# KANNADIGA

DAILY

YEAR. 1 Nos. 1 - 110.

FROM 22-3-1930

TO 26-7-1930

# ಕನ್ನಡಿಗ

ನಿತ್ಯ ಸಂಚಿಕೆ

ವರ್ಷ 1. ಸಂಚಿಕೆ 1-110.

22-3-1930 ರಿಂದ

26-7-1930 ಗೆ

ರ. ನಂ. ಬಿ೯೧೬ ಬೆಲೆ ೦—೦—೩

ನಿತ್ಯಸಂಚಿಕೆಯು.

सर्वं परवशं दुःखं सर्वमात्मवशं सुखम् ॥ — मनु

ಸಂಪಾದಕರು— ಮಂಗಳೂರ್ ಥಿಯೋ... ಮುಂಗಳಾಪ ಶ್ರೀನಿವಾಸರಾಯರು

ಬಾಗಲಕೋಟೆ ಶನಿವಾರ ಮಿತಿ ಫಾಲ್ಗುಣ ಬಹುಳ ೮ ಶಕ ೧೮೫೨ ತಾ ೨೨—೩—೩೦ ಸಂಚಿಕೆ ೧

## ಸಂಪಾದಕರ ಭೂಮಿ.

ನನ್ನ ದೇಹವು ನಿನ್ನ ವೀರಶಾಸನವಾಗಿ।
ಕನ್ನನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಬೀರುವಗಂಧವಹವೆಂದು ತಿಳಿಯೆ॥

—ಬೇಂದ್ರೆ ದತ್ತಾತ್ರಯರಾಯರು.

**ಸ್ಕೌಟರ್ಯಾಲಿ:—** ನಾಳೆ ೨೬ ನೇ ತಾರೀಖಿಗೆ ಧಾರವಾಡದಲ್ಲಿ ಈ ಸ್ಕೌಟರ್ಯಾಲಿ ನೆರೆಯುತ್ತಿದ್ದು, ಇದಕ್ಕೆ ನಮ್ಮ ತರುಣರು ಮುದ್ದಾದ ನವೀನ ವೇಷ ಹಾಕಿಕೊಂಡು ಮುಂಕರಿ ಬಿದ್ದು ಅಲ್ಲಿಗೆ ಬರುವ ಗವರ್ನರ ಬಹಾದ್ದೂರರ ದರ್ಶನದಿಂದ ಧನ್ಯರಾಗಬೇಕಾಗಿದೆ! ಈ ಸ್ಕೌಟ ಸಂಸ್ಥೆಯು ಹಿಂದುಸ್ಥಾನದಲ್ಲಿ ಬಂದು ನೆಲಸಿದಾಗಿನಿಂದಲೂ ಒಂದಾದರೂ ರಾಷ್ಟ್ರೀಯ ಉಪಯೋಗೀ ಕಾರ್ಯವನ್ನು ಮಾಡಿದ್ದರೆ ಆಣೆ. ಚಿಕ್ಕವರಿರುವಾಗಿನಿಂದಲೇ ನಮ್ಮ ಮಕ್ಕಳು ನಮ್ಮನ್ನು ದಾಸ್ಯಭ್ರಷ್ಟರನ್ನಾಗಿಮಾಡಿದ ಬ್ರಿಟಿಶರಿಗೆ ರಾಜನಿಷ್ಟರಾಗಿ ಉಳಿಯಬೇಕೆಂದು ಆಂಗ್ಲೇಯರು ನಡೆಸಿದ ಅನೇಕ ಯತ್ನಗಳಲ್ಲಿ ಇದೂ ಒಂದಾಗಿದೆ. ಹಿರಿಯರಿಗೆ ರಾವಸಾಹೇಬ, ರಾವಬಹದ್ದೂರ ಮೊದಲಾದ ಬಿರುದಾವಳಿಗಳನ್ನು ಕೊಟ್ಟು ಅವರನ್ನು ತಮ್ಮ ಬಗಲಕೂಸುಗಳನ್ನಾಗಿ ಮಾಡಿಕೊಳ್ಳುತ್ತಿರುವಂತೆ, ಚಿಕ್ಕಮಕ್ಕಳ ಚಿತ್ತವೃತ್ತಿಯನ್ನು ಅವರ ಬುದ್ಧಿ ವಿಕಾಸವಾಗುವದಕ್ಕೆ ಮುಂಚೆಯೇ, ವಿಪರ್ಯಾಸಗೊಳಿಸಿ ರಾಜನಿಷ್ಠೆಯ ಪಡಿಯಚ್ಚಿನಲ್ಲಿ ಒತ್ತಿ ತೆಗೆಯಬೇಕೆಂಬುದಕ್ಕಾಗಿ ~~ಕೂಡಿ~~ ಬಿಟ್ಟಿವೆ. ಅಂತೇ ನಮ್ಮನ್ನಾಳುವ ಸಾಹೇಬರಿಗೆ ಸಿಸ್ತಿನಿಂದ ಸಲಾಮು ಹೊಡೆಯಬೇಕಾದ ಪ್ರಸಂಗಗಳಲ್ಲಿ ಮಾತ್ರ ತಪ್ಪದೆ ಈ ಸ್ಕೌಟ ಆಟದ ಉಪಯೋಗ ಮಾಡುವದರಲ್ಲಿ ಬಂದಿದೆ. ಅಲ್ಲದೆ ಬ್ರಿಟಿಶ್ ವೇಷಭೂಷಣಾಗಳ ಬೆಡಗನ್ನು ಚಿಕ್ಕಮಕ್ಕಳಿಗೆ ಕಲಿಸಿ ಅವುಗಳ ಶ್ರೇಷ್ಠತೆಯ ಅವರ ಅಂತಃಕರಣದಲ್ಲಿ ನೆಲೆನಿಲ್ಲುವಂತೆ ಮಾಡುವ ಉದ್ದೇಶದಿಂದ ಇಂಥ ರ್‍ಯಾಲಿ, ಝಾಂಬೋರಿ ಮೊದಲಾದ ಕೂಟಗಳನ್ನು ಕೂಡ್ರಿಸುತ್ತಿರುವರು. ಸ್ಕೌಟರ ಆಟನೋಟಗಳಲ್ಲಿ ರಾಷ್ಟ್ರೀಯತ್ವವು ಲವಲೇಶವೂ ಕೂಡ ಇಲ್ಲ. ಅಲ್ಲಿರುವದೆಲ್ಲ ಬ್ರಿಟಿಶರ ಅಟ್ಟಹಾಸವೇ. ಅವರ ಉತ್ಸವ ವೈಭವಗಳಿಗೇ ಆಹ್ವಾನ. ನಮ್ಮನ್ನು ಹಡೆದ ತಾಯಿ ಬಗೆದು ಬಂಧನದಲ್ಲಿರಿಸಿ ಬ್ರಿಟಿಶರು ಸ್ಥಾಪಿಸಿದ ಉಕ್ಕಿನ ಚೌಕಟ್ಟಿನ ಘಟಕವಾದ ಆಯ್ ಸಿ. ಎಸ್ ಪ್ರಭುಗಳ ಸ್ವಾಗತದ ವೈಭವವನ್ನು ಹೆಚ್ಚಿಸುವದಕ್ಕಾಗಿ ಮಾತ್ರ ಈ ಸ್ಕೌಟರ ಉಪಯೋಗ. ಹಿಂದುಸ್ಥಾನವನ್ನು ಪಾದಾಕ್ರಾಂತ ಮಾಡಿ ಅವರ ಸ್ವಾತಂತ್ರ್ಯವನ್ನೆಲ್ಲ ಹರಣಮಾಡಿ ಹಿಂದೀಯರ ಮಾನ ಮರ್ಯಾದೆಗಳನ್ನು ಗಾಳಿಗೆ ತೂರುತ್ತಿರುವ ನಿರ್ದಯವೆಂದು ಮೆರೆಯುತ್ತಿರುವ ಯೂನಿಯನ್ ಜ್ಯಾಕಿಗೆ ಬಾಗಿ ಬಗ್ಗಿ ವಂದನೆ ಮಾಡುವುದೇ ಇವರು ತೋರಿಸುತ್ತಿರುವ ದೇಶಪ್ರೇಮ! ಇಂಥ ಕಾರ್ಯಕ್ರಮ ಉಳ್ಳ ಸ್ಕೌಟರಲ್ಲಿ ಕನ್ನಡ ತರುಣರು ಇನ್ನೂ ಈ ಸ್ವಾತಂತ್ರ್ಯಯುಗದಲ್ಲಿಯೂ, ಸತ್ಯಾಗ್ರಹದ ಹುಟ್ಟು ಬಿರುಗಾಳಿಯು ಹಿಂದುಸ್ಥಾನದ ಬೀದಿಬೀದಿಗಳಲ್ಲಿಯೂ ಬೀಸುತ್ತಿರುವ ಈ ಸಮಯದಲ್ಲಿಯೂ— ಈ ಸ್ಕೌಟ ಆಟನೋಟ ಎಂಬ ಬ್ರಿಟಿಶರ ಕೃತಕ ಬಲೆಗೆ ಮೋಹಿಸಿ ಅದರಲ್ಲಿ ಸಹಕರಿಸುವಷ್ಟು ಅಭಿಮಾನ ಶೂನ್ಯರಾಗಿದ್ದಾರೆಂದು ನಾವೇನು ತಿಳಿದಿಲ್ಲ. ಬಂಗಾಲ ಪಂಜಾಬ ಪ್ರಾಂತಗಳ ತರುಣರು "Down Down with the Union jack" ಎಂದು ಉದ್ಘೋಷಿಸಿ ನಮ್ಮ ಅಪಮಾನದ ಚಿಹ್ನವಾದ ಈ ಬ್ರಿಟಿಶ್ ಧ್ವಜವನ್ನು ಬದ್ದು ಕೆಡಹುತ್ತಿರುವ ಈ ಪ್ರಸಂಗದಲ್ಲಿವ್ವಾಗ ಅದನ್ನೇ ಕನ್ನಡ ತರುಣರು ವಂದಿಸಿ ಪೂಜಿಸುವಷ್ಟು ಮೂಢರಿದ್ದಾರೆಂದು ತೋರಿಸಬೇಕಿಲ್ಲೆಂದು ನಮ್ಮ ಕರ್ನಾಟಕ ವಿದ್ಯಾರ್ಥಿಗಳಲ್ಲಿ ನಮಗೆ ಪೂರ್ಣ ಭರವಸೆ ಇದೆ. ಗವ್ಹರ್ನರ ಸಾಹೇಬರ ಕಟಾಕ್ಷವೀಕ್ಷಣದಿಂದ ತಾವು ಧನ್ಯರಾಗಬೇಕೆಂಬ ಆಶೆಗಾಗಿ ನಮ್ಮ ವಿದ್ಯಾರ್ಥಿಗಳು ತಮ್ಮ ರಾಷ್ಟ್ರೀಯತೆಯನ್ನು ಮಾರಿಕೊಂಡು, ತಾವು ಅಸ್ಪದೀಯರೂ ಗುಲಾಮಗಿರಿಯ ಪ್ರೇಮಿಗಳೆಂದೂ ಜಗತ್ತಿಗೆ ಜಾಹೀರಮಾಡಿ, ಕರ್ನಾಟಕದ ಹೆಸರು ಕೆಡಿಸಲಿಕ್ಕಿಲ್ಲೆಂದು ನಮ್ಮ ವಿಶ್ವಾಸ. ಅಲ್ಲದೆ ವಿದ್ಯಾರ್ಥಿಗಳ ಹುಡುಗ ಬುದ್ಧಿಯ ಮೇಲೆಯೇ ವಿಶ್ವಾಸವಿಟ್ಟು ಸುಮ್ಮನೆ ಕೂಡ್ರದೆ, ಪ್ರಾಂತದ ಹಿರಿಯರು ಸಕಾಲದಲ್ಲಿಯೇ ಅವರಿಗೆ ಜಾಹೀರ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕ ವಿದ್ಯಾರ್ಥಿಗಳ ಕರ್ತವ್ಯವೇನೆಂಬುದನ್ನು ಸ್ಪಷ್ಟವಾಗಿ ತಿಳಿಸಿಕೊಟ್ಟಿದ್ದಾರೆ. ಅದನ್ನು ಬೇರೆ ಕಡೆಗೆ ಪ್ರಕಟಿಸಿದ್ದೇವೆ. ಧಾರವಾಡದಲ್ಲಿಯ 'ಸ್ಕೌಟ ರ್‍ಯಾಲಿ'ಯನ್ನು ಸಕಲರೂ ಬಹಿಷ್ಕರಿಸಬೇಕು. ಶ್ರೀ ದಿವಾಕರ ರಂಗರಾಯರಂಥವರಿಂದ, ಜೊತೆಗೆ ಈ

ಬಹಿಷ್ಕಾರ ಪತ್ರಕ್ಕೆ ತರುಣರು ಸಹಿ ಹಾಗಿಸಲೇಬೇಕು. ಕುಲ ಕೋಟಿ ಉದ್ಧಾರ ಗುಪ್ತಂತಿದ್ದರೂ ಸ್ಕೂಲಿಯನ್ನು ತ್ಯಜ್ಯವೆಂದು ತನ್ನ ದ ಶರಣ... ಬಹಿಷ್ಕರಿಸಲೇಬೇಕು (ಶಾಲೆಯ ಕೃಷ್ಣಪ್ರಸ್ತ ಲ್ಲಿದ್ದ ಚಿಗರಿಹಾಗರ, ಚಿಕ್ಕೋಡಿ ಬೆಳಗಾವಿ) ಹುಡುಗರ ಹೋರ್ಡ್ ಇನ್ಸ್‌ಪೆಕ್ಟರ ಪರೀಕ್ಷೆ ಈ ಶಾಲೆಯಲ್ಲಿ ನೋಡಲಿಕ್ಕೆ ಸಿಗಬಾರದು. ಇಷ್ಟು ಅಭ್ಯಾಸವನ್ನು ಕನ್ನಡ ತರುಣರು ಈ ಸಮಯದಲ್ಲಿ ತೋರಿಸಬೇಕು. ಇಷ್ಟು ವಿದ್ಯಾರ್ಥಿಗಳು ಆ ಶಾಲೆಯಲ್ಲಿ ಸಹಕರಿಸಿದರೆ, ಆವರೆಲ್ಲ ಚಿಗರಿಹಾರ ಕಂತಲೂ ವನ್ನರೆಂದು ಉಳಿದವರು ಓದಹತ್ತಿದರೆ ದೋಷವೆಲ್ಲಿ?

---

ಹುಬ್ಬಳ್ಳಿ— ಇದು ಕರ್ನಾಟಕ ಪ್ರಾಂತದಲ್ಲಿಯ ಒಂದು ಅತ್ಯಂತ ಪ್ರಮುಖ ಪಟ್ಟಣವಾಗಿದೆ. ಅಲ್ಲಿ ಬೆಳಗಾವಿ ಶೋಲಾಪುರ ಮೊದಲಾದ ಊರುಗಳಲ್ಲಿ ಕಂಡಹಂತ ಕನ್ನಡ ಮರಾಠಿ ತಿಕ್ಕಾಟವು ಈ ಹೊತ್ತಿನವರೆಗೂ ಇಲ್ಲ. ಎಲ್ಲ ಸಾರ್ವಜನಿಕ ಕಾರ್ಯಗಳು ಅತ್ಯಂತ ಸಮಾಧಾನದಿಂದಲೇ ಜರುಗಿಸಲ್ಪಡುತ್ತಲಿದ್ದವೆ. ಇಲ್ಲಿಯ ಜನವಸತಿಯು ಪೂರ್ಣ ಕನ್ನಡದ ದಿಯಾಗಿರುವದರಿಂದ ಹೊಟ್ಟೆ ಹೊರಕೊಳ್ಳಲಿಕ್ಕಾಗಿ ಬಂದ ನಾಲ್ಕಾರು ಮರಾಠಿಗರೂ ಇದ್ದರು. ಇಲ್ಲಿಯಲ್ಲ ಅನಿವಾರ್ಯವಾಗಿಯೇ ಆಗಲೋಲ್ಲದೇಕೆ ಅವರೆಲ್ಲ ಕನ್ನಡ ನುಡಿಯನ್ನು ಕಲಿತವರೇ ಆಗಿರುವರು. ವಿಜಯವಾದ ಪರಿಸ್ಥಿತಿಯು ಹೀಗಿದ್ದು ಅಲ್ಲಿಯ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಯಾದ ಶ್ರೀ ಗೋಳಕೇರಿ ರವರು ಕಾಂಗ್ರೆಸ ಸಭೆಯ ಜಾಹೀರ ಪತ್ರಿಕೆಗಳನ್ನು ಉಭಯ ಭಾಷೆಯಲ್ಲಿ (ಕನ್ನಡ ಮತ್ತು ಮರಾಠಿ) ಹೊರಡಿಸುವ ಆಚರಣೆ ಏನು ಅನಿಸಿತೋ ನಮ್ಮ ಪ್ರಾಮಾಣಿಕ ಬುದ್ಧಿಗೆ ತೋಚದಾಗಿದೆ. ಒಂದು ವೇಳೆ ಶ್ರೀ ಗೋಳಕೇರಿಯವರ ಮಾತೃಭಾಷೆ ಮರಾಠಿ ಇದ್ದು ಮಾತೃಭಾಷೆಯ ಪ್ರೇಮದ ಮೂಲಕ ಹುಬ್ಬಳ್ಳಿಯಲ್ಲಿಯೂ ಇದರ ಪ್ರಸಾರವನ್ನು ಮಾಡುತ್ತಿರುವರಾಗಿ ತೋರುತ್ತದೆ. ಅವರ ಇದು ಸಾಧುವೂ ಇಲ್ಲ ಪ್ರಾಂಜಲವೂ ಅಲ್ಲ. ಇಂಥಾ ಅವರ ಮನೋಭಾವನೆಗಳಿಂದ ಏನು ಕಾರಣ ಜನರೊಳಗೆ ದುರಸ್ಥ ಪರಿಣಾಮ ಮರಾಠಿ ಕನ್ನಡ ವಿವಾದದ ಬಿತ್ತನ್ನು ಅವರು ಹುಟ್ಟಿಸಿಡುವರು. ಕರ್ನಾಟಕವನ್ನು ಪ್ರತ್ಯೇಕ ಪ್ರಾಂತವನ್ನಾಗಿ ಕಟ್ಟಿಕೊಂಡ ಮೇಲೆ, ಕನ್ನಡಸಂಸ್ಥೆಯ ಮತ ಜನತೆ ಜನಾರ್ದನಿಗೆ ಸಮರ್ಪಿತವಾಗಬೇಕಾದರೆ ಶ್ರೀ. ಗೋಳಕೇರಿಯವರು ಕನ್ನಡ ನುಡಿಗೇ ಮನ್ನಣೆ ಕೊಡಬೇಕಾಗುವದು. ಇದರಲ್ಲಿ ಕನ್ನಡಿಗರು ಸ್ವಾಭಿಮಾನದ ಕಣ್ಣು ತೆರೆದು ಜನತೆಯ ಅಸಂದಿಗ್ಧಗೆ ಅವರು ಗುಂಡಾಗಿ ಉದಾತ್ತ ಭಾವನೆಯಿಂದ ಕೊಂಡ ಅವರು ದೇಶಸೇವೆಯ ಕಾರ್ಯದಲ್ಲಿ ಕಡೆ ಬರುವರು ನಿಶ್ಚಯ. ಹುಬ್ಬಳ್ಳಿಯಲ್ಲಿ ಇಂದಿನವರೆಗೆ ಸಹಸ್ರಾವಧಿ ಕಾಂಗ್ರೆಸ ಗಾಂಧಿ ಸಭೆಗಳು ನೆರೆದಿದ್ದುಂಟು, ಆ ಯಾ ಸಭೆಯ ಮಹತ್ವದ ಕಾಲಕ್ಕೆ ಅವುಗಳಿಗೆಲ್ಲ ಜನರು ಮುಕರಿದ್ದುದು ಉಂಟು. ಆ ಸಭೆಯ ಹಸ್ತಪತ್ರಿಕೆಗಳೆಲ್ಲ ಕನ್ನಡದಲ್ಲಿ ಇರುತ್ತಿದ್ದವಲ್ಲ. ಈಗ ಒಮ್ಮೆಲೆ ಮರಾಠಿ ಜಾಹೀರಾತಿನ ಅವಶ್ಯಕತೆ ಅದೆಂತು ಉದ್ಭವಿಸಿತು, ರಾತ್ರೋರಾತ್ರಿ ಮರಾಠಿಗರು ಹುಬ್ಬಳ್ಳಿಯನ್ನು ಒಳನುಗ್ಗಿ ಮೂಲ ನಿವಾಸಿಗರನ್ನು ಒಂದು ಮೂಲೆಗೆ ಅಟ್ಟಿ, ನಗರವನ್ನೆಲ್ಲ ತಾವೇ ಆಕ್ರಮಿಸಿ ನಮಗೆ ಮರಾಠೀ ಜಾಹೀರಾತು ಬೇಕು ಎಂದು ಬೇಡಹತ್ತಿಲ್ಲವಷ್ಟೆ ? ಅಥವಾ ಮರಾಠಿಯು ಇಲ್ಲಿಯೂ ಕಾಲುಚಾಚಿತೆ ಎಂಬುದರ ಪುರಾವೆಯನ್ನು ಕೈಗೆತ್ತಿಯುವ ಕಾಲಕ್ಕೆ ಸಾಧಿಸಿ ಇಡುವಾ ಎಂದು ತಮ್ಮಲ್ಲಿಯೇ ವಿಚಾರಿಸಿಕೊಂಡು ಕಾರ್ಯದರ್ಶಿಗಳು ಹೀಗೆ ತಮ್ಮ ಅಧಿಕಾರದ ದುರುಪಯೋಗ ಮಾಡಿರುವರೋ ಏನೋ. ಮೊದಲಿನಿಂದಲೂ ಇದ್ದ ನಾಲ್ಕಾರು ಮನೆಯವರಿಗಾಗಿ ಹೀಗೆ ಮರಾಠಿಯಲ್ಲಿಯೂ ತಗೆಯಬೇಕಾಗಿ ಬಂತು ಎಂದು ರುಮಾಲುಗಳು ಹೇಳುವರೇನು? ಹಾಗಾದರೆ ಮರಾಠಿಗರಂತೆ ಅಷ್ಟೇ ಸಂಖ್ಯೆಯವರೆಗೆ ತೆಲಗು ತಮಿಳು ಗುಜರಾಥಿ ಮಾತಾಡುವ ಜನರೂ ಹುಬ್ಬಳ್ಳಿಯಲ್ಲಿ ವಾಸಮಾಡುತ್ತಿದ್ದಾರೆ. ಅವರ ಸಲುವಾಗಿ ಅವರ ಭಾಷೆಯಲ್ಲಿಯೂ ಜಾಹೀರಾತನ್ನು ಹೊರಡಿಸಿಲ್ಲವಲ್ಲ ಇರಲಿ ಕಾರ್ಯದರ್ಶಿಗಳು ಇನ್ನು ಮುಂದರು ಕನ್ನಡಕ್ಕೆ ಪೂರ್ಣ ಮನ್ನಣೆಯನ್ನು ಕೊಡುವರೆಂದು ಹಾರೈಸುವಾ. ಹುಬ್ಬಳ್ಳಿ ಪೂರ್ಣ ಯಜಮಾನತಿಯಾದ ಕನ್ನಡ ನುಡಿವೆಣ್ಣಿಗೆ ಇಲ್ಲದ ಸವತಿಯನ್ನು ತಂದಿಟ್ಟು ಅವರೀವರ ಜಗಳ ದಿಂದ ಹುಬ್ಬಳ್ಳಿಯ ಸಾರ್ವಜನಿಕ ಚಳವಳಿಯ ಪ್ರಗತಿಯನ್ನು ಕುಂಠಿತ ಮಾಡಿದ ಆರೋಪವನ್ನು ನಮ್ಮ ಸ್ನೇಹಿತರಾದ ಶ್ರೀ. ಗೋಳಕೇರಿಯವರು ಹೊತ್ತುಕೊಳ್ಳಬಾರದೆಂದು ನಮ್ಮ ಬಯಕೆ. ಈ ಪ್ರಕಾರ ಹುಬ್ಬಳ್ಳಿಯನ್ನು ಮರಾಠಿ ನಾಡಿನ ಕ್ಷೇತ್ರವಾಗಿ ಶ್ರೀಮತಿ ಉಮಾಬಾಯಿ ಕುಂದಾಪೂರ ಇವರು ತಮ್ಮ ದೇಶಸೇವಾಕಾರ್ಯದ ಪೂರ್ವದಿಂದಲೂ ಇತ್ತೀಚಲಾಗಿ ಕನ್ನಡನುಡಿಯನ್ನೇ ದಕ್ಷತೆ ತೆಗೆದುಕೊಂಡು ತಮ್ಮ ಆದರ್ಶ ಕಾರ್ಯವಾದತ್ತ ಆ ಜನತೆಯಲ್ಲಿ ಮಹತಿಯನ್ನು ಹೊಂದುತ್ತಿರುವಂತೆ ರವಾನಂತರೂ ತಮ್ಮ ಹಂಬಲವನ್ನು ಬಿಟ್ಟು ಕಾರ್ಯಕ್ಕೆ ದೃಷ್ಟಿಯಿಂದ ದೇಶಸೇವೆ ನಿರತರಾಗುವದೆ ಉತ್ತಮಮಾರ್ಗವು.

---

ಗಾಂಧಿಯವರು ಖೈರಾ ಜಿಲ್ಲೆಯನ್ನು ದಾಟಿ ಬರೋಚ ಜಿಲ್ಲೆಯನ್ನು ಇಂದಿನಿಂದ ಪ್ರವೇಶಿಸುವರು. * *

ಪಂ. ಜವಹರಲಾಲರು ೨೨ಕ್ಕೆ ಸಂಗಮಕ್ಕೆ ಬಂದು ಆ ಮೇಲೆ ಬನಾರಸ, ಲಖನೌ, ದಂಡಿ ಮೊದಲಾದ ಪಟ್ಟಣಗಳಿಗೆ ಹೋಗತಕ್ಕವರಿದ್ದಾರೆ † † † † †

ಬಿಹಾರ ವಿದ್ಯಾಪೀಠದ ವಿದ್ಯಾರ್ಥಿಗಳೂ ಗುರುಗಳೂ ಕೂಡಿಯೇ ತಮ್ಮ ಅಭ್ಯಾಸಕ್ರಮವನ್ನು ಬಿಟ್ಟು ಹಳ್ಳಿಹಳ್ಳಿಗಳಲ್ಲಿ ಕಾಂಗ್ರೆಸದ ಪೂರ್ಣ ಸ್ವರಾಜ್ಯ ಸಂದೇಶವನ್ನು ಬೀರಲು ಹೊರಟಿರುವರು ‡ ‡ ‡ ‡

ಮಾರ್ಚ ೧೨ನೇ ತಾರೀಖಿನ ದಿವಸ ಬೆಳಿಗ್ಗೆ ಮಹಾತ್ಮಾ ಗಾಂಧಿಯವರು ಬ್ರಿಟಿಶರ ಅನ್ಯಾಯದ ಕಟ್ಟಳೆಯನ್ನು ಧಿಕ್ಕರಿಸುವೆನೆಂಬ ವೀರ ಪ್ರತಿಜ್ಞೆಯಿಂದ ತನ್ನ ಶಾಂತಿ ಸೈನ್ಯದೊಂದಿಗೆ ಸಾಬರಮತಿ ಆಶ್ರಮದಿಂದ ಹೊರಬಿದ್ದುದು ಇಡೀ ಜಗತ್ತಿಗೆ ಆಶ್ಚರ್ಯಕರವಾದ, ಚಿರಸ್ಮರಣೀಯವಾದ ದೃಶ್ಯವಾಗಿದೆ ಇಷ್ಟೇ. ಆ ಅದ್ಭುತ ದೃಶ್ಯವನ್ನೇ ೨-೩ ಸಿನೆಮಾ ಫಿಲ್ಮ ಕಂಪನಿಯವರು, ಚಿತ್ರಿಸಿಗೊಂಡು ಜನಸಾಮಾನ್ಯರಿಗೂ ಆ ದೃಶ್ಯವನ್ನು ನೋಡಿ ಕಣ್ತುಂಬುವಂಥ ಸುಯೋಗವನ್ನು ಕಲ್ಪಿಸಿಟ್ಟಿರುವರು. ಆದರೆ ಇವರಿಗೆಲ್ಲ ಈ ದೃಶ್ಯವನ್ನು ತೋರಿಸಲಿಕ್ಕಾಗದೆಂದು ಹಿಂದುಸ್ಥಾನ ಸರಕಾರದ ಮನಾಯಿ ಆಗಿದೆ. ಗಾಂಧಿಸಂಬಂಧ ಒಂದಲ್ಲೊಂದು ಸರಕಾರದವರ ಎನೆ ಡವಡವ ಅನ್ನುತ್ತಿಂಬೆಯಲ್ಲವೇ. × ×

ಕದ್ದುಗುತನದಿಂದ ಉಪ್ಪು ಮಾಡಿ ಅಪರಾಧಕ್ಕೆ ಗುರಿಯಾಗಬೇಕು. ಇಂಥ ಉದಾಹರಣೆಗಳು ಈ ಹೊತ್ತಿಗೂ ಹಿಂದು ಸ್ಥಾನದಲ್ಲಿ ಸಿಗುತ್ತವೆಂದ ಮೇಲೆ ನಾವು ಉಪ್ಪಿನ ಕಟ್ಟಳೆಯನ್ನು ಮುರಿಯುವದಕ್ಕೆ ಹೂಡಿ ಸತ್ಯಾಗ್ರಹವು ತೀರ ನ್ಯಾಯವಾದದ್ದೆನ್ನಲಿಕ್ಕೆ ಇದಕ್ಕೂ ಹೆಚ್ಚಿನ ಸಮರ್ಥನೆಯು ಬೇಕೆ? × ‡

# ಅಖಿಲ ಭಾರತ ಕಾಂಗ್ರೆಸ ಕಮಿಟಿಯ

## ಅಧಿವೇಶನವು.

(ಅಹಮ್ಮದಾಬಾದದಿಂದ ಬಂದ ತಂತಿಯ ಸಮಾಚಾರವು. ತಾ॥ ೨೧-೩-೩೦)

ಶ್ರೀ. ಜವಾಹರಲಾಲ ನೆಹರೂ ಇವರ ಅಧ್ಯಕ್ಷತೆ ಕೆಳಗೆ ಈ ಅಧಿವೇಶನವು ನೆರೆದು ಈ ಠರಾವುಗಳನ್ನು ಸ್ವೀಕರಿಸಿತು.

(೧) ವಾರ್ಷಿಕ ಆಯವ್ಯಯದ ಅಂದಾಜು ಪಟ್ಟಿಯನ್ನು ಒಪ್ಪಿಕೊಳ್ಳುತ್ತದೆ

(೨) ಕಾರ್ಯಕಾರಿ ಮಂಡಲದವರು ಮಹಾತ್ಮಾ ಗಾಂಧಿಯವರಿಗೆ ಸತ್ಯಾಗ್ರಹದ ಬಗ್ಗೆ ಸರ್ವಾಧಿಕಾರವನ್ನು ಕೊಟ್ಟದ್ದನ್ನು ಈ ಸಭೆಯು ಸಂಪೂರ್ಣವಾಗಿ ಅನುಮೋದಿಸುತ್ತಿದೆ.

(೩) ಪ್ರತಿ ಪ್ರಾಂತದವರೂ ತಮತಮಗೆ ಸಾಧ್ಯವಿದ್ದಂತೆ ಕಾಯದೆ ಭಂಗದ ಕಾರ್ಯಕ್ರಮವನ್ನು ಅಂಗೀಕರಿಸಬಹುದೆಂದು ಈ ಸಭೆಯು ಅಭಿಪ್ರಾಯ ಪಡುತ್ತದೆ. ಆದಷ್ಟು ಉಪ್ಪಿನ ಕಟ್ಟಳೆಯನ್ನು ಮುರಿಯುವದರ ಕಡೆಗೇನೆ ಎಲ್ಲ ಪ್ರಾಂತದವರು ಯತ್ನಿಸಬೇಕು.

(೪) ಮಹಾತ್ಮಾ ಗಾಂಧಿಯವರು ಈ ಉಪ್ಪಿನ ಕಟ್ಟಳೆಯನ್ನು ತಾವು ಪ್ರತ್ಯಕ್ಷವಾಗಿ ಮುರಿದು ಅಪ್ಪಣೆಕೊಡದ ಮುಂಚಿತವಾಗಿ ಯಾವ ಪ್ರಾಂತದವರು ಈ ಕಾರ್ಯಕ್ರಮವನ್ನು ಆರಂಭಿಸಬಾರದು.

(೫) ಸರದಾರ ವಲ್ಲಭಭಾಯಿಯವರು ಶಿಕ್ಷೆ ಹೊಂದಿದ್ದಕ್ಕಾಗಿ ಅವರನ್ನು ಈ ಸಭೆಯು ಮನಃಪೂರ್ವಕ ಅಭಿನಂದಿಸುತ್ತದೆ

(೬) ಗುಜರಾಥದಲ್ಲಿಯ ಬೋರಸಾದ ಮತ್ತು ಕೈರಾ ತಾಲೂಕಿನೊಳಗಿನ ಪಟೇಲರು (ಗೌಡ ಕುಲಕರ್ಣಿಯವರು) ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಸತ್ಯಾಗ್ರಹಕ್ಕೆ ಸಿದ್ಧರಾಗಿ ನಿಂತಿದ್ದಕ್ಕೆ ಈ ಸಭೆಯು ಅವರ ಗುಣಾನುವಾದ ಮಾಡುತ್ತದೆ.

---

(ಮುಂಬಯಿಂದ ಬಂದ ತಂತಿಯ ಸಮಾಚಾರವು ೨೧-೩ ೩೦)

ಜವಾಹರಲಾಲ ನೆಹರು ಮತ್ತು ಗಾಂಧಿಯವರ ಭೆಟ್ಟಿಯಾಗಿ ಅವರನಡುವೆ ನಡೆದ ಮಾತುಕಥೆಗಳಲ್ಲಿ, ಸಮಗ್ರದೇಶದ ತುಂಬೆಲ್ಲ ಸಾಮುದಾಯಿಕ ಕಾಯದೆಭಂಗ ಚಳವಳಿಯನ್ನು ಹೂಡಲು ಈರ್ವರೂ ಒಪ್ಪಿಕೊಂಡಿದ್ದಾರೆ.

ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಅಧಿವೇಶನವು ಅತ್ಯಂತ ಉತ್ಸಾಹಭರಿತ ಪರಿಸ್ಥಿತಿಯಲ್ಲಿ ಇಂದು ಕೂಡ್ರುತ್ತಲಿದ್ದದೆ.

ಉಪ್ಪಿನ ಕಟ್ಟಳೆಯನ್ನು ಕಿತ್ತಿಹಾಕಿರೆಂದು ಅಸೆಂಬ್ಲಿಯಲ್ಲಿ ತಂದ ಠರಾವು ನಾಮಂಜೂರಾಯಿತು.

ಶ್ರೀ ಸೇನಗುಪ್ತರಮೇಲೆ ಹಾಕಿದ ಖಟ್ಲೆಯ ವಿಚಾರಣೆಯು ರಂಗೂನದಲ್ಲಿ ನಡೆದಿದ್ದು ಚೌಕಸಿಯು ಮುಗಿದಿದೆ. ಮ್ಯಾಜಿಸ್ಟ್ರೇಟರು ಶನಿವಾರ ತೀರ್ಪು ಹೇಳತಕ್ಕವರಿದ್ದಾರೆ

ರಂಗೂನದಲ್ಲಿ ಕೋರ್ಟಿನ ಒಳಗೆ ಸೇನಗುಪ್ತರ ಮೇಲಿನ ಆರೋಪದ ವಿಚಾರಣೆ ನಡೆದ ಸಮಯದಲ್ಲಿ ಹೊರಗೆ ಜನರು ಅತಿಶಯವಾಗಿ ನೆರೆದು ದಂಗೆ ಮಾಡಿರುವರು. ಕಲ್ಲು ಹಾರ್‍ಯಾಡರುವವು ಪೋಲೀಸರಿಗೂ ನೆರೆದ ಜನರಲ್ಲಿ ಅನೇಕರಿಗೂ ಕಲ್ಲು ತಾಕಿ ಘಾಯವಾಗಿದೆ. ಮುಂದೆ ಪೋಲೀಸ ಕಮಿಶನರು ಒಂದು ಮೋಟರು ಹಚ್ಚಿ ನೆರೆದ ಗದ್ದಲಿಗರನ್ನು ಚದರಿಸಬೇಕಾಯಿತು. ರಾಷ್ಟ್ರೀಯ ಧ್ವಜವನ್ನು ಹೊತ್ತುಕೊಂಡು ಬರುವ ಓರ್ವ ಗೃಹಸ್ಥನಿಗೂ ಕುದುರೆಯ ಮೇಲಿನ ಒಬ್ಬ ಪೋಲೀಸನಿಗೂ ತಿಕ್ಕಾಟವಾದದ್ದೇ ಇದೆಲ್ಲ ಗೊಂದಲದ ಮೂಲವು.

ದುಂಡು ಮೇಜಿನ ಸಭೆಯನ್ನು ಆದಷ್ಟು ಬೇಗ ಕರೆಯತಕ್ಕದ್ದೆಂದು ಈ ಸಭೆಯು ಆಗ್ರಹಪಡುತ್ತದೆಂಬ ಆಶಯದ ಠರಾವು ಶ್ರೀ ರಾಮಸ್ವಾಮಿ ಮುದಲಿಯಾರ ಇವರು ತಂದದ್ದು—ಕೌನ್ಸಿಲ ಆಫ ಸ್ಟೇಟ ಸಭೆಯಲ್ಲಿ ಇಂದು ಸ್ವೀಕೃತವಾಗಿದೆ. ಮೂಲ ಠರಾವಿನಲ್ಲಿದ್ದ 'ಅಕ್ಟೋಬರ ೩೦ ನೇ ತಾರೀಖಿನೊಳಗಾಗಿ ಕರೆಯತಕ್ಕದ್ದೆಂಬ' ಭಾಗವು ಶ್ರೀ ಖಾಪರ್ಡೆಯವರಿಗೆ ಸರಿಬರದ್ದರಿಂದ ಅದನ್ನು ಹೊಡೆದು ಹಾಕಿದರು.

---

ಹೌಸ ಆಫ ಕಾಮನ್ಸದ ಸಭಾಗೃಹದಲ್ಲಿ ಕೆಲವು ಪಾರ್ಲಿಮೆಂಟ ಸಭಾಸದರು ಸಭೆ ಸೇರಿ 'ಪಾರ್ಲಿಮೆಂಟ ಕಮಿಟಿ' ಎಂಬದೊಂದು ಹೊಸ ಸಂಘವನ್ನು ನಿರ್ಮಿಸಿದ್ದಾರೆ. ಈ ಸಂಘದ ಮುಖ್ಯ ಉದ್ದೇಶವು ಹಿಂದುಸ್ಥಾನಕ್ಕೆ ಆದಷ್ಟು ಬೇಗನೆ ವಸಾಹತಿಕ ಸ್ವರಾಜವನ್ನು ಕೊಡಿಸುವದು. ಸದ್ಯಕ್ಕೆ ಈ ಸಂಘದಲ್ಲಿ ಕೇವಲ ಕೂಲಿಕಾರ ಪಕ್ಷದ ಸಭಾಸದರೇ ಇದ್ದಾರೆ. ಮುಂದೆ ಬರಬರುತ್ತ ಇದರಲ್ಲಿ ಬೇರೆ ಪಂಗಡದವರನ್ನೂ ಸೇರಿಸಿಕೊಳ್ಳುವಂತೆ ಯತ್ನಿಸುವದರಲ್ಲಿ ಬರುವದು. ಇದಕ್ಕೆ ಪಿ·ಟರ ಫ್ರೀಮನ್ ಇವರು ಅಧ್ಯಕ್ಷರಾಗಿದ್ದು ಮಾರ್ಗನ್ ಜೋನ್ಸ ಇವರು ಕಾರ್ಯದರ್ಶಿಗಳಾಗಿದ್ದಾರೆ. ಕನ್ವರ್ಡಿ ಮೊದಲಾದವರೇ ಈ ಸಂಘದ ಸದಸ್ಯರು. ಇವರ ಮೇಲಿನ ಉದ್ದೇಶಕ್ಕೆ ಎಲ್ಲ ಕೂಲಿಕಾರ ಪಕ್ಷದವರ ಸಹಾನುಭೂತಿಯಿರುವದಂತೆ. † † † †

ರಾಸಹಳ್ಳಿಯಲ್ಲೂ ಸರದಾರ ವಲ್ಲಭಭಾಯಿಯವರಿಗೆ ಬಾಯಿಧಡಿ ಹಾಕಿದ ಮ್ಯಾಜಿಸ್ಟ್ರೇಟರ ಕಾಯಿದೆಯು ಇನ್ನೂ ಅಮಲಿನಲ್ಲಿದ್ದರೂ ಇಂದು ಗಾಂಧಿಯವರ ಮುಂದೆ ನಿರ್ಜೀವಿಯಾಗಿ ಅವರನ್ನು ಮುಟ್ಟಲಿಕ್ಕಾಗದೆ ಕಾಗದದ ಮಡಿಕೆಯಲ್ಲಿ ಅಡಗಿಕೊಂಡಿದೆ.

ಮ್ಯಾಜಿಸ್ಟ್ರೇಟನ ಕಾಯಿದೆಯನ್ನು ಧಿಕ್ಕರಿಸಿ ಅದೇ ರಾಸ ಹಳ್ಳಿಯಲ್ಲಿ ಗಾಂಧಿಯವರು ಇಂದು ಭಾಷಣ ಮಾಡಿದ್ದಕ್ಕೆ ಅವರಿಗೇನು ಧಕ್ಕೆ ತಗಲಲಿಲ್ಲ. ಮ್ಯಾಜಿಸ್ಟ್ರೇಟಗೆ ಗಾಂಧಿಯನ್ನು ಬಂಧಿಸುವ ಧೈರ್ಯವಿಲ್ಲದಾಗಿದೆ. ಗಾಂಧಿಜಿಯವರು ರಾಸ ಹಳ್ಳಿಯವರಿಗೆ ಈ ಸತ್ಯಾಗ್ರಹಕ್ಕಾಗಿ ೫೦೦ ಸ್ವಯಂಸೇವಕರನ್ನು ಪೂರೈಸಿಕೊಡಬೇಕೆಂದು ಹೇಳಿದ್ದಾರೆ. ಸರಕಾರವು ನಾವು ತಮ

ನಿಸಿದ ಉಪ್ಪನ್ನು ಕಸಿದುಕೊಂಡು ನಮ್ಮನ್ನು ಬಿಟ್ಟುಬಿಡ ಬೇಕೆಂದು ಪ್ರಾರ್ಥನೆಯಿದೆ. ಆಗಲಿ ನಾನು ಕಿರೀಟಧಾರಿಗಳನ್ನೆಲ್ಲ ಆದರೂ ನನ್ನ ಕೈಯೊಳಗಿನ ಉಪ್ಪನ್ನು ಸರಕಾರವು ಹೀಗೆ ಕಸಿದ ಕೊಳ್ಳ ಬಹುದೆ ನೋಡಿಬಿಡುವೆ. ಎಂದು ಗಾಂಧಿಯವರು ತಮ್ಮ ಭಾಷಣದಲ್ಲಿ ಹೇಳಿದರು.

* * * * *

ಸೂರತ ಜಿಲ್ಲೆಯಲ್ಲಿ ಒಟ್ಟಿಗೆ ಇಂದಿನವರೆಗೆ ೯೦೦ ಜನ ಪಟೇಲರು ರಾಜೀನಾಮೆಯನ್ನು ಕೊಟ್ಟಿರುವರು. ಅವರೆಲ್ಲ ತಮ್ಮ ರಾಜೀನಾಮೆ ಅರ್ಜಿಯಲ್ಲಿ 'ಈ ಬ್ರಿಟಿಶರ ಆಡಳಿತದಿಂದ ನಾವು ಆರ್ಥಿಕ, ಧಾರ್ಮಿಕ ಸಾಂಸ್ಕೃತಿಕ ಮೊದಲಾದ ಎಲ್ಲ ರೀತಿಯಿಂದಲೂ ಹಾಳಾಗಿರುವೆವು. ಇಂಥ ರಾಜ್ಯಪದ್ಧತಿಯಿಂದ ಸ್ವತಂತ್ರರಾಗಬೇಕೆಂದು ನಮ್ಮ ಭಾರತೀಯರು ಹೋರಾಡುತ್ತಿರುವ ಈ ಸಮಯದಲ್ಲಿ ಇಂಥ ಸರಕಾರದೊಡನೆ ನಾವು ಸಹಕಾರ ಮಾಡಲಾರೆವು. ನಿಮ್ಮ ಸೇವೆ ಸಾಕು' ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುವರು

# 'ಕನ್ನಡಿಗ'ನ ನಿತ್ಯ ಸಂಚಿಕೆ!

ಸ್ವಾತಂತ್ರ್ಯ ಸಂಗ್ರಾಮದ ಸದ್ದು ಸರ್ವದಿಕ್ಕುಗಳಲ್ಲಿಯೂ ಮೊಳಗುತ್ತಲಿರುವದರಿಂದಲೂ, ಸತ್ಯಾಗ್ರಹದ ಜಯಭೇರಿಯ ಸಂಗತಿಗಳನ್ನು ತಿಳಿದುಕೊಳ್ಳಲು ಜನಸಾಮಾನ್ಯರು ಸಹ ಬಹಳ ಆತುರರಾಗಿರುವದರಿಂದಲೂ, ಜನರ ಈ ಆತುರತೆಯನ್ನು ತೃಪ್ತಿಪಡಿಸುವದಕ್ಕಾಗಿ, ನಾವು 'ಕನ್ನಡಿಗ'ನ ನಿತ್ಯ ಸಂಚಿಕೆಯನ್ನು ಹೊರಡಿಸಬೇಕೆಂದು ನಿಶ್ಚಯಿಸಿದಪ್ರಕಾರ ಫಾಲ್ಗುಣ ಬಹುಳ ೮ ತಾ|| ೨೨-೩-೩೦ ಶನಿವಾರದಿಂದಲೇ ಪ್ರಾರಂಭಿಸಿದ್ದೇವೆ.

ಸಧ್ಯದಲ್ಲಿ ಮುಂಬಯಿಯಿಂದ ಬರುವ ಇಂಗ್ಲೀಷ ಪತ್ರಿಕೆಗಳ ಅನುವಾದಗಳನ್ನು ಕೊಡುವದಲ್ಲದೇ, ಅಲ್ಲಲ್ಲಿಂದ ನಮ್ಮ ಸ್ವಂತ ಪ್ರತಿನಿಧಿಗಳ ಹಕೀಕತಿಗಳನ್ನೂ, ವಿಶೇಷ ಸುದ್ದಿಗಳನ್ನೂ ಕೊಡುವೆವು. ಇದಕ್ಕೆ ಜನರ ಪ್ರೋತ್ಸಾಹವು ದೊರೆತು, ಸುಮಾರು ದಿನಾಲು ಎರಡು ಸಾವಿರ ಪ್ರತಿಗಳು ಖರ್ಚಾಗಹತ್ತಿದ ಕೂಡಲೇ, ನಾವು ಸ್ವತಂತ್ರವಾಗಿ "ಫ್ರೀಪ್ರೆಸ್" ಅಸೋಸಿಯೇಟೆಡ್ ಪ್ರೆಸ್"ಗಳ ತಂತಿಗಳನ್ನೂ ಪ್ರಸಿದ್ಧಪಡಿಸುವೆವು

ನಿತ್ಯಪತ್ರಿಕೆಯು ಆಕಾರವು 'ಕನ್ನಡಿಗ'ನ ಅರ್ಧದಷ್ಟೇ ಆಗುವದು. ಪುಟಗಳು ನಾಲ್ಕು ಸಂಚಿಕೆಯೊಂದಕ್ಕೆ ಬೆಲೆ ಮೂರು ಕಾಸು ಮಾತ್ರ. ಗದಗ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಾಪುರ, ಹೊಸಪೇಟೆ ರಾಯಚೂರ ಮುಂತಾದ ಸ್ಥಳಗಳಿಗೆ ಪತ್ರಿಕೆಗಳನ್ನು ಕಳಿಸ ಬೇಕೆಂದು ಏರ್ಪಡಿಸಲಾಗಿದೆ. ಈಗ ಮೋಟಾರುಗಳು ಎಲ್ಲಿಂದಲೂ ಇರುವದರಿಂದ ಅಲ್ಲಲ್ಲಿಯ ಕೆಲವು ಮೋಟಾರುವಾಲಾಗಳ ಮುಖಾಂತರ ಪತ್ರಿಕೆಯ ವಿತರಣೆಯನ್ನು ಮಾಡಬೇಕೆಂದಿದೆ. ಎಲ್ಲಲ್ಲಿ ಕೊಡಬೇಕೆನ್ನುವರೋ, ಅಲ್ಲಿಯವರು ನಮಗೆ ಪತ್ರ ಬರೆದುಕೊಳ್ಳಬೇಕು. ತಮ್ಮ ತಮ್ಮ ಮೋಟಾರುಗಳಿಂದ ಪತ್ರಿಕೆಗಳನ್ನು ಒಯ್ಯುವ ವ್ಯವಸ್ಥೆಯನ್ನು ಅಲ್ಲಿಯ ಮೋಟಾರುಗಳ ಒಡೆಯರು ಮಾಡಬೇಕು. ಪೋಸ್ಟಿನಿಂದ ಕಳಿಸುವ ವ್ಯವಸ್ಥೆಯನ್ನು ಸಧ್ಯದಲ್ಲಿ ಮಾಡುವ ಇಚ್ಛೆ ನಮಗಿರುವದಿಲ್ಲ. ನಿತ್ಯ ಪತ್ರಿಕೆಯ ಸಂಬಂಧವಾಗಿ ನಮ್ಮ ಉದ್ದೇಶವು ಈ ಕನ್ನಡ ನಾಡಿನಲ್ಲಿ ಒಂದುದೇ ಆದರೆ ಬೇಗ ಪ್ರಯೋಗ ಮಾಡಬಹುದು. ತಿಂಗಳ ಬಿಲ್ಲ ತೆಗೆದುಕೊಳ್ಳುವವರು ಸಹ ಸಧ್ಯದಲ್ಲಿ ದಿನಕ್ಕೆ ಸಂಚಿಕೆಯೊಂದಕ್ಕೆ ಕಾಲು ಆಣೆಯಂತೆ ಬಿಲ್ಲುಮಾಡಿ ಏಜಂಟರಿಗೆ ಸಲ್ಲಿಸಬೇಕು.

ಏಜಂಟರಾಗಲಿಚ್ಛಿಸುವವರು ಕೂಡಲೇ ಬರೆದುಕೊಳ್ಳಬೇಕು. ಸಣ್ಣ ಊರವರು ಕನಿಷ್ಟ ಮೂರು ರೂಪಾಯಿಗಳನ್ನೂ, ಪಟ್ಟಣದವರು ಕನಿಷ್ಟ ಹತ್ತು ರೂಪಾಯಿಗಳನ್ನೂ ಠೇವು ಕಳಿಸಬೇಕು. ಸ್ಥಾನಿಕ ಕಾಂಗ್ರೇಸ ಕಮಿಟಿಯ, ಅಥವಾ ಮುಖ್ಯ ಸಭ್ಯ ಗೃಹಸ್ಥರ ಶಿಫಾರಸು ಪತ್ರ ಸಹ ಪ್ರಮಾಣಪತ್ರದೊಂದಿಗೆ ಅರ್ಜಿಯ ಸಂಗಡ ಕಳಿಸತಕ್ಕದ್ದು. ಪ್ರತಿವಾರದಲ್ಲಿ ಲೆಕ್ಕವನ್ನೂ ಹಣವನ್ನೂ, ಮಾರದೆ ಉಳಿದ ಸಂಚಿಕೆಗಳನ್ನೂ ತಿರುಗಿ ಕಳಿಸತಕ್ಕದ್ದು. ನೂರಕ್ಕೆ ೨೫ ರೂಪಾಯಿಗಳಂತೆ ಏಜಂಟರಿಗೆ ಕಮೀಶನ್ ದೊರೆಯುವದು. ಸಣ್ಣ ಊರುಗಳ ಏಜಂಟರು ಸಣ್ಣ ಊರುಗಳಲ್ಲಿ ದಿನಾಲು ೧೦ (೧೨) ಪ್ರತಿಗಳನ್ನು ತರಿಸಿಕೊಂಡರೂ ಅವರಿಗೆ ಪ್ರತಿ ತಿಂಗಳು ೨-೩ ರೂಪಾಯಿ ಕಮೀಶನ್ನಿಯೇ ದೊರೆಯುವವು. ಇನ್ನು ಪಟ್ಟಣಗಳಲ್ಲಿ ನೂರನ್ನೂರು ಪ್ರತಿಗಳನ್ನು ಮಾರುವ ಏಜಂಟರಿಗೆ ತಿಂಗಳೊಂದಕ್ಕೆ ೧೦ ರೂಪಾಯಿಗಳಿಂದ ೨೦ರ ವರೆಗೆ ಪಗಾರ ಬೀಳುವದು. ಮೇಲಿನಕೆಲವು ದೊಡ್ಡ ಪಟ್ಟಣಗಳಿಗೆ ಸಹ ಇಂಗ್ಲೀಷ ಪತ್ರಿಕೆಗಳಿಗಿಂತಲೂ, ಮೊದಲು ನಾಲ್ಕನೇದಿ ಸುದ್ದಿಗಳು ನಮ್ಮ ಪತ್ರಿಕೆಯಿಂದ ತಿಳಿಯುವವು. ಏಜಂಟರು ಕೆಲವು ಪ್ರಮುಖ ಸುದ್ದಿಗಳನ್ನು ಬೀದಿಯಲ್ಲಿ ಒದರುತ್ತ ತಿರುಗಿಯಾಗಲಿ, ಸ್ಥಾನಿಕ ಮುಖ್ಯ ಮುಖಂಡರನ್ನು ಭೆಟ್ಟಿಯಾಗಿ ಅವರ ಹೆಸರನ್ನು ನೋಂದಾಯಿಸಿಕೊಂಡಾಗಲಿ, ಪ್ರಯತ್ನಿಸಿದರೆ ಜನರಲ್ಲಿ ಪ್ರತಿಗಳು ಹೆಚ್ಚಾಗಿ ಖರ್ಚಾಗುವವು, ಆದುದರಿಂದ ಆವಶ್ಯಕರು ಕೂಡಲೇ ಏಜಂಟರಾಗಲು ಬರೆದುಕೊಳ್ಳತಕ್ಕದ್ದು.

ಜಾಹೀರಾತಿನ ದರ:— ಕಾಯಂ ಜಾಹೀರಾತುಗಳಿಗೆ ಒಂದು ಕಾಲಮ್ಮಿನ ಒಂದು ಇಂಚಿನ ಪ್ರತಿಯೊಂದು ಸಂಚಿಕೆಗೆ ನಾಲ್ಕು ಆಣೆ ಹಂಗಾಮೀ ಜಾಹೀರಾತುಗಳಿಗೆ ಐದು ಆಣೆ

ನಿತ್ಯ ಪತ್ರಿಕೆಯ ವ್ಯವಸ್ಥಾಪಕರು
"ಕನ್ನಡಿಗನ" ಕಾರ್ಯಾಲಯ ಬಾಗಲಕೋಟೆ.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ, ಅವರಿಂದ ಅಲ್ಲಿಯೇ ಪ್ರಸಿದ್ಧ ಪಡಿಸಲ್ಪಟ್ಟಿತು.

ರೆ. ನಂ. ಬಿ ೧೯೪೭

ಬೆಲೆ ೦—೦—೩

ನಿತ್ಯ ಸುಚಿಕೆಯು.

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ರವಿವಾರ ಮಿತಿ ಫಾಲ್ಗುಣ ಬಹುಳ ೯ ಶಕ ೧೮೫೧ ತಾ ೨೩—೩—೩೦ ಸಂಚಿಕೆ ೨

# ಸಂಪಾದಕರ ಭೂಮಿಕೆ

ನನ್ನ ದೇಹವು ನಿನ್ನ ಹೋರಾಟಕಾಗಿ।

ಕಣ್ಣನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।

ನನ್ನ ಪ್ರಾಣವು ನಿನ್ನ ಗಂಧವನು ಹೀರಬಹ ಗಂಧವಹವೆಂದು ತಿಳಿಯೆ॥

— ಬೇಂದ್ರೆ ದತ್ತಾತ್ರಯರಾಯರು.

**ವಿಪತ್ತಿಕಾಲೇ ಧಿಯೋಪಿ ಪುಂಸಾಂ ಮಲಿನೀಭವಂತಿ.**

ಉಪ್ಪಿನ ಮೇಲಿನ ಕರಪಟ್ಟಿಯನ್ನು ತೆಗೆಯಬೇಕೆಂಬ ಠರಾವನ್ನು ಶ್ರೀ ಶಿವದೇವ ನಂಧದತ್ತ ಇವರು ಅಸೆಂಬ್ಲಿಯಲ್ಲಿ ತಂದಿದ್ದು, ಅದು ೫೭ ವಿರುದ್ಧ ಮತಗಳಿಂದ ನಾಮಂಜೂರ ಮಾಡಲ್ಪಟ್ಟಿತೆಂಬ ಸಂಗತಿಯನ್ನು ವಾಚಕರು ನಿನ್ನಿನ ಕನ್ನಡಿಗ ದಲ್ಲಿ ಓದಿರುವರಷ್ಟೇ. ವಿರುದ್ಧ ಮತಕೊಟ್ಟವರೊಳಗೆ ಶ್ರೀ ಛೆಟ್ಟಿ ಮತ್ತು ಪುರುಷೋತ್ತಮದಾಸ ಠಾಕೂರದಾಸ ಇವರೀರ್ವರ ಹೆಸರುಗಳು ಎಲ್ಲರ ಕಣ್ಣಲ್ಲಿಯೂ ಚುಚ್ಚುವಂತಿವೆ. ಪುರುಷೋತ್ತಮರು ಠರಾವನ್ನು ಕಡಿವೆ. ಮಾಡಿ ರೆವಿನ್ಯೂ ಬರಲಿಕ್ಕೆ ೭ ಕೋಟಿ ರೂಪಾಯಿಗಳು ಪ್ರಜಾ ಭಾರವೆಂಬ ಕಾರಣವನ್ನು ಒಳ್ಳೇ ಅಭ್ಯಾಸದಿಂದ ಮಂಡಿಸಿ ವಿರುದ್ಧ ಮತಕೊಟ್ಟು ಪುಣ್ಯ ಕಟ್ಟಿಕೊಂಡಿರುವರು. ಪುರುಷೋತ್ತಮದಾಸ ಠಾಕೂರದಾಸರು ಸಿದ್ಧಾಂತ ನಿಷ್ಠೆಯಿಂದಲೂ ಮಾರ್ಮಿಕ ದೃಷ್ಟಿಯಿಂದಲೂ ಸರಕಾರದ ಅನ್ಯಾಯವನ್ನು ವಿರೋಧಿಸುವ ಯೋಧ್ಧರೆಂದು ಹೆಸರಾದವರು; ಇವರ ಬುದ್ಧಿಗೂ ಮಸುಕು ಬರಬೇಕೆ? ನಮ್ಮ ದುರ್ದೈವ!! ಈ ಕರಪಟ್ಟಿಯು ಮೂಲಕ ಈ ಹೊತ್ತಿಗೂ ಎಷ್ಟೋ ಬಡವರು ಉಪ್ಪಿಲ್ಲದ ಊಟವನ್ನು ಮಾಡಬೇಕಾಗಿದೆಂದು "ಯಂಗ ಇಂಡಿಯಾ"ದಲ್ಲಿ ಗಾಂಧಿಯವರು ಪ್ರಕಟಿಸಿದ ಸಂಗತಿಯು ಪುರುಷೋತ್ತಮರಿಗೆ ಗೊತ್ತಿಲ್ಲವೆಂತಲ್ಲ. ಆದರೂ ಲಕ್ಷದ ಶ್ರೀಮಂತ ನಂತೆ ರೂಪಾಯಿಗಳನ್ನು ಎಣಿಸುವುದಕ್ಕೆಯೇ ಅಭ್ಯಾಸವುಳ್ಳ ಪುರುಷೋತ್ತಮರಿಗೆ ಬಡವರ ಹೊಟ್ಟೆಗೆ ಬರಿಹಾಕಿ ರೊಕ್ಕ ಹಿರಿದರೂ ಅನ್ಯಾಯವೆನಿಸಲೊಲ್ಲದಾಗಿದೆ. ಅಕಿಂಚನರಾದ ಪ್ರಜಾಜನರು ಒಂದು ಉಪವಾಸ ಎರಡು ಉಪವಾಸ ಕಳೆದರೂ ಚಿಂತೆಯಿಲ್ಲ ರೊಕ್ಕ ಕಾಯಬೇಕೆಂದು ಇವರ ಎಣಿಕೆಯೋ ಏನೋ? ಅಥವಾ ನಡೆಯುವ ಗೀಣೆ ಮೊದಲು ಉದ್ಯೋಗಗಳ ಚಳವಳಿಯ ಛಛಂಗಟಿಯನ್ನು ಹಗಲಿರುಳೂ ಬಯಸುತ್ತಿರುವ ಪುರುಷೋತ್ತಮರಿಗೆ ಬಡವರ ದಾರಿದ್ರ್ಯದ ಬಗ್ಗೆ ಕಕ್ಕುಲತೆ ಇಲ್ಲದಾಗಿ ತೋರುತ್ತದೆ! ಈ ಕಲ್ಪನೆ ಒತ್ತಟ್ಟಿಗಿರಲಿ. ಈ ಉಪ್ಪಿನ ಕಟ್ಟಳೆಯನ್ನು ಅಲ್ಲಗಳೆಯಬೇಕೆಂದು ಜನದ್ವಿಖ್ಯಾತರಾದ ಮಹಾತ್ಮರಂಥ ಪೂಜ್ಯ ಪುರುಷರು ಕೂಡ ಪ್ರಾಣಕೊಡಲಿಕ್ಕೆ ಸಿದ್ಧರಾಗಿ ಜೀವದ ಮೇಲೆ ಹಂಗುದೊರೆದು ಹೊರಡಬೇಕೆಂದು ಮಾಡಿದ ಈ ಸಮಯದಲ್ಲಾದರೂ, ಧೈರ್ಯವನ್ನು ತೋರಿದು ಪುರುಷೋತ್ತಮರು ಮತಕೊಡಬೇಕಾಗಿತ್ತೆಂದು ನಮ್ಮ ಅಭಿಪ್ರಾಯ. ಇದರಂತೆ ಜಮೀನದಾರ ಪ್ರಭುಗಳಿಗೆ ಬ್ರಿಟಿಶ ಕಪ್ಪದ ಸರಕಾರ ಮೇಲೆ ಎರಡನೇ ದೇಶದ ಕಪ್ಪದ ಸರಕಾರಗಳಿಗೆ ಗೆಲವು ಕಡಿಮೆ ಕರ ಇರಬೇಕೆಂಬ ಸರಕಾರದವರ ಸೂಚನೆಯು ಅತ್ಯಂತ ಸಮಂಜಸ ತೋರುತ್ತಿರುವುದು. ನೆಚ್ಚಿದ ಎಮ್ಮೆ ಕೋಣ ಈಯಿತೆಂಬಂತೆ ನಮ್ಮ ಬುದ್ಧಿವಂತರ ಸ್ಥಿತಿಯಾಗ ಹತ್ತಿದೆ. ಬ್ರಿಟಿಶರು ಈಗ ನೂರವಷ್ಟು ವರುಷಗಳಿಂದ ನಮ್ಮನ್ನೂ ಎತ್ತಿ ಆಡಿಸಿ ಲಾಲನೆ ಪಾಲನೆ ಮಾಡಿರುವರೆಂದು ಬಗೆದು ಅವರಿಗೆ ಈ ಸವಲತ್ತನ್ನು ಕೊಡಲು ಜಮೀನದಾರರು ಸಿದ್ಧರಾಗಿರುವರೇನು? ಇದರಲ್ಲೇನು ಅನ್ಯಾಯವಿಲ್ಲವಂತೆ! ಯಾಕೆಂದರೆ ಎಲ್ಲ ವಸಾಹತುಗಳಲ್ಲಿ ಬ್ರಿಟಿಶ ಕಾಯಿಗೆ ಇಷ್ಟು ಸವಲತ್ತು ಇದ್ದೇ ಇರುವದಂತೆ. ಇದ್ದಿದ್ದೀತು. ಇಂಗ್ಲಂಡವು ಉಳಿದ ವಸಾಹತುಗಳಿಗೆ ಹಾಲುಣಿಸಿದ್ದರೆ ನಮಗೆ ನಾನಾಬಗೆಯ ವಿಷ ಉಣಿಸಿ ಕ್ಷೀಣಕಾಯರನ್ನಾಗಿ ಮಾಡಿರುವಳೆಂಬುದನ್ನು ನೆನೆದರೆ ಎಂಥ ಉದಾರನ ಔದಾರ್ಯವಾದರೂ ಬತ್ತಿಹೋಗುವಂತಿದೆ. ಮೇಲಾಗಿ ಇಂಥ ಕೇಳಿಕೆಯಲ್ಲಿ ಮಾತ್ರ ಹಿಂದುಸ್ಥಾನಕ್ಕೆ ವಸಾಹತುಗಳ ಸಾದೃಶ್ಯ ತೋರಿಸಬರುತ್ತಿದೆ. ವಸಾಹತುಗಳ ಹಕ್ಕುಗಳನ್ನು ನಮಗೆ ಕೊಡಿರೆಂದು ಕೇಳಿದರೆ ಬ್ರಿಟಿಶರಿಗೆ ಕಲಿಕಿರುಗುತ್ತದೆ. ಇವೆಲ್ಲ ಜರುಗುವದರಿಂದ ಬುದ್ಧಿವಂತರಿಗೆ ಅರಿವಾಗುತ್ತಿರಲಿಕ್ಕಿಲ್ಲವೇ? ಹಾಗಿದ್ದರೆ "ಓದಿ ಮರುಳಾದ ಕೂಚುಭಟ್ಟ" ಎಂಬಂತೆ ನಮ್ಮ ಜಮೀನದಾರ ಸ್ಥಿತಿ ಆಗಬಹುದು.

---

ಸೇನಗುಪ್ತರು ರಂಗೂನದಲ್ಲಿ ಮಾಡಿದ ಭಾಷಣವು ಉತ್ಕೃಷ್ಟವಾಗಿತ್ತೆಂದೂ ಅದರಲ್ಲಿ ರಾಜದ್ರೋಹವೇನೂ ಇರಲಿಲ್ಲವೆಂದೂ ಸರಕಾರದವರು ತರಿಸಿದ ಸಾಕ್ಷಿದಾರರಲ್ಲಿ ಕೆಲವು ಸಾಕ್ಷಿ ಹೇಳಿರುವರು. ಇವರೆಲ್ಲ ಸೇನಗುಪ್ತರ ಮಿತ್ರರೆಂಬುದು ಸರಕಾರಕ್ಕೆ ಹಿಂದುಗಡೆ ಗೊತ್ತಾಯಿತಂತೆ.

## ಕಾಯಿದೆ ಭಂಗಕ್ಕೂ

# ಬಹಿಷ್ಕಾರಕ್ಕೂ ವರೆಹಚ್ಚಿದರೆ

(ಓದುಗರು ಪ್ರಶ್ನೆ ಮಾಡಿದ್ದಕ್ಕೆ ಮಹಾತ್ಮರು ಉತ್ತರ ಕೊಟ್ಟಿರುವರು)

ಪ್ರಶ್ನೆ:— ಗಾಂಧಿಜಿ, ಸವಿನಯ ಕಾಯಿದೆ ಭಂಗ ಚಳವಳಿಗಿಂತಲೂ ಬಹಿಷ್ಕಾರ ಚಳವಳಿಯೇ ಹೆಚ್ಚು ಯಶಸ್ವಿಯಾಗಬಹುದಲ್ಲೇ?

ಉತ್ತರ:— ಎಷ್ಟೋ ವರ್ಷಗಳ ಹಿಂದೆಯೇ ನಾನು ಈ ಬಹಿಷ್ಕಾರದ ಸಿದ್ಧಾಂತವನ್ನು ಕಂಡು, ಬಹಳ ಬಹಿಷ್ಕಾರದ ನಿಷ್ಠೆ ಪ್ರಯೋಗಗಳಿಗಿಂತಲೂ ಸವಿನಯ [illegible] ಯಶಸ್ವಿಯಾಗಿದೆ. ಅದರ [illegible] ಬಹಿಷ್ಕಾರ ಚಳವಳಿಯನ್ನು ಕೈಕೊಳ್ಳುವದರಿಂದ ಏನ ಪ್ರಯೋಜನ ಆಗಲಿಲ್ಲ

ಪ್ರಶ್ನೆ:— ಆದರೆ ಹಿಂದೆ ಒಮ್ಮೆ ಬ್ರಿಟಿಶ ಬಟ್ಟೆಗಳನ್ನು ಆತ್ಯಂತಿಕ [illegible] ಬಹಿಷ್ಕರಿಸಬೇಕೆಂದು ನೀವು [illegible] ತಿಳಿಸಿದ್ದಿರಿ. ಅದನ್ನು ಉಳಿದ ಪ್ರಾಂತಗಳು ಅನುಸರಿಸಲಿಲ್ಲವಾದ್ದರಿಂದ ಹೀಗೆ ಮಾಡಬೇಕಾಗಿತ್ತು.

ಉತ್ತರ:— ಅದಕ್ಕೆ ಮೋಹನ [illegible] ಆಹಮ್ಮದಾಬಾದ ಮತ್ತು [illegible] ರಕ್ತತರ್ಪಣದ [illegible] ಹಿಂದೆ [illegible] ಲಾಭವುಂಟಾದದ್ದು.

ಪ್ರಶ್ನೆ:— (ಬಹಿಷ್ಕಾರ ನಡೆಯದಿದ್ದರೆ) ಎಂದಿಗೂ ಪ್ರಾಂತದವರು ಆ [illegible] ಕಾಯಿದೆಗಳನ್ನು ಎತ್ತಿ ಹಿಡಿಯಲಿಲ್ಲವೆಂದು.

ಉತ್ತರ:— ಹಾಗೆ ಮಾಡದಿದ್ದದು ಜನರ ಮನಸಿನಲ್ಲಿ [illegible] ಅರ್ಥ. ನನು [illegible] ಬಹಿಷ್ಕಾರದಲ್ಲಿ ನನಗೆ ಸ್ವತಃ ವಿಶ್ವಾಸವಿದ್ದಿಲ್ಲವಂತ ನಾನು ಅದಕ್ಕೆ ಬೆಂಬಲವನ್ನೀಯಲಿಲ್ಲ.

ಪ್ರಶ್ನೆ:— ಆದರೆ ಅವರ ಸತ್ಯಾಗ್ರಹವನ್ನು ಯಶಸ್ವಿಯಾಗಿ [illegible] ವಿದೇಶಿ ಬಟ್ಟೆಗಳ ಬಹಿಷ್ಕಾರವನ್ನು [illegible] ಕೊಡಬೇಕಾದದ್ದಲ್ಲವೆ?

ಉತ್ತರ:— ಹಾಗಲ್ಲ [illegible] ಬಹಿಷ್ಕಾರ [illegible] ವಿಪರೀತ [illegible] ಈ ಬಹಿಷ್ಕಾರವು ಯಶಸ್ವಿಯಾಗಿ [illegible] ಸವಿನಯ ಕಾಯದೆ ಭಂಗದ [illegible] ಸತ್ಯಾಗ್ರಹಿಗಳು [illegible] ಬೇಕಾಗಿರುವದು.

ಪ್ರಶ್ನೆ:— ಆದರೆ! [illegible] ಅವರನ್ನೆಲ್ಲ ಸೆರೆಮನೆಯಲ್ಲಿ ಹಾಕಿ [illegible] ನಿಮ್ಮ ಕಾಯಿದೆ ಭಂಗವು ಹೇಗೆ ಉಳಿಯಬಹುದಲ್ಲವೇ.

ಉತ್ತರ:— ಸರಕಾರವು ಹಾಗೆ ಮಾಡಿದರೆ ಈ ಜನರ ಉಪಟಳದಿಂದ ಸರಕಾರವು ನಿಶ್ಚಿಂತವಾಗಬೇಕೆಂದು ಬಯಸಿದರೆ ಇಷ್ಟು ಜನರನ್ನೆಲ್ಲ ಗಲ್ಲಿಗೆ ಏರಿಸದ ಹೊರತು ಇವರ ವಿರೋಧವು ಅವರಿಗೆ ತಪ್ಪಿದ್ದಲ್ಲ. ಈ ಜನರಿಷ್ಟು ತಮ್ಮ ಕಾರ್ಯದಲ್ಲಿ [illegible] ಅಚಲರಾಗಿಯೂ ನಿಂತರೆಂದರೆ ಏನು ಮಾಡಬೇಕೆಂಬುದು ತೋಚದಂತಾಗಿ ಸರಕಾರದ [illegible] ಕೊಂಡು [illegible] ಸಹಾಯವಾಗುವದು.

ಪ್ರಶ್ನೆ:— ಇದು ಹೇಗೆ, ಈ ಜನರು ಜೇಲಿನಲ್ಲಿರುವಾಗಲೂ ಸರಕಾರಕ್ಕೆ ತೊಂದರೆಯನ್ನುಂಟುಮಾಡಬಲ್ಲರೇ?

ಉತ್ತರ:— ಈ ಜನರನ್ನೆಲ್ಲ ಎಷ್ಟು ದಿವಸ ಬಂದಿವಾಸದಲ್ಲಿಟ್ಟರು [illegible] ಬರುವದಿಲ್ಲ [illegible] ಮಾಡಿದರೆ [illegible] ಸಹಸ್ರ ಸತ್ಯಾಗ್ರಹಿಗಳು [illegible]. [illegible] ಕೈದಿಯು ಸತ್ಯಾಗ್ರಹಿ ಇದ್ದೇ ಇರುವನೆಂದು ಅನ್ನಲಿಕ್ಕಾಗದು.

## ಪೋಲೀಸ ಠಾಣೆಯ ಮೇಲೆ ದಾಳಿ ಮಾಡಿದರು.

ಚಿರಂಪಿ [illegible] ಉತ್ತರ ಹಿಂದ ಸ್ಥಾನದ ಓರ್ವ ಗೃಹಸ್ಥನನ್ನು ಪೊಲೀಸರು ದಸ್ತು ಮಾಡಿದ್ದಕ್ಕಾಗಿ ೩೦೦ ಜನರ ಗುಂಪು [illegible] ಪೊಲೀಸ ಠಾಣೆಯ ಮೇಲೆ ದಾಳಿ ಮಾಡಿ ಆತನನ್ನು ಬಿಡಿಸಿದರು. ಪೊಲೀಸರಿಗೆ [illegible] ಪೋಲೀಸರು ಎಷ್ಟು ಹೇಳಿದರೂ ಕೇಳದೆ, ಮಂದಿಯನ್ನು ಚದರಿಸಿದ ಆ ಗುಂಪನ್ನು ಪೊಲೀಸರು [illegible] ಬೆನ್ನಟ್ಟಿ [illegible] ಬೆದರಿಸಿದರು. [illegible] ದಿವಸ ಈ ಶರಣು ಹೋದರು [illegible] ಆರೋಪದಿಂದ ಆತನನ್ನು ಕೈದು ಮಾಡಿದರು.

## ಹೊಸ ಆಜ್ಞೆ ಕಾನೂನು ಮತ್ತು ಬಿರತ ಕೈದಿಗಳು.

ಕಲ್ಕತ್ತೆಯ [illegible] ಚರ್ಚೆ ನಡೆದ ವೇಳೆಯಲ್ಲಿ ಪ್ರೇಕ್ಷಕರ ಸ್ಥಳದಲ್ಲಿ ಕುಳಿತಿದ್ದ ಓರ್ವ ಗೃಹಸ್ಥನ [illegible] ಹಾಳಗಲಿ' ಎಂದು ಕೂಗುತ್ತ ಕೆಲವು ಹಸ್ತಪತ್ರಿಕೆಗಳನ್ನು ಆಗೃಹದಲ್ಲೆಲ್ಲ 'ಬಿರತ ಕೈದಿಗಳನ್ನು ಬಿಡುವ [illegible]' 'ಅವರಿಗೆ [illegible] ಬಂದಿಸಿದ್ದಾರೆ; ಅಲ್ಲದೆ 'ಜೇಲಿನಲ್ಲಿ ಅವರ [illegible] ನಡೆದಿದೆ. ಇದು ತೀರ ಅನ್ಯಾಯ! ಇದೆಲ್ಲಕ್ಕೆ [illegible] ಕೂಲಿಕಾರ ಸರಕಾರದ ಹಾದೀ [illegible] ಇಂಥ ಅನ್ಯಾಯಗಳು ಇನ್ನು ನಿಲ್ಲಲೇ ಬೇಕು.

[illegible] ಅಧಿಕಾರಿಗಳ ವೇಳೆ ಮತ್ತು [illegible] ಕೈದಿಗಳನ್ನು ಬಿಡು' ಎಂಬ ಕೂಗು ಕೇಳಬಂದಿತು. ಮತ್ತು ಕೆಲವು ಹಸ್ತಪತ್ರಿಕೆಗಳ [illegible]. ಈ ರೀತಿ ಅವನೆಲ್ಲ ಮಾಡಿದವರು ಓರ್ವ [illegible]. [illegible] ಚರ್ಚೆ ಮುಗಿಯುವರೆಗೆ [illegible] ಬಿಟ್ಟಿದ್ದರಂತೆ ಅವರನ್ನು ಕೇಳಲಾಗಿ [illegible] ಕಮ್ಯೂನಿಸ್ಟ ಸಂಗದಕ್ಕೆ ಸೇರಿದವರೆಂದು ಹೇಳಿದರಂತೆ.

## ಎಪ್ರಿಲ ೬ ನೆ ತಾರೀಖಿಗೆ

# ಸಾರ್ವತ್ರಿಕ ಕಾಯದೆ ಭಂಗದ ಪ್ರಾರಂಭವು.

**ಉಪ್ಪಿನ ಕಟ್ಟಳೆಯನ್ನು ಮುರಿದನಂತರ ಬಂಧಿತರಾದವರು, ಕೊನೆವರೆಗೆ ನಿರಾಹಾರಿಗಳು ಪ್ರಾಣಬಿಡಬೇಕು.**

### ಮಹಾತ್ಮಾಜಿಯವರು ಮಹೀನದಿಯನ್ನು ದಾಟಿದ್ದು

ನಿನ್ನಿನ ದಿವಸ ರಾತ್ರಿಯೇ ಮ. ಗಾಂಧಿಯವರು ತಮ್ಮ ಶಾಂತಿ ಸೈನ್ಯದೊಂದಿಗೆ ಖೈರಾ ಜಿಲ್ಲೆಯ ಸೀಮಾಂತವನ್ನು ದಾಟಿ ಬರೋಡಾ ಜಿಲ್ಲೆಯ ಸೀಮೆಯನ್ನು ಸೇರಿದರು. ದಾರಿಯಲ್ಲಿ ಮಹೀನದಿಯನ್ನು ದಾಟಬೇಕಾಯಿತು. ರಾತ್ರಿ ವೇಳೆಯಲ್ಲಿ ನದಿಯ [illegible] ಕೆಸರಿನಲ್ಲಿಯೂ ನಡೆದು, ನೀರಿನಲ್ಲಿಯೂ ಮಾರ್ಗಕ್ರಮಣ ಮಾಡಲಿಕ್ಕೆ ಬಹು ಪ್ರಯಾಸವಾಯಿತು. ಗಾಂಧಿಯವರಿಗೆ ಆಯಾಸವು ಹೆಚ್ಚಾಗಿ ಕಡೆಗೆ ಸ್ವಯಂಸೇವಕರು ಹೆಗಲ ಮೇಲೆ ಎತ್ತಿಕೊಂಡು ಹೋದರು. ಇದಕ್ಕೆ ಗಾಂಧಿಯವರು ಒಮ್ಮೆಲೆ ಒಡಂಬಡದ್ದರಿಂದ ವಿಶೇಷವಾಗಿ ಹೇಳಿಕೊಳ್ಳಬೇಕಾಯಿತು.

### ಗಾಂಧಿ ಜವಹಾರಲಾಲರ ಭೆಟ್ಟಿ

ಜವಾಹರಲಾಲರೂ ಗಾಂಧಿಯವರ ಭೆಟ್ಟಿಗೆಂದು ರಾತ್ರಿ ಪಟ್ಟಣಕ್ಕೆ ಬಂದು ಅಲ್ಲಿ ಅವರ ದಾರಿ [illegible] ಆದರೂ ಹಾಗೆ ರಾತ್ರಿಯಲ್ಲಿಯೇ ಪ್ರಯಾಣಬೆಳೆಸಿ ಮಹೀನದಿಯನ್ನು ಅದೇ ರಾತ್ರಿಯಲ್ಲಿಯೇ ದಾಟಿ ಗಾಂಧಿಯವರನ್ನು ಕೂಡಿಕೊಂಡರು. ಅಲ್ಲಿ ಅವರೀರ್ವರೂ ಒಂದು ತಾಸಿನವರೆಗೆ ವಿಚಾರ ನಡಿಸಿ ಕಟ್ಟಕಡೆಗೆ ಸಾರ್ವತ್ರಿಕ ಕಾಯದೆಭಂಗವನ್ನು ಪ್ರಾರಂಭಿಸಲಿಕ್ಕೆ ಅಖಿಲಭಾರತ ಕಾಂಗ್ರೆಸ್ ಕಮೀಟಿಯವರಿಗೆ ಶಿಫಾರಸ ಮಾಡಲಿಕ್ಕೆ ಅಡ್ಡಿಯಿಲ್ಲವೆಂಬ ನಿರ್ಣಯಕ್ಕೆ ಬಂದರು.

### ಜಲಿಯನವಾಲಾಬಾಗದಲ್ಲಿ ಕೊಲೆಯಾದ ತಾರೀಖಿಗೇನೇ ಸ್ವಾತಂತ್ರ್ಯಯುದ್ಧ ಪ್ರಾರಂಭ.

ಎಪ್ರಿಲ ೬ ನೇ ತಾರೀಖಿನಿಂದ ಗಾಂಧಿಯವರು ಉಪ್ಪಿನ ಕಟ್ಟಳೆಯನ್ನು ಮುರಿಯಲಿಕ್ಕೆ ಆರಂಭಿಸುವರು. ಇದೇ ತಾರೀಖಿಗೆ ೧೯೧೯ ರಲ್ಲಿ ಜಲಿಯನವಾಲಾಬಾಗದ ಕೊಲೆಯ ಕಾಂಡವು ಸಂಭವಿಸಿದ್ದನ್ನು ಹಿಂದೀಜನರು ಮರೆಯುವಂತಿಲ್ಲ. ಈಶ್ವರಿ ಇಚ್ಛೆಯಿಂದ ಅದೇ ದಿವಸವೇ ಹಿಂದಿಯರು ದಾಸ್ಯವಿಮೋಚನೆಯ ಮೊದಲನೆ ಮೆಟ್ಟಲನ್ನು ಮೆಟ್ಟುತ್ತಿರುವರೆಂಬುದನ್ನು ನೆನೆದರೆ ಇದರಲ್ಲಿ ಏನಾದರೂ ಈಶ್ವರೀ ಸಂಕೇತವಿದ್ದಂತೆ ಭಾಸವಾಗುವದಿಲ್ಲವೆ?

### ಆಯುಷ್ಯದ ಇದೇ ನನ್ನ ಕೊನೆಯ ಕದನವು ಅದಕ್ಕಾಗಿ ಸೇರಬಾರಿರಿ

[illegible]ಪುರದಲ್ಲಿ ರಾತ್ರಿ ೮ ಘಂಟೆಗೆ ಕೂಡಿದ ಕಲ್ಪಿದ [illegible] ಪದ್ಧತಿಯಲ್ಲಿಯೇ ವಾಡಿಕೆಯಂತೆ ಆ ಊರ ಜನರಿಗೆ ಮಹಾತ್ಮಾಜಿಯವರು ವ್ಯಾಖ್ಯಾನ ಹೇಳಿದರು. ವ್ಯಾಖ್ಯಾನದಲ್ಲಿ ಇಂಥಾ (ಸ್ವಾತಂತ್ರ್ಯ ಹೋರಾಟವು) ತನ್ನ ಈ ಜನ್ಮದಲ್ಲಿಯ ಕೊನೆಯ ಕಾದಾಟವು. [illegible] ಈ [illegible] ಯುದ್ಧಕ್ಕೆ ಸೇರ [illegible] ಕಟ್ಟಳೆಗಳಲ್ಲಿ ಈ ಉಪ್ಪಿನ ಕಟ್ಟಳೆ [illegible] ಅಲ್ಪಕಾಲದಲ್ಲಿ [illegible] ಸತ್ಯಾಗ್ರಹಿಗಳ ಬಾಂಧವ್ಯ [illegible] ಅನುಕೂಲವಾಗುವದು [illegible] ಬಾಕಿ ಉಳಿದ ಕಟ್ಟಳೆಗಳ [illegible] ಬಹಿಷ್ಕಾರ [illegible] ಸತ್ಯಾಗ್ರಹಿಗಳು [illegible] ಸಿದ್ಧರಾಗಿರ ಬೇಕು [illegible] ಅನೇಕ ಪ್ರಾಂತಗಳ [illegible] ದಲ್ಲಿ [illegible] ಪ್ರಾರಂಭ [illegible] ದಿನಗಳಲ್ಲಿ [illegible] ಸ್ವಾತಂತ್ರ್ಯವು [illegible] ದೊರೆಯುವದು. [illegible]

### ಸರಕಾರೀ ನೌಕರೀ ಮಹಾಜನರನ್ನು ಬಹಿಷ್ಕರಿಸಿರಿ

ಈ ವೇಳೆ ಪಟ್ಟಣದಲ್ಲಿ ಸರಕಾರೀ ಚಾಕರೀ ಮಾಡುವವರನ್ನು ಏನೂ ಆತಂಕವಿಲ್ಲದೇ ಬಹಿಷ್ಕರಿಸಬಹುದೆಂದು ಮಹಾತ್ಮಾಜಿಯವರು ಅಪ್ಪಣೆ ಕೊಟ್ಟಿದ್ದಾರೆ. ಆದರೆ ಅದರಲ್ಲಿ ಒಂದು ಸೂಕ್ಷ್ಮಭೇದವನ್ನಿಟ್ಟಿದ್ದಾರೆ. ನಾವು ಸರಕಾರಿ ಅಧಿಕಾರದವರೆಂಬ ಭಾವನೆಯಿಂದ ಜನರ ಸೇವೆ ತೆಗೆದುಕೊಳ್ಳುವ ಕಲೆಕ್ಟರ ಅಧಿಕಾರಿಗಳನ್ನು ಸಾಮಾಜಿಕ ರೀತಿಯಿಂದ ಬಹಿಷ್ಕರಿಸಬೇಕು. ಆದರೆ ಅವರಿಗೆ ಮನುಷ್ಯಪ್ರಾಣಿ ಎಂಬ ಬಾಂಧವ್ಯ ಬುದ್ಧಿಯಿಂದ ಅನ್ನ ಔಷಧ ಅವಶ್ಯಕ್ಕೆ ನೆರವಾಗಬೇಕು. [illegible] ಕಾರಣದಿಂದ ನೀವು [illegible] ಒಬ್ಬರ [illegible] ನೀವು ಕೊಡತಕ್ಕದ್ದು. ಆದರೆ ಅವನು ತಾನೇ ನಿಮ್ಮ ಕರೆಗೆ ಹೋಗುತ್ತ ಅವನಿಗೆ ಇಲ್ಲದ ತೊಂದರೆಯುಂಟುಮಾಡಬಾರದು.

**ಮುಖಂಡರು ಗಾಂಧಿಜಿಯವರ ದರ್ಶನಕ್ಕೆ ಹೊರಟರು.**

ಆಂಧ್ರದೇಶದ ಪ್ರಮುಖ ದೇಶಭಕ್ತನಾದ ಸಾಂಬಮೂರ್ತಿ ಮತ್ತು ಕೆಲವು ಮುಂದಾಳುಗಳು ಮಹಾತ್ಮಾಜಿಯವರನ್ನು ಕಂಡು [illegible] ಜಂಬುಸರಕ್ಕೆ ಹೋಗತಕ್ಕವರಿದ್ದಾರೆ. ಜಂಬುಸರದಲ್ಲಿ [illegible] ಬಹು [illegible]ವಾಗಿದೆ. ಇದರ ಹಿಂದಿನ [illegible] ಬಿಸಿಲಿನಿಂದ ಕೆಲವು ಸತ್ಯಾಗ್ರಹಿಗಳು ಬಹಳ ದಣಿದಿದ್ದಾರೆ.

§ * *

ಅಹಮದಾಬಾದ ಮುನ್ಸಿಪಾಲಿಟಿ [illegible] ಗಾಂಧಿಜಿಯವರ ಉಪ್ಪಿನ ಸತ್ಯಾಗ್ರಹಕ್ಕೆ ಸಹಾಯ ಮಾಡುವರು.

ಖೈರಾ ಜಿಲ್ಲೆಯೊಳಗಿನ [illegible] ಪಟೇಲರೂ ತಮ್ಮ ಚಾಕರಿಯನ್ನು ಬಿಡುತ್ತಿರುವರು.

## ಕಲಕತ್ತಾ

ಕೋಮಿಲಾಪಟ್ಟಣದ ಅಭಯ ಆಶ್ರಮದಿಂದ ೪೫ ಸತ್ಯಾಗ್ರಹಿಗಳ ತಂಡವು ಹೊರಟು ಕಲಕತ್ತೆಗೆ ಬಂದಿದೆ, ಇವರು ಮುಂದೆ ಕಂಟಾಯಿಯಲ್ಲಿ ಪ್ರಾರಂಭವಾಗಲಿರುವ ಉಪ್ಪಿನ ಕಾಯಿದೆ ಭಂಗ ಚಳವಳಿಗೆ ಕೂಡಿಕೊಳ್ಳುತ್ತಲಿದ್ದಾರೆ. ಇವರೊಡನೆ ಪ್ರಫುಲ್ಲಘೋಷರೂ ಹೊರಟಿರುವರು

## ಮುಂಬಯಿ

ಮುಂಬಯಿಯಲ್ಲಿಯ ಸತ್ಯಾಗ್ರಹಿಗಳ ಸಂಖ್ಯೆಯು ದಿನ ದಿನಕ್ಕೆ ಬೆಳೆಯುತ್ತಿದ್ದು ಈ ಹೊತ್ತಿಗೆ ೧೨೦ ಜನ ಪ್ರಮುಖರ ಹೆಸರುಗಳು ಪ್ರಕಟವಾಗಿವೆ.

# ‘ಕನ್ನಡಿಗ’ನ ನಿತ್ಯ ಸಂಚಿಕೆ!

ಸ್ವಾತಂತ್ರ್ಯ ಸಂಗ್ರಾಮದ ಸದ್ದು ಸರ್ವದಿಕ್ಕುಗಳಲ್ಲಿಯೂ ಮೊಳಗುತ್ತಲಿರುವದರಿಂದಲೂ, ಸತ್ಯಾಗ್ರಹದ ಜಯಭೇರಿಯ ಸಂಗತಿಗಳನ್ನು ತಿಳಿದುಕೊಳ್ಳಲು ಜನಸಾಮಾನ್ಯರು ಬಹು ಆತುರರಾಗಿರುವದರಿಂದಲೂ, ಜನರ ಈ ಆತುರತೆಯನ್ನು ತೃಪ್ತಿಪಡಿಸುವದಕ್ಕಾಗಿ, ನಾವು ‘ಕನ್ನಡಿಗ’ನ ನಿತ್ಯ ಸಂಚಿಕೆಯನ್ನು ಹೊರಡಿಸಬೇಕೆಂಬ ನಿಶ್ಚಯಿಸಿದಪ್ರಕಾರ ಫಾಲ್ಗುಣ ಬಹುಳ ತಾ॥ ೨೨-೩-೩೦ ಶನಿವಾರದಿಂದಲೇ ಪ್ರಾರಂಭಿಸಿದ್ದೇವೆ.

ಸಧ್ಯದಲ್ಲಿ ಮುಂಬೈಯಿಂದ ಬರುವ ಇಂಗ್ಲೀಷ ಪತ್ರಿಕೆಗಳ ಅವತರಣಿಕೆಗಳನ್ನು ಕೊಡುವದಲ್ಲದೇ, ಅಲ್ಲಲ್ಲಿಂದ ನಮ್ಮ ಸ್ವಂತ ಪ್ರತಿನಿಧಿಗಳ ತಂತಿಗಳನ್ನೂ, ಮುಖ್ಯವಿಷಯಗಳ ಬಗ್ಗೆ ತರಿಸುವೆವು. ಇದಕ್ಕೆ ಜನರ ಪ್ರೋತ್ಸಾಹನವು ದೊರೆತು, ಸುಮಾರು ದಿನಾಲು ಎರಡು ಸಾವಿರ ಪ್ರತಿಗಳು ಮಾರಾಟವಾಗ ತೊಡಗಿದ ಕ್ಷಣವೇ, ನಾವು ಸ್ವತಂತ್ರವಾಗಿ “ಫ್ರೀಪ್ರೆಸ್”, “ಅಸೋಸಿಏಟೆಡ್ ಪ್ರೆಸ್” ಗಳ ತಂತಿಗಳನ್ನೂ ಪೂರೈಸಿಕೊಡುವೆವು.

ನಿತ್ಯಪತ್ರಿಕೆಯ ಆಕಾರವು ‘ಕನ್ನಡಿಗ’ನ ಈಗಿನ ಆಕಾರದಷ್ಟೇ ಆಗುವದು. ಪುಟಗಳು ನಾಲ್ಕು. ಸಂಚಿಕೆಯೊಂದಕ್ಕೆ ಬೆಲೆ ಮೂರು ಕಾಸು ಮಾತ್ರ. ಗದಗು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಾಪುರ, ಬಳ್ಳಾರಿ ರಾಯಚೂರ ಮುಂತಾದ ಸ್ಥಳಗಳಿಗೆ ಪಾರ್ಸಲಗಳನ್ನು ಕಳಿಸಿ ಏಜಂಟರ ಮುಖಾಂತರ ಮಾರಾಟ ಮಾಡಲಾಗುವದು. ಈಗ ಮೋಟಾರುಗಳು ಎಲ್ಲಡೆಗೂ ಇರುವದರಿಂದ ಅಲ್ಲಲ್ಲಿಯ ಕೆಲವು ಮೋಟಾರ ಏಜಂಟರು ನಮ್ಮ ಪತ್ರಿಕೆಯ ಪಾರ್ಸಲುಗಳನ್ನು ಕೊಟ್ಟರೆ [illegible], ಅಲ್ಲಿಯವರು ನಮಗೆ ಪತ್ರ ಬರೆದುಕೊಳ್ಳಬೇಕು. ತಮ್ಮ ತಮ್ಮ ಮೋಟಾರುಗಳಿಂದ ಪಾರ್ಸಲುಗಳನ್ನು ಒಯ್ಯುವ ವ್ಯವಸ್ಥೆಯನ್ನು ಅಲ್ಲಲ್ಲಿಯ ಮೋಟಾರುಗಳ ಟಿಕೀಟು ಏಜಂಟರು ತಾವೇ ಮಾಡಿಕೊಳ್ಳತಕ್ಕದ್ದು. ಪೋಸ್ಟಿನಿಂದ ಕಳಿಸುವ ವ್ಯವಸ್ಥೆಯನ್ನು ಸಧ್ಯದಲ್ಲಿ ಮಾಡುವದು ಶಕ್ಯವಾಗಿರುವದಿಲ್ಲ. ನಿತ್ಯ ಪತ್ರಿಕೆಯು ಕಾಯಮವಾಗಿ ನಡೆಯುವದಕ್ಕೆ [illegible] ಈ ಕನ್ನಡ ನಾಡಿನಲ್ಲಿ ಒಂದೇ ಆದರೆ [illegible] ಶೀಘ್ರವಾಗಿ ಪ್ರವೇಶ ಮಾಡಬಹುದು. ತಿಂಗಳ [illegible] ತಗೆದುಕೊಳ್ಳುವವರು ಸಹ [illegible] ದಿನಕ್ಕೆ ಸಂಚಿಕೆಯೊಂದಕ್ಕೆ ಕಾಲು ಆಣೆಯಂತೆ ಲೆಕ್ಕಮಾಡಿ ಏಜಂಟರಿಗೆ ಸಲ್ಲಿಸಬೇಕು.

ಏಜಂಟರಾಗಲಿಚ್ಛಿಸುವವರು ಕೂಡಲೇ ಬರೆದುಕೊಳ್ಳಬೇಕು. ಸಣ್ಣ ಊರವರು ಕನಿಷ್ಟ ಮೂರು ರೂಪಾಯಿಗಳನ್ನೂ, ಪಟ್ಟಣದವರು ಕನಿಷ್ಟ ಹತ್ತು ರೂಪಾಯಿಗಳನ್ನೂ ಠೇವು ಕಳಿಸಬೇಕು. ಸ್ಥಾನಿಕ ಕಾಂಗ್ರೆಸ ಕಮಿಟಿಯ, ಅಥವಾ ಮುಖ್ಯ ಸದ್ಗೃಹಸ್ಥರ ಒಂದು ಸರ್ಟಿಫಿಕೇಟನ್ನಾದರೂ ಪ್ರಾಮಾಣಿಕತನದ ಬಗ್ಗೆ ಅರ್ಜಿಯ ಸಂಗಡ ಕಳಿಸತಕ್ಕದ್ದು. ಪ್ರತಿವಾರದಲ್ಲಿ ಲೆಕ್ಕವನ್ನೂ ಹಣವನ್ನೂ, ಮಾರದೇ ಇದ್ದ ಸಂಚಿಕೆಗಳನ್ನೂ ತಿರುಗಿ ಕಳಿಸತಕ್ಕದ್ದು. ನೂರಕ್ಕೆ ೨೫ ರೂಪಾಯಿಗಳಂತೆ ಏಜಂಟರಿಗೆ ಕಮೀಶನ್ ದೊರೆಯುವದು. ಮೋಟಾರುಗಳ ಟಿಕೀಟ ಏಜಂಟರುಗಳು ಸಣ್ಣ ಊರುಗಳಲ್ಲಿ ದಿನಾಲು ೧೦ ರಿಂದ ೧೨ ಪ್ರತಿಗಳನ್ನು ತರಿಸಿಕೊಂಡರೂ ಅವರಿಗೆ ಪ್ರತಿ ತಿಂಗಳು ೨-೩ ರೂಪಾಯಿ ಕಮಿಶನ್ನಿನಲ್ಲಿಯೇ ದೊರೆಯುವವು. ಇನ್ನು ಪಟ್ಟಣಗಳಲ್ಲಿ ನೂರಿನ್ನೂರು ಪ್ರತಿಗಳನ್ನು ಮಾರುವ ಏಜಂಟರಿಗೆ ತಿಂಗಳೊಂದಕ್ಕೆ ೧೦ ರೂಪಾಯಿಗಳಿಂದ ೩೦ರ ವರೆಗೆ ಸಿಗಬಹುದು. [illegible] ಪಟ್ಟಣಗಳಿಗೆ ಸಹ ಇಂಗ್ಲೀಷ ಪತ್ರಿಕೆಗಳಿಗಿಂತಲೂ, ಮೊದಲು ಮುಖ್ಯವಾದ ಸುದ್ದಿಗಳು ನಮ್ಮ ಪತ್ರಿಕೆಯಿಂದ ತಿಳಿಯುವವು. [illegible] ಏಜಂಟರು [illegible] ಸುದ್ದಿಗಳನ್ನು [illegible], ಸ್ಥಾನಿಕ ಮುಖ್ಯ ಮಂದಿಗಳನ್ನು ಭೆಟ್ಟಿಯಾಗಿ ಅವರ ಹೆಸರನ್ನು ನೊಂದಾಯಿಸಿಕೊಂಡಾಗಲಿ, ಪ್ರಯತ್ನಿಸಿದರೆ ಜನರಲ್ಲಿ ಪ್ರತಿಗಳು ಹೆಚ್ಚಾಗಿ ಖರ್ಚಾಗಲಾರಂಭಿಸುವವು, ಆದುದರಿಂದ ಅವಶ್ಯಕರು ಕೂಡಲೇ ಏಜಂಟರಾಗಲು ಬರೆದುಕೊಳ್ಳತಕ್ಕದ್ದು.

ಜಾಹಿರಾತಿನ ದರ— ಕಾಯಂ ಜಾಹಿರಾತಗಳಿಗೆ ಒಂದು ಕಾಲಮ್ಮಿನ ಒಂದು ಇಂಚಿನ ಪ್ರತಿಯೊಂದು ಸಂಚಿಕೆಗೆ ನಾಲ್ಕು ಆಣೆ. ತಂಗಾಮಿ ಜಾಹೀರಾತುಗಳಿಗೆ ಐದು ಆಣೆ.

ನಿತ್ಯ ಪತ್ರಿಕೆಯ ವ್ಯವಸ್ಥಾಪಕರು
“ಕನ್ನಡಿಗ” ಕಾರ್ಯಾಲಯ ಬಾಗಲಕೋಟೆ.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ, ಅವರಿಂದ ಅಲ್ಲಿಯೇ ಪ್ರಸಿದ್ಧ ಪಡಿಸಲ್ಪಟ್ಟಿತು.

ರಿ. ನಂ. ಬಿ ೧೯೪೭

ಬೆಲೆ ೦—೦—೩

# [illegible]

ನಿತ್ಯಪತ್ರಿಕೆಯು

[illegible] — ಮನು

ಸಂಪಾದಕರು— [illegible] ಶ್ರೀನಿವಾಸರಾಯರು

ಬಾಗಲಕೋಟೆ ಸೋಮವಾರ ವಿಕ್ರಮ ಫಾಲ್ಗುಣ ಬಹುಳ ೧೨ ಶಕ ೧೮೬೯ ತಾ ೨೯—೩—೪೮ ಸಂಚಿಕೆ ೩

## ಸಂಪಾದಕರ ಭಾವನೆ

ನನ್ನ ದೇಹವು ನಿನ್ನ ಪೀಠವಾಗಿರಲಿ!

ಕಣ್ಣನ್ನು ಕಾಣಲಿಕೆ ನಿಲ್ಲಿಸಲು ನಿದ್ದೆಯಿದೆ।

ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೆ

— ಬೇಂದ್ರೆ ದತ್ತಾತ್ರೇಯರಾಯರು

## ಟಾಯಿಮ್ಸ ಪತ್ರದ ಬಗ್ಗೆ ಎಚ್ಚರಿಕೆ

ಹಿಂದೀಯರ ರಾಷ್ಟ್ರೀಯ ಭಾವನೆಯನ್ನು ಅವರ ನ್ಯಾಯವಾದ ಆಕಾಂಕ್ಷೆಗಳನ್ನು ಅವರ ಮುಂದಾಳುಗಳನ್ನು ಎಷ್ಟು ದ್ವೇಷದಿಂದ ಕಂಡರೂ ಟಾಯಿಮ್ಸ ಪತ್ರಿಕೆಯವರಿಗೆ ತೃಪ್ತಿಯೇ ಇಲ್ಲವಾಗಿದೆ [illegible]ಯಲ್ಲಿ ಹುಟ್ಟುತ್ತಿರುವ ರಾಷ್ಟ್ರೀಯ ಜಾಗ್ರತಿಯ ದ್ಯೋತಕವಾದ ಎಲ್ಲ ಸಂಗತಿ ಸುದ್ದಿ ವರ್ತಮಾನಗಳನ್ನು ವಿಪರ್ಯಾಸವಾಗಿ ಬರೆಯುವದರಲ್ಲಿ ಟಾಯಿಮ್ಸಕಾರನು ತೋರಿಸುತ್ತಿರುವ ಜಾಣತನವನ್ನು ಪಾಶ್ಚಾತ್ಯ ಸತ್ಕಾರ್ಯದಲ್ಲಿ ವಿನಿಯೋಗಿಸಿದ್ದರೆ, ವಿಶ್ವಶಾಂತಿಕರ್ತನಾಗಿ ಸಮರ್ಥನಾಗಿ ಜನರ ಅನಂತ ಉಪಕೃತಿಗೆ ಪಾತ್ರನಾಗಬಹುದಾಗಿತ್ತು. ಆದರೆ ಜನತಾ ಜನಾರ್ದನನ ಯಥಾರ್ಥ ಸೇವೆಯು ಲಭಿಸಬೇಕಾದರೂ ಪುಣ್ಯ ಬೇಕಲ್ಲವೆ? ಇವನ ಆಶ್ರಯದಾತನಾದ ಇಲ್ಲಿಯ ಬ್ರಿಟಿಶ ರಾಜ್ಯದ ಮೇಟಿಯು ಕಾಲವನ್ನೇ ಕಲ್ಲೆಸೆದ ತ್ರಿವಿಕ್ರಮ ಸತ್ಯಾಗ್ರಹ ಚಳವಳಿಯ ಪ್ರಭಾವದಿಂದಲೂ ಟಾಯಿಮ್ಸಕಾರನ ತಲೆಯ ಮೇಲೆ ಇಲ್ಲವೆ ಇಲ್ಲ. ಗಾಂಧಿಯವರನ್ನು ಜಗನ್ಮಾನ್ಯನಾದ ಅವರ ಶಾಂತಿಯುದ್ಧದ ಸಂಗತಿಗಳನ್ನು ವಿಪರ್ಯಾಸ ಮಾಡಿ ಜನರಲ್ಲಿ ಅವುಗಳ ಬಗ್ಗೆ ಅವಿಶ್ವಾಸ ಅಸಮಾಧಾನ ಹುಟ್ಟಿಸುವಲ್ಲಿ, ಒಂದು ತರದ ಹೆದರಿಕೆ-ಇನ್ನೊಂದರ ಭಾವನೆಗಳು ಉದ್ಭವವಾಗುವಂತೆ ಬರೆಯುತ್ತಿರುವನು. ಇವನ ಲೆಕ್ಕಣಿಕೆಯ ತುದಿಗೆ [illegible] ಗಾಂಧಿಜಿಯು 'ಜಾದುಗಾರ'ನಾದನು '[illegible]'ನಾದನು, '[illegible]'ನಾದನು. '[illegible]' [illegible] [illegible] ದೇಶ [illegible] [illegible] [illegible] ಇನ್ನೂ ಏನೇನೋ ಬಿರುದಾವಳಿಗಳನ್ನು [illegible]

[illegible] ಒಂದೇ [illegible] [illegible] ಬಿಟ್ಟಿರುವ ಯಥಾರ್ಥವಾದ ಸಂಗತಿಗಳನ್ನು ರಾಷ್ಟ್ರೀಯ ಪತ್ರಗಳು ಪ್ರಕಟಿಸಿದರೆ, ಒಂತೆ! [illegible] '[illegible] ಬಿಟ್ಟಿದ್ದ [illegible]' [illegible] [illegible] ಬಗ್ಗೆ ರಾಜನೀತಿಯ [illegible] [illegible]ವೆಂದು ನಮ್ಮ ಸದ್ದಿಗಾರನು ಕಲ್ಕತ್ತೆಗೆ ಭೆಟ್ಟಿ ಆಗಿ ತೀರ್ಮಾನಿಸುವನು" ಇಷ್ಟಕ್ಕೆ ಬಿಡುವಂತಿಲ್ಲ ತೀರ ಸುಳ್ಳು ಆಪಾದನೆ!! ಇದಕ್ಕೆ ಮುಂದ [illegible], 'ಆದರೆ ಹಾಗೆ ಮಾಡುವರೆಂಬ ಬಿಟ್ಟ ವರ್ತಮಾನವಿದೆ,' ಹೀಗೆ ಪ್ರತಿವಂದನೆಯ ಮಾತುಗಳು ಇವನೇನೂ ಈ ಬಾರಿ ಒಳಗೆ ಬಹಳ ಹೆದರಿದಂತೆ ತೋರುತ್ತದೆ. ಹೀಗೆ [illegible] ಒಂದು ಸಟ್ಟೆ ಒಂದು ಬರಬರದೇ ಜಾತಿ ಜಾತಿಗಳಲ್ಲಿ ಬ್ಯಾಗಿಯನ್ನು ಹಚ್ಚಿ ಅದರ ಮೇಲೆ ಈಗ ತಮ್ಮ ಬ್ಯಾಳಿ ಬೇಯಿಸುತ್ತಿರುವನು ಇಷ್ಟೆಲ್ಲ ಪೂರ್ವ ತಯಾರಿಯನ್ನ ನಡಿಸಿದ್ದರೂ ನಡಿಸಲಿ, ಆದರೆ ಟಾಯಿಮ್ಸಪತ್ರಕಾರನ ಈ ಹೊತ್ತಿನ ಯತ್ನವು ಕೊಂಚ ಹೆಚ್ಚು ಧೀರ್ಘವಾದ್ದಾಗಿದೆ.

ನಿನ್ನಿನ 'ಟಾಯಿಮ್ಸ ಆಫ್ ಇಂಡಿಯಾ'ದಲ್ಲಿ ಇದೇ ಪತ್ರಕಾರನು ಅಗ್ರಲೇಖದಲ್ಲಿ ಕಾಂಗ್ರೆಸ್ಸು ಅಹಿಂಸೆಯ ವ್ರತವನ್ನು ಬಿಟ್ಟಿತು. ಎಂಬುದನ್ನು ಸಾಧಿಸುವ ಯತ್ನಮಾಡಿದ್ದಾರೆ. ಗಾಂಧಿಯು ಅಹಿಂಸೆಯನ್ನು ಬಿಟ್ಟನೆಂದು ಬರೆದರೆ ಲೋಕವು ನಂಬುವದಿಲ್ಲೆಂದು ಮನಗಂಡ ಮೇಲೆ, ಈಗ್ಗೆ ಮ. ಗಾಂಧಿಗೂ ಕಾಂಗ್ರೆಸಿಗೂ ಏಳುವಾಸ್ತವಿಕ ಉಳಿದಿಲ್ಲವೆಂಬದನ್ನು ತೋರಿಸಲು ಹವ್ಯಾಸ ಮಾಡುತ್ತಿದ್ದಾರೆ. ಕಾಂಗ್ರೆಸಿನಲ್ಲಿ ಇನ್ನು ಮೇಲೆ ಗಾಂಧಿಯವರ ಅಭಿಪ್ರಾಯಗಳಿಗೆ ಮಾನ್ಯತೆ ಉಳಿಯುವಂತಿಲ್ಲವೆಂತಲೂ ಜವಾಹರಲಾಲರೇ ಅವರ ಸಂಪೂರ್ಣ ಹಾಳಕರಾಗಿ ನಿಂತಿಹರೆಂತ ಈಗ ಅಹಿಂಸೆಯನ್ನು ಧರ್ಮವಾಗಿಟ್ಟುಕೊಳ್ಳದವರೂ ಕಾಂಗ್ರೆಸಿನ ಚಳವಳಿಯಲ್ಲಿ ಸೇರಿಕೊಳ್ಳಬಹುದೆಂದು ಹೇಳಿದ್ದಾರೆಂದೂ, ಇದರಿಂದ ಹಿಂಸಾವಾದಿಗಳಾದ ಕ್ರಾಂತಿಕಾರ ಪಕ್ಷದವರೂ ಇದರಲ್ಲಿ ಸೇರಿಕೊಂಡು ತಮ್ಮ ಕಾರ್ಯವನ್ನು [illegible] [illegible] ಒಳ್ಳೇ [illegible] [illegible] ಬರೆದಿದ್ದಾರೆ. ಆದರೆ ಕಾಂಗ್ರೆಸ ಕಳೆಯು ರಾಜದ್ರೋಹ ಸಂಘವೆಂದು ಸರಕಾರದವರು ಸಾರಲಿಕ್ಕೆ [illegible] [illegible] [illegible] [illegible] [illegible] [illegible] [illegible] [illegible] [illegible] [illegible]. ಆದರೆ ಕಾಂಗ್ರೆಸ್ಸಿಗರೇ [illegible]

ಅಹಿಂಸಾವ್ರತವನ್ನು ಎಲ್ಲಿಯೂ ಧಿಕ್ಕರಿಸಿಲ್ಲ. ಈ ಹೊತ್ತಿಗೂ ಅಹಿಂಸಾ ಮೂರ್ತಿಗಳಾದ ಗಾಂಧಿಜಿಯೇ ಅವರ ನಿರ್ಗರ್ವ ಏಕೈಕ ಪ್ರಭುಗಳಾಗಿದ್ದಾರೆ. ಅಹಿಂಸೆಯೊಂದೇ ನಮ್ಮ ಉದ್ಧಾರ ಮಾರ್ಗವೆಂದು ಕಾಂಗ್ರೆಸದ ಸಕಲ ಮುಖಂಡರೂ ಏಕಮತದಿಂದ ಹೋದ ಹೋದಲ್ಲಿ ಒತ್ತಿ ಒತ್ತಿ ಹೇಳುತ್ತಿದ್ದಾರೆ. ಆದರೆ ನೋಸ್ತಿ ಅ. ಭಾ. ಕಾಂ. ಕಮೀಟಿಯು ಮೀಟಿಂಗದಲ್ಲಿ ಯಾವನೂ ಒಬ್ಬನು ಅಹಿಂಸೆಯು ತನ್ನ ಧರ್ಮವೆಂದೊಪ್ಪದೆ ಅದು ಸ್ವರಾಜ್ಯದ ಮಾರ್ಗವೆಂದು ಒಪ್ಪಿ ಈ ಚಳವಳಿಯಲ್ಲಿ ಭಾಗ ತೆಗೆದುಕೊಳ್ಳಲಿಕ್ಕೆ ಅಡ್ಡಿಯಿಲ್ಲವಷ್ಟೇ? ಎಂದು ಕೇಳಿದ್ದಕ್ಕೆ ಜವಾಹರಲಾಲರು ಕೈಕೊಳ್ಳಬಹುದೆಂದುತ್ತರ ಕೊಟ್ಟಿದ್ದರ ಮೇಲಿಂದ ಟಾಯಿಮ್ಸ ಕಾರರು ದೂರದೃಷ್ಟಿಯು ಹಚ್ಚಿ ಇಷ್ಟೆಲ್ಲ ತಮ್ಮ ತರ್ಕ ಪಾಂಡಿತ್ಯವನ್ನೇ ತೋರಿಸಿದ್ದಾರೆ. ಕಾರಣ ಟಾಯಿಮ್ಸ ಪತ್ರದ ವಾಚಕರು ಅವರ ದೊಡ್ಡಸ್ತಿಕೆಗಳಲ್ಲಿ ಪತ್ರ್ಯಾಂಶಗಳಿಂದ ನಂಬಿ ತಮ್ಮ ಅಭಿಪ್ರಾಯಗಳನ್ನು ಕಟ್ಟಿಕೊಳ್ಳುವ ಗೋಜಿಗೆ ಹೋಗಬಾರದೆಂದೂ ನಿಜಾಂಶವನ್ನು ತಿಳಿದುಕೊಳ್ಳಲು ರಾಷ್ಟ್ರೀಯ ಪತ್ರಗಳನ್ನೋದಿ ಸ್ಫೂರ್ತಿ ಹೊಂದಬೇಕೆಂದೂ ನಮ್ಮ ಹೇಳಿಕೆ

## ಅಸೆಂಬ್ಲಿಯಲ್ಲಿ ನಡೆದ ವರ್ತಮಾನ.

ಉಪ್ಪನ್ನು ಅಗ್ಗವಾಗ ಮಾಡುವದಕ್ಕಾಗಿ ಶೂಸ್ಟರ ಸಾಹೇಬರ ಒಂದು ಯೋಜನೆಯನ್ನು ಮಾಡಿದ್ದು, ಆ ಸಂಬಂಧಿ ಪೂರ್ಣ ವಿಚಾರಣೆಗಾಗಿ ಒಂದು ಕಮಿಟಿಯನ್ನು ನೇಮಿಸಬೇಕೆಂದು ಸಾಹೇಬರೇ ಮೊನ್ನೆ ಒದಗಿಸಿದರು. ಈ ವಿಚಾರಣೆಯಿಂದ ಉಪ್ಪಿನ ಮೇಲಿನ ಕರವನ್ನು ತೆಗೆದುಹಾಕಿದಷ್ಟೇ ಉಪಯುಕ್ತವಾಗಿ ಉಪ್ಪು ಕಿರು ಕಡಿಮೆ ದರದಲ್ಲಿ ಮಾರಾಟವಾಗುವದಂತೆ.

ಹಿಂದೂ ಪತ್ರ ಕರ್ನಾಟಕ ಉಪ್ಪಿನ ಮೇಲಿನ ಇನಕಮ್ ಟ್ಯಾಕ್ಸ ತೆಗೆಯಬೇಕೆಂಬ ಆಶಯದ ಠರಾವು ತಿರುಗಿಸಿಕೊಳ್ಳಲ್ಪಟ್ಟಿತು.

‡ ‡ ‡ ‡

ಕಪ್ಪೆಣೆಯು ಮೇಲಿನ ಕರವನ್ನು ಹೆಚ್ಚಿಸುವ ವಿಚಾರ ನಡೆದ ವೇಳೆಯಲ್ಲಿ ಡಾ. ಮಾರ್ಲಂಡ್ಸ ಇವರು ಒಳ್ಳೆ ಜೋರಿನಿಂದ ಅದನ್ನು ವಿರೋಧಿಸಿದರು. ಸರಕಾರದವರು ನಮಗೆ ಒಪ್ಪಾರ ಆಯಿಲ್ ಕಂಪನಿಯವರಿಗೆ ಸಮಂಜಸ ಮೇಲಿನಂಥ ಕರವನ್ನು ಹೆರಬೇಕು. ಆದರೆ ನಾವು ಅಗ್ಗವಾದ ಕಂಪನಿಗಳ್ನ ಮಾರುವದನ್ನು ಬಂದ ಮಾಡಿ ಕೇವಲ ಬೆಳೆಯುವಣೆಯನ್ನು ಮಾರಾಟಕ್ಕೆ ಇಟ್ಟು ಜನರಿಂದ ಹೆಚ್ಚು ರೊಕ್ಕವನ್ನು ಬಿಚ್ಚಿಸುವದು ಸರಿಯಲ್ಲವೆಂದೆ ಎಚ್ಚರಿಕೆ ಕೊಟ್ಟಿರುವರು. † † †

ಈ ಉಪ್ಪಿನ ಕಟ್ಟಳೆಯನ್ನು ಇನ್ನು ಬೇರೆ ರೀತಿಯಿಂದ ಹೇಗೆ ಮುರಿಯಬಹುದೆಂಬದನ್ನು ಅದೆ ಪತ್ರಿಕೆ ಕೆಲವರು ಒರೆದು ಕಳಿಸಿರುವರು.

(೧) ಪೋರ್ತುಗೀಜ ಸಂಸ್ಥಾನದಲ್ಲಿ ಉಪ್ಪಿನ ಮೇಲೆ ಕರ ಇಲ್ಲದ ಮೂಲಕ ೭ ಆಣೆಗೆ ೧ ಬಂಗಾಲಿ ಮಣ ಉಪ್ಪು ಸಿಗುತ್ತದೆ. ಕಾರಣ ಅಲ್ಲಿ ಕೊಂಡುಕೊಂಡು ಅಗರಿ ತಯಾರಿಸಿ ಅಗರಿ ಆ ಉಪ್ಪನ್ನು ಬ್ರಿಟಿಶ ಇಂಡಿಯಾದಲ್ಲಿ ತರಲಿಕ್ಕೆ ಯತ್ನಿಸಬೇಕು. ಹೀಗೆ ತರುವಾಗ್ಗೆ ಬ್ರಿಟಿಶರಿಗೆ ಕರ ಕೊಡಬೇಕಾಗುತ್ತದೆ. ಆ ಕರವನ್ನು ಕೊಡಲಿಕ್ಕೆ ವಿರೋಧಿಸಿ ನಿರಾಕರಿಸಬೇಕು.

(೨) ಇದರಂತೆ ಕಾರೆವಾಡ ಸಂಸ್ಥಾನದಲ್ಲಿಯೂ ಉಪ್ಪಿನ ಮೇಲೆ ಕರವು ತೀರ ಕಡಿಮೆ ಇದ್ದುದರಿಂದ ಅಲ್ಲಿಯ ಉಪ್ಪನ್ನು ಬ್ರಿಟಿಶ ಹಿಂದುಸ್ಥಾನದಲ್ಲಿ ಕರ ಕೊಡದೆ ತರಲಿಕ್ಕೆ ಯತ್ನ ನಡಿಸಬೇಕು.

* * * * *

ಹೀಗೆ ಇತ್ತ ಸೂಚನೆಗಳು ಸತ್ಯಾಗ್ರಹಕ್ಕೆ ಅನುಕೂಲರಾದ ಜನರಿಂದ ಬರುತ್ತಿರಲು ಅತ್ತ ಸರಕಾರದವರು ತಾವೂ ಹೆಚ್ಚು ಹೆಚ್ಚು ಸಜ್ಜಾಗುತ್ತಿರುವರು. ಈ ಉಪ್ಪಿನ ಸಂಬಂಧ ಯಾವದೆ ತರದ ಕಾಯದೆ ಭಂಗದ ಬಗ್ಗೆ ಗುನ್ಹೆಗಾರರನ್ನು ಒಮ್ಮೆಲೆ ದಸ್ತಗೀರ ಮಾಡಲಿಕ್ಕೆ ಸಾಮಾನ್ಯ (೨ನೇ ತರಗತಿಯ) ಪೋಲೀಸ ನೌಕರ ಅಧಿಕಾರವನ್ನು ದಯಪಾಲಿಸಿ ಈ ಉಪ್ಪಿನ ಕಟ್ಟಳೆಯನ್ನು ಹೆಚ್ಚು ಬಾಗಲೋಕತೆಯಿಂದ ಒತ್ತಾಯಪಡಿಸಲು ಸರಕಾರದವರು ಸನ್ನಿದ್ಧರಾಗುತ್ತಿದ್ದಾರೆ

## ಸಿನೆಮಾ ಗೃಹಕ್ಕೆ ಬೆಂಕಿ ಹತ್ತಿತು.

ಮಂಚೂರಿಯಾದೊಳಗೆ ಕಿರಿನ ಎಂಬ ಪಟ್ಟಣದೊಳಗಿನ ಸಿನೆಮಾ ಥೇಟರಕ್ಕೆ ಬೆಂಕಿಬಿದ್ದು ನೂರಾರು ಜನ ಪ್ರೇಕ್ಷಕರು ಸುಟ್ಟು ಬೂದಿ ಯಾಗಿರುವರು. ಬೆಂಕಿಯಲ್ಲಿ ಬೆಂದು ಹೋದ ಶವಗಳನ್ನು ಈವರೆಗೆ ಹೊರಗೆ ಎಳೆದೊಗೆದಿರುವರು. ಸತ್ತವರೊಳಗೆ ಹುಡುಗರು ಹೆಣ್ಣುಮಕ್ಕಳ ಸಂಖ್ಯೆಯೇ ಬಹಳವಾಗಿದೆ ಅಂತೆ. ವಿದ್ಯುತ್ ದೀಪದ ತಂತಿಗಳ ಸ್ಪರ್ಶದಿಂದ ಭಯಂಕರ ಬೆಂಕಿ ಎದ್ದು ಇಷ್ಟೆಲ್ಲ ಅನರ್ಥವಾಯಿತು. ಬೆಂಕಿಬಿದ್ದ ಕೂಡಲೇ ಜನರು ದಿಕ್ಕೆಟ್ಟು ಹೊರಗೆ ಓಡುವ ಗಡಬಡಿಯಲ್ಲಿಯೇ ಅವರ ಕಾಲಕೆಳಗೆ ಸಿಕ್ಕು ಅನೇಕ ಹುಡುಗರು ಉಸುರುಕಟ್ಟಿಕೊಂಡು ಪ್ರಾಣ ಬಿಟ್ಟಿರುವರಂತೆ.

## ಸ್ಕ್ರೀನ್ಗೆ ಬಿದ್ದು ಹೋಗಿ ಪ್ರಾಣ ಕೊಟ್ಟವನು.

ಮುಂಬಯಿಯಲ್ಲಿ ೮ ವರ್ಷದ ಗುಜರಾಥಿ ಹುಡುಗನೊಬ್ಬನು ಪ್ರಾಯಿಮಸ ಸ್ಟೋವ್ ಹಚ್ಚಿಸಹೋಗಿ ಅದೇ ವೇಳೆಯಲ್ಲಿ ಸ್ಪಿರಿಟ ಹಾಕಹೋಗಿ ಮೈಗೆ ಬೆಂಕಿ ಹಗಲಿಸಿಕೊಂಡು ಸತ್ತುಹೋದನು. ಅವನ ಮೃತ ಶರೀರದ ಪರೀಕ್ಷೆ ಮಾಡಿ ತಮ್ಮ ತೀರ್ಪು ಹೇಳುವಾಗ ಅಪಮೃತ್ಯು ವಿಚಾರಣೆಯ ಮ್ಯಾಜಿಸ್ಟ್ರೇಟರು ಈ ಪ್ರಕಾರ ಹೇಳಿರುವರು:— ಗುಜರಾಥಿ ಹಿಂದುಜನರಲ್ಲಿ ಇಂಥ ಮೃತ್ಯುಗಳು ಇತ್ತಿತ್ತಲಾಗಿ ಬಹಳ ಆಗಹತ್ತಿವೆ. ಇಂದಿನ ವರೆಗೆ ಸುಟ್ಟುಕೊಂಡು ಸತ್ತವರೆಲ್ಲ ಚಿಕ್ಕ ಪ್ರಾಯದ ಹೆಣ್ಣುಹುಡಿಗಿಯರೆ ಆಗಿದ್ದರು. ಅದಕ್ಕಾಗಿ ಆ ಸಮಾಜದವರಿಗೆ ಎಷ್ಟು ಎಚ್ಚರ ಕೊಟ್ಟರೂ ಕೇಳದಾಗಿದ್ದಾರೆ. ಕಾರಣ ಗುಜರಾಥಿ ಹಿಂದು ಜನರಿಗೆ ಪ್ರಾಯಮಸ ಸ್ಟೋವ್ಗಳನ್ನು ಉಪಯೋಗ ಮಾಡಬಾರದೆಂದು ಕಾಯಿದೆ ಮಾಡುವಂಥ ಪ್ರಸಂಗ ಬಂದು ಕೂತಿದೆ.

## ಭಾರತೀಯ ಸ್ವಾತಂತ್ರ್ಯ ಸಮರ ಕರ್ನಾಟಕದಲ್ಲಿ ಪ್ರಾರಂಭ. ಶಾಂತಿಸೇನೆಯಲ್ಲಿ ಸೇರಿರಿ.

ಇಂಥ ಸಮರ ಸಮಯದಲ್ಲಿ ವೀರ ಕನ್ನಡಿಗರು ಸುಮ್ಮನಿರುವದು ಸಾಧ್ಯವಲ್ಲ. ಅನ್ಯರು ರಣಕ್ಕೆ ಹೋಗಲಿ, ನಾವು ಮನೆಯಲ್ಲಿರುವಾ, ಎನ್ನುವಷ್ಟು ರಣಹೇಡಿಗಳು ಕನ್ನಡಿಗರಲ್ಲ. ಅನ್ಯರು ದೊರಕಿಸಿದ ಸ್ವಾತಂತ್ರ್ಯವನ್ನು ನಾವು ಉಪಭೋಗಿಸುವಾ ಎಂದು ಋಣಗಳನ್ನು ತಿನ್ನಲಿಕ್ಕೆ ಸಿದ್ಧರಾಗುವಷ್ಟು ದ್ರೋಹಿಗಳು ನಾವಲ್ಲ. ನಾವೂ ಸ್ವಾತಂತ್ರ್ಯ ಸಮರದಲ್ಲಿ ಸೇರಿ ನಮ್ಮ ಕರ್ತವ್ಯವನ್ನು ಮಾಡುವಾ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮೀಟಿಯವರು ೨೧—೩—೩೦ನೇ ದಿನ ಒಂದು ಸತ್ಯಾಗ್ರಹ ಮಂಡಲವನ್ನೇ ಸ್ಥಾಪಿಸಿದರು. ಆ ಮಂಡಲದವರು ಕರ್ನಾಟಕದಲ್ಲಿ ಬೆಳಗಾಂವಿ ಕಾರವಾರ ಜಿಲ್ಲೆಯಲ್ಲಿ ಉಪ್ಪಿನ ಕರವನ್ನು ಕೊಡದಿರುವ ಸತ್ಯಾಗ್ರಹವನ್ನು ಪ್ರಾರಂಭಿಸಬೇಕೆಂದು ನಿಶ್ಚಯಿಸಿದ್ದಾರೆ. ಸತ್ಯಾಗ್ರಹಿಗಳ ಸೈನ್ಯವನ್ನು ಸಿದ್ಧಪಡಿಸುವ ಕಾರ್ಯವು ನಡೆದಿದೆ. ಇನ್ನೂರ ಮೇಲೆ ಜನರು ಈಗಾಗಲೇ ಸೈನ್ಯವನ್ನು ಸೇರಿದ್ದಾರೆ. ಇಂತಹ ಸಂದರ್ಭದಲ್ಲಿ ಕರ್ನಾಟಕದ ಬಿಸಿ ನೆತ್ತರದ ವೀರ ತರುಣರೇ ಹಿಂಜರಿಯದೇ ಮುಂದಕ್ಕೆ ಬಂದು ಈ ಶಾಂತಿ ಸೈನ್ಯದಲ್ಲಿ ಸೇರಿರಿ. ಸ್ವಾತಂತ್ರ್ಯ ಸಮರದಲ್ಲಿ ಸಹಾಯಕರಾಗಿರಿ. ಸೈನಿಕರಾಗುವವರು ಹುಬ್ಬಳ್ಳಿಯಲ್ಲಿರುವ ಹಿಂದುಸ್ಥಾನೀ ಸೇವಾದಳ ಕಚೇರಿಗೆ ಬರೆದು ಪ್ರತಿಜ್ಞಾಪತ್ರಿಕೆಗೆ ಅಂಕಿತ ಹಾಕಬೇಕು.

ಕರ್ನಾಟಕ ಸತ್ಯಾಗ್ರಹ ಕಮೀಟಿ.

---

### ಕಲಕತ್ತೆಯ ಮೇಯರರಾದ

# ಸೇನಗುಪ್ತರಿಗೆ ಶಿಕ್ಷೆಯಾಯಿತು.

ಸೇನಗುಪ್ತರ ಮೇಲೆ ಹೊರಿಸಲ್ಪಟ್ಟ ರಾಜದ್ರೋಹದ ಆರೋಪದ ಬಗ್ಗೆ ರಂಗೂನ ಅಸಿಸ್ಟಂಟ ಕಮಿಶನರ ಕೋರ್ಟಿನಲ್ಲಿ ವಿಚಾರಣೆಯು ನಡೆದು ಅವರು ಮಾಡಿದ ಭಾಷಣದಲ್ಲಿ ರಾಜದ್ರೋಹವಿದೆಂದು ನಿರ್ಣಯವಾಗಿ ಅವರಿಗೆ ೧೦ ದಿವಸದ ಸಾದಾ ಶಿಕ್ಷೆ ವಿಧಿಸಲ್ಪಟ್ಟಿತು.

ಇದೇ ಮಾರ್ಚ ೧೩ನೇ ತಾರೀಖಿನ ದಿವಸ ಸೇನಗುಪ್ತರು ಕಲಕತ್ತೆಯಲ್ಲಿ ತಮ್ಮ ಮನೆಯಲ್ಲಿರುವಾಗ ಈ ಆರೋಪದ ಬಗ್ಗೆ ವಾರಂಟನ್ನು ಅವರಿಗೆ ಜಾರಿ ಮಾಡುವದಕ್ಕೆ ಬಂದಿತ್ತು. ಮುಂದೆ ವಾರಂಟ ಪ್ರಕಾರ ಅವರನ್ನು ದಸ್ತಮಾಡಿ ಹಿಡಕೊಂಡು ಹೋಗಿ ೫೦೦೦ ರೂಪಾಯಿಗಳ ಎರಡು ಜಾಮೀನ ಕೊಡಲಿಕ್ಕೆ ಹೇಳಿದರು. ಸೇನಗುಪ್ತರು ಅದಕ್ಕೆ ಒಪ್ಪಲಿಲ್ಲ, ಆದರೂ ಅವರಿಗೆ ರಾತ್ರಿಯಲ್ಲಿ ತಮ್ಮ ಮನೆಯಲ್ಲಿಯೇ ನಿಲ್ಲಲಿಕ್ಕೆ ಅಪ್ಪಣೆ ಕೊಟ್ಟರು. ಮರುದಿನ ಮಧ್ಯಾಹ್ನಕ್ಕೆ ಮೇಲ ಬೋಟಿನಿಂದ ರಂಗೂನಕ್ಕೆ ಕರೆದೊಯ್ದರು. ಅಲ್ಲಿಯ ಮ್ಯಾಜಿಸ್ಟ್ರೇಟರು ನಿಮ್ಮ ಮೇಲಿನ ವಿಶ್ವಾಸದ ಮೇಲಿಂದಲೇ ನಿಮಗೆ ಜಾಮೀನ ಮೇಲೆ ಬಿಡುತ್ತೇನೆ. ಆ ಪ್ರಕಾರ ಬರೆದುಕೊಡಿರಿ ಎಂದು ಹೇಳಿದ್ದಕ್ಕೆ ಸೇನಗುಪ್ತರು ಒಪ್ಪದೆ ವಿಚಾರಣೆಯ ಕಾಲದಲ್ಲಿ ಕಚ್ಚೆಯಲ್ಲಿಯೇ ಉಳಿದಿದ್ದರು. ಫೆಬ್ರುವರಿ ತಿಂಗಳ ೨೨ ಮತ್ತು ೨೭ ನೇ ತಾರೀಖಿಗೆ ರಂಗೂನದಲ್ಲಿ ಗುಪ್ತರು ಮಾಡಿದ ಭಾಷಣಕ್ಕಾಗಿ ಈಗ ಶಿಕ್ಷೆಯಾಯಿತು.

### ಬಂಗಾಲಶಾಸನ ಸಭೆಯೂ ದಬ್ಬಾಳಿಕೆಯೂ

ಬಂಗಾಲ ಸರಕಾರವು ಅನ್ಯಾಯದಿಂದ ನಡೆಸಿದ ನಡೆಸಿದ ರಾಜಕೀಯ ಕೃತ್ಯಗಳ ದಬ್ಬಾಳಿಕೆಯಿಂದ ಜನರು ಕ್ಷೋಭೆಗೊಂಡಿದ್ದಾರೆ. ಅವರ ಅಸಂತೋಷದ ದ್ಯೋತಕಕ್ಕಾಗಿ ಸರಕಾರದ ವೆಚ್ಚಕ್ಕಾಗಿ ಮಂಜೂರಾಗುವ ಹಣದಲ್ಲಿ ಒಂದು ರೂಪಾಯಿ [illegible] ಕಡಿತ ಮಾಡಬೇಕೆಂಬ ಆಶಯದ ಸೂಚನೆಯನ್ನು [illegible]ಂಗಾಲ ಶಾಸನ ಸಭೆಯಲ್ಲಿ ಕೆಲವರು ಎಬ್ಬಿಸಿದರು. ಇದಕ್ಕೆ ಸರಕಾರದ ಮಂತ್ರಿಯವರು ತಾವೇನು ಜನರನ್ನು ಗೋಳಾಡಿಸಬೇಕೆಂದಾಗಲಿ, ಅಥವಾ ಅವರನ್ನು ಭಯಭೀತರನ್ನಾಗಿ ಮಾಡಬೇಕೆಂದಾಗಲಿ, ದಬ್ಬಾಳಿಕೆಯನ್ನು ನಡೆಸಿಲ್ಲ ಆದರೆ ಕಾಂಗ್ರೆಸ್ಸಿನ ಭಾರವು ಸರಕಾರದ ಮೇಲಿದ್ದು ಅದರ ಬಗ್ಗೆ ಜನರಲ್ಲಿ ತಿರಸ್ಕಾರ ಅಥವಾ ದ್ವೇಷ ಬುದ್ಧಿಯನ್ನು ಹುಟ್ಟಿಸತಕ್ಕಂಥ ಜನರ ಕೃತ್ಯಗಳನ್ನು ಸರಕಾರವು ದಂಡಿಸಬೇಕಾಗುತ್ತದೆಂದು ಹೇಳಿದರು. ಆದಾಗ್ಯೂ ಪಕ್ಷಾಲ್ಲಿಕರ ಒಂದು ರೂಪಾಯಿ ಕಡಿಮೆ ಮಾಡಬೇಕೆಂಬ ಸೂಚನೆಯೇ ಕೌನ್ಸಿಲಿನಲ್ಲಿ ಪಾಸಾಯಿತು.

### ಪುಣೆಯಲ್ಲಿ ಸತ್ಯಾಗ್ರಹದ ದಿಮಿದಿಮಿ

ಪುಣೆಯಲ್ಲಿ ಸತ್ಯಾಗ್ರಹ ವಿಚಾರದ ಪ್ರಸಾರ ಮಾಡುವದಕ್ಕಾಗಿ ಅಲ್ಲಿಯ ಸತ್ಯಾಗ್ರಹ ಕಮೀಟಿಯವರು ನಿನ್ನೆ ಎರಡು ದೊಡ್ಡ ಮೆರವಣಿಗೆಗಳನ್ನು ಹೊರಡಿಸಿದ್ದರು. ಮೆರವಣಿಗೆಯು ಮುಂಜಾನೆಯಲ್ಲಿ ಅರ್ಧ ಊರು, ಸಾಯಂಕಾಲದಲ್ಲಿ ಅರ್ಧ ಊರು ಈ ಪ್ರಕಾರ ಊರೊಳಗೆಲ್ಲ ಹಾಯ್ದು ಅಲ್ಲಲ್ಲಿಗೆ ಮುಖ್ಯ ಮುಖ್ಯ ಕೂಟಗಳಿಗೆ ನಿಂತು ಮ. ಗಾಂಧಿಯವರು ವೈಸರಾಯರಿಗೆ ಬರೆದ ಪತ್ರವನ್ನು ಓದುತ್ತಿದ್ದರು. ಮೆರವಣಿಗೆಯು ಅತ್ಯಂತ ಶಾಂತತೆಯಿಂದಲೂ, ಶಿಸ್ತಿನಿಂದಲೂ, ಸಾಗಿತು. ಸಂತಿಂಥ ಸ್ವಭಾವದವರೇ ಮೆರವಣಿಗೆಯಲ್ಲಿ ಭಾಗ ತೆಗೆದುಕೊಳ್ಳಕೂಡದೆಂದು ಮೊದಲೇ ಜನರಿಗೆ ಜಾಹೀರ ಮಾಡಿದ್ದರು. ಸಾಯಂಕಾಲಕ್ಕೆ ಸಾರ್ವಜನಿಕ ಸಭೆಯು ಆಯಿತು. ಅಂತೂ ಊರಲ್ಲೆಲ್ಲ ಸತ್ಯಾಗ್ರಹದ ಮಾತುಕಥೆಯು ನಡೆದದೆ. ಶ್ರೀ ಕೇಳ್ಕರ, ಐಣೆ ಮೊದಲಾದ ತರುಣರೇ ಇದೆಲ್ಲಕ್ಕೆ ಪುರಸ್ಕರ್ತರಾಗಿ ನಿಂತು ಕೆಲಸ ಮಾಡಿ ಬೆಂಬಲಿಗರ ಮೊದಲಿಂದ ಹೆಚ್ಚು ಕೆಲಸ ಮಾಡುತ್ತಿದ್ದಾರೆ. ಸ್ವಯಂಸೇವಕರ ತುಕಡಿಗಳನ್ನು ನಮೂದಿಸಿ ಕೊಳ್ಳಲಿಕ್ಕೆ ೨-೩ ಸ್ಥಳಗಳಲ್ಲಿ ಅನುಕೂಲ ಮಾಡಿದ್ದಾರೆ.

## ಸತ್ಯಾಗ್ರಹ ಸುರುವು ಆಗುವ ಸ್ಥಳ.

ಉಪ್ಪಿನ ಕಟ್ಟಳೆಯನ್ನು ಮುರಿಯುವದಕ್ಕೋಸ್ಕರ ಮಹಾತ್ಮರು ಆರಿಸಿದ ಎರಡೂ ಸ್ಥಳಗಳು ಬರೋಚ ಮತ್ತು ಸೂರತ ಜಿಲ್ಲೆಗಳ ನಡುವೆ ಹರಿಯುತ್ತಿರುವ ಮಹೀನದಿಯ ಎರಡೂ ದಂಡೆಯ ಮೇಲೆ ಇದಿರುಬದಿರಾಗಿವೆ.

## ಸ್ವಯಂಸೇವಕರಾಗಬೇಕೆನ್ನುವವರೂ ದ್ರೋಹಿಗಳೇ!

ಬಿಹಾರ ಪ್ರಾಂತದಲ್ಲಿ ೬ ಜನರು ಉಪ್ಪಿನ ಕಾಯಿದೆ ಭಂಗದ ಕಾರ್ಯಕ್ರಮದಲ್ಲಿ ತಾವೂ ಸ್ವಯಂಸೇವಕರಾಗಿ ಬರಲು ಸಿದ್ಧರಿದ್ದೇವೆಂದು ತಮ್ಮ ಹೆಸರು ಬರೆಸಲಿಕ್ಕೆ ಹೋದ್ದಕ್ಕಾಗಿ ಅವರನ್ನು ಗಲಭೆಗಾರರೆಂದು ಹಿಡಿದೊಯ್ದಿರುವರು.

# ‘ಕನ್ನಡಿಗ’ನ ನಿತ್ಯ ಸಂಚಿಕೆ!

ಸ್ವಾತಂತ್ರ್ಯ ಸಂಗ್ರಾಮದ ಸದ್ಯದ ಸುದ್ದಿಗಳೆಲ್ಲವೂ ಬೇಗನೆ ತಿಳಿಯುವದರಿಂದಲೂ, ಸತ್ಯಾಗ್ರಹದ ಜಯಭೇರಿಯ ನಾದಗಳನ್ನು ಕೇಳಲು ಜನಸಾಮಾನ್ಯರು ಸಹ ಬಹು ಆತುರರಾಗಿರುವದರಿಂದಲೂ, ಜನರ ಈ ಆತುರತೆಯನ್ನು ತೃಪ್ತಿಪಡಿಸುವದಕ್ಕಾಗಿ, ನಾವು ‘ಕನ್ನಡಿಗ’ನ ನಿತ್ಯ ಸಂಚಿಕೆಯನ್ನು ಹೊರಡಿಸಬೇಕೆಂಬ ನಿಶ್ಚಯಮಾಡಿದ ಪ್ರಕಾರ ಫಾಲ್ಗುಣ ಬಹುಳದ ತಾ॥ ೨೨-೩-೩೦ ಶನಿವಾರದಿಂದಲೇ ಪ್ರಾರಂಭಿಸಿದ್ದೇವೆ.

ಸಧ್ಯಕ್ಕೆ ಮುಂಬೈಯಿಂದ ಬರುವ ಇಂಗ್ಲೀಷ ಪತ್ರಿಕೆಗಳ ಅವತರಣಿಕೆಗಳನ್ನು ಕೊಡುವದಲ್ಲದೆ, ಅಲ್ಲಲ್ಲಿಯ ನಮ್ಮ ಸ್ವಂತ ಪ್ರತಿನಿಧಿಗಳ ತಂತಿಗಳನ್ನೂ, ಮುಖ್ಯ ವಿಷಯಗಳ ಬಗ್ಗೆ ತರಿಸುವೆವು. ಇದಕ್ಕೆ ಜನರ ಪ್ರೋತ್ಸಾಹನವು ದೊರೆತು, ಸುಮಾರು ದಿನಾಲು ಎರಡು ಸಾವಿರ ಪ್ರತಿಗಳು ಮಾರಾಟವಾಗ ತೊಡಗಿದಲ್ಲಿ, ನಾವು ಸ್ವತಂತ್ರವಾಗಿ “ಫ್ರಿ ಪ್ರೆಸ್” ಅಸೋಸಿಯೇಟೆಡ್ ಪ್ರೆಸ್” ಗಳ ತಂತಿಗಳನ್ನೂ ಪ್ರಕಟಿಸಿಕೊಡುವೆವು

ನಿತ್ಯಪತ್ರಿಕೆಯ ಆರಂಭವು ‘ಕನ್ನಡಿಗ’ನ ಈಗಿನ ಚಿಕ್ಕಾಕಾರದಷ್ಟೇ ಆಗುವದು. ಪುಟಗಳು ನಾಲ್ಕು. ಸಂಚಿಕೆಯೊಂದಕ್ಕೆ ಬೆಲೆ ಮೂರು ಕಾಸು ಮಾತ್ರ. ಗದಗು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಾಪುರ, ಬಳ್ಳಾರಿ ರಾಯಚೂರ ಮುಂತಾದ ಸ್ಥಳಗಳಿಗೆ ಮೋಟಾರಗಳನ್ನು ಇಟ್ಟು ಪತ್ರಿಕೆಯ ಮುಂಚಿತವಾಗಿ ರವಾನೆಗಳು ಮಾಡಲ್ಪಡುವವು. ಈಗ ಮೋಟಾರುಗಳು ಎಲ್ಲಿಯೂ ಇರುವದರಿಂದ ಅಲ್ಲಲ್ಲಿಯ ಕೆಲವು ಮೋಟಾರುಗಳ ಏಜಂಟರಿಗೆ ನಮ್ಮ ಪತ್ರಿಕೆಯ ಏಜನ್ಸಿಯನ್ನೂ ಕೊಟ್ಟಿದೆ. ಎಲ್ಲೆಲ್ಲಿ ಕೊಟ್ಟಿಲ್ಲವೋ, ಅಲ್ಲಿಯವರು ನಮಗೆ ಪತ್ರ ಬರೆಯಬೇಕು. ತಮ್ಮ ತಮ್ಮ ಊರುಗಳಿಂದ ಮೋಟಾರುಗಳನ್ನು ತರಿಸಿಕೊಳ್ಳುವ ವ್ಯವಸ್ಥೆಯನ್ನು ಅಲ್ಲಿಯ ಮೋಟಾರುಗಳ ಓಕೇಲ ಏಜಂಟರು ತಾವೇ ಮಾಡಿಕೊಳ್ಳತಕ್ಕದ್ದು. ಪೋಸ್ಟಿನಿಂದ ಕಳಿಸುವ ವ್ಯವಸ್ಥೆಯನ್ನು ಸಧ್ಯದಲ್ಲಿ ಮಾಡುವ ಇಚ್ಛೆ ನಮಗಿರುವದಿಲ್ಲ. ನಿತ್ಯಪತ್ರಿಕೆಯ ಕಾರ್ಯಾರಂಭ ನಡೆಸುವಂಥ ಸಾಹಸವು ಈ ಕನ್ನಡ ನಾಡಿನಲ್ಲಿ ಒಂದನೇ ಆವರ್ತಿ ಆಗಿ ಕ್ರಮೇಣ ಮಾಡಬಹುದು. ತಿಂಗಳ ಬಿಲ್ಲ ತಗದುಕೊಳ್ಳುವವರು ಸಹ ಸಧ್ಯದಲ್ಲಿ ದಿನಕ್ಕೆ ಸಂಚಿಕೆಯೊಂದಕ್ಕೆ ಕಾಲು ಆಣೆಯಂತೆ ಲೆಕ್ಕಮಾಡಿ ಏಜಂಟರಿಗೆ ಸಲ್ಲಿಸಬೇಕು.

ಏಜಂಟರಾಗಬಿಚ್ಛಿಸುವವರು ಕೂಡಲೇ ಬರೆದುಕೊಳ್ಳಬೇಕು. ಸಣ್ಣ ಊರವರು ಕನಿಷ್ಠ ಮೂರು ರೂಪಾಯಿಗಳನ್ನೂ, ಪಟ್ಟಣದವರು ಕನಿಷ್ಠ ಹತ್ತು ರೂಪಾಯಿಗಳನ್ನೂ ಠೇವು ಇಡಬೇಕು. ಸ್ಥಾನಿಕ ಕಾಂಗ್ರೆಸ ಕಮಿಟಿಯ, ಅಥವಾ ಮುಖ್ಯ ಸದ್ಗೃಹಸ್ಥರ ಒಂದು ಸರ್ಟಿಫಿಕೇಟನ್ನು ದಾನ ಪ್ರಮಾಣಿಕತನದ ಬಗ್ಗೆ ಅರ್ಜಿಯ ಸಂಗಡ ಕಳಿಸತಕ್ಕದ್ದು. ಪ್ರತಿವಾರದಲ್ಲಿ ಲೆಕ್ಕವನ್ನೂ ಹಣವನ್ನೂ, ಮಾರಾಟವಾಗದ್ದ ಸಂಚಿಕೆಗಳನ್ನೂ ತಿರುಗಿ ಕಳಿಸತಕ್ಕದ್ದು. ನೂರಕ್ಕೆ ೨೫ ರೂಪಾಯಿಗಳಂತೆ ಏಜಂಟರಿಗೆ ಕಮೀಶನ್ ದೊರೆಯುವದು. ಮೋಟಾರುಗಳ ತಿಕೀಟ ಏಜಂಟರುಗಳು ಸಣ್ಣ ಊರುಗಳಲ್ಲಿ ದಿನಾಲು ೧೦ ೧೨ ಪ್ರತಿಗಳನ್ನು ಮಾರಿಕೊಂಡರೂ ಅವರಿಗೆ ಪ್ರತಿ ತಿಂಗಳು ೨-೩ ರುಪಾಯಿ ಕಮೀಶನ್ನಾದರೂ ದೊರೆಯುವವು. ಇನ್ನು ಪಟ್ಟಣಗಳಲ್ಲಿ ನೂರಿನ್ನೂರು ಪ್ರತಿಗಳನ್ನು ಮಾರುವ ಏಜಂಟರಿಗೆ ತಿಂಗಳೊಂದಕ್ಕೆ ೧೦ ರೂಪಾಯಿಗಳಿಂದ ೨೦ ರ ವರೆಗೆ ಪಗಾರ ಬೀಳುವದು. ಮೇಲಿನ ಕೆಲವು ದೊಡ್ಡ ಪಟ್ಟಣಗಳಿಗೆ ಸಹ ಇಂಗ್ಲೀಷ ಪತ್ರಿಕೆಗಳಿಗಿಂತಲೂ, ಮೊದಲು ಮಹತ್ವದ ಸುದ್ದಿಗಳು ನಮ್ಮ ಪತ್ರಿಕೆಯಿಂದ ತಿಳಿಯುವವು. ಏಜಂಟರು ಕೊಂಚ ಪ್ರಯತ್ನಪಟ್ಟು ಸುದ್ದಿಗಳನ್ನು ಬೀದಿಯಲ್ಲಿ ಓದಿ ಕೂಗುವುದಾಗಲಿ, ಸ್ಥಾನಿಕ ಮುಖ್ಯ ಮನುಷ್ಯರನ್ನು ಭೆಟ್ಟಿಯಾಗಿ ಅವರ ಹೆಸರನ್ನ ನೋಂದಾಯಿಸಿಕೊಂಡಾಗಲಿ, ಪ್ರಯತ್ನಿಸಿದರೆ ಅಲ್ಲಿ ಪ್ರತಿಗಳು ಹೆಚ್ಚಾಗಿ ಖಪು ಆಗುವವು, ಆದುದರಿಂದ ಆವಶ್ಯಕರು ಕೂಡಲೇ ಏಜಂಟರಾಗಲು ಬರೆದುಕೊಳ್ಳತಕ್ಕದ್ದು.

ಜಾಹಿರಾತಿನ ದರ:— ಕಾಯಂ ಜಾಹೀರಾತುಗಳಿಗೆ ಒಂದು ಕಾಲಮ್ಮಿನ ಒಂದು ಇಂಚಿನ ಪ್ರತಿಯೊಂದು ಸಂಚಿಕೆಗೆ ನಾಲ್ಕು ಆಣೆ ಹಂಗಾಮೀ ಜಾಹೀರಾತುಗಳಿಗೆ ಎಂಟು ಆಣೆ.

— ನಿತ್ಯಪತ್ರಿಕೆಯ ವ್ಯವಸ್ಥಾಪಕರು
“ಕನ್ನಡಿಗ” ಕಾರ್ಯಾಲಯ ಬಾಗಲಕೋಟೆ.

ಈ ಪತ್ರಿಕೆಯು ಮುಗಳಖೋಡ ರಾಘವೇಂದ್ರರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾಕಲ್ಪ ಮುದ್ರಣಾಲಯದಲ್ಲಿ ಮುದ್ರಿತವಾಗಿ, ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೧—೬

# ಕನ್ನಡಿಗ

ಜಯ ಕರ್ನಾಟಕ

ನಿತ್ಯಸಂಚಿಕೆಯು

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ಮಂಗಳವಾರ ಶುಕ್ಲ ಫಾಲ್ಗುಣ ಬಹುಳ ೧೧ ಶಕ ೧೮೫೧ ತಾ ೨೫—೩—೩೦ ಸಂಚಿಕೆ ೪

## ಸಂಪಾದಕರ ಭೂಮಿಕೆ

ನನ್ನ ದೇಹವು ನಿನ್ನ ವೀರಶಾಸನವಾಗಿ।
ನನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೆ॥

— ಬೇಂದ್ರೆ ದತ್ತಾತ್ರೇಯರಾಯರು.

ಎಲ್ಲ ಪ್ರಾಂತಗಳು ತಮ್ಮ ತಮ್ಮ ಸೇನಾನಾಯಕರನ್ನು ನೇಮಿಸಿಕೊಂಡು ಅವರ ಹಿಂಬಾಲಕರಾಗಿ ಸಜ್ಜುಗೊಂಡು ಸ್ವಾತಂತ್ರ್ಯ ರಣರಂಗದಲ್ಲಿ ತಮ್ಮ ಶೌರ್ಯೋತ್ಸಾಹಗಳನ್ನು ತೋರಿಸಬೇಕೆಂದು ಆತುರಪಡುತ್ತಿರುವದನ್ನು ನಾವು ದಿನಾಲು ನೋಡುತ್ತೇವೆ. ತಮಿಳನಾಡು ಶ್ರೀ ಸಿ. ರಾಜಗೋಪಾಲಾಚಾರ್ಯರನ್ನು ತಮ್ಮ ದಂಡನಾಯಕರನ್ನಾಗಿ ನೇಮಿಸಿಕೊಂಡಿದೆ. ಆಚಾರ್ಯರೂ ತಮ್ಮ ದಕ್ಷತೆಗೆ ಅನುರೂಪವಾಗಿ ಈಗಾಗಲೇ ಕನ್ಯಾಕುಮಾರಿ ಬಳಿ ಉಪ್ಪಿನ ಕಟ್ಟಳೆಯನ್ನು ಮುರಿಯಬೇಕೆಂದು ತಾವು ನಿರ್ಧರಿಸಿರುವೆವೆಂದೂ, ಅದಕ್ಕಾಗಿ ಸತ್ಯಾಗ್ರಹಿಗಳನ್ನು ಕಟ್ಟಿಕೊಂಡು ಮದ್ರಾಸ ಪಟ್ಟಣದಿಂದ ಶೀಘ್ರವೇ ಹೊರಡುತ್ತೇವೆಂದೂ ಪ್ರಕಟಿಸಿದ್ದಾರೆ. ಇದರಂತೆ, ಆಂಧ್ರ, ವಂಗ, ಪಂಜಾಬ, ಮಹಾರಾಷ್ಟ್ರ ಮೊದಲಾದ ಪ್ರಾಂತಗಳು ತಮ್ಮ ಸೇನಾಪತಿಯನ್ನು ಗೊತ್ತುಪಡಿಸಿಕೊಂಡು ನಿರ್ದಿಷ್ಟ ಸ್ಥಳಗಳಿಗೆ ತೆರಳುವ ಸಿದ್ಧತೆಯಲ್ಲಿದ್ದಾರೆ. ಬಂಗಾಲವು ಕೊಂಟಾಯಿಯನ್ನೂ, ಮಹಾರಾಷ್ಟ್ರವು ಮುಂಬಯಿ ಹತ್ತರ ಪ್ರದೇಶವನ್ನೂ ತಮ್ಮ ಸದ್ಯದ ರಣಕ್ಷೇತ್ರಗಳಾಗಿರತಕ್ಕದ್ದೆಂದು ಗೊತ್ತು ಮಾಡಿಟ್ಟುಕೊಂಡು ಮುಖ್ಯ ಸೇನಾನಿಯಾದ ಮಹಾತ್ಮಾಜಿಯ ಪಾಂಚಜನ್ಯದ ಧ್ವನಿ ಕೇಳುತ್ತಲೆ ಅತ್ತಕಡೆಗೆ ಸಾಗಿಹೋಗಲು ಸಿದ್ಧರಾಗಿದ್ದಾರೆ. ಹೀಗೆಯೇ ನಾಲ್ಕೂ ದಿಕ್ಕಿನಿಂದಲೂ ಬರುತ್ತಿರುವ ಸ್ಫೂರ್ತಿಕರ ಈ ಉತ್ಸಾಹದ ವಾರ್ತೆಯಿಂದ ಕನ್ನಡ ತರುಣರ ರಕ್ತದಲ್ಲಿಯ ಶೌರ್ಯ ಪ್ರತಾಪಾದಿ ಗುಣಗಳು ಸ್ಫುರಿಸದೆ ಇದ್ದಿರಬಹುದೆ? ಛೆ! ಅದೆಂತು! ಹಾಗಾದರೆ ಅಂಥ ಸಮರಸಿದ್ಧತೆಯು ಇಲ್ಲಿಯ ತರುಣರಲ್ಲಿಯೂ ಇದ್ದದ್ದೆ ಆದರೆ, ಕರ್ನಾಟಕದಲ್ಲಿಯೂ ಸತ್ಯಾಗ್ರಹದ ಕಾರ್ಯಕ್ರಮಕ್ಕೆ ಉಳಿದ ಪ್ರಾಂತೀಯರಂತೆ ನಿಶ್ಚಿತ ಸ್ವರೂಪವನ್ನು ಕೊಡಲು ತಡವೇಕೆ? ಈ ವಿಚಾರದಲ್ಲಿ ನಮ್ಮ ಮುಂದಾಳುಗಳೇ ಇನ್ನೂ ಹಿಂದು ಮುಂದು ನೋಡುತ್ತಿರುವರೆಂದು ನಮಗೆ ಅನಿಸುತ್ತದೆ. ಕನ್ನಡ ತರುಣರಂತೂ "ನಮ್ಮ ರಣಕ್ಷೇತ್ರದ ದಳಪತಿಗಳಾರು? ನಮ್ಮ ಸಮರಭೂಮಿಯಾವದು? ನಾವು ಈ ಶಾಂತಿ ಯುದ್ಧಕ್ಕೆ ಹೊರಡತಕ್ಕ ದಿನವು ಯಾವದು? ಸೇನೆಯ ಪತಾಕೆಗೆ ನಾವೆಂದು ಬಂದು ಕೂಡಬೇಕು?" ಇವೇ ಮೊದಲಾದ ಪ್ರಶ್ನೆ ಮಾಡುತ್ತಿರುವರು. ಸತ್ಯಾಗ್ರಹ ಕಮಿಟಿಯವರ ಉತ್ತರ ಸಿದ್ಧವಿದೆಯೆ? ಇದ್ದರೆ ಪ್ರಕಟವಾಗಲೊಲ್ಲದೇಕೆ? ಕಾರ್ಯಕ್ರಮಕ್ಕೆ ನಿಶ್ಚಯ ರೂಪರೇಷೆಗಳನ್ನು ಜನರ ಮುಂದೆ ಇಡದ ಹೊರತು ಜನರಲ್ಲಿ ಸ್ಫೂರ್ತಿ ಉದಿಸುವದಿಲ್ಲ. ಸ್ಫೂರ್ತಿಯು ಸಂಸರ್ಗದಿಂದ ಹುಟ್ಟುವ ದಿವ್ಯ ಭಾವನೆಯಾಗಿದ್ದು, ಪರಪ್ರಾಂತೀಯರು ತೋರಿಸಿಕೊಳ್ಳುತ್ತಿರುವ ಈ ಸಮಯವು ಸ್ಫೂರ್ತಿಗೆ ಅನುಕೂಲವಾಗಿದ್ದು ದಿಂದ ದಿನಗಳು ಉರುಳಿದಂತೆ, ನಮ್ಮ ತರುಣರ ಉದ್ರೇಕ ಉತ್ಸಾಹಗಳು ಹಾಗೇ ಹಾರಿ ಹೋಗಬಹುದೆಂಬ ನಮ್ಮ ಭೀತಿಯನ್ನು ಸತ್ಯಾಗ್ರಹ ಕಮಿಟಿಯವರಿಗೆ ನಾವು ತಿಳಿಸದೇ ಇರೆವು. ಕಾರಣ ಸತ್ಯಾಗ್ರಹವಲ್ಲಿ ಪ್ರಾರಂಭವಾಗತಕ್ಕದ್ದು, ಯಾರ ನೇತೃತ್ವದ ಕೆಳಗೆ? ಎಂದು? ಎಂಬುದನ್ನು ನಿಶ್ಚಯಿಸಿ, ಆ ಮೇಲೆ ತರುಣರಿಗೆ ಹೆಸರು ಕೊಡಲಿಕ್ಕೆ ಹೇಳುವದರಿಂದ ಹೆಚ್ಚು ವೀರರು ಮುಂದೆ ಬರುವರೆಂದು ನಮ್ಮ ನಂಬಿಕೆ.

### ರಣಭೇರಿಯು ಕೇಳಿಸುವದಿಲ್ಲವೇ?

‘ ಸುಖಿನಃ ಕ್ಷತ್ರಿಯಾಃ ಪಾರ್ಥ ಲಭಂತೇ ಯುದ್ಧಮೀದೃಶಮ್ ’

ಇಂಥ ಅಪೂರ್ವ ಸಮಯದಲ್ಲಿ ಕರ್ನಾಟಕವು ಸುಮ್ಮನೆ ಕುಳಿತುಕೊಂಡು ನೋಡುತ್ತಿರುವದೋ? ಭಾರತ ಇತಿಹಾಸ ರಂಗದ ಮೇಲೆ ಒಂದಾನೊಂದು ಕಾಲಕ್ಕೆ ಅತ್ಯಂತ ವೈಭವದಿಂದ ಮೆರೆದಂಥ ಕರ್ನಾಟಕವು ಹಿಂದೆ ಬೀಳುವದೇ? ಪುಲಕೇಶಿ, ವಿಕ್ರಮ, ಕೃಷ್ಣದೇವರಾಯರೇ ಮೊದಲಾದ ಅತಿರಥರಿಗೆ ಕಾರ್ಯಭೂಮಿಯಾದ ಈ ಕರ್ನಾಟಕವು ರಣರಂಗದಿಂದ ಕಾಲ್ತೆಗೆಯುವದೇ? ಆ ಮಹಾವಿಧಾತೃಗಳ, ಆ ಧರ್ಮಸಂಸ್ಥಾಪಕರ, ಆ ವೀರಶಿರೋಮಣಿಗಳ, ವಂಶಜರು ನಾವಲ್ಲವೇ? ಅವರಲ್ಲಿದ್ದ ರಕ್ತದ ಅಂಶವು ನಮ್ಮ ರಕ್ತನಾಳಗಳಲ್ಲಿ ಹರಿದಾಡುವದಿಲ್ಲವೇ? ಧರ್ಮರಾಜ್ಯದ ಹಾದಿಯಲ್ಲಿದ್ದ ಆ ಮಹಾತ್ಮಾ ಗಾಂಧಿಯು ಮಾಡುವ ಸಿಂಹನಾದವು ಆರು ಸಾವಿರ ಮೈಲುಗಳಾಚೆಗೆ ಹೋಗಿ ಶತ್ರುಗಳ ಹೃದಯವನ್ನು ಭೇದಿಸಿದ್ದರೂ ಕನ್ನಡ ಕಂದುಗಳ ಕಿವಿಗಳಿಗೆ ಇನ್ನೂ ಕೇಳಿಸಿಲ್ಲವೋ? ಈ ಸಮಯದಲ್ಲಿ ಹಿಂದುಳಿದು, ಕಡೆ ತನಕ ಹಿಂದುಳಿದವರಾಗಬೇಡಿರಿ. ಅನೇಕ ಶತಮಾನಗಳ

ವರೆಗೆ ದೇದೀಪ್ಯಮಾನವಾಗಿ ಪ್ರಕಾಶಿಸಿದಂಥ ಕರ್ನಾಟಕ ಮಾತೆಯು ಕೀರ್ತಿಗೆ ಈ ಹೊತ್ತು ಕಪ್ಪು ಹಚ್ಚಬೇಡಿರಿ. ಕನ್ನಡಿಗರು ಹೇಡಿಗಳಾಗಿ ಹಿಂದುಳಿದರೆಂಬ ಕಳಂಕವು ಜನ್ಮಾಂತರಗಳಲ್ಲಿ ನಿಮ್ಮ ಅಂತಃಕರಣದಿಂದ ಆಚರಿಸಿರಿ. ಕರ್ನಾಟಕದ ಕಲಿಗಳು ಈ ಸಮಯದಲ್ಲಿ ಬೆನ್ನು ತೋರಿಸಿದರೆ ಕರ್ನಾಟಕವು ಸಾವಿರ ವರ್ಷ ತಲೆಯೆತ್ತದಂತಾದರೂ ಚನ್ನಾಗಿ ಲಕ್ಷ್ಯದಲ್ಲಿಡಿರಿ. ಕರ್ನಾಟಕ ಮಾತೆಯು ದಿಗಂತ ಕೀರ್ತಿಯನ್ನು ಆಸ್ವಾದಿಸಬೇಕಾಗಿದ್ದರೆ, ಕನ್ನಡಿಗರು ಸತ್ತಿಲ್ಲವೆಂದು ತೋರಿಸಬೇಕಾಗಿದ್ದರೆ ಸತ್ಯಾಗ್ರಹ ಸೇನೆಯ ದಂಡಾಳುಗಳಾಗಿರಿ.

ಕರ್ನಾಟಕ ವೈಭವ.

---

## ಲಂಡನದಿಂದ ಹಿಂದುಸ್ಥಾನಕ್ಕೆ ಏಳೇ ದಿವಸಗಳಲ್ಲಿ ವಿಮಾನದಿಂದ ಟಪಾಲು ತರಲ್ಪಡುವವು.

ಇಷ್ಟು ದಿವಸಗಳವರೆಗೆ ಯುರೋಪ ಖಂಡದ ದಕ್ಷಿಣ ಭಾಗದ ಮೇಲೆ ಹಾಯ್ದು ಬರುತ್ತಿದ್ದ ವಿಮಾನಗಳು ಇನ್ನು ಮೇಲೆ ಯುರೋಪ ಖಂಡದ ಮಧ್ಯಪ್ರದೇಶಗಳಲ್ಲಿ ಹಾಯ್ದು ಇಟಲಿಯ ವರೆಗೆ ಬರುವವು. ಅಲ್ಲಿಂದ ಆಫ್ರಿಕೆಯು ಟಪಾಲನ್ನು ಉಗಿಹಡಗದಿಂದ ಸಲೋನಿಕಾ ಪಟ್ಟಣಕ್ಕೆ ತಂದು ಮತ್ತೆ ವಿಮಾನ ಮಾರ್ಗದಿಂದ ಅದನ್ನು ಒಂದೇ ದಿವಸದಲ್ಲಿ ಅಲೆಕ್ಝಾಂಡ್ರಿಯಾಕ್ಕೆ ಮುಟ್ಟಿಸುವರು. ಆ ವೇಳೆ ಹಿಂದಿನಂತೆಯೇ ಬಗದಾದ ಮತ್ತು ಪರ್ಶಿಯನ್ ಅಖಾತದ ಮೇಲೆ ಹಾಯ್ದು ಲಂಡನದಿಂದ ಹೊರಟ ಟಪಾಲು ಹಿಂದುಸ್ಥಾನಕ್ಕೆ ಏಳೇ ದಿವಸಗಳಲ್ಲಿ ಬಂದು ಬೀಳುವದು.

* ‡ *

## ಮೋಟರ ಬಸ್ಸುಗಳು ಬರ್ಫದಲ್ಲಿ ಹುಗಿದು ಹೋಗಿವೆ.

ಇಂಗ್ಲಂಡದ ಉತ್ತರ ಭಾಗಕ್ಕೆ ಮತ್ತು ಸ್ಕಾಟ್ಲಂಡದಲ್ಲಿ [illegible] ಕಾಲಕ್ಕೆ ಅತಿಶಯವಾಗಿ ಬರ್ಫ [illegible] ಹತ್ತಿದೆ. ಚಳಿಯನ್ನು ತಾಳಲಾರದೆ ಅಡವಿಯೊಳಗಿನ ಮೃಗಗಳು ಗಿರಿಕಂದರಗಳನ್ನು ಬಿಟ್ಟು ಜನವಸತಿಯಿಂದ ಸಜ್ಜಾದಂಥ ಹಳ್ಳಿಗಳನ್ನು ಒಳಸಗ್ಗ ಹತ್ತುತ್ತಿವೆ. ಪಟ್ಟಣದಿಂದ ಪಟ್ಟಣಕ್ಕೆ ಓಡಾಡುವ ಮೋಟರಗಾಡಿಗಳು 'ಬಸ' ಬರ್ಫದಲ್ಲಿ ಹುದುಗಿಹೋಗಿವೆ ಎಂದೂ ಸುದ್ದಿ ಬಂದಿದೆ. ಈ ಇಪ್ಪತ್ತು ವರ್ಷದಲ್ಲಿ ಈ ಪರಿ ಚಳಿಯು ಬಿದ್ದಿದ್ದಿಲ್ಲವಂತೆ.

## ಮದ್ರಾಸ ಇಲಾಖೆಯಲ್ಲಿ ಸತ್ಯಾಗ್ರಹವು.

ಶೀಘ್ರದಲ್ಲಿಯೇ ತಾವು ಕೇಪ ಕೊಮರಿನ (ಕನ್ಯಾಕುಮಾರಿ)ದಲ್ಲಿ ಉಪ್ಪಿನ ಕಟ್ಟಳೆಯನ್ನು ಮುರಿಯಲಿಕ್ಕೆ ಪ್ರಾರಂಭಿಸುವವರಿದ್ದೇವೆ ಎಂದು ಸಿ. ರಾಜಗೋಪಾಲಾಚಾರ್ಯರು ಪ್ರಕಟಮಾಡಿರುವರು.

## ಅಸೆಂಬ್ಲಿಯ ವರ್ತಮಾನ.

ರಹಿಮತುಲ್ಲಾ ಇವರು ಬೆಳ್ಳಿಯ ಮೇಲೆ ಜಕಾತಿಯನ್ನು ಹಾಕಬಾರದೆಂಬ ಸೂಚನೆಯನ್ನು ತಂದಿದ್ದು ಅದರ ಸಲುವಾಗಿ ಸರಕಾರ ಪಕ್ಷದವರು ಸಹಕರಿಸುತ್ತಿದ್ದ ತಮ್ಮ ಸೂಚನೆಯು ಸ್ವೀಕಾರ ಪ್ರಸಂಗವಿದೆಂದು ತಿಳಿಸುತ್ತಾರೆ.

## ಮಹಾತ್ಮಾಜಿಯು ಹೋಗಿ ಅಸ್ಪೃಶ್ಯರಲ್ಲಿಯೇ ಕುಳಿತರು.

ತಮ್ಮ ದಂಡಯಾತ್ರೆಯ ಮಾರ್ಗಕ್ರಮಣದಲ್ಲಿ ನಿನ್ನಿನ ದಿವಸ ಸತ್ಯಾಗ್ರಹದ ಯಾತ್ರಿಕರು ಗಜರಾಪಟ್ಟಣಕ್ಕೆ ಬಂದು ತಲ್ಪಿದರು.

ಗಜರಾಪಟ್ಟಣದಲ್ಲಿ, ಅಲ್ಲಿಯ ಜನರು ಸಭಾಸ್ಥಳದಲ್ಲಿ ಸ್ಪೃಶ್ಯರು ಒತ್ತಟ್ಟಿಗೆ, ಅಸ್ಪೃಶ್ಯರು ಒತ್ತಟ್ಟಿಗೆ ಕೂಡುವಂತೆ ಏರ್ಪಾಡುಮಾಡಿದ್ದರು. ಗಾಂಧಿಜಿಯವರು ಇದನ್ನು ಕಂಡು ಒಡನೆ ತಾವು ಅಸ್ಪೃಶ್ಯರ ಮಧ್ಯದಲ್ಲಿಯೇ ಹೋಗಿ ಕುಳಿತುಕೊಂಡು ತಮ್ಮ ಸೈನಿಕರೂ ಅಲ್ಲಿಯೇ ಬಂದು ಕೂಡುವಂತೆ ಹೇಳಿದರು. ಅನಂತರ ತಮ್ಮ ಮಾತುಗಳನ್ನು ಹೇಳಿ, ಈ ಊರ ಜನರಲ್ಲಿ ಸ್ಪೃಶ್ಯ, ಅಸ್ಪೃಶ್ಯ ಭಾವವು ಇನ್ನೂ ಇದ್ದದ್ದು ಕಂಡು ತಮಗೆ ಅತ್ಯಂತ ವ್ಯಸನವಾಗಿರುವದೆಂದೂ, ತಾವು ಈ ಯಾತ್ರೆಗೆ ಹೊರಟ ಮೇಲೆ ಇಂಥ ಭೇದಭಾವವನ್ನು ಜನರಲ್ಲಿ ಕಂಡದ್ದು ಇದೆ ಮೊದಲಿಗೆ ಎಂದೂ ಹೇಳಿದರು.

---

## ಹೊಲಿಯರೂ, ಪರ್ವತಿ ದೇವಾಲಯವೂ.

ಪರ್ವತಿ ದೇವಾಲಯವನ್ನು ಒಳಿನ ಗ್ರಾಮದಕಾಗಿ ಅಸ್ಪೃಶ್ಯರು ಮಾಡುತ್ತಿರುವ ಯತ್ನಗಳೆಲ್ಲ ಇಂದಿನವರೆಗೂ ನಿಷ್ಫಲವಾಗುತ್ತ ಬಂದಿವೆ. ಒಳನುಗ್ಗಿ ದೇವರ ದರ್ಶನವನ್ನು ಹೊಂದುವದಕ್ಕೆ ಅವರು ಹೂಡಿದ ಸತ್ಯಾಗ್ರಹವು ನಡುವೆ ಬಿಡಲ್ಪಟ್ಟಿತ್ತು. ಅವರೆ ಈ ಸತ್ಯಾಗ್ರಹವನ್ನು ಮತ್ತೆ ೩೧ನೇ ತಾರೀಖಿಗೆ ಪ್ರಾರಂಭಿಸಬೇಕೆಂದೂ ಈ ಸಾರೆ ಪ್ರಸಂಗ ಒದಗಿದಲ್ಲಿ ರಕ್ತಪಾತವನ್ನು ಮಾಡಲಿಕ್ಕೆ ಸಹ ಹೇಸಬಾರದೆಂದೂ ಅವರ ನಿಶ್ಚಯಮಾಡಿಕೊಂಡು ಕೂತಿರುವರು. ಈಗ್ಗೆ ಅವರು ಕಲೆಕ್ಟರರ ಕಡಿಗೆ ಅರ್ಜಿ ಮಾಡಿಕೊಂಡಿದ್ದು ಅದರ ಉತ್ತರ ಬರುವವರೆಗೆ ಇಂಥ ಸಾಹಸವನ್ನು ಮಾಡಬಾರದೆಂದು ಧೋಂಡ್ಯಾಟ ಎಂಬುವನು ಸೂಚಿಸಿದ್ದು ಸಭೆಗೆ ರುಚಿಸಿಲ್ಲ. ಇದರಂತೆ ಇನ್ನೊಬ್ಬನು ಗಾಂಧಿಯವರ ಸತ್ಯಾಗ್ರಹವು ಯಶಸ್ವಿಯಾಗುವವರೆಗೆ ನಾವು ತಡೆಯಬೇಕೆಂದ. ಮಾಡಿದ ಸೂಚನೆಯೂ ಗ್ರಾಹ್ಯವಾಗಲಿಲ್ಲ. ಅಂತು ೩೧ನೇ ತಾರೀಖಿಗೆ ಪರ್ವತಿ ಬೆಟ್ಟವನ್ನೇರಿ ಪುನಃ ಸತ್ಯಾಗ್ರಹವನ್ನು ಆರಂಭಿಸಬೇಕೆಂದು ಅಲ್ಲಿಯ ಅಸ್ಪೃಶ್ಯರೂ ಸಹಾಯಕ ಮಂಡಳಿಯವರದೂ ನಿರ್ಧಾರವಾಗಿದೆ.

---

## ಸರಕಾರದ ಮುಂಜಾಗ್ರತೆಯು..

ಬಂಗಾಲ ಸರಕಾರದವರು ಈ ವರ್ಷ ಚೌಕಿದಾರಿ ತೆರಿಗೆಯ ಹೆಚ್ಚು ಪಟ್ಟಿಗೆ ಬಯಸದಿರುವ ತಮ್ಮ ಆವನ್ಯೂ ಅಂದಾಜಿನಲ್ಲಿ ಈಗಿನಗಿಂತ ಹೆಚ್ಚು ಹಣವನ್ನು ಹಿಡಿದು ಬಿಟ್ಟಿದ್ದರೆ ಹೆಚ್ಚಾಗಿ ಜನರನ್ನು ಜೇಲಿಗೆ ಹಾಕಬೇಕೆಂಬ ಸರಕಾರದ ಇಚ್ಛೆಯು ಇದರಿಂದ ಪ್ರಕಟವಾದಂತಾಯಿತು. ಆದರೆ ಹೀಗೆ ಬೇಕಾಬಿಟ್ಟಿ ಹಣವನ್ನು ಕೇಳಿಕೊಂಡು ಬಂದದ್ದು ಹೆಚ್ಚಿಗೆ ಹಿಡಿದದ್ದರ ಬಗ್ಗೆ ೫೦೦೦ ರೂಪಾಯಿ ಕಡಿಮೆ ಮಾಡಬೇಕೆಂದು ಒಬ್ಬ ಮೆಂಬರನು ಸೂಚನೆ ತಂದದ್ದಕ್ಕೆ ಶ್ರೀ ಮಿತ್ತರ ಇವರು ಇದರಲ್ಲಿ ಅನ್ಯಾಯವಿಲ್ಲವೆಂದು ಹೇಳಿ ಸೂಚನೆಯನ್ನು ಮತಕ್ಕೆ ಹಾಕಿ ಸೋಲಿಸಿದರು.

# ಗಾಂಧಿಜಿಯು ಹಾರೈಸುವದೇನು

## ಸ್ತ್ರೀಯರಾಗಲಿ ಪುರುಷರಾಗಲಿ ಎಲ್ಲರೂ ಉಪ್ಪಿನ ಕಟ್ಟಳೆಯನ್ನು ಮುರಿಯಲೇಬೇಕು.

**ಸಾಮುದಾಯಿಕ ಕಾಯಿದೆ ಭಂಗವನ್ನು ಪ್ರತಿ ಪ್ರಾಂತವು ಪ್ರಾರಂಭಿಸಬಹುದು.**

### ಆಂಧ್ರಪ್ರಾಂತದ ತಯಾರಿಯು

ಸತ್ಯಾಗ್ರಹ ವಿಚಾರದ ಪ್ರಚಾರಕ್ಕಾಗಿ ಪ್ರಾಂತದಲ್ಲೆಲ್ಲ ಸ್ವಯಂಸೇವಕರ ಮಂಡಳಿಯನ್ನು ಹೊರಡಿಸಬೇಕೆಂದೆನೆಂದು, ಆಂಧ್ರದೇಶದ ಸರ್ವಾಧಿಕಾರಿಯಾಗಿ ನೇಮಿಸಲ್ಪಟ್ಟ ಶ್ರೀ ಕೊಂಡ ವೆಂಕಟಪ್ಪಯ್ಯಾ ಮಹಾತ್ಮಾಜಿಗೆ ತಿಳಿಸಲಾಗಿ ಮಹಾತ್ಮಾಜಿಯು ನನ್ನನ್ನು ಹಿಡಿದ ಕೂಡಲೆ ಅಥವಾ ಅವಶ್ಯ ತೋರಿದಾಗ ನೀವು ಸಾಮುದಾಯಿಕ ಕಾಯಿದೆ ಭಂಗವನ್ನು (ಉಪ್ಪಿನಬಗ್ಗೆ) ಸುರುಮಾಡಲಿಕ್ಕೆ ಎಲ್ಲ ಪ್ರಾಂತದವರಿಗೂ ಹೇಳಕಳಿಸಿದ್ದೇನೆ. ಕಾರಣ ಈ ನಿನ್ನ ಕಾರ್ಯಕ್ರಮಕ್ಕೆ ಸಾಕಷ್ಟು ಸ್ವಯಂಸೇವಕರು ದೊರೆಯುವಂತಿದ್ದರೆ ಅಷ್ಟರೊಳಗೆ ಈ ಪ್ರಚಾರ ಕಾರ್ಯವನ್ನು ಕೈಕೊಂಡು ಮುಗಿಸಬಹುದೆಂದು ಹೇಳಿದ್ದಾರೆ.

### ಜಂಗಲ ಕಾಯಿದೆ ಮುರಿಯಲಿಕ್ಕೆ ಅಪ್ಪಣೆ ದೊರೆಯಲಿಲ್ಲ.

ತಮ್ಮ ಪ್ರಾಂತದಲ್ಲಿ ತಮಗೆ ಅನ್ಯಾಯವೆನಿಸುತ್ತಿರುವ ಅಡವಿಯ ಬಗ್ಗೆ ಇರುವ ಕಟ್ಟಳೆಗಳನ್ನು ಸಾಮುದಾಯಿಕರೀತಿ ಮುರಿಯಲು ತಾವು ಉಪಕ್ರಮಿಸಬಹುದೇನೆಂದು ಮಧ್ಯಪ್ರಾಂತದ ಮುಖಂಡರು ಕೇಳಿದ್ದಕ್ಕೆ ಮಹಾತ್ಮರು ಆ ಕಡೆಗೆ ಈಗ ಹೋಗಕೂಡದು. ಅವು ಅನ್ಯಾಯದ ಕಟ್ಟಳೆಗಳೇ ಆಗಿದ್ದರೂ ಅವುಗಳನ್ನು ಉಪ್ಪಿನ ಕಾಯಿದೆಯಂತೆ ರದ್ದು ಪಡಿಸುವದು ಸಾಧ್ಯವಿಲ್ಲ. ಈಗ ಆ ಉಸಾಬರಿ ಮಾಡಬೇಡಿರೆಂದು ಉತ್ತರ ಕೊಟ್ಟಿರುವರು.

### ಮಹಾತ್ಮಾಜಿ, 'ವಿಜಯೀಭವ'

ಕಾಂಗ್ರೆಸ ಮುಖಂಡರೆಲ್ಲ ಅ. ಭಾ. ಕಾ. ಕಮಿಟಿಯ ಬೈಠಕ ಮುಗಿಸಿಕೊಂಡು ಮಹಾತ್ಮರ ಭೆಟ್ಟಿಗೆಂದು ಜಂಬೂಸರ ಪಟ್ಟಣಕ್ಕೆ ಬಂದು ಅವರ ದರ್ಶನಗೊಂಡು ಅವರಿಂದ ತಮ್ಮ ಸಂಶಯಗಳ ನಿವಾರಣೆ ಮಾಡಿಕೊಂಡು, ತಮ್ಮ ಪ್ರಾಂತಕ್ಕೆ ಹಿಂತಿರುಗಿ ಹೋಗಿ ಏನು ಮಾಡಬೇಕಾದ್ದಿರುವದನ್ನು ಕೇಳಿಕೊಂಡು ಅವರನ್ನು ಬೀಳ್ಕೊಂಡು, 'ಗಾಂಧಿಜಿ ವಿಜಯೀಭವ' ಎಂದು ಆಶೀರ್ವಚನಗಳಿಂದ ತಮ್ಮ ತಮ್ಮ ಪ್ರಾಂತಕ್ಕೆ ಹೊರಟು ಹೋದರು. ಇದೇ ಕಾಲಕ್ಕೆ ಜವಾಹರಲಾಲರು ಸತ್ಯಾಗ್ರಹಿ ಸ್ವಯಂಸೇವಕರ ಪಕ್ಷಗಳಿಗೆ ತಮ್ಮ ಹಸ್ತದಿಂದಲೇ ಸ್ವಾತಂತ್ರ್ಯ ಪತಾಕೆಯ ಪದಕಗಳನ್ನು ಹಚ್ಚಿದರು

---

(ನಮ್ಮ ಸ್ವಂತ ಸುದ್ದಿಗಾರರಿಂದ ಬಂದ ತಂತಿಯ ಸಮಾಚಾರವು.)
ಮುಂಬಯಿ.

### ಗಾಂಧಿ ಫಿಲ್ಮುಗಳಿಗೆ ಬಂದೀ ಹುಕುಂ.

ಮಾರ್ಚ ೧೨ ನೇ ತಾರೀಖಿನ ದಿನ ಮಹಾತ್ಮಾಜಿಯು ದಂಡಯಾತ್ರೆಗೆ ಹೊರಟನಂತರ ಚಲನಚಿತ್ರಗಳನ್ನು ಮಾಡುವ ಕಂಪನಿಗಳು ತೆಗೆದುಕೊಂಡು [illegible] ಎಲ್ಲಾ ಕಡೆ [illegible] ಇಂಥ ಚಿತ್ರಗಳಿಗೆ ಬಂದೀ ಹುಕುಂ [illegible]!!

### ಪೋಲೀಸರ ಇರಾದೆ ನನ್ನು ಹಿಡಿದರು

[illegible]

**ಸರಕಾರದ ಗಾಂಧೀ [illegible]**

ಗಾಂಧಿಜಿಯವರ ವಿಜಯ ಯಾತ್ರೆಯು [illegible] ಬರುವ ಸುದ್ದಿಗಳನ್ನು [illegible] ಗಾಂಧಿಜಿಯವರ [illegible] ಮುಂಬಯಿ [illegible] ತಂತಿ ಕಚೇರಿಯಲ್ಲಿಯೇ [illegible] ವಂತೆ.

### ಆಂಧ್ರ ಮತ್ತು ಕರ್ನಾಟಕ ದೇಶಗಳ ತಯಾರಿ.

ಆಂಧ್ರ ಮತ್ತು ಕರ್ನಾಟಕ ದೇಶಗಳ ಮುಂದಾಳುಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೇರಲು ಬಹು ಉತ್ಸುಕರಾಗಿರುವದು ಕಂಡು ಬರುತ್ತದೆ. ಸತ್ಯಾಗ್ರಹವನ್ನು ಹೂಡಲು ತುದಿಗಾಲಮೇಲೆ ತಯಾರಿರುವರಂತೆ. ಕರ್ನಾಟಕ ಸತ್ಯಾಗ್ರಹ ಕಮಿಟಿಯ ಮೀಟಿಂಗು ಇದೇ ೩೦ನೇ ತಾರೀಖಿಗೆ ಹುಬ್ಬಳ್ಳಿಯಲ್ಲಿ ಕೂಡತಕ್ಕದ್ದಿದೆ.

## ಮುಂಬಯಿ ಇಲಾಖೆಯ ಯುವಕ ಸಂಘವು.

ಮುಂಬಯಿ ಇಲಾಖೆಯ ಯುವಕ ಸಂಘದ ಕಾರ್ಯಕಾರೀ ಮಂಡಲದ ಅಧಿವೇಶನವು ಅಹಮ್ಮದಾಬಾದದಲ್ಲಿ ನಿನ್ನೆ ಕೂಡಿತ್ತು. ಕೆ. ಎಫ್. ನ್ಯಾರಿಮಾನ, ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯ ಮೊದಲಾದ ಪ್ರಮುಖರು ಬಂದಿದ್ದರು. ಶ್ರೀ. ಮೆಹರಲ್ಲಿಯವರು 'ಯುವಕ ಸಂಘದ ಕಾರ್ಯಕಾರೀಮಂಡಲದಧ್ಯಕ್ಷ ಇದ್ದರೂ ಸಭಾಸದರು ಮೊಟ್ಟಮೊದಲು ಸ್ವಯಂಸೇವಕರಾಗಲಿಕ್ಕೆ ಈಗಿಂದೀಗ್ಗೆ ಹೆಸರು ಕೊಡಬೇಕೆಂದು' ಇದ್ದ ಠರಾವು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು

ಭಾರತೀಯ ಸ್ವಾತಂತ್ರ್ಯ ಸಮರ

## ಕರ್ನಾಟಕದಲ್ಲಿ ಪ್ರಾರಂಭ · ಶಾಂತಿಸೇನೆಯಲ್ಲಿ ಸೇರಿರಿ·

ಇಂಥ ಸಮರ ಸಮಯದಲ್ಲಿ ವೀರ ಕನ್ನಡಿಗರು ಸುಮ್ಮನಿರುವದು ಸಾಧ್ಯವಲ್ಲ. ಅನ್ಯರು ರಣಕ್ಕೆ ಹೋಗಲಿ, ನಾವು ಮನೆಯಲ್ಲಿರುವಾ, ಎನ್ನುವಷ್ಟು ರಣಹೇಡಿಗಳು ಕನ್ನಡಿಗರಲ್ಲ. ಅನ್ಯರು ದೊರಕಿಸಿದ ಸ್ವಾತಂತ್ರ್ಯವನ್ನು ನಾವು ಉಪಭೋಗಿಸುವಾ, ಎಂದು ಋಣಗಳನ್ನು ತಿನ್ನಲಿಕ್ಕೆ ಸಿದ್ಧರಾಗುವಷ್ಟು ದ್ರೋಹಿಗಳು ನಾವಲ್ಲ. ನಾವೂ ಸ್ವಾತಂತ್ರ್ಯ ಸಮರದಲ್ಲಿ ಸೇರಿ ನಮ್ಮ ಕರ್ತವ್ಯವನ್ನು ಮಾಡುವಾ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ೨೭—೨—೩೦ನೇ ದಿನ ಒಂದು ಸತ್ಯಾಗ್ರಹ ಮಂಡಲವನ್ನೇ ಸ್ಥಾಪಿಸಿದರು; ಆ ಮಂಡಲದವರು ಕರ್ನಾಟಕದಲ್ಲಿ ತಿರುಗಾಡಿ ಕಾರವಾರ ಜಿಲ್ಲೆಯಲ್ಲಿ ಉಪ್ಪಿನ ಕರವನ್ನು ಕೊಡದಿರುವ ಸತ್ಯಾಗ್ರಹವನ್ನು ಪ್ರಾರಂಭಿಸಬೇಕೆಂದು ನಿಶ್ಚಯಿಸಿದ್ದಾರೆ. ಸತ್ಯಾಗ್ರಹಿಗಳ ಸೈನ್ಯವನ್ನು ಸಿದ್ಧಪಡಿಸುವ ಕಾರ್ಯವು ನಡೆದಿದೆ. ಇನ್ನೂರ ಮೇಲೆ ಜನರು ಈಗಾಗಲೇ ಸೈನ್ಯವನ್ನು ಸೇರಿದ್ದಾರೆ. ಇಂತಹ ಸಂದರ್ಭದಲ್ಲಿ ಕರ್ನಾಟಕದ ಬಿಸಿ ನೆತ್ತರದ ವೀರ ತರುಣರೇ ಹಿಂಜರಿಯದೇ ಮುಂದಕ್ಕೆ ಬಂದು ಈ ಶಾಂತಿ ಸೈನ್ಯದಲ್ಲಿ ಸೇರಿರಿ. ಮತ್ತು ಸ್ವಾತಂತ್ರ್ಯ ಸಮರದಲ್ಲಿ ಸಹಾಯಕರಾಗಿರಿ

ಸೈನಿಕರಾಗುವವರು ಹುಬ್ಬಳ್ಳಿಯಲ್ಲಿರುವ ಹಿಂದುಸ್ಥಾನೀ ಸೇವಾದಲ ಕಚೇರಿಗೆ ಬರೆದು ಪ್ರತಿಜ್ಞಾಪತ್ರಿಕೆಗೆ ಅಂಕಿತ ಹಾಕಬೇಕು.

| | |
|---|---|
| ದೇಶಪಾಂಡೆ ಗಂಗಾಧರರಾಯ | ಗುಕವಾಡಿ ಶಂಕರರಾಯ |
| ಎನ್. ಎಸ್. ಹರ್ಡೀಕರ | ಟೀ. ಸುಬ್ರಹ್ಮಣ್ಯಂ |
| ಕೌಜಲಗಿ ಹಣಮಂತರಾಯ | ದಿವಾಕರ ರಂಗರಾಯ |

ಕರ್ನಾಟಕ ಸತ್ಯಾಗ್ರಹ ಕಮಿಟಿ.

# 'ಕನ್ನಡಿಗ'ನ ನಿತ್ಯ ಸಂಚಿಕೆ!

ಏಜಂಟರಾಗಲಿಚ್ಛಿಸುವವರು ಕೂಡಲೇ ಬರೆದುಕೊಳ್ಳಬೇಕು. ಸಣ್ಣ ಊರವರು ಕನಿಷ್ಟ ಮೂರು ರೂಪಾಯಿಗಳನ್ನೂ, ಪಟ್ಟಣದವರು ಕನಿಷ್ಟ ಹತ್ತು ರೂಪಾಯಿಗಳನ್ನೂ ಠೇವು ಕಳಿಸಬೇಕು. ಸ್ಥಾನಿಕ ಕಾಂಗ್ರೆಸ ಕಮಿಟಿಯ, ಅಥವಾ ಮುಖ್ಯ ಸದ್ಗೃಹಸ್ಥರ ಒಂದು ಸರ್ಟಿಫಿಕೇಟನ್ನಾದರೂ ಪ್ರಾಮಾಣಿಕತನದ ಬಗ್ಗೆ ಅರ್ಜಿಯ ಸಂಗಡ ಕಳಿಸತಕ್ಕದ್ದು. ಪ್ರತಿವಾರದಲ್ಲಿ ಲೆಕ್ಕವನ್ನೂ ಹಣವನ್ನೂ, ಮಾರದೇ ಇದ್ದ ಸಂಚಿಕೆಗಳನ್ನೂ ತಿರುಗಿ ಕಳಿಸತಕ್ಕದ್ದು. ನೂರಕ್ಕೆ ೨೫ ರೂಪಾಯಿಗಳಂತೆ ಏಜಂಟರಿಗೆ ಕಮೀಶನ್ ದೊರೆಯುವದು. ಮೋಟಾರುಗಳ ತಿಕೀಟ ಏಜಂಟರುಗಳು ಸಣ್ಣ ಊರುಗಳಲ್ಲಿ ದಿನಾಲು ೧೦ ೧೨/ಪ್ರತಿಗಳನ್ನು ತರಿಸಿಕೊಂಡರೂ ಅವರಿಗೆ ಪ್ರತಿ ತಿಂಗಳು ೨-೩ ರುಪಾಯಿ ಕಮಿಶನ್ನೇ ದೊರೆಯುವವು. ಇನ್ನು ಪಟ್ಟಣಗಳಲ್ಲಿ ನೂರನ್ನೂರು ಪ್ರತಿಗಳನ್ನು ಮಾರುವ ಏಜಂಟರಿಗೆ ತಿಂಗಳೊಂದಕ್ಕೆ ೧೦ ರೂಪಾಯಿಗಳಿಂದ ೫೦ ರ ವರೆಗೆ ಪಗಾರ ಬೀಳುವದು. ಮೇಲಿನ ಕೆಲವು ದೊಡ್ಡ ಪಟ್ಟಣಗಳಿಗೆ ಸಹ ಇಂಗ್ಲಿಷ ಪತ್ರಿಕೆಗಳಿಗಿಂತಲೂ, ಮೊದಲು ಮಹತ್ವದ ಸುದ್ದಿಗಳು ನಮ್ಮ ಪತ್ರಿಕೆಯಿಂದ ತಿಳಿಯುವವು. ಕಾರಣ ಏಜಂಟರು ಕೂಂಚ ಪ್ರಮುಖ ಸುದ್ದಿಗಳನ್ನು ಬೀದಿಯಲ್ಲಿ ಓದುತ್ತ ತಿರುಗಿಯಾಗಲಿ, ಸ್ಥಾನಿಕ ಮುಖ್ಯ ಮನುಷ್ಯರನ್ನು ಭೆಟ್ಟಿಯಾಗಿ ಅವರ ಹೆಸರನ್ನು ನೋಂದಾಯಿಸಿಕೊಂಡಾಗಲಿ, ಪ್ರಯತ್ನಿಸಿದರೆ ಜನರಲ್ಲಿ ಪ್ರತಿಗಳು ಹೆಚ್ಚಾಗಿ ಖಪು ಆಗದೇ ಇರುವದಿಲ್ಲ. ಆದ್ದರಿಂದ ಅವಶ್ಯರು ಕೂಡಲೇ ಏಜಂಟರಾಗಲು ಬರೆದುಕೊಳ್ಳತಕ್ಕದ್ದು.

ಜಾಹಿರಾತಿನ ದರ:— ಕಾಯಂ ಜಾಹೀರಾತುಗಳಿಗೆ ಒಂದು ಕಾಲಮ್ಮಿನ ಒಂದು ಇಂಚಿನ ಪ್ರತಿಯೊಂದು ಸಂಚಿಕೆಗೆ ನಾಲ್ಕು ಆಣೆ ಹಂಗಾಮೀ ಜಾಹೀರಾತುಗಳಿಗೆ ಐದು ಆಣೆ

ನಿತ್ಯ ಪತ್ರಿಕೆಯ ವ್ಯವಸ್ಥಾಪಕರು
"ಕನ್ನಡಿಗ" ಕಾರ್ಯಾಲಯ ಬಾಗಲಕೋಟೆ.

ಈ ಪತ್ರಿಕೆಯು ಮಂಗಳವೇಢೆ ರಾಘವೇಂದ್ರಾಚಾರ್ಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ, ಅವರಿಂದ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

ನಿತ್ಯಸುಚಿಕೆಯು.

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೆ ರಾಘವೇಂದ್ರರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ಬುಧವಾರ ಪ್ರ. ಫಾಲ್ಗುಣ ಬಹುಳ ೧೧ ಶಕ ೧೮೫೧ ತಾ ೨೬—೩—೩೦ ಸಂಚಿಕೆ ೫

## ಸಂಪಾದಕರ ಭೂಮಿ.

ತನ್ನ ದೇಹವೆ ತನ್ನ ಸೆರೆಮನೆಯಾದರೂ ।
ಕಣ್ಣನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
[illegible] ತನ್ನ ಗಂಧವನು [illegible]

—ಬೇಂದ್ರೆ ದತ್ತಾತ್ರಯರಾಯರು.

## "ಅಪರಾಧವು ಉಪೇಕ್ಷಣೀಯವಾಗಿದೆ."

ಶ್ರೀಮಾನ ಸೇನಗುಪ್ತರಿಗೆ ಶಿಕ್ಷೆಯಾಯಿತಷ್ಟೆ! ಆದರೆ ಸಮ್ಮ ಮನೋದೇವತೆಯ ವಿರುದ್ಧ ಶಿಕ್ಷಿಸಲು ಮ್ಯಾಜಿಸ್ಟ್ರೇಟರು ಬಲು ಪೇಚಿನಲ್ಲಿ ಬಿದ್ದು ಇಲ್ಲದ ಸಮಾಧಾನಗಳನ್ನು ಯುಕ್ತಪಟ್ಟದ್ದು ಅವರು ಬರೆದ ತೀರ್ಮಾನದಲ್ಲಿ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ. "ಸೇನಗುಪ್ತರು ಮಾಡಿದ ಅಪರಾಧವು ಕ್ಷುಲ್ಲಕವಾಗಿದ್ದು ಉಪೇಕ್ಷಣೀಯವೇ ಆಗಿದೆ. ಅವರು ಮಾಡಿದ ಭಾಷಣವು ಇಂದಿನ ಕಾಲದ ಮುಂದಾಳುಗಳ ಭಾಷಣದಷ್ಟು ಪ್ರಖರವಾಗಿಲ್ಲ. ರಾಜದ್ರೋಹವು ಪ್ರತ್ಯಕ್ಷವಾಗಿ ಅವರ ಯಾವ ಶಬ್ದಗಳಲ್ಲಿಯೂ ಇಲ್ಲ. ಆದರೂ ಬಹಳ ಸೂಕ್ಷ್ಮ ನೋಡಿದರೆ ವಿಷಯದ ಒಟ್ಟಿಗೆ ಈ ರಾಜದ್ರೋಹದ ವಾಸನೆಯು ಘ್ರಾಣೇಂದ್ರಿಯಕ್ಕೆ ತಗಲುವಂತಿದೆ. ಕೊಟ್ಟರೆ ಇಷ್ಟಕ್ಕೇ ಶಿಕ್ಷೆ ಕೊಡಬೇಕು. ರಾಜದ್ರೋಹವನ್ನು ಮಾಡಬೇಕೆಂದು ಸೇನಗುಪ್ತರು ಬಗೆದಿಲ್ಲ; ಅವರು ಅಂದು ಅವರ ಪ್ರಕೃತಿಗೆ ಸ್ವಾಸ್ಥ್ಯವಿದ್ದಿಲ್ಲವಾದ್ದರಿಂದ ಬಾಯಿಗೆ ಬಂದದ್ದಾಯಿಸಿಕೊಂಡು ಕೊಂಚ ಆವೇಶದಿಂದಾಗಿದ್ದಕ್ಕೆ ಹೆಚ್ಚಿನ ಶಬ್ದಗಳು ಅವರ ಬಾಯಿಂದ ಅವರಿಗೆ ತಿಳಿಯದೆ ಹೊರಬಿದ್ದಿದ್ದರೂ ಬಿದ್ದಿರಬಹುದು." ಇತ್ಯಾದಿ ತಮ್ಮ ತೀರ್ಮಾನದಲ್ಲೆಲ್ಲ ಇದೆ ಪ್ರಕಾರದ ಸಹಾನುಭೂತಿಯನ್ನು ಮ್ಯಾಜಿಸ್ಟ್ರೇಟರೇ ಪ್ರದರ್ಶಿಸುತ್ತ ಬಂದಿದ್ದರೂ ಸೇನಗುಪ್ತರು ನಿರ್ದೋಷಿ ಎಂದು ಹೇಳುವ ಧೈರ್ಯವು ಅವರಿಗೇಕೆ ಬರಲಿಕ್ಕಿಲ್ಲ!

ಮ್ಯಾಜಿಸ್ಟ್ರೇಟನು ನ್ಯಾಯಶೀಲನಾಗಿದ್ದರೂ ಅವನು ಬ್ರಿಟಿಶ ಯಂತ್ರದ ಒಂದು ಅಂಗವಾಗಿ ಉಳಿಯುವವರೆಗೂ ಆ ಯಂತ್ರದ ಮೂಲ ಚಕ್ರಗಳಿಗೆ ಅನುಕೂಲವಾದ ತಾಳದ ಮೇಲೆ ತಿರುಗಬೇಕಾಗುತ್ತದೆಂಬುದು ಎಂಥವನಿಗೂ ಈ ತೀರ್ಮಾನವನ್ನು ಓದುವದರಿಂದ ಸ್ಪಷ್ಟವಾಗುವಂತಿದೆ. ತಾನು ಅನ್ಯಾಯವನ್ನು ಮಾಡುತ್ತಿರುವೆನೆಂಬುದು ಮ್ಯಾಜಿಸ್ಟ್ರೇಟನಿಗೆ ಹೊಳೆದರೂ ಮೇಲಿನವರ ದಬ್ಬಾಳಿಕೆಯ ಧೋರಣವನ್ನು ನೋಡಿಕೊಂಡು ವರ್ತಿಸಬೇಕಾದ್ದರಿಂದ ಬುದ್ಧಿಪೂರ್ವಕವಾಗಿ ಅನಿವಾರ್ಯತೆಯಿಂದ ಶತ್ರುವಿನಂತೆ [illegible] ತಿರುಗಬೇಕಾಗಿದೆ. 'ಜಾನಾಮಿ ಧರ್ಮಂ ನಚ ಮೇ ಪ್ರವೃತ್ತಿಃ... ಕೇನಾಪಿ ದೇವೇನ ಹೃದಿಸ್ಥಿತೇನ ಯಥಾ ನಿಯುಕ್ತೋಸ್ಮಿ ತಥಾ ಕರೋಮಿ" ಎಂಬ ದುರ್ಯೋಧನನ ಉದ್ಗಾರವನ್ನು ಅಲ್ಲಿ ಉಲ್ಲೇಖಿಸುವದೊಂದು ಮ್ಯಾಜಿಸ್ಟ್ರೇಟನು ಉಳಿಸಿದ್ದಾನೆ. ಅಂತು ಸರಕಾರದ ದಬ್ಬಾಳಿಕೆಯ ಧೋರಣದ ಪ್ರಕಟನೆಯು ಬ್ರಿಟಿಶ ಇಂಡಿಯಾದೊಳಗಿನ ಎಲ್ಲ ಅಮಲದಾರರಿಗೂ ಬಹಿರಂಗವಾಗಿ ಕಳಿಸಲ್ಪಟ್ಟಿದೆಯೆಂಬುದು ಇನ್ನೊಂದು ಒಡೆದ ಮಾತು.

### ರೈತರೂ ಸಾರಾವಸೂಲಿಯೂ.

ಈಗ ಮಾರ್ಚ ತಿಂಗಳು ಕೊನೆಗಾಣುತ್ತಿರುವದರಿಂದ ಜಮೀನುಗಳ ಕಂದಾಯವನ್ನು ವಸೂಲಿಮಾಡುವದನ್ನು ಗೌಡ ಕುಲಕರ್ಣಿಯವರು ಬಲು ಜೋರಿನಿಂದ ನಡಿಸಿರುವರು. 'ಕ್ವರಿ ಮಾಡಿರಿ' ಎಂದು ಮೇಲಿನ ಮಾಮಲೇದಾರರು ಅವರಿಗೆ ಪ್ರಚೋದಿಸುತ್ತಿರುವರು. ವಸೂಲಿಗಾಗಿ ಅಮಾನುಷ ವ್ಯವಹಾರವನ್ನು ಕೂಡ ಕೆಲವು ಹಳ್ಳಿಯ ಗೌಡ ಕುಲಕರ್ಣಿಯವರು ಮಾಡುತ್ತಿರುವದನ್ನು ಮೇಲಿನ ಅಧಿಕಾರಿಗಳ ಅವಲೋಕನಕ್ಕೆ ತರಬೇಕೆಂದು ಬಯಸಿ ನಾವು ಈ ಬಗ್ಗೆ ಇಲ್ಲಿ ಬರೆಯಲಿಚ್ಛಿಸಿದ್ದೇವೆ. ವಿಜಾಪೂರ ಜಿಲ್ಲೆಯ ಹಳ್ಳಿಗಳಲ್ಲಿ ನೀರಿನ ಕೊರತೆ ಬಹಳ. ಊರಿಗೊಂದೇ ಭಾವಿ, ಅಥವಾ ಸಣ್ಣ ಕೆರೆ. ಸಾರಾ ಕೊಡುವವರು ನೀರು ಒಯ್ಯಕೂಡದೆಂದು ನಿರ್ಬಂಧಪಡಿಸಿ ಗೌಡರು ಆ ಭಾವಿದಂಡೆಗಳಿಗೆ ಕಾವಲು ಇಡಿಸುವರಂತೆ!! ಇದು ಎಷ್ಟು ಅನ್ಯಾಯ! ಹುರಿಗೊಳಿಸುವ ಬೇಸಿಗೆಯ ಬಿಸಿಲಲ್ಲಿ ಪಾಪ ಬಡ ರೈತರು ಮತ್ತು ನೀರಿಗಾಗಿ ಯಾರಿಗೆ ಮೊರೆಯಿಡಬೇಕು? ಮನೆಯಲ್ಲಿದ್ದ ಹಸುಗೂಸುಗಳೂ

ಲಾಠಿಚಾರ್ಜ ಮಾಡಿದ ಪೊಲೀಸ ಅಧಿಕಾರಿಗಳ ಮೇಲೆ ವಿಚಾರಣೆ ಅಳವಡಿಸಿ, ಅಥವಾ ಗೌರವ ಕಳೆದುಕೊಂಡ ಸ್ತ್ರೀಯರಿಗೆ ಇಲ್ಲ ಏನು ಬೇಕು? ಹೊಲದೊಳಗಿನ ಪೀಕು ಹಿಟ್ಟು ಮಾಡಿದ್ದರಿಂದ ಇನ್ನೂ ಕೈಗೆ ಬಂದಿಲ್ಲ. ಮುಂಗಾರಿಯಂತೂ ಎಂಥೋ ಕೇಳ ಹೆಸರಿಲ್ಲದೆ ಹೋಗಿದೆ ಹಿಂಗಾರಿಯ ಪೈಕಿ ಜೋಳ ಒಂದು ಕೈಗೆಬಂದಿದೆ. ಇದೇ ರೈತನ ವರ್ಷದ ಗ್ರಾಸವು. ಇದನ್ನು ಈಗ ಸ್ವಗೆಬಂದಂತೆ ಬಾಜಾರಕ್ಕೆ ಹಚ್ಚಿ ಏನು ಮಾಡುವುದು? ಹತ್ತಿಯು ಬೆಳೆಯು ಇನ್ನೂ ಹೊಲದಲ್ಲಿದೆ. ಈ ಗಾಗಲೇ ಬಿಡಿಸಹತ್ತಿದರೆ ಇನ್ನೊಂದು ಹದಿನೈದು ದಿವಸ ಅವಧಿಯನ್ನು ಅಧಿಕಾರಿಗಳು ದಯಪಾಲಿಸಿದ್ದಾದರೆ ಬಹುಶಃ ಕರ ಮೇಲೆ ಅನಂತ ಉಪಕಾರ ಮಾಡಿದಂತಾಗುತ್ತದೆ. ಈ ವಸೂಲಿಯು ತಂತ್ರ ರೀತಿ ನಿಂದ್ಯವಾದ ವರ್ತನೆಯಾಗಿದೆ. ಮಾಮಲೇದಾರ ಮೊದಲಾದ ಅಧಿಕಾರಿಗಳು, ಸೊಸೈಟಿಗಾಗಿ ಇಷ್ಟು ಜನರ ಗೋಳು ಹೊಯ್ದುಕೊಂಡು ಅವರಿಗೆ ಕೀರ್ತಿ ಅನಿಸಿ ಯಾವ ಸುಖಶಾಂತಿಯನ್ನು ಹೊಂದಬೇಕಾಗಿದೆಯೋ ನಾವರಿಯೆವು ಬೇಸೂರ ಮೊದಲಾದ ಗಾವಗಳಲ್ಲಿ ಈ ಮಾದರಿಯ ಹಿಂಸೆ ನಡೆದುದು ನಾವು ಕೇಳುತ್ತೇವೆ ದಯಾಳುವಾದ ಮಾಮಲೇದಾರರು ಇದರ ವಿಚಾರಣೆಯನ್ನು ಅರಿತುಕೊಳ್ಳಲು ಯತ್ನಿಸುವರೆಂದು ಆಶಿಸುತ್ತೇವೆ

---

## ಅಧ್ಯಕ್ಷರನ್ನು ಹಿಡಿದೊಯ್ದರೆ?

—>> >>[ ]<< <<—

**ಅಖಿಲ ಭರತ ಕಾಂಗ್ರೇಸ ಕಮಿಟಿಯು ಅಹಮ್ಮದಾಬಾದ ಅಧಿವೇಶನದಲ್ಲಿ ಸ್ವೀಕ ಸಲ್ಪಟ್ಟ ಠರಾವು—**

(೧) ಅಧ್ಯಕ್ಷರು, ಕೊರಾಧ್ಯಕ್ಷರೂ ಸರಕಾರದ ದಬ್ಬಾಳಿಕೆಗೆ ತುತ್ತಾದ ವೇಳೆಯಲ್ಲಿ ಅವರು ತಮ್ಮ ಸ್ಥಾನಕ್ಕೆ ಬೇರೆ ಒಬ್ಬರನ್ನು ನಿಯಮಿಸತಕ್ಕದ್ದು. ಪ್ರಾಂತಿಕ ಮಂಡಲಗಳ ಕಾರ್ಯಭಾರವೂ ಇದರಂತೆ ನಡೆಯತಕ್ಕದ್ದು.

(೨) ಹಿಂದೀ ರಾಷ್ಟ್ರೀಸಭೆಯ ಅಮೇರಿಕೆಯಲ್ಲಿರುವ ಶಾಖೆಯನ್ನು ಕಾಂಗ್ರೆಸ್ಸು ನಿರಾಕರಿಸುತ್ತದೆ. (ಅಮೇರಿಕೆಯಲ್ಲಿ ಹಿಂದೀ ಮಹಾಸಭೆಯ ಶಾಖೆಯವರು ಕಾಂಗ್ರೆಸ ಧ್ಯೇಯ ಪತ್ರ ಪತ್ರಿಕೆಗಳಿಗೆ ಅನನುರೂಪವಾದ ಆಮಂತ್ರಣವನ್ನು ನಡೆಸಿದ್ದನ್ನು ಶ್ರೀಮತಿ ಸರೋಜಿನೀದೇವಿಯವರ ಮುಖದಿಂದ ಕೇಳಿ ಮನಗಂಡು ಈ ಠರಾವು ಪಾಸುಮಾಡುವದರಲ್ಲಿ ಬಂದಿತು ಅಲ್ಲಿಯವರ ಚಳವಳಿಯಿಂದ ಕಾಂಗ್ರೆಸ್ಸಿಗೆ ಅಪಾಯವಾಗುವದೆಂದೂ, ಅವರು ತೀರ ಅಲ್ಪ ಸಂಖ್ಯಾತರಿದ್ದುದರಿಂದ ಈ ಠರಾವಿನಿಂದ ವಿಶೇಷ ಕ್ಷೋಭವೇನೂ ಉಂಟಾಗಲಿಕ್ಕಿಲ್ಲವೆಂದೂ ಜವಾಹರಲಾಲರ ತಿಳಿಸಿ ಹೇಳಿ ಈ ಠರಾವು ಸ್ವೀಕೃತವಾಯಿತೆಂದು ಸಾರಿದರು )

### ಮುಂಬಯಿ ವಕೀಲರೂ ವಲ್ಲಭಭಾಯಿಯ ಶಿಕ್ಷೆಯೂ.

ಸರದಾರ ವಲ್ಲಭಭಾಯಿಗೆ ಕಾರಾಗೃಹ ವಾಸವನ್ನು ವಿಧಿಸಿದ್ದು ಯಾವ ಕಾಯಿದೇ ಕಲಮುಗಳಿಗೂ ಅನ್ವಯಿಸುವದಿಲ್ಲವೆಂದೂ, ಅವರ ಭಾಷಣ ಸ್ವಾತಂತ್ರ್ಯವನ್ನು ಅಪಹರಿಸಿ ಅವರ ಶಿಕ್ಷೆ ವಿಧಿಸಿದ್ದು ತೀರ ಅನ್ಯಾಯವೆಂದೂ ಮುಂಬಯಿ ವಕೀಲರೆಲ್ಲರೂ ಸಭೆಸೇರಿ, ಸರಕಾರಕ್ಕೆ ತಿಳಿಸಿದ್ದಾರೆ. ಮತ್ತು ಈ ಖಟ್ಲೆಯ ಸಂಬಂಧಿ ಎಲ್ಲ ಕಾಗದ ಪತ್ರಗಳನ್ನು ಹಾಯಕೋರ್ಟಿನವರು ತರಿಸಿಕೊಂಡು ವಿಚಾರ ಮಾಡತಕ್ಕದ್ದು. ಇಲ್ಲವಾದರೆ ಮುಂಬಯಿ ಇಲಾಖೆಯಲ್ಲಿ ಕಾಯಿದೆ ಕಾನೂನುಗಳ ಅವಶ್ಯಕತೆ ಉಳಿವಿಲ್ಲವೆಂಬ ಜಾಹೀರಮಾಡಿರಿ. ಎಂದು ಹಾಯಕೋರ್ಟಿಗೆ ಅರ್ಜಿ ಕಳಿಸಿದ್ದಾರೆ

### ೭೫೦೦ ರೂಪಾಯಿಗಳ ಬಹುಮಾನವು.

ಹಿಂದುಸ್ಥಾನದಿಂದ ಇಂಗ್ಲಂಡಿಗೆ ವಿಮಾನದಿಂದ ಹಾರಿ ಇಳಿದವನಿಗೆ ಬಕ್ಷೀಸ ಕೊಡುವೆನೆಂದು ಆಗಾಖಾನರು ಸಾರಿದ್ದರು. ಶ್ರೀ ಚವಲಾ ಇವರು ಹಾಗೆ ಯತ್ನಮಾಡಿ ಯಶಸ್ವಿಯಾಗಿರುವರೆಂದು ವೈಸರಾಯರು ಅವರಿಗೆ ೭೫೦೦ ರೂಪಾಯಿಗಳ ಬಹುಮಾನ ಮಾಡಿದರು ಆಗಾಖಾನರ ಇನ್ನೊಂದು ಕರಾರವನ್ನು ಮಾತ್ರ ಚವಲಾ ಇವರು ನೆರವೇರಿಸಿಲ್ಲ ಇನೊಬ್ಬನ ಜೋಡು ಇಲ್ಲದೆ ಒಬ್ಬನೆ ಹಾರಿ ಹೋಗಬೇಕೆಂಬ ಕರಾರು ಪಾಲಿಸಲ್ಪಟ್ಟಿಲ್ಲ. ಯಾಕೆಂದರೆ ಚವಲಾ ಇವರ ಜೊತೆಯಲ್ಲಿ ಎಂಜನಿಯರ ಎಂಬ ಇನ್ನೊಬ್ಬ ಗೃಹಸ್ಥನಿದ್ದನು. ಆದರೂ ಇನಾಮು ಕೊಡುವದರಲ್ಲಿ ಬಂದಿತು. ಧೈರ್ಯ ಸಾಹಸ ಕೆಲಸ! ಚವಲಾ ಇವರು ವಿಮಾನ ಏರಿಸುವದನ್ನು ಗಾಂಧಿಜೀ ಇತ್ಯಾದಿಗಳಿಂದಲೇ ಕಲಿಯ ಹತ್ತಿದ್ದರಂತೆ.

### ಗುತ್ತಲದಲ್ಲಿ ಸ್ವಾತಂತ್ರ್ಯ ಸಂದೇಶ.

ನಿನ್ನೆ ಈ ಊರಲ್ಲಿ ಶ್ರೀ ಬಳ್ಳಾರಿಯವರು ಬಂದು ಒಂದು ತರದ ಸ್ವಾತಂತ್ರ್ಯವನ್ನು ಘೋಷಮಾಡಿರುವರು ತರುಣರ ಸಭೆ ಕರೆದು ಖಾದೀ, ಮದ್ಯಪಾನ ನಿಷೇಧ, ರಾಷ್ಟ್ರಧ್ವಜ ವಂದನೆ, ವ ಜನಾಂದೋಲನಗಳನ್ನು ಜರುಗಿಸಲು ಬೇರೆ ಬೇರೆ ಮಂಡಳಿಗಳನು ಮಾಡಿರುವರು.

## ಅಸೆಂಬ್ಲಿಯಲ್ಲಿಯ ವರ್ತಮಾನವು.

ಬೆಳ್ಳಿಯ ಮೇಲೆ ಜಕಾತಿಯನ್ನು ಕೂಡಿಸಬೇಡಿರೆಂದು ರಹಿಮತುಲ್ಲಾ ಮತ್ತು ಪುರುಷೋತ್ತಮದಾಸ ಠಾಕೂರದಾಸ ಇವರು ಎಷ್ಟೋಂದ ಒದರಿಕೊಂಡರೂ ಪ್ರಯೋಜನವಾಗಲಿಲ್ಲ ಹೀಗೆ ಕರಕೊಳ್ಳುವದರಿಂದ ಈಗಿನ ಅನ್ಯಾಯವಾದ ಚಲನ ಪದ್ಧತಿಯಿಂದ ಹಿಂದುಸ್ಥಾನಕ್ಕೆ ಇನ್ನು ಹೆಚ್ಚಿನ ಹಾನಿ ತಟ್ಟುವದೆಂದು ಪುರುಷೋತ್ತಮದಾಸ ಠಾಕೂರದಾಸರು ತಿಳಿಸಿ ಹೇಳಿದರು. ಕೇಳುವವರಾರು. ಕಡೆಗೆ ಬೆಳ್ಳಿಯ ಮೇಲೆ ಶಾಸ್ಟರ ಸಾಹೇಬರ ಸೂಚನೆಯ ಪ್ರಕಾರ ಜಕಾತಿ ಇರತಕ್ಕದ್ದೆಂಬೇ ನಿರ್ಣಯವಾಯಿತು. ಕೇವಲ ಜನರ ಹಿತಕ್ಕಾಗಿಯೇ ತಾವು ಹೀಗೆ ಮಾಡಬೇಕಾಗಿದೆಂದು ಶೂಸ್ಟರರು ಹೇಳುವ ಅನೃತವು ಕೇಳಬೇಕು.

† § † ‡

ಇದರಂತೆ ಕಲ್ಲಿದ್ದಿಲಿನ ಮೇಲಿಯೂ ಹೆಚ್ಚಿನ ಕರವು ಹೇರಲ್ಪಟ್ಟಿತು. ಬರ್ಮಾ ಆಯಿಲ್ ಕಂಪನಿಯವರು ಈ ಹೆಚ್ಚಿನ ಕರಕ್ಕೆ ವಿರೋಧಿಸುತ್ತಿದ್ದರಿಂದ ಅವರ ಸ್ವಜಾತೀಯರಾದ ಯುರೋಪಿಯನ್ನರು ಇದಕ್ಕೆ ಪ್ರತಿಕೂಲ ಮತಕೊಟ್ಟರು. ಆದಾಗ್ಯೂ ಸರಕಾರದ ಸೂಚನೆಯೇ ಸ್ವೀಕೃತವಾಯಿತು ಯುರೋಪಿಯನ್ನ ಜನರ ಮತಪ್ರದಾನದ ಬಗ್ಗೆ ಪುರುಷೋತ್ತಮದಾಸ ಠಾಕೂರದಾಸರು ಅವರ ಕುತ್ಸಿತತನವನ್ನು ಖಂಡಿತ ಒಳ್ಳೇ ಆವೇಶದಿಂದ ಭಾಷಣಮಾಡಿದರು. ಆದರೇನು ಅಸೆಂಬ್ಲಿಯ ಆ ಹೊಡೆದಾಟವಲ್ಲ. ಹೊಳೆಯಲ್ಲಿ ಹುಣಿಸೆಹಣ್ಣು ತೊಳೆದಂತೆ ಇರುವದೆಂದು ತಿಳಿದರೂ ಹೇಳುವದು ಸಾಕಲ್ಲ.

### ಮಹಾತ್ಮಾ ಗಾಂಧಿಯವರ ಧರ್ಮ ಪತ್ನಿಯವರಾದ

# ಶ್ರೀಮತಿ ಕಸ್ತೂರಿಬಾಯಿಯವರು

## ಸತ್ಯಾಗ್ರಹಕ್ಕೆ ಹೊರಡತಕ್ಕವರು.

ಶ್ರೀಮತಿ ಕಸ್ತೂರಿ ಬಾಯಿ ಗಾಂಧಿಯವರೂ ಆಶ್ರಮದಲ್ಲಿಯ ೧೭ ಜನ ಸ್ತ್ರೀ ಸೈನ್ಯದೊಡನೆ ಉಪ್ಪಿನ ಕಟ್ಟಳೆಯನ್ನು ಮುರಿಯುವದಕ್ಕೋಸ್ಕರ ಸಾಬರಮತಿಯಿಂದ ಹೊರಟು ಬುಲಸಾರದವರೆಗೆ ಉಗಿಬಂಡಿಯಿಂದ ಪ್ರಯಾಣ ಬೆಳೆಸಿ ಅಲ್ಲಿಂದ ತಿರೇಲ ಎಂಬ ಸ್ಥಳಕ್ಕೆ ಬಂದು ಅಲ್ಲಿ ಸತ್ಯಾಗ್ರಹವನ್ನು ಪ್ರಾರಂಭಿಸತಕ್ಕವರಿದ್ದರು. ಮಹಾತ್ಮಾಜಿಯವರ ಅಪ್ಪಣೆ ದೊರೆತಲ್ಲಿ ಎಪ್ರೀಲ ೫ ನೇ ತಾರೀಖಿಗೆ ಸುರುವು ಮಾಡಬೇಕೆಂದು ಇವರ ಹಂಬಲ.

### ಸ್ತ್ರೀಯರಿಗಾಗಿ ಸತ್ಯಾಗ್ರಹದ ಶಿಬಿರವು.

ಹಿಂದೀಯರ ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮ ತನ್ನು ಬಲಿದಾನವನ್ನು ಅರ್ಪಿಸಿ ಜನ್ಮಸಾರ್ಥಕ ಮಾಡಿಕೊಳ್ಳಬೇಕೆಂದು ಬಯಸುತ್ತಿರುವ ಅಬಲೆಯರಿಗೂ ಈ ರಣಾಂಗಣದಲ್ಲಿ ಆಸ್ಪದವಾಗಬೇಕೆಂದು ಬಗೆದು ಅಂಥವರನ್ನು ಈ ಶಾಂತಿ ಯುದ್ಧಕ್ಕೆ ಸಿದ್ಧರನ್ನಾಗಿ ಮಾಡುವದಕ್ಕಾಗಿ ಸಾಬರಮತಿ ಆಶ್ರಮದಲ್ಲಿ ಒಂದು ಶಿಕ್ಷಣ ಶಿಬಿರವನ್ನು ತೆರೆದಿದ್ದಾರೆ. ದಾದಾಭಾಯಿ ನವರೋಜಿಯವರ ಮೊಮ್ಮಗಳಾದ ಶ್ರೀಮತಿ ಖುರಶೇದಬಾಯಿಯವರು ಈ ಶಿಬಿರದ ಭಾರವನ್ನು ವಹಿಸಿರುವರು. ೧೨ ಜನ ಮಹಿಳೆಯರ ಅರ್ಜಿಗಳು ಬಂದ ಕೂಡಲೇ ಕ್ಲಾಸ ಪ್ರಾರಂಭವಾಗುವದು. ಮಕ್ಕಳುಳ್ಳವರಿಗಳಿದ್ದ ಹೆಂಣು ಮಕ್ಕಳು ಅರ್ಜಿ ಮಾಡಕೂಡದು. ತಮ್ಮ ಮಕ್ಕಳ ಸಂರಕ್ಷಣೆಯ ಭಾರವನ್ನು ಬೇರೆ ಯೋಗ್ಯ ರೀತಿಯಿಂದ ವ್ಯವಸ್ಥೆ ಆಗುವಂತಿದ್ದರೆ ಮಾತ್ರ ಬರಬಹುದು. ಅರ್ಜಿ ಮಾಡಿಕೊಳ್ಳುವವರು ೧೮ ರಿಂದ ೪೫ ವಯಸ್ಸಿನ ವಯಸ್ಸಿನೊಳಗಿನ ಸದೃಢರಾದವರಾಗಿರಬೇಕು. ಅಂಜುಬುರುಕ ಸ್ವಭಾವದವರು ಉಪಯೋಗವಿಲ್ಲ. ಸತ್ಯಾಗ್ರಹಿಗಳಾದ ಗಂಡಸರಿಗೆ ಕೊಡಬೇಕಾದ ಶಿಕ್ಷಣವೇ ಇವರಿಗೂ ಕೊಡಲ್ಪಡುವದು.

### ಮುಂದಿನ ಕಾಯದೆ ಭಂಗದ ಪ್ರಕಾರವು.

ಮಹಾತ್ಮಾ ಗಾಂಧಿಯವರು ಪರೀಕ್ಷ ಪಟ್ಟಣದಲ್ಲಿದ್ದಾಗ ಪ್ರಾಂತೀಯ ಮುಖಂಡರಾದ, ಸಿ. ರಾಜಗೋಪಾಲಾಚಾರ್ಯ ಗಂಗಾಧರರಾವ ದೇಶಪಾಂಡೆ, ಜಯರಾಮದಾಸ ದೌಲತರಾಮ ಮತ್ತು ಮಹದೇವ ದೇಸಾಯಿ ಈ ನಾಲ್ವರೂ ಅವರೊಡನೆ ಸವಿನಯ ಕಾಯದೆ ಭಂಗದ ಪ್ರಕಾರವನ್ನು ನಿಶ್ಚಯಿಸುವದಕ್ಕೋಸ್ಕರ ಆಲೋಚನೆ ಮಾಡಿದರು. ಆಗ್ಗೆ ಗಾಂಧಿಯವರ ಅಭಿಪ್ರಾಯ ಪಟ್ಟದ್ದೇನಂದರೆ: ಸರಕಾರವು ಸತ್ಯಾಗ್ರಹಿಗಳನ್ನು ಜೇಲಿಗೆ ಕಳಿಸದೆ, ಕೇವಲ ಮುಂಗೈಚೇರಿಯಿಂದ ನಮ್ಮ ಕೈಗಳಲ್ಲಿನ್ನು ಕಸಿಯಲಿಕ್ಕೆ ಬಂದರೆ ಸತ್ಯಾಗ್ರಹಿಗಳು ಅದನ್ನು ಸಾತ್ವಿಕ ಪ್ರತಿಕಾರ ಮಾಡಲಿಕ್ಕೆಬೇಕು. ಮತ್ತು ಇಂಥ ಪ್ರಸಂಗದಲ್ಲಿ ಉಪ್ಪು ಕಾಯದೆ ಭಂಗದ ಕಾರ್ಯಭೂಮಿಯನ್ನು ಆದಷ್ಟು ವಿಸ್ತಾರಗೊಳಿಸಿಕೊಳ್ಳುವದಲ್ಲದೆ ನಾವು ಇಂಥ ಇಂಥಲ್ಲಿ ಕಾಯದೆ ಭಂಗ ಮಾಡತಕ್ಕವರಿದ್ದೇವೆಂದು ಮುಂಚಿತ ಸರಕಾರಕ್ಕೆ ತಿಳಿಸುತ್ತಿರುವ ಪದ್ಧತಿಯನ್ನು ಬಿಟ್ಟುಕೊಡಬೇಕು.

‡ ‡ †

### ಸರಕಾರವು ಒಳಗೆ ಹೆದರಿದೆ.

ಗಾಂಧಿಯವರ ಆವೇಶವು ಉತ್ಕೃಷ್ಟವಾಗಿದೆ. ಅವರ ಮೊದಲಿನ ನೂರು ಮೈಲಿನ ಪ್ರವಾಸವು ತೀರಿದ ಮೇಲೆ- ಅವರು ಅಮೋದ ಪಟ್ಟಣದಲ್ಲಿರುವಾಗ ಈ ಸರಕಾರಕ್ಕೆ ಹೇಳಿದ್ದೇನೆಂದರೆ, ಇದರ ಸಕ್ತಿವು ಕಗ್ಗುತ್ತಿದೆ ನಾನು ಎಂಥ ರಾಜದ್ರೋಹದ ಭಾಷಣ ಮಾಡಿದರೂ ನನ್ನನ್ನು ಹಿಡಿಯಲಿಕ್ಕೆ ಅಂಜುತ್ತಿದೆ. ಇವರ ರಾಜ್ಯವನ್ನು ಕಳಚಿ ಒಗೆಯಬೇಕೆಂಬ ನನ್ನ ಪ್ರಯತ್ನಗಳಿಗೆ ಅಡ್ಡವಾದರೂ ತಡೆಯುವ ಶಕ್ತಿಯು ಸರಕಾರಕ್ಕೆ ಉಳಿದಿರುವದಿಲ್ಲ. ನನ್ನ ಸೈನ್ಯವಾದರೂ ಏನು ಬಹಳದೆಯೋ? ೮೦ ಜನ ನಿಃಶಸ್ತ್ರ ಸ್ವಯಂಸೇವಕರು. ಈ ದಾರಿಯ ಸ್ಥಳದಲ್ಲಿ ೮೦೦೦ ಸಾವಿರ ಸ್ವಯಂಸೇವಕರು ನನ್ನ ಬೆನ್ನ ಹತ್ತಿದರೆ ಇವರು ಎಷ್ಟು ಅಂಜಲಿಕ್ಕಿಲ್ಲ ನೋಡಿರಿ. ಸರಕಾರವು ಒಳಗೆ ನರ್ವಸವಾಗಿದೆ. ನೈತಿಕ ಧೈರ್ಯ ಉಳಿದಿಲ್ಲ. ದಬ್ಬಾಳಿಕೆಯನ್ನು ಮಾಡಲಿಕ್ಕೆ ಅಂಜಿಕೆಯಿಂದ ಕೈ ನಡುಗಹತ್ತಿವೆ. ಅಂತೂ ಸೇನಗುಪ್ತರಿಗೆ ೧೨ ದಿವಸಗಳಿಗಿಂತ ಹೆಚ್ಚಿನ ಶಿಕ್ಷೆಯನ್ನು ಕೊಡುವ ಧೈರ್ಯವಾಗಲಿಲ್ಲ. ಉಪ್ಪಿನ ಮೇಲಿನ ಕರವನ್ನು ಪ್ರತ್ಯಕ್ಷ ಅಪ್ರತ್ಯಕ್ಷರೀತಿಯಿಂದ ತೆಗೆದು ಹಾಕಲಿಕ್ಕೆ ಒಂದುಗಿಂದು ಗಂಭೀರ ವಿಚಾರ ಮೊಕ್ಷ ಕಾಕ್ಸರ ಸಾಹೇಬರ ಪಸೆಂಬ್ಲಿಯೊಳಗಿನ ಭಾಷಣದಿಂದ ವ್ಯಕ್ತವಾಗುವಂತಿದೆ. ೧೯೨೧ ನೇ ಇಸ್ವಿಯ ವರ್ಷವು ಈ ಸರಕಾರದಲ್ಲಿ ಉಳಿದಿಲ್ಲವೆಂಬುದ ಇವೆಲ್ಲ ಸಂಗತಿಗಳಿಂದ ನಿಮಗೆ ತಿಳಿಯದೆ ಇರಲಿಕ್ಕಿಲ್ಲ. ಅಂತೂ ಇಂಥ ಸುಪ್ರಸಂಗದಲ್ಲಿ ಪ್ರಾಣ ಹೋಲ ಮನೆಗಳ ಹಂಗು ದೇಹತೆದು ಬಂದೂ ಈ ಸಮರ ಕಥೆಯನ್ನು ಒಮ್ಮೆ ಮುಗಿಸಿಬಿಡಿರಿ ಅವೇಲೆ ನಿಮ್ಮ ಹೊಲಗಳ ಮೇಲಿನ ಕರವು ಕಡಿಮೆ ಆಗುವದು. ಮಾಮಲೇದಾರರು ನಿಮ್ಮೊಡನೆ ಸಭ್ಯರಾಗಿ ವರ್ತಿಸ ಹತ್ತುವರು. ಜೀವಿಸಿದರೆ ಸ್ವಾತಂತ್ರ್ಯ ಹಿಂದ ಸ್ಥಾನದಲ್ಲಿ ಜೀವಿಸುತ್ತೇವೆ. ಇಲ್ಲನಾದರೆ ಈ ಸಮರಾಂಗಣದಲ್ಲಿ ನಮ್ಮ ದೇಹಗಳನ್ನು ಬಲಿದಾನವಾಗಿ ಅರ್ಪಿಸಿ ವೀರಸ್ವರ್ಗವನ್ನು ಹೊಂದುತ್ತೇವೆಂಬ ನಿಶ್ಚಯದಿಂದ ಹೋರಬೇಕಿರಿ. ಏಳಿರಿ

### ಇದರ ಒಂದು ಕಾಯಿದೆ ಭಂಗವೇ.

ನಾಳೆ ಏಪ್ರಿಲ ೧ನೇ ತಾರೀಖಿಗೆ ಅಮಲಿನಲ್ಲಿ ಬರಲಿರುವ ಬಾಲವಿವಾಹ ಪ್ರತಿಬಂಧಕ ಕಾಯದೆಯನ್ನು ವಿರೋಧಿಸಲಿಕ್ಕೆ ಯಾವ ಯಾವ ಸಾಹಸ ಮಾಡಬೇಕೆಂಬುವ ಬಗ್ಗೆ ಆಲೋಚನೆಯನ್ನು ಮಾಡಲು ಬಾಗಲಕೋಟೆಯ ಆಚಾರ್ಯವೃಂದವು ವೇ|| ಕೊಪ್ಪರಾಚಾರ್ಯ ಗಲಗಲಿ ಇವರ ನೇತೃತ್ವದ ಕೆಳಗ ಸಭೆಸೇರಿ, ಕೆಲವೊಂದು ಕಾರ್ಯಕ್ರಮವನ್ನು ಗೊತ್ತುಮಾಡಿರುವರು. ಮೊದಲು ವೇ|| ಕೊಮಾರಾಚಾರ್ಯರು ಕೆಲವು ಸ್ಥಳಕ ಆಚಾರ್ಯರನ್ನು ಕೂಡಕೊಂಡು ಬಾಗಲಕೋಟೆಯಲ್ಲಿ ಪ್ರವ್ಯ ಕೊಡಿಸಲಿಕ್ಕೆ ಒಪ್ಪಿಕೊಂಡರು. ಆ ಮೇಲೆ ವೇ|| ಕವ. ನಾರಾಚಾರ್ಯ ಕಟ್ಟಿ ಇವರು ಇದೆ ಸಭೆಯಲ್ಲಿ ಸ್ಥಾಪಿತ ಪ್ರಚಾರ ಮಂಡಲಕ್ಕೆ ಕಾರ್ಯದರ್ಶಿಗಳಾಗಿ ನಿಂತುಕೊಂಡು ಪ್ರಚಾರದ ಕಾರ್ಯವನ್ನು ನೋಡಿಕೊಳ್ಳತಕ್ಕದ್ದು. ಏಪ್ರಿಲ ತಿಂಗಳ ೧ ನೇ ತಾರೀಖ ಕರ್ನಾಟಕ ಎಲ್ಲ ಕಡೆಯಲ್ಲಿ ಈ ಕಾಯದೆಯ ವಿರೋಧಿ ಸಭೆಗಳು ಸೇರುವಂತೆ ಎಲ್ಲ ಸ್ಥಳಗಳಿಗೂ ಪ್ರಾರ್ಥನೆಗಳನ್ನು ಕಳಿಸಬೇಕು ಹೆಚ್ಚಿನದೆಂದರೆ ಸುಮಾರು ೩೦ ಆಚಾರ್ಯರು ತಾವು ಜೇಲಿಗೆ ಹೋದರೂ ಚಿಂತೆಯಿಲ್ಲ ಇದನ್ನು ತಾವು ಮುರಿಯತಕ್ಕವರೇ ಎಂದು ಪ್ರತಿಜ್ಞೆಮಾಡಿ ಸಹಿ ಕೊಟ್ಟಿರುವರು.

---

ಭಾರತೀಯ ಸ್ವಾತಂತ್ರ್ಯ ಸಮರ

## ಕರ್ನಾಟಕದಲ್ಲಿ ಪ್ರಾರಂಭ. ಶಾಂತಿಸೇನೆಯಲ್ಲಿ ಸೇರಿರಿ.

ಇಂಥ ಸಮರ ಸಮಯದಲ್ಲಿ ವೀರ ಕನ್ನಡಿಗರು ಸುಮ್ಮನಿರುವದು ಸಾಧ್ಯವಲ್ಲ. ಅನ್ಯರು ರಣಕ್ಕೆ ಹೋಗಲಿ, ನಾವು ಮನೆಯಲ್ಲಿರುವಾ, ಎನ್ನುವಷ್ಟು ಹೇಡಿಗಳು ಕನ್ನಡಿಗರಲ್ಲ. ಅನ್ಯರು ದೊರಕಿಸಿದ ಸ್ವಾತಂತ್ರ್ಯವನ್ನು ನಾವು ಉಪಭೋಗಿಸುವಾ ಎಂದು ಋಣಗಳನ್ನು ತಿನ್ನಲಿಕ್ಕೆ ಸಿದ್ಧರಾಗುವಷ್ಟು ದ್ರೋಹಿಗಳು ನಾವಲ್ಲ. ನಾವೂ ಸ್ವಾತಂತ್ರ್ಯ ಸಮರದಲ್ಲಿ ಸೇರಿ ನಮ್ಮ ಕರ್ತವ್ಯವನ್ನು ಮಾಡುವಾ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮೀಟಿಯವರು ೨೩—೩—೩೦ನೇ ದಿನ ಒಂದು ಸತ್ಯಾಗ್ರಹ ಮಂಡಲವನ್ನೇ ಕಲ್ಪಿಸಿದರು. ಆ ಮಂಡಲದವರು ಕರ್ನಾಟಕದಲ್ಲಿ ಶಿರಗಾಂವಿ ಕಾರವಾರ ಜಿಲ್ಲೆಯಲ್ಲಿ ಉಪ್ಪಿನ ಕರವನ್ನು ಕೊಡದಿರುವ ಸತ್ಯಾಗ್ರಹವನ್ನು ಪ್ರಾರಂಭಿಸಬೇಕೆಂದು ನಿಶ್ಚಯಿಸಿದ್ದಾರೆ. ಸತ್ಯಾಗ್ರಹಿಗಳ ಸೈನ್ಯವನ್ನು ಸಿದ್ಧಪಡಿಸುವ ಕಾರ್ಯವು ನಡೆದಿದೆ. ಇನ್ನು ಕೆಲವೇ ಜನರು ಈಗಾಗಲೇ ಸೈನ್ಯವನ್ನು ಸೇರಿದ್ದಾರೆ. ಇಂತಹ ಸಂದರ್ಭದಲ್ಲಿ ಕರ್ನಾಟಕದ ಬಿಸಿ ನೆತ್ತರದ ವೀರ ತರುಣರೇ ಹಿಂಜರಿಯದೇ ಮುಂದಕ್ಕೆ ಬಂದು ಈ ಶಾಂತಿ ಸೈನ್ಯದಲ್ಲಿ ಸೇರಿರಿ. ಮತ್ತು ಸ್ವಾತಂತ್ರ್ಯ ಸಮರದಲ್ಲಿ ಸಹಾಯಕರಾಗಿರಿ.

ಸೈನಿಕರಾಗುವವರು ಹುಬ್ಬಳ್ಳಿಯಲ್ಲಿರುವ ಹಿಂದುಸ್ಥಾನಿ ಸೇವಾದಲ ಕಚೇರಿಗೆ ಬರೆದು ಪ್ರತಿಜ್ಞಾಪತ್ರಿಕೆಗೆ ಅಂಕಿತ ಹಾಕಬೇಕು.

ದೇಶಪಾಂಡೆ ಗಂಗಾಧರರಾಯ — ಗಾಂವಕರ ಶಂಕರರಾವ
ಎನ್. ಎಸ್. ಹರ್ಡೀಕರ — ಟೀ. ಸುಬ್ರಹ್ಮಣ್ಯಂ
ಕೌಜಲಗಿ ಹಣಮಂತರಾಯ — ದಿವಾಕರ ರಂಗರಾಯ

ಕರ್ನಾಟಕ ಸತ್ಯಾಗ್ರಹ ಕಮೀಟಿ.

---

# 'ಕನ್ನಡಿಗ'ನ ನಿತ್ಯ ಸಂಚಿಕೆ!

ಏಜಂಟರಾಗಲಿಚ್ಛಿಸುವವರು ಕೂಡಲೇ ಬರೆದುಕೊಳ್ಳಬೇಕು. ಸಣ್ಣ ಊರವರು ಕನಿಷ್ಟ ಮೂರು ರೂಪಾಯಿಗಳನ್ನೂ, ಪಟ್ಟಣದವರು ಕನಿಷ್ಟ ಹತ್ತು ರೂಪಾಯಿಗಳನ್ನೂ ಠೇವು ಕಳಿಸಬೇಕು. ಸ್ಥಾನಿಕ ಕಾಂಗ್ರೆಸ ಕಮೀಟಿಯ ಅಥವಾ ಮುಖ್ಯ ಸದ್ಗೃಹಸ್ಥರ ಒಂದು ಸರ್ಟಿಫಿಕೇಟನ್ನಾದರೂ ಪ್ರಮಾಣಕ್ಕಾಗಿ ಅರ್ಜಿಯ ಸಂಗಡ ಕಳಿಸತಕ್ಕದ್ದು. ಪ್ರತಿವಾರದಲ್ಲಿ ಲೆಕ್ಕವನ್ನು ಹಣವನ್ನೂ, ಮಾರದೇ ಇದ್ದ ಸಂಚಿಕೆಗಳನ್ನೂ ತಿರುಗಿ ಕಳಿಸತಕ್ಕದ್ದು. ನೂರಕ್ಕೆ ೨೫ ರೂಪಾಯಿಗಳಂತೆ ಏಜಂಟರಿಗೆ ಕಮೀಶನ್ ದೊರೆಯುವದು. ಮೋಟಾರುಗಳ ತಿಕೀಟ ಏಜಂಟರುಗಳು ಸಣ್ಣ ಊರುಗಳಲ್ಲಿ ದಿನಾಲು ೧೦ ೧೫ ಪ್ರತಿಗಳನ್ನು ತರಿಸಿಕೊಂಡರೂ ಅವರಿಗೆ ಪ್ರತಿ ತಿಂಗಳು ೨-೩ ರೂಪಾಯಿ ಕೂಲಿಕ್ಕೆಯೇ ದೊರೆಯುವವು. ಸಣ್ಣ ಪಟ್ಟಣಗಳಲ್ಲಿ ನೂರನ್ನೂರು ಪ್ರತಿಗಳನ್ನು ಮಾರುವ ಏಜಂಟರಿಗೆ ತಿಂಗಳೊಂದಕ್ಕೆ ೬೦ ರೂಪಾಯಿಗಳಿಂದ ೨೦೦ ರ ವರೆಗೆ ಪಗಾರ ಬೀಳುವದು. ಮೇಲಿನ ಕೆಲವು ದೊಡ್ಡ ಪಟ್ಟಣಗಳಿಗೆ ಸಹ ಇಂಗ್ಲೀಷ ಪತ್ರಿಕೆಗಳಿಗಿಂತಲೂ, ಮರಾಠಿ ಪತ್ರಿಕೆಗಳಿಗಿಂತಲೂ ಮುಂಚಿತವಾಗಿ ಸುದ್ದಿಗಳು ನಮ್ಮ ಪತ್ರಿಕೆಯಿಂದ ತಿಳಿಯುವವು. ಕಾರಣ ಏಜಂಟರು ಕೂಡಲೆ ಪ್ರಮುಖ ಸುದ್ದಿಗಳನ್ನು ಪೇಟೆಯಲ್ಲಿ ಒದರುತ್ತ ತಿರುಗಿಯಾಗಲಿ, ಸ್ಥಾನಿಕ ಮುಖ್ಯ ಮುಖ್ಯ ಜನರನ್ನು ಭೆಟ್ಟಿಯಾಗಿ ಅವರ ಹೆಸರನ್ನು ನೊಂದಾಯಿಸಿಕೊಂಡಾಗಲಿ, ಪ್ರಯತ್ನಿಸಿದರೆ ಜನಕ್ಕೆ ಪ್ರತಿಗಳು ಹೆಚ್ಚಾಗಿ ಖರ್ಚಾಗೇ ಹೋಗುವವು, ಆದ್ದರಿಂದ ಅವಶ್ಯವಾಗಿ ಕೂಡಲೇ ಏಜಂಟರಾಗಲು ಬರೆದುಕೊಳ್ಳತಕ್ಕದ್ದು.

ಜಾಹೀರಾತಿನ ದರ— ಕಾಯಂ ಜಾಹೀರಾತುಗಳಿಗೆ ಒಂದು ಕಾಲಮ್ಮಿನ ಒಂದು ಇಂಚಿನ ಪ್ರತಿಯೊಂದು ಸಂಚಿಕೆಗೆ ನಾಲ್ಕು ಆಣೆ ಹಂಗಾಮೀ ಜಾಹೀರಾತುಗಳಿಗೆ ಐದು ಆಣೆ

ನಿಮ್ಮ ಪತ್ರಿಕೆಯ ವ್ಯವಸ್ಥಾಪಕರು
"ಕನ್ನಡಿಗ" ಕಾರ್ಯಾಲಯ ಬಾಗಲಕೋಟೆ.

---

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಯಂತ್ರದಲ್ಲಿ ಮುದ್ರಿತವಾಗಿ, ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦ ೧

ಜಯ ಕರ್ನಾಟಕ

ನಿತ್ಯ ಪಂಚಿಕೆಯು.

[illegible]

ಸಂಪಾದಕರು:— [illegible]

ಬಾಗಲಕೋಟೆ ಪುಸ್ತಕ ... ಫಾಲ್ಗುಣ ಬಹುಳ ೧೩ ಶಕ ೧೮೫೧ ತಾ ೨೮—೩—೩೦ ಸಂಚಿಕೆ ೬

# ಸಂಪಾದಕರ ಧ್ವನಿ.

ನನ್ನ ದೇಹವು ನಿನ್ನ ಪೀಠಕ್ಕಾಗಿ ।
ನನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧನಿದೆ ।
ನನ್ನ ಪ್ರಾಣವು ನಿನ್ನ ಗಂಧವನ್ನು ... [illegible]

— [illegible]

## ಕರ್ನಾಟಕವು

# ಅನ್ಯಪ್ರಾಂತಗಳಿಗಿಂತ ಹಿಂದೆಯೆ?

ಮಹಾತ್ಮರು ಗುಜರಾಥದಲ್ಲಿ ಸಾಗಿಸುತ್ತಿರುವ ಸ್ವಾತಂತ್ರ್ಯ ಸಂಗ್ರಾಮದ ಪ್ರಗತಿಯು ದಿನದಿನಕ್ಕೆ ಉಗ್ರವಾಗತೊಡಗಿದೆ. ಅವರು ಹೋದ ಹೋದಲ್ಲಿ ದಿನಾಲು ಸಾವಿರಾರು ಜನರು ... ಅವರ ಉಪದೇಶ ... ಸ್ವೀಕರಿಸಿ ... ಕೂಡ ತರುತ್ತಲಿದ್ದಾರೆ. ... ಗಟ್ಟಲೆ ಸ್ವಯಂಸೇವಕರು ಮುಂದೆ ಬಂದು, ಸಂಗ್ರಾಮದಲ್ಲಿ ಸೇರುತ್ತಲಿದ್ದಾರೆ. ... ತಮ್ಮ ... ಆಭರಣಗಳನ್ನು ರಾಷ್ಟ್ರಕಾರ್ಯಕ್ಕಾಗಿ ... ಕೊಡುತ್ತಲಿದ್ದಾರೆ. ... ಹಣವನ್ನು ಮಹಾತ್ಮರಿಗೆ ಬೇಕುಬೇಕಾದಂತೆ ಕೊಡುತ್ತಲಿದ್ದಾರೆ. ಸಾವಿರಗಟ್ಟಲೆ ಸ್ತ್ರೀಯರು ಸಹ ಸಭೆಗಳಿಗೆ ಗುಂಪು ಗುಂಪಾಗಿ ಬಂದು, ... ನಡೆದುದನ್ನೆಲ್ಲ ಚನ್ನಾಗಿ ಗ್ರಹಣಮಾಡಿ, ಸ್ವಯಂಸೇವಿಕೆಯರಾಗುತ್ತಲಿದ್ದಾರೆ. ಗುಜರಾಥದ ... ನಭೋಮಂಡಲದಲ್ಲಿ ಗುರುವಿನ ಪ್ರಕಾಶವು ಅತ್ಯಂತ ತೇಜೋಮಯವಾಗಲು, ಗುಜರಾಥದ ಗ್ರಾಮಸ್ಥರು ತಮ್ಮ ತಮ್ಮ ಸರಕಾರದ ನೌಕರಿಗೆ ತಿಲಾಂಜಲಿಯನ್ನು ಕೊಡುವ ಮುಖ್ಯ ಕಾರಣವು. ತಮ್ಮ ಪ್ರಾಣವನ್ನು ಕೂಡ ಕೊಡಲು ಆ ಆಧುನಿಕ ಯೋಗಿಯಾದ ಮಹಾತ್ಮನು ಸಿದ್ಧನಿರಲು, ಅವನ ... ನಾವು ಈ ಬಗೆಯಿಂದ ಅವನಿಗೆ ಪ್ರತಿಪೂರ್ಣವಾಗಿ ರಾಷ್ಟ್ರಕಾರ್ಯದಲ್ಲಿ ನೆರವಾದುದು ಗುಜರಾಥಕ್ಕೆ ... ಭೂಷಣವಾದುದು.

ಗುಜರಾಥಕ್ಕೆ ನೆರೆಹೊರೆಯ ಪ್ರಾಂತವಾದ ... ಸ್ವಯಂಸೇವಕರು ... ರಾಷ್ಟ್ರಸೇವೆಗೆ ಸಿದ್ಧರಾಗಿದ್ದಾರೆ. ಹಣವೂ ಹರಿದು ಬರುತ್ತಿದೆ. ... ಒಬ್ಬ ವ್ಯಕ್ತಿಯು ... ಕೊಟ್ಟಿದ್ದಾನೆ ... ಮಹಾರಾಷ್ಟ್ರದಲ್ಲಿ ... ಜನ ... ತಮ್ಮ ಕಾರ್ಯ ... ಪುನಃ ಸೇರಿಸಲು ಹಣದಿಂದ ಪ್ರಚಾರ ಕಾರ್ಯಕ್ಕಾಗಿ ... ಕಟ್ಟಿದ್ದಾರೆ. ... ಕೊಡುವ ಶ್ರೀ ... (ಲೋಕಮಾನ್ಯ ...) ... 'ಬಲಿದಾನ' ... ಪಂಜಾಬ, ಸಂಯುಕ್ತ ಪ್ರಾಂತಗಳ ... ತಮ್ಮ ಚಳವಳಿಯನ್ನು ... ಬಂಗಾಲದ ... ಸಿದ್ಧರಾಗಿ ಸಮಗ್ರ ... ಕೊಡುವರ. ಅರ್ಥಾತ್ ... ತಮ್ಮ ತಮ್ಮಲ್ಲಿ ಅನ್ಯಭಾವದ ಸಾಮರ್ಥ್ಯವನ್ನು ... ತೋರಿಸಿಕೊಂಡಿವೆ.

ಹೀಗೆ ಹಿಂದುಸ್ಥಾನದ ಎಲ್ಲ ಪ್ರಾಂತಗಳಲ್ಲಿಯೂ ರಾಷ್ಟ್ರದ ಸೇವೆಗಾಗಿ ... ಸಿದ್ಧತೆಯೂ ತೋರುತ್ತಿರಲು ಕರ್ನಾಟಕವು ಹಿಂದೆ ಉಳಿಯುವದೆ? ಒಂದು ಸಾವಿರ ಸ್ವಯಂಸೇವಕರು ಬೇಕೆಂದು ಸೇನಾನಾಯಕರಾದ ಡಾ. ಹರ್ಡೀಕರರು ಕೇಳಿದ್ದರೆ, ಈ ವರೆಗೆ ... ಜನರಷ್ಟು ಮಾತ್ರ ಹೆಸರು ಕೊಡಬಹುದೆ? ... ಅನ್ಯಪ್ರಾಂತದೊಳಗೆ ... ಕರ್ನಾಟಕದಲ್ಲಿ ... ಬಂದಿಲ್ಲ ಬಾರದೇ? ಇವೆಲ್ಲ ಅಲ್ಪ ಪ್ರಮಾಣದಲ್ಲಿ ಈ ಮುಂದೆ ... ನಡೆಯಲಾಗದು. ಲಕ್ಷಗಟ್ಟಲೆ ಹಣವೂ, ಸಾವಿರಗಟ್ಟಲೆ ... ನೂರು ಗಟ್ಟಲೆ ... ಮುಂದೊರೆದು ಇದೀಗ ಒಂದೇ ದೇಶ ... ಮಹಾತ್ಮರ ಸಂಗಡ ಸಂಗ್ರಾಮದಲ್ಲಿ ಸೇರಿ ಸಮಾನ ... ಮಹಾದೇವರು ... ನೋಡು ... ! ... [illegible]

ಪ್ರಾಣಾರ್ಪಣಮಾಡಲು ಎದೆತಿಗೆದು ಹೊರಟಿರಲು, ಉಳಿದ ಕನ್ನಡ ತರುಣರು ಸುಮ್ಮನೇ ಕುಳಿತುಕೊಳ್ಳುವರೇ! ಅವನು ವೀರಶೈವನೆಂಬದನ್ನು ನಮ್ಮ ವೀರಶೈವ ಬಂಧುಗಳು ಮರೆಯದಿರಲಿ! ಕಿತ್ತೂರ ಚನ್ನಮ್ಮ, ಕೊಡಗಿನ ರಾಜರು, ಬೆಳಗಿಯ ಮೋಹಸಿನ ರಾಣಿ ಇವರೇ ಮೊದಲಾದ ವೀರಶೈವ ಸ್ತ್ರೀ-ಪುರುಷರ ವಂಶಸ್ಥರಾದ ಈಗಿನ ವೀರಶೈವರು ಕೇವಲ ಮುನಿಸಿಪಾಲ್ಟಿಯ ಹೊಲಸನ್ನಾಗಲಿ, ಲೋಕಲ್ ಬೋರ್ಡಿನ ಬೀದಿಗಳ ಮಣ್ಣನ್ನು ಮೈ ಮೇಲೆ ಹಾಕಿಕೊಂಡಾಗಲಿ ಸಂತುಷ್ಟರಾಗುವರೋ? ಹಾಗಿದ್ದರೆ ಹಿಂದಕ್ಕೆ ಹಿಂದವರತೆಯು ಮಂಗಲಸೂತ್ರದ ಸಂರಕ್ಷಣೆಗಾಗಿ ಮಡಿದು, ಅದೋ ಆ ಪುಣ್ಯಶಾಲಿಗಳಾಗಿ ಕುಳಿತ ತಮ್ಮ ವಂಶಸ್ಥರಿಗೆ ಇಂದಿನ ವೀರಶೈವರು ಏನೆಂದು ಉತ್ತರವನ್ನೀಯುವರು? ಇಂದಿಗೆ ವೀರಶೈವರು ಸ್ವಾತಂತ್ರ್ಯದ ಈ ಧರ್ಮಯುದ್ಧದಲ್ಲಿ ಸೇರಿ, ತಮ್ಮಲ್ಲಿದ್ದ ಕ್ಷಾತ್ರ ತೇಜವನ್ನು ತೋರಿಸದಿದ್ದರೆ ಆ ಪುಣ್ಯಶ್ಲೋಕನೂ, ಅಪ್ರತಿಮ ಕ್ಷತ್ರಿಯ ವೀರನೂ, ಧರ್ಮಸ್ಥಾಪಕನೂ ಆದ ಆ ಬಸವೇಶ್ವರನಿಗೆ ಇಂದಿನ ವೀರಶೈವರು ನಮಸ್ಕರಿಸಿದ ಫಲವೇನು? ಅವನ ವಚನಶಾಸ್ತ್ರವನ್ನೋದಿ ಉಪಯೋಗವೇನು? ಅವನ ಇತಿಹಾಸವನ್ನು ಅವನ ವಂಶಸ್ಥರು ಈಗ ಓದಿ ಮಾಡುವದೇನು? ಕರ್ನಾಟಕದಲ್ಲಿ ವೀರಶೈವ ಸಮಾಜವೇ ಮುಖ್ಯವಾದುದು. ಆದ್ದರಿಂದ ಅವರು ಹುರಿದುಂಬೀ ಅಹಿಂಸಾಮಯ ಸಂಗ್ರಾಮದಲ್ಲಿ ಸೇರಿದರೆ, ಕರ್ನಾಟಕವು ತಲೆಯೆತ್ತಲು ತಡವಾಗದು. "ಕರ್ನಾಟಕವು ವೀರಶೈವ ನಾಡು" ಎಂದು ಹೆಮ್ಮೆ ಪಡುತ್ತಲಿದ್ದ ವೀರಶೈವರು ಇದೀಗ ತಮ್ಮ ನಾಡಿನ ಸೇವೆಯನ್ನು ಮಾಡಲು ಅಂಜಿ ಕುಳಿತರೆ ಇದು ವೀರಶೈವರ ನಾಡಲ್ಲವೆಂದೂ, ವೀರಶೈವರು ವೀರರೂ ಅಲ್ಲವೆಂದೂ ಅವರ ಕ್ಷಾತ್ರ ವೃತ್ತಿಯು ಇಂದು ಸಂಪೂರ್ಣವಾಗಿ ಅಳಿದೇ ಹೋಗಿದೆಯೆಂದೂ, ಇತಿಹಾಸವು ಒರೆದಿಡಬೇಕಾಯಿತೆಂಬದನ್ನು ನಮ್ಮ ಬಾಂಧವರು ಮರೆಯದಿರಲಿ!

ಇಂದಿನ ಸ್ವಾತಂತ್ರ್ಯ ಸಂಗ್ರಾಮವು ಯಾರ ಬೆಳೆಯಿಂದಲೂ ದಾರೀನೋಡದು. ವೀರಶೈವರಾಯಿತು. ರಡ್ಡೀ ಜನರಾಯಿತು. ಮುಸಲ್ಮಾನರಾಯಿತು. ಯಾವದೇ ಜಾತಿಯವರಾಯಿತು, ಮುಂದೊರೆದು ಬರಲಿ ಅಥವಾ ಬರದಿರಲಿ! ಅವರಿಗಾಗಿ ಕಾದುಕೊಂಡು ನಿಲ್ಲಲಾರದು. ಭಾರತೀಯರ ಧಮನಿಗಳ ಇಂದಿನ ಧೀರರ ಸ್ವರೂಪದಿಂದ ಯಾರ ಅಂತಃಕರಣವು ಕಳಮಳಗೊಂಡಿರುವದೋ, ಯಾರು ಕನ್ನಡಿಗರ ಸಾವಿರಾರು ವರ್ಷದ ಕೀರ್ತಿಗೆ ಕಲಂಕ ತಗಲಬಾರದೆಂದು ಅತ್ಯಂತ ಆತುರರಾಗಿರುವರೋ, ಅವರೆಲ್ಲ ಅಪ್ಪಚ್ಚಿ ಹಾಕಿಕೊಂಡು ಕುಳಿತುಕೊಳ್ಳುವ ಸಮಯವಿದಲ್ಲ. ಅನ್ಯ ಪ್ರಾಂತಗಳಿಗಿಂತ ಸ್ವಾತಂತ್ರ್ಯದ ಹೋರಾಟದಲ್ಲಿ ಕರ್ನಾಟಕವು ಗುಜರಾಥವನ್ನು ಮೀರಿಸಿದ್ದರೂ, ಅದಕ್ಕೆ ಸಮಾನಸ್ಪಂದವಾಗಿ ನಡೆಯುವ ಮಹತ್ವಾಕಾಂಕ್ಷೆಯನ್ನಿಟ್ಟುಕೊಂಡೇ, ಕಾರ್ಯಮಾಡಲಿ! ಮಹಾತ್ಮರ ಆಶೀರ್ವಾದದ ಬಲದಿಂದ ಈ ಮಹತ್ವಾಕಾಂಕ್ಷೆಯು ಈಡೇರದೇ ಇರದು!

---

## ಸುರತ ಜಿಲ್ಲೆಯಲ್ಲಿ ಸ್ವಾಗತದ ಸಿದ್ಧತೆಯು.

ಮಹಾತ್ಮಾಜಿಯು ತಮ್ಮ ಶಾಂತಿ ಸೈನ್ಯದೊಂದಿಗೆ ೨೮ ನೇ ತಾರೀಖಿಗೆ ಸುರತ ಜಿಲ್ಲೆಯನ್ನು ಪ್ರವೇಶಿಸತಕ್ಕವರಿದ್ದಾರೆ. ಬರೋಚ ಜಿಲ್ಲೆಯ ಸೀಮಾಂತಕ್ಕೆ ಇದ್ದ ಕೀಮ ನದಿಯನ್ನು ದಾಟಿ ಸುರತ ಜಿಲ್ಲೆಯ ಮೊದಲನ ಹಳ್ಳಿಯಾದ ಉಮರಾಚಿ ಹಳ್ಳಿಯಲ್ಲಿ ತಮ್ಮ ಪಾಳೆಯದೊಂದಿಗೆ ಇಳಿಕೊಳ್ಳುವರು. ಮಹಾತ್ಮರ ಈ ಆಗಮನವನ್ನು ಯೋಗ್ಯರೀತಿಯಿಂದ ಸ್ವಾಗತ ಮಾಡಲು ಸುರತ ಜಿಲ್ಲಾ ಕಾಂಗ್ರೆಸ ಕಮೀಟಿಯವರು ಹಳ್ಳಿಗಳೊಳಗೆ ಅದ್ಭುತ ಸಿದ್ಧತೆ ನಡೆಸಹತ್ತಿರುವರು. ಹಳ್ಳೀ ಜನರ ಯತ್ನವು ಹಿಡಿಸಲಾರದಷ್ಟಾಗಿರುವದು. ಇದನ್ನೆಲ್ಲ ಸಹಿಸಲಾರದೆ ಸರಕಾರದ ಪರವಾಗಿ ಅಲ್ಲಿಯ ಮಾಮಲೆದಾರ ಮೊದಲಾದ ಅಧಿಕಾರಿಗಳು ಹಳ್ಳಿಗಳಲ್ಲಿ ಗೌಡ ಕುಲಕರ್ಣಿಯರ ಸಭೆ ನೆರೆಸಿ ಅವರಿಗೆ ನೀವು ನಿಮ್ಮ ನೌಕರಿ ಚಾಕರಿ ಬಿಡತಕ್ಕದ್ದಲ್ಲ ಎಂದು ಬೋಧೆ ಮಾಡತೊಡಗಿದ್ದಾರಂತೆ. ಆದರೆ ಇವರ ದುರ್ಬೋಧೆಗೆ ಕಿವಿಗೊಡುವವರೇ ಇಲ್ಲದಾಗಿದೆ. ಖೇಡ ಮತ್ತು ಬರೋಚ ಜಿಲ್ಲೆಯೊಳಗಿನ ಪಟೇಲರಂತೆ ಈ ಸಮಯದಲ್ಲಿ ನಾವೂ ನಮ್ಮ ಚಾಕರಿಗೆ ಶರಣು ಹೊಡೆಯತಕ್ಕವರೇ ಎಂದು ಪಟೇಲರು ಮಾಮಲೆದಾರರ ಮೋರೆಗೆ ಹೇಳುವ ಧೈರ್ಯ ಮಾಡಹತ್ತಿದ್ದರಿಂದ ಅಧಿಕಾರಿಗಳು ಹತಾಶರಾಗಹತ್ತಿದ್ದಾರೆಂದು ಸುರತ ಜಿಲ್ಲಾ ಕಾಂಗ್ರೆಸ ಕಮೀಟಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

## ಮುಂಬಯಿ ಹೊಲೆಯರ ಯತ್ನಗಳು ನಿಷ್ಫಲವಾಗ ತೊಡಗಿವೆ.

ಮುಂಬಯಲ್ಲಿಯ ಹಿಂದೂ ದೇವಾಲಯಗಳಲ್ಲಿ ತಮಗೂ ಪ್ರವೇಶ ದೊರಕತಕ್ಕದ್ದೆಂದು ಅಲ್ಲಿಯ ಅಸ್ಪೃಶ್ಯರು ಈಗ ೫-೬ ತಿಂಗಳುಗಳಿಂದ ಒಂದರ ಹಿಂದೊಂದು ಯತ್ನ ಮಾಡುತ್ತ ಬಂದಿರುವರು. ಅವರು ಹಿಂಡುಗಟ್ಟಿಕೊಂಡು ಭಜನೆ ಮಾಡುತ್ತ ಗುಡಿಯ ಬಾಗಲಿಗೆ ಬರುತ್ತಲೆ ಪೂಜಾರಿಗಳು ಬಾಗಿಲ ಹಾಕಿಕೊಂಡು ಕೂಡ್ರುವದು ಇದೇ ಕ್ರಮ ನಡೆದದೆ. ಹೊಲಿಯರು ಅಹಿಂಸಾಮಯ ಸತ್ಯಾಗ್ರಹ ತತ್ವವನ್ನೇ ಅಂಗೀಕರಿಸಿದ್ದರಿಂದ ಉಳಿದ ಗೊಂದಲಕ್ಕೆ ಹೋಗದೆ ತಮಗೆ ಅನಕೂಲವಿದ್ದ ವೇಳೆಯವರೆಗೆ ಹೊರಗೆ ಆ ಗುಡಿಗಳ ಮುಂದೆ ಸ್ವಸ್ಥ ಭಜನೆ ಮಾಡುತ್ತ ಕೂತು ಬಿಡುವರು. ದೇವರೊಲಿದರೂ ಪೂಜಾರಿಗಳೇನು ಅವರ ಭಜನೆಗೆ ಒಲಿಯದಾಗಿರುವರು. ಇಂಥದೇ ಒಂದು ಯತ್ನವು ನಿನ್ನೆ ನಡೆದ ವೇಳೆಯಲ್ಲಿ ಶ್ರೀ ದೇವರುಕರ ಮೊದಲಾದ ಹೊಲಿಯರ ಮುಂದಾಳುಗಳಿಗೂ ಪೂಜಾರಿಗೂ ಮೊದಲು ಬಾಯಿಗೆ ಬಾಯಿ ಹತ್ತಿ (ಮುಸಲ್ಮಾನರಂಥ ಬ್ಯಾಂಡ ಬಾರಿಸುವವರನ್ನು ಒಳಗೆ ಬಿಡುತ್ತೀರಿ ಹಿಂದೂಗಳಾದ ನಮಗೆ ಬಿಡುವದಿಲ್ಲ ಇದೆಲ್ಲಿಯ ನ್ಯಾಯ ವೆಂದು ಕೇಳಿದ್ದಕ್ಕೆ) ನಂತರ ಕೈಗೆ ಕೈಗೆ ಹತ್ತಿ ಹೊಲಿಯರನ್ನು ಅವರ ಮುಖಂಡರನ್ನು ಕೋಲು ಬಡಿಗೆ ಕಲ್ಲು ಮೊದಲಾದವುಗಳಿಂದ ಅಲ್ಲಿರುವ ಧರ್ಮ್ಯ ಜನರು ಹೊಡೆದಿರುವರು. ಹಾಗೆ ಹೊಡಿಸಿಕೊಂಡು ಶಾಂತವೃತ್ತಿಯಿಂದ ಹೊಲಿಯರು ಪರಾವೃತರಾಗಿ ಬಂದಿದ್ದಾರೆ. ಇದರಲ್ಲಿ ಯಾರದು ಸತ್ಯಾಗ್ರಹ ಯಾರದು ದುರಾಗ್ರಹ ವಾಚಕರೇ ಊಹಿಸಬೇಕು.

ನಾಶಿಕದಲ್ಲಿಯೂ ಇದೇ ಪ್ರಕಾರ ನಡೆದದೆ. ಅಲ್ಲಿ ಅಂತೂ ದೇವರ ರಕ್ಷಣೆಗಾಗಿ ಬ್ರಿಟಿಶ ಸೈನಿಕರ ಕಾವಲು ಕರೆಸಿಕೊಂಡಿರುವರು. ಸತ್ಯಾಗ್ರಹಿ ಹೊಲಿಯರು ಈಗ ತಿಂಗಳುಗಟ್ಟಲೆ ಅಲ್ಲಿಯೇ ಗುಡಿಯ ಮುಂದೆಯೇ ಭಜನೆಮಾಡುತ್ತ ಅವಿಚ್ಛಿನ್ನರಾಗಿ ಕುಳಿತು ಬಿಟ್ಟಿದ್ದಾರೆ. ಬಾಗಿಲ ತೆರೆವಾಗ್ಗೆ [illegible]

ರಾಮದೇವಾಲಯವನ್ನು ಪ್ರವೇಶಿಸಿ ದೇವರ ದರ್ಶನ ಹೊಂದಬೇಕೆಂಬದೇ ಅವರ ಲವಲವಿಕೆ. ಹಿಂದಕ್ಕೆ ಕನಕದಾಸನನ್ನು ಹೊರಗೆಹಾಕುವಾಗ್ಗೆ ಉಡುಪಿಯ ಶ್ರೀ ಕೃಷ್ಣನು ಮತ್ತೊಂದು ಖಿಡಕಿಯೊಳಗಿಂದ ಅವನಿಗೆ ದರ್ಶನ ಕೊಟ್ಟನಂತೆ, ಹಾಗೇನಾದರೂ ನಾಸಿಕದ ಶ್ರೀ ರಾಮಚಂದ್ರನು ಮಾಡಬಾರದೇ. ಆಯಿತು ಅವನು ಇನ್ನೂ ಹೊಲೆಯರ ಪಕ್ಷಪಾತಕ್ಕೆ ನಡಿಸದ್ದಾನಾದೀತು.

ಮುಂಬಯಿ

# ಗವರ್ನರರಿಗೆ ದಿಗಿಲು ಬಿದ್ದಿದೆ.

## ಗಾಂಧಿಯ ಕಾಯದೆಭಂಗ ಚಳವಳಿಯನ್ನು ಮುರಿಬಡಿಯಬೇಕೋ ಅಥವಾ ಗಾಂಧಿಯ ಹೇಳಿಕೆಗೆ ಒಪ್ಪಬೇಕೋ ? ಎಂಬದನ್ನು ಕೇಳಲಿಕ್ಕೆ

## ಅವರು ದಿಲ್ಲಿಯವರೆಗೆ ಓಡಿರುವರು.

### ವೈಸರಾಯರು ಏನು ಮಸಲತ್ತು ಹೇಳಿಕಳಿಸುವರು ನೋಡಬೇಕು !!

ಮ. ಗಾಂಧಿಯವರ ಕಾಯದೆ ಭಂಗ ಚಳವಳಿಯು ವಿರಾಟ ಸ್ವರೂಪದಾಗಹತ್ತಿದೆ. ಆದಾಗ್ಯೂ ಮ. ಗಾಂಧಿಯವರ ಮೈಗೆ ಕೈ ಹಚ್ಚಲು ಸರಕಾರವು ಹೆದರಹತ್ತಿದೆ. ಹಿಡಿದರೇನೋ ಬಿಟ್ಟರೇನೋ ಎಂಬ ದಿಗಿಲು ಬಿದ್ದಿದೆ ! ಮುಂಬಯಿ ಗವರ್ನರರಂತೂ ಯಾವದಕ್ಕೂ ಧೈರ್ಯಸಾಲದೆ ದಿಲ್ಲಿಯವರೆಗೆ ಓಡಿರುವರು. ಅಲ್ಲಿ ಇವರ ಅಂಗಾಂಗಿಯಾದ ವೈಸರಾಯರಾದರೂ ಏನು ಹೇಳಬೇಕಾಗಿದೆ ? ಇಂಗ್ಲಂಡದೊಳಗಿನ ಮುತ್ಸದ್ದಿಗಳೇ ಇನ್ನೂ ಹೊಳಹಾಕುವದರಲ್ಲಿದ್ದಾರೆ. ಏನು ಮಾಡಬೇಕೆಂಬ ಸಾವು ಪ್ರಶ್ನವಿದೆ. ೧೦೦—೧೫೦ ವರ್ಷಗಳಿಂದ ಅವಿಚ್ಛಿನ್ನವಾಗಿ ಸಾಮ್ರಾಜ್ಯಸುಖಗಳನ್ನು ನಡಿಸುತ್ತ ಬಂದಿದ್ದರೂ ಇವತ್ತಿನಂದು ತಲೆ ತುರಿಸುವ ಪ್ರಸಂಗವು ಬ್ರಿಟಿಷರಿಗೆ ಎಂದೂ ಬಂದಿರಲಿಲ್ಲ.

## ರಾಯಬಿರೇಲಿಯಲ್ಲಿ ೩೭ ಸ್ವಯಂಸೇವಕರನ್ನು ಕೈದಿಸಿರುವರು.

ಈ ಸ್ವಯಂಸೇವಕರು ಇನ್ನೂ ಯಾವ ಕಾಯದೆಭಂಗವನ್ನು ಪ್ರಾರಂಭಿಸಿರಲಿಲ್ಲ. ರಾಯಬಿರೇಲಿಯಲ್ಲಿಯೇ ಉಪ್ಪಿನ ಕಟಿಕೆಯನ್ನು ಮುರಿಯಬೇಕೆಂದು ಅಲ್ಲಿಯ ಕಾಂಗ್ರೆಸ ಕಮೀಟಿಯವರು ನಿಶ್ಚಯಿಸಿದ್ದು ಮಾತ್ರ ನಿಜ. ಈ ೩೭ ಸ್ವಯಂಸೇವಕರು ಆ ಜಿಲ್ಲೆಯಲ್ಲಿ ಅಡ್ಡಾಡಿ ಸತ್ಯಾಗ್ರಹಿಗಳನ್ನು ಕಲೆಹಾಕುವ ಯತ್ನದಲ್ಲಿದ್ದರು. ಈ ಯತ್ನಕ್ಕಾಗಿಯೇ ಅವರಿಗೆ ಸರಕಾರದಿಂದ ಈ ಮರ್ಯಾದೆಯು ಕೊಡಲ್ಪಟ್ಟಿದೆ. ಆದರೆ ಇಷ್ಟು ಜನ ದಸ್ತಗಿರಿಯಿಂದ ಅಲ್ಲಲ್ಲಿಯ ಕೆಲಸವು ಎಳ್ಳಷ್ಟಾದರೂ ಕುಗ್ಗದೆ, ಹಳ್ಳಿಗಳಿಂದ ಸ್ವಯಂಸೇವಕರು ತಾವಾಗಿಯೇ ಅಲ್ಲಿಯವರೆಗೆ ಬಂದು ನಾಮುಂದೆ ನಾಮುಂದೆ ಎಂದು ಹೆಸರು ಕೊಡುತ್ತಿರುವರು. ಈಗಾಗಲೇ ೩೦೦ ಮೇಲೆ ಸಂಖ್ಯೆ ಏರಿದೆ. ಹಳ್ಳಿಯ ಜನರ ಈ ಉತ್ಸಾಹವನ್ನು, ಸರಕಾರದವರ ದಬ್ಬಾಳಿಕೆಗೆ ಇವರು ಪ್ರತಿಯಾಗಿ ತೋರಿಸುತ್ತಿರುವ ಸುಶೀಲತ್ವವನ್ನು ನೋಡಿ ಆ ಪ್ರಾಂತದವರು ಗಾಂಧಿಯವರ ಸ್ಪೆಶಲ್ ಪರವಾನಗಿ ತೆಗೆದುಕೊಂಡು ಶೀಘ್ರದಲ್ಲಿಯೇ ಸತ್ಯಾಗ್ರಹವನ್ನು ಪ್ರಾರಂಭಿಸಬೇಕೆಂಬ ಆಲೋಚನೆಯಲ್ಲಿದ್ದುದು ಸರಕಾರಕ್ಕೂ ಮನವರಿಕೆ ಆಗಿದೆ. ಈ ಚಳವಳಿಯು ಸರ್ಕಾರದ ದಬ್ಬಾಳಿಕೆಯಿಂದ ಸಾಕೆ ಹೊಂದುವಂತಿಲ್ಲ. ಇದು ಒಕ್ಕಟ್ಟಿನಂತಲ್ಲ. ಎಲ್ಲ ಕಡೆಗೂ ಇದೆ ಹಬ್ಬುತ್ತಲಿದೆ. ಗುಜರಾಥದಲ್ಲಿ ಸರದಾರ ವಲ್ಲಭಭಾಯಿಯನ್ನು ಹಿಡಿದದ್ದು, ಗುಜರಾಥದ ಪ್ರತಿ ಕರಾವಿನ ರಾಷ್ಟ್ರೀಯ ಸೆರೆಮನೆಯಲ್ಲಿ ಪ್ರಾಣವನ್ನಾಗಿ ಭಸ್ಮಾಗ್ನಿ ಹೊತ್ತಿಸಿ ನಿಂತುಕೊಂಡಿತು. ನೂರಾರು ಹಳ್ಳಿಗಳ ಪಟೇಲ ಕುಲಕರ್ಣಿಗಳು ಸರಕಾರದ ದರಕಾರ ಸರ್ವ ಇವರೆ ಇವರ ಜಾಗಗಳನ್ನು ಸರಕಾರದ ಮೇಲಿಯ ಮೇಲೆ ಹರಿದು ಒಗೆದು ಸ್ವರಾಜ್ಯದ ಸೈನಿಕರಾಗಿ ನಿಂತುಕೊಂಡು ಅವರಲ್ಲಿಯೇ ತಮ್ಮ ಜನ್ಮಸಾರ್ಥಕ್ಯವಿದೆಂದು ಭಾವಿಸಹತ್ತಿದರು. ಸೇನಾಪತಿಗೆ ಶಿಕ್ಷೆ ಕೊಟ್ಟದಕ್ಕೆ ರಂಗಣದಲ್ಲಿ ಎಂದೂ ಇಲ್ಲದ ಜಾಗೃತಿಯು ದೃಗ್ಗೋಚರವಾಗಹತ್ತಿದೆ. ಹೀಗೆ ಸರಕಾರ ದಬ್ಬಾಳಿಕೆಯೆಂದರೆ ಉರಿಯುವದರಲ್ಲಿ ಎಣ್ಣೆ ಸುರುವಿದಂತಾಗಿ ಜ್ವಾಲೆಯು ಹಬ್ಬುವದರಲ್ಲಿಯೇ ಇದೆ ಕೊನೆಗೆ ನೆಂದಲೆಯಿಲ್ಲದು ಮಹಾತ್ಮನ ಆರಿಸ ಕಷ್ಟ ಕಾರ್ಯದ ಜ್ವಾಲೆ ಇದು. ೩೨೦ ಕೋಟಿ ಹಿಂದೀಯರ ಅಂತಃಕರಣದ ಪ್ರಖರವಾದ ಜ್ಯೋತಿ ಇದು ಸರಕಾರದ ದಬ್ಬಾಳಿಕೆಗೆ ಸೊಪ್ಪು ಹಾಕುವಂಥ ಕುಲ್ಲುದೀಪ ಇದು ಅಲ್ಲ. ಸ್ವಲ್ಪ ತಾಳಲಾರದೆ ನೆಲವನೆಲ್ಲ ಸುಡುವದೆಂದು ಒದರುತ್ತಿರುವಂಥ ಪ್ರಾಣದ ಆಹುತಿಯನ್ನು ದರೂವರಾ ಕೊಡುವ ನಾವು ಹಿಂದೀಯರು ಹೊತ್ತಿಸಿದ ಯಜ್ಞಕುಂಡದ ಜ್ವಾಲೆ ಇದು. ಈ ಯಜ್ಞಕುಂಡದಲ್ಲಿ ಎಲ್ಲ ಹಿಂದೀಯರು ಆಹುತಿಯಾಗದೇ ಕೆ ಇಲ್ಲವೇ ಯಜ್ಞನಾರಾಯಣನು ಪ್ರಸನ್ನನಾಗಿ ಬ್ರಿಟಿಶರ ರಾಜ ದಂಡನೆಯಿಂದ ಹಿಂದುಸ್ಥಾನವನ್ನು ಮುಕ್ತಮಾಡಬೇಕು. ಆಗ್ಗೆ ಈ ಜ್ವಾಲೆಯು ಶಾಂತವಾಗತಕ್ಕದ್ದೆಂಬವನ್ನು ಸರಕಾರವು ಮರೆಯಲಿಕ್ಕಾಗದು. ದಬ್ಬಾಳಿಕೆಯ ಭೀತಿಗೆ ನಡುಗಿ ಅಡಗುವ ಹೊತ್ತು ಇದಲ್ಲ. ಕಾರಣ ದಬ್ಬಾಳಿಕೆಯ ಸಾಮ್ರಾಜ್ಯದಷ್ಟು ನಾವು ಸರಕಾರವು ತೈಯಾರಾಗುವದರಲ್ಲಿ ಅರ್ಥವಿಲ್ಲ.

## ಮ. ಗಾಂಧಿ ವ ಕಮಲಾದೇವಿಯರ ಭೆಟ್ಟಿ

ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ನನ್ನ ಭಗಿನಿಯರೆಲ್ಲ ಅತ್ಯಂತ ಉತ್ಸುಕರಾಗಿದ್ದಾರೆ. ಅವರೆಲ್ಲರೂ ಯಾವ ರೀತಿಯಿಂದ ಈ ಧರ್ಮಕಾರ್ಯಕ್ಕೆ ನೆರವಾಗಬಹುದೆಂಬುದನ್ನು ಹೇಳಿರಿ ಎಂದು ಕಮಲಾದೇವಿಯವರು ಕೇಳಿದ್ದಕ್ಕೆ ಗಾಂಧಿಯವರು 'ನೀವೆಲ್ಲರೂ ನಿಮ್ಮ ಆತುರತೆಯನ್ನು ಕೊಂಚವೇ ಬಿಗಿಹಿಡಿದರೆ ನಿಮ್ಮ ಮೇಲೆಯೂ ನಿರ್ದಿಷ್ಟವಾದ ಕೆಲಸವು ಕಡ [illegible] ಬೇಕಾದದು. ಆಗ್ಯೆ ನಿಮ್ಮ ತ್ಯಾಗಬುದ್ಧಿಗೂ ಸಹನಶೀಲತೆಗೂ ಸಾಕಷ್ಟು ಆಸ್ಪದ ದೊರೆಯಬಹುದೆಂದು ಉತ್ತರ ಕೊಟ್ಟರು. ಬಚ್ಚಮಕ್ಕಳ ತಾಯಂದಿರು ಈ ಸಂದರ್ಭದಲ್ಲಿ ಏನು ಮಾಡಬೇಕೆಂದು ಕಮಲಾದೇವಿಯವರು ಮತ್ತೆ ಕೇಳಿದ್ದಕ್ಕೆ 'ಆ ಧರ್ಮ ತಮ್ಮ ಮಕ್ಕಳ ಸಂರಕ್ಷಣೆ ಮಾಡುವದೇ ಆದ್ಯಕರ್ತವ್ಯವಾದ.' ಗಾಂಧಿಯವರು ಹೇಳಿದರು.

ಭಾರತೀಯ ಸ್ವಾತಂತ್ರ್ಯ ಸಮರ

## ಕರ್ನಾಟಕದಲ್ಲಿ ಪ್ರಾರಂಭ. ಶಾಂತಿಸೇನೆಯಲ್ಲಿ ಸೇರಿರಿ.

ಇಂಥ ಸಮರ ಸಮಯದಲ್ಲಿ ವೀರ ಕನ್ನಡಿಗರು ಸುಮ್ಮನಿರುವದು ಸಾಧ್ಯವಲ್ಲ. ಅವರು ರಣಕಹಳೆಗಳ ನಾದವು [illegible] ಎನ್ನುವವರು [illegible] ಕನ್ನಡಿಗರಿಗೆ ಅನ್ಯರು ದೊರಕಿಸಿದ ಸ್ವಾತಂತ್ರ್ಯವನ್ನು ನಾವು ಉಪಭೋಗಿಸುವಾ ಎಂದು [illegible] ನಾವೂ ಸ್ವಾತಂತ್ರ್ಯ ಸಮರದಲ್ಲಿ ಸೇರಿ ನಮ್ಮ ಕರ್ತವ್ಯವನ್ನು ಮಾಡುವಾ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ೨೧—೨—೩೦ನೇ ದಿನ ಒಂದು ಸತ್ಯಾಗ್ರಹ ಮಂಡಳವನ್ನೇ ರಚಿಸಿದರು. ಆ ಮಂಡಳವು ಕರ್ನಾಟಕದಲ್ಲಿ [illegible] ಕಾರವಾರ ಜಿಲ್ಲೆಯಲ್ಲಿ ಉಪ್ಪಿನ ಕಾನೂನು ಕೊಡದಿರುವ ಸತ್ಯಾಗ್ರಹವನ್ನು ಪ್ರಾರಂಭಿಸಬೇಕೆಂದು ನಿಶ್ಚಯಿಸಿದ್ದಾರೆ. ಸತ್ಯಾಗ್ರಹಿಗಳ ಸೈನ್ಯವನ್ನು ಸಿದ್ಧಪಡಿಸುವ ಕಾರ್ಯವು ನಡೆದಿದೆ. ಇನ್ನೂರರ ಮೇಲೆ ಜನರು ಈಗಾಗಲೇ ಸೈನ್ಯವನ್ನು ಸೇರಿದ್ದಾರೆ. ಇಂತಹ ಸಂದರ್ಭದಲ್ಲಿ ಕರ್ನಾಟಕದ ಬಿಸಿ ನೆತ್ತರದ ವೀರ ತರುಣರೇ! ಹಿಂಜರಿಯದೆ ಮುಂದಕ್ಕೆ ಬಂದು ಈ ಶಾಂತಿ ಸೈನ್ಯದಲ್ಲಿ ಸೇರಿರಿ. [illegible] ಸ್ವಾತಂತ್ರ್ಯ ಸಮರದಲ್ಲಿ ಸಹಾಯಕರಾಗಿರಿ. ಸೈನಿಕರಾಗಬಯಸುವವರು [illegible] ಹಿಂದೂಸ್ಥಾನಿ ಸೇವಾದಳ ಕಚೇರಿಯಿಂದ ಪ್ರತಿಜ್ಞಾಪತ್ರಿಕೆಗೆ ರುಜು ಹಾಕಬೇಕು.

ದೇಶಪಾಂಡೆ ಗಂಗಾಧರರಾವ — [illegible]
ಎನ್. ಎಸ್. ಹರ್ಡೀಕರ — ಟಿ. ಸುಬ್ರಹ್ಮಣ್ಯಂ
ಕೌಜಲಗಿ ಹಣಮಂತರಾಯ — ದಿವಾಕರ ರಂಗರಾಯ

ಕರ್ನಾಟಕ ಸತ್ಯಾಗ್ರಹ ಕಮಿಟಿ.

## "ಕನ್ನಡಿಗ"ನ ನಿತ್ಯ ಸಂಚಿಕೆ!

ಏಜಂಟರಾಗಲಿಚ್ಛಿಸುವವರು [illegible] ತಿಳಿಸಬೇಕು. [illegible] ರೂಪಾಯಿಗಳನ್ನೂ, ಪಟ್ಟಣದವರು ಕನಿಷ್ಠ ಹತ್ತು ರೂಪಾಯಿಗಳನ್ನೂ ರವಾನಿಸಬೇಕು. ಸ್ಥಳಿಕ ಕಾಂಗ್ರೆಸ ಕಮಿಟಿ, ಅಥವಾ ಮುಖ್ಯ ಸದ್ಗೃಹಸ್ಥರ ಒಂದು ಸರ್ಟಿಫಿಕೇಟನ್ನಾದರೂ ಪ್ರಾಮಾಣಿಕತನದ ಬಗ್ಗೆ ಅರ್ಜಿಯ ಜೊತೆ ಕಳಿಸತಕ್ಕದ್ದು. ಪ್ರತಿವಾರದಲ್ಲಿ ಲೆಕ್ಕವನ್ನೂ ಹಣವನ್ನೂ [illegible] ಕಳಿಸತಕ್ಕದ್ದು. [illegible] ಏಜಂಟರಿಗೆ ಕಮಿಶನ್ ದೊರೆಯುವದು. [illegible] ಹಳ್ಳಿ ಊರುಗಳಲ್ಲಿ ದಿನಾಲು ೧೦ ೧೨ ಪ್ರತಿಗಳನ್ನು ತರಿಸಿಕೊಂಡರೂ ಅವರಿಗೆ ಪ್ರತಿ [illegible] ರೂಪಾಯಿ ಕಮಿಶನ್ [illegible] ದೊರೆಯುವದು. ಇನ್ನು ಪಟ್ಟಣಗಳಲ್ಲಿ ನೂರಿನ್ನೂರು ಪ್ರತಿಗಳನ್ನು ಮಾರುವ ಏಜಂಟರಿಗೆ [illegible] ರೂಪಾಯಿಗಳಿಂದ [illegible] ವರೆಗೆ [illegible] ಬೇಕಾಗುವದು. ಮೇಲಿನ ಕೆಲವು ದೊಡ್ಡ ಪಟ್ಟಣಗಳ [illegible] ನಮ್ಮ ಪತ್ರಿಕೆಯಿಂದ ತಿಳಿಯುವವು. [illegible] ಸ್ಥಾನಿಕ ಮುಖ್ಯ ಮುಖಂಡರನ್ನು ಭೆಟ್ಟಿಯಾಗಿ [illegible] ಪ್ರಯತ್ನಿಸಿದರೆ ಜನರಲ್ಲಿ ಪ್ರತಿಗಳು ಹೆಚ್ಚಾಗಿ ಖರ್ಚಾಗಲಿಕ್ಕೆ ಅನುಕೂಲವಾಗುವದು. [illegible]

ಜಾಹೀರಾತಿನ ದರ:— [illegible] ಒಂದು ಇಂಚಿನ ಪ್ರತಿಯೊಂದು ಸಂಚಿಕೆಗೆ ನಾಲ್ಕು ಆಣೆ [illegible] ಐದು ಆಣೆ

ನಿಮ್ಮ ಪತ್ರಿಕೆಯ ವ್ಯವಸ್ಥಾಪಕರು
"ಕನ್ನಡಿಗ" ಕಾರ್ಯಾಲಯ ಬಾಗಲಕೋಟೆ.

ಈ ಪತ್ರಿಕೆಯು [illegible] ಶ್ರೀನಿವಾಸರಾಯರಿಂದ ಬಾಗಲಕೋಟೆಯ [illegible] ವಿದ್ಯಾವರ್ಧಕ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

ಜಯ ಕರ್ನಾಟಕ

ನಿತ್ಯ ಸಂಚಿಕೆಯು

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ಶನಿವಾರ ಮಿತಿ ಫಾಲ್ಗುಣ ಬಹುಳ ೧೪ ಶಕೆ ೧೮೫೧ ತಾ ೨೮—೩—೩೦ ಸಂಚಿಕೆ ೭

## ಸಂಪಾದಕರ ಭೂಮಿಕೆ.

ನನ್ನ ದೇಹವು ನಿನ್ನ ಪೀಠಶಾಸನಕಾಗಿ ।
ಕಣ್ಣುಗಳು ಕಂಬನಿಗೆ ತಿಳಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರುವ ಗಂಧವಹವೆಂದು ತಿಳಿಯೋ ॥

— ಬೇಂದ್ರೆ ದತ್ತಾತ್ರೇಯರಾಯರು.

### ಸರಕಾರವು ಉಪ್ಪನ್ನು

## ಮಣ್ಣು ಕೂಡಿಸಹತ್ತಿರುವದು.

ಶ್ರೀ ರಾಜಗೋಪಾಲಾಚಾರ, ಶ್ರೀಮತಿ ಕಮಲಾದೇವಿ ಮುಂತಾದವರು ಗಾಂಧಿಯವರ ಸ್ವಾತಂತ್ರ್ಯ ಯಾಗದ ಪ್ರಥಮ ಯಜ್ಞಭೂಮಿಯಾಗಿ ಆರಿಸಿದ ದಂಡಿ ಗ್ರಾಮದ ಅನುಕೂಲತೆಗಳನ್ನು ನೋಡಿಕೊಳ್ಳಲು ಮೊನ್ನೆ ಆ ಗ್ರಾಮಕ್ಕೆ ಹೋಗಿದ್ದರು. ಅಲ್ಲಿಯ ವೈಭವ ವರ್ಣನಾತೀತ. ಸಮುದ್ರ ದಂಡೆಯು ಗಾಂಧಿಯವರ ಪಾದಸ್ಪರ್ಶದ ನಿರೀಕ್ಷಣೆಯಲ್ಲಿತ್ತು. ಆ ಉದ್ದಕ್ಕೂ ಉದ್ದಳ ಬಿದ್ದಿದ್ದಂತೆ, ಮತ್ತು ಇದೆಲ್ಲ ಸಮುದ್ರ ತೀರವು ಹೊಳೆಯುತ್ತಿರುವ ಉಪ್ಪಿನ ಕಣಗಳಿಂದ ಬೆಳ್ಳಗಾಗಿ ಅಭೂತಪೂರ್ವ ದೃಷ್ಟಿ ಕಂಡಿತು. ನೋಡಹೋದವರೆಲ್ಲ ಕಾಲಿಗೆ ಹತ್ತುತ್ತಿರುವ ಉಪ್ಪನ್ನು ತಮ್ಮ ಬೊಗಸೆಯಿಂದ ಬಳಿದುಕೊಂಡು ನಿರೀಕ್ಷಿಸಿದಾಗ ಅದು ನಮ್ಮ ಪೇಟೆಯಲ್ಲಿ ಕೊಂಡುಕೊಳ್ಳುವ ಉಪ್ಪಿಗಿಂತಲೂ ಹೆಚ್ಚು ಬಿಳುಪಾಗಿಯೂ ಹೆಚ್ಚು ಹೊಳಪುಳ್ಳದ್ದಾಗಿಯೂ ಇದ್ದದ್ದನ್ನು ಕಂಡು ಚಕಿತರಾದರು. ಆದರೆ ಮಹಾತ್ಮರ ಆಗಮನದ ಸುದ್ದಿಯಿಂದ ದಿಗ್ಭ್ರಾಂತರಾದ ಸರಕಾರವು ಗಾಂಧಿಜನರಿಗೆ ಈ ಉಪ್ಪು ಶುಭ್ರವಾಗಿ ದೊರೆಯಬಾರದೆಂದು ಇದೆಲ್ಲ ಉಪ್ಪಿನಲ್ಲಿ ಕೂಲಿಜನರನ್ನೂ ಪೋಲೀಸರನ್ನೂ ಹಚ್ಚಿ ಮಣ್ಣುಗಲಿಸುವ ಮೂಢ ಕಾರ್ಯದಲ್ಲಿ ತೊಡಗಿರುವದನ್ನು ನೋಡಿ ನಮ್ಮ ಮಂದಾಳುಗಳು ಬಿದ್ದು ಬಿದ್ದು ನಕ್ಕಂತೆ. ನೀರಿನಲ್ಲಿ ಕಾಲುಜಾರಿದ ಮನುಷ್ಯನು ಮುಳುಗುವ ಸಂಕಟಕ್ಕೆ ಹೇಗಾದರೂ ಕೈಬಡಿಯುತ್ತ, ಕಾಲು ಒಗೆಯುತ್ತ ಧಡಪಡಿಸುತ್ತಿರುವಂತೆ ಸರಕಾರದವರ ಈ ಕೃತಿಯಾಗಿದೆ. ಚಿಕ್ಕ ಹುಡುಗರೂ ಕೂಡ ನಗಬಹುದಾದ ಇಂಥ ಹಾಸ್ಯಾಸ್ಪದ ಪ್ರಯತ್ನಗಳಿಗೆ ಸರಕಾರವು ಎಡೆಗೊಳ್ಳುತ್ತಿರುವದೇ ಸರಕಾರದ ಬುದ್ಧಿಯು ಕೈಬಿಡುತ್ತಿರುವ ಒಳಗಿನ ಮರ್ಮವನ್ನು ಸ್ಪಷ್ಟವಾಗಿ ತೋರಿಸುತ್ತದಲ್ಲವೇ?

### ಅಹಮ್ಮದಾಬಾದದಲ್ಲಿ ಸೇರಿದ

## ಕಾಂಗ್ರೆಸ್ ಸಭೆಯು.

(ನಮ್ಮ ಪ್ರೇಷಿತ ಪ್ರತಿನಿಧಿಗಳಿಂದ ಅಹಮ್ಮದಾಬಾದ ತಾ. ೨೭-೩-೩೦)

ಶುಕ್ರವಾರ ತಾ॥ ೨೧ ನೆಯ ದಿನ ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಸಭೆಯು ಸೇರಿದ ಸಂಗತಿಯು ಎಲ್ಲರಿಗೂ ಈಗ್ಗೆ ತಿಳಿದ ಮಾತಾಗಿದೆ. ಅಲ್ಲಿ ತೀರ್ಮಾನಿಸಲ್ಪಟ್ಟ ಮುಖ್ಯ ವಿಷಯಗಳೂ ಪ್ರಕಟವಾಗಿವೆ. ಆದ್ದರಿಂದ ನಾನು ಕಂಡ ಕೆಲವು ಸಂಗತಿಗಳನ್ನಿಲ್ಲಿ ಬರೆಯುವೆನು.

ಈ ಸಭೆಗೆ ಕರ್ನಾಟಕದಿಂದ ಐದೇ ಪ್ರತಿನಿಧಿಗಳು ಬಂದಿದ್ದರು. ಎಲ್ಲ ಪ್ರಾಂತಗಳಿಂದಲೂ ಸೇರಿ ಸುಮಾರು ೭೦ ಜನರು ಬಂದಿರುವರು. ಸಭೆಯ ಕಾರ್ಯವು ಒಳ್ಳೆ ವ್ಯವಸ್ಥಿತವಾಗಿ ಸಾಗಿ ೧॥ ಗಂಟೆಯಲ್ಲಿ ಸಭೆಯ ಕಾರ್ಯವೆಲ್ಲ ಮುಗಿಯಿತು. ಇತ್ತಂಡವಾದಕ್ಕೆ ಯಾವ ಆಸ್ಪದ ದೊರೆಯದೆ, ರಾಷ್ಟ್ರವು ಹೂಡಿದ ಸಂಗ್ರಾಮದ ಮಹತ್ವವನ್ನರಿತು, ಕೇವಲವಾದ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದುದರಿಂದಲೇ, ಇಷ್ಟರಿಂದ ಅಲ್ಪಾವಧಿಯಲ್ಲಿ ಎಲ್ಲ ಕೆಲಸವೂ ಮುಗಿಯಿತು.

ಆಂಧ್ರ ಸಾಂಬಮೂರ್ತಿಗಳು ತುರುಂಗದಿಂದ ಇದೀಗ ಹೊರಬಿದ್ದು ಬಂದಿದ್ದರೂ ಕೊಂಚವಾದರೂ ಸೊರಗಿದ್ದಿಲ್ಲ. ಕಂಡ ಅವರನ್ನು ಎಲ್ಲರೂ ಗೌರವಿಸುವವರೆ! "ಪುನಃ ಜೇಲಿಗೆ ಹೋಗಲಿಕ್ಕೆಂದೇ ನಾನು ಸಜ್ಜಾಗಿರುವೆನು; ಅಷ್ಟರಲ್ಲಿ ಆಂಧ್ರದ ತುಂಬೆಲ್ಲ ಬೆಂಕಿಯನ್ನು ಹೊತ್ತಿಸುವೆ" ಎಂದು ಮೂರ್ತಿಗಳು ಬಲು ಉತ್ಸಾಹದಿಂದ ಹೇಳುತ್ತಲಿದ್ದರು. ನಾಗಪುರದ ಶ್ರೀ. ಅಭ್ಯಂಕರರು ಅಧ್ಯಕ್ಷರನ್ನು ಆರಿಸುವಾಗ್ಗೆ ಸನದಶೀರ ಪದ್ಧತಿಯನ್ನು ಅನುಸರಿಸಬೇಕೆಂದು ಹೇಳಿದಾಗ್ಗೆ, ಜವಾಹರಲಾಲರು ಅಂದದ್ದು— "ಬಲವಂತನಾದ ಅಧ್ಯಕ್ಷನು ಯಾವ ಪದ್ಧತಿಗೂ ಒಳಗಾಗದೇ ಸಂಗ್ರಾಮದಂಥ ಅಸಾಧಾರಣ ಸಮಯದಲ್ಲಿ ಕೈಕೊಳ್ಳಬೇಕಾದದ್ದೇನು ಬೇಕಾದುದನ್ನು ಮಾಡಬಲ್ಲನು; ಯುದ್ಧವು ಮುಗಿದ ಮೇಲೆ ಅವನು ಮಾಡಿದ್ದು ಉಚಿತವೋ ಅನುಚಿತವೋ ಎಂಬುದನ್ನು ವಿವೇಚಿಸುವ ಅಧಿಕಾರವು ಈ ಕಮಿಟಿಗೆ ಇದ್ದೇ ಇರುವದು" ಎಂದು ಹೇಳಿದ್ದು ಸರ್ವರಿಗೆಲ್ಲ ಹಿಡಿಸಿತು. ಡಾ. ಅಭ್ಯಂಕರ

ಆಗಾಗ ಎತ್ತುತ್ತಲಿದ್ದ ಚಿಕ್ಕಿಸರವಾದ ಮಾತುಗಳಿಂದ ಎಲ್ಲರೂ ನಗುವರು. ಅಧ್ಯಕ್ಷರು ಅದಕ್ಕೂ ಹೆಚ್ಚು ನಗುವಂತೆ ಅವರಿಗೆ ಉತ್ತರವನ್ನಿತ್ತು, ಅವರನ್ನು ಸುಮ್ಮನೇ ಕುಳ್ಳಿರಿಸುತ್ತಲಿದ್ದರು. ಕಾಂಗ್ರೆಸ ಮಹಾಶಿಬಿರಗಳಾದ ಒಜಾರ ಕಾರ್ಯದಕ್ಷತೆಯು ಒಡೆದು ಕಾಣುತ್ತಲಿದ್ದಿತು.

ಗುಜರಾಥದವರು ಈ ಸಭೆಗಾಗಿ ಸಾವಿರಾರು ರೂಪಾಯಿಗಳನ್ನು ವೆಚ್ಚಮಾಡಿ, ಅತಿಥಿಗಳನ್ನು ಚನ್ನಾಗಿ ಸತ್ಕರಿಸಿದರು. ಮಂಟಪವನ್ನೂ ಅಂದವಾಗಿ ಹಾಕಿದ್ದರು. ಗುರ್ಜರು ವ್ಯಾಪಾರಸ್ಥರಾದ್ದರಿಂದ ಹಣ ಸಂಪಾದನೆಯ ಕಲೆಯು ಅವರಿಗೆ ಒಳಿತಾಗಿ ಸಾಧಿಸಿದೆ. ಪ್ರೇಕ್ಷಕರ ತಿಕೀಟಿನ ಫೀ ಹತ್ತು ರೂಪಾಯಿಗಳಿಟ್ಟು, ಸಾವಿರ ರೂಪಾಯಿಗಳನ್ನು ಈ ಮಾರ್ಗದಿಂದ ಆಗಿಂದಾಗ್ಗೆಯೇ ವಸೂಲಮಾಡಿಕೊಂಡರು. ಈ ಸಭೆಯನ್ನು ನೋಡುವ ಉತ್ಸಾಹವು ಜನರಲ್ಲಿ ಮೊದಲೂ ಅತಿಶಯವಾಗಿದ್ದದರಿಂದಲೂ ರಾಷ್ಟ್ರಸಭೆಗೆ ಧನಸಹಾಯಮಾಡ ಬೇಕು ಎಂಬ ಅಂತಃಕರಣವೃತ್ತಿ ಪ್ರೇಮದಿಂದ ತುಂಬಿತುಳುಕುತ್ತಲಿದ್ದದರಿಂದಲೂ ಆನಂದದಿಂದ ಹತ್ತುರೂಪಾಯಿಗಳನ್ನು ಕೊಟ್ಟು ಪ್ರೇಕ್ಷಕರಾಗಿ ಬಂದಿದ್ದರು. ಮೀರಬೈಯವರು ಅಭಿಮಾನದಿಂದ ಕೋಲೆಗಳ ಬಂಧಗಳಿಲ್ಲದ ಮೀರಾಬೈಯವರು ಅವರು ಮಹಾತ್ಮರ ಆಶ್ರಮದಲ್ಲಿ ಒಂದು ೩–೪ ವರ್ಷಗಳಿಂದ ಇಲ್ಲಿಯ ಆಶ್ರಮದ ನಿಯಮಗಳನ್ನು ಎಲ್ಲ ಪಾಲಿಸಿ, ರಾಷ್ಟ್ರಸೇವೆಯಲ್ಲಿ ನಿರತರಾಗಿದ್ದಾರೆ. ಬಾರ್ಡೋಲಿಯಲ್ಲಿ ಕಳೆದ ವರ್ಷ ನಡೆದ ರೈತರ ಹೋರಾಟದಲ್ಲಿ ಇವರೂ ಬಹುದಕ್ಷತೆಯಿಂದ ಕೆಲಸಮಾಡಿ, ಇಲ್ಲಿಯ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ. ಕಾರ್ಯಕರ್ತರು ಅವರನ್ನು ಚನ್ನಾಗಿ ಹೊಗಳಿದರು. ಮಹಾತ್ಮರಿಗೂ ಅವರ ಸೇವಾದೀಕ್ಷೆಯು ರುಚಿಸಿದೆ. ಬಾರ್ಡೋಲಿ ತಾಲೂಕಿನಲ್ಲಿಯೇ ಅವರಿನ್ನೂ ಇರುವದರಿಂದ ಅವರನ್ನು ಇಲ್ಲಿ ಅಹಮ್ಮದಾಬದಿನಲ್ಲಿ ಕಾಣುವದು ನನಗೆ ಶಕ್ಯವಿಲ್ಲ. ಅವರಲ್ಲಿ ಕಿರಿಯನಾದ ವಾಸುದೇವನ ಬಹು ಚಪಲನು. ಅಧಿಕಾರಿಗಳ ರಹಸ್ಯವನ್ನು ತಿಳಿದು, ಜನರಿಗೆ ಅದನ್ನು ತಿಳಿಸುವದಕ್ಕಾಗಿ ಹೀಗೆ, ಅನೇಕ ಸಲ ಮೋಟಾರುಗಳನ್ನು ಕೂಡ ಹಿಂದೆಹಾಕಿದ್ದನಂತೆ! ಅದ್ದರಿಂದ ಅವನಿಗೆ ಇಲ್ಲಿಯ ಜನರು "ಅಚೆಲಸ" ( Acheles ) (ಎಂದರೆ ಪವನಂಜಯ ಎನ್ನಬಹುದು) ಎಂಬ ಬಿರುದನ್ನು ಕೊಟ್ಟಿದ್ದಾರೆ. ಈ ಬಂಧುಗಳ ಹೆಸರನ್ನು ಸಕಲ ಕನ್ನಡಿಗರೂ ಗಲಿ ಮೀರಾಬೈರವರಲಿ ಕೇಳಲಿಕ್ಕೆ ಕರ್ನಾಟಕದಲ್ಲಿ ಖ್ಯಾತಿಹೊಂದಿದ ತನ್ನ ಜ್ಞಾತಿಬಂಧುವನನ್ನು ಮೀರಾಬೈಯವರು ಮರೆಯದಿರಲಿ!

ಕಿಶೋ: ಸು.

## ನಮ್ಮ ಧಾರವಾಡ ಪತ್ರ.

೨೭—೩—೩೦

"ಹಾವೇರಿಗೆ ಕನ್ನಡಶಾಲೆಗಳ ಕೆಲಸಕ್ಕಾಗಿ ಇದ್ದಯ ಶ್ರೀ ಜೋಗ ಕೃಷ್ಣಾಚಾರ್ಯರು ಮೊನೆ ಹೋಗಿದ್ದರು. ಅದರ ದುರ್ದೈವದಿಂದ ಅವರು ಧಾರವಾಡಕ್ಕೆ ತಿರುಗಿ ಬರುವಾಗ ಅವರು ಕುಳಿತ ಮೋಟಾರಿನ ಹಿಂದಿನ ಗಾಲಿಯು ಒಮ್ಮಿಂದೊಮ್ಮೆ ಮುರಿದು ಒಡೆದು ಬಿದ್ದದರಿಂದ ಶ್ರೀ ಜೋಗರವರಿಗೆ ಬಹಳ ಅಪಘಾತವಾಗಿದ್ದು, ಅವರು ಎರಡು ದಿವಸಗಳವರೆಗೆ ಹಾವೇರಿಯ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದಿ, ಇಂದಿನ ದಿವಸ ಇಲ್ಲಿಗೆ ಚಿಕಿತ್ಸೆಗಾಗಿ ಬಂದಿರುವದಾಗಿ ಕಳಿಸಿದ್ದಾರೆ,

ಅಪಾಯವು ಭಯಂಕರವಾಗಿದ್ದಿರುತ್ತದೆಂದು ತಿಳಿಯುತ್ತದೆ."

"ಇಲ್ಲಿಯ ತರುಣ ಸಂಘದ ಹಳ್ಳಿಕೇರಿ ಗುದ್ಲೆಪ್ಪನವರು ಮತ್ತು ಮಾಗಡಿ ಎಂಬ ಇಬ್ಬರು ತರುಣರು ಮಹಾತ್ಮಾ ಗಾಂಧಿಯವರು ಪ್ರಾರಂಭಿಸಿದ ಸತ್ಯಾಗ್ರಹದಲ್ಲಿ ಭಾಗತೆಗೆದುಕೊಳ್ಳಲು ಮೊನ್ನೆ ಹೋಗಿದ್ದಾರೆ"

ಇಲ್ಲಿಯ ಕೆಲವು ವಕೀಲರು ಒಂದು ಸಭೆಯನ್ನು ಏರ್ಪಡಿಸಿ ಕೊಂಡು ಎಲ್ಲರೂ ಖಾದಿಯನ್ನೇ ಹಾಕಿಕೊಳ್ಳಬೇಕೆಂದು ನಿರ್ಣಯಿಸಿಕೊಂಡಿದ್ದಾರೆ. ಸ್ತುತ್ಯವು.

ಶ್ರೀ ಶಾಂತಕವಿಗಳ ವಾರ್ಷಿಕೋತ್ಸವವು ಶ್ರೀ ಜೋಶಿ ವಿನಾಯಕರಾಯರ ಅಧ್ಯಕ್ಷತೆಯಲ್ಲಿ ೨೬-೩-೩೦ ನೇಯ ದಿನ ಕೂಡಿತು. ಈ ಸಮಯದಲ್ಲಿ ಶ್ರೀ ಬೇಂದ್ರೆಯವರು "ಕನ್ನಡ ಕವಿತೆ ಮತ್ತು ಛಂದಸ್ಸು" ಈ ವಿಷಯವಾಗಿ ವಿಚಾರ ಪರಿಪ್ಲುತ ಭಾಷಣ ಮಾಡಿದರು. ಮೊನ್ನೆ ಕರ್ನಾಟಕ ಕಚೇರಿಯಲ್ಲಿ ಇಲ್ಲಿಯ ರಾಷ್ಟ್ರೀಯ ಕೆಲಸಗಾರರ ಸಭೆಯು ಸೇರಿತ್ತು. ಶ್ರೀ ಗುತ್ತಲ ಗೋವಿಂದಾಚಾರ್ಯರು ಅಧ್ಯಕ್ಷರಾಗಿದ್ದರು. ಸತ್ಯಾಗ್ರಹ ಸಂಗ್ರಾಮಕ್ಕಾಗಿ ಜನರನ್ನೂ, ಧನವನ್ನೂ ಕೂಡಿಸಲು ಬೇರೆ ಬೇರೆ ಮಂಡಲಗಳು ಏರ್ಪಾಡಾದವು. ವಿದೇಶಿ ಬಟ್ಟೆಯ ಬಹಿಷ್ಕಾರ, ಕಾಂಗ್ರೆಸ ಸಭಾಸದರನ್ನು ಕೂಡಿಸುವದು, ರಾಷ್ಟ್ರಧ್ವಜ ವಂದನೆ ಮೊದಲಾದವುಗಳಿಗಾಗಿಯೂ ಬೇರೆ ಬೇರೆ ಕೆಲಸಗಾರರ ನಿಯಮಿಸಲ್ಪಟ್ಟರು. ಓರ್ವ ಮಹನೀಯರು ಇಲ್ಲಿಯ ಕಾಂಗ್ರೆಸ ಕಮೀಟಿಗೆ ಬಂದು ಸತ್ಯಾಗ್ರಹ ನಿಧಿಗೆ ೧೦೦ ರೂ. ಕೊಟ್ಟಿದ್ದಾರೆ.

## ಹುಬ್ಬಳ್ಳಿ ಪತ್ರ.

(ನಮ್ಮ ಸ್ವಂತ ಸುದ್ದಿಗಾರರಿಂದ)

ನಿನ್ನಿನ ದಿವಸ ಡಾ. ಜೋಷ್ಯರು ಮನೆಯಲ್ಲಿ ಯಾವದೋ ಕಾರಣದಿಂದ ಜಗಳಮಾಡಿ ಸಿಟ್ಟಿನಭರದಲ್ಲಿ ಒಬ್ಬನಿಗೆ ಚಾಕುವಿನಿಂದ ಇರಿದನು. ಬಹಳ ಘಾಯವಾದ್ದರಿಂದ ಬೆದರಿ ೩ ವರ್ಷದ ಮಗನೊಡನೆ ಮನೆಯ ಎದುರಿನಲ್ಲಿದ್ದ ಭಾವಿಯಲ್ಲಿ ಬಿದ್ದು ಆತ್ಮಹತ್ಯನಮಾಡಿಕೊಂಡನು. ಮಗುವನ್ನು ತೆಗೆದುಕೊಂಡು ಬೀಳಲು ಕಾರಣವೇನೂ ತಿಳಿಯದು. ಘಾಯವಾದ ಮನುಷ್ಯನು ಆಸ್ಪತ್ರೆಯಲ್ಲಿರುವನು.

ಭಾರತಮಿಲ್ಲಿನ ಕೆಲಸಗಾರರು ಸಂಘವನ್ನು ಮಾಡಿಕೊಂಡಿದ್ದು ಅದರ ಪತಿಯಿಂದ ಮೂನಪ್ಪಯ್ಯನ ಮಠದ ಎದುರಿನ ಬೈಲಲ್ಲಿ ಶ್ರೀಯುತ ಏಕಾಂಬರಮ್ ಇವರ ಭಾಷಣವಾಯಿತು.

ಹುಬ್ಬಳ್ಳಿಯ ಕೋ ಆಪರೇಟಿವ್ (ಹ ಸಪಿಟಲ) ರುಗ್ಣಾಲಯಕ್ಕೆ ಮುಂಬಯಿ ಗವ್ಹರ್ನರರು ೧೦೦೦ ರೂ ಕಾಣಿಕೆಯನ್ನು ಕಳಿಸಿ ಆಸ್ಪತ್ರೆಯ ಕೆಲಸದಿಂದ ಅತ್ಯಂತ ಸಂತುಷ್ಟರಾಗಿದೇನೆಂದು ಬರೆದಿರುವರು. ಆಸ್ಪತ್ರೆಯ ಕಾರ್ಯದರ್ಶಿಗಳಾದ ಡಾ। ಕುಂಭಕೋಣ ಇವರು ತಿಳಿಸುತ್ತಾರೆ. ಮತ್ತು ಸದರಿ ರುಗ್ಣಾಲಯದ ತ್ರೈವಾರ್ಷಿಕ ವರದಿಯು ಒಂದು ನಮ್ಮ ಕಡೆಗೆ ಬಂದಿದೆ.

## ರಾಟಿಯು ವರದಕ್ಷಿಣೆಯು.

ಗೋಕಾವಿಯ ಶ್ರೀ ಕಲ್ಯಾಣಶೆಟ್ಟಿ ಚನಬಸಪ್ಪನವರು ತಮ್ಮ ಮಗಳ ಮದುವೆಯನ್ನು ಶುದ್ಧಖಾದಿಯಿಂದಲೇ ಮಾಡಿದರು; ವರನಿಗೆ ಒಂದು ರಾಟಿಯನ್ನು ವರದಕ್ಷಿಣೆಯಾಗಿ ಕೊಟ್ಟರು. ಕರ್ನಾಟಕದಲ್ಲಿಯೂ ರಾಟಿಗೆ ತಕ್ಕ ಸ್ಥಾನವು ದೊರೆಯುತ್ತಿದೆ ಅಲ್ಲವೇ?

## ಇದು ಮಕ್ಕಳ ಮದುವೆಯ ಸಮಯವಲ್ಲ.

ಮ. ಗಾಂಧಿಯವರು ಮೊನ್ನೆ ತ್ರಾಲಸಾ ಹಳ್ಳಿಯಲ್ಲಿ ಭಾಷಣ ಮಾಡುವಾಗ್ಗೆ ಹೇಳಿದ್ದೇನಂದರೆ ಶಾರದಾ ಕಾಯಿದೆ ಸಮಯಕ್ಕೊಬ್ಬ ಎರಡು ಮಾತು ಹೇಳುವ ಪ್ರಸಂಗ ಬಿದ್ದಾಗ್ಗೆ ನಾವು ಶಾರದಾ ಕಾಯ್ದೆಗೆ ಬೆಂಬಲಕೊಟ್ಟು ನನ್ನ ಮನಸ್ಸಿನಲ್ಲಿದ್ದ ವಿಚಾರದಲ್ಲಿ ಕೈಹಾಕುವದು ಸರಕಾರಕ್ಕೆ ಬೇಕಾರವಿಲ್ಲ. ಅವರು ಈ ವಿಷಯಕ್ಕೆ ವಿಶೇಷ ಕಾಳಜಿ ಹಚ್ಚಿಕೊಂಡು ಕೆಲಸಮಾಡುವದಿಲ್ಲ. ಆದರೂ ನಾವು ನಮ್ಮ ಶಿಸುಗಳ ಮದುವೆ ಮಾಡಿ ಅವುಗಳ ಕೊರಳಿಗೆ ಗಂಟು ಕಟ್ಟಬಾರದು ಈ ಸಮಯದಲ್ಲಂತೂ ದೇಶದ ಎಲ್ಲ ತರುಣರು ಮನಃಪೂರ್ವಕ ಇಲ್ಲದೆ ಇದ್ದು ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮ ಪರಾಕ್ರಮವನ್ನು ತೋರಿಸಬೇಕಾಗಿದೆ. ಹಿಂದೂಸ್ಥಾನವು ನಿಜವಾದ ಯುದ್ಧವನ್ನು ಪ್ರಾರಂಭಿಸಿದೆ. ಎಲ್ಲ ಪ್ರಾಂತಗಳಲ್ಲಿಯೂ ಯುದ್ಧದ ರಣಭೇರಿಯು ಕೇಳಹತ್ತಿದೆ. ತಾಯ್ನಾಡು ತನ್ನ ಮಕ್ಕಳ ಧೈರ್ಯೋತ್ಸಾಹಗಳನ್ನು ನೋಡಲು ಆತುರಳಾಗಿದ್ದಾಳೆ. ಇಂಥ ವೇಳೆಯಲ್ಲಿ ಮಕ್ಕಳ ಮದುವೆ ಮಾಡಿ, ಅವರ ಜೀವಿತವನ್ನು ಕಷ್ಟಪ್ರದ ಮಾಡಬೇಡಿ ಎಂದು ಹೇಳಿದ್ದಾರೆ.

ಬೆಂಗಳೂರ ಮಾ ೧೯

## ಉತ್ತರಾದಿ ಮಠದ ಶ್ರೀಗಳ ಆಗಮನ

ಉತ್ತರಾದಿ ಮಠದ ಶ್ರೀ ಶ್ರೀಗಳವರು ಹೊಸಕೋಟೆಯಿಂದ ಈ ದಿನ ಬೆಳಿಗ್ಗೆ ೬॥ ಘಂಟೆಗೆ ಬೆಂಗಳೂರು ಪೌರಸಭೆಯವರು ಹಾಕಿಸಿದ್ದ ಹಸುರು ಮಂಟಪದಲ್ಲಿ ಬಿಡಾರ ಮಾಡಿಸಿದರು. ದಿವಾನರೇ ಮೊದಲಾದ ಸಂಸ್ಥಾನದ ಅಧಿಕಾರಿಗಳೂ ಪುರಪ್ರಮುಖರೂ ಶಿಷ್ಯಕೋಟಿಯೂ ಕೂಡಿದ್ದು ಶ್ರೀಗಳವರಿಗೆ ಸುಸ್ವಾಗತವನ್ನು ಬಯಸಿದರು. ರಾಜಮರ್ಯಾದೆಯಾಗಿ ೧೨ ಕುಶಾಲ ತೋಪುಗಳು ಉಡಾಯಿಸಲ್ಪಟ್ಟವು.

## ಮಹಾತ್ಮಾ ಗಾಂಧಿಯವರು ಸಾಹಾದಲ್ಲಿ ಮಾಡಿದ ಅತ್ಯಂತ ಸ್ಫೂರ್ತಿದಾಯಕವಾದ ಭಾಷಣದಲ್ಲಿ ಹೇಳಿದ್ದೇನಂದರೆ

ಈ ರಾಜನೀತಿಯನ್ನು ವಿರೋಧಿಸುವದು ನನ್ನ ಧರ್ಮ. ರಾಜದ್ರೋಹ ಮಾಡುವುದು ನನ್ನ ಕರ್ತವ್ಯ. ಯಾವ ರಾಜ್ಯದಲ್ಲಿ ಪದೇ ಪದೇ ಅನ್ಯಾಯವಾಗುತ್ತಿರುವದೋ, ಯಾವ ರಾಜ್ಯದಲ್ಲಿ ಬಡಜನರಿಗೆ ಅವಶ್ಯವಾದ ಉಪ್ಪಿನಂತಹ ವಸ್ತುವಿನ ಮೇಲೆ ಕರ ಹೊರಿಸಲ್ಪಡುತ್ತಿರುವದೋ, ಯಾವ ರಾಜ್ಯದ ಪ್ರಜೆಗಳ ಉತ್ಪನ್ನದ ೫ ಪಾಲಿನಷ್ಟು ಸಂಬಳವು ವಾಯಿಸರಾಯರಿಗೆ ಕೊಡಲ್ಪಡುತ್ತಿರುವದೋ, ಯಾವ ರಾಜ್ಯದಲ್ಲಿ ಪ್ರಜೆಗಳಿಗೆ ಮದ್ಯ ಕುಡಿಸಿ ಅಫೀಮು ತಿನ್ನಿಸಿ ೨೫ ಕೋಟಿ ರುಪಾಯಿಗಳು ಭಂಡಾರಕ್ಕೆ ತುಂಬಿಸಲ್ಪಡುತ್ತವೆಯೋ ಯಾವ ರಾಜ್ಯದ ಪರದೇಶೀ ಬಟ್ಟೆಯ ಬಗ್ಗೆ ೬೦ ಕೋಟಿ ರೂಪಾಯಿಗಳು ಪರದೇಶಕ್ಕೆ ಹೋಗುತ್ತಿರುವವೋ ಆ ರಾಜನೀತಿಗೆ ದ್ರೋಹ ಬಗೆಯುವದು ನನ್ನ ಕರ್ತವ್ಯವು. ಈ ರಾಜನೀತಿಯನ್ನು ಸುಟ್ಟುಹಾಕೆಂದು ದೇವರಲ್ಲಿ ನನ್ನ ಪ್ರಾರ್ಥನೆ. ಈ ಮೊದಲು ನನ್ನನ್ನು ಒಂದು ದೊಡ್ಡ ಶಿಕ್ಷೆಯನ್ನು ಕೊಟ್ಟಿದ್ದರು. ಆದರೆ ನಾನು ಬೇಸಬಿದ್ದನೆಂದು ಸರಕಾರಕ್ಕೆ ಭಯವಾಯಿತು. ಅದರಿಂದ ನನ್ನನ್ನು ಬಿಡುಗಡೆ ಮಾಡಿದರು. ಈಗ ಸರಕಾರವು ನನ್ನನ್ನು ಹಿಡಿದರೆ ಒಳಿತು ನಾನು ಪದೇ ಪದೇ ರಾಜದ್ರೋಹ ಮಾಡಿರುವೆನು. ಜನರಿಗೆ ಹೇಳುತ್ತೇನೆ ಸರಕಾರವನ್ನು ನಿರಾಕರಿಸುವದರಿಂದ ಜನರಿಗೆ ಭೀತಿಯಾಯಿತೆಂದು ಸರಕಾರಕ್ಕೆ ಅನಿಸಿದ್ದರೆ ಅದು ತಪ್ಪು ಕಲ್ಪನೆ. [illegible]ವನ್ನು ಜೈಲಿಗಿಟ್ಟ ದಿವಸದಿಂದ ಏನಾಯಿತು. ಈ ಸಭೆಯಲ್ಲಿ ಒಂದು ಉತ್ಸವದಂತೆ ಜನರು ನೆರೆದಿದ್ದಾರೆ.

ಕರ್ನಾಟಕ ಧುರೀಣ


# 'ಕನ್ನಡಿಗ'ನ ನಿತ್ಯ ಸಂಚಿಕೆ!

ಏಜಂಟರಾಗಲಿಚ್ಛಿಸುವವರು ಕೂಡಲೇ ಬರೆದುಕೊಳ್ಳಬೇಕು. ಸಣ್ಣ ಊರವರು ಕನಿಷ್ಠ ಮೂರು ರೂಪಾಯಿಗಳನ್ನೂ, ಪಟ್ಟಣದವರು ಕನಿಷ್ಠ ಹತ್ತು ರೂಪಾಯಿಗಳನ್ನೂ ಠೇವು ಕಳಿಸಬೇಕು. ಸ್ಥಾನಿಕ ಕಾಂಗ್ರೆಸ ಕಮಿಟಿಯ, ಅಥವಾ ಮುಖ್ಯ ಸದ್ಗೃಹಸ್ಥರ ಒಂದು ಸರ್ಟಿಫಿಕೇಟನ್ನಾದರೂ ಪ್ರಮಾಣಪತ್ರದ ಬಗ್ಗೆ ಅರ್ಜಿಯ ಸಂಗಡ ಕಳಿಸತಕ್ಕದ್ದು. ಪ್ರತಿವಾರದಲ್ಲಿ ಲೆಕ್ಕವನ್ನೂ ಹಣವನ್ನೂ, ಮಾರದೇ ಉಳಿದ ಸಂಚಿಕೆಗಳನ್ನೂ ತಿರುಗಿ ಕಳಿಸತಕ್ಕದ್ದು. ನೂರಕ್ಕೆ ೨೫ ರೂಪಾಯಿಗಳಂತೆ ಏಜಂಟರಿಗೆ ಕಮಿಶನ್ ದೊರೆಯುವದು. ಮೋಟಾರುಗಳ ತಿಕೀಟ ಏಜಂಟರುಗಳು ಸಣ್ಣ ಊರುಗಳಲ್ಲಿ ದಿನಾಲು ೧೦ ರ ಪ್ರತಿಗಳನ್ನು ತರಿಸಿಕೊಂಡರೂ ಅವರಿಗೆ ಪ್ರತಿ ತಿಂಗಳು ೨-೩ ರುಪಾಯಿ ಕೂಲಿಯೇ ದೊರೆಯುವವು. ಇನ್ನು ಪಟ್ಟಣಗಳಲ್ಲಿ ನೂರಿನಷ್ಟು ಪ್ರತಿಗಳನ್ನು ಮಾರುವ ಏಜಂಟರಿಗೆ ತಿಂಗಳೊಂದಕ್ಕೆ ೧೦ ರೂಪಾಯಿಗಳಿಂದ ೨೦ ರ ವರೆಗೆ ಪಗಾರ ಬೀಳುವದು. ಮೇಲಿನ ಕೆಲವು ಊರ ಪಟ್ಟಣಗಳಿಗೆ ಸಹ ಇಂಗ್ಲೀಷ ಪತ್ರಿಕೆಗಳಿಗಿಂತಲೂ, ಮೊದಲು ಮಹತ್ವದ ಸುದ್ದಿಗಳು ನಮ್ಮ ಪತ್ರಿಕೆಯಿಂದ ತಿಳಿಯುವವು. ಏಜಂಟರು ಕೂಡ ಪ್ರಮುಖವಾದ ಸುದ್ದಿಗಳನ್ನು ಬೀದಿಯಲ್ಲಿ ಒದರುತ್ತ, ತಿರುಗಿಯಾಗಲಿ, ಸ್ಥಾನಿಕ ಮುಖ್ಯ ಮನುಷ್ಯರನ್ನು ಭೆಟ್ಟಿಯಾಗಿ ಅವರ ಹೆಸರನ್ನು ನೋಂದಾಯಿಸಿಕೊಂಡಾಗಲಿ, ಪ್ರಯತ್ನಿಸಿದರೆ ಜನರಲ್ಲಿ ಪ್ರತಿಗಳು ಹೆಚ್ಚಾಗಿ ಖಪು ಆಗುವವು, ಆದ್ದರಿಂದ ಆವಶ್ಯಕರು ಕೂಡಲೇ ಏಜಂಟರಾಗಲು ಬರೆದುಕೊಳ್ಳತಕ್ಕದ್ದು.

ಜಾಹೀರಾತಿನ ದರ:— ಕಾಯಂ ಜಾಹೀರಾತುಗಳಿಗೆ ಒಂದು ಕಾಲಮ್ಮಿನ ಒಂದು ಇಂಚಿನ ಪ್ರತಿಯೊಂದು ಸಂಚಿಕೆಗೆ ನಾಲ್ಕು ಆಣೆ ಹಂಗಾಮೀ ಜಾಹೀರಾತುಗಳಿಗೆ ಐದು ಆಣೆ

ನಿಮ್ಮ ಪತ್ರಿಕೆಯ ವ್ಯವಸ್ಥಾಪಕರು
"ಕನ್ನಡಿಗ" ಕಾರ್ಯಾಲಯ ಬಾಗಲಕೋಟೆ.


ಈ ಪತ್ರಿಕೆಯು ಮಂಗಳವೇಢೆ ರಾಘವೇಂದ್ರರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅಕ್ಷರ ಸ್ತಂಭ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರಿ. ನಂ. ಬಿ ೧೯೬೭ ಬೆಲೆ ೦-[illegible]

ಜಯಕರ್ನಾಟಕ

ನಿತ್ಯಸಂಚಿಕೆಯು.

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ರವಿವಾರ ಮಿತಿ ಫಾಲ್ಗುಣ ಬಹುಳ ೩೦ ಶಕ ೧೮೫೧ ತಾ ೩೦—೩—೩೦ ಸಂಚಿಕೆ ೮

## ಸಂಪಾದಕರ ಭೂಮಿ.

ನನ್ನ ದೇಹವು ನಿನ್ನ ಮಂದಿರಾಸನವಾಗಿ ।
ನನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ ಪ್ರಾಣವು ನಿನ್ನ ಗಂಧರ್ವನು ಬೀಣಗಂಧವಹವೆಂದು ತಿಳಿಯೋ ॥

“ ಇಪ್ಪತ್ತು ಪ್ರತಿಶತ ಗೌತ ಕುಲಕರ್ಣಿಯವರು ವಿನಾಶದ ಸಗಾಯಿಯನ್ನು ಹಚ್ಚಿರುವರು. ಬೆಳೆಯು ಬಹಳೇ ಹಿಕ್ಕಟ್ಟಾಗ್ದ ರಿಂದ ರೈತ , ಬಂದ ಅಲ್ಪಸ್ವಲ್ಪ ವನಾಲನ್ನೂ ಕೊಡಲು ಸಾರಿ ತೆರಿಗೆಯನ್ನು ಕೊಟ್ಟಾರೆಂದರೆ ಶಕ್ಯವಿಲ್ಲ. ಎಪ್ರಿಲ ೧೫ ತಾರೀಖಿನ ವರೆಗೆ ಮುದ್ದತು ಇದ್ದು ಇನ್ನು ೧೫ ದಿವಸಗಳ ವರೆಗೆ ರೈತರಿಗೆ ಸವಡುಕೊಟ್ಟರೆ ಅವರು ತಮಗೆ ಬತ್ತುವ ಪೂರ್ತಿ ಬಂ ಹತ್ತಿ ಯನ್ನು ಮಾರಿ ಸಾಲದಿದ್ದರೆ ತಮ್ಮ ಜೀವನನ್ನಾದರೂ ಒತ್ತೆ ಇಟ್ಟು ತೆರಿಗೆಯನ್ನು ಸಲ್ಲಿಸುವರು. ಕಂದಾಯ ಗೌತ ಕಾಲಸಭೋ ಗರು ಕರೆಯೋ ಬಾಗದೆ, ಮಾಲಿಕ ಅಮಲದಾರರ ಶಿಫಾರಸ ಇದ್ದವೆ ಕೋರ್ಟಿನ್ನು ವಿಚಾರ್ಯ ಕೊಡದೆ ಬಂಧವರೂ, ಸ್ಥಳೀಯರೂ ಇದ ಗಳಗಳಿಯ, ರೈತರಿಗೆ ತಮ್ಮ ಕೃಯಕ್ಷ್ದ್ರ್ದ ನಷ್ಟ ಸಹಾಯವಾಗಿ, ಪುಣ್ಯ ಕಟ್ಟಿ ಕೊಳ್ಳಬೇಕೆಂದು ಬೇಡುವ ” —ಓರ್ವ ಗಲಗಲಿ ರೈತ.

ನಾವೀಗನ್ನೊ ಈ ಸಾರಾವಳಿಯ ಬಗ್ಗೆ ಬರೆದಿದ್ದೆವು ಆದರೆ ಈ ವೇಳೆಕೊಟ್ಟ ಪತ್ರವಮಾದರಿಯ ಪತ್ರಗಳು ಅನೇಕ ಹಳ್ಳಿಗಳಿಂದ ಒಂದರಿಂದ, ಅದೇ ಮಾತನ್ನು ಪುನಃ ಸಂಗ ರದ ದಿಕ್ಕಿನಿಂದ ಕಷ್ಟ ಒಮ್ಮೆ ಬರುವವು. ಆವಶ್ಯವೆ ದು ಕಂಡು ಬಂದದ್ದರಿಂದ ಪುನಃ ಆ ಮಾತಿನ ಬಗ್ಗೆಯೇ ಬರೆಯಬೇಕಾಗಿದೆ ಗೌತ ಕುಲಕರ್ಣಿಯರು ಅವರ ಮೇಲಿನವರಾದ ಮಾಮಲೇದಾರ ಮಹಾಲಕರಿಗ ಈ ದೈವವಶದಿಂದ ಅಧಿಕಾರಯೋಗ್ಯರಾಗಿದ್ದರೂ, ಮನುಷ್ಯಪ್ರಾಣಿಗಳೇ ಆಗಿದುದರಿಂದ, ಅವರಿಗೂ ದಯಾ ಮಾಯೆ ಗಳು ಇರಲಿಕ್ಕೆ ಸಾಕೆಂದು ಎಣಿಸಿಯೇ ಅವರನ್ನು ಉದ್ದೇಶಿಸಿ ಈ ರೀತಿ ಹೇಳುವದು ಕೇಳುವದನ್ನ ಮಾಡುತ್ತಿ ವೆವೆಂದು ಅಧಿಕಾರ ಸಂಪನ್ನರು ಮರೆಯಲಿಕ್ಕಾಗದು. ಅವರಿಗೆ ಹೃದಯ ವಿದ್ದದ್ದೇ ಆದರೆ, ಕೇವಲ ತಮ್ಮ ಶಿಫಾರಸ್ಸುಗಾಗಿ ಇಷ್ಟೆಂದು ಹೇಳೋ ತೆರನ್ನು ಈ ಸಾರಾವಳಿಯ ಸಂದರ್ಭದಲ್ಲಿ ಪ್ರದ ರ್ಶಿಸಬಾರದು, ರೈತನ ಅಡಚಣಿಯು ಪ್ರಾಮಾಣಿಕತನದ್ದೆಂದು ಅಧಿಕಾರಿಗಳು ಮನಗಂಡ ಕೂಡಲೆ ಅದನ್ನು ಅರಿಯುದವರಂತೆ ಆಚರಿಸಿ ರೈತನನ್ನು ನಾನಾ ಯಾತನೆಗೆ ಈಡುಮಾಡುವದು ಕೇವಲ ಅಧಿಕಾರದ ಮದವೇ ವಿನಃ ಬೇರೆ ನ್ ಈಗಿನ ಪ್ರಕ್ಷುಬ್ಧ ವಾತಾವರಣದಲ್ಲಿಯೂ ಈ ತರದ ಹಿಂಸೆಯನ್ನು ರೈತನು ಇನ್ನು ಬಹಳ ದಿನ ತಾಳಿಕೊಂಡು ಕೂಡ್ರಲಾರನೆಂಬುದು ಅಧಿಕಾರಿಗಳಿಗೆ ಗೊತ್ತಿರಲಿ.

## ಅಹಮ್ಮದಾಬಾದದಲ್ಲಿ ಸೇರಿದ ಕಾಂಗ್ರೆಸ್ ಸಭೆಯು.

(ನಮ್ಮ ಪ್ರೇಷಿತ ಪ್ರತಿನಿಧಿಗಳಿಂದ ಅಹಮ್ಮದಾಬಾದ ತಾ. ೨೧-೩-೩೦)

( ಕಳೆದ ಸಂಚಿಕೆಯಿಂದ ಮುಗಿದುದು )

ರಾಷ್ಟ್ರದ ಹೀನಸ್ಥಿತಿಯಿಂದ ಕಳವಳಗೊಂಡು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಾತ್ಮರ ಸಂಗಡವೇ ಹೊರಟು, ತನ್ನ ಪ್ರಾಣ ವನ್ನು ಸಹ ಬಲಿದಾನ ಕೊಡಲು ಸಿದ್ಧನಾದ ಇಸೋ [illegible] ವೀರಶೈವ ತರುಣನೆಂದರೆ ಮಹಾದೇವ ಮಲ್ಹಾರನು. ಇವನು ಮಹಾತ್ಮರ ಸಂಗಡ ಕಾಲುನಡಿಗೆಯಿಂದ ಹೊರಟ ಮೊದಲನೇ ತಂಡದ ವೀರ ರಲ್ಲಿ ಒಬ್ಬನು. ಧಾರವಾಡ ಜಿಲ್ಲೆಯ ರಾಣೇಬಿನ್ನೂರ ತಾಲೂಕಿ ನವನು. ೧೮ ವರ್ಷ ಮಾತ್ರ! ಆಶ್ರಮದಲ್ಲಿ ಎರಡು ತಿಂಗಳಿದ್ದ ರವ. ತನ್ನ ಸಾತ್ವಿಕ ಪ್ರಕೃತಿಯಿಂದ ಮಹಾತ್ಮರ ಪ್ರೀತಿಗೂ ಅರ್ಹನಾ ದನಾಗಿದ್ದಾನೆ ಇಷ್ಟು ಒಂದು ಗ ಅವನಿಗೆ ಕನ್ನಡವೊಂದೇ ಬರುತ್ತಿ ಲಿದಿತ್ತು. ಹಿಂದೀ ಗುಜರಾಥಿಗಳನ್ನು ಈ ಎರಡೇ ತಿಂಗಳುಗಳಲ್ಲಿ ತಕ್ಕ ಮಟ್ಟಿಗೆ ಕಲಿತಿದ್ದಾನೆ. ಸ್ವಾತಂತ್ರ್ಯಕ್ಕಾಗಿ ಇವನ ಉತ್ಸಾಹ ವು ನಿಸ್ಸೀಮವಾಗಿದೆ “ ನಿನ್ನನ್ನು ಗುಂಡು ಹಾಕಿ ಕೊಲ್ಲತಕ್ಕವರು ಕೊಂದರೆ ಏನು ಮಾಡುವಿ? ” ಎಂದು ಅವನನ್ನು ಜೊತೆಗಾರರಲ್ಲಿ ಒಬ್ಬನಾದ [illegible] ಕೇಳಲು “ ಸಂತೋಷದಿಂದ ಸಾಯುವೆ, ” ಎಂದು ತಟ್ಟನೇ ಬಹು ಗಂಭೀರವಾಗಿಂತ ಉತ್ತರವನ್ನಿತ್ತನು. ಇವನಿಗೆ ಮೀಸೆಯು ಸಹ ಇನ್ನೂ ಒಡೆದಿಲ್ಲ ಆದರೂ ಅವನಲ್ಲಿ ಹುಟ್ಟಿದ ರಾಷ್ಟ್ರಸೇವೆಯ ಕಲ್ಪನೆಯು ಜನ್ಮತಃ ವೇ ಅವನ ಜನ್ಮಭೂಮಿಯಾದ ಕರ್ನಾಟಕದ ವೀರಶೈವನಾಗಿ ತಿಳಿದ , ಅವನಲ್ಲಿಯೂ ಸ್ವತಂತ್ರ್ಯ ದಳವಾಳಸೆಯು ನಲಿಗೊಂಡರೆ, ಕರ್ನಾಟಕವು ಅನ್ಯಪ್ರಾಂತಗಳನ್ನು ಈ ಸಂಗ್ರಾಮದಲ್ಲಿ ಹಿಂದೆಹಾಕಬಹುದಲ್ಲವೇ ? ಎಂದು ನಾವು ಅಂದುಕೊಂಡೆ.

ಹುಬ್ಬಳ್ಳಿಯ ಗುರುಸಿದ್ಧಪ್ಪನೆಂಬ ಮತ್ತೊಬ್ಬ ತರುಣನು, ತನ್ನ ಮಿತ್ರನಾದ ಮಾಗಡಿ ವಂಕಟೇಶನ ( ಇವನು ರಡ್ಡಿ ಜಾತಿಯವನು.) ಸಂಗಡ ಬಂದು ಈ ದಿನವೇ “ ಸತ್ಯಾಗ್ರಹ ಶಿಕ್ಷಣ ಶಿಬಿರ ” ವನ್ನು ಅಹಮ್ಮದಾಬಾದಿನಲ್ಲಿ ಸೇರಿದ್ದಾನೆ ಹೀಗೆ ವೀರಶೈವ- ರಡ್ಡಿ ಮೊದಲಾದ ಕರ್ನಾಟಕದ ಎಲ್ಲ ಜಾತಿಯ ತರುಣರು, ಮುಂದೊರೆದು ಒಂದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೇರಿದರೆ ಕರ್ನಾಟಕವು ಬಂಡುಳಿದಿತೆಂದು ಬನ್ನಲಿಕ್ಕೆ ಅದಕ್ಕಾಗಿ ಧೈರ್ಯ ಮಾಡೀರಿ! ಆದರೆ ಕನ್ನಡ ತರುಣರಿಲ್ಲ. ಜಾತಿಮತಗಳನ್ನು ಲೆಕ್ಕಿ ಸದೇ ಮುಂದೆ ಬರಬೇಕು. ಇಷ್ಟೇ!

## ಸರಕಾರದ ತಳಗಲ್ಲೇ ಅದರ ಹತ್ತಿದೆ.

ಇತ್ತ ಸರಕಾರದವರು ರಾಜೀನಾಮೆಗಳನ್ನು ಕೊಟ್ಟವರ ಧೈರ್ಯಸ್ಥೈರ್ಯಗಳನ್ನು ನಾನಾ ರೀತಿಯಿಂದ ಪರೀಕ್ಷಿಸುತ್ತಿರುವರು, ಬೆದರಿಸುವರು, ಆಸೆತೋರಿಸುವರು, ಸುಮ್ಮಸುಮ್ಮನೆ ಠಾಣೆಗಳಿಗೆ ಕರಿಸಿಕೊಳ್ಳುವರು, ಜವಾಬು ಕೊಡು ಎಂದು ಕೇಳುವರು. ಇದು ನಿನ್ನದೇ ಸಹಿ ಹೌದೋ ಅಲ್ಲವೋ ನೋಡು ಎಂದು ಕಚೇರಿಗೆ ಕರಿಸಿಕೊಳ್ಳುವರು. ಹೀಗೆ ಗುಪ್ತತನವೂ ಲಾಂಗೂಲಚಾಲನವಾಡುವದೂ ಎರಡೂ ಪ್ರಕಾರವನ್ನು ಸರಕಾರವು ನಡೆಸಿದೆ. ಆದರೆ ಅದೇನೋ ಒಂದು ದೈವೀಮಾಯೆಯಿಂದ ಗುಜರಾಥದ ಪಟೀಲರಲ್ಲಿ ಒಮ್ಮೆಲೆ ಮಹಾತ್ಮರ ಪುಣ್ಯಪ್ರಭಾವದಿಂದ ಅಪೂರ್ವದ ಧೈರ್ಯಬಂದದ್ದು ಎಲ್ಲೆಡೆಯಲ್ಲಿಯೂ ಕಂಡು ಬರಹತ್ತಿದೆ. ಇದೆಲ್ಲ ಸರಕಾರದ ಕುಳವುಗಳಿಗೆ ಎಷ್ಟೋ ಪಟೀಲರು ಮನೆಯಲ್ಲಿ ಕುಳಿತುಕೊಂಡೇ '' ಆ ಸಹಿ ನನ್ನದು ಹೌದು. ನಿಮ್ಮ ಕಡೆಗೆ ಬರಲಿಕ್ಕೆ ನಮಗೆ ಈಗ ಸವಡು ಇಲ್ಲ " ಎಂಬ ನೀಟಾದ ಉತ್ತರವನ್ನು ಬರೆದು ಕಳಿಸಿರುವರು. ಬಂದ ಅಮಲದಾರನಿಗೆ ದೂರದಿಂದಲೆ ಬಗ್ಗಿ ಶರಣುಹೊಡೆಯುವ ಗೌಡರಿಗೆ ಸರಕಾರದ ಅಂಜಿಕೆ ಹಾರಿಹೋದ ಮೇಲೆ ಬ್ರಿಟಿಶರಾಜ್ಯದ ತಳಗಲ್ಲೇ ಸಡಿಲಾಯಿತೆನ್ನಲಿಕ್ಕೆ ಆತಂಕವೇನಿದೆ!

## ಸ್ತ್ರೀಯರಿಗೆ ಅಪೂರ್ವವಾದ ಸಂಧಿಯು.

ಇಂದಿನವರೆಗೆ ಆದ ಯುದ್ಧದ ಗುಂಡು ತೋಪುಗಳ ಗಡಗಡಾಟದ ಅಬ್ಬರದಲ್ಲಿ ಅಬಲೆಯರಿಗೆ ರಣಾಂಗಣಗಳಲ್ಲಿ ಭಾಗತೆಗೆದುಕೊಳ್ಳಲು ಬರುತ್ತಿದ್ದಿಲ್ಲ. ಆದರೆ ಗಾಂಧೀಯವರ ಅಪೂರ್ವದ ಶಾಂತಿಯ ಇಂದಿನ ಹಿಂದಿಯರ ಸ್ವಾತಂತ್ರ್ಯಕಲಹದಲ್ಲಿ ಅಬಲೆಯರು ಕೂಡ ರಣಾಂಗಣದಲ್ಲಿ ನಿಂತು ಹೋರಾಡಲು ಅನುಕೂಲವಾಗಿದೆ. ಸ್ವರಾಜ್ಯವನ್ನಾಗಲಿ ಜನ್ಮಭೂಮಿಯ ವಿಮೋಚನೆಯನ್ನಾಗಲಿ ಗಿಟ್ಟಿಸಿಕೊಳ್ಳುವಂಥ ಈ ಸತ್ಯಾಗ್ರಹದಲ್ಲಿ ಸ್ತ್ರೀಸಮಾಜವು ಭಾಗತೆಗೆದುಕೊಳ್ಳಲಿಕ್ಕೆ ಹಿಂಜರಿಯಬಾರದೆಂಬ ಅಭಿಪ್ರಾಯದ ಪ್ರಕಟನೆಯನ್ನು ಮುಂಬಯಿ ಸ್ತ್ರೀಸಮಾಜದವರು ಹೊರಡಿಸಿದ್ದಾರೆ.

## 'ನಿರಾಧಾರಿಯಾದ' ಶೌಕತ ಅಲ್ಲಿಯವರ ಇಚ್ಛೆ

ಮೌಲಾನಾ ಶೌಕತಅಲ್ಲಿಯವರನ್ನು ಕುರಿತು ಮಹಾತ್ಮರು ಮೊನ್ನಿನ ಯಂಗ ಇಂಡಿಯಾ ಪತ್ರದಲ್ಲಿ '' ನಾನು ಕೊಂದ ಅಸಹಕಾರ ಚಳವಳಿಯ ಕಾಲಕ್ಕೆ ಜೀವದ ಗೆಳೆಯರಾದ ಮೌಲಾನಾ ಕೊಂಡದೆಹೋದ ಕಾರಣಗಿ, ಅವರೆಡಕೆ ಅದ್ದಾಗಿ ನಾನೇ ಪರಿಗಣಿಸಲು ಮಾಡಿದೆವು. ಆದರೆ ಈಗ ಅದೇ ಮೌಲಾನನು ಅದೇಕೋ ನನ್ನ ನನ್ನಿಂದ ಬೇರ್ಪಟ್ಟಿರುವನು. ನಾನಂತೂ ಈಗಲೂ ಅತಿ ಬಡವನಾದ ಗಿಡ್ಡನ ಗಾಂಧಿಯೇ ಆಗಿದ್ದೇನೆ. ಅಂಥವ ವಿಚಾರಗಳೇ ಈ ಹೊತ್ತಿಗೂ ನನ್ನ ಹೃದಯದಲ್ಲಿ ಸ್ಫುರಿಸುತ್ತವೆ. ಹೀಗಿದ್ದು ಶೌಕತಅಲ್ಲಿಯು ನನ್ನನ್ನು ತನ್ನ ಜೇಬಿನೊಳಗಿಂದ ಈಗ ಹೊರಗೆ ಚಲ್ಲಿದೇಕೋ ನನಗೆ ತಿಳಿಯದು '' ಎಂದು ಬರೆದಿದ್ದರು. ಅದಕ್ಕೆ ಶೌಕತಅಲ್ಲಿಯು ನಿನ್ನೆ ಹೀಗೆ ಪ್ರಕಟಿಸಿದ್ದಾನೆ. ಮಹಾತ್ಮನನ್ನು ನನ್ನ ಕಿಸೆಯೊಳಗಿಂದ ನಾನೇನು ಹೊರಗೆ ಹಾಕಿಲ್ಲ. ನಾನು ಈ ಕೆಲವು ವರ್ಷಗಳವರೆಗೆ ಗಾಂಧಿಯನ್ನು ನನ್ನ ಹೃದಯದ ಗದ್ದುಗೆಯಲ್ಲಿ ಇಟ್ಟು ಪೂಜಿಸಿದೆನು. ಆದರೆ ಈಗ ನಾನು ದರಿದ್ರನೂ ನಿರಾಧಾರಿಯೂ ಆಗಿರುವೆನೆಂದು ಮಹಾತ್ಮನು ಕಾಣಾಗಿಯೋ ನನ್ನ ಕಿಸೆಯೊಳಗಿಂದ ಜಿಗಿದು ಹೋಗಿದ್ದಾನೆ. ನನ್ನ ಹೃದಯವು ಈ ಹೊತ್ತಿಗೂ ಮಹಾತ್ಮನನ್ನು ಎಂದು ಕಂಡೇನೋ ಎಂದು ಹಗಲಿರುಳೂ ಚಡಪಡಿಸುತ್ತಿದೆ. ‡ ‡

## ೧೦ ಲಕ್ಷ ರೂಪಾಯಿಗಳ ಕಾಣಿಕೆ.

ಹೈದರಾಬಾದದ ನೈಜಾಮರು ಅಲ್ಲೀಗಢ ಮುಸಲ್ಮಾನ ಕಾಲೇಜಿಕ್ಕೆ ೧೦೦೦೦೦೦ ರೂಪಾಯಿಗಳ ಕಾಣಿಕೆಯನ್ನು ಕೊಟ್ಟರು. ನೈಜಾಮರ ಮತಾಭಿಮಾನವು ಈ ರೀತಿ ವ್ಯಕ್ತವಾದದ್ದು.

---

## ಕರ್ನಾಟಕ.

---

### ಕೊರಡೂರ ಹೊಸರಿತ್ತಿಗಳಲ್ಲಿ ಸ್ವಾತಂತ್ರ್ಯ ಸಂದೇಶ.

ಕೊರಡೂರು ಮತ್ತು ಹೊಸರಿತ್ತಿಗಳಲ್ಲಿ ಕಾರ್ಯಕ್ರಮವು ಜರುಗಿತು. ಸಭೆಗೆ ೪-೫ ನೂರು ಜನರು ನೆರೆದಿದ್ದರು. ರೈತರಲ್ಲಿ ಉತ್ಸಾಹವು ತುಂಬಿತುಳುಕುತ್ತಿದೆ. ಕೊರಡೂರಿಂದ ಇಬ್ಬರು ರೈತರು ಸತ್ಯಾಗ್ರಹಕ್ಕೆ ಹೊರಡಲು ಸಿದ್ಧರಾಗಿ ಸಹಿಮಾಡಿರುವರು.

ಹಾವೇರಿ ಸಭೆ. ಇಲ್ಲಿಗೆ ಶ್ರೀ. ಬುರ್ಲಿ ಮತ್ತು ಹೊಸಮನಿ ಪರಮಣ್ಣನವರು ಬಂದಿದ್ದರು. ಸಭೆ ನೆರೆದರು. ಸಭೆಗೆ ವಿಶೇಷ ಜನರು ಕೂಡಲಿಲ್ಲ. ಆದರೂ ನಮಗೆ ಅಭಿಮಾನವೆನಿಸುವಂತೆ ಬಂದವರಲ್ಲಿಯೇ ಇಬ್ಬರು ಸತ್ಯಾಗ್ರಹಕ್ಕೆ ಹೊರಡಲು ಸಿದ್ಧರಾಗಿ ಸಹಿಮಾಡಿದರು.

### ಸುರಪುರ,

ಊರೊಳಗೆ ಹವೆಯು ಕೆಟ್ಟಿದೆ. ಜನರಿಗೆ ವಿಷಮಜ್ವರಗಳು ಬರಹತ್ತಿವೆ.

೨೧-೩-೩೦ ನೇ ದಿವಸ ಅಮೀನಸಾಹೇಬರು ಶಾರದಾವಾಚನಾಲಯದ ಕೆಲ ಜನರನ್ನೂ ಊರೊಳಗಿನ ಕೆಲ ಸಜ್ಜನಸ್ಥರನ್ನೂ ಕರೆಯಿಸಿದ್ದರು. ಕಾರಣವು ತಿಳಿದಿಲ್ಲ.

ಅಸ್ಪೃಶ್ಯಜಾತಿಯ ಓರ್ವ ಸ್ತ್ರೀಯಳು ಯಾವ ಕಾರಣದಿಂದಲೋ ತನ್ನ ಮಕ್ಕಳಾದ ಒಂದು ವರ್ಷದ ಕೂಸನ್ನೂ ಹಾಗು ಆರು ವರ್ಷದ ಒಬ್ಬ ಹುಡುಗನನ್ನೂ ಬಾವಿಯಲ್ಲಿ ನೂಕಿ ತಾನು ಹಾರಿಕೊಂಡು ಪ್ರಾಣ ಬಿಟ್ಟಳು.

ಇಲ್ಲಿಗೆ ಅವ್ವಲ್ ಕಾರಕೂನದಾರರು ಬಂದಿದ್ದಾರೆ. ಊರ ಸುತ್ತಲಿನ ಕೆಲ ಹಳ್ಳಿಯ ರೈತರೆಲ್ಲರೂ ಒಂದುಗೂಡಿ '' ಉಣ್ಣಲಿಕ್ಕೆ ಅನ್ನವಿಲ್ಲ, ಹೊಲಗಳು ಏನೂ ಬೆಳೆದಿಲ್ಲ, ಬಹಳ ಬಡತನವಿದೆ ನಮ್ಮ ಕಡೆಯಿಂದ ಪಟ್ಟಿ ಮನ್ನಾ ಕೊಡುವದಾಗುವದಿಲ್ಲ " ಮುಂತಾಗಿ ಅರ್ಜಿಯನ್ನು ಬರೆದುಕೊಂಡಿದ್ದಾರೆ. ಹಾಗು ಟಕ್ಕರರಿಗೆ ತಂಟೆ ಮಾಡುವ ಆಲೋಚನೆಯಲ್ಲಿದ್ದಾರೆ.

### ಮಾಳೀ ಟ್ರೇನಿಂಗ ಕ್ಲಾಸು ಪುಣೆ.

ಮಾಳೀ ಟ್ರೇನಿಂಗ ಕ್ಲಾಸು ಪುಣೆ ಶಹರದ ಬೊಟ್ಯಾನಿಕಲ್ ಗಾರ್ಡನ್ನ ಖಡಕಿಯಲ್ಲಿ ಸುರುವು ಆಗುತ್ತದೆ. ಅದು ಖಡಕೀ ಸ್ಟೇಶನದಿಂದ (ಜಿ: ಆಯ್. ಪಿ.) ಒಂದು ಮೈಲಿನೊಳಗೆ ಇರುತ್ತದೆ ಮತ್ತು ಪುಣೆ ಪಟ್ಟಣದಿಂದ ೫ ಮೈಲಿನ ಮೇಲಿರುತ್ತದೆ. ಕ್ಲಾಸು ಪ್ರತಿ ವರ್ಷ ಮೇ ತಿಂಗಳ ೧೫ ನೇ ತಾರೀಖಿನಿಂದ ಮುಂದು ವರ್ಷದ ಎಪ್ರೀಲ ೧೫ ನೇ ತಾರೀಖಿನ ವರೆಗೆ ನಡೆಯುವದು. ಹೆಚ್ಚಿನ ಮಾಹಿತಿಗಾಗಿ ದೇವೀಹೊಸೂರ ಒಕ್ಕಲತನದ ಶಾಲೆಗೆ ಬರೆದು ಕೇಳಬೇಕು.

# ಸರಕಾರದವರು
# ಮುನ್ನೂರು ಬ್ರಿಟಿಶ ಸೈನಿಕರನ್ನು
## ಜಬಲಪುರಕ್ಕೆ ಕಳಿಸಿರುವರು.

ಮಹಾತ್ಮಾ ಗಾಂಧಿಯವರು ತಮ್ಮ ಅಸಹ್ಯವಧಿಯಲ್ಲಿಯೇ ಮುಟ್ಟಬೇಕಾದ ಜಬಲಪುರ ತಾಲೂಕಿಗೆ ಸರಕಾರವು ೩೦೦ ಬ್ರಿಟಿಶ ಸೈನಿಕರನ್ನು ಕಳಿಸಿಕೊಟ್ಟಿರುವರು. ಇದೆ ತಾಲೂಕಿನ ಜಲಿಯೇ ಗಂಡಿ ಗ್ರಾಮದಲ್ಲಿ ಮಹಾತ್ಮರು ನಾಳೆ ೬ ನೇ ತಾರೀಖಿಗೆ ಉಪ್ಪಿನ ಕಟ್ಟಳೆಯನ್ನು ಮುರಿಯುತ್ತಿರುವರು. ಇದರ ಸಲುವಾಗಿ ಸರಕಾರವು ತನ್ನ ೩೦೦ ಸೈನಿಕರನ್ನು ಜಬಾಲಪುರ ತಾಲೂಕಿನಲ್ಲಿ ಗಂಡಿ ಗ್ರಾಮದ ಸಮೀಪದಲ್ಲಿಯೇ ಇರಿಸಿಬಿಟ್ಟು, ಆ ಕೊಟ್ಟಿಗೆ ತಮ್ಮ ವಿನಾಶಕಾಲದ ಬುದ್ಧಿಗನುಸರಿಸಿ ಮಾಡುವದನ್ನು ಮಾಡುತ್ತಿರುವರು. ಬ್ರಿಟಿಶ ಸೈನಿಕರು ಬಿಟ್ಟು ಯಮದೂತರು ಬಂದು ಮುಂದೆ ನಿಂತರೂ ಅವರ ಸೈನಿಕರು ಹಿಂದೆ ಸರಿಯುವಂತಿಲ್ಲ. 'ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ' ಎಂಬುದು ಸರಕಾರಕ್ಕೆ ಗೊತ್ತಿಲ್ಲವಂತಲ್ಲ ಆಗಲಿ!

### ನನ್ನನ್ನು ಹಿಡಿವ ಕಾಲಕ್ಕೆ

ನಿನ್ನೆ ಮಾಂಗ್ರೋಳಿಯಲ್ಲಿ ಮಾತಾಡುವಾಗ ಮಹಾತ್ಮರು ತಮ್ಮನ್ನು ಹಿಡಿದಕೂಡಲೇ ಎಲ್ಲರೂ ಒಮ್ಮೆಲೆ ಶಕ್ಯವಿದ್ದಲ್ಲೆಲ್ಲ ಶಕ್ಯವಿದ್ದರೀತಿಯಿಂದ ಒಮ್ಮೆಲೆ ಉಪ್ಪಿನ ಕಟ್ಟಳೆಯನ್ನು ಮುರಿಯಲು ಪ್ರಾರಂಭ ಮಾಡಿರಿ. ಉಪ್ಪಿನ ಕಟ್ಟಳೆಯು ಆಯುಷ್ಯವು ಸಮೀಪಬಂದಿದೆಂಬುದು ನನಗೆ ಈಗ ನಿಚ್ಚಳವಾಗಿ ಕಾಣುತ್ತಿದೆ. ಇನ್ನು ತಿಂಗಳೊಪ್ಪತ್ತಿನ ಅವಧಿಯಲ್ಲಿಯೇ ಸರಕಾರವು ಅದನ್ನು ತಿರುಗಿ ತೆಗೆದುಕೊಳ್ಳಬೇಕಾಗುವದು ನಿಶ್ಚಯವೆಂದು ಹೇಳಿದರು.

### ಬೆಂಗಾಲವು ಸತ್ಯಾಗ್ರಹಕ್ಕೆ ಸಾಗಿತು.

ಬೆಂಗಾಲ ಪ್ರಾಂತದ ಸ್ವಯಂಸೇವಕರು ನಿನ್ನೆ ಅತ್ಯಂತ ಉತ್ಸಾಹಭರಿತ ವಾತಾವರಣದಲ್ಲಿ ಉಪ್ಪಿನ ಕಟ್ಟಳೆಯನ್ನು ಮುರಿಯಲು ಕೂಚ ಮಾಡಲು ಪ್ರಾರಂಭಿಸಿದರು. ಇದೇ ಬೆಂಗಾಲದಿಂದ ಹೊರಟ ಕಾಯಿದೇ ಭಂಗದ ಪ್ರಥಮ ಪಥಕವು. ೩೨ ಸತ್ಯಾಗ್ರಹಿಗಳಿಂದ ಕೂಡಿದ ಈ ಪಥಕವನ್ನು ಡಾ॥ ಸುರೇಶ ಬ್ಯಾನರ್ಜಿ ಇವರ ನಾಯಕತ್ವದ ಕೆಳಗೆ ಕೂಚು (ಮಾರ್ಚ) ಮಾಡಿಸುತ್ತ, ಹೋಗಿ ಕೊಂಬಾಯಿ ಎಂಬ ಗ್ರಾಮದಲ್ಲಿ ಪಾಳೆಯ ಹಾಕುತ್ತಿರುವರು. ಹಾದಿಯಲ್ಲಿ ಹತ್ತುವ ಹಳ್ಳಿಗಳಲ್ಲಿ ಪ್ರಸಾರಕಾರ್ಯವನ್ನು ನಡೆಸುತ್ತಲೇ ಮುಂದೆ ಮುಂದೆ ಸಾಗುವದೆಂದು ಗೊತ್ತುಮಾಡಿಕೊಂಡಿದ್ದಾರೆ.

### ಸೂರತ ಜಿಲ್ಲೆಯ ಸ್ವಾಗತದ ಪ್ರಕಾರವು.

ಸೂರತ ಜಿಲ್ಲೆಯೊಳಗೆ ನಾಳೆ ನಾಡದು ಗಾಂಧಿಯವರು ಕಾಲಿಡತಕ್ಕವರು. ಅವರ ಆಗಮನವನ್ನು ಹಾರೈಸುತ್ತಿರುವ ಸೂರತ ಜಿಲ್ಲೆಯ ಜನರು ಮಹಾತ್ಮರಿಗೆ ಪ್ರಿಯವಾದ ಮಾರ್ಗಗಳಿಂದಲೇ ಅವರ ಸ್ವಾಗತಕಾರ್ಯವನ್ನು ಏರ್ಪಡಿಸಹತ್ತಿದ್ದಾರೆ. ೫೦೦ ಸ್ವಯಂಸೇವಕರು ತಮ್ಮ ತಮ್ಮ ಸಂಪತ್ತಿಯ ಆಶೆಯನ್ನೆಲ್ಲ ತೊರೆದು ಮಹಾತ್ಮರನ್ನು ಹಿಂಬಾಲಿಸಲು ಸಿದ್ಧರಾಗಿ ನಿಂತಿದ್ದಾರೆ. ಸೂರತ ಜಿಲ್ಲೆಯೊಳಗಿನ ಗ್ರಾಮಸ್ಥರು, ಹಳ್ಳಿಗಳ ಪಟೇಲರು ತಮ್ಮ ಚಾಕರಿಯನ್ನು ಬಿಟ್ಟುಕೊಟ್ಟು, ಬ್ರಿಟಿಶರ ರಾಜ್ಯಕ್ಕೆ ಬೆನ್ನು ತಿರುಗಿಸುತ್ತಿದ್ದಾರೆ.

ಬಾರ್ಡೋಲಿ ತಾಲೂಕ ಇರುವದು ಇದೇ ಜಿಲ್ಲೆಯಲ್ಲಿ. ಅದರ ಸಿಂಹಗಳು ಕೇಳದೆಯೇ ಅವರ ಅಧಿಕಾರಿಗಳಿಗೆ ಉಳಿದ ತಾಲೂಕುಗಳು ಜಿಲ್ಲೆಯ ಪ್ರತಿಯೊಂದು ಗ್ರಾಮದಿಂದಲು ೨೦೦ ೩೦೦ ಪ್ರಮಾಣ ಸ್ವಯಂಸೇವಕರಾಗಲು ಸಿದ್ಧರಾಗಿದ್ದಾರೆ.

---

### ಕರ್ನಾಟಕದ ಸಿದ್ಧತೆಗೆ ಪರಿಗೆ ಕೊರತೆಯಿಲ್ಲ.
### ಡಾ. ಹರ್ಡೀಕರರು ಬಾಗು ದೊಡ್ಡ ಶೂರರು ಅಂತೆ
### ಅಂಕೋಲೆಯೆ ನಮ್ಮ ರಣಕ್ಷೇತ್ರ.

(ನಮ್ಮ ಸ್ವಂತ ಖಾಸಗಿ ವರದಿಗಾರರಿಂದ)

ಕರ್ನಾಟಕದ ಸತ್ಯಾಗ್ರಹ ಕಾರ್ಯಕರ್ತರು ಈ ಹೊತ್ತು ಹುಬ್ಬಳ್ಳಿಯಲ್ಲಿ ಕೂಡಿಕೊಂಡಿದ್ದರು. ನಿನ್ನೆ ಡಾ॥ ಹರ್ಡೀಕರರ ಪ್ರಾಮುಖ್ಯದಲ್ಲಿ ಅವರ ಸಭೆಯು ನಡೆದಿತ್ತು. ಡಾಕ್ಟರರು ಆ ಸಭೆಯಲ್ಲಿ ತಾವು ಗುಜರಾತದಲ್ಲಿ ನೋಡಿಬಂದ ಜನರ ಅಪೂರ್ವವಾದ ಉತ್ಸಾಹವನ್ನೂ ಅವರ ಮನೋಧೈರ್ಯವನ್ನೂ ವರ್ಣಿಸಿದರು. ಮಹಾತ್ಮರು ತಾವು ಕೇಳಿದ ಕಡೆಗಳಲ್ಲಿ ಈ ಉಪ್ಪಿನ ಕಟ್ಟಳೆ ಸಂಬಂಧದ ಅನೇಕ ವಿಷಯಗಳನ್ನು ತಿಳಿಸಿದರು. (ಸರಕಾರದ ಕಾಯಿದೆಗಳನ್ನು ಮುರಿಯುವದೆ ನನ್ನ ಧರ್ಮವಾಗಿದೆಂದು ಹೇಳಿ) ಕರ್ನಾಟಕದಲ್ಲಿಯೇ ಶೀಘ್ರದಲ್ಲಿಯೇ ಸತ್ಯಾಗ್ರಹವನ್ನು ಪ್ರಾರಂಭ ಮಾಡಬೇಕೆಂದು ಜಾಹೀರಮಾಡಿದರು. ಕರ್ನಾಟಕದ ಇತಿಹಾಸವು ಅತ್ಯಂತ ವೀರರಸಪೂರ್ಣವಾದ್ದು ಕನ್ನಡಿಗರೆಲ್ಲ ಆ ವೀರವೃತ್ತಿಯನ್ನು ಮತ್ತೊಮ್ಮೆ ಪ್ರದರ್ಶಿಸುವ ಸಮಯವು ಬಂದಿದೆ. ಈಗ ನಾವು ಅದನ್ನು ಮಾಡಿಸಿದಲ್ಲಿ ನಮ್ಮ ಕರ್ನಾಟಕದ ಕೀರ್ತಿ ಉಳಿಯುವಂತಿಲ್ಲೆಂದು ಹೇಳಿದರೂ ನಾನು ಪ್ಲೇಗ ಬೇನೆಗಿಂತಲೂ ಹೆಚ್ಚಿನ ಪಿಡುಗು ಅಂತ ಹಾರಿದು ಅಂತೆ ನಿಮ್ಮನ್ನೆಲ್ಲ ಕಟ್ಟಿಕೊಂಡು ಸಮುದ್ರಕ್ಕೆ ಹೋಗಿ ಬರಿಮಾಡಿಯು ಬೇಕೆನ್ನುತ್ತೇನೆ. ಅಲ್ಲಿಯವರೆಗೆ ಈ ಪಿಡುಗು ತಪ್ಪದ್ದಲ್ಲ. ನನ್ನ ಪ್ಲೇಗು ಹುಡುಗರಿಗೆ ಬಲುಬೇಗ ಬರುವದೆಂತೆ ಹೀಗೆ ಪ್ಲೇಗಬಂದ ಹುಡುಗರ ಸಂಖ್ಯೆ ಹೆಚ್ಚು ಆದಷ್ಟು ನನಗೆ ಸಂತೋಷ. ಈ ಕ್ಷಣಕ್ಕೆಯೊದರೂ ಈ ನಂತ ಪಿಡುಗು ಬಡಿದುಕೊಂಡಿದ್ದವರು ಮುಂದೆ ಬನ್ನಿ ಅವರಿಗೆ ಸ್ಥಾನ ವೀರಸ್ವರ್ಗ

ದಾರಿಯನ್ನು ತೋರಿಸುತ್ತೇನೆ. ಇವರು ತಮ್ಮ ಭಾಷಣದಿಂದ ಹುಬ್ಬಳ್ಳಿಯನ್ನೆಲ್ಲ ಕೊಡೆದೆಬ್ಬಿಸಿರುವರು. ಇಂದಿನ ಕಮಿಟಿಯಲ್ಲಿ ಬಹಳವಾಗಿ ಅಂಕೋಲೆಯನ್ನೇ ರಣಕ್ಷೇತ್ರವನ್ನಾಗಿ ಆರಿಸಿದರು. ೨೦೦ ಸ್ವಯಂಸೇವಕರು ಈಗಾಗಲೇ ಹೆಸರು ಕೊಟ್ಟಿರುವರು

---

## ಆಂಧ್ರ ದೇಶದ ಸಿದ್ಧತೆ

ಆಂಧ್ರದೇಶದ ಸತ್ಯಾಗ್ರಹ ಕಮಿಟಿಯವರು ನಾಳೆ ಗುಂಟೂರದಲ್ಲಿ ಕಲೆತು ತಾವು ಈ ಉಪ್ಪಿನ ಕಾಯಿದೆಭಂಗವನ್ನು ಯಾವ ಸ್ಥಳದಲ್ಲಿ ಮಾಡಬೇಕೆಂಬುದನ್ನು ನಿರ್ಣಯಿಸುವರಂತೆ. ಆಲ್ಲಿಂದ ೫೦ ಸ್ವಯಂಸೇವಕರುಳ್ಳ ಮೊದಲ ತಂಡವು ಕಾಯಿದೆ ಭಂಗಕ್ಕಾಗಿ ಕೃಷ್ಣಾಜಿಲ್ಲೆಯ ಬಂದರಿಗೆ ಸಾಗಲಿದ್ದಾರೆ.

---

# 'ಕನ್ನಡಿಗ'ನ ನಿತ್ಯ ಸಂಚಿಕೆ!

ಸ್ವಾತಂತ್ರ್ಯ ಸಂಗ್ರಾಮದ ಸದ್ದು ಸರ್ವದಿಕ್ಕುಗಳಲ್ಲಿಯೂ ಕೇಳುತ್ತಲಿರುವದರಿಂದಲೂ, ಸತ್ಯಾಗ್ರಹದ ಜಯಭೇರಿಯ ಸಂಗತಿಗಳನ್ನು ತಿಳಿದುಕೊಳ್ಳಲು ಜನಸಾಮಾನ್ಯರು ಸಹ ಬಹು ಆತುರರಾಗಿರುವದರಿಂದಲೂ, ಜನರ ಈ ಆತುರತೆಯನ್ನು ತೃಪ್ತಿಪಡಿಸುವದಕ್ಕಾಗಿ, ನಾವು 'ಕನ್ನಡಿಗ'ನ ನಿತ್ಯ ಸಂಚಿಕೆಯನ್ನು ಹೊರಡಿಸಬೇಕೆಂಬ ನಿಶ್ಚಯಿಸಿದ ಪ್ರಕಾರ ಫಾಲ್ಗುಣ ಬಹುಳ ೮ ತಾ॥ ೨೨-೩-೩೦ ಶನಿವಾರದಿಂದಲೇ ಪ್ರಾರಂಭಿಸಿದ್ದೇವೆ.

ಸಧ್ಯದಲ್ಲಿ ಮುಂಬೈಯಿಂದ ಬರುವ ಇಂಗ್ಲೀಷ ಪತ್ರಿಕೆಗಳ ಆಧಾರಕ್ಕೆ ನಾವು ಕಾಯುವದಿಲ್ಲವಾಗಿ, ಅಲ್ಲಿಂದ ನಮ್ಮ ಸ್ವಂತ ಪ್ರತಿನಿಧಿಗಳ ತಂತಿಗಳನ್ನೂ, ಮುಖ್ಯವಿಷಯಗಳ ಬಗ್ಗೆ ತರಿಸುವೆವು. ಇದಕ್ಕೆ ಜನರ ಪ್ರೋತ್ಸಾಹನವು ದೊರೆತು, ಸುಮಾರು ದಿನಾಲು ಎರಡು ಸಾವಿರ ಪ್ರತಿಗಳು ಖರ್ಚಾಗತೊಡಗಿದಾಕ್ಷಣವೇ, ನಾವು ಸ್ವತಂತ್ರವಾಗಿ "ಫ್ರೀಪ್ರೆಸ್" "ಅಸೋಸಿಯೇಟೆಡ್ ಪ್ರೆಸ್"ಗಳ ತಂತಿಗಳನ್ನು ಪೂರೈಸಿಕೊಡುವೆವು

ನಿತ್ಯಪತ್ರಿಕೆಯ ಆಕಾರವು 'ಕನ್ನಡಿಗ'ನ ಈಗಿನ ಆಕಾರದಷ್ಟೇ ಆಗುವದು. ಪುಟಗಳು ನಾಲ್ಕು. ಸಂಚಿಕೆಯೊಂದಕ್ಕೆ ಬೆಲೆ ಮೂರು ಕಾಸು ಮಾತ್ರ. ಗದಗು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಾಪುರ, ಬಳ್ಳಾರಿ ರಾಯಚೂರ ಮುಂತಾದ ಸ್ಥಳಗಳಿಗೆ ಪಾರ್ಸಲುಗಳನ್ನು ಕಳಿಸಿ ಏಜಂಟರ ಮುಖಾಂತರ ಸಂಚಿಕೆಗಳು ಮಾರಲ್ಪಡುವವು. ಈಗ ಮೋಟಾರುಗಳು ಎಲ್ಲೆಡೆಗೂ ಇರುವದರಿಂದ ಅಲ್ಲಲ್ಲಿಯ ಕೆಲವು ಮೋಟಾರುಗಳ ಏಜಂಟರಿಗೆ ನಮ್ಮ ಪತ್ರಿಕೆಯ ಏಜನ್ಸಿಯನ್ನೂ ಕೊಟ್ಟಿದೆ. ಎಲ್ಲಿಲ್ಲಿ ಕೊಟ್ಟಿಲ್ಲವೋ, ಅಲ್ಲಿಯವರು ಬೇಗನೆ ಪತ್ರ ಬರೆದುಕೊಳ್ಳಬೇಕು. ತಮ್ಮ ತಮ್ಮ ಮೋಟಾರುಗಳಿಂದ ಪಾರ್ಸಲುಗಳನ್ನು ತರಿಸಿಕೊಳ್ಳುವ ವ್ಯವಸ್ಥೆಯನ್ನು ಅಲ್ಲಲ್ಲಿಯ ಮೋಟಾರುಗಳ ಟಿಕೇಟ ಏಜಂಟರು ತಾವೇ ಮಾಡಿಕೊಳ್ಳತಕ್ಕದ್ದು. ಪೋಸ್ಟಿನಿಂದ ಕಳಿಸುವ ವ್ಯವಸ್ಥೆಯನ್ನು ಸಧ್ಯದಲ್ಲಿ ಮಾಡುವ ಉದ್ದೇಶವಿರುವದಿಲ್ಲ. ನಿತ್ಯ ಪತ್ರಿಕೆಯ ಕಾರ್ಯಂಗಳು ನಡೆಯುವಂಥ ಸುಪ್ರಸಂಗವು ಈ ಕನ್ನಡ ನಾಡಿನಲ್ಲಿ ಬಂದದ್ದೇ ಆದರೆ ಹಾಗೆ ಪ್ರಯೋಗ ಮಾಡಬಹುದು. ತಿಂಗಳ ಗಟ್ಲೆ ತೆಗೆದುಕೊಳ್ಳುವವರು ಸಹ ಸಧ್ಯದಲ್ಲಿ ದಿನಕ್ಕೆ ಸಂಚಿಕೆಯೊಂದಕ್ಕೆ ಕಾಲು ಆಣೆಯಂತೆ ಲೆಕ್ಕಮಾಡಿ ಏಜಂಟರಿಗೆ ಸಲ್ಲಿಸಬೇಕು.

ಏಜಂಟರಾಗಲಿಚ್ಛಿಸುವವರು ಕೂಡಲೇ ಬರೆದುಕೊಳ್ಳಬೇಕು. ಸಣ್ಣ ಊರವರು ಕನಿಷ್ಟ ಮೂರು ರೂಪಾಯಿಗಳನ್ನೂ, ಪಟ್ಟಣದವರು ಕನಿಷ್ಟ ಹತ್ತು ರೂಪಾಯಿಗಳನ್ನೂ ಠೇವು ಕಳಿಸಬೇಕು. ಸ್ಥಾನಿಕ ಕಾಂಗ್ರೆಸ ಕಮಿಟಿಯ, ಅಥವಾ ಮುಖ್ಯ ಸದ್ಗೃಹಸ್ಥರ ಒಂದು ಸರ್ಟಿಫಿಕೇಟನ್ನಾದರೂ ಪ್ರಮಾಣಕ್ಕಾಗಿ ಅರ್ಜಿಯ ಸಂಗಡ ಕಳಿಸತಕ್ಕದ್ದು. ಪ್ರತಿವಾರದಲ್ಲಿ ಲೆಕ್ಕವನ್ನೂ ಹಣವನ್ನೂ, ಮಾರದೇ ಇದ್ದ ಸಂಚಿಕೆಗಳನ್ನೂ ತಿರುಗಿ ಕಳಿಸತಕ್ಕದ್ದು. ನೂರಕ್ಕೆ ೨೫ ರೂಪಾಯಿಗಳಂತೆ ಏಜಂಟರಿಗೆ ಕಮೀಶನ್ ದೊರೆಯುವದು. ಮೋಟಾರುಗಳ ತಿಕೇಟ ಏಜಂಟರುಗಳು ಸಣ್ಣ ಊರುಗಳಲ್ಲಿ ದಿನಾಲು ೧೦ ೧೫ ಪ್ರತಿಗಳನ್ನು ಮಾರಿಕೊಂಡರೂ ಅವರಿಗೆ ಪ್ರತಿ ತಿಂಗಳು ೬-೭ ರೂಪಾಯಿ ಉತ್ಪನ್ನವೇ ದೊರೆಯುವವು. ಇನ್ನು ಪಟ್ಟಣಗಳಲ್ಲಿ ನೂರಿನ್ನೂರು ಪ್ರತಿಗಳನ್ನು ಮಾರುವ ಏಜಂಟರಿಗೆ ತಿಂಗಳೊಂದಕ್ಕೆ ೧೦ ರೂಪಾಯಿಗಳಿಂದ ೫೦ರ ವರೆಗೆ ಹಣ ಬೀಳುವದು. ಮೇಲಿನ ಕೆಲವು ದೊಡ್ಡ ಪಟ್ಟಣಗಳಿಗೆ ಸಹ ಇಂಗ್ಲೀಷ ಪತ್ರಿಕೆಗಳಿಗಿಂತಲೂ, ಮೊದಲು ಮಹತ್ವದ ಸುದ್ದಿಗಳು ನಮ್ಮ ಪತ್ರಿಕೆಯಿಂದ ತಿಳಿಯುವವು. ಹಾಗೆ ಏಜಂಟರು ಕೂಡ ಪ್ರಕಟಿಸ್ಸ ಸುದ್ದಿಗಳನ್ನು ಬೀದಿಯಲ್ಲಿ ಓದುತ್ತ ತಿರುಗಿಯಾಗಲಿ, ಸ್ಥಾನಿಕ ಮುಖ್ಯ ಮನುಷ್ಯರನ್ನು, ಭೆಟ್ಟಿಯಾಗಿ ಅವರ ಹೆಸರನ್ನು ನೋಂದಾಯಿಸಿಕೊಂಡಾಗಲಿ, ಪ್ರಯತ್ನಿಸಿದರೆ ಬಹಳ ಪ್ರತಿಗಳು ಹೆಚ್ಚಾಗಿ ಖಪು ಆಗುವ ಸಂಭವವು, ಆದ್ದರಿಂದ ಇಚ್ಛೆಯುಳ್ಳವರು ಕೂಡಲೇ ಏಜಂಟರಾಗಲು ಬರೆದುಕೊಳ್ಳತಕ್ಕದ್ದು.

ಜಾಹೀರಾತಿನ ದರ:— ಕಾಯಂ ಜಾಹೀರಾತುಗಳಿಗೆ ಒಂದು ಕಾಲಮ್ಮಿನ ಒಂದು ಇಂಚಿನ ಪ್ರತಿಯೊಂದು ಸಂಚಿಕೆಗೆ ನಾಲ್ಕಾಣೆ ಹಂಗಾಮೀ ಜಾಹೀರಾತುಗಳಿಗೆ ಐದು ಆಣೆ

ನಿತ್ಯ ಪತ್ರಿಕೆಯ ವ್ಯವಸ್ಥಾಪಕರು
"ಕನ್ನಡಿಗನ" ಕಾರ್ಯಾಲಯ ಬಾಗಲಕೋಟೆ.

---

ಈ ಪತ್ರಿಕೆಯು ಮಂಗಳವೇಢ ರಾಮಚಂದ್ರರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ, ಅವರಿಂದ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರಿ. ನಂ. ಬಿ ೧೯೪೭. ಬೆಲೆ ೦—೦—೩

ಜಯಕರ್ನಾಟಕ

ನಿತ್ಯಪತ್ರಿಕೆಯು.

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ಸೋಮವಾರ ರೌದ್ರಿ ಚೈತ್ರ ಶುದ್ಧ ೧ ಶಕ ೧೮೪೨ ತಾ ೨೨—೩—೨೦ ಸಂಚಿಕೆ ೯

## ಸಾಮೋದರಂ ಭೂಮಿ.

ನಿನ್ನ ದೇಹವು ನಿನ್ನ ವೀರಶಾಸನವಾಗಿ ।
ನಿನ್ನನ್ನು ಕಲ್ಲಿಗೆ ನಿಲ್ಲಿಸಲು ಸಿದ್ಧವಿದೆ ।
ಹಾಳಾದ ನಿನ್ನ ಗಂಧರ್ವನು ಬೀರಬಹ ಗಂಧವಹವೆಂದು ತಿಳಿಯೇ ॥

## ವಿಜಾಪುರದ ನವಕರ್ನಾಟಕ.

ಮಹಾತ್ಮಾ ಗಾಂಧಿಯವರ ಕಾಯಿದೆ ಭಂಗ ಚಳವಳಿಯೊಳಗಿನ ಪ್ರಥಮ ಕಾರ್ಯಕ್ರಮವಾದ ಉಪ್ಪಿನ ಕಟ್ಟಳೆಯನ್ನು ಮುರಿಯುವದಕ್ಕಾಗಿ ಹೂಡಿದ ಸತ್ಯಾಗ್ರಹದ ದಂಡಯಾತ್ರೆಯ ದಿವಸವನ್ನು ಕರ್ನಾಟಕ ಪತ್ರಿಕೆಗಳೆಲ್ಲ ಬಹಳ ಉತ್ಸಾಹದಿಂದ ಕೇಳುವ ಆದರಲ್ಲಿಯೇ ತಲ್ಲೀನತೆಯನ್ನು ತೋರಿಸುತ್ತಲೂ ಸಂಭ್ರಮಿಸುತ್ತಿರುವಾಗ ವಿಜಾಪುರದ "ನವಕರ್ನಾಟಕ"ವೊಂದೇ ವಿಶೇಷವಾಗಿ ಸದ್ದನ್ನು ಮೀರಿ ಮಾಡಿಕೊಂಡು ಹಿಂದೀಯರ ಈ ಚಳವಳಿಯ ನಿರ್ಧಾರವು ತನಗೆ ಕಣ್ಣಿಗೆ ಬೀಳಲಿಲ್ಲವೆಂಬಂತೆ ಬರೆಯುತ್ತಿರುವದನ್ನು ನೋಡಿ ನಮಗೆ ಬೇಸರ ಆಶ್ಚರ್ಯ ಉಂಟಾಗಿದೆ. "ನಮ್ಮ ಎಣಿಕೆಯು ಕಾಲವು ಸಮೀಪಿಸಿತು; ನಮ್ಮ ಭೂಮಿಯ ದಾರಿದ್ರ್ಯದ ದೈನ್ಯವು ಇನ್ನು ದೂರಾಗುವದು; ರಾಷ್ಟ್ರದ ಸ್ವಾತಂತ್ರ್ಯ ಲಕ್ಷ್ಮಿಯು ಕರೆಬರುವದು ನಾವಿನ್ನು ತೀವ್ರವಾಗಿ ನಮ್ಮ ಬಟ್ಟೆಗಳನ್ನು ತೊಡಕೊಳ್ಳುವವು" ಎಂಬುವ ಮೊದಲಾದ ವಿಚಾರಗಳ ಸಫಲತೆಯನ್ನು ಈ ಹೊತ್ತಿನ ಸತ್ಯಾಗ್ರಹ ಚಳವಳಿಯಲ್ಲಿ ಎಲ್ಲ ಕನ್ನಡ ಪತ್ರಿಕೆಗಳು ಕಾಣುತ್ತಿರುವಾಗ್ಗೆ, ನವಕರ್ನಾಟಕವು ಇದಲ್ಲದರಲ್ಲಿ ಏನೋ ಅಪಸ್ವರವನ್ನು ಕಂಡು ದೀರ್ಘಾಲೋಚನೆಯ ಸೋಗು ಹಾಕಿ ಉದ್ಗಾರ ತೆಗೆಯುತ್ತಿರುವ ದೇಕೆ ಎಂಬುದು ನಮಗೆ ತಿಳಿಯದಾಗಿದೆ. ಮಹಾತ್ಮಾ ಗಾಂಧಿಯವರು ಪ್ರವರ್ತಿಸಿದ ಈ ಚಳವಳಿಯನ್ನು ಎಲ್ಲ ಪತ್ರಿಕೆಗಳು ತಮ್ಮ ಜಾತಿ ನೀತಿಗಳನ್ನು ಮರೆತು, ಅಭಿಮಾನದಿಂದ ಅವರ ಯಶಸ್ಸಿಗಾಗಿ ಪ್ರೋತ್ಸಾಹನವನ್ನು ಕೊಡುತ್ತಿರುವಾಗ ನವಕರ್ನಾಟಕವು ಈ ಚಳವಳಿಯ ಬಗ್ಗೆ ಆರಂಭದಿಂದಲೂ ಸಂಶಯವೃತ್ತಿಯನ್ನೇ ತಾಳಿ, ಕರ್ನಾಟಕದಲ್ಲಿಯೂ ದಿನದಿನಕ್ಕೆ ಹೆಚ್ಚುತ್ತಿರುವ ಸತ್ಯಾಗ್ರಹದ ಬಗ್ಗೆ ಏನನ್ನೂ ಕೇಳಿಯೂ ಕೇಳದವರಂತೆ ವರ್ತಿಸುತ್ತಿರುವದು ನಮಗೆ ಸ್ವಲ್ಪವೂ ಸಮಂಜಸ ತೋರಲೊಲ್ಲದು. ನವಕರ್ನಾಟಕದ ವಾಚಕ ವರ್ಗವೆಲ್ಲ ತಮ್ಮ ಪತ್ರಿಕೆಯ ಮೂಕ ಭಾವಕ್ಕೆ ಬೇಸತ್ತಿರುವದು ಸಹಜವಿದೆ. ಎಲ್ಲರಂತೆ ಅವರ ಹೃದಯಗಳಲ್ಲಿಯೂ ಪ್ರೋತ್ಸಾಹವು ಕುಣಿಯುತ್ತಿರುವೀ ಸಮಯದಲ್ಲಿ 'ನವಕರ್ನಾಟಕ' ದ ಪುಟಗಳು ಅವರಿಗೆ ಅದಿದ ತೊಂಡದಂತೆ ನಿಸ್ತೇಜವಾಗಿಯೂ ನಿರುತ್ಸಾಹಕವಾಗಿಯೂ ತೋರುತ್ತಿರುವವೆನ್ನುವದನ್ನು ನಾವು ನಮ್ಮ ಅನುಭವದಿಂದ ಹೇಳಬಲ್ಲೆವು. ಕರ್ನಾಟಕದ ಜನತೆಯಂತೂ ಮಹಾತ್ಮರ ಈ ಕಾರ್ಯಕ್ರಮದಲ್ಲಿ ಅಚಲವಾದ ಶ್ರದ್ಧೆಯುಳ್ಳದಾಗಿದೆ. ಇದು ಕರ್ನಾಟಕದ ಶಿಲ್ಪ ಚಾರಿತ್ರ್ಯಕ್ಕೆ ಅನುರೂಪವೇ ಆಗಿದೆ. ಕರ್ನಾಟಕಕ್ಕೆ ಭಾಷಣ ಮಾಡುವ ಕಲೆಯು ಅಷ್ಟೊಂದು ಗೊತ್ತಿಲ್ಲ. ಇದರಂತೆ ಆದು ಕಾರಸ್ಥಾನದ ಕುಟಿಲ ರೀತಿಯನ್ನೂ ಅರಿಯದು. ವೀರಭೂಮಿಯಾದ ಕರ್ನಾಟಕವು ಯಾವಾಗಲೂ ಬಯಸುತ್ತಿರುವದು ಸರಳ ಮತ್ತು ವೀರವೃತ್ತಿ. ಸಾಧ್ಯವದಿಂದ ಆರ್ಥ ಸಂಪಾದ ಮತ್ತು ಹಂಕ್ರಮದ ಕಾರ್ಯಕ್ರಮವೇ ಅದಕ್ಕೆ ದೊರೆತರೆ ವಿಶೇಷವಾಗಿದಲ್ಲ ನಾಡಿಗರು ಉತ್ಸಾಹಪಡುವ ಈ ಕಾರ್ಯಕ್ರಮದ ದಕ್ಷಿಯೇ ನಮ್ಮ ತತಿ ಸಾಹಸಗಳ ಸೂರಿಯಾತ ಬೆಳಕಿನ ಸತ್ಯತೆ ಆಶ್ಚರ್ಯವಿಲ್ಲ. ಇದು ನಮ್ಮ ಪ್ರಾಂತದ ಸ್ವಭಾವಗುಣಕ್ಕನುಗುಣವಾಗಿದ್ದುದರಿಂದ ಈ ಚಳವಳಿಯಲ್ಲಿ ಜ್ಯೋತಿಯ ತೆರನ ಹೊಸವಿಚಾರ ಕಿಡಿ ಹೊಮ್ಮುತ್ತಿವೆ. ಅಂತೆಯೇ 'ನಾನು ಬ್ರಾಹ್ಮಣ ನೀನು—ಬ್ರಾಹ್ಮಣೇತರ' ಎಂಬುದಾದ ಪರಿಜ್ಞಾನವನ್ನು ಬಿಟ್ಟು ಎಲ್ಲ ಸತ್ಯಾಗ್ರಹರು ಈ ಚಳವಳಿಯನ್ನು ಅತ್ಯಂತ ಉತ್ಸಾಹದಿಂದ ಆದರಿಸಿ ಕರ್ನಾಟಕದ ತರುಣರಾಗಿ ತಮ್ಮ ವೀರವಾದ ತಂಗರಕ್ಕೆ ಸಿದ್ಧರಾಗಲು ಸಾರುತ್ತಿರುವರು. ಈ ಕರ್ನಾಟಕದ ಪತ್ರಿಕಾ ಪ್ರಪಂಚವೆಲ್ಲ ಏಕಕಂಠದಿಂದ ಸ್ವತಂತ್ರ ಭಾರತದ ಕಹಳೆಯನ್ನು ಊದುತ್ತಿರುವಾಗ 'ನವಕರ್ನಾಟಕ' ಅದನ್ನು ವಿಪ್ಲವ ತಗೆಯುವದಾಗಲಿ ಈಗಿನಂತೆ ಮೌನವನ್ನವಲಂಬಿಸುವದಾಗಲಿ ಸರ್ವಥಾ ಗರ್ಹಣೀಯವೇ ಸರಿ. ಇನ್ನು ಆಲೋಚನೆಯು ಸಾಕು! "ಎಲ್ಲ ಪತ್ರಿಕೆಗಳು ಒಮ್ಮತದಿಂದ ಕರ್ನಾಟಕದ ತರುಣರನ್ನು ಧರ್ಮಯುದ್ಧಕ್ಕೆ ಬರಬೇಕೆಂದು ಕರೆಯುತ್ತಿರುವಾಗ ಕರೆಗಳು ಹುರಿದುಂಬಿಸಲು ನಿಂತಿರುವಾಗ 'ನವಕರ್ನಾಟಕ'ವು ಅನ್ಯಮಾನಸಿಕತ್ತೆ ಹಿಂದಕ್ಕೆ ಸ್ರೆಂದು ಈ ಸ್ವಾತಂತ್ರ್ಯಯುದ್ಧಕ್ಕೆ ಇತಿಹಾಸಕಾರರು ಬರೆಯದೆ ದಾರಿಯ ಮೇಲೆ 'ನವಕರ್ನಾಟಕ'ಕ್ಕೆ ಎಷ್ಟೊಂದು ಅಪಕೀರ್ತಿ!! ನವಕರ್ನಾಟಕವು ಇನ್ನೂ ಕೆಲಸಿಲ ಮಾರ್ಗವನ್ನು ವಿಚಾರಿಸುತ್ತಿರುವದಾಗಿ ತೋರುತ್ತದೆ. ಅವುಗಳ ಸಾಧ್ಯಾಸಾಧ್ಯತೆಯ ಹೀನ ನಿಸ್ವಾರ್ಥದ ಬಗ್ಗೆ ಮೊನ್ನೆ ನವಕರ್ನಾಟಕವೇ ವಿಲಾಪ ಮಾಡಿತು. ವೀರ ವಿಚಾರವುಳ್ಳವರು ಬ್ರಿಟಿಶರ ಶಾಸನ ಸಭೆಗಳ ತ್ಯಾಜ್ಯತೆಯ ಎಂದೋ ನಿಶ್ಚಯಿಸಿ ಈ ವೀರ ಮಾರ್ಗವನ್ನು ಅವಲಂಬಿಸಿದ್ದು ನವಕರ್ನಾಟಕಕ್ಕೇನು ಗೊತ್ತಿಲ್ಲವಂತಲ್ಲ. ಇನ್ನು ಮೇಲೆ ಅವುಗಳಬಗ್ಗೆ ಹಲುಬಿದ ಪ್ರಯೋಜನವಿಲ್ಲ. ಹೆಚ್ಚಿಗೇನು ನವಕರ್ನಾಟಕದಲ್ಲಿಯೂ ಮಹಾತ್ಮರ ವೀರ ಪ್ರಭಾವವು ಈಗಾದರೂ ಒಡಮೂಡಲಿ, ಎಂಬುದೇ ನಮ್ಮ ಹಾರೈಕೆ.

## ತರುಣರು ವಿಶಾಲ ಸಾಹಸಗಳಿಗಾಗಿ ಮುಂದೆ ಬರುವ ಸಮಯವಿದು.

ಮುಂಬಯಿಯಲ್ಲಿ ಮೊನ್ನೆ ಶ್ರೀ. ರಾಜಗೋಪಾಲಾಚಾರಿಯವರು ಕಾಂಗ್ರೆಸ್ ಮಂದಿರದಲ್ಲಿ ಸಾರ್ವಜನಿಕ ಸಭೆಯ ಅಧ್ಯಕ್ಷತೆಯ ಕೆಳಗೆ ಅತ್ಯಂತ ವೀರಾವೇಶದ ಭಾಷಣಮಾಡಿದರು. ಈ ಹೊತ್ತಿನ ತರುಣರ ಭಾಗ್ಯೋದಯದಿಂದ ಇಂಥ ಧರ್ಮಯುದ್ಧದಲ್ಲಿ ಹುಡುಗರೆಲ್ಲ ಕೂಡಿ ಹೋರಾಡುವ ವೀರ ಪ್ರಸಂಗವು ಅವರಿಗೆ ಪ್ರಾಪ್ತವಾಗಿದೆ. ಇಂಥ ಸ್ವಾತಂತ್ರ್ಯ ಯುದ್ಧಗಳು ಬೇಡಿ ಬಗೆದರೂ ಸಿಕ್ಕಲಾರವು. ಇಂಥ ಯುದ್ಧಗಳು ಆಯಾ ದೇಶದ ತರುಣರಿಗೆ ತಮ್ಮ ಜನ್ಮಭೂಮಿಯ ಋಣವನ್ನು ತೀರಿಸಿ ಚ್ಯುತಿಯಿಲ್ಲದ ಸ್ವರ್ಗಸುಖವನ್ನು ಹೊಂದಲು ಸುಲಭವಾದ ಉಪಾಯಗಳಾಗಿವೆ. ಆದರೆ ಇಂಥ ಯುದ್ಧಗಳು ಬಹು ವಿರಳ. ಯಾಕೆಂದರೆ ಪ್ರಜೆಗಳ ಸ್ವಾತಂತ್ರ್ಯಕ್ಕಾಗಿ ಸಂಗ್ರಾಮವನ್ನು ಸಾರಿ ಅದನ್ನು ತೂಗಿಸಿಕೊಂಡು ಹೋಗುವಂಥ ಸಮರ್ಥರು ಜನ್ಮವೆತ್ತುವದೇ ವಿರಳ. ವಾಶಿಂಗಟನ್ನನಂಥ, ನೆಪೋಲಿಯನ್ನನಂಥ, ಕ್ರಾಮವೆಲ್ಲನಂಥ, ಮ್ಯಾಝಿನಿಯಂಥ ವಿಭೂತಿಗಳು ರಾಷ್ಟ್ರದಲ್ಲಿ ಯಾವಾಗಲೂ ಹುಟ್ಟುತ್ತಿರುವದಿಲ್ಲ. ಒಮ್ಮೆ ಇಂಥ ವಿಭೂತಿಗಳು ಹುಟ್ಟಿ ಮರೆಯಾದೆಂದರೆ ಮತ್ತೆ ಅವರ ಸದೃಶರನ್ನು ಕಾಣುವದು ನೂರು ವರ್ಷವೋ, ಸಾವಿರ ವರ್ಷವೋ ಹೇಳಲಿಕ್ಕಾಗದು. ಇವರಂತೆ ಮಹಾತ್ಮಾ ಗಾಂಧಿಯಂಥ ದೈವೀ ವಿಭೂತಿಗಳು ಹಿಂದುಸ್ಥಾನದಲ್ಲಿ ಯಾವಾಗಲೂ ಹುಟ್ಟುತ್ತಿರೆಂದು ತಿಳಿಯಬೇಡಿರಿ. ಗಾಂಧಿಯ ಸದೃಶರನ್ನು ಮತ್ತೆ ಕಾಣಲಿಕ್ಕೆ ಹಿಂದುಸ್ಥಾನಕ್ಕೆ ಸಾವಿರ ವರ್ಷ ಬೇಕಾದೀತು. ಅಲ್ಲಿಯವರೆಗೆ ಇದೇ ದಾಸ್ಯ ಶೃಂಖಲೆಯನ್ನು ಚುಂಬಿಸುತ್ತ ಬ್ರಿಟಿಶ ಸಾಮ್ರಾಜ್ಯದ ತಳವಾರರೂ ಹಳಬರೂ ಕೂಲಿಯವರೂ ಆಗಿ ಜೀವಿಸಬೇಕಾಗುವಂಥ ದುರ್ದೆಶೆಯನ್ನು ನಿಮ್ಮ ಮಾತೃಭೂಮಿಗೆ ಒದಗಿಸತಕ್ಕದ್ದಲ್ಲ. ಗಾಂಧಿಯವರಿಗೆ ಸಹಾಯ ಮಾಡಲು ನೀವು ಕೈಕೊಂಡರೆ ಆ ಕ್ರಾಂತಿಯು ಬರುವದು ನಿಶ್ಚಯ. ಆ ಮೇಲೆ ಐವತ್ತು ವರ್ಷವೂ ಜೀವಿಸಿದರೂ ಜೀವ ಸತ್ತಂತೆಯೇ ಸರಿ. ನಿಮ್ಮ ತಾರುಣ್ಯದ ದಿನಗಳನ್ನು ಈಗ ಕಳೆದುಬಿಟ್ಟರೆ ಉಪಯೋಗವೇನು? ಸ್ವಾತಂತ್ರ್ಯ ಸಂಪಾದನೆಗಾಗಿ ಹಿಂದುಸ್ಥಾನವು ಮಾಡುತ್ತ ಬಂದಿರುವ ಪ್ರಯತ್ನಗಳಲ್ಲಿ ಇದೇ ಕೊನೆಯದಾಗಿರುವದೆಂದು ತಿಳಿಯಿರಿ. ಮಹಾತ್ಮರಂಥ ತಪೋನಿಧಿಗಳು ತಮ್ಮ ತಪಸ್ಸನ್ನೆಲ್ಲ ಇದಕ್ಕೆ ಧಾರೆ ಎರೆಯಲು ಸಿದ್ಧರಾಗಿ ಇನ್ನು ತಮ್ಮ ತಪೋಭೂಮಿಗೆ ತಿರುಗಿ ಹೋಗಲಿಕ್ಕಿಲ್ಲವೆಂದು ನಿಶ್ಚಯದಿಂದ ಹೊರಬಿದ್ದ ಈ ಸಮಯವು ಸಾಮಾನ್ಯವೆಂದು ತಿಳಿಯಬೇಡ. ಅವರ ತಪಃಸಾಮರ್ಥ್ಯಕ್ಕೆ ನಿಮ್ಮ ತಾರುಣ್ಯದ ಸಾಹಸವನ್ನಿಷ್ಟು ಕೂಡಿಸಿ ನೋಡಿರಿ. ಈ ಸಂದರ್ಭದಲ್ಲಿ ಭಾರತದ ತರುಣರು ಏನು ಮಾಡುವರು ಎಂಬುದನ್ನು ಇಡೀ ಜಗತ್ತು ಕಣ್ಣಿಟ್ಟು ನೋಡುತ್ತದೆ. ೬೦ ವರ್ಷದ ಮುದುಕನನ್ನು ಸಮರ ಭೂಮಿಗೆ ನೂಕಿ, ನೀವು ಹಿಂದೆ ನಿಂತು ಚಪ್ಪಾಳೆ ಹೊಡೆಯುವವರಾದರೆ ಮುಂದಿನ ಇತಿಹಾಸವು ನಿಮ್ಮನ್ನು ಎಂಥ ಹೆಸರಿನಿಂದ ಕರೆದೀತು? ತರುಣರೇ ಏಳಿರಿ. ಇಂಥ ಸುಪ್ರಸಂಗ ಸಿಕ್ಕುವದು ಕೇವಲ ಭಾರತದ ಪುಣ್ಯದಿಂದ. ತಿಳಿದು ನಿಮ್ಮ ಕಾರ್ಯ ಸಾಹಸಗಳನ್ನು ತೋರಗೊಡಿರಿ.

# ಕಾಶೀ ಕ್ಷೇತ್ರವೂ ಸತ್ಯಾಗ್ರಹವೂ

ಶ್ರೀ ಶಿವಪೂರ್ಣಾನಂದರ ಅಧ್ಯಕ್ಷತೆಯಲ್ಲಿ ಕೂಡಿದ ಕಾಶೀಪಟ್ಟಣದ ಯುವಕ ಸಂಘವು ೫೦೦ ಸ್ವಯಂಸೇವಕರನ್ನು ಈ ಕಾಯದೇಭಂಗ ಯುದ್ಧಕ್ಕೆ ತಪ್ಪದೆ ಈಗಿಂದೀಗಲೇ ಸಿದ್ಧಪಡಿಸಲೇಬೇಕೆಂದು ನಿಶ್ಚಯಿಸಿದೆ. ಮತ್ತು ಸ್ವಯಂಸೇವಕರಾಗಲಿಕ್ಕೆ ತಂಡ ತಂಡವಾಗಿ ಬರುವ ತರುಣರ ಹೆಸರು ಬರೆದುಕೊಂಡು ವರ್ಗೀಕರಣ ಮಾಡಲು ಒಂದು ಮಂಡಳವನ್ನು ನೇಮಿಸಿರುವರು. ತರುಣರಲ್ಲಿ ಉತ್ಸಾಹವು ಅಪೂರ್ವವಾಗಿದೆ.

## ಸತ್ಯಾಗ್ರಹಿಗಳು ತಕ್ಕೊಳ್ಳಬೇಕಾದ ಶಪಥ ಯಾವದು?

ಇಷ್ಟು ದಿನಗಳವರೆಗೆ ಸ್ವಯಂಸೇವಕರಾಗಲಿಚ್ಛಿಸುವವರು ಸ್ವರಾಜ್ಯ ಪ್ರಾಪ್ತಿಗಾಗಿ ಅಹಿಂಸಾ ಮಾರ್ಗವನ್ನೇ ಅವಲಂಬಿಸುತ್ತೇನೆಂಬ ಶಪಥವಲ್ಲದೆ, ಖಾದಿಯ ಧರಿಸುವ ಬಗ್ಗೆಯೂ ಅಸ್ಪೃಶ್ಯ ನಿವಾರಣೆಯ ಬಗ್ಗೆಯೂ ಬೇರೆ ಶಪಥಗಳನ್ನು ತಕ್ಕೊಳ್ಳಬೇಕಾಗುತ್ತಿತ್ತು. ಆದರೆ ಈಗ ರಾಷ್ಟ್ರದಲ್ಲಿ ಹಬ್ಬುತ್ತಿರುವ ಕಾಯದೆ ಭಂಗದ ಚಳವಳಿಯಲ್ಲಿ ಇತರ ಮತೀಯರೂ ಭಾಗವಹಿಸಲಿಕ್ಕೆ ಅನುಕೂಲವಾಗುವದರಿಂದ ರಾಷ್ಟ್ರದ ಈ ಸ್ವಾತಂತ್ರ್ಯದ ಹೋರಾಟದಲ್ಲಿ ತಮ್ಮ ಶಕ್ತಿ ಉತ್ಸಾಹಗಳನ್ನು ಸಮರ್ಪಿಸಲು ಅವರಿಗೂ ಅವಕಾಶವಿರಬೇಕೆಂದು ಬಯಸಿ ಶಪಥದಲ್ಲಿಯ ಹೆಚ್ಚಿನ ಭಾಗಗಳನ್ನು ತೆಗೆದುಹಾಕಿ ಸದ್ಯಕ್ಕೆ ಅವಶ್ಯವಿರುವ ಅಹಿಂಸಾ ವ್ರತದ ಪಣವೊಂದನ್ನೇ ಇಡುವಲ್ಲಿ ಬಂದಿದೆ. ಹಿಂದೀ ಪೂರ್ಣ ಸ್ವರಾಜ್ಯವೇ ನಮ್ಮ ಧ್ಯೇಯವಾಗಿದ್ದು (ಅದನ್ನು ಸಂಪಾದಿಸಲಿಕ್ಕೆ) ನ್ಯಾಯಶೀಲವಾದ ಅಹಿಂಸಾತ್ಮಕ ಮಾರ್ಗದಿಂದಲೇ ನಾನು ಯತ್ನಿಸುವೆನು. ಈ ಎರಡೆ ಮಾತಿನ ಶಪಥಕ್ಕೆ ಒಪ್ಪಿದರೆ ತೀರಿತು ಅವರಿಗೆ ಈ ಧರ್ಮಯುದ್ಧದಲ್ಲಿ ಭಾಗವಹಿಸಿಕೊಳ್ಳುವ ಭಾಗ್ಯವು ಪ್ರಾಪ್ತವಾಗುವದು.

## ಪುಣೆಯ ಸತ್ಯಾಗ್ರಹ ವೀರರು ರಣರಂಗಕ್ಕೆ ಹೊರಟರು

ಮಹಾರಾಷ್ಟ್ರ ಸತ್ಯಾಗ್ರಹಿ ಪಥಕದ ಮೊದಲನೆ ಪದಾತಿಯು ನಿನ್ನೆ ಪುಣೆಯಿಂದ ರಣರಂಗಕ್ಕೆ ಹೊರಟಿತು. ಆಗ್ಗೆ ಜನರ ಸಂದಣಿಯು ಸತ್ಯಾಗ್ರಹಿಗಳನ್ನು ಯಥಾಯೋಗ್ಯವಾಗಿ ಆದರಿಸಿ ಆಶೀರ್ವದಿಸಿ, ರವಿವಾರದ ಪೇಟೆಯ ರಸ್ತೆಯವರೆಗೆ ಕಳಿಸುತ್ತ ಗದಗಟ್ಟುವಂತೆ ತಮ್ಮ ಜಯಘೋಷದಿಂದ ಬೀಳ್ಕೊಟ್ಟರು. ಅಲ್ಲಿಯೇ ನಿಂತಿರುವ ಲೋಕಮಾನ್ಯರ ಕಲ್ಲ ವಿಗ್ರಹವು ಚೈತನ್ಯಗೊಂಡು ತನ್ನ ಅನುಯಾಯಿಗಳ ಇಂದಿನ ಸಾಹಸವನ್ನು ಕಂಡು ಶಾಬಾಸ್ ಎಂಬ ಶಬ್ದವನ್ನಾಡುತ್ತಿತ್ತು. ಈ ಪದಾತಿಯು ಕಾಲುನಡಿಗೆಯಿಂದಲೇ ಆರಂಭವಾಗಿದ್ದು ಮುಟ್ಟಿನ ಕಾರ್ಯಕ್ರಮವನ್ನಿಟ್ಟುಕೊಂಡಿದೆ.

## ಮುಂಬಯಿಯವರ ಸಮರ ಭೂಮಿ ಯಾವದು?

ಮುಂಬಯಿ ಸತ್ಯಾಗ್ರಹ ಕಮೀಟಿಯವರು ವ್ಹಿಲೆ ಪಾರ್ಲೆದ ಅಂತ್ಯ ಭಾಗವಾಗಿರುವ ಜುಹೂ ಸ್ಥಾನದಲ್ಲಿ ಉಪ್ಪಿನ ಕಟ್ಟಳೆಯನ್ನು ಮುರಿಯಬೇಕೆಂದು ನಿಶ್ಚೈಸಿ ಅಲ್ಲಿ ಅನುಕೂಲವಾದ ಸಿದ್ಧತೆಯನ್ನು ನಡೆಸಿರುವರು. ಮುಂಬಯಿ ಕಾಂಗ್ರೆಸ ಕಮೀಟಿಯು ಉಪ್ಪಿನ ಚೀಲಗಳನ್ನೇ ತಕ್ಕೊಂಡು ಹೋಗಿ ವ್ಹಿಲೆಪಾರ್ಲೆದಲ್ಲಿ ಇಟ್ಟಿದ್ದಾರೆ. ಅಂದರೆ ಸಮರ ಭೂಮಿಯು ಸಮೀಪದಲ್ಲಿಯೇ

ಕಚೇರಿ ನೋಡಾಗುವದರಿಂದ ಕೆಲಸಕ್ಕೆ ಹೆಚ್ಚು ಅನುಕೂಲವಾದೀತು [illegible] ಅಟ್ಟಿಸಿ [illegible] ಮಾಡಿಕೊಂಡಿದ್ದಾರೆ.

## ಶ್ರೀ ಆಯ್. ಪಿ. ಶೆಟ್ಟಿ, ಶಿಂದಗಿಯವರ ಉತ್ಸಾಹದ ಕಾರ್ಯಗಳಿವು

ಜೀ. ಆಯ್. ಪಿ. ಶೆಟ್ಟಿ [illegible] ಲಿಯುವರು [illegible] ಕೂಲಿಯುವರು ಈ ಭೀಕರ ಸತ್ಯಾಗ್ರಹವನ್ನು ಕೈಕೊಳ್ಳಬೇಕೆಂದು [illegible] ಬೇಕು.

## [illegible]

[illegible] ಹೋಗಬಿಟ್ಟಿಲ್ಲೆಂದು [illegible]!

# ಪಂಡಿತ ಮೋತಿಲಾಲ ನೆಹರು ಇವರು ಲಕ್ಷಾವಧಿ ರೂಪಾಯಿಗಳ ಬೆಲೆಬಾಳುವ ತಮ್ಮ 'ಆನಂದ ಭವನ' ಅರಮನೆಯನ್ನು ಕಾಂಗ್ರೆಸ್ಸಿಗೆ ದಾನಮಾಡಿದರು.

ಪಂಡಿತ ಮೋತಿಲಾಲ ನೆಹರೂ ಇವರು ಕಾಂಗ್ರೆಸ್ಸ ಅಧ್ಯಕ್ಷರಾದ ಜವಾಹರಲಾಲರಿಗೆ ಈ ಪ್ರಕಾರ ಪತ್ರ ಬರೆದಿರುವರು.

ಪ್ರಿಯ ಅಧ್ಯಕ್ಷ,

ನಾನು ನನ್ನ ಆನಂದ ಭವನ ಅರಮನೆಯನ್ನು ದೇಶಕ್ಕೆ ದಾನ ಮಾಡಬೇಕೆಂದು ಬಗೆದಿದ್ದೇನೆ. ಈ ಸಂಬಂಧಿ ವಾರೀಸದಾರರೂ ಕೂಡಿ ಮುಕುಂದರೊಡನೆ ಮೊನ್ನೆ [illegible] ಮಾತುಕತೆಯಾಡಿದ್ದೆವು. ಈ ದಾನವನ್ನು ಕಾಂಗ್ರೆಸ ಕಾರ್ಯಕಾರಿ ಮಂಡಲವು ಪ್ರತಿಗ್ರಹಿಸಿ ನನ್ನ ಇಚ್ಛೆಯನ್ನು ಪೂರ್ಣಗೊಳಿಸುವದೆಂದು ನಾನು ಆಶಿಸುತ್ತೇನೆ. ನಿಮ್ಮ ಮತ್ತು ಆ ಮಂಡಲದ ಒಪ್ಪಿಗೆಯು ದೊರೆತದ್ದಾದರೆ ನಾನು ನಾಳೆ ಎಪ್ರಿಲ ೬ ನೇ ತಾರೀಖಿಗೆ 'ರಾಷ್ಟ್ರೀಯ ಸಪ್ತಾಹ' ಪ್ರಥಮ ದಿವಸಕ್ಕೆ [illegible] ದಂಡಿಯಲ್ಲಿ ಹಿಂದುಸ್ಥಾನ ಸ್ವತಂತ್ರ್ಯ ಯುದ್ಧವನ್ನು ಆರಂಭಿಸುವ ಸಮಯಕ್ಕೂ [illegible] ಈ ದಾನ [illegible] ಬೇಕೆಂದು ನಾನು ಆತುರನಾಗಿದ್ದೇನೆ. ನನ್ನದೆಂದು [illegible] ಯೆಂದರೆ. ನೀವು ಇನ್ನುಮುಂದೆ ಇದಕ್ಕೆ "ಸ್ವರಾಜ್ಯ ಭವನ" ವೆಂದು ಕರೆಯತಕ್ಕದ್ದು. ಮತ್ತು ಇದಕ್ಕೆ ಕಾಂಗ್ರೆಸ್ಸಿನ ಮುಖ್ಯ ಕಚೇರಿಯನ್ನಾಗಿ ಮಾಡಿ ಅಖಿಲಭಾರತ ಕಾಂಗ್ರೆಸ ಕಮಿಟಿಯು [illegible] ನೆಲೆಸಬೇಕು. [illegible] ಭವನ [illegible]

[illegible] ಎಂದು ಒಳ್ಳೆ [illegible] ಈ ಪತ್ರವನ್ನು ಮುಗಿಸುತ್ತೇನೆ.

## [illegible]

[illegible]

## ಎಪ್ರಿಲ ೬ ನೇ ದಿವಸ, ಸಾಗಿಸುವ ರೀತಿ.

[illegible] ಎಪ್ರಿಲ ೬ ನೇ ತಾರೀಖಿಗೆ [illegible] ಈ ದಿವಸವನ್ನು [illegible] ಉತ್ಸವ [illegible] ಈ ದಿನವನ್ನು [illegible] ಬೇಕೆಂದು [illegible]

**ಬಾಗಲಕೋಟೆ ಮ್ಯುನಿಸಿಪಾಲಿಟಿ.**

೨೯-೩-೩೦

ಶನಿವಾರ ರಾತ್ರಿ ೧೨ ಘಂಟೆಯವರೆಗೆ ಜನರಲ್ ಕಮಿಟಿ ಯ ಸಭೆ ನಡೆಯಿತು.

[illegible]

# 'ಕನ್ನಡಿಗ'ನ ನಿತ್ಯ ಸಂಚಿಕೆ!

ಸ್ವಾತಂತ್ರ್ಯ ಸಂಗ್ರಾಮದ ಸದ್ದು ನಾಲ್ದೆಸೆಗಳಲ್ಲಿಯೂ ಮೊಳಗುತ್ತಲಿರುವದರಿಂದಲೂ, ಸತ್ಯಾಗ್ರಹದ ಜಯಭೇರಿಯ ಸಂಗತಿಗಳನ್ನು ತಿಳಿದುಕೊಳ್ಳಲು ಜನಸಾಮಾನ್ಯರು ಬಹು ಆತುರರಾಗಿರುವದರಿಂದಲೂ, ಜನರ ಈ ಆತುರತೆಯನ್ನು ತೃಪ್ತಿಪಡಿಸುವದಕ್ಕಾಗಿ, ನಾವು 'ಕನ್ನಡಿಗ'ನ ನಿತ್ಯ ಸಂಚಿಕೆಯನ್ನು ಹೊರಡಿಸಬೇಕೆಂಬ ನಿಶ್ಚಯಿಸಿದಪ್ರಕಾರ ಫಾಲ್ಗುಣ ಬಹುಳ ೩೦ ತಾ|| ೩೧-೩-೩೦ ಸೋಮವಾರದಿಂದಲೇ ಪ್ರಾರಂಭಿಸಿದ್ದೇವೆ.

ಸಧ್ಯದಲ್ಲಿ ಮುಂಬೈಯಿಂದ ಬರುವ ಇಂಗ್ಲೀಷ ಪತ್ರಿಕೆಗಳ ಅವತರಣಿಕೆಗಳನ್ನು ಕೊಡುವದಲ್ಲದೇ, ಅಲ್ಲಲ್ಲಿಂದ ನಮ್ಮ ಸ್ವಂತ ಪ್ರತಿನಿಧಿಗಳ ತಂತಿಗಳನ್ನೂ, ವಾರ್ತಾಪತ್ರಗಳನ್ನೂ [illegible] ತರುವೆವು. ಇದಕ್ಕೆ ಜನರ ಪ್ರೋತ್ಸಾಹನವು ದೊರೆತು, ಸುಮಾರು ದಿನಾಲು ಒಂದು ಸಾವಿರ ಪ್ರತಿಗಳು ಖಾಯಂ ಆಗಿ ಹೋಗತೊಡಗಿದಲ್ಲಿ, ನಾವು ಸ್ವತಂತ್ರವಾಗಿ "ಫ್ರಿ ಪ್ರೆಸ್" "ಅಸೋಸಿಯೇಟೆಡ್ ಪ್ರೆಸ್"ಗಳ ತಂತಿಗಳನ್ನು ಪೂರೈಸಿಕೊಡುವೆವು.

ನಿತ್ಯಪತ್ರಿಕೆಯು ಆಕಾರದಲ್ಲಿ 'ಕನ್ನಡಿಗ'ನ ಈಗಿನ ಆಕಾರದಷ್ಟೇ ಆಗುವದು. ಪುಟಗಳು ನಾಲ್ಕು. ಸಂಚಿಕೆಯೊಂದಕ್ಕೆ ಬೆಲೆ ಮೂರು ಕಾಸು ಮಾತ್ರ. ಗದಗು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಾಪುರ, ಬಳ್ಳಾರಿ ರಾಯಚೂರ ಮುಂತಾದ ಸ್ಥಳಗಳಿಗೆ ಪಾರ್ಸಲಗಳನ್ನು ಕಳಿಸಿ ಏಜಂಟರ ಮುಖಾಂತರ ಸಂಚಿಕೆಗಳು ಮಾರಲ್ಪಡುವವು. ಈಗ ಮೋಟಾರುಗಳು ಎಲ್ಲೆಡೆಗೂ ಇರುವದರಿಂದ ಅಲ್ಲಲ್ಲಿಯ ಕೆಲವು ಮೋಟಾರುಗಳ ಏಜಂಟರಿಗೆ ನಮ್ಮ ಪತ್ರಿಕೆಯ ಏಜನ್ಸಿಯನ್ನೂ ಕೊಟ್ಟಿದೆ. ಎಲ್ಲೆಲ್ಲಿ ಕೊಟ್ಟಿಲ್ಲವೋ, ಅಲ್ಲಿಯವರು ತ್ವರೆಯಾಗಿ ಪತ್ರ ಬರೆದುಕೊಳ್ಳಬೇಕು. ತಮ್ಮ ತಮ್ಮ ಮೋಟಾರುಗಳಿಂದ ಪಾರ್ಸಲುಗಳನ್ನು ಕಳಿಸಿಕೊಳ್ಳುವ ವ್ಯವಸ್ಥೆಯನ್ನು ಅಲ್ಲಲ್ಲಿಯ ಮೋಟಾರುಗಳ ಏಜಂಟರು ತಾವೇ ಮಾಡಿಕೊಳ್ಳತಕ್ಕದ್ದು. ಪೋಸ್ಟಿನಿಂದ ಕಳಿಸುವ ವ್ಯವಸ್ಥೆಯನ್ನು ಸಧ್ಯದಲ್ಲಿ ಮಾಡುವ ಇಚ್ಛೆ ನಮಗಿರುವದಿಲ್ಲ. ನಿತ್ಯ ಪತ್ರಿಕೆಯು [illegible] ಈ ಕನ್ನಡ ನಾಡಿನಲ್ಲಿ ಒಂದೇ ಆದರೆ [illegible] ಕ್ರಮೇಣ ಮಾಡಬಹುದು. [illegible] ದಿನಕ್ಕೆ [illegible] ಕೆಲಸವಾಗಿ ಏಜಂಟರಿಗೆ [illegible].

ಏಜಂಟರಾಗಲಿಚ್ಛಿಸುವವರು ಕೂಡಲೇ ಬರೆದುಕೊಳ್ಳಬೇಕು. ಸಣ್ಣ ಊರವರು ಕನಿಷ್ಟ ಮೂರು ರೂಪಾಯಿಗಳನ್ನೂ, ಪಟ್ಟಣದವರು ಕನಿಷ್ಟ [illegible] ರೂಪಾಯಿಗಳನ್ನೂ ಠೇವು ಇಡಬೇಕು. ಸ್ಥಾನಿಕ ಕಾಂಗ್ರೆಸ ಕಮಿಟಿಯ, ಅಥವಾ ಮುಖ್ಯ ಸಜ್ಜನರ ಒಂದು ಸರ್ಟಿಫಿಕೇಟಿನಲ್ಲದೆ ಪ್ರಮಾಣಪತ್ರದೊಡನೆ ಅರ್ಜಿಯ ಸಂಗಡ ಕಳಿಸತಕ್ಕದ್ದು. ಪ್ರತಿವಾರದಲ್ಲಿ ಲೆಕ್ಕವನ್ನೂ ಹಣವನ್ನೂ, ಮಾರದೇ ಇದ್ದ ಸಂಚಿಕೆಗಳನ್ನೂ ಬೇಗನೆ ಕಳಿಸತಕ್ಕದ್ದು. ನೂರಕ್ಕೆ ೨೫ ರೂಪಾಯಿಗಳಂತೆ ಏಜಂಟರಿಗೆ ಕಮೀಶನ್ ದೊರೆಯುವದು. ಮೋಟಾರುಗಳ ಏಜಂಟರು ಸಣ್ಣ ಊರುಗಳಲ್ಲಿ ದಿನಾಲು ೧೦ ೧೨ ಪ್ರತಿಗಳನ್ನು ತರಿಸಿಕೊಂಡರೂ ಅವರಿಗೆ ಪ್ರತಿ ತಿಂಗಳು ೩-೩ ರೂಪಾಯಿ ಕಮೀಶನ್ನಿಲ್ಲಿಯೇ ದೊರೆಯುವವು. ಇನ್ನು ಪಟ್ಟಣಗಳಲ್ಲಿ ನೂರನೂರು ಪ್ರತಿಗಳನ್ನು ಮಾರುವ ಏಜಂಟರಿಗೆ ತಿಂಗಳೊಂದಕ್ಕೆ ೧೦ ರೂಪಾಯಿಗಳಿಂದ ೨೦ ರ ವರೆಗೆ [illegible] ದೊರೆಯುವದು. [illegible] ಇಂಗ್ಲೀಷ ಪತ್ರಿಕೆಗಳಲ್ಲಿಯೂ, ಮುಖ್ಯ ಮುಖ್ಯ ಸುದ್ದಿಗಳು ನಮ್ಮ ಪತ್ರಿಕೆಯಿಂದ ತಿಳಿಯುವವು. [illegible] ಸ್ಥಾನಿಕ ಮುಖ್ಯ ಮುಖ್ಯ ಜನರನ್ನು ಭೆಟ್ಟಿಯಾಗಿ [illegible] ಪ್ರಯತ್ನಿಸಿದರೆ ಜನರಲ್ಲಿ ಪ್ರತಿಗಳು ಹೆಚ್ಚಾಗಿ ಖರ್ಚಾಗಲಿಕ್ಕೆ [illegible] ಬರೆದುಕೊಳ್ಳತಕ್ಕದ್ದು.

" ಜಾಹೀರಾತಿನ ದರ— [illegible] ಒಂದು ಕಾಲಮ್ಮಿನ ಒಂದು ಇಂಚಿನ ಪ್ರತಿಯೊಂದು ಸಂಚಿಕೆಗೆ ನಾಲ್ಕು ಆಣೆ ಖಾಯಂ ಜಾಹೀರಾತುಗಳಿಗೆ ಎರಡು ಆಣೆ

ನಿತ್ಯ ಪತ್ರಿಕೆಯ ವ್ಯವಸ್ಥಾಪಕರು
"ಕನ್ನಡಿಗ" ಕಾರ್ಯಾಲಯ ಬಾಗಲಕೋಟೆ.

ಈ ಪತ್ರಿಕೆಯು ಮಂಗಳವೇಢೆ ರಾಘವೇಂದ್ರರಾಯರ ಮಕ್ಕಳಾದ ಶ್ರೀನಿವಾಸಚಾರ್ಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾಲಯದಲ್ಲಿ ಮುದ್ರಿತವಾಗಿ, ಅವರಿಂದ ಅಲ್ಲಿಯೇ ಪ್ರಸಿದ್ಧ ಪಡಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

ಜಯಕರ್ನಾಟಕ

ನಿತ್ಯಸಂಚಿಕೆಯು.

यद्यत् परवशं दुःख । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ಬುಧವಾರ ಮಿತಿ ಚೈತ್ರ ಶುದ್ಧ ೩ ಶಕ ೧೮೫೨ ತಾ ೨—೪—೩೦ ಸಂಚಿಕೆ ೧೨೯

## ಸಂಪಾದಕರ - ಛೂಪಿ.

### ೧೩ ನೇ ಏಪ್ರಿಲ್

ಏಪ್ರಿಲ ೧೩ ನೇ ತಾರೀಖು ಕರ್ನಾಟಕಸ್ಥರಿಗೆ ಸೀಮೋಲ್ಲಂಘನ ದಿವಸವಾಗಿದೆ! ಆ ಹೊತ್ತು ಕರ್ನಾಟಕದ ಸತ್ಯಾಗ್ರಹಿ ದಾತಿಗಳು ಹುಬ್ಬಳ್ಳಿಯಿಂದಲೂ ಬೆಳಗಾಂವಿಯಿಂದಲೂ ನಿಮ್ಮಾಭಿಮುಖವಾಗಿ ಹೊರಟು ಈ ಸ್ವಾತಂತ್ರ್ಯಕೋಳಗುಳದಲ್ಲಿ ಕರ್ನಾಟಕರಿಗೆ ಮೊದಲಿನ ಸಮರಭೂಮಿಯಾದ ಅಂಕೋಲೆಯ ಕಡೆಗೆ ಸಾಗಿಹೋಗಬೇಕೆಂದು ಯುದ್ಧಮಂಡಲದ ಆಜ್ಞೆ ಹೊರಟಿದೆ. ಪ್ರಾರಂಭದಲ್ಲಿಯೇ ಕರ್ನಾಟಕವು ತನ್ನ ಸಮರಸನ್ನಾಹವನ್ನು ಮುಗಿಸಿಕೊಳ್ಳಬೇಕಾಗಿದೆ. ಕೆಲವರು ಯೋದ್ಧರನ್ನು ಕಳಿಸಬೇಕಾಗಿ ಹೊರಟಿದ್ದು ಇನ್ನು ಕೆಲವರು ಯುದ್ಧಕ್ಕಾಗಿ ಬೇಕಾಗುವ ಧನ ಸಂಚಯವನ್ನು ಕೂಡಿಸಲು ಹೊರಟಿರುವರು. ಸ್ವಾಭಿಮಾನಿಗಳಾದ ಕನ್ನಡ ತರುಣರು ಸ್ವಯಂಸೇವಕರಾಗಲು ಮುಂದೆ ಬಂದು ಕರ್ನಾಟಕದ ಕೀರ್ತಿಯನ್ನು ಕಾಯ್ದುಕೊಳ್ಳಬೇಕಾದಂತೆ ಧನಾಢ್ಯರಾದವರು ಕೈಬಿಚ್ಚಿ ದ್ರವ್ಯದಾನಮಾಡಿ ಸಾಮಗ್ರಿಗಳೊಳಗದಕ್ಕೆ ಯುದ್ಧದಿಂದ ಹಿಂತಿರುಗಿಬರಬೇಕಾಯಿತು ಎಂದು ಅನಿಸಿಕೊಳ್ಳದಂತೆ ನೋಡಿಕೊಳ್ಳಬೇಕಾಗಿದೆ. ಪ್ರಾಂತಿಕ ಕಮಿಟಿಯವರು ಕೇಳಿಕೊಳ್ಳುವಂತೆ ಎಲ್ಲರೂ ತಮ್ಮ ಉತ್ಪನ್ನದ ಒಂದು ಶತಾಂಶಭಾಗವನ್ನಾದರೂ ಈ ಕಾರ್ಯಕ್ಕೆ ಅರ್ಪಿಸುವ ಮನಸ್ಸು ಮಾಡಿ ಯಾರು ಬರಲಿ ಯಾರು ಬರದಿರಲಿ ಆಯಾ ಕಾಂಗ್ರೆಸ ಕಮೀಟಿಗಳಿಗೆ ಮುಟ್ಟಿಸುವದು ತಮ್ಮ ಕರ್ತವ್ಯವೆಂದು ಭಾವಿಸಲೇಬೇಕು. ಜೀವದ ಹಂಗು ದೊರೆದು ಕಾದುವ ಧೈರ್ಯಶಾಲಿಗಳು ಕಾದಲು ಒಪ್ಪಿ ಸಮರಾಂಗಣದಲ್ಲಿ ಹೋಗಿನಿಂತಾಗ್ಗೆ, ಕೈಬಿಚ್ಚಿ ರೊಕ್ಕ ಕೊಡುವಷ್ಟು ಉದಾರತೆಯು ಕರ್ನಾಟಕದಲ್ಲಿಯ ಧನಸಂಪನ್ನರಿಗೆ ಇರಲಿಕ್ಕಿಲ್ಲೆಂದು ಯಾರು ಅಂದಾರು! ಕರ್ನಾಟಕದಲ್ಲಿಯ ಸ್ಫೂರ್ತಿ ಉತ್ಸಾಹಗಳಿಗೆ ಕಡಿಮೆ ಇಲ್ಲ. ಆದರೆ 'ಯೋಜಕಸ್ತತ್ರದುರ್ಲಭಃ' ಎಂಬಂತೆ ನಮ್ಮ ಸ್ಥಿತಿಯಾಗಿತ್ತು. ಆದರೆ ಈಗ ಸುದೈವದಿಂದ, ಡಾ॥ ಹರ್ಡೀಕರರಂಥವರೂ, ಕೌಜಲಗಿ ಹಣಮಂತರಾಯರಂಥವರೂ, ದಿವಾಕರ ರಂಗರಾಯರಂಥವರೂ, ಜನಸಾಮಾನ್ಯದ ವಿಶ್ವಾಸಕ್ಕೆ ಪಾತ್ರರಾದ ಪರಮಸ್ವಾರ್ಥತ್ಯಾಗಿಗಳು ಉದ್ಯುಕ್ತರಾದ್ದರಿಂದ ನಮ್ಮ ಆಕಾಂಕ್ಷೆಯು ಪೂರಾದಂತಾಗಿ ಈಗಿನ ಚಳವಳಿಯಲ್ಲಿ ಕರ್ನಾಟಕವು ತನ್ನ ಉಜ್ವಲವಾದ ಇತಿಹಾಸಕ್ಕೆ ಒಪ್ಪುವಂಥ ಪರಾಕ್ರಮವನ್ನೇ ಪ್ರದರ್ಶಿಸುವದರಲ್ಲಿ ಯಾರೂ ಸಂಶಯಪಡಬೇಕಾಗಿಲ್ಲ.

## ಅಸೆಂಬ್ಲಿಯ ವರ್ತಮಾನ

### ಸರಕಾರಕ್ಕೆ ಅಡ್ಡ ಮಾಲವಿಯರ ಮುಖಂಡಿಗೆಯು.

ಪರದೇಶದಿಂದ ಬರುವ ನೂಲಿನ ಬಟ್ಟೆಗಳ ಮೇಲೆ ಕರ ಕೂಡಿಸಬೇಕೆಂಬ ವಿಚಾರವೇ ಈಗ ನಡೆದಿದೆ. ಕರಕೂಡಿಸುವದರೊಳಗೂ ಬ್ರಿಟಿಶ ಸರಕುಗಳಿಗೆ ಕರವು ಕಡಿಮೆ ಇರತಕ್ಕದ್ದು ಎಂದು ಸರಕಾರದ ಮಂತ್ರಿಯು ಬಿಲ್ಲು ತಂದಿರುವನು. ಮಾಲವೀಯರೇ ಮೊದಲಾದ ದೇಶಹಿತಕರನ್ನು ಬಿಟ್ಟು ಉಳಿದವರೆಲ್ಲ ಬ್ರಿಟಿಶ ಸರಕಿಗೆ ಈ ಸವಲತ್ತು ಇರಕೂಡದೆಂದು ಹೋರಾಡುತ್ತಿರುವರು. ಪರದೇಶಿ ಬಟ್ಟೆಗಳ ಮೇಲೆ ಹೀಗೆ ಕರ ಕೂಡಿಸಬೇಕೆಂದು ತಾವು (ಸರಕಾರವು) ಯೋಚಿಸಿದ್ದು ಕೇವಲ ಹಿಂದೀ ಗಿರಣಿಗಳ ಕಲ್ಯಾಣಕ್ಕಾಗಿದ್ದು ನೀವು ಹೀಗೆ ಇಂಗ್ಲಂಡಿಗೆ ಸವಲತ್ತು ಕೊಡಲು ನಾಕರಿಸಿದರೆ ಸಮಗ್ರ ಬಿಲ್ಲನ್ನೇ ನಾನು ಹಿಂದಕ್ಕೆ ತಕ್ಕೊಳ್ಳುತ್ತೇನೆಂದು ಸರಕಾರದ ಮಂತ್ರಿಯು ಬೆದರಿಸಿದ್ದಕ್ಕೆ ಈ ಅಧಿಕಾರ ನಿನಗಿರುವದಿಲ್ಲ. ಹಿಂದಸ್ಥಾನದ ಆಯವ್ಯಯದ ಬಗ್ಗೆ ವಿಚಾರ ಮಾಡುವ ಪೂರ್ಣ ಅಧಿಕಾರವು ಈ ಸಭೆಗೆ ಇದ್ದುದರಿಂದ ಈ ಸಭೆಯ ನಿರ್ಣಯದಂತೆ ಸರಕಾರವು ಆಚರಿಸಲಿಕ್ಕೆ ಬೇಕು. ಎಂದು ಮಾಲವೀಯರು ಹಟಹಿಡಿದು ಒಳ್ಳೇ ಚಿಗಟಿನಿಂದ ಬಡಿದಾಡುತ್ತಿರುವರು. ಹೀಗೆಯೇ ಕೊನೆಯ ಮೇಲೆ ಕೋಟೆಯನ್ನು ಮುಂದೆ ಮಾಡುತ್ತಿರುವರು. ಈಗ್ಗೆ ಆದೇ ಮಾಲವೀಯರೆ ಮತ್ತೆ "ಅಧಿಕಾರಸ್ಥರಾದ ಮೆಂಬರರಿಗೆ ಈ ಬಿಲ್ಲಿನ ಮೇಲೆ ಮತಕೊಡಲು ಬರುವದಿಲ್ಲೆಂದು ಕಾಯಿದೆ. ಕೌನ್ಸಿಲ ಪ್ರೆಸಿಡೆಂಟರು ಇದಕ್ಕೆ ಏನೆನ್ನುವರು"? ಎಂದು ದೊಡ್ಡ ಮುಳ್ಳಂಗಿಯನ್ನೇ ಒಗೆದಿದ್ದಾರೆ. ಇದಕ್ಕೆ ಪ್ರೆಸಿಡೆಂಟರ ಅನುಕೂಲ ಅಭಿಪ್ರಾಯ ಸಿಕ್ಕಿದ್ದಾದರೆ, ಸರಕಾರದ ಕಡಿಯ ೨೬ ಮತಗಳು ಕಡಿಮೆ ಆಗಿ ಇಂಗ್ಲಂಡದಿಂದ ಬರುವ ಬಟ್ಟೆಗಳಿಗೆ ಕಡಿಮೆ ಕರ ಇರಬೇಕೆಂಬ ಬಿಲ್ಲು ಬಿದ್ದುಹೋಗುತ್ತದೆ. ಅದಕ್ಕಾಗಿ ಸರಕಾರದ ಪಕ್ಷದವರು ತಮ್ಮ ಎಲ್ಲ ಜನರನ್ನು ಕಲ್ಪಿಸಿಕೊಳ್ಳಹತ್ತಿದ್ದಾರೆ. ರಾಷ್ಟ್ರೀಯ ಪಕ್ಷದಲ್ಲಿ ವಿದ್ಯೆ ಇದೆ, ಬುದ್ಧಿ ಇದೆ, ಚಟುವಟಿಕೆ ಇದೆ, ಪರಿಸ್ಥಿತಿಯ ಜ್ಞಾನವಿದೆ, ನ್ಯಾಯವಿದೆ. ಆದರೂ ಸರಕಾರದ ಬಲ ಒಂದು ಇಲ್ಲವಾದ್ದರಿಂದ ಯಶಸ್ಸು ನಮ್ಮದಾಗಿಲ್ಲ.

ಅಧ್ಯಕ್ಷ ಪಟೇಲರು ಪಂಡಿತ ಮಾಲವೀಯವರ ಸೂಚನೆಯನ್ನು ಉದಳಿಬಿಟ್ಟು ಸರಕಾರದ ಸೂಚನೆಯನ್ನೇ 'ಶ್ರೀ ಚೆಟ್ಟಿ'ಯವರು ಮಾರ್ಪಡಿಸಿದಂತೆ ಅಸೆಂಬ್ಲಿಯು ಸ್ವೀಕರಿಸುವಂತೆ ಮಾಡಿಕೊಟ್ಟರು. ಪಂಡಿತ ಮಾಲವೀಯ ಮತ್ತು ಇವರ ಪಕ್ಷದವರು ಈ ಕಾಲಕ್ಕೆ ತಮ್ಮ ವಿರೋಧಪ್ರದರ್ಶನಾರ್ಥವಾಗಿ ಅಸೆಂಬ್ಲಿಯಿಂದ ಎದ್ದುಹೋದರು. ಮಾಲವೀಯರು ತಮ್ಮ ಆವೇಶದಂತೆ ಇನ್ನು ರಾಜೀನಾಮೆ ಕೊಡುವರೋ?

# ಶ್ರೀ. ಹರ್ಡೇಕರ ಮಂಜಪ್ಪನವರ

## ಸಂದೇಶವು.

## ‘ ಈ ಸಮಯದಲ್ಲಿ ತರುಣರು ಮಹಾತ್ಮರ ಅಪ್ಪಣೆಯಂತೆ ನಡೆಯಲು ಸಿದ್ಧರಾಗಬೇಕು.

ಯಾರಲ್ಲಿ ಅಂಥ ಸಾಹಸೋತ್ಸಾಹಗಳಿಲ್ಲವೋ ಅವರು ಖಾದಿಯ ಕಾರ್ಯದಲ್ಲಿಯೇ ಮಗ್ನರಾ ಬೇಕು. ನೂಲುವದು, ನೂಲಿಸುವದು ಖಾದಿ ಮಾಡಿಸುವದು, ಮಾರುವದು, ಈ ಪ್ರಕಾರ ಖಾದೀಕಾರ್ಯ ದಲ್ಲಿಯೇ ಅವರು ತನುಮನಧನಗಳನ್ನೆಲ್ಲ ಸೂರೆಮಾಡಬೇಕೆಂಬುದೇ ನನ್ನ ಅಭಿಪ್ರಾಯವೆಂದು ಶ್ರೀಮಾ ದಿವಾಕರರಿಗೆ ಮಂಜಪ್ಪನವರು ಬರೆದಿದ್ದಾರೆ.

## ದೇವರು ಹಿಮಾಲಯದಲ್ಲಿಲ್ಲ ಆದರೆ ೩೦ ಕೋಟಿ ಪ್ರಜಾಜನರ ಹೃದಯದಲ್ಲಿದ್ದಾನೆ!

ಮಹಾತ್ಮಾಜಿಯು ತನ್ನ ಪದಾತಿಯೊಡನೆ ನಿನ್ನೆ ಸುರತ ಜಿಲ್ಹೆಯ ಮೊದಲನೆ ಹಳ್ಳಿಯಾದ ಉಪ್ರಾಸಿ ಗ್ರಾಮಕ್ಕೆ ಬಂದು ತಲ್ಪಿದನು. ಸುರತ ಜಿಲ್ಹೆಯ ಸಮಸ್ತ ಮುಖಂಡರೂ ಇಲ್ಲಿಗೆ ಆಗಮಿಸಿದ್ದರು. ಸುರತ ಜಿಲ್ಹೆಯಲ್ಲಿ ೧೦೭ ಜನ ಪಟೇಲರು ತಮ್ಮ ಸರಕಾರಿ ಚಾಕರಿಯನ್ನು ಬಿಟ್ಟುಕೊಟ್ಟಿದ್ದಾರೆಂದು ಕಾಂಗ್ರೆಸ ಕಾರ್ಯದರ್ಶಿಗಳು ಸಭೆಯಲ್ಲಿ ತಿಳಿಸಿದರು. ಹಳ್ಳಿಯಾದಾಗ್ಯೂ ಸಭೆಯಲ್ಲಿ ಜನ ಸಂದಣಿಯು ವಿಶೇಷವಾಗಿದ್ದು ಅವರಲ್ಲಿ ಹೊಸ ಬಹ ಉತ್ಸಾಹವು ಎಲ್ಲೆಡೆಯಲ್ಲಿಯೂ ಒಡೆದು ಕಾಣುತಿತ್ತು. ಗಾಂಧಿಜಿಯವರು ಇಲ್ಲಿ ಮಾಡಿದ ಭಾಷಣವಾದರೂ ಬಹಳೇ ಸ್ಫೂರ್ತಿದಾಯಕವಿತ್ತು. ಸರದಾರ ವಲ್ಲಭಭಾಯಿಗೆ ಅತ್ಯಂತ ಪ್ರೀತಿಯ ಭೂಭಾಗವಾದ ಈ ಸುರತ ಜಿಲ್ಹೆಯಲ್ಲಿ ನಾನಿದೀಗ ಕಾಲಿಡುತ್ತಿರುವೆನು. ಸರದಾರ ವಲ್ಲಭಭಾಯಿಯವರು ನಿಮ್ಮ ಸೇವೆ ಮಾಡಿದಷ್ಟು ಮತ್ತಿನ್ನಾರು ಸೇವೆ ಮಾಡಿಲ್ಲವೆಂಬುದು ನೀವು ಬಲ್ಲಿರಿ. ಅದೇ ಕಾರಣದ ಸಲುವಾಗಿ ಸುರತ ಜಿಲ್ಹೆಯವರು ಈ ಚಳವಳಿಯಲ್ಲಿ ಹೆಚ್ಚಾಗಿ ಸೇರಿಕೊಳ್ಳತಕ್ಕದ್ದೆಂದು ನನ್ನ ಅಪೇ. ಸರದಾರರನ್ನು ಜೇಲಿಗೆ ಅಟ್ಟಿ ನೀವು ಅಪ್ಪುಗೈ ಹಚ್ಚಿಕೊಂಡು ಸುಮ್ಮನೇ ಕುಳಿತುಕೊಳ್ಳಬೇಕೆನ್ನುವಿರೇನು? ಸರದಾರರನ್ನು ಬಂದಿಯಲ್ಲಿರಿಸಿದ ಸರಕಾರವು ನೆಲಕ್ಕುರುಳುವಂತೆ ಅದರ ಬೇರು ಗಳನ್ನೆಲ್ಲ ಕಡಿದೊಗೆಯಲು ನೀವು ಮೀರಿದ ಸಾಹಸವನ್ನು ಮಾಡ ಲೇಬೇಕು. ಇಲ್ಲಿಯ ಯಾವತ್ತೂ ಗೌಡ ಕುಲಕರ್ಣಿಯರು ತಮ್ಮ ಚಾಕರಿಗೆ ರಾಜೀನಾಮೆ ಕೊಡತಕ್ಕದ್ದು ಈ ಗೌಡ ಕುಲಕರ್ಣಿ ಯರೇ ಈ ಬ್ರಿಟಿಶ್‌ರಾಜ್ಯದ ಬೇರುಗಳಿದ್ದಂತಿರುವರು. ಅವರೆಲ್ಲ ಈ ಸರಕಾರದೊಡನೆ ಸಹಕರಿಸಿ ಸಹಾಯಮಾಡುವದನ್ನು ಬಿಟ್ಟರೆ ನಾಳಿಗೆ ಈ ಸರಕಾರವು ಸಿಡಿ ಹಾಯಿದ ಗಿಡದಂತೆ ಒಣಗಿ ಬೋಳ ಆಗಿ ನಿಲ್ಲುವದು. ಆ ವೇಳೆ ಯಾವ ಚಳವಳಿಯ ಬೇಗೆಯಾದರೂ ಇದನ್ನು ಸಹಜವಾಗಿ ದಹಿಸಬಹುದು. ನನಗೀಗ ೬೧ ವರ್ಷ ಗಳಿದ್ದರೂ ದೇವರನ್ನು ಕಾಣುವದಕ್ಕಾಗಿ ಹಿಮಾಲಯಕ್ಕೆ ಹೋಗ ಬೇಕೆಂದು ನಾನು ಬಯಸಿಲ್ಲ. ಯಾಕೆಂದರೆ ಹಿಂದುಸ್ತಾನವು ಪರತಂತ್ರ ಇರುವ ವರೆಗೆ, ೩೦ ಕೋಟಿ ಪ್ರಜಾಜನರು ಪಾ ತಂತ್ರದ ಕಷ್ಟಗಳಿಂದ ಕೊರಗುತ್ತಿರುವಾಗ ಹಿಮಾಲಯದ ನನಗ ದೇವರ ದರ್ಶನ ಎಂದೆಗೂ ಆಗದು. ನನಗೆ ನಿಜವಾ ದೇವರ ದರ್ಶನವಾಗುವದಿದ್ದರೆ ನನಗೆ ಆ ದೇವನು ೩೦ ಕೋ ಜನರ ಹೃದಯದಲ್ಲಿಯೇ ಕಾಣಿಸಿಕೊಳ್ಳುವನೆಂದು ನನ ಪೂರ್ಣ ಭರವಸೆ ಇದೆ. ಇವರೆಲ್ಲರ ಹೃತ್‌ವೇದಿಕೆಗಳನ್ನ ನಾವು ತಲ್ಪದ ಹೊರತು ನಿಜವಾದ ದೇವನ ದರ್ಶನವು ನಮ ಲಭಿಸ ವದೇ ಇಲ್ಲ. ಈ ಕಾಯದೇಭಂಗದ ಚಳವಳಿಯನ್ನ ಪ್ರಾರಂಭಿಸಲು ನಾನು ಅನುಮಾನಿಸುತ್ತಿದ್ದೆ. ನಾನು ಹೀಗೆಯೆ ಕಡೆತನಕ ಅನುಮಾನಿಸುತ್ತ ಕುಳಿತರೆ ನಾನು ದೇಶದ್ರೋ ಮಾಡಿದಂತಾಗುವದೆಂದು ನನಗೆ ಒಂದೇಸವನೆ ಅನಿಸಹತ್ತಿದ್ದ ರಿಂದ ಈ ಕಾಯದೇಭಂಗಕ್ಕೆ ಕೈ ಹಾಕಿರುವೆನು ನಿಮ್ಮ ಶ ರದಲ್ಲಿ ಉಸಿರಿರುವ ವರೆಗೂ ಸ್ವದೇಶವನ್ನು ಅದೇಕೆ ಹಿಂದ ಸ್ಥಾನವನ್ನೇ ಬಂಧಮುಕ್ತಮಾಡುವ ಈ ಚಳವಳಿಯ ಯಶಸ್ಸಿ ಗಾಗಿ ಹೋರಾಡಿರಿ ನೀವು ಸರದಾರರ ಶಿಷ್ಯರು, ಇಷ್ಟೆಲ್ಲ ಗುಡ್ಡದಂಥ ರಾಗಮಾಡಿ ಈಗ ವೈಗಳ್ಳಾವದ್ದೇ ಆದರೆ, ವಲ್ಲಭ ಭಾಯಿಯವರ ಗುಜರಾಥಕ್ಕೆ ಆಂಧ್ರರು, ಬೆಂಗಾಲಿಗಳು, ಪಂಜಾಬಿಗಳು, ಥೂ ಥೂ ಎಂದು ಉಗುಳುವರು! ಇದು ಲಕ್ಷ್ಯದಲ್ಲಿರಲಿ. ಚಾಕರಿಯನ್ನು ಬಿಟ್ಟ ಪಟೇಲರು ಘಟ್ಟಿಮುಟ್ಟ ಉಳಿಯಲಿಕ್ಕೆ ಬೇಕು ಸರಕಾರದವರ ಸಾಮ ದಾನ ಭೇದ ದಂಡ ಮೊದಲಾದ ಯಾವ ಉಪಾಯಕ್ಕೂ ಹಣಿಯಬಾರದು. ವೀರಸ ದಹಳ್ಳಿಯ ಗೌಡನಂತೆ ರಾಜೀನಾಮೆಯನ್ನು ತಿರುಗಿ ತಕ್ಕೊಳ್ಳು ವದು ಹೇಡಿತನವು. ದೇಶದ್ರೋಹಿಯು ಅವನು ಅಂಥ ರಾ ನಾಮೆಗಳಿಂದ ಒಟ್ಟಿನಮೇಲೆ ಕೆಟ್ಟ ಪರಿಣಾಮವಾಗುವ ಸಂಭವ ಹೆಚ್ಚು- ಪೂರ್ಣ ಎಚ್ಚರದಿಂದ ಈ ಚಳವಳಿಯಲ್ಲಿ ಬೀಳಿರಿ!

† † † ‡ †

ಮುಂಬಯಿ ಜುಹುಸ್ಥಾನದಲ್ಲಿ ಒಂದು ಸತ್ಯಾಗ್ರಹ ಶಿಬಿ ವನ್ನು ನಿನ್ನಿನಿಂದ ಹೊರಡಿಸಿರುವರು. ೨೪ ತಾಸು ಅಲ್ಲಿಯೇ ಇರುವವರ ಸಲುವಾಗಿಯೂ, ಮತ್ತು ಉಳಿದವರಿಗೆ ಸತ್ಯಾಗ್ರ ಶಿಕ್ಷಣಪ್ರದಾನದ ಸಲುವಾಗಿಯೂ ಇದರ ಉಪಯೋಗ ವಾಗತ ಕ್ಕದ್ದಿದೆ. ಶ್ರೀ ಬಜಾಜರು ಇದರ ನಿರ್ವಾಹಕರು.

# ಸೇನಗುಪ್ತರಿಗೆ ಬಿಡುಗಡೆಯಾಯಿತು

ಲೆಕ್ಕದಕ್ಕಿಂತಲೂ ಒಂದು ದಿವಸ ಮೊದಲು ಸೆನಗುಪ್ತರನ್ನು ಮುಕ್ತಮಾಡಿರುವರು. ಅವರ ಪ್ರಕೃತಿಯು ಮೊದಲಿನಂತೆಯೇ ಇರುವದು ಬಂದಿಯಲ್ಲಿರುವಾಗ ಅವರ ರಕ್ತಾಭಿಸರಣವು ಕೊಂಚವಿಕಾರ ಹೊಂದಿದ್ದು ಈಗ ಸರಿಯಾಗ ಹತ್ತಿದೆ.

## ವರ್ತಕರೇ ಕಳದಿದ್ದು ವರ್ತಕರೇ ಗಳಿಸಬೇಕು.

ಸಾಂಧೇಲದಲ್ಲಿ ಅಹ್ಮದಾಬಾದದ ಅನೇಕ ಅರಬಿ ವ್ಯಾಪಾರಸ್ಥರು ಮ. ಗಾಂಧಿಯವರ ದರ್ಶನಕ್ಕೆ ಒಂದು ನೆರದದ್ದರಿಂದ ಗಾಂಧಿಯವರು ಪರದೇಶಿ ಬಟ್ಟೆಯ ಬಹಿಷ್ಕಾರ ಕುರಿತು ಹೆಚ್ಚಾಗಿ ಹೇಳಿದರು. ಪರದೇಶಿ ಒಟ್ಟೆಗಳಿಗೆ ಬಹಿಷ್ಕಾರ ಹಾಕುವದು ಒಳ್ಳೆಯದೆಂದು ಆ ವರ್ತಕರಿಗೆಲ್ಲ ಈಗ ಹೆಚ್ಚಗೆ ಒಪ್ಪಿಗೆಯಾಗಿದೆ ಅಂತೆ! ನೀವು ಈ ವ್ಯಾಪಾರಸ್ಥರ ಹಿಂದುಸ್ತಾನದ ಸ್ವಾತಂತ್ರ್ಯವನ್ನು ಸ್ವರಾಜ್ಯವನ್ನೂ ಕಳೆಯಲಿಕ್ಕೆ ಮೂಲಕಾರಣರಾಗಿದ್ದುದರಿಂದ ನೀವೇ ಮತ್ತೆ ಈ ಬಹಿಷ್ಕಾರ ಕೃತಿಯಿಂದ ಅದನ್ನು ಸಂಪಾದಿಸಬೇಕು. ಜಪಾನರ ಸರಕು ತಕ್ಕೊಳ್ಳಲಿಕ್ಕೆ ಅಡ್ಡಿಯಿಲ್ಲವೆಂದು ನಿಮ್ಮೊಳಗೆ ಕೆಲಬರು ಯೋಚಿಸುತ್ತಿರುವಿರೆಂದು ಕೇಳುತ್ತೇನೆ. ಆದರೆ ಅವರ ಆ ವಿಚಾರಣೆ ತಪ್ಪೆಂದು ನಾನು ಖಂಡಿತವಾಗಿ ಹೇಳಬಲ್ಲೆನು. ಎಲ್ಲ ಪರದೇಶಿ ಬಟ್ಟೆಗಳನ್ನು ಬಹಿಷ್ಕರಿಸುವದೇ ಹಿಂದುಸ್ತಾನಕ್ಕೆ ಕ್ಷೇಮಕರವಾದ ಮಾರ್ಗವು. ಇಂಥ ಪೂರ್ಣ ಬಹಿಷ್ಕಾರವನ್ನೇ ಯಶಸ್ವಿಯಾಗಿ ಮಾಡಲಿಕ್ಕೆ ನೀವು ಯತ್ನಿಸಬೇಕು.

## ದಾರಿಯಲ್ಲಿಯ ಅನವಶ್ಯಕ ವೆಚ್ಚಕ್ಕಾಗಿ ಮಹಾತ್ಮರ ಪ್ರಾಯಶ್ಚಿತ್ತವು.

ದಾರಿಯಲ್ಲಿ ಅಲ್ಲಲ್ಲಿಯ ಜನರು ಗಾಂಧಿಯವರ ಸತ್ಯಾಗ್ರಹಿಸೈನ್ಯದ ಶ್ರಮಪರಿಹಾರಾರ್ಥವಾಗಿ ಕಲ್ಪಿಸುತ್ತಿರುವ ಕೆಲವು ಅನುಕೂಲತೆಗಳು ಅನವಶ್ಯಕವಿದ್ದು ವ್ಯರ್ಥ ದುಡ್ಡು ಹಾಳಾಗುತ್ತಿರುವದೆಂದು ಗಾಂಧಿಯವರು ಬಹಳ ಕಳವಳ ಪಡಹತ್ತಿದ್ದಾರೆ. ಯುದ್ಧಕ್ಕಾಗಿ ಸಮರಾಂಗನಕ್ಕೆ ಸಾಗಿದ ಸೈನಿಕರಿಗೆ ಸೌಖ್ಯದ ಅನುಕೂಲತೆಗಳು ಸರಿಯಲ್ಲವೆಂದು ಹೇಳಿ ಅವುಗಳಿಗಾಗಿ ಆಸಕ್ತಿಯನ್ನು ತೋರಿಸುತ್ತಿರುವ ಸ್ವಯಂಸೇವಕರಿಗೆ ಒಳಿತಾಗಿ ಸಿಟ್ಟು ಮಾಡಿ ನಾವು ದರಿದ್ರ ನಾರಾಯಣರ ಪರವಾಗಿ ಕೆಲಸಮಾಡುತ್ತೇವೆಂದು ಹೇಳಿಕೊಳ್ಳುತ್ತಿರುವಾಗ ಒರ್ವ ಹಿಂದಿಯನ ದಿನದ ಉತ್ಪನ್ನದ ಏಳು ದುಡ್ಡಿಗಿಂತಲೂ ಹೆಚ್ಚು ವೆಚ್ಚ ಮಾಡಲು ನಮಗೆ ಅಧಿಕಾರವಿಲ್ಲ. ನಾವೇ ಅದಕ್ಕಿಂತಲೂ ಹೆಚ್ಚು ಖರ್ಚ ಮಾಡುತ್ತಿರುವಾಗ ವೈಸರಾಯರಿಗೆ ನೀವು ಈ ಉತ್ಪನ್ನದ ೫೦೦೦ ಪಟ್ಟು ಪಗಾರ ತಿನ್ನುತ್ತೀರಿ ಎಂದು ಯಾವ ಮೋರೆಯಿಂದ ಕೇಳುವಿರಿ? ನಿಮಗೆ ದಾರಿಯಲ್ಲಿಯೂ ಸಭೆಗಳಿಗೂ ಗ್ಯಾಸದೀಪಗಳ ಅವಶ್ಯಕತೆ ಏನಿದೆ. ಒಂದುವೇಳೆ ಬೇಕಾಗಿದ್ದರೆ ಅವುಗಳನ್ನು ಆಳುಗಳ ಮೇಲೆ ಹೊರಿಸುವದೇಕೆ? ನೀವೇ ಹೊರಲಿಕ್ಕಾಗದೆ ಇದೆಲ್ಲ ನಿಮ್ಮ ಆರಾಮಿಯವೆಚ್ಚದ ಲೆಕ್ಕಹಾಕಿದರೆ ಪ್ರತಿ ಒಬ್ಬನಿಗೂ ಆ ಏಳುದುಡ್ಡಿನ ೫೦ ಪಟ್ಟು ವೆಚ್ಚ ನಡೆದಿದೆ! ಇದು ಇನ್ನು ನಿಲ್ಲಲೇಬೇಕು ಹಾಲು ಕಾಯಿ ಪಲ್ಲೆಗಳು ಸಿಗದ ಹಳ್ಳಿಗಳಲ್ಲಿ ಅವುಗಳನ್ನು ದೂರಿನ ಪೇಟೆಯಿಂದ ಒದಗಿಸಿಕೊಳ್ಳಬಾರದು. ಇದೆಲ್ಲಕ್ಕಾಗಿ ನನಗೆ ಪ್ರಾಯಶ್ಚಿತ್ತ ತಕ್ಕೊಳ್ಳುವದು ಅವಶ್ಯವೆನಿಸಿದೆ

## ಅಕೋಲಾ ಸತ್ಯಾಗ್ರಹಿಗಳ ನಿಶ್ಚಯವು.

ವರ್‍ಹಾಡ ಪ್ರಾಂತದಲ್ಲಿ ಉಪ್ಪು ಮಾಡಲಿಕ್ಕೆ ಅನುಕೂಲ ಸ್ಥಳಗಳು ಎಲ್ಲಿಯೂ ಇಲ್ಲದ್ದರಿಂದ ಅಲ್ಲಿಯ ಸತ್ಯಾಗ್ರಹಿಗಳು, ೬ನೇ ತಾರಿಖಿನ ದಿವಸ ಸಭೆಸೇರಿ ನಾವು ಕಾಯದೆಭಂಗ ಮಾಡಲು ಸಿದ್ಧರಿದ್ದೇವೆಂಬ ಠರಾವನ್ನು ಎಲ್ಲರೂ ಉದ್ಘೋಷಿಸತಕ್ಕವರಂತೆ, ಮತ್ತು ಕಾಯದೆಭಂಗಮಾಡಿ ತಯಾರಿಸಿದ ಉಪ್ಪು ಸಿಕ್ಕರೆ ಅದನ್ನು ಓಣಿ ಓಣಿ ಮಾರಲಿಕ್ಕೆ ತಕ್ಕೊಂಡು ಹೋಗುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಶ್ರೀಮತಿ ದುರ್ಗಾಬಾಯಿ ಜೋಶಿ ಎಂಬ ವೀರ ಮಹಿಳೆಯೋರ್ವಳು ಅಲ್ಲಿಯ ಸ್ತ್ರೀಯರನ್ನು ಕಾಯದೆ ಭಂಗಕ್ಕೆ ಸಜ್ಜುಗೊಳಿಸುವೆನೆಂದು ಹೊಣೆ ಹೊತ್ತು ಅಹರ್ನಿಶ ಕೆಲಸ ನಡಿಸಿರುವಳು.

## ಮುಸಲ್ಮಾನರು ಹಿಂದುಳಿಯಲಿಕ್ಕಾಗದು.

ಹಿಂದುಸ್ತಾನದ ಪಾರತಂತ್ರ್ಯದ ಬಿಡುಗಡೆಗಾಗಿ ಮಹಾತ್ಮಾ ಗಾಂಧಿಯವರು ಹೂಡಿದ ಈ ಯುದ್ಧವು ಹಿಂದುಗಳಿಗೆ ಧರ್ಮಯುದ್ಧವಿದ್ದಂತೆ ಮುಸಲ್ಮಾನರಿಗೂ ಧರ್ಮಯುದ್ಧವೇ ಆಗಿದೆ! ಯಾಕಂದರೆ ಹೋದಲಿ ಸ್ವಾತಂತ್ರ್ಯವನ್ನು ಬೆಂಬಿಸುತ್ತ ಹೋಗುವದೇ ಮುಸಲ್ಮಾನ ಧರ್ಮದ ಮುಖ್ಯ ಕುರುಹು ಆಗಿದೆ. ಈ ಚಳವಳಿಯಿಂದ ಹಿಂದೂರಾಜ್ಯವಾಗುವದಿದೆಂಬ ತಪ್ಪು ಕಲ್ಪನೆಯನ್ನು ಕೆಲವು ಸ್ವಾರ್ಥಸಾಧು ಮುಸಲ್ಮಾನರು ಈ ವೇಳೆಯಲ್ಲಿ ನಮ್ಮ ಸಮಾಜದಲ್ಲಿ ಹರಡುತ್ತಿರುವದು ದುರ್ದೈವದ ಸಂಗತಿಯಾಗಿದೆ. ಇದು ನಿಜವಾದ ಮುಸಲ್ಮಾನರ ಅಭಿಪ್ರಾಯವಲ್ಲ. ಇದು ಸರಕಾರದ ಒಡಕ್ಕಿನ ಉಪಾಯಗಳಲ್ಲೊಂದಾಗಿದೆಂಬದನ್ನು ಮುಸಲ್ಮಾನರು ಮರೆಯಲಿಕ್ಕಾಗದು. ಈ ಚಳವಳಿಯಲ್ಲಿ ಭಾಗತೆಗೆದುಕೊಳ್ಳದಿದ್ದರೆ ಮುಸಲ್ಮಾನರಿಗೆ ಇಡಿ ಜಗತ್ತೇ ಹೆಸರಿಡುವದಲ್ಲದೆ, ಅವರಿಗೆ ಮುಂದೆ ಮಹತ್ತರವಾದ ಹಾನಿಯಾಗದೆ ಇರದೆಂಬುದನ್ನು ಲಕ್ಷ್ಯದಲ್ಲಿಟ್ಟು ನಮ್ಮ ಮುಸಲ್ಮಾನ ಬಾಂಧವರೆಲ್ಲ ಈ ಚಳವಳಿಯಲ್ಲಿ ಹೆಚ್ಚಾಗಿ ಭಾಗತಕ್ಕೊಂಡು ಹಿಂದುವಿನೊಡನೆ ಭುಜಕ್ಕೆ ಭುಜಹಚ್ಚಿ ಕಾದಾಡಿದರೆ ಮಾತ್ರ, ಮುಂದಿನ ಸಲದಲ್ಲಿ ಭಾಗಿಯಾಗಬಲ್ಲದು. '' ಈ ಆಶಯದ ಒಂದು ಪ್ರಕಟಣೆಯನ್ನು ಹೊರಡಿಸಿ ಅದಕ್ಕೆ ಅಬ್ದುಲ ಕಲಮ್ ಅಜದ್, ಡಾ. ಮಹಮುದ ಆಲಮ್, ಡಾ. ಕಿಚಲು, ಅಬಾಸ ತಯಬಜಿ, ಬ್ರೆಲ್ವಿ ಮೊದಲಾದ ೧೫ ಮುಸಲ್ಮಾನ ಮುಖಂಡರು ಸಹಿಮಾಡಿದ್ದಾರೆ.

## ಸಂಯುಕ್ತಪ್ರಾಂತದಲ್ಲಿ ದಬ್ಬಾಳಿಕೆ.

ರಾಯಬರೇಲಿಯಲ್ಲಿಯೂ ಈಗಾಗಲೇ ೪೩ ಜನರು ಜೇಲಿನಲ್ಲಿದ್ದದ್ದಲ್ಲದೆ ಮತ್ತೆ ಈ ಹೊತ್ತು ೭ ಜನರನ್ನು ಹಿಡಿದಿದ್ದಾರೆ.

ನಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆ ಮಾಡಿನೋಡಿರಿ. ತಮಗೆ ಪತ್ರವೊಂದನ್ನು ಬರೆದರೆ ತಾವು ಇಚ್ಛೆಪಡುವ ಅಂಗಡಿಯಲ್ಲಿಯೆ ಕೊಡುತ್ತೇವೆ.

ಗೌರ್ನಮೆಂಟ್

# ಶ್ರೀ. ಹರ್ಡೇಕರ ಮಂಜಪ್ಪನವರ

## ಸಂದೇಶವು.

## ‘ಈ ಸಮಯದಲ್ಲಿ ತರುಣರು ಮಹಾತ್ಮರ ಅಪ್ಪಣೆಯಂತೆ ನಡೆಯಲು ಸಿದ್ಧರಾಗಬೇಕು.

ಯಾರಲ್ಲಿ ಅಂಥ ಸಾಹಸೋತ್ಸಾಹಗಳಿಲ್ಲವೋ ಅವರು ಖಾದಿಯ ಕಾರ್ಯದಲ್ಲಿಯೇ ಮಗ್ನರಾ ಬೇಕು. ನೂಲುವದು, ನೂಲಿಸುವದು ಖಾದಿ ಮಾಡಿಸುವದು, ಮಾರುವದು, ಈ ಪ್ರಕಾರ ಖಾದೀಕಾರ್ಯ ದಲ್ಲಿಯೇ ಅವರು ತನುಮನಧನಗಳನ್ನೆಲ್ಲ ಸೂರೆಮಾಡಬೇಕೆಂಬುದೇ ನನ್ನ ಅಭಿಪ್ರಾಯವೆಂದು ಶ್ರೀಮಾ ದಿವಾಕರರಿಗೆ ಮಂಜಪ್ಪನವರು ಬರೆದಿದ್ದಾರೆ.

### ದೇವರು ಹಿಮಾಲಯದಲ್ಲಿಲ್ಲ ಆದರೆ ೩೦ ಕೋಟಿ ಪ್ರಜಾಜನರ ಹೃದಯದಲ್ಲಿದ್ದಾನೆ!

ಮಹಾತ್ಮಾಜಿಯು ತನ್ನ ಪದಾತಿಯೊಡನೆ ನಿನ್ನೆ ಸುರತ ಜಿಲ್ಹೆಯ ಮೊದಲನೆ ಹಳ್ಳಿಯಾದ ಉಪ್ರಾಸಿ ಗ್ರಾಮಕ್ಕೆ ಬಂದು ತಲ್ಪಿದನು. ಸುರತ ಜಿಲ್ಹೆಯ ಸಮಸ್ತ ಮುಖಂಡರೂ ಇಲ್ಲಿಗೆ ಆಗಮಿಸಿದ್ದರು. ಸುರತ ಜಿಲ್ಹೆಯಲ್ಲಿ ೧೦೭ ಜನ ಪಟೇಲರು ತಮ್ಮ ಸರಕಾರಿ ಚಾಕರಿಯನ್ನು ಬಿಟ್ಟುಕೊಟ್ಟಿದ್ದಾರೆಂದು ಕಾಂಗ್ರೆಸ ಕಾರ್ಯದರ್ಶಿಗಳು ಸಭೆಯಲ್ಲಿ ತಿಳಿಸಿದರು. ಹಳ್ಳಿಯಾದಾಗ್ಯೂ ಸಭೆಯಲ್ಲಿ ಜನ ಸಂದಣಿಯು ವಿಶೇಷವಾಗಿದ್ದು ಅವರಲ್ಲಿ ಸೂಸಿ ಬಹ ಉತ್ಸಾಹವು ಎಲ್ಲೆಡೆಯಲ್ಲಿಯೂ ಒಡೆದು ಕಾಣುತಿತ್ತು. ಗಾಂಧಿಜಿಯವರು ಇಲ್ಲಿ ಮಾಡಿದ ಭಾಷಣವಾದರೂ ಒಳ್ಳೇ ಸ್ಫೂರ್ತಿದಾಯಕವಿತ್ತು. ಸರದಾರ ವಲ್ಲಭಭಾಯಿಗೆ ಅತ್ಯಂತ ಪ್ರೀತಿಯ ಭೂಭಾಗವಾದ ಈ ಸುರತ ಜಿಲ್ಹೆಯಲ್ಲಿ ನಾನಿದೀಗ ಕಾಲಿಡುತ್ತಿರುವೆನು. ಸರದಾರ ವಲ್ಲಭಭಾಯಿಯವರು ನಿಮ್ಮ ಸೇವೆ ಮಾಡಿದಷ್ಟು ಮತ್ತಿನ್ನಾರು ಸೇವೆ ಮಾಡಿಲ್ಲವೆಂಬುದು ನೀವು ಬಲ್ಲಿರಿ. ಅದೇ ಕಾರಣದ ಸಲುವಾಗಿ ಸುರತ ಜಿಲ್ಹೆಯವರು ಈ ಚಳವಳಿಯಲ್ಲಿ ಹೆಚ್ಚಾಗಿ ಸೇರಿಕೊಳ್ಳತಕ್ಕದ್ದೆಂದು ನನ್ನ ಆಶೆ. ಸರದಾರರನ್ನು ಜೇಲಿಗೆ ಅಟ್ಟಿ ನೀವು ಅಪ್ಪುಗೈ ಹಚ್ಚಿಕೊಂಡು ಸುಮ್ಮನೇ ಕುಳಿತುಕೊಳ್ಳಬೇಕೆನ್ನುವಿರೇನು? ಸರದಾರರನ್ನು ಬಂದಿಯಲ್ಲಿರಿಸಿದ ಸರಕಾರವು ನೆಲಕ್ಕುರುಳುವಂತೆ ಅದರ ಬೇರುಗಳನ್ನೆಲ್ಲ ಕಡಿದೊಗೆಯಲು ನೀವು ಮೀರಿದ ಸಾಹಸವನ್ನು ಮಾಡಲೇಬೇಕು. ಇಲ್ಲಿಯ ಯಾವತ್ತೂ ಗೌಡ ಕುಲಕರ್ಣಿಯರು ತಮ್ಮ ಚಾಕರಿಗೆ ರಾಜೀನಾಮೆ ಕೊಡತಕ್ಕದ್ದು. ಈ ಗೌಡ ಕುಲಕರ್ಣಿಯರೇ ಈ ಬ್ರಿಟಿಶ್ ರಾಜ್ಯದ ಬೇರುಗಳಿದ್ದಂತಿರುವರು. ಅವರೆಲ್ಲ ಈ ಸರಕಾರದೊಡನೆ ಸಹಕರಿಸಿ ಸಹಾಯ ಮಾಡುವದನ್ನು ಬಿಟ್ಟರೆ ನಾಳಿಗೆ ಈ ಸರಕಾರವು ಸಿಡಿ ಹಾಯಿದ ಗಿಡದಂತೆ ಒಣಗಿ ಬಾರ್ಲ ಆಗಿ ನಿಲ್ಲುವದು. ಆ ವೇಳೆ ಯಾವ ಚಳವಳಿಯ ಬೇಗೆಯಾದರೂ ಇದನ್ನು ಸಹಜವಾಗಿ ದಹಿಸಬಹುದು. ನನಗೀಗ ೬೧ ವರ್ಷಗಳಿದ್ದರೂ ದೇವರನ್ನು ಕಾಣುವದಕ್ಕಾಗಿ ಹಿಮಾಲಯಕ್ಕೆ ಹೋಗಬೇಕೆಂದು ನಾನು ಬಯಸಿಲ್ಲ. ಯಾಕೆಂದರೆ ಹಿಂದುಸ್ಥಾನವು ಪರತಂತ್ರ ಇರುವ ವರೆಗೆ, ೩೦ ಕೋಟಿ ಪ್ರಜಾಜನರು ಪಾ ತಂತ್ರ್ಯದ ಕಷ್ಟಗಳಿಂದ ಕೊರಗುತ್ತಿರುವಾಗ ಹಿಮಾಲಯದ ನನಗ ದೇವರ ದರ್ಶನ ಎಂದೆಗೂ ಆಗದು. ನನಗೆ ನಿಜವಾ ದೇವರ ದರ್ಶನವಾಗುವದಿದ್ದರೆ ನನಗೆ ಆ ದೇವನು ೩೦ ಕೋ ಜನರ ಹೃದಯದಲ್ಲಿಯೇ ಕಾಣಿಸಿಕೊಳ್ಳುವನೆಂದು ನನ ಪೂರ್ಣ ಭರವಸೆ ಇದೆ. ಇವರೆಲ್ಲರ ಹೃತ್ವೇದಿಕೆಗಳನ್ನು ನಾವು ತಲ್ಪದ ಹೊರತು ನಿಜವಾದ ದೇವನ ದರ್ಶನವು ನಮ ಲಭಿಸುವದೇ ಇಲ್ಲ. ಈ ಕಾಯದೇಭಂಗದ ಚಳವಳಿಯನ್ನು ಪ್ರಾರಂಭಿಸಲು ನಾನು ಅನುಮಾನಿಸುತ್ತಿದ್ದೆ. ನಾನು ಹೀಗೆಯೆ ಕಡೆತನಕ ಅನುಮಾನಿಸುತ್ತ ಕುಳಿತರೆ ನಾನು ದೇಶದ್ರೋಹ ಮಾಡಿದಂತಾಗುವದೆಂದು ನನಗೆ ಒಂದೇಸವನೆ ಅನಿಸಹತ್ತಿದ್ದ ರಿಂದ ಈ ಕಾಯದೇಭಂಗಕ್ಕೆ ಕೈ ಹಾಕಿರುವೆನು. ನಿಮ್ಮ ಶ ರದಲ್ಲಿ ಉಸಿರಿರುವ ವರೆಗೂ ಸರದಾರರನ್ನು ಆದೀಕೆ ಹಿಂದ ಸ್ಥಾನವನ್ನೇ ಬಂಧಮುಕ್ತಮಾಡುವ ಈ ಚಳವಳಿಯ ಯಶ ಗಾಗಿ ಹೋರಾಡಿರಿ ನೀವು ಸರದಾರರ ಶಿಷ್ಯರು, ಇಷ್ಟೆಲ್ಲ ಗುಡ್ಡದಂಥ ರಾಗ ಮಾಡಿ ಈಗ ಷ್ಟೈಗಳ್ಳರಾದ್ದೇ ಆದರೆ, ವಲ್ಲಭ ಭಾಯಿಯವರ ಗುಜರಾಥಕ್ಕೆ ಆಂಧ್ರರು, ಬೆಂಗಾಲಿಗಳು, ಪಂಜಾಬಿಗಳು, ಥೂ ಥೂ ಎಂದು ಉಗುಳುವರು.! ಇದು ಲಕ್ಷ್ಯದಲ್ಲಿರಲಿ. ಚಾಕರಿಯನ್ನು ಬಿಟ್ಟ ಪಟೇಲರು ಘಟ್ಟಿಮುಟ್ಟ ಉಳಿಯಲಿಕ್ಕೆ ಬೇಕು. ಸರಕಾರದವರ ಸಾಮ ದಾನ ಭೇದ ದಂಡ ಮೊದಲಾದ ಯಾವ ಉಪಾಯಕ್ಕೂ ಹಣಿಯಬಾರದು. ವೀರಸ ದಹಳ್ಳಿಯ ಗೌಡನಂತೆ ರಾಜೀನಾಮೆಯನ್ನು ತಿರುಗಿ ತಕ್ಕೊಳ್ಳು ವದು ಹೇಡಿತನವು. ದೇಶದ್ರೋಹಿಯು ಅವನು ಅಂಥ ರಾ ನಾಮೆಗಳಿಂದ ಒಟ್ಟಿನಮೇಲೆ ಕೆಟ್ಟ ಪರಿಣಾಮವಾಗುವ ಸಂಭವ ಹೆಚ್ಚು. ಪೂರ್ಣ ಎಚ್ಚರದಿಂದ ಈ ಚಳವಳಿಯಲ್ಲಿ ಬೀಳಿರಿ!

† † † ‡ †

ಮುಂಬಯಿ ಜುಹುಸ್ಥಾನದಲ್ಲಿ ಒಂದು ಸತ್ಯಾಗ್ರಹ ಶಿಬಿರ ವನ್ನು ನಿನ್ನಿನಿಂದ ಹೊರಡಿಸಿರುವರು. ೨೪ ತಾಸು ಅಲ್ಲಿಯೇ ಇರುವವರ ಸಲುವಾಗಿಯೂ, ಮತ್ತು ಉಳಿದವರಿಗೆ ಸತ್ಯಾಗ್ರಹ ಶಿಕ್ಷಣಪ್ರದಾನದ ಸಲುವಾಗಿಯೂ ಇದರ ಉಪಯೋಗ ನಾಗ ಕ್ಷದ್ದಿದೆ. ಶ್ರೀ ಬಜಾಜರು ಇದರ ನಿರ್ವಾಹಕರು.

# ಸೇನಗುಪ್ತರಿಗೆ ಬಿಡುಗಡೆಯಾಯಿತು

ಲೆಖ್ಖದಕ್ಕಿಂತಲೂ ಒಂದು ದಿವಸ ಮೊದಲು ಸೇನಗುಪ್ತರನ್ನು ಮುಕ್ತಮಾಡಿರುವರು. ಅವರ ಪ್ರಕೃತಿಯು ಮೊದಲಿನಂತೆಯೇ ಇರುವದು ಬಂದಿಯಲ್ಲಿರುವಾಗ ಅವರ ರಕ್ತಾಭಿಸರಣವು ಕೊಂಚವಿಕಾರ ಹೊಂದಿದ್ದು ಈಗ ಸರಿಯಾಗ ಹತ್ತಿದೆ.

## ವರ್ತಕರೇ ಕಳೆದಿದ್ದು ವರ್ತಕರೇ ಗಳಿಸಬೇಕು.

ಸಾಂಥೇಲದಲ್ಲಿ ಅಹ್ಮದಾಬಾದದ ಅನೇಕ ಅರಬಿ ವ್ಯಾಪಾರಸ್ಥರು ಮ. ಗಾಂಧಿಯವರ ದರ್ಶನಕ್ಕೆ ಬಂದು ನೆರೆದದ್ದರಿಂದ ಗಾಂಧಿಯವರು ಪರದೇಶಿ ಬಟ್ಟೆಯ ಬಹಿಷ್ಕಾರ ಕುರಿತು ಹೆಚ್ಚಾಗಿ ಹೇಳಿದರು. ಪರದೇಶಿ ಬಟ್ಟೆಗಳಿಗೆ ಬಹಿಷ್ಕಾರ ಹಾಕುವದು ಒಳ್ಳೆಯದೆಂದು ಆ ವರ್ತಕರಿಗೆಲ್ಲ ಈಗ ಹೆಚ್ಚಿಗೆ ಒಪ್ಪಿಗೆಯಾಗಿದೆ ಅಂತೆ? ನೀವು ಈ ವ್ಯಾಪಾರಸ್ಥರೆ ಹಿಂದುಸ್ಥಾನದ ಸ್ವಾತಂತ್ರ್ಯವನ್ನು ಸ್ವರಾಜ್ಯವನ್ನೂ ಕಳೆಯಲಿಕ್ಕೆ ಮೂಲಕಾರಣರಾಗಿದ್ದುದರಿಂದ ನೀವೇ ಮತ್ತೆ ಈ ಬಹಿಷ್ಕಾರ ಕೃತಿಯಿಂದ ಅದನ್ನು ಸಂಪಾದಿಸಬೇಕು. ಜಪಾನರ ಸರಕು ತಕ್ಕೊಳ್ಳಲಿಕ್ಕೆ ಅಡ್ಡಿಯಿಲ್ಲವೆಂದು ನಿಮ್ಮೊಳಗೆ ಕೆಲಬರು ಯೋಚಿಸುತ್ತಿರುವಿರೆಂದು ಕೇಳುತ್ತೇನೆ. ಆದರೆ ಅವರ ಆ ವಿಚಾರಣೆ ತಪ್ಪೆಂದು ನಾನು ಖಂಡಿತವಾಗಿ ಹೇಳಬಲ್ಲೆನು. ಎಲ್ಲ ಪರದೇಶಿ ಬಟ್ಟೆಗಳನ್ನು ಬಹಿಷ್ಕರಿಸುವದೇ ಹಿಂದುಸ್ಥಾನಕ್ಕೆ ಕ್ಷೇಮಕರವಾದ ಮಾರ್ಗವು. ಇಂಥ ಪೂರ್ಣ ಬಹಿಷ್ಕಾರವನ್ನೇ ಯಶಸ್ವಿಯಾಗಿ ಮಾಡಲಿಕ್ಕೆ ನೀವು ಯತ್ನಿಸಬೇಕು.

## ದಾರಿಯಲ್ಲಿಯ ಅನವಶ್ಯಕ ವೆಚ್ಚಕ್ಕಾಗಿ ಮಹಾತ್ಮರ ಪ್ರಾಯಶ್ಚಿತ್ತವು.

ದಾರಿಯಲ್ಲಿ ಅಲ್ಲಲ್ಲಿಯ ಜನರು ಗಾಂಧಿಯವರ ಸತ್ಯಾಗ್ರಹಿಸೈನ್ಯದ ಶ್ರಮಪರಿಹಾರಾರ್ಥವಾಗಿ ಕಲ್ಪಿಸುತ್ತಿರುವ ಕೆಲವು ಅನುಕೂಲತೆಗಳು ಅನವಶ್ಯಕವಿದ್ದು ವ್ಯರ್ಥ ದುಡ್ಡು ಹಾಳಾಗುತ್ತಿರುವದೆಂದು ಗಾಂಧಿಯವರು ಬಹಳ ಕಳವಳ ಪಡಹತ್ತಿದ್ದಾರೆ. ಯುದ್ಧಕ್ಕಾಗಿ ಸಮರಾಂಗನಕ್ಕೆ ಸಾಗಿದ ಸೈನಿಕರಿಗೆ ಸೌಖ್ಯದ ಅನುಕೂಲತೆಗಳು ಸರಿಯಲ್ಲವೆಂದು ಹೇಳಿ ಅವುಗಳಿಗಾಗಿ ಆಸಕ್ತಿಯನ್ನು ತೋರಿಸುತ್ತಿರುವ ಸ್ವಯಂಸೇವಕರಿಗೆ ಒಳಿತಾಗಿ ಸಿಟ್ಟುಮಾಡಿ ನಾವು ದರಿದ್ರ ನಾರಾಯಣರ ಪರವಾಗಿ ಕೆಲಸಮಾಡುತ್ತೇವೆಂದು ಹೇಳಿಕೊಳ್ಳುತ್ತಿರುವಾಗ ಓರ್ವ ಹಿಂದಿಯನ ದಿನದ ಉತ್ಪನ್ನದ ಏಳು ದುಡ್ಡಿಗಿಂತಲೂ ಹೆಚ್ಚು ವೆಚ್ಚ ಮಾಡಲು ನಮಗೆ ಅಧಿಕಾರವಿಲ್ಲ. ನಾವೇ ಅದಕ್ಕಿಂತಲೂ ಹೆಚ್ಚು ಖರ್ಚು ಮಾಡುತ್ತಿರುವಾಗ ವೈಸರಾಯರಿಗೆ ನೀವು ಈ ಉತ್ಪನ್ನದ ೫೦೦೦ ಪಟ್ಟು ಪಗಾರ ತಿನ್ನುತ್ತೀರಿ ಎಂದು ಯಾವ ಮೋರೆಯಿಂದ ಕೇಳುವಿರಿ? ನಿಮಗೆ ದಾರಿಯಲ್ಲಿಯೂ ಸಭೆಗಳಿಗೂ ಗ್ಯಾಸದೀಪಗಳ ಅವಶ್ಯಕತೆ ಏನಿದೆ. ಒಂದುವೇಳೆ ಬೇಕಾಗಿದ್ದರೆ ಅವುಗಳನ್ನು ಆಳುಗಳ ಮೇಲೆ ಹೊರಿಸುವದೇಕೆ? ನೀವೇ ಹೊರಲಿಕ್ಕಾಗದೆ ಇದೆಲ್ಲ ನಿಮ್ಮ ಅರಾಮಿಯವೆಚ್ಚದ ಲೆಕ್ಕಹಾಕಿದರೆ ಪ್ರತಿ ಒಬ್ಬನಿಗೂ ಆ ಏಳುದುಡ್ಡಿನ ೫೦ ಪಟ್ಟು ವೆಚ್ಚ ನಡೆದಿದೆ. ಇದು ಇನ್ನು ನಿಲ್ಲಲೇಬೇಕು. ಹಾಲು ಕಾಯಿ ಪಲ್ಲೆಗಳು ಸಿಗದ ಹಳ್ಳಿಗಳಲ್ಲಿ ಅವುಗಳನ್ನು ದೂರಿನ ಪೇಟೆಯಿಂದ ಒದಗಿಸಿಕೊಳ್ಳಬಾರದು. ಇದೆಲ್ಲಕ್ಕಾಗಿ ನನಗೆ ಪ್ರಾಯಶ್ಚಿತ್ತ ತಕ್ಕೊಳ್ಳುವದು ಅವಶ್ಯವೆನಿಸಿದೆ.

## ಅಕೋಲಾ ಸತ್ಯಾಗ್ರಹಿಗಳ ನಿಶ್ಚಯವು.

ವರ್‍ಹಾಡ ಪ್ರಾಂತದಲ್ಲಿ ಉಪ್ಪು ಮಾಡಲಿಕ್ಕೆ ಅನುಕೂಲ ಸ್ಥಳಗಳು ಎಲ್ಲಿಯೂ ಇಲ್ಲದ್ದರಿಂದ ಅಲ್ಲಿಯ ಸತ್ಯಾಗ್ರಹಿಗಳು, ೬ನೇ ತಾರೀಖಿನ ದಿವಸ ಸಭೆಸೇರಿ ನಾವು ಕಾಯದೆಭಂಗ ಮಾಡಲು ಸಿದ್ಧರಿದ್ದೇವೆಂಬ ಠರಾವನ್ನು ಎಲ್ಲರೂ ಉದ್ಘೋಷಿಸುತ್ತಲಿರುವರಂತೆ. ಮತ್ತು ಕಾಯದೆಭಂಗಮಾಡಿ ತಯಾರಿಸಿದ ಉಪ್ಪು ಸಿಕ್ಕರೆ ಅದನ್ನು ಓಣಿ ಓಣಿ ಮಾರಲಿಕ್ಕೆ ತಕ್ಕೊಂಡು ಹೋಗುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಶ್ರೀಮತಿ ದುರ್ಗಾಬಾಯಿ ಜೋಶಿ ಎಂಬ ವೀರ ಮಹಿಳೆಯೋರ್ವಳು ಅಲ್ಲಿಯ ಸ್ತ್ರೀಯರನ್ನೂ ಕಾಯದೆ ಭಂಗಕ್ಕೆ ಸಜ್ಜುಗೊಳಿಸುವೆನೆಂದು ಹೊಣೆ ಹೊತ್ತು ಅಹರ್ನಿಶ ಕೆಲಸ ನಡಿಸಿರುವಳು.

## ಮುಸಲ್ಮಾನರು ಹಿಂದುಳಿಯಲಿಕ್ಕಾಗದು.

ಹಿಂದುಸ್ಥಾನದ ಪಾರತಂತ್ರ್ಯದ ಬಿಡುಗಡೆಗಾಗಿ ಮಹಾತ್ಮಾ ಗಾಂಧಿಯವರು ಹೂಡಿದ ಈ ಯುದ್ಧವು ಹಿಂದುಗಳಿಗೆ ಧರ್ಮಯುದ್ಧವಿದ್ದಂತೆ ಮುಸಲ್ಮಾನರಿಗೂ ಧರ್ಮಯುದ್ಧವೇ ಆಗಿದೆ! ಯಾಕಂದರೆ ಹೋದಲಿ ಸ್ವಾತಂತ್ರ್ಯವನ್ನು ಬೇಡಿಸುತ್ತ ಹೋಗುವದೇ ಮುಸಲ್ಮಾನ ಧರ್ಮದ ಮುಖ್ಯ ಕುರುಹು ಆಗಿದೆ. ಈ ಚಳವಳಿಯಿಂದ ಹಿಂದೂರಾಜ್ಯವಾಗುವದಿದೆಂಬ ತಪ್ಪು ಕಲ್ಪನೆಯನ್ನು ಕೆಲವು ಸ್ವಾರ್ಥಸಾಧು ಮುಸಲ್ಮಾನರು ಈ ವೇಳೆಯಲ್ಲಿ ನಮ್ಮ ಸಮಾಜದಲ್ಲಿ ಹರಡುತ್ತಿರುವದು ದುರ್ದೈವದ ಸಂಗತಿಯಾಗಿದೆ. ಇದು ನಿಜವಾದ ಮುಸಲ್ಮಾನನ ಅಭಿಪ್ರಾಯವಲ್ಲ. ಇದು ಸರಕಾರದ ಬುದ್ಧಿಭೇದದ ಉಪಾಯಗಳಲ್ಲೊಂದಾಗಿದೆಂಬದನ್ನು ಮುಸಲ್ಮಾನರು ಮರಿಯಲಿಕ್ಕಾಗದು. ಈ ಚಳವಳಿಯಲ್ಲಿ ಭಾಗ ತಗೆದುಕೊಳ್ಳದಿದ್ದರೆ ಮುಸಲ್ಮಾನರಿಗೆ ಇದು ಜಗತ್ತೇ ಹೆಸರಿಡುವದಲ್ಲದೆ, ಅವರಿಗೆ ಮುಂದೆ ಮಹತ್ತರವಾದ ಹಾನಿಯಾಗದೆ ಇರದೆಂಬುದನ್ನು ಲಕ್ಷ್ಯದಲ್ಲಿಟ್ಟು ನಮ್ಮ ಮುಸಲ್ಮಾನ ಬಾಂಧವರೆಲ್ಲ ಈ ಚಳವಳಿಯಲ್ಲಿ ಹೆಚ್ಚಾಗಿ ಭಾಗತಕ್ಕೊಂಡು ಹಿಂದುವಿನೊಡನೆ ಭುಜಕ್ಕೆ ಭುಜಹಚ್ಚಿ ಕಾದಾಡಿದರೆ ಮಾತ್ರ ಮುಂದಿನ ಫಲದಲ್ಲಿ ಭಾಗಿಯಾಗಬಲ್ಲರು." ಈ ಆಶಯದ ಒಂದು ಪ್ರಕಟಣೆಯನ್ನು ಹೊರಡಿಸಿ ಅದಕ್ಕೆ ಅಬ್ದುಲ ಕಲಮ್ ಆಜದ್, ಡಾ. ಮಹಮದ ಆಲಮ್, ಡಾ. ಕಿಚಲು, ಅಬಾಸ ತಯಬಜಿ, ಖ್ರೈಲ್ಲಿ ಮೊದಲಾದ ೧೫ ಮುಸಲ್ಮಾನ ಮುಖಂಡರು ಸಹಿಮಾಡಿದ್ದಾರೆ.

## ಸಂಯುಕ್ತಪ್ರಾಂತದಲ್ಲಿ ದಬ್ಬಾಳಿಕೆ.

ರಾಯಬರೇಲಿಯಲ್ಲಿಯೂ ಈಗಾಗಲೇ ೪೩ ಜನರು ಜೇಲಿನಲ್ಲಿದ್ದದ್ದಲ್ಲದೆ ಮತ್ತೆ ಈ ಹೊತ್ತು ೭ ಜನರನ್ನು ಹಿಡಿದಿದ್ದಾರೆ.

## ಬರಹಗಾರರಿಗೆ ಸೂಚನೆ.

'ಪಠಾಣ' ಈ ಬರಹವು ವಾದಗ್ರಸ್ತ ವಿಷಯವಾದುದರಿಂ ಪ್ರಕಟಿಸಲಾರೆವು. 'ಶ್ರೀ. ನಾ. ಶಾಹು ಛತ್ರಪತಿಗಳ ಆಕಾಶವಾಣಿ' ಬರಹಗಾರರು ಪ್ರತ್ಯಂತರದ ಆಧಾರದಿಂದ ಬರೆದು ಸಿದ್ಧಮಾಡಿಕೊಟ್ಟರೆ ಪ್ರಕಟಿಸಬಹುದು. ಸಂಪಾದಕ.

**ಅಹಮ್ಮದಾಬಾದ ಗಿರಣಿಗಳ ಒಡೆಯರೂ ಸತ್ಯಾಗ್ರಹಕ್ಕೆ ಧನಮುಕತಕ್ಕವರೇ !!**

ಅಹಮ್ಮದಾಬಾದ ಗಿರಣಿಗಳ ಒಡೆಯರಲ್ಲಿರ್ವರು ನ್ಯಾಳಿಗೆ ಮಹಾತ್ಮರಿಗೆ ಭೆಟ್ಟಿಯಾಗತಕ್ಕವರಿದ್ದಾರೆ ಅವರೆಲ್ಲರೂ ಮಹಾತ್ಮರ ಚಳವಳಿಗೆ ಅನುಕೂಲರಿದ್ದಾರೆ. ಇಷ್ಟೇ ಅಲ್ಲದೇ ತಮ್ಮ ತಮ್ಮ ಮನಿಯ ವ್ಯಕಿ ಕನಿಷ್ಟ ಒಬ್ಬರಾದರೂ ಈ ಸತ್ಯಾಗ್ರಹದಲ್ಲಿ ಬಂದು ಕೂಡಬೇಕೆಂದು ಗೊತ್ತುಮಾಡಿಕೊಂಡಿದ್ದಾರೆ. ಗಿರಣಿಗಳ ಮಾಲಕರೆಂದರೆ ರಾಜ ಮಹಾರಾಜರಷ್ಟು ಸುಖಲೋಲುಪತೆಯಿಂದ ಬೆಳೆದವರಿರುವರೆಂಬುದನ್ನು ಯಾರೂ ಮರೆಯಲಿಕ್ಕಾಗದು. ಅಂಥವರು ಅತಿ ಅಪಾರವಾದ ಸುಖಸಂಪತ್ತಿಯನ್ನು ಬಿದಿಗೊತ್ತಿ, ಸತ್ಯಾಗ್ರಹದ ಕದನದಲ್ಲಿ ಧುಮುಕಬೇಕೆಂದು ನಿಶ್ಚಯಿಸಬೇಕಾದರೆ ಆ ಮಹಾತ್ಮನ ತಪಃಪ್ರಭಾವ ವೆಂಥದಿರಬೇಕು !!

**ಆಂಧ್ರದೇಶದ ಸತ್ಯಾಗ್ರಹಿಗಳು**

ಆಂಧ್ರದೇಶದ ೩೦ ಸತ್ಯಾಗ್ರಹಿ ತ್ಕಂಡಿಗಳು ಪದಾತಿಯು ನಾಳೆ ವರ್ಷ ಪ್ರತಿಪದ ದಿವಸ, ಎಲ್ಲೂರಿಂದ ಹೊರಡುವದನ್ನು ಗೊತ್ತುಮಾಡಿದ್ದಾರೆ

# ‘ಕನ್ನಡಿಗ’ನ ನಿತ್ಯ ಸಂಚಿಕೆ!

ಸ್ವಾತಂತ್ರ್ಯ ಸಂಗ್ರಾಮದ ಸದ್ದು ಸರ್ವದಿಕ್ಕುಗಳಲ್ಲಿಯೂ ಮೊಳಗುತ್ತಲಿರುವದರಿಂದಲೂ, ಸತ್ಯಾಗ್ರಹದ ಜಯಭೇರಿಯ ಸಂಗತಿಗಳನ್ನು ತಿಳಿದುಕೊಳ್ಳಲು ಜನಸಾಮಾನ್ಯರು ಸಹ ಬಹು ಆತುರರಾಗಿರುವದರಿಂದಲೂ, ಜನರ ಈ ಆತುರತೆಯನ್ನು ತೃಪ್ತಿಪಡಿಸುವದಕ್ಕಾಗಿ, ನಾವು ‘ಕನ್ನಡಿಗ’ನ ನಿತ್ಯ ಸಂಚಿಕೆಯನ್ನು ಹೊರಡಿಸಬೇಕೆಂಬ ನಿಶ್ಚಯಿಸಿದಪ್ರಕಾರ ಫಾಲ್ಗುಣ ವದ್ಯ ಅಮಾವಾಸ್ಯೆ ತಾ॥ ೨೨-೩-೩೦ ಶನಿವಾರದಿಂದಲೇ ಪ್ರಾರಂಭಿಸಿದ್ದೇವೆ.

ಸಧ್ಯದಲ್ಲಿ ಮುಂಬೈಯಿಂದ ಬರುವ ಇಂಗ್ಲೀಷ ಪತ್ರಿಕೆಗಳ ಅವತರಣಿಕೆಗಳನ್ನು ಕೊಡುವದಲ್ಲದೇ, ಅಲ್ಲಲ್ಲಿಂದ ನಮ್ಮ ಸ್ವಂತ ಪ್ರತಿನಿಧಿಗಳ ತಂತಿಗಳನ್ನೂ, ಮುಖ್ಯವಿಷಯಗಳ ಬಗ್ಗೆ ತರಿಸುವೆವು. ಇದಕ್ಕೆ ಜನರ ಪ್ರೋತ್ಸಾಹನವು ದೊರೆತು, ಸುಮಾರು ದಿನಾಲು ಎರಡು ಸಾವಿರ ಪ್ರತಿಗಳು ಖರ್ಚಾಗುವಂತೆ ತೋರಿದ ಕ್ಷಣವೇ, ನಾವು ಸ್ವತಂತ್ರವಾಗಿ “ಫ್ರಿಪ್ರೆಸ್” “ಅಸೋಸಿಯೇಟೆಡ್ ಪ್ರಿಸ್” ಗಳ ತಂತಿಗಳನ್ನೂ ಪೂರೈಸಿಕೊಡುವೆವು

ನಿತ್ಯಪತ್ರಿಕೆಯ ಆಕಾರವು ‘ಕನ್ನಡಿಗ’ನ ಈಗಿನ ಆಕಾರದಷ್ಟೇ ಆಗುವದು. ಪುಟಗಳು ನಾಲ್ಕು ಸಂಚಿಕೆಯೊಂದಕ್ಕೆ ಬೆಲೆ ಮೂರು ಕಾಸು ಮಾತ್ರ. ಗದಗು, ಹುಬ್ಬಳ್ಳಿ ಧಾರವಾಡ, ಬೆಳಗಾವಿ, ವಿಜಾಪುರ, ಬಳ್ಳಾರಿ ರಾಯಚೂರ ಮುಂತಾದ ಸ್ಥಳಗಳಿಗೆ ಪಾರ್ಸಲಗಳನ್ನು ಕಳಿಸಿ ಏಜಂಟರ ಮುಖಾಂತರ ಸಂಚಿಕೆಗಳು ಮಾರಲ್ಪಡುವವು. ಈಗ ಮೋಟಾರುಗಳು ಎಲ್ಲೆಡೆಗೂ ಇರುವದರಿಂದ ಅಲ್ಲಲ್ಲಿಯ ಕೆಲವು ಮೋಟಾರುಗಳ ಏಜಂಟರಿಗೆ ನಮ್ಮ ಪತ್ರಿಕೆಯ ಏಜನ್ಸಿಯನ್ನೂ ಕೊಟ್ಟಿದೆ. ಎಲ್ಲೆಲ್ಲಿ ಕೊಟ್ಟಿಲ್ಲವೋ, ಅಲ್ಲಿಯವರು ನಮಗೆ ಪತ್ರ ಬರೆದುಕೊಳ್ಳಬೇಕು. ತಮ್ಮ ತಮ್ಮ ಮೋಟಾರುಗಳಿಂದ ಪಾರ್ಸಲುಗಳನ್ನು ತರಿಸಿಕೊಳ್ಳುವ ವ್ಯವಸ್ಥೆಯನ್ನು ಅಲ್ಲಲ್ಲಿಯ ಮೋಟಾರುಗಳ ಟಿಕೇಟ ಏಜಂಟರು ತಾವೇ ಮಾಡಿಕೊಳ್ಳತಕ್ಕದ್ದು. ಪೋಸ್ಟಿನಿಂದ ಕಳಿಸುವ ವ್ಯವಸ್ಥೆಯನ್ನು ಸಧ್ಯದಲ್ಲಿ ಮಾಡುವ ಇಚ್ಛೆ ನಮಗಿರುವದಿಲ್ಲ. ನಿತ್ಯ ಪತ್ರಿಕೆಯು ಕಾಯಂವಾಗಿ ನಡೆಯುವಂಥ ಸುಪ್ರಸಂಗವು ಈ ಕನ್ನಡ ನಾಡಿನಲ್ಲಿ ಬಂದರೇ ಆದರೆ ಹಾಗೆ ಕ್ರಮೇಣ ಮಾಡಬಹುದು. ತಿಂಗಳ ಗಟ್ಲೆ ತಗೆದುಕೊಳ್ಳುವವರು ಸಹ ಸಧ್ಯದಲ್ಲಿ ದಿನಕ್ಕೆ ಸಂಚಿಕೆಯೊಂದಕ್ಕೆ ಕಾಲು ಆಣೆಯಂತೆ ಲೆಕ್ಕಮಾಡಿ ಏಜಂಟರಿಗೆ ಸಲ್ಲಿಸಬೇಕು.

ಏಜಂಟರಾಗಲಿಚ್ಛಿಸುವವರು ಕೂಡಲೇ ಬರೆದುಕೊಳ್ಳಬೇಕು. ಸಣ್ಣ ಊರವರು ಕನಿಷ್ಟ ಮೂರು ರೂಪಾಯಿಗಳನ್ನೂ, ಪಟ್ಟಣದವರು ಕನಿಷ್ಟ ಹತ್ತು ರೂಪಾಯಿಗಳನ್ನೂ ಠೇವು ಕಳಿಸಬೇಕು. ಸ್ಥಾನಿಕ ಕಾಂಗ್ರೇಸ ಕಮಿಟಿಯ, ಅಥವಾ ವ್ಯಾಖ್ಯ ಸದ್ಗೃಹಸ್ಥರ ಒಂದು ಸರ್ಟಿಫಿಕೇಟನ್ನಾದರೂ ಪ್ರಾಮಾಣಿಕತನದ ಬಗ್ಗೆ ಅರ್ಜಿಯ ಸಂಗಡ ಕಳಿಸತಕ್ಕದ್ದು. ಪ್ರತಿವಾರದಲ್ಲಿ ಲೆಕ್ಕವನ್ನೂ ಹಣವನ್ನೂ, ಮಾರದೇ ಇದ್ದ ಸಂಚಿಕೆಗಳನ್ನೂ ತಿರುಗಿ ಕಳಿಸತಕ್ಕದ್ದು. ನೂರಕ್ಕೆ ೨೫ ರೂಪಾಯಿಗಳಂತೆ ಏಜಂಟರಿಗೆ ಕಮಿಶನ್ ದೊರೆಯುವದು ಮೋಟಾರುಗಳ ಟಿಕೇಟ ಏಜಂಟರುಗಳು ಸಣ್ಣ ಊರುಗಳಲ್ಲಿ ದಿನಾಲು ೧೦ ೧೨ ಪ್ರತಿಗಳನ್ನು ತರಿಸಿಕೊಂಡರೂ ಅವರಿಗೆ ಪ್ರತಿ ತಿಂಗಳು ೨-೩ ರುಪಾಯಿ ಕೂತಲ್ಲಿಯೇ ದೊರೆಯುವವು ಇನ್ನು ಪಟ್ಟಣಗಳಲ್ಲಿ ನೂರಿನ್ನೂರು ಪ್ರತಿಗಳನ್ನು ಮಾರುವ ಏಜಂಟರಿಗೆ ತಿಂಗಳೊಂದಕ್ಕೆ ೧೦ ರೂಪಾಯಿಗಳಿಂದ ೨೦ ರ ವರೆಗೆ ಪಗಾರ ಬೀಳುವದು. ಮೇಲಿನ ಕೆಲವು ದೊಡ್ಡ ಪಟ್ಟಣಗಳಿಗೆ ಸಹ ಇಂಗ್ಲೀಷ ಪತ್ರಿಕೆಗಳಿಗಿಂತಲೂ, ಮೊದಲು ಮಹತ್ವದ ಸುದ್ದಿಗಳು ನಮ್ಮ ಪತ್ರಿಕೆಯಿಂದ ತಿಳಿಯುವವು. ಏಜಂಟರು ಸುದ್ದಿಗಳನ್ನು ಬೀದಿಯಲ್ಲಿ ಒದರುತ್ತ ತಿರುಗಿಯಾಗಲಿ, ಸ್ಥಾನಿಕ ಮುಖ್ಯ ಜನರನ್ನು ಭೆಟ್ಟಿಯಾಗಿ ಅವರ ಹೆಸರನ್ನು ನೋಂದಾಯಿಸಿಕೊಂಡಾಗಲಿ, ಪ್ರಯತ್ನಿಸಿದರೆ ಜನರಲ್ಲಿ ಪ್ರತಿಗಳು ಹೆಚ್ಚಾಗಿ ಖರ್ಚಾಗೇ ಆಗುವವು, ಆದ್ದರಿಂದ ಅಪೇಕ್ಷಕರು ಕೂಡಲೇ ಏಜಂಟರಾಗಲು ಬರೆದುಕೊಳ್ಳತಕ್ಕದ್ದು.

ಜಾಹೀರಾತಿನ ದರ:— ಕಾಯಂ ಜಾಹೀರಾತುಗಳಿಗೆ ಒಂದು ಕಾಲಮ್ಮಿನ ಒಂದು ಇಂಚಿನ ಪ್ರತಿಯೊಂದು ಸಂಚಿಕೆಗೆ ನಾಲ್ಕು ಆಣೆ ಹಂಗಾಮೀ ಜಾಹೀರಾತುಗಳಿಗೆ ಐದು ಆಣೆ

ನಿತ್ಯಪತ್ರಿಕೆಯ ವ್ಯವಸ್ಥಾಪಕರು,
ಕನ್ನಡಿಗನ ಕಾರ್ಯಾಲಯ, ಬಾಗಲಕೋಟೆ.

ಈ ಪತ್ರಿಕೆಯು ಮಂಗೇಶ ವೇಂಕಟೇಶ ರಾಜೇರಾಯರ ಸ್ವಾಮ್ಯಕ್ಕೆ ಒಳಪಟ್ಟಿದ್ದು, ಅವರ ಪರವಾಗಿ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ, ೯ ರಿಂದ ಅಲ್ಲಿಯೇ ಪ್ರಸಿದ್ಧ ಪಡಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

# ಕನ್ನಡಿಗ

ನಿತ್ಯಸಂಚಿಕೆಯು.

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ಗುರುವಾರ ಮಿತಿ ಚೈತ್ರ ಶುದ್ಧ ೪ ಶಕೆ ೧೮೫೨ ತಾ ೩—೪—೩೦ ಸಂಚಿಕೆ ೧೧

## ಸಂಪಾದಕರ ಭೂಮಿ.

ನನ್ನ ದೇಹವು ನಿನ್ನ ವೀರಶಾಸನಕಾಗಿ ।
ಕನ್ನಡನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹಗಂಧವಹವೆಂದು ತಿಳಿಯೈ॥

ಬಾಗಲಕೋಟೆಯ

## ಅಪ್ರತಿಮ ಸತ್ಯಾಗ್ರಹಿಯು.

ಅಸಹಕಾರ ಚಳವಳಿಯ ಮಂಥನದಿಂದ ಹಿಂದುಸ್ಥಾನದಲ್ಲಿ, ಸ್ವಸುಖನಿರಭಿಲಾಷಿಗಳಾದ ಕೆಲವು ಉದಾತ್ತ ಜೀವಿಗಳು ದೇಶದ ಅಜ್ಞಾತವಾದತಳದಿಂದ ಮೇಲಕ್ಕೆ ಒಂದು ಅಂದಿಗಿಂದಿಗೂ ತಮ್ಮ ನಿಸ್ವಾರ್ಥ ಕೃತಿಗಳ ಕಾರಣಗಳಿಂದ ರಾಷ್ಟ್ರದ ಸ್ವಾತಂತ್ರ್ಯಹೋರಾಟದಲ್ಲಿ ಅಲ್ಲಲ್ಲಿಗೆ ಮಿನುಗುತ್ತಿರುವದನ್ನು ನಾವು ನೋಡುತ್ತಿರುವೆವಷ್ಟೆ, ಇಂಥ ಪ್ರಕಾಶಮಾನ ವ್ಯಕ್ತಿಗಳಲ್ಲಿ ಬಾಗಲಕೋಟೆಯ ನೀರಲಕೇರಿ ಶ್ರೀನಿವಾಸರಾಯರನ್ನು ಎಣಿಸಬಹುದು. ಅದೇ ಮಥನದ ಕಾಲಕ್ಕೆ ಬಾಗಲಕೋಟೆಗರ ಸುದೈವದಿಂದ ಅವರಿಗೂ ಒಂದು ರತ್ನವು ಲಭಿಸಿದೆ. ಈ ವೀರನು ತನ್ನೊಳಗೆ ಅಡಗಿರುವ ಜ್ಯೋತಿಯ ಪರಿಜ್ಞಾನವಿಲ್ಲದೆ ಎಲ್ಲಿಯೋ ಒಂದು ಹಳ್ಳಿಯ ಕುಲಕರ್ಣಿಕೆಯನ್ನು ಮಾಡುತ್ತ ಕಾಲಹರಣ ಮಾಡುತ್ತಿದ್ದನು. ಅಸಹಕಾರ ಚಳವಳಿಯು ಗಾಳಿ ತೂರುತ್ತಲೆ ಇವರ ಹೃದಯದಲ್ಲಿ ಗೂಢವಾಗಿದ್ದ ಬೆಂಕಿಯಮೇಲಿನ ಬೂದಿಯು ಹಾರಿಹೋಗಿ, ಇನ್ನು ಮೇಲೆ ರಾಷ್ಟ್ರೀಯಸೇವೆಗಾಗಿಯೇ ತನ್ನ ದೇಹವನ್ನು ಸವೆಸತಕ್ಕದ್ದೆಂಬ ವೀರಪ್ರತಿಜ್ಞೆಯಿಂದ ಹೊರಬಿದ್ದ ಈ ಖಾಸವೀರನು ಈ ಹೊತ್ತಿಗೂ ಚಳವಳಿಯ ಏರಿಳಿತಗಳಿಂದ ಕೊಂಚಾದರೂ ನಿಷಣ್ಣನಾಗದೆ ಪ್ರತಿ ರಾಷ್ಟ್ರಕಾರ್ಯದಲ್ಲಿಯೂ ಮುಂದ ಒಂದು ನಿಂತೇ ಇರುವದನ್ನು ಬರಿ ಬಾಗಲಕೋಟೆಗರೇಕೆ ಇಡಿ ಕರ್ನಾಟಕದವರೆ ನೋಡಿದ್ದಾರೆ.

ಸರದಾರ ವಲ್ಲಭಭಾಯಿಯು ಗಾಂಧಿಯವರ ಬಲಗೈ ಇದ್ದಂತೆ ಕರ್ನಾಟಕದಲ್ಲಿ ಡಾ॥ ಹರ್ಡೀಕರರಿಗೆ ನಮ್ಮೂರ ನೀರಲಕೇರಿ "ಸೀನಪ್ಪ"ನು ಬಲಗೈ ಇದ್ದಂತೆ ಸರಿ. ಸೀನಪ್ಪನು ಎದೆಯಮೇಲಿನ ಕೈಇದ್ದಂತೆ! ಅವರ ಯಾವಕೆಲಸಕ್ಕಾದರೂ ಸೀನಪ್ಪನು ಬೇಕು. 'ಸೀನಪ್ಪ'ನು ಯಾವ ಕೆಲಸ ಹೇಳಿದರೂ ಸ್ವೀಕರಿಸಿಕೊಂಡು ಒಬ್ಬ ಅಂಥ ತತ್ಪರನೆಂಬುದು ಡಾಕ್ಟರರಿಗೆ ಪೂರ್ಣ ಮನವರಿಕೆ. ಡಾಕ್ಟರರ ಆಜ್ಞೆಯನ್ನು ಶಿರಸಾವಹಿಸಿ ಅದೆಂಥ ದುರ್ಘಟದೊಳಗಿದ್ದರೂ ಅವಕ್ಕೆಲ್ಲ ಎದೆಗೊಟ್ಟು ಅವರ ಅಪ್ಪಣೆಯನ್ನು ಎದೆಗೊಟ್ಟು ಅವರ ಅಪ್ಪಣೆಯನ್ನು ಕೊನೆಗಾಣಿಸುವದೇ ಸೀನಪ್ಪನಿಗೊಂದು ಸಾತ್ವಿಕವಾದ ಸಂತೃಪ್ತಿ.

ಈ ಹೊತ್ತಿಗೆ ಸೀನಪ್ಪನೆಂದರೆ ' A hero of many battles ' ಅನೇಕಕಾಳಗಗಳನ್ನು ಗೆದ್ದ ಬಂಟನು. ಹತ್ತಿಪ್ಪತ್ತು ಸ್ವಯಂಸೇವಕರ ಶಿಬಿರಗಳನ್ನು ನಡಿಸಿದ ಅಧಿಕಾರಿಯು, ನಾಗಪೂರ ಸತ್ಯಾಗ್ರಹದಲ್ಲಿ ಕಾರಾಗೃಹವಾಸವನ್ನನುಭವಿಸಿದ ಮನಸ್ವಿಯು, ಕರ್ನಾಟಕದಲ್ಲಿಯ ಸೇವಾದಲದ ಆಧಾರಸ್ತಂಭನು, ಅನೇಕ ಕಾಂಗ್ರೆಸ ಕಾನಫರನ್ಸಗಳ ವ್ಯವಸ್ಥೆಯನ್ನು ವಹಿಸಿಕೊಂಡು ಅವುಗಳನ್ನೆಲ್ಲ ನಿರಾಯಾಸದಿಂದ ಯಥಾವತ್ತಾಗಿ ಕೊನೆಗಾಣಿಸಿದ ಸ್ವಯಂಸೇವಕನು.

ಇಂಥಿಂಥ ' ಸೀನಪ್ಪನು ' ನಿನ್ನಿನ ದಿವಸ ಡಾಕ್ಟರ ಪತ್ರದ ಪ್ರಕಾರ ಕಾಯಿದೇಭಂಗದ ಭೀಕರವಾದ ರಣಸಂಗ್ರಾಮಕ್ಕೆ ಮಿಡುಕದೆ ಮಿಸುಕದೆ ಹುಬ್ಬಳ್ಳಿಗೆ ತೆರಳಿದನು. ಇದು ಧೈರ್ಯ! ಇದು ಮನೋದಾರ್ಢ್ಯ!! ಚಿಂತೆಯಿಲ್ಲ ಇವೆಲ್ಲ ಹೊರಗಿನವರ ಹುರುಪಿನಿಂದ ಬರತಕ್ಕವುಗಳಲ್ಲ. ಒಳಗಿಂದೊಳಗೇ ಸ್ಫುರಿಸುತ್ತಿರಬೇಕು. ಸ್ವದೇಶ, ಸ್ವರಾಷ್ಟ್ರ, ಸ್ವಜನರು, ಎಂಬ ಅಭಿಮಾನದ ಕಿಡಿಗಳು! ಸೀನಪ್ಪನಂಥ ದರಗಂಡ ಯೋದ್ಧರು ಹುಟ್ಟಿಬೆಳೆದ ಊರಿನಲ್ಲಿ ಅವನಿಗೆ ಸರಿಹೋಗಲು ಇತರ ಸತ್ಯಾಗ್ರಹಿಗಳು ಇಲ್ಲದೇ ಹೋಗಬಹುದೇ! ಸೀನಪ್ಪನು ಎತ್ತಿಹಿಡಿದಿರುವ ನಿಶಾನೆಯನ್ನು ಈ ಸತ್ಯಾಗ್ರಹ ಯುದ್ಧವು ಕೊನೆಗಾಣುವವರೆಗೆ ಅವನ ತರುವಾಯ ನಾವದನ್ನು ಎತ್ತಿ ಹಿಡಿಯುತ್ತೇವೆಂಬ ಹ್ಯಾವದ ತರುಣರು ಬಾಗಲಕೋಟೆಯಲ್ಲಿ ಹೊರಡಲಿಕ್ಕಿಲ್ಲವೇ! ಎಷ್ಟು ಜನರು ಹೊರಡುವರು ಇದರ ಪರೀಕ್ಷೆ ಆಗಲೇಬೇಕಾಗಿದೆ!! ಅಭಿಮಾನ ಶಾಲಿಗಳು ಮುಂದ ಬರಲಿ. ಬಾಗಲಕೋಟೆಯು ಸೀನಪ್ಪನಂಥ ವೀರಾಗ್ರಣಿಗಳ ತೌರೂರು ಎಂಬುದನ್ನು ಸಿದ್ಧ ಮಾಡಿಕೊಡಿರಿ. ಸೀನಪ್ಪನು ಹೇಡಿಗಳ ಮಧ್ಯದಲ್ಲಿ ಹುಟ್ಟಿಬೆಳೆದವನಲ್ಲ. ನಮ್ಮಂಥ ಕೆಚ್ಚೆದೆಯ ಕಿರಿಯರ ನಡುವಿನಲ್ಲಿ ಬೆಳೆದವನೆಂಬುದನ್ನು ತೋರಿಸುವ ಬಯಕೆಯುಳ್ಳವರೆಲ್ಲ ಈಗ ಹೊರಹೊರಡಿರಿ.

# ಕರ್ನಾಟಕದಲ್ಲಿಯ ಸಮರ ಸನ್ನಾಹ.

## ಸತ್ಯಾಗ್ರಹಿ ಸೈನಿಕರ ಚಲನವಲನವು.

ಹುಬ್ಬಳ್ಳಿಯಿಂದ ಅಂಕೋಲೆಗೆ ೧೩ ನೇ ತಾರೀಖಿಗೆ ಸತ್ಯಾಗ್ರಹಿ ಪಥಕವು ಹೊರಡುವದಿದ್ದು, ಅವರಿಗೆ ಮಾರ್ಗಾನುಕೂಲತೆಯನ್ನು ಒದಗಿಸುವದಕ್ಕಾಗಿ ನಾಳೆ ೬ ನೇ ತಾರೀಖಿಗೆ ೫ ಜನರದೊಂದು ಗುಂಪು ಹುಬ್ಬಳ್ಳಿಯಿಂದ ಅಂಕೋಲೆ ಕಡೆಗೆ ಸಾಗಿ ದಾರಿಯಲ್ಲೆಲ್ಲ ಹಿಂದೆ ಬರುವ ಪದಾತಿಯ ಬಿಡಾರುಗಳ ವ್ಯವಸ್ಥೆಯನ್ನು ಮಾಡುತ್ತ ಮುಂದೆ ಮುಂದೆ ಸಾಗುವದು ಶ್ರೀ ಕೌಜಲಗಿ ಹಣಮಂತರಾಯರು ಕರ್ನಾಡ ಸದಾಶಿವರಾಯರು ಮತ್ತು ಗುಳವಾಡಿ ಮೂವರೂ ಈಗಾಗಲೇ ಅಂಕೋಲೆಗೆ ಹೋಗಿ ನಿಂತುಕೊಂಡಿದ್ದಾರೆ ಅಲ್ಲಿಯ ಪದ್ಧತಿಯಲ್ಲಿ ಈ ಮೂವರನು ಕೂಡಿದ ೧೩ ನೇ ತಾರೀಖಿಗೆ ಹೊರಡುವ ಎರಡೂ ಪಥಕಗಳಲ್ಲೂ ೩೩ ರಂತೆ ಸ್ವಯಂಸೇವಕರು ಇರತಕ್ಕದ್ದೆಂದು ಗೊತ್ತುಮಾಡಿದ್ದಾರೆ ಸ್ವಯಂಸೇವಕರನ್ನು ಸತ್ಯಾಗ್ರಹಿಗಳನ್ನಾಗಿ ಆರಿಸುವ ಅಧಿಕಾರವು ಡಾ. ಹರ್ಡಿಕರರಿಗೆ ಒಪ್ಪಿಸಲ್ಪಟ್ಟಿದೆ ಮತ್ತು ದೇಶಭಕ್ತ ಗಂಗಾಧರರು ಪದಾತಿಗಳಿಗೆ ಮುಖ್ಯಸ್ಥನನ್ನು ನೇಮಿಸುವರು

### ಕರ್ನಾಟಕದ ಸ್ತ್ರೀಯರೂ ಸತ್ಯಾಗ್ರಹಕ್ಕೆ ಮುಂದೆ ಬರಹತ್ತಿರುವರು.

ಶ್ರೀಮತಿ ಉಮಾಬಾಯಿ ಮತ್ತು ಜಾನಕಿಬಾಯಿ ಇವರೆ ಮೊದಲಾದ ಕರ್ನಾಟಕದ ಹೆಂಗಳೆಯರು ಸತ್ಯಾಗ್ರಹಕ್ಕೆ ಹೆಸರು ಕೊಟ್ಟದ್ದಕ್ಕಾಗಿ ಕರ್ನಾಟಕವು ಇವರನ್ನು ಎಷ್ಟು ಅಭಿನಂದಿಸಿದರೂ ಕಡಿಮೆಯೇ ಇದೆ. ಕರ್ನಾಟಕದಲ್ಲಿ ಮತ್ತೆ ಹೆಚ್ಚಿಗೆ ಸ್ತ್ರೀ ಸ್ವಯಂಸೇವಿಕೆಯರನ್ನು ನೇಕರಿಸಲಿಕ್ಕೆ ಯುದ್ಧಮಂಡಳವು ಇವರಿಗೆ ಕೇಳಿಕೊಂಡಿದೆ. ಸತ್ಯಾಗ್ರಹಿಗಳ ಶಿಕ್ಷಣಕ್ಕಾಗಿ ಹುಬ್ಬಳ್ಳಿ ಬೆಳಗಾವಿ ಮತ್ತು ಮಂಗಳೂರ ಈ ಮೂರು ಊರುಗಳಲ್ಲಿ ಶಿಕ್ಷಣ ಶಿಬಿರಗಳನ್ನು ಹೊರಡಿಸಬೇಕೆಂದು ಗೊತ್ತಾಗಿದೆ ಅಂಕೋಲೆಯಂತೆ ಕಾರವಾರದಲ್ಲಿಯೂ ಉಪ್ಪಿನ ಕಾಯದೆ ಭಂಗದ ಕಾರ್ಯವು ಪ್ರತ್ಯಕ್ಷವಾಗಿ ನಡೆಯಬಹುದೆಂದೂ ಕಮಿಟಿಯವರು ವಿಚಾರಿಸಿದ್ದಾರೆ.

### ಅಹಮದಾಬಾದದ ಗಿರಣಿಗಳ ಮಾಲಕರು ಮಹಾತ್ಮರ ಭೆಟ್ಟಿಗೆ ತೆರಳಿದರು

ಮಹಾತ್ಮಾ ಗಾಂಧಿಯವರು ತಮ್ಮ ಶಾಂತಿ ಸೈನ್ಯದೊಂದಿಗೆ ಈ ಹೊತ್ತು ಸಾಯಂಕಾಲಕ್ಕೆ ಸುರತನಗರಕ್ಕೆ ಮುಟ್ಟುವರು ಅವರನ್ನು ಸಂದರ್ಶಿಸಬೇಕೆಂದು ಹಂಬಲಿಸುತ್ತಿರುವ ಅಹಮದಾಬಾದದ ಗಿರಣಿಗಳ ಸಾವುಕಾರರು ಸ್ಪೆಶಲ್ ಟ್ರೇನಿನಿಂದ ಸುರತಿಗೆ ಹೊರಡತಕ್ಕವರಿದ್ದಾರೆ. ಮುಂಬಯಿಯಿಂದ ಸುರತಕಡೆಗೆ ಬರುವ ಗಾಡಿಗಳಲ್ಲೆಲ್ಲ ಮಹಾತ್ಮಾಜಿಯವರ ದರ್ಶನಾರ್ಥಿಗಳ ಗದ್ದಲವು ಅತಿಶಯವಾಗಿದೆ. ಈ ಗಿರಣಿ ಸಾವುಕಾರರು ಮಹಾತ್ಮರೊಡನೆ ಸಮಾಲೋಚಿಸಿ ವಿದೇಶೀ ಬಟ್ಟೆಗಳ ಬಹಿಷ್ಕಾರದ ಬಗ್ಗೆ ಹೆಚ್ಚು ಉಗ್ರತರವಾದ ಉಪಾಯಗಳನ್ನೇ ಕೈಕೊಳ್ಳುವವರಿದ್ದಾರೆ.

ಮತ್ತು ಈಗಿನ ಚಳವಳಿಗೆ ದ್ರವ್ಯದಿಂದ ಸಹಾಯಮಾಡುವದಲ್ಲದ ಮನಿಗೊಬ್ಬರಂತೆ ಆಹುತಿ ಹೋಗಬೇಕೆಂದು ನಿರ್ಧಾರದಿಂದಲೇ ಹೊರಟಿರುವರು.

### ವಿದೇಶಿ ಬಟ್ಟೆಗಳಿಗೆ ಮುಂಬಯಿ ಕಪ್ಪಡ ವ್ಯಾಪಾರಸ್ಥರ ಬಹಿಷ್ಕಾರವು

ಮುಂಬಯಿ ಕಪ್ಪಡ ವ್ಯಾಪಾರಸ್ಥರೆಲ್ಲ ಸಭೆಸೇರಿ ಇನ್ನು ಲೆಂಕಶಾಯರ ಅರವಿಗೆ ತಾವು 'ಆರ್ಡರ' ಕೊಡಬಾರದೆಂದೂ ಮತ್ತು ಕೊಟ್ಟ ಆರ್ಡರುಗಳನ್ನು ಸಹ ಇನ್ನು ಮೂರು ತಿಂಗಳವರೆಗೆ ಹಿಂತಡೆದು ಹಿಡಿಯಬೇಕೆಂದು ಅವರಿಗೆ ತಿಳಿಸಬೇಕೆಂದೂ ಎಂಬ ಆಶಯದ ಠರಾವುಗಳನ್ನು ಚರ್ಚಿಸಹತ್ತಿದ್ದಾರೆ. ಸಭೆಗೆ ೩೦೦ ಕಪ್ಪಡ ವರ್ತಕರು ಆಗಮಿಸಿದ್ದರು

### ಸರಕಾರ "ಸಾಲ್ಟ ಇನಸ್ಪೆಕ್ಟರನೇ ಸತ್ಯಾಗ್ರಹಿಯಾಗಿ ಬಂದಿದ್ದಾನೆ

ಕಲಕತ್ತೆಯ ಹತ್ತಿರಿರುವ ಅಭಯ ಆಶ್ರಮದಲ್ಲಿ ಕಾಯಿದೆ ಭಂಗದ ಸಲುವಾಗಿ ಸ್ವಯಂಸೇವಕ ಜನರ ಉತ್ಸಾಹವು ಸೂಸಿ ಹರಿಯುತ್ತಿದೆ ಗಾಂಧಿಜಿಯವರ ಪ್ರಿಯಮಿತ್ರನಾದ ಕೃಷ್ಣದಾಸನು ಅಭಯ ಆಶ್ರಮದ ಕುಲಪತಿಯು. ಸುಡಿತ ಜೀವನಲಾಲ ಎಂಬಾತನು ಮೊದಲು ಸರಕಾರಿ ಉಪ್ಪಿನ ಖಾತೆಯಲ್ಲಿ ಇನಸ್ಪೆಕ್ಟರ ಇದ್ದವನು ಈಗ ಈ ಆಶ್ರಮದ ಸತ್ಯಾಗ್ರಹಿಗಳಿಗೆ ಉಪ್ಪು ತಯಾರಿಸುವ ರೀತಿಯನ್ನು ಕಲಿಸ ಹತ್ತಿದ್ದಾರೆ ಈ ಆಶ್ರಮದಿಂದ ಈಗೊಂದು ೪೨ ಜನ ಸ್ವಯಂಸೇವಕರ ಪಥಕವು ಕೋಂಟಾಯಿ ಕಡೆಗೆ ಹೊರಟು ಹೋಗಿದ್ದು ೨೦ ಸ್ವಯಂಸೇವಕರ ದ್ವಿತೀಯ ಪದಾತಿಯು ನಾಳೆಗೇನೆ ಕಲಕತ್ತೆಗೆ ಬಂದು ತಲ್ಪುವದು. ಕಾಲುನಡಿಗೆಯಿಂದ ಬರುವಾಗ್ಗೆ ಮಾರ್ಗದಲ್ಲೆಲ್ಲ ಚಳವಳಿಯ ಪ್ರಸಾರ ಕಾರ್ಯವನ್ನು ಮಾಡುತ್ತಲೇ ಸಾಗಿರುವದು.

### ಸರಕಾರಿ ನೌಕರರಿಗೆ ಸಾಮಾಜಿಕ ಬಹಿಷ್ಕಾರವೇ ತಕ್ಕುದ್ದು.

ಗಂಗಾಪುರದಲ್ಲಿ ಕೂಡಿದ ಕಾಶೀ ಜಿಲ್ಲೆಯ ರಾಜಕೀಯ ಪರಿಷತ್ತಿನಲ್ಲಿ ರಾಷ್ಟ್ರೀಯ ಚಳವಳಿಯನ್ನು ವಿರೋಧಿಸುವ ಸರಕಾರಿ ನೌಕರರನ್ನು ಬಹಿಷ್ಕರಿಸುವದೇ ನ್ಯಾಯವಾದದ್ದೆಂಬ ಠರಾವು ಸ್ವೀಕೃತವಾಗಿದೆ ಗುಜರಾಥದ ಖೇಡ ಭರೋಚ ಸುರತ ಮೊದಲಾದ ಜಿಲ್ಲೆಗಳಲ್ಲಿಯಂತೂ ಬಹಿಷ್ಕಾರವು ಈಗಾಗಲೇ ರೂಢಿಯಲ್ಲಿಬಂದು ಸರಕಾರೀ ನೌಕರರನ್ನು ಸ್ಕೃತಿಯ ಮೇಲೆ ತರಹತ್ತಿದೆ.

## ಗಾಂಧಿಯನ್ನು ಏನುಮಾಡಬೇಕೆಂಬುದು ಮುಂಬಯಿ

# ಗವ್ಹರ್ನರರಿಗೆ ತೋಚದಾಗಿದೆ!

ಮ॥ ಗಾಂಧಿಯವರ ಚಳವಳಿಯಂತೂ ದಾವಾಗ್ನಿಯಂತೆ ಸಮಗ್ರ ಹಿಂದುಸ್ಥಾನವೆಲ್ಲ ಆಕ್ರಮಿಸಹತ್ತಿದೆ. ಈ ದಾವಾಗ್ನಿಯ ಜ್ವಾಲೆಯು ಗಾಂಧಿಯವರಿಂದ ಹೊರಡುತ್ತಿದ್ದು, ಈ ಉಗಮವನ್ನು ಹೇಗೆ ಬಂದುಮಾಡಬೇಕೆಂಬುವ ಆಲೋಚನೆಯ ಭಾರವು ಪಾಪ ಮುಂಬಯಿ ಗವ್ಹರ್ನರರ ಮೇಲೆ ಬಿದ್ದಿದೆ. ಅದಕ್ಕಾಗಿ ಅವರು ಅಕಲು ಕೇಳಬಂಲಿಕ್ಕೆ ದಿಲ್ಲಿಯವರೆಗೆ ಸಹ ಧಾವಿಸಿ ಹೋಗಿ ಬಂದರು, ವೈಸರಾಯರು ಏನು ಉಪಾಯ ಹೇಳಿ ಕಳಿಸಿರುವರೋ ಇನ್ನೂ ತಿಳಿಯಲಿಲ್ಲ. ಆದರೆ ಅದು ನಮ್ಮ ಗವ್ಹರ್ನರರಿಗೆ ಅಷ್ಟು ಸಮರ್ಪಕ ತೋರಿಲ್ಲವಾಗಿ ಕಾಣುತ್ತಿದೆ ಯಾಕಂದರೆ ಅಲ್ಲಿಂದ ಬಂದಕೂಡಲೆ ಮತ್ತೆ ಅದೆ ಮಾತಿನಬಗ್ಗೆ ವಿಚಾರ ಮಾಡಲು ಗವ್ಹರ್ನರ ಸಾಹೇಬರು ತಮ್ಮ ಮಂತ್ರಿಮಂಡಲವನ್ನು ಕರಿಸಿಕೊಂಡಿರುವರು, ಈ ಕಾರ್ಯಕರ್ತರ ಆಲೋಚನಾ ಸಭೆಯ ಅಧಿವೇಶನದಿಂದ ಏನು ತಿರುಳು ಹೊರಬೀಳುತ್ತದೋ ನೋಡಬೇಕು. ವೈಸರಾಯರು ಗಾಂಧಿಯನ್ನು ಈಗಲೇ ಹಿಡಿಯಬಾರದೆಂಬ ಅಭಿಪ್ರಾಯದವರಾಗಿದ್ದಾರೆಂದೂ ಒಂದು ವಾರ್ತೆ. ಅದು ಗವ್ಹರ್ನರ ಸಾಹೇಬರಿಗೆ ಬಹುಶಃ ರುಚಿಸಿರಲಿಕ್ಕಿಲ್ಲ. ಅದಕ್ಕಾಗಿ ಇಷ್ಟೊಂದು ಆಲೋಚನೆಯಲ್ಲಿ ಬಿದ್ದಿದ್ದಾರೆ.

### ಗಾಂಧಿಯವರ ಉಪ್ಪಿಗೆ ಸರಕಾರವು ಜೇಕಳಿ ಹೊಡೆಯುವದಂತೆ.

ಮ॥ ಗಾಂಧಿಯವರನ್ನು ಹಿಡಿಯದೆ ಬಿಡುವದಾದರೆ ಅವರು ತಯಾರಿಸುವ ಉಪ್ಪಿನ ಮಾಳಿಗಳನ್ನು ನೀರಿನಿಂದ ಹರಿಯಿಸಿ ಬಿಡಬೇಕೆಂಬ ಯೋಜನೆ ಹಾಕಿ ಮುಂಬಯಿ ಸರಕಾರದವರ ನೀರು ಹೊಡೆಯುವ ಕ್ಯಾನವಾಸ ಕೊಳವೆಗಳನ್ನು ಕೊಂಡಿಟ್ಟಿರುವಂತೆ ಈ ಸೀನ ಗೊಡ್ಡ ಪ್ರಮಾಣದ ಜೇಕಳಿಗಳಿಂದ ಜೋರಿಸಿದ ನೀರು ಹೊಡೆದು ಗಾಂಧಿಯ ಸೈನ್ಯವು ತಯಾರಿಸಿದ ಉಪ್ಪನ್ನೆಲ್ಲ ಮತ್ತೆ ಸಮುದ್ರಕ್ಕೆ ಕೂಡಿಸಿ ಬಿಡಬೇಕೆಂದು ಯೋಚಿಸಿದ್ದಾರಂತೆ. ಆದರೂ ಇದರಿಂದ ಗಾಂಧಿಯವರು ಹಿಮ್ಮೆಟ್ಟಲಿಕ್ಕಿಲ್ಲೆಂದೂ ಸರಕಾರವು ತಿಳಕೊಂಡಿದೆಯಂತೆ ಸರಕಾರಕ್ಕೆ ಇನ್ನೂ ಇಷ್ಟಾದರು ಬದ್ಧಿಯಿದೆ ಅನ್ನಬೇಕು?

### ಎಲ್ಲರೂ ದಂಡಿಗ್ರಾಮದಲ್ಲಿಯೇ ನೆರೆಯ ಬೇಡಿರಿ.

ಮಹಾತ್ಮರು ಉಪ್ಪಿನ ಕಟ್ಟಳೆಯ ಹೋಮವನ್ನು ದಂಡಿಗ್ರಾಮದಲ್ಲಿ ಮಾಡುವವರಷ್ಟೆ ಅವರೀ ಮಹಾಯಜ್ಞವನ್ನು ಕಣ್ಣಾರೆ ಕಂಡು ಪುಣ್ಯ ಪಡಕೊಳ್ಳಬೇಕೆಂಬ ಅಸಂಖ್ಯ ಭಾವಿಕರು ದಂಡಿಯಲ್ಲಿ ಈಗಾಗಲೆ ಹೆಚ್ಚು ನೆರೆಯ ಹತ್ತಿರುವದಂತೆ. ದಂಡಿಯು ಸಣ್ಣಗ್ರಾಮವಿದ್ದು ಎಲ್ಲರೂ ಅಲ್ಲಿಯೇ ಸೇರುವದರಿಂದ ಮುಖ್ಯಕಾರ್ಯಕ್ಕೆ ಆತಂಕ ಉಂಟಾಗುವ ಸಂಭವವಿರುವದರಿಂದ ಶ್ರೀ ಮಹಾದೇವ ದೇಸಾಯರು ಇಂಥ ಭಾವಿಕರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ನೀವು ಬರುವದರಿಂದ ವಿನಾಕಾರಣ ಜನಸಂದಣಿ ಹೆಚ್ಚಿ ಆಗಬೇಕಾದ ಕಾರ್ಯವು ಯಥಾವತ್ತಾಗಿ ಸಾಗಲಿಕ್ಕೆ ಬಹಳ ತೊಂದರೆಯುಂಟಾಗುವ ಸಂಭವವಿದೆ, ನಿಮಗೂ ಯಾವ ವ್ಯವಸ್ಥೆ ಇಲ್ಲದೆ ಆಯಾಸ ಪಡಬೇಕಾಗುವದು. ಕಾರಣ ಹೆಚ್ಚಿನ ಜನರು ಯಾರೂ ದಂಡಿಗೆ ಬರಬಾರದು.

### ಜಪಾನೀ ಜನರ ಸಹಾನುಭೂತಿಯು.

ಮಹಾತ್ಮಾಜಿಯವರ ಗುಣಗಾನವನ್ನು ಅನೇಕರಂತೆ ಜಪಾನಿ ಜನರೂ ಮಾಡಲಾರಂಭಿಸಿರುವರು. ಮೊನ್ನೆ ಜಪಾನ ದೇಶದೊಳಗಿನ ಕೋಬೆಪಟ್ಟಣದಲ್ಲಿ ದೊಡ್ಡದೊಂದು ಸಾರ್ವಜನಿಕ ಸಭೆಕೂಡಿ ಸಭೆಯಲ್ಲಿ ಗಾಂಧಿಯವರ ಈ ಅಹಿಂಸಾಮಯ ಚಳವಳಿಯ ಮಹಾತ್ಮೆಯನ್ನೂ ಅದರ ಆವಶ್ಯಕತ್ವವನ್ನೂ ಇಡಿ ಜಗತ್ತಿನ ಜನರೆಲ್ಲರೂ ಅದಕ್ಕೆ ನೆರವಾಗಬೇಕೆಂಬದನ್ನೂ ತಿಳಿ ಹೇಳಿ ಆಮೇಲೆ ಜಪಾನಕ್ಕೆ ಶಕ್ಯವಿದ್ದಷ್ಟು ರೀತಿಯಿಂದ ಗಾಂಧಿಯವರಿಗೆ ನೆರವಾಗಲು ಜಪಾನವು ಸಿದ್ಧವಿದೆಂಬ ಆಶಯದ ಠರಾವನ್ನು ಸಭೆಯವರೆಲ್ಲ ಅಂಗೀಕರಿಸಿದರು.

ಸಮುದ್ರಾಚೆಗಿರುವ ಜಪಾನಿ ಜನರೇ ಮೊದಲಾದವರು ಗಾಂಧಿಯವರ ಬೆಂಬಲಕ್ಕೆ ಈ ಪ್ರಕಾರವಾಗಿ ಧಾವಿಸಿ ಬರುತ್ತಿರುವಾಗ ಒಂದೇ ಮನೆಯಲ್ಲಿರುವವರಾದ ಹಿಂದೀಯರಲ್ಲನೇಕರು ಇನ್ನು ಯುಕ್ತಾಯುಕ್ತ ವಿಚಾರ ನಡೆಸಿರುವದು ಹಿಂದೀಯರು ಎಂಥ ಅಧಃಪಾತವನ್ನು ಹೊಂದಿರುವರೆಂಬದನ್ನು ತೋರಿಸುತ್ತಿದೆ.

### ಸಿಂಧಪ್ರಾಂತದ ಸತ್ಯಾಗ್ರಹವು,

ಸಿಂಧಪ್ರಾಂತದ ಮುಖಂಡರು ನಿನ್ನೆ ಹೈದರಾಬಾದ (ಸಿಂಧ) ದಲ್ಲಿ ಸಮ್ಮಿಲಿತರಾಗಿ, ತಮ್ಮದೊಂದು ಯುದ್ಧಮಂಡಳವನ್ನು ಏರ್ಪಡಿಸಿಕೊಂಡು ಸಭೆಗೆ ಎಲ್ಲ ಸ್ವಯಂಸೇವಕರನು ಹೈದರಾಬಾದದಲ್ಲಿಯೇ ಕಲೆಹಾಕಿ ಅಲ್ಲಿಂದಲೇ ಕರಾಚಿಗೆ ತೆರಳಬೇಕೆಂದು ನಿರ್ಧಾರಮಾಡಿದ್ದಾರೆ.

### ಕರ್ನಾಟಕ ಪ್ರಾಂತದ ಸಿದ್ಧತೆ.

೨೦ ನೇ ತಾರೀಖಿಗೆ ಹುಬ್ಬಳ್ಳಿಯಲ್ಲಿ ಕರ್ನಾಟಕ ಸತ್ಯಾಗ್ರಹ ಕಮಿಟಿಯವರು ಕೂಡಿ ಎಪ್ರೀಲ ೧೩ ನೇ ತಾರೀಖಿನ ದಿನವೇ ಉಪ್ಪಿನ ಕಾಯದೆ ಭಂಗಕ್ಕಾಗಿ ಅಂಕೋಲೆಗೆ ತೆರಳುವದೆಂದು ನಿರ್ಧರಿಸಿದ್ದಾರೆ. ಅದೇ ದಿವಸವೇ ಒಂದು ಪಥಕವು ಹುಬ್ಬಳ್ಳಿಯಿಂದ ಮತ್ತೊಂದು ಪಥಕವು ಬೆಳಗಾಂವಿಯಿಂದ ಹೊರಟು ಎರಡೂ ಅಂಕೋಲೆಯಲ್ಲಿ ಕೂಡಿ ಕೆಲಸಮಾಡತಕ್ಕವು.

## ಹಾವೇರಿಯಲ್ಲಿ ಅಪೂರ್ವ ಉತ್ಸಾಹವು.

### ೨೭ ಜನರು ಸತ್ಯಾಗ್ರಹಿಗಳು.

### ೬೫ ವರ್ಷದ ಮುದುಕರಾದ

# ಹೇರ್ಲೇಕರ ವಕೀಲರು ಸೈನಿಕರಾದರು

ಶ್ರೀ. ಬಿಂದು ಮಾಧವ ಬುರ್ಲಿ ಯವರು ಈ ಊರಿಗೆ ಬಂದಂದಿನಿಂದ ಊರಲ್ಲಿ ಹೊಸ ಹುರುಪು ಉತ್ಪನ್ನವಾಗಿದೆ ವಿದ್ಯಾರ್ಥಿಗಳೆಲ್ಲರೂ ಅವರ ಬೆನ್ನು ಹತ್ತಿರುವರು. ೩೦ ನೇ ತಾರೀಖಿನ ದಿವಸ, ಅಸ್ಪೃಶ್ಯ ಜನಾರೋಹಣವಾದ ಕೂಡಲೆ ತರುಣರ ಸಭೆಯು ಮಾಡಲ್ಪಟ್ಟಿರು. ಬುರ್ಲಿಯವರ ಸ್ಫೂರ್ತಿದಾಯಕ ಭಾಷಣವನ್ನು ಕೇಳಿ, ೧೪ ಜನರು ಸ್ವಯಂಸೇವಕರಾದರು. ಸಾಯಂಕಾಲಕ್ಕೆ ಹೆರ್ಲೇಕರ ವಕೀಲರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಜರುಗಿಸಲ್ಪಟ್ಟಿತು. ಶ್ರೀ ಪರಮಣ್ಣಾ ಹೊಸಮನಿ, ಬುರ್ಲಿಯವರ ವ್ಯಾಖ್ಯಾನಗಳಾದವು. ಸಭೆಯಲ್ಲಿ ಮತ್ತೆ ೭೬ ಜನರು ಸ್ಫೂರ್ತಿಗೊಂಡು, ಸತ್ಯಾಗ್ರಹಿಗಳಾದರು. ಈ ಸಭೆಗೆ ನೆರೆದ ಜನರನ್ನು ನೋಡಿದರೆ, ಅಸಹಕಾರದ ಕಾಲವು ನಮಗೆ ನೆನಪಾಗುತ್ತದೆ

# ‘ಕನ್ನಡಿಗ’ನ ನಿತ್ಯ ಸಂಚಿಕೆ!

ಸಧ್ಯದಲ್ಲಿ ಮುಂಬೈಯಿಂದ ಬರುವ ಇಂಗ್ಲೀಷ ಪತ್ರಿಕೆಗಳ ಅವತರಣಿಕೆಗಳನ್ನು ಕೊಡುವದಲ್ಲದೇ, ಅಲ್ಲಲ್ಲಿಂದ ನಮ್ಮ ಸ್ವಂತ ಪ್ರತಿನಿಧಿಗಳ ತಂತಿಗಳನ್ನೂ, ಮುಖ್ಯ ವಿಷಯಗಳ ಬಗ್ಗೆ ತರಿಸುವೆವು. ಇದಕ್ಕೆ ಜನರ ಪ್ರೋತ್ಸಾಹನವು ದೊರೆತು, ಸುಮಾರು ದಿನಾಲು ಎರಡು ಸಾವಿರ ಪ್ರತಿಗಳು ಖಪಾಟವಾಗ ತೊಡಗಿದಾಕ್ಷಣವೇ, ನಾವು ಸ್ವತಂತ್ರವಾಗಿ “ಫ್ರಿಪ್ರೆಸ್” “ಅಸೋಸಿಯೇಟೆಡ್ ಪ್ರೆಸ್” ಗಳ ತಂತಿಗಳನ್ನೂ ಪೂರೈಸಿಕೊಡುವೆವು

ನಿತ್ಯಪತ್ರಿಕೆಯ ಆಕಾರವು ‘ಕನ್ನಡಿಗ’ನ ಈಗಿನ ಆಕಾರದಷ್ಟೇ ಆಗುವದು. ಪುಟಗಳು ನಾಲ್ಕು. ಸಂಚಿಕೆಯೊಂದಕ್ಕೆ ಬೆಲೆ ಮೂರು ಕಾಸು ಮಾತ್ರ. ಗದಗು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಾಪುರ, ಬಳ್ಳಾರಿ ರಾಯಚೂರ ಮುಂತಾದ ಸ್ಥಳಗಳಿಗೆ ಪಾರ್ಸಲಗಳನ್ನು ಕಳಿಸಿ ಏಜಂಟರ ಮುಖಾಂತರ ಸಂಚಿಕೆಗಳು ಮಾರಲ್ಪಡುವವು. ಈಗ ಮೋಟಾರುಗಳು ಎಲ್ಲೆಡೆಗೂ ಇರುವದರಿಂದ ಅಲ್ಲಲ್ಲಿಯ ಕೆಲವು ಮೋಟಾರುಗಳ ಏಜಂಟರಿಗೆ ನಮ್ಮ ಪತ್ರಿಕೆಯ ಏಜನ್ಸಿಯನ್ನೂ ಕೊಟ್ಟಿದೆ. ಎಲ್ಲೆಲ್ಲಿ ಕೊಟ್ಟಿಲ್ಲವೋ, ಅಲ್ಲಿಯವರು [illegible] ಪತ್ರ ಬರದುಕೊಳ್ಳಬೇಕು. ತಮ್ಮ ತಮ್ಮ ಮೋಟಾರುಗಳಿಂದ ಪಾರ್ಸಲುಗಳನ್ನು ತರಿಸಿಕೊಳ್ಳುವ ವ್ಯವಸ್ಥೆಯನ್ನು ಅಲ್ಲಲ್ಲಿಯ ಮೋಟಾರುಗಳ ಟಿಕೇಟ ಏಜಂಟರು ತಾವೇ ಮಾಡಿಕೊಳ್ಳತಕ್ಕದ್ದು. ಪೋಷ್ಟಿನಿಂದ ಕಳಿಸುವ ವ್ಯವಸ್ಥೆಯನ್ನು ಸಧ್ಯದಲ್ಲಿ ಮಾಡುವ ಇಚ್ಛೆ ನಮಗಿರುವದಿಲ್ಲ. ನಿತ್ಯ ಪತ್ರಿಕೆಯು ಕಾಯಂವಾಗಿ ನಡೆಯುವಂಥ ಸುಪ್ರಸಂಗವು ಈ ಕನ್ನಡ ನಾಡಿನಲ್ಲಿ ಬಂದದೇ ಆದರೆ ಹಾಗೆ ಕ್ರಮೇಣ ಮಾಡಬಹುದು. ತಿಂಗಳ ಗಟ್ಲೆ ತೆಗೆದುಕೊಳ್ಳುವವರು ಸಹ ಸಧ್ಯದಲ್ಲಿ ದಿನಕ್ಕೆ ಸಂಚಿಕೆಯೊಂದಕ್ಕೆ ಕಾಲು ಆಣೆಯಂತೆ ಲೆಕ್ಕಮಾಡಿ ಏಜಂಟರಿಗೆ ಸಲ್ಲಿಸಬೇಕು.

ಏಜಂಟರಾಗಬಯಸುವವರು ಕೂಡಲೇ ಬರೆದುಕೊಳ್ಳಬೇಕು ಸಣ್ಣ ಊರವರು ಕನಿಷ್ಟ ಮೂರು ರೂಪಾಯಿಗಳನ್ನೂ, ಪಟ್ಟಣದವರು ಕನಿಷ್ಟ ಹತ್ತು ರೂಪಾಯಿಗಳನ್ನೂ ಠೇವು ಕಳಿಸಬೇಕು. ಸ್ಥಾನಿಕ ಕಾಂಗ್ರೇಸ ಕಮಿಟಿಯ, ಅಥವಾ ಮುಖ್ಯ ಸದ್ಗೃಹಸ್ಥರ ಒಂದು ಸರ್ಟಿಫಿಕೇಟನ್ನಾದರೂ ಪ್ರಾಮಾಣಿಕತನದ ಬಗ್ಗೆ ಅರ್ಜಿಯ ಸಂಗಡ ಕಳಿಸತಕ್ಕದ್ದು. ಪ್ರತಿವಾರದಲ್ಲಿ ಲೆಕ್ಕವನ್ನೂ ಹಣವನ್ನೂ, ಮಾರದೇ ಇದ್ದ ಸಂಚಿಕೆಗಳನ್ನೂ ತಿರುಗಿ ಕಳಿಸತಕ್ಕದ್ದು. ನೂರಕ್ಕೆ ೨೫ ರೂಪಾಯಿಗಳಂತೆ ಏಜಂಟರಿಗೆ ಕಮೀಶನ್ ದೊರೆಯುವದು. ಮೋಟಾರುಗಳ ತಿಕೀಟ ಏಜಂಟರುಗಳು ಸಣ್ಣ ಊರುಗಳಲ್ಲಿ ದಿನಾಲು ೧೦ ೧೨ ಪ್ರತಿಗಳನ್ನು ತರಿಸಿಕೊಂಡರೂ ಅವರಿಗೆ ಪ್ರತಿ ತಿಂಗಳು ೨-೩ ರೂಪಾಯಿ ಕೂತಲ್ಲಿಯೇ ದೊರೆಯುವವು ಇನ್ನು ಪಟ್ಟಣಗಳಲ್ಲಿ ನೂರಿನ್ನೂರು ಪ್ರತಿಗಳನ್ನು ಮಾರುವ ಏಜಂಟರಿಗೆ ತಿಂಗಳೊಂದಕ್ಕೆ ೧೦ ರೂಪಾಯಿಗಳಿಂದ ೨೦ ರ ವರೆಗೆ ಪಗಾರ ಬೀಳುವದು. ಮೇಲಿನ ಕೆಲವು ದೊಡ್ಡ ಪಟ್ಟಣಗಳಿಗೆ ಸಹ ಇಂಗ್ಲೀಷ ಪತ್ರಿಕೆಗಳಿಗಿಂತಲೂ, ಮೊದಲು ಮಹತ್ವದ ಸುದ್ದಿಗಳು ನಮ್ಮ ಪತ್ರಿಕೆಯಿಂದ ತಿಳಿಯುವವು. ಕಾರಣ ಏಜಂಟರು ಕೆಲವು [illegible] ಸುದ್ದಿಗಳನ್ನು ಬೀದಿಯಲ್ಲಿ ಒದರುತ್ತ ತಿರುಗಿಯಾಗಲಿ, ಸ್ಥಾನಿಕ ಮುಖ್ಯ ಮನುಷ್ಯರನ್ನು ಭೆಟ್ಟಿಯಾಗಿ ಅವರ ಹೆಸರನ್ನು ನೋಂದಾಯಿಸಿಕೊಂಡಾಗಲಿ, ಪ್ರಯತ್ನಿಸಿದರೆ ಜನರಲ್ಲಿ ಪ್ರತಿಗಳು ಹೆಚ್ಚಾಗಿ ಖಪು ಆಗತೊಡಗುವವು, ಅದಕ್ಕಾಗಿ ಆವಶ್ಯಕರು ಕೂಡಲೇ ಏಜಂಟರಾಗಲು ಬರೆದುಕೊಳ್ಳತಕ್ಕದ್ದು.

ಜಾಹೀರಾತಿನ ದರ:— ಕಾಯಂ ಜಾಹೀರಾತುಗಳಿಗೆ ಒಂದು ಕಾಲಮ್ಮಿನ ಒಂದು ಇಂಚಿನ ಪ್ರತಿಯೊಂದು ಸಂಚಿಕೆಗೆ ನಾಲ್ಕು ಆಣೆ ಹಂಗಾಮೀ ಜಾಹೀರಾತುಗಳಿಗೆ ಐದು ಆಣೆ

ನಿತ್ಯ ಪತ್ರಿಕೆಯ ವ್ಯವಸ್ಥಾಪಕರು
“ಕನ್ನಡಿಗನ” ಕಾರ್ಯಾಲಯ ಬಾಗಲಕೋಟೆ.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ, ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

# ಕನ್ನಡಿಗ

ಜಯಕರ್ನಾಟಕ

ನಿತ್ಯಸಂಚಿಕೆಯು.

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ಶುಕ್ರವಾರ ಮಿತಿ ಚೈತ್ರ ಶುದ್ಧ ೫ ಶಕೆ ೧೮೫೨ ತಾ ೪—೪—೩೦ ಸಂಚಿಕೆ ೧೨

## ಸಂಪಾದಕರ ಭೂಮಿ.

ನನ್ನ ದೇಹವು ನಿನ್ನ ವೀರಶಾಸನಕಾಗಿ ।
ನನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹಗಂಧವಹವೆಂದು ತಿಳಿಯೈ ॥

## ವಿಜಾಪೂರ ಜಿಲ್ಹೆಯ ಸಿದ್ಧತೆ ಏನುನಡೆದಿದೆ?

ವಿಜಾಪೂರ ಜಿಲ್ಹೆಯ ಹಳ್ಳಿಗಳಲ್ಲಿ ಜನಜಾಗ್ರತೆಯನ್ನುಂಟು ಮಾಡಲು ಜಿಲ್ಹಾ ಕಾಂಗ್ರೆಸಕಮಿಟಿಯವರು ಯಾವ ಯಾವ ಯೋಜನೆಯನ್ನು ಮಾಡಹತ್ತಿರುವರು ಇದಾವದೂ ಜನರಿಗೆ ತಿಳಿಯದಾಗಿದೆ ಒಬ್ಬ ಜಿಲ್ಹಾ ಪ್ರಚಾರಕನನ್ನು ನೇಮಿಸಿಕೊಂಡ ಬಗ್ಗೆ ನಾವು ಹಿಂದಕ್ಕೊಮ್ಮೆ ಕೇಳಿದ್ದೆವು. ಆ ಮಹನೀಯರು ಯಾವ ದಿಕ್ಕೋಗದಲ್ಲಿ ಸುತ್ತುತ್ತಿರುವರು ವಿಶೇಷವಾಗಿ ಯಾವ ಭಾಗವನ್ನು ವಹಿಸಿಕೊಂಡಿರುವರು ಆ ಕಾರ್ಯಭಾಗದಲ್ಲಿ ಅವರು ಇಂದಿನವರೆಗೆ ಮಾಡಿದ ಪ್ರಗತಿ ಎಷ್ಟು ಇವುಗಳನ್ನು ತಿಳಿದು ಕೊಳ್ಳಲು ಕಾಂಗ್ರೆಸ ಸಭಾಸದರು ಆತುರಪಡುತ್ತಿರುವದು ಸ್ವಾಭಾವಿಕವಾಗಿದೆ. ಆ ಒಬ್ಬರಿಂದಲೆ ಕಾರ್ಯವು ನೀಗುವಂತಿದೆಯೋ? ನಮ್ಮ ಸಿದ್ಧತೆಯು ಇನ್ನು ಇಮ್ಮಡಿ ಮುಮ್ಮಡಿ ಜೋರಿನಿಂದ ಸಾಗಬೇಕಲ್ಲವೆ? ಕರ್ನಾಟಕವು ಯುದ್ಧವನ್ನಂತೂ ಸಾರಿದೆ. ಅದರಲ್ಲಿ ವಿಜಾಪೂರ ಜಿಲ್ಹೆಯವರು ತಮ್ಮ ಪಾಲಿನ ಹೊರೆಯನ್ನು ಸಂಪೂರ್ಣವಾಗಿ ಹೊರಲೇಬೇಕು; ಇದರಲ್ಲಿ ಹಿಂದುಪದ್ದು ಅಪಕಾರರೆಂದು ಕರಿಸಿಕೊಳ್ಳುವ ಹ್ಯಾಗಿತನವು ನಮಗೆಬೇಕಿಲ್ಲ. ನಮ್ಮ ಆಲಸ್ಯತನದಿಂದ ನಮ್ಮ ಜಿಲ್ಹೆಯ ಹೆಸರಿಗೆ ಕಲಂಕಬಾರದಂತೆ ನೋಡಿಕೊಳ್ಳುವದು ಎಲ್ಲ ಅಭಿಮಾನಿಗಳ ಆದ್ಯಧರ್ಮವಾಗಿದೆ. ಆದರೆ ನಾವು ಈಗಿನಂತೆ ಸ್ವಸ್ಥ ಕಾಲುಚಾಚಿಕೊಂಡು ಕುಳಿತರೆ, ಬರಿ ಬಿಳಿಭಾಯದ ಪಟ್ಟಣಗಳ ವೆಟ್ಟಿಗೆ ಮಾತ್ರ ನಮ್ಮ ಚಳವಳಿಯನ್ನು ಹಚ್ಚಿಟ್ಟರೆ, ಸತ್ಯಾಗ್ರಹ, ಕಾಯಿದೆಭಂಗ, ಸ್ವಾತಂತ್ರ್ಯಗಳ ವಿಚಾರಗಳನ್ನು ಕಷ್ಟಪಟ್ಟು ನಮ್ಮ ಹಳ್ಳಿಗಾಡಗಳಲ್ಲಿ ನಾವು ಬಿತ್ತದಿದ್ದರೆ, ತರುಣರ ಸ್ವಾಭಿಮಾನವನ್ನು ಜಾಜ್ವಲ್ಯವಾಗಿ ಮಾಡುವದಕ್ಕಾಗಿ ನಿಶ್ಚಯದ ಕಾರ್ಯಕ್ರಮವನ್ನು ಕಲ್ಪಿಸಿ, ಶ್ರದ್ಧೆಯಿಂದ ಪಾಲಿಸುತ್ತ ಹೋಗದಿದ್ದರೆ, ಈ ಸ್ವಾತಂತ್ರ್ಯ ಯುದ್ಧದಲ್ಲಿ ನಾವೆಂತು ನಮ್ಮ ಸಮರ ಭಾರವನ್ನು ನಿರ್ವಹಿಸಿ ಕೊಳ್ಳಲು ಸಮರ್ಥರಾಗುವೆವೊ ಎಂಬ ಬಲವಾದ ಸಂಶಯವು ನಮ್ಮನ್ನಾವರಿಸಹತ್ತಿದೆ

ಜಿಲ್ಹೆಯ ಪ್ರಮುಖರೆಲ್ಲರೂ ಅವಶ್ಯವಾಗಿ ಇತ್ತಕಡೆಗೆ ಲಕ್ಷ್ಯ ಕೊಡಬೇಕು. ಧಾರವಾಡ ಜಿಲ್ಹೆಯಲ್ಲಿ ಶ್ರೀ. ಬುರ್ಲಿ ಬಿಂದು ಮಾಧವಾಚಾರ್ಯರೂ ಬೆಳಗಾವಿ ಜಿಲ್ಹೆಯಲ್ಲಿ ಗುರುನಾಥ ಜೋಶಿಯವರೂ ಕಾರವಾರ ಜಿಲ್ಹೆಯಲ್ಲಿ ಶ್ರೀ. ಗುಳವಡಿಯವರೂ ಹೇಗೆ ಕ್ರಮವಾಗಿ ಪ್ರತಿ ಹಳ್ಳಿಯನ್ನು ಸಂದರ್ಶಿಸಿ ಅಲ್ಲಿಯ ನಿವಾಸಿಗಳಿಗೆ ರಾಷ್ಟ್ರೀಯತೆಯ ಸ್ವರಾಜ್ಯದ, ಸ್ವಾತಂತ್ರ್ಯದ, ಕಾಯಿದೆ ಭಂಗದ, ಕಲ್ಪನೆಗಳನ್ನು ತಿಳಿಸಿಹೇಳಿ ಆ ಜನರ ಚಿತ್ತವೃತ್ತಿಯನ್ನು ಪಲ್ಲಟಿಸಿ ಅವರಲ್ಲಿಯ ದೇಶಾಭಿಮಾನವನ್ನೂ ಅಂಕುರಗೊಳಿಸುತ್ತಿರುವಂತೆ ನಮ್ಮ ಜಿಲ್ಹೆಯಲ್ಲಿಯು ಯತ್ನಗಳು ಸಾಗಲಿಕ್ಕೆಬೇಕು. ಇಂಥ ಪ್ರಚಾರಕರು ತಮ್ಮ ದಿನದ ವರದಿಯನ್ನು ಕನ್ನಡ ವೃತ್ತಪತ್ರಗಳ ಮುಖಾಂತರ ಜನಸಾಮಾನ್ಯರ ಅವಗಾಹನಕ್ಕೆ ಸಾದರಪಡಿಸುತ್ತಿರಬೇಕು. ವಿಜಾಪೂರ ಜಿಲ್ಹೆಗೆ ನಮ್ಮ ಎಣಿಕೆಯ ಪ್ರಕಾರ ಇಂಥ ೩।೪ ಪ್ರಚಾರಕರುಬೇಕು. ಒಬ್ಬರ ಹಿಂದೆ ಒಬ್ಬರು ಅವೇ ವಿಚಾರಗಳನ್ನು ಬೀರಹತ್ತಿದರೇನೆ ಅವು ನಮ್ಮ ಹಳ್ಳಿಯ ಜನರಲ್ಲಿ ಕಾಲೂರಿ ನಿಲ್ಲುವ ಸಂಭವ, ಇಲ್ಲವಾದರೆ ಗಾಳಿಯಗೂಡ ಬಂದದ್ದು ಗಾಳಿಯೊಡನೆ ಹಾರಿಹೋದಂತಾಗಿ ಪ್ರಯೋಜನವಾಗುವದಿಲ್ಲ ಈ ಪ್ರಚಾರಕರ ತಂಡವಲ್ಲದೆ, ಬೆಳಗಾವಿಯಲ್ಲಿ ಶ್ರೀ ಗಂಗಾಧರರಾಯರೂ, ಜೋಶಿ ನಾರಾಯಣರಾಯರೂ ಧಾರವಾಡದಲ್ಲಿ ಶ್ರೀ. ಹರ್ಡೀಕರ ದಿವಾಕರರೂ, ಬಳ್ಳಾರಿಯಲ್ಲಿ ಭಾಷ್ಯಮ್‌ರೂ, ಮಂಗಳೂರಲ್ಲಿ ಕರ್ನಾಡ ಸದಾಶಿವರಾಯರೂ ತಮ್ಮ ತಮ್ಮ ಜಿಲ್ಹೆಯಲ್ಲಿಯ ದೊಡ್ಡ ದೊಡ್ಡ ಹಳ್ಳಿಗಳನ್ನು ಸಂದರ್ಶಿಸಿ ಈ ಚಳವಳಿಯ ಬಗ್ಗೆ ಅಲ್ಲಿಯವರಲ್ಲಿ ಆದರವನ್ನು ಹುಟ್ಟಿಸಿ ಅವರ ಸಹಾಯ ವಿಶ್ವಾಸಗಳನ್ನು ಗಳಿಸಿಕೊಂಡು ಬರುತ್ತಿರುವಂತೆ, ನಮ್ಮ ಜಿಲ್ಹೆಯ ಹಿರಿಯರೂ ಮಾಡಬೇಕು. ಅಂದರೇನೆ ಜಿಲ್ಹೆಯಲ್ಲಿ ಬೇಸಿಗೆಯ ಉರಿ ಬಿಸಿಲಿಗೆ ಅರಮುಬ್ಬಾಗಿರುವ ನಮ್ಮ ಜಿಲ್ಹೆಯಲ್ಲಿ ಏನಾದರೂ ಚೇತಕಳೆಯ ಲಕ್ಷಣಗಳು ತಲೆಯತ್ತಿ, ಕರ್ನಾಟಕದ ಉಳಿದ ಜಿಲ್ಹೆಗಳ ಸಾಲಿನಲ್ಲಿ ನಾವು ಈ ಹೊತ್ತು ಎಲ್ಲಿ ನಿಂತುಕೊಂಡಿದ್ದೇವೆಂಬುದರ ಅರಿವು ಹುಟ್ಟಲನುವಾದೀತು

ಇದಕ್ಕಾಗಿ ಜಿಲ್ಹಾ ಕಾಂಗ್ರೆಸ ಕಮಿಟಿಯವರು ಹೆಚ್ಚು ಚಟುವಟಿಕೆಯಿಂದ ಅತ್ತಿಂದಿತ್ತ ಇತ್ತಿಂದತ್ತ ಓಡಾಡಿ, ಜಿಲ್ಹೆಯಲ್ಲಿಯ ಕೆಲಸುಗಾರರ ಸಭೆಯನ್ನು ಕರೆದ, ಕಾರ್ಯಕ್ರಮವನ್ನು ಗೊತ್ತುಪಡಿಸುವದು ಅತ್ಯಂತ ಅವಶ್ಯವಾಗಿದೆ. ಕೆಲಸಮಾಡುವವರ ದೃಷ್ಟಿಯಲ್ಲಿದ್ದವರ ಅಲ್ಲಲ್ಲಿಗೆ ಹೋಗಿ, ಮಲಗಿದವರನ್ನು ಎಚ್ಚರಿಸಬೇಕು. ಹಿರಿಯರಿಗೆ ಈ ಸಮಯದಲ್ಲಿ ನಮ್ಮ ಕೈಬಿಡಬೇಡಿ ಎಂದು ಅಂಗಲಾಚಿಬೇಡಿಕೊಳ್ಳಬೇಕು. ಮತ್ತಿನ್ನೇನಾದರೂ ಮಾಡಿಕೊಳ್ಳಬೇಕು. ಅಂತು ಜಿಲ್ಹೆಯ ಪೀರಪಿಂದ ಉಗಮಹೊಂದಿ ಕಾರ್ಯಪ್ರವಾಹವು ಬರಬೇಕಾಗಿದೆ

## ಪ್ರತಿಜ್ಞಾ ಪತ್ರಕ್ಕೆ

# ತನ್ನ ರಕ್ತದಿಂದ ಸಹಿಮಾಡಿದ ವೀರನು

ರಾಯಬರೇಲಿಯಲ್ಲಿ ಸಂಕಾರದವರ ದಬ್ಬಾಳಿಕೆಯಿಂದ ಚಳವಳಿಗೆ ತಾರುಣ್ಯವೇ ಒಳ್ಳೆ ಕಳೆಬರುತ್ತಿದೆ. ದಿನಾಲು ನೂರಾರು ಜನರು ಸ್ವಯಂಸೇವಕರು ಸತ್ಯಾಗ್ರಹ ಪತ್ರಕ್ಕೆ ಸಹಿ ಕೊಡಹತ್ತಿದ್ದಾರೆ. ಹಳ್ಳಿಯ ತರುಣರಲ್ಲಂತೂ ರಣೋತ್ಸಾಹವು ತುಂಬಿ ತುಳುಕಹತ್ತಿದೆ. ( ಸರಕಾರದವರು ಎಷ್ಟು ಪೀಡೆಗೆ ಗುರಿಮಾಡಿದರೂ ಅಹಿಂಸೆಯನ್ನು ಯಾರು ಬಿಟ್ಟಿಲ್ಲ. ) ನಿನ್ನೆ ಓರ್ವ ತರುಣನು ದೂರಿನ ಹಳ್ಳಿಯಿಂದ ನಡೆದುಬಂದು, ಕಾಂಗ್ರೆಸ ಕಚೇರಿಯಲ್ಲಿ ಸತ್ಯಾಗ್ರಹಿಗಳು ಸಹಿಮಾಡಬೇಕಾದ ಪ್ರತಿಜ್ಞಾ ಪತ್ರವನ್ನು ಇಸಕೊಂಡು, ಅಲ್ಲಿಯೇ ತನ್ನ ಮೈಸೆತ್ತರವನ್ನು ತೆಗೆದು ಆ ರಕ್ತಕಣಗಳಿಂದ ತನ್ನ ಸಹಿಮಾಡಿ ಕಾರ್ಯದರ್ಶಿಗೆ ಅರ್ಪಿಸಿದನೆಂದೂ ತಾವು ಇದನ್ನೆಲ್ಲ ಪ್ರತ್ಯಕ್ಷನೋಡಿದೆನೆಂದೂ ರಾಘವದಾಸ ಕಿಡವಾಯಿ ಎಮ್ ಎಲ್. ಎ. ಇವರು ತಿಳಿಸುತ್ತಾರೆ. ತರುಣರ ಅಂತಃಕರಣವು ಇಷ್ಟೊಂದು ಕಳಕಳಿಯಾದಾಗ್ಗೆ ಈ ಚಳವಳಿಗೆ ಯಶಸ್ಸು ಕಟ್ಟಿಟ್ಟದ್ದೆ ಅಲ್ಲವೆ ಕರ್ನಾಟಕದಲ್ಲೇನು ಇಂಥ ಕಳಕಳಿಯ ತರುಣರು ಹೊರಡಲಿಕ್ಕಿಲ್ಲ?

---

### ಉಪ್ಪಿನ ಮೇಲಿನ ಕರವು ಇಸ್ಲಾಮ ಧರ್ಮಕ್ಕೆ ವಿರುದ್ಧವಾಗಿದೆ,

"ಮುಸಲ್ಮಾನರಿಗೆ ಪವಿತ್ರ ಉಕ್ತಿಗಳಾದ 'ಹಾದಿ' ಎಂಬ ಗ್ರಂಥದಲ್ಲಿಯೂ ನೀರು, ಗಾಳಿ, ಉಪ್ಪು ಇವುಗಳ ಮೇಲೆ ಕರ ಇರಕೂಡದೆಂದು ಹೇಳಿದೆ ಅಂತೆ. ಕಾರಣ ಈ ಉಪ್ಪಿನ ಕಟ್ಟಳೆಯನ್ನು ಮುರಿಯುವದು ಮುಸಲ್ಮಾನರ ಧರ್ಮವೇ ಆಗಿದೆ. ಆದ್ದರಿಂದ ಗಾಂಧಿಯವರು ಹೂಡಿದ ಈ ಉಪ್ಪಿನ ಸತ್ಯಾಗ್ರಹದಲ್ಲಿ ಯಾವತ್ತು ಧರ್ಮನಿಷ್ಠೆ ಮುಸಲ್ಮಾನರು ಮೊದಲು ಸೇರಬೇಕು. ಮೌಲಾನಾ ಶೌಕತ ಅಲ್ಲೀಯವರು ಈ ಚಳವಳಿಯ ವಿರುದ್ಧ ಬೋಧಿಸುತ್ತಿರುವದು ಅತ್ಯಂತ ನಿಂದ್ಯ ಮತ್ತು ಆತ್ಮಘಾತುಕವಾದ ಬೋಧೆಯಾಗಿದೆ ಎಂದು ಹೇಳಲು ನನಗೆ ವಿಷಾದವೆನಿಸುತ್ತದೆ" ಎಂದು ಸೈದಲಾಲ ಬಾದಶಹಾ ಇವರು ಪ್ರಕಟನೆ ಹೊರಡಿಸಿದ್ದಾರೆ. ಇವರು ಪೇಶಾವರದ ಕಾಂಗ್ರೇಸ ಮತ್ತು ಖಿಲಾಫತ ಕಮೀಟಿಗಳ ಅಧ್ಯಕ್ಷರಿದ್ದರು.

### ಬಾಬೂ ರಾಜೇಂದ್ರ ಪ್ರಸಾದರು ಬಿಹಾರದ ಸರ್ವಾಧಿಕಾರಿಯಾದರು

೫೦,೦೦೦ ಸ್ವಯಂಸೇವಕರನ್ನು ಹೊರಡಿಸ ಬಹುದು

ಬಿಹಾರ ಪ್ರಾಂತದ ಕಾಂಗ್ರೇಸ ಕಮೀಟಿಯಲ್ಲಿ ಕಮೀಟಿಯ ಅಧ್ಯಕ್ಷರಾದ ಬಾಬೂ ರಾಜೇಂದ್ರ ಪ್ರಸಾದರೇ ಇನು ಪ್ರಾಂತದ ಸರ್ವಸೂತ್ರ ಚಾಲಕತ್ವವನ್ನು ವಹಿಸಬೇಕೆಂದು ಗೊತ್ತಾಯಿತು ಚಂಪಾರಣ್ಯ ಮತ್ತು ಶಾರಣ ಇವೆರಡು ಸ್ಥಳಗಳಲ್ಲಿ ಉಪ್ಪಿನ ಕಟ್ಟಳೆಯನ್ನು ಮುರಿಯುವ ಸತ್ಯಾಗ್ರಹವನ್ನು ಪ್ರಾರಂಭಿಸಬೇಕೆಂದು ಗೊತ್ತು ಮಾಡಿ ಪ್ರಾಂತಿಕಮೀಟಿಯ ಮೇಂಬರೆಲ್ಲ ಸತ್ಯಾಗ್ರಹಿಗಳಾಗಲು ಸಹಿ ಕೊಟ್ಟಿರುವರು. ೫೦೦೦೦ ಸ್ವಯಂ ಸೇವಕರನ್ನು ಕೂಡಿಸಬೇಕೆಂದೆಣಿಸಿ ಆಯಾ ತಾಲೂಕಗಳಿಗೆ ಇಂತಿಷ್ಟೆಂದು ಹಂಚಿ ಹಾಕಿದ್ದಾರೆ

### ಕಾಂಗ್ರೇಸ ಸುದ್ದಿಗಳಿಗೆ ಆತಂಕ.

ಕಾಂಗ್ರೇಸ ಸುದ್ದಿಗಳಿಗೆ ತಂತೀಚೇಯುಲ್ಲಿ ನಿರಾತಂಕವಾದ ಮಾರ್ಗ ಉಳಿದಿಲ್ಲ. ಕಾಂಗ್ರೇಸಿನವರು ಕಳುಹಿಸಿದ ಸುದ್ದಿಗಳನ್ನು ವಿಚಾರಿಸಿ ಕ್ಷೇಮಕರವಾದವುಗಳನ್ನಷ್ಟೆ ಜನರ ಅವಲೋಕನಕ್ಕೆ ಬೀಳಗೊಡುವರು.

### ಪಂಡಿತ ಮಾಲವೀಯರು ರಾಜೀನಾಮೆ ಕೊಡುವರೆಂದು ವಾರ್ತೆ,

ಪರದೇಶೀ ಬಟ್ಟೆಗಳ ಮೇಲೆ ಕರ ಕೂಡಿಸುವ ಬಗ್ಗೆ ಅಸೆಂಬ್ಲಿಯಲ್ಲಿ ಅಪೂರ್ವವಾದ ವಿವಾದವನ್ನು ಹೂಡಿ ಅಪಜಯಹೊಂದಿದ ಮಾಲವೀಯರು, ಅಸೆಂಬ್ಲಿಯ ಅಸಾರತೆಯನ್ನು ಮನಗಂಡು ಇನ್ನು ಅಲ್ಲಿಂದ ನಿವೃತ್ತರಾಗಬೇಕೆಂದು ವಿಚಾರ ನಡಿಸಿರುವರೆಂದೂ, ಅವರು ಹಾಗೆ ಮಾಡಿದಕೂಡಲೆ ಶ್ರೀ ಬುರ್ಲಿ, ಆಣೆ. ರಾಘುದಾಸ ಭಾರ್ಗವ, ಮುಖತಂರಸಿಂಗ ಮತ್ತು ಪ್ರಕಾಶಮ್ ಮೊದಲಾದವರೂ ತಮ್ಮ ರಾಜೀನಾಮೆಗಳನ್ನು ಕಳಿಸುವೆವೆಂದು ಪ್ರಕಟಗೊಳಿಸಿದ್ದಾರೆ. ಪ|| ಮಾಲವೀಯರು ಅಸೆಂಬ್ಲಿಯಿಂದ ಹೊರಬಿದ್ದು ಕಲೆತೊಳಕೊಂಡು ವಿದೇಶೀ ಬಟ್ಟೆಗಳ ಬಹಿಷ್ಕಾರದ ಬೆನ್ನುಹತ್ತುವ ಸಂಭವವಿದೆಂದೂ ವದಂತಿ ಇದೆ. ಅವರು ಅಸೆಂಬ್ಲಿಯಲ್ಲಿಯ ತಮ್ಮ ಭಾಷಣದಲ್ಲಿ ಆ ಪ್ರಕಾರ ಅಡಿಯೂ ತೋರಿಸಿದ್ದಾರೆ.

### ಸುರತಪಟ್ಟಣಕ್ಕೆ

# ಮ. ಗಾಂಧಿಯವರ ಆಗಮನವು.

### ೧೬೯ ಪಟೇಲರು ಬಿಟ್ಟಿರುವರು ೯೬೭ ಜನ ಸ್ವಯಂಸೇವಕರಾಗಿರುವರು.

ಮಹಾತ್ಮಾ ಗಾಂಧಿಯವರು ಸುರತ ಪಟ್ಟಣದಲ್ಲಿ ಒಪ್ಪತ್ತು ಮಾತ್ರ ಇದ್ದು ಮುಂದಿನ ಊರಿಗೆ ಹೊರಟು ಹೋದರು. ಮಹಾತ್ಮರನ್ನು ಸ್ವಾಗತ ಮಾಡುವದರಲ್ಲಿ ಸುರತವು ತೋರಿಸಿದ ಉತ್ಸಾಹವು ಅಪೂರ್ವವೂ ಅವರ್ಣನೀಯವೂ ಆಗಿದೆ. ಗಾಂಧಿಯವರ ಶಾಂತಿ ಸೈನ್ಯವನ್ನು ಮೋಟಾರ ಗಾಡಿಗಳಲ್ಲಿ ಕೂಡಿಸಿಕೊಂಡು ರಥಗಳನೆಲ್ಲ ಸಾಲಾಗಿ ಊರ ಬೀದಿಗಳಲ್ಲಿ ಮೆಲ್ಲ ಮೆಲ್ಲಗೆ ಮೆರೆಯಿಸುತ್ತ ತರುವ ಕಲಕ್ಕೆ ದಂಡಯಾತ್ರೆಗೆ ಹೊರಟಿರುವ ಮಹಾತ್ಮರನ್ನೂ ಅವರ ಸೈನಿಕರನ್ನೂ ಸಂದರ್ಶಿಸಿ ಕೃತಾರ್ಥರಾಗಬೇಕೆಂಬ ಹಂಬಲದಿಂದ ಸುರತ ನಿವಾಸಿಗಳೆಲ್ಲ ಸ್ಥಳಸಿಕ್ಕಲ್ಲೆಲ್ಲ ಕಿಕ್ಕಿರಿದು ನಿಂತುಕೊಂಡಿದ್ದರು ಉಪ್ಪರಿಗೆ, ಮಾಳಿಗೆ, ಕಂಬ, ಕಿಡಿಕಿ, ಇವುಗಳೆಲ್ಲ ಬಿಂಬಾನೆಯರಾದ ಹೆಂಗಳೆಯರ ವೃಂದಗಳಿಂದ ಬಿಗಿದು ತುಂಬಿದ್ದವು. ಅಲ್ಲಲ್ಲಿಗೆ ವಿಜಯಸೂಚಕವಾದ ಕಮಾನುಗಳಿಂದ ಬೀದಿಗಳನ್ನು ಅಲಂಕರಿಸಿದ್ದರು. ಆ ಜನಸಮ್ಮರ್ದವನ್ನು ನೋಡಿದರೆ ಸುರತ ಪಟ್ಟಣಕ್ಕೆ ಇಡೀ ಭರತಖಂಡದ ಪ್ರಜಾ ಜನರೆಲ್ಲ ಬಂದು ಮುಕರಿ ಬಿದ್ದಿರುವಂತೆ ಭಾಸವಾಗುತ್ತಿತ್ತು. ಜನರ ಆತುರತೆಗಂತೂ ಮಿತಿ ತಪ್ಪಿಹೋಗಿತ್ತು. ಎಳ್ಳಿನಂತೆ, ಎಲ್ಲಿ ಹಣಿಕಿ ಹಾಕಿದರೆ ತಮಗೆ ಮಹಾತ್ಮರ ದರ್ಶನ ಮೊದಲು ಲಭಿಸುವದೋ ಎಂಬು ಚನ್ನೇ ಆ ಜನಸಂದಣಿಯು ಹವಣಿಸುತ್ತಿತ್ತು. ಇಷ್ಟೊಂದು ಭಕ್ತಿ, ಪ್ರೀತಿ ಉತ್ಸಾಹಗಳಿಂದ ಪೂರಿತರಾದ ಜನರ ಮಧ್ಯದಲ್ಲಿ ಹಾಯ್ದು ತಾಪೀನದಿಯ ವಿಶಾಲವಾದ ತೀರಕ್ಕೆ ಮಹಾತ್ಮರು ಬಂದು ತಲ್ಪಿದರು. ಅಲ್ಲಿಯೇ ಸಾರ್ವಜನಿಕ ಸಭೆ. ಅದೊಂದು ಅದ್ಭುತವಾದ ಜನಸಮ್ಮೇಲನ ೮೦ ಸಹಸ್ರ ಜನರು ತಾಪೀಪ್ರವಾಹದ ಬದಿಗೆ ಇನ್ನೊಂದು ಜನಪ್ರವಾಹವೇ ಪಸರಿಸಿಕೊಂಡು ನಿಂತು ಬಿಟ್ಟಿತ್ತು. ಈ ಭವ್ಯವಾದ ಸಭಾ ಸ್ಥಳವನ್ನು ೨೫ ಗ್ಯಾಸಬತ್ತಿಗಳಿಂದ ಬೆಳಕಿಸಿದ್ದರು. ಸುರತ ಜನರ ಉತ್ಸಾಹವನ್ನು ಕರ್ತೃತ್ವ ಶಕ್ತಿಯನ್ನೂ ಅವರ ರಾಷ್ಟ್ರೀಯತೆಯ ಪ್ರಭಾವವನ್ನೂ ಕೇವಲ ಈ ಜನಸಮ್ಮರ್ದನದಲ್ಲಿ ಮುಗಿಯಿತೆಂದು ಹೊರಗಿನವರು ತಿಳಕೊಳ್ಳಬಾರದೆಂದೂ ಏನೋ ಸಭೆಯ ಪ್ರಾರಂಭದಲ್ಲಿಯೇ ಶ್ರೀಯುತ ಕಲ್ಯಾಣಜಿಮೇಹಾಯಿಯವರು ಸುರತ ಜಿಲ್ಲೆಯಲ್ಲಿ ೧೬೯ ಹಳ್ಳಿಗಳ ಗೌಡ ಕುಲಕರ್ಣಿಯರು ತಮ್ಮ ಚಾಕರಿಗಳಿಗೆ ಶರಣು ಹೊಡೆದಿರುವರು. ೯೬೭ ಸ್ವಯಂಸೇವಕರು ತಮ್ಮ ಮನೆಮಾರುಗಳನ್ನು ತೊರೆದು ಮಹಾತ್ಮರ ಈ ಧರ್ಮಯುದ್ಧದಲ್ಲಿ ಜೀವಕೊಡಲು ಸಿದ್ಧರಾಗಿರುವರು, ಇದರಲ್ಲಿ ೮೭ ವೀರವನಿತೆಯರ ಹೆಸರುಗಳೂ ಇವೆ ಮತ್ತು ೫೦೦೦೦ ರೂಪಾಯಿಗಳ ಸತ್ಯಾಗ್ರಹನಿಧಿಯು ಈ ಹೊತ್ತಿಗೆ ಸಿದ್ಧವಿದೆ ಎಂದು ಸಾರಿ ಹೇಳಿದರು.! ಇಂಥ ''ಸುರತ ಜಿಲ್ಲೆಯ ಬಗ್ಗೆ ಯಾವನಿಗೆ ಅಭಿಮಾನವೆನಿಸಲಿಕ್ಕಿಲ್ಲ? ಅಂತೆಯೇ ಮಹಾತ್ಮರು ಅವರಿಗೆ ಸತ್ಯಾಗ್ರಹವನ್ನು ಬೇಕಾದಲ್ಲಿ ಸುರುವು ಮಾಡಿರೆಂಬ ಒಟ್ಟ ಅಪ್ಪಣೆಯನು ಕೊಟ್ಟು ಬಿಟ್ಟಿರುವರು. ಇಲ್ಲಿಯೇ ಗಾಂಧಿಯವರಿಗೆ ಅಹಮ್ಮದಾಬಾದ ಗಿರಣಿಗಳ ಒಡೆಯರು ತಮ್ಮ ಹೆಂಡರು ಮಕ್ಕಳೊಡನೆ ಬಂದು ಭೆಟ್ಟಿ ಆದರು. ಮುಂದಿನ ಹಳ್ಳಿಯಾ ಮೋಸರಭಾತದಲ್ಲಿ ಅವರಿಗೂ ಮಹಾತ್ಮರಿಗೂ ವಿದೇಶೀ ಬಟ್ಟೆಯಬಗ್ಗೆ ಕೆಲವು ಸಂಭಾಷಣೆ ಆಯಿತು.

ಅಂದಿನ ಸುರತದ ಆ ಅದ್ಭುತ ಸಭೆಯಲ್ಲಿ ನೆರೆದ ವಿವಿಧ ಜಾತಿಯರಿಗೆ, ಮಹಾತ್ಮಜಿಯವು ಈ ಪ್ರಕಾರ ಹೇಳಿದರು. ನಾವು ನಮ್ಮ ನಮ್ಮೊಳಗೆ ಧರ್ಮದ ಸಲುವಾಗಿ ಬಡಿದಾಡಿದರೂ, ಈ ಭಾರತ ಭೂಮಿಯು ನಮ್ಮದು ಸರ್ವಜಾತಿಯವರದು ಎಂಬ ಅಭಿಮಾನದಿಂದಾದರೂ ಒಂದಾಗಿ ಹಿಂದೂ ದೇಶದ ಪಾರತಂತ್ರ್ಯವನ್ನು ಹೋಗಲಾಡಿಸುವದಕ್ಕೆ ಒಮ್ಮನಸಿನಿಂದ ಹೋರಾಡುವಾ. ನಾನು ಈ ಸಂಗ್ರಾಮಕ್ಕೆ ಹೊರಹೊಟಾರಭ್ಯ ಈ ಹೊತ್ತಿನ ವರೆಗೂ ಈ ೨೦ ದಿವಸ ನಮಗೆ ಯಶಸ್ಸು ಕೊಡು ಎಂದು ದೇವರನ್ನು ಬೇಡಿಕೊಳ್ಳಹತ್ತಿದ್ದೇನೆ. ನೀವೆಲ್ಲರೂ ಇದೇ ಪ್ರಕಾರ ಪ್ರಾರ್ಥಿಸಬೇಕೆಂದು ಕೋರುತ್ತೇನೆ. ನಾನು ಅನೇಕ ಧರ್ಮಗಳ ಪುಸ್ತಕಗಳನ್ನು ಓದಿದ್ದೇನೆ ಯಾವ ಧರ್ಮದಲ್ಲಿಯೂ ಇಂಥ ಪದ್ಧತಿಯು ಇಂಥ ಕಟ್ಟಳೆಯು, ನ್ಯಾಯವಾದದ್ದೆಂದು ಹೇಳಿರುವದನ್ನು ಕಾಣಲಿಲ್ಲ. ಸರಕಾರವು ನನ್ನನ್ನು ಇಂದಿನ ವರೆಗೆ ಹಿಡಿಯದೆ ಬಿಟ್ಟದ್ದು ಪರರಾಷ್ಟ್ರಗಳ ಭಯಕ್ಕಾಗಿ, ಈ ಬ್ರಿಟಿಶ ಸರಕಾರವು ಈ ಕ್ಷಣವೇ ಮಣ್ಣುಪಾಲಾಗಬೇಕೆಂದು ನಾನು ಬಯಸುತಿದ್ದರೂ ಯತ್ನಿಸುತ್ತಿದ್ದರೂ ಒಬ್ಬ ಬ್ರಿಟನ್ನನಿಗಾದರೂ ಧಕ್ಕೆ ತಗಲಲೆಂದು ಹಾರೈಸಿಲ್ಲ. ನನ್ನನ್ನು ಶಿಕ್ಷಿಸಿದವನಿಗೂ ಕೂಡಾ ಕಲ್ಯಾಣವಾಗಲೆಂದೇ ನಾನು ಬಯಸುವವನು. ಸರಕಾರಕ್ಕೆ ನನ್ನನ್ನು ಒಳಗೆ ಹಾಕಿದರೂ ಸಂಕಟ ಹೊರಗೆ ಬಿಟ್ಟರೂ ಸಂಕಟ! ಇಂಥ ದುರ್ದಶೆ ಬಂದದೆ, ಇಂದಿಲ್ಲ ನಾಳೆ ನನ್ನನ್ನೂ ಅವರು ಹಿಡಿಯಲೇ ಬೇಕಾಗುವದು. ಸರದಾರ ವಲ್ಲಭ ಭಾಯಿಯು ಜೇಲಿಗೆ ಹೋಗಿಂದ ನಾನು ಜೇಲಿಗೆ ಹೋಗುವ ನನ್ನ ಆತುರತೆಯನ್ನು ಕಡಿಮೆ ಮಾಡಿದ್ದೇನೆ. ಸರದಾರ ನನ್ನು ಹೊರಗೆ ತರುವಂಥ ಪರಿಸ್ಥಿತಿಯನ್ನು ದೇಶದಲ್ಲಿ ಉಂಟುಮಾಡಬೇಕೆಂಬುದರ ಕಡೆಗೇ ಈಗ್ಗೆ ನನ್ನ ಲಕ್ಷ್ಯವಿದೆ. ಇಂಥ ಪರಿಸ್ಥಿತಿಯನ್ನು ತರಲಿಕ್ಕೆ, ಈ ಕಾಯದೇಭಂಗ ಚಳವಳಿಯ ಸ್ವಯಂಸೇವಕರಾಗಿ ಬಂದು ನೀವೆಲ್ಲರೂ ನೆರವಾಗಬೇಕೆಂದು ಕೇಳಿಕೊಳ್ಳುತ್ತೇನೆ.

## ಶಾರದಾ ಕಾಯಿದೆ.

ಶಾರದಾ ಕಾಯಿದೆಯನ್ನು ಅಮಲಿನಲ್ಲಿ ತರುವ ಬಗ್ಗೆ ಹೌಸ ಆಫ ಕಾಮನ್ಸದಲ್ಲಿ ಪ್ರಶ್ನೋತ್ತರಗಳು ನಡೆದದ್ದಕ್ಕೆ ಮಿ॥ ಬೆನ್ನ ಇವರು 'ಇಂಡಿಯಾ ಗವ್ಹರ್ನಮೆಂಟ' ಈ ಬಗ್ಗೆ ಪೂರ್ಣ ಎಚ್ಚರಿಕೆಯಿಂದ ಇದೆಂದೂ, ಅದನ್ನು ಅಮಲಿನಲ್ಲಿ ತರುವದಕ್ಕೆ ಮಾನಸಿಕ ಮಾಡಲಾರದೆಂದೂ ಉತ್ತರ ಕೊಟ್ಟಿರುವರು.

ಇತ್ತ ಅಸೆಂಬ್ಲಿಯ ಸಭಾಸದನಾದ ಎಮ್. ಕೆ. ಆಚಾರ್ಯ ಇವರು ಹೀಗೆ ತಿಳಿಸುತ್ತಾರೆ:- ಮಾರ್ಚ ೧೯ ನೇ ತಾರೀಖಿಗೆ ಅಸೆಂಬ್ಲಿಯಲ್ಲಿ ತಾವು ಕೇಳಿದ ಪ್ರಶ್ನೆಗಳಿಗೆ 'ಇಲ್ಲಿಯ ವರೆಗೆ ಈ ಬಗ್ಗೆ ಸರಕಾರಕ್ಕೆ ೫೪೩ ತಂತಿಗಳಲ್ಲಿ ೩೯ ಸಾವಿರ ಜನರಿಂದ ಸಹಿ ಮಾಡಲ್ಪಟ್ಟ ಜಾಹೀರಗಳೂ ಮತ್ತು ೪೯೪ ಠರಾವುಗಳೂ ಬಂದು ಮುಟ್ಟಿರುವವು.

ಈ ಸಂಗತಿಗಳ ಮೇಲಿಂದ ದೇಶದಲ್ಲಿ ಜನತೆಯ ದೊಡ್ಡದೊಂದು ಭಾಗವು ಈ ಕಾಯಿದೆಯಿಂದ ಅಸಂತುಷ್ಟವಾಗಿದೆಂದು ತಮಗೆ ವಿದಿತವಾಯಿತೆಂದೂ ಮತ್ತು ಈ ಬಗ್ಗೆ ಅಸೆಂಬ್ಲಿಯ ಮುಂದಿರುವ ಸೂಚನೆಗಳ ವಿಚಾರಣೆಯಿಂದ ಏನಾದರೂ ಒಂದು ಸಮಾಧಾನಕರವಾದ ಮಾರ್ಗವು ಹೊರಟೀತೆಂದೂ, ಸರಕಾರವು ಆಶಿಸುತ್ತಿರುವದೆಂದೂ ಆಚಾರ್ಯರಿಗೆ ಸರಕಾರದ ಉತ್ತರ ದೊರಕಿದೆಯಂತೆ!

ಇದರ ಮೇಲಿಂದ ಆಚಾರ್ಯರು 'ಈ ಸೂಚನೆ ಉಪಸೂಚನೆಗಳ ವಿಚಾರಣೆ ಮುಗಿಯುವ ವರೆಗಂತೂ ಸರಕಾರವು ಈ ಕಾಯಿದ ಮುರಿದವರಿಗೆ ಕಠಿಣ ಶಿಕ್ಷೆ ವಿಧಿಸಲಿಕ್ಕಿಲ್ಲೆಂದೂ ಜನರು ೧೦ ವರ್ಷಗಳ ಹುಡಿಗಿಯರ ಮದುವೆ ಮಾಡಬಹುದೆಂದೂ ಅನುಮಾನವನ್ನು ತೆಗೆದಿದ್ದಾರೆ.

## ಠಾಣಾ ಜಿಲ್ಲೆಯ ಹುರುಪಿನ ಗಡಿಗಳು

ನಾವೂ ಸತ್ಯಾಗ್ರಹ ಸಂಗರವನ್ನು ಹೂಡಬೇಕೆಂದು ಹಾತೊರೆಯುತ್ತಿರುವೆವು. ಬಂದು ನಮ್ಮ ಮಾರ್ಗದರ್ಶಕರಾಗಿ ನಿಂತುಕೊಂಡು ನಮ್ಮಿಂದ ದೇಶಕಾರ್ಯವನ್ನು ಮಾಡಿಸಿರೆಂದು ಜಮುನಾದಾಸ ಮೇಥಾ ಇವರಿಗೆ ಠಾಣಾ ಜಿಲ್ಲೆಯ ಕಾಂಗ್ರೆಸ ಕೆಲಸಗಾರರು ಹೇಳಿಕೊಂಡಿದ್ದಾರೆ. ಠಾಣಾ ಜಿಲ್ಲೆಯಲ್ಲಿಯೇ ೫೦೦ ಸ್ವಯಂಸೇವಕರನ್ನು ಕೂಡಿಸಬೇಕೆಂದು ಅವರ ಹವ್ಯಾಸ.

## ಕಾಠೇವಾಡದಲ್ಲಿಯ ಸತ್ಯಾಗ್ರಹ ಸಿದ್ಧತೆ ಪೂರ್ತಿಯಾಗಿದೆ,

ಮಹಾತ್ಮನ ಅಪ್ಪಣೆಯಾಗುವ ದಾರೀ ನೋಡುತ್ತಲಿದ್ದಾರು.

## ಶಿಕ್ಷಣಕ್ಕಿಂತ ಸತ್ಯಾಗ್ರಹವೇ ಹೆಚ್ಚು,

ಕಾಶೀ ವಿದ್ಯಾಪೀಠದ ವಿದ್ಯಾರ್ಥಿ ಯೋರ್ವನು ತನ್ನ ಅಧ್ಯಯನವನ್ನೆಲ್ಲ ಬದಿಗೊತ್ತಿ ದೇಶದ ಕದನದಲ್ಲಿ ಧುಮುಕಿದ್ದಾನು. ಕೋವಿಲಾದ ಯುವಕ ಸಂಘದ ಕಾರ್ಯದರ್ಶಿಗಳನ್ನು ಹಿಡಿದೊಯ್ದಿದ್ದಾರೆ.

## ಆಂಧ್ರರ ಸತ್ಯಾಗ್ರಹವು,

ಗುಂಟೂರಲ್ಲಿ ೩೬೦ ಸ್ವಯಂಸೇವಕರು ಆಂಧ್ರ ಸತ್ಯಾಗ್ರಹ ಕಮೀಟಿಯವರು ನಿನ್ನೆ ಗುಂಟೂರಲ್ಲಿ ಕೂಡಿ, ಸತ್ಯಾಗ್ರಹವನ್ನು ತೀವ್ರವೇ ಪ್ರಾರಂಭಿಸಬೇಕೆಂದು ನಿಶ್ಚೈಸಿ ಶ್ರೀ ಕೊಂಡವೆಂಕಟಪ್ಪಯ್ಯಾನೆ ಆಂಧ್ರದ ಸರ್ವಾಧಿಕಾರಿಯಾಗಿರಬೇಕೆಂಬ ಗೊತ್ತುವಳಿಗೆ ಒಪ್ಪಿಗೆಯಿತ್ತರು. ಗುಂಟೂರ ಜಿಲ್ಲೆಯವರು ಇದಿನವರೆಗೆ ೧೨೦೦೦ ರೂಪಾಯಿಗಳನ್ನು ೩೬೦ ಸ್ವಯಂಸೇವಕರನ್ನು ಕಳಿಸಿಕೊಡುವರೆಂದು ಪ್ರಕಟಗೊಳಿಸಿದ್ದಾರೆ. ಪರ್ವತಿ ದೇವಾಲಯದ ಸತ್ಯಾಗ್ರಹವು ಹಿಮ್ಮೆಟ್ಟಿದೆ. ಮೊನ್ನೆ ಮುಂಜಾನೆ ೨೦ ಜನ ಹೊಲಿಯರ ತಂಡ, ಒಂದು ಶ್ರೀ ಪಾಟಡೆ ಇವರ ಮುಖಂಡತ್ವದ ಕೆಳಗೆ ಪರ್ವತಿ ಬೆಟ್ಟವನ್ನು ಹತ್ತಿ ಗುಡಿಯೊಳಗೆ ಧುಮುಕುವದಕ್ಕಾಗಿ ಬಾಗಿಲ ತೆರೆಯುವ ಮಾರ್ಗವನ್ನು ಕೆಲಹೊತ್ತು ಕಾಯ್ದುಕೊಂಡು ಕುಳಿತಿರುವರಂತೆ. ಆದರೆ ಈ ಸತ್ಯಾಗ್ರಹಿಗಳಲ್ಲಿ ಹಟವಾಗಲಿ ಆಗ್ರಹವಾಗಲಿ ಯಾವದೂ ಇರಲಿಲ್ಲವಂತೆ.

೨೦ ಜನ ಹೋದವರು ಅಲ್ಲಿ ಮುಟ್ಟುವದರೊಳಗೆ ೯ ಜನರು ಮಾತ್ರ ಉಳಿದಿದ್ದರು, ಅಲ್ಲಿ ಹೋದಮೇಲಾದರೂ ಇಂದು ಬಾಗಿಲ ತೆಗೆಯುವದಿಲ್ಲವೆಂದು ಯಾರೋ ಹೇಳಿದಕೂಡಲೆ, ಮನೆಗೆ ಹೊರಡುವ ಸಂಧಾನಕ್ಕೆ ಹತ್ತಿದರಂತೆ ಅಷ್ಟರಲ್ಲಿಯೇ ಸರದಾರ ಮುಜುಮದಾರರ ಭೆಟ್ಟಿ ಆಗಿ ಶ್ರೀ ಪಾಟಡೆ ಇವರು ಅವರೊಡನೆ ಮಾತುಕಥೆ ನಡಿಸಿ, ಮುಜುಮದಾರರ ಸೌಜನ್ಯಕ್ಕಾಗಿ ಆಭಾರ ಮನ್ನಿಸಿ ಮನೆಯ ಹಾದಿ ಹಿಡಿದರಂತೆ. ಸತ್ಯಾಗ್ರಹವು ಇಷ್ಟು ಅಳ್ಳಕೆ ಆಗಲಿಕ್ಕೆ ಕಾರಣವೇನಿರಬಹುದು? ಹೊಲಿಯರಾಗಲಿ ಅವರ ಆಶ್ರಯದಾತೃಗಳಾದ ಸುಧಾರಕರಾಗಲಿ ಈ ಸತ್ಯಾಗ್ರಹದ ಬೆಸನಕ್ಕೆ ಬೇಸತ್ತೀರಬಹುದಾಗಿ ತೋರುತ್ತದೆ ಆಗ್ರಹವೆಂದರೆ ಜೀವ ಹೋದರೂ ಹಟ ಬಿಟ್ಟರಬಾರದು ಇಂಥ ಆಗ್ರಹವಿದ್ದಲ್ಲಿ ಮಾತ್ರ ಸತ್ಯಾಗ್ರಹಿಗಳಿಗೆ ಯಶಸ್ಸು ದೊರೆಯುವದೇ ಹೊರತು, ಹೀಗೆ ಎರಡನೇಯವರ ಭಿಡೆಕ್ಕೆ ಬಿಟ್ಟೀಬೇಸರಿಕೆಯ ನಡತೆಗೆ ಸತ್ಯಾಗ್ರಹದಲ್ಲಿ ಸ್ಥಳವಿಲ್ಲ-


# 'ಕನ್ನಡಿಗ'ನ ನಿತ್ಯ ಸಂಚಿಕೆ!

ಸಧ್ಯದಲ್ಲಿ ಮುಂಬೈಯಿಂದ ಬರುವ ಇಂಗ್ಲೀಷ ಪತ್ರಿಕೆಗಳ ಅವತರಣಿಕೆಗಳನ್ನು ಕೊಡುವದಲ್ಲದೇ, ಅಲ್ಲಲ್ಲಿಂದ ನಮ್ಮ ಸ್ವಂತ ಪ್ರತಿನಿಧಿಗಳ ತಂತಿಗಳನ್ನೂ, ಮುಖ್ಯವಿಷಯಗಳ ಬಗ್ಗೆ ತರಿಸುವೆವು. ಇದಕ್ಕೆ ಜನರ ಪ್ರೋತ್ಸಾಹನವು ದೊರೆತು, ಸುಮಾರು ದಿನಾಲು ಎರಡು ಸಾವಿರ ಪ್ರತಿಗಳು ಮಾರಾಟವಾಗ ಹೊಡಗಿದಾಕ್ಷಣವೇ, ನಾವು ಸ್ವತಂತ್ರವಾಗಿ "ಫ್ರಿಪ್ರೆಸ್" "ಅಸೋಸಿಯೇಟೆಡ್ ಪ್ರೆಸ್" ಗಳ ತಂತಿಗಳನ್ನೂ ಪೂರೈಸಿಕೊಡುವೆವು

ನಿತ್ಯ ಪತ್ರಿಕೆಯ ವ್ಯವಸ್ಥಾಪಕರು
"ಕನ್ನಡಿಗನ" ಕಾರ್ಯಾಲಯ ಬಾಗಲಕೋಟೆ.


ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ, ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭

ಬೆಲೆ ೦-೦-೩

ನಿತ್ಯಸಂಚಿಕೆಯು.

ಸರ್ವಂ ಪರವಶಂ ದುಃಖಂ। ಸರ್ವಮಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ಶನಿವಾರ ಮಿತಿ ಚೈತ್ರ ಶುದ್ಧ ೭ ಶಕ ೧೮೫೨ ತಾ ೫-೪-೩೦ ಸಂಚಿಕೆ ೧೩

## ಸಂಪಾದಕರ ಭೂಮಿ.

ನನ್ನ ದೇಹವು ನಿನ್ನ ವೀರಶಾಸನಕಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೈ॥

## ರಾಷ್ಟ್ರೀಯ ವಾರವು.

ನಾಳೆ ಆರನೇ ತಾರೀಖಿನಿಂದ ರಾಷ್ಟ್ರೀಯ ಸಪ್ತಾಹವು ಪ್ರಾರಂಭವಾಗುವದು. ಈಗ ಹನ್ನೊಂದು ವರ್ಷಗಳ ಹಿಂದೆ ೧೯೧೯ನೆ ಇಸ್ವಿಯ ಇದೇವಾರ ಜಲಿಯಾನವಾಲಾಬಾಗದಲ್ಲಿ ರೌಲೆಟ ಕಾಯಿದೆಯನ್ನು ವಿರೋಧಿಸಬೇಕೆಂದು ಸಭೆ ನೆರೆದವರ ಕೊಲೆಯಾಯಿತು. ನಿರಪರಾಧಿಗಳ, ನಿಃಶಸ್ತ್ರಿಗಳ ಕೊಲೆ ಅದು! ಅಂದಿನಿಂದ ಹಿಂದೀ ರಾಷ್ಟ್ರವು ಈ ದಿನಗಳನ್ನು ಮರಿಯದೆ ತಪ್ಪದೆ ಒಂದಿಲ್ಲೊಂದು ದೇಶೋದ್ಧಾರಕ ಕಾರ್ಯಕ್ರಮದಿಂದ ಪಾಲಿಸುತ್ತ ಬಂದಿದೆ. ಸ್ವಾಭಿಮಾನದಿಂದ ಪ್ರೇರಿತರಾದ ಆ ದೇಶಪ್ರೇಮಿಗಳ ರಕ್ತಪಾತದಿಂದ ಉಂಟಾದ ಕ್ಷೋಭೆಯು, ತನ್ನ ಕಾರ್ಯವನ್ನು ಮಾಡದೆ ಅಡಗುವಂತಿಲ್ಲ. ಅಂದಿನಿಂದಲೂ ದೇಶದ ಹೃದಯವು ಒಂದೇಸವನೆ ಕಳವಳಗೊಳ್ಳುತ್ತಿರುವದು. ಅಂತೆಯೇ ಅಂದು ನಿರ್ಬಲವಾದ ನಿರಾಧಾರವಾದ ಪಾದಾಕ್ರಾಂತವಾದ ಹತಾಶೆಯಾದ ಈ ದುರ್ಭಾಗ ಹಿಂದುಸ್ಥಾನವೆ ಒಂದೇ ಹನ್ನೊಂದು ವರ್ಷಗಳ ಅವಧಿಯಲ್ಲಿ ಚೇತರಿಸಿಗೊಂಡದ್ದು ತನ್ನನ್ನು ಅಪಮಾನಗೊಳಿಸಿದ, ಬನ್ನಾಗಿ ಮಾಡಿದ ಕಂಗಾಲುಪಾದಾಕ್ರಾಂತ ಮಾಡಿದ ಬ್ರಿಟಿಶರ ಈ ರಾಜ್ಯಪದ್ಧತಿಯನ್ನು ಮಣ್ಣುಗೂಡಿಸದೆ ಬಿಡಲಿಕ್ಕಿಲ್ಲೆಂಬ ಭೀಷ್ಮ ಪ್ರತಿಜ್ಞೆಯಿಂದ ಸರಕಾರಕ್ಕೆ ತಕ್ಕೆ ಮುಕ್ಕೆ ಬಿದ್ದು ಜೀವದ ಹಂಗು ತೊರೆದು ಹೋರಾಡಲಿಕ್ಕೆ ಸಿದ್ಧವಾಗಿದೆ. ಯುದ್ಧವನ್ನು ಹೂಡಿದೆ. ಕಾರಣ ಈ ವರ್ಷದ ಈ ಸಪ್ತಾಹದಲ್ಲಿ, ಸರಕಾರದೊಡನೆ ಹೂಡಿದ ಈ ಸವಿನಯ ಕಾಯದೆ ಭಂಗ ಯುದ್ಧದ ಸಮರ ಸನ್ನಾಹವನ್ನು ಒದಗಿಸಿಕೊಳ್ಳುವದರಲ್ಲಿಯೇ ಕಳೆಯಬೇಕು. ಬೇರೆ ಪ್ರಾಂತೀಯರೆಲ್ಲರೂ ಅಪೂರ್ವವಾದ ಕಾರ್ಯಕ್ರಮವನ್ನು ಇಟ್ಟುಕೊಂಡು ಅದನ್ನು ಪೂರ್ಣಗೊಳಿಸುವದರ ಪೂರ್ವಸಿದ್ಧತೆಯಲ್ಲಿ ಈಗಾಗಲೇ ಮಗ್ನರಾಗಿದ್ದಾರೆ. ಕರ್ನಾಟಕದ ಕೆಲವೆಡೆಯಲ್ಲಿಯು ಈ ಒಗ್ಗೆ ನಡೆದ ಸಿದ್ಧತೆಯ ವಿಷಯವಾಗಿ ಅಲ್ಲಲ್ಲಿಯ ವೃತ್ತಪತ್ರಗಳಲ್ಲಿ ನಾವು ಓದುತ್ತಿದ್ದೇವೆ. ವಿಜಾಪುರ ಜಿಲ್ಹೆಯಾದರೂ ಈ ವಿಷಯದಲ್ಲಿ ಹಿಂದುಳಿಯಲಿಕ್ಕಾಗದು. ಮುಖ್ಯ ಮುಖ್ಯ ಹಳ್ಳಿಗಳಲ್ಲಿಯಾದರೂ ಭಾರತೀಯರು ಈಗ ನಡಿಸಿರುವ ಸ್ವಾತಂತ್ರ್ಯ ಹೋರಾಟದ ವಾರ್ತೆ ಹರಡುವಂತೆಯೂ, ಜನರ ಮನಸ್ಸು ಇತ್ತಕಡೆಗೆ ಒಲಿಯುವಂತೆಯೂ ಏನಾದರೂ ಉಪಾಯಗಳನ್ನು ಅಲ್ಲಲ್ಲಿಯ ಕಾಂಗ್ರೆಸ್ ಕೆಲಸಗಾರರು ಯೋಚಿಸಿ ಆ ಕಾರ್ಯವನ್ನು ಪಾರ ಕೆಡಹಲು ಬೇಕು. ನಾಳೆ ೧೩ನೇ ತಾರೀಖಿಗೆ ಕರ್ನಾಟಕವು ಆರಂಭಿಸಲಿರುವ ಕಾಯದೆಭಂಗ ಚಳವಳಿಗೆ ಯೋಗ್ಯ ಸ್ವಯಂಸೇವಕರನ್ನೂ ಹಣವನ್ನೂ ಕಳಿಸುವ ಕಾರ್ಯವೇ ಮುಖ್ಯವಾಗಿ ಸರ್ವತ್ರ ನಡಿಯಬೇಕಾಗಿದೆ. ಯುದ್ಧವೆಂದಮೇಲೆ ಎಲ್ಲರೂ ಸೈಹಿಡಿದು ಹೊರಡುವ ನಿವಾರ್ಯವಿಲ್ಲ, ಕರ್ನಾಟಕದ ಮಾನಾಭಿಮಾನದ ಪ್ರಶ್ನೆ ಒಂದಿದೆ. ತಮಗ ಜನ್ಮವಿತ್ತು ಸಾಕಿಸಲಹಿದ ಈ ಕರಿನಾಡಿನ ಅಭಿಮಾನಿಗಳೆಲ್ಲರೂ ಪ್ರತ್ಯಕ್ಷ ಅಪ್ರತ್ಯಕ್ಷ ರೀತಿಯಿಂದ ಸಹಾಯಮಾಡಿ ಜನ್ಮಭೂಮಿಯ ಉತ್ಕರ್ಷಕ್ಕೆ ಕಾರಣೀಭೂತರಾಗುವರೆಂದು ಹಾರೈಸುತ್ತೇವೆ.

---

## ಕರ್ನಾಟಕ ಪ್ರಕಟನಾ ಶಾಖೆ.

ಪ್ರಾಂತಿಕ ಕಾಂಗ್ರೇಸ ಕಮಿಟಿಯ ಕಚೇರಿಯ ಸ್ಥಾನವಾದ ಧಾರವಾಡಲ್ಲಿ ಕರ್ನಾಟಕ ಯುದ್ಧಮಂಡಲದವರು ಪ್ರಕಟನಾಶಾಖೆಯನ್ನೊಂದು ಸ್ಥಾಪಿಸಿದ್ದಾರೆ. ಇದರ ಕಾರ್ಯಭಾರವನ್ನು ಶ್ರೀ. ಡಿ. ಪಿ. ಕರ್ಮರಕರ ಇವರು ಹೊತ್ತುಕೊಂಡಿದ್ದಾರೆ. ಕರ್ನಾಟಕದ ಎಲ್ಲ ದಿಕ್ಕುಗಳಲ್ಲಿಯೂ ಸತ್ಯಾಗ್ರಹದ ಸಿದ್ಧತೆಯ ಮತ್ತು ಸತ್ಯಾಗ್ರಹದ ಸುದ್ದಿಗಳನ್ನೆಲ್ಲ ಕಲೆಹಾಕಿ ಅವುಗಳನ್ನು ಎಲ್ಲ ವೃತ್ತಪತ್ರಗಳಿಗೂ ಬೇರೆ ಪ್ರಕಟನೆಗಳಿಂದಲೂ ಪ್ರಕಟಗೊಳಿಸುವದೇ ಈ ಪ್ರಕಟನಾಶಾಖೆಯ ಮುಖ್ಯ ಉದ್ಯೋಗವಾಗಿದೆ. ಕಾರಣ ಕರ್ನಾಟಕದಲ್ಲಿಯ ಎಲ್ಲ ಕೆಲಸಗಾರರು ತಮ್ಮ ಕೆಲಸದ ವರದಿಯನ್ನೂ ಅಲ್ಲಲ್ಲಿಯ ಮಹತ್ವದ ಸುದ್ದಿಗಳನ್ನೂ ಈ ಪ್ರಕಟನಾ ಶಾಖೆಗೆ ತಪ್ಪದೆ ತಕ್ಷಣವೇ ತಿಳಿಸುತ್ತಿರಬೇಕೆಂದು ನಮ್ಮ ಸೂಚನೆ. ಕರ್ನಾಟಕದ ಸುದ್ದಿಗಳು ಇಂಗ್ಲೀಷ ಪತ್ರಗಳಲ್ಲಿ ಕಾಣಿಸಿಕೊಳ್ಳುವದು ಬಹು ವಿರಳ. ಕಾರಣ ಈ ಶಾಖೆಯವರು ಇವೆಲ್ಲ

ಸುದ್ದಿಗಳನ್ನು ಇಂಗ್ಲೀಷ ಪತ್ರಗಳಿಗೆ ಕಳಹುವ ವ್ಯವಸ್ಥೆಯನ್ನು ಮಾಡಿದ್ದರಿಂದ, ಉತ್ತಮವೇ ಆಯಿತು. 'ಕನ್ನಡಿಗವು' ಈಗ್ಗೆ ದಿನಂಪ್ರತಿ ಹೊರಡುತ್ತಿರುವದರಿಂದ ಈ ಶಾಖೆಯು 'ಕನ್ನಡಿಗನಿಗೆ' ನಿತ್ಯವೂ ಸುದ್ದಿಗಳನ್ನು ತಂತಿಯಿಂದಾಗಲೀ ಟಪಾಲಿನಿಂದಾಗಲೀ ತಿಳಿಸುತ್ತ ಹೋದಲ್ಲಿ ಇವರ ಪ್ರಕಟನಾಕಾರ್ಯದಲ್ಲಿ ಕನ್ನಡಿಗನೂ ತಕ್ಕಮಟ್ಟಿಗೆ ನೆರವಾಗಬಲ್ಲನು.

---

## ಪಾರ್ಲಮೆಂಟರಿ ಕಮಿಟಿ

ಹೌಸ ಆಫ ಕಾಮನ್ಸದಲ್ಲಿಯ 'ಲೇಬರ' ಪಂಗಡದವರ ಪೈಕಿ ಕೆಲವರು ಹಿಂದುಸ್ಥಾನಕ್ಕೆ 'ಸಾಮಂತ ಸ್ವರಾಜ್ಯವನ್ನು ಕೊಡಿಸಬೇಕೆಂ'ಬ ಧ್ಯೇಯವನ್ನಿಟ್ಟುಕೊಂಡು 'ಪಾರ್ಲಿಮೆಂಟರಿ ಕಮಿಟಿ' ಎಂಬದೊಂದು ಸಂಘವನ್ನು ಸ್ಥಾಪಿಸಿಗೊಂಡಿದ್ದು ಈಗ ಆ ಸಂಘದ ಪರವಾಗಿ ಅದರ ಚೇಅರಮನ್ ಪೀಟರ ಫ್ರೀಮನ್ ಇವರು ಜೋರಿನಿಂದ ಚಳವಳಿ ನಡಿಸಿರುವರು ಸಾಮಂತ ಸ್ವರಾಜ್ಯವನ್ನು ಹಿಂದುಸ್ಥಾನಕ್ಕೆ ಕೊಡಲೇಬೇಕೆಂಬ ವಿಷಯವನ್ನು ಪ್ರತಿಪಾದಿಸುವ, ಬೇರೆ ಬೇರೆ ಸಣ್ಣ ಸಣ್ಣ ಪುಸ್ತಕಗಳ ೧೨,೦೦೦ ಪ್ರತಿಗಳನ್ನು ಪುಕ್ಕಟೆಯಾಗಿ ಹಂಚಿರುವರು ಲೇಬರ ಪಂಗಡದ ಹೆಚ್ಚು ಸಭಾಸದರು ಇದರ ಮೆಂಬರರಾಗತೊಡಗಿದ್ದಾರಂತೆ! ಹಿಂದುಸ್ಥಾನದಲ್ಲಿಯ ಸಂಗತಿಗಳನ್ನು ತಿಳಿದುಕೊಳ್ಳಲಿಕ್ಕೆ ಹಿಂದೀ ಕೂಲಿಕಾರರ ಪಕ್ಷದ ಶಾಖೆಯೊಂದಿಗೆ ಪತ್ರವ್ಯವಹಾರ ನಡಸಿದ್ದಾರೆ.

## ಸಿಂಧ ಸತ್ಯಾಗ್ರಹಿಗಳು

(ಸಿಂಧ) ಹೈದರಾಬಾದದಲ್ಲಿ ಸತ್ಯಾಗ್ರಹಿಗಳ ಶಿಕ್ಷಣಕ್ಕಾಗಿ ಒಂದು ಶಿಬಿರವನ್ನು ಹೊರಡಿಸಿದ್ದು ಶ್ರೀ. ಮಲಕಾನಿ ಇವರು ಅದರ ವ್ಯವಸ್ಥಾಪಕರಾಗಿದ್ದಾರೆ. ಇಲ್ಲಿಂದಲೆ ಸತ್ಯಾಗ್ರಹಿ ತಂಡಗಳನ್ನು ಕಾಯಿದೆಭಂಗದ ಸ್ಥಳಗಳಿಗೆ ಕಳಿಸಲ್ಪಡುವವು. ಶ್ರೀ ಜಯರಾಮದಾಸ ದೌಲತರಾಮ ಮತ್ತು ಡಾ|| ಚೌತ್ರರಾಮ ಮೊದಲಾದವರು ಪ್ರಾಂತದಲ್ಲೆಲ್ಲ ತಿರುಗಿ ಜಾಗ್ರತಿಯನ್ನುಂಟುಮಾಡಲು ಪ್ರಾರಂಭಿಸಿದ್ದಾರೆ. ನಿನ್ನಿನ ದಿವಸವೇ ಸತ್ಯಾಗ್ರಹಿಗಳ ಒಂದು ಗುಂಪು ಹಳ್ಳಿಗಳಲ್ಲಿಯ ಪ್ರಚಾರಕಾರ್ಯಕ್ಕಾಗಿ ಹೈದರಾಬಾದದಿಂದ ಹೊರಟಿದೆ.

## ಅಹಮದಾಬಾದ ಗಿರಣಿಗಳ ೧೩೦ ಕೂಲಿಕಾರರು ಸತ್ಯಾಗ್ರಹಿಗಳಾದರು!

ಅಹಮ್ಮದಾಬಾದ ಗಿರಣಿಗಳ ಸಂಘದವರು, ತಮ್ಮ ಗಿರಣಿಗಳಲ್ಲಿ ಕೆಲಸಮಾಡುವವರಲ್ಲಿ ಯಾರಾದರು ಸ್ವಯಂಸೇವಕರಾಗಿ ಸತ್ಯಾಗ್ರಹಕ್ಕೆ ಹೋಗಲು ಇಚ್ಛಿಸಿದರೆ ಅವರಿಗೆ ಎದಷ್ಟು ಅನುಕೂಲತೆಗಳನ್ನು ಒದಗಿಸಿಕೊಟ್ಟು ಸಹಾಯಮಾಡಬೇಕೆಂದು ನಿಶ್ಚಯಿಸಿಕೊಂಡದ್ದರಿಂದ ಅಲ್ಲಿಯ ಕೂಲಿ ಜನರೊಳಗೆ ಈ ಬಗ್ಗೆ ಹೆಚ್ಚಿಗೆ ಚಳವಳಿ ನಡೆದಿದ್ದು ಈಗಾಗಲೆ ೧೩೦ ಜನರು ಸ್ವಯಂಸೇವಕರಾಗಿ ಸಾಬರಮತಿ ಶಿಬಿರಕ್ಕೆ ಶಿಕ್ಷಣಪಡೆಯಲು ಹೋದರು ಶಂಕರಲಾಲ ಬ್ಯಾಂಕರ ಮತ್ತು ಗುಲಜಾರಿಲಾಲ ನಂದಾ ಇವರು ದಿನಾಲು ಈ ಗಿರಣಿ ಜನರ ಸಭೆಕೂಡಿಸಿ ಉಪದೇಶಮಾಡುತ್ತಿದ್ದಾರೆ.

## ದೇವರ ಮುಂದೆ ನಿಮಗೆ ಜವಾಬು ಕೊಡಬೇಕಾಗುವದು!

ಮೊನ್ನಿನ ಸುರತ ನಗರದ ಸಭೆಯಲ್ಲಿ ಗಾಂಧಿಜಿಯವರು 'ಸ್ವರಾಜ್ಯವು ನನ್ನ ಬೊಕ್ಕಣದಲ್ಲಿದೆ, ನೀವೆಲ್ಲರೂ ನಾನು ಹೇಳಿದಂತೆ ಆಚರಿಸಿ ೯೦ ಕೋಟಿ ರೂಪಾಯಿಗಳ ಪ್ರವಾಹವನ್ನು ನಿಲ್ಲಿಸಿದರೆ ಈಗಲೇ ಸ್ವರಾಜ್ಯವು ನಿಮ್ಮ ಪದರಿನಲ್ಲಿ ಬೀಳುವದು. ವಕೀಲರು ತಮ್ಮ ವಕೀಲಿಯನ್ನು ಬಿಡಬೇಕು, ಕುಡುಕರು ಕುಡುಕತನವನ್ನು, ವ್ಯಾಪಾರಸ್ಥರು ವಿದೇಶಿ ಬಟ್ಟೆಗಳ ವ್ಯಾಪಾರವನ್ನು ಬಿಡಬೇಕು. ಎಲ್ಲರೂ ಖಾದಿ ತೊಟ್ಟುಕೊಳ್ಳಬೇಕು. ಈ ಪ್ರಕಾರ ೯೦ ಕೋಟಿ ರೂಪಾಯಿಗಳನ್ನು ಉಳಿಸಹತ್ತಿದರೆ ಸ್ವರಾಜ್ಯ ಗಳಿಸುವದೇನು ಅಸಾಧ್ಯವಲ್ಲ. ಈ ನಾಲ್ಕರಲ್ಲಿ ಬೇಕಾದ್ದೊಂದು ಆರಿಸಿಕೊಂಡು ಅದನ್ನು ಕಡೆಪೂರೈಸಿರಿ. ಇಲ್ಲವಾದರೆ ನೀವು ದೇವರ ಮುಂದೆ ಏನು ಜವಾಬು ಕೊಡುವಿರಿ? ಇವುಗಳಲ್ಲಿ ಯಾವದನ್ನೂ ಮಾಡದಿದ್ದರೆ ದೇವರು ನಿಮಗೆ ಶಿಕ್ಷಿಸದೆ ಬಿಡನು" ಎಂದು ಹೇಳಿರುವರು

## ಸೇಟ ನರಸೀದಾಸ ಗಂಗಾಜಿ ಪ್ರೋಷ್ಠಿಯವರ ಔದಾರ್ಯ!

ಈ ಕಾಯಿದೆಭಂಗ ಚಳವಳಿಯಲ್ಲಿಯ ಸತ್ಯಾಗ್ರಹಿಗಳಿಗೆ ಆಹಾರ ಪೂರೈಸುವದಕ್ಕಾಗಿ ಸಹಾಯಮಾಡಿರೆಂದು ಮುಂಬಯಿ ಸತ್ಯಾಗ್ರಹಿ ಕಮೀಟಿಯವರು ಅಲ್ಲಿಯ ಧಾನ್ಯದ ವರ್ತಕರಿಗೆ ಬೇಡಿಕೊಳ್ಳಲು ಸೇಟ ನರಸೀದಾಸ ಇವರು ತಾವಾಗಿಯೇ ಮುಂದೆ ಈ ಕಾಯಿದೆಭಂಗ ಯುದ್ಧವು ನಡಿಯುವ ವರೆಗೆ ಇದರಲ್ಲಿಯ ಸತ್ಯಾಗ್ರಹಿಗಳಿಗೆ ಅನ್ನಸಾಮಗ್ರಿಗಳನ್ನು ಪೂರೈಸಿಕೊಡುವದು ತನಗೊಪ್ಪಿತೆಂದು ಒಳ್ಳೇ ಸಂತೋಷದಿಂದ ಒಪ್ಪಿಕೊಂಡಿರುವರು ಮುಂಬಯಿ ಸತ್ಯಾಗ್ರಹಿ ಕಮೀಟಿಯವರ ದೊಡ್ಡದೊಂದು ಭಾರವೇ ಇಳಿದಂತಾಯಿತು! ಶ್ರೀಮಂತಿಗೆ ಇದ್ದದ್ದಕ್ಕೂ ಸಾರ್ಥಕಮಾಡಿಕೊಂಡಂತಾಯಿತು! ಇವರ ಔದಾರ್ಯವನ್ನು ಅನುಕರಿಸಲು ಉಳಿದ ವರ್ತಕರು ಸ್ವಲ್ಪಾದರೂ ಯತ್ನಿಸಬಾರದೇ? ಇಂಥ ಉದಾರಹೃದಯರು ಅಭಿಮಾನದಿಂದ ಮುಂದೆ ಬಂದು ನಿಂತರೆ ಮಾತ್ರ ಸಂಗ್ರಾಮದಂಥ ದೊಡ್ಡ ಕಾರ್ಯಗಳು ನೀಗುವವು. ಇಲ್ಲದೆ ಮೊಂಡಗೈಯಿಂದ ಮೋಹಾಕಿದರೆ ಏನು ಆಗಬೇಕಾಗಿದೆ? ಈ ಸೇಟ ನರಸೀದಾಸರ ಒಬ್ಬ ಮಗನು ಈಗ ಕಾರಾಗೃಹದಲ್ಲಿ ಇದ್ದುದನ್ನು ಮರಿಯಲಿಕ್ಕಾಗದು. ಅವನು ಸತ್ಯಾಗ್ರಹಿಯಾಗಿ ಮುಂಬಯಿಯಲ್ಲಿ ಪ್ರಚಾರಕಾರ್ಯ ಮಾಡುತ್ತಿದ್ದುದಕ್ಕಾಗಿಯೇ ಶಿಕ್ಷೆಹೊಂದಿದಾನೆ.

## ಮುಂಬಯಿ ಕಪ್ಪಡ ವರ್ತಕರಲ್ಲಿ ರಾಷ್ಟ್ರಾಭಿಮಾನವು!

ಮುಂಬಯಿ ಕಪ್ಪಡ ವರ್ತಕ ಸಂಘದವರು ತಮ್ಮ ಅಂಗಡಿಗಳಲ್ಲಿ ಕೆಲಸಮಾಡುವವರೊಳಗೆ ಬೇಕಾದವರು ಈ ಸತ್ಯಾಗ್ರಹಿ ಚಳವಳಿಯಲ್ಲಿ ಸೇರಬಹುದೆಂದು ಅಪ್ಪಣೆಕೊಟ್ಟಿದ್ದಾರೆ ಮತ್ತು ಅಂಥವರ ಕುಟುಂಬಗಳ ಸಂರಕ್ಷಣಾರ್ಥವಾಗಿ ಅರ್ಧ ಸಂಬಳವನ್ನು ಕೊಡುವದನ್ನೂ ಗೊತ್ತುಮಾಡಿದ್ದಾರೆ. ಅವರು ತಿರುಗಿ ಒಂದವೇಳೆ ಮತ್ತೆ ಅವರನ್ನು ಮೊದಲಿನ ಸಂಬಳಕ್ಕೆ ಇಟ್ಟುಕೊಳ್ಳುವರಂತೆ. ಮುಂಬಯಿ ವರ್ತಕರ ಈ ಅಭಿಮಾನವನ್ನು ಜಾಗ್ರತಿಯನ್ನು ನೋಡಿದ ಮೇಲಾದರೂ ಇಲ್ಲಿಯ ವರ್ತಕರು ಇತ್ತಕಡಿಗೆ- ರಾಷ್ಟ್ರದ ಹೋರಾಟದ ಕಡೆಗೆ ಲಕ್ಷ ಕೊಡುವರೋ!

## ಪಂಡಿತ ಮಾಲವಿಯವರು

# ಅಸೆಂಬ್ಲಿಗೆ ರಾಜೀನಾಮೆ ಕೊಟ್ಟರು!

'ನುಡಿಯಂತೆ ನಡೆ' ಎಂಬುದು ದೊಡ್ಡವರ ದೊಡ್ಡಿಸ್ಥಿಕೆಯ ಗುಟ್ಟು. ಮಾಲವೀಯರು ತಾವು ನುಡಿಯುತ್ತ ಬಂದಂತೆ ಅಸೆಂಬ್ಲಿಯ ತಮ್ಮ ಸ್ಥಳಕ್ಕೆ ಇಂದು ರಾಜೀನಾಮೆಯನ್ನು ಕೊಟ್ಟರು ಇವರೊಡನೆ ಇನ್ನು ಏಳು ಅಸೆಂಬ್ಲಿಯ ಮುಖ್ಯ ಹುದ್ದೆದಾರಿಗಳೂ ತಮ್ಮ ರಾಜೀನಾಮೆಗಳನ್ನು ಕಳಿಸಿರುವರು. ರಾಜೀನಾಮೆಯೊಡನೆ ವೈಸರಾಯರಿಗೆ ಒಂದೊಂದು ಪತ್ರವನ್ನು ಕಳಿಸಿರುವರು. ಆ ಪತ್ರಗಳಲ್ಲಿ ತಮ್ಮ ರಾಜೀನಾಮೆಯ ಕಾರಣಗಳನ್ನು ವಿವೇಚಿಸಿರುವರು. ಮಾಲವೀಯರು ತಮ್ಮ ಪತ್ರದಲ್ಲಿ: "ನಾನು ೨೫ ವರ್ಷಗಳಿಂದ ಅಸೆಂಬ್ಲಿಯಲ್ಲಿ ಕೆಲಸಮಾಡುತ್ತ ಬಂದಿದುದರಿಂದ ಈ ರಾಜೀನಾಮೆಯನ್ನು ಪುನಃಪುನಃ ವಿಚಾರ ಮಾಡಿ ಅತ್ಯಂತ ಖಿನ್ನ ಹೃದಯದಿಂದ ಬರೆಯಬೇಕಾಯಿತು. ಅಸೆಂಬ್ಲಿಯಿಂದ ನಿವೃತ್ತರಾಗಬೇಡಿರೆಂದು ನಾನು ಲಾಹೋರದಲ್ಲಿ ಕಾಂಗ್ರೆಸ ಜನರೊಡನೆ ಬಹಳ ವಾದಿಸಿದೆ.

ಆಗ್ಯೆ ನನಗೆ ಈ ಅಸೆಂಬ್ಲಿಯ ಕೆಲಸದಲ್ಲಿ ಇನ್ನೂ ವಿಶ್ವಾಸವಿತ್ತು. ಆದರೆ ಸರಕಾರದ ಮೊನ್ನಿನ ಕೃತಿಯಿಂದ ಕಪಡದ ಮೇಲಿನ ಕರವಿಚಾರಣೆಯ ಸಮಯದಲ್ಲಿ ಸರಕಾರವು ತೋರಿಸಿದ ಸ್ವಯಂಪ್ರಭುತ್ವದ ಮತ್ತು ಹೀನ ಆಚರಣೆಯಿಂದ ಸರಕಾರದಲ್ಲಿರುವ ನನ್ನ ವಿಶ್ವಾಸವೆಲ್ಲ ಹಾರಿಹೋಗಿದೆ. ಹಿಂದೀಯರಿಗೆ ಕೊಡಲ್ಪಟ್ಟ ಅಲ್ಪಸ್ವಲ್ಪ ಸ್ವಾತಂತ್ರ್ಯತೆಯನ್ನು ಕೂಡಾ ಪ್ರಸಂಗಬಂದಲ್ಲಿ ಕಾಲುಕೆಳಗೆ ಮೆಟ್ಟಲಿಕ್ಕೆ ಈ ಸರಕಾರವು ಹಿಂದು ಮುಂದೆ ನೋಡುವದಿಲ್ಲೆಂಬುದು ಈಗ ನನಗೆ ಪೂರ್ಣ ಮನವರಿಕೆಯಾಯಿತು. ಅಸೆಂಬ್ಲಿಯಂಥ ಸಂಸ್ಥೆಗಳ ಮುಖಾಂತರ ಹಿಂದೀಯರಿಗೆ ಅವರ ರಾಜ್ಯಭಾರದಲ್ಲಿ ಕೆಲವು ಹಕ್ಕಬಾಧ್ಯತೆಗಳು ಕೊಡಲ್ಪಟ್ಟಿವೆಯೆಂಬ ಪ್ರಾಮಾಣಿಕ ಬುದ್ಧಿಯಿಂದ ನಾನು ಅವುಗಳಲ್ಲಿ ಸೇರಿ ಕೆಲಸಮಾಡಲಿಚ್ಛಿಸಿ ಇಂದಿನ ವರೆಗೆ ಮಾಡುತ್ತ ಬಂದೆ. ನಿಮ್ಮ ಸರಕಾರವು ಹುಂಬತನದಿಂದ ಈಡಾಡಿ ಬಿಡಬಹುದೆಂಬುದು ಪದೆಪದೆ ಪ್ರತೀತಿಗೆ ಬರವಿದ್ದರೂ ಮೊನ್ನಿನ ಕಪ್ಪಡದ ಮೇಲಿನ ಕರವಿಚಾರಣೆಯ ಸಮಯದಲ್ಲಿ ನಿಮ್ಮ ಸರಕಾರವು ತೋರಿಸಿದ ಉದ್ಧಾಮತನದ ಆಚರಣೆಯಿಂದ ಅದು ಮನದಟ್ಟಾಯಿತು. ಕಾರಣ ನಾವು ಬಯಸಿದ ಜನರ ಕಲ್ಯಾಣವಾಗಲಿ, ಅವರ ಹಕ್ಕ ಬಾಧ್ಯತೆಗಳ ಸಂರಕ್ಷಣೆಯಾಗಲಿ, ಇಲ್ಲಿ ಶಕ್ಯವಿಲ್ಲೆಂದು ಪೂರ್ಣ ತಿಳಕೊಂಡು ಈ ರಾಜೀನಾಮೆಯನ್ನು ಬರೆದು ಕಳಿಸಿರುವೆ." ಮಾಲವೀಯರು ಇನ್ನು ವಿದೇಶಿ ಬಟ್ಟೆಗಳ ಬಹಿಷ್ಕಾರದ ಬೆನ್ನುಹತ್ತುವವರಿದ್ದಾರೆ.

## ಸರಕಾರದ ಸೈನ್ಯ ಸನ್ನಾಹವು.

ಮಹಾತ್ಮಾಜಿಯ ಸತ್ಯಾಗ್ರಹದ ಪ್ರಯತ್ನಗಳನ್ನು ಪ್ರತಿರೋಧಿಸಲಿಕ್ಕೆ ಸರಕಾರವು ತನ್ನ ಎಲ್ಲ ಸನ್ನಾಹವನ್ನು ಸಿದ್ಧಗೊಳಿಸ ಹತ್ತಿದೆ. ಜಬಾಲಪೂರಕ್ಕೆ ೩೦೦ ಬ್ರಿಟಿಷ ಸೈನಿಕರನ್ನು ಕಳಿಸಿ ಕೊಂಡಿದೆ. ಈ ಸೈನಿಕರು ಏನು ಗುಂಡು ಮದ್ದು ಹಾರಿಸಬೇಕೋ ಏನು ಕಲ್ಲುಗೊಂಬೆಗಳಂತೆ ಸಮುದ್ರದಂಡೆಗೆ ನಿಂತಕೊಂಡು ಸತ್ಯಾಗ್ರಹಿಗಳನ್ನು ಅಂಜಿಸತಕ್ಕವರೊ ಇನ್ನೂ ಯಾವದೂ ತಿಳಿದಿ.

ಶ್ರೀ ಸಾಂಬಮೂರ್ತಿಯು ಪೂರ್ವಗೋದಾವರಿ ತಾಲೂಕಿನಿಂದ ೨೦ ಸ್ವಯಂಸೇವಕರನ್ನು ಕಟ್ಟಿಕೊಂಡು ಕಾಲುನಡಿಗೆಯಿಂದ ಮಸಲೀಪಟ್ಟಣದ ಕಡೆಗೆ ಸಾಗಿರುವನು. ದಾರಿಯಲ್ಲಿಯ ಹಳ್ಳಿಯ ಜನರು ಸಾಂಬಮೂರ್ತಿಗೆ ಅಪೂರ್ವವಾದ ಸ್ವಾಗತವನ್ನು ಮಾಡುತಿರುವರು ಹಳ್ಳಿ ಹಳ್ಳಿಗೆ ಅವರ ಪಾದದಳದ ಸಂಖ್ಯೆಯು ಬೆಳೆಯುತ್ತಿರುವದು. ನಿನ್ನೆ ರಾಜಮಹೇಂದ್ರಿಗೆ ಅವನು ಬಂದು ತಪ್ಪಿದಾಗ ಸಾಂಬಮೂರ್ತಿಯ ಪದಾತಿಯು ೬೦ ದಂಡಾಳುಗಳನ್ನೊಳಕೊಂಡಿತ್ತು.

## ಈರ್ವ ಅಣ್ಣತಮ್ಮಂದಿರ ಸ್ವಾತಂತ್ರ್ಯ ಪ್ರೇಮ.

ಆಂಧ್ರದೇಶದಲ್ಲಿ ಸಾಂಬಮೂರ್ತಿಯು ಹೋದಹೋದಲ್ಲಿ ಅದ್ಭುತ ಉತ್ಸಾಹವನ್ನು ಹುಟ್ಟಿಸುತ್ತ ನಡೆದಿರುವನು. ನಿನ್ನೆ ಅವನು ರಾಜಮಹೇಂದ್ರಿಯಿಂದ ತೆರಳಿದ ಅಲ್ಲಿಯ ಈರ್ವ ತರುಣರು ಓಡಿಹೋಗಿ ಸಾಂಬಮೂರ್ತಿಯ ದಂಡಿನಲ್ಲಿ ಸೇರಿಕೊಂಡರು. ಹಿಂದೆ ಮಾತಾಪಿತೃಗಳು ಓಡೋಡುತ್ತ ಅವರನ್ನು ಹಿಂಬಾಲಿಸಿ ಎಷ್ಟುಸರಿಯಿಂದ ಹೇಳಿಕೊಂಡರೂ ಆ ಅಣ್ಣತಮ್ಮಂದಿರು 'ಸ್ವಾತಂತ್ರ್ಯ ಸಿಗದಹೊರತು ನಾವು ಮನಿಗೆ ಹೋಗಲಿಕ್ಕಿಲ್ಲ' ವೆಂದು ಪ್ರತಿಜ್ಞೆಮಾಡಿರುವೆವು. ನೀವು ತಿರುಗಿ ಹೋಗಿರಿ ಎಂದು ಹೇಳಿ ಮುಂದೆ ನಡೆದು ಹೋಗಿಬಿಟ್ಟರು.

### ವಿಜಾಪುರ ಜಿಲ್ಹೆಯ ಸತ್ಯಾಗ್ರಹಿಗಳಿಗೆ ಸೂಚನೆ

ಕರ್ನಾಟಕದಲ್ಲಿ ೧೩ನೇ ತಾರೀಖಿನ ದಿವಸ ಉಪ್ಪಿನ ಕಾಯದೆಯನ್ನು ಮುರಿಯುವ ಸಲುವಾಗಿ ಸತ್ಯಾಗ್ರಹವು ಪ್ರಾರಂಭವಾಗುವದು ಸತ್ಯಾಗ್ರಹಿಗಳ ಮೊದಲನೇ ಪಥಕವು ಹುಬ್ಬಳ್ಳಿಯಿಂದ ಅದೇ ದಿವಸ ಹೊರಡುವದು. ಸ್ವಯಂಸೇವಕರಾಗಲಿಕ್ಕೆ ಹೆಸರು ಕೊಟ್ಟವರು ತೀವ್ರವೆ ಸಿದ್ಧರಾಗಬೇಕು. ಮತ್ತು ಸ್ವಯಂ ಸೇವಕರಾಗಲಿಚ್ಛಿಸುವವರು ತೀವ್ರವೆ ನಮ್ಮ ಕಡೆಗೆ ಪತ್ರದ್ವಾರಾ ಅಥವಾ ಸಮಕ್ಷಮ ತಿಳಿಸಬೇಕು. ಬಾಗಲಕೋಟೆ ತಾಲೂಕ ಕಾಂಗ್ರೆಸ ಕಮೀಟಿಯ ಕಾರ್ಯದರ್ಶಿಗಳಿಗೆ ಸ್ವಯಂಸೇವಕರನ್ನು ನೊಂದಾಯಿಸಲಿಕ್ಕೆ ಅಧಿಕಾರ ಕೊಟ್ಟಿದೆ. ನಮ್ಮ ಕಡೆಗೆ ಅಥವಾ ಬಾಗಲಕೋಟೆಯ ಕಮೀಟಿಯ ಕಾರ್ಯದರ್ಶಿಗಳಿಂದ ಯೋಗ್ಯತಾ ಪತ್ರವನ್ನು ಪಡೆಯಕೊಳ್ಳದೇ ಯಾರೂ ಹುಬ್ಬಳ್ಳಿಗೆ ಹೋಗಬಾರದು. ವ್ಯರ್ಥ ತೊಂದರೆಯಾದೀತು. ತಾಲೂಕ ಕಮೀಟಿಗಳ ಕಾರ್ಯದರ್ಶಿಗಳು ಕಾಲಕಾಲಕ್ಕೆ ಸ್ವಯಂ ಸೇವಕರ ಹೆಸರುಗಳನ್ನು ನಮಗೆ ತಿಳಿಸುತ್ತ ಹೋಗಬೇಕು. ತರುಣರೆಲ್ಲರೂ ಈ ಸಮಯದಲ್ಲಿ ಮುಂದೆ ಬಂದು ಸ್ವಯಂಸೇವಕರಾಗಿ ಜಿಲ್ಹೆಯ ಕೀರ್ತಿಯನ್ನು ಕಾಪಾಡಬೇಕು,

ಹನುಮಂತರಾವ ಮೋಹರೆ
ಕಾರ್ಯದರ್ಶಿ
ಜಿಲ್ಹಾ ಕಾಂಗ್ರೆಸ ಕಮೀಟಿ ವಿಜಾಪುರ

## ಬಾಗಲಕೋಟೆಯ ಸತ್ಯಾಗ್ರಹಿ

# ವೀರರು ರಣಾಂಗಣಕ್ಕೆ ತೆರಳಿದರು.

ಹುಬ್ಬಳ್ಳಿಯಲ್ಲಿಯ ಯುದ್ಧದ ಶಿಬಿರದಿಂದ ಬಂದ ಆಜ್ಞೆಯ ಮೇರೆಗೆ ಬಾಗಲಕೋಟೆಯಿಂದ ಈಗಾಗಲೇ ಈರ್ವರು ಅಲ್ಲಿಗೆ ಹೋಗಿದ್ದು ಮತ್ತೆ ನಾಲ್ಕು ಸತ್ಯಾಗ್ರಹಿಗಳು ಎಲ್ಲ ಸಮರ ಸಿದ್ಧತೆಯಿಂದ ಒಮ್ಮೆಲೆ ಹೊರಟು ಬರಬೇಕೆಂದು ಸೇನಾಧಿಪತಿಯಾದ ಡಾ|| ಹರ್ಡೀಕರರ ಆಜ್ಞೆಯಾಗಿದೆ.

ಈ ಆಜ್ಞೆಯ ಮೇರೆಗೆ ಈ ಹೊತ್ತು ಸಾಯಂಕಾಲದ ಗಾಡಿಗೆ ಈ ವೀರರು ಸಮರ ಭೂಮಿಗೆ ತೆರಳತಕ್ಕವರಿದ್ದಾರೆ ಘೋರವಾದ ಸ್ವಾತಂತ್ರ್ಯ ಯುದ್ಧಕ್ಕೆ ಬಾಗಲಕೋಟೆಯಿಂದ ಹೊರಡತಕ್ಕವರೊಳಗೆ ಪ್ರಥಮ ದಂಡಾಳುಗಳಾದ ಈ ಭಟರನ್ನು ಅಭಿನಂದಿಸಿ ಸನ್ಮಾನಗೊಳಿಸಿ, ಜಯಶಾಲಿಗಳಾಗಿರೆಂದು ಹರಸಿ ಕಳಿಸುವದು ಬಾಗಲಕೋಟೆಗರ ಕರ್ತವ್ಯವಾಗಿದೆ [illegible] ಕಾಂಗ್ರೆಸ ಕಮಿಟಿಯವರು ಈ ವೀರರ ಮೆರವಣಿಗೆಯನ್ನು ಹೊರಡಿಸಿ ಅವರ ಉತ್ತುಂಗವಾದ ಧೈರ್ಯಸಾಹಸಗಳ ಪ್ರಕಾಶವು ಬಾಗಲಕೋಟೆಯ ಉಳಿದ ತರುಣರ ಹೃದಯದಲ್ಲಿ ಮೂಡುವಂತೆ ಮಾಡಿ ಅವರಿಗೆ ಬೀಳ್ಕೊಡಬೇಕೆಂದು ಬಯಸಿದ್ದಾರೆ ಮೆರವಣಿಗೆ ೪ ಘಂಟೆಗೆ ಹೊರಡುವದು ಎಲ್ಲರೂ ಭಾಗ ತೆಗೆದುಕೊಳ್ಳಬೇಕು ಕಡುಗಲಿಗಳಾದ ಈ ಹುಡುಗರ ಧೈರ್ಯ ಸ್ವಾರ್ಥತ್ಯಾಗಗಳನ್ನು ಮನಃಪೂರ್ವಕ ಅಭಿನಂದಿಸಬೇಕು.

---

### ಗಾಂಧಿಯ ವಿರುದ್ಧ ಸತ್ಯಾಗ್ರಹವು.

ಹೊಸ ಹೊಸ ಪಂಗಡಗಳ ಏಳ್ಗೆಗೆ ಪುಣೆಯ ಪಟ್ಟಣವು ಒಂದು ಸುಪೀಕವಾದ ಭೂಮಿ, ಅಲ್ಲಿ ಮನೆಗೊಬ್ಬ ಮುಂದಾಳು ತಲೆಗೊಂದು ವಿಚಾರ ಅಲ್ಲದೆ ಅಲ್ಲಿ ಕಲಿತವರು ಬಹಳ. ಈಗೊಂದು ಅಲ್ಲಿ ಸಂಘ ಉದ್ಭವಿಸಿದೆ. ಇದು ನಮ್ಮ ಅಸ್ಪೃಶ್ಯ ಬಾಂಧವರ ಸೃಷ್ಟಿ (ಹಿಂದಿನ ಸೂತ್ರಧಾರರುಗಳು ಬೇರೆ) ಈ ಸಂಘದ ಹೆಸರು 'ಕ್ರಾಂತಿಕಾರರನ್ನು ಮುರಿಯುವ ಸಂಘ' ಈ ಸಂಘದ ವಿಚಾರವಂತ ಕಾಂಗ್ರೆಸ ಮತ್ತು ಮಹಾತ್ಮಾ ಗಾಂಧಿ ಇವರು ಕ್ರಾಂತಿಕಾರರು ಇವರನ್ನು ಮುರಿಯುವದು ಇದರ ಉದಾತ್ತ ಧ್ಯೇಯ. ಮಹಾತ್ಮನಿಂದ ದೇಶಕ್ಕೆ ಅನರ್ಥವಾಗಹತ್ತಿದೆ ಎಂದೂ ಅದನ್ನು ತಪ್ಪಿಸಲಿಕ್ಕೆ ಈ ಕಲ್ಯಾಣ ಕಾರ್ಯ ಮಹಾತ್ಮಾಜಿಯ ಕ್ರಿಯಾಶಕ್ತಿಯ ವಿರುದ್ಧ ತಾವೂ ಸತ್ಯಾಗ್ರಹವನ್ನು ಹೂಡತಕ್ಕವರಂತೆ, ಚಾತುರ್ವರ್ಣ್ಯ ಪದ್ಧತಿಯು ಪೂರ್ಣ ಅಳಿದುಹೋಗುವವರೆಗೆ ಪ್ರತಿಕರು ಹಿಂದುಸ್ಥಾನದ ಸುಖಶಾಂತಿಗಳ ರಕ್ಷಣೆಗಾಗಿ ಇರಲೇಬೇಕೆಂಬುದೇ ಈ ಸಂಘದ ಧ್ಯೇಯವು. ಆಗಲಿ ಈ ಹೊಲಿಯರ ಸತ್ಯಾಗ್ರಹದ ಜಗಳ ಎಷ್ಟಿದೆಂಬುದು ಮೊನ್ನೆ ಪರ್ವತಿ ಸತ್ಯಾಗ್ರಹದಲ್ಲಿ ಹೊರಬಿದ್ದಿದೆ. ಯಾರೋ ಹಿಂದೆ ನಿಂತು ಕಣ್ಣಿ ತಿರುವುತ್ತ ಈ ಸೂತ್ರಗೊಂಬೆಗಳು ಕುಣಿಯುತ್ತಿರುವವು ಆಯಿತು ಹೆಚ್ಚಿಗೇನಿದೆ.

### ಕಲಕತ್ತೆಯಲ್ಲಿ ದಂಗೆ.

ಕಲಕತ್ತೆಯಲ್ಲಿ ಬಂಡಿ ಹೊಡೆಯುವವರು ತಮಗೆ ವಿರುದ್ಧವಾದ ಕಾಯದೆಯನ್ನು ಅಲ್ಲಿಯ ಮುನಸಿಪಾಲ್ಟಿಯವರು ಪಾಸು ಮಾಡಿಕೊಂಡಿದ್ದರಿಂದ ಕಟ್ಟುಮಾಡಿಕೊಂಡು ತಮ್ಮ ಬಂಡಿಗಳನ್ನೆಲ್ಲ ಬೀದಿಗಳಲ್ಲಿಯೇ ಬಿಟ್ಟುಕೊಂಡು, ಸಂಚು ಹಾದುಹೋಗುವದನ್ನು ಬಂದುಮಾಡಿಬಿಟ್ಟರು. ಪೋಲೀಸರು ಬಿಡಿಸಲಿಕ್ಕೆ ಬಂದರೆ ಅವರಿಗೆ ಕಲ್ಲು ಗುಂಡುಗಳಿಂದ ಹೊಡೆಯಹತ್ತಿದರು ಆವಾಗ ಪೋಲೀಸರು ಗುಂಡು ಹಾರಿಸಬೇಕಾಯಿತು. ಹೀಗೆ ಎರಡು ಸಾರೆ ಗುಂಡು ಹಾರಿದಮೇಲೆ ಅವರು ಅಲ್ಲಿಂದ ಮರೆಯಾದರು ಅನೇಕರಿಗೆ ಭೀಕರ ಅಪಾಯಗಳಾಗಿವೆ. ಮುನಸಿಪಾಲಿಟಿಯವರು ತಮ್ಮ ಕಾಯದೆಯನ್ನು ತಿರುಗಿ ತಕ್ಕೊಂಡಿರುವರಂತೆ

---

### ವೈಸರಾಯರು ಮರುಗಿದ್ದಾರೆ.

ಹಿಂದುಸ್ತಾನದ ನಿಜವಾದ ಕಲ್ಯಾಣವು ರಾಜನಿಷ್ಠೆಯಿಂದಲೇ ಆಗಬೇಕಾಗಿದ್ದು ತಳಗೇಡಿಗಳು ದೇಶದಲ್ಲಿ ಇಲ್ಲದ ಗೊಂದಲವನ್ನೆಬ್ಬಿಸಿ ರಾಜ್ಯಘಾತಕ ಕಾರ್ಯವನ್ನು ಮಾಡಹತ್ತಿದ್ದಾರಂತೆ ಆಯಾ ಹೆಸರಿನಿಂದ ಜನರಲ್ಲಿ ಹಿಂಸಾವೃತ್ತಿಯನ್ನು ದ್ವೇಷಭಾವನೆಗಳನ್ನು ಮಹಾತ್ಮಾಜಿಯು ಬೆಳೆಸುತ್ತಿರುವನಂತೆ ಈ ಕಾಯದೆಭಂಗ ಚಳವಳಿಯಿಂದ ಜನತೆಯ ಚಿತ್ತವೃತ್ತಿಯಲ್ಲಿ ವಿಲಕ್ಷಣ ಪರಿಣಾಮ ಉಂಟಾಗಿ ಬಿರುಗಾಳಿ ಎಬ್ಬುತ್ತಿದ್ದರೆ ಅದರಿಂದ ದೇಶಕ್ಕೆ ಆಗುವ ಹಾನಿಯನ್ನು ತಡೆಯುವದು ಎಲ್ಲರಿಗೂ ಕೈಮೀರಬಹುದು ಮಾಡುವದೇನಿದೆ ಇದೇ ಉತ್ಸಾಹ ಬುದ್ಧಿಶಕ್ತಿಯನ್ನು ಮಹಾತ್ಮಾಜಿಯು ಅವನ ಅನುಯಾಯಿಗಳೂ ವಿಧಾಯಕ ಚಳವಳಿಯಲ್ಲಿ ವೆಚ್ಚಮಾಡಿದ್ದರೆ ಬೇಕಾದಂಗೆ ಬಹು ಸಲಗಿತ್ತು. ಪಾಪ, ದೇಶದ ದುರ್ದೈವ.

### ಜಲಾಲಪುರಕ್ಕೆ ಮಿಲಿಟರಿ ಬಂದದ್ದೇ ನಿಜವು.

ಸರಕಾರವು ಬ್ರಿಟಿಶ ಸೈನಿಕರನ್ನು ಜಲಾಲಪುರಕ್ಕೆ ಕಳಿಸಿದ ವರ್ತಮಾನವು ಸುಳ್ಳೆಂದು ಟಾಯಿಮ್ಸ ಪತ್ರವು ಒಬ್ಬಣ ಚೀರ ಸುರಿಸುತ್ತಿತ್ತು. ಆದರೆ ಇಂದು ಅಲ್ಲಿಯ ಕಾಂಗ್ರೆಸ ಕಮೀಟಿಯ ಕಾರ್ಯದರ್ಶಿಗಳೇ ಬ್ರಿಟಿಶಸೈನಿಕರು ಬಂದು ನೆಲಸಿರುವದೇ ನಿಜವೆಂದು ತಿಳಿಸುತ್ತಾರೆ. ಕೆಲವರನ್ನು ಕೆಲವರು ಕೆಲವು ವೇಳೆಯವರೆಗೆ ಮಾತ್ರ ಠಕ್ಕಿಸಬಲ್ಲರು. ಎಲ್ಲರನ್ನೂ ಕಡೆತನಕ ಠಕ್ಕಿಸುತ್ತೇನೆಂದರೆ ಯಾರಿಗೂ ಸಾಧ್ಯವಿಲ್ಲ, ಟಾಯಿಮ್ಸ ಪತ್ರಕಾರನು ಇದನ್ನು ಬಲ್ಲವನಾಗಿದ್ದರೂ, ಪಾಪ ಅವನಿಗೆ ಸುಳ್ಳನ್ನು ಬಿಡುವದಾಗುವದಿಲ್ಲ?

---

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

# ಕರ್ನಾಟಕ

ಜಯಕರ್ನಾಟಕ

ನಿತ್ಯಸಂಚಿಕೆಯು.

यद्यत परवशं दु:ख । यद्यदात्मवशं सुखम ॥ — मनु

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ರವಿವಾರ ಮಿತಿ ಚೈತ್ರ ಶುದ್ಧ ೮ ಶಕ ೧೮೫೨ ತಾ ೬—೪—೩೦ ಸಂಚಿಕೆ ೧೪

## ಸಂಪಾದಕರ ಭೂಮಿ.

### ಅಧ್ಯಕ್ಷ ಜವಾಹರಲಾಲರ ನಿವೇದನವು.

**ಯಾತ್ರಿಕರಾದ ಮಹಾತ್ಮಾಜಿಯವರು ಸ್ವಾತಂತ್ರ್ಯರಣಾಂಗದಲ್ಲಿ ಮುಂದೆ ಮುಂದೆ ಧುಮುಕುತ್ತಿರುವರು**

ಎಲೈ ತರುಣರೇ, ಯುವತಿಯರೆ, ನೀವೆತ್ತ ನಡೆದಿರುವಿರಿ? ಮೊನ್ನೆ ಮೊನ್ನೆ ಸ್ವಾತಂತ್ರ್ಯ ಸ್ವಾತಂತ್ರ್ಯವೆಂಬ ಕೂಗನ್ನೆಬ್ಬಿಸಿದವರು ನೀವೇ ಅಲ್ಲವೆ? ಇಂದೆತ್ತ ನಡೆದಿರುವಿರಿ? ಸ್ವಾತಂತ್ರ್ಯದ ಆ ನಿಮ್ಮ ಕಲಕಲವೆಲ್ಲ ಜೊಳ್ಳೆ? ಆ ಘೋಷವೆಲ್ಲ ಒಳಗಿನ ನಿಮ್ಮ ಅಳ್ಳೆದೆಯನ್ನು ಒಚ್ಚಿಡಲು ನೀವು ಎಬ್ಬಿಸಿದ ತಮಾಷೆಯೆ? ಇಂದು ಹಿಂದುಸ್ಥಾನವೆಲ್ಲ ಸಮರಭೂಮಿಯಾಗಿದೆ. ಭಾರತದ ರಣಪತಾಕೆಯು ನಿಮ್ಮನ್ನೆಲ್ಲ ಕರೆಯುತ್ತಿದೆ. ಅಕೋ ಅಲ್ಲಿ ಸ್ವತಃ ಸ್ವಾತಂತ್ರ್ಯದೇವಿಯೇ ನಿಮ್ಮನ್ನಿದಿರುನೋಡುತ್ತ ನಿಂತುಕೊಂಡಿದ್ದಾಳೆ. ಇದೇನು? ಈ ವೇಳೆಯಲ್ಲಿಯೂ ಇನ್ನೂ ನಿಮ್ಮ ಅನುಮಾನವೇ? ನಿನ್ನಿನ ದಿನವೇ ಸ್ವಾತಂತ್ರ್ಯ ಸ್ವಾತಂತ್ರ್ಯವೆಂದು ನೀವೆ ಕೂಗುತ್ತಿದ್ದಿರಲ್ಲ! ಜನ್ಮಭೂಮಿಯ ಸ್ವಾತಂತ್ರ್ಯಕ್ಕಿಂತಲೂ ನಿಮ್ಮ ಪರೀಕ್ಷೆಯ ಛಪ್ಪರವು ನಿಮಗೆ ಪ್ರಿಯಕರವಾಗಿರುವದೆ? ಭಾರತಾಂಬೆಯ ವಿಮೋಚನೆಗಿಂತಲೂ ಲೆಕ್ಕ ಬರೆಯುವದರಲ್ಲಿಯೇ ನಿಮ್ಮ ಅಕ್ಕರತೆಯು ಹೆಚ್ಚಿತೆ? ನಿಮ್ಮನ್ನು ನಿಮ್ಮ ದೇಶವನ್ನು ನಿಮ್ಮ ದೇಶಿಯರನ್ನು ಮೆಟ್ಟಿ ತುಳಿದು ಜರ್ಜರಿತ ಮಾಡಿದ ಈ ಬಲಾಢ್ಯ ಸಾಮ್ರಾಜ್ಯಕ್ಕೆ ಇದಿರು ನಿಂತು ಅದರೊಡನೆ ಪರಾಕ್ರಮದಿಂದ ಹೋರಾಡಿ ಮಡಿದು ಹೋಗುತ್ತಿರುವ ಧೈರ್ಯಶಾಲಿಗಳಾದ ಸ್ವಜನರ ಸಾವನ್ನು ಉಪ್ಪರಿಗೆಯ ಮೇಲೆ ನಿಂತು ಮಾತ್ರ ಈಕ್ಷಿಸಲು ಬಯಸುತ್ತಿರುವಿರಾ? ಭಾರತ ಭೂಮಾತೆಯ ಪಾರತಂತ್ರ್ಯವನ್ನು ತಪ್ಪಿಸದಿದ್ದರೆ, ಅವಳ ಕೋಟ್ಯಾವಧಿ ಮಕ್ಕಳು ಹಸಿವೆಯ ಕೂಗಿನಿಂದ ನರಳುತ್ತಿರುವದನ್ನು ನೀವು ಬಿಡಿಸದಿದ್ದರೆ, ನಿಮ್ಮ ಪದವಿ ಪರೀಕ್ಷೆಗಳ ಪ್ರಯೋಜನವೆಯಿಲ್ಲ, ನಿಮ್ಮ ಕ್ಷುದ್ರಗಳಿಕೆಯ ಉಪಯೋಗವೇನು? ಪಾರತಂತ್ರ್ಯದ ಶೃಂಖಲೆಯಿಂದ ಭಾರತ ಮಾತೆಯೇ ಸಾಯುತ್ತಿರುವಾಗ ನಾವು ಬದುಕುವದೆಂತು? ಅಥವಾ ಭರತಮಾತೆಯನ್ನೆ ಉಳಿಸಿದರೆ ನಮಗೆ ಸಾವೆಲ್ಲಿಯದು!

**ಜವಾಹರಲಾಲ ನೆಹರು.**

## ಗಾಂಧಿಯವರ ಭೀಕರ ಪ್ರತಿಜ್ಞೆ.

ತಮ್ಮ ದಂಡಯಾತ್ರೆಯಲ್ಲಿ ಐಷಾರಾಮಕ್ಕೂ ಸುಖಲೋಲುಪತೆಗೂ ಆಸ್ಪದ ಇರಕೂಡದೆಂದು ತಮ್ಮ ದಂಡಾಳುಗಳಿಗೂ ಅವರನ್ನು ಆತಿಥ್ಯದಿಂದ ಪೂಜಿಸುವ ನಗರವಾಸಿಗಳಿಗೂ ಮಹಾತ್ಮರು ಪರಿಪರಿಯಿಂದ ಹೇಳಿಕೊಂಡು 'ಏನು; ದರಿದ್ರ ನಾರಾಯಣನ ದಾಸರ ದಾಸರಾದ ನಾವೂ ಇಷ್ಟೊಂದು ದುಂದುಗಾರರಾಗಬೇಕೆ?" ಎಂದು ಅತ್ಯಂತ ಉದ್ವೇಗದಿಂದ ಆತ್ಮನಿರ್ಭರ್ತ್ಸನೆಯ ಭಾಷಣಮಾಡಿ ಕೊನೆಗೆ "ನಾನು ಇಷ್ಟೊಂದು ಕರಳುಹರಕೊಂಡು ಮಾತಾಡುತ್ತೇನೆಂದು ಈ ಹೋರಾಟದಿಂದ ನಾನು ಹಿಂತೆಗೆಯುತ್ತೇನೆಂದು ಯಾರೂ ಭಾವಿಸಲಾಗದು. ನನ್ನ ಸಹಕಾರಿಗಳಲ್ಲಿ ಯಾರು ಹೇಗೆ ವರ್ತಿಸಿದರೂ ನನ್ನೀ ಸಂಗ್ರಾಮವನ್ನು ನಿಲ್ಲಿಸುವದಿಲ್ಲ; ನಾನೊಬ್ಬನೆ ಉಳಿದರೇನು, ಅಥವಾ ಸಹಸ್ರಾರು ಜನರು ನನ್ನ ಬೆನ್ನು ಹತ್ತಿದರೇನು, ನಾನೀ ಕದನದಿಂದ ಹಿಂತಿರುಗುವಂತಿಲ್ಲ. ಹಂದಿ ನಾಯಿಗಳಂತೆ ಎಲ್ಲಿಯಾದರೂ ಬಿದ್ದು ಸತ್ತು ನನ್ನ ಶವದ ಮಾಂಸವನ್ನು ಹದ್ದು ಕಾಗೆಗಳು ಹರಿದು ತಿಂದರೂ ನರಿನಾಯಿಗಳು ನನ್ನ ಅಸ್ತಿಗಳನ್ನು ದಿಕ್ಕುಗೊಂಬು ಮಾಡಿದರೂ ಚಿಂತೆಯಿಲ್ಲ, ಆದರೆ ಪರಾಜಿತನಾಗಿ ಆಶ್ರಮಕ್ಕೆ ಮರಳಿಹೋಗಲಿಕ್ಕಿಲ್ಲೆಂದು ಪಣತೊಟ್ಟಿದ್ದೇನೆ." ಎಂದು ಗಾಂಧಿಜಿಯವರು ತಮ್ಮ ಕೃತನಿಶ್ಚಯವನ್ನು ಬಿಚ್ಚಿ ಹೇಳಿ, ಅಲ್ಲಿಯೇ ನೆರೆದ ಲಲನೆಯರ ಕಡೆಗೆ ತಿರುಗಿ 'ನೀವು ಅತ್ಯಂತ ಪ್ರೇಮಹೃದಯದಿಂದ ನನಗೆ ಕಾಣಿಕೆಯಾಗಿ ಕೊಟ್ಟ ಹಣವನ್ನು ನಾವಿಂತು ಅಪವ್ಯಯಮಾಡಿ ನಿಮ್ಮ ದ್ರೋಹಕಟ್ಟಿಕೊಂಡಿದ್ದೇವೆ. ಇದಕ್ಕಾಗಿ ನೀವು ಈ ಪಾಪಿಯನ್ನು ಎಷ್ಟು ನಿಂದಿಸಿದರೂ ಕಡಿಮೆ ಇದೆಂದು ಹೇಳಿ ಪಶ್ಚಾತ್ತಾಪದ ಉದ್ವೇಗದಿಂದ ಉಸ್ಸೆಂದು ಬಿದ್ದುಬಿಟ್ಟರು.

ತರುಣರೆ,

ಜಗದ್ವಿಖ್ಯಾತನಾದ, ಮಹಾತಪಸ್ವಿಯಾದ, ಇಂದಿನ ಸಮಸ್ತ ಪ್ರಪಂಚಕ್ಕೆ ಏಕಮೇವಾದ್ವಿತೀಯನಾದ, ಇಂದಿನ ಭಾರತದ ಮಹರ್ಷಿಯಾದ, ಅಹಿಂಸಾಮೂರ್ತಿಯಾದ, ಸತ್ಯಪ್ರತಿಜ್ಞನಾದ, ಹಿಂದೀಯರ ಪಂಚಪ್ರಾಣನಾದ ಅಸಹಯೋಗಿಯಾದ ಮಹಾತ್ಮನಿಗೆ ಇಂಥ ಸಾವು ಒದಗುವ ಪ್ರಸಂಗವನ್ನು ತರುವಿರೋ?

## ಸಿಪಾಯಿಯು ಸತ್ಯಾಗ್ರಹಿಯಾದನು!

ಬುರದ್ವಾನ ಇನಕಮ ಟ್ಯಾಕ್ಸ ಕಚೇರಿಯ ದಫುರಾಯನೆಂಬ ಸಿಪಾಯಿಯು ತನ್ನ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ಸತ್ಯಾಗ್ರಹಿಯಾಗಿ ಪ್ರಥಮ ಪಥಕದೊಡನೆಯೆ ಕಾಯಿದೆ ಭಂಗಕ್ಕೆ ನಡೆದಿರುವನು.

## ಬೆಂಗಾಲ ಸತ್ಯಾಗ್ರಹಿಗಳ ಪ್ರಗತಿ

ಡಾ|| ಬ್ಯಾನರ್ಜಿ ಇವರ ಪತಾಕಿಯೊಡನೆ ಹೊರಟ ಸತ್ಯಾಗ್ರಹ ತಂಡವು ನಿನ್ನೆ ಕೊಂಟಾಯಿಯ ಮುಟ್ಟಿರುವದು. ಅಲ್ಲಿಯೇ ಈ ಹೊತ್ತು ಉಪ್ಪಿನ ಕಟ್ಟಳೆಯನ್ನು ಮುರಿಯುವ ಉಪಕ್ರಮವು ಮಾಡಲ್ಪಡುವದು. ಇವರು ದಾರಿಯಲ್ಲಿಯ ಹಳ್ಳಿಗಳೊಳಗೆ ವ್ಯಾಖ್ಯಾನ ಕೊಡುತ್ತಲೂ ಗೀತಾ ಉಪದೇಶಮಾಡುತ್ತಲೂ ಒಂದಿರುವರು. ಸ್ವಯಂಸೇವಕರಾಗಲಿಚ್ಛಿಸುವವರ ಸಂಖ್ಯೆಯು ದಿನೆ ದಿನೆ ಹೆಚ್ಚುತ್ತಲಿರುವದು

ಸುರತ ಜಿಲ್ಲಾ ಪ್ರಕಟನಾ ಕಾಬೆಯವರು ತಿಳಿಸುವದೇನಂದರೆ-

ಸುರತ ಜಿಲ್ಲೆಯ ಜಲಾಲಪುರ ತಾಲೂಕದೊಳಗೆ ೧೫ ಹಳ್ಳಿಗಳಿಗೆ ಈಗ ಗೌಡ ಕುಲಕರ್ಣಿಯರೇ ಇರುವದಿಲ್ಲ. ಬಾರ್ಡೋಲಿ ತಾಲೂಕದಲ್ಲಿ ಈ ಹೊತ್ತಿನ ವರೆಗೆ ೫೭೬ ಸ್ವಯಂಸೇವಕರ ಹೆಸರುಗಳು ಪ್ರಕಟವಾಗಿವೆ. ಜೋರಾಸಿ ತಾಲೂಕಿನ ಲೋಕಲ್ ಬೋರ್ಡ ಪ್ರೆಸಿಡೆಂಟನು ರಾಜಿನಾಮೆ ಕೊಟ್ಟಿರುವನು. ಪೋಲೀಸರಿಗೆ ಸರಿರಾತ್ರಿಯಲ್ಲಿಯೇ ಅರ್ಧಚಂದ್ರ ಸಿಕ್ಕಿತು. ಧವ್ರಾಭಾತ ಹಳ್ಳಿಯ ಗೌಡನು ತನ್ನ ಮನೆಯ ಒಂಕದಲ್ಲಿ ಮಾಡಿಕಯಂತೆ ಒಂದು ಮಲಗಿದ ಪೋಲೀಸರನ್ನು ಮಧ್ಯರಾತ್ರಿಯಲ್ಲಿಯೇ ಹೋಗಿ [illegible] 'ನಾನು ಈಗ ನಿಮ್ಮ ಸರಕಾರದ ನೌಕರನಲ್ಲ; ನೀವು ಮತ್ತೊಂದೆಡೆಗೆ ಸ್ಥಳ ನೋಡಿಕೊಳ್ಳಿರಿ, ಏಳಿರಿ' ಎಂದು ಉಚ್ಚಾಟಣೆಕೊಟ್ಟು ಎಬ್ಬಿಸಿ ಬಿಟ್ಟನು.

ಶಸ್ತ್ರಧಾರಿಗಳಾದ ಪೋಲೀಸರ ಗುಂಪಿಗೆ ಈ ಹೊತ್ತು ಆ ಹಳ್ಳಿಯಲ್ಲಿ ಕೂಳು ನೀರು ಏನೂ ಸಿಗಲಿಲ್ಲ. ನೀರು ಜಗ್ಗಲಿಕ್ಕೆ ಹಗ್ಗವನ್ನು ಸಹ ಯಾರೂ ಕೊಡಲಿಲ್ಲ.

## ಪೋಲೀಸರ ರಂಗತಾಲೀಮು ನಡೆದಿದೆ!

ಮಹಾತ್ಮಾಜಿಯನ್ನು ಮಾಂಗೈಕರ ಏನಿಂದ ಹೇಗೆ ತಪ್ಪಿಸಿ ನಿಲ್ಲಿಸಬೇಕೆಂಬುದನ್ನು ಪೋಲೀಸರು ಕಲಿಯುತ್ತಿರುವರು. ಪೋಲೀಸರೊಳಗೆ ಒಬ್ಬನು ಗಾಂಧಿಯಾಗುವನು ಇನ್ನೊಬ್ಬನು ಅಧಿಕಾರಸ್ಥನಾಗಿ, 'ಉಪ್ಪು ಮಾಡಬೇಡ' ಎಂದು ಹೇಳುವನು ಅದಕ್ಕೆ ಗಾಂಧಿ ಪಾತ್ರವನ್ನು ವಹಿಸಿದ ಪೋಲೀಸನು 'ನಾನು ಮಾಡುವವನೆ' ಎಂದು ಉತ್ತರ ಕೊಡುವನು. ನಂತರ ಅಧಿಕಾರಿಯಾದ ಪೋಲೀಸನು ಗಾಂಧಿಯಾದ ಪೋಲೀಸನ ಕೈಗಳನ್ನು ಗಟ್ಟಿಯಾಗಿ ಹಿಡಿದು ಹಿಂದಕ್ಕೆ ಹೇಗೆ ಹೇಗೆ ನೂಕಬೇಕೆಂಬ ಕೃತಿಯನ್ನು ಅಭ್ಯಾಸಪೂರ್ವಕ ಅನುಕರಿಸುತ್ತಿರುವನು. ಹೀಗೆ ಪೋಲೀಸರ ರಂಗತಾಲೀಮು ನಡೆದಿದೆ. ಇಂಥ ಒಂದು ರಂಗತಾಲೀಮದಲ್ಲಿ ಬಲಾತ್ಕಾರದೊಳಗೆ ಹೊಡೆತಕ್ಕೆ ಗಾಂಧಿಯಾದ ಪೋಲೀಸನ ಹಲ್ಲು ಮುರಿದಿದೆ.

## ಸಿಂಧ ಸತ್ಯಾಗ್ರಹಿಗಳ ಪ್ರಯಾಣವು ಪ್ರಾರಂಭವಾಗಿದೆ

ಸಿಂಧ ಪ್ರಾಂತದ ಎಲ್ಲ ಭಾಗಗಳಿಂದಲೂ ಸತ್ಯಾಗ್ರಹಿಗಳ ತಂಡಗಳು ಹೈದರಾಬಾದದ ಕಡೆಗೆ ಹೊರಟಿರುವವು. ಎಲ್ಲ ತಂಡಗಳು ಹೈದರಾಬಾದಕ್ಕೆ ಬಂದು ಸೇರಿದ ಮೇಲೆ ಅಲ್ಲಿಂದ ಎಲ್ಲರೂ ಉಗಿಬಂಡಿಯಿಂದ ಕರಾಚಿಗೆ ತೆರಳುವರು. ಕರಾಚಿಯನ್ನೇ ಸಿಂಧೀಯರು ತಮ್ಮ ರಣಕ್ಷೇತ್ರವನ್ನಾಗಿ ಆರಿಸಿದ್ದಾರೆ.

## ಬೆಂಗಾಲ ವೀರಮಾತೆಯ ಜೀವಂತ ಕಾಣಿಕೆಗಳು!

ಬೆಂಗಾಲ ಪ್ರಾಂತದಲ್ಲಿ ಡಾ| ಬ್ಯಾನರ್ಜಿಯವರು ಹೋದ ಹೋದಲ್ಲಿ ತಮ್ಮ ಅನುಪಮವಾದ ಸ್ವಾತಂತ್ರ್ಯಪ್ರೇಮ ಪ್ರವಾಹದಿಂದ ಹಳ್ಳಿಯವರ ತಿಳುವಳಿಕೆಯಲ್ಲಿ ಕ್ರಾಂತಿಯನ್ನು ಹುಟ್ಟಿಸಿ ಅವರ ಹೃದಯವು ದೇಶಸೇವೆಗಾಗಿ ಹಾತೊರೆಯುವಂತೆ ಮಾಡುತ್ತ ನಡೆದಿದ್ದಾರೆ ಅಲ್ಲಿಯ ಪಟ್ಟಣಿಗರ ಕುಟಿಲತನವನ್ನರಿಯದ ಸರಳ ಮತ್ತು ಸತ್ಯಪ್ರಿಯರಾದ ಹಳ್ಳಿಯವರು ಅನ್ಯಾಯವನ್ನು ತಿಳಿಸಿಕೊಟ್ಟಲ್ಲಿ ಅದನ್ನು ಧ್ವಂಸಿಸಲಿಕ್ಕೆ ತಮ್ಮ ಸರ್ವಸ್ವವನ್ನು ಅರ್ಪಿಸಬೇಕೆಂಬ ಬುದ್ಧಿಯು ಅವರಿಗೆ ಬಲುಬೇಗ ಹುಟ್ಟುತ್ತದೆ. ಇಂಥದೆ ಒಂದು ಸಭೆಯಲ್ಲಿ ಡಾ|| ಬ್ಯಾನರ್ಜಿಯವರು ಅನ್ಯಾಯವನ್ನು ಮುರಿದೊಗೆಯುವದಕ್ಕೆ ಮಹಾತ್ಮರು ಆರಂಭಿಸಿದ ಈ ಕದನಕ್ಕೆ ಜನರಿಂದಲೂ ಧನದಿಂದಲೂ ಸಹಾಯಮಾಡಿರೆಂದು ಬೇಡಿಕೊಳ್ಳಲು, ಅನೇಕ ಕುಲಾಂಗನೆಯರು ತಮ್ಮ ಮೇಲಿನ ಆಭರಣಗಳನ್ನು ಬಿಚ್ಚಿ ಒಗೆಯಹತ್ತಿದರು. ಅಲ್ಲಿಯೇ ಕುಳಿತ ಒಬ್ಬ ವೀರಮಾತೆಯು 'ಅಯ್ಯಾ! ನಾನು ಅಕಿಂಚನಳು ಆದರೆ ನನಗೆ ರತ್ನದಂಥ ನಾಲ್ಕು ಗಂಡುಮಕ್ಕಳಿದ್ದಾರೆ ಅವರನ್ನೇ ಈ ಸಂಗ್ರಾಮಕ್ಕೆ ಅರ್ಪಿಸುತ್ತೇನೆ. ಸ್ವೀಕರಿಸಬೇಕು' ಎಂದು ಹೇಳಿ ತನ್ನ ತಾಯಿತನವನ್ನು ಸಾರ್ಥಕಮಾಡಿಕೊಂಡಳು. ಕನ್ನಡಮಾತೆಯರ ಈ ಒಳಗಣ್ಣು ಎಂದು ತೆರೆಯುವದು? ಮುಮ್ಮು ಕುಪ್ಪ ಉಣಿಸಿ ಪೋಷಿಸುವದಕ್ಕಾಗಿ ಮಾತ್ರ ಮಕ್ಕಳನ್ನು ತಾವು ಹಡದಿಲ್ಲವೆಂಬ ಜ್ಞಾನೋದಯವು ನಮ್ಮ ಕನ್ನಡ ಮಾತೆಯರಿಗೆ ಇಂದು ಆಗಬೇಕಾಗಿದೆ, ಮಕ್ಕಳನ್ನು ಹಡೆದ ಅವರ ಗಂಭೀರ ಸಹಿಷ್ಣುತೆಯನ್ನು ಅವರ ಸಾಹಸದ ಲೀಲೆಯನ್ನು ಅವರ ಕಾರ್ಯದ ಪರಿಮಿತಿಯನ್ನು ನೋಡುವದರಲ್ಲಿಯೇ ಇಂದಿನ ತಾಯಂದಿರು ಆನಂದಪಡಬೇಕಾಗಿದೆ. ತ್ಯಾಗಮೂರ್ತಿಗಳಾದ ಕನ್ನಡ ತಾಯಂದಿರೂ ತಮ್ಮ ಮಕ್ಕಳ ಈಗಿನ ಕ್ಷುದ್ರ ಗೃಹಸೌಖ್ಯವನ್ನು ಬಯಸಿ ಅವರನ್ನು ಈ ಧರ್ಮಯುದ್ಧದಿಂದ ಅತ್ತಗಟ್ಟಿ ಅನಗಾಲವಲ್ಲಿಯೂ ಲೋಕಾಪವಾದಕ್ಕೆ ಪಾತ್ರರಾಗಬಾರದೆಂದು ತರುಣ ಕನ್ನಡನಾಡು ಕೋರುತ್ತಿದೆ

## ಸಮುದ್ರದಡದ ಉಪ್ಪನ್ನು ನಾಶಗೊಳಿಸಲು ಹುಕುಂ ಹೊರಟಿದೆ.

ಮಸಲೀಪಟ್ಟಣದ ಉಪ್ಪಿನ ಅಧಿಕಾರಿಗಳಿಗೆ ಅಲ್ಲಿ ಸಮುದ್ರದಂಡೆಗೆ ಕೂಡಿಬೀಳುತ್ತಿರುವ ಉಪ್ಪನ್ನು ಮತ್ತೆ ಸಮುದ್ರಪಾಲು ಮಾಡಲಿಕ್ಕೆ ಮೇಲಿನಿಂದ ಅಪ್ಪಣೆ ಬಂದಿದೆ. ಸತ್ಯಾಗ್ರಹಿಗಳು ರಾತ್ರಿಯಲ್ಲಿ ಎಲ್ಲಿಯಾದರೂ ಉಪ್ಪನ್ನು ಎತ್ತಿಕೊಂಡು ಹೋದಾರೆಂಬ ಅಂಜಿಕೆಯೇ ಈ ಹುಕುಮಿಗೆ ಕಾರಣವಂತೆ!

## ಮಹಾತ್ಮಾಜಿಯವರ ಆಜ್ಞೆಯು

ಎಪ್ರಿಲ್ ೬ನೇ ತಾರೀಖಿನ ದಿವಸ ಸಿಕ್ಕಿದವರೆಲ್ಲರೂ ಉಪ್ಪಿನ ಕಟ್ಟಳೆಯನ್ನು ಮುರಿಯುವ ಸತ್ಯಾಗ್ರಹವನ್ನು ಆರಂಭಿಸಬೇಕೆಂದು ನಾವ ಜಾಹೀರಪಡಿಸುತ್ತೇವೆ ಅಂಥ ಸತ್ಯಾಗ್ರಹಿಗಳೆಲ್ಲರೂ ಈ ಕೆಳಗಿನ ಸಂಗತಿಗಳನ್ನು ಲಕ್ಷ್ಯಪೂರ್ವಕ ಪಾಲಿಸಲೇಬೇಕು. (೧) ಈ ಸತ್ಯಾಗ್ರಹಕ್ಕೆ ಅತ್ಯವಶ್ಯವಾದದ್ದೆಂದರೆ ಅಹಿಂಸೆಯು. ಈ ಅಹಿಂಸೆಯನ್ನು ಮನಸಾ ಕಾಯಾ ವಾಚಾ ಆಚರಿಸಲಿಕ್ಕಬೇಕು.

(ತಂತಿಯಿಂದ ಬಂದ ವಾರ್ತೆ)

## ನಿನ್ನೆ ಬೆಳಿಗ್ಗೆ ೮ ಗಂಟೆಗೆ
# ಮ. ಗಾಂಧಿಯವರು ದಂಡಿಗೆ
## ಮುಟ್ಟಿದರು!

ಶ್ರೀಮ ಗಾಂಧಿಜಿ ಮತ್ತು ಸೈನಿಕರು ತಮ್ಮ ದಂಡಯಾತ್ರೆಯ ಕೊನೆಯ ಭಾಗವಾದ ದಂಡಿಗ್ರಾಮಕ್ಕೆ ಮುಟ್ಟಿದರು. ಅಲ್ಲಿ ಮುಂಬಯಿ ನಿವಾಸಿಯಾದ ಓರ್ವ ಮುಸಲ್ಮಾನ ಸಾವುಕಾರನ ಬಂಗ್ಲೆಯಲ್ಲಿ ಗಾಂಧಿಯವರಿಗೆ ಇಳಿದುಕೊಳ್ಳಲು ಸ್ಥಳ ಗೊತ್ತು ಮಾಡಿರುವರು. ಸ್ವಯಂಸೇವಕರೆಲ್ಲ ಹೊರಗೆ ಬೈಲಿನಲ್ಲಿ ಹೊಡೆದ ಡೇರೆಗಳಲ್ಲಿ ತಮ್ಮ ಬಿಡಾರ ಹಾಕತಕ್ಕವರು. ದಂಡಿಯು ೩೦ ಜನವಸತಿಯ ಸಣ್ಣ ಗ್ರಾಮವು ಬಾಗಲಿ ನಸಿ ಗುಡಿಸಲು ಎಲ್ಲ ಕೂಡಿದರೂ ೫೦ ಮನೆಗಳೇನು ಆಗುವದಿಲ್ಲ. ನಿವಾಸಿಗಳೆಲ್ಲರೂ ಮೀನಗಾರರು. ಊರಲ್ಲಿ ಕುಡಿಯುವ ನೀರಿನ ಬಾವಿ ಒಂದಕಿಂತ ಹೆಚ್ಚಿಲ್ಲ. ಇಂಥ ಕ್ಷುದ್ರ ಹಳ್ಳಿಯು ಈ ಹೊತ್ತು ಮಹಾತ್ಮರ ದೃಷ್ಟಿಪ್ರಸಾದದಿಂದ ದೊಡ್ಡ ಪಟ್ಟಣವಾಗಹತ್ತಿದೆ ಈಗ ದಿನಾಲು ಸಾವಿರಾರು ಮೋಟಾರುಗಳು ತೆರಪಿಲ್ಲದೆ ದಂಡಿಗೆ ಓಡಾಡಹತ್ತಿವೆ. ಜನರ ಸಂದಣಿಯು ದಿನೆದಿನೆ ಬೆಳೆಯಹತ್ತಿದೆ ಜನರಿಗೆ ಇದೊಂದು ಯಾತ್ರಾಸ್ಥಳವಾದಂತಾಗಿದೆ ಊರ ಜನರೆಲ್ಲರೂ ಬರುಹೋಗುವ ಜನರಿಗೆ ಆದರ ತೋರಿಸುತ್ತಿರುವರು. ಇಳಿದುಕೊಳ್ಳಲಿಕ್ಕೆ ಸಣ್ಣ ಮನೆಗಳಿದ್ದರೂ ಅವುಗಳೊಳಗೆ ಸ್ಥಳಮಾಡಿಕೊಟ್ಟು, ಎರಡನೇ ಅನುಕೂಲತೆಗಳನ್ನೂ ಒದಗಿಸಿಕೊಡುವರು. ಸರಕಾರದ ಪಕ್ಷದವರೂ ಒಳ್ಳೇ ಪ್ರಯಾಸದಿಂದ ಒಂದು ಬಂಗ್ಲೆಯನ್ನು ಸಂಪಾದಿಸಿಕೊಂಡು ದೊಡ್ಡ ಅಧಿಕಾರಿಗಳನ್ನು (ಕಲೆಕ್ಟರ ಡಿ. ಮ್ಯಾಜಿಸ್ಟ್ರೇಟ ಇವರೆಲ್ಲರೂ ಇಲ್ಲಿಯೇ ಠಿಕಾಣಿ ಹಿಡಿದು) ಸಣ್ಣ ಶಿಪಾಯಿಯ ವರೆಗೂ ಎಲ್ಲರೂ ಆ ಬಂಗಲೆಯಲ್ಲಿಯೇ ಕಾಲಕಳೆಯ ಬೇಕಾಗಿದೆ. ಯಾಕಂದರೆ ಊರೊಳಗೆ ಜನರು ಸರಕಾರದ ಮಂದಿಗೆ ಸ್ಥಳ ಕೊಡಬಾರದೆಂದು ಕಟ್ಟುಮಾಡಿಕೊಂಡಿದ್ದಾರೆ ದಂಡಿಗೆ ನಾಲ್ಕು ಪಾರ್ಶ್ವಗಳಲ್ಲಿ ಸಮುದ್ರವು ಸುತ್ತುಗಟ್ಟಿದೆ. ಉಪ್ಪು ಮಾಡಲಿಕ್ಕೆ ಸಮುದ್ರ ದಂಡೆಗೆ ವಿಶಾಲವಾದ ಪುಳಿನ ಪ್ರದೇಶವಿದೆ ಅಲ್ಲಿ ಸ್ವಾಭಾವಿಕವಾದ ಪ್ರಕ್ರಿಯೆಯಿಂದಲೇ ಉಪ್ಪು ಸಿದ್ಧವಾಗುತ್ತಿದೆ. ದಂಡೆಗೆ ಹೋಗಿ ಬಳಕೊಂಡು ಬಾರದಂತಾಯಿತು ಈ ಉಪ್ಪನ್ನು ಸರಕಾರವು ತನ್ನ ಕಾಯದೆ ಸಲುವಾಗಿ ನಾಶಗೊಳಿಸುತ್ತದೆ. ಇದೆಲ್ಲ ದಂಡಿಯ ಪರಿಸ್ಥಿತಿ

### ಮಹಾತ್ಮಾ ಗಾಂಧಿಯವರ ಯೋಜನೆ

(ತಂತಿಯಿಂದ ಬಂದ ವಾರ್ತೆ)

ಇಂದು ಗಾಂಧಿಯವರು ಉಪ್ಪಿನ ಕಾಯಿದೆಯನ್ನು ಭಂಗಿಸುವ ಉಪಕ್ರಮವನ್ನು ಇಲ್ಲಿಯೇ ಮಾಡತಕ್ಕವರು ಸಮುದ್ರ ದಂಡೆಗೆ ಬಿದ್ದ ಉಪ್ಪನ್ನು ಬಳಿದುಕೊಂಡು ಬರುವದರಿಂದಲೂ ಗಾಂಧಿಯವರು ಸಮುದ್ರದ ನೀರನ್ನು ತಂದು ಮನೆಯಲ್ಲಿ ಕಾಸಿ ಉಪ್ಪು ಮಾಡುವ ಪದ್ಧತಿಯನ್ನು ಮೊದಲು ಅನುಸರಿಸುವ ಸಂಭವವಿದೆ. ಸರಕಾರದವರು ಯಾವ ರೀತಿಯಿಂದ ವಿರೋಧಿಸತಕ್ಕವರಿದ್ದಾರೆ ಇದು ಯಾರಿಗೂ ಇನ್ನು ತಿಳಿದಿಲ್ಲ.

### ಸರಕಾರದ ಆತಂಕವನ್ನು ಲೆಕ್ಕಿಸಬೇಡಿ!

ಕಾರಣ ಮಹಾತ್ಮಾಜಿಯವರು ಈ ರೀತಿಯಾಗಿ ಆಜ್ಞೆಯನ್ನು ಹೊರಡಿಸಿದ್ದಾರೆ.

ಸರಕಾರದವರು ಸತ್ಯಾಗ್ರಹಿಗಳ ಮಾರ್ಗದಲ್ಲಿ ಏನಾದರೂ ಆತಂಕಗಳನ್ನುಂಟುಮಾಡಿದರೆ, ಸತ್ಯಾಗ್ರಹಿಗಳು ಅವುಗಳನ್ನು ಕಿತ್ತು ಒಗೆದು ಮುಂದೆ ಸಾಗಬೇಕು. ಸ್ವತಃ ಪೋಲೀಸರೇ ಮುಂದೆ ನಿಂತುಕೊಂಡರೂ ಅವರನ್ನೂ ಸರಿಸಿ ಮುಗ್ಗಲವಾಗಿ ತಮ್ಮ ಕಾರ್ಯವನ್ನು ನಡೆಸತಕ್ಕದ್ದು. ಅವರನ್ನು ಹೀಗೆ ಸರಿಸಿ ಹೋಗುವವರಲ್ಲಿ ಎಂಥ ಗಂಡಾಂತರ ಬಂದರೂ ಅದನ್ನು ಲೆಕ್ಕಿಸ ಬಾರದು!

---

### ಮದ್ಯಪಾನ ಪ್ರತಿಬಂಧಕ್ಕಾಗಿ ಪಾರ್ಶಿಜನರಿಗೆ
## ಮಹಾತ್ಮರ ಉಪದೇಶ.

ನವಸಾರಿಯಲ್ಲಿ ಪಾರ್ಶಿಜನರೇ ಹೆಚ್ಚಾಗಿದ್ದಾರೆ ಮಹಾತ್ಮರು ಅಲ್ಲಿಗೆ ಹೋದ ದಿನ ಅವರು ಸಭೆಗೆ ಹೆಚ್ಚಾಗಿ ಬಂದಿದ್ದರು. ಸ್ತ್ರೀಯರೂ ವಿಶೇಷವಾಗಿದ್ದರು. ಎಲ್ಲ ಕಡೆಗಳಲ್ಲಿ ಪಾರ್ಶೀಜನರೇ ಬಹುಶಃ ಶೆರೆ ಅಂಗಡಿಗಳ ಗುತ್ತೇ ಹಿಡಿಯುತ್ತಿರುವದರಿಂದ ಮಹಾತ್ಮರು ಈ ಬಗ್ಗೆ ಬಹಳ ಪರಿಯಿಂದ ಪಾರ್ಶೀಜನರಿಗೆ ಉಪದೇಶಿಸಿದರು.. ಈ ನೀಚ ವ್ಯವಸಾಯವನ್ನು ಅವರು ಈ ಮುಂದಾದರೂ ಬಿಡತಕ್ಕದ್ದೆಂದೂ, ಅವರು ಹಟದಿಂದ ಸರಕಾರಕ್ಕೇ ಸಹಾಯಕರಾಗಿ ಗುತ್ತೇ ಹಿಡಿದರೆ, ಅವರ ವಿರುದ್ಧ ಸಹ ಸತ್ಯಾಗ್ರಹವನ್ನು ಹೂಡಬೇಕಾಗುವದೆಂದೂ ಎಚ್ಚರಿಕೆಕೊಟ್ಟು, ಪಾರ್ಶಿ ಸ್ತ್ರೀಯರು ಶೆರೆಸೆಂದಿ ಅಂಗಡಿಗಳ ಪಿಕೆಟಿಂಗ ಮಾಡಿ, ತನ್ನ ಗಂಡಂದಿರು, ಬಂಧುಗಳು, ತಂದೆಯವರು ಮಾಡುತ್ತಿರುವ ಪಾಪಕೃತಿಗೆ ಸೆಡ್ಡು ಹಾಕಬೇಕೆಂದು ಸ್ತ್ರೀಯರಲ್ಲಿಯೂ ಮೊರೆಯಿಟ್ಟರು. ಉಪ್ಪಿನ ತೆರಿಗೆಯು ಹೋದ ಕೂಡಲೇ ಮದ್ಯಪಾನವು ಸಂಪೂರ್ಣವಾಗಿ ನಿಂತರೆ, ಈ ತೆರಿಗೆಗಳ ಬಲದಿಂದ ನಡೆಯುತ್ತಿರುವ ಪರದೇಶೀ ಸರಕಾರವು ಡೊಗ್ಗಲು ಉರುಳುವದೆಂದು ಮಹಾತ್ಮರು ವಿಶ್ವಾಸದಿಂದ ನುಡಿದರು.

ನವಸಾರಿಯಲ್ಲಿ ಮಹಾತ್ಮರನ್ನು, ಅತ್ಯಂತ ಉತ್ಸಾಹದಿಂದ ಜನರು ಒಸಗೆಮಾಡಿಕೊಂಡರು. ೫೦ ಸಾವಿರ ಜನರು ಸಭೆಗೆ ಕಲೆತಿದ್ದರು ಧನಿಕರಾ ಕೆರೆಯ ಹೊರಗಿನಿಂದ ಅಲ್ಲಿನ ರಾತ್ರಿ ಆ ಗ್ರಾಮದ ಪರಿಸರವು ನಳನಳಿಸಿತು. ವಿದ್ಯುತ ದೀಪಗಳಿಂದ ಒಮ್ಮೆ ಅಂದವಾಗಿ ಆ ಪ್ರಸಿದ್ಧ ಸಾವಿರಾದ ಜೈಲು ಶೃಂಗರಿಸಲ್ಪಟ್ಟಿತ್ತು.

---

### ತರುಣರ ಪರಿಷತ್ತಿನ ಸ್ವಾಗತಾಧ್ಯಕ್ಷರ ಬಂಧನ!

ನವಸಾರದಲ್ಲಿ ಕಳೆದ ವಾರ ನರೀಮಾನ್ನರ ಅಧ್ಯಕ್ಷತೆಯಲ್ಲಿ ಗುಜರಾತ ತರುಣರ ಪರಿಷತ್ತು ಸೇರಿತ್ತು. ಈ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಡಾಕ್ಟರ ಖಂಡೂಭಾಯಿ ದೇಸಾಯಿಯವರು ಮಾಡಿದ ಭಾಷಣಕ್ಕಾಗಿ ಅವರು ಬಂಧಿಸಲ್ಪಟ್ಟಿದ್ದಾರೆ.

## ಸಿಪಾಯಿಯು ಸತ್ಯಾಗ್ರಹಿಯಾದನು!

ಬುರದ್ವಾನ ಇನಕಮ ಟ್ಯಾಕ್ಸ ಕಚೇರಿಯ ದಹುರಾಯ ನೆಂಬ ಸಿಪಾಯಿಯು ತನ್ನ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ಸತ್ಯಾಗ್ರಹಿಯಾಗಿ ಪ್ರಥಮ ಪಥಕದೊಡನೆಯೆ ಕಾಯಿದೆ ಭಂಗಕ್ಕೆ ನಡೆದಿರುವನು.

## ಬೆಂಗಾಲ ಸತ್ಯಾಗ್ರಹಿಗಳ ಪ್ರಗತಿ

ಡಾ॥ ಬ್ಯಾನರ್ಜಿ ಇವರ ಪತಾಕಿಯೊಡನೆ ಹೊರಟ ಸತ್ಯಾಗ್ರಹ ತಂಡವು ನಿನ್ನೆ ಕೊಂಡಾಯಿಯ ಮುಟ್ಟಿರುವದು. ಅಲ್ಲಿಯೇ ಈ ಹೊತ್ತು ಉಪ್ಪಿನ ಕಟ್ಟಳೆಯನ್ನು ಮುರಿಯುವ ಉಪಕ್ರಮವು ಮಾಡಲ್ಪಡುವದು. ಇವರು ದಾರಿಯಲ್ಲಿಯ ಹಳ್ಳಿಗಳೊಳಗೆ ವ್ಯಾಖ್ಯಾನ ಕೊಡುತ್ತಲೂ ಗೀತಾ ಉಪದೇಶಮಾಡುತ್ತಲೂ ಬಂದಿರುವರು. ಸ್ವಯಂಸೇವಕರಾಗಲಿಚ್ಛಿಸುವವರ ಸಂಖ್ಯೆಯು ದಿನೆ ದಿನೆ ಹೆಚ್ಚುತ್ತಲಿರುವದು

ಸುರತ ಜಿಲ್ಹಾ ಪ್ರಕಟನಾ ಶಾಖೆಯವರು ತಿಳಿಸುವದೇನಂದರೆ-

ಸುರತ ಜಿಲ್ಲೆಯ ಜಲಾಲಪುರ ತಾಲೂಕದೊಳಗೆ ೧೫ ಹಳ್ಳಿಗಳಿಗೆ ಈಗ ಗೌಡ ಕುಲಕರ್ಣಿಯರೇ ಇರುವದಿಲ್ಲ ಬಾರ್ಡೋಲಿ ತಾಲೂಕದಲ್ಲಿ ಈ ಹೊತ್ತಿನ ವರೆಗೆ ೫೭೭ ಸ್ವಯಂಸೇವಕರ ಹೆಸರುಗಳು ಪ್ರಕಟವಾಗಿವೆ. ಜೋರಾಸಿ ತಾಲೂಕಿನ ಲೋಕಲ್ ಬೋರ್ಡ ಪ್ರೆಸಿಡೆಂಟನು ರಾಜೀನಾಮೆ ಕೊಟ್ಟಿರುವನು. ಪೋಲೀಸರಿಗೆ ಸರಿರಾತ್ರಿಯಲ್ಲಿಯೇ ಅರ್ಧಚಂದ್ರ ಸಿಕ್ಕಿತು. ಛಪ್ರಾಭಾತ ಹಳ್ಳಿಯ ಗೌಡನು ತನ್ನ ಮನೆಯ ಒಂಕದಲ್ಲಿ ವಾಡಿಕೆಯಂತೆ ಬಂದು ಮಲಗಿದ ಪೋಲೀಸರನ್ನು ಮಧ್ಯರಾತ್ರಿಯಲ್ಲಿಯೇ ಹೊರಗೆ ಹಾಕಿದನು. 'ನಾನು ಈಗ ನಿಮ್ಮ ಸರಕಾರದ ನೌಕರನಲ್ಲ; ನೀವು ಮತ್ತೊಂದೆಡೆಗೆ ಸ್ಥಳ ನೋಡಿಕೊಳ್ಳಿರಿ, ಏಳಿರಿ' ಎಂದು ಉಚ್ಚಾಟಣೆಕೊಟ್ಟು ಎಬ್ಬಿಸಿ ಬಿಟ್ಟನು.

ಕ್ರೋಧ ರಾಳಾದ ಪೋಲಿಸರ ಗುಂಪಿಗೆ ಈ ಹೊತ್ತು ಆ ಹಳ್ಳಿಯಲ್ಲಿ ಕೂಳು ನೀರು ಏನೂ ಸಿಗಲಿಲ್ಲ. ನೀರು ಜಗ್ಗಲಿಕ್ಕೆ ಹಗ್ಗವನ್ನು ಸಹ ಯಾರೂ ಕೊಡಲಿಲ್ಲ.

## ಪೋಲೀಸರ ರಂಗತಾಲೀಮು ನಡೆದಿದೆ!

ಮಹಾತ್ಮಾಜಿಯನ್ನು ಮುಂಗೈಕಸವಿನಿಂದ ಹೇಗೆ ತಡೆದು ನಿಲ್ಲಿಸಬೇಕೆಂಬುದನ್ನು ಪೋಲೀಸರು ಕಲಿಯುತ್ತಿರುವರು. ಪೋಲೀಸರೊಳಗೆ ಒಬ್ಬನು ಗಾಂಧಿಯಾಗುವನು. ಇನ್ನೊಬ್ಬನು ಅಧಿಕಾರಸ್ಥನಾಗಿ, 'ಉಪ್ಪ ಮಾಡಬೇಡ' ಎಂದು ಹೇಳುವನು ಅದಕ್ಕೆ ಗಾಂಧಿ ಪಾತ್ರವನ್ನು ವಹಿಸಿದ ಪೋಲೀಸನು 'ನಾನು ಮಾಡುವವನೆ' ಎಂದು ಉತ್ತರಕೊಡುವನು. ನಂತರ ಅಧಿಕಾರಿಯಾದ ಪೋಲೀಸನು ಗಾಂಧಿಯಾದ ಪೋಲೀಸನ ಕೈಗಳನ್ನು ಗಟ್ಟಿಯಾಗಿ ಹಿಡಿದು ಹಿಂದಕ್ಕೆ ಹೇಗೆ ಹೇಗೆ ನೂಗಿಸಬೇಕೆಂಬ ಕೃತಿಯನ್ನು ಅಭ್ಯಾಸಪೂರ್ವಕ ಅನುಕರಿಸುತ್ತಿರುವನು. ಹೀಗೆ ಪೋಲೀಸರ ರಂಗತಾಲೀಮು ನಡೆದಿದೆ. ಖಾಯರೆ ಒಂದು ರಂಗತಾಲೀಮದಲ್ಲಿ ಜಲಾಶಯದೊಳಗೆ ಹೊಡತಕ್ಕೆ ಗಾಂಧಿಯಾದ ಪೋಲೀಸನ ಹಲ್ಲು ಮುರಿದಿದೆ.

## ಸಿಂಧ ಸತ್ಯಾಗ್ರಹಿಗಳ ಪ್ರಯಾಣವು ಪ್ರಾರಂಭವಾಗಿದೆ

ಸಿಂಧ ಪ್ರಾಂತದ ಎಲ್ಲ ಭಾಗಗಳಿಂದಲೂ ಸತ್ಯಾಗ್ರಹಿಗಳ ತಂಡಗಳು ಹೈದರಾಬಾದದ ಕಡೆಗೆ ಹೊರಟಿರುವವು. ಎಲ್ಲ ತಂಡಗಳು ಹೈದರಾಬಾದಕ್ಕೆ ಬಂದು ಸೇರಿದ ಮೇಲೆ ಅಲ್ಲಿಂದ ಎಲ್ಲರೂ ಉಗಿಬಂಡಿಯಿಂದ ಕರಾಚಿಗೆ ತೆರಳುವರು. ಕರಾಚಿಯನ್ನೇ ಸಿಂಧೀಯರು ತಮ್ಮ ರಣಕ್ಷೇತ್ರವನ್ನಾಗಿ ಆರಿಸಿದ್ದಾರೆ.

## ಬೆಂಗಾಲ ವೀರಮಾತೆಯ ಜೀವಂತ ಕಾಣಿಕೆಗಳು!

ಬೆಂಗಾಲ ಪ್ರಾಂತದಲ್ಲಿ ಡಾ। ಬ್ಯಾನರ್ಜಿಯವರು ಹೋದ ಹೋದಲ್ಲಿ ತಮ್ಮ ಅನುಪಮವಾದ ಸ್ವಾತಂತ್ರ್ಯಪ್ರೇಮ ಪ್ರವಾಹದಿಂದ ಹಳ್ಳಿಯವರ ತಿಳುವಳಿಕೆಯಲ್ಲಿ ಕ್ರಾಂತಿಯನ್ನು ಹುಟ್ಟಿಸಿ ಅವರ ಹೃದಯವು ದೇಶಸೇವೆಗಾಗಿ ಹಾತೊರೆಯುವಂತೆ ಮಾಡುತ್ತ ನಡೆದಿದ್ದಾರೆ ಅಲ್ಲದೆ ಪಟ್ಟಣಿಗರ ಕುಟಿಲತನವನ್ನರಿಯದ ಸರಳ ಮತ್ತು ಸತ್ಯಪ್ರಿಯರಾದ ಹಳ್ಳಿಯವರು ಅನ್ಯಾಯವನ್ನು ತಿಳಿಸಿಕೊಟ್ಟಲ್ಲಿ ಅದನ್ನು ಧ್ವಂಸಿಸಲಿಕ್ಕೆ ತಮ್ಮ ಸರ್ವಸ್ವವನ್ನು ಅರ್ಪಿಸಬೇಕೆಂಬ ಬುದ್ಧಿಯು ಅವರಿಗೆ ಬಲುಬೇಗ ಹುಟ್ಟುತ್ತದೆ. ಇಂಥದೆ ಒಂದು ಸಭೆಯಲ್ಲಿ ಡಾ॥ ಬ್ಯಾನರ್ಜಿಯವರು ಅನ್ಯಾಯವನ್ನು ಮುರಿದೊಗೆಯುವದಕ್ಕೆ ಮಹಾತ್ಮರು ಆರಂಭಿಸಿದ ಈ ಕದನಕ್ಕೆ ಜನರಿಂದಲೂ ಧನದಿಂದಲೂ ಸಹಾಯಮಾಡಿರೆಂದು ಬೇಡಿಕೊಳ್ಳಲು, ಅನೇಕ ಕುಲಾಂಗನೆಯರು ತಮ್ಮ ಮೇಲಿನ ಆಭರಣಗಳನ್ನು ಬಿಚ್ಚಿ ಒಗೆಯಹತ್ತಿದರು. ಅಲ್ಲಿಯೇ ಕುಳಿತ ಓರ್ವ ವೀರಮಾತೆಯು 'ಆರ್ಯರೆ ನಾನು ಆಕಿಂಚನಳು ಆದರೆ ನನಗೆ ರತ್ನದಂಥ ನಾಲ್ಕು ಗಂಡುಮಕ್ಕಳಿದ್ದಾರೆ ಅವರನ್ನೇ ಈ ಸಂಗ್ರಾಮಕ್ಕೆ ಅರ್ಪಿಸಿದ್ದೇನೆ. ಸ್ವೀಕರಿಸಬೇಕು ಎಂದು ಹೇಳಿ ತನ್ನ ತಾಯಿತನವನ್ನು ಸಾರ್ಥಕಮಾಡಿಕೊಂಡಳು. ಕನ್ನಡಮಾತೆಯರ ಈ ಒಳಗಣ್ಣು ಎಂದು ತೆರೆಯುವದು? ಮಕ್ಕಳ ಹುಟ್ಟಿಸಿ ಉಣಿಸಿ ಮುದ್ದಿಸುವದಕ್ಕಾಗಿ ಮಾತ್ರ ಮಕ್ಕಳನ್ನು ತಾವು ಹಡದಿಲ್ಲವೆಂಬ ಜ್ಞಾನೋದಯವು ನಮ್ಮ ಕನ್ನಡ ಮಾತೆಯರಿಗೆ ಇಂದು ಆಗಬೇಕಾಗಿದೆ, ಮಕ್ಕಳನ್ನು ಹಡೆದು ಅವರ ಗಂಭೀರ ಸಹಿಷ್ಣುತೆಯನ್ನು ಅವರ ಸಾಹಸದ ಲೀಲೆಯನ್ನು ಅವರ ಕಾರ್ಯದ ಪರಿಮಿತಿಯನ್ನು ನೋಡುವದರಲ್ಲಿಯೇ ಇಂದಿನ ತಾಯಂದಿರು ಆನಂದಪಡಬೇಕಾಗಿದೆ. ತ್ಯಾಗಮೂರ್ತಿಗಳಾದ ಕನ್ನಡ ತಾಯಂದಿರೂ ತಮ್ಮ ಮಕ್ಕಳ ಈಗಿನ ಕ್ಷುದ್ರ ಗೃಹಸೌಖ್ಯವನ್ನು ಬಯಸಿ ಅವರನ್ನು ಈ ಧರ್ಮಯುದ್ಧದಿಂದ ಅಡ್ಡಗಟ್ಟಿ ಅನಗಾಲವಲ್ಲಿಯೂ ಲೋಕಾಪವಾದಕ್ಕೆ ಪಾತ್ರರಾಗಬಾರದೆಂದು ತರುಣ ಕನ್ನಡನಾಡು ಕೋರುತ್ತಿದೆ.

## ಸಮುದ್ರಘಡದ ಉಪ್ಪನ್ನು ನಾಶಗೊಳಿಸಲು ಹುಕುಂ ಹೊರಟಿದೆ.

ಮಸಲಿಪಟ್ಟಣದ ಉಪ್ಪಿನ ಅಧಿಕಾರಿಗಳಿಗೆ ಅಲ್ಲಿ ಸಮುದ್ರ ದಂಡೆಗೆ ಕೂಡಿಬೀಳುತ್ತಿರುವ ಉಪ್ಪನ್ನು ಮತ್ತೆ ಸಮುದ್ರಪಾಲು ಮಾಡಲಿಕ್ಕೆ ಮೇಲಿನಿಂದ ಅಪ್ಪಣೆ ಬಂದಿದೆ ಸತ್ಯಾಗ್ರಹಿಗಳು ರಾತ್ರಿಯಲ್ಲಿ ಎಲ್ಲಿಯಾದರೂ ಉಪ್ಪನ್ನು ಎತ್ತಿಕೊಂಡು ಹೋದಾರೆಂಬ ಅಂಜಿಕೆಯೇ ಈ ಹುಕುಮಿಗೆ ಕಾರಣವಂತೆ!

## ಮಹಾತ್ಮಾಜಿಯವರ ಆಜ್ಞೆಯು

ಎಪ್ರಿಲ್ ೬ ನೇ ತಾರೀಖಿನ ದಿವಸ ಸಿಕ್ಕಿದವರೆಲ್ಲರೂ ಉಪ್ಪಿನ ಕಟ್ಟಳೆಯನ್ನು ಮುರಿಯುವ ಸತ್ಯಾಗ್ರಹವನ್ನು ಆರಂಭಿಸಬೇಕೆಂದು ನಾನು ಜಾಹೀರಪಡಿಸುತ್ತೇನೆ ಅಂಥ ಸತ್ಯಾಗ್ರಹಿಗಳೆಲ್ಲರೂ ಈ ಕೆಳಗಿನ ಸಂಗತಿಗಳನ್ನು ಲಕ್ಷ್ಯಪೂರ್ವಕ ಪಾಲಿಸಲೇಬೇಕು. (೧) ಈ ಸತ್ಯಾಗ್ರಹಕ್ಕೆ ಅತ್ಯವಶ್ಯವಾದದ್ದೆಂದರೆ ಅಹಿಂಸೆಯು, ಈ ಅಹಿಂಸೆಯನ್ನು ಮನಸಾ ಕಾಯಾ ವಾಚಾ ಆಚರಿಸಲಿಕ್ಕೆಬೇಕು.

( ತಂತಿಯಿಂದ ಬಂದ ವಾರ್ತೆ )

### ನಿನ್ನೆ ಬೆಳಿಗ್ಗೆ ೮ ಗಂಟೆಗೆ

# ಮ. ಗಾಂಧಿಯವರು ದಂಡಿಗೆ

### ಮುಟ್ಟಿದರು!

ಮ. ಗಾಂಧಿಜಿ ಮತ್ತು ಸೈನಿಕರು ತಮ್ಮ ದಂಡಯಾತ್ರೆಯ ಕೊನೆಯ ಭಾಗವಾದ ದಂಡಿಗ್ರಾಮಕ್ಕೆ ಮುಟ್ಟಿದರು. ಅಲ್ಲಿ ಮುಂಬಯಿ ನಿವಾಸಿಯಾದ ಓರ್ವ ಮುಸಲ್ಮಾನ ಸಾವುಕಾರನ ಬಂಗ್ಲೆಯಲ್ಲಿ ಗಾಂಧಿಯವರಿಗೆ ಇಳಿಯಲಿಕ್ಕೆ ಸ್ಥಳ ಗೊತ್ತು ಮಾಡಿರುವರು. ಸ್ವಯಂಸೇವಕರೆಲ್ಲ ಹೊರಗೆ ಬೈಲಿನಲ್ಲಿ ಹೊಡೆದ ಡೇರೆಗಳಲ್ಲಿ ತಮ್ಮ ಬಿಡಾರ ಹಾಕತಕ್ಕವರು. ದಂಡಿಯು ೨೦೦ ಜನವಸತಿಯ ಸಣ್ಣ ಗ್ರಾಮವು. ಬಾಗಲೆ ಮನಿ ಗುಡಿಸಲು ಎಲ್ಲ ಕೂಡಿದರೂ ೫೦ ಮನಿಗಳೇನು ಆಗುವಾಕಿಲ್ಲ. ನಿವಾಸಿಗಳೆಲ್ಲರೂ ಮೀನುಗಾರರು. ಊರಲ್ಲಿ ಕುಡಿಯುವ ನೀರಿನ ಬಾವಿ ಒಂದಕ್ಕಿಂತ ಹೆಚ್ಚಿಲ್ಲ. ಇಂಥ ಕ್ಷುದ್ರ ಹಳ್ಳಿಯು ಈ ಹೊತ್ತು ಮಹಾತ್ಮರ ದೃಷ್ಟಿಪ್ರಸಾದದಿಂದ ದೊಡ್ಡ ಪಟ್ಟಣ ವಾಗಹತ್ತಿದೆ. ಈಗ ದಿನಾಲು ಸಾವಿರಾರು ಮೋಟಾರುಗಳು ತೀರ್ಪಿಲ್ಲದೆ ದಂಡಿಗೆ ಓಡಾಡಹತ್ತಿವೆ. ಜನರ ಸಂದಣಿಯು ದಿನದಿನ ಬೆಳೆಯುತ್ತಿದೆ. ಜನರಿಗೆ ಇದೊಂದು ಯಾತ್ರೆಯ ಸ್ಥಳವಾದಂತಾಗಿದೆ. ಊರ ಜನರೆಲ್ಲರೂ ಬರುಹೋಗುವ ಜನರಿಗೆ ಆದರ ತೋರಿಸುತ್ತಿರುವರು. ಇಳಿಯಲಿಕ್ಕೆ ಸಣ್ಣ ಮನೆಗಳಿದ್ದರೂ ಅವುಗಳೊಳಗೆ ಸ್ಥಳಮಾಡಿಕೊಟ್ಟು, ಎರಡನೇ ಅನುಕೂಲತೆಗಳನ್ನು ಒದಗಿಸಿಕೊಡುವರು. ಸರಕಾರದ ಪಕ್ಷದವರೂ ಒಳ್ಳೇ ಪ್ರಯಾಸದಿಂದ ಜಾಗೆಯನ್ನು ಸಂಪಾದಿಸಿಕೊಂಡು ದೊಡ್ಡ ಅಧಿಕಾರಿಗಳನ್ನು (ಕಲೆಕ್ಟರ ಡಿ| ಮ್ಯಾಜಿಸ್ಟ್ರೇಟ ಇವರೆಲ್ಲರೂ ಇಲ್ಲಿಯೇ ಧರ್ಮಶಾಳೆಯಲ್ಲಿ) ಹಿಡಿದು ಸಣ್ಣ ಶಿಪಾಯಿಯ ವರೆಗೂ ಎಲ್ಲರೂ ಆ ಬಂಗಲೆಯಲ್ಲಿಯೇ ಕಾಲಕಳೆಯಬೇಕಾಗಿದೆ. ಯಾಕಂದರೆ ಊರೊಳಗೆ ಜನರು ಸರಕಾರದ ಮಂದಿಗೆ ಸ್ಥಳ ಕೊಡಬಾರದೆಂದು ಕಟ್ಟುಮಾಡಿಕೊಂಡಿದ್ದಾರೆ. ದಂಡಿಗೆ ಮೂರು ಪಾರ್ಶ್ವಗಳಲ್ಲಿ ಸಮುದ್ರವು ಸುತ್ತುಗಟ್ಟಿದೆ. ಉಪ್ಪು ಮಾಡಲಿಕ್ಕೆ ಸಮುದ್ರ ದಂಡೆಗೆ ವಿಶಾಲವಾದ ಪುಳಿನ ಪ್ರದೇಶವಿದೆ. ಅಲ್ಲಿ ಸ್ವಾಭಾವಿಕವಾದ ಪ್ರಕ್ರಿಯದಿಂದಲೇ ಉಪ್ಪು ಸಿದ್ಧವಾಗುತ್ತಿದೆ. ದಂಡೆಗೆ ಹೋಗಿ ಬಳಕೊಂಡು ಬರುವ ಸ್ವದೇಶಿ ಉಪ್ಪಿರಾಯಿತು. ಈ ಉಪ್ಪನ್ನು ಸರಕಾರವು ತನ್ನ ಕಾವಲ ಪಡೆಯಿಂದ ನಾಶಗೊಳಿಸುತ್ತದೆ. ಇದೆಲ್ಲ ದಂಡಿಯ ಪರಿಸ್ಥಿತಿ

### ಮಹಾತ್ಮಾ ಗಾಂಧಿಯವರ ಯೋಜನೆ

(ತಂತಿಯಿಂದ ಬಂದ ವಾರ್ತೆ)

ಇಂದು ಗಾಂಧಿಯವರು ಉಪ್ಪಿನ ಶಾಸನವನ್ನು ಧಿಕ್ಕರಿಸುವ ಉಪಕ್ರಮವನ್ನು ಇಲ್ಲಿಯೇ ಮಾಡತಕ್ಕವರು. ಸಮುದ್ರ ದಂಡೆಗೆ ಬಿದ್ದ ಉಪ್ಪನ್ನು ಬಳಿದುಕೊಂಡು ಬರುವದಕ್ಕಿಂತಲೂ ಗಾಂಧಿಯವರು ಸಮುದ್ರದ ನೀರನ್ನು ತಂದು ಮನೆಯಲ್ಲಿ ಕಾಸಿ ಉಪ್ಪು ಮಾಡುವ ಪದ್ಧತಿಯನ್ನು ಮೊದಲು ಅನುಸರಿಸುವ ಸಂಭವವಿದೆ. ಸರಕಾರದವರು ಯಾವ ರೀತಿಯಿಂದ ವಿರೋಧಿಸತಕ್ಕವರಿದ್ದಾರೆ ಇದು ಯಾರಿಗೂ ಇನ್ನು ತಿಳಿದಿಲ್ಲ.

### ಸರಕಾರದ ಆತಂಕವನ್ನು ಲೆಕ್ಕಿಸಬೇಡಿ!

ಕಾರಣ ಮಹಾತ್ಮಾಜಿಯವರು ಈ ರೀತಿಯಾಗಿ ಆಜ್ಞೆಯನ್ನು ಹೊರಡಿಸಿದ್ದಾರೆ.

ಸರಕಾರದವರು ಸತ್ಯಾಗ್ರಹಿಗಳ ಮಾರ್ಗದಲ್ಲಿ ಏನಾದರೂ ಆತಂಕಗಳನ್ನುಂಟುಮಾಡಿದರೆ, ಸತ್ಯಾಗ್ರಹಿಗಳು ಅವುಗಳನ್ನು ಕಿತ್ತು ಒಗೆದು ಮುಂದೆ ಸಾಗಬೇಕು. ಸ್ವತಃ ಪೋಲೀಸರೇ ಮುಂದೆ ನಿಂತುಕೊಂಡರೂ ಅವರನ್ನು ಸರಿಸಿ ನುಗ್ಗುವನಾಗಿ ತಮ್ಮ ಕಾರ್ಯವನ್ನು ನಡಿಸತಕ್ಕದ್ದು. ಅವರನ್ನು ಹೀಗೆ ಸರಿಸಿ ಹೋಗುವದರಲ್ಲಿ ಎಂಥ ಗಂಡಾಂತರ ಬಂದರೂ ಅದನ್ನು ಲೆಕ್ಕಿಸ ಬಾರದು!

---

### ಮದ್ಯಪಾನ ಪ್ರತಿಬಂಧಕಕ್ಕಾಗಿ ಪಾರ್ಶಿಜನರಿಗೆ

## ಮಹಾತ್ಮರ ಉಪದೇಶ.

ನವಸಾರಿಯಲ್ಲಿ ಪಾರ್ಶಿಜನರೇ ಹೆಚ್ಚಾಗಿದ್ದಾರೆ. ಮಹಾತ್ಮರು ಅಲ್ಲಿಗೆ ಹೋದ ದಿನ ಅವರು ಸಭೆಗೆ ಹೆಚ್ಚಾಗಿ ಬಂದಿದ್ದರು. ಸ್ತ್ರೀಯರೂ ವಿಶೇಷವಾಗಿದ್ದರು. ಎಲ್ಲ ಕಡೆಯಲ್ಲಿ ಪಾರ್ಶೀಜನರೇ ಬಹುಶಃ ಶೆರೆ ಶಿಂದಿಗಳ ಗುತ್ತೇ ಹಿಡಿಯುತ್ತಿರುವದರಿಂದ ಮಹಾತ್ಮರು ಈ ಬಗ್ಗೆ ಬಹಳ ಪರಿಯಿಂದ ಪಾರ್ಶೀಜನರಿಗೆ ಉಪದೇಶಿಸಿದರು.. ಈ ನೀಚ ವ್ಯವಸಾಯವನ್ನು ಅವರು ಈ ಮುಂದಾದರೂ ಮಾಡಕೂಡದೆಂದೂ, ಅವರು ಹಟದಿಂದ ಸರಕಾರಕ್ಕೇ ಸಹಾಯಕರಾಗಿ ಗುತ್ತೇ ಹಿಡಿದರೆ, ಅವರ ವಿರುದ್ಧ ಸಹ ಸತ್ಯಾಗ್ರಹವನ್ನು ಹೂಡಬೇಕಾಗುವದೆಂದೂ ಎಚ್ಚರಿಕೆಕೊಟ್ಟು, ಪಾರ್ಶಿ ಸ್ತ್ರೀಯರು ಸೆರೆಸಿಂದಿ ಅಂಗಡಿಗಳ ಪಿಕೆಟಿಂಗ ಮಾಡಿ, ತಮ್ಮ ಗಂಡಂದಿರು, ಬಂಧುಗಳು, ತಂದೆಯವರು ನಡಿಸುತ್ತಿರುವ ಪಾಪಕೃತಿಗೆ ಸೊಪ್ಪು ಹಾಕಬೇಕೆಂದು ಸ್ತ್ರೀಯರಲ್ಲಿಯೂ ಮೊರೆಯಿಟ್ಟರು. ಉಪ್ಪಿನ ತೆರಿಗೆಯು ಹೋದ ಕೂಡಲೇ ಮದ್ಯಪಾನವು ಸಂಪೂರ್ಣವಾಗಿ ನಿಂತರೆ, ಈ ತೆರಿಗೆಗಳ ಬಲದಿಂದ ನಡೆಯುತ್ತಿರುವ ಪರದೇಶೀ ಸರಕಾರವು ಹೊರಗಾಗಲು ಊರುವದಿಲ್ಲವೆಂದು ಮಹಾತ್ಮರು ವಿಶ್ವಾಸದಿಂದ ನುಡಿದರು.

ನವಸಾರಿಯಲ್ಲಿ ಮಹಾತ್ಮನ, ಅತ್ಯಂತ ಉತ್ಸಾಹದಿಂದ ಜನರು ಬರಮಾಡಿಕೊಂಡರು. ೫೦ ಸಾವಿರ ಜನರು ಸಭೆಗೆ ಕಲೆತಿದ್ದರು. ಧರಿಯಾ ಕೆರೆಯು ಒಂದಾನೊಂದು ಕಾಲದಲ್ಲಿ ಆದು ರಾತ್ರಿ ಆ ದ್ರುಮವನ್ನು ನೆನೆಸಿತು, ವಿಶ್ವನಾಥ ದಿಪಗಳಿಂದ ಒಮ್ಮೆ ಅಂದವಾಗಿ ಆ ವಿಸ್ತೀರ್ಣವಾದ ಬೈಲು ಶೃಂಗರಿಸಲ್ಪಟ್ಟಿತ್ತು.

---

### ತರುಣಾ ಪರಿಷತ್ತಿನ ಸ್ವಾಗತಾಧ್ಯಕ್ಷರ ಬಂಧನ!

ನವಸಾರದಲ್ಲಿ ಕಳದಾರಿಯ ವಾರ ನರೀಮಾನ್ನರ ಅಧ್ಯಕ್ಷತೆಯಲ್ಲಿ ಗುಜರಾತ ತರುಣಾ ಪರಿಷತ್ತು ಸೇರಿತು. ಈ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಡಾಕ್ಟರ ಖಂಡೂಭಾಯಿ ದೇಸಾಯಿಯವರು ಮಾಡಿದ ಭಾಷಣಕ್ಕಾಗಿ ಅವರು ಬಂಧಿಸಲ್ಪಟ್ಟಿದ್ದಾರೆ.

## ಮಹಾತ್ಮರ ಸತ್ಯಾಗ್ರಹಕ್ಕೆ

# ಮಹಮ್ಮದೀಯರ ಬೆಂಬಲ!

### ಉಪ್ಪಿನ ಕರವನ್ನು ಕುರಾಣವು ನಿರ್ಬಂಧಿಸಿದೆ.

ಒಡೋದಾ ಸಂಸ್ಥಾನದ ಧರ್ಮದಲ್ಲಿ ಮಹಾತ್ಮರಿಗೆ ಅದ್ವಿತೀಯವಾದ ಸ್ವಾಗತವು ನಿಲ್ಲಿಸಲ್ಪಟ್ಟಿತು. ಅಲ್ಲಿ ಮುಸಲ್ಮಾನರ ಸಂಖ್ಯೆಯೇ ಹೆಚ್ಚಾಗಿದೆ. ದಕ್ಷಿಣ ಆಫ್ರಿಕೆಯ ಸಂಗಡ ಇವರ ವ್ಯವಹಾರವು ವಿಶೇಷವಾದ್ದರಿಂದ ಮಹಾತ್ಮರನ್ನೂ ಪ್ರಜೆಗಳ ಬಗ್ಗೆ ಅವರಲ್ಲಿದ್ದ ಕಳವಳವನ್ನೂ ಈ ಮುಸಲ್ಮಾನರೆಲ್ಲ ಚನ್ನಾಗಿ ಬಲ್ಲವರಾಗಿದ್ದಾರೆ. ಆದ್ದರಿಂದ ಈ ಸತ್ಯಾಗ್ರಹದ ಚಳವಳದಲ್ಲಿ ತಾವು ಸಂಪೂರ್ಣವಾಗಿ ಸಹಕಾರಿಗಳಾಗಿ ನಡೆಯುವವರಾಗಿ ಅವರು ಮಹಾತ್ಮರಿಗೆ ಆಶ್ವಾಸನವನ್ನಿತ್ತರು. ಉಪ್ಪಿನ ಮೇಲೆ ಕರವನ್ನು ಹೇರಕೂಡದೆಂದು ಕುರಾಣದ ಆಜ್ಞೆಯುಂಟೆಂದೂ ಆದ್ದರಿಂದ ಮುಸಲ್ಮಾನರೆಲ್ಲ ಮಹಾತ್ಮರಿಗೆ ಈ ವಿಷಯದಲ್ಲಿ ಸಹಾಯವನ್ನೀಯಲೇ ಬೇಕೆಂದೂ ಅಲ್ಲಿಯ ಮಹಮ್ಮದೀಯರು ಹೇಳಿದರು.

---

### ಮಾಲವೀಯರಿಗೆ ನೆಹರೂರವರ ಶಹಬ್ಬಾಸು.

ಪಂಡಿತ ಮಾಲವಿಯ ಹಾಗೂ ಅವರ ಸಂಗಡಿಗರು ದಿಲ್ಲಿಯ ಅಸೆಂಬ್ಲಿಯಲ್ಲಿಯ ತಮ್ಮ ಸ್ಥಾನಗಳ ರಾಜೀನಾಮೆಯನ್ನು ಕೊಟ್ಟದ್ದರಿಂದ ಪಂಡಿತ ಮೋತಿಲಾಲರು ಅವರನ್ನೆಲ್ಲ ಅಭಿನಂದಿಸಿ ನೌಕರಶಾಹಿಯ ಪಂಜರದೊಳಗಿಂದ ಬೇಗನೇ ಬಿಡುಗಡೆಯಾಗಿ ಬಂದುದಕ್ಕಾಗಿ ಶಹಬ್ಬಾಸನ್ನೂ ಅವರೆಲ್ಲರಿಗೆ ಕೊಟ್ಟಿದ್ದಾರೆ.

---

### ಬಾಗಲಕೋಟೆಯ · ಸತ್ಯಾಗ್ರಹಿಗಳ ಸನ್ಮಾನ.

ಬಾಗಲಕೋಟೆಯಿಂದ ೫ ಜನ ಸತ್ಯಾಗ್ರಹಿಗಳು ನಿನ್ನೆ ಸಾಯಂಕಾಲದ ಗಾಡಿಗೆ ಹುಬ್ಬಳ್ಳಿ ಶಿಬಿರಕ್ಕೆ ಹೋದರು. ಊರೊಳಗೆ ಈ ವೀರರ ಮೆರವಣಿಗೆ ಹೊರಟಿತ್ತು. ಹಾದಿಯೊಳಗೆ ಜನರು ಅಲ್ಲಲ್ಲಿಗೆ ಈ ಸ್ವಯಂಸೇವಕರಿಗೆ ಹಾರತುರಾಯಿಗಳಿಂದ ಮನ್ನಿಸಿದರು. ಮೆರವಣಿಗೆಯು ಖಾದೀ ಅಂಗಡಿಗೆ ಬರಲು ಕಾಂಗ್ರೆಸ ಕಮಿಟಿಯವರು ಈ ತರುಣ ವೀರರಿಗೆ ಮಂಗಲಕರವಾದ ಕುಂಕುಮ ತಿಲಕವನ್ನಿಟ್ಟು ಅಭಿವಂದನೆಗಳ ಆಹೇರಿಮಾಡಿ ಪ್ರಚಂಡ ಜಯರವದಿಂದ ಬೀಳ್ಕೊಟ್ಟರು. ಊರಲ್ಲಿಯ ತರುಣರ ಉತ್ಸಾಹಕ್ಕೆ ಸರೆಯೊಡೆದಂತಾಗಿದೆ. ಸ್ಟೇಶನ್ನದಲ್ಲಿ ಕಾಂಗ್ರೇಸ ಕಾರ್ಯದರ್ಶಿಗಳು ಈ ಸತ್ಯಾಗ್ರಹಿಗಳಿಗೂ ಮೆರವಣಿಗೆಯೊಡನೆ ಬಂದ ೨೦೦|೩೦೦ ತರುಣರಿಗೆಲ್ಲ ಸತ್ಯಾಗ್ರಹವು ಘೋರವಾದ ಯುದ್ಧ ವ್ಯೂಹವಿದ್ದು ಅಹಿಂಸಾ ವ್ರತ ಆಥವಾ ಸಿಸ್ತೀನ ಸಹಿಷ್ಣುತೆಯಿಂದಲೆ ಗೆಲ್ಲಬೇಕಾಗಿದೆ ಎಂದು ಹೇಳಿ ಮ॥ ಗಾಂಧಿಯವರು ತಗೆದುಕೊಂಡ ಭೀಕರ ಪ್ರತಿಜ್ಞೆಯನ್ನು ನೆನಪು ಮಾಡಿಕೊಟ್ಟು ಅವರ ಅ್ಯಪಣವನ್ನು ಕೊನೆಗಾಣಿಸಲಿಕ್ಕೆ ತರುಣರು ತಮ್ಮ ಪ್ರಾಣವನ್ನು ಕೊಡಲು ಸಹ ಸಿದ್ಧರಿರಬೇಕೆಂದು ಬೋಧಿಸಿದರು.

## ಅಲ್ಲಲ್ಲಿಯ ಸತ್ಯಾಗ್ರಹದ ಸಿದ್ಧತೆ

ಬಿಹಾರದಲ್ಲಿ ಉಪ್ಪಿನ ಕಟ್ಟಳೆಯನ್ನು ಮುರಿಯುವ ಸಿದ್ಧತೆ ಭರದಿಂದ ಸಾಗಿದೆ. ಜಳಗಾವದಿಂದ ಹನ್ನೆರಡು ಜನ ಸ್ವಯಂಸೇವಕರು ವಿಲೇಪಾರ್ಲೆಗೆ ಹೊರಟಿದ್ದಾರೆ. ಸಿಂಧದವರು ಏಪ್ರಿಲ ೯ ನೆಯ ತಾ॥ ನಿಂದ ಸತ್ಯಾಗ್ರಹ ಪ್ರಾರಂಭಿಸುವದನ್ನು ನಿಶ್ಚಯಿಸಿದ್ದಾರೆ. ಪುಣೆಯಿಂದ ಹೊರಟ ಸತ್ಯಾಗ್ರಹಿಗಳಿಗೆ ಸಾಂಗ್ಲಿ ಪ್ರಾಂತದಲ್ಲಿ ಬಹು ವೈಭವದ ಸ್ವಾಗತವಾಯಿತು.

---

### ಗವರ್ನರ ವೈಸರಾಯ ಮೊದಲಾದವರು ತಮ್ಮ ತಮ್ಮ ಕಾರ್ಯಕ್ರಮಗಳನ್ನು ಗಾಂಧಿಯವರಿಗಾಗಿ ನಿಲ್ಲಿಸಿದರು!

ವ್ಹಾಯಿಸರಾಯರು ಸಂಚಾರಕ್ಕಾಗಿ ಹೊರಡತಕ್ಕವರಿದ್ದರು. ಮುಂಬಯಿ ಗವರ್ನರರು ಭೇಟಿಗಾಗಿ ಕರ್ನಾಟಕದ ಯಲ್ಲಾಪುರಕ್ಕೆ ಹೋಗತಕ್ಕವರಿದ್ದರು. ಮುಂಬೈ ಇಲಾಖೆಯ ಗೃಹಮಂತ್ರಿ ಮೊದಲಾದ ದೊಡ್ಡ ದೊಡ್ಡ ಅಧಿಕಾರಿಗಳು ಬೇಸಿಗೆಗಾಗಿ ತಂಪು ಹವೆಯ ಮಹಾಬಳೇಶ್ವರಕ್ಕೆ ತೆರಳತಕ್ಕವರಿದ್ದರು. ಆದರೆ ಮಹಾತ್ಮರ ಸತ್ಯಾಗ್ರಹದ ಯುದ್ಧವು ವಿಶೇಷ ಹಬ್ಬುತ್ತಿರುವದನ್ನು ಕಂಡು ಇವರೆಲ್ಲರೂ ತಮ್ಮ ತಮ್ಮ ಕಾರ್ಯಕ್ರಮಗಳನ್ನು ರದ್ದುಪಡಿಸಿ, ದಿಲ್ಲಿ ಮುಂಬೈಗಳ ತಮ್ಮ ರಾಜಧಾನಿಗಳಲ್ಲಿಯೇ ಚಿಂತಾಕ್ರಾಂತರಾಗಿ "ಮುಂದೇನು ಗತಿ?" ಎಂದು ವಿಚಾರಿಸುತ್ತಲಿದ್ದಾರೆ.

### ಮಹಾರಾಷ್ಟ್ರ ಸತ್ಯಾಗ್ರಹಿಗಳು.

ಪುಣೆಯಿಂದ ಹೊರಟ ಮಹಾರಾಷ್ಟ್ರ ವೀರರ ಪಥಕವು ನಾಳೆಗೆ ವಿಲೆಪಾರ್ಲೆಗೆ ಮುಟ್ಟುವದು. ಅಲ್ಲಿ ಜಮುನಾಲಾಲ ಬಜಾಜರು ಎಲ್ಲ ಸಿದ್ಧತೆ ಮಾಡಿಕೊಂಡು ಈ ಪದಾತಿಯ ದಾರಿಯನ್ನು ಕಾಯುತ್ತ ಕುಳಿತಿರುವರು. ೬ ನೇ ತಾರೀಖಿಗೆ ಸತ್ಯಾಗ್ರಹವು ಪ್ರಾರಂಭವಾಗುವದು.

### ಕೇರಳ ಪ್ರಾಂತದವರು

ತಮಿಳ ಜನರೊಳಗೆ ಕೂಡಿಕೊಳ್ಳದೆ ತಾವು ಪ್ರತ್ಯೇಕವಾಗಿ ಸತ್ಯಾಗ್ರಹವನ್ನು ಆರಂಭಿಸಬೇಕೆಂದೂ ಅದಕ್ಕಾಗಿ ಸಿದ್ಧತೆಯನ್ನು ಜೋರಿನಿಂದ ತಮ್ಮ ಪ್ರಾಂತದಲ್ಲಿ ನಡಿಸಬೇಕೆಂದು ನಿಶ್ಚಯಿಸಿ ಕಾರ್ಯಕ್ಕೆ ಹತ್ತಿರುವರು.

### ಸರಕಾರದ ಅಭಿನಂದನೆ

ರಾಯಬಂದಲಿಯಲ್ಲಿ ಸಾವಿರ ಸ್ವಯಂಸೇವಕರು ಸಿದ್ಧರಾಗಿರುವರು. ಸರಕಾರದ ದಬ್ಬಾಳಿಕೆಯಿಂದ ಈ ಕಾರ್ಯವು ತನ್ನಷ್ಟಕ್ಕೆ ತಾನೇ ನಡೆದಿರುವದರಿಂದ ಕಾಯದೆಭಂಗ ಕಮಿಟಿಯವರು ಸರಕಾರವನ್ನು ಅಭಿನಂದಿಸಹತ್ತಿರುವರು.

### ಶ್ರೀಮತಿ ಕಮಲಾದೇವಿ.

ಶ್ರೀಮತೀ ಕಮಲಾದೇವಿಯು ಕೈತುಂಬ ಸತ್ಯಾಗ್ರಹ ಕಾಯಿದೆ ಭಂಗ ಇದೆ. ಕೆಲಸವಾಗಿದ್ದರಿಂದ 'ಸ್ತ್ರೀ ಸಮ್ಮೇಲನದ' ಕಾರ್ಯದರ್ಶಿತ್ವವನ್ನು ಬಿಟ್ಟು ಗೊಟ್ಟಿರುವಳು. ಇದರಂತೆ ಲಾಲಾಜಿಯಿಂದ ನಿರ್ಮಿತವಾದ 'ಸರ್ವಂಟ್ಸ್ ಆಫ ಇಂಡಿಯಾ' ಸಂಘದವರೂ ತಮ್ಮ ಸಾಮಾಜಿಕ ಕೆಲಸವನ್ನು ಬಿಟ್ಟು ಈ ಕಾಯಿದೆ ಭಂಗವನ್ನೆ ಕೈಯಲ್ಲಿ ತಕ್ಕೊಳ್ಳುವ ನಿಶ್ಚಯಮಾಡಿದ್ದಾರೆ ಎಲ್ಲರ ಮನಸ್ಸಿನಲ್ಲಿಯೂ ಕಾಯಿದೆ ಭಂಗವು ತುಂಬ ಹತ್ತಿರುವದು.

---

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರೆ. ನಂ. ಬಿ ೧೫೪೭ — ಬೆಲೆ ೦—೦—೩

[illegible]

ನಿತ್ಯಸಂಚಿಕೆಯು.

जननी जन्मभूमिश्च स्वर्गादपि गरीयसी ॥ — मनु

ಸಂಪಾದಕರು— ಮಂಗಳವೇಢೆ ಬಿಂದುರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ಸೋಮವಾರಂ ಮಿತಿ ಚೈತ್ರ ಶುದ್ಧ ೯ ಶಕ ೧೮೫೨ ತಾ ೭—೪—೩೦ ಸಂಚಿಕೆ ೧೫

## ಸಂಪಾದಕರ ಘೋಷಣೆ

ಕನ್ನಡ ಮಾನಿಸನ ಮೋಹ[illegible] ಕಟ್ಟುತಿನಾಸು!
ನಿನ್ನ ಜೀವನದ ಮಾಡಿದಂಥ ಮುಕ್ಕಳಬೊಮ್ಮ!
ಕನ್ನಡಾಡಿ[illegible] ಬಾಳ ಮೋ[illegible]ಬಸ್ತಿಯು ನೊಂದು [illegible]ಸ್ವರಾಜ್ಯ ಪಡೆದು!
ಕನ್ನ[illegible] ಸಿಂಹಾಸನಕಾಗಿ!
ಕನ್ನ[illegible] ಕಲ್ಪಿಗೆ ನಿಲ್ಲಿರಲು ನಿಷ್ಟವಿದೆ!
ಕನ್ನಡ[illegible] ನಿನ್ನ ಗಂಧವನು [illegible]ಗಂಧ [illegible] ತಿಳಿಯಲು!

— [illegible]

## ಬಾಗಲಕೋಟೆಯಲ್ಲಿಯ ಸತ್ಯಾಗ್ರಹ ವಾರ್ತೆ.

ಬಾಗಲಕೋಟೆಯಲ್ಲಿ ನಿನ್ನೆ ದಿನ [illegible] ಸ್ವಯಂಸೇವಕರು [illegible] ಉಪ್ಪು [illegible] ಹೋಗಿದ್ದರು. [illegible] ಮತ್ತು [illegible] ರಾಷ್ಟ್ರೀಯ [illegible] ಕೊಂದು ಕಾಂಗ್ರೆಸ ಕಮಿಟಿಯವರು ನಿಶ್ಚಯಿಸಿದ್ದರೆ ಸತ್ಯಾಗ್ರಹ ನಿಧಿಯು ಸಲುವಾಗಿ ಹಣ [illegible] ನಾಳೆನಿಂದ [illegible] ಸ್ವಯಂಸೇವಕರು [illegible] ಪೆಟ್ಟಿಗೆ [illegible] ಅಡ್ಡಾಡಿ ನಿಧಿ [illegible] ರಾಷ್ಟ್ರೀಯ [illegible] ಸ್ವಯಂಸೇವಕರು [illegible] ಬಾಗಲಕೋಟೆಗೆ [illegible] ಮಾರ್ಗದಲ್ಲಿ [illegible] ಕೊಡುವದು ತಮ್ಮ ಕರ್ತವ್ಯವೆಂದು ಪ್ರತಿಯೊಬ್ಬ ನಾಗರೀಕನು ತಿಳಿಯತಕ್ಕದ್ದು.

## ಎದ್ದೇಳಿ ಕನ್ನಡಿಗರೇ!

ಬನ್ನಿರಿ ಬನ್ನಿರಿ ಕನ್ನಡ ಜಟ್ಟಿಗಳಿರ! ಸತ್ಯಾಗ್ರಹಕೆ ತೆರಳೋಣ!
ಕನ್ನಡ ನಾಡಿನ ಬನ್ನವ ಬಿಡಿಸುವ ಮೊದಲನೆ ಮೆಟ್ಟಲು ಏರೋಣ!
ನಮ್ಮಯ ನಾಡಿನ ಉಪ್ಪನ್ನೆಲ್ಲಾ! ತಮ್ಮದಾಗಿಯೆ ಮಾಡಿರುವ!

ಆಳ್ವರ ಕ್ರೌರ್ಯಂ!
ತಾಳ್ಮೆಯಿಂದಲಿ!

ಉಪ್ಪನು ಕಾಯಿಸಲು ನಾಡಿನ ಯುವಕರು ಧೈರ್ಯದಿಂದಲಿ ಸಾಗೋಣ ||೧||

ಭಾರತಭೂಮಿಯ ಒಡಲೊಳಗಿರುವ! ಉಪ್ಪಿನ ಒಡೆಯರು ನಾವಲ್ಲೇ!
ನಮ್ಮಯ ಉಪ್ಪನು ನಾವೇ ತಿನ್ನಲು! ಕಪ್ಪನು ನಾವೇಕೆ ಕೊಡಬೇಕೇ?!
ಕಾರಣವಿಲ್ಲದೆ ಕೇಳಗ ಹೇರಿದೆ! ಸಪ್ಪಗ ಕೊಡುವದೇತಕ್ಕೆ?!

ಹಿರಿಯರು ಕಿರಿಯರು!
ದುರ್ಬಲರೆನ್ನದೆ!

ಸಲುವರೊಂದಿಗೆ ಭಾರತ ಯಜ್ಞಕೆ! ಆತ್ಮಾಹುತಿ ಮಾಡೋಣ ||೨||

ಯುದ್ಧದ ಭೇರಿಯು ಗರ್ಜನೆ ಕೇಳದೆ! ಚಿತ್ತವರಾದಿರಾ ನಾಡಿಗರೇ!
ಯೋಧ್ಧರ ತಂಡಕೆ ತಂಡವೆ ಸಾಗಿದೆ! ಸ್ವಾರ್ಥ ತೆರವಿಂ ಉದ್ಧರವರೆ!
ಹಿಂದಣ ಹಿರಿಯರು ನಮ್ಮ ನಡತೆಗೆ! ಕೆಂಡವಾಗುವರೆ ಬಂಧುಗಳೇ!

ಹಿಂದಣ ಹಿರಿಯರ!
ಸಂತಸ ಗೊಳಿಸಲು!

ನಿಮ್ಮಯ ಶಕ್ತಿಯ ತಿಲಕರ[illegible] ನೀವುತ ನಡೆಯಿರಿ ಕಾರಗೆಕೆ ||೩||

ಶಕ್ತಿಯ ತೆರದಿಂ ಹಿಂದು ಸತ್ತರೆ! ಮಾನವ ಜನ್ಮದ ಸಾರ್ಥಕವೆ!
ಮಾತೆಯ ನಾಶವ ಮಾಡೊಗೆಯುವಳಿ! ನೋಡಿ ಬಿಂತು ಹೋಯ್ತುವದೆ?
ಕೈಸುಗಳಿಲ್ಲದ ಕಾಳಗ ಮಾಡುವ! ನೀಬಳನು ಕಾಪ್ಪನ ಮಾನವನೆ!

ಎಲ್ಲಿ ನಿಮ್ಮ ಬಾಳು!
ಎಲ್ಲಿ ಎಲ್ಲಾ ಬಾಳು!

ಸ್ವಾತಂತ್ರ್ಯವಿಲ್ಲದಿಹ ಬಾಳೊಂದು ಬಾಳೆ! ಎದ್ದೇಳಿ ಕನ್ನಡಿಗರೇ ||೪||

—ಧಿಟ್ಟಕವಿ

## ಮಹಾತ್ಮಾಜಿಯ ಆಜ್ಞೆ.

### ಸತ್ಯಾಗ್ರಹಿಗಳು

# ಪೋಲೀಸರನ್ನು ಸರಿಸಿ ಸಾಗತಕ್ಕದ್ದು.

ಮಹಾತ್ಮಾ ಗಾಂಧಿಯವರು ದಂಡಿಗ್ರಾಮದಲ್ಲಿ ಮುಟ್ಟಿದ ಮೇಲೆ ಅಲ್ಲಿ ತಾವು ಉಪ್ಪಿನ ಕಾಯಿದೆಯನ್ನು ಯಾವ ರೀತಿಯಿಂದ ಮುರಿಯತಕ್ಕದ್ದು ಇದರ ಬಗ್ಗೆ ತಮ್ಮ ಯೋಜನೆಯನ್ನು ತಿಳಿಸಿ ಹೇಳಿದರು. ಸಧ್ಯಕ್ಕೆ ಉಪ್ಪಿನ ಮಾರಗಳನ್ನು ನಗ್ಗಿ ಉಪ್ಪು ತಗುವದನ್ನು ಬಿಟ್ಟುಬಿಡಬೇಕು. ಸಮುದ್ರದಿಂದ ನೀರು ಹೊತ್ತುಕೊಂಡು ಬಂದು, ಮನೆಯಲ್ಲಿ ಅದನ್ನು ಕಾಸಿ ಉಪ್ಪು ಮಾಡತಕ್ಕದ್ದು. ನೀವು ಸಗರಕ್ಕೆ ಹೋಗುವ ಮಾರ್ಗವನ್ನು ಸರಕಾರದವರು ಕಟ್ಟಿದರೆ, [illegible] ನಿರ್ಬಂಧ ಮಾಡಿದರೆ ಅವುಗಳನ್ನು ಕಿತ್ತಿ ಒಗೆದು ಸತ್ಯಾಗ್ರಹಿಗಳು ಮುಂದೆ ಸಾಗತಕ್ಕದ್ದು. ಆದರೆ ಇಂಥ ಬೇಲಿಯನ್ನು ಏನೋ ಬಿದರಿನ ಬೇಲೆಂದು ಹಚ್ಚುವರೆಂದು ಕಂಡುಬಂದರೆ ಇಂತಿಷ್ಟು ಅವಧಿಯಲ್ಲಿ ಅದನ್ನು ತೆಗೆಯಿರೆಂದು ಸರಕಾರಕ್ಕೆ ಮೊದಲು ತಿಳಿಸಿ ಆ ಅವಧಿಯಲ್ಲಿ ಅವರು ತೆಗೆಯದಿದ್ದರೆ ಅದನ್ನು ಸತ್ಯಾಗ್ರಹಿಗಳೇ ಕಿತ್ತಬೇಕು. ಸ್ವತಃ ಪೋಲೀಸರೆ ನಿಂತರೆ ಅವರನ್ನು ಸರಿಸಿ ನಮ್ಮ ಕೆಲಸವನ್ನು ನಾವು ಮುಂದೆ ನಡಿಸತಕ್ಕದ್ದು. ಇದೆ ಮೊದಲಾಗಿ ನಿಶ್ಚಯಿಸಿಕೊಂಡು ನಿನ್ನೆ ಬೆಳಿಗ್ಗೆ ೮ ಘಂಟೆಗೆ ಸಮುದ್ರದ ನೀರು ತರಲಿಕ್ಕೆ ಹೊರಡತಕ್ಕವರಿದ್ದರು.

## ಶ್ರೀಮತಿ ಸರೋಜಿನಿ ದೇವಿಯವರು ದಂಡಿಗ್ರಾಮಕ್ಕೆ ತೆರಳಿದರು!

ಶ್ರೀಮತಿ ಸರೋಜಿನಿ ನಾಯಿಡು ನಿನ್ನೆ ಮುಂಬಯಿಂದ ಮಹಾತ್ಮಾ ಗಾಂಧಿಯವರ ಸನ್ನಿಧಾನವನ್ನು ಬಯಸಿ ದಂಡಿಗ್ರಾಮಕ್ಕೆ ತೆರಳಿದಳು. ಮಹಾತ್ಮರಲ್ಲಿ ನಿಸ್ಸೀಮ ಭಕ್ತಿಯುಳ್ಳವಳೂ ಚಿರಕಾಲದಿಂದಲೂ ಅವರ ಗೆಳೆತನದ ತಿರುಳನ್ನುಂಡವಳೂ ಆದ ನಾನು ಈ ಸಮಯದಲ್ಲಿ— ಹಿಂದೀಯರ ಸ್ವಾತಂತ್ರ್ಯ ಶೃಂಖಲೆಯು ಮೊಟ್ಟಮೊದಲಿನ ಕಡಿಯನ್ನು ಕಡಿದೊಗೆಯಲಿಕ್ಕೆ ಜಗತ್ತಿಂಗೆ ನಿಶ್ಚಯಿಸಿಯು ಆರಂಭಿಸುವ ಮಂಗಲ ಸಮಯದಲ್ಲಿ— ನಾನು ಮಹಾತ್ಮರ ಸನ್ನಿಧಿಯಲ್ಲಿಯೇ ಇರಬೇಕೆಂದು ಬಯಸುತ್ತಿರುವದು ಸ್ವಾಭಾವಿಕವಾಗಿದೆ.

ತಿಳಿದು ನೋಡಿದರೆ ಹಿಂದುಸ್ಥಾನದ ನಿಜವಾದ ಇತಿಹಾಸವು ಇಂದಿನಿಂದಲೇ ಇಂಥ ಸಾಧುಸತ್ಪುರುಷರ ಅಗಾಧ ಮಹಿಮೆಯಿಂದಲೇ ಮಾರ್ಪಡಿಸಲ್ಪಡುತ್ತಿದೆ. ನೀರು ಹತ್ತಿದರೆ ಕರಗಿಹೋಗುವಂಥ ನಿಸ್ಸತ್ವವಾದ ಈ ಉಪ್ಪೇ ಮಹಾತ್ಮನ ತಪಃಪ್ರಭಾವದಿಂದ ಬಾಂಬುಗುಂಡುಗಳಿಗಿಂತಲೂ ಹೆಚ್ಚಿನ ಅಪಾಯವನ್ನು ಬ್ರಿಟಿಶರ ರಾಜ್ಯಕ್ಕೆ ಮಾಡಲಿಕ್ಕಿಲ್ಲೆಂದು ಹೇಳುವದು ಹೇಗೆ? ಎಂದು ದೇವಿಯವರು ಉದ್ಗಾರತೆಗೆದು ಹೊರಟಿರುವರು.

---

## ಹೆಣ್ಣು ಹುಡುಗಿಯು ಗಂಡಾದವಳು!

ಮುರ್ಶಿದಾಬಾದದ ಹತ್ತರ ಅಧಾರಿ ಎಂಬ ಊರಲ್ಲಿಯ ಕೋಮು ಶೇಖರ ಮೊಮ್ಮಗಳ ಲಗ್ನವಾಗಿತ್ತು. ಅತ್ತೆಯ ಮನೆಗೆ ಹೋಗಿ ಅಲ್ಲಿ ಇದ್ದು ತಂದೆಯ ಮನೆಗೆ ಬಂದ ಮೇಲೆ ಅವಳಲ್ಲಿ ಬದಲಾವಣೆಯಾಗ ಹತ್ತಿದವು. ಸ್ವಲ್ಪಾವಧಿಯಲ್ಲಿ ಹೆಣ್ಣು ಹೋಗಿ ಸಂಪೂರ್ಣ ಗಂಡೇ ಆಯಿತು. ಈಗ ಈ ಹೊಸ ಗಂಡು ವ್ಯಕ್ತಿಯ ವಯಸ್ಸು ೨೦. ಮೊನ್ನೆ ಮೊನ್ನೆ ಒಂದು ಹೆಣ್ಣನ್ನು ಲಗ್ನವಾದನು. ಇದರ ಕಾರಣವನ್ನು ಶಾಸ್ತ್ರೀಯರೀತಿಯಿಂದ ಬಂಗಾಲಿಗಳು ಶೋಧಿಸುತ್ತಿರುವರು.

ಅಮೃತ ಬಝಾರ ಪತ್ರಿಕೆ.

## ನಾಶೀಕದ ದೇವಾಲಯದಲ್ಲಿ ದಂಗೆ

ಚೈತ್ರ ಶುದ್ಧ ಪ್ರತಿಪದೆಯ ದಿನ್ನ ನಾಶಿಕದಲ್ಲಿ ಕಾಳಾರಾಮನ ದೇವಾಲಯದಲ್ಲಿ ಪ್ರವೇಶಮಾಡುವಗೋಸುಗ ವರ್ಣಾಶ್ರಮ ಧರ್ಮಿಗಳು ಒಂದು ಬಂಡನ್ನು ಹೂಡಿದರು. ಆ ದೇವಾಲಯದಲ್ಲಿ ಪ್ರವೇಶ ಮಾಡಬೇಕೆಂದು ಅಸ್ಪೃಶ್ಯರು ಈಗ ಅಜಮಾಸು ಒಂದು ತಿಂಗಳಿಂದ ಆ ದೇವಾಲಯದ ಎದುರಲ್ಲಿ ಶಾಂತವಯವಾದ ಸತ್ಯಾಗ್ರಹವನ್ನು ಹೂಡಿರುವದರಿಂದ ಇತರ ಜನರಿಗೂ ಕೂಡ ಅಲ್ಲಿ ಪ್ರವೇಶವು ದುಸ್ತರವಾಗಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಓರ್ವ ಆಚಾರ್ಯನು ತನ್ನ ಮನೆಯೊಳಗಿಂದ ಹಾಯ್ದು ಆ ದೇವಾಲಯದಲ್ಲಿ ಪ್ರವೇಶಮಾಡಬಹುದೆಂದು ಯಾವತ್ತೂ ಚಾತುರ್ವರ್ಣ್ಯರಿಗೆ ಪ್ರಕಟವಾಗಿ ಆಮಂತ್ರಣವನ್ನು ಕೊಟ್ಟನು. ಇದೇ ಪ್ರಸಂಗ ನಿರೀಕ್ಷಿಸುತ್ತಿದ್ದ ಸನಾತನ ಧರ್ಮದವರು ಸಾವಿರಾರು ಜನ ಗುಂಪುಗಟ್ಟಿ ಅಲ್ಲಿಗೆ ಬಂದು ಮುಳುರಿದ್ದಲ್ಲದೆ ಹತ್ತರದಲ್ಲಿ ಆ ದೇವಾಲಯದ ಉತ್ತರ ಮಹಾದ್ವಾರದ ಬಳಿಯಲ್ಲಿ ಸತ್ಯಾಗ್ರಹವನ್ನು ಹೂಡಿದ ಅಸ್ಪೃಶ್ಯರ ಮೇಲೆ ಏರಿ ಹೋಗಿ ಅವರ ಮೇಲೆ ಕಲ್ಲಿನ ಮಳೆ ಸುರಿಸಿದರು.

ಈ ಸಮಯದಲ್ಲಿ ಅಲ್ಲಿಯ ಪೋಲೀಸ ಅಮಲದಾರರು ಈ ಅತ್ಯಾಚಾರವನ್ನು ನಿರ್ಬಂಧಿಸಲು ಎಷ್ಟು ಪ್ರಯತ್ನಪಟ್ಟರೂ ಅವರಿಂದ ಸಾಧ್ಯವಾಗದಾಯಿತು. ಆಗವರು ತಮ್ಮ ಮೇಲಧಿಕಾರಗಳಿಗೆ ತಿಳಿಸಲು ಅವರು ಯಾವತ್ತೂ ಪೋಲೀಸ ಸೇನೆಗೆ ಆ ಜನಸಂದಣಿಯನ್ನು ಓಡಿಸಲಿಕ್ಕೆ ಅಪ್ಪಣೆಯನ್ನಿತ್ತರು. ಕೊನೆಗೆ ಆ ತಂಡವು ಎರಡು ತಾಸಿನವರೆಗೆ ಪೋಲೀಸರೊಡನೆ ಹೋರಾಡಿತು. ಅಷ್ಟರಲ್ಲಿ ಸತ್ಯಾಗ್ರಹಿಗಳು ಭೋಜನಕ್ಕೆಂದು ತಮ್ಮ ಶಿಬಿರಕ್ಕೆ ಹೋದ್ದರಿಂದಲೂ ಮತ್ತು ವರ್ಣಾಶ್ರಮಿಗಳು ತಾವು ಆ ದಿನ ಕನಿಷ್ಟ ಗುಡಿಯ ಹಿಂದಿನ ದರ್ಶನವನ್ನಾದರೂ ತೆಗೆದುಕೊಳ್ಳುವೆವೆಂದು ಹೇಳಿಸಿದ್ದರಿಂದ ಅವರಿಗೆ ಗುಡಿಯ ಹತ್ತರ ಹೋಗಗೊಟ್ಟರು. ನಂತರ ಅವರು ತಾವು ದರ್ಶನವನ್ನು ತೆಗೆದುಕೊಳ್ಳದೆ ಹಿಂತಿರುಗಲಿಕ್ಕಿಲ್ಲೆಂದು ಹಟಹಿಡಿದದ್ದರಿಂದ ಪೋಲೀಸರು ಸುವ್ಯವಸ್ಥರೀತಿಯಿಂದ ಆ ಜನರಿಗೆ ದರ್ಶನವನ್ನು ಒದಗಿಸಿಕೊಟ್ಟರು. ಈ ಸಂದರ್ಭದಲ್ಲಿ ಅಸ್ಪೃಶ್ಯರು ಮಾತ್ರ ಬಹಳೇ ಶಾಂತತೆಯನ್ನು ವ್ಯಕ್ತಗೊಳಿಸಿದರು. ಆದರೆ ಅವಕ್ಕೆ ವಿಪರೀತವಾಗಿ ವರ್ಣಾಶ್ರಮಿಗಳು ತಮ್ಮ ರಾಕ್ಷಸೀವೃತ್ತಿಯನ್ನು ಪ್ರಕಟಿಸಿದರು.

## ಮಹಾತ್ಮಾಜಿಯ ಆಜ್ಞೆ.

## ಸತ್ಯಾಗ್ರಹಿಗಳು

# ಪೋಲೀಸರನ್ನು ಸರಿಸಿ ಸಾಗತಕ್ಕದ್ದು.

ಮಹಾತ್ಮಾ ಗಾಂಧಿಯವರು ದಂಡಿಗ್ರಾಮಕ್ಕೆ ಮುಟ್ಟಿದ ಮೇಲೆ ಅಲ್ಲಿ ತಾವು ಉಪ್ಪಿನ ಕಾಯಿದೆಯನ್ನು ಯಾವ ರೀತಿಯಿಂದ ಮುರಿಯತಕ್ಕದ್ದು ಇದರ ಬಗ್ಗೆ ತಮ್ಮ ಯೋಜನೆಯನ್ನು ತಿಳಿಸಿ ಹೇಳಿದರು. ಸದ್ಯಕ್ಕೆ ಉಪ್ಪಿನ ಮಾರ್ಗಗಳನ್ನು ಸಗ್ಗಿ ಉಪ್ಪು ತೆಗೆಯುವದನ್ನು ಬಿಟ್ಟುಬಿಡಬೇಕು. ಸಮುದ್ರದಿಂದ ನೀರು ಹೊತ್ತುಕೊಂಡು ಬಂದು, ಮನೆಯಲ್ಲಿ ಅದನ್ನು ಕಾಸಿ ಉಪ್ಪು ಮಾಡತಕ್ಕದ್ದು. ನೀವು ತಗ್ಗಿಗೆ ಹೋಗುವ ಮಾರ್ಗವನ್ನು ಸರಕಾರದವರು ಕಟ್ಟಲು, ಕಟಿಗೆ ಹಿಡಿದು ನಿಂತಿರುವ ಪೋಲೀಸರ ನಿರ್ಬಂಧ ಪಡಿಸಿದರೆ ಅವುಗಳನ್ನು ಕಿತ್ತಿ ಒಗೆದು ಸತ್ಯಾಗ್ರಹಿಯು ಮುಂದೆ ಸಾಗತಕ್ಕದ್ದು. ಆದರೆ ಇಂಥ ಬೇಲಿಯನ್ನು ಏನೋ ಬೆದರಿಕೆ ಬೇಕೆಂದು ಹಚ್ಚಿರುವರೆಂದು ಕಂಡುಬಂದರೆ ಇಂತಿಷ್ಟು ಅವಧಿಯಲ್ಲಿ ಅದನ್ನು ತೆಗೆಯಿರೆಂದು ಸರಕಾರಕ್ಕೆ ಮೊದಲು ತಿಳಿಸಿ ಆ ಅವಧಿಯಲ್ಲಿ ಅವರು ತೆಗೆಯದಿದ್ದರೆ ಅದನ್ನು ಸತ್ಯಾಗ್ರಹಿಗಳೇ ಕಿತ್ತತಕ್ಕದ್ದು. ಸ್ವತಃ ಪೋಲೀಸರೆ ನಿಂತರೆ ಅವರನ್ನು ಸರಿಸಿ ನಮ್ಮ ಕೆಲಸವನ್ನು ನಾವು ಮುಂದೆ ನಡಿಸತಕ್ಕದ್ದು. ಇದೆ ಮೊದಲಾಗಿ ನಿಶ್ಚಯಿಸಿಕೊಂಡು ನಿನ್ನೆ ಬೆಳಿಗ್ಗೆ ೮ ಘಂಟೆಗೆ ಸಮುದ್ರದ ನೀರು ತರಲಿಕ್ಕೆ ಹೊರಡತಕ್ಕವರಿದ್ದರು.

## ಶ್ರೀಮತಿ ಸರೋಜಿನಿ ದೇವಿಯವರು ದಂಡಿಗ್ರಾಮಕ್ಕೆ ತೆರಳಿದರು!

ಶ್ರೀಮತಿ ಸರೋಜಿನಿ ನಾಯಿಡು ನಿನ್ನೆ ಮುಂಬಯಿಂದ ಮಹಾತ್ಮಾ ಗಾಂಧಿಯವರ ಸನ್ನಿಧಾನವನ್ನು ಬಯಸಿ ದಂಡಿಗ್ರಾಮಕ್ಕೆ ತೆರಳಿದಳು. ಮಹಾತ್ಮರಲ್ಲಿ ನಿಶ್ಚಿತ ಭಕ್ತಿಯುಳ್ಳವಳೂ ಬಹುಕಾಲದಿಂದಲೂ ಅವರ ಗೆಳೆತನದ ತಿರುಳನ್ನುಂಡವಳೂ ಆದ ನಾಯಡು ಈ ಸಮಯದಲ್ಲಿ— ಹಿಂದೀಯರ ಪಾರತಂತ್ರ್ಯ ಶೃಂಖಲೆಯು ಪಟಪಟನೆ ಕಡಿಯುವ, ಕಡಿದೊಗೆಯಲಿಕ್ಕೆ ಜಗತ್ತಿಂಗ್ಯ ನಿಶ್ಚಯಿಸಿಯು ಆರಂಭಿಸಿದ ಮಂಗಲ ಸಮಯದಲ್ಲಿ— ನಾನು ಮಹಾತ್ಮರ ಸನ್ನಿಧಿಯಲ್ಲಿ ಇರಬೇಕೆಂದು ಬಯಸುತ್ತಿರುವದು ಸ್ವಾಭಾವಿಕವಾಗಿದೆ.

ತಿಳಿದು ನೋಡಿದರೆ ಹಿಂದುಸ್ಥಾನದ ನಿಜವಾದ ಇತಿಹಾಸವು ಅಂದಿನಿಂದಿನ ಇಂಥ ಸಾಧುಸತ್ಪುರುಷರ ಅಗಾಧ ಮಹಿಮೆಯಿಂದಲೇ ಮಾರ್ಗದರ್ಶಕ ಬಾಧಿಸಿರುವದು ನೀರು ಹತ್ತಿದರೆ ಕರಗಿಹೋಗುವಂಥ ನಿಸ್ಸತ್ವವಾದ ಈ ಉಪ್ಪೇ ಮಹಾತ್ಮನ ತಪಃಪ್ರಭಾವದಿಂದ ಬಾಂಬುಗುಂಡುಗಳಿಗಿಂತಲೂ ಹೆಚ್ಚಿನ ಅಪಾಯವನ್ನು ಬ್ರಿಟಿಶರ ರಾಜ್ಯಕ್ಕೆ ಮಾಡಲಿಕ್ಕಿಲ್ಲೆಂದು ಹೇಳುವದು ಹೇಗೆ? ಎಂದು ದೇವಿಯವರು ಉದ್ಗಾರತೆಗೆದು ಹೊರಟಿರುವರು.

---

## ಹೆಣ್ಣು ಹುಡುಗಿಯು ಗಂಡಾದದ್ದು !

ಮುಶಿರಾಬಾದದ ಹತ್ತರ ಆಥಾಲ್ಲಿ ಎಂಬ ಊರಲ್ಲಿಯ ಶ್ರೀಮತಿ ಶೇಖರ ಮೊಮ್ಮಗಳ ಲಗ್ನವಾಗಿತ್ತು. ಅತ್ತೆಯ ಮನೆಗೆ ಹೋಗಿ ಅಲ್ಲಿ ಇದ್ದು ತಂದೆಯ ಮನೆಗೆ ಬಂದ ಮೇಲೆ ಅವಳಲ್ಲಿ ಬದಲಾವಣೆಯಾಗ ಹತ್ತಿದವು. ಸ್ವಲ್ಪಾವಧಿಯಲ್ಲಿ ಹೆಣ್ಣು ಹೋಗಿ ಸಂಪೂರ್ಣ ಗಂಡು ಆಯಿತು. ಈಗ ಈ ಹೊಸ ಗಂಡು ವ್ಯಕ್ತಿಯ ವಯಸ್ಸು ೨೦. ಮೊನ್ನೆ ಮೊನ್ನೆ ಒಂದು ಹೆಣ್ಣನ್ನು ಲಗ್ನವಾದನು: ಇದರ ಕಾರಣವನ್ನು ಶಾಸ್ತ್ರೀಯರೀತಿಯಿಂದ ಬಂಗಾಲಿಗಳು ಶೋಧಿಸ ಹತ್ತಿರುವರು.

ಅಮೃತ ಬಝಾರ ಪತ್ರಿಕೆ.

## ನಾಶೀಕದ ದೇವಾಲಯದಲ್ಲಿ ದಂಗೆ

ಚೈತ್ರ ಶುದ್ಧ ಪ್ರತಿಪದೆಯ ದಿವಸ ನಾಶಿಕದಲ್ಲಿ ಕಾಳಾರಾಮ ದೇವಾಲಯದಲ್ಲಿ ಪ್ರವೇಶ ಮಾಡುವಕಾಲಕ್ಕೆ ವರ್ಣಾಶ್ರಮ ಧರ್ಮಿಗಳು ಒಂದು ಬಂಡನ್ನು ಹೂಡಿದರು. ಆ ದೇವಾಲಯದಲ್ಲಿ ಪ್ರವೇಶ ಮಾಡಬೇಕೆಂದು ಅಸ್ಪೃಶ್ಯರು ಈಗ ಅಜಮಾಸು ಒಂದು ತಿಂಗಳಿಂದ ಆ ದೇವಾಲಯದ ಎದುರಿನಲ್ಲಿ ಶಾಂತಮಯವಾದ ಸತ್ಯಾಗ್ರಹವನ್ನು ಹೂಡಿರುವದರಿಂದ ಇತರ ಜನರಿಗೂ ಕೂಡ ಅಲ್ಲಿ ಪ್ರವೇಶವು ದುಸ್ತರವಾಗಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಓರ್ವ ಆಚಾರ್ಯನು ತನ್ನ ಮನೆಯೊಳಗಿಂದ ಹಾಯ್ದು ಆ ದೇವಾಲಯದಲ್ಲಿ ಪ್ರವೇಶ ಮಾಡಬಹುದೆಂದು ಯಾವತ್ತೂ ಚಾತುರ್ವರ್ಣ್ಯರಿಗೆ ಪ್ರಕಟವಾಗಿ ಆಮಂತ್ರಣವನ್ನು ಕೊಟ್ಟನು. ಇದೇ ಪ್ರಸಂಗ ನಿರೀಕ್ಷಿಸುತ್ತಿದ್ದ ಸನಾತನ ಧರ್ಮದವರು ಸಾವಿರಾರು ಜನ ಗುಂಪುಗಟ್ಟಿ ಅಲ್ಲಿಗೆ ಬಂದು ಮುಳುರಿದ್ದಲ್ಲದೆ ಹತ್ತರದಲ್ಲಿ ಆ ದೇವಾಲಯದ ಉತ್ತರ ಮಹಾದ್ವಾರದ ಬಳಿಯಲ್ಲಿ ಸತ್ಯಾಗ್ರಹವನ್ನು ಹೂಡಿದ ಅಸ್ಪೃಶ್ಯರ ಮೇಲೆ ಏರಿ ಹೋಗಿ ಅವರ ಮೇಲೆ ಕಲ್ಲಿನ ಮಳೆ ಸುರಿಸಿದರು.

ಈ ಸಮಯದಲ್ಲಿ ಅಲ್ಲಿಯ ಪೋಲೀಸ ಅಮಲದಾರರು ಈ ಅತ್ಯಾಚಾರವನ್ನು ನಿರ್ಬಂಧಿಸಲು ಎಷ್ಟು ಪ್ರಯತ್ನಪಟ್ಟರೂ ಅವರಿಂದ ಸಾಧ್ಯವಾಗದಾಯಿತು. ಆಗವರು ತಮ್ಮ ಮೇಲಧಿಕಾರಿಗಳಿಗೆ ತಿಳಿಸಲು ಅವರು ಯಾವತ್ತೂ ಪೋಲೀಸ ಸೇನೆಗೆ ಆ ಜನಸಂದಣಿಯನ್ನು ಓಡಿಸಲಿಕ್ಕೆ ಅಪ್ಪಣೆಯನ್ನಿತ್ತರು. ಕೊನೆಗೆ ಆ ತಂಡವು ಎರಡು ತಾಸಿನವರೆಗೆ ಪೋಲೀಸರೊಡನೆ ಹೋರಾಡಿತು ಆ ಸ್ಥಳದಲ್ಲಿ ಸತ್ಯಾಗ್ರಹಿಗಳು ಭೋಜನಕ್ಕೆಂದು ತಮ್ಮ ಶಿಬಿರಕ್ಕೆ ಹೋದ್ದರಿಂದಲೂ ಮತ್ತು ವರ್ಣಾಶ್ರಮಿಗಳು ತಾವು ಆ ದಿನ ಕನಿಷ್ಟ ಗುಡಿಯ ಶಿಖರದ ದರ್ಶನವನ್ನಾದರು ತೆಗೆದುಕೊಳ್ಳುವೆವೆಂದು ಸೂಚಿಸಿದ್ದರಿಂದ ಅವರಿಗೆ ಗುಡಿಯ ಹತ್ತರ ಹೋಗಗೊಟ್ಟರು. ನಂತರ ಅವರು ತಾವು ದರ್ಶನವನ್ನು ತೆಗೆದುಕೊಳ್ಳದೆ ಹಿಂತಿರುಗಲಿಕ್ಕಿಲ್ಲೆಂದು ಹಟಹಿಡಿದದ್ದರಿಂದ ಪೋಲೀಸರು ಸುವ್ಯವಸ್ಥರೀತಿಯಿಂದ ಆ ಜನರಿಗೆ ದರ್ಶನವನ್ನು ಒದಗಿಸಿಕೊಟ್ಟರು. ಈ ಸಂದರ್ಭದಲ್ಲಿ ಅಸ್ಪೃಶ್ಯರು ಮಾತ್ರ ಬಹಳೇ ಶಾಂತತೆಯನ್ನು ವ್ಯಕ್ತಗೊಳಿಸಿದರು. ಆದರೆ ಅದಕ್ಕೆ ವಿಪರೀತವಾಗಿ ವರ್ಣಾಶ್ರಮಿಗಳು ತಮ್ಮ ರಾಕ್ಷಸೀವೃತ್ತಿಯನ್ನು ಪ್ರಕಟಮಾಡಿದರು.

## ಉಪ್ಪಿನ ಕಟ್ಟಳೆಯನ್ನು ಮುರಿಯುವದಕ್ಕಾಗಿ ಮುಂಬಯಿಯಲ್ಲಿ

# ೩ನೂರು ಸತ್ಯಾಗ್ರಹಿಗಳು

## ಸಮುದ್ರ ದಂಡೆಗೆ ಹೊರಡುವರು

ಸೋಮವಾರ ಬೆಳಿಗ್ಗೆ ಮುಂಬಯಿ ಕಾಂಗ್ರೆಸ ಕಟ್ಟಡದಿಂದ ೩೦೦ ಸತ್ಯಾಗ್ರಹಿಗಳು ಉತ್ಸಾಹದೊಂದಿಗೆ ಹೊರಟು ಹಾರ್ಬರ ವ್ಹಾರ್ಫ ಎಂಬ ಭಾಗಕ್ಕೆ ಒಂದು ಅಲ್ಲಿ ಉಪ್ಪನ್ನು ಮಾಡಲುಪಕ್ರಮಿಸಿದ್ದಾರೆ. ಇನ್ನೂರ ಸತ್ಯಾಗ್ರಹಿಗಳಲ್ಲಿ ಅನೇಕ ಹೆಣ್ಣುಮಕ್ಕಳೂ ಇದ್ದಾರೆ. ಉಪ್ಪನ್ನು ಹೇಗೆ ತಯಾರಿಸಬೇಕು, ಹೇಗೆ ಹೇಗೆ ಆ ಉಪ್ಪಿನ ಕಾಯಿದೆಯನ್ನು ಮುರಿಯಬೇಕು. ಇದಕ್ಕೆಲ್ಲ ಮೊನ್ನೆ ರವಿವಾರದಿಂದಲೂ ಸತ್ಯಾಗ್ರಹಿಗಳಿಗೆ ತಿಳಿಸಹೇಳಹತ್ತಿದ್ದಾರೆ. ಮೊದಲು ಹತ್ತು ಸತ್ಯಾಗ್ರಹಿಗಳದೊಂದು ಗುಂಪು ಈ ಉಪಕ್ರಮದಲ್ಲಿ ತೊಡಗುವದು. ಅವರನ್ನು ಹಿಡಿದೊಯ್ದ ಕೂಡಲೆ ಮತ್ತೆ ಹತ್ತು ಜನರು ಅವರ ಸ್ಥಳದಲ್ಲಿ ನಿಂತುಕೊಳ್ಳಬೇಕೆಂದು ಗೊತ್ತುಮಾಡಿಕೊಂಡಿದ್ದಾರೆ.

ಮುಂಬಯಿಯಲ್ಲಿಯೇ ಇನ್ನೊಂದು ಕಡೆಗೆ ಬ್ರಿಟಿಶ ಅಧಿಕಾರಿಗಳ ನಿರ್ಬಂಧದ ಹೊರಗೆ ಆದಿತ್ಯವಾರದ ಬಂದರಿನಲ್ಲಿ ಈ ಕಾಯಿದೆಭಂಗವು ಆರಂಭವಾಗುವದಿತ್ತು. ಮಹಾರಾಷ್ಟ್ರದ ಸತ್ಯಾಗ್ರಹಿಗಳೂ ಬಂದು ಕೂಡಿಕೊಳ್ಳುವರು. ಸಮುದ್ರ ವಧಿ ಜನರು ಬಂದು ಕಡೆಗೆ ಏನು ನಡೆಯುವದನ್ನು ನೋಡುವದಕ್ಕಾಗಿ ಧಾವಿಸಹತ್ತಿದ್ದಾರೆ.

ಈ ಸತ್ಯಾಗ್ರಹ ಕಾಲದಲ್ಲಿ ಈ ಹಣದ ಯೋಜನೆಯನ್ನು ಪೂರೈಸಿಕೊಳ್ಳುವರು, ಯುದ್ಧಕ್ಕೆ ಕಳಿಸಿದ ನಮ್ಮ ಮಕ್ಕಳನ್ನು ನಾವು ಹಚ್ಚಗೆ ಹಸಿವೆಯ ನೋವುಗೊಂಡು ಉಪವಾಸದ ಪಾಪವು ಪ್ರತಿಗ್ರಹಸ್ಥನ ತಲೆಯ ಮೇಲೆ ಬರುವದು. ಮುಂಬಯಿಯಲ್ಲಿ ಸೇಟ ನಂಗೋದಾಸ ಎಂಬ ಧಾನ್ಯ ವರ್ತಕರು ಮುಂಬಯಿ ಸತ್ಯಾಗ್ರಹಿಗಳ ಅನ್ನಸಾಮಗ್ರಿಯ ವೆಚ್ಚವನ್ನೆಲ್ಲ ಒಪ್ಪಿಕೊಂಡು ಹೊತ್ತಿರುವರು. ಅವರ ಔದಾರ್ಯದ ಅನುಕರಣೆಯು ಬಾಗಲಕೋಟೆಯ ವ್ಯಾಪಾರಸ್ಥರ ಹೃದಯದಲ್ಲಿ ಉದಯವಾದ ದ್ದಾದರೆ, ಎಷ್ಟೋ ಕಾರ್ಯವಾಗುವಂತಿದೆ. ವರ್ತಕರು ತಮ್ಮ ಧರ್ಮಬುದ್ಧಿಗಾಗಿ ಹೆಸರು ಪಡೆದುಕೊಂಡವರು ಇರುವರು. ಅವರೇ ಮುಂದೆ ಬಂದು ಈ ಸಂಗ್ರಾಮದ ಅನ್ನ ಸಾಮಗ್ರಿಯ ವ್ಯವಸ್ಥೆಯನ್ನು ಹೊತ್ತುಕೊಳ್ಳುವರೆಂದು ನಮ್ಮ ಆಶೆ. ಅಷ್ಟಾಗದಿದ್ದರೆ ಯಥಾಶಕ್ತಿಯಾದರೂ ಕೈಬಿಚ್ಚಿ ದಾನ ಮಾಡಿರಿ. ನೀವು ಉಂಡು ತೇಗುವಾಗ್ಯೆ ಈ ಸತ್ಯಾಗ್ರಹಿಗಳ ಹಸಿದ ಹೊಟ್ಟೆಯ ನೆನಪು ಮಾಡಿಕೊಂಡು ಒಂದು ತುತ್ತು ಉಳಿಸಿಕೊಡುವ ಮನಸ್ಸು ಮಾಡಿದರೆ ಆ ವೀರರು ನಮಗಾಗಿ ಸ್ವಾತಂತ್ರ್ಯವನ್ನು ಗಳಿಸಿಕೊಂಡು ಬರುವರು. ಹೀಗೆ ದಾನ ಮಾಡುವದರಲ್ಲಿ ತ್ಯಾಗವಿದೆ, ಧರ್ಮವಿದೆ, ದೇಶಾಭಿಮಾನವಿದೆ, ಸ್ವಾತಂತ್ರ್ಯಪ್ರೇಮವಿದೆ. ಇದೆಲ್ಲವನ್ನು ದಾನದಿಂದ ಸಾಧಿಸಿರಿ.

---

### ವಿಮಾನ ಉಡ್ಡಾಣದಲ್ಲಿ ನುರಿತಂಥ ಕನ್ನಡಿಗನು!

ಇತ್ತೀಚೆ ಹಿಂದುಸ್ಥಾನದಲ್ಲಿಯ ತರುಣರು ವಿಮಾನ ಉಡ್ಡಾಣದಲ್ಲಿ ವಿದ್ಯೆಯನ್ನು ಹೊಂದುತ್ತಲಿದ್ದಾರಷ್ಟೇ! ಕನ್ನಡಿಗರು ಈ ವ್ಯವಸಾಯದಲ್ಲಿ ಸೇರುತ್ತಿರುವದು ಸಂತೋಷದ ಸಂಗತಿ. ಶ್ರೀಯುತ ಬಿ. ಕೆ. ಎಸ್. ರಾವ ಇವರು ಬೆಂಗಳೂರ ... ಫ್ಲಾಯಿಂಗ ಕ್ಲಬ್" ನಲ್ಲಿ ಸೇರಿ ಅಲ್ಲಿ ಉಡ್ಡಾಣಶಾಸ್ತ್ರದ ಸಹವಾಸ ... ದಕ್ಷಿಣ ಹಿಂದು ವ್ಯಕ್ತಿಗಳೇ ಈ ಯಶಸ್ಸನ್ನು ... ದಾಖಲಿಸಿದ್ದಾರೆ ... ಎಂಬ ಕೀರ್ತಿಯನ್ನು ... ಕನ್ನಡಿಗರಿಗೆ ... ಹಿಂದ ಸ್ಥಾನದಲ್ಲಿ ಈ ರಂಗ ... ಇವರಿಗೇ ಲಭಿಸಿತು ... ಈಗ ... ಫ್ಲಾಯಿಂಗ ಕ್ಲಬ್ಬ" ಗಳು ಮುಂಬೈ ಕಲಕತ್ತೆಗಳಲ್ಲಿರುವದರಿಂದ ಕನ್ನಡಿಗರು ಈ ಹೊಸ ವ್ಯವಸಾಯದಲ್ಲಿಯೂ ಲಕ್ಷ್ಯಕೊಡತಕ್ಕದ್ದು.

---

# 'ಕನ್ನಡಿಗ'ನ ನಿತ್ಯ ಸಂಚಿಕೆ!

ಸಧ್ಯದಲ್ಲಿ ಮುಂಬೈಯಿಂದ ಬರುವ ಇಂಗ್ಲೀಷ ಪತ್ರಿಕೆಗಳು ಅವರ ಸುದ್ದಿಗಳನ್ನು ... ದಿನ ತಡವಾಗಿ ... ಪ್ರತಿನಿಧಿಗಳ ... ಮುಖ್ಯವಿಷಯಗಳ ... ದಿನಾಲು ... ಪ್ರತಿದಿನ ... ದೊರೆಯಲಿಕ್ಕೆ ... ನಮ್ಮ ಪ್ರತಿನಿಧಿ ... "ಫ್ರೀ ಪ್ರೆಸ್" ... ಪ್ರೆಸ್" ... ವಾರ್ತೆಗಳನ್ನು ಪೂರೈಸಿಕೊಡುವೆವು.

ನಿತ್ಯ ಪತ್ರಿಕೆಯ ವ್ಯವಸ್ಥಾಪಕರು
"ಕನ್ನಡಿಗ" ಆಫೀಸು ಬಾಗಲಕೋಟೆ.

---

ಈ ಪತ್ರಿಕೆಯು ಮಂಗಳವೇಢೆ ರಾಜಾರಾಮರಾಯರ ಮಕ್ಕಳಾದ ಶ್ರೀನಿವಾಸರಾಯರು ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಿ ಅಲ್ಲಿಯೇ ಪ್ರಸಿದ್ಧಿಪಡಿಸಿದರು.

ರ. ನಂ. ಬಿ ೧೯೪೭ ಬೆಲೆ ೦—೦—೩

# ಕನ್ನಡಿಗ

ಜಯಕರ್ನಾಟಕ

ನಿತ್ಯಸಂಚಿಕೆಯು.

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ಮಂಗಳವಾರ ಮಿತಿ ಚೈತ್ರ ಶುದ್ಧ ೧೦ ಶಕ ೧೮೫೨ ತಾ ೮—೪—೩೦ ಸಂಚಿಕೆ ೧೬

## ಸಂಪಾದಕರ ಭೂಮಿಕೆ

ನನ್ನ ದೇಹವು ನಿನ್ನ ವೀರಶಾಸನಕಾಗಿ।
ಕನ್ನನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನಪ್ರಾಣವು ನಿನ್ನ ಗಂಧವನು ಬೀರುವಗಂಧವಹವೆಂದು ತಿಳಿಯೊ॥

## ಗಾಂಧಿಯವರ ಆಜ್ಞೆ

ಮೊನ್ನೆ ಆರನೇ ತಾರೀಖಿಗೆ ಮಹಾತ್ಮರು ತಮ್ಮ ನಿಶ್ಚಯದ ಪ್ರಕಾರ ದಂಡಿಯಲ್ಲಿ ಉಪ್ಪಿನಕಾಯಿದೆಯನ್ನು ಸಾರಿದೂರಿ ಮುರಿದರು. ಅಲ್ಲಿ ಒಬ್ಬ ಪೋಲೀಸನ ಸುಳಿವೂ ಇರಲಿಲ್ಲವಂತೆ ನೋಡಿದರೆ ಜಿಲ್ಹೆಯ ಅಮಲದಾರರೆಲ್ಲರೂ ಕಲೇಕ್ಟರ, ಕಮಿಶನರ, ಡೆ| ಕಲೇಕ್ಟರ, ಅಲ್ಲಿಯೇ ತಳವೂರಿ ನಿಂತುಕೊಂಡಿದ್ದಾರೆ. ಅಂತು ಸರಕಾರದವರು ಮ| ಗಾಂಧಿಯವರಿಗೆ ಆತಂಕ ಉಂಟುಮಾಡಿ ಹೆಚ್ಚಿನ ಕ್ಷೋಭೆಯನ್ನುಂಟುಮಾಡಬಾರದೆಂದು ನಿಶ್ಚಯಿಸಿದೆ ಹೀಗೆ ಎಷ್ಟು ದಿವಸ ನಡೆಯುವದು ನಡೆಯಲಿ ಸುಮ್ಮನೆ ನೋಡುತ್ತ ಕುಳಿತರಾಯಿತು ಎಂಬ ಧೋರಣವನ್ನು ಸ್ವೀಕಾರ ಮಾಡಿದೆ, ಅವರ ಈ ಧೋರಣವೇ ಅವರನ್ನು ನಕ್ಕ ಹತ್ತುವಂತೆ ಮಾಡುವದು ಪ್ರತಿ ಒಬ್ಬ ಹಿಂದೀಯನ ಕರ್ತವ್ಯವಾಗಿದೆ. ಎಲ್ಲರೂ ಈ ಕಾಯಿದೆ ಭಂಗಕ್ಕೆ ಸಿದ್ಧರಾಗಿ ನಿಲ್ಲಬೇಕು, ಊರು ಊರಿಗೆ, ಹಳ್ಳಿ ಹಳ್ಳಿಗೆ ಬೀದಿ ಬೀದಿಗೆ ಈ ಕಟ್ಟಳೆಯ ವಿರುದ್ಧ ಆಚರಣೆಯನ್ನು ಪ್ರಚಾರದಲ್ಲಿ ಇನ್ನೂ ತರಬೇಕು. ಅಂದರೆ ಸರಕಾರವು ಈ ಕಾಯಿದೆ ಪೂರ್ತ ತನ್ನ ಅಸ್ತಿತ್ವವು ನಾಶವಾಯಿತೆಂದು ಒಪ್ಪಬೇಕು ಇಲ್ಲವಾದರೆ ಅನಂತ ಅನಂತವಾಗಿ ಜನರನ್ನು ಕಾರಾಗೃಹಕ್ಕೆ ಕಳಿಸಬೇಕು. ಇಂಥ ದುಂವಸ್ಥೆಯನ್ನು ಅದಕ್ಕೆ ಉಂಟುಮಾಡಬೇಕು. ಆದಕ್ಕೆ ಗಾಂಧಿಯವರು ಇನ್ನು ಉಪ್ಪಿನಕಟ್ಟಳೆಯನ್ನು ಪ್ರತಿ ಹಳ್ಳಿಯಲ್ಲಿಯೂ ಮುರಿಯಲಿಕ್ಕೆ ಪ್ರಾರಂಭಮಾಡಿರಿ ಉಪದೇಶಿಸಿರಿ. ಮಾತ್ರ ಅವರಿಗೆ ಹೀಗೆ ಮಾಡುವದರಲ್ಲಿ ನಿಮಗೆ ಜೇಲಿಗೆ ಹೋಗುವ ಪ್ರಸಂಗ ಬರಬಹುದೆಂದು ಸ್ಪಷ್ಟ ತಿಳಿಸಿ ಹೇಳಿರಿ ಎಂದು ಪ್ರಕಟನೆ ಹೊರಡಿಸಿರುವರು. ಅನ್‌ರ್ಟರ್‌ವು ಈ ಪ್ರಕಟನೆಗೆ ಏನು ಉತ್ತರ ಕೊಡುವದು! ಪ್ರಾಂತಿಕ ಮಂಡಲದವರು ಈ ವಿಷಯವಾಗಿ ಹೆಚ್ಚಿಗೆ ವಿಚಾರಮಾಡಿ ಜನರು ಅಕ್ಕಲ್ಲಿಗೆ ಈ ಧರದ ವೈಯಕ್ತಿಕ ಕಾಯಿದೆಭಂಗವನ್ನು ಅಂಗೀಕರಿಸಲು ಅನುಮೋದಿಸುವರೋ ಅಥವಾ ಇಲ್ಲಿಯ ಪರಿಸ್ಥಿತಿಯ ಅವಲೋಕನದಿಂದ ಮತ್ತೇನಾದರೂ ಕಾರ್ಯಕ್ರಮವನ್ನು ಹಾಕಿಕೊಡುವರೊ ಏನೆಂಬುವದನ್ನು ಶೀಘ್ರ ಪ್ರಕಟಿಸಬೇಕು,

## ಪ. ಮಾಲವಿಯರೂ ಪರದೇಶಿ ಬಟ್ಟೆಯ ಹೋಳಿಯೂ

ಪಂಡಿತ ಮಾಲವಿಯರು ಅಸೆಂಬ್ಲಿಯ ಓಲಗದಿಂದ ಹೊರಬಿದ್ದು ಬಂದಂದಿನಿಂದ ಪರದೇಶಿಬಟ್ಟೆಗಳ ಬಹಿಷ್ಕಾರದ ಪುರಸ್ಕರ್ತರಾಗಿ ನಿಂತುಕೊಂಡಿದ್ದಾರೆ. ದಿಲ್ಲಿಯ ಕಪ್ಪಡ ವರ್ತಕರ, ಸಭೆಯನ್ನು ಕರೆದು ಅವರು ಕನಿಷ್ಟ ಒಂದು ವರ್ಷವಾದರೂ ವಿದೇಶೀ ಬಟ್ಟೆಗಳನ್ನು ತರಿಸಬಾರದೆಂಬ ಒಗ್ಗೆ ಅವರ ಕಡೆಯಿಂದ ಅಭಿವಚನ ತಕೆಗೊಂಡಿದ್ದಾರೆ. ಮತ್ತು ಮೊನ್ನೆ ಈ ಬಹಿಷ್ಕಾರ ಚಳವಳಿಯ ಆರಂಭದಿವಸವೆಂದು ರಾಷ್ಟ್ರೀಯ ವಾರದ ಮೊದಲು ದಿವಸ ದೊಡ್ಡದೊಂದು ಸಭೆಯಾಗಿ ಪರದೇಶಿ ಅರಿವೆಗಳ ಹೋಳಿ ಮಾಡಿದರು. ಆ ಕಪ್ಪಡ ವರ್ತಕರೆಲ್ಲರು ತಮ್ಮ ಸಮಾಜದ ಸಭೆ ಕರೆದು ಈ ತರಹದ ಠರಾವು ಸರ್ವಾನುಮತದಿಂದ ಸ್ವೀಕೃತವಾಗುವಂತೆ ಯತ್ನಿಸುತ್ತೇವೆಂದು ಹೇಳಿದ್ದಾರೆ.

## ನಾಸಿಕದ ಅಸ್ಪೃಶ್ಯರು.

ಕಾಳಾರಾಮ ಗುಡಿಯೊಳಗೆ ತಮಗೂ ಪ್ರವೇಶ ದೊರೆಯಬೇಕೆಂದು ಅಸ್ಪೃಶ್ಯರು ಒಳ್ಳೇ ಜೋರಿನಿಂದ ಸತ್ಯಾಗ್ರಹವನ್ನು ಹೂಡಿದ್ದಾರೆ. ಸನಾತನಿಯರು ಗುಡಿಯ ಬಾಗಿಲವನ್ನು ಇಕ್ಕಿ ಒಬ್ಬ ಪೂಜಾರಿಯ ಮನೆಯೊಳಗಿಂದ ಹಾಯ್ದು ಹೋಗಿ ದೇವರ ದರ್ಶನಕ್ಕೆ ಹೋಗಹತ್ತಿದ್ದಾರೆ. ಮೊನ್ನೆ ಅಸ್ಪೃಶ್ಯರು ತಮಗೂ ಈ ಮನೆಯೊಳಗಿಂದ ಹಾದುಹೋಗಲಿಕ್ಕೆ ಅಪ್ಪಣೆಯಿರಬೇಕೆಂದು ಸಾಧಿಸಿ ಮನೆಯ ಬಾಗಿಲಿಗೆ ಕುಳಿತರು. ಆಗ್ಯೆ ಕೆಲವರನ್ನು ಪೊಲೀಸರು ಹಿಡಿದೊಯ್ದಿದ್ದರು. ಅವರನ್ನು ಇಂದು ಬಿಟ್ಟುಕೊಟ್ಟಿದ್ದಾರೆ. ರಾಮನವಮಿ ೩೦,೦೦೦ ಸನಾತನಿಯರ ಪರಿಷತ್ ಕೂಡತಕ್ಕದ್ದಿದ್ದು ಅಂದು ಏನಾದರೂ ಗೊಂದಲವೇಳಬಹುದೆಂದು ಪೋಲೀಸರು ಈಗಿನಿಂದಲೆ ಜಾಗ್ರತೆಯಿಂದಿರಹತ್ತಿದ್ದಾರೆ.

## ಉಪ್ಪಿನ ಕಟ್ಟಳೆಯು

# ಬೆಳಗಾಂವಿಯಲ್ಲಿ ಧಿಕ್ಕರಿಸಲ್ಪಟ್ಟಿತು.

## ಅಲ್ಲಿಯ ಅಧಿಕಾರಿಗಳು ಹುಳುಹುಳು ಕಣ್ಣುಬಿಡುತ್ತ ಕುಳಿತವೆ!

(ತಂತಿಯಿಂದ ಬಂದದ್ದು.)

ಮೊನ್ನೆ ೬ ನೇ ತಾರೀಖು ಭಾನುವಾರ ಬೆಳಗಾವಿಯಲ್ಲಿ ದೇಶಭಕ್ತ ಗಂಗಾಧರರಾಯರು ಮತ್ತು ಜೋಶೀ ನಾರಾಯಣ ರಾಯರು ಮೂವತ್ತು ಜನ ಸತ್ಯಾಗ್ರಹಿಗಳನ್ನು ಕೂಡಿಕೊಂಡು ಉಪ್ಪಿನ ಕಾಯಿದೆಯನ್ನು ಧಿಕ್ಕರಿಸಿ ಕರಕೊಡದೆ ತಯಾರು ಮಾಡಿದ ಉಪ್ಪನ್ನು ಓಣಿ ಓಣಿ ಮಾರಲಿಕ್ಕೆ ಪ್ರಾರಂಭಮಾಡಿ ದವರು. ಅಲ್ಲಿಯ ಸರಕಾರ ಅಧಿಕಾರಿಗಳು ಮಿಕಿ ಮಿಕಿ ಕಣ್ಣುಬಿಡುತ್ತ ಮೇಲಿನವರ ಕೈಬಾಯಿ ನೋಡುತ್ತ ಕುಳಿತಿರುವರು.

ಬೆಳಗಾಂವಿಗರ ಈ ಉಪಕ್ರಮವನ್ನು ಉಳಿದ ಕರ್ನಾಟಕವು ಅನುಕರಿಸಲು ಆತಂಕವೇನು? ಗಾಂಧಿ ಮಹಾತ್ಮರ ಆಜ್ಞೆಯಂತೂ ದೊರಕಿದೆ. ಈ ವಿಷಯದಲ್ಲಿ ಪ್ರಾಂತಿಕ ಕಮೀಟಿಯವರ ಆಲೋಚನೆ ಏನು? ದೇಶದ ತುಂಬ ಈ ಬ್ಯಾಗಿ ಏಕ ಕಾಲಕ್ಕೆ ಹಬ್ಬಬೇಕೆಂದು ನಮ್ಮ ವಿಚಾರ. ಅದರೆ ಆದರಲ್ಲಿ ಒಂದುಬಗೆಯ ಏಕಸೂತ್ರತೆ ಇರಲೇಬೇಕು,

### ಮಹಾತ್ಮಾ ಗಾಂಧಿಯವರ ಆಹಾರವು!

ಈ ಸತ್ಯಾಗ್ರಹ ವಾರದಲ್ಲಿ ಮಹಾತ್ಮಾ ಗಾಂಧಿಯವರು ಕೇವಲ ಹುರಕಡ್ಲಿ, ಅಕ್ಕಿಯಗಂಜಿ, ಹುಣಸೀಹುಳಿ, ಉಳ್ಳೀಗಡ್ಡಿ, ಹಾಲು (ಸಕ್ಕರೆ) ಇಷ್ಟೇ ಪದಾರ್ಥಗಳ ಸೇವನದಿಂದ ತಮ್ಮ ಭೋಜನವನ್ನು ಮುಗಿಸತಕ್ಕದ್ದೆಂದು ನಿಯಮ ಹಾಕಿಕೊಂಡಿದ್ದಾರೆ.

### ಗದಗಿನ ವಕೀಲರೂ ಸತ್ಯಾಗ್ರಹವೂ

(ನಮ್ಮ ಸ್ವಂತ ಸುದ್ದಿಗಾರರಿಂದ)

ಇಲ್ಲಿಂದಲೂ ಹುಬ್ಬಳ್ಳಿಗೆ ಸ್ವಯಂಸೇವಕರು ಹೋಗಿರುವರು. ವಕೀಲರೆಲ್ಲರೂ ಖಾದಿಯನ್ನೇ ಧರಿಸಿಕೊಂಡು ಕೋರ್ಟಿಗೆ ಹೋಗುತ್ತಲಿದ್ದಾರೆ. ನಖಶಿಖಾಂತವಾಗಿ ಖಾದಿ ಧರಿಸಿದವರೇ ಹೆಚ್ಚು, ೩|೪ ಜನರು ಮಾತ್ರ ಹಂಪಬಂದರು. ೨|೩ ಜನರು ಗಾಂಧಿ ಟೊಪ್ಪಿಗೆಯನ್ನು ಕೂಡಾ ಹಾಕಿಕೊಂಡು ಹೋಗುತ್ತಲಿದ್ದಾರೆ. ಇದು ನಿಜವಾಗಿಯೂ ಇವರಿಗೆಲ್ಲ ಭೂಷಣವು, ಒಂದುಕಾಲಕ್ಕೆ ವಕೀಲರೆಲ್ಲ ಮೊದಲನೇ ತರಗತಿಯ ರಾಜಕೀಯ ಧುರೀಣರಿದ್ದರು. ಅದು ಈಗ ತಪ್ಪಿಹೋದಾಗದಿದ್ದರೂ, ಇಂಥ ವಿಧಾಯಕ ಕಾರ್ಯಗಳಿಗಾದರೂ ಅವರು ಸಹಾಯವನ್ನೀಯುತ್ತಿರುವದು ಕೊಂಚ ಸಂತೋಷದ ಮಾತೇ ಸರಿ. ಶ್ರೀ. ಜಾಲಿಹಾಳ ಅನಂತರಾಯರು ಸತ್ಯಾಗ್ರಹದ ಪ್ರತಿಜ್ಞಾಪತ್ರಕ್ಕೆ ತಮ್ಮ ರುಜುಹಾಕಿ, ರಣಾಂಗಣಕ್ಕೆ ಅಪ್ಪಣೆ ಬಂದೊಡನೆ ಹೊರಡಲು ಸಿದ್ಧರಾಗಿ ನಿಂತಿದ್ದಾರೆ. ಮಳಗಿ ಹಾಗು ಶಿವರಾಮ ಕುಲಕರ್ಣಿ ಈ ವಕೀಲದ್ವಯರು ಸಹ ಸತ್ಯಾಗ್ರಹದ ಸೈನಿಕರಲ್ಲಿ ಸೇರುವ ನಿಶ್ಚಯಮಾಡಿರುವರೆಂದು ಕೇಳುತ್ತೇನೆ. ಈ ನಿಶ್ಚಯವು ಪ್ರತಿಜ್ಞಾಪತ್ರಿಕೆಯ ಮೇಲೆ ಬೇಗನೇ ಒಡಮೂಡಬಹುದಾಗಿ ವಿಶ್ವಾಸವಿದೆ.

### ಮಹಾತ್ಮರ ಭಾಷಣದೊಳಗಿನ ಕೆಲವು ಸೂತ್ರ-ವಚನಗಳು.

ನಾವು ಮಾಡುವ ಯುದ್ಧದಲ್ಲಿ ಕಲಂಕವಿಲ್ಲ; ನಮ್ಮಲ್ಲಿ ಕಪಟತೆ ಇರುವದು; ನಮ್ಮ ಮಾರ್ಗವು ಸರಲವಿರುವದು ಈ ಕದನದಲ್ಲಿ ನಮಗೆ ದೇವರ ಸಹಾಯವಿರುವದು. ಸತ್ಯಕ್ಕಾಗಿ ಹೆಣಗುವ ಈ ಯುದ್ಧದಲ್ಲಿ ಅಪಜಯವೆಲ್ಲಿರುವದು?

ನಿಮ್ಮ ಉದ್ಯೋಗವು ಯಾವದೇ ಇರಲಿ ಅದನ್ನು ನೀವು ಬಿಟ್ಟುಬಿಡತಕ್ಕದ್ದು. ಸತ್ಯಾಗ್ರಹ ಸಂಗ್ರಾಮಕ್ಕೆ ಕೂಡುವದೇ ನಿಮ್ಮ ಈಗಿನ ಉದ್ಯೋಗವು ನಿಮಗೆ ಜಯವು ಕಟ್ಟಿಟ್ಟದ್ದು.

ಇದು ನನ್ನ ಕೊನೆಯ ಸಂಗರವು ೩೦ ಕೋಟಿ ಜನರ ಸಂಕಟವನ್ನು ಕಳೆದುಹಾಕುವದಕ್ಕಾಗಿ ನೀವು ನನಗೆ ಸಹಾಯ ಮಾಡಲಿಕ್ಕೇಬೇಕು. ಅವರೆಲ್ಲರೂ ಸ್ವತಂತ್ರರಾಗಬೇಕೆಂದು ನನ್ನ ಇಚ್ಛೆ ಅದೆ. ಉಪ್ಪಿನ ಕರದ ವಿರುದ್ಧವಾಗಿರುವ ಸತ್ಯಾಗ್ರಹವು ಸ್ವಾತಂತ್ರ್ಯದ ಮೊದಲನೆಯ ಹೆಜ್ಜೆಯು. ಎರಡನೆಯ ಹೆಜ್ಜೆಯು ಭೂಕಂದಾಯದ ವಿರುದ್ಧವಾಗಿರುವದು. ಉಪ್ಪಿನ ಮೇಲಿನ ಕರವು ಇಲ್ಲದಾದರೆ ನಮ್ಮ ಸಂಕಟವೇ ಇಲ್ಲದಂತಾಯಿತು.

### ಸತ್ಯಾಗ್ರಹದ ವಿವಿಧ ರೀತಿಗಳು.

ಉಪ್ಪಿನ ಸತ್ಯಾಗ್ರಹ— ದುಷ್ಟ ಮತ್ತು ಅನ್ಯಾಯದ ಕಟ್ಟಳೆಗಳನ್ನು ಸವಿನಯವಾಗಿ ಮುರಿದು ಕಷ್ಟಗಳನ್ನು ಸಹಿಸಲು ಸಿದ್ಧರಾಗುವದೇ ಸತ್ಯಾಗ್ರಹವೆನಿಸುವದು. ಉಪ್ಪಿನ ಸತ್ಯಾಗ್ರಹವನ್ನು ಅನೇಕ ರೀತಿಯಿಂದ ಮಾಡಬಹುದು. ೧ ಸರಕಾರಕ್ಕೆ ಕರಕೊಡದೆ ಉಪ್ಪನ್ನು ಮಾಡಬಹುದು. ೨ ಅಂಥ ಉಪ್ಪನ್ನು ಎತ್ತಿ ಒಯ್ದು ಎರಡನೆಯವರಿಗೆ ಕೊಡಬಹುದು. ಇಲ್ಲವೆ ಮಾರಬಹುದು. ೩. ತನ್ನಷ್ಟಕ್ಕೆ ತಾನೇ ಸಮುದ್ರ ದಡದಲ್ಲಿ ಆದ ಉಪ್ಪನ್ನು ಕರಕೊಡದೆ ಎತ್ತಿ ತರಬಹುದು ೪. ಅದನ್ನು ಮಾರಬಹುದು. ೫, ಉಪ್ಪಿನ ಮಣ್ಣನ್ನು ಕರಕೊಡದೆ ಒಯ್ಯುವದು; ಅಥವಾ ಮಾರುವದು. ೬. ಸರಕಾರದವರ ಮಾಲಕೀಯ ಉಪ್ಪನ್ನು ತೆಗೆದುಕೊಂಡು ಬರಬಹುದು, ೭. ಇವುಗಳಲ್ಲಿ ಯಾವುದಾದರೊಂದು ಮಾಡಲು ಯತ್ನಿಸುವದು, ಇವೆಲ್ಲ ಗುನ್ಹೆಗಳೇ ಆಗುವವು. ಆದರೆ 'ಸತ್ಯಾಗ್ರಹಿಯು ಈ ಕಾರ್ಯವನು ನಾನು ಮಾಡುವೆನೆಂದು ಮೊದಲು ಅಧಿಕಾರಿಗಳಿಗೆ ಪ್ರಕಟವಾಗಿ ತಿಳುಹಿ, ಇದು ಗುನ್ಹೆಯಲ್ಲ ಇದು ನನ್ನ ನೈತಿಕ ಕರ್ತವ್ಯ' ಎಂದು ಸಾರಿ ಆಮೇಲೆ ಇದನ್ನು ಕೈಕೊಳ್ಳತಕ್ಕದ್ದು. ಇಲ್ಲದಿದ್ದರೆ ಕಳವಿನಿಂದ ಹೊಟ್ಟೆಪಾಡಿಗಾಗಿ ಉಪ್ಪುಮಾಡುವವನಿಗೂ ಸತ್ಯಾಗ್ರಹಿಗೂ ಭೇದವೇ ಉಳಿಯಲಿಕ್ಕಿಲ್ಲ.

—ಕರ್ನಾಟಕ ಧುರೀಣ.

( ತಂತಿಯಿಂದ ಬಂದವಾರ್ತೆ. )

### ತಾವು ನಿಶ್ಚಯಿಸಿಕೊಂಡಂತೆ ಆದಿತ್ಯವಾರ ಬೆಳಿಗ್ಗೆ ಮಹಾತ್ಮಾ ಗಾಂಧಿಯವರು ದಾಂಡಿಯಲ್ಲಿ

# ಉಪ್ಪಿನ ಕಟ್ಟಳೆಯನ್ನು ಮುರಿದರು!

## ಆದರೂ ಸರಕಾರವು ಮಹಾತ್ಮಾಜಿಯನ್ನು ಹಿಡಿಯಲಿಕ್ಕೆ ಅಂಜಿದೆ!

ಆದಿತ್ಯವಾರ ೬ ನೇ ತಾರೀಖಿನ ಬೆಳಗಿನ ೬ ಘಂಟೆಗೆ ಮಹಾತ್ಮಾ ಗಾಂಧಿಯವರು ತಮ್ಮ ಶಾಂತಿ ಸೈನ್ಯದೊಂದಿಗೆ ದಾಂಡಿಗ್ರಾಮದಲ್ಲಿ ಸರಕಾರದ ಉಪ್ಪಿನ ಕಟ್ಟಳೆಯನ್ನು ಧಿಕ್ಕರಿಸಿ ಸರಕಾರಿಗೆ ಕರಪಟ್ಟಿ ಯಾವದನ್ನೂ ಕೊಡುವದಿಲ್ಲೆಂದು ಅವರ ದಂಡೆಯ ಮೇಲೆ ಹೇಳಿ ಉಪ್ಪು ಆರಿಸಲಿಕ್ಕೆ ಪ್ರಾರಂಭಮಾಡಿದರು. ತನ್ನ ಆಜ್ಞಾಭಂಗದ ಲವಲೇಶವನ್ನೂ ಸಹಿಸಲಾರದ ಸರಕಾರವು ಮಹಾತ್ಮರು ಹೇಳಿ ಕೇಳಿ ತಮ್ಮ (ಕಮಿಶನರ, ಕಲೆಕ್ಟರ, ಡಿ. ಡಿ, ಕಲೆಕ್ಟರ ಎಲ್ಲರೂ ದಂಡಿಯಲ್ಲಿಯೇ ಠಾವೂರಿ ನಿಂತುಕೊಂಡಿರುವದನ್ನು ಮರೆಯಬಾರದು.) ಕಣ್ಣೆದುರಿಗೆ ಕಾಯಿದೆಯನ್ನು ಉಲ್ಲಂಘಿಸಿದರೂ, ಮುರಿದರೂ, ಮೆಟ್ಟಿ ತುಳಿದರೂ ಅವರ ಮೈಗೆ, ಅವರ ಸೈನಿಕರ ಮೈಗೆ ಕೈಹಚ್ಚುವ ಧೈರ್ಯ ಮಾಡಲೊಲ್ಲದು.

ಒಬ್ಬ ಸಿಪಾಯಿಯ ಸುಳುವೂ ಅಲ್ಲಿ ಇರಲಿಲ್ಲ. ಸರಕಾರವು ಇಷ್ಟೇಕೆ ಅಡಗಿಕೊಳ್ಳುವದು? ಎಲ್ಲಿ ಹೋಯಿತು ಬ್ರಿಟಿಶ ಸಾಮ್ರಾಜ್ಯದ ದರ್ಪವು? ಮಹಾತ್ಮರ ತಪಃಪ್ರಭಾವದ ಮುಂದೆ ತಾನು ಮಾಡಿದ ಪಾತಕಕ್ಕಾಗಿ ಸರಕಾರವು ನಡುಗಹತ್ತಿರುವದು ಅಥವಾ ೩೦ ಕೋಟಿ ಹಿಂದೀಯರು ತಮ್ಮ ಹೃದಯದ ಗದ್ದುಗೆಯಲ್ಲಿ ಇಟ್ಟು ಪೂಜಿಸುತ್ತಿರುವ ಮಹಾತ್ಮನಿಗೆ ಕೈಹಚ್ಚಿದರೆ, ಈಗ ಪೂರ್ಣ ಎಚ್ಚತ್ತಿರುವ ಹಿಂದೀಯರ ಕೋಲಾಹಲದಿಂದ ನಾಳಿಗೆ ಅಳಿಯಬೇಕಾಗಿರುವ ಸರಕಾರವು ಇಂದೇ ಮಣ್ಣುಮುಕ್ಕುವ ಪ್ರಸಂಗ ಬಂದೀತೆಂದು ಅದು ಅಂಜಿ ಹಾಕಹತ್ತಿರುವದು. ಮಹಾತ್ಮರನ್ನು ಹಿಡಿದರೆ ದೇಶದಲ್ಲಿ ವಿಚಿತ್ರ ಕ್ಷೋಭೆಯುಂಟಾಗುವದೆಂಬ ಸರಕಾರದ ಭೀತಿಯನ್ನು ಪ್ರತಿಯೊಬ್ಬ ಹಿಂದೀಯನು ತನ್ನ ಕೃತಿಯಿಂದ ನಿಜವಾಗಿ ತೋರಿಸಬೇಕಾಗಿದೆ.

# ಗುಜರಾಥದಲ್ಲಿ ದಬ್ಬಾಳಿಕೆಗೆ ಆರಂಭ

## ಗಾಂಧೀಜಿಯ ಮಗ ರಾಮದಾಸನನ್ನು ಹಿಡಿದರು.

### ಲಾಲ ಕೋಠಾರಿ ಇವರಿಗೆ ೧॥ ತಿಂಗಳ ಸಜೆಯಾಯಿತು.

( ತಂತಿಯಿಂದ ಬಂದವಾರ್ತೆ. )

ಮ॥ ಗಾಂಧಿಯವರ ಯುದ್ಧ ಶಿಬಿರವನ್ನೊಂದು ಬಿಟ್ಟು ಅನ್ಯತ್ರ ಗುಜರಾಥದಲ್ಲಿ ಅಲ್ಲಿಗಲ್ಲಿಗೆ ಸರಕಾರವು ದಬ್ಬಾಳಿಕೆಯನ್ನು ಆರಂಭಿಸಿದೆ. ರಾಮದಾಸ ಗಾಂಧಿ (ಮಹಾತ್ಮರ ಚಿರಂಜೀವ) ಮನಿಲಾಲ ಕೊಠಾರಿ, ಅಮೃತಲಾಲ ಸೇಟ ಮತ್ತು ಗೋಪಾಲದಾಸ ದೇಸಾಯಿ ಈ ಮೊದಲಾದ ಕಾಯಿದೆಭಂಗದ ಪುರಸ್ಕರ್ತರನ್ನು ಅವರವರ ಸತ್ಯಾಗ್ರಹ ಹೂಡಿದ ಸ್ಥಳದಿಂದಲೇ ಹಿಡಿದೊಯ್ದಿರುವರು.

ಇವರು ತಯಾರುಮಾಡಿದ ಒಟ್ಟು ೧೦೦ ಮಣ ಉಪ್ಪನ್ನು ಜಪ್ತಮಾಡಿಕೊಂಡು ಹೋಗಿರುವರು. ಅಂತೂ ಗುಜರಾಥವು ಭೀಕರವಾದ ದಬ್ಬಾಳಿಕೆಯ ಕರಾಳವದನದ ದವಡೆಯಲ್ಲಿ ಸಿಕ್ಕಿದೆ. ಯಾರು ಯಾವಾಗ್ಯೆ ಈ ದವಡಿಗೆ ಪಾಡಾಗುವರೆಂಬ ಇದರ ನಿಯಮ ಉಳಿದಿಲ್ಲ. ಎಲ್ಲರೂ ತಮ್ಮ ಪಾಳಿ ಈಗಲೊ ಇನ್ನೊಂದು ಗಳಿಗೆಗೊ ಎಂದು ನಿಶ್ಚಯಿಸಿಕೊಂಡೇ ಉಪ್ಪಿನ ಕಟ್ಟಳೆಯನ್ನು ಮೆಟ್ಟಿ ತುಳಿಯಹತ್ತಿದ್ದಾರೆ. ಮನಿಲಾಲ ಕೋಠಾರೆ ಇವರಿಗೆ ಉಪ್ಪಿನ ಕಾಯಿದೆ ಪ್ರಕಾರ ೧॥ ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿತು.

### ಅಹಮ್ಮದಾಬಾದ ಹೆಣ್ಣು ಹುಡಿಗೆಯರ ರಾಷ್ಟ್ರಭಕ್ತಿ!

ಅಹಮ್ಮದಾಬಾದದಲ್ಲಿ ಕರಕೊಡದೆ ತಂದ ಉಪ್ಪನ್ನು ಸತ್ಯಾಗ್ರಹಿಗಳು ಬೀದಿ ಬೀದಿಗೆ ಮಾರಹತ್ತಿರುವರು. ಇವರ ಮುಖ್ಯಸ್ಥನಾದ ತರುಣ ಸಂಘದ ಅಧ್ಯಕ್ಷನೊಬ್ಬನನ್ನು ಈ ಅಪರಾಧಕ್ಕಾಗಿ ಹಿಡಿದಿದ್ದಾರೆ. ಹುಡುಗರೆಲ್ಲ ಹುರುಪುಗೊಂಡಿವೆ. ಅಹಮ್ಮದಾಬಾದದ ಹೆಣ್ಣುಹುಡಿಗೆಯರು 'ಗರ್ಲ ಗಾಯಿಡ್ಸ್' ಎಂಬ ಸ್ಕೌಟ ಮಾದರಿಯ ಸಂಸ್ಥೆಗೆ ರಾಜೀನಾಮೆ ಕೊಟ್ಟು ಕಳುಹಿಸಿದರು. ನಿನ್ನಿನ ದಿವಸ ಯೂನಿಯನ್ ಜ್ಯಾಕಿಗೆ ವಂದನಾ ಮಾಡಲಿಕ್ಕೆ ನಾಕರಿಸಿ ತಾವು ಇನ್ನುಮುಂದೆ "ದೇವರು ಅರಸನನ್ನು ರಕ್ಷಿಸಲಿ' ಎಂಬ ಪದವ ಹಾಡುವದಿಲ್ಲೆಂದು ಆ 'ಗರ್ಲ ಗಾಯಿಡ್ಸ' ಸಂಸ್ಥೆಯ ಮುಖ್ಯಸ್ಥಳಿಗೆ ತಿಳಿಸಿಬಿಟ್ಟರು.

### ಉಪ್ಪಿನ ಕಾಯಿದೆಯನ್ನು

### ಮುಂಬಯಿ ಸತ್ಯಾಗ್ರಹಿ ವೀರರು

# ಬ್ರಿಟಿಶ ಸೈನಿಕರ ಎದುರಿನಲ್ಲಿಯೇ

### ಮುರಿದರು.

ಸೋಮವಾರ ಮುಂಜಾನೆ ಸಮುದ್ರ ದಂಡೆಗೆ ಸಾವಿರಾರು ಜನರು ನೆರೆದಿದ್ದರು. ಪೋಲೀಸರು ನಿಂತುಕೊಂಡಿದ್ದರು. ಮಿಲಿಟರಿಯು ಅಲ್ಲಿಯೇ ಸನ್ನದ್ಧವಾಗಿತ್ತು. ಇಷ್ಟೆಲ್ಲ ಭಯಾನಕ ಪರಿಸ್ಥಿತಿಯುಂಟಾಗಿದ್ದರೂ ಸತ್ಯಾಗ್ರಹಿಗಳು ಹೆದರದೆ ಹಿಂಜರಿಯದೆ ತಮ್ಮ ನಿಶ್ಚಿತ ಕಾರ್ಯಕ್ರಮದಲ್ಲಿಯೇ ನಿರತರಾಗಿದ್ದರು. ಯಾರೂ ಅವರಿಗೆ ಆತಂಕವನ್ನುಂಟುಮಾಡಲಿಲ್ಲ. ಸಮುದ್ರ ನೀರು ತಂದು ಕುದಿಸಿ ಉಪ್ಪು ತಯಾರು ಮಾಡಿದರು. ಅದನ್ನು ಹಂಚಲಿಕ್ಕೆ ಮಾರಲಿಕ್ಕೆ ಕಾಂಗ್ರೆಸ ಮನೆಗೆ ತೆಗೆದುಕೊಂಡು ಹೋದರು. ಜುಹುದಲ್ಲಿ ಮಹಾರಾಷ್ಟ್ರ ಸ್ವಯಂಸೇವಕರು ಉಪ್ಪು ಸಮುದ್ರನೀರು ಕುದಿಸಿ ಸಿದ್ಧಮಾಡಿದರು. ದಾಸಗುಪ್ತರು ಬಂಗಾಲದಲ್ಲಿ ಇದೇ ಪ್ರಕಾರ ಮಾಡಿರುವರು. ಎಲ್ಲಿಯೂ ಪೋಲೀಸರು ಇವರಿಗೆ ಅಡ್ಡ ಬಂದಿಲ್ಲ. ದಾಸಗುಪ್ತರು ಇದೇ ಪ್ರಕಾರ ಮುಂಜಾನೆ ೩ ತಾಸು ಸಾಯಂಕಾಲಕ್ಕೆ ೩ ಘಂಟೆಯವರೆಗೆ ಮಾಡಬೇಕೆಂದು ಗೊತ್ತು ಮಾಡಿದ್ದಾರೆ. ಹೀಗೆ ತಯಾರಿಸಿದ ಉಪ್ಪನ್ನು ಲಿಲಾವಿಗೆ ಪೊಟ್ಟಣ ಕಳಿಸಿಕೊಡಹತ್ತಿರುವರು. ಅಲ್ಲಿ ಸಾರ್ವಜನಿಕ ಸಭೆಯಲ್ಲಿ ಈ ಉಪ್ಪಿಗೆ ಹೆಚ್ಚಿನ ಬೆಲೆಯನ್ನು ಕೊಟ್ಟು ಜನರು ಕೊಳ್ಳಹತ್ತಿರುವರು. ಇನ್ನು ಹಳ್ಳಿಯ ಜನರನ್ನು ಹೀಗೆ ಉಪ್ಪು ಮಾಡಲಿಕ್ಕೆ ಕರೆತರಬೇಕೆಂದು ದಾಸಗುಪ್ತರು ಯೋಚಿಸಿದ್ದಾರೆ.

---

### ಲಂಡನ್ನದಲ್ಲಿ ಕೂಡಿದ ಹಡಗು ಪಡೆ ಸಭೆ.

ಎಲ್ಲ ರಾಷ್ಟ್ರಗಳು ತಮ್ಮ ತಮ್ಮ ಯುದ್ಧದ ಹಡಗುಪಡೆಯನ್ನು ಕಡಿಮೆ ಮಾಡಬೇಕೆಂದು ಒಪ್ಪಿ, ಯಾವ ಎಷ್ಟರ ಮಟ್ಟಿಗೆ ಕಡಿಮೆ ಮಾಡತಕ್ಕದ್ದು ಎಂಬ ವಿಚಾರ ಮಾಡುವ ಕಾರ್ಯ ಲಂಡನ್ನದಲ್ಲಿ [illegible]! ಮೂರು ತಿಂಗಳುಗಳವರೆಗೆ [illegible] ಯಾವ ನಿರ್ಣಯವನ್ನೂ ಹೊರಡಿಸದೆ, ಆಯಾದೇಶ ಪ್ರತಿನಿಧಿಗಳು ತಮ್ಮ ತಮ್ಮ ದೇಶಕ್ಕೆ ಹೊರಟು ಹೋದರು. ಎಲ್ಲರೂ ಒಬ್ಬರನ್ನು ಒಬ್ಬರು ಹೊಡೆಯಬೇಕೆಂದು ಕೂಡಿದವರು!

### ಮಹಾತ್ಮಾಜಿಯ ಶಾಂತಿಸೈನ್ಯಕ್ಕೆ ಮತ್ತೀರ್ವರ ಜೋಡಣೆ.

ಮಹಾತ್ಮಾಗಾಂಧಿಯವರೊಡನೆ ಹೊರಟ ೭೯ ಸ್ವಯಂಸೇವಕರ ಪ್ರಥಮ ತಂಡದಲ್ಲಿಯೇ ಸೇರಿಕೊಳ್ಳುವ ಭಾಗ್ಯವು ಮತ್ತೀರ್ವರಿಗೆ ಲಭಿಸಿದೆ. ಸೇಟ ಜಮನಾಲಾಲ ಬಜಾಜ ಇವರ ಚಿರಂಜೀವ ಕಮಲನಯನ ಬಜಾಜ ಮತ್ತು ರಾಮಚಂದ್ರ ಶಿವಾಲಾಲ (ಮೊದಲು ಆಶ್ರಮದಲ್ಲಿದ್ದ ಹುಡುಗ) ಈ ಈರ್ವರನ್ನು ಮಹಾತ್ಮರು ಪ್ರತ್ಯಕ್ಷ ಯುದ್ಧದಲ್ಲಿ ತೊಡಗುವ ತಮ್ಮ ಸೈನ್ಯಕ್ಕೆ ಸೇರಿಸಿಕೊಂಡಿದ್ದಾರೆ. ಆಸ್ವಸ್ಥತೆಯ ಮೂಲಕ ಹಿಂದುಳಿದ ಸ್ವಯಂಸೇವಕರೂ ಈಗ ಬಂದು ಕೂಡಿಕೊಂಡಿರುವರು. ಅಂತು ದಂಡಿ ರಣಕ್ಷೇತ್ರದ ಮೇಲೆ ಈಗ್ಗೆ ಮಹಾತ್ಮರನ್ನೊಳಗೊಂಡು ಒಟ್ಟು ೮೪ ಸತ್ಯಾಗ್ರಹಿಗಳಾದಂತಾದರು.

---

### ಅಸ್ಪೃಶ್ಯರ ಮುಖಂಡರು ಮಹಾತ್ಮರನ್ನು ಬಿನ್ನಹಿಸಿ ಕೊಳ್ಳಲು ದಂಡಿಗೆ ಹೋಗಿದ್ದಾರೆ

ಪುಣೆಯಲ್ಲಿ ಮೊನ್ನೆ ಸ್ಥಾಪಿತವಾದ "ಕ್ರಾಂತಿಕಾರರನ್ನು ಮುರಿಬಡಿಯುವ ಸಂಘದ ಅಧ್ಯಕ್ಷರೂ ಕಾರ್ಯದರ್ಶಿಗಳೂ ಆದ ಸಂದಾಂ ಘಾಟಗೆ ಮತ್ತು ಪಾಪಡೆ ಎಂಬವರು "ಹೊಲೆಯರಿಗೆ ಹಿಂದೂದೇವಾಲಯಗಳಲ್ಲಿ ಪ್ರವೇಶ ಸಿಕ್ಕುವವರೆಗೆ ನೀವು ಈ ನಿಮ್ಮ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದೂ ಮತ್ತು ತಮ್ಮ ಆ ಪ್ರಯತ್ನಕ್ಕೆ ನೆರವಾಗಬೇಕೆಂದೂ" ಮಹಾತ್ಮರಿಗೆ ಬೇಡಿಕೊಳ್ಳುವದಕ್ಕಾಗಿ ದಂಡಿಗ್ರಾಮಕ್ಕೆ ಹೋಗಿದ್ದಾರೆ.

### ಗಲ್ಲಿಗೇರಿಸುವ ಶಿಕ್ಷೆಯು ಇರಬೇಕೇ?

ಮಾನವ ಪ್ರಾಣಿಯ ಕೊಲೆಮಾಡಿದ ಮನುಷ್ಯನಿಗೆ ದೇಹಾಂತ ಶಿಕ್ಷೆಯಂಥ ಅಮಾನುಷ ಶಿಕ್ಷೆಯನ್ನು ಕೊಡುವದರಿಂದೇನು ಪ್ರಯೋಜನ? ಅಂಥ ಅಪರಾಧಿಗಳಿಗೆ ಸಹ ದೇಹಾಂತ ಶಿಕ್ಷೆಯನ್ನು ಇನ್ನುಮೇಲೆ ಯಾವ ರಾಷ್ಟ್ರವಾದರೂ ವಿಧಿಸಬಾರದೆಂದು ಗೊತ್ತುಮಾಡಿಕೊಳ್ಳುವದರಿಂದ ಒಳಿತಾಗಲಿಕ್ಕಿಲ್ಲೇ? ಎಂಬಿವೆ ಪ್ರಶ್ನೆಗಳ ವಿಚಾರಣೆಗಾಗಿ ಬಂದು 'ದೇಹಾಂತಶಿಕ್ಷೆ ವಿವೇಚನ ಮಂಡಲ' ಎಂಬ ಒಂದು ಮಂಡಲವು ನಿರ್ಮಾಣವಾಗಿದ್ದು, ಅದು ಮುಖ್ಯ ಮುಖ್ಯ ಜನರ ಅಭಿಪ್ರಾಯಗಳನ್ನು ಕಲೆಹಾಕಹತ್ತಿದ್ದಾರೆ. ಈ ಮಂಡಲದ ಮುಂದೆ ನಿನ್ನೆ ದಿವಸ ಲಾರ್ಡ ಡಾರ್ಲಿಂಗ ಎಂಬ ಪ್ರಖ್ಯಾತರಾದ ಜಡ್ಜಿಯು, ದೇಹಾಂತಶಿಕ್ಷೆ ಇರತಕ್ಕದ್ದು ಎಂದು ಸಾಕ್ಷಿ ನುಡಿದನು. ಅನ್ಯಾಯದಿಂದ ಒಬ್ಬನ ಪ್ರಾಣವನ್ನು ಅಪಹರಿಸಿದವನ ಪ್ರಾಣವನ್ನು ತೆಗೆದುಕೊಳ್ಳುವದೇ ಉಚಿತವು. ಕಾಯಿದೆ ಪ್ರಕಾರ ಅಪರಾಧವೆಂದು ಈಗ ಗೊತ್ತುಮಾಡಿದ ಎಲ್ಲ ಅಪರಾಧಗಳಿಗೆ ಯೋಗ್ಯವಾದ ಮನ್ನಣೆಯನ್ನಿತ್ತು ಅಪರಾಧದ ವಿಚಾರಣೆ ನಡಿಸಿದರೆ ನಿರಪರಾಧಿಯನ್ನು ಗಲ್ಲಿಗೇರಿಸುವ ಪ್ರಸಂಗವು ಎಂದೂ ಬರುವದಿಲ್ಲ. ಜೀವವನ್ನು ಕೊಡದ ಮನುಷ್ಯನನ್ನು ಕೊಲ್ಲಬೇಕೆಂದೇ ಮಾನವನ ಮನಸ್ಸು ಹಾತೊರೆಯುತ್ತಿರುವದರಿಂದ ಅಂಥವನಿಗೆ ದೇಹಾಂತ ಶಿಕ್ಷೆ ವಿಧಿಸುವದೆ ನ್ಯಾಯವಾದದ್ದು. ಇವೇ ಮೊದಲಾದ ಕಾರಣಗಳನ್ನು ತೋರಿಸುವನು

ಈ ಪತ್ರಿಕೆಯು ಮಂಗಳವೇಢ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ 'ವಿದ್ಯಾರಣ್ಯ' ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ, ಅವರಿಂದ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

# ಕನ್ನಡಿಗ

ಜಯಕರ್ನಾಟಕ

ನಿತ್ಯಸಂಚಿಕೆಯು.

यद्यत परवशं दु:खं । यद्यदात्मवशं सुखम ॥ — मनु

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ಬುಧವಾರ ಮಿತಿ ಚೈತ್ರ ಶುದ್ಧ ೧೧ ಶಕ ೧೮೫೨ ತಾ ೯—೪—೩೦ ಸಂಚಿಕೆ ೧೭

## ಸಂಪಾದಕರ ಭೂಮಿ.

### ನಾವು ಬಯಸಿದ
### ದಬ್ಬಾಳಿಕೆಯೇ ಬರಹತ್ತಿದೆ.

ಕಾಯಿದೆ ಭಂಗದ ಚಳವಳಿಯು ಪ್ರಾರಂಭವಾದಂದಿನಿಂದಲೂ ನಾವು ದಾರೀ ನೋಡುತ್ತಿರುವ ದಬ್ಬಾಳಿಕೆಯೇ ಮೊನ್ನೆ ಗುಜರಾಥದಲ್ಲಿ ನಿನ್ನೆ ಮುಂಬಯಿಯಲ್ಲಿ ಇಂದು ಕರ್ನಾಟಕದಲ್ಲಿ ಈ ಪ್ರಕಾರ ಪ್ರಾಂತದಿಂದ ಪ್ರಾಂತಕ್ಕೆ ತನ್ನ ರಾಕ್ಷಸಿ ಹೆಜ್ಜೆಯನ್ನಿಕ್ಕುತ್ತ ಭಾರತೀಯ ತರುಣರ ಮುಂದೆ ಈಗ್ಗೆ ಕಾಣಿಸಹತ್ತಿರುವದನ್ನು ಕಂಡು ಸ್ವಾತಂತ್ರ್ಯ ಪ್ರಿಯರು ಆನಂದಭರಿತರಾಗಿದ್ದಾರೆ ನಾವು ಬೇಡಬಯಸುತ್ತಿರುವದೇ ಸಾಧಿಸಿದಮೇಲೆ ಯಾರಿಗೆ ಆನಂದವಾಗಲಿಕ್ಕಿಲ್ಲ. ಸರಕಾರದವರು ನಮ್ಮನ್ನು ಹಿಂಸಿಸಬೇಕು, ಪೀಡಿಸಬೇಕು, ನಾನಾಯಾತನೆಗಳಿಗೀಡುಮಾಡಬೇಕು. ಆದರೇನೇ ಪ್ರಜಾಜನರಲ್ಲಿ ಆ ಸರಕಾರದಬಗ್ಗೆ ದ್ವೇಷವು ಹುಟ್ಟಿ ಇನ್ನು ಸರಕಾರವನ್ನು ವಿರೋಧಿಸಬೇಕೆಂಬ ಬುದ್ಧಿಯು ಜನಸಾಮಾನ್ಯರಲ್ಲಿಯೂ ಉದಯವಾಗಹತ್ತುವದು. ಮನುಷ್ಯನ ಸಹನಶೀಲತೆಗೂ ಎಲ್ಲೆಯಿದೆ, ಮಿತಿ ಇದೆ. ಕಷ್ಟಯಾತನಗಳು ಆ ಮಿತಿಯನ್ನು ಮೀರಿದಮೇಲೆ ಮನುಷ್ಯನು ಸ್ವಾಭಾವಿಕವಾಗಿ ತಿರುಗಿನಿಲ್ಲುವನು. ಹಿಂದುಸ್ಥಾನದ ಪ್ರಜಾಜನರಲ್ಲಿ ಈ ಹೊತ್ತು ಈ ವಿರೋಧ ಬುದ್ಧಿಯು ಬೆಳೆಯಬೇಕಾಗಿದೆ. ಸರಕಾರದ ಅನ್ಯಾಯಗಳಿಂದ ಜನರ ತಲೆತಿರುಗಿ ಜನರು ಕೆರಳಿ ನಿಲ್ಲಬೇಕಾಗಿದೆ. ಅನ್ಯಾಯವನ್ನು ಸಹಿಸಲಾರದೆ ಗುರ್ರೆಂದು ತಿರುಗಿ ನಿಲ್ಲುವ ವೃತ್ತಿಯು ಕೇವಲ ಉದಯೋನ್ಮುಖ ರಾಷ್ಟ್ರದಲ್ಲಿ ದಬ್ಬಾಳಿಕೆಯಿಂದ ಬಲು ಬೇಗ ಚಿಗಿಯಹತ್ತುತ್ತದೆ. ಅಂತೆಯೇ ನಾವು ದಬ್ಬಾಳಿಕೆಯನ್ನು ಬಯಸಿದ್ದು. ದಬ್ಬಾಳಿಕೆಯ ಅಕಾಂಡತಾಂಡವವು ಪ್ರಾರಂಭವಾಗಿ ಅಳ್ಳೆದೆಯವರ ಹೃದಯಗಳನ್ನು ನಡುಗಿಸುತ್ತಲೂ ಸ್ವಾತಂತ್ರ್ಯ ಪ್ರೇಮಿಗಳಾದ ಗಂಭೀರರ ಹೃದಯದಲ್ಲಿ ವಿಪ್ರತಾಪಾದಿಗಳ ಸ್ಫೂರ್ತಿಯನ್ನು ದಯಿಸುತ್ತಲೂ ಪ್ರಾಂತದಿಂದ ಪ್ರಾಂತಕ್ಕೆ, ಜಿಲ್ಹೆಯಿಂದ ಜಿಲ್ಹೆಗೆ ಹಬ್ಬತೊಡಗಿದೆ. ಈ ದಬ್ಬಾಳಿಕೆಯಿಂದ ತರುಣರು ಸ್ಫುರಣಗೊಂಡು ಕಾಯಿದೆಭಂಗ ಚಳವಳಿಯಲ್ಲಿ ಹೆಚ್ಚುಹೆಚ್ಚು ನಿಶ್ಚಯದಿಂದ ಮಗ್ನರಾಗತೊಡಗಿರುವದನ್ನು ನೋಡಿದರೆ ದೇಶದಲ್ಲಿ ಅಳ್ಳೆದೆಯವರ ಸಂಖ್ಯೆಯು ಅಳಿದುಹೋಗಿ ಎಲ್ಲರೂ ಧೀರಹೃದಯಿಗಳಾಗಿ ಮುಂದಾಳುಗಳು ಹೂಡಿದ ಕದನವನ್ನು ಕೊನೆಯವರೆಗೆ ಒಯ್ದೇ ತೀರುವೆವೆಂಬ ಪಣತೊಟ್ಟವರೇ ಕಣ್ಣಿಗೆ ಬೀಳಹತ್ತಿದ್ದಾರೆ ಇಂಥ ವೀರಾವೇಶದ ವೇಳೆಯಲ್ಲಿ ದಬ್ಬಾಳಿಕೆಯು ರಾಷ್ಟ್ರಕ್ಕೆ ಬಲು ಹಿತವು. ದಬ್ಬಾಳಿಕೆಯ ತುಳಿತಕ್ಕೆ ಹಿಂಜರಿಗುವ ಅಥವಾ ಹತವೀರ್ಯರಾಗುವವರು ನಾವಲ್ಲ ಎಂಬುದನ್ನು ಸಿದ್ಧಮಾಡಿ ತೋರಿಸಿಬಿಡುವಾ.

### ಇವಕ್ಕೆ ತರುಣ ಜನರ ಉತ್ತರವೇನಿದೆ?

ಪ್ರಿಯ ಮಿತ್ರರೆ—

ನನ್ನ ಕೆಲವು ಪ್ರಶ್ನೆಗಳಿಗೆ ನಿಮ್ಮಿಂದ ಸ್ಪಷ್ಟ ಉತ್ತರಗಳು ನನಗೆ ಬೇಕಾಗಿರುತ್ತವೆ

ಈ ಬಗ್ಗೆ ನೀವೇನಾದರೂ ಆಲೋಚಿಸಿರುವಿರೋ? ಈ ಭಾರತ ವರ್ಷವು ನಮ್ಮದಾಗಬೇಕೊ ಅಥವಾ ಎಂದೆಂದಿಗೂ ಹೀಗೇ ಅನ್ಯರದಾಗಿಯೇ ಉಳಿಯತಕ್ಕದ್ದೋ?

ಅತ್ಯಂತ ಕಳಕಳಿಯ ಪ್ರಯತ್ನಗಳಿಲ್ಲದೆ ನಾವು ನಮ್ಮ ದೇಶದ ಸ್ವಾತಂತ್ರ್ಯವನ್ನು ದೊರಕಿಸಬಲ್ಲೆವೆಂದು ನೀವು ನಂಬುತ್ತೀರೋ? ಹಾಗೆ ನಿಮ್ಮ ತಿಳವಳಿಕೆ ಇಲ್ಲದಿದ್ದರೆ ದೇಶದ ಸಲುವಾಗಿ ಸ್ವಾರ್ಥತ್ಯಾಗವನ್ನು ಯಾರು ಕೈಕೊಳ್ಳತಕ್ಕದ್ದು?

ದೇಶದ ಗೋಜು ನಮಗೇಕೆಂದು ದೇಶೋನ್ನತಿಯ ಕಾರ್ಯದಲ್ಲಿ ಕೈಹಾಕದೆ ದೂರನಿಲ್ಲಬೇಕೆನ್ನುವಿರೊ ಅದು ನಿಮ್ಮ ಸ್ವಾಭಿಮಾನಕ್ಕೆ ಒಪ್ಪುವದೇ?

ಒಂದು ಪೀಳಿಗೆಯ ತರುಣರಾದರೂ ತಮ್ಮ ಸರ್ವಸ್ವವನ್ನೆಲ್ಲ ಈಡ್ಯಾಡಿ ಈ ಕಲಹದಲ್ಲಿ ಧುಮುಕದವಿನಾ ನಮ್ಮ ಉದಾಸೀನ ವೃತ್ತಿಯ ಪರಂಪರೆಯನ್ನು ನಾವು ಎಂದಿಗೆ ನೀಗಬೇಕು?

ಸಾಹಸ ಪರಾಕ್ರಮಗಳು ತರುಣರ ವಿಶಿಷ್ಟವಾದ ಸೊತ್ತುಗಳಲ್ಲವೇ ಮತ್ತು ಅವುಗಳನ್ನು ದೇಶಕ್ಕಾಗಿ ಸೂರೆಮಾಡುವದು ತರುಣರ ಕರ್ತವ್ಯವಲ್ಲವೆ?

ಯಾವ ಶಿಕ್ಷಣವು ಕೇವಲ ನಮ್ಮದಿಷ್ಟು ಹೊಟ್ಟೆ ಹೊರೆಕೊಂಡು ಬಾಳುವ ಸ್ವಾರ್ಥವನ್ನು ಮಾತ್ರ ಕಲಿಸುವದೊ, ಮತ್ತು ಯಾವದು ನಮ್ಮ ಸ್ವಾತಂತ್ರ್ಯದ ಆಕಾಂಕ್ಷೆಯನ್ನು ನಾಶಗೊಳಿಸುವದೋ ಅಂಥ ಶಿಕ್ಷಣವನ್ನು ಕಟ್ಟಿಕೊಂಡು ಏನು ಪ್ರಯೋಜನ? ಆದುದರಿಂದ ನಿಮ್ಮಲ್ಲಿ ನೀವು ಸಮಾಲೋಚಿಸಿ ಈ ದುಗುಡದೊಳಗಿಂದ ಪಾರಾಗಿರಿ.

ಸಿ. ರಾಜಗೋಪಾಲಾಚಾರಿ.

(ತಂತಿಯಿಂದ ಬಂದವಾರ್ತೆ)

## ಬೆಳಗಾವಿಯಲ್ಲಿ ಭೀಕರವಾದ ದಬ್ಬಾಳಿಕೆ!!

### ಕರ್ನಾಟಕ ಸತ್ಯಾಗ್ರಹದ ಸೇನಾಧಿಪತಿಗಳಾದ

# ಗಂಗಾಧರರಾಯರನ್ನು ಸೆರೆಹಿಡಿದರು

ಮೊನ್ನೆ ೭ ನೇ ತಾರೀಖಿನ ಮಧ್ಯರಾತ್ರಿಯ ಸುಮಾರಕ್ಕೆ ಬೆಳಗಾವಿಯಲ್ಲಿ ದೇಶಭಕ್ತ ಗಂಗಾಧರರಾಯರನ್ನು ಸೆರೆಹಿಡಿದರು. ಇವರೊಡನೆ ಬೆಳಗಾವಿಯ ಪ್ರಸಿದ್ಧ ವಕೀಲರಾದ ಶ್ರೀ. ಜೋಶಿ ನಾರಾಯಣರಾಯರನ್ನು, ಅಲ್ಲಿಯ ಪ್ರಸಿದ್ಧ ವರ್ತಕರಾದ ಜೀವಣರಾವ ಯಾಳಗಿಯವರನ್ನೂ ಮತ್ತು ದಾಬಡೆ ಅನಂತರಾಯರನ್ನು ಅದೇ ಅಪರಾಧಕ್ಕಾಗಿ ಹಿಡಿದೊಯ್ದಿರುವರು. ದೇ. ಭ. ಗಂಗಾಧರರಾಯರು ಉಪ್ಪಿನ ಕಾಯದೆಯ ೪೭ (ಕ) ಕಲಮನ್ನು ಧಿಕ್ಕರಿಸಿ ಉಪ್ಪು ಮಾರಿದ ಅಪರಾಧವನ್ನು ಮಾಡಿರುವರೆಂದು ಅವರನ್ನು ಹಿಡಿದಿರುವರು. ಗಂಗಾಧರರಾಯರು ೭ ನೇ ತಾ|| ನ ಸಾರ್ವಜನಿಕ ಸಭೆಯಲ್ಲಿ ಮಾರಿದ ಉಪ್ಪನ್ನು ೪೦ ಜನರು ಕೊಂಡುಕೊಂಡಿದ್ದರೂ ಇದೇ ನಾಲ್ಕು ಜನರ ಮೇಲೆ ಆರೋಪಹೊರಿಸಲ್ಪಟ್ಟಿದೆ. ದೇಶಭಕ್ತ ಗಂಗಾಧರರಾಯರೇ ನಮ್ಮ ಸತ್ಯಾಗ್ರಹ ಸಮರದ ಸೇನಾಧಿಪತಿಗಳಾಗಿದ್ದರು. ಅವರು ಎತ್ತಿಹಿಡಿದು ಸಂರಕ್ಷಿಸುತ್ತಿದ್ದ ಕರ್ನಾಟಕದ ರಣಪತಾಕೆಯನ್ನು ಬೀಳಗೊಡದೆ ಸಮರವನ್ನು ಸಾಗಿಸುವ ಭಾರವು ಕನ್ನಡ ತರುಣರ ತಲೆಯ ಮೇಲಿದೆ.

---

### ಬೆಳಗಾಂವಿಯ ಪತ್ರ

(ನಮ್ಮ ಸುದ್ದಿಗಾರನಿಂದ)

ಬೆಳಗಾವಿಯಲ್ಲಿ ತಾ|| ೬-೪-೩೦ ನೇ ದಿವಸ ಒಂದು ಜಾಹೀರ ಸಭೆಯು ಸೇರಿತ್ತು. ಸಭೆಗೆ ೫೦೦೦ ಕ್ಕಿಂತಲೂ ಹೆಚ್ಚು ಜನರು ಆಗಮಿಸಿದ್ದರು. ಆ ಸಭೆಯಲ್ಲಿ ದೇಶಭಕ್ತ ಗಂಗಾಧರರಾಯರು ಭಾಷಣಮಾಡಿದರು.— ನಾನು ಇದೇ ದಿನ ಕಾಯಿದೆಭಂಗವನ್ನು ಮಾಡುತ್ತೇನೆ ಎಂದು ಅನ್ನುತ್ತ ತಾವು ಕರಕೊಡದೆ ತಂದ ಉಪ್ಪಿನ ಪುಡಿಕೆಯನ್ನು ಜನರಿಗೆ ತೋರಿಸಿ ಮಾರಹತ್ತಿದರು. ಕೆಲವರು ೫ ರೂಪಾಯಿಗಳಿಗೆ ಕೆಲವರು ೧ ರೂ. ೧ ಆ. ೩ ಪೈಗಳಿಗೆ ಈ ಪ್ರಕಾರ ಕೊಂಡುಕೊಂಡರು. ಶ್ರೀ. ಜೋಶೀ ನಾರಾಯಣರಾಯರು ಉಪ್ಪಿನ ಪುಡಿಕೆಯನ್ನು ೫ ರೂಪಾಯಿಗಳಿಗೆ ಕೊಂಡುಕೊಂಡು ಅದನ್ನು ಅದನ್ನು ಪುನಃ ಲಿಲಾವಿನಿಂದ ಮಾರಲಿಕ್ಕೆ ಹಚ್ಚಿದರು. ಅದನ್ನೇ ಶ್ರೀ. ಜೀವಣರಾವ ಯಾಳಗಿ ಇವರು ೩೦ ರೂಪಾಯಿಗಳನ್ನು ಕೊಟ್ಟು ಕೊಂಡರು. ಅನಂತರ ಅಧ್ಯಕ್ಷರ ಮುಂದೆ ನಿಧಿಯುಗೋಸುಗ ರೂಪಾಯಿಗಳ ಸುರಿಮಳೆಯಾಗಹತ್ತಿತು. ಮತ್ತು ಹೀಗೆ ಸತ್ಯಾಗ್ರಹಕ್ಕೆ ಸಿದ್ಧರಿದ್ದ ಜನರು ಮುಂದೆ ಬಂದು ತಮ್ಮ ಹೆಸರುಗಳನ್ನು ಹಚ್ಚಿರೆಂದು ಕೇಳಹತ್ತಿದರು. ಅಂದಿನ ಸಭೆಯ ನೋಟವು ನಿಜವಾಗಿಯೂ ಅತ್ಯಂತ ಉತ್ಸಾಹಪ್ರದವಾಗಿದ್ದಿತು.

### ಜಮಖಂಡಿ

ತಾ|| ೩೧-೩-೩೦ ನೇ ಯುಗಾದಿಯ ಪ್ರತಿಪದೆಯ ದಿವಸ ಈಗ ಮಹಾತ್ಮಾಜಿಯವರು ಕೈಕೊಂಡ ಕೆಲಸಕ್ಕೆ ಜಯಪ್ರದವಾಗಬೇಕೆಂದು ಇಲ್ಲಿಯ ತರುಣ ಸಂಘದವರು ಮುಂಜಾನೆ ೭||ಗಂಟೆಗೆ ಧ್ವಜಾರೋಹಣವನ್ನು ಮಾಡಿದರು. ಆ ಕಾಲಕ್ಕೆ ದೇ. ಭ. ಅನಂತರಾವ ದಾಬಡೆ ವಕೀಲ (ಬಿ. ಎ. ಎಲ್. ಎಲ್. ಬಿ.) ದೇ|| ಬಿಂದೂರಾವ ನರಗುಂದಕರ ವಕೀಲ ಬಿ. ಎ. ಎಲ್ ಎಲ್ ಬಿ. ಮತ್ತು ಡಾ|| ದಾಮೂ ಅಣ್ಣಾ ಹಲ್ಯಾಳಕರ ಇವರು ಬಂದಿದ್ದರಿಂದ ಒಳ್ಳೇ ಕಳೆ ಬಂದಿತ್ತು.

### ಗುಳೇದಗುಡ್ಡ

ಇವತ್ತು ಇಲ್ಲಿಯ ಕಾರ್ಯಕ್ರಮವು ಮುಂಜಾನೆಯದು ನಿರ್ವಿಘ್ನದಿಂದ "ರಾಷ್ಟ್ರೀಯ ಧ್ವಜವಂದನೆ, ಮೆರವಣಿಗೆ" ಇಬ್ಬರು ಸತ್ಯಾಗ್ರಹಿ ಸ್ವಯಂಸೇವಕರೊಂದಿಗೆ ಮತ್ತು ನೂರಾರು ಜನರ ಸಮುದಾಯದಿಂದ ಹೊರಟು ಮುಂಜಾನೆಯ ಕಾರ್ಯವು ಪೂರ್ಣವಾಯಿತು.

---

### ನಮ್ಮ ಬಳ್ಳಾರಿಯ ಪತ್ರ

(ನಮ್ಮ ಸ್ವಂತ ಸುದ್ದಿಗಾರರಿಂದ)

ಧಾರವಾಡದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸ ಕಮಿಟಿ ಕೌನ್ಸಿಲ ಉತ್ತರದ ಪ್ರಕಾರ ಇಲ್ಲಿಯ ಜಿಲ್ಲಾ ಕಾಂಗ್ರೆಸ್ಸು ಕಮಿಟಿಯು ನಾಲ್ಕು ಮಂದಿ ಮ್ಯಾಟ್ರಿಕ್ ವಿದ್ಯಾರ್ಥಿಗಳನ್ನು ಸತ್ಯಾಗ್ರಹಿ ಸ್ವಯಂಸೇವಕರಾಗಿ ಕಳುಹಿಕೊಟ್ಟಿರುತ್ತದೆ

ಹಗಲೆಲ್ಲ ಸ್ವಯಂಸೇವಕರು ಮತ್ತು ಕೆಲವು ಮಂದಿ ವಕೀಲರು ಮನೆಮನೆಗೂ ತಿರುಗಿ ಖಾದಿ ಮಾರಾಟಮಾಡಿದರು.

ಸಾಯಂಕಾಲದಲ್ಲಿ ಒಂದು ಜಾಹೀರ ಸಭೆಯು ಜರುಗಿ ಅಬ್ದುಲ್ ರಹೀಮ ಸಾಹೇಬ, ದೀಕ್ಷಿತ, ಸುಬ್ರಹ್ಮಣ್ಯಂ ಮುಂತಾದವರ ಭಾಷಣಗಳಾದ ನಂತರ ಸಭೆಯು ಮುಗಿಯಿತು.

ಇಲ್ಲಿ ಈಗ ಖಾದಿಯ ಮಾರಾಟವು ಹೆಚ್ಚಾಗುತ್ತಿದ್ದರಿಂದ, ಇಲ್ಲಿಯೇ ಖಾದಿಯ ಕೈಗಾರಿಕೆಯನ್ನು ಅಭಿವೃದ್ಧಿಗೆ ತರಬೇಕೆಂಬುವ ಉದ್ದೇಶದಿಂದ ಇಷ್ಟರಲ್ಲಿಯೇ ಸಹಾಯ ಸಂಘಗಳ ಕ್ರಮದಲ್ಲಿ ಒಂದು ಕೋಆಪರೇಟಿವ್ಹ ಖಾದಿ ಸ್ಟೋರ್ಸ ಎಂಬುವದು ಪ್ರಾರಂಭಿಸಲ್ಪಡುವದು.

೧-೪-೩೦ ರಲ್ಲಿ ಇಲ್ಲಿಯ ಸನಾತನ ಧರ್ಮದವರ ಸಭೆಯೊಂದು ಜರುಗಿ ಶಾರದಾ ಕಾಯಿದೆಗೆ ಸತ್ಯಾಗ್ರಹ ಪ್ರಾರಂಭಿಸಬೇಕೆಂದು ತೀರ್ಮಾನಿಸಲ್ಪಟ್ಟಿರುತ್ತದೆ.

[ತಂತಿಯಿಂದ ಬಂದ ವಾರ್ತೆ]

### ಮುಂಬಯಿಯಲ್ಲಿಯೂ ದಬ್ಬಾಳಿಕೆಯು ತನ್ನ ಕರಾಳವಾದ ಆಳಿಕೆಯಿಂದ

## ಸತ್ಯಾಗ್ರಹಿಗಳನ್ನು ನುಂಗಹತ್ತಿದೆ!

# ನ್ಯಾರಿಮನ್ ಮತ್ತು ಬಜಾಜರು

## ಸೆರೆಯಾಳಾದರು!

ಮುಂಬಯಿ ಸರಕಾರವು ತಮ್ಮ ಸುತ್ತಲೂ ಹಬ್ಬುತ್ತಿರುವ ಕಾಯಿದೆಭಂಗ ಚಳವಳಿಯ ದಾವಾನಲವನ್ನು ಹೇಗೆ ನೊಂದಿಸಬೇಕೆಂಬ ಗಹನ ವಿಚಾರದಲ್ಲಿ ಬಿದ್ದಿದ್ದಿತಷ್ಟೆ; ಈಗ ಸರಕಾರವು ಆ ತಮ್ಮ ತಲೆಕೆಡಿಸುವದನ್ನು ಬಿಟ್ಟುಗೊಟ್ಟು ತಮಗೆ ಅತಿ ಸುಲಭವಾದ ದಬ್ಬಾಳಿಕೆಯ ಮಾರ್ಗವನ್ನೇ ಅವಲಂಬಿಸಬೇಕೆಂದು ನಿರ್ಧರಿಸಿಕೊಂಡಂತೆ ತೋರುತ್ತದೆ. ನಿನ್ನೆ ದಿವಸ ಮುಂಬಯಿಯಲ್ಲಿ ಶ್ರೀ. ನ್ಯಾರಿಮನ್, ಜಮನಾಲಾಲ ಬಜಾಜ ಮತ್ತು ಇನ್ನೀರ್ವರನ್ನು ಉಪ್ಪಿನ ಕಾಯಿದೆಭಂಗ ಮಾಡಿದ್ದಕ್ಕಾಗಿ ಮುಂಬಯಿ ಸರಕಾರವು ಸೆರೆಹಿಡಿದಿರುವದು. ಇನ್ನೂ ಅನೇಕರನ್ನು ಹಿಡಿಯುವ ಸಂಭವದಲ್ಲಿದೆ. ಇದೇ ಸರಕಾರವು ಗುಜರಾಥದ ಮುಂದಾಳುಗಳಿಗೆ ಘೋರತರವಾದ ಶಿಕ್ಷೆ ವಿಧಿಸಲುಪಕ್ರಮಿಸಿದೆ.

### ಮುಂಬಯಿ ಸತ್ಯಾಗ್ರಹಿಗಳ ಸಾಹಸಕ್ಕೇನು ಕುಂದಿರುವದಿಲ್ಲ.

ಗೊತ್ತುಪಡಿಸಿದ ಕಾರ್ಯಕ್ರಮದಂತೆ ಮತ್ತೆ ಈ ಹೊತ್ತು (ನ್ಯಾರಿಮನ್ನರನ್ನು ಹಿಡಿದೊಯ್ದಿದ್ದರೂ) ೫೦ ಜನ ಸ್ವಯಂಸೇವಕರ ಪದಾತಿಯು ಸಮುದ್ರದಂಡೆಗೆ ಸಾಗಿ ಉಪ್ಪಿನ ಕಟ್ಟಳೆಯನ್ನು ಯಥಾವತ್ತಾಗಿ 'ಮುರಿದು ಮುಕ್ಕಿ' ಮನೆಗೆ ಬಂದರು. ಜುಹುದಲ್ಲಿ ಮಹಾರಾಷ್ಟ್ರ ಸ್ವಯಂಸೇವಕರೂ ತಮ್ಮ ಕಾರ್ಯಕ್ರಮವನ್ನು ಅಂಜಿಲ್ಲದೆ ನಡಿಸೇ ಇರುವರು. ಸರಕಾರದ ದಬ್ಬಾಳಿಕೆಯಿಂದ ಸತ್ಯಾಗ್ರಹಿಗಳಲ್ಲಿ ಒಂದು ಮಾದರಿಯ ಅಪೂರ್ವವಾದ ಜಿಗಟುತನವೂ ಹಟವೂ ತಲೆದೋರಹತ್ತಿವೆ.

---

### ಯಾದವಾಡ (ಗೋಕಾಕ) ಖಾದಿ ಕೇಂದ್ರದವರಿಂದ

ತಾರೀಖು ೩ ನೇ ಎಪ್ರೀಲ ದಿವಸ ಶ್ರೀ. ಜೋಶಿ ಇವರು ಬಂದು ಹಿಂದುಸ್ತಾನೀ ಸೇವಾದಳದ ಸ್ವಯಂಸೇವಕರೊಂದಿಗೆ ನಗರಸಂಕೀರ್ತನೆಯನ್ನು ಮಾಡಿ, ಸಂಜೇ ೬ ಘಂಟೆಗೆ ಬಾಜಾರದಲ್ಲಿ ಜಾಹೀರ ಸಭೆಯು ಕೂಡಿಸಲ್ಪಟ್ಟಿತು. ಸಭೆಗೆ ಸುತ್ತಲಿನ ಹಳ್ಳಿಯ ಜನರು ಕೂಡಿದ್ದರು. ಸದ್ಯದ ಶಾಂತಿಮಯವಾದ ಯುದ್ಧದಲ್ಲಿ ಸಾಯಲು ಎಷ್ಟು ಜನ ತರುಣರು ಸಿದ್ಧರಿರುವಿರಿ? ಎಂದು ವ್ಯಾಖ್ಯಾತರು ಕೇಳಲು ಅದೇ ಕಾಲಕ್ಕೆ ಆರು ಜನ ತರುಣರು ತಮ್ಮ ಹೆಸರುಗಳನ್ನು ಕೊಟ್ಟರು. ಮರುದಿವಸ ಭಾರತ ಸ್ವಾತಂತ್ರ್ಯ ನಿಧಿಯ ಭಿಕ್ಷೆಗಾಗಿ ಊರಲ್ಲಿ ತಿರುಗಾಡಲು ೨೨ ರೂಪಾಯಿಗಳು ಕೂಡಿದವು.

ಕರ್ನಾಟಕಸ್ಥ ಮುಖಂಡರಿಗೆ ವಿನಯಪೂರ್ವಕವಾಗಿ ಬೇಡಿಕೊಳ್ಳುವದೇನಂದರೆ- ಮುಂದಾಳುಗಳು ಮೇಲೆ ಮೇಲೆ ಬಂದು ಜನರಲ್ಲಿ ಉತ್ಸಾಹವನ್ನು ಹುಟ್ಟಿಸಹತ್ತಿದರೆ ಸಂಪೂರ್ಣ ಸ್ವಾತಂತ್ರ್ಯವು ಮಹಾತ್ಮರ ಹೇಳಿಕೆಯಂತೆ ತೀವ್ರವೇ ಸಿಗುವದರಲ್ಲಿ ಸಂದೇಹವಿಲ್ಲ.

### ಪ್ರೊಫೆಸರ ಇಂದ್ರರಿಗೆ ಶಿಕ್ಷೆಯಾಯಿತು.

ಸ್ವಾಮಿ ಶ್ರದ್ಧಾನಂದರ ಮಕ್ಕಳಾದ ಪ್ರೊಫೆಸರ ಇಂದ್ರ ಇವರಿಗೆ ೯ ತಿಂಗಳ ಕಠಿಣ ಸಜೆ ವಿಧಿಸಲ್ಪಟ್ಟಿತು. ಇವರು ಮಾಡಿದ ಅಪರಾಧ ರಾಜದ್ರೋಹವಂತೆ ೧೨೪ ಅ. ಇವರು 'ಅರ್ಜುನ' ಎಂಬ ಹಿಂದೀ ಪತ್ರದ ಸಂಪಾದಕರಿದ್ದರಲ್ಲದೆ ದಿಲ್ಲಿಯ ಯುವಕಸಂಘದ ಅಧ್ಯಕ್ಷರೂ ಆಗಿದ್ದರು

### ಲಾಹೋರ ಬಾಂಬುದ್ರೋಹಿ ಶೋಧೆ.

ಲಾಹೋರದ ಹತ್ತರ ನವಕೋಟೆಯಂಬಲ್ಲಿ ೧೨ ಜನ ಮುಸಲ್ಮಾನರನ್ನು ೧೯೨೭-೧೯೩೦ ನೇ ಇಸ್ವಿಯಲ್ಲಿ ಇವರು ಬಾಂಬ ಒಗೆದರೆಂಬ ಆರೋಪದ ಸಲುವಾಗಿ ಹಿಡಿದಿದ್ದಾರೆ.

### ಸತ್ಯಾಗ್ರಹಿಗಳ ಮೇಲೆ ಜೀಕಳಿಯಿಂದ ನೀರು ಉಗ್ಗಹತ್ತಿದರೆ

"ಸತ್ಯಾಗ್ರಹಿಗಳು ಉಪ್ಪಿನ ಕಾಯಿದೆಯನ್ನು ಮುರಿಯುವದರಲ್ಲಿ ತೊಡಗಿದಾಗ ಅವರ ಮೇಲೆ ಜೀಕಳಿಕೊಳವೆಗಳ ಸಹಾಯದಿಂದ ಒಳ್ಳೇ ಜೋರಿನಿಂದ ನೀರಿನ ಪ್ರವಾಹವನ್ನು ಬಿಡಬೇಕೆಂದು ಸರಕಾರವು ವಿಚಾರಿಸಿದಂತೆ ತೋರುತ್ತದೆ. ಇದು ನಿಜವಿದ್ದರೆ ಪ್ರಸಂಗದಲ್ಲಿ ಸತ್ಯಾಗ್ರಹಿಯು ಪ್ರಾಣಹೋದರು ತನ್ನ ಸ್ಥಾನದಿಂದ ಕೂದಲೆಳೆಯಷ್ಟು ಸಹ ಕದಲತಕ್ಕದ್ದಲ್ಲ. ಶಾಂತತನದಿಂದ ತಮ್ಮ ಸ್ಥಳಗಳಿಗೆ ಗಟ್ಟಿಯಾಗಿ ಎರಕೊಂಡು ಕೂಡ್ರತಕ್ಕದ್ದು" ಎಂದು ಗಾಂಧಿಯವರು ವೃತ್ತಪತ್ರದ ಪ್ರತಿನಿಧಿಗೆ ತಿಳಿಸಿದ್ದಾರೆ.

### ಬೆಂಗಾಲದಲ್ಲಿ 'ಸ್ತ್ರೀ ಸತ್ಯಾಗ್ರಹ ಸಂಘ'ವು

ಕಲಕತ್ತೆಯಲ್ಲಿ ಕೆಲವು ಮುಖ್ಯ ಮಹಿಳೆಯರು ಕೂಡಿ ಈ ಸ್ತ್ರೀ ಸತ್ಯಾಗ್ರಹ ಸಂಘವನ್ನು ನಿರ್ಮಿಸಿದ್ದಾರೆ. ಇವರ ಉದ್ದೇಶವು ಬಂಗಾಲ ಪ್ರಾಂತದಲ್ಲಿಯ ಸ್ತ್ರೀಯರನ್ನು ಸತ್ಯಾಗ್ರಹಕ್ಕೆ ಸಜ್ಜುಗೊಳಿಸುವದು ಇದ್ದು, ಸ್ತ್ರೀ ಸ್ವಯಂಸೇವಕರ ಹೆಸರು ಹಚ್ಚಿಕೊಳ್ಳುವ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ.

## ಅಲಹಾಬಾದ ಮತ್ತು ದಿಲ್ಲಿಯ ಸರಕಾರಕ್ಕೆ ಈಗ ಬಿಸಿ ಹತ್ತಿದೆ.

ಅಲಹಾಬಾದ ಮತ್ತು ದಿಲ್ಲಿಯಲ್ಲಿ ಸರಕಾರದವರು ತಮ್ಮ ಕಚೇರಿಯ ಕಾರಕೂನರಿಗೆ ಸಹ ಈ ಉಪ್ಪಿನ ಅಪರಾಧಿಗಳನ್ನು ಹಿಡಿದು ಶಿಕ್ಷಿಸುವ ಅಧಿಕಾರವನ್ನು ಈಗ ದಯಪಾಲಿಸಿದ್ದಾರೆ. ಇದೇ ಮಾದರಿಯ ಅಧಿಕಾರವು ನಮ್ಮ ಮುಂಬಯಿ ಪ್ರಾಂತದ ಪೋಲೀಸ, ಅಡ್ಲಿ, ಮೊದಲಾದವರಿಗೆ ಸಿಕ್ಕು ಈಗ ತಿಂಗಳ ಮೇಲೆ ಆಗಿಹೋಯಿತು. ದಿಲ್ಲಿಯ ಸರಕಾರವು ಅದೇಕೊ ಕೊಂಚ ತಡಮಾಡಿ ಎಚ್ಚತ್ತಿದೆ

## ಕಲಕತ್ತೆಯಲ್ಲಿಯ ಕೋಣದ ಬಂಡಿಯವರ ಕಟ್ಟು

ಮಧ್ಯಾಹ್ನದಲ್ಲಿ ಬಂಡಿಗಳಿಗೆ ಕೋಣಗಳನ್ನು ಹೂಡಕೂಡದೆಂದು ಕಲಕತ್ತಾ ಮ್ಯುನಿಸಿಪ್ಯಾಲಿಟಿಯವರು ಮಾಡಿದ ಕಟ್ಟಳೆಯ ವಿರುದ್ಧ ಆ ಬಂಡಿಯವರಲ್ಲಿ ಸತ್ಯಾಗ್ರಹ ಹೂಡಿ ಬೀದಿಗಳಲ್ಲಿಯೇ ತಮ್ಮ ಚಕ್ಕಡಿಗಳನ್ನೂ ಕೋಣಗಳನ್ನೂ ತರುಬಿಕೊಂಡು ನಿಂತು ರಹದಾರಿಯನ್ನು ಬಂದು ಮಾಡಿಬಿಟ್ಟರು. ಮುಂದೆ ಎಂಡಾವರ್ತಿ "ಗೋಳಿಬಾರ" ಆದಮೇಲೆ ಬೀದಿಗಳು ತೆರವಾದವು. ಆ ಬಂಡಿಯವರ ಈ ಕಟ್ಟಿನ ಸಂದರ್ಭದಲ್ಲಿ ಈ ಕೊತ್ತು ಮುಂದಿನವರಾದ ಒವರ್ಸ್‌ನ್ ಮತ್ತು ಸ್ವಾಮಿ ವಿಶ್ವಾನಂದ ಈ ಈರ್ವ ಕೂಲಿಕಾರ ಸಂಘದ ಮುಂದಾಳುಗಳನ್ನು ಹಿಡಿದೊಯ್ದಿರುವರು. ಜಾಮೀನ ಮುಚ್ಚಳಿಕೆಯನ್ನು ಕೊಡಲು ಸಹ ಸರಕಾರವು ಒಪ್ಪಿಲ್ಲ.

## "ರೇಡಿಯೋ"ದಲ್ಲಿ ಮಾತಾಡುವವರ ಮೋರೆಯೂ ಮೂಡಹತ್ತಿರುವದು.

ಇತ್ತೀಚೆಗೆ ತಾರು ತಂತಿ ಕಂಬ ದಿಂಬ ಯಾವದೂ ಇಲ್ಲದೆ (ರೇಡಿಯೋ ಎಂಬ ಯಂತ್ರದ ಸಹಾಯದಿಂದ) ವಾರ್ತೆಗಳನ್ನು ತಿಳಿಸುವದು. ಅಲ್ಲಿಯ ವರ್ತಮಾನವನ್ನು ಕೇಳುವದು ರೂಢವಾಗ ಹತ್ತಿದಯಷ್ಟೆ. ಇಂದಿನ ವರೆಗೆ ಈ ಯಂತ್ರದಿಂದ ಮಾತು ಆಡುವವರ ಧ್ವನಿ ಮಾತ್ರ ದೇಶಾಂತರದಲ್ಲಿಯೂ ಕೇಳಬರುತ್ತಿತ್ತು. ಆದರೆ ಈ ರೇಡಿಯೋ ಯಂತ್ರಕ್ಕೆ ಟೆಲಿವ್ಹಿಜನ್ ಎಂಬ ಇನ್ನೊಂದು ಯಂತ್ರವನ್ನು ಜೋಡಿಸುವದರಿಂದ ಆ ಸುದ್ದಿ ತಿಳಿಸುವವನ ಛಾಯಾಚಿತ್ರವು ಕೂಡಾ ಅವನ ಧ್ವನಿಯೊಡನೆ ಕಾಣಹತ್ತುತ್ತಿದೆ. ಅವನು ಕೈ ಮಾಡುವದು ಅವನ ತುಟಿಗಳಲ್ಲಾಡುವದು ಇವೆಲ್ಲವೂ ಕಾಣಹತ್ತಿವೆ. ಅಂದರೆ ಆತನು ಸಾವಿರಾರು ಮೈಲುಗಳಾಚೆಗೆ ಎಲ್ಲಿಯೋ ಇದ್ದರೂ ಇವೆರಡು ಯಂತ್ರಗಳ ಸಹಾಯದಿಂದ ಪ್ರತ್ಯಕ್ಷ ಪರಸ್ಪರ ಭೆಟ್ಟಿಯಾಗಿ ಕ್ಷೇಮ ಸಮಾಚಾರವನ್ನು ಕೇಳಿ ತಿಳಕೊಳ್ಳಲು ಅನುಕೂಲವಾಗಿದೆ. ಇವೇ ಎರಡು ಯಂತ್ರಗಳ ಸಹಾಯದಿಂದ ಸಮಗ್ರ ವರ್ತಮಾನ ಪತ್ರಗಳ ನಕಲಿಗೆ ನಕಲನ್ನೇ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಕಳಿಸುವ ಯೋಜನೆಯನ್ನು ಮಾಡಹತ್ತಿದ್ದಾರೆ. ಇಂದರ ಪರಿಣಾಮಕ್ಕೆ ಜಗತ್ತಿನ ದೇಶಗಳಲ್ಲೆಲ್ಲ ಈ ವರ್ತಮಾನ ಪತ್ರಗಳ ಪ್ರತಿಗಳು ಜನರಿಗೆ ಓದಲಿಕ್ಕೆ ದೊರೆಯುವವು. ಇಂಥದೊಂದು ಪ್ರಯೋಗವನ್ನು ಮೊನ್ನೆ ಚಾರ್ಲ್ಸ ಯಂಗ ಎಂಬ ಶಾಸ್ತ್ರಜ್ಞನು ಅಮೇರಿಕೆಯಲ್ಲಿ ಮಾಡಿ ನೋಡಿ ಮನಗಂಡಿರುವನು. ಅವನೇ ಪ್ರಯೋಗದಲ್ಲಿ ನ್ಯೂಯಾರ್ಕದ ವರ್ತಮಾನಪತ್ರದ ಒಂದು ಪುಟದ ಫೋಟೋ ಅಮೇರಿಕಾಖಂಡವನ್ನು ದಾಟಿ ಸಮುದ್ರದಾಚೆಗಿರುವ ಪಟ್ಟಣದಲ್ಲಿ ಮಾಡಿಸಿರುವನು. ಇದಕ್ಕೆ ಮೂರು ತಾಸು ಅವಧಿ ಹತ್ತಿತಂತೆ.

## ಅಂಕೋಲಾ

ಅಂಕೋಲಾ ಮತ್ತು ಅವರ್ಸಾದ ಚಮಗಾರ ಜಾತಿಯ ತರುಣರು ತಮ್ಮಲ್ಲಿ "ಅಸ್ಪೃಶ್ಯರ ತರುಣ ಸಂಘ" ಎಂಬ ಹೆಸರಿನ ಸಂಘ ಒಂದನ್ನು ಸ್ಥಾಪಿಸಿಕೊಂಡು ಇನ್ನು ಮುಂದೆ ಸಂಘಕ್ಕೆ ಸೇರಿದ ತರುಣರಲ್ಲಿ ಯಾರೂ ಸರಾಯಿ ಶೇಂದಿಗಳನ್ನು ಕುಡಿಯಬಾರದೆಂದೂ, ತಮ್ಮ ಬಾಂಧವರಲ್ಲಿ ಯಾರಾದರೂ ಸೇವಿಸುತ್ತಿದ್ದರೆ ಅವರಿಗೆ ಅದರ ಸೇವನೆಯಿಂದ ಸಮಾಜಕ್ಕಾಗುವ ಹಾನಿಯನ್ನು ತಿಳಿಸಿಹೇಳಿ ಬಿಡುವ ಬಗ್ಗೆ ಪ್ರಯತ್ನಿಸಬೇಕೆಂದೂ ನಿಶ್ಚಯಿಸಿಕೊಂಡು ಅದರಂತೆ ಆಚರಿಸಹತ್ತಿರುವರು.

ಇದಲ್ಲದೆ ಈ ಸಂಘಕ್ಕೆ ಸೇರಿದ ತರುಣರು ಇನ್ನುಮುಂದೆ ಪ್ರತಿಯೊಬ್ಬನು ಸ್ವದೇಶಿ ವಸ್ತ್ರವನ್ನೇ ಉಪಯೋಗಿಸಬೇಕೆಂದೂ ಸದ್ಯಕ್ಕೆ ಎಲ್ಲರೂ ಖಾದಿಯ ಟೊಪ್ಪಿಗೆಗಳನ್ನೇ ಉಪಯೋಗಿಸಬೇಕೆಂದೂ ನಿರ್ಧರಿಸಿಕೊಂಡಿರುತ್ತಾರೆ.

## ಮುಂಬಯಿ ಪೇಟೆಯ ಧಾರಣೆ.

ಬಾಮ್ಸಲಾರೀ ಎತ್ತು ಕಂಪನಿ ಕಲಕತ್ತಾ ಇವರ ಮಾರ್ಕೆಟ ಹಾರ್ಕೆಟದ ೧ ವಾರದ ವರದಿಯು. —

ಹಗಡಗಳು:— ಇವುಗಳ ಬೇಡಿಕೆಯು ಈ ವಾರ ಸ್ವಲ್ಪ ಹೆಚ್ಚಿದೆ. ಬಾಜಾರವು ದರಗಳ ವಿಷಯದಲ್ಲಿ ಸ್ಥಿರ ಇದ್ದದರಿಂದ ದರಗಳು ಏರಲಿಲ್ಲ. ಇಂಗ್ಲಂಡದಿಂದ ತರಿಸುವ ಮಾಲೂ ಕ್ರಮೇಣ ಕಡಿಮೆಯಾಗುತ್ತಿರುವದ್ದರಿಂದ, ಇನ್ನು ಎರಡು ತಿಂಗಳನಂತರ ದರಗಳು ಏರುವ ಚಿನ್ಹವಿದೆ.

ಕೋನಾಕೃತಿಯ ಕಬ್ಬಿಣ ತುಂಡು ಮೊದಲಾದವುಗಳು:— ಇಂಗ್ಲಂಡದಲ್ಲಿ ಸ್ಪರ್ಧೆ ಸಾಧನಾ ಇದರ ಮಾರಾಟವು ಮಂದಗತಿಯಿಂದ ಸಾಗಿದೆ. ವಿಶೇಷ ಮಾಲೂ ಪರಸ್ಥಳಗಳಿಗೆ ಕಳುಹಲ್ಪಡದ್ದೂ ಧಾರಣೆಯು ಇದ್ದಂತೆಯೇ ಇದೆ.

ಸಿಮಿಂಟ:— ಇದರ ಮಾರಾಟವು ಈ ವಾರದಲ್ಲಿ ಬಹು ಜೋರಿನಿಂದ ಸಾಗಿದೆ.

ಅರಳೆ:—

ತಾ. ೭-೪-೩೦

| | | |
|---|---|---|
| ಹಿಂದಿನ ದಿನದ ದರ | | ೮-೪೧ |
| ಇಂದಿನ | ,, | ೮-೪೪ |
| ಅಂತರ | | + ೩ |

ಧಾರಣೆಯು ಹೆಚ್ಚಿಗೆ ಏರುವ ಸಂಭವವಿಲ್ಲ.

### ಭಂಗಾರ ಮತ್ತು ಬೆಳ್ಳಿ

| | |
|---|---|
| ನ್ಯಾಶನಲ್ ಬ್ಯಾಂಕ ಭಂಗಾರ | ೨೧॥।-॥ |
| ಪಾಟಲಾ | ೨೧॥-॥ |
| ೧೦ ನಂ | ೨೧॥। |
| ೯೭ ನಂ. | ೨೧೮ |
| ಖರೇ ಬೆಳ್ಳಿ | ೫೩॥= |

ಈ ಪತ್ರಿಕೆಯು ಮಂಗಳವೇಢ ರಾಜಾರಾಯರ ಮಾಲಕರಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦-೦-೩

ನಿತ್ಯಸಂಚಿಕೆಯು.

यद्यत परवशं दुःख । यद्यदात्मवशं सुखम ॥ — मनु

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ಗುರುವಾರ ಪ್ರ. ಚೈತ್ರ ಶುದ್ಧ ೧೨ ಶಕ ೧೮೫೨ ತಾ. ೧೦-೪-೩೦ ಸಂಚಿಕೆ ೧೮

## ಸಂಪಾದಕರ ಭಣಿತಿ

# ಮ. ಗಾಂಧಿಯವರ ಸಂದೇಶವು.

ಗುಜರಾಥದಲ್ಲಿ ಆರಂಭಿಸಲ್ಪಟ್ಟ ಸಾರ್ವತ್ರಿಕ ಸಾಮುದಾಯಿಕ ಕಾಯಿದೆ ಭಂಗದಿಂದ ಆಗಬೇಕಾದ ಪರಿಣಾಮವು ಸರಕಾರದ ಮೇಲೆ ಆಗಿದೆಂದು ಇಂದು ಸರಕಾರದಿಂದ ಹಿಡಿಯಲ್ಪಟ್ಟವರ ವರ್ತಮಾನದಿಂದ ಸಹಜವಾಗಿ ಗೊತ್ತಾಗುವಂತಿದೆ ಮತ್ತು ಇದೇ ಪ್ರಕಾರದ ದಬ್ಬಾಳಿಕೆಯು ಎಲ್ಲಾ ಪ್ರಾಂತಗಳಲ್ಲಿಯೂ ಸರಕಾರದಿಂದ ಪ್ರಾರಂಭಿಸಲ್ಪಟ್ಟಿರಬೇಕು. ಇದು ಅಭಿನಂದನೀಯವಾದ ಸಂಗತಿಯೇ. ಸರಿ ಕಾಯಿದೆಭಂಗ ಮಾಡುವ ಸತ್ಯಾಗ್ರಹಿಗಳನ್ನು ಸರಕಾರವು ಹಿಡಿಯದೆ ಹಾಗೇ ಬಿಟ್ಟಿದರೆ ಮಾತ್ರ ಆಶ್ಚರ್ಯಪಡಬಹುದಾಗಿತ್ತು. ಕಾಯಿದೆ ಕಾನೂನಗಳಿಗೆ ಅನ್ವಯಿಸಿ, ಅವುಗಳ ಪ್ರಕಾರ ಸರಿಯಾಗಿ ವಿಚಾರಣೆ ಮಾಡದೆ ಸತ್ಯಾಗ್ರಹಿಗಳ ವ್ಯಕ್ತಿಗಳಾಗಲಿ, ಅವರ ಆಸ್ತಿಪಾಸ್ತಿಗಳಾಗಲಿ ಸರಕಾರವು ಕೈಹಚ್ಚಿದ್ದರೆ ಅದು ಶೋಚನೀಯವಾಗುತ್ತಿತ್ತು. ಕಾಯಿದೆ ಕಾನೂನಗಳ ಪ್ರಕಾರ ವಿಚಾರಣೆ ನಡಿಸಿ ಸತ್ಯಾಗ್ರಹಿಗಳನ್ನು ದಂಡಿಸಿದರೆ ಬಂಧಿಸಿದರೆ, ಅವರು ಗುಣಗುಟ್ಟುವ ಕಾರಣವಿಲ್ಲ. ಅದು ಕಾಯಿದೆಭಂಗದ ಸ್ವಾಭಾವಿಕವಾದ ಪರಿಣಾಮವೇ ಇರುತ್ತದೆ. ಬಂಧಿವಾಸ, ಕಾರಾಗೃಹದ ಯಾತನೆ ಮೊದಲಾದವುಗಳಿಂದಲೇ ಸತ್ಯಾಗ್ರಹಿಯ ಸತ್ವಪರೀಕ್ಷೆಯಾಗುವದು. ಇವೆಲ್ಲವುಗಳಿಗೆ ಹಣಿಯದೆ ಸ್ಥಿರಧೀಯನಾಗಿ ಉಳಿಯುವವನೇ ನಿಜವಾದ ಸತ್ಯಾಗ್ರಹಿಯು. ಇವನಿಗೆ ಗೆಲವು ಬರಬೇಕಾದರೆ ಇವನ ಅನುಯಾಯಿಗಳೂ ಇವನನ್ನು ಹಿಡಿದೊಯ್ದಾಗ ಗಾಬರಿಗೊಳಗಾಗದವರಿರಬೇಕು. ಪ್ರತಿಯೊಬ್ಬನು ತನಪಕ್ಕೆ ಕಾಣುವ ಮುಖಂಡನೂ ಅನುಯಾಯಿಯೂ ಆಗಿ ವರ್ತಿಸುವಂಥ ಸಮಯವು ಈಗ ಬಂದಿದೆ. ಮುಂದಾಳುಗಳನ್ನು, ಮುಖಂಡರು, ಪುರಸ್ಕರ್ತರನ್ನು, ಮಾರ್ಗದರ್ಶಕರನ್ನು ಸರಕಾರವು ಹಿಡಿದಿಟ್ಟಿದ್ದು ಸೆರೆಮನೆಗೆ ಕಳಿಸಿದ ಮೇಲೆಯೂ ವಿದ್ಯಾರ್ಥಿಗಳು ಸರಕಾರಿ ಶಾಲೆಕಾಲೇಜುಗಳನ್ನು ಬಿಟ್ಟು ಬಂದು ಅವರ ಕಾರ್ಯಕ್ಕೆ ನೆರವಾಗದಿದ್ದರೆ ನನಗೆ ಮೀರಿದ ವ್ಯಸನವಾಗುತ್ತಿದೆ.

## ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಜವಾಹರ ಲಾಲ ನೆಹರೂ ಇವರು ಕೆಳಗಿನ ಈ ಪ್ರಕಟನಪತ್ರಿಕೆಯನ್ನು ಹೊರಡಿಸಿದ್ದಾರೆ:—

"ಅಖಿಲ ಭಾರತ ರಾಷ್ಟ್ರೀಯ ಸಭೆಯ ಮಂಡಳವು ಯಾವತ್ತೂ ದೇಶದಲ್ಲಿ ಸವಿನಯ ಕಾಯಿದೆಭಂಗವನ್ನು ಸುರುವು ಮಾಡುವ ಕಾಲವು ಸೂಚಿಸಲಿಕ್ಕೆ ಮಹಾತ್ಮಾ ಗಾಂಧಿಯವರಿಗೆ ಒಪ್ಪಿಸಿತ್ತು. ಮಹಾತ್ಮರು ಆ ಸೂಚನೆಯನ್ನು ಕೊಟ್ಟಿದ್ದಾರೆ. ಮತ್ತು ಎಪ್ರಿಲ ೬ ನೇ ತಾರೀಖಿನಿಂದ ಬೇರೆ ಬೇರೆ ಪ್ರಾಂತಗಳಲ್ಲಿ ಸವಿನಯ ಕಾಯಿದೆಭಂಗವನ್ನು ಸುರುವು ಮಾಡಬಹುದೆಂದ ಪ್ರಕಟಿಸಿದ್ದಾರೆ. ಆದುದರಿಂದ ಪ್ರಾಂತಿಕ ಮಂಡಳದವರು ೬ ನೇ ತಾರೀಖಿನ ನಂತರ ನಿರಾತಂಕವಾಗಿ ಮುಂದುವರಿಯಬಹುದಾದ ಪರಿಯ ಹಾಗೆ ಮಾಡಲಿಕ್ಕೆ ನಾನು ಅವರಿಗೆ ಒತ್ತಾಯಪಡಿಸುತ್ತೇನೆ. ಆಯಾ ಪ್ರಾಂತದವರು ತಾವು ಈಗಾಗಲೆ ಗೊತ್ತುಪಡಿಸಿದ ಸ್ಥಳದಲ್ಲಿ ೬ ನೇ ತಾರೀಖಿನ ದಿವಸವಾಗಲಿ ಅಥವಾ ರಾಷ್ಟ್ರೀಯ ವಾರದಲ್ಲಿ ಮತ್ತಾವದಿನವಾಗಲೀ ಸತ್ಯಾಗ್ರಹವನ್ನು ಪ್ರಾರಂಭಿಸತಕ್ಕದ್ದು. ನಮ್ಮ ಧ್ಯೇಯದಲ್ಲಿ ಪೂರ್ಣ ನಂಬಿಗೆಯನ್ನಿಟ್ಟು ೨೬ ನೇ ಜಾನೆವಾರಿಯ ದಿವಸ ಕೈಕೊಂಡ ಪ್ರತಿಜ್ಞೆಯನ್ನು ಪೂರ್ಣಗೊಳಿಸಲು ನಾವು ಪ್ರಾರಂಭಿಸುತ್ತೇವೆ ಮತ್ತು ಆ ಸ್ವಾತಂತ್ರ್ಯದ ಪ್ರತಿಜ್ಞೆಗನುಸರಿಸಿ ನಾವು ಎಂಥ ಗಂಡಾಂತರಗಳು ಬಂದರೂ ಅವಕ್ಕೆ ತಲೆಗೊಟ್ಟು ನಿಲ್ಲುವೆವು. ಕಾರಣ ಇನ್ನಾವತ್ತೂ ಆಬಾಲವೃದ್ಧರು ಪುರುಷರು ಸ್ತ್ರೀಯರು ಎಂಬ ಭೇದವೆಣಿಸದೆ ಯಾರಿಗೆ ರಾಷ್ಟ್ರಮಾತೆಯ ಸ್ವಾತಂತ್ರ್ಯದ ಬಗ್ಗೆ ಮತ್ತು ಹೀನಾವಸ್ಥೆಯಲ್ಲಿ ಬಳಲುತ್ತಿರುವ ಅವಳ ಪ್ರಜರ ಬಗ್ಗೆ ಕಳವಳವೆನಿಸುವದೋ ಅಂಥ ಪ್ರತಿಯೊಬ್ಬನು ತನ್ನ ಶಕ್ತ್ಯನುಸಾರವಾಗಿ ಸ್ವಾತಂತ್ರ್ಯ ಸೈನಿಕರೊಡನೆ ಈ ಸಂಗ್ರಾಮದಲ್ಲಿ ಧುಮುಕಲಿ! ಮತ್ತು ನಮ್ಮ ಜನರ ವಿಶ್ವಾಸಘಾತುಕರುಗಳು ಅತ್ಯಂತ [illegible] ದವರಿಗೆಲ್ಲ ಗಳಿಗೆಗೂ ವಿರೋಧಿಸಲಿ! ಮತ್ತು ಅಂಥ ಉದಾರ ಸ್ವಾರ್ಥತ್ಯಾಗದಿಂದ ನಮ್ಮ ಮನೋರಾಜ್ಯದಲ್ಲಿರುವ ಸ್ವತಂತ್ರ ಹಿಂದುಸ್ಥಾನವು ಉದಯಹೊಂದಲಿ!

## ಉಪ್ಪಿನ ಕಾಯಿದೆಯನ್ನು

### ಈ ರಾಷ್ಟ್ರೀಯ ವಾರದಲ್ಲಿ ಯಾರು, ಎಲ್ಲಿ, ಹೇಗೆ ಧಿಕ್ಕರಿಸಹತ್ತಿರುವರು ?

ಗುಜರಾಥ— ದಂಡಿಯಲ್ಲಿ ಮಹಾತ್ಮಾಜಿಯವರೇ ೬ ನೇ ತಾರೀಖಿನ ಬೆಳಗಿನ ೬ ಘಂಟೆಗೆ ಸಮುದ್ರ ಸ್ನಾನಕ್ಕೆಂದು ಹೋಗಿ ಸ್ನಾನ ಮುಗಿಸಿಕೊಂಡು ತಿರುಗಿ ಬರುವಾಗ್ಯೆ ತಮ್ಮ ಸೈನ್ಯದೊಂದಿಗೆ ಸಮುದ್ರ ತೀರದ ಮೇಲೆ ಬಿದ್ದ ಉಪ್ಪಿನ ಕಣಗಳನ್ನು ಆರಿಸಿಕೊಂಡು ಬಂದರು. ಅವರ ಜೊತೆಯಲ್ಲಿಯೇ ಇದ್ದ ದೇವೀ ಸರೋಜಿನಿ ನಾಯಡು ಇವರು ಮಹಾತ್ಮರನ್ನು 'ಕಾಯಿದೆ ಭೇದಕ' ನೆಂದು ಸಂಬೋಧಿಸಿ ಅಭಿನಂದಿಸಿದರು. ಮರುದಿವಸ ೭ ನೇ ತಾರೀಖು, ಗಾಂಧಿಯವರ ಮೌನದಿವಸ ವಿದ್ದುದರಿಂದ ಅವರು ಸಮುದ್ರ ತೀರಕ್ಕೆ ಹೋಗಲಿಲ್ಲ. ಆದರೆ ಅವರ ಸೈನಿಕರು ಹೋಗಿ ಮತ್ತೆ ಉಪ್ಪಿನ ಕಣಗಳನ್ನು ಕೂಡಿಸಿಕೊಂಡು ಬಂದಿರುವರು. ಇಲ್ಲಿಯ ಬೇರೆ ಕೆಲವರು ಸಮುದ್ರ ನೀರು ತಕ್ಕೊಂಡು ಬಂದು ಕುದಿಸಿ ಉಪ್ಪು ಮಾಡುವದರಲ್ಲಿ ತೊಡಗಿದ್ದಾರೆ. ಸರಕಾರವು ಎರಡನೆ ಕಡೆಯ ಸ್ವಯಂಸೇವಕರ ಕೈಯೊಳಗಿಂದ ಉಪ್ಪನ್ನು ಜಪ್ತಮಾಡಿ ಕಸಿದುಕೊಂಡು ಹೋಗುತ್ತಿದ್ದರೂ ಮಹಾತ್ಮರ ಈ ಶಿಬಿರಕ್ಕೆ ಕೈಹಚ್ಚಿಲ್ಲ.

ಜಲಾಲಪೂರ ತಾಲೂಕ— ಈಗ್ಗೆ ಜಲಾಲಪೂರ ಸಮಗ್ರ ತಾಲೂಕಿನೊಳಗೆ ಪ್ರತಿಯೊಬ್ಬರ ಮನೆಯಲ್ಲಿಯೂ ಸೇರು ೨ ಸೇರು ಕರಕೊಡದೆ ತಂದ ಉಪ್ಪು ಸಿಕ್ಕೇ ಸಿಗುತ್ತದೆ. ಕೇವಲ ಸ್ವಯಂಸೇವಕರು ಸತ್ಯಾಗ್ರಹಿಗಳು ಮಾತ್ರ ಈ ಕಾಯಿದೆ ಭಂಗದ ಕೆಲಸವನ್ನು ಅಲ್ಲಿ ಮಾಡುತ್ತಿರುವರೆಂಬ ಭೇದ ಉಳಿದಿರುವದಿಲ್ಲ. ಹೆಂಗಸರು, ಗಂಡಸರು, ಹುಡುಗರು, ಹಿರಿಯರು ಎಲ್ಲರೂ ಸರಕಾರದ ಉಪ್ಪಿನ ಕಾಯಿದೆಯ ವಿರುದ್ಧ ಆಚರಿಸಹತ್ತಿರುವರು. ಜಲಾಲಪೂರ ತಾಲೂಕಿನ ಈಗಿನ ಪರಿಸ್ಥಿತಿಯು ನಿಜವಾಗಿಯೇ ಸರಕಾರಕ್ಕೂ ಪ್ರಜರಿಗೂ ಬಳ್ಳೇ ಸಂಕಟವಮಯವಾಗಿದೆ.

ಆಟ್ಟ— ಆದಿತ್ಯವಾರದಂತೆ ೭ ನೇ ತಾರೀಖಿನ ಬೆಳಗ್ಗೆ ೧೫೦ ಸ್ವಯಂಸೇವಕರು ಸಮುದ್ರ ತೀರಕ್ಕೆ ಹೋಗಿ ಉಪ್ಪನ್ನು ಆರಿಸಿಕೊಳ್ಳಹತ್ತಿದರು ಅಷ್ಟರಲ್ಲಿಯೇ ಅಲ್ಲಿಗೆ ಪೋಲೀಸರ ಒಂದು ತಂಡವು ಬಂದು ಈ ಸತ್ಯಾಗ್ರಹಿಗಳ ಕೈಯಲ್ಲಿಯ ಉಪ್ಪನ್ನು ಕಸಿದುಕೊಳ್ಳಹತ್ತಿದರು. ಸ್ವಯಂಸೇವಕರಾದರೂ ತಮ್ಮ ಕೈಯಲ್ಲಿಯ ಉಪ್ಪನ್ನು ಒಮ್ಮೆಲೇ ಕೊಡಲಿಲ್ಲ ಪೋಲಿಸರಿಗೂ ಸತ್ಯಾಗ್ರಹಿಗಳಿಗೂ ಜಗ್ಗಾಟ ನಡಿಯಿತು. ಆಮೇಲೆ ಸತ್ಯಾಗ್ರಹಿಗಳ ಮುಖಂಡರಾದ ಡಾ|| ನಾಯಿಕ ಮತ್ತು ದೇಸಾಯಿಯವರನ್ನು ಸೆರೆಹಿಡಿದರು. ಮತ್ತು ಜೋರಿನಿಂದ ಸತ್ಯಾಗ್ರಹಿಗಳ ಉಪ್ಪನ್ನೆಲ್ಲ ಕಸಿದುಕೊಂಡು ಒತ್ತಟ್ಟಿಗೆ ಸುರುವಿ ಅದರ ಸುತ್ತಲು ಪೋಲೀಸರ ಕಾವಲು ಇಟ್ಟಿರುವರು. ಈ ಸ್ವಯಂಸೇವಕರೊಡನೆ ಆಟ್ಟ ಪಟ್ಟಣದ ೫೪ ಹೆಂಗಸರೂ ಉಪ್ಪು ಆರಿಸುವದಕ್ಕೆ ಹೋಗಿದ್ದರು. ಅವರ ಕೈಯೊಳಗಿನ ಉಪ್ಪನ್ನು ಮಾತ್ರ ಕಸಿದುಕೊಂಡಿರುವದಿಲ್ಲ.

### ಮಹಾತ್ಮರು ವೈಸರಾಯರ ಕಾಲುಹಿಡಿದುಕೊಳ್ಳಲು ಸಿದ್ಧರಂತೆ!

೬ ನೇ ತಾರೀಖಿನ ದಿವಸ ಉಪ್ಪಿನ ಕಾಯಿದೆಯನ್ನು ಧಿಕ್ಕರಿಸಿ ಕರಕೊಡದೆ, ಸಮುದ್ರ ತೀರದಿಂದ ಉಪ್ಪನ್ನು ಆರಿಸಿಕೊಂಡು ಬಂದಮೇಲೆ ಮಹಾತ್ಮರು ಸಣ್ಣದೊಂದು ಭಾಷಣ ಮಾಡಿದರು. ಅದರಲ್ಲಿ ಅವರು, 'ಸರಕಾರವು ನನ್ನನ್ನು ಸೆರೆಹಿಡಿದು ಒಯ್ಯಲಿ, ಒಯ್ಯದಿರಲಿ, ನಾವಂತೂ ಈಗ ಕೈಕೊಂಡು ಆರಂಭಿಸಿದ ಕರ್ತವ್ಯವನ್ನು ತಪ್ಪದೇ ಮಾಡಿಯೇ ತೀರಬೇಕು. ನಾಳೆಯಿಂದ ಪ್ರತಿಯೊಬ್ಬನು ಸರಕಾರಕ್ಕೆ ಕರಕೊಡದೆ ಶಕ್ಯವಿದ್ದ ಸ್ಥಳಗಳಲ್ಲೆಲ್ಲ ಉಪ್ಪನ್ನು ತಯಾರಿಸಿಕೊಳ್ಳುವ ತಾನು ಸ್ವತಂತ್ರನಾಗಿರುವನೆಂಬ ಭಾವನೆಯಿಂದ ವರ್ತಿಸತಕ್ಕದ್ದು. ಆದರೆ ಅಹಿಂಸಾವ್ರತವನ್ನೂ ಶಾಂತವೃತ್ತಿಯನ್ನೂ ತಿಲಮಾತ್ರವೂ ಬಿಡಲಿಕ್ಕಾಗದು. ವೈಸರಾಯರಿಗೆ ಈ ಕಾಯಿದೆಯನ್ನು ತಿರುಗಿ ತಕ್ಕೊಳ್ಳುವ ಅಧಿಕಾರವಿದೆ. ಆ ಅಧಿಕಾರದ ಪ್ರಕಾರ ಅವರು ಅದನ್ನು ತಿರುಗಿ ತಕ್ಕೊಂಡರೆ ನಾನು ಅವರ ಪಾದಮೂಲದಲ್ಲಿ ಬಿದ್ದು ಹೊರಳಾಡಲು ಸಹ ಸಿದ್ಧನಿದ್ದೇನೆ. ಆದರೆ ಅವರು ಹಾಗೆ ತಿರುಗಿ ತಕ್ಕೊಳ್ಳುವದಿಲ್ಲ ಎಂದು ಹೇಳಿದರು. ಆಮೇಲೆ ಗಾಂಧಿಯವರು ಆರಿಸಿತಂದ ೨ ತೊಲಿ ಉಪ್ಪು ೫೨೫ ರೂಪಾಯಿಗಳಿಗೆ ಲಿಲಾವು ಆಯಿತು. ಅಹಮ್ಮದಾಬಾದದ ಓರ್ವ ಗಿರಣಿಯ ಒಡೆಯನು ಅದನ್ನು ಕೊಂಡುಕೊಂಡನು.

### ಕಲಕತ್ತೆಯಲ್ಲಿ ವಿಮಾನದ ಹಾರಾಟವು.

ಶ್ರೀ. ಸತೀಶದಾಸ ಗುಪ್ತರು ಮಹಿಷ ಮಥನದಲ್ಲಿ ಮಾಡಿದ ಉಪ್ಪು ಕಲಕತ್ತೆಯಲ್ಲಿ ಒಂದು ತೊಲಿಗೆ ೫ ರೂಪಾಯಿಗಳಿಂದ ೨೫ ರೂಪಾಯಿಗಳ ವರೆಗೆ ಮಾರಲ್ಪಟ್ಟಿತು. ಆದಿತ್ಯವಾರ ೮|| ಘಂಟೆಗೆ ಮಹಿಷ ಮಥನದಲ್ಲಿ (ಕಲಕತ್ತೆಯಿಂದ ೧೦ ಮೈಲಿನ ಅಂತರದ ಮೇಲಿದೆ) ಶ್ರೀ. ದಾಸಗುಪ್ತರು ತಮ್ಮ ೩೪ ಸತ್ಯಾಗ್ರಹಿಗಳೊಡನೆ ಸಮುದ್ರತೀರಕ್ಕೆ ಹೋಗಿ ಅಲ್ಲಿ ಇದಕ್ಕಾಗಿಯೇ ಹಾಕಿದ ಛಪ್ಪರದಲ್ಲಿ ನೀರು ಕುದಿಸಿ ಉಪ್ಪು ತಯಾರಿಸಿದರು. ಈ ಉಪ್ಪನ್ನೇ ಒಹಿರಂಗವಾಗಿ ಮಾರಹತ್ತಿರುವರು ಸೋದೇಪೂರದಿಂದ ಮತ್ತೊಂದು ಸತ್ಯಾಗ್ರಹಿಗಳ ತಂಡವು ಅಲ್ಲಿಗೆ ಬಂದು ತಲ್ಪಿದೆ ಇದರಂತೆ ೫ ಕಾಂಗ್ರೆಸ್ ಸ್ವಯಂಸೇವಕರು ಆಹೊತ್ತೇ ೧೦ ಘಂಟೆಗೆ ಅಲ್ಲಿಯೇ ಬಂದು ಸೇರಿರುವರು. ಈ ಎಲ್ಲ ಸ್ವಯಂಸೇವಕರು ಅತ್ಯಂತ ಶಿಸ್ತಿನಿಂದಲೂ ವಿನಯದಿಂದಲೂ ವರ್ತಿಸತ್ತಲಿರುವರು. ಈ ಸ್ಥಳದ ಮೇಲೆಯೇ ಅಂದು ಮುಂಜಾನೆ ಒಂದು ವಿಮಾನವು ಹಾರಾಡುತ್ತಿತು. ಈ ಹೊತ್ತಿನ ವರೆಗೆ ಸರಕಾರವು ದಬ್ಬಾಳಿಕೆಯನ್ನು ಆರಂಭಿಸಿಲ್ಲ.

### ಕಂಟಾಯಿಯಲ್ಲಿ ಉಪ್ಪಿನ ಪಾತ್ರೆಗಳನ್ನು ಒಡೆದರು!

ಕಂಟಾಯಿಯಲ್ಲಿ ಡಾ|| ಸುರೇಶ ಬ್ಯಾನರ್ಜಿ ಇವರ ನೇತೃತ್ವದ ಕೆಳಗೆ ೨೯ ಸ್ವಯಂಸೇವಕರು ತಾ|| ೬-೪-೩೦ ನೇ ದಿವಸ ಪ್ರಾತಃಕಾಲದಲ್ಲಿ ಉಪ್ಪಿನ ಕಟ್ಟಳೆಯನ್ನು ಮುರಿದರು. ಉಪ್ಪಿನ ಖಾತೆಯ ಅಧಿಕಾರಿಗಳು ಪೋಲೀಸರ ಸಹಾಯದಿಂದ ಸ್ವಯಂಸೇವಕರು ಸಿದ್ಧಪಡಿಸಿದ ಉಪ್ಪನ್ನು ವಶಪಡಿಸಿಕೊಂಡು ನಾಶಮಾಡಿದರು. ಆಗ್ಯೆ ಸ್ವಯಂಸೇವಕರು ಪುನಃ ಉಪ್ಪನ್ನು ಮಾಡತೊಡಗಲು, ಅಧಿಕಾರಿಗಳು ನೀರನ್ನು ಕುದಿಸುತ್ತಿದ್ದ ಮಣ್ಣಿನ ಹರವಿಗಳನ್ನು ಒಡೆದುಹಾಕಿದರು. ಉಪ್ಪು ಮಾಡುವದನು

ಪ್ರತಿಬಂಧಿಸಲಿಕ್ಕೆ ಪೋಲೀಸ ಶಿಪಾಯಿಗಳ ಕಾವಲಿಟ್ಟಿರುವರು. ಆದರೆ ಯಾವ ಸ್ವಯಂಸೇವಕರನ್ನು ಅವರು ಸೆರೆಹಿಡಿದಿಲ್ಲ. ಈ ಸಮಯದಲ್ಲಿ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು, ಅಬಕಾರಿಯ ಸುಪರಿಂಟೆಂಡೆಂಟರು ಇನ್ನುಳಿದ ಸ್ಥಳಿಕ ಅಧಿಕಾರಿಗಳು ಮತ್ತು ೧೦-೧೨ ಅಬಕಾರೀ ಶಿಪಾಯಿಗಳು ಪ್ರತ್ಯಕ್ಷ ಇದ್ದರು. ಮತ್ತು ಆ ಸ್ಥಳದ ದೊಡ್ಡ ಜನಸಮುದಾಯವು ಇವನ್ನೆಲ್ಲ ನಿರೀಕ್ಷಿಸುತ್ತಿತ್ತು.

## ದಿಲ್ಲಿ

ದಿಲ್ಲಿಯಲ್ಲಿ ೬ನೇ ತಾ|| ನ ಬೆಳಗ್ಗೆ ದಲಪತಿ ಮಹಮ್ಮದ ಇದ್ರಿಸ ಇವರನೇತೃತ್ವದ ಕೆಳಗೆ ಸತ್ಯಾಗ್ರಹಿಗಳ ಮೊದಲನೇ ಪದಾತಿಪಂಕ್ತಿ ದಿಲ್ಲಿಯಿಂದ ೫ ಮೈಲಿನ ಮೇಲಿರುವ ಶಕರಪುರ ಎಂಬ ಸ್ಥಳಕ್ಕೆ ಹೊರಟಿತು. ದಾರಿಯಲ್ಲಿ ಇವರನ್ನು ನೋಡಬೇಕೆಂದು ಮನೆಗಳ ಉಪ್ಪರಿಗೆ ಕಿಡಿಕಿ ಮಾಳಿಗೆ ಕಂಬಿಗಳ ಮೇಲೆ ಕಿಕ್ಕಿರಿದು ನಿಂತ ಜನರ ಸಮೂಹವು ಈ ಸತ್ಯಾಗ್ರಹಿಗಳ ಮೇಲೆ ಒಂದೇ ಸಮನೆ ಹೂಗಳನ್ನು ಹಾರಿಸುತ್ತಿತ್ತು. ಸಾಯಂಕಾಲಕ್ಕೆ ಶ್ರೀ ಜಮುನಲಾಲರ ನೇತೃತ್ವದ ಕೆಳಗೆ ಇನ್ನೊಂದು ಪದಾತಿಯು ಮತ್ತೆ ಅದೇ ಸ್ಥಳಕ್ಕೆ ಹೊರಟಿತು. ಇತ್ತ ಪಂ. ಮಾಲವೀಯವರು ದಿಲ್ಲಿಯಲ್ಲಿಯೇ ಒಂದು ದೊಡ್ಡ ಸಭೆ ಕೂಡಿಸಿ ವಿದೇಶೀ ಬಟ್ಟೆಗಳ ಬಹಿಷ್ಕಾರವನ್ನು ಪುರಸ್ಕರಿಸಿದರು. ಆ ಸಭೆಯಲ್ಲಿಯೇ ಕಾಯದೆಯ ವಿರುದ್ಧ ಉಪ್ಪು ಮಾರಲ್ಪಡಲು ಪಂ. ಮಾಲವೀಯರು ಅದರದೊಂದು ಪುಡಿಕೆಯನ್ನು ಕೊಂಡುಕೊಂಡರು.

ಮುಂಬಯಿಯಲ್ಲಿ. ೬ ನೇ ತಾರೀಖಿನ ದಿವಸವೆ ಜುಹುದಲ್ಲಿ ಶ್ರೀ ಜಮುನಾಲಾಲ ಬಜಾಜರ ಅಧ್ಯಕ್ಷತೆಯಲ್ಲಿ ಉಪ್ಪಿನ ಕಾಯ್ದೆಯು ಧಿಕ್ಕರಿಸಲ್ಪಟ್ಟಿತು. ಸರಕಾರದ ಈ ಕಾಯಿದೆಯ ಬಂಧವನ್ನು ಉಳಿಸಿಕೊಳ್ಳಲಿಕ್ಕೆ ಸರಕಾರದ ಒಂದು ಪಿಳ್ಳೆ ಸಹ ಅಲ್ಲಿ ಇರಲಿಲ್ಲ. ಜುಹುದಲ್ಲಿ ಸಮುದ್ರದ ನೀರನ್ನು ತಂದು ಕಾಸಿ ಅಲ್ಲಿಯೇ ಸುಂಗಗಚ್ಚುಗಳಿಂದ ಕಟ್ಟಿದ ಪಾಳಗಳಲ್ಲಿ ಸುರುವುವರು. ಈ ಜುಹು ಶಿಬಿರದಲ್ಲಿ ೫೫ ಸತ್ಯಾಗ್ರಹಿ ಸೈನಿಕರಿರುವರು, ಇವರ ಶಿಬಿರವು ಒಂದು "ಅಲ್ಯುಮಿನಿಯ ಫ್ಯಾಕ್ಟರಿ"ಯ ಆವಾರದಲ್ಲಿದೆ. ಮುಂಬಯಿಂದ ಇಲ್ಲಿಗೆ ಹೋಗುವ ಪ್ರತಿಗಾಡಿಯೂ ಈ ಮಹಾರಾಷ್ಟ್ರ ಸತ್ಯಾಗ್ರಹಿಗಳ ಸಾಹಸವನ್ನು ನೋಡಬೇಕೆಂಬ ಕುತೂಹಲಉಳ್ಳ ಪ್ರವಾಸಿಕರಿಂದ ತುಂಬಿ ತುಂಬಿ ಬರಹತ್ತಿವೆ. ಇದರಂತೆ ಮಹಾಲಕ್ಷ್ಮೀ ಸ್ಟೇಶನದ ಹತ್ತರ ಮುಂಬಯಿ ಸತ್ಯಾಗ್ರಹಿಗಳು ನ್ಯಾರಿಮನ್, ಶ್ರೀಮತಿ ಕಮಲಾದೇವಿ ಮತ್ತು ಅವಂತಿಕಾಬಾಯಿ ಇವರೇ ಮೊದಲಾದ ಪ್ರತಿಷ್ಠಿತರೊಂದಿಗೆ ಬಂದು ಉಪ್ಪಿನ ಕಾಯದೆಯನ್ನು ಮುರಿದರು.

## ಮದ್ರಾಸ

ಅಸೆಂಬ್ಲಿಗೆ ರಾಜೀನಾಮೆಯನ್ನು ಕೊಟ್ಟು ತಲೆ ತೂಗಿಕೊಂಡು ಬಂದಿರುವ ಟಿ. ಪ್ರಕಾಶಮ್‌ರು ಮದ್ರಾಸ ಸತ್ಯಾಗ್ರಹಿಗಳ ಪುರೋಗಾಮಿಗಳಾಗಿ ನಿಲ್ಲಲು ಮುಂದೆ ಬಂದಿದ್ದಾರೆ. ಸತ್ಯಾಗ್ರಹ ಸಂಗ್ರಾಮಕ್ಕಾಗಿ ಹಣ ಕೂಡಿಸಲು ಈಗ ಉಪಕ್ರಮಿಸಿರುವರು.

## ಬಂಗಾಲ

ಸುಭಾಷ ಚಂದ್ರಬೋಸ ಇವರಿಗೆ ಈಗೆರಡು ತಿಂಗಳ ಹಿಂದೆ ಶಿಕ್ಷೆಯಾಗಿದ್ದು ಈಗ ಕಾರಾಗ್ರಹದಲ್ಲಿ ಅವರಿಗೆ ಅಜ್ಞರ್ದಿಂದಲೂ ನಿಷ್ಠುರತೆಯಿಂದಲೂ ಮಿದುಳಿಗೆ ವಿಕಾರ ಉಂಟಾಗಿರುವದು.

---

### ಸೇಟ ಜಮುನಾಲಾಲ

# ಬಜಾಜರಿಗೆ ಎರಡು ವರ್ಷಗಳ ಸಜೆ

### ಮತ್ತು ೨೦೦ ರೂಪಾಯಿಗಳ ಜುಲ್ಮಾನೆಯು

ಶ್ರೀ ಜಮುನಾಲಾಲ ಬಜಾಜರು ಕೋಟ್ಯಾಧೀಶರು. ಶ್ರೀಮಂತಿಕೆಯಲ್ಲಿ ಹುಟ್ಟಿ ಶ್ರೀಮಂತಿಕೆಯಲ್ಲಿಯೇ ಬೆಳೆದವರು. ಅಸಹಕಾರ ಚಳವಳಿಯಲ್ಲಿಯೇ ಮಹಾತ್ಮರ ಸಂಸರ್ಗದಿಂದ, ಇವರಲ್ಲಿಯೂ ಜನತಾಜನಾರ್ದನನ ಸೇವೆಯಿಂದ ಜನ್ಮಸಾರ್ಥಕ ಮಾಡಿಕೊಳ್ಳಬೇಕೆಂಬ ಉದಾತ್ತ ಭಾವನೆಯು ಇವರ ಉದಾರ ಹೃದಯದಲ್ಲಿ ಉದಯ ಹೊಂದಿತು; ಅಂದಿನಿಂದಲೂ ತಮ್ಮ ಶ್ರೀಮಂತಿಕೆಯ ಸುಖಸಂಪತ್ತಿಗೆಲ್ಲ ತಿಲತರ್ಪಣವನ್ನಿತ್ತು ಮ| ಗಾಂಧಿಯವರ ಪರಮ ಶಿಷ್ಯರಾಗಿ ದೀನರ ಉದ್ಧಾರಕಾರ್ಯದಲ್ಲಿಯೇ ತೊಡಗಿಕೊಂಡಿದ್ದಾರೆ. ಇಂಥ ಸಾಧುವೃತ್ತಿಯ ಗಂಭೀರನಿಗೆ ಸರಕಾರವು ಇಂದು ಕುವಿಚಾರದಿಂದ ೨ ವರ್ಷದ ಕಾರಾಗ್ರಹದ ಶಿಕ್ಷೆಯನ್ನು ವಿಧಿಸಿದೆ. ಇದರಿಂದ ಜಮನಾಜೀ ದೀನೋದ್ಧಾರ ಬುದ್ಧಿಯನ್ನು ಬಗ್ಗು ಬಡೆಯಬೇಕೆಂದು ಸರಕಾರವು ಯೋಜನೆಮಾಡಿದ್ದರೆ ಮಾತ್ರ ವ್ಯರ್ಥವೆಂದು ನಾವು ಹೇಳಬಲ್ಲೆವು. ಅಂಗಾರವನ್ನು ಬೆಂಕಿಯಲ್ಲಿ ಹಾಕಿ ಸುಡುವದರಿಂದ ಅದರ ಕಾಂತಿಯು ಮತ್ತಿಷ್ಟು ಹೆಚ್ಚುವದೆ ಹೊರತು ಅದಕ್ಕೆ ಕುಂದುಬರುವದುಂಟೇ? [illegible] ಅದನ್ನು ಬೆಂಕಿಯಲ್ಲಿ ಹಾಕಿ ಸುಡುವ ಅಕ್ಕಸಾಲಿಗನ ಬಾಯಿಯಲ್ಲಿ ಬೂದಿಬೀಳದೆ ಹೋಗುವದಿಲ್ಲ.

## ನ್ಯಾರಿಮನ್ನರಿಗೆ

ಒಂದು ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿತು. ಇದೇ ಪ್ರಕಾರ ಮುಂಬಯಿಯ ಐದಾರು ಮುಂದಾಳುಗಳನ್ನು ಹಿಡಿದೊಯ್ದು ಕಾರಾಗ್ರಹಕ್ಕೆ ಅಟ್ಟಿದರೂ ಅಲ್ಲಿಯ ಕಾಯಿದೆಭಂಗದ ಚಳವಳಿ ಉಗ್ರತರತೆಯಾವದೂ ಇಲ್ಲಿಗೆ ಅತ್ಯಂತ ಉತ್ಸಾಹದಿಂದಲೂ ಶಿಸ್ತಿನಿಂದಲೂ ಸಾಗಿಸಲ್ಪಟ್ಟಿದೆ. ಜುಹುದಲ್ಲಿಯ ಉಪ್ಪಿನ ಪಾಳಗಳನ್ನು ಸರಕಾರವು ಒಡೆದು ಹಾಕಿದೆ, ಆದರೂ ಮತ್ತೆ ಹೊಸ

ಸ್ಥಾನಿಗರನ್ನು ಬಿಟ್ಟಿ ಕೆಲಸ ನಡಿಸಿರುವರು ಶ್ರೀ [illegible] ಇವರು [illegible] ಸ್ವ [illegible] ನ್ಯಾರಿ [illegible] ಸ್ಥಾನನ್ನು ಶ್ರೀ [illegible] ಅವರಿಗೆ [illegible]

## ರಾಮದಾಸ ಗಾಂಧಿ

ಗಾಂಧಿಜಿಯವರ ಮಕ್ಕಳಾದ ರಾಮದಾಸ ಗಾಂಧಿಯವರಿಗೆ ಆರು ತಿಂಗಳ ಶಿಕ್ಷೆ ಕೊಡಲಾಗಿದೆ.

## ಮ. ಗಾಂಧಿಯವರ ಸ್ಥಳಾಂತರ!

ಮಹಾತ್ಮಾಜಿಯವರು ದಂಡಿಯಿಂದ [illegible] ಮೈಲಿಗೆ ಒಂದು ಅಲ್ಲಿ ಉಪ್ಪಿನ [illegible] ಅಲ್ಲಿದ್ದ [illegible] ಸತ್ಯಾಗ್ರಹಿಗಳ ಕೈಯೊಳಗಿನ ಉಪ್ಪನ್ನು ಪೋಲಿಸರು ಕಸಿದುಕೊಂಡು ಹೋಗಿದ್ದರು. ಇದನ್ನೆಲ್ಲ [illegible] ಗಾಂಧಿಜಿಯವರು, [illegible] ಬಿಡಿಯಲ್' ಎಂದು [illegible] ಒಂದಿರು [illegible]. ಆದರೆ ಆ ಹೊತ್ತು ೩೦೦೦ ಜನರ [illegible] ಗಾಂಧೀಜಿಯವರ ಸ್ವಯಂಸೇವಕರು ಉಪ್ಪನ್ನು ಆರಿಸುತ್ತಿದ್ದರೆ [illegible] ಅಲ್ಲಿ [illegible] ಪೋಲೀಸರಿಲ್ಲ. [illegible] ಗಾಂಧಿಯವರ [illegible] ನನ್ನ ಸತ್ಯಾಗ್ರಹಿಗಳ [illegible] ಪೋಲೀಸರ [illegible] ಎಂದು ಮಹಾತ್ಮರು [illegible].

## ಜಲಾಲಪುರ

ಪೋಲೀಸರು ಜಲಾಲಪುರದಲ್ಲಿ ಹಚ್ಚಿಗೆ ಗೊಂದಲ [illegible] ಅದರ [illegible] ಸತ್ಯಾಗ್ರಹಿಗಳ [illegible] ಅವರ [illegible] ಉಪ್ಪು [illegible] ಕೈಯೊಳಗಿನ [illegible] ಉಪ್ಪನ್ನು [illegible] ಸತ್ಯಾಗ್ರಹಿಗಳು [illegible]

## ಶ್ರೀ. ನ. ಸಿ. ಕೇಳಕರ

ಶ್ರೀಯುತ ನರಸಿಂಹ ಚಿಂತಾಮಣಿ ಕೇಳಕರ ಇವರು [illegible] ಅನ್ಯಾಯ [illegible] ನೋಡಿರಿ! [illegible]

## ದಬ್ಬಾಳಿಕೆಯು ತಾಂಡವನೃತ್ಯದ ತುಳಿತಕ್ಕೆ ಸಿಕ್ಕವರು!

ಗುಜರಾಥ— ಆಟ್ಟೆ [illegible] ಮೇಲೆ ಉಪ್ಪನ್ನು [illegible] ಡಾ|| ನಾಯಕ ವ [illegible] ಕಿಶಾಭಾಯಿ ದೇಸಾಯಿ ( ಗುಜರಾಥ ವಿದ್ಯಾಪೀಠ [illegible] ) ಇವರನ್ನು [illegible] ಒಯ್ದಿರುವರು. [illegible] ಪಕ್ಕಾಗಿ ಹಿಡಿದಿರುವರು.

ಬೋರಸಾದಲ್ಲಿ ದರಬಾರ ಗೋಪಾಲದಾಸ ಶ್ರೀ [illegible] ದಾಸ [illegible] ಎಂದು ಪ್ರಸಿದ್ಧಿಗೆ ಬಂದ [illegible] ಭಾಯಿ ಅಂಬಾಲಾಲ ಭಾಜಿಬಾಯಿ ( ಸತ್ಯಾಗ್ರಹ [illegible] ಸದ ಮುಖ್ಯ ಸಂಚಾಲಕರು ) ಮತ್ತು ಮನಿ [illegible] (ಬೋರಸಾ [illegible] ತಾಲೂಕಿನ ಮುಖ್ಯ ಕೆಲಸಗಾರ ) ಇವರನ್ನು [illegible] ದಿನ [illegible] ೧೦ ಘಂಟೆಗೆ ಸೆರೆಹಿಡಿದರು.

ಬರೋಡೆದಲ್ಲಿ ಡಾ|| ಚಂದ [illegible] ಇವರನ್ನೂ [illegible] ಸತ್ಯಾಗ್ರಹಿಗಳ [illegible] ಬಂಬುಸರದಲ್ಲಿ ಉಪ್ಪು [illegible] ಹಿಡಿದಿರುವರು. ಅವರ ಸ್ಥಳಕ್ಕೆ ಮತ್ತೊಂದ [illegible] ಮರುದಿನವೇ ಹೊರಟಿದೆ.

ರಾಸ:— [illegible] ಪೋಲೀಸರಿಗೆ ಸಹಾಯ ಮಾಡಲಿಲ್ಲವೆಂಬ [illegible] ಅವನ ಮೇಲೆ [illegible] ಗಿನ ಆರೋಪ [illegible] ಶಿಕ್ಷೆ ವಿಧಿಸಲ್ಪಟ್ಟಿದೆ.

[illegible]— [illegible] ಜನ [illegible] ಸತ್ಯಾಗ್ರಹದಲ್ಲಿ ಪ್ರಸಿದ್ಧಿಗೆ ಬಂದ [illegible] ವ್ಯಾಸ ಎಂಬ ಸ್ವಯಂಸೇವಕನನ್ನು ಹಿಡಿದೊಯ್ದಿರುವರು. [illegible] ಉಪ್ಪನ್ನು ಮಾಡುವದಲ್ಲಿ [illegible] ಸತ್ಯಾಗ್ರಹಿಗಳಲ್ಲಿ [illegible] ಹಿಡಿದಿಲ್ಲ. [illegible] ಯಾವ [illegible] ಮಾಡಿಲ್ಲ.

ಸಂಯುಕ್ತ ಪ್ರಾಂತ— [illegible] ಕಾಂಗ್ರೆಸ [illegible] ಅಧ್ಯಕ್ಷರಾದ [illegible] ಅರೋಪದಿಂದ ಹಿಡಿದರು.

ಮುಂಬಯಿ — ಶ್ರೀ [illegible] ಜಮನಾಲಾಲ ಬಜಾಜ ಮತ್ತು ಇನ್ನೂ [illegible] ರಾತ್ರಿ ಹಿಡಿದಿರುವರು.

—— o ——

## ಗಂಗಾಧರರಾಯರಿಗೆ ಶಿಕ್ಷೆ!

ಉಪ್ಪಿನ ಕಾಯದೆ ಮುರಿದದ್ದಕ್ಕಾಗಿ ಬೆಳಗಾವಿಯ ಶ್ರೀ ಗಂಗಾಧರರಾಯರಿಗೆ [illegible] ದಂಡ [illegible] ಜೋಶಿ, [illegible] ದಿವಸದ [illegible] ದ್ದಾರೆ.

[illegible] ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ [illegible] ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

# ಕನ್ನಡಿಗ

ಜಯಕರ್ನಾಟಕ

ನಿತ್ಯಸಂಚಿಕೆಯು.

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ಶುಕ್ರವಾರ ಮಿತಿ ಚೈತ್ರ ಶುದ್ಧ ೧೩ ಶಕ ೧೮೬೭ ತಾ ೧೧—೪—೩ ಸಂಚಿಕೆ ೧೯

## ಸಂಪಾದಕರ ಭೂಮಿಕೆ

### ಕರ್ನಾಟಕವು ಇನ್ನು ತಣ್ಣಗೆ ಕೂಡುವಂತಿಲ್ಲ!

ಯುದ್ಧ ಯುದ್ಧವೆಂದು ನಾವು ಇನ್ನೂ ಸಮರಸನ್ನಾಹದ ಸಿದ್ಧತೆಯಲ್ಲಿರುವಾಗಲೆ, ಪ್ರತಿಪಕ್ಷಿಗಳಾದ ಸರಕಾರದವರು ಎರಗಿ ಬಂದು ನಮ್ಮ ಪ್ರಾಂತಕ್ಕೆ ಅಗ್ರಸೇನಾನಾಯಕರಾದ ದೇ. ಭ. ಗಂಗಾಧರರಾಯರನ್ನು ಸೆರೆಹಿಡಿದರು. ಮತ್ತು ಈ ಸತ್ಯಾಗ್ರಹ ಸಂಗ್ರಾಮದ ಪಚ್ಚಕ್ಕಾಗಿ ದ್ರವ್ಯಾನುಕೂಲತೆಯನ್ನು ಒದಗಿಸಿ ಕೊಡಲು ಒಪ್ಪಿಕೊಂಡು ಒಳ್ಳೇ ಹುರುಪಿನಿಂದ ಕೆಲಸ ನಡೆಸಿದ ಶ್ರೀ ಜೋಶಿ ನಾರಾಯಣರಾಯರನ್ನೂ ಬಂಧಿಸಿದರು. ಈ ರೀತಿ ನಮ್ಮ ಸಿದ್ಧತೆಯು ಪೂರ್ತಿಯಾಗುವ ಪೂರ್ವದಲ್ಲಿಯೇ ನಮ್ಮನ್ನು ಒಕ್ಕರಿಬಡಿಯಬೇಕೆಂದು ಬಗೆದು ಸರಕಾರವು ಈ ದಬ್ಬಾಳಿಕೆಯನ್ನು ಆರಂಭಿಸಿದಂತೆ ತೋರುತ್ತದೆ. ಕರ್ನಾಟಕವೇನು ಮೆತ್ತನ್ನವನಾಡು, ಅಂಜುಬುರುಕರೇ ಅಲ್ಲಿ ತುಂಬಿಕೊಂಡಿರುವರು. ಅವರನ್ನು ಇದೀಗ ಹ, ಹಾ, ಅನ್ನುವದರಲ್ಲಿ ಹೆದರಿಸುತ್ತೇನೆ ಬರಿ ಬೆದರುಗೊಂಬೆಯಾದ ಎಲ್ಲ ಕನ್ನಡಿಗರನ್ನೂ ಗದ್ದುಹೋಗಿಸುತ್ತೇನೆಂದು, ಸರಕಾರವು ಎಣಿಕೆ ಹಾಕಿದಂತೆ ತೋರುತ್ತದೆ ಮುಂದಾಳುಗಳನ್ನು ಹಿಡಿದೊಯ್ದರೆ ಕಾಯಿದೆ ಭಂಗಕ್ಕೆ ಮುಂದು ಬರುವ ತ್ರಾಣವು ಕನ್ನಡಿಗರಲ್ಲಿ ಹೊರಡಲಿಕ್ಕಿಲ್ಲೆಂದು ಸರಕಾರವು ಲೆಕ್ಕ ಹಾಕಿದಂತೆ ಕಾಣುತ್ತದೆ.

ಕನ್ನಡ ತರುಣರು ಸರಕಾರದ ಈ ಎಲ್ಲ ಎಣಿಕೆಗಳಿಗೆ ಏನು ಉತ್ತರ ಕೊಡುವರು? ಸರಕಾರದ ದಬ್ಬಾಳಿಕೆಯ ಆರ್ಭಟಿಗೆ ಬೆದರಿ ಹೇಡಿಗಳಂತೆ ಸಮರಕ್ಕೆ ಬೆನ್ನು ತೋರಿಸಿ ಓಡಿಬರುವರೋ? ೭೫ ವರ್ಷದ ಪೂಜ್ಯನಾದ ಮುಪ್ಪಿನ ಮುದುಕನನ್ನು ಸಮರಕ್ಕೆ ಪ್ರಥಮ ಆಹುತಿಯನ್ನಾಗಿಟ್ಟು ಈಗ ಹಿಂತೆಗೆದರೆ ಉಳಿದ ಪ್ರಾಂತಗಳು ಕನ್ನಡ ತರುಣರ ಹೆಸರಿಗೆ ನಗದೆ ಇರಲಿಕ್ಕಿಲ್ಲವೇ? ಉಳಿದ ಪ್ರಾಂತದ ತರುಣರು ಈ ಸ್ವಾತಂತ್ರ್ಯ ಯುದ್ಧದಲ್ಲಿ ತಮ್ಮ ತಾರುಣ್ಯದ ಶೌರ್ಯಸಾಹಸಗಳನ್ನು ತೋರಿಸುತ್ತಿರುವಾಗ ಅದೇ ಸ್ವಾತಂತ್ರ್ಯಪ್ರೀತಿ ಸ್ವಾಭಿಮಾನಗಳಿಂದ ಪ್ರೇರಿತರಾದ ಕನ್ನಡ ತರುಣರಿಂದಲೂ ತಮ್ಮ ಸಮರಸಾಹಸವನ್ನು ತೋರಿಸದೆ ಬಿಡುವರೆಂತು? ಸರಕಾರದ ದಬ್ಬಾಳಿಕೆಗೆ ಸೊಪ್ಪುಹಾಕದೆ ಅಹಿರಾವಣ ಮಹಿರಾವಣರ ಕಥೆಯಂತೆ ಒಬ್ಬನನ್ನು ಸೆರೆಹಿಡಿದರೆ ಹತ್ತು ಜನರು ಅವನ ಸ್ಥಳದಲ್ಲಿ ಉದ್ಭವರಾಗಿ ನಿಂತು ಸರಕಾರವನ್ನು ಪ್ರತಿರೋಧಿಸುವಷ್ಟು ಶಕ್ತಿಯು ಇಂದಿನ ಕನ್ನಡ ತರುಣರಲ್ಲಿದೆ. ಮೇಲಾಗಿ ತಾಳಿಕೋಟೆಯ ಕಾಳಗದ ಅನಾಹುತದಿಂದ ಕನ್ನಡಿಗರೆಲ್ಲರೂ ಕಲಿತ ಪಾಠದ ಉಪಯೋಗವನ್ನು ಇಂದಿನ ಕನ್ನಡಿಗರು ಮಾಡಿಕೊಳ್ಳದೆ ಬಿಡುವರೇ? ತಾಳೀಕೋಟೆಯ ಕಾಳಗದಲ್ಲಿ ೮೦ ವರ್ಷದ ಮುದುಕನಾದ ರಾಮರಾಯನು ಅತ್ತಿತ್ತ ಓಡಾಡಿ ಸೈನಿಕರನ್ನು ಹುರಿದುಂಬಿಸುತ್ತಿರುವಾಗ ಎಲ್ಲರೂ ಪರಾಕ್ರಮದಿಂದಲೆ ಹೋರಾಡಿ ಜಯಲಕ್ಷ್ಮಿಯನ್ನು ಮೆಚ್ಚಿಸಿಬಿಟ್ಟಿದ್ದರು. ಅಷ್ಟರಲ್ಲಿಯೇ ದೈವದುರ್ವಿಪಾಕದಿಂದ ರಾಮರಾಯನು ಬೀಳಲು ಕಾಲವಶದಿಂದ ಬುದ್ಧಿಗೆ ಭ್ರಮೆಬಂದು ಎಲ್ಲ ರಣಶೂರರು ಕಾಲುತೆಗೆದು ಓಡಹತ್ತಿ ತಮ್ಮ ಮೇಲೆ ತಾವೇ ಅಪಜಯವನ್ನು ತಂದುಕೊಂಡು, ಕನ್ನಡಿಗರ ಸಾಮ್ರಾಜ್ಯವನ್ನು ಮಣ್ಣುಪಾಲುಮಾಡಿ ಈ ಹೊತ್ತಿಗೂ ಈ ಇತಿಹಾಸವನ್ನು ಓದುವ ಪ್ರತಿಯೊಬ್ಬ ಕನ್ನಡ ವಿದ್ಯಾರ್ಥಿಯಿಂದಾ ಕೂಡಾ ಹಳಿಸಿಕೊಳ್ಳುತ್ತಿರುವ ಆ ಘೋರ ದುಸ್ಥಿತಿಯನ್ನು ನೋಡುವದು ಕನ್ನಡಿಗರಿಗೆ ದಿನಂಪ್ರತಿಯ ಸಂಗತಿಯಾಗಿದೆ ಈಗಿನ ಕನ್ನಡ ತರುಣರು ಈ ಹೊತ್ತಿನ ದಬ್ಬಾಳಿಕೆಗೆ ನಮ್ಮ ಹಿರಿಯರು ತುತ್ತಾದಾಗ ಸಮರಕ್ಕೆ ಹಿಂಜರಿದಿದ್ದರೆ ಆದರೆ ಅವರಿಗೂ ಯುಗಯುಗಾಂತರದಲ್ಲಿಯೂ ಶಾಪಿಸಿಕೊಳ್ಳುವ ಪ್ರಸಂಗವು ಕಟ್ಟಿಟ್ಟದ್ದೇ. ತಾಳಿಕೋಟೆಯ ಯುದ್ಧದಲ್ಲಿ ಮುಂದಾಳು ಬಿದ್ದ ಕೂಡಲೆ ಕಾರಣವಿಲ್ಲದೆ ಹಿಂತಿರುಗಿ ಕರ್ನಾಟಕವು ಕೈಸುಡಿಸಿಕೊಂಡಿದೆ. ಮತ್ತೆ ಅದೇ ಅಪರಾಧವನ್ನು ಈಗಿನ ತರುಣ ಕರ್ನಾಟಕವು ಮತ್ತೆ ಎಂದೂ ಮಾಡಲಿಕ್ಕಿಲ್ಲ. ಮುಂದಾಳು ಬಿದ್ದರೇನು ಎದ್ದರೇನು! ಸ್ವಾತಂತ್ರ್ಯದೇವಿಯು ಪಾದವಾಗಿಲದ ವರೆಗೂ ಮುಂದೆ ಮುಂದೆ ನುಗ್ಗುವದೇ ಒಂದು ತನ್ನ ಕರ್ತವ್ಯವೆಂದು ತಿಳಿದು ಹೋರಾಡಬೇಕಾಗಿದೆ. ಪೂರ್ಣ ಸ್ವರಾಜ್ಯದ ಉದಾತ್ತ ಧ್ಯೇಯದಿಂದ ಜ್ವಲಿಸುತ್ತಿರುವ ಕನ್ನಡಿಗರ ಹೃದಯವು ಅವರನ್ನು ಈ ಕಾರ್ಯಕ್ಕೆ ಪ್ರೇರಿಸುವದೆಂದು ನಮ್ಮ ಪೂರ್ಣ ನಂಬಿಗೆ ಇದೆ.

## ಕರ್ನಾಟಕವು

# ಸತ್ಯಾಗ್ರಹಕ್ಕೆ ಸಿದ್ಧವಾಯಿತು!

## ಎಪ್ರಿಲ ೧೩ ನೆಯ ತಾರೀಖು ಲಕ್ಷ್ಯದಲ್ಲಿರಲಿ!

ಕಾರವಾರ ಜಿಲ್ಲಾ ಅಂಕೋಲೆಯಲ್ಲಿ ಇದೇ ಎಪ್ರಿಲ ೧೩ನೇ ತಾರೀಖಿನ ದಿವಸ ಸಾಯಂಕಾಲ ೪ ಗಂಟೆಗೆ ಉಪ್ಪಿನ ಕಟ್ಟೆಯು ಕರ್ನಾಟಕದ ಸತ್ಯಾಗ್ರಹಿಗಳಿಂದ ಪ್ರವೇಶಿಸಲ್ಪಡುವದು. ಅವರಿಗೆ ಶುಭ ಬಯಸಲಿಕ್ಕೂ, ಕನ್ನಡಿಗರ ಬೆಂಬಲವಿದೆಂದು ತಿಳಿಸಲಿಕ್ಕೂ, ಅಂದೇ ಸಾಯಂಕಾಲ ಸಾಡೆ ೫ ಗಂಟೆಗೆ ಸರಿಯಾಗಿ ಕರ್ನಾಟಕದ ತುಂಬೆಲ್ಲ ಎಲ್ಲ ಹಳ್ಳಿಪಟ್ಟಣಗಳಲ್ಲಿಯೂ ಸಾರ್ವಜನಿಕ ಸಭೆಗಳು ಜರುಗಬೇಕೆಂದು ಕರ್ನಾಟಕ ಪ್ರಾಂತಿಕ ಸತ್ಯಾಗ್ರಹ ಮಂಡಲದವರು ನಿಶ್ಚಯಿಸಿದ್ದಾರೆ. ಅದ್ದರಿಂದ ಎಲ್ಲ ಹಳ್ಳಿಯವರು ಇತ್ತ ಲಕ್ಷ್ಯಗೊಟ್ಟು, ಆದಿನ ತಪ್ಪದೆ ಸಭೆಗಳನ್ನು ತಮ್ಮ ತಮ್ಮಲ್ಲಿ ನೆರವೇರಿಸಬೇಕು. ಹೀಗೆ ಸಭೆ ಜರುಗಿಸಲು ನಿಶ್ಚಯಿಸಿದವರು ಕೆಳಗೆ ಕಾಣಿಸಿದವುಗಳಲ್ಲಿ ಯಾವ ಕಡೆಗಾದರೂ ಕೂಡಲೇ ಹೋಗಿ ಪ್ರಾಂತಿಕ ಮಂಡಲದವರ ಸಂದೇಶವನ್ನು ಸಮಯಕ್ಕೆ ತೆಗೆದುಕೊಂಡು ಹೋಗಬೇಕು. ಈ ಸಂದೇಶವು ಏನಿದೆಂಬುದು ಯಾರಿಗೂ ಗೊತ್ತಿಲ್ಲ. ಅದು ಅತ್ಯಂತ ಮಹತ್ವದ ಸಂದೇಶವಿರುವದರಿಂದ, ಅದನ್ನು ಅರಿತುಕೊಳ್ಳಲಿಕ್ಕೆ ಯಾರೂ ಹಿಂದೆ ಬೀಳಬಾರದು. ಆದುದರಿಂದ ಆಸಕ್ತಿಯುಳ್ಳವರೆಲ್ಲ ಕೂಡಲೇ ಈ ಮಹತ್ವದ ಸಂದೇಶವನ್ನು ತೆಗೆದುಕೊಂಡು ಹೋಗತಕ್ಕದ್ದು. ಅದನ್ನು ಅದೇ ಸಭೆಯ ಕಾಲದಲ್ಲಿ ಒಡೆದು ಓದಿ, ಅದರಲ್ಲಿ ಕಾಣಿಸಿದಂತೆ ಆಚರಿಸತಕ್ಕದ್ದೆಂಬುದನ್ನು ಎಲ್ಲರೂ ಲಕ್ಷ್ಯದಲ್ಲಿಡಬೇಕು.

ಮಹತ್ವದ ಸಂದೇಶಗಳು ದೊರೆಯುತಕ್ಕ ಸ್ಥಳಗಳುः—

(೧) ಧಾರವಾಡ ಹುಬ್ಬಳ್ಳಿ, ಗದಗು ವಿಜಾಪುರ, ಬೆಳಗಾವಿ ಬಾಗಲಕೋಟೆ ಮೊದಲಾದ ಮಹತ್ವದ ಕಾಂಗ್ರೆಸ್ಸ ಕಮಿಟಿಗಳಲ್ಲಿ ‘ಕನ್ನಡಿಗ’, ‘ಕರ್ಮವೀರ’, ‘ಕರ್ನಾಟಕ ವೈಭವ’, ‘ಸೇವಾದಲ’ಗಳ ಕಾರ್ಯಾಲಯಗಳಲ್ಲಿ.

ಬಾಗಲಕೋಟೆ.
ತಾ|| ೧೦—೪—೩೦

ಕಾರ್ಯದರ್ಶಿ,
ತಾಲೂಕ ಕಾಂಗ್ರೆಸ ಕಮಿಟಿ.
ಬಾಗಲಕೋಟೆ

## ರಣವೀರ ದೇಶಪಾಂಡೆ ಗಂಗಾಧರರಾಯರ ವೀರ ಸಂದೇಶವು

ಕರ್ನಾಟಕದ ನನ್ನ ಬಂಧುಭಗಿನಿಯರೇ,

ಕರ್ನಾಟಕ ಸತ್ಯಾಗ್ರಹಮಂಡಲದ ಅಧ್ಯಕ್ಷನನ್ನಾಗಿ ಮಾಡಿ ನೀವು ನನಗೆ ಈ ಸತ್ಯಾಗ್ರಹ ಸಮರದಲ್ಲಿ ಅಗ್ರಮಾನವನ್ನು ಕೊಟ್ಟಿದ್ದೀರಿ. ಸರಕಾರದವರು ದೇಶಸೇವಕನಾದ ನನಗೆ ಬೇರೆ ಪ್ರಾಂತಗಳ ಮಾರ್ಗದಲ್ಲಿ ಕೂಡ ... ದಿದ್ದರೂ ನನ್ನನ್ನು ಕರ್ನಾಟಕದಲ್ಲಿ ಎಲ್ಲರಿಂದಲೂ ಮೊದಲು ಸೆರೆಹಿಡಿದು ಅಗ್ರಮಾನವನ್ನು ಕೊಟ್ಟಿದ್ದಾರೆ. ಈ ಪ್ರಸಂಗದಲ್ಲಿ ಕರ್ನಾಟಕದ ನನ್ನ ಬಂಧುಭಗಿನಿಯರು ಈ ಧರ್ಮಯುದ್ಧದಲ್ಲಿ ಸೇರಿ, ನಮ್ಮ ಶಾಂತಿಸೇನೆಯ ಅಧಿನಾಯಕನಾದ ಮಹಾತ್ಮಾ ಗಾಂಧಿಯವರಿಗೆ ಸಂಪೂರ್ಣ ಸಹಾಯಮಾಡುವರೆಂದು ನಾನು ನಂಬಿದ್ದೇನೆ. ಕರ್ನಾಟಕದಲ್ಲಿಯ ವೀರತನದ ಸ್ಫೂರ್ತಿಯು ಇನ್ನೂ ಅಳಿದಿಲ್ಲವೆಂಬುದನ್ನು ಸಿದ್ಧಪಡಿಸುವ ಶುಭಸಮಯವು ಈಗ ಬಂದಿದೆ. ಏಳಿರಿ, ತರುಣ ವೀರರೆ, ಏಳಿರಿ. ರಣಕಹಳೆಯನ್ನೂದಿ, ಈ ಅಸುರೀ ಸಾಮ್ರಾಜ್ಯವನ್ನು ಮಣ್ಣುಗೂಡಿಸಲಿಕ್ಕೆ ಸಿದ್ಧರಾಗಿರಿ.

**ದೇಶಪಾಂಡೆ ಗಂಗಾಧರ**

### ಬೆಂಗಳೂರ

ಹಿಂದುಸ್ಥಾನಿ ಸೇವಾದಲದ ಕಾರ್ಯದರ್ಶಿಗಳಾದ ಡಾ|| ಎನ್. ಎಸ್. ಹರ್ಡೀಕರರವರು ಒರಿಸ್ಸಾ ಪ್ರಾಂತದ ಮೇರೆಗೆ ದೇಶೀಯ ವಿದ್ಯಾಶಾಲೆಯಲ್ಲಿ ಅನೇಕ ವರ್ಷಗಳಿಂದಲೂ ಉಪಾಧ್ಯಾಯರಾಗಿರುವ ಮಿ|| ಎಚ್. ಆರ್. ತ್ರಿವ ಬಿ.ಎ. ರವರು ಈದಿನ ಮಧ್ಯಾಹ್ನ ೨ ಗಂಟೆ ಟ್ರೈನಿನಲ್ಲಿ ಕಾನೂನು ಭಂಗದ ಚಳವಳಿಯಲ್ಲಿ ಭಾಗ ವಹಿಸಲು ಹುಬ್ಬಳ್ಳಿಗೆ ಪ್ರಯಾಣ ಬೆಳೆಸಿದರು.

### ಧಾರವಾಡ,

ಈ ಜಿಲ್ಲೆಯ ಬೆಳಗಿನ ಶ್ರೀ ಯಶವಂತ ಕೃಷ್ಣಂಬಳ ನಾಡಕರ್ಣಿ ಬಿ.ಎ. ಎಲ್‌ಎಲ್.ಬಿ. ವಕೀಲರು ಸತ್ಯಾಗ್ರಹವನ್ನು ಸೇರಿದ್ದಾರೆಂದು ತಿಳಿಸಲು ಆನಂದವಾಗುತ್ತದೆ.

### ಹಾವೇರಿ

ಇಲ್ಲಿ ಇಂದಿನವರೆಗೆ ೨೭ ಸತ್ಯಾಗ್ರಹಿಗಳು, ಶ್ರೀ ಹೇರ್ಲೇಕರ ವಕೀಲರ ನೇತೃತ್ವದ ಕೆಳಗೆ ಸಮರಕ್ಕೆ ತೆರಳಲು ಸಿದ್ಧರಿರುವರು

### ಶಿರಪೂರ.

ಇಲ್ಲಿಯ ಸ್ಟೇಶನಮಾಸ್ತರರಾದ ಶ್ರೀ. ಚಿದಂಬರಯ್ಯನವರು ರಾಜೀನಾಮೆ ಕೊಟ್ಟು ಸತ್ಯಾಗ್ರಹದ ಸೈನ್ಯ ಕಟ್ಟಲು ಹೊರಟಿದ್ದಾರೆ.

### ಗಲಗಲಿ.

ಹುಬ್ಬಳ್ಳಿಯ ಸತ್ಯಾಗ್ರಹ ಶಿಬಿರದಿಂದ ಬಂದ ಆಜ್ಞೆಯ ಪ್ರಕಾರ ಗಲಗಲಿಯಿಂದಾ ರಾಘವೇಂದ್ರ ಗೋಪಾಳ ಹಪ್ಪು ಇವರು ನಿನ್ನೆ ಕಾಯಿದೆ ಭಂಗಕ್ಕಾಗಿ ಹುಬ್ಬಳ್ಳಿಗೆ ಹೊರಟರು. ಗಲಗಲಿಯಲ್ಲಿ ಇನ್ನೂ ೨೦-೨೫ ತರುಣರು ಸತ್ಯಾಗ್ರಹಕ್ಕೆ ಸಿದ್ಧರಿದ್ದಾರಂತೆ,

### ಭೀಮರಾತದಲ್ಲಿ

# ಮ. ಗಾಂಧಿಯೊಡನೆ ೧೦೦೦೦ ಜನರು

## ಉಪ್ಪಿನ ಕಾಯಿದೆಯನ್ನು ಮುರಿದರು.

ಮಹಾತ್ಮಾಜಿಯವರು ತಾವು ನಿನ್ನೆ ನಿಶ್ಚಯಿಸಿಕೊಂಡಂತೆ ಈ ಹೊತ್ತು ಮುಂಜಾನೆ ಭೀಮರಾತಕ್ಕೆ ಹೋಗಿ ಉಪ್ಪಿನಕಟ್ಟಳೆಯನ್ನು ಮುರಿದರು. ಇವರೊಡನೆ ೧೦೦೦೦ ಜನರು— ಹುಡುಗರು ಹೆಂಗಸುಮಕ್ಕಳು— ಇವರೆಲ್ಲರೂ ಸಮುದ್ರ ದಂಡೆಗೆ ಬಿದ್ದಿರುವ ಉಪ್ಪಿನ ಕಣಗಳನ್ನು ಎತ್ತಿಕೊಂಡು ಸರಕಾರದ ಉಪ್ಪಿನ ಕಾಯಿದೆಯನ್ನು ಅಲ್ಲಗಳೆದರು. ಭೀಮರಾತಕ್ಕೆ ಗಾಂಧಿಯವರಿಗೆ ಬರಲಿಕ್ಕೆ ತುಸ ಸಮಯ ತಡವಾಯಿತು. ಆ ಸಮುದ್ರ ದಂಡೆಯ ಮೇಲೆ — ಎಲ್ಲಿ ನೋಡಿದರತ್ತ ಅಪಾರ ಜನ ರಾಮದಾಸ ಗಾಂಧಿ ಮೊದಲಾದ ಸತ್ಯಾಗ್ರಹಿ ಭಕ್ತರ ಉಪ್ಪಿನ ಕಾಯಿದೆಭಂಗಕ್ಕಾಗಿ ಅದರ ಸಾಧನಕ್ಕಾಗಿ ಸೇರಿಕೊಂಡಿದ್ದರೋ— ಆ ಸ್ಥಳದ ಕ್ಷಯೀ ಸುರತದಿಂದಲೂ ಸುತ್ತಮುತ್ತಲಿನ ಹಳ್ಳಿಗಳಿಂದಲೂ ಈ ಹತ್ತು ಸಾವಿರ ಜನರ ಮಹಾಸಮೂಹವು, ಕಿಂಚಿತ್ತಾದರೂ ಬೇಸರಗೊಳ್ಳದೆ ಸತ್ಯಾಗ್ರಹದ, ಸ್ವಾತಂತ್ರ್ಯದ ಮ|| ಗಾಂಧಿ ಸರದಾರ ವಲ್ಲಭಭಾಯಿ ಮೊದಲಾದವರ ಮೇಲಿನ ಹೃದಯಂಗಮ ಲಾವಣಿಗಳನ್ನು ಹೆಂಗಸುಮಕ್ಕಳು ಹುರುಪಿನಿಂದ ಹಾಡುತ್ತಿರುವದನ್ನು ಆಸಕ್ತಿಯಿಂದ ಕೇಳುವದರಲ್ಲಿಯೇ ಮಗ್ನರಾಗಿ ಆನಂದದಲ್ಲಿದ್ದರು. ಅಷ್ಟರಲ್ಲಿಯೇ ಗಾಂಧಿಯವರ ಆಗಮನವಾಯಿತು. ಮಹಾತ್ಮಾಜಿಯವರು ಬಂದವರೇ, ಯಾವ ಸ್ಥಳದಲ್ಲಿ ಸರಕಾರವು ಒಳ್ಳೇ ಜಂಭದಿಂದ ರಾಮದಾಸ ಗಾಂಧಿಯನ್ನು ಸೆರೆಹಿಡಿದು ತನ್ನ ಸಾಮ್ರಾಜ್ಯದ ಬಿಗಿತನ ತೋರಿಸಿತೋ, ಅದೇ ಸ್ಥಳದಲ್ಲಿ ಉಪ್ಪು ಕೂಡಿಸಲು ಪ್ರಾರಂಭಿಸಿದರು. ಅವರ ಬೆನ್ನಹಿಂದೆ ಆ ಜನಸಮೂಹವೆಲ್ಲ ಆ ವಿಸ್ತಾರವಾದ ತೀರದ ಮೇಲೆ ೨ ಘಂಟೆಯವರೆಗೆ ಉಪ್ಪು ಕೂಡಿಸುವದರಲ್ಲಿ ತೊಡಗಿದ್ದರೂ ಒಬ್ಬ ಪೋಲೀಸನೂ ಸಹ ಅವರನ್ನು ತಡೆಯಲು ಅಲ್ಲಿ ಇರಲಿಲ್ಲ. ಸರಕಾರದ ಮೊನ್ನಿನ ದರ್ಪವು ಇಂದೆಲ್ಲಿ ಹೋಯಿತು? ಮಹಾತ್ಮ ಗಾಂಧಿಯವರು 'ನನ್ನನ್ನು ಹಿಡಿಯಿರಿ' ಎಂದು ಸರಕಾರಕ್ಕೆ ಪತ್ರದ್ವಾರಾ ಮೊನ್ನೆ ಆಟ್ಲದಲ್ಲಿ, ಇಂದು ಭೀಮರಾತದಲ್ಲಿ, ನಾಳೆ ನಡಿಯಾದದಲ್ಲಿ ಹೀಗೆ ಸರಕಾರವು ಎಲ್ಲೆಲ್ಲಿ ದಬ್ಬಾಳಿಕೆಯ ತುಳಿತದಿಂದ ತನ್ನ ದರ್ಪವನ್ನು, ತನ್ನ ಅಧಿಕಾರವನ್ನು ತನ್ನ ಅಸ್ತಿತ್ವವನ್ನು ಸಿದ್ಧಗೊಳಿಸುವ ಯತ್ನವನ್ನು ಮಾಡುತ್ತಲಿದೆಯೋ ಅಲ್ಲಲ್ಲಿಗೆ ಗಾಂಧಿಯವರು ಹೋಗಿ ಸರಕಾರದ ದರ್ಪವು ಅಳಿದು ಹೋಗಿದೆಯೆಂದು ಜಗತ್ತಿಗೆ ತೋರಿಸಿಕೊಡುತ್ತಿದ್ದಾರೆ. ಗಾಂಧಿಯವರು ಹೋದ ಹೋದಲ್ಲೆಲ್ಲ ಬ್ರಿಟಿಶ ಸರಕಾರವು ತನ್ನ ದರ್ಪದ ಅಳಿಕೆಯಿಂದ ನಿವೃತ್ತವಾಗುತ್ತಿದೆ. ಇದರಿಂದ ಗುಜರಾಥದ ಹಳ್ಳಿಯ ಜನಗಳಿಗೆ ಬಲು ಹುರುಪು ಬಂದಿದೆ. ಗಾಂಧಿಯವರಾದರೂ ಪ್ರತಿ ಹಳ್ಳಿಗೆ ಹೋಗಿ ಅಲ್ಲಲ್ಲಿಯ ರೈತರಿಗೆ ಕಾಯಿದೆಭಂಗ ಕಲಿಸಲು ನಿರ್ಭಯದಿಂದ ಪ್ರೋತ್ಸಾಹಿಸಿ ಎಂದು ಉಪದೇಶಿಸಿ ತಾವು ಕಾಯಿದೆಭಂಗ ಮಾಡುತ್ತ ಓಡಾಡುತ್ತಿದ್ದಾರೆ. ತನ್ನ ಸರಕಾರವು ಹಿಡಿಯಗೊಳ್ಳದೆ ತನ್ನ ಸ್ವತ್ವ ಕೃತಿಯಿಂದ ಅವರಿಗೆ ತೋರಿಸಿಕೊಟ್ಟು, ಸರಕಾರದ ಗತ್ತು ಕಗ್ಗಿದೆ. ಅವರಿಗೆ ಮನಸ್ವೀಟ್ಟಾಗಿ ಮಾಡಿಕೊಳ್ಳಲು ಓಡಾಡುವ ಕಾರ್ಯಕ್ರಮವನ್ನು ಈ ರಾಷ್ಟ್ರೀಯ ವಾರದಲ್ಲಿ ಇಟ್ಟುಕೊಂಡಿದ್ದಾರೆ. ಅಲ್ಲಿಯವರೆಗೆ ಅವರ ಮುಖ್ಯ ಶಿಬಿರವು ದಾಂಡಿಯಲ್ಲಿಯೇ ಉಳಿಯತಕ್ಕದ್ದಿದೆ.

ಅಬ್ಬಾಸ ತಯಬಜಿ ' ಈ ಮಹಾತ್ಮನ ಆಶ್ರಯವನ್ನು ಬಿಟ್ಟು ನಾನು ಮತ್ತೊಂದೆಡೆಗೆ ಹೋಗುವ ಹೊರತು ನನಗೆ ಸರಕಾರವು ಹಿಡಿಯುವದಿಲ್ಲ ಮತ್ತು ಇದರಿಂದ ಏನೂ ಕಾರ್ಯವಾಗುವದಿಲ್ಲ. ಈ ಮಹಾತ್ಮನ ಆಶ್ರಯವನ್ನು ಇನ್ನು ನಾನು ಬಿಡಬೇಕು! ಎಂದು ವಿನೋದದ ಉದ್ಗಾರತೆಗೆದರು ಮತ್ತು ನಾಳೆಗೆ ನದಿಯಾದಕ್ಕೆ ತೆರಳತಕ್ಕವರಿದ್ದಾರೆ.

### ಸತ್ಯಾಗ್ರಹದ ಮೂಲಕ

## ಉಪ್ಪಿನ ಧಾರಣೆ ಇಳಿಯಿತು!

ಉಪ್ಪಿನ ಕಾಯಿದೆಭಂಗಚಳವಳಿಯು ದೇಶದಲ್ಲೆಲ್ಲ ದಿನದಿನಕ್ಕೆ ಬೆಳೆಯುತ್ತಿರುವದರಿಂದ, ಸರಕಾರಕ್ಕೆ ಕರಕೊಟ್ಟು ಮಾಲೆಗಳನ್ನು ಹಿಡಿದಿದ್ದ ಉಪ್ಪಿನ ವ್ಯಾಪಾರಸ್ಥರು, ಈ ಚಳವಳಿಯಿಂದ ಮುಂದೆ ಏನಾಗುವದೋ ಎಂದು ಗಾಬರಿಗೊಂಡು ಉಪ್ಪಿನ ಧಾರಣೆಯನ್ನು ಇಳಿಸಿ ಪೇಟೆಯಲ್ಲಿ ಮನೆಮನೆಗೆ ಉಪ್ಪನ್ನು ಹೊತ್ತು ತಂದು ಮಾರ ಹತ್ತಿರುವರು. ಮೊದಲು ಮುಂಬಯಿಯಲ್ಲಿ ಒಂದು ಪಾಯಲಿಗೆ ೧೦ ಬೆಲೆ ಇದ್ದದ್ದು ಈಗ ೫ ಬಿಲ್ಲೆಯ ಪಾಯಲಿಗೆ ಉಪ್ಪನ್ನು ಮಾರಹತ್ತಿದವರು.

### ಸತ್ಯಾಗ್ರಹಿಗಳ ಮೇಲೆ ಪೋಲೀಸರ ಪ್ರಹಾರ

ದಿಲ್ಲಿಯ ಹತ್ತಿರದ ಸೇಲಂಪುರದಲ್ಲಿ ಮೊನ್ನಿನ ಆದಿತ್ಯವಾರದಿಂದಲೂ ದಿನಾಲು ೧೦ ಜನ ಸತ್ಯಾಗ್ರಹಿಗಳು ದೇವದಾಸ ಗಾಂಧಿಯ (ಮಹಾತ್ಮಾಜಿಯವರ ಚಿರಂಜೀವ) ನೇತೃತ್ವದ ಕೆಳಗೆ ಉಪ್ಪಿನ ಕಟ್ಟಳೆಯನ್ನು ಮುರಿಯ ಹತ್ತಿದ್ದಾರೆ. ಈ ಮೊದಲಿನ ಎರಡು ದಿವಸ ಪೋಲೀಸರು ಇವರು ಕೂಡಿಸಿಟ್ಟ ಉಪ್ಪನ್ನೆಲ್ಲ ಸ್ವಲ್ಪ ರೀತಿಯಿಂದ ಅಪಹರಿಸಿಕೊಂಡು ಹೋಗಿದ್ದರು. ಈ ಹೊತ್ತು ಬಾವಲಿಗಳನ್ನು ಹಿಡಿಕೊಂಡು ಉಪ್ಪು ಕಾಯಿಸುತ್ತಿರುವ ವೇಳೆಯಲ್ಲಿ ಒಂದು ಉಪ್ಪನ್ನು ಕೊಡಿರೆಂದು ಕೇಳಲಾಗಿ, ಮಹಾತ್ಮರ ಆಜ್ಞೆಯ ಪ್ರಕಾರ ಸತ್ಯಾಗ್ರಹಿಗಳು ಕೊಡಲಿಕ್ಕೆ ಒಪ್ಪಲಿಲ್ಲ ಪೋಲೀಸರಿಗೂ ಸತ್ಯಾಗ್ರಹಿಗಳಿಗೂ

ಜಗ್ಯಾಟ ನಡೆದು ಸತ್ಯಾಗ್ರಹಿಗಳು ಜಗಟ ಹಿಡಿಯಲು ಪೋಲೀಸರು ಸತ್ಯಾಗ್ರಹಿಗಳ ತಲೆಯ ಮೇಲೆ, ಹೊಟ್ಟೆಯ ಮೇಲೆ ಎದೆಯ ಮೇಲೆ ಬೆತ್ತದಿಂದ ಮುಷ್ಟಿ ಪ್ರಹಾರ ಮಾಡಿದರು. ಇದರಿಂದ ೭ ಸತ್ಯಾಗ್ರಹಿಗಳಿಗೆ ಬಹಳ ಅಪಾಯವಾಗಿದೆ ಅವರಿಗೆ ಕೂಡಲೆ ಡಾಕ್ಟರರಿಕ್ಕೆ ಒದಗಿದ ಹೊರಸಿನ ಮೇಲೆ ಹಾಕಿ ಅವರನ್ನು ಊರಿಗೆ ತಂದಿರುವರು. ಆ ಹೊತ್ತು ಕಾಂಗ್ರೆಸ ಸಮಯಂತಿಗೆ ದೊಡ್ಡ ಸಭೆ ಸೇರಿ ಈ ಸತ್ಯಾಗ್ರಹಿಗಳನ್ನು ಅವರ ಅಹಿಂಸಾವ್ರತದ ಸಲುವಾಗಿ ಅಭಿನಂದಿಸಿ ಸ್ವಯಂಸೇವಕರಾಗಿ ಬನ್ನಿರಿ ಎಂದು ಕರೆದದ್ದಕ್ಕೆ ಅಸಂಖ್ಯ ಜನರು ಮುಂದೆ ಬಂದಿದ್ದಾರೆ.

## ಮಹಾತ್ಮಾಜಿಯವರ ಮುಂದಿನ ಯೋಜನೆ!

ಮ|| ಗಾಂಧಿಯವರು ದಂಡಿಯಲ್ಲಿ ಉಪ್ಪಿನ ಕಾಯಿದೆಯನ್ನು ಮುರಿದರು! ಆಗ್ಗೆ ಯಾವ ಪೋಲೀಸರೂ ಅವರನ್ನು ಹಿಡಿಯಲು ಮುಂದೆ ಬರಲಿಲ್ಲ. ಆಮೇಲೆ ಬಟ್ಟ ಎಂಬ ಹಳ್ಳಿಯಲ್ಲಿ— ಎಲ್ಲ ಪೋಲೀಸರು ಮನ್ನಾದಿವಸವೇ ಬನ್ನಿ ಮಣ್ಣನ್ನು ಸೇರಿದರು. ಸತ್ಯಾಗ್ರಹಿಗಳು ತಯಾರಿಸಿದ ಉಪ್ಪನ್ನು ಕಸಿದುಕೊಂಡರು— ಆಗ್ಗೆ ಜನರು 'ನಿಮ್ಮ ಸಾಮ್ರಾಜ್ಯದ ದರ್ಪವು ಅರಿಗಿದ್ದರೆ ನನ್ನನ್ನು ಹಿಡಿಯಬನ್ನಿರಿ' ಎಂದು ಸರಕಾರಕ್ಕೆ ಜಾಹೀರ ರೀತಿಯಿಂದ ಆಹ್ವಾನಿಸಿ ಉಪ್ಪಿನ ಕಾಯಿದೆಯನ್ನು ಮುರಿದರು. ಸರಕಾರವು ಅಷ್ಟರಲ್ಲಿ ಬಾಲಮುದುರಿಕೊಂಡು ಎಲ್ಲಿಯೋ ಓಡಿಹೋಯಿತು. ಗಾಂಧಿಯವರೊಡನೆ ಬೇರೆ ಹಳ್ಳಿಯ ರೈತರು ತಮ್ಮ ಹೆಂಡರು ಮಕ್ಕಳೊಡನೆ ಬಂದು ಉಪ್ಪಿನ ಕಾಯಿದೆ ವಿರುದ್ಧ ಸಮುದ್ರ ದಂಡೆಯ ಮೇಲಿನ ಉಪ್ಪನ್ನು ಆರಿಸಿದರು, ಬಿಳಿಯರನ್ನು ಕಾಡುವ ಧೈರ್ಯವು ಈ ಸರಕಾರಕ್ಕೆ— ನಿನ್ನೆ ದಿವಸವೇ ಸತ್ಯಾಗ್ರಹಿಗಳು ಉಪ್ಪನ್ನು ಕಸಿದುಕೊಂಡರು ಅಷ್ಟನ್ನು ಸೆರೆಹಿಡಿದ ಸರಕಾರಕ್ಕೆ ಧೈರ್ಯವಾಗಲಿಲ್ಲ. ಇದ್ದರಿಂದ ಗಾಂಧಿಯವರು ಇನ್ನುಮೇಲೆ ಹಳ್ಳಿಹಳ್ಳಿಗೆ ಹೋಗಿ ಅಲ್ಲಿಯ ರೈತಜನರಿಂದ ತಾವು ಸ್ವತಃ ನಿಂತು ಉಪ್ಪಿನ ಕಾಯಿದೆಯನ್ನು ಮುರಿಸುವ ಕಾರ್ಯಕ್ರಮವನ್ನು ಕೈಕೊಂಡು, ನಾಳಿನ ದಿವಸವೇ ಧೀಮಾರಾಜ ಮೊದಲಾದ ಹಳ್ಳಿಗಳಿಗೆ, ಹೋಗುವದನ್ನು ನಿಶ್ಚಯಿಸಿದ್ದಾರೆ. ಇದರಿಂದ ಗುಜರಾಥದ ಹಳ್ಳಿಗಳಲ್ಲಿ ಎಲ್ಲ ರೈತ ಜನರೂ ಉಪ್ಪಿನ ಕಟ್ಟಳೆಯನ್ನು ಧಿಕ್ಕರಿಸಿ ತಮಗೆ ಬೇಕಾದಷ್ಟು ಉಪ್ಪನ್ನು ತಾವೇ ಮಾಡಿಕೊಂಡು ಸರಕಾರದ ಉಪ್ಪಿನ ಕರವನ್ನು ತಮ್ಮ ಶಕ್ತಿಯಿಂದಲೇ ನಿಲ್ಲಿಸಿಬಿಟ್ಟಂತಾಗಿಹೋಗುವದು.

## ಹೌಸ ಆಫ್ ಕಾಮನ್ಸದಲ್ಲಿ ಗಾಂಧಿ ಚಳವಳಿಯು!

ಮೊನ್ನೆ ಹೌಸ ಆಫ ಕಾಮನ್ಸದಲ್ಲಿ ಇಂಡಿಯಾ ಸೆಕ್ರೆಟರಿಗಳಿಗೆ (ಹಿಂದುಸ್ಥಾನ ಕಾರ್ಯದರ್ಶಿಗಳಿಗೆ) 'ಮಹಾತ್ಮರ ದಂಡಿಯಾತ್ರೆಯಿಂದ ಜನತೆಯ ಮೇಲೆ ಯಾವ ಪರಿಣಾಮವಾಗಿದೆ' ಎಂದು ಪ್ರಶ್ನೆ ಕೇಳಿದ್ದಕ್ಕೆ ಕಾರ್ಯದರ್ಶಿಗಳಾದ ಬೆನ್ ಅವರು 'ಮುಂಬಯಿ ಪ್ರಾಂತದಲ್ಲಿ ಏನೋ ಕೊಂಚ ಗದ್ದಲವೆದ್ದಿದೆ, ಮಿಕ್ಕುಳಿದ ಹಿಂದುಸ್ಥಾನದ ಮೇಲೆ ಅದರಿಂದ ಯಾವ ಪರಿಣಾಮವಾಗಿದೆಂದು ಈಗಾಗಲೇ ಹೇಳಲಿಕ್ಕಾಗದೆಂ'ದು ತಿಳಿಸಿದರು. ಸಮಗ್ರ ಹಿಂದುಸ್ಥಾನವೂ ಮಹಾತ್ಮಾಜಿಯವರೊಡನೆ ಬ್ರಿಟಿಶ ಸಾಮ್ರಾಜ್ಯವನ್ನು ಬುಡಮೇಲೆ ಮಾಡಿ ಒಗೆಯುವದಕ್ಕೆ ಬಹಿರಂಗವಾಗಿ ಸವಿನಯ ಎಂಬದು ಒಂದು ನಡಿಸಿದ್ದು ಬೆನ್ನರಿಗೆ ಇನ್ನೂ ವಿದಿತವಾಗಿಲಿಕ್ಕಿಲ್ಲೇ? ಅಥವಾ ತಮ್ಮ ಸ್ವರೂಪದಾಶದ ಕಥೆಯನ್ನು ತಾವೇ ಹೇಳಬಾರದೆಂದು ಹೀಗೆ ನುಡಿದಿರಬಹುದು. ಯಾಕಂದರೆ ಈ ಶಾಂತಮಯ ಬಂಡುಗಾರರು ಬಹಿರಂಗರೀತಿಯಿಂದ ಸರಕಾರದ ಕಾಯಿದೆಗಳನ್ನೂ ಅವುಗಳ ಅಧಿಕಾರವನ್ನೂ ಧಿಕ್ಕರಿಸುತ್ತಿದ್ದರೂ ಅವರನ್ನು ಇದಿರಿಸುವ ನೈತಿಕ ಧೈರ್ಯವು ಹಿಂದುಸ್ಥಾನ ಸರಕಾರಕ್ಕೆ ಉಳಿದಿಲ್ಲವೆಂಬ ತಮ್ಮ ಅಪಮಾನವನ್ನು ತಾವೇ ಹೇಗೆ ಹೇಳಿಕೊಳ್ಳಬೇಕು? ನಂತರ ಘನರ ಬ್ರಾಕವೆ ಎಂಬುವರು 'ಹಿಂದೀಯರು ತಮ್ಮ ಸ್ವಾತಂತ್ರ್ಯಕ್ಕಾಗಿ ಘೋರವಾದ ಉಪಾಯಗಳನ್ನು ಕೈಕೊಳ್ಳುತ ಮೊದಲು ಅವರನ್ನು ಸಮಾಧಾನ ಮಾಡುವದಕ್ಕಾಗಿ ಮ|| ಗಾಂಧಿಯವರೊಡನೆ ಮಾತುಕಥೆ ನಡಿಸುವದು ಯೋಗ್ಯವಾಗಲಿಕ್ಕಿಲ್ಲೇ?' ಎಂದು ಕೇಳಿದರು. ಅದಕ್ಕೆ ಬೆನ ಸಾಹೇಬರು ಗಾಂಧಿಯವರ ಕಾಯಿದೆಭಂಗ ಚಳವಳಿಯನ್ನು ಹೇಗೆ ಮನ್ನಿಸಬೇಕೆಂಬುದನ್ನು ವೈಸರಾಯರು ತಮ್ಮ ಜಾನೆವರಿ ತಿಂಗಳಲ್ಲಿಯ ಭಾಷಣದಲ್ಲಿ ಸ್ಪಷ್ಟ ಹೇಳಿದರು. ಅದರಂತೆ ಆಚರಿಸಬೇಕೆಂದೇ ನಮ್ಮ ನಿಶ್ಚಯ ಎಂದು ಒಳ್ಳೇ ಬಿಂಕದ ಉತ್ತರ ಕೊಟ್ಟರು.

ವೈಸರಾಯರು ತಮ್ಮ ಜಾನೇವರಿಯ ಭಾಷಣದಲ್ಲಿ 'ತಮ್ಮ ಕಾಯಿದೆಗಳ ದರ್ಪವನ್ನು (ಎಂಥ ಪ್ರಸಂಗಬಂದರೂ) ನಾವು ನಮ್ಮಲ್ಲಿಯ ಸರ್ವಶಕ್ತಿಯನ್ನು ಯೋಗಿಸಿ ಕಾಯ್ದುಕೊಳ್ಳತಕ್ಕವರೇ ಎಂದು ಆಢ್ಯತೆಯಿಂದ ಹೇಳಿದ್ದರು. ಅದನ್ನೇ ಇಂದು ಬೇನ ಸಾಹೇಬರು ಹಿಂದೀಯರಿಗೆ ಮತ್ತೆ ನೆನಪುಮಾಡಿಕೊಟ್ಟರು. ಅಂದು ಉತ್ತರಿಸುವಾಗಿನಂತೆ ಮಾತಾಡಿದ ವೈಸರಾಯರೇ ಇಂದು ಗಾಂಧಿಯವರನ್ನು ಹಿಡಿಯಲು ಹೆದರುತ್ತಿರುವದೇಕೆ? ಅವರು ಹೋದಹೋದಲ್ಲಿಂದ ತಮ್ಮ ಪೋಲೀಸರನ್ನು ಹಿಂದಕ್ಕೆ ಕರಿಸಿಕೊಳ್ಳುತ್ತಿರುವದೇಕೆ? ಗಾಂಧಿಯವರನ್ನು ಮುಂದಿಟ್ಟುಕೊಂಡು ಗುಜರಾಥದ ಹಳ್ಳಿಗಳ ರೈತರೆಲ್ಲ ಒಪ್ಪರಹಿಂದೆಬ್ಬರು ಉಪ್ಪಿನ ಕಾಯಿದೆಯನ್ನು ಧಿಕ್ಕರಿಸುತ್ತಿದ್ದುದಕ್ಕೆ ೪-೮ ಜನರನ್ನು ಸೆರೆಹಿಡಿದರೆ ಕಾಯಿದೆಯ ಆಢ್ಯತೆಯನ್ನು ಕಾಯುಕೊಂಡಂತಾಯಿತೆ? ಅಖಂಡ ಹಿಂದುಸ್ಥಾನದಲ್ಲೆಲ್ಲ ಈ ಕಾಯಿದೆಭಂಗದ ಬೆಂಕಿಯು ಹಬ್ಬಿದೆ. ಅವರನ್ನೆಲ್ಲ ಮೆಟ್ಟಿ ತುಳಿಯಲು ಸರಕಾರವು ಅನುಮಾನಿಸುತ್ತಿರುವದೇಕೆ? ಅಂದು ಅಷ್ಟು ಕಠೋರತೆಯಿಂದ ಮಾತನಾಡಿದ ವೈಸರಾಯರಿಗೆ ಮತ್ತು ಅವರ ಸರಕಾರಕ್ಕೆ ಈ ಹೊತ್ತು ಒಮ್ಮೆಲೆ ಕರುಣೆ ಹುಟ್ಟಿರಲಿಕ್ಕಿಲ್ಲ. ಬೇರೆ ಆ ಬಿಂಕದ ಮಾತುಗಳು ಇಂದು ಕೃತಿಯಲ್ಲಿ ಬಾರದಿರುವದಕ್ಕೆ ಹೃದಯದಲ್ಲಿಯ ಧೈರ್ಯ ಕುಗ್ಗುತ್ತಿರುವದೇ ಕಾರಣವೆಂದು ಜನರು ತಿಳಿಕೊಳ್ಳುತ್ತಿರುವದು ಯೋಗ್ಯವಾಗಿದೆ.

ಈ ಪತ್ರಿಕೆಯು ಮಂಗಳವೇಢೆ ರಾಜಾರಾಮರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ
ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

# ಕನ್ನಡಿಗ

ಜಯಕರ್ನಾಟಕ

ನಿತ್ಯಸಂಚಿಕೆಯು.

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ಶನಿವಾರ ಮಿತಿ ಚೈತ್ರ ಶುದ್ಧ ೧೪ ಶಕ ೧೮೫೨ ತಾ ೧೨—೪—೩೦ ಸಂಚಿಕೆ ೨೦

## ಸಂಪಾದಕರ ಭೂಮಿ.

### ಸೈನಿಕರು ಸಿದ್ಧರಾಗಿರಲಿ!

ಸ್ವಾತಂತ್ರ್ಯ ಸಂಗ್ರಾಮವು ಈ ವರೆಗೆ ಗುಜರಾಥದಲ್ಲಿ ದ್ದಿತು. ಅಲ್ಲಿಂದ ಇನ್ನಿತರ ಪ್ರಾಂತಗಳಲ್ಲಿಯೂ ಪಸರಿಸಿತು. ಈ ಎಲ್ಲ ವಾರ್ತೆಯನ್ನು ನಾವು ಓದಿ ನಮ್ಮ ಮನಸ್ಸನ್ನು ಸಂತೃಪ್ತಿಗೊಳಿಸುತ್ತಲಿದ್ದೆವಷ್ಟೇ? ಈಗ ಕರ್ನಾಟಕದಲ್ಲಿಯೂ ಈ ಯುದ್ಧವು ಪ್ರಾರಂಭವಾಗುವದು. ನಾಳಿನ ರವಿವಾರ ಕರ್ನಾಟಕದಲ್ಲಿ ಎಲ್ಲೆಡೆಗಳಲ್ಲಿಯೂ ಸಾರ್ವಜನಿಕ ಸಭೆಗಳಾಗಬೇಕೆಂದು ನಮ್ಮ ಪ್ರಾಂತಿಕ ಸತ್ಯಾಗ್ರಹ ಮಂಡಲದವರು ಅಪ್ಪಣೆಕೊಡಿಸಿದ್ದಾರೆ. ಇದು ನಿನ್ನಿನ 'ಕನ್ನಡಿಗ'ನಲ್ಲಿ ಪ್ರಕಟವೂ ಆಗಿದೆ. ಆ ಪ್ರಕಾರವಾಗಿ ನಮ್ಮ ಪ್ರಾಂತದಲ್ಲಿ ಈ ಸಭೆಗಳು ಯಶಸ್ವಿಯಾದರೇನೇ, ಕರ್ನಾಟಕದಲ್ಲಿ ಸಾರ್ವತ್ರಿಕ ಕಾಯಿದೆ ಭಂಗವನ್ನು ಮಾಡಲು ನಮ್ಮ ಪ್ರಾಂತಿಕ ಸತ್ಯಾಗ್ರಹ ಮಂಡಲದವರು ಅಪ್ಪಣೆ ಕೊಡುವರು. ಹಾಗೂ ಇಂಥ ರೀತಿಯಲ್ಲಿಯೇ ಇಂಥ ದಿನ ಕನ್ನಡ ನಾಡಿನಲ್ಲಿ ಉಪ್ಪಿನ ಕಾಯಿದೆ ಭಂಗವು ಸಾರ್ವತ್ರಿಕವಾಗಿ ಪ್ರಾರಂಭವಾಗತಕ್ಕದ್ದು ಎಂಬ ಯೋಜನೆಯನ್ನು ಕನ್ನಡಿಗರ ಮುಂದಿಡುವರು. ಆ ಯೋಜನೆಯನ್ನು ಕೃತಿಯಲ್ಲಿ ತರಲು ಕನ್ನಡ ನಾಡು ಸಿದ್ಧವಿದೆಯೆಂದು ತೋರಿಸುವದು ನಾಳೆ ರವಿವಾರ ದಿನ. ಆದುದರಿಂದ ಅಂದಿನ ಸಭೆಗಳು ಅತ್ಯಂತ ಯಶಸ್ವಿಯಾಗುವಹಾಗೆ ಎಲ್ಲ ಅಭಿಮಾನಿಗಳೂ ಪ್ರಯತ್ನಿಸತಕ್ಕದ್ದು.

### ಕರಕೊಡದೆ ತಂದ ಉಪ್ಪನ್ನು ಕೊಂಡದ್ದಕ್ಕಾಗಿ

ಮೊನ್ನೆ ಬೆಳಗಾವಿಯಲ್ಲಿ ಶ್ರೀ. ಜೋಶೀ ನಾರಾಯಣರಾಯರಿಗೆ ಮ್ಯಾಜಿಸ್ಟ್ರೇಟರಿಂದ ದಂಡವಾಗಿತ್ತು. ಅವರು ಧೀರತನದಿಂದ ಆ ಜುಲ್ಮಾನೆಯನ್ನೇ ಅಂಗೀಕರಿಸಿ ಸೆರೆಮನೆಯಲ್ಲಿ ನಿಂತುಕೊಂಡಿದ್ದರು. ಆದರೆ ಅವರ ಮಿತ್ರರೊಬ್ಬರು ನಾರಾಯಣರಾಯರಿಗೆ ಹೇಳದೆ ಕೇಳದೆ, ಸರಕಾರಕ್ಕೆ ಅವರ ದಂಡದ ಹಣವನ್ನು ಸಲ್ಲಿಸಿಬಿಟ್ಟದ್ದಕ್ಕಾಗಿ ಸರಕಾರವು ಅವರನ್ನು ಜೇಲಿನಲ್ಲಿಟ್ಟುಗೊಳ್ಳದೆ ಹೊರಗೆ ಹಾಕಿರುವರೆಂಬುವದು. ಅವರ ಮಿತ್ರರ ಈ ಕೃತಿಗಾಗಿ ನಾರಾಯಣರಾಯರು ಖಿನ್ನರಾಗಿದ್ದು ಯಥಾರ್ಥವೇ ಆಗಿದೆ. ದೇಶದಲ್ಲಿ ಪ್ರತಿಯೊಬ್ಬ ಉಪದ್ವ್ಯಾಪ್ಯತನವನ್ನು ಮಾಡಿ ಅಭಿಮಾನಿಗಳ ಮನಾರಿಗೂ ಹೇಗೆ ಮಸಿಹಚ್ಚುತ್ತಾರೆಂಬುದರ ಉದಾಹರಣೆ ಇದು. ನಾರಾಯಣರಾಯರು ಸಾರ್ವಜನಿಕ ಸಭೆ ಕೂಡಿಸಿ ಇದನ್ನೆಲ್ಲ ಹೇಳಿದೆ ತನ್ನ ಮಿತ್ರನ ಅಧಿಕಪ್ರಸಂಗತನದ ಕೃತಿಯಿಂದ ತಮಗಾದ ಸಂತಾಪವನ್ನು ವ್ಯಕ್ತಗೊಳಿಸಿದರು. ಇಂಥ ಸರಕಾರದವರಾದರೂ ನಾರಾಯಣರಾಯರಂಥ ಧೀರೋದಾತ್ತರ ಬಗ್ಗೆ ಜನರ ಅನಾದರವು ಹುಟ್ಟುವಂಥ ಪ್ರಸಂಗವಿದ್ದರೆ, ಅದನ್ನು ಎಷ್ಟು ಆತುರತೆಯಿಂದ ಅಪ್ಪಿಕೊಳ್ಳುತ್ತಿದ್ದೆಂಬುದೂ ಅವರೀ ಕೃತಿಯಿಂದ ವ್ಯಕ್ತವಾಗುತ್ತದೆ. ಪರಭಾರೆ ಅಪರಾಧಿತನಲ್ಲದೆ ಯಾರಿಗೆ ಯಾರೂ ದಂಡವನ್ನು ತುಂಬಿದರೂ ಅಪರಾಧಿತನ ಒಪ್ಪಿಗೆಯನ್ನು ಕೇಳದೆ ಅದನ್ನು ಸ್ವೀಕರಿಸಿ ಅಪರಾಧಿಯನ್ನು ಬಂಧಮುಕ್ತ ಮಾಡುವಂಥ ಔದಾರ್ಯವನ್ನು ತೋರಿಸಿದ್ದಲ್ಲಿ ನಾವು ಹೇಳಿದರಕಿಂತಲೂ ಬೇರೆ ಉದ್ದೇಶವೇನಿರಬಹುದು?

### ಗಂಗಾಧರರಾಯರು ಕಾರಾಗೃಹಕ್ಕೆ ನಡೆದರು.

### ತರುಣರು ಮಾಡುವದೇನು.

ಭಾರತಿಯು ಸಿಟ್ಟಿಗೆದ್ದಿಹಳು | ನಾಡಿನ ಹಿರಿಯರ ನೋಡುತಿರೆ
ಹಿರಿಯರಿಗೆ ಮನ್ನಣೆಯು ಸಿಗದಾಗ | ಅರಸನ ಅತಿಥಿಗಳಾಗಿಹರು
ಕರಿನಾಡದಂಡ ನಾಯಕನೂ | ಕಾರಾಗ್ರಹವಸ್ಸೈದಿಹನು

ಹಿರಿಯನ ಬಾಧನ ತಡೆಗೊಟ್ಟು |
ಹರೆಯದ ಹುಡುಗರು ಎದೆಗೆಟ್ಟು |

ಕರಿನಾಡಕೀರ್ತಿಯನ್ನಳಿಸುವಿರೊ? | ಭಾರತಿಯಗುಡಿಯನುಳಿಸುವಿರೊ?
||೧||

ಮಾಗಿಯಹೊತ್ತದು ಹರೆತನವು | ಮಾರುತ ಮುಂದಾಗುವದು
ಸಾಗಿರಿಸತ್ಯದ ಶಾಳಗಳೆ | ಸಾರ್ಥಕವು ನಮ್ಮ ಹರೆತನವು
ರಣದಲ್ಲಿ ಮಡಿಯೆ ಕೀರ್ತಿಯನು | ಹೆಣವಾಗಿ ಜಗದಿ ಬಾಳುವರೆ ||

ಮುಂದಾಳು ಜಾರಿ ಹೋಗಿಹನೆಂದು |
ಮುಂದಿಟ್ಟಡಿಯನು ಹಿಂತೆಗೆದು |
ರಣಹೇಡಿಗಳೆನಿಸಾಡವರು | ಎಂದೆಂಬ ಬಿರುದುಗಳಿಸುವಿರಾ ||೨||

ಕೆಚ್ಚೆದೆಯ ಗಂಡುತನವನ್ನು | ಸಿಜಸಮರದಲ್ಲಿ ತೋರಿಸಿರಿ
ರೊಚ್ಚಿನಕಿಚ್ಚದು ಹೊಂಗೆದ್ದು | ಹೆಜ್ಜಿನ ನರಗಳಲಿ ಹರಿದಾಡಿ
ಸ್ವಾತಂತ್ರ್ಯ ಮೂರ್ತಿ ಮೋಹನನ | ಪದತತ್ವದಲ್ಲಿ ಸೂಸಾಡಿ

ಭಾರತಿಯಬಾವುಟವ ಒಡಮೂಡಿ |
ಆಳರಸರಲ್ಲಿ ಭಯಮೂಡಿ |
ಸ್ವಾತಂತ್ರ್ಯ ದೇವಿಗೆ ಸೆರೆಯಾಗಿ | ಸಾರ್ಥಕವು ನಮ್ಮ ಹರೆತನವು
||೩||

ಧನ್ಯಾತ್ಮಾ

# ಉಪ್ಪಿನ ಕಾಯಿದೆ ಭಂಗದ ಹಾಯಿಲು.

## ಅಹಮ್ಮದಾಬಾದ.

## ಸ್ತ್ರೀಯರೂ ಕಾಯಿದೆಭಂಗವೂ.

ಸೇಟ ಅಮೃತಲಾಲ, ದರಬಾರ ಗೋಪಾಲದಾಸ ಗೋಕುಲದಾಸ ಮೊದಲಾದವರ ಕಿರಿಯ ಶಿಷ್ಯರು (ಅಹಮ್ಮದಾಬಾದದ ಕ್ಷಿಯ) ಮಾರ್ಕ ಜನರಲ್ಲಿ ಕಾಯಿದೆ ಭಂಗಕ್ಕಾಗಿ ಅಪೂರ್ವ ಉತ್ಸಾಹವುಂಟಾಗಿದೆ. ೧೧೦೦ ಸ್ವಯಂಸೇವಕರು ಹೆಸರು ಕೊಟ್ಟಿರುವರು. ಇದರಲ್ಲಿ ಮುಸಲ್ಮಾನರ ಸಂಖ್ಯೆಯು ವಿಶೇಷವಾಗಿದೆ. ಹೆಂಗಸು ಮಕ್ಕಳು ಕಳ್ಳತನದಿಂದ ತಯಾರ ಮಾಡಿದ ಉಪ್ಪನ್ನು ಅವರಾಸ್ಥಳಗಳಿಂದ ಬಂಡಿಗಳಲ್ಲಿ ತುಂಬಿಕೊಂಡು ಅಹಮ್ಮದಾಬಾದದ ಓಣಿಗಳಲ್ಲಿ ಮಾರಲಿಕ್ಕೆ ಸಿದ್ಧರಾಗಿದ್ದಾರೆ. ನಾಲ್ಕು ನೂರು ಸ್ತ್ರೀಯರೇ ಉಪ್ಪನ್ನು ಮಾರಲಿಕ್ಕೆ ಹೊರಡುವರು. ಅಸಂಖ್ಯ ಕೂಲಿಕಾರರೂ ಕಾಯಿದೆ ಭಂಗಕ್ಕೆ ಸಿದ್ಧರಾಗಿ ಮುಂದೆ ಬಂದಿದ್ದಾರೆ.

### ಮುಂಬಯಿ

೮-೧೦ ಸ್ವಯಂಸೇವಕರ ತಂಡಗಳು ಸಮುದ್ರ ನೀರನ್ನು ಅಲ್ಲಿ ಬಿದ್ದಿರುವ ಉಪ್ಪನ್ನೂ ತರಲಿಕ್ಕೆ ಕಾಂಗ್ರೆಸ ಕಟ್ಟಡದಿಂದ ಪಾತ್ರೆಗಳನ್ನು ತೆಗೆದುಕೊಂಡು ಹೋಗುತ್ತಿರುವರು. ನ್ಯಾರಿಮನ್ ಬಜಾಜ ಇವರನ್ನು ಹಿಡಿಯುವದಕ್ಕೂ ಪೂರ್ವದಲ್ಲಿ ಇಂಥ ಒಂದೇ ಪಥಕವು ಹೋಗುತ್ತಿತ್ತು. ಈಗ ಹತ್ತು ಪಥಕಗಳು ಹೊರಡುತ್ತಿವೆ. ಇವರಿಗೆ ಪೋಲೀಸರ ಆತಂಕವೇನು ಇರಲಿಲ್ಲ. ಗುಂಪು ಗುಂಪಾದ ಜನರು ಸಮುದ್ರ ನೀರು ತಂದು ಸುರುವುತ್ತಿದ್ದಾರೆ. ಉಪ್ಪು ಮಾಡುವ ಕ್ರಿಯೆ ನಡೆದಿದೆ. ನ್ಯಾರಿಮನ್ನರನ್ನು ಹಿಡಿದ ಚಳವಳಿಯನ್ನು ನಿಲ್ಲಿಸಿದೆವೆಂಬ ಸಮಾಧಾನವನ್ನು ಸರಕಾರವು ತಾಳಿದ್ದರೆ, ಇದಲ್ಲ ಅವರ ಕಣ್ಣಿಗೆ ಬಿದ್ದಿರಲಿಕ್ಕಿಲ್ಲವೇನು? ಇದರೊಡನೆ ಪರದೇಶಿ ಟೊಪ್ಪಿಗೆಗಳನ್ನು ಸುಡುವ ಚಳವಳಿಯೂ ಒಳಪಿನಿಂದ ಸಾಗಿದೆ. ಇದನ್ನು ತಗ್ಗಿಸಬೇಕೆಂದು ಸರಕಾರವು ಬಲಾತ್ಕಾರದಿಂದ ಜನರ ಟೊಪ್ಪಿಗೆಗಳನ್ನು ಕಸಿದುಕೊಳ್ಳುತ್ತಿರುವದರಿಂದ, ಆವರಿಗೆ ೧೫ ರುಪಾಯಿಗಳ ಮಟ್ಟಿಗೆ ದಂಡ ಮಾಡಿದ್ದಾರೆ. ಇದರಿಂದ ಆ ಚಳವಳಿಯು ಮತ್ತಿಷ್ಟು ಶಕ್ತಿಗೆ ಬಿದ್ದಿದೆ. ಮುಂಬಯಿ ವರ್ತಕರ ಮಂಡಲದವರೂ ಎಲ್ಲ ಪರದೇಶಿ ಜವಳಿಯನ್ನು ಬಹಿಷ್ಕರಿಸಲೇಬೇಕೆಂದು ಪಣತೊಡುತ್ತಿರುವರು.

### ಸಿಂಧಪ್ರಾಂತ.

ಸಿಂಧಪ್ರಾಂತದ ತುಂಬೆಲ್ಲ ಅಸಾಧ್ಯ ಚಳವಳಿ ನಡೆದಿದೆ. ಊರೂರಿಗೆ ಸಭೆಗಳು ನಡೆಯುತ್ತಿರುವವು, ಸ್ವಯಂಸೇವಕರು ತಂಡಗಟ್ಟಿಕೊಂಡು ಹಳ್ಳಿಹಳ್ಳಿ ಅಡ್ಡಾಡಿ ಸತ್ಯಾಗ್ರಹಿಗಳನ್ನು ಕಲೆಹಾಕುತ್ತಿರುವರು. ಇಂದಿನವರೆಗೆ ಮೊದಲಿನ ಪಥಕಕ್ಕೆ ೫೦೦ ಮೇಲೆ ಸ್ವಯಂಸೇವಕರ ಸಂಖ್ಯೆ ಭರ್ತಿಯಾಗಿದೆ. ಸಿಂಧದಲ್ಲಿ ನಾಳೆ ೧೩ ನೇ ತಾರೀಖಿಗೆ ಕಾಯಿದೆಭಂಗಕ್ಕೆ ಆರಂಭ.

### ಪಂಜಾಬ.

ಜಬಲಪೂರದಲ್ಲಿ ರಸಾಯನ ಕ್ರಿಯೆಯಿಂದ ಸಾರ್ವಜನಿಕ ಸಭೆಯಲ್ಲಿ ಉಪ್ಪು ತಯಾರು ಮಾಡುತ್ತ, ಸರಕಾರದ ಕಾಯಿದೆಯನ್ನು ಧಿಕ್ಕರಿಸುತ್ತಿರುವರು. ಸೇಠ ಗೋವಿಂದದಾಸ, ಹಾಯಿ ಡೆಪ್ಯುಟಿ ಕೌನ್ಸಿಲರ ಎಂಬುವರು ಪದಾರ್ಥಗಳನ್ನು ಮಿಶ್ರಮಾಡಿ ಉಪ್ಪು ತಯಾರಿಸುತ್ತಿರುವರು. ಹೀಗೆ ತಯಾರಿಸಿದ ಉಪ್ಪನ್ನು ಅಲ್ಲಿಯೇ ಸಭೆಯಲ್ಲಿ ಮಾರುತ್ತಿರುವರು. ಇಂಥ ಒಂದು ತೊಲೆ ಉಪ್ಪಿಗೆ ನಿನ್ನೆ ೧೦೧ ರೂಪಾಯಿಗಳ ಬೆಲೆ ಬಂದಿತು.

### ಗುಜರಾನವಾಲಾ.

ರವಿನದಿಯ ದಂಡೆಗೂ ಮತ್ತು ಲಾಹೋರನಗರದ ಸುತ್ತುಮುತ್ತಲಿನ ಸೀಮೆಯಲ್ಲಿಯೂ ಇರುವ ಮಣ್ಣಿನಿಂದ ಉಪ್ಪನ್ನು ತಯಾರು ಮಾಡಬೇಕೆಂದು, ಗುಜರಾನವಾಲಾದಲ್ಲಿ ಕೂಡಿದ ಸಮ್ಮೇಳನದಲ್ಲಿ ನಿರ್ಣಯವಾಗಿದೆ. ಸಮ್ಮೇಳನದಲ್ಲಿ ಈ ಠರಾವನ್ನು ಅನುಮೋದಿಸುವಾಗ ಡಾ॥ ಕಿಚಲೂ ಇವರು ಪಂಜಾಬಿಗಳೆಲ್ಲರೂ ಈ ಕಾಯಿದೆ ಭಂಗದಲ್ಲಿ ಭಾಗಿಗಳಾಗಬೇಕೆಂದು ಹೇಳಿ "ಸ್ವೈರಾಚಾರಿ ಸರಕಾರ ಇಂಥ ದೊಡ್ಡ ಅಧಿಕಾರಗಳಿಗೆ ನಾನು ಆಹ್ವಾನ ಮಾಡುತ್ತೇನೆ" ನಿಮ್ಮಲ್ಲಿ ಸಾಮರ್ಥ್ಯವಿದ್ದರೆ ನಮ್ಮೆಲ್ಲರನ್ನೂ ಒಂದು ವೇಳೆಯನ್ನು ಬಿಡದೆ ಹಿಡಿದು ಬಂಧಿಸಿರಿ, ಇಲ್ಲವಾದರೆ ನಮ್ಮ ರಾಷ್ಟ್ರೀಯ ಧ್ವಜಕ್ಕೆ ಬಂದು ನಮೋ ಎನ್ನಿರಿ. ನಮ್ಮನ್ನು ಅಲ್ಲಿಗೊಬ್ಬನನ್ನು, ಇಲ್ಲಿಗೊಬ್ಬನನ್ನು ಹಿಡಿಯುವದರಿಂದೇನು ಆಗಬೇಕಾಗಿದೆ" ಎಂದು ಭಾಷಣಮಾಡಿದರು.

### ಲಾಹೋರ.

ಇಲ್ಲಿ ೧೧ನೇ ತಾರೀಖಿನ ೫ ಘಂಟೆಗೆ ಉಪ್ಪಿನ ಕಟ್ಟಳೆಯನ್ನು ಮುರಿದರು. ಜಾಲಿಯಾನ ವಾಲಾಬಾಗದಲ್ಲಿ ದೊಡ್ಡ ಸಭೆ ಸೇರಿ ನಾಳೆಗೆ ಮುರಿಯುತ್ತಲಿರುವರು.

### ಮಧ್ಯಪ್ರಾಂತ.

ನಾಗಪೂರದಿಂದ ನಿನ್ನೆ ಒಂದು ಸ್ವಯಂಸೇವಕರ ಪಥಕವು ಅಕೋಲಾ ಜಿಲ್ಲೆಯಲ್ಲಿರುವ ದಹಿಹಂಡ ಎಂಬಲ್ಲಿಗೆ ಉಪ್ಪು ಮಾಡಲಿಕ್ಕೆ ಹೊರಟಿತು.

### ಸಂಯುಕ್ತ ಪ್ರಾಂತ.

ರಾಯಬರೇಲಿಯಲ್ಲಿ ಹಾಳುಮನೆಗಳ ಮಣ್ಣಿನಿಂದ ಉಪ್ಪು ತಯಾರ ಮಾಡಿ ಉಪ್ಪಿನ ಕಾಯಿದೆಯನ್ನು ಮುರಿದರು. ಪಂಡಿತ ಮೋತಿಲಾಲರು ಅಂಥ ಮಣ್ಣಿನಿಂದಲೇ ಸ್ವತಃ ಒಂದು ತೊಲೆ ಉಪ್ಪು ತಯಾರ ಮಾಡಿದರು. ಪೋಲೀಸರು ಯಾರೂ ಬಂದಿದ್ದಿಲ್ಲ.

### ಕಾಶಿ

ಉಪ್ಪನ್ನು ತಯಾರ ಮಾಡಲಿಕ್ಕೆ ಮೊದಲೇ ಸಿದ್ಧಪಡಿಸಿದ ಸ್ಥಳಕ್ಕೆ ಮೊನ್ನಿನ ದಿವಸದಿಂದಲೂ ದಿನಾಲು ಸ್ವಯಂಸೇವಕರು ಧ್ವಜಪತಾಕೆಗಳ ಮೆರವಣಿಗೆಯಿಂದ ಹೋಗಿ ಅಲ್ಲಿ ಪ್ರಚಂಡ ಜನಸಮೂಹವು ಆತುರತೆಯಿಂದ ನೋಡುತ್ತ ಕುಳಿತಿರುವಾಗಲೆ ಉಪ್ಪು ತಯಾರು ಮಾಡುತ್ತಿರುವರು. ಇನ್ನೂ ವರೆಗೆ ಪೋಲೀಸರ ಹಾವಳಿಗೆ ಪ್ರಾರಂಭವಿಲ್ಲ.

### ಅಲ್ಲಹಾಬಾದ

ಇದೇ ತಿಂಗಳ ೧೯ನೇ ತಾರೀಖಿಗೆ ಅಲ್ಲಹಾಬಾದ ಮುನಿಸಿಪಾಲಟಿ ಅಧ್ಯಕ್ಷರಿಯೇ ಒತ್ತಟ್ಟಿಗೆ ಉಪ್ಪಿನ ಕಾಯಿದೆಯನ್ನು ಮುರಿಯಬೇಕೆಂದು ನಿಶ್ಚಯಿಸಿದ್ದಾರೆ. ಅಲ್ಲಹಾಬಾದ ಊರಲ್ಲಿಯೇ ೧೦೩ ಸ್ವಯಂಸೇವಕರು ಸಿದ್ಧರಾಗಿದ್ದಾರೆ. ಶ್ರೀ ಸತ್ಯಾಗ್ರಹಿಗಳ ಕಳಗೆ ಶ್ರೀಮತಿ ಕಮಲಾ ನೇಹರು(ಜವಾಹರಲಾಲರು)ಪತ್ನಿಯವರು ಇವರೇ ಮೊದಲಾದ ನೆಹರು ಮನೆತನದ ಎಲ್ಲ ಹೆಣ್ಣು ಮಕ್ಕಳು ಹೆಸರು ಕೊಟ್ಟಿದ್ದಾರೆ, ಮುಸಲ್ಮಾನರ ಹೆಸರುಗಳೂ ಇವೆ.

### ಮದ್ರಾಸ.

ಗುಂಟೂರದಲ್ಲಿ ೩೦೦ ಸ್ವಯಂಸೇವಕರ ತಂಡವು ನಿನ್ನೆ ಉಪ್ಪು ತಯಾರಿಸಿ ಉಪ್ಪಿನ ಕಾಯಿದೆಯನ್ನು ಮುರಿಯಿತು. ಪೋಲೀಸರ ಆತಂಕವೇನಲವೂ ಆಗದೆ.

### ಕೇರಳ ಪ್ರಾಂತ

ಸತ್ಯಾಗ್ರಹಿಗಳ ದೊಡ್ಡದೊಂದು ಗುಂಪು ಕಲ್ಲಿಕೋಟೆ ಪಟ್ಟಣದಿಂದ ಹೊರಟು ಮಾರ್ಗದ ಪ್ರದೇಶದಲ್ಲೆಲ್ಲ ಜನಜಾಗೃತಿಯ ಪ್ರಚಾರಮಾಡಿ ಉಪ್ಪು ಮಾಡಲಿಕ್ಕೆ ನಾಳೆ ೧೩ನೇ ತಾರೀಖಿಗೆ ಹೊರಟದೆ.

### ಆಂಧ್ರದೇಶ.

ಆಂಧ್ರದೇಶದ ಸರ್ವಾಧಿಕಾರಿಯವರ [illegible] ಎಲ್ಲ ಕಡೆಯಲ್ಲಿಯೂ ೬ನೇ ತಾರೀಖಿನ ದಿನವೇ ಕಾಯಿದೆಭಂಗ ಮಾಡತಕ್ಕದ್ದೆಂದು ಒತ್ತರದ ಹುಕುಂ ಹೊರಡಿಸಿದ್ದಾನೆ. ಮೊದಲು ೧೩ನೇ ತಾರೀಖಿನ ದಿನ ಮಾಡಬೇಕೆಂದು ನಿರ್ಣಯಿಸಿದ್ದಕ್ಕೆ "[illegible]" ಎಂದು ೮ ದಿವಸ ಮೊದಲು ಹಾಕಿದರು!

(ಶಂತಿಯಿಂದ ಬಂದವಾರ್ತೆ)

## ಮುಂಬಯಿ ಕಾಂಗ್ರೆಸ್ ಮಂದಿರಕ್ಕೆ ಮುತ್ತಿಗೆಹಾಕಿ
## ಇನ್ನೂರು
# ಪೋಲೀಸರು ಒಮ್ಮೆಲೆ ಒಳನುಗ್ಗಿದರು

ನೊನ್ನೆ ಸಾಯಂಕಾಲ ಮುಂಬಯಿ ಪೋಲೀಸರು ಅಲ್ಲಿಯ ಂಗ್ರೆಸ್ ಮಂದಿರದ ಮೇಲೆ ದಾಳಿಯನ್ನಿ ಒಮ್ಮೆಲೆ ೨೦೦ ಲೀಸರೂ ಒಳನುಗ್ಗಿ ಅಲ್ಲಿಯ ಉಪ್ಪಿನ ಮೂಟೆಗಳನ್ನು ಡೆದು ಹಾಳುಮಾಡಿದರು. ಈ ಕಾಲಕ್ಕೆ ಅಲ್ಲಿದ್ದ ಮಹಿಳೆಯರು ತೀ ಧೈರ್ಯದಿಂದ ಈ ಪೋಲೀಸರ ವಿಧ್ವಂಸಕ ಕಾರ್ಯಕ್ಕೆ ಡೆಯನ್ನುಂಟುಮಾಡಿ, ನಾರಿಯರಲ್ಲಿಯೂ ಉಜ್ವಲವಾದ ವೀರ ವೃತ್ತಿಯು ಎಲ್ಲರ ದೃಗ್ಗೋಚರಕ್ಕೆ ತಂದುಕೊಟ್ಟರು. ಅವರ ಶೌರ್ಯದ ಆ ಸಾಹಸವನ್ನು ಕಂಡವರೆಲ್ಲ ಆ ವೀರ ಮಾನಿನಿ ಯರನ್ನು ಹೊಗಳದೆ ಇರರು. ಆದಾಗ್ಯೂ ಪೋಲೀಸರು ತಮ್ಮ ರ್ಯವನ್ನು ತಾವು ಮಾಡಿಯೇ ಹೊರಬಿದ್ದರು ಆ ಕಾಂಗ್ರೆಸ ಮಂದಿರದಲ್ಲಿ ಉಪ್ಪು ತಯಾರಿಸುವದಕ್ಕಾಗಿ ಇಟ್ಟಿದ ಮಡಿಗಳ ಲ್ಲ ಒಡೆದು ಅಲ್ಲಿದ್ದ ೪-೫ ಮಣ ಉಪ್ಪನ್ನು ಲೂಟಿಮಾಡಿ ದರು.

### ಕಾಂಗ್ರೆಸ್ ಮುಂದಾಳುಗಳ ಕೈಸೆರೆ!

ಅಲ್ಲಿಯೇ ಇದ್ದ ಮಿ॥ ಅಬಿದಅಲಿ, ಮಿ॥ ಮೆಹೆರಅಲಿ, ಮಿ॥ ಸಾದಿಕ್ ಈ ಮೂವರನ್ನು, ಯುವಕ ಸಂಘದ ಮತ್ತು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳನ್ನು ಕೈಸೆರೆಮಾಡಿ ಕೊಂಡು ಹೋದರು. ಮರುದಿನದ ದಿವಸ ಅವರ ಅಪರಾ ದ ವಿಚಾರಣೆಯಾಗಿ ಮೂವರಿಗೂ ಕಾರಾಗ್ರಹವಾಸದ ಶಿಕ್ಷೆ ಧಿಸಲಾಗಿದೆ, ಅಬಿದಅಲಿ ಇವರಿಗೆ ೬ ತಿಂಗಳ, ಮೆಹೆರಅಲಿ ವರಿಗೆ ೪ ತಿಂಗಳು ಸಾದಿಕ್ ಇವರಿಗೆ ೨ ತಿಂಗಳ ಈ ಪ್ರಕಾರ ಜೆ ಆಗಿದೆ.

### ಮಹಾತ್ಮರು ಬೇಗನೆ ಮುಂಬಯಿಗೆ ಬರುವರು.

ಮಹಾತ್ಮಾ ಗಾಂಧಿಯವರು ಬೇಗನೆ ಮುಂಬಯಿಗೆ ಬರ ಲಿಕ್ಕವರೆಂಬ ವಾರ್ತೆ ಹರಡಿದೆ. ಆದರೆ ಈ ರಾಷ್ಟ್ರೀಯ ವಾರ ಮುಗಿಯುವವರೆಗೆ ಅವರು ದಂಡಿಯ ಶಿಬಿರ ಬಿಟ್ಟು ದೂರ ಬರುವದಿಲ್ಲೆಂದು ಅವರ ಭೆಟ್ಟಿಗೆ ಬಂದ ಮುಂಬಯಿ ವರ್ತಕರಿಗೆ ಹೇಳಿದ್ದಾರೆ. ರಾಷ್ಟ್ರೀಯ ವಾರವು ಮುಗಿದನಂತರ ಒಂದು ದಿನ ಬಿಡುವು ಮಾಡಿಕೊಂಡು ಬರುತ್ತೇನೆಂದೂ ಹೇಳಿ ದ್ದಾರೆ.

### ಮಹಾತ್ಮರಿಗೆ ಜಾಡ್ಯವಾಗಿದೆ.

ಗುರುವಾರ ರಾತ್ರಿ ನಿದ್ರೆ ಇಲ್ಲದ್ದಕ್ಕಾಗಿ ಮಹಾತ್ಮರಿಗೆ ನೆಟ್ಟ ಸ್ವಾಸ್ಥ್ಯವಿಲ್ಲದಾಗಿದೆ. ಕಾರಣ ನಿತ್ಯದಂತೆ ಹಳ್ಳಿಗಳಿಗೆ ಅವರು ಹೋಗಲಿಲ್ಲ. ಆದರೂ ಅಲ್ಲಿಯ (ಕರಾಡ ಮತ್ತು ಮಾಟ ವಡ) ಜನರು ಸತ್ಯಾಗ್ರಹಿಗಳೊಡನೆ ಉಪ್ಪನ್ನು ಕದ್ದು ಮನೆಗೆ ತಕ್ಕೊಂಡುಹೋಗಿ ಅದರ ಕೆಲವು ಭಾಗವನ್ನು ತಮ್ಮ ಹಳ್ಳಿಗಳಲ್ಲಿ ಮಾರಿದರು. ಪೋಲೀಸರ ಪೆಂಪ್ಲು ಇರಲಿಲ್ಲ.

### ಆಟ್ಟವಲ್ಲಿ ೧೦೦೦ ಮಣ ಉಪ್ಪು ಕೂಡಿಟ್ಟಿವೆ.

ಆಟ್ಟದಲ್ಲಿಯ ಸತ್ಯಾಗ್ರಹಿಗಳೂ ಸುತ್ತಲಿನ ಹಳ್ಳಿಯ ನಿವಾಸಿ ಗಳೂ ದಿನಾಲು ಉಪ್ಪನ್ನು ಕಾಯಿಸುವ ಕೃತಿಯನ್ನು ನಡೆಸೇ ಇರುವರು. ಅಲ್ಲಿ ಈಗ ೧೦೦೦ ಮಣ ಉಪ್ಪು ಸಂಗ್ರಹವಾಗಿದೆ, ಇದಲ್ಲದೆ ಸ್ವಯಂ ಸೇವಕರು ೧೦೦ ರುಪಾಯಿಗಳ ಉಪ್ಪನ್ನು ಮಾರಿರುವರು.

## ದಿಲ್ಲಿಯಲ್ಲಿಯ ಮುಖಂಡರನ್ನೆಲ್ಲ ಒಟ್ಟಿಗೆ ಸೆರೆಹಿಡಿದರು.
## ದೇವೀದಾಸ ಗಾಂಧಿಯು ಸೆರೆಯಾಳಾಗಿರುವನು.

ದಿಲ್ಲಿಯ ಹತ್ತಿರ ಶಹರಾದ ಎಂಬಲ್ಲಿ ಮಹಾತ್ಮಾಜಿಯ ಕೊನೆಯ ಮಗನಾದ ದೇವೀದಾಸನು ಹತ್ತರಷ್ಟು ಸ್ವಯಂಸೇವಕ ರೊಂದಿಗೆ ರಾಷ್ಟ್ರೀಯ ವಾರದ ಪ್ರಾರಂಭದಿಂದಲೂ ಉಪ್ಪು ಮಾಡುತ್ತಿದ್ದರಷ್ಟೇ! ನೊನ್ನೆ ಇವರ ಕೈಯೊಳಗಿನ ಉಪ್ಪನ್ನು ಕಿತ್ತುಕೊಳ್ಳುವದಕ್ಕಾಗಿ ಪೋಲೀಸರು ಅತ್ಯಂತ ಶಾಂತರೀತಿ ಯಿಂದ ಈ ಸತ್ಯಾಗ್ರಹಿಗಳನ್ನು ಪೈಮಾರಿ ಥಳಿಸಿದರು. ಅದ ರಿಂದ ತೃಪ್ತರಾಗದೆ ಈ ಹೊತ್ತು ಎಲ್ಲರನ್ನು ೧೨೪ (ಅ) ಕಲ ಮಿನ ಪ್ರಕಾರ ಅಪರಾಧ ನಡೆಸಿರುವರೆಂಬ ಆರೋಪದಿಂದ ಹಿಡಿದೊಯ್ದರು! ಮಹಾತ್ಮರ ಮಕ್ಕಳೊಳಗೆ [ರಾಮದಾಸನು ಈಗಾಗಲೇ ಸೆರೆಮನೆಯಲ್ಲಿದ್ದಾನೆ! ಈ ದೇವಿದಾಸನು ಎರಡನೆ ಯವನು.

ಲಾಲ ಶಂಕರಲಾಲ, ಶ್ರೀಮತಿ ಸತ್ಯವತಿದೇವಿ, ಪಾರ್ವತಿ ದೇವಿ. ಮಿ॥ ಎಮ್. ಎಚ್. ಅಸಫಾ, ಲಾಲಾ ದೇಶಬಂಧು, ಇನ್ನೂ ಅನೇಕ ದಿಲ್ಲಿಯ ಮುಖಂಡರನ್ನು ೧೨೪ ಕಲಮಿನ ಪ್ರಕಾರ ಹಿಡಿದಿದ್ದಾರೆ ಇಂದಿನ ವರೆಗೆ ಸರಕಾರದವರು ತಮ್ಮ ಹೆಂಣುಮಕ್ಕಳಿಗೆ ಕೈಹಚ್ಚಿರಲಿಲ್ಲ. ಈಗ ಅದೂ ಆರಂಭವಾ ಯಿತು! ಇವರ ಪಾಪದ ಬಟ್ಟಲು ತೀವ್ರ ತುಂಬಬೇಕಾಗಿದೆ ಯಲ್ಲವೇ?

# ಕಾಯಿದೆ ಭಂಗ ಸಂಗ್ರಾಮದ ಹುಯಿಲು.

## ಆಂಧ್ರ.

ಕಾಕಿನಾಡಿನಲ್ಲಿ ಶ್ರೀ. ಸಾಂಬಮೂರ್ತಿಯು ಪೋಲೀಸರ ಸಾಕ್ಷಿಯನ್ನಿಟ್ಟುಕೊಂಡು ೧೦೦೦೦ ಜನರು ನೆರೆದಿರುವ ಆ ಸಂದಣಿಯಲ್ಲಿ ತನ್ನ ೫ ಸತ್ಯಾಗ್ರಹಿ ವೀರರೊಡನೆ ಸಮುದ್ರ ನೀರನ್ನು ಕುದಿಸಿ ಉಪ್ಪು ತಯಾರುಮಾಡಿ ಉಪ್ಪಿನ ಕಾಯಿದೆಯನ್ನು ಮುರಿದನು. ತಯಾರಿಸಿದ ಉಪ್ಪನ್ನು ತಮ್ಮ ಶಿಬಿರಕ್ಕೆ ಒಯ್ದು ಸಾಯಂಕಾಲದ ಸಭೆಯಲ್ಲಿ ಇದನ್ನು ಎಲ್ಲರಿಗೆ ತೋರಿಸಿ, ಇದನ್ನು ನಾವು ಅಗ್ನಿ ಸಾಕ್ಷಿಯಾಗಿ ಮಾಡಿದ್ದೇವೆ. ಮತ್ತು ನಮಗೆ ಸ್ವತಂತ್ರ್ಯ ಸಿಗುವವರೆಗೆ ದಿನಾಲು ೫ ಸತ್ಯಾಗ್ರಹಿಗಳ ತಂಡವು ಕಳಿಸುತ್ತ ಈ ಚಳವಳಿಯನ್ನು ರಕ್ಷಿಸಿ ಉಪ್ಪು ಮಾಡುತ್ತ ಹೋಗುತ್ತೇವೆಂದು ಹೇಳುವರು.

## ವಿರಾರ.

ಸತ್ಯಾಗ್ರಹಕ್ಕಾಗಿ ಜನರಲ್ಲಿ ಜಾಗ್ರತಿಯನ್ನುಂಟುಮಾಡಲು ಊರಲ್ಲಿ ಮೆರವಣಿಗೆಯನ್ನೊಂದು ಹೊರಡಿಸಿ ಸಾಯಂಕಾಲದಲ್ಲಿ ಸಭೆಯಿಟ್ಟಿದ್ದರು. ಆ ಸಭೆಯಲ್ಲಿಯ ೧೦೦ ಸತ್ಯಾಗ್ರಹಿಗಳ ಹೆಸರು ಕೊಟ್ಟಿದ್ದಲ್ಲದೆ ೧೦೦೦ ರೂಪಾಯಿಗಳು ನಗದಾಗಿ ಬಂದವು. ನಾಳೆಗೆ ಉಪ್ಪಿನ ಕಟ್ಟೆಯನ್ನು ಮುಂದುಗೊಡಲು ಈ ಸತ್ಯಾಗ್ರಹಿಗಳು ಹೊರಡತಕ್ಕವರು.

## ಕರ್ನಾಟಕ.

೧೩ನೇ ತಾರೀಖಿನ ದಿವಸವೆ ಅಂಕೋಲೆಯಲ್ಲಿ ಉಪ್ಪು ತಯಾರಮಾಡುವ ಕ್ರಮವು ಪ್ರಾರಂಭವಾಗುವದು.

**ಅಂಚಿ ಸುಟ್ಟದ್ದಕ್ಕೆ ದುಂಡುಬಡಿಗೆಯ ಏಟುಗಳು.**

ಭೂಲೇಶ್ವರದಲ್ಲಿ ( ಮುಂಬಯಿ ) ಸತ್ಯಾಗ್ರಹ ಸಭೆ ಮುಗಿಸಿಕೊಂಡು ಜನರು ತಿರುಗಿ ಬರುತ್ತಿರುವಾಗ ಪರದೇಶಿ ಬಟ್ಟೆಗಳ ಹೋಳಿ ಮಾಡಬೇಕೆಂದು ಆ ಜನಗಳಿಗೆ ಹುಕಿ ಬಂದು ಅಲ್ಲಿಯೇ ಪರದೇಶಿ ಟೊಪ್ಪಿಗೆಗಳನ್ನು ಕೊಡಿರೆಂದು ಬೇಡಿಕೊಳ್ಳಹತ್ತಿ ಅವುಗಳ ದೊಡ್ಡದೊಂದು ಗುಂಪು ಕೂಡಿಸಿ ಬೀದಿಯು ನಡುವೆಯೇ ಆ ಗುಂಪಿಗೆ ಬೆಂಕಿ ಹಚ್ಚಿಬಿಟ್ಟರು. ಇದು ಅಲ್ಲಿದ್ದ ಪೋಲೀಸರಿಗೆ ಸಹನವಾಗದೆ ಜನರನ್ನು ಚದುರಿಸಹತ್ತಿದರು. ಜನರು ಮಿಸುಕಲಿಲ್ಲ ಅಲ್ಲಿಯೇ ಮತ್ತೆ ಆ ಹೋಳಿಯಲ್ಲಿ ಟೊಪ್ಪಿಗೆ ಕೋಟು ಮುಂತಾದವುಗಳನ್ನು ಒಗೆಯುತ್ತಿದರು. ಆ ಮೇಲೆ ಪೋಲೀಸರು ತಮ್ಮ ಹಂಟರಗಳಿಂದ ( ದುಂಡು ಬಡಿಗೆಗಳಿಂದ ) ಜನರನ್ನು ಥಳಿಸಹತ್ತಿದರು, ಅನೇಕ ಜನರು ಗಾಯಹೊಂದಿರುವರು

## ಅಲಹಾಬಾದ.

ರಾಷ್ಟ್ರೀಯ ವಾರದ ನಿಮಿತ್ತ ಆದ ಸಭೆಯಲ್ಲಿ ಪಂ. ಮೋತಿಲಾಲ ನೆಹರು ಇವರು ಸತ್ಯಾಗ್ರಹದ ಮತ್ತು ಕಾಯಿದೆಭಂಗ ಮರ್ಮವನ್ನೆಲ್ಲ ತಿಳಿಸಿ ಹೇಳಿ ೧೦ನೇ ತಾರೀಖಿನ ದಿನ ಅಲಹಾಬಾದದಲ್ಲಿಯು ಉಪ್ಪಿನ ಕಾಯಿದೆಭಂಗವನ್ನು ಮಾಡುವದು ಗೊತ್ತಾಗಿದೆಂದು ಜನರಿಗೆ ಹೇಳಿದರು.

## ಅಹ್ಮದಾಬಾದ

ವಿಲೆಪಾರ್ಲೆಯಲ್ಲಿ ಹೆಣ್ಣುಮಕ್ಕಳೇ ಉಪ್ಪು ಮಾರಹತ್ತಿರುವರು.

ಸೇನಗುಪ್ತರು ನಾಳೆ ೧೩ನೇ ತಾರೀಖಿನ ದಿವಸ ಅಂದರೆ ಜಲಿಯಾನವಾಲಾಬಾಗದ ಕೊಲೆಯಾದ ದಿವಸವೇ ಕಲಕತ್ತೆಯಲ್ಲಿ ಕರಕೊಡದೆ ತಂದ ಉಪ್ಪನ್ನು ಮಾರಲುಪಕ್ರಮಿಸುವರು.

## ಶಿರೂರ,

ಬಾಗಲಕೋಟೆ ಕಾಂಗ್ರೆಸ ಕಮಿಟಿಯ ಪ್ರಚಾರಕರಾದ ಹುಂಡೇಕಾರ ಇವರು ನಿನ್ನಿನ ದಿವಸ ಇಲ್ಲಿಗೆ ಬಂದಿದ್ದು ೨ ಪೇಟೆಗಳಲ್ಲಿ ಸೈತ ಸಭೆ ಕರೆದು ಸತ್ಯಾಗ್ರಹದ ಬಗ್ಗೆ ಭಾಷಣಮಾಡಿದರು. ಅವರ ಮಾತುಕೇಳಿ ೭ ಜನ ತರುಣರು ಸತ್ಯಾಗ್ರಹಕ್ಕೆ ಹೊರಡಲು ಸಿದ್ಧರಾಗಿದ್ದಾರೆ.

---

## ಸವದತ್ತಿ.

ಇಲ್ಲಿ ನಿನ್ನೆ ಜಾಹೀರ ಸಭೆಯಾಗಿ ದೇಶಭಕ್ತ ಗಂಗಾಧರರಾಯರು ಸೆರೆ ಒಳಹೊಕ್ಕದ್ದಕ್ಕೆ ಅವರನ್ನು ಅಭಿನಂದಿಸಿದರು. ಮತ್ತು ಯಾವ ಕಾಯಿದೆಭಂಗಕ್ಕಾಗಿ ಗಂಗಾಧರರಾಯರನ್ನು ಸರಕಾರವು ಸೆರೆ ಹಿಡಿದಿತ್ತೋ ಅದೇ ಅಪರಾಧವನ್ನು ಅಂದರೆ ಕರ ಕೊಡದೆ ತಂದ ಉಪ್ಪನ್ನು (ದಯಾನಂದ ಅಂಗಡಿ ಇವರು ಬೆಳಗಾವಿಯಿಂದ ತಂದದ್ದನ್ನು ) ಆ ಸಭೆಯಲ್ಲಿಯೂ ಮಾರಿದರು. ಅದನ್ನು ಶ್ರೀ ಕಣಮುಂಡಿ ಗೋವಿಂದರಾಯರು ೮ ಆಣೆಗಳಿಗೆ ಕೊಂಡುಕೊಂಡರು. ಅದೇ ಸಭೆಯಲ್ಲಿ ೩-೬-೯ ರೂಗಳು ೮೦. ಸೆ ದಂಡ ವರೆಗೆ ಭಿಕ್ಷೆಬಂದಿತು.

## ಆದಿತ್ಯರಿಂದ ಗೊತ್ತುವಳಿ

ನಾಳೆ ಭಾನುವಾರ ದಿನ ಸಾಯಂಕಾಲ ೫ ಘಂಟೆಗೆ ಕರ್ನಾಟಕದ ಎಲ್ಲ ಹಳ್ಳಿಪಟ್ಟಣಗಳಲ್ಲಿಯೂ ಸಭೆಗಳಾಗಬೇಕಾಗಿವೆ. ಕರ್ನಾಟಕದ ರಣಕ್ಷೇತ್ರವಾದ ಅಂಕೋಲೆಯಲ್ಲಿ ಆ ದಿನ ದಿನ ನಮ್ಮ ತರುಣರು ಮಾಡಲಿರುವ ಕಾಯಿದೆಭಂಗಕ್ಕೆ ಎಲ್ಲ ಕನ್ನಡಿಗರ ಸಂಪೂರ್ಣ ಬೆಂಬಲವಿದೆಂದು ಪ್ರಕಟಗೊಳಿಸಬೇಕು. ಕಾರಣ ಕೆಳಗಿನ ಈ ಠರಾವನ್ನು ಎಲ್ಲ ಸಭೆಯವರು, ಅನುಮೋದಿಸಬೇಕು:—

(ಊರ ಹೆಸರು ) ನಾಗರಿಕರ ಈ ಸಭೆಯು ಅಂಕೋಲೆಯಲ್ಲಿಯ ಸತ್ಯಾಗ್ರಹಿಗಳನ್ನು ಮನಃಪೂರ್ವಕ ಅಭಿನಂದಿಸಿ ಅವರು ಆರಂಭಿಸಿದ ಈ ಪವಿತ್ರವಾದ ಧರ್ಮ ಯುದ್ಧದಲ್ಲಿ ಅವರಿಗೆ ತನ್ನ ಸಂಪೂರ್ಣ ಬೆಂಬಲವಿದೆಂದು ಆಶ್ವಾಸನವನ್ನೀಯುತ್ತಿದೆ.

## ಗುಳೇದಗುಡ್ಡ

ಗುರುವಾರ ತಾ॥ ೧೦ ನೆಯ ದಿವಸ ಗುಳೇದಗುಡ್ಡದಲ್ಲಿ ಸಾರ್ವಜನಿಕ ಸಭೆಯಾಯಿತು. ರಾಷ್ಟ್ರೀಯ ವಾರದ ಈ ನಾಲ್ಕನೆಯ ದಿನದಲ್ಲಿ ವ್ಯಾಖ್ಯಾನ ಕೊಡಲು ಬಾಗಲಕೋಟೆಯಿಂದ ಮಂಗಳವೇಢೆ ಶ್ರೀನಿವಾಸರಾಯರು ಬಂದಿದ್ದರು. ೫-೬ ನೂರು ಜನರು ಸೇರಿದ್ದರು. ೧॥ ಘಂಟೆಯವರೆಗೆ ಸಭೆ ನಡೆಯಿತು; ಕಡೆಗೆ ಪರದೇಶಿ ಬಟ್ಟೆಗಳ ಹೋಳಿಯಾಯಿತು.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

ಜಯಕರ್ನಾಟಕ

ನಿತ್ಯಸಂಚಿಕೆಯು.

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ರವಿವಾರ ಮಿತಿ ಚೈತ್ರ ಶುದ್ಧ ೧೫ ಶಕ ೧೮೫೨ ತಾ ೧೩—೪—೩೦ ಸಂಚಿಕೆ ೨೧

## ಸಂಪಾದಕರ ಭೂಮಿ

ನನ್ನ ದೇಹವು ನಿನ್ನ ವೀರಶಾಸನವಾಗಿ।
ಕಣ್ಣನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೋ

## ಸ್ತ್ರೀಯರೇ ಪ್ರಮುಖರಾಗಿರುವರು!

ಪಹಾತ್ಮರಿಂದ ಆರಂಭಿಸಲ್ಪಟ್ಟ ಈ ಧರ್ಮಯುದ್ಧವು ಸಾತ್ವಿಕ ಸ್ವಭಾವಿಗಳಾದ ನಮ್ಮ ಆರ್ಯಮಹಿಳೆಯರಿಗೆ ಒಳ್ಳೇ ಉತ್ಸಾಹಕಾರಿಯಾಗಿದೆ. ದೇಶೋದ್ಧಾರಕ ಕಾರ್ಯಗಳಲ್ಲಿ ಅವರು ಈಗಿನಷ್ಟು ಸಹಕಾರಿತ್ವವನ್ನು ಹಿಂದೆ ಎಂದೂ ಪ್ರದರ್ಶಿಸಿರಲಿಲ್ಲ. ಮಹಾತ್ಮರಾದರೂ ಅವರ ಶುದ್ಧಾಂತಃಕರಣದ ಬೆಂಬಲದ ಮೇಲೆಯೇ ಹೆಚ್ಚು ಶ್ರದ್ಧೆಯುಳ್ಳವರಾಗಿರುವರು. ಈಗ್ಗೆ ಎಲ್ಲಿ ನೋಡಿದಲ್ಲಿ ಹೆಣ್ಣುಮಕ್ಕಳು ತಮ್ಮ ಜೋಕೆ ಕಾಲೀನತೆಯನ್ನು ಬಿಟ್ಟುಕೊಟ್ಟು ಒಳ್ಳೇ ಧೈರ್ಯದಿಂದ ಮುಂದೆ ಬಂದು ಕಷ್ಟನಷ್ಟಗಳಿಗೆ ಎದೆಗೊಟ್ಟು ಕಾರ್ಯಮಾಡಹತ್ತಿದ್ದಾರೆ. ಹಳ್ಳಿಯ ಹೆಂಣುಮಕ್ಕಳು ಮೊದಲುಮಾಡಿಕೊಂಡು ಪಟ್ಟಣದ ಮಾನಿನಿಯರ ವರೆಗೂ ಒಂದೇ ಮಾದರಿಯ ಉಜ್ವಲವಾದ ರಾಷ್ಟ್ರಪ್ರೇಮವು ಎಲ್ಲರಲ್ಲಿ ಸಮಾನವಾಗಿ ಜಾಗೃತವಾಗಿದೆ. ಅಹಮ್ಮದಾಬಾದದಲ್ಲಿ ಉಪ್ಪು ಮಾರತಕ್ಕವರೆಲ್ಲ ಸ್ತ್ರೀಯರೇ! ದಿಲ್ಲಿಯಲ್ಲಿ ಅಂಬಿ ಅಂಗಡಿಗಳಿಗೆ ಅಡ್ಡಾಡಿ ವಿದೇಶಿ ಅರಿವೆಗಳ ವ್ಯಾಪಾರವನ್ನು ಬಿಟ್ಟುಬಿಡಿರೆಂದು ಬೋಧಿಸುವವರು ಹೆಂಗಸರೇ; ಆಟ್ಟಿ, ದಂಡಿ, ಕರಾಡ, ಜಾಂಬುಸರ ಮೊದಲಾದ ಹಳ್ಳಿಗಳಲ್ಲಿಯೂ ಗಾಂಧಿಜಿಯನ್ನು ಪೂಜಿಸಿ ಅವರ ಹೇಳಿಕೆ ಪ್ರಕಾರ ಉಪ್ಪು ಕೂಡಿಸಲಿಕ್ಕೆ ಮುಂದೆ ಬಿದ್ದವರು ಹಳ್ಳಿಯ ಹೆಂಣುಮಕ್ಕಳೇ; ಮುಂಬಯಿ ವ್ಹಿಲಾಪಾರ್ಲೆದಲ್ಲಿ ಉಪ್ಪು ಮಾರುವವರು ಮತ್ತೆ ಸ್ತ್ರೀಯರೇ; ಮುಂಬಯಿ ಕಾಂಗ್ರೆಸ್ ಮಂದಿರವನ್ನು ಪೋಲೀಸರು ಒಳನುಗ್ಗಿ ಗೊಂದಲನಡಿಸಿದಾಗ ಶಾಂತತನದಿಂದ ಪೋಲೀಸರಿಗೆ ಅಡ್ಡನಿಂತವರು ಅಲ್ಲಿಯ ಮಾನಿನಿಯರೇ, ಸತ್ಯಾಗ್ರಹಿ ಹುಡುಗರೊಡನೆ ಸರಿಗೆ ಸರಿಯಾಗಿ ಉಪ್ಪು ತಯಾರಿಸುವದರಲ್ಲಿ ಎಲ್ಲಿ ನೋಡಿದರೂ ಶಿರಗುಪ್ಪಿ ನಿಂತೇ ಇದ್ದಾರೆ. ಆರ್ಯಮಹಿಳೆಯರ ಈ ತೇಜದ ಪರಿಸ್ಫುರಣವು ನಿಜವಾಗಿಯೇ ಅಪೂರ್ವವಾಗಿದೆ. ಈ ಎಲ್ಲ ನಾರಿಯರ ವೀರ ಚರಿತೆಯನ್ನು ಕೇಳಿ ತಿಳಿಕೊಂಡಮೇಲೆ ನಮ್ಮ ಕರ್ನಾಟಕದ ಲಲನೆಯರಲ್ಲಿಯೂ ಚೈತನ್ಯ ಉಂಟಾಗದಿದ್ದೀತೇ? ನಮ್ಮ ಹೆಣ್ಣುಮಕ್ಕಳು ಭಾವಿಕತನ, ಸಹನಶೀಲತೆ, ಕಷ್ಟಸಹಿಷ್ಣುತೆ ಮೊದಲಾದ ಗುಣಗಳಿಗೆ ಅತ್ಯಂತ ಪ್ರಸಿದ್ಧರು. ಇಂಥವರು ಪ್ರಸ್ತುತ ಪರಿಸ್ಥಿತಿಯ ನಿಜವಾದ ಜ್ಞಾನವಾದ ಮೇಲೆ ಪರಪ್ರಾಂತೀಯ ಹೆಂಗಳೆಯರಂತೆ ಈ ಸಂಗ್ರಾಮದಲ್ಲಿ ಧುಮುಕಲು ಎಂದೂ ಹಿಂದುಮುಂದೆ ನೋಡರು ಎಂದು ಪೂರ್ಣ ಭರವಸೆ ಇದೆ. ಆದರೆ ಅವರಿಗೆ ಈಗಿನ ಪರಿಸ್ಥಿತಿಯ ಜ್ಞಾನಮಾಡಿಕೊಡುವ ನಿಪುಣರು ಬೇಕಾಗಿದೆ.

## ಕಾಳಾರಾಮನ ರಥೋತ್ಸವದ ದಂಗೆ! ಅನೇಕರ ತಲೆ ಒಡೆದಿವೆ!

ನಾಸೀಕದಲ್ಲಿ ಹೊಲೆಯರು ಕಾಳಾರಾಮನ ದೇವಾಲಯದಲ್ಲಿ ಪ್ರವೇಶಮಾಡಲು ಬಯಸಿ ಸತ್ಯಾಗ್ರಹ ಹೂಡಿದಂತು ಈಗ ೨-೩ ತಿಂಗಳದಿಂದಲೂ ದೇವಾಲಯದ ಮುಂದೆ ಧ್ವಜ ಹಾಕಿರುವರಷ್ಟೇ? ಮೊನ್ನೆ ರಾಮನವಮಿ ನಿಮಿತ್ತ ಶ್ರೀರಾಮದೇವರ ರಥೋತ್ಸವದ ಕಾಲಕ್ಕೆ ಹೊಲೆಯರು ತಾವೂ ರಥದ ಹಗ್ಗವನ್ನು ಜಗ್ಗತಕ್ಕವರೆಂದು ಬಂದು ರಥದ ಹಗ್ಗಕ್ಕೆ ಮುಕ್ಕರಿಬಿದ್ದರು. ಇದರಿಂದ ಅಲ್ಲಿ ನೆರೆದ ೩೦೦ ಸನಾತನ ಧರ್ಮಾಭಿಮಾನಿಗಳು ಸಂತಾಪಗೊಂಡು ಹೊಲೆಯರನ್ನು ಕಲ್ಲು ದುಂಡಬಡಿಗೆ ಹೆಂಟೆಗಳಿಂದ ಬಿಗಿಯಹತ್ತಿದರು. ಹೊಲೆಯರೂ ಏಟು ತಾಳಲಾರದೆ ತಮ್ಮ ಸತ್ಯಾಗ್ರಹದ ಅಹಿಂಸೆಯನ್ನು ಮರೆತು, ತಿರುಗಿ ಕಲ್ಲುಮಣ್ಣು ಸನಾತನಿಗಳಿಗೆ ಒಗೆಯಹತ್ತಿದರು. ಹೀಗಾಗಿ ಇಡೀ ದಿವಸ ನಾಸಿಕ ಪಟ್ಟಣದಲ್ಲಿ ಎಲ್ಲಿ ನೋಡಿದಲ್ಲಿ ಅನಾಹುತ, ಆಘಾತ, ಕೋಲಾಹಲ ಇವುಗಳ ಸಂತೆಯೇ ಆಗಿಬಿಟ್ಟಿತು. ಸನಾತನಿಗಳು ಸತ್ಯಾಗ್ರಹಿ ಹೊಲೆಯರ ಬೀಡಾರಕ್ಕೆ ಬೆಂಕಿಹಚ್ಚಿ ಸುಟ್ಟುಬಿಟ್ಟರು. ಇದರಿಂದಲೂ ಕೆಲವು ಹೊಲೆಯರು ಗಾಯಹೊಂದಿದರು. ಸನಾತನಿಗಳೇ ಬಹುಸಂಖ್ಯಾಕರಾಗಿದ್ದರಿಂದ ಪೋಲೀಸರು ಹೊಲೆಯರ ಸಂರಕ್ಷಣೆಗೆ ನಿಲ್ಲಬೇಕಾಯಿತು. ತಮ್ಮ ಲಂಡ ದುಂಡು ಬಡಿಗೆಯನ್ನು ಗದ್ದಲದಲ್ಲಿ ಬೀಸುತ್ತ, ಜನರನ್ನು ಬಡೆಯುತ್ತ ಆ ಗದ್ದಲವನ್ನು ಚದರಿಸಬೇಕಾಯಿತು. ಹೊಲೆಯರನ್ನೆಲ್ಲ ಊರು ಬಿಡಿಸಿ ದೂರ ಒತ್ತಟ್ಟಿಗೆ ಇಟ್ಟು ಅವರನ್ನು ಪೋಲೀಸರು ಕಾವಲಿಟ್ಟು ಕಾಯುತ್ತಿರುವರು. ಆ ದಿನ ರಾತ್ರಿಯೆಲ್ಲ ನಗರದ ಬೀದಿಗಳಲ್ಲಿ ಪೋಲೀಸರ ಕಾವಲು ಇದ್ದೇ ಇತ್ತು.

## ರಕ್ತಸ್ರಾವವಾದರೂ ಉಪ್ಪು ಬಿಡಬೇಡಿರಿ!

ಮೊನ್ನೆ ದಿವಸ ಮಹಾತ್ಮಾ ಗಾಂಧಿಯವರು ಸತ್ಯಾಗ್ರಹಿಗಳಿಗೆ 'ನಿಮ್ಮ ನೆತ್ತರ ಸೋರುತ್ತಿದ್ದರೂ, ಕೈಯೊಳಗಿನ ಉಪ್ಪು ಪೋಲೀಸರ ವಶವಮಾಡಿ ಕೊಡಬೇಡಿ' ಎಂದು ಉಪದೇಶಿಸಿದ್ದಕ್ಕೆ 'ದೀನಬಾಂಧವ' ಆಂಗ್ಲೋಇಂಡಿಯನ್ ವರ್ತಮಾನ ಪತ್ರಗಳಲ್ಲಿ ಗಾಂಧಿಯು ಹಿಂಸೆ ಮಾಡಲಿಕ್ಕೆ ಬೋಧಿಸುತ್ತಿರುವನು ಎಂದು ಹೂಲಿಯನ್ನೆಬ್ಬಿಸಿ ಕೈಗೆ ಬಂದದ್ದು ಬರೆಕೊಂಡಿರುವರು. ಅದಕ್ಕೆ ಈ ಹೊತ್ತು ಗಾಂಧಿಯವರು ಅದನ್ನು ಪೂರ್ಣ ತಿಳಿಸಿಹೇಳಿರುವರು. ಸತ್ಯಾಗ್ರಹಿಯ ಅಹಿಂಸೆಯು ವ್ಯಕವೆಂದರೆ, ಅವನು ಎರಡನೆಯವರ ಮೇಲೆ ಯಾವ ತರದ ಹಿಂಸಾಚರಣೆಯನ್ನು ಮಾಡಲಾಗದು. ಹೊರತು ತನ್ನ ರಕ್ತ ಸುರಿಯುತ್ತಿದ್ದರೂ, ತನ್ನ ಜನ್ಮ ಹೋದರೂ ತಾನು ಹಿಡಿದ ಸತ್ಯದ ಆಗ್ರಹವನ್ನು ಬಿಡುವಂತಿಲ್ಲ! ನಾನು ಹೇಳಿದ್ದರ ಅರ್ಥವು ಸತ್ಯಾಗ್ರಹಿಯು ಎಷ್ಟೇ ಹಿಂಸಿಸಲ್ಪಟ್ಟರೂ ತಾನು ಪ್ರತಿಹಿಂಸೆ ಮಾಡದೆ ಇದ್ದು ವಿರೋಧಿಗೆ ಆಧೀನವಾಗುವಂತಿಲ್ಲ ಎಂಬುದೇ ನನ್ನ ಮತ.

## ಜಬಲಪುರದಲ್ಲಿ ಹುಲುಬನ್ನಿಯ ವಿರುದ್ಧ ಸತ್ಯಾಗ್ರಹ!

ಜಬಲಪುರದಲ್ಲಿ ರಸಾಯನ ರೀತಿಯಿಂದ ಉಪ್ಪನ್ನು ಮಾಡುತ್ತಿರುವರು. ಅದನ್ನೇ ಸತ್ಯಾಗ್ರಹಿಗಳು ಓಣಿ ಓಣಿ ಮಾರುತ್ತಿರುವರು. ಇಲ್ಲಿ ೧೯೦ ಸ್ವಯಂಸೇವಕರು ಈ ಕಾಯಿದೆ ಭಂಗಕ್ಕೆ ಸಿದ್ಧರಾಗಿರುವರು. ಈ ಕಾಯಿದೆಭಂಗದ ಚಳವಳಿಯು ಇಂಗಿತವನ್ನು ಅಲ್ಲಿ ಸುತ್ತಮುತ್ತಲಿನ ಹಳ್ಳಿಯವರಿಗೆ ತಿಳಿಸಿ ಹೇಳಲು ಪ್ರಯತ್ನ ನಡೆದಿದೆ. ಹೀಗೆ ಉಪ್ಪಿನ ಕಾಯಿದೆಭಂಗವನ್ನು ಈ ಹೊತ್ತು ಆರಂಭಿಸಿದ್ದೇವೆ. ನಾಳೆಗೆ ಮತ್ತೊಂದು ಕಾಯಿದೆಯ ವಿರುದ್ಧ ಧಿಕ್ಕಾರ ಹೂಡುವದು ಎಂದು ಹೇಳುತ್ತ ಹುಲುಬನ್ನಿಯ ವಿರುದ್ಧವೂ ಸತ್ಯಾಗ್ರಹವನ್ನು ಹೂಡುವೆವೆಂದು ಹೇಳಿದ ಕೂಡಲೆ ಅಲ್ಲಿಯ ೧೫೦ ಹಳ್ಳಿ ಜನರು ಆ ಹುಲುಬನ್ನಿ ಕಾಯಿದೆಭಂಗಕ್ಕೆ ಸಿದ್ಧರೆಂದು ಬಹಳ ಉತ್ಸಾಹದಿಂದ ಮುಂದೆ ಬಂದು ಅದನ್ನು ಈಗಲೇ ಆರಂಭಿಸಿರಿ; ನಾವು ಇದೇ ಹಳ್ಳಿಯವರೇ ಒಂದಾಗುತ್ತೇವೆ ನೋಡಿರೆಂದು ಆಶ್ವಾಸನ ಕೊಡಹತ್ತಿದರು. ಗಾಳಿಯು ಎತ್ತ ಬೀಸಹತ್ತಿದೆಂಬುದು ಇದರಿಂದ ಸ್ಪಷ್ಟವಾಗುವದಿಲ್ಲವೇ? ಹಟವಾದಿಗಳು ಇಂಥ ಮಾರ್ಗದಿಂದ ವಿರೋಧಿಸಿಯೇ ಈ ಸರಕಾರದ ಅನ್ಯಾಯದ ಕೃತಿಗಳಿಂದ ಮುಕ್ತರಾಗಬೇಕೆಂಬ ಭಾವನೆಯು ರೈತಸಾಮಾನ್ಯರಲ್ಲಿಯೂ ಈಗ ಬಡಮೂಡಹತ್ತಿದೆ.

## ಬ್ರಿಟಿಶ ಔಷಧಗಳಿಗೆ ಬಹಿಷ್ಕಾರ

ಅಖಿಲ ಹಿಂದುಸ್ಥಾನ ಡಾಕ್ಟರ ಜನರ ಮಂಡಳದವರು 'ಇನ್ನು ಮೇಲೆ ಡಾಕ್ಟರ ಜನರು ಬ್ರಿಟಿಷರ ಯಾವ ಔಷಧಗಳನ್ನು ಉಪಯೋಗಿಸಕೂಡದೆಂದು' ಒಂದು ಠರಾವು ಪಾಸಮಾಡಿಕೊಂಡಿದ್ದಾರೆ. ಹಿಂದೀ ಔಷಧಗಳನ್ನೇ ಅದಷ್ಟು ಉಪಯೋಗಿಸತಕ್ಕದ್ದು ಒಂದು ವೇಳೆ ಅವಶ್ಯವಿದ್ದ ಔಷಧವು ಹಿಂದುಸ್ಥಾನದಲ್ಲಿ ಸಿಗುವಂತಿರಲಿಲ್ಲವಾದರೆ ಬ್ರಿಟಿಶ ಸರಕಾರವನ್ನು ಬಿಟ್ಟು ಎರಡನೆ ದೇಶಗಳು ತಯಾರಿಸಿದ ಔಷಧಗಳನ್ನು ಉಪಯೋಗಿಸಬಹುದೆಂದೂ ಗೊತ್ತುಮಾಡಿಕೊಂಡಿದ್ದಾರೆ. ಈ ಠರಾವಿಗೆ ಕಾರಣವು ಮೊನ್ನಿನ ಬ್ರಿಟಿಶ ಡಾಕ್ಟರ ಮಂಡಳದ ಉದ್ಧಾಮವೃತ್ತಿಯು.

## ದಿಲ್ಲಿಯಲ್ಲಿ ವಿದೇಶಿ ಬಟ್ಟೆಯ ಬಹಿಷ್ಕಾರ.

ವಿದೇಶಿಬಟ್ಟೆಗಳನ್ನು ಮಾರಬೇಡಿ, ಕೊಳಬೇಡಿ ಎಂದು ಅಂಗಡಿ ಅಂಗಡಿ ಹೋಗಿ ಹೆಣ್ಣುಮಕ್ಕಳು ಅಡ್ಡವಿಲ್ಲತ್ತಿರುವರು. ಪ್ರೊಫೆಸರ ಇಂದ್ರ (ಶ್ರದ್ಧಾನಂದರ ಮಕ್ಕಳು) ಇವರ ಪತ್ನಿಯರೇ ಪ್ರಮುಖ ನಾಯಿಕೆಯರಾಗಿ ನಿಂತುಕೊಂಡಿದ್ದಾರೆ

## ಸರಕಾರಿ ನೌಕರರಿಗೆ ಸಾಮಾಜಿಕ ಬಹಿಷ್ಕಾರವೇ ಮದ್ದು

### ಕರ್ನಾಟಕದ ಅಧಿಕಾರಿಗಳಿಗೆ ಎಚ್ಚರಿಕೆ.

ಬಂಗಾಲದಲ್ಲಿ ಕಲಕತ್ತೆಯ ಹತ್ತರ ಸತೀಶದಾಸಗುಪ್ತರು ಉಪ್ಪು ಮಾಡುತ್ತಿರುವ ಹಳ್ಳಿಯಲ್ಲಿ ಅಲ್ಲಿ ಇರುವ ಮತ್ತು ಬರುಹೋಗುವ ಎಲ್ಲ ಸರಕಾರಿ ನೌಕರರಿಗೆ ಊರಜನರೆಲ್ಲಕೂಡಿ ಬಹಿಷ್ಕಾರ ಹಾಕಹತ್ತಿರುವರು ಅವರಿಗೆ ಕೂಳು ನೀರು ಸಹ ಹೊತ್ತಿಗೆ ಸಿಗುವದು ಬಂದಾಗಿದೆ, ಇತ್ತ ಗುಜರಾಥದ ಅಟ್ಟಿ ದಂಡಿ ಮೊದಲಾದ ಸ್ಥಳಗಳಲ್ಲಿಯೂ ಇದೇ ಹಾಡು. ಕರ್ನಾಟಕದ ಗಿನ ಮಾಮಲೇದಾರರು ಜನರಿಗೆ ವಿನಾಕಾರಣ ತೊಂದರೆ ಕೊಡಹತ್ತಿರುವರು. ಮನಸ್ಸಿಗೆ ಬಂದ ಹಾಗೆ ರೆವೆನ್ಯೂ ಕರ್ತವ್ಯವನ್ನಿಷ್ಟು ಮಾಡುವದು ಬಿಟ್ಟುಕೊಟ್ಟು ಇಲ್ಲದ ಉಪದ್ವ್ಯಾಪ ಮಾಡಹತ್ತಿದ್ದಾರೆ ಇಂದು ಬಂಗಾಲ ಗುಜರಾಥಗಳಲ್ಲಿ ಬೀಸುವ ಬಹಿಷ್ಕರದ ಗಾಳಿಯು ಇಲ್ಲಿಗೆ ಬರಲಿಕ್ಕೇನು ತಡಹತ್ತುವದಿಲ್ಲ. ಆಗ್ಗೆ ಇದೆಲ್ಲ ಅಧಿಕ ಪ್ರಸಂಗತನಕ್ಕೆ ಬಹಳ ಪಶ್ಚಾತ್ತಾಪ ಪಡಬೇಕಾದೀತು, ಇಷ್ಟೇ ಅಲ್ಲ ಬಹಿಷ್ಕಾರದ ಇಕ್ಕಟ್ಟಿಗೆ ಸಿಕ್ಕು ಒಂಟೆ ಒದರುವಹಾಗೆ ಒದರಬೇಕಾದೀತು.

## ಆಂಗ್ಲ ಮನುಷ್ಯನೂ ಕಾಯಿದೆಭಂಗಕ್ಕೆ ಸಿದ್ಧನಾದನು!

ಆಂಗ್ಲೇಯನು ತಾನು 'ಮಹಾತ್ಮರ ಸತ್ಯಾಗ್ರಹ ಚಳವಳಿಯಲ್ಲಿ ಸೇರಿಕೊಳ್ಳಲು ನಿಶ್ಚಯಿಸಿರುವೆನೆಂತಲೂ ಮತ್ತು ತನ್ನನ್ನು ಮಹಾತ್ಮರು ತಮ್ಮ ಶಿಬಿರದೊಳಗೆ ಸೇರಿಸಿಕೊಳ್ಳಬೇಕೆಂ'ತಲೂ ಶಾಂತನಿಕೇತನದಿಂದ ಮ|| ಗಾಂಧಿಯವರಿಗೆ ಪತ್ರ ಬರೆದಿದ್ದಾನೆ. ಇದರಂತೆ ಶಾಂತಿನಿಕೇತನದಿಂದ ಮಹಾತ್ಮರ ಕಡೆಗೆ ಬಂದ ಇನ್ನೊಬ್ಬ ಬಂಗಾಲ ಗೃಹಸ್ಥನನ್ನು ಮಹಾತ್ಮರು ಬಂಗಾಲದಲ್ಲಿಯೇ ಕೆಲಸಮಾಡ ಹೋಗು ಎಂದು ಮರಳಿ ಕಳಿಸಿಕೊಟ್ಟರು!

## ನಾಸಿಕದ ಗುಡಿಯಲ್ಲಿ ಅಂತ್ಯಜರ ಪ್ರವೇಶ!

ಮೊನ್ನೆ ರಾಮನವಮಿ ಗದ್ದಲದಲ್ಲಿ ಹರಿಯ ಸತ್ಯಾಗ್ರಹಿಗಳು ವೇಳೆ ಸಾಧಿಸಿ ಕಾಳರಾಮ ಗುಡಿಯಲ್ಲಿ ಹೊಕ್ಕು ತಮ್ಮ ಸತ್ಯಾಗ್ರಹವು ಯಶಸ್ವಿಯಾಯಿತೆಂದು 'ಸತ್ಯಾಗ್ರಹಕಿ ಜಯ' ಎಂಬ ಕೂಗನ್ನೆಬ್ಬಿಸಿ ಅವರಲ್ಲಿಯೇ ಲೀನರಾಗಿದ್ದರಂತೆ! ದೇವರ ದರ್ಶನಕ್ಕಿಂತಲೂ ಸತ್ಯಾಗ್ರಹದ ಯಶಸ್ಸೇ ಇವರಿಗೆ ಹೆಚ್ಚು ಬೇಕಾಗಿದೆಂಬುದು ಹೀಗಿದ್ದದ್ದೇ ಆದರೆ ಇದು ಅಸ್ಪೃಶ್ಯರ ದುರಾಗ್ರಹವೆಂದು ಸ್ಪಷ್ಟವಾಗಲಿಲ್ಲೇ?

## ಗವಳಿ

'ಕನ್ನಡಿಗ' ಪತ್ರದಲ್ಲಿ ತಾರೀಖು ೮-೪-೩೦ ದಿವಸ ಪ್ರಸಿದ್ಧವಾದ್ದರಲ್ಲಿ "ಶಿವರಾವ ವಕೀಲರು ಸತ್ಯಾಗ್ರಹಕ್ಕೆ ಹೊರಡಲು ನಿಶ್ಚಯಿಸಿದ್ದಾರೆ ಅವರಾ ಕೇಳತ್ತೇವೆ ಎಂಬ ಸಂಗತಿಯು ಪ್ರಸಿದ್ಧವಾಗಿದಷ್ಟೆ ಆದರೆ ಈ ಸಂಬಂಧ ನಿಮ್ಮ ಬಾತಮಿದಾರನು ನಿಮಗೆ ತಪ್ಪು ಮಾಹಿತಿ ಕೊಟ್ಟಿರತಾನೆ,

ಶಿವರಾವ ಎಚ್. ಕುಲಕರ್ಣಿ ವಕೀಲ, ಗದಗ.

## ಪೋಲೀಸರ ನಿನ್ನಿನ ಸುಲಿಗೆಯಿಂದ
## ಮುಂಬಯಿಯಲ್ಲಿಯು
# ಕಾಯಿದೆ ಭಂಗಕ್ಕೆ ವಿಚಿತ್ರ ಕಳೆಏರಿದೆ!

ನಿನ್ನಿನ ದಿವಸ ೩೦೦ ಪೋಲೀಸರು ಕಾಂಗ್ರೆಸ ಮಂದಿರಕ್ಕೆ ದಾಳೀ ಹಾಕಿ ಒಳನುಗ್ಗಿ ಅಲ್ಲಿಯ ಉಪ್ಪಿನ ಮಡಿಕೆಗಳನ್ನು ಒಡೆದುಹಾಕಿ ಅಲ್ಲಿದ್ದ ಮುಖಂಡರನ್ನು ಸೆರೆಹಿಡಿದುಕೊಂಡು ಹೋದ ವಾರ್ತೆಯು ಊರೆಲ್ಲ ಹರಡಿಕೊಂಡು ಜನರಲ್ಲಿ ವಿಚಿತ್ರವಾದ ಉತ್ಸಾಹವನ್ನುಂಟುಮಾಡಿದೆ. ಜನರ ಉತ್ಸಾಹವನ್ನು ಕುಗ್ಗಿಸಬೇಕು; ಅವರ ಹೃದಯದಲ್ಲಿ ಭಯ ಹುಟ್ಟಿಸಬೇಕು; ತನ್ನ ಪಾಶವೀ ಶಕ್ತಿಯ ಪ್ರದರ್ಶನದಿಂದ ಜನರನ್ನು ಅಡಗಿಸಬೇಕೆಂಬ ಸರಕಾರದ ವಿಚಾರಗಳೆಲ್ಲ ಬಯಲಾಗಹತ್ತಿವೆ. ಅವರ ದಬ್ಬಾಳಿಕೆಯಿಂದ ಅವರು ಬಯಸಿದ್ದರಕಿಂತಲೂ ವಿಪರೀತ ಪರಿಣಾಮವಾಗಹತ್ತಿದೆ. ಜೀವಂತ ಕೃಷ್ಣಸರ್ಪವನ್ನು ಅಸಿವಾಸಿ ಕಡಿದರೆ ಭುಸ್ಸೆಂದು ಹೆಡೆಯೆತ್ತಿ ಹೊಡೆಯಬಂದವನ ಎದೆ ಝಲ್ಲೆನ್ನಿಸುವಂತೆ ಈಗ ಸ್ಥಿತಿಯಾಗಿದೆ.

ಸ್ವಾಭಿಮಾನದ ಕಿಡಿಗಳಿಂದ ಚೈತನ್ಯಗೊಂಡ ರಾಷ್ಟ್ರದ ಹೆಡೆ ತುಳಿಯುವಂಥ ಅವಿಚಾರದ ಕೆಲಸವನ್ನು ಸರಕಾರವು ಮಾಡಹತ್ತಿದೆ. ಕಾಂಗ್ರೆಸ್ ಮಂದಿರವನ್ನು ನುಗ್ಗಿ ಅಲ್ಲಿಯ ಮಡಿಕೆಗಳನ್ನು ಒಡಿಸಿ ಪೋಲೀಸರು ಹೊರಗೆ ಹೊರಟಿದ್ದರೋ ಇಲ್ಲವೋ ಅಷ್ಟರಲ್ಲಿಯೇ ಮತ್ತೆ ಸ್ವಯಂಸೇವಕರು ಗಚ್ಚು ಇಟ್ಟಿಂಗಿಗಳಿಂದ ಅವುಗಳನ್ನು ಕಟ್ಟಹತ್ತಿದರು. ಬೆಳಗಾಗುವದರೊಳಗೆ ಅವುಗಳನ್ನು ತಯಾರಿಸಿ ಪುನಃ ಅಲ್ಲಿ ಸಮುದ್ರನೀರು ತಂದು ಸುರುವಹತ್ತಿರುವರು. ಪೋಲೀಸರ ಈ ದಾಳಿಯಕಿಂತಲೂ ಮೊದಲು ತಂಬಿಗೆಗಳಿಂದ ನೀರನ್ನು ತಂದು ಹಾಕುತ್ತಿದ್ದವರು ಈಗ ಕೊಡಗಳನ್ನುಪಯೋಗಿಸಹತ್ತಿದ್ದಾರೆ. ಮೊದಲಿಗೆ ನಾಲ್ಕಾರು ಹೆಣ್ಣುಮಕ್ಕಳಷ್ಟೆ ಈ ಕಾರ್ಯದಲ್ಲಿ ಭಾಗವಹಿಸುತ್ತಿದ್ದರು; ಈಗ ಅವರ ಸಂಖ್ಯೆ ೭೦-೮೦ಕ್ಕೆ ಏರಿದೆ. ೪೦೦ ಸ್ವಯಂಸೇವಕರು ಉಪ್ಪನ್ನು ಮಾರಲಿಕ್ಕೆ ಹೊರಟಿದ್ದಾರೆ. ಶ್ರೀ ಖಾಡಿಲಕರರು ಸ್ವತಃ ಒಂದು ತಂಡವನ್ನು ಕಟ್ಟಿಕೊಂಡು, ಉಪ್ಪನ್ನು ಮಾರುತ್ತ ಮುಂಬಯಿ ಬೀದಿಗಳಲ್ಲಿ ಅಡ್ಡಾಡಹತ್ತಿರುವರು. ಖಾಡಿಲಕರರ ಕೈಯಿಂದ ಉಪ್ಪು ಕೊಳ್ಳುವದೆಂದರೆ ಜನರಿಗೆ ಒಂದ ಹಬ್ಬವಾಗಿದೆ. ೫ ರು. ೧೦ ರು. ಹೀಗೆ ಮನಬಂದ ಬೆಲೆಯನ್ನು ಕೊಟ್ಟು ಕೊಳ್ಳಹತ್ತಿರುವರು. ಅವರೆಲ್ಲರ ಹಾದಿಯನ್ನು ಇಟ್ಟಿರುವರು. ೭೦ ಜನರು ಈ ತಂಡದವರಿಂದ ಕೊಂಡುಕೊಂಡಿದ್ದಾರೆ. ಇಂಥ ೪೦ ತಂಡಗಳು ಮುಂಬಯಿಯಲ್ಲಿ ತಿರುಗಹತ್ತಿವೆ. ಅಲ್ಲದೆ ಸ್ತ್ರೀಯರು ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯ ಮತ್ತು ಅವಂತಿಕಾಬಾಯಿ ಗೋಖಲೆ ಇವರ ನೇತೃತ್ವದ ಕೆಳಗೆ ಅಹೋರಾತ್ರಿ ಈ ಕೆಲಸವನ್ನು ಮಾಡಲು ಸಿದ್ಧರಾಗಿ ನಿಂತಿದ್ದಾರೆ. ಅತ್ತ ವಿಲೆಪಾರ್ಲೆಯಲ್ಲಿಯೂ ಇಮ್ಮಡಿಯಾದ ಉತ್ಸಾಹದಿಂದ ಕೆಲಸ ಸಾಗಿದೆ.

ನಿನ್ನಿನ ದಿವಸ ಪೋಲೀಸರು ಸತ್ಯಾಗ್ರಹಿಗಳ ಮೇಲೆ ನಡಿಸಿದ ಅತ್ಯಾಚಾರವು ಅಷ್ಟಂತ ನಿಂದ್ಯ ಮತ್ತು ಘೋರತರದ್ದಾಗಿತ್ತೆಂದು ಅಲ್ಲಿಯೇ ಪ್ರತ್ಯಕ್ಷ ಇದ್ದ ಕಮಲಾದೇವಿಯರು ಅಭಿಪ್ರಾಯ ಪಟ್ಟಿರುವರು. ಸರಕಾರದ ಈ ದಬ್ಬಾಳಿಕೆಯಿಂದ ಈ ಉಪ್ಪಿನ ಕಾಯಿದೆಭಂಗಕ್ಕೆ ಇಷ್ಟು ಕಳೆಯುಂಟಾಗಿರುವದಲ್ಲ. ಆದರೆ ಮುಂಬಯಿ ವ್ಯಾಪಾರಗಾರರ ಸಂಘಗಳು ವಿದೇಶೀ ಬಟ್ಟೆಯ ಬಹಿಷ್ಕಾರವನ್ನೂ ತಾವು ಪುರಸ್ಕರಿಸಲೇಬೇಕೆಂದು ಹಟತೊಡಹತ್ತಿದ್ದಾರೆ. ಹೀಗಾಗಿ ಎತ್ತ ನೋಡಲು ಅತ್ತ ಸರಕಾರವು ಹುಚ್ಚುಮಂಗವಾಗಿದೆ.

### ಮ॥ ಗಾಂಧಿಯವರ ಮುಂದಿನ ಕಾರ್ಯಕ್ರಮ.

ಮಹಾತ್ಮ ಗಾಂಧಿಯವರು ದಂಡಿಯಲ್ಲಿರುವ ತಮ್ಮ ಸೈನಿಕರನ್ನು ಇನ್ನು ಅಲ್ಲಿಂದ ಚಲಿಸತಕ್ಕವರಿದ್ದಾರೆ. ಅವರನ್ನು ಹಿಂದಸ್ಥಾನದ ವಿವಿಧ ಪ್ರಾಂತಗಳಿಗೆ ಆಯಾ ಪ್ರಾಂತಗಳ ಅಪೇಕ್ಷೆ ಅನುಕೂಲತೆಗಳ ಪ್ರಕಾರ ಕಳಿಸತಕ್ಕವರಿದ್ದಾರೆ. ಈಗಾಗಲೇ ೫ ಜನರನ್ನು ಮಹಾರಾಷ್ಟ್ರಕ್ಕೆ ಇಬ್ಬರನ್ನು ದಿಲ್ಲಿಗೆ ಕಳಿಸಿಕೊಟ್ಟಿರುವರು. ತಾವು ಗುಜರಾಥ ಪ್ರಾಂತದಲ್ಲಿಯೇ ನಿಂತುಕೊಂಡು ಅವರ ಶಕ್ತಿಯನ್ನೇ ಸರ್ವತೋಮುಖದಿಂದಲೂ ಬೆಳಸಬೇಕೆಂದು ಯೋಚಿಸಿದ್ದಾರೆ. 'ಬಹಳವಾದರೆ ಮುಂಬಯಿಯವರಿಗೆ ಒಂದು ದಿವಸ ಬರಬಹುದು. ಮುಂಬಯಿಯಿಂದ ಆಚೆಗೆ ನಾವು ಗುಜರಾಥವನ್ನು ಬಿಟ್ಟು ಹೋಗಬಾರದೆಂದು ನಿಶ್ಚಯಿಸಿಕೊಂಡಿದ್ದೇನೆ' ನು ಮೇಲ್ಮೆಯ ಅವರು ತಮ್ಮ ಮನೋಗತವನ್ನು ವ್ಯಕ್ತಗೊಳಿಸಿರುವರು. ಯುದ್ಧದ ಭಾರವು ಹೆಚ್ಚಾದಂತೆ ಅವರು ಪ್ರಕೃತಿಯನ್ನು ಜಪ್ಪಿಸಿಕೊಂಡು ಕೆಲಸಮಾಡಬೇಕೆಂದು ನಿರ್ಣಯಿಸಿ ಈಗ ಸಾಯಂಕಾಲದಲ್ಲಿ ಹಳ್ಳಿಗಳಿಗೆ ಹೋಗುವದನ್ನು ಬಿಟ್ಟುಕೊಟ್ಟಿದ್ದಾರೆ. ಈಗ ಅವರ ಆಹಾರವು ಹುರಕಳ್ಳು ಅಕ್ಕಿಗಂಜಿ ಹಾಲು ಇವು ಮೂರೇ ಆಗಿದ್ದರೂ ಆರೋಗ್ಯವು ಚನ್ನಾಗಿದೆ. ಅವರ ಮೋರೆಯು ವಿಜಯಶ್ರೀಯ ಛವಿಯಿಂದ ಒಂದೇಸವನೇ ಮಿನುಗುತ್ತಿರುವದು.

### ಕೇಸರೀ ಪತ್ರದ ಕೇಳಕರರೂ
### ಕಾಯಿದೆಭಂಗ ಮಾಡತಕ್ಕವರು.

ಶ್ರೀ. ಕೇಳಕರರು ಬೆಂಬ ಅವರೆಲ್ಲಿಗೆ ಹೋದರೂ ನಿಂತ್ಕೊಂಡಿದ್ದಾರಷೆ? ಈಗ ಪೋಂಟಿಸಿ ... ಮೋಡಲಾದರೆ ದೊಂದು ಮುಂದಿನವನ್ನು ಮಾಡಿಕೊಂಡು ಕಾಯಿದೆಭಂಗ ಚಳವಳಿಯಲ್ಲಿ ತಾವೂ ಬೀಳಬೇಕೆಂದು ಗೊತ್ತುಮಾಡಿದ್ದಾರೆ.

## ಲ್ಯಾಂಕಾಶಾಯರ ಗಿರಣಿಗಳು ಅಳಹತ್ತಿವೆ!

'ಹಿಂದುಸ್ಥಾನದ ರಾಜಕೀಯ ವಾತಾವರಣವು ಅತ್ಯಂತ ಪ್ರಕ್ಷುಬ್ಧವಾಗಿದ್ದುದರಿಂದಲೂ ಮತ್ತು ವಿದೇಶೀ ಬಟ್ಟೆಗಳನ್ನು ಕರಿಸಬಾರದೆಂದು ಮುಂಬಯಿ ವರ್ತಕರು ನಿಶ್ಚಯಿಸಿಕೊಂಡದ್ದರಿಂದಲೂ ಲ್ಯಾಂಕಾಶಾಯರಿಗೆ ಗಿರಾಕಿಗಳ ಕೊರತೆಯುಂಟಾಗಿ ವ್ಯಾಪಾರವು ಬಹಳ ಮಂದವಾಗಿದೆ. ಆದರೂ ಮುಂಬಯಿ ಹೊರತು ಉಳಿದ ಸ್ಥಳಗಳ ವರ್ತಕರು ಲ್ಯಾಂಕಾಶಾಯರನ್ನು ಬಹಿಷ್ಕರಿಸಿಲ್ಲೆಂದು ಇದ್ದುದರಲ್ಲಿಯೇ ಸಮಾಧಾನ ಪಡಬೇಕು. ಉಣ್ಣೆಯ ಬಟ್ಟೆಗಳ ಗಿರಣಿಗಳಿಗಂತೂ ಉಪವಾಸ ಬಂದಿದ್ದಿವೆ' ಎಂದು ಇಂಗ್ಲಂಡ ಟ್ರೇಡ ಯೂನಿಯನ್‌ದವರು ತಮ್ಮ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಆಗಿನ್ನೂ ಕಾಲವೇಯ ಬಹಿಷ್ಕಾರ ಚಳವಳಿಯ ವಾರ್ತೆಯು ಇಂಗ್ಲಂಡಕ್ಕೆ ಮುಟ್ಟಿರಲಿಲ್ಲ. ಇಲ್ಲಿಯ ಕಪ್ಪಡ ವರ್ತಕರ ನಿರ್ಧಾರವೂ ಯೂನಿಯನ್‌ದವರಿಗೆ ತಿಳಿದಿರಲಿಲ್ಲವೆಂದು ತೋರುತ್ತದೆ. ಈಗ ವಿದೇಶೀ ಬಟ್ಟೆಯ ಬಹಿಷ್ಕಾರ ಚಳವಳಿಯ ಆರಂಭವು. ಆಗಲೇ ಇಷ್ಟು ಹಾನಿಯಾಗುವಾಗ ಎಲ್ಲರೂ ವಿದೇಶೀ ಬಟ್ಟೆಗಳ ಬಹಿಷ್ಕಾರವನ್ನು ಒಂದು ವರ್ಷದ ವರೆಗಾದರೂ ಸಾಗಿಸಿದರೆ ಇಂಗ್ಲಂಡಕ್ಕೆ ಬಿಸಿಹತ್ತಿ ಅದರ ಕಣ್ಣು ತೆರೆಯುವವು; ಇದರಲ್ಲಿ ಸಂಶಯವಿಲ್ಲ. ಜವಳೀ ವ್ಯಾಪಾರಸ್ಥರು ದೇಶದ ಕಲ್ಯಾಣಕ್ಕಾಗಿ ಇಷ್ಟೊಂದು ತ್ಯಾಗವನ್ನು ಏಕೆ ಸ್ವೀಕರಿಸಬಾರದು? ತಿಳಿದು ನೋಡಿದರೆ ಇದರಲ್ಲಿ ಅಂಥ ತ್ಯಾಗವೂ ಸಹ ಇರುವದಿಲ್ಲ. ವ್ಯಾಪಾರಸ್ಥರು ಬಟ್ಟೆಯೊಡನೆ ವಿಚಾರವಾಡಿ ಅಂಗಡಿಗಳಲ್ಲಿ ಸ್ವದೇಶೀ ಬಟ್ಟೆಗಳನ್ನೇ ಗಿರಾಕಿಗಳು ಕೊಂಡುಕೊಳ್ಳಬೇಕು. ಇದರಿಂದ ಅವರ ವ್ಯಾಪಾರವೂ ಕಡಿಮೆಯಾಗಲಿಲ್ಲ.

## ಕೂಲಿಕಾರ ಸತ್ಯಾಗ್ರಹಿಯ ಮೇಲೆಯೇ ಗಾಡಿಯು ಹಾಯ್ದುಹೋಯಿತು!

ಮುಂಬಯಿಯ ರೇಲ್ವೆ ಕೂಲಿಕಾರರು, ತಮ್ಮ ಕೆಲವು ಬೇಡಿಕೆಗಳನ್ನು ರೇಲ್ವೇ ಸಂಚಾಲಕರಿಗೆ ತಿಳಿಸಿ ಅವುಗಳನ್ನು ನಿವಾರಣೆ ಮಾಡಿರೆಂದು ರೇಲ್ವೆ ಮಂಡಲಕ್ಕೆ ನಾನಾಪರಿಯಿಂದ ಬೇಡಿಕೊಂಡರು. ರೇಲ್ವೆ ಮಂಡಲದವರು ಇದೆಲ್ಲ ಅವರ ಬಿನ್ನಹಕ್ಕೆ ಕಿವಿಗೊಡಲಿಲ್ಲ. ಆದ್ದರಿಂದಲೇ ಉತ್ಕಂಠಿತರಾಗುತ್ತಿರುವದರಿಂದ ರೇಲ್ವೆಯ ಕೂಲಿಕಾರ ಸಂಘದವರು ಕಟ್ಟುಮಾಡಿಕೊಂಡು ತಮ್ಮ ತಮ್ಮ ಕೆಲಸಗಳಿಂದ ನಿವೃತ್ತರಾಗಿ ಈಗ ೩ ತಿಂಗಳ ಕಾಲದವರೆಗೂ ಚಳವಳಿಯನ್ನು ನಡಿಸಿ ಅದರಿಂದೇನು ಪ್ರಯೋಜನವನ್ನು ಕಾಣದೆ ಕಟ್ಟಕಡೆಗೆ ಈ ಶಾಂತಮಯ ಸತ್ಯಾಗ್ರಹವನ್ನು ಪ್ರಾರಂಭಿಸಿರುವರು. ಇವರ ಸತ್ಯಾಗ್ರಹ ಪದ್ಧತಿಯು ಬಹಳೇ ಘೋರವಾಗಿದ್ದಾಗಿದೆ. ಕೂಲಿಕಾರರೆಲ್ಲರು ತಂಡ ತಂಡದಿಂದ ಹುಟ್ಟಿರಹಿಂದೊಬ್ಬರು ರೇಲ್ವೆ ಅಧಿಕಾರಿಗಳಿಗೆ ಗಾಡಿಗಳೋಡಿಸುವ ರೇಲ್ವೆ ಹಳಿಗಳ ಮೇಲೆ ಅಡ್ಡ ಮಲಗಿಕೊಂಡು ಬಿಡುವದು. ಈ ಕ್ರಮವನ್ನು ಮೊನ್ನಿನಿಂದಲೂ ಆರಂಭಿಸಿರುವರು. ಪೋಲೀಸರು ಅವರನ್ನು ತಡೆಯುತ್ತಿರುವರು. ಅವರ ತಡೆಯನ್ನು ಲೆಕ್ಕಿಸದೆ ಕೂಲಿಕಾರರು ಹಳಿಗಳ ಮೇಲೆ ಮುಕುರಿ ಬೀಳುತ್ತಿರುವದರಿಂದ ಅವರ ಮೇಲೆ ಗುಂಡುಹಾರಿಸಿ, ಅವರನ್ನು ಹಿಂದಕ್ಕೆ ಸರಿಸಹತ್ತಿರುವರು. ನಿನ್ನೆ ಇಂಥ ಗೋಳೀಬಾರದಲ್ಲಿ ಅನೇಕ ಕೂಲಿಕಾರರಿಗೆ ಗಾಯವಾಗಿದೆ. ಕೆಲವರು ಕೊಲ್ಲಲ್ಪಟ್ಟಿದ್ದಾರೆ. ಆದರೂ ಕೂಲಿಕಾರರು ತಮ್ಮ ಸತ್ಯಾಗ್ರಹವನ್ನೇನು ನಿಲ್ಲಿಸಿಲ್ಲ. ನಿನ್ನೆ ದಿವಸ ಇಂಥ ಒಬ್ಬ ಸತ್ಯಾಗ್ರಹಿಯ ಮೇಲೆ ಅವನ ಸತ್ಯಾಗ್ರಹವನ್ನು ಲೆಕ್ಕಿಸದೆ ಗಾಡಿಯು ಅವನ ಮೇಲೆಯೇ ಹಾಯ್ದು ಹೋಯಿತು. ಏನು ಅನರ್ಥವಿದು! ಬಡವರಾದ ಕೂಲಿಕಾರರು ಹೊಟ್ಟೆಗಾಗಿ ನಾಲ್ಕು ದುಡ್ಡು ಹೆಚ್ಚಿಗೆ ಕೇಳಿ ಅದಕ್ಕೆ ಜೀವ ಕೊಡಲು ಸಿದ್ಧರಾಗಿ ಗುಂಡಿಯ ಬಾಯಲ್ಲಿ ಇದಿರ್ಕ್ಕಾಗಿಯೆ ಬಿದ್ದು ಸಾಯಹತ್ತಿದರೂ ಕೈಬಿಚ್ಚಿ ಎರಡು ಕಾಸು ಕೊಡಬಾರದಿಲ್ಲವಲ್ಲವೇ? ಧಿಕ್ಕು! ಎರಡೆಷ್ಟು ದುಃಖ ಕಾಣಾಕ್ಕೆ ಸಕ್ಕರೆ ತುಪ್ಪ ಸುರಿಸೋದು ಧಿಕ್ಕು! ಮಕ್ಕಳ ಮರಿಗಳ ಮರಿಸೋದ ಧಿಕ್ಕು!

## 'ಕನ್ನಡಿಗ'ನ ಏಜನ್ಸಿ.

ಕೆಳಗೆ ಕಾಣಿಸಿದ ಸ್ಥಳಗಳಲ್ಲಿ ನಮ್ಮ ಏಜನ್ಸಿಗಳಿದ್ದು ಏಜಂಟರ ಹೆಸರುಗಳು ಕಾಣಿಸಲ್ಪಟ್ಟಿವೆ. ಅವರ ಹತ್ತಿರ ನಮ್ಮ ನಿತ್ಯಪತ್ರಿಕೆಗಳು ದಿನಾಲು ಮಾರಲಿಕ್ಕೆ ದೊರೆಯುವವು. ಕಾಯಂ ಚಂದಾದಾರರಾಗಲು ಇಚ್ಛಿಸುವವರು ಅವರ ಕಡೆ ಹೋಗಿ ತಮ್ಮ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳತಕ್ಕದ್ದು. ಆರೆವಾರ ಪತ್ರಿಕೆಯ ಏಜನ್ಸಿಯನ್ನು ಸಹ ಇದೇ ಜನರಿಗೆ ಕೊಡುವ ವಿಚಾರ ನಡೆದಿದ್ದು, ಆ ಬಗ್ಗೆ ನಿಶ್ಚಿತವಾದುದನ್ನೆಲ್ಲ ಹಿಂದುಗಡೆ ಪ್ರಕಟಿಸುವೆವು.

ಏಜನ್ಸಿಗಳು.

| | | | |
|---|---|---|---|
| ೧ | ಶ್ರೀ. | ಉಡಪಿನಾಥ ಹೂದಲ್ಲೂರ | ವಿಜಾಪುರ |
| ೨ | ,, | ಠಾ. ಸೀ. ಬಹಾಗಿರದಾರ | ಇಲಕಲ್ಲ |
| ೩ | ,, | ಜಗನ್ನಾಥ ರಾಘವೇಂದ್ರರಾವ ದೇಸಾಯಿ | ಹುನಗುಂದ |
| ೪ | ,, | ರಾಚಪ್ಪಾ ವಂಟಿ ಕಿರಾಣಿ ಅಂಗಡಿ | ಅಮೀನಗಡ |
| ೫ | ,, | ನಾರಾಯಣ ರಾಮಪ್ಪಾ ಕಾಂಬಳೆ, ಮೋಟಾರ ತಿಕೀಟ ಏಜಂಟ | ಗಲಗಲಿ |
| ೬ | ,, | ರಾಘವೇಂದ್ರಾಚಾರ್ಯ ಧಾಣಕಶಿರೂರ | ಕೆರೂರ |
| ೭ | ,, | ಬಾಪೂರಾವ ವಿರುಪಾಕ್ಷರಾವ ಬಾಸೂತಕರ | ಗುಳೇದಗುಡ್ಡ |
| ೮ | ,, | ಶಾಯರ್ಷವಿರ್ಷ ಕರ್ನಾಟಕ ಕರುಣಾಸಂಘ | ರಾಯಚೂರ |
| ೯ | ,, | ಕೃಷ್ಣಾಜಿ ಹನಮಂತ ಕೆರಕಲಮಟ್ಟಿ ಆ ಮನಾಪ್ಪೂರ | ಶಿರೂರ ತಾ॥ ಬಾಗಲಕೋಟೆ |
| ೧೦ | ,, | ಜಿ. ಎಲ್ ಮಂಗಳೂರ C/o ಶಾಂತೇಶ ವಾಚನಾಲಯ | ಧಾರವಾಡ |
| ೧೧ | ,, | ಎಸ್. ಎಸ್. ಹಸೀಬ | ಹುಬ್ಬಳ್ಳಿ |
| ೧೨ | ,, | ಆರ್. ಕೆ ಅಸುಂಡಿ ವೃತ್ತಪತ್ರಿಕೆಗಳ ಏಜಂಟ | ಗದಗ |
| ೧೩ | ,, | ಅಪ್ಪಾರಾವ ದೇಶಪಾಂಡೆ C/o ಡಾಕ್ಟರ ಕೆ ಬಿ ಅಂತ್ರೋಳೀಕರ | ಸೊಲ್ಲಾಪುರ |
| ೧೪ | ,, | ವೈದ್ಯ ವಾದಿರಾಜ ಜಹಗೀರದಾರ | ಬೀಳ್ಗಿ ತಾ॥ ಬಾಗಲಕೋಟೆ |
| ೧೫ | ,, | ತಿರುಕಾಚಾರ್ಯ ಮಧ್ವಾಚಾರ್ಯ ಚಿಮ್ಮಲಗಿ, ಹೆಡ್ ಮಾಸ್ತರ | ಧೋಂಡಿತಿ ಮು॥ ಹುಬ್ಬಳ್ಳಿ |

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

ನಿತ್ಯಸಂಚಿಕೆಯು.

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ಸೋಮವಾರ ಮಿತಿ ಚೈತ್ರ ಬಹುಳ ೧ ಶಕ ೧೮೫೨ ತಾ. ೧೪—೪—೩೦ ಸಂಚಿಕೆ ೨೨

## ಸಂಪಾದಕರ ಭೂಮಿಃ

ನನ್ನ ದೇಹವು ನಿನ್ನ ವೀರಶಾಸನಕಾಗಿ।
ಕಣ್ಣಸನ್ನೆ ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ದೀರಬಹಗಂಧವಹವೆಂದು ತಿಳಿಯೊ।

## ವಿಜಾಪುರ ಜಿಲ್ಲೆಯ ಹಿರಿಯರು ಕೈಬಿಡುವರೆ?

ವಿಜಾಪುರ ಜಿಲ್ಲೆಯು ರಾಷ್ಟ್ರೀಯ ಆಂದೋಲನದಲ್ಲಿ ಎಂದಿನಿಂದಲೂ ತನ್ನ ಶಕ್ತಿಯಿಂದ ಜೀವಂತ ಒಂದಾದುದೆಂಬ ಸಂಗತಿಯನ್ನು ಎಷ್ಟು ಅಭಿಮಾನದಿಂದ ಒರೆಯಬೇಕಾಗಿದೆಯೋ, ಅಷ್ಟೇ ಮನೋವ್ಯಥೆಯಿಂದ ಈಗಿನ ಕಾಯಿದೆಭಂಗ ಚಳವಳಿಯಲ್ಲಿ ಈ ಜಿಲ್ಲೆಯು ಬೊಗ್ಗಲಾರಿ ಬಾಗಿ ತೆಗೆದಿರುವ ಸಂಗತಿಯನ್ನು ಅಷ್ಟೇ ವ್ಯಸನದಿಂದ ಯೋಚಿಸಬೇಕಾಗಿದೆ. ವಿಜಾಪುರ ಜಿಲ್ಲೆಯ ಹಿರಿಯರು ಸ್ವಾರ್ಥತ್ಯಾಗಿಗಳು; ಕರ್ತೃತ್ವಶಕ್ತಿಯುಳ್ಳವರು; ಸಾರ್ವಜನಿಕ ಕಾರ್ಯಗಳಲ್ಲಿ ನುರಿತವರು; ರಾಷ್ಟ್ರಹಿತಚಿಂತನೆಯಲ್ಲಿ ಕಾಲಕಳೆದವರು. "ಓಂ ರಾಷ್ಟ್ರದೇವೋ ಭವ" ಎಂದು ಸಂಕಲ್ಪ ಮಾಡಿ ಲೋಕಮಾನ್ಯರಿಂದ ಮಂತ್ರೋಪದೇಶ ಹೊಂದಿದವರು. ಇಂಥವರಿಗೆ ಕಾರ್ಯ ಕಷ್ಟಮಾಡುವದರಲ್ಲಿ ನಿಸ್ಸೀಮರು, ಹಿರಿಯರ ಆಜ್ಞೆಯೆಂದರೆ ಪ್ರತಿಮಾತಿಲ್ಲದೆ ಶಿರಸಾವಹಿಸಿ ಆಚರಿಸತಕ್ಕವರೂ ಉತ್ಸಾಹಿಗಳೂ ಆದ ಇಲ್ಲಿಯ ತರುಣರ ಬೆಂಬಲ. ಹೀಗೆ ಗಾಳಿಬೆಂಕಿಗಳ ಸಂಯೋಗವಾದಂತಾಗಿ ದೇಶೀ ಚಳವಳಿಗಳ ಬೇಗೆಯು ಜಿಲ್ಲೆಯಲ್ಲಿ ಒಲುಬೇಗ ಹಬ್ಬುವ ಸಂಪ್ರದಾಯವಿತ್ತು. ಬಂಗಾಲ ಇಬ್ಭಾಗವಾದ ಸಮಯದ ಸ್ವದೇಶಿ ಚಳವಳಿಯಲ್ಲಿಯೂ ನಂತರ ಹೋಮರೂಲ ಚಳವಳಿಯಲ್ಲಿಯೂ ಮೊನೆ ಮೊನ್ನೆ ಮಹಾತ್ಮರ ಅಸಹಕಾರ ಚಳವಳಿಯಲ್ಲಿಯೂ ವಿಜಾಪೂರ ಜಿಲ್ಲೆಯ ಕನ್ನಡಿಗರ ಕರ್ತವ್ಯವನ್ನು ನಾಲ್ಕು ಪ್ರಾಂತಗಳು ಹೊಗಳುವಂತೆಯೇ ಉದ್ಧರಿಸುತ್ತ ಬಂದಿದೆ. ಆದರೆ ಈಗ ಯಾವ ಪಾಪಿಯ ದೃಷ್ಟಿ ತಾಕಿತೆನ್ನಬೇಕು? ಚಳವಳಿಯಲ್ಲಿ ವಿಜಾಪೂರ ಜಿಲ್ಲೆಯು ಬಹಳೇ ಮಾಗಳವಾಗಹತ್ತಿದೆ. ಪರಿಸ್ಥಿತಿಯನ್ನು ವಿಮರ್ಶಿಸಿ ನೋಡಿದರೆ ತರುಣರ ಹುಕಿಯಲ್ಲಿ ಏನು ಕೈಕಂಕರ ತೋರಿಬರುವದಿಲ್ಲ. ಆಗಿನಂತೆ ಈಗಲೂ ಅವರ ಉತ್ಸಾಹವು ರಾಷ್ಟ್ರಕಾರ್ಯಕ್ಕಾಗಿ ಹೊರಹೊಮ್ಮುತ್ತಿರುವದು (ಮಾತೃಭೂಮಿಯ ವಿಮೋಚನಕ್ಕಾಗಿ) ಕಡತಂದ ಕಾರಾಗೃಹವಾಸವನ್ನಾದರೂ ಆನಂದದಿಂದ ಅನುಭವಿಸುವೆವೆಂಬ ಅವರ ಮನೋನಿರ್ಧಾರವು ಇಂದಿಗೂ ಮನೋಜ್ಞವಾಗಿ ಗೋಚರವಾಗುತ್ತಿರುವದು. ಆದರೆ ಆ ಉತ್ಸಾಹಕ್ಕೆ ನಿಯಾಮಕರಾಗಿ ನಿಂತುಕೊಳ್ಳುವ ಹಿರಿಯರು ಈ ಹೊತ್ತು ಕಾರ್ಯಕ್ಷೇತ್ರದಿಂದ ಸರಿದು ನಿಂತಿರುವದರಿಂದ ಇಲ್ಲಿಯ ತರುಣರ ಉತ್ಸಾಹವು ಕಾರ್ಯಕಾರಿಯಾಗಿ ಪರಿಣಮಿಸಲಿಕ್ಕೆ ಅಡೆತಡೆಯುಂಟಾಗಿದೆ. ಜಿಲ್ಲೆಯ ಹಿರಿಯರಿಗೆ ಹೀಗೆ ಒಮ್ಮಿಂದೊಮ್ಮೆಗೆ ಈ ಕೈಬಿಡುವಿಕೆಯೆಲ್ಲಿಂದ ಬಂದಿತೋ ತಿಳಿಯದಾಗಿದೆ. ಅವರು ಇಂದಿನವರೆಗೆ ಆಕ್ರಮಿಸಿದ ಹೋರಾಟದ ಸ್ಥಾನಗಳಿಂದ ಹೀಗೆ ಒಮ್ಮೆಲೆ ನಿವೃತ್ತರಾದ್ದರಿಂದ ಅವರು ಅಲಂಕರಿಸಿದ ಆ ಪೀಠಗಳೆಲ್ಲ ಶೂನ್ಯವಾಗಿ ಕಾಣುತ್ತಿರುವದರಲ್ಲಿ ನಮ್ಮ ಜಿಲ್ಲೆಯ ಸ್ಥಿತಿಯು ಹಿರಿಯರಲ್ಲಿ ಮನೆಮಾಡಿಕೊಂಡಿದೆ. ತರುಣರ ಉತ್ಸಾಹವು ಎತ್ತ ಜಗ್ಗೀತು. ಗಳಿಸಿದ ಜನತೆಯ ನಂಬಿಗೆಯೂ ಅವರವೂ ಆವಾವ ಆ ಜನತೆಯ ಸಹಾಯವು ಒಮ್ಮೆಲೆ ಹೇಗೆ ಲಭಿಸೀತು? ಕಾರಣ ಜಿಲ್ಲೆಯ ಹಿರಿಯರು ಇಷ್ಟು ದಿವಸ ಅಧ್ವರ್ಯಗಳಾಗಿ ನಿಂತು ಕಾರ್ಯನಡಿಸಿದ ಮುಖಂಡರು ಹೀಗೆ ಆಯಾತವೇಳೆಗೆ ಹಿಂತೆಗೆದು ಜಿಲ್ಲೆಯ ಕೈಬಿಡಬಾರದೆಂದು ನಾವು ಪರಿಪರಿಯಿಂದ ಕೇಳಿಕೊಳ್ಳುತ್ತೇವೆ.

---

## ೩೦೦ ಮನೆಯವರು ಉಪ್ಪು ಮಾಡಹತ್ತಿರುವರು!

ಬಂಗಾಲದಲ್ಲಿ ಮಹೀಷವಂಶನದ ಹತ್ತಿರ ಕೃಷ್ಣಪೂರದಲ್ಲಿ ೩೦೦ ಮನೆತನದವರು ಜಾಹೀರರೀತಿಯಿಂದ ತಮ್ಮ ತಮ್ಮ ಮನೆಗೆ ಹತ್ತುವಷ್ಟು ಉಪ್ಪನ್ನು ತಾವೇ ಮಾಡಿಕೊಳ್ಳಹತ್ತಿರುವರು. ನೀಲ ಎಂಬ ಕಾಂಗ್ರೆಸ್ ಕಾರ್ಯಕರ್ತೆಯು ಉಪ್ಪಿನ ಮಾಳಗಳ ಮೇಲೆ ದಾಳಿಮಾಡಿ ಅವುಗಳನ್ನು ಒಡೆದು ಪೋಲೀಸರು ನಾಲ್ಕುವೇಳೆ ಉಪ್ಪು ತೆಗೆದುಕೊಂಡು ಹೋದರೂ ಮತ್ತೆ ಯುದ್ಧಪ್ರಕಾರ ಅಲ್ಲಿಯ ಸ್ವಯಂಸೇವಕರು ನಾಲ್ಕು ವೇಳೆಯೂ ಸರಿಪಡಿಸಿಕೊಂಡು ಕೆಲಸ ನಡೆಸಿರುವರು. ಅಲ್ಲಿಯ ಉರ್ವ ಮೂವರು ಸತ್ಯಾಗ್ರಹಿಗಳನ್ನು ಹಿಡಿದೊಯ್ದಿರುವರು! ಮಹಿಷಾದಲ್ಲಿಯ ಒಂದು ಮಣ ಉಪ್ಪನ್ನು ನಿನ್ನೆ ಜಪ್ತಮಾಡಿ ಅಲ್ಲಿಯ (ಉಪ್ಪು ಮಾಡಲಿಕ್ಕೆ ಉಪಯೋಗಿಸುತ್ತಿದ್ದ) ಕಬ್ಬಿಣ ಅಳಿಗೆಗಳನ್ನು ಪೋಲೀಸರು ಒಡೆದಿರುವರು.

## ಕಾಯಿದೆಭಂಗದ ಪ್ರಸಾರವು!

### ಮದ್ರಾಸ

ಮದ್ರಾಸದಲ್ಲಿ ಇಂದಿನ ವರೆಗೆ ತರುಣ ಸಂಘದವರು ೪೦ ಸ್ವಯಂಸೇವಕರನ್ನು ಮಾತ್ರ ಸಂಪಾದಿಸಿರುವರು! ಮದ್ರಾಸದಂಥ ದೊಡ್ಡ ರಾಜಧಾನಿಯ ಪಟ್ಟಣಕ್ಕೆ ಇದು ಭೂಷಣವೆಂದು ಯಾರು ಅನ್ನುವರು? ಶ್ರೀ. ಪ್ರಕಾಶಂರು ಇದಿಷ್ಟೇ ಸ್ವಯಂಸೇವಕರನ್ನು ಕೂಡಿಕೊಂಡು ೧೩ ನೇ ತಾರೀಖಿನ ಬೆಳಿಗ್ಗೆ ಸ್ವರಾಜ್ಯ ಕಚೇರಿಯಿಂದ ಹೊರಟು ಉಪ್ಪನ್ನು ತಯಾರಿಸುವ ಕಾರ್ಯದಲ್ಲಿ ಪ್ರವೃತ್ತರಾಗತಕ್ಕವರೆಂದು ತಿಳಿಸಿರುವರು. ಮದ್ರಾಸ ಜನರನ್ನು ಜಾಗರಿಸಲಿಕ್ಕೆ ಇಂಥ ಪ್ರಕಟನೆಗಳದ್ವಾರ ಯತ್ನ ನಡಿಸೇ ಇರುವರು.

### ಮಸಲೀಪಟ್ಟಣ

ಇಲ್ಲಿಯ ಸತ್ಯಾಗ್ರಹಿಗಳ ಚಟುವಟಿಕೆಯನ್ನು ಕಡೆಯಲು ಒಳ್ಳೆರಿಯಿಂದ ಪೋಲೀಸರ ಹಿಂಡ ಬಂದಿದೆ ಅವರ ಹಿಂದೆ ಸತ್ಯಾಗ್ರಹಿಗಳ ಗುಂಪೂ ಒಂದು ಅದೇ ಗಾಡಿಗೆ ಒಂದು ಮಸಲೀಪಟ್ಟಣಕ್ಕೆ ತಲುಪಿತಂತೆ ನಾವು ಈಗ ಸರಕಾರಕ್ಕೆ ಉತ್ತರ ಕೊಡಬೇಕಾಗಿರುವದು ಇದೇ ರೀತಿಯದಾಗಿರಬೇಕಾಗಿದೆ.

### ಗುಂಟೂರ

೧೦ ನೇ ತಾರೀಖಿನ ಬೆಳಿಗ್ಗೆ ಸತ್ಯಾಗ್ರಹಿಗಳೆಲ್ಲ ಆಂಧ್ರದ ಸರ್ವಾಧಿಕಾರಿಯಾದ ಕೊಂಡ ವೆಂಕಟಪ್ಪಯ್ಯಾ ಇವರ ಮುಖ್ಯತ್ವದಲ್ಲಿ ಸಾರ್ವಜನಿಕರಿಂದ ಪ್ರಾರ್ಥನೆಮುಗಿಸಿಕೊಂಡು ವೆಂಕಟಪ್ಪನವರ ಬಂಗಲೆಯ ಕಡೆಗೆ ಸಾಗಿದರು. ಗುಂಟೂರಿಗೆ ಸಮುದ್ರವಿಲ್ಲದ್ದರಿಂದ, ಅವರು ಸಮೀಪದಲ್ಲಿಯ ಉಪ್ಪುಗೂಡ ಮಣ್ಣನ್ನು ತಂದು ರಾಶಿಹಾಕಿದ್ದರು. ಅಲ್ಲಿಗೆ ಹೋಗಿ ಆ ಮಣ್ಣಿನಿಂದ ಉಪ್ಪನ್ನು ತಯಾರಿಸಹತ್ತಿದರು. ತಾವು ಹೀಗೆ ಮಾಡತಕ್ಕವರಿದ್ದೇವೆಂದು ಮುನ್ನಿನದಿನವೆ ಜಿಲ್ಹಾ ಅಧಿಕಾರಿಗಳಿಗೆಲ್ಲ ತಿಳಿಸಿ, ಊರೆಲ್ಲಿಯೂ ಜಾಹೀರಪಡಿಸಿದ್ದರು. ಆದರೆ ಪೋಲೀಸರು ಯಾರೂ ಈ ಕಾಯಿದೆಭಂಗದ ಅಪಮಾನದಿಂದ ಸರಕಾರವನ್ನು ರಕ್ಷಿಸಿಕೊಳ್ಳಲು ಬರಲಿಲ್ಲ.

### ಕಲಕತ್ತಾ

ಕಲಕತ್ತೆಯಲ್ಲಿ ಕಾಲೇಜ ವಿದ್ಯಾರ್ಥಿಗಳೇ ಉಪ್ಪು ಮಾರುತ್ತಿದ್ದರು ಅವರಿಗೆ ಹಿಡಿದು ಶಿಕ್ಷೆಕೊಡಲು, ಆ ವಿದ್ಯಾರ್ಥಿಗಳ ಕಾಲೇಜುಗಳೇ (ರಿಪನ್ ಮತ್ತು ಚರ್ಚ ಇವೆರಡು ಕಾಲೇಜುಗಳು) ಈಗ ಬಲವಾಗಿ ಆ ಕಾಲೇಜುಗಳು ಈಗ ಬಂದು ಮಾಡಲ್ಪಟ್ಟಿವೆ. ಸರಕಾರದವರು ತಮ್ಮ ದಮ್ಮಳಿಕೆಯಿಂದ ಚಳವಳಿಯನ್ನು ನಿಂದಿಸಬೇಕೆಂದು ಬಯಸಿದರೆ, ಅದು ಮದ್ದಿನ ರಾಶಿಯಲ್ಲಿ ಕಿಡಿ ಉದುರಿಸಿದಂತಾಗಿ ಚಳವಳಿಯು ಭಗ್ಗನೇ ಹಬ್ಬಿಕೊಳ್ಳುವದೇ ಎಲ್ಲ ಕಡೆಗೆ ಕಾಣಿಸುತ್ತಿದೆ! ಸರಕಾರವು ಇನ್ನಾದರೂ ಬುದ್ಧಿಕಲಿಯುವದೆನೋ?

## ವಡವಾನ ಸ್ತ್ರೀಯರ ಶಪಥವು!

ವಡವಾನದಲ್ಲಿ ಸರಕಾರದವರು ಸ್ವತಂತ್ರ ಭಾರತ ಉಪ್ಪನ್ನು ಮಾರತಕ್ಕವರೆಂದು ಕೆಲ ಸ್ವಯಂಸೇವಕರನ್ನು ವಿರಮಗಾಂವದ ವರೆಗೆ ಹಿಂತಿರುಗಿಸಿ ಅಲ್ಲಿ ಬಿಟ್ಟುಬಿಟ್ಟರು. ಇಲ್ಲಿಯ ಜೈನ ಸ್ತ್ರೀಸಮಾಜದವರೆಲ್ಲ ತಾವಿನ್ನು ಪರದೇಶಿ ಉಡಿಗೆ ತೊಡಿಗೆಗಳನ್ನು ಹಾಕಲಿಕ್ಕಿಲ್ಲೆಂದು ತಮ್ಮ ತಮ್ಮ ಸ್ವಾಮಿಗಳ ಪಾದಮುಟ್ಟಿ ಆಣೆಮಾಡಿದ್ದಾರೆ. ಕೆಲವು ಸ್ತ್ರೀಯರು ತಾವಿನ್ನು ಈ ಯುದ್ಧ ಮುಗಿಯುವ ವರೆಗೆ ಸೀ ಅಡಿಗೆಯನ್ನು ಉಣ್ಣಲಿಕ್ಕಿಲ್ಲೆಂದು ಪ್ರತಿಜ್ಞೆಮಾಡಿರುವರು. ಸ್ವಾತಂತ್ರ್ಯಕ್ಕಾಗಿ ಅಲ್ಲಿಯ ಸ್ತ್ರೀಯರಲ್ಲಿಯೂ ಪ್ರಕಟವಾಗಹತ್ತಿರುವ ಈ ಕಳಕಳಿಯನ್ನು ಇತ್ತ ಕಡೆಯ ಗಂಡಸರು ಸಹ ಇನ್ನೂ ಅನುಕರಿಸಬೇಕಾಗಿದೆ ಅಲ್ಲವೇ? ಗಂಡಸರಿಗೆ ಬುದ್ಧಿ ಕಲಿಸುವವರು ಹೆಣ್ಣುಮಕ್ಕಳೇ ಎಂದು ಕವಿಗಳನ್ನುತ್ತಿರುವದು ನಿಜವಿರಬಹುದಲ್ಲವೇ? ಆಗಲಿ! ಈ ವಡವಾನ ಜೈನ ಸ್ತ್ರೀಯರಿಂದಾದರೂ ಬುದ್ಧಿಕಲಿತು ಈ ವೇಳೆಯದ ತಮ್ಮ ಕರ್ತವ್ಯವೇನೆಂಬುದನ್ನು ಇಲ್ಲಿಯ ಗಂಡಸರು ಅರಿತುಕೊಳ್ಳಲಿ!

## ಲಾಹೋರದಲ್ಲಿ ಸತ್ಯಾಗ್ರಹದ ಆರಂಭವು!

ಡಾ|| ಸತ್ಯಪಾಲ ಮತ್ತು ಅಲವಾ ಇವರು ಮೊನ್ನೆ ೧೦ ನೇ ತಾರೀಖಿಗೆ ಏಳೇಳು ಸ್ವಯಂಸೇವಕರ ಸಣ್ಣ ಸಣ್ಣ ಜಮುಗಳನ್ನು ರಚಿಸಿ ಅವರೊಂದಿಗೆ ರಾವೀನದಿಯ ದಂಡೆಯ ಕಡೆಗೆ ಸಾಗಿದರು. ಅಲ್ಲಿ ಸ್ವತಂತ್ರ ಉಪ್ಪು ತಯಾರಮಾಡಿದರು. ಒಂದ ಜಮು ಹಿಡಿಯಲ್ಪಟ್ಟರೆ ಅದರ ಸ್ಥಳಕ್ಕೆ ಮತ್ತೊಂದಿರಲೆಂದು ಅನೇಕ ಪಥಕಗಳನ್ನ ಏರ್ಪಡಿಸಲಾಗಿಟ್ಟಿದ್ದಾರೆ ೧೩ ನೇ ತಾರೀಖಿಗೆ ಅಮೃತಸರ, ಜಲಿಯನವಾಲಾ ಬಾಗಗಳಲ್ಲದೇ ಪಂಜಾಬದ ಇತರ ಜಿಲ್ಹೆಗಳಲ್ಲಿಯೂ ಉಪ್ಪಿನ ಕಾಯಿದೆಯ ಧಿಕ್ಕಾರ ನಡೆಯುವಂತೆ ಏರ್ಪಾಡ ಮಾಡಿದಾರೆ

ಪಂಡಿತ ಮಾಲವೀಯರು ತಮ್ಮ ವಿದೇಶೀ ಬಟ್ಟೆಗಳ ಬಹಿಷ್ಕಾರ ಚಳವಳಿಯ ಪ್ರಸಾರಕ್ಕಾಗಿ ಲಾಹೋರಿಗೆ ಹೋಗಿದ್ದಾರೆ ಅಲ್ಲಿಯ ಜವಳೀ ವರ್ತಕರಿಗೆ ಭೆಟ್ಟಿಯಾಗಿ ತಮ್ಮ ಅಂಬೋಣವನ್ನು ಅವರ ಮುಂದಿಟ್ಟರು ವರ್ತಕರ ಉತ್ತರ ಏನೂ ಪ್ರಕಟವಾಗಿಲ್ಲ. ಅವಿಶ್ರಾಂತ ಶ್ರಮಪಡುವವರಾದ ಪಂಡಿತ ಮಾಲವೀಯರಂಥ ದೇಶವತ್ಸಲರು ಮನಸ್ಸಿನ ಮೇಲೆ ತಕ್ಕೊಂಡು ದುಡಿಯಹತ್ತಿದ ಮೇಲೆ ಇಲ್ಲಿಯ ಪರದೇಶಿ ಬಟ್ಟೆಗಳಿಗೆ ಕೊನೆಗಾಲ ಬಂದಿತೆಂದು ಖಂಡಿತವಾಗಿ ನಂಬಬಹುದು!

## ಜಂಬುಸರದಲ್ಲಿಯೂ ಅಧಿಕಾರಿಗಳ ದುರವಸ್ಥೆ!

ಜಂಬುಸರದಲ್ಲಿ ಮನಸೂಖ ಮಾಮಲೇದಾರರೆ ಮೊದಲಾದ ಸರಕಾರೀ ಅಧಿಕಾರಿಗಳು ಇರುತ್ತಿರುವ ಮನೆಗಳನ್ನು ಇನ್ನು ತೆರವು ಮಾಡಿರೆಂದು ಆ ಮನೆಗಳ ಯಜಮಾನರು ಆ ಅಧಿಕಾರಿಗಳಿಗೆ 'ನೋಟಿಸ' ಕೊಟ್ಟಿದ್ದಾರೆ. ಅವರಿಗೆ ಊರೊಳಗೆ ಮತ್ತಿಬ್ಬರು ಮನೆಕೊಡಲು ಒಪ್ಪರೊಲ್ಲರು! ಹೀಗಾಗಿ ಇಷ್ಟು ಉದ್ದಂಡರಾದ ಅಧಿಕಾರಿಗಳು ಗಿಡದ ಹೊರವನಲ್ಲಿ ಬಾಳುವೆಮಾಡುವ ಪ್ರಸಂಗಬಂದಿದೆ! ಸರಕಾರಕ್ಕೆ ಸರಕಾರಿ ಬಹಿಷ್ಕಾರವನ್ನು ಸಾರಿದರೆ, ಅವರು ಎಂಥ ಅಧಿಕಾರವುಳ್ಳವರಿದ್ದರೂ ಅವರ ಸ್ಥಿತಿಯು ನಾಯಿ ಪಾಡಾಗುತ್ತ ಹೀನವಾಗುತ್ತದೆಂದು ಜಂಬುಸರ ಮೊದಲಾದ ಗುಜರಾಥದ ಪಟ್ಟಣಗಳಲ್ಲಿ ಇಂದು ಕಾಣಬರುವದಾಗಿದೆ! ಇವರಂತೆ ಕೆಲವು ಸಾಹುಕಾರರು ಬಾಡಿಗೆಗೆ ಕೊಟ್ಟ ಅಂಗಡಿಗಳ ಒಡೆಯರು ಆ ಸರಕಾರಿ ಮಾರವಾಡಿಗಳಿಗೆ ಆ ಅಂಗಡಿಗಳನ್ನು ಬಿಟ್ಟುಕೊಡಲಿಕ್ಕೆ ನೋಟೀಸು ಕೊಟ್ಟಿದ್ದಾಗ ಅನ್ಯಾಯ ರೀತಿಗಳನ್ನು ಹಿಂದೆಟ್ಟುವದಕ್ಕೆ ಹೀಗೆ ಒಕ್ಕಟ್ಟಿನಿಂದ ಹೋರಾಡುವ ಹೊರತು ಅನ್ಯ ಉಪಾಯಗಳಿಲ್ಲ!

# ಬಾಗಲಕೋಟೆಯು ಉಪ್ಪಿನ ಕಾಯಿದೆಯನ್ನು ಮುರಿಯಿತು.

## ಸಭೆಯಲ್ಲಿ ಜನರಿಂದ ಉಪ್ಪಿನ ಚೀಟಿಗಳು ಮಾರಲ್ಪಟ್ಟವು

### ಸ್ವತಂತ್ರ ಭಾರತದ ಸಭೆಗೆ ಆಗಮಿಸಿದ ಅನೇಕ ಸ್ತ್ರೀಯರು ನಿರ್ಭಯದಿಂದ ಕೂಡಿಕೊಂಡರು.

### ಮಂಗಳವೇಢೆ

# ಶ್ರೀನಿವಾಸರಾಯರು ಸೆರೆಯಾಳಾದರು.

### ಇವರೊಡನೆ ಮತ್ತೆ ಕೆಲವು ಸತ್ಯಾಗ್ರಹಿಗಳನ್ನು ಸೆರೆಹಿಡಿದಿರುವರು.

### ಈ ಸೆರೆಯಾಳುಗಳ ಪ್ರಚಂಡ ಮೆರವಣಿಗೆಯು

### ತರುಣರ ಉತ್ಸಾಹವು ಉಕ್ಕೇರುತ್ತಿದೆ.

ಕರ್ನಾಟಕ ಸತ್ಯಾಗ್ರಹ ಯುದ್ಧಮಂಡಲದ ಅಪ್ಪಣೆಯ ಪ್ರಕಾರ ರಾಷ್ಟ್ರೀಯ ವಾರದ ಕೊನೆಯ ದಿನವಾದ ಭಾನುವಾರ ೧೩ ನೇ ತಾರೀಖಿಗೆ ಬಾಗಲಕೋಟೆಯಲ್ಲಿ ಊರ ಮಧ್ಯದಲ್ಲಿರುವ ಕೊತ್ವಾಲಪ್ಪನ ಗುಡಿಯ ಸಭಾಮಂಟಪದಲ್ಲಿ ಸಂಜೆಯ ೭ ಘಂಟೆಗೆ ಸಭೆಕೂಡಿತ್ತು. ಸಭೆಗೆ ಅನೇಕ ಸ್ತ್ರೀಯರೂ ಆಗಮಿಸಿದ್ದರು. ಅವರೆಲ್ಲರೂ ಸ್ವತಂತ್ರ ಉಪ್ಪನ್ನು ಕೊಂಡುಕೊಳ್ಳುವ ಇಚ್ಛೆಯಿಂದಲೇ ಬಂದಿದ್ದರು. ಆದರೆ ಕೊಳ್ಳುವ ಜನರು ಬಹಳವಾಗಿ ಉಪ್ಪಿನ ಚೀಲಗಳು ಸಾಲದೆ ಹೋದವು! ಆದಕಾರಣ ಕೆಲವು ಹೆಣ್ಣುಮಕ್ಕಳು ತಮಗೆ ಉಪ್ಪಿನ ಚೀಟಿಗಳು ಸಿಗಲಿಲ್ಲ ಇಷ್ಟು ಜನ ಕೊಳ್ಳುತ್ತಿರುವಾಗ [illegible] ಮಂಗಳವೇಢೆ ಶ್ರೀನಿವಾಸರಾಯರಿಗೆ [illegible]. ಶ್ರೀನಿವಾಸರಾಯರು ನಾಳಿಗೆ ಮನೆಗೆ ಮಾರಲಿಕ್ಕೆ ತರುತ್ತೇವೆ ಅಲ್ಲಿ ಕೊಂಡುಕೊಳ್ಳಿರಿ ಅವಸರಪಡಬೇಡಿ ಎಂದು ಹೇಳಿ ಅವರನ್ನು ಸಾಂತ್ವನಗೊಳಿಸಿದರು. ಪೊಲೀಸರು ಈ ಕಾಯಿದೆಭಂಗದ ವಾರ್ತೆಯನ್ನು ಮೊದಲೇ ಹಿಡಿದು 'ಫುಲ್ ಡ್ರೆಸ್' ಮಾಡಿಕೊಂಡು ಎಂಟು ಜನರು ಸಭಾಮಂಟಪದ ಮುಂದೆ ಶಾಂತತೆ ರಕ್ಷಣೆಮಾಡಬೇಕೆಂದು ಆತುರತೆಯಿಂದ ಕಾದುಕೊಂಡು ನಿಂತಿದ್ದರು. ಸಭಾಮಂಟಪವು ಹಿರಿಯರಿಂದಲೂ ವಿದ್ಯಾರ್ಥಿಗಳಿಂದಲೂ ಕಿಕ್ಕಿರಿದು ಬಿದ್ದಿತ್ತು. ಸಭೆಗೆ ಎಂದೂ ಬಾರದ ಬಾಗಲಕೋಟೆಯ ಸ್ತ್ರೀಸಮುದಾಯವೂ ಹೆಚ್ಚಾಗಿ ಬಂದದ್ದು ಈ ಸಭೆಯ ವಿಶೇಷ ಲಕ್ಷಣವು! ಶ್ರೀಮಾನ್ ಮಂಗಳವೇಢೆ ಶ್ರೀನಿವಾಸರಾಯರೇ ಈ ಸಭೆಯ ಎಲ್ಲ ಕಾರ್ಯವನ್ನು ನಿರ್ವಹಿಸಿದರು. ಶ್ರೀ ನರಗುಂದ ಜಯರಾಯರು ಶ್ರೀನಿವಾಸರಾಯರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸಿದ ಮೇಲೆ ಶ್ರೀ ಮಂಗಳವೇಢೆಯವರು ತಮ್ಮ ಭಾಷಣಕ್ಕೆ ಆರಂಭಮಾಡಿ, ಹಿಂದೀ ಜನರ ಇಂದಿನ ದಾರಿದ್ರ್ಯಕ್ಕೆ ಈ ಸರಕಾರವೇ ಮೂಲಕಾರಣವೆಂದೂ, ಈ ಸರಕಾರವನ್ನು ಎತ್ತಿಒಗೆದು ಸ್ವತಂತ್ರರಾಗದ ಹೊರತು ಗತ್ಯಂತರವಿಲ್ಲೆಂಬುದನ್ನೂ ವಿಶದವಾಗಿ ತಿಳಿಸಿ ಹೇಳಿದರು. ಆಮೇಲೆ ಸದ್ಯದ ಕಾಯಿದೆಭಂಗದ ಪ್ರಚಂಡ [illegible] ಸರಕಾರದ [illegible]ಗಳನ್ನು ಹೇಗೆ ನಡುಗಿಸುತ್ತಿದೆಯೆಂಬುದನ್ನು ವಿವರಿಸಿ, ಸಭೆಯವರು ಸ್ತ್ರೀಪುರುಷರು ಏನು ಮಾಡಲಿಕ್ಕೆ ಸಿದ್ಧರಿರುವಿರೆಂದು ಪ್ರಶ್ನೆಮಾಡಿ [illegible] ಉಪ್ಪನ್ನು ಕೊಳ್ಳಲು ಎಷ್ಟು ಜನರು ಮುಂದೆ ಬರುವಿರಿ ಎಂದು [illegible] ಸ್ವತಂತ್ರಭಾರತದ ಉಪ್ಪನ್ನು ಲಿಲಾವಿಗೆ ಇಟ್ಟರು. ಲಿಂಗಾಪೂರ ಎಂಬ ಸ್ವಯಂಸೇವಕನು [illegible] ಉಪ್ಪು [illegible] ಆದೇ [illegible] ಲಿಲಾವು ಆಯಿತು. [illegible] ಎಂಬ [illegible] ಮುಂದೆ [illegible] ಸಭೆಯಲ್ಲಿ ಶ್ರೀನಿವಾಸರಾಯರು [illegible] ಚೀಟಿಗಳನ್ನು [illegible] ಸಭೆಯಲ್ಲಿ ಮಾರಿದರು. [illegible] ಪೊಲೀಸರಿಗೆ [illegible] ಕಾಯಿದೆ [illegible] ಶ್ರೀನಿವಾಸರಾಯರನ್ನು ಸೆರೆಹಿಡಿದು [illegible] 'ಕನ್ನಡಿಗ' ಪತ್ರಿಕೆ [illegible] ಶ್ರೀನಿವಾಸರಾಯರ [illegible] ಕನ್ನಡಿಗ ಪತ್ರಿಕೆ ಸಂಪಾದಕರಾದ ಶ್ರೀನಿವಾಸರಾಯರ

ಅಸಾಧ್ಯವಾದ ಜಯಘೋಷದಿಂದ ಹೂಹಾರ ಸಹಿತ ಸೆರೆಮನೆಯ ಬಾಗಿಲವರೆಗೆ ಹಿಂಬಾಲಿಸಿತು. ಇಂಥ ಸ್ವಾತಂತ್ರ್ಯ ಸಮರದ ಬಾಗಲಕೋಟೆಯ ಕೀರ್ತಿಯನ್ನು ಗೀತದ ನಾನಾ ಶ್ರೀನಿವಾಸ ರಾಯರೂ ಅವರೀರ್ವರ ಇಂದಿನ ಬೆಳಗಾಂವದ ಶ್ರೀ ಗಣೆ ಮತ್ತು ಲಿಂಗಾಪೂರ ಈ ಸ್ವಯಂಸೇವಕರೂ ಸಿದ್ಧರಾಗಿರುತ್ತ ಸ್ತ್ರೀಯರೂ ಈ ಧರ್ಮಯುದ್ಧದಲ್ಲಿ ಭಾಗಿಗಳಾಗಲು ಸರಕಾರದ ದಬ್ಬಾಳಿಕೆಗೆ ಬಗ್ಗಲು ಕೋಟೆಯ ನಾಗರಿಕರು ಏನು ಉತ್ತರಕೊಡಬೇಕು. ಇದು ಸ್ಪಷ್ಟವಿದೆ. ಇಲ್ಲಿಯ ತರುಣರೂ ಉತ್ಸಾಹಗೊಂಡಿದ್ದಾರೆ. ಆಗಲಿ ಜನತೆಗೂ ಸರಕಾರಕ್ಕೂ ಒಮ್ಮೆ ಧರ್ಮಯುದ್ಧವು ಆರಂಭವಾಗಲಿ. ಮಂಗಳವೇಢೆಯವರನ್ನು ಕಾರಾಗೃಹಕ್ಕೆ ಕಳಿಸಿ ಬಾಗಲಕೋಟೆಯು ತಣ್ಣಗೆ ಕುಳಿತಿತು ಎಂಬ ಅಪಕೀರ್ತಿಯು ಬಾರದಂತೆ ಅರಿತು ತಮ್ಮ ಕರ್ತವ್ಯವನ್ನು ಮಾಡಬೇಕಾಗಿದೆ. ಕನ್ನಡಿಗನ ಸಂಪಾದಕರನ್ನು ಕರ್ನಾಟಕದ ತರುಣರೆಲ್ಲರೂ ಒಳ್ಳೇ ಸ್ಫೂರ್ತಿಯಿಂದ ಅದರಿಸುತ್ತಿರುವರಲ್ಲವೆ? ಅವರಲ್ಲಿ ಇಂದು ಶ್ರೀನಿವಾಸರಾಯರಿಗೆ ಸಂತೋಷವಾಗುವಂತೆ ಅಭಿಮಾನವಿದ್ದರೆ ಉಪ್ಪಿನ ಕಟ್ಟಳೆಯನ್ನು ಮುರಿಯುವದಕ್ಕೆ ಸಿದ್ಧರಾಗದ ಉಳಿಯಬಹುದು?

## ಸೊಲ್ಲಾಪೂರ ೫೦೦ ಸತ್ಯಾಗ್ರಹಿಗಳು.

ಮಾರ್ಚ ೩೦ನೆ ತಾರೀಖಿನ ದಿವಸ ಮುನಸಿಪಾಲಟಿ ಕಚೇರಿಯ ಮೇಲೆ ರಾಷ್ಟ್ರಧ್ವಜ ಏರಿಸಲ್ಪಟ್ಟಿತು. ೧ನೇ ತಾರೀಖಿನ ದಿವಸ ಸಂಜೆ ೬ ಘಂಟೆಯ ಸುಮಾರಕ್ಕೆ ದೀ. ಭ. ಭೋಪಟಕರರು "ಸ್ವಾತಂತ್ರ್ಯ ಸಂಗ್ರಾಮ" ಈ ವಿಷಯದ ಮೇಲೆ ಡಾ|| ಅಂತ್ರೋಳಿಕರ ಇವರ ಅಧ್ಯಕ್ಷತೆಯ ಕೆಳಗೆ ಟಿಳಕ ಚೌಕದಲ್ಲಿ ವ್ಯಾಖ್ಯಾನ ಮಾಡಿದರು.

ಈ ಊರ ತರುಣರಲ್ಲಿ ಉತ್ಸುಕತೆ ತುಂಬಿ ತುಳುಕುತ್ತಿದೆ. ಚಿಕ್ಕ ಚಿಕ್ಕ ಬಾಲಕರೂ ಸಹ ಸನ್ನದ್ಧರಾಗಿದ್ದು ಸವಾಲಿಕ ದೊಂದಿ ಗೆಳೆಯರು ಸೈನಿಕರ ರೀತಿಯಿಂದ ಜಯ ಜಯ ಕಾರದ ನಿನಾದ ಮಾಡುತ್ತ ಊರಲ್ಲ ದಿನಾಲು ಮೆರವಣಿಗೆಯನ್ನು ಹೊರಡಿಸ ಹತ್ತಿದ್ದಾರೆ. ಈ ಊರಲ್ಲಿ ೫೦೦ ಜನ ಸ್ವಯಂಸೇವಕರು ಸತ್ಯಾಗ್ರಹದ ಸಲುವಾಗಿ ಸಿದ್ಧರಾಗಿದ್ದಾರೆ.

ಕರ್ನಾಟಕ ನಾಟಕಶಾಲೆಯ ಮತ್ತು ಅಭಿನಯಕೇಸರಿಗಳಾದ ಸದಾಶಿವರಾವ ಗರೂಡ ಇವರ ಪತ್ನಿಯು ನಾಟಕ ಮಂಡಳಿಯವರು ಗುಲಬುರ್ಗಾದಿಂದ ಬಂದಿದ್ದರು. ಅವರು ಇಲ್ಲಿ ನಾಟ್ಯದ ಪ್ರಯೋಗಗಳನ್ನು ಮಾಡಿ ಬಾಗಲಕೋಟೆಗೆ ಹೋಗುವವರಿದ್ದಾರೆ.

## ನಾಗಪೂರದಲ್ಲಿ ವಿದೇಶಿ ಬಟ್ಟೆಯ ಬಹಿಷ್ಕಾರವು.

ನಾಗಪೂರ ಜವಳಿ ವ್ಯಾಪಾರಸ್ಥರ ಸಂಘದವರು ತಮ್ಮ ಸಂಘದ ಸಭೆಯಲ್ಲಿ ಸಧ್ಯಕ್ಕೆ ಮೂರು ತಿಂಗಳುಗಳ ವರೆಗೆ ಪರದೇಶಿ ಬಟ್ಟೆಗಳನ್ನು ತರಿಸಬಾರದೆಂದು ನಿಶ್ಚಯಿಸಿಕೊಂಡಿದ್ದಾರೆ. ಈ ಸಂಘದಲ್ಲಿ ಅನೇಕ ಹಿಂದೂ ಮತ್ತು ಮುಸಲ್ಮಾನ ವರ್ತಕ ಮಂಡಳಿ ಎಲ್ಲರೂ ಒಪ್ಪಿಗೆ ಸೂಚಿಸಿದ್ದರಿಂದ ಈ ಕಾರ್ಯವನ್ನು ಕೈಕೊಂಡಿದ್ದಾರೆ.

## ಅಸೆಂಬ್ಲಿ ಸದಸ್ಯರಾಗಿದ್ದ ಆಣೆ, ಸ್ವಯಂಸೇವಕರಾದರು

ಶ್ರೀ ಸಂತ ತುಕಾರಾಮ ಕಾಶಿದ ಧಂಗದ ಸತ್ಯಾಗ್ರಹ ಸಿದ್ಧರಾಗಿ ಈ ಚಳವಳಿಯಲ್ಲಿ ಸ್ವಯಂಸೇವಕನ ಕೆಲಸ ಮಾಡಲು ಸಿದ್ಧರಿದ್ದೇನೆ. ಸರ್ಕಾರ ಸ್ವೀಕರಿಸಬೇಕೆಂದು ಕೇಳಿಕೊಳ್ಳುವ, ಅವರನ್ನು ಮಹಾರಾಷ್ಟ್ರ ಪ್ರಾಂತಿಕ ಯುದ್ಧ ಮಂಡಳದಲ್ಲಿ ಸೇರಿಸಿಕೊಂಡಿರುವರು. ಇವರನ್ನು ನೋಡಿ ಅದೇ ಪ್ರಾಂತದ ಇಸ್ಲಾಮೀ ಸಿದ್ಧಕೇಲಸಗಾರರಾದ ಶ್ರೀ ಬಾಮನಗಾಂವಕರ ಇವರೂ ಸತ್ಯಾಗ್ರಹಿಗಳಾಗಿ ಹೊರಹೊರಟಿರುವರು. ಅಂತು ಚಳವಳಿಯ ಓಘವು ಮಹಾಪೂರ ಬಂದ ಹೊಳೆಯು ಪ್ರವಾಹದಂತೆ ದಂಡೆಯ ದೊಡ್ಡ ದೊಡ್ಡ ಗಿಡಗಳನ್ನು ಒಡಲೊಳಗೆ ಸೆಳೆದುಕೊಂಡು ಪ್ರಚಂಡವಾಗಿ ಹರಿಯ ಹತ್ತಿದೆ. ಇಂಥ ಪ್ರಸಂಗದಲ್ಲಿ ಇದರೊಳಗೆ ಮುಳುಗಲಂಜಿ ದೂರ ನಿಂತು ತಮಾಷೆ ನೋಡುತ್ತಿರುವವರೇ ಪಾಪಿಗಳು.

## ಬಿಜಾಪೂರ ಸತ್ಯಾಗ್ರಹವು ನಿರಾತಂಕ ಸಾಗಿದೆ.

ಸೋಲಾಪೂರ ಸಂದರ್ಭ ಇ ೦. ೨೦ ಸತ್ಯಾಗ್ರಹಿ ಸ್ವಯಂಸೇವಕರನ್ನು ಕೂಡಿಕೊಂಡು ಈ ರಾಷ್ಟ್ರೀಯ ಮಾಲದಲ್ಲಿ ನಿತ್ಯವೂ ಉಪ್ಪು ಮಾಡುತ್ತಿರುವರು. ಸಮಯದಲ್ಲಿ ಈ ಸ್ವಾತಂತ್ರ್ಯ ಭಾರತದ ಉಪ್ಪನ್ನು ಸುಮಾರು ೧೧೦೦ ಸ್ವಯಂಸೇವಕರು ಊರಿಲ್ಲೆಲ್ಲ ಮಾರುತ್ತ, ಒಬ್ಬರಿಗೊಬ್ಬರು ತಿಳಿಸುವರು. ಈ ಹೊತ್ತು ಅದೇ ಪ್ರಕಾರದ ಕಾರ್ಯಕ್ರಮವು ಸಿದ್ಧವಾಗುತ್ತಿರುವದಾಗಿ ಬಿದ್ದಿತು. ಇಂದಿನವರೆಗೆ ಅಲ್ಲಿಯ ಪೋಲೀಸರು ತಲೆ ಎತ್ತಿರುವದಿಲ್ಲ. ದಿನಕ್ಕೊಂದು ಚಂದವಾಗಿ ಜರಗುತ್ತಲೇ ಇರುವದಂತೆ.

## ಹುಬ್ಬಳ್ಳಿಯಲ್ಲಿಯೂ ಚೌಕಿದಾರರ ರಾಜೀನಾಮೆಯು.

ಪಾಕಿಸ್ತಾನದ ಹತ್ತಿರ ಹುಬ್ಬಳ್ಳಿಯ ಮತ್ತು ಘಟಪ್ರಭಾ ಮೊದಲಾದ ಸ್ಥಳಗಳಲ್ಲಿ ೭ನೇ ತಾರೀಖಿಗೆ ಕಾಯಿದೆಭಂಗವು ಪ್ರಾರಂಭವಾಗುವ ದಿವಸಗಳಲ್ಲಿ ೪/೫ ಸತ್ಯಾಗ್ರಹಿಗಳಿಗೆ ಕಾರಾಗೃಹವಾಸದ ಬಹುಮಾನ ದೊರೆತಿದೆ. ಆದರೆ ಮೊನ್ನೆ ೧೧ನೇ ತಾರೀಖಿಗೆ ಹುಬ್ಬಳ್ಳಿಯಲ್ಲಿ ಪ್ರಾಂತಿಕ ಯುದ್ಧ ಮಂಡಲದ ಅಧ್ಯಕ್ಷರಾದ ಶ್ರೀ ಭ. ಸಿ. ಹಿರೇಮಠ ಇವರನ್ನು ಪೋಲೀಸ ಅಧಿಕಾರಿಯು ಹಿಡಿದು ಬಂದಾಗ ಎರಡು ಇವರು ಅಂದು ಜನರು ಸಭೆ ನೆರೆದ ಬಂದ ಸಭೆಯಲ್ಲಿ ಭಾಷಣ ಮಾಡುತ್ತಿದ್ದರು. ಮಧ್ಯಂತರ ನೋಡುತ್ತಲೇ ಅವರು ತಮ್ಮ ಭಾಷಣವನ್ನು ನಿಲ್ಲಿಸಿ ಹತ್ತಿರದಲ್ಲಿಯೇ ಇದ್ದ ಶ್ರೀ ಮಹಾಮಾಯಾ ಪ್ರಸಾದರಿಗೆ ನಗುನಗುತ್ತ ತಮ್ಮ ಸ್ಥಾನದ ಹಕ್ಕನ್ನು ಮತ್ತು ಅಧ್ಯಕ್ಷರ ಸಂಕೇತವಾದ ಧ್ವಜವನ್ನು ಅವರ ಕೈಯಲ್ಲಿಗೆ ಕೊಟ್ಟು ನಗೆಯಿಂದಲೇ ಆ ಅಧಿಕಾರಿಯ ಬೆನ್ನು ಹತ್ತಿ ಹೋಗಿ ಬಿಟ್ಟರು. ಇದರಿಂದ ಅಲ್ಲಿಯ ಜನರಿಗೆ ಮನಸ್ಸಿನ ಮೇಲೆ ವಿಚಿತ್ರವಾದ ಪರಿಣಾಮ ಉಂಟಾಗಿ, ೧೨ ಚೌಕಿದಾರರು "ಮತ್ತು ಒಬ್ಬ "ದಫೇದಾರನು" ತಮ್ಮ ನೌಕರಿಗೆ ರಾಜೀನಾಮೆ ಕೊಟ್ಟರು.

ಈ ಪತ್ರಿಕೆಯು ಮಂಗಳವೇಢೆ ರಾಜೇಶ್ವರ ಏರಮಾಣ್ಯ ಇದ್ದ ಶ್ರೀನಿವಾಸರಾಯರವರು ಬಾಗಲಕೋಟೆಯಲ್ಲಿಯ
ಅವರ ಸ್ವಂತ ವಿದ್ಯಾರ್ಣವ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

# ಕನ್ನಡಿಗ

ಜಯ ಕರ್ನಾಟಕ

ಸತ್ಯಸಂಹಿತೆಯು.

[illegible]

ಸಂಪಾದಕರು — ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ಬಾಗಲಕೋಟೆ ಮಂಗಳವಾರ ೨೨ ಚೈತ್ರ ಬಹುಳ — ಶಕ ೧೮೫೨ ತಾ। ೧೫—೪—೩೦ ಸಂಚಿಕೆ ೨೩

## ಬಾಗಲಕೋಟೆಗರ

## ಅಪೂರ್ವ ಉತ್ಸಾಹವು.

ಬೆಳಗಾವಿಯನ್ನು ಹೊರತುಪಡಿಸಿದರೆ ಕರ್ನಾಟಕದಲ್ಲಿ ಅನ್ಯತ್ರ ಎಲ್ಲಿಯೂ ಸರಕಾರವು ಕಾಯಿದೆಭಂಗದ ಪುಂಡರಿಗೆ ಇಷ್ಟೊಂದು ಶೀಘ್ರತೆಯಿಂದ ರಾಜ್ಯಸತ್ರದ ಆತಿಥ್ಯವನ್ನು ಒದಗಿಸಿಕೊಟ್ಟಿಲ್ಲ. ವಿಜಾಪುರ ಜಿಲ್ಲೆಯಲ್ಲಿಯೇ ಹಲ ಊರುಗಳಲ್ಲಿ ಈ ಕಾಯಿದೆ ಭಂಗದ ಉಪಕ್ರಮವಾಗಿದ್ದರೂ ಅಲ್ಲಿಯ ಪೋಲೀಸರಿಗೆ ಅದು ಅಷ್ಟು ಅಪರಾಧವೆನಿಸಿಲ್ಲ ಎಂದೇ ಅವರು ಯಾವ ದೀರ್ಘಸೂತ್ರಕ್ಕೆ ಬಿದ್ದಿಲ್ಲ. ಆದರೆ ಬಾಗಲಕೋಟೆಯ ಪೋಲೀಸರು ತಮ್ಮ ಕರ್ತವ್ಯದಕ್ಷತೆಯನ್ನು ಪ್ರದರ್ಶಿಸುವ ಸಮಯವಿದೆ ಎಂದು ಬಹಳ ಉತ್ಸಾಹದಿಂದ ನಿನ್ನಿನ ಸತ್ಯಾಗ್ರಹ ವೀರರನ್ನು ಸೆರೆಹಿಡಿದರು. ಇದರಿಂದ ಊರಲ್ಲಿ ಕಾಯಿದೆ ಭಂಗ ಚಳವಳಿಗೆ ವಿಲಕ್ಷಣ ಕಳೆ ಏರಿತು. ಶ್ರೀನಿವಾಸರಾಯರು ಹೋಗಿದ್ದು ನೂರು ವ್ಯಾಖ್ಯಾನಗಳನ್ನು ಕೊಟ್ಟು ಸಾವಿರ ಉಪ್ಪಿನಚೀಟಿಗಳನ್ನು ಮಾರಿದ್ದರು. ಈ ಹೊತ್ತು ಸ್ಫುಟವಾಗಿ ವ್ಯಕ್ತವಾದ ಉತ್ಸಾಹವನ್ನು ಜನರಲ್ಲಿ ಹುಟ್ಟಿಸಲಿಕ್ಕಾಗುತ್ತಿದ್ದಿಲ್ಲ. ಪೋಲೀಸರ ಆತುರತೆಯ ಸಹಾಯದಿಂದ ಅದೆಲ್ಲ ಒಂದೇ ದಿವಸದಲ್ಲಿ ಸಾಧ್ಯವಾಯಿತು. ಶ್ರೀನಿವಾಸರ ಉದ್ದೇಶ ಸಫಲವಾಯಿತು. ಊರ ಉದ್ಯಮೆದಾರರೆಲ್ಲ ಸರಕಾರದ ಅನ್ಯಾಯದಿಂದ ಉದ್ವಿಗ್ನರಾಗಿ ನಿನ್ನಿನ ದಿನ ಸಂಪೂರ್ಣ ಹರತಾಳವನ್ನು ಏಕೋಭಾವದಿಂದ ಪಾಲಿಸಿದರು. ಅಭಿನಂದನಪರ ಸಭೆ ಕರೆದರೆ ಅದಕ್ಕೆ ೬-೭ ಸಾವಿರ ಜನರು ಆಗಮಿಸಿದ್ದರು. ಸ್ತ್ರೀಯರ ಸಂಖ್ಯೆಯು ವಿಶೇಷವಾಗಿತ್ತು. ಇಷ್ಟು ಜನರು ಬಾಗಲಕೋಟೆಯ ಸಭೆಗಳಿಗೆ ಹಿಂದಕ್ಕೆಂದೂ ಕೂಡಿರಲಿಲ್ಲ. ಜೊತೆಗೆ ವಿಜಾಪುರದಿಂದ ಶ್ರೀ ಮೋಹರೆ ಹಣಮಂತರಾಯರು ಬಂದುದರಿಂದ ಆ ಪ್ರಚಂಡ ಜನಸಮುದಾಯವು ಉತ್ಸಾಹದಿಂದ ಸ್ಫುರಿಸಹತ್ತಿತು. ಹಣಮಂತರಾಯರು ಒಳ್ಳೆ ಸ್ಫೂರ್ತಿದಾಯಕ ಭಾಷಣದಿಂದ ಅಭಿನಂದನಪರ ಠರಾವನ್ನು ಸಭೆಯ ಮುಂದೆ ಇಟ್ಟರು. ಆರಳೀಕಟ್ಟಿ (ಇಂಡಿಯನ್ ಕ್ರಿಶ್ಚನ್) ದಯಾನಂದರು ಉಪ್ಪು ಮಾರಲಿಕ್ಕೆ ನಿಂತುಕೊಳ್ಳಲು ಸವದತ್ತಿಯಿಂದ ವಾರಂಟ ತೆಗೆದುಕೊಂಡು ಬಂದ ಪೋಲೀಸನು ಶ್ರೀ. ಆರಳೀಕಟ್ಟಿಯನ್ನು ದಸ್ತಗಿರ ಮಾಡಿದನು. ಆಮೇಲೆ ಶಂಕರಗೌಡ ಪಾಟೀಲ ಎಂಬಾತನು ಉಪ್ಪು ಮಾರಲಿಕ್ಕೆ ಮುಂದೆಬಂದು ನಿಂತನು. ಅನೇಕ ಹೆಣ್ಣುಮಕ್ಕಳು ಕೊಂಡುಕೊಂಡರು. ಶ್ರೀ. ಕಟಗೇರಿ ಹಣಮಂತರಾಯರು ಇಂದಿನ ಮೊದಲನೇ ಲಿಲಾವನ್ನು ಬೇಡಿಕೊಂಡರು. ಇವರ ಪೈಕಿ ಒಬ್ಬರನ್ನೂ ಪೋಲೀಸರು ಹಿಡಿಯಲು ಧೈರ್ಯ ಮಾಡಲಿಲ್ಲ. ಅಂತ ನಿಶ್ಚಯಮಾಡಿದ ಕಾಯಿದೆ ಭಂಗಕ್ಕೆ ಅಪರಾಧಿಗಳನ್ನು ನಿರ್ಮಿಸಿಟ್ಟರೆ ಇಂದಿನ ಕಾಯಿದೆ ಭಂಗಕ್ಕೆ ಪೋಲೀಸರು ಒಪ್ಪಿಗೆಯನ್ನಿತ್ತರೆನ್ನಬೇಕಲ್ಲವೆ! ಅಥವಾ ಉಪ್ಪಿನ ಕಾಯಿದೆಯು ಸ್ವಾತಂತ್ರ್ಯ ಕಾರಣವಾಗಬೇಕಲ್ಲವೆ? ಈ ಹೊತ್ತಿನ ಜನರ ಒಕ್ಕಟ್ಟು, ಶಾಂತವೃತ್ತಿ, ಸಂದಣಿ, ಮತ್ತು ಅವರ ಅಪೂರ್ವ ಉತ್ಸಾಹ ಇವೇ ಮೊದಲಾದವುಗಳೂ ನಿಜವಾಗಿಯೂ ಚಿರಸ್ಮರಣೀಯವಾಗಿವೆ.

---

## ಹಿಂಸೆಯ ಮಾರ್ಗವನ್ನು ಸರಕಾರವೇ ಸ್ವೀಕರಿಸುವದು.

## ಸೇನಗುಪ್ತರು ಹಿಡಿಯಲ್ಪಟ್ಟರು.

**ವಿದ್ಯಾರ್ಥಿಗಳ ಸತ್ಯಾಗ್ರಹವು ದಿನೇ ದಿನೇ ಬೆಳೆಯುತ್ತಿದೆ**

ಕಲಕತ್ತೆಯ ಸತ್ಯಾಗ್ರಹ ಮಂಡಳದ ಅಧ್ಯಕ್ಷರಾದ ಶ್ರೀ. ಜೆ. ಎಮ್. ಸೇನಗುಪ್ತರು ೧೩ನೇ ತಾ॥ ವ ವ್ಯಾಖ್ಯಾನದ ಸಂಗಡ, ಸರಕಾರದಿಂದ 'ಜಪ್ತಮಾಡಲ್ಪಟ್ಟ ದೇಶದಾಳಿ' ಎಂಬ ಬಂಗಾಲಿ ಪುಸ್ತಕದಲ್ಲಿಯ ಸಾರಾಂಶವನ್ನು ಓದಿ ಉಪ್ಪಿನ ಕಟ್ಟಳೆಯನ್ನು ಅದೇ ವೇಳೆಕ್ಕೆ ಮುರಿದರಾಗಲು, ವಿದ್ಯಾರ್ಥಿಗಳೂ ಸಹ ಹಿಡಿಯಲ್ಪಟ್ಟರು. ೧೫ನೇ ತಾ॥ ಸಮಧ್ಯಾಹ್ನದ ೩ ಗಂಟೆಗೆ, ಕಲಕತ್ತಾ ಮುನಸಿಪಾಲಿಟಿಯ ಅಧ್ಯಕ್ಷರಾದ ಶ್ರೀ ಸೇನಗುಪ್ತರಿಂದ ರಾಷ್ಟ್ರೀಯ ಧ್ವಜಾರೋಹಣವಾಯಿತು. ನಂತರ ಕಾರ್ನವಾಲೀಸ ಸ್ಕ್ವೇರಿನಲ್ಲಿ ಸಭೆಕೂಡಿದಾಗ್ಗೆ, ಡೆಪ್ಯುಟಿ ಕಮೀಶನರ ಸಾಹೇಬರು ಸರಕಾರದಿಂದ ಜಪ್ತಮಾಡಲ್ಪಟ್ಟ ಪುಸ್ತಕದಲ್ಲಿಯ ಸಾರಾಂಶವನ್ನು ಓದಬೇಡಿರೆಂದು ಹೇಳಿದರೂ, ಶ್ರೀ ಸೇನಗುಪ್ತರು ಹಾಗೇ ಓದಹತ್ತಿದರು. ಮತ್ತು ತಮ್ಮ ಕೈಯಲ್ಲಿದ್ದ ಪುಸ್ತಕವನ್ನು ಕೊಡಬೇಕಾಗಿ ಕೇಳಿಕೊಂಡರು. ಸರಕಾರದ ಆಜ್ಞೆಯನ್ನು ಮೀರಿದುದಕ್ಕೆ ಸಭೆಯಲ್ಲಿಯೇ ಹಿಡಿಯಲ್ಪಟ್ಟರು. ಸಭೆಯಲ್ಲಿದ್ದ ಜನರು ಶಾಂತರೀತಿಯಿಂದ ತಮ್ಮ ಮನೆಗೆ ತೆರಳಬೇಕಾಗಿ ಶ್ರೀ. ಸೇನಗುಪ್ತರು ವಿನಯಪೂರ್ವಕ ಭಾಷಣವನ್ನು ಮಾಡಿದರು.

# ಅಂಕೋಲೆಯಲ್ಲಿಯ ಯುದ್ಧವು

## ನಿರ್ವಿಘ್ನತೆಯಿಂದ ಜರುಗಿತು!

(ಕೊನೆಯ ತಂತಿಯಿಂದ ಒಂದು ವಾರ್ತೆ)

ಕರ್ನಾಟಕ ಸತ್ಯಾಗ್ರಹ ಮಂಡಲದ ಅನುಜ್ಞೆಯ ಮೇರೆಗೆ ೧೩ ನೇ ತಾರೀಖಿನ ರಾಷ್ಟ್ರೀಯ ದಿನಾಚರಣೆಯು ಎಲ್ಲ ಸ್ಥಳಗಳಲ್ಲಿ ನಿರ್ವಿಘ್ನತೆಯಿಂದ ಕೊನೆಗೊಂಡಿತು. ಧಾರವಾಡ, ಬೆಳಗಾವಿ, ಗದಗ, ಬಾಗಲಕೋಟ, ಬಳ್ಳಾರಿ, ಹಿರೇ, ಸಿದ್ದಾಪುರ ಮುಂತಾಗಿ ಹತ್ತು ಮೊದಲಾದ ಸ್ಥಳಗಳಲ್ಲಿ ಕಾಯಿದೆಯನ್ನು ಮುರಿದು ತಯಾರಿಸಿದ ಉಪ್ಪು ಮಾರಲ್ಪಟ್ಟಿತು! ಬೆಳಗಾವಿಯಲ್ಲಿ ಹಿಡಿಯಲ್ಪಟ್ಟ ಶ್ರೀ. ಗೋಖಲೆ, ಪಾಟೀಲ ಇವರಿಗೆ ೧ ತಿಂಗಳ ಶಿಕ್ಷೆ; ೫೦ ರೂಪಾಯಿ ದಂಡ, ಮತ್ತು ಶ್ರೀ ಗಣೇಶ ಪುಣಲೀಕರ, ದಾತಾರ ಮತ್ತು ಕೋವಾಡಕರ ಇವರಿಗೆ ೬ ತಿಂಗಳ ಕಠಿಣ ಶಿಕ್ಷೆ ಮತ್ತು ೫೦ ರೂಪಾಯಿ ದಂಡ ವಿಧಿಸಲ್ಪಟ್ಟಿದೆ. ಅಂಕೋಲೆಯಲ್ಲಿ ಡಾ|| ಹರ್ಡೀಕರರ ನೇತೃತ್ವದಲ್ಲಿ ಸತ್ಯಾಗ್ರಹಿಗಳ ಗುಂಪು ನಿರ್ವಿಘ್ನತೆಯಿಂದ ಉಪ್ಪಿನ ಕಾಯಿದೆಯನ್ನು ಉಲ್ಲಂಘಿಸಿತು. ಈ ವರೆಗೆ ಯಾರೂ ಹಿಡಿಯಲ್ಪಟ್ಟಿರುವದಿಲ್ಲ!

## ೪ ವರ್ಷದ ಚಿಕ್ಕ ಬಾಲಕನು ಖೈರಾದ ಕಲೆಕ್ಟರರಿಗೆ ಕಾಯಿದೆಯನ್ನು ಮುರಿದು ತಯಾರಿಸಿದ ಉಪ್ಪನ್ನು ಕೊಟ್ಟನು!

ಖೈರಾದ ಕಲೆಕ್ಟರರಾದ ಮಿ|| ಮಾಸ್ಟರರು ಬೊರಸಾದವನ್ನು ಸಂದರ್ಶಿಸಿ ಸರಕಾರಿ ನೌಕರರನ್ನು ಬಹಿಷ್ಕರಿಸಿದ ಸ್ಥಿತಿಯನ್ನು ಕುರಿತು ವಿಚಾರಣೆ ಮಾಡುತ್ತಲಿದ್ದರು. ಪೇಟೆಯಲ್ಲಿ ಅವರಿಗೆ ವ್ಯಾಪಾರಸ್ಥರು ಸಾಮಾನುಗಳನ್ನು ಕೊಡಲು ನಿರಾಕರಿಸಿದರು! ಇದರ ಸಂಬಂಧದಲ್ಲಿ ಚನ್ನಾಗಿ ಮನವರಿಕೆಯಾದ ನಂತರ ಮ್ಯಾಜಿಸ್ಟ್ರೇಟರು ಕೋರ್ಟನ್ನು ಹೊಕ್ಕರು. ಸತ್ಯಾಗ್ರಹಿ ಸ್ತ್ರೀಯರು ಉಪ್ಪನ್ನು ಮಂಜಾನೆ ಊರಲ್ಲಿ ಮಾರಾಟಮಾಡಿ, ಕಚೇರಿಯಲ್ಲಿ ಮಾರುವದಕ್ಕೋಸ್ಕರ ಬಂದರು. ನಾಲ್ಕು ವರ್ಷದ ಚಿಕ್ಕ ಬಾಲಕನು ಕಲೆಕ್ಟರ ಸಾಹೇಬರಿಗೆ ಉಪ್ಪನ್ನು ಕೊಡಲು ಅವರು ನಗೆಮುಖದೊಡನೆ ಅದನ್ನು ಸ್ವೀಕರಿಸಿದರು. ನಾಲ್ಕು ಜನ ಸ್ತ್ರೀ ಸತ್ಯಾಗ್ರಹಿಗಳು ಅವರ ಮನೆಯವರು ಮಕ್ಕಳು ಮತ್ತು ಓರ್ವ ಸ್ವಯಂಸೇವಕನು ಹಿಡಿಯಲ್ಪಟ್ಟರು. ಆದರೆ ೧೫ ನಿಮಿಷಗಳ [illegible] ಗದಲ್ಲಿಡಲ್ಪಟ್ಟು ಮುಕ್ತಮಾಡಲ್ಪಟ್ಟರು! ಜನಸಮ್ಮರ್ದವು ಇವರ ಮೆರವಣಿಗೆಯನ್ನು ಬಹು ಉತ್ಸಾಹದಿಂದ ಮಾಡಿತು!

ಇಲ್ಲಿಯ ಅನೇಕ ಹಳ್ಳಿಗಳ ಪಟೇಲರು ರಾಜೀನಾಮೆ ಕೊಟ್ಟಿದ್ದಾರೆ. ಈವರೆಗೆ ೧೬೦೦ ಜನ ಸ್ವಯಂಸೇವಕರು ಆಗಿದ್ದಾರೆ. ಇಲ್ಲಿಯ ಹಿಂದುಳಿದ ಜಾತಿಯವರು ಶೆರೆ ಸಿಂದಿ ಕುಡಿಯುವದನ್ನೂ ಪರದೇಶೀ ವಸ್ತ್ರಗಳನ್ನು ಧರಿಸುವದನ್ನೂ ಬಿಟ್ಟುಬಿಟ್ಟಿದ್ದಾರೆ. ಈ ಉತ್ಸಾಹದ ಚಳವಳಿಯು ಶಾಂತತೆ ಮತ್ತು ಅಹಿಂಸಾಮಯ ಮಾರ್ಗದಿಂದ ನಡೆದಿದೆ.

## ಬಾಗಲಕೋಟೆಯ ಸೆರೆ ಆಳುಗಳಾದ ವೀರರಿಗೆ ಶ್ರೀ ದಿವಾಕರರ ಅಭಿನಂದನೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀ ದಿವಾಕರ ರಂಗರಾಯರು 'ಕನ್ನಡಿಗ' ಪತ್ರದ ಸಂಪಾದಕರಿಗೆ ಸಿಕ್ಕ ವಿಜಾಪೂರ ಜಿಲ್ಲೆಯ ಅಪ್ರ[illegible]ನವರಿಗೆ ಅಭಿನಂದನಪರ ತಂತಿ ಕೊಟ್ಟಿದ್ದಾರೆ.

## ಪರೀಕ್ಷೆಯ ಮಂಡಪಗಳು ಬರಿದಾಗಿವೆ.

### ಕಾಲೇಜು ಪರೀಕ್ಷೆಗಳಿಗೆ ಬಂಗಾಲ ವಿದ್ಯಾರ್ಥಿಗಳ ಬಹಿಷ್ಕಾರವು.

ಕಲಕತ್ತೆಯಲ್ಲಿ ೨-೩ ಕಾಲೇಜ ವಿದ್ಯಾರ್ಥಿಗಳು ತಮ್ಮ ತಮ್ಮ ಕಾಲೇಜುಗಳಿಗೆ ಧರಣೆ ಹೊಡೆದು ಸ್ವಯಂ ಸೇವಕರುಗಳು ೨ ಕಾಲೇಜ ಅಧಿಕಾರಿಗಳು ಬೇಸಗೆಯ ರಜೆಯ ನಿಮಿತ್ತ ಮಾಡಿಕೊಂಡು ಕಾಲೇಜುಗಳನ್ನು ಆ ದಿನದಿಂದಲೇ ಬಂದ ಮಾಡಿದರು. ಈ ವಿದ್ಯಾರ್ಥಿಗಳು ತಮ್ಮ ವಾರ್ಷಿಕ ಪರೀಕ್ಷೆಗೆ ಸಹ ಹೋಗಲಿಲ್ಲ. ಹೀಗಾಗಿ ಎಲ್ಲ ಪರೀಕ್ಷೆಗಳೂ ವಿದ್ಯಾರ್ಥಿಗಳಿಂದ ಬಹಿಷ್ಕೃತವಾಗಿ ಪರೀಕ್ಷೆಯ ಭ[illegible]ಗಳು ಬರಿದು ಬಿದ್ದಿವೆ.

---

### ವಿಜಾಪೂರ

ವಿಠ್ಠಲ ಮಂದಿರದಲ್ಲಿ ಸಭೆಯಾಗಿ ಅಂಕೋಲೆಯಲ್ಲಿ ಕನ್ನಡಿಗರ ಪ್ರಾರಂಭಿಸಿದ ಕಾಯಿದೆಭಂಗದ ಯುದ್ಧವು ಯಶಸ್ವಿಯಾಗಿ ನೆರವೇರಲೆಂದು ಜಗದೀಶನ ಬೇಡಿಕೊಂಡು ಅವರಿಗೆ ಬೆಂಬಲ ಪಡಿಸುವನ್ನು ಪ್ರಕಟಗೊಳಿಸಿದರು. ಆ ವೇಳೆ ಶ್ರೀ ಮನೋಹರ ಜನವಂತರಾಯರು ಉಪ್ಪಿನ ಕಾಯಿದೆಯನ್ನು ತಿರಸ್ಕರಿಸುವ ಕುರಿತು ಕೊಡಲಿಕ್ಕೆ ತಂದಿದ್ದ ಉಪ್ಪನ್ನು ಸಭೆಯಲ್ಲಿ ಮಾರುತ್ತಿದ್ದರು. ೧೫-೨೦ ಜನರು ಕೊಂಡುಕೊಂಡರು.

### ಗಲಗಲಿ

ಅಂಕೋಲೆಯಲ್ಲಿಯ ಸತ್ಯಾಗ್ರಹಕ್ಕೆ ಸಹಾಯಕರಾಗಿ ಬರಲು ಸಿದ್ಧರಾದವರ ತಿಳಿಸುವುದಕ್ಕಾಗಿ ನಾಗರಿಕ ಸಭೆ ನಡೆದಿತ್ತು. ಶ್ರೀ ಕಾಶಿನಾಥ ರಾಘವಾಚಾರ್ಯ,ವೆಂಕಣ್ಣ ನಾಯಕ ಇವರು ಉಪ್ಪಿನ ಕಾಯಿದೆ ಮುರಿದರು ೪೦ ಮಂದಿ ಗಂಡಸರೂ ೨ ಹೆಣ್ಣುಮಕ್ಕಳು ಕೂಡಿಕೊಂಡರು,

### ಕುಂದಗಿ

೧೩ನೇ ತಾರೀಖಿನ ದಿವಸ ರಾಷ್ಟ್ರೀಯ ದಿನಾಚರಣೆಯು ಬಹು ಸಂಭ್ರಮದಿಂದ ಕೊನೆಗೊಂಡಿತು. ಶ್ರೀ ಶಂಕರಗೌಡಾ ತಿಮ್ಮನಗೌಡಾ ಪಾಟೀಲ, ಇವರು ಸಭೆಯಲ್ಲಿ ಕಾಯಿದೆಯನ್ನುಲ್ಲಂಘಿಸಿ ತಯಾರಿಸಿದ ಉಪ್ಪನ್ನು ಲಿಲಾವು ಮಾಡಿದರು. ೧೦-೧೫ ಜನರು ಉಪ್ಪನ್ನು ಕೊಂಡರು. ಉಪ್ಪನ್ನು ಲಿಲಾವ ಮಾಡಿದ ಹಣವು ೧೦ ರೂಪಾಯಿ ಬಂದಿತು

### ಗುಳೇದಗುಡ್ಡ

ರಾಷ್ಟ್ರೀಯ ಸಪ್ತಾಹವು ನಡೆಯುವದಾಯಿತು. ಧ್ವಜವಂದನೆ, ಪತ್ತು ನಗರಸಂಕೀರ್ತನೆ ಮಾಡಲ್ಪಟ್ಟಿತು. ಕೊನೆಯ ದಿವಸ ಸಾಯಂಕಾಲದಲ್ಲಿ ಸಭೆ ಸೇರಿ ಕಾಯಿದೆಯನ್ನು ಮುರಿದು ತಯಾರಿಸಿದ ಉಪ್ಪು ಶ್ರೀ ಬಾಬುರಾವ ಬಾಸೂಟಕರವರಿಂದ ಮಾರಲ್ಪಟ್ಟಿತು. ಉಪ್ಪಿನ ಚೀಟಿಗಳು ಮಾರಲ್ಪಟ್ಟು ೪-೦-೬ ಪೈ ದೊರೆತಿದೆ, ೧೫-೬ ಜನರು ಉಪ್ಪನ್ನು ಕೊಂಡರು.

### ಹುನಗುಂದ.

ರಾಷ್ಟ್ರೀಯ ಸಪ್ತಾಹದ ಕೊನೆಯ ದಿನ ಮುಂಜಾವಿನಲ್ಲಿ ಧ್ವಜಾರೋಹಣವು ಮಾಡಲ್ಪಟ್ಟಿತು. ೩ ಘಂಟೆಗೆ ಉತ್ಸಾಹಿ ಜನರು ಮೆರವಣಿಗೆಯನ್ನು ಹೊರಡಿಸಿದರು. ೪ ಘಂಟೆಗೆ ಶ್ರೀ ರಾಘವೇಂದ್ರರಾವ ದೇಸಾಯಿ ಇವರ ಅಧ್ಯಕ್ಷತೆಯ ಕೆಳಗೆ ಸಭೆ ಸೇರಿತು. ಶ್ರೀ ರಾಘವೇಂದ್ರರಾಯರು, ಸರಕಾರದ ಕಟ್ಟಳೆಯನ್ನುಲ್ಲಂಘಿಸಿ ತಯಾರಿಸಿದ ಉಪ್ಪನ್ನು ಲಿಲಾವು ಮಾಡಿದರು. ಈ ಉಪ್ಪನ್ನು ಶ್ರೀ ರಾದ ತಮಣಾಚಾರ್ಯ ಕಟ್ಟಿ, ಮಧ್ವರಾವ ಪ್ಯಾಟಿ, ಎ. ಬಿ ಕುಲಕರ್ಣಿ ಮತ್ತು ಅನೇಕ ಜನರು ಕೊಂಡುಕೊಂಡರು.

---

(ತಂತಿಯಿಂದ ಬಂದ ಸುದ್ದಿ)

## ಮಹಾಸಭೆಯ ಅಧ್ಯಕ್ಷರಾದ

# ಜವಾಹರಲಾಲರನ್ನು ಸೆರೆಹಿಡಿದರು!

೧೫—೪—೩೦

ನಿನ್ನೆ ಅಧ್ಯಕ್ಷ ಜವಾಹರರು ಅಲ್ಲಾಹಾಬಾದದಿಂದ ರಾಯ ಪ್ರಾಂತಕ್ಕೆ ಹೋಗಬೇಕೆಂದು ಸ್ಟೇಶನಕ್ಕೆ ಬಂದಾಗ ಅಲ್ಲಿಯೇ ಅವರನ್ನು ಉಪ್ಪಿನ ಕಾಯಿದೆಭಂಗದ ಆರೋಪದಿಂದ ದಸ್ತಗಿರ ಮಾಡಿದರು. ನಾಳೆಗೆ ಇವರ ಅಪರಾಧದ ವಿಚಾರಣೆ ನಡೆಯುವದು. ಇವರಿಗೆ ಹಚ್ಚಿದ ಕಲಮಿಗೆ ೬ ತಿಂಗಳ ಶಿಕ್ಷೆ ಇದೆ. ಶ್ರೀ. ಜವಾಹರಲಾಲರನ್ನು ನೈನಿತಾಲ ಜೇಲಿಗೆ ಒಯ್ದರಂತೆ.

## ಮುಂಬಯಿಯಲ್ಲಿ ೩ ಲಕ್ಷ ಜನರು ಉಪ್ಪಿನ ಕಾಯಿದೆ ಭಂಗಮಾಡಿದರು!

ಜವಾಹರಲಾಲರನ್ನು ಹಿಡಿದ ಸುದ್ದಿಯು ಮುಂಬಯಿಯಲಿ ಹರಡಿದ ಕೂಡಲೇ ಊರೆಲ್ಲ ಸಂಪೂರ್ಣ ಹರತಾಳವು ಪಾಳಿಸಲ್ಪಟ್ಟಿತು! ಅಂದು ಸಾವಿರಾರು ಜನರು ಉಪ್ಪು ಮಾರಲಿಕ್ಕೆ ಬೀದಿಬೀದಿ ಮನೆ ಮನೆ ಅಡ್ಡಾಡಹತ್ತಿದರು. ಶ್ರೀಮತಿ ಕಮಲಾದೇವಿಯವರೊಬ್ಬರೇ ೬೦೦೦ ರೂಪಾಯಿಗಳ ಉಪ್ಪನ್ನು ಮಾರಿದರು. ಒಟ್ಟಿಗೆ ೩೦೦೦೦೦ ಜನರು ಅಂದರೆ ಮುಂಬಯಿ ಜನಸಂಖ್ಯೆಯ ೧/೪ ದಷ್ಟು ಜನರು ಬ್ರಿಟಿಶ ಸರಕಾರದ ಕಾಯಿದೆಯನ್ನು ಕಾಲುಕೆಳಗೆ ತುಳಿದು ಸರಕಾರಕ್ಕೆ ಆಹ್ವಾನಿಸಿರುವರು! ಸರಕಾರದ ಉತ್ತರವೇನಿದೆ? ಇಷ್ಟು ಜನರ ನಿರ್ಭಯದ ಕೃತ್ಯಕ್ಕೆ ಸರಕಾರವು ಜರ್ಜರಿತವಾಗಿರಬೇಕಲ್ಲವೇ?

## ಕರ್ನಾಟಕದಲ್ಲಿಯ ಕಾಯಿದೆಭಂಗದ ಹುಯಿಲು!

(ತಂತಿಯಿಂದ ಬಂದ ವಾರ್ತೆ)

**ಧಾರವಾಡ**

ಧಾರವಾಡದಲ್ಲಿ ಭಾನುವಾರ ಸಭೆ ಆಗಿ ಸಾರ್ವಜನಿಕ ಸಭೆಯಲ್ಲಿ ಶ್ರೀ. ಡಿ. ಪಿ. ಕರಮರಕರ ಇವರು ಜಾಹೀರ ರೀತಿಯಿಂದ ಸ್ವತಂತ್ರ ಭಾರತದ ಉಪ್ಪನ್ನು ಮಾರಿ ಸರಕಾರದ ಉಪ್ಪಿನ ಕಾಯಿದೆಯನ್ನು ಧಿಕ್ಕರಿಸಿದರು! ಇನ್ನೂರು ಜನರು ಕೊಂಡುಕೊಂಡರು! ಪೋಲೀಸರ ಹಾವಳಿಯೇನೂ ಇಲ್ಲ.

**ನಿಪ್ಪಾಣಿ**

ಭಾನುವಾರ ಸಾಯಂಕಾಲ ೬॥ ಘಂಟೆಗೆ ನಾಗರಿಕರ ಸಭೆಯೊಂದು ಕರ್ನಾಟಕವು ಇಂದು ಅಂಕೋಲೆಯಲ್ಲಿ ಆರಂಭಿಸಿದ ಶಾಂತಿಯುದ್ಧಕ್ಕೆ ವಿಜಯವನ್ನು ಬಯಸಿ ಅದಕ್ಕೆ ತಮ್ಮ ಬೆಂಬಲವನ್ನು ಪ್ರತಿಜ್ಞಾಪೂರ್ವಕ ಪ್ರಕಟಿಸುವ ಕುರಿತು ಶ್ರೀ. ಕಾಗವಾಡೆ ಎಂಬವರು ಸ್ವತಂತ್ರ ಉಪ್ಪನ್ನು ಜಾಹೀರ ರೀತಿಯಿಂದ ಸಭೆಯಲ್ಲಿ ಮಾರಿದರು. ನೂರಾರು ಜನರು ಕೊಂಡುಕೊಂಡರು! ಸರಕಾರದ ಅಧಿಕಾರಿಗಳು ನೋಡಿ ನೋಡದವರಂತೆ ಕುಳಿತಿರುವರು.

**ಬಳ್ಳಾರಿ**

ಕರ್ನಾಟಕದ ಪತ್ರಿಕೆಗಳ ಸಂಪಾದಕ ಪ್ರಾಂತಪರಿಷತ್ತಿನ ನಿನ್ನೆ ಭಾನುವಾರ ನಾಗಪ್ಪನವರ ಸಭೆ ಸೇರಿ, ಅಂಕೋಲೆಯ ರಣಕ್ಷೇತ್ರದಲ್ಲಿ ಕಾದಾಡುವ ಪತ್ರಿಕೆಗಳ ವೀರರಿಗೆ ಜಯಶೀಲರಾಗುವ ಪ್ರಾರ್ಥನೆಗಳಿಂದ ಹಾರೈಸಿದರು. ಆ ವೀರರಿಗೆ ತಮ್ಮದು ಸಂಪೂರ್ಣ ಸಹಾಯ ಸಹಾನುಭೂತಿಗಳಿವೆಯೆಂದು ತೋರಿಸುವದಕ್ಕಾಗಿ ಆ ಸಭೆಯಲ್ಲಿ ಶ್ರೀ. ನಂಜೆ ಚೆಟ್ಟಿಯವರು ಸ್ವತಂತ್ರ ಉಪ್ಪನ್ನು ಜಾಹೀರ ರೀತಿಯಿಂದ ಮಾರಿ ಕಾಯಿದೆಭಂಗ ಮಾಡಿದರು. ಇಲ್ಲಿಯ ಪೋಲೀಸರ ಕಣ್ಣುಕಿವಿಗಳು ಈ ಕಾಯಿದೆಭಂಗ ನಡೆದಾಗ ಕಾಶೀಯಾತ್ರೆಗೆ ಹೋಗಿದ್ದವು!

**ಹುಬ್ಬಳ್ಳಿ,**

ಕರ್ನಾಟಕದ ಪತ್ರಿಕೆಗಳು ಪರಿಚಯಿಸಿದ ಜನರಿಗೆ ಅಂಕೋಲೆಯಿಂದ ತಂದ ಭರವಸೆಯಾದ ಹುಬ್ಬಳ್ಳಿಯ ನಾಗರಿಕರ ಸಭೆಯೊಂದರಲ್ಲಿ ಉಪ್ಪಿನ ಕಾಯಿದೆಯನ್ನು, ಆ ಪ್ರಜಾತ ಜನಸಮೂಹದ ಸಾಕ್ಷಾತ್ಕಾರದಲ್ಲಿ ಮುರಿದರು. ಅನೇಕ ಜನರು ನಮಗೆ ನಮಗೆ ಎಂದು ಕಿತ್ತಾಡಿ ಆ ಉಪ್ಪಿನ ಪುಡಿಕೆಗಳನ್ನು ಕೊಂಡುಕೊಂಡರು! ಪೋಲೀಸರು ಉಪದ್ರವ ಮಾಡಲಿಕ್ಕೂ ಇನ್ನೂವರೆಗೆ ಮಾಡಿಲ್ಲ.

## ಸುದ್ದಿಗಳು.

**ಚಡಚಣ.**

ರೈತರ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಜೀವರಾಜರು ತಮ್ಮ ಕಣ್ಣಿರಿಸಿ ಸುರಕ್ಷಿತ ಹೋಗಿ ಮ. ಗಾಂಧಿಯವರಿಗೆ ಭೆಟ್ಟಿಯಾಗಿ ಅವರ ನಿತ್ಯಕ್ರಮವನ್ನೆಲ್ಲ ಅವಲೋಕನ ಮಾಡಿಕೊಂಡು ಬಂದರು.

ವಿದ್ಯಾರ್ಥಿಗಳು ... ರಾಷ್ಟ್ರಧ್ವಜವನ್ನು ಹಿಡಿದು ... ಸ್ವಾಗತ ಮಾಡಲಾಯಿತು.

ಖಾದಿಯುಂಟಾಗುವದು ವ್ಯವಸ್ಥೆಯಿಂದ, ಓದುವನೆಯ ವ್ಯವಸ್ಥೆಯೂ ಸಂಘಟನೆಯಿಂದಲೇ ಸಾಗುತ್ತದೆ.

**ನಿಂಬರಗಿ.**

ಇಲ್ಲಿ ಜಾತ್ರೆಯ ಕಾಲಕ್ಕೆ ಶ್ರೀ ವೆಂಕಟೇಶ ಮಹಾಜನಕರಾಯ ಬೆಂದ್ರೆ ದತ್ತಾರಾಯ, ಹಲಕಂಗಿ ಚನ್ನಮಲ್ಲಪ್ಪ, ಜೀವರಾಜ ಚಿಕ್ಕಪ್ಪ, ಶಂಕರ ... ಮುಂತಾದವರು, ವ್ಯಾಖ್ಯಾನ ಕೊಟ್ಟರು ... ಅನೇಕ ಪ್ರಾಂತವಾಗಿ ಹೇಳಿದರು. ಬೇಂದ್ರೆಯವರು 'ಮನುಷ್ಯನಿಗೆ ಅಸಾಧ್ಯವಾದುದಿಲ್ಲ.' ಎಂಬ ವಿಷಯದನ್ನು ಹೇಳುವಾಗ ... 'ರಸಭರಿತವಾಗಿ ಹೇಳಿದರು. ಚೆನ್ನಮಲ್ಲಪ್ಪನವರು

ಶಕ್ತಿ ಧರ್ಮ' ವಿಷಯವಾಗಿಯೂ, ಜೀವರಾಜರು ತಮ್ಮ ಭಾರತಪ್ರವಾಸದ ಅನುಭವಗಳನ್ನೂ ಕಾಶೀನಾಥರಾಯರು ಹಿಂದು ಮುಸಲ್ಮಾನರ ಐಕ್ಯದ ಬಗ್ಗೆಯೂ ಚೆನ್ನಾಗಿ ವಿವರಿಸಿದರು. ಅಲ್ಲದೆ ಲಾವಣೀಪದಗಳು, ದಾಸರಹಾಡುಗಳು ಹಾಡಲ್ಪಟ್ಟವು.

ತೀರ್ಥಖಂಡದಲ್ಲಿ ಒಂದು ಕೂಸು ಬಿದ್ದು ಸತ್ತಿತೆಂದು ಸುದ್ದಿಯಿದೆ.

( ತಂತಿಯಿಂದ ಬಂದವಾರ್ತೆ. )

### ಬೆಳಗಾವಿ

ನಿನ್ನಿನ ಭಾನುವಾರ ಬೆಳಗಾಂವಿಯಿಂದ ಸತ್ಯಾಗ್ರಹಿಗಳು ನಮ್ಮ ಕ್ಷೇತ್ರವಾದ ಅಂಕೋಲೆಗೆ ಸಾಗಿದರು. ೫-೬ ಸಾವಿರ ಜನರು ಈ ಜನರನ್ನು ಜಯ ಜಯ ಕಾರದಿಂದ ಒಂದು ಮೈಲಿನ ವರೆಗೆ ಅವರನ್ನು ಕಳುಹಲಿಕ್ಕೆ ಬಂದಿದ್ದರು. ದಾರಿಯಲ್ಲಿ ಕುಲಾಂಗನೆಯರು ಸತ್ಯಾಗ್ರಹಿಗಳಿಗೆ ಆರತಿಯನ್ನು ಬೆಳಗಿ ಹೂವಿನ ಹಾರಗಳಿಂದ ಗೌರವಿಸಿದರು. ಮಾರ್ಗದಲ್ಲೆಲ್ಲ ಅವರ ಮೇಲೆ ಪುಷ್ಪವೃಷ್ಟಿಯು ಒಂದೇಸವನೆ ಸುರಿಯುತ್ತಿತ್ತು. ಊರೊಳಗಿನ ಎಲ್ಲ ಬೀದಿಗಳಲ್ಲಿ ಈ ಸಂಗ್ರಾಮ ವೀರರ ಮೆರವಣಿಗೆಯು ಹೊರಟು ಪ್ರಾತಃಕಾಲದ ೬ ಘಂಟೆಗೆ ಹನುಮಂತ ದೇವರ ಗುಡಿಗೆ ಬಂದು ಅಲ್ಲಿ ಪ್ರಾರ್ಥನೆ ಸಲ್ಲಿಸಿಕೊಂಡು ಶಾಸನೋಲ್ಲಂಘನ ಮಾಡಿ ಅಂಕೋಲೆಯ ಮಾರ್ಗವನ್ನು ಹಿಡಿದು ಸಾಗಿದರು. ಶ್ರೀ ಗೋಖಲೆ ಕೇಶವರಾಯರೇ ಈ ಪಡೆಯ ದಳಪತಿಗಳು.

ಹೀಗೆ ವಿಜೃಂಭಣೆಯಿಂದ ಸಾಗಿದ ಸೇನೆಯು ಬೆಳಗಾವಿ ಬಿಟ್ಟು ೯ ಮೈಲುಗಳ ವರೆಗೆ ಎಲ್ಲವೂ ಸುರಳೀತವಾಗಿ ನಡೆದು ಹೋಯಿತು! ಆದರೆ ೯ ಮೈಲುಗಳ ಹತ್ತಿರ, ಈ ಪಡೆಯ ದಳಪತಿಗಳಾದ ಶ್ರೀ. ಕೇಶವರಾಯರನ್ನು ಪೋಲೀಸರು ಸೆರೆ ಹಿಡಿದರು! 'ನಿಮ್ಮ ಸೇನೆಯೊಂದಿಗೆ ಮುಂದಕ್ಕೆ ಸಾಗಕೂಡದೆಂದು' ಕಲೆಕ್ಟರು ಇವರಿಗೆ ಅಪ್ಪಣೆಮಾಡಿದ್ದ ಅದನ್ನು ಧಿಕ್ಕರಿಸಿ ಕೇಶವರಾಯರು ಮುಂದೆ ಸಾಗಿದ ಅಪರಾಧಕ್ಕಾಗಿ ಇವರನ್ನು ಬಂಧಿಸಿದರಂತೆ! ಇವರನ್ನು ಹಿಡಿದೊಯ್ದಕೂಡಲೇ ಬಾಗೇವಾಡಿಯ (ಸಮೀಪದ ಹಳ್ಳಿ) ನಿವಾಸಿಗಳು ಈ ಸೇನೆಯನ್ನು ಸ್ವಾಗತಮಾಡಿ ಪ್ರಚಂಡ ಸಭೆ ಕೂಡಿಸಿ ಕೇಶವರಾಯರನ್ನು ಅಭಿನಂದಿಸಿ, ಸರಕಾರ ಅಧಿಕಾರಿಗಳನ್ನು ಬಹಿಷ್ಕರಿಸಬೇಕೆಂದು ನಿಶ್ಚಯಿಸಿಕೊಂಡರು.

ಇತ್ತ ಬೆಳಗಾವಿಯಲ್ಲಿ ನಾಗರೀಕರ ಪ್ರಚಂಡ ಸಭೆ ಕೂಡಿ ಅಂಕೋಲೆಯಲ್ಲಿ ಕನ್ನಡಿಗರು ಮಾಡಿರುವ ಸತ್ಯಾಗ್ರಹ ಸಮಾಪ್ತಿ ಯಶಸ್ವಿಯಾಗಲೆಂದು ಹಾರೈಸುವ ಠರಾವಿನ ಬಗ್ಗೆ ಶ್ರೀ. ದಿವಾಕರ ಬಳವಂತರಾಯರು (ಸಂಯುಕ್ತ ಕರ್ನಾಟಕದ ಸಂಪಾದಕರು) ಭಾಷಣ ಮಾಡುತ್ತಿರುವಾಗ್ಗೆ ಅವರನ್ನು ಪೋಲೀಸರು ಹಿಡಿದೊಯ್ದರು. ಅಮೇಲೆ ಡಾ|| ಕೋವಾಡಕರ, ಶ್ರೀ. ಪಾಟೀಲ ಪುಂಡಲೀಕಜಿ ಇವರನ್ನು ದಸ್ತಗೀರಿ ಮಾಡಿ ಒಯ್ದರು. ಜನರು ಅತ್ಯಂತ ಶಾಂತರೀತಿಯಿಂದ ವರ್ತಿಸುತ್ತಿರುವರು.

ಜೋಶಿ ನಾರಾಯಣರಾವ, ಇವರ ದಂಡವನ್ನು ನಾ... ಬೆಳವಿಯವರು ತುಂಬಿದರು. ಆದಕ್ಕೆ ನಾರಾಯಣರಾಯರು ಬಿಡುಗಡೆ ಆಯಿತು. ನಾರಾಯಣರಾಯರು ಪುನಃ ಸತ್ಯಾಗ್ರಹ ಮಾಡಲಿಕ್ಕೆ ತಯಾರಾಗುತ್ತಾರೆ.

### ಚಂದಗಡ

ಉಪ್ಪಿನ ಕಾಯಿದೆಯನ್ನು ಮುರಿದದ್ದಕ್ಕಾಗಿ ಐದು ಜನರನ್ನು ಹಿಡಿದಿರುವರು.

## 'ಕನ್ನಡಿಗ'ನ ಏಜನ್ಸಿ

ಕೆಳಗೆ ಕಾಣಿಸಿದ ಸ್ಥಳಗಳಲ್ಲಿ ನಮ್ಮ ಏಜನ್ಸಿಗಳಿದ್ದು ಏಜಂಟರ ಹೆಸರುಗಳು ಕಾಣಿಸಲ್ಪಟ್ಟಿವೆ. ಅವರ ಹತ್ತಿರ ನಮ್ಮ ಪತ್ರಿಕೆಗಳು ದಿನಾಲು ಮಾರಲಿಕ್ಕೆ ದೊರೆಯುವವು. ಕೆಲವು ಊರುಗಳಿಂದ ಅಭ್ಯಾಸವಿರುವ ಅವರ ಕಡೆ ಹೋಗಿ ತಮ್ಮ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳತಕ್ಕದ್ದು. ಅರವಾರ ಪತ್ರಿಕೆಯ ಏಜನ್ಸಿಯನ್ನು ಸಹ ಇದೇ ಜನರಿಗೆ ಕೊಡುವ ವಿಚಾರ ನಡೆದಿದ್ದು, ಆ ಬಗ್ಗೆ ನಿಶ್ಚಿತವಾದುದನ್ನೆಲ್ಲ ಹಿಂದುಗಡೆ ಪ್ರಕಟಿಸುವೆವು.

| | | | |
|---|---|---|---|
| ೧ | ಶ್ರೀ. | ಉಮಾಪತಿನಾಥ ಹೊದ್ಲೂರ | ವಿಜಾಪುರ |
| ೨ | ,, | ರಾ. ಸೀ. ಜಹಾಗೀರದಾರ | ಇಲಕಲ್ಲ |
| ೩ | ,, | ಜಗನ್ನಾಥ ರಾಘವೇಂದ್ರರಾವ ದೇಸಾಯಿ | ಹುನಗುಂದ |
| ೪ | ,, | ರಾಚಪ್ಪ ಮಲ್ಲಪ್ಪ ಕಂಚಾಣಿ ಅಂಗಡಿ | ಅಮೀನಗಡ |
| ೫ | ,, | ನಾಗಲಿಂಗಪ್ಪ ಕೆಂಭಾವಿ, ಮೋಟಾರ ಏಜಂಟ | ಗಲಗಲಿ |
| ೬ | ,, | ರಾಘವೇಂದ್ರಾಚಾರ್ಯ ಧೂಳಖೇಡ | ಕೆರೂರ |
| ೭ | ,, | ಬಾಪೂರಾವ ವಿರುಪಾಕ್ಷರಾವ ಬಾಗಲಕೋಟಕರ | ಗುಳೇದಗುಡ್ಡ |
| ೮ | ,, | ಕಾರ್ಯದರ್ಶಿ ಕರ್ನಾಟಕ ತರುಣಸಂಘ | ರಾಯಚೂರ |
| ೯ | ,, | ಕೃಷ್ಣಾಜಿ ಹನಮಂತ ಕಂಠಲಮುಟ್ಟ ಆ. ಮಾಸ್ತರ | ಶಿರೂರ ತಾ\|\| ಬಾಗಲಕೋಟ |
| ೧೦ | ,, | ಜಿ. ಎಲ್ ಮಂಗಳೂರ C/o ಶಾಂತೇಶ ವಾಚನಾಲಯ | ಧಾರವಾಡ |
| ೧೧ | ,, | ಎಲ್. ಕೆ ಅಸುಂಡಿ ವೃತ್ತಪತ್ರಿಕೆಗಳ ಏಜಂಟ | ಗದಗ |
| ೧೨ | ,, | ಅಪ್ಪಾರಾವ ದೇಶಪಾಂಡೆ C/o ಡಾಕ್ಟರ ಕೆ ಬಿ. ಚಂದ್ರಶೇಖರ | ಸೊಲ್ಲಾಪುರ |
| ೧೩ | ,, | ವೈದ್ಯ ವಾದಿರಾಜ ಜಹಗೀರದಾರ | ಬೀಳೂರ ತಾ\|\| ಬಾಗಲಕೋಟ |
| ೧೪ | ,, | ತಿರುಕಾಚಾರ್ಯ ಮಧ್ವಾಚಾರ್ಯ ಚಿಮ್ಮಲಗಿ, ಹೆಡ್ ಮಾಸ್ತರ | ಧುಂಡಶಿ ಪೋ. ಹುಬ್ಬಳ್ಳಿ |

ಈ ಪತ್ರವನ್ನು ಮುಂಗಿನಮಠ ರಂಗರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ
ಅವರ ಸ್ವಂತ ವಿದ್ಯಾವಿನೋದ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

# ಕನ್ನಡಿಗ

ಜಯ ಕರ್ನಾಟಕ

ನಿತ್ಯಸಂಚಿಕೆಯು.

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾಜಿ ಮುಜುಮುದಾರ

ಬಾಗಲಕೋಟೆ ಗುರುವಾರ ಪ್ರಮೋದ ಚೈತ್ರ ಬಹುಳ ೪ ಶಕ ೧೮೫೨ ತಾ ೧೭—೪—೩೦ ಸಂಚಿಕೆ ೨೪

## ಸಂಪಾದಕರ ಭೂಮಿ

ನನ್ನ ದೇಹವು ನಿನ್ನ ವೀರಶಾಸನಕಾಗಿ।
ಕಣ್ಣನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೋ॥

## ಆತ್ಮನಿವೇದನ

"ಕನ್ನಡಿಗ" ದ ಸಂಪಾದಕರಾಗಿದ್ದ ಶ್ರೀ. ಶ್ರೀನಿವಾಸರಾಯರು ಸರಕಾರದ ದಬ್ಬಾಳಿಕೆ ಆಹುತಿಯಾಗಿ ನಾಲ್ಕು ತಿಂಗಳ ಕಾರಾಗ್ರಹ ವಾಸಕ್ಕೆ ಇಂದು ಅಟ್ಟಲ್ಪಟ್ಟರು. ಕನ್ನಡ-ನಾಡು ನುಡಿಗಳ ಸೇವೆಯನ್ನು ಸರ್ವವಿಧವಾಗಿ ಮಾಡಿ, ಕರ್ನಾಟಕ ಏಕೀಕರಣವನ್ನು ಸಾಧಿಸುವದಲ್ಲದ, ಪಾರತಂತ್ರ್ಯ ಶೃಂಖಲೆಗಳಿಂದ ಕಟ್ಟಲ್ಪಟ್ಟು ಕೊಳೆಯುತ್ತಿದ್ದ ಭಾರತಮಾತೆಯ ಸ್ವಾತಂತ್ರ್ಯವನ್ನು ಸಂಪಾದಿಸಬೇಕೆಂದು ಈಗಾಗ ವರ್ಷಗಳಹಿಂದೆ ಅವರು 'ಕನ್ನಡಿಗ' ನನ್ನು ಹೊರಡಿಸಿದರು. ಕರ್ನಾಟಕತ್ವದ ನಿಜವಾದ ಕಲ್ಪನೆಯುಳ್ಳವರಾದ ಅವರು ಅದೇ ತತ್ವವನ್ನು ಜನತ ಜನಾರ್ದನನಲ್ಲಿ ಬೀರಿ, ಕರ್ನಾಟಕ ನಾಡು-ನುಡಿ-ಏಕೀಕರಣ ಮುಂತಾದ್ದರ ಬಗ್ಗೆ ವಿಶೇಷ ಚಳವಳಿಯನ್ನು ಮಾಡಿದರು. ಇದಕ್ಕಾಗಿ ಅನೇಕ ಸಲ ಅವರು ಜನರ ಅಪಹಾಸ ಚೇಷ್ಟೆ ನಿಂದೆ ಮುಂತಾದವುಗಳಿಗೆ ಆದರೂ ಗುರಿಯಾದರು. ಆದರೂ ಅವರು ತಮ್ಮ ಧ್ಯೇಯದಿಂದ ದಚ್ಯುತರಾಗದೆ ಕನ್ನಡಿಗನ ಮೊದಲಿನ ಗುರಿಯನ್ನೇ ಕಾಯಂವಾಗಿಟ್ಟಿದರೆಂಬದನ್ನು ತಾವೆಲ್ಲರೂ ಬಲ್ಲಿರಿ.

ಈ ಪ್ರಕಾರವಾಗಿ ತಮ್ಮ ಸ್ವಾರ್ಥತ್ಯಾಗ, ಕನ್ನಡತ್ವದ ಕಲ್ಪನೆ ದೇಶಪ್ರೀತಿ, ಕನ್ನಡ ಭಾಷೆಯ ಪ್ರಭುತ್ವ ಮುಂತಾದ ಗುಣಗಳಿಂದ ಸ್ವಲ್ಪೇ ಅವಧಿಯಲ್ಲಿ ತರುಣ ಕನ್ನಡಿಗರಲ್ಲಿ ಕರ್ನಾಟಕತ್ವದ ಮೊಳಕೆಯನ್ನು ಹುಟ್ಟಿಸಲಿಕ್ಕೆ ಕಾರಣರಾದ ಶ್ರೀ. ಶ್ರೀನಿವಾಸರ ಸ್ಥಾನವು ಇಂದು ನಮ್ಮ ಪಾಲಿಗೆಬಂದಿದೆ. ಈ ಸಾಹಸದ ಕಾರ್ಯವನ್ನು ಕೈಕೊಳ್ಳಲು ನಮ್ಮಲ್ಲಿ ಸ್ವಲ್ಪವಾದರೂ ಯೋಗ್ಯತೆಯಿಲ್ಲ. ಆದರೂ ಬಂಧಿವಾಸವನ್ನು ಉಪಭೋಗಿಸಿ ಅವರು ತಿರುಗಿಬರುವವರೆಗೆ ಅವರೀಮುದ್ದುಗೂಸನ್ನು ಎಂತಾದರೂ-ಅವರ ಧ್ಯೇಯ ಮುಂತಾದ್ದರಲ್ಲಿ ಸ್ವಲ್ಪವೂ ಬದಲು ಮಾಡದೆ.—ಪೋಷಿಸಬೇಕೆಂಬ ಒಂದೇ ಒಂದ ಇಚ್ಛೆಯಿಂದ ನಾವೀ ಧೈರ್ಯವನ್ನು ತಾಳಿದ್ದೇವೆ. ನಮ್ಮೆಲ್ಲ ಕುಂದು ಕೊರತೆಗಳನ್ನು ಉದರದಲ್ಲಿ ಹಾಕಿಕೊಂಡು ನಮ್ಮೀ ಪ್ರಥಮಕಾರ್ಯಕ್ಕೆ ಕನ್ನಡನಾಡಿನ ಹಿರಿಯ ಕಿರಿಯರೆಲ್ಲರೂ ಪ್ರೋತ್ಸಾಹನವನ್ನು ಕೊಡಬೇಕಾಗಿ ಎಲ್ಲರನ್ನೂ ಬೇಡಿಕೊಳ್ಳುತ್ತೇವೆ.

ಶ್ರೀ ಶ್ರೀನಿವಾಸರಾಯರು ತಮ್ಮ ಕಾರಾವಾಸದ ಪ್ರಕರವನ್ನು ಮುಗಿಸಿಕೊಂಡು ಅವರಿಂದ ಹೆಚ್ಚು ತೇಜಸ್ವಿಗಳೂ ಕಾರ್ಯಯೋಗಿಗಳೂ ಆಗಿ ಸುಖರೂಪ ತಿರುಗಿಬಂದು, ತಮ್ಮೆಲ್ಲರ ಸೇವೆಯನ್ನು ಮಾಡಲು ಶೀಘ್ರವಾಗಿ ಸಮರ್ಥರಾಗುವ ಕೃಪೆಯನ್ನು ದಯಪಾಲಿಸಲೆಂದು ಪರಮಾತ್ಮನನ್ನು ನಾವು ಅನನ್ಯಭಾವದಿಂದ ಬೇಡಿಕೊಳ್ಳುತ್ತೇವೆ. ಆಗಾಗ್ಗೆ ತಕ್ಕ ಸಲಹೆ ಮುಂತಾದ್ದನ್ನು ಕೊಟ್ಟು ಎಂದಿನಂತೆ ಕನ್ನಡಿಗನನ್ನು ಪ್ರೋತ್ಸಾಹಿಸಬೇಕಾಗಿ ಕನ್ನಡಿಗರಲ್ಲಿ ಇನ್ನೊಮ್ಮೆ ಮೊರೆಯಿಟ್ಟು ನಾವೀಲೇಖಣಿಯನ್ನು ಸ್ವೀಕರಿಸುತ್ತೇವೆ.

## ಧಾರವಾಡದಲ್ಲಿ ಬೆಂಚಮ್ಯಾಜಿಸ್ಟ್ರೇಟರ ರಾಜೀನಾಮೆ

ಧಾರವಾಡ ಮುನಸೀಪಾಲ್ಟಿಯ ಸಭಾಸದರಾದ ಶ್ರೀ. ಗದಿಗೆಯ್ಯ ಹಿರೇಮಠರು ತಮ್ಮ ಬೆಂಚಮ್ಯಾಜಿಸ್ಟ್ರೇಟರ ಸ್ಥಾನಕ್ಕೆ ರಾಜೀನಾಮೆ ಕೊಟ್ಟದ್ದಲ್ಲದೆ ಖಾದಿಯನ್ನು ಧಾರಣಮಾಡುವೆವಾಗಿ ಪ್ರತಿಜ್ಞೆ ತಕ್ಕೊಂಡರು. ಕಾಂಗ್ರೆಸದ ಅಧ್ಯಕ್ಷರಾದ ಜವಾಹರಲಾಲರಂಥವರನ್ನು ಬಂಧಿಸಿದ ಸಮಯದಲ್ಲಿ ತಾವು ಬೆಂಚಮ್ಯಾಜಿಸ್ಟ್ರೇಟರಾಗುವುದಕ್ಕಿಂತ ಅನ್ಯಾಯವೆಂದು ಹೇಳಿದರು ವಿದೇಶೀ ಬಟ್ಟೆಗಳ ಹೋಳಿಗೆ ತಮ್ಮ ಸ್ವಂತ ಜರವರುಮಾಲವನ್ನು ಕೊಟ್ಟದ್ದಲ್ಲದೆ ತಾವೇ ಸ್ವತಃ ಅಗ್ನಿಕ್ರಿಯೆಮಾಡಿದರು.

## ಶ್ರೀ. ಮಂಗಳವೇಢೆಯವರು

### ವಿಜಾಪುರ ತುರುಂಗಕ್ಕೆ ಒಯ್ಯಲ್ಪಟ್ಟರು!

ಶ್ರೀ. ಮಂಗಳವೇಢೆ ಶ್ರೀನಿವಾಸರಾಯರನ್ನು ನಿನ್ನೆ ರಾತ್ರಿ ಗಾಡಿಯಿಂದ ವಿಜಾಪುರ ತುರುಂಗಕ್ಕೆ ಕರಕೊಂಡು ಹೋದರು! ಸ್ಟೇಶನದಲ್ಲಿ ನೂರಾರು ಜನರು ನೆರೆದು ಅವರನ್ನು ಸನ್ಮಾನಿಸಿದರು. ಶ್ರೀ. ಶ್ರೀನಿವಾಸರಾಯರು ಉಲ್ಹಾಸಮುಖದಿಂದ ಎಲ್ಲರಿಗೂ ನಮಸ್ಕರಿಸಿ ಅವರ ಅಪ್ಪಣೆ ತೆಗೆದುಕೊಂಡರು.

(ತಂತಿಯಿಂದ ಬಂದ ವಾರ್ತೆ)

# ಜವಾಹರಲಾಲರಿಗೆ ಆರು ತಿಂಗಳ ಶಿಕ್ಷೆ.

ಅಧ್ಯಕ್ಷ ಜವಾಹರಲಾಲರಿಗೆ ಉಪ್ಪಿನ ಕಾಯದೆಯನ್ನು ಮುರಿದದ್ದಕ್ಕಾಗಿ ಆರು ತಿಂಗಳ ಸಜೆಯು. ನಾಯಿನಿತಾಲ ಕಾರಾಗೃಹಕ್ಕೆ ಕಳಿಸಿರುವರಾಗಿ ತಿಳಿಯುತ್ತದೆ

## ದಬ್ಬಾಳಿಕೆಯ ಆರಂಭವು.

ಕಲಕತ್ತೆ ರಾಯಟರಿಂದ ಲಕನೌ ಮೊದಲಾದ ಸ್ಥಳಗಳಲ್ಲಿ ಸರಕಾರವು ಅತೀತ ತೀವ್ರ ಪ್ರಕೃತಿಯ ದಬ್ಬಾಳಿಕೆಯನ್ನು ಆರಂಭಿಸಿದೆ ಈಗಾಗಲೆ ನೂರಾರು ಜನರನ್ನು ಸೆರೆ ಹಿಡಿದಿರುವರು. ಅಂತು ಸರಕಾರವು ತಾನು ಯಾವ ಉಪಾಯಗಳಿಂದ ಇನ್ನು ಈ ಚಳವಳಿಯನ್ನು ಬಗ್ಗು ಬಡಿಯಬೇಕೆಂಬುದನ್ನು ನಿರ್ಧರಿಸಿಕೊಂಡಂತಾಗಿದೆನ್ನಬಹುದು. ಆದರೆ ಸತ್ಯಾಗ್ರಹಿಗಳು ಬಯಸಿದ್ದೂ ಇದೇ.

### ರತ್ನಾಗಿರಿ.

ಉಪ್ಪಿನ ಕಾನೂನನ್ನು ಮುರಿದದ್ದಕ್ಕೆ ಶ್ರೀ ರಾವ ವಳವಳ್ಕರ ಮತ್ತು ಬರ್ವೆಯವರು, ರತ್ನಾಗಿರಿ ಜಿಲ್ಲೆಯಲ್ಲಿಯ ಶೈತಾಪುರದಲ್ಲಿ ಹಿಡಿಯಲ್ಪಟ್ಟರು. ಇವರ ವಿಚಾರಣೆಯು ರಾಜಾಪುರದಲ್ಲಿ ಆಗುವದಿದೆ.

### ಚಿಕ್ಕೋಡಿ.

ಇಲ್ಲಿಯ ೧೫ ಜನವಕೀಲರು ಕಾನೂನಭಂಗ ಮಾಡಲೊಪ್ಪಿರುವರಂತೆ.

ಇನ್ನು ಮೇಲೆ ದೇ. ಎಂ. ಆರ್ ಪಾಟೀಲ, ಬಿ. ಎ. ಎಲ್ ಎಲ್ ಬಿ ವಕೀಲರು (ಶ್ರೀ. ಲೋಕೂರ ಜಜ್ಜರಬೀಗರು) ಶಿಬಿರ ಧುರೀಣರಾಗಿ ಇರುವರೆಂದು ತಿಳಿಯುತ್ತದೆ.

೬ನೇ ತಾರೀಖಿನಿಂದ ಇಲ್ಲಿಯ ವರೆಗೆ ೭ ದಿನ ಸ್ವಾತಂತ್ರ್ಯ ರಣಸಂಗ್ರಾಮವು ನಡದಿದೆ ಅಗ್ನಿಕುಂಡವು ಪ್ರಜ್ವಲಿತವಾಗ ಹತ್ತಿದೆ ಆಹಾ! ಬಂಡ ಆರಂಭಿಸಿದೆ.

## ಬಳ್ಳಾರಿಯಲ್ಲಿ ಕಾಯಿದೆ ಭಂಗ.

೧೩ ನೇ ತಾ|| ದಂದು ಸಭೆಯಲ್ಲಿ ಉಪ್ಪು ಮಾರಲಿಕ್ಕೆ ಪ್ರಾರಂಭವಾಗಲು ಜನರೆಲ್ಲರೂ ಉತ್ಸಾಹಪೂರ್ವಕವಾಗಿ ಉಪ್ಪನ್ನು ಕೊಂಡುಕೊಳ್ಳಲು ಮುಂದುವರಿದರು ಮುತ್ತಿಗೆ ಹಾಕಿದರು. ಉಪ್ಪೆಲ್ಲವು ಮಾರಲ್ಪಟ್ಟಿತು. ಇನ್ನು ಹೆಚ್ಚು ಇದ್ದರೆ ಬಹಳ ಜನರು ಕೊಂಡುಕೊಳ್ಳುತ್ತಿದ್ದರು ಸುಮಾರು ೩೦೦ ಜನರು ಈ ಉಪ್ಪನ್ನು ಕೊಂಡುಕೊಂಡರು. ಅದೇ ದಿನ ರಾತ್ರಿ ಎರಡನೇ ಗುಂಪು ಹುಬ್ಬಳ್ಳಿಗೆ ಹೊರಟು ಹೋಯಿತು, ಅವರನ್ನು ಸಾಗಕಳುಹಲು ಬಹಳ ಜನರು ಸ್ಟೇಶನ್ನಿನಲ್ಲಿ ಕೂಡಿದ್ದರು ಸ್ಟೇಶನ್ ತುಂಬ "ವಂದೇಮಾತರಂ" "ಗಾಂಧಿ ಮಹಾರಾಜಕೀ ಜೈ" ಗದ್ದಲವೇ ಗದ್ದಲ,

ಈ ವರೆಗೂ ಯಾರನ್ನೂ ಪೋಲೀಸರು ಸೆರೆ ಹಿಡಿದಿರುವದಿಲ್ಲ, ಊರಲ್ಲೆಲ್ಲ ಉತ್ಸಾಹವೇ ತುಂಬಿಕೊಳ್ಳುತ್ತದೆ.

ಇಲ್ಲಿಯ ಜವಳೀ ವರ್ತಕರ ಸಭೆಯು ಮುಂದಿನ ತಿಂಗಳ ವರೆಗೂ ವಿದೇಶಿ ಬಟ್ಟೆಯನ್ನು ತರಿಸಬಾರದೆಂದು ತೀರ್ಮಾನಿಸಿಕೊಂಡು ಈ ತೀರ್ಮಾನಕ್ಕೆ ವಿರೋಧಿಸಿದವರನ್ನು ಜುಲ್ಮಾನದಿಂದಲೂ, ಮತ್ತು ಬಹಿಷ್ಕಾರದಿಂದಲೂ ಶಿಕ್ಷಿಸಬೇಕೆಂದು ಠರಾಯಿಸಿದ್ದಾರೆ.

### ಕೊಂಡಾಯಿಯಲ್ಲಿ

ಬಂಗಾಲದ ಮುಖ್ಯ ಯುದ್ಧ ಭೂಮಿಯಾದ ಕೊಂಡಾಯಿಯಲ್ಲಿ ಡಾ|| ಪ್ರಫುಲ್ಲಘೋಷ ಮತ್ತು ಶ್ರೀ ಪ್ರಮಥನಾಥ ಮುಕರ್ಜಿ ಇವರನ್ನು ಸರಕಾರದವರು ಭಾನುವಾರ ಬೆಳಿಗ್ಗೆ ಬಂಧಿಸಿ ಒಯ್ದಿರುವರು

## ಸೇನಗುಪ್ತರಿಗೆ ಮತ್ತೆ ಆರು ತಿಂಗಳ.

ಮೊನ್ನೆ ಸೇನಗುಪ್ತರನ್ನು ಸರಕಾರದಿಂದ ಮನಾಯಿ ಮಾಡಲ್ಪಟ್ಟ ಪುಸ್ತಕಗಳನ್ನು ಓದುವ ಅಪರಾಧ ಮಾಡಿದರೆಂಬ ಆರೋಪದಿಂದ ಅವರನ್ನು ೧೨೪ ಕಲಮಿನಪ್ರಕಾರ ದಸ್ತಗಿರ ಮಾಡಿದ್ದರಷ್ಟೇ? ಈಗ ಅವರ ಅಪರಾಧದ ವಿಚಾರಣೆಯಾಗಿ ಆರು ತಿಂಗಳ ಸಶ್ರಮ ಶಿಕ್ಷೆ ವಿಧಿಸಲ್ಪಟ್ಟಿತು.

## ಮುಂಬಯಿ ಸ್ತ್ರೀಯರ ವೀರ ನಿರ್ಧಾರವು

ಮುಂಬಯಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ಅಬಿದ ಅಲಿ ಇವರನ್ನು ಕಾಯಿದೆ ಭಂಗ ಮಾಡಿದಕ್ಕಾಗಿ ಹಿಡಿದೊಯ್ದು ಶಿಕ್ಷೆ ಕೊಟ್ಟಿದ್ದಾರಷ್ಟೇ? ಆದರೆ ಈಗ ಅವರ ಪತ್ನಿಯವರು ತನ್ನ ಗಂಡನನ್ನು ಹಿಡಿದೊಯ್ದರೇನಾಯಿತು ಅವರು ಕೈಕೊಂಡ ಕಾರ್ಯವನ್ನು ಮುಂದುವರಿಸುವದು ಅವರ ಅರ್ಧಾಂಗಿಯಾದ ನನ್ನ ಕರ್ತವ್ಯವಾಗಿರುತ್ತದೆ. ಮತ್ತು ಅವರು ಮಾಡುತ್ತಿದ್ದ ಕಾರ್ಯವನ್ನು ಪೂರೈಸಲು ನನ್ನ ಸರ್ವಶಕ್ತಿಯನ್ನು ವೆಚ್ಚಮಾಡಲು ಸಿದ್ಧಳಾಗಿ ನಾನೂ ಮುಂದೆ ಬಂದು ಕಾರ್ಯಕ್ಷೇತ್ರದಲ್ಲಿ ನಿಂತುಕೊಂಡಿದ್ದೇನೆ ಇಂಥ ಸುಪ್ರಸಂಗವು ನನ್ನ ಗಂಡನ ಬಂಧನದ ಮೂಲಕ ನನಗೆ ಲಭಿಸಿದ್ದರಿಂದ ನಾನು ಇವರನ್ನು ಬಂಧಿಸಿದವರನ್ನು ಅಭಿನಂದಿಸುತ್ತೇನೆಂದು ಪ್ರಸಿದ್ಧಗೊಳಿಸಿರುವಳು. ಇದು ಮಾತ್ರ ನಿಜವಾದ ಪತಿಯ ಸೇವೆ ಚಿಂತೆ ಇಲ್ಲ!!

## ನೂರಾರು ಜನರು ಉಪ್ಪು ಸಿದ್ಧಗೊಳಿಸಿರಿ.

## ಶ್ರೀ ಮಂಗಳವೇಢೆ ಶ್ರೀನಿವಾಸರಾಯರಿಗೆ ೪ ತಿಂಗಳ ಸಾದಾ ಶಿಕ್ಷೆ.

ಕನ್ನಡಿಗನ ಸಂಪಾದಕರಾದ ಶ್ರೀ ಮಂಗಳವೇಢೆ ಶ್ರೀನಿವಾಸರಾಯರಿಗೆ ಇಂಡಿಯನ್ ಪೀನಲ್ ಕೋಡಿನ ೧೧೭ ಕಲಮಿನನ್ವಯ ಮತ್ತು ಉಪ್ಪಿನ ಕಾಯದೆಯ ೪೭ ನೇ ಕಲಮಿನನ್ವಯ ೪ ತಿಂಗಳ ಸಾದಾ ಶಿಕ್ಷೆಯಾಯಿತು. (ಅ) ವರ್ಗದ ಕೈದಿಗಳಂತೆ ಅವರನ್ನು ನಡೆಸಿಕೊಳ್ಳಬೇಕಾಗಿ ಮ್ಯಾಜಿಸ್ಟ್ರೇಟರು ಅಪ್ಪಣೆಕೊಡಿಸಿರುವರು. ಅವರು ಆನಂದದಿಂದ ಶಿಕ್ಷೆಯನ್ನು ಸ್ವೀಕರಿಸಿದರು ಬಾಗಲಕೋಟೆಯ ಹತ್ತಿರದ [illegible]ದಲ್ಲಿ ನೂರಾರು ಜನರು ಹೋಗಿ ಉಪ್ಪು ಸಿದ್ಧಗೊಳಿಸಬೇಕೆಂಬುದೇ ಶ್ರೀ ಶ್ರೀನಿವಾಸರಾಯರ ಸಂದೇಶವು ಕಾಯಿದೆ ವಿರುದ್ಧ ಉಪ್ಪು ಸಿದ್ಧಪಡಿಸಿದರೆಂಬ ಆರೋಪದಿಂದ ಹಿಡಿಯಲ್ಪಟ್ಟ ಶ್ರೀ ಭಾವಾಸೆ ಲಿಂಗಪ್ಪ, ಇವರಿಗೆ ಉಪ್ಪಿನ ಕಾಯಿದೆಯ ೪೭ ಕಲಮಿನನ್ವಯ ೧೫ ರೂಪಾಯಿ ಹಾಗೂ ಉಪ್ಪು ಬೇಕಾಯದೇಶೀರ ರೀತಿಯಿಂದ ಸಭೆಯಲ್ಲಿ ಮಾರಿದರೆಂಬ ಆರೋಪದಿಂದ ಶ್ರೀ ಕೃಷ್ಣಾಜಿ ಗೋಪಾಳ ನಾಯಿಕ ಇವರಿಗೆ ಅದೇ ಕಲಮಿನನ್ವಯ ೨೫ ರೂ. ದಂಡ ವಿಧಿಸಲ್ಪಟ್ಟು ಅವರು ಬಿಡಲ್ಪಟ್ಟಿದ್ದಾರೆ.

## ಮುಂಬಯಿಯಲ್ಲಿ ಉಪ್ಪಿನ ಕಾಯಿದೆಯನ್ನು

# ಮೂರು ಲಕ್ಷ ಜನರು ಮುರಿದರು!

## ಅಧ್ಯಕ್ಷ ಜವಾಹಿರಲಾಲರಿಗೆ ೬ ತಿಂಗಳ ಶಿಕ್ಷೆ!

### ಮುಂಬಯಿಯಲ್ಲಿಯ ಅಪೂರ್ವ ಹರತಾಳವು, ಚೌಪಾಟಿ ಮೇಲಿನ ಚಿರಸ್ಮರಣೀಯವಾದ ಜನಸಮ್ಮರ್ದನದ ಗಂಭೀರ ಆಚರಣೆಯೂ, ಅತಿ ಪ್ರಚಂಡ ಸಭೆಯೂ!

ಅಧ್ಯಕ್ಷ ಜವಾಹಿರಲಾಲರನ್ನು ಹಿಡಿದ ವರ್ತಮಾನವು ಬಂದಕೂಡಲೆ ಮುಂಬಯಿ ಪಟ್ಟಣದಲ್ಲಿಯ ತರುಣರ ಹೃದಯಗಳು ಸ್ಫುರಣಹೊಂದಿ ವಿದ್ಯುದ್ವೇಗದಿಂದ ಪಟ್ಟಣವನ್ನೆಲ್ಲ ಸುತ್ತು[illegible] ಹರತಾಳವನ್ನು ಏರ್ಪಡಿಸಿದರು. ೩ ಘಂಟೆಗೆ ತಮ್ಮ [illegible] ಅಂಗಡಿ ಮುಂಗಡಿಗಳನ್ನು ಇಕ್ಕಿಕೊಂಡು ಜನರು ಚೌಪಾಟಿ ಸಮುದ್ರದ ದಂಡೆಯ ಮೇಲೆ [illegible] ಎಂಬ [illegible] ದರು. ಅಂದಿನ ಮುಂಬಯಿ [illegible] ಯಲ್ಲಿಯ ಆ ಪ್ರಚಂಡ ಸಭೆಯು ಪ್ರಚಂಡತೆಯ ದೃಷ್ಟಿಯಿಂದ ಅಪಾರತೆಯ ದೃಷ್ಟಿಯಿಂದ, ಸಭಿಕರ ಪ್ರಶಾಂತ ಮತ್ತು ಗಂಭೀರ ವರ್ತನದ ದೃಷ್ಟಿಯಿಂದ, ಸ್ವಯಂಸೇವಕರ ಸಂಘಟನೆ [illegible] ಸಾಮರ್ಥ್ಯದ ದೃಷ್ಟಿಯಿಂದ,— ಆ ಸಭೆಯು ನಿಜವಾಗಿಯೇ 'ನಭೂತೋ ನಭವಿಷ್ಯತಿ' ಆಗಿತ್ತೆಂದು ಕೇಳಲು ಯಾವ ಪ್ರತ್ಯಯವೂ ಇಲ್ಲ. ಮುಂಜಾವಿನಿಂದ ಸಂಜೆಯ ವರೆಗೆ ಸುಮಾರು ೩ ಲಕ್ಷ ಜನರು ಸಮುದ್ರ [illegible] ಕೊಡ ಬಿಂದಿಗೆಗಳಿಂದ ತಮ್ಮ [illegible] ಮನೆಗಳಿಗೆ ಒಯ್ದು ಅದನ್ನು ಕಾಸಿ ಉಪ್ಪು ಮಾಡಿ ಉಪ್ಪಿನ ಕಾಯಿದೆಯನ್ನು ಮುರಿದರು! ಎಂದು ಶ್ರೀ. [illegible] ಸುಂದರಲಾಲರು ಆ ಸಭೆಯಲ್ಲಿ ಹೇಳಿ ಇನ್ನುಮೇಲೆ ತಾವೆಲ್ಲರೂ ಕೇವಲ ಇಂಥ ಸ್ವತಂತ್ರ ಭಾರತದ ಉಪ್ಪನ್ನೇ ತಿನ್ನತಕ್ಕವರೆಂದು ಪ್ರತಿಜ್ಞೆಮಾಡಿ [illegible] ಅದನ್ನು ಆಚರಣೆಯಲ್ಲಿ ತಂದು ಬಿಡಿರೆಂದು ಆ ಪ್ರಚಂಡ ಜನಸಮೂಹಕ್ಕೆ ಬೇಡಿಕೊಂಡರು! ಸರೋಜಿನೀ ದೇವಿಯವರು ಸಭೆಯವರಿಗೆ ಅಗ್ನಿ [illegible] ಉತ್ಸಾಹವನ್ನೇ ಸ್ವರಾಜ್ಯ [illegible] ನಿಗೆ [illegible] ಉಪ್ಪಿನ ಕಾಯಿದೆಭಂಗದ ಉತ್ಸಾಹವು ಏನೇ ಹಲ್ಲು [illegible] ಯಂತೆ ಅಲ್ಪಕಾಲವು ಜ್ವಲಿಸಿ ತನ್ನಷ್ಟಕ್ಕೆ ತಾನೇ ನಂದಿತೆಂಬ ಅಪವಾದ ಬಾರದಂತೆ ಎಚ್ಚರಿಕೆಯಿಂದ ನಡೆಯಬೇಕಾಗಿದೆ. ಎಂಥ ಕಷ್ಟ ವ್ಯಥೆಗಳಿಗೂ ತಲೆಕೊಟ್ಟು ನಿಲ್ಲಬೇಕಾಗಿದೆ ಎಂದು ಹೇಳಿದರು. ಆಮೇಲೆ ಶ್ರೀಮತಿ ಚಟ್ಟೋಪಾಧ್ಯ [illegible] ಉಪ್ಪಿನ ಕಾಯಿದೆಯೊಂದಕ್ಕೆ ನಮ್ಮ ಉತ್ಸಾಹವನ್ನು ಇನ್ನು ಬಂಧಿಸಿ ಇಡದೆ, ಎರಡನೇ ಕಾಯಿದೆಗಳನ್ನು ಇದರಂತೆ ಒಂದು ಹಿಂದೆ ಒಂದನ್ನು ತಿರಸ್ಕರಿಸುತ್ತ ಹೋಗದೆ [illegible]! ಜನರಲ್ಲಿ ಈಗ ಪ್ರಜ್ವಲಿಸಿದ ವಿರೋಧವೃತ್ತಿಗೆ ಈ ಕೊಟ್ಟ ಉಪ್ಪಿನ ಕಾಯಿದೆಯು [illegible]! ಇಚ್ಛೆಯ ಕಾಯಿದೆಗಳನ್ನು ಧಿಕ್ಕರಿಸಲಿಕ್ಕೆ ಇನ್ನು ಆರಂಭಿಸಬೇಕು. ಉಪ್ಪಿನ ಕಾಯಿದೆಯು ಸತ್ತುಬಿದ್ದಿದೆ. ಇನ್ನು ಅದಕ್ಕೆ [illegible] ಬಗೆಯುವದರಲ್ಲಿ ಅರ್ಥವಿಲ್ಲವೆಂದು ಅಭಿಪ್ರಾಯಪಟ್ಟರು. ಈ ಸಭೆಯಲ್ಲಿ ಜನರ ಅನುಕೂಲತೆಗಾಗಿ [illegible] ವ್ಯಾಖ್ಯಾತೃ [illegible] ಭಾಷಣಮಾಡು [illegible] ಜನಸಮೂಹವು ಬಹು ವಿಸ್ತಾರವಾಗಿ ಹಬ್ಬಿಕೊಂಡದ್ದರಿಂದ ಒಂದೇ ಸ್ಥಳದಿಂದ ಮಾತಾಡಿದರೆ ಎಲ್ಲರಿಗೂ ಕೇಳಿಬರುವಂತಿರಲಿಲ್ಲ. ಆದ್ದರಿಂದ ಈ ತರಹದ ಏರ್ಪಾಡು ಮಾಡಬೇಕಾಗಿತ್ತು.

### ಸ್ತ್ರೀಯರ ನಿರ್ಧಾರವು!

[illegible] ಯಲ್ಲಿ ನಿನ್ನೆ ಸ್ತ್ರೀಯರ ಪರಿಷತ್ತು [illegible] ಮುಂದೆ ಅಂಗಡಿ ಅಂಗಡಿ [illegible] ವಿದೇಶಿ ಬಟ್ಟೆಗಳ ಬಹಿಷ್ಕಾರ [illegible] ಸಂಕೊಂಡ [illegible] ಪಡೆಯಬೇಕೆಂದೂ [illegible] ಸಾಕ್ಷಿಗಾಗಿ [illegible] ನಿಶ್ಚಯಿಸಿಕೊಂಡರು. [illegible] ಕರ್ನಾಟಕದ [illegible] ಈ ಕಾರ್ಯಕ್ಕೆ [illegible] ಈ ಚಳವಳಿಯು [illegible] ನಮ್ಮ [illegible] ನಾವು ಹಿಂದು [illegible] ಕಲಬಹುದು. ಈ [illegible] ಹೆಣ್ಣುಮಕ್ಕಳ [illegible] ಅಹುದು. ತಿಳುವಳಿಕೆ [illegible] ಮಾನ ಬಿಡದು [illegible] ಯುಳ್ಳ ಸ್ತ್ರೀಯರು [illegible] ನಿರ್ಧಾರವಾಗದೇ?

### ಟಿ. ಪ್ರಕಾಶಮ್ ಇವರನ್ನು ಹಿಡಿದುಬಿಟ್ಟರು!

[illegible] ಕಾಯಿದೆಯಂತೆ ಜಪ್ತಿಗೆ [illegible] ಶ್ರೀ. ಟಿ. ಪ್ರಕಾಶಮ್ [illegible] ನಿನ್ನೆ [illegible] ರಿಗೆ [illegible] ಕಾಸಿ, ತೆಗೆದುಕೊಂಡು [illegible] ಮತ್ತೆ ಏನೋ ವಿಚಾರಮಾಡಿ ಬಿಟ್ಟುಬಿಟ್ಟರು.

## ದೇಶದಲ್ಲಿ ಹಿಂಸೆಯುಂಟಾದರೆ ಗಾಂಧಿಯವರು ಅಖಂಡ ಉಪವಾಸವನ್ನು ಕೈಕೊಳ್ಳುವರಂತೆ!

ಜನರು ವಿಶೇಷತಃ ಈ ಚಳುವಳಿಯಲ್ಲಿ ಲಕ್ಷ್ಯವಿಂದ ಕೆಲಸ ಮಾಡಬೇಕೆಂದು, ನನ್ನ ವಿಶ್ವಾಸಕ್ಕೆ ಪಾತ್ರರಾದರು. ಇಂಥ ಕಾಲದಲ್ಲಿ ಹಿಂಸೆ ಅತ್ಯಾಚಾರಗಳು ನಡೆದರೆ ನನ್ನ [illegible] ಅನ್ನ [illegible] ಅಸಲಿನ (ಅಖಂಡ ಉಪವಾಸ) ವ್ರತವನ್ನು ನಾನು ಕೈಕೊಳ್ಳುವ ಸಂಭವವಿದೆ. ಯದ್ಯಪಿ [illegible] ಸ್ವಾತಂತ್ರ್ಯಪ್ರಾಪ್ತಿ [illegible] ಹಿಂಸೆ ಅತ್ಯಾಚಾರಗಳನ್ನು [illegible], [illegible] ನನ್ನ [illegible], ಮತ್ತು [illegible] ನನ್ನ [illegible] ಜನರ [illegible] ಅತ್ಯಾಚಾರ [illegible] ಆ ಪಾಪವನ್ನು [illegible] ನಾನು ಪ್ರತ್ಯ [illegible] ಈಗ ಎಲ್ಲರಿಗೂ [illegible]! [illegible]! [illegible] ಜನರನ್ನು [illegible] ತಿಳಿವದು [illegible] ಅತ್ಯಂತ [illegible]! ಇದನ್ನು [illegible] ಈ ಚಳವಳಿಯಲ್ಲಿ ಜನರು ವರ್ತಿಸ [illegible] ಅಲೌಕಿಕ ವಿಭೂತಿ [illegible] ನಾವಾಗ [illegible] ಇರುವ [illegible] ಬಹಳ ಹಿತವನ್ನು [illegible].

## ಕನ್ಯಾಕುಮಾರಿ ಮುನಿಸಿ ಇವರು ಗಾಂಧಿಯವರ ಶಿಷ್ಯರಾದರು.

ಮುಂಬಯಿ ಸರಕಾರ ಪಕ್ಷದ ಪ್ರಮುಖ ಗೃಹಸ್ಥರಲ್ಲಿ ಹಿರಿಯರಾದ ಕನ್ಯಾಕುಮಾರಿ ಮುನಸಿಯವರು ತಮ್ಮ ಹಿಂದಿನ ಕೃತಿಗಳಿಗೆ ಪಶ್ಚಾತ್ತಾಪ ಪಟ್ಟು ಇನ್ನು ನಮಗೆ ಗಾಂಧಿಯವರ ಶಿಷ್ಯತ್ವದ ಹೊರತು ಬೇರೆ ಉದ್ಧಾರ ಮಾರ್ಗವಿಲ್ಲೆಂದು, ಮತ್ತು ಗಾಂಧಿಯವರು ಈ ಕಾಯಿದ ಭಂಗದ ಚಳವಳಿಯು ಹೊರತು ನಿಜವಾದ ಸೇವೆಯು ಮತ್ತು ಲೋಕಕಲ್ಯಾಣದ ಮಾರ್ಗವು ಇಲ್ಲವೇ ಇಲ್ಲವೆಂದೂ ಅಭಿಪ್ರಾಯಪಟ್ಟು ಗಾಂಧಿಯವರಿಗೆ ಅದರಂತೆ ಪತ್ರ ಬರೆದು, ಅವರಲ್ಲಿ ತಮ್ಮನ್ನು ಸ್ವೀಕರಿಸಬೇಕೆಂದು ಕೇಳಿಕೊಂಡಿದ್ದಾರೆ. ಇನ್ನು ಸತ್ಯಾಗ್ರಹಿಗಳ ಗಾಂಧಿಯವರ ದರ್ಶನದಿಂದ ಉಂಟಾದ ಪ್ರೇರಣೆಗಿಂತ ಅವರ ಉಪದೇಶವೃತ್ತದಿಂದ ಪ್ರೇರಿತರಾದ, ಗಾಂಧಿಯವರ ಲೋಕಕಲ್ಯಾಣದ ಮಾರ್ಗವನ್ನು [illegible] ಇನ್ನು ಆವಾರಣ ಮಾಡುತ್ತಿರುವ [illegible], ಮುನಸಿಯವರ ಮೇಲೆ ಸರಕಾರದವರು [illegible] ಕಾರಣವಾದ [illegible] ಇಂದಿನ ವರೆಗೆ ಇವರು ಜನರ ಧಿಕ್ಕಾರವನ್ನು [illegible] ಬೇರೆ [illegible] ಮಾಡಿದ ಗೃಹಸ್ಥರು ಅವರಿಗೂ ಈಗ ಉದ್ಧಾರವಾಗುವ ಸಮಯವು ಬಂದಿತೆನ್ನಬೇಕು! ದುರ್ಯೋಧನನಂತೆ ಕಡೆತನಕ ಸಾಧುಸಾತ್ವಿಕ ಸಂಗತಿಗಳ ದ್ವೇಷದಲ್ಲಿಯೇ ಜೀವಕಳೆಕೊಳ್ಳುವದಕ್ಕಿಂತಲೂ ಇದು ಲೇಸು. ಇನ್ನೂ ಮುನಸಿ ಮಾದರಿಯ ಜನ ಇದೇ ಇದೆ. ಅವರಿಗೆಂದು ಬುದ್ಧಿ ಬರುವದೋ ನೋಡಬೇಕು. ಯಾವದಕ್ಕಾದರೂ ಸುಕೃತ ಬೇಕಷ್ಟೇ!

## ಕರ್ನಾಟಕದಲ್ಲಿ ದಬ್ಬಾಳಿಕೆ.

ಪ್ರಾಂತಿಕ ಕಮಿಟಿಯ ಅಧ್ಯಕ್ಷರಾದ ಶ್ರೀ. ದಿವಾಕರರಿಗೆ ಸಿವಲ್ ಕೋಡಿನ ೧೦೭ ನೆ ಕಲಮಿನನ್ವಯ ನೋಟೀಸ ಜಾರಿಯಾಗಿದೆ.

ಚಂದಗಡದಲ್ಲಿ ಪಿಡಿಯಲ್ಲಿಟ್ಟ ಶ್ರೀ ಸ್ವಯಂಸೇವಕರಲ್ಲಿ ಕೆಲವರಿಗೆ ಒಂದು ತಿಂಗಳ, ಮೂವರಿಗೆ ೧೫ ದಿವಸ ಶಿಕ್ಷೆ ವಿಧಿಸಲ್ಪಟ್ಟಿತು.

ಅಂಕೋಲೆಯಲ್ಲಿ ಶ್ರೀ. ನಾಡಕರ್ಣಿ ವಕೀಲರಿಗೆ ೬ ತಿಂಗಳ ಸಾದಾ ಶಿಕ್ಷೆ. ಸ್ವಾಮಿ ವಿದ್ಯಾನಂದರಿಗೆ ೧ ವರ್ಷ ಸಕ್ತ ಶಿಕ್ಷೆ ವಿಧಿಸಲಾಗಿದೆ.

ಮಂಗಳೂರಲ್ಲಿ ಶ್ರೀ. ಉಮೇಶರಾವ (ವಕೀಲರು) ಮೊದಲಾದ ೭ ಸ್ವಯಂಸೇವಕರಿಗೆ ಶಿಕ್ಷೆಯಾಯಿತು. ಶ್ರೀ. ಉಮೇಶರಾವ, ಶ್ರೀ. ಪಟ್ಟು ಇವರಿಗೆ ೬ ತಿಂಗಳ ಸಾದಾ ಶಿಕ್ಷೆ, ಉಳಿದ ಕೆಲವು ಸ್ವಯಂಸೇವಕರಿಗೆ ೬ ತಿಂಗಳ, ಕೆಲವರಿಗೆ ೪ ತಿಂಗಳ ಸಾದಾ ಶಿಕ್ಷೆ ವಿಧಿಸಲಾಗಿದೆ. ಜಿಲ್ಲೆಯ ಬೇರೆ ಬೇರೆ ಸ್ಥಳಗಳಿಂದ ಸ್ವಯಂಸೇವಕರು ಬರುತ್ತಿದ್ದಾರೆ.

### ಕರ್ನಾಟಕದಲ್ಲಿ ಸತ್ಯಾಗ್ರಹ

ಧಾರವಾಡದಲ್ಲಿ ೧೪ ನೇ ತಾ॥ ದಿನ ಶ್ರೀ. ದಿವಾಕರರು ಜಾಹೀರ ರೀತಿಯಿಂದ ಉಪ್ಪು ಲಿಲಾವು ಮಾಡಿದರು. ೬೦ ರೂ. ೩೫ ರೂಪಾಯಿಗಳಿಗೆ ಮೂರು ಚಿಮಟಿಗೆ ಉಪ್ಪು ಮಾರಲ್ಪಟ್ಟಿತು. ಸಭೆಯಲ್ಲಿ ಜನರು [illegible] ಭಾಗವಹಿಸಿ ಸ್ಪಷ್ಟವಾಗಿ [illegible] ಹೇಳಿದರು.

ಪಂಡಿತ ಜವಾಹರಲಾಲರನ್ನು ಬಂಧಿಸಿದ್ದಕ್ಕಾಗಿ ಗದಗಿನಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಸಾಯಂಕಾಲ ಕೂಡಿದ ಜಾಹೀರ ಸಭೆಯಲ್ಲಿ ಶ್ರೀ. ಜಾಲಿಹಾಳ ಅನಂತರಾಯ ವಕೀಲ, ಮತ್ತು ಡಾ॥ ಉಮರ್, ಡಾ॥ ಹುಯಿಲಗೋಳ ರವರು ಜಾಹೀರ ರೀತಿಯಿಂದ ಕಾಯಿದೇ ವಿರುದ್ಧ ಸಿದ್ಧಗೊಳಿಸಿದ ಉಪ್ಪು ಲಿಲಾವು ಮಾಡಿದರು.

### ಬೆಳಗಾಂವಿಯಲ್ಲಿ ದಬ್ಬಾಳಿಕೆ!

ಮುಂಬಯಿಯ ಪತ್ರಿಕೆಗಳಲ್ಲಿ ಒಳ್ಳೇ ವರ್ಚಸ್ಸಿನ ಶ್ರೀ. ಘೋಂಡೋ ಯಲ್ಲೋ ಕುಲಕರ್ಣಿಯವರನ್ನೂ, ನಂದಗಡದ ಪ್ರಸಿದ್ಧ ವ್ಯಾಪಾರಸ್ಥರಾದ ಶ್ರೀ ಸೆಠ ಕೆಬಿ ನಾರಾಯಣ ಜಲಂಧರೋಟಕರನ್ನೂ ಅಂಕೋಲೆ, ಹೂಟ ಸತ್ಯಾಗ್ರಹೀ ವೀರ ಮುಖಂಡರಾದ ಶ್ರೀ ಟಿ. ಕೆ. ಮಧ್ವಾಚಾರ್ಯರನ್ನೂ ಸರಕಾರದವರು ಬಂಧಿಸಿದರು. ಇದಕ್ಕಾಗಿ ನಂದಗಡದಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು.

ಈ ಪತ್ರಿಕೆಯು ಬಳವಂತ ಅಣ್ಣಾಜಿ ಪಂಚವಾಘ ಇವರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

ನಿತ್ಯಸಂಚಿಕೆಯು.

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು :— ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಶುಕ್ರವಾರ ಮಿತಿ ಚೈತ್ರ ಬಹುಳ ೫ ಶಕ ೧೮೫೨ ತಾ ೧೮—೪—೩೦ ಸಂಚಿಕೆ ೨೫

## ಸಂಪಾದಕರ ಭೂಮಿ

ನನ್ನ ದೇಹವು ನಿನ್ನ ವೀರಶಾಸನಕಾಗಿ।
ಕಣ್ಣನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ದೀನಬಹಗಂಧವಹವೆಂದು ತಿಳಿಯೆ॥

## ಎಲ್ಲಿಗೆ?

ಮೊನ್ನಿನ ದೈನಿಕ ಪತ್ರದಲ್ಲಿ ಮುಂಬಯಿ ಟಾಯಿಮ್ಸ ಪತ್ರಕಾರರು 'ಎಲ್ಲಿಗೆ?' ಎಂಬ ಅಗ್ರಲೇಖದ ಕೆಳಗೆ ಪ್ರಸ್ತುತ ಚಳವಳದ ಸಲುವಾಗಿ ನಾನಾ ತರದ ಉದ್ಗಾರಗಳನ್ನು ತೆಗೆದಿರುವರು. ಆಂಗ್ಲ ವೃತ್ತಪತ್ರಕಾರರಿಗೆ ಈಗ ಚಳವಳಿಯ ಬಿಸಿಯು ಚನ್ನಾಗಿ ಹತ್ತಿದಂತೆ ಅವರು ತೆಗೆದ ಉದ್ಗಾರಗಳಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಮಹಾತ್ಮಾ ಗಾಂಧಿಯವರು ಉಪ್ಪಿನ ಕರವನ್ನು ಮುರಿಯುವ ಉದ್ಯೋಗವನ್ನು ಆರಂಭಿಸಿದ ಕೂಡಲೇ ಈ ಚಳವಳಿಯನ್ನು ಯಥೇಚ್ಛವಾಗಿ ಹೀಯಾಳಿಸಿ ಇವರ ಚಳವಳಿಗೆ ಎಲ್ಲಿಯೂ ಬೆಂಬಲವಿಲ್ಲೆಂದು ಇವರೇ ಸಾಧಿಸಿದರು. ಮಹಾತ್ಮರ ದೈವೀ ಪ್ರಭಾವದಿಂದ ಉಪ್ಪಿನ ಕರದ ಶಾಸನವನ್ನು ಮುರಿಯುವ ಕಾರ್ಯ ಮುಗಿಸಿ, ವಿದೇಶೀ ಬಟ್ಟೆಗಳ ಬಹಿಷ್ಕಾರ, ಮದ್ಯಪಾನ ನಿಷೇಧ ಮೊದಲಾದ ಹೆಚ್ಚಿನ ಶಾಸನಭಂಗ ಚಳವಳಿಗೆ ರಾಷ್ಟ್ರವು ಕೈಹಾಕುತ್ತಿರುವದನ್ನು ಕಂಡು, ಉಪ್ಪಿನ ಕಾಯಿದೆಯ ವಿಷಯವಾಗಿ ತಾವು ಅಷ್ಟು ಚಿಂತಿಸುವದಿಲ್ಲವೆಂದು ಹೇಳಹತ್ತಿರುವರು. ಆದರೆ ಟಾಯಿಮ್ಸಕಾರರಿಗೆ ಅಸಮಾಧಾನವನ್ನುಂಟು ಮಾಡಿದ ಸಂಗತಿಯೆಂದರೆ ಮಹಾತ್ಮರ ವರ್ಚಸ್ಸು ಗುಜರಾಥದಲ್ಲಿ ಸಂಪೂರ್ಣವಾಗಿದ್ದು ಗುಜರಾಥಿಯರು ಮಹಾತ್ಮರು ಹೇಳಿದ ಬೇಕಾದ ಶಾಸನವನ್ನು ಉಲ್ಲಂಘಿಸುವ ಕೆಲಸವನ್ನು ಮಾಡಲಿಕ್ಕೆ ಸಿದ್ಧರಾಗಿರುವರೆಂಬುದು; ಮಹಾತ್ಮರು ಜನರ ಅಂತಃಕರಣದಲ್ಲಿಯೇ ಘುಮುಕುವದರಿಂದ ಬುದ್ಧಿವಂತರು ಸಹ ತಮ್ಮ ತಲೆಯ ಉಪಯೋಗವನ್ನು ಮಾಡದೇ ಒಮ್ಮೆಗಲೇ ಬಲಿಬೀಳುವರೆಂಬೂ ಇವರ ಆಕ್ಷೇಪವು. ಜರ್ಮನಿಯು ಕೂಡ ಅನ್ಯಾಯದಿಂದ ಇಂಗ್ಲಂಡವು ಯುದ್ಧ ಹೂಡಿದಾಗ ಅದರ ನ್ಯಾಯಾನ್ಯಾಯತೆಯ ವಿಷಯವಾಗಿ ಇಂಗ್ಲಂಡದಲ್ಲಿಯ ಎಷ್ಟು ಜನ ಬುದ್ಧಿವಂತರು ವಿಚಾರಮಾಡಿದರು? ಜರ್ಮನಿಯು ಯಶಸ್ವಿಯಾದರೆ ಇಂಗ್ಲಂಡವು ದಾಸ್ಯಕ್ಕೆ ಒಳಗಾಗುವದೆಂದು ಹೇಳುವ ನಿಮ್ಮ ಒಂದೇ ಶಬ್ದವೇ ಇಂಗ್ಲಂಡದಲ್ಲಿ ಎಲ್ಲ ಜನರನ್ನು ಆಸುರೀ ಯುದ್ಧದಲ್ಲಿ ತೊಡಗಿಸಿತು. ಹಿಂದುಸ್ಥಾನವಂತೂ ಅಸಹ್ಯವಾದ ದಾಸ್ಯದಲ್ಲಿ ಹೊರಳಾಡುತ್ತಲಿರುವದು. ತಿನ್ನಲಿಕ್ಕೆ ಜನರಿಗೆ ಒಂದು ತುತ್ತು ಸಹ ಕೂಳು ದೊರೆಯುವದಿಲ್ಲ. ಕರಗಳ ಹೊರೆಯು ತಲೆಬಗ್ಗಿಸಿ ಬಿಟ್ಟಿರುವದು. ಇಂಥ ಪರಿಸ್ಥಿತಿಯಲ್ಲಿ ಬುದ್ಧಿಯ ಕೆಲಸವಾದರೂ ಏನು ಉಳಿದಿರುವದು? ಹಿಂದುಸ್ಥಾನದಲ್ಲಿಯ 'ಉದಾರ' 'ಮೊತ್ತಸ್ತ' ಮೊದಲಾದ ಗಣ್ಯರಾದರೂ ಅಂಕಗಣಿತವನ್ನು ಲೆಕ್ಕಕ್ಕೆ ತೆಗೆದುಕೊಂಡು ಲೆಕ್ಕಹಾಕಿ ಈ ಚಳವಳಿಯು ಯೋಗ್ಯವಾದದ್ದಲ್ಲವೆಂದು ನಿರ್ಣಯಿಸಿ ಸರಕಾರಕ್ಕೆ ಸಹಾಯಮಾಡಬೇಕೆಂಬದೇ ಇವರ ಉದ್ದೇಶವು. ಟೈಮ್ಸಕಾರರೇ ಆ ಪ್ರಸಂಗವು ಈಗ ಹೋಗಿರುವದು. ನಿಮ್ಮ ಮಾಯಾ ಜಾಲಕ್ಕೆ ಒಳಗಾಗುವ ದಿವಸಗಳು ಈಗ ಹೋಗಿರುವವು. ಹಿಂದುಸ್ಥಾನದಲ್ಲಿ ಸ್ವಾತಂತ್ರ್ಯ ಪ್ರಾಪ್ತಿಯ ಅಭಿಲಾಷೆಯು ಸಂಪೂರ್ಣವಾಗಿ ಪ್ರತಿಯೊಂದು ಪ್ರಾಣಿಯ ಹೃದಯವನ್ನು ಆಕ್ರಮಿಸಿದ್ದು ಅದನ್ನು ಕಿತ್ತಿಹಾಕುವ ಶಕ್ತಿಯು ನಿಮ್ಮದಲ್ಲ. ಪ್ರಾರಂಭವಾದ ಈ ಚಳವಳಿಯು ಎಂದಿಗೂ ನಿಲ್ಲದು. ನೀವು ಸೂಚಿಸಿದಂತೆ ಮಹಾತ್ಮಾ ಗಾಂಧಿಯವರನ್ನು ಸರಕಾರವು ಸೆರೆಹಿಡಿದರೂ ಈ ಚಳವಳಿಯನ್ನು ಯಶಸ್ವಿಯಾಗಿ ಮಾಡುವಷ್ಟು ಸಾಮರ್ಥ್ಯವು ಪ್ರತಿಯೊಬ್ಬನಲ್ಲಿಯೂ ಬಂದಿರುವದು. ನೀವು 'ಎಲ್ಲಿಗೆ?' ಎಂದು ಕೇಳಿದ್ದಕ್ಕೆ 'ಬೇಕಾದಲ್ಲಿಗೆ' ಹಿಂದುಸ್ಥಾನವು ಸ್ವಾತಂತ್ರ್ಯ ಗುಡಿಯ ಬಾಗಿಲವನ್ನು ಮುಟ್ಟುವವರೆಗೆ ಎಂಬುದೇ ಜಾಗ್ರತ ಹಿಂದುಸ್ಥಾನದ ಉತ್ತರವು. ಸರಕಾರವು ಬೇಕಾದಂಥ ಘೋರ ದಬ್ಬಾಳಿಕೆಯನ್ನು ಪ್ರಾರಂಭಿಸಿದರೂ ಸ್ವಾತಂತ್ರ್ಯ ದೇವತೆಯ ಅಡಿದಾವರೆಗಳನ್ನು ಮುಟ್ಟುವವರೆಗೆ ಈ ಚಳವಳಿಯು ನಿಲ್ಲುವದಿಲ್ಲವೆಂದು ಸರಕಾರವೂ ಸರಕಾರದ ಈ ಉಪದೇಶಕರೂ ಚನ್ನಾಗಿ ಲಕ್ಷದಲ್ಲಿಡಲಿ!

## ಕರ್ನಾಟಕದಲ್ಲಿ ದಬ್ಬಾಳಿಕೆ.

## ನಮ್ಮ ಪ್ರಾಂತಿಕ ಕಮಿಟಿಯ ಅಧ್ಯಕ್ಷರಾದ

# ದಿವಾಕರರಿಗೆ ಆರು ತಿಂಗಳ ಶಿಕ್ಷೆ.

ಕರ್ಮವೀರ ಪತ್ರದ ಸಂಪಾದಕರಾದ ರಂಗರಾಯರಿಗೆ ಶಿಕ್ಷೆಯು ವಿಧಿಸಲ್ಪಟ್ಟಿತು. ೧೬ ನೇ ತಾರೀಖಿಗೆ ಅವರನ್ನು ಹಿಡಿದರು. ೧೭ ನೇ ತಾರೀಖಿಗೆ ಅವರಿಗೆ ಆರು ತಿಂಗಳ ಸಾದಾ ಶಿಕ್ಷೆಯೂ ಮೂರು ನೂರು ರೂಪಾಯಿ ದಂಡವೂ ದಂಡ ಕೊಡದಿದ್ದರೆ ಮತ್ತೊಂದು ತಿಂಗಳ ಶಿಕ್ಷೆಯೂ ವಿಧಿಸಲ್ಪಟ್ಟವು. ಅವರನ್ನು "ಏ" ವರ್ಗದ ಸೆರೆಯಾಳುಗಳನ್ನಾಗಿ ಮಾಡಿರುವರು.

### ಬೆಳಗಾಂವಿ.

ಧೋಂಡೋ ಎಲ್ಲೋ ಕುಲಕರ್ಣಿ ಎಂಬವರಿಗೆ ಒಂದು ವರ್ಷದ ಸಕ್ರಮ ಶಿಕ್ಷೆಯು ವಿಧಿಸಲ್ಪಟ್ಟಿತು.

ಚಂದಗಡ ಹಣಮಂತನಾಯಕರಿಗೆ ಅಂದರೆ ಖಾನಾಪೂರ ತಾಲೂಕಿನಲ್ಲಿ ವಲ್ಲಭಭಾಯಿ ಎನಿಸಿಕೊಂಡವರಿಗೆ ಒಂದು ವರ್ಷದ ಸಾದಾ ಶಿಕ್ಷೆಯನ್ನು ಕೊಟ್ಟರು.

ಬೆಳಗಾಂವಿ ಸ್ವಯಂಸೇವಕರ ಪಥಕದ ಮುಖಂಡರಾದ ಟೋಣಪಿ ಪ. ಧರ್ಮಾಚಾರ್ಯರಿಗೆ ಒಂದು ತಿಂಗಳ ಶಿಕ್ಷೆಯಾಯಿತು. ಊರಲ್ಲಿ ಸಭೆಯಾಗಿ ಪರದೇಶೀ ಬಟ್ಟೆಗಳ ಹೋಳಿಯಾಯಿತು.

ಜಾಂಬೋಟಕರ ಮತ್ತು ಬಾಳಂಭಟ್ಟರ ಮೇಲಿನ ಖಟ್ಲೆಯು ನಡೆದಿದೆ.

ದಿವಾಕರ ರಂಗರಾಯರನ್ನು ಹಿಡಿದುಶಿಕ್ಷೆ ಕೊಟ್ಟ ಸುದ್ದಿಯು ಊರಲ್ಲೆಲ್ಲ ಹಬ್ಬಿ ಜನರನ್ನು ಬಹು ಜಾಗೃತರನ್ನೂ ಉತ್ಸಾಹಿಗಳನ್ನೂ ಮಾಡಿದೆ. ಬಿಂದೋ ಶ್ರೀನಿವಾಸ ನಾಯಿಕ ಕಹಾಪೂರ ಇವರನ್ನೂ ಹಿಡಿದಿರುವರು.

### ಗದಗ.

ಜಾಲೀಹಾಳ ವಕೀಲರನ್ನೂ ಸಾವ್ಕಾರ ಎಂಬವರನ್ನೂ ಹಿಡಿದಿರುವರು.

### ಚಂದಗಡ

ತಮ್ಮ ಊರ ಮುಖಂಡರಾದ ಹಣಮಂತ ನಾಯಕರನ್ನು ಹಿಡಿದಬಗ್ಗೆ ಸರಕಾರವನ್ನು ನಿಷೇಧಿಸುದಕ್ಕಾಗಿ ಊರ ಜನರು ದೊಡ್ಡ ಸಭೆ ಕೂಡಿಸಿದ್ದರು. ಸಭೆಯಲ್ಲಿ ಉಪ್ಪಿನ ಕಟ್ಟಳೆಯನ್ನು ಬಹಳ ಜನರು ಮುರಿದರು. ಐವತ್ತು ಮಂದಿ ಗಂಡಸರೂ ಮೂವತ್ತು ಮಂದಿ ಹೆಂಗಸರೂ ಉಪ್ಪನ್ನು ಕೊಂಡರು, ಸರಕಾರವು ಕಣ್ಣು ಮುಚ್ಚಿ ಕಣ್ಣಿಗೆ ಕುಳಿತದೆಯೋ!

### ಧುಂಡಶಿ

೧೪ ನೇ ತಾರೀಖಿನ ಮುಂಜಾನೆ ೮-೨೦ ಘಂಟೆಗೆ ಸತ್ಯಾಗ್ರಹ ಪಥಕವು ತಡಸವನ್ನು ಮುಟ್ಟಿತು. ಅಲ್ಲಿಯ ಜನರು ಅತಿ ವಿಜೃಂಭಣೆಯಿಂದ ಸ್ವಾಗತವನ್ನಿತ್ತು ಸತ್ಯಾಗ್ರಹಿಗಳ ಮೆರವಣಿಗೆಯೊಂದನ್ನು ಊರಲ್ಲೆಲ್ಲಾ ತೆಗೆದರು. ಇಲ್ಲಿ ಉತ್ಸಾಹವೆಷ್ಟಿದೆಂಬದನ್ನು ಹೇಳತೀರದ. ಪ್ರತಿ ಮನೆಯ ಎದುರಿನಲ್ಲಿ ಸಿಪಾಯಿಗೆ ಆರತಿ ಅಕ್ಷತೆಗಳನ್ನು ಹಚ್ಚಿ ನಮಸ್ಕಾರಮಾಡಿ ಜಾಗ್ರತಿಯಾಗಿ ಜಯಶೀಲರಾಗಿ ಹಿಂದಿರುಗಿರಿ. ಎಂದು ಹಾರೈಸುತ್ತಿದ್ದರು. ಸಂಜೆ ೪॥ ಘಂಟೆಗೆ ಒಂದು ದೊಡ್ಡ ಸಭೆ ಸೇರಿ ಸುಮಾರು ೩೦೦ ೪೦೦ ಜನರು ನೆರೆದಿದ್ದರು ಬುರ್ಲಿಯವರ ವ್ಯಾಖ್ಯಾನವಾಯಿತು. ವ್ಯಾಖ್ಯಾನವಾದ ನಂತರ ಅಲ್ಲಿಯ ಜನರು ೬೬ ರೂಪಾಯಿಗಳನ್ನೊಳಗೊಂಡ ಒಂದು ಹಮ್ಮಿಣಿಯನ್ನು ಅರ್ಪಿಸಿದರು. ಹಾಗೂ ಆ ಸಭೆಯಲ್ಲಿಯೇ ೧೫ ರೂಪಾಯಿ, ಸಿಕ್ಕವು. ಸುಮಾರು ೮-೧೦ ತೊಲಿಯ ತೂಕದ ಒಂದು ಬೆಳ್ಳಿಯ ಉಡದಾರ ಮತ್ತು ಒಂದು ಬಂಗಾರದ ಹೂ ಇವು ಸಭೆಯಲ್ಲಿ ದೊರೆತವು. ಮುಂಜಾನೆ ೫ ಘಂಟೆಗೆ ಧ್ವಜವಂದನೆಯ ನಂತರ ತಡಸದ ಪ್ರಮುಖರೆಲ್ಲರೂ ೧ ಮೈಲಿನ ವರೆಗೆ ನಮ್ಮ ಹಿಂದೆ ಬಂದು ನಮ್ಮನ್ನು ಹರಸಿ ಬೀಳ್ಕೊಟ್ಟರು. ಸುಮಾರು ೮-೩೦ ಘಂಟೆಗೆ ಧುಂಡಶಿಗೆ ಮುಟ್ಟಿದೆವು.

---

### ಮದ್ರಾಸ

"ಸ್ವರಾಜ್ಯ" ವೆಂಬ ದೈನಿಕ ಪತ್ರ ಸಂಪಾದಕರೂ ಮದ್ರಾಸ ಇಲಾಖೆಯ ಪ್ರಸಿದ್ಧ ಮುಖಂಡರೂ ಆದ ಟಿ ಪ್ರಕಾಶಂ ಇವರಿಗೆ ಆರು ತಿಂಗಳ ಶಿಕ್ಷೆಯಾಯಿತು. ಮತ್ತು ಐದು ನೂರು ರೂಪಾಯಿ ದಂಡವಾಯಿತು. ದಂಡ ಕೊಡದ್ದಕ್ಕಾಗಿ ಅವರ ಮೋಟಾರನ್ನು ಜಪ್ತಮಾಡಿ ದಂಡವಸೂಲಮಾಡಿದರು.

### ಕರಾಚಿ

ಮುಖ್ಯ ಮುಂದಾಳುಗಳದ ಆರು ಜನರನ್ನು ಹಿಡಿದಿರುವರು. ಕೋರ್ಟಿನಲ್ಲಿ ಅವರ ಮೇಲೆ ಮಾಡಿದ ಖಟ್ಲೆಯು ನಡೆವ ಕಾಲದಲ್ಲಿ ಹೊರಗೆ ಇಪ್ಪತ್ತು ಸಾವಿರ ಜನರು ನೆರೆದಿದ್ದರು. ಅವರು ದಂಗೆಮಾಡಿದರೆಂದು ಹೇಳಿ ಅವರ ಮೇಲೆ ಪೋಲೀಸರು ಗುಂಡು ಹಾರಿಸಿದರು. ಮೂವತ್ತು ಜನರಿಗೆ ಗಾಯಗಳಾಗಿವೆ.

### ಸುರತ.

ಕಲ್ಯಾಣಜಿ ಮೆಹತಾ ಮತ್ತು ಖೋಟುಭಾಯಿ ಎಂಬ ಮುಖಂಡರನ್ನು ಹಿಡಿದಿರುವರು. ಹದಿನೈದು ವರ್ಷದ ಒಬ್ಬ ಹುಡುಗನನ್ನು ಹಿಡಿದು ಉಪ್ಪು ಮಾರಿದ್ದಕ್ಕಾಗಿ ಒಂದು ತಿಂಗಳ ಶಿಕ್ಷೆ ಕೊಟ್ಟರು. ಭಲೆಗುಜರಾಥದ ಹುಡುಗರೇ !

## ಬ್ರಿಟಿಶ ಕಮುತ್ಸದ್ದಿಗಳ ಹುರುಳು ಹೊರಬಿದ್ದಿತು!

# ಮಹಾತ್ಮರನ್ನು ತೀವ್ರವಾಗಿ ಹಿಡಿಯಬೇಕೆನ್ನುವರು!

ಬ್ರಿಟಿಶ ಮಂತ್ರಿ ಮಂಡಲದವರು ಈಗ ಆಲೋಚನೆ ಮಾಡಿ ಮಹಾತ್ಮರನ್ನು ಸೆರೆಯಾಳುಗಳನ್ನಾಗಿ ಮಾಡಬೇಕೆಂದು ಹಿಂದುಸ್ಥಾನ ಸರಕಾರಕ್ಕೆ ತಿಳಿಸಿರುವರು. ಬ್ರಿಟಿಶರ ಮುತ್ಸದ್ದಿತನವು ಎಲ್ಲಿ ಅಡಗಿತು? ಅಹಿಂಸೆಯಿಂದ ಕೆಲಸ ಮಾಡುವವರನ್ನು ನಾವು ಏನೂ ಮಾಡಲಿಕ್ಕಿಲ್ಲೆಂದು ಹೇಳಿದ ಅವರ ವಚನಗಳು ಎಲ್ಲಿ ಹೋದವು? ಕಡೆಗೆ ಏನೂ ತೋಚದೆ ಹುಚ್ಚನ ಕೈಯಲ್ಲಿಯ ಕಲ್ಲಿನಂತೆ ಈ ಮಾರ್ಗವನ್ನು ಅವರು ಅವಲಂಬಿಸಬೇಕಾಯಿತು. ಮಹಾತ್ಮರಿಗೆ ಮನ್ನಣೆಮಾಡಿ ಅವರ ಹಾಗೂ ರಾಷ್ಟ್ರದ ಬೇಡಿಕೆಗಳನ್ನು ಪೂರೈಸುವದನ್ನು ತಲೆಯಲ್ಲಿ ಹಾಕಿಕೊಳ್ಳುವದಿಲ್ಲವೋ? ಎಷ್ಟು ದಿನಗಳ ವರೆಗೆ ರಾಷ್ಟ್ರವು ಕಣ್ಣು ಮುಚ್ಚಿಕೊಂಡು ಕೂಡುವದು? ಅದು ಕಣ್ಣುತೆರೆದಿದೆ. ನಿಮ್ಮನ್ನೂ ಕಣ್ಣು ತೆರೆಯುವಂತೆ ಮಾಡಿದೆ. ದೇವರು ದಯಪಾಲಿಸಿದ ಬುದ್ಧಿಶಕ್ತಿಯನ್ನು ಮಾನವನು ಕೆಟ್ಟರೀತಿಯಿಂದ ಉಪಯೋಗ ಮಾಡಹತ್ತಿದರೆ ಕಡೆಗೆ ಅವನ ದುರ್ಬುದ್ಧಿಯೇ ಅವನನ್ನು ತಿನ್ನುವದು. ಹಾಳುಮಾಡುವದು. ಹಿಂದುಸ್ಥಾನದ ಆಳರಸರು ದಬ್ಬಾಳಿಕೆಯಿಂದ ಜನತೆಯನ್ನು ಜಾಗ್ರತಗೊಳಿಸಿ ತಮ್ಮ ಮೇಲೆ ತಾವೇ ಕಲ್ಲುಹಾಕಿಕೊಳ್ಳುವದು ರಾಷ್ಟ್ರಕ್ಕೆ ಹಿತಕರವೇ ಆಗಿರುವದು.

### ಬಾಗಲಕೋಟೆಯಲ್ಲಿ ಸಭೆಗಳ ಸುರಿಮಳೆ

ದಿನಾಲು ಸ್ವತಂತ್ರ ಉಪ್ಪುಮಾಡುವದರಲ್ಲಿ ಬರಹತ್ತಿದೆ. ಶ್ರೀ ಮಂಗಳವೇಢೆಯವರು ಪ್ರಾರಂಭಿಸಿದ ಕಾರ್ಯಕ್ರಮವು ಇಲ್ಲಿ ದಿನಾಲು ಸಾಗಹತ್ತಿದೆ. ಪ್ರತಿದಿನ ಜಾಹೀರಸಭೆ, ಸ್ವಾತಂತ್ರ್ಯ ವೀರರ ಭಾಷಣೆ, ಸ್ವತಂತ್ರ ಉಪ್ಪಿನ ಮಾರಾಟ ಮುಂತಾದ ಕಾರ್ಯಕ್ರಮವು ಎಥಾಸಾಂಗ ನೆರವೇರಹತ್ತಿದೆ. ೧೫ನೇ ತಾ॥ ದಿನ ಕೂಡಿದ ಸಭೆಯಲ್ಲಿ ನಮ್ಮ ಹೆಣ್ಣುಮಕ್ಕಳನೇಕರು ಸ್ವಾತಂತ್ರ್ಯ ಉಪ್ಪು ಕೊಳ್ಳಲು ಪ್ರಾರಂಭ ಮಾಡಿರುವರು. ಅಲ್ಲದೆ ಅನೇಕ ಬಾಲಕರು ವೃದ್ಧರು ಅತ್ಯಂತ ಧೈರ್ಯದಿಂದ ಮುಂದೆ ಬಂದು ಉಪ್ಪುಕೊಳ್ಳಹತ್ತಿರುವರು. ಮತ್ತು ಸ್ವತಃ ಮಾರಹತ್ತಿವರು. ನಿನ್ನೆ ಕೂಡಿದ ಸಭೆಯಲ್ಲಿ ಹೆಣ್ಣುಮಗಳೊಬ್ಬಳು ತಾನು ಉಪ್ಪು ತರುವೆನೆಂದು ಧೈರ್ಯದಿಂದ ಮುಂದೆ ಬಂದಳು. ಇಲ್ಲಿಯ ಭಾಟಿಯಾ ಹೆಣ್ಣುಮಕ್ಕಳೊಬ್ಬರು ಮನೆಮನೆಗೆ ಉಪ್ಪುಮಾರಲು ಸಿದ್ಧರಾಗಿರುವರು. ಇವತ್ತಿನಿಂದ ಹೆಣ್ಣುಮಕ್ಕಳು ಮನೆಮನೆಗೆ ಉಪ್ಪು ಮಾರುವ ಕಾರ್ಯಕ್ರಮವನ್ನು ಪ್ರಾರಂಭಮಾಡಲಿರುವರು. ಹೆಣ್ಣುಮಕ್ಕಳ ಈ ಧೈರ್ಯವನ್ನು ನೋಡಿ ಊರವರೆಲ್ಲರೂ ಅದೇ ತರದ ಧೈರ್ಯವನ್ನು ತಾಳಿ ಅವರಿಂದ ಉಪ್ಪನ್ನು ಕೊಂಡು ಸ್ವಾತಂತ್ರ್ಯ ಸಮರವನ್ನು ಮುಂದೆ ಸಾಗಿಸಬೇಕಾಗಿ ಬೇಡಿಕೆ,

ಈ ಸಭೆಯಲ್ಲಿ ಶ್ರೀ. ದಿವಾಕರರ ಶಿಕ್ಷೆಗಾಗಿ ಅವರನ್ನಭಿನಂದಿಸಲಾಯಿತು. ಮತ್ತು ಅವರ ಕಾರ್ಯವನ್ನು ಮುಂದೆ ಸಾಗಿಸಬೇಕಾಗಿಯೂ ನಿರ್ಣಯಿಸಲಾಯಿತು.

### ಅಹಮ್ಮದಾಬಾದಿನಲ್ಲಿ ಐದು ಸಾವಿರ ಜನರು ಸೆರೆ ಕುಡಿಯುವದನ್ನು ಬಿಟ್ಟರು.

ಮಹಾತ್ಮರು ಈ ಉಪ್ಪಿನ ಕಟ್ಟಳೆಗಳನ್ನು ಮುರಿಯುವದಾದ ವೇಳೆ ಮುಂದೆ ಮಾಡುವ ಕಾರ್ಯವೆಂದರೆ ಶರಾಬಿ ಸೆರೆಗಳ ಮಾರಾಟವನ್ನೂ ಜನರಲ್ಲಿಯ ಕುಡುಕತನವನ್ನೂ ನಿಲ್ಲಿಸಿ ಸರಕಾರವನ್ನು ಹಣ್ಣಿಗೆ ತರಬೇಕೆಂದು ಮಾಡಿರುವರು. ಅದಕ್ಕನುಸರಿಸಿಯೇ ಅಹಮ್ಮದಾಬಾದದಲ್ಲಿಯ ಕೂಲಿಕಾರ ಸಂಘದ ಸ್ವಯಂಸೇವಕರು ಟೊಂಕಕಟ್ಟಿ ನಿಂತಿರುವರು. ಐದು ಸಾವಿರ ಜನರ ಕಡಿಂದ ಸೆರೆ ಕುಡಿಯುವದನ್ನು ಬಿಡಿಸಿರುವರು.

### ಕುರಿಗಳೇ ನಿಮ್ಮ ಕಾಯುವವನೆಲ್ಲಿ.

ಜಂಬುಸರದಲ್ಲಿ ಒಂದು ಸಾವಿರ ಸತ್ಯಾಗ್ರಹಿಗಳು ಉಪ್ಪಿನ ಕಟ್ಟಳೆಗಳನ್ನು ಮುರಿದರು. ಅಲ್ಲಿ ಫೌಜದಾರನು ಹುಡುಗರೆಲ್ಲರಿಗೂ "ನೀವು ಕುರಿಗಳಂತೆ ಇರುವಿರಿ, ನಿಮ್ಮನ್ನು ಕಾಯುವ ಕುರುಬನು ಎಲ್ಲಿ ಇರುವನು" ಎಂದು ಅಂದನು. ಅದಕ್ಕೆ ಆ ಹುಡುಗರು "ನಮ್ಮ ಕುರುಬನು ದಾಂಡಿಯಲ್ಲಿ ಇರುವನು (ಮಹಾತ್ಮಾಗಾಂಧಿ) ಅವರಿಗೆ ಹೋಗಿ ಭೆಟ್ಟಿಯಾಗು ಎಂದು ಹೇಳಿದರು. ತಮ್ಮ ಕೈಯಲ್ಲಿಯ ಉಪ್ಪನ್ನು ಅವರು ಬಿಟ್ಟುಕೊಡಲಿಲ್ಲ. ನಮ್ಮಲ್ಲಿಯ ಹುಡುಗರೂ ಇದರಂತೆ ಮಾಡಲಿಕ್ಕಿಲ್ಲವೇ? ಮತ್ತು ಅಲ್ಲಿಯೇ ಹೆಣ್ಣುಮಕ್ಕಳು ಪರದೇಶೀ ವಸ್ತ್ರಗಳನ್ನು ಧರಿಸಲಿಕ್ಕಿಲ್ಲೆಂದು ಪ್ರತಿಜ್ಞೆಮಾಡಿದರು.

### ತಿದ್ದುಪಡೆ—ಹುನಗುಂದ

೧೫ ನೇ ತಾರೀಖಿನ ಪತ್ರಿಕೆಯಲ್ಲಿ ಉಪ್ಪುಕೊಂಡವರು ಶ್ರೀ. ಎಸ್. ಬಿ. ಕುಲಕರ್ಣಿಯವರೆಂದು ತಪ್ಪು ಬಿದ್ದಿದೆ. ಅದನ್ನು ಪ್ರಿ. ಕೆ. ಕುಲಕರ್ಣಿ ಎಂದು ನಮ್ಮ ವಾಚಕರು ತಿದ್ದಿಕೊಳ್ಳಬೇಕಾಗಿ ಬೇಡಿಕೆ.

## ಪೋಲೀಸರು ಅತುಲಸೇನರ ಮುಂಗೈ ಎಲುಬು ಮುರಿದಿರುವರು.

ಕಲಕತ್ತೆಯಲ್ಲಿ ಓಣಿ ಓಣಿ ಮನೆಮನೆಗೆ ಸರಕಾರದ ಅಪ್ಪಣೆ ಪಡೆಯದೆ ತಯಾರಿಸಿದ ಉಪ್ಪನ್ನು ಸತ್ಯಾಗ್ರಹಿಗಳು ಮಾರುತ್ತಿರುವರು. ಒಂದು ದುಡ್ಡಿಗೆ ೪ ಬಟ್ಟಲ. ಉಪ್ಪುಕಾರರು ದಿನಾಲು ನೂರಾರು ರೂಪಾಯಿಗಳ ಉಪ್ಪು ಮಾರುತ್ತಿದ್ದಾರೆ. ಪೋಲೀಸರು ಈ ಸತ್ಯಾಗ್ರಹಿಗಳ ಕೈಯೊಳಗಿಂದ ಆ ಉಪ್ಪನ್ನು ಕಸಿದುಕೊಳ್ಳಲಿಕ್ಕೆ ಹವಣಿಸಹತ್ತಿರುವರು. ಸತ್ಯಾಗ್ರಹಿಗಳು ಕೊಡಲೊಲ್ಲರು. ಹೀಗಾಗಿ ನಿನ್ನೆ ಪೋಲೀಸರಿಗೂ ಸತ್ಯಾಗ್ರಹಿಗಳಿಗೂ ಜಗ್ಗಾಟವಾಗಿ ಪೋಲೀಸರು ಸತ್ಯಾಗ್ರಹಿಗಳನ್ನು ಮೈಮುರಿ ಗುದ್ದಿರುವರು. ಅವರ ಈ ದೂಡಾಟದಿಂದ ಒಬ್ಬ ಸತ್ಯಾಗ್ರಹಿಯು ಮೂರ್ಛೆಹೊಂದಿ ಬಿದ್ದನು. ಮತ್ತು ಈ ಸತ್ಯಾಗ್ರಹಿಗಳ ಮುಖ್ಯಸ್ಥನಾದ ಅತುಲಸೇನ ಇವರ ಮುಂಗೈ ಎಲಬು ಮುರಿದಿದ್ದಾರೆ.

## ಬಳ್ಳಾರಿ ಪತ್ರವು.

(ನಮ್ಮ ಸ್ವಂತ ಸುದ್ದಿಗಾರರಿಂದ.)

“ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀಯುತ ಪಂಡಿತ ಜವಹಾರಲಾಲ ಇವರು ಸೆರೆಹಿಡಿಯಲ್ಪಟ್ಟರೆಂಬ ಸುದ್ದಿಯನ್ನು ಕೇಳಿದಕೂಡಲೆ ಇಲ್ಲಿಯ ವರ್ತಕರೆಲ್ಲರು ತಮ್ಮ ತಮ್ಮ ಅಂಗಡಿಗಳನ್ನು ಮುಚ್ಚಿಯೂ, ಮತ್ತು ವಿದ್ಯಾರ್ಥಿಗಳು ತಮ್ಮ ವಾರ್ಷಿಕ ಪರೀಕ್ಷೆಗಳು ಇದ್ದರೂ, ಸ್ಕೂಲುಗಳಿಗೆ ಶಾಲೆ ಹೋಗದೆ ಹರತಾಳವನ್ನು ಆಚರಿಸಿದರು. ಅದೇದಿನ ಸಾಯಂಕಾಲ ದೇಶಬಾಂಧವ ಮೈದಾನ (ರಾಜ ಛತ್ರದ ಮುಂದಿರುವ ಸರ್ಕಸ್ಸು ಮೈದಾನದಲ್ಲಿ ಹೋದ ಫೇಬ್ರುವರಿ ತಿಂಗಳಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯದ ಧ್ವಜವನ್ನು ಏರಿಸಿದ್ದರಿಂದಲೂ ಮತ್ತು ಸತ್ಯಾಗ್ರಹ ಚಳವಳಿಯಲ್ಲಿ ಶ್ರೀಯುತ ಗಂಗಾಧರರಾಯ ದೇಶಪಾಂಡೆ ಮೊದಲು ಸರಕಾರದವರು ಮನ್ನಣೆ ಕೊಟ್ಟಿರುವದರಿಂದ, ಅದರ ಹೆಸರನ್ನು ಈ ಮೈದಾನಕ್ಕೆ ಇಟ್ಟಿರುತ್ತಾರೆ.) ಇಲ್ಲಿ ಉಪಾಧ್ಯಾಯರಾದ ರಾಯಚೂರ ಮಿಸ್ಸ ಯುನಿಯನಿನ ಮಂಜುನಾಥ ಲಾಲ್ ಇವರ ಅಧ್ಯಕ್ಷತೆಯ ಕೆಳಗೆ ಒಂದು ಸಭೆಯು ಸೇರಿತ್ತು. ಶ್ರೀ. ಗೋಪಾಲಚಾರಿಯವರು, ಸತ್ಯವಂತರಾಯರು, ದೀಕ್ಷಿತರು ಮತ್ತು ಸಂಗೋಟಿರಾಯರು ಸ್ಫೂರ್ತಿದಾಯಕವಾದ ಭಾಷಣಗಳನ್ನು ಮಾಡಿದರು. ಮುಂಬಯಿ ಕಾಂಗ್ರೆಸ್ಸ ಕಮೀಟಿಯಿಂದ ಇನ್ನೂ ಜಿಲ್ಲಾ ಕಾಂಗ್ರೆಸ ಕಮೀಟಿಗೆ ಬಂದ ೧೪-೪-೩೦ ನೇ ತಾರೀಖಿನ ಕಾಂಗ್ರೆಸ್ಸ ಅಧ್ಯಕ್ಷರು ಸೆರೆ ಹಿಡಿಯಲ್ಪಟ್ಟ ಸಮಾಚಾರವನ್ನು ತಿಳಿಸಿದ ತಂತಿಯನ್ನು ಸಭಿಕರೆಲ್ಲರಿಗೂ ಓದಿ ತೋರಿಸಿದರು. ಶ್ರೀಯುತ ಬಳ್ಳೋಳಿ ಭೀಮರಾಯರು, ಸಭಾಕಾರ್ಯವನ್ನು ನಿರ್ವಹಿಸಿದರು, ತರುವಾಯ ಪ್ರೇಕ್ಷಕರಿಂದ ಕೊಡಲ್ಪಟ್ಟ ಮೂರು ಚಪ್ಪಾಳೆಗಳ ಕೂಡ ಮಹಾತ್ಮಾ ಗಾಂಧಿಕಿ ಜೈ, ಕರ್ನಾಟಕಮಾತಾಕಿ ಜೈ ಎಂಬುವ ಜಯಘೋಷದೊಡನೆ ಸಭೆಯು ಮುಗಿಯಲ್ಪಟ್ಟಿತು.

ಬಳ್ಳಾರಿಯಿಂದ ಬಂದ ಪ್ಲ್ಯಾಂಟಿಂಗ ಕ್ಯಾಪ್ಟನ್‌ರು ಆದ ಶ್ರೀ ಎಚ್. ಮಲ್ಕೋಟರಾಯರು ಕರವನ್ನು ಕೊಡದ ತಂದ ಉಪ್ಪನ್ನು ತಾಲೂಕ ಆಫೀಸು ಮತ್ತು ಪೋಲೀಸು ಸ್ಟೇಶನ್ನಿನ ಎದುರಿಗೆ ಇರುವ ವೀರಭದ್ರದೇವರ ದೇವಸ್ಥಾನದ ಮೈದಾನದಲ್ಲಿ ನಡೆದ ಜಾಹೀರ ಸಭೆಯಲ್ಲಿ ಮಾರಿದರು. ಅದನ್ನು ಬಳ್ಳಾರಿ ಜಿಲ್ಲಾ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಇಜಾರಿ ಮಹಾಬಲಪ್ಪನವರು ಒಂದು ರೂಪಾಯಿಗೆ ಕೊಂಡು ಕೊಂಡರು.

---


# ಬೇಕಾಗಿದ್ದಾರೆ.

‘ಕನ್ನಡಿಗ’ನ ಕಾರ್ಯಾಲಯದಲ್ಲಿ ಲೆಕ್ಕಪತ್ರ ಬರೆಯಲಿಕ್ಕೂ ಪ್ರೂಫಗಳನ್ನು ತಿದ್ದಲಿಕ್ಕೂ, ಏಜನ್ಸಿ ವ್ಯವಸ್ಥೆ ಮಾಡಲಿಕ್ಕೂ ಒಬ್ಬ ಚಟುವಟಿಕೆಯು ಹಾಗೂ ಚುರುಕುಬುದ್ಧಿಯ ಕಾರಕೂನನು ಬೇಕಾಗಿದ್ದಾನೆ. ಅವಶ್ಯಕರು ಸಮಕ್ಷಮ ಭೆಟ್ಟಿಯಾಗಬೇಕು.

ವ್ಯವಸ್ಥಾಪಕರು ‘ಕನ್ನಡಿಗ’ನ ಕಾರ್ಯಾಲಯ

ಬಾಗಲಕೋಟೆ.


## ‘ಕನ್ನಡಿಗ’ನ ಏಜನ್ಸಿ

ಕೆಳಗೆ ಕಾಣಿಸಿದ ಸ್ಥಳಗಳಲ್ಲಿ ನಮ್ಮ ಏಜನ್ಸಿಗಳಿದ್ದು, ಏಜಂಟರ ಹೆಸರುಗಳು ಕಾಣಿಸಲ್ಪಟ್ಟಿವೆ. ಅವರ ಹತ್ತಿರ ನಮ್ಮ ನಿತ್ಯಪತ್ರಿಕೆಗಳು ದಿನಾಲು ಮಾರಲಿಕ್ಕೆ ದೊರೆಯುವವು. ಕಾಯಂ ಚಂದಾದಾರರಾಗಲು ಇಚ್ಛಿಸುವವರು ಅವರ ಕಡೆಗೆ ಹೋಗಿ ತಮ್ಮ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳತಕ್ಕದ್ದು. ಅದರಂತೆ ಪತ್ರಿಕೆಯ ಏಜನ್ಸಿಯನ್ನು ಸಹ ಇನ್ನೂ ಜನರಿಗೆ ಕೊಡುವ ವಿಚಾರ ನಡೆದಿದ್ದು, ಆ ಬಗ್ಗೆ ನಿಶ್ಚಿತವಾದುದನ್ನೆಲ್ಲ ಹಿಂದುಗಡೆ ಪ್ರಕಟಿಸುವೆವು.

| | | |
|---|---|---|
| ೧ | ಶ್ರೀ. ಉದಪೀನಾಥ ಹೊಡ್ಲೂರ | ವಿಜಾಪುರ |
| ೨ | ,, ರಾ ಸೀ. ಜಹಾಗೀರದಾರ | ಇಲಕಲ್ಲ |
| ೩ | ,, ಜಗನ್ನಾಥ ರಾಘವೇಂದ್ರರಾವ ದೇಸಾಯಿ | ಹುನಗುಂದ |
| ೪ | ,, ರಾಚಪ್ಪಾ ಮಂಟೂ ಕರಾಣೆ ಅಂಗಡಿ | ಅಮೀನಗಡ |
| ೫ | ,, ನಾರಾಯಣಪ್ಪಾ ಕಂಬಳಿ, ಮೋಟಾರ ತಿಕೀಟ ಏಜಂಟ | ಗಲಗಲಿ |
| ೬ | ,, ರಾಘವೇಂದ್ರಾಚಾರ್ಯ ಧಾಣಕಶಿರೂರ | ಕೆರೂರ |
| ೭ | ,, ಬಾಪೂರಾವ ವಿರುಪಾಕ್ಷರಾವ ಬಾಸೂತಕರ | ಗುಳೇದಗುಡ್ಡ |
| ೮ | ,, ಕಾರ್ಯದರ್ಶಿ ಕರ್ನಾಟಕ ತರುಣಸಂಘ | ರಾಯಚೂರ |
| ೯ | ,, ಕೃಷ್ಣಾಜಿ ಹನಮಂತ ಕೆರಕಲಮಟ್ಟಿ ಮು. ಮಾಸ್ತರ | ಶಿರೂರ ತಾ॥ ಬಾಗಲಕೋಟೆ |
| ೧೦ | ,, ಜಿ. ಎಲ್ ಮಂಗಳೂರ C/O ಶಾಂತೇಶ ವಾಚನಾಲಯ | ಧಾರವಾಡ |
| ೧೧ | ,, ಆರ್. ಕೆ ಅಸುಂಡಿ ವೃತ್ತಪತ್ರಿಕೆಗಳ ಏಜಂಟ | ಗದಗ |
| ೧೨ | ,, ಅಪ್ಪಾರಾವ ದೇಶಪಾಂಡೆ C/o ಡಾಕ್ಟರ ಕೆ ಬಿ. ಅಂತ್ರೋಳೀಕರ | ಸೊಲ್ಲಾಪುರ |
| ೧೩ | ,, ವೈದ್ಯ ವಾದಿರಾಜ ಜಹಗೀರದಾರ | ಬೇವೂರ ತಾ॥ ಬಾಗಲಕೋಟೆ |
| ೧೪ | ,, ತಿರುಕಾಚಾರ್ಯ ಮಧ್ವಾಚಾರ್ಯ ಚಿಮ್ಮಲಗಿ, ಹೆಡ್ ಮಾಸ್ತರ | ಧುಂಡಿಶಿ ಮಾ. ಹುಬ್ಬಳ್ಳಿ |

ಈ ಪತ್ರಿಕೆಯು ಬಸವಂತ ಅಣ್ಣಾರಾವ ಮುದ್ಧಾರ, ಇವರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

ಜಯಕರ್ನಾಟಕ

ನಿತ್ಯಸಂಚಿಕೆಯು.

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರುಃ— ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಶನಿವಾರ ಪು. ೩ ಚೈತ್ರ ಬಹುಳ ೬ ಶಕೆ ೧೮೫೨ ತಾ ೧೯—೪—೩೦ ಸಂಚಿಕೆ ೨೬

## ಸಂಪಾದಕರ ಭೂಮಿ.

—⁂—

ಚಿಕ್ಕ ಮನಸಿನ ಮೋಹಮಾಡಿ ಕಟ್ಟುವೆನಾನು।
ಚಿನ್ನ ಬೆಸನವ ಮಾಡಿದಂಥ ಮಕ್ಕಳದೊಮ್ಮೆ।
ಚಿಕ್ಕವಾದರು ಚಿನ್ನ ಮೋಹಬಸ್ತಿಯನೊಂದು ಚಿನ್ಮಯಾಕಾಶದಲ್ಲಿ।

### ಹಿಂದಿನವರ ಹೊಣೆಗಾರಿಕೆಯು ಹೆಚ್ಚಿತು

ಕರ್ನಾಟಕದ ಯುದ್ಧ ಮಂಡಲದವರು ತಮ್ಮ ನಿರ್ಣಯದ ಪ್ರಕಾರ ಯುದ್ಧವನ್ನು ಪ್ರಾರಂಭ ಮಾಡಿ ಒಬ್ಬರಹಿಂದೊಬ್ಬರು ಅರಸನ ಅತಿಥಿಗಳಾಗಿ ಹೋಗಿಬಿಟ್ಟರು. ಆ ಯುದ್ಧಮಂಡಲದಲ್ಲಿದ್ದ ಅತಿರಥ ಮಹಾರಥಿಗಳೆಲ್ಲ ಸರಕಾರದ ಸೆರೆಯಾಳಾಗಿ ತಾವು ಆರಂಭಿಸಿದ ಸಮರ ಕಾರ್ಯವನ್ನು ಅನಿವಾರ್ಯಹಕ್ಕಾಗಿ ಕೇವಲ ಯುವಕರ ಕೈಗೊಪ್ಪಿಸಿ ಕರ್ನಾಟಕದ ಕೀರ್ತಿಯನ್ನು ತರುಣರು ಎಂತು ಕಾಯ್ದುಕೊಳ್ಳುವರೋ ಎಂಬ ದುಗುಡುಗಿಯಿಂದ ಕಾರಾಗೃಹದಲ್ಲಿ ಕಾಲುಕಳೆಯುತ್ತಿರುವರು. ಯುದ್ಧ ಮಂಡಲದಲ್ಲಿದ್ದ ವೀರಾಗ್ರಣಿಗಳೊಳಗೆ ಸೇನಾಧಿಪತಿಗಳಾದ ದೇ. ಭ. ಗಂಗಾಧರರಾಯರು, ಅವರಿಗೆ ತಾನಾಜಿಯಂತಿದ್ದ ಹಣಮಂತರಾಯರು. ಅವರ ಮುಖ್ಯ ಸಚಿವರಾಗಿದ್ದ ದಿವಾಕರ ರಂಗರಾಯರು ಈ ಮೂವರು ನವಗ್ರಂದು ಎರವಾಗಿರುವರು. ಅಂದರೆ ನಮ್ಮ ಯುದ್ಧ ಮಂಡಲದವರಲ್ಲಿ ಉಳಿದವರೆಂದರೆ ಡಾ|| ಹರ್ಡೀಕರ ಮತ್ತು ಕನ್ನಾಡ ಸದಾಶಿವರಾವ, ಡಾ. ಹರ್ಡೀಕರರಿಗೂ ವಾರಂಟ ಹೊರಟಿದೆಂಬ ವಾರ್ತೆ. ಯುದ್ಧ ಮಂಡಲವು ಕರಗಿ ಹೋಗಿದೆ. ಯುದ್ಧಮಂಡಳವು ಮಾಡುತ್ತಿದ್ದ ಸಮರ ಸಮಾಲೋಚನೆಯು ಕಾರ್ಯವನ್ನು ನಿರ್ವಹಿಸುವದಕ್ಕಾಗಿ ಇವರ ಸ್ಥಳಗಳಿಗೆ ಹೊಸಬರನ್ನು ಆರಿಸಿ ಆ ಕಾರ್ಯಕ್ಕೆ ಅವರನ್ನು ನಿಯೋಜಿಸಬೇಕಲ್ಲವೇ? ಹೀಗೆ ಈ ಕಾರ್ಯಕ್ಕಾಗಿ ಯೋಗ್ಯ ವ್ಯಕ್ತಿಗಳನ್ನು ಆರಿಸಿ ಹೋದರೆ ಈ ಚಳವಳಿಯ ಪ್ರವಾಹದಲ್ಲಿ ಹಾರಿಕೊಂಡಂಥ ವ್ಯಕ್ತಿಗಳೂ ಕೂಡ ಬಗಲೆ ಕಾರಾಗೃಹಕ್ಕೆಳೆಲ್ಪಟ್ಟಿರುವರೆಂಬುದು ಥಟ್ಟನೆ ಹೊಳೆಯದೆ ಇರದು. ದಾತಾರ ಬಲವಂತರಾಯರು, ಗೋಖಲೆ ಕೇಶವರಾಯರು, ಪುಂಡಲೀಕ ಮೊದಲಾದ ನವನವ ಯೋಧರನ್ನು ಸರಕಾರವು ಈ ಮೊದಲೆ ಬಂಧಿಸಿ ಒಯ್ದಿರುವರು. ಈ ಪ್ರಕಾರ ಪರಿಸ್ಥಿತಿಯುಂಟಾಗಿರಲು ಕರ್ನಾಟಕವು ಆರಂಭಿಸಿದ ಸಮರವನ್ನು ಮುಂದೊರಿಸುವದೆಂತು? ಎಂಬದೊಂದು ದೊಡ್ಡ ಚಿಂತೆಯೇ ಆಗಿದೆ. ಇಂಥ ಸಂಕಟವೇಳೆಯಲ್ಲಿ ಕರ್ನಾಟಕ ಕೀರ್ತಿ ಅಪಕೀರ್ತಿಯ ಸಮಯದಲ್ಲಿ, ಕಾರಣಾಂತರದಿಂದಲೋ, ಮನೋದೌರ್ಬಲ್ಯದ ಮೂಲಕವೋ ಈಗ ಹಿಂದುಳಿದ ೧೯೨೧ ನೇ ಇಸ್ವಿಯ ಅಸಹಕಾರ ಚಳವಳಿಯ ವೀರರೆಲ್ಲ ಈ ಹೊಣೆಗಾರಿಕೆಯನ್ನು ಹೊರಲು ಮುಂದೆ ಬರಲೇಬೇಕು. ಧಾರವಾಡದಲ್ಲಿಯ ಶ್ರೀ. ಕಬ್ಬೂರ, ಗುತ್ತಲ, ಮುದವೀಡಕರ, ಜೋಶಿ ಮೊದಲಾದವರು ಬೆಳಗಾವಿಯ ಶ್ರೀ ಬೆಳವಿ, ಮುಜಲಿ, ಕವಠೂರ ಪ್ರಭೃತಿಗಳೂ, ವಿಜಾಪೂರದ ಶ್ರೀನಿವಾಸರಾವ ಕೌಜಲಗಿ, ಮುದ್ದಾರಾವ ಕೆಂಭಾವಿ, ಮಂಜಪ್ಪ ಹರ್ಡೇಕರ, ಬಳ್ಳಾರಿಯ, ಶ್ರೀ. ಬೆಲ್ಲೊಣ ಭೀಮರಾವ, ಕೆ. ಗುರುರಾಜರಾವ. ಬಾಗಲಕೋಟೆಯ ಕಿರಸೂರ ಧಾರವಾಡಕರ, ರಾಮ ದುರ್ಗಾಯಿಕರೇ ಮುಂತಾದ ಇನ್ನೂ ಅನೇಕರು ಈಗ ತಮ್ಮ ಗೃಹಕೃತ್ಯದ ಅಡಚಣೆಗಳನ್ನು ಬದಿಗೊತ್ತಿ ರಾಷ್ಟ್ರದ ಕೀರ್ತಿಯನ್ನು ಉಳಿಸಿಕೊಳ್ಳಲು ಈ ಸಂಗ್ರಾಮ ಧಾವಿಸಿಬಂದು ಕರ ಅರನ್ನು ಹುರಿಗೊಳಿಸಿ ಸರಕಾರದ ದಬ್ಬಾಳಿಕೆಯ ಶಕೆಯಿಂದ ಕರಗಿ ಹೋದ ನಮ್ಮ ಯುದ್ಧ ಮಂಡಲದವರ್‍ನ ದಂಡಿಯಲ್ಲಿಯೇ ಕೈಬಿಟ್ಟು ಹೋಗಿರುವ ಈ ಸತ್ಯಾಗ್ರಹ ಕದನವನ್ನು ಯಶಸ್ವಿಯಾಗಿ ಪೂರ್ತಿಗೊಳಿಸುವ ಶ್ರೇಯೋಭಾಗಿಗಳಾಗಿ ಅಖಂಡ ಕರ್ನಾಟಕದ ಕೃತಜ್ಞತೆಗೆ ಪಾತ್ರರಾಗಬೇಕೆಂದು ನಮ್ಮ ಪ್ರಾರ್ಥನೆ. ತಮ್ಮ ಪ್ರಾಸಂಗಿಕ ಅಡಚಣೆಗಳನ್ನು ಮೀರಿ ನಿಲ್ಲುವಂಥ ಸಾಮರ್ಥ್ಯವೂ ಸಾಹಸವೂ ಇವರೆಲ್ಲರಲ್ಲಿಯೂ ಖಂಡಿತವಾಗಿ ಇವೆ ಎಂಬುದನ್ನು ನಾವು ಪೂರ್ಣಬಲ್ಲೆವು. ಅಂತೇ ಇವರಿಗೆ ಮೊದಲು ಬಿನ್ನಹಿಸಿಕೊಳ್ಳಬೇಕೆಂದು ಬಯಸಿದೆವು.

---

### ಗದಗ.

(ತಂತಿಯಿಂದ ಬಂದ ವಾರ್ತೆ)

ಗದಗಿನಲ್ಲಿ ಯಾವ ಮುಖಂಡರನ್ನು ಹಿಡಿದಿಲ್ಲವೆಂದು ತಾರಿನಿಂದ ತಿಳಿಯುತ್ತಿದೆ.

## ಬ್ರಿಟಿಶ ಮುತ್ಸದ್ದಿಗಳು ಅಂಜಿದರು!

## ಮಹಾತ್ಮರನ್ನು

# ಸದ್ಯಕ್ಕೆ ಹಿಡಿಯಕೂಡದು!

ಎಂದೂ ಚಳವಳಿಯನ್ನು ಹ್ಯಾಗೆ ಮುರಿಯಬೇಕೆಂದು ವ್ಹಾಯಿಸರಾಯರೇ ವಿಚಾರಿಸಬೇಕೆಂದೂ ಬ್ರಿಟಿಶ ಮುತ್ಸದ್ದಿಗಳು ಹೇಳಿದರು. ಇವರ ಆಟವೇ ತಿಳಿಯುವಂತಿಲ್ಲ.

### ಪೋಲೀಸರು ಸತ್ಯಾಗ್ರಹಿಗಳ ಅಂಡವನ್ನು ಹಿಚಕಿದ್ದು

ಧೋಲೇರಾದಲ್ಲಿಯು ಪೋಲೀಸರು ನಡಿಸಿದ ಅತ್ಯಾಚಾರಕ್ಕೆ ಮಿತಿಯೇ ಇಲ್ಲದಾಗಿದೆ, ಅಹಮ್ಮದಾಬಾದದಿಂದ ಶ್ರೀ ಸಮರ್ಥಲಾಲ ವೈದ್ಯರ ನೇತೃತ್ವದ ಕೆಳಗೆ ಧೋಲೇರಾಕ್ಕೆ ನಡೆದುಬಂದ ೧೫ ಸತ್ಯಾಗ್ರಹಿಗಳು ವಾಡಿಕೆಯಂತೆ ಉಪ್ಪನ್ನು ಆರಿಸಿಕೊಂಡು ಸಮುದ್ರ ದಡದಿಂದ ಮರಳಿ ಬರುವಾಗ್ಗೆ ೨೦-೨೫ ಪೋಲೀಸರು ಅವರನ್ನು ಮುತ್ತಿ ಅವರೊಳಗಿನ ಒಬ್ಬೊಬ್ಬನನ್ನು ಒಬ್ಬೊಬ್ಬ ಪೋಲೀಸನು ಆರಿಸಿಕೊಂಡು ಸತ್ಯಾಗ್ರಹಿಯ ಕೈಯೊಳಗಿನ ಆ ಉಪ್ಪನ್ನು ಕಸಿದುಕೊಳ್ಳುವದಕ್ಕಾಗಿ ಅವನ ಮೇಲೆ ವಿಚಿತ್ರ ಹಿಂಸೆ ನಡಿಸಿದನು. ೧೨-೧೫ ಜನ ಪೋಲೀಸರು ತಮ್ಮ ತಮ್ಮ ಸತ್ಯಾಗ್ರಹಿ ಹುದ್ದರಿಗಳ ಅಂಡಕೋಶಗಳಿಗೆ ಕೈಹಾಕಿ ಅಂಡಬೀಜಗಳನ್ನು ಹಿಚುಕಹತ್ತಲು ಆ ಸತ್ಯಾಗ್ರಹಿಗಳೆಲ್ಲರೂ ಸ್ಮೃತಿತಪ್ಪಿ ಬಿದ್ದುಬಿಟ್ಟರು. ನಿಶ್ಶಸ್ತ್ರರೂ ಪ್ರಶಾಂತರೂ ಅಹಿಂಸಾವೃತ್ತಿಯವರೂ ಆದ ಸತ್ಯಾಗ್ರಹಿಗಳ ಮೇಲೆ ಪೋಲೀಸರು ನಡಿಸಿದ ಈ ಘೋರವಾದ ಅತ್ಯಾಚಾರವನ್ನು ಈರ್ವರು ಯುರೋಪಿಯನ್ ಪೋಲೀಸ ಅಧಿಕಾರಿಗಳೂ, ಈರ್ವರು ಏತದ್ದೇಶೀಯ ಅಧಿಕಾರಿಗಳೂ ಮನದಣಿ ನೋಡುತ್ತ ನಿಂತುಕೊಂಡಿದ್ದರು. ಅಂಬಾಲಾಲ ಶುಕ್ಲಾ ಎಂಬ ಸ್ವಯಂಸೇವಕನ ತರಡು ಹಿಚುಕಿದ್ದಲ್ಲದೆ ಅವನ ಹೊಟ್ಟೆ ಎದೆಯ ಮೇಲೆ ಗುದ್ದಹತ್ತಲು ೧೫ ನಿಮಿಷಗಳ ವರೆಗೆ ಇದನ್ನೆಲ್ಲ ಶಾಂತರೀತಿಯಿಂದ ಸಹನಮಾಡಿಕೊಂಡು ಕಡೆಗೆ ಮೂರ್ಛೆಹೊಂದಿ ನೆಲಕ್ಕೆ ಬಿದ್ದುಬಿಟ್ಟನು. ಆ ಅಂಬಾಲಾಲನು ನೆಲಕ್ಕುರುಳಿದ್ದನ್ನು ಕಂಡು ತಮ್ಮ ಪೋಲೀಸರ ಶೌರ್ಯವನ್ನು ನೋಡುತ್ತ ನಿಂತುಕೊಂಡಿದ್ದ ಅಧಿಕಾರಿಗಳು ತ್ವರೆಮಾಡಿ ಡಾಕ್ಟರನನ್ನು ಕರೆಕಳಿಸಿದರು. ಉಳಿದ ಸತ್ಯಾಗ್ರಹಿಗಳು ಸರಕಾರಿ ಡಾಕ್ಟರನ ಸಹಾಯವು ನಮಗೆ ಬೇಕಿಲ್ಲ, ಅಂಬಾಲಾಲನು ಸತ್ತರೂ ಚಿಂತೆಯಿಲ್ಲೆಂದು ಹಟಹಿಡಿದರು. ಅಷ್ಟರಲ್ಲಿಯೇ ಈ ಸುದ್ದಿಯನ್ನೆಲ್ಲ ಕೇಳಿದ ಡಾ॥ ಮಣಿಶಂಕರ ತ್ರಿವೇದಿ ಇವರು ಅಲ್ಲಿಗೆ ಬಂದು ಅಂಬಾಲಾಲನನ್ನು ಹೊರಸಿನ ಮೇಲೆ ಹೊರಿಸಿಕೊಂಡು ತಮ್ಮ ದವಾಖಾನೆಗೆ ಒಯ್ದು ಕೆಲವು ಇಂಜೆಕ್ಶನ್ ಮೊದಲಾದ ತೀಕ್ಷ್ಣತರ ಉಪಾಯಗಳನ್ನು ಮಾಡಿದರು. ಮುಂದೆ ಎರಡು ಎರಡೂವರೆ ಗಂಟೆಯ ಮೇಲೆ ಅಂಬಾಲಾಲನಿಗೆ ಸ್ಮೃತಿಬಂದಿತು. ಆಮೇಲೆ ತ್ರಿವೇದಿಯವರು ಅವನ ಸರ್ವಾಂಗವನ್ನು ಪರೀಕ್ಷಿಸಿ ನೋಡಲು ಅವನ ಕತ್ತಿಗೆಗೆ ಚೂರಿಯ ಹಕ್ಕು, ಹನ್ನೆರಡು ಗಾಯಗಳಾಗಿದ್ದವು. ಈ ಗಾಯಗಳು ಈಗ ಮಾಯುತ್ತಿದ್ದರೂ ಅಂಬಾಲಾಲನಿಗೆ ಜ್ವರಬರಹತ್ತಿವೆ. ಪೋಲೀಸರ ಈ ವಿಚಿತ್ರ ಘಟನೆಯಿಂದ ಸ್ವಯಂಸೇವಕರೂ ಊರೊಳಗಿನ ಜನರೂ ಹೌಹಾರಿ ಕೂಡುವದರ ಬದಲು ಹೆಚ್ಚಿನ ಹುರುಪಿನಿಂದ ಪೋಲೀಸರ ಹಿಂಸೆಯನ್ನು ಲೆಕ್ಕಿಸದೆ ಈ ಕಾಯಿದೆಭಂಗದ ಕೆಲಸದಲ್ಲಿ ಹೆಚ್ಚು ಜನರು ಆಸಕ್ತರಾಗಹತ್ತಿರುವದೊಂದು ಅನುಕರಣೀಯವಾಗಿದೆ.

### ಮುಂಬಯಿ ಕಾಯಿದೆಭಂಗವು ಪೂರ್ತಿ ಆಯಿತೆನ್ನಬೇಕು!

ಮುಂಬಯಿಯಲ್ಲಿ ಸರ್ವಸಾಧಾರಣ ಈಗ ಎಲ್ಲ ಜನರು ತಮ್ಮ ಉಪ್ಪನ್ನು ತಾವೇ ತಯಾರಿಸಿಕೊಂಡು ತಿನ್ನಹತ್ತಿರುವರು. ಹೀಗಾಗಿ ಅಲ್ಲಿಯ ಉಪ್ಪಿನ ಧಾರಣೆಯು ಅರ್ಧದಕಿಂತಲೂ ಹೆಚ್ಚಿಗೆ ಇಳಿದಿದೆ. ಸಮುದ್ರಕ್ಕೆ ಹೋಗಿ ತಂಬಿಗೆ ೩ ತಂಬಿಗೆ ನೀರು ತುಂಬಿಕೊಂಡು ಬಂದು ಮನೆಯಲ್ಲಿಯೇ ಉಪ್ಪು ಮಾಡುವದೊಂದು ಅಲ್ಲಿಯ ಹುಡುಗರಿಗೆ ಒಂದು ಉದ್ಯೋಗವೇ ಆಗಿದೆ. ಹೀಗೆ ಮಾಡುವದಕ್ಕೆ ಕೇಳುವವರು ಹೇಳುವವರು ಯಾರೂ ದಿಕ್ಕಿಲ್ಲ. ಹೀಗಾಗಿ ಪ್ರತಿಕುಟುಂಬವು ತಮ್ಮ ಹುಡುಗರೊಂದಿಗೆ ಉತ್ಸಾಹದಿಂದ ಮಾಡುತ್ತಿರುವ ಇಂಥ ಉಪ್ಪಿನಿಂದಲೇ ತಮ್ಮ ಆದಿನದ ವೆಚ್ಚವನ್ನು ಬಗೆಹರಿಸಿ ಬಿಡಹತ್ತಿರುವರು. ಆದರೂ ಕಾಂಗ್ರೆಸದ ಪ್ರಸಾರ ಕಾರ್ಯವು ನಡಿದೇ ಇದೆ. ಇನ್ನೂರು ಸ್ವಯಂಸೇವಕರು ಉಪ್ಪಿನ ಚೀಟಿಗಳನ್ನು ಮಾರುತ್ತಲೂ ಪುಕ್ಕಟೆಯಾಗಿ ಹಂಚುತ್ತಲೂ ಸಾಗಿರಲು ಇನ್ನು ೩೦೦ ಸ್ವಯಂಸೇವಕರು ಕೂಟಕೂಟಕ್ಕೆ ವ್ಯಾಖ್ಯಾನ ಕೊಡುತ್ತಲೂ ಉಪ್ಪಿನ ಕಾಯಿದೆಯನ್ನು ಲೆಕ್ಕಿಸಬೇಡಿರೆಂದು ಬೋಧಿಸುತ್ತಲೂ ಬೀದಿ ಬೀದಿ ಅಲೆಯುತ್ತಿರುವರು. ನಿನ್ನಿನ ದಿವಸ ಜಸ್ಟಿಸ ಆಫ್ ಪೀಸ, ಆನರರಿ ಮ್ಯಾಜಿಸ್ಟ್ರೇಟ್ಸ್ ಮ್ಯುನಸಿಪಲ್ ಕೌನ್ಸಿಲರ್ಸ ಮೊದಲಾದ ಸರಕಾರದ ನೆಚ್ಚಿಗೆಯ ಜಬರ ಹಿರಿಹುದ್ದರಿಗಳೆಲ್ಲ ಬಹಿರಂಗವಾಗಿ ಈ ಉಪ್ಪು ಕೊಂಡುಕೊಂಡು ಉಪ್ಪಿನ ಕಾಯಿದೆಯನ್ನು ನಿರಾಕರಿಸಿದರು. ಸರ ಚಿಮನಲಾಲ ಸೆಟಲವಾಡನ ಮಗನು ಇಂಥ ಉಪ್ಪನ್ನು ಕೊಂಡು ಮತ್ತು ಮಾರಿ ಅಪ್ಪನ ಅತಿ ಮೆಚ್ಚಿಗೆಯ ಸರಕಾರದ ಶಾಸನವನ್ನು ಉಲ್ಲಂಘಿಸಿ ತಂದೆಯು ಬುದ್ಧಿಗಲಿಯುವಂತೆ ಮಾಡಿರುವನು. ಮುಂಬಯಿಯಲ್ಲಿ ಉಪ್ಪನ್ನು ಕೊಳ್ಳದೆ ಇದ್ದ ಪ್ರತಿಷ್ಠಿತರೆನ್ನುವವರು ಯಾರೂ ಉಳಿಯಲಿಲ್ಲ. ಸರಕಾರದ ಪರಮ ವಿಶ್ವಾಸಕ್ಕೆ ಪಾತ್ರರಾದವರು ಕೂಡಾ ಈ ಪ್ರಕಾರ ಕರ ಕೊಡದೆ ತಂದ ಉಪ್ಪನ್ನು ಸೇವಿಸಹತ್ತಿದ ಮೇಲೆ ಆ ಕಾಯಿದೆಯನ್ನು ಸರಕಾರವು ಹೇಗೆ ರಕ್ಷಿಸಿಕೊಳ್ಳುವದೋ ನೋಡುವಾ!

ತಂತಿಯಿಂದ ಬಂದ ವಾರ್ತೆ.

## ಸಮರಭೂಮಿಯಾದ ಅಂಕೋಲೆಯಲ್ಲಿಯ ಸತ್ಯಾಗ್ರಹ ಕಾಳಗಕ್ಕೆ ಇದೀಗ ಒಳ್ಳೇ ಕಲಿತನದ ಕಳೆ ಏರಹತ್ತಿತು.

## ರಣಶೂರರೂ ತ್ಯಾಗವೀರರೂ ಆದ

# ಕೌಜಲಗಿ ಹಣಮಂತರಾಯರನ್ನು

## ಶೆರೆ ಹಿಡಿದರು.

## ಇವರೊಡನೆ ೧೮ ಸ್ವಯಂಸೇವಕ ದಂಡಾಳುಗಳೂ ಬಂಧಿಸಲ್ಪಟ್ಟಿರುವರು.

ದೇ. ಭ. ಹಣಮಂತರಾವ ಕೌಜಲಗಿಯವರನ್ನು, ಮತ್ತು ಹದಿನೆಂಟು ಸ್ವಯಂಸೇವಕರನ್ನು ಸರಕಾರದವರು ಹಿಡಿದಿರುವರು. ಹಣಮಂತರಾಯರು ದೇಶಸೇವೆಗಾಗಿ ಆತ್ಮಸಮರ್ಪಣೆ ಮಾಡಿದ ಸಂಗತಿಯು ಎಲ್ಲರಿಗೂ ಗೊತ್ತಿದ್ದ ವಿಷಯವು. ಅಂಕೋಲೆಯಲ್ಲಿ ಕರ್ನಾಟಕದ ಸತ್ಯಾಗ್ರಹ ನಡೆಯುವದಕ್ಕಾಗಿ ಆರಿಸಿದ ಸ್ಥಾನದಲ್ಲಿ ಇವರನ್ನು ಹಿಡಿದಿರುವರು. ಸಂಗ್ರಾಮದ ಸೇನಾಪತಿಗಳು ಸೆರೆಹಿಡಿಯಲ್ಪಟ್ಟರು, ಹದಿನೆಂಟು ಜನ ಸ್ವಯಂಸೇವಕರೂ ಆಹುತಿಯಾಗಿರುವರು. ಕರ್ನಾಟಕದವರೇ ಎಚ್ಚರಾಗಿರಿ. ಸ್ವಾತಂತ್ರ್ಯಕ್ಕಾಗಿ ತಮ್ಮನ್ನೇ ಆಹುತಿ ಹಾಕಲು ಸಿದ್ಧರಾದ ಮುಖಂಡರನ್ನು ಅನುಸರಿಸಿರಿ

---

### ಮಹಾತ್ಮರ ಚರಿತ್ರೆಯಲ್ಲಿ ಸ್ಪೇನದೇಶದ ಕಳಕಳಿಯು

ಮಹಾತ್ಮನ ಆತ್ಮತೇಜವು ಜಗತ್ತಿನಲ್ಲಿಯ ಎಲ್ಲ ರಾಷ್ಟ್ರಗಳನ್ನು ಕಣ್ಣು ಕಿಸಿಯುವಂತೆ ಮಾಡಿದೆ. ಅಮೇರಿಕಾ ದೇಶದವರು ಅವ್ಯಾಹತವಾಗಿ ಮಹಾತ್ಮರ ತತ್ವಗಳ ಮನನವನ್ನು ಪ್ರಸಾರವನ್ನೂ ಮಾಡುತ್ತಿರುವರಲ್ಲದೆ, ತಮ್ಮ ಶಕ್ತಿ ಮೀರಿ ಸಹಾಯವನ್ನು ಸಹ ಮಾಡುವೆವೆಂದು ಅಭಿವಚನವಿತ್ತಿರುವರು. ಹೊಸದಾಗಿ ಸ್ವತಂತ್ರವಾದ ಐರ್ಲಂಡ ದೇಶವು ಪೂರ್ಣವಾಗಿ ಸಹಾನುಭೂತಿಯನ್ನು ತೋರಿಸಿರುವದು. ಸಾಮ್ರಾಜ್ಯದ ಕೈಯೊಳಗಿಂದ ಪಾರಾಗಬೇಕಾದರೆ ಎಷ್ಟು ಕಷ್ಟಪಡಬೇಕಾಗುವದೆಂಬದನ್ನು ಅವರು ಸ್ವತಃ ಅನುಭವಿಸಿರುವರು. ಅಷ್ಟೇ ಕಷ್ಟ, ಈಗ ಹಿಂದುಸ್ಥಾನವು ಅನುಭವಿಸುತ್ತಿರುವದೆಂದು ಅವರಿಗೆ ಚನ್ನಾಗಿ ಗೊತ್ತಾಗಿದೆ. ಜಪಾನದೇಶದವರಂತೂ ನಮ್ಮ ಸಮೀಪದಲ್ಲಿಯ ಪೌರ್ವಾತ್ಯ ಬಾಂಧವರು. ಅವರೂ ಮಹಾತ್ಮರ ಧೈರ್ಯ ಶಕ್ತಿ, ಸಾಹಸಗಳನ್ನು ನೋಡಿ ತಮ್ಮ ಪೂರ್ಣವಾದ ಸಹಾನುಭೂತಿಯನ್ನು ತೋರಿಸುವರು. ಸಹಾಯವನ್ನು ಸಮಯದಲ್ಲಿ ಮಾಡುವರು. ಇದಲ್ಲದೆ ಸ್ಪೇನದೇಶದ ಜನರು ಸಹ ಮಹಾತ್ಮರ ತತ್ವಗಳೂ ಅವರು ಹೂಡಿದ ಈಗಿನ ಸತ್ಯಾಗ್ರಹ ಸಂಗ್ರಾಮವೂ ನಿಸ್ಸಂದೇಹವಾಗಿ ಯಶಸ್ವಿಯಾಗುವವೆಂದು ಮನವರಿಕೆ ಮಾಡಿಕೊಂಡಿರುವರು. ಮಹಾತ್ಮರ ವಿಷಯಕ್ಕೆ ತಮ್ಮ ದೇಶದಲ್ಲಿ ಸಹಾನುಭೂತಿಯನ್ನೂ ಸಹಾಯಕ ಬುದ್ಧಿಯನ್ನೂ ಹುಟ್ಟಿಸಹತ್ತಿರುವರು. ಯುರೋಪಖಂಡದ ಜನರು ಬರೀ ವಿಷಯಲಾಲಸರು. ಅಂಥವರನ್ನೂ ಸಹ ಮಹಾತ್ಮನ ಆತ್ಮಶಕ್ತಿಯು ಬೆರಗಾಗುವಂತೆ ಮಾಡಿದೆ, ಧನ್ಯ! ಮಹಾತ್ಮನೇ ಧನ್ಯ!

### ದಂಡಿ.

ಮಹಾತ್ಮರು ದಂಡಿಯಿಂದ ಮುಂದೆ ತೆರಳುವರು. ಮತ್ತು ನವಸಾರಿಯಿಂದ ಒಂದು ಮೈಲು ದೂರದಲ್ಲಿರುವ ವಿಜಾಲಪೂರಕ್ಕೆ ಅಲ್ಲಿ ಕೂಡಲಿಕ್ಕಿರುವ ಅಖಿಲ ಗುಜರಾತ ಸ್ತ್ರೀಪರಿಷತ್ತಿಗೆ ಹೋಗುವರು. ದಂಡಿಯಲ್ಲಿ ಸ್ವಯಂಸೇವಕರು ಸಿಂದೀಗಿಡಗಳನ್ನು ಕಡಿದು ನಾಶಮಾಡಹತ್ತಿರುವರು. ಈಗಾಗಲೇ ಎರಡು ನೂರು ಗಿಡಗಳು ಕಡಿದಿರುವರು, ಮತ್ತು ಐನೂರು ಗಿಡಗಳನ್ನೂ ಕಡಿಯುವರು. ಸರಕಾರದ ಅಬಕಾರೀ ಕಾಯದೆಗಳು ಮಣ್ಣು ಮುಕ್ಕಿದವೊ? ಮಹಾತ್ಮರ ಪಥಕದಲ್ಲಿಯ ಕೆಲವು ಸ್ವಯಂಸೇವಕರು ಸಮೀಪದ ಹಳ್ಳಿಗಳಿಗೆ ಹೋಗಿರುವರು. ಕೆಲವರು ಮದ್ರಾಸಕ್ಕೂ ಹೋಗಿರುವರು.

### ಸುರತ.

ಸುರತದಲ್ಲಿ ಸ್ತ್ರೀಸ್ವಯಂಸೇವಕರು ಕುಡುಕರಿಗೆ “ಶೆರೆಹೆಂಡಗಳನ್ನು ಕುಡಿಯುವದಕ್ಕಿಂತ ನಮ್ಮ ರಕ್ತವನ್ನು ಕುಡಿಯಿರಿ” ಎಂದು ಹೇಳುತ್ತ ಕುಡುಕರನ್ನು ವ್ಯಸನದಿಂದ ಮುಕ್ತರನ್ನಾಗಿ ಮಾಡಲು ಯತ್ನಮಾಡುತ್ತಿರುವರು. ಬಹುತರವಾಗಿ ಎಲ್ಲ ಮುಖಂಡರನ್ನು ಹಿಡಿದಿರುವರು,

### ಕರಾಚಿ.

ಕರಾಚಿಯಲ್ಲಿ ಸ್ವಾಮಿ ಗೋವಿಂದಾನಂದ ಮತ್ತು ಸ್ವಾಮಿ ಕೃಷ್ಣಾನಂದ ಎಂಬವರನ್ನು ಹಿಡಿದಿರುವರು. ಸನ್ಯಾಸಿಯನ್ನು ಅಪ್ಪಿಕೊಂಡರೆ ಮೈಯೆಲ್ಲ ಬೂದಿ ಎಂಬ ಮಾತು ಸರಕಾರಕ್ಕೆ ಗೊತ್ತಿಲ್ಲವೋ?

ಇಲ್ಲಿಯ ಮುಖಂಡರನ್ನು ಹಿಡಿದದ್ದಕ್ಕಾಗಿ ಭಂಗೀಜನರೂ ಕಸ ಗುಡಿಸುವವರೂ, ಕೂಲಿಕಾರರೂ ಕೆಲಸ ನಿಲ್ಲಿಸಿ ಬಿಟ್ಟಿರುವರಂತೆ. ನಮ್ಮಲ್ಲಿಯ ಜನರು ಇವರಿಂದೇನಾದರೂ ಬುದ್ಧಿಗಲಿಯುವರೋ!

## ದಿಲ್ಲಿ

ಮಹಾತ್ಮರ ಹಿರೇಮಗನಾದ ದೇವದಾಸ ಗಾಂಧಿಯವರಿಗೆ ಮತ್ತು ದಿಲ್ಲಿ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶಂಕರಲಾಲ ಇವರಿಗೆ ಮೂರು ತಿಂಗಳ ಸಾದಾ ಶಿಕ್ಷೆಯಾಯಿತು.

## ಕರಾಚಿ

ಕರಾಚಿಯಲ್ಲಿ ಪೋಲೀಸರು ಗುಂಡು ಹಾರಿಸಿದಾಗ ಗಾಯಪಟ್ಟ ೪೭ ಸ್ವಯಂಸೇವಕರನ್ನು ದವಾಖಾನೆಗೆ ಕಳಿಸಿರುವರು. ಗಾಯಹೊಂದಿದವರಲ್ಲಿ ಒಬ್ಬನು ಸತ್ತನು.

## ಕಲಕತ್ತೆ

ಕಲಕತ್ತೆಯಲ್ಲಿ ಆದ ದಂಗೆಯಲ್ಲಿ ೫೦ ಜನರಿಗೆ ಗಾಯವಾಗಿದೆ. ಹದಿನಾರು ಜನರನ್ನು ದಂಗೆ ಮಾಡಿದರೆಂದು ಆರೋಪದ ಮೇಲೆ ಹಿಡಿದಿರುವರು.

## ಬದಾಲಪೂರ

ಚೈತ್ರ ಪೌರ್ಣಿಮೆಯ ದಿವಸ ಸುಮುಹೂರ್ತದಲ್ಲಿ ಇಪ್ಪತ್ತು ಸಾವಿರ ಜನರು ಉಪ್ಪಿನ ಕಟ್ಟಳೆಗಳನ್ನು ಮುರಿದರು. ಪೋಲೀಸರಿಗೆ ಸಮಾಜದಲ್ಲಿ ಬಹಿಷ್ಕಾರ ಹಾಕಿರುವರು. ಜೋರಸದ ತಾಲೂಕಿನಲ್ಲಿ ಮುನ್ನೂರು ಗೌಡ ಕುಲಕರ್ಣಿಯರು ರಾಜೀನಾಮೆ ಕೊಟ್ಟಿರುವರು. ನಮ್ಮಲ್ಲಿಯವರು ಮಲಗಿರುವರೋ? ದೇಶದ ಎಚ್ಚರವೇ ಇಲ್ಲವೋ?

## ನಡಿಯಾದ

ಇಲ್ಲಿಯ ಇಬ್ಬರು ಮುಖಂಡರಿಗೆ ಆರು ತಿಂಗಳ ಶಿಕ್ಷೆಯಾಗಿದೆ. ಹರತಾಳವು ಅತ್ಯಂತ ಯಶಸ್ವಿಯಾಗಿದೆ. ಕಲೆಕ್ಟರ ಸಾಹೇಬರು ಚಹಾಮಾಡಿಕೊಂಡು ಕುಡಿಯಬೇಕೆಂದರೆ ಹಳ್ಳಿಯವರು ಅವರಿಗೆ ಸಕ್ಕರೆಯೇ ಸಿಗದಂತೆ ಮಾಡಿರುವರು ಅಲ್ಲಿಯ ಸರಕಾರೀ ನೌಕರರಿಗೆ ಈ ತರದ ದುರ್ದಶೆ ನಮ್ಮಲ್ಲಿಯವರು ಮಾತ್ರ ಯಥಾಸ್ಥಿತ ಚಕ್ಕಂದ ಹೊಡೆಯುತ್ತಿರುವರು.

## ಕಾನಪೂರ

ಪೋಲೀಸರು ಇಲ್ಲಿ ಅಂಬಾಲಾಲ ಶುಕ್ಲ ಎಂಬ ಒಬ್ಬ ವೀರ ತರುಣ ಸತ್ಯಾಗ್ರಹಿಯನ್ನು, ಹೊಟ್ಟೆಯ ಮೇಲೆ, ಎದೆಯ ಮೇಲೆ ಗುದ್ದಿದರು ಕತ್ತಿಗೆ ಹಿಚಕಿದರು ಆದರೂ ಅಹಿಂಸೆಯಿಂದ ಅದನ್ನೆಲ್ಲ ಸಹಿಸಿ ಕಡೆಗೆ ನಿಶ್ಚೇಷ್ಟನಾಗಿ ಬಿದ್ದನು. ಸತ್ಯಾಗ್ರಹಿ ವೀರರೇ ಅಹಿಂಸೆಯನ್ನು ಮಾತ್ರ ಕಡೆತನಕ ಬಿಡಬೇಡಿರಿ ಈ ಉದಾಹರಣೆಯನ್ನು ಮರೆಯಬೇಡಿರಿ.

## ಲಿಂಬಡಿ

ಉಪ್ಪಿನ ಕಟ್ಟಳೆಯನ್ನು ಮುರಿದು ತಂದ ಉಪ್ಪನ್ನು ತನ್ನ ಮೋಟರದಲ್ಲಿ ತಂದನೆಂದು ಒಬ್ಬ ಮೋಟರದವನಿಗೆ ಹದಿನೈದು ರೂಪಾಯಿ ದಂಡವನ್ನೂ ಒಂದು ತಿಂಗಳವರೆಗೆ ಅವನು ಮೋಟರ ನಡಿಸಬಾರದೆಂದೂ ಸರಕಾರವು ಮಾಡಿರುತ್ತದೆ ರಾಷ್ಟ್ರ ಕಾರ್ಯಕ್ಕಾಗಿ ನಮ್ಮಲ್ಲಿ ಮೋಟರದವರು ಮುಂದೆ ಧೈರ್ಯದಿಂದ ಬರುವರೋ?

## ಮುಂಬಯಿ ಸರಾಫ ಮಹಾಜನ ಸಂಘದವರು ಪರದೇಶೀ ಬಟ್ಟೆಯನ್ನು ಬಹಿಷ್ಕರಿಸಿದರು.

ಈ ಸಂಘದ ಮ್ಯಾನೇಜಿಂಗ ಕಮೀಟಿಯವರು ತಾ॥ ೧೧-೪-೩೦ ನೇ ಸಭೆಯಲ್ಲಿ ಹಿಂದುಸ್ಥಾನದ ಸಧ್ಯದ ಪರಿಸ್ಥಿತಿಯನ್ನು ಪರ್ಯಾಲೋಚಿಸಿ, ಶಕ್ಯವಿದ್ದಷ್ಟು ಕಾಂಗ್ರೆಸಿಗೆ ಸಹಾಯವನ್ನೀಯುವದು ತಮ್ಮ ಪವಿತ್ರ ಧರ್ಮವೆಂದು ತಿಳಿದು ಇತರವಿಚಾರಗಳಿಗೆ ಆಸ್ಪದವನ್ನೀಯದೆ ಅದರಲ್ಲಿ ಭಾಗವಹಿಸಬೇಕಾಗಿ ನಿರ್ಧರಿಸಿಕೊಂಡು ಕೆಳಗಿನ ಠರಾವುಗಳನ್ನು ತೀರ್ಮಾನಿಸಿದ್ದಾರೆ:—

೧ ಈ ಸಂಘದ ಸಭಾಸದರು, ಪರದೇಶದ ಅದರಲ್ಲಿ ವಿಶೇಷ ಬ್ರಿಟಿಶ್ ಬಟ್ಟೆಗಳನ್ನು ತರಿಸಕೂಡದು. ಮತ್ತು ಇಲ್ಲಿಂದಾದರು ಕೊಂಡುಕೊಳ್ಳಕೂಡದು. ತಮ್ಮ ಜವಾಬ್ದಾರಿಯ ಮೇಲೆ ಎರಡನೆ ಕಡೆಗೆ ಮಾಲನ್ನು ಮಾರಾಟಕ್ಕೆ ಕಳಿಸಕೂಡದು ದಲಾಲರಿಗೆ ಕೆಲಸಕ್ಕೆ ಆತಂಕವಾಗದಂತೆ, ಠರಾವಿನ ಅರ್ಥವನ್ನು ತಿಳಿಸಬೇಕು. ಇದರ ವ್ಯವಸ್ಥೆಯು ೩ ತಿಂಗಳದ ಅವಧಿಯಲ್ಲಿಯೇ ಆಗತಕ್ಕದ್ದು. ಈ ಅವಧಿಯಲ್ಲಿ ಯಾರಾದರೂ ಸಭಾಸದರು, ಠರಾವಿಗನುಸರಿಸಿ ನಡೆಯದಿದ್ದುದು ಕಂಡು ಬಂದರೆ, ಸಂಘವು ಯೋಗ್ಯ ದಂಡ ವಿಚಾರಣೆಯನ್ನು ಅವರ ಬಗ್ಗೆ ಕೈಕೊಳ್ಳುವದು.

೨ ಬ್ರಿಟಿಶ್ ಸಂಬಂಧವಿದ್ದಂಥ ಗಿರಣಿಯ ಬಟ್ಟೆಯನ್ನು ಪರದೇಶದ ಬಟ್ಟೆಯೆಂದೇ ತಿಳಿದು, ಅದನ್ನೂ ಸಹ ಬಹಿಷ್ಕರಿಸತಕ್ಕದ್ದು.

೩ ಸಭಾಸದರು ಸ್ವದೇಶೀ ಬಟ್ಟೆಯನ್ನೇ ಉಪಯೋಗಿಸಬೇಕು. ವ್ಯವಸ್ಥಾಪಕ ಕಮೀಟಿ ಮತ್ತು ಜನರಲ್ ಕಮೀಟಿಯ ಸಭಾಸದರು ಸ್ವದೇಶೀ ಬಟ್ಟೆಯನ್ನೇ ಧರಿಸಿಕೊಂಡು, ಸಭೆಗೆ ಬಾರದಿದ್ದಲ್ಲಿ, ಸಭೆಯಲ್ಲಿ ಅವರು ಗೈರಹಾಜರ ಇರುವರೆಂದು ತಿಳಿಯುವದರಲ್ಲಿ ಬರುವದು.

೪ ಸಭಾಸದರು ಬ್ರಿಟಿಶ್ ಹುಂಡಣಾವಳ (exchange) ಬ್ಯಾಂಕುಗಳಲ್ಲಿ ಸಂಬಂಧವಿದ್ದದನ್ನು ೮ ದಿವಸದಲ್ಲಿ ಬಂದು ಮಾಡತಕ್ಕದ್ದು.

೫ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯಲ್ಲಿ ವಿಶೇಷ ಹಾನಿಯಾದುದನ್ನು ಯೋಚಿಸಿ, ಸಭಾಸದರು, ಸರಕಾರ ಕಾಗದ, ಬಾಂಡು ಮುಂತಾದವುಗಳನ್ನು ಖರೀದಿ ಮಾಡಕೂಡದು. ಮತ್ತು ದಲಾಲಿಯಿಂದಾದರೂ ಸಹ ಮಾರಾಟಿ ಮಾಡಕೂಡದು.

೬ ಸಧ್ಯದ ಚಳವಳಿಯಲ್ಲಿ ಸಭಾಸದರು ಅಥವಾ ನೌಕರರು ಭಾಗವಹಿಸಿದರೆ ಅವರಿಗೆ ಸಿಗತಕ್ಕ ವೇತನವನ್ನು ಕೊಟ್ಟು ಕೆಲಸಕ್ಕೆ ಕಳಿಸಬೇಕು. ಮತ್ತು ಅವರು ಕೆಲಸವನ್ನು ಮುಗಿಸಿಕೊಂಡು ಮರಳಿ ಬಂದ ನಂತರ, ಅವರನ್ನು ಅವರ ಸ್ಥಳದ ಮೇಲೆ ನಿಯಮಿಸಿಕೊಳ್ಳಬೇಕು.

೭ ಮೇಲ್ಕಂಡ ಠರಾವುಗಳನ್ನು ಯಾರಾದರೂ ಸಭಾಸದರು ಉಲ್ಲಂಘಿಸಿದ್ದು ಕಂಡು ಬಂದರೆ, ಅವರನ್ನು ಶಿಕ್ಷಿಸುವದಕ್ಕೋಸ್ಕರ ಸಂಘವು ಯೋಗ್ಯ ವಿಚಾರಗಳನ್ನು ಕೈಕೊಳ್ಳುವದು.

(ಕರ್ನಾಟಕದಲ್ಲಿರುವ ಅನೇಕ ಸಂಸ್ಥೆಗಳು ಈ ಸಂಘವು ಅನುಸರಿಸಿದ ಸ್ತುತ್ಯ ಮಾರ್ಗವನ್ನು ಅವಶ್ಯ ಕಂಡಲ್ಲಿ ಅನುಕರಣಮಾಡಬೇಕಾಗಿ ಕರ್ನಾಟಕ ವ್ಯಾಪಾರ ಸಂಘದ ಕಾರ್ಯದರ್ಶಿಗಳು ಅಪೇಕ್ಷಿಸುತ್ತಾರೆ.)

ಈ ಪತ್ರಿಕೆಯು ಬಸವಂತ ಅಣ್ಣಾರಾವ [illegible] ಇವರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭

ಚಿತ್ರ ಸಂಚಿಕೆಯು.

सर्वं परवशं दुःखं सर्वमात्मवशं सुखम् ॥ — मनु

ಸಂಪಾದಕರು :- ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ರವಿವಾರ ಮಾ ಚೈತ್ರ ಬಹುಳ ೭ ಶಕ ೧೮೫೨ ತಾ ೨೦—೪—೩೦ ಸಂಚಿಕೆ ೨೭

## ಸಂಪಾದಕರ ಭಾಷಣ.

### ಕೈಲಾಗದ
### ವಿಜಾಪೂರ ನವಕರ್ನಾಟಕ ಪತ್ರ.

ಸತ್ಯಾಗ್ರಹ ಯುದ್ಧದ ರಣಭೇರಿಯು ಪ್ರತಿ ಹಳ್ಳಿಹಳ್ಳಿಯಲ್ಲಿಯೂ ಈಗ ಮೊಳಗುತ್ತಿದೆ. ಹಳ್ಳಿಯ ರೈತರು ತಮ್ಮನ್ನು ಕೂಳುಗೇಡುಮಾಡುವ ಈ ರಾಜಪದ್ಧತಿಯ ಎದುರು ಶಸ್ತ್ರಾಗಲು ಈ ಶಾಂತಿಯುದ್ಧವೇ ಶ್ರೇಷ್ಠ, ಕಿಚ್ಚಿನಲ್ಲಿ ಜಿಗಿಯಲು ಸಿದ್ಧರಿದ್ದಾರೆ. ಅವರಿಗೆ ತಮ್ಮ ದಾರಿದ್ರ್ಯದ ಹಾಳುಬಾಳುವೆಯು ಸಾಕಾಗಿದೆ. ಸ್ವಾತಂತ್ರ್ಯದ ಜೀವನಕ್ಕಾಗಿ ಅವರು ಧಡಪಡಿಸಹತ್ತಿದ್ದಾರೆ. ಮಹಾತ್ಮಾ ಗಾಂಧಿಯವರ ಕಾಯಿದೆಭಂಗ ಚಳವಳಿಯ ಹಾರಿಕೆ ಮಂತ್ರವನ್ನು ಕೇಳಿ ಹುರಿಹುಗೊಂಡು ಅದರ ವಿಶೇಷ ಸಂಗತಿಗಳನ್ನು ಅರಿತುಕೊಳ್ಳಲು ಪ್ರತಿ ಹಳ್ಳಿಯವರೂ ಹಾತೊರೆಯುತ್ತಿರುವರು. ಈ ಚಳವಳಿಯಿಂದ ತಮ್ಮ ಉದ್ಧಾರ ಆಗುವದೆಂಬ ಭಾವನೆಯೂ ವಿಶ್ವಾಸವೂ ಅದು ಹೇಗೋ ಆ ಅಜ್ಞರಿಗೆ (ದೈವೀ ಪ್ರೇರಣೆಯಿಂದ) ಅನಿಸಹತ್ತಿದೆ. ಇಂಥ ಚಳವಳಿಯನ್ನು ತಾವೂ ನಡಸಬೇಕೆಂದು ಗಡಬಡಿಸಹತ್ತಿರುವರು ಮಾರ್ಗದರ್ಶಕರನ್ನು ಹುಡುಕಹತ್ತಿರುವರು. ಇದು ಯಾವದೂ ನಮ್ಮ ನವಕರ್ನಾಟಕದ ಸಂಪಾದಕರ ದೃಷ್ಟಿಪಥಕ್ಕಾಗಲೀ ಶ್ರುತಿಪಥಕ್ಕಾಗಲೀ ಬಂದಿರಲಿಕ್ಕಿಲ್ಲವೇ? ಹೇಗೆ ಬರಬೇಕು! ಯೋಗಾರೂಢರಾಗಿ, ಶಿವಧ್ಯಾನಪರ್ಯಂಕರಾಗಿ ಶಿವಗುಹೆಯನ್ನು ಬಿಟ್ಟು ಹೊರಗೆ ಬರದವರಿಗೆ ದಿವ್ಯಜ್ಞಾನೋದಯವಾಗುವವರೆಗೆ ಕಣ್ಮುಚ್ಚಿಯಲ್ಲಿರುವ "ಬಡವರ ಬಗ್ಗರ, ತುತ್ತಿನ ಚೀಲದ, ಒಳದನಿಯ." ಆಕ್ರೋಶವು, ಕೋಲಾಹಲವು ಕೇಳಬರುವದೆಂತು? ಕಂಡುಬರುವದೆಂತು? ಕುಳಿತಲ್ಲಿಯೇ ಪ್ರಪಂಚವನ್ನೆಲ್ಲ ಒಡೆದು ನೋಡುವಂಥ ಜ್ಞಾನದೃಷ್ಟಿಯು ನವಕರ್ನಾಟಕದ ಸಂಪಾದಕರಿಗೆ ಇನ್ನೂ ಉದಯಿಸಿಲ್ಲ. ತಮ್ಮ ಚರ್ಮಚಕ್ಷುಗಳಿಂದಲೆ ಇತರ ಮುಖಂಡರು ಈ ಬಡಜನರ ಹಸಿವೆಯ ಕೋಲಾಹಲವನ್ನು ಕಂಡುಕೊಂಡಂತೆ ಇವರು ಕಂಡುಕೊಳ್ಳಬಹುದಾಗಿತ್ತು. ಆದರೆ ನಮ್ಮ ಸಂಪಾದಕರು ಸಂಚಾರಶೂನ್ಯರು. ಮನೆಯಲ್ಲಿಯ ತಮ್ಮ ಶಿವಾರ್ಚನೆಯ ಶಾಂತಮಯ ವಾತಾವರಣವನ್ನು ಮೀರಿ ಹೊರಗೆ ಹಣಿಕಿಕ್ಕಿದವರಲ್ಲ. ಪ್ರಾಚೀನ ಮಹಾನುಭಾವರ ವಚನಗ್ರಂಥಗಳನ್ನು ಸಂಶೋಧಿಸುವದರಲ್ಲಿ ಸಂಲಗ್ನವಾದ ಇವರ ದೃಷ್ಟಿಗೆ ರೈತರ ಇಂದಿನ ಮನಸ್ಥಿತಿಯ ಪರಿಜ್ಞಾನವು ಅಷ್ಟೊಂದು ಇರದಿದ್ದರೆ, ಅದು ಕ್ಷಮ್ಯವೇ ಅಲ್ಲವೇ? "ವಾತಾಃ ವಾಂತು ಕದಂಬರೇಣುಶಬಲಾ ನೃತ್ಯಂತು ಸರ್ಪದ್ವಿಷಃ ಸೋತ್ಸಾಹಾ ನವವಾರಿಭಾರಗುರವೋ ಮುಂಚಂತು ನಾದಂ ಘನಾಃ" ಇವೆಲ್ಲವೂ ತಮ್ಮ ಸಹಜವಾದ ವ್ಯಾಪಾರವನ್ನು ನಡಿಸಿಯೇ ನಡಿಸುವಂತೆ ನಮ್ಮ ಸಂಪಾದಕರೂ ತಮ್ಮ ಶೀಲಸ್ವಭಾವಗಳಿಗೆ ಅನುಗುಣವಾದ ಈಶಾರಾಧನೆ, ಪ್ರಾಚೀನ ವಚನಸಂಶೋಧನೆ ಇವೇ ಮೊದಲಾದ ಕ್ಷೇಮಕರವಾದ ವ್ಯಾಪಾರಗಳಲ್ಲಿಯೇ ತಮ್ಮ ಮನಸ್ಸನ್ನು ತೊಡಗಿಸುವದು ಒಳ್ಳೆಯದು. ರಣಾಂಗಣ, ಕಾಳಗ, ಕಲಿತನ, ಯುದ್ಧ ಎಂದಾಕ್ಷಣಕ್ಕೆ ಸ್ವಭಾವಭೀರುಗಳಿಗೆ ನಡುಗು ಹುಟ್ಟುವದುಂಟು. ಅದಕ್ಕೆ ತಾವು ಇನ್ನೂ ಸಿದ್ಧರಿಲ್ಲವೆಂದು ಕಡೆತನಕ ಅವರು ನುಡಿಯುವವರೇ! ಅಂಥ ಕೈಲಾಗದವರು ಅಲ್ಲದ ಸಲ್ಲದ ಧ್ವನಿತೆಗೆದು ರಣಕ್ಕೆ ಹೊರಡಲುದ್ಯುಕ್ತರಾದವರ ಎದೆಗುಂದಿಸುವ ಕಾರ್ಯವನ್ನಾದರೂ ಮಾಡಬಾರದು! 'ಕರ್ನಾಟಕವು ಈ ರಣರಂಗಕ್ಕೆ ಹೊರಡಲು ಸಿದ್ಧವಿಲ್ಲ; ಕರ್ನಾಟಕದ ಮುಖಂಡರು ಪೂರ್ಣ ವಿಚಾರಮಾಡಿಲ್ಲ; ಕೇವಲ ಅನುಕರಣ ಬುದ್ಧಿಯಿಂದ ಕರ್ನಾಟಕದವರು ಈ ಸಂಗ್ರಾಮವನ್ನು ಹೂಡಿರುವರು' ಇವೇ ಮೊದಲಾದ ಅವಾಸ್ತವಿಕತನದ ಉದ್ಗಾರಗಳನ್ನು ತೆಗೆದು ತಮ್ಮ ಅಳ್ಳೆದೆಯನ್ನು ಬೈಲಿಗಿಡುವದರಿಂದ ಏನೂ ಪ್ರಯೋಜನವಿಲ್ಲ. ಎಲ್ಲ ವೃತ್ತಪತ್ರ ಕರ್ತರೂ, ಎಲ್ಲ ಮುಖಂಡರೂ, ಹರ್ಡೀಕರ ಮಂಜಪ್ಪನಂಥ ನಿಸ್ವಾರ್ಥ ಲೋಕಹಿತಚಿಂತಕರೂ, ಕರಿನಾಡಿನ ಸಕಲ ಪ್ರಜಾವರ್ಗವೂ 'ಇದೊಂದು ಅಪೂರ್ವ ಸಮಯ ಬಂದಿದೆ; ಹುರಿಯಾಳಾಗಿ ಹೋರಾಡಿರಿ' ಎಂದು ಏಕಕಂಠದಿಂದ ಕೂಗುತ್ತಿರುವಾಗ 'ಬಂದೇ ಗೂಗಿ ಗುಕ್' ಎಂಬಂತೆ ನಮ್ಮ ನವಕರ್ನಾಟಕದ ಸಂಪಾದಕರು ಅಪಶಕುನದ ನಿರುತ್ಸಾಹದ ಮಾತನ್ನಾಡುತ್ತಿರುವದನ್ನು ಇನ್ನು ನಿಲ್ಲಿಸಬೇಕು. 'ಧೈರ್ಯವಿದ್ದರೆ ಸಮರಕ್ಕೆ ತೆರಳಿ, ಇಲ್ಲವಾದರೆ ಬಾಯಿಮುಚ್ಚಿಕೊಂಡು ಸ್ವಸ್ಥ ಮನೆಯಲ್ಲಿ ಕೂಡಿರಿ' ಎಂದು ಜವಾಹರಲಾಲರು ಹೇಳಿದ್ದನ್ನು ಮತ್ತೆ ನಾವು ಇಲ್ಲಿ ಹೇಳದೇ ಇರೆವು!

# ಬಿಸನಾಳದಲ್ಲಿ ಸತ್ಯಾಗ್ರಹವು

ಬೀಳಗಿ ಗಲಗಲಿ ನಡುವೆ, ಗಲಗಲಿಯಿಂದ ನಾಲ್ಕು ಮೈಲು ಅಂತರಕ್ಕೆ ಈ ಬಿಸನಾಳ ಗ್ರಾಮವಿದೆ, ೩೦೦ ಜನವಸತಿಯ ಸಣ್ಣ ಹಳ್ಳಿ. ಆ ಊರ ಹಳ್ಳದಲ್ಲಿಯೂ ಹಳ್ಳಕ್ಕೆ ಹತ್ತಿರುವ ಹೊಲಗಳಲ್ಲಿಯೂ ಉಪ್ಪಿನಮಣ್ಣು ಹೇರಳವಾಗಿ ದೊರೆಯುತ್ತದೆ. ಬಾಗಲಕೋಟೆಯಲ್ಲಿ ಈಗ ದಿನಾಲು ಮಾರಲ್ಪಡುತ್ತಿರುವ ಉಪ್ಪು ಈ ಬಿಸನಾಳ ಹಳ್ಳಿಯದೆ. ಇಲ್ಲಿ ನಿನ್ನೆ ಸಾಯಂಕಾಲಕ್ಕೆ ಉಪ್ಪಿನ ಮಣ್ಣನ್ನು ಹೊತ್ತುಕೊಂಡು ಹೋಗಲುದ್ಯುಕ್ತರಾದ ೫ ಸ್ವಯಂಸೇವಕರನ್ನು ಬೀಳಗಿ ಫೌಜದಾರರು ಸೆರೆಹಿಡಿದಿರುವರು. ಮೊದಲು ಆ ಮಣ್ಣನ್ನಷ್ಟೇ ಜಪ್ತಮಾಡಿಕೊಂಡು ಹೋಗಬೇಕೆಂದು ಫೌಜದಾರರು ಯೋಚಿಸಿದ್ದರು. ಆದರೆ ಎಷ್ಟು ಹೇಳಿದರೂ ಆ ಸತ್ಯಾಗ್ರಹಿಗಳು ಆ ಮಣ್ಣನ್ನು ಕೊಡಲಿಕ್ಕೆ ಒಪ್ಪಲಿಲ್ಲವಾದ್ದರಿಂದ ಆ ಐದೂ ಜನರನ್ನು ಬಂಧಿಸಿ ಬೀಳಗಿಗೆ ತಕ್ಕೊಂಡು ಹೋದರು. ಅಂತು ಬಾಬುರಾವ ಗಣಿ, ಜೋಶಿ, ಕಾಥೊಟೆ, ಮಾವನ ಹಬ್ಬ ಈ ನಾಲು ಗಲಗಲಿಯ ಸ್ವಯಂಸೇವಕರು ಬಾಗಲಕೋಟೆಯಲ್ಲಿ ಕಾಯಿದೆ ಭಂಗಮಾಡಿ ಸೆರೆಸಿಕ್ಕ ಲಿಂಗಾಪೂರ ಇವನೂ ಕೂಡಿಕೊಂಡು ಬಿಸನಾಳದಲ್ಲಿ ಈ ಸತ್ಯಾಗ್ರಹ ಕದನವನ್ನು ಆರಂಭಿಸಿ ಹಿಂದಿನವರ ಹೊಣೆಗಾರಿಕೆಯನ್ನು ಹೆಚ್ಚಿಸಿರುವರು. ಗಲಗಲಿಯವರು ಸುತ್ತಲಿನ ಬೀಳಗಿ ಪೇಟದ ಹಳ್ಳಿಗಳ ಜನರೂ ಈ "ಪ್ರಾರಂಭ್ದ ಮುತ್ತಮಜನಾನ ಪರಿತ್ಯಜತಿ" ಎಂಬ ನೀತಿಗನುಸರಿಸಿ ಸಂಗ್ರಾಮವನ್ನು ಸಾಗಿಸಬೇಕು.

(ತಂತಿಯಿಂದ ಬಂದವಾರ್ತೆ)

### ಸಾಂಬಮೂರ್ತಿ.

ಆಂಧ್ರ ಜನಸೇನನಾದ ಸಾಂಬಮೂರ್ತಿಯನ್ನು ಸರಕಾರರವು ಮತ್ತೆ ಸೆರೆಹಿಡಿಯಿತು, ಈ ವೀರನು ಕಾರಾಗೃಹದಿಂದ ಬಂದು ಮೈ ಇನ್ನೂ ಆರಿಲ್ಲ. ಅಷ್ಟರಲ್ಲಿಯೇ ಪುನಃ ಬಂದಿವಾಸಕ್ಕೆ ಸಿದ್ಧನಾದನು, ಜೇಲಬಿಟ್ಟು ಬರುವಾಗ್ಗೆನೆ ಬಳ್ಳಾರಿ ಜೇಲಅಧಿಕಾರಿಗಳಿಗೆ 'ನನ್ನ ಖೋಲಿಯನ್ನು ಯಾರಿಗೂ ಕೊಡಬೇಡಿ'ಎಂದು ಮತ್ತೆ ನಾನೀ ಕ್ಷೇತ್ರದಲ್ಲಿಯೇ ಬಂದು ಬಿಡುವೆ ಎಂದು ಹೇಳಿ ಬಂದದ್ದು ದಿಟವೇ ಆಯಿತು. ಆಳರಸರಿಗೆ ಇಂಥ ಜಿಗಳೆಗಳಿಂದಲೇ ರಕ್ತಸ್ರಾವವಾಗಿ ಕ್ಷಯ ಹತ್ತಿದರೆ ಹತ್ತಬೇಕು. ಸಾಂಬಮೂರ್ತಿಯವರು ಸೇವಾದಲದ ಅಧ್ಯಕ್ಷರಿದ್ದಾರೆ.

### ಮುಂಬಯಿ

ಶ್ರೀ ಜಮುನಾದಾಸ ಮೆಹತಾ ಇವರನ್ನು ಹಿಡಿದು ೬ ತಿಂಗಳ ಶಿಕ್ಷೆ ೨೦೦ ದುಲ್ಮಾನೆ ವಿಧಿಸಲ್ಪಟ್ಟಿದೆ.

ಸತ್ಯಾಗ್ರಹವು ಅತಿ ಭರದಿಂದ ಸಾಗಿದೆ. ಉಪ್ಪು ಮಾರುವದು ಹೆಚ್ಚಾಗಿ ನಡೆದಿದೆ. ಉಪ್ಪಿನ ಮಾರಾಟದಲ್ಲಿ ಒಬ್ಬ ಪೋಲಿಸ ಅಮಲದಾರನು ಸ್ವತಃ ತಾನೇ ಉಪ್ಪು ಕೊಂಡನಂತೆ. ನಮ್ಮಲ್ಲಿಯ ಪೊಲಿಸರು ಏನು ಮಾಡುವರೋ? ಉಂಡು ಮಲಗುವರೋ!

ಕಮಲಾದೇವಿಯೆಂಬ ಒಬ್ಬ ವೀರವನಿತೆಯು ಮೂವತ್ತೊಂದು ಸಾವಿರ ರೂಪಾಯಿಗಳ ಉಪ್ಪು ಮಾರಿರುವಳು. ನಮ್ಮಲ್ಲಿಯ ಹೆಣ್ಣುಮಕ್ಕಳು ಮೂವತ್ತು ರೂಪಾಯಿಗಳ ಉಪ್ಪನ್ನಾದರೂ ಮಾರಬಾರದೇ?

### ಕಲಕತ್ತೆಯಲ್ಲಿ ಮನೆಗಳನ್ನು ಒಳನುಗ್ಗುತ್ತಿರುವರು

ಕಲಕತ್ತೆಯಲ್ಲಿ ಪೋಲೀಸರು ಅನೇಕ ಸ್ಥಳಗಳನ್ನು ಒಳನುಗ್ಗಿ ಕೈಗೆಬಂದದ್ದನ್ನು ಜಪ್ತಮಾಡುತ್ತ ಒಟ್ಟಿಗೆ ೧೭ ಮುಖ್ಯ ಕಾಂಗ್ರೆಸ ಭಕ್ತರನ್ನು ಹಿಡಿದೊಯ್ದಿದ್ದಾರೆ

### ಚಿತ್ತಗಾಂಗ ದಂಗೆ

ಚಿತಗಾಂಗದಲ್ಲಿ ಭೀಕರವಾದ ದಂಗೆ ಉತ್ಪನ್ನವಾಗಿದೆ. ತಾರತಂತಿಗಳನ್ನು ಕತ್ತರಿಸಿರುವರಂತೆ

### ಪಂಜಾಬ

ಅಮೃತ ಸರದಲ್ಲಿ ಸತ್ಯಾಗ್ರಹಿಗಳೂ ಅಕಾಲೀ ಸತ್ಯಾಗ್ರಹಿಗಳೂ ಉಪ್ಪಿನ ಕಟ್ಟಳೆಯನ್ನು ಮುರಿದರು. ಪಾಂಡಿತರೂ ಅವರು ಜನರಿಗೆ ಪ್ರೋತ್ಸಾಹಿಸಿಂದಿರಲು ಉಪದೇಶಮಾಡಿದರು. ಫಿರೋಜಪೂರದಲ್ಲಿ ಹನ್ನೊಂದು ಜನರನ್ನು ಹಿಡಿದಿರುವರು. ನೆಬ್ಬರು ಹನ್ನೆರಡು ವರ್ಷದ ಹುಡುಗನೂ ಹಿಡಿದಿರುವರು. ಸರಕಾರವು ಹುಡುಗರಿಗೂ ಅಂಜಿತೆ! ಪಂಜಾಬದ ಎಲ್ಲ ಪುಂಡಾಳುಗಳನ್ನೂ ಬಂಧಿಸ ಹತ್ತಿರುವರು

---

## ಪಾಪದ ಮೋಟಾರ ಡ್ರಾಯವ್ಹರನ ತಪ್ಪೇನು?
## ಸರಕಾರದವರಲ್ಲಿ ನ್ಯಾಯಾನ್ಯಾಯ ಉಳಿದುದಿಲ್ಲ.

ಗುಜರಾಥ ಧೋಲೇರಾದಲ್ಲಿ ಮೋಟರು ಗಾಡಿಯೊಳಗೆ ಸಂಚಾರ ಮಾಡ[illegible]ಪ್ರವಾಸಿಕನ ಹತ್ತರ ಸ್ವತಂತ್ರ ಉಪ್ಪಿನ ೨ ೩ ಪುಡಕೆಗಳು ಹೊರಟಿದ್ದಕ್ಕೆ ಆ ಮೋಟರ ಡ್ರಾಯವ್ಹರನ ಮೇಲೆ ಸ್ವತಂತ್ರ ಉಪ್ಪು ತರುವದಕ್ಕೆ ಸಹಾಯ ಮಾಡಿದನೆಂಬ ಆರೋಪವ ಹುಟ್ಟಿ ಹಾಕಿ ಒಯ್ದು ಆವನಿಗೆ ಶಿಕ್ಷೆ ವಿಧಿಸಿ ಮೋಟರಗಾಡಿಯು ಇನ್ನೂ ತಿಂಗಳವರೆಗೆ ಎಲ್ಲಿಯೂ ಅಲ್ಲಾಡಕೂಡದೆಂದು ನಿರ್ಬಂಧಿಸಿರುವರು. ಮೋಟರ ಇಡುವ ಮತ್ತು ನಡಸುವ ಉದ್ಯೋಗವು ಸ್ವತಂತ್ರವಿದೆಂದು ಅನ್ನುವ ಸ್ವಾತಂತ್ರ್ಯ ಪ್ರೇಮಿಗಳು ಈ ಅನ್ಯಾಯವನ್ನು ಆನಾಹೂತನನ್ನು ನೋಡಿರಿ ಇಸಾಫ ನೀತಿಯು ಕುರಿ ಮತ್ತು ತೋಳನ ಕಥೆಯಂತೆ ನಡೆಯುತ್ತಿದೆ. ಕುರಿಯನ್ನು ತಿನ್ನಲು ಬಯಸಿದ ತೋಳವು ಆ ಕುರಿಗೆ ನೀನು ನನಗೆ ಬಯ್ಯುತ್ತೀಯಾ!" ಎಂದು ಪ್ರಶ್ನೆಮಾಡಿದ್ದಕ್ಕೆ ಆ ಕುರಿಯು ಗದ ಗದ ನಡುಗುತ್ತ "ಇಲ್ಲಾ ನಾನು ನಿಮಗೆ ಬಯದಿಲ್ಲ" ಎಂದು ಉತ್ತರಕೊಟ್ಟಿತು. ಹಾಗಾದರೆ ನಿಮ್ಮ ಅಪ್ಪ ನನಗೆ ಒಯ್ದಿರಬೇಕು" ಎಂದು ನೆವನಹೇಳಿ ಆ ಕುರಿಯನ್ನು ಮುರಿದು ತಿಂದುಬಿಟ್ಟಿತು. ಅದರಂತೆ 'ಅಂಥ ಉಪ್ಪನ್ನು ನಾನು ತಂದಿಲ್ಲ' ವೆಂದು ಡ್ರಾಯವ್ಹರನು ಪರಿ ಪರಿಯಿಂದ ಹೇಳಿಕೊಂಡರೂ ಅದನ್ನು ಕೇಳದೆ "ನೀ ಇಲ್ಲ ನೀ ಕೂಡಿಸಿಕೊಂಡ ಬಂದ ಪ್ಯಾಸಿಂಜರನು ತಂದಿರುವನಲ್ಲ" ಎಂದು ಕಾರಣ ಹಚ್ಚಿ ಶಿಕ್ಷೆ ಕೊಡಲಾಯಿತು.

## ಅಂಕೋಲೆಯಲ್ಲಿಯ ಸತ್ಯಾಗ್ರಹಿಗಳ ಶಿಬಿರವನ್ನು ಅಲ್ಲಿಯ

# ಗಾಬರಿಗೊಂಡ ಕಲೆಕ್ಟರರು

## ಒಳನುಗ್ಗಿದರು.

ಅಂಕೋಲೆಯಲ್ಲಿ ಕಲೆಕ್ಟರರು, ಸತ್ಯಾಗ್ರಹ ಕಚೇರಿಯನ್ನು ತಮ್ಮ ವಶಕ್ಕೆ ತಕ್ಕೊಂಡರು. ಸತ್ಯಾಗ್ರಹಿಗಳು ಕಚೇರಿಯಿಂದ ಹೊರಬೀಳಲು ಅನುಮತಿಸಲಿಲ್ಲ. ಅಪಶ್ನೆ ಕೌಜಲಗಿ ಹಣಮಂತರಾಯರನ್ನು, ನಾಯಿಕ ಎಂಬವರನ್ನೂ, ಕಾರವಾರಿನ ಎಂಬವರನ್ನೂ, ಮತ್ತು ಬೇರೆ ಹದಿನೈದು ಜನ ಸ್ವಯಂಸೇವಕರನ್ನು ಹಿಡಿದಿರುವರು. ನಿನ್ನೆ ಹೊರಟ ಸತ್ಯಾಗ್ರಹಿಗಳ ಪಥಕದ ಸೇನಾಧಿಪತಿಗಳಾಗಿ ಮುಂದೆ ಸಾಗಿ ನಡೆದ (ಸ್ವಾಮೀ ರಾಮಾನಂದ) ಎಂಬವರನ್ನೂ ಮತ್ತು ಶಿವಸಿಂಪಿ ಎಂಬವರನ್ನೂ ಹಿಡಿದಿರುವರು. ಉಪ್ಪನ್ನು ತಯಾರಿಸುವದೂ ಮಾರಾಟ ಮಾಡುವದೂ ಅತಿ ಉತ್ಸಾಹದಿಂದಲೂ ರಭಸದಿಂದಲೂ ಸಾಗಿವೆ. ಮೊದಲಿನ ಜನರ ಎರಡು ಪಟ್ಟು ಜನರು ಬಂದು ಈಗ ಕೆಲಸ ನಡೆಸಿರುವರು. ಹೊಸದಾಗಿ ಬಂದು ಕೂಡಿದವರಲ್ಲಿ ಯಾರನ್ನೂ ಹಿಡಿದಿಲ್ಲ. ಸಂಗ್ರಾಮವು ದಿನದಿನಕ್ಕೆ ಹೆಚ್ಚು ಹೆಚ್ಚು ಯಶಸ್ವಿಯಾಗಿ ಬೆಳೆಯುತ್ತಿದೆ.

### ಕಲಕತ್ತೆಯ ಅತ್ಯಾಚಾರದ ಬಗ್ಗೆ

## ಮಹಾತ್ಮಾಜಿಯವರ ಅಭಿಪ್ರಾಯ.

ಕರಾಚಿ ಹಾಗೂ ಕಲಕತ್ತೆಯಲ್ಲಿ ಆದ ದಂಗೆಗಳ ವಿಷಯಕ್ಕೆ ನಿಮ್ಮ ಅಭಿಪ್ರಾಯವೇನೆಂದು ಕೇಳಿದ್ದಕ್ಕೆ ಗಾಂಧಿಯವರು "ಈ ದಂಗೆಗಳ ಬಗ್ಗೆ ನಾನು ಅಷ್ಟು ತೀವ್ರವಾಗಿ ಏನೂ ನಿಶ್ಚಯವಾಗಿ ಹೇಳಲಾರೆನು. ಇಂಥ ದಂಗೆಗಳ ವಿಷಯಕ ಸುದ್ದಿಗಳಲ್ಲಿ ಅತಿಶಯೋಕ್ತಿಯೂ ಅನೃತವೂ ತುಂಬಿರುವದರಿಂದ ಜನರೇ ದಂಗೆಗೆ ಕಾರಣರಾದರೆಂಬ ಮಾತಿಗೆ ನಾನು ಮನ್ನಣೆ ಕೊಡಲಾರೆನು. ಜನರು ಅಹಿಂಸಾ ವ್ರತವನ್ನು ತಾವಾಗಿಯೇ ಮುರಿದರೆಂಬ ಮಾತು ಸುಳ್ಳು ಇರುವದನ್ನು ನಾನು ಕಣ್ಣಾರೆ ಕಂಡಿರುವೆನು. ದಂಗೆಯಾಗುವದು ಎಳ್ಳಷ್ಟು ಸಂಭವವಿಲ್ಲದೆ ಪೋಲೀಸರು ಜನರನ್ನು ಚದರಿಸಬೇಕೆಂದು ಅವರನ್ನು ತಾವಾಗಿಯೇ ಶಾಂತತೆಯನ್ನು ಭಂಗಮಾಡಲಿಕ್ಕೆ ಹಚ್ಚುವರು. ತಾವಾಗಿಯೇ ಜನರನ್ನು ಪ್ರಕ್ಷುಬ್ಧಗೊಳಿಸುವರು. ಶಾಂತತಾಭಂಗವಾಗದಂತೆ ಸಭೆಗಳನ್ನೂ ಮೆರವಣಿಗೆಗಳನ್ನೂ ಮಾಡಬೇಕು. ಜನರ ಮೇಲೆ ಯಾವ ಮುಖಂಡರ ಸತ್ತೆಯು ನಡೆಯುವದೋ ಮತ್ತು ಯಾರು ಅರ್ಥಪೂರ್ಣವಾಗಿ ಅಹಿಂಸಾ ವ್ರತವನ್ನು ಕೈಕೊಂಡಿದ್ದರೋ ಅಂಥವರನ್ನು ಸರಕಾರದವರು ಬಹು ದಕ್ಷತೆಯಿಂದ ಹಿಡಿದು ಹಾಕಿರುವರು. ಕ್ರೂರ ಕೃತಿಯಲ್ಲಿಯ ಕ್ರೂರತನವು ಅದಕ್ಕೆ ಕಟ್ಟಳೆಯ ಬೆಂಬಲವಿದ್ದರೆ ಕಡಿಮೆಯಾಗದು. ಜನರನ್ನು ಕ್ರೂರತನದಿಂದ ನಡಿಸಿಕೊಂಡರೆ ಜನರಲ್ಲಿ ಸಹನಶಕ್ತಿಯು ಇಲ್ಲದಂತಾಗುತ್ತದೆ. ಸದ್ಯದ ಜನಜಾಗೃತಿ ಸಾಮುದಾಯಿಕ ಸತ್ಯಾಗ್ರಹಿಗಳ ಚಳವಳಿಯು ದೇವರ ಪ್ರೇರಣೆಯಿಂದಲೇ ಸುರುವು ಮಾಡಲ್ಪಟ್ಟಿದೆ. ಹಿಂದೀರಾಷ್ಟ್ರದ ಉದ್ಧಾರವು ಹಳ್ಳಿಗಳಿಂದ ಆಗಬೇಕಾಗಿರುವದಲ್ಲದೆ ಪಟ್ಟಣಗಳಿಂದಲ್ಲ"

### ಸ್ತ್ರೀಯರಿಗೆ ಉಪದೇಶ!

ವಿಜಾಪುರದಲ್ಲಿ ಕೂಡಿದ ಸ್ತ್ರೀಯರ ಪರಿಷತ್ತಿಗೆ ಒಂದು ಸಾವಿರ ಜನ ಹೆಣ್ಣುಮಕ್ಕಳು ಸುತ್ತುಮುತ್ತಲಿನ ಹಳ್ಳಿಗಳಿಂದ ಬಂದಿದ್ದರು. ಇದಲ್ಲದೆ ಅಹಮದಾಬಾದ, ಮುಂಬಯಿ ಮುಂತಾದ ಪಟ್ಟಣಗಳಿಂದಲೂ ಅನೇಕ ಸ್ತ್ರೀಯರು ಬಂದಿದ್ದರು. ಅವರೆಲ್ಲರಿಗೂ ಮಹಾತ್ಮರು ಪರದೇಶೀ ಬಟ್ಟೆಗಳ ಬಹಿಷ್ಕಾರವನ್ನೂ, ಸೆರೆಕುಡಿಯುವದನ್ನು ಬಿಡಿಸುವದನ್ನೂ ಕೈಕೊಳ್ಳಬೇಕೆಂದು ಉಪದೇಶಿಸಿದರು. ಗುಜರಾತದ ವನಿತೆಯರೂ ಸಹ ರಾಷ್ಟ್ರಕಾರ್ಯದಲ್ಲಿ ಮುಂದೆ ಬಂದು ಎಲ್ಲರಿಗೂ ಮೇಲುಪಂಕ್ತಿಯನ್ನು ಹಾಕಿಕೊಟ್ಟಿರುವರು. ಕರ್ನಾಟಕದ ಹೆಣ್ಣುಮಕ್ಕಳು ಏನು ಮಾಡುತ್ತಿರುವರು? ಪುರಾಣ ಕೇಳುತ್ತಿರುವರೋ? ಮಹಾತ್ಮರ ಮಾತುಗಳು ಅವರಿಗೆ ಕೇಳಲೊಲ್ಲವೋ?

### ಸ್ತ್ರೀಯರೂ ಪೋಲೀಸರೂ.

ಪೋಲೀಸರು ಒಂದುವೇಳೆ ಹೆಂಗಸರ ಕೈಮುಟ್ಟಿ ಉಪ್ಪನ್ನು ಕಸಿದುಕೊಳ್ಳಲು ಬಂದರೆ "ಪೋಲೀಸರೇ ನೀವೂ ನಮ್ಮ ಅಣ್ಣತಮ್ಮಂದಿರಲ್ಲವೇ? ನಾವೂ ನೀವೂ ಒಬ್ಬಳೇ ತಾಯಿಯ ಮಕ್ಕಳಲ್ಲವೇ? ನಾವೂ ನಿಮ್ಮ ಅಕ್ಕತಂಗಿಯರಲ್ಲವೇ? ಎಂದು ಹೇಳಬೇಕೆಂತಲೂ, ಹಾಗೆ ಹೇಳಿದರೆ ಅವರಿಗೆ ನಾಚಿಕೆ ಹುಟ್ಟುವದೆಂತಲೂ ಮಹಾತ್ಮರು ಅವರಿಗೆ ಉಪದೇಶ ಮಾಡಿರುವರು. ನಮ್ಮಲ್ಲಿಯ ಪೋಲೀಸರು ಸ್ವಲ್ಪ ಬುದ್ಧಿ ಕಲಿಯುವರೋ?

### ಕಲಕತ್ತೆಯಲ್ಲಿ ದಂಗೆ ಆಯಿತು

ಅಧ್ಯಕ್ಷ ಜವಾಹರಲಾಲರನ್ನು ಹಿಡಿದ ದಿವಸ ಕಲಕತ್ತೆಯಲ್ಲಿ ಹರತಾಳವು ಪಾಲಿಸಲ್ಪಟ್ಟಿತು. ಟ್ರಾಮ ಕಂಪನಿಯವರು ತಮ್ಮ ಟ್ರಾಮ ಗಾಡಿಗಳ ಓಡಾಟವನ್ನು ಬಂದು ಮಾಡಲಿಲ್ಲ. ಇದನ್ನು ಸಹಿಸಲಾರದೆ ಶಾಲೆಯ ಕೆಲವು ಹುಡುಗರು ಜನರಿಲ್ಲದೆ ಬರಿದಾಗಿ ಓಡಾಡುತ್ತಿರುವ ಟ್ರಾಮ ಡಬ್ಬಿಗೆ ಪೆಟ್ರೋಲ ಉಗ್ಗಿ ಉರಿ ಹಚ್ಚಿಬಿಟ್ಟರು. ಮುಂದೆ ಆ ಉರಿಯನ್ನು ಆರಿಸಲಿಕ್ಕೆ ಬಂದ ಜನರಿಗೆ ಕಲ್ಲು ಒಗೆದರು ಪೋಲೀಸ ಸಾರ್ಜಂಟರಿಗೂ ಕಲ್ಲು ತಾಕಿದವು ಅವರು ಗುಂಡು ಹಾರಿಸಿ ನೆರೆದ ಗದ್ದಲವನ್ನು ಸರಿಸಿದರು

### ಮುಸಲ್ಮಾನರಿಗೂ ಬುದ್ಧಿ ಬಂತು.

ಮೌ. ಮಹಮ್ಮದ ಅಲ್ಲಿಯವರು ಗವ್ಹರ್ನರರಿಗೆ ಭೆಟ್ಟಿಯಾಗಿ ಮಹಾತ್ಮರನ್ನು ಹಿಡಿಯಕೂಡದೆಂತಲೂ, ಅವರನ್ನು ಹಿಡಿದರೆ ಸರಕಾರವು ಒಂದು ದೊಡ್ಡ ತಪ್ಪು ಮಾಡಿದಂತಾಗುವದೆಂದೂ ಹೇಳಿದರು. ಇವರು ಈಗ ಕಣ್ಣು ತೆರೆದರೋ? ಇನ್ನಾದರೂ ಮುಂದೆ ಬರಲಿ.

## ಹಿಂದುಸ್ಥಾನವೂ ಆಯರ್ಲಂಡದಂತೆ ಕೈ ಬಿಡುವದೋ ?

ಮೊನ್ನೆ ಕಲಕತ್ತೆಯಲ್ಲಿ ಆದ ದಂಗೆಯ ವಿಷಯದ ಚರ್ಚೆಯು ಪಾರ್ಲಮೆಂಟದಲ್ಲಿ ನಡೆದಕಾಲಕ್ಕೆ ಹಿಂದುಸ್ಥಾನದ ಸ್ಟೇಟಸೆಕ್ರೇಟರಿಗಳು ಬೆನ್ನಸಾಹೇಬರು, "ಹಿಂದುಸ್ಥಾನದಲ್ಲಿಯ ಚಳವಳಿಯು ಐರ್ಲಂಡಿನಷ್ಟೇನು ಚಿಂತಾಜನಕವಾಗಿಲ್ಲವೆಂದು ಹೇಳಿದರು. ಸಾಹೇಬರಿಗೆ ಇನ್ನೂ ಬಿಸಿ ಹತ್ತಿದಂತೆ ತೋರುವದಿಲ್ಲ. ಆದರೆ ಹಿಂದುಸ್ಥಾನದ ನಿಜವಾದ ಸ್ಥಿತಿಯು ಪೂರ್ಣವಾಗಿ ಗೊತ್ತಿರುವ ಒಬ್ಬ ಸಭಾಸದರು ಫೆನರ ಬ್ರಾಕವೇ ಎಂಬುವರು ಮಾತ್ರ ಸಾಹೇಬರನ್ನು ಚನ್ನಾಗಿ ತಿವಿದಿರುವರು. "ಐರ್ಲಂಡದವರು ತಮ್ಮ ಸ್ವಾತಂತ್ರ್ಯಕ್ಕಾಗಿ ಯಾವ ಬಗೆಯಿಂದ ಚಳವಳಿಯನ್ನು ಎಬ್ಬಿಸಿದ್ದರೋ ಅದೇ ಪ್ರಕಾರ ಈಗ ಹಿಂದುಸ್ಥಾನವು ದಿನದಿನಕ್ಕೆ ಹೆಚ್ಚು ಚಳವಳಿಯನ್ನು ಮಾಡುತ್ತಿರುವದು. ಇದಕ್ಕೆ ಬೆನ್ನಸಾಹೇಬರು ಏನಾದರೂ ಮಾರ್ಗ ಹುಡುಕುವರೋ" ಎಂದು ಬ್ರಾಕವೇಸಾಹೇಬರು ಕೇಳಿದರು. ರಾವಣನು ತನ್ನ ಶಕ್ತಿಯ ಮದದಿಂದ ರಾಮನ ದೈವೀಶಕ್ತಿಯ ಆಳವನ್ನು ಅರಿಯದೆ ಯುದ್ಧವನ್ನೇ ಹೂಡಬೇಕೆಂದ. ನ್ಯಾಯಿಸಿದ ಕಾಲದಲ್ಲಿ ವಿಭೀಷಣನು ಅವನಿಗೆ ಹಾಗೆ ಮಾಡಕೂಡದೆಂದು ಖರೆಖರೆಯಾಗಿ ಹೇಳಿದನು. ರಾಮನಿಗೆ ಅವನ ಪತ್ನಿಯನ್ನು ಒಪ್ಪಿಸಿ ಶರಣು ಹೋಗಲು ಉಪದೇಶಿಸಿದನು. ರಾವಣನು ಕೇಳಲಿಲ್ಲ. ರಕ್ಕಸ ಸ್ವಭಾವವೇ ಅದು. ವಿಭೀಷಣನು ಮಾತ್ರ ರಾಮನನ್ನು ಕೂಡಿಕೊಂಡನು. ನಮ್ಮ ಈ ಸಾಹೇಬರಲ್ಲಿಯೂ ಸಹ ಎಷ್ಟೋ ಜನರು ರಾವಣನ ಸ್ವಭಾವದವರೂ, ವಿಭೀಷಣನ ಸ್ವಭಾವದ ಮಂದಿ ಇರುವರು.

### ದಿಲ್ಲಿ

ಮಹಾತ್ಮನ ಮಗನಾದ ದೇವಿದಾಸ ಗಾಂಧಿಯವರಿಗೆ ರಾಜದ್ರೋಹದ ಆರೋಪದ ಮೇಲೆ ಒಂದು ಖಟ್ಲೆ ನಡೆದಿದ್ದು, ಉಪ್ಪಿನ ಕಟ್ಟಳೆ ಮುರಿದ ಕಾರಣ ಮೂರು ತಿಂಗಳ ಶಿಕ್ಷೆಯಾಯಿತು. ಮತ್ತೊಂದು ಖಟ್ಲೆಯೇಕೆ? ಮಹಾತ್ಮನ ಮಗನೆಂದು ಸರಕಾರವು ಹೆದರುವದೋ?

### ಕರಾಚಿ

ಕರಾಚಿಯಲ್ಲಿ ಪೋಲೀಸರು ಮಾಡಿದ ಗುಂಡುಗಳ ಸುರಿಮಳೆಯಲ್ಲಿ ಜಯರಾಮದಾಸ ದವಲತರಾಮ ಅಂದರೆ ಪರದೇಶಿ ವಸ್ತ್ರ ಬಹಿಷ್ಕಾರದ ಬೆಂಬಲಿಗರಾಗಿರುವವರು ಅವರಿಗೂ ಸಹ ಗುಂಡು ತಾಗಿ ಗಾಯವಾಗಿದ್ದು, ಹಿಡಿದವರನ್ನು ಜೇಲಿಗೆ ಒಯ್ಯುವಾಗ ಸಂಗಡ ಸೈನಿಕರ ಕಾವಲಿಟ್ಟಿದ್ದರಂತೆ. ಸರಕಾರವು ಬೆದರಿರುವದೋ?

### ಕಲಕತ್ತಾ.

ವಿದ್ಯಾರ್ಥಿಗಳೂ ಕಾಲೇಜದಲ್ಲಿಯೂ ಪಿಕೆಟಿಂಗ (ಶೆರೆಕುಡಿಯುವದನ್ನು ಬಿಡಿಸುವದು.) ನಡಿಸಿರುವರು. ನಮ್ಮ ವಿದ್ಯಾರ್ಥಿಗಳು ಏನು ಮಾಡುತ್ತಿರುವರು? ಪರೀಕ್ಷೆಗೆ ಹೋಗಲು ತಯಾರಾಗಿರುವರೋ?

ಹದಿನಾರು ಹುಡುಗರನ್ನು ಹಿಡಿದಿರುವರು. ಅಜಯ ಮೂಕರ್ಜಿ ಎಂಬ ಒಬ್ಬ ಸತ್ಯಾಗ್ರಹೀವೀರನಿಗೆ ಹದಿನೆಂಟು ತಿಂಗಳ ಕಠಿಣ ಶಿಕ್ಷೆಯನ್ನು ಕೊಟ್ಟರು.

ಕೆಲವು ಸತ್ಯಾಗ್ರಹಿಗಳು ಅಲಿಪೂರ ಜೇಲಿನಲ್ಲಿ ತಮ್ಮನ್ನು ಕೆಟ್ಟರೀತಿಯಿಂದ ನಡಿಸಿಕೊಂಡ ಕಾರಣ ಉಪವಾಸ ವ್ರತವನ್ನು ಹಿಡಿದಿರುವರು. ಜತೀಂದ್ರನಾಥ ದಾಸನಂಥ ತರುಣನು ಜೇಲಿನಲ್ಲಿ ಉಪವಾಸಮಾಡಿ ಸ್ವರ್ಗ ಹೊಂದಿದ ಮಾತನ್ನು ಸರಕಾರವು ಇಷ್ಟು ತೀವ್ರವೇ ಮರೆತಿತೋ?

### ಅಲಹಾಬಾದ,

ಜವಾಹಿರಲಾಲರನ್ನು "ಅ" ವರ್ಗದ ಬಂದಿಯವನನ್ನಾಗಿ ಮಾಡುವೆವೆಂದು ಸರಕಾರವು ಕೇಳಿದರೆ ಅವರು ಬೇಡವೆಂದು ಹೇಳಿದರಂತೆ. ಮಹಾತ್ಮನ ಆತ್ಮಶಕ್ತಿಯು ಈ ತರುಣ ಮಹಾತ್ಮನಲ್ಲಿಯೂ ಅಂಕುರಿಸಿತು. ಜವಾಹಿರಲಾಲರೇ ಧನ್ಯ.

### ನಾಗಪೂರ

ಅಭ್ಯಂಕರ ಎಂಬುವರು ಐವತ್ತು ಸ್ವಯಂಸೇವಕರೊಂದಿಗೆ ಉಪ್ಪಿನ ಕಟ್ಟಳೆಯನ್ನು ಮುರಿದರು. ಮಹಾರಾಷ್ಟ್ರವೂ ಕಣ್ಣು ತೆರದದೆ.

### ಕರ್ನಾಟಕ

ನಿಪ್ಪಾಣಿಯ ಹತ್ತರ ಹಳ್ಳಿಯಲ್ಲಿ ಶೇಡುಗು, ದರೋಡೆ, ಮನೆಸುಡುವದು, ಹೆಂಗಸರ ಮೇಲೆ ಅತ್ಯಾಚಾರ ಮಾಡುವದು ಮೊದಲಾದವುಗಳು ಕೆಲವು ಸ್ಥಳದಲ್ಲಿ ನಡೆಯುತ್ತಿರುವವಂತೆ. ಪೋಲೀಸರು ಏನು ಮಾಡುತ್ತಲಿರುವರು? ಸಿಂಹದಂಥ ನಿಶ್ಶಸ್ತ್ರರಾದ ಸತ್ಯಾಗ್ರಹಿಗಳನ್ನು ಹಿಡಿಯುವದರಲ್ಲಿ ತೊಡಗಿರುವರೋ? ದರವಡೆಖೋರರಿಗೆ ಹೆದರುವರೋ?

### ನಡಿಯಾದ

ಇಲ್ಲಿ ಭೀಕಾಭಾಯಿ ಎಂಬವರನ್ನು ಹಿಡಿದಿರುವರು. ಇವರು ಮುಂಬಯಿ ವಿಶ್ವವಿದ್ಯಾಲಯದ ಫೆಲೋ ಆಗಿದ್ದರು. ಮತ್ತು ಅಕಾಡೆಮಿಕ ಮಂಡಲದ ಸಭಾಸದರು, ಮತ್ತು ಆನಂದದಲ್ಲಿಯ ವಿದ್ಯಾಸಂಸ್ಥೆಯ ಮುಖ್ಯ ಅಧ್ಯಾಪಕರು. (ಹೆಡ್‌ಮಾಸ್ತರ) ಇಂಥವರನ್ನೂ ಹಿಡಿದಿರುವರು. ಸರಕಾರಕ್ಕೆ ಯಾರೇನು? ಬಿ. ಎ. ಆದಕೂಡಲೇ ಎದೆ ಉಬ್ಬಿಸಿಕೊಂಡು ಅಡ್ಡಾಡುವ ತರುಣರೇನು ಇತ್ತಕಡೆಗೆ ಸ್ವಲ್ಪ ತಮ್ಮ ಚಿತ್ತವನ್ನು ಗಮನಿಸುವರೋ? ನಮ್ಮಲ್ಲಿಯ ಶಾಲೆಯ ಅಧ್ಯಾಪಕರು ತಮ್ಮ ವ್ಯವಸಾಯ ಬಂಧವನ್ನು ಬಂಧಿಸಿದ್ದಕ್ಕೆ ಏನೆಂದರೂ ಮಾಡುವಂತಿರುವರೋ? ಶಾಲೆ ಬಿಟ್ಟಾಗಿನ್ನೂ ಹಾಕಿಕೊಳ್ಳುವ ವಿಚಾರ ಮಾಡಲಿ.

### ವರ್ಧಮಾನ

ಇಲ್ಲಿಯ ತಂತೀ ಕಚೇರಿಗಳಲ್ಲಿ ಸತ್ಯಾಗ್ರಹದ ಸುದ್ದಿಗಳನ್ನು ತೆಗೆದುಕೊಳ್ಳುವದಿಲ್ಲವಂತೆ, ಮತ್ತು ಕಳಿಸುವದೂ ಇಲ್ಲವಂತೆ. ಸತ್ಯಾಗ್ರಹಿಗಳ ಮೇಲೆ ಪೋಲೀಸರು ಮಾಡಿದ ಅತ್ಯಾಚಾರವನ್ನು ಮುಚ್ಚಿಡುವದಕ್ಕೆ ಈ ಆಟ ಹೂಡಿರುವರೋ?

ಈ ಪತ್ರವು ಬಲವಂತ ಅಣ್ಣಾರಾವ ದಾಮಾಪುರಕರ ಇವರಿಂದ ಬಾಗಲಕೋಟೆಯಲ್ಲಿಯ
ವಿದ್ಯಾರಣ್ಯ ಮುದ್ರಾಯಂತ್ರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೧—೩

ಜಯ ಕರ್ನಾಟಕ

ನಿತ್ಯ ಸಂಚಿಕೆಯು.

यच्च परवशं दुःखं । यद्यदात्मवशं सुखम् ॥ — मनु

ಸಂಪಾದಕರು :— ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಸೋಮವಾರ ಮಿತಿ ಚೈತ್ರ ಬಹುಳ ೮ ಶಕೆ ೧೮೫೪ ತಾ ೨೫—೪—೩೨ ಸಂಚಿಕೆ ೨೪

## ಹಿಂಸೆಯ ಹಾಲಿಯು.

ಈಗ ಮಹಾತ್ಮರು ನಡಿಸಿದ್ದ ಸಂಪೂರ್ಣ ಅಹಿಂಸಾ ಮಯ ಹೋರಾಟವು ಇಡೀ ಜಗತ್ತಿಗೆ ಗೊತ್ತಾಗಿರುವದು. ಜಗತ್ತಿನಲ್ಲಿ ಶಾಂತತೆಯನ್ನು ನೆಲೆಗೊಳಿಸಬೇಕೆಂದು ಅಹೋರಾತ್ರಿ ಚಿಂತಿಸುವ ೧೧ ಮಹಾಪುರುಷರಲ್ಲಿ ಮಹಾತ್ಮರ ಹೆಸರು ಒಂದಾಗಿರುವದು ಆದರೆ ಈ ಹನ್ನೊಂದು ಜನರಲ್ಲಿ ಮಹಾತ್ಮರು ಮೊದಲನೆಯವರೆಂದು ಸಿಪ್ಪಾಸ್ಯಾಪಾತಿಗಳು ಸ್ಪಷ್ಟವಾಗಿ ಒಪ್ಪಿಕೊಳ್ಳುವರು. ಇಡೀ ಜಗತ್ತಿನ ಅಭಿಪ್ರಾಯವೇ ಮಹಾತ್ಮರು ಶಾಂತತೆಯ ಅವತಾರವೇ ಎಂದು ಒಪ್ಪಿಕೊಳ್ಳುವಾಗ ನಮ್ಮ ಸರಕಾರಕ್ಕೆ ಮಹಾತ್ಮರ ಚಳವಳಿಯು ಹಿಂಸಾಪರವಾದದ್ದೆಂದು ಅನ್ನಲಿಕ್ಕೆ ಬಾಯಿಯಿಲ್ಲ. ಆದರೆ ಆಂಗ್ಲ ವೃತ್ತಪತ್ರಿಕಾಕಾರರು ಹಿಂಸೆಯ ಹಾಲಿಯನ್ನು ಎಬ್ಬಿಸಿ ಮಹಾತ್ಮರನ್ನು ತೀವ್ರವಾಗಿಯೇ ಸೆರೆ ಹಿಡಿಯಬೇಕೆಂಬ ಯತ್ನವನ್ನು ಅಖಂಡವಾಗಿ ನಡಿಸಿರುವರು. ಎಲ್ಲಿಯಾದರೂ ಸ್ವಲ್ಪ ಗೊಂದಲವಾದರೆ ಸಾಕು! "ಈ ಚಳವಳಿಯು ಶಾಂತಸ್ವರೂಪವನ್ನು ದಾಟಿ ಅತ್ಯಾಚಾರದ ಸ್ವರೂಪವನ್ನು ಹೊಂದಿತೆಂದು ಉಚ್ಚೋಷವನ್ನೆಬ್ಬಿಸುವರು. ಅದರಲ್ಲಂತೂ ಎಲ್ಲಿಯಾದರೂ ಜನರಿಂದ ಅತ್ಯಾಚಾರವಾದರೆ ಅಖಂಡ ಉಪವಾಸದ ಅವಲಂಬನವನ್ನು ಮಾಡುವೆವೆಂದು ಮಹಾತ್ಮರು ಸಾರಿದ್ದರಿಂದ ಈ ನಮ್ಮ ವೈರಿಗಳಿಗೆ ಮತ್ತಿಷ್ಟು ಚಲ್ಲಾಟವಾಗಿರುವದು, ಅತ್ಯಾಚಾರವನ್ನು ಮಾಡುವವರು ಯಾರು? ಜನರು ಶಾಂತಮಯವಾದ ಉಪಾಯಗಳಿಂದ ಚಳವಳಿಯನ್ನು ನಡಿಸಿರಲು ಸರಕಾರದ ದಿಂಡೇರಿಗೆ ಈ ತರದ ಅತ್ಯಾಚಾರಗಳನ್ನು ಮಾಡಲಿಕ್ಕೆ ಏನು ಕಾರಣವಿರುವದು? ಗುಜರಾಥದಲ್ಲಿ ಪೋಲೀಸರು ಕೈಯಲ್ಲಿಯ ಅಪ್ಪಸ್ತ್ರ ತೋರಿಸಿ ಸಿರಸಾಥಿ ಗ್ರಾಮದ ಕೆಲಜನರ ಮೇಲೆ ನಡಿಸಿದ ಹೇಯ ಕೃತಿಗಳನ್ನು ನೋಡಿದರೆ ಸರಕಾರದ ಬುದ್ಧಿಯು ಸಂಪೂರ್ಣವಾಗಿ ಹೋಗಿರುವದೆಂದು ತಿಳಿದುಬರುವದು. ಕಲಕತ್ತೆ ಮೊದಲಾದ ಸ್ಥಳಗಳಲ್ಲಿ ನಿಷ್ಕಾರಣವಾಗಿ ಜನರ ಮೇಲೆ ಅತ್ಯಾಚಾರಗಳನ್ನು ಮಾಡಿ— ಅದರ ದೋಷವನ್ನು ಜನರ ಮೇಲೆ ಹೊರಿಸುತ್ತಿರುವರು. ಸರಕಾರದ ಈ ಕುಟಿಲ ಯುಕ್ತಿಗಳು ಎಲ್ಲರಿಗೂ ಚನ್ನಾಗಿ ಗೊತ್ತಾಗಿರುವವು. ಸರಕಾರಕ್ಕೆ ನೆವಬೇಕಾಗಿರುವದು. ಹಿಂಸೆಯ ನೆವದಿಂದ ಈ ಚಳವಳಿಯನ್ನು ಮುರಿಯುವದೇ ಅವರ ವಿಚಾರವು. ಆದರಿಂದ ಜನರು ಮಾತ್ರ ಯಾವ ನೆವದಿಂದಲೂ ಸರಕಾರಕ್ಕೆ ಅವಸರ ದೊರೆಯುವಂತೆ ಎಂದಿಗೂ ಅವಸರ ಕೊಡಕೂಡದು. ಜನರೇ ಸಂಪೂರ್ಣ ಶಾಂತತೆಯಿಂದ ನಡೆದರೆ ಈ ಚಳವಳಿಯು ಯಶಸ್ವಿಯಾಗುವದರಲ್ಲಿ ಏನೂ ಸಂಶಯವಿಲ್ಲ ಈ ವಿಷಯವಾಗಿ ನಮ್ಮ ದೇಶಬಾಂಧವರು ಪೂರ್ಣ ಎಚ್ಚರಿಕೆಯಿಂದ ನಡಿಯಬೇಕಾಗಿ ನಮ್ಮ ಪ್ರಾರ್ಥನೆ.

### ಗೆಲವು ಕಟ್ಟಿಟ್ಟಿದ್ದು.

(ಸೌಶಕ್ರೀಡೆಯ ಧಾಟಿ)

ಭಾರತಿಯು ಬಂಧನದ ಹರಿಯುತ್ತ। ನಾಡಿನ ಯುವಕರು ಕ್ಷೋಭದಲಿ।
ಕಾರಾಗೃಹವನು ಬಿಗಿಲಿಕ್ಕಿಸದೆ। ಉಪ್ಪಿನ ಕಟ್ಟನೆ ಮುರಿಯುತ್ತ।
ವರಕೂಡರಂತೆ ಸಿಪಾಯಿಗಳವನು। ಕೈಯಲ್ಲಿ ಹಿಡಿದು ಸಾಗಿಹರು।

ಜೀವದ ಹಂಗನು ಹರಿದವರು।
ಪ್ರಾಣದ ಭೀತಿಯ ತೊರೆದವರು।
ರಣದಲ್ಲಿ ಮಡಿಯೆ ಹೆದರುವರೆ। ಆಳ್ವರ ಭೀತಿಗೆ ಬೆಚ್ಚುವರೆ ॥೧॥

ಶತಕೋಟಿ ಪ್ರಾಣಗಳು ಮುಂಬರುತಿರೆ। ಕುಳಿತಲ್ಲಿ ಕುಳಿತು ಬೇಸತ್ತು।
ಮತಭಾವನೆಯಿಲ್ಲದ ಕಿತ್ತೆಗೆದು ರಣರಂಗದಲ್ಲಿ ಕೇರುತಲಿ
ಪ್ರಾಣದ ಪರಿವೆಯ ಹರಿದೊಗೆದು। ಗಾಂಧಿಯ ಸೇವಕರಾಗಿಹರು।

ಗಾಂಧಿಯೆ ಪರಮ್ಯವತೆನೆಂದು।
ಬಂಧನ ತೋರುವ ಹರಿಯೆಂದು।
ಮೋಹನನ ಪದ ತಳದಿತೊರಲಾಗಿ। ಧನ್ಯತೆಯ ವ್ಯಕ್ತಪಡಿಸಿಹರು ॥೨॥

ದ್ವಾಪರದ ಕೃಷ್ಣ ಪರಮಾತ್ಮಾ। ತ್ರೇತಯುಗದ ಸತ್ಯ ಶ್ರೀರಾಮ।
ಕಲಿಯುಗದಿ ಭಾರತದ ಪರಮಾತ್ಮಾ। ಸಾಗಿಹನು ಧನ್ಯ ಮಹಾತ್ಮಾ।
ದೇವರ ದೇವನು ಮೋಹನನು। ಪೂರ್ತಿಯಗೊಳಿಸುವ ಕಾರ್ಯವನು।

ಹೀಗೆಂದು ಜನರು ಮುಂಬಂದು।
ಸಾಕೆಂದು ಮನೆಯ ಹಿಂಬಂದು।
ಭಾರತಿಯ ಸ್ವಾತಂತ್ರ್ಯಯಾಗಕ್ಕೆ। ಆಹುತಿಗೆಲ್ಲಾಗಿ ನಡೆದಿಹರು ॥೩॥

ಒಪ್ಪೊಂದು ಕಟ್ಟಿನಲಿ ಜಗವೆಲ್ಲ। ಕಟ್ಟಿಟ್ಟು ತಮ್ಮ ಸ್ವಾರ್ಥವನು।
ಹುಟ್ಟಿನ ರೊಟ್ಟಿಯ ಕಾಮ್ಮುವತೆ। ಒಟ್ಟಿಗೆ ಥಟ್ಟನದಲ್ಲಿ।
ಕಟ್ಟನು ಮೆಟ್ಟಲು ಭಾರತಿಯು। ಒಕ್ಕಟ್ಟೆ ನಮ್ಮ ಮೂರ್ತಿ ಸಹ।

ಕೆಲಾ ದಮ್ಮಯ್ಯ ಹೃದಯವನು।
ಬೀರುತ ತಾಯಿಯ ಬ್ಯಾಯಿತನು।
ಭಾರತದ ಗರ್ಜನೆಯ ಭೋರ್ಗರೆಯೆ। ಬಾರಾಗ ಪರಿಮಾವನು ಕಟ್ಟಿಟ್ಟಿದ್ದು ॥೪॥

— ಫಿಷ್ಪೇಕರ

# ಶ್ರೀ. ದಿವಾಕರರ ಸಂದೇಶವು

## ಜನತೆಗೆ ಬಿನ್ನಹ.

ಇಡೀ ದೇಶದಲ್ಲಿಯೂ ಕರ್ನಾಟಕದಲ್ಲಿಯೂ ಚಳುವಳಿಯು ರಭಸದಿಂದ ಪ್ರಾರಂಭವಾಗಿದೆ. ಇದರಿಂದ ಸತ್ಯಾಗ್ರಹದ ಪರಿಣಾಮವಾಗುತ್ತಿದೆಯೆಂದು ತಿಳಿಯುತ್ತದೆ. ಸಾವಿರಾರು ಜನರ ಸಭೆಗಳಲ್ಲಿ ಕಾಯಿದೆ ವಿರುದ್ಧವಾದ ಉಪ್ಪಿನ ವ್ಯಾಪಾರವಾಗತೊಡಗಿದೆ. ಸರಕಾರದವರು ಮಾತ್ರ ಮುಖಂಡರನ್ನೇ ವಿಶೇಷ ಕಾರ್ಯಕರ್ತರನ್ನೇ ಹಿಡಿಯುದೇಕೆಂದು ನಿಶ್ಚಯಿಸಿದ್ದಾರೆ. ಇದರಿಂದ ಎಲ್ಲ ಸತ್ಯಾಗ್ರಹಿಗಳೂ (೧) ಮುಖಂಡರಿಲ್ಲದೆ ಈ ಚಳವಳಿಯನ್ನು ಸಾಗಿಸಬೇಕು. (೨) ಹೆಚ್ಚು ಕಾರ್ಯಕರ್ತರಾಗಬೇಕು. (೩) ಹೆಚ್ಚು ಸತ್ಯಾಗ್ರಹಿಗಳನ್ನು ಕೂಡಿಸಬೇಕೆಂದು ಆವ್ಹಾನಿಸಲ್ಪಟ್ಟಿದ್ದಾರೆ.

ಕರ್ನಾಟಕವು ಚಿಕ್ಕ ಪ್ರಾಂತವಾದರೂ ದೇಶದ ವಿಷಯದಲ್ಲಿ ತನ್ನ ಕರ್ತವ್ಯವನ್ನು ಮಾಡಬೇಕು. ಇದೊಂದು ಈಶ ಪ್ರೇರಣೆಯಿಂದ ಉಂಟಾದ ಚಳವಳಿಯು. ಇದರಲ್ಲಿ ಎಲ್ಲ ಜಾತಿಯವರೂ ಅಹಮಹಮಿಕೆಯಿಂದ ಭಾಗತೆಗೆದುಕೊಳ್ಳುತ್ತಿರುವರು. ಈಗ ಎಲ್ಲರ ಮುಂದೆ ಇದ್ದ ಸಾಮಾನ್ಯ ಧ್ಯೇಯದಿಂದಲೂ, ಎಲ್ಲರೂ ಅನುಭೋಗಿಸುವ ಕಷ್ಟನಷ್ಟಗಳಿಂದಲೂ ನಮ್ಮ ಐಕ್ಯವು ದೃಢವಾಗಿ ಒಮ್ಮನಸಿನಿಂದ ಎಲ್ಲರೂ ಕಾರ್ಯಕರ್ತರಾಗುವದಕ್ಕೆ ಪ್ರೇರಣೆಯನ್ನುಂಟುಮಾಡಲಿ.

ಈ ಸಂಗ್ರಾಮವು ಸ್ವಲ್ಪಕಾಲಮಾತ್ರ ಬಹು ರಭಸದಿಂದ ನಡೆಯುವದು. ನಾವು ಒಂದು ಕ್ಷಣ ಕೂಡ ಕಳೆಯದೆ ನಮ್ಮ ಶಕ್ತಿಸರ್ವಸ್ವವನ್ನು ಈಗಲೇ ಉಪಯೋಗಿಸಬೇಕಾಗುವದು. ಪ್ರತಿಯೊಬ್ಬ ಸತ್ಯಾಗ್ರಹಿಯೂ ತನ್ನಲ್ಲಿ ಒಂದು ಹನಿ ರಕ್ತ ಉಳಿಯುವವರೆಗೆ ಅಂದರೆ ಕೊನೆಯವರೆಗೂ ಕಾದಿ ಮಡಿಯುವೆವೆಂದು ಪಣ ತೊಡಲಿಕ್ಕೆ ಬೇಕು. ಉಳಿದವರು ಸುಮ್ಮನೇ ಕೂಡಬಾರದು. ಈ ಪವಿತ್ರ ಸಂಗ್ರಾಮದಲ್ಲಿ ಯಾವದೇ ರೀತಿಯಿಂದ ಆದಷ್ಟು ಹೆಚ್ಚು ಭಾಗವನ್ನು ತೆಗೆದುಕೊಳ್ಳುವದು ಪ್ರತಿಯೊಬ್ಬನ ಧರ್ಮವಾಗಿದೆ. ಸತ್ಯ ಹಾಗು ಅಹಿಂಸೆಗಳೇ ನಮ್ಮ ತಳಹದಿಯಾಗಿದೆ. ಅತ್ಯಂತ ಶಿಸ್ತಿನಿಂದ ಹಾಗು ಸಂಘಟನೆಯಿಂದ ನಡೆದರೆ ಮಾತ್ರ ನಮಗೆ ಜಯವು ದೊರೆಯುವದು.

ಧಾರವಾಡ. ೧೭—೪—೩೦<br>ಘಂಟೆ ೧೧—೩೦

ರಂಗನಾಥ ದಿವಾಕರ.

## ಕಾಯಿದೆಭಂಗ ಸತ್ಯಾಗ್ರಹದ ಪ್ರಸಾರ

### ಕರಾಚಿ

ಇಲ್ಲಿಯ ಇಬ್ಬರು ಸತ್ಯಾಗ್ರಹಿಗಳಿಗೆ ಎರಡು ವರ್ಷದ ಶಿಕ್ಷೆಯಾಗಿದೆ. ದತ್ತಾತ್ರೇಯನೆಂಬ ಒಬ್ಬ ಮಹಾರಾಷ್ಟ್ರ ಸ್ವಯಂಸೇವಕನು ಸತ್ತಿರುವನು. ಜನರು ಬಹಳ ನಿಷ್ಠೆಯಿಂದ ಅವನ ಶವವನ್ನು ಮೆರೆಸಿಕೊಂಡು ಅವನ ಸ್ಮಶಾನಯಾತ್ರೆಯನ್ನು ಮಾಡಿದರು. ಮತ್ತೊಬ್ಬ ಸಿಂಧೀ ಸ್ವಯಂಸೇವಕನೂ ತೀರಿಕೊಂಡಿರುವನು. ಕರೇನಿಶಾನಗಳಿಂದ ಅವನ ಮೆರವಣಿಗೆಯನ್ನು ಸ್ಮಶಾನದವರೆಗೆ ಹೊಯ್ದಿದ್ದರು. ಜಯರಾಮದಾಸ ದವಲತ್ರಾಮ ಇವರಿಗೆ ಗುಂಡು ತಗಲಿದ್ದಕ್ಕಾಗಿ ಪೋಲೀಸ ಕಮೀಶನರು ದುಃಖವನ್ನು ವ್ಯಕ್ತ ಮಾಡಿರುವರು. ಈ ಹೊರಗಿನ ಜಾಲದಿಂದ ಆಗುವದೇನು.

### ಸುರತ.

ಇಲ್ಲಿಯ ಒಬ್ಬರು ಮುಖಂಡರಿಗೆ ಎರಡು ವರ್ಷಗಳ ಶಿಕ್ಷೆಯಾಗಿರುವದು. ಇದರ ಹೊರತು ಸರಕಾರವು ಮಾಡುವದೇನು,

### ಅಲಾಹಾಬಾದ.

ಮೋತೀಲಾಲ ನೆಹರುರವರು ರಾಷ್ಟ್ರಸಭೆಯ ಅಧ್ಯಕ್ಷರಾದರು. ಇವರ ಪತ್ನಿಯು ಸ್ತ್ರೀಯರನ್ನು ಕೂಡಿಸಿ ಖಾದೀ ಒಟ್ಟಿಯನ್ನು ಹೂಡಲು ಉಪದೇಶಿಸಿದಳು. ಮತ್ತು ಸ್ವತಃ ತಮ್ಮ ಕೈಯಿಂದ ಕಟ್ಟಿಗೆಯನ್ನು ಹಾಕಿ ಬೆಂಕೀ ಹಚ್ಚಿ ಉಪ್ಪಿನ ನೀರು ಕಾಸಲು ಸಹಾಯಮಾಡಿದರು. ಮೋತೀಲಾಲರು ಈಗೆರಡು ದಿವಸಗಳಿಂದ ಈ ಕೆಲಸವನ್ನು ನಡಿಸಿಯೇ ಇರುವರು. ಜವಾಹೀರಲಾಲರಂತೂ ಈ ಕೆಲಸವನ್ನು ಮಾಡಿ ಕಾರಾಗ್ರಹದಲ್ಲಿ ಕುಳಿತಿರುವರು.

### ಮೀರತ.

ಇಲ್ಲಿಯ ಮುಖಂಡರನ್ನು ಹಿಡಿದಿರುವರು. ಒಬ್ಬ ಜಾಟಿ ವಿದ್ಯಾರ್ಥಿಯು ಮುಂದೆ ಬಂದಿರುವನು. ಉಪ್ಪಿನ ಮಾರಾಟದಿಂದ ಏಳೂವರೆ ನೂರು ರೂಪಾಯಿಗಳು ಬಂದಿವೆ. ಏಳೂವರೆ ಈ ಅಂಕಿಯು ಶನಿಕಾಟವನ್ನು ತೋರಿಸುತ್ತದೆ. ಸರಕಾರಕ್ಕೂ ಶನಿಯಕಾಟವು ಹತ್ತಿರುವದೋ?

### ಬೊರಸಾದ,

ಇಲ್ಲಿಯ ವ್ಯಾಪಾರಿಗಳು ಪರದೇಶಿ ಬಟ್ಟೆಗಳಿಗೆ ಪೂರ್ಣಬಹಿಷ್ಕಾರ ಹಾಕಿರುವರು. ನಮ್ಮಲ್ಲಿಯ ವ್ಯಾಪಾರಿಗಳು ಕಣ್ಣುಮುಚ್ಚಿರುವರೋ?

---

ಎಂ. ಜಿ. ಬಿ. ಆರಳಿಕಟ್ಟಿ ಎಂಬ ತರುಣವೀರರೊಬ್ಬರು ತಮ್ಮ ಅಣ್ಣನಾದ ದಯಾನಂದ ಆರಳಿಕಟ್ಟಿ ಎಂಬವರನ್ನು ಸರಕಾರವು ಶಿಕ್ಷಿಸಿದ್ದಕ್ಕಾಗಿ ಅವರ ಸ್ಥಾನಕ್ಕೆ ಬಂದು ನಿಂತಿರುವರು. ತಮ್ಮ ಮೈಮೇಲಿನ ಪರದೇಶೀ ಬಟ್ಟೆಗಳನ್ನು ಸುಟ್ಟು ಬೂದಿ ಮಾಡಿರುವರು. ಇವರು ಈಗ ಸತ್ಯಾಗ್ರಹ ಯುದ್ಧವನ್ನು ಮುಂದೆ ಸಾಗಿಸಲು ಹೊರಡುತ್ತಿರುವರು. ಕರ್ನಾಟಕದ ತರುಣರು ಇವರ ಮಾದರಿಯನ್ನು ಅನುಸರಿಸಿ ಮುಂದೆ ಬರಲಿ. ಅಣ್ಣನು ಹೋದರೆ ತಮ್ಮನು ಬಂದು ನಿಂತನು. ಸ್ವಯಂಸೇವಕರನ್ನು ಜೇಲಿಗೆ ಕಳಿಸಲು ಸರಕಾರವು ಸಿದ್ಧವಾಗಲಿ. ಇತ್ತ ಸ್ವಯಂಸೇವಕ ಸೇನೆಯೂ ಸಿದ್ಧವಾಗಲಿ. ಸರಕಾರದ ಬಣ್ಣವು ತಿಳಿಯಲಿ.

## ಅಂಕೋಲೆಯ ರಣಭೂಮಿಯು.

# ಕೌಜಲಗಿ ಹಣಮಂತರಾಯರಿಗೆ

## ೩ ತಿಂಗಳು ಸಜೆ ೧೦೦ ರೂಪಾಯಿ ದಂಡ.

## ಗಲಗಲಿ ಸ್ವಾಮಿಗೆ ೧ ವರ್ಷದ ಕಠಿಣ ಶಿಕ್ಷೆ!

## ಉಳಿದ ಸ್ವಯಂಸೇವಕರನ್ನು ಬಿಟ್ಟುಬಿಟ್ಟರು!

ಅಂಕೋಲೆಯಲ್ಲಿ ಹೂಡಿದ ಸತ್ಯಾಗ್ರಹ ಸಂಗ್ರಾಮದ ಸೇನಾಧಿಪತಿಗಳಾದ ದಿವಾಕರರು ೩೦ ತಿಂಗಳ ವರೆಗೆ ಕಾರಾಗೃಹಕ್ಕೆ ಅಟ್ಟಲ್ಪಟ್ಟರು. ಅವರ ಸ್ಥಾನದಲ್ಲಿಯೇ ಹಣಮಂತರಾಯರು ಸೇನಾಪತಿಗಳಾಗಿ ಬಂದು ನಿಂತರು. ಕರ್ನಾಟಕ ಸತ್ಯಾಗ್ರಹ ಯುದ್ಧಮಂಡಲದ ಅಧ್ಯಕ್ಷರಿವರು. ಇವರು ಸರಕಾರದ ಕಣ್ಣುಗಳಲ್ಲಿ [illegible] ಎಂಬುವಂತೆ 'ಇವರಿಗೆ ಮೂರು ತಿಂಗಳ ಮೇಲೆ ಮೂರು ವಾರಗಳ (೧೦೦ ರೂಪಾಯಿ ದಂಡ ಕೊಡದಿದ್ದರೆ) ಶಿಕ್ಷೆಯಾಗಿರುವದು. ಹಣಮಂತರಾಯರ ಹಿಂದೆ ನಿಂತು ಸತ್ಯಾಗ್ರಹ ಯುದ್ಧವನ್ನು ನಡೆಸಿದ [illegible] ಎಲ್ಲರಿಗೂ ಅಷ್ಟೇ ಶಿಕ್ಷೆಯಾಗಿರುವದು. ಗಲಗಲಿಯ ಸ್ವಾಮಿ [illegible] ಎಂಬವರಿಗೆ ಒಂದು ವರ್ಷ ಕಠಿಣ ಶಿಕ್ಷೆಯಾಗಿ ಕಾರಾಗೃಹಕ್ಕೆ ಅಟ್ಟಿರುವರು. ಮಿಕ್ಕ [illegible] ಸ್ವಯಂಸೇವಕರನ್ನು ಹಿಡಿದು ಒಂದು ದಿವಸ [illegible] ಬಿಟ್ಟರು. ಹೊಸ ಸೈನಿಕರು ತಮ್ಮ ತಮ್ಮ [illegible]. ತಮ್ಮ ದೇಶವನ್ನು [illegible] ಪ್ರತಿಯೊಬ್ಬ ಕನ್ನಡಿಗನು ಮುಂದೆ ಬರ[illegible] ಹೊಸೆದು ಸಮರಕ್ಕೆ [illegible] ಇಂಥ ಸಮಯದಲ್ಲಿ [illegible] ವರ್ಷಗಳಿಂದ [illegible] ದಲ್ಲಿ ಸುಮ್ಮನೆ ಕುಳಿತರೆ [illegible] ಬಂಗಾರದ [illegible] ಎಷ್ಟು ದಿನ ಇದೆ ಎಂಬುವದನ್ನು [illegible] ಪಡುತ್ತಿರುವೆವು. [illegible] ಕರ್ನಾಟಕದ [illegible] ಜನರಿಂದ [illegible] ಕರ್ನಾಟಕದಲ್ಲಿ ವಿಜಯನಗರದ ರಾಜ್ಯವನ್ನು ಸ್ಥಾಪಿಸಿ [illegible] ರಾಜಕಾರ್ಯಗಳನ್ನು ತಮ್ಮ ಕೈಯಲ್ಲಿಟ್ಟುಕೊಂಡು ಅತಿ ವೈಭವದಿಂದ ಮೆರೆದ ಆ ರಾಜರೂ ವೀರರೂ ನಮ್ಮ ಪೂರ್ವಜರಲ್ಲವೆ? ಅವರ ರಕ್ತವೂ ಅವರ ಧೈರ್ಯ ಶೌರ್ಯ ಸಾಹಸ ಮೊದಲಾದ ಗುಣಗಳು ನಮ್ಮಲ್ಲಿ ಇಲ್ಲವೇ? ಹೆಣ್ಣುಮಕ್ಕಳಾದರೂ ನಾವು [illegible]; ನಾವೇನು ಮಾಡುವದದೆ ಎಂದು ಮೂಗು [illegible] ಬಿಟ್ಟು [illegible] ಸ್ವಯಂಸೇವಕರಾಗಿ ಸಮರಕ್ಕೆ ತೆರಳಿರಿ. [illegible] ಉಳಿಸಿಕೊಂಡು [illegible] ಹೋರಾಟವನ್ನು [illegible] ದೇವರನ್ನು ಮಹಾತ್ಮರ ಈ ಚಳವಳಿಯಲ್ಲಿ ಯಶವನ್ನು ದೊರೆಯಲೆಂದು ಪ್ರಾರ್ಥಿಸಿರಿ.

### ಅಂಕೋಲೆಯ ಸತ್ಯಾಗ್ರಹ ಶಿಬಿರ

ತಾ॥ ೧೩ ನೇ ದಿವಸ ಶ್ರೀ ನಾಡಕರ್ಣಿ ಇವರ ನೇತೃತ್ವದಲ್ಲಿ ಸತ್ಯಾಗ್ರಹವು [illegible] ತಾ॥ ೧೪ [illegible] ಶ್ರೀ ನಾಡಕರ್ಣಿ ಇವರಿಗೆ [illegible] ೬ ತಿಂಗಳ ಸಜೆಯಾಯಿತು. ಶ್ರೀ ಸ್ವಾಮಿ ವಿದ್ಯಾನಂದರವರಿಗೆ ೧ ವರ್ಷ ಕಠಿಣ ಶಿಕ್ಷೆಯಾಯಿತು.

ತಾ॥ ೧೫ ನೇ [illegible] ೧ ವರ್ಷ ಕಠಿಣ [illegible] ೨೦೦ ರೂಪಾಯಿ ದಂಡ [illegible] ೬ ತಿಂಗಳ ಸಜೆ.

[illegible] ಶ್ರೀ [illegible] ೧ ವರ್ಷ [illegible] ೨೦೦ ರೂಪಾಯಿ [illegible] ೩ ತಿಂಗಳ [illegible] ಶಿಕ್ಷೆ [illegible] ಸತ್ಯಾಗ್ರಹ [illegible].

ಈ ಹೊತ್ತು [illegible] ೩೦ ಸ್ವಯಂಸೇವಕರು [illegible] ೧ ವರ್ಷದ [illegible] ಶಿಕ್ಷೆ.

### ಇತರವೃತ್ತ.

[illegible] ದಿವಸ [illegible] ೬ ತಿಂಗಳ [illegible] ಗಳನ್ನು [illegible] ಮಾಡಿ ವರೊ?

[illegible] ಕರ್ನಾಟಕದ ಸತ್ಯಾಗ್ರಹವು [illegible] ಎಂಬ ವಿಷಯದ ಮೇಲೆ ವ್ಯಾಖ್ಯಾನವಾಯಿತು. [illegible] ಗಳ ಸೋಳಿ ಮಾಡಿದರು

## ರಾಷ್ಟ್ರಸೇನೆಯ ನಿರ್ಮಾಣವು.

ಸ್ವರಾಜ್ಯಪ್ರಾಪ್ತಿಯ ವರೆಗೂ ಏಕನಿಷ್ಠೆಯಿಂದ ಹೆಣಗಾಡಲಿಚ್ಛಿಸುವ ಗುಜರಾಥದಲ್ಲಿಯ ಎಲ್ಲ ಸ್ವಯಂಸೇವಕರ ಸಮ್ಮೇಲನವನ್ನು ಮಹಾತ್ಮರು ಮೊನ್ನೆ ನಡಿಯಾದದಲ್ಲಿ ಕರೆದಿದ್ದರು. ಆ ಸಮ್ಮೇಲನಕ್ಕೆ ಸುಮಾರು ೫೦೦ ಸ್ವಯಂಸೇವಕರು ಆಗಮಿಸಿದ್ದರು, ಸಮ್ಮೇಲನದಲ್ಲಿ ರಾಷ್ಟ್ರಸೇನೆಯ ಘಟನೆಯ ಬಗ್ಗೆ ಚರ್ಚೆ ನಡೆದು, ಕಟ್ಟಕಡೆಗೆ ಇಂಥ ಒಂದು ಸೇನೆಯನ್ನು ಕಟ್ಟಬೇಕೆಂದು ನಿರ್ಣಯವಾಯಿತು. ಈ ಸೇನೆಯೊಳಗಿನ ಸೈನಿಕರೆಲ್ಲರೂ ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಗುವವರೆಗೆ ತಮ್ಮ ಜೀವನದ ಅನ್ಯಗೊಡವೆಗಳನ್ನು ಅನುಸರಿಸದೆ ಕೇವಲ ಸ್ವರಾಜ್ಯಪ್ರಾಪ್ತಿಗಾಗಿಯೇ ದುಡಿಯುತ್ತಿದ್ದರೆ [illegible] ಸ್ವಯಂಸೇವಕರು [illegible] ಕಾರ್ಯಕ್ಕೆ ಹತ್ತಿ [illegible] ವದಿಲ್ಲವೆಂದು ಪ್ರಾಮಾಣಿಕದಿಂದ ಹೇಳಿದ್ದಕ್ಕೆ ಗಾಂಧಿಯವರು ಅವರ ಪ್ರಾಮಾಣಿಕತನವನ್ನು ಹೊಗಳಿ [illegible] ಇತರ ಕೆಲಸಗಳನ್ನು [illegible] ಈ ಸೈನಿಕರ [illegible] ಬಗ್ಗೆ ವಿವೇಚನೆ ನಡೆದು, ಈ ರಾಷ್ಟ್ರಸೇನೆಯೊಳಗಿನ [illegible] ಅತಿಶಯ [illegible] ವೇದಾಂತಿಗಳಿಂದಲೂ [illegible] ಗೊತ್ತಾಯಿತು. ಮತ್ತು [illegible] ಸೈನಿಕನು [illegible] ಸಿಗದ [illegible] ಮಾದಕ ದ್ರವ್ಯಗಳನ್ನು ಸೇವಿಸಕೂಡದು. [illegible] ಮೈಲಿಗೆ ಬಿಡಲೆತ್ತ [illegible] ಇಂಥವರೂ [illegible] ಜನ ಕೂಡಿದರು. ಇಂತು ಸ್ವರಾಜ್ಯ ಸಿಪಾಯಿಗಳ ದಂಡನ್ನೊಂದು ನಿರ್ಮಾಣಮಾಡಿ ಅವರಿಗೆ ಗಾಂಧಿಯವರು ಅಹಿಂಸೆ ಮಂತ್ರದ ಉಪದೇಶ ಮಾಡಿದರು. [illegible] ಸಂಭವಿಸಿದ [illegible] ದಂಗೆಗಳಲ್ಲಿ [illegible] ಜನರ [illegible] ಅತ್ಯಾಚಾರಗಳು ಸಂಭವಿಸಲಿಕ್ಕಿಲ್ಲೆಂದು ನಾನೇನು ಹೇಳಿದ್ದಿಲ್ಲ. ಹಿಂದುಸ್ಥಾನದ [illegible] ದೇಶದಲ್ಲಿ ನಾನು [illegible] ಶಾಂತತೆಯನ್ನು [illegible] ಉಪಟ್ಟಳದ [illegible] ಜನರು [illegible] ಧರ್ಮವೇ ಆಗಿಹೋಗಿದೆ. ಗುಜರಾಥದಲ್ಲಿ ಇಂಥ ಅತ್ಯಾಚಾರಗಳು ಸಂಭವಿಸಲಿಕ್ಕಿಲ್ಲೆಂದು ನನ್ನ ನಂಬಿಗೆ ಇದೆ, ಉಪ್ಪಿನ ಕಾಯಿದೆಯು ಕಾಯಿದೆಪುಸ್ತಕದಲ್ಲಿ ಮಾತ್ರ ಜೀವಂತವಾಗಿ ಉಳಿದಿದೆ. ಇನ್ನು [illegible] ದಿನ [illegible] ನೀವು ರಾಷ್ಟ್ರಸೈನಿಕರು [illegible] ಭಾಷಣಮಾಡಿದರು, [illegible] ರಾಷ್ಟ್ರಸೇವಾವ್ರತ [illegible] ಜನರಿಂದ ರಾಷ್ಟ್ರಸೇನೆಯ [illegible] ಸಿದ್ಧವಾಗಬೇಕು. ಗಾಂಧಿಜಿಯವರ [illegible] ಪ್ರಾಂತಿಯ [illegible] ಉದ್ಧಾರಿಸಬೇಕು. [illegible] ಬೇಕಾದ [illegible] ನಮ್ಮ [illegible]

## ಜವಾಹರಲಾಲರ ಪತ್ನಿಯವರು ಸ್ವತಂತ್ರ ಉಪ್ಪು ಮಾರಹತ್ತಿರುವರು,

ಅಂತೂ ನೇಹರು ಕುಟುಂಬವೇ ರಾಷ್ಟ್ರಕಾರ್ಯಕ್ಕೆ ಸಿದ್ಧವಾಗಿದೆ. ಕರ್ನಾಟಕದಲ್ಲಿಯಾದರೂ ಇಂಥ ಒಂದು ಕುಟುಂಬವು ಸಿದ್ಧವಾಗ ಬಹುದೋ ?

## ಕರ್ನಾಟಕ ಸತ್ಯಾಗ್ರಹದ ಪ್ರಥಮ ಪಥಕ.

ಪತ್ರಿಕೆ

ಮುಂಜಾನೆ [illegible] ಕ್ಕೆ ಸತ್ಯಾಗ್ರಹ ಪಥಕವು ಹುಂಡಸಿಯನ್ನು ಮುಟ್ಟಿತು. ಅಲ್ಲಿ ಊರಿನವರು ಮೆರವಣಿಗೆಯನ್ನು ತೆಗೆದರು. [illegible] ವೇಳೆಗೆ ಒಂದು ಸಭೆ ಸೇರಿತು. [illegible] ಮಂದಿ ನೆರೆದಿದ್ದರು. ಅಲ್ಲಿ ಶ್ರೀ [illegible] ಯವರು ಭಾರತೀಯ [illegible] ಮತ್ತು [illegible] ಜನ ಹೂಟಿರುವ ಉದ್ದೇಶವನ್ನು ಕುರಿತು ವ್ಯಾಖ್ಯಾನ ಮಾಡಿದರು. ಸಭೆಯಲ್ಲಿ [illegible] ಗಳು [illegible], ಅಲ್ಲಿಂದ [illegible] ಗೆ ಹೊರಟೆವು. ಹಾದಿಯಲ್ಲಿದ್ದ [illegible] ಗ್ರಾಮದ ಜನರು ಬಂದು ಅವರ ಗ್ರಾಮದಲ್ಲಿ [illegible] ಹೋಗಬೇಕೆಂದು ಹೇಳಿಕೊಂಡು [illegible] ಅದಕ್ಕೆ ಒಪ್ಪಿ [illegible] ಸ್ವಲ್ಪ ನಿಂದೆವು. ಅಲ್ಲಿಯೂ ಒಂದು ಚಿಕ್ಕ ಸಭೆ ಕೂಡಿತು ಶ್ರೀ [illegible] ಯವರು [illegible] ನಿಮಿಷಗಳವರೆಗೆ [illegible] ಹಾಗೂ ನಮ್ಮ ಕರ್ತವ್ಯದ ವಿಷಯವಾಗಿ ವ್ಯಾಖ್ಯಾನಮಾಡಿದರು. ಅಲ್ಲಿ [illegible] ಗಳು ದೊರೆತವು. ಅಲ್ಲಿಂದ ಹೊರಟು [illegible] ಯನ್ನು [illegible] ಗಂಟೆ ವೇಳೆಗೆ ಮುಟ್ಟಿದೆವು. ಅಲ್ಲಿಯ ಜನರು ನಮ್ಮ [illegible] ಕಾದಿದ್ದು ಊರೊಳಗೆ ಕರೆದೊಯ್ದರು [illegible] ಹಾಕಲಾಯಿತು [illegible] ನಮ್ಮ [illegible] ಯಿತು. ಮುನ್ನ ರಾತ್ರಿ [illegible] ಘಂಟೆಗೆ [illegible] ಮೆರವಣಿಗೆಯಾಯಿತು. ಸ್ವಯಂಸೇವಕರೆಲ್ಲರೂ [illegible] ಊರಿನವರ [illegible] ಅವರ ಮನಸ್ಸಂತೋಷ [illegible] ಆದಕ್ಕೆ [illegible] ಊರನ್ನೆಲ್ಲ [illegible] ತೋರಣಗಳಿಂದ ಅಲಂಕರಿಸಿದ್ದರು. ಅವರ ಉತ್ಸಾಹವಂತೂ ಹೇಳತೀರದು. ಎಲ್ಲೆಲ್ಲಿಯೂ [illegible] ಕೈ ಎತ್ತಿ ತಮ್ಮ ಮನಸ್ಸಂತೋಷ [illegible] ಎಲ್ಲೆಲ್ಲಿಯೂ [illegible] ತಮ್ಮ ತಮ್ಮ ಮನೆಗಳ ಬಾಗಿಲಲ್ಲಿ [illegible]. [illegible] ಘಂಟೆಗೆ ಮೆರವಣಿಗೆ ಮುಗಿಯಿತು. [illegible] ಘಂಟೆಗೆ ಸಭೆ ಸೇರಿತು. ಅದರಲ್ಲಿ ಶ್ರೀ [illegible] ಯವರು [illegible] ಭಾಷಣ ಮಾಡಿದರು ಮತ್ತು ಆ ಸಭೆಯಲ್ಲಿ [illegible] ರಾಷ್ಟ್ರ [illegible] ಪಂಡಿತ ಜವಹರಲಾಲ ನೆಹರು [illegible] ನಿಷೇಧ [illegible] ಊರಿನಲ್ಲಿ ಪಂಡಿತ ನೆಹರ, ಅವರನ್ನು ಹಿಡಿದುದಕ್ಕಾಗಿ ಸಂಪೂರ್ಣ ಹರತಾಳ ಮಾಡಿದ್ದರು [illegible] ಗಳು ದೊರೆತವು. ಅಲ್ಲದೆ [illegible] ಸತ್ಯಾಗ್ರಹಿಗಳಾಗಲು, ಹೆಸರು ಕೊಟ್ಟಿದ್ದಾರೆ.

ಮುಂಜಾನೆ [illegible] ನಂತರ ಗ್ರಾಮಸ್ಥರು ಗ್ರಾಮದ [illegible] ನಮ್ಮ ಹಿಂದೆ ಬಂದು ನಮ್ಮನ್ನು ಕಳಿಸಿಕೊಟ್ಟು ಹಿಂದಿರುಗಿದರು. [illegible] ಘಂಟೆಗೆ ಸರಿಯಾಗಿ [illegible] ಮುಟ್ಟಿದೆವು.

[illegible] } [illegible]
[illegible] } ಪ್ರಕಟನ ಕಾರ್ಯದರ್ಶಿ,

ಈ ಪತ್ರಿಕೆಯು [illegible] ಬಾಗಲಕೋಟೆಯಲ್ಲಿಯ [illegible] ಮುದ್ರಿತವಾಗಿ [illegible] ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

ನಿತ್ಯಪತ್ರಿಕೆಯು.

ಬಾಗಲಕೋಟೆ ಮಂಗಳವಾರ ಮಂ ಚೈತ್ರ ಬಹುಳ ೯ ಶಕ ೧೮೫೩ ತಾ ..—೪—೧೯೩೧ ಸಂಚಿಕೆ ೨೯

## ಕಾಯಿದೆಯ ಕೋರ್ಟುಗಳು ಬೇಕು.

ಈಗಿನ ಕಾಯಿದೆಯ ದೃಷ್ಟಿಯಿಂದ ಈಗಿನ ಉಪ್ಪಿನ ಕಾಯಿದೆಯು ಕೇವಲ ಅನ್ಯಾಯದ ಕಾಯಿದೆ. ಅಂಥ ಕಾಯಿದೆಯನ್ನು ಮುರಿದರೆ ದಂಡಿಸುವದೆಂದರೆ ನ್ಯಾಯ ನೀತಿಗೆ ವಿರುದ್ಧವೇ ಸರಿ. ಆದೇಕೆಂದರೆ ನಮ್ಮ ಸರಕಾರವು ಇಂಥ ಕಾಯಿದೆಗಳನ್ನು ಮುರಿದ ಜನರನ್ನು ಶಿಕ್ಷಿಸುವ ಕ್ರಮವನ್ನೇ ಬಿಟ್ಟು ಬಿಡಬೇಕು. ಒಂದು ವೇಳೆ ಸರಕಾರ ಪ್ರಚಲಿತ ಕಾಯಿದೆಯ ದೃಷ್ಟಿಯಿಂದ ಸ್ವತಂತ್ರ ಉಪ್ಪನ್ನು ಮಾರುವದಾಗಲೀ ಸಿದ್ಧಪಡಿಸುವದಾಗಲೀ ಅಪರಾಧವಾಗುತ್ತಿದ್ದರೂ, ತಿಳಿದರೂ ಸಹ ಈ ಅಪರಾಧಕ್ಕಾಗಿ ದಂಡಿಸುವದರಲ್ಲಿಯೂ ಸ್ವಲ್ಪ ಕ್ರಮವುಂಟು. ಈಗ ಮಹಾದಾರ ಅಜ್ಞಾನ ಸಾರವಾಗಿ ಇಡೀ ಹಿಂದುಸ್ಥಾನದ ತುಂಬೆಲ್ಲ ನಡೆಸಿದ ಚಳವಳಿಯಲ್ಲಿ ಈಗಿನ ಕಾಯಿದೆಯ ದೃಷ್ಟಿಯಿಂದ ಸಂಭವಿಸುವ ಅಪರಾಧಗಳು ಉಪ್ಪಿನ ಶಾಸನದ ೪೭ (ಅ) ಅಥವಾ ೯ ಈ ಎರಡು ಕಲಮುಗಳಲ್ಲಿ ಸಮಾವೇಶವಾಗುವವು. ಸ್ವಯಂಸೇವಕರಾಗಲೀ ಇತರ ಜನರಾಗಲೀ ಈ ಕಾಯಿದೆಯನ್ನು ಮುರಿಯುವದೆಂದರೆ ಸ್ವತಂತ್ರ ಉಪ್ಪನ್ನು ಮಾರುವದು ಅಥವಾ ಕೊಂಡುಕೊಳ್ಳುವದು, ಸ್ವತಂತ್ರ ಉಪ್ಪನ್ನು ಸಿದ್ಧಪಡಿಸುವರು ಇಲ್ಲವೇ ತಾವು ಸಿದ್ಧಪಡಿಸಿದ ಉಪ್ಪನ್ನು ಪೋಲೀಸರು ಕಸಿದುಕೊಳ್ಳಲಿಕ್ಕೆ ಬಂದರೆ ಅವರ ಮೇಲೆ ಯಾವ ತರದ ಹಿಂಸೆಯ ಪ್ರಯೋಗವನ್ನು ಮಾಡದೇ ಅದನ್ನು ಪ್ರಾಣಹೋಗುವ ವರೆಗೆ ತಮ್ಮ ಕೈಯಿಂದ ಬಿಡುವದಿಲ್ಲ. ಇಂಥ ಸಾತ್ವಿಕ ಮಾರ್ಗಗಳಿಂದ ಜನರು ಆಚರಿಸುತ್ತಿರಲು ಸರಕಾರದ ಅಧಿಕಾರಿಗಳೇ ಈ ಜನರ ಮೇಲೆ ಬೇರೆ ಬೇರೆ ಕಲಮುಗಳನ್ನು ಹಚ್ಚಿ ದಂಡಿಸುತ್ತಿರುವರು. ಈಗ ಕೆಲವು ಜನರಿಗೆ ಹಚ್ಚಿದ ಕಲಮುಗಳನ್ನು ನೋಡಿದರೆ ತೀರ ನಗೆ ಬರುವಂತಿರುವದು. ಕೆಲವರಿಗೆ ಪಿನಲ್‌ಕೋಡ ೧೨೭ ನೇ ಕಲಮನ್ನು ಹಚ್ಚಿರುವರು. ಯಾವನಾದರೂ ೧೦ ಜನರಕಿಂತಲೂ ಹೆಚ್ಚಿನ ಜನರಿಗೆ ಸಾರ್ವಜನಿಕ ರೀತಿಯಿಂದ ಯಾವದಾದರೂ ಅಪರಾಧವನ್ನು ಮಾಡಲಿಕ್ಕೆ ಉತ್ತೇಜನ ಕೊಟ್ಟರೆ ಈ ಅಪರಾಧಕ್ಕೆ ಪಾತ್ರನಾಗುವನು.

ಈ ಕಲಮಿನ ಕೆಳಗೆ ಅಪರಾಧವಾಗಬೇಕಾದರೆ ಕನಿಷ್ಟ ಪಕ್ಷಕ್ಕೆ ೧೧ ಜನರೇ ಸಾರ್ವಜನಿಕರೀತಿಯಿಂದ ಒಂದು ಕೃತಿಯನ್ನು ಮಾಡಬೇಕು ಅಥವಾ ಮಾಡುವ ಉದ್ದೇಶವಿರಬೇಕು. ಹೀಗಿದ್ದರೂ ಕೂಡ ಆರೋಪಿಗಳು ಸಂರಕ್ಷಣೆಯನ್ನು ಮಾಡಿಕೊಳ್ಳದೇಯಿದ್ದದರಿಂದ ಅಧಿಕಾರಿಗಳು ಕಾಯಿದೆಯ ಅರ್ಥವನ್ನು ಯೋಗ್ಯರೀತಿಯಿಂದ ಮಾಡದೇ ಬೇಕಾದಹಾಗೆ ದಂಡಿಸುತ್ತಿರುವರು. ವೇಳೆಗೆ ೧೨೭ ನೇ ಕಲಮಿನ ಅಪರಾಧವು ಮುಖ್ಯ ಅಪರಾಧಕ್ಕೆ ವಿಧೇಯ ಅಪರಾಧವಾಗಿದ್ದು ಮುಖ್ಯ ಅಪರಾಧದ ಕಿಂತ ಈ ಅಪರಾಧಕ್ಕೆ ಹೆಚ್ಚಿನ ಶಿಕ್ಷೆಯನ್ನು ಕೊಡುವರು.

ಇತ್ತೀಚೆಗೆ ಪಿನಲ್‌ಕೋಡಿನ ೧೪೭-೧೪೩ ನೇ ಕಲಮಿನ ಕಲಮುಗಳು ಸಹ ಹಚ್ಚಹತ್ತಿರುವವು. ಪೋಲೀಸರು ತಮ್ಮ ಹೆಚ್ಚಿನ ಪಾಂಡಿತ್ಯವನ್ನು ಆತ್ರುತವನ್ನು ತೋರಿಸುತ್ತಿರುವರು. ಈಗ ಇವರ ಕರ್ತವ್ಯವು ನಮಗೆ ಸ್ಪಷ್ಟವಾಗಿ ಕಾಣಹತ್ತಿದೆ. ಹಿಂದುಸ್ಥಾನದ ವ್ಯಾಪಿ ಕರೆಯುವ ಕಾಂಗ್ರೆಸ ಈ ಚಳವಳಿಯನ್ನು ನಡೆಸುವ ಭಾರವು ತಮ್ಮ ಮೇಲೆ ಹೇರಿದ್ದಾರೆಂದು ಇವರ ಕಲ್ಪನೆಯಾಗಿರುವದು. ಅಧಿಕಾರಿಗಳು ನಡೆಸಿದ ಕೃತಿಗಳು ಕಾಯಿದೆಯನ್ನು ಬಿಟ್ಟು ನಡೆಯುವವು. ಆದ್ದರಿಂದಲೇ ಕಾಯಿದೆಯ ಕೋರ್ಟು ಮಾಡಿರುವವೆಂದು ನಾವು ಅನ್ನುವೆವು. ಈ ಉಪ್ಪಿನ ಕಾಯಿದೆಯನ್ನು ಬಿಟ್ಟು ಇಲ್ಲದ ಅಪರಾಧವನ್ನು ಹೊರಿಸಿ ಜನರಿಂದ ಅನಾದರಗಳಾಗುತ್ತಿರುವವೆಂದು ಪೋಲೀಸರು ಸಿದ್ಧಮಾಡಲು ಯತ್ನಿಸಿದರೆ ಸ್ವಸಂರಕ್ಷಣೆಯನ್ನು ಮಾಡಿಕೊಳ್ಳದೆ ಗತ್ಯಂತರವಿಲ್ಲ. ಹೀಗೆ ಮಾಡುವದರಿಂದಲೇ ಈ ಕೋರ್ಟುಗಳು ಕಣ್ತೆರೆ ಬಹುದು.

### ಪದ ರಾಗ ಧನಶ್ರಿ ತಾಳ ರೂಪಕ

(ಮೂರ್ತಿವಂತ ಭೀತಿ ಉಳ್ಳ ಮನ ಸನೋರ ರಾಹಿಲೀ)

—ಎಂಬ ಧಾಟಿ—

ಮಂಗಲ ನಿಮಗಾಗಲಿ ನಿಷ್ಠೆಯಿಂದ ಹಿಂದ ಮಾತೆಗೆ ‖
ಹಿಂಗಲಿ ಪರತಂತ್ರತೆಯು ದೀರ್ಘ ಕಾರಣದ ಕನ್ನಡಿ ‖ ಪಲ್ಲ ‖
ಸಮರಭೂಮಿಗೈದಲಿರುವ ಧೀರ ಕನ್ನಡಿಗರಿಗೆ ‖
ಅವಿರತ ಹರ ಹರ ದಿಂದ ರಣಾಂಗಣ ಧುಮುಕಿದಂಗೆ ‖ ೧ ‖
ಜಂಟೋಳಿಗೆ ಪಯಣ ಬೆಳೆಸಿ ಆಂಗ್ಲರೀ ಪ್ರಭುತ್ವದ ‖
ಸಂಕಲಿಗಳ ಕಡಿದು ಕಳಚಿ ಕಡಿವ ಸಾಹಸಿಗರಿಗೆ ‖ ೨ ‖
ಬದ್ಧನಾಡನುದ್ಧರಿಸಲು ಬದ್ಧ ದೀಕ್ಷಾರಾದವರಿಗೆ ‖
ಮುದ್ದು ಮೋಹನನ ವಿಶುದ್ಧ ಪದ್ಧತಿಯನು ಬಿಡದವರಿಗೆ ‖ ೩ ‖

## ಹೌಸ ಆಫ ಕಾಮನ್ಸದಲ್ಲಿ ಹಿಂದುಸ್ಥಾನದ ಹಿತಚಿಂತನೆ

ಫೆನ್ನರ ಬ್ರಾಕವೆ ಎಂಬುವವರು ಹಿಂದುಸ್ಥಾನದಲ್ಲಿ ಕಳೆದ ವಾರದಲ್ಲಿ ನಡೆದಿರುವ ಅತ್ಯದ್ಭುತ ಚಳವಳಿಯ ನಿಜಸ್ವರೂಪವನ್ನು, ಅಲ್ಲಿಯ ಸಭಾಸದರ ದಿವ್ಯಚಿತ್ತಕ್ಕೆ ತಂದುಕೊಟ್ಟು, ಹಿಂದುಸ್ಥಾನದ ಅಡಚಣಿ ಅನಾನುಕೂಲತೆಗಳನ್ನು ಕಿತ್ತಿ ಒಗೆಯದ ಹೊರತು ಗತ್ಯಂತರವಿಲ್ಲೆಂದು ಸ್ಪಷ್ಟವಾಗಿ ಹೇಳಿದರು. ಈ ಚಳವಳಿಯ ಬಗ್ಗೆ ಇಂಡಿಯಾಗವರ್ನಮೆಂಟದವರು ಇಂದಿನವರೆಗೆ ಸಹಾನುಭೂತಿಯಿಂದ ವರ್ತಿಸುತ್ತ ಬಂದಿರುವರೆಂದು ಒಪ್ಪಬೇಕಾಗಿದ್ದರೂ, ಅದು ಅಷ್ಟು ಸಮಾಧಾನಕರವಾಗಿಲ್ಲ, ಮ. ಗಾಂಧಿಯ ಚಳವಳಿಗೆ ಹಿಂದುಸ್ಥಾನದ ಮಂದಪಕ್ಷದವರ ಬೆಂಬಲವಿಲ್ಲೆಂದು ಬೆನ್ನ ಸಾಹೇಬರು ತಿಳಿದುಕೊಂಡಿರುವದು ತೀರ ತಪ್ಪು. ಮ. ಗಾಂಧಿಯನ್ನು ಸೆರೆ ಹಿಡಿದರೆ ಅಥವಾ ಈಗ ನಡೆದಿರುವ ಮುಂದಾಳುಗಳನ್ನು ಬಂಧಿಸುವ ಕ್ರಮವು ಹೀಗೇ ಮುಂದೆ ಸಾಗಿದರೆ, ನಾಳೆಗೆ ಇವರೆಲ್ಲ ಆ ಚಳವಳಿಯ ಪುರಸ್ಕರ್ತರಾಗಿಯೇ ಆಗುವರು. ನಿಮ್ಮ ಸಾಯಿಮನ್ ಕಮಿಶನ ರಿಪೋರ್ಟ ದುಂಡು ಮೇಜಿನ ಸಭೆಯೂ ಎಲ್ಲವೂ ಅಲ್ಲಿಯೇ ಕೂಡುವವು. ಇದು ಲಕ್ಷ್ಯದಲ್ಲಿರಲಿ. ಆದ್ದರಿಂದ ಪ್ರಸಂಗವು ಕೈ ಮೀರಿಹೋಗುವದರೊಳಗೆ ಏನಾದರೂ ತಿಪ್ಪಾಯಿ ನಡೆಸುವದು ಒಳ್ಳೇದೆಂದು ತಮ್ಮ ಅಭಿಪ್ರಾಯವನ್ನು ವಿಶದವಾಗಿ ಮಂಡಿಸಿದರು. ಇದಕ್ಕೆ ಕೆನ್ನವರ್ಡ ಸಾಹೇಬರು , ಈಗಿನ ಚಳವಳಿಗೆ ಇಷ್ಟೇನು ಅಂಜುವ ಕಾರಣವಿಲ್ಲ ಹಳ್ಳಿಗಳಿಗೆ ಬ್ರಿಟೀಶರಾಜ್ಯವು ಬೇಡಾಗಿದ್ದರೂ ಅವು ಈ ಚಳವಳಿಯಲ್ಲಿ ಅಂಥದೇನು ಭಾಗ ತಗೆದುಕೊಂಡಿಲ್ಲ; ಸ್ವರಾಜ್ಯ ಕೊಡುವೆವೆಂಬ ಆಶ್ವಾಸನವನ್ನಿತ್ತರೂ ಕಾಯಿದೆಭಂಗ ಮಾಡುವವರನ್ನು ಬಂಧಿಸುವ ಕ್ರಮವನ್ನು ನಿಲ್ಲಿಸಲಿಕ್ಕಾಗದು. ವೈಸರಾಯರು ತಮಗೆ ಸೂಚಿಸಿದ್ದನ್ನು ಮಾಡಬಹುದು ಎಂದು ಉತ್ತರ ಕೊಟ್ಟರು. ಆ ಮೇಲೆ ಮ್ಯಾಕ್ಸಟನ್ ಎಂಬ ಇನ್ನೊಬ್ಬ ಸಾಹೇಬರು ದಬ್ಬಾಳಿಕೆಯು ಥರವಲ್ಲ. ವೈಸರಾಯರಿಗೆ ಎಲ್ಲವನ್ನು ಒಪ್ಪಿಸಿ ನಾವು ತಣ್ಣಗೆ ಕೂಡುವದು ವಿಹಿತವಲ್ಲ. ಇದರಿಂದ ಲೇಬರಪಕ್ಷದಲ್ಲಿ ಅಲ್ಲಿಯ ಜನರ ವಿಶ್ವಾಸ ಹಾರಿಹೋಗುವದು.

———— o ————

### ಬೆಳಗಾಂವಿ.

ಸತ್ಯಾಗ್ರಹಿಗಳ ಮೂರನೇ ತಂಡವು ಉಪ್ಪಿನ ಕಟ್ಟಳೆಯನ್ನು ಮುರಿಯುವದಕ್ಕಾಗಿ ವೆಂಗುರ್ಲೆಗೆ ಹೊರಟಿತು. ಬೆಳಗಾಂವಿಯ ಸೆಂಟ್ರಲ ಜೇಲಿನಲ್ಲಿ ಇಟ್ಟ ಮಹನೀಯರು ಕಣ್ಣತುಂಬ ನೋಡಿ ಆನಂದ ಪಡುವಂತೆ ಆ ಜೇಲಿನ ಎದುರಿಗೇ ಪ್ರಚಂಡ ಸಭೆಯನ್ನು ಕೂಡಿಸಿದ್ದರು ಬೆಳಗಾಂವಿಯಿಂದ ದಿಂಡಗಲ್ಲ ವರೆಗೆ ಅಂದರೆ ನಾಲ್ಕು ಮೈಲುಗಳವರೆಗೆ ಜನರು ಸತ್ಯಾಗ್ರಹಿಗಳನ್ನು ಕಳುಹಿಸಿ ಕೊಡಲು, ಕಿಕ್ಕಿರಿದು ನೆರೆದಿದ್ದರು

ಮಾಲವಣಕ್ಕೆ ಉಪ್ಪಿನ ಕಟ್ಟಳೆಯು ಭಂಗಮಾಡುವದ ...ಗೆಯಿಂದ ಹೊರಟ ೨೨ ಸತ್ಯಾಗ್ರಹಿಗಳ ತಂಡವು ... ಯೋಗ್ಯವಾಗಿ ಅವರ ಸ್ವಾಗತ ಆದರ ...ಮಾಡಿರುವರು, ಅವರ ಕಾರ್ಯದಲ್ಲಿ ದೇವರು ಯಶಸ್ಸು ಕೊಡಲೆಂದು ಜನರೆಲ್ಲರು ಸಭೆಕರೆದು ಪ್ರಾರ್ಥಿಸಿದರು ಸಭೆಯಲ್ಲಿ ಉಪ್ಪು ತಯಾರು ಮಾಡಿ ಮಾರಾಟ ಮಾಡಿದರು ಒಬ್ಬ ಹೆಣ್ಣುಮಗಳು ೧೫ ರೂಪಾಯಿ ಬೆಲೆ ಬಾಳುವ ಒಂದು ಉಂಗುರವನ್ನು ಕೊಟ್ಟಳು.

### ಹಾನಗಲ್ಲ.

ಸತ್ಯಾಗ್ರಹಿಗಳ ತಂಡವು ಒಂದು ಮೈಲು ದೂರ ಇರುವಾಗಲೇ ಜನರು ಎದುರುಗೊಂಡು ಸ್ವಾಗತ ಮಾಡಲಿಕ್ಕೆ ಹೋಗಿದ್ದರು. ಊರಲ್ಲಿ ಎರಡು ಮೂರು ಸಾವಿರ ಜನರು ಕೂಡಿ ಸಭೆ ಕರೆದಿದ್ದರು. ಸಭೆಯಲ್ಲಿ ಬುರ್ಲಿಯವರ ವ್ಯಾಖ್ಯಾನವಾಯಿತು. ಶ್ರೀ. ರಂಗಾಚಾರ್ಯ ಎಂಬವರು ಐವತ್ತು ರೂಪಾಯಿಗಳನ್ನು ಸತ್ಯಾಗ್ರಹ ಫಂಡಿಗೆ ಕೊಟ್ಟರು. ಸಭೆಯಲ್ಲಿಯ ಜನರು ಐವತ್ತು ರೂಪಾಯಿ ಕೂಡಿಸಿ ಕೊಟ್ಟರು. ಹಿಂದಿನ ಊರುಗಳಲ್ಲಿ ದೊರೆತ ಆಭರಣಗಳನ್ನು ಲಿಲಾವು ಮಾಡಿದರು. ಜನರು ಆಭರಣಗಳನ್ನು ಅವುಗಳನ್ನು ತಾವು ಕೊಂಡ ಬೆಲೆಯನ್ನೂ ಒಪ್ಪಿಸಿದರು. ನಮ್ಮ ಜನರು ಇನ್ನಾದರೂ ಕಣ್ಣು ತೆರೆಯಲಿ.

### ಬಂಕಾಪುರದಲ್ಲಿ ಕರ್ನಾಟಕ ಸತ್ಯಾಗ್ರಹಿಗಳ ಪ್ರಚಂಡ ಮೆರವಣಿಗೆ
### ಜನತೆಯಲ್ಲಿ ಅಪೂರ್ವ ಉತ್ಸಾಹ
### ಟಿ ಎಲ್. ಬಿ. ಮೋಂಟರರ ರಾಜೀನಾಮೆ!!!

ಶಿಗ್ಗಾಂವಿ ಪೌರ ಜನರೆಲ್ಲ ಡೊಳ್ಳು, ಬಜಂತ್ರಿ, ಬ್ಯಾಂಡ ಮೊದಲಾದವುಗಳೊಂದಿಗೆ ಎದುರುಗೊಳ್ಳಲು ಊರಮುಂದಿನ ಹಳ್ಳದ ಹತ್ತರ ಕಾಯುಕೊಂಡಿದ್ದರು. ದಂಡು ಬರುತ್ತಲೆ ಮುಜಲಿನೊಂದಿಗೆ ಎದುರುಗೊಂಡು ಧ್ವಜಕ್ಕೆ ಮಾಲೆ ಹಾಕಿ ಆರತಿಎತ್ತಿ ಹೂಮಾಲೆಗರೆದರು. ಮೆರವಣಿಗೆ ಊರಲ್ಲಿ ಬಹಳ ಸಡಗರದಿಂದ ಸಾಗಿತು. ಶ್ರೀ ಯಲ್ಲಮ್ಮನಗುಡಿ ಪಟಾಂಗಣಕ್ಕೆ ಬಂದು ನಿಂತಿತು. ಕೂಡಿದ ಜನರು ಶಾಂತರೀತಿಯಿಂದ ಕುಳಿತುಕೊಂಡರು. ಪ್ರಸಿದ್ಧ ವ್ಯಾಪಾರಿಗಳಾದ ಶ್ರೀ ಚನ್ನಪ್ಪ ನಾರಾಯಣಪೂರ ಇವರನ್ನು ಅಧ್ಯಕ್ಷರನ್ನಾಗಿಸಿದ ಬಳಿಕ ದಂಡಿನ ನಾಯಕರಾದ ಶ್ರೀ ಬುರ್ಲಿಯವರು ಭಾಷಣಮಾಡಿದರು. ಸತ್ಯಾಗ್ರಹಿಗಳ ಟೊಪ್ಪಿಗೆಯಲ್ಲಿ ೧೩೯ ರೂಪಾಯಿ ಕೂಡಿದವು. ಒಂದು ಬೆಳ್ಳಿ ಉಡದಾರವು ೧೨ ರೂಪಾಯಿಗೆ ಲಿಲಾವಾಗಿ ಉಡಿದಾರ ಹಾಗೇ ಉಳಿಯಿತು. ತಿರಬಡಿಗಿವತಿಯಿಂದ ಮೌಲಾ ಸಾಹೇಬರೆಂಬವರು ೧೫ ರೂಪಾಯಿಗಳನ್ನು ಕೊಟ್ಟರು. ಇಷ್ಟಲ್ಲದೆ ಸಭೆಯಲ್ಲಿ ಬೇರೆ ೧೦ ರೂಪಾಯಿಗಳು ಕೂಡಿದವು. ಆ ಮೇಲೆ ಅಧ್ಯಕ್ಷರು ಬಂಕಾಪೂರದ ನಾಗರೀಕರವತಿಯಿಂದ ೧೦೫ ರೂಪಾಯಿಗಳ ಚೀಲಗಳನ್ನು ಅರ್ಪಿಸಿದರು.

### ತಂತಿಯಿಂದ ಬಂದ ಸುದ್ದಿ.

ಜಮ್ನಾದಾಸ ಮೆಹತಾ ಎಂಬವರಿಗೆ ಆರು ತಿಂಗಳ ಸಜೆಯು ಎರಡನೂರ ರೂಪಾಯಿ ದಂಡವೂ, ದಂಡ ಕೊಡದಿದ್ದರೆ ಮತ್ತೊಂದು ತಿಂಗಳ ಸಜೆಯೂ ಕೊಡಲಾಗಿದೆ.

ಸಾಂಬಮೂರ್ತಿ ಎಂಬವರನ್ನು ಸರಕಾರದವರು ಹಿಡಿದಿದ್ದಾರೆ. ನಿಪ್ಪಾಣಿಯ ರವಣ ಎಂಬವರನ್ನೂ ಮತ್ತು ಕಾಗವಾಡ ಎಂಬವರನ್ನೂ ಹಿಡಿದಿರುವರು.

## ಮುಂಬಯಿಯಲ್ಲಿ
# ಪೋಲೀಸರ ಅತ್ಯಾಚಾರ

[ ತಂತಿಯಿಂದ ಬಂದ ಸುದ್ದಿ ]

ಮೂರು ನೂರು ಪೋಲೀಸರು ಕೈಯಲ್ಲಿ ಲಾಠಿ ಹಿಡಿದುಕೊಂಡು, ಉಪ್ಪು ತಯಾರುಮಾಡುವ ಸಾಧನಗಳನ್ನು ನಾಶಮಾಡುವ ಉದ್ದೇಶದಿಂದ ಸ್ವಯಂಸೇವಕರ ಮೇಲೆ ಏರಿ ಹೋದರು. ಸ್ವಯಂಸೇವಕರು ಶಾಂತರೀತಿಯಿಂದ ಪೋಲೀಸರಿಗೆ ಪ್ರತಿಬಂಧವಮಾಡಿದರು. ಸ್ವಯಂಸೇವಕರು ಒಳ್ಳೇ ಧೈರ್ಯದಿಂದಲೂ ಶಾಂತಿಯಿಂದಲೂ ಪೋಲೀಸರ ಕೆಲಸಕ್ಕೆ ತಡೆಹಾಕಿರುವರು. ಶ್ರೀ. ಕನೈಯ್ಯಾಲಾಲ ಮುನಶಿ ಎಂಬವರನ್ನು, ಅಲ್ಲಿಯೇ ಬಂಧಿಸಿದರು. ಮಂದಪಕ್ಷದ ಜಮನಾದಾಸ ದ್ವಾರಕಾದಾಸ ಎಂಬವರು ಕಾಂಗ್ರೆಸ ಪಕ್ಷಕ್ಕೆ ಬಂದು ಕೂಡಿದರು. ಅಂತೆಯೇ ಮಂದಪಕ್ಷದವರೂ ಮುಂದೆ ಬಂದು ರಾಷ್ಟ್ರೀಯ ಪಕ್ಷಕ್ಕೆ ಕೂಡಿಕೊಳ್ಳಹತ್ತಿದರು. ಇದೊಂದು ದೇಶದ ಸುದೈವವೇ ಸರಿ. ಮಹಾರಾಷ್ಟ್ರದ ಮುಂದಾಳುಗಳಾದ ಸ್ವಾಮಿ ಆನಂದ, ದೇವ, ಕೇಳಕರ, ಪೇರ ಎಂಬವರನ್ನೂ, ಸರಕಾರದವರು ಹಿಡಿದಿರುವರು. ಮಹಾರಾಷ್ಟ್ರವು ನಿಶ್ಚಯವಾಗಿ ಮುಂದೆ ಬಂದು ಈ ಚಳವಳಿಯನ್ನು ಹೆಚ್ಚು ಹುರುಪಿನಿಂದ ಸಾಗಿಸುವದು. ಮಹಾರಾಷ್ಟ್ರದವರೂ ತಮ್ಮ ಧೈರ್ಯ, ಸಾಹಸ ಉತ್ಸಾಹಗಳನ್ನು ಬಯಲಿಗೆ ತೆಗೆಯಲೇ ಬೇಕು.

### ಸರಕಾರದ
## ದಬ್ಬಾಳಿಕೆಯೋ ಹೇಡಿತನವೋ?

ಎಲ್ಲ ಕಡೆಯಿಂದಲೂ ಸತ್ಯಾಗ್ರಹಿಗಳನ್ನು ಹಿಡಿದು, ಜೇಲಿಗೆ ಅಟ್ಟಿದ ಸುದ್ದಿಗಳೇ ಬರಹತ್ತಿವೆ. ಸರಕಾರವು ಮೊದಲು ಮೊದಲು ಮೆತ್ತಗೆ ತೋರಿತು. ಆದರೆ ಈಗ ಮಾತ್ರ ತನ್ನ ಡೊಂಬರಾಟವನ್ನು ಹೂಡಿದೆ ಇವರ ಆಟವು, ಎಲ್ಲ ಜನರಿಗೂ ಗೊತ್ತಾಗಿ ಹೋಗಿದೆ. ಮುಖಂಡರನ್ನು ಮಾತ್ರ ಹಿಡಿದು ಶಿಕ್ಷೆ ಕೊಡಲಿಕ್ಕಿರುವರು. ಸ್ವಯಂಸೇವಕರನ್ನು ಮಾತ್ರ, ಹಾಗೇ ಬಿಟ್ಟು, ಬಿಡುವರು. ಇದರಲ್ಲಿ ಸರಕಾರದ ಹೇತುವೇನಿರಬಹುದು! ಸ್ವಯಂಸೇವಕರನ್ನು ಹಿಡಿದು ಜೇಲಿಗೆ ಅಟ್ಟಲು ಸರಕಾರವು ಹೆದರುವದು ಯಾಕಂದರೆ ಸರಕಾರದ ಜೇಲುಗಳಾದರೂ ಎಷ್ಟು ಇರುವವು? ಸ್ವಯಂಸೇವಕರ ಸಂಖ್ಯೆಯು ಹೆಚ್ಚುತ್ತ ನಡೆದಿರುವದು. ಜೇಲುಗಳು ತುಂಬಿ ಹೆಚ್ಚಾಗುವಷ್ಟು ಸ್ವಯಂಸೇವಕರು ಈ ಹೊತ್ತಿಗೆ ಸಿದ್ಧರಾಗಿರುವರು. ಇವರಿಗೆ ಜೇಲಿನಲ್ಲಿ ಹಾಕಿ ಊಟಕ್ಕೆ ಹಾಕುವದಾ ಸಹ ಸರಕಾರಕ್ಕೆ ದುಸ್ತರವಾಗಿರುವದು. ಇದನ್ನು ಸರಕಾರದವರು ಕಂಡುಹಿಡಿದು ಸ್ವಯಂಸೇವಕರನ್ನು ಸುಮ್ಮನೆ ಬಿಡುವರು ಮುಖಂಡರನ್ನು ಮಾತ್ರ ಹಿಡಿದು ಹಾಕುವರು ಸರಕಾರದ ಕಾಯಿದೆ ಕಾನೂನುಗಳು ಪುಸ್ತಕದಲ್ಲಿಯೇ ಉಳಿದವು. ಮಹಾತ್ಮರು ಹೇಳುವಂತೆ ಉಪ್ಪಿನ ಕರವು ಹಾರಿಹೋಯಿತು.

## ಪ್ರಾಂತಿಕ ಕಾಂ. ಕಮಿಟಿ ಆಜ್ಞೆ.
### ಬಿಸನಾಳದಲ್ಲಿ ಸಮರಾಂಗಣವು!

ಬಿಸನಾಳದಲ್ಲಿ ಸ್ವಯಂಸೇವಕರನ್ನು ಸರಕಾರದವರು ಹಿಡಿದ ಕಾರಣ ಧಾರವಾಡದಿಂದ ಅನೇಕ ಅಭಿನಂದನೆಗಳು ಬಂದಿವೆ. ಗಲಗಲಿಯ ಸ್ವಯಂಸೇವಕರಿಗೆ ಶಾಂತರೀತಿಯಿಂದಲೂ ಮತ್ತು ಸತ್ಯಾಗ್ರಹ ಮಂಡಲದವರು ಹಾಕಿಕೊಟ್ಟ ನಿಯಮಗಳನ್ನು ಸರಿಯಾಗಿ ಉಪ್ಪು ತಯಾರಾಗಬಹುದಾದ ಎಲ್ಲ ಸ್ಥಳಗಳಲ್ಲಿ ಉಪ್ಪಿನ ಕಾಯಿದೆಭಂಗ ಮಾಡಲು ಧಾರವಾಡದಿಂದ ಪ್ರಾಂತಿಕ ಕಾಂ ಕಮಿಟಿಯವರು ಅಪ್ಪಣೆಕೊಟ್ಟಿದ್ದಾರೆ. ಅಂತೆಯೇ ಈ ನಮ್ಮ ಬಿಸನಾಳಗಲಗಲಿಯೂ ಬಂದು ಸಜ್ಜು ಸಮರಾಂಗಣವನ್ನು ನೋಡಬೇಕಾಗಿದೆ. ಈ ಸಮರವನ್ನು ಯಶಸ್ವಿಯಾಗಿ ಮಾಡುವ ಭಾರವು ಗಲಗಲಿಯ ಜನರ ಮೇಲೆ ಹೆಚ್ಚಾಗಿದೆ. ಕಾರಣ ಇವರು ಅಹಿಂಸಾ, ಶಾಂತಿ, ಕಷ್ಟಸಹನ ಮಾಡುವದು ಇವುಗಳನ್ನೇ ಯುದ್ಧ ಸಾಮಗ್ರಿಗಳಾಗಿ ಮಾಡಿಕೊಂಡು ದೇಶವನ್ನು ಸ್ವಾಧೀನ ಒಮ್ಮೆ ಈ ಸಮರವನ್ನು ಹೂಡಲಿ! ಈ ಬಗೆಯಾಗಿ ನಮ್ಮ ಸೇನಾಧಿಕಾರಿಗಳು ಆಜ್ಞೆಯನ್ನು ಕೊಟ್ಟು, ತಮ್ಮ ಕರ್ತವ್ಯವನ್ನು ಮಾಡಿದರು. ಇನ್ನು ಗಲಗಲಿಯ ಸ್ವಯಂಸೇವಕರೂ ಅಲ್ಲಿಯ ಜನರೂ, ಸುತ್ತುಮುತ್ತಲಿನ ಹಳ್ಳಿಗಳೊಳಗಿನ ಜನರೂ ಮಾಡತಕ್ಕ, ಕರ್ತವ್ಯವನ್ನು ಮಾಡಲಿ!

### ಪರದೇಶದವನೂ ಬಂದು ಮಹಾತ್ಮನ ಶಿಷ್ಯನಾದನು!

ಮಹಾತ್ಮನು ಈ ಸ್ವಾತಂತ್ರ್ಯ ಯುದ್ಧವನ್ನು ಹೂಡಿದಾಗಿನಿಂದ ಜಗತ್ತಿನ ಎಲ್ಲ ರಾಷ್ಟ್ರಗಳೂ ಅವರ ಈ ಕಾರ್ಯಕ್ಕೆ ಸಹಾನುಭೂತಿಯನ್ನು ತೋರಿಸುತ್ತಿರುವವು. ಈಗಾಗಲೇ ಇಂಗ್ಲಂಡ ದೇಶದಲ್ಲಿ ಹುಟ್ಟಿ ಅಲ್ಲಿಯೇ ಬೆಳೆದ ಇಂಗ್ಲಿಷ ತರುಣನೊಬ್ಬನು ರೆಜಿನಾಲ್ಡ ಎಂಬವನು ಮಹಾತ್ಮನ ಪ್ರಿಯ ಶಿಷ್ಯನಾಗಿರುವನು. ಈಗ ಪುನಃ ಆಸ್ಟ್ರೇಲಿಯಾ ದೇಶದ ಥಾರ್ನಟನ ಎಂಬವನೊಬ್ಬನು ಬಂದು ಮಹಾತ್ಮರು ಹೂಡಿದ ಸತ್ಯಾಗ್ರಹದ ಸ್ವೀಕಾರ ಬಂದು ತನ್ನ ತಲೆಯ ಮೇಲಿನ ಹ್ಯಾಟು ಚಲ್ಲಿಕೊಟ್ಟು ಗಾಂಧೀ ಟೊಪ್ಪಿಗೆಯನ್ನು ಹಾಕಿಕೊಂಡನು.

ಮಹಾತ್ಮಾ ಗಾಂಧೀಕಿ ಜಯ್!

### ಜಯರಾಮದಾಸರಿಗೆ ಮಹಾತ್ಮನ ಸಂದೇಶವು!

ಸರಕಾರದ ಸೆರೆಯಾಳುಗಳಾಗಿ ಕಾರಾಗೃಹಕ್ಕೆ ಹೋಗುವದಕ್ಕೆ ಬದಲಾಗಿ ನಿಮ್ಮ ಕಣ್ಣಿಯಲ್ಲಿ ಗುಂಡು ತಗಲಿದುದು ಬಹಳೇ ಒಳಿತಾಯಿತು. ಆದರೆ ಆ ಗುಂಡು ನಿಮ್ಮ ಎದೆಗೆ ತಟ್ಟಿ ನೀವು ವೀರಸ್ವರ್ಗವನ್ನು ಹೊಂದಿದ್ದರೆ ಇದಕ್ಕೂ ಎಷ್ಟೋ ಒಳಿತಾಗುತ್ತಿತ್ತು. ಸರಕಾರಕ್ಕೆ ಇದರಿಂದ ಸ್ವಲ್ಪಾದರೂ ನಾಚಿಕೆ ಹುಟ್ಟಬೇಕೆಂದು ಮಹಾತ್ಮರ ಉದ್ದೇಶವಿರಬಹುದೋ?

## ಗದಗ

ಶ್ರೀ. ಹುಕ್ಕೇರಿಕರ, ಕರಮರಕರ ಮೊದಲಾದವರು [illegible] ಸಭೆಯಲ್ಲಿ ಒಂದು ನೂರು ರೂಪಾಯಿ ಕೂಡಿಸಿದ್ದು. ಸಂಘದ ಹಳ್ಳಿಯಾದ [illegible]ದಲ್ಲಿಯೂ ಸಭೆಯಾಗಿ ಸತ್ಯಾಗ್ರಹಿಗಳಿಗೆ ೪-೫ ಚೀಲ ಧಾನ್ಯ ಕೂಡಿಸಿ ಕೊಡುವೆವೆಂದು ವಚನ ಕೊಟ್ಟರು.

## ಗಲಗಲಿ

ದೆ. ಭ. ಬಾಬುರಾವ [illegible] ಮೊದಲಾದ ಐದು ಜನರು ಬಂಧಿಸಲ್ಪಟ್ಟರೆಂಬ ಸುದ್ದಿಯನ್ನು ಕೇಳಿ ಗಲಗಲಿಯ ಜನರು [illegible], ಯಾವ ಸ್ಥಳದಲ್ಲಿ, ಯಾವ [illegible] ಅವರು ಸೆರೆಹಿಡಿಯಲ್ಪಟ್ಟರೋ ಅಲ್ಲಿಗೆ [illegible] ಪುನಃ ಸತ್ಯಾಗ್ರಹ ಮಾಡಬೇಕು. ಅವರನ್ನೂ ಹಿಡಿ[illegible], ಮರುದಿವಸ ಕೆಲಜನರು ಹೋಗಿ ಅದೇ ಕೃತಿಯನ್ನು ಮಾಡಬೇಕು ಎಂತ ನಿರ್ಧರಿಸಿಕೊಂಡು ತಾ|| ೨೬ ನೇ [illegible] ಕೈಯಲ್ಲಿ ಒಂದೊಂದು ಚೀಲ ತೆಗೆದುಕೊಂಡು [illegible] ಹೋಗಿ, ಅದೇ ಸ್ಥಳದಲ್ಲಿಯೇ ಮಣ್ಣು ತುಂಬಿ [illegible]. ಆದರೆ ಆ ದಿವಸ ಪೌಜದಾರರು ಎಲ್ಲಿ [illegible] ತಿಳಿಯದು. ಹವಾಲದಾರನು [illegible] "ಮಣ್ಣಿಗೆ ಹರಕತ್ತು ಅದ ಒಯ್ಯಬೇಡಿ" ಎಂದು [illegible]. ಆದರೆ ಸತ್ಯಾಗ್ರಹಿಗಳು ನಾವಂತೂ [illegible]. [illegible] ಮಾಡು ಎಂತ ಜಯ ಜಯ [illegible] ತುಂಬಿದ ಚೀಲಗಳನ್ನು ತೆಗೆದುಕೊಂಡು ಗಲಗಲಿಗೆ ಬಂದರು.

ಈ ೫ ಮಂದಿ ಜಯಶಾಲಿಗಳಾಗಿ ಮಣ್ಣಿನ ಚೀಲಗಳನ್ನು [illegible] ಬಂದ ಸುದ್ದಿಯನ್ನು ಕೇಳಿ, ಊರಲ್ಲಿಯ [illegible] ಜನರು ಬರುತ್ತ, ಬೇಗನೆ, ತಕ್ಕೊಂಡು ಬಂದು, [illegible] ಪ್ರದೇಶದಲ್ಲಿ ಈ ಸತ್ಯಾಗ್ರಹಿಗಳನ್ನು ಎದುರುಗೊಂಡು ಸ್ವಾಗತಮಾಡಿದರು.

## ಗುಳೇದಗುಡ್ಡ

ಆ ರಾತ್ರಿಯ ದಿವಸ [illegible] ನೇಹರೂ ಇವರನ್ನೂ ಮತ್ತು ಧಾರ್ಮಿಕ ಪ್ರಮುಖರಿಂದ [illegible] ಬ್ರಿಟಿಶ ಸರಕಾರವು ಬಂಧಿಸಿದ್ದರಿಂದ ಈ ಬ್ರಿಟಿಶ ಸರಕಾರದ ಕೃತ್ಯವನ್ನು ಸಿವಾನಿ[illegible] ವ್ಯಕ್ತ ಮಾಡಿರುವರು. ಉಪ್ಪನ್ನು ಅನೇಕ ವೀರ ತರುಣರೂ, ಉತ್ಸಾಹಿ ಬಾಲಕರೂ, ವೃದ್ಧರೂ [illegible]. ಸ್ತ್ರೀಯರೂ [illegible] ಉಪ್ಪನ್ನು [illegible] ಕಟ್ಟಿದ್ದಾರೆ, ಸಭೆಯಲ್ಲಿ ಜನಸಮುದಾಯವು ಐದು ಸಾವಿರಕ್ಕೆ ಮಿಕ್ಕಿತ್ತು. ಆರು ಮಂದಿ ಸತ್ಯಾಗ್ರಹಿಗಳು ಹೆಸರನ್ನು ಕೊಟ್ಟಿರುವರು. ಶ್ರೀಯುತ ತಿಪ್ಪಣ್ಣ ಶಾಸ್ತ್ರಿ [illegible] ಇವರು [illegible] ಮಹಿಮೆಯನ್ನು [illegible]. [illegible] ಇವರೂ [illegible] ವಿಷಯವನ್ನೇ ವ್ಯಾಖ್ಯಾನ ಕೊಟ್ಟರು, [illegible]. [illegible]. ಬಾಗಲಕೋಟೆಯ

ವೀರಶೈವರೇ! ನೀವು ಗುಳೇದಗುಡ್ಡದವರ ಕಡೆಗೆ ನೋಡಿರಿ! ಎಚ್ಚರಾಗಿರಿ!

## ಕರ್ನಾಟಕ ಸತ್ಯಾಗ್ರಹ ಪ್ರಥಮ ಪಥಕ.

ಪತ್ರ ೪

ಮುಂಜಾನೆ ೬|| ಘಂಟೆಗೆ ಬಂಕಾಪುರದ ಸರಹದ್ದಿಗೆ ಬಂದೆವು. ಅಲ್ಲಿ ಆ ನಗರದ ಜನರು ಮೇಳವಾದ್ಯಗಳೊಂದಿಗೆ ನಮ್ಮ ಎದುರು ನೋಡುತ್ತಿದ್ದರು. ನಮ್ಮನ್ನು ಊರೊಳಗೆ ಕರೆದೊಯ್ದು ಶಿಬಿರವನ್ನು ಮುಟ್ಟಿಸಿದರು. ಒಂದು ತಾಸು ವಿಶ್ರಾಂತಿಯ ನಂತರ ಮೆರವಣಿಗೆಯಾಯಿತು. ಬೀದಿಗಳಲ್ಲಿ ಎಲ್ಲಿ ನೋಡಿದರೂ ತಳಿರು ತೋರಣಗಳೇ ಕಾಣ ಬರುತ್ತಿದ್ದವು. ನೆಲದ ಮೇಲಂತೂ ಎಲ್ಲೆಲ್ಲಿ 'ವಂದೇ ಮಾತರಂ ಗಾಂಧಿ ಮಹಾತ್ಮಾಕೀ ಜೆಯ್ ಭಾರತ ಮಾತಾಕೀ ಜಯ' ಎಂಬ ಸಾರಣೆಗಳನ್ನು ಹಾಕಿದ್ದರು. ಎತ್ತ ತಿರುಗಿದರೂ ಜಯ ಘೋಷಗಳೇ ಕೇಳಬರುತ್ತಿದ್ದವು. ಮೆರವಣಿಗೆಯಂತೂ ಬಲು ವಿಜೃಂಭಣೆಯಿಂದ ನಡೆಯಿತು. ಆಗಲೇ ಒಂದು ಸಭೆ ಸೇರಿತು. ಸಭಾಸ್ಥಾನದಲ್ಲಂತೂ ಶ್ರೀ ಟುಲಕಯವರ ಭಾಷಣವನ್ನು ಕೇಳಲು ಜನರು ಕಿಕ್ಕಿರಿದಿದ್ದರು. ಶ್ರೀ ಟುಲಕಯವರು ಭಾರತೀಯ ಸ್ವಾತಂತ್ರ್ಯ ಹಾಗೂ ಅದನ್ನು ಗಳಿಸುವ ಮಾರ್ಗ ವೆಂಬ ವಿಷಯದ ವ್ಯಾಖ್ಯಾನಮಾಡಿದರು. ಸುಮಾರು ೧೬೦ ರೂಪಾಯಿಗಳು ದೊರೆತವು. ಹೆಚ್ಚಿನ ಮಹತ್ವದ ಸಂಗತಿಯೇನೆಂದರೆ ಅಲ್ಲಿನ ಸುಪ್ರಸಿದ್ಧ ವ್ಯಾಪಾರಸ್ಥರಾದ ಶ್ರೀ ಕಾಂತಪ್ಪ [illegible]ಪ್ಪ [illegible]ಪ್ಪನವರು ಇವರು ಸತ್ಯಾಗ್ರಹದ ಸಲುವಾಗಿ ತಾಲೂಕ ಲೋಕಲ್ ಬೋರ್ಡ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟರು.

ಸಂಜೆ ೫ ಘಂಟೆಗೆ ನಮ್ಮ ಶಿಬಿರವನ್ನು ಬಿಟ್ಟೆವು. ಗ್ರಾಮಸ್ಥರು ಒಮ್ಮೆ [illegible] ನಮ್ಮನ್ನು ತಮ್ಮ ಸರಹದ್ದಿನವರೆಗೂ ಮುಟ್ಟಿಸಿದರು. ಸತ್ಯಾಗ್ರಹಿಗಳು ನಾಲ್ಕು ದಿವಸಗಳಿಂದ ನಡೆದು ದಣಿದಿದ್ದರು. [illegible] ಹಳ್ಳಿಯ ಕಾರ್ಯಕ್ರಮವನ್ನು ನಿಯಮಿತ ವೇಳೆಯಲ್ಲಿ [illegible] ಮೋಟಾರಿನಿಂದ [illegible] ಹಳ್ಳಿಗೆ ಹೋದೆವು. [illegible]ದಿಂದ ಸುಮಾರು ೪ ಮೈಲುಗಳ ದೂರದಲ್ಲಿ ಬಂದೂ [illegible] ನಮಗಾಗಿ ಬಹಳ ಹೊತ್ತು ಕಾಯುತ್ತಿದ್ದ ಜನರು [illegible] ಸರಿಯಾಗಿ ನಮ್ಮ ಮೋಟರನ್ನು ಕಂಡು ಅದನ್ನು ನಿಲ್ಲಿಸಿ [illegible] ಯಾತ್ರಿಗಳನ್ನು [illegible] ಬೇಡಿದರು. ನಮಗೆ ವೇಳೆ [illegible] ನಿರಾಕರಿಸಲಾಗದ ೧೦ ನಿಮಿಷಗಳವರೆಗೆ [illegible] ಹಳ್ಳಿಯನ್ನು ರಾತ್ರಿ ೮ ಘಂಟೆಗೆ ಮುಟ್ಟಿದೆವು. ಅಲ್ಲಿಯ ಜನರು ನಮ್ಮನ್ನು [illegible] ನೋಡುತ್ತಿದ್ದರು. [illegible]ಯಿಂದ [illegible] ಬಂದಿತ್ತು. ಜನರ ಉತ್ಸಾಹ ಆದರ ಮತ್ತು [illegible] ಎದ್ದುಕಾಣುತ್ತಿದ್ದಿತು. ಬಂದೊಡನೆ ಮೆರವಣಿಗೆಯಾಯಿತು. ಅಲ್ಲಲ್ಲಿ [illegible] ಹಾಕಿದ್ದರು. ಎಲ್ಲಿ ನೋಡಿದರೂ ಉತ್ಸಾಹವೇ ಕಾಣುತ್ತಿತ್ತು. ರಾತ್ರಿ ೧೦ ಘಂಟೆಗೆ ಒಂದು ದೊಡ್ಡ ಸಭೆ ಸೇರಿದ್ದಿತು. [illegible] ನಮ್ಮ ಕರ್ತವ್ಯದ ವಿಷಯವಾಗಿ ವ್ಯಾಖ್ಯಾನವಾಯಿತು. ಆ ಸಭೆಯಲ್ಲಿ ನಡೆದಿದ್ದ ಮಾರಾಟದಿಂದ ೪೦ ರೂಪಾಯಿಗಳು ದೊರೆತವು.

ಮುಂಜಾನೆ ೫ ಘಂಟೆಗೆ ಸರಿಯಾಗಿ ಪ್ರಯಾಣ ಆರಂಭವಾಯಿತು. ಊರಿನವರು ಮೇಳವಾದ್ಯಗಳೊಂದಿಗೆ ಬಂದದ್ದು ನಮ್ಮನ್ನು ಕಳಿಸಿಕೊಟ್ಟು ಹೊರಟು ಹೋದರು, ಸುಮಾರು ೯|| ಘಂಟೆಗೆ ಹಾನಗಲ್ಲಕ್ಕೆ ಮುಟ್ಟಿದೆವು.

ಹಾನಗಲ್ಲ

೧೭-೪-೩೦

ಚ. ಮೂರ್ತಿ

ಪ್ರಕಟಣಾ ಕಾರ್ಯದರ್ಶಿ

ಈ ಪತ್ರಿಕೆಯು [illegible] ಇವರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦-೦-೩

# ಕನ್ನಡಿಗ

ಜಯ ಕರ್ನಾಟಕ

ನಿತ್ಯಸಂಚಿಕೆಯು

सर्वं परवशं दुःखं सर्वमात्मवशं सुखम् ॥ — मनु

ಸಂಪಾದಕರು :— ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಬುಧವಾರ ಮಿತಿ ಚೈತ್ರ ಬಹುಳ ೧೦ ಶಕೆ ೧೮೫೨ ತಾ ೨೩-೪-೩೦ ಸಂಚಿಕೆ ೩೦

## ವೀರಶೈವರೂ ಖಾದೀ ಪ್ರಸಾರವೂ

ಬಹುತರವಾಗಿ ಪ್ರಮುಖ ವೀರಶೈವರೆಲ್ಲರೂ ದೊಡ್ಡ ದೊಡ್ಡ ವ್ಯಾಪಾರಿಗಳು. ವ್ಯಾಪಾರದಲ್ಲಿ ಅವರು ಬಹಳೇ ನಿರತರು. ತಮ್ಮ ಈ ಉದ್ಯೋಗದ ಬಲದಿಂದಲೇ ಬೇಕಾದಷ್ಟು ಸಂಪತ್ತಿಯನ್ನು ಗಳಿಸಿಕೊಂಡು ಸುಖದಿಂದಿರುವರು. ಆದರೆ ಈ ನಾಲ್ಕೆಂಟು ವರುಷಗಳಿಂದ ವ್ಯಾಪಾರಿಗಳು ಮಾತ್ರ ಹತಾಶರಾಗಿರುವರು. ವ್ಯಾಪಾರದಲ್ಲಿ ವಿಶೇಷ ಲಾಭವಿಲ್ಲ. ಖರ್ಚು ತೀರಲಿಕ್ಕೆ ಬೇಕಾದರೆ ಪ್ರಯಾಸ. ಎಂದು ಅವರು ಅನ್ನುತ್ತಿರುವರು. ಇದೆಲ್ಲಕ್ಕೂ ಏನು ಕಾರಣವಿರಬಹುದು? ಒಮ್ಮೆ ಮನುಷ್ಯದೇಹಕ್ಕೆ ಜಿಗಳಿಯು ಹತ್ತಿತೆಂದರೆ ಅವನನ್ನು ರಕ್ತಹೀರಿ ಕಳೆಗುಂದಿಬಿಡುತ್ತದೆ. ನಮ್ಮ ದೇಶಕ್ಕಾದರೂ ಒಂದು ಜಿಗಳಿಯು ಹತ್ತಿದೆ. ನಮ್ಮ ದೇಶದ ಸಂಪತ್ತಿಯನ್ನು ಹೀರಿ ನಮ್ಮನ್ನು ಅತಿ ದರಿದ್ರರನ್ನೂ ದೀನರನ್ನೂ ಮಾಡಿದೆ. ಈ ಜಿಗಳಿಯನ್ನು ನಾವು ಕಿತ್ತೊಗೆಯುವ ಹೊರತು ನಮಗೆ ಗತ್ಯಂತರವಿಲ್ಲ. ಈ ಜಿಗಳಿಯು ಯಾವದೆಂಬುವದು ಈಗ ನಿರ್ವಿವಾದವಾಗಿ ಎಲ್ಲರಿಗೂ ಗೊತ್ತಿದೆ. ವಿದೇಶೀ ಬಟ್ಟೆಯೇ ಈ ಜಿಗಳಿಯು. ವಿದೇಶಿ ಬಟ್ಟೆಗಾಗಿ ನಾವು ನಮ್ಮ ದೇಶದಿಂದ ೫೦-೬೦ ಕೋಟಿ ರೂಪಾಯಿಗಳನ್ನು ಪರದೇಶದವರ ಕಿಸೆಯಲ್ಲಿ ಹಾಕುತ್ತಿರುವೆವು. ನೂರಾರು ವರುಷಗಳಿಂದಲೂ ಈ ಕ್ರಮವು ಸಾಗಿದೆ. ಬಂಗಾರದ ಹೊಗೆಯಾಡುವ ಮನೆಗಳಲ್ಲಿ ಹೊಟ್ಟೆಗೂ ಹೊಗೆ ಸಹ ಕಾಣದಾಗಿದೆ. ದೇಶದ ಸಂಪತ್ತು ಹಾಳಾಗಿ ನಾವು ಪರಕೀಯರ ಆಳಾಗಿ ದುಡಿದು ಸಾಯುವ ಸಮಯ ಬಂದಿದೆ. ನಾವು ಮನುಷ್ಯರಾಗಿ ಬದುಕಿ ಉಳಿಯಬೇಕಾದರೆ ಈ ಜಿಗಳಿಯನ್ನು ಪೂರ್ಣವಾಗಿ ಬಹಿಷ್ಕರಿಸಬೇಕಾಗಿದೆ. ಇದೆಲ್ಲ ನೋಡಲಾಗಿ ಖಾದೀಬಟ್ಟೆಯಿಂದ ದೇಶದ ಉದ್ಧಾರವಾಗುವದರಲ್ಲಿ ಸಂಶಯವಿಲ್ಲ. ಕರ್ನಾಟಕದಲ್ಲಿ ನೂರಕ್ಕೆ ಇಪ್ಪತ್ತು ಜನರು ವೀರಶೈವರು. ಮೇಲಾಗಿ ಅವರು ಉದ್ಯೋಗಶೀಲರು. ಅವರು ಈ ಕಾರ್ಯವನ್ನು ಕೈಕೊಂಡರೆ ಕರ್ನಾಟಕವೆಲ್ಲವೂ ಖಾದಿಯಿಂದ ಹೊಚ್ಚಿದಂತೆ ಬೇಗನೆ ಶೋಭಿಸುವದು. ವೀರಶೈವರಿಗೆ ಖಾದಿಯನ್ನು ಧರಿಸಲು ಧರ್ಮದ ಆಜ್ಞೆಯೂ ಉಂಟು. ತಮ್ಮ ಬಾಂಧವರನ್ನು ಉದ್ಯೋಗಕ್ಕೆ ಹಚ್ಚಿ ಹೊಟ್ಟೆಗೆ ಹಾಕಿದ ಪುಣ್ಯವೂ ಲಭಿಸುವದು. ಮತ್ತು ರಾಷ್ಟ್ರದ ಸಂಪತ್ತಿಯನ್ನು ಉಳಿಸಿ ರಾಷ್ಟ್ರದ ಉನ್ನತಿಯನ್ನೂ ಭಾರತಮಾತೆಯ ಸೇವೆಯನ್ನೂ ಮಾಡಿದಂತಾಗುವದು. ಖಾದಿಯಿಂದ ಇಷ್ಟೆಲ್ಲ ಲಾಭಗಳಿದ್ದಮೇಲೆ ಅದರ ಬಗ್ಗೆ ವೀರಶೈವ ಬಾಂಧವರು ಇನ್ನಾದರೂ ವಿಚಾರಮಾಡಿ ಈ ಕಾರ್ಯವನ್ನು ಸುರುವುಮಾಡುವರೋ? ವೀರಶೈವ ಸಮಾಜದ ಧರ್ಮಗುರುಗಳೂ ಸಮಾಜಸೇವಕರೂ ಈ ಕೆಲಸಕ್ಕೆ ಟೊಂಕಕಟ್ಟಿನಿಂತರೆ ಇದು ಯಶಸ್ವಿಯಾಗುವದರಲ್ಲಿ ಸಂದೇಹವೇ ಇಲ್ಲ. ಇನ್ನು ವಿಶೇಷವಾಗಿ ಬಾಗಲಕೋಟೆ ವೀರಶೈವರಿಗೆ ಈ ಊರ ಮುಂದಾಳುಗಳೂ ಪೇಟೆಯ ಜನರಿಗೆಲ್ಲ ಅತ್ಯಂತ ಪ್ರಿಯರೂ ಆದ ಶ್ರೀನಿವಾಸರಾಯರು ಒಂದು ಕಳಕಳಿಯ ವಿನಂತಿ ಮಾಡಿಕೊಂಡಿರುವರು. ಅವರ ವಿನಂತಿಯೆಂದರೆ ಈ ಊರಲ್ಲಿ ಒಂದು ಖಾದೀ ಅಂಗಡಿಯನ್ನು ವೀರಶೈವ ಬಾಂಧವರೆಲ್ಲರೂ ಕೂಡಿ ಸ್ಥಾಪಿಸುವದು. ಶ್ರೀನಿವಾಸರಾಯರ ಮನಸ್ಸಿಗೆ ಆನಂದವಾಗಬೇಕು,

ಕನ್ನಡಿಗನ ಸಂಪಾದಕರಾದ ಮಂಗಳವೇಢೆ ಶ್ರೀನಿವಾಸರಾಯರು.

ಅವರ ಜೇಲಿನಲ್ಲಿಯ ದುಃಖವು ಕಡಿಮೆಯಾಗಬೇಕು ಎಂಬ ಇಚ್ಛೆ ಇದ್ದರೆ ವೀರಶೈವ ಬಾಂಧವರೇ ಶ್ರೀನಿವಾಸರಾಯರ ಇದೊಂದು ಮಾತನ್ನು ನಡಿಸಿರಿ. ನಿಮಗೇನು ಇದು ಮೀರಿದ ಕೆಲಸವಲ್ಲ. ಸಹಜವಾಗಿ ನೀವು ಮಾಡಬಲ್ಲಿರಿ.

## ನಮ್ಮ ಕೊಳಗುಳ

೧

ಖಡ್ಗಗಳ ಹೊಳಪಿಲ್ಲ, ಕೂರಸಿಯ ಹೊಯ್ಲಿಲ್ಲ!
ಗುಂಡು ಮದ್ದುಗಳಿಲ್ಲ, ನಮ್ಮ ಕೊಳಗುಳದಿ.
ಮುಂಡೆದಿರುಗಿದ, ತೋಳ ಬಲುಮೆಯಾಗಬೇಕಿಲ್ಲ;
ರುಂಡಗಳ, ಮುಂಡಗಳ ನೆತ್ತರಿನ ಹೊಂಡದಲಿ
ಕತ್ತರಿಸಿ ಕೆಡಹುವರಿಲ್ಲ.
ಭಲ್ಲೆಗಳ ಈಟಿಗಳ
ಕೂರಿತದ ಹೋಕಿಲ್ಲ ನಮ್ಮ ಕೊಳಗುಳದಿ.

೨

ಹುಂಬಶಕ್ತಿಯು ಬೇಡ, ಬಂಟತನ ಬೇಕೆಮಗೆ
ಕೈದುಗಳಬ್ಬರ ಬೇಡ, ಮೊಂಡಾಟ ತನವಿರಲಿ.
ಚಿತ್ರಹಿಂಸೆಯು ಬೇಡ, ನಾವಹಿಂಸಿಗರಿಹೆವು
ಧಿಟ್ಟಎದೆ ಎಮಗಿರಲಿ, ಸಿಟ್ಟು ಹೋಗಲಿ ಶಕ್ತಿ
ಮಾನಸೀಕ ಬಲವಿರಲಿ
ಸ್ವಾತಂತ್ರ್ಯ ಧ್ಯೇಯದಲಿ
ಕ್ಷಾತ್ರವೃತ್ತಿಯದೇಕೆ? ನಮ್ಮ ಕೊಳಗುಳದಿ.

೩

ಬ್ರಹ್ಮತೇಜದ ಮುಂದೆ ಕ್ಷತ್ರಿಯರಬಲಜೊಳ್ಳು
ಬಾಗುವವು ಕಿರೀಟಗಳು ನಮ್ಮ ತೇಜದೆದುರಿನಲಿ
ಭರತಿಗೆ ಬೇಕೆಂದು ಇಂಥ ಸಾಹಸದುರಿಗೆ—
ಹುರುಳಿಸಿ, ಹರಿಗೊಂಡು ಸಾಯಲಿಹ ಬಂಟಣಾಗರು.
ಸ್ವಾರ್ಥವೃತ್ತಿಯ ಹರಿದು
ನಿಶ್ಶಸ್ತ್ರ ದಿಂತರಿದು
ಮಡಿಯಲಿಹ ಬಂಟರ್ಕೈ ನಮ್ಮ ಕೊಳಗುಳದಿ.

೪

ಹಳ್ಳಿಗಳ ಊರುಗಳ ಗೆಡಿದಾಟಿ ಬನಿರೈ
ಸಂಸಾರ ಸಾಗರದ ನಾವೆಯನು ಬದಿಗೊತ್ತಿ ||
ಹೆಂಡಿರನು ಮಕ್ಕಳನು ನೆರೆಮರೆತು ಸಾಗಿರೈ ||
ಭಾರತಿಯು ಶಿರೆಯನ್ನು ಹರಿದೊಗೆವ ಪಣ ಹೂಡಿ,
ಹೊಲಗಳನು ಮನೆಗಳನು
ಹುಲುಸಾದ ಪೈರುಗಳ
ಮರೆತವನು ಕಲೆಯಿರೈ ನಮ್ಮ ಕೊಳಗುಳದಿ.

೫

ತರುಣ ಹೆಂಡಿರ ಕೂಡ ಸರಸವಾಡುವಕಾಲ
ಜಾರಿಹುದು ನಾಡಿಗರೆ, ಎಚ್ಚರಾಗಿರಿ ಇನ್ನು
ಪ್ರೇಮಮಯರೇ ನಿಮ್ಮ ಪ್ರೇಮಗೀತೆಯು ಬೇಡ
ನಾಡಿನಂಗಳಕಿಂದು ಬೆಂಕಿ ಬಿದ್ದಿಹುದು–
ವೀಣೆಯುಂ ಕೈಗೊಟ್ಟು
ಕಡೆಯ ಮುತ್ತನು ಕೊಟ್ಟು
ಹರಿಸಿರೈ ಯುವತಿಯರೆ ನಿಮ್ಮ ರಾಯರನು.

೬.

ನಿಮ್ಮ ಎದೆದರ್ಪದಿಂದರಿಯ ಧೈರ್ಯವು ಕುಗ್ಗಿ
ಗಡಗಡನೆ ನಡುಗಲ್ಕೆ ನಿಮ್ಮ ಕೈ ಮೇಲಾಗಲಿ.
ಹೊಡೆದಾಡಿ ಮಡಿದರೇಂ? ಕೆಡರೆಲ್ಲ ನಾಡಿಗರೆ
ವೀರಸಗ್ಗದರಾಣಿ ಪೂಮಾಲೆ ತೊಡಿಸುವಳು.
ಸತ್ತು ಬಿದ್ದರೆ ಸಗ್ಗ
ಬದುಕಿ ಉಳಿದರೆ ಸಾಕ
ನಿಮ್ಮ ದೈವವೆ ದೈವ! ಹೇಡಿಗಳು ಕಾಣ್ಬುದೇನು?

೭

ಶಾಂತತೆಯು ನಮ್ಮ ಗುರಿ, ಮಹಾತ್ಮನೆಮ್ಮ ಹರಿ
ಸಾಹಸವೆ ಭಕ್ತಿ ಲಿತ ಭಾರತಿಯೆ ಪರದೈವವು.
ಕೆಚ್ಚೆದೆಯ ಬಿಲ್ಲಿನಲಿ ಆಗ್ರಹದ ಕೂರಂಬು
ಶಾಂತತೆಯ ಟಂಕಾರದಿಂ ಭೋರ್ಗರೆಯಲು.
ಎದುರಾಳು ಯಾವನವ?
ಹೆದೆಗೆದುರು ನಿಲ್ಲುವವ?
ಗಂಡುಗಲಿಗಳೆಸಾಗಿ ದಂಡಯಾತ್ರೆಗೆ ನೀವು.
ಕರೆಕೆಯುದು ನಿಮ್ಮಡಿಯ ಒತ್ತಿ-

ಧಿಟ್ಟಕವಿ.

## ಎಚ್ಚರಿಕೆ.

### ಹುನಗುಂದ ತಾಲೂಕ ಮಾಮಲೇದಾರರ

## ಉಪದ್ವ್ಯಾಪಿತನವು.

ದೇಶದಲ್ಲೆಲ್ಲ ಮಹಾತ್ಮಾಗಾಂಧಿಯವರ ಕಾಯಿದೇಭಂಗ ಚಳವಳಿಯು, ಹಿಂದುಸ್ಥಾನ ದೇಶದ ದಾರಿದ್ರ್ಯನಿವಾರಣೆಗಾಗಿಯೂ ಸ್ವಾತಂತ್ರ್ಯವನ್ನು ಸಂಪಾದಿಸುವದಕ್ಕಾಗಿಯೂ ಸಂದಿಗೊಂದಿಗಳಲ್ಲಿ ಸಹ ಹರಡಿರುವಾಗ ಹುನಗುಂದ ಮಾಮಲೇದಾರರು "ಶಾಂತತಾಸಂಘ" ವನ್ನು ಸ್ಥಾಪಿಸಲು ಉಪಕ್ರಮಿಸಿದ್ದಾರೆ. ಇವರ ಈ ಸಂಘಕ್ಕೆ ಯಾವ ಪಾಪಿಯು ಮೆಂಬರನಾಗುವನೋ ದೇವರೇ ಬಲ್ಲ ಈ ಸಂಘ ಸ್ಥಾಪಿಸುವವರ ಮೇಲಿಂದಲೇ ಯೋಗ್ಯತೆಯನ್ನು ಅಂತಿಮಧ್ಯೇಯವನ್ನು ತಿಳಿಯದಿರುವಷ್ಟು ಮಬ್ಬಿನಲ್ಲಿ ಈಗ ಜನತೆಯು ಇಲ್ಲವೆಂಬದು ಈ ಮಾಮಲೇದಾರರು ಲಕ್ಷದಲ್ಲಿ ಇಡತಕ್ಕದ್ದು

ಎಲ್ಲ ಜನರು ಇಂಥ ಆಟಗಾರರ ಆಟಕ್ಕೆ ಮೋಸಹೋಗಬಾರದು. ಯಜ್ಞಯಾಗಾದಿಗಳಲ್ಲಿ ಸಹಾ ಈ ತರದ ವಿಘ್ನಗಳು ಬರುತ್ತಿದ್ದವೆಂಬದು ಪುರಾಣ ಪ್ರಸಿದ್ಧವದೆ. ಅದೆ ಈ ಕೆಲಸವನ್ನು ಸರಕಾರಿ ಅಧಿಕಾರಸ್ಥರು ಈಗ ಮಾಡತೊಡಗಿದ್ದಾರೆ. ಎತ್ತ ಮಹಾತ್ಮರ ಸ್ವಾರ್ಥತ್ಯಾಗ ಧೈರ್ಯ, ಎತ್ತ ಹೊಟ್ಟೆ ಹೊರಕೊಳ್ಳುವ ಅಧಿಕಾರಿಗಳ ಸ್ವಾರ್ಥಪರ ಹವ್ಯಾಸ! ಈ ತರಹದ ಸಭೆಗಳಿಗೆ ಯಾರೂ ಹಣಕೆ ಹಾಕಬಾರದು. ಇವರ ಹೇಳಿಕೆಯನ್ನು ಯಾರು ಕಿವಿಮೇಲೆ ಹಾಕಿಕೊಳ್ಳಬಾರದು. ಇದಕ್ಕಾಗಿ ನಾನು ಜಾಗ್ರತವಾದ ಜನತೆಗೆ ಹೆಚ್ಚಿಗೆ ಹೇಳಬೇಕಾಗಿಲ್ಲ.

ಹುನಗುಂಡ.
೩ -೪—೩೦

ನಿಮ್ಮ ಸೇವಕ
ರಾಘವೇಂದ್ರ ಅಣ್ಣಾರಾವ ದೇಸಾಯಿ
ವಕೀಲ.

ವೀರಾಗ್ರಗಣಿಗಳಾದ,

ಕೌಜಲಗಿ

# ಹಣಮಂತರಾಯರ ಸಂದೇಶ!

ಮುಂದಾಳುಗಳನ್ನು ಹಿಡಿದುಹಾಕಿದರೆ ಸತ್ಯಾಗ್ರಹಿಗಳು ಮಾರ್ಗದರ್ಶಕರಿಲ್ಲದಂತಾಗಿ ಚಳವಳಿಯನ್ನು ಸಾಗಿಸಲಾರರೆಂದು ಸರಕಾರವು ತಿಳಿಯುತ್ತದೆ. ಆದರೆ ನನ್ನ ಎಲ್ಲ ಸಮರ ಸಹಕಾರಿಗಳಿಗೆ ನಾನು ಹೇಳುವದೇನಂದರೆ, ಇನ್ನು ಮುಂದೆ ಮುಖಂಡರೂ ನೀವೇ, ಸೈನಿಕರೂ ನೀವೇ ಎಂದು ಹೊಣೆ ಹೊತ್ತು ಮುಂದೆ ಸಾಗಿರಿ! ಮಹಾತ್ಮನ ಈ ಚಳವಳಿಯು ಸರಳವೂ, ಸ್ಪಷ್ಟವೂ ಆಗಿದೆ. ಅದಕ್ಕಾಗಿ ಮುಖಂಡರ ಅವಶ್ಯಕತೆಯೇ ಇಲ್ಲ. ಶಾಂತಿಯೊಂದೇ ಅತಿ ಅವಶ್ಯವಾಗಿ ಬೇಕಾದುದು.

## ಮೋತೀಲಾಲರ ಸಂದೇಶವು.

ರಾಷ್ಟ್ರಸಭೆಯ ಅಧ್ಯಕ್ಷರಾದ ಮೋತೀಲಾಲರು ರಾಷ್ಟ್ರೀಯ ಸೈನಿಕರಾದ ಸತ್ಯಾಗ್ರಹೀ ವೀರರನ್ನು ಅಭಿನಂದಿಸಿ ಈ ಪ್ರಕಾರ ಹೇಳುತ್ತಾರೆ— ಈ ಚಳವಳಿಯು ಸ್ವರಾಜ್ಯವು ದೊರೆಯುವ ವರೆಗೂ ಹೀಗೇ ಸಾಗತಕ್ಕದ್ದಾಗಿದೆ ಸರಕಾರವು ಮುಂದಾಳುಗಳನ್ನು ಹಿಡಿಯುವದು, ಶಿಕ್ಷೆಕೊಡುವದು ಮೊದಲಾದ ಕೆಲಸಗಳನ್ನು ನಡಿಸಿರುವದು. ಇದರಿಂದ ಕಂಡುಬರುವ ಸಂಗತಿಯೇನು? ಒಂದು ಕಡೆಯಿಂದ ವಿಚಾರಿಸಿದರೆ, ಬಹು ದಿವಸಗಳಿಂದಲೂ ಪಾರತಂತ್ರರಾಗಿ ಬಳಲುತ್ತ ಉಳಿದ ಜನರು ತಮ್ಮ ಶಕ್ತಿ ಸರ್ವಸ್ವವನ್ನೂ ಅರ್ಪಿಸಿ ಸ್ವತಂತ್ರರಾಗಲು ನಿರ್ಧರಿಸಿದುದು ಕಂಡುಬರುತ್ತದೆ. ಮತ್ತೊಂದು ಕಡೆಗೆ ನೋಡಿದರೆ ಪರಕೀಯ ಸರಕಾರವು ತನ್ನ ಅನ್ಯಾಯಮಯವಾದ ಕಟ್ಟಳೆಗಳನ್ನು ರಕ್ಷಿಸಿಕೊಳ್ಳಲು ಗಾಬರಿಗೊಂಡಿದೆ. ಸರಕಾರದ ನೆರೆಯಾಳುಗಳಾದ ಜನರೆಲ್ಲರೂ ನಮ್ಮ ಈ ಸ್ವಾತಂತ್ರ್ಯ ಯುದ್ಧದ ವಿಜಯಸ್ತಂಭಗಳಿದ್ದಂತೆ. ಕರಾಚಿ, ಕಲಕತ್ತೆಗಳಲ್ಲಾದ ದಂಗೆಗಳು ನಮ್ಮ ಈ ಸತ್ಯಾಗ್ರಹ ಚಳವಳಿಗೆ ಯಾವ ಬಗೆಯಿಂದಲೂ ಸಂಬಂಧಪಟ್ಟಿಲ್ಲ. ಹಿಂಸೆಯಿಂದ ಈ ನಮ್ಮ ಯುದ್ಧಕ್ಕೆ ಏನೂ ಉಪಯೋಗವಾಗದು. ನಿಮ್ಮ ಮುಂದಾಳುಗಳು ಈ ಯುದ್ಧದಲ್ಲಿ ಶಾಂತರೀತಿಯಿಂದ ಸಾಗಿಹೋಗುವದನ್ನು ನೀವು ಅನುಸರಿಸತಕ್ಕದ್ದು. ದಂಗೆಗಳನ್ನು ನಿಷೇಧಿಸುವದು ನಮ್ಮ ಕರ್ತವ್ಯವು. ಆದರೂ ನಮ್ಮ ಯುದ್ಧವನ್ನು ಮಾತ್ರ ನಿಲ್ಲಿಸತಕ್ಕದ್ದಲ್ಲ. ಬಹಳೇ ಶಾಂತರಾಗಿ ನಡೆಯತಕ್ಕದ್ದು. ಮುಂದಾಳುಗಳನ್ನು, ಜನರ ಹೃದಯದಲ್ಲಿ ಮನೆಮಾಡಿಕೊಂಡಿರುವಂಥ ಮುಖಂಡರನ್ನು ಹಿಡಿದು ಜೇಲಿಗೆ ಅಟ್ಟುವ ಸರಕಾರದ ಈ ಧೋರಣಕ್ಕೆ ನಾವು ಕೃತಜ್ಞರಾಗತಕ್ಕದ್ದು. ಮಹಾತ್ಮನು ಈ ಧೋರಣಕ್ಕೆ ಬಲಿ ಬೀಳಲಿ, ಬೀಳದಿರಲಿ ಈ ಯುದ್ಧವು ಮಾತ್ರ ಹೀಗೇ ಸಾಗತಕ್ಕದ್ದೇ! ನಗೆಮೊಗದಿಂದ ಕಾದಿರಿ! ಕಡೆಗೆ ವಿಜಯಶಾಲಿಗಳಾಗಿರಿ.

## ಕರ್ನಾಟಕದ ಸತ್ಯಾಗ್ರಹಕ್ಕೆ ಕಳೆಏರಿತು!

ಬೇರೆ ಬೇರೆ ಸ್ಥಳಗಳಿಂದ ಸತ್ಯಾಗ್ರಹೀ ವೀರರ ಮೂರು ತಂಡಗಳು ಅಂಕೋಲೆಯ ಸಮರಭೂಮಿಗೆ ತೆರಳಿವೆ. ಯಮಕನಮರ್ಡಿ ಎಂಬಲ್ಲಿ ನಿನ್ನೆ ರಾತ್ರಿ ವಾಮನರಾವ ಬಿದ್ರಿ, ಬಾವೂ ಗೋಖಲೆ ಮತ್ತು ಇಬ್ಬರು ಸ್ವಯಂಸೇವಕರನ್ನು ಹಿಡಿದಿರುವರು. ಬಾಗೇವಾಡಿಯಲ್ಲಿ (ಬೆಳಗಾವ ಜಿಲ್ಲೆಯ) ಗುರುನಾಥ ವಾಮನಾಚಾರ್ಯ ಎಂಬವರನ್ನು ಹಿಡಿದಿರುವರು. ಜೀವಣರಾವ ಯಾಳಗಿ ಮತ್ತು ಅನಂತರಾವ ದಾಬಡೆ ಎಂಬವರು ೧೫ ದಿವಸಗಳ ಶಿಕ್ಷೆಯನ್ನು ಭೋಗಿಸಿ ಬಿಟ್ಟು ಬಂದಿರುವರು. ಇವರು ಮತ್ತೆ ಈ ಕೆಲಸಕ್ಕೆ ಹತ್ತುವವರೇ. ಅಂಕೋಲೆಯಲ್ಲಿ ಒಟ್ಟು ೫೧ ಸ್ವಯಂಸೇವಕರು ಹಿಡಿಯಲ್ಪಟ್ಟಿರುವರು. ಅವರಲ್ಲಿ ಮೂವರಿಗೆ ಒಂದು ವಾರದ ವರೆಗೆ ಸಜೆಯಾಗಿದೆ. ಉಳಿದವರನ್ನು ಒಂದು ದಿವಸ ಸಜೆ ಕೊಟ್ಟು ಬಿಟ್ಟಿರುವರು. ಒಟ್ಟಿಗೆ ಇದು ವರೆಗೆ ಸರಕಾರದವರು ಕರ್ನಾಟಕದ ೭೦ ಜನ ಸತ್ಯಾಗ್ರಹಿಗಳಿಗೆ ಸಜೆ ಕೊಟ್ಟಿರುವರು, ಇವರಲ್ಲಿ ಬೆಳಗಾಂವ ಜಿಲ್ಲೆಯವರು ಮೂವತ್ತು ಜನರಿರುವರು. ಅಂಕೋಲೆಯಲ್ಲಿ ನಡೆದ ಸತ್ಯಾಗ್ರಹ ಯುದ್ಧಕ್ಕೆ ಒಳ್ಳೇ ಕಳೆ ಏರಿ ಬಂದಿದೆ. ಸಮರವು ಭರದಿಂದ ಸಾಗಿದೆ.

## ಸರಕಾರದ ದಬ್ಬಾಳಿಕೆಯ ಸುದ್ದಿಗಳು

### ಬಂಗಾಲ

ಕಲಕತ್ತೆಯಲ್ಲಿ ಪೋಲೀಸರು ರಾಷ್ಟ್ರೀಯ ಕೆಲಸಗಾರರ ಮನೆಹೊಕ್ಕು ಸಾಮಾನಗಳನ್ನು ಹುಡುಕುತ್ತಿರುವರು. ಶಾಂತಿಮಯ ಕೆಲಸಗಾರರ ಮನೆಯಲ್ಲಿ ಏನು ಸಿಗುವದು?

ಸೇನಗುಪ್ತರಿಗೆ ಕೈಯಲ್ಲಿ ಬೇಡೀ ಹಾಕಿಕೊಂಡು ಪೋಲೀಸರು ಉದ್ಧಟತನದಿಂದ ಅವರನ್ನು ಕಲಕತ್ತೆಗೆ ಕರೆದುಕೊಂಡು ಬಂದರು. ಸೇನಗುಪ್ತರೇನು ಸಾಮಾನ್ಯರೋ? ಅವರು ಬಂಗಾಲದ ಪ್ರಸಿದ್ಧ ಮುಂದಾಳುಗಳು. ದಿವಂಗತ ತ್ಯಾಗವೀರರಾದ ಚಿತ್ತರಂಜನ ದಾಸರ ಪಟ್ಟಶಿಷ್ಯರು. ಇದನ್ನು ಸರಕಾರವು ನೆನಪಿನಲ್ಲಿಡಲಿ.

ಆಚಾರ್ಯ ರೇ ಎಂಬವರು ತಮ್ಮ ಮೂಲಗ್ರಾಮಕ್ಕೆ ಹೋಗಿರುವರು. ಇವರು ಖಾದೀ ಭಕ್ತರು. ಖಾದೀ ಪ್ರಸಾರದ ಜಟ್ಟಿಗಳು. ಇನ್ನು ತಮ್ಮ ಕೆಲಸವನ್ನು ಹೆಚ್ಚು ಜೋರಿನಿಂದ ಸಾಗಿಸಲಿ!

ಸೀಮಿತು ಕಾಯದೇ ಭಂಗಮಾಡಿ ಮೆರವಣಿಗೆ ಹೊರಡಿಸಲು ಸಿದ್ಧರಾಗಿರುವರು. ಒಬ್ಬ ವೀರ ತರುಣಿಯು ಸಹ ಸಿದ್ಧಳಾಗಿರುವಳು.

### ಬೋರಸಾದ

ಇಲ್ಲಿಯ ಪಟೇಲ ಜನರು ಶೆರೆ ಶಿಂದಿ ಕುಡಿಯುವವನನ್ನು ಐದು ವರ್ಷಗಳ ವರೆಗೆ ತಮ್ಮ ಸಮಾಜದಿಂದ ಹೊರಗೆ ಹಾಕಬೇಕೆಂದೂ ಮತ್ತು ೫೧ ರೂಪಾಯಿ ದಂಡ ಮಾಡಬೇಕೆಂದೂ ನಿಶ್ಚಯಿಸಿರುವರು. ಕುಡುಕನನ್ನು ಹಿಡಿದುಕೊಟ್ಟವರಿಗೆ ೫೧ ರೂಪಾಯಿ ಇನಾಮು ಕೊಡುವರಂತೆ! ಇದೆಲ್ಲವೂ ಮಹಾತ್ಮನ ಅಮೃತವಾಣಿಯ ಫಲವಲ್ಲವೇ? ಇಲ್ಲಿಯ ಮಾಮಲೇದಾರನಿಗೆ ಊರಲ್ಲಿ ಇರಲಿಕ್ಕೆ ಜನರು ಮನೆಯನ್ನು ಸಹ ಕೊಡಲೊಲ್ಲರು. ಕಚೇರಿಯ ಆವಾರದಲ್ಲಿಯೇ ಹೆಂಡರು ಮಕ್ಕಳನ್ನು ಇಟ್ಟುಕೊಂಡು ಇರಹತ್ತಿರುವರು. ಗುಜರಾತದ ಸರಕಾರೀ ನವಕರರಿಗೆ ಈ ಪ್ರಕಾರ ನಡೆದದೆ. ಇಲ್ಲಿಯ ನವಕರರು ಇದನ್ನು ನೋಡಿ ಜಾಗ್ರತರಾಗಲಿ!

### ಧೊಲೇರಾ

ಇಲ್ಲಿ ಪೋಲೀಸರು ಸ್ವಯಂಸೇವಕರ ಕೈಯೊಳಗಿನ ಉಪ್ಪು ಕಸಿದುಕೊಳ್ಳುವದಕ್ಕಾಗಿ ಚಾಕು, ಚೂರಿಗಳಿಂದ ಅವರ ಕೈಯನ್ನು ಗಾಯಪಡಿಸುವರು. ಅವರನ್ನು ಬತ್ತಲೇ ಮಾಡುವರು. ಮತ್ತು ಸುಡುವ ಸಿಗರೇಟುಗಳನ್ನು ಅವರ ಕೈಗೆ ಒತ್ತುವರು. ವಿರಮಗಾವ ಎಂಬಲ್ಲಿಯೂ ಇಂಥ ಅತ್ಯಾಚಾರಗಳು ನಡೆದಿವೆ. ಫೋಟೋದಲ್ಲಿ ಸಹ ಅವರ ಈ ಕೃತಿಗಳ ಚಿತ್ರಗಳು ತೆಗೆಯಲ್ಪಟ್ಟಿವೆ. ಪೋಲೀಸರು ಇದನ್ನು ನೋಡಿ ಗಾಬರಿಯಾಗಿರುವರು. [illegible]

### ಕಂಟಾಯ

ಪೋಲೀಸರು ಒಬ್ಬ ಸ್ವಯಂಸೇವಕನನ್ನು ಒದ್ದು ಎದೆಗೆ ನೋವು ಮಾಡಿದರು. ಆದರೂ ಆ ವೀರನು ಅದನ್ನೆಲ್ಲ ಸಹಿಸಿಕೊಂಡನು. ಪೋಲೀಸರ ಕಾಲುಗಳು ಉದ್ದವಾಗಹತ್ತಿವೆಯೋ?

### ಮಹಾರಾಷ್ಟ್ರ

ಪೇಣ ಎಂಬಲ್ಲಿ ಕೇಳಕರ [illegible] ರಾಷ್ಟ್ರಧ್ವಜವನ್ನು ಏರಿಸಿದರು. ಸತ್ಯಾಗ್ರಹಿಗಳು ಉಪ್ಪಿನ ಕಾಯದ ಮುರಿಯುವದಕ್ಕೆ ಪ್ರಾರಂಭಿಸಿರುವರು.

ಜಳಗಾಂವದಲ್ಲಿ ದೇವಕೀನಂದನ ಎಂಬ ಮುಂದಾಳುವನ್ನು ಹಿಡಿದು ೪ ತಿಂಗಳ ಕಠಿಣ ಸಜೆಯನ್ನೂ ನೂರು ರೂಪಾಯಿ ದಂಡವನ್ನೂ ವಿಧಿಸಿರುವರು.

### ಗುಜರಾತ

ಬಾರ್ಡೋಲಿಯಲ್ಲಿ ಮಹಾತ್ಮನು "ನಿಮ್ಮಲ್ಲಿ ಒಬ್ಬನೂ ವಿದೇಶೀ ಬಟ್ಟೆಯನ್ನು ಧರಿಸಬಾರದು; ಸೆರೆ ಶಿಂದಿ ಕುಡಿಯಬಾರದು; ಪಟೇಲ ಕುಲಕರ್ಣಿಯರು ಸರಕಾರದ ನೌಕರಿ ಬಿಡಬೇಕು. ಇಂದಿಗೆ ಸ್ವರಾಜ್ಯವೆಂದರೇನು ಎಂದು ನನಗೆ ಕೇಳಿರಿ. ನಾನು ಅದನ್ನು ನಿಮಗೆ ಹೇಳುವೆನು." ಕರ್ನಾಟಕಕ್ಕೂ ಈ ಮಹಾತ್ಮನ ಉಪದೇಶವು ಸರಿದೋರದೋ?

### ಮದ್ರಾಸ

ರಾಜಗೋಪಾಲಾಚಾರ್ಯರು ಸ್ವಯಂಸೇವಕರ ತಂಡದ ಸೇನಾಧಿಪತಿಗಳಾಗಿ ವೇದಾರಣ್ಯಂ ಎಂಬಲ್ಲಿಗೆ ಉಪ್ಪಿನ ಕಾಯದೇ ಭಂಗಕ್ಕಾಗಿ ಹೊರಟಿರುವರು. ಇವರು ಮಹಾತ್ಮನ ಪ್ರಿಯ ಶಿಷ್ಯರು. ಅವನ ಮಾತಿನಂತೆ ನಡೆಯುವವರೇ?

### ಬೆಳಗಾವಿ

ಯಾಳಗಿ ಮತ್ತು ದಾಬಡೆಯವರು ಬಿಟ್ಟುಬಂದ ಕಾರಣ ಅವರ ಸನ್ಮಾನ ಮಾಡುವದಕ್ಕಾಗಿ ಒಂದು ದೊಡ್ಡ ಸಭೆಗೂಡಿತ್ತು. ಶಂಕೂರ ಎಂಬವರನ್ನು ಹಿಡಿದು ಆರು ತಿಂಗಳ ಕಠಿಣ ಸಜೆ ಕೊಟ್ಟಿರುವರು. ಮಾರುತಿರಾವ ಮತ್ತು ಕಾಗವಾಡ ಎಂಬವರಿಗೂ ಅಷ್ಟೇ ಶಿಕ್ಷೆಯಾಗಿದೆ. ಅಥಣಿಯ ಮುಂದಾಳುಗಳಾದ ಗುರುನಾಥ ಜೇರೆ ಎಂಬವರಿಗೆ ಎಂಟು ತಿಂಗಳ ಹಾಗೂ ಜೋಶೀ ಎಂಬವರಿಗೆ ಐದು ತಿಂಗಳ ಕಠಿಣ ಸಜೆಯಾಗಿದೆ.

(ಶಾಂತಿಯಿಂದ ಬಂದ ವಾರ್ತೆ)

## ಶಾಂತಿ ಸಂಗ್ರಾಮ

### ಅಂಕೋಲೆಯವರ ಉಪ್ಪಿನ ಕಾಯಿದೇ ಭಂಗ, ಹೆಣ್ಣು ಮಕ್ಕಳ ಮೇಲು ಪಂಕ್ತಿ.

(ನಮ್ಮ ಸ್ವಂತ ಸುದ್ದಿಗಾರರಿಂದ)

ಬೆಳಗಿನ ಕಪ್ಪು ಹರಿಯುವ ಹೊತ್ತಿಗೆ ಸರಿಯಾಗಿ ಶಿಬಿರದಿಂದ ಸ್ವಯಂಸೇವಕರುಗಳು ಸಿದ್ಧರಾಗಿ ಹೊರಟು ಊರಬೀದಿಗಳಲ್ಲಿ ಅಲ್ಲಲ್ಲಿ ನಿಂತು, ಜನರೆಲ್ಲರೂ ಕ್ರಮದಿಂದಲೂ, ಶಾಂತರೀತಿಯಿಂದಲೂ ವರ್ತಿಸಬೇಕಾಗಿ ಬೇಡುತ್ತಿದರು, ಇನ್ನು ಕೆಲವರು ಕಚೇರಿಯ ಮೈದಾನದಲ್ಲಿ ಅಷ್ಟೊತ್ತಿಗಾಗಲೇ ನೆರೆದಿದ್ದ ಸಾವಿರಾರು ಜನ ಹೆಂಗಸರು, ಗಂಡಸರು, ಹುಡುಗರು, ಹುಡುಗಿಯರುಗಳನ್ನು ಕರೆದುಕೊಂಡು ಸಾಲಿನಮೇಲೆ ಶಿಸ್ತಿನಿಂದ ಜಯಘೋಷ ಮಾಡುತ್ತ ಹೊರಟರು.

ಹೀಗಿವರು ಹೋಗ ಹೋಗುತ್ತಾ ಗುಂಪು ಬೆಳೆಯುತ್ತಾ ಹೋಯಿತು. ಎರಡು ಪಂಗಡಮಾಡಿಕೊಂಡು ಎರಡು ಕಡೆಗಳಿಗೆ ಹೋದವರೂ ತಮ್ಮ ತಮ್ಮ ಬುಟ್ಟಿಗಳಲ್ಲಿಯೂ, ಕೈವಸ್ತ್ರಗಳಲ್ಲಿಯೂ, ಮಡಕೆ ತಂಬಿಗೆಗಳಲ್ಲಿಯೂ ಸಮುದ್ರದ ನೀರನ್ನು ಉಪ್ಪಿನ ಮಣ್ಣನ್ನೂ ಅಥವಾ ಚೊಕ್ಕ ಬೆಳ್ಳಗೆ ಹಾಗಿದ್ದ ಹರಳುಪ್ಪನ್ನೂ ತಗೆದುಕೊಂಡು ಎರಡು ಎರಡೂವರೆ ಗಂಟೆಯಲ್ಲಿ ತಿರುಗಿ ಬಂದಿತು.

ಇವತ್ತಿನ ಸಾಹಸ ಕಾರ್ಯದಲ್ಲಿ ಹೆಣ್ಣುಮಕ್ಕಳೇ ಮುಂದಾಳುತನವನ್ನು ವಹಿಸಿದ್ದ ಪೂರ್ಣ ತುರಂಗಕ್ಕೆ ಕಳುಹಲ್ಪಟ್ಟ ಶ್ರೀ ಶಿವರಾಯರ ತಂಗಿಯರಾದ ಶೀತಾಬಾಯಿ ಸಂತೋಷದಿಂದ ಆಡಿದ ನಾಲ್ಕು ಮಾತುಗಳು ಎಲ್ಲರಿಗೂ ಬಹು ಉತ್ಸಾಹಕರವಾಗಿವೆ. ಅವರು ಹೇಳಿದ್ದೇನೆಂದರೆ "ಇದುವರೆಗೆ ಉಪ್ಪನ್ನು ಮಾಡಲು ನಾವೆಲ್ಲರೂ ಅಂಜುತ್ತಿದ್ದೆವು, ಈಗ ಸರಕಾರದವರಿಗೆ ಅದರ ಕಾಯಿದೆಯನ್ನು ಮುರಿದಿದ್ದೇವೆ. ಇನ್ನು ಅಂಜುವ ಕಾರಣವಿಲ್ಲ. ನಮಗೆ ಬೇಕಾದ ಉಪ್ಪನ್ನು ನಾವೇ ಮಾಡಿಕೊಳ್ಳೋಣ. ನಾನು ತಂದಿರುವ ಸಮುದ್ರ ನೀರಿನಿಂದ ಉಪ್ಪನ್ನು ಮಾಡಿ ಸಾಯಂಕಾಲಕ್ಕೆ ಮಾರುತ್ತೇನೆ. ಈಗ ನಮ್ಮಣ್ಣನವರು ತುರಂಗದಲ್ಲಿದ್ದಾರೆ. ನಾನಾದರೂ ಅವರ ಹಿಂದೆಯೇ ಹೋಗಲು ಸಿದ್ಧಳಿದ್ದೇನೆ."

ಇವರಲ್ಲದೆ ದೇವದಾಸಿಯ ಕುಲದ ಜನವಡೀಬಾಯಿ ಹನ್ಮಕ್ಕೀ [illegible] ಎಂಬುವರೂ ಉತ್ಸಾಹದಾಯಕವಾದ ನಾಲ್ಕು ಮಾತುಗಳನ್ನಾಡಿದರು.

ಈ ಪತ್ರಿಕೆಯು ಕೆ. ಶಂಕರ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯಲ್ಲಿಯ
ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦-೦-೩

ಜಯ ಕರ್ನಾಟಕ

ನಿತ್ಯಸಂಚಿಕೆಯು.

यदत् परवशं दुःखं । यद्यदात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಗುರುವಾರ ಮಿತಿ ಚೈತ್ರ ಬಹುಳ ೧೧ ಶಕೆ ೧೮೫೨ ತಾ ೨೪-೪-೩೦ ಸಂಚಿಕೆ ೩೧

## ಸಂಪಾದಕರ ಭೂಮಿ.

ನನ್ನ ದೇಹವು ನಿನ್ನ ವೀರಶಾಸನವಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ದೀರಬಹಗಂಧನವವೆಂದು ತಿಳಿಯೆ॥

## ಯುದ್ಧವು ನಿಲ್ಲುವದೋ?

ಪರಕೀಯರ ಆಳಿಕೆಗೆ ಒಳಗಾಗಿ ನಾವು ನಮ್ಮ ಶಕ್ತಿ, ಸಂಪತ್ತುಗಳನ್ನು ಕಳೆದುಕೊಂಡು ಕಳೆಗುಂದಿದವರಾಗಿ ಇದುವರೆಗೆ ಬಾಳಿದೆವು. ಈಗ ಮಾತ್ರ ದೇಶವು ಎಚ್ಚತ್ತಿರುವದು. ಇನ್ನು ಮುಂದೆ ಅದು ಸುಮ್ಮನೆ ಕೂಡದು ತನ್ನ ಶಕ್ತಿ ಮೀರಿ ಪ್ರಯತ್ನಮಾಡಲು ಸಿದ್ಧವಾಗಿದೆ. ಸ್ವತಂತ್ರವಾಗುವದಕ್ಕಾಗಿ ಮಹಾತ್ಮನ ಮಂತ್ರದಂತೆ ನಡೆಯಲು ಟೊಂಕಕಟ್ಟಿದೆ. ರಾಷ್ಟ್ರದಲ್ಲಿಯ ಬಾಲಕರು, ತರುಣರ, ವೃದ್ಧರು, ಸ್ತ್ರೀಯರು, ಎಲ್ಲರೂ ಈ ಶಾಂತಿಮಯ ಸತ್ಯಾಗ್ರಹದಲ್ಲಿ ಸೈನಿಕರಾಗತೊಡಗಿದ್ದಾರೆ. ಯುದ್ಧವೂ ಸುರುವಾಗಿ ಅಲ್ಪಕಾಲವಾಯಿತು. ಅಷ್ಟರಲ್ಲಿಯೇ ಸರಕಾರವು ಗಾಬರಿಯಾಗಿದೆ. ಸತ್ಯಾಗ್ರಹದ ಎಲ್ಲ ಮುಂದಾಳುಗಳನ್ನು ಹಿಡಿದು ಜೇಲಿಗೆ ಅಟ್ಟಿರುವರು. ದೇಶದ ಮೇಲಿನ ಪ್ರೇಮದಿಂದಲೂ, ಮಹಾತ್ಮನ ಮೇಲಿನ ಭಕ್ತಿಯಿಂದಲೂ ಎಲ್ಲ ಮುಂದಾಳುಗಳೂ ಈ ಯುದ್ಧದಲ್ಲಿ ಸರಂಪಂದ ಸೆರೆಯಾಳುಗಳಾಗಿರುವರು. ಕಾರಾಗೃಹದಲ್ಲಿ ಕಷ್ಟನಷ್ಟಗಳನ್ನು ಸಹಿಸುತ್ತಿರುವರು. ಇದನ್ನೆಲ್ಲ ನೋಡಿ ಸತ್ಯಾಗ್ರಹದ ಸೈನಿಕರು ಯಾವಬಗೆಯಿಂದಲೂ ಹಿಂಜರಿಯುವ ಕಾರಣವಿಲ್ಲ ಯಾಕಂದರೆ ಮಹಾತ್ಮನು ತಾನು ಈ ಯುದ್ಧವನ್ನು ನಿಲ್ಲಿಸುವದಿಲ್ಲವೆಂತಲೂ ಮುಂದೆ ಹೀಗೇ ಸಾಗಿಸುವನೆಂತಲೂ ನಿರ್ಧಾರಮಾಡಿರುವನು. ಮಹಾತ್ಮನ ನಿರ್ಧಾರವು ಹಿಮಾಲಯದಂತೆ ಅಚಲವಾದುದು. ಅದರಲ್ಲಿ ಏನೂ ಹೆಚ್ಚು ಕಡಿಮೆ ಯಾಗುವದು ಶಕ್ಯವಿಲ್ಲ ಆದರೆ ಸರಕಾರವು ಮಾತ್ರ ಒಂದು ಸೋಗು ಹೂಂಡಿಸುವದು. ಜನರಲ್ಲಿ ಪ್ರಕ್ಷೋಭವನ್ನುಂಟುಮಾಡಿ ಪೋಲೀಸರನ್ನು ಇಲ್ಲದ ಕೆಲಸಕ್ಕೆ ಹಚ್ಚಿ ಇಲ್ಲದ ತಪ್ಪನ್ನು ಜನರ ಮೇಲೆ ಹೊರಿಸಿ ಈ ಚಳವಳಿಯ ಶಕ್ತಿಯನ್ನು ಕಡಿಮೆಮಾಡಬೇಕೆಂದು ಒಂದು ಹೊಸ ಆಟ ಹೂಡಿರುವರು.

ಕರಾಚಿ, ಕಲಕತ್ತ, ಚಿತಗಾಂಗದಲ್ಲಿ ಆದ ದಂಗೆಗಳು ಅದರ ಈ ಆಟದಲ್ಲಿಯ ಸೋಗುಗಳು. ಅವರು ಹೀಗೆ ಮಾಡಲು ಒಂದು ಪ್ರಬಲ ಕಾರಣವುಂಟು. ಈ ಸೋಗುಗಳಿಗೆ ಮಹಾತ್ಮನು ಸೊಪ್ಪುಹಾಕಿ ತನ್ನ ಈ ಚಳವಳಿಯನ್ನು ನಿಲ್ಲಿಸುವನೆಂದು ಅವರು ತಿಳಕೊಂಡಿರಬಹುದು ಆ ದಿವಸಗಳು ಈಗ ಉಳಿದಿಲ್ಲ. ಮಹಾತ್ಮರೂ ಈಗ ಈ ಸರಕಾರದ ಕಾರಸ್ಥಾನವನ್ನು ಚನ್ನಾಗಿ ಕಂಡು ಹಿಡಿದಿರುವರು. ಮಹಾತ್ಮರೂ ಈಗ ಮುಂದಡಿಯಿಡಲು ಯಾವ ಬಗೆಯಿಂದಲೂ ಹಿಂದೆ ಮುಂದೆ ನೋಡುವದಿಲ್ಲ. ತಮ್ಮ ಈ ಸ್ವಾತಂತ್ರ್ಯಯುದ್ಧವನ್ನು ಅಖಂಡವಾಗಿ ಅವ್ಯಾಹತವಾಗಿ ಹೀಗೆ ಮುಂದೆ ಸಾಗಿರುವರು. ಗುಜರಾತದಲ್ಲಿ ಈ ಯುದ್ಧವನ್ನು ಎಲ್ಲ ರೀತಿಯಿಂದಲೂ ಯಶಸ್ವಿಯಾಗಿ ಮಾಡಹತ್ತಿರುವರು. ಬೇರೆ ಪ್ರಾಂತಗಳಿಗೂ ಹಾಗೇ ಮಾಡಲು ಹುರುಪು ಗೊಳಿಸುತ್ತಿರುವರು. ಅವನ ಆತ್ಮಶಕ್ತಿಗೂ ದಿವ್ಯತೇಜಸ್ಸಿಗೂ ಇವೇನು ದೊಡ್ಡ ಕೆಲಸವಲ್ಲ. ಅವನ ಸಿದ್ಧತೆಯನ್ನು ನೋಡಿದರೆ ಕೌರವರ ಸಂಹಾರಕ್ಕಾಗಿ ಒಂದು ನಿಂತು ಅರ್ಜುನನ ಸಾರಥಿಯಾಗಿ ಕಾದಿದ ಕೃಷ್ಣನ ಅವತಾರದಂತೆ ತೋರುವನು. ತನ್ನ ಈ ಕೆಲಸವನ್ನು ಪೂರ್ತಿಗೊಳಿಸುವದಕ್ಕಾಗಿ ತಾನು ಪ್ರಾಣವನ್ನಾದರೂ ಕೊಡುವೆನೆಂದು ಹೇಳುತ್ತಿರುವನು. ದೇಶವೇ ಅವನಿಗೆ ಈಶನಂತೆ ಆಗಿರುವದು. ದೇಶಸೇವೆಯೇ ಈಶಸೇವೆಯೆಂದು ಹೇಳುತ್ತಿರುವನು ಇಂಥ ಮಹಾತ್ಮನು ಸಮರ ಸಾರ್ವಭೌಮನಾಗಿ ನಡೆದಿರಲು, ಯುದ್ಧವು ನಿಲ್ಲುವದೇ? ಎಂದಿಗೂ ನಿಲ್ಲದು. ಮುಂಬಯಿಯ ಟಾಯಿಮ್ಸಕಾರನು ಬೇಕಾದ್ದು ಒರೆಯಲಿ ಸೂರ್ಯನ ಕಣ್ಣಲ್ಲಿ ಮಣ್ಣು ತೂರಲಿಕ್ಕೆ ಯತ್ನಿಸಿದರೆ ಆ ಮಣ್ಣು ತನ್ನ ಕಣ್ಣಲ್ಲಿಯೇ ಬೀಳುವದು.

---

## ಅಂಕೋಲಾ

ಹಿಂದುಸ್ಥಾನೀ ಸೇವಾದಲದ ಕಾರ್ಯವಾಹಕರಾದ ಶ್ರೀ. ಪಂದು ಮಾಧವ ಬರ್ಡೆಯವರಿಗೆ ಒಂದು ವರ್ಷದ ಸಶ್ರಮ ಶಿಕ್ಷೆ ವಿಧಿಸಲ್ಪಟ್ಟಿತು. ಹಳಿಯಾಳದ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶ್ರೀ. ಫಡನೀಸರಿಗೆ ಒಂದು ವರ್ಷ ಕಠಿಣ ಶಿಕ್ಷೆಯಾಯಿತು. ಮತ್ತು ೩ ಜನ ಸ್ವಯಂಸೇವಕರನ್ನು ಹಿಡಿದಿರುವರು.

||ಓಂ||

## ಸತ್ಯಾಗ್ರಹೀ.

(ಕಾರ—ಹಕ್ಕಿ)

ದಂಡ ಘಟಕಿ ಶಿಕ್ಷೆ ಕರೆಯು ಕೈವಿ ಗಂಜುದೆಲ್ಲಿ ? ||
ರುಂಡನಿಟ್ಟು ಪ್ರಾಣಬಿಡುವೆ ಶೂಲ ಗಂಭದಲ್ಲಿ ||೧||
ಮಡಿದು ಪಡಿದು ವೀರಮರಣ ತಾಯಿಸೇವೆಯಲ್ಲಿ ||
ದುಡಿದು ನೀಡು ಪ್ರಾಣ ನಾಡಪ್ರೇಮ ಯಜ್ಞದಲ್ಲಿ || ೨ ||
ಹರಿದು ಸುರಿಗ ಹರಿದು ಹಾರಿ ಅರಿಯು ಗಳುವ ಹರಿಸ್ಯೆ ||
ತರುಣರಕ್ತದಿಂದ ಉರಿವ ಶೌರ್ಯ ಧೈರ್ಯತೋರಿಸ್ಯೆ ||೩||
ನ್ಯಾಯನೀತಿ ಧರ್ಮದಿಂದ ವೈರಿ ಶಿರವ ಬಾಗಿಸು ||
ಮಾಯ ಮೋಹ ತೊರೆದು ಶರಣರ ಕಲೆದೂಗಿಸು ||೪||
ಪಾರತಂತ್ರ್ಯ ಹರಿದು ಹರುಷಗೊಳ್ಳು ಕಷ್ಟ ದೂಡು ||
ಸಾರವತ್ತ ಸಂಸಪುಣ್ಯ ಭೂಮಿ ನಮ್ಮ ನಾಡು ||೫||

## ವಿಜಾಪೂರ

ನಿನ್ನಿನ ದಿವಸ ೨೨-೪ ೩೦ ೬ ಘಂಟೆಗೆ ಒಂದು ಜಾಹೀರ ಸಭೆಯು ಕೂಡಿತ್ತು. ಸಭೆ ಮುಗಿದ ನಂತರ ೮ ಘಂಟೆಯ ಸುಮಾರಕ್ಕೆ ನಮ್ಮ ಸ್ವಯಂಸೇವಕನಾದ ಕುಷ್ಟಿಗಿ ವ್ಹಿ ವ್ಹಿ ಎಂಬವನು ಉಪ್ಪು ಮಾರಲಿಕ್ಕೆ ನಿಂತನು. ಆಗ್ಗೆ ಫೌಜದಾರರು ಬಂದು ಪರಕತಮಾಡಿ ಆತನನ್ನು ಪೋಲೀಸರ ವಶಮಾಡಿದರು. ಜೋಶಿ ಜಿ. ಜಿ. ಈತನ ಹತ್ತಿರ ಉಪ್ಪು ಇದ್ದದರಿಂದ ಈತನನ್ನೂ ಪೋಲಿಸರ ವಶ ಮಾಡಿದರು. ಅನಂತರ ವಾಟವೆ ಡಿ ಕೆ ಈತನನ್ನೂ ಹಿಡಿದರು. ಆಮೇಲೆ ಮೂವರನ್ನೂ ಫೌಜದಾರರ ಕಚೇರಿಗೆ ಒಯ್ದು ಕೂಡಿಸಿದರು. ರಾತ್ರಿ ಹನ್ನೊಂದು ಘಂಟೆಗೆ ಈ ಮೂವರನ್ನೂ ಬಿಟ್ಟರು.

ಕಾರ್ಯದರ್ಶಿ ಕಾ. ಕಮೀಟಿ.

## ಸೊಲ್ಲಾಪೂರ.

ಜಮನಾಲಾಲ ಬಜಾಜರನ್ನ ಸರಕಾರವು ದಂಡಿಸಿದ ಕಾರಣ ಸೊಲ್ಲಾಪೂರದ ಅವರ ಸಮಾಜ ಬಂಧುಗಳು ಬಂದು ಪ್ರಕಟನೆಯನ್ನೂ ಹೊರಡಿಸಿದ್ದಾರೆ.

ಮಹಾತ್ಮಾ ಗಾಂಧಿಯವರು ಸುರುವುಮಾಡಿದ ಕಾಯದೆ ಭಂಗದಲ್ಲಿ ಸೈನಿಕರಾಗಿರಿ.

ಎರಡನೆಯವರನ್ನೂ ಸೈನಿಕರನ್ನಾಗಿ ಮಾಡಿರಿ.

ಶುದ್ಧ ಖಾದಿಯನ್ನು ತಯಾರಿಸಿ ಧರಿಸಿರಿ.

ರಾಮಕೃಷ್ಣ ಜಾಜೂ
ಪರಶರಾಮ ರಾಠೀ
ಮುರಲೀಧರ ಆಸಾವಾ.
ಮೋಹನಲಾಲ ಟಾಂಡಕ.

## ಕನ್ನಡಿಗನಿಗೆ ರಜೆ.

ಯಂತ್ರವು ನಾದುರಸ್ತ ಆದಮೂಲಕ ನಾಳಿನ ಸಂಚಿಕೆಯು ಹೊರಡುವದಿಲ್ಲ. ಇನ್ನು ಮುಂದೆ ಪ್ರತಿ ಬುಧವಾರದ ಹೊರತಾಗಿ ಪ್ರತಿ ದಿನ ಹೊರಡುತ್ತದೆ.

ವ್ಯವಸ್ಥಾಪಕ, ಕನ್ನಡಿಗ, ನಿತ್ಯಸಂಚಿಕೆ.

## ಮುಂಬಯಿ: ಟಾಯಿಮ್ಸಕಾರನ ಕುಚೇಷ್ಟೆ.

ಮುಸಲ್ಮಾನರು ಈ ಚಳವಳಿಯಲ್ಲಿ ಕೂಡಿಲ್ಲವೆಂತಲೂ ಅವರು ಇದಕ್ಕೆ ವಿರೋಧಮಾಡುತ್ತಿರುವರೆಂತಲೂ ದೊಡ್ಡ ಅಕ್ಷರಗಳಿಂದ ತನ್ನ ಪತ್ರದಲ್ಲಿ ಬರೆಯಹತ್ತಿರುವನು. ಮುಸಲ್ಮಾನರ ಮುಂದಾಳುಗಳು ಅನೇಕರು ಮಹಾತ್ಮನ ಎಡಗೈ ಬಲಗೈಯಂತೆ ಅವರ ಸಂಗಡ ಕೆಲಸಮಾಡುತ್ತಿರುವದು ಇವನಿಗೆ ಇನ್ನೂ ಗೊತ್ತಾಗಿಲ್ಲವೋ? ನಮ್ಮ ಮುಹಮ್ಮದೀಯ ಬಾಂಧವರು ಇವನ ಮಬ್ಬಿಗೆ ಬೀಳುವರೋ? ಅಥವಾ ತಮ್ಮ ಮುಂದಾಳುಗಳಂತೆ ತಾವೂ ಬಂದು ಕೂಡಿಕೊಳ್ಳುವರೋ? ಅವರು ಸ್ವಾರ್ಥವನ್ನು ಬದಿಗೊತ್ತಿ ಬಂದರೇ ಸ್ವರಾಜ್ಯವು ಸಾಧ್ಯವು ಎಂದು ಮಹಾತ್ಮನು ಹೇಳುವದು ಅವರಿಗೆ ಕೇಳಲೊಲ್ಲದೋ?

## ಬ್ರಾಹ್ಮಣೇತರರಿಗೆ ಮಹಾತ್ಮನ ಸಂದೇಶ

ಈಗಿನ ಯುದ್ಧವು ಕೇವಲ ಬ್ರಾಹ್ಮಣರಿಗಾಗಲಿ, ಹಿಂದೂಗಳಿಗಾಗಲಿ ಸಂಬಂಧ ಪಟ್ಟಿಲ್ಲ. ಪೂರ್ಣ ಹಿಂದುಸ್ಥಾನದವತಿಯಿಂದಲೇ ನಡೆದದೆ. ಮುಖ್ಯವಾಗಿ ಹೊಟ್ಟೆಗೆ ಕೂಳುಸಿಗದೆ ಹೊರಳಾಡುತ್ತಿರುವ ಜನರವತಿಯಿಂದ ನಡೆದದೆ. ಕಾರಣ ಹಿಂದುಸ್ಥಾನದಲ್ಲಿಯ ಎಲ್ಲ ಬ್ರಾಹ್ಮಣೇತರರೂ ಬಂದು ಕೂಡಿಕೊಳ್ಳಬೇಕು.

ಲೋಕವಂದ್ಯನಾದ ಮಹಾತ್ಮನ ಮಾತುಗಳನ್ನು ಕರ್ನಾಟಕದ ಬ್ರಾಹ್ಮಣೇತರರು ಅನುಸರಿಸುವರೋ!

## ಇಂಗ್ಲಂಡದವರು ನಮ್ಮ ವಿಷಯಕ್ಕೆ ಏನನ್ನುತ್ತಿರುವರು,

ಈ ನಮ್ಮ ಚಳವಳಿಯಿಂದ ಅಲ್ಲಿಯ ಎಲ್ಲ ಪತ್ರಗಳೂ ಕಣ್ಣು ತೆರೆದಿವೆ. ಕರಾಚಿ ಹಾಗೂ ಚಿತಗಾಂಗ ದಂಗೆಗಳ ವಿಷಯಕ್ಕೆ ತಮ್ಮ ಮನಸಿಗೆ ಬಂದಂತೆ ಬರೆಯಹತ್ತಿವೆ. ಲಾರ್ಡ ಮೆಸ್ಟನ್ ಸಾಹೇಬರು ಸಂಡೇ ಟಾಯಿಮ್ಸ ಪತ್ರದಲ್ಲಿ ಹೀಗೆ ಬರೆದಿರುವರು ಹಿಂದುಸ್ಥಾನದ ಅಧಿಕಾರಿಗಳು ತಮ್ಮ ಕಾಯದೆಗಳನ್ನು ಕಾಯ್ದುಕೊಳ್ಳುವದಕ್ಕಾಗಿ ನಡಿಸಿದ ಈ ದಬ್ಬಾಳಿಕೆಯು ಮನಸಿಗೆ ಬಾರದು. ಅವರು ಸಮಂಜಸವಾದ ಹಾಗೂ ಅವಶ್ಯವಾದ ಎಲ್ಲ ಉಪಾಯಗಳಿಗೂ ನಾವು ಸಹಾಯಮಾಡಬೇಕು. ಸಾಹೇಬರಿಗೆ ಗುಜರಾಥದಲ್ಲಿಯ ದಬ್ಬಾಳಿಕೆಯ ಸುದ್ದಿಯು ಗೊತ್ತಾದಂತೆ ತೋರುವದಿಲ್ಲ. ಸ್ವಯಂಸೇವಕರ ಅಂಡಹಿಚಕುವದು, ಬಡಿಗೆಮಾಡುವದು, ಬಟ್ಟೆ ಮುರಿಯುವದು, ಇವು ಯೋಗ್ಯವಾದ ಮಾರ್ಗಗಳೋ ಸಾಹೇಬರು ಮುಂದೆ ಹೀಗೆ ಅನ್ನುವರು. ನಾವು ನಮ್ಮ ಕರ್ತವ್ಯ ಬುದ್ಧಿಯಲ್ಲಿ ಮನೋದ್ರೇಕಗಳಿಗೆ ಆಸ್ಪದ ಕೊಡಲಾರೆವು. ಜನರನ್ನು ಸಮಾಧಾನಗೊಳಿಸಿ ಅವರನ್ನು ರಾವುಂಡ ಟೇಬಲ ಪರಿಷತ್ತಿಗೆ ಕರೆಸುವದನ್ನು ಬಿಟ್ಟು ನಾವೇ ನಮ್ಮ ಮನಸಿಗೆ ಬಂದಂತೆ ಸಾಯಿಮನ್ನ ರಿಪೋರ್ಟನ್ನು ವಿಚಾರಿಸುವೆವು. ಲ್ಯಾನ್ಸಬರಿ ಸಾಹೇಬರೂ ಹೀಗೆ ಅನ್ನುತ್ತಿರುವರು. ಸಾಹೇಬರು ಇನ್ನೂ ನಿದ್ದಿಗಣ್ಣನಲ್ಲಿರುವರೋ? ಪೂರ್ಣ ಹಿಂದುಸ್ಥಾನವೇ ಸಿದ್ಧವಾಗಿ ನಿಂತು ಹೊಟ್ಟೆಗಿಲ್ಲದೆ ಸಾಯುವದಕ್ಕಿಂತ ಸ್ವತಂತ್ರರಾಗಲು ಸಾಯುವದು ಲೇಸೆಂದು ಭಾವಿಸಿ ಮಹಾತ್ಮನ ಮಾತುಗಳಂತೆ ನಡೆಯಲು ಧಾವಿಸಿ ಬರುತ್ತಲಿರುವರು. ಆದರೂ ಸಾಹೇಬರು ಏನೇನೋ ಹೇಳುತ್ತಿರುವರು. ಅವರು ಮಾಡುವದು ನಮಗೆ ಗೊತ್ತೇ ಅದೆ. ನಾವು ಮಾಡುವದನ್ನು ಮಾಡಿದರಾಯಿತು ಭಗವಂತನು ಗೀತೆಯಲ್ಲಿ ಹೇಳಿದಂತೆ ಸ್ವಕರ್ಮನಿರತರಾದರಾಯಿತು. ಫಲ ಕೊಡುವದು ಅವನ ಕೆಲಸ. ಕರ್ಮ ಮಾಡುವದು ಮಾತ್ರ ನಮ್ಮ ಕೈಯೊಳಗೆ.

# ಸಾಬರಮತಿ ಜೇಲಿನಲ್ಲಿ

# ೧೨೦೦ ಮಂದಿ ಉಪವಾಸ

# ಮಾಡುವರು.

[ ಮುಂಬಯಿಯಿಂದ ತಂತಿಯಿಂದ ಬಂದ ಸುದ್ದಿ ]

ಸ್ವರಾಜ್ಯ ಪತ್ರದ ಸಂಪಾದಕರೂ ಮದ್ರಾಸಿನ ಮುಂದಾಳುಗಳೂ ಆದ ಟಿ. ಪ್ರಕಾಶಂ ಎಂಬವರನ್ನು ಮದ್ರಾಸದಲ್ಲಿ ಹಿಡಿದಿರುವರು. ಚಿತಗಾಂಗದಲ್ಲಿ ದಬ್ಬಾಳಿಕೆಯು ಜೋರಿನಿಂದ ನಡೆದಿರುವದು. ಪಟ್ಟಾಭಿಸೀತಾರಾಮಯ್ಯ, ಸ್ವಾಮಿ ಆನಂದ, ಮತ್ತು ಖೇರ ಎಂಬವರಿಗೆ ಒಂದು ವರ್ಷದ ಸಜೆಯಾಯಿತು. ಶೇಕರ ಎಂಬವರಿಗೆ ೯ ತಿಂಗಳ ಸಜೆಯಾಗಿದೆ. ಸುಭಾಷ ಬಾಬೂ ಮತ್ತು ಸೇನಗುಪ್ತರನ್ನು ಅಲಿಪೂರದ ಜೇಲಿನಲ್ಲಿಟ್ಟಿರುವರು. ಅಲ್ಲಿ ಅವರು ಉಪವಾಸವನ್ನು ಸುರುವು ಮಾಡಿರುವರು. ಸುಭಾಷ ಬಾಬುಗಳ ಮೇಲೆ ಪೋಲೀಸರು ಪೆಟ್ಟುಹಾಕಿರುವರು. ಅವರು ಆ ಪೆಟ್ಟಿನಿಂದ ಮೂರು ತಾಸುಗಳ ವರೆಗೆ ನಿಶ್ಚೇಷ್ಟರಾಗಿ ಸತ್ತಂತೆ ಬಿದ್ದರು. ಸಾಬರಮತಿಯ ಜೇಲಿನಲ್ಲಿ ಹನ್ನೆರಡುನೂರು ಮಂದಿ ಸೆರೆಯಾಳುಗಳು ಉಪವಾಸವನ್ನು ಮಾಡುತ್ತಿರುವರು.

## ಮಹಾತ್ಮನು ಮುಂದೆ ಸಾಗಿದನು!

ಚಿತಗಾಂಗದಲ್ಲಿ ಆದ ದಂಗೆಯು ಬಗ್ಗೆ ಮಹಾತ್ಮನು ಹೀಗೆ ಅನ್ನುವನು— "ಚಿತಗಾಂಗದ ದಂಗೆಯು ಖೇದಕರವಾಗಿದೆ. ಆದರೆ ಎಂಥ ಬಿಕ್ಕಟ್ಟಿನ ಪರಿಸ್ಥಿತಿಯು ಒದಗಿಬಂದರೂ ಈಗ ನಡಿಸಿದ ಯುದ್ಧವನ್ನು ಮಾತ್ರ ಬಂದು ಇಡುವದಿಲ್ಲ. ಸತ್ಯಾಗ್ರಹಿಗಳು ಅದ್ವಿತೀಯವಾಗಿ ಯುದ್ಧವನ್ನು ಸಾಗಿಸಬೇಕಾಗಿದೆ. ಸರಕಾರದವರ ಹಿಂಸೆಗೂ, ಶಾಂತತೆಯಲ್ಲಿ ವಿಶ್ವಾಸವಿಲ್ಲದ ನಮ್ಮ ಕೆಲವು ಜನರ ಹೂಲಿಗೂ ಸತ್ಯವು ಎದೆಗೊಟ್ಟು ನಿಲ್ಲಬೇಕಾಗಿದೆ" ಜಲಾಲಪೂರ ತಾಲೂಕದಲ್ಲಿ ಮಹಾತ್ಮರು ಪರದೇಶೀ ಬಟ್ಟೆಗಳ ಬಹಿಷ್ಕಾರ, ಸೆರೆ ಶಿಂದಿ ಕುಡಿಯುವದನ್ನು ಪೂರ್ಣವಾಗಿ ನಿಲ್ಲಿಸುವ ಕಾರ್ಯವನ್ನು ಸುರುವು ಮಾಡಿರುವರು. ಜಲಾಲಪೂರ ತಾಲೂಕಿನಲ್ಲಿಯೇ ಮೊದಲು ಈ ಪ್ರಯೋಗವನ್ನು ಯಶಸ್ವಿಯಾಗಿ ಮಾಡಬೇಕೆನ್ನುವರು, 'ಸ್ವಾತಂತ್ರ್ಯ ಯುದ್ಧವನ್ನು ಮುಂದೆ ಸಾಗಿಸಿದರು. ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕೆ ತಕ್ಕೊಳ್ಳುವದಿಲ್ಲವೆಂದು ಹೇಳಿದರು.

### ಅಮೇರಿಕೆಯಲ್ಲಿ

ಜೇಲಿಗೆ ಬೆಂಕಿ ಹತ್ತಿತು. ೩೦೦ ಕೈದಿಗಳು ಸತ್ತರು. ಅಮೇರಿಕೆಯ ಸಂಯುಕ್ತ ಪ್ರಾಂತದಲ್ಲಿ ಓಹಿಯೋ ಎಂಬಲ್ಲಿ ಜೇಲಿಗೆ ಬೆಂಕಿ ಹತ್ತಿತು. ಬಿರುಗಾಳಿ ಬಿಟ್ಟದ್ದರಿಂದ ಬೆಂಕಿಯು ಹೆಚ್ಚುತ್ತ ಹೋಯಿತು. ಅದನ್ನು ನಂದಿಸುವದು ಸಾಧ್ಯವಾಗಲಿಲ್ಲ. ೩೦೦ ಕೈದಿಗಳು ಅಗ್ನಿಗೆ ಆಹುತಿಯಾದರು. ೫೦೦ ಮಂದಿಯನ್ನು ಉಳಿಸಿಕೊಂಡಿರುವರು. ಅಗ್ನಿಯ ಮುಂದೆ ಯಾರ ಆಟ ನಡೆಯುವದು?

## ಸತ್ಯಾಗ್ರಹ ಯುದ್ಧದ ಸುದ್ದಿಗಳು.

### ಮುಂಬಯಿ.

ಪೋಲೀಸರು ಸ್ವಯಂಸೇವಕರ ಮೇಲೆ ಏರಿಹೋದರು. ಆದರೂ ಸ್ವಯಂಸೇವಕರು ಧೈರ್ಯದಿಂದಲೂ ಶಾಂತಿಯಿಂದಲೂ ಒಂದು ತಾಸಿನ ವರೆಗೆ ಅಖಂಡ ಹೋರಾಡಿದರು. ಕೆಲವು ಸ್ವಯಂಸೇವಕರಿಗೆ ಸ್ವಲ್ಪ ಗಾಯವೂ ಆಗಿದೆ. ಪ್ರಾಂ. ಕಾ. ಕ ಅಧ್ಯಕ್ಷರನ್ನೂ ಕಾರ್ಯದರ್ಶಿಗಳನ್ನೂ ಹಿಡಿದಿರುವರು. ಪ್ರತಿಯೊಬ್ಬರಿಗೂ ಎಂಟು ತಿಂಗಳ ಸಜೆಯಾಗಿದೆ. ಶ್ರೀಮತಿ ಸರೋಜಿನೀ ನಾಯುಡ, ಕಮಲಾದೇವಿ ಚಟ್ಟೋಪಾಧ್ಯಾಯ, ಮತ್ತು ಲೀಲಾವತಿ ಮುನಶಿ ಎಂಬವರು ಸತ್ಯಾಗ್ರಹಕ್ಕೆ ಜನರನ್ನು ಹುರುಪುಗೊಳಿಸುತ್ತಿರುವರು. ಸರದಾರ ಪ್ರತಾಪಸಿಂಗನೆಂಬ ಒಬ್ಬ ಶೀಖವೀರನು ಸತ್ಯಾಗ್ರಹಕ್ಕೆ ತಮ್ಮ ಶೀಖ ಸಮಾಜದವರು ಲಕ್ಷಜನರು ಸಿದ್ಧರಿರುವರೆಂದು ಹೇಳಿದರು. ಕಾಂಜೀಮಾಸ್ತರರೆಂಬ ಸತ್ಯಾಗ್ರಹದ ಮುಂದಾಳುಗಳನ್ನು ಹಿಡಿದಿರುವರು.

### ಕಲಕತ್ತೆ.

ಜಗತ್ಪ್ರಸಿದ್ಧರಾದ ಸ್ವಾಮೀವಿವೇಕಾನಂದರ ತಮ್ಮ ಭೂಪೇಂದ್ರದತ್ತ ಎಂಬವರನ್ನು ಹಿಡಿದಿರುವರು. ಬಹುತರವಾಗಿ ಎಲ್ಲ ಮುಂದಾಳುಗಳನ್ನು ಹಿಡಿದು ಹಾಕುತ್ತಿರುವರು. ಸ್ತ್ರೀಯರು ಮುಂದೆ ಬರಹತ್ತಿರುವರು. ರಾಷ್ಟ್ರಸೇವೆಗಾಗಿ ಅತುಲ ಸ್ವಾರ್ಥತ್ಯಾಗವನ್ನು ಮಾಡಿ ಜೇಲಿನಲ್ಲಿಯೇ ಬಳಲುತ್ತಿರುವ ವೀರರಾದ ಶ್ರೀ. ಸುಭಾಸಚಂದ್ರ ಬೋಸರ ಪತ್ನಿಯೂ, ಸೇನಗುಪ್ತರ ಪತ್ನಿಯೂ ತಮ್ಮ ಪತಿಗಳು ಮಾಡಿದ ಪವಿತ್ರಕಾರ್ಯವನ್ನು ಕೈಕೊಂಡು ಮುಂದಾಳುಗಳಾಗಿ ಬಂದು ನಿಂತಿರುವರು. ಇದು ವೀರಪತ್ನಿಯರಿಗೆ ಶೋಭಿಸತಕ್ಕ ಮಾತೇ! ಸತೀಶಚಂದ್ರ ದಾಸಗುಪ್ತರೆಂಬವರು ಒಂದು ವಾರದ ವರೆಗೆ ಉಪವಾಸ ವ್ರತವನ್ನು ಹಿಡಿದಿರುವರು. ಆತ್ಮಬಲವನ್ನು ಪಡೆದುಕೊಳ್ಳಲು ಹೀಗೆ ಮಾಡಿರುವರು. ಕಲಕತ್ತೆಯ ದಂಗೆಯ ನಿಷೇಧವನ್ನು ಮಾಡಿ ಜನರಿಗೆ ಬುದ್ಧಿಗಲಿಸಬೇಕೆಂದು ಅವರ ಉದ್ದೇಶವು. ಇದು ಮಹಾತ್ಮನು ಹೇಳಿಕೊಟ್ಟ ಮಂತ್ರವೇ

### ಗುಜರಾತ.

ಜಲಾಲಪೂರದಲ್ಲಿ ಸ್ವಯಂಸೇವಕರು ಸಿಂದೀಗಿಡಗಳನ್ನು ನೆಲಸಮ ಮಾಡುತ್ತಿರುವರು.

ಬೋರಸಾದದಲ್ಲಿಯ ಮುಂದಾಳುವಾದ ಕಾಲೀದಾಸ ಪಟೇಲ ಎಂಬವನನ್ನು ಹಿಡಿದಿರುವರು. ಅದಕ್ಕಾಗಿ ಸತ್ಯಾಗ್ರಹವು ಬಹಳೇ ಜೋರಾಗಿ ನಡೆದಿದೆ.

ಮಹಾತ್ಮಾ ಗಾಂಧಿಯವರ ಪತ್ನಿಯು ಸ್ತ್ರೀ ಸ್ವಯಂಸೇವಕರೊಂದಿಗೆ ಕೂಡಿಕೊಂಡು ಸಿಂದೆ ಶೆರೆ ಕುಡಿಯುವವರನ್ನು ಅ

ವ್ಯಸನದಿಂದ ಬಿಡಿಸುವ ಹಾಗೂ ಅವುಗಳ ವ್ಯಾಪಾರವನ್ನು ಹತ್ತಿಕ್ಕುವ ಕಾರ್ಯವನ್ನು ಸುರುವು ಮಾಡಿರುವರು. ಈ ಕಾರ್ಯವು ಸ್ತ್ರೀಯರಿಂದಲೇ ಹೆಚ್ಚು ಯಶಸ್ವಿಯಾಗಬಹುದೋ? ನಮ್ಮಲ್ಲಿಯ ಸ್ತ್ರೀಯರು ಮಹಾತ್ಮನ ಪತ್ನಿಯಂತೆ ಮಾಡಬಲ್ಲರೋ.

### ಮಹಾರಾಷ್ಟ್ರ.

ಈ ಪ್ರಾಂತದಲ್ಲಿ ಒಟ್ಟು ಮೂರುನೂರು ಸ್ತ್ರೀಸ್ವಯಂಸೇವಕರು ಮುಂದೆ ಬಂದು ಕಾರ್ಯನಡಿಸಿರುವರು. ನಮ್ಮಲ್ಲಿ ಎಷ್ಟು ಜನರು ಸ್ತ್ರೀಸ್ವಯಂಸೇವಕರಿರುವರು? ಇನ್ನಾದರೂ ಮುಂದ ಬರಲಿ.

### ಮದ್ರಾಸ.

ಬೇರೆ ಬೇರೆ ಸ್ಥಳಗಳಲ್ಲಿ ಮೂರು ನಾಲ್ಕು ಕಡೆಗೆ ಸತ್ಯಾಗ್ರಹವು ಸುರುವಾಗಿದೆ. ಜನರಲ್ಲಿ ಸಿದ್ಧತೆಯೂ ಹೆಚ್ಚಾಗಹತ್ತಿದೆ.

### ಚಿತಗಾಂಗ.

ದಂಗೆಯು ಶಾಂತವಾಗಿದೆ. ಮೂಲ ಕಾರಣವು ಯಾರು? ಬಂಗಾಲ ಪ್ರಾಂತದ ಎಲ್ಲ ವಕೀಲರು ಕೆಲವು ಕಾಲವಾದರೂ ತಮ್ಮ ವಕೀಲಿಯನ್ನು ಬಂದಿಟ್ಟು ಮುಂದ ಬರಬೇಕೆಂದು ನಿಶ್ಚಯಿಸಿರುವರು. ನಮ್ಮಲ್ಲಿಯ ವಕೀಲರೂ ಹೀಗೆ ಮಾಡಬಲ್ಲರು? ಅಂಜಿಕೆಯೋ? ದುಡ್ಡಿನ ಆಸೆಯೋ!

### ಲಖನೌ.

ಉಪ್ಪು ಮಾಡುವದು ನಡೆದಿದೆ. ಒಬ್ಬ ಹದಿಮೂರು ವರ್ಷದ ವಿದ್ಯಾರ್ಥಿಯು ಈ ಕೆಲಸ ನಡಿಸುವನು. ಕರ್ನಾಟಕದ ವಿದ್ಯಾರ್ಥಿಗಳೇ ದೇಶದ ಕೆಲಸಕ್ಕೆ ನಿಮ್ಮ ಕೈ ಹೆಚ್ಚುವದಿಲ್ಲವೋ?

### ಛಂದೋಸಿ

ವಿದ್ಯಾರ್ಥಿಗಳೂ, ವ್ಯಾಪಾರಸ್ಥರೂ, ಮಾಸ್ತರರೂ, ವಿದೇಶಿ ಬಟ್ಟೆಗಳನ್ನು ಧರಿಸಲಿಕ್ಕಿಲ್ಲೆಂದು ಪ್ರತಿಜ್ಞೆ ಮಾಡಿರುವರು. ಉಪ್ಪು ಮಾಡಿ ಮಾರುವ ಕೆಲಸವು ಭರದಿಂದ ನಡೆದಿದೆ.

### ಕಾನಪೂರ,

ಪಂ. ಮದನಮೋಹನ ಮಾಲವೀಯವರು ಇಲ್ಲಿಯ ಜವಳೀ ವ್ಯಾಪಾರಿಗಳ ಸಭೆ ಕರೆದು ಅವರು ಪರದೇಶೀ ಬಟ್ಟೆಗಳನ್ನು ತರಿಸದಂತೆ ಮಾಡಿರುವರು. ಪರದೇಶೀ ಬಟ್ಟೆಗಳ ಒಂದು ಪ್ರಚಂಡ ಹೋಳಿಯನ್ನು ಮಾಡಿದರು. ನಾವು ಇಲ್ಲ ಹೋಳೀಹಬ್ಬದಂದು ಲ್ಯಾಂಕಾಶಾಯರದವರ ಹೋಳಿಯನ್ನೇ ಮಾಡುವೆವು. "ಹೊಟ್ಟೆಗಿಲ್ಲದ" ಬೊಬ್ಬೆ ಹೊಡೆಯುವರು.

---

### ಹುನಗುಂದ.

ನಮ್ಮ ದೇಶದ ದಾರಿದ್ರ್ಯ ನಾಶಕ್ಕಾಗಿ ಸಂಪೂರ್ಣಸ್ವಾತಂತ್ರ್ಯವನ್ನು ಸಂಪಾದಿಸುವದಕ್ಕಾಗಿ ಮಹಾತ್ಮಾಗಾಂಧಿಯವರು ನಡಿಸುತ್ತಿರುವ ಚಳವಳಿಯು ದೇಶದಲ್ಲ ಸಂದರ್ಭದಲ್ಲಿ ಹರಡಿ ಜನತೆಯನ್ನು ಆಕರ್ಷಿಸುತ್ತಿರುವಾಗ ಹುನಗುಂದ ತಾಲೂಕ ಹಿರಿಯರು "ಶಾಂತತಾ ಸಂಘ" ವನ್ನು ಸ್ಥಾಪಿಸಲು ಪಕ್ರಮಿಸಿದ್ದಾರೆ. ಇಂಥ ಸಂಘಕ್ಕೆ ಎಷ್ಟು ಜನರು ಮೆಂಬರರಾಗುವರೋ ದೇವರೇ ಬಲ್ಲ! ಮಹಾತ್ಮರ ಚಳವಳಿಯೇ ಶಾಂತಿಮಯವೆಂಬುದು ಅವರಿಗೆ ಇನ್ನೂ ತಿಳಿಯಬಾರದೇ!

---

## 'ಕನ್ನಡಿಗ'ನ ಏಜನ್ಸಿ

ಕೆಳಗೆ ಕಾಣಿಸಿದ ಸ್ಥಳಗಳಲ್ಲಿ ನಮ್ಮ ಏಜನ್ಸಿಗಳಿದ್ದು ಏಜಂಟರ ಹೆಸರುಗಳು ಕಾಣಿಸಲ್ಪಟ್ಟಿವೆ. ಅವರ ಹತ್ತಿರ ನಮ್ಮ ನಿತ್ಯಪತ್ರಿಕೆಗಳು ದಿನಾಲು ಮಾರಲಿಕ್ಕೆ ದೊರೆಯುವವು. ಕಾಯಂ ಚಂದಾದಾರರಾಗಲು ಇಚ್ಛಿಸುವವರು ಅವರ ಕಡೆಗೆ ಹೋಗಿ ತಮ್ಮ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳತಕ್ಕದ್ದು. ಅರವಾರ ಪತ್ರಿಕೆಯ ಏಜನ್ಸಿಯನ್ನು ಸಹ ಇದೇ ಜನರಿಗೆ ಕೊಡುವ ವಿಚಾರ ನಡೆದಿದ್ದು, ಆ ಬಗ್ಗೆ ನಿಶ್ಚಿತವಾದುದನ್ನೆಲ್ಲ ಹಿಂದುಗಡೆ ಪ್ರಕಟಿಸುವೆವು.

| | | |
|---|---|---|
| ೧ | ಶ್ರೀ. ಉದಪೀನಾಥ ಹೊದ್ಲೂರ | ವಿಜಾಪುರ |
| ೨ | ,, ರಾ. ಸೀ. ಜಹಾಗೀರದಾರ | ಇಲಕಲ್ಲ |
| ೩ | ,, ಜಗನ್ನಾಥ ರಾಘವೇಂದ್ರರಾವ ದೇಸಾಯಿ | ಹುನಗುಂದ |
| ೪ | ,, ರಾಚಪ್ಪ ಮಂಟೂ ಕಿರಾಣಿ ಅಂಗಡಿ | ಅಮೀನಗಡ |
| ೫ | ,, ನಾರಾಯಣಪ್ಪ ಕಾಂಬಳೆ, ಮೋಟಾರ ತಿಕೀಟ ಏಜಂಟ | ಗಲಗಲಿ |
| ೬ | ,, ರಾಘವೇಂದ್ರಾಚಾರ್ಯ ಧೂಳಖೇಡಕರ | ಕೆರೂರ |
| ೭ | ,, ಬಾಪೂರಾವ ಪರಮೇಶ್ವರರಾವ ಜಾಗೀರದಾರ | ಗುಳೇದಗುಡ್ಡ |
| ೮ | ,, ಕಾರ್ಯದರ್ಶಿ ಕರ್ನಾಟಕ ತರುಣಸಂಘ | ರಾಯಚೂರ |
| ೯ | ,, ಕೃಷ್ಣಾಜಿ ಹನಮಂತ ಕರಕಲಮಟ್ಟಿ ಅ. ಮಾಸ್ತರ | ಶಿರೂರ ತಾ\|\| ಬಾಗಲಕೋಟ |
| ೧೦ | ,, ಜಿ. ಎಲ್ ಮಂಗಳೂರ C/o ಶಾಂತೇಶ ವಾಚನಾಲಯ | ಧಾರವಾಡ |
| ೧೧ | ,, ಆರ್. ಕೆ. ಅಸುಂಡಿ ವೃತ್ತಪತ್ರಿಕೆಗಳ ಏಜಂಟ | ಗದಗ |
| ೧೨ | ,, ಅಪ್ಪಾರಾವ ದೇಶಪಾಂಡೆ C/o ಡಾಕ್ಟರ ಕೆ. ಬಿ. ಅಂತಪುರಕರ | ಸೊಲ್ಲಾಪುರ |
| ೧೩ | ,, ವೈದ್ಯ ವಾದಿರಾಜ ಜಹಗೀರದಾರ | ಬೇವೂರ ತಾ\|\| ಬಾಗಲಕೋಟ |
| ೧೪ | ,, ತಿರುಕಾಚಾರ್ಯ ಮಧ್ವಾಚಾರ್ಯ ಬಿಮ್ಮಲಗಿ, ಹಡಗಲಿ | ಧುಂಡಶಿ ವ್ಯಾ. ಹುಬ್ಬಳ್ಳಿ |
| ೧೫ | ಎಸ್. ಪಿ ಲಿಮಯೆ. ಮಾದಿಭಂಡಾರ. | ಹುಬ್ಬಳ್ಳಿ. |

ಈ ಪತ್ರಿಕೆಯು [illegible] ಇವರಿಂದ ಬಾಗಲಕೋಟೆಯಲ್ಲಿಯ
[illegible] ಮುದ್ರಣಾಲಯದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರ. ನಂ. ಬಿ ೧೯೪೭                                                                 ಬೆಲೆ ೦-೦-೩

ಜಯಕರ್ನಾಟಕ

ನಿತ್ಯಸಂಚಿಕೆಯು.

यत्त परवशं दुःखं । यद्यदात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ಶನಿವಾರ ಮಿತಿ ಚೈತ್ರ ಬಹುಳ ೧೩ ಶಕ ೧೮೫೨ ತಾ ೨೬—೪—೩೦ ಸಂಚಿಕೆ ೩೨

## ಸಂಪಾದಕರ ಭೂಮಿ.

ನನ್ನ ದೇಹವು ನಿನ್ನ ಶೀರಶಾಸನಕಾಗಿ।
ಕಣ್ಣನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಭವನು ಬೀರಬಹಗಂಧವದವೆಂದು ತಿಳಿಯೆ॥

## ವಿಜಾಪೂರ ಜಿಲ್ಹೆಯಲ್ಲಿಯು

## ಕಾಯದೆ ಭಂಗವು,

ಧಾರವಾಡ, ಬೆಳಗಾಂವಿ, ಕಾರವಾರ ಮೊದಲಾದ ಜಿಲ್ಹೆಗಳಲ್ಲಿ ಸರಕಾರದ ಉಪ್ಪಿನ ಕಾಯದೆಯನ್ನು ಮುರಿದು ನೂರಾರು ವೀರರು ಜೇಲಿಗೆ ಹೋದರು. ಮತ್ತು ಅವರ ಹಿಂದೆ ಆದರೂ ಆ ಕಾರ್ಯವು ಅವ್ಯಾಹತವಾಗಿ ಸಾಗಿಸಲ್ಪಟ್ಟು ಸರಕಾರಕ್ಕೆ ಒಂದು ಬಗೆಯ ಆಹ್ವಾನವನ್ನು ಕೊಡಲಾಗಿದೆ. ವಿಜಾಪೂರ ಜಿಲ್ಹೆಯ ಜನರು ಮಾತ್ರ ಅಷ್ಟೊಂದು ದೊಡ್ಡ ಪ್ರಮಾಣದಿಂದ ಸರಕಾರವನ್ನು ಎದುರಿಸಿ ತನ್ನ ಎದೆಗಾರಿಕೆಯನ್ನು ತೋರಿಸಲಿಲ್ಲವಲ್ಲ! ಎಂದು ಅರಿಯದ ಜನರು ಹಿಂದು ಮುಂದೆ ಆಡಿಕೊಳ್ಳ ಹತ್ತಿ ಈ ಜಿಲ್ಹೆಯವರಲ್ಲಿ ಧೈರ್ಯದ ಕೊರತೆ ಇರಬಹುದೇ ಎಂದು ತಮ್ಮ ಮನಸ್ಸಿಗೆ ಊಹೆ ಕಟ್ಟಹತ್ತಿರುವರೆಂಬುದು ನಮ್ಮ ಕಿವಿಗೆ ಬಂದದೆ.

ಆದರೆ ಈ ಜಿಲ್ಹೆಯಲ್ಲಿಯೂ ಸರಕಾರದ ಕಾಯದೆಗಳನ್ನು ಧಿಕ್ಕರಿಸಲಿಕ್ಕೆ ಬೇಕಾಗುವ ಧೈರ್ಯ ಸಾಹಸ ಪರಾಕ್ರಮಾದಿ ಗುಣಗಳು ಜನಸಾಮಾನ್ಯರಲ್ಲಿ ತುಂಬಿ ತುಳುಕುತ್ತಿವೆ. ಮೂರು ಮನೆಯ ಹಳ್ಳಿಯೊಳಗೂ ಗಾಂಧಿ ಮಹಾತ್ಮನ ಜಯ ಜಯಕಾರವು ಕೇಳ ಬರಹತ್ತಿದೆ. ಕಾಯದೆ ಭಂಗದ ಯುದ್ಧವನ್ನು ನಡೆಪೂರೈಸುವದಕ್ಕೆ ಬೇಕಾದಷ್ಟು ಸ್ವಯಂಸೇವಕರು ನಾಮುಂದೆ ನಾಮುಂದೆ ಎಂದು ಹಳ್ಳಿ ಹಳ್ಳಿಗೂ ಹೊರಡ ಹತ್ತಿದ್ದಾರೆ. ಹೀಗೆ ಅವ್ಯಕ್ತವಾಗಿ ಒಳಗಿಂದೊಳಗೆ ಕುದಿ ಹಿಡಿದು ಸಜ್ಜಾದ ಕಜಾಯವನ್ನು ಇನ್ನು ಕೆದರಿ ಎಡೆಗಳಿಗೆ ನೀಡುವದೊಂದುಳಿದದೆ, ಅದೇ ಕೆಲಸವನ್ನು ಶ್ರೀ ಮೋಹರೆ ಹಣಮಂತರಾಯರು ಒಬ್ಬಂಟಿಗನಾಗಿದ್ದರೂ ಒಳ್ಳೇ ಒಂಟಿತನದಿಂದ ಈಗ ಮಾಡಲುಪಕ್ರಮಿಸಿದ್ದಾರೆ. ವಿಶ್ರಾಂತಿ ಇಲ್ಲದೆ ಹಳ್ಳಿ ಹಳ್ಳಿಗೆ ಅಡ್ಡಾಡಿ ಅಲ್ಲಿಯ ಯುವಕರನ್ನು ಹುರಿಗೊಳಿಸಿ; ಅಲ್ಲಿಯ ರೈತರಿಗೆ ಬ್ರಿಟೀಶ ಸರಕಾರದ ಕುಟಿಲತಂತ್ರಗಳನ್ನೆಲ್ಲ ತಿಳಿಸಿ ಹೇಳಿ ಇಂಥ ಸರಕಾರದ ಜಾಲದಿಂದ ನಾವು ಬಿಡುಗಡೆ ಹೊಂದದಿದ್ದರೆ ನಮ್ಮ ಮಕ್ಕಳ ಮರಿಗಳ ಬಾಳು ಕತ್ತೆನಾಯಿಯ ಬಾಳುವೆಗಿಂತಲೂ ಹೀನತರದ್ದಾಗುವದೆಂದು ಅವರ ಮುಖದಿಂದಲೆ ಒಡಂಬಡಿಸಿ ಸತ್ಯಾಗ್ರಹಕ್ಕೆ ಸಿದ್ಧರಾಗುವೆವೆಂಬ ಅವರ ಅಭಿವಚನಗಳನ್ನು ಪಡೆಯುತ್ತ ಹಳ್ಳಿಯಿಂದ ಹಳ್ಳಿಗಸಾಗಿ ಹಳ್ಳಿಗಾಡಿನವರಲ್ಲಿ ಅಪೂರ್ವಜಾಗ್ರತೆಯನ್ನುಂಟು ಮಾಡುತ್ತ ನಡೆದಿರುವರು. ಜನತೆಯಲ್ಲಿ ತಲೆ ಎತ್ತುತ್ತಿರುವ ಈ ಉತ್ಸಾಹಕ್ಕೆ ಒಂದು ಕಾರ್ಯವಾಹಕತೆಯ ಸ್ವರೂಪವನ್ನು ಕಲ್ಪಿಸುವದಕ್ಕಾಗಿ ಬಾಗಲಕೋಟೆ, ಬಿಸನಾಳ, ಇವೆರಡು ಸ್ಥಳಗಳಲ್ಲಿ ಸತ್ಯಾಗ್ರಹ ಶಿಬಿರಗಳನ್ನು ತೆಗೆದು ಅಲ್ಲಿ ಯುವಕರಿಗೆ ಸತ್ಯಾಗ್ರಹ ಶಿಕ್ಷಣವನ್ನು ಕೊಟ್ಟು ಅವರನ್ನು ಕಾಯಿದೆಭಂಗ ಕಾರ್ಯಕ್ಕಾಗಿ ಜಿಲ್ಹೆಯ ತುಂಬ ಹರಡಿ ಬಿಡಬೇಕೆಂದು ಬಗೆದಿದ್ದಾರೆ. ಈ ಶಿಬಿರಗಳು ನಾಳೆ ರವಿವಾರ ಬೆಳಿಗ್ಗೆ ಪ್ರಾರಂಭವಾಗುವವು. ಅಲ್ಲದೆ ೧೨ ಜನರದೊಂದು ಪ್ರಚಾರಕ ಪಥಕವನ್ನು ಏರ್ಪಡಿಸಿ ಅದನ್ನು ಕಾಲಮಾರ್ಗವಾಗಿ ಜಿಲ್ಹೆಯ ದಕ್ಷಿಣ ಭಾಗಗಳೊಳಗಿನ ಮುಖ್ಯ ಮುಖ್ಯ ಹಳ್ಳಿಗಳಿಗೆ ಕಳಿಸುವ ಯೋಜನೆಯನ್ನೊಂದು ಕೈಕೊಂಡಿದ್ದಾರೆ. ಈ ಪಥಕವಾದರೂ ೩೦ ನೇ ತಾರೀಖಿನ ದಿವಸ ಬೆಳಿಗ್ಗೆ ಬಾಗಲಕೋಟೆಯಿಂದ ಹೊರಟು ತನ್ನ ದಂಡೆಯಾತ್ರೆಯ ಕ್ರಮವನ್ನು ಹುನಗುಂದ ಮಾರ್ಗವಾಗಿ ಸಾಗಿಸುವದು. ದಾರಿಯಲ್ಲಿ ಹಳ್ಳಿ ಹಳ್ಳಿಗಳಲ್ಲಿಯೂ ಒಪ್ಪತ್ತು ಬಿಡಾರಹೊಡೆಯುತ್ತ ಅಲ್ಲಿಯ ಜನರಲ್ಲಿ ಧೈರ್ಯ ಉತ್ಸಾಹಗಳನ್ನು ಬೀಜ ಬಿತ್ತುತ್ತಸಾಗುವ ಸೈನ್ಯವಿದು. ಜನರಲ್ಲಿ ಮಹಾತ್ಮನ ಸತ್ಯಾಗ್ರಹಕ್ಕಾಗಿ ಅಷ್ಟು ಭಕ್ತಿವಿಶ್ವಾಸಗಳು ಎಲ್ಲಿ ನೋಡಿದಲ್ಲಿ ದೃಗ್ಗೋಚರವಾಗಹತ್ತಿರುವದರಿಂದ ಇವರಿಗೆ ಎಲ್ಲ ರೀತಿಯಿಂದಲೂ ಆಯಾ ಹಳ್ಳಿಯವರು ಸಹಾಯ ಮಾಡಬೇಕೆಂದು ಹೇಳಿಕೊಳ್ಳುವ ಅವಶ್ಯಕತೆಯೇ ಇಲ್ಲ.

# ಬಿಸನಾಳದಲ್ಲಿ ಸತ್ಯಾಗ್ರಹ.

## ಕಾಖಂಡಕಿ ರಾಮಾಚಾರ್ಯರನ್ನು ಸೆರೆಹಿಡಿದರು.

ಬಿಸನಾಳದಲ್ಲಿಯು ಉಪ್ಪಿನ ಮಣ್ಣನ್ನು ತರಲು ಗಲಗಲಿಯು ೫ ಜನರು ಹೋಗಿದ್ದು, ಅವರು ಹಿಡಿಯಲ್ಪಟ್ಟಿದ್ದರಷ್ಟೇ! ನಿನ್ನಿನ ದಿನ ಬೀಳಗಿ ತಾಲೂಕಿನಲ್ಲಿ ಅವರ ಖಟ್ಲೆ ನಡೆದು ಶ್ರೀ. ಲಿಂಗಾಪೂರ ಇವರಿಗೆ ೩ ತಿಂಗಳ ಸಾದಾ ಶಿಕ್ಷೆ ವಿಧಿಸಲ್ಪಟ್ಟಿತು. ಬಾಬುರಾವ [illegible] ಇವರಿಗೆ ೧೦೦ ರೂಪಾಯಿ ಉಳಿದ ೩ ಜನರಿಗೆ ೫೦ ರೂಪಾಯಿಯಂತೆ ದಂಡವಾಯಿತು. ಶ್ರೀ. ಕಾಖಂಡಕಿ ರಾಮಾಚಾರ್ಯರನ್ನು ಇ. ಪಿ. ಕೊ. ೧೧೭ ಮತ್ತು ೪೭ ಸಿ. ಈ ಕಲಮುಗಳನ್ವಯ ದಸ್ತಗೀರು ಮಾಡಿದರು. ೨೮ ನೇ ತಾರೀಖಿಗೆ ಇವರ ವಿಚಾರಣೆಯಾಗುವದಿದೆ. ಈಗ್ಗೆ ಬಿಸನಾಳದಿಂದ ಉಪ್ಪಿನ ಮಣ್ಣನ್ನು ಗಲಗಲಿಯ ಸತ್ಯಾಗ್ರಹಿಗಳು ದಿನಾಲು ಒಯ್ಯುತ್ತಿರುವರು. ಉಪ್ಪುಮಾಡುವ ಕೆಲಸ ನಡೆದಿದೆಯಂತೆ!

## ಶ್ರೀ ಮಹದೇವ ದೇಸಾಯರು ಹಿಡಿಯಲ್ಪಟ್ಟಿರುವರು.

ರಾತ್ರಿ ೯ ಗಂಟೆ ಧೋಲೇರಾದಿಂದ ಆರು ಜನ ಸ್ವಯಂಸೇವಕರೊಡನೆ ಮೋಟಾರದೊಳಗೆ ಉಪ್ಪು ಹಾಕಿಕೊಂಡು ಹೋಗುತ್ತಿರುವ ವೇಳೆಗೆ ಪೋಲೀಸ ಪಾರ್ಟಿ ಬಂದು, ಆ ಉಪ್ಪನ್ನು ತಮ್ಮ ವಶಕ್ಕೆ ಕೊಡಿರೆಂದು ಕೇಳಿದರು. ಅದಕ್ಕೆ ಮಹದೇವರು ಒಪ್ಪಲಿಲ್ಲ. ಆ ಮೇಲೆ ನಿಮ್ಮೆಲ್ಲರನ್ನು ದಸ್ತಗೀರ ಮಾಡಿರುವೆವೆಂದು ಪೋಲೀಸರು ಹೇಳಿ ಅವರನ್ನು ಕೈದುಖಾನೆಗೆ ತೆಗೆದುಕೊಂಡು ಹೋದರು. ಈ ವಾರ್ತೆಯು ಊರಲ್ಲಿ ಹರಡಿದಾಕ್ಷಣವೇ ಜನರು ಸ್ವಯಂಸ್ಫೂರ್ತಿಯಿಂದ ಹರತಾಳವನ್ನು ಪಾಲಿಸಿದರು. ಎಲ್ಲ ಅಂಗಡಿಗಳು ಇಕ್ಕಲ್ಪಟ್ಟವು. ಮಹದೇವ ದೇಸಾಯಿ ಇವರು ಮಹಾತ್ಮರಿಗೆ ತೀರ ಹತ್ತಿರದ ಎಡಬಲ ಸೇವಕರು.

## ಕರ್ನಾಟಕ ಸತ್ಯಾಗ್ರಹದ ಪ್ರಥಮ ಪಥಕ.

ಪತ್ರ ೬. ಇಸಳೂರ.
ತಾ-೧೯-೪-೩೦.

ಹಾನಗಲ್ಲಿನಿಂದ ಕಾರವಾರ ಜಿಲ್ಲೆಯಲ್ಲಿ ಹೆಜ್ಜೆಯನ್ನಿಟ್ಟೆವು. ನಾವು ಮೊದಲು ಪ್ರವೇಶಿಸಿದ ಸ್ಥಳವೆಂದರೆ ಪಾಳ್ಯ. ಇಲ್ಲಿ ಸುಮಾರು ೧೧ ಘಂಟೆಗೆ ಸಭೆ ಸೇರಿತು. ಶ್ರೀ ಬುರ್ಲಿಯವರು ನಾವು ಹೊರಟ ಉದ್ದೇಶದ ವಿಷಯಕ್ಕೆ ಭಾಷಣಮಾಡಿದರು. ಇಲ್ಲಿ ಬಹಳ ಸ್ವಲ್ಪ ಹಣ ಸಿಕ್ಕಿತು. ಈ ಊರಿಂದ ಸಂಜೆಯ ೪॥ ಘಂಟೆಗೆ ಹೋಟು ಸುಮಾರು ೬ ಘಂಟೆಗೆ ಮಳಗಿಯನ್ನು ಮುಟ್ಟಿದೆವು. ಈ ಊರಲ್ಲಿ ಜನರು ಮೆರವಣಿಗೆಯನ್ನು ತೆಗೆದರು. ನಂತರ ಸುಮಾರು ೭ ಘಂಟೆಗೆ ಸಭೆ ಸೇರಿ ಸತ್ಯಾಗ್ರಹಿಗಳಲ್ಲಿ ಕೆಲವರ ಭಾಷಣವಾಯಿತು. ಇಲ್ಲಿ ಸುಮಾರು ೨೦ ರೂ. ಸಿಕ್ಕವು. ರಾತ್ರಿ ಇಲ್ಲಿಯೇ ಉಳಿದು ಮರುದಿನ ಬೆಳಿಗ್ಗೆ ಧ್ವಜಾರೋಹಣದ ನಂತರ ಇಲ್ಲಿಂದ ಹೊರಟು, ಸುಮಾರು ೧೦ ಘಂಟೆಗೆ ಇಸಳೂರಿಗೆ ಬಂದೆವು.

ಪತ್ರ ೭. ಸಿರ್ಸಿ
ತಾ-೨೦-೪-೩೦.

ಇಸಳೂರಲ್ಲಿ ೧೯ ನೇ ತಾರೀಖಿನ ಸಂಜೆಯ ೫ ಘಂಟೆಗೆ ಸಭೆ ಸೇರಿ ಶ್ರೀ ಬುರ್ಲಿಯವರು ಸತ್ಯಾಗ್ರಹದ ಮೇಲೆ ವ್ಯಾಖ್ಯಾನ ಕೊಟ್ಟರು. ೫೦-೬೦ ರೂಪಾಯಿಗಳು ಸಭೆಯಲ್ಲಿ ದೊರೆತವು. ಹೆಂಗಸರಲ್ಲೊಬ್ಬರು ಒಂದು ಬಂಗಾರದ ಉಂಗುರ ಕೊಟ್ಟರು. ಅದು ೨೦ ರೂಪಾಯಿಗೆ ಲಿಲಾವಾಯಿತು. ಒಬ್ಬ ಹುಡುಗನು ರೋಲ್ಡ ಗೋಲ್ಡ ಗುಂಡಿಯನ್ನು ಕೊಟ್ಟದ್ದು ಅವನ ದೇಶಸೇವೆಗೆ ಮೆಚ್ಚಿ, ತಿರುಗಿ ಅವನಿಗೆ ಕೊಡಲಾಯಿತು. ಒಟ್ಟು ಈ ಊರಲ್ಲಿ ೮೫ ರೂಪಾಯಿ ದೊರೆತವು. ಧ್ವಜಾರೋಹಣಕ್ಕೆ ಊರ ಎಲ್ಲ ಜನರು ಬಂದಿದ್ದರು. ಮುಂಜಾನೆ ಧ್ವಜಾರೋಹಣವಾದನಂತರ ೭॥ ಘಂಟೆಗೆ ಸಿರ್ಸಿಯನ್ನು ಮುಟ್ಟಿದೆವು.

ಪತ್ರ ೮.

ಇಲ್ಲಿಗೆ ೭॥ ಘಂಟೆಗೆ ತಲ್ಪಿದೆವು. ಊರಲ್ಲಿ ಮೆರವಣಿಗೆಯಾಯಿತು. ಸಂಜೆಯ ೬ ಘಂಟೆಗೆ ಸರಿಯಾಗಿ ೪-೫ ಸಾವಿರ ಜನರ ದೊಡ್ಡ ಸಭೆ ಸೇರಿತು. ಶ್ರೀ ಬುರ್ಲಿ, ಹಾಗೂ ಕೆಲವು ಸತ್ಯಾಗ್ರಹಿಗಳ ಭಾಷಣಗಳಾದವು. ಸಭೆಯಲ್ಲಿ ಹೆಂಗಸರು ಕೆಲವು ಆಭರಣಗಳನ್ನು ಕೊಟ್ಟರು. ಎಲ್ಲವನ್ನು ಲಿಲಾವಮಾಡಲಿಲ್ಲ. ಲಿಲಾವು ಮಾಡಿದ್ದರಲ್ಲಿ ಸುಮಾರು ೧೫೦ ರೂಪಾಯಿ ದೊರೆತವು. ಸಭೆಯಲ್ಲಿ ೬೦-೭೦ ರೂಪಾಯಿಗಳು ದೊರೆತವು. ಮರುದಿನ ಮುಂಜಾನೆ ಧ್ವಜಾರೋಹಣಕ್ಕೆ ಸುಮಾರು ಸಾವಿರ ಜನರು ಸೇರಿದ್ದರು. ಅಲ್ಲಿಂದ ೮ ಘಂಟೆಗೆ ಹೊರಟು ತ್ಯಾಗಲೀಎಂಬ ಸಣ್ಣ ಹಳ್ಳಿಗೆ ಬಂದೆವು. ಅಲ್ಲಿ ಸಭೆ ಸೇರಿ ೧೨ ರೂಪಾಯಿ ದೊರೆತವು. ಅಲ್ಲಿಂದ ಹೊರಟು ಸಿದ್ದಾಪೂರಕ್ಕೆ ೧೨ ಘಂಟೆಗೆ ತಲ್ಪಿದೆವು.

ಸಿದ್ದಾಪೂರ ಜ. ಮೂರ್ತಿ
ತಾ-೨೧-೪-೩೦ ಪ್ರಕಟನಾಕಾರ್ಯದರ್ಶಿ.

## ಬ್ರಾಹ್ಮಣೇತರರಿಗೆ ಮಹಾತ್ಮರ ಸಂದೇಶ.

ಇದು ಬ್ರಾಹ್ಮಣರ ಜಗಳವಲ್ಲ; ಅಥವಾ ಒಂದು ಪಂಗಡದ್ದಲ್ಲ; ಇಡೀ ಹಿಂದೂ ದೇಶದ್ದು; ಉಪವಾಸ ಬೀಳುವಂಥ ಲಕ್ಷಾವಧಿ ಜನರ ದೆಸೆಯಿಂದ ನಡೆದಿದೆ. ಆದುದರಿಂದ ಬ್ರಾಹ್ಮಣೇತರರೆಲ್ಲರೂ ಇದರೊಳಗೆ ಸೇರಲಿಕ್ಕೆ ಬೇಕು ಎಂದು ಮಹಾತ್ಮರು ಹೇಳಿದ್ದಾರೆ.*

## ನಿಃಶಸ್ತ್ರರಾದ ಜನರ ಗುಂಪಿನಮೇಲೆ
## ಪೇಶಾವರದ ಮಿಲಿಟರಿ
# ಸೈನಿಕರು ಗುಂಡಿನ ಮಳೆಸುರಿಸಿದರು.

ಪೇಶಾವರದಲ್ಲಿ ಕಾಂಗ್ರೇಸ ಮತ್ತು ಖಿಲಾಫತ್ ಮುಖಂಡರನ್ನು ಹಿಡಿಯೊಯ್ಯಲು ಊರ ಜನರು ಹರತಾಳವನ್ನು ಪಾಲಿಸಿದರು. ಮುಖಂಡರ ವಿರಹದಿಂದ ತಮಗಾದ ವ್ಯಥೆಯನ್ನು ಹೀಗೆ ಯಶಸ್ವಿರೀತಿಯಿಂದ ಏಕಕಂಠವಾಗಿ ಅಲ್ಲಿಯ ನಾಗರೀಕರು ಪ್ರದರ್ಶಿಸುವದನ್ನು ಕಂಡು ಸರಕಾರವು ವಿನಾಕಾರಣ ಗಾಬರಿಗೊಂಡು, ಸೈನ್ಯಸಹಾಯವನ್ನು ತರಿಸಿಕೊಂಡು ಊರವರ ಎದೆಯ ಮೇಲೆ ಏರಿಸಹತ್ತಿದರು. ಮಶೀನ ತೋಫು ಗುಂಡು, ಮದ್ದು ಬಂದೂಕುಗಳನ್ನು ಹೇರಿದ ಮೋಟಾರುಗಳನ್ನು ಓಣಿ ಓಣಿ ತಿರುಗಿಸಿಕೊಂಡು ಬಂದರು. ಈ ರೀತಿಯಾಗಿ ಅಲ್ಲಿ ನಾಗರೀಕರನ್ನು ಹೆದರಿಸಬೇಕೆಂಬ ಸರಕಾರದವರ ಹಂಚಿಕೆ ನಡೆದಿರಲು ಇದು ಯಾವದಕ್ಕೂ ಅಲ್ಲಿಯ ಜನರು ಸೊಪ್ಪು ಹಾಕಲಿಲ್ಲ. ನಿರ್ಭಯದಿಂದ ಬೀದಿಯಲ್ಲಿ ಗುಂಪು ಗುಂಪು ಕೂಡಹತ್ತಿದರು. ತಮ್ಮ ಶಸ್ತ್ರಸಹಾಯದ ದರ್ಪಕ್ಕೆ ಜನರು ಬಗ್ಗಲಿಲ್ಲವೆಂದು ಬ್ರಿಟೀಶ ಸೈನಿಕರು ಸಿಟ್ಟಿಗೆದ್ದು ಆ ಜನರ ಮೇಲೆ ಮಶಿನಗನ್ನುಗಳಿಂದ ಗುಂಡು ಹಾರಿಸಹತ್ತಿದರು. (ಅಲ್ಲಿಯ ಪೋಲೀಸ ಕಚೇರಿಯ ಜನರು ಮೊದಲು ಕಲ್ಲು ಒಗೆಯಹತ್ತಿದರು ಎಂಬುದೂ ಒಂದು ವರ್ತಮಾನವಿದೆ.) ಆ ವೇಳೆ ನೆರೆದ ಜನರು ಈ ಗುಂಡಿನ ಮಳೆಗೆ ಹಿಂದೀಯರು (ಪಟಪಟ ಬಿದ್ದು ಸಾಯುತ್ತಿರುವದನ್ನು ನೋಡಿ ಉದ್ವಿಗ್ನರಾಗಿ ಆವೇಶದ ಭರದಲ್ಲಿ ಶಸ್ತ್ರಾಸ್ತ್ರಗಳಿಂದ ತುಂಬಿದ ಎರಡು ಮೋಟಾರ ಗಾಡಿಗಳಿಗೆ ಕೊಳ್ಳಿಕೊಟ್ಟು ಸುಟ್ಟುಬಿಟ್ಟರು. ಮಶಿನಗನ್ನುಗಳು ಒಂದೇ ಸವನೇ ಗುಂಡಿನ ಮಳೆ ಸುರಿಸುತ್ತಲೆ ಇದ್ದವು. ಇದರಿಂದ ೨೦ ಜನ ಹಿಂದೀಯರು ೨ ಯುರೋಪಿಯನ್ನರೂ ಮಡಿದಿರುವರು. ನೂರಾರು ಜನರು ಗಾಯಹೊಂದಿ ಆಸ್ಪತ್ರೆಯಲ್ಲಿ ನರಳುತ್ತ ಬಿದ್ದುಕೊಂಡಿರುವರು. ನಮ್ಮ ಸಂರಕ್ಷಣೆಗೆಂದು ಇಡಲ್ಪಟ್ಟ ಶಸ್ತ್ರಾಸ್ತ್ರಗಳು ಈ ಪರಿ ನಮ್ಮ ಕೊಲೆಗೆ ಉಪಯೋಗಿಸಲ್ಪಟ್ಟವು, ಇದೇ ಏನು ? ಮೊದಲಿನದು ಅಲ್ಲ ಅಂದಿಗಿಂದಿಗೂ ನಡದೇ ಇದೆ. ಜನರಲ್ಲಿ ವಿರೋಧ ಶಕ್ತಿಯು ಬೆಳೆಯುವವರೆಗೆ ನಡೆಯತಕ್ಕದ್ದು ಇದೆ. ನಿರಪರಾಧಿ ಜನರ ಇಂಥ ಕೊಲೆಪಾತಕದಿಂದಲೆ ಸರಕಾರದ ಪಾಪದ ಬಟ್ಟಲು ತುಂಬಬೇಕಾಗಿದೆ. ಸ್ವಾತಂತ್ರ್ಯಕ್ಕಾಗಿ ಹಿಂದೀಯರು ಶಾಂತರೀತಿಯಿಂದ ತಮ್ಮ ನೆತ್ತರದ ಆಹುತಿಯನ್ನೀಯಬೇಕಾಗಿದೆ, ದಧೀಚನ ವಂಶಜರಾದ ವೀರಭಾರತೀಯರಿಗೆ ಇದೇನು ಅಸಾಧ್ಯವಾದ ಮಾತಲ್ಲ?

### ಮದ್ರಾಸದಲ್ಲಿ ಇನ್ನು ಸಭೆಗಳಾಗಕೂಡದಂತೆ

ಸಭೆಕೂಡಿ ವಿಷಯ ವಿವೇಚನೆ ನಡಿಸುವಂಥ ನಾಗರೀಕರ ಜನ್ಮ ಹಕ್ಕಿಗೆ ಮದ್ರಾಸ ಸರಕಾರದವರೂ ಮನಾಯಿ ಹುಕುಂ ಹೊರಡಿಸಿರುವರು.

### ಶ್ರೀ ಟಿ ಪ್ರಕಾಶಮ್ಮರಿಗೆ ಶಿಕ್ಷೆಯಾಯಿತು

ನಿನ್ನಿನ ದಿವಸ ಹಿಡಿಯಲ್ಪಟ್ಟ ಶ್ರೀ. ಟಿ. ಪ್ರಕಾಶಮ್ಮ ಇವರ ಅಪರಾಧದ ವಿಚಾರಣೆ ನಡೆದು ಇಂದು ಅವರಿಗೆ ಒಂದು ವರ್ಷ ಕಾರಾಗೃಹ ಶಿಕ್ಷೆ ವಿಧಿಸುವದರಲ್ಲಿ ಬಂದಿದೆ. ಪೋಲೀಸ ಸುಪರಿಂಟೆಂಡೆಂಟರ ಸಾಕ್ಷಿ ನುಡಿಯಲು ಕೋರ್ಟಿನ ಮುಂದೆ ನಿಂತುಕೊಂಡು ತಿಳಿಸಿರುವರು. ಅಲ್ಲದೆ ಶ್ರೀ ಪ್ರಕಾಶಮ್ಮ ಇವರು ಉಪ್ಪಿನ ಕಾಯಿದೆ ಮುರಿದ ಅಪರಾಧವನ್ನು ಒಪ್ಪಿಕೊಂಡು ಈ ಉಪ್ಪಿನ ಪಟ್ಟಿಯಿಂದ ನಮ್ಮ ಹಿಂದೀ ಸ್ಥಾನದ ಆರ್ಥಿಕ ಸ್ಥಿತಿಯು ಹಾಳಾಗಿದೆ ಅದನು ಮುರಿಯಬೇಕೆಂದು ಕಾಂಗ್ರೆಸ ನಿರ್ಣಯವನ್ನು ನಾನು ಅತ್ಯಾನಂದದಿಂದಲೂ ಹಾಗೆ ಕಾಯಿದೆ ಮುರಿಯುವದರಿಂದ ಉಂಟಾಗಬಹುದಾದ ಪರಿಣಾಮವನ್ನು ಪೂರ್ಣ ಎಣಿಸಿಯೇ ತಾವು ಆಚರಿಸಿರುವರೆಂದು ಹೇಳಿ ಆ ಶಿಕ್ಷೆಯನ್ನು ಅನುಭವಿಸಲು ಒಳ್ಳೇ ಉತ್ಸಾಹದಿಂದಲೆ ನಡೆದರು. ಇವರು ಜೇಲು ಮುಟ್ಟುವವರೆಗೂ ಅಸಂಖ್ಯ ಜನರು ಜಯಜಯಕಾರ ಮಾಡುತ್ತ ಹಿಂಬಾಲಿಸಿದ್ದರು.

### ಚಿತ್ತಗಾಂಗ ಮತ್ತು ಪೇಶಾವರದಲ್ಲಿ
### ಜನರು ರಾತ್ರಿ ದೀಪ ಇಡಲಿಕ್ಕಾಗದು

ಪೇಶಾವರದಲ್ಲಿ ಈಗ ಎಲ್ಲವೂ ಶಾಂತವಿದೆಯೂ— ಒಬ್ಬರನ್ನೂ ಒಳಗೆ ಬಿಡುವದಿಲ್ಲ. ಒಳಗಿನವರನ್ನು ಹೊರಗೆ ಬಿಡುವದಿಲ್ಲ. ಸತ್ಯಾಗ್ರಹಕ್ಕಾಗಿ ೧೦೦೦೦ ಸ್ವಯಂಸೇವಕರನ್ನು ಉತ್ಸಾಹದಿಂದ ಕರಕೊಂಡು ಬಂದ ಅಬ್ದುಲ್ ಘಪ್ಪಾರರೆಂಬ ಮುಖಂಡರನ್ನು ಪೋಲೀಸರು ಊರೊಳಗೆ ಬರಗೊಟ್ಟಿಲ್ಲ. ರಾತ್ರಿಯ ೮ ಘಂಟೆಯ ಮೇಲೆ ಊರಲ್ಲಿ ಯಾವ ತರದ ಪ್ರಕಾಶವೂ ಇರಕೂಡದೆಂದು ಹುಕುಂ ಹೊರಟಿದೆ. ಯಾರ ಮನೆಯೊಳಗಾದರೂ ದೀಪವಿದ್ದದ್ದು ಕಂಡು ಬಂದರೆ ಅವರಿಗೆ ದಂಡ ಮತ್ತು ಶಿಕ್ಷೆ ವಿಧಿಸಲಾಗುವದು. ಮಕ್ಕಳು ಮರಿ ಇದ್ದ ಮನೆಯವರು ಮತ್ತೂ ಬೇನೆಯಿಂದ ನರಳುವವರೂ ಸಹ ಸಮಗ್ರ ರಾತ್ರಿಯನ್ನು ಕಗ್ಗತ್ತಲೆಯಲ್ಲಿಯೇ ಕಳೆಯಬೇಕಾಗಿದೆ. ಇದೆಲ್ಲ ಜನರಲ್ಲಿ ಶಾಂತತೆ ಇಡುವ ಸಲುವಾಗಿ! ಜನರನ್ನು ಸಂರಕ್ಷಿಸುವ ಸಲುವಾಗಿ!! ಮತ್ತು ತಮ್ಮ ಕಾಯಿದೆಗಳ ದರ್ಪ ಉಳಿಸಿಕೊಳ್ಳುವದಕ್ಕಾಗಿ!! ಹೇಗಿದೆ ಬ್ರಿಟಿಶ ಸರಕಾರದ ಆಟ? ಅವರು ಮಾಡುತ್ತಿರುವದೆಲ್ಲ ನಮ್ಮ ಕಲ್ಯಾಣದ ಸಲುವಾಗಿಯೇ! ಎಷ್ಟು ಶ್ರಮಪಡುತ್ತಿರುವರು, ಪಾಪ! ಇದೆಲ್ಲ ಇವರ ಉಪಕಾರ ಹೊರುವವರು ಜಗತ್ತಿನಲ್ಲಿಯೇ ಸಿಗದಂತಾಗಿದೆ.

## ಪರದೇಶಿ ಬಟ್ಟೆಗಳ ಬಹಿಷ್ಕಾರ

### ಮುಂಗೋಡ

ಇಲ್ಲಿಯ ಅರಿವೆಯ ವರ್ತಕರು ತಮ್ಮದೊಂದು ಸಂಘ ಸ್ಥಾಪಿಸಿಕೊಂಡು ೧ ವರ್ಷದವರೆಗೆ ಪರದೇಶಿಯ ಸರಕು ತರಿಸ ಬಾರದೆಂದೂ ಮಾರಬಾರದೆಂದೂ ಹರಿಸಿದರೆ ೫೧ ರೂಪಾಯಿ ದಂಡ ಕೊಡಬೇಕೆಂದೂ ಗೊತ್ತು ಮಾಡಿದ್ದಾರೆ. ಒಬ್ಬ ವರ್ತಕನು ಸ್ವಯಂಸ್ಫೂರ್ತಿಯಿಂದ ಶುದ್ಧ ಖಾದಿಯ ಅಂಗಡಿಯನ್ನು ಹಾಕ ಲಿಕ್ಕೆ ಸಿದ್ಧನಾಗಿ ಮಾಡುವದರಿಂದ ಭಾಗಗೊಳ್ಳಬೇಕೆಂದು ಕೋರಿದ್ದಾನೆ. ೨೮—೪—೩೦ ದಿನ ಇಲ್ಲಿಯ ದೇವಿಯ ಗುಡಿ ಯಲ್ಲಿ ದೊಡ್ಡ ಸಭೆ ಸೇರಿತ್ತು. ಸಾವಿರಾರು ಜನರು ಬಂದಿದ್ದರು. ಪೋಲೀಸರು ಸಶಸ್ತ್ರರಾಗಿ ಬಂದಿದ್ದರು. ಉಪ್ಪು ಮಾರಲಾಯಿತು. ಪೋಲೀಸ ಇನಸ್ಪೆಕ್ಟರರು ಮೊದಲು ಜಪ್ತಿ ಮಾಡಿದರು. ಮುಂದೆ ಏನೂ ಮಾಡಲಿಲ್ಲ. ಸತ್ಯಾಗ್ರಹಿಗಳು ಪರದೇಶಿಯ ಅರಿವೆಯ ಹೋಳೀ ಮಾಡುವದರಿಂದ ಪರದೇಶಿ ಅರಿವೆ ಬೇಡಿದರು; ಎಲ್ಲರೂ ಒಗೆದರು; ಹೋಳೀ ಆಯಿತು.

### ಇಂಗ್ಲಂಡ

ಬರ್ಮಿಂಗಹ್ಯಾಮ ಎಂಬಲ್ಲಿ ಸ್ವತಂತ್ರ ಕೂಲಿಕಾರರ ಪಕ್ಷದ ಒಂದು ಪರಿಷತ್ತು ಕೂಡಿತ್ತು. ಆ ಪರಿಷತ್ತಿನಲ್ಲಿ ಹಿಂದು ಸ್ಥಾನದ ಪೂರ್ಣ ಸ್ವತಂತ್ರತೆ, ರಾಜಕೀಯ ಸೆರೆಯಾಳುಗಳ ಬಿಡುಗಡೆ ಮತ್ತು ಉಪ್ಪಿನ ಪಟ್ಟಿಯನ್ನು ನಿಲ್ಲಿಸುವದು, ಇವು ಗಳ ವಿಷಯಕ್ಕೆ ಸಹಾನುಭೂತಿಯುಳ್ಳ ಠರಾವನ್ನು ಮಾಡಿ ದರು.

### ಮುಂಬಯಿ

ಶ್ರೀ ಕ್ಷನರೂ ಸತ್ಯಾಗ್ರಹಪಕ್ಷ ಸೇರಿರುವರು. ಉಪ್ಪುಮಾಡು ವದು, ಮಾರುವದು ನಡೆದಿದೆ.

ಪಂಡಿತ ಮಾಣಿಕ್ಯಂದ ಮಾಳವೀಯ ಎಂಬ ಸ್ವಯಂಸೇವ ಕನನ್ನು ಹೊಡೆದರು. ತಲೆ ಒಡೆದು ರಕ್ತ ಸುರಿಯಿತು.

ಒಬ್ಬ ಮುಸಲ್ಮಾನ ಸತ್ಯಾಗ್ರಹಿಯು ಉಪ್ಪಿನ ಪಟ್ಟಿಯನ್ನು ಮುರಿದನು. ಅವನನ್ನು ಪೋಲೀಸರು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ತಂದರು. ಅಲ್ಲಿ ಅವನು ಕೈಯಿಂದ ಸನ್ನೆ ಮಾಡಿ ತಾನು ಕಾಯದೆ ಭಂಗಮಾಡಿದ್ದು ನಿಜವೆಂದು ಹೇಳಿದನು. ಮೂಕನಾದರೇನಾಯಿತು ಅವನೂ ವೀರನೇ ಅಲ್ಲವೇ?

ಪ್ರೊಫೆಸರ ಭಾಗವತರೆ ಎಂಬವರನ್ನೂ ಮತ್ತು ಮುಂಬಯಿ ಕ್ರಾನಿಕಲ ಪತ್ರದ ಸಂಪಾದಕ ಮಂಡಲೀಕಲ್ಲಿಯೊಬ್ಬರನ್ನು ಹಿಡಿದು ಸಜೆ ಕೊಟ್ಟಿರುವರು. ಆಸ್ಟ್ರೇಲಿಯಾ ದೇಶದಿಂದ ಒಂದು ಸತ್ಯಾಗ್ರಹಕ್ಕೆ ಕೂಡಿದ ಥಾರ್ನಟನ ಸಾಹೇಬನು ಮಹಾತ್ಮನಿಗೆ ಭೆಟ್ಟಿಯಾಗಿ ಅವನ ದಿವ್ಯ ತೇಜವನ್ನು ನೋಡಿ ಬೆರಗಾದನು. ಹೇಳಿದನು, "ಮಹಾತ್ಮನ ಮಹಿಮೆಯು ಒಂದೊಂದು ದಿವಸಕ್ಕೂ ತಿಳಿದರೂ," ನಮ್ಮಲ್ಲಿ ಎಷ್ಟೋ ಜನರು ಹಾಗೇ ಇರುವರಲ್ಲ. ಇದರೇನು ಮನಸ್ಸೋ?

### ಲುಧಿಯಾನಾ

ಹತ್ತು ಸಾವಿರ ಜನರ ಸಭೆಯಲ್ಲಿ ಯಾರೋ ಒಬ್ಬಿಬ್ಬರು ಹೂಲಿ ಎಬ್ಬಿಸಿದ್ದಕ್ಕಾಗಿ ಪೋಲೀಸರು ಎಲ್ಲರಮೇಲೆಯೂ ಗುಂಡು ಹಾರಿಸಿದರು. ಐವತ್ತು ಜನರಿಗೆ ಘಾಯವಾಗಿದೆ. ಸ್ವಲ್ಪ ನೆವ ಸಿಕ್ಕರೆ ಸಾಕು. ಗುಂಡುಗಳು ತಯಾರೇ ಆಗುವವು.

### ಪೇಶಾವರ

ಕಾಂಗ್ರೆಸ ಪಕ್ಷದ ಮುಖಂಡರನ್ನು ಹಿಡಿದ ಕಾರಣ ಪ್ರಚಂಡ ಜನ ಸಮುದಾಯವು ಕೂಡಿತು, ದಂಗೆಯಾಯಿತು. ಅದರಲ್ಲಿ ಇಪ್ಪತ್ತು ಜನರು ನಮ್ಮವರೂ, ಇಬ್ಬರು ಯುರೋಪಿ ಯನ್ನರೂ ಸತ್ತಿರುವರು. ನೂರಾರು ಜನರು ಗಾಯ ಹೊಂದಿ ರುವರು. ಪೋಲೀಸರಿಗೂ ಗಾಯಗಳಾಗಿವೆ. ತೋಫು, ತುಬಾಕಿ ಗಳಿಂದ ತುಂಬಿದ ಎರಡು ಮೋಟಾರಗಳು ಸುಟ್ಟಿರುವವು.

### ಕಲಕತ್ತಾ

ಎಡ್ವಾನ್ಸ ಮತ್ತು ಲಿಬರ್ಟಿ ಎಂಬ ಎರಡು ಪತ್ರಗಳ ಸಂಪಾದಕರನ್ನು ಹಿಡಿದಿರುವರು. ಸರಕಾರದ ಪ್ರೇಮ ದೃಷ್ಟಿಯು ವರ್ತಮಾನ ಪತ್ರಿಕಾಕರ್ತರ ಮೇಲೂ ಬಿದ್ದಿತೋ?

ಅಹಮ್ಮದಬಾದದಲ್ಲಿ ಮಹಾತ್ಮಾ ಗಾಂಧಿಯವರ ಪಟ್ಟ ಶಿಷ್ಯನಾದ ಮಹಾದೇವ ದೇಸಾಯರನ್ನು ಹಿಡಿದಿರುವರು. ಇವರನ್ನು ಒಮ್ಮೆ ಹಿಡಿದು ಬಿಟ್ಟಿರುವರು. ಈಗ ಪುನಃ ಹಿಡಿದಿ ರುವರು. ಸರಕಾರದ ಲೀಲೆ ಯಾರು ಬಲ್ಲರು.

### ದಿಲ್ಲಿ

ಮೌಲಾನಾ ಅಬ್ದುಲ ಕಲಮ ಆಝಾದ ಎಂಬವರು, ಮುಸಲ್ಮಾನರೆಲ್ಲರೂ ಈ ಚಳವಳಿಯಲ್ಲಿ ಸೇರಿ ಸ್ವತಂತ್ರತೆಗಾಗಿ ಪೂರ್ಣ ಸಹಕಾರದಿಂದ ಯತ್ನಮಾಡಬೇಕೆಂದು ಹೇಳಿದರು.

### ಪಾಟನಾ

ಸ್ವಯಂಸೇವಕರ ಮೆರವಣಿಗೆಯನ್ನು ನೋಡಲಿಕ್ಕೆ ಕೂಡಿದ ಜನರಿಗೆ ಶಾಂತರೀತಿಯಿಂದ ಇರಲಿಕ್ಕೆ ಹೇಳುತ್ತಿದ್ದ ಪ್ರೊಫೆಸರ ಅಬ್ದುಲ ಬಾರಿ ಎಂಬವರಿಗೆ ಪೋಲೀಸರು ಹೊಡೆದರು. ಪ್ರೊಫೆ ಸರ ಕರ್ಲೋನಿ ಎಂಬವರಿಗೂ ಏಟುಗಳೂ ಬಿದ್ದವೆ. ಪ್ರೊಫೆ ಸರರು ಪೋಲೀಸರ ಬಡಿಕೆಗೆ ತುತ್ತಾಗ ಹತ್ತಿದರು.

### ಸಿಮ್ಲಾ

ಅಸೆಂಬ್ಲಿಯ ಅಧ್ಯಕ್ಷರಾದ ಪಟೇಲರು ತಮ್ಮ ಅಧ್ಯಕ್ಷ ಸ್ಥಾನಕ್ಕೆ ತಿಲಾಂಜಲಿ ಕೊಡುವವರಿದ್ದಾರಂತೆ. ಇನ್ನು ಯಾರ ಪಾಳಿ!

### ಕರಾಚಿ

ಇಲ್ಲಿ ಐವತ್ತು ಸಾವಿರ ಜನರು ಕೂಡಿ ಸಭೆಮಾಡಿ ಎಲ್ಲರೂ ಸಮುದ್ರತೀರಕ್ಕೆ ಹೋಗಿ ಉಪ್ಪಿನ ಕಾಯದೆ ಭಂಗಮಾಡಿದರು. ಇಂಥ ಪ್ರಚಂಡ ಜನ ಸಮೂಹಕ್ಕೆ ಸರಕಾರವು ಏನು ಮಾಡು ವದು.

ಈ ಪತ್ರಿಕೆಯು ಬಳವಂತ ಕೃಷ್ಣರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

# ಕನ್ನಡಿಗ

ಜಯಕರ್ನಾಟಕ

ನಿತ್ಯಸಂಚಿಕೆಯು.

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು :— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ರವಿವಾರ ಮಿತಿ ಚೈತ್ರ ಬಹುಳ ೧೪ ಶಕ ೧೮೫೨ ತಾ ೨೭—೪—೩೦ ಸಂಚಿಕೆ ೩೩

## ಸಂಪಾದಕರ ಭೂಮಿ.

ನನ್ನ ದೇಹವು ನಿನ್ನ ವೀರಶಾಸನವಾಗಿ।
ಕನ್ನಡನ್ನ ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ದೀರಬಹಗಂಧನಹವೆಂದು ತಿಳಿಯೆ॥

### ವಿಚಾರಣೆಯ ಫಾರ್ಸ ನಡೆದಿದೆ.

ಕಾಯಿದೆಭಂಗ ಸತ್ಯಾಗ್ರಹಿಗಳನ್ನು ಕಾರಾಗ್ರಹಕ್ಕೆ ಕಳಿಸುವ ವಿಷಯದಲ್ಲಿ ಸರಕಾರವು ನ್ಯಾಯಾ ನ್ಯಾಯವನ್ನು ತಾವೇ ಹಾಕಿಕೊಂಡಿರುವ ಕ್ರಮವನ್ನು ತೊರೆದು ನಿಂತಿದೆ. ಕಾರಾಗ್ರಹದಲ್ಲಿ ಸತ್ಯಾಗ್ರಹಿಗಳನ್ನು ತಮ್ಮ ಮನಸ್ಸಿಚ್ಛವಷ್ಟು ದೀರ್ಘ ಅವಧಿಯ ವರೆಗೆ ಬಂಧಿಸುವ ಕುರಿತು ಕೈಗೆ ಬಂದ ಕಲಮು ಗಳನ್ನು ಎಳೆದು ತಂದು ಅದರ ಕೆಳಗೆ ಸತ್ಯಾಗ್ರಹಿಯು ಅಪರಾಧ ಮಾಡಿರುವನೆಂದು ಪೋಲೀಸ ಖಾತೆಯವರು ನ ಡಿಯಬೇಕು, ಮತ್ತು ಅವರು ಹಾಗೆ ನಡಿದ ಮಾತ್ರಕ್ಕೆ ಅವರ ಅಣ್ಣಂದಿರಾದ ಮ್ಯಾಜಿಸ್ಟ್ರೇಟರು ಸಾಕ್ಷಿ ಪುರಾವೆಗಳ ಪರಿವೆ ಇಲ್ಲದೆ ಸತ್ಯಾಗ್ರಹಿಗಳಿಗೆ ಹೆಚ್ಚು ಶಿಕ್ಷೆಕೊಟ್ಟ ಸರಕಾರದ ಸಿಫಾರಸ್ಸಿಗೆ ತಾವು ಪಾತ್ರರಾದೆವೆಂಬ ಸಮಾಧಾನದಿಂದ ಮೆರೆಯುದೇಕು, ಈ ಪದ್ಧತಿಯು ಚಳವಳಿಯ ಪ್ರಾರಂಭದಿಂದಲೂ ನಡಸೇ ಇದೆ. ಇದರಲ್ಲಿ ಪೋಲೀಸರೂ ಮ್ಯಾಜಿಸ್ಟ್ರೇಟರೂ ಒಂದೇ ಗುಟ್ಟಿನಿಂದ ಕೆಲಸ ಮಾಡುತ್ತಿರುವರೆಂಬುವದರಲ್ಲಿ ಯಾವ ಸಂಶಯವೂ ಇಲ್ಲ. ಮ್ಯಾಜಿಸ್ಟ್ರೇಟರು ಪೋಲೀಸರಿಗೆ ಒಳಾಂತರ ಸಾಮಿಲರಾಗಿ ವರ್ತಿಸುತ್ತಿರುವರು; ಅವರು ಬಹಿರಂಗವಾಗಿ ಕೋರ್ಟಿನಲ್ಲಿ ನಡೆಸ ತ್ತಿರುವ ವಿಚಾರಣೆಯು ಕೇವಲ ಫಾರ್ಸ! ಕಾಯಿದೆ ನ್ಯಾಯ ಇವುಗಳ ಆಭಾಸ ಮಾತ್ರ! ಬಾಗಲಕೋಟೆಯಲ್ಲಿ ಸತ್ಯಾಗ್ರಹಿಗಳನ್ನು ಸೆರೆ ಹಿಡಿದೊಯ್ದು ಕೂಡಲೇ ವಿಚಾರಣೆಯ ಪೂರ್ವದಲ್ಲಿ ಡಿ. ಇನ್ಸ್. ಎಲ್. ಪಿ, ಯವರೂ ಇಲ್ಲಿಯ ಮ್ಯಾಜಿಸ್ಟ್ರೇಟರು ಒತ್ತಟ್ಟಿಗೆ ಕುಳಿತು ಘಂಟೆ ದೀಡಘಂಟೆ ರಹಸ್ಯವಾಗಿ ಚರ್ಚೆ ನಡಿಸಿ (ಬಹುಶಃ ತೀರ್ಪನ್ನು ನಿಶ್ಚಯಿಸಿಕೊಂಡೆ) ಹೊರಬಿದ್ದರು. ಮೊನ್ನೆ ಬೀಳಗಿಯಲ್ಲಿಯೂ ಮತ್ತೆ ಇದೇ ಹಾಡು.

ಇಲ್ಲಿ ಇನ್ನೊಂದು ಚಮತ್ಕಾರ! ಈ ಉಪ್ಪಿನ ಕಾಯಿದೆಭಂಗದ ಸಂದರ್ಭದಲ್ಲಿ ಅಪರಾಧಿಗಳಿಗೆ ಶಿಕ್ಷೆ ಇಚ್ಛಿಸಿದಾಗೆಲ್ಲ ಇ. ಪಿ. ಕೋಡಿನ ೧೧೭ ನೇ ಕಲಮಿನ ಸಹಾಯತಕ್ಕೊಳ್ಳುತ್ತಿರುವರು. ಇದು ಡಾಣಾ ಡಂಗುರವಾಗಿದೆ. ಆದರೆ ಬೀಳಗಿಯ ದೀಡಶಹಣೆ ಸಬ್ ಇನಸ್ಪೇಕ್ಟರರು ಇ. ಪಿ. ಕೋಡಿನ ೧೪೭ನೇ ಕಲಮಿನ ಪ್ರಕಾರ ಆ ಅಹಿಂಸಾ ಧರ್ಮಿಗಳ ಮೇಲೆ ಖಟ್ಲೆಹಾಕಿ ಉಪ್ಪಿನ ಕಾನೂನಿನ ಯಾವ ಸಂಬಂಧವನ್ನೂ ತಂದಿರಲಿಲ್ಲ (ಮಂತ್ರಿ) ಮುಂದೆ ವಿಚಾರಣೆಯು ಅರ್ಧ ಮುಗಿಯುತ್ತ ಬಂದ ಸಮಯಕ್ಕೆ ಉಪ್ಪಿನ ಕಟ್ಟಳೆಯ ೪೭ ನೇ ಕಲಮನ್ನು ಅಪರಾಧಿಗಳಿಗೆ ಅನ್ವಯಿಸಬೇಕೆಂದು ಪುರವಣಿ ಚಾರ್ಜಶೀಟ ಸಾದರಪಡಿಸಿದ (ನಂತ್ರಿ). ಮುಂದೆ ಮರುದಿವಸ ಇ. ಪಿ. ಕೋಡಿನ ೧೪೭ ನೇ ಕಲಮಿನ ವಿನಾಃಕಾರಣ ಆದೆ. 'ಧಾಸಿಗೊ' ಅದನ್ನು ಅಳಿಸಿ ಬಿಡಬೇಕೆಂದು ಆದೆ. ಸಬ್ ಇನಸ್ಪೇಕ್ಟರರು ಅರ್ಜಿ ಬರೆದು ಕೊಂಡ (ನಂತೆ). ಇದೇ ಅರ್ಜಿ ಪುರವಣಿ. ಬಿನ್ನಹಗಳ ಪ್ರಕಾರ ಮ್ಯಾಜಿಸ್ಟ್ರೇಟರು ತಾವು ಬರೆದಿರುವ ಬರೆಯುತ್ತಿರುವ ತೀರ್ಪಿನಲ್ಲಿ "ಬಿನ್ ತಕರಾರದಿಂದ" ಹೆಚ್ಚು ಕಡಿಮೆ ಮಾಡುತ್ತಲಿ ಬಂದ (ರಂತೆ). ಇದಕ್ಕೆಲ್ಲ ಕ್ರಿಮಿನಲ್ ಪ್ರೋಸೀಜರದಲ್ಲಿ ಆಧಾರಗಳು ಸಿಗಬಹುದೇ! ಒಂದು ವೇಳೆ ಈ ಅಪದ್ಧಗಳೆಲ್ಲ ದಪ್ತರದಿಂದ ದೂರಾಗಿ ಸ್ವಪ್ನವಾದ ಕಾಗದ ಪತ್ರಗಳಷ್ಟೇ ಅಲ್ಲಿ ಸ್ಥಳ ಸಿಕ್ಕಿರಬಹುದು. ಏನಿದ್ದರೇನು ಸತ್ಯಾಗ್ರಹಿಗಳು ಇಂಥ ಅನ್ಯಾಯಗಳಿಂದ ನಮ್ಮನ್ನು ಸಂರಕ್ಷಿಸಿಕೊಳ್ಳಿರಿ ಎಂದು ಮಹಾಬಾಹ ಸರಕಾರಕ್ಕೆ ಕೇಳಿಕೊಳ್ಳುವಂತಿಲ್ಲ, ಕೇಳಿಕೊಂಡರೂ ತನ್ನದೂ ಮತ್ತು ತನ್ನ ಅಧಿಕಾರಿಗಳ ದರ್ಪವನ್ನು ಕಾಯ್ದುಕೊಳ್ಳುವದರಲ್ಲಿಯೇ ಗರ್ಕಾಗಿರುವ ಈಗಿನ ಸರಕಾರದಲ್ಲಿ ನ್ಯಾಯವೂ ಸಿಗುವಂತಿಲ್ಲ ಎಂಬುದನ್ನು ಅವರು ಪೂರ್ಣಬಲ್ಲರು. ಪೋಲೀಸನಿಂದ ಗವ್ಹರ್ನರ ಸಾಹೇಬರ ವರೆಗೆ ಎಲ್ಲರೂ ಒಂದೆಯಲ್ಲಿ ಹುಟ್ಟಿದವರೇ! ರಾಜ್ಯ ಪದ್ಧತಿಯೇ ಹಾಗಿದೆ.

### ಮಹಾತ್ಮರು ಸ್ವತಃ ಉಪ್ಪಿನ ಗಿಡವನ್ನು ಕಡಿದರು.

ಜಲಾಲಪೂರದಿಂದ ಸಮೀಪದಲ್ಲಿಯೇ ಇರುವ ಬೋಡಾಲಿ ಎಂಬ ಹಳ್ಳಿಯೊಳಗೆ ಜನರಿಗೆ ಕಿತ್ತಿಹಾಕಿ ತೋರುವದಕ್ಕಾಗಿ ಮಹಾತ್ಮರು ಸ್ವತಃ ಕೈಯಲ್ಲಿ ಕೊಡ್ಲಿಯನ್ನು ಹಿಡಿದುಕೊಂಡು ಕಡೆಯಹತ್ತಿ ಒಂದು ಗಿಡವನ್ನು ನೆಲಕ್ಕುರುಳಿಸಿದರು.

## ಅಸೆಂಬ್ಲಿಯ ಅಧ್ಯಕ್ಷಪದಕ್ಕೂ ಸದಸ್ಯತ್ವಕ್ಕೂ ಪ್ರೆಸಿಡೆಂಟ

# ಪಟೇಲರು ರಾಜೀನಾಮೆ ಕೊಟ್ಟರು.

[ ತಂತಿಯಿಂದ ಬಂದವಾರ್ತೆ. ]

ನಿಃಶಸ್ತ್ರಧಿಗಳೂ ಅಹಿಂಸಾ ಧರ್ಮಿಗಳೂ ಆದ ಸತ್ಯಾಗ್ರಹಿಗಳನ್ನು ಬ್ರಿಟಿಶ್ ಅಂಮಲದಾರರು ಹೇಳಲಾರದಷ್ಟು ಕ್ರೂರತನದಿಂದ ಹಿಂಸಿಸಹತ್ತಿರುವದರಿಂದ ನಾನಿನ್ನು ಈ ಸರಕಾರದೊಡನೆ ಕ್ಷಣ ಮಾತ್ರವೂ ಸಹಕರಿಸಲಾರೆನೆಂದು ವೈಸರಾಯರಿಗೆ ಪತ್ರ ಬರೆದು ತಿಳಿಸಿರುವರು. ಆ ಪತ್ರದಲ್ಲಿ ತಮ್ಮ ಮನಸಿನೊಳಗಿನ ಕುದಿಯನ್ನೆಲ್ಲ ಹೊರ ಚೆಲ್ಲಿರುವರು. ಆಳರಸರನ್ನು ಸಮಾಜವು ಬಹಿಷ್ಕರಿಸಲೇಬೇಕೆಂಬ ಚಳವಳಿಯನ್ನು ಕೈಕೊಳ್ಳುವೆನೆಂದೂ, ಪಟೇಲರು ಅದರಲ್ಲಿ ಸೂಚಿಸಿರುವರು.

ಶ್ರೀ. ಶ್ರೀಪ್ರಕಾಶ ( ಸಂಯುಕ್ತ ಪ್ರಾಂತ ) ಇವರಿಗೆ ೬ ತಿಂಗಳ ಕಾರಾಗ್ರಹವಾಸವು ದೊರೆತಿದೆ.

### ಪುಣೆಯ ಶ್ರೀ ಭೋಪಟಕರರು ಸೆರೆ ಆಳಾದರು

ಪುಣೆಯ ಶ್ರೀ ಭೋಪಟಕರ ( ಕೇಸರಿ ಮಂಡಲ) ಇವರನ್ನು ನಿನ್ನಿನ ದಿವಸ ಸೆರೆ ಹಿಡಿದಿರುವರು. ಉಪ್ಪಿನ ಕಾಯಿದೆ ಭಂಗ ಚಳವಳಿಯಲ್ಲಿ ತಾವೂ ಭಾಗ ತೆಗೆದು ಕೊಳ್ಳತಕ್ಕದ್ದೆಂದು ಶ್ರೀ ನರಸೋಪಂತ ಕೇಳಕರರು ಸ್ಥಾಪಿಸಿಕೊಂಡಿದ್ದ ಮಂಡಲದಲ್ಲಿ ಶ್ರೀ ಭೋಪಟಕರರೂ ಓರ್ವ ವಿಚಾರ ಶೀಲರಾದ ಮುಖಂಡರು.

### ಮಹಾತ್ಮರ ಮುಂದಿನ ಯೋಚನೆ

ಸರಕಾರದವರ ಉಪ್ಪಿನ ವಖಾರಗಳ ಮೇಲೆ ದಾಳೀಮಾಡಿ ಅಲ್ಲಿಯ ಉಪ್ಪನ್ನೆಲ್ಲ ಲೂಟಮಾಡಬೇಕೆಂದು ಮಹಾತ್ಮರು ಯೋಚಿಸುತ್ತಿರುವರು. ಹೀಗೆ ಮಾಡುವದರ ಯುಕ್ತಾಯುಕ್ತತೆಯ ಬಗ್ಗೆ ಇನ್ನೂ ಆಲೋಚನೆನಡೆದಿದೆಯಂತೆ. ಸರಕಾರದವರ ಕಡತಕ್ಕೊಂಡು ಜನರಿಗೆ ಮಾರುವ ಉಪ್ಪನ್ನು ಈ ವಖಾರಗಳಲ್ಲಿಯೇ ಸಂಗ್ರಹಿಸಿ ಇಡುತ್ತಿರುವರು. ಅವುಗಳನ್ನೆ ಶಾಂತರೀತಿಯಿಂದ ಒಳನುಗ್ಗಿ ಅಲ್ಲಿಯ ಉಪ್ಪನ್ನು ಲೂಟಾಯಿಸಿಗೊಂಡು ಜನರೊಳಗೆ ಹಂಚಬಿಡಬೇಕೆಂಬುದೇ ಅವರ ವಿಚಾರ ( ಈ ಸುದ್ದಿಗೆ ಇನ್ನು ಸಾಕಷ್ಟು ಆಧಾರವಿಲ್ಲೆಂದೂ ತಂತಿಯಲ್ಲಿ ಉಲ್ಲೇಖವಿದೆ ).

### ಶ್ರೀ ಮಹಾದೇವ ದೇಸಾಯಿಗೆ ಸಜೆಯಾಯಿತು

ಮಹಾತ್ಮಾ ಗಾಂಧಿಯವರ ಮುಖ್ಯ ಕಾರ್ಯವಾಹಕನಾದ ಕರ್ತೃತ್ವಶಾಲಿ ಮಹಾದೇವ.ದೇಸಾಯಿ ಇವರಿಗೆ ಇ. ಪಿ. ಕೋಡ ೧೪೩ ನೇ ಕಲಮು ಮತ್ತು ಉಪ್ಪಿನ ಕಟ್ಟಳೆ ೪೭ ನೇ ಕಲಮು ಇವುಗಳ ಪ್ರಕಾರ ಮೂರು ಮೂರು ತಿಂಗಳಂತೆ ಒಟ್ಟು ಆರು ತಿಂಗಳ ಶಿಕ್ಷೆ ಆಯಿತು. ಇವರನ್ನು 'ಅ' ವರ್ಗದ ಕೈದಿಯನ್ನಾಗಿ ಮಾಡಿರುವರು.

ಇವರೊಡನೆ ಹಿಡಿಯಲ್ಪಟ್ಟ ಆರು ಜನ ಸ್ವಯಂಸೇವಕರು ಹಾಗೇ ಬಿಟ್ಟು ಬಿಟ್ಟರು. ಸರಕಾರವು ಅಪರಾಧಿಗಳ ಅಪರಾಧದ ಕಡೆಗೆ ಲಕ್ಷ ಕೊಡುವದನ್ನು ಬಿಟ್ಟುಕೊಟ್ಟು ಮಾರೀ ನೋಡಿ ಮಣೆ ಹಾಕಹತ್ತಿರುವದೋ ಕಾಯಿದೆ ದೃಷ್ಟಿಯಲ್ಲಿ ಸಕಲರೂ ಸರಿಸಮಾನರೆಂಬ ಅವರ ತತ್ವವು ಈಗ ಮರೆಯಾಗಿದೆ. ಅಥವಾ ಮಾತಾಪಿತರ ರಕ್ಷಣೆಗೆ ಯೋಗ್ಯವಾದವುಗಳನ್ನಷ್ಟೇ ನುಂಗಿ ನೀರು ಕುಡಿದು ಹಿಂದುಸ್ಥಾನದಲ್ಲಿಯ ತನ್ನ ರಾಜ್ಯವನ್ನು ನಿಷ್ಕಂಟಕ ಮಾಡಬೇಕೆಂದು ಬಗೆದಿದೆಯೋ? ಇದರಿಂದ ಅದು ಭಗ್ನಾಶಯಾಗುವದು ನಿಶ್ಚಯ.

———o———

### ನಿಪ್ಪಾಣಿ ಸತ್ಯಾಗ್ರಹದ ಪ್ರಸಾರವು

ನಿಪ್ಪಾಣಿಯ ಕೆಲವು ಸತ್ಯಾಗ್ರಹಿಗಳನ್ನು ಸರಕಾರವು ಹಿಡಿದು ಶಿಕ್ಷೆ ವಿಧಿಸಲು ಅಲ್ಲಿಯ ಊರ ಸತ್ಯಾಗ್ರಹಿಗಳು ನಮ್ಮನ್ನೂ ಹಿಡಿಯಿರಿ ನಾವೂ ಅದೇ ಅಪರಾಧ ಮಾಡಿರುವೆವು ಮಾಡುತ್ತಿರುವೆವು ಮುಂದೆ ಮಾಡಬೇಕೆಂದು ಬಗೆದಿರುವೆವು, ಇಲ್ಲವಾದರೆ ಈಗ ಹಿಡಿದವರನ್ನೂ ಬಿಟ್ಟು ಬಿಡಿರೆಂದು ಪೋಲಿಸರಿಗೆ ಗಂಟು ಬಿದ್ದು, ಆ ಶಿಕ್ಷೆ ಹೊಂದಿದ ಸತ್ಯಾಗ್ರಹಿಗಳನ್ನು ಬೆಳಗಾಂವಿ ಜೇಲಿಗೆ ಒಯ್ದುದರೂ ಇವರೂ ಮೋಟರ ಮಾಡಿಕೊಂಡು ಬೆನ್ನು ಹತ್ತಿದರಂತೆ, ಮುಂದೆ ಮರುಳಿ ಬಂದು ಊರೊಳಗೆ ಹರತಾಳವನ್ನು ಪಾಲಿಸಿ, ಪೋಲಿಸರಿಗೂ ಸಾಕ್ಷಿ ಹೇಳಿದವರಿಗೂ ಸಾಮಾಜಿಕ ಬಹಿಷ್ಕಾರವನ್ನು ಪುರಸ್ಕರಿಸ ಹತ್ತಿರುವರು. ಕೆಲವು ವಕೀಲರು ತಮ್ಮ ವಕೀಲಿಗೆ ರಜಾ ಹೊಡೆದು ಚಳವಳಿಯಲ್ಲಿ ಸಮಾವೇಶರಾಗಿರುವರೆಂಬಲೂ ವಾರ್ತೆ ಇದೆ. ದೊಡ್ಡದೊಂದು ಪೋಲಿಸ ಸೈನ್ಯದೊಂದಿಗೆ ಬೆಳಗಾಂವಿಯ ಕಲೆಕ್ಟರರು ಸ್ವತಃ ನಿಪ್ಪಾಣಿಯಲ್ಲಿ ಧ್ವಜಹಾಕಿರುವರು, ಆದರೂ ನಿಪ್ಪಾಣಿಯ ಜನರು ಈಗ ಪರದೇಶಿ ಬಟ್ಟೆಗಳ ಹೋಳಿ ಮಾಡುವದನ್ನೂ, ಶೆರೆ ಸಿಂದಿ ಅಂಗಡಿಗಳ ಮುಂದೆ ನಿಂತು ಜನರಿಗೆ ಬೋಧಿಸುವದನ್ನೂ ಜೋರಿನಿಂದ ನಡಿಸಿರುವರು.

### ಗಲಗಲಿ.

ನಿನ್ನಿನ ದಿವಸ ೨೫-೪-೩೦ ನೇ ದಿವಸ ಸಂಜೆಯ ೬ ಗಂಟೆಗೆ ಸಭೆಯಾಗಿ ಅಂಕೋಲೆಯಿಂದ ಬಂದ ಉಪ್ಪು ಸ್ತ್ರೀಯರಿಂದ ಮಾರಲ್ಪಟ್ಟಿತು. ಸೌ. ಗಂಗಾಬಾಯಿ ಹಟ್ಟಿ ಇವರು ಉಪ್ಪು ಮಾರಿದರು, ಮತ್ತು ಅನೇಕ ಸ್ತ್ರೀಯರು ಕೊಂಡುಕೊಂಡರು.

# ವೀರಶೈವ ಮಹಾಜನರಲ್ಲಿ ವಿಜ್ಞಾಪನೆ.

ನಮ್ಮ ಸಮಾಜದ ಮುಖ್ಯೋದ್ಯೋಗವಾದ ಒಕ್ಕಲತನಕ್ಕೆ ಜೋಡಿಯ ಉದ್ಯೋಗವಾಗಿದ್ದ ನೂಲುವ ಕೆಲಸವು ಇತ್ತೀಚೆಗೆ ನಿಂತು ಹೋದುದರಿಂದ ನಮ್ಮ ಹಳ್ಳಿಯ ಬಾಂಧವರು ಬಹು ಬಡತನದಿಂದ ಬಳಲುತ್ತಿದ್ದಾರೆಂಬುದು ಸರ್ವರಿಗೂ ತಿಳಿದ ಸಂಗತಿಯೇ ಆಗಿದೆ.

ಈಗ ನಮ್ಮ ಕರ್ನಾಟಕದಲ್ಲಿ ಸಾಧಾರಣ ೧೫ ಲಕ್ಷ ರೂ. ಗಳ ಖಾದಿಯು ಪ್ರತಿ ವರುಷ ಮಾರಾಟವಾಗುತ್ತಿದೆ. ಈ ದೇಶದ ಖಾದಿಯು ಹುಟ್ಟುವಳಿಗಾದರೋ ಸಾಧಾರಣ ೭೫-೮೦ ಸಾವಿರ ರೂ. ಗಳಷ್ಟು ಮಾತ್ರವೇ ಇದೆ. ಈಗ ಪ್ರತಿ ವರ್ಷ ೬೦-೭೦ ಸಾವಿರ ರೂ. ಗಳ ಖಾದಿಯು ಪರಪ್ರಾಂತಗಳಿಂದ ಬರುತ್ತಿದೆ. ಇನ್ನು ಮೇಲೆ ಖಾದಿಯ ಉಪಯೋಗವು ನಮ್ಮಲ್ಲಿ ದಿನೇ ದಿನೇ ಹೆಚ್ಚಾಗುವದು ಸ್ವಾಭಾವಿಕವಾಗಿದೆ. ಬೇರೆ ಪ್ರಾಂತ್ಯಗಳಲ್ಲಿ ಪೂಜ್ಯರಾದ ಕಾಂಗ್ರೆಸ್ಸಿನ ಖಾದಿ ಕಾರ್ಯ ಧುರೀಣರು ಕಾರಾಗೃಹವಾಸಿಗಳಾದುದರಿಂದ ಈ ಕಾರ್ಯವು ಕುಂಠಿತವಾಗುವ ಸಂಭವವಿದೆ.

ಖಾದಿಯನ್ನು ಉಪಯೋಗಿಸುವವರು ಕೂಡ ಸ್ವದೇಶೀ ಹುಟ್ಟುವಳಿಯಾದರೆ ಕಡಿಮೆಯಾಗುವದು. ಆದುದರಿಂದ ಇಂಥ ಸಮಯದಲ್ಲಿ ವೀರಶೈವರು ಮುಂದೆ ಬಂದು ಒಂದು ಸ್ವತಂತ್ರವಾದ ವೀರಶೈವ ಖಾದಿ ಭಾಂಡಾರವನ್ನು ದೊಡ್ಡ ಪ್ರಮಾಣದಲ್ಲಿ ಪ್ರಾರಂಭಿಸುವದು ದೇಶಕ್ಕೂ ಸಮಾಜಕ್ಕೂ ತುಂಬಾ ಶ್ರೇಯಸ್ಕರವಾದುದಲ್ಲವೇ ?

ಈ ಖಾದಿ ಹುಟ್ಟುವಳಿ ಮತ್ತು ಮಾರಾಟಗಳ ಕಾರ್ಯವು ಪರಸ್ಪರ ಸಹಾಯಕ ಸಂಘಗಳ ಪದ್ಧತಿಗಳನ್ನನುಸರಿಸಿ ಕ್ರಮಬದ್ಧವಾಗಿ ನಡೆಯುವುದೇ ಶ್ರೇಯಸ್ಕರವಾದುದಾಗಿರುವುದರಿಂದ ೫ ರೂ. ಗಳಿಗೆ ಒಂದು ಭಾಗ ( ಶೇರ ) ದಂತೆ ೨೦ ಸಾವಿರ ಭಾಗಗಳನ್ನು ಕೂಡಿಸಿ ಹುಟ್ಟುವಳಿಯ ಮತ್ತು ವಿಕ್ರಯದ ಬೇರೆ ಬೇರೆ ಕೇಂದ್ರಸ್ಥಾನಗಳನ್ನು ಗೊತ್ತು ಪಡಿಸಿ ಅಖಿಲ ಭಾರತೀಯ ಚರಕಾ ಸಂಘದವರ ಸಹಾಯ ಸಲಹೆಗಳನ್ನು ಹೊಂದಬೇಕಾಗುತ್ತದೆ.

ಈ ಪವಿತ್ರವಾದ ಕಾರ್ಯದ ಸಂಬಂಧವಾಗಿ ಮಹಾನುಭಾವರಾದ ಬಸವಣ್ಣನವರ ಜಯಂತಿಯ ದಿವಸ ತಮ್ಮಲ್ಲಿ ಸಭೆ ಸೇರಿದಾಗ ಚರ್ಚಿಸಿ ಈ ವಿಷಯದಲ್ಲಿ ತಮ್ಮ ಸ್ಥಳದಿಂದಾಗಬಹುದಾದ ಸಹಾಯ ಸೌಲಭ್ಯಗಳನ್ನು ಕುರಿತು ತಮ್ಮ ಸೂಚನೆಗಳೊಂದಿಗೆ ದಯವಿಟ್ಟು ನನಗೆ ಜಾಗ್ರತೆ ತಿಳಿಸಬೇಕಾಗಿ ಪ್ರಾರ್ಥನೆ.

| | |
|---|---|
| ಪೊ. ಪತ್ತಿಕೊಂಡ | ಹರ್ಡೇಕರ ಮಂಜಪ್ಪ |
| ಜಿ. ವಿಜಾಪುರ. | ವೀರಶೈವ ವಿದ್ಯಾಲಯ ಆಲಮಟ್ಟಿ |

## ರಶಿಯಯದೇಶದಲ್ಲಿ ಯುದ್ಧದ ಸಿದ್ಧತೆಯು.

ಜರ್ಮನಿಯರ ಸಹಾಯದಿಂದ ರಶಿಯಾದೇಶದವರು, ಒಂದು ದೊಡ್ಡ ಸೈನ್ಯವನ್ನು ಹೊಸ ಪದ್ಧತಿಯಿಂದ ಶಿಕ್ಷಣಕೊಟ್ಟು ತಯಾರ ಮಾಡಹತ್ತಿರುವರು. ಜರ್ಮನಿಯವರು ಮಾಡಿದ ಎಲ್ಲ ಯುದ್ಧ ಸಾಮಗ್ರಿಗಳನ್ನು ಗುಪ್ತವಾಗಿ ಬಚ್ಚಿಡಲಿಕ್ಕೆ ರಶಿಯನ್ನರು ಒಂದು ಸುರಕ್ಷಿತವಾದ ಸ್ಥಳವನ್ನು ತಮ್ಮ ದೇಶದಲ್ಲಿ ಕೊಡದೇ ಕೆಂತಲೂ ಮತ್ತು ರಶಿಯಾದೇಶದವರ ಸಾಮಗ್ರಿಯನ್ನು ಸಿದ್ಧಪಡಿಸಲು ಜರ್ಮನ ತಜ್ಞರು ಸಹಾಯ ಮಾಡಬೇಕೆಂತಲೂ ಗೊತ್ತು ಮಾಡಿಕೊಂಡಿರುವರು. ರಶಿಯಾದೇಶದಲ್ಲಿ ಕಾಲಾಳುಗಳೂ, ಕುದುರೆಯ ಮೇಲಿನ ಸವಾರರೂ, ಹೊಸ ಪದ್ಧತಿ ಯುದ್ಧ ಸಾಮಗ್ರಿಯೂ; ಎಂಭತ್ತು ಲಕ್ಷ ಶಿಕ್ಷಣ ಪಡೆದ ಸೈನ್ಯವೂ, ಇವೆಲ್ಲವುಗಳನ್ನು ನೋಡಿದರೆ ರಶಿಯಾದೇಶವು ಯುದ್ಧಕ್ಕಾಗಿ ಹಾತೊರೆಯುತ್ತಿದೆ. ಎಂದು ಗೊತ್ತಾಗುವದು. ರಶಿಯಾದೇಶದಲ್ಲಿ ವಿಷದ ಹೊಗೆಯನ್ನು ತಯಾರು ಮಾಡುವ ೨೮೮ ಕಾರಖಾನೆಗಳೂ ಮದ್ದು ಗುಂಡು ತಯಾರ ಮಾಡುವದಕ್ಕೆ ೮೫, ತೋಫು ಬಂದೂಕಿಗಳನ್ನು ಮಾಡುವದಕ್ಕೆ ೧೫, ವಿಮಾನಗಳನ್ನು ಮಾಡುವದಕ್ಕೆ ೨೧, ಹೀಗೆ ಅನೇಕ ಕಾರಖಾನೆಗಳು ಸಿದ್ಧವಿರುವವು. ರಶಿಯಾ ದೇಶದ ಗುಪ್ತಚಾರರು ಬಹಳ ಜಾಣರು. ಮೇಲಾಗಿ ಯುದ್ಧ ಶಾಸ್ತ್ರದಲ್ಲಿ ನಿಪುಣರಾದ ಸೇನಾನಾಯಕರು. ಈ ಬಗೆಯಾಗಿ ಸಿದ್ಧರಾಗಿ ಜಗತ್ತಿನಲ್ಲಿಯ ಎಲ್ಲ ಕೂಲಿಕಾರರ ಉದ್ಧಾರ ಮಾಡುವದಕ್ಕಾಗಿಯೇ ತಾವು ಯುದ್ಧ ಹೂಡುವರೆಂದು ರಶಿಯನ್ನರು ಹೇಳುತ್ತಿರುವರು. ಜಗತ್ತಿನಲ್ಲಿಯ ಎಲ್ಲ ಭಾಂಡವಲದಾರರು ತಮ್ಮನ್ನು ತುಳಿದು ತಳಕ್ಕೆ ಮೆಟ್ಟಬೇಕೆಂದು ಮಾಡಿರುವ ಕಾರಣ ತಾವು ಇದೆಲ್ಲ ಸಿದ್ಧತೆಯನ್ನು ಮಾಡುತ್ತಿರುವರೆಂದು ಅನ್ನುವರು. ಇಂಗ್ಲಂಡ ದೇಶದ ಭಾಂಡವಲದಾರರು ಇತ್ತ ಕಡೆಗೆ ಒಂದೇ ಸಮನೇ ನೋಡುತ್ತ ಕುಳಿತಿರುವರು. ಜಗತ್ತಿನಲ್ಲಿಯ ಎಲ್ಲ ಕೂಲಿಕಾರರು ಒಕ್ಕಟ್ಟಿನಿಂದ ಭಾಂಡವಲದಾರರು ಒಕಟಿಗೆ ಹೀಗಾಗಬಹುದು.

### ಮುಂಬಯಿ:

ಭಾಟಿಯಾ ಬಾಗ ಎಂಬಲ್ಲಿ ಉಪ್ಪನ್ನು ತಯಾರಿಸುತ್ತಿರುವರು. ನೂರಾರು ಸ್ವಯಂಸೇವಕರು ಅನ್ನು ನಿತ್ಯ ಕಾಯುತ್ತಿರುವರು, ಪೋಲೀಸರು ಮಧ್ಯೆ ಬಂದರೋ ಹಣೆ ಹಾಕಿಲವಂತೆ. ಪೇಟ ತರಲೋ? ಬಿಸ್ಸಗಲಿಸಲೋ? ರಾಷ್ಟ್ರೀಯ ಸ್ತ್ರೀ ಸಭೆಯ ತರಡಿತ್ತು. ಅದರಲ್ಲಿ ಸ್ತ್ರೀಯರು ಪರದೇಶೀ ಬಟ್ಟೆಗಳನ್ನು ಧರಿಸಬಾರದೆಂದು ಗೊತ್ತು ಮಾಡಿ ಕೊಂಡರು. ಕೆಲವು ಸ್ತ್ರೀ ಮುಂದಾಳುಗಳು ಓಣಿ ಓಣಿ ಅಡ್ಡಾಡಿ ವಿದೇಶೀ ಬಟ್ಟೆಗಳ ಬಹಿಷ್ಕಾರ ಸಿಂದಿ ಶೆರೆಗಳನ್ನು ಕುಡಿಯುವದನ್ನು ಬಿಡುವದು, ಇವುಗಳ ಬಗ್ಗೆ ಜನರಿಗೆ ತಿಳಿಸಿ ಹೇಳುತ್ತಿರುವರು. ಜಮುನಾಲಾಲ ಬಜಾಜರ ಪತ್ನಿಯರಾದ ಜಾನಕೀಬಾಯಿ ಎಂಬವರ ಅಧ್ಯಕ್ಷತೆಯ ಕೆಳಗೆ ಒಂದು ಸಭೆಯಾಗಿತ್ತು. ಮೂರನೂರು ಮಾರವಾಡೀ ಹೆಣ್ಣುಮಕ್ಕಳೂ, ಎರಡನೂರು ಗುಜರಾತೀ ಹೆಣ್ಣುಮಕ್ಕಳೂ ಕೂಡಿದ್ದರು. ಮಹಾತ್ಮಾ ಗಾಂಧಿಯವರಿಗಾಗಿ ಅಲ್ಲಿಯ ಸ್ತ್ರೀಯರು ಬಂಗಾರದ ಬಳೆಗಳನ್ನೂ ಧನವನ್ನೂ ಕೊಟ್ಟರು. ನಮ್ಮಲ್ಲಿಯ ಮಾರವಾಡಿಯರು ಏನು ಮಾಡುತ್ತಿರುವರು.

## ಪೋಲೀಸರಿಗೆ ಪೇಟೆಯಲ್ಲಿ ಅಕ್ಕಿಬ್ಯಾಳಿ ಸಿಗದಾಗಿದೆ

ರತ್ನಾಗಿರಿಯಲ್ಲಿಯ ಜನರು ಪೋಲೀಸರನ್ನು ಸಮಾಜದಿಂದ ಬಹಿಷ್ಕರಿಸಿರುವರು. ಅಲ್ಲಿಯ ವರ್ತಕರು ಅವರಿಗೆ ಯಾವ ಸಾಮಾನವನ್ನು ಮಾರಕೊಡದೆಂದು ನಿರ್ಧರಿಸಿರುವರು. ಈ ಅವರ ನಿರ್ಧಾರವನ್ನು ಎಲ್ಲಿಯ ದೃಷ್ಟಿಯಿಂದ ಪಾಲಿಸುತ್ತಿರುವರೋ ನೋಡುವದಕ್ಕೆ ಏಳು ಜನ ವರ್ತಕರದೊಂದು ಮಂಡಲವನ್ನು ಮಾಡಿದ್ದಾರೆ. ಈ ಮಂಡಲದವರು ಅತ್ಯಂತ ಜಾಗರೂಕತೆಯಿಂದ ಕೆಲಸ ನಡೆಸಿರುವದರಿಂದ, ಅಲ್ಲಿಯ ಪೋಲೀಸ ಜನರಿಗೆ, ಅಕ್ಕಿ, ಬೇಳೆ, ಕಾಫಿ, ಬೀಡಿ, ಕಡ್ಡಿಪೆಟ್ಟಿಗೆ ಇವೇ ಮೊದಲಾದ ಜೀವನಕ್ಕೆ ಅತ್ಯವಶ್ಯವಾದ ಕಿರಾಣಿ ಸಾಮಾನುಗಳು ದೊರೆಯದಾಗಿವೆ. ಇಲ್ಲಿಯ ಡೌಲುಡೌಲು ಉದ್ದಾಮ ವೃತ್ತಿಯಿಂದ ಆಚರಿಸುತ್ತಿರುವ ಬಹಿಷ್ಕಾರವು ಪೋಲೀಸರಿಗೆ ಎಲ್ಲ ಕಡೆಯಲ್ಲಿಯೂ ಈ ಅವಸ್ಥೆ ಆಗಬೇಕು. ಅಂದರೇನೆ ಅವರ ದೀಡದಮ್ಮಡಿ ದಿಮಾಕು ಕುಗ್ಗುವ ಸಂಭವವಿದೆ. ರತ್ನಾಗಿರಿಯ ಯಾವನಾದರೂ ವರ್ತಕನು ಅಲ್ಲಿಯ ಪೋಲೀಸ ಖಾತೆಯ ಮನುಷ್ಯನಿಗೆ (ಅವನು ಬೇಕಾದವನಿರಲಿ) ಯಾವದೇ ಪದಾರ್ಥವನ್ನು ಅಪ್ಪಿತಪ್ಪಿ ಮಾರಿದರೆ ಆ ವರ್ತಕನಿಗೆ ೫೧ ರೂಪಾಯಿ ದಂಡ ವಿಧಿಸಲ್ಪಡುವದರಲ್ಲಿ ಬರುವದು. ಅಲ್ಲ ಇದರಂತ ಪರದೇಶೀ ಬಟ್ಟೆಯ ಬಹಿಷ್ಕಾರವೂ ಬಳೆ ಜಂಗಾಗಿಸಲಾಗಿದೆ.

### ಪ್ರಕಾಶಮ್ ಇವರನ್ನು ಹಿಂಬಾಲಿಸಿದ್ದಕ್ಕೆ ೪೦ ಜನರನ್ನು ಹಿಡಿದಿರುವರು

ಟಿ. ಪ್ರಕಾಶಮ್ ಇವರಿಗೆ ಶಿಕ್ಷೆವಿಧಿಸಿ ಅವರನ್ನು ಜೇಲಿಗೆ ಕರಕೊಂಡು ಹೋಗುವಾಗ್ಗೆ ಜನರು ಗುಂಪುಗುಂಪಾಗಿ ಹಿಂಬಾಲಿಸಿದ್ದರು. ಊರಲ್ಲಿ ಹರತಾಳವು ಪಾಲಿಸಲ್ಪಟ್ಟಿತ್ತು. 'ಹರತಾಳವನ್ನು ಪಾಲಿಸಿರೆಂದು ಹೇಳುತ್ತ ಹೋದವರೊಳಗೆ ಕೆಲವರನ್ನು ಪ್ರಕಾಶಮ್ ಹಿಂಬಾಲ ನಡೆದ ಗದ್ದಲದೊಳಗಿನ ಕೆಲವರನ್ನೂ ಹೀಗೆ ಒಟ್ಟಿಗೆ ೪೦ ಜನರನ್ನು ವಿನಾಕಾರಣ ಮದ್ರಾಸ ಸರಕಾರವು ಸೆರೆ ಹಿಡಿದಿರುವದು. ಅವರ ಮೇಲೆ ಯಾವ ಅಪರಾಧವನ್ನು ಹೊರಿಸಲಿಕ್ಕೆ ಬಾರದ್ದರಿಂದ ಅದರೊಳಗಿನ ೩೭ ಜನರನ್ನು ಈ ಹೊತ್ತು ಮ್ಯಾಜಿಸ್ಟ್ರೇಟನು ಬಿಟ್ಟು ಬಿಟ್ಟಿರುವನು. ಒಳ ಸೈನ್ಯಸ್ಥನವನು ಉಳಿದವರೊಳಗೆ ಕೆಲ ಜನರಿಗೆ ಒಂದು ವಾರದ ಸಾದಾ ಶಿಕ್ಷೆಯಾಯಿತು. ಇನ್ನು ಕೆಲವರ ಅಪರಾಧದ ವಿಚಾರಣೆ ಇನ್ನೂ ಆಗತಕ್ಕದ್ದಿದೆ. ಪೋಲೀಸರು ಹಿಡಿದು ತಂದು ನಿಲ್ಲಿಸಿದ್ದ ಜನರನ್ನೆಲ್ಲ ನಿರಪರಾಧಿಗಳೆಂದೂ ಮ್ಯಾಜಿಸ್ಟ್ರೇಟನು ಬಿಟ್ಟುಕೊಟ್ಟ ಪೋಲೀಸರ ಮಾನಹಾನಿಯಾಗುವದಿಲ್ಲದ ಸರಕಾರದಲ್ಲಿ ಮ್ಯಾಜಿಸ್ಟ್ರೇಟನೂ ಸುಮಾರ ಆಗುವದಂತೆ. ಅದಕ್ಕಾಗಿ ಪೋಲೀಸರ ಟೊಂಪಿ ಬಿದ್ದವರೆಲ್ಲ ಕಾರಾಗ್ರಹವನ್ನು ಕಂಡೇ ಬರಬೇಕಾಗಿದೆ. ಮದ್ರಾಸದಲ್ಲಿ ಪೋಲೀಸರ ಹಾವಳಿ ಈಗೂ ನಡೆದದ್ದರೂ ಅಲ್ಲಿಯ ಕಾಯದೆ ಭಂಗವು ಯಥಾ ಪೂರ್ವ ಸಾಗಿಯೇ ಇದೆ ದಿನಾಲು ಹತ್ತು ಜನ ಸತ್ಯಾಗ್ರಹಿಗಳ ತಂಡವು ಅಲ್ಲಿಯ ಹಾಯ್‌ಕೋರ್ಟ ಎದುರಿನ ಸಮುದ್ರದ ದಂಡೆಗೆ ಹೋಗಿ ಉಪ್ಪು ಮಾಡುವ ಕ್ರಮವನ್ನು ನಡೆಸಿರುವರು.

### ಈಚಲ ಮರದಿಂದ ಬಿದ್ದು ಒಬ್ಬ ಸತ್ಯಾಗ್ರಹಿಯು ಮಡಿದನು

ಮಹಾತ್ಮರು ಸರಾಯಿ ವ್ಯಾಪಾರವನ್ನು ನಿಲ್ಲಿಸುವದಕ್ಕಾಗಿ ಆ ಸರಾಯಿ ಹುಟ್ಟುವ ಮೂಲವನ್ನೇ ಕಡಿದೊಗೆಯಬೇಕೆಂದು ಹೇಳಿ ಈಚಲ ಗಿಡಗಳನ್ನು ಕಡಿಯುವ ಚಳವಳಿಯನ್ನು ಗುಜರಾಥದಲ್ಲಿ ಆರಂಭಮಾಡಿರುವರಷ್ಟೆ; ಈ ಕಾರ್ಯಕ್ರಮದಲ್ಲಿ ಅನೇಕ ಸತ್ಯಾಗ್ರಹಿಗಳು ತೊಡಗಿಕೊಂಡಿದ್ದಾರೆ. ಇಂಥ ಸತ್ಯಾಗ್ರಹಿಗಳಲ್ಲಿ ಒಬ್ಬನಾದ ಪತ್ಲದಾಸ ನಂಬವನು ನವಸಾರಿಯಲ್ಲಿ ಈಚಲ ಮರ ಕಡಿಯುತ್ತಿದ್ದಾಗ್ಗೆ ಆ ಮರವು ಮೈಮೇಲೆ ಬಿದ್ದು ತಕ್ಷಣವೆ ಪ್ರಾಣ ಬಿಟ್ಟನು. ಅವನ ಶವದ ಸ್ಮಶಾನ ಯಾತ್ರೆಯು ಅತೀವ ವೈಭವದಿಂದ ಸಾಗಿಸಲ್ಪಟ್ಟಿತು. ಪ್ರತ್ಯಕ್ಷ ಮಹಾತ್ಮರೆ ಆ ಸ್ಮಶಾನ ಯಾತ್ರೆಗೆ ಬರಬೇಕಾಗಿದ್ದರು ಆದರೆ ಕೆಲವೊಂದು ಅನಿವಾರ್ಯವಾದ ಅಡಚಣೆಗಳ ಮೂಲಕ ಅವರಿಗೆ ಹೋಗಲಿಕ್ಕಾಗಲಿಲ್ಲ. ಆದರೆ ಅವರು ಕಳಿಸಿದ ಸಂದೇಶವು ಅತಿ ಮಹತ್ವದ್ದಾಗಿದೆ. "ಪತ್ಲದಾಸನಿಗೆ ಲಭಿಸಿದ್ದ ವೀರ ಮರಣಕ್ಕಿಂತಲೂ ಹೆಚ್ಚು ಸ್ಪೃಹಣೀಯವಾದ ಮರಣವು ಯಾರಿಗೂ ಲಭಿಸುವಂತಿಲ್ಲ ಪತಂಬಳಿಗ ಮಗನಿಂದ ಕಲುಷಿತವಾದ ಕುಡುಕತನವನ್ನು ಇಲ್ಲ ಎಲ್ಲರು ಬಿಡಲೇಬೇಕು, ಪತ್ಲದಾಸನು ಬಿದ್ದು ಹೋದ ಮೇಲೆ ಗುಜರಾಥದೊಳಗಿನ ಒಂದು ಸಿಂದಿಗಿಡವು ತಲೆ ಎತ್ತಿ ನಿಲ್ಲದಂತೆ ಮಾಡುವದು ಪ್ರತಿ ಒಬ್ಬ ಸತ್ಯಾಗ್ರಹಿಯ ಕರ್ತವ್ಯವಾಗಿದೆ. ಅಂಥ ಗಿಡಗಳ ಒಡೆಯರು ಅವುಗಳನ್ನು ಕಡಿದೊಗೆಯುವದಕ್ಕೆ ಸತ್ಯಾಗ್ರಹಿಗಳಿಗೆ ಅವಶ್ಯವಾದ ಅಪ್ಪಣೆಯನ್ನು ದಯಪಾಲಿಸುವರೆಂದು ನಾನು ಪೂರ್ಣ ನಂಬಿದ್ದೇನೆ"

### ಪರದೇಶ

ಮಿ ಇಂಜಿನಿಯರ ಎಂಬ ಒಬ್ಬ ಹಿಂದೀ ವೈಮಾನಿಕರು, ಇಂಗ್ಲಂಡದಿಂದ ಹಿಂದುಸ್ಥಾನಕ್ಕೆ ತಮ್ಮ ವಿಮಾನದಿಂದ ಒಂದೇ ಹಾರಾಟದಲ್ಲಿ ಹಾರಿ ಬರಬೇಕೆಂದು ಯತ್ನ ನಡಿಸಿರುವರು. ರವೀಂದ್ರರಿಂದ ರವೀಂದ್ರನಾಥ ಟಾಗೋರರು ತಮ್ಮ ಅಸ್ವಸ್ಥತೆಯ ಮೂಲಕ ಯಾವ ವ್ಯಾಖ್ಯಾನಗಳನ್ನೂ ಸದ್ಯಕ್ಕೆ ಇಂಗ್ಲಂಡದಲ್ಲಿ ಕೊಡುವದಿಲ್ಲವಂತೆ. ಮತ್ತು ಅಗಸ್ಟ ತಿಂಗಳಲ್ಲಿ ಅಮೇರಿಕಾ ದೇಶಕ್ಕೆ ಹೋಗುವರು.

ದೀನಬಂಧು ಅಂಡ್ರೂಜರು ವ್ಯಾಖ್ಯಾನ ಕೊಡುವದಕ್ಕಾಗಿ ಜೀನೀವಾಕ್ಕೆ ಹೋಗುವರು.

ಪ್ರೊ ಫೆಸರ ಲೋವೆಲ್ಲ ಎಂಬವರು ಒಂದು ಹೊಸ ಗ್ರಹವನ್ನು ಹುಡುಕಿ ತೆಗೆದಿರುವರು. ಅದಕ್ಕೆ ಅವರು "ಕ್ಷ" ಗ್ರಹವೆಂದು ಹೆಸರಿಟ್ಟಿರುವರು, ಅದಕ್ಕೆ ಬೇರೊಂದು ಹೆಸರನ್ನು ಇಡಬೇಕೆಂದು ಪಾಶ್ಚಿಮಾತ್ಯ ಜೋಯಿಸರು ವಾದ ವಿವಾದ ನಡಿಸಿರುವರು, ನಮ್ಮಲ್ಲಿಯ ಭಟ್ಟರು ಇದಕ್ಕೇನಾದರೂ ಹೊಸ ಹೆಸರು ಕೊಡುವರೋ!

ಈ ಪತ್ರಿಕೆಯು ಬಳವಂತ ಲಕ್ಷ್ಮಣರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦—೦—೩

# ಕರ್ನಾಟಕ.

ಜಯಕರ್ನಾಟಕ

ನಿತ್ಯಸಂಚಿಕೆಯು.

यद्यत परवशं दुःखं । यद्यदात्मवशं सुखम ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ಸೋಮವಾರ ಮಿತಿ ಚೈತ್ರ ಬಹುಳ ೩೦ ಶಕೆ ೧೮೫೨ ತಾ ೨೮—೪—೩೦ ಸಂಚಿಕೆ ೩೪

## ಸಂಪಾದಕರ ಭೂಮಿ.

ತನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ತನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ॥

## ಸಭೆಗಳ ಸಾರ್ಥಕ್ಯ.

ಮಹಾತ್ಮರ ಚಳವಳಿಯು ಪ್ರಾರಂಭವಾಗಿ ೩೦ ದಿವಸಗಳಾದವು. ಈ ಅವಧಿಯಲ್ಲಿ ಮಹಾತ್ಮರ ಸಂದೇಶವು ಪ್ರತಿಯೊಂದು ಕೊಂಪೆಯಲ್ಲಿಯೂ ಸಹ ಮುಟ್ಟಿರುವದು. ಈ ಸ್ವಲ್ಪ ದಿವಸಗಳಲ್ಲಿ ಎಷ್ಟೋ ಜನರು ಕಾರಾಗೃಹಕ್ಕೆ ಹೋಗಿರುವರು. ಸ್ತ್ರೀ ಪುರುಷರಲ್ಲಿಯೂ, ಬಾಲಬಾಲಕಿಯರಲ್ಲಿಯೂ ಅಪೂರ್ವವಾದ ಉತ್ಸಾಹವು ಕಂಡುಬರುತ್ತಿರುವದು. ಹಿಂದುಸ್ಥಾನದ ಪ್ರತಿಯೊಂದು ಹಳ್ಳಿಯಲ್ಲಿಯೂ ಸಭೆಗಳೇ ಸಭೆಗಳು. ಬಾಗಲಕೋಟೆಯಲ್ಲಿ ಯಂತೂ ಸಭೆಗಳ ಸುರಿಮಳೆಯಾಯಿತು. ಹತ್ತು ಜನರು ಸಹ ಸೇರದೇ ಇದ್ದ ಸ್ಥಳದಲ್ಲಿ ಸಾವಿರಾರು ಜನರು, ಚಳವಳಿಯ ಸುದ್ದಿಯನ್ನೂ ಮಹಾತ್ಮರ ಪ್ರತಿ ನಿತ್ಯದ ಸಂದೇಶವನ್ನೂ ಕೇಳಲಿಕ್ಕೆ ಆತುರರಾಗಿ ನೆರೆಯುವರು. ಸ್ತ್ರೀಯರೂ ಕೂಡ ಅಡಿಗೆಯ ಪರಿವೆಯಿಲ್ಲದೆ ಸಭೆಗೆ ಬರಹತ್ತಿರುವರು. "ಮಹಾತ್ಮರಂಥವರೇ ಉಪವಾಸ ವನವಾಸ ಪಡುತ್ತಿರುವಾಗ ನಮಗೇಕೆ ಸಂಜೆಯ ಊಟವು" ಎಂದು ತಮ್ಮ ತಮ್ಮ ಗಂಡಂದಿರಿಗೆ ಸ್ಪಷ್ಟವಾಗಿ ಹೇಳಹತ್ತಿರುವರು." ಸಂಜೆಯಾದ ಕೂಡಲೇ ಒಕ್ಕಲಿಗನು ತನ್ನ ಕಂಬಳಿಯನ್ನು ಬಗಲಲ್ಲಿ ಇಟ್ಟುಕೊಂಡವನೇ ಕೊತ್ತಲಪ್ಪನ ಗುಡಿಯ ಮುಂದೆ ಬಂದು ಕುಳಿತು ಬಿಡುವನು. ಅವತ್ತಿನ ದಿವಸ ಸಭೆ ಇರಲಿ ಇರದಿರಲಿ ಸಭೆಯ ಸ್ಥಳಕ್ಕೆ ಬರುವದು ಅವನ ನಿತ್ಯ ವ್ಯವಸಾಯವೇ ಆಗಿ ಹೋಗಿದೆ. ಮುಖಂಡರನ್ನು ಹಿಡಿದ ಸುದ್ದಿಯನ್ನೂ, ವ್ಯಾಖ್ಯಾತರು ಆವೇಶದಿಂದ ಮಾಡಿದ ಭಾಷಣವನ್ನೂ ಕೇಳಿದ ಕೂಡಲೇ ನೆರೆದ ಜನರು ಪುಟಪುಟದು ಕೇಳುವರು. ಉಪ್ಪು ಮಾರಲಿಕ್ಕೆ ಸಣ್ಣ ಬಾಲಕರು ಕಟ್ಟೆಯ ಮೇಲೆ ಬಂದ ಕೂಡಲೇ ಉಪ್ಪಿನ ಸಂಕಲ್ಪವನ್ನು ಹೇಳಿಸಿಕೊಳ್ಳಲಿಕ್ಕೆ ಸ್ತ್ರೀ ಪುರುಷರು ನಾ ಮುಂದೆ ನೀ ಮುಂದೆ ಎಂದು ಹಾತೊರೆದು ಮುಂದಕ್ಕೆ ಬಂದು ಅಂಜಿಕೆಯಿಲ್ಲದೆ ಸ್ವತಂತ್ರ ಉಪ್ಪನ್ನು ಕೊಳ್ಳುವರು. ಉಪ್ಪಾರನು ತನ್ನ ಪೂರ್ವಜರು ತಮ್ಮ ಊರಲ್ಲಿಯೇ ಉಪ್ಪು ಮಾಡುತ್ತಿದ್ದು ಆದರಿಂದಲೇ ತನಗೆ ಉಪ್ಪಾರನೆಂಬ ಅಭಿಧಾನವೆಂದು ತಿಳಿದುಕೊಂಡನು

ಇಂಥ ಅಪೂರ್ವವಾದ ಸಭೆಗಳು ಕರ್ನಾಟಕದ ಇತರ ಭಾಗಗಳಲ್ಲಿಯೂ ನೆರೆದಿದ್ದು ಜನರಿಗೆ ಆತ್ಮಜ್ಞಾನವು ಸಂಪೂರ್ಣವಾಗಿ ಆಗಿರುವದು. ಜಾಗೃತಿಯೂ ಪೂರ್ಣವಾಗಿ ಹುಟ್ಟಿರುವದು. ಇನ್ನು ಸಭೆಗಳ ಅವಶ್ಯಕತೆಯು ಉಳಿದಿರುವದಿಲ್ಲ. ಇನ್ನು ಕಾರ್ಯವು ರಭಸದಿಂದ ಸಾಗಬೇಕಾಗಿದೆ. ಇಂದಿನ ವರೆಗೆ ಸಭೆಯಲ್ಲಿ ಕೇಳಿಕೊಂಡ ಕಾರ್ಯಕ್ರಮವನ್ನು ಕೃತಿಯಲ್ಲಿ ತರುವದೇ ಪ್ರತಿಯೊಬ್ಬ ಕರ್ನಾಟಕಸ್ಥನ ಕರ್ತವ್ಯವಾಗಿದೆ

## ಕರಾಚಿ ಮ್ಯಾಜಿಸ್ಟ್ರೇಟರಿಗೆ ಹೆದರಿಕೆ

ಕರಾಚಿ ಜಿಲ್ಲಾ ಅಧಿಕಾರಿಯಾದ ರಿಚರ್ಡಸನ್ ಎಂಬಾತನಿಗೆ ಎರಡು ಪೋಸ್ಟ ಕಾರ್ಡುಗಳು ಬಂದಿರುವವಂತೆ "ನೀನು ಇನ್ನು ೧೫ ದಿವಸಗಳಲ್ಲಿ ನಿನ್ನ ಚಾಕರಿಯನ್ನು ಬಿಡಲಿಲ್ಲವಾದರೆ ನಿನ್ನ ಜೀವಕ್ಕೆ ಧಕ್ಕೆ ಆಗುವ ಸಂಭವವಿದೆ." ಎಂದು ಆ ಪತ್ರಗಳಲ್ಲಿ ಬರೆದಿರುವವಂತೆ. ಎರಡೂ ಪತ್ರಗಳೂ ಕರಾಚಿಯಿಂದಲೆ ಟಪಾಲಿಗೆ ಹಾಕಲ್ಪಟ್ಟವುಗಳಾಗಿವೆಯಂತೆ. ಅವುಗಳ ಬರಹಗಾರರ ಶೋಧಕ್ಕಾಗಿ ಎರಡೂ ಪತ್ರಗಳನ್ನು ಆ ಕಲೆಕ್ಟರನು ಪೋಲೀಸ ಸುಪರಿಂಟೆಂಡೆಂಟನ ಕಡೆಗೆ ಕಳಿಸಿ ಕೊಟ್ಟಿರುವನು. ಈ ರಿಚರ್ಡಸನ್‌ನೇ ಆರು ಜನ ಸತ್ಯಾಗ್ರಹಿಗಳಿಗೆ ಹೆಚ್ಚು ಶಿಕ್ಷೆ ಕೊಟ್ಟವನು. ಅಲ್ಲದೆ ಮೊನ್ನಿನ ದಂಗೆಯಲ್ಲಿ ನಿರಪರಾಧಿ ನಿಃಶಸ್ತ್ರ ಜನರ ಮೇಲೆ ಗುಂಡು ಹಾರಿಸಲು ಅಪ್ಪಣೆ ಕೊಟ್ಟವನು. ಆದರೂ ಅಹಿಂಸಾ ವ್ರತವನ್ನು ಸ್ವೀಕರಿಸಿದ ಕಾಂಗ್ರೆಸ ಪಕ್ಷದ ಯಾವ ದೇಶಪ್ರೇಮಿಯೂ ಇಂಥ ಪತ್ರಗಳನ್ನು ಎಂದೂ ಬರೆಯಲಾರನು. ಬಂಗಾಲ ಪಂಜಾಬದೊಳಗಿನ ಪೋಲೀಸರಂತೆ ತಮಗೂ ಹೆಚ್ಚಿನ (ಸಂರಕ್ಷಣೆ) ಅಧಿಕಾರವಿರಬೇಕೆಂದು ಬಯಸಿದ ಪೋಲೀಸರು ಏನಾದರೂ ಹೀಗೆ ಮಾಡಿರಬಹುದೇನು ಮತ್ತೆ!

## ಭಾಟಿಯಾ 'ಬಾಗದಲ್ಲಿ' ನಡೆದ ವಿಚಿತ್ರ ಹಿಂಸೆ.

ನೊನ್ನೆ ಮುಂಬಯಿ ಭಾಟಿಯಾ ಬಾಗದಲ್ಲಿ ಸತ್ಯಾಗ್ರಹಿಗಳ ಮೇಲೆ ಪೋಲೀಸರು ನಡೆಸಿದ ಅತ್ಯಾಚಾರವು ಚಿತ್ರವಿಚಿತ್ರವಾಗಿದ್ದು ಯಮಯಾತನೆಗಿಂತಲೂ ಮಿಗಿಲಾಗಿದ್ದ ಇಷ್ಟೊಂದು ಯಮಯಾತನೆಯನ್ನು ಸಹಿಸಬೇಕಾದರೂ ಸತ್ಯಾಗ್ರಹಿಗಳು ಅಕ್ಷಯ ಉಪ್ಪನ್ನೇನು ಪೋಲೀಸರಿಗೆ ಮುಟ್ಟಗೊಡಲಿಲ್ಲ. ಮತ್ತು ಪ್ರತೀಕಾರಕ್ಕಾಗಿ ಒಬ್ಬ ಪೋಲೀಸನ ಮೇಲೆ ಕೈ ಎತ್ತಿಲ್ಲ, ಒಂದು ಸಿಟ್ಟಿನ ಮಾತಾಡಿಲ್ಲ. ಎಂಥ ತಾಳ್ಮೆಯಿದು!

"ಸೈರಣೆ ಎಂಬುದು ವೈಸಿರಿ ವೈರಣೆಯೇದಾನ ಧರ್ಮಜಪಮುಂ ತಪಮಂ" ಎಂಬಂತೆ ಈ ಸತ್ಯಾಗ್ರಹಿಗಳ ಇಂಥ ಸಹಿಷ್ಣುತೆಯ ತಪಸ್ಸಿನಿಂದ, ಬ್ರಿಟಿಶ ಸಾಮ್ರಾಜ್ಯವು ಸುಟ್ಟು ಹೋಗದೆ ಉಳಿಯಬಲ್ಲದೇ? ವಾಚಕರ ಅವಗಾಹನಕ್ಕಾಗಿ ಆ ವಿಚಿತ್ರ ಹಿಂಸೆಯ ಕೆಲವಂಶವನ್ನು ಇಲ್ಲಿ ಕೆಳಗೆ ಕೊಡಲಾಗಿದೆ;

**ಅಂಡ ಹಿಚಕಿದ್ದು**

ವನಮಾಲಿ ಲಾವಜಿ, ಚಿಮನಲಾಲಜಿ ಕಬೇಡಿಯಾ, ರಾಮಚಂದ್ರ ಪಿ ನಾಯಿಡು, ಮತ್ತು ಭಾಗವತಿ ಪ್ರಸಾದ.

**ಜುಟ್ಟಿಗಳನ್ನು ಜಗ್ಗಿ ಕೂದಲು ಕಿತ್ತಿದ್ದು.**

ಸಾಧರಾಮ ಸೀತಾರಾಮ, ಬಾಬೂಲಾಲ ರೇವಾಶಂಕರ

**ಮೂರ್ಛೆ ಬಂದು ಬಿದ್ದವರು.**

ಮನುಭಾಯಿ ಝವೇರಿ, ಜಗಮೋಹನದಾಸ ಮೆಥಾ, ವನಮಾಲಿ ಲಾವಜಿ, ವ್ರಜಲಾಲ ಕುಥಿ, ಜಯಕೃಷ್ಣ ಭಾಯಿದಾಸ, ಗೋಪಾಲ ಜೋಶಿ.

**ಲಾಠಿ ಏಟು ತಾಳಿದವರು.**

ರಾವಜಿ ಪಟೇಲ, ಜಮನದಾಸ, ತ್ರಿಭುವನದಾಸ ಶಹಾ ಪ್ರಭಾಶಂಕರ ಜ್ಞಾನಿ ಮತ್ತು ಇನ್ನು ಎಂಟು ಜನರು.

**ಅಣಸುಹಾಕಿದ ಸೋಟಿದ ಏಟಕ್ಕೆ ಆಹುತಿಯಾದವರು.**

ಶಾಂತಿಲಾಲ ಜೆ. ಮೇಥಾ. ಶಂಕರ ಪರೀಖ, ಗೋವಿಂದ ಜಗನ್ನಾಥ

**ಒದ್ದು ಕೆಡಹಲ್ಪಟ್ಟವರು.**

ಜಯರಾಮ ರಜಪೂತ. ಗೋಕುಲದಾಸ ಧರ್ಮಾಜಿ, ಲಕ್ಕರ ರತಂಜಿ. ಠಕ್ಕರ ಜೆ. ಟಿ. ಜೆ. ಜೋಶಿ.

**ಮುಂಬಯಿ.**

ಪೋಲೀಸ ಕಮಿಶನರನು ಭಾಟಿಯಾ ಬಾಗದಲ್ಲಿನ ಪೋಲೀಸ ಅತ್ಯಾಚಾರದ ವಾರ್ತೆಯು ಸುಳ್ಳಿದೆ ಎಂದು ಪ್ರಕಟಿಸಿದ್ದನ್ನು ಅದಕ್ಕೆ ಉತ್ತರವೆಂದು ಇದೆಲ್ಲ ಸತ್ಯಾಗ್ರಹಿಗಳು ಆಸಪತ್ರಿಯಲ್ಲಿ ತಾವು ನರಳುತ್ತ ಬಿದ್ದಲ್ಲಿಂದಲೆ ತಮ್ಮ ಗಾಯಗಳ ಸಾಕ್ಷಿಯಾಗಿ ಈ ಪ್ರಕಟಣೆಯನ್ನು ಹೊರಡಿಸುವರು. ಇದೇ ಪ್ರಕಾರದ ಯಾತನೆಯನ್ನು ಅನುಭೋಗಿಸಿದವರು ಇನ್ನೂ ಅನೇಕರಿರುವರು. ಹೀಗಿದ್ದು ಪೋಲೀಸರು ಅತ್ಯಾಚಾರ ನಡಿಸಿಲ್ಲವೆಂದು ಕಮಿಶನರನು ಸಾರಬೇಕಾದರೆ ಅವನು ಒಳ್ಳೇ ಎದೆಗಾರನಲ್ಲವೇ? ಹಗಲು ದರೋಡೆ ಮಾಡಲಿಕ್ಕೂ ಹೇಸದ ದುರುಳನನಲ್ಲವೆ.

## ಮುಂಬಯಿ ಸ್ತ್ರೀ ಸಮಾಜದ ಚಟುವಟಿಕೆ.

ರಾಷ್ಟ್ರೀಯ ಸೇವಿಕಾ ಸಂಘದ ೩೦೦ ಹೆಣ್ಣುಮಕ್ಕಳು ತಂಡ ತಂಡವಾಗಿ, ಜನರು ವಾಸಮಾಡಿಕೊಂಡಿರುವ ಚಾಳುಗಳಿಗೆ ಹೋಗಿ ಅಲ್ಲಿಯ ಜನರಿಂದ ಸ್ವದೇಶಿ ಬಟ್ಟೆಗಳನ್ನೇ ಧರಿಸುವೆವೆಂಬ ಪ್ರತಿಜ್ಞೆಯನ್ನು ಮಾಡಿಸಿ, ಪ್ರತಿಜ್ಞಾಪತ್ರಕ್ಕೆ ಅವರ ಸಹಿ ತಕ್ಕೊಳ್ಳುತ್ತಿರುವರು. ಅರಬಿ ಅಂಗಡಿಗಳ ಮುಂದೆನಿಂತು ವಿದೇಶಿ ಬಟ್ಟೆಗಳನ್ನು ಮಾರಬೇಡಿರಿ ಕೊಳ್ಳಬೇಡಿರಿ ಎಂದು ಅಂಗಡಿಕಾರರಿಗೂ ಗಿರಾಕಿಗಳಿಗೂ ಬೇಡಿಕೊಳ್ಳುವ ಕ್ರಮವನ್ನು ಇನ್ನು ತೀವ್ರವೇ ಆರಂಭಿಸತಕ್ಕವರಿರುವರು. ಮುಂಬಯಿ ಲಲನೆಯರ ಈ ಸಾಹಸವು ದೇಶವಾತ್ಸಲ್ಯವೂ ನಮ್ಮ ಕರಿನಾಡಿನ ಸ್ತ್ರೀಯರಲ್ಲಿಯೂ ಉದಯಿಸಲಿಕ್ಕಿಲ್ಲೇ?

## ಬೋರಸಾದ ತಾಲೂಕಿನಲ್ಲಿ ತೆರಗಿ ಕೊಡಬಾರದೆಂಬ ಚಳವಳಿ ಆರಂಭವಾಗಿದೆ

ರಾಸ ಹಳ್ಳಿಯವರ ನಿರ್ಧಾರಕ್ಕನುಸರಿಸಿ ತಾವೂ ತಮ್ಮ ಸರದಾರ ವಲ್ಲಭಭಾಯಿ ಮತ್ತು ಗೋಪಾಲದಾಸರನ್ನು ಸರಕಾರವು ಬಿಡುವತನಕ ತಮ್ಮ ಹೊಲಗಳ 'ಬರಾಡ'ವನ್ನು ಕೊಟ್ಟಸ್ಸರಲ್ಲೆಂದು ಮತ್ತೆ ೮ ಹಳ್ಳಿಗಳ ರೈತರು ನಿಶ್ಚಯಿಸಿಕೊಂಡಿರುವರು. ನಮ್ಮ ಎಲ್ಲ ಮುಖಂಡರನ್ನು ಕಾರಾಗ್ರಹಕ್ಕೆ ಅಟ್ಟಿದರೂ ನಾವಿನ್ನೂ ಉಪ್ಪಿನಕಾಯಿದೆಯನ್ನಾದರೂ ಕೂಡಾ ಮುರಿದೊಗೆಯಲು ಸಾಕಷ್ಟು ಹೋರಾಟ ನಡೆಸಿರುವದಿಲ್ಲ, ಇದಕ್ಕೇನನ್ನಬೇಕು!

**ಕಲಕತ್ತಾ**

ಪಂ ಮಾಲವೀಯರು ವಿದೇಶಿ ಬಟ್ಟೆಗಳ ಬಹಿಷ್ಕಾರ ಪ್ರಸಾರಕ್ಕಾಗಿ ಅಲ್ಲಿಗೆ ಹೋಗಿ ಒಳ್ಳೇ ಉತ್ಸಾಹದಿಂದ ಕೆಲಸ ನಡಿಸಿರುವರು. ಅವರು ಸುಭಾಷ ಚಂದ್ರರಿಗೂ, ಸೇನಗುಪ್ತರಿಗೂ, ಭೆಟ್ಟಿಯಾಗುವವರಿರುವರು.

---

**ಹುಬ್ಬಳ್ಳಿ.**

ಹುಬ್ಬಳ್ಳಿ ಲಿಂಗಾಯತ ವಿದ್ಯಾವರ್ಧಕ ಸಂಘದವರು ಹುಬ್ಬಳ್ಳಿ ಮುನಸಿಪಾಲಟಿಗೆ ಪ್ರಾಥಮಿಕಶಿಕ್ಷಣ ವಿಷಯವಾಗಿ ಕೆಲವು ಮಹತ್ವದ ಸೂಚನೆಗಳನ್ನು ಸಾದರಪಡಿಸಿದ್ದು ಹುಬ್ಬಳ್ಳಿಯ ಉಳಿದ ಸಂಘಸಂಸ್ಥೆಗಳೂ ಈ ಸೂಚನೆಗಳ ಪ್ರಕಾರ ಮುನಸಿಪಾಲಟಿಯವರು ವರ್ತಿಸಲೇಬೇಕೆಂಬ ಆಶಯದ ಠರಾವ ಪಾಸಮಾಡಿಕೊಂಡು ಮುನಸಿಪ್ಯಾಲಟಿಗೆ ಕಳಿಸಿಕೊಡಬೇಕೆಂದು ಸದರ ವಿದ್ಯಾವರ್ಧಕ ಸಂಘದವರು ಹುಬ್ಬಳ್ಳಿ ನಾಗರಿಕರಿಗೆ ಬಿನ್ನಹಿಸಿ ಕೊಂಡಿದ್ದಾರೆ.

ಸಕ್ತಿ ಶಿಕ್ಷಣ ಪುಸ್ತಕಶಿಕ್ಷಣ, ನೂಲುವ ಮೊದಲಾದ ಔದ್ಯೋಗಿಕ ಶಿಕ್ಷಣ. ವಸ್ತುಸಂಗ್ರಹಾಲಯ ಹೆಣ್ಣು ಹುಡಿಗಿಯರಿಗೆ ಪಾಕಶಾಸ್ತ್ರ ಶಿಶುಸಂಗೋಪನದ ಶಿಕ್ಷಣ ಇವೇ ಮೊದಲಾದ ಸುಧಾರಣೆಗಳನ್ನು ಈಗಿನ ಶಿಕ್ಷಣಪದ್ಧತಿಯಲ್ಲಿ ಸೇರಿಸಬೇಕೆಂಬ ಸೂಚನೆಗಳು ಸರ್ವಮಾನ್ಯವೇ ಆಗಿವೆ. ಧನಸಂಪನ್ನವಾದ ಮುನಸಿಪಾಲಟಿಯು ಇದನ್ನೆಲ್ಲ ಅವಶ್ಯ ಕೈಕೊಳ್ಳಲೇಬೇಕು.

## ಅಮೇರಿಕಾ ದೇಶದ ಜನರೆಲ್ಲರೂ

# ಬ್ರಿಟಿಶರಿಗೆ ಧಿಕ್ಕಾರ ಹಾಕುತ್ತಿರುವರು

ಹಿಂದುಸ್ಥಾನದಲ್ಲಿ ಬ್ರಿಟಿಶ ಸರಕಾರದವರು ನಡಿಸಿದ ದಬ್ಬಾಳಿಕೆಯ ವಿರುದ್ಧ ಅಮೇರಿಕೆಯ ಜನರು ತಮ್ಮ ತೀವ್ರ ನಿಷೇಧವನ್ನು ವ್ಯಕ್ತಗೊಳಿಸಹತ್ತಿರುವರು. ಈಗ ಕೆಲವು ದಿವಸಗಳ ಕೆಳಗೆ ಮಿ ರೋಜರ ಬಾಲ್ಡ್ವಿನ್ ಇವರ ಅಧ್ಯಕ್ಷತೆಯಲ್ಲಿ ನ್ಯೂಯಾರ್ಕ ಪಟ್ಟಣದಲ್ಲಿ ದೊಡ್ಡದೊಂದು ಸಭೆ ಕೂಡಿ ಕೆಳಗಿನ ಠರಾವುಗಳನ್ನು ಒಪ್ಪಿಕೊಂಡಿದ್ದಾರೆ. ಇದೇ ಸಭೆಯಲ್ಲಿ ಹಿಂದುಸ್ಥಾನದ ರಾಜಕೀಯ ಕೈದಿಗಳಿಗೆ ಸಹಾಯ ಮಾಡಿರೆಂದು ದೀನಬಂಧು ಸಿ ಎಫ್. ಎಂಡ್ರೂಜರು ಭಾಷಣ ಮಾಡಿದರು.

(೧) ಹಿಂದುಸ್ಥಾನದಲ್ಲಿ ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುತ್ತಿರುವ ಹಿಂದೀವೀರರಿಗೆ ಅಮೇರಿಕೆಯ ನಾಗರೀಕರ ಈ ಸಭೆಯು ತನ್ನ ಸಂಪೂರ್ಣ ಬೆಂಬಲವಿದೆಂದು ಸಾರುತ್ತದೆ. ಮತ್ತು ಹಿಂದುಸ್ಥಾನದ ಸಧ್ಯದ ಪರಿಸ್ಥಿತಿಯಲ್ಲಿ ಜನರೊಳಗೆ ರಾಜಕೀಯ ಜಾಗ್ರತೆಯನ್ನು ಹುಟ್ಟಿಸುವದೇ ಮೇಲ್ತರದ ಉಪಾಯವೆಂದು ಅಭಿಪ್ರಾಯ ಪಡುತ್ತಿದೆ.

(೨) (ಅ) ಅಲ್ಲಿಯ ಬ್ರಿಟಿಶ ಅಧಿಕಾರಿಗಳು ಸ್ವೀಕರಿಸಿರುವ ದಬ್ಬಾಳಿಕೆಯ ಧೋರಣವು ಅಂಧಕನದ್ದೂ ತೀರ ತಪ್ಪಾದದ್ದು ಘಾತುಕವಾದದ್ದೂ ಇದ್ದು ಅದನ್ನು ಈ ಸಭೆಯು ಅತ್ಯಂತ ತೀವ್ರತೆಯಿಂದ ನಿಷೇಧಿಸುತ್ತಿದೆ.

(ಬ) ಇದರಂತೆ ಈ ಆಪತ್ಕಾಲಸಮಯದಲ್ಲಿ ಅಮೇರಿಕೆಯಿಂದ ಹಿಂದುಸ್ಥಾನಕ್ಕೆ ಹೋಗಲಿಚ್ಛಿಸುವ ಹಿಂದೀದೇಶಭಕ್ತರಿಗೆ ಪಾಸಪೋರ್ಟ ಕೊಡದಿರುವದು ತೀರ ಅನ್ಯಾಯದಿದ್ದು ಈ ತಪ್ಪನ್ನು ಹಿಂದುಸ್ಥಾನಿ ಸರಕಾರವು ತೀವ್ರವೇ ತಿದ್ದಿಕೊಳ್ಳತಕ್ಕದೆಂದು ಈ ಸಭೆಯು ಆ ಸರಕಾರಕ್ಕೆ ಸೂಚಿಸುತ್ತಿದೆ.

(ಕ) ಮತ್ತು ನಿರಪರಾಧ ಕೈದಿಗಳನ್ನೂ ಮತ್ತು ವಿಚಾರಣೆ ಇಲ್ಲದ ಜೇಲಿನಲ್ಲಿಟ್ಟಿರುವ ಅಹಿಂಸಾವಾದಿಗಳಾದ ಇತರ ರಾಜಕೀಯ ಅಪರಾಧಿಗಳನ್ನೂ ಬ್ರಿಟಿಶ ಸರಕಾರವು ಬಿಟ್ಟು ಬಿಡುವದೇ ಒಳ್ಳೇದೆಂದು ಈ ಸಭೆಯವರ ಆಗ್ರಹವಿದೆ.

ತನ್ನ ಸ್ವಾತಂತ್ರ್ಯ ಸಂಪಾದನೆಗಾಗಿ ನ್ಯಾಯವಾದ ಮಾರ್ಗದಿಂದ ಹೋರಾಡುತ್ತಿರುವ ಹಿಂದೀಯರ ಮೇಲೆ ಅಲ್ಲಿಯ ಆಳರಸರು ಆರಂಭಿಸಿರುವ ಘೋರವಾದ ದಬ್ಬಾಳಿಕೆಯ ಕ್ರೂರಕೃತಿಗಳನ್ನೆಲ್ಲ, ಈಗ ಅಧಿಕಾರದಲ್ಲಿರುವ ಇಂಗ್ಲಂಡದ ಕೂಲಿಕಾರ ಸರಕಾರವು ತನ್ನ ಮಧ್ಯಸ್ಥಿಕೆಯಿಂದ ಅವನ್ನೆಲ್ಲ ಅಪಮಾರ್ಜಿಸುವದೆ ಉತ್ತಮ ಪಕ್ಷವೆಂದು ಈ ಸಭೆಯು ಆ ಸರಕಾರಕ್ಕೆ ಬುದ್ಧಿವಾದ ಹೇಳದೆ ಇರದು.

### ಬಳ್ಳಾರಿಯಲ್ಲಿ ಕಾಯದೆಭಂಗ

ಮೊನ್ನೆ ದೇಶಪಾಂಡೆ ಸ್ಮೈಲಿವಲಿ ಸಭೆಸೇರಿ ಅಲ್ಲಿಯಿಂದ ಇಲ್ಲಿಯ ಪೇರ್ ಸ್ಟ್ರೀಟಲಿಂದ ತಾಲ್ಲೂಕಿ, ಗಾಂಧಿ ಸುತ್ತು, ಜಾಹೀರ ರೀತಿಯಿಂದ ಮಾರಲಟ್ಟಿತು. ಆದನು ೩-೮ ಕೆಂಗಾ ಮುದ್ರಕ ಕೊಂಡು ಕೊಂಡ ನಂತರ ಅನೇಕ ಗಂಡಸರು ಕೊಂಡರು. ಪ್ರೋಲಿಸರು ಇದಕ್ಕೆಲ್ಲ ಸಾಕ್ಷಿಯಾಗಿ ಅಲ್ಲಿಯೇ ಇದ್ದರು. ಇಷ್ಟರಲ್ಲಿಯೇ ಗುಂಟೂರಿನ ಮುನಸಿಪಲ್ ಚೇರಮನರಾದ ನರಸಿಂಹರಾವ ಇವರನು. ಇದೇ ಕಾಯಿದೆ ಭಂಗ ಅಪರಾಧಕ್ಕಾಗಿ ಬಳ್ಳಾರಿ ಜೇಲಿನಲ್ಲಿ ಇರಲಿಕ್ಕೆ ಬಂದಿರುವರೆಂಬ ವಾರ್ತೆ ಬರಲು, ಎಲ್ಲರೂ ಅವರನ್ನು ಜೇಲಿನ ವರೆಗೆ ಜಯ ಜಯಕಾರದಿಂದ ಹಿಂಬಾಲಿಸಿದರು. ತಿರುಗಿ ಬಂದ ಮೇಲೆ ಮುರ್ತಿರಾಯರು 'ಕರ್ನಾಟಕದಲ್ಲಿರುವ ಬಳ್ಳಾರಿಯ ಜೇಲನು, ತುಂಬಿ ಬಿಡುವಂಥ ಸಾಮರ್ಥ್ಯವು ನಮ್ಮ ನಗರಿಗೆ ಇಲ್ಲತಕ್ಕದ್ದು. ನಾವು ಹೀಗೆ ಪರತಂತ್ರ್ಯದಿಂದ ಅದನ್ನು ತುಂಬಲಿಕ್ಕೆ ಇಂಬುಗೊಡಬಾರದೆಂದು ಭಾಷಣ ಮಾಡಿದ ಮೇಲೆ ಸಭೆ ಮುಗಿಯಿತು.

### ಸಾಯಿಮನ್ ಕಮಿಟಿ ರಿಪೋರ್ಟ

ಕಾಯದೆಭಂಗ ಚಳವಳಿಯಲ್ಲಿ ಗುಂಗಾದ ಹಿಂದುಸ್ಥಾನವು ಸಾಯಮನ್ ಕಮಿಟಿಯ ರಿಪೋರ್ಟನ್ನು ತಿರಸ್ಕಾರದಿಂದ ಒಕ್ಕಲದಾಗಿದೆ. ಅದೊಂದು ಯತ್ನಿಯ ಚಿಂತೆಯ ಸಮಾನವೆಂದು ಭಾವಿಸಿ ಬಿಟ್ಟಿದೆ. ಆದರೆ ಇಂಗ್ಲಂಡದೊಳಗಿನ ಒಂದು ತಂಗಡವು ಇಲ್ಲಿ ಚಳವಳಿಯು ಜೋರು ನಡೆದಾಗ ಅದನ್ನು ತೀವ್ರ ಹೊರಗೆಡುಹಲಿಕ್ಕೆ ಒತ್ತಾಯ ಪಡಿಸಹತ್ತಿದೆ. ಅದನ್ನು ಪ್ರಕಟಗೊಳಿಸಿ ಅದರ ಚರ್ಚೆಯ ಸಲುವಾಗಿ ಒಂದು ಮಂಡಲ ಗಿಂಡಲವನ್ನು ಕರೆದು ಅದರಲ್ಲಿ ಹಿಂದುಸ್ಥಾನಕ್ಕೆ ಸಾಮಂತ ಸ್ವರಾಜ್ಯವನ್ನು ಕೊಡಬೇಕೆಂದು ಒಪ್ಪಿದಂತೆ ಮಾಡಿ ಹಿಂದೀಯರನ್ನು ಸಮಾಧಾನಗೊಳಿಸಬೇಕೆಂದು ಡೇಲಿ ಹೆರಾಲ್ಡ ಪತ್ರವು ಸೂಚಿಸ ಹತ್ತಿದೆ

### ಇಹವೃತ್ತ

ಬಾಗಲಕೋಟೆಯ ಡಾಕ್ಟರ ಜನರ ಸಭೆಯು ನಿನ್ನೆ ದಿವಸ ಸೇರಿ ಕೆಳಗೆ ಬರೆದ ಠರಾವುಗಳು ನಿರ್ಣಯಿಸಲ್ಪಟ್ಟವು. ೧ ಬಾಗಲಕೋಟೆಯ ಡಾಕ್ಟರ ಜನರ ಈ ಸಭೆಯು ಬ್ರಿಟಿಶ್ ಮೆಡಿಕಲ್ ಕೌನ್ಸಿಲದ ನಿರ್ಣಯವನ್ನು ತೀವ್ರವಾಗಿ ನಿಷೇಧಿಸಿರುತ್ತದೆ. ೨. ಬ್ರಿಟಿಶ್ ಔಷಧಗಳನ್ನು ತರಿಸಕೂಡ ದೆಂದು ಈ ಸಭೆಯು ನಿರ್ಧರಿಸುತ್ತದೆ. ೩. ವಿದೇಶಿ ಬಟ್ಟೆಯನ್ನು ಬಹಿಷ್ಕರಿಸಿ, ಸ್ವದೇಶೀ ಬಟ್ಟೆಯನ್ನೇ ಉಪಯೋಗಿಸಬೇಕೆಂದು ನಿಶ್ಚಯಿಸಿ, ವಿಶೇಷ ಮಹತ್ವವು ಶುದ್ಧ ಖಾದೀಗೇ ಕೊಡಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.

## ಸರದಾರ ವಲ್ಲಭ ಭಾಯಿ

ಸರದಾರ ವಲ್ಲಭ ಭಾಯಿಯವರನ್ನು ಸಾಬರಮತಿ ಜೇಲಿನಿಂದ ಯರವಡಾ ಜೇಲಿಗೆ ಕಳಿಸಿರುವರು.

## ಪ್ರೊ. ಗಾಂಗೂಲಿ ಇವರಿಗೆ ಸಜೆ

ಶ್ರೀ ಜೀವನಲಾಲ ಮೋಹನ ಗಾಂಗೂಲಿ ಎಂಬ ಬಂಗಾಲ ಪ್ರೊಫೆಸರರಿಗೆ, ಭಾಷಣಬಂದಿ ಹುಕುಮಾಗಿದ್ದು ಅದನ್ನು ಅವರು ಲಕ್ಷಿಸದೆ ಸರಕಾರದ ಕಾಯಿದೆಭಂಗ ಮಾಡಿದ್ದಕ್ಕಾಗಿ ಅವರನ್ನು ಬಂಧಿಸಿ ವಯಿದಾ ಒಂದು ವರ್ಷದ ಕಠಿಣ ಶಿಕ್ಷೆ ವಿಧಿಸಿದರು.

---

## ಮುಂಬಯಿ

ಮೆಕ್ಸಿಕೋ ದೇಶದ ಒಬ್ಬ ನಾವಿಕನು ಒಬ್ಬ ಮುತ್ತಿನ ರತ್ನದ ವ್ಯಾಪಾರಿಯ ಅಂಗಡಿಗೆ ಹೋಗಿ ಕೆಲವು ರತ್ನಗಳನ್ನು ಕೊಂಡನು. ಅವುಗಳ ಬೆಲೆಯನ್ನು ಕೊಡುವದಕ್ಕೆಂದು ತನ್ನ ಚಣ್ಣದ ಕಿಸೆಯಲ್ಲಿ ಕೈ ಹಾಕಿ ಒಂದು ಪಿಸ್ತೂಲನ್ನು ಹೊರಗೆ ತೆಗೆದು ಅದನ್ನು ಹಾರಿಸಿ ಆ ಅಂಗಡಿಯ ಮಾಲಕನನ್ನು ಕೊಂದನು. ಮೆಕ್ಸಿಕೋ ದೇಶದಲ್ಲಿ ಕೊಂಡ ವಸ್ತುವಿನ ಬೆಲೆ ಕೊಡುವದೆಂದರೆ ಗುಂಡು ಹಾರಿಸುವದೆಂದು ತಿಳಿದಿರುವರೋ?

ಶ್ರೀ ಕಾಮದಾರ ಎಂಬ ಹೆಸರಿನ ಮುಂಬಯಿ ಹಾಯಕೋರ್ಟಿನ ಒಬ್ಬ ಪ್ರಸಿದ್ಧ ವಕೀಲರು ತಮ್ಮ [illegible] ಬಳಿಯಲ್ಲಿ [illegible].

ಮುಂಬಯಿಯಲ್ಲಿಯ ಸುಪ್ರಸಿದ್ಧ ಕಾಯದೆ ಪಂಡಿತರಾದ ಭೂಲಾಭಾಯಿ ದೇಸಾಯಿ ಎಂಬುವರು, ಪೋಲೀಸು ಅಧಿಕಾರಿಗಳು ಕಾಯದೆಗೆ ವಿರುದ್ಧವಾಗಿರುವರೆಂದು ಬರೆದಿರುವರು. ಬರೇ ಬರೆದರೇನಾಯಿತು.

ಉಪ್ಪಿನ ಕಾಯದೆಭಂಗ ಸತ್ಯಾಗ್ರಹವು ನಿರಾತಂಕವಾಗಿ ಪೋಲಿಸರ ಯಾವ ಉಪಟಳವಿಲ್ಲದೆ ಸಾಗಿದೆ. ನೂರಾರು ಸ್ವಯಂ ಸೇವಕರು ಸಾವಿರಾರು ಜನರ ಸಂದಣಿಯಲ್ಲಿಯೇ ಚೌಪಾಟಿ ದಂಡೆಯ ಮೇಲೆ ಸಮುದ್ರ ನೀರು ಕಾಸಿ ಉಪ್ಪು ಮಾಡಿದರು. ಈ ಕ್ರಮವು ಮುಂಜಾನೆ ೭ ಘಂಟೆಯಿಂದ ಹಿಡಿದು ೯|| ಘಂಟೆಯವರೆಗೆ ನಡೆಯಿತು ಆದರೂ ಪೋಲಿಸರು ಚಿತ್ರದಲ್ಲಿನ ಗೊಂಬೆಗಳಂತೆ ಇದನ್ನೆಲ್ಲ ನೋಡುತ್ತ ಸುಮ್ಮನೆ ನಿಂತುಕೊಂಡಿದ್ದರು. ಪೋಲೀಸರು ಈ ಸಂಧಿಯನ್ನು [illegible] ಸತ್ತು ಹೋದ ಕಾಯದೆಯನ್ನು ಸಂರಕ್ಷಿಸಿಕೊಳ್ಳುವದರಲ್ಲಿ [illegible] ಅಧಿಕಾರಿಗಳಿಗೂ ಬೇಸರ ಹತ್ತಿರಬಹುದೇನು?

## ಕರಾಚಿ

ಇಲ್ಲಿ ಸಾವಿರಾರು ಮಣ ಉಪ್ಪನ್ನು ತಯಾರಿಸಿರುವರು. ಒಂದು ಬಿಲ್ಲಿಗೆ ಒಂದು ಸೇರಿನಂತೆ ಮಾರಾಟ ಮಾಡಹತ್ತಿರುವರು. ಮುಂಬಯಿಯಂತೆ ಈ ಊರಲ್ಲಿಯೂ ಉಪ್ಪಿನ ಕಾಯದೆಗಳು ಸತ್ತಂತಾಯಿತು.

## ಮೈಸೂರ

ಕೋಲಾರದ ಬಂಗಾರದ ಕಣಿಗಳಲ್ಲಿ ಕೆಲಸ ಮಾಡುವ ಕೂಲಿಕಾರರು ಸಂಪು ಮಾಡಿರುವರು. ಕೆಲಸಕ್ಕೆ ಹೋಗುವ ಕೂಲಿಕಾರರನ್ನು ಮನಸ್ಸು ತಿರುಗಿಸಿ ಕೆಲಸದಿಂದ ಬಿಡಿಸಹತ್ತಿರುವರು. ಆದರ ಈ ಜನರು ದಂಗೆ ಹಾಕಿದರೆಂದು ಹೇಳಿ ಬೆಂಗಳೂರಿನಿಂದ ದಂಡು ತರಿಸಿ ಗುಂಡು ಹಾರಿಸಿದರು. ಇಪ್ಪತ್ತು ಜನರಿಗೆ ದೊಡ್ಡ ಗಾಯಗಳಾಗಿರುವವು. ಜಿ ಆಯ್ ಪಿ ಕೂಲಿಕಾರ ಸಂಪಿನಲ್ಲಿಯೂ ಇದೇ ಹಾಡಾಯಿತು. ಈ ಅಧಿಕಾರಿಗಳು ಮೈಸೂರ ಅಧಿಕಾರಿಗಳ ತಲೆಯ ಮೇಲೂ ಕೈ ಇಟ್ಟರೋ?

## ಬಂಗಾಲ

ಅಲೀಪೂರ ಜೇಲದಲ್ಲಿರುವ ಶ್ರೀ ಸುಭಾಸ ಬೋಸ ಮತ್ತು ಸೇನಗುಪ್ತ ಇವರಿಗೆ ಅಲ್ಲಿಯ ವಾರ್ಡರ್ಸ್ ಜನರು ಬಡಿದರೆಂದೂ ಆ ಬಡತವನ್ನು ತಾಳಲಾರದೆ ಮೂರ್ಛೆ ಬಂದು ಬಿದ್ದರು. ಆದರೂ ಸೇನಗುಪ್ತರ ಪತ್ನಿಯರಿಗೆ ತಮ್ಮ ಪತಿರಾಯರನ್ನು ಸಹ ಸಂದರ್ಶಿಸುವ ಅಪ್ಪಣೆ ದೊರೆಯಲಿಲ್ಲ. ಈ ೨-೩ ದಿನಗಳಿಂದೀಚೆ ಅವರು ಆತುರಗೊಂಡಿರುವರು. ಆದರೆ ಈಗ ಅವರು ಚನ್ನಾಗಿದ್ದಾರೆಂದು ಸರಕಾರಿ ವೈದ್ಯನ ವರದಿ ಬಂದಿದೆ. ಜನರು ಕೊಂಚ ಸಮಾಧಾನ ಹೊಂದಹತ್ತಿದ್ದಾರೆ.

## ಪರದೇಶ

ಲಂಡನದಲ್ಲಿ, ಆಲ್ಬಿಯನ್ ಜ್ಯಾನರ್ಜೆ ಎಂಬ ಒಬ್ಬ ಮಂದ ಪಕ್ಷದ ಮುಂದಾಳು ಹೀಗೆ ಬರೆಯುವನು, ಬ್ರಿಟಿಶರು ನಿಷ್ಠೆಯುಳ್ಳವರಾಗಿ, ಹಿಂದೀ ಮಂದ ಪಕ್ಷದವರಿಗೆ ಆಶ್ವಾಸನ ಕೊಟ್ಟರೆ, ಅವರು ಬ್ರಿಟಿಶರ ಸಂಗಡ ಸಹಕಾರ ಮಾಡುವರು. ಸಾಯಿಮನ್ ರಿಪೋರ್ಟ ಪ್ರಕಟವಾದಮೇಲೆ, ಅದನ್ನು ಕೃತಿಯಲ್ಲಿ ತರುವಂತೆ ತೋರಿಸಿದರೆ, ಈಗಿನ ಸ್ವಾತಂತ್ರ್ಯತೆಯ ಚಳವಳವು ತಾನಾಗಿಯೇ ಮುಗ್ಗರಿಸುವದೆಂದು, ಇವರು ಧ್ವನಿ ತೆಗೆದಿರುವರು. ಹಿಂದುಸ್ಥಾನದಲ್ಲಿ ನಡೆದ ಈ ಸತ್ಯಾಗ್ರಹದ ಅಬ್ಬರವು ಇನ್ನೂ ಇವರಿಗೆ ಕೇಳಬಂದಿಲ್ಲವೋ! ಸಾಹೇಬರ ಅಂತರಂಗವನ್ನು ಇವರು ಇನ್ನೂ ಕಂಡು ಹಿಡಿದಿಲ್ಲವೋ!

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಸೋಮವಾರ ತಾ. ೨೮-೪-೩೦

**ಪಾದುಕಾ ಪಟ್ಟಾಭಿಷೇಕ,**

ಬುಧವಾರ ತಾ. ೩೦-೪-೩೦

**ಮಾಯಾ ಬಾಜಾರ,**

ಶನಿವಾರ ತಾ. ೩-೫-೩೦

**ಯಚ್ಚಮ್ಮ ನಾಯಿಕ.**

**ಎಂಬ ನಾಟಕಗಳನ್ನು ಅಭಿನಯಿಸುವರು.**

ಸಂಘದೊಡೆಯ—**ಸದಾಶಿವರಾವ ಗರೂಡ**

**ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಳುಮುದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.**

ರ. ನಂ. ಬಿ ೧೯೪೭ ಬೆಲೆ ೦—೦—೩

ನಿತ್ಯಸಂಚಿಕೆಯು.

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ಮಂಗಳವಾರ ಮಿತಿ ವೈಶಾಖ ಶುದ್ಧ ೧ ಶಕ ೧೮೫೨ ತಾ ೨೯—೪—೩೦ ಸಂಚಿಕೆ ೩೫

## ಸಂಪಾದಕರ ಭೂಮಿ.

ತನ್ನ ದೇಹವು ನಿನ್ನ ಧೀರಶಾಸನಕಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ತನ್ನ ಪ್ರಾಣವು ನಿನ್ನ ಗಂಧವನು ದೀರಬಹಗಂಧವಹವೆಂದು ತಿಳಿಯೆ॥

### ಸರಕಾರದ ಹೊಸ ಸಾಹಸವು.

ಮಹಾತ್ಮರ ಈ ಚಳವಳಿಯನ್ನು ಮುರಿಬಡಿಯಬೇಕೆಂಬ ಹವ್ಯಾಸದಿಂದ ಸರಕಾರವು ತನ್ನ ಬಗಲಬಚ್ಚುಗಳಾದ, ದೇಸಾಯಿ, ದೇಶಪಾಂಡೆ, ಗೌಡ, ನಾಡಗೌಡ, ಕುಲಕರ್ಣಿ, ಇವೇ ಮೊದಲಾದ ವತನದಾರರನ್ನೂ ಸಿಪಾಯಿ ಶಾನಭೋಗ ಮೊದಲಾದ ನತದೃಷ್ಟರಾದ ತನ್ನ ಹಸ್ತಕರನ್ನೂ, ಮತ್ತು ಸರಿ ಮನೆಗೆ ಬೆಂಕಿ ಹತ್ತಿದಾಗ ಅಕ್ಕಿ ಹುರಿಕೊಳ್ಳುವ ಸ್ವಾರ್ಥಲಂಪಟರನ್ನೂ ಹುಡಿಕಿ ಹುಡಿಕಿ ಹಿಡಕರಿಸಿ ತಾಲೂಕ ಕಚೇರಿಯಲ್ಲಿ ಅವರನ್ನೆಲ್ಲ ಒಟ್ಟಿಗೆ ಕಲೆಹಾಕಿ ಬ್ರಿಟಿಶರ ಬಹದ್ದೂರಿಕನವನ್ನು ಅವರಿಗೆ ಹೊಗಳಿ ಹೇಳಿ' ಗಾಂಧಿಜಿಯನ್ನು ಅವರ ಚಳವಳಿಯನ್ನು ಅಗ್ಗಳವಾಗಿ ಹೀಯಾಳಿಸಿ ಆ ಸಭೆಗೆ ಇನ್ನೊಬ್ಬರ ಪ್ರವೇಶವಾಗದಂತೆ ಪೂರ್ವದಿಂದಲೆ ಎಚ್ಚರಗೊಂಡಿದ್ದು ತಾಲೂಕ ತಾಲೂಕಿಗೆ "ಶಾಂತಿ ಸಂಘಗಳ' ನ್ನು ಸ್ಥಾಪಿಸುವ ಕಾರ್ಯದಲ್ಲಿ ತನ್ನ ಅಧಿಕಾರವನ್ನು ವೆಚ್ಚಮಾಡಹತ್ತಿದೆ. ಸರಕಾರವು ಆರಂಭಿಸಿದ ದಬ್ಬಾಳಿಕೆಯು ತೀರ ಅನ್ಯಾಯದ್ದೂ ಕ್ರೂರತನದ್ದೂ ಆಗಿದೆ, ಎಂದು ಜಗತ್ತೇ ಸಾರುತ್ತಿರುವಾಗ, ಅದನ್ನು ಸಮರ್ಥಿಸಿಕೊಳ್ಳುವ ಉದ್ದೇಶದಿಂದ ನಿಮ್ಮ ಆಸ್ತಿ ಸ್ವಾಸ್ತಿಗಳ ಸಂರಕ್ಷಣೆಗಾಗಿ ನಾವೇ ದಬ್ಬಾಳಿಕೆಯನ್ನು ಕೈಕೊಳ್ಳಬೇಕಾಗಿದೆಂದು ಈ ಸರಕಾರವು ಈ ಶಾಂತಿಸಂಘಗಳಿಗೆ ಬಂದ ಮಂಡ್ಳಿಗರಿಗೆ ಹೇಳಹತ್ತಿದೆ ಅಂತೆ, ಹಿಂದುಸ್ಥಾನವನ್ನು ಸಮಗ್ರ ಸುಲಿದುಕೊಂಡು ಅದನ್ನು ಕೂಳುಗೇಡಿ ಮಾಡಿದ ಬ್ರಿಟಿಶರು ಬಂಡುಗಾರರೂ ಅಥವಾ ದೇಶಕ್ಕೆ ಸಾಕಷ್ಟು ಅನ್ನ ವಸ್ತ್ರಗಳು ಸಿಕ್ಕಲೆಂದು ತಮ್ಮ ಮನೆಮಾರು ತೊರೆದು ತಾಳ್ಮೆಯಿಂದ ಕಷ್ಟಪಡುತ್ತಿರುವ ಮಹಾತ್ಮರ ಅನುಯಾಯಿಗಳು ಪುಂಡಾಟವನ್ನೆಬ್ಬಿಸಿದವರೂ ಎಂಬುದನ್ನು ಏವ.ಶೀಸಿ ತಿಳಕೊಳ್ಳದಷ್ಟು ತಿಳಿಗೇಡಿಗಳು ಈ ವತನದಾರರಲ್ಲಿ ಇದ್ದಾರೆಂದು ನಾವು ನಂಬಲಾರೆವು. ಸರಕಾರಕ್ಕೂ ಇದು ಗೊತ್ತಾಗಿದೆ. ಆದರೆ ನೀರಲ್ಲಿ ಕಾಲುಹಾಕಿ ಮುಣುಗಹತ್ತಿರುವ ಮನುಷ್ಯನು ಉಳಿಯಬೇಕೆಂದು ಹತ್ತಿರದ ಕಡ್ಡಿಯನ್ನು ಕೂಡಾ ಅವಚಿಕೊಳ್ಳುತ್ತಿರುವಂತೆ ಸರಕಾರವು ಏನಾದರೂ ಧಡಪಡ ನಡಿಸಿದೆ ಅಯಿತು.. ಸಮಗ್ರ ಹಿಂದೀಜನಾಂಗದ ಸಹಾಯ ಸಹಾನುಭೂತಿಗಳು ಎತ್ತ ಕಡೆಗೆ ಹರಿಯಹತ್ತಿವೆಂಬುದು ಕೂಸಿಗೂ ಗೊತ್ತಾಗಿ ಹೋಗಿದೆ. ಇರಲಿ.

೧೯೨೧ ನೇ ಇಸ್ವಿಯ ಅಸಹಕಾರ ಚಳವಳಿಯ ಕಾಲಕ್ಕೆ ರಾಜನಿಷ್ಠಸಂಘಗಳನ್ನು ಸರಕಾರವು ಸ್ಥಾಪಿಸಿತ್ತು. ಆ ಹಳೇ ಪ್ರೇತ ಸ್ವರೂಪಗಳಾದ ರಾಜನಿಷ್ಠ ಸಂಘಗಳೇ ಈಗ 'ಶಾಂತಿ ಸಂಘ' ಗಳೆಂಬ ಹೆಸರಿನಿಂದ ನೌಕರದಾರರ ನೆರಳಿನಲ್ಲಿ ದುರ್ಗಂಧಿ ನಾರಹತ್ತಿವೆ. ನಿಜವಾದ ರಾಜನಿಷ್ಠರು ಈಗ್ಗೆ ಎಲ್ಲೆಲ್ಲಿಯೂ ಸಿಗದ್ದರಿಂದಲೂ ರಾಜನಿಷ್ಠ ಶಬ್ದವು ಸಮಾಜದಲ್ಲಿ ತನ್ನ ಯೋಗ್ಯತೆಯನ್ನು ಕಳಕೊಂಡು ಜೊಳ್ಳಶಬ್ದವಾದ್ದರಿಂದಲೂ, ಸರಕಾರವು ಹೆದರಿ ಈ ಪ್ರಕಾರ ಬದಲು ಕಸರಿತ 'ಶಾಂತಿಸಂಘ' ಗಳನ್ನು ಪ್ರಸ್ಥಾಪಿಸಬೇಕೆಂದು ಹವಣಿಸಹತ್ತಿದೆ. ಶಾಂತಿಯ, ಅವತಾರಸ್ವರೂಪರಾದ ಗಾಂಧಿಜಿಯನ್ನು ವಿರೋಧಿಸುವ ಸಂಘಗಳೂ ಕೂಡಾ 'ಶಾಂತಿ' ಯ ಅಭಿದಾನ ಹೊಂದುವದಾದರೆ, ಕಾಗೆಗೆ ಗಿಳಿ ಅನ್ನಬಾರದೇಕೆ ? ಇರಲಿ.

ನಮ್ಮ ಜಿಲ್ಹೆಯಲ್ಲಿ ಈ ಶಾಂತಿಸಂಘಗಳೆಂಬ ಹೆಣದ ಮೆರವಣಿಗೆಯನ್ನು ತೆಗೆದ ಮಾಮಲೇದಾರರಲ್ಲಿ ಹುನುಗುಂದ ಮತ್ತು ಬಾಗೇವಾಡಿ ಮಾಮಲೇದಾರರು ಬೀಳಗಿಯ ಮಹಾಲಕರಿಯವರು ಅಗ್ರಸ್ಥಾನವನ್ನು ಹೊಂದಿದಕ್ಕೆ ನಾವು ಅವರನ್ನು ಅಭಿನಂದಿಸುತ್ತೇವೆ. ಆದರೆ ಅವರ ದುರ್ದೈವದಿಂದ ಊರ ಪ್ರಮುಖ ಜನರು ರೈತರು ಮುಂತಾದವರು ಶಾಂತಿ ಸಭೆಗೆ ಹೋಗಿಲಿಲ್ಲ. ಹುನಗುಂದದಲ್ಲಿ ಯಾರೂ ನಾಲ್ವರು ಬರೆದುಕೊಂಡುಬಂದ ಕಾಗದಗಳನ್ನು ಓದಿದರು. ಅರಿಯದ ೨೦-೩೦ ಹಳ್ಳಿಯ ಜನರನು ಕುಲಕರ್ಣಿಯರು ಸಭೆಗೆ ಹಿಡಿದು ತಂದು ಕೂಡಿಸಿದ್ದರು, ಈ ಅಜ್ಞಾನದ ಹಳ್ಳಿಯ ಜನರು ಕೂಡಾ ಸಭೆ ಮುಗಿಸಿ ಮನೆಗೆ ಹೋಗುವಾಗ್ಗೆ 'ಗಾಂಧಿಮಹಾರಾಜಾ ಸರಕಾರದ ಬುರುಕಿಹರಿದ

ತಗಿದಾನ ಇದಕ್ಕೆ ಈಗ ಹೊಟ್ಟ್ಯಾಗ ಬೆಂಕಿಬಿದ್ದು ಈ ಹೊಸ ಆಟಾ ಹೂಡ್ಯಾರು' ಅಂತ ಅಂದುಕೊಳ್ಳುತ್ತಿದ್ದರು. ಹುನಗುಂದ ಶಾಂತಿ ಸಭೆಯ ಅಧ್ಯಕ್ಷರು ಮ॥ ಹಿರೇಮಠ ಸಾಹೇಬರು ಸಭೆಗೆ ಹೋಗುವಾಗ ಇವರಿಗೆ "ಶೇಮ ಶೇಮ" ಎಂಬ ಗರ್ಜನೆಯ ಆಹೇರಿ ಆಯಿತು.

---

## ದಿಲ್ಲಿ

ಇಲ್ಲಿಯ ಸಾಯಮನ್ ವ್ಯಾಪಾರಸ್ಥರ ಸಂಘದವರು ಬ್ರಿಟಿಶ್ ಸಾಯಮನ್ ಕಮಿಷನ್‌ಗಳನ್ನಾಗಲೀ, ಅವುಗಳ ಸಾಮಾನುಗಳನ್ನಾಗಲೀ ೬ ತಿಂಗಳ ವರೆಗೆ ತರಿಸಕೂಡದೆಂದು ನಿರ್ಧರಿಸಿದ್ದಾರೆ. ತಮ್ಮ ಈರ್ವರ ಸಹಕಾರಿಗಳೊಡನೆ ಮೌಲಾನಾ ಶಫೀಕ್ ರಹಮಾನ್ ಕಿಡ್ವಾಯಿಯವರು 'ಜಮಿಯಾ ಮಿಲಿಯಾ' ಸಂಸ್ಥೆಯ ಪ್ರೊಫೆಸರ ಸ್ಥಳಕ್ಕೆ ರಾಜಿನಾಮೆ ಕೊಟ್ಟು ಉಪ್ಪಿನ ಕಾರ್ಯಕ್ಕಾಗಿ ಹೊರಟಿದ್ದಾರೆ. ಸಧ್ಯದ ರಾಷ್ಟ್ರದ ಹೋರಾಟದ ಬಗ್ಗೆ ಪ್ರಮುಖ ಮುಸಲ್ಮಾನರ ಸಹಾನುಭೂತಿಯನ್ನು ದೊರಕಿಸಲು ಇಚ್ಛಿಸುತ್ತಾರೆ.

## ಅಲ್ಲಹಾಬಾದ.

ರಾಯಿ ಬರ್‍ಯಾಲಿ ಜಿಲ್ಹೆಯ ಅನೇಕ ಸ್ಥಳಗಳಲ್ಲಿ ಕಾಯಿದೆಯನ್ನು ಮುರಿದು ಉಪ್ಪು ತಯಾರಿಸಲ್ಪಟ್ಟಿತು. ಒಂದು ಹಳ್ಳಿಯಲ್ಲಿಯ ಜನ ಸ್ವಯಂ ಸೇವಕರು ಹಿಡಿಯಲ್ಪಟ್ಟರು. ಆದರೆ ಉಳಿದ ಸ್ಥಳಗಳಲ್ಲಿ ಯಾರೂ ಹಿಡಿಯಲ್ಪಟ್ಟಿರುವದಿಲ್ಲ.

ರಾಯಿ ಬರ್‍ಯಾಲಿ ಜಿಲ್ಹೆಯ ಜೇಲಿನಲ್ಲಿ ಸೆರೆಯಾಳು ಉಪವಾಸ ವ್ರತವನ್ನು ಕೈಕೊಂಡಿದ್ದು ಹಾಗೆಯೇ ಸಾಗಿದೆ. ರಾಜಕೀಯ ಕೈದಿಗಳೆಲ್ಲರೂ ಸಹ ಈ ಉಪವಾಸ ವ್ರತದಲ್ಲಿ ಭಾಗಿಗಳಾಗುವವರಿದ್ದಾರೆ.

## ವಿರಾರ

ಪುಣೆಯ ಮರಾಠಾ ಪತ್ರದ ಸಂಪಾದಕರಾದ ಶ್ರೀ ಡಿ. ವ್ಹಿ. ಗೋಖಲೆಯವರು ಅಂಬೋಳಾ ಸತ್ಯಾಗ್ರಹ ಕ್ಯಾಂಪದಲ್ಲಿ ೨೬ನೇ ತಾ॥ ನ ಸಂಜೆ ೫॥ ಘಂಟೆಗೆ ಹಿಡಿಯಲ್ಪಟ್ಟರು. ಈ ತೆರವಾದ ಕ್ಯಾಂಪ ಮುಖಂಡತ್ವವನ್ನು ಡಾ. ಗಳು ವರ್ತಕರವರು ವಹಿಸಿದ್ದಾರೆ. ಮಾಹಿಮ, ಪಾಲಘರ ಮೊದಲಾದ ಸ್ಥಳಗಳಲ್ಲಿ ಸತ್ಯಾಗ್ರಹವು ಪ್ರಾರಂಭವಾಗಿದೆ.

## ಬಡೂದಾನ

ಡೆಪ್ಯುಟಿ ಕಲೆಕ್ಟರ ಜಾಗೆಗೆ ರಾಜಿನಾಮೆ ಕೊಟ್ಟ ಠಾಕೂರ ಪೃಥ್ವಿರಾಜ ಸಿಂಗರವರು ತಮ್ಮ ಪತ್ನಿಯೊಡನೆ ೧೧ ಜನ ಸ್ವಯಂಸೇವಕರ ಮುಖಂಡತ್ವವನ್ನು ವಹಿಸಿ ಗೂಲೇಸಿಯಾದಲ್ಲಿ ಉಪ್ಪಿನ ಕಾಯದೆಯನ್ನು ಮುರಿಯುವದಕ್ಕೋಸ್ಕರ ಅಲ್ಲಿಗೆ ಬಂದಕೂಡಲೆ ಅಲ್ಲಿಯ ಜನತೆಯು ಅತೀ ಉತ್ಸಾಹದೊಡನೆ ಅವರನ್ನು ಸ್ವಾಗತೀಕರಿಸಿದರು. ಸ್ವಯಂಸೇವಕರು, ಬರೇಲಿ ಜಿಲ್ಹೆಯಲ್ಲಿರುವ ರಾಮಗಂಗಾ ನದಿಯನ್ನು ದಾಟಿದನಂತರ, ೧೫ ಜನ ಪುಂಡ ಮುಸಲ್ಮಾನರ ತಂಡವು ಲಾಠಿಯಸಹಿತವಾಗಿ ಬಂದು ಸ್ವಯಂಸೇವಕರಿಗೆ ಲಾಠೀಪ್ರಹಾರ ಮಾಡಿದರು.

## ಬಿಸನಾಳ.

ಶ್ರೀ ಶಂಕರ ಹಣಮಂತ ದೇಶಪಾಂಡೆ ಇವರು ಬಿಸನಾಳ ಕುಲಕರ್ಣಿ ಕೆಲಸಕ್ಕೆ ಸರಕಾರದ ದಬ್ಬಾಳಿಕೆಗೆ ಬೇಸತ್ತು ರಾಜಿನಾಮೆ ಕೊಟ್ಟರು. ಸುತ್ತ್ಯ ಉಳಿದ ಗೌಡ ಕುಲಕರ್ಣಿಯರು ಅವರನ್ನು ಅನುಸರಿಸುವರೋ ?

## ತಾಳೀಕೋಟಿ

೨೬ ನೇ ತಾರೀಖಿನ ದಿವಸ ಇಲ್ಲಿಯ ರಜಪೂತ ಜನರ ಸಭೆ ಸೇರಿ ಶರೆ ಸಿಂದಿಯನ್ನು ಕುಡಿಯಕೂಡದಾಗಿಯೂ, ಮಾಂಸಾಹಾರವನ್ನು ಸೇವಿಸಕೂಡದಾಗಿಯೂ ಮತ್ತು ಸಿಗರೇಟುಗಳನ್ನು ಸೇದಕೂಡದೆಂಬ ಬಗ್ಗೆ ಠರಾವುಗಳು ಪಾಸಾದವು. ಹಿರಿಯರೂ ಹುಡುಗರೂ ಮುಂದೆ ಎಂದೂ ಈ ಠರಾವಿನ ವಿರುದ್ಧ ಹೋಗುವದಿಲ್ಲೆಂದು ಆಣೆ ಮಾಡಿದ್ದಾರೆ. ಯಾವನಾದರೂ ಇದಕ್ಕೆ ತಪ್ಪಿ ನಡೆಯುವದು ಕಂಡು ಬಂದರೆ, ಮೊದಲನೇ ಸಾರಿ ೫-೫-೩ ದಂಡಕ್ಕೆ ಪಾತ್ರನಾಗುವನಾಗಿಯೂ ಮತ್ತು ಎರಡನೇ ಸಾರಿ ಇದಕ್ಕೆ ತಪ್ಪಿ ನಡೆಯುವದು ಪುನಃ ಕಂಡು ಬಂದರೆ ಅವನನ್ನು ಸಮಾಜದಿಂದ ಬಹಿಷ್ಕೃತನನ್ನಾಗಿ ಮಾಡಲೇ ಬೇಕಾಗಿಯೂ ಗೊತ್ತಾಯಿತು. ಕರ್ನಾಟಕದ ಉಳಿದ ಉಳಿದ ಭಾಗದವರು ಇವರ ಅನುಕರಣ ಮಾಡುವರೇ ?

## ಶ್ರೀ ಬಸವಜಯಂತಿಯೂ ಕರ್ನಾಟಕವೂ

ಶ್ರೀ ಬಸವ ಜಯಂತಿಯು ವೈಶಾಖ ಶುದ್ಧ ೩ ಗುರುವಾರ ಬಂದಿರುತ್ತದೆ. ಮಹಾನುಭಾವರಾದ ಬಸವಣ್ಣನವರು ವೀರಶೈವರಾದರೂ ಅವರ ತತ್ವಗಳು ಸರ್ವಮಾನ್ಯವಾಗಿವೆ. ಈಗ ದೇಶೋದ್ಧಾರಕ್ಕಾಗಿ ಮಹಾತ್ಮಾ ಗಾಂಧಿಯವರು ಯಾವ ಸತ್ಯಾಗ್ರಹವನ್ನು ಕೈಕೊಂಡಿರುವರೋ ಅದೇ ಸತ್ಯಾಗ್ರಹ ವ್ರತದಿಂದ ಸುಮಾರು ೮೦೦ ವರ್ಷಗಳ ಪೂರ್ವದಲ್ಲಿ ಅಖಿಲ ಕರ್ನಾಟಕವನ್ನೇ ಉದ್ಧಾರಮಾಡಿದರು. ಅವರ ಸ್ವದೇಶಿ ವ್ರತವು ಅಸಾಧಾರಣವಾದದ್ದು. ಪ್ರತಿಯೊಂದು ಸಮಾಜವೂ ಸ್ವಯಂಪೂರ್ಣವಾಗಿರಬೇಕೆಂದು ಅವರ ತತ್ವ. ಇದೇ ಉದ್ದೇಶದಿಂದಲೇ "ಕಾಯಕವೇ ಕೈಲಾಸ" ವೆಂದು ಹೇಳಿ, ಬೇರೆ ಬೇರೆ ಉದ್ಯೋಗಗಳನ್ನು ಮಾಡುವದರಲ್ಲಿದ್ದ ಉಚ್ಚನೀಚ ಎಂಬ ಭೇದಗಳನ್ನು ತೆಗೆದು ಹಾಕಿದರು. ಅಂತೆಯೇ ವೀರಶೈವರಲ್ಲಿ ಪ್ರತಿಯೊಂದು ಉದ್ಯೋಗವನ್ನು ಮಾಡುವವರಿದ್ದು ಈ ಸಮಾಜವು ಸ್ವಯಂಪೂರ್ಣವಾಗಿರುವದು. ಇದೇ ತತ್ವವನ್ನು ಬ್ರಾಹ್ಮಣ, ಜೈನ, ಮುಸಲ್ಮಾನ ಮುಂತಾದ ಸಮಾಜದವರು ಅನುಕರಣಮಾಡುವದು ಅವಶ್ಯವು.

ಶ್ರೀ ಬಸವಜಯಂತಿಯ ಉತ್ಸವದಲ್ಲಿ ಕರ್ನಾಟಕದಲ್ಲಿಯ ಪ್ರತಿಯೊಂದು ಸಮಾಜದವರೂ ಭಾಗತೆಗೆದುಕೊಂಡು ಅವರು ಬೋಧಿಸಿರುವ ಸ್ವದೇಶಿ ವ್ರತದ ಒಂದು ಭಾಗವಾದ ಖಾದಿಯನ್ನೇ ಯಾವತ್ತರೂ ಧರಿಸಬೇಕೆಂದು ನನ್ನ ವಿನಂತಿ.

ಗುರಪಾದಪ್ಪ ಸಜ್ಜನ ಬಿ. ಎ.
ಶ್ರೀ ಮಹಾಂತೇಶ ಎ. ವ್ಹಿ. ಸ್ಕೂಲ
ಇಲಕಲ್ಲ.

# ಸರಕಾರದ ಹೊಸ ಬಾಣಗಳು.

( ತಂತಿಯಿಂದ ಬಂದದ್ದು. )

ವ್ಹಾಯಿಸರಾಯರು ೧೯೧೦ನೇ ಇಸ್ವಿಯ ಪ್ರೆಸ್ ಕಾಯದೆಯನ್ನು ದುರಸ್ತ ಮಾಡಿದಬಗ್ಗೆ ಮುದ್ದಾಂ ಪ್ರಕಟನೆಯನ್ನು ಪ್ರಸಿದ್ಧ ಮಾಡಿರುವರು. ಇದರಿಂದ ಸರಕಾರಕ್ಕೆ ಪ್ರಕಾಶಕರು ಮತ್ತು ಸಂಪಾದಕರು ಕೊಡುವ ಜಾಮೀನು ರದ್ದು ಮಾಡಲಿಕ್ಕೂ ಮುದ್ರಾಲಯದ ಸಾಮಾನುಗಳನ್ನು ಜಪ್ತ ಮಾಡಲಿಕ್ಕೆ ಬರುವದು ಇದಲ್ಲದೇ ಈಗಿನ ಚಳವಳಿಯ ಪ್ರತಿಕಾರದ ಸಲುವಾಗಿ ಹೊಸ ಕೆಲವು ಕಲಮುಗಳನ್ನು ಸಮಾವೇಶ ಮಾಡಿರುವರು. ಕಾಯದೇದ ಅಥವಾ ಶಾಂತತೆಯ ವಿರೋಧವಾಗಿ ಏನಾದರೂ ಮಾಡಿದರೆ ಭೂಮಿಯ ತೆರಿಗೆಯನ್ನು ಕೊಡದೇ ಇರುವದಕ್ಕೆ ಅಥವಾ ಕೊಡುವವರನ್ನು ಮುಂದೆಹಾಕಲಿಕ್ಕೆ ಏನಾದರೂ ಉತ್ತೇಜನವನ್ನು ಕೊಟ್ಟರೆ ಇಂಥ ಕೃತಿಯನ್ನು ನಿರ್ಬಂಧಿಸುವದಕ್ಕೂ ಸಹಾ ಈ ಕಾಯದೇಯಿಂದ ಅಧಿಕಾರವು ಕೊಡಲ್ಪಟ್ಟಿದೆ.

## ಬಂಗಾಲದಲ್ಲಿ ಪೋಲೀಸರು ಮತ್ತೆ ಗುಂಡು ಹಾರಿಸಿದರು.

ಬಂಗಾಲ ಪ್ರಾಂತದಲ್ಲಿ ಡಾಯಮಂಡ ಬಂದರದ ಹತ್ತಿರುವ ನೀಲಾ ಎಂಬ ಸ್ಥಳದಲ್ಲಿ ಉಪ್ಪಿನ ಕಾಯಿದೆಯನ್ನು ಮುರಿಯುವದಕ್ಕಾಗಿ ನೆರೆದ ೨೦೦೦ ಜನರ ಮೇಲೆ ಅವರು ಸ್ವತಂತ್ರ ಉಪ್ಪನ್ನು ತಯಾರಮಾಡುತ್ತಿರುವ ವೇಳೆಗೆ ಪೋಲೀಸರು ಬಂದು ' ನೀವು ಇಲ್ಲಿ ನೆರೆದದ್ದು ಕಾಯಿದೆವಿರುದ್ಧವಾಗಿದೆ. ಆದ್ದರಿಂದ ನೀವು ಇಲ್ಲಿಂದ ಚದರತಕ್ಕದ್ದೆಂದು ಅಪ್ಪಣೆಮಾಡಿದರು. ಜನರು ಅವರ ಅಪ್ಪಣೆಯನ್ನು ಲೆಕ್ಕಿಸದೆ ಉಪ್ಪು ಮಾಡುವ ತಮ್ಮ ಕಾರ್ಯದಲ್ಲಿಯೇ ನಿರತರಾಗಿದ್ದರು. ತಮ್ಮ ಆಜ್ಞಾಭಂಗವನ್ನು ಸಹಿಸಲಾರದ ಪೋಲೀಸರು ಆ ಶಾಂತ ಜನಸಮ್ಮರ್ದನದ ಮೇಲೆ ಗುಂಡಿನ ಮಳೆಗರೆದರು. ಓರ್ವನು ತತ್ಕ್ಷಣದಲ್ಲಿಯೇ ಸತ್ತನು; ಇನ್ನು ೧೯ ಜನರು ಗುಂಡಿನ ಗಾಯಗಳಿಂದ ನೋಯಲಾಗಿರುವರು. ಕೂಡಿದ ಜನರಲ್ಲಿ ಕೆಲವರು ಕಲ್ಲು ದುಂಡುಗಳನ್ನು ಒಗೆದರಂತೆ. ಜನರ ಇಂಥ ವರ್ತನೆಯು ನಿಂದ್ಯವಾದದ್ದೇ ಸರಿ; ನಮ್ಮನ್ನು ಎಂಥ ಯಮಯಾತನೆಗೆ ಗುರುಮಾಡಿದರೂ ನಾವು ಸಾಮೂಹಿಕವಾಗಿಯೂ ಪ್ರಶಾಂತರಾಗಿರುವದು ಅತ್ಯವಶ್ಯವಾಗಿದೆಂದು ಮಹಾತ್ಮರು ಬಡಕೊಳ್ಳುತ್ತಿರುವದು ದೇಶ ಹಿತ್ಯೈಷಿಗಳೆಲ್ಲರೂ ಲಕ್ಷ್ಯದಲ್ಲಿಡತಕ್ಕ ಮಾತಾಗಿದೆ. ಆ ಇಂಥ ಅತ್ಯಾಚಾರಗಳು ನಮ್ಮ ಜನರಿಂದಲೆ ಸಂಭವಿಸುತ್ತಿರುವವೆಂದು ಹೇಳಲಿಕ್ಕೂ ಬರುವಂತಿಲ್ಲ. ನಮ್ಮ ಶಾಂತತೆಯನ್ನು ಭಗ್ನ ಮಾಡಬೇಕೆಂದು ಹವಣಿಸುತ್ತಿರುವ ವೈರಿಗಳ ಕಾರ್ಯಕವಾಗಿರಬಾರದೇಕೆ ?

## ಮಹಾತ್ಮರು ನಮ್ಮಿಂದ ಬೇಡುತ್ತಿರುವದೇನು ?

ಮೊನ್ನಿನ ದಿವಸ ಮಹಾತ್ಮರು ಕರಾಡಿಯಿಂದ ಏಳು ಮೈಲ ಮೇಲಿರುವ ಪಸಾರ ಎಂಬ ಹಳ್ಳಿಯಲ್ಲಿ ಮಾಡಿದ ಭಾಷಣದಿಂದ ಗಾಂಧಿಜಿಯವರು ತಮ್ಮ ದೇಶಬಾಂಧವರ ವರ್ತನೆಯು ಈ ಸಮಯದಲ್ಲಿ ಎಂಥದಾಗಿರಬೇಕೆಂದು ಬಯಸುತ್ತಿರುವರೆಂಬುದನ್ನು ಊಹಿಸಬಹುದಾಗಿದೆ. ಉಪ್ಪನ್ನು ಮಾಡಬೇಕೆಂದು ನೀವು ಸ್ವತಂತ್ರ ಉಪ್ಪನ್ನು ಮಾಡುತ್ತಿರುವರೇನೋ ನಿಜ ಆದರೆ ಈ ರೀತಿಯಾಗಿ ಉಪ್ಪಿನ ಕಟ್ಟೆಗಳನ್ನು ಧಿಕ್ಕರಿಸುವದೇನು ಅಂಥ ಪೌರುಷದ ಕಾರ್ಯವಲ್ಲ ವಿರಾಮಗಾಂವದಲ್ಲಿಯ ಸ್ವಯಂಸೇವಕರಂತೆ ನೀವು ಪೋಲೀಸರ ಪೆಟ್ಟು ತಿಂದಿಲ್ಲ, ಹಾಗೆ ಪೆಟ್ಟು ತಿನ್ನಲು ಬೇಕು. ಉಪ್ಪಿನ ಕಟ್ಟೆಗಳು ಪ್ರಕಾಶವಾದರೂ ಪೋಲೀಸರಿಗೆ ಹೊಡೆಯುವ ಅಧಿಕಾರ ಕೊಡಲ್ಪಟ್ಟಿಲ್ಲ. ಪೋಲೀಸರು ನಮ್ಮ ಹತ್ತಿರವಿರುವ ಉಪ್ಪನ್ನು ತಮ್ಮ ಸ್ವಾಧೀನಪಡಿಸಿಕೊಳ್ಳಬಹುದು, ಆದರೆ ಹೊಡೆಬಡೆಯುವದರಿಂದಲ್ಲ, ನಾನು ಬ್ಯಾರಿಸ್ಟರನಿದ್ದು ಈಗ್ಗೆ ನನ್ನ ಕಾಯಿದೆಯ ಜ್ಞಾನವೆಲ್ಲ ಮಲಿನವಾಗಿದ್ದರೂ, ಮ್ಯಾಜಿಸ್ಟ್ರೇಟರಿಗೆ ಕಾಯಿದೆ ಹೇಳಿ ಈ ಎಲ್ಲ ಸ್ವಯಂ ಸೇವಕರನ್ನು ಕಚೇರಿಯಿಂದ ಬಿಡಿಸಿಕೊಂಡು ಬರಬಲ್ಲೆನು. ಈ ಮಾತು ಬೇರೆ. ನೀವು ನಿಮ್ಮ ಹಳ್ಳಿಯಲ್ಲಿರುವ ಎಲ್ಲ ಈಚಲ ಗಿಡಗಳನ್ನು ಬೇರುದೊರಿಸಲಿ ಕಿತ್ತಿ ನೆಲಕ್ಕುರಳಿಸಬೇಕು; ಅಂದರೆ ಸಿಂದಿ ಅಂಗಡಿಗಳ ಮುಂದೆ ನಿಂತು ಬೋಧಮಾಡುವ ಪ್ರಸಂಗವೇ ತಪ್ಪಿಹೋಗುವದು. ಸಿಂದಿಯ ಬದಲು ನೀವು ಕಣ್ಣಿನ ಪಾನಕವನು ಕುಡಿಯಲು ಆರಂಭಿಸಿರಿ. ನೀವು ದಿನಾಲು ನೂಲಬೇಕು. ಕರಾಡಿಯೊಳಗಿನ ವಿದ್ಯಾರ್ಥಿಗಳು ಚದರಂಡಿಗೆ ಮಾಡಿ ಅವುಗಳ ಮೇಲೆ ನೂಲಹತ್ತಿರುವರು. ನೀವು ವಿದೇಶಿ ಬಟ್ಟೆಗಳನ್ನು ಮತ್ತು ಕರೆ ಸಿಂದಿಗಳನ್ನು ಬಹಿಷ್ಕರಿಸಿದರೆ ನೀವು ಸರಕಾರಕ್ಕೆ ತೆರುತ್ತಿರುವ ತೆರಗಿಯ ಹಣದಷ್ಟು ಉಳಿತಾಯವಾಗಿ ಇದ್ದದರಲ್ಲಿಯೇ ನೀವು ಸುಖಿಯಾಗುವಿರಿ. ಈಗ ನೀವು ಸುಕ್ಕಲೂ ಕಾಣುತ್ತಿರುವ ಕರೀ ಟೊಪ್ಪಿಗೆಗಳನ್ನು ಸುಟ್ಟು ಬಿಡಿರಿ. ನಿಮ್ಮಲ್ಲಿ ಲೋಕಲ್‌ಬೋರ್ಡ ಶಾಲೆಗೆ ಬೇಲಿ ಹಚ್ಚಿ ರಾಷ್ಟ್ರೀಯ ಶಾಲೆಯನ್ನು ತೆರೆಯಿರಿ. ಈ ಸರಕಾರಿ ಶಾಲೆಗಳ ಶಿಕ್ಷಣದಿಂದ ನಾವು ಗುಲಾಮರಾಗುತ್ತೇವೆ. ಸರಕಾರಿ ನೌಕರದಾರರನ್ನು ಬಹಿಷ್ಕರಿಸುವ ಪದ್ಧತಿಯು ಒಳ್ಳೇದಾಗಿದೆ. ಎರಡನೆ ಹಳ್ಳಿಗಳಲ್ಲಿ ಇದರ ಪರಿಣಾಮವು ಬಲು ಗುಣಕಾರಿಯಾಗಿದೆ.

## ಸಿ ರಾಜಗೋಪಾಲಾಚಾರ್ಯರ ಬಿನ್ನಹ.

ತಮಿಳನಾಡಿನ ಸತ್ಯಾಗ್ರಹ ಮಂಡಲಿಯ ಅಧಿಪತಿಯಾದ ಸಿ. ರಾಜಗೋಪಾಲಾಚಾರ್ಯ ಇವರು ಈ ಸತ್ಯಾಗ್ರಹ ಚಳವಳಿಗೆ ಯಶವು ದೊರೆಯಲೆಂದು ಬೇಡಿಕೊಳ್ಳುವದಕ್ಕಾಗಿ ೨೯ ನೇ ತಾರೀಖಿನ ದಿವಸ ಉಪವಾಸ ಜಪತಪಗಳನ್ನು ನಡಿಸಿರೆಂದು ಕೇರಳ ಆಂಧ್ರ ತಮಿಳ ಪ್ರಾಂತಗಳ ಜನಗಳಿಗೆ ಕೇಳಿಕೊಂಡಿದ್ದಾರೆ.

## ಕಾಂಗ್ರೆಸ್ ಮುಖ್ಯ ಕಾರ್ಯದರ್ಶಿಗೂ ಶಿಕ್ಷೆ ಆಯಿತು

ಸಂಯುಕ್ತ ಪ್ರಾಂತದ ಶ್ರೀ ಪ್ರಕಾಶ ಇವರು ರಾಷ್ಟ್ರೀಯ ಮಹಾಸಭೆಯ ಜನರಲ್ ಸೆಕ್ರೆಟರಿಗಳಾಗಿದ್ದರು. ಅವರಿಗೂ ಮೊನ್ನಿನ ದಿವಸ ಆರು ತಿಂಗಳ ಸಜೆ ೧೦೦ ರೂಪಾಯಿ ದಂಡ ಆಗಿದೆ. ತಾವು ಉಪ್ಪಿನ ಕಟ್ಟಳೆಯನ್ನು ಮುರಿಯಬೇಕೆಂದು ಬುದ್ಧಿ ಪೂರ್ವಕವಾಗಿ ಮುರಿದಿರುವೆನೆಂದು ಅವರು ಕೋರ್ಟಿಗೆ ತಿಳಿಸಿದರು.

## ಮಧ್ಯಪ್ರಾಂತ

ಮಧ್ಯಪ್ರಾಂತ ಸತ್ಯಾಗ್ರಹ ಯುದ್ಧ ಮಂಡಲಿಯವರು ಸಧ್ಯಕ್ಕೆ ಉಪ್ಪಿನ ಕಟ್ಟಳೆಯನ್ನಷ್ಟು ಮುರಿಯಬೇಕೆಂದು ನಿಶ್ಚಯಿಸಿರುವರು. ಮಧ್ಯ ಪ್ರಾಂತದಲ್ಲಿ ಮರಾಠಿ ಮಾತಾಡುವ ಮತ್ತು ಹಿಂದೀ ಮಾತಾಡುವ ಎರಡು ಭಾಗಗಳಿದ್ದು ಅವೆರಡು ಭಾಗದವರೂ ಪರಸ್ಪರರು ಸಹಾಯ ಮಾಡುತ್ತಿರಬೇಕೆಂದೂ ನಿಶ್ಚಯಿಸಿಕೊಂಡಿರುವರು.

## ಮಾಲವೀಯರಿಗೂ ಅಪ್ಪಣೆ ದೊರೆಯಲಿಲ್ಲ

ಅಲೀಪೂರ ಜೇಲದಲ್ಲಿ ನಡೆಯುವ ಅತ್ಯಾಚಾರಗಳ ಬಗ್ಗೆ ನಿಜವಾದ ಸಂಗತಿಗಳನ್ನು ತಿಳಿದುಕೊಳ್ಳಬೇಕೆಂದು ಅಲ್ಲಿಯ [illegible] ಮತ್ತು ಸೇನಗುಪ್ತರಿಗೂ ಭೆಟ್ಟಿಯಾಗಿ ಅವರ ಸ್ಥಿತಿ ಸಮಾಚಾರವನ್ನು ವಿಚಾರಿಸಬೇಕೆಂದೂ ಬಯಸಿ ಪಂಡಿತ ಮಾಲವೀಯರು ಅಲೀಪೂರ ಜೇಲಿನೊಳಗೆ ತಮಗೆ ಹೋಗಗೊಡಬೇಕೆಂದು ಜೇಲ ಅಧಿಕಾರಿಗೆ ಕೇಳಲು ಆವನು ಪೋಲೀಸ ಸುಪರಿಂಟೆಂಡೆಂಟನ ಅಪ್ಪಣೆಯಿಲ್ಲದೆ ನಾನು ನಿಮ್ಮನ್ನು ಒಳಗೆ ಬಿಡಲಾರೆನೆಂದು ಹೇಳಿದನು. ಪಂ. ಮಾಲವೀಯರಂಥ ಪುರುಷರೂ ಈ ಪ್ರಕಾರ ಅವಮಾನಿತರಾಗಿ ತಿರುಗಿ ಬರುತ್ತಿರುವದನ್ನು ಹಿಂದೀಯರು ಸಹಿಸಬೇಕಾಗಿದೆ. ಗುಲಾಮರಿಗೆ ಮಾನಾಪಮಾನ ಉಂಟೆ?

ಸೇನಗುಪ್ತರ ಪತ್ನಿಯರಿಗೂ ಅಪ್ಪಣೆ ದೊರೆಯಲಿಲ್ಲ. ಈ ಬಗ್ಗೆ ಜೇಲ ಬಾಗಿಲದಲ್ಲಿಯೇ ಸತ್ಯಾಗ್ರಹ ಹೂಡಬೇಕೆಂದು ಅವರು ಯೋಚಿಸುತ್ತಿರುವರು. ಚಿಂತಾ ಜನಕವಾದ ಬೇನೆ ಬೇಸರಿಕೆ ಸಮಯದಲ್ಲಿಯೂ ಸರಕಾರದವರು [illegible] ಪತಿಪತ್ನಿಯರು ಕೂಡಿ ಪರಸ್ಪರರನ್ನು ಕಾಣಕೂಡದೆಂದು ಅಪ್ಪಣೆ ಕೊಡುತ್ತಿರುವ ಅಭ್ಯಂತರ ಉಳಿಯಲಿಲ್ಲ.

## ಗದಗಿನ ಸತ್ಯಾಗ್ರಹ ಸಿದ್ಧತೆ

ಗದಗ ಮತ್ತು ಬೆಟಗೇರಿಯಲ್ಲಿಯೂ ಅನೇಕ ಜನರು ಸತ್ಯಾಗ್ರಹಕ್ಕಾಗಿ ಸಿದ್ಧರಾಗಿದ್ದಾರೆ. ಮುಂದಿನ ವಾರದಲ್ಲಿ ಉಪ್ಪಿನ ಕಟ್ಟಳೆಯನ್ನು ಮುರಿಯುವದರ ಸಲುವಾಗಿ ಅನೇಕ ಜನ ಸ್ವಯಂಸೇವಕರು ಶ್ರೀ ಜಾಲಿಹಾಳ ಹಾಗು ಸಾವ್ಕಾರರ ಮುಖಂಡತ್ವದಲ್ಲಿ ತೆರಳುವವರಿದ್ದಾರೆ.

ಖಾದಿಯನ್ನು ಬಹುತರ ಎಲ್ಲರೂ ಧರಿಸುತ್ತಲಿದ್ದಾರೆ. ಖಾದೀ ಟೊಪ್ಪಿಗೆಯಿಲ್ಲದ ಜನರನ್ನು ಕಾಣುವದೇ ವಿರಳ.

ಶ್ರೀ ಜಾಲಿಹಾಳ ಮುಂತಾದವರು ಉಪ್ಪಿನ ಕಟ್ಟಳೆಯನ್ನು ಮುರಿದಿದ್ದಾರೆ, ಇಲ್ಲಿಯ ಅಧಿಕಾರಿಗಳು ಅವರನ್ನು ಹಿಡಿದಿಲ್ಲ. ಹಿಡಿದರೆ ಚಳವಳಿಗೆ ಹಚ್ಚುಗೆ ಕೊಟ್ಟಂತಾದೀತೆಂದು ಹೆದರಿ ಬಿಟ್ಟಂತೆ ತೋರುತ್ತದೆ.

## ರಾಯಚೂರ

ಇಲ್ಲಿ ಬಿಸಿಲಿನ ಬೇನೆಯು ಅಸಹ್ಯವಾಗಿ ತೊಡಗಿದ್ದರೂ ಎಳೆ ಮಕ್ಕಳು ಇಂಥ [illegible] ಸೆಕೆಯಲ್ಲಿಯೇ ಶಾಲೆಗೆ ಹೋಗುವಾಗ್ಗೆ ಎಳೆ ಮಕ್ಕಳು ಕಮರಿ ಹೋಗುತ್ತಿರುವರು. ಶಾಲೆಗೆ ಸೂಟಿ ಕೊಡಬಾರದೆ? ಅಧಿಕಾರಿಗಳ ಹೊಟ್ಟೆಯಲ್ಲಿ ಮಕ್ಕಳಿಲ್ಲವಾಗಿ ತೋರುತ್ತದೆ. ಇಲ್ಲಿಯ ಹಮದರ್ದ ಶಾಲೆ ವಿದ್ಯಾರ್ಥಿಗಳು ಸ್ಕೌಟ ರ‍್ಯಾಲಿಗಾಗಿ ಹೈದರಾಬಾದಕ್ಕೆ ಹೋಗುತ್ತಿರುವಂತೆ ಸ್ಕೌಟರ ಹುಚ್ಚು ಇನ್ನೂ ಇಲ್ಲಿಯ ಹುಡುಗರಿಗೆ ಬಿಟ್ಟಿಲ್ಲವಾಗಿ ತೋರುತ್ತದೆ. ಧಾರವಾಡ ಹುಡುಗರ ವೀರವೃತ್ತಿಯು ಇವರಿಗೆ ಗೊತ್ತಿರಲಿಕ್ಕಿಲ್ಲವೆ?

ಲೋಕಲ ಫಂಡಿನವರು ಗಟಾರುಗಳ ಕೊಳಚೆ ನೀರನ್ನು ರಸ್ತೆಗಳಿಗೆ ಉಗ್ಗಿಸಿ, ಊರಿಗೆ ಬೇನೆಗಳನ್ನು ಕರೆಕರುವ ಯತ್ನದಲ್ಲಿದ್ದಾರೆ. ಊರು ನಿರೋಗಿಯಾಗಿರುವದನ್ನು ನೋಡಲಾರರು ಪಾಪ

## ಗುಳೇದಗುಡ್ಡ

ಕರ್ನಾಟಕದಲ್ಲಿಯ ಮುಂದಾಳುಗಳು ಕಾರಾಗೃಹಕ್ಕೆ ಹೋದಬಗ್ಗೆ ಅವರನ್ನು ಅಭಿನಂದಿಸುವ ಕುರಿತು ಜಾಹೀರ ಸಭೆಯು ನಿನ್ನಿನ ದಿವಸ ಸೇರಿತ್ತು. ಸಭೆಗೆ ೧೦೦೦ ಕ್ಕಿಂತ ಹೆಚ್ಚು ಜನರು ಬಂದಿದ್ದರು. ಮಾಮಲೇದಾರ, ಫೌಜದಾರ ಮತ್ತು ಪೋಲೀಸಶಿಪಾಯರನ್ನು ಸಭೆಯಲ್ಲಿ ನೋಡಬಹುದಾಗಿತ್ತು. ಸಂಜೆಯ ೬ ಘಂಟೆಗೆ ಸರಿಯಾಗಿ ಸಭೆಯು ಶ್ರೀ ಬಾಪೂರಾವ ಬಾಸೂತಕರ ಇವರ ಅಧ್ಯಕ್ಷತೆಯ ಕೆಳಗೆ ಜರುಗಿತು. ಶ್ರೀ ತಿಪ್ಪಣ್ಣ ಶಾಸ್ತ್ರಿ ಇವರು ಮಹಾತ್ಮಾ ಗಾಂಧಿಯವರ ಚಳವಳಿಯಲ್ಲಿ ಯಾಕೆ ಭಾಗಿಗಳಾಗಬೇಕೆಂಬುವ ವಿಷಯದ ಬಗ್ಗೆ ೧ ತಾಸಿನವರೆಗೆ ಬಹು ಮಾರ್ಮಿಕವಾಗಿ ಸಭಿಕರಿಗೆ ತಿಳಿ ಹೇಳಿದರು. ಅನಂತರ ೧೦ ವರ್ಷದ ಹುಡುಗನಾದ ಪರಪ್ಪ ಮುರಗೆಪ್ಪ ಕಲ್ಯಾಣಿ ಇವನು ಅದೇ ವಿಷಯದ ಮೇಲೆ ತಾನು ಬರೆದು ತಂದ ನಿಬಂಧವನ್ನು ಓದಿದನು. ಸಭೆಯಲ್ಲಿ ಗುಳೇದಗುಡ್ಡದ ಸಮೀಪದಲ್ಲಿಯೇ ಉಪ್ಪು ತಯಾರಾಗುವ ಸ್ಥಳವನ್ನು ಶೋಧಿಸಿ, ಉಪ್ಪಿನ ಕಾಯದೇ ಉಲ್ಲಂಘನ ಮಾಡಬೇಕಾಗಿ ಠರಾವು ತೀರ್ಮಾನಿಸಲ್ಪಟ್ಟಿತು.

---

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಬುಧವಾರ ತಾ. ೩೦-೪-೩೦

**ಮಾಯಾ ಬಾಜಾರ.**

ಶನಿವಾರ ತಾ. ೩-೫-೩೦

**ಯಚ್ಚಮ್ಮ ನಾಯಿಕ.**

ಎಂಬ ನಾಟಕಗಳನ್ನು ಅಭಿನಯಿಸುವರು.

ಸಂಘದೊಡೆಯ—ಸದಾಶಿವರಾವ ಗರೂಡ

---

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾ[illegible] ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦-೦-೩

# ಕನ್ನಡಿಗ

ಜಯಕರ್ನಾಟಕ

ನಿತ್ಯಸಂಚಿಕೆಯು.

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ಗುರುವಾರ ಮಿತಿ ವೈಶಾಖ ಶುದ್ಧ ೩ ಶಕ ೧೮೫೨ ತಾ ೧-೫-೩೦ ಸಂಚಿಕೆ ೩೬

## ಸಂಪಾದಕರ ಭೂಮಿ.

ನನ್ನ ದೇಹವು ನಿನ್ನ ವೀರಶಾಸನಕಾಗಿ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ದೇಶಬಹುಗಂಧವಹವೆಂದು ತಿಳಿಯೆ॥

## ಶ್ರೀಮದ್ಬಸವೇಶ್ವರ ಜಯಂತಿಯು

ರಾಷ್ಟ್ರ ಪುರುಷರ ಜಯಂತಿಯು ಉತ್ಸವೆಂದರೆ ಅದು ರಾಷ್ಟ್ರದ ತರುಣರಲ್ಲಿ ಉತ್ಸಾಹವನ್ನು ಹುಟ್ಟಿಸುವ ಸುಪ್ರಸಂಗವು. ಜಗತ್ತಿನಲ್ಲಿಯ ಎಲ್ಲ ವೀರಶೈವರಿಗೂ ಬಸವ ಜಯಂತಿಯು ಒಂದು ಪವಿತ್ರವಾದ ಕಾರ್ಯವು. ಪುಣ್ಯದ ಸಾಧನವು. ಬಸವಣ್ಣನವರು ಕೇವಲ ವೀರಶೈವ ಮತದ ಪುನರುದ್ಧಾರವನ್ನಷ್ಟೇ ಮಾಡಲಿಲ್ಲ. ಅದರ ಸಂಗಡಲೇ ಅವರು ಸಾಮಾಜಿಕ ಸುವ್ಯವಸ್ಥೆಯನ್ನೂ ಮಾಡಿದರು. ಸಮಾಜದಲ್ಲಿಯ ಪ್ರತಿಯೊಂದು ವ್ಯಕ್ತಿಯು ಉದಾತ್ತ ವೈದಿಕ ತತ್ವಗಳನ್ನು ಆಚರಿಸುವಂತೆ ಸುಲಭವಾದ ಕೆಲವು ಧಾರ್ಮಿಕ ನಿಯಮಗಳನ್ನು ಜನತೆಯ ಹೃದಯದಲ್ಲಿ ಕಳಲೂರುವಂತೆ ಮಾಡಿದರು. ರಾಜಕೀಯ ವಾತಾವರಣವನ್ನೂ ಅವರು ಸುಸ್ಥಿರವಾಗುವಂತೆ ಮಾಡಿದ್ದರು. ತಮ್ಮ ಅನುಯಾಯಿಗಳು ಯಾವ ತರದ ಆರ್ಥಿಕ ತೊಂದರೆಗಳಿಗೆ ಒಳಗಾಗ ಬಾರದಂತೆಯೂ ಕೆಲವು ನಿಯಮಗಳನ್ನು ಹಾಕಿಕೊಟ್ಟಿರುವರು. ಇಂಥ ದೈವೀಶಕ್ತಿಯಿಂದ ಪ್ರೇರಿತವಾದ ಅವತಾರವು ಲೋಕ ಕಲ್ಯಾಣಕ್ಕಾಗಿ ಅವತರಿಸಿದ ಪುಣ್ಯಭೂಮಿಯು ನಮ್ಮ ಕನ್ನಡ ನಾಡು. ಈ ವಿಭೂತಿಯ ಜಯಂತಿ ಉತ್ಸವನ್ನು ಮಾಡುವ ಮೊದಲು, ನಾವು ಆ ದೈವೀ ಪುರುಷನು ಹಾಕಿಕೊಟ್ಟ ಧಾರ್ಮಿಕ, ಸಾಮಾಜಿಕ, ರಾಜಕೀಯ ಆರ್ಥಿಕ ನಿಯಮಗಳಲ್ಲಿ ಕೆಲವನ್ನಾಗಲಿ ಆಚರಣೆಯಲ್ಲಿ ತರಲು ಪ್ರಯತ್ನಿಸತಕ್ಕದ್ದು. ಅಂದರೇ ಆ ಮಹಾಪುರುಷನ ಪುಣ್ಯಸ್ಮರಣ ಮಾಡಿದಂತಾಗುವದು,

## ವೀರಶೈವರ ಅವನತಿ

ಕರ್ನಾಟಕದ ಪ್ರಾಮುಖ್ಯ ಜನಾಂಗವೆಂದರೆ ವೀರಶೈವರು ನಮ್ಮ ಕೈಯಲ್ಲಿ ಪುರಾತನ ಕಾಲದಿಂದಲೂ ಒಕ್ಕಲತನ ಕೈಗಾರಿಕೆ, ವ್ಯಾಪಾರ, ಮುಂತಾದ ದೇಶದ ಸಂಪದಾಭಿವೃದ್ಧಿಯ ಉದ್ಯೋಗಗಳು ಇದ್ದವು. ಅವು ಸದ್ಯಕ್ಕೆ ಪರಕೀಯ ಸ್ವಾರ್ಥಿ ಇಂಗ್ರೇಜಿ ಸರಕಾರದ ಆಳಿಕೆಯಿಂದ ವ್ಯಾಪಾರ ಕಲಾಕೌಶಲ್ಯಗಳು ಮಣ್ಣುಪಾಲಾದವು. ಒಕ್ಕಲತನವು ಮಾತ್ರ ಹಾಗೂ ಹೀಗೂ ಜೀವ ಹಿಡಕೊಂಡು ದೈನ್ಯಾವಸ್ಥೆಯಲ್ಲಿ ಇರುವದು ಈ ಸ್ಥಿತಿಯನ್ನರಿತ ಈಗ ನಮ್ಮ ಮುಂದಾಳುಗಳು ನಮ್ಮ ವೀರಶೈವರಲ್ಲಿ ವಿದ್ಯಾ ಪ್ರಸಾರದ ಪವಿತ್ರ ಕಾರ್ಯವನ್ನು ಕೈಕೊಂಡು ಅವಿಶ್ರಾಂತ ಶ್ರಮವಹಿಸಿ ಗಣಪತಿಯನ್ನು ಮಾಡ ಹೋಗಲು, ಮಂಗವಾಯಿತು. ಅವರ ಫಲರೂಪವಾದ ಪದವೀಧರರಲ್ಲಿ ಕೆಲವರು ಸರಕಾರಿ ನೀಚಸೇವಾ ವೃತ್ತಿಯಿಂದಲೂ ಮತ್ತು ಕೆಲವರು ನಮ್ಮ ಧನರೂಪಿ ರಕ್ತವನ್ನು ಹೀರುವ ವಕೀಲ ಉದ್ಯೋಗದಲ್ಲಿಯೂ ತೊಡಗಿ ತಮ್ಮ ಸ್ವಾರ್ಥದ ಹೊಟ್ಟೆಯನ್ನು ತುಪ್ಪದಲ್ಲಿ ಎದ್ದುತ್ತ ಇರುವರು. ಈ ಮಹಾಶಯರಿಂದ ನಮ್ಮ ಸಮಾಜದ ಉನ್ನತಿ ಮಾತಂತೂ ಪತ್ತಟ್ಟಿಗಿರಲಿ ಯಾವ ಸಮಾಜದ ಬಲದಿಂದ ಪದವೀಧರರಾದರೋ ಅದೇ ಸಮಾಜದ ಹಿತವನ್ನು ತಮ್ಮ ಕಾಲಿನಿಂದ ತುಳಿಯುತ್ತಿರುವರು. ಸ್ವಾರ್ಥ ಪಿಶಾಚಿಯಿಂದ ಹಿಡಿಯಲ್ಪಟ್ಟ ಈ ವರ್ಗಕ್ಕೆ ಮಹಾತ್ಮನ ಮೋಕ್ಷ ಮಂತ್ರ (ಸತ್ಯಾಗ್ರಹ)ದ ಹೆಸರನ್ನು ಎತ್ತಿದೊಡನೆ ಕಣ್ಣು ಬೆಳ್ಳಗಾಗುತ್ತಾವೆ. ಸದ್ಯಕ್ಕೆ ಭರತ ಭೂಮಿಯಲ್ಲಿ ಜೋರ್ಗರೆಯುವ ಚಳವಳಿಯ ಭೇರಿ ನಾದವು ಈ ಮಹಾಶಯರ ಕರ್ಣರಂಧ್ರವನ್ನು ಭೇದಿಸಲಾರದಾಗಿದೆ. ಶಿವ, ಶಿವಾ, ಎಂಥ ಅಧಃಪಾತವಿದು ನಮ್ಮ ನೆರೆಯವರಾದ ಮಹಾರಾಷ್ಟ್ರ ಗುರ್ಜರ ಪ್ರಾಂತದ ಹೆಂಗಳೆಯರ ಬಲವನ್ನಾದರೂ ಪರಮಾತ್ಮನು ನಮ್ಮ ಮುಂದಾಳುಗಳಿಂದ ಮೆರೆಯುವ ಪದವೀಧರ ಮಹಾಶಯರಿಗೆ ದಯಪಾಲಿಸಬಾರದೆ. ಮಾರ್ಗದರ್ಶಕರಿಲ್ಲದೇ ತೊಳಲುತ್ತಿರುವ ನಮ್ಮ ಸಮಾಜದಲ್ಲಿ ಧೈರ್ಯಕಷ್ಟ ಸಹಿಷ್ಣುತೆ ಮುಂತಾದ ಸದ್ಗುಣಗಳನ್ನು ಮಣ್ಣುಗೂಡಿಸುವ ಮುಂದಾಳುಗಳೆಂಬ ಬಿಸುಲುಗುದರಿಯ ಬೆನ್ನುಹತ್ತಿ ನಿರಾಶರಾಗ ಬೇಡರಿ ಬಾಂಧವರೇ ಏಳಿರಿ, ಏಳಿರಿ ಜಾಗ್ರ

ತರಾಗೆರಿ ಸುಖಕ್ಕೆಲಿಗ್ಗಳಲ್ಲಿ ಹೊರಳಾಡುವದನ್ನು ಕಷ್ಟದಾಯಕವಾದ ಕಠಿಣ ಕಾರ್ಯಕ್ಕಾಗಿ ಕರಿಸು ಬೇಡರಿ, ಅವರಿಗೆ ನವಪ್ರೀತೆ ರೊಟ್ಟಿಗೆ ಗತಿಯಿಲ್ಲೆಂಬ ಪ್ರಸಂಗ ಒದಗುವವರೆಗೂ ಸುಖವಾಗಿ ಉರುಳಾಡಲಿ. ಭಾರತ ಮಾತೆಯು ಸ್ವಾತಂತ್ರ್ಯಕ್ಕಾಗಿ ತನ್ನ ಸರ್ವಸ್ವವನ್ನು ಧಾರೆಯೆರೆದ ಮಹಾತ್ಮಾಜಿಯು ಬೆನ್ನ ಹಿಂದೆ ಆತನು ಅನುಭವಿಸುವ ಕಷ್ಟದಲ್ಲಿ ಭಾಗಿಗಳಾಗೋಣ. ನಾಮಧಾರಿ ಮುಂದಾಳುಗಳಿಗೆ ಶರಣು ಹೊಡಿಯೋಣ.

ಇಲಕಲ್ಲ ಓರ್ವ ವೀರಶೈವ

---

## ಪ್ರೆಸಿಡೆಂಟ ಪಟೇಲರು ತಮ್ಮ ರಾಜೀನಾಮೆ ಕಾಲಕ್ಕೆ ವೈಸರಾಯರಿಗೆ ಬರೆದ ಪತ್ರವು.

ನನ್ನ ಪ್ರಿಯಮಿತ್ರ ಅರ್ಯವಿನ್‌ರೆ,

ನಾನು ಈ ಪತ್ರದ ಮುಖಾಂತರ ಅಸೆಂಬ್ಲಿಯಲ್ಲಿಯ ನನ್ನ ಅಧ್ಯಕ್ಷಪದದ ಮತ್ತು ಸದಸ್ಯತ್ವದ ರಾಜೀನಾಮೆಯನ್ನು ಸಾದರ ಪಡಿಸಲು ಬಯಸಿದ್ದೇನೆ. ನಾನು ಹೀಗೆ ಒಮ್ಮಿಂದೊಮ್ಮೆಲೆ ರಾಜೀನಾಮೆಯನ್ನು ಕೊಡುವ ಕಾರಣಗಳ ವಿವರವನ್ನು ಮತ್ತು ಈ ಅಧ್ಯಕ್ಷಪದದಲ್ಲಿ ನಿಂತುಕೊಂಡು ಕೆಲಸ ಮಾಡುವಾಗ ನಾನು ಅನುಭವಿಸಿದ ಅನೇಕ ಅಡಚಣೆಗಳನ್ನು ನಿಮ್ಮ ಅವಲೋಕನಕ್ಕೆ ತರುವದುಚಿತವೆಂದೆಣಿಸಿ ಅವುಗಳನ್ನು ಸಂಕ್ಷೇಪವಾಗಿ ಇಲ್ಲಿ ಮುಂಡಿಸಿದ್ದೇನೆ.

ಅಧ್ಯಕ್ಷಪದವನ್ನು ನಾನು ಅತೀವನಿಷ್ಪಕ್ಷಪಾತ ಬುದ್ಧಿಯಿಂದ ವಹಿಸಿದ ಈ ಐದುವರ್ಷಗಳ ಅವಧಿಯಲ್ಲಿ ನಾನು ಅತ್ಯಂತ ನಿರ್ದಾಕ್ಷಿಣ್ಯದಿಂದ ಕೆಲಸ ಮಾಡುತ್ತ ಬಂದಿರುವೆನು. ಅಗ್ಗ ಲೋಕಪ್ರಿಯತೆಯ ಮಬ್ಬಿಗೆ ಬೀಳದೆ ಅಥವಾ ಆಳರಸರ ಬೆದರಿಕೆಗೆ ಹೆದರದೆ ಕೇವಲ ದೇಶಹಿತೈಕ ಮತ್ತು ಅಸೆಂಬ್ಲಿಯ ದೃಷ್ಟಿಯಿಂದ ನಾನು ಅಧ್ಯಕ್ಷಪದದ ಕಾರ್ಯಭಾರವನ್ನು ನಿರ್ವಹಿಸುತ್ತ ಬಂದಿರುವೆನು.

### ಆಳರಸರ ಕ್ಷೋಭೆ.

ನನ್ನ ನಿರ್ದಾಕ್ಷಿಣ್ಯದ ಆಡಳಿತವು ಆಳರಸರಿಗೆ ಸಹನವಾಗಲಿಲ್ಲ. ತಮ್ಮ ಇಚ್ಛೆಯನ್ನೆ ನಡಿಸಬೇಕೆಂದು ಹಟ ಹಿಡಿದ ಬಿಳಿಯ ಅಧಿಕಾರಿ ವರ್ಗವು 'ಬಾದಶಹನ ಸರಕಾರವು ಸರಳವಾಗಿ ಸಾಗುವಂತೆ ನೀವು ಅನುಕೂಲರಾಗಿ ವರ್ತಿಸಲೇಬೇಕೆಂ'ದು ನನ್ನ ಮೇಲೆ ಅನೇಕ ಬಗೆಯ ಒತ್ತಾಯಗಳನ್ನು ಉಪಯೋಗಿಸಿದರೂ ಅವುಗಳನ್ನೆಲ್ಲ ನಾನು ಬಹು ಜಿಗಟಿನಿಂದ ವಿರೋಧಿಸಿದ್ದಕ್ಕೆ ಕಡೆಗೆ ಅವರ ಕ್ಷೋಭೆದ್ವೇಷಾಸೂಯೆಗಳಿಗೆ ಗುರಿಯಾದೆನು.

### ಅಧ್ಯಕ್ಷಪದವೆಂದರೆ ಅದೊಂದು ಮುಳ್ಳಿನ ಹಾಸಿಗೆಆಗಿತ್ತು

ಈ ಮೂರು ವರ್ಷಗಳಲ್ಲಿಯಂತೂ ಅಧ್ಯಕ್ಷಪದವೆಂದರೆ ಅದೊಂದು ಮುಳ್ಳಿನ ಹಾಸಿಗೆಯೇ ಆಗಿ ಪರಿಣಮಿಸಿದೆ. ಬಿಳಿಯ ಅಧಿಕಾರಿ ವರ್ಗವೆಲ್ಲ ನನ್ನ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ಸಹ ಹಾಕುವದಕ್ಕೆ ಯತ್ನಿಸಿತು. ವೃತ್ತ ಪತ್ರಗಳಲ್ಲಿ ನನ್ನ ವಿರೋಧವಾಗಿ ಬರೆದ ಹೀನ ಟೀಕೆಗಳನ್ನು ಸಹ ನುಂಗಿಕೊಂಡೆನು. ನನಗೆ ಇಂಥ ಟೀಕೆಗಳಿಗೆ ಉತ್ತರ ಕೊಡಲಿಕ್ಕೆ ಉಪಾಯವಿದ್ದಿಲ್ಲ. ಅಸೆಂಬ್ಲಿಯ ಅಧಿವೇಶನದಲ್ಲಿಯೇ ಇವುಗಳಿಗೆ ಉತ್ತರ ಕೊಡುತ್ತಿದ್ದೆನು.

### ನನ್ನನ್ನು ಇಳಿಸಬೇಕೆಂಬ ಹಂಚಿಕೆ.

ನನ್ನನ್ನು ಒಗೆಯುವದಕ್ಕಾಗಿ ಈ ಅಧಿಕಾರಿಗಳು ಯೋಚಿಸಿದ್ದರು. ವೃತ್ತಪತ್ರಗಳಲ್ಲಿ ಸಹ ಇವರ ಲೇಖಗಳಿಗೆ ಆಸ್ಪದವು ದೊರೆಯುತ್ತಿತ್ತು. ನನ್ನ ರಾಜೀನಾಮೆಯಿಂದ ಅವರಿಗೆ ಆನಂದವಾಗಬಹುದು.

ನನ್ನನ್ನು ಯಾವಾಗಲೂ ಗುಪ್ತರೀತಿಯಿಂದ ಕಾಯುತ್ತಿದ್ದರು. ನನ್ನ ನಡೆನುಡಿಗಳ ಮೇಲೆ ಅವರ ಗುಪ್ತದೃಷ್ಟಿಯು ಇದ್ದೇ ಇತ್ತು.

ಹಿಂದೆ ನನ್ನ ಮನಸ್ಸು ಎಂದಿಗೂ ರಾಜೀನಾಮೆಯನ್ನು ಕೊಡುತ್ತಿದ್ದಿಲ್ಲ; ಆದರೆ ನಾನು ಘಟ್ಟಿಯಾಗಿ ಉಳಿದು ನಿಷ್ಪಕ್ಷಪಾತದಿಂದಲೂ ಸ್ವತಂತ್ರತೆಯಿಂದಲೂ ನನ್ನ ನಿರ್ಣಯಗಳನ್ನು ಪ್ರತಿಯೊಂದು ಪ್ರಸಂಗದಲ್ಲಿ ಕೊಟ್ಟದ್ದು ಜಗತ್ತಿನಲ್ಲಿ ಎಲ್ಲ ರಾಷ್ಟ್ರೀಯ ಸಂಸ್ಥೆಗಳಿಗೆ ಇವು ಅಭಿಮಾನಾಸ್ಪದ ಸಂಗತಿಗಳಾಗದೇ ಇರಲಾರವು.

ಆದರೆ ಈಗಿನ ಪರಿಸ್ಥಿತಿಯಲ್ಲಿ ನಾನು ಅಧ್ಯಕ್ಷನಾಗಿ ಉಳಿಯುವದರಿಂದ ಯಾವ ಹಿತವೂ ಆಗುವದಿಲ್ಲ. ಎಷ್ಟೋ ಜನರು ರಾಜೀನಾಮೆಯನ್ನು ಕೊಟ್ಟಿರುವರು. ಮದನಮೋಹನ ಮಾಲವೀಯರಂಥವರು ಸಹ ಬಿಟ್ಟು ಹೋದರು. ಟ್ಯಾರೀಫ ಬಿಲ್ಲಿನಲ್ಲಿ ಅಧಿಕಾರಿಗಳು ಸ್ವತಂತ್ರ ಅಭಿಪ್ರಾಯಕ್ಕೆ ಆಸ್ಪದ ಕೊಡದೇ ಬಿಲ್ಲನ್ನು ಪಾಸು ಮಾಡಿಕೊಂಡರು,

ಈಗ ಘೋರಯುದ್ಧವು ನಡೆದಿರುವದು ಎಷ್ಟೋ ಜನರು ಸೆರೆಮನೆಯಲ್ಲಿ ಹೋಗಿರುವರು. ಮತ್ತು ಎಷ್ಟೋ ಜನರು ಹೋಗುತ್ತಿರುವರು. ನಾನು ಯಾರಿಗೂ ತ್ರಾಸವಾಗದೆ ಶಾಂತ ಸ್ವರಾಜ್ಯದ ಘಟನೆಯ ಪ್ರಾಪ್ತಿಯಾಗಿ ಪ್ರಯತ್ನ ಮಾಡಿದೆನು. ಆದರೆ ಅದಕ್ಕೆ ಯಶಸ್ಸು ದೊರೆಯಲಿಲ್ಲ. ಇಂಗ್ಲಂಡ ಮತ್ತು ಹಿಂದುಸ್ತಾನದಲ್ಲಿ ನಡೆದ ಸಂಗತಿಗಳನ್ನು ನೋಡಿದರೆ ಶಾಂತ ಸ್ವರಾಜ್ಯವನ್ನು ಕೊಡುವದು ಶಕ್ಯವಾಗಿ ತೋರುವದಿಲ್ಲ.

ಆದ್ದರಿಂದ ನನಗೆ ರಾಜೀನಾಮೆಯನ್ನು ಕೊಡುವ ಉಪಾಯವು ಒಂದೇ ಉಳಿದದ್ದು ರಾಜೀನಾಮೆಯನ್ನು ಕೊಟ್ಟಿರುವೆನು.

---

## ಹುಬ್ಬಳ್ಳಿ.

ಅಂಕೋಲೆಯಲ್ಲಿ ಬೆಳಗಾಂವಿ ಸತ್ಯಾಗ್ರಹಿಗಳ ಲೀಡರರಾದ ಶ್ರೀ. ಎಸ್ ಎನ್ ದೇಶಪಾಂಡೆಯವರನ್ನು ಭಾಷಣ ಮಾಡಿದ್ದಕ್ಕಾಗಿ ಹಿಡಿದಿರುವರು.

ಕರ್ನಾಟಕ ಸತ್ಯಾಗ್ರಹ ಮಂಡಳದವರು ತಾ-೧-೫-೩೦ನೇ ಗುರುವಾರ ದಿವಸ ಧಾರವಾಡ ಜಿಲ್ಹೆಯ ಸರ್ವ ಭಾಗಗಳಲ್ಲಿಯೂ ಸಾರ್ವತ್ರಿಕ ಕಾಯಿದೆಭಂಗದ ಕಾರ್ಯಕ್ರಮವು ನಡೆಯಬೇಕೆಂದು ನಿಶ್ಚಯಿಸಿದ್ದಾರೆ. ಆದ್ದರಿಂದ ಧಾರವಾಡ ಜಿಲ್ಹೆಯಲ್ಲಿರುವ ಸರ್ವ ಸತ್ಯಾಗ್ರಹಿಗಳೂ ಮತ್ತು ಎಲ್ಲ ನಾಗರಿಕರೂ ತಮ್ಮ ತಮ್ಮ ಸ್ಥಳದಲ್ಲಿ ಅಂದು ಎಂಟು ಘಂಟೆಗೆ ಸರಿಯಾಗಿ ಉಪ್ಪಿನ ಕರದ ಕಾಯದೆಯನ್ನು ಶಕ್ಯವಿದ್ದರೀತಿಯಿಂದ ಮುರಿಯಬೇಕೆಂದು ವಿನಂತಿ ಮಾಡಿಕೊಂಡಿರುವರು.

## ವ್ಹಾಯಿಸರಾಯರು

# ಪಟೇಲರಿಗೆ ಕೊಟ್ಟ ಆಹ್ವೇರಿಯು.

ವ್ಹಾಯಿಸರಾಯರು ಪ್ರೆಸ ಆಕ್ಟ ಎಂಬದೊಂದು ಹೊಸ ಕಾಯದೆಯನ್ನು ಮಾಡಿರುವರು. ಈ ಕಾಯದೆಯಿಂದ ವರ್ತಮಾನಪತ್ರಗಳು ತಮ್ಮ ಕೈಕಾಲುಗಳನ್ನು ಸಹ ಅಲ್ಲಾಡಿಸದೆ ಸುಮ್ಮನೆ ಕುಳಿತುಕೊಳ್ಳಬೇಕಾಯಿತು. ಇದರ ಪರಿಣಾಮವು ಈಗಾಗಲೇ ಕಂಡುಬರುತ್ತಿದೆ. ವ್ಹಾಯಿಸರಾಯರು ಬಹಳೇ ಮುತ್ಸದ್ಧಿಗಳೂ ಶಾಂತಚಿತ್ತದವರೂ ಎಂದು ಇದುವರೆಗೆ ಅನಿಸಿಕೊಂಡು ಈಗಮಾತ್ರ ಇಂಥ ಕೆಲಸಮಾಡಿದರು. ವರ್ತಮಾನಪತ್ರಗಳನ್ನು ಹೆಡಮುರಿಗೆ ಕಟ್ಟುವ ಕಾಯದೆಯನ್ನು ಶುರುವು ಮಾಡಿರುವರು. ವರ್ತಮಾನಪತ್ರಗಳೆಂದರೆ ರಾಷ್ಟ್ರದ ನಿಜವಾದ ಪರಿಸ್ಥಿತಿಯನ್ನು ಮತ್ತು ರಾಷ್ಟ್ರದ ಜ್ಞಾನವನ್ನೂ ಪ್ರಸಾರಮಾಡುವ ಸಾಧನಗಳು. ವ್ಹಾಯಿಸರಾಯರ ಹೊಸ ಕಾಯಿದೆಯಿಂದ ಈ ಸಾಧನಗಳು ಮೂಲೆಗುಂಪಾಗಿ ಬೀಳುವವು. ಈ ಕಾಯದೆಯ ವಿಷಯಕ್ಕೆ ನಿಮ್ಮ ಅಭಿಪ್ರಾಯವೇನೆಂದು ಪಟೇಲರಿಗೆ ಕೇಳಿದರೆ ಅವರು ತಾವು ಅಧ್ಯಕ್ಷಪದವಿಗೆ ರಾಜೀನಾಮೆಕೊಟ್ಟು ಬರುವ ಮುಂದೆ ವ್ಹಾಯಿಸರಾಯರು ತಮಗೆ ಇದನ್ನೊಂದು ಕಳುಹಿದ ಆಹ್ವೇರಿಯನ್ನು ಮಾಡಿದರು ಎಂದು ಹೇಳಿದರು,

## ವ್ಹಾಯಿಸರಾಯರಿಗೆ
### ಪಟೇಲರು ಮಾಡಿದ ಉಪದೇಶವು

ಪಟೇಲರು ವ್ಹಾಯಿಸರಾಯರಿಗೆ ಎರಡನೆಯದೊಂದು ಪತ್ರವನ್ನು ಬರೆದಿರುವರು. ಮತ್ತೂ ಹೀಗೆ ಹೇಳಿರುವರು ನಾನು ವಿಲಾಯತಿಗೆ ಹೋದಕಾಲಕ್ಕೆ ಹಿಂದುಸ್ಥಾನದ ನಿಜವಾದ ಪರಿಸ್ಥಿತಿಯನ್ನು ಬಾದಶಹರಿಗೂ, ಬರ್ಕನಹೆಡ್ ಸಾಹೇಬರಿಗೂ ಇನ್ನೂ ಬ್ರಿಟಿಶ ಮುತ್ಸದ್ದಿಗಳಿಗೂ ತಿಳಿಸಿ ಹೇಳಿದೆನು ಆದರೆ ಅದೆಲ್ಲ ಹೊಳೆಯಲ್ಲಿ ಹುಣಶೆಹಣ್ಣು ತೊಳೆದಂತೆ ಆಯಿತು ಮಹಾತ್ಮಾ ಗಾಂಧಿ ಮತ್ತು ಮೋತಿಲಾಲ ನೇಹರುಗಳಂಥ ಮುಖಂಡರು ನಿಮ್ಮ ಭೆಟ್ಟಿ ತೆಗೆದುಕೊಂಡ ಕಾಲದಲ್ಲಿ ನೀವು ಅವರಿಗೆ ಯಾವ ಆಶ್ವಾಸನವನ್ನೂ ಕೊಡಲಿಲ್ಲ. ನೀವು ಅಸೆಂಬ್ಲಿಯಲ್ಲಿ ದೊಡ್ಡ ದೊಡ್ಡ ಮಾತುಗಳನ್ನಾಡಿದಿರಿ! ಆದರೆ ಈಗಿನ ನಿಮ್ಮ ಕೃತಿಗಳ ಮೇಲಿಂದ ನೋಡಲಾಗಿ ನಮ್ಮ ಭ್ರಮವು ನಿರಸನವಾಯಿತು. ಇನ್ನು ಮೇಲಾದರೂ ಮಹಾತ್ಮನನ್ನು ಕರಿಸಿಕೊಂಡು ವಿಚಾರ ಮಾಡಿ ರಾಷ್ಟ್ರದ ಬೇಡಿಕೆಯನ್ನು ಪೂರೈಸಬೇಕು. ಇಲ್ಲವಾದರೆ ಮೂವತ್ತೆರಡು ಕೋಟಿಜನರ ಬೇಡಿಕೆಗಳನ್ನು ಒತ್ತಿಟ್ಟು ಅಪಕೀರ್ತಿಗೆ ನೀವು ಪಾತ್ರರಾಗಬೇಕಾಗುವದು. ಈ ಬಗೆಯಿಂದ ನಿಮ್ಮ ವಿಶಾಲವಾದ ಕೀರ್ತಿಗೆ ಕಲಂಕವನ್ನು ಹೆಚ್ಚಿಕೊಳ್ಳುವದಕ್ಕಿಂತ ನೀವು ನಿಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟುಬಿಡುವದೇಲೇಸು. ಇಂಥ ಸಮಯದಲ್ಲಿ ನೀವು ಧೈರ್ಯದಿಂದಲೂ ನಿಷ್ಪಕ್ಷಪಾತದಿಂದಲೂ ನಡೆದರೆ ಹಿಂದುಸ್ಥಾನದ ಹಾಗೂ ಇಂಗ್ಲಂಡದ ಹಿತವನ್ನು ಮಾಡಿದಂತಾಗುವದು. ಇಲ್ಲವಾದರೆ ಹಿಂದಸ್ಥಾನವು ಇಂಗ್ಲಂಡಕ್ಕೆ ಕಡೆಯ ಶರಣಾರ್ಥಿ ಹೊಡೆಯಬೇಕಾಗುವದು.

( ಮುಂಬಯಿಂದ ತಂತಿಯಿಂದ ಬಂದ ಸುದ್ದಿಗಳು )

ದಿಲ್ಲಿಯ ಮ್ಯಾಜಿಸ್ಟ್ರೇಟರು ಹಿಂದುಸ್ಥಾನ ಟೈಮ್ಸ್, ತೇಜ ಮತ್ತು ಅರ್ಜುನ ಈ ವರ್ತಮಾನ ಪತ್ರಗಳಿಗೆ ಪ್ರತಿ ಒಂದಕ್ಕೆ ೫೦೦೦ ರೂಪಾಯಿಗಳ ಜಾಮೀನವನ್ನು, ಮತ್ತು ರಿಯಾಸತ ಮತ್ತು ಮಿಲತ್ ಎಂಬುವ ವರ್ತಮಾನಪತ್ರಗಳಿಗೆ ಅನುಕ್ರಮವಾಗಿ, ಪ್ರೆಸ್ ಆ್ಯಕ್ಟಪ್ರಕಾರ ೧೦೦೦ ಮತ್ತು ೨೦೦೦ ರೂ। ಗಳ ಜಾಮೀನದನ್ನೂ ಕೊಡಬೇಕು ಇವತ್ತಿನ ಸಂಜೆಯ ವಳಗಾಗಿ ಜಾಮೀನವನ್ನು ಕೊಡದೇ ಇದ್ದರೆ ನಾಳೆಯಿಂದ ಆ ಪತ್ರಗಳು ಬಂದ ಮಾಡಲ್ಪಡುವವು. ಕೊಂಡ ವೆಂಕಟಪ್ಪಯ್ಯನವರು, ರಾಣೆಯ ಡಾ॥ ಸಾವರಕರರು, ಲಾಹೋರಿನ ಡಾ॥ ಆಲಮ್ ಮತ್ತು ಸತ್ಯಪಾಲ ಇವರು ಹಿಡಿಯಲ್ಪಟ್ಟಿದ್ದಾರೆ.

### ಮದ್ರಾಸ.

ರವಿವಾರ ದಿವಸ ಒಂದು ದೊಡ್ಡ ಸಭೆಯಾಗಿತ್ತು, ಸಭೆಯಲ್ಲಿ ಹತ್ತೆಂಟು ಜನರು ಹಾಲೀ ಎಬ್ಬಿಸಿದರು, ಯುರೋಪಿಯನ್ನರ ಮೋಟಾರಗಳಿಗೆ ಕಲ್ಲು ಒಗೆದರು ಪೋಲೀಸರು ಗುಂಡು ಹಾರಿಸಿ ಸಭೆಯ ಜನರನ್ನು ಚದರಿಸಿದರು. ಗುಂಡು ಬಡೆದು ಇಬ್ಬರು ಸತ್ತಿರುವರು, ಹತ್ತೆಂಟು ಜನರಿಗೆ ಗಾಯಗಳಾಗಿವೆ. ಮದ್ರಾಸ ಹಾಯಕೋರ್ಟಿನ ಒಬ್ಬ ವಕೀಲರಿಗೂ ಗುಂಡು ತಾಕಿದೆ. ಊರಲ್ಲಿ ಸಭೆಯಾಗಬಾರದೆಂದು ಅಲ್ಲಿಯ ಮ್ಯಾಜಿಸ್ಟ್ರೇಟರು ಹುಕುಮು ಕೊಟ್ಟಿರುವರು.

### ಗುಜರಾತ.

ಮಹಾತ್ಮರು ವ್ಹಾಯಿಸರಾಯರಿಗೆ ಇನ್ನೊಂದು ಪತ್ರವನ್ನು ಬರೆಯುವರು. ಆ ಪತ್ರವನ್ನು ಯಾರ ಸಂಗಡ ಕಳಿಸದೆ ಅಂಚೆಯ ದ್ವಾರದಿಂದ ಕಳಿಸುವರು,

ಬಾರ್ಡೋಲೀ ತಾಲೂಕಿನವರು ಭೂಕಂದಾಯವನ್ನು ನಿಲ್ಲಿಸುವ ಬಗ್ಗೆ ಮಹಾತ್ಮರನ್ನು ಕೇಳಿದರು. ಅದಕ್ಕೆ ಮಹಾತ್ಮರು ಈ ವಿಷಯವನ್ನು ಜನರು ತಮ್ಮಷ್ಟಕ್ಕೆ ತಾನೇ ವಿಚಾರಿಗೆಕೊಂಡು ನಡೆಯಬೇಕೆಂದು ಹೇಳಿದರು, ಇದು ಸ್ವತಂತ್ರತೆಯ ಸೋಪಾನವೆಂದು ಹೇಳಿದರು,

ಈಚಲಗಿಡವನ್ನು ಕಡಿಯುವಾಗ್ಗೆ ಒಬ್ಬ ಸ್ವಯಂಸೇವಕನಿಗೆ ಪೆಟ್ಟು ತಗಲಿದೆ. ಅವನ ಹೆಬ್ಬಟ್ಟು ಕತ್ತರಿಸಿ ಹೋಗಿದೆ.

### ದಿಲ್ಲಿ,

ಪಟೇಲರಿಗೆ ಸ್ವಾಗತ ಮಾಡಲು ಅರ್ಧಮೈಲಿನ ವರೆಗೆ ಜನರುಳ್ಳ ಒಂದು ಪ್ರಚಂಡ ಮೆರವಣಿಗೆಯು ಹೊರಟಿತ್ತು ಸ್ತ್ರೀ ಸ್ವಯಂಸೇವಕರು ಕೆಂಪು ಬಟ್ಟೆಗಳನ್ನು ಧರಿಸಿದ್ದರು. ಆದರಿಂದ ಮೆರವಣಿಗೆಗೆ ವಿಶೇಷ ಶೋಭೆ ಬಂದಿತ್ತು. ಸ್ವಯಂಸೇವಕರು

ಪಟೇಲರು ಕಳಿಕ ರಥವನ್ನು ತಾವೇ ಸ್ವತಃ ಜಗ್ಗಿದರು. ಕುದುರೆಗಳನ್ನು ಬಿಚ್ಚಿಬಿಟ್ಟರು. ಪಟೇಲರು ಅಷ್ಟು ಪೂಜ್ಯರೇ ಇರುವರು.

## ಗುಜರಾತದ ಸ್ತ್ರೀಯರು ವ್ಹಾಯಿಸರಾಯರಿಗೆ ಬರೆದ ಪತ್ರವು,

ಈಗ ನಡೆದಿರುವ ಈ ರಾಷ್ಟ್ರೋದ್ಧಾರ ಕಾರ್ಯದಲ್ಲಿ ನಾವು ಭಾಗ ತೆಗೆದುಕೊಳ್ಳದೆ ಉಳಿಯಲಾರೆವು. ಉಪ್ಪಿನ ಕಾಯಿದೆ ಭಂಗದಲ್ಲಿ ನಮ್ಮ ಪೂರ್ಣ ಸಹಾನುಭೂತಿ ಇರುವದು. ಹಳ್ಳಿಯಲ್ಲಿ ಹೆಂಗಸರು ಸ್ವತಂತ್ರ ಉಪ್ಪನ್ನು ತಯಾರಿಸುತ್ತಿರುವರು. ನಮ್ಮ ಕಾರ್ಯಕ್ಕಾಗಿ ನಾವು ಒಂದು ಹೊಸದಾರಿಯನ್ನು ಹುಡುಕಬೇಕಾಗಿದೆ. ಮಹಾತ್ಮರು ಹೇಳುವಂತೆ ಪರದೇಶೀ ವಸ್ತ್ರ ಬಹಿಷ್ಕಾರ ಹಾಗೂ ಸೆರೆದ ಅಂಗಡಿಗಳನ್ನು ಕಾಯುವದನ್ನು ಸಂಘಟನ ಮಾಡಿ ತೆಗೆದುಹಾಕುವದು, ಈ ಎರಡು ಕೆಲಸಗಳಿಗೆ ನಾವು ಯೋಗ್ಯರಾಗಿದ್ದೇವೆ. ನಾವು ಈ ಕೆಲಸವನ್ನು ಸುರುವು ಮಾಡುತ್ತೇವೆ. ಆದರೆ ಸೆರೆ ಅಂಗಡಿಗಳನ್ನು ಬಂದು ಮಾಡುವದು, ಪರದೇಶೀ ವಸ್ತ್ರಗಳು ನಮ್ಮಲ್ಲಿ ಬರದಂತೆ ಮಾಡುವದು ಸರಕಾರದ ಕರ್ತವ್ಯವು ಎಂಬದನ್ನು ತಾವು ಲಕ್ಷ್ಯಕ್ಕೆ ತಂದುಕೊಳ್ಳಬೇಕೆಂದು ಬಿನ್ನೈಸುವೆವು.

## ವಿವಿಧ ವಾರ್ತೆಗಳು

ಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರಾದ ಜಗದೀಶ ಚಂದ್ರ ಬೋಸರು ಜಿನೀವಕ್ಕೆ ಹೋಗಿರುವರು. ಹಿಂದುಸ್ಥಾನದಲ್ಲಿ ರಾಜಕೀಯ ಚಳವಳಿಯು ಬಹಳೇ ಭರದಿಂದ ಸಾಗಿರುವ ಕಾಲಕ್ಕೆ, ತಮ್ಮ ವನಸ್ಪತಿ ಶಾಸ್ತ್ರದಂಥ ಬೌದ್ಧಿಕ ವಿಶ್ರಾಂತದ ಕಡೆಗೆ ಜನರು ಲಕ್ಷ್ಯಕೊಡುವದಿಲ್ಲವಂತೆ ದೇಶದಲ್ಲಿ ಜನರು ಕೂಳಿಲ್ಲದೆ ಗೋಳಾಡುವ ಕಾಲದಲ್ಲಿ ಇವರ ವನಸ್ಪತಿ ಶಾಸ್ತ್ರವನ್ನು ಯಾರು ಕೇಳುವರು!

ಬಾರ್ಡೋಲಿಯ ಜನರು ತಮ್ಮ ಸಮೀಪದ ಹಳ್ಳಿಹಳ್ಳಿಗಳಿಗೆ ಹೋಗಿ ಕಂಡ ಕಂಡಲ್ಲಿ ಎಲ್ಲ ಈಚಲ ಗಿಡಗಳನ್ನು ಕಡಿದು ಹಾಕುತ್ತಿರುವರು. ಈಗಾಗಲೇ ಮೂರು ಸಾವಿರ ಈಚಲ ಗಿಡಗಳನ್ನು ನೆಲಕ್ಕುರುಳಿಸಿರುವರು.

ಮುಂಬಯಿ ಟಾಯಿಮ್ಸಕಾರನು ಪಟೇಲರು ರಾಜೀನಾಮೆ ಕೊಟ್ಟದ್ದಕ್ಕಾಗಿ ಅವರನ್ನು ಹೀಯಾಳಿಸುವ ಒಂದು ಲೇಖವನ್ನು ಬರೆದಿದ್ದಾನೆ. ಪಟೇಲರು ಅಧ್ಯಕ್ಷರಾಗಿ ಕೆಲಸ ಮಾಡುವಾಗ್ಗೆ ಅವರನ್ನು ಎಷ್ಟೋಸಾರೆ ಹೊಗಳುತ್ತಿದ್ದನು. ಗೆದ್ದ ಎತ್ತಿನ ಬಾಲ ಹಿಡಿಯುವದು ಟಾಯಿಮ್ಸಕಾರನ ನೀತಿಯು.

ಇಂಗ್ಲಂಡದಲ್ಲಿ ಹದಿನಾರು ಲಕ್ಷ ಕೂಲಿಕಾರರು ಕೆಲಸವಿಲ್ಲದೆ ತಿರುಗುತ್ತಿರುವರು.

ಹೌರಾ ಮುನಸಿಪಾಲಿಟಿಯ ಉಪಾಧ್ಯಕ್ಷರಾದ ಪ್ರೊ. ವಿಜಯ ಕುಮಾರ ಭಟ್ಟಾಚಾರ್ಯ ಶ್ರೀ ರಾದ ಬಿಪಿನ್ ಬಿಹಾರಿ ಘೋಸ ಮತ್ತು ಕೀರ್ತಿಚಂದ್ರದತ್ತ ಇವರು ಹೌರಾ ಒಟ್ಟಿಯ ಪೇಟೆಯಲ್ಲಿ ಪಿಕೆಟಿಂಗ ಮಾಡಿದ ಆರೋಪದ ಬಗ್ಗೆ ಹಿಡಿಯಲ್ಪಟ್ಟು ೬ ತಿಂಗಳ ಕಠಿಣ ಶಿಕ್ಷೆಯು ಇವರಿಗೆ ವಿಧಿಸಲ್ಪಟ್ಟಿತು. ಹಿಡಿಯಲ್ಪಟ್ಟ ಉಳಿದ ೨೭ ಜನರು ಬಿಡುಗಡೆ ಹೊಂದಿದರು.

ಪೋಲೀಸರ ಹುಕುಮನ್ನು ಉಲ್ಲಂಘಿಸಿ ಸಭೆಯನ್ನು ಸಾರ್ವಜನಿಕ ಸ್ಥಳದಲ್ಲಿ ಜರುಗಿಸಿದ ಆರೋಪದ ಮೇಲೆ ಅಖಿಲ ಬಂಗಾಲ ವಿದ್ಯಾರ್ಥಿ ಸಂಘದ ಅಧ್ಯಕ್ಷರೂ, ಉತ್ತರ ಮತ್ತು ದಕ್ಷಿಣ ಕಲಕತ್ತೆಯ ಮತ್ತು ಬುರಾ ಬಜಾರ ಕಾಂಗ್ರೆಸ ಕಮೀಟಿಯ ಕಾರ್ಯದರ್ಶಿಗಳೂ ಹಿಡಿಯಲ್ಪಟ್ಟಿದ್ದಾರೆ,

ಶ್ರೀ ಸುಭಾಸಚಂದ್ರ ಬೋಸರ ಬಂಧುಗಳಾದ ಶ್ರೀ ಸರತ್ ಬೋಸರವರು "ಅಲೀಪೂರ ಜೇಲಿನಲ್ಲಿದ್ದ ರಾಜಕೀಯ ಕೈದಿಗಳನ್ನು ತಪಾಸಿಸುವದಕ್ಕೋಸ್ಕರ ಖಾಸಗೀ ಡಾಕ್ಟರರು ಸಂದರ್ಶಿಸಲು ಮತ್ತು ಅವರ ಬಂಧುಬಳಗದವರು ಸಂಭಾಷಣವನ್ನು ಮಾಡಲು ದಾರ್ಜಿಲಿಂಗದಲ್ಲಿದ್ದ ಗವ್ಹರ್ನರರು ಹುಕುಮು ಕೊಡುವರಾಗಿ ಡಾ. ಬಿ. ಸಿ. ರಾಯರವರಿಗೆ ತಂತಿಯ ಮೂಲಕ ಅರುಹಿದ್ದಾರೆ,

## ಇಹವೃತ್ತ,

ಇಲ್ಲಿಯ ಮರಾಠಾ ಸಮಾಜದವರು ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜನ್ಮೋತ್ಸವವನ್ನು ಪ್ರತಿವರುಷದಂತೆ ಈ ವರ್ಷವೂ ಮಾಡುವರು. ಕಿಲ್ಲೆಯಲ್ಲಿ ನಾಡಗೌಡರ ಓಣಿಯಲ್ಲಿ ಉತ್ಸವದ ಸ್ಥಳವನ್ನು ಗೊತ್ತು ಮಾಡಿರುವರು. ಸಂಜೆಯ ಆರು ಘಂಟೆಗೆ ವ್ಯಾಖ್ಯಾನಗಳಾಗುವವು ಬಾಗಲಕೋಟೆಯ ನಾಗರಿಕರೆಲ್ಲರೂ ಬರಬೇಕಾಗಿ ಕಾರ್ಯದರ್ಶಿಗಳು ವಿನಂತಿ ಮಾಡಿಕೊಳ್ಳುವರು.

ಬೇಸಿಗೆಯ ಬಿಸಿಲು ಹೆಚ್ಚಾಗಿದೆ. ಬಾವಿಯೊಳಗಿನ ನೀರು ತಳಕಂಡಿದೆ. ಮುನಸಿಪಾಲ್ಟಿಯವರು ಬಾವಿಯೊಳಗಿನ ಕೆಸರು ತೆಗೆಸುವ ಕೆಲಸವನ್ನು ತೀವ್ರನೇ ಸುರುವು ಮಾಡುವರೋ? ಇಲ್ಲವಾದರೆ ಹೊಲಸು ನೀರಿನಿಂದ ಹುಟ್ಟುವ ಬೇನೆಗಳು ಸುರುವಾಗುವವು.


**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

**ಸೋಮವಾರ ತಾ. ೫-೫-೩೦**

**ಶರಣ ಬಸವ**

ಬುಧವಾರ ತಾ. ೭-೫-೩೦

**ಮಾಯಾ ಬಜಾರ,**

ಶನಿವಾರ ತಾ. ೧೦-೫-೩೦

**ಯಚ್ಚಮ್ಮ ನಾಯಿಕ.**

**ಎಂಬ ನಾಟಕಗಳನ್ನು ಅಭಿನಯಿಸುವರು,**

ಸಂಘದೊಡೆಯ—**ಸದಾಶಿವರಾವ ಗರೂಡ**


**ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.**

ರ. ನಂ. ಬಿ ೧೯೪೭ ಬೆಲೆ ೦—೦—೩

# ಕರ್ನಾಟಕ

ಜಯಕರ್ನಾಟಕ

ನಿತ್ಯಸಂಚಿಕೆಯು.

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರುः— ಬಳವಂತ ಅಣ್ಣಾರಾವ ಮುಜುಮುದಾರ.

ಬಾಗಲಕೋಟೆ ಶುಕ್ರವಾರ ಮಿತಿ ವೈಶಾಖ ಶುದ್ಧ ೪ ಶಕೆ ೧೮೫೨ ತಾ ೨—೫—೩೦ ಸಂಚಿಕೆ ೩೭

## ಸಂಪಾದಕರ ಭೂಮಿ.

ತನ್ನ ದೇಹವು ನಿನ್ನ ವೀರಶಾಸನಕಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ತನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ॥

## ಪೂರ್ಣ ಸ್ವರಾಜ್ಯದ ಪಾವಟಿಗೆಗಳು.

ಬ್ರಿಟೀಶರ ಆಳಿಕೆಯಿಂದ ನಮ್ಮ ರಾಷ್ಟ್ರಕ್ಕಾದ ಹಿತಕ್ಕಿಂತ ಹಾನಿಯೇ ಹೆಚ್ಚಾಗಿದೆ ಎಂದು ನಮ್ಮ ರಾಷ್ಟ್ರವು ಈಗ ಐವತ್ತು ವರುಷಗಳ ಕೆಳಗೆ ಕಂಡು ಹಿಡಿಯಿತು. ಸ್ವರಾಜ್ಯದ ಮೂಲಮಂತ್ರವನ್ನು ರಾಷ್ಟ್ರದ ನಿದರ್ಶನಕ್ಕೆ ತಂದು ಕೊಟ್ಟವರು ರಾಷ್ಟ್ರ ಪಿತಾಮಹರಾದ ದಾದಾಭಾಯಿ ನವರೋಜಿಯವರು. ಅವರ ಆ ಮಂತ್ರವನ್ನೇ ಜಪಿಸುತ್ತ ಅನೇಕರಾಷ್ಟ್ರವೀರರು ಜನತೆಯಲ್ಲಿ ಜಾಗ್ರತಿಯನ್ನುಂಟುಮಾಡಿದರು. ಅವರೆಲ್ಲರಲ್ಲಿಯೂ ಮಹಾತ್ಮನು ಮಿಗಿಲಾದವನು. ಕಳೆದಹತ್ತು ವರ್ಷಗಳಲ್ಲಿ ಆದ ಜನಜಾಗ್ರತೆಯು ಮಹಾತ್ಮನ ತಪಸ್ಸಿನ ಫಲವು. ಆ ಮಹಾತ್ಮನೇ ಈಗ ರಾಷ್ಟ್ರವನ್ನು ಪರದಾಸ್ಯದಿಂದ ಮುಕ್ತಮಾಡಲು ಸಿದ್ಧನಾಗಿರುವನು. ಅವನ ದಿವ್ಯತೇಜದಿಂದ ಜಗವೇ ಬೆರಗಾಗಿದೆ, ಅವನು ಹೂಡುಕಿತ್ತೆಗೆದ ಈ ಅಹಿಂಸಾಮಯ ಯುದ್ಧವು ಅವನ ಸೇನಾಧಿಪತ್ಯದ ಕೆಳಗೇ ಸುರುವು ಮಾಡಲ್ಪಟ್ಟಿತು. ಈ ಯುದ್ಧದಲ್ಲಿಯ ಮೊದಲನೇ ಜಯವು ಈಗ ಉಪ್ಪಿನಕಾಯದೆ ಭಂಗದಲ್ಲಿ ಸಿಕ್ಕಿತು. ಮಹಾತ್ಮರು ಹೇಳುವಂತೆ ಉಪ್ಪು ಇನ್ನು ಯಾರಿಗಾರೂ ಕರವಿಲ್ಲದೆ ಸಿಗುವಂತಾಯಿತು. ಮುಂಬಯಿ, ಕರಾಚಿ, ಗುಜರಾತ, ಈ ಪ್ರದೇಶಗಳಲ್ಲಿ ಮಹಾತ್ಮರ ಈ ವಿಜಯದ ಸ್ತಂಭವು ಸ್ಥಾಪಿತವಾಯಿತು. ಆದರೆ ಮಹಾತ್ಮರು ನಮ್ಮೆಲ್ಲರಿಗೂ ದೊರಕಿಸಿಕೊಡುವ ಸ್ವರಾಜ್ಯಕ್ಕೆ ಇದನ್ನು ಮೊದಲನೇಯ ಪಾವಟಿಗೆಯನ್ನಾಗಿ ಗೊತ್ತು ಮಾಡಿದ್ದರು, ಈಗಂತೂ ರಾಷ್ಟ್ರವು ಈ ಪಾವಟಿಗೆಯನ್ನು ಪೂರ್ಣವಾಗಿ ಏರಿದಂತಾಯಿತು. ಇನ್ನು ಪರದೇಶೀ ವಸ್ತ್ರಬಹಿಷ್ಕಾರವನ್ನು ಮಹಾತ್ಮರು ಸ್ವರಾಜ್ಯದ ಎರಡನೇ ಪಾವಟಿಗೆಯನ್ನಾಗಿ ಗೊತ್ತು ಮಾಡಿರುವರು. ಈ ಪಾ ವ ಟಿ ಗೆ ಯ ನ್ನು ರಾಷ್ಟ್ರವು ಏರಿದಮೇಲೆ ಅರ್ಧ ಸ್ವರಾಜ್ಯವು ಸಿಕ್ಕಂತಾಯಿತು. ಮೂರನೇ ಪಾವಟಿಗೆಯು ಸೆರೆಸಿಂದಿಗಳ ವ್ಯಾಪಾರವನ್ನು ನಿಲ್ಲಿಸುವದು. ರಾಷ್ಟ್ರವು ಈ ಎರಡೂ ಪಾವಟಿಗೆಗಳನ್ನೂ ಭರದಿಂದ ಏರುವಂತೆ ಮಹಾತ್ಮರೇ ಆಜ್ಞೆ ಕೊಟ್ಟಿರುವರು. ಗುಜರಾತವಂತೂ ಬಹಳೇ ಉತ್ಸಾಹದಿಂದ ಈ ಕೆಲಸ ನಡಿಸಿದೆ. ಕರ್ನಾಟಕವು ಗುಜರಾತಪ್ರಾಂತವನ್ನು ಮಾದರಿಯಾಗಿಟ್ಟುಕೊಂಡು ಉತ್ಸಾಹದಿಂದ ಮುಂದೆ ಸಾಗಲಿ.

## ಪಟೇಲರು ದಿಲ್ಲಿಯಲ್ಲಿ ಮಾಡಿದ ಭಾಷಣ.

ಸಿಮ್ಲಾದಲ್ಲಿ ಮತ್ತು ದಿಲ್ಲಿಯಲ್ಲಿ ಜನರು ನನಗೆ ಮಾಡಿದ ಸ್ವಾಗತವನ್ನು ನೋಡಿದರೆ ಜನತೆಯು ಪರಕೀಯರ ರಾಜ್ಯವನ್ನು ಕಿತ್ತಿ ಒಗೆಯಲಿಕ್ಕೆ ಬೇಕಾದಷ್ಟು ತೊಂದರೆಗಳು ಬಂದರೂ ಸಹ ಸಿದ್ಧವಾದಂತೆ ನಿಶ್ಚಯವಾಗಿ ಕಂಡುಬರುವದು. ಜನತೆಯ ಈ ನಿರ್ಧಾರವನ್ನು ನೋಡಲು ವ್ಹಾಯಿಸರಾಯರು ನನ್ನ ಸಂಗಡ ಇರಬೇಕಾಗಿತ್ತು.

ಸಾವಿರಾರುಜನರು ಜೇಲಿಗೆ ಸಂತೋಷದಿಂದ ಹೋಗುವ ಕಾರಣವು ಪಾಶ್ಚಿಮಾತ್ಯರಿಗೆ ತಿಳಿಯದು ಅನತ್ಯಾಚಾರ, ಹಿಂಸೆ, ಶಾಂತತೆ ಇವು ಹಿಂದೀ ಜನರ ಧರ್ಮವೇ ಆಗಿವೆ. ಈ ಧರ್ಮಮಾರ್ಗವನ್ನು ನಾವು ಸ್ವರಾಜ್ಯ ಸಿಗುವ ವರೆಗೂ ನಿಲ್ಲಿಸುವದಿಲ್ಲವೆಂದು ವ್ಹಾಯಿಸರಾಯರಿಗೂ ಬ್ರಿಟೀಶ ಸರಕಾರಕ್ಕೂ ನಾನು ಹೇಳಲಿಚ್ಛಿಸುತ್ತೇನೆ ದೇಶವು ಸ್ವತಂತ್ರವಾಗುವ ವರೆಗೆ ಸಾವಿರಾರು ಜನರು ಬರೇ ಜೇಲಿಗಷ್ಟೇ ಏಕೆ ತಮ್ಮ ಪ್ರಾಣವನ್ನು ಸಹ ಕೊಡಲು ಸಿದ್ಧರಿರುವರು ಬಾಂಬಿನಶಾಸ್ತ್ರದಲ್ಲಿ ವಿಶ್ವಾಸವಿದ್ದವರು ಅದನ್ನು ಬಿಟ್ಟು ಈ ಶಾಂತತೆಯ ಯುದ್ಧವನ್ನು ಸಾಗಿಸಬೇಕೆಂದು ಅವರು ಹೇಳಿದರು. ವರ್ತಮಾನ ಪತ್ರಗಳನ್ನು ಒತ್ತಿ ಹಿಡಿವ ಕಾಯದೆಯಿಂದ ಚಳವಳಿಯು ನಿಲ್ಲುವದೆಂದು ಸರಕಾರದ ತಪ್ಪು ತಿಳವಳಿಕೆಯಾಗಿದೆ. ಈಗಿನ ಚಳವಳಿಯ ಬೇರುಗಳು ಬಹು ದೂರ ಹಬ್ಬಿರುವವು. ಇ… ಎಷ್ಟೋ ಕಾಯದೆಗಳಿಗೆ ಎದೆಗೊಟ್ಟು ನಿಲ್ಲುವವ… ಷ್ಯನು ತನ್ನ ಕೈಯೊಳಗಿನ ಅಧಿಕಾರವನ್ನು ಬಿಟ್ಟು… ಸ್ವಲ್ಪ ಕಠಿಣವಾದ್ದು ಬ್ರಿಟೀಶರಂತೂ ಹೀ… ವನ್ನು ಕಳೆದು ಕೊಳ್ಳಲಾರರು. ಸ್ವತ… ಸರ್ವಸ್ವವನ್ನು ಅರ್ಪಿಸಲು ಸಿದ…

# ಉಪ್ಪಿನ ಕಾರಖಾನೆಗಳನ್ನು ಒಳನುಗ್ಗುವ ಹಂಚಿಕೆಯನ್ನು ಪ್ರಯೋಗಿಸಲು ಗಾಂಧಿಯವರು ಮುಂಬಯಿಗೆ ಬರಲೊಪ್ಪಿರುವರು.

( ತಂತಿಯಿಂದ ಬಂದದ್ದು. )

ಶ್ರೀ ಸಿ. ರಾಜಗೋಪಾಲಾಚಾರ್ಯರನ್ನು ವೇದಾರಣ್ಯ ಎಂಬಲ್ಲಿ ಹಿಡಿದು ೬ ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಿದರು. ಲಾಹೋರದಲ್ಲಿ ಜಾಫರ ಅಲೀಖಾನರು ಹಿಡಿಯಲ್ಪಟ್ಟರು. ಠಾಕಾ ಕಾಲೇಜಿನವರಿಗೆ ೬ ತಿಂಗಳ ಸಜೆಯಾಯಿತು. ಕಲಕತ್ತೆಯಲ್ಲಿ ಪೋಲೀಸರು ಅನೇಕ ಮನೆಗಳನ್ನು ಝಡತಿ ಮಾಡಿದರು. ಲಿಬರ್ಟಿ ಮತ್ತು ಎಡವಾನ್ಸ ಎಂಬೆರಡು ವೃತ್ತಪತ್ರಗಳು ಜಾಮೀನ ಕೊಡಲಾಗದೆ ಬಂದು ಇಡಲ್ಪಟ್ಟಿವೆ. ಸರಕಾರದವರು ತಯಾರಿಸಿದ ಉಪ್ಪಿನ ಕಾರಖಾನೆಗಳಲ್ಲಿ ಹೊಕ್ಕು ಉಪ್ಪು ತರುವ ಪ್ರಯೋಗವನ್ನು ಮಾಡುವದಕ್ಕಾಗಿ ಮುಂಬಯಿಗೆ ಬರಲು ಗಾಂಧಿಜಿಯವರು ಒಪ್ಪಿರುವರು.

## ಬೆಳಗಾಂವಿಯಲ್ಲಿ ಕರ್ನಾಟಕ ಬ್ರಾಹ್ಮಣೇತರ ಪರಿಷತ್ತು

### ವಿಚಾರ

ತಾ॥ ೧೧—೫—೧೯೩೦ ನೇ ದಿವಸ ಬೆಳಗಾಂವಿಯಲ್ಲಿ ಕರ್ನಾಟಕ ಬ್ರಾಹ್ಮಣೇತರ ಪರಿಷತ್ತನ್ನು ಕೂಡಿಸಬೇಕೆಂದು ಬ್ರಾಹ್ಮಣೇತರ ಮುಂದಾಳುಗಳು ನಿಶ್ಚಯಿಸಿರುವರು. ಈ ಪರಿಷತ್ತಿನಲ್ಲಿ ಹಾವೇರಿಯ ಸುಪ್ರಸಿದ್ಧ ವಕೀಲರಾದ ಶ್ರೀ ಹೊಸಮನಿ ಸಿದ್ದಪ್ಪನವರು ಅಧ್ಯಕ್ಷರಾಗಲು ಒಪ್ಪಿರುವರು. ಆ ಪರಿಷತ್ತಿನಲ್ಲಿ ವಿಚಾರಮಾಡತಕ್ಕ ವಿಷಯಗಳನ್ನೂ ಕಾರ್ಯಕ್ರಮವನ್ನೂ ಮುಂದೆ ಗೊತ್ತುಪಡಿಸುವರು. ಆ ಪರಿಷತ್ತಿನ ಧ್ಯೇಯದ ಬಗ್ಗೆ ಅವರು ಒಂದು ಜಾಹೀರ ವಿನಂತಿಯನ್ನು ಮುದ್ರಿಸಿ ಪ್ರಸಿದ್ಧಿಸಿರುವರು. ಅದರ ಕೆಲವು ಭಾಗವನ್ನು ಇಲ್ಲಿ ಕೊಟ್ಟಿದ್ದೇವೆ.

ನಮ್ಮ ಕೈಯಿಂದ ಹೋದ ರಾಜ್ಯಸೂತ್ರ [illegible] ನಮಗೆ ಮರಳಿ ದೊರೆಯಬೇಕೆಂದರೆ ಅರ್ಜಿಮಾಡುವದ [illegible] ಹೇಳಿಕೊಳ್ಳುವದು, ಶಿಷ್ಟಾಯಿ ಕಳಿಸುವದು ಇವೆ [illegible] ಪ್ರಯತ್ನಗಳು ವ್ಯರ್ಥವೆಂಬುದು ಕಳೆದ ೫೦ ವರ್ಷಗ [illegible] ಲ್ಲಿ ನಡೆದ ಪ್ರಯತ್ನಗಳಿಂದ ಅನುಭವಕ್ಕೆ ಬಂದಿದೆ. [illegible] ವಲ್ಪ ದಿವಸಗಳ ಹಿಂದೆ ಅರ್ಲವಿಂಟರ್ನ ಮತ್ತು [illegible] ಆರ್ಡ ಆಯರ್ವಿನ್ ಇವರು ಮಾಡಿದ ಭಾಷಣಗಳ [illegible] ಲಿಂಪ ಸಾಯಮನ್ ಕಮೀಶನ್ ಹಾಗೂ ಆ ತರದ [illegible] ದನ್ನದೊಳಗೆ ಕೂಡುವ ರಾವುಂಡ ಟೇಬಲ್ ಪರಿಷತ್ತಿನ ಮೇಲೆ ನಮ್ಮ ವಿಶ್ವಾಸವಿಲ್ಲ. ನಿಃಶಸ್ತ್ರರಾದ ನಾವು ಸಶಸ್ತ್ರಗಳಿಂದ ಸ್ವಾತಂತ್ರ್ಯ ಗಳಿಸುವದು ಹಿಂದುಸ್ಥಾನಕ್ಕೆ ಸದ್ಯದ ಪರಿಸ್ಥಿತಿಯಲ್ಲಿ ಅಸಾಧ್ಯ. ಆದಕಾರಣ ಮಹಾತ್ಮರು ಅವಲಂಬಿಸಿದ ಅಹಿಂಸೆಯ ಸತ್ಯಾಗ್ರಹವೇ ಉಪಾಯವಲ್ಲದೆ ಬೇರೆ ಉಪಾಯಗಳಿಲ್ಲೆಂದು ಬಹುಜನರ ಅಭಿಪ್ರಾಯ.

ಎಲ್ಲರಿಗಿಂತ ಬ್ರಾಹ್ಮಣೇತರರಿಗೆ ಅಂದರೆ ಹಿಂದುಳಿದವರಿಗೆ ಸ್ವರಾಜ್ಯವು ಹೆಚ್ಚು ಅವಶ್ಯವಾದದ್ದು ಕಂಡುಬರುತ್ತದೆ. ದಿನದಿನಕ್ಕೆ ಅವರ ನೈತಿಕ ಮತ್ತು ಆರ್ಥಿಕ ಕ್ಷೀಣತೆಯು ಪಾರತಂತ್ರ್ಯದ ಅಧಿಕಾಂಶ ಫಲವಾಗಿದೆ. ಕಳಕೊಂಡ ಸ್ವಾತಂತ್ರ್ಯವನ್ನು ಸಂಪಾದಿಸುವದರಲ್ಲಿ ಭಾಗ ತೆಗೆದುಕೊಂಡು ಅದರಲ್ಲಿ ಅನುಭವಶಿಕ್ಷಣ ಪಡೆಯದಿದ್ದರೆ ಸಿಕ್ಕ ಸ್ವಾತಂತ್ರ್ಯವನ್ನು ಉಪಭೋಗಿಸುವದು ಅಶಕ್ಯ. ಕಷ್ಟಪಟ್ಟವನೇ ಸುಖವನ್ನನುಭವಿಸಲಿಕ್ಕೆ ಪಾತ್ರನು. ಹಿಂದುಸ್ಥಾನವು ದೊರಕಿಸುವ ಸ್ವಾತಂತ್ರ್ಯವು ನಮ್ಮ ಪದರಿನಲ್ಲಿ ಬೀಳಬೇಕಾದರೆ ಸ್ವಾತಂತ್ರ್ಯದ ಹಸಿವೆಯಿದ್ದವರು ಅದಕ್ಕೆ ತಮ್ಮ ಸ್ವಾರ್ಥತ್ಯಾಗವನ್ನು ನೀಡಲಿಕ್ಕೆ ಬೇಕು. ಯಾವದೇಶದ ಸ್ವರಾಜ್ಯವು ಪ್ರಾಪ್ತವಾಗಲಿ. ಅದು ಮಹಾತ್ಮರು ತೆಗೆದ ೧೧ ಮುದ್ದೆಗಳ ಮೇಲೆ ಕಟ್ಟಲ್ಪಟ್ಟರೆ ಮಾತ್ರ ಬ್ರಾಹ್ಮಣೇತರರ ದು [illegible] ಗಳು ಬಯಲಾಗುವವು. ಮಹಾತ್ಮರು [illegible] ರಿಗೆ ಬರೆದ ಪತ್ರದಲ್ಲಿ "ಸ್ವಾತಂತ್ರ್ಯದ [illegible] ವನ್ನು ರಾಷ್ಟ್ರಸೇವಕರು ತಿಳಿಯದಿದ್ದರೆ, ಅದ [illegible] ಉಪಯೋಗವು ಬೇಡ, ಮಾಳ, ಹಾಗೂ ಅತಿಕ್ರ [illegible] ಜನಸಮಾಜಕ್ಕಾಗುವದು ಕಷ್ಟ" ಎಂದು ಹೇಳಿರುವ [illegible]. ಅಂದಮೇಲೆ ಸ್ವರಾಜ್ಯವು ವಿದೇಶಿಯರ ಕೈಯಿಂದ [illegible] ದುಸ್ಥಾನದ ಪದರಿನಲ್ಲಿ ಬಿದ್ದಿಂಬರೆ ನಮ್ಮ ಕೆಲಸವು ತೀರಲಿಲ್ಲ ಮುಂದೆ ಅದು ಎಷ್ಟರಮಟ್ಟಿಗೆ ನಮ್ಮ ಸ್ವದೇಶ ಬಾಂಧವರಿಂದ ಬಹುಜನ ಸಮಾಜದ ಹಿತಕ್ಕಾಗಿ ಉಪಯೋಗಿಸಲ್ಪಡುವದೆಂಬುವದನ್ನು ನಿರೀಕ್ಷಿಸುವದು. ಮತ್ತು ಹಾಗೆ ಮಾಡಹಚ್ಚುವದು ನಮ್ಮ ಹೊಣೆಯಾಗಿದೆ?

## ಗಳಗಲಿ,

ಶ್ರೀ ರಾಮಾಚಾರ್ಯ ಕಾಖಂಡಕಿ ಇವರಿಗೆ ೬ ತಿಂಗಳ ಕಠೀಣ ಶಿಕ್ಷೆಯು ವಿಧಿಸಲ್ಪಟ್ಟಿದೆ.

## ಇಹವೃತ್ತ.

ನಿನ್ನಿನ ದಿನ ಬಸವೇಶ್ವರ ಜಯಂತಿಯು ಬಹು ವಿಜೃಂಭಣೆಯಿಂದ ಜರುಗಿತು ಮುಂಜಾನೆ ಬಸವೇಶ್ವರ ಫೋಟೋ ಮೆರವಣಿಗೆಯಾಯಿತು. ಸಾಯಂಕಾಲಕ್ಕೆ ಶ್ರೀ ಮುದವೇಡಕೃಷ್ಣರಾಯರ ವ್ಯಾಖ್ಯಾನ ವಾಯಿತು.

ಬೀಳಗಿಯಿಂದು ತಂದ ರಾಜಕೀಯ ಕೈದಿಗಳಾದ ಶ್ರೀ ರಾಮಾಚಾರ್ಯ ಕಾಖಂಡಕೀ ಹಾಗೂ ಲಿಂಗಾಪೂರ ಯವರನ್ನು ನಿನ್ನಿನ ದಿನ ಮುಂಜಾನೆ ಗಾಡಿಗೆ ವಿಜಾಪೂರ ಜೇಲಿಗೆ ವೈದರು, ಅವರನ್ನು ಕಳುಹುದಕ್ಕಾಗಿ ನೂರಾರು ಜನರು ಸ್ಟೇಶನಕ್ಕೆ ಹೋಗಿದ್ದರು.

ಗದಗು ಶ್ರೀದತ್ತಾತ್ರೇಯ ನಾಟಕಮಂಡಳವು ಬಂದಿದ್ದು ಪ್ರಯೋಗಗಳು ನಡದವೆ ಪ್ರೋತ್ಸಾಹವು ಚನ್ನಾಗಿದೆ,

# ಸ್ವರಾಜ್ಯವು ಬಾಗಿಲಲ್ಲಿ ಬಂದಿದೆ.

ವರ್ತಮಾನ ಪತ್ರದ ಹೊಸ ಕಾಯಿದೆಯಿಂದ ತಾನೇನು ಬೆರಗಾಗಲಿಲ್ಲ. ಸಾರ್ವಜನಿಕ ಅಭಿಪ್ರಾಯವನ್ನು ಪ್ರಾಮಾಣಿಕವಾಗಿ ತಿಳಿಸುವ ವರ್ತಮಾನ ಪತ್ರಗಳು ಯಾವ ಬಗೆಯಿಂದಲೂ ಹೆದರಕೂಡದು. ಸ್ವರಾಜ್ಯವು ಬಾಗಿಲಲ್ಲಿ ಬಂದು ನಿಂತಿರಲು ತಮ್ಮ ದೇಶ ಬಾಂಧವರು ಅನೇಕ ಯಾತನೆಗಳನ್ನು ಸಹಿಸುತ್ತಿರಲು ಮುದ್ರಣಾಲಯದವರು ಮಾತ್ರ ಹಿಂದುಳಿದರೆಂದು ತಿಳಿಕೊಳ್ಳಬೇಡಿರಿ ಎಂದು ಮಹಾತ್ಮರು ಹೇಳಿದರು.

---

## ಮಹಾತ್ಮರು ಪ್ರೆಸ್ ಕಾಯಿದೆಯನ್ನು ಉಲ್ಲಂಘಿಸುವರು

ಪ್ರೆಸ್ಸಿನ ಹೊಸ ಕಾಯದೆಗನುಸರಿಸಿ ಸರಕಾರದವರು ಜಾಮೀನು ಕೊಡಲು ಕೇಳಿದರೆ, ಜಾಮೀನು ಕೊಡಲಾಗದೆಂದೂ ಪ್ರೆಸ್ಸು ಸರಕಾರದ ಬೊಕ್ಕಸಕ್ಕೆ ಸೇರಿದರೂ ಅಡ್ಡಿಯಿಲ್ಲವೆಂದೂ ನವಜೀವನ, ಪ್ರೆಸ್‌ದ ವ್ಯವಸ್ಥಾಪಕರಿಗೆ ಮಹಾತ್ಮಾ ಗಾಂಧಿಯವರು ಅರುಹಿದ್ದಾರೆ.

### ಸುರತ

ಬೋರ್ಸಾದ ತಾಲೂಕಿನಲ್ಲಿ ಕರನಿರಾಕರಣೆಯ ಚಳವಳಿಯನ್ನು ಪ್ರಾರಂಭಿಸಲು ಮಹಾತ್ಮಾ ಗಾಂಧಿಯವರು ಅಪ್ಪಣೆಯನ್ನಿತ್ತಿದ್ದಾರೆ. ಬರೋಡದ ಕೆಲಸಗಾರರು ಈ ಕಾರ್ಯವನ್ನು ತೀವ್ರವೇ ಕೈಕೊಳ್ಳುವವರಿದ್ದಾರೆ. ೬೦ ಜನ ಸ್ವಯಂಸೇವಕರು ಉಪ್ಪಿನ ಕಾಯಿದೆಯನ್ನು ಮುರಿದರು. ಆದರೆ ಮೂರು ಜನ ಸ್ವಯಂಸೇವಕರನ್ನ ಹಿಡಿಯಲ್ಪಟ್ಟಿದ್ದಾರೆ.

### ಮಿದ್ನಾಪೂರ

ಉಪ್ಪಿನ ಕಾಯಿದೆಯನ್ನು ಮುರಿದ ಬಗ್ಗೆ ಮತ್ತು ಪೋಲಿಸರ ಹುಕುಮನ್ನು ಉಲ್ಲಂಘಿಸಿ ಭಾಷಣಮಾಡಿದ ಬಗ್ಗೆ ಹಿಡಿಯಲ್ಪಟ್ಟ ಶ್ರೀ ಎಮ್. ಎಮ್. ದಾಸ ಮತ್ತು ಬಿ. ಎನ್. ಚಟರ್ಜಿಯವರಿಗೆ ೨ ವರ್ಷ ಮತ್ತು ೬ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಪೋಲೀಸರಿಂದ ಅನೇಕ ಮನೆಗಳು ತಪಾಸಿಸಲ್ಪಟ್ಟು, ಬಂದೂಕಗಳು ಪೋಲೀಸರ ಹಸ್ತಗತವಾಗಿವೆ. ಇವುಗಳ ಮಾಲಕರಲ್ಲಿ ಲಾಯಸನ್ಸ ಇದ್ದರೂ ಲೆಕ್ಕಿಸಲ್ಪಟ್ಟಿಲ್ಲ.

### ನಾಗಪೂರ

ಪ್ರತಿಯೋಗಿ ಸಹಕಾರ ಪಕ್ಷದ ಸಭೆಯು ಡಾ. ಮುಂಜೆಯವರ ಅಧ್ಯಕ್ಷತೆಯು ಕೆಳಗೆ ಸೇರಿ ಉಪ್ಪಿನ ಕಾಯದೆಯನ್ನುಲ್ಲಂಘಿಸಬೇಕಾಗಿ ತೀರ್ಮಾನವಾಯಿತು. ಇವತ್ತಿನ ದಿವಸ ಸೇರುವ ಸಭೆಯಲ್ಲಿ ಡಾ. ಮುಂಜೆಯವರು ಉಪ್ಪಿನ ಕಾಯಿದೆಯನ್ನು ಮುರಿಯುವವರಿದ್ದಾರೆ, ಮತ್ತು ಸಭೆಯಲ್ಲಿ ಸರಕಾರದಿಂದ ಬಂದೀಯಾದ ಪುಸ್ತಕಗಳು ಓದಲ್ಪಡುವವು.

### ಅಹಮ್ಮದಾಬಾದ.

ಬೋರ್ಸಾದದ ಸಮೀಪದಲ್ಲಿ ಉಪ್ಪನ್ನು ತಯಾರಿಸುವಾಗ್ಗೆ ಶಾಲಾ ಕಾಲೇಜಗಳರವರು ಹಿಡಿಯಲ್ಪಟ್ಟರು. ಶ್ರೀ ಅಬ್ಬಾಸ ತ್ಯಯಬ್ಜಿಯವರು ಬೋರ್ಸಾದಕ್ಕೆ ಹೋದರು.

### ಜಾಳೀಸಗಾಂವ

೨೭ ನೇ ತಾರೀಖ ದಿವಸ ಸಭೆ ಸೇರಿ ಸಾರ್ವಜನಿಕವಾಗಿ ಕಾಯದೆಯನ್ನು ಮುರಿದು ತಯಾರಿಸಿದ ಉಪ್ಪು ... ಹರಿ ಹಣಮಂತರಾಯ ... ವಿನಾಯಕ ನಿರ್ವಿಕಾರ ಹೆಸರಿನವರಿಂದ ಮಾರಲ್ಪಟ್ಟಿತು. ಅದೇ ವೇಳೆಕ್ಕೆ ಇವರೀರ್ವರೂ ಹಿಡಿಯಲ್ಪಟ್ಟು, ೯ ತಿಂಗಳ ಶಿಕ್ಷೆ ಮತ್ತು ೫೦ ರೂ. ದಂಡವು ವಿಧಿಸಲ್ಪಟ್ಟಿತು. ಜನರು ಪೂರ್ಣ ಹರತಾಳವನ್ನು ಪಾಲಿಸಿದರು.

### ಕರಾಚಿ.

ಕಾಯಿದೆಯನ್ನು ಮುರಿದು ತಯಾರಿಸಿದ ೧೧,೦೦೦ ಪೌಂಡ ಉಪ್ಪು, ಸ್ತ್ರೀಯರಿಂದ, ಮತ್ತು ಹುಡುಗರಿಂದ ಮಾರಲ್ಪಟ್ಟಿತು. ೨೭ ನೇ ತಾರೀಖಿನ ದಿವಸ ಬಹು ದೊಡ್ಡ ಮೆರವಣಿಗೆಯು ಹೊರಟು ಕೊನೆಗೆ ಶ್ರೀ ಸಿಧ್ವಾಂವರ ಅಧ್ಯಕ್ಷತೆಯ ಕೆಳಗೆ ಸಭೆ ಸೇರಿ, ಪೇಶಾವರದಲ್ಲಿ ಜನತೆಯ ಮೇಲೆ ನಿಷ್ಕಾರಣವಾಗಿ ಗುಂಡಿನ ಮಳೆ ಸುರಿಸಿದ ಬಗ್ಗೆ ನಿಷೇಧದ ಠರಾವು ಪಾಸು ಮಾಡಲ್ಪಟ್ಟಿತು. ಅನಂತರ ಪರದೇಶೀ ಬಟ್ಟೆಗಳ ಹೋಳಿಯಾಯಿತು. ಇದೆಲ್ಲವನ್ನು ನಿರೀಕ್ಷಿಸುವದಕ್ಕೋಸ್ಕರವೇ ಏನೋ ಎಂಬಂತೆ ಒಂದು ವಿಮಾನವು ಮೇಲೆ ಸುಳಿದಾಡುತ್ತಲಿತ್ತು.

### ಕಾರವಾರ.

ನಿನ್ನೆಯ ದಿನ ಊರಿನ ಜನಗಳು ಒಂದಾಗಿ ಉಪ್ಪಿನಕಾಯಿದೆ ಭಂಗ ಮಾಡಿದರು. ಸುಮಾರು ಎರಡು ಸಾವಿರ ಜನರು ಸೇರಿದ್ದರು. ಉಪ್ಪಿನ ನೀರಿನ ಗಡಿಗೆಗಳನ್ನು ಒಡೆದು ಹಾಕಬೇಕೆಂಬ ಉದ್ದೇಶವಿದ್ದಂತೆ ಕಂಡರೂ, ಪೋಲೀಸರವರಾರೂ ಕೈ ಹಚ್ಚಲಿಲ್ಲ. ಮೂವರನ್ನು ಮಾತ್ರವೆ ಸೆರ ಹಿಡಿದರು. ಅಲ್ಲದೆ ಸುತ್ತಲಿನ ಹಳ್ಳಿಗಳಲ್ಲಿ ನಾಲ್ವರನ್ನು ಹಿಡಿದರೆಂಬ ವರ್ತಮಾನ ಇನ್ನೂ ಕೆಲವರನ್ನು ಹಿಡಿಯ ಬಹುದೆಂದು ಜನರಾಡಿಕೊಳ್ಳುತ್ತಿದ್ದಾರೆ. ಇಷ್ಟಾದರೂ ಶಾಂತತೆಯನ್ನು ಚನ್ನಾಗಿ ಕಾಪಾಡಿಕೊಂಡಿದ್ದಾರೆ.

### ಕುಮಟಾ.

ಊರಿನವರೂ ಮತ್ತು ಸುತ್ತಲಿನ ಹಳ್ಳಿಗಳ ಜನರೂ ಒಟ್ಟಾಗಿ ಸರಕಾರದ ಕಟ್ಟಳೆಯನ್ನು ತುಚ್ಛಮಾಡಿ, ಸ್ವತಂತ್ರವರ್ತನದಿಂದ ಉಪ್ಪನ್ನು ತಯಾರಿಸಿ ಬಜಾರಕ್ಕೆ ತಂದು ಮಾರಿದರು. ಅಂದಾಜದ ಮೇಲೆ ೧೨—೧೩ ಸಾವಿರ ಜನರು ನೆರೆದಿದ್ದರೆಂದು ಹೇಳಬಹುದು. ಮಣಗಟ್ಟಿಲೆ ಉಪ್ಪಿನ ವ್ಯಾಪಾರವಾಗಿರಬಹುದು. ನೌಕರಶಾಹಿಯವರಿಗೆ ಸ್ವಂತ ಉತ್ಸಾಹವನ್ನು ತೋರಿಸುವದಕ್ಕೆ ವಿಲ್ಲದಿದ್ದರೂ ತಮ್ಮ ಹೆಂಡರು ಮಕ್ಕಳನ್ನು ಈ ಸ್ವತಂತ್ರ ಸಂಗ್ರಾಮಕ್ಕೆ ಕಳುಹಿಸಿದ್ದರು. ಉತ್ಸಾಹವು ದಿನೇ ದಿನೇ ಹೆಚ್ಚುತ್ತಿದ್ದರೂ ಶಾಂತತೆಗೆ ಸ್ವಲ್ಪವೂ ಭಂಗ ಬಂದಿಲ್ಲ.

## ಹುಬ್ಬಳ್ಳಿ

ಸ್ವಯಂಸೇವಕರು ಊರಲ್ಲಿ ಆಡ್ವಾಡಿ ಗಾಂಧಿ ಉಪ್ಪಿನ ಸೂರಾಬು ಚೀಟಿಗಳನ್ನು ಮಾರಿದರು. ಅನೇಕರಿಗೆ ಉಚಿತವಾಗಿ ಹಂಚಿದರು.

ಧಾರವಾಡ ಹುಬ್ಬಳ್ಳಿಯ ವಕೀಲ ವಿದ್ಯಾರ್ಥಿಗಳು ೭ನೇ ಯಲ್ಲಿ ಖಾದಿಯ ಪ್ರಸಾರವನ್ನು ಮಾಡುವದಕ್ಕಾಗಿ ಒಂದು ಆಲೋಚನಾ ಸಭೆಯು ಶ್ರೀ ವಿಶ್ವನಾಥರಾವ ಜೋಶಿ ವಕೀಲ ರಲ್ಲಿ ಕೂಡಿ, ಒಂದು ಖಾದಿಯ ಮಂಡಲವು ಸ್ಥಾಪಿಸ [illegible] ಭಂಡಿ ಮಿಕ್ಷಿನ ಒಂದು ಭಾಗವನ್ನು ಮೇ ತಿಂಗಳ ಪರ್ಯಂತ ಸ್ವಲ್ಪಸಮಯದಿಂದು ಸೂಟೀಸು ಕೂಂಡುವದು ಇದರಿಂದ ಒಂದು ಸಾವಿರ ಜನರು ಕೂಲ್ಲಿಗಿಲ್ಲದ ಕೂಡ್ರುವ ಪ್ರಸಂಗ ಬಂದದೆ. ಇತ್ತ ಚಂದಾನಿಗ ಘಡವು ಲಕ್ಷ್ಯಕೊಟ್ಟರೆ ಖಾದಿಯ ಏಳಿಗೆಯನ್ನು ಹೆಚ್ಚಿಸಲು ಅಪೂರ್ವವಾದ ಯೋಗ್ಯ ಒಂದೇತ್ತಿಂದು ಅನ್ನಲು ಅಡ್ಡಿಯಿಲ್ಲ. ನಮ್ಮ ತಾಲೂಕಿನಲ್ಲಿ ಅನೇಕ ಕಡೆಗೆ ಹಳ್ಳದಿಂದ ಉಪ್ಪನ್ನು ಮಾಡಲು ಬರುತ್ತಿದ್ದು ಅನೇಕರು ತಮ್ಮ ಮನೆಗೆ ಬೇಕಾಗುವ ಉಪ್ಪನ್ನು ಮಾಡಿಕೊಳ್ಳಲು ಪ್ರಾರಂಭಿಸಿ ಉದಾಹರಣೆಗಳು ಅನೇಕ ದೊರೆಯುತ್ತವೆ. ಅದರ ಸೀಮೆಯ ಕಾರ್ಖಾನೆಗಳ ಹತ್ತಿರ ಹೋಗಿ ಹಳ್ಳದ ಉಪ್ಪನ್ನು ಮಾಡ ಬೇಕೆಂದು ಸರ್ಕಾರದಿಂದ ಉಪದೇಶಿಸಲಾಗುತ್ತಿರುವ ದೆಂದು ರೈತರು ಅದರ ಕಡೆಗೆ ಲಕ್ಷ್ಯಮಾಡುತ್ತಿರುವರೆಂದು ತಿಳಿದುಬಂದದೆ.

## ಅಂಕೋಲಾ.

ವೈ ಶಾ ಪಿಯ ೫ ಜನರನ್ನು ಹಿಡಿದರೆಂಬ ಕಾರಣದಿಂದ ಕಾರೀಖ ೨೭ ರಲ್ಲಿ ಹರತಾಳವನ್ನು ನಡೆಸಿದರು. ಮಧ್ಯಾಹ್ನದ ವರೆಗೂ ಅಂಗಡಿಗಳೆಲ್ಲ ಬಂದಾಗಿ, ಬೀದಿಗಳಲ್ಲಿ ಜನ ಸಂಚಾರ ಕಡಿಮೆ ನಿಂತಂತಾಗಿತ್ತು. ಹೆಮ್ಮಕ್ಕಳು ಸಿಂಗರಿಸಿದ ಪೆಟ್ಟಿಗೆಯನ್ನು ಒಲೆ ಪ್ರವೇಶ ಮಾಡಿ ಕರೆದೊಯ್ದು, ಪ್ರಮಾಣವನ್ನು ಮಾಡಬೇಕೆಂದು, ೩೦೦ ಜನ ಹೆಣ್ಣುಗಂಡಸರೇ ಸೇರಿ ಸರ ಕಾರದ ಪರವಾನಿಗೆಯನ್ನು ಪಡೆದು ತಮ್ಮ ಉಪ್ಪನ್ನು ಶಾಂತರೀತಿಯಿಂದಲೂ ಧೀರ ಮನದಿಂದಲೂ ನಡೆಸಿದರು. ಕೃದ ಗಳ ವರ್ತನೆಯೂ ಕೂಡ ಸುತ್ತಲಿನ ಜನರಲ್ಲಿ ಹುರುದುಂಬಿ ಸುವ ಹಾಗಿತ್ತು.

## ಬೆಳಗಾಂವಿ.

ತಾ|| ೨೮—೪—೩೦ ನೇ ದಿವಸ ಬಹಿಷ್ಕಾರ ಸಭೆಯಾಗಿ ಪರ ದೇಶಿ ಬಟ್ಟೆಗಳ ಹೋಳಿಯಾಯಿತು. ಶ್ರೀ ಪಂಡಿತ, ದಾಬಡೆ, ಮತ್ತು ಪ್ರಭು ಮಾತಾಡಿದರು. ಶ್ರೀ ಪಂಡಿತರವರು ತಮ್ಮ ಕಡೆಗೆ ಉಪ್ಪು ಇದ್ದ ಬಗ್ಗೆ ಹೇಳಿದರು, ತಾ|| ೨೯—೪—೩೦ ನೇ ದಿವಸ ೩—೩೦ ಮಿನಿಟಿಗೆ ಶ್ರೀ ಪಂಡಿತ ಸಂಯುಕ್ತ ಕರ್ನಾ ಟಕ ಸಂಪಾದಕರನ್ನು ಹಿಡಿದರು, ಕೂಡಲೇ ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಲ್ಪಟ್ಟು ಪಂಡಿತರಿಗೆ ೧ ತಿಂಗಳ ಸಾದಾ ಶಿಕ್ಷೆ ಯಾಯಿತು. ೩೦ ನೇ ತಾರೀಖಿನ ದಿವಸ ೬|| ಘಂಟೆಗೆ ನಗರ ವೆಂಕಟೇಶ ಪಾರಿಶವಾಡ ಇವರನ್ನು ಹಿಡಿದು ಖಾನಾಪೂರ ಕಳಿಸಿ ದರು. ಖಾನಾಪೂರದ ಡಾ. ಜೋಶಿ ಇವರಿಗೆ ೬ ತಿಂಗಳ ಸಶ್ರಮ ಶಿಕ್ಷೆಯಾಯಿತು. ಹಿಂಡಲಗಿ ಜೇಲಕ್ಕೆ ೩೦ ನೇ ತಾ|| ನ ದಿವಸ ಮುಂಜಾನೆ ತಂದರು. ಇವರ ಅಭಿನಂದನಪರ ಸಭೆಯು ತಾ|| ೨೯—೪—೩೦ ನೇ ದಿವಸ ಕೂಡಿತ್ತು. ಸಂಯುಕ್ತ ಕರ್ನಾಟಕ ಸಂಪಾದಕತ್ವವನ್ನು ಶ್ರೀ ಗೆಜ್ಜಿ [illegible] ರಿಸುವವರಿದ್ದಾರೆ. [illegible] ಬೆಳಗಾವಿಯಲ್ಲಿ ಪ್ರತಿ ದಿವಸ ಸಭೆಗಳು ಆಗ [illegible] ಉಪ್ಪು ಮಾರುವದು ಪ್ರತಿ ದಿವಸ ನಡೆದದೆ, ಹುಡ ಗಿಯಲ್ಲಿ ಎಷ್ಟೋ ತರುಣ ಮುಂದಾಳುಗಳು ಉಪ್ಪುವನ್ನು ಪ್ರತಿ ದಿವಸ ಮಾರುತ್ತಿರುವರು.

## ಅಂಕೋಲಾ ತಾಲೂಕ ಕಚೇರಿಯಿಂದ

### ಮಾವತ್ತು ಪೋಲೀಸ ಪಾಟೀಲರಿಗೆ ಹುಕುಮು

ಬಾಂಬೆ ಆಕ್ಟ ಕಲಮು ೩೯ ರ ಪ್ರಕಾರ (ಪ್ರತಿ ಯೊಬ್ಬ ಪೋಲೀಸ ಪಾಟೀಲನು ಅಬಕಾರಿ ಗುನ್ಹೆ ಮಾಡುವ ಉದ್ದೇಶವಾ ಗಿ ಅಥವಾ ತಯಾರ ಮಾಡುವದಾಗಲಿ ತನ್ನ ನಜರಿಗೆ ಬಂದ ಕೂಡಲೆ ಅಬಕಾರಿ ಅಫೀಸರರಿಗೆ ಖಾತರಿ ಕೊಡಬೇಕು. ತಮ್ಮ ಕಡಿಗೆ ಶಕ್ಯವಿದ್ದಷ್ಟು ಮಟ್ಟಿಗೆ ಗುನ್ಹೆ ಆಗುತ್ತದೆಂತ ಕಂಡಲ್ಲಿ ಅದನ್ನು ಆಗದಂತೆ ಪ್ರಯತ್ನ ಮಾಡಬೇಕು. ಅಬಕಾರಿ ಅಫೀ ಸರರು ತಮ್ಮ ಕರ್ತವ್ಯ ಮಾಡುವಾಗ್ಯೆ ಅವರಿಗೆ ಸಹಾಯ ಮಾ ಡಬೇಕು) ಇತ್ತೀಚೆಯಲ್ಲಿ ಅಬಕಾರಿ ಉತ್ಪನ್ನವು ಕಡಿಮೆ ಆಗು ತ್ತ ಹೋದ್ದರಿಂದ ಗ್ರಾಮಸ್ಥರು ಅಬಕಾರಿ ಅಫೀಸರರಿಗೆ ತಕ್ಕ ಮದ್ದತು ಮಾಡದ ಇದ್ದರೆ ಸ್ಥಿತಿ ಮತ್ತೂ ಕೆಟ್ಟೀತು. ಗ್ರಾಂ ಪೋ. ಆಕ್ಟ ಕಲಂ ೬ ರ ಪ್ರಕಾರ ಪೋಲೀಸ ಪಾಟೀಲರು ಗುನ್ಹೆ ಆಗದಿದ್ದಂತ ಪ್ರಯತ್ನ ಮಾಡಬೇಕು. ವ ಗುನ್ಹೆ ಮಾಡಿದವ ರಿಗೆ ನ್ಯಾಯಾಲಯದ ಬಗ್ಗೆ ತರತಕ್ಕದ್ದು. ಈ ಪ್ರಕಾರ ಕಲಂ ೬ ರಂತೆ ನಿಮ್ಮ ಕರ್ತವ್ಯ ಮಾಡದೆ ಇದ್ದರೆ ೯ ನೇ ಕಲಮು ಪ್ರ ಕಾರ ಶಿಕ್ಷೆಗೆ ಪಾತ್ರರಾಗಬೇಕಾಗುತ್ತದೆ, ಒಳಗಡೆ ನಮೂದ ಮಾಡಿದ ಪ್ರಕಾರ ಪ್ರತಿಯೊಬ್ಬ ಪೋಲೀಸ ಪಾಟೀಲನು ಕರ್ತ ವ್ಯ ಬಜಾಯಿಸ ಹುಜೂರ ಹುಕುಂ ನಂ ೧೩೩೯ ನೇದು ಸಾದರ ಆಗಿದೆ. ಕಾರಣ ಅದರಂತೆ ವರ್ತಿಸಬೇಕು. ತಾ|| ೧೬-೪-೩೦

ಮಾಮಲೇದಾರ ಅಂಕೋಲಾ.


**ಗದಗ:ಶ್ರೀ ದತ್ತಾತ್ರೇಯ ಸಂಗೀತ ನಾಟಕ**

**ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಶನಿವಾರ ತಾ.೩-೫-೩೦

**ಯಚ್ಚಮ್ಮ ನಾಯಿಕ.**

**ಸೋಮವಾರ ತಾ,೫-೫-೩೦**

**ಶರಣ ಬಸವ**

ಬುಧವಾರ ತಾ.೭-೫-೩೦

**ಮಾಯಾ ಬಾಜಾರ,**

**ಎಂಬ ನಾಟಕಗಳನ್ನು ಅಭಿನಯಿಸುವರು,**

ಸಂಘದೊಡೆಯ—**ಸದಾಶಿವರಾವ ಗದಗಕರ**


ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ವ. ನಂ. ೬ ೧೯೬೭ ಬೆಲೆ ೦—೧—೩

# ಕನ್ನಡಿಗ

ಜಯ ಕರ್ನಾಟಕ

ನಿತ್ಯಸಂಚಿಕೆಯು.

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ಶನಿವಾರ ಮಿತಿ ವೈಶಾಖ ಶುದ್ಧ ೫ ಶಕೆ ೧೮೫೨ ತಾ ೩—೫—೩೦ ಸಂಚಿಕೆ ೩೮

ಕನ್ನ ಡಿಗನೇ ನಿನ್ನ ವೀರಶಾಸನಕಾಗಿ ·
ಕನ್ನಡವ ಕಲ್ಲಾಗಿ ನಿಲ್ಲಿಸಲು ಸಿದ್ಧನಿರು ·
ಕನ್ನಡಪ್ರಾಣವು ನಿನ್ನ ಗಂಧವನು ಬೀರಬಯಸುವುದೆಂದು ತಿಳಿಯು॥

ವ್ಹಾಯಿಸರಾಯರು ಹೊಸದಾಗಿ ಹೊರಡಿಸಿದ ಪ್ರೆಸ್ಸ್ ಆಕ್ಟಿನ ನಿಷೇಧಾರ್ಥವಾಗಿ "ಕನ್ನಡಿಗನು" ತನ್ನ ಸಂಪಾದಕರ ಭೂಮಿಯನ್ನು ತೆಗೆದು ಹಾಕಿರುವನು. ಆ ಸ್ಥಳದಲ್ಲಿ ಬರೇ ಸಹ ಸುದ್ದಿಗಳನ್ನೇ ಕೊಡುತ್ತ ಹೋಗುವನು,

## ಮಹಾತ್ಮಾ ಗಾಂಧಿಯವರನ್ನು ಹಿಡಿಯಬೇಕೋ?

(ಉದಕ ಮಂಡಲ.)

ಚಿತಗಾಂಗ ದಂಗೆಯ ನಂತರ ಬೇರೆ ಬೇರೆ ಪ್ರಾಂತಗಳಲ್ಲಿ ರಾಜಕೀಯ ಪರಿಸ್ಥಿತಿಯು ಯಾವಬಗೆ ನಡೆದಿರುವದು ಸತ್ಯಾಗ್ರಹವನ್ನು ಉಪ್ಪಿನ ಕಾಯದೇಗಳಿಗೆ ಅಲ್ಲದೇ ಬೇರೆ ಎಲ್ಲ ಕಾಯದೇಗಳನ್ನು ಮುರಿಯುವದಕ್ಕು ಮುಂದೆ ಸಾಗಿಸುವರೋ ಹ್ಯಾಗೆ, ಮತ್ತು ಮಹಾತ್ಮನನ್ನು ಹಿಡಿದರೆ ಒಳ್ಳೇ ಪರಿಣಾಮ ಯಾವದು ಎಂಬದನ್ನು ಹಿಂದುಸ್ಥಾನ ಸರಕಾರದವರು ಬಹಳೇ ಚಿಂತೆಯಿಂದ ವಿಚಾರಿಸುತ್ತಿರುವರು ಮಂದರ ಪಕ್ಷದವರ ಹಾಗೂ ಮುಸಲ್ಮಾನರು ತಮಗೆ ವಿರೋಧ ಮಾಡದಂತೆ ಸರಕಾರವು ಎಚ್ಚರಪಡುತ್ತಿರುವದು, ಅಲ್ಲಲ್ಲಿಯ ಜನತೆಯ ಅಭಿಪ್ರಾಯವನ್ನು ತಿಳಿದುಕೊಳ್ಳಲು ಹಿಂದುಸ್ಥಾನ ಸರಕಾರವು ಸ್ಥಾನಿಕ ಸರಕಾರಗಳಿಗೆ ತಂತಿಯಿಂದ ಸುದ್ದೀ ಕಳಿಸಲು ಹೇಳಿದೆ,

### ಮಹಮ್ಮದ ಅಲ್ಲಿಯವರು ವ್ಹಾಯಿಸರಾಯರಿಗೆ ಕಳಿಸಿದ ತಂತೀ ಸುದ್ದಿಯು

ಮಹಾತ್ಮರನ್ನು ಹಿಡಿದು ಈಗಿದ್ದ ಪರಿಸ್ಥಿತಿಯನ್ನು ಇನ್ನು ಹೆಚ್ಚು ಬಿಕ್ಕಟ್ಟು ಮಾಡಬಾರದೆಂದು ನಾನು ನಿಮಗೆ ಕೇಳಿಕೊಳ್ಳುತ್ತೇನೆ,

ಮಹಾತ್ಮನು ತನ್ನ ಶಕ್ತಿಯನ್ನು ತೋರಿಸಿದ್ದಾನೆ ಸರಕಾರವು ತನ್ನ ಶಕ್ತಿಯನ್ನು ತೋರಿಸಿಬಿಟ್ಟದೆ ತಮ್ಮ ಘನತೆಯ ವಿಚಾರವನ್ನು ಬಿಟ್ಟು ಎರಡೂ ಪಕ್ಷದವರು ತಮ್ಮ ಹೆಜ್ಜೆಗಳನು ಹಿಂದ ತಕ್ಕೊಂಡು ಶಾಂತತೆ ಹಾಗೂ ಸ್ವತಂತ್ರತೆಗಾಗಿ ಒಬ್ಬರಿಗೊಬ್ಬರು ತಿರುಗಿ ಕೂಡಿಕೊಳ್ಳಬೇಕು ನೀವು ನಿಶ್ಚಯವಾಗಿ ತಿಳಿಸಿದರೆ ನಾನು ಮಹಾತ್ಮರಿಗೂ ಇದರಂತೆಯೇ ತಂತಿಯಿಂದ ಸುದ್ದೀ ಕಳಿಸುವೆನು.

ವ್ಹಾಯಿಸರಾಯರ ಉತ್ತರ

ಹಿಂದುಸ್ಥಾನದಲ್ಲಿಯ ರಾಜ್ಯ ವ್ಯವಸ್ಥೆಯ ಧೋರಣವು ಮೊದಲಿನ ಹಾಗೆಯೇ ಏನೂ ಬದಲಾಗದೇ ಉಳಿದದೆ ಕಾಯದೆಗಳನು ನಿಮ್ಮ ಸತ್ಯಾಗ್ರಹ ವಿರುದ್ಧ ಸರಕಾರವು ಉಪಯೋಗಿಸಲ್ಪಟ್ಟಿದೆ, ಹಾಗೂ ತಮ್ಮ ಸರಕಾರದ ವ್ಯವಸ್ಥೆಗಳು ಭಂಗವಾಗದಂತೆ ಅವುಗಳನ್ನು ಉಪಯೋಗಿಸಲಾಗುವದು ಬೇಕಾದ ಉಪಾಯಗಳೂ ಉಪಯೋಗ ಮಾಡಲ್ಪಡುವವು ನಾನು ಸ್ನೇಹದಿಂದ ಕೈ ಮುಂದೆ ಚಾಚಿದರೆ ಅದನ್ನು ರಾಷ್ಟ್ರವು ಸ್ವೀಕರಿಸಲಿಲ್ಲ.

---

**ಕಲಕತ್ತಾ.**

ಜೇಲಿನಲ್ಲಿದ್ದ ಶ್ರೀ ಜೆ ಎಮ್. ಸೇನಗುಪ್ತರವರು ಪುನಃ ಐದನೇ ಸಾರೆ ಕಲಕತ್ತಾ ಮುನಸಿಪಾಲಿಟಿಯ ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು.

**ನವಸಾರಿ.**

ಸತ್ಯಾಗ್ರಹ ಯುದ್ಧದಲ್ಲಿ ಭಾಗತೆಗೆದುಕೊಳ್ಳಲು ತಮಗೆ ಪರವಾನಿಗೆ ದೊರೆಯಬೇಕಾಗಿ ಶ್ರೀ ರೆಜಿನಾಲ್ಡ ರೇನಾಲ್ಡ್‌ಸರು ಮಹಾತ್ಮಾ ಗಾಂಧಿಯವರನ್ನು ಬಹಳೇ ಒತ್ತಾಯಪಡಿಸಿದರು. ಆದರೆ ಗಾಂಧಿಜೀಯವರು, ರಾಷ್ಟ್ರೀಯ ಸೈನ್ಯದ ಕಾದಿಟ್ಟ ತರಗತಿಯಲ್ಲಿ ಇರಬೇಕಾಗಿ ಉಪದೇಶಿಸಿದರು.

**ಅಲೀಬಾಗ.**

ಶ್ರೀ ಚಿಂತಾಮಣಿ ಶಾಸ್ತ್ರಿ ಜೋಶಿ ಯವರಿಗೆ ೬ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ. ನಾಶಿಕರೆಯ ಶ್ರೀ ಕಾಣೆ ಮತ್ತು ಗೋಸಾವಿ ಯವರಿಗೆ ೬ ತಿಂಗಳ ಸಶ್ರಮ ಸಜೆ ಯಾಗಿದೆ.

**ದಿಲ್ಲಿ.**

ಶ್ರೀ ದೇವೀದಾಸ ಗಾಂಧೀ ಮತ್ತು ಸನ್ಯಾಸಿ ಇವರಿಗೆ ಕ್ರಮವಾಗಿ ೧, ೨ ವರ್ಷಗಳವರೆಗೆ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿದೆ.

# ವರ್ತಮಾನಪತ್ರಗಳ ಹೊಸಿಕಾಯ್ದೆಗೆ ಒಂದು ಔಷಧ.

ಈಗ ಹೊಸದಾಗಿ ವ್ಹಾಯಿಸರಾಯರು ಜಾಹೀರ [illegible] ವರ್ತಮಾನದ ಕಾಯಿದೆಯನ್ನು [illegible] ರೀತಿಯಿಂದ ಎದುರಿಸುವ ದಾರಿ [illegible] ಒಂದು ಹೊಸ ಔಷಧವನ್ನು ಹುಡುಕಿರುವರು ಸರಕಾರದ ವತಿಯಿಂದ ಕೆಲಸ ಮಾಡುವ ಎಲ್ಲ ಮುದ್ರಣಾಲಯಗಳಲ್ಲಿಯೂ ಪಿಕೆಟಿಂಗ ಮಾಡಿ ಅವುಗಳನ್ನು ಬಂದುಮಾಡಿಸುವದು. ಇದರಿಂದ ಸರಕಾರದ ಬಾಲಬಡಿಯುವ ವರ್ತಮಾನಪತ್ರಗಳೂ ನಿಂತು ಹೋಗುವವು. ರಾಷ್ಟ್ರೀಯ ಪತ್ರಗಳನ್ನು ಸರಕಾರವು ಬಂದು ಮಾಡಿದ ಮೇಲೆ ರಾಷ್ಟ್ರೀಯ ಜನರು ಸರಕಾರದ ಬಾಲಬಡಕ [illegible] ಪತ್ರಗಳನ್ನೂ ಬಂದು ಮಾಡಿಸುವದು ಯೋಗ್ಯವೆಂದು ಅವರು ಹೇಳಿದರು.

ಈ ಹೊಸ ಕಾಯಿದೆಯಿಂದ ಪರಿಸ್ಥಿತಿಯೂ ನಿಜವಾದ ಸಂಗತಿಗಳೂ ಜನರಿಗೆ ತಿಳಿಯದೆ ಹೋಗುವದರಿಂದ ಗೊಂದಲವೂ ದೊಂಬಿಗಳೂ ಏಳುವವೆಂದು ಅವರು ಹೇಳುತ್ತಾರೆ

## ದಿಲ್ಲಿಯಲ್ಲಿ

### ಫಳದ ಮೇಲೆ ಸುದ್ದೀ ಬರೆದು ಹಚ್ಚಿದರು.

ವರ್ತಮಾನ ಪತ್ರದ ಸಂಘದ ವತಿಯಿಂದ ಚಾಂದಣೀ ಚೌಕ ಎಂಬಲ್ಲಿ ಗಡಿಯಾರದ ಗೋಪುರದ ಕೆಳಗೆ ಐದು ಫಳಗಳನ್ನು ತೂಗಬಿಟ್ಟಿದ್ದರು. ಅವುಗಳ ಮೇಲೆ ಎಲ್ಲ ಸುದ್ದಿಗಳನ್ನು ಬರೆದು ಹಚ್ಚಿ [illegible] ಸರಕಾರ [illegible] ಕಡೆಯಿಂದ [illegible] ಹೋಗುತ್ತಿದ್ದರು. ಸುದ್ದಿಗಳನ್ನು ಇಂಗ್ಲೀಷ, ಉರ್ದು, ಹಾಗೂ ಹಿಂದೀ ಈ ಭಾಷೆಗಳಲ್ಲಿ ಬರೆದಿದ್ದರು. ಹಿಂದುಸ್ತಾನದ ರಾಜಧಾನಿ ಎನಿಸಿಕೊಳ್ಳುವ ದಿಲ್ಲಿಯಲ್ಲಿ ಒಂದೂ ಪತ್ರವಿಲ್ಲ ಪಂಜಾಬ ಹಾಗೂ ಬಂಗಾಲ ಪ್ರಾಂತಗಳಲ್ಲಿ ವರ್ತಮಾನಪತ್ರಗಳನ್ನು ಹೊಸ ಕಾಯಿದೆಯಿಂದ ಬಹಳ ಜೋರಿನಿಂದ ಬಂದುಮಾಡಹತ್ತಿರುವರು,

ಈ ಹೊಸ ಕಾಯಿದೆ ನಿಷೇಧಮಾಡುವದಕ್ಕಾಗಿ ಲಾಹೋರದಲ್ಲಿಯ ಎಲ್ಲ ಪತ್ರಗಳು ಎರಡು ದಿವಸಗಳವರೆಗೆ ಬಂದು ಇದ್ದವು. ಕಲಕತ್ತೆಯಲ್ಲಿ ಪೋಲೀಸರು ಎರಡು ವರ್ತಮಾನಪತ್ರಗಳ ಕಚೇರಿಗಳಲ್ಲಿ ಒಳನುಗ್ಗಿ ಪರದೇಶೀ ಬಟ್ಟೆಗಳ ಹೋಳಿ ಸಂಬಂಧದ ಕೆಲವು ಪತ್ರಗಳನ್ನು ಹುಡುಕಿದರು ಕಲಕತ್ತೆಯ ಎಲ್ಲ ಪ್ರಸಿದ್ಧ ಪತ್ರಗಳಿಗೂ ಜಾಮೀನು ಕೊಡುವ ಬಗ್ಗೆ ನೋಟಿಸು ಕೊಟ್ಟಿರುವರು: ಪೇಶಾವರದಲ್ಲಿ ಆದ ದಂಗೆಯ ಸಂಗತಿಗಳನ್ನು ವಿಚಾರ ಮಾಡುವದಕ್ಕಾಗಿ ಕಾಂಗ್ರೆಸದ ವತಿಯಿಂದ ನಿಯಮಿಸಿದ ಮಂಡಳಕ್ಕೆ ಪಟೇಲರನ್ನು ಅಧ್ಯಕ್ಷರನ್ನಾಗಿ ಮಾಡಿರುವರು.

## ಬೆಳಗಾಂವಿ

ಶ್ರೀ ವಾಮನರಾವ ಬಿದರಿ ಮತ್ತು ೫ ಜನ ಸ್ವಯಂಸೇವಕರ ಮೇಲಿನ ಖಟ್ಲೆಯು ಇವತ್ತಿನದಿವಸ ನಡೆಯುವದಿದೆ. ಅಥಣಿ ವ್ಯಾಪಾರಸ್ಥರಾದ ಶ್ರೀ ಶಿವಪ್ಪಾ ಜಮಖಂಡಿ ಇವರ ವಿಚಾರಣೆಯು ಇನ್ನೂ ಗೊತ್ತಾಗಿಲ್ಲ. ಸಂಕೇಶ್ವರದ ಶ್ರೀ ಚಂಬಪ್ಪಾ ಪಟ್ಟಣಶೆಟ್ಟಿ ಇವರ ವಿಚಾರಣೆಯು ಎಪ್ರಿಲ ೨೭ ನೇ ತಾ॥ ನ ದಿವಸ ಜರುಗಿ ೧॥ ತಿಂಗಳ ಸಕ್ತಮಜುರಿ ಶಿಕ್ಷೆ ಮತ್ತು ೧೦೦ ರೂಪಾಯಿ ದಂಡ ದಂಡ ಕೊಡಲಿಲ್ಲವಾದರೆ ಮತ್ತೆ ೧೧ ದಿವಸದ ಸಕ್ತಮಜುರಿ ಶಿಕ್ಷೆ ೨೫ ನೇ ತಾ॥ ನ ದಿವಸ ನಿಪ್ಪಾಣಿಯ ಶ್ರೀ ಬಿ, ಕೆ. ಪಟವರ್ಧನರವರು ಹಿಡಿಯಲ್ಪಟ್ಟರು.

ಆ ಮೇಲೆ ಶ್ರೀ ರಂಗನಾಯ್ಕ ಇವರು ಪರದೇಶಿ ಅರಿವೆಗಳನ್ನು ಸುಡತಕ್ಕದ್ದದೆ. ಯಾರಾದರೂ ಸ್ವಸಂತೋಷದಿಂದ ತಮ್ಮ ಅರಿವೆಗಳನ್ನು ಕೊಡತಕ್ಕವರಿದ್ದರೆ ಕೊಡಿರಿ [illegible] ಕೊಂಡರು [illegible] ಬನ್ನಹ ಮಾಡಿ [illegible] ಮರುದಿವಸ ಅರಿವೆಗಳು ಕ್ಷಣಾರ್ಧದಲ್ಲಿ ಕೂಡಿದವು. ಅವರಿಗೆಲ್ಲ ಈಗ ಯಾರು ಸಂತೋಷದಿಂದ ಅರಿವೆಗಳನ್ನು ಸುಡಲಿಕ್ಕೆ ಕೊಟ್ಟಿರುವಿರೋ ಅವರೆಲ್ಲ ಇನ್ನು ಮೇಲೆ ಪರದೇಶಿ ಅರಿವೆಗಳನ್ನು ಕೊಳ್ಳಬಾರದು ಹಾಗೆ ನಡೆಯುದವರು ಈಗಲೆ ತಮ್ಮ ತಮ್ಮ ಅರಿವೆಯನ್ನು ತೊಗೊಂಡು ಹೋಗಬೇಕಾಗಿ ಹೇಳಿದರು ಆದರೆ ಯಾರೂ ತಗೊಳ್ಳಲಿಕ್ಕೆ ಒಪ್ಪಲಿಲ್ಲ ಅಲ್ಲದೆ ಇನ್ನು ಮೇಲೆ ಚಹಾ ಸಕ್ಕರಿ ಸಿಗರೇಟುಗಳನ್ನು ಸಹಾ ಬಿಡತೇವೆಂದು ವಚನಕೊಟ್ಟನು. ಆ ಮೇಲೆ ಶ್ರೀ ಗ್ರಾಮೋಪಾಧ್ಯ ಎಂಬ ಸ್ವಯಂಸೇವಕರು ಉಪ್ಪು ಮಾರಲಿಕ್ಕೆ ಎದ್ದರು. ಕೂಡಲೆ ಫೌಜದಾರರು ಎದ್ದುಬಂದು ಆತನ ಮುಂಗೈ ಹಿಡಿದು ೩।೪ ಜನ ಪೋಲಿಸರೂ ಕೂಡಿ ಕೈ ಮಡಮುರಿದು ಉಪ್ಪು ಕಸಿದುಕೊಂಡರು. ಆದರೆ ಸ್ವಯಂಸೇವಕನ ಕೈಗೆ ರಕ್ತಬರುವಂತೆ ಏತರಿಂದಲೋ ಪೋಲೀಸರು ಚುಚ್ಚಿದ್ದರು. ಅಷ್ಟರಲ್ಲಿ ಸಭೆಯಲ್ಲಿ ಅನೇಕಕಡೆ ಅನೇಕ ಜನರು ಉಪ್ಪು ಮಾರಹತ್ತಿದರು. ಇದನ್ನು ನೋಡಿ ಪೋಲಿಸ ಅಧಿಕಾರಿಗಳು ಘಾಬರಿಯಾಗಿ ಹೌಹಾರಿ ಕುಳಿತರು. ಔಟು ಉಪ್ಪು ೨೧ ಜನರು ಮಾರಿದರು. ಅನೇಕರು ಕೊಂಡುಕೊಂಡರು ಇದನ್ನೆಲ್ಲ ನೋಡಿದ ಫೌಜದಾರನಿಗೆ ಸಿಟ್ಟು ಬಂದು ದಲದ ಕ್ಯಾಪಟನ್ನನಿಗೆ ಖಾಮೋಶ ಚಪ್ ರಹಾ ಆಜ್ ಎಕ್ ಶೂಟಿಂಗ ಎಂದು ಗದ್ದರಿಸಿ ರಿವಾಲ್ವರನ್ನು ತೆಗೆದನು. ಇದನ್ನೆಲ್ಲ ನೋಡಿ ಜನರು ಸಂತಪ್ತರಾದರು, ಆದರೆ ಮಧ್ಯದಲ್ಲಿ ಶ್ರೀ ರಂಗನಾಯ್ಕ ಇವರು ಬಂದು ಏನು? ಗುಂಡು ಹಾಕುತ್ತಿದ್ದರೆ ಹಾಕಿರಿ ಎಂದು ಎದೆ ತಟ್ಟಿಕೊಂಡು ನಿಂತರು. ಆದರೆ ಧೈರ್ಯವಾಗದ್ದರಿಂದ ಕ್ರುದ್ಧ ಮುಖವುಳ್ಳವರಾಗಿ ತಟಸ್ಥರಾಗಿ ನಿಲ್ಲಬೇಕಾಯಿತು. ಆದರೆ ಯಾರನ್ನೂ ಹಿಡಿಯಲಿಲ್ಲ. ಆಮೇಲೆ ಕೂಡಿದ ಪರದೇಶಿ ಅರಿವೆಗಳನ್ನು ಸಭೆಯಲ್ಲಿಯೇ ಹೋಳಿಮಾಡಿ ಸಭೆ ಮುಗಿಸಿ ಶಾಂತಚಿತ್ತದಿಂದ ಎಲ್ಲರೂ ತಮ್ಮ ತಮ್ಮ ಮನೆಗೆ ಹೋದರು. ಸಭೆಗಾಗಿ ಸುತ್ತ ಮುತ್ತಲಿನ ೪೫ ಹರದಾರಿದೂರಿರುವ ಹಳ್ಳಿಗಳಿಂದ ಜನರು ಬಂದಿದ್ದರು. ಅಜಮಾಸ ಸಾವಿರಾರು ಜನರು ಕೂಡಿದ್ದರು. ಈದಿನವೂ ನಿನ್ನಿನಂತೆಯೇ ಕಸಿದುಕೊಂಡ ಉಪ್ಪು ಪಂಚನಾಮೆ ಮಾಡಿಬಿಟ್ಟರು. ಮುಂದೆ ಗುಡಿಯಿಂದ ಸತ್ಯಾಗ್ರಹೀ ಪಥಕವು ವಂದೇ ಮಾತರಂ ಮಹಾತ್ಮಾ ಗಾಂಧೀಕೀ ಜಯ! ಕಾಯದೇ ಭಂಗಕೀ ಜಯ! ಕೆಂಪುಮೋತಿಯವರಿಗೆ ಧಿಃಕಾರ! ದೇಶದ್ರೋಹಿಗಳಿಗೆ ಧಿಃಕಾರ! ಎಂದು ಗರ್ಜನೆ ಮಾಡುತ್ತ ಹೊರಬಿದ್ದಿತು.

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಶನಿವಾರ ತಾ.೩-೫-೩೦

**ಯಚ್ಚಮ್ಮ ನಾಯಿಕ.**

ಸೋಮವಾರ ತಾ,೫ ೫-೩೦

**ಶರಣ ಬಸವ**

ಬುಧವಾರ ತಾ.೭-೫-೩೦

**ಮಾಯಾ ಬಾಜಾರ.**

**ಎಂಬ ನಾಟಕಗಳನ್ನು ಅಭಿನಯಿಸುವರು.**

ಸಂಘದೊಡೆಯ—**ಸದಾಶಿವರಾವ ಗರೂಡ**

## ಮುರಗೋಡ ಪತ್ರ.

( ನಮ್ಮ ಸ್ವಂತ ಸುದ್ದಿಗಾರರಿಂದ )

### ಕಾಯಿದೆ ಭಂಗ.

ಮೊನ್ನೆ ಸಾಯಂಕಾಲಕ್ಕೆ (೨೮-೪-೩೦) ಬೆಳಗಾಂವಿಯಿಂದ ಹೊಂಗಲ ಮಾರ್ಗವಾಗಿ ಹೊರಟ ಸತ್ಯಾಗ್ರಹಿಗಳದೊಂದು ೧೪ ಜನರ ಪಥಕವು ಹೊಸೂರಿಂದ ಇಲ್ಲಿಗೆ ಬಂದಿತು. ಅವರಿಗೆ ಆ ಊರಲ್ಲಿ ಆದರ ಉಪಚಾರವು ಚನ್ನಾಗಿ ಆಯಿತು. ಇವರು ಬರುವರೆಂಬ ಸುದ್ದಿಯು ಮೊದಲೇ ತಿಳಿದಿದ್ದರಿಂದ ಅವರಿಗೆ ಪುರಜನರೆಲ್ಲ ಊರಹೊರಗೆ ಹೋಗಿ ಎದುರುಗೊಂಡು ಕರೆದುಕೊಂಡು ಬಂದರು. 'ರಘುಪತಿ ರಾಘವ ರಾಜಾರಾಮ ಪತಿತ ಪಾವನ ಸೀತಾರಾಮ' ಎಂಬ ಮಂಜುಳನಿನಾದದಿಂದ ಭಜನಿ ಮಾಡುತ್ತ ಹಾಡುತ್ತ, ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ಶ್ರೀ. ಗ್ರಾಮದೇವತೆಯಾದ 'ದ್ಯಾಮವ್ವ'ನ ಗುಡಿಗೆ ಬಂದರು. ಅವರ ಸಂಗಡರಲ್ಲೂ ಜನರೆಲ್ಲರೂ ಹಿಂಬಾಲಿಸಿದ್ದರು. ಶ್ರೀ ದೇವಮ್ಮನ ಗುಡಿಯಲ್ಲಿ ಶ್ರೀ. ಬಸವಣ್ಣಪ್ಪ ಕರಡಿಗುಡ್ಡ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪಾಚ್ಛಾಪೂರದ ಸತ್ಯಾಗ್ರಹೀ ವೀರರಾದ ಚಿಕ್ಕ ವಯಸ್ಸಿನ ದೇ. ಯಮಾಜಿ ಬಾಳಕೃಷ್ಣ ದೇಶಪಾಂಡೆ ಇವರು ಒಂದು ತಾಸಿನ ವರೆಗೆ ಮಹಾತ್ಮಾಜಿಯವರ ಸಂದೇಶವನ್ನು ಜನರಿಗೆ ತಿಳಿಸಿ ಹೇಳಿದರು. ಜನರು ಶಾಂತ ಚಿತ್ತದಿಂದ ಕುಳಿತು ಕೇಳುತ್ತಿದ್ದರು.

೬-೭ ನೂರು ಜನರು ಕುಳಿತಿದ್ದರು. ಇಲ್ಲಿಯ ಫೌಜದಾರರು ೮-೧೦ ಸಶಸ್ತ್ರ ಬೇಡಿ ಸಹಿತ ಪೋಲೀಸರೊಂದಿಗೆ ಬಂದಿದ್ದರು. ಶ್ರೀ. ದೇಶಪಾಂಡೆಯವರ ಭಾಷಣ ನಡೆದಾಗ್ಗೆ ನೀವು ಹೀಗೇ ಹೇಳಿರಿ, ಜನರಿಗೆ ಕ್ಷೋಭನಾ ಉತ್ಪನ್ನವಾಗುವಂತೆ ಭಾಷೆಯಾಡಬೇಡಿರಿ. ಗಾಂಧಿ ಹೇಳಿದಷ್ಟೇ ಹೇಳಿರೆಂದು ಮುರಾರಿಯಿಂದ ೧-೨ ಸಾರೆ ಹರಕತ್ತು ಮಾಡಿದರು. ಆದರೂ ಶ್ರೀ. ದೇಶಪಾಂಡೆಯವರು ಅವರಿಗೆ — ನಿಮ್ಮಕಿಂತ ಹೆಚ್ಚು ನನಗೆ ಗಾಂಧಿಯವರು ಸಂದೇಶ ಹೇಗೆ ಹೇಳಬೇಕೆಂಬುವದು ಗೊತ್ತಿದೆ ನೀವೇನೂ ಅದರಲ್ಲಿ ಬಾಯಿಹಾಕಬೇಡಿರಿ ಎಂದು ಸ್ಪಷ್ಟವಾಗಿ ವೀರರಿಗೆ ಒಪ್ಪುವಂತೆ ನುಡಿದದ್ದರಿಂದ ಉಪಾಯಗಾಣದೆ ಸುಮ್ಮನೆ ಕುಳಿತರು. ಆ ಮೇಲೆ ಬೇಕಾಯಿದೆ ಶೀರ ಉಪ್ಪನ್ನು ಮಾರಲಿಕ್ಕೆಂದು ಶ್ರೀ. ಗ್ರಾಮೋಪಾಧ್ಯ ಎಂಬ ಸತ್ಯಾಗ್ರಹೀ ವೀರನು ಮುಂದೆ ಬಂದು ಉಪ್ಪು ಮಾರಬೇಕೆನ್ನುವದರೊಳಗಾಗಿಯೇ ೩-೪ ಜನ ಪೋಲೀಸರೂ, ಫೌಜದಾರರೂ ಬಂದು ಅವನ ಮುಂಗೈ ಹಿಡಿದು ಉಪ್ಪು ಕಸಿದುಕೊಳ್ಳಬೇಕೆಂದು ಆತನ ಕೈಯನ್ನು ಮಡಮುರಿದ್ದರಿಂದ ನಿರ್ವಾಹವಿಲ್ಲದೆ ಮುಷ್ಟಿ ತೆರೆದನು. ಆದರೆ ಅದರಲ್ಲೇನಿದ್ದಿಲ್ಲ.

ಆಗ ಫೌಜದಾರರು — ಮುರಾರಿಯಲ್ಲಿ ಉಪ್ಪು ಎಲ್ಲದೆ ತೋರಿಸು ಎಂದೂ, 'ತಮ್ಮ ಪುರುಷ ಆಸೀಲತರ ಮಿತ ಬಾಹುವಾ' ಎಂದು ನುಡಿದರು. ಅದಕ್ಕೆ ವೀರನು — ನೀವು ಗಂಡಸಿದ್ದರೆ ತಕ್ಕೊಳ್ಳಿರಿ ಎಂದು ಮತ್ತೊಂದು ಉಪ್ಪಿನ ಚೀಟು ತೆಗೆದು ಮಾರಲು ಪ್ರಾರಂಭಿಸಿದರು. ಕೂಡಲೆ ಅವನ ರಟ್ಟೆ ಹಿಡಿದು ೩-೪ ಜನ ಪೋಲೀಸರು ಕೂಡಿ ಆತನ ಕೈಯನ್ನು ಮಡಮುರಿದು ಉಪ್ಪನ್ನು ಕಸಿದುಕೊಂಡು ನಿನ್ನನ್ನು 'ಅರೆಸ್ಟ' (ಕೆರೆಹಿಡಿ) ಮಾಡಿದ್ದೇನೆಂದು ಹೇಳಿದರು. ಇಷ್ಟೆಲ್ಲ ಆಗುವ ವರೆಗೆ ಫೌಜದಾರನು ಬಲಗಯ್ಯಲ್ಲಿ 'ಪಿಸ್ತೂಲ'ನ್ನು ಗುರಿ ಇಟ್ಟು ಗುಂಡು ಹಾಕುತ್ತಾರೋ ಏನೋ ಅನ್ನುವಂತೆ ಸದಾ ಅವರ ಕೈಯ್ಯಲ್ಲಿ ಸಜ್ಜಾಗಿತ್ತು. ಇದೆಲ್ಲ ಮುಂಡಾಟವನ್ನು ನೋಡಿ ಸಭೆಯು ಒಮ್ಮೆಲೆ ಹಲಕಲ್ಲೋಲವಾಯಿತು, ಜನರು ಸಂತಪ್ತರಾದರು. ಆದರೆ 'ಶಾಂತ' ಇರಬೇಕಾಗಿ ಸತ್ಯಾಗ್ರಹೀ ವೀರರು ತಮ್ಮ ವಾಣಿಯಿಂದ ಹೇಳಿದೊಂದೇ ತಡ, ಎಲ್ಲರೂ 'ಶಾಂತ'ರಾಗಿ ಕುಳಿತರು. ಆ ಮೇಲೆ ಕಸಿದ ಉಪ್ಪನ್ನು ಪಂಚನಾಮಾ ಮಾಡಿ ಶ್ರೀ ಗ್ರಾಮೋಪಾಧ್ಯನನ್ನು ಸೆರೆ ಹಿಡಿದ ಬಗ್ಗೆ ಹೇಳಿ ಕೆಲವು ಹೆಜ್ಜೆ ಕರಕೊಂಡು ಹೋಗಿ ನಾವು ಕರೆದಾಗ ಬರಬೇಕಾಗಿ ಹೇಳಿ ತಿರುಗಿ ಬಿಟ್ಟರು. ಈ ಪ್ರಕಾರ ಸೆರೆಹಿಡಿದೊಯ್ದು ಬಿಡುವ ಫಾರ್ಸ ಆಗಿ ಸಭೆಯು "ಮಹಾತ್ಮಾ ಗಾಂಧೀಕೀ ಜಯ! ವಂದೇಮಾತರಂ" "ಕಾಯಿದೇ ಭಂಗಕೀ ಜಯ! ಎಂಬ ವೀರ ಗರ್ಜನೆಯಾಗಿ ಪರದೇಶಿ ಅರಿವೆಯು ಹೋಳಿಯಾಯಿತು. ಫೌಜದಾರರು ಹಜರಿದ್ದರು, ಆ ಮೇಲೆ ಸಭೆವಿಸರ್ಜನೆಯಾಯಿತು.

## ಪೋಲೀಸ ಅಧಿಕಾರಿಗಳ ಉನ್ಮತ್ತತನ,

ನಿನ್ನೆ ( ತಾ|| ೨೫-೪-೩೦ ) ಸಾಯಂಕಾಲಕ್ಕೆ ೭ ಗಂಟೆಗೆ ಶ್ರೀ ಮಲ್ಲಿಕಾರ್ಜುನ ದೇವರ ಗುಡಿಯಲ್ಲಿ ಸಭೆ ನೆರೆಯಿತು. ಈ ಮೊದಲು ಫೌಜದಾರರೂ ೧೦-೧೨ ಪೋಲೀಸರು ಬೇಡಿ ಸಹಿತ ಸಿದ್ಧಗಿ ಸಶಸ್ತ್ರರಾಗಿ ಬಂದಿದ್ದರು. ಮೊದಲು ವಂದೇಮಾತರಂ' ರಾಷ್ಟ್ರಗೀತವೆಂದ ಬಳಿಕ ಪದ್ಧತಿಯಂತೆ ಅಧ್ಯಕ್ಷಸ್ಥಾನಕ್ಕೆ ಇಲ್ಲಿಯ ಸತ್ಯಾಗ್ರಹಿಯಾದ ಶ್ರೀ. ಮಹಾದೇವಪ್ಪ ಸಿಂಪಿ ಇವರನ್ನು ಆರಿಸಿದ ಬಳಿಕ ದೇ. ಯಮಾಜಿ ಬಾಳಕೃಷ್ಣ ದೇಶಪಾಂಡೆ ಇವರು ತಮ್ಮ ಸರಸವಾದ ವಾಣಿಯಿಂದ ಭಾಷಣ ಪ್ರಾರಂಭಿಸಿದರು.

ಸಾರಾಂಶ — ಉಪ್ಪಿನ ಕಟ್ಟಳೆಯು ಸತ್ತಂತೇ ಸರಿ, ಗುಜರಾತದಲ್ಲಿ ಎಲ್ಲಿ ನೋಡಿದಲ್ಲಿ ಬೇಕಾಯಿದೇ ಶೀರ ಉಪ್ಪನ್ನೇ ಮಾರುತ್ತಿರುವರು ಮಾತ್ರ ಹಳ್ಳಿಹಳ್ಳಿಗಳಲ್ಲಿ ಈ ಕಾಯಿದೆ ಉಳಿದಿದೆ. ಹೊರತು ಮುಂಬೈ ಬೆಳಗಾಂವಿ ಮುಂತಾದ ಅನೇಕ ಶಹರಗಳಲ್ಲಿ ಈ ಕಾಯಿದೇಕ್ಕೆ ಮಣ್ಣು ಕೊಡಲ್ಪಟ್ಟಿದೆ. ಅದ್ದರಿಂದ ನೀವು ಅಂಜದೆ ಪ್ರತಿಯೊಬ್ಬ ಸ್ತ್ರೀಪುರುಷರು ಈ ಬೇಕಾಯಿದೇಶೀರ (ಕಂಕೊಡದಿ ತಂದ ಉಪ್ಪು) ಈ ಅನ್ಯಾಯದ ಕಾಯಿದೆಯನ್ನು ಕಾಲುಮೆಟ್ಟಿ ತುಳಿದುಬಿಡಿರಿ ಹಾಗೂ ಪರದೇಶಿ ಅರಿವೆಗಳಿಗೆ ಬಹಿಷ್ಕಾರ ಹಾಕಿರಿ! ಸೆರೆ ಸಿಂದಿಗಳಿಗೆ ಬಹಿಷ್ಕಾರ ಹಾಕಿರೆಂದೂ ಹಾಗೆಮಾಡಿ ಬಹು ಅನೇಕ ಕಡೆಯ ಉದಾಹರಣೆಗಳನ್ನು ಕೊಟ್ಟು ತಿಳಿಸಿಹೇಳಿದರು. ಮತ್ತು ಬಂಗಾಲದ ಸುಪ್ರಸಿದ್ಧ ಪುಢಾರಿಗಳೂ ಬಾರಿಸ್ಟರರೂ, ಆದ ದೇ. ಸೇನಗುಪ್ತ, ಸುಭಾಷಚಂದ್ರ ಭೋಸ ಇವರನ್ನು ಅಲೀಪೂರ ಜೇಲದಲ್ಲಿ ಪೋಲಿಸರು ನಿರ್ದಯದಿಂದ, ಅನ್ಯಾಯದಿಂದ ಹೊಡೆದದ್ದರಿಂದ ಸುಭಾಷ

ಬಾಯಿಗೆ ಪಟ್ಟಿ ಹತ್ತಿ ಕೆಳವಳಿಸಿ ೩ ತಾಸಿನವರೆಗೆ ನಿಶ್ಚೇಷ್ಟಿತನಾಗಿ ಬಿದ್ದನು. ಆದ್ದರಿಂದ ಪೋಲಿಸರ ಅನ್ಯಾಯದ ವರ್ತನ ಬಗ್ಗೆ ಚನ್ನಾಗಿ ಟೀಕಿಸಿದರು. ಕೂಡಲೆ ಫೌಜದಾರರು ಸಿಟ್ಟಿಗೆದ್ದು (ಇವರಿಗೆ ಕನ್ನಡಭಾಷೆಯು ಗಂಧಸಹ ಇಲ್ಲ. ಕೇವಲ ಹಿಂದೀ ಭಾಷೆ) ಭಾಷಣಕ್ಕೆ ಅಡ್ಡಿ ಮಾಡಿ ಹೀಗೆ ಪೋಲಿಸರ ಮೇಲೆ ಟೀಕಿಸಕೂಡದಾಗಿಯೂ, ಸೌಮ್ಯ ಭಾಷೆಯಿಂದ ಹೇಳಬೇಕಾಗಿಯೂ, ತಮ್ಮ ಅಧಿಕಾರ ಮದದಿಂದ ಹೇಳಿದರು. ಆದರೆ ಶ್ರೀ ದೇಶಪಾಂಡೆಯು ಸೊಪ್ಪುಹಾಕದೆ ನಾನು ಇದ್ದದ್ದು ಇದ್ದಂತೇ ಹೇಳಿದೆನು ಹೊರತು ಯಾವ ವ್ಯಕ್ತಿಯನ್ನೂ ಟೀಕಿಸಿಲ್ಲ. ಮತ್ತು ನಾನೇನು ಮುದುಕನಲ್ಲ; ತರುಣನಿದ್ದೇನೆ! ಯಾವ ತರುಣನಿಗ ಇಂಥ ಅನ್ಯಾಯದ ಸುದ್ದಿಯನ್ನು ಕೇಳಿ ಹೊಟ್ಟೆಯಲ್ಲಿ ಬೆಂಕಿ ಬೀಳಲಾರದು ತಾವೇ ವಿಚಾರಿಸಿರಿ ಎಂದನು. ಆದರೆ ಉನ್ಮತ್ತನಾದ ಫೌಜದಾರನು ಹೀಗೆ ಕಡಕ ಭಾಷಣಮಾಡಿದರೆ ಸಭೆ ಬಂದುಮಾಡತೇನೆ. ನಿನಗೆ 'ಅರೇಸ್ಟ' ಮಾಡತ್ತೇನೆಂದು ಯದ್ವಾತದ್ವಾ ಮಾತಾಡಿದನು. ಆದರೆ ಶ್ರೀ ದೇಶಪಾಂಡೆಯು ಸೊಪ್ಪುಹಾಕದೆ ಧೈರ್ಯದಿಂದ ಅರೆಸ್ಟಮಾಡುವ ಅಧಿಕಾರವಿದ್ದರೆ ಮಾಡಬಹುದು! ಬೇಕಾದರೆ ಸಭೆ ಬಂದುಮಾಡಬಹುದು ಮುಷ್ಟಿಯಿಂದ ಹೊಂಬಿದ್ದಾಗಲೇ ಹೇಳಿಬಂದೇವೆ ನಮ್ಮ ಆಶೆ ಬಿಡಿರಿ' ನಮ್ಮ ಜೀವ ಇರುವ ವರೆಗೆ ಸತ್ಯವನ್ನು ಬಿಡುವದಿಲ್ಲ ಎಂದು ಉತ್ತರ ಕೊಟ್ಟಿದ್ದರಿಂದ ಉಪಾಯ ಗಾಣದೆ ಸ್ವಸ್ಥ ಕುಳಿತುಕೊಳ್ಳಬೇಕಾಯಿತು. ಕೂಡಲೆ ದೇ. ದೇಶಪಾಂಡೆಯವರಿಗೆ ಭಳಿರೆ ಭಂಟ! ಶಾಬ್ಬಾಸ? ಇದ್ದರಿಂಬೇಕು ಇಂಥವೀರ? ಎಂದು ಜನರು ಮಾತಾಡತೊಡಗಿದರು. ಪುನಃ ಮತ್ತೆ ಭಾಷಣಕ್ಕೆ ಪ್ರಾರಂಭಿಸಿ ಮಹಾತ್ಮಾಜಿಯವರ ಸಂದೇಶವನ್ನೆಲ್ಲ ಹೇಳಿ. ಇನ್ನು ಮೇಲೆ ದೇಶಾಯದೇಶೀರ ಉಪ್ಪುಮಾರುವ ಕೆಲಸ ನಡಿಯತಕ್ಕದ್ದದೆ ಎಂದು ಹೇಳಿ ಭಾಷಣ ಮುಗಿಸಿದರು.

---

ವಿಜಾಪೂರ ಜಿಲ್ಲೆಯ ಸತ್ಯಾಗ್ರಹಿಗಳ ಮೊದಲನೇ (ಲಾಲಾಜಿಯವರ) ಪಥಕವು

# ಬಿಸನಾಳಿಗೆ

## ನಡೆದು ಹೋಗುವ ಮಾರ್ಗವು.

ವಿಜಾಪೂರ ಜಿಲ್ಲೆಯ ಮಂಡಳವು ನಿಶ್ಚಯಿಸಿದ ಪ್ರಕಾರಾ ಮೊದಲನೇ ಪಥಕವು ತಾ|| ೫-೫-೩೦ ಮುಂಜಾನೆ ಬಾಗಲಕೋಟೆಯಿಂದಾ ಕೆಳಗೆ ಬರೆದ ಊರುಗಳಲ್ಲಿ ಪ್ರಚಾರಕಾರ್ಯವನ್ನು ಮಾಡುತ್ತಾ ಬಿಸನಾಳಿಗೆ ಹೋಗುವರು.

| ತಾರೀಖು | ಹೊರಡುವವೇಳೆ | ಮುಟ್ಟುವವೇಳೆ | ಯಾವ ಊರಿಗೆ | ಪ್ರತಿದಿನ ಪ್ರಯಾಣದಮೈಲುಗಳು |
|---|---|---|---|---|
| ೫-೫-೩೦ | ಬಾಗಲಕೋಟೆಯಿಂದ ಮುಂಜಾನೆ ೮ ಗಂಟೆಗೆ | ೧೦ ಗಂಟೆಗೆ | ಗದ್ದನಕೇರಿ | |
| | | ಸಾಯಂಕಾಲ ೬ ಗಂಟೆಗೆ | ಅನಗವಾಡಿ | ೧೦ ಮೈಲು |
| | | | ಬೂದಿಹಾಳ | |
| | | | ಬಾವಲತ್ತಿ | |
| ೬ ನೇ | | ಮಧ್ಯಾನ್ಹ ೧೦ ಗಂಟೆಗೆ | ಕುಂದರಗಿ | ೬ ಮೈಲು |
| | | | ಕಾತರಕಿ | |
| | | ಸಂಜೆ ೬ ಗಂಟೆ | ಕೊಪ್ಪ | ೫ ಮೈಲು |
| ೭ ನೇ | | | ಆಲಗುಂಡಿ | |
| | | ಮಧ್ಯಾನ್ಹ | ಅರಕೇರಿ | ೬ ಮೈಲು |
| | | ಸಾಯಂಕಾಲ | ಬೀಳಗಿ | ೮ ಮೈಲು |
| ೮ ನೇ | | ಮಧ್ಯಾನ್ಹ | ಸೊನ್ನ | ೬ ಮೈಲು |
| | | ಸಾಯಂಕಾಲ | ಶಿದ್ದಾಪೂರ | ೪ ಮೈಲು |
| ೯ ನೇ | | ಮಧ್ಯಾನ್ಹ | ತಗ್ಗಿ | |
| | | ಸಾಯಂಕಾಲ | ಬಾಡಗಿ | ೬ ಮೈಲು |
| | | | ಗಲಗಲಿ | ೬ ಮೈಲು |
| ೧೦ ನೇ | | ಮುಂಜಾನೆ ೮ ಗಂಟೆಗೆ | ಬಿಸನಾಳ | ೪ ಮೈಲು |
| | | | | ೬೧ ಮೈಲು |

ಟೀಪು——ಮೇಲೆ ಬರೆದ ಮಾರ್ಗದಲ್ಲಿ ಪ್ರಸಂಗ ಬಂದಾಗ್ಯೆ ಹೆಚ್ಚು ಕಡಿಮೆ ಮಾಡಲ್ಪಡಬಹುದು.

ತಾಲೂಕಾ ಕಾಂಗ್ರೆಸ್ ಕಮಿಟಿ, ಬಾಗಲಕೋಟೆ.
(ಸತ್ಯಾಗ್ರಹದ ಮಂಡಲದವರ ಆಜ್ಞಾನುಸಾರ.)

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಕ. ನಂ. ಬಿ ೧೯೪೭ ಬೆಲೆ ೦—೦—೩

# ಕನ್ನಡಿಗ

ಜಯಕರ್ನಾಟಕ

ನಿತ್ಯಸಂಚಿಕೆಯು.

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ರವಿವಾರ ಮಿತಿ ವೈಶಾಖ ಶುದ್ಧ ೬ ಶಕ ೧೮೫೨ ತಾ ೪—೫—೩೦ ಸಂಚಿಕೆ ೩೯

ನನ್ನ ದೇಹವು ನಿನ್ನ ವೀರಶಾಸನಕಾಗಿ।
ಕಣ್ಣನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ದೀರಬಹಗಂಧವಹವೆಂದು ತಿಳಿಯೆ॥

—ಬೇಂದ್ರೆ ದತ್ತಾತ್ರೇಯರಾಯರು.

---

ವ್ಹಾಯಿಸರಾಯರು ಹೊಸದಾಗಿ ಹೊರಡಿಸಿದ ಪ್ರೆಸ್ಸ ಆಕ್ಟಿನ ನಿಷೇಧ ಫಲವಾಗಿ " ಕನ್ನಡಿಗನು " ತನ್ನ ಸಂಪಾದಕರ ಭೂಮಿಯನ್ನು ತೆಗೆದು ಹಾಕಿರುವನು, ಆ ಸ್ಥಳದಲ್ಲಿಯೂ ಸಹ ಸುದ್ದಿಗಳನ್ನೇ ಕೊಡುತ್ತ ಹೋಗುವನು,

## ವಚನಾಮೃತ

ಜನರು ಏನು ಮಾಡಬೇಕೆಂಬುವದು ಅವರೆದುರಿಗೆ ಸ್ಪಷ್ಟವಾಗಿ ನಿಂತಿದೆ. ಸುವ್ಯವಸ್ಥಿತವಾಗಿ ನಡಿಸಲ್ಪಟ್ಟ ಈ ಹೂಲಿಯನ್ನು ನಾವು ಶಾಂತಿಯಿಂದ ತಡೆಹಾಕ ಬೇಕಾಗಿದೆ. ಜನರಲ್ಲಿ ಇಚ್ಛೆಯೂ ಶಕ್ತಿಯೂ ಉಂಟಾದರೆ ಸ್ವತಂತ್ರತೆಯು ನಿಶ್ಚಿತವಾಗಿ ದೊರೆಯುವದು. ದುಃಖವನ್ನು ಸಹಿಸಿಕೊಳ್ಳುವದರಿಂದ ಸ್ವತಂತ್ರತೆಯು ದೊರೆಯುವದು. ಹಿಂಸೆಯಿಂದ ಹಕ್ಕುಮಾತ್ರ ದೊರೆಯುವದು.

ಮಹಾತ್ಮರು (ಯಂಗ ಇಂಡಿಯಾ ೧—೫—೩೦)

## ಹಾವೇರಿಯಲ್ಲಿ ಉಪ್ಪಿನ ಕಾಯದೆ ಭಂಗವು

ಇಲ್ಲಿಯ ತುಕಡಿ ಸೇನಾನಾಯಕರಾದ ಶ್ರೀ ಹೊಸಮನಿ ಪರಮಣ್ಣರು (ಕರಜಗಿ) ಸತ್ಯಾಗ್ರಹಿಗಳ ಜೊತೆಗೆ ನಗರದ ಮುಖ್ಯ ಮುಖ್ಯ ಬೀದಿಗಳಲ್ಲಿ ರಾಷ್ಟ್ರಧ್ವಜವನ್ನು ತೆಗೆದುಕೊಂಡು ಜಯಘೋಷದೊಂದಿಗೆ ಸಂಕೀರ್ತನೆಯನ್ನು ಮುಗಿಸಿ. ಸುಮಾರು ೯॥ ಘಂಟೆಗೆ (ಮುಂಜಾವಿನಲ್ಲಿ) ಗಾಂಧಿಚೌಕಿಗೆ ಸರಿಯಾಗಿ ಬಂದರು. ಅಲ್ಲಿ ೨, ೨॥ ಸಾವಿರ ಜನಸಂಖ್ಯೆಯು ನೆರೆದಿತ್ತು. ಸರಕಾರದ ಅಧಿಕಾರಿಗಳೂ ಮತ್ತು ಊರೊಳಗಿನ ಪ್ರಮುಖ ಜನರೂ ಆಗಮಿಸಿದ್ದರು ಶ್ರೀ ಪರಮಣ್ಣನವರು, ಸರಕಾರದ ಉಪ್ಪಿನಮೇಲಿರುವ ಅನ್ಯಾಯವಾದ ಕಾಯದೆ ಬಗ್ಗೆ, ಮತ್ತು ಪೇಟೆಯಲ್ಲಿ ಮಾರುವ ಉಪ್ಪಿನ ಅಪವಿತ್ರತೆಯ ವಿಷಯವಾಗಿ, ಜನರ ಮನಸ್ಸಿನಮೇಲೆ ಪರಿಣಾಮ ಕಾಣುವಹಾಗೆ ಹೇಳಿದರು ಇದಲ್ಲದೆ ಅವರು ಸತ್ಯಾಗ್ರಹಿಗಳೊಂದಿಗೆ ಅಲ್ಲಿಯೇ ಉಪ್ಪನ್ನು ತಯಾರ ಮಾಡಿ, ಜನರಲ್ಲಿ ಮಾರಿದರು ಅವರು ಸವಾಲು ಹಿಡಿದ ಮೊದಲನೇ ಪಾಕೇಟಿಗೆ ೧೦ ರೂಪಾಯಿಗಳು ಬಂದವು ಅದನ್ನು ಶ್ರೀ ವೆಂ ಗು, ಜಿವಟ ಇವರು ಕೊಂಡರು. ಮತ್ತು ಉಳಿದ ಉಪ್ಪಿನ ಪಾಕೇಟುಗಳನ್ನು ಮಾರಲು, ಸುಮಾರು ೮ ರೂಪಾಯಿಗಳು ದೊರೆತವು ಉಪ್ಪು ಕೊಂಡವರಲ್ಲಿ ಸರಕಾರಿ ಅಧಿಕಾರಿ ವರ್ಗದವರೂ ಇದ್ದರೆಂದು ಕಾಣಿಸುತ್ತದೆ. ಪೋಲೀಸರು ಶಾಂತಚಿತ್ತದಿಂದ ಬಂದು, ಕೇಳಿ, ಸಮಾಧಾನದಿಂದ ಹೋದರು. ನಾಳೆಯಿಂದ ಊರಲ್ಲಿ ಪ್ರತಿಮನೆಗಳಿಗೆ ಹೋಗಿ, ಉಪ್ಪನ್ನು ಕೊಂಡ ಕೊಳ್ಳಿರೆಂದು ಹೇಳುತ್ತೇವೆಂದು ಇಲ್ಲಿಯ ಸ್ವಯಂಸೇವಕರು ಶ್ರೀ ಪಥಕನಾಯಕರಿಗೆ ತಿಳಿಸಿರುತ್ತಾರೆ.

---

## ಸತ್ಯಾಗ್ರಹ ಜಯವು

ವಾಡಿಕೆಯಂತೆ ಸ್ವಯಂಸೇವಕರ ಸಂಘ ಸಂಘ ತಂಡಗಳು ಸಮುದ್ರದಿಂದ ಉಪ್ಪನ್ನು ತಂದು ಮಾರುತ್ತಲಿವೆ. ಪೋಲೀಸರು ಯಾರನ್ನೂ ಹಿಡಿದಿರುವದಿಲ್ಲ ಉಪ್ಪುಹೆಚ್ಚಾಗಿ ಉತ್ತಮ ತರದ್ದು ಮಾರಲ್ಪಡಹತ್ತಿದೆ. ಸರ್ವಸ್ಥಳದಿಂದಲೂ ಸಹಾನುಭೂತಿಯು ದೊರೆಯ ಹತ್ತಿದೆ. ಕಾರವಾರದಲ್ಲಿ ಭಾಷಣ ಮಾಡಿದ್ದಕ್ಕೆ ಹಿಡಿಯಲ್ಪಟ್ಟ ಶ್ರೀ ಎಸ್ ಎನ್ ದೇಶಪಾಂಡೆಯವರಿಗೆ ನಾಲ್ಕು ತಿಂಗಳ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ ಹೊನ್ನಾವರ ತಾಲೂಕಿನ ಹಳದೀಪುರದಲ್ಲಿ ಅಂಕೋಲಾದ ಶ್ರೀ ಮೊಹಲೆಯವರು ಭಾಷಣ ಮಾಡಿದ ಬಗ್ಗೆ ಹಿಡಿಯಲ್ಪಟ್ಟಿದ್ದಾರೆ ಕುಮಟಾ ಮತ್ತು ಕಾರವಾರದಲ್ಲಿ ಉಪ್ಪಿನ ಸತ್ಯಾಗ್ರಹವು ಬಹು ಜೋರಿನಿಂದ ನಡೆದಿದ್ದು, ಈ ವರೆಗೆ ಅಲ್ಲಿ ಯಾರೂ ಹಿಡಿಯಲ್ಪಟ್ಟಿಲ್ಲ.

ಮುರುಗೋಡ ಪತ್ರ.

ನಮ್ಮ ಸ್ವಂತ ಸುದ್ದಿಗಾರರಿಂದ ಬಂದ ವಾರ್ತೆ.

## ಸ್ತ್ರೀಯರ ಸಭೆ

## ಸಾವಿರಾರು ಪರದೇಶೀ ಬಳೆಗಳು ಒಡೆಯಲ್ಪಟ್ಟವು.

ಇಂದು ಬೆಳಿಗಿನ ೧೦||೧೧ ಘಂಟೆಗೆ ಈ ಊರ ಮಧ್ಯದಲ್ಲಿರುವ ಶ್ರೀ ಮಲ್ಲಿಕಾರ್ಜುನ ದೇವರ ಗುಡಿಯಲ್ಲಿ ಹೆಂಗಸರಿಗಾಗಿಯೇ ಸಭೆ ಕೂಡಿತ್ತು. ಸಭೆಗೆ ಸಾವಿರಾರು ಹೆಂಗಸರು ನೆರೆದಿದ್ದರು. ಮೊದಲು ಆಸಪಕಾರದ ಲಾವಣಿ, ರಾಷ್ಟ್ರೀಯ ಪದಗಳನ್ನು ಶ್ರೀ ದೇಶಪಾಂಡೆಯವರು ಅಂದ ಮೇಲೆ ಶೆರೆ ಸಿಂದಿಗಳನ್ನು ಕುಡಿಯಬಾರದಾಗಿ ಪರದೇಶಿ ಮಾಲನ್ನು ಧರಿಸಬಾರದಾಗಿ ಸಕ್ಕರೆಯನ್ನೂ ಮೊದಲೇ ಬಿಡಬೇಕು ಪೋಲೀಸರಿಗೆ ಹಾಲು ಮೊಸರು ಬೆಣ್ಣೆಯನ್ನು ಕೊಡಬಾರದಾಗಿ ಪರದೇಶಿ ಬಳೆ ತೊಡಬೇಡಿರಿ, ದೇಶಿ ಬಳೆಗಳನ್ನೇ ತೊಡಿರಿ, ಎಂದು ದಲಾಲರು ಉಪದೇಶ ಮಾಡಿದರು. ಕೂಡಿದ ಹೆಂಗಸರ ಮನಸ್ಸಿನಮೇಲೆ ಪರಿಣಾಮವಾಗಿ ಅಲ್ಲಿಯೇ ಅನೇಕರು ಕೈಯಲ್ಲಿಯ ಬಳೆಗಳನ್ನು ಒಡಕೊಂಡರು. ಆ ಮೇಲೆ ಮಹಾತ್ಮಾ ಗಾಂಧಿಮಹಾರಾಜಕೀ ಜಯ! ಎಂದು ಜಯಘೋಷ ಮಾಡುತ್ತ ತಮ್ಮ ತಮ್ಮ ಮನೆಗಳಿಗೆ ಹೋದರು ಆ ಮೇಲೆ ಸತ್ಯಾಗ್ರಹಿ ಪಥಕವು ಮುಂದೆ ಪ್ರಯೋಗ ಬೆಳಿಸಲು ಜಯಘೋಷ ಮಾಡುತ್ತ ಊರಲ್ಲೆಲ್ಲ ಸುತ್ತಾಡಿ ಊರಹೊರಗಿನ ಮೋಟರ ಸ್ಟ್ಯಾಂಡಕ್ಕೆ ಬಂದರು ಅಷ್ಟರಲ್ಲಿ ನೂರಿನ್ನೂರು ಹೆಂಗಸರು ಅವರಿಗೆ ಆರತಿಮಾಡಬೇಕೆಂದೂ, ಆಶಿರ್ವಾದಮಾಡಬೇಕೆಂದೂ ನೆರೆದಿದ್ದರು. ಕೂಡಲೆ ಎಲ್ಲರನ್ನು ಸಾಲಾಗಿ ನಿಲ್ಲಿಸಿ ಅವರಕಾಲಿಗೆ ನೀರು ಹಾಕಿ ಒಬ್ಬೊಬ್ಬರೇ ಆರತಿಗಳನ್ನು ಬೆಳಗಿ ಪ್ರತಿಯೊಬ್ಬರು ಸರಕಾರದ ದಬ್ಬಾಳಿಕೆಗೆ ಒಳಗಾಗದೆ ಎಲ್ಲರೂ ಸುರಕ್ಷಿತವಾಗಿ ಬರಬೇಕಾಗಿ ದೇವರನ್ನು ಸ್ಮರಿಸಿ ಹರಿಸಿದರು. ಈ ಆನಂದಮಯ ದೃಶ್ಯವನ್ನು ನೋಡಿದವರೆಲ್ಲರಿಗೆ ಕಂಬನಿಗಳು ತಮಿಂದತಾವೇ ಉಕ್ಕುತ್ತಿದ್ದವು. ಅಲ್ಲದೆ ಎಲ್ಲರಲ್ಲಿಯೂ ಒಂದು ತರದ ಚೈತನ್ಯವು ಪಸರಿಸಿದಂತೆ ಭಾಸವಾಗುತ್ತಿತ್ತು. ಇಷ್ಟೆಲ್ಲವಾದಬಳಿಕ ಮೋಟಿನಲ್ಲಿ ಕುಳಿತು ನಡೆಗಲಕ್ಕೆ ಪ್ರಯಾಣ ಬೆಳಿಸಿದರು. ಕೂಡಿದವರೆಲ್ಲ ಮಹಾತ್ಮಾ ಗಾಂಧಿಮಹಾರಾಜಕೀ ಜಯ! ಸತ್ಯಾಗ್ರಹ ವೀರರಿಗೆ ಜಯ ಜಯ

---

### ಅಂಕೋಲಾದಲ್ಲಿ ಉಪ್ಪಿನಸಂತೆ,

ಐವರು ನಾಡವರ ಮುಖಂಡರು ಸೆರೆಯಾಳಾದರು

ಕಳೆದ ೨೫ರವರೆಗೆ ಸತ್ಯಾಗ್ರಹಿಗಳ ನಿತ್ಯ ಗಟ್ಟಿಯ ಕಾರ್ಯಕ್ರಮಗಳು ನಡೆಯುತ್ತಿದ್ದವು ತಾ|| ೨೬ಕ್ಕೆ ಮಂದಿಗ್ಗೆ ಶೆಟಗೇರಿ, ಹಿಚಗಡ, ಕಣಗಿಲ್ಲ, ಭಾವಿಕೇರಿ, ಜೇಲೆಕೇರಿ ಮುಂತಾದ ಹಳ್ಳಿಗಳ ನಾಡವರ ವರ್ಗದ ೩—೪ ನೂರು ಮಂದಿ ಸ್ತ್ರೀಪುರುಷರು ಸ್ವತಃ ತಯಾರಿಸಿದ ಉಪ್ಪನ್ನು ೨ ಘಂಟೆಗೆ ಭೆಂಡಿ ಬಾಜಾರಕ್ಕೆ ತಂದು ಅಲ್ಲಿ ಕೂಡಿದ ೩—೪ ಸಾವಿರ ಜನ ಸ್ತ್ರೀಪುರುಷರು ಭರ ಸಂತೆಯಲ್ಲಿ ಮಾರಿದರು. ಹೀಗೆ ನಡೆದಿರಲು ಪೋಲಿಸರು ಆ ಅಸಂಖ್ಯ ನಾಡವರ ಸಮೂಹದೊಳಗಿನ ಶ್ರೀ ಹನ್ಮಣ್ಣನಾಯ್ಕ, ದೇವಣ್ಣ ನಾಯ್ಕ ಬೀರಣ್ಣನಾಯ್ಕ ಬಾಸಗೊಡ, ಬೊಮ್ಮಯ್ಯನಾಯ್ಕ ಹೀಗೆ ನಾಲ್ವರನ್ನು ಸೆರೆಹಿಡಿದರು! ಸಂತೆಯ ವ್ಯಾಪಾರ ತೀರಿಸಿ ಎಲ್ಲರೂ ಕೋಟೆಯ ಮೈದಾನಿಗೆ ಬಂದರು. ಅಲ್ಲಿ ಕೂಡಿದ ೪—೫ ಸಾವಿರ ಜನರ ಸಭೆಯಲ್ಲಿ ಶೆಟಗೇರಿಯ ಶ್ರೀ ಜೋಗಿ ಬೀರಣ್ಣ ನಾಯ್ಕ ಇವರು ನಾವು ನೂರಗಟ್ಲೆ ಜನರು ಭೆಂಡೀಬಾಜಾರದಲ್ಲಿ "ನಾವು ಸ್ವತಃ ತಯಾರಿಸಿದ ಉಪ್ಪನ್ನು ಜನರಿಗೆ ಮಾರುವಾಗ ಕೇವಲ ನಾಲ್ವರನ್ನು ಮಾತ್ರ ಹಿಡಿದುದರ ಮೇಲಿಂದ ಜೇಲಿನಲ್ಲಿ ನಮ್ಮೆಲ್ಲರಿಗೆ ಕೂಳು ಹಾಕುವ ಶಕ್ತಿ ಯಿಲ್ಲೆಂಬ ಸಂಗತಿ ಸಿದ್ಧವಾಗುತ್ತದೆ. ಪಕ್ಷಪಾತದಿಂದ ಕೇವಲನಾಲ್ವರನ್ನು ಒಯ್ದುದರಿಂತ ತಿಳಿಯ ಬೇಕಾಗುತ್ತದೆ." ಎಂದು ನುಡಿದರು. ಅಷ್ಟರಲ್ಲಿ ಫೌಜದಾರರು ಅವರನ್ನು ಹಿಡಿದೊಯ್ದರು.

ತಾ|| ೨೬ಕ್ಕೆ ಭೆಂಡಿ ಬಾಜಾರದಲ್ಲಿ ಉಪ್ಪಿನ ಸಂತೆ ನೇರಿತ್ತು. ಮೊನ್ನೆ ಗಿಂತ ಜನಸೋಮವು ಹೆಚ್ಚಿಗೆ ಸೇರಿತ್ತು ಬಿಳಂಬಾರ, ಬಡಿಗೇರ, ಒಕ್ಕಲಿಗರೇ ಮೊದಲಾಗಿ ಈ ದಿನ ಹೆಚ್ಚಿಗೆ ಉಪ್ಪನ್ನು ಮಾರಲು ತಂದ್ದರು. ಅರ್ಧತಾಸಿನೊಳಗೆ ಎಲ್ಲಾ ಉಪ್ಪು ಮಾರಾಟವಾಗಿ ಹೋಯಿತು, ಸುಮಾರು ೪೦ ಮಣ ಉಪ್ಪು ಮಾರಾಟಕ್ಕೆ ಬಂತತ್ತು. ಪೋಲೀಸಅಧಿಕಾರಿಗಳ ಶಾಂತರೀತಿ ಯಿಂದ ನಡಕೊಂಡರು ಸ್ವಯಂ ಸೇವಕರೇ ಎಲ್ಲ ವ್ಯವಸ್ಥೆ ಯಿಟ್ಟಿದ್ದರು.

---

### ಇಂಡಿ

ಇಂಡಿತಾಲೂಕ ಮಾಮಲೇದಾರರವರ ಅಧ್ಯಕ್ಷತೆಯಲ್ಲಿ ಇಂಡಿಯಲ್ಲಿಯೇ ಸಭೆ ಸೇರಿ "ಶಾಂತತಾರಕ್ಷಕ" ಸಂಘ ಒಂದು ಸ್ಥಾಪಿಸಲ್ಪಟ್ಟಿದೆ. (೨೨) ಜನರು ಸಭಾಸದರರಾದಂತೆ ಗೊತ್ತಾಗುತ್ತದೆ. ಸಂಘದ ನಿಯಮ – ಉದ್ದೇಶಗಳಾವವೂ ಬೈಲಿಗೆ ಬಂದಿಲ್ಲ. ಈ "ಶಾಂತತಾ ರಕ್ಷಕ ಸಂಘ" ಗಳ ಹಾವಳಿಯು ಎಲ್ಲ ಕಡೆಗೆ ಏಳಬೇಕಾದರೆ ಕಮೀಶನರ ಧೋರಣೆಗಳ ಅಕ್ಷಯೇ ಕಾರಣವಿದೆಂದೂ ವದಂತಿ ಇದೆ.

### ಮಂಗಳೂರ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್‌ಕಮೀಟಿಯ ಮೊದಲಿನ ಅಧ್ಯಕ್ಷರಾದ ಶ್ರೀ ಕರ್ನಾಡ ಸದಾಶಿವರಾಯರಿಗೆ ಮತು ಉಡಪಿ ಸತ್ಯಾಗ್ರಹ ತಂಡದ ಮುಖ್ಯಸ್ಥರಾದ ಶ್ರೀ ಪಣಿಯಾಡಿ ಉಪಾಧ್ಯರಿಗೆ ೧ ವರ್ಷದ ಸಾದಾ ಶಿಕ್ಷೆಯಾಗಿದೆ. ಶ್ರೀ ಬೆಳ್ಳಿಪಡಿ ತಿಮ್ಮಪ್ಪರಾಯ ಮತ್ತು ನಾರಾಯಣ ಭಂಡಾರಿಯವರಿಗೆ ಉಪ್ಪಿನ ಕಾಯದೇಭಂಗದ ಬಗ್ಗೆ ೬ ತಿಂಗಳ ಸಾದಾ ಸಜೆ ವಿಧಿಸಲ್ಪಟ್ಟಿದೆ. ಈವರೆಗೆ ಶಿಕ್ಷೆಯಾದ ಸತ್ಯಾಗ್ರಹಿಗಳ ಸಂಖ್ಯೆಯು ೨೪ ಆಗಿದೆ

### ಅಲಹಾಬಾದ

ಪೇಶಾವರದಲ್ಲಿ ಸಂಭವಿಸಿದ ಸಂಗತಿಗಳ ವಿಚಾರಣೆಗೋಸ್ಕರ, ಅಲ್ ಇಂಡಿಯಾ ಕಾಂಗ್ರೇಸಕಮೀಟಿಯು ಸದ್ಯದ ಅಧ್ಯಕ್ಷರಾದ ಪಂಡಿತ ಮೋತಿಲಾಲರು ಶ್ರೀ ಪಟೇಲರನ್ನು ವಿಚಾರಣಾ ಮಂಡಲದ ಅಧ್ಯಕ್ಷರನ್ನಾಗಿ ನಿಯಮಿಸಿದ್ದಾರೆ.

# ಡಾ. ಕಿಚಲೂ ಇವರು ಸೆರೆಆಳಾದರು

## ಪಂಜಾಬದಲ್ಲಿ ಹರತಾಳವು.

( ತಂತಿಯಿಂದ ಬಂದದ್ದು. )

ರಾಜದ್ರೋಹದ ಆರೋಪದ ಮೇಲೆ ಡಾ. ಕಿಚಲೂ ಇವರನ್ನು ಹಿಡಿದಿರುವರು.

ಪೇಶಾವರದಲ್ಲಿ ಆದ ಗೋಳೀಬಾರಿನ ನಿಷೇಧಾರ್ಥವಾಗಿ ಪಂಜಾಬ ಪ್ರಾಂತದಲ್ಲಿ ಎಲ್ಲ ಕಡೆಯಲ್ಲಿಯೂ ಹರತಾಳವನ್ನು ಮಾಡಿದರು. ಎಲ್ಲ ಕಡೆಯಲ್ಲಿಯೂ ಶಾಂತರೀತಿಯಿಂದ ಹರತಾಳದ ಕಾರ್ಯವು ಸಾಂಗವಾಯಿತು.

ಅಮೃತಸರದಲ್ಲಿ ೨೫ ಸ್ವಯಂಸೇವಕರನ್ನು ಹಿಡಿದಿರುವರು. ಅಲ್ಲಲ್ಲಿ ಮಿಲಟರಿ ಜನರನ್ನು ಇಟ್ಟಿರುವರು. ಊರಲ್ಲಿ ಯಾರೂ ಒಳಗೆ ಬಾರದಂತೆ ರಕ್ಷಿಸುತ್ತಿರುವರು.

೧ ಲಕ್ಷ ಸ್ವಯಂಸೇವಕರನ್ನು ಸಿದ್ಧಮಾಡಿ ಕೊಟ್ಟರೆ ತಾವು ಮುಂಬಯಿಗೆ ಬರುವರೆಂದು ಗಾಂಧೀಜಿಯವರು ಹೇಳಿರುವರು.

ಕಲಕತ್ತೆಯಲ್ಲಿ ಪಟೇಲರ ಸನ್ಮಾನಕ್ಕಾಗಿ ಹೊರಡಿಸಿದ ಮೆರವಣಿಗೆಯನ್ನು ಪೋಲಿಸರು ಚದರಿಸಿದರು.

### ಕಲಕತ್ತೆಯಲ್ಲಿ ಎಲ್ಲ ವರ್ತಮಾನಪತ್ರಗಳು ಬಂದಾದವು.

ಲಿಬರ್ಟಿ, ಆನಂದ ಬಝಾರ, ಮುಂತಾದ ಪತ್ರಗಳಿಗೆ ಪ್ರೆಸ್ಸ ಆ್ಯಕ್ಟ ಕಾಯಿದೆಗಳನ್ನು ಹಚ್ಚಿದ್ದರಿಂದ ಅದರ ಪ್ರತೀಕಾರವಾಗಿ ಕಲಕತ್ತೆಯಲ್ಲಿ ಎಲ್ಲ ಪತ್ರಗಳು ಬಂದಾದವು. ಯಾವ ವರ್ತಮಾನ ಪತ್ರಗಳು ಬಂದುಮಾಡಲ್ಪಡುವದಿಲ್ಲವೋ ಅವುಗಳನ್ನು ಕೊಳ್ಳಕೂಡದೆಂದು ಗೊತ್ತಾಗಿದೆ.

ಮೇ ತಿಂಗಳ ೧ ನೇ ತಾರೀಖಿನ ದಿವಸ ಕಲಕತ್ತೆಯಲ್ಲಿ ಒಂದು ಪ್ರಚಂಡ ಸಭೆ ಸೇರಿ ಯಾವ ವರ್ತಮಾನಪತ್ರಗಳು ಪ್ರೆಸ್ಸ ಆ್ಯಕ್ಟ ಕಾಯಿದೆಯನ್ನು ತಿರಸ್ಕರಿಸುವದಿಲ್ಲವೋ ಅಂಥ ಪತ್ರಗಳಿಗೆ ಯಾವ ತರದ ಸಹಾಯವನ್ನು ಮಾಡಕೂಡದು, ಯಾವ ತರದ ಜಾಹಿರಾತನ್ನು ಕೊಡಕೂಡದು. ಮತ್ತು ಆ ಪತ್ರವನ್ನು ಕೊಳ್ಳಕೂಡದೆಂದು ನಿಶ್ಚಯಿಸಿದ್ದಾರೆ.

ಆಂಧ್ರ ದೇಶದ ಸತ್ಯಾಗ್ರಹ ದಳದ ಮುಖ್ಯಸ್ಥರಾದ ಸತ್ಯಾಗ್ರಹ ವೀರ ಕೊಂಡ ವೆಂಕಟಪ್ಪಯ್ಯಾ ಇವರಿಗೆ ಒಂದು ವರುಷದ ಸಶ್ರಮ ಶಿಕ್ಷೆಯಾಯಿತು.

ಭಡೋಚದಲ್ಲಿ ಕೇವಲ ೨೦೦೦ ಹೆಂಗಸರೇ ಪೋಲೀಸರ ಎದುರಿಗೆ ಪ್ರತ್ಯಕ್ಷ ಉಪ್ಪು ತಯಾರಮಾಡಿ ಅದನ್ನು ಬೀದಿ ಬೀದಿ ಬೀದಿಗಳಲ್ಲಿ ಮಾರಿದರು.

ಗೋಕಾಕದಲ್ಲಿಯೂ ಉಪ್ಪಿನ ಕಾಯಿದೆಯನ್ನು ಮುರಿಯಲ್ಪಟ್ಟಿತು.

### ಬೆಳಗಾಂವಿ

( ತಂತಿಯಿಂದ ಬಂದ ವಾರ್ತೆ )

ವಾಮನರಾವ ಬಿದರಿ ಮತ್ತು ಗೋಖಲೆ ಮತ್ತು ಕರ್ವೆ ಸ್ವಯಂ ಸೇವಕರು ೧೫ ದಿವಸಗಳ ಹಿಂದೆ ಹಿಡಿಯಲ್ಪಟ್ಟಿದ್ದು ೨ ನೇ ತಾರೀಖಿಗೆ ಬೆಳಗಾವಿಯ ಡೆಪುಟಿ ಕಲೆಕ್ಟರ ಎದುರಿಗೆ ನಡೆದು ಗೋಖಲೆಯವರಿಗೆ ೧೦೦ ರೂಪಾಯಿ ದಂಡವಾಗಿ ಉಳಿದವರಿಗೆ ೬ ತಿಂಗಳ ಸಶ್ರಮ ಶಿಕ್ಷೆಯಾಯಿತು. ಇವರ ಸನ್ಮಾನಾರ್ಥವಾಗಿ ಊರಲ್ಲಿ ಜಾಹೀರ ರೀತಿಯಿಂದ ಉಪ್ಪು ಮಾರಲ್ಪಟ್ಟಿತು.

ದೇ. ಗಂಗಾಧರರಾಯರನ್ನು ರತ್ನಾಗಿರಿಗೆ ತೆಗೆದುಕೊಂಡು ಹೋದರೆಂದು ವಾರ್ತೆಯಿದೆ.

### ಮುಂಬಯಿ.

ಇಲ್ಲಿಯ ಹಾಯಕೋರ್ಟಿನ ಮುಖ್ಯ ನ್ಯಾಯಾಧೀಶರು ವಿರಾಮವನ್ನು ತೆಗೆದುಕೊಂಡರು. ಅವರು ನಾಲ್ಕಾರು ದಿವಸಗಳಲ್ಲಿ ವಿಲಾಯತಿಗೆ ತೆರಳುವರು, ಅವರು ಕಡೆಯ ನ್ಯಾಯವನ್ನು ನಡಿಸುವದಕ್ಕೆ ಹಾಯಕೋರ್ಟಿಗೆ ಬಂದಾಗ್ಗೆ, ಎಲ್ಲ ನ್ಯಾಯಾಧೀಶರನ್ನು ರಕ್ಷಿಸುವದಕ್ಕೆಂದು ಸಶಸ್ತ್ರ ಪೋಲೀಸರು ಎರಡೂ ಬದಿಗೆ ನಿಂತುಕೊಂಡಿದ್ದರು. ಒಳಗೆ ಯಾರನ್ನೂ ಬಿಡುತ್ತಿರಲಿಲ್ಲ. ಇದರಿಂದ ಎಲ್ಲರೂ ಆಶ್ಚರ್ಯ ಚಕಿತರಾಗಿದ್ದರು. ಇದರ ಕಾರಣ ವೇನೆಂದರೆ ನ್ಯಾಯಾಧೀಶರಿಗೆ ಅಂಜಿಕೆ ಹಾಕುವ ಕೆಲವು ಪತ್ರಗಳು ಬಂದಿರುತ್ತವೆಯಂತೆ ಇಲ್ಲಿಯ ನ್ಯಾಯಾಧೀಶರು ವಿಲಾಯತಿಗೆ ಹೋಗುವ ಕಾಲಕ್ಕೆ ಕಟ್ಟಕಡೆಗೆ ಎಲ್ಲ ವಕೀಲರೂ ಕೂಡಿ ಅವರಿಗೊಂದು ಕಳುಹಿಸುವ ಕೂಟವನ್ನು ಮಾಡುವ ಸಾಂಪ್ರದಾಯ ಉಂಟು. ಆದರೆ ಆ ತರದ ಕಳಿಸುವ ಕೂಟ ವನ್ನು ಈ ನ್ಯಾಯಾಧೀಶರು ಕಾಣಲಿಲ್ಲನೆಂಬುದು ಮಹತ್ವದ ಸಂಗತಿಯಾಗಿದೆ.

ಇಲ್ಲಿಯ ಬಿ. ಬಿ. ಸಿ ಆಯ್ ರೇಲವೇ ಕೂಲಿಕಾರರು ಒಂದು ಪೂಲಿನ ಮೇಲೆ ಕೆಲಸ ಮಾಡುತ್ತಿರಲಾಗ್ಯೆ ಅದರ ಕೆಳಗಿನ ಭೂಮಿಯು ಅದರ ಕಳಚಿ ಬಿದ್ದಿತು. ಅದರಲ್ಲಿ ಒಬ್ಬನು ಸತ್ತನು. ನಾಲ್ಕು ಜನರಿಗೆ ಪೆಟ್ಟು ತಗಲಿದೆ, ಇಲ್ಲಿಯ ಎಲ್ಲ ಮುಸಲ್ಮಾನ ಸ್ತ್ರೀಯರು ಸತ್ಯಾಗ್ರಹದಲ್ಲಿ ಕೂಡಿಕೊಂಡಿರುವರು.

### ಬಂಗಾಲ.

ಬಿರುಗಾಳಿಯು ಬಹಳೇ ಜೋರಿನಿಂದ ಬೀಸಹತ್ತಿದ್ದರಿಂದ ಯಮುನಾ ನದಿಯಲ್ಲಿ ಒಂದು ಹಡಗವು ಮುಳುಗಿತು. ಅದರಲ್ಲ ಮೂರು ನೂರು ಜನರು ಕುಳಿತಿದ್ದರು. ಅವರೆ ಇಪ್ಪತ್ತು ಜನರು ಮಾತ್ರ ಜೀವ ಉಳಿಸಿ ಕೊಂಡು ಪಾರಾದರು, ಉಳಿದ ಜನರ ಸುದ್ದಿಯೇ ಇಲ್ಲ, ಹಡಗದಲ್ಲಿ ಇದ್ದ ಟಪಾಲು ಸಹ ಮುಳುಗಿ ಹೋಗಿದೆ. ಬಹಳ ಹಾನಿ ಯಾಗಿದೆ. ಈಶಕೆಂಗೆ.

## ಹುಬಳ್ಳಿಯ ಪತ್ರ.

ಕರ್ನಾಟಕ ಸತ್ಯಾಗ್ರಹ ಮಂಡಲದವರು ಧಾರವಾಡ ಜಿಲ್ಲೆಯಲ್ಲಿ ೧ ನೇ ಮೇ, ದಿನವನ್ನು ಸಾರ್ವತ್ರಿಕ ಕಾಯದೆ ಭಂಗವನ್ನು ಆಚರಿಸಬೇಕೆಂದು ವಿನಂತಿಸಿದಂತೆ ಇಂದು ಬೆಳಗಿನ ಎಂಟು ಘಂಟೆಗೆ ರಾಜಾಭಾಸ್ಕರ ಕೇರೆಯ ಬೈಲಲ್ಲಿ ರಾಷ್ಟ್ರೀಯ ಧ್ವಜ ವಂದನೆಯ ಕಾರ್ಯವಾಗಿ ಕಂಕೂಡದಿಂದ ತಂದ ಉಪ್ಪಿನ ಪೊಟ್ಟಣಗಳನ್ನು ಮಾರಿ ಕಾಯದೆಯನ್ನು ಮುರಿಯಲ್ಪಟ್ಟಿತು. ನೂರಾರು ಜನರು ಉಪ್ಪಿನ ಪೊಟ್ಟಣಗಳನ್ನು ಕೊಂಡರು.

ಹಿಂದೂಸ್ಥಾನೀ ಸೇವಾದಲದ ಸತ್ಯಾಗ್ರಹಿ ಸ್ವಯಂಸೇವಕರು ಇಲ್ಲಿಂದ ಬೇರೆ ಬೇರೆ ಹದಿನೆಂಟು ಸ್ಥಳಗಳಿಗೆ ಹೋಗಿದ್ದು ಸತ್ಯಾಗ್ರಹವನ್ನು ಮಾಡಿ ಮರಳಿ ಶಿಬಿರಕ್ಕೆ ಬಂದ ಸ್ವಯಂಸೇವಕರ ರಿಪೋರ್ಟ ಎಲ್ಲಕಡೆಗೂ ಉತ್ಸಾಹಪೂರ್ವಕ ಸಾಂಗವಾಯಿತೆಂದೂ ಸರಕಾರದಿಂದ ಯಾವ ಅಡ್ಡಿಯಾಗಲಿಲ್ಲವೆಂದು ತಿಳಿದು ಬರುವದು. ಆದರೆ ಹುಬ್ಬಳ್ಳಿ ತಾಲೂಕ ಹೆಬಸೂರಲ್ಲಿ ಪೋಲೀಸರು ಸ್ವಯಂಸೇವಕರಿಗೆ ಯಾವ ಬಗೆಯ ಸಹಾಯ ಮಾಡಬಾರದೆಂದು ಡಂಗುರ ಹೊಡಿಸಿದ್ದರಿಂದೂ ಸ್ವಯಂಸೇವಕರಿಗೆ ಊರವರು ಸಹಾಯವನ್ನು ಮಾಡಲಿಲ್ಲೆಂದು ತಿಳಿಯುವದು.

ಈಗ ನಡೆದ ಸ್ವಾತಂತ್ರ್ಯ ಯುದ್ಧದಲ್ಲಿ ಹಿಂದೀ ಸ್ತ್ರೀಯರು ಪರದೇಶಿಯ ಬಹಿಷ್ಕಾರ, ಖಾದಿಹುಟ್ಟುವಳಿಗಾಗಿ ಲಕ್ಷವನ್ನು ಪೂರೈಸಬೇಕೆಂದು ಮಹಾತ್ಮಾ ಗಾಂಧಿಯವರ ಆಜ್ಞೆಯಂತೆ ಇಲ್ಲಿಯ ಭಗಿನೀಮಂಡಳದವರು ೧ ನೇ ತಾರೀಖಿನಿಂದ ಕಾರ್ಯದ ಪ್ರಾರಂಭಮಾಡಿ ಸೌ. ಅಂಬಕ್ಕ ಮುಡವೇಡಕರ ಶ್ರೀಮತಿ ಉಮಾಬಾಯಿ ಕುಂದಾಪುರ ನೇತೃತ್ವದಲ್ಲಿ ಟಿಳಕ ಕನ್ಯಾಶಾಲೆಯ ವಿದ್ಯಾರ್ಥಿನಿಯರು ಹಾಗು ಅನೇಕ ಭಗಿನಿಯರ ಮೆರವಣಿಗೆಯು ಕರ್ನಾಟಕ ಪ್ರೆಸ್ಸಿನಿಂದ ಹೊರಟು ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ರಾಧಾಕೃಷ್ಣ ಗುಡಿಗೆ ಬಂದು ತಲ್ಪಿತು. ಅಲ್ಲಿ ಪುಣ್ಯಾಹವನ್ನು ಕೇಳಲು ಬಂದ ಅನೇಕ ಭಗಿನಿಯರ ಮುಂದೆ ಶ್ರೀ ಉಮಾಬಾಯಿಯವರು, ಕಾಯಿದೆ ಭಂಗ, ಪರದೇಶಿ ಬಟ್ಟೆಯ ಬಹಿಷ್ಕಾರದ ಬಗ್ಗೆ ಭಾಷಣಮಾಡಿದರು. ಕಡೆಗೆ ಕಂಕೂಡದಿಂದ ತಂದ ಉಪ್ಪಿನ ಪಾಕೀಟುಗಳನ್ನು ಅನೇಕ ಭಗಿನಿಯರು ಅದನು ಕೊಂಡುಕೊಂಡರು.

ಶ್ರೀ. ವೀರಶೈವ ಧರ್ಮಸ್ಥಾಪನಾಚಾರ್ಯ, ಶ್ರೀಮದ್ಬಸವೇಶ್ವರ ಜಯಂತಿಯು ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಊರನ್ನು ಶೃಂಗರಿಸಿ [illegible], ಸಾವಕಾರಶೆಟ್ಟರು. ತಮ್ಮ ಬಸವ (ಎತ್ತು) ನ್ನು ಶೃಂಗರಿಸಿ ಮೆರವಣಿಗೆಯನ್ನು ತೆಗೆದಿದ್ದರು. ಬೇರೆ ಬೇರೆ ಭಾಗಗಳಲ್ಲಿ ಶ್ರೀ ಬಸವೇಶ್ವರನ ಭಾವಚಿತ್ರವನ್ನು, ಪಲ್ಲಕ್ಕಿಯೊಳಗಿಂದ, ವಾದ್ಯದೊಡನೆ, ಮೆರವಣಿಗೆಯನ್ನು ತೆಗೆದಿದ್ದರು. ಊರೊಳಗೆ ಎಲ್ಲಿನೋಡಿದಲ್ಲಿ ಉತ್ಸಾಹವೇ ತುಂಬಿ ತುಳುಕುತ್ತಿತ್ತು. ಇದಕ್ಕೆಲ್ಲ ಈಗಿನ ಶ್ರೀ ಮೂರುಸಾವಿರ ಮಠದ ಶ್ರೀಗಳವರ ಪ್ರೋತ್ಸಾಹವೆಂದು ಅನ್ನಲು ಅಡ್ಡಿಯಿಲ್ಲ.

### ಲಾಹೋರ

ಅಲ್ಲಿಯ ಮುಂದಾಳುಗಳನ್ನು ಸರಕಾರದವರು ಹಿಡಿದ ಕಾರಣ, ಅಲ್ಲಿಯ ಎಲ್ಲ ವ್ಯಾಪಾರಿಗಳು ಪರದೇಶೀ ಅರಿವೆಗಳನ್ನು ಕರಿಸಬಾರದೆಂದು ಗೊತ್ತುಮಾಡಿರುವರು. ಎರಡು ಅಂಗಡಿಯವರು ಮಾತ್ರ ಒಪ್ಪಲಿಲ್ಲ. ಅದಕ್ಕಾಗಿ ಆ ಎರಡು ಅಂಗಡಿಗಳಲ್ಲಿ ಪಿಕೆಟಿಂಗ ಸುರುವು ಮಾಡುವರು.

### ನಾಗಪೂರ

ಉಗಿಬಂಡಿಯ ಮಾರ್ಗವನ್ನು ಪ್ರತಿಬಂಧಮಾಡಿದ ಆರೋಪದ ಮೇಲೆ ಹಿಡಿದು ಖಟ್ಲೆನಡಿಸಿದ ನಲವತ್ತೆಂಟು ಜಿ. ಆಯ್. ಪಿ. ರೇಲವೇ ಸತ್ಯಾಗ್ರಹಿಗಳನ್ನು ಬಿಟ್ಟುಬಿಟ್ಟಿರುವರು. ಅವರ ಮೇಲೆ ನಡಿಸಿದ ಖಟ್ಲೆಯನ್ನೂ ತೆಗೆದುಹಾಕಿರುವರು. ಮತ್ತೂ ಇದೇ ಆರೋಪದ ಮೇಲೆ ಶಿಕ್ಷೆಕೊಟ್ಟು ಜೇಲಿಗೆ ಕಳಿಸಿದ ಹದಿಮೂರು ಸತ್ಯಾಗ್ರಹಿಗಳನ್ನೂ ಅಲ್ಲಿಯ ಸರಕಾರದ ಪರವಾನಗಿ ತೆಗೆದುಕೊಂಡು ಬಿಟ್ಟುಬಿಡುವರು.

### ಅಹಮ್ಮದಾಬಾದ.

ಎಲ್ಲ ಗಿರಣಿಗಳ ಮಾಲಕರು ತಮ್ಮ ಸಂಘದ ವತಿಯಿಂದ ಸರಕಾರಕ್ಕೆ ಹೀಗೆ ಬರೆದು ತಿಳಿಸಿರುವರು. ನಮ್ಮ ಗಿರಣಿಗಳಲ್ಲಿ ಕೆಲಸ ಮಾಡುವ ಕೂಲಿಕಾರರು ತಮ್ಮ ಬಾಂಧವರನ್ನು ಸಿಂದಿ ಶೆರೆಗಳ ದುರ್ವ್ಯಸನದಿಂದ ಬಿಡಿಸಲು ಪ್ರಯತ್ನ ಮಾಡುವಾಗ್ಗೆ ಅವರನ್ನು ಕೆಟ್ಟ ರೀತಿಯಿಂದ ನಡಿಸಿಕೊಂಡಂಥ ಜನರನ್ನೂ ಮತ್ತು ನಿಯಮಿಸಿದ ಅಂಗಡಿಗಳು ಅಥವಾ ಗೊತ್ತುಮಾಡಿ ಕೊಟ್ಟ ಸ್ಥಳಗಳನ್ನು ಬಿಟ್ಟು ಬೇರೆ ಸ್ಥಳಗಳಲ್ಲಿ ಸಿಂದಿ ಶೆರೆಗಳ ವ್ಯಾಪಾರವನ್ನು ಮಾಡುವ ಜನರನ್ನೂ ಕಾಯದೆ ವಿರುದ್ಧವಾಗಿ ನಡೆದದ್ದಕ್ಕೆ ತಕ್ಕ ಶಾಸನ ಮಾಡಬೇಕು. ಮುಂದೆ ಈ ತೆರದ ಸಂಗತಿಗಳು ಆಗದಂತೆ ಸರಕಾರವು ಎಚ್ಚರ ಪಡಬೇಕು.

### ಗುಜರಾತ.

ಸೆರೆ ಸಿಂದಿಗಳನ್ನು ಬಂದು ಮಾಡುವ ಕಾರ್ಯವು ಯಶಸ್ವಿಯಾಗಿ ನಡೆದದೆ. ಸಿಂದೀಗಿಡಗಳ ಮಾಲಕರು ಗಾಂಧಿಜೀಯವರಿಗೆ ಅವುಗಳನ್ನು ಕಡಿದು ಹಾಕಲು ಒಪ್ಪಿಗೆ ಕೊಡುತ್ತಿರುವರು. ಕರಡಿ ಎಂಬ ಹಳ್ಳಿಯಲ್ಲಿ ಒಂದೂ ಉಳಿಯದಂತೆ ಎಲ್ಲ ಸಿಂದೀ ಗಿಡಗಳನ್ನು ಕಡಿದು ಹಾಕಿರುವರು. ಭೂಮಿಯು ಬೋಳುಕಾಣುತ್ತದೆ.

ಜಲಾಲಪೂರದಲ್ಲಿ ದೇವಿಯ ಮುಂದೆ ಆಹುತಿ ಕೊಡಲಿಕ್ಕೆ ತಂದ ಕುರಿ, ಕೋಳಿಗಳನ್ನು ಕಡಿಯಬಾರದೆಂದು ಜನರಿಗೆ ತಿಳಿಸಿ ಹೇಳಿ ಮಹಾತ್ಮರ ಪತ್ನಿಯವರು ಅವುಗಳನ್ನು ಜೀವದಿಂದ ಉಳಿಸಿ ತಿರುಗಿ ಕಳಿಸಿದರು. ಸ್ತ್ರೀ ಸ್ವಯಂಸೇವಕರನ್ನು ಕರೆಸಾಕುತ್ತಿರುವರು.

### ಕಲಕತ್ತೆ.

ಇಲ್ಲಿಯ ಮಾರವಾಡಿ ವ್ಯಾಪಾರ ಸಂಘದವರು ನಾಲ್ಕು ತಾಸುಗಳವರೆಗೆ ಪಂಡಿತ ಮಾಲವಿಯರ ಸಂಗಡ ಚರ್ಚೆಮಾಡಿ, ಒಂದು ವರ್ಷದ ವರೆಗೆ ಪರದೇಶೀ ಬಟ್ಟೆಗಳನ್ನು ತರಿಸಬಾರದೆಂದು ಗೊತ್ತು ಮಾಡಿದರು. ತಮ್ಮದೊಂದು ಪರಿಷತ್ತು ಕರೆದು ಮಾಲವೀಯರ ವಿಚಾರಕ್ಕನುಸರಿಸಿ ಈ ನಿರ್ಣಯವನ್ನು ಕೃತಿಯಲ್ಲಿ ತರುವರು.

### ಪರದೇಶ

ಆಸ್ಟ್ರೇಲಿಯಾ ದೇಶದಲ್ಲಿ ಒಬ್ಬ ಶಾಸ್ತ್ರಿಯ ಶೋಧಕನು ಒಂದ ಹೊಸ ಮಂತ್ರವನ್ನು ಹುಡುಕಿ ತೆಗೆದಿರುವನು. ಅದರ ಸಹಾಯದಿಂದ ಹೊಟ್ಟೆಯೊಳಗಿನ ಎಲ್ಲ ಭಾಗಗಳ ಹಾಗೂ ಅವುಗಳ ಕ್ರಿಯೆಗಳ ಭಾವ ಚಿತ್ರವನ್ನು ತೆಗೆಯಲಿಕ್ಕೆ ಬರುವದು.

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ
ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರಿ. ನಂ. ಬಿ ೧೯೪೭ ಬೆಲೆ ೦—೦—೩

# ಕನ್ನಡಿಗ

ಜಯಕರ್ನಾಟಕ

ನಿತ್ಯಸಂಚಿಕೆಯು.

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮುದಾರ.

ಬಾಗಲಕೋಟೆ ಸೋಮವಾರ ಮಿತಿ ವೈಶಾಖ ಶುದ್ಧ ೨ ಶಕೆ ೧೮೪೩ ತಾ ೯—೫—೨೧ ಸಂಚಿಕೆ ೪೦

ನನ್ನ ದೇಹವು ನಿನ್ನ ವೀರಶಾಸನಕಾಗಿ।
ಕನ್ನಡನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ ಪ್ರಾಣವು ನಿನ್ನ ಗಂಧವನು ಬೀರಬಹಗಂಧವಹವೆಂದು ತಿಳಿಯು॥

ವ್ಹಾಯಿಸರಾಯರು ಹೊಸದಾಗಿ ಹೊರಡಿಸಿದ ಪ್ರೆಸ್ಸ ಆಕ್ಟಿನ ನಿಷೇಧಾರ್ಥವಾಗಿ "ಕನ್ನಡಿಗನು" ತನ್ನ ಸಂಪಾದಕರ ಭೂಮಿಯನ್ನು ತೆಗೆದು ಹಾಕಿರುವನು, ಆ ಸ್ಥಳದಲ್ಲಿಯೂ ಸಹ ಸುದ್ದಿಗಳನ್ನೇ ಕೊಡುತ್ತ ಹೋಗುವನು,

## ವಚನಾಮೃತ

ಹಿಂಸೆಯಮಾರ್ಗದಿಂದ ಹಿಂದುಸ್ತಾನದ ಸ್ವತಂತ್ರಿಯು ದೊರೆಯಲಾರದು. ಅಹಿಂಸಾವ್ರತವನ್ನು ಕಡೆತನಕ ಪಾಲಿಸಿದರೆ ಮಾತ್ರ ನಾವು ಅದನ್ನು ದೊರಕಿಸಲಿಕ್ಕೆ ಪಾತ್ರರಾಗುವೆವು.

ಮಹಾತ್ಮರು. (ಯಂಗ ಇಂಡಿಯಾ)

## ಮುಸಲ್ಮಾನರು ಸ್ವರಾಜ್ಯರಥವನ್ನು ಮುಂದೆ ಸಾಗಿಸತಕ್ಕದ್ದು

ಮಹಾತ್ಮರು ಓಲಪಾಡದಿಂದ ಮೋಟಾರದಲ್ಲಿ ರಾಂಡೇರ ಎಂಬಲ್ಲಿಗೆ ಬಂದರು. ಅಲ್ಲಿ ಸಭೆಯಲ್ಲಿ ನಾಲ್ಕು ಮಾತು ಹೇಳಿದರು, ಬಹಳ ಮುಸಲ್ಮಾನರು ಖಾದೀಟೊಪ್ಪಿಗೆಗಳನ್ನು ಹಾಕಿಕೊಂಡು ಬಂದಿದ್ದರು. ಅಲ್ಲಿ ಅವರು ಹೀಗೆ ಹೇಳಿದರು. ರಾಂಡೇರದ ಮುಸಲ್ಮಾನರು ನನ್ನ ಹಳೇ ಗೆಳೆಯರು. ನಾನು ವಕೀಲಿ ಮಾಡುವಾಗ ನಿಮ್ಮ ಪರಿಚಯವಾಗಿತ್ತು. ದಕ್ಷಿಣ ಆಫ್ರಿಕಾದ ಸತ್ಯಾಗ್ರಹದಲ್ಲಿ ಅನೇಕ ಜನ ಮುಸಲ್ಮಾನರು ನನ್ನ ಸಹಕಾರಿಗಳಾಗಿದ್ದರು. ಮುಸಲ್ಮಾನರು ಟೊಂಕ ಕಟ್ಟಿ ಈ ಸ್ವರಾಜ್ಯರಥವನ್ನು ಮುಂದೆ ಎಳೆಯುವರೆಂದು ತಾವು ತಿಳಿದುಕೊಂಡಿರುವರೆಂದು ಅಂದರು.

ಹಿಂದೂ ಮುಸಲ್ಮಾನರು ಒಬ್ಬರಿಗೊಬ್ಬರು ಸಂಶಯ ಪಡುತ್ತ ಕೂಡ್ರುವ ಕಾಲವು ಇದಲ್ಲ. ಸ್ವರಾಜ್ಯವು ದೊರೆತ ನಂತರ ತಮ್ಮ ಭೇದ ಭಾವಗಳನ್ನು ದೂರಮಾಡಲು ಬರುವದು. ಹಿಂದುಸ್ತಾನವು ಈಗ ಸಾವು ಬದುಕುಗಳ ಹುರಿವೆಳ್ಳದ ಚಕ್ರದಲ್ಲಿ ತೊಡಕಿದೆ ಕಾರಣ ಎಲ್ಲ ಮುಸಲ್ಮಾನರೂ ಇದರಲ್ಲಿ ಸೇರಿಕೊಳ್ಳತಕ್ಕದ್ದು ಎಂದು ಹೇಳಿದರು.

### ಮಹಾತ್ಮರ ಪತ್ನಿಯರು

ಮುಂದಿನ ವಾರದಲ್ಲಿ ಜಲಾಲಪೂರ ತಾಲೂಕದ ಹದಿನಾಲ್ಕು ಹಳ್ಳಿಗಳಲ್ಲಿ ಪ್ರವಾಸ ಮಾಡಿ ತಮ್ಮ ಸ್ವಯಂಸೇವಕರೊಂದಿಗೆ ವ್ಯಾಖ್ಯಾನಕೊಡುವ ಉಪಕ್ರಮವನ್ನು ಸುರುವು ಮಾಡುವರು.

## ವ್ಹಾಯಿಸರಾಯರ ಮತ್ತೊಂದು ಕಾಯದೆಯು.

ಲಾಹೋರದಲ್ಲಿಯ ಆರೋಪಿಗಳ ಖಟ್ಲೆಯು ಪೂರ್ವವಿಚಾರ (ಪ್ರಿಲಿಮಿನರಿ ಎನ್‌ಕ್ವಾಯರಿ) ಮಾಡಲಾಗದು. ಆ ಖಟ್ಲೆಯನ್ನು ವಿಚಾರಿಸಲು ಒಂದು ವಿಶಿಷ್ಟ ನ್ಯಾಯಾಧೀಶ ಮಂಡಲವನ್ನು ನಿಯಮಿಸತಕ್ಕದ್ದು. ಆರೋಪಿಗಳು ನ್ಯಾಯಾಧೀಶರ ಎದುರಿಗೆ ಹಾಜರ ಇರುವ ಕಾರಣ ಎಲ್ಲ ಮತ್ತು ಅವರು ಕೊಟ್ಟ ನಿರ್ಣಯದ ಮೇಲೆ ಅಪೀಲು ಮಾಡಲಿಕ್ಕೆ ಬರುವದಿಲ್ಲ. ಎಂಬ ಆಶಯದ ಒಂದು ಕಾಯಿದೆಯು ವ್ಹಾಯಿಸರಾಯರಿಂದ ಹೊರಡಿಸಲ್ಪಟ್ಟಿದೆ.

## ಮುಂದಿಟ್ಟ ಹೆಜ್ಜೆಯನ್ನು ಹಿಂದೆ ತಗೆಯಲಾಗದು ಮುಂದಾಳುಗಳಿಲ್ಲದೆ ಮುಂದೆ ಸಾಗತಕ್ಕದ್ದು.

ಸುರತದಿಂದ ಇಪ್ಪತ್ತು ಮೈಲು ದೂರವಿರುವ ಒಲಪಾಡ ಎಂಬ ಹಳ್ಳಿಗೆ ಮಹಾತ್ಮರು ಬಂದರು. ಅಬ್ಬಾಸತಯ್ಯಬಜೀಯವರ ಮಮ್ಮಗಳಾದ ಕು. ಹಾಮೀದಾ ಎಂಬವರು ಸ್ತ್ರೀಸ್ವಯಂಸೇವಕರೊಂದಿಗೆ ರಾಷ್ಟ್ರೀಯ ಪದಗಳನ್ನು ಹಾಡುತ್ತ ಬರುತ್ತಿದ್ದರು. ಇಲ್ಲಿಯ ಬಹುತೇಕ ಪಾಟೀಲರು ರಾಜೀನಾಮೆ ಕೊಟ್ಟಿರುವರು. ಆ ಮೇಲೆ ಮಹಾತ್ಮರು ಮುಂದಾಳುಗಳನ್ನು ಹಿಡಿದ ಬಗ್ಗೆ ಹೇಳಿ ಮುಂದಾಳುಗಳಿಲ್ಲದೆ ನಾವು ಈ ಶಾಂತಿ ಯುದ್ಧದಲ್ಲಿ ಮುಂದೆ ಸಾಗಿಸತಕ್ಕದ್ದೆಂದು ಹೇಳಿದರು. ಮುಂದಾಳು

ಗಳನ್ನು ರಾಕಾಗ್ರಹದಲ್ಲಿ ಒತ್ತಿಟ್ಟದ್ದರಿಂದ ನಮ್ಮ ಉತ್ಸಾಹವು ದೇಶ ಸೇವೆಯಕಾರ್ಯದಲ್ಲಿ ಕುಗ್ಗಬಾರದು. ಸರಕಾರವು ತಯಾರಿಸಿದ ಉಪ್ಪನ್ನು ಕೊಳ್ಳಬಾರದು. ತಮ್ಮಲ್ಲಿ ಸಿದ್ಧತೆ ಹಾಗೂ ಆತ್ಮವಿಶ್ವಾಸಗಳಿದ್ದರೆ ರಾಸ ಹಳ್ಳಿಯಂತೆ ಭೂಕಂದಾಯವನ್ನು ನಿಲ್ಲಿಸುವ ಮಾದರಿಯನ್ನೂ ತೆಗೆದುಕೊಳ್ಳಬಹುದು. ಪರದೇಶೀ ಬಟ್ಟೆಗಳನ್ನು ಧರಿಸಲು ನಮಗೆ ನಾಚಿಕೆಯುಂಟಾಗಬೇಕು. ಹಿಂದೂ ಮುಸಲ್ಮಾನರು ಖಾದೀಬಟ್ಟೆಗಳನ್ನೇ ಧರಿಸುವ ಪ್ರತಿಜ್ಞೆ ಮಾಡತಕ್ಕದ್ದು. ಸಿಂದಿಶೆರೆಗಳನ್ನು ಕುಡಿಯುವವರನ್ನು ಆ ವ್ಯಸನದಿಂದ ಬಿಡಿಸುವ ಕೆಲಸದಲ್ಲಿ ಸ್ತ್ರೀಸ್ವಯಂಸೇವಕರು ಬಹಳೇ ಯೋಗ್ಯರಿರುವರು. ಸರ ಮನೂಭಾಯಿಯವರ ಮಮ್ಮಾಗಳು ಸಹ ಈ ಚಳವಳಿಯಲ್ಲಿ ಬಂದು ಸೇರಿರುವಳು, ಉಳಿದ ಶ್ರೀಮಂತ ಜನರೂ ಇದರಂತೆ ಮಾಡಬೇಕೆಂದು ಗಾಂಧಿಯವರು ಕೇಳಿಕೊಂಡರು. ಹೆಣ್ಣುಮಕ್ಕಳು ಸಿದ್ಧರಾದರೆ ಶೆರೆಸಿಂದಿಗಳು ನಿರ್ನಾಮದಾಗುವವೆಂದು ಹೇಳಿದರು.

## ಅಮೀನಗಡದಲ್ಲಿ ಅಪೂರ್ವಜಾಗ್ರತೆ

ಶ್ರೀಯುತ "ಕನ್ನಡಿಗನ" ಸಂಪಾದಕರು ಹುನಗುಂದ ತಾಲೂಕ ಪೈಕಿ ಅಮೀನಗಡ ಮತ್ತು ಸೂಳಿಭಾಂವಿ ಜನತೆಯಲ್ಲಿ ಸಧ್ಯಸ್ಥಿತಿಯ ವಿಷಯವಾಗಿ ಬಹಳೇ ಜಾಗ್ರತಿಮಾಡಿರುವರು. ಇವತ್ತಿನ ದಿವಸ ಬಾಗಲಕೋಟೆಯಿಂದ ದೇಶಭಕ್ತರು ಮಹಾತ್ಮಾ ಗಾಂಧಿಯವರ ಸಂದೇಶವನ್ನು ತಿಳಿಸುವದಕ್ಕಾಗಿ ಇಲ್ಲಿಗೆ ಬರುವವರಿದ್ದಾರೆಂದು ತಿಳಿದು ಜನರು ತಂಡತಂಡವಾಗಿ ಬಹಳ ರಾತ್ರಿ ಆಗುವವರೆಗೆ ಮಾರ್ಗನೋಡಿ ಹುನಗುಂದದಿಂದ ಆಗಮಿಸಿದ ಶ್ರೀಯುತ ಕಟ್ಟಿ, ಮಧ್ವರಾವ ಪ್ಯಾಟಿ ಮತ್ತು ರಾಘವೇಂದ್ರರಾವ ಇವರಿಂದಲೇ ಸಭೆಯ ಕೆಲಸವನ್ನು ಆರಂಭಮಾಡಿದರು. ಸಭೆಗೆ ರಾತ್ರಿ ಬಹಳ ಆದಾಗ್ಯೂ ಸಾವಿರದವರೆಗೆ ಜನರು ಸಂಜೇ ಊಟದ ಆರವೆಯಿಲ್ಲದೆ ಕೂತಿದ್ದರು. ಶ್ರೀಯುತ ಮಧ್ವರವ ಮತ್ತೂ ಕಟ್ಟಿಇವರು ಕೂಡಿದ ಜನರಮೇಲೆ ಒಳ್ಳೇ ಪರಿಣಾಮ ಆಗುವಂತೆ ಭಾಷಣಮಾಡಿದರು. ಅಮೀನಗಡ ಮತ್ತೂ ಸೂಳಿಭಾಂವಿ ಗ್ರಾಮಗಳು ನೇಕಾರಕಿ ಊರುಗಳಿದ್ದು ನೇಕಾರರು ಖಾದೀ ತಯಾರಿಸಲಿಕ್ಕೆ ಒಳ್ಳೇ ಆತುರರಾಗಿದ್ದಾರೆ. ಆದರೆ ಎಲ್ಲಕಡಿಗೂ ನೂಲಿನ ಅಡಚಣಿಯು ಬಹಳೇ ಆಗ ಹತ್ತಿದೆ ನಮ್ಮ ಧನಿಕ ವ್ಯವಹಾರಸ್ಥರು ಇತ್ತ ಲಕ್ಷ್ಯಕೊಟ್ಟು ಈ ಪವಿತ್ರ ದೇಶಕಾರ್ಯಕ್ಕೆ ಯಲ್ಲಾಒಗೆಯಾಗಿ ಸಹಾಯಮಾಡಿ ಖಾದೀ ಹುಟ್ಟುವಳಿಯನ್ನು ಬೆಳೆಸಿ ಮಹಾತ್ಮರು ಕೈಕೊಂಡಿರುವ ಈ ದೇಶೋದ್ಧಾರದಕ್ಕೆ ಸಹಾಯಮಾಡಿ ಕೀರ್ತಿ ಸಂಪಾದಿಸಲಿಕ್ಕೆ ಜಗದೀಶನು ಅವರಿಗೆ ಬದ್ಧಿಕೊಡಲೆಂದು ಪ್ರಾರ್ಥಿಸುವ.

ಪ್ರೇಕ್ಷಕ.

## ಜಮುಖಂಡಿಯಲ್ಲಿ ಶ್ರೀ ಬಸವಜಯಂತ್ಯುತ್ಸವವು

ಪದ್ಧತಿಯಂತೆ ಈ ವರ್ಷಾದರೂ ಬಸವೇಶ್ವರ ಕ್ಲಬ್ ಜಮಖಂಡೀ ಈ ಸಂಘದ ದತಿಯಿಂದ "ಶ್ರೀ ಬಸವಜಯಂತ್ಯುತ್ಸವವು" ಮಿತಿ ವೈ, ಶು, ಶಕೇ ೧೮೫೨ ಗುರುವಾರ ದಿವಸ ಬಹು ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಉತ್ಸವಕ್ಕೆ ವೀರಶೈವ ಧರ್ಮಾಭಿಮಾನಿ ಬಾಲವೃದ್ಧರೆಲ್ಲರೂ ಬಂದಿದ್ದು ಉತ್ಸವವು ಬಹುಸಡಗರದಿಂದ ಕೂನೆಗೆ ಕಂಡಿತು. ರುದ್ರಾಭಿಷೇಕ, ಪ್ರವಚನ, ಶ್ರೀ ಬಸವಜನ್ಮ, ನಾಮಕರ್ಣವಿಧಿ ಶ್ರೀಗಳ ಭಾವಚಿತ್ರದ ಸ್ಥಾಪನೆ, ಫೋನೋ, ಪೇಟೆಯಲ್ಲಿ ಪಲ್ಲಕ್ಕಿ ಮೆರವಣಿಗೆ, ಮತ್ತು ಶ್ರೀ ರಾಮಭಾವು ಪಾಳೆ ಇವರ ಗಾಯನ ಈ ಪ್ರಕಾರ ಉತ್ಸವದ ಕಾರ್ಯಕ್ರಮಗಳಿದ್ದವು.

ಉತ್ಸವ ಸೆಕ್ರೆಟರಿ,

ಬಿ. ಎಸ್ ಇಂಗಳಗಿ.

## ಗಲಗಲಿಯಲ್ಲಿ ಮತ್ತೊಬ್ಬರ ದಸ್ತಗೀರ ರಾಘವೇಂದ್ರ ಗೋಪಾಳರಾವ ಹಬ್ಬು

ಇವರನ್ನು ನಿನ್ನೆ ಮಧ್ಯಾಹ್ನ ೩ ಗಂಟೆಗೆ ಗಲಗಲಿಯಲ್ಲಿ ಉಪ್ಪಿನಕಾಯಿದೆಯ ೪೭ನೇ ಕಲಮಿನ ಪ್ರಕಾರ ರಾತ್ರಿ ೮॥ ಘಂಟೆಗೆ ಬಾಗಲಕೋಟೆಯ ಕಚೇರಿಗೆ ೭ ಅಪರಾಧದ ವಿಚಾರಣೆಗಾಗಿ ತಂದಿರುವರು ಇವರು ಮಾಡಿದ ಅಪರಾಧ ಅಂದರೆ ಬಾಗಲಕೋಟೆಯಲ್ಲಿ ಉಪ್ಪು ಮಾರಿದ್ದು. ಎಂಟಾನೆಂಟು ದಿವಸ ಇವರೊಡನೆ ನೂರಾರು ಜನರು ಉಪ್ಪಿನ ಕಾಯಿದೆಯನ್ನು ಇವರಷ್ಟೇ ಜಾಹೀರ ರೀತಿಯಿಂದ ಧಿಕ್ಕರಿಸಿದವರ ಪಾರಪತ್ಯ ತಕ್ಕೊಳ್ಳದೆ ಇವರೊಬ್ಬರನ್ನೇ ಸರಕಾರದವರು ಏಕೆ ಆರಿಸಿರಬಹುದು? ಆಳು ಒಳೆ ಬೇಸಾಗಿದೆ ಎಂಬಮಾತ್ರಕ್ಕೇನು ಆರಿಸಿರಲಿಕ್ಕಿಲ್ಲ! ಆದರೆ ಹಬ್ಬು ಇವರು ಅಂಕೋಲೆ ಹುಬ್ಬಳ್ಳಿ ಬಿಸನಾಳ ಮೊದಲಾದ ಯುದ್ಧಭೂಮಿಗಳಲ್ಲಿ ಅಡ್ಡಾಡಿ ತಾವು ಕೆಚ್ಚೆದೆಯವರು ದೇಶೋದ್ಧಾರಕ್ಕಾಗಿ ಬದ್ಧಕಂಕಣರೂ ಎಂಬುದನ್ನು ಸಾಕಷ್ಟು ಸಿದ್ಧಮಾಡಿಕೊಟ್ಟದ್ದಕ್ಕಾಗಿಯೇ ಅವರಿಗೆ ಈ ಸನ್ಮಾನವೂ ಮನ್ನಣೆಯೂ ಸರಕಾರದ ಆತಿಥ್ಯವೂ ಇಷ್ಟೊಂದು ಬೇಗನ ಲಭಿಸಿತು

---

ರವಿವಾರದ ಮೂಲಕ ನಿನ್ನಿನ ದಿವಸ ತಂತಿಯವಾರ್ತೆಗಳು ಬಾರದ್ದರಿಂದ 'ಕನ್ನಡಿಗನು' ನಾಲ್ಕುಪುಟದ ಬದಲು ಎರಡೇ ಪುಟದಿಂದ ಈ ದಿವಸ ವಾಚಕರ ಕೈಸೇರಿರುವನು. ಈ ಬಗ್ಗೆ ಕ್ಷಮಿಸಬೇಕಾಗಿ ಬಿನ್ನಹ. ಸಂ. ಕ.

---

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

**ಸೋಮವಾರ ತಾ, ೫ ೫-೩೦**

**ಶರಣ ಬಸವ**

ಬುಧವಾರ ತಾ,೭-೫-೩೦

**ಮಾಯಾ ಬಾಜಾರ.**

ಶನಿವಾರ ತಾ,೧೦-೫-೩೦

**ಸಂಪೂರ್ಣ ಕೃಷ್ಣಲೀಲಾ.**

ಎಂಬ **ನಾಟಕಗಳನ್ನು** ಅಭಿನಯಿಸುವರು.

ಸಂಘದೊಡೆಯ— **ಸದಾಶಿವರಾವ ಗೆರೂಡ**

---

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ.ನಂ. ಬಿ ೧೯೪೭

ಬೆಲೆ ೦—೦—೩

# ಕನ್ನಡಿಗ

ಜಯಕರ್ನಾಟಕ

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ಮಂಗಳವಾರ ಮು॥ ವೈಶಾಖ ಶುದ್ಧ ೮ ಶಕ ೧೮೫೨ ತಾ ೬—೫—೩೦ ಸಂಚಿಕೆ ೪೧

(ತಂತಿಯಿಂದ ಬಂದ ವಾರ್ತೆ)

# ಮಹಾತ್ಮಾಜಿಯವರು

## ಯರೋಡಾ ಜೇಲಿಗೆ ಅಟ್ಟಲ್ಪಟ್ಟರು,

ಅಂತೂ ಸರಕಾರವು ತನ್ನ ದುರ್ಬುದ್ಧಿಗೆ ಸರಿಯಾಗಿ ತನ್ನ ಪದರಿನಲ್ಲಿ ಬೆಂಕಿಯನ್ನು ಕಟ್ಟಿಕೊಂಡಿತು.



## ಮಹಾತ್ಮಾಜಿಯವರ ದಸ್ತಗಿರಿಯು

ಸುರತ ಜಿಲ್ಹಾ ಕಲೆಕ್ಟರರು ಸಶಸ್ತ್ರ ಪೋಲೀಸರೊಡನೆ ಕರಾಡಿಯಲ್ಲಿಯ ಮಹಾತ್ಮರ ಬಿಡಾರವನ್ನು ಸರಿರಾತ್ರಿಯ ಸಮಯದಲ್ಲಿಯೇ ಒಳನುಗ್ಗಿ ಮಹಾತ್ಮರು ಟಾರ್ಚಲಾಯಿಟಿನಲ್ಲಿ ಮಲಗಿಕೊಂಡ ಪಲಂಗನ್ನು ಗೊತ್ತುಹಚ್ಚಿ ಅವರ ಸುತ್ತಲೂ ಮುತ್ತಿಗೆ ಹಾಕಿಕೊಂಡು ನಿಂತರು. ಅಷ್ಟರಲ್ಲಿಯೇ ಗಾಂಧಿಯವರು ಎಚ್ಚತ್ತರು. ಸ್ವತಃ ಕಲೆಕ್ಟರರು ಅವರಿಗೆ ವಾರಂಟ ಓದಿ ಹೇಳಿ ನಿಮ್ಮನ್ನು ನಾನು ಕೈದು ಮಾಡಿರುವೆನೆಂದು ತಿಳಿಸಿ ಆಗಿಂದಾಗ್ಗೆ ಗುಜರಾಥದ ಮೇಲುಗಾಡಿಯಿಂದ ಮುಂಬಯಿ ಹತ್ತಿರಿನ ಹಳ್ಳಿಯ ವರೆಗೆ ತಂದು ಅಲ್ಲಿಂದ ಯರವಡಾ ಜೇಲಿಗೆ ಮೋಟಾರಿನಿಂದ ಒಯ್ದು ಕೂಡ್ರಿಸಿರುವರು. ಗಾಂಧಿಯವರು ನಡೆಸಿದ ಚಳವಳಿಯಿಂದ ದೇಶಕ್ಕೆ ಅಪಾಯವಾಗದೆ ಇರದೆಂದು ಸರಕಾರದ ಅಭಿಪ್ರಾಯವಾಗಿದ್ದರಿಂದ, ಅವರನ್ನು ನಿರ್ಬಂಧದಲ್ಲಿರಿಸಬೇಕೆಂದು ಸರಕಾರವು ಅಪ್ಪಣೆಯನ್ನಿತ್ತಿದೆ. ಈ ಅಪ್ಪಣೆಯನ್ನು ೧೮೨೭ ನೇ ಇಸ್ವಿಯ ರೆಗ್ಯುಲೇಶನದ ೨೫ ನೇ ನಿಯಮದ ಪ್ರಕಾರ ಕೊಡಲ್ಪಟ್ಟಿದೆ. ಇದರಿಂದ ಗಾಂಧಿಯವರನ್ನು ತನ್ನ ಇಚ್ಛೆ ಇರುವ ವರೆಗೂ ಬಂಧನದಲ್ಲಿಡುವದು ಸರಕಾರಕ್ಕೆ ಅಧಿಕಾರವಿದೆ.

ಮಧ್ಯಾನ್ಹದ ೧೨ ಘಂಟೆಗೆ ಮುಂಬಯಿ ಇಂದ ಹೊರಟ ಮೇಲಿನ ತಂತಿಯು ಇಲ್ಲಿಗೆ ರಾತ್ರಿ ೮ ಗಂಟೆಗೆ ಬಂದು ತಲ್ಪಿತು. ತಂತಿಯ ಕಚೇರಿಯು ಜನರ ಉಪಯೋಗಕ್ಕಾಗಿದೆಂಬದನ್ನು ಎಷ್ಟರ ಮಟ್ಟಿಗೆ ನಂಬಬೇಕೆಂಬದನ್ನು ಜನರೇ ವಿಚಾರಿಸಲಿ!

**ಇವತ್ತಿನ ದಿವಸ ಎಲ್ಲ ಹಳ್ಳಿ ಪಳ್ಳಿಗಳಲ್ಲಿ**

**ಹರತಾಳವು ಪಾಲಿಸಲ್ಪಡಬೇಕು.**

## ವೀರಸತ್ಯಾಗ್ರಹಿ ರಾಘವೇಂದ್ರ ಹಬ್ಬು ಇವರಿಗೆ

# ನಾಲ್ಕು ತಿಂಗಳ ಸಶ್ರಮ ಶಿಕ್ಷೆ.

ಬಾಗಲಕೋಟೆಯ ಮೊದಲನೇ ವರ್ಗದ ಮ್ಯಾಜಿಸ್ಟ್ರೇಟರು ಶ್ರೀ ಹಬ್ಬು ಇವರ ಮೇಲಿರುವ ಆರೋಪದ ವಿಚಾರಣೆಯನ್ನು ನಡೆಸಿ ಉಪ್ಪಿನ ಕಾಯದೆಯ ೪೭ ನೇ ಕಲಮಿನ ಕೆಳಗೆ ಹಬ್ಬು ಇವರು ಅಪರಾಧ ಮಾಡಿರುವರೆಂದು ಪೊಲೀಸರ ಹೇಳಿಕೆಯ ಮೇಲಿಂದ ಮನವರಿಕೆಮಾಡಿಕೊಂಡು, "ನಿಮ್ಮನ್ನು ಬಿಟ್ಟುಬಿಡುವದು ನನ್ನ ಕೈಯಲ್ಲಿ ಇಲ್ಲ. ಶಿಕ್ಷೆ ಕೊಡಲೇ ಬೇಕಾಗಿದೆ!" ಎಂದು ಉದ್ಗಾರ ತೆಗೆದು ೪ ತಿಂಗಳ ಸಶ್ರಮ ಶಿಕ್ಷೆ ವಿಧಿಸಿದರು. ಮ್ಯಾಜಿಸ್ಟ್ರೇಟರ ಮೇಲಿನ ಉದ್ಗಾರವೇನು ಸತ್ಯಾಗ್ರಹಿಗಳಿಗೆ ಸಹಾನುಭೂತಿ ಪರವಾಗಿದೆಯೋ ಅಥವಾ ತಾವು ಕೊಡುವ ತೀರ್ಪು ತಮ್ಮದಾಗಿರದೆ ತಮ್ಮ ಮನಸಿನ ವಿರುದ್ಧ ಕೊಡಬೇಕಾಗಿದೆಂಬ ಅರ್ಥವೋ ಸ್ಪಷ್ಟ ವ್ಯಕ್ತವಾಗಲಿಲ್ಲ. ಹಾಗೆ ನಿಜವಾದ ಸಹಾನುಭೂತಿಯು ಇದ್ದದ್ದೇ ಸತ್ಯವಾಗಿದ್ದರೆ ಪಿಷ್ಟೋಕ್ತಿಯಿಂದ ತಮ್ಮ ನ್ಯಾಯಬುದ್ಧಿಯನ್ನು ವ್ಯಕ್ತಗೊಳಿಸಲು ಆಸ್ಪದವಿದೆ ಎಂದು ನಮ್ಮ ನಂಬಿಗೆ. ಆದರೆ ದಯಾಮಾಯೆಗಳು ಇವರಲ್ಲಿ ಪ್ರಕಟವಾಗಿದ್ದು ನಾವಂತೂ ನೋಡಿಲ್ಲ. ಅಧಿಕಾರಿಗಳ ಸಹಾನುಭೂತಿಯನ್ನು ನಾವು ನಿರೀಕ್ಷಿಸುವದು ಮೂರ್ಖತನವೆ. ನೌಕರಿಯನ್ನು ಪತಕರಿದಾಕ್ಷಣವೆ ಮಾನವ ಸಹಜವಾದ ಗುಣಗಳೆಲ್ಲ ಅವರಲ್ಲಿ ಮೂರ್ಛಿತವಾದಂತೆ ಎತ್ತಿ ಹಿಡಿಯುತ್ತವೆ ತಾವು ಹಿಂದೇಯಿರೆಂಬ ಅರಿವು ಹಾರಿಹೋಗುತ್ತದೆ, ಇದನ್ನು ನಾವು ಒಲ್ಲೆವು. ಆದರೆ ಕೆಲವರು ತಾವು ಮಾಡುತ್ತಿರುವ ಅನ್ಯಾಯದಿಂದ ತಾವು ನೊಂದಕೊಂಡಿರುವದೆಂಬ ನಟನೆ ನಡೆಸುವ ಕ್ರಮವನ್ನು ನಂಬಿ ಅವರು ಮಾಡುತ್ತಿರುವದೆಲ್ಲ ಕ್ಷಮ್ಯವಾಗಿದೆ ಹಾಗಲಿ, ಪಾಪ! ಅವನೇನು ಮಾಡಿಯಾನು ಎಂಬ ದಾಕ್ಷಿಣ್ಯ ಭಾವನನ್ನಾಗಲಿ ನಾವು ಸರ್ವಥಾ ತಾಳಲಿಕ್ಕಾಗದು. ನಮ್ಮೊಡನೆ ಇಲ್ಲದವರೆಲ್ಲರೂ ನಮ್ಮ ವೈರಿಗಳೇ ಎಂಬ ಲಾಲಾಜಿಯ ವಾಕ್ಯವು ಪದೆ ಪದೆ ಲಕ್ಷ್ಯಕ್ಕೆ ಬರುತ್ತದೆ.

ಮ್ಯಾಜಿಸ್ಟ್ರೇಟರ ವಿಚಾರಣೆಯ ಕ್ರಮದಲ್ಲಿ ಶ್ರೀ ಹಬ್ಬು ಇವರು ಯಾವಭಾಗವನ್ನು ತಕ್ಕೊಳ್ಳಲಿಲ್ಲ. ನಾನು ಉಪ್ಪು ಮಾರಿದ್ದು ನಿಜವಿದೆ ಆದರೆ ನಿಮ್ಮ ವಿಚಾರಣೆಯಲ್ಲಿ ನಾನೇನು ಮಾತನಾಡುವದಿಲ್ಲವೆಂದು ಹೇಳಿದರು. ನಿನ್ನನ್ನು ಈಗ ಬಿಟ್ಟುಗೊಟ್ಟರೆ ನೀನು ಮತ್ತೆ ಉಪ್ಪು ಮಾರುವಿ ಏನು, ಎಂದು ಮ್ಯಾಜಿಸ್ಟ್ರೇಟರು ಕೇಳಿದ್ದಕ್ಕೆ ಹಬ್ಬು ಇವರು ಮಾರುವದು ಖಂಡಿತ ಎಂದು ಉತ್ತರಕೊಟ್ಟರು. ಪೋಲೀಸ ಸಬ ಇನಸ್ಪೆಕ್ಟರರು ಹಬ್ಬು ಇವರ ಗುರ್ತು ಆದೆ ಎಂದು ಹೇಳಿದರು ಮತ್ತೂ ಉಪ್ಪು ಮಾರುವದೇ ಇವರ ಉದ್ಯೋಗವೆಂದು ಕೋರ್ಟಿಗೆ ತಿಳಿಸಿದ್ದಕ್ಕೆ ಎಲ್ಲರೂ ನಕ್ಕರು ಬಾಗಲಕೋಟೆಯ ವಾತಾವರಣವು ಹೆಚ್ಚು ಪ್ರಕ್ಷುಬ್ಧವಾಗಿರುವದರಿಂದ ಹಬ್ಬು ಯವರಿಗೆ ಶಿಕ್ಷೆ ಆಗಬೇಕೆಂದು ಪ್ರೋಸೀಕ್ಯುಟರರು ಮ್ಯಾಜಿಸ್ಟ್ರೇಟರಿಗೆ ಕೇಳಿಕೊಂಡರು ಆ ಪ್ರಕಾರ ಮ್ಯಾಜಿಸ್ಟ್ರೇಟರು ನಾಲ್ಕು ತಿಂಗಳ ಸಶ್ರಮ ಶಿಕ್ಷೆ ಕೊಟ್ಟಿರುವರೆಂದು ಸಾರಿದರು. ಎಂಥಾ ಅವರೇ!

### ಶ್ರೀಮನ್ಮಧ್ವಾಚಾರ್ಯರ ಕೃಪೆ
### (ಉಡುಪಿ)

ಇಲ್ಲಿಯ ಸತ್ಯಾಗ್ರಹ ಮಂಡಲದವರು ಉಪ್ಪಿನ ಕಾಯದೆ ಭಂಗಕ್ಕಾಗಿ ತಮ್ಮಲ್ಲಿಯ ಇಪ್ಪತ್ತೈದು ಸ್ವಯಂಸೇವಕರ ಒಂದು ತಂಡವನ್ನು ಮಂಗಳೂರಿಗೆ ಕಳುಹಿಸಿ ಕೊಟ್ಟರು. ಆ ಪಥಕಕ್ಕೆ ಶ್ರೀಕೃಷ್ಣಪಥಕವೆಂಬ ಹೆಸರು ಕೊಟ್ಟಿರುವರು. ಶ್ರೀ ಮಧ್ವಾಚಾರ್ಯರ ಪ್ರತ್ಯಕ್ಷ ಶಿಷ್ಯರಾದ ಸೋದೆ ಮಠದ ಶ್ರೀಗಳವರೂ ಮತ್ತೂ ಪಾಲಿಮಾರ ಮಠದ ಶ್ರೀಗಳವರೂ ಸ್ವಯಂಸೇವಕರಿಗೆ ಫಲಮಂತ್ರಾಕ್ಷತೆಗಳನ್ನೂ ಆಶೀರ್ವಾದಗಳನ್ನೂ ಕೊಟ್ಟು ಕಳುಹಿದರು. ಈ ಸ್ವತಂತ್ರತೆಯ ಯುದ್ಧದಲ್ಲಿ ಭಗವಂತನ ಅಧಿಷ್ಠಾನ ಉಂಟೆಂದು ಮಹಾತ್ಮರು ಹೇಳುವ ಮಾತು ನಿಜವಾಯಿತು. ಮಧ್ವಗುರುಭ್ಯೋನಮಃ ॥

### ಒಂದು ಭವಿಷ್ಯ ಕಥನ.

ಲಂಡನ್ನಿನ ಸ್ಟಾರ್ ಲೋರ್ ಎಂಬ ಜ್ಯೋತಿಷ್ಯ ಪತ್ರಿಕೆಯು ಹಿಂದೂ ದೇಶದ ಪರಿಸ್ಥಿತಿ ಪರಿಶೀಲನವನ್ನು ಜ್ಯೋತಿಷ್ಯ ಶಾಸ್ತ್ರದ ಪ್ರಕಾರವಾಗಿ ಗಣಿಸಿ ಮಹಾತ್ಮರಿಗೆ ನಕ್ಷತ್ರಗಳು ಅನುಕೂಲವಾಗಿರುವದರಿಂದ ಅವರ ಸತ್ಯಾಗ್ರಹ ಪ್ರಯತ್ನವು ಫಲಕಾರಿಯಾಗುವುದೆಂದು ಹೇಳಿರುತ್ತದೆ. ಮೇ ಜೂನ ತಿಂಗಳುಗಳಲ್ಲಿ ರಾಜಿ ಪ್ರಸ್ತಾಪ, ಕ್ರಾಂತಿಕಾರರ ಚಳವಳಿ ಹೆಚ್ಚುವದು. ಗಾಂಧಿಯವರ ಪ್ರಯತ್ನವು ಹಣವಿಲ್ಲದೆ ಹಿಂದೆ ಬೀಳುವದು. ದೇಶದ ಅನೇಕ ಭಾಗಗಳಲ್ಲಿ ಗಲಭೆಗಳಾಗುವವು, ಈಗಿನ ವೈಸರಾಯರು ಒಂದಕ್ಕೆ ಕರೆಸಲ್ಪಟ್ಟು ಬೇರೆ ವೈಸರಾಯರು ಬರುವರು. ಗಾಂಧಿ ಪಕ್ಷದೊಡನೆ ಆಲೋಚಿಸಲು ಒಂದು ಕಮಿಶನ್ನ ಕಳುಹಿಸಲ್ಪಡುವದು. ಗಾಂಧಿಯವರ ೧೧ ಕರಾರುಗಳು ಈದೇಶ ರಾಜ್ಯಂಗೆ ಸುಧಾರಣೆಯಾಗುವದು. ಆದರೆ ಇದೇ ಸಂದರ್ಭದಲ್ಲಿ ನೆಪ್ಚ್ಯೂನ ಗ್ರಹವು ದುಷ್ಟವಾಗಿರುವದರಿಂದ ದೇಶದಲ್ಲಿ ಅನಾಯಾತ್ವವು ಹೆಚ್ಚಿ ಬಹು ಜನರು ಮರಣ ಹೊಂದಿ ಕೆಲವು ಪ್ರಾಂತ್ಯಗಳೇ ಹಾಳಾಗುವ ಸಂಭವವುಂಟು ಎಂದು ಆ ಪತ್ರಿಕೆಯು ಹೇಳುವದು

### ಸ್ತ್ರೀಯರು ಬೆನಸಾಹೇಬರಿಗೆ ಬುದ್ಧಿಗಲಿಸಿದರು,
### (ಲಂಡನ,)

ಶಾಂತತೆ ಹಾಗೂ ಸ್ವತಂತ್ರತೆಯ ಅಂತರ ರಾಷ್ಟ್ರೀಯ ಸ್ತ್ರೀಸಂಘದವರು, ಹಿಂದುಸ್ಥಾನದಲ್ಲಿಯ ಎಲ್ಲ ರಾಜಕೀಯ ಕೈದಿಗಳನ್ನು ಬಿಟ್ಟುಕೊಡಬೇಕೆಂದೂ ಮತ್ತು ಸಾಮಂತ ಸ್ವರಾಜ್ಯದ ಬಗ್ಗೆ ವಿಚಾರ ಮಾಡಲು ಇದೊಂದು ಮಾರ್ಗವಾಗುವದೆಂದು ತಮ್ಮ ನಂಬಿಗೆಯುಂಟೆಂತಲೂ ತಿಳಿಸಲು ಒಂದು ಮಂಡಲವನ್ನು ಬೇನಸಾಹೇಬರ ಕಡೆಗೆ ಕಳಿಸುವರು.

ವ್ಹೈಸರಾಯರು ಹೊಸದಾಗಿ ಹೊರಡಿಸಿದ ಪ್ರೆಸ್ಸ ಆಕ್ಟಿನ ನಿಷೇಧಾರ್ಥವಾಗಿ “ಕನ್ನಡಿಗನು” ತನ್ನ ಸಂಪಾದಕರ ಭೂಮಿಯನ್ನು ತೆಗೆದು ಹಾಕಿರುವನು, ಆ ಸ್ಥಳದಲ್ಲಿಯೂ ಸಹ ಸುದ್ದಿಗಳನ್ನೇ ಕೊಡುತ್ತ ಹೋಗುವನ,

## ವಚನಾಮೃತ,

ಸತ್ಯಾಗ್ರಹಿಯು ತನ್ನ ಶಕ್ತಿಯು ತನ್ನದೇ ಎಂದು ಹೇಳಿಕೊಂಡುದಿಲ್ಲ ಅವನಲ್ಲಿರುವ ಎಲ್ಲ ಶಕ್ತಿಯು ದೇವರಿಂದಲೇ ಬಂದುದು. ಆ ಶಕ್ತಿಯು ದೇವರ ಶಕ್ತಿಯೇ ಇರುವದು. ಅದರಿಂದಲೇ ಅವನು ಜನತೆಯ ಮನಸ್ಸನ್ನು ಒಲಿಸಿಕೊಂಡು ತನ್ನ ಧ್ಯೇಯದ ಕಡೆಗೆ ಸಾಗುವನು. ದೇವರ ಸಹಾಯವಿಲ್ಲವಾದರೆ ಅವನು ದಾರಿಸಾಗದೆ, ಮುಂದುಗಾಣದೆ ಮುಗ್ಗರಿಸುವನು

ಮಹಾತ್ಮರು

# ಬಿಸನಾಳ ಸತ್ಯಾಗ್ರಹಿಗಳಿಗೆ

## ಬಾಗಲಕೋಟೆಗರ ಮನ್ನಣೆಯು.

ಬಿಸನಾಳಕ್ಕೆ ಉಪ್ಪಿನ ಸತ್ಯಾಗ್ರಹಕ್ಕಾಗಿ ತೆರಳಬೇಕಾಗಿದ್ದ ಪಥಕವು ನಿನ್ನೆ ಮುಂಜಾನೆ ಬಾಗಲಕೋಟೆಯಿಂದ ಹೊರಟಿತು ಬೆಳಗಿನ ಆರು ಘಂಟೆಯ ಪ್ರಶಾಂತವಾದ ಮಂಗಲ ಸಮಯದಲ್ಲಿಯೇ ಧ್ವಜಾಭಿವಂದನೆಯನ್ನು ಮಾಡಿ ೧೨ ಸ್ವಯಂಸೇವಕರ ಈ ಪಥಕವು ಸ್ಟೇಶನದಲ್ಲಿರುವ ಶಿಕ್ಷಣ ಶಿಬಿರದಿಂದ ಹೊರಬಿದ್ದು ಊರೊಳಗಿನ ಬೀದಿಗಳಲ್ಲಿ ಹಾಯುತ್ತ ಗದ್ದನಕೇರಿಯ ಮಾರ್ಗವಾಗಿ ಪ್ರಯಾಣಬೆಳಿಸಿತು. ಊರ ನಾಗರೀಕರು ಅಟ್ಟಹಾಸದಿಂದ ತಮ್ಮ ಮನೆ ಅಂಗಡಿಗಳ ಮುಂದಿನ ಬೀದಿಗಳ ಭಾಗವನ್ನು ತಳಿರು ತೋರಣಗಳಿಂದ ಅಲಂಕರಿಸಿದ್ದಲ್ಲದೆ, ಓಣಿಗಳನ್ನು ಊದಿಗ ಥಳಿಹೊಡೆದು ರಂಗವಲ್ಲಿಗಳಿಂದ ಅಲಂಕರಿಸಿದ್ದರು. ಹೀಗೆ ಅತಿಶಯಸ್ಫೂರ್ತಿಯಿಂದ ಅಲಂಕೃತವಾದ ಊರು ದೀಪಾವಳಿಯ ಹಬ್ಬದ ಕಳೆಬಂದಿತ್ತು. ಜನರು ಅತ್ಯಂತ ಉತ್ಸಾಹಪೂರಿತರಾಗಿದ್ದರು ಉಪ್ಪಿನ ಸಂಗರಕ್ಕೆ ಸಾಗಿದ ಈ ಸತ್ಯಾಗ್ರಹಿಗಳ ತಂಡವನ್ನು ಅಖಂಡ ಹಿಂಬಾಲಿಸಿಯೇ ಇದ್ದರು. ಹೀಗೆ ಮೆರವಣಿಗೆಯು ಮುಂದೆಸಾಗಿದಂತೆ ಬೆಳೆಯುತ್ತಲೆ ನಡೆದಿದ್ದರೂ ಅದರ ಶಿಸ್ತಿನ ಲಕ್ಷಗಳು, ಶಾಂತತೆಯ ಲಕ್ಷಣಗಳು, ಗಾಂಧೀ ಮರ್ಯಾದೆಗಳು ನ್ಯೂನತೆ ಉಂಟಾಗಲಿಲ್ಲ ಇಷ್ಟೇ ಅಲ್ಲ, ಎಲ್ಲರ ಮೋರೆಯ ಮೇಲೂ ಮಹಾತ್ಮರು ಕೈಕೊಂಡಿರುವ ಶಾಂತಿ ಯುದ್ಧದ ಗಂಭೀರವೃತ್ತಿಯು ಭಾವನೆಯು ಒಡೆದು ಕಾಣುತ್ತಿತ್ತು. ಸುಮಂಗಲೆಯರಾದ ಗೃಹಿಣಿಯರು ತಮ್ಮ ತಮ್ಮ ಮನೆಗಳ ಮುಂದೆ ಈ ಸತ್ಯಾಗ್ರಹಿಗಳಿಗೆ ಆರತಿಯ ಕುಂಕುಮ ಗಂಧವಾಳ್ಯಾದಿ ಮಂಗಲದ್ರವ್ಯಗಳಿಂದ ಪೂಜಿಸಿ ಆರತಿ ಅಕ್ಷತೆಗಳಿಂದ ನೆನೆಗಿ ತಮ್ಮ ಅಂಗಳಗಳಿಂದ ಆ ವೀರರ ಹಣೆಗಳಿಗೆ ಕುಂಕುಮತಿಲಕವನ್ನಿಟ್ಟು ಹೂ ಹಾರಿಸಿ ಸಮರದಲ್ಲಿ ಜಯಶಾಲಿಗಳಾಗಿ ಬನ್ನಿರೆಂದು ಬೀಳ್ಕೊಡುವ ದೃಶ್ಯವನ್ನು ನೋಡಿ ಹಿಂದಕ್ಕೆ ಯುದ್ಧಕ್ಕೆ ಹೊರಟಯೋಧ್ದರಿಗೆ ಅಂದಿನ ಪೌರನಾರಿಯರು ಸತ್ಕರಿಸುತ್ತಿರುವ ರೀತಿಯನ್ನು, ಕವಿ ತಮ್ಮ ಗ್ರಂಥಗಳಲ್ಲಿ ವರ್ಣಿಸಿರುವ ಆ ಪ್ರಕಾರವನ್ನು, ಇಲ್ಲಿ ಕಣ್ಣಾರೆ ಕಾಣುವಂತೆ ಮಾಡಿದವು ಎನ್ನುವದಾಗಿದೆ ಅಲ್ಲವೆಂದು ಎಲ್ಲರೂ ಹರ್ಷಭರಿತರಾಗಿದ್ದರು. ಅದೇ ಸಮಯದಲ್ಲಿ ರೊಕ್ಕವೂ ಕಣ್ಣುಮುಟ್ಟಿಗೆ ಕೊಡುತ್ತಿತ್ತು. ಬಾಜಾರದಲ್ಲಿ ಜವಳೀ ವ್ಯಾಪಾರಸ್ಥರು ತಮ್ಮ ಸಂಘದ ಪರವಾಗಿ ೩೫ ರೂಪಾಯಿಗಳನ್ನು ಕಾಣಿಕೆ ಹಾಕಿದರು. ಹಿಗೆಯೇ ಅನೇಕರು ಉದಾರಹಸ್ತದಿಂದ ದ್ರವ್ಯಸಹಾಯ ಮಾಡಿರುವರು.

---

# ಉಪ್ಪಿನ ಸಂತೆ.

## ಅಂಕೋಲಾ ಉಪ್ಪಿನ ಸತ್ಯಾಗ್ರಹ

ಮೊದಲೇ ಪ್ರಕಟಿಸಿದಂತೆ ನಿನ್ನೆಯ ಸಂಜೆಗೆ ಎಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ಉಪ್ಪನ್ನು ತಯಾರಿಸಿ ಅದನ್ನು ಗಿಡ್ಡಾವ ನಗರದಲ್ಲಿ ತಾಲೂಕ ಕಚೇರಿಯ ಹತ್ತಿರದ ವಿಶಾಲವಾದ ಮೈದಾನದಲ್ಲಿ ಬಂದು ಸೇರಿದರು. ಆ ಸಭೆಯಲ್ಲಿ ನೆರೆದಿದ್ದವರು ಮತ್ತು ಉಪ್ಪನ್ನು ಕೊಳ್ಳಲು ಬಂದವರು ಸುಮಾರು ಸಾವಿರ ಮಂದಿ ನೆರೆದಿದ್ದರು. ಲಿಲಾವ ಆದನಂತರ ರಾಷ್ಟ್ರೀಯ ಗೀತೆಯಾಯಿತು. ಆ ವೇಳೆ ಸಭೆಯು ಮುಕ್ತಾಯವಾಯಿತು.

ಈ ದಿನ ಎಂದಿನಂತೆ ಕುಮಠ ರವಿವಾರ ಮತ್ತು ಅಂಕೋಲಾ ತಾಲೂಕಗಳಲ್ಲಿ ಎಲ್ಲ ಕಡೆಗಳಲ್ಲಿಯೂ ಉಪ್ಪನ್ನು ತಯಾರಿಸಿ ಲಿಲಾವ ಮಾಡಿದರು. ಪೋಲೀಸರು ಯಾರನ್ನೂ ಹಿಡಿದು ಮಾಡಲಿಲ್ಲ.

ಈ ತಾಲೂಕಗಳಲ್ಲಿ ಉಪ್ಪಿನ ಕಾಯದೆಯು ಸಂಪೂರ್ಣ ವ್ಯರ್ಥವಾಗಿದೆ. ಉಪ್ಪು ತಯಾರ ಮಾಡುವದು ಸರ್ವ ಸಾಧಾರಣ ಮಾತಾಗಿದೆ. ಜನರಿಗೆ ಉಪ್ಪಿನ ಕಾಯದೆ ಎಂಬುದು ಮರೆತು ಹೋಗಿದೆ ಹೆಂಗಸರು ಮುಂಜಾನೆ ಬುಟ್ಟಿಗಳಲ್ಲಿ ಉಪ್ಪಿನ ನೀರನ್ನು ತಂದು ತಮಗೆ ಬೇಕಾದಷ್ಟು ಉಪ್ಪನ್ನು ತಯಾರು ಮಾಡಿಕೊಳ್ಳುತ್ತಾರೆ ಅಂಗಡಿಗಳಲ್ಲಿ ಸರಕಾರಿ ಉಪ್ಪಿನ ವ್ಯಾಪಾರ ಕಡಿಮೆಯಾಗಿದೆಯೆಂದು ಕೇಳಬರುತ್ತದೆ. ಆದರಲ್ಲೂ ಹಳ್ಳಿಗಳಲ್ಲಿ ಜನರು ತಮ್ಮ ತಮ್ಮ ಮನೆಗಳಿಗೆ ಬೇಕಾಗುವಷ್ಟು ತಮ್ಮ ತಮ್ಮ ಮನೆಗಳಲ್ಲಿ ತಯಾರಿಸಿ ಸರಕಾರಿ ಉಪ್ಪನ್ನು ಕೊಳ್ಳುವದೇ ಇಲ್ಲ

ನಾಳೆ ಸಂಜೆ ೪ ಘಂಟೆಗೆ ಉಪ್ಪಿನ ಸಂತೆ ನಡೆಯುವದು. ಸುತ್ತಮುತ್ತಲಿನ ನೂರಾರು ಜನರು ತಾವು ಮಾಡಿದ ಉಪ್ಪನ್ನು ತಂದು ಮಾರುವರು.

ಸತ್ಯಾಗ್ರಹ ಶಿಬಿರ ಅಂಕೋಲಾ
೨—೫—೩೦ ಪ್ರಕಟನೆ ಶಾಖಾಧಿಕಾರಿ

## ಮಹಾರಾಷ್ಟ್ರ

ಪುಣೆಯ ಸತ್ಯಾಗ್ರಹ ಮಂಡಲದ ಕಾರ್ಯದರ್ಶಿಗಳಾದ ಶ್ರೀ ಕಾನಿಟಕರ ಎಂಬವರನ್ನು ಉಪ್ಪಿನ ಕಾಯದೇಭಂಗ ಮಾಡಿದ್ದಕ್ಕಾಗಿ ಹದಿನೆಂಟು ತಿಂಗಳ ಸಜೆ ಯಾಗಿದೆ.

ಕಲ್ಯಾಣದಲ್ಲಿಯ ಪ್ರಸಿದ್ಧ ಡಾಕ್ಟರರಾದ ಫಡಕೆ ಎಂಬವರಿಗೆ ನಾಲ್ಕು ತಿಂಗಳ ಸಜೆಯಾಗಿದೆ.

ಪಿನವೇಲದಲ್ಲಿ ಮೂರು ನಾಲ್ಕು ನೂರು ಸ್ತ್ರೀಯರು ಉಪ್ಪಿನ ಕಾಯದೇಭಂಗ ಮಾಡಿದರು ಅಲ್ಲಿಯ ಎಲ್ಲ ಮುಂದಾಳುಗಳೂ ಈ ಸತ್ಯಾಗ್ರಹ ಯುದ್ಧದಲ್ಲಿ ಭಾಗ ತೆಗೆದುಕೊಂಡಿರುವರು.

## ನವಸಾರಿ

ಮುಂಬಯಿಯ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಮುಖಂಡರು ಮಹಾತ್ಮರನ್ನು ತಮ್ಮಲ್ಲಿಗೆ ಬರಲು ಕೇಳಿಕೊಂಡರು. ಆವರ ಮತ್ತು ಮಹಾತ್ಮರ ಸಂಭಾಷಣವು ಒಂದು ತಾಸಿನವರೆಗೆ ಆಯಿತು. ಮುಂಬಯಿಯ ಮುಖಂಡರು ತಮ್ಮ ಸ್ಥಳದಿಂದ ಮಹಾತ್ಮರ ಯಾವದೇ ಕಾರ್ಯಕ್ಕೆ ಸಂಪೂರ್ಣ ಬೆಂಬಲವಿದೆಯೆಂದು [illegible] ಸತ್ಯಾಗ್ರಹದ ಹೋರಾಟದ ಬಗ್ಗೆ ಯಾವದೇ ಮಾರ್ಗವನ್ನು ತಾವು ತೋರಿಸಿದರೆ, ಅದನ್ನು ಹಿಂಬಾಲಿಸಲು ತಾವೆಂದೂ ಅಲ್ಲಗಳೆಯಲಾರೆವೆಂದು ಉಲ್ಲೇಖಿಸಿದರು. ತಮ್ಮ ಸ್ಥಳದಲ್ಲಿ ೧ ಲಕ್ಷ ಸತ್ಯಾಗ್ರಹಿಗಳು ಕಾರ್ಯಮಾಡಲು ಉತ್ಸುಕರಿದ್ದಾರೆಂದು ತಿಳಿಸಿದರು. ಆಮೇಲೆ ಮಹಾತ್ಮರು ಅವರಿಗೆ ಅಹಿಂಸೆಯನ್ನು ಪೂರ್ಣ ಪಾಲಿಸಬೇಕೆಂದೂ, ಅಂಗಡಿಗಳ ಪಿಕೆಟಿಂಗ ಸ್ತ್ರೀಯರೇ ಮಾಡಬೇಕೆಂದೂ, ಮತ್ತು ಪುರುಷರು ಇವರಿಗೆ [illegible] ಮುಂಬಯಿಗೆ ಶೀಘ್ರದಲ್ಲಿ [illegible] ಅಭಿನಂದಿಸಿದ್ದಾರೆ.

## ಅಹಮ್ಮದಾಬಾದ

ಇಲ್ಲಿಯ ವರ್ತಮಾನಪತ್ರ ಸಂಘದವರು ಒಂದು [illegible] ಯಾವದೇ ಒಂದು ಪ್ರತಿ [illegible] ಸರಕಾರವು ಜಾಮೀನು ಬೇಡಿದರೆ, ಉಳಿದ [illegible] ಎಲ್ಲ ಪತ್ರಗಳೂ ತಮ್ಮ ಕೆಲಸವನ್ನು ನಿಲ್ಲಿಸಿ ಬಿಡಬೇಕು. ಸಂದೇಶ, [illegible] ಪತ್ರಿಕೆ, ಗುಜರಾತ [illegible], ಪ್ರಜಾಬಂಧು [illegible] ಗುಜರಾತ [illegible] ಪತ್ರಿಕೆಗಳೂ [illegible] ಒಪ್ಪಿಗೆ ಕೊಟ್ಟಿರುವವು. ಉಳಿದ ಪತ್ರಿಕೆಗಳೂ ಹೀಗೆಯೇ ಮಾಡಬೇಕೆನ್ನುವವು.

## ಲಾಹೋರ

ಡಾಕ್ಟರ ಸತ್ಯಪಾಲ, ಮತ್ತು [illegible], ಎಂಬವರು ಸೆರೆಮನೆಗೆ ಹೋದ ಕಾರಣ, ಅವರ ಸ್ಥಳಗಳಲ್ಲಿ, ಶಾರ್ದೂಲಸಿಂಗ ಮತ್ತು ಅವ್ಯಕ್ತಸರ [illegible] ರಹಮಾನ ಎಂಬವರು ನಿಂತಿರುವರು.

## ಪಾಟಣಾ

ಪಟೇಲರು ಇಲ್ಲಿಗೆ ಬಂದಿರುವರು. ಹಸನ ಇಮಾಮ ಮತ್ತು ರಾಜೇಂದ್ರ ಪ್ರಸಾದ ಎಂಬ ಇಲ್ಲಿಯ ಮುಂದಾಳುಗಳು ಅವರಿಗೆ ಸ್ವಾಗತ ಮಾಡಿದರು. ಸಂಜೆಯಲ್ಲಿ ಸಭೆ ಸೇರಿ ಪಟೇಲರ ವ್ಯಾಖ್ಯಾನವಾಗುವದು.

## ಅಜಮೀರ

ಇಲ್ಲಿ ಕೂಡಲಿಕ್ಕಿರುವ ಜಮೀಯತ್ ಉಲ್ ಉಲೇಮಾ ಎಂಬ ಸಭೆಯ ಅಧ್ಯಕ್ಷರಾಗಲಿಕ್ಕೆ ಮೌಲಾನಾ [illegible] ಎಂಬವರು, ೧೯೨೧ನೇ ಇಸವಿಯ ಅಸಹಕಾರ ಆಂದೋಲನದಲ್ಲಿ ಪ್ರಮುಖರಾಗಿದ್ದವರು, ಮಹಾತ್ಮಾ ಗಾಂಧಿಯವರಿಗೆ ಈಗಿನ ಚಳವಳಿಯಲ್ಲಿ ತಮ್ಮ ಸಹಾನುಭೂತಿಯು ಇರುವದೆಂತಲೂ, ಮತ್ತು ಮುಸಲ್ಮಾನರು ಸ್ವತಂತ್ರಗಾಗಿ ತಮ್ಮ ಹಿಂದೀ ಬಾಂಧವರ ಸಂಗಡ ಸಹಕಾರದಿಂದ ಹೆಗಲಿಗೆ ಹೆಗಲು ಕೊಟ್ಟು ಹೆಣಗುವದರ ಕಡೆಗೆ ತಮ್ಮದು ಅತ್ಯಂತ ಅನುಕೂಲ ಅಭಿಪ್ರಾಯ ಉಂಟೆಂತಲೂ ಹೇಳಿದರು.

## ಪರದೇಶ

ಅಮೇರಿಕೆಯ ಸಂಯುಕ್ತ ಸಂಸ್ಥಾನದಲ್ಲಿ ಒಂದು ದೊಡ್ಡ ಸುಂಟರಗಾಳಿಯು ಬೀಸಿ ಬಹಳೇ ಹಾನಿಯಾಗಿದೆ. ಇಪ್ಪತ್ತು ಜನ ಗಂಡಸರೂ ಎಂಟು ಜನ ಹೆಂಗಸರೂ ಗಾಳಿಯಲ್ಲಿ ಸಿಕ್ಕು ಸತ್ತಿರುವರು. ನೂರಾರು ಜನರು ಘಾಯಹೊಂದಿರುವರು. ಸುಮಾರು ಒಂದು ಕೋಟಿ ಬೆಲೆ ಬಾಳುವಷ್ಟು ಆಸ್ತಿಯು ಹಾಳಾಗಿರುವದು. ಹಾನಿಗೊಂಡ ಜನರಿಗೆ ಸಹಾಯ ಮಾಡುವದಕ್ಕಾಗಿ ವಿಮಾನಗಳು ಕಳಿಸಲ್ಪಟ್ಟಿರುವವು.

ಹಿಂದುಸ್ಥಾನದ ಅಂಡರ ಸೆಕ್ರೆಟರಿಗಳಾದ ಅರ್ಲರಸೆಲ ಸಾಹೇಬರು ಸೌಥಾಂಪಟನ ಎಂಬಲ್ಲಿ ಭಾಷಣಮಾಡುವ ಕಾಲಕ್ಕೆ ಹೀಗೆಂದರು. "ಸರಕಾರವು ಸಹಾನುಭೂತಿಯಿಂದ ಎಲ್ಲರನ್ನು ಒಟ್ಟುಗೂಡಿಸಿ ಪರಿಷತ್ತನ್ನು ಕರೆದು ಹಿಂದುಸ್ಥಾನಕ್ಕೆ ಅವಶ್ಯವಿದ್ದ ಬೇಡಿಕೆಗಳನ್ನು ಆ ಪರಿಷತ್ತಿನ ಮುಂದೆ ಇಡುವಂತೆ ಮಾಡಿದರೂ ಸಹ ಜನತೆಯ ಒಂದು ಭಾಗವು ಸತ್ಯಾಗ್ರಹವನ್ನು ಕೈಕೊಳ್ಳುವದೆಂದರೆ ದುರ್ದೈವವೇ ಸರಿ" ಸಾಹೇಬರ ದುರ್ದೈವವೋ [illegible] ದುರ್ದೈವವೋ?

ಲಂಡನದಲ್ಲಿಯ ಡೇಲೀ ನ್ಯೂಜ ಎಂಬ ಪತ್ರವು ಬರೆಯುವದೇನೆಂದರೆ: ಈಗ ಸುರುವು ಮಾಡಿದ ದಬ್ಬಾಳಿಕೆಯು ಬಹಳೇ ಕೆಟ್ಟದಾಗಿದೆ, ಈಗ ಅಲ್ಲಲ್ಲಿ ಆದ ದಂಗೆಗಳಿಂದ ಮಹಾತ್ಮರ [illegible] ಹೊರಬಿದ್ದಂತಾಯಿತು, ಮಂದಪಕ್ಷದವರು ಮತ್ತು ಮುಸಲ್ಮಾನರು ಸರಕಾರಕ್ಕೆ ಬಂದು ಕೂಡಿಕೊಳ್ಳುತ್ತಿರುವರು, ಸರಕಾರವು ಮಾತ್ರ ಇಂಥ ಸುಪ್ರಸಂಗವನ್ನು ಕಳೆದುಕೊಳ್ಳಬಾರದು. ಎಂದು ಬರೆದಿರುವದು. ಸುಳ್ಳು ಸುದ್ದಿಗಳೆಂದರೆ ಇಂಗ್ಲಿಷರ ಪತ್ರಗಳಿಗೆ ಬಲು ಹಿಗ್ಗು.

---

**ಗದಗಿನ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

**ತಮ್ಮ ಲೋಕಪ್ರಿಯವಾದ**

**ಬುಧವಾರ ತಾ. ೭-೫-೩೦**

**ಮಾಯಾ ಬಾಜಾರ.**

**ಶನಿವಾರ ತಾ. ೧೦-೫-೩೦**

**ಸಂಪೂರ್ಣ ಕೃಷ್ಣಲೀಲಾ**

**ಸೋಮವಾರ ತಾ. ೧೨-೫-೩**

**ಯಚ್ಚಮ್ಮ ನಾಯಿಕ.**

**ಎಂಬ ನಾಟಕಗಳನ್ನು ಅಭಿನಯಿಸುವರು.**

**ಸಂಘರೊಡೆಯ—ಸದಾಶಿವರಾವ ಗೆರೂರ**

ಈ ಪತ್ರಿಕೆಯು ಬಸವಂತ ಲಕ್ಷ್ಮಣರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದಲೇ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ.ನಂ. ಬಿ ೧೯೪೭ ಬೆಲೆ ೦-೦-೩

# ಕನ್ನಡಿಗ

ಜಯಕರ್ನಾಟಕ

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ಗುರುವಾರ ಮಿತಿ ವೈಶಾಖ ಶುದ್ಧ ೧೦ ಶಕ ೧೮೫೨ ತಾ ೮-೫-೩೦ ಸಂಚಿಕೆ ೪೨

ವ್ಹಾಯಿಸರಾಯರ ಹೊಸದಾಗಿ ಹೊರಡಿಸಿದ ಪ್ರೆಸ್ಸ್ ಆಕ್ಟಿನ ನಿಷೇಧಾರ್ಥವಾಗಿ "ಕನ್ನಡಿಗನು" ತನ್ನ ಸಂಪಾದಕರ ಭೂಮಿಯನ್ನು ತೆಗದು ಹಾಕಿರುವನು, ಆ ಸ್ಥಳದಲ್ಲಿಯೂ ಸಹ ಸುದ್ದಿಗಳನ್ನೇ ಕೊಡುತ್ತ ಹೋಗುವನು,

## ಬಾಗಲಕೋಟೆಯಲ್ಲಿ ಪ್ರಚಂಡ ಹರತಾಳವು

ಮಹಾತ್ಮಾಜಿಯವರನ್ನು ಹಿಡಿದ ಸುದ್ದಿಯು ಇಲ್ಲಿಗೆ ೫ನೇ ತಾರೀಖು ರಾತ್ರಿ ೮ ಗಂಟೆಗೆ ತಿಳಿಯಿತು. ಕೂಡಲೇ ಇಲ್ಲಿಯ ಲಕ್ಷ್ಮೀ ಸಿನೇಮಾ ಕಂಪನಿಯವರು ತಮ್ಮ ಸಿನೇಮಾವನ್ನು ಬಂದಿಟ್ಟರು. ದತ್ತಾತ್ರೇಯ ನಾಟಕ ಮಂಡಳಿಯವರು ತಮ್ಮ ನಾಟಕವನ್ನು ಬಂದಿಟ್ಟರು. ಮರುದಿನ ಸಂಪೂರ್ಣ ಹರತಾಳವನ್ನು ಪಾಲಿಸಬೇಕಾಗಿ ಊರಿನ ಶೆಟ್ಟರೆಲ್ಲರೂ ನಿರ್ಣಯಿಸಿದರು. ೬ನೇ ತಾ॥ ಮುಂಜಾನೆ ಎಲ್ಲ ಅಂಗಡಿಗಳು ಇಕ್ಕಲ್ಪಟ್ಟಿದ್ದವು. ಕಲ್ಲೀದ ಬಾಜಾರವು ಕೂಡ ಕೆಲ ಹೊತ್ತಿನಮೇಲೆ ಮುಚ್ಚಲ್ಪಟ್ಟಿತು ಎಲ್ಲ ಚಹಾದ ಅಂಗಡಿಗಳು ಬೀಡೀ ಅಂಗಡಿಗಳು ಸಹಿತ ಬಂದಾಗಿದ್ದವು. ಕನ್ನಡ, ಮರಾಠಿ, ಉರ್ದು ಇಂಗ್ಲೀಷ ಶಾಲೆಗಳೆಲ್ಲವೂ ಮುನಸಿಪಾಲಟಿಯ ಅಪ್ಪಣೆಯ ಮೇರೆಗೆ ಮುಚ್ಚಲ್ಪಟ್ಟವು., ಟಾಂಗಗಳ ಓಡಾಟವು ಹೋಗಿದ್ದರಿಂದ ಬಂದಾಯಿತು. ಮೋಟರ ಕಂಪನಿಯವರೆಲ್ಲರೂ ತಮ್ಮ ತಮ್ಮ ಮೋಟರುಗಳನ್ನು ಬಂದಿಟ್ಟರು. ಇಷ್ಟೆಲ್ಲ ಆದ ಬಳಿಕ ಸ್ವಯಂಸೇವಕರ ಮೆರವಣಿಗೆಯು ಹೊರಟು ಊರನ್ನೆಲ್ಲ ಸುತ್ತಿಬಂದಿತು. ಊರ ಹಿರಿಯರು ಕೆಲವರು ಹೋಗಿ ರಾಜೀನಾಮೆ ಕೊಡಲಿಕ್ಕೆ ಇಲ್ಲಿಯ ಬೆಂಚ ಮ್ಯಾಜಿಸ್ಟ್ರೇಟರನ್ನು ಕೇಳಿಕೊಂಡರು. ಒಬ್ಬರುಮಾತ್ರ ಇಂಥ ಬಿಟ್ಟೀಕಟ್ಟುವಿನ ಕೆಲಸಕ್ಕೆ ಕೂಡಲೆ ಕರಮು ಹೊಡೆಯುವೆನೆಂದು ಹೇಳಿದರು. ಉಳಿದವರು ವಿಚಾರಮಾಡುತ್ತೇವೆಂದು ಹೇಳಿದರು. ಈ ಮ್ಯಾಜಿಸ್ಟ್ರೇಟರು ಜನವಾಗಿಯೂ ಬಿಟ್ಟೀ ಕಟ್ಟುಗಳೇ ಈ ಕೆಲಸ ಮಾಡುವುದರಿಂದ ಲಾಭವಾವುದೋ ತಿಳಿಯುವದಿಲ್ಲ. ಆದರೂ ಸರಕಾರೀ ಅಧಿಕಾರಿಗಳ ಬಾಲಬಡೆಯುವದು ಮಾತ್ರ ಲಭಿಸುತ್ತಿದೆ. ಇರಲಿ.

ಸುಮಾರು ೧೧ ಘಂಟೆಗೆ ಸ್ವಯಂಸೇವಕರು ಊರಲ್ಲೆಲ್ಲ ತಿರುಗಾಡಿ ಪರದೇಶೀ ಅರಿವೆಗಳನ್ನು ಕೂಡ ಹಾಕಹತ್ತಿದರು. ಸಾಯಂಕಾಲ ೪ ಗಂಟೆಗೆ ಮತ್ತೆ ಸ್ವಯಂಸೇವಕರ ಮೆರವಣಿಗೆಯು ತೆಗೆಯಲ್ಪಟ್ಟಿತು. ಈ ಮೆರವಣಿಗೆಯಲ್ಲಿ ಅನೇಕ ಜನರು ಭಾಗ ತೆಗೆದುಕೊಂಡಿದ್ದರು. ಮೆರವಣಿಗೆಯು ಊರಲ್ಲೆಲ್ಲ ಹಾಯ್ದು ೬ ಗಂಟೆಯ ಸುಮಾರಕ್ಕೆ ಕಿಲ್ಲೇದ ಕೊತ್ತಲೇಶನ ಗುಡಿಗೆ ಬಂದು ತಲ್ಪಿತು. ಸ್ವಲ್ಪಾವಧಿಯಲ್ಲಿಯೇ ಪ್ರಚಂಡ ಜನಸಮುದಾಯವು ನೆರೆಯಿತು. ಸಭೆಗೆ ಶ್ರೀ ನರಗುಂದ ಜಯರಾಯರು ಅಧ್ಯಕ್ಷರಾಗಿ ಆರಿಸಲ್ಪಟ್ಟರು ಶ್ರೀ ಮುದಗಲ್ಲ ವಕೀಲ, ಪುರೋಹಿತ, ಕೆರೂರ, ಕಣಬೂರ ವಕೀಲ, ಮುಜುಮದಾರ, ಮತ್ತು ಗುರುರಾವ ಜೋರಾಪೂರಂಥವರು ಗಾಂಧಿಯವರನ್ನು ಹಿಡಿದಬಗ್ಗೆ ಸರಕಾರದ ಕೃತಿಯನ್ನು ನಿಷೇಧಿಸಿದರು, ಆ ವೇಳೆ ಅಧ್ಯಕ್ಷರು ಸಮಾರೋಪ ಮಾಡಿದರು, ಬೇಕಾಯಿದೇಶೀರ ರೀತಿಯಿಂದ ತಯಾರಮಾಡಿದ ಉಪ್ಪಿನ ೯೬ ಚೀಟಿಗಳು ಆಣೇಕ್ಕೊಂದರಂತೆ ಮಾರಲ್ಪಟ್ಟವು, ನಂತರ ಪರದೇಶೀ ವಸ್ತ್ರಗಳಿಗೆ ಅಗ್ನಿಸಂಸ್ಕಾರ ಮಾಡಲ್ಪಟ್ಟಿತು. ಅಂತೂ ಅಂದಿನ ಹರತಾಳವು ಜಾಹೀರ ಸಭೆಯು, ಪರದೇಶೀ ವಸ್ತ್ರಗಳ ಹೋಳಿಯು ಒಳ್ಳೇ ಯಶಸ್ವಿರೀತಿಯಿಂದ ಕೊನೆಗಂಡಿತು. ಈ ಕಾರ್ಯದಲ್ಲಿ ಸಹಾಯ ಮಾಡಿದ ಪ್ರತಿಯೊಬ್ಬನಾಗರಿಕನು ತನ್ನ ಕರ್ತವ್ಯಮಾಡಿದ್ದಕ್ಕಾಗಿ ಅಭಿನಂದನೆಗೆ ಪಾತ್ರನು,

### ಹರತಾಳ

ಇಲಕಲ್ಲ, ಹುನುಗುಂದ, ಗಲಗಲಿ, ಮುದ್ದೇಬಿಹಾಳ, ಗುಳೇದಗುಡ್ಡ, ಗದಗ, ಬೆಟಗೇರಿ, ಮೊದಲಾದ ಸ್ಥಳಗಳಲ್ಲಿ ಗಾಂಧಿಜಿಯವರನ್ನು ಬಂಧಿಸಿದ್ದಕ್ಕಾಗಿ ಸಂಪೂರ್ಣ ಹರತಾಳ ಪಾಲಿಸಲ್ಪಟ್ಟ ವಾರ್ತೆಯು ಕೈಸೇರಿದೆ. ವಿಶೇಷ ಇನ್ನು ನಾಳಿನ ಸಂಚಿಕೆಯಲ್ಲಿ ಪ್ರಕಟಿಸುವೆವು,

## ಮಹಾರಾಷ್ಟ್ರದಲ್ಲಿ ದಬ್ಬಾಳಿಕೆಯು

ಪುಣೆಯ ತರುಣಸಂಘದ ಅಧ್ಯಕ್ಷರಾದ ಶ್ರೀ ಗಾಡಗೀಳರವರನ್ನು ಪಿನಲ್ ಕೋಡಿನ ೧೧೭ ನೇ ಕಲ್ಮಿನನ್ವಯ ಹಿಡಿದಿದ್ದಾರೆ. ಅದರಂತೆ ಶ್ರೀ. ಪಿ. ಪಿ, ಜೋಶಿ. ತುಳಜಾರಾಮ ಮೇಥಾ, ಬಾಬೂರಾವ ಮೇಥಾ ಮರಾಠೆ, ಚುನೀಲಾಲ ಮೇಥಾ ಮುಂತಾದವರನ್ನು ಉಪ್ಪಿನಕಾಯಿದೇ ಮುರಿದದ್ದಕ್ಕಾಗಿ ಮತ್ತು ಎರಡನೆಯವರಿಗೆ ಕಾಯಿದೆ ಮುರಿಯಲಿಕ್ಕೆ ಬೋಧಿಸಿದ್ದಕ್ಕೆ ಹಿಡಿದಿದ್ದಾರೆ.

# ಗೋಕಿ ಸುಬಣ್ಣಾಚಾರ್ಯರನ್ನು ಸೆರೆಹಿಡಿದರು.

### ಗಲಗಲಿಯಿಂದ ಬೀಳಗಿಗೆ ತಂದಿರುವರು

## ಮಹಾತ್ಮಾಜಿಯವರನ್ನು ಏಕೆ ಹಿಡಿದರು ?
## ಮುಂಬಯಿ ಸರಕಾರದ ಪ್ರಕಟನೆಯು.

ಮೇ ೫ನೇ ತಾರೀಖಿನ ದಿವಸ ಮೋಹನದಾಸ ಕರಮಚಂದ ಗಾಂಧಿಯು ಹಿಡಿಯಲ್ಪಟ್ಟನು. ಅವನನ್ನು ಯರವಡಾದ ಸೆಂಟ್ರಲ್ ಜೇಲಿನಲ್ಲಿ ಇಟ್ಟಿರುವೆವು. ಯಾವ ಸತ್ಯಾಗ್ರಹ ಚಳವಳಿಯ ಮೂಲ ಉತ್ಪಾದಕನೂ ಮುಖಂಡನೂ ಗಾಂಧೀಯಾಗಿರುವನೋ ಆ ಚಳವಳಿಯು ಹಿಂದುಸ್ತಾನದ ಪ್ರತಿಯೊಂದು ಭಾಗದಲ್ಲಿ ಬಹಳವಾಗಿ ಕಾಯಿದೆ ಭಂಗವನ್ನೂ ಮತ್ತು ಸಾರ್ವಜನಿಕ ಶಾಂತತೆಗೆ ತೊಂದರೆಯನ್ನೂ ಉಂಟುಮಾಡಿರುತ್ತದೆ. ಹಿಂದಿನ ಚಳವಳಿಯಂತೆ ಈಗಿನ ಚಳವಳಿಯಾದರೂ ಶಾಂತತೆಯನ್ನು ಬೀರುತ್ತಿದ್ದರೂ ಅನಿವಾರ್ಯವಾಗಿ ಅಶಾಂತತೆಯ ಕೆಲಸಗಳಿಗೆ ಆಸ್ಪದವಾಯಿತು. ದಿನದಿನಕ್ಕೆ ಅವು ಹೆಚ್ಚಾಗುತ್ತ ನಡೆದವು. ಗಾಂಧಿಯು ಈ ದೊಂಬಿಗಳನ್ನು ನಿಷೇಧಿಸಿದರೂ ಸಹ ತನ್ನ ಅನುಯಾಯಿಗಳನ್ನು ತಡೆಹಾಕುವದು ತನ್ನ ಕೈಯಲ್ಲಿ ಉಳಿಯದಂತಾಗಿದೆ.

### ಸರಕಾರದ ಮಂತ್ರವು ನಿಂತಿತು

ಯಾವ ಗುಜರಾತ ಪ್ರಾಂತದಲ್ಲಿ ಅವನ ವರ್ಚಸ್ಸು ಬಹಳವಾಗಿದೆಯೋ ಮತ್ತು ಅಹಮದಾಬಾದದಿಂದ ದಂಡಿಯ ವರೆಗೆ ಯಾವ ಪ್ರಾಂತದೊಳಗಿಂದ ಅವನು ಪ್ರವಾಸ ಮಾಡಿದನೋ, ಆ ಪ್ರಾಂತದ ಜನತೆಯ ಮನಸ್ಸಿನಲ್ಲಿ ಈ ಚಳವಳಿಯು ಚನ್ನಾಗಿ ನಟ್ಟಿದೆ ಮತ್ತು ಸರಕಾರೀ ನವಕರರಿಗೆ ಬಹಿಷ್ಕಾರವೂ ಅನ್ನ ನೀರು ಸಿಗದಂತೆ ಆಗುವದೂ, ಪಾಟೀಲರು ಕೆಲಸಬಿಡುವದೂ ಹೀಗಾಗಿ ರಾಜ್ಯಕಾರಭಾರದ ಯಂತ್ರಕ್ಕೆ ಬಹಳೇ ತೊಂದರೆಯಾಯಿತು.

### ತೆರಿಗೆಯನ್ನು ಕೊಡುವದಿಲ್ಲ

ಉಪ್ಪಿನಕಾಯಿದೆ ಭಂಗ, ಮದ್ಯಪಾನ ನಿಷೇಧ, ಪರದೇಶಿ ಬಟ್ಟೆಗಳ ಬಹಿಷ್ಕಾರ, ಇವುಗಳಲ್ಲದೆ ಸರಕಾರದ ತೆರಿಗೆಯನ್ನು ನಿಲ್ಲಿಸಿ ಬಿಡುವದಕ್ಕೆ ರೈತರನ್ನು ಹುರಿದುಂಬಿಸಿದರು. ಇದಲ್ಲದೆ ದರ್ಶನಾ ಮತ್ತು ಧಾರವಾಡಾ ಎಂಬಲ್ಲಿಯ ಸರಕಾರಿ ಉಪ್ಪಿನ ಆಗರಗಳನ್ನು ಒಳನುಗ್ಗುವ ಪ್ರಯತ್ನ ಮಾಡಿದರು ಇದರಿಂದಂತೂ ಶಾಂತತಾ ಭಂಗವಾಗುವ ಸಂಭವವು ಬಹಳೇ ಇತ್ತು

### ಸರಕಾರವು ಸುಮ್ಮನೆ ಕೂತಿತ್ತು

ಗಾಂಧೀಯು ತನ್ನ ಆಶ್ರಮದಿಂದ ಹೊರಟದಿವಸದಿಂದಲೂ ಯಾವ ಬಗೆಯಿಂದಲೂ ಶಾಂತತಾಭಂಗವಾಗಲಿಕ್ಕಿಲ್ಲೆಂತಲೂ ಈ ಉಪ್ಪಿನ ಕಾಯದೆಭಂಗವು ತನ್ನಷ್ಟಕ್ಕೆ ತಾನೇ ನಿಲ್ಲುವದೆಂತಲೂ ಸರಕಾರವು ತಿಳಕೊಂಡಿತ್ತು, ಆದರೆ ಈಗ ಮಾತ್ರ ಶಾಂತತೆಯು ಉಳಿಯುವದು ಶಕ್ಯವಿಲ್ಲೆಂದು ತಿಳಕೊಂಡಿದೆ.

### ಶಾಂತತೆಗೆ ತೊಂದರೆ

ಹಿಂದುಸ್ಥಾನ ಸರಕಾರದ ಸಂಗಡ ವಿಚಾರಿಸಿ ಮುಂಬಯಿ ಸರಕಾರವು ಈಗ ಗಾಂಧಿಯನ್ನು ಬಿಟ್ಟುಕೊಡುವದು ಶಕ್ಯವಿಲ್ಲೆಂದು ಭಾವಿಸಿ ಅವರನ್ನು ೧೮೨೭ ನೇ ಇಸ್ವಿಯ ೨೫ ನೇ ಕಟ್ಟಳೆಯ ಪ್ರಕಾರ ಸರಕಾರದ ಮನಸ್ಸಿಗೆ ಬರುವ ವರೆಗೆ ಬಂಧನದಲ್ಲಿ ಹಾಕಿದೆ. ಅವರ ಆರೋಗ್ಯಕ್ಕೂ ಸುಖಕ್ಕೂ ಎಲ್ಲ ವ್ಯವಸ್ಥೆಗಳೂ ಮಾಡಲ್ಪಡುವವು.

ಮಹಾತ್ಮನ ಚಳವಳಿಯ ಸಾಮರ್ಥ್ಯವನ್ನು ಸರಕಾರವು ತನ್ನ ಬಾಯಿಂದ ತಾನೇ ಹೇಳಿದೆ. ಇನ್ನಾದರೂ ಜನತೆಯು ಎಚ್ಚರಗೊಳ್ಳಲಿ

---

## ಮಂಗಳೂರ ಜಿಲ್ಲೆಯಲ್ಲಿ ಬರುವ ೧೧ ನೇ ತಾರೀಖಿಗೆ ಸಾಮುದಾಯಿಕ ಕಾಯಿದೆ ಭಂಗವು.

ತಾರೀಖು ೩-೫-೩೦ ರಲ್ಲಿ ೩೦ ಜನ ಸ್ವಯಂಸೇವಕರು ಸಂಗಡ ಸಂಗಡಗಳಾಗಿ ಪಟ್ಟಣದ ಬೇರೆ ಬೇರೆ ಸ್ಥಳಗಳಿಗೆ ಹೋಗಿ ನಿರಾತಂಕವಾಗಿ ಉಪ್ಪು ತಯಾರಿಸಿದರು. ಇದಲ್ಲದೆ ಊರ ಜನರನ್ನು ಉಪ್ಪು ತಯಾರಿಸುವಂತೆ ಬೋಧಿಸಿದರು. ನಿನ್ನೆಯಂತೆಯೇ ಈ ಹೊತ್ತು ಕೂಡಾ ನೂರಾರು ಹೆಂಗಸರು, ಮಕ್ಕಳು ಉಪ್ಪು ತಯಾರಮಾಡಿ ಶಿಬಿರದ ಕಚೇರಿಗೆ ತಂದುಕೊಟ್ಟಿರುವರು. ಸಾಯಂಕಾಲ ಮೈದಾನಿನಲ್ಲಿ ಕೂಡಿದ ಸಭೆಯಲ್ಲಿ ಎಸ್. ರಂಗಯ್ಯಾ ಬಾಳಿಗರಿಯವರು ಹಿಡಿಯಲ್ಪಟ್ಟು ಮೆರವಣಿಗೆಯಿಂದ ಸ್ಟೇಶನ್ನಿಗೆ ಒಯ್ಯಲ್ಪಟ್ಟರು. ಪ್ರತಿದಿವಸ ಉಪ್ಪು ತಯಾರ ಮಾಡಿ ಮಾರುವ ಕೆಲಸವು ನಡೆದಿದೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸತ್ಯಾಗ್ರಹದ ಚಳವಳಿಯು ರಭಸದಿಂದ ಸಾಗಿರುವದಲ್ಲದೆ ಇದೇ ತಿಂಗಳ ಬರುವ ೧೧ ನೇ ತಾರೀಖು ಆದಿತ್ಯವಾರ ದಿವಸ ಸಾಮುದಾಯಿಕ ಕಾಯಿದೆ ಭಂಗವನ್ನು ಮಾಡುವ ವ್ಯವಸ್ಥೆಯು ನಡೆಯುತ್ತಲಿದೆ

### ಬೆಳಗಾಂವಿಯಲ್ಲಿ ಹರತಾಳವು

ಮಹಾತ್ಮಾಜಿಯವರನ್ನು ಹಿಡಿದ ತಂತಿಯು ೫ನೇ ತಾರೀಖಿನ ಮಧ್ಯಾಹ್ನ ಬೆಳಗಾಂವಿಗೆ ಮುಟ್ಟಿದ ಕೂಡಲೇ ಎಲ್ಲ ಅಂಗಡಿಗಳು ಮುಚ್ಚಲ್ಪಟ್ಟವು ಕೂಡಲೆ ಮಹಾತ್ಮಾಜಿಯವರ ಭಾವಚಿತ್ರವನ್ನು ಪಾಲಕಿಯಲ್ಲಿ ಕೂಡ್ರಿಸಿ ದೊಡ್ಡದೊಂದು ಮೆರವಣಿಗೆಯು ಹೊರಡಿಸಲಾಯಿತು. ಆ ಮೆರವಣಿಗೆಯು ಊರನ್ನೆಲ್ಲ ಸುತ್ತಿ ಒಂದು ಮಾರ್ಕೀಟಿಗೆ ಬಂದು ಸೇರಿತು. ಅಲ್ಲಿ ಸಾರ್ವಜನಿಕ ಸಭೆಯು ನೆರೆದು ಅನೇಕ ಮುಖಂಡರ ಭಾಷಣಗಳಾದವು. ತಾ॥ ೬ ಮತ್ತು ೭ ನೇ ತಾರೀಖುಗಳಲ್ಲಿಯೂ ಹರತಾಳವನ್ನಾಚರಿಸಬೇಕೆಂದು ವ್ಯಾಪಾರಸ್ಥರು ನಿರ್ಣಯಿಸಿದ್ದಾರೆ

### ಮಹಾರಾಷ್ಟ್ರದ ಮುಖಂಡರು ಹಿಡಿಯಲ್ಪಟ್ಟರು.

ಮಹಾರಾಷ್ಟ್ರದ ಮುಖಂಡರಾದ ಶ್ರೀ ದೇವ ಶಂಕರರಾಯರು ಘಾಟಕೋಪರದಲ್ಲಿ ಹಿಡಿಯಲ್ಪಟ್ಟು ಸಿವಲ್ ಕೋಡಿನ ೧೧೭ ಮತ್ತು ಉಪ್ಪಿನ ಕಾಯದೆಯ ೪೭ ನೇ ಕಲಮುಗಳನ್ವಯ ೧ ವರ್ಷ ಸಕ್ತ ಶಿಕ್ಷೆ ಮತ್ತು ೧೦೦ ರೂಪಾಯಿ ದಂಡ ದಂಡ ಕೊಡದಿದ್ದರೆ ಮತ್ತೆ ೩ ತಿಂಗಳ ಸಕ್ತ ಶಿಕ್ಷೆ ವಿಧಿಸಲಾಯಿತು.

### ವಿಜಾಪುರ ಜಿಲ್ಲೆಯ

## ಸತ್ಯಾಗ್ರಹ ಮಂಡಲದ ಅಧಿಪತಿಗಳಾದ

# ಮೋಹರೆ ಹಣಮಂತರಾಯರಿಗೆ

೯ ತಿಂಗಳ ಸಶ್ರಮ ಶಿಕ್ಷೆ ಮತ್ತು ೩೦೦ ರೂಪಾಯಿ ಜುಲ್ಮಾನೆಯಾಗಿದೆ. ಈ ದಂಡ ಕೊಡಲಿಕ್ಕೆ ತಪ್ಪಿದರೆ ಮತ್ತೆ ಮೂರು ತಿಂಗಳ ಕಾರಾಗೃಹವಾಸವೆಂದು ವಿಧಿಸಲಾಗಿದೆ.

ಶ್ರೀಮಾನ್ ಮೋಹರೆ ಹಣಮಂತರಾಯರು ಈಗೊಂದು ತಿಂಗಳಾರಭ್ಯ ಒಳ್ಳೇ ಉತ್ಸಾಹದಿಂದ ಕಾರ್ಯಮಾಡಲುದ್ಯುಕ್ತರಾಗಿ ತಮ್ಮ ಅಪೂರ್ವ ಚಟುವಟಿಕೆಯಿಂದ ಸಮಗ್ರ ಜಿಲ್ಲೆಯನ್ನು ವಿಶೇಷತಃ ದಕ್ಷಿಣ ಭಾಗವನ್ನು ಸತ್ಯಾಗ್ರಹಕ್ಕೆ ಹೊಡೆದೆಬ್ಬಿಸಿ. ಪಿಸನಾಳ ರಣಕ್ಷೇತ್ರದಲ್ಲಿ ನೀವು ಹೋರಾಡಿರಿ ಎಂದು ಯುದ್ಧಸನ್ನಾಹವನ್ನೆಲ್ಲ ಪೂರ್ತಿಗೊಳಿಸಿ ಇನ್ನು ಜಿಲ್ಲೆಯ ಉತ್ತರ ಭಾಗವನ್ನಿಷ್ಟು ಸಜ್ಜುಗೊಳಿಸುವ ವಿಚಾರದಲ್ಲಿದ್ದಾಗ ಅವರ ಅವಿಶ್ರಾಂತ ಪರಿಶ್ರಮವನ್ನು ನೋಡಿ ಸರಕಾರವು ಅವರಿಗೆ ವಿಶ್ರಾಂತಿಯನ್ನು ಕಲ್ಪಿಸಿ ಕೊಟ್ಟಿದೆ. ಅವರು ಅರ್ಧಮರ್ಧ ಬಿಟ್ಟ ಕಾರ್ಯವನ್ನು ಮುಂದೆ ನಡಿಸುವದು ಜಿಲ್ಲೆಯ ಹಿರಿಕಿರಿಯರ ಇಂದಿನ ಆದ್ಯ ಕರ್ತವ್ಯವಾಗಿದೆ. ಅಕಳಕಳಂಕ ಚಳವಳಿಯ ವೀರರಲ್ಲಿ ಮೋಹರೆಯವರೆ ಇನ್ನೊಬ್ಬರ ಜೊತೆಯ ಮಾರ್ಗ ನಿರೀಕ್ಷಣ ಮಾಡದೆ ತಮ್ಮ ವೀರವೃತ್ತಿಗೆ ಅನುರೂಪವಾಗಿ ಈ ಸತ್ಯಾಗ್ರಹದ ಚಳವಳಿಯಲ್ಲಿ ಧುಮುಕಿ ತರುಣರಿಗೆ ಬಂಟತನದ ದಾರಿಯನ್ನು ತೋರಿಸಿ ಅವರ ಉತ್ಸಾಹವನ್ನು ತಮ್ಮ ಸ್ಫೂರ್ತಿಯಿಂದ ದ್ವಿಗುಣಿತಗೊಳಿಸಿ ಈ ಹೊತ್ತು ವಿಶ್ರಾಂತಿ ಮಂದಿರದಲ್ಲಿ ಕುಳಿತಿರುವರು. ಈ ವೀರ ಭಟನ ಸ್ಥಾನವನ್ನು ತುಂಬುವಂಥ ಇನ್ನೊಬ್ಬ ಗಂಡಸು ವಿಜಾಪುರದಲ್ಲಿ ಇರಲಿಕ್ಕಿಲ್ಲ ! ಹೀಗೆಂದಿಗಾದೀತು; ಶ್ರೀ ಕೌಜಲಗಿ ಶ್ರೀನಿವಾಸರಾಯರು ಅಲಂಕರಿಸಿದ ನಗರದಲ್ಲಿ ಅವರ ಜೀವಮಾನದಲ್ಲಿ ಹೀಗಾದೀತೆಂದು ಕಲ್ಪಿಸಲು ಕೂಡ ಆಸ್ಪದವಿಲ್ಲ. ಹುಣಿಸಿ ಗಿಡವು ಹಳಿಯದಾದರು ಅದರ ಹುಳಿ ಹೋಗುವದಿಲ್ಲವೆಂಬಂತೆ ನಮ್ಮ ಕೌಜಲಗಿಯವರು ವೃದ್ಧಾಪ್ಯದ ಮನೆಯಲ್ಲಿ ಕಾಲಿಟ್ಟಿದ್ದರೂ ಅವರಲ್ಲಿಯೇ ರಣೋತ್ಸಾಹವು ಸ್ಫುರಿಸಿದ್ದು ಅತ್ಯಾಶ್ಚರ್ಯವಲ್ಲ. ಇಷ್ಟು ದಿನಗಳವರೆಗೆ ತನ್ನ ತರುಣ ಮಕ್ಕಳ ಸಾಹಸವನ್ನು ಕಣ್ಣಿಟ್ಟು ಈಕ್ಷಿಸುತ್ತ ಕುಳಿತ ಕೌಜಲಗಿಯವರು ಮತ್ತೆ ಈ ಸತ್ಯಾಗ್ರಹಕ್ಕೂ ಸಜ್ಜಾಗಿದ್ದುದ್ದು ಸೋಜಗದ ಮಾತಾಗಿದ್ದರೂ ಜಿಲ್ಲೆಯ ಹಿರಿಯರನ್ನು ನಾಚಿಸುವಂಥ ಸಂಗತಿಯಾಗಿದೆ. ನಿನ್ನಿನ ಸಭೆಯಲ್ಲಿಯ ಅವರ ಉದ್ಗಾರಗಳಿಂದ ಈ ಮಿಕ್ಕುಳಿದ ಹಿರಿಯರು ಬುದ್ಧಿಗಲಿಯುವರೆಂದು ತರುಣರ ಆಸೆ ಇದೆ.

### ದೇಶಭಕ್ತ ಗಂಗಾಧರರಾಯರು ಮತ್ತೆ ಹಿಡಿಯಲ್ಪಟ್ಟರು,

ಮೊನ್ನೆ ೫ ನೇ ತಾರೀಖಿನ ದಿನ ದೇಶಭಕ್ತ ಗಂಗಾಧರರಾಯರು ಅವರಿಗಾದ ೧ ತಿಂಗಳ ಶಿಕ್ಷೆಯ ಅವಧಿಯು ಮುಗಿದಿದ್ದರಿಂದ ರತ್ನಾಗಿರಿಯಲ್ಲಿ ಬಿಡಲ್ಪಟ್ಟರು. ಆದರೆ ವೆಂಗುರ್ಲಾ ಮತ್ತು ಮಾಲವಣಗಳಲ್ಲಿ ಉಪ್ಪು ತಯಾರಮಾಡಿ ಮಾರಿದ್ದಂದ ಪಿನಲ್ ಕೋಡಿನ ೧೧೭ ಮತ್ತು ಉಪ್ಪಿನ ಕಾಯದೆಯ ೪೭ ನೇ ಕಲಮುಗಳನ್ವಯ ಅಲ್ಲಿಯೇ ಪುನಃ ಹಿಡಿಯಲ್ಪಟ್ಟಿದ್ದಾರೆ. ಅವರ ಖಟ್ಲೆಯ ವಿಚಾರಣೆಯು ೯ ನೇ ತಾರೀಖಿಗಿದೆ.

### ಮಹಾತ್ಮರ ಮಂತ್ರದ ಶಕ್ತಿಯು.

ಅಮೇರಿಕೆಯಲ್ಲಿಯ ಶಿಕಾಗೋ ಪಟ್ಟಣದ "ಯುನಿಟಿ" ಎಂಬ ಪತ್ರವು ಮಹಾತ್ಮರ ವಿಷಯಕ್ಕೆ ಹೀಗೆ ಬರೆಯುತ್ತದೆ. ಹಿಂದುಸ್ಥಾನದ ಸ್ವತಂತ್ರತೆಗಾಗಿ ಧರ್ಮಯುದ್ಧವನ್ನು ಹೂಡಿ ಆಹಮ್ಮದಾಬಾದದಿಂದ ತನ್ನ ಸೇನೆಯನ್ನು ಕಕೊಂಡು ಹೊರಡುವ ಕಾಲದ ಮಹಾತ್ಮಾ ಗಾಂಧಿಯು ಅದ್ವಿತೀಯನಾಗಿ ತೋರುತ್ತಿದ್ದನು. ಈ ಬಗೆಯ ಕ್ರಾಂತಿಯು ಪೂರ್ವದಲ್ಲಿ ಎಲ್ಲಿಯೂ ಆಗಿಲ್ಲ. ಕಾಳಗ ಕೊಲೆಗಳು ಕ್ರಾಂತಿಯ ಪೂರ್ವ ಚಿನ್ಹಗಳು, ಮೆರವಣಿಗೆಯಲ್ಲಿಯಾದರೂ ಶಸ್ತ್ರ ಸಿಪಾಯರು, ಮಿಲಿಟರಿ ವಾದ್ಯಗಳು ಇವುಗಳು ಜಗತ್ತಿನ ಎಲ್ಲ ಕಡೆಯಲ್ಲಿಯೂ ಕಂಡು ಬರುವವು. ಆದರೆ ಹಿಂದುಸ್ಥಾನದಲ್ಲಿ ನಮಗೆ ಕಾಣುವದೇನು? ಕೋಮಲ ಹಾಗೂ ಪುಟ್ಟ ಮೂರ್ತಿಯಂತೆ ಕಂಗೊಳಿಸುವ ಮಹಾತ್ಮನು. ಅವನ ಸಂಗಡ ಅವನ ೭೯ ಅನುಯಾಯಿಗಳು ಉರಿಯುವ ಬಿಸಿಲಿನ ಕಿಚ್ಚಿನಲ್ಲಿ ಧೂಳಿ ತುಂಬಿದ ಮಾರ್ಗದಿಂದ ಅವನ ಬೆನ್ನು ಹತ್ತಿ ಹೊರಟು ಕಾಯದೇಭಂಗದ ಸ್ಥಾನಕ್ಕೆ ಸಮುದ್ರತೀರವನ್ನು ಮುಟ್ಟುವದು ಈ ಬಗೆಯ ಮಹಾತ್ಮನ ಕಾರ್ಯದಿಂದ ಒದುಬರಹ ಬಾರದ ಕೋಟಿಗಟ್ಟಲೆ ಜನರು ಸಹ ಎಚ್ಚರರಾಗಿರುವರು. ಅಹಿಂಸಾ ಮಂತ್ರವನ್ನು ಇಷ್ಟು ದೊಡ್ಡ ಪ್ರಮಾಣದಿಂದ ಇಷ್ಟು ಶಕ್ತಿಯಿಂದ ಯಾರೂ ಜನರಲ್ಲಿ ಬಿತ್ತಿದಿಲ್ಲ. ಸರಕಾರವು ಗಾಬರಿಯಾಗಿ ಕುಳಿತುದನ್ನು ನೋಡಿದರೆ ಈ ಮಂತ್ರದ ಶಕ್ತಿಯು ಎಷ್ಟೆಂಬುದು ಗೊತ್ತಾಗುವದು. ಜನತೆಯಲ್ಲಿ ಈ ಬೀಗಿಯು ಹೊತ್ತುತ್ತ ಹೋದೀತೆಂದು ಸರಕಾರವು ಅಂಜಿದೆ. ಆದರೆ ಧರ್ಮಯಾತ್ರೆಗೆ ಹೊರಟ ಈ ಸಾಧುಗಳ ಮೆರವಣಿಗೆಗೆ ಸರಕಾರವು ಕೈ ಹಚ್ಚಲು ಅಂಜಿತು. ಈ ಸಾಧುಗಳ ಮಹಿಮೆಯೇ ಅಷ್ಟು ಪ್ರಭಾವವುಳ್ಳದ್ದಾಗಿದೆ. ಯೇಸೂಕ್ರಿಸ್ತನು ತನ್ನ ಅನುಯಾಯಿಗಳೊಡನೆ ಧರ್ಮಯಾತ್ರೆಗಾಗಿ ಜೆರೂಸಲೇಮ ಎಂಬ ಕ್ರೈಸ್ತರ ಪವಿತ್ರ ಸ್ಥಾನಕ್ಕೆ ಹೋದ ನಂತರ ಜಗತ್ತಿನ ಇತಿಹಾಸದಲ್ಲಿ ಸಂಭವಿಸಿದ ಎರಡನೇ ಉದಾಹರಣೆಯೆಂದರೆ ಈ ಮಹಾತ್ಮರ ಧರ್ಮಯಾತ್ರೆಯೇ ಆಗಿರುವದು.

### ಮೆ ೧೧ ನೇ ತಾರೀಖಿಗೆ ಭಯಂಕರ ಹೋಳಿಯು

ಬರುವ ೧೧ ನೇ ತಾರೀಖು ರವಿವಾರ ದಿನ ನಮ್ಮ ದಾಕ್ಷಿಣ್ಯ ಪ್ರತ್ಯಕ್ಷ ಚಿನ್ಹವಾದ ಪರದೇಶೀ ವಸ್ತ್ರಗಳ ಪ್ರಚಂಡ ಹೋಳಿಯನ್ನು ಕರ್ನಾಟಕದ ಹಳ್ಳಿಹಳ್ಳಿಗಳಲ್ಲಿ ಕೂಡ ಮಾಡಬೇಕೆಂದು ಸತ್ಯಾಗ್ರಹ ಮಂಡಲದ ಅಧ್ಯಕ್ಷರಾದ ಡಾ|| ಹರ್ಡೀಕರರು ವಿಜ್ಞಾಪಿಸುತ್ತಾರೆ. ಆದುದರಿಂದ ಎಲ್ಲ ಜನರು ಒಳ್ಳೇ ಉತ್ಸಾಹದಿಂದ ಆದಿನ ಪರದೇಶೀ ವಸ್ತ್ರಗಳ ಹೋಳಿಯನ್ನು ಮಾಡಬೇಕು.

### ಸಾಂಗಲಿ

ಮಹಾತ್ಮಾ ಗಾಂಧಿಯವರ ಸತ್ಯಾಗ್ರಹದ ಚಳವಳಿಯ ಬಗ್ಗೆ ತಮ್ಮ ಸಹಾನುಭೂತಿಯಿದೆ ಎಂಬದನ್ನು ವ್ಯಕ್ತಗೊಳಿಸುವ ದೆಶ್ಯೋಸ್ಕರ ಒಂದು ಪ್ರಚಂಡ ಸಭೆಸೇರಿ, ಪರದೇಶಿ ಬಟ್ಟೆಯನ್ನು ಇನ್ನು ಮುಂದೆ ತರಿಸಕೂಡದೆಂಬದಾಗಿ ತೀರ್ಮಾನವಾಯಿತು.

### ಲಾಹೋರ

ಕೆಂಪು ಮೋತಿಯ ಶಿಪಾಯರಲ್ಲಿ ಅಪ್ರೀತಿಯನ್ನು ಹುಟ್ಟಿಸುವದಕ್ಕೋಸ್ಕರ ಪ್ರಯತ್ನಗಳು ನಡೆದಿರುವವೆಂಬ ಊಹೆಯಿಂದ, ಈ ಮೊದಲೆ ಕೊಹಿಂಗಾಂಜೇರ ಜಿಲ್ಲೆಯಲ್ಲಿ ಭಾಷಣಮಾಡಿದ ಬಗ್ಗೆ ಹಿಡಿಯಲ್ಪಟ್ಟ ಶ್ರೀ. ಲಾಲಾ ಗೋವರ್ಧನ ಲಾಲ, ಡಾ. ಖಾನಚಂದದೇವ, ಇವರ ಮನೆಗಳು ಮ್ಯಾಜಿಸ್ಟ್ರೇಟರ ಹುಕುಮಿನಾನ್ವಯ ಶೋಧಿಸಲ್ಪಟ್ಟವು. ಆದರೆ ಅಲ್ಲಿ ಅವರಿಗೆ ಏನೂ ದೊರೆಯಲಿಲ್ಲ.

ಲಾಹೋರ ವಿದ್ಯಾರ್ಥಿಗಳ ಸಂಘದ ಪರವಾಗಿ ಲಜಪತರಾಯ ಹಾಲ್‌ದಲ್ಲಿ, ಸಾರ್ವಜನಿಕ ಸಭೆಗೂಡಿ 'ಸ್ವಾತಂತ್ರ್ಯದ ಹೋರಾಟ' ಎಂಬ ವಿಷಯದ ಬಗ್ಗೆ ಭಾಷಣಗಳಾದವು. ವಿದ್ಯಾರ್ಥಿಗಳ ಪರೀಕ್ಷೆ ಮುಗಿದದ್ದರಿಂದ ಈ ಚಳವಳಿಯಲ್ಲಿ ತೀವ್ರ ಧುಮುಕಬೇಕಾಗಿ ತೀರ್ಮಾನವಾಯಿತು. ಈ ವರೆಗೆ ಈ ಸ್ವಾತಂತ್ರ್ಯ ಯುದ್ಧದಲ್ಲಿ ಹಿಡಿಯಲ್ಪಟ್ಟ ಮುಂದಾಳುಗಳ ಅಭಿನಂದನವು ಮಾಡಲ್ಪಟ್ಟಿತು.

### ನವಸಾರಿ.

#### ಅಬಾಸತ್ಯೆಯಬ್ಜಿಯವರು ಮಹಾತ್ಮರ ಸ್ಥಳವನ್ನು ಸ್ವೀಕರಿಸಿದರು

ಬಡೋದಾ ಹಾಯಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಶ್ರೀ ಅಬಾಸ ತಯಾಬ್ಜಿಯವರು ಮಹಾತ್ಮಾ ಗಾಂಧಿಯವರ ಸ್ಥಳವನ್ನು ಸ್ವೀಕರಿಸಲು ಅಹಮ್ಮದಾಬಾದದಿಂದ ಹೋಗಿದ್ದಾರೆ.

### ಅಲಹಾಬಾದ

ಮಹಾತ್ಮರು ಹಿಡಿಯಲ್ಪಟ್ಟ ವಾರ್ತೆಯು ತಿಳಿದೊಡನೆ, ಸಂಪೂರ್ಣ ಹರತಾಳವು ಪಾಲಿಸಲ್ಪಟ್ಟಿತು. ಎಲ್ಲ ಕಡೆಯಲ್ಲಿಯೂ ಅಹಿಂಸಾಮಯ ವಾತಾವರಣವು ಕಂಡುಬರುತ್ತಿತ್ತು. ಇಲ್ಲಿಯ ಕಲೇಕ್ಟರರು ಜನತೆಯ ಶಾಂತತೆಯನ್ನು ನೋಡಿ ಆನಂದವನ್ನು ವ್ಯಕ್ತಗೊಳಿಸಿದರು.

## ಗುಜರಾತದಲ್ಲಿಯ ಸತ್ಯಾಗ್ರಹವು.

### ಬೋರಸಾದ.

ಇಲ್ಲಿ ಉಪ್ಪನ್ನು ತಯಾರಿಸುವ ಸ್ವಯಂಸೇವಕರನ್ನು ಪೋಲೀಸರು ಲಾಠಿಯಿಂದ ಥಳಿಸಿದರು. ಪೋಲೀಸರ ಅತ್ಯಾಚಾರಗಳನ್ನು ಫೋಟೋದಲ್ಲಿ ತೆಗೆಯುವ ಒಬ್ಬನನ್ನು ಪೋಲೀಸರು ಥಳಿಸಿ ಅವನ ಫೋಟೋ ತೆಗೆಯುವ ಯಂತ್ರವನ್ನು ಸಹ ಒಡೆದರು. ಇಲ್ಲಿಯ ಮಾಮಲೇದಾರನಿಗೆ ಮನೆ ಬಿಡಲಿಕ್ಕೆ ಮಾಲಕರು ನೋಟೀಸು ಕೊಟ್ಟಿರುವರು.

## ಮುಂಬಯಿಯಲ್ಲಿ ಎರಡು ದಿವಸಗಳ ಪ್ರಚಂಡ ಹರತಾಳವು

ಮಹಾತ್ಮರನ್ನು ಹಿಡಿದ ಸುದ್ದಿಯು ಊರಲ್ಲೆಲ್ಲ ಗಾಳಿಯು ಹಬ್ಬಿದಂತೆ ಹಬ್ಬಿತು. ಎಲ್ಲಿನೋಡಿದಲ್ಲಿ ಅಂಗಡಿಗಳು ಮುಚ್ಚಿದ್ದವು. ಪೇಟೆಯು ಬಣಗುಡುತ್ತಿತ್ತು. ಎಲ್ಲ ಗಿರಣಿಗಳು ಬಂದು ಇಡಲ್ಪಟ್ಟಿದ್ದವು. ವಾಹನಗಳು ಒಂದೂ ಓಡಾಡುತ್ತಿರಲಿಲ್ಲ. ಎಲ್ಲ ಕಡೆಯಲ್ಲಿಯೂ ಶಾಂತತೆಯು ನೆಲೆಗೊಂಡಿತ್ತು.

## ವಿಚಿತ್ರ ನ್ಯಾಯ

ಗುಜರಾಥದ ತರುಣ ಸಂಘದ ಮುಂದಾಳುಗಳಾದ ಶ್ರೀ ಮೇಗಾನಿ ಯವರು ಬಾರವಾಲಾ ಎಂಬಲ್ಲಿ ಎಪ್ರೀಲ ೨೫ ನೇ ತಾರೀಖಿನ ದಿವಸ ಭಾಷಣಮಾಡಿದರೆಂಬ ಆರೋಪ ಹೊರಿಸಿ ಅವರಿಗೆ ಸಜೆ ಕೊಟ್ಟಿರುವರು. ಆದರೆ ಅವರು ಆ ಹೊತ್ತು ರಾಣಪುರದಲ್ಲಿ ತಮ್ಮ ಮನೆಯಲ್ಲಿ ಮಲಗಿಕೊಂಡಿದ್ದರೆಂದು ಸೌರಾಷ್ಟ್ರ ಎಂಬ ಪತ್ರದಲ್ಲಿ ಎಂಟು ಜನ ಮುಖಂಡರು ಸರಕಾರಕ್ಕೆ ತಿಳಿಸಿರುವರು. ಪೋಲಿಸರ ಸಾಕ್ಷಿಯ ಮೇಲಿಂದ ಶಿಕ್ಷೆ ಕೊಟ್ಟರಂತೆ.

## ಹಾವೇರೀ ಮುನಸಿಪಾಲಿಟಿಯ ಕಟ್ಟಡದ ಮೇಲೆ ರಾಷ್ಟ್ರಧ್ವಜವು,

ಧಾರವಾಡ ಜಿಲ್ಹೆಯ ಹಾವೇರೀ ಮುನಸಿಪಾಲಿಟಿಯ ಕಟ್ಟಡದ ಮೇಲೆ ಮತ್ತು ಮುನಸಿಪಾಲಿಟಿ ಹಾಯಸ್ಕೂಲಿನ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನೇರಿಸಬೇಕೆಂಬ ಠರಾವು ೨ ನೇ ತಾರೀಖಿನ ದಿವಸ ಪಾಸಾಯಿತು. ಮತ್ತು ಖಾದಿಯನ್ನು ಧರಿಸುವ ಮುನಸಿಪಾಲಿಟಿಯ ನವಕರರಿಗೆ ಮೊದಲು ಬಡತಿಯನ್ನು ಕೊಡಬೇಕೆಂತಲೂ ನಿರ್ಣಯಿಸಲಾಗಿದೆ. ಮೊದಲನೆಯ ನಿರ್ಣಯದ ಪ್ರಕಾರ ೪ ನೇ ತಾರೀಖಿನ ದಿವಸ ರಾಷ್ಟ್ರಧ್ವಜದ ಪ್ರಚಂಡ ಮೆರವಣಿಗೆಯು ಹೊರಟು ಊರನ್ನೆಲ್ಲ ಸುತ್ತಿಬಂದು ಮ್ಯುನಸಿಪಾಲಿಟಿಯ ಕಟ್ಟಡದ ಮೇಲೆ ಏರಿಸಲಾಯಿತು. ಧಾರವಾಡ ಮುನಸಿಪಾಲಿಟಿಯಲ್ಲಿ ಈ ವಿಷಯದ ವಿಚಾರವು ನಿನ್ನೆ ದಿನ ನಡೆಯುವದಿತ್ತು. ಈ ನಿರ್ಣಯವು ಪಾಸಾಗದಿದ್ದರೆ ಇದಕ್ಕಾಗಿ ಸತ್ಯಾಗ್ರಹವನ್ನು ಹೂಡುವ ನಿಶ್ಚಯವಾಗಿದೆ. ಆದರೆ ಬಾಗಲಕೋಟೆಯವರು. ..................(೦)

### ಸರಕಾರದ ಉಪ್ಪಿನ ಮಾಳಿಯ ಮೇಲೆ ದಾಳಿ

ಮುಂಬಯಿಯ ೧೭ ಸತ್ಯಾಗ್ರಹಿಗಳು ಭಾಂಡಪ(ಠಾಣಾ)ದಲ್ಲಿರುವ ಸರಕಾರೀ ಉಪ್ಪಿನ ಮಾಳಿಯನ್ನು ೨ ನೇ ತಾ|| ದಿನ ಮುತ್ತಿದ್ದರಿಂದ ಅವರೆಲ್ಲರೂ ಬಂಧಿಸಲ್ಪಟ್ಟರು.

ಆಗ ಅವರ ಹತ್ತರ ೫ ಮಣ ೩ ಸೇರು ಉಪ್ಪು ಇದ್ದಿತು. ಮಧ್ಯಾಹ್ನ ರೆಸಿಡೆಂಟ ಮ್ಯಾಜಿಸ್ಟ್ರೇಟರ ಮುಂದೆ ಅವರೆಲ್ಲರೂ ತರಲ್ಪಟ್ಟರು. ಆದರೆ ಜಿಲ್ಹಾ ಕಲೇಕ್ಟರರ ಅಪ್ಪಣೆಯ ಮೇರೆಗೆ ಪೋಲೀಸರು ಖಟ್ಲೆಯನ್ನು ತಿರುಗಿ ತಕ್ಕೊಂಡು ಎಲ್ಲ ಸ್ವಯಂಸೇವಕರು ಬಿಡಲ್ಪಟ್ಟರು. ಉಪ್ಪು ಮಾತ್ರ ಉಪ್ಪಿನ ಅಧಿಕಾರಿಗಳಿಗೆ ಕೊಡಲಾಯಿತು.

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ
ವಿದ್ಯಾರ್ಣವ ಮುದ್ರಾ ಶಾಲೆಯಲ್ಲಿ ಮುದ್ರಿತವಾಗಿ ಅವರಿಂದಲೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ಬೆಲೆ ೦-೦-೩

ಜಯ ಕರ್ನಾಟಕ

ನಿತ್ಯಸಂಚಿಕೆಯು.

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರುः— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ಶುಕ್ರವಾರ ಮಿತಿ ವೈಶಾಖ ಶುದ್ಧ ೧೧ ಶಕೆ ೧೮೫೨ ತಾ ೯-೫-೩೦ ಸಂಚಿಕೆ ೪೩

## ಮಹಾತ್ಮರ ಸಂದೇಶ

ಪರರ ಪ್ರಾಣಗಳನ್ನು ಹಿಂಸೆ ಮಾಡದೆ ನಿಮ್ಮ ಪ್ರಾಣಗಳನ್ನೇ ಆಹುತಿ ಹಾಕಿರಿ. ಆಮೇಲೆ ಹಿಂದುಸ್ಥಾನದಲ್ಲಿ ಸ್ವರಾಜ್ಯವು ಸ್ಥಾಪಿಸಲ್ಪಡುವದು.

ನನ್ನ ಸಂದೇಶದಂತೆ ಜನರು ಆಚರಿಸುತ್ತಿರುವರು. ಮಧ್ಯರಾತ್ರಿಯವರೆಗೆ ನನಗೆ ತಿಳಿದು ಬಂದ ಸಂಗತಿಗಳ ಮೇಲಿಂದ ಜನರು ನನ್ನ ಸಂದೇಶವನ್ನು ಕೃತಿಯಲ್ಲಿ ತಂದಿರುವರೆಂದು ಗೊತ್ತಾಗುವದು. ಗುಜರಾಥದಲ್ಲಿ ಸ್ತ್ರೀಯರು ಪುರುಷರು ಎಲ್ಲರೂ ಎಚ್ಚರರಾಗಿರುವರು. ಅಟ್ಟ ಮತ್ತು ಭೀಮರಾಡ ಗ್ರಾಮಗಳಲ್ಲಿ ನಿರ್ಭಯದಿಂದ ಸ್ತ್ರೀಪುರುಷರೆಲ್ಲರೂ ಸತ್ಯಾಗ್ರಹವನ್ನು ಮಾಡಿದುದನ್ನು ನಾನು ಪ್ರತ್ಯಕ್ಷ ನೋಡಿದ್ದೇನೆ. ಸಾವಿರಾರು ಜನರು ಕೂಡಿದ್ದರೂ ಸಹ ದುರ್ನಡತೆಯನ್ನೂ ದುರ್ವ್ಯಾಪಾರವನ್ನೂ ಯಾರೂ ಮಾಡಲಿಲ್ಲ. ಸರಕಾರದ ನವಕರರು ಮಾತ್ರ ಮೇರೆ ದಪ್ಪಿ ನಡೆಸಿದರು. ಸ್ವರಾಜ್ಯದ ಈ ಶುಭೋದಯವು ಜಗತ್ತಿನ ಲ್ಲಿಯೇ ಒಂದು ಪಾಠವಾಗಿರುವದು.

## ಸ್ವರಾಜ್ಯ ಮಂತ್ರ

ಪರರಿಗೆ ಹಿಂಸೆ ಮಾಡದೆ ಸ್ವಾರ್ಥತ್ಯಾಗದಿಂದ ತಾನು ಬಂದ ಕಷ್ಟಗಳನ್ನು ಸಹಿಸುವದೇ ಸ್ವರಾಜ್ಯ ಮಂತ್ರವು. ಈ ಮಂತ್ರವನ್ನು ಎಲ್ಲರೂ ಜಪಿಸಿರಿ.

## ದೇವರೇ ಸೂತ್ರಧಾರನು.

ಒಂದು ಮುಷ್ಟಿ ಉಪ್ಪಿನಲ್ಲಿ ರಾಷ್ಟ್ರದ ಸ್ವಾಭಿಮಾನವೂ ಸರ್ವಸ್ವವೂ ಅಡಕವಾಗಿದೆ. ಸರಕಾರದವರು ಮುಷ್ಟಿಯನ್ನು ಮುರಿದರೂ ಚಿಂತೆಯಿಲ್ಲ ಅದರೊಳಗಿನ ಉಪ್ಪು ಮಾತ್ರ ಯಾರೂ ಕೊಡಬಾರದು. ಸರಕಾರವು ಸವಿನಯದಿಂದ ಯುದ್ಧ ಮಾಡುವದಾದರೆ, ಸ್ವತಂತ್ರ ಉಪ್ಪನ್ನು ತಯಾರಿಸುವ ಎಲ್ಲರನ್ನು ಹಿಡಿದು ಹಾಕಲಿ ಸತ್ಯಾಗ್ರಹಿಯ ಕೈಯಲ್ಲಿನ ಉಪ್ಪನ್ನು ಉದ್ಧಟತನದಿಂದ ಕಸಿದುಕೊಳ್ಳುವದೆಂದರೆ ಹಿಂದುಸ್ಥಾನಕ್ಕೆ ಅಪಮಾನಮಾಡಿದಂತೆ!! ಸತ್ಯಾಗ್ರಹಿಗಳು ಈ ಉನ್ಮತ್ತತನಕ್ಕೆ ಸಿಟ್ಟಿಗೇಳದೆ, ಸೇಡು ತೀರಿಸಿಕೊಳ್ಳಲು ಯತ್ನಿಸದೆ, ಪರಮಾತ್ಮನ ಸ್ಮರಣಮಾಡುತ್ತ ಸಹಿಸಿಕೊಳ್ಳಬೇಕು. ನನ್ನನ್ನು ಹಿಡಿದರೆ ನನ್ನ ಅನುಯಾಯಿಗಳು ಅಂಜುವ ಕಾರಣವಿಲ್ಲ.

ಈ ಸ್ವಾತಂತ್ರ್ಯ ಯುದ್ಧದ ಸೂತ್ರಧಾರನು ನಾನಲ್ಲ. ಪರಮಾತ್ಮನೇ ಈ ಯುದ್ಧವನ್ನು ನಡೆಸಿರುವನು. ನಾವೆಲ್ಲರೂ ಅವನ ಕೈಯಲ್ಲಿಯ ಗೊಂಬೆಗಳು. ನಮ್ಮೆಲ್ಲರ ಹೃದಯದಲ್ಲಿ ಅವನು ವಾಸಿಸುತ್ತಿರುವನು. ಅವನ ವಿಷಯವಾಗಿ ನಮ್ಮಲ್ಲಿ ನಿಜವಾದ ವಿಶ್ವಾಸವಿದ್ದುದಾದರೆ, ಅವನೇ ಈ ಸ್ವಾತಂತ್ರ್ಯ ಯುದ್ಧವನ್ನು ಮುಂದಕ್ಕೆ ಸಾಗಿಸುವನು.

## ಜನತೆಯ ಕಾರ್ಯ

ಸಾವಿರಾರು ಜನರು ಉಪ್ಪಿನ ಕಟ್ಟಳೆಯನ್ನು ಮುರಿಯಲಿ ಶರೆ ಸಿಂದೀ ಅಂಗಡಿಗಳನ್ನು ಬಂದುಮಾಡಿರಿ. ನೂಲು ತೆಗೆಯಲಿ ಪರದೇಶೀ ಬಟ್ಟೆಗಳ ಹೋಳೀ ಮಾಡಲಿ. ವಿದ್ಯಾರ್ಥಿಗಳು ಶಾಲೆಗೆ ಶರಣು ಹೊಡೆಯಲಿ. ಸರಕಾರೀ ಕೆಲಸಗಾರರು ರಾಜೀನಾಮೆ ಕೊಡಲಿ. ಜನತೆಯು ಸೇವೆಯನ್ನು ಮಾಡಲಿ. ಇಷ್ಟೆಲ್ಲ ಕಾರ್ಯವನ್ನು ಮಾಡಿದರೆ ನಾವು ಪೂರ್ಣ ಸ್ವರಾಜ್ಯವನ್ನು ನಿಶ್ಚಯವಾಗಿ ಸಂಪಾದಿಸುವೆವು

## ದಿಲ್ಲಿಯಲ್ಲಿ ಗುಂಡುಗಳ ಸುರಿಮಳೆ

### ೬ ಮಂದಿ ಸತ್ತರು ೭೦ ಜನರು ಗಾಯ ಹೊಂದಿರುವರು.

ಊರ ತುಂಬೆಲ್ಲ ಹರತಾಳವು ಆಯಿತು. ಕಾಂಗ್ರೆಸ ಮುಂದಾಳುಗಳು ಊರಲ್ಲೆಲ್ಲ ಹರತಾಳವನ್ನು ಮಾಡಲು ಜನರಿಗೆ ಹೇಳಿದರು, ಕೆಲವು ಕಡೆಯಲ್ಲಿ ಜನರಿಂದ ಅಂಗಡಿಗಳನ್ನು ಇಕ್ಕಿಸುವ ಕಾಲಕ್ಕೆ ಹೂಲಿ ಎದ್ದಿತು. ಡೆಪ್ಯುಟಿ ಕಮಿಶನರ ಹಾಗೂ ಪೋಲೀಸ ಸಾಹೇಬರ ಮ್ಯಾ ಮೇಲೆ ಜನರು ಹೋದರು. ಜನರ ಮೇಲೆ ಗುಂಡುಗಳು ಹಾರಿಸಲ್ಪಟ್ಟವು ಪೋಲೀಸರು ಲಾಠಿಯಿಂದ ಜನರನ್ನು ಥಳಿಸಿದರು. ಚಾಂದಣಿ ಚೌಕದಲ್ಲಿ ಮೋಟಾರುಗಳ ಮೇಲೆ ಕಲ್ಲುಗಳು ಒಗೆಯಲ್ಪಟ್ಟವು. ಶೀಖರ ಗುರುದ್ವಾರದೊಳಗಿಂದಲೂ ಕಲ್ಲುಗಳು ಒಗೆಯಲ್ಪಟ್ಟವು. ಪೋಲೀಸರು ಗುಂಡು ಹಾರಿಸಿ ಜನರನ್ನು ಚದರಿಸಿದರು ಶಸ್ತ್ರಾಸ್ತ್ರಬದ್ಧ ಮೋಟಾರುಗಳು ಅಷ್ಟರಲ್ಲಿಯೇ ಬಂದವು. ಆದರೆ ಅವುಗಳ ಉಪಯೋಗವಾಗಲಿಲ್ಲ. ಪೋಲೀಸರು ಗುರುದ್ವಾರದಲ್ಲಿ ಒಳನುಗ್ಗಿದರು. ಸೈನ್ಯವನ್ನೂ ತಂದಿಟ್ಟಿರುವರು ಐದು ಜನರಿಗಿಂತ ಹೆಚ್ಚು ಜನರು ಕೂಡಬಾರದು, ಎಂಬ ಕಾಯದೆಯು ಅಮಲಿನಲ್ಲಿ ಬಂದಿದೆ.

### ಧಾರವಾಡ

ಶ್ರೀಯುತ ಜೋಗ ವಿಶ್ವನಾಥರಾಯರು, ವ್ಹಾಯಿಸರಾಯರಿಗೆ, ಗಲ್ಬಲೆಕೆಯನ್ನು ನಿಷೇಧಿಸಿ ಪತ್ರ ಬರೆದು, ಕಾಯಿದೆ ಮಂಡಳದ ಸ್ಥಳಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ.

೬—೫—೩೦ ನೇ ದಿನಸ ಕೂಡಿದ ನಗರಸಭೆಯ ಸಾಧಾರಣ ಸಭೆಯಲ್ಲಿ ಶ್ರೀ|| ಜೋಗರು ಅಧ್ಯಕ್ಷರಾಗಿಯೂ, ಡಾ|| ತಿರಹಟ್ಟಿಯವರು ಉಪಾಧ್ಯಕ್ಷರಾಗಿಯೂ, ಶ್ರೀ. ಕಬ್ಬೂರವರು ಸ್ಟ್ಯಾಂಡಿಂಗ ಕಮಿಟಿಯ ಚೇರಮನ್ನರಾಗಿಯೂ ಆರಿಸಲ್ಪಟ್ಟರು. ಸಂಜೆಯಲ್ಲಿ ಇವರ ಸನ್ಮಾನಾರ್ಥವಾಗಿ ನಗರಸಭೆಯ ಕಟ್ಟಡದಲ್ಲಿ ನಾಗರಿಕರ ಸಭೆಸೇರಿತ್ತು. ಶ್ರೀ. ಜೋಶಿ ವಿನಾಯಕರಾಯರು ಅಧ್ಯಕ್ಷರಾಗಿದ್ದರು.

ಅಧ್ಯಕ್ಷ, ಉಪಾಧ್ಯಕ್ಷ ಮೊದಲಾದವರನ್ನು ಆರಿಸುವ ಕುರಿತು ೫ ನೇ ತಾರೀಖಿಗೆ ನಗರಸಭೆಯ ಸಾಧಾರಣ ಸಭೆಯು ಕೂಡತಕ್ಕದ್ದಿತ್ತು. ಮ|| ಗಾಂಧಿಯವರನ್ನು ಹಿಡಿದದ್ದಕ್ಕಾಗಿ ಅದು ಮುಂದೆ ಹಾಕಲ್ಪಟ್ಟಿತು. ಆದು ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು.

ಶ್ರೀ ಶಾಂತೇಶ ವಾಚನಾಲಯ, ನಗರ ಸಭೆಯ ರಾಷ್ಟ್ರಧ್ವಜ ಸತ್ಯಾಗ್ರಹ ಮಂಡಳ ಮೊದಲಾದ ಸಂಸ್ಥೆಗಳು ಪೂಮಾಲೆಗಳನ್ನರ್ಪಿಸಿದ್ದಲ್ಲದೆ, ನಗರ ಸಭೆಯ ರಾಷ್ಟ್ರಧ್ವಜ ಸತ್ಯಾಗ್ರಹ ಮಂಡಳದವರು ನಗರಸಭೆಯ ಮೇಲೆ ಸದಾಸರ್ವದಾ ಹಚ್ಚಲು ಒಂದು ರಾಷ್ಟ್ರಧ್ವಜವನ್ನು ಶ್ರೀ. ಜೋಗರವರಿಗೆ ಅರ್ಪಿಸಿದರು. ಇಂದು ಒಂದು ಪ್ರಚಂಡ ಮೆರವಣಿಗೆಯು ರಾಷ್ಟ್ರಧ್ವಜಸಹಿತವಾಗಿ ಊರೊಳಗೆಲ್ಲ ಸಂಚರಿಸುವದು. ಮತ್ತು ಸಂಜೆಯಲ್ಲಿ ನಗರಸಭೆಯ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ಹಚ್ಚುವ ಸಮಾರಂಭವು ಜರಗುವದು.

### ಗಲಗಲಿ

ಮಹಾತ್ಮಾಜಿಯವರನ್ನು ಬಂಧಿಸಿದ್ದಕ್ಕಾಗಿ ನಿನ್ನಿನ ದಿನ ಗಲಗಲಿಯಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟು ಸಾಯಂಕಾಲ ಜಾಹೀರ ಸಭೆಯು ಕೂಡಿತ್ತು. ಶ್ರೀ. ಗೋರೆ ಸುಬ್ಬಣಾಚಾರ್ಯ, ಹಮ್ಮಣ್ಣಪ್ಪ ಕುಚಣ್ಣವರ ಮುಂತಾದ ಮಹನೀಯರ ಭಾಷಣಗಳಾದವು. ಅನಂತರ ಪರದೇಶೀ ಅರಿವೆಗಳ ಪ್ರಚಂಡ ಹೋಳಿಯಾಗಿ ಸಭೆ ವಿಸರ್ಜಿಸಲಾಯಿತು.

ಗಣೆಯ ಶ್ರೀ. ಶಂಕರ ಹಣಮಂತರೆಂಬವರು ಕುಲಕರ್ಣಿ ಗೌಡಕಿ ಕೆಲಸಕ್ಕೆ ಈ ಮೊದಲೇ ರಾಜೀನಾಮೆ ಕೊಟ್ಟಿದ್ದರಷ್ಟೇ? ಅವರ ಸ್ಥಳದಲ್ಲಿ ನೇಮಿಸಲ್ಪಟ್ಟ ಶ್ರೀ. ಗೋವಿಂದಪ್ಪ ಚಿಕ್ಕಲಕಿ ಮತ್ತು ಶಿವಪ್ಪ ತೆಗ್ಗಿಯವರು ಅನುಕ್ರಮವಾಗಿ ಗೌಡ ಮತ್ತು ಕುಲಕರ್ಣಿಯರಾಗಿ ನೇಮಿಸಲ್ಪಟ್ಟಿದ್ದರು. ಆದರೆ ಈಗ ಇವರಿಬ್ಬರೂ ಮುಂದೆ ಬಂದು ತಮ್ಮ ವತನಕ್ಕೆ ಶರಣು ಹೊಡೆದು ರಾಷ್ಟ್ರಕಾರ್ಯಕ್ಕೆ ಸಿದ್ಧರಾಗಿದ್ದಾರೆ ಸ್ತುತ್ಯವು! ಗಲಗಲಿಯ ಶ್ರೀ. ಸುಬಣಾಚಾರ್ಯ ಗೋರೆಯವರನ್ನು ಪಿನಲ್ ಕೋಡಿನ ೧೧೭ ಮತ್ತು ಉಪ್ಪಿನ ಕಾಯಿದೆಯ ೪೭ ನೇ ಕಲಮುಗಳನ್ವಯ ಹಿಡಿದು ಬೀಳಗಿಗೆ ತಂದಿದ್ದಾರೆ. ಖಟ್ಲೆಯ ವಿಚಾರಣೆಯು ಈದಿನ ನಡೆಯುವದು.

### ಇಲಕಲ್ಲ

ಯಶಸ್ವಿಯಾದ ಹರತಾಳವು ಪಾಲಿಸಲ್ಪಟ್ಟಿತು. ಊರಲ್ಲಿ ಒಂದು ಲಾಳಿಯ ಶಬ್ದವೇನು ಕೇಳಬರುವಂತಿದ್ದಿಲ್ಲ ಎಲ್ಲ ಮಗ್ಗದವರು ತಮ್ಮ ಲಾಳಿಗಳನ್ನು ಕೆಳಗೊಗೆದು ಮಹಾತ್ಮರ ಚಿತ್ರಪಟವನ್ನು ಊರಂತೂರೆಲ್ಲ ಮೆರೆಯಿಸುವದರಲ್ಲಿಯೂ ಗಾಂಧಿಜಿಯವರ ಜಯಜಯಕಾರ ಮಾಡುವದರಲ್ಲಿಯೂ ಇಡೀ ದಿವಸ ಕಳೆದು ಸಾಯಂಕಾಲಕ್ಕೆ ಪ್ರಚಂಡಸಭೆ ಕೂಡಿದರು. ಸಭೆಯಲ್ಲಿ ಶ್ರೀ. ಕಟ್ಟಿ ಆಚಾರ್ಯರೂ, ಜಾಕಗೀರದಾರರೂ ಸ್ಫೂರ್ತಿಪರ ಭಾಷಣಮಾಡಿದರು.

### ಗುಳೇದಗುಡ್ಡ

ತಾ|| ೬-೫-೩೦ ನೇ ದಿನ ಮುನಸಿಪಾಲಿಟಿಯ ಹತ್ತಿರದ ಬೈಲಿನಲ್ಲ ಪ್ರಚಂಡ ಜನಸಮುದಾಯದ ಜಾಹೀರ ಸಭೆ ಕೂಡಿತ್ತು. ಮಹಾತ್ಮಾಜಿಯವರನ್ನು ಬಂಧಿಸಿದ್ದಕ್ಕಾಗಿ ಬ್ರಿಟಿಶ್ ಸರಕಾರದ ಕೃತಿಯ ನಿಷೇಧವನ್ನು ವ್ಯಕ್ತಪಡಿಸಿತು. ಶ್ರೀ ತಿಪ್ಪಣ್ಣಶಾಸ್ತ್ರಿ ಇವರು ಸದ್ಯಸ್ಥಿತಿಯ ಮೇಲೆ ಬಹು ಸುಶ್ರಾವ್ಯವಾದ ಭಾಷಣವನಾಡಿದರು ಮುನಸಿಪಾಲಿಟಿಯ ಹತ್ತರಿದ್ದ ಬೈಲಿಗೆ ಇನ್ನು ಮುಂದೆ 'ಮಹಾತ್ಮಾ ಗಾಂಧಿ ಚೌಕ' ಎಂದು ಹೆಸರಿಡಬೇಕಾಗಿ, ಶ್ರೀ|| ಬಾಗಲೂಕರರವರು ಸೂಚಿಸಿದರು. ಇದಕ್ಕೆ ಎಲ್ಲ ಜನರ ಸಮ್ಮತಿ ದೊರೆತಿತು. ಪರದೇಶಿ ಬಟ್ಟೆಗಳ ಹೋಳಿಯಾಯಿತು. ಅಪೂರ್ವ ಹರತಾಳವು ಪಾಲಿಸಲ್ಪಟ್ಟಿತು. ಸಭೆಗೆ ೭-೮ ಸಾವಿರ ಜನರು ನೆರೆದಿದ್ದರು.

ಕಮತಗಿ—ಜವಾಬು ದಸ್ತೆಗಳು ಕೂಡುವ ಬೈಲಜಾಗೆಯಲ್ಲಿ ಸಭೆಯನ್ನು ಕೂಡಿಸಬಾರದಾಗಿ ಶ್ರೀ. ಬಾಗಲೂಕರರಿಗೆ ನೋಟೀಸು ಕೊಟ್ಟಿರುತ್ತಾರಾಗಿ ತಿಳಿಯುತ್ತದೆ.

### ಬೀಳಗಿ

ಮಹಾತ್ಮರನ್ನು ಹಿಡಿದ ಸುದ್ದಿಯು ತಿಳಿದಕೂಡಲೇ ಊರಲ್ಲಿ ಸಂಪೂರ್ಣ ಹರತಾಳವು ಪಾಲಿಸಲ್ಪಟ್ಟಿತು. ಊರಲ್ಲಿಯ ಅಂಗಡಿ ಕೆಲ್ಲವು ಮುಚ್ಚಲ್ಪಟ್ಟಿದ್ದವು ಸಂಜೆಯ ಮುಂದೆ ಮಹಾತ್ಮರ ಭಾವಚಿತ್ರದೊಂದಿಗೆ ಯುವಕರ ಪ್ರಚಂಡ ಮೆರವಣಿಗೆಯಾಯಿತು. ನಮ್ಮ ವಿದ್ಯಾರ್ಥಿ ಬಾಂಧವರು ಖಾದಿಯನ್ನು ಧರಿಸುವ ನಿಶ್ಚಯಮಾಡಿದಂತೆ ತಿಳಿಯುತ್ತದೆ.

## ಮುಂಬಯಿಯ ವ್ಯಾಪಾರಸ್ಥರು ಸರಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ!

ಮುಂಬಯಿಯಲ್ಲಿ ವ್ಯಾಪಾರಸ್ಥರ ೧೪ ಮುಖ್ಯ ಸಂಘಗಳ ಪ್ರತಿನಿಧಿಗಳ ಸಭೆಸೇರಿ ಮಹಾತ್ಮಾಜಿಯವರನ್ನು ಬಂಧಿಸಿದ್ದಕ್ಕಾಗಿ ಸರಕಾರದ ಕೃತಿಯನ್ನು ನಿಷೇಧಿಸಲಾಯಿತು. ಹಿಂದುಸ್ತಾನ ವ್ಯಾಪಾರಸ್ಥರ ಸಂಘದ ವತಿಯಿಂದ ಅಸೆಂಬ್ಲಿ ಹಾಗೂ ಕೌನ್ಸಿಲುಗಳಲ್ಲಿರುವ ಸಭಾಸದರು ಕೂಡಲೇ ರಾಜೀನಾಮೆ ಕೊಡಬೇಕೆಂದು ನಿರ್ಣಯಿಸಲಾಯಿತು. ವ್ಯಾಪಾರಸ್ಥರು ಸ್ವಾತಂತ್ರ್ಯ ಯುದ್ಧದಲ್ಲಿ ಸೇರಲೇಬೇಕೆಂದು ಮಾರವಾಡಿಗಳು ನಿರ್ಣಯಿಸಲಾಯಿತು.

# ನರೀಮನ್ನರು ಬಂಧಮುಕ್ತರಾದರು.

ಮುಂಬಯಿಯ ಪ್ರಸಿದ್ಧ ಮುಂದಾಳುಗಳಾದ ಶ್ರೀ. ನರೀಮನ್ನರು ನಿನ್ನೆ ದಿನ ಬಂಧಮುಕ್ತರಾದರು. ಮುಂಬಯಿಗೆ ಆಗಮಿಸಿದ ಶ್ರೀ ವಿಠ್ಠಲಭಾಯಿ ಪಟೇಲರ ಸ್ವಾಗತದ ನಿಮಿತ್ತ ಊರೆಲ್ಲ ಶೃಂಗರಿಸಲ್ಪಟ್ಟಿತ್ತು. ಪಟೇಲರ ಮೆರವಣಿಗೆಯು ಊರೊಳಗಿನ ಮುಖ್ಯ ಮುಖ್ಯ ಬೀದಿಗಳನ್ನು ಸುತ್ತಿ ಕಾಂಗ್ರೆಸ ಮಂದಿರಕ್ಕೆ ಬಂದು ತಲ್ಪಿತು. ಸಾಯಂಕಾಲ ಪ್ರಚಂಡ ಸಭೆಗೂಡಿ ಮುಖಂಡರ ಭಾಷಣಗಳಾದವು. ವೀರರಿಬ್ಬರ ಆಗಮನಕ್ಕಾಗಿ ಊರೆಲ್ಲೆಲ್ಲ ಉತ್ಸಾಹವು ತುಂಬಿತುಳುಕುತ್ತಲಿದೆ.

---

## ಬೆಳಗಾಂವಿಯ ಸ್ಥಿತಿಯು

ಮಹಾತ್ಮಾಜಿಯವರ ಬಂಧನದ ನಿಮಿತ್ತವಾಗಿ ಬೆಳಗಾಂವಿಯಲ್ಲಿ ಮೂರು ದಿನಗಳ ವರೆಗೆ ಸಂಪೂರ್ಣ ಹರತಾಳವು ಪಾಳಿಸಲ್ಪಟ್ಟಿತು. ಜನರಿಗೆ ಪಲ್ಲೆ ಕಾಯಿಗಳು ಕೂಡ ಸಿಕ್ಕಲಿಲ್ಲ ದಿನಾಲು ಪ್ರಚಂಡ ಮೆರವಣಿಗೆಯು ಊರನ್ನೆಲ್ಲ ಸುತ್ತಿಬರಹತ್ತಿದೆ. ಮೆರವಣಿಗೆಯಲ್ಲಿ ಅನೇಕ ಸ್ತ್ರೀಯರು ಭಾಗತೆಗೆದುಕೊಳ್ಳಹತ್ತಿರುವರು. ಪ್ರತಿದಿವಸ ಪ್ರಚಂಡ ಸಭೆ ಕೂಡಹತ್ತಿದೆ. ಈ ಸ್ವಾತಂತ್ರ್ಯಯುದ್ಧವನ್ನು ಮುಂದುವರಿಸಲು ಜನರು ನಿಶ್ಚಯಿಸಿದ್ದಾರೆ ಮುರಗೋಡದಲ್ಲಿ ೨ ದಿನಗಳ ವರೆಗೆ ಸಂಪೂರ್ಣ ಹರತಾಳ ಜಿಲ್ಲೆಯ ಎಲ್ಲ ಹಳ್ಳಿಗಳಲ್ಲಿ ಒಕ್ಕಲಿಗರು ಕೂಡ ತಮ್ಮ ಕೆಲಸವನ್ನು ಬಿಟ್ಟು ಜಾಹೀರ ಸಭೆಯನ್ನು ಕೂಡಿದರು ಬೆಳಗಾಂವಿಯಲ್ಲಿ ಸತ್ಯಾಗ್ರಹ ಸ್ವಯಂಸೇವಕರಾದ ಶ್ರೀ. ಅನಂತ ಅಣ್ಣಾಜಿ ಚಿಕ್ಕೋಡಿ, ಡಾ ಕಲ್ಲೋಳಿ, ಅಣ್ಣಾಪ್ಪ ಕೋಟನೂರ, ಸಿದ್ಧಾಂತಿಯವರು ಹಿಡಿಯಲ್ಪಟ್ಟಿದ್ದಾರೆ ಅಥಣಿಯ ಬಿಲ್ಲಿನ ವಿಚಾರಣೆಯು ನಿನ್ನಿನ ದಿವಸ ನಡೆಯುವದಿತ್ತು. ೭ ನೇ ತಾರೀಖಿನ ದಿವಸ ಕೂಡಿದ ಸಾರ್ವಜನಿಕ ಸಭೆಗೆ ೮೦೦೦ ಜನರು ಕೂಡಿದ್ದರು. ೩೦೦ ಹೆಣ್ಣುಮಕ್ಕಳು ಬಂದಿದ್ದರು ಸಭೆಯಲ್ಲಿ ಅನೇಕ ಸ್ತ್ರೀಯರು ತಮ್ಮ ಆಭರಣಗಳನ್ನು ಸತ್ಯಾಗ್ರಹ ಫಂಡಿಗಾಗಿ ಅರ್ಪಿಸಿದರು. ೨೦೦ ರೂ. ಬೆಲೆಬಾಳುವ ಬಂಗಾರದ ಉಂಗುರಗಳು ಕೊಡಲ್ಪಟ್ಟಿವೆ. ಸಭೆ ನಡೆದಾಗ್ಗೆ ಮಳೆಯು ಸುರಿಯುತ್ತಿದ್ದರೂ ಜನರು ಸ್ವಲ್ಪಾದರೂ ಕದಲದೆ ಸಭೆ ಮುಗಿಯುವ ವರೆಗೆ ತಟಸ್ಥರಾಗಿ ಕುಳಿತಿದ್ದರು. ಊರಲ್ಲೆಲ್ಲ ಸಂಪೂರ್ಣ ಶಾಂತತೆಯು ನೆಲೆಗೊಂಡಿದೆ.

---

## ಮಹಾತ್ಮರು ವ್ಹಾಯಿಸರಾಯರಿಗೆ ಬರೆದ ಎರಡನೇ ಪತ್ರದ ಸಾರಾಂಶವು

ಪ್ರಿಯಮಿತ್ರರೇ, — ದೇವರ ದಯೆ ಇದ್ದರೆ ನನ್ನ ಅನುಯಾಯಿಗಳೊಡನೆ ಧರ್ಸನಾ ಎಂಬಲ್ಲಿಗೆ ಹೋಗಿ ಅಲ್ಲಿಯ ಉಪ್ಪಿನ ಆಗರಗಳನ್ನು ಕೈವಶಮಾಡಿಕೊಳ್ಳುವ ಉದ್ದೇಶವುಂಟು.

ನಿಮಗೆ ಇದನ್ನು ತಡೆಹಾಕಬೇಕಾದರೆ ಮೂರು ಮಾರ್ಗಗಳುಂಟು:

೧) ಉಪ್ಪಿನ ಕರವನ್ನು ತೆಗೆದು ಹಾಕುವದು.

೨) ನನ್ನನ್ನೂ ಮತ್ತು ನನ್ನ ಅನುಯಾಯಿಗಳನ್ನೂ ಹಿಡಿದು ಹಾಕುವದು.

೩) ಹೂಲಿಯಿಂದ (ಎಲ್ಲರನ್ನೂ ಬಿದರಿಸುವದು)

### ಪೋಲೀಸರ ಗೊಂದಲವು

ನಾನು ಗುಜರಾತದಲ್ಲಿ ಮನಗಂಡಂತೆ ಬೇರೆ ಪ್ರಾಂತಗಳಲ್ಲಿಯೂ ಪೋಲೀಸರಿಂದ ಸತ್ಯಾಗ್ರಹಿಗಳು ಪೀಡಿಸಲ್ಪಟ್ಟಸುದ್ದಿಗಳು ನನ ಕೈ ಸೇರಿವೆ.

### ಕರಾಚಿ, ಪೇಶಾವರ, ಮದ್ರಾಸ ದಂಗೆಗಳು

ಪೋಲೀಸರ ಅತ್ಯಾಚಾರಗಳನ್ನೂ ಅಧಿಕಾರಿಗಳ ಸುಳ್ಳುತನವನ್ನೂ ಸ್ಪಷ್ಟವಾಗಿ ತೋರಿಸುತ್ತವೆ

ಸರಕಾರದ ಸುಳ್ಳು ಸುದ್ದಿಗಳು ಬಹಳವಾಗಿವೆ. ಅವುಗಳ ಕೆಲವು ಉದಾಹರಣೆಗಳನ್ನೂ ಕೊಟ್ಟಿದ್ದೇವೆ

ವ್ಹಾಯಿಸರಾಯರ ಹೊಸ ಕಾಯದೆಗಳೆಂದರೆ ಮುಸುಕಿನಲ್ಲಿಯ ಮಿಲಿಟರೀ ಕಾಯ್ದೆಗಳೇ ಆಗಿವೆ.

ಸತ್ಯಾಗ್ರಹ ಧರ್ಮಕ್ಕನುಸರಿಸಿ ದಬ್ಬಾಳಿಕೆಯು ಹೆಚ್ಚಾಗುತ್ತ ಹೋದಂತೆ ನಮ್ಮ ಸಹನಶಕ್ತಿಯೂ ಹೆಚ್ಚುತ್ತ ಹೋಗುವದು ದುಃಖವನ್ನು ಸಹಿಸುವವರಿಂದಲೇ ನಮಗೆ ಯಶವು ದೊರೆಯುವದು.

ಕಟ್ಟಕಡೆಗೆ ಮಹಾತ್ಮರು ಉಪ್ಪಿನ ಕಾಯದೆಯನ್ನು ತೆಗೆದುಹಾಕಲು ವ್ಹಾಯಿಸರಾಯರಿಗೆ ಕೇಳಿಕೊಂಡಿರುವರು. "ಹಿಂಸೆಯನ್ನು ಕ್ರೋಧದಿಂದಾಗಲಿ ಮೋಹದಿಂದಾಗಲಿ ಜನರು ಮಾಡದಂತೆ ಅವರಿಗೆ ಬುದ್ಧಿಯನ್ನೂ ಶಕ್ತಿಯನ್ನೂ ಪರಮಾತ್ಮನು ದಯಪಾಲಿಸುವನೆಂದು ನಾನು ಆಶಿಸುವೆನು.

ಹೀಗೆ ಬರೆದು ಮಹಾತ್ಮರು ತಮ್ಮ ಪತ್ರವನ್ನು ಮುಗಿಸಿರುವರು.

---

ಶಿರಸಿ ಮುನಸಿಪಾಲ್ಟಿಯ ನಿರ್ಣಯ.

### ಉಪ್ಪಿನ ಕಾಯದೆಯನ್ನು ತೆಗೆದುಹಾಕಿರಿ.

ಬಡವರಿಗೆ ಅತ್ಯಂತ ಕಷ್ಟಕರವಾದ ಉಪ್ಪಿನ ಕಾಯದೆಯನ್ನು ಸರಕಾರದವರು ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ಈ ಮುನಸಿಪಾಲಿಟಿಯು ಬಿನ್ನವಿಸುತ್ತದೆ. ಎಂಬಾಶಯದ ಗೊತ್ತು ಶಿರಸಿ ಮುನಸಿಪಾಲಿಟಿಯಲ್ಲಿ ನಿರ್ಣಯವಾಗಿದೆ ಶಿರಸಿಯವರ ಮೇಲ್ಪಂಕ್ತಿಯನ್ನು ಉಳಿದ ಮುನಸಿಪಾಲಿಟಿಯವರು ಹಿಡಿಯುವರೋ?

---

ಸಾಬರಮತಿ ಜೇಲಿನಿಂದ ೩೫ ಮಂದಿ ಉಪ್ಪಿನ ಸೆರೆಯಾಳುಗಳನ್ನು ನಾಸಿಕ ಜೇಲಿಗೆ ಒಯ್ದಿರುವರು. ಮತ್ತು ೧೫ ಜನರನ್ನು ಯೆರವಡಾ ಜೇಲಿಗೆ ಒಯ್ದಿರುವರು.

## ಕರಾಚಿಯ ಮುಸಲ್ಮಾನರು ಸತ್ಯಾಗ್ರಹಿಗಳಾದರು!

ಮೇ ೪ ನೇ ತಾರೀಖಿನ ದಿನ ಕೂಡಿದ ಜಾಹೀರ ಸಭೆಯಲ್ಲಿ ಸರಕಾರದವರು ಜಪ್ತಮಾಡಿದ ಪುಸ್ತಕದೊಳಗಿನ ವಿಷಯವನ್ನು ಓದಲಾಯಿತು. ಸಭೆಗೆ ೫೦೦೦ ಹೆಣ್ಣುಮಕ್ಕಳೂ ೧೫೦೦೦ ಗಂಡಸರೂ ನೆರೆದಿದ್ದರು. ೨೦೦೦ ಸ್ತ್ರೀಯರು ಸ್ವದೇಶೀವ್ರತವನ್ನು ಸ್ವೀಕರಿಸಲಿಕ್ಕೆ ಪ್ರತಿಜ್ಞೆ ಕೈಕೊಂಡಿದ್ದಾರೆ. ೨೦೦ ಸ್ತ್ರೀಯರು ಸತ್ಯಾಗ್ರಹ ಸೇನೆಯನ್ನು ಸೇರುವರು. ಇಲ್ಲಿಯ ಮುಸಲ್ಮಾನರು ಸತ್ಯಾಗ್ರಹ ಯುದ್ಧದಲ್ಲಿ ಬೀಳುವ ನಿಶ್ಚಯಮಾಡಿದ್ದಾರೆ.

## ಹುಬ್ಬಳ್ಳಿಯಲ್ಲಿ ಉಪ್ಪಿನ ಸಂತೆಯು!

೩ ನೇ ತಾ|| ನ ದಿವಸ ಹುಬ್ಬಳ್ಳಿಯಲ್ಲಿ ಉಪ್ಪಿನ ಸಂತೆಯನ್ನು ನೆರೆಯಿಸಲಾಗಿತ್ತು. ಸುತ್ತಲಿನ ೩೦ ಹಳ್ಳಿಗಳ ಸುಮಾರು ೧೦೦ ಜನ ಹೆಣ್ಣುಮಕ್ಕಳು, ೫೦ ಜನ ಪುರುಷರು ಉಪ್ಪು ಮಾರಿದರು.

## ಸರಕಾರೀ ಅಧಿಕಾರಿಗಳಿಗೆ ಸಾಮಾಜಿಕ ಬಹಿಷ್ಕಾರ!

ಯಾದವಾಡದಲ್ಲಿ ಸತ್ಯಾಗ್ರಹವು ಬಹಳ ಜೋರಿನಿಂದ ಸಾಗಿದೆ. ಜನಸಮುದಾಯವೆಲ್ಲ ಒಮ್ಮನದಿಂದ ಸತ್ಯಾಗ್ರಹಕ್ಕೆ ಜನರು ಜೋಳ, ಗೋದಿ, ಅಕ್ಕಿ ಮೊದಲಾದ ಧಾನ್ಯಗಳಿಂದಲೂ, ದುಡ್ಡಿನಿಂದಲೂ ಸಹಾಯಮಾಡುತ್ತಿದ್ದಾರೆ. ಇವತ್ತಿನ ದಿವಸ ೪ ಘಂಟೆಗೆ ಫೌಜದಾರ, ಹವಾಲದಾರ, ಪೋಲೀಸರು ಬಂದಿರುವರು. ನಾಳೆ ಪೋಲೀಸ ಇನಸ್ಪೆಕ್ಟರು ಪಾರ್ಟಿ ತೆಗೆದುಕೊಂಡು ಬರುವರೆಂದು ವದಂತಿ ಇದೆ. ಜನರು ಸರಕಾರಿ ನೌಕರರ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ಹಾಕಿದ್ದಾರೆ. ಅಮಲದಾರರಿಗೆ ಯಾವತರದ ಸಹಾಯವನ್ನಾಗಲೀ, ಅಂಗಡಿಗಳಲ್ಲಿ ರೊಕ್ಕ ಕೊಟ್ಟರೆ ಸಾಮಾನುಗಳನ್ನಾಗಲೀ ಕೊಡುವದನ್ನು ಬಂದುಮಾಡಿರುತ್ತಾರೆ. ಉಪ್ಪು ಮಾಡುವದು ಪೇಟೆಯ ಬೈಲಿನಲ್ಲಿಯೇ ನಡೆಯುತ್ತಿದೆ.

## ಹುನಗುಂದದಲ್ಲಿ ಅಪೂರ್ವ ಹರತಾಳ!

ತಾ|| ೭—೫—೩೦ ನೇ ದಿನ ಸಂಪೂರ್ಣ ಹರತಾಳವು ಮಹಾತ್ಮರನ್ನು ಹಿಡಿದ ಬಗ್ಗೆ ಪಾಲಿಸಲ್ಪಟ್ಟಿತು. ಎಲ್ಲ ಗಿರಣಿಗಳೂ, ಮೋಟಾರುಗಳೂ ಬಂದಾಗಿದ್ದವು. ಶೆರೆ, ಶೇಂದಿ, ಗಾಂಜಿ ಅಂಗಡಿಗಳು ಮೊದಲ್ಗೊಂಡು ಯಾವತ್ತು ಅಂಗಡಿಗಳೂ ಮುಚ್ಚಲ್ಪಟ್ಟಿದ್ದವು. ಶೇಟ ಸಾವಕಾರರೂ, ಬಾಲವೃದ್ಧರೂ, ಸ್ತ್ರೀಯರೂ ಒಮ್ಮನಸ್ಸಿನಿಂದ ಹರತಾಳದಲ್ಲಿ ಭಾಗ ತೆಗೆದುಕೊಂಡು ಯಶಸ್ವಿಯಾಗಿ ಮಾಡಿದರು. ರಾಜವ್ವಳೆಂಬ ವೇಶ್ಯೆಯೊರ್ವಳು ಅಂಗಡಿಗೆ ಅಡ್ಡಾಡಿ ಬಾಗಿಲವನ್ನು ಇಕ್ಕಿಸಿದ ವೀರಶಿರೋಮಣಿಯನ್ನು ಹುನಗುಂದ ನಾಗರೀಕರು ಅನುಸರಿಸುವರೋ!

ಸಾಯಂಕಾಲಕ್ಕೆ ಮಹಾತ್ಮಾ ಗಾಂಧಿಯವರ ಚಿತ್ರಪಟದೊಂದಿಗೆ ಮೆರವಣಿಗೆ ಆಯಿತು. ಮೆರವಣಿಗೆಯು ಮುಗಿದ ನಂತರ, ಮಹಾತ್ಮರ ಚಿತ್ರಪಟದ ಅಧ್ಯಕ್ಷತೆಯ ಕೆಳಗೆ ಶ್ರೀ|| ಮುದ್ದುರಾವ ಪ್ಯಾಟಿ ಇವರು ಸದ್ಯದ ಪರಿಸ್ಥಿತಿಯ ಮೇಲೆ ಭಾಷಣಮಾಡಿ, ಹುನಗುಂದ ನಾಗರೀಕರಲ್ಲಿ ಹೊಸ ಹುರುಪು ಹುಟ್ಟಿಸಿದರು. ಸಭೆಗೆ ಸಾವಿರಾರು ಜನರು ನೆರೆದಿದ್ದರು. ೪೦೫೦ ಉಪ್ಪಿನ ಚೀಟುಗಳು ಮಾರಲ್ಪಟ್ಟವು. ಸ್ತ್ರೀಯರೂ ಸಹ ಉಪ್ಪಿನ ಚೀಟುಗಳನ್ನು ಕೊಂಡರು.

## ವಿದೇಶೀ ಬಟ್ಟೆಗಳ ಬಹಿಷ್ಕಾರದ ಪರಿಣಾಮವು.

ಲಂಡನ್ನದಲ್ಲಿ ಪಾರ್ಲಮೆಂಟಿನೊಳಗೆ ಬೇನಸಾಹೇಬರಿಗೆ ಮಿ. ಹ್ಯಾಕಿಂಗ, ಸಾಹೇಬರು ಬಹಿಷ್ಕಾರದ ಚಳವಳಿಯನ್ನು ನಿಲ್ಲಿಸುವಂತೆ ಪ್ರಯತ್ನಮಾಡಲಿಕ್ಕೆ ಸೂಚನೆಗಳನ್ನು ಮಾಡಿದರು. ಅದಕ್ಕೆ ಬೇನಸಾಹೇಬರು ಕಾಯದೆಯನ್ನು ಮುರಿದರೆ ನಿಶ್ಚಯವಾಗಿ ಶಾಸನವಾಗುತ್ತದೆ. ಎಂದು ಉತ್ತರಕೊಟ್ಟರು.

ಮಿಲ್ಸ ಎಂಬ ಸಾಹೇಬರು, ಜನರಲ್ಲಿಯ ಅಸಂತೋಷವು ಬಹಿಷ್ಕಾರ ಚಳವಳಿಯನ್ನ ಹುಟ್ಟಿಸಿದೆ. ಎಂದು ಹೇಳಿದರು.

ಡೇವ್ಹಿಸ ಎಂಬ ಸಾಹೇಬರು, ನೀವು ಬ್ರಿಟಿಶ ಸಭೆಯ ಮಂತ್ರಿಗಳು, ಬ್ರಿಟಿಶ ಜನರಿಗಾಗಿ ನೀವು ಕೆಲವು ಕರ್ತವ್ಯಗಳನ್ನು ಮಾಡಬೇಕಾಗಿರುವದು ಎಂಬುದನ್ನು ಚನ್ನಾಗಿ ಲಕ್ಷ್ಯದಲ್ಲಿಡಿರಿ ಎಂದು ಬೇನಸಾಹೇಬರಿಗೆ ಹೇಳಿದರು.

ಹಿಂದುಸ್ಥಾನದಲ್ಲಿಯ ಖಾದೀಪ್ರಸಾರವು ಇಂಗ್ಲಂಡದಲ್ಲಿ ಸಾಹೇಬರನ್ನು ಈಗಾಗಲೇ ಹಣ್ಣುಗ ತಂದಿರುವದು.

## ಕಾಂಗ್ರೇಸದ ಕಚೇರಿಯು ಪೋಲೀಸರ ಸ್ವಾಧೀನವಾಯಿತು

ಪೇಶಾವರದಲ್ಲಿ ಕಾಂಗ್ರೆಸ ಕಚೇರಿಯನ್ನು ಬ್ರಿಟಿಶ ಶಿಪಾಯರು ತಮ್ಮ ವಶ ಪಡೆಸಿಕೊಂಡಿರುವರು. ನವಜವಾನ ಸಭೆಯ ಮಂದಿರದಲ್ಲಿ ದೇಶೀ ಶಿಪಾಯರು ಇರಹತ್ತಿರುವರು. ಊರಲ್ಲೆಲ್ಲ ಮಿಲಿಟರಿ ಜನರು ಜನರನ್ನು ಹೆದರಿಸುತ್ತ ಅನೇಕ ಮುಖಂಡರನ್ನು ಹಿಡಿಯಹತ್ತಿದರು. ಎಲ್ಲ ಅಂಗಡಿಗಳು ಮುಚ್ಚಲ್ಪಟ್ಟಿದ್ದರಿಂದ ವ್ಯಾಪಾರವೆಲ್ಲ ಬಂದಾಗಿದೆ. ಮನೆಬಿಟ್ಟು ಹೊರಬೀಳಲಿಕ್ಕೆ ಸರಕಾರದ ಅಪ್ಪಣೆಬೇಕು. ಖಾದಿ ಪೋಷಾಕ ಹಾಕಿಕೊಂಡ ಸ್ವಯಂಸೇವಕರಾರೂ ಬೀದಿಗಳಲ್ಲಿ ಅಡ್ಡಾಡಬಾರದಾಗಿ ವಿಧಿಸಲಾಗಿದೆ. ಪೋಲೀಸರು ಗುಂಡು ಹಾರಿಸಿದ್ದರಿಂದ ೨೦ ಜನರು ಸತ್ತಿರುವರೆಂದು. ಸರಕಾರದ ಪ್ರಕಟಣೆ ೭೦ ಜನರಿಗೆ ಗಾಯವಾಗಿದೆ.

---

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**
ತಮ್ಮ ಲೋಕಪ್ರಿಯವಾದ
ಶನಿವಾರ ತಾ. ೧೦-೫-೩೦
**ಸಂಪೂರ್ಣ ಕೃಷ್ಣಲೀಲಾ.**
ಭಾನುವಾರ ತಾ|| ೧೧—೫—೩೦
**ಶರಣಬಸವ**
ಸೋಮವಾರ ತಾ, ೧೨—೫—೩೦
**ಯಚ್ಚಮ್ಮ ನಾಯಿಕ.**
ಬುಧವಾರ ತಾ, ೧೪-೫-೩೦
**ಚವತಿಯಚಂದ್ರ**
**ಎಂಬ ನಾಟಕಗಳನ್ನು ಅಭಿನಯಿಸುವರು.**
ಸಂಘದೊಡೆಯ—**ಸದಾಶಿವರಾವ ಗರೂಡ**

---

ಈ ಪತ್ರಿಕೆಯು ಬಸವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭

ಬೆಲೆ ೦–೦–೩

ಜಯಕರ್ನಾಟಕ

ನಿತ್ಯಸಂಚಿಕೆಯು.

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ಶನಿವಾರ ಮಿತಿ ವೈಶಾಖ ಶುದ್ಧ ೧೨ ಶಕ ೧೮೫೨ ತಾ ೧೦–೫–೩೦ ಸಂಚಿಕೆ ೪೪

## ಧಾರವಾಡ ಮುನಸಿಪಾಲಿಟಿಯ ಮೇಲೆ ರಾಷ್ಟ್ರಧ್ವಜ!

ತಾ|| ೭-೫-೩೦ ನೇ ದಿವಸ ಶ್ರೀ. ಭಿಸೆಯವರು ಸೂಚಿಸಿದ "ನಗರ ಸಭೆಯ ಮೇಲೆ ಇಂದಿನಿಂದ ರಾಷ್ಟ್ರಧ್ವಜವನ್ನು ಹಚ್ಚಬೇಕೆಂಬ" ವಿಷಯವನ್ನು ಕುರಿತು ವಿವೇಚಿಸುವದಕ್ಕಾಗಿ ನಗರ ಸಭೆಯ ಸಾಧಾರಣ ಸಭೆಯು ಸಂಜೆಯ ೭ ಘಂಟೆಗೆ ಇಂದು ಸೇರಿತ್ತು. ನಗರ ಸಭೆಯ ರಾಷ್ಟ್ರಧ್ವಜ ಸತ್ಯಾಗ್ರಹ ಮಂಡಳದವರು ಎಲ್ಲ ಸಭಾಸದರಲ್ಲಿಯೂ ಹೋಗಿ, ಇಂದಿನ ಸಭೆಯು ಅತ್ಯಂತ ಮಹತ್ವದ್ದಿರುವದರಿಂದ ಬರಬೇಕೆಂದು ಕೇಳಿಕೊಂಡಿದ್ದರು. ಇದಲ್ಲದೆ ಮೇಲಿನ ಮಂಡಳದವರೂ, ಕಾಂಗ್ರೆಸ ಕಮಿಟಿಯವರೂ ಕೂಡಿಕೊಂಡು ಮಧ್ಯಾನ್ಹ ೪ ಘಂಟೆಗೆ ರಾಷ್ಟ್ರಧ್ವಜದ ಮೆರವಣಿಗೆಯನ್ನು ತೆಗೆದಿದ್ದರು. ಮೆರವಣಿಗೆಯಲ್ಲಿ ಸಾಧಾರಣವಾಗಿ ೧೦೦೦ ಜನರು ಸೇರಿದ್ದರೆಂದು ಹೇಳಬಹುದು. ಸಾರಸ್ವತಪುರದ ಹೆಂಗಳೆಯರು ತಮ್ಮದೊಂದು ಬೇರೆ ಮೆರವಣಿಗೆಯನ್ನೇ ತೆಗೆದಿದ್ದರು. ಮೆರವಣಿಗೆಯು ಊರಲ್ಲೆಲ್ಲ ಸುತ್ತಿ ಬಂದು ೫|| ಘಂಟೆಗೆ ನಗರಸಭೆಯನ್ನು ಸೇರಿತು. ನಗರಸಭೆಯ ಕಾರ್ಯಕಲಾಪಗಳು ೭ ಗಂಟೆಗೆ ಪ್ರಾರಂಭವಾದವು. ಶ್ರೀ. ಭಿಸೆಯವರು ಸೂಚಿಸಿದ ಠರಾವನ್ನು ಶ್ರೀ. ಕಬ್ಬೂರರವರು ಸಭೆಯ ಮುಂದಿಟ್ಟರು. ಶ್ರೀ. ಶಹಾಣೆ ಸಾಹೇಬರು 'ರಾಷ್ಟ್ರಧ್ವಜವನ್ನು ಹಚ್ಚುವದು ಕಾಯದೇಶೀರ ಆಗುವದಿಲ್ಲವೆಂದು ವಿರೋಧಿಸಿದರು.' ಮತಗಳನ್ನು ತೆಗೆದುಕೊಳ್ಳಲಾಗಿ "ರಾಷ್ಟ್ರಧ್ವಜವನ್ನು ಹಚ್ಚಬೇಕೆಂಬ" ಸೂಚನೆಯು ಬಹುಮತದಿಂದ ಸ್ವೀಕೃತವಾಯಿತು. ಆಮೇಲೆ ಶ್ರೀಯುತ ಜೋಗರವರು ರಾಷ್ಟ್ರಧ್ವಜವನ್ನು ಏರಿಸಿ "ನಾವಂತೂ ನಮ್ಮ ಕರ್ತವ್ಯವನ್ನು ಮಾಡಿದ್ದೇವೆ. ಇದನ್ನು ಸರ್ವತೋಪರಿಯಿಂದ ರಕ್ಷಿಸುವ ಭಾರವು ನಾಗರಿಕರನ್ನೇ ಕೂಡಿದೆ" ಎಂದು ಹೇಳಿದರು. ಬಳಿಕ ಎಲ್ಲರೂ ರಾಷ್ಟ್ರಧ್ವಜಕ್ಕೆ ವಂದನೆಗಳನ್ನರ್ಪಿಸಿ ತೆರಳಿದರು.

## ಸತ್ಯಾಗ್ರಹಕ್ಕೆ ಮುಸಲ್ಮಾನರ ಬೆಂಬಲ!

ಮಹಾತ್ಮರು ನಡಿಸಿದ ಸತ್ಯಾಗ್ರಹ ಚಳವಳಿಯಲ್ಲಿ ಮುಸಲ್ಮಾನರು ಸೇರಿ ಹೋರಾಡಬೇಕೆಂದು ಬರುವ ಜಮೇಯತ್ ಉಲ್ ಉಲೇಮ ಸಭೆಯ ಅಧ್ಯಕ್ಷರಾದ ಮೌ. ಮೋಯಿನುದ್ದೀನರು ಹೇಳಿದ್ದಾರೆ.

## ರಂಗೂನದಲ್ಲಿಯ ಭೀಕರವಾದ ಭೂಕಂಪವು!

ಪೇಗು ಪಟ್ಟಣದಲ್ಲಿ ಮೊನ್ನಿನ ದಿವಸ ಭಯಂಕರ ಭೂಕಂಪವಾಯಿತು. ಶ್ವೇಡಾಗಮಾಡೋ ಪಾಗೋಡಕ್ಕೆ ಬಹು ಧಕ್ಕೆ ತಗಲಿದ್ದು, ಕೋಆಪರೇಟಿವ್ಹ ಬ್ಯಾಂಕ, ಮುನಸಿಪಾಲಿಟಿ ಮತ್ತು ಕೆಲವು ಸರಕಾರಿ ಕಟ್ಟಡಗಳು ನಾಶವಾಗಿ ಹೋಗಿವೆ. ಮಾರ್ಕೆಟದಲ್ಲಿಯ ಕೆಲವು ಕಟ್ಟಡಗಳು ಬಿದ್ದು, ಬಹಳ ಜನರಿಗೆ ಅಪಾಯವಾಗಿದೆ. ಥಾಂಗವಾ ದ್ವೀಪವು ಅದೃಶ್ಯವಾಗಿ ಹೋಗಿದ್ದು, ರಂಗೂನ ಟಯಿಮ್ಸ ಪತ್ರಿಕೆಯ ಇಮಾರತಿಗೆ ಧಕ್ಕೆ ತಗಲಿದೆ. ರಂಗೂನಕ್ಕೆ ಹೋಗಲಿಕ್ಕಿರುವ ಹೊಗೆಬಂಡಿಯು ಉರುಳಿ ಬಿದ್ದುದರಿಂದ, ಹೊಗೆಬಂಡಿಯ ವ್ಯವಹಾರವು ನಿಂತುಹೋಗಿದೆ. ಸಿನೇಮಾ ಗೃಹವು ಒಮ್ಮೆಲೆ ಕಡಕೊಂಡು ಬಿದ್ದದರಿಂದ ಪ್ರೇಕ್ಷಕರಲ್ಲಿ ೫೦ ಜನರಿಗೆ ಗಾಯವಾಗಿದೆ. ಒಟ್ಟಿನಲ್ಲಿ ೫೦೦ ಜನರು ಮರಣ ಹೊಂದಿದ್ದು ೧೦೦ ಜನರಿಗೆ ಗಾಯವಾಗಿದೆ ಸ್ಥಳಿಕ ಅಧಿಕಾರಿಗಳು ನಿರಾಶ್ರಿತರಿಗೆ ಸರ್ವವಿಧದಿಂದಲೂ ಸಹಾಯ ಮಾಡಹತ್ತಿದ್ದಾರೆ.

## ಬಾಗಲಕೋಟೆ ಸತ್ಯಾಗ್ರಹಿಗಳ ಮೊದಲನೇ ಪಥಕವು.

ಕುಂದರಗಿಯಿಂದ ಬುಧವಾರ ತಾ|| ೭-೫-೩೦ ನೇ ದಿವಸ ಮುಂಜಾನೆ ೭ ಗಂಟೆಗೆ ಮೆರವಣಿಗೆಯೊಂದಿಗೆ ಹೊರಟೆವು. ಅಲ್ಲಿಂದ ಬಾವಲತ್ತಿಗೆ ಬಂದೆವು, ಇಲ್ಲಿಯ ಜನರ ಕೊಂಚಮಟ್ಟಿಗೆ ಉತ್ಸಾಹವನ್ನು ತೋರಿಸಿದರು, ಇಲ್ಲಿ ವ್ಯಾಖ್ಯಾನವಾದನಂತರ ಗಂಟೆಯ ಸುಮಾರಕ್ಕೆ ಬಂದೆವು ಇಲ್ಲಿಯಾದರೂ ನಮ್ಮ ಸಲುವಾಗಿ ಊಟಉಡಿಗೆಯ ವ್ಯವಸ್ಥೆಯಾಗಿತ್ತು. ಭೋಜನವನ್ನು ತೀರಿಸಿಕೊಂಡು ವ್ಯಾಖ್ಯಾನವಾದನಂತರ ೪ ಘಂಟೆಗೆ ಬೀಳಗಿಗೆ ಹೊರಟೆವು. ಇಲ್ಲಿಗೆ ಸಂಜೆಯ ೭ ಘಂಟೆಗೆ ಬಂದು ಮುಟ್ಟಿದೆವು. ಇಲ್ಲಿಯವರೂ ಮೆರವಣಿಗೆಯೊಂದಿಗೆ ಊರಲ್ಲಿ ಬಂದೆವು. ಆ ಮೇಲೆ ಬಜಾರದ ಮಧ್ಯದಲ್ಲಿ ಕೈಚಾರೋ ಹಣವನ್ನು ತೀರಿಸಿಕೊಂಡು ಇಲ್ಲಿಯ ಜನಸಮೂಹದ ಮುಂದೆ ವ್ಯಾಖ್ಯಾನವಾಯಿತು. ನಂತರ ನೇಟಿವ್ಹ ಜನರಲ್ ಲಾಯಬ್ರರಿಯಲ್ಲಿ ವ್ಯವಸ್ಥೆ ಮಾಡಿದ್ದರಿಂದ ಅಲ್ಲಿ ಇಳಿದುಕೊಂಡೆವು. ಸಂಜೆಯ ಊಟದ ವ್ಯವಸ್ಥೆಯಾಗಿತ್ತು. ೮ ನೇ ತಾರೀಖು ಮುಂಜಾನೆ ಸೊನ್ನಕ್ಕೆ ಹೋಗಿ ಸಂಜೆಗೆ ಬಾಡಿಗೆ ಬಂದಿರುವೆವು.

ಪಥಕದ ಸೇನಾಪತಿ.

## ಸ್ವಾತಂತ್ರ್ಯಕ್ಕಾಗಿ ಆತ್ಮಾರ್ಪಣ.

ಮಹಾತ್ಮರನ್ನು ಹಿಡಿದುದಕ್ಕಾಗಿ ತಾರೀಖು ೬—೫—೩೦ ನೆಯ ದಿವಸ ಲಾಹೋರದಲ್ಲಿ ಸಂಪೂರ್ಣ ಹರತಾಳವು ಜರುಗಿತು. ಸಂಜೆಗೆ ಡಾ. ಅಲಮ್‌ರವರ ಪತ್ನಿಯವರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಇವರು ತಮ್ಮ ಭಾಷಣದಲ್ಲಿ ಹೇಳಿದ್ದೇನೆಂದರೆ ಈಗ ತರುಣರು ವಿಶೇಷವಾಗಿ ಮುಂದೆ ಬಂದು ಸ್ವಾತಂತ್ರ್ಯಸಮರದಲ್ಲಿ ಸೇರಬೇಕು. ಸ್ವಾತಂತ್ರ್ಯಕ್ಕಾಗಿ ಆತ್ಮಾರ್ಪಣವಾಗಲು ನನ್ನ ಪತಿಗಳೊಬ್ಬರೇ ಏಕೆ ನಾನೂ ಸಹ ನನ್ನ ಚಿಕ್ಕ ಮಗನೊಂದಿಗೆ ಸಿದ್ಧನಾಗಿದ್ದೇನೆ. ನನ್ನ ಪತಿಗಳನ್ನು ಸೆರೆವನೆಗೆ ಅಟ್ಟಿದ್ದು ನನಗೆ ಭೂಷಣವೇ ಆಗಿದೆ. ಈಗ ಮುಸಲ್ಮಾನ ಹೆಂಗಳೆಯರೆಲ್ಲರೂ ಇದರಲ್ಲಿ ಸೇರಿ, ಹೋರಾಡಬೇಕು.

## ಸತ್ಯಾಗ್ರಹಕ್ಕೆ ಕರ್ನಾಟಕದ ಬಲಿದಾನ.

ಉಪ್ಪಿನ ಸತ್ಯಾಗ್ರಹವನ್ನು ಮಾಡಿ ಈ ವರೆಗೆ ಕರ್ನಾಟಕದಲ್ಲಿ ೧೩೦ ಜನರು ಸೆರೆಮನೆಗೆ ಹೋಗಿದ್ದಾರೆ ಬೆಳಗಾಂವಿ ಜಿಲ್ಲೆಯೊಂದೇ ೫೫ ಜನರ ಬಲಿಯನ್ನು ಕೊಟ್ಟಿದೆ ಉಪ್ಪಿನ ಸತ್ಯಾಗ್ರಹವು ಎಲ್ಲ ಕಡೆಗೂ ಬಹು ಜೋರಿನಿಂದ ನಡೆದಿದೆ. ಇದರೊಂದಿಗೆ ವಿದೇಶೀ ಬಟ್ಟೆಗಳ ಬಹಿಷ್ಕಾರ ಚಳವಳಿಯೂ ಸಾಗತಕ್ಕದ್ದಿದ್ದು, ಬರುವ ೧೧ ನೇ ತಾರೀಖಿನ ದಿವಸ ಕರ್ನಾಟಕದಲ್ಲಿ ಎಲ್ಲ ಕಡೆಯಲ್ಲಿಯೂ ಪರದೇಶೀ ಬಟ್ಟೆಗಳ ಹೋಳಿಯು ಜರುಗತಕ್ಕದ್ದಿದೆ.

## ಹರತಾಳದ ವಾರ್ತೆಗಳು

ಮಹಾತ್ಮಾ ಗಾಂಧಿಯವರನ್ನು ಸರಕಾರದವರು ಸೆರೆಹಿಡಿದುದಕ್ಕಾಗಿ ತಾರೀಖು ೬—೫—೩೦ ನೇ ದಿವಸ ಗದಗ, ಮುಳಗುಂದ, ನರಗುಂದ ಗದಗ, ಇಲಕಲ್ಲ, ಬಸಹಟ್ಟಿ, ಬಂಕಾಪೂರ, ಬೆಳಗಾಂವಿ, ಧಾರವಾಡ. ಹುಬ್ಬಳ್ಳಿ, ಬ್ಯಾಡಗಿ, ಬೆಂಗಳೂರ ಮೊದಲಾದ ಕಡೆಗಳಲ್ಲಿ ಹರತಾಳವು ಪಾಲಿಸಲ್ಪಟ್ಟಿತು. ಬೆಳಗಾಂವಿಯಲ್ಲಿ ೩ ದಿವಸಗಳ ವರೆಗೆ ಹರತಾಳವು ಪಾಲಿಸಲ್ಪಟ್ಟದ್ದಲ್ಲದೆ ಅಂದು ಸ್ವಯಂಸೇವಕರು ಕೋಪ್ಪಳ ಶಾಂತಾಬಾಯಿಯವರ ನೇತೃತ್ವದಲ್ಲಿ ಶರೆ ಸಿಂದಿ ಅಂಗಡಿಗಳ ಪಿಕೆಟಿಂಗವನ್ನು ಪ್ರಾರಂಭಿಸಿದರು. ನರಗುಂದದಲ್ಲಿ ಸಗರೋಭೆಯೂ ಇಂಗ್ಲಿಷ ಶಾಲೆಯೂ ಮುಚ್ಚಲ್ಪಟ್ಟಿದ್ದವು ಮುಳಗುಂದದಲ್ಲಿ ಸಂಜೆಗೆ ಸೇರಿದ ಸಭೆಯಲ್ಲಿ ಉಪ್ಪು ಮಾರಲ್ಪಟ್ಟಿತು. ಇಲಕಲ್ಲಿನಲ್ಲಿ ಸಂಪೂರ್ಣ ಹರತಾಳವಾಗಿದ್ದು, ಅಂದು ಸಭೆಯಲ್ಲಿ ಬಾಬಾಸಾ ನಗಾರಿ, ಚೌಡಪ್ಪ ನಾಯ್ಕಮಕ್ಕಳು, ಚಂದುಸಾ ಚಿತ್ರವಾಟಿಗಿ, ಈ ಮೂರು ಜನರು ಶರೆ ಸಿಂದಿ ಇನ್ನು ಮೇಲೆ ಕುಡಿಯುವದಿಲ್ಲವಾಗಿ ಪ್ರತಿಜ್ಞೆ ಮಾಡಿದರು.

## ತುರಂಗಕ್ಕಾಗಿ ಶ್ರೀ ವಿಠ್ಠಲಭಾಯಿಯವರ ಆತುರತೆ.

ಶ್ರೀ ವಿಠ್ಠಲಭಾಯಿ ಪಟೇಲರು ಮುಂಬಯಿಯಲ್ಲಿ ಭಾಷಣ ಮಾಡುವಾಗ್ಗೆ "ಮಾತಿನ ಮಲ್ಲರು ಈಗ ಬೇಡಾಗಿದ್ದು, ನಾಡಿ ದಂಡೆ ನಡೆಸುವವರು ಈಗ ಬೇಕಾಗಿದ್ದಾರೆ. ಬ್ರಿಟಿಶ ಪಾರ್ಲಮೆಂಟದ ಅಧ್ಯಕ್ಷನಿಗೆ ರಾಜೀನಾಮೆಯನ್ನು ಕೊಟ್ಟಕೂಡಲೆ ಅಲ್ಲಿನ ನಿವೃತ್ತಿ ಹೊಂದಿದ ಕೂಡಲೆ ೫೦೦೦ ಪೌಂಡು ಬಹುಮಾನವು ಸಿಗುತ್ತದೆ. ಆದರೆ ಹಿಂದುಸ್ಥಾನದಲ್ಲಿಯ ವರಿಷ್ಠ ಶಾಸನ ಮಂಡಳದ ಅಧ್ಯಕ್ಷರು ತಮ್ಮ ಸ್ಥಳಕ್ಕೆ ಶರಣು ಹೊಡೆದ ಕೂಡಲೆ ಅವರಿಗೆ ತುರಂಗವಾಸದ ಬಹುಮಾನವು ದೊರಕಬಹುದು.' ಎಂದು ನುಡಿದರು.

## ಜೇಲಿನಲ್ಲಿಯೂ ಹರತಾಳ!

ಮಹಾತ್ಮಾ ಗಾಂಧಿಯವರನ್ನು ಹಿಡಿದ ಸುದ್ದಿಯನ್ನು ಕೇಳಿದ ಕೂಡಲೆ ಮುಂಬಯಿಯಲ್ಲಿ ಆರ್ಥರರೋಡ ಜೇಲಿನಲ್ಲಿರುವ ಶ್ರೀ. ಮುನಸಿ, ಫಾಟಕರು, ಪಾಟೀಲ, ಗಣಪತಶಂಕರ, ಕಾಂಜಿ ಮಾಸ್ತರ, ನಾಥುರಾಮ ಮೊದಲಾದ ರಾಜಕೀಯ ಕೈದಿಗಳು ೩ ದಿವಸಗಳ ವರೆಗೆ ಉಪವಾಸ ವ್ರತವನ್ನೂ, ೧ ದಿವಸ ಮೌನವ್ರತವನ್ನೂ ಸ್ವೀಕರಿಸಿ ಹರತಾಳವನ್ನು ಆಚರಿಸಿದರು.

## ಫ್ರೆಂಚ ಸ್ತ್ರೀಯಳ ಸತ್ಯಾಗ್ರಹದಲ್ಲಿ ಸೇರಬೇಕೆಂಬಾಸೆ

ಕ್ಲಾಡ ರಿವ್ಹೇರಿ ಎಂಬ ಫ್ರೆಂಚ ವಿದುಷಿಯು ಪರಿಸ್ಥಿತಿಯನ್ನು ತಿಳಿದುಕೊಳ್ಳುವದಕ್ಕಾಗಿ ಈಗ ಹಿಂದುಸ್ಥಾನದಲ್ಲಿ ಸಂಚರಿಸುತ್ತಿರುವಳು. ಗಾಂಧಿಯವರು ಬಂಧಿಸಲ್ಪಡುವದಕ್ಕಿಂತ ಒಂದು ದಿನ ಮುಂಚೆಯಾಗಿ ಇವಳು ಮಹಾತ್ಮರನ್ನು ಕಂಡು ಕೊಂಡು ಸತ್ಯಾಗ್ರಹದಲ್ಲಿ ಸೇರಿಸಿ ಕೊಳ್ಳಲು ಕೇಳಿದಳು. ಮೊಟ್ಟ ಮೊದಲು ಸಾಬರಮತಿಯ ಆಶ್ರಮಕ್ಕೆ ಹೋಗಿ ಹಿಂದುಸ್ಥಾನದ ಪರಿಸ್ಥಿತಿಯನ್ನು ಚನ್ನಾಗಿ ತಿಳಿದುಕೊಳ್ಳಬೇಕೆಂದು ಗಾಂಧಿಯವರು ಈ ವಿದುಷಿಗೆ ಅಪ್ಪಣೆಯನ್ನಿತ್ತರು

### ಬಂಕಾಪುರ

ಧಾರವಾಡ ಜಿಲ್ಲೆಯ ಸತ್ಯಾಗ್ರಹ ಮಂಡಳದವರು ಪ್ರಕಟಿಸಿದಂತೆ ಬಸವ ಜಯಂತಿಯ ದಿವಸ ಉಪ್ಪಿನ ಕಾಯಿದೆಭಂಗ ಮಾಡಲಾಯಿತು, ಮುಂಜಾನೆ ೬|| ಗಂಟೆಗೆ ಮೆರವಣಿಗೆಯು ಹೊರಟು ೮ ಗಂಟೆಗೆ ನೇಕಾರ ಓಣಿಗೆ ಬಂದಿತು. ಅಲ್ಲಿ ಅಂಕೋಲೆಯಿಂದ ತಂದ ಉಪ್ಪನ್ನು ಶ್ರೀ ಕರ್ಮರಕರವರು ಆಣೆಗೊಂದು ಪುಡಿಕೆಯಂತೆ ಮಾರಿದರು ಬಳಿಕ ರಾಷ್ಟ್ರಧ್ವಜವಂದನೆಯಾಗಿ ಶ್ರೀ ಬಸವೇಶ್ವರರ ವಿಷಯವಾಗಿ ಭಾಷಣಗಳಾದವು. ಪರದೇಶಿ ಅರಿವೆಯಿಂದ ಸಿದ್ಧಪಡಿಸಿದ ಗೊಂಬೆಯೊಂದಿಗೆ ಪುನಃ ೪ ಗಂಟೆಗೆ ಮೆರವಣಿಗೆಯು ಹೊರಟು ಎಲ್ಲಮ್ಮನ ಗುಡಿಯ ಪಟಾಂಗಣಕ್ಕೆ ಬಂದಿತು. ಶ್ರೀ. ಜೋಶಿಯವರು ಖಾದಿಯ ಬಗ್ಗೆ ಭಾಷಣ ಮಾಡಿದರು, ಬಳಿಕ ಪರದೇಶಿ ಅರಿವೆಯ ಹೋಳಿಯಾಯಿತು.

---

ಬದಾಮಿ ತಾಲೂಕ ಕಾಂಗ್ರೆಸ ಕಮಿಟಿ
ಗುಳೇದಗುಡ್ಡದ ಕಾರ್ಯದರ್ಶಿಗಳಾದ

## ಬಾಪುರಾವ ಬಾಸುತಕರವರು

### ಸೆರೆ ಆಳಾದರು

ನಿನ್ನಿನ ದಿನ ಸಂಜೆಯ ೪ ಘಂಟೆಗೆ ಬಂಧಿಸಲ್ಪಟ್ಟರು. ೬ ಘಂಟೆಗೆ ಶ್ರೀ ಗುಂಡೇರಾವ ಜೋಶಿಯವರ ಅಧ್ಯಕ್ಷತೆಯಲ್ಲಿ ಗಾಂಧಿ ಚೌಕಿನಲ್ಲಿ ಸಭೆ ನೆರೆದು ಶ್ರೀ ಬಾಸುತಕರರನ್ನು ಅಭಿನಂದಿಸುವರು.

# ಬಿಸನಾಳದಲ್ಲಿ ರಣಕ್ಷೇತ್ರ

ತಾರೀಖು ೫ ನೆಯ ದಿನ ಬಾಗಲಕೋಟೆಯಿಂದ ಬಿಸನಾಳಕ್ಕೆ ಉಪ್ಪಿನ ಕಾಯದೆಭಂಗಮಾಡಲು ಹೊರಟ ಅಲ್ಲಾಜಿ ಸಧಳದ ವೀರರು, ಅಲ್ಲಲ್ಲಿಗೆ ಹಾದಿಹಾದಿಗೆ ಜನರಿಂದ ಸನ್ಮಾನ ಸತ್ಕಾರಗಳನ್ನು ಸ್ವೀಕರಿಸಿ. ಇಂದು ಬಿಸನಾಳಕ್ಕೆ ತಲುಪಿದ್ದು ಅಲ್ಲಿ ಸಂಜೆಯ ೪ ಘಂಟೆಗೆ ಉಪ್ಪನ್ನು ಸಿದ್ಧಪಡಿಸಿ ಕಾಯದೆ ಭಂಗವನ್ನು ಮಾಡತಕ್ಕವರಿದ್ದಾರೆ. ಸುತ್ತುಮುತ್ತಲಿನ ಹಳ್ಳಿಯ ಜನರು ಈ ಅಪೂರ್ವ ದೃಶ್ಯವನ್ನು ಕಣ್ಣತುಂಬ ನೋಡಲು ಇಂದು ತಂಡ ತಂಡವಾಗಿ ನೆರೆಯುವವರಿದ್ದಾರೆ. ಬಾಗಲಕೋಟೆಯಿಂದಲೂ ನೂರಾರು ಜನರು ಗುಂಪು ಗುಂಪಾಗಿ ಹೋಗಿ ಅವರಿಗೆ ಬೆಂಬಲವನ್ನೀಯುವವರಿದ್ದಾರೆ.

---

## ಉಪ್ಪಿನ ಠಾಣೆಯ ಹಲ್ಲೆಗಾಗಿ
## ಶ್ರೀ ತಯ್ಯಬಜಿಯವರು ಸಿದ್ಧರಾದರು

ಮಹಾತ್ಮಾ ಗಾಂಧಿಯವರ ಆಜ್ಞೆಯಂತೆ ಉಪ್ಪಿನ ಸತ್ಯಾಗ್ರಹದ ನೇತೃತ್ವವನ್ನು ಸ್ವೀಕರಿಸಿದ ಶ್ರೀ ಅಬ್ಬಾಸ ತಯ್ಯಬಜಿಯವರು ೭ ನೇ ತಾರೀಖಿಗೆ ಜಲಾಲಪೂರಕ್ಕೆ ಬಂದು ಕೆಳಗಿನ ಭಾಷಣವನ್ನಿತ್ತರು- "ಮಹಾತ್ಮಾಗಾಂಧಿಯವರು ಸೆರೆಮನೆಗೆ ಹೋದದ್ದರಿಂದ ಸತ್ಯಾಗ್ರಹ ಚಳವಳಿಯು ಕುಗ್ಗಬಹುದೆಂದೂ, ಧರಸನಾದಲ್ಲಿಯ ಉಪ್ಪಿನ ಠಾಣೆಯ ಮೇಲೆ ಹಲ್ಲೆಯನ್ನು ಮಾಡುವದು ನಿಲ್ಲಬಹುದೆಂದೂ ಯಾರೂ ತಿಳಿದುಕೊಳ್ಳತಕ್ಕದ್ದಲ್ಲ. ನಾನು ಮಹಾತ್ಮರು ನಿಶ್ಚಯಮಾಡಿದಂತೆ ಉಪ್ಪಿನ ಠಾಣೆಯ ಮೇಲೆ ಸ್ವಯಂಸೇವಕರೊಂದಿಗೆ ಹಲ್ಲೆಯನ್ನು ಮಾಡಿ ಮಹಾತ್ಮರ ಕಾರ್ಯವನ್ನು ಪೂರ್ತಿಗೊಳಿಸುತ್ತೇನೆ. ಸರಕಾರದವರು ಗುಂಡಿನ ಸುರಿಮಳೆಯನ್ನು ಸುರಿಸಿದರೂ ಅವುಗಳಿಗೆ ಎದುರಾಗಲು ಸಿದ್ಧನಿದ್ದೇನೆ. ನಮ್ಮದು ಶಾಂತತಾಮಯಮಾರ್ಗವು ನಾವಂತೂ ಅಲ್ಲಿಗೆ ಹೋಗಿ ಹಲ್ಲೆಯನ್ನು ಮಾಡುವೆವು. ನಾವು ಈ ಯುದ್ಧದಲ್ಲಿ ಮರಣ ಹೊಂದಿದರೆ, ಸ್ವರಾಜ್ಯವು ಶೀಘ್ರದಲ್ಲಿಯೇ ಸಿಗುವದು." ಸುರತದ ಶ್ರೀ ದಾವೇಯವರೂ ಮತ್ತು ಮಹಾತ್ಮರ ಚಿರಂಜೀವರಾದ ಶ್ರೀ ಮಣಿಲಾಲ ಗಾಂಧಿಯವರೂ ಈ ಕಾರ್ಯವನ್ನು ಪೂರ್ತಿಗೊಳಿಸಲು ಬೇಕಾಗುವ ಸಿದ್ಧತೆಯನ್ನು ಮಾಡಲು ಈಗ ಮುಂದೆ ಹೋಗಿರುವರು. ಶ್ರೀ ತಯ್ಯಬಜಿಯವರೇ ಹಲ್ಲೆಗಾರರ ನೇತೃತ್ವವನ್ನು ವಹಿಸುವರು. ಸುರತ ಜಿಲ್ಲೆಯೊಳಗಿನ ಸುತ್ತುಮುತ್ತಲಿನ ಹಳ್ಳಿಗಳ ಸ್ವಯಂಸೇವಕರ ತಂಡಗಳು ಈ ಮುಖ್ಯ ಪಥಕ್ಕೆ ಬಂದು ಕೂಡಿಕೊಳ್ಳುವವು. ಬಳಿಕ ಎಲ್ಲರೂ ಕೂಡಿ ಉಪ್ಪಿನ ಠಾಣೆಯ ಮೇಲೆ ಹಲ್ಲೆಯನ್ನು ಮಾಡುವರು.

## ಬಿ, ದಾಸಗುಪ್ತರನ್ನು ಸೆರೆಹಿಡಿದರು!

ಬಾರಿಸಾಲದ ತರುಣ ಸಂಘದ ಕಾರ್ಯದರ್ಶಿಗಳಾದ ಶ್ರೀ|| ವಿಮಲಬಂಧು ದಾಸಗುಪ್ತರನ್ನು ಬಂಗಾಲ ಆರ್ಡಿನನ್ಸ ಕಾಯಿದೆಯ ಅನ್ವಯ ಸೆರೆಹಿಡಿದಿರುತ್ತಾರೆ.

## ಶ್ರೀ ಗೋರೆಯವರಿಗೆ ಶಿಕ್ಷೆ.

ಗಲಗಲಿಯ ಶ್ರೀ ಗೋರೆ ಸುಬ್ಬಾಚಾರ್ಯರ ವಿಚಾರಣೆಯು ಇಂದು ಬೀಳಗಿಯಲ್ಲಿ ನಡೆದು ಅವರಿಗೆ ನಾಲ್ಕು ತಿಂಗಳ ಸಕ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ. ಶ್ರೀ ಗೋರೆಯವರು ತಮ್ಮ ಜವಾಬಿನಲ್ಲಿ "ತಾವು ಅಪರಾಧ ಮಾಡಿಲ್ಲ" ವೆಂದು ಹೇಳಿದರು.

## ಬೆಳಗಾಂವಿ ಜಿಲ್ಲೆಯಲ್ಲಿ ಬಂಧನ ಹಾಗೂ ಶಿಕ್ಷೆ.

ತಂತಿಯಿಂದ ಬಂದವಾರ್ತೆ.

ಡಾ. ಕೊಕಟನೂರ, ಡಾ. ಕೊಲ್ಲಳ್ಳಿ, ಸಿದ್ಧಾಂತಿ ಹಾಗೂ ಶ್ರೀ ಚಂದೋರಕರರಿಗೆ ಅನುಕ್ರಮವಾಗಿ ೨೦೦ ರೂ. ದಂಡ, ೩ ತಿಂಗಳ, ೨ ವಾರ ಸಕ್ರಮ ಹಾಗೂ ೪ ತಿಂಗಳ ಶಿಕ್ಷೆಗಳಾಗಿವೆ. ಇವರೆಲ್ಲರನ್ನೂ ಇಂದು ಬೆಳಗಾಂವಿಗೆ ತಂದರು. ಎಷ್ಟೋ ಜನರು ಸ್ಟೇಶನಕ್ಕೆ ಹೋಗಿ ಇವರಿಗೆ ಪುಷ್ಪಮಾಲೆಗಳನ್ನರ್ಪಿಸಿದರು. ಸಂಜೆಗೆ ಸಭೆಯಲ್ಲಿ ಇವರೆಲ್ಲರನ್ನೂ ಅಭಿನಂದಿಸುವದರಲ್ಲಿ ಬಂದಿತು. ಬೆಳಗಾಂವಿಯಲ್ಲಿ ಇಂದು ಶ್ರೀ ಪ್ರಭು, ಕೊಪ್ಪಳ, ಹಾಗೂ ಕಿತ್ತೂರರವರನ್ನು ಯಮಕನಮರ್ಡಿಯಲ್ಲಿ ಶ್ರೀ ವೈದ್ಯರವರನ್ನೂ ಬಂಧಿಸಿದ್ದಾರೆ. ಇವರ ವಿಚಾರಣೆಯು ಇಂದು ಆಗತಕ್ಕದ್ದಿದೆ.

## ಬಾರಡೋಲಿ ತಾಲೂಕಿನಲ್ಲಿ ಕರನಿರಾಕರಣೆ!

ಬಾರಡೋಲಿ ತಾಲೂಕಿನ ಹಳ್ಳಿಗಳ ಪ್ರತಿನಿಧಿಗಳು ಬಾರಡೋಲಿಯಲ್ಲಿ ಸೇರಿ ಮಹಾತ್ಮಾ ಗಾಂಧಿಯವರು ಇಲ್ಲವೆ ವಲ್ಲಭಭಾಯಿಯವರು ಹೇಳುವ ವರೆಗೆ ಸರಕಾರಕ್ಕೆ ಕರ ಕೊಡತಕ್ಕದ್ದಲ್ಲವೆಂದು ನಿಶ್ಚಯಿಸಿದ್ದಾರೆ. ಇದಲ್ಲದೆ ಎಲ್ಲ ಸರಕಾರಿ ಅಧಿಕಾರಿಗಳಿಗೆ ರಾಜೀನಾಮೆಯನ್ನು ಕೊಡಲಿಕ್ಕೂ ಕೇಳಿಕೊಂಡಿದ್ದು ರಾಜೀನಾಮೆಯನ್ನು ಕೊಡದಿದ್ದವರಿಗೆ ಬಹಿಷ್ಕಾರ ಹಾಕುವ ಠರಾವನ್ನು ಪಾಸುಮಾಡಿಕೊಂಡಿದ್ದಾರೆ.

## ವಲ್ಲಭಭಾಯಿಯವರನ್ನು ಬೆಳಗಾಂವಿಗೆ ತಂದರು!

ಶ್ರೀ. ವಲ್ಲಭಭಾಯಿ ಪಟೇಲರನ್ನು ಬೆಳಗಾಂವಿಗೆ ತಂದು ಹಿಂಡಲಗಿ ಜೇಲಿನಲ್ಲಿ ಇಟ್ಟಿರುವರಾಗಿ ತಿಳಿಯುತ್ತದೆ. ಇವರ ಶಿಕ್ಷೆಯ ಅವಧಿಯು ಮುಗಿಯಲು ಬಂದದ್ದರಿಂದ, ಬಿಟ್ಟಕೂಡಲೆ ಮತ್ತೆ ಬೆಳಗಾಂವಿ ಜಿಲ್ಲೆಯಲ್ಲಿ ಭಾಷಣ ಮಾಡಿದುದಕ್ಕಾಗಿ ಹಿಡಿಯಲು ಅನುಕೂಲವಾಗಬೇಕೆಂದು ಹೀಗೆ ಮಾಡಿರುವರಾಗಿ ತೋರುತ್ತದೆ.

## ಕುಂದಾಪುರದಲ್ಲಿ ಸೆರೆಹಿಡಿದರು!

ಕುಂದಾಪುರದ ಸ್ವಯಂಸೇವಕರು ಕೊಡಗಿ ಕೃಷ್ಣರಾಯರ ನೇತೃತ್ವದಲ್ಲಿ ತಾ|| ೫ ನೆಯ ದಿವಸ ಉಪ್ಪಿನ ಕಾಯಿದೆಭಂಗ ಮಾಡಿದರು, ಉಪ್ಪನ್ನು ಸಿದ್ಧಪಡಿಸಿ ಸಭೆಯಲ್ಲಿ ಮಾರಿದ್ದಕ್ಕಾಗಿ ಶ್ರೀ. ಕೊಡಗಿ ಹಾಗೂ ಹೆಗಡೆ ಇವರು ಬಂಧಿಸಲ್ಪಟ್ಟು ಆರು ತಿಂಗಳ ಸಕ್ರಮ ಶಿಕ್ಷೆಗೆ ಗುರಿಯಾಗಿದ್ದಾರೆ.

(ತಂತಿಯಿಂದ ಬಂದ ವಾರ್ತೆ)

# ಸೊಲ್ಲಾಪುರದಲ್ಲಿ ಭಯಂಕರ ದಂಗೆ!

ಸ್ವಯಂಸೇವಕರಿಗೆ ಶಿಂದಿ ಗಿಡಗಳನ್ನು ಕಡಿಯಲಿಕ್ಕೆ ಪ್ರತಿಬಂಧ ಮಾಡಿದ್ದರಿಂದ ಭಯಂಕರ ದಂಗೆಯಾಯಿತು. ಪೋಲೀಸ ಚೌಕಿಗಳು ಬೆಂಕಿಗೆ ಆಹುತಿಯಾದವು! ಅನೇಕ ಪೋಲೀಸರು ಕೊಲ್ಲಲ್ಪಟ್ಟರು. ಸರಕಾರದ ಅಂಗಡಿಗಳಿಗೆ ಬೆಂಕಿ ಹಚ್ಚಿದರು. ಸಶಸ್ತ್ರ ಸೈನಿಕರು ಬಂದಿಳಿದಿದ್ದಾರೆ. ಯುರೋಪಿಯನ್ನರ ಪತ್ನಿಯರು ಒಳ್ಳೇ ಭಯಗ್ರಸ್ತರಾಗಿದ್ದಾರೆ. ಗುಡಚಾಪಿ ಕಟ್ಟಹತ್ತಿದ್ದಾರೆ!

## ಮದ್ರಾಸದಲ್ಲಿ ರೇಲ್ವೆ ನೌಕರರು ಕೆಲಸಕ್ಕೆ ಹೋಗಲಿಲ್ಲ

ಮಹಾತ್ಮಾಜಿಯವರನ್ನು ಬಂಧಿಸಿದ್ದರಿಂದ ಮದ್ರಾಸದಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ೬ ನೇ ತಾರೀಖು ಮಧ್ಯಾಹ್ನ ಮಹಾತ್ಮಾಜಿಯವರ ಬಂಧನದ ನಿಮಿತ್ತ ವರ್ಕಶಾಪಿನ [illegible] ಕೆಲಸಗಾರರು [illegible]. ಅಧಿಕಾರಿಗಳು [illegible] ಕೆಲಸಗಾರರಾರೂ ವರ್ಕಶಾಪಿಗೆ ಹೋಗಲಿಲ್ಲ.

## ಕಾಂಗ್ರೆಸ ವರ್ಕಿಂಗ ಕಮಿಟಿಯ ಸಭೆಯು!

ಕಾಂಗ್ರೆಸ ವರ್ಕಿಂಗ ಕಮಿಟಿಯ ಸಭೆಯು ೧೨ ನೇ ತಾರೀಖಿನ ದಿವಸ ಅಲಹಾಬಾದ ಸ್ವರಾಜ್ಯ ಭುವನದಲ್ಲಿ ಕೂಡು ನಡೆದಿದೆ. ಮುಂದಿನ ಕಾರ್ಯಕ್ರಮವನ್ನು ಗೊತ್ತುಪಡಿಸುವದೇ ಸಭೆಯ ಮುಖ್ಯ ಕಾರ್ಯ. ಹೊಸದಾಗಿ ಆರಿಸಲ್ಪಟ್ಟ ಶ್ರೀ. ವಿಠ್ಠಲಭಾಯಿ ಪಟೇಲರು ಮುಂದಿನ ಕಾರ್ಯಕ್ರಮವನ್ನು ಸಭೆಯ ಮುಂದೆ ಇಡುವವರಿದ್ದಾರೆ.

## ಹೆಣ್ಣುಮಕ್ಕಳಿಗೆ ಪೋಲೀಸರು ಹೊಡೆದರು

ಮಹಾತ್ಮಾಜಿಯವರ ಬಂಧನ ನಿಮಿತ್ತ ಪಂಜಾಬದಲ್ಲಿಯ ಎಲ್ಲ ನಗರಗಳಲ್ಲಿ ಹರತಾಳ ಜಾಹೀರಸಭೆಗಳಾದ ಸುದ್ದಿ ಬಂದಿದೆ. ಜನಗಳ ಮೇಲೆ ಪೋಲೀಸರು ಲಾಠೀ ಪ್ರಹಾರ ಮಾಡಿದರು. ಮೂವರು ಹೆಣ್ಣುಮಕ್ಕಳಿಗೆ, ೪೭ ಗಂಡಸರಿಗೆ ಗಾಯವಾಗಿದೆ. ಪರದೇಶೀ ಬಟ್ಟೆಗಳನ್ನು ಕೊಳ್ಳಬೇಡಿರೆಂದು ಹೇಳುವಾಗ ೧೫ ಜನ ಸ್ವಯಂಸೇವಕರು ಹಿಡಿಯಲ್ಪಟ್ಟಿದ್ದಾರೆ. ಪ್ರತಿಯೊಬ್ಬನಿಗೂ ೫೦ ರೂಪಾಯಿ ದಂಡ, ಇಲ್ಲವೆ ೧ ತಿಂಗಳ ಸಾದಾ ಶಿಕ್ಷೆ ವಿಧಿಸಲಾಯಿತು. ಸತ್ಯಾಗ್ರಹಿಗಳು ದಂಡ ಕೊಡದೆ ಸೆರೆಮನೆಯನ್ನು ಸೇರಿದರು. ಜಲಂಧರದಲ್ಲಿ ೩ ಲಕ್ಷ ಜನರ ಪ್ರಚಂಡ ಮೆರವಣಿಗೆಯು ಹೊರಟು ಊರನ್ನೆಲ್ಲ ಸುತ್ತಿ ಬಂದಿತು. ಸಾಯಂಕಾಲ ಲಕ್ಷ ಜಾಹೀರ ಸಭೆಯಾಗಿ ಮುಖಂಡರ ಭಾಷಣಗಳಾದವು.

## ಯಮಕನಮರಡಿಯಲ್ಲಿ ಶಿಂದಿ ಗಿಡಗಳನ್ನು ಕಡಿದರು!

ಶ್ರೀ. ಚಿಕ್ಕೋಡಿ ಅನಂತರಾಯರು ಇಲ್ಲಿ ಪ್ರಚಲಿತ ಪರಿಸ್ಥಿತಿಯ ಬಗ್ಗೆ ಜಾಗೃತಿಮಾಡುತ್ತಿರುವರು. ಶಿಂದಿಯ ಗಿಡಗಳನ್ನು ಕಡಿಯುವದು ಪ್ರಾರಂಭವಾಗಿದ್ದು ಈಗಾಗಲೇ ೫೦ ಗಿಡಗಳು ಕಡಿಯಲ್ಪಟ್ಟವೆ. ಶ್ರೀ. ಚಿಕ್ಕೋಡಿ ಅನಂತರಾಯರು ಬಂಧಿಸಲ್ಪಟ್ಟಿದ್ದಾರೆ.

## ಕೌನ್ಸಿಲಿಗೆ ರಾಜೀನಾಮೆ!

ಸರಕಾರದವರು ಮಹಾತ್ಮಾ ಗಾಂಧಿಯವರನ್ನು ಹಿಡಿದದ್ದನ್ನೂ ಮತ್ತು ದಬ್ಬಾಳಿಕೆಯ ವೃತ್ತಿಯನ್ನೂ ನಿಷೇಧಿಸಿ ಡಾ|| ಭೀಮಭಾಯಿ ನಾಯಿಕ ಮತ್ತು ಶ್ರೀ. ಎನ್. ಕೆ. ದೀಕ್ಷಿತ ಇವರು ಕಾಯದೆ ಮಂಡಳದ ಸಭಾಸದತ್ವಕ್ಕೆ ಶರಣು ಹೊಡೆದಿದ್ದಾರೆ.

## ಕಾಯದೆ ಮಂಡಳಕ್ಕೆ ಶರಣು ಹೊಡೆದರು!

ಶ್ರೀ. ವೆಂಕಟರಂಗಮ ನಾಯುಡುರವರು ಮದ್ರಾಸ ಕಾಯದೆ ಮಂಡಳದ ಸಭಾಸದತ್ವಕ್ಕೆ ಶರಣು ಹೊಡೆದರು. ನಿನ್ನೆ ದಿನ ಜೊಲಿಂಗನಲ್ಲೂರಲ್ಲಿ ಇಬ್ಬರು ಸತ್ಯಾಗ್ರಹಿಗಳಿಗೆ ೬ ತಿಂಗಳ ಸಶ್ರಮ ಶಿಕ್ಷೆಯಾಯಿತು.

## ಸತ್ಯಾಗ್ರಹಕ್ಕೆ ಪರದೇಶದವರ ಸಹಾಯ!

ಮಹಾತ್ಮಾ ಗಾಂಧಿಯವರು ಹೂಡಿದ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗತೆಗೆದುಕೊಳ್ಳಲು ಕೆನಿಯಾದಿಂದ ಒಂದು ಸ್ವಯಂಸೇವಕರ ತಂಡವು ಮೊನ್ನೆ ಜಲಮಾರ್ಗದಿಂದ ಹೊರಟಿದೆ. ಈಸ್ಟ ಇಂಡಿಯನ್ ಆಫ್ರಿಕೆಯ ರಾಷ್ಟ್ರೀಯ ಮಂಡಳದವರು ಇದಕ್ಕಾಗಿ ಸ್ವಯಂಸೇವಕರನ್ನು ಕಳಿಹಿಸುತ್ತಿದ್ದು, ಶೀಘ್ರದಲ್ಲಿಯೇ ಅವರಾದರೂ ಬಂದು ಸೇರುವವರಿದ್ದಾರೆ.

## ಮಹಾತ್ಮರನ್ನು ಪುರಂದರಕ್ಕೆ ತಂದರು!

ಮಹಾತ್ಮಾ ಗಾಂಧಿಯವರನ್ನು ಯರವಡಾ ಜೇಲಿನಿಂದ ಪುರಂದರಕ್ಕೆ ತಂದು ಈಗ ಪುರಂದರ ಕಿಲ್ಲೆಯಲ್ಲಿ ಇಟ್ಟಿರುವರಾಗಿ 'ಜ್ಞಾನಪ್ರಕಾಶ'ದಿಂದ ತಿಳಿಯುತ್ತದೆ.

### ಬೆಂಗಳೂರು

ಮಹಾತ್ಮರ ಬಂಧನದ ನಿಮಿತ್ತ ಬೆಂಗಳೂರಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಸಾಯಂಕಾಲ ಪ್ರಚಂಡ ಮೆರವಣಿಗೆಯು ಹೊರಟು ಜಾಹೀರ ಸಭೆಯಾಯಿತು. ಪರದೇಶೀ ವಸ್ತ್ರಗಳನ್ನು ಬಹಿಷ್ಕರಿಸಬೇಕೆಂಬಾಶಯದ ಠರಾವು ಸ್ವೀಕೃತವಾಗಿದೆ.

---

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಶನಿವಾರ ತಾ ೧೦-೫-೩೦

**ಸಂಪೂರ್ಣ ಕೃಷ್ಣಲೀಲಾ,**

ಭಾನುವಾರ ತಾ|| ೧೧—೫—೩೦

**ಶರಣಬಸವ**

ಸೋಮವಾರ ತಾ. ೧೨—೫—೩೦

**ಯಚ್ಚಮ್ಮ ನಾಯಿಕ.**

ಬುಧವಾರ ತಾ.೧೪-೫-೩೦

**ಚವತಿಯಚಂದ್ರ**

**ಎಂಬ ನಾಟಕಗಳನ್ನು ಅಭಿನಯಿಸುವರು.**

ಸಂಘಟನೆಯಿಃ— **ಸದಾಶಿವರಾವ ಗೆರೊಳ**

**ಈ ಪತ್ರಿಕೆಯು ಬಳವಂತ ಅಣ್ಣಾರಾವ ಮಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ, ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.**

ರ, ನಂ. ಬಿ ೧೯೪೭ ಬೆಲೆ ೦—೦—೩

ನಿತ್ಯಸಂಚಿಕೆಯು.

यद्यत परवशं दुःख । यद्यदात्मवशं सुखम ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮುದಾರ.

ಬಾಗಲಕೋಟೆ ರವಿವಾರ ವಿಕೃತಿ ವೈಶಾಖ ಶುದ್ಧ ೧೩ ಶಕೆ ೧೮೫೨ ತಾ ೧೧—೫—೩೦ ಸಂಚಿಕೆ ೪೫

## ಶ್ರೀ ವಿಠ್ಠಲಭಾಯಿಯವರ ವೀರವಾಣಿ

(ಮುಂಬಯಿಯಲ್ಲಿಯ ಭಾಷಣದಿಂದ)

“ಸರಕಾರದವರು ಮಧ್ಯರಾತ್ರಿಯಲ್ಲಿ ಒಂದು ಕಳ್ಳನನ್ನು ಹಿಡಿಯುವಂತೆ ಮಹಾತ್ಮರನ್ನು ಸೆರೆ ಹಿಡಿದರು. ಯಾಕಂದರೆ ಮಹಾತ್ಮರನ್ನು ಹಿಡಿಯುವದು ಅತ್ಯಂತ ಕ್ರೂರವೂ ಹಂಗಿಸಿಕೊಳ್ಳತಕ್ಕಂತಹ ಕೃತಿಯೂ ಆಗಿರುವದೆಂದು ಸರಕಾರವು ತಿಳಿದುಕೊಂಡಿದ್ದರಿಂದಲೇ ಅವರನ್ನು ಹಗಲಿನಲ್ಲಿ ಹಿಡಿಯಲು ಹೆದರಿದರು. ನಿಮ್ಮನ್ನು ಹಿಡಿಯುವವರಿದ್ದೇವೆಂದು ಸರಕಾರವು ಮಹಾತ್ಮರಿಗೆ ತಿಳಿಸಿದ್ದರೆ, ಮಹಾತ್ಮರೇ ಸ್ವತಃ ಬಂದು ಸೆರೆಯಾಗುತ್ತಿದ್ದರು. ಲಾರ್ಡ ಆಯರ್ವಿನ್ನರಿಗೆ ನಿಜವಾದ ಪರಿಸ್ಥಿತಿಯ ಜ್ಞಾನವು ಬೇಕಾಗಿರುವದಿಲ್ಲ. ಆದ್ದರಿಂದಲೆ ಅವರು ವೃತ್ತಪತ್ರಗಳ ದಬ್ಬಾಳಿಕೆಯ ಕಾಯದೆಯನ್ನು ಹೊರಗೆ ತೆಗೆದಿದ್ದಾರೆ. ಹೀಗೆ ಅವರು ಒಂದರಹಿಂದೊಂದು ಅನ್ಯಾಯಗಳನ್ನು ಮಾಡುತ್ತಿದ್ದಾರೆ. ಮಹಾತ್ಮಾ ಗಾಂಧಿಯವರೊಡನೆ ಸಧಾರಣೆಗಳ ಸಂಬಂಧವಾಗಿ ವಿಚಾರ ವಿನಿಮಯ ಮಾಡುವದೇ ತರುಣೋಪಾಯವಾಗಿದೆಯೆಂದು ೪-೫ ವರ್ಷಗಳಿಂದಲೂ ನಾನು ವ್ಹಾಯಿಸರಾಯರಿಗೆ ಅರಿಕೆ ಮಾಡಿಕೊಳ್ಳುತ್ತ ಬಂದಿದ್ದೇನೆ, ಇದಕ್ಕೆ ಮನ್ನಣೆಯನ್ನೀಯದೆ ವ್ಹಾಯಿಸರಾಯರು ದಬ್ಬಾಳಿಕೆಯನ್ನಾಶ್ರಯಿಸಿದ್ದಾರೆ. ದಬ್ಬಾಳಿಕೆಗೆ ಉತ್ತರವೆಂದು ಭಾರತದೇಶವಾಸಿಗಳೆಲ್ಲರೂ ಪರದೇಶಿಬಟ್ಟೆ ಬಹಿಷ್ಕಾರ, ಸೆರೆ ಸಿಂದಿ ಬಹಿಷ್ಕಾರ, ಸಾಮಾಜಿಕ ಬಹಿಷ್ಕಾರ ಮೊದಲಾದವುಗಳನ್ನು ಕೈಕೊಳ್ಳಬೇಕು. ಎಲ್ಲಿಯವರೆಗೆ ಸರಕಾರವು ನಮ್ಮ ನಿಜವಾದ ಪ್ರತಿನಿಧಿಗಳನ್ನು ವಿಚಾರಿಸಿ ಆದಾಯವನ್ನು ವೆಚ್ಚ ಮಾಡುವದಿಲ್ಲವೋ, ಅಲ್ಲಿಯ ವರೆಗೆ ಕರವನ್ನು ಕೊಡದಿರುವದು ಅನ್ಯಾಯವಾಗದು, ದೇಶದಲ್ಲೆಲ್ಲ ಕರನಿರಾಕರಣೆಯ ಚಳವಳಿಯನ್ನು ಪ್ರಾರಂಭಿಸುವ ಪ್ರಸಂಗವು ಈಗ ಬಂದೊದಗಿದೆ. ನನಗೆ ಶಿಪಾಯಿಯಾಗಿ ಸ್ವಾತಂತ್ರ್ಯಸಮರದಲ್ಲಿ ಸೇರುವದು ಬೇಕಾಗಿದೆ. ಮುಖಂಡನಾಗಿ ಮೆರೆಯುವದು ಬೇಡಾಗಿದೆ. ಈಗ ಲಕ್ಷಾವಧಿ ಜನರು ಉಪ್ಪಿನ ಕಟ್ಟಳೆಯನ್ನು ಮುರಿದಿದ್ದಾರೆ. ಇನ್ನು ಮುಂದೆ ಪರದೇಶಿ ಬಟ್ಟೆಗಳ ಬಹಿಷ್ಕಾರದ ಕಡೆಗೆ ನಮ್ಮ ದೃಷ್ಟಿಯನ್ನು ಹೊರಳಿಸಬೇಕು. ಯಾವ ದುಂಡು ಪರಿಷತ್ತಿನಲ್ಲಿ ಮಹಾತ್ಮರೂ ಮತ್ತು ರಾಷ್ಟ್ರೀಯಸಭೆಯ ಮುಖಂಡರೂ ಭಾಗಿಗಳಾಗುವದಿಲ್ಲವೋ ಆ ಪರಿಷತ್ತಿಗೆ ಬರಲಾರೆವೆಂದು ಇವರು ವ್ಹಾಯಿಸರಾಯರಿಗೆ ತಿಳಿಸಬೇಕು. ಸರಕಾರದವರೊಡನೆ ಸುತ್ತುಮುತ್ತಿನಿಂದ ಹೆಜ್ಜೆ ಹೆಜ್ಜೆಗೆ ಹೋರಾಡುವದು ನನಗೆ ಬೇಕಾಗಿದೆ. ಯಾವ ಸ್ಥಳದಲ್ಲಿಯೂ ಯಾವ ಕಟ್ಟಡದಲ್ಲಿಯೂ ಶಾಂತತೆಯಿಂದ ಕಾಲಕಳೆಯುವಂತೆ ಸರಕಾರಕ್ಕೆ ಆಸ್ಪದ ಕೊಡತಕ್ಕದ್ದಲ್ಲ.

## ಶ್ರೀ ವಿಠ್ಠಲಭಾಯಿಯವರ ಹಿಂದೆಯೂ ಗುಪ್ತ ಪೋಲಿಸರು.

ವರಿಷ್ಠ ಕಾಯದೆ ಮಂಡಳದ ಅಧ್ಯಕ್ಷರಾಗಿದ್ದ ಶ್ರೀ ವಿಠ್ಠಲಭಾಯಿಯವರ ಚಲನವಲನಗಳನ್ನು ಕಂಡು ಹಿಡಿಯುವದಕ್ಕಾಗಿ ಅವರ ಹಿಂದೆ ಪೋಲಿಸರು ನಿಯಮಿಸಲ್ಪಟ್ಟಿದ್ದರೆಂಬುವದು ಕೆಳಗಿನ ಸಂಗತಿಗಳಿಂದ ಕಂಡುಬರುವದು. (೧) ದಿಲ್ಲಿಯಿಂದ ಪಾಟಣಾಕ್ಕೆ ಹೋಗುವದಕ್ಕಿಂತ ಪೂರ್ವದಲ್ಲಿ ಶ್ರೀ ಪಟೇಲರು ಪಾಟಣಾದ ಹಸನ ಇಮಾಮರಿಗೆ ತಮ್ಮಲ್ಲಿ ಇಳಿದುಕೊಳ್ಳುವೆವೆಂದು ತಂತಿಯಿಂದ ತಿಳಿಸಿದ್ದರು. ಈ ತಂತಿಯು ಹಸನ ಇಮಾಮರಿಗೆ ತಲುಪಲೇ ಇಲ್ಲ.

೨) ಶ್ರೀ ಪಟೇಲರು ಅಸೆಂಬ್ಲಿಯ ಅಧ್ಯಕ್ಷಸ್ಥಾನಕ್ಕೆ ತಿಲಾಂಜಲಿಯನ್ನಿತ್ತ ಕೂಡಲೆ ಮುಂಬಯಿಯ ಶ್ರೀ ಮೆಹೆರಿಯವರು ಅಭಿನಂದನಪರ ತಂತಿಯನ್ನು ಕಳುಹಿಸಿದರು. ಈ ತಂತಿಯೂ ಇನ್ನೂ ಅನೇಕ ಅಭಿನಂದನಪರ ತಂತಿಗಳೂ ಶ್ರೀ ಪಟೇಲರಿಗೆ ಮುಟ್ಟಲೇ ಇಲ್ಲ.

೩) ಶ್ರೀ ಪಟೇಲರವರ ಬಿನ್ನಹಕ್ಕೆ ಮನ್ನಣೆಯನ್ನಿತ್ತು ಮಹಾತ್ಮಾ ಗಾಂಧಿಯವರು ಬಾರ್ಡೋಲಿಯ ಸತ್ಯಾಗ್ರಹಕ್ಕೆ ಸಂಬಂಧಿಸಿದ ಕೆಲವು ಕಾಗದ ಪತ್ರಗಳನ್ನು ಟಪಾಲಿನಿಂದ ಶ್ರೀ ಪಟೇಲರಿಗೆ ಹೋದ ವರ್ಷ ಕಳಿಸಿದರು. ಈ ಕಾಗದ ಪತ್ರಗಳು ಅವರಿಗೆ ಮುಟ್ಟದ್ದರಿಂದ ಮಹಾತ್ಮರು ಓರ್ವ ಗೃಹಸ್ಥನ ಸಂಗಡ ಕಾಗದಪತ್ರಗಳನ್ನು ಪುನಃ ಕಳಿಸಿಕೊಟ್ಟರು. ವ್ಹಾಯಿಸರಾಯರೊಡನೆ ಬಾರ್ಡೋಲಿ ಸತ್ಯಾಗ್ರಹದ ವಿಷಯವಾಗಿ ವಿಚಾರ ವಿನಿಮಯ ಮಾಡಲು ಶ್ರೀ ಪಟೇಲರಿಗೆ ಈ ಕಾಗದಪತ್ರಗಳು ಬೇಕಾಗಿದ್ದವು.

### ಬಿಸನಾಳದಲ್ಲಿ

# ೨೦೦೦ ಜನರು ಉಪ್ಪಿನ ಕಾಯಿದೆ

## ನಿನ್ನಿನ ದಿವಸ ಮುರಿದರು!

### ಬ್ರಿಟಿಶ ಚಿತ್ರಪಟಗಳಿಗೆ ಬಹಿಷ್ಕಾರ!

ಮುಂಬಯಿಯಲ್ಲಿಯ ಸಿನೇಮಾ ಫಿಲ್ಮ ಕಂಪನಿಯವರು ಸಭೆ ಮಾಡಿಕೊಂಡು ಕೆಳಗಿನ ಠರಾವುಗಳನ್ನು ಪಾಸು ಮಾಡಿಕೊಂಡಿದ್ದಾರೆ. (೧) ಚಿತ್ರಪಟಗಳನ್ನು ಸಿದ್ಧಪಡಿಸುವವರು ಬ್ರಿಟನ್‌ದಿಂದ ಯಾವ ಸಾಮುಗ್ರಿಗಳನ್ನೂ ತರಿಸಬಾರದು. (೨) ಚಿತ್ರಪಟಗಳನ್ನು ತೋರಿಸುವವರು ಬ್ರಿಟಿಶ ಚಿತ್ರಪಟಗಳನ್ನು ತೋರಿಸಕೂಡದು. (೩) ಸಿನೇಮಾ ಉದ್ಯೋಗದಲ್ಲಿ ತೊಡಗಿರುವವರೆಲ್ಲರೂ ಹಿಂದುಸ್ಥಾನದಲ್ಲಿ ಸಿದ್ಧವಾದ ಸರಕುಗಳನ್ನೇ ಉಪಯೋಗಿಸಬೇಕು. ಇಂಪೀರಿಯಲ್, ಕೋಹಿನೂರ, ರಣಜಿತ, ಶಾರದಾ, ಶ್ರೀಕೃಷ್ಣ, ಸುರೇಶ, ಝುನಾನಾ, ಯಂಗ ಇಂಡಿಯಾ ಪಿಕ್ಚರ್ಸ ಈ ಕಂಪನಿಗಳ ವ್ಯವಸ್ಥಾಪಕರು ಮೇಲಿನ ಠರಾವುಗಳನ್ನು ಕೃತಿಯಲ್ಲಿ ತರಲು ವಚನಕೊಟ್ಟಿದ್ದಾರೆ

### ಬಿಹಾರದಲ್ಲಿ ಸತ್ಯಾಗ್ರಹ ಚಳವಳಿಯು!

ಉಪ್ಪಿನ ಕಾಯಿದೆಭಂಗದ ಚಳವಳಿಯು ಈ ಪ್ರಾಂತದಲ್ಲಿ ಬಹು ಜೋರಿನಿಂದ ಸಾಗಿದ್ದು, ಹಳ್ಳಿಗಳಲ್ಲಿಯೂ ಜನರು ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ. ಚಂಪಾರಣ್ಯ ಮತ್ತು ಸರಾನ ಜಿಲ್ಲೆಗಳ ೫೦೦ ಹಳ್ಳಿಗಳಲ್ಲಿ ಜನರು ಉಪ್ಪನ್ನು ಸಿದ್ಧಪಡಿಸಹತ್ತಿದ್ದು ಉಳಿದ ಜಿಲ್ಲೆಗಳಲ್ಲಿಯೂ ಈ ಕಾರ್ಯವು ಸಾಗಿದೆ. ಪ್ರಾಂತದಲ್ಲಿ ಒಟ್ಟಿಗೆ ೨೧೭ ಸ್ಥಳಗಳಲ್ಲಿ ಉಪ್ಪಿನ ಕೇಂದ್ರಗಳು ತೆಗೆಯಲ್ಪಟ್ಟಿವೆ ಈ ವರೆಗೆ ೨೪೧ ಜನರು ಸೆರೆಮನೆಗೆ ಹೋಗಿದ್ದು, ಇವರಲ್ಲಿ ಇಬ್ಬರು ವರಿಷ್ಠ ಕಾಯಿದೆ ಮಂಡಳದ ಮಾಜಿ ಸಭಾಸದರೂ, ೯ ಜನರು ಕಾಯಿದೆ ಮಂಡಳದ ಮಾಜಿ ಸಭಾಸದರೂ, ೧೨ ಕ್ಕಿಂತ ಹೆಚ್ಚು ಜನರು ಮುನಸಿಪಾಲಿಟಿ ಲೋಕಲ್ ಬೋರ್ಡ ಮೊದಲಾದವುಗಳ ಅಧ್ಯಕ್ಷರೂ ಉಪಾಧ್ಯಕ್ಷರೂ ಎಷ್ಟೋ ಜನ ವಕೀಲರೂ ಜಮೀನದಾರರೂ ವ್ಯಾಪಾರಸ್ಥರೂ ಇದ್ದಾರೆ. ಪ್ರಾಂತದೊಳಗಿನ ಪ್ರಮುಖ ಮುಖಂಡರೆಲ್ಲರೂ ಈಗ ಸೆರೆಮನೆಯನ್ನು ಸೇರಿದಂತಾಗಿದೆ. ಕೆಲವು ಕಡೆಗಳಲ್ಲಿ ಪೋಲೀಸರು ಶಕ್ತಿಯನ್ನು ಪ್ರಯೋಗಿಸಿ ಪಾತ್ರೆಗಳನ್ನು ನಾಶಪಡಿಸಿಯೂ, ಸತ್ಯಾಗ್ರಹಿಗಳನ್ನು ಅವಮಾನಗೊಳಿಸಿಯೂ ಈ ಚಳವಳಿಯನ್ನು ವಿರೋಧಿಸಿದ್ದಾರೆ. ಚಂಪಾರಣ್ಯ ಜಿಲ್ಲೆಯಲ್ಲಿಯ ಬಂಕೀಗಢದ ಪೋಲೀಸ ಅಧಿಕಾರಿಯು ರಾಷ್ಟ್ರಧ್ವಜದ ಸ್ತಂಭವನ್ನೂ ಸ್ವಯಂಸೇವಕರ ವಸತಿಯ ಸ್ತಂಭಗಳನ್ನೂ ಮುರಿದದ್ದಲ್ಲದೆ, ವಸತಿಗೆ ಬೆಂಕಿಯನ್ನು ಹಚ್ಚಲು ಹೋಗಿದ್ದನು. ಆದರೆ ಸ್ವಯಂಸೇವಕರು "ನಾವೆಂತೂ ಸ್ಥಳಬಿಟ್ಟು ಕದಲುವದಿಲ್ಲ. ಬೇಕಾದರೆ ನಮ್ಮನ್ನು ಸುಡಿರಿ" ಎಂದು ಧೈರ್ಯತನದಿಂದ ನುಡಿದದ್ದರಿಂದ ಅಧಿಕಾರಿಯ ಆಟವು ಸಾಗಲಿಲ್ಲ. ಉಪ್ಪಿನ ಸತ್ಯಾಗ್ರಹ ಚಳವಳಿಯು ಜೋರಾಗಿ, ಪರದೇಶಿ ಬಟ್ಟೆಗಳ ಬಹಿಷ್ಕಾರ, ಸೆರೆಸಿಂದಿ ಬಹಿಷ್ಕಾರಗಳ ಚಳವಳಿಯೂ ಭರದಿಂದ ಸಾಗಿದೆ.

### ಕತ್ತೆಯ ಮೆರವಣಿಗೆ!

ಪರದೇಶಿ ಬಟ್ಟೆಗಳ ಹೋಳಿಗಾಗಿ ಪುಣೆಯಲ್ಲಿ ಒಂದು ಪ್ರಚಂಡ ಮೆರವಣಿಗೆಯು ಹೊರಟಿತ್ತು. ಒಂದು ಕತ್ತೆಗೆ ಪರದೇಶೀ ಅರಿವೆಗಳನ್ನು ತೊಡಿಸಿ ಅದನ್ನು ಮೆರವಣಿಗೆಯಲ್ಲಿ ತೆಗೆದುಕೊಂಡಿದ್ದರು.

### ವಿಠ್ಠಲಭಾಯಿಯವರು ಗುಜರಾಥಕ್ಕೆ ತೆರಳಿದರು!

ಸತ್ಯಾಗ್ರಹ ಯುದ್ಧದ ನೇತೃಗಳಾಗಿರುವ ಶ್ರೀ. ಅಬ್ಬಾಸ ತಯ್ಯಬಜಿಯವರೊಡನೆ ಸತ್ಯಾಗ್ರಹದ ವಿಷಯವಾಗಿ ವಿಚಾರ ವಿನಿಮಯ ಮಾಡಲು ಮುಂಬಯಿಯಿಂದ ಜಲಾಲಪುರಕ್ಕೆ ಶ್ರೀ ವಿಠ್ಠಲಭಾಯಿಯವರು ತೆರಳಿದರು.

### ಪರದೇಶದ ವ್ಯಾಪಾರಿಗಳು ಗಾಬರಿಗೊಂಡರು!

ಹಿಂದುಸ್ಥಾನದಲ್ಲಿಯ ಪರದೇಶಿ ಬಟ್ಟೆಗಳ ಬಹಿಷ್ಕಾರದ ಪ್ರಗತಿಯ ಸುದ್ದಿಯನ್ನು ಕೇಳಿ ಜಪಾನ, ಜರ್ಮನಿ, ಫ್ರಾನ್ಸ, ಮೊದಲಾದ ದೇಶಗಳ ವ್ಯಾಪಾರಿಗಳು ಗಾಬರಿಗೊಂಡಿದ್ದಾರೆ. ರುಬಿಯಾಸ್ಸದ ವ್ಯಾಪಾರಿ ಸಂಘದವರು ಹಿಂದುಸ್ಥಾನದಲ್ಲಿರುವ ತಮ್ಮ ದೇಶದ ಪ್ರತಿನಿಧಿಗೆ ಈವರೆಗೆ ದೊರೆತಿರುವ ಗಿರಾಕಿಗಳನ್ನು ಸ್ಥಿರಪಡಿಸುವದಕ್ಕೂ, ಅವರಿಂದ ಮುಂಗಡವಾಗಿ ಹಣವನ್ನು ತೆಗೆದುಕೊಳ್ಳುವದಕ್ಕೂ ತಿಳಿಸಿದ್ದಾರೆ. ಯಾಕೋಹಾಮಾದ ರೇಶಿಮೆಯ ವ್ಯಾಪಾರಿಗಳಂತೂ ಹಿಂದುಸ್ಥಾನದಲ್ಲಿಯ ವ್ಯಾಪಾರಿಗಳು ತಮ್ಮ ಸರಕುಗಳನ್ನು ತರಿಸುವದನ್ನು ನಿಲ್ಲಿಸಿದ್ದು ಕಂಡು ಚಡಪಡಿಸಹತ್ತಿದ್ದಾರೆ.

### ಪಾಲೆಸ್ತಾಯಿನ ದಿನವು!

ಹಿಂದುಸ್ಥಾನದಲ್ಲಿಯ ಮುಸಲ್ಮಾನರ ಬಿನ್ನಹಕ್ಕೆ ಮನ್ನಣೆಯನ್ನಿತ್ತು ಅರೇಬಿಯಾದ ಕಾರ್ಯಕಾರಿ ಮಂಡಳದವರು ಮೇ ೧೬ ನೇ ತಾರೀಖನ್ನು ಪಾಲೆಸ್ತಾಯಿನ್ ದಿನವೆಂದು ಆಚರಿಸಲು ಕೇಳಿಕೊಂಡಿದ್ದಾರೆ ಈ ದಿನವು ಸಿರಿಯಾ, ಇರಾಕ, ಇಜಿಪ್ತ, ಹೆಡಜಜ್ಜ ಮೊದಲಾದ ದೇಶಗಳಲ್ಲಿಯೂ ಪಾಲಿಸಲ್ಪಡುವದು.

### ಗೋಕಾಕದಲ್ಲಿ ಸಾಮುದಾಯಿಕ ಕಾಯಿದೆಭಂಗ!

ಮಹಾತ್ಮಾ ಗಾಂಧಿಯವರ ಬಂಧನದ ಸುದ್ದಿಯು ಬಂದ ಕೂಡಲೇ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಸಂಜೆಗೆ ಸೇರಿದ ಸಭೆಯಲ್ಲಿ ಸರಕಾರದ ಕೃತ್ಯವು ನಿಷೇಧಿಸಲ್ಪಟ್ಟು ಮಹಾತ್ಮರನ್ನು ಅಭಿನಂದಿಸುವದರಲ್ಲಿ ಬಂದಿತು. ಉಪ್ಪಿನ ಕಾಯಿದೆ ಭಂಗವನ್ನು ಮಾಡಲು ಈಗ ಇಲ್ಲಿ ೨೦೦೦ ಜನರು ಸಿದ್ಧರಾಗಿದ್ದು, ಮುರಗೋಡ ಮಹಾಲಿಂಗಪ್ಪನವರ ಮುಖಂಡತ್ವದಲ್ಲಿ ಕೂಡಲೇ ಸಾಮುದಾಯಿಕವಾಗಿ ಕಾಯಿದೆಭಂಗ ಮಾಡುವವರಿದ್ದಾರೆ!

# ಗಂಗಾಧರರಾಯರಿಗೆ ೫ ತಿಂಗಳ ಶಿಕ್ಷೆ

## ಶ್ರೀ. ದಾಬಡೆ ಅನಂತರಾಯರನ್ನು ಮತ್ತೆ ಹಿಡಿದರು!

(ತಂತಿಯಿಂದ ಬಂದ ವಾರ್ತೆ)

ಶ್ರೀ. ಭ. ದೇಶಪಾಂಡೆ ಗಂಗಾಧರರಾಯರ ವಿಚಾರಣೆಯು ತಾ|| ೯ ನೆಯ ದಿನ ರತ್ನಾಗಿರಿ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರೆದುರಿಗೆ ಸೆಂಟ್ರಲ್ ಜೇಲಿನಲ್ಲಿ ನಡೆದು ೧೧೭ ನೇ ಕಲಮಿನನ್ವಯ ನಿನ್ನೆ ಅವರಿಗೆ ೫ ತಿಂಗಳ ಸಾದಾ ಶಿಕ್ಷೆಯು ವಿಧಿಸಲಾಯಿತು. ಅವರು ಅ ವರ್ಗದ ಕೈದಿಗಳಾಗಿ ನಡೆಯಿಸಿಕೊಳ್ಳಲ್ಪಡುವರು. ಶ್ರೀ. ದಾಬಡೆ ಅನಂತರಾಯರನ್ನು ಅಥಣಿಯಲ್ಲಿ ಮತ್ತೆ ಸೆರೆಹಿಡಿದು ನಿನ್ನೆ ಬೆಳಗಾವಿಗೆ ತಂದಿದ್ದಾರೆ. ಕಾಂಗ್ರೆಸ್ಸಿನ ಕೆಲಸಕ್ಕೆ ಇತ್ತೀಚಿಗೆ ತಿಲಾಂಜಲಿಯನ್ನಿತ್ತ ಪಾಚಾಪೂರದ ಶ್ರೀ. ಬಾಳಕೃಷ್ಣ ದೇಶಪಾಂಡೆಯವರನ್ನು ಸೆರೆಹಿಡಿದಿದ್ದಾರೆ. ಶ್ರೀ ಪ್ರಭು ಮೊದಲಾದವರ ವಿಚಾರಣೆಯು ೧೨ ನೇ ತಾ|| ಗೆ ನಡೆಯತಕ್ಕದ್ದಿದೆ.

---

### ಅಂಕೋಲೆಯ ವಾರ್ತೆ.

ಪರದೇಶಿ ಬಟ್ಟೆಗಳ ಬಹಿಷ್ಕಾರದ ಚಳವಳಿಯು ಭರದಿಂದ ಸಾಗಿದೆ ಸತ್ಯಾಗ್ರಹಿಗಳು ಸುತ್ತಮುತ್ತಲಿನ ಹಳ್ಳಿಗಳಿಗೆ ಹೋಗಿ ಪರದೇಶೀ ಬಟ್ಟೆಗಳನ್ನು ಶೇಖರಿಸಿ ತರುತ್ತಿದ್ದಾರೆ ಹೆಂಗಸರು ಪ್ರತಿನಿತ್ಯವೂ ರಾಷ್ಟ್ರೀಯ ಗೀತೆಗಳನ್ನು ಹಾಡುತ್ತ ಪಟ್ಟಣದಲ್ಲಿ ಸಂಚರಿಸಿ ವಿದೇಶಿ ವಸ್ತ್ರಗಳನ್ನು ಕೂಡಿಸ ಹತ್ತಿದ್ದಾರೆ, ಈಗಾಗಲೇ ಬಹಳ ಬಟ್ಟೆಗಳು ಸೇರಿವೆ ಉಪ್ಪಿನ ಕರದ ಸತ್ಯಾಗ್ರಹವು ಮೊದಲಿನಂತೆಯೇ ನಡೆದಿದೆ. ಅಂಕೋಲೆಯಲ್ಲಿ ಇತ್ತಿತ್ತಲಾಗಿ ಯಾರನ್ನೂ ಕೈ ಸೆರೆ ಮಾಡಿಲ್ಲ. ಕಾರವಾರ ಜಿಲ್ಲೆಯ ಶ್ರೀಗಳಾದ ಗಂಗೊಳ್ಳಿ ರಾಘವೇಂದ್ರರಾಯರು, ನಾಡಕರ್ಣಿ ಯಶವಂತರಾಯರು, ಕಾಮತ ಪದ್ಮನಾಭರಾಯರು, ಕಲ್ಯಾಣಪುರ ಶ್ರೀಪಾದರಾಯರು, ಮತ್ತು ಭಟ್ಟ ಕೇಶವರಾಯರು, ಇವರುಗಳಿಗೆ ನೀವು ಸತ್ಯಾಗ್ರಹ ಸಮರದಲ್ಲಿ ಸಹಾಯಕರಾಗಿ ಕಾನೂನಿನ ವಿರುದ್ಧ ಆಚರಿಸುವದರಿಂದ ನಿಮ್ಮ ವಕೀಲಿಯ ಸನದನ್ನು ಯಾಕೆ ರದ್ದು ಮಾಡಬಾರದಾಗಿ ಅಧಿಕಾರಿಗಳಿಂದ ಕೇಳಲಾಗಿದೆ.

### ವೃತ್ತಪತ್ರಗಳ ದಬ್ಬಾಳಿಕೆಯ ಕಾನೂನಿನ ನಿಷೇಧ

ವ್ಹಾಯಿಸರಾಯರು ಹೊರಡಿಸಿದ ವೃತ್ತಪತ್ರಗಳ ದಬ್ಬಾಳಿಕೆಯ ಕಾನೂನಿನ ನಿಷೇಧವೆಂದು ಕರ್ನಾಟಕದಲ್ಲಿ "ಕಾನಡಾ ವೃತ್ತ" ಮತ್ತು "ಕರ್ನಾಟಕ ವೈಭವ" ಈ ಎರಡು ವಾರಪತ್ರಿಕೆಗಳು ಅಗ್ರಲೇಖಗಳನ್ನು ಬರೆಯುವದನ್ನು ಬಿಟ್ಟುಕೊಟ್ಟಿವೆ.

### ಪುಸ್ತಕ ಜಪ್ತಿ.

ಲೆಫ್ಟಿನೆಂಟ ಕರ್ನಲ್ ಆರ್ಥರ ಆಸ್ಬರ್ನರವರಿಂದ ರಚಿತವಾಗಿ ಆಲ್‌ಫ್ರೆಡ ನೋಪ್ ಇವರಿಂದ ಪ್ರಕಟಿತವಾದ "ಬ್ರಿಟಿಶರು ಭಾರತದೇಶವನ್ನು ಬಿಡಬೇಕೋ" ಎಂಬ ಹೆಸರಿನ ಇಂಗ್ಲಿಷ ಗ್ರಂಥವು ಸರಕಾರದವರಿಂದ ಜಪ್ತಮಾಡಲ್ಪಟ್ಟಿದೆ.

### ಬೈಲಹೊಂಗಲದಲ್ಲಿ ಸೆರೆಹಿಡಿದರು

ಪ್ರಸಿದ್ಧ ವ್ಯಾಪಾರಿಗಳಾದ ಶ್ರೀ ಕಾಮತ ಶಂಕರರಾಯರನ್ನೂ ಮತ್ತು ಧಾರವಾಡದ ಹಿರೇಮಠ ಸುಬುದ್ಧಿಯವರನ್ನೂ ಬೈಲಹೊಂಗಲದಲ್ಲಿ ನಿನ್ನೆಯ ದಿನ ಸೆರೆ ಹಿಡಿದಿರುವರು.

### ಕಿತ್ತೂರಿನಲ್ಲಿ ಸಿಂದಿ ಗಿಡಗಳನ್ನು ಕಡಿದರು

ಬೆಳಗಾಂವಿ ಜಿಲ್ಲೆಯ ಕಿತ್ತೂರಿನಲ್ಲಿ ಸಿಂದಿ ಗಿಡಗಳನ್ನು ಕಡಿಯುವ ಕಾರ್ಯವು ಭರದಿಂದ ನಡೆದಿದ್ದು, ಈಗಾಗಲೆ ೨೫೦ ಗಿಡಗಳನ್ನು ಕಡಿದಿರುವರಾಗಿ ತಿಳಿಯುತ್ತದೆ.

### ಶ್ರೀ ಬಾಸುತಕರರನ್ನು ಬಿಟ್ಟರು

ನೊನ್ನೆ ರಾತ್ರಿಯಲ್ಲಿ ಬಂದಿಮಾಡಿ ಜೇಲಿನಲ್ಲಿಟ್ಟು ನಿನ್ನೆ ಮುಂಜಾನೆ ಬಿಟ್ಟುಬಿಟ್ಟರು. ಖಟ್ಲೆಯ ವಿಚಾರಣೆಯು ಆಗುವದಿದೆಯಂತೆ.

### ವಿದ್ಯುತ್ಪಾತದಿಂದ ಮರಣ

ಕೊಲ್ಹಾಪುರದಲ್ಲಿಯ ವಸತಿಗೃಹದಲ್ಲಿ ವಾಸಿಸಿ ಬಿ. ಎ. ವರ್ಗದಲ್ಲಿ ಅಭ್ಯಾಸಿಸುತ್ತಿದ್ದ ಇಬ್ಬರು ತರುಣರು ಮೊನ್ನಿನ ದಿವಸ ವಿದ್ಯುತ್ ತಗುಲಿ ಮರಣ ಹೊಂದಿದರು.

### ಅಲ್ಲಲ್ಲಿಯ ಶಿಕ್ಷೆಗಳು

#### ನಡಿಯಾದ.

ಶ್ರೀಗಳಾದ ಪುರಷೋತ್ತಮ ಪಟೇಲ, ಅಂಬಾಲಾಲ, ಮತ್ತು ಮನಭಾಯಿ ವಿ. ಹತಾ ಇವರು ಉಪ್ಪಿನ ಕಾಯಿದೆಭಂಗಕ್ಕಾಗಿ ಸೆರೆಯಾಗಿ ೬ ತಿಂಗಳ ಸಕ್ತ ಶಿಕ್ಷೆಗೆ ಗುರಿಯಾಗಿದ್ದಾರೆ.

#### ವೇದಾರಣ್ಯಮ್

ಕಾಂ. ಕ. ಕಾರ್ಯದರ್ಶಿ ಶ್ರೀ ವೇದರತ್ನ ಪಿಳ್ಳೆಯವರಿಗೆ ಉಪ್ಪಿನ ಕಟ್ಟಳೆಯನ್ನು ಮುರಿದುದಕ್ಕಾಗಿ ೬ ತಿಂಗಳ ಸಾದಾ ಶಿಕ್ಷೆಯನ್ನೂ ೨೦೦ ರೂ. ದಂಡವನ್ನೂ ದಂಡ ಕೊಡದಿದ್ದರೆ ಮತ್ತೆ ೬ ವಾರಗಳ ಶಿಕ್ಷೆಯನ್ನು ವಿಧಿಸಲಾಗಿದೆ.

#### ಲಾಹೋರ.

ಪರದೇಶಿ ವಸ್ತ್ರಗಳ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದುದಕ್ಕಾಗಿ ೧೮ ಜನ ಸ್ವಯಂಸೇವಕರು ಬಂಧಿಸಲ್ಪಟ್ಟಿದ್ದಾರೆ.

#### ಅಹಮ್ಮದಾಬಾದ.

ಶ್ರೀಗಳಾದ ಜವ್ಹೇರಚಂದ ಮೋಘಾಣಿ, ಡಾ. ಮೋಹನಲಾಲ ಇವರಿಗೆ ಉಪ್ಪಿನ ಕಟ್ಟಳೆಯನ್ನು ಮುರಿದುದಕ್ಕಾಗಿ ಕ್ರಮವಾಗಿ ೨ ೧|| ವರ್ಷ ಸಾದಾಶಿಕ್ಷೆಯಾಗಿದೆ. ಶ್ರೀ ಭೋಗಿಲಾಲ ಪರೀಖರವರಿಗೆ ೨ ತಿಂಗಳ ಸಕ್ತ ಹಾಗೂ ೨ ತಿಂಗಳ ಸಾದಾ ಶಿಕ್ಷೆಯಾಗಿದ್ದು, ೧೦೦ ರೂ. ಗಳ ದಂಡವೂ ಆಗಿದೆ. ಅವಧಿಯ ಒಳಗಾಗಿ ಇವರು ದಂಡವನ್ನು ಕೊಟ್ಟಲ್ಲಿ ಮೇಲಿನ ಎರಡೂ ಶಿಕ್ಷೆಗಳನ್ನು ಒಮ್ಮೆಲೆ ಭೋಗಿಸಬೇಕಾಗುವದು.

## ಟಾಯಿಮ್ಸ್ ಪತ್ರಕ್ಕೆ ಬೆಂಕಿ ಹಚ್ಚಿದರು!

ಮುಂಬಯಿಯಲ್ಲಿ ಮಾತುಂಗಾದಲ್ಲಿ ಶ್ರೀ. ಜಮುನಾದಾಸ ದ್ವಾರಕಾದಾಸರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿ ಹಿಂದು ಸ್ತಾನದ ಹಿತವನ್ನು ಬಯಸದ "ಟಾಯಿಮ್ಸ, ಡೇಲಿಮೇಲ, ಈವ್ನಿಂಗ ನ್ಯೂಜ" ಮೊದಲಾದ ಪತ್ರಿಕೆಗಳನ್ನು ಬಹಿಷ್ಕರಿಸ ಬೇಕೆಂಬ ಠರಾವು ಪಾಸಾಯಿತು. ಸಭೆಯ ಕೊನೆಯಲ್ಲಿ ಶ್ರೀ. ಮೇಕಹರಿಯವರು ತಾವು ಕೊಡಿಸಿತಂದ 'ಟಾಯಿಮ್ಸ' ಮತ್ತು 'ಈವ್ನಿಂಗ ನ್ಯೂಜ' ಪತ್ರಿಕೆಗಳ ಹಳೇ ಸಂಚಿಕೆಗಳಿಗೆ ಬೆಂಕಿ ಹಚ್ಚಿದರು.

## ಕೌನ್ಸಿಲಿಗೆ ರಾಜೀನಾಮೆ!

ಮಹಾತ್ಮಾ ಗಾಂಧೀಯವರನ್ನು ಸೆರೆಹಿಡಿದುದನ್ನು ನಿಷೇಧಿಸಿ ವ್ಹಾಯಿಸರಾಯರಿಗೆ ಪತ್ರ ಬರೆದು ಅಹಮ್ಮದಾಬಾದ ಜಿಲ್ಲೆಯ ಪ್ರತಿನಿಧಿಗಳಾದ ಶ್ರೀ ಸ್ವಾಮಿನಾರಾಯಣರೂ ಮತ್ತು ಸಂಯುಕ್ತ ಪ್ರಾಂತದಲ್ಲಿಯ ಆಲಹಾಬಾದ ಜಿಲ್ಲೆಯ ಪ್ರತಿನಿಧಿಗಳಾದ ಶ್ರೀ. ತಿವಾರಿಯವರೂ ಕಾಯದೆಮಂಡಳದ ಸಭಾಸದತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ.

## ಸೂರತದಲ್ಲಿ ಒಂದು ವಾರ ಹರತಾಳ!

ಸೂರತದಲ್ಲಿಯ ಕಂಚುಗಾರರು ಮತ್ತು ರತ್ನವ್ಯಾಪಾರಿಗಳು ಮಹಾತ್ಮರನ್ನು ಹಿಡಿದುದಕ್ಕಾಗಿ ಒಂದು ವಾರದ ವರೆಗೆ ಹರತಾಳವನ್ನು ಆಚರಿಸಲು ನಿಶ್ಚಯಿಸಿದ್ದು, ಎಲ್ಲ ವ್ಯಾಪಾರಸ್ಥರೂ ಈ ಕಾರ್ಯದಲ್ಲಿ ಬೆಂಬಲವೀಯಲು ಕೇಳಿಕೊಂಡಿದ್ದಾರೆ.

## ಸತ್ಯಾಗ್ರಹಿಗಳಿಗೆ ಪುಕ್ಕಟೆ ಔಷಧ!

ಸತ್ಯಾಗ್ರಹಿಗಳು ಈಗ ಅಲ್ಲಲ್ಲಿ ಹಿಂಸೆಯಾಗುತ್ತಿದೆಯೆಂದು ತಿಳಿದುಬಂದುದರಿಂದ ಆವು ಗಾಯವನ್ನು ಪೂರ್ಣವಾಗಿ ನಾಶ ಪಡಿಸುವ "ಝಂಡು" ಔಷಧವನ್ನು ಸತ್ಯಾಗ್ರಹಿಗಳಿಗೆ ಪುಕ್ಕಟೆಯಾಗಿ ಕೊಡುವೆವೆಂದು ಕಲಕತ್ತೆಯ ಝಂಡು ಕಂಪನಿಯವರು ಪ್ರಸಿದ್ಧಪಡಿಸಿದ್ದಾರೆ.

## ಪೋಲೀಸರ ಅಸಾಧುವರ್ತನ!

ಸಕ್ಕರ ಕೋರ್ಟಿನಲ್ಲಿ ಪೋಲೀಸ ಪ್ರಕರಣದ ಇವರ ವಿಚಾರಣೆಯು ನಡೆದದ್ದು ವಿಚಾರಣೆಯಲ್ಲಿ ತೋರಬಿದ್ದ ಸಂಗತಿಗ ಳೆಂದರೆ- ಇಬ್ರಾಹಿಮ ಎಂಬ ಹುಡುಗನು ಪೋಲೀಸ ಸೇವೆಯಲ್ಲಿ ದ್ದನು. ಯಂತ್ರದಲ್ಲಿ ಕೆಲಸ ಮಾಡುತ್ತಿರುವಾಗ ಒಂದು ದಿನ ಇವನು ಎಣ್ಣೆಯ ಪಾತ್ರೆಯನ್ನು ಒಡೆದನು. ಈ ತಪ್ಪಿಗಾಗಿ ಪೋಲೀಸರು ಇವನ ಕಣ್ಣಿನ ಎವೆಗಳನ್ನೂ ರೆಪ್ಪೆಗಳನ್ನೂ ಕತ್ತರಿಸಿ ಮುಖಕ್ಕೆ ಮಸಿ ಹಚ್ಚಿ ಇವನನ್ನು ೪-೫ ವರ್ಷಗಳ ವರೆಗೆ ಬಂಧಿಸಿಟ್ಟಿದ್ದರು. ಮೇಲಧಿಕಾರಿಗಳಿಗೆ ಎರಡು ಸಾರೆ ಈಬಗ್ಗೆ ಅರ್ಜಿ ಮಾಡಿದರೂ ಉಪಯೋಗವಾಗಲಿಲ್ಲ.

## ಸ್ವದೇಶಿಯ ಬಗ್ಗೆ ಅಮೇರಿಕದವರ ನಿಶ್ಚಯ

ಅಮೇರಿಕದವರು ಬ್ರಿಟಿಶರಿಂದ ಅರಿವೆ ತರಿಸಬೇಕೋ ಬೇಡವೋ ಎಂಬುವ ಬಗ್ಗೆ ವಾದ ನಡೆದಾಗ ಬೆಂಜಾಮಿನ್ ಫ್ರಾಂಕಲಿನ್ನರು ಅಂದದ್ದು— "ಇನ್ನು ಮುಂದೆ ಹಿಂದಿನಂತೆ ಅಮೇರಿಕದವರು ಬ್ರಿಟಿಶರ ಅರಿವೆಗಳನ್ನು ಕೊಳ್ಳಲಾಗದು: ಒಂದಾನೊಂದು ಕಾಲಕ್ಕೆ ಬ್ರಿಟಿಶರ ಅರಿವೆ ಬ್ರಿಟಿಶರ ಫ್ಯಾಶನ್ನುಗಳಲ್ಲಿ ಅಮೇರಿಕದವರು ಮುಳುಗಿದ್ದರು; ಮತ್ತು ಅದೇ ಅವರಿಗೆ ಅಭಿಮಾನವೆನಿಸುತ್ತಿತ್ತು. ಈಗ ಮಾತ್ರ ಆ ಕಾಲವು ಹೋಯಿತು. ಈಗಿನ ಅವರ ಅಭಿಮಾನವೆಂದರೆ, "ತಮ್ಮ ಅಂದರೆ ಅಮೇರಿಕದಲ್ಲಿಯೇ ಆದ ಅರಿವೆಗಳು ದೊರೆಯುವವರೆಗೆ ಹೊಸ ಅರಿವೆ ಉಡತಕ್ಕದ್ದಲ್ಲ. ಮತ್ತು ಪರದೇಶಿಯ ಅರಿವೆಗಳನ್ನು ಕೊಳ್ಳತಕ್ಕದ್ದಲ್ಲ.

## ಬೀಳಗಿ ಪೇಠಾ ಪೈಕಿ ಶ್ಯಾವಳ್ಳಿಯ ಗ್ರಾಮದ ಪತ್ರ

ಹಳ್ಳೀ ಗೌಡನ ಅರೇರಾವಿಯು ೩ ಬೀಳಗಿ ಪೇಠಾದ ಶ್ಯಾವಳ್ಳಿಗೆ ಕೆಲವು ಪ್ರಚಾರಕರು ಹೋದಾಗ್ಗೆ ಆ ಹಳ್ಳಿಯ ರೈತರು ಸಭೆಸೇರಿ ಆ ಪ್ರಚಾರಕರು ಹೇಳುತ್ತಿರುವ ಚಳವಳಿಯ ವೃತ್ತಾಂತವನ್ನು ಶಾಂತರೀತಿಯಿಂದ ಒಳ್ಳೇ ಮನಸ್ಸುಗೊಟ್ಟು ಕೇಳುತ್ತಲಿದ್ದರು. ಅಷ್ಟರಲ್ಲಿಯೇ ಏನೋ ಘಾತವಾಯಿತೆಂಬಂತೆ ಅಲ್ಲಿಯ ಗೌಡನು, ಒದಬಡಕೊಂಡು, ಓಡಿಬಂದು 'ರೈತರನ್ನು ಬಾಯಿಗೆ ಬಂದಂತೆ ಬೈದು ಅವರನ್ನು ಬೆದರಿಸಲಿಕ್ಕೆ ಯತ್ನಮಾಡಿದನಂತೆ ಗೌಡನ ಈ ಅಧಿಕಾರ ಪ್ರದರ್ಶನವನ್ನು ರೈತರು ಅತ್ಯಂತ ತಿರಸ್ಕಾರದಿಂದ ವ್ಯಕ್ತಗೊಳಿಸಿದರು. ಗೌಡರು ಬುದ್ಧಿಕಲಿತು ಮನೆಗೆ ತಿರುಗಿದರು.

## ಪರದೇಶಗಳಲ್ಲಿ ಹರತಾಳ

ಮಹಾತ್ಮಾ ಗಾಂಧಿಯವರನ್ನು ಸೆರೆಹಿಡಿದ ಸುದ್ದಿಯನ್ನು ಕೇಳಿದ ಕೂಡಲೆ ಪಾನಾಮಾ ಪಟ್ಟಣದಲ್ಲಿರುವ ಹಿಂದೀ ವ್ಯಾಪಾರಗಾರರು ತಾ|| ೬ನೇ ದಿನ ೨೪ ತಾಸುಗಳವರೆಗೆ ಸಂಪೂರ್ಣ ಹರತಾಳವನ್ನು ಆಚರಿಸಿದರು. ಸುಮಾತ್ರಾ ದ್ವೀಪದ ಪೂರ್ವದಂಡೆಯಲ್ಲಿರುವ ಹಿಂದೀಯರು ಮಹಾತ್ಮರನ್ನು ಹಿಡಿದದ್ದಕ್ಕಾಗಿ ವ್ಹಾಯಿಸರಾಯರಿಗೆ ನಿಷೇಧಪರ ತಂತಿಯನ್ನು ಕಳಿಸಿದ್ದಲ್ಲದೆ ಅಂದು ದಿನ ಉಪವಾಸ ವ್ರತವನ್ನು ಆಚರಿಸಿದರು

---


**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಭಾನುವಾರ ತಾ|| ೧೧—೫—೩೦

**ಶರಣಬಸವ**

ಸೋಮವಾರ ತಾ, ೧೨—೫—೩೦

**ಯಚ್ಚಮ್ಮ ನಾಯಿಕ.**

ಬುಧವಾರ ತಾ,೧೪-೫-೩೦

**ಚವತಿಯಚಂದ್ರ**

**ಎಂಬ ನಾಟಕಗಳನ್ನು ಅಭಿನಯಿಸುವರು.**

ಸಂಘದೊಡೆಯ—**ಸದಾಶಿವರಾವ ಗರೂಡ**


---

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರ್ಣವ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಇವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭

ಬೆಲೆ ೦—೦—೩

ನಿತ್ಯಸಂಚಿಕೆಯು.

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮುದಾರ.

ಬಾಗಲಕೋಟೆ ಸೋಮವಾರ ಮಿತಿ ವೈಶಾಖ ಶುದ್ಧ ೧೫ ಶಕ ೧೮೫೨ ತಾ ೧೨—೫—೩೦ ಸಂಚಿಕೆ ೪೬

## ಬಿಸನಾಳದಲ್ಲಿ ಸಾಮುದಾಯಿಕ ಕಾಯಿದೆಭಂಗವು

### ಬಿಸಿ ಬಿಸಿ ಉಪ್ಪು.

ವಿಜಾಪುರ ಜಿಲ್ಲೆಯ ಯುದ್ಧ ಮಂಡಳದ ಅಧ್ಯಕ್ಷರಾದ ಶ್ರೀ ಸೊಪರೆ ಹಣಮಂತರಾಯರು ಗೊತ್ತುಪಡಿಸಿದಂತೆ ೧೧ ಜನ ಸ್ವಯಂಸೇವಕರ ಗುಂಪು ಬಾಗಲಕೋಟೆಯಿಂದ ಮೇ ೩ನೆಯ ತಾರೀಖಿನಿಂದ ಹೊರಟಿತು. ಗದ್ದನಕೇರಿ, ಅನಗವಾಡಿ ಕುಂದರಗಿ, ಬೀಳಗಿ, ಬಾಡಗಿ ಮುಂತಾದ ಗ್ರಾಮಗಳ ಮೇಲಿಂದ ಹಾಯ್ದು ೯ ನೆಯ ತಾರೀಖು ಸಾಯಂಕಾಲ ಅದು ಗಲಗಲಿಗೆ ಬಂದಿತು. ರಾತ್ರಿ ಜಾಹೀರ ಸಭೆಗೂಡಿ ನೆರೆದವರೆಲ್ಲರೂ ಈ ವೀರ ಭಟರಿಗೆ ಆಶೀರ್ವಾದಮಾಡಿದರು ಮರುದಿವಸ ಅಂದರೆ ೧೦ ನೆಯ ತಾರೀಖು ಮಧ್ಯಾಹ್ನ ೨ ಘಂಟೆಗೆ ಸ್ವಯಂಸೇವಕರು ಅಖಿಲ ವಾದ್ಯವೈಭವದೊಡನೆ ಬಿಸನಾಳಗೆ ಹೊರಟರು ಸಾವಿರಾರು ಜನರು ಅವರನ್ನು ಹಿಂಬಾಲಿಸಿದರು. ಬಿಸನಾಳದಲ್ಲಿ ಬಾಗಲಕೋಟೆಯ ಪೋಲೀಸ ಇನಸ್ಪೆಕ್ಟರ, ಸಬ್ ಇನಸ್ಪೆಕ್ಟರ ಮತ್ತು ೪-೬ ಶಿಪಾಯರು ಮೊದಲೇ ಬಂದು ತಳ ಹೂಡಿದ್ದರು.

ಬಿಸನಾಳದಲ್ಲಿ ಸಾಮುದಾಯಿಕ ಕಾಯಿದೆಭಂಗವು ಅತ್ಯಂತ ಯಶಸ್ವಿಯಾಗಿ ಪಾರಗಂಡಿತು. ಇದಕ್ಕಾಗಿ ಅಲ್ಲಿಯ ಜನರು ನಾಲ್ಕಾರು ದಿವಸಗಳಿಂದಲೇ ಪೂರ್ವ ಸಿದ್ಧತೆಯನ್ನು ಶಾಂತರೀತಿಯಿಂದಲೂ ಸುವ್ಯವಸ್ಥಿತವಾಗಿಯೂ ನಡೆಸಿದ್ದರು ಗುಜರಾತದಲ್ಲಿ ಅಹಮದಾಬಾದಕ್ಕೆ ಎಷ್ಟು ಮಹತ್ವವು ಬಂದಿರುವದೋ ಅಷ್ಟೇ ಮಹತ್ವವು ವಿಜಾಪುರ ಜಿಲ್ಲೆಯಲ್ಲಿಯ ಗಲಗಲಿಗೆ ಬಂದಿರುವದು ಇಲ್ಲಿಯ ಆಬಾಲವೃದ್ಧರು ಉತ್ಸಾಹಭರಿತರಾಗಿರುವರು. ಹೆಣ್ಣುಮಕ್ಕಳು ಸ್ವಾತಂತ್ರ್ಯ ಯುದ್ಧದಲ್ಲಿ ತಮ್ಮ ಶಕ್ತಿಸಾಹಸಗಳನ್ನು ಚೆನ್ನಾಗಿ ವ್ಯಕ್ತಪಡಿಸಿದರು. ಸ್ವಯಂಸೇವಕರು ಗಲಗಲಿಯಿಂದ ರಣಕ್ಷೇತ್ರಕ್ಕೆ ಹೊರಡುವ ಕಾಲಕ್ಕೆ ತಳಿರು ತೋರಣ ರಂಗವಲ್ಲಿಗಳಿಂದ ಶೋಭಿಸುವ ಓಣಿಗಳೊಳಗಿಂದ ಹಾಯ್ದು ಹೋಗುವಾಗ್ಗೆ ಅಲ್ಲಿಯ ವೀರಪತ್ನಿಯರು, ವೀರಮಾತೆಯರು, ವೀರ ಭಗಿನಿಯರು ಅವರಿಗೆ ಆರತಿಯನ್ನು ಮಾಡಿದರು. ಅಲ್ಲಿಯ ಹಿರಿಯರು ಅವರಿಗೆ ಯಶದೊರೆಯಲೆಂದು ಅನುಗ್ರಹಮಾಡಿದರು! ಆಮೇಲೆ ಆ ವೀರರು ಬಿಸನಾಳಕ್ಕೆ ೩ ಗಂಟೆಗೆ ಬಂದರು! ಅಲ್ಲಿ ಮೂರು ಸಾವಿರ ಜನರು ಕೂಡಿ ಅವರ ಸ್ವಾಗತ ಮಾಡಿದರು! ಗಾಂಧೀಜಿಯವರು ಹೇಳುವಂಥ ದರಿದ್ರನಾರಾಯಣರು ಅಲ್ಲಿ ಇದ್ದರು. ನೆರೆದವರಲ್ಲೆಲ್ಲ ಉತ್ಸಾಹವು ತುಂಬಿತುಳುಕುತ್ತಲಿತ್ತು.

ಗಲಗಲಿಯಂತೆಯೇ ಬಿಸನಾಳದಲ್ಲಿಯೂ ಓಣಿಗಳು ಸುಶೋಭಿತವಾಗಿ ಕಂಗೊಳಿಸುತ್ತಿದ್ದವು ಸ್ವಯಂಸೇವಕರ ಮೆರವಣಿಗೆಯು ಊರೊಳಗಿಂದ ಹಾಯ್ದು ಆರತಿಯು ಮುಗಿದ ಬಳಿಕ ರಣಕ್ಷೇತ್ರಕ್ಕೆ ಹೊರಟಿತು. ರಣಕ್ಷೇತ್ರವು ಊರಿನಿಂದ ಒಂದು ಮೈಲು ಅಂತರದ ಮೇಲೆ ಗೊತ್ತುಮಾಡಲ್ಪಟ್ಟಿತ್ತು. ಕಲ್ಲುಮುಳ್ಳುಗಳನ್ನು ಲೆಕ್ಕಿಸದೆ ಮೂರು ಸಾವಿರ ಜನರು ಉಪ್ಪಿನ ಕಾಯಿದೆಭಂಗಕ್ಕೆ ಅತ್ಯಂತ ಶಾಂತರೀತಿಯಿಂದ ಸಾಗಿದರು! ರಣಕ್ಷೇತ್ರದಲ್ಲಿ ಮೊದಲು ರಾಷ್ಟ್ರಧ್ವಜದ ಸ್ಥಾಪನೆಯಾಯಿತು. ರಾಷ್ಟ್ರಗೀತೆಗಳು ಬಹು ಇಂಪಾಗಿದ್ದವು! ಜನರಲ್ಲಿ ಚೆನ್ನಾಗಿ ಜಾಗೃತೆಯನ್ನುಂಟುಮಾಡಿದವು! ಸುಮಾರು ೨೦೦ ಸ್ತ್ರೀಯರು ಕೂಡಿದ್ದರು! ಕೆಲವರು ರಣಕ್ಷೇತ್ರವನ್ನು ಕಣ್ಣಿಟ್ಟು ನೋಡಿ ಧನ್ಯರಾಗಲು, ನಾ ಮುಂದೆ ನೀ ಮುಂದೆ ಎಂದು ಉತ್ಸಾಹದಿಂದ ಬಂದಿದ್ದರು ಮೊದಲು ಐದು ಸ್ವಯಂಸೇವಕರು ಉಪ್ಪಿನ ಮಣ್ಣನ್ನು ಹ್ಯಾದೋಳಗಿಂದ ಕೆದರಿ ಗಡಿಗೆಗಳಲ್ಲಿ ತುಂಬಿಟ್ಟರು. ಆಮೇಲೆ ಕೂಡಿದ ಮೂರು ಸಾವಿರ ಜನರು ಉಪ್ಪಿನ ಮಣ್ಣನ್ನು ಕರವಸ್ತ್ರಗಳಲ್ಲಿ, ಟೊಪ್ಪಿಗೆಗಳಲ್ಲಿ, ಕಂಬಳಿಯಲ್ಲಿ, ಮುಷ್ಟಿಯಲ್ಲಿ, ಬೊಗಸೆಯಲ್ಲಿ ಮನಸ್ಸು ತಣಿಯುವಂತೆ ತುಂಬಿಕೊಂಡರು!

ಆಮೇಲೆ ಪುನಃ ಬಿಸನಾಳಕ್ಕೆ ಬಂದು ಅಗಸಿಯ ಮುಂದೆ ಒಲೆಗಳನ್ನು ಹೂಡಿ ಆ ಮಣ್ಣಿನಿಂದ ಶುದ್ಧವಾದ ಉಪ್ಪು ಸಿದ್ಧಪಡಿಸಿ ಸ್ವಯಂಸೇವಕರು ಅಲ್ಲಿ ನೆರೆದ ಎಲ್ಲ ಜನರಲ್ಲಿಯೂ ಆ ಉಪ್ಪು ಹಂಚಿದರು. ಉಪ್ಪು ತಯಾರಾಗುವ ಕಾಲಕ್ಕೆ ಉಪ್ಪಿನ ಕಾಯಿದೆಯು ಹುಗಿಯಲ್ಪಟ್ಟಿತೆಂಬ ಬಗ್ಗೆ ಸುಶ್ರಾವ್ಯವಾದ ವ್ಯಾಖ್ಯಾನಗಳಾದವು, ಜನರೆಲ್ಲರೂ ಉತ್ಸಾಹದಿಂದ, ಒಳ್ಳೇ ಶಾಂತರಾಗಿ ಕುಳಿತು ವ್ಯಾಖ್ಯಾನ ಕೇಳಿದರು. ಆಮೇಲೆ ರಾಷ್ಟ್ರಗೀತೆಗಳಾದವು. ರಾಷ್ಟ್ರಧ್ವಜಾರೋಹಣವಾದ ಬಳಿಕ ಸಭೆ ವಿಸರ್ಜನೆಯಾಯಿತು. ಪವಿತ್ರವಾದ ಮಾತೃಭೂಮಿಯ ಪ್ರಸಾದವೆಂದು ಜನರು ಭಾವಿಸಿ ಅದನ್ನು ರುಚಿನೋಡಿದರು. ಮತ್ತೆ ಕೆಲವರು ಅದು ಸ್ವಾತಂತ್ರ್ಯ ಯುದ್ಧದಲ್ಲಿಯ ವಿಜಯಚಿನ್ಹವೆಂದು ಭಾವಿಸಿ

ತಮ್ಮ ಕಿಸೆಗಳೊಳಗೆ ಹಾಕಿಕೊಂಡರು. ಎಲ್ಲ ಕಡೆಯಲ್ಲಿಯೂ ಶಾಂತತೆಯು ನೆಲೆಗೊಂಡಿತ್ತು. ಜಯಜಯಕಾರಗಳು ಪ್ರಚಂಡವಾಗಿ ಮುಗಿಲು ತುಂಬುವಂತೆ ಕೇಳಬರುತ್ತಿದ್ದವು! ಪೋಲೀಸ ಬಾಂಧವರು ಯಾವ ಒಂದು ರೀತಿಯಿಂದಲೂ ಅಡ್ಡಿ ಮಾಡಲಿಲ್ಲ, ಜನರೆಲ್ಲರೂ ಮೊದಲಿನಿಂದ ಕಡೆಯ ವರೆಗೆ ಶಾಂತರೀತಿಯಿಂದ ಕಲಹವನ್ನು ಪಾರುಗಾಣಿಸಿದರು. ಮಹಾತ್ಮರು ತಮ್ಮ ಗೈರುಹಾಜರಿಯಲ್ಲಿ ಶಾಂತತೆಯು ತಳವೂರುವಂತೆ ಮಾಡಿದ ಹಾಗೆ ಇಲ್ಲಿಯೂ ಸ್ವಯಂಸೇವಕರು ಎಲ್ಲ ಕಡೆಯಲ್ಲಿ ಶಾಂತತೆಯು ಪೂರ್ಣವಾಗಿ ನೆಲೆಗೊಳ್ಳುವಂತೆ ಮಾಡಿದ್ದರು.

ಈ ೧೧ ಜನರ ಗುಂಪು ಬಿನ್ನಾಳದಲ್ಲಿಯೇ ಬಿಡಾರ ಹೊಡೆದಿರುವದು. ದಿನಾಲು ಉಪ್ಪು ತಯಾರುಮಾಡುವ ಏರ್ಪಾಡಾಗಿರುವದು. ಇವರಲ್ಲಿ ಯಾರಾದರೂ ಬಂಧಿಸಲ್ಪಟ್ಟರೆ ಅವರ ಜಾಗೆಯಲ್ಲಿ ಹೊಸ ಸ್ವಯಂಸೇವಕರನ್ನು ಕಳಿಸುವ ವ್ಯವಸ್ಥೆಯಾಗಿದೆ. ಇವತ್ತಿನ ವರೆಗೆ ಯಾರೂ ಹಿಡಿಯಲ್ಪಟ್ಟಿಲ್ಲ.

—ಓರ್ವ ಪ್ರತ್ಯಕ್ಷದರ್ಶಿ

## ಮುಸಲ್ಮಾನರ ಮೇಲೆ ವಿಶ್ವಾಸವನ್ನಿಡಿರಿ!

ಬಿಹಾರದ ಪ್ರಸಿದ್ಧ ರಾಷ್ಟ್ರಭಕ್ತರಾದ ಶ್ರೀ. ಬಾ. ರಾಜೇಂದ್ರ ಪ್ರಸಾದರು ಕೆಳಗಿನ ಬಿನ್ನಹ ಪತ್ರಿಕೆ ಎಸೆದಿದ್ದು ಅದರ ಸಾರಾಂಶವು:— ಬಕ್ರೀದ ಹಬ್ಬವು ಸಮೀಪ ಹತ್ತಿದ್ದು ಈ ಹಬ್ಬದಲ್ಲಿ ಯಾವ ಅನಾಹುತಗಳಾಗುವವೋ ಎಂಬ ವಿಷಯವಾಗಿ ಹಿಂದೂ ಮುಸಲ್ಮಾನರು ಸಂಶಯ ಪಡುತ್ತಿರಬಹುದು. ಈಗ ಇಡೀ ದೇಶವೇ ಬ್ರಿಟಿಶ ಸರಕಾರದ ಕೂಡ ಸ್ವಾತಂತ್ರ್ಯ ಸಮರವನ್ನು ಹೂಡಿದೆ ನಮ್ಮ ನಮ್ಮೊಳಗಿನ ಜಗಳಗಳನ್ನು ಹಿಂದುಗಡೆಯಲ್ಲಿ ತೀರಿಸಿಕೊಳ್ಳಬಹುದು! ಆದುದರಿಂದ ಹಿಂದೂ ಬಾಂಧವರು ಮುಸಲ್ಮಾನರಿಗೆ ಯಾವ ತೊಂದರೆಗಳನ್ನೂ ಕೊಡತಕ್ಕದ್ದಲ್ಲ. ಗೋವುಗಳನ್ನು ಹಿಂದೂ ಬಾಂಧವರು ಎಷ್ಟು ಪೂಜ್ಯವೆಂದು ತಿಳಿದುಕೊಳ್ಳುತ್ತಾರೆಂಬುವದು ಅವರಿಗೆ ಗೊತ್ತೇ ಇದೆ. ಆದ್ದರಿಂದ ಈ ಬಗ್ಗೆ ಮುಸಲ್ಮಾನರಿಗೆ ಯಾವ ತೊಂದರೆಯನ್ನೂ ಕೊಡದೆ ಮುಸಲ್ಮಾನರ ಮೇಲೆ ವಿಶ್ವಾಸವನ್ನಿಟ್ಟು ಆ ವಿಷಯವನ್ನು ಅವರಿಗೇ ಬಿಟ್ಟುಕೊಡಬೇಕಾಗಿ ಬಿನ್ನಹ!

## ಮೈಸೂರಲ್ಲಿ ಹರತಾಳ!

ಮಹಾತ್ಮರನ್ನು ಸೆರೆಹಿಡಿದ ಸುದ್ದಿಯು ೬ ನೇ ತಾ॥ ಗೆ ತಲುಪಿದ ಕೂಡಲೇ ಹಿಂದೀ ಪ್ರೇಮಿ ಮಂಡಲದವರು ಪಟ್ಟಣದಲ್ಲೆಲ್ಲ ಮೆರವಣಿಗೆಯನ್ನು ತೆಗೆದು ಹರತಾಳವನ್ನಾಚರಿಸಲು ಕೇಳಿಕೊಂಡರು. ಮೈಸೂರಿನ ವೃದ್ಧಪಿತಾಮಹರಾದ ಎಂ. ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಶ್ರೀ. ಸಿದ್ಧನಾಥಪಂತರು, ಆಗರ ರಂಗಯ್ಯ ಮೊದಲಾದವರ ಭಾಷಣಗಳಾದವು! ಮರುದಿವಸ ಹರತಾಳವು ಆಚರಿಸಲ್ಪಟ್ಟಿದ್ದಲ್ಲದೆ, ಸಂಜೆಯ ೪ ಗಂಟೆಗೆ ಮಹಾತ್ಮರ ಭಾವಚಿತ್ರದೊಂದಿಗೆ ಮೆರವಣಿಗೆಯು ಹೊರಟು ಪಟ್ಟಣದಲ್ಲೆಲ್ಲ ಸಂಚರಿಸಿತು. ಸಂಜೆಯಲ್ಲಿ ಸಭೆ ನೆರೆದು ಶ್ರೀ। ಪುಣಂಚಿತ್ತಾಯರಿಂದ ರಚಿತವಾದ "ಯಾರಿಗೋಸ್ಕರ ಗಾಂಧಿ ಬಂಧನದೊಳಿಹನು" ಎಂಬ ಪದ್ಯವು ಅನ್ನಲ್ಪಟ್ಟಿತು. ಅಂತ್ಯದಲ್ಲಿ ವಿದೇಶಿ ವಸ್ತ್ರಗಳ ಹೋಳಿಯಾಯಿತು ಶ್ರೀ. ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಸತ್ಯಾಗ್ರಹ ಮಂಡಳವು ಏರ್ಪಡಾಗಿದ್ದು, ಸತ್ಯಾಗ್ರಹದಲ್ಲಿ ಭಾಗತೆಗೆದುಕೊಳ್ಳಲು ತಾ॥ ೧೫ ಕ್ಕೆ ಮೊದಲನೆಯ ದಳವು ಹೊರಡುವದಿದೆ! ಇದರಲ್ಲಿ ಪಂಡಿತ ಸಿದ್ಧನಾಥಪಂತರೂ ಅವರ ವಿದ್ಯಾರ್ಥಿಗಳೂ ಸೇರಿರುವರು.

### ಪಂಡಿತ ಮೋತೀಲಾಲರು
## ವ್ಹಾಯಿಸರಾಯರಿಗೆ ಬರೆದ ಪತ್ರ!

ಅಖಿಲ ಭಾರತ ರಾಷ್ಟ್ರಸಭೆಯ ಮಂಡಳದ ಅಧ್ಯಕ್ಷರಾದ ಪಂಡಿತ ಮೋತೀಲಾಲರು ವ್ಹಾಯಿಸರಾಯರಿಗೂ ಮತ್ತು ವಾಯವ್ಯ ಪ್ರಾಂತದ ಚೀಫ ಕಮಿಶನರರಿಗೂ ಈ ಕೆಳಗಿನ ಪತ್ರವನ್ನು ಬರೆದಿದ್ದಾರೆ:— ಪೇಶಾವರದಲ್ಲಾದ ದಂಗೆಯ ಸಂಬಂಧವಾಗಿ ವಿಚಾರಣೆ ಮಾಡಲು ಶ್ರೀ. ವಿಠ್ಠಲಭಾಯಿ ಯವರ ಅಧ್ಯಕ್ಷತೆಯಲ್ಲಿ ಒಂದು ಮಂಡಳವು ಏರ್ಪಡಿಸಲ್ಪಟ್ಟಿದೆ. ಈ ಮಂಡಳವು ೨೫ ನೇ ತಾರೀಖಿಗೆ ಪೇಶಾವರಕ್ಕೆ ಹೋಗಿ ಅಲ್ಲಿ ವಿಚಾರಣೆಯನ್ನು ಪ್ರಾರಂಭಿಸುವದು. ನೀವು ಈ ಮಂಡಳದವರಿಗೆ ಅಲ್ಲಿಗೆ ಹೋಗಗೊಡುವಿರೆಂದೂ ಮತ್ತು ಇವರ ಕಾರ್ಯದಲ್ಲಿ ಸ್ವಲ್ಪವಾದರೂ ಯಾವ ತೊಂದರೆಗಳನ್ನುಂಟುಮಾಡುವದಿಲ್ಲೆಂದೂ ನಾನು ಆಶಿಸುತ್ತೇನೆ. ಸ್ಥಳಿಕ ಅಧಿಕಾರಿಗಳಾದವರೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕಾಗಿ ಬಿನ್ನಹ! ಸರಕಾರದ ಪರವಾಗಿ ಒಂದು ಮಂಡಳವು ಏರ್ಪಡಿಸಲ್ಪಟ್ಟಿದ್ದು ನನಗೆ ಗೊತ್ತುಂಟು. ಈಗಿನ ಪರಿಸ್ಥಿತಿಯಲ್ಲಿ ಸರಕಾರಿ ಮಂಡಳದ ಮೇಲೆ ಜನರು ಸ್ವಲ್ಪ ವಿಶ್ವಾಸವನ್ನಿಡುವದಿಲ್ಲವಾದುದರಿಂದ ಸ್ವತಂತ್ರ ಮಂಡಳವೇ ಹೆಚ್ಚು ಉಪಯುಕ್ತವಾಗಿದೆ.

## ಡಾ॥ ಸತ್ಯಪಾಲ ಮೊದಲಾದವರಿಗೆ ಶಿಕ್ಷೆ!

೧೪೪ ನೆಯ ಕಲಮಿನನ್ವಯ ಲಾಹೋರದಲ್ಲಿ ಬಂಧಿಸಲ್ಪಟ್ಟ ಡಾ॥ ಸತ್ಯಪಾಲ, ಡಾ॥ ಆಲಮ್ ಹಾಗೂ ಜಾಫರಅಲ್ಲಿಖಾನ ಇವರಿಗೆ ಕ್ರಮವಾಗಿ ೩, ೧॥, ೨ ವರ್ಷಗಳ ವರೆಗೆ ಸಕ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ

## ಡಾಕ್ಟರರನ್ನು ಕರೆದು ಸೆರೆಮಾಡಿದರು!

ತಾ॥ ೯ ನೆಯ ದಿವಸ ಲಾಹೋರದ ಪೋಲೀಸ ಅಧಿಕಾರಿಗಳು ರಾತ್ರಿ ೨ ಘಂಟೆಗೆ ಡಾ॥ ಗೋಪೀಚಂದರ ಮನೆಗೆ ಹೋಗಿ ಮಾಳಿಯಲ್ಲಿ ಆತನಿಗಾಗಿ, ಓರ್ವ ಸಾಮಾನ್ಯ ವೇಷದವನನ್ನು ಡಾಕ್ಟರರಲ್ಲಿಗೆ ಕಳುಹಿದರು ಡಾಕ್ಟರರು ಮನೆಯಲ್ಲಿ ಮಲಗಿಕೊಂಡಿದ್ದರು. ಇವನಿಗೆ ಅವರನ್ನೆಬ್ಬಿಸುವ ಧೈರ್ಯವಾಗಲಿಲ್ಲ. ಒಬ್ಬ ರೋಗಿಯು ಮನೆಗೆ ಬೇಗನೆ ಹೋಗುವವನಿದೆಯಾದುದರಿಂದ ಡಾಕ್ಟರರನ್ನು ಎಬ್ಬಿಸೆಂದು ಚೌಕೀದಾರನಿಗೆ ಕೇಳಿಕೊಂಡನು. ಚೌಕೀದಾರನು ಇದಕ್ಕೆ ಸಮ್ಮತಿಸದ್ದರಿಂದ, ಅವರಿಬ್ಬರ ನಡುವೆ ವಾಗ್ಯುದ್ಧವು ಪ್ರಾರಂಭವಾಯಿತು. ಹೊರಗಿನ ಗದ್ದಲವನ್ನು ಕೇಳಿ ಡಾಕ್ಟರರು ಎಚ್ಚತ್ತು ಅಂಗಳದ ಹೊರಗೆ ಬಂದರು. ಕೂಡಲೆ ಲಾಹೋರದಲ್ಲಿ ಭಾಷಣಮಾಡಿದುದಕ್ಕಾಗಿ ೧೪೪ ನೆಯ ಕಲಮಿನನ್ವಯ ನಿಮ್ಮನ್ನು ಸೆರೆಮಾಡಲು ಬಂದಿದ್ದೇನೆಂದು ಅಧಿಕಾರಿಯು ಹೇಳಿದನು. ಬಳಿಕ ಡಾಕ್ಟರರು ಕೆಳಗೆ ಇಳಿದು ಬಂದು ಸೆರೆಯಾಳಾದರು.

# ಧ ರ ಸ ನಾ

# ಉಪ್ಪಿನ ಠಾಣೆಯ ಮೇಲೆ ದಾಳಿ.

## ಶ್ರೀ ಅಬ್ಬಾಸರು ೧೫ ನೇ ತಾ॥ ದಿನ ಕೈವಶಪಡಿಸಿ ಕೊಳ್ಳುವರು.

ಶ್ರೀ ಅಬ್ಬಾಸ ತಯ್ಯಬಜಿಯವರು, ಮಹಾತ್ಮರು ಈ ಮೊದಲು ನಿಶ್ಚಯಿಸಿದ ಪ್ರಕಾರ ಧರಸಾನಾ ಉಪ್ಪಿನ ಠಾಣೆಯ ಮೇಲೆ ಹಲ್ಲೆಯನ್ನು ಮಾಡಲು, ಮಹಾತ್ಮರ ಮೊದಲಿನ ಸ್ವಯಂಸೇವಕ ದಳದೊಂದಿಗೆ ಕಾಲು ನಡಿಗೆಯಿಂದ ಇಂದು ಮುಂಜಾನೆ ಹೊರಟು, ೧೪ ನೆಯ ತಾ. ದಿವಸ ಧರಸನಾಕ್ಕೆ ಮುಟ್ಟಿ ಮರುದಿವಸ ಮುಂಜಾನೆ ೬ ಗಂಟೆಗೆ ಅದನ್ನು ಕೈವಶಪಡಿಸಿಕೊಳ್ಳುವವರಿದ್ದಾರೆ.

### ಮುಸಲ್ಮಾನರೂ ಸತ್ಯಾಗ್ರಹದಲ್ಲಿ ಸೇರಬೇಕು ಜಮಾಯತ್ ಉಲ್ ಉಲೇಮಾ ಸಂಘದ ಅಪ್ಪಣೆ.

ಹಿಂದುಸ್ಥಾನದಲ್ಲಿ ಈಗ ನಡೆದ ಸ್ವಾತಂತ್ರ್ಯಸಂಗ್ರಾಮದಲ್ಲಿ ಮುಸಲ್ಮಾನರು ಸೇರಬೇಕೋ ಹೇಗೆ ಎಂಬುದನ್ನು ವಿಚಾರಿಸಲು ಅಮ್ರೋಹದಲ್ಲಿ ಜಮಾಯತ್ ಉಲ್ ಉಲೇಮಾ ಸಂಘದ ಅಧಿವೇಶನವು ೩ ದಿವಸಗಳ ವರೆಗೆ ನೆರೆದಿತ್ತು. ಅಲ್ಲಿ ಕೆಳಗಿನ ಗೊತ್ತುಗಳನ್ನು ಸ್ವೀಕರಿಸುವದರಲ್ಲಿ ಬಂದಿವೆ. ಇವುಗಳನ್ನು ಪಾಸುಗೊಳಿಸಲು ಒಂದು ಮತವಾದರೂ ವಿರುದ್ಧವಾಗಿದ್ದಿಲ್ಲ. ೧) ಲಾಹೋರದ ರಾಷ್ಟ್ರೀಯ ಸಭೆಯು ಸಂಪೂರ್ಣ ಸ್ವಾತಂತ್ರ್ಯವೆ ತನ್ನ ಧ್ಯೇಯವೆಂದು ಸಾರಿದ್ದು, ನಮ್ಮ ಸಂಘದ ಧ್ಯೇಯಕ್ಕನುಸರಿಸಿಯೇ ಇದೆ. ಇದಲ್ಲದೆ ನೆಹರು ವರದಿಯು ಈಗ ರದ್ದಾಗಿದೆ. ಅಲ್ಪ ಸಂಖ್ಯಾತರನ್ನು ಸಂತುಷ್ಟಗೊಳಿಸುವಂತಹ ಯೋಜನೆಯನ್ನೇ ಸಿದ್ಧಪಡಿಸುವೆವೆಂದು ರಾಷ್ಟ್ರಸಭೆಯಿಂದ ಆಶ್ವಾಸನವು ದೊರೆತಿದೆ. ಇವೆಲ್ಲ ಸಂಗತಿಗಳನ್ನು ವಿಚಾರಿಸಲಾಗಿ ಮುಸಲ್ಮಾನರು ರಾಷ್ಟ್ರೀಯ ಸಭೆಯಿಂದ ದೂರ ಉಳಿಯುವದು ಸಮಂಜಸವಾಗಿ ತೋರುವದಿಲ್ಲ ೨) ಸಂಪೂರ್ಣ ಸ್ವಾತಂತ್ರ್ಯವನ್ನು ಸಂಪಾದಿಸುವದಕ್ಕಾಗಿ ಮುಸಲ್ಮಾನರೆಲ್ಲರೂ ರಾಷ್ಟ್ರಸಭೆಯವರೊಡನೆ ಸಹಕರಿಸಿ, ಧೈರ್ಯದಿಂದಲೂ ಹುರುಪಿನಿಂದಲೂ ಶಾಂತಿಮಯ ಸಮರವನ್ನು ನಡೆಸಬೇಕು. ಕೆಳಗಿನಂತೆ ಕಾರ್ಯಕ್ರಮಗಳನ್ನು ಗೊತ್ತುಮಾಡಿಕೊಂಡು ಈ ಮೇಲಿನ ತೀರ್ಮಾನುಗಳನ್ನು ಸಿದ್ಧಿಗೊಯ್ಯಬೇಕು. ೧) ಜಪ್ತ ಮಾಡಲ್ಪಟ್ಟ ಫತವಾ ಮತ್ತು ಇತರ ಸಾಹಿತ್ಯವನ್ನು ಪ್ರಸಿದ್ಧಿಸುವದು. ೨) ಸೆರೆಸಿಂದಿ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುವದು, ೩) ಬ್ರಿಟಿಶ ಸರಕುಗಳಿಗೂ ವಿಶೇಷತಃ ಬ್ರಿಟಿಶ ಬಟ್ಟೆಗಳಿಗೂ ಬಹಿಷ್ಕಾರ ಹಾಕಿ ಸ್ವದೇಶಿ ವಸ್ತುಗಳ ಪ್ರಸಾರ ಮಾಡುವದು. ಈ ಕಾರ್ಯಕ್ರಮಗಳನ್ನು ಕೃತಿಯಲ್ಲಿ ತರುವಂತೆ ಯತ್ನಿಸುವದಕ್ಕಾಗಿ ಮೌ. ಕಿಫಾಯಿತುಲ್ಲಾ, ಅತಾವುಲ್ಲಾ ಶಹಾ ಬುಖಾರಿ, ಮತ್ತು ಮಹಮ್ಮದ ನಾಯೀಮ ಈ ಮೂವರ ಮಂಡಳವನ್ನು ಈ ಸಭೆಯು ನಿಯಮಿಸುತ್ತದೆ.

### ಬಾಗಲಕೋಟೆಯಿಂದ ಮತ್ತೊಂದು ಆಹುತಿಯು.

ಈ ಊರಿಂದ ಉಪ್ಪಿನ ಕಾಯದೆ ಭಂಗಕ್ಕಾಗಿ ಅಂಕೋಲೆಯ ರಣಕ್ಷೇತ್ರಕ್ಕೆ ಹೋದ ಸ್ವಯಂಸೇವಕರಲ್ಲಿ ಮಿ. ಜೇ. ವಾಮನ ಎಂಬವರಿಗೆ ಮೂರು ತಿಂಗಳ ಶಿಕ್ಷೆಯಾಗಿದೆ. ಇವರು ಬೇರೆ ಇಬ್ಬರು ಸ್ವಯಂಸೇವಕರೊಂದಿಗೆ ಗೋವೆಯ ಹದ್ದಿನಿಂದ ಉಪ್ಪು ತಂದು ಕರಕೊಡುವದಿಲ್ಲವೆಂದು ಹೇಳಿದರು. ಅದಕ್ಕಾಗಿ ಅವರಿಗೆಲ್ಲರಿಗೂ ಶಿಕ್ಷೆಯಾಗಿದೆ. ಅವರು ತಮ್ಮ ಮಿತ್ರಮಂಡಳಿಗೆ ಈ ಪ್ರಕಾರ ಸಂದೇಶ ಕಳಿಸಿರುವರು. " ನೀವಾದರೂ ನಿಮ್ಮ ಕಾರ್ಯವನ್ನು ಜೋರಿನಿಂದ ನಡಿಸಿ ಸ್ವತಂತ್ರತೆಯ ಸಲುವಾಗಿ ಹೋರಾಡಿ ನಿಮ್ಮ ಜನ್ಮವನ್ನು ಸಾರ್ಥಕಗೊಳಿಸಬೇಕು " ಇವರ ಮಿತ್ರರು ಇನ್ನಾದರೂ ಸಿದ್ಧರಾಗುವರೋ ?

### ಹೈದರಾಬಾದ ಸಂಸ್ಥಾನದಲ್ಲಿ ಝಡತಿ

ಹೈದರಾಬಾದ ಕ್ರಿ. ಪೊ. ಕೋಡಿನ ೪೨೬ । ೪೨೦ ೪೨೧ ಕಲಮುಗಳ ಅನ್ವಯ. ಹೈದರಾಬಾದ ಸಂಸ್ಥಾನದಲ್ಲಿನ ಹೈದರಾಬಾದ ನಗರ, ಗುಲಬುರ್ಗಾ, ವರಂಗಲ್ ಮೊದಲಾದ ಜಿಲ್ಲೆಗಳಲ್ಲಿ ಎಷ್ಟೋ ಕಡೆಗೆ ಮನೆಗಳ ಝಡತಿ ಮಾಡುವದಲ್ಲಿ ಬಂದಿವೆ. ಒಬ್ಬ ಅಧಿಕಾರಿಯು " ಲಾ ಜರ್ನಲ್ ಪ್ರೆಸ್ಸಿನ " ಝಡತಿ ಮಾಡುವದನ್ನು ಬಿಟ್ಟು, ಅದರ ಸಂಪಾದಕರ ಮನೆಯನ್ನೇ ಝಡತಿಮಾಡಿದನಂತೆ. ಈ ಅಧಿಕಾರಿಯ ಅಪರಾಧದ ವಿಚಾರಣೆಯಾಗುವದಾಗಿ ತಿಳಿಯುತ್ತದೆ.

### ಸತ್ಯಾಗ್ರಹಕ್ಕೆ ಹೈದರಾಬಾದ ಸಂಸ್ಥಾನದ ಸಹಾಯ

ಬ್ರಿಟಿಶ ಹಿಂದುಸ್ಥಾನದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗತೆಗೆದುಕೊಳ್ಳಲು ಈಗಾಗಲೇ ಇಲ್ಲಿ ೩೦ ಜನರು ಸಿದ್ಧರಾಗಿದ್ದಾರೆ. ಎಷ್ಟೋ ಜನರು ಕೋಕೊನಾಡಾ ಮತ್ತು ಪುಣೆ ಪಟ್ಟಣಗಳಿಗೆ ಹೋಗಿ ಸತ್ಯಾಗ್ರಹದಲ್ಲಿ ಭಾಗತೆಗೆದುಕೊಳ್ಳುವ ಸಿದ್ಧತೆಯಲ್ಲಿ ತೊಡಗಿದ್ದಾರೆ.

### ಸಾಂಗಲಿ ಸಂಸ್ಥಾನದ ಪ್ರಜಾಪರಿಷತ್ತು.

ಶಿರಹಟ್ಟಿಯ ಶ್ರೀ ಮುನ್ಷಿ ಅಶ್ವತ್ಥರಾಯರ ಅಧ್ಯಕ್ಷತೆಯಲ್ಲಿ ಸೇರಿದ ೮ ನೆಯ ಅಧಿವೇಶನದಲ್ಲಿ " ಸಾಂಗಲಿ ಸಂಸ್ಥಾನಕ್ಕೊಳಗಾಗಿರುವ ಶಿರಹಟ್ಟಿ, ತೇರದಾಳ, ಶಹಾಪೂರ, ತಾಲೂಕಗಳೂ ಮತ್ತು ದೊಡ್ಡವಾಡ ಭಾಗವೂ ಕನ್ನಡ ಭಾಷೆಯನ್ನಾಡುವ ಭಾಗಗಳಾಗಿರುವದರಿಂದ ಈ ಭಾಗಗಳಲ್ಲಿಯ ಶಿಕ್ಷಣ ಹಾಗೂ ಕೋರ್ಟ ವ್ಯವಹಾರವು ಕನ್ನಡದಲ್ಲಿಯೇ ಸಾಗಬೇಕೆಂದು " ತೀರ್ಮಾನವಾಗಿದೆ.

ತಾ॥ ೧೧ ನೆಯ ದಿನ ಇಲ್ಲಿ

# ವಿದೇಶಿ ಬಟ್ಟೆಗಳ ಹೋಳಿಯಾಯಿತು.

## ಮಹಾತ್ಮರು ಯರವಡಾದಲ್ಲಿಯೇ ಇರುವರು!

ಮಹಾತ್ಮರನ್ನು ಯರವಡಾ ತುರಂಗದಿಂದ ಪುರಂದರ ಕಿಲ್ಲೆಗೆ ಕಳುಹುವರೆಂದು ಮುದ್ರಿತವಾದದ್ದು ನಿರಾಧಾರವಾಗಿದೆಯೆಂದೂ, ಯರವಡಾದಿಂದ ಅವರನ್ನು ಬೇರೆಕಡೆಗೆ ಒಯ್ಯುವದಿಲ್ಲವೆಂದೂ ಸರಕಾರದವರು ಅಸೋಸಿಯೇಟೆಡ್ ಪ್ರೆಸ್‌ದ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ.

## ಸಾವರಕರರವರ ಮೇಲೆ ಸರಕಾರದ ಕಟಾಕ್ಷ!

ರತ್ನಾಗಿರಿ ಜೇಲಿನಲ್ಲಿರುವ ಶ್ರೀ. ಸಾವರಕರ ವಿನಾಯಕ ರಾಯರ ವಸತಿಗೆ ಪೊಲೀಸ ಸುಪರಿಂಟೆಂಡೆಂಟರು ಒಮ್ಮೆಲೇ ಹೋಗಿ ಅವರ ಪತ್ರವನ್ನು ಜಪ್ತ ಮಾಡಿದರು. ಜಪ್ತಿಯಲ್ಲಿ ಹೊರಬಿದ್ದ ಸಂಗತಿಗಳ ಬಗ್ಗೆ ಏನೂ ತಿಳಿದಿಲ್ಲ.

## ಡಿಸ್ಟ್ರಿಕ್ಟ ಜಡ್ಜರಿಗೆ ಶ್ರೀ. ಜೋಶಿಯವರ ಜವಾಬು

ಸಂಗಮನೇರ ವಕೀಲರಾದ ಶ್ರೀ ಜೋಶಿ ನಾರಾಯಣರಾಯರಿಗೆ ಪ್ಲೀಡರ್ಸ ಆಕ್ಟಿನ ೩೫ ನೆಯ ಕಲಮಿನ ಅನ್ವಯ ನೋಟೀಸು ಕೊಡಲ್ಪಟ್ಟಿದ್ದು, ಅವರು ಅದಕ್ಕೆ ಕೆಳಗಿನಂತೆ ಜವಾಬು ಕೊಟ್ಟಿದ್ದಾರೆ. ಅದರ ಸಾರಾಂಶವು— ನಾನು ಪ್ಲೀಡರ್ಸ ಗಳಿಂದ ವಕೀಲಿಯನ್ನು ಮಾಡುತ್ತಿದ್ದೇನೆ. ಕಾಯದೆಯ ಮಾರ್ಗದಿಂದ ಅನ್ಯಾಯದ ಕಾಯದೆಗಳನ್ನು ನಿವಾರಿಸುವದು ಅಶಕ್ಯವಾಗಿದೆ. ಶಾಂತಿಮಯಮಾರ್ಗದಿಂದ ಅದನ್ನು ನಿವಾರಿಸುವದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಉಪ್ಪಿನಕಾಯದೆಯು ಅನ್ಯಾಯದ್ದಾಗಿರುವದು. ಎಷ್ಟೋ ಸುಧಾರಿಸಿದ ರಾಷ್ಟ್ರಗಳಲ್ಲಿ ಉಪ್ಪಿನ ಮೇಲೆ ಕರವಿಲ್ಲ ನನ್ನ ಸನದು ರದ್ದುಮಾಡುವದೆಂದರೆ ನನ್ನ ನಾಗರಿಕತೆಯ ಹಕ್ಕು ಕಳೆದಂತಾಗುವದು. ನಾಗರೀಕನೆಂದು ನಾನು ಉಪ್ಪು ಕೊಂಡೆನು, ಸಭೆಯಲ್ಲಿ ಮಾರುತ್ತಿದ್ದ ಉಪ್ಪನ್ನು ೫ ರೂ ಗೆ, ಕೊಂಡು ಅದನ್ನು ಹಾರಲಿಕ್ಕೆ ಹೇಳಿದೆನು. ನಾನು ಆ ಉಪ್ಪಿಗೆ ಕೈ ಹಚ್ಚಲಿಲ್ಲ. ಕಾಯದೆಯಂತೆ ಇದು ತಪ್ಪಾಗಲಾರದು. ಆದರೂ ನಾನು ಕಟ್ಟಳೆಯನ್ನು ಮುರಿದುದು ತಪ್ಪೆಂದು ಒಪ್ಪಿಕೊಂಡಿರುವೆನು. ನನಗಾದ ಶಿಕ್ಷೆಯು ಪ್ಲೀಡರ್ಸ ಆಕ್ಟಿನ ಕೆಳಗೆ ಬರುವದಿಲ್ಲ.

## ಮಧ್ಯಪ್ರಾಂತದಲ್ಲಿ ಸತ್ಯಾಗ್ರಹ!

ಮಧ್ಯಪ್ರಾಂತದ ಸತ್ಯಾಗ್ರಹ ಮಂಡಳದವರು ಸರಕಾರದವರಿಂದ ಜಪ್ತಮಾಡಲ್ಪಟ್ಟ ವಾಙ್ಮಯವನ್ನು ಬಹಿರಂಗವಾಗಿ ಓದಿ ಸತ್ಯಾಗ್ರಹ ಮಾಡುವದನ್ನು ನಿಶ್ಚಯಿಸಿದ್ದು ಶ್ರೀ ಅಭ್ಯಂಕರರು ಈ ಕಾರ್ಯದಲ್ಲಿ ಮುಂದಾಗಿದ್ದಾರೆ.

## ಮಹಾತ್ಮರನ್ನು ಕಾಣಲು ಅಪ್ಪಣೆಕೊಡಲಿಲ್ಲ!

ಮಹಾತ್ಮರ ಸೋದರಳಿಯಂದಿರಾದ ಶ್ರೀ. ಮಥುರಾದಾಸ ತ್ರಿಕಮಜಿಯವರು ತಾ॥ ೮ ನೆಯ ದಿವಸ ಮಹಾತ್ಮರನ್ನು ಕಂಡುಬರುವದಕ್ಕಾಗಿ ಯರವಡಾಕ್ಕೆ ಹೋಗಿದ್ದರು. ಈ ಬಗ್ಗೆ ಮೇಲಧಿಕಾರಿಗಳಿಂದ ನಮಗೆ ಯಾವ ಅಪ್ಪಣೆಯೂ ಬಂದಿಲ್ಲವಾದ್ದರಿಂದ ಮಹಾತ್ಮರನ್ನು ಕಾಣಲು ನಿಮ್ಮನ್ನು ಬಿಡವದಿಲ್ಲವೆಂದು ಜೇಲ ಸುಪರಿಂಟೆಂಡೆಂಟರು ಅವರಿಗೆ ತಿಳಿಸಿದರು.

## ಹರಪನಹಳ್ಳಿಯಲ್ಲಿ ಹರತಾಳ!

ಮಹಾತ್ಮರನ್ನು ಸೆರೆಹಿಡಿದುದಕ್ಕಾಗಿ ಮಂಗಳವಾರ ಹರತಾಳವು ಪಾಲಿಸಲ್ಪಟ್ಟಿತು! ಬೆಳಿಗ್ಗೆ ಮಹಾತ್ಮರ ಭಾವಚಿತ್ರದೊಡನೆ ಮೆರವಣಿಗೆಯಾಯಿತು. ಪೋಲೀಸರು ಅಂಗಡಿಗಾರರಿಗೆ ಅಂಗಡಿಗಳನ್ನು ತೆಗೆದಿಡುವಂತೆ ಎಷ್ಟು ಹೇಳಿದರೂ ಅವರು ಕೇಳಲಿಲ್ಲ. ಪರಸ್ಥಳಗಳಿಂದ ಬಂದ ಪೋಲೀಸರಿಗೆ ಖಾನಾವಳಿಗಳಲ್ಲಿ ಅನ್ನವೂ ಸಿಗಲಿಲ್ಲ. ಸಾಯಂಕಾಲದಲ್ಲಿ ಮತ್ತೆ ಮೆರವಣಿಗೆಯಾಗಿ ಸಭೆಯಾಯಿತು ಶ್ರೀ. ಕೆ. ಗುರುರಾಜರಾಯರು, ಸದಾಶಿವಯ್ಯನವರು, ಮಾಧವರಾಯರು ಭಾಷಣಗಳನ್ನಿತ್ತರು. ಕಡೆಯಲ್ಲಿ ಪರದೇಶಿ ಬಟ್ಟೆಗಳ ಹೋಳಿಯಾಯಿತು. ಬಲಾತ್ಕಾರದಿಂದ ಬಟ್ಟೆಗಳನ್ನು ತೆಗೆದುಕೊಂಡು ಬೆಂಕಿಯಲ್ಲಿ ಹಾಕುತ್ತಿದ್ದಾರೆಂದು ಪೋಲೀಸ ಸರ್ಕಲ್ ಇನಸ್ಪೆಕ್ಟರರು ಮೊದಲು ಗಲಾಟೆ ಮಾಡಿದರು. ಸ್ವಸಂತೋಷದಿಂದಲೇ ಬಟ್ಟೆಗಳನ್ನು ಕೊಟ್ಟಿರುವೆವೆಂದು ಸಭಿಕರು ಹೇಳಿದ ಕೂಡಲೆ ಅವರು ಕ್ಷಮೆಯನ್ನು ಬೇಡಿಕೊಂಡರು!

## ಸರಕಾರಿ ಅಧಿಕಾರಿಯ ರಾಜೀನಾಮೆ!

ಮಹಾತ್ಮರನ್ನು ಸೆರೆಹಿಡಿದುದಕ್ಕಾಗಿ ಪಂಜಾಬ ಪ್ರಾಂತದ ಉತ್ತರ ಭಾಗದ ಅ. ಸರ್ವೇಯರರಾದ ಶ್ರೀ ಸಾಧುರಾಮರವರು ತಮ್ಮ ಉದ್ಯೋಗಕ್ಕೆ ಶರಣು ಹೊಡೆದಿದ್ದಾರೆ.

## ರಾಜೀನಾಮೆ!

ಕೌನ್ಸಿಲ್ ಆಫ್ ಸ್ಟೇಟಿದ ಸಭಾಸದರಾದ ಶ್ರೀ. ರತನಸಿ ಮೂರಾರಜಿಯವರು ತಮ್ಮ ಸಭಾಸದತ್ವಕ್ಕೂ, ಶ್ರೀಮತಿ ಹಂಸ ಮೆಹತಾರವರು ಸ್ವಾಸ್ಥ್ಯಸಂರಕ್ಷಕ ಪದವಿಗೂ (Justice of Peace) ತಿಲಾಂಜಲಿಯನ್ನಿತ್ತಿದ್ದಾರೆ.

## ಸತ್ಯಾಗ್ರಹಕ್ಕೆ ಬೆಂಗಳೂರಿನವರ ಬೆಂಬಲ!

ಕರ್ನಾಟಕದಲ್ಲಿ ನಡೆದಿರುವ ಉಪ್ಪಿನ ಕಾಯಿದೆಭಂಗದಲ್ಲಿ ಭಾಗತೆಗೆದುಕೊಳ್ಳಲು ಬೆಂಗಳೂರಿನ ೧೦ ಜನ ಸ್ವಯಂಸೇವಕರು ಅಲ್ಲಿಯ ಪ್ರಸಿದ್ಧ ವಕೀಲರಾದ ಶ್ರೀ ಭಾಷ್ಯಂ ಇವರೊಂದಿಗೆ ಪಟ್ಟಳ್ಳಿಗೆ ಹೊರಟು ಬಂದಿದ್ದಾರೆ.

---


ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು

ತಮ್ಮ ಲೋಕಪ್ರಿಯವಾದ

ಸೋಮವಾರ ತಾ. ೧೨—೫—೩೦

ಯಚ್ಚಮ್ಮ ನಾಯಿಕ.

ಬುಧವಾರ ತಾ. ೧೪-೫-೩೦

ಚಿನತಿಯಚಂದ್ರ

ಎಂಬ ನಾಟಕಗಳನ್ನು ಅಭಿನಯಿಸುವರು.

ಸಂಘದೊಡೆಯ—ಸದಾಶಿವರಾವ ಗೆರೂಡ


---

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೫೪೭

ಬೆಲೆ ೦—೦—೩

ಜಯಕರ್ನಾಟಕ

ನಿತ್ಯಸಂಚಿಕೆಯು.

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ಮಂಗಳವಾರ ಮಿತಿ ವೈಶಾಖ ಬಹುಳ ೧ ಶಕೆ ೧೮೫೨ ತಾ ೧೩—೫—೩೦ ಸಂಚಿಕೆ ೪—

## ಮಹಾತ್ಮರ ಸಂದೇಶ

"ಪ್ರೇಮವೇ ಈ ಸೃಷ್ಟಿಯ ಸೂತ್ರವು. ಅದೇ ಈ ಜೀವನದ ರಹಸ್ಯವು. ನಾನು ಸತ್ಯಪ್ರೇಮಿಯು. ನಾನು ಸತ್ಯಶೋಧನನು, ಸತ್ಯಾಗ್ರಹಿಯು. ಸತ್ಯವೇ ನನ್ನ ದೇವತೆ, ಸ್ವರಾಜ್ಯವು ಸತ್ಯದ ಒಂದು ಅಂಗವು, ಒಂದು ಭಾಗವು. ಸತ್ಯಾಗ್ರಹವೇ ನನಗೆ ದಕ್ಷಿಣ ಆಫ್ರಿಕೆಯಲ್ಲಿ, ಚಂಪಾರಣ್ಯದಲ್ಲಿ, ಬಾರ್ಡೋಲಿಯಲ್ಲಿ ಮಾರ್ಗದರ್ಶಕವಾಯಿತು ನನಗೆ ಜಯವನ್ನು ಸಂಪಾದಿಸಿ ಕೊಟ್ಟಿತು ನಾನು ಪ್ರೇಮದ ಮೂಲಕವೇ ಇಂಗ್ಲೀಷರನ್ನು ಪ್ರೀತಿಸುವವನಿದ್ದೇನೆ. ಆದರೆ ಅವರ ಜುಲಮೆಯನ್ನು ನಾನು ತಾಳಲಾರೆನು ಅವರ ದಾಸ್ಯವನ್ನು ನಾನು ಸ್ವೀಕರಿಸಲಾರೆನು. ತದ್ವಿರುದ್ಧ ನಾನು ಅಹಿಂಸಾ ಮಾರ್ಗದಿಂದ ಹೋರಾಡಿ ಗೆದ್ದೇ ತೀರುವೆನೆಂದು ನನ್ನ ಭಾವನೆ. ಆದುದರಿಂದಲೇ ರಾಟೆ, ಖಾದಿ, ನಮ್ಮ ಸಮಾಜದಲ್ಲಿರುವ ಪತಿತರ ಬಗ್ಗೆ ಪ್ರೀತಿ, ಹಿಂದೂ ಮುಸಲ್ಮಾನರಲ್ಲಿರುವ ಐಕ್ಯ ಇವುಗಳಿಂದಲೇ ನಾನು ಸ್ವರಾಜ್ಯವನ್ನು ಪ್ರಾಪ್ತಮಾಡಿಕೊಳ್ಳಬೇಕೆನ್ನುವೆನು."

### ಮಂಗಳೂರ ಜಿಲ್ಲೆಯಲ್ಲಿ ಸಾರ್ವತ್ರಿಕ

## ಹರತಾಳ ಮತ್ತು ಕಾಯದೆಭಂಗ

ಮಹಾತ್ಮಾ ಗಾಂಧಿಯವರನ್ನು ಸೆರೆಹಿಡಿದದಕ್ಕಾಗಿ ಮಂಗಳೂರ ಜಿಲ್ಲೆಯಲ್ಲಿ ತಾ|| ೧೦ ಹಾಗೂ ೧೧ ಈ ಎರಡು ದಿನಗಳಲ್ಲಿ ಸಾರ್ವತ್ರಿಕ ಹರತಾಳವೂ, ತಾ|| ೧೧ ನೆಯ ದಿವಸ ಸಾಮುದಾಯಿಕ ಕಾಯಿದೆಭಂಗವೂ ಆಚರಿಸಲ್ಪಟ್ಟವು. ಇಂದು ಜಿಲ್ಲೆಯಲ್ಲಿ ಸುತ್ತಲೆಲ್ಲ ಶೆರೆ ಸಿಂದಿ ಅಂಗಡಿಗಳ ಮೇಲೆ ಪಿಕೆಟಿಂಗ ಪ್ರಾರಂಭವಾಗುವದಿದೆ.

## ಸತ್ಯಾಗ್ರಹಿಗೆ ಬೆಂಕಿಯಿಂದ ಬಾಧೆ

ತಾ|| ೭-೫-೩೦ ನೆಯ ದಿವಸ ೨೦ ಜನ ಸ್ವಯಂಸೇವಕರು ಬೋಳಾರದಲ್ಲಿ ಉಪ್ಪು ತಯಾರಿಸಿದರು. ಸ್ವಯಂಸೇವಕರ ಹತ್ತಿರವೇ ಅಲ್ಲಿಯ ಕೆಲವು ತರುಣರು ಉಪ್ಪು ಸಿದ್ಧಪಡಿಸಹತ್ತಿದರು. ಆಗ ಕೆಲವು ಮುಸಲ್ಮಾನ ಬಂಧುಗಳು ಪೋಲೀಸರ ಚಿತಾವಣಿಯಿಂದ ತರುಣರಿಗೆ ಬಾಧೆಕೊಟ್ಟರು. ಒಬ್ಬ ಯೋಗೀಶನೆಂಬ ತರುಣನ ಕಾಲು ಸುಟ್ಟುಹೋಯಿತು. ಸಾಯಂಕಾಲದ ಸಭೆಯಲ್ಲಿ ಉಪ್ಪು ಮಾರಲ್ಪಟ್ಟಿತು.

## ದುಂಡುಮೇಜಿನ ಪರಿಷತ್ತಿಗೆ ಬಹಿಷ್ಕಾರ

ಮುಂಬಯಿಯಲ್ಲಿಯ ೧೭ ವ್ಯಾಪಾರಿ ಸಂಘಗಳ ಚಾಲಕರು ಒಟ್ಟಿಗೆ ಸೇರಿ "ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಹಿಂದುಸ್ಥಾನದಲ್ಲಿಯ ವಣಿಕ್ ವರ್ಗದವರು ದುಂಡುಮೇಜಿನ ಪರಿಷತ್ತಿನಲ್ಲಿ ಭಾಗತೆಗೆದುಕೊಳ್ಳುವದು ಸಮಂಜಸವಾಗಿರುವದಿಲ್ಲವೆಂದು" ನಿರ್ಣಯಿಸಿಕೊಂಡಿದ್ದಾರೆ.

## ಪರದೇಶಿ ಬಟ್ಟೆಗಳ ಬಹಿಷ್ಕಾರದ ಪರಿಣಾಮ

ಹಿಂದುಸ್ತಾನದಲ್ಲಿ ನಡೆದ ಪರದೇಶಿ ಬಟ್ಟೆಗಳ ಬಹಿಷ್ಕಾರದ ಚಳವಳಿಯ ಮೂಲಕ ಲ್ಯಾಂಕೇಶಾಯರದಲ್ಲಿಯ ಎಷ್ಟೋ ನೂಲುವ ಹಾಗೂ ನೇಯುವ ಗಿರಣಿಗಳು ಮುಚ್ಚಲ್ಪಟ್ಟದ್ದರಿಂದ ಎಷ್ಟೋ ಕೂಲಿಕಾರರು ಉದ್ಯೋಗವಿಲ್ಲದೆ ತಿರುಗಾಡಹತ್ತಿದ್ದಾರೆ. ಹಿಂದುಸ್ತಾನದೊಡನೆ ಇರುವ ಲ್ಯಾಂಕೇಶಾಯರದ ವ್ಯಾಪಾರವು ಸಂಪೂರ್ಣವಾಗಿ ನಿಂತುಹೋಗುವ ಲಕ್ಷಣವಿದೆ.

## ಸಕ್ಕರದಲ್ಲಿ ಶಿಕ್ಷೆ

ಶ್ರೀ. ಹಸಾನಂದ ಪಮ್ನಾನಿ, ರಾಮಚಂದ್ರ ವಿರುಮಲ್ಲ ಮತ್ತು ಪಂಡಿತ ದೌಲತರಾಮ ಇವರಿಗೆ ಉಪ್ಪಿನ ಕಾಯಿದೆ ಭಂಗಕ್ಕಾಗಿ ೧೫ ತಿಂಗಳ ಶಿಕ್ಷೆಯಾಗಿದೆ.

## ಪಂಡಿತ ನೆಹರೂರವರ ಪತ್ರಕ್ಕೆ ಸರಕಾರದಿಂದ

### ಮನ್ನಣೆ ದೊರೆಯಲಿಲ್ಲ.

ಪಂಡಿತ ಮೋತಿಲಾಲ ನೆಹರೂರವರು ಪೇಶಾವರ ದಂಗೆಯ ವಿಚಾರಣೆಯ ಮಂಡಳಿಗೆ ಪೇಶಾವರದಲ್ಲಿ ಹೋಗಗೊಡಲು ಅಪ್ಪಣೆಯನ್ನೀಯಬೇಕೆಂದು ವ್ಹಾಯಿಸರಾಯರಿಗೂ, ವಾಯುವ್ಯ ಪ್ರಾಂತದ ಚೀಫ ಕಮೀಶನರರಿಗೂ ಪತ್ರ ಬರೆದು ಕೇಳಿಕೊಂಡಿದ್ದರಷ್ಟೇ? ಅದಕ್ಕೆ ಉತ್ತರವೆಂದು ಈಗ ವಾಯುವ್ಯ ಪ್ರಾಂತದ ಚೀಫ ಕಮೀಶನರರು "ಮಂಡಳದವರು ಪೇಶಾವರದಲ್ಲಿ ಕಾಲಿಡಕೂಡದೆಂದೂ ಮಂಡಳದವರಲ್ಲಿ ಯಾರಾದರೂ ಈಗ ಹಾಗೆ ಮಾಡಿದ್ದಲ್ಲಿ ಅವರನ್ನಾದರೂ ಹೊರಗೆ ಅಟ್ಟುವದರಲ್ಲಿ ಬರುವದೆಂದೂ" ತಿಳಿಸಿದ್ದಾರೆ.

### ಧರಸನೆಯ ಉಪ್ಪಿನ ಮಾಳಿಯೇ
## ಅಖಿಲ ಭರತ ಖಂಡದ ರಣಕ್ಷೇತ್ರವು

ಶ್ರೀ ವಿಠ್ಠಲಭಾಯಿಯವರು ತಾ|| ೯ನೆಯ ದಿವಸ ಶ್ರೀ ಅಬ್ಬಾಸರಿಗೆ ಭೆಟ್ಟಿಯಾಗಿ ಧರಸನಾ ಉಪ್ಪಿನ ಮಾಳಿಯ ಹಲ್ಲೆಯ ವಿಷಯವಾಗಿ ಅವರೊಡನೆ ವಿಚಾರ ವಿನಿಮಯ ಮಾಡಿ 'ಧರಸನಾ ಉಪ್ಪಿನ ಮಾಳಿಯನ್ನೇ ನಾಗಪುರದಂತೆ ಅಖಿಲ ಭರತ ಖಂಡದ ರಣಕ್ಷೇತ್ರವನ್ನಾಗಿ ಮಾಡಿ ಹಿಂದುಸ್ಥಾನದ ಬೇರೆ ಬೇರೆ ಭಾಗಗಳಿಂದ ಸತ್ಯಾಗ್ರಹಿಗಳ ತಂಡಗಳನ್ನು ಕರೆಯಿಸಿಕೊಂಡು ಸತ್ಯಾಗ್ರಹ ಸಮರದಲ್ಲಿ ಯಶಸ್ಸನ್ನು ಪಡೆಯಬೇಕೆಂದು ಸೂಚಿಸಿದ್ದಾರೆ. ಬರುವ ಅಖಿಲ ಭಾರತ ರಾಷ್ಟ್ರಮಂಡಳದ ಸಭೆಯಲ್ಲಿ ಶ್ರೀ. ವಿಠ್ಠಲಭಾಯಿಯವರೇ ಮೇಲಿನ ಸೂಚನೆಯನ್ನು ಮಂಡಿಸತಕ್ಕವರಿದ್ದಾರೆ.

**ಮದ್ರಾಸ ಕಾಯಿದೆ ಮಂಡಳದ ಉಪಾಧ್ಯಕ್ಷರ ರಾಜಿನಾಮೆ**

ಮುಂಬಯಿ ಕಾಯಿದೆ ಮಂಡಳದ ಸಭಾಸದರಾಗಿರುವ ಶ್ರೀ ಮೋತಿಚಂದ ರತನಚಂದರೂ, ಮದ್ರಾಸ ಕಾಯಿದೆ ಮಂಡಳದ ಉಪಾಧ್ಯಕ್ಷರಾಗಿರುವ ಶ್ರೀಮತಿ ಮ. ಧೋಲಕ್ಷ್ಮಿ ರೆಡ್ಡಿಯವರೂ, ಬಿಹಾರ ಹಾಗೂ ಓರಿಸಾ ಕಾಯಿದೆಮಂಡಳದ ಸಭಾಸದರಾಗಿರುವ ಶ್ರೀ. ಡಿ. ಪಿ. ಸಿಂಹರವರೂ ತಮ್ಮ ಸ್ಥಳಗಳಿಗೆ ರಾಜಿನಾಮೆಯನ್ನು ಕೊಟ್ಟಿದ್ದಾರೆ ಕರ್ನಾಟಕದ ಪ್ರತಿನಿಧಿಗಳು ಇನ್ನೂ ತೂಕಡಿಸುತ್ತಿರುವರೋ ?

### ಉಪ್ಪಿನ ಕರಕ್ಕೆ ನಗರ ಸಭೆಗಳ ವಿರೋಧ

ಉಪ್ಪಿನ ಮೇಲಿನ ಕರವು ಅನ್ಯಾಯದ್ದೂ, ಶ್ರೀಮಂತರಿಗಿಂತ ಬಡವರಿಗೆ ಹೆಚ್ಚು ಭಾರವಾದದ್ದೂ ಇರುವದರಿಂದ ಈ ಕರವು ಕೂಡಲೆ ತೆಗೆಯಲ್ಪಡಬೇಕಾಗಿಯೂ, ಮತ್ತು ಹಿಂದಸ್ಥಾನದಲ್ಲಿ ಎಲ್ಲಿಯೂ ಉಪ್ಪನ್ನು ಸಿದ್ಧಪಡಿಸುವದಕ್ಕೆ ಆತಂಕವನ್ನುಂಟು ಮಾಡಬಾರದೆಂದೂ ಹಾವೇರಿಯ ನಗರ ಸಭೆಯವರು ತಾ|| ೭ನೆಯ ದಿವಸ ನಿರ್ಣಯಿಸಿಕೊಂಡಿದ್ದಾರೆ. ಮಂಗಳೂರ ನಗರಸಭೆಯವರೂ ಉಪ್ಪಿನ ಕರದ ಬಗ್ಗೆ ತಮ್ಮ ನಿಷೇಧವನ್ನು ವ್ಯಕ್ತಪಡಿಸಿದ್ದಾರೆ ಸುರತ ನಗರಸಭೆಯಲ್ಲಿಯೂ ಉಪ್ಪಿನ ಕರವು ಅನ್ಯಾಯದ್ದಿರುವದೆಂಬ ಠರಾವು ಪಾಸಾಗಿದೆ.

### ಸತ್ಯಾಗ್ರಹ ಶಿಬಿರಕ್ಕೆ ಸಹಾಯ

ಇಲ್ಲಿಯ ಸತ್ಯಾಗ್ರಹ ಶಿಬಿರಕ್ಕೆ ಸಹಾಯವೆಂದು ಡಾ|| ಲಾಡ್ಜಿ ಹಾಗೂ ಶ್ರೀಯುತ ತಾಯಿಬ ... ದಾತಾರ ಇವರು ಕ್ರಮವಾಗಿ ೫೦ ಹಾಗು ೩೦ ರೂಪಾಯಿಗಳನ್ನು ಕೊಟ್ಟಿರುವರೆಂದೂ, ಉಳಿದವರೂ ಇವರ ಅನುಕರಣೆ ಮಾಡಬೇಕೆಂದೂ ಸತ್ಯಾಗ್ರಹ ಮಂಡಳದ ಕಾರ್ಯದರ್ಶಿಗಳು ತಿಳಿಸುತ್ತಾರೆ.

### ಬಂದಿನಿವಾರಣೆಯೇ ಸರಕಾರಕ್ಕೆ ಮದ್ದು

"ಮಹಾತ್ಮರು ಸೆರೆಯಿಂದ ಬಿಡುಗಡೆಯಾಗಿ ಹೊರಗೆ ಬಂದು ಆಜ್ಞಾಪಿಸುವ ವರೆಗೆ ಕರ ನಿರಾಕರಣೆ, ವಿದೇಶಿವಸ್ತ್ರ, ಹಾಗೂ ಬ್ರಿಟಿಶ ಸರಕುಗಳ ಬಹಿಷ್ಕಾರ, ಅಧಿಕಾರಿಗಳ ಸಾಮಾಜಿಕ ಬಹಿಷ್ಕಾರ ಇವೇ ಮೊದಲಾದವುಗಳನ್ನ ಕೃತಿಯಲ್ಲಿ ತನ್ನಿರಿ"ಎಂದು ಶ್ರೀ. ವಿಠ್ಠಲಭಾಯಿಯವರು ಸುರತದಲ್ಲಿಯ ಭಾಷಣದಲ್ಲಿ ಹೇಳಿದ್ದಾರೆ.

### ಸಪ್ರೂ ಪರಿಷತ್ತಿಗೆ ಪಂಡಿತ ಮಾಲವೀಯಾ ಹಾಗೂ
## ಶ್ರೀಯುತ ಕೇಳಕರರ ಬಹಿಷ್ಕಾರ

ಈ ತಿಂಗಳ ೧೪ನೆಯ ತಾ|| ಗೆ ಮುಂಬಯಿಯಲ್ಲಿ ಜರುಗುವ ಸರ್ ಸಪ್ರೂರವರ ಸರ್ವಪಕ್ಷ ಪರಿಷತ್ತಿಗೆ ಪಂಡಿತ ಮಾಲವೀಯಾ, ಡಾ|| ಮುಂಜೆ, ಡಾ| ನಾರಂಗ, ಹಾಗೂ ಶ್ರೀ. ನರಸೋಪಂತ ಕೇಳಕರ ಮೊದಲಾದ ಹಿಂದೂ ಮಹಾಸಭೆಯ ಮುಖಂಡರು ಬಹಿಷ್ಕಾರ ಹಾಕಿದ್ದಾರೆ. ಸರಕಾರದವರ ದಬ್ಬಾಳಿಕೆಗೆ ಉತ್ತರವಾಗಿ ಮಹಾತ್ಮರು ಹಾಗು ಇತರ ರಾಷ್ಟ್ರಸಭೆಯ ಮುಖಂಡರು ಕಾರಾಗೃಹಕ್ಕೆ ತೆರಳಿರುವಾಗ ಈ ಪರಿಷತ್ತನ್ನು ನೆರೆಯಿಸುವದು ಸಮಂಜಸವಾಗದ್ದರಿಂದ ಮುಂದೆ ಹಾಕಬೇಕೆಂದೂ, ಈ ಪರಿಷತ್ತನ್ನು ಈಗ ಜರುಗಿಸುವದು ಮತ್ತಿಷ್ಟು ಗಂಡಾಂತರಕ್ಕೆ ಕಾರಣವಾಗುವದೆಂದೂ ಅಭಿಪ್ರಾಯಪಟ್ಟಿದ್ದಾರೆ.

### ಪ್ರೊ, ಧರ್ಮಾನಂದ ಕೋಸಂಬಿಯವರನ್ನು ಹಿಡಿದರು

ಪ್ರೊ ಧರ್ಮಾನಂದ ಕೋಸಂಬಿಯವರು ಶಿರೋಡಾದಲ್ಲಿ ಉಪ್ಪಿನ ಕಟ್ಟಳೆಯನ್ನು ಮುರಿದದ್ದರಿಂದ ಪೋರ್ತುಗೀಜ ಸರಕಾರದ ಅಧಿಕಾರಿಗಳಿಂದ ೭ನೇ ತಾ|| ಗೆ ಬಂಧಿತರಾಗಿದ್ದಾರೆ.

### ಸತ್ಯಾಗ್ರಹಕ್ಕೆ ವಿಮಾಕಂಪನಿಯವರ ಸಹಾನುಭೂತಿ

ನಮ್ಮ ಕಂಪನಿಗಳಲ್ಲಿ ವಿಮಾ ಇಳಿಸಿದವರಲ್ಲಿ ಯಾರು ದೇಶದಲ್ಲಿ ಈಗ ಪ್ರಾರಂಭವಾಗಿರುವ ಸ್ವಾತಂತ್ರ್ಯಸಮರದಲ್ಲಿ ಸೇರಿ ಶಿಕ್ಷೆಗೆ ಗುರಿಯಾಗಿರುವರೋ ಅಂತಹ ಗೃಹಸ್ಥರ ಹಣವನ್ನು ತುಂಬುವ ಕಾಲಾವಧಿಯು ಮುಗಿದರೂ ಸಹ ಅವರ "ಪಾಲಿಸಿ"ಯನ್ನು ರದ್ದು ಮಾಡದೆ ಹಾಗೆಯೇ ಮುಂದೆ ನಡೆಸುವೆವೆಂದು ಮುಂಬಯಿಯ ಆಲ್ - ಇಂಡಿಯಾ ಸೆಕ್ಯೂರಿಟಿ ಲಾಯಿಫ್ ಆಂಡ ಜನರಲ್ ಅಸ್ಯೂರನ್ಸ ಹಾಗೂ ಈಸ್ಟ ಆಂಡ ವೆಸ್ಟ ಅಸ್ಯೂರನ್ಸ ಕಂಪನಿಗಳು ಠರಾವುಗಳನ್ನು ಪಾಸುಮಾಡಿಕೊಂಡಿವೆ ಉಳಿದ ಕಂಪನಿಗಳೂ ಇವರ ಅನುಕರಣ ಮಾಡಬೇಕು.

### ರತ್ನಾಗಿರಿಯಲ್ಲಿ ಶಿಕ್ಷೆ.

"ಬಲವಂತ" ಪತ್ರದ ಸಂಪಾದಕರಾದ ಶ್ರೀ ಪಟವರ್ಧನ ಹಾಗೂ ಸಾತಾರೆಯ ಶ್ರೀ ಘಾಣೇಕರ ಇವರನ್ನು ಉಪ್ಪಿನ ಕಾಯಿದೆ ಭಂಗಕ್ಕಾಗಿ ಹಿಡಿದು, ರತ್ನಾಗಿರಿಯ ಫ. ಕ್ಲಾ. ಮ್ಯಾಜಿಸ್ಟ್ರೇಟರು ಕ್ರಮವಾಗಿ ೭ ತಿಂಗಳ ಹಾಗೂ ೬ ತಿಂಗಳ ಸಶ್ರಮ ಶಿಕ್ಷೆಯನ್ನು ವಿಧಿಸಿದ್ದಾರೆ

### ಧರಸನಾ ಉಪ್ಪಿನ ಮಾಳಿಯ ದಾಳಿಗಾಗಿ
## ಮುಂಬಯಿಯ ಸತ್ಯಾಗ್ರಹಿಗಳು ಸಿದ್ಧರಾಗಿರುವರು

"ಧರಸನಾ ಉಪ್ಪಿನ ಮಾಳಿಯನ್ನು ಕೈವಶಪಡಿಸಿಕೊಳ್ಳದೆ ಶ್ರೀ ಅಬ್ಬಾಸರೂ ಮತ್ತು ಅವರ ಕೈಕೆಳಗಿನ ಸತ್ಯಾಗ್ರಹಿಗಳು ಸರಕಾರದ ದಬ್ಬಾಳಿಕೆಗೆ ತುತ್ತಾದಲ್ಲಿ, ಮುಂಬಯಿಯಿಂದ ಪ್ರತಿನಿತ್ಯವೂ ೫೦ ಇಲ್ಲವೆ ೧೦೦ ಸತ್ಯಾಗ್ರಹಿಗಳನ್ನು ಅಲ್ಲಿಗೆ ಕಳಿಸಿ ದಾಳಿಯ ಕಾರ್ಯವನ್ನು ಕೊನೆಗಾಣಿಸುವೆವೆಂಬುದಾಗಿ ಶ್ರೀಮತಿ ಕಮಲಾದೇವಿಯವರು ಶ್ರೀ ಅಬ್ಬಾಸರಿಗೆ ವಚನ ಕೊಟ್ಟಿದ್ದಾರೆ.

# ಬಾರ್ಡೋಲಿ ತಾಲೂಕದ ಭೀಷ್ಮಪ್ರತಿಜ್ಞೆ

## ಕರನಿರಾಕರಣೆಯ ಬ್ರಹ್ಮಾಸ್ತ್ರವನ್ನು ಹೊರಗೆ ತೆಗೆದರು.

ಜಗದ್ವಂದ್ಯ, ವಿಭೂತಿಗಳೂ ಹಿಂದುಸ್ಥಾನದ ಪ್ರಾಣಪದಕರೂ ಆಗಿರುವ ಮಹಾತ್ಮಾ ಗಾಂಧಿಯವರನ್ನು ಸರಕಾರದವರು ಅನ್ಯಾಯದಿಂದ ಸೆರೆಮನೆಗೆ ಅಟ್ಟಿದುದಕ್ಕಾಗಿ ನಿಷೇಧವೆಂದು ನಾವು ಬಾರ್ಡೋಲಿ ತಾಲೂಕಿನ ಪ್ರಜೆಗಳು ಮಹಾತ್ಮರಾಗಲಿ ಇಲ್ಲವೆ ಶ್ರೀ ವಲ್ಲಭಭಾಯಿಯವರಾಗಲಿ ಸೆರೆಯಿಂದ ಬಿಡುಗಡೆಯಾಗಿ ಬಂದು ಆಜ್ಞೆ ಕೊಡುವರೆಂದು ಆಜ್ಞಾಪಿಸುವವರೆಗೆ ಕರನಿರಾಕರಣೆಯ ಬ್ರಹ್ಮಾಸ್ತ್ರವನ್ನು ಹೊರಗೆ ತೆಗೆದು ಕರಕೊಡದವರಾಗಿ ನಿಶ್ಚಯಿಸಿದ್ದೇವೆಂದೂ, ಈ ಕಾರ್ಯವನ್ನು ಕೊನೆಗಾಣಿಸಲು ಮುಂದೆ ನಮ್ಮ ಯಾವ ತೊಂದರೆಗಳನ್ನೂ ಲೆಕ್ಕಿಸುವದಿಲ್ಲವೆಂದೂ, ಅಪಮಾನಗಳನ್ನು ತಾಳ್ಮೆಯಿಂದ ಸಹಿಸಲೂ ಸೆರೆಮನೆಯನ್ನು ಆನಂದದಿಂದ ಸೇರಲೂ, ಪ್ರಸಂಗ ಬಿದ್ದಲ್ಲಿ ನಮ್ಮ ಪ್ರಾಣಗಳನ್ನು ಅರ್ಪಿಸಲೂ ಸಹ ಸಿದ್ಧರಾಗಿದ್ದೇವೆಂದೂ" ಬಾರ್ಡೋಲಿ ತಾಲೂಕಿನ ಪ್ರಜೆಗಳು ಶ್ರೀ ಅಬ್ಬಾಸರವರ ಅಧ್ಯಕ್ಷತೆಯಲ್ಲಿ ತಾ॥ ೧೦ ನೆಯ ದಿನ ಸಭೆಮಾಡಿಕೊಂಡು ನಿಶ್ಚಯಿಸಿದ್ದಾರೆ.

---

ಕತ್ತೆಗೆ ಪರದೇಶೀ ಚೊಣ್ಣ ಚಾಳೀಸಗಳನ್ನು ಹಾಕಿ ಮೆರೆಯಿಸಿದರು.

### ಗುಳಗಲಿಯಲ್ಲಿ
### ಪರದೇಶಿ ಬಟ್ಟೆಗಳ ಪ್ರಚಂಡ ಹೋಳಿ

ಶ್ರೀ ಗೋತೆ ಸುಬ್ಬಣಾಚಾರ್ಯರನ್ನು ೧೨ ನೇ ತಾ॥ ದಿನ ಇಲ್ಲಿಗೆ ತಂದಿದ್ದಾರೆ

ಕರ್ನಾಟಕ ಸತ್ಯಾಗ್ರಹ ಮಂಡಳದ ಅಪ್ಪಣೆಯ ಮೇರೆಗೆ ತಾ॥ ೧೧ ನೆಯ ದಿವಸ ಪರದೇಶಿ ಬಟ್ಟೆಗಳ ಪ್ರಚಂಡ ಹೋಳಿಯು ಮಾಡಲ್ಪಟ್ಟಿತು. ಪರದೇಶಿ ಅರಿವೆಗಳನ್ನು ತೊಡುವವರಿಗೆ ನಾಚಿಕೆಯನ್ನು ಹುಟ್ಟಿಸುವದಕ್ಕಾಗಿ ಒಂದು ಕತ್ತೆಗೆ ಪರದೇಶಿ ಚೊಣ್ಣ ಚಾಳೀಸಗಳನ್ನು ಹಾಕಿ ಅದನ್ನು ಮೆರೆಯಿಸುವದರಲ್ಲಿ ಬಂದಿತು ಅದರ ಬದಿಗಳಲ್ಲಿ "ನಾನು ಪರದೇಶೀ ಬಟ್ಟೆಗಳನ್ನು ತೊಟ್ಟುಕೊಳ್ಳತಕ್ಕವನೇ. ಯಾಕಂದರೆ ನಾನು ಹೇಳಿ ಕೇಳಿ ಕತ್ತೆಯು" ಎಂಬ ಅಕ್ಷರಗಳಿಂದ ಬರೆಯಲ್ಪಟ್ಟ ಹಲಿಗೆಗಳನ್ನು ಹಿಡಿಯುವದರಲ್ಲಿ ಬಂದಿತ್ತು. ಸಂತೆಯ ದಿನವಿದ್ದುದರಿಂದ ಜನಸಂದಣಿಯು ಹೆಚ್ಚಾಗಿತ್ತು. ಮೆರವಣಿಗೆಯು ಹಾಯ್ದು ಹೋಗುತ್ತಿರುವಾಗ ಎಷ್ಟೋ ಜನರು ತಮ್ಮ ಮೈಮೇಲಿನ ಪರದೇಶಿ ಬಟ್ಟೆಗಳನ್ನು ತೆಗೆದು ಬಿಸುಟಿದರು. ಮೆರವಣಿಗೆಯು ನಂತರದಲ್ಲಿ ಸಭೆಯಾಗಿ ಮುಖಂಡರ ಭಾಷಣಗಳೂ ಶೇಖರಿಸಿದ ಬಟ್ಟೆಗಳ ಹೋಳಿಯೂ ಜರುಗಿದವು.

### ಶ್ರೀ ಅಬ್ಬಾಸರು ಸೆರೆಯಾಳಾದರೆ
### ಸರೋಜಿನಿ ದೇವಿಯವರು ನೇತೃಗಳಾಗುವರು.

ಮಹಾತ್ಮರು ಸೆರೆಯಾಳಾದ ತಕ್ಷಣವೇ ಅವರ ಸತ್ಯಾಗ್ರಹ ಪಥಕದ ನೇತೃಗಳಾಗಿರುವ ಶ್ರೀ ಅಬ್ಬಾಸರು ೧೨ ನೆಯ ತಾ॥ ದಿವಸ ಧರಸನಾ ಉಪ್ಪಿನ ಮಾಳಿಯ ಮೇಲೆ ಹಲ್ಲೆಯನ್ನು ಮಾಡಲು ಯೋಚಿಸಿದ್ದರಿಂದ ಇವರು ಸರಕಾರದ ದಬ್ಬಾಳಿಕೆಗೆ ಯಾವಾಗ ತುತ್ತಾಗುವರೆಂಬುದನ್ನು ಹೇಳಲು ಬರುವಂತಿಲ್ಲ. ಈ ಬಗ್ಗೆ ವಿಚಾರಿಸುವದಕ್ಕಾಗಿ ಶ್ರೀ ಅಬ್ಬಾಸರು ಶ್ರೀಮತಿ ಸರೋಜಿನಿದೇವಿಯವರನ್ನು ಮುಂಬಯಿಯಿಂದ ಕರೆಕಳುಹಿದ್ದರು. ಅವರು ಅಬ್ಬಾಸರಿಗೆ ಭೆಟ್ಟಿಯಾಗಿ "ನಿಮ್ಮ ಸೆರೆಯ ಕಾಲದಲ್ಲಿ ನಾನೇ ಸ್ವತಃ ಸತ್ಯಾಗ್ರಹ ಪಥಕದ ನೇತೃತ್ವವನ್ನು ಸ್ವೀಕರಿಸಿ, ಸತ್ಯಾಗ್ರಹ ಸಮರವನ್ನು ಮುಂದೆ ಸಾಗಿಸಿ, ಸೆರೆಯಾಳಾಗುವೆನು ಇಲ್ಲವೆ ಗೆಲುವನ್ನು ಹೊಂದುವೆನೆಂ"ದು ತಿಳಿಸಿದ್ದಾರೆ.

### ಮದ್ರಾಸದಲ್ಲಿ ಬಂಧನ.

ಶ್ರೀಗಳಾದ ವ್ಹಿ. ಎಲ್ ಶಾಸ್ತ್ರಿ. ಸತ್ಯವೀರಭದ್ರರಾವ್, ಡಾ॥ ಪಿಸಟೆರಾಜನ್. ಡಾ. ಬಿ ಸುಬ್ಬರಾವ ಮೊದಲಾದ ಆಂಧ್ರ ಮುಖಂಡರು ಸ್ವಯಂಸೇವಕರೊಂದಿಗೆ ಮೆರವಣಿಗೆಯಿಂದ ಹೊರಟು ೧೪೪ ನೇ ಕಲಮನ್ನು ಮುರಿಯಲು ಯತ್ನಿಸಿದ್ದರಿಂದ ಸೆರೆಯಾಳಾಗಿದ್ದಾರೆ

### ಸಿದ್ದಾಪುರದ ಪಟೇಲರು ರಾಜೀನಾಮೆ ಕೊಟ್ಟರು

ಉತ್ತರ ಕನ್ನಡ ಜಿಲ್ಲೆಯೊಳಗಿನ ಸಿದ್ದಾಪುರದ ಶ್ರೀನಾರಾಯಣ ಗಣಪತಿಭಟ್ಟರು ತಮ್ಮ ಪಟೇಲಿಕೆಗೆ ರಾಜೀನಾಮೆ ಕೊಟ್ಟಿದ್ದಾರೆ. ಅಲ್ಲದೆ ಸತ್ಯಾಗ್ರಹ ನಿಧಿಗೆ ೧೨೦ ರೂಪಾಯಿಗಳನ್ನು ಕೊಟ್ಟರು.

### ಬೆಂಚ್ ಮ್ಯಾಜಿಸ್ಟ್ರೇಟ ಪದವಿಗೆ ರಾಜೀನಾಮೆ.

ಮಂಗಳೂರಿನ ಶ್ರೀ. ಬಿ. ಮೋಹನಪ್ಪ ತಿಂಗಳಾಯರು, ಮಹಾತ್ಮಾಜಿಯವರಂತಹ ಸತ್ಪುರುಷರನ್ನು ನಿರ್ಬಂಧದಲ್ಲಿರಿಸಿದದಕ್ಕಾಗಿ ಮನನೊಂದು, ತಮ್ಮ ಬೆಂಚಮ್ಯಾಜಿಸ್ಟ್ರೇಟ ಪದವಿಗೆ ರಾಜೀನಾಮೆಯನ್ನಿತ್ತಿದ್ದಾರೆ.

### ಸಿಖರೂ ಸತ್ಯಾಗ್ರಹದಲ್ಲಿ ಸೇರಿದರು

ಸತ್ಯಾಗ್ರಹ ಮಂಡಳದ ಮುಖಂಡರಾದ ಶ್ರೀ ತಾರಾಸಿಂಗರವರ ಅಧ್ಯಕ್ಷತೆಯಲ್ಲಿ ಸೀಖ ಮಧ್ಯವರ್ತಿ ಸಂಘದವರು ತಮ್ಮ ಸಂಘದ ಸಾಧಾರಣ ಸಭೆಯನ್ನು ಕೂಡಿಸಿಕೊಂಡು ಮಹಾತ್ಮರು ಹೂಡಿದ ಸತ್ಯಾಗ್ರಹ ಸಮರದಲ್ಲಿ ಸೀಖರು ಸೇರಬೇಕೆಂಬುದಾಗಿ ಗೊತ್ತುಪಡಿಸಿಕೊಂಡಿದ್ದಾರೆ.

## ಗುಪ್ತ ಪೋಲೀಸನು ಸತ್ಯಾಗ್ರಹಿಯಾದನು.

ಪುಣೆಯ ಗುಪ್ತ ಪೋಲೀಸರ ಖಾತೆಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಜಿ. ಆರ್ ಇನಾಮದಾರ ಇವರು ತಮ್ಮ ಉದ್ಯೋಗವನ್ನು ಬಿಟ್ಟು ಗುಪ್ತ ಸತ್ಯಾಗ್ರಹ ಸಮರದಲ್ಲಿ ಸೇರಿದ್ದಾರೆ.

## ಶಿಕ್ಷೆಯನ್ನು ಕೊಟ್ಟಿದುದಕ್ಕಾಗಿ ಮ್ಯಾಜಿಸ್ಟ್ರೇಟರಿಗೆ ಹೆಂಡದ ಬಹುಮಾನ.

ಮದ್ರಾಸ ಶ್ರೀಮತಿ ದುರ್ಗಾಬಾಯಿಯವರು ೧೪ನೆಯ ಕಲಮಿನನ್ವಯ ಬಂಧಿಸಲ್ಪಟ್ಟು ಶಿಕ್ಷೆಗೆ ಗುರಿಯಾದ ಶ್ರೀ ವ್ಹಿ. ಎಲ್. ಶಾಸ್ತ್ರಿಗಳ ಕೊರಳಿಗೆ ಹಾಕಲು ಒಂದು ಹಾರವನ್ನು ತಂದಿದ್ದರು. ಆದರೆ ಮ್ಯಾಜಿಸ್ಟ್ರೇಟರು ಹಾಗೆ ಮಾಡಲು ಅವರಿಗೆ ಅಪ್ಪಣೆಯನ್ನು ಕೊಡಲಿಲ್ಲವಾದುದರಿಂದ, ಅವರು ಅದನ್ನು ಮ್ಯಾಜಿಸ್ಟ್ರೇಟರಿಗೇ ಶಿಕ್ಷೆಯನ್ನು ಕೊಟ್ಟುದಕ್ಕಾಗಿ ಬಹುಮಾನವೆಂದು ಅರ್ಪಿಸಿಬಿಟ್ಟರು.

## ಸಿ. ಆಯ್. ಈ. ಬಿರುದಿಗೆ ಶರಣು ಹೊಡೆದರು.

ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡಿದುದಕ್ಕಾಗಿ ನಿಷೇಧವೆಂದು ಶ್ರೀ [illegible] ಅವರು ತಮ್ಮ ಸಿ. ಐ. ಈ. ಬಿರುದಿಗೂ ಮತ್ತು ಜಸ್ಟಿಸ್ ಆಫ್ ದಿ ಪೀಸ್ ಪದವಿಗೂ (ಜಸ್ಟಿಸ ಆಫ್ ಪೀಸ) ಶರಣು ಹೊಡೆದರು.

## ಕರ್ನಾಟಕ ಸತ್ಯಾಗ್ರಹಿಗಳಿಗೆ ಕಠಿಣ ಶಿಕ್ಷೆಗಳಾದವು.

ಬೆಳಗಾವಿ ಜಿಲ್ಲೆಯ [illegible] ೫ ಜನ ಸ್ವಯಂಸೇವಕರು ಗೋವೆ [illegible] ತಂದ ಉಪ್ಪಿನ [illegible] ಎಂಬಲ್ಲಿ ಪೋಲೀಸರಿಗೆ [illegible] ಬ್ರಿಟಿಶ ಸರಕಾರದ ಅಧಿಕಾರಿಗಳು [illegible] ಮೇಲೆ [illegible] ಉಪಯೋಗಿಸಿ ಅವರನ್ನು ಅವಮಾನಗೊಳಿಸಿದರು. ಅವಮಾನಕ್ಕೊಳಗಾದ ಈ ಹುಡುಗರು ಉಪ್ಪನ್ನು ಅಧಿಕಾರಿಗಳ ಕೈವಶಪಡಿಸುವದಕ್ಕಿಂತ ತಿಂದು ಬಿಡುವದೇ ಲೇಸೆಂದು ಯೋಚಿಸಿ ಎಲ್ಲ ಉಪ್ಪನ್ನು ತಿಂದು ಬಿಟ್ಟರು, ೭ ಜನ ಸತ್ಯಾಗ್ರಹಿಗಳ ಮತ್ತೊಂದು ತಂಡವನ್ನು ಇದೇ ರೀತಿಯಿಂದ ಉಪ್ಪನ್ನು ಕೈವಶಪಡಿಸಿಕೊಂಡು, ಅವರನ್ನು ಸೆರೆಹಿಡಿದು ಅಧಿಕಾರಿಗಳು ಅವರಿಗೆ ೩ ತಿಂಗಳ ಸಖ್ತ ಶಿಕ್ಷೆಯನ್ನು ವಿಧಿಸಿದ್ದಾರೆ.

## ಲಂಡನ್ನಿನ ವ್ಯಾಪಾರಿ ಸಂಘದ [illegible] ಪತ್ರಿಕೆ

ಲಂಡನ್ನಿನಲ್ಲಿಯ ಜವಳಿ ವ್ಯಾಪಾರಿಗಳ ಸಂಘವು [illegible] ವಿಲಾಯತಿ ಬಟ್ಟೆಗಳ ಬಹಿಷ್ಕಾರದ ಚಳವಳಿಯು ಬಹು ಭರದಿಂದ ಸಾಗಿರುವದರಿಂದ ಸೇವು ಇನ್ನು ಮುಂದೆ [illegible] ಬಟ್ಟೆಗಳಿಂದ ತುಂಬಿದ ಹಡಗಗಳನ್ನು ಉತ್ತರ ಹಿಂದುಸ್ಥಾನಕ್ಕೆ ಕಳಿಸತಕ್ಕದ್ದಲ್ಲವೆಂದು" ಲಂಡನ್ ಮ್ಯಾಂಚೆಸ್ಟರ, ಲ್ಹಿಯಸ್ಟರ್, ಪ್ಯಾರಿಸ ಮೊದಲಾದ ಪಟ್ಟಣಗಳ ವ್ಯಾಪಾರಿ ಸಂಘಗಳಿಗೆ ಎಚ್ಚರಿಕೆಯನ್ನು ಕೊಟ್ಟದ್ದಲ್ಲದೆ, ಸ್ಥಳೀಕ ಪ್ರತಿನಿಧಿಗಳಿಗೂ, ವ್ಯಾಪಾರಸ್ಥರಿಗೂ, ಅಂತಹ ಸರಕುಗಳನ್ನು ಸ್ವೀಕರಿಸಬಾರದಾಗಿ ತಿಳಿಸಿದ್ದಾರೆ

## ಕಾನಪುರದಲ್ಲಿ ಪರದೇಶಿ ಬಟ್ಟೆಗಳ ಪಿಕೆಟಿಂಗ

ಕಾನಪುರದಲ್ಲಿ ಪರದೇಶಿ ಬಟ್ಟೆಯ ಅಂಗಡಿಗಳ ಮೇಲೆ ಸ್ವಯಂಸೇವಕರು ಬಹಳ ಹುರುಪಿನಿಂದ ಪಿಕೆಟಿಂಗ ಸುರುಮಾಡಿದ್ದಾರೆ. ಇವರಲ್ಲಿ ೧೨ ಸ್ತ್ರೀಯರೂ ಸಮಾವಿಷ್ಟರಾಗಿದ್ದು ಬೇರೆ ಬೇರೆ ಅಂಗಡಿಗಳ ಮುಂದೆ ನಿಂತು ಗಿರಾಕಿಗಳಿಗೆ ಕೈಜೋಡಿಸಿ ನಮ್ರತೆಯಿಂದ ಪರದೇಶಿ ವಸ್ತ್ರಗಳನ್ನು ಕೊಳ್ಳಬಾರದೆಂದು ಬೇಡಿಕೊಳ್ಳುತ್ತಿದ್ದಾರೆ, ವ್ಯಾಪಾರಸ್ಥರೊಳಗೆ ಒಡಂಬಡಿಕೆಯ ಮಾತುಗಳು ನಡೆದಿವೆ.

## ಸರಕಾರವೇ ಉಪ್ಪನ್ನು ನಾಶಪಡಿಸುತ್ತಿರುವದು.

ಅಂಕೋಲೆಯ ಸಮುದ್ರ ತೀರದ ಮೇಲೆ ಸ್ವಾಭಾವಿಕವಾಗಿ ಸಿದ್ಧವಾಗಿರುವ ಬಡವರ ಅನ್ನವಾದ ಉಪ್ಪನ್ನು ಪಗಾರ ಕೊಟ್ಟು ಇಟ್ಟ ಆಳಿನ ಕೈಯಿಂದ ಅಧಿಕಾರಿಗಳು ನಾಶಪಡಿಸುತ್ತಿರುವರಾಗಿ ತಿಳಿಯುತ್ತದೆ.

## ಬೆಂಗಳೂರಿನ ಭಾಷ್ಯಂ ವಕೀಲರು ಉಪ್ಪಿನ ಕಟ್ಟಳೆ ಮುರಿದರು

ಬ್ರಿಟಿಶ ಕರ್ನಾಟಕದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿಕೊಳ್ಳಲು ಸ್ವಯಂಸೇವಕರೊಂದಿಗೆ ಅಂಕೋಲೆಗೆ ಹೊರಟು ಬಂದ ಬೆಂಗಳೂರಿನ ಸುಪ್ರಸಿದ್ಧ ವಕೀಲರಾದ ಶ್ರೀ ಭಾಷ್ಯಂ ಇವರು ೩೦ [illegible] ಸ್ವಯಂಸೇವಕರೊಂದಿಗೆ ೪ ನೇ ತಾ॥ ದಿನ ಸಮುದ್ರಕ್ಕೆ ತೆರಳಿ ಮುಂಜಾನೆ ೯ ಘಂಟೆಗೆ ಉಪ್ಪನ್ನೂ, ಉಪ್ಪಿನ ಮಣ್ಣನ್ನೂ, ಉಪ್ಪು ನೀರನ್ನೂ ತೆಗೆದುಕೊಂಡು ಕಟ್ಟಳೆಯನ್ನು ಮುರಿದು ಆಶ್ರಮಕ್ಕೆ ತಿರುಗಿ ಬಂದರು. ಯಾರನ್ನೂ ದಸ್ತಗಿರಿ ಮಾಡಿಲ್ಲ.

## ಇನ್ನೂರು ಮಕ್ಕಳ ತಂದೆಯು.

" ಕ್ರಿ. ಶ. ೧೮೩೪ ರಲ್ಲಿ ಇರಾಣ ದೇಶವನ್ನು ಆಳುತ್ತಿದ್ದ ಶಹಾ ಇವರಿಗೆ ೫೫ ಜನ ಗಂಡು ಮಕ್ಕಳೂ, ೧೨೫ ಹೆಣ್ಣುಮಕ್ಕಳೂ ಇದ್ದದ್ದಲ್ಲದೆ, ಅವರಲ್ಲಿ ಎಷ್ಟೋ ಜನರಿಗೆ ೧೦ರಿಂದ ೨೦ ರ ವರೆಗೆ ಮಕ್ಕಳಿದ್ದರೆಂದೂ, ಹೀಗಿದ್ದುದರಿಂದ ಶಹಾರವರ ಕೌಟುಂಬಿಕ ಜನಸಂಖ್ಯೆಯು ಒಂದು ಸಾವಿರದ ಮೇಲೆಯನ್ನು ಮುಟ್ಟಿತ್ತೆಂದೂ " ಕ್ರಿ. ಶ ೧೮೩೫ ನೆಯ ವರ್ಷದ " ಮುಂಬಯಿ ಸಮಾಚಾರ " ಪತ್ರಿಕೆಯ ಒಂದು ಸಂಚಿಕೆಯಿಂದ ತಿಳಿದು ಬರುತ್ತದೆ.

## ಪ್ರಾಜ್ಞಪಾಠ ಶಾಲೆಯ ಶಿಕ್ಷಕರಿಗೆ ಶಿಕ್ಷೆ.

ಪುಣೆಯ ಪ್ರಾಜ್ಞಪಾಠ ಶಾಲೆಯಲ್ಲಿ ಶಿಕ್ಷಕರಾದ ಶ್ರೀ ಖಾಡಿಲಕರರಿಗೂ ಮತ್ತು ಶ್ರೀ ವಾಟವೆ ಧರ್ಮಶಾಸ್ತ್ರಿಗಳಿಗೂ ಉಪ್ಪಿನ ಕಟ್ಟಳೆಯನ್ನು ಮುರಿದದಕ್ಕಾಗಿ ಸಾತಾರೆಯ ಮ್ಯಾಜಿಸ್ಟ್ರೇಟರು ಕ್ರಮವಾಗಿ ೧೫ ತಿಂ. ಹಾಗೂ ೧೨ ತಿಂ ಶಿಕ್ಷೆಯನ್ನು ವಿಧಿಸಿದ್ದಾರೆ.

## ಬ್ರಿಟಿಶ ವಿದ್ಯುತ್ ಯಂತ್ರಗಳಿಗೆ ಬಹಿಷ್ಕಾರ

ಮುಂಬಯಿಯಲ್ಲಿಯ ವಿದ್ಯುತ್ ಯಂತ್ರಗಳ ವ್ಯಾಪಾರಸ್ಥರೂ, ಗುತ್ತಿಗೆದಾರರೂ ೯ ನೇ ತಾ॥ ದಿವಸ ಸಭೆಯನ್ನು ಮಾಡಿಕೊಂಡು ಇನ್ನು ಮುಂದೆ ಬ್ರಿಟನ್‌ದಲ್ಲಿ ಸಿದ್ಧವಾದ ವಿದ್ಯುತ್ ಉಪಕರಣಗಳನ್ನು ತರಿಸಬಾರದೆಂದು ನಿಶ್ಚಯಿಸಿಕೊಂಡಿದ್ದಾರೆ.

ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು

ತಮ್ಮ ಲೋಕಪ್ರಿಯವಾದ

ಬುಧವಾರ ತಾ. ೧೪-೫-೩೦

ಚವತಿಯಚಂದ್ರ

ಎಂಬ ನಾಟಕಗಳನ್ನು ಅಭಿನಯಿಸುವರು.

ಸಂಘದೊಡೆಯ:—ಸದಾಶಿವರಾವ ಗೆಲೊರ

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದಲೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ (ವಿಶೇಷ ಸಂಚಿಕೆ) ಬೆಲೆ ೦—೨—೩

# ಕನ್ನಡಿಗ

ಜಯ ಕರ್ನಾಟಕ

ನಿತ್ಯಸಂಚಿಕೆಯು.

यद्यत परवशं दुःखं । यद्यदात्मवशं सुखम् ॥ — मनु

ಸಂಪಾದಕರು:— ಬಳವಂತ ಅಪ್ಪಾರಾವ ಮುಜುಮದಾರ.

ಬಾಗಲಕೋಟೆ ಬುಧವಾರ ಮಿತಿ ವೈಶಾಖ ಬಹುಳ ೨ ಶಕೆ ೧೮೫೨ ತಾ ೧೪—೫—೩೦ ಸಂಚಿಕೆ ೪೮

## ಡಾಕ್ಟರ ಕಿಚಲೂರವರಿಗೆ
# ೩ ವರ್ಷ ಸಶ್ರಮ ಶಿಕ್ಷೆ

ಪಂಜಾಬದ ಮುಂದಾಳುಗಳಾದ ಡಾಕ್ಟರ ಕಿಚಲೂರವರಿಗೆ ರಾಜದ್ರೋಹಕ್ಕಾಗಿ ೩ ವರ್ಷ ಸಶ್ರಮ ಶಿಕ್ಷೆ ವಿಧಿಸಲಾಯಿತು. ಪಂಜಾಬದ ಮುಸಲ್ಮಾನರಲ್ಲಿ ಡಾಕ್ಟರ ಕಿಚಲೂರವರು ಮುಖ್ಯಸ್ಥರು. ಇನ್ನಾದರೂ ನಮ್ಮ ಮುಸಲ್ಮಾನ ಬಂಧುಗಳು ಮುಂದೆ ಬಂದು ರಾಷ್ಟ್ರಕಾರ್ಯದಲ್ಲಿ ಧುಮುಕುವರೋ?

## ಬೆಳಗಾವಿಯಲ್ಲಿ ೩೬ ಸ್ವಯಂಸೇವಕರನ್ನು ಹಿಡಿದರು.

( ನಮ್ಮ ಸ್ವಂತ ಸುದ್ದಿಗಾರರಿಂದ )

೧೧ ನೇ ತಾರೀಖಿನ ದಿವಸ ಮಾರ್ಕೇಟಿನಲ್ಲಿ ಪರದೇಶೀ ಬಟ್ಟೆಗಳ ಪ್ರಚಂಡ ಹೋಳಿಯಾಯಿತು. ೧೫೦೦೦ ಜನರು ಕೂಡಿದ್ದರು. ಪೋಲೀಸಸಾಹೇಬರೂ ಉಳಿದ ಅಧಿಕಾರಿಗಳೂ ಬಂದು ೩೬ ಸ್ವಯಂಸೇವಕರನ್ನು ಹಿಡಿದು ೩ ಮೋಟರುಗಳಲ್ಲಿ ತುಂಬಿಕೊಂಡು ಹೋದರು. ಸ್ವಯಂಸೇವಕರ ಶಿಬಿರದಲ್ಲಿಯೂ ಪರದೇಶೀ ವಸ್ತ್ರಗಳ ಹೋಳಿಯಾಯಿತು. ಅವತ್ತಿನ ದಿವಸ ಎಲ್ಲ ಅಂಗಡಿಗಳು ಮುಚ್ಚಲ್ಪಟ್ಟಿದ್ದವು. ಊರಲ್ಲೆಲ್ಲ ಶಾಂತತೆಯು ಹಬ್ಬಿದೆ.

---

## ಬ್ರಾಹ್ಮಣೇತರರಿಗೆ ಸ್ಟೇಶನ್ನದಲ್ಲಿ ಊಟ ಸಿಗಲಿಲ್ಲ.

ಬ್ರಾಹ್ಮಣೇತರ ಪರಿಷತ್ತಿಗೆ ಆಗಮಿಸಿದ ೨೦ ಜನ ಮುಂದಾಳುಗಳ ತಲೆಯಮೇಲೆ ಗಾಂಧಿ ಟೊಪ್ಪಿಗೆ ಹಾಗೂ ರಾಷ್ಟ್ರಧ್ವಜಗಳಿದ್ದುದರಿಂದ ರೇಲ್ವೇದೊಳಗೆ ಅವರನ್ನು ಬಿಡಲಿಲ್ಲ. ತಲೆಯಮೇಲಿನ ಟೊಪ್ಪಿಗೆಗಳನ್ನು ತೆಗೆದಿಟ್ಟು ಒಳಗೆ ಹೋಗಿರೆಂದು ಪೋಲೀಸ ಅಧಿಕಾರಿಗಳು ಹೇಳಿದರು. ಆದರೆ ಪ್ರತಿನಿಧಿಗಳಿದಕ್ಕೆ ಒಪ್ಪಲಿಲ್ಲ. ರೇಲ್ವೇದಲ್ಲಿಯ ಭೋಜನವನ್ನು ತರಿಸಿ ಎಲ್ಲರೂ ಹೊರಗೆ ಊಟಮಾಡಿದರು. ಬ್ರಾಹ್ಮಣೇತರ ಬಂಧುಗಳು ಇಂಥ ಅಪಮಾನವನ್ನು ಸಹಿಸುವರೋ?

## ಬ್ರಾಹ್ಮಣೇತರರ ಪರಿಷತ್ತು,
### ಗಾಂಧೀಜೀಯವರ ಚಳವಳಿಯಲ್ಲಿ ಸೇರಬೇಕು,

ಹಾವೇರಿಯ ಶ್ರೀ ಹೊಸಮನಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ಸೇರಿದ ಬ್ರಾಹ್ಮಣೇತರ ಪರಿಷತ್ತಿನಲ್ಲಿ ಮಹಾತ್ಮಾಜಿಯವರ ಸತ್ಯಾಗ್ರಹ ಚಳವಳದಲ್ಲಿ ಬ್ರಾಹ್ಮಣೇತರರು ಅವಶ್ಯವಾಗಿ ಸೇರಬೇಕೆಂದು ಬಹುಮತದಿಂದ ನಿರ್ಣಯಿಸಲ್ಪಟ್ಟಿದೆ. ಪರಿಷತ್ತಿಗೆ ಸುಮಾರು ೨೦೦೦ ಪ್ರತಿನಿಧಿಗಳು ಸೇರಿದ್ದರು.

## ಸಂಪಗಾಂವಿ

ಸಂಪಗಾಂವಿಯಲ್ಲಿ ೨೦ ಜನ ಸ್ವಯಂಸೇವಕರು ೪೦ ಸಿಂದೀ ಗಿಡಗಳನ್ನು ಕಡಿದರು. ದಿನಾಲು ಸಿಂದೀ ಗಿಡಗಳನ್ನು ಕಡಿಯುತ್ತಿದ್ದಾರೆ. ಹುದ್ಲಿಯಲ್ಲಿಯೂ ಸಿಂದೀ ಗಿಡಗಳನ್ನು ಕಡಿಯುವ ಕೆಲಸವು ದಿನಾಲು ಸಾಗಿದೆ. ಪ್ರತಿದಿವಸ ಸಭೆ ಜರುಗುತ್ತಲಿದ್ದು ಉಪ್ಪು ಮಾಡುವದಾದರೂ ಸಾಗಿದೆ. ಬಾಪು ಗೋಖಲೇ ಎಂಬ ಯಮಕನಮರಡಿಯ ಚಿಕ್ಕ ಬಾಲಕನಿಗೆ ಈ ಮೊದಲೇ ೧೦೦ ರೂ. ದಂಡವಾಗಿದ್ದು ಪುನಃ ಅವನನ್ನು ಪೋಲೀಸರು ಹಿಡಿದಿದ್ದಾರೆ.

## ಹರತಾಳ ಪಾಲಿಸಬೇಕು

ನಿವೃತ್ತ ನ್ಯಾಯಾಧೀಶರಾದ ಶ್ರೀ ಅಬ್ಬಾಸ ತಯಬಜೀಯವರು ಬಂಧಿಸಲ್ಪಟ್ಟಿದ್ದಕ್ಕಾಗಿ ಇಂದು ಎಲ್ಲರೂ ಹರತಾಳವನ್ನು ಆಚರಿಸಬೇಕಾಗಿ ಸತ್ಯಾಗ್ರಹ ಮಂಡಳದವರ ವಿನಂತಿಯಿದೆ.

## ಶ್ರೀ. ತಯ್ಯಾಬ್ಜಿಯವರು ಸೆರೆಯಾಳಾದರು!

# ಉಪ್ಪಿನ ವಖಾರದ ಮೇಲೆ ದಾಳಿ

೧೨ ನೇ ತಾ|| ಮುಂಜಾನೆ ಶಿರೋಡಾ ಉಪ್ಪಿನ ವಖಾರದ ಮೇಲೆ ದಾಳಿ ಮಾಡಲಾಯಿತು. ೯೦ ಸ್ವಯಂಸೇವಕರು ಹಿಡಿಯಲ್ಪಟ್ಟಿದ್ದಾರೆ ಮಹಾರಾಷ್ಟ್ರದ ಕೆಲವು ಮುಖಂಡರಾದರೂ ಬಂಧಿಸಲ್ಪಟ್ಟಿದ್ದಾರೆ. ೪೦೦ ಮಣ ಉಪ್ಪು ವಖಾರದೊಳಗಿಂದ ತಕ್ಕೊಂಡು ಮಾರುವದರಲ್ಲಿ ಬಂದಿತು. ಸ್ವಯಂಸೇವಕರ ಖಟ್ಲೆಯ ವಿಚಾರಣೆ ನಡೆದಿದೆ.

ಮಹಾತ್ಮರು ಸೆರೆಯಾಳಾದ ಕೂಡಲೇ ಅವರ ಆಜ್ಞೆಯ ಪ್ರಕಾರ ಸತ್ಯಾಗ್ರಹಿಗಳ ಪಥಕದ ನೇತೃತ್ವವನ್ನು ವಹಿಸಿ, ತಾ|| ೧೫ ನೆಯ ದಿವಸ ಧರಸನಾ ಉಪ್ಪಿನ ಮಾಳಿಯ ಮೇಲೆ ದಾಳಿಯನ್ನಿಡಲು ಶ್ರೀ. ಅಬ್ಬಾಸ ತಯ್ಯಬಜಿಯವರು ಕರಡಿಯಿಂದ ತಾ|| ೧೨ ಕ್ಕೆ ಹೊರಡಲು ಯೋಚಿಸಿದ್ದರಷ್ಟೇ! ಆದರೆ ಸುರತದ ಡಿ|| ಮ್ಯಾಜಿಸ್ಟ್ರೇಟರು ಅವರು ಹೊರಡುವದಕ್ಕಿಂತ ಪೂರ್ವದಲ್ಲಿಯೇ ಅವರಿಗೆ "ನೀವು ಧರಸಾನಾ ಉಪ್ಪಿನ ಮಾಳಿಯ ಮೇಲೆ ಸತ್ಯಾಗ್ರಹಿಗಳೊಂದಿಗೆ ದಾಳಿಯನ್ನಿಡುವದಾಗಿ ಯೋಚಿಸಿದ್ದೀರಿ. ನಿಮ್ಮ ಈ ಕೃತ್ಯವು ಕಾಯಿದೆಗೆ ವಿರುದ್ಧವಾದದ್ದು ಹಿಂಸಾಪ್ರೇರಕವೂ ಇದೆ. ನಿಮ್ಮ ಈ ಕೃತ್ಯದಿಂದ ಫಲಿಸಬಹುದಾದ ಪರಿಣಾಮದ ಕಡೆಗೆ ಲಕ್ಷ್ಯಗೊಟ್ಟು ಈ ಕೃತ್ಯದಲ್ಲಿ ತೊಡಗಬೇಕು, ಅವಶ್ಯಬಿದ್ದ ಎಲ್ಲ ಸಾಧನೆಗಳಿಂದ ನಿಮ್ಮ ಈ ದಾಳಿಯನ್ನು ತಡೆಯಲು ಸರಕಾರದವರು ನಿಶ್ಚಯಿಸಿದ್ದಾರೆ" ಎಂಬ ಆಶಯದ ಪತ್ರ ಕಳುಹಿಸಿ ಎಚ್ಚರಿಕೆಯನ್ನು ಕೊಟ್ಟರು. ಶ್ರೀ. ಅಬ್ಬಾಸರು ಇದಕ್ಕಾಗಿ ಸರಕಾರದವರ ಆಭಾರವನ್ನು ಮನ್ನಿಸಿ, ಮುಂದಿಟ್ಟ ಹೆಜ್ಜೆಯನ್ನು ಎಂದಿಗೂ ಹಿಂದೆಗೆಯುವದಿಲ್ಲವೆಂದು ಡಿ|| ಮ್ಯಾಜಿಸ್ಟ್ರೇಟರಿಗೆ ತಿಳಿಸಿ, ಮೊದಲು ಗೊತ್ತುಪಡಿಸಿದ ಪ್ರಕಾರ ೫೯ ಜನ ಸ್ವಯಂಸೇವಕರೊಂದಿಗೆ ತಾ|| ೧೨ ನೆಯ ದಿವಸ ಮುಂಜಾನೆ ೬ ಗಂಟೆಗೆ ಕರಡಿಯಿಂದ ಹೊರಟರು. ೨೦೦೦ ವರೆಗೆ ಜನಸಂದಣಿಯು ಕೂಡಿತ್ತು. ಎಲ್ಲಿ ನೋಡಿದಲ್ಲಿ ಉತ್ಸಾಹವೇ ತುಂಬಿ ತುಳುಕುತ್ತಿತ್ತು. ಸತ್ಯಾಗ್ರಹಿಗಳು ಊರಲ್ಲೆಲ್ಲ ಮೆರವಣಿಗೆಯಿಂದ ಹೊರಟು ೬|| ಗಂಟೆಗೆ ಊರ ಹೊರಗೆ ಬಂದು ತಲುಪಿದರು. ಕೂಡಲೆ ಅಲ್ಲಿ ೪೦೦ ಸಶಸ್ತ್ರ ಪೋಲೀಸರೊಂದಿಗೆ ಸಿದ್ಧರಾಗಿ ನಿಂತಿದ್ದ ಪೋಲೀಸ ಸುಪರಿಂಟೆಂಡೆಂಟ, ಕಲೆಕ್ಟರ ಮೊದಲಾದ ಸರಕಾರಿ ಅಧಿಕಾರಿಗಳು ಸತ್ಯಾಗ್ರಹಿಗಳನ್ನು ಬಂದು ಮುತ್ತಿದರು. ಆಮೇಲೆ ಡಿ|| ಮ್ಯಾಜಿಸ್ಟ್ರೇಟರು ಶ್ರೀ. ತಯ್ಯಬಜಿಯವರ ದಳವು ಕಾಯಿದೆಗೆ ವಿರುದ್ಧವಾಗಿದೆಯೆಂದು ಸಾರಿದ್ದರಿಂದ ಕೂಡಲೆ ಪೋಲೀಸರು ಮುಂದೆ ಬಂದು ಶ್ರೀ. ತಯ್ಯಬಜಿಯವರನ್ನೂ, ಬಾರ್ಡೋಲಿ ಸತ್ಯಾಗ್ರಹ ಪತ್ರಿಕೆಯ ಸಂಪಾದಕರಾದ ಶ್ರೀ. ಜಗತ್‌ರಾಮ ದಾವೆಯವರನ್ನೂ, ೫೯ ಜನ ಸ್ವಯಂಸೇವಕರನ್ನೂ ಸೆರೆಹಿಡಿದು ಅವರೆಲ್ಲರನ್ನು ಮೋಟರದಿಂದ ಜಲಾಲಪುರಕ್ಕೆ ತೆಗೆದುಕೊಂಡು ಹೋದರು. ಶ್ರೀ. ತಯ್ಯಬಜಿಯವರನ್ನು ಬಂಧಿಸುವದಕ್ಕಿಂತ ಪೂರ್ವದಲ್ಲಿ ಡಿ|| ಮ್ಯಾಜಿಸ್ಟ್ರೇಟರಿಗೂ ತಯ್ಯಬಜಿಯವರಿಗೂ ಕೆಳಗಿನ ಸಂಭಾಷಣವಾಯಿತು.

ಡಿ|| ಮ್ಯಾ||— ನಿಮ್ಮ ಈ ಸಂಘವು ಕಾಯಿದೆಗೆ ವಿರುದ್ಧವಾದದ್ದಿದೆ. ನೀವು ಇಲ್ಲಿಂದ ಹೊರಟುಹೋಗಬೇಕು. ಇಲ್ಲವಿದ್ದರೆ ನಿಮ್ಮನ್ನು ಬಂಧಿಸಬೇಕಾದೀತು.

ತಯ್ಯಾಬಜೀ— ನೀವು ನಿಮ್ಮ ಶಸ್ತ್ರಾಸ್ತ್ರಗಳನ್ನೂ ಮನಸಿಗೆ ಬಂದಲ್ಲಿ ನಿಮ್ಮ ಅಧೀನದಲ್ಲಿರುವ ಬೇಕಾದ ಸಾಧನೆಗಳನ್ನು ನಮ್ಮ ವಿರುದ್ಧ ಉಪಯೋಗಿಸಬಹುದು.

ಆಮೇಲೆ ಡಿ|| ಮ್ಯಾಜಿಸ್ಟ್ರೇಟರು "ಯಾರಾದರೂ ತಿರುಗಿ ಹೋಗಲು ಇಚ್ಛಿಸುತ್ತೀರೋ?" ಎಂದು ಸ್ವಯಂಸೇವಕರಿಗೆ ಪ್ರಶ್ನೆ ಹಾಕಿದರು. ಕೂಡಲೇ ಸ್ವಯಂಸೇವಕರಿಂದ "ಯಾರೂ ಇಚ್ಛಿಸುವದಿಲ್ಲ" ವೆಂಬ ಉತ್ತರವೂ, ಅಲ್ಲಿ ನೆರೆದವರಿಂದ "ನಾವೂ ಬರುವೆವು" ಎಂಬ ಧ್ವನಿಯೂ ಕೇಳಬಂದಿತು.

---

### ವಿಜಾಪೂರದ ಶ್ರೀ|| ಅಂಗಡಿಯವರ ಮೇಲೆ ಆರೋಪವಿಡಲ್ಪಟ್ಟಿತು.

ವಿಜಾಪುರದ ಶ್ರೀ. ಅಂದಾನೆಪ್ಪ ಅಂಗಡಿಯವರ ಮೇಲಿನ ಖಟ್ಲೆಯ ನಿರ್ಣಯವಾಗಿ ಅವರ ಮೇಲೆ ಇ. ಪಿ. ಕೋಡಿನ ೪೮೯ ನೆಯ ಕಲಮಿನ ಪ್ರಕಾರ ಆರೋಪವಿಡಲ್ಪಟ್ಟಿತು.

### ವಿಜಾಪುರ ಸ್ಕೂಲ ಬೋರ್ಡಿನ ದಾವೆಯ ನಿರ್ಣಯ

ವಿಜಾಪುರದಲ್ಲಿಯ ಜಾಯಿಂಟ ಸಬಜಜ್ಜ ಕೋರ್ಟಿನಲ್ಲಿ ಶ್ರೀ. ಭಗವಾನ್ ವಾಸುದೇವ ಮರಾತೆಯವರು ವಿಜಾಪುರ ಜಿಲ್ಹಾ ಸ್ಕೂಲ ಬೋರ್ಡಿನ ವಿರುದ್ಧವಾಗಿ ದಾವೆಗಳನ್ನು ತಂದಿದ್ದರಷ್ಟೇ? "ಈ ದಾವೆಗಳು ಸರಿಯಾದ ಪ್ರತಿವಾದಿಗಳ ವಿರುದ್ಧ ತರಲ್ಪಟ್ಟಿಲ್ಲವಾದ್ದರಿಂದ ಕಿತ್ತೊಗೆಯಬೇಕೆಂದೂ, ಎರಡೂ ಪಕ್ಷದವರು ತಮ್ಮ ಖರ್ಚನ್ನು ತಾವೇ ನೋಡಿಕೊಳ್ಳಬೇಕೆಂದೂ ಜಾಯಿಂಟ ಸಬಜಜ್ಜರು ನಿರ್ಣಯ ಕೊಟ್ಟಿದ್ದಾರೆ.

### ಪ್ರಚಂಡ ಹೋಳಿಯು

೧೧ ನೇ ತಾರೀಖಿನ ದಿವಸ ಗದಗ, ಬೆಟಗೇರಿ, ಅಂಕೋಲಾ, ಹುಬ್ಬಳ್ಳಿ ಮುಂತಾದ ಗ್ರಾಮಗಳಲ್ಲಿ ಪರದೇಶೀ ಬಟ್ಟೆಗಳ ಪ್ರಚಂಡ ಹೋಳಿಯಾಯಿತು. ಎಲ್ಲೆಲ್ಲಿಯೂ ಸ್ತ್ರೀಯರು ಮುಂದೆ ಬಿದ್ದು ಪರದೇಶೀ ಅರಿವೆಗಳನ್ನು ಕೂಡಿಸಹತ್ತಿದ್ದಾರೆ. ಅಂಕೋಲೆಯಲ್ಲಿಯಂತೂ ಸ್ತ್ರೀಯರೇ ಸಭೆ ಸೇರಿಸಿ, ಪರದೇಶೀ ವಸ್ತ್ರಗಳನ್ನ ಅಗ್ನಿನಾರಾಯಣನಿಗೆ ಸಮರ್ಪಿಸಿದರು.

---

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮುದಾರ ಇವರಿಂದ ಬಾಗಲಕೋಟೆಯ
ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

यद्यत् परवशं दुःखं । यद्यदात्मवशं सुखम् ॥ -मनु.

# ಕನ್ನಡಿಗ

KANNADIGA
BAGALKOT

ಸಂಪಾದಕರು:- ಬಳವಂತ ಅಣ್ಣಾರಾವ ಮುಜುಮುದಾರ

ಬಾಗಲಕೋಟೆ ಗುರುವಾರ ಮಿತಿ ವೈಶಾಖ ಬಹುಳ ೩ ಶಕೆ ೧೮೫೨ ತಾ ೧೫—೫—೩೦ ಸಂಚಿಕೆ ೪೯

## ಮಹಾತ್ಮರ ಸಂದೇಶ

" ರಾಷ್ಟ್ರಹೃದಯ ಪವಿತ್ರೀಕರಣ ಚಳವಳಿದು. ಇದು ಕೆಲವು ಪಂಗಡಗಳಿಗೆ ಮಾತ್ರ ಸಂಬಂಧಿಸಿದುದಲ್ಲ. ಸ್ವಾತಂತ್ರ್ಯ ಸಂಪಾದನೆಯಾದ ಮೇಲೆ ಬೇಕಾದವರು ಬೇಕಾದ ಹಾಗೆ ಕಾದಾಡಲಿ. ಆದರೆ ಸಂಗ್ರಾಮ ಸಮಯದಲ್ಲಿ ಬಡಿದಾಡುವದು ಧರ್ಮವಲ್ಲ "

## ವಿಜಾಪುರದ ಮ್ಯುನಸಿಪಾಲಿಟಿಯ ಮರುಳತನವು

ವಿಜಾಪುರ ನಗರ ಸಭೆಯಲ್ಲಿ ಮಹಾತ್ಮರನ್ನು ಹಿಡಿದ ಬಗ್ಗೆ ಸಭೆಯನ್ನು ನಿಲ್ಲಿಸಬೇಕೆಂಬ ಆಶಯದ ಸೂಚನೆಯೊಂದು ಮುಂದೆ ಬಂದಿತ್ತು. ಆದರೆ ಈ ಸೂಚನೆಯು ೫ ವಿರುದ್ಧ ೭ ಮತಗಳಿಂದ ನಿರಾಕರಿಸಲ್ಪಟ್ಟಿತು. ಆದುದರಿಂದ ನಗರ ಸಭೆಯವರು ತಮ್ಮ ಕಚೇರಿಯನ್ನು ಮುಚ್ಚಿದ್ದಿಲ್ಲ. ಇದನ್ನು ಕಂಡು ನಗರ ಸಭೆಯಲ್ಲಿ ಕೆಲಸಮಾಡುವವರೆಲ್ಲರೂ ತಾವು ಕಚೇರಿಗೆ ಬರುವದಿಲ್ಲವೆಂದು ಅರ್ಜಿಯನ್ನು ಬರೆದಿಟ್ಟು ಅಂದು ಕಚೇರಿಗೆ ಹೋಗಿರಲಿಲ್ಲ ಅದಕ್ಕೆ ನಗರ ಸಭೆಯವರು ಶ್ರೀ. ಅಂಗಡಿಯವರ ಅಧ್ಯಕ್ಷತೆಯಲ್ಲಿ ೧೨ ನೆಯ ತಾ|| ದಿವಸ ಸಭೆಕೂಡಿಸಿ ಅವರಿಗೆ ಕ್ಷಮೆ ಬೇಡಲು ಹೇಳಿಕೊಂಡರು. ಶ್ರೀ. ಕುಲಕರ್ಣಿ ಗೋವಿಂದರಾಯರು ಕ್ಷಮೆಯನ್ನು ಬೇಡುವದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದರಿಂದ ನಗರ ಸಭೆಯವರು ಅವರಿಗೆ ೨ ರೂ. ದಂಡವನ್ನು ಮಾಡಿದ್ದಲ್ಲದೆ ತಪ್ಪಿಸಿದ ದಿನವನ್ನು ಸಂಬಳವಿಲ್ಲದ ದಿನವೆಂದು ತಿಳಿಯಬೇಕೆಂದೂ ಗೊತ್ತುಮಾಡಿಕೊಂಡರಂತೆ.

## ವಿಜಾಪುರ ಮುನಸಿಪಾಲಿಟಿಯ ಮೇಲೆ ಅವಿಶ್ವಾಸದ ಠರಾವು.

" ಮಹಾತ್ಮರನ್ನು ಹಿಡಿದ ಬಗ್ಗೆ ಮ್ಯುನಸಿಪಾಲಿಟಿಯ ಸಭೆಯನ್ನು ನಿಲ್ಲಿಸಬೇಕೆ"ಂಬ ಆಶಯದ ಸೂಚನೆಯು ತಮ್ಮ ನಗರ ಸಭೆಯಲ್ಲಿ ಸ್ವೀಕೃತವಾಗದ್ದನ್ನು ಕಂಡು ವಿಜಾಪುರದ ನಾಗರಿಕರು ಒಂದು ಸಾರ್ವಜನಿಕ ಸಭೆಯನ್ನು ಶ್ರೀ. ಧನಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸೇರಿಸಿ "ಮ್ಯುನಸಿಪಾಲಿಟಿಯ ಮೇಲೆ ತಮ್ಮ ವಿಶ್ವಾಸವಿರುವದಿಲ್ಲವೆಂಬುದಾಗಿಯೂ ಈಗಿದ್ದ ಸಭಾಸದರು ತಮ್ಮ ನಿಜವಾದ ಪ್ರತಿನಿಧಿಗಳಲ್ಲದ್ದರಿಂದ, ಅವರು ಕೂಡಲೆ ರಾಜೀನಾಮೆಯನ್ನು ಕೊಡಬೇಕೆಂಬುದಾಗಿಯೂ ಗೊತ್ತುಗಳನ್ನು ಮಾಡಿಕೊಂಡರು. ಇನ್ನೂ ಯಾವ ಸಭಾಸದರೂ ರಾಜೀನಾಮೆಯನ್ನು ಕೊಟ್ಟಿಲ್ಲವಂತೆ! ಇದಕ್ಕೇನನ್ನಬೇಕು ನಿರ್ಲಜ್ಜತನವೆಂದು!

---

## ಕೌನ್ಸಿಲಕ್ಕೆ ರಾಜೀನಾಮೆ

ಪನವೇಲ ಮ್ಯುನಸಿಪಾಲಿಟಿಯ ಅಧ್ಯಕ್ಷರೂ, ಬ್ರಾಹ್ಮಣೇತರ ಪಕ್ಷದ ಮುಖಂಡರೂ ಆದ ಶ್ರೀ. ಅಟ್ಮಾನೆಯವರು ಸರಕಾರದವರ ದಬ್ಬಾಳಿಕೆಯ ವೃತ್ತಿಯನ್ನು ನಿಷೇಧಿಸಿ ತಮ್ಮ ಸಭಾಸದತ್ವಕ್ಕೆ ರಾಜೀನಾಮೆ ಕೊಟ್ಟಿರುವರು. ಕರ್ನಾಟಕದಲ್ಲಿಯ ಬ್ರಾಹ್ಮಣೇತರ ಪಕ್ಷದ ಮುಖಂಡರಾದ ರಾ. ಬ. ಕಂಬಳಿ ಶ್ರೀ. ಅಂಗಡಿ ಮೊದಲಾದವರು ಇನ್ನೂ ಕಾಯಿದೆಮಂಡಳಕ್ಕೆ ಅಂಟಿಕೊಂಡೇ ಕುಳಿತಿರುವರಲ್ಲ!

## ಭಗಲ್‌ಪೂರ

ಜಿಲ್ಲಾ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶ್ರೀ ರಾಮೇಶ್ವರ ನಾರಾಯಣ ಅಗರವಾಲಾ ಇವರ ವಿಚಾರಣೆಯು ಸೆರೆಮನೆಯಲ್ಲಿ ಜರುಗಿ ಅವರಿಗೆ ಪಿನಲ್ ಕೋಡಿನ ೧೧೭ ಮತ್ತು ಉಪ್ಪಿನ ಕಟ್ಟಳೆಯ ೪೭ ಕಲಮುಗಳನ್ವಯ ೧೮ ತಿಂಗಳ ಸಶ್ರಮ ಶಿಕ್ಷೆ, ಮತ್ತು ೫೦೦ ರೂಪಾಯಿ ದಂಡ ಇಲ್ಲವೆ ಮತ್ತೆ ೬ ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿತು

## ರಾವಸಾಹೇಬ ಪದವಿಯನ್ನು ಬಿಟ್ಟರು.

ಮಹಾತ್ಮಾಗಾಂಧಿಯವರನ್ನು ಸರಕಾರವು ಹಿಡಿದ ಬಗ್ಗೆ ಆದರ ಕೃತ್ಯವನ್ನು ನಿಷೇಧಿಸಿ ನಡಿಯಾದದ ರಾವಸಾಹೇಬ ರಣಛೋಡದಾಸ ಕುಶಲದಾಸ ಶಹಾ ಇವರು ತಮ್ಮ ಪದವಿಯನ್ನು ಬಿಟ್ಟು ಬಿಟ್ಟಿದ್ದಾರೆ. ಶ್ರೀ ರಣಛೋಡದಾಸ ಇವರು ೨೦ ವರ್ಷಗಳ ವರೆಗೆ ಆನರರಿ ಮ್ಯಾಜಿಸ್ಟ್ರೇಟರಿದ್ದರು.

## ಶ್ರೀ ಸಾವರಕರರ ಮನೆಯ ಝಡ್ತಿ.

ಬ್ಯಾರಿಸ್ಟರ ಸಾವರಕರರಿಂದ ರಚಿತವಾದ “ ೧೮೫೭ರ ಸ್ವಾತಂತ್ರ್ಯ-ಸಮರ ” ಹಾಗೂ “ ಮ್ಯಾಝಿನಿಯವರ ಜೀವನ ಚರಿತ್ರ ” ಈ ಗ್ರಂಥಗಳನ್ನು ಕೈವಶ ಪಡಿಸಿಕೊಳ್ಳುವದಕ್ಕಾಗಿ ಪೋಲೀಸ ಅಧಿಕಾರಿಗಳು ತಾ|| ೯ನೆಯ ದಿವಸ ಶ್ರೀ ಗಣೇಶ ದಾಮೋದರ ಸಾವರಕರ ಇವರ ಮನೆಯನ್ನು ಝಡ್ತಿ ಮಾಡಿದರು. ಝಡ್ತಿಯು ೫ ತಾಸುಗಳ ವರೆಗೆ ಸಾಗಿತು “ ರಂಗೀಲಾ ರಸೂಲ ” ಗ್ರಂಥದ ಹೊರತಾಗಿ ಆಕ್ಷೇಪಾರ್ಹವಾದ ಉಳಿದ ಯಾವ ವಸ್ತುಗಳೂ ಝಡ್ತಿಯಲ್ಲಿ ಹೊರಡಲಿಲ್ಲ

## ಕರನಿರಾಕರಣೆಯ ಚಳವಳಿ.

ಗುಜರಾಥ ಪ್ರಾಂತದ ಜಂಬೂಸಾರ ತಾಲೂಕಿನ ಹಳ್ಳಿಗಳ ಜನರು ಸರಕಾರಕ್ಕೆ ಹಪ್ತೆಯನ್ನು ಕೊಡಬಾರದಾಗಿ ನಿಶ್ಚಯಿಸಿ ಕೊಂಡಿದ್ದಾರೆ ಕಾಯರಾ ಜಿಲ್ಹೆಯವರು ಶೀಘ್ರದಲ್ಲಿಯೇ ಇವರ ಕಿತ್ತಿಯನ್ನು ಹಿಡಿಯುವವರಿದ್ದಾರೆ.

## ಸ್ವತಂತ್ರ ಉಪ್ಪಿನ ಅಂಗಡಿಯು

ಗುಜರಾತ ಪ್ರಾಂತದ ಡಾಕೋರ ಗ್ರಾಮದಲ್ಲಿ ಸ್ವತಂತ್ರ ಉಪ್ಪಿನದೊಂದು ಅಂಗಡಿಯು ತೆರೆಯಲ್ಪಟ್ಟಿದೆ.

## ಬ್ರಿಟಿಶ ಮೋಟಾರುಗಳಿಗೆ ಬಹಿಷ್ಕಾರ.

ಮುಂಬಯಿಯಲ್ಲಿಯ ಮೋಟಾರ ಕಂಪನಿಗಳ ಚಾಲಕರೆಲ್ಲರೂ ಶ್ರೀ ಹೀರಾಲಾಲ ಶಹಾರವರ ಅಧ್ಯಕ್ಷತೆಯಲ್ಲಿ ಸಭೆ ಮಾಡಿಕೊಂಡು “ ನಾಲ್ಕು ತಿಂಗಳ ಮುಟ್ಟಿಗೆ ಬ್ರಿಟನದಲ್ಲಿ ಸಿದ್ಧವಾದ ಮೋಟಾರ ಹಾಗೂ ಅವುಗಳ ಇತರ ಉಪಕರಣಗಳನ್ನು ತರಿಸಬಾರದೆಂದೂ, ಯಾವದೇ ರೀತಿಯಿಂದಲೂ ಅವುಗಳ ವ್ಯಾಪಾರಕ್ಕೆ ಉತ್ತೇಜನವನ್ನೀಯಬಾರದೆಂದೂ ” ಗೊತ್ತುಮಾಡಿಕೊಂಡಿದ್ದಾರೆ. ಕರ್ನಾಟಕದಲ್ಲಿಯ ಮೋಟಾರ ಕಂಪನಿಗಳ ಚಾಲಕರೂ ಇತ್ತ ಲಕ್ಷಕೊಡುವರೋ

## ಸ್ವತಂತ್ರ ಉಪ್ಪಿಗಾಗಿ ಆಣೆ

ಸೂರತ ಜಿಲ್ಹೆಯ ಬುಡಿಯಾ ಗ್ರಾಮದ ನಿವಾಸಿಗಳು ಇನ್ನು ಮುಂದೆ ಸ್ವತಂತ್ರವಾಗಿ ಸಿದ್ಧಪಡಿಸಿದ ಉಪ್ಪನ್ನೇ ತಿನ್ನುವೆವೆಂಬದಾಗಿ ಆಣೆ ಮಾಡಿದ್ದಾರೆ.

( ತಂತಿಯ ವಾರ್ತೆ )

## ಶ್ರೀ. ತಯಬಜಿಯವರಿಗೆ ೬ ತಿಂಗಳ ಶಿಕ್ಷೆ.

ಶ್ರೀ. ತಯಬಜಿಯವರಿಗೆ ೬ ತಿಂಗಳ ಸಾದಾ ಶಿಕ್ಷೆಯೂ, ೫೩ ಸ್ವಯಂಸೇವಕರಿಗೆ ೩ ತಿಂಗಳ ಸಶ್ರಮ ಶಿಕ್ಷೆಯೂ ವಿಧಿಸಲ್ಪಟ್ಟಿದ್ದು, ಉಳಿದವರನ್ನು ಬಿಟ್ಟುಬಿಟ್ಟಿದ್ದಾರೆ. ಮಹಾತ್ಮರ ಚಿರಂಜೀವರಾದ ಮಣಿಲಾಲ ಗಾಂಧಿಯವರು ಪಥಕದ ನೇತೃಗಳಾಗಿ ಧರಸನಾಕ್ಕೆ ಹೊರಟಿದ್ದಾರೆ.

## ಸೋಲ್ಲಾಪುರದಲ್ಲಿ ದಬ್ಬಾಳಿಕೆಯ ಸತ್ರ

ಲಷ್ಕರೀ ಕಾಯಿದೆಯು ಸಾರಲ್ಪಟ್ಟಿದೆ, ಪೋಲೀಸ ಅಧಿಕಾರಿಗಳು ಕಾಂಗ್ರೆಸಕಮೀಟಿಯ ಅಧ್ಯಕ್ಷ ಶ್ರೀ ಜಾಜು, ಹಾಗೂ ಕಾರ್ಯದರ್ಶಿಗಳನ್ನೂ, ಉಳಿದ ಮೂರು ಜನರನ್ನೂ ಸೆರೆಹಿಡಿದುಕೊಂಡ. ಹೋದದ್ದಲ್ಲದೆ, ಕಾಂಗ್ರೆಸ್ ಕಚೇರಿಯನ್ನೂ ಝಡ್ತಿ ಮಾಡಿದರು. ಮ್ಯುನಿಸಿಪಾಲಿಟಿಯ ಮೇಲಿನ ರಾಷ್ಟ್ರಧ್ವಜವೂ ಕಿತ್ತಲ್ಪಟ್ಟಿದೆ. ಸಂಜೆಯ ೭ ಗಂಟೆಯಿಂದ ಮುಂಜಾನೆ ೬ ಗಂಟೆಯ ವರೆಗೆ ತಮ್ಮ ತಮ್ಮ ಮನೆಗಳನ್ನು ಬಿಟ್ಟು ಯಾರೂ ಹೊರಗೆ ಬರಕೂಡದೆಂಬುದಾಗಿಯೂ ಗಾಂಧಿ ಟೊಪ್ಪಿಗೆಗಳನ್ನು ಹಾಕಿಕೊಂಡು ೪ಕ್ಕಿಂತ ಹೆಚ್ಚು ಜನರು ಒಟ್ಟಿಗೆ ಸೇರಬಾರದಾಗಿಯೂ ಕಾಯಿದೆಯು ಸಾರಲ್ಪಟ್ಟಿದೆ.

## ಮುಂಜಿವಿಗೆ ಆಚಾರ್ಯರೇ ಸಿಗಲಿಲ್ಲ

ಮಹಾಡದಲ್ಲಿ ಉಪ್ಪಿನ ಕಾಯಿದೆಭಂಗಕ್ಕಾಗಿ ಬಂಧಿತರಾದ ಶ್ರೀ ಸುರೇಂದ್ರನಾಥರ ವಿಚಾರಣೆಯ ಕಾಲಕ್ಕೆ ಸಾಕ್ಷೀಹೇಳಿದ ನಿಮಿತ್ತವಾಗಿ, ಸಾಕ್ಷೀದಾರನ ಮನೆಯಲ್ಲಿ ನೆರವೇರತಕ್ಕ ಉಪನಯನ ಸಮಾರಂಭಕ್ಕೆ ಆಚಾರ್ಯರೇ ಸಿಗಲಿಲ್ಲವಂತೆ !

## ಸತ್ಯಾಗ್ರಹ ಮಂಡಳವು ಕಾಯದೆಗೆ ವಿರುದ್ಧವಾದ ಸಂಘವಂತೆ.

ಮಿದನಾಪುರದಲ್ಲಿಯ ಸತ್ಯಾಗ್ರಹ ಶಿಬಿರಗಳು ಕಾಯಿದೆಗೆ ವಿರುದ್ಧವಾದ ಸಂಘಗಳೆಂದು ನಿರ್ಣಯಿಸಲ್ಪಟ್ಟಿವೆ.

## ಕಲಕತ್ತೆಯಲ್ಲಿ ಬಂಧನ

ಕಲಕತ್ತೆಯಲ್ಲಿ ೮೦ ಜನರನ್ನು ಹಿಡಿದಿರುವರು.

## ಸರಕಾರಿ ಉದ್ಯೋಗಗಳಿಗೆ ರಾಜೀನಾಮೆ.

ಗಾಂಧಿಯವರ ದಸ್ತಗಿರಿ ಯಾಗುತ್ತಲೇ ಇಂಡಿಯಾ ಸರಕಾರದ ವಾಣಿಜ್ಯಶಾಖಾ ಸುಪರಿಂಟೆಂಡೆಂಟರಾಗಿದ್ದ ಶ್ರೀ ಐ. ಹೆಚ್ ದೇಸಾಯಿಯವರು ತಮ್ಮ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟರು.

ಬನಾರಸಿನ ಶ್ರೀ ಸೋಮನಾಥ ಪಂಡಿತರು ಗಾಂಧಿಯವರ ದಸ್ತಗಿರಿ ಸುದ್ದಿ ಕೇಳಿ ತಮ್ಮ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟರು.

## ಕೌನ್ಸಿಲುಗಳಿಗೆ ರಾಜೀನಾಮೆ.

ಶ್ರೀ ಪರ್ವತನೇನಿ ಭೂಷಯ್ಯ ಚೌಧುರಿಯವರು ಮದರಾಸು ಶಾಸನ ಸಭಾ ಸದಸ್ಯತನಕ್ಕೆ ಸಲಾಮು ಹೊಡೆದರು.

ಮದರಾಸಿನ ಶಾಸನಸಭೆಗೆ ಶ್ರೀತುಲಸೀರಾಮರವರು ರಾಜೀನಾಮೆ ಕೊಟ್ಟರು.

# ಧರಸನಾ ವಖಾರದ ಮೇಲೆ ದಾಳಿ

ಶ್ರೀ. ಅಬ್ಬಾಸ ತಯಬಜಿಯವರು ಸೆರೆಯಾಳಾದ ಸುದ್ದಿಯನ್ನು ಕೇಳಿದ ಕೂಡಲೆ ಸುತ್ತಮುತ್ತಲಿನ ಹಳ್ಳಿಗಳ ಜನರು ತಂಡತಂಡವಾಗಿ ಧರಸನಾಕ್ಕೆ ಹೋಗಹತ್ತಿದ್ದಾರೆ. ಈಗಾಗಲೇ ೩೦೦ ಜನ ಸತ್ಯಾಗ್ರಹಿಗಳು ಬಂದು ಸೇರಿದ್ದಾರೆ. ಅಧಿಕಾರಿಗಳಾದರೂ ಶಸ್ತ್ರಾಸ್ತ್ರಸಹಿತವಾಗಿ ಸಜ್ಜಾಗಿ ಹೋಗಿ ನಿಂತಿದ್ದಾರೆ. ಅಬ್ಬಾಸರು ಸೆರೆಯಾಳಾದಲ್ಲಿ ಪಥಕದ ನೇತೃತ್ವವನ್ನು ವಹಿಸಿಕೊಳ್ಳಲು ಮಹಾತ್ಮರಿಂದ ನಿಯಮಿಸಲ್ಪಟ್ಟ ಶ್ರೀಮತಿ ಸರೋಜಿನಿ ದೇವಿಯರು ಬರುವ ವರೆಗೆ ಧರಸನಾ ವಖಾರದ ಮೇಲೆ ದಾಳಿಯನ್ನಿಡುವ ಹೊಣೆಯನ್ನು ಮಹಾತ್ಮರ ಚಿರಂಜೀವರಾದ ಶ್ರೀ. ಮಣಿಲಾಲ ಗಾಂಧಿಯವರು ತಾತ್ಕಾಲಿಕವಾಗಿ ಹೊತ್ತಿದ್ದಾರೆ. ಅಲಹಾಬಾದದಲ್ಲಿ ನೆರೆಯಲಿಕ್ಕಿದ್ದ ರಾಷ್ಟ್ರಸಭೆಯ ಕಾರ್ಯಕಾರೀ ಮಂಡಳದ ಸಭೆಗೆ ಹೋಗಿದ್ದ ಶ್ರೀಮತಿ ಸರೋಜಿನಿಯವರು ಮುಂಬಯಿಗೆ ಹೊರಟು ಬಂದಿದ್ದು ಶೀಘ್ರದಲ್ಲಿಯೇ ಅಲ್ಲಿಗೆ ಹೋಗಿ ನೇತೃತ್ವವನ್ನು ವಹಿಸಿ ಮೊದಲು ನಿಶ್ಚಯಿಸಿದ ಪ್ರಕಾರ ಧರಸನಾ ಉಪ್ಪಿನ ವಖಾರದ ಮೇಲೆ ತಾ|೧೫ ಕ್ಕೆ ದಾಳಿಯನ್ನಿಡುವವರಿದ್ದಾರೆ. ಮುಂಬಯಿಯಿಂದಲೂ ಸ್ವಯಂಸೇವಕರ ತಂಡಗಳು ಬಂದು ಅವರನ್ನು ಕೂಡತಕ್ಕವಿವೆ.

---

## ರಾವಬಹದ್ದೂರ ಪದವಿಯನ್ನು ಬಿಟ್ಟರು

ಮಹಾತ್ಮರನ್ನು ಸೆರೆಹಿಡಿದು ಬಂಧನದಲ್ಲಿಟ್ಟಿದುದಕ್ಕಾಗಿ ಬ್ರಾಹ್ಮಣೇತರ ಪಂಗಡದ ಮುಖಂಡರಾದ ಕೊಲ್ಹಾಪುರದ ಶ್ರೀ. ಡೊಂಗರೆಯವರು ರಾವಬಹದ್ದೂರ ಪದವಿಯನ್ನು ಬಿಟ್ಟುಕೊಟ್ಟಿದ್ದಾರೆ.

## ಹರತಾಳಕ್ಕಾಗಿ ಸನದು ಹೋಯಿತು

ಮೈಮನಸಿಂಗ ವಕೀಲರ ಸಂಘದ ಅಧ್ಯಕ್ಷರಾದ ಶ್ರೀ. ಮಹೀಮಚಂದ್ರ ರಾಯ ಇವರು ಹರತಾಳದ ನಿಮಿತ್ತವಾಗಿ ಕೋರ್ಟಿಗೆ ಹೋಗದ್ದರಿಂದ, ಅವರ ಸನದು ಕೆಲವು ವರ್ಷಗಳ ಮಟ್ಟಿಗೆ ರದ್ದು ಮಾಡಲ್ಪಟ್ಟಿದೆ.

## ಮಧ್ಯಪ್ರಾಂತದ ಮುಖಂಡರಿಗೆ ಶಿಕ್ಷೆ

ಜಬಲಪುರದ ಶ್ರೀ. ಸೇಟ ಗೋವಿಂದದಾಸ, ದ್ವಾರಕಾಮಿಶ್ರ, ರವಿಶಂಕರ ಶುಕ್ಲ ಮತ್ತು ಮಖನಲಾಲ ಚತುರ್ವೇದಿ ಇವರುಗಳು ರಾಜದ್ರೋಹಕ್ಕಾಗಿ ೧೨೨ ಬ ಮತ್ತು ೧೨೪ ಅ ಕಲಮುಗಳನ್ವಯ ೨ ವರ್ಷಗಳ ಸಕ್ರಮ ಶಿಕ್ಷೆಗೆ ಗುರಿಯಾಗಿದ್ದಾರೆ.

## ಹಿಡಿದು ಬಿಟ್ಟುಬಿಟ್ಟರು

ತಾ|| ೧೧ ನೆಯ ದಿವಸ ಬೆಳಗಾವಿಯಲ್ಲಿ ೩೬ ಸ್ವಯಂಸೇವಕರು ಪರದೇಶಿ ಬಟ್ಟೆಗಳ ಹೋಳಿಯ ಸಮಯದಲ್ಲಿ ಬಂಧಿಸಲ್ಪಟ್ಟಿದ್ದರಷ್ಟೆ? ಇವರಲ್ಲಿಯ ೨೯ ಜನರನ್ನು ಅಧಿಕಾರಿಗಳು ಈಗ ಬಿಟ್ಟುಬಿಟ್ಟಿದ್ದಾರೆ.

## ಹಿಡಿದರು

ಪುಣೆಯ ಯುವಕ ಸಂಘದ ಕಾರ್ಯದರ್ಶಿಗಳಾದ ಶ್ರೀ. ಎಸ್. ಎಮ್. ಜೋಶಿಯವರು ಇ. ಪಿ ಕೋಡಿನ ೧೭ಬಿರನ್ವಯ ಅಲೀಬಾಗದಲ್ಲಿ ಬಂಧಿಸಲ್ಪಟ್ಟಿದ್ದಾರೆ.

## ಉಪ್ಪಿನ ಕರಕ್ಕೆ ಮರಾಠರ ವಿರೋಧ

ಧಾರವಾಡದ ಮರಾಠಾ ಜನರು ತಾ|| ೮ ನೆಯ ದಿವಸ ಸಭೆಯನ್ನು ಕೂಡಿಸಿಕೊಂಡು 'ವಸಾಹತಿ ಸ್ವರಾಜ್ಯ"ವನ್ನು ಬೇಗನೇ ಕೊಡಬೇಕೆಂದೂ, ಉಪ್ಪಿನ ಕರವನ್ನು ಕೂಡಲೆ ತೆಗೆದು ಹಾಕಬೇಕೆಂದೂ ನಿರ್ಣಯಿಸಿಕೊಂಡರಂತೆ! ಸ್ವಾತಂತ್ರ್ಯ-ವೀರರೆಂದು ಹೆಸರಾದ ಮರಾಟರು ''ವಸಾಹತಿ ಸ್ವರಾಜ್ಯ''ದಿಂದಲೇ ಸಂತುಷ್ಟರಾಗಬೇಕೆನ್ನುವರೋ?

## ಧರಸನಾ ಉಪ್ಪಿನ ಮಾಳಿಯ ಸುತ್ತಲೂ ತಂತಿ

ಧರಸನಾ ಉಪ್ಪಿನ ಮಾಳಿಯ ದಾಳಿಗಾರರನ್ನು ತಡೆಯುವದಕ್ಕಾಗಿ ಅಧಿಕಾರಿಗಳು ವಖಾರದ ಸುತ್ತಲೆಲ್ಲ ತಂತಿಗಳನ್ನು ಕಟ್ಟಿರುತ್ತಾರೆಂದು ತಿಳಿಯುತ್ತದೆ.

## ಸ್ವಯಂಸೇವಕನಿಗೆ ಫಟಕೀ ಶಿಕ್ಷೆ

ತಾ|| ೧೧ ನೆಯ ದಿವಸ ಬೆಳಗಾವಿಯಲ್ಲಿ ಬಂಧಿಸಲ್ಪಟ್ಟ ಶ್ರೀ. ಅಣ್ಣಾಜಿ ಮುತಾಲಿಕ, ವಾಸುದೇವ ಕುಲಕರ್ಣಿ, ರಾಮು ಪಾಲೇಕರ, ವಿನಾಯಕ ಕೇಳಕರ, ಪುರುಷೋತ್ತಮ ಪ್ರಭು, ಜನಾರ್ದನ ನಕಡಿ ಈ ಸ್ವಯಂಸೇವಕರುಗಳಿಗೆ ೭|| ತಿಂಗಳ ಸಕ್ರಮ ಶಿಕ್ಷೆಯೂ, ಶ್ರೀ. ನಾರಾಯಣ ಗವಾಡೆ ಇವನಿಗೆ ೧೫ ಹೊಡತಗಳ ಫಟಕೀ ಶಿಕ್ಷೆಯೂ ವಿಧಿಸಲ್ಪಟ್ಟಿತು.

## ವಿಜಾಪುರ ಜಿಲ್ಲೆಯ ಎರಡನೇ ಪಥಕದ

### ಕಾರ್ಯಕ್ರಮವು

| ತಾರೀಖು | ಹೊರಡುವ ವೇಳೆ | ಮುಟ್ಟುವ ವೇಳೆ | ಯಾವ ಊರಿಗೆ |
|---|---|---|---|
| ೧೬-೫-೩೦ | ಬಾಗಲಕೋಟೆಯಿಂದ ೮ ಗಂಟೆಗೆ | ಮಧ್ಯಾಹ್ನ | ಕಮತಗಿ |
| ೧೭-೫-೩೦ | ಕಮತಗಿಯಿಂದ | ,, | ಅಮೀನಗಡ |
| | | ಸಾಯಂಕಾಲ | ಹುನಗುಂದ |
| ೧೮-೫-೩೦ | ಹುನಗುಂದದಿಂದ | ,, | ಇಲಕಲ್ಲ |
| ೧೯-೫-೩೦ | ಇಲಕಲ್ಲದಿಂದ | ಮಧ್ಯಾಹ್ನ | ಹುನಗುಂದ |
| | ಹುನಗುಂದದಿಂದ | ಸಾಯಂಕಾಲ | ಸಂಗಮ |
| ೨೦-೫-೩೦ | ಸಂಗಮದಿಂದ | ಮಧ್ಯಾಹ್ನ | ಬೀವೂರ |
| ೨೧-೫-೩೦ | ಬೀವೂರದಿಂದ | ಸಾಯಂಕಾಲ | ಬಾಗಲಕೋಟೆ |

ವಿಜಾಪುರ ಜಿಲ್ಲೆಯ ಎರಡನೆಯ ಪಥಕದ ವೀರರು ಮೇಲಿನ ಕಾರ್ಯಕ್ರಮಕ್ಕನುಸಾರವಾಗಿ ಆ ಆ ಹಳ್ಳಿಗಳಿಗೆ ಬರತಕ್ಕವರಿದ್ದಾರೆ. ಎಲ್ಲರೂ ತ್ರಿಕರಣಪೂರ್ವಕವಾಗಿ ಸಹಾಯ ಮಾಡಬೇಕಾಗಿ ವಿನಂತಿ.

ಸತ್ಯಾಗ್ರಹ ಮಂಡಳ ಬಾಗಲಕೋಟೆ

## ಸತ್ಯಾಗ್ರಹಿಗಳಿಗೆ ಕುಡಿಯಲಿಕ್ಕೆ ನೀರು ಸಿಗಲಿಲ್ಲ

೮ ನೆಯ ತಾ|| ದಿವಸ ಕೆಲವು ಸ್ವಯಂಸೇವಕರು ವಢವಾಣದಿಂದ ವಿರಮಗಾಂವ ಸ್ಟೇಶನ್ನಕ್ಕೆ ಬಂದಿಳಿದರು. ಇವರ ಹತ್ತಿರ ಉಪ್ಪಿನ ಚೀಲಗಳಿದ್ದವು. ಪೋಲೀಸ ಅಧಿಕಾರಿಗಳಿಗೆ ಇದು ತಿಳಿದದ್ದರಿಂದ ಅವರು ಕೂಡಲೇ ಸ್ವಯಂಸೇವಕರನ್ನು ಮುತ್ತಿಕೊಂಡರು. ಸತ್ಯಾಗ್ರಹಿಗಳಾದರೂ ಪೋಲೀಸರಿಗೆ ಉಪ್ಪು ಕೊಡತಕ್ಕದ್ದಲ್ಲವೆಂದು ನಿರ್ಧರಿಸಿ ಚೀಲಗಳ ಸುತ್ತಲೂ ನಿಂತುಕೊಂಡರು ಹೀಗೆಯೇ ಕೆಲವು ಹೊತ್ತು ನಡೆದನಂತರ ಸ್ವಯಂಸೇವಕರಿಗೆ ನೀರಡಿಕೆಯಾಯಿತು ಒಬ್ಬ ಸತ್ಯಾಗ್ರಹಿಯು ಮೂರ್ಛೆಹೊಂದಿ ಬಿದ್ದನು. ಸ್ಟೇಶನದ ಅಧಿಕಾರಿಗಳಿಗೆ ಇದು ತಿಳಿದದ್ದರಿಂದ ಅವರು ನೀರಿನಿಂದ ಸಹಿತವಾಗಿ ಅಲ್ಲಿಗೆ ಬಂದರು. ಆದರೆ ಪೋಲೀಸ ಅಧಿಕಾರಿಗಳು ನೀರು ಕೊಡುವದಕ್ಕೆ ಅಪ್ಪಣೆ ಕೊಡಲಿಲ್ಲವಾದುದರಿಂದ ಅವರು ನಿರಾಶೆಯಿಂದ ತಿರುಗಿ ಹೋದರು. ಇಷ್ಟರಲ್ಲಿಯೇ ಈ ಸುದ್ದಿಯು ಊರಲ್ಲಿ ತಿಳಿದುದರಿಂದ, ಮ್ಯುನಿಸಿಪಾಲಿಟಿಯು ಹಾಗು ಲೋಕಲ್ ಬೋರ್ಡುಗಳ ಅಧ್ಯಕ್ಷರು ನೀರಿನಿಂದ ತುಂಬಿದ ಕೊಡಗಳಿಂದ ಸಿದ್ಧವಾದ ೧೦೦ ಜನ ಹೆಣ್ಣುಮಕ್ಕಳೊಂದಿಗೆ ಮ್ಯಾಜಿಸ್ಟ್ರೇಟರಿಗೆ ಭೆಟ್ಟಿಯಾಗಿ ತಮ್ಮ ಉದ್ದೇಶವನ್ನು ಹೇಳಿದರು. ಆಮೇಲೆ ಎಲ್ಲರೂ ಕೂಡಿ ಅಲ್ಲಿಗೆ ಹೋಗಿ ಸ್ವಯಂಸೇವಕರಿಗೆ ನೀರು ಕೊಟ್ಟರು

## ಅಡವಿಯ ಕಾನೂನಿನ ವಿರುದ್ಧ ಸತ್ಯಾಗ್ರಹ

ಮಹಾರಾಷ್ಟ್ರ ಸತ್ಯಾಗ್ರಹ ಮಂಡಳದವರು ವ್ಹಿಲೆಪಾರ್ಲೆಯಲ್ಲಿ ಒಂದು ಸಭೆಯನ್ನು ಕೂಡಿಸಿಕೊಂಡು "ಅಡವಿಯ ಕಾನೂನಿನ ವಿರುದ್ಧ ಸತ್ಯಾಗ್ರಹವನ್ನು ಬೇಗನೆ ಪ್ರಾರಂಭಿಸತಕ್ಕದ್ದೆ"ಂದು ಗೊತ್ತುಪಡಿಸಿಕೊಂಡಿದ್ದಾರೆ. ಈ ಬಗ್ಗೆ ವ್ಯವಸ್ಥೆ ಮಾಡಲು ಒಂದು ಸ್ವತಂತ್ರ ಮಂಡಳವು ಏರ್ಪಡಾಗಿದೆ.

## ಅಂಕೋಲೆಯಲ್ಲಿ ಬ್ರಿಟಿಶ ಸರಕುಗಳಿಗೆ ಬಹಿಷ್ಕಾರ

ಅಂಕೋಲೆಯಲ್ಲಿ ಬ್ರಿಟಿಶ ಸರಕುಗಳ ಬಹಿಷ್ಕಾರವು ಒಳ್ಳೇ ಭರದಿಂದ ಸಾಗಿದೆ. ಒಟ್ಟಿಯ ವ್ಯಾಪಾರಸ್ಥರು ಸಭೆಸೇರಿ ಸಂಘವನ್ನು ಮಾಡಿಕೊಂಡು ಇನ್ನುಮುಂದೆ ಬ್ರಿಟಿಶ ಬಟ್ಟೆಗಳನ್ನು ತರಿಸುವದಿಲ್ಲವೆಂದೂ, ಶಿಂಪಿಗರೆಲ್ಲರೂ ಸಭೆ ಮಾಡಿಕೊಂಡು ಇನ್ನುಮುಂದೆ ವಿದೇಶಿ ವಸ್ತ್ರಗಳನ್ನು, ಅದರಲ್ಲಿಯೂ ಬ್ರಿಟಿಶ್ ಬಟ್ಟೆಗಳನ್ನು ಹೊಲಿಯುವದಿಲ್ಲವೆಂದೂ ಗೊತ್ತುಮಾಡಿಕೊಂಡಿದ್ದಾರೆ.

## ಗಾಂಧಿ ಟೊಪ್ಪಿಗೆಯವರಿಗೆ ಪ್ರತಿಬಂಧ

ಗಾಂಧಿ ಟೊಪ್ಪಿಗೆಗಳನ್ನು ಧರಿಸಿದವರು ಕೋರ್ಟಿಯಲ್ಲಿಯೂ ರಾಜಕೀಯ ಮುಖಂಡರ ವಿಚಾರಣೆಯಾಗತಕ್ಕ ಕೋರ್ಟುಗಳಲ್ಲಿಯೂ ಕಾಲಿಡಕೂಡದೆಂದು ನೀವು ತೆಗೆದ ಅಪ್ಪಣೆಯು ಯಾವ ಕಟ್ಟಳೆಯ ಕೆಳಗೆ ಬರುವದೆಂಬುದನ್ನು ತಿಳಿಸಿರೆಂದು ಬೆಳಗಾವಿಯ ಶ್ರೀ. ಜೋಶಿ ನಾರಾಯಣರಾಯರು ಡಿ. ಪೋ. ಸುಪರಿಂಟೆಂಡೆಂಟರಿಗೆ ಕೇಳಿದ್ದಾರೆ.

## ಸತ್ಯಾಗ್ರಹಕ್ಕೆ ಬೇವೂರಿನವರ ಬೆಂಬಲ

ಬೇವೂರಿನ ಶ್ರೀ. ಕುಪ್ಪಸದ ಗುರುಪ್ಪ ಹಾಗು ಹನುಮಪ್ಪ ಭಂಡಿವಡ್ಡರ ಇವರಿಂದ ಪ್ರತ್ಯೇಕವಾಗಿ ಐದೈದು ರೂಪಾಯಿಗಳೂ, ಉಳಿದವರಿಂದ ಜೋಳದ ೬ ಚೀಲಗಳೂ ಸತ್ಯಾಗ್ರಹ ಶಿಬಿರದ ಸಹಾಯಾರ್ಥವಾಗಿ ಬಂದಿವೆಯೆಂದೂ, ಉಳಿದ ಊರವರೂ ಇವರ ಅನುಕರಣೆಮಾಡಬೇಕೆಂದೂ ಸತ್ಯಾಗ್ರಹ ಮಂಡಳದವರು ತಿಳಿಸುತ್ತಾರೆ.

## ಬಂಗಾಲದಲ್ಲಿ ಹಿಡಿದರು

ಬಂಗಾಲ ಪ್ರಾಂತದ ಸತ್ಯಾಗ್ರಹ ಮಂಡಳದ ಅಧ್ಯಕ್ಷರಾದ ಶ್ರೀ ಯತೀಂದ್ರ ಮೋಹನರಾಯ ಹಾಗೂ ಪ್ರಫುಲ್ಲಕುಮಾರ ಸೇನ ಇವರನ್ನು ಕೊಂಡಾಯಿಯಲ್ಲಿ ಸೆರೆಹಿಡಿದಿದ್ದಾರೆ.

## ಸೀತಾಪುರದಲ್ಲಿ ಬಂಧನ

ಸೀತಾಪುರದ ಮ್ಯುನಿಸಿಪಾಲಟಿಯ ಅಧ್ಯಕ್ಷರಾದ ಶ್ರೀ ಶಂಭುನಾಥ ಇವರನ್ನು ೧೧೭ ಕಲಮಿನನ್ವಯ ಉಪ್ಪಿನ ಕಾಯಿದೆ ಭಂಗಕ್ಕಾಗಿ ಸೆರೆಹಿಡಿದಿದ್ದಾರೆ.

## ಭಯಂಕರ ಭೂಕಂಪವು

ಇರಾಣ ದೇಶದ ಅಝೋರ ಬೈಜನ ಪಟ್ಟಣದಲ್ಲಿ ಈಗ ಕೆಲವು ದಿನಗಳಿಂದ ಭೂಕಂಪಗಳಾಗ ಹತ್ತಿವೆ, ಎರಡು ಸಾವಿರ ಜನರು ಮರಣಕ್ಕೆ ಗುರಿಯಾಗಿದ್ದಾರೆ. ೫೦೦ ಜನರಿಗೆ ಗಾಯಗಳಾಗಿವೆ

## ದುಂಡುಮೇಜಿನ ಪರಿಷತ್ತು ಯಾವಾಗ?

ಹಿಂದುಸ್ಥಾನಕ್ಕೆ ಯಾವ ಯಾವ ಸುಧಾರಣೆಗಳನ್ನು ಕೊಡಬೇಕೆಂಬುದರ ಬಗ್ಗೆ ಹಿಂದುಸ್ಥಾನದ ಮುಖಂಡರೊಡನೆ ವಿಚಾರ ವಿನಿಮಯ ಮಾಡುವದಕ್ಕಾಗಿ ಜರುಗಲಿಕ್ಕಿದ್ದ ದುಂಡುಮೇಜಿನ ಪರಿಷತ್ತು ಅಕ್ಟೋಬರ ೨೦ ನೆಯ ತಾ|| ದಿವಸ ಲಂಡನ್ನದಲ್ಲಿ ಸೇರತಕ್ಕದ್ದಾಗಿದೆ

---


ಕಂಪನಿಯ ಮುಕ್ಕಾಂ ಸ್ವಲ್ಪ ಉಳಿದಿವೆ,

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಶನಿವಾರ ತಾ|| ೧೭—೫—೩೦

**ಲಂಕಾದಹನ**

ಭಾನುವಾರ ತಾ|| ೧೮—೫—೩೦

**ಸುದಾಮದೇವ**

ಸೋಮವಾರ ತಾ|| ೧೯—೫—೩೦

**ಯಚ್ಚಮ್ಮನಾಯಿಕ.**

**ಎಂಬ ನಾಟಕವನ್ನು ಅಭಿನಯಿಸುವರು.**

ಈ ನಾಟಕಗಳು ಪುನಃ ಆಡಲ್ಪಡುವದಿಲ್ಲ.

ಸಂಘದೊಡೆಯ—**ಸದಾಶಿವರಾವ ಗರೂಡ**


---

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ "ವಿದ್ಯಾರಣ್ಯ" ಮುದ್ರಾ ಯಂತ್ರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

यद्यत् परवशं दुःखं । यद्यदात्मवशं सुखम् ॥ –मनु.

# ಕನ್ನಡಿಗ

KANNADIGA
BAGALKOT

ಸಂಪಾದಕರು:– ಬಳವಂತ ಅಣ್ಣಾರಾವ ಮುಜುಮುದಾರ

ಬಾಗಲಕೋಟೆ ಶುಕ್ರವಾರ ವಿತ್ತ ವೈಶಾಖ ಬಹುಳ ೪ ಶಕೆ ೧೮೫೨ ತಾ ೧೬—೫—೩೦ ಸಂಚಿಕೆ ೫೦

## ಈ ಸರಕಾರದಲ್ಲಿ ವ್ಯಾಪಾರಿಗಳದೂ ವಿಶ್ವಾಸವಿಲ್ಲ

### ವ್ಯಾಪಾರಿಗಳೂ ಕೋರ್ಟಿಗೆ ಬಹಿಷ್ಕಾರ ಹಾಕಿದರು.

ಮುಂಬಯಿಯ ೨೬ ವ್ಯಾಪಾರಿ ಸಂಘಗಳ ಪ್ರತಿನಿಧಿಗಳು ಶ್ರೀ. ಹಿರಾಚಂದ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿಸಿಕೊಂಡು ಕೆಳಗಿನ ಮಹತ್ವದ ಗೊತ್ತುಗಳನ್ನು ತೀರ್ಮಾನಿಸಿಕೊಂಡಿದ್ದಾರೆ (೧) ಜಗದ್ವಂದ್ಯರೂ ವ್ಯಾಪಾರಿ ಬಂಧುಗಳ ಹಿತಚಿಂತಕರೂ ಆಗಿರುವ ಮಹಾತ್ಮರನ್ನು ಅನ್ಯಾಯದಿಂದ ಸೆರೆ ಹಿಡಿದುದನ್ನು ಈ ಸಭೆಯು ನಿಷೇಧಿಸುವದಲ್ಲದೆ ಸರಕಾರವು ತನ್ನ ಈ ಕೃತಿಯಿಂದ ವ್ಯಾಪಾರಿ ಬಂಧುಗಳ ವಿಶ್ವಾಸವನ್ನಾದರೂ ಕಳೆದುಕೊಂಡಿರುವದೆಂದು ಈ ಸಭೆಯು ಸಾರುತ್ತದೆ, (೨) ವೃತ್ತಪತ್ರಗಳ ದಬ್ಬಾಳಿಕೆಯ ಕಾಯಿದೆಯಿಂದ ವ್ಯಾಪಾರಿಗಳಿಗೂ, ನಾಗರಿಕರಿಗೂ, ತಮಗೂ ಆಗಬಹುದಾದ ಅಹಿತಗಳ ಕಡೆಗೆ ಲಕ್ಷ್ಯಕೊಟ್ಟು ಸರಕಾರವು ಈ ಕಾಯಿದೆಯನ್ನು ಕೂಡಲೆ ತೆಗೆದೊಗೆಯಬೇಕೆಂದು ಈ ಸಭೆಯು ಸರಕಾರಕ್ಕೆ ಆಗ್ರಹಪಡಿಸುತ್ತದೆ. (೩) ದಬ್ಬಾಳಿಕೆಯನ್ನು ಪ್ರಾರಂಭಿಸಿ ರಾಜಕೀಯ ಹಾಗೂ ಆರ್ಥಿಕ ಸ್ವಾತಂತ್ರ್ಯ ಸಂಪಾದನೆಗಾಗಿ ಹೋರಾಡುತ್ತಿರುವ ವೀರರನ್ನು ಕಾರಾಗ್ರಹಕ್ಕೆ ಕಳುಹಿದುದಕ್ಕಾಗಿ ಸರಕಾರದ ಕೃತಿಯನ್ನು ಈ ಸಭೆಯು ನಿಷೇಧಿಸುತ್ತದೆ. (೪) ವ್ಯಾಪಾರಿ ಸಂಘಗಳ ಪ್ರತಿನಿಧಿಗಳಾಗಿ ಕಾಯಿದೆ ಮಂಡಲಗಳಿಗೆ ಹೋಗಿರುವ ಸಭಾಸದರು ಸರಕಾರದ ದಬ್ಬಾಳಿಕೆಯ ವೃತ್ತಿಯು ನಿಷೇಧವೆಂದು, ಕೂಡಲೇ ರಾಜೀನಾಮೆ ಕೊಡಬೇಕು. (೫) ಯಾವ ಹಿಂದೂ ವ್ಯಾಪಾರಿ ಸಂಘಗಳು ದುಂಡು ಮೇಜಿನ ಪರಿಷತ್ತಿನಲ್ಲಿ ಯಾವದೇ ಬಗೆಯಿಂದ ಭಾಗವನ್ನು ತೆಗೆದುಕೊಳ್ಳಕೂಡದು. ಈ ಸಭೆಗೆ ಪ್ರತಿನಿಧಿಗಳನ್ನು ಕೊಟ್ಟು ಕಳುಹಿದ ಸಂಘಗಳು ಇನ್ನು ಮುಂದೆ ಕೋರ್ಟುಗಳ ಕಟ್ಟೆಗಳನ್ನೇರದೆ ತಮ್ಮ ತಂಟೆಗಳನ್ನು ಪಂಚರ ಮುಖಾಂತರವಾಗಿ ತೀರಿಸಿಕೊಳ್ಳಬೇಕು.

## ಬ್ರಾಹ್ಮಣೇತರರು ಕಾಂಗ್ರೆಸ್ಸನ್ನು ಸೇರಿದರು

ಬೆಳಗಾವಿಯಲ್ಲಿ ಶ್ರೀ ಹೊಸಮನಿಯವರ ಅಧ್ಯಕ್ಷತೆಯಲ್ಲಿ ಸೇರಿದ ಬ್ರಾಹ್ಮಣೇತರ ಪರಿಷತ್ತಿನಲ್ಲಿ ಈ ಕೆಳಗಿನ ಗೊತ್ತುಗಳು ಸ್ವೀಕೃತವಾಗಿವೆ. (೧) ಕರ್ನಾಟಕ ಬ್ರಾಹ್ಮಣೇತರ ಪಕ್ಷವು "ಕರ್ನಾಟಕ ಕಾಂಗ್ರೆಸ್ ಲೋಕಪಕ್ಷ" ವೆಂಬ ಹೆಸರನ್ನಿಟ್ಟುಕೊಂಡು ಕಾಂಗ್ರೆಸ್ಸದಲ್ಲಿ ಸೇರಬೇಕು. (೨) ಅಸ್ಪೃಶ್ಯತೆಯ ನಿವಾರಣೆ, ಪರದೇಶಿ ಸರಕುಗಳ ಬಹಿಷ್ಕಾರ, ಖಾದಿಯ ಉತ್ಪತ್ತಿ, ಮತ್ತು ಪ್ರಸಾರ, ಸೆರೆ ಸಿಂದಿ ಬಹಿಷ್ಕಾರ, ಗ್ರಾಮ ಸಂಘಟನೆ, ಈ ಕಾರ್ಯಗಳ ಕಡೆಗೆ ಈ ಪಕ್ಷದವರು ವಿಶೇಷವಾಗಿ ಲಕ್ಷ್ಯಕೊಡಬೇಕು. (೩) ವೃತ್ತಪತ್ರ ದಬ್ಬಾಳಿಕೆಯ ಕಾಯಿದೆಯನ್ನು ಈ ಪರಿಷತ್ತು ನಿಷೇಧಿಸುತ್ತದೆ. (೪) ಮಹಾತ್ಮಾಗಾಂಧಿಯವರನ್ನು ಸೆರೆ ಹಿಡಿದುದಕ್ಕಾಗಿಯೂ ಮತ್ತು ದೇಶದಲ್ಲೆಲ್ಲ ದಬ್ಬಾಳಿಕೆಯ ಸತ್ರವನ್ನು ಸುರುವು ಮಾಡಿದುದಕ್ಕಾಗಿಯೂ ಈ ಪರಿಷತ್ತು ಸಂಕಾರದ ಕೃತಿಯನ್ನು ನಿಷೇಧಿಸುತ್ತದೆ. (೫) ಕಾಂಗ್ರೆಸ್‌ದಲ್ಲಿ ನಮ್ಮ ಪಕ್ಷದ ಜನರು ಸಮಾವಿಷ್ಟರಾಗುವಂತೆ ಹೆಚ್ಚು ಜೋರಿನಿಂದ ಪ್ರಯತ್ನಿಸಬೇಕು.

## ಬಿಸನಾಳದ ಹೊಸ ಹೊಸ ಸುದ್ದಿ

( ಸತ್ಯಾಗ್ರಹ ಶಿಬಿರಾಧಿಪತಿಗಳಿಂದ )

“ಬಿಸನಾಳದ ಬಳಿಯಲ್ಲಿ ೨ ಮೈಲಿನ ಅಂತರದಲ್ಲಿ ಬೂದಿಹಾಳವೆಂಬ ಗ್ರಾಮವಿದೆ, ಅಲ್ಲಿ ೧೩ನೆಯ ತಾರೀಖಿಗೆ ಒಂದು ಜಾತ್ರೆ ಇತ್ತು. ಜಾತ್ರೆಗೆ ಜನರು ಬಹಳ ಕೂಡುವರೆಂಬ ಸುದ್ದಿಯು ತಿಳಿದು ಬಂದಿದ್ದುದರಿಂದ ಲಾಲಾಜಿ ಪಥಕದ ಸ್ವಯಂಸೇವಕರು ಅಂದು ಉಪ್ಪಿನ ನೀರನ್ನೂ ಉಪ್ಪಿನ ಮಣ್ಣನ್ನೂ ತೆಗೆದುಕೊಂಡು ಅಲ್ಲಿಗೆ ಹೋದರು. ಊರ ಜನರು ವಾದ್ಯ ವೈಭವಗಳಿಂದ ಅವರನ್ನು ಸತ್ಕರಿಸಿದರು. ಜಾತ್ರೆಗಾಗಿ ೧೦೦೦ ಜನರು ಬಂದಿದ್ದರು, ಅವರು ಅಲ್ಲಿಗೆ ಹೋದ ಬಳಿಕ ಅವರಲ್ಲಿ ೫ ಸ್ವಯಂಸೇವಕರು ಒಲೆಯನ್ನು ಹೊತ್ತಿಸಿ ಉಪ್ಪನ್ನು ಸಿದ್ಧ ಮಾಡಿದರು. ಅಲ್ಲಿ ನೆರೆದವರೆಲ್ಲರೂ ಸ್ವಯಂಸೇವಕರಿಂದ ಉಪ್ಪು ಸಿದ್ಧಪಡಿಸುವ ರೀತಿಯನ್ನು ಕೇಳಿಕೊಂಡರು. ಸಂಜೆಯಲ್ಲಿ ಮಹಾತ್ಮರ ಬಂಧನ ಹಾಗು ಉಪ್ಪಿನ ಕಾಯಿದೆ ಭಂಗದ ವಿಷಯವಾಗಿ ಸ್ವಯಂಸೇವಕರು ಭಾಷಣವನ್ನಿತ್ತರು. ಸಭೆಯಲ್ಲಿ ಉಪ್ಪು ಮಾರಲ್ಪಟ್ಟಿತು. ಈ ವರೆಗೆ ಯಾರನ್ನೂ ಸೆರೆಹಿಡಿದಿರುವದಿಲ್ಲ”

## ಸೊಲ್ಲಾಪುರ ದಂಗೆಯ ಸವಿಸ್ತರ ಸಂಗತಿಗಳು

(ಸೊಲ್ಲಾಪುರದಲ್ಲಾದ ದಂಗೆಯ ಸವಿಸ್ತರ ಸಂಗತಿಗಳು ೧೦ ನೆಯ ತಾರೀಖಿನ "ಕರ್ಮಯೋಗಿ" ಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ಪ್ರಸಿದ್ಧಿಸಲ್ಪಟ್ಟಿವೆ. "ಕನ್ನಡಿಗ"ನ ವಾಚಕರಿಗಾಗಿ ಆ ಸವಿಸ್ತರ ಸಂಗತಿಗಳನ್ನು ಕೆಳಗೆ ಕೊಟ್ಟಿರುತ್ತೇವೆ ಸಂ. ಕ)

[ಕರ್ಮಯೋಗಿ"ಯ ವಿಶೇಷ ಸಂಚಿಕೆಯಿಂದ]

"ಗುರುವಾರ ದಿವಸ ಮುಂಜಾನೆ ಹಿಂದಿನ ೩ ದಿವಸಗಳಂತೆಯೇ ಮೆರವಣಿಗೆ ಮೊದಲಾದ ಕಾರ್ಯಕ್ರಮಗಳು ೧೦-೧೦॥ ಗಂಟೆಯ ವರೆಗೆ ಸಾಗಿದವು ಬಳಿಕ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೋಟುಹೋದರು. ಇದೇ ವೇಳೆಯಲ್ಲಿ ಕೆಲವು ಜನರು ರೂಪಾಭವಾನಿ ಬಳಿಯಲ್ಲಿಯ ಸಿಂದೀ ಗಿಡಗಳನ್ನು ಕಡಿಯಲಿಕ್ಕೆ ಹೋದರು. ಈ ಸುದ್ದಿಯು ಪೋಲೀಸರಿಗೆ ತಿಳಿದದ್ದರಿಂದ ಪೋಲೀಸರು ಆ ಸ್ಥಳಕ್ಕೆ ಬಂದುಬಿಟ್ಟರು ಗುಂಡ ಜನರೂ ಬಂದು ಸೇರಿದರು. ಪೋಲೀಸರಿಗೂ ಮತ್ತು ಅವರಿಗೂ ವಾಗ್ವಾದಗಳು ನಡೆದವು. ಪೋಲೀಸರು ಅಲ್ಲಿ ನೆರೆದವರಲ್ಲಿ ೭-೮ ಜನರನ್ನು ಸೆರೆಹಿಡಿದರು. ಈ ಗಡಬಿಡಿಯು ನಡೆದಿರುವಾಗ್ಯೆ ಸಮೀಪದಲ್ಲಿಯೇ ಇರುವ ಬಾಜಾರ ಪೇಟೆಯೊಳಗಿನ ಎಷ್ಟೋ ಜನರು ಅಲ್ಲಿಗೆ ಬಂದು ಸೇರಿದರು. ಜನಸಂದಣಿಯು ಹೆಚ್ಚಾದುದನ್ನು ಕಂಡು ಕೆಲವು ಪೋಲೀಸರಾದರೂ ಬಂದರು. ಡಿ॥ ಮ್ಯಾಜಿಸ್ಟ್ರೇಟ ಮೊದಲಾದ ಅಧಿಕಾರಿಗಳು ಅಲ್ಲಿ ಇದ್ದರು. ಅಲ್ಲಿ ನೆರೆದ ಜನರಲ್ಲಿ ಕೆಲವರು ಸೆರೆಯಾಳಾದ ಜನರ ಹೆಸರುಗಳನ್ನು ಬರೆದುಕೊಂಡು ಅವರನ್ನು ಬಿಡಿರೆಂದು ಕೇಳಹತ್ತಿದರು. ಹೀಗೆ ಮಾತು ಕಥೆಗಳು ನಡೆದಿರುವಾಗ ಶಂಕರನೆಂಬ ಓರ್ವ ಹುಡುಗನು ಮುಂದೆ ಬಂದು ಹಿಡಿದವರನ್ನು ಬಿಡಲಿಕ್ಕೇ ಬೇಕೆಂದು ನುಡಿಯುತ್ತಿರುವಲ್ಲಿ ಓರ್ವ ಸಾರ್ಜಂಟನು ಅವನ ಮೇಲೆ ಗುಂಡು ಹೊಡೆದನು. ಜನರು ಸಿಟ್ಟಿಗೆದ್ದರು. ಕಲ್ಲುಗಳನ್ನು ಎಸೆಯಹತ್ತಿದರು. ಅವರ ಮೇಲೆ ಪೋಲಿಸರು ಗೋಳೀಬಾರ ಮಾಡಿದರು. ಈ ಗೋಲೀಬಾರದಲ್ಲಿ ೩-೪ ಜನರು ಮರಣಹೊಂದಿದರು. ಕೂಡಿದ ಜನರು ಓಡಹತ್ತಿದರು, ಈ ಪ್ರಕಾರ ಜನರು ಸಿಟ್ಟಿಗೆದ್ದುದರಿಂದ ಅವರಿಗೆ ಮುಂದಾಳುಗಳ ಮಾತಿನಂತೆ ನಡೆಯುವದು ಅಸಾಧ್ಯವಾಯಿತು. ಈ ಗುಂಪಿನೊಳಗಿನ ಕೆಲವು ಜನರು ಮಂಗಳವಾರಪೇಟೆಯ ಪೋಲೀಸ ಚೌಕಿಗೆ ಬಂದು ಚೌಕಿಯಲ್ಲಿಯ ಕೆಲವು ಕಾಗದಪತ್ರಗಳನ್ನು ಸುಟ್ಟದ್ದಲ್ಲದೆ, ಇಬ್ಬರು ಪೋಲೀಸರಿಗೆ ಹೊಡೆದು, ಅವರಲ್ಲಿ ಒಬ್ಬನನ್ನು ಸುಡುತ್ತಿರುವ ಕಾಗದ ಮತ್ತು ಬಟ್ಟೆಗಳ ಮಧ್ಯದಲ್ಲಿ ಒಗೆದರು. ಬಳಿಕ ಕೆಲವು ಜನರ ಗುಂಪು ದಿವಾಣಿ ಕೋರ್ಟಿನ ಕಡೆಗೆ ಹೋಯಿತು. ಮತ್ತು ಅವರು ಕೋರ್ಟಿನಲ್ಲಿದ್ದ ಕಾರಕೂನರನ್ನು ಹೊರಗೆ ಕರೆದು ಕೋರ್ಟಿನ ಕಟ್ಟಡವನ್ನು ಸುಟ್ಟುಬಿಟ್ಟರು.

ಇದನ್ನು ಕಂಡು ಡಿ॥ ಮ್ಯಾಜಿಸ್ಟ್ರೇಟರೂ ಮತ್ತು ಸ್ಥಾನಿಕ ಅಧಿಕಾರಿಗಳೂ ವಿಚಾರಶೂನ್ಯರಾಗಿ, ಸಿಟ್ಟಿಗೆದ್ದು, ಪಟ್ಟಣದಲ್ಲಿಯ ನಿರಪರಾಧಿ ಹಾಗೂ ಶಾಂತತಾಪ್ರಿಯ ನಾಗರಿಕರ ಕೊಲೆಯನ್ನು ಮಾಡಲು ಪ್ರಾರಂಭಿಸಿದರು. ಸಶಸ್ತ್ರ ಪೋಲೀಸರು ಮೋಟಾರುಗಳಲ್ಲಿ ತಿರುಗಾಡಹತ್ತಿದರು.

ಮೋಟಾರ ಲಾರಿಯಲ್ಲಿ ಡ್ರಾಯವ್ಹರನ ಎರಡೂ ಬ ಗಳಲ್ಲಿ ಇಬ್ಬರು ಸಾರ್ಜಂಟರಿದ್ದರು. ಅವರ ಕೈಯಲ್ಲಿ ಪಿಸ್ತು ಗಳಿದ್ದು, ಅವುಗಳನ್ನು ಅವರು ಹೊರಗೆ ಹಿಡಿದಿದ್ದರು ಗಡೆಯಲ್ಲಿ ಪೋಲೀಸರಿದ್ದು ಅವರು ಕಿಡಿಕಿಯೊಳಗಿಂದ ಬಾ ಸಲ್ಲ ಮತ್ತು ನಳಿಗಳನ್ನು ಹೊರಗೆ ತೆಗೆದು ಸಜ್ಜಾಗಿ ಇಟ್ಟಿದ್ದರು ಮೋಟಾರದ ಹಿಂದೆ ಇಬ್ಬರು ಪೋಲೀಸರು ಬಂದೂಕಗಳ ಸಿದ್ಧವಾಗಿ ನಿಂತಿದ್ದರು. ಒಂದು ಲಾರಿಯ ಮೇಲ್ಭಾಗದ ಮಶಿನ್ ಗನ್ನುಗಳನ್ನು ಇಟ್ಟಿದ್ದರು. ಇಂತಹ ಎರಡು ಲಾ ಗಳು ೪೦-೫೦ ಮೈಲಿನ ವೇಗದಿಂದ ಒಂದೇ ಸಮನೆ ಬೀದಿ ಮೇಲೆ, ಕಿಡಿಕಿಯಲ್ಲಿ, ಬಾಗಿಲದ ಹಿಂದಿಯಲ್ಲಿ, ಅಟ್ಟದಮೇ ಜಿನ್ನಗಳಲ್ಲಿ ಎಲ್ಲಿ ಮನುಷ್ಯರು ಕಾಣಿಸಿಕೊಳ್ಳುತ್ತಿದ್ದರೋ ಅವ ಗಲ್ಲರಿಗೂ ಗೋಳಿಗಳನ್ನು ಹೊಡೆಯುತ್ತ ನಡೆದಿದ್ದವು. ಇದು ಹೀಗೆಯೇ ಮಧ್ಯಾನ್ಹ ೧॥ ಗಂಟೆಯಿಂದ ರಾತ್ರಿ ೭॥ ಗಂಟೆ ವರೆಗೆ ಸಾಗಿತು ಈ ೬ ತಾಸುಗಳಲ್ಲಿ ಸುಮಾರು ೨೫ ಜನರು ಮರಣಹೊಂದಿದ್ದಲ್ಲದೆ ೫೦ ಕ್ಕಿಂತ ಹೆಚ್ಚು ಜನರು ಗಾಯ ಪಟ್ಟಿರುವರೆಂಬುದಾಗಿ ತಿಳಿಯುತ್ತದೆ"

## ಗೌಡರ ಕಿಡಿಗೇಡಿತನ

ಧಾರವಾಡ ಜಿಲ್ಲೆಯ ಹಿರೇಕೆರೂರ ಹಾಗೂ ರಾಣೇ ನ್ನೂರ ತಾಲೂಕುಗಳಲ್ಲಿಯ ಪ್ರಚಾರ ಕಾರ್ಯವನ್ನು ಕೈಕೊಂ ಹಳ್ಳಿಹಳ್ಳಿಗೆ ತಿರುಗುತ್ತಿರುವ ವಿಕ್ರಮ ಪಥಕದ ಸ್ವಯಂ ವಕರು ಕದರಮಂಡಲಗಿ ಗ್ರಾಮಕ್ಕೆ ೬ ನೇ ತಾ॥ ಗೆ ತಲು ಲ್ಲಿ ಮುಂಜಾನೆ ರಾಷ್ಟ್ರಧ್ವಜವಂದನೆಯ ಸಮಾರಂಭವ ಜರುಗಿಸಿದ್ದಲ್ಲದೆ, ಸಂಜೆಯಲ್ಲಿ ಸಾರ್ವಜನಿಕ ಸಭೆಯನ್ನು ಕೂ ಭಾಷಣಗಳನ್ನಿತ್ತರು. ಇದನ್ನು ಕಂಡು ಗೌಡರು ಗಾಬರಿಗೊಂ ಸಭಾಸ್ಥಾನಕ್ಕೆ ಬಂದು, "ನಿಮ್ಮನ್ನು ಸೆರೆಹಿಡಿದಿದ್ದೇವೆ' ಎಂ ಅವರಿಗೆ ಹೇಳಿದರು. "ಸ್ವಯಂಸೇವಕರು ವಾರಂಟನ್ನು ತೋ ಸಿರಿ"ಂದು ಕೇಳಿಕೊಂಡ ಕೂಡಲೆ ಅವರು ಸಿಟ್ಟಿಗೆದ್ದು "ನಿಮ್ ಕಾಯಿದೆಗೆ ವಿರುದ್ಧವಾಗಿ ಸಿದ್ಧಪಡಿಸಿದ ಉಪ್ಪು ಇದ್ದ ತಿಳಿದುಬಂದಿದೆ. ಆದುದರಿಂದ ನಿಮ್ಮನ್ನು ಹಿಡಿದಿದ್ದೇವೆ. ರ ೧೦ ಗಂಟೆಗೆ ಫೌಜದಾರರು ಬರುವರು, ಆಮೇಲೆ ನಿ ವಿಚಾರಣೆಯಾಗುವದು" ಎಂದು ಹೇಳಿ ಗೌಡರು ಅವರ ಕರೆದುಕೊಂಡು ಹೋಗಿ ಚೌಕಿಯಲ್ಲಿ ಇಟ್ಟರು. ಸ್ವಯಂ ಕರು ಫೌಜದಾರರ ಹಾದಿಯನ್ನು ನೋಡಿ ಬೇಸತ್ತು ರ ೧೦ ಗಂಟೆಯ ಮೇಲೆ ಬ್ಯಾಡಗಿಗೆ ಹೊರಟರು. ಗೌಡರಾ ಬಿಚ್ಚುಗತ್ತಿಯ ಕಾವಲಿಗಾರರನ್ನೂ ೭ ಜನ ಹೊಲೆಯ' ಸಂಗಡ ಕರೆದುಕೊಂಡು ಸ್ವಯಂಸೇವಕರನ್ನು ಹಿಂಬಾಲಿಸಿ ದಾರಿಯಲ್ಲಿಯೇ ಫೌಜದಾರರು ಭೆಟ್ಟಿಯಾಗಿ "ವಾರಂಟು ಇವರನ್ನೇಕೆ ಹಿಡಿದಿರಿ" ಎಂದು ಸಿಟ್ಟುಮಾಡಿ ಸ್ವಯಂಸೇ ರಿಗೆ ಮುಂದೆ ಹೋಗಗೊಟ್ಟರು. ಗೌಡರು ತಮ್ಮ ಗುಂಡ ಜನ್ಮಾಗಿ ಕಿವಿ ಹಿಂಡಿಸಿಕೊಂಡಂತಾಯಿತು.

## ಕಪ್ತಾನನು ಸತ್ಯಾಗ್ರಹದಲ್ಲಿ ಸೇರಿದನು,

ಕರಾಚಿಯ ಸೈನ್ಯಖಾತೆಯಲ್ಲಿದ್ದ, ಕಪ್ತಾನ ದುದಾರಿ ಲಾರಖಾನೆಯಲ್ಲಿಯ ಪೋಲೀಸರ ಪುಂಡತನಕ್ಕೆ ಬೇಸತ್ತು ಉದ್ಯೋಗಕ್ಕೆ ರಾಜೀನಾಮೆ ಕೊಟ್ಟು, ಸತ್ಯಾಗ್ರಹದಲ್ಲಿ ದ್ದಾನೆ.

# ಧರಸಾನಾ ದಾಳಿಯ ರಣರಂಗ

ಮಹಾತ್ಮಾ ಗಾಂಧಿಯವರ ಆಜ್ಞೆಯ ಮೇರೆಗೆ ಶ್ರೀಮತಿ ಸರೋಜಿನಿ ದೇವಿಯವರು ತಾ|| ೧೫ ಕ್ಕೆ ಸರಿಯಾಗಿ ಮುಂಜಾನೆ ೬ ಗಂಟೆಗೆ ಧರಸಾನಾ ಉಪ್ಪಿನ ವಖಾರದ ಮೇಲೆ ದಾಳಿಯನ್ನು ಮಾಡಲು ೫೦ ಜನ ಸ್ವಯಂಸೇವಕರೊಂದಿಗೆ ಹೋಗತಕ್ಕವರಿದ್ದಾರೆ. ಅಲಹಾಬಾದದಲ್ಲಿ ಕೂಡಿದ ಅಖಿಲ ಭಾರತ ರಾಷ್ಟ್ರ ಸಭೆಯ ಕಾರ್ಯಕಾರೀ ಮಂಡಳದವರು ಧರಸಾನಾ ಉಪ್ಪಿನ ಮಾಳಿಯೇ ಅಖಿಲ ಭರತಖಂಡದ ರಣಕ್ಷೇತ್ರವಾಗಬೇಕೆಂದು ನಿರ್ಧರಿಸಿದುದರಿಂದ ಧರಸಾನಾ ಗ್ರಾಮಕ್ಕೆ ಈಗ ಬಹು ಮಹತ್ವವು ಪ್ರಾಪ್ತವಾಗಿದ್ದು, ಭರತಖಂಡದೊಳಗಿನ ಎಲ್ಲರ ದೃಷ್ಟಿಯೂ ಈಗ ಅತ್ತಕಡೆಗೇ ಹೊರಳಿದೆ. ಗುಜರಾಥದೊಳಗಿನ ಅಲ್ಲಲ್ಲಿಯ ಸ್ವಯಂಸೇವಕರು ತಂಡತಂಡವಾಗಿ ಧರಸಾನಾಕ್ಕೆ ಹೋಗಹತ್ತಿದ್ದಾರೆ. ಈಗಾಗಲೆ ಬಾರ್ಡೋಲಿ ತಾಲೂಕಿನ ೩೦೦ ಜನ ಸ್ವಯಂಸೇವಕರು ಧರಸಾನಾದ ಸಮೀಪದಲ್ಲಿರುವ ಉಂತಡಿ ಗ್ರಾಮದಲ್ಲಿ ತಳವೂರಿದ್ದಾರೆ. ಸುರತದಿಂದ ೨೫ ಸ್ವಯಂಸೇವಕರೂ ಜಲಾಲಪುರದಿಂದ ೭೫ ಸ್ವಯಂಸೇವಕರೂ ಧರಸಾನಾಕ್ಕೆ ಹೋಗಿದ್ದಾರೆ. ಸುರತ ಪಥಕದ ನೇತೃತ್ವವನ್ನು ಮಹಾತ್ಮರ ಚಿರಂಜೀವರಾದ ಶ್ರೀ. ಹರಿದಾಸ ಗಾಂಧಿಯವರು ವಹಿಸಿದ್ದಾರೆ. ಸುರತದ ಡಾಕ್ಟರರಾದ ಶ್ರೀ. ಆಪ್ಟೆಯವರು ಉಂತಡಿಯ ಬಿಡಾರದಲ್ಲಿ ಸ್ವಯಂಸೇವಕರಿಗಾಗಿ ಒಂದು ಔಷಧಾಲಯವನ್ನು ತೆಗೆದಿದ್ದಾರೆ ಸುರತ, ಅಹಮ್ಮದಾಬಾದ, ಕಾಯರಾ ಮೊದಲಾದ ಪಟ್ಟಣಗಳಿಂದ ಕೂಡಿ ೨೦೦೦೦ ಸ್ವಯಂಸೇವಕರು ದಾಳಿಗಾಗಿ ಹೋಗುವವರಿದ್ದಾರೆ. ಶ್ರೀಮತಿ ಸರೋಜಿನಿ ದೇವಿಯವರನ್ನು ದಾಳಿಯಕಿಂತ ಪೂರ್ವದಲ್ಲಿಯೇ ಸರಕಾರವು ಬಂಧಿಸಿದಲ್ಲಿ, ಮಹಾತ್ಮರ ಚಿರಂಜೀವರಾದ ಶ್ರೀ. ಮಣಿಲಾಲ ಗಾಂಧಿಯವರು ದಾಳಿಯ ಕಾರ್ಯವನ್ನು ಕೈಕೊಳ್ಳುವರು.

೩೦೦ ಪೋಲೀಸ ಅಧಿಕಾರಿಗಳು ಸಶಸ್ತ್ರರಾಗಿ ಉಪ್ಪಿನ ಮಾಳಿಯ ಸಮೀಪದಲ್ಲಿಯೇ ತಳವೂರಿದ್ದಾರೆ. ವಖಾರದ ಸುತ್ತಲೂ ತಂತಿಗಳು ಬಿಗಿಯಲ್ಪಟ್ಟಿವೆ. ಸುರತ ಜಿಲ್ಲೆಯ ಡಿ|| ಮ್ಯಾಜಿಸ್ಟ್ರೇಟರು ಕ್ರಿ. ಪ್ರೊ. ಕೋಡಿನ ೧೪೪ ನೆಯ ಕಲಮಿನನ್ವಯ ೧ ತಿಂಗಳ ಮಟ್ಟಿಗೆ ನಾಲ್ಕು ಜನರಿಗಿಂತ ಹೆಚ್ಚು ಜನರು ಒಟ್ಟಿಗೆ ಸೇರಬಾರದೆಂದೂ, ಬಡಿಗೆ, ಲಾಠಿ, ಚಾಕು ಮೊದಲಾದವುಗಳನ್ನು ಹಿಡಿದುಕೊಂಡು ಯಾರೂ ತಿರುಗತಕ್ಕದ್ದಲ್ಲವೆಂದೂ ಅಪ್ಪಣೆಯನ್ನು ಹೊರಡಿಸಿದ್ದಾರೆ.

ಧರಸಾನಾ ಗ್ರಾಮದಲ್ಲಿ ಎಲ್ಲರಲ್ಲಿಯೂ ಉತ್ಸಾಹವು ತುಂಬಿ ತುಳುಕುತ್ತಲಿದೆ. ದಾಳಿಯ ವೇಳೆಯಲ್ಲಿ ಎಲ್ಲರೂ ಶಾಂತ ರೀತಿಯಿಂದ ವರ್ತಿಸಬೇಕೆಂಬುದನ್ನು ತಿಳಿಸಿಹೇಳಲು ದಿನಾಲು ಸಭೆಗಳಾಗಹತ್ತಿವೆ. ದಾಳಿಗಾಗಿ ಹೊರಟ ಕೂಡಲೇ ಯಾರೂ ಬೆನ್ನುಹತ್ತಿ ಬಾರದೆ ಹಿಂದೆಯೇ ಉಳಿಯಬೇಕಾಗಿ ಜನರಿಗೆ ತಿಳಿಸುವದರಲ್ಲಿ ಬಂದಿದೆ.

## ಕೌನ್ಸಿಲಕ್ಕೆ ರಾಜೀನಾಮೆ

ಮುಂಬಯಿ ಕಾಯಿದೆ ಮಂಡಳದ ಸಭಾಸದರಾದ ಸಿಂಧದ ಶ್ರೀ. ಮುಖಿ ಹರಿಕಿಶನದಾಸರು ಕವ್ನ್ಸಿಲಕ್ಕೆ ರಾಜೀನಾಮೆ ಕೊಟ್ಟಿದ್ದಾರೆ

## ಮಂಗಳೂರಿನಲ್ಲಿ ಪರದೇಶೀ ಬಟ್ಟೆಗಳ ಬಹಿಷ್ಕಾರ

೩ ತಿಂಗಳ ಮಟ್ಟಿಗೆ ಪರದೇಶಿ ಬಟ್ಟೆಗಳನ್ನು ತರಿಸುವದಿಲ್ಲವೆಂದು ಮಂಗಳೂರಿನ ಬಟ್ಟೆಯ ವ್ಯಾಪಾರಸ್ಥರು ನಿರ್ಧರಿಸಿಕೊಂಡಿದ್ದಾರೆ.

## ಅಕಾಲಿ ಜಥಾದ ಮುಖಂಡರು ಬಂಧಿಸಲ್ಪಟ್ಟರು

೧೦೦ ಜನ ಅಕಾಲಿ ದಳದೊಂದಿಗೆ ಪೇಶಾವರಕ್ಕೆ ಹೊರಡಬೇಕೆಂದಿದ್ದ ಸೀಖರ ಮುಖಂಡರಾದ ಶ್ರೀ. ತಾರಾಸಿಂಗ ಇವರನ್ನು ರಾಜದ್ರೋಹಕ್ಕಾಗಿ ಪಂಜಾಬದ ಅಧಿಕಾರಿಗಳು ಮುಸಾಫರಖಾನದಲ್ಲಿ ಬಂಧಿಸಿದ್ದಾರೆ. ಡಾ|| ಕಿಚಲುರವರು ತಾವು ಸೆರೆಯಾಳಾದ ಕೂಡಲೆ ಇವರನ್ನು ಪಂಜಾಬ ಪ್ರಾಂತದ ಸತ್ಯಾಗ್ರಹ ಮಂಡಳದ ಅಧ್ಯಕ್ಷರನ್ನಾಗಿ ನಿಯಮಿಸಿದರು. ಇವರು ಶಿರೋಮಣಿ ಗುರುದ್ವಾರ ಪ್ರಬಂಧಕ ಮಂಡಳ ಹಾಗೂ ಸೀಖ ಮಧ್ಯವರ್ತಿ ಸಂಘದ ಅಧ್ಯಕ್ಷರೂ ಇದ್ದರು.

## ನಗರಸಭೆಯ ಮೇಲೆ ರಾಷ್ಟ್ರಧ್ವಜ

ಮ್ಯುನಸಿಪಾಲಿಟಿಯ ಸಭೆಯಲ್ಲಿ ಈ ಮೊದಲು ಗೊತ್ತು ಮಾಡಿಕೊಂಡ ಪ್ರಕಾರ ಅಹಮ್ಮದನಗರ ಮ್ಯುನಸಿಪಾಲಿಟಿಯವರು ತಾ|| ೯ ನೆಯ ದಿವಸ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನೇರಿಸುವ ಸಮಾರಂಭವನ್ನು ಸಾಂಗಗೊಳಿಸಿದರು.

## ಮದುವೆಯ ಸಮಾರಂಭದಲ್ಲಿ ಸತ್ಯಾಗ್ರಹ

ತಾ| ೧೦ ನೆಯ ದಿವಸ ಮಹಾಡದಲ್ಲಿ ಶ್ರೀ. ಸುರೇಂದ್ರನಾಥರ ಮನೆಯಲ್ಲಿ ಅವರ ಬಂಧುವಿನ ಮದುವೆಯ ಸಮಾರಂಭವಿತ್ತು. ಆದರೆ ಸರಕಾರಿ ಅಧಿಕಾರಿಗಳು ಅದೇ ಸಮಯದಲ್ಲಿಯೇ ಬಂದು ಅವರನ್ನು ಸೆರೆಹಿಡಿದರು. ಇದನ್ನು ಕಂಡ ಕೂಡಲೇ ಅಲ್ಲಿ ನೆರೆದ ಸದ್ಗೃಹಸ್ಥರೆಲ್ಲರೂ ಒಂದು ವಿನಂತಿ ಪತ್ರಿಕೆಯನ್ನು ಹೊರಡಿಸಿ ಸಮಾರಂಭಕ್ಕೆ ರಾಷ್ಟ್ರೀಯ ಸ್ವರೂಪವನ್ನು ಕೊಟ್ಟದ್ದರಿಂದ ಅಸ್ಪೃಶ್ಯ ಮೊದಲಾದ ಎಲ್ಲ ಜಾತಿಯ ಜನರು ಮೆರವಣಿಗೆಯಿಂದ ವರನೊಂದಿಗೆ ಹೊರಟು ವಧುವಿನ ಮನೆಯನ್ನು ಪ್ರವೇಶಿಸಿ ಲಗ್ನಸಮಾರಂಭ ಸಾಂಗಗೊಳಿಸಿದರು.

---

"ಸೊಲ್ಲಾಪುರದಲ್ಲಾದ ದಂಗೆಯ ಸುದ್ದಿಯನ್ನು ಕೇಳಿ ಜನರು ಪ್ರಕ್ಷುಬ್ಧರಾಗಿದ್ದಾರೆ. ಒಂದು ಸ್ವತಂತ್ರ ಮಂಡಳವನ್ನು ನಿಯಮಿಸಿ ದಂಗೆಯ ಸಂಬಂಧವಾಗಿ ವಿಚಾರಣೆಯನ್ನು ಮಾಡಿರಿ" ಎಂದು ಶ್ರೀ. ಶಿರಾಳಕರರು, ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಪರವಾಗಿ ಮುಂಬಯಿ ಸರಕಾರದ ಗೃಹಮಂತ್ರಿಗಳಿಗೆ ತಾರಿನಿಂದ ತಿಳಿಸಿದ್ದಾರೆ.

## ಬೆಳಗಾವಿ ಜಿಲ್ಲೆಯಲ್ಲಿ ದಬ್ಬಾಳಿಕೆ

# ದಾಬಡೆಯವರಿಗೆ ೧ ವರ್ಷದ ಶಿಕ್ಷೆ.

ಬೆಳಗಾವಿಯ "ತರುಣಭಾರತ"ದ ಸಂಪಾದಕರಾದ ಶ್ರೀ ಪ್ರಭು ಹಾಗು ಶ್ರೀ ಕೊಪ್ಪಳ, ಕಿತ್ತೂರ, ವೈದ್ಯ ಇವರಿಗೆ ೯ ತಿಂಗಳ ಸಶ್ರಮ ಶಿಕ್ಷೆಯೂ, ಶ್ರೀ ದಾಬಡೆ ಅನಂತರಾಯರಿಗೆ ೧ ವರ್ಷ ಸಾದಾ ಶಿಕ್ಷೆಯೂ ಆಗಿದೆ. ಪಾಚ್ಛಾಪುರದ ಶ್ರೀ ದೇಶಪಾಂಡೆಯವರು ೧೧೭ ಮತ್ತು ೪೭ ಕಲಮುಗಳನ್ವಯ ೯ ತಿಂಗಳ ಸಶ್ರಮ ಶಿಕ್ಷೆಗೆ ಗುರಿಯಾಗಿದ್ದಾರೆ. ಚಿಕ್ಕೋಡಿಯ ಶ್ರೀ ಚಿಟಣೀಸ ಹಾಗೂ ಸೋನವಾಲ ಇವರಿಗೂ. ಯಮಕನಮರ್ಡಿಯ ಶ್ರೀ ಚಿಕ್ಕೋಡಿ ಅನಂತರಿಗೂ ೬ ತಿಂಗಳ ಸಶ್ರಮ ಶಿಕ್ಷೆ ಆಗಿದೆ.

## ಸಿಲೋನದಲ್ಲಿ ಜಲಪ್ರಳಯ

ಸಿಲೋನದಲ್ಲಿ ಭಯಂಕರ ಜಲಪ್ರಳಯವಾಗಿದ್ದು, ಎಷ್ಟೋ ಗ್ರಾಮಗಳು ಮಹಾಪೂರದಲ್ಲಿ ಮುಳುಗಿ ಹೋಗಿವೆ. ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆ. ರೇಲ್ವೆಮೊದಲಾದ ವಾಹನಗಳು ನಿಂತುಹೋಗಿವೆ. ಇಂತಹ ಪ್ರಳಯವು ಹಿಂದೆ ಎಂದೂ ಆಗಿದ್ದಿಲ್ಲವಂತೆ !

## ಪ್ರೊ. ಧರ್ಮಾನಂದ ಕೋಸಂಬಿಯವರ ಬಿಡುಗಡೆ

ಉಪ್ಪಿನ ಕಾಯಿದೆ ಭಂಗವನ್ನು ಮಾಡಿರುವರೆಂಬ ಆರೋಪವನ್ನು ಹೊರಿಸಿ ಪೋರ್ತುಗೀಜ ಸರಕಾರದವರು ಪ್ರೊ. ಧರ್ಮಾನಂದ ಕೋಸಂಬಿಯವರನ್ನು ಸೆರೆ ಹಿಡಿದಿದ್ದರಷ್ಟೆ, ಆದರೆ ಪುರಾವೆಗಳು ಸಿಗದ್ದರಿಂದಾಗಿ ಅವರನ್ನು ಈಗ ಬಿಟ್ಟುಬಿಟ್ಟಿದ್ದಾರೆ.

## ಅಡವಿಯ ಕಾನೂನಿನ ಸತ್ಯಾಗ್ರಹ

ಮಧ್ಯಪ್ರಾಂತದಲ್ಲಿ ಅಡವಿಯ ಕಾನೂನಿನ ವಿರುದ್ಧ ಸತ್ಯಾಗ್ರಹವು ಈಗ ಪ್ರಾರಂಭವಾಗಿದ್ದು, ಚಿಂದವಾಡದ ಅಬ್ದುಲ್ ಮಜಿದಖಾನರು ಅಡವಿಯ ಕಟ್ಟಳೆಯನ್ನು ಮುರಿದುದಕ್ಕಾಗಿಯೂ ಮುರಿಯಲು ಜನರಿಗೆ ಬೋಧಿಸಿದುದಕ್ಕಾಗಿಯೂ ಅಧಿಕಾರಿಗಳಿಂದ ಬಂಧಿಸಲ್ಪಟ್ಟಿದ್ದಾರೆ.

## ಬ್ರಾಹ್ಮಣೇತರ ಪಂಗಡದ ಮುಖಂಡರಿಗೆ ಶಿಕ್ಷೆ

ಮಹಾರಾಷ್ಟ್ರದ ಬ್ರಾಹ್ಮಣೇತರ ಪಂಗಡದ ಮುಖಂಡರಾದ ಶ್ರೀ. ವಿಠ್ಠಲ ರಾಮಜಿ ಶಿಂದಯವರು ಇ. ಪಿ. ಕೋಡಿನ ೧೧೭ನೆಯ ಕಲಮಿನನ್ವಯ ಬಂಧಿತರಾಗಿ ೬ ತಿಂಗಳ ಸಶ್ರಮಶಿಕ್ಷೆಗೆ ಗುರಿಯಾದರು.

## ಧರಸಾನಾದಲ್ಲಿ ಉಪ್ಪಿನ ಅಧಿಕಾರಿಯ ರಾಜೀನಾಮೆ

ಧರಸಾನಾದಲ್ಲಿಯ ಉಪ್ಪನ್ನು ಸಂರಕ್ಷಿಸುವ ಅಧಿಕಾರಿಯೊಬ್ಬನು ತನ್ನ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟಿರುವದಾಗಿ ತಿಳಿಯುತ್ತದೆ. ರಾಜೀನಾಮೆಯು ಇನ್ನೂ ಮೇಲಧಿಕಾರಿಗಳಿಂದ ಅಂಗೀಕರಿಸಲ್ಪಟ್ಟಿಲ್ಲ. ರಾಜೀನಾಮೆಯನ್ನು ತಿರುಗಿ ತೆಗೆದುಕೊಳ್ಳಲು ಅವರನ್ನು ಆಗ್ರಹಪಡಿಸಹತ್ತಿದ್ದಾರೆ.

## ಸರಕಾರಿ ಉದ್ಯೋಗಸ್ಥನ ರಾಜೀನಾಮೆ.

ಗುಜರಾಥ ಪ್ರಾಂತದ ಬುಲಸಾರ ತಾಲೂಕ ಕಚೇರಿಯೊಳಗಿನ ಕಾರಕೂನರಾದ ಶ್ರೀ. ಗೋಪಾಲಜಿ ದೇಸಾಯಿಯವರು ತಮ್ಮ ಉದ್ಯೋಗಕ್ಕೆ ಶರಣು ಹೊಡೆದಿದ್ದಾರೆ.

## ಉಪ್ಪಿನ ವಖಾರಗಳ ಮೇಲೆ ದಾಳಿ

ಮುಂಬಯಿಯಲ್ಲಿಯ ಸತ್ಯಾಗ್ರಹಿಗಳು ವಸಯಿ, ವಡಾಲಾ ಹಾಗೂ ಭಾಯಂದಾರ ಉಪ್ಪಿನ ವಖಾರಗಳ ಮೇಲೆ ದಾಳಿಯನ್ನು ಮಾಡಬೇಕೆಂದು ಯೋಚಿಸಿದ್ದು ಇದಕ್ಕಾಗಿ ಶೀಘ್ರದಲ್ಲಿಯೇ ಹೊರಡುವವರಿದ್ದಾರೆ,

## ಗುರ್ಖಾ ಜನರು ಸತ್ಯಾಗ್ರಹದ ಸೈನಿಕರಾದರು

ಬಂಗಾಲದ ಪ್ರಾಂತಿಕ ರಾಷ್ಟ್ರಸಭೆಯ ಕಾರ್ಯಕಾರೀ ಮಂಡಳದವರು ದಾರ್ಜಿಲಿಂಗದ ಬಳಿಯಲ್ಲಿರುವ ಗುಡ್ಡಗಾಡು ಪ್ರದೇಶಗಳಿಂದ ಗುರ್ಖಾ ಜನರನ್ನು ಸತ್ಯಾಗ್ರಹ ಸಮರಕ್ಕೆ ಕರೆದುಕೊಂಡು ಬರುತ್ತಿರುವರಾಗಿ ತಿಳಿಯುತ್ತದೆ. ಈಗಾಗಲೆ ೧೫ ಜನ ಗುರ್ಖರು ಕಲಕತ್ತೆಗೆ ಬಂದು ಸತ್ಯಾಗ್ರಹ - ಸೈನ್ಯದಲ್ಲಿ ಸೇರಿದ್ದಾರೆ.

## ಶ್ರೀಜಮನಾದಾಸ ದ್ವಾರಕಾದಾಸರಿಗೆ ೮ ತಿಂಗಳ ಸಶ್ರಮ ಶಿಕ್ಷೆ.

ಮುಂಬಯಿಯ ಶ್ರೀ ಜಮನಾದಾಸ ದ್ವಾರಕಾದಾಸ, ಪುರುಷೋತ್ತಮ ತ್ರಿಕಮದಾಸ, ಮತ್ತು ಶ್ರೀ ಮೊಹಸಿನ, ಇವರು ಉಪ್ಪಿನ ಕಾಯಿದೆ ಭಂಗಕ್ಕಾಗಿ ಬಂಧಿತರಾಗಿ ಉಪ್ಪಿನ ಕಾಯಿದೆಯ ೪೭ ಅ ಹಾಗು ಪಿ. ಕೋಡಿನ ೧೧೭ ಕಲಮುಗಳನ್ವಯ ೫ ತಿಂಗಳ ಸಶ್ರಮ ಶಿಕ್ಷೆಗೂ, ೩೦೦ ರೂ. ಗಳ ದಂಡಕ್ಕೂ ದಂಡ ಕೊಡದಿದ್ದರೆ ಮತ್ತೆ ೩ ತಿಂಗಳ ಶಿಕ್ಷೆಗೂ ಪಾತ್ರರಾಗಿದ್ದಾರೆ.

## "ಮುಂಬಯಿ ಟಾಯಿಮ್ಸ"ಕ್ಕೆ ಆಳಿಗಾಲ.

ಮುಂಬಯಿಯ ವಕೀಲ ಸಂಘದವರು (Advocate Association) "ಟಾಯಿಮ್ಸ" ಪತ್ರಕ್ಕೆ ಬಹಿಷ್ಕಾರ ಹಾಕುವದನ್ನು ಗೊತ್ತುಪಡಿಸಿಕೊಂಡಿದ್ದಾರೆ. "ಟಾಯಿಮ್ಸ"ಕ್ಕೆ ಇನ್ನು ಆಳಿಗಾಲ ಬಂದಂತಾಯಿತು.

---

ಕಂಪನಿಯ ಮುಕ್ಕಾಂ ಸ್ವಲ್ಪ ಉಳಿದಿವೆ,

**ಗದಗ ಶ್ರೀ ದತ್ತಾತ್ರಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಶನಿವಾರ ತಾ|| ೧೭—೫—೩೦

**ಲಂಕಾದಹನ**

ಭಾನುವಾರ ತಾ|| ೧೮—೫—೩೦

**ಸುದಾಮದೇವ**

ಸೋಮವಾರ ತಾ|| ೧೯—೫—೩೦

**ಯಚ್ಚಮ್ಮನಾಯಿಕ.**

**ಎಂಬ ನಾಟಕವನ್ನು ಅಭಿನಯಿಸುವರು,**

ಈ ನಾಟಕಗಳು ಪುನಃ ಆಡಲ್ಪಡುವದಿಲ್ಲ.

ಸಂಘದೊಡೆಯ—**ಸದಾಶಿವರಾವ ಗೆರೂಡ**

---

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

यद्यत् परवशं दुःखं । यद्यदात्मवशं सुखम् ॥ –मनु.

# ಕನ್ನಡಿಗ

KANNADIGA
BAGALKOT

ಸಂಪಾದಕರು:– ಬಳವಂತ ಅಣ್ಣಾರಾವ ಮುಜುಮುದಾರ

ಬಾಗಲಕೋಟೆ ಶನಿವಾರ ಮಿತಿ ವೈಶಾಖ ಬಹುಳ ೫ ಶಕೆ ೧೮೫೨ ತಾ ೧೭—೫—೩೦ ಸಂಚಿಕೆ ೫೧

ಮುಸಲಮಾನರಿಗೆ

## ಮಹಾತ್ಮರ ಸಂದೇಶ

"ನಾನು ಮುಸಲಮಾನರಿಗೆ ನನ್ನ ಹೃದಯುವನ್ನು ಕೊಟ್ಟಿದ್ದೇನೆ. ನಾನು ಅನನ್ಯಭಾವದಿಂದ ಅವರ ಸೇವೆಯುನ್ನು ಮಾಡಿದ್ದೇನೆ. ಒಂದು ಕಾಲಕ್ಕೆ ನಾನು ಹೇಗೆ ಇಂಗ್ಲೀಷ ಸರಕಾರದ ಸೇವೆಯುನ್ನು ಏಕನಿಷ್ಠೆಯಿಂದ ಮಾಡಿದೆನೋ, ಹಾಗೆಯೇ ಮುಸಲಮಾನರ ಸೇವೆಯನ್ನು ಮಾಡಿದ್ದೇನೆ ಅದಕ್ಕೆ ನನ್ನ ಆತ್ಮವೇ ಸಾಕ್ಷಿ. ಆದುದರಿಂದ ಅವರು ನನ್ನ ವಿರುದ್ಧ ವೈರತ್ವ ಮಾಡಲಾರರು. ಕಾರಾಗೃಹವನ್ನು ಸೇರಿದ ಮೇಲೆ ನಾನು ಮುಸಲಮಾನರ ವಾಙ್ಮಯವನ್ನು ಓದುವೆನು. ಆಗ ನಾನು ಅವರ ಹೃದಯುವನ್ನು ಹೆಚ್ಚಾಗಿ ತಿಳಿಯಲು ಶಕ್ತನಾಗುವೆನು."

## ಮಹಾತ್ಮರ ಕ್ಷೇಮಸಮಾಚಾರ

ಬೆಂಗಳೂರಿನ "ತಾಯಿನಾಡು" ಪತ್ರಿಕೆಯ ಸುದ್ದಿಗಾರರೊಬ್ಬರು ಮಹಾತ್ಮಾ ಗಾಂಧಿಯವರ ಕ್ಷೇಮಸಮಾಚಾರದ ವಿಷಯವಾಗಿ ಹೀಗೆ ಬರೆದಿರುತ್ತಾರೆ. "ನಾನು ಯರವಡಾ ತುರಂಗಕ್ಕೆ ಈದಿನ ಮಧ್ಯಾಹ್ನದಲ್ಲಿ ಹೋಗಿದ್ದೆನು. ಮಹಾತ್ಮರು ಆರೋಗ್ಯವಾಗಿದ್ದಾರೆ. ಅವರಿಗೆ ೭ ಕೋಣೆಗಳು ಕೊಡಲ್ಪಟ್ಟಿವೆ. ವಿದ್ಯುಚ್ಛಕ್ತಿಯ ದೀಪಗಳು ಅವಕ್ಕೆ ಹಾಕಿಸಲ್ಪಟ್ಟಿವೆ. ಮಹಾತ್ಮಾಜಿಯವರು ಹೊರಗೆ ಅಂಗಳದಲ್ಲಿ ಮಲಗುತ್ತಿದ್ದಾರೆ. ಹಣ್ಣುಗಳೂ ಮತ್ತು ಹಾಲು ಅವರಿಗೆ ಸರಬರಾಯಿ ಮಾಡಲ್ಪಡುತ್ತಿವೆ. ಮಹಾತ್ಮಾಜಿಯವರು ದಿನಂಪ್ರತಿ ತಕಲಿಯಲ್ಲಿ ನೂಲುತ್ತಿದ್ದಾರೆ." (ತಾಯಿನಾಡು ತಾ|| ೭)

## ಬ್ರಿಟಿಶ್ ಸಾಮ್ರಾಜ್ಯದ ಕೊನೆ

ಮಿ|| ಬ್ರೇಲ್ಸ್‌ಫರ್ಡ ಎಂಬುವವರು 'ನ್ಯೂ ಲೀಡರ್' ಎಂಬ ಪತ್ರಿಕೆಯಲ್ಲಿ ಬರೆಯುತ್ತ ಈ ರೀತಿ ಹೇಳಿರುವರು:—

"ಭರತ ಖಂಡದಲ್ಲಿ ಬ್ರಿಟಿಶರ ಆಳಿಕೆಯು ಕಾಲಾನುಕಾಲದಲ್ಲಿ ಕೊನೆಯಾಗುವದು ಖಂಡಿತ. ಅದು ಯಾವಾಗ ಹೇಗೆ ಆಗುತ್ತದೆಂಬುದು ನಮಗೆ ಗೊತ್ತಿಲ್ಲ. ಆದರೆ ನಮ್ಮ ಜೀವಮಾನ ಕಾಲದಲ್ಲೇ ಆಗುತ್ತದೆಂಬುದು ಅನೇಕರ ಅಭಿಮತ."

## ಸತ್ತವನು ಎದ್ದು ನಮಸ್ಕರಿಸಿದನು

ಪ್ರಸಿದ್ಧ ಗ್ರಂಥಕರ್ತನಾದ ಮಿ|| ಅಲಿಕೊ ಇಲಿಲಿಯಸ್ ಎಂಬುವವನು ಚೀನ ದೇಶದಲ್ಲಿ ಪ್ರವಾಸ ಮಾಡುತ್ತಿರುವಾಗ ಒಂದು ದಿವಸ ಪೇಕಿಂಗ ಪಟ್ಟಣದಲ್ಲಿರುವ ಲಾಮಾ ದೇವಸ್ಥಾನಕ್ಕೆ ಹೋಗಿದ್ದನು. ಅಲ್ಲಿ ಯಾವದೋ ಒಂದು ರಾಜಮನೆತನಕ್ಕೆ ಸೇರಿದ ಓರ್ವ ವ್ಯಕ್ತಿಯ ಶವದ ಪೆಟ್ಟಿಗೆಯಿತ್ತು. ಅವನು ಅಲ್ಲಿ ನಿಂತಿರುವಾಗ ೧೨ ಜನರು ಬಂದು ಆ ಶವದ ಪೆಟ್ಟಿಗೆಯನ್ನು ಹೊತ್ತುಕೊಂಡು ಹೋಗಿ ಬುದ್ಧದೇವರ ಮುಂದಿಟ್ಟರು. ಸ್ವಲ್ಪ ಹೊತ್ತಾದ ಬಳಿಕ ಆ ಶವವು ಎದ್ದು ಹೋಗಿ ಬುದ್ಧದೇವರಿಗೆ ತಲೆಬಾಗಿ ನಮಸ್ಕರಿಸಿ ಪುನಃ ತನ್ನ ಸ್ಥಳಕ್ಕೆ ಬಂದು ಮಲಗಿ ಶವರೂಪವನ್ನು ಧರಿಸಿತಂತೆ!

## ಕಾರವಾರದ ಕರ್ಕಿಯವರ ರಾಜೀನಾಮೆ

ಕಾರವಾರ ಜಿಲ್ಲೆಯ ಪರವಾಗಿ ಮುಂಬಯಿ ಕಾಯಿದೆ ಮಂಡಳಕ್ಕೆ ಪ್ರತಿನಿಧಿಗಳಾಗಿ ಆರಿಸಿ ಹೋದ ಶ್ರೀ. ಮಂಜುನಾಥಭಟ್ಟ ಕರ್ಕಿಯವರು ಸರಕಾರದ ದಬ್ಬಾಳಿಕೆಯ ನಿಷೇಧಾರ್ಥವಾಗಿ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ.

## ಡಿಸ್ಟ್ರಿಕ್ಟ ಬೋರ್ಡ ಮುರಿಯಲ್ಪಟ್ಟಿತು

ಮಧ್ಯಪ್ರಾಂತದಲ್ಲಿ ಬೇತುಲದ ಡಿಸ್ಟ್ರಿಕ್ಟ ಬೋರ್ಡಿನ ಅಧಿಕಾರಿಗಳು ತಮ್ಮ ಅಧೀನದಲ್ಲಿಯ ಶಾಲೆಗಳ ಶಿಕ್ಷಕರಿಗೆ ಸೆರೆಸಿಂದಿ ಬಹಿಷ್ಕಾರದ ಕಾರ್ಯದಲ್ಲಿಯೂ, ಇತರ ರಾಜಕೀಯ ಚಳವಳಿಯಲ್ಲಿಯೂ ಭಾಗ ತೆಗೆದುಕೊಳ್ಳಲು ಅಪ್ಪಣೆಯನ್ನು ಕೊಟ್ಟದುದಕ್ಕಾಗಿ, ಈಗಿನ ಡಿಸ್ಟ್ರಿಕ್ಟ ಬೋರ್ಡ ಮುರಿಯಲ್ಪಟ್ಟು ಹೊಸದಾಗಿ ಸ್ಥಾಪಿಸಲ್ಪಡಬೇಕೆಂದು ಸ್ಥಾನಿಕ ಸ್ವರಾಜ್ಯಖಾತೆಯ ಮಂತ್ರಿಗಳು ಅಪ್ಪಣೆಯನ್ನು ಹೊರಡಿಸಿದ್ದಾರೆ.

## ಹಾವೇರಿಯ ಶ್ರೀ. ಹೊಸಮನಿಯವರು ಕಾಂಗ್ರೆಸಕ್ಕೆ ಕೂಡಿದರು

ಇದೇ ೧೧ ನೆಯ ತಾ॥ ಗೆ ಬೆಳಗಾಂವಿಯಲ್ಲಿ ಸೇರಿದ ಕರ್ನಾಟಕ ಬ್ರಾಹ್ಮಣೇತರರ ಪರಿಷತ್ತಿನ ಅಧ್ಯಕ್ಷರಾದ ಹಾವೇರಿಯ ಶ್ರೀ. ಹೊಸಮನಿ ವಕೀಲರು ತಮ್ಮ ಭಾಷಣದಲ್ಲಿ ಬ್ರಾಹ್ಮಣೇತರರಿಗೆ ಕೆಲವು ಬುದ್ಧಿಯ ಮಾತುಗಳನ್ನು ಹೇಳಿದ್ದು ಅವುಗಳನ್ನು ಇಲ್ಲಿ ಕೊಟ್ಟಿದೆ—

"ಬ್ರಾಹ್ಮಣೇತರ" ಈ ಶಬ್ದವು ಜಾತಿಮೂಲಕ ಪಕ್ಷ ರಚನೆಯ ದ್ಯೋತಕವಾಗಿದೆ. ಒಂದು ಕಾಲದಲ್ಲಿ ಇದು ಸಕಾರಣವಾಗಿದ್ದಿರಬಹುದು. ಆದರೆ ಈಗ ನಮ್ಮ ದೃಷ್ಟಿಯು ಬದಲಾಗಿದೆ. ಜಾತಿಗಳಿಗಾಗಿ ಬಡಿದಾಡುವದನ್ನು ಬಿಟ್ಟುಕೊಟ್ಟು ಈಗ ನಾವು ಎಲ್ಲರೂ ಒಂದಾಗಿ ಹೋರಾಡುವ ಕಾಲವು ಬಂದೊದಗಿದೆ. ನಮ್ಮ ಪಕ್ಷಕ್ಕೆ ನಿಜವಾಗಿ ನೋಡಿದಲ್ಲಿ 'ಲೋಕ ಪಕ್ಷ'ವೆಂಬ ಹೆಸರು ಚನ್ನಾಗಿ ಒಪ್ಪುವದಾದುದರಿಂದ 'ಲೋಕ ಪಕ್ಷ'ವೆಂದು ಹೆಸರಿಟ್ಟುಕೊಳ್ಳುವದು ಒಳಿತು. ರಾಜಕಾರಣದಲ್ಲಿ ಈಗ ಬಿದ್ದಿರುವ ಪಕ್ಷಗಳೆಂದರೆ ಎರಡೇ. ಒಂದು ಉದಾರಮತವಾದಿಗಳ ಪಕ್ಷ, ಮತ್ತೊಂದು ಕಾಂಗ್ರೆಸ ಪಕ್ಷ. ಇವರಲ್ಲಿ ಕಾಂಗ್ರೆಸ ಪಕ್ಷದವರೇ ಜನತೆಯಲ್ಲಿ ಹೆಚ್ಚಾಗಿ ಜಾಗೃತಿಯನ್ನುಂಟುಮಾಡಿರುವರು. ಅಸಹಕಾರ ಯುಗದಲ್ಲಿ ರಾಜಕೀಯ ಆಂದೋಲನವು ಕೇವಲ ಪಟ್ಟಣಗಳಲ್ಲಿಯೇ ಹಬ್ಬಿತ್ತು. ಮಹಾತ್ಮಾ ಗಾಂಧಿಯವರ ಪುಣ್ಯದಿಂದ ಅದು ಈಗ ಹಳ್ಳಿ ಹಳ್ಳಿಗಳಲ್ಲಿಯೂ ಹಬ್ಬಿದೆ. ಖಾದಿಯ ಕಾರ್ಯವನ್ನು ಕೈಯಲ್ಲಿ ತೆಗೆದುಕೊಂಡು ರಾಷ್ಟ್ರೀಯ ಪಕ್ಷದವರು ಜನತಾಜನಾರ್ದನನ ಸೇವೆಯನ್ನು ಮಾಡಿದ್ದಲ್ಲದೆ, ಅಸ್ಪೃಶ್ಯತಾ ನಿವಾರಣೆಗಾಗಿಯೂ ಪ್ರಯತ್ನಿಸಿದ್ದಾರೆ. ಮೋರ್ಲೆ ಮಿಂಟೋ ಸುಧಾರಣೆಗಳ ಹಾಗೆಯೇ ಮಾಂಟಫರ್ಡ ಸುಧಾರಣೆಗಳೂ ನಿಷ್ಫಲವಾಗಿವೆಯೆಂದು ಕಂಡುಬಂದಿದೆ, ಈ ಸುಧಾರಣೆಗಳನ್ನು ಯಶಸ್ವಿ ಮಾಡುವದಕ್ಕಾಗಿ ಉದಾರಮತವಾದಿಗಳೂ, ನಾವೂ ಪ್ರಯತ್ನಪಟ್ಟೆವು. ಈಗ ನಮ್ಮ ಭ್ರಾಂತಿಯು ಬಯಲಾಗಿದೆ. ಬ್ರಿಟಿಶರು ಹಿಂದುಸ್ತಾನವನ್ನು ಬಿಟ್ಟುಹೋದರೆ, ದೇಶದಲ್ಲಿ ಅರಾಜಕತೆಯುಂಟಾಗುವದೆಂದು ಕೆಲವರು ಹೇಳುತ್ತಾರೆ. ಎಷ್ಟೋ ವರ್ಷಗಳ ವರೆಗೆ ದಾಸ್ಯದಲ್ಲಿ ಕೊಳೆಯುತ್ತ ಬಿದ್ದುದರಿಂದಲೇ ಅವರಲ್ಲಿ ಈ ತರದ ವಿಚಾರಗಳು ಹುಟ್ಟುತ್ತಿವೆಯೆಂದು ನನಗೆ ಎನಿಸುತ್ತದೆ. ಹಿಂದೀ ಜನರಿಗೆ ನಾಲ್ಕಾರು ಸರಕಾರೀ ಉದ್ಯೋಗಗಳು ಹೆಚ್ಚಿಗೆ ಸಿಕ್ಕಲ್ಲಿ ರಾಷ್ಟ್ರಕ್ಕೆ ಯಾವ ಲಾಭವೂ ಆಗದು. ಲಾರ್ಡ ರಸೆಲ್ ಮತ್ತು ಆಯರ್ವಿನ್ನರ ಭಾಷಣಗಳಿಂದಲೂ, ಮುಖ್ಯ ಪ್ರಧಾನರಾದ ಮ್ಯಾಕಡೊನಾಲ್ಡರು ಬಾಲ್ಡವಿನ್ನರಿಗೆ ಬರೆದ ಪತ್ರದಿಂದಲೂ, ಹಿಂದುಸ್ತಾನಕ್ಕೆ ಸ್ವರಾಜ್ಯವು ಬೇಗನೇ ಸಿಗಲಾರದೆಂಬುವದು ಸ್ಪಷ್ಟವಾಗಿದೆ. ದುಂಡುಮೇಜಿನ ಪರಿಷತ್ತು ಹಾಗೂ ಸಾಯಮನ್ ಸಮಿತಿಯ ವರದಿ ಇವುಗಳ ಮೋಹದಲ್ಲಿ ನಾವು ಬೀಳತಕ್ಕದಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಕಾಂಗ್ರೆಸಕ್ಕೆ ಕೂಡಿಕೊಳ್ಳುವದೇ ನಮಗೆ ಪರಮ ಶ್ರೇಯಸ್ಕರವಾಗಿ ತೋರುತ್ತದೆ. ಹಳ್ಳಿಹಳ್ಳಿಗಳಲ್ಲಿ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸುವ ಕಾರ್ಯವನ್ನೂ, ಸೆರೆಸಿಂದಿ ಹಾಗೂ ಪರದೇಶಿ ಸರಕುಗಳ ಬಹಿಷ್ಕಾರವನ್ನೂ, ಅಸ್ಪೃಶ್ಯತಾ ನಿವಾರಣೆಯ ಕಾರ್ಯವನ್ನೂ ನಾವು ಈಗ ಕೈಯಲ್ಲಿ ತೆಗೆದುಕೊಂಡು ಜನತಾಜನಾರ್ದನನ ಸೇವೆಗೆ ಸಿದ್ಧರಾಗಬೇಕಾಗಿದೆ. ಕಾರ್ಯವನ್ನು ಪ್ರಾರಂಭಿಸಿ, ಮಹಾತ್ಮರಾದ ವಿದ್ಯಾರಣ್ಯ, ಬಸವೇಶ್ವರ, ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ ಮೊದಲಾದವರು ಜನ್ಮವೆತ್ತಿದ ನಾಡಿನಲ್ಲಿ ಹುಟ್ಟಿದುದರ ಸಾರ್ಥಕತೆಯನ್ನು ಮಾಡಿಕೊಳ್ಳೋಣ.

## ಬ್ಯಾರಿಸ್ಟರರಿಗೆ ಶಿಕ್ಷೆ

ಉಪ್ಪಿನ ಕಾಯಿದೆಭಂಗಕ್ಕಾಗಿ ೭೪, ೧೧೭ ಮತ್ತು ೧೪೫ ಇ. ಪಿ. ಕೋ. ಕಲಮುಗಳನ್ವಯ ಬಂಧಿಸಲ್ಪಟ್ಟ ಗುಂಟೂರದ ಬ್ಯಾರಿಸ್ಟರ ಉನ್ನವ ಲಕ್ಷ್ಮೀನಾರಾಯಣರಿಗೂ ಹಾಗು ಪುನ್ನಯ್ಯ ಶಾಸ್ತ್ರಿಗಳಿಗೂ ೧ ವರ್ಷದ ಸಕ್ತ ಶಿಕ್ಷೆಯು ವಿಧಿಸಲ್ಪಟ್ಟಿದೆ.

## ಹಿಡಿದು ಬಿಟ್ಟುಬಿಟ್ಟರು

ಶಿರೋಡಾ ಉಪ್ಪಿನ ಮಖಾರದ ಮೇಲೆ ದಾಳಿಯನ್ನು ಮಾಡಿದರೆಂಬ ಆರೋಪದಿಂದ ಬಂಧಿತರಾದ ೯೫ ಸ್ವಯಂಸೇವಕರನ್ನು ಅಧಿಕಾರಿಗಳು ಎರಡು ತಾಸುಗಳ ವರೆಗೆ ಹಿಡಿದು ಕೂಡಿಸಿ ಬಿಟ್ಟುಬಿಟ್ಟರಂತೆ.

## ಪ್ರಕಟನೆಯನ್ನು ಹಂಚಿದುದಕ್ಕಾಗಿ ಶಿಕ್ಷೆ

ಸಭೆ ಹಾಗು ಮೆರವಣಿಗೆ ಮೊದಲಾದವುಗಳನ್ನು ಪ್ರತಿಬಂಧಿಸುವ ಕಟ್ಟಳೆಯನ್ನು ಮುರಿಯಿರೆಂದು ಜನರಿಗೆ ಬೋಧಿಸಿದುದಕ್ಕಾಗಿ ಬಿಹಾರ ಒಚಾರದ ಸತ್ಯಾಗ್ರಹ ಮಂಡಳದ ಶ್ರೀ. ವಿದ್ಯಾಲಂಕಾರ ಮತ್ತು ಕೇಡಿಯಾ ಇವರಿಗೆ ೧ ವರ್ಷದ ಶಿಕ್ಷೆಯಾಗಿದೆ.

## ಜಾಮೀನು ಕೊಡದ್ದಕ್ಕಾಗಿ ಶಿಕ್ಷೆ

೧೦೮ ನೆಯ ಕಲಮಿನನ್ವಯ ಜಾಮೀನನ್ನು ಕೊಡಲು ನಿರಾಕರಿಸಿದುದಕ್ಕಾಗಿ ಝರಿಯಾ ತರುಣ ಸಂಘದ ಕಾರ್ಯದರ್ಶಿಗಳಾದ ಶ್ರೀ. ಶರಣಿಕಾಂತ ಹೋರೆಯವರಿಗೆ ಒಂದು ವರ್ಷದ ಶಿಕ್ಷೆಯಾಯಿತು.

## ಬಂಗಾಲದಲ್ಲಿ ದಬ್ಬಾಳಿಕೆಯ ಸತ್ರ

ಢಾಕಾ ಮ್ಯುನಸಿಪಾಲಟಿಯ ಅಧ್ಯಕ್ಷರ ಮಕ್ಕಳಾದ ಶ್ರೀ ಸತೀಶ ಹಾಗು ಶ್ರೀ ಸಂತೋಷಚಂದ್ರ ಗಂಗೊಳ್ಳಿ ಇವರು ಬಂಗಾಲ ಆರ್ಡಿನನ್ಸಿನ ಅನ್ವಯ ಬಂಧಿಸಲ್ಪಟ್ಟಿದ್ದಾರೆ. ಢಾಕಾ ಸತ್ಯಾಗ್ರಹ ಮಂಡಳದ ಕಾರ್ಯದರ್ಶಿಗಳಾದ ಶ್ರೀ ಹರಿಪಾದ ಚತರ್ಜಿಯವರಿಗೆ ೬ ತಿಂಗಳ ಸಕ್ತ ಶಿಕ್ಷೆಯಾಗಿದೆ.

## ಶ್ರೀ ಅಬ್ಬಾಸರ ಸೈನ್ಯದ ವರ್ಗೀಕರಣ.

ಶ್ರೀ ಅಬ್ಬಾಸ ತಯ್ಯಬಜಿಯವರೊಡನೆ ಬಂಧಿಸಲ್ಪಟ್ಟ ೫೯ ಸ್ವಯಂಸೇವಕರಲ್ಲಿ ಎಲ್ಲ ಪಂಗಡಗಳ ಹಾಗೂ ಎಲ್ಲ ಪ್ರಾಂತಗಳ ಜನರೂ ಇರುವರಲ್ಲದೆ ಮಹಾತ್ಮರ ಪುತ್ರರಾದ ಶ್ರೀ ಹೀರಾಲಾಲರ ಚಿರಂಜೀವರೂ, ಕಾಕಾ ಕಾಲೇಲಕರರ ಇಬ್ಬರು ಚಿರಂಜೀವರೂ ಸಮಾವಿಷ್ಟರಾಗಿದ್ದಾರೆ.

### ರಣರಂಗಕ್ಕಿಳಿದ

# ಸರೋಜಿನಿ ದೇವಿಯರ ವೀರವಾಣಿ

"ಇಷ್ಟಾರ್ಥವನ್ನಾದರೂ ಸಾಧಿಸಿಕೊಳ್ಳುವೆನು; ಇಲ್ಲವೆ ಪ್ರಾಣವನ್ನಾದರೂ ಬಲಿಗೊಡುವೆನು."

—ಶ್ರೀಮತಿ ಸರೋಜಿನಿ ದೇವಿ.

ಶ್ರೀಮತಿ ಸರೋಜಿನಿ ದೇವಿಯವರು ಧರಸಾನಾ ದಾಳಿಯ ರಣವೀರರ ಸೇನಾಧಿಪತ್ಯವನ್ನು ಸ್ವೀಕರಿಸಲು ಮುಂಜಾನೆ ೪ ಗಂಟೆಗೆ ಧರಸಾನಾ ಸಮೀಪದ ಡೋಂಗರಿ ಸ್ಟೇಶನ್ನಿಕ್ಕೆ ಬಂದು ಇಳಿದ ಕೂಡಲೆ ಸ್ಥಳಿಕ ಮುಖಂಡರು ಶ್ರೀಮತಿಯವರನ್ನು ಸ್ವಯಂಸೇವಕರ ಬಿಡಾರಕ್ಕೆ ಮೋಟಾರದಿಂದ ಕರೆದುಕೊಂಡು ಹೋದರು. ಸರೋಜಿನಿ ದೇವಿಯವರು ಬಿಡಾರದ ಬಾಗಿಲಕ್ಕೆ ಬಂದ ಕೂಡಲೆ ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು "ನೀವು ನಮ್ಮನ್ನು ಅಗಲುವವರು" ಎಂದು ನುಡಿದರು. ಅದಕ್ಕೆ ಶ್ರೀಮತಿಯವರು "ಅಹುದು' ಎಂದು ಉತ್ತರವನ್ನಿತ್ತರು. ಬಳಿಕ ಶ್ರೀ. ನರಹರಿ ಪರೀಖರವರು ಸ್ವಯಂಸೇವಕರಿಗೆ ಕೆಲವು ಸೂಚನೆಗಳನ್ನು ಕೊಟ್ಟರು. ಶಾಂತತೆಯಿಂದ ವರ್ತಿಸಲು ಕೇಳಿಕೊಂಡರು. ಬಳಿಕ ೬॥ ಗಂಟೆಗೆ ರಾಷ್ಟ್ರಧ್ವಜವಂದನೆಯ ಸಮಾರಂಭವು ಜರುಗಿಸಲ್ಪಟ್ಟಿತು. ಶ್ರೀಮತಿಯವರು "ಮಹಾತ್ಮರು ಪ್ರಾರಂಭಿಸಿದ ಸ್ವಾತಂತ್ರ್ಯ ಸಮರವನ್ನು ಸಾಗಿಸಲು ನೀವು ಸಿದ್ಧರಾಗಿರುವಿರಿ. ಅತ್ಯಂತ ಶಾಂತತೆಯಿಂದ ವರ್ತಿಸಿ ಈ ಯುದ್ಧದಲ್ಲಿ ಜಯವನ್ನು ಪಡೆಯಿರಿ" ಎಂದು ಸ್ವಯಂಸೇವಕರಿಗೆ ಉಪದೇಶಿಸಿದರು.

ವಠಾರದ ದಾಳಿಗಾಗಿ ಶ್ರೀಮತಿಯವರು ೫೦ ಸ್ವಯಂಸೇವಕರೊಂದಿಗೆ ಸರಿಯಾಗಿ ೬॥ ಗಂಟೆಗೆ ಹೊರಟರು. ಜನಸಂದಣಿಯು ಹೆಚ್ಚಾಗಿ ಸೇರಿತ್ತು. ಎಲ್ಲಿ ನೋಡಿದಲ್ಲಿ ಉತ್ಸಾಹವೇ ಕಂಡು ಬರುತ್ತಿತ್ತು. ಶ್ರೀಮತಿಯವರು ಸ್ವಯಂಸೇವಕರೊಂದಿಗೆ ಮುಖ್ಯ ಬೀದಿಯಲ್ಲಿದ್ದ ಸುಂಕದ ಕಟ್ಟೆಯನ್ನು ದಾಟಿದ ಕೂಡಲೇ ಸೂರತ ಜಿಲ್ಲೆಯ ಪೋ. ಸುಪರಿಂಟೆಂಡೆಂಟರಾದ ಮಿ| ರಾಬಿನ್‌ಸನ್‌ರು ೫೦ ಪೋಲೀಸ ಹಾಗು ಕೆಲವು ಸಿಪಾಯಿಗಳೊಂದಿಗೆ ಮೋಟಾರದಲ್ಲಿ ಮುಂದೆ ಹೋಗಿ ದಾರಿಯಲ್ಲಿ ಸಾಲಾಗಿ ದಂಡಗೆ ನಿಂತು ಅವರನ್ನು ಮುತ್ತಿದರು. ಆ ಸಮಯದಲ್ಲಿ ಶ್ರೀಮತಿ ಸರೋಜಿನಿ ದೇವಿಯವರಿಗೂ, ಪೋ. ಸು. ರಿಗೂ ಕೆಳಗಿನ ಸಂಭಾಷಣವಾಯಿತು.

ಪೋ॥ ಸು:— ನೀವು ಮುಂದಕ್ಕೆ ಹೋಗತಕ್ಕದ್ದಲ್ಲ.

ಶ್ರೀಮತಿ ನಾಯಿಡು:— ನಾವು ಇಲ್ಲಿಯೇ ನಿಲ್ಲುವೆವು, ಹಿಂದಕ್ಕೆ ಹೋಗಲಾರೆವು.

ಪೋ॥ ಸು:— ನಾವಾದರೂ ನೀವು ಇಲ್ಲಿ ಇರುವ ವರೆಗೆ ಇಲ್ಲಿಯೇ ನಿಂತು ನಿಮ್ಮ ವಿರುದ್ಧ ಸತ್ಯಾಗ್ರಹ ಮಾಡುವೆವು.

ಬಳಿಕ ಶ್ರೀಮತಿಯವರು ಸ್ವಯಂಸೇವಕರಿಗೆ ಅಲ್ಲಿಯೇ ಕುಳಿತುಕೊಳ್ಳಲು ಹೇಳಿ ತಮ್ಮ ಕಾರ್ಯದಲ್ಲಿ ತೊಡಗಿದರು.

(ತಂತಿಯ ವಾರ್ತೆ)

ಸಶಸ್ತ್ರ ಸೈನಿಕರು ಸತ್ಯಾಗ್ರಹಿಗಳ ಸುತ್ತಲೂ ಚಕ್ರವ್ಯೂಹವನ್ನು ರಚಿಸಿ ಸಜ್ಜಾಗಿ ನಿಂತಿದ್ದಾರೆ. ಒಂದು ಹನಿ ನೀರು ಒಳಗೆ ಬಾರದಂತೆ ವ್ಯವಸ್ಥೆ ಮಾಡಿದ್ದಾರೆ. ನೀರಡಿಕೆಯಿಂದ ಬಿಸಲಲ್ಲಿ ಬಳಲುತ್ತಿರುವ ಸತ್ಯಾಗ್ರಹಿಗಳಿಗೆ ನೀರನ್ನು ಕೊಡುವದಕ್ಕಾಗಿ ಕೆಲವು ಹೆಣ್ಣುಮಕ್ಕಳು ಚಕ್ರವ್ಯೂಹದೊಳಗಿಂದ ಪ್ರವೇಶಿಸಲು ಯತ್ನಿಸಿದರು. ಪೋಲೀಸ ಅಧಿಕಾರಿಗಳು ಸತ್ಯಾಗ್ರಹಿಗಳಿಗೆ "ನೀವು ಈ ವ್ಯೂಹದೊಳಗಿಂದ ಬೇಕಾದರೆ ಹೊರಗೆ ಹೋಗಬಹುದು. ಹೊರಗೆ ಹೋದ ಬಳಿಕ ನಿಮಗೆ ಪುನಃ ಪ್ರವೇಶವು ದೊರೆಯಲಾರದು" ಎಂದು ಸೂಚಿಸಿದರು. ಶ್ರೀಮತಿ ಸರೋಜಿನಿ ದೇವಿಯವರು ತಿರಸ್ಕಾರಪೂರ್ವಕವಾಗಿ ಅವರ ಸೂಚನೆಗಳನ್ನು ಧಿಕ್ಕರಿಸಿ ಶರೀರದಿಂದ ದುರ್ಬಲಳಾಗದ ಹೊರತು ಇಲ್ಲವೆ ರಣರಂಗದಲ್ಲಿ ಪ್ರಾಣರಹಿತಳಾಗಿ ಬೀಳದ ಹೊರತು ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆಯದೆ ಸಾಗುವೆನೆಂದು ಧೈರ್ಯದಿಂದ ಉತ್ತರವನ್ನಿತ್ತರು. ಈ ವರೆಗೆ ಶ್ರೀಮತಿಯವರೂ ಸತ್ಯಾಗ್ರಹಿಗಳೂ ತಮ್ಮ ನಿಶ್ಚಿತಾರ್ಥಕ್ಕೆ ದೃಢವಾಗಿ ಅಂಟಿಕೊಂಡು ಕುಳಿತಿದ್ದಾರೆ

## ರಾ. ಬ. ಬಿ ಎಲ್. ಪಾಟೀಲರಿಗೆ ಅನಾವೃತ ಪತ್ರ.

"ಸರದಾರ ವಲ್ಲಭಭಾಯಿ ಪಟೇಲರನ್ನು ಸೆರೆ ಹಿಡಿಯಲು ಆ ಸಂಬಂಧವಾಗಿ ವಿಚಾರ ಮಾಡುವದಕ್ಕೆ ಅಸೆಂಬ್ಲಿಯಲ್ಲಿ ಸೂಚನೆ ಬಂದಾಗ ಒಬ್ಬ ಹಿಂದೂ ಸಭಾಸದರು ವಿರೋಧ ಮತ ಕೊಟ್ಟರೆಂದು ಪ್ರಸಿದ್ಧವಾಗಿತ್ತು. ವಿರುದ್ಧ ಮತಕೊಟ್ಟ ಓರ್ವ ಹಿಂದೂ ಎಂದರೆ ನೀವೇ ಎಂದು ಬಹು ಜನರು ತಿಳಿದುಕೊಂಡಿದ್ದಾರೆ. ನೀವು ಆರಿಸಿ ಹೋದ ವೇಳೆಯೂ ಪಂ. ಮಾಲವೀಯ, ಶ್ರೀ ಕೇಳಕರ ಮೊದಲಾದವರೂ ಕೂಡ ರಾಜೀನಾಮೆ ಕೊಟ್ಟಿದ್ದಾರೆ. ಅಸೆಂಬ್ಲಿಯ ಅಧ್ಯಕ್ಷರಾದ ಶ್ರೀ ವಿಠ್ಠಲಭಾಯಿ ಪಟೇಲರೂ ತಮ್ಮ ಸ್ಥಾನಕ್ಕೆ ಶರಣು ಹೊಡೆದಿದ್ದಾರೆ. ಸರಕಾರದ ಧೋರಣವನ್ನು ನಿಷೇಧಿಸುವದಕ್ಕಾಗಿ ಸರಕಾರದ ದಬ್ಬಾಳಿಕೆಯನ್ನು ಖಂಡಿಸುವದಕ್ಕಾಗಿ ನೀವೇನು ಮಾಡಿರುವಿರಿ? ಅಸೆಂಬ್ಲಿಯಲ್ಲಿ ಕೂಡುವದೇ ನಿಮಗೆ ಭೂಷಣವಾಗಿ ತೋರುತ್ತದೆಯೋ ಹೇಗೆ? ಅಸಬುರುಕತನದಿಂದ ಅಸೆಂಬ್ಲಿಗೆ ಹೋಗಿದ್ದರೆ ಅಲ್ಲಿ ಗಟ್ಟಿಯಾಗಿ ಕುಳಿತುಕೊಳ್ಳಿರಿ. ಜನರ ಪ್ರತಿನಿಧಿಗಳೆಂದು ಹೋಗಿದ್ದರೆ, ರಾಜೀನಾಮೆ ಕೊಡಿರಿ. ಮತ್ತು ರಾವಬಹದ್ದೂರ ಪದವಿ ಬಿಟ್ಟುಬಿಡಿರಿ!! ಎಂಬ ಆಶಯದ ಅನಾವೃತ ಪತ್ರವನ್ನು ಓರ್ವ ಮತದಾರರು ಅಸೆಂಬ್ಲಿಯಲ್ಲಿಯ ಕರ್ನಾಟಕದ ಪ್ರತಿನಿಧಿಗಳಾದ ರಾ. ಬ. ಬಿ. ಎಲ್. ಪಾಟೀಲರವರಿಗೆ ಬರೆದಿದ್ದಾರೆ. ರಾ. ಬಹದ್ದೂರರು ಉತ್ತರ ಕೊಡುವರೇನೋ ನೋಡಬೇಕಾಗಿದೆ.

## ಬೆಳಗಾವಿಯ ರಾ. ಬ. ಅಂಗಡಿಯವರ ರಾಷ್ಟ್ರೀಯತ್ವ!

ಬೆಳಗಾವಿಯಲ್ಲಿ ಕೂಡಿದ ಬ್ರಾಹ್ಮಣೇತರ ಪರಿಷತ್ತಿಗೆ ಹಿಪ್ಪಣಿಯಿಂದ ಪ್ರತಿನಿಧಿಗಳಾಗಿ ಹೋದ ಕೆಲವು ಜನರು ಕೋರ್ಟಿಯಲ್ಲಿ ಊಟಕ್ಕೆ ಹೋಗುತ್ತಿರುವಾಗ "ಗಾಂಧಿ ಟೊಪ್ಪಿಗೆಯನ್ನು ಹಾಕಿದುದಕ್ಕಾಗಿಯೂ ರಾಷ್ಟ್ರಧ್ವಜವನ್ನು ಹಿಡಿದುದಕ್ಕಾಗಿಯೂ ನಿಮ್ಮನ್ನು ಒಳಗೆ ಬಿಡುವದಿಲ್ಲವೆಂದು ಕಾವಲಗಾರರು ಅವರಿಗೆ ಹೇಳಿದರಂತೆ. ಹೀಗೆ ವಾದ ನಡೆದಿರುವಾಗ ರಾ. ಬ. ಅಂಗಡಿಯವರು ಅಲ್ಲಿಗೆ ಬಂದು ಒಳಗೆ ಬಿಡಿರೆಂದು ಅಧಿಕಾರಿಗಳನ್ನು ಕೇಳಿಕೊಂಡರಂತೆ. ಅದಕ್ಕೆ ಅಧಿಕಾರಿಗಳು "ಟೊಪ್ಪಿಗೆಯನ್ನು ತೆಗೆದು ರಾಷ್ಟ್ರಧ್ವಜವನ್ನು ಬಗಲಲ್ಲಿ ಹಿಡಿದರೆ" ಒಳಗೆ ಬಿಡುವೆವೆಂದು ಹೇಳಿದರಂತೆ. ಇದನ್ನು ಕೇಳಿಕೊಂಡು ರಾ. ಬ. ಅಂಗಡಿಯವರೂ ರಾಷ್ಟ್ರಧ್ವಜವನ್ನು ಸುರಳೀ ಸುತ್ತಲಿಕ್ಕೆ ಸ್ವಯಂಸೇವಕರಿಗೆ ಹೇಳಿದರಂತೆ. ಬಳಿಕ ಸ್ವಯಂಸೇವಕರು ಅದಕ್ಕೆ ಒಪ್ಪದೆ ಕೋರ್ಟಿಯ ಹೊರಬದಿಯಲ್ಲಿಯೇ ಊಟ ಮಾಡಿದರಂತೆ. ಹೇಗಿದೆ ನೋಡಿರಿ! ರಾ. ಬ. ಅಂಗಡಿಯವರು ನಾಡಗುಡಿಗಾಗಿ ತೋರಿಸಿದ ನಿಷ್ಠೆಯು!

## ಸೊಲ್ಲಾಪುರದಲ್ಲಿ ನಡೆದ ಕೆಲವು ಕೊಲೆಗಳ ಮಾದರಿ

"(೧) ಕಾಡಾದಿಯವರ ಚಾಳದ ಹತ್ತರ ದಾರಿಯಲ್ಲಿ ಹೋಗುವಾಗ್ಗೆ ಸಂಗಪ್ಪ ಕಂಬಸಪ್ಪ ಎಂಬುವವನಿಗೆ ಗುಂಡು ಹಾಕಿದರು. ಅವನು ಆಸ್ಪತ್ರೆಯಲ್ಲಿರುವನು. (೨) ರಾನಡೆ ಎಂಬೊಬ್ಬ ಹುಡುಗನು ಅಟ್ಟದ ಮೇಲೆ ನಿಂತಿರುವಾಗ ಅವನಿಗೆ ಗುಂಡು ಒಗೆದರು. ಅವನ ಮಿದುಳು ಚೆಲ್ಲಿ ಅವನು ಅಲ್ಲಿಯೇ ಮಡಿದನು. (೩) ಸಾಖರ ಪೇಟೆಯಲ್ಲಿ ಕನಕಟ್ಟೀ ಇವರ ಮನೆಯ ಹತ್ತರ ಬಣ್ಣಗಾರರ ಒಬ್ಬ ಹೆಂಗಸಿಗೆ ಬೈಲೀಗೆ ಹೋಗುವಾಗ್ಗೆ ಗುಂಡು ಹೊಡೆಯಲ್ಪಟ್ಟಿತು. (೪) ಮನೆಯಲ್ಲಿ ಕೂತಿರುವ ಒಬ್ಬ ಹುಚ್ಚನಂಥ ಮುದುಕನಿಗೆ ಗುಂಡು ಹೊಡೆಯಲ್ಪಟ್ಟಿದೆ. ಇಂಥ ಅನೇಕ ಉದಾಹರಣೆಗಳಿರುವವು." ಸ. ಕ.

## ಶಿರೋಡೆಗೆ ಮುಂಬಯಿಯಿಂದ ಸತ್ಯಾಗ್ರಹಿಗಳು

(ತಂತಿಯಿಂದ ಬಂದ ವಾರ್ತೆ)

ಶಿರೋಡಾ ಉಪ್ಪಿನ ವಖಾರದ ಮೇಲೆ ದಾಳಿಯನ್ನು ಮಾಡಲು ಮುಂಬಯಿಯಿಂದ ೧೦೬ ಸ್ವಯಂಸೇವಕರು ಕಳಿಸಲ್ಪಟ್ಟಿದ್ದರು. ಅವರೆಲ್ಲರೂ ೧೫ ನೆಯ ತಾ॥ ಗೆ ಸೆರೆಯಾಳಾಗಿದ್ದಾರೆಂದು ತಂತಿಯಿಂದ ತಿಳಿದು ಬಂದಿದೆ.

## ಉಪ್ಪಿನ ವಖಾರದ ದಾಳಿಗಾಗಿ

ಶ್ರೀಮತಿ ಕಮಲಾದೇವಿಯವರೂ ಸಿದ್ಧರಾದರು.

ಮುಂಬಯಿಯ ಸತ್ಯಾಗ್ರಹ ಮಂಡಲದವರು ತಾ॥ ೧೪ ನೆಯ ದಿವಸ ಯುದ್ಧ ಮಂಡಲದ ಸಭೆಯನ್ನು ಕೂಡಿಸಿ ವಡಾಲಾದ ಉಪ್ಪಿನ ವಖಾರದ ಮೇಲೆ ೧೮ ನೆಯ ತಾ॥ ದಿವಸ ಪ್ರಚಂಡ ದಾಳಿಯನ್ನು ಮಾಡತಕ್ಕದ್ದೆಂದು ನಿರ್ಧರಿಸಿಕೊಂಡು [illegible]೦೦೦ ಸತ್ಯಾಗ್ರಹಿಗಳ ದಳವನ್ನು ಸಿದ್ಧಪಡಿಸಿದ್ದಾರೆ. ಈ ದಾಳಿಯ ನೇತೃತ್ವವನ್ನು ಶ್ರೀಮತಿ ಕಮಲಾದೇವಿಯವರು ವಹಿಸುವವರಿದ್ದಾರೆ.

## ಮುಸಲ್ಮಾನರೂ ಸತ್ಯಾಗ್ರಹದಲ್ಲಿ ಸೇರಿದರು

"ಧರಸಾನಾ ಉಪ್ಪಿನ ವಖಾರದ ದಾಳಿಯ ನೇತೃತ್ವವನ್ನು ವಹಿಸಿಕೊಳ್ಳಲು ತಾವು ಸಿದ್ಧರಾಗಿರುವೆವು" ಎಂದು ಜಮಾಯತ ಉಲ್ ಉಲೇಮಾದ ಅಧ್ಯಕ್ಷರಾದ ಮೌಲಾನಾ ಕಿಫಾಯತುಲ್ಲಾ ಇವರು ತಿಳಿಸಿದ್ದಾರೆ.

## ಕ್ರಿಶ್ಚಿಯನ್ನರೂ ಪದವಿಯನ್ನು ಬಿಟ್ಟುಗೊಟ್ಟರು.

ನಾಗಪುರದ ಪ್ರಸಿದ್ಧ ವಕೀಲರಾದ ಹಿಂದೂ-ಕ್ರಿಸ್ತ ಜಾತಿಯ ಸಾಳವೆ ಇವರು ಸರಕಾರಿ ಧೋರಣವನ್ನು ನಿಷೇಧಿಸಿ ರಾವಸಾಹೇಬ ಪದವಿಯನ್ನು ಬಿಟ್ಟುಕೊಟ್ಟಿದ್ದಾರೆ.

## ಸಾಬರಮತಿ ಜೈಲಿನಲ್ಲಿ ಅನ್ನತ್ಯಾಗ

ಸಾಬರಮತಿಯ ಜೇಲಿನ ಅಧಿಕಾರಿಗಳು "ಕ" ವರ್ಗದ ರಾಜಕೀಯ ಸೆರೆಯಾಳುಗಳನ್ನು ಉಳಿದ ರಾಜಕೀಯ ಸೆರೆಯಾಳುಗಳಿಂದ ಬೇರೆ ಮಾಡಿದುದಕ್ಕಾಗಿ ಅಲ್ಲಿಯ ಎಲ್ಲ ರಾಜಕೀಯ ಸೆರೆಯಾಳುಗಳು ಅನ್ನತ್ಯಾಗ ವ್ರತವನ್ನು ಕೈಕೊಂಡಿದ್ದಾರೆ.

## ಕತ್ತೆಯ ಕಿವಿ, ಹಾಗು ಆಡಿನ ಕೋಡಿನಿಂದ ಕೂಡಿದ ಪ್ರಾಣಿಯು

ನೈನಿತಾಲದಲ್ಲಿ ೧೦ ನೆಯ ತಾರೀಖಿನ ದಿವಸ ಒಂದು ವಿಚಿತ್ರವಾದ ಪ್ರಾಣಿಯು ಅಲ್ಲಿಯ ಜನರ ಕಣ್ಣಿಗೆ ಬಿತ್ತಂತೆ. ಅದಕ್ಕೆ ಕತ್ತೆಯ ಕಿವಿಗಳೂ, ಕುದುರೆಯ ಕುತ್ತಿಗೆಯೂ, ಆಕಳ ಕರದ ಖುರಗಳೂ, ಆಡಿನ ಕೋಡುಗಳೂ ಇದ್ದವಂತೆ!

## ಸಾವಿರಗಟ್ಟಲೆ ಸಿಂದಿ ಗಿಡಗಳ ನಾಶ

ಗುಜರಾಥ ಪ್ರಾಂತದ ಸುರತ ಜಿಲ್ಹೆಯಲ್ಲಿ ಈ ವರೆಗೆ ೩೪೯೯೩ ಸಿಂದೀಗಿಡಗಳು ಕಡಿಯಲ್ಪಟ್ಟಿವೆಯೆಂದು "ಬಾರ್ಡೋಲಿ ಸತ್ಯಾಗ್ರಹ ಪತ್ರಿಕೆ"ಯಿಂದ ತಿಳಿಯುತ್ತದೆ.

---

ಕಂಪನಿಯ ಮುಕ್ಕಾಂ ಸ್ವಲ್ಪ ಉಳಿದಿವೆ.

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಶನಿವಾರ ತಾ॥ ೧೭—೫—೩೦

**ಲಂಕಾದಹನ**

ಭಾನುವಾರ ತಾ॥ ೧೮—೫—೩೦

**ಸುದಾಮದೈನ್ಯ**

ಸೋಮವಾರ ತಾ॥ ೧೯—೫—೩೦

**ಯಚ್ಚಮ್ಮನಾಯಿಕ.**

ಎಂಬ ನಾಟಕವನ್ನು ಅಭಿನಯಿಸುವರು.

ಈ ನಾಟಕಗಳು ಪುನಃ ಆಡಲ್ಪಡುವದಿಲ್ಲ.

ಸಂಘದೊಡೆಯ—ಸದಾಶಿವರಾವ ಗರೂಡ

---

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ನಿತ್ಯಸಂಚಿಕೆಯು. ಬೆಲೆ ೦-೦-೩

यद्यत् परवशं दुःखं । यद्यदात्मवशं सुखम् ॥ -मनु.

# ಕನ್ನಡಿಗ

KANNADIGA
BAGALKOT.
WEEKLY

ಸಂಪಾದಕರು:- ಬಳವಂತ ಅಣ್ಣಾರಾವ ಮುಜುಮುದಾರ

ಬಾಗಲಕೋಟೆ ರವಿವಾರ ಮಿತಿ ವೈಶಾಖ ಬಹುಳ ೬ ಶಕೆ ೧೮೫೨ ತಾ ೧೮-೫-೩೦ ಸಂಚಿಕೆ ೫೨

## ಮಹಾತ್ಮರ ಸಂದೇಶ

"ಯಾರನ್ನೂ ಹಿಂಸಿಸದೆ ಸಂಪಾದಿಸಿದ ಸ್ವರಾಜ್ಯವು ಬಹು ದಿನ ನಮ್ಮದಾಗಿರುವದು. ಜನರು ಆತ್ಮತ್ಯಾಗದಿಂದಲೇ ಅದನ್ನು ಗಳಿಸಲಿ. ಸ್ವತಃ ಕಷ್ಟಪಡುವದೇ ನಿಜವಾದ ಆತ್ಮತ್ಯಾಗವು. ಅಂದರೆ ಇನ್ನೊಬ್ಬರನ್ನು ಹಿಂಸಿಸದೆ ತಾನೇ ಸಾಯುವದು. ಹಿಂದುಸ್ಥಾನವು ಈ ತ್ಯಾಗದ ಹಾಗೂ ಅಹಿಂಸೆಯ ಮಂತ್ರವನ್ನು ಮರೆಯದಿರಲಿ!

## ಪತ್ರಿಕೆಗಳ ಮೇಲೆ ಗದಾಪ್ರಹಾರ

"ಬ್ರಿಟಿಶ ಹಿಂದುಸ್ಥಾನದಲ್ಲಿ ಕಾನೂನಿಗನುಸರಿಸಿ ಸ್ಥಾಪಿತವಾಗಿರುವ ಸರಕಾರದ ವಿಷಯಕ್ಕೆ ದ್ವೇಷ, ತಿರಸ್ಕಾರ, ಅಸಂತೋಷ, ಮೊದಲಾದವುಗಳನ್ನು ಹುಟ್ಟಿಸುವ ಹಾಗು ದಂಗೆ, ಪ್ರಜಾಸ್ವಾಸ್ಥ್ಯಭಂಗ, ಸಾರ್ವಜನಿಕ ಶಾಂತತಾಭಂಗಗಳಿಗೆ ಉತ್ತೇಜನ ಕೊಡುವ ಲೇಖಗಳು "ಕಾಂಗ್ರೆಸ್ ಪತ್ರಿಕೆ"ಯಲ್ಲಿ ಪ್ರಸಿದ್ಧಿಸಲ್ಪಡುತ್ತಿವೆಯೆಂದು ಕಂಡುಬಂದಿದೆ. ಆದುದರಿಂದ ಎರಡು ತಿಂಗಳ ಮಟ್ಟಿಗೆ "ಕಾಂಗ್ರೆಸ್ ಪತ್ರಿಕೆ" ಯನ್ನಾಗಲೀ ಇಲ್ಲವೆ ಬೇರೆ ಹಸ್ತಪತ್ರಿಕೆ, ಪ್ರಕಟನಾಪತ್ರಿಕೆ ಮೊದಲಾದವುಗಳನ್ನಾಗಲೀ ಪ್ರಸಿದ್ಧಿಸಬಾರದ"ೆಂದು ಮುಂಬಯಿಯ ಚೀಫ ಪ್ರೆ. ಮ್ಯಾಜಿಸ್ಟ್ರೇಟರು ಶ್ರೀ. ಪ್ರೊ. ಕೋಡಿನ ೧೪ನೇ ತೇದಿ ಕಲಮಿನನ್ವಯ ಮುಂಬಯಿಯ ಪ್ರಾಂ. ಕಾಂ. ಕ. ಹಾಗೂ ಯುದ್ಧ ಮಂಡಳದವರಿಗೆ ತಿಳಿಸಿದ್ದಾರೆ.

ಶ್ರೀ ಇದು ತಿಳಿದ ಕೂಡಲೇ ಯುದ್ಧ ಮಂಡಳದವರು ಸಭೆ ಕೂಡಿಸಿಕೊಂಡು ಈ ದಬ್ಬಾಳಿಕೆಯ ಕಾಯಿದೆಯನ್ನು ಮುರಿದು ಮೊದಲಿನಂತೆಯೇ "ಕಾಂಗ್ರೆಸ್ ಪತ್ರಿಕೆ" ಯನ್ನು ಹೊರಡಿಸಬೇಕೆಂದು ನಿರ್ಧರಿಸಿಕೊಂಡಿದ್ದಾರೆ.

ಶ್ರೀ. ವರದರಾಜಲು ನಾಯುಡುರವರ ಸಂಪಾದಕತ್ವದಲ್ಲಿ ಪ್ರಸಿದ್ಧವಾಗುವ "ತಮಿಳನಾಡು" ಪತ್ರಿಕೆಗೆ ೨೦೦೦ ರು. ಗಳ ಅಡವು ಕೇಳಲ್ಪಟ್ಟಿದೆ. "ಸ್ವದೇಶಮಿತ್ರ" ಎಂಬ ಪತ್ರಿಕೆಗೂ ೨೦೦೦ ರು. ಗಳ ಎರಡು ಅಡವುಗಳನ್ನು ಕೇಳುವದರಲ್ಲಿ ಬಂದಿದೆ. "ಸ್ವಾತಂತ್ರ್ಯಸಂಘ" ಎಂಬ ಪತ್ರಿಕೆಗಾದರೂ ೧೦೦೦ ರು. ಗಳ ಎರಡು ಅಡವುಗಳನ್ನು ಕೇಳಲಾಗಿದೆ.

## ಗಾಂಧಿ ಟೊಪ್ಪಿಗೆಯವರಿಗೆ ಗವ್ಹರ್ನರರ ಪ್ರಶಸ್ತಿ

ಬರ್ಮಾದಲ್ಲಿ ಮೊನ್ನೆ ಮೊನ್ನೆ ಭಯಂಕರ ಭೂಕಂಪವಾಗಿ ಅಲ್ಲಿಯ ಜನರಿಗೆ ಬಹಳ ಹಾನಿಯಾಗಿದೆಯಷ್ಟೇ? ಹಾನಿಗೊಳಗಾದವರ ಕಷ್ಟಗಳನ್ನು ದೂರಮಾಡುವದಕ್ಕೆ ಉಪಾಯಗಳನ್ನು ಯೋಚಿಸುವದಕ್ಕಾಗಿ ಗವ್ಹರ್ನರ ದೊರೆಗಳ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಸೇರಿತ್ತು. ಆ ಸಭೆಯಲ್ಲಿ ಭಾಷಣ ಮಾಡುವಾಗ ಗವ್ಹರ್ನರರು ಹೀಗೆ ಹೇಳಿದ್ದಾರೆ:— ಈ ಮಹತ್ತ್ವವಾದ ಸಂಕಟ ಕಾಲದಲ್ಲಿ ಎಲ್ಲರೂ ತಮ್ಮ ತಮ್ಮ ರಾಜಕೀಯ ಮತಾಂತರಗಳನ್ನು ಬದಿಗಿಟ್ಟು ಸಹಾಯ ಮಾಡಿದ್ದಾರೆ. ಒಂದು ಕಡೆಗೆ ಗಾಂಧಿ ಟೊಪ್ಪಿಗೆಗಳನ್ನು ಧರಿಸಿದವರೇ ಮುಂದೆ ಬಂದು ನಿರಾಶ್ರಿತರಿಗೆ ಸಹಾಯಮಾಡುತ್ತಿದ್ದುದನ್ನು ಕಂಡೆನು. ಅವರು ಅಸಹಕಾರಿಗಳಾದರೂ ಸಹ ಈ ಸಮಯದಲ್ಲಿ ಮುಂದೆ ಬಂದು ದೀನ ಜನರಿಗೆ ಸಹಾಯವನ್ನು ಮಾಡಿದುದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ"

## ದುಂಡುಮೇಜಿನ ಪರಿಷತ್ತಿನಲ್ಲಿ ವಿಶ್ವಾಸವಿಲ್ಲ

"ದುಂಡುಮೇಜಿನ ಪರಿಷತ್ತನ್ನು ಕೂಡಲೆ ಕೂಡಿಸಿರೆಂದು ಕೂಗುವವರ ಮೇಲೆ ಜನರ ವಿಶ್ವಾಸವು ಈಗ ಉಳಿದಿರುವದಿಲ್ಲವಾದುದರಿಂದ ಸದ್ಯದ ಪರಿಸ್ಥಿತಿಯನ್ನು ವಿಚಾರಿಸುವದಕ್ಕಾಗಿ ಜರುಗಲಿಕ್ಕಿದ್ದ ಈ ಪರಿಷತ್ತಿನ ಮೇಲೆ ನನ್ನ ವಿಶ್ವಾಸವಿಲ್ಲ. ಮಹಾತ್ಮಾ ಗಾಂಧಿಯವರು ಈ ಪರಿಷತ್ತಿಗೆ ಆಮಂತ್ರಿಸಲ್ಪಡುವರಾಗಿ ನಂಬಿದ್ದೇನೆ" ಎಂದು ಶ್ರೀ. ಬಿಪಿನಚಂದ್ರ ಪಾಲರು ದುಂಡುಮೇಜಿನ ಪರಿಷತ್ತಿನ ವಿಷಯವಾಗಿ ತಮ್ಮ ಮತವನ್ನು ವ್ಯಕ್ತಗೊಳಿಸಿದ್ದಾರೆ.

ಬಿಸನಾಳದಲ್ಲಿ

## ಪೋಲೀಸ ಅಧಿಕಾರಿಗಳೆದುರಿನಲ್ಲಿಯೇ ಉಪ್ಪು

ತಾ॥ ೧೪ ನೇ ದಿವಸ ಬೀಳಗಿಯ ಫೌಜದಾರ, ಜಮಾದಾರ ಹಾಗು ಎರಡು ಶಿಪಾಯಿಗಳು ಬಿಸನಾಳಕ್ಕೆ ಹೋಗಿದ್ದರು. ಅಲ್ಲಿ ಸತ್ಯಾಗ್ರಹ ಶಿಬಿರದ ಎದುರಿನಲ್ಲಿಯೇ ಇಳಿದುಕೊಂಡಿದ್ದರು. ಲಾಲಾಜಿ ಪಥಕದ ವೀರರು ಪ್ರತಿದಿವಸದಂತೆ ಅಂದಿನ ದಿವಸದಲ್ಲಿಯೂ ಅವರ ಎದುರಿನಲ್ಲಿಯೇ ಉಪ್ಪನ್ನು ಸಿದ್ಧಪಡಿಸಿದರು. ಅವರು ಸುಮ್ಮನೆ ನೋಡುತ್ತ ಕುಳಿತಿದ್ದರು. ಯಾರನ್ನೂ ಹಿಡಿದುಕೊಂಡು ಹೋಗಲಿಲ್ಲ.

### ಕರ್ನಾಟಕದ ವೀರವನಿತೆಯರಾದ

# ಶ್ರೀಮತಿ ಕಮಲಾದೇವಿಯವರಿಗೆ

## ಒಂಭತ್ತು ತಿಂಗಳ ಎರಡು ವಾರಗಳ ಶಿಕ್ಷೆ

ಮುಂಬಯಿಯಲ್ಲಿಯ ಉಪ್ಪಿನ ಸತ್ಯಾಗ್ರಹ ಚಳವಳಿಯಲ್ಲಿ ಮುಖ್ಯ ಭಾಗವನ್ನು ವಹಿಸಿ ಎಪ್ರಿಲ ೬ ನೆಯ ತಾರೀಖಿನಿಂದ ಈ ತಿಂಗಳದ ೧೫ ನೆಯ ತಾ|| ವರೆಗೆ ಬಿಟ್ಟೂಬಿಡದೆ ಉಪ್ಪಿನ ಕಟ್ಟಳೆಗಳನ್ನು ಮುರಿದು ಅಖಿಲ ಭರತಖಂಡದ ಜನರ ಆದರಕ್ಕೆ ಪಾತ್ರರಾದ ಮಂಗಳೂರಿನ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ೧೬ ನೆಯ ತಾ| ದಿವಸ ಮುಂಬಯಿಯಲ್ಲಿ ಬಂಧಿಸಲ್ಪಟ್ಟು ಇ. ಪಿ. ಕೋಡಿನ ೧೧೭ ನೆಯ ಕಲಮಿನನ್ವಯ ೬ ತಿಂಗಳ ಸಾದಾ ಶಿಕ್ಷೆಗೂ ಮತ್ತು ೧೫೦ ರೂ ಗಳ ದಂಡಕ್ಕೂ ದಂಡವನ್ನು ಕೊಡದಿದ್ದಲ್ಲಿ ೩ ತಿಂಗಳ ಸಾದಾ ಶಿಕ್ಷೆಗೂ, ಉಪ್ಪಿನ ಕಾಯಿದೆಯ ೪೭ ಅ ಕಲಮಿನನ್ವಯ ೨೦ ರೂ. ಗಳ ದಂಡಕ್ಕೂ, ದಂಡವನ್ನು ಕೊಡದಿದಲ್ಲಿ ೨ ವಾರಗಳ ಸಾದಾ ಶಿಕ್ಷೆಗೂ, ಹೀಗೆ ಒಟ್ಟಿಗೆ ೯ ತಿಂಗಳ ಹಾಗು ೨ ವಾರಗಳ ಸಾದಾ ಶಿಕ್ಷೆಗೆ ಗುರಿಯಾಗಿದ್ದಾರೆ.

### ರಾಷ್ಟ್ರದ್ರೋಹಕ್ಕಾಗಿ ಬಹಿಷ್ಕಾರ

ಉಪ್ಪಿನ ಆಗರದ ಮೇಲೆ ಮಾಡಲ್ಪಡುವ ದಾಳಿಯನ್ನು ತಡೆಯುವದಕ್ಕಾಗಿ ಅಧಿಕಾರಿಗಳು ಧರಸಾನಾ ಆಗರದ ಸುತ್ತಲು ತಂತಿಗಳನ್ನು ಬಿಗಿಸಿರುವರಷ್ಟೇ. ಹೀಗೆ ತಂತಿಗಳನ್ನು ಬಿಗಿದವನು ಡೋಂಗರಿ ಸ್ಟೇಶನದಿಂದ ಪ್ರವಾಸಿಕರನ್ನು ಕರೆ ತರುವದಕ್ಕಾಗಿ ಬಂದ. ಮೋಟಾರನ್ನು ಇಟ್ಟಿದನೆಂದು ಉಂಟಾಡಿಯ ಜನರು ತಿಳಿದುಕೊಂಡು ಯಾವ ಪ್ರವಾಸಿಕನೂ ಅವನ ಮೋಟಾರಿನಲ್ಲಿ ಕೂಡತಕ್ಕದಲ್ಲವೆಂದು ಸಾರಿ ಬಹಿಷ್ಕಾರ ಹಾಕಿದ್ದರಿಂದ ಅವನಿಗೆ ಬಹಳ ಹಾನಿಯಾಗಿದೆ ಈ ಬಹಿಷ್ಕಾರದ ಸುದ್ದಿಯು ಪೋಲೀಸ ಅಧಿಕಾರಿಗಳಿಗೆ ತಿಳಿಯಿತು, ಕೂಡಲೇ ಫೌಜದಾರರು ಅಲ್ಲಿಗೆ ಬಂದು ಬಹಿಷ್ಕಾರವನ್ನು ತಿರುಗಿ ತೆಗೆದು ಕೊಳ್ಳಲು ಜನರಿಗೆ ಹೇಳಿದರು. ಜನರು ಒಪ್ಪಲಿಲ್ಲ ಬಹಿಷ್ಕಾರವನ್ನು ತಿರುಗಿ ತೆಗೆದುಕೊಳ್ಳದಿದ್ದರೆ, ಉಳಿದ ಎಲ್ಲ ಮೋಟಾರುಗಳ "ಲಾಯಸೆನ್ಸ"ನ್ನು ತಿರುಗಿ ತೆಗೆದುಕೊಳ್ಳುವದರಲ್ಲಿ ಬರುವದು ಎಂದು ಫೌಜದಾರರು ಜನರನ್ನು ಬೆದರಿಸಿದರು. ಜನರು ಈ ಬೆದರಿಕೆಗೂ ಸೊಪ್ಪು ಹಾಕದೆ ಬಹಿಷ್ಕಾರವನ್ನು ಹಾಗೆಯೇ ಸಾಗಿಸಿದ್ದಾರೆ.

### ಸುಂಕಕ್ಕಾಗಿಯೇ ಸತ್ಯಾಗ್ರಹ

ಮುಂಬಯಿಯ ಪ್ರಾ. ಕಾಂ. ಕಮೀಟಿಯ ಯುದ್ಧಮಂಡಳದವರು ೧೮ ನೆಯ ತಾ|| ದಿವಸ ವಡಾಲಾ ಉಪ್ಪಿನ ಆಗರದ ಮೇಲೆ, ದಾಳಿಯಲ್ಲಿ ತೆಗೆದುಕೊಳ್ಳಲ್ಪಡುವ ಉಪ್ಪಿನ ನಿಜವಾದ ಬೆಲೆಯನ್ನು ಆಗರದ ಒಡೆಯರಿಗೆ ಕೊಟ್ಟು ದಾಳಿಯನ್ನು ಮಾಡುವವರಿದ್ದಾರೆ. ಸುಂಕವನ್ನು ಕೊಡದೆ ಉಪ್ಪನ್ನು ತೆಗೆದುಕೊಂಡು ಬರುವದೇ ದಾಳಿಯ ಉದ್ದೇಶವಿದ್ದುದರಿಂದ ಈ ಉಪಾಯವನ್ನು ಯೋಜಿಸುವದರಲ್ಲಿ ಬಂದಿದೆ.

### ಫೌಜದಾರರು ರಾಜೀನಾಮೆ ಕೊಟ್ಟರು

ಪೂರ್ಣಾಯ ಜಿ|| ಪೊ|| ಠಾಣೆಯ ಸಬ್ ಇನಸ್ಪೆಕ್ಟರರಾದ ಶ್ರೀ ತಾರಾಕುಮಾರ ಮುಖರ್ಜಿ ಹಾಗು ಹೆಡ್ ಕಾನಸ್ಟೇಬಲರಾದ ಶ್ರೀ ಶಾರದಾಪ್ರಸಾದ ಇವರು ಮಹಾತ್ಮರನ್ನು ಹಿಡಿದುದರ ನಿಷೇಧಾರ್ಥವಾಗಿ ತಮ್ಮ ಉದ್ಯೋಗಗಳಿಗೆ ಶರಣು ಹೊಡೆದಿದ್ದಾರೆ

### ಕರನಿರಾಕರಣೆಗೆ ಸಿದ್ಧರಾದರು

ಗುಜರಾಥ ಪ್ರಾಂತಗಳೊಳಗಿನ ದಾಂಡೇಲಿ ಕಳಿಯುವರು ಸರಕಾರದವರಿಗೆ ಒಂದು ಪೈ ಸಹ ಕಂದಾಯವನ್ನು ಕೊಡುವದಿಲ್ಲೆಂದು ನಿಶ್ಚಯಿಸಿದ್ದಾರೆ.

### ಭಾರತೀಯರಿಗೆ ವ್ಹಾಯಿಸರಾಯರ ವಿನಂತಿಪತ್ರ

ವ್ಹಾಯಿಸರಾಯರಾದ ಲಾರ್ಡ ಆಯರ್ವಿನ್ನ ದೊರೆಗಳು ಹಿಂದುಸ್ತಾನದ ಜನರಿಗೊಂದು ವಿನಂತಿ ಪತ್ರವನ್ನು ಬರೆದಿದ್ದಾರೆ. ಅದರ ಸಾರಾಂಶವೆಂದರೆ:— "ಡಿಸೆಂಬರ ೨೩ ನೆಯ ತಾ|| ಗೆ ಮಹಾತ್ಮಾ ಗಾಂಧಿ ಹಾಗು ಪಂಡಿತ ಮೋತಿಲಾಲ ನೆಹರೂರವರು ನನಗೆ ಭೆಟ್ಟಿಯಾದರು ಅವರು ಆಗ ಹೊಸ ಕರಾರುಗಳನ್ನು ಹಾಕಿದುದರಿಂದ ಭೆಟ್ಟಿಯಿಂದ ಯಾವ ಫಲವೂ ಸಿಗಲಿಲ್ಲ, ಹೀಗೆ ಒಂದು ಉತ್ಕೃಷ್ಟ ಸಂಧಿಯು ಕಳೆದುಹೋಯಿತು. ಅವರು ವಿಧಾಯಕ ಮಾರ್ಗವನ್ನು ಬಿಟ್ಟು ಕಾಯಿದೆಭಂಗದ ವಿನಾಶಕ ಮತ್ತು ಸಂಕಟಮಯ ಮಾರ್ಗವನ್ನವಲಂಬಿಸಿದರು. ಕಾಯಿದೆಭಂಗ ಪ್ರಾರಂಭಿಸಿದ್ದು ಹುಚ್ಚುತನವೇ ಸರಿ. ಇದರಿಂದ ಶಾಂತತಾಭಂಗವಾಗುವದು ನಿಶ್ಚಯವೇ ಸರಿ. ಹಿಂದುಸ್ತಾನ ಮತ್ತು ಬ್ರಿಟನ್‌ಗಳಲ್ಲಿ ಒಪ್ಪಂದವಾಗಲೆಂದು ನಾನು ಅಂತಃಕರಣಪೂರ್ವಕವಾಗಿ ಪ್ರಯತ್ನಿಸುತ್ತೇನೆ.

ಶಾಂತತೆಯನ್ನು ಕಾಪಾಡುವದಕ್ಕೆ ಯೋಗ್ಯ ಉಪಾಯಗಳನ್ನು ಕೈಕೊಳ್ಳುವ ಕಾಲವು ಈಗ ಬಂದೊದಗಿದೆ. ಈಗ ೨-೩ ವಾರಗಳಲ್ಲಿ ಪೇಶಾವರ, ಮದ್ರಾಸ, ಕರಾಚಿ, ಸೋಲಾಪುರ, ಮೊದಲಾದ ಸ್ಥಳಗಳಲ್ಲಿ ದಂಗೆಗಳಾಗಿದ್ದು, ಸರಕಾರದ ಬಗ್ಗೆ ಜನರಲ್ಲಿ ಅನಾದರವುಂಟಾಗಹತ್ತಿವೆ. ಇದನ್ನು ತಡೆಯಲು ತೀಕ್ಷ್ಣತರ ಉಪಾಯಗಳನ್ನು ನಾವು ಕೈಕೊಳ್ಳಬೇಕಾಗಿದೆ. ನವ್ಹೆಂಬರ ೧ ನೆಯ ತಾರೀಖಿನ ಜಾಹೀರನಾಮೆಯಿಂದ ನಾವು ತಿಲಮಾತ್ರವೂ ಹಿಂದೆ ಸರಿಯುವದಿಲ್ಲ. ಅದೇ ಧೋರಣವನ್ನೇ ಮುಂದೆ ಸಾಗಿಸುವೆವು. ಅಕ್ಟೋಬರ ತಾ|| ೨೦ ಕ್ಕೆ ದುಂಡುಮೇಜಿನ ಪರಿಷತ್ತು ಕೂಡತಕ್ಕದ್ದಿದೆ. ಸಪ್ಟಂಬರದಲ್ಲಿ ಸಾಮ್ರಾಜ್ಯ ಪರಿಷತ್ತು ಕೂಡುವದಿದೆ ಇದರಲ್ಲಿ ನನ್ನ ಶ್ರದ್ಧೆಯುಂಟು. ಆದುದರಿಂದ ಎಲ್ಲರೂ ಇದನ್ನು ಶಾಂತರೀತಿಯಿಂದ ವಿಚಾರಮಾಡಬೇಕಾಗಿ ವಿನಂತಿ."

## ೧೭ ತಾಸುಗಳ

# ಸರೋಜಿನಿ ದೇವಿಯರ ನಿರಾಹಾರ

ಶ್ರೀಮತಿ ಸರೋಜಿನಿ ದೇವಿಯರು ಸ್ವಯಂಸೇವಕರೊಂದಿಗೆ ಪ್ರತಿಬಂಧಿತವಾದ ಸ್ಥಳವನ್ನು ಹೊಕ್ಕ ಕೂಡಲೆ ಅಬಕಾರಿ ಇನಸ್ಪೆಕ್ಟರರು ಸರೋಜಿನಿ ದೇವಿಯವರಿದ್ದಲ್ಲಿಗೆ ಹೋಗಿ ಮುಂದಕ್ಕೆ ಹೋಗಕೂಡದೆಂದು ಹೇಳಿದರು. ಸರೋಜಿನಿ ದೇವಿಯವರು ಸ್ವಯಂಸೇವಕರೊಂದಿಗೆ ಆ ಸ್ಥಳದಲ್ಲಿಯೇ ನಿಂತುಬಿಟ್ಟರು. ಬಳಿಕ ಡಿ|| ಪೋ|| ಸುಪರಿಂಟೆಂಡೆಂಟರು ಅಲ್ಲಿಗೆ ಹೋಗಿ ಅವರ ಮುಂದೆ ಕಾವಲನ್ನು ರಚಿಸಿ "ಮುಂದಕ್ಕೆ ಹೋಗುವದಾದರೆ ಬಲಾತ್ಕಾರವನ್ನುಪಯೋಗಿಸಿ ಹೋಗಿರಿ" ಎಂದು ನುಡಿದರು. "ಇಲ್ಲಿಯೇ ನಿಲ್ಲುವೆವು ಮತ್ತು ಶಾಂತರೀತಿಯಿಂದ ವರ್ತಿಸುವೆವು" ಎಂದು ಶ್ರೀಮತಿಯವರು ಉತ್ತರವನ್ನಿತ್ತರು. ಇದನ್ನೆಲ್ಲ ಅಲ್ಲಿಯೇ ನೋಡುತ್ತ ನಿಂತಿದ್ದ ಶ್ರೀ. ವ್ಹಿ. ಎ. ದೇಸಾಯಿಯವರು ಸಬ್ ಇನಸ್ಪೆಕ್ಟರರ ಅಪ್ಪಣೆಯನ್ನು ತೆಗೆದುಕೊಂಡು ಸರೋಜಿನಿ ದೇವಿಯವರಿಗೆ ಕುಳಿತುಕೊಳ್ಳಲು ಒಂದು ಖುರ್ಚಿಯನ್ನು ಕೊಟ್ಟರು. ಇದನ್ನು ಕಂಡು ಡಿ|| ಪೋ|| ಸುಪರಿಂಟೆಂಡೆಂಟ ಹಾಗೂ ಡಿ|| ಮ್ಯಾಜಿಸ್ಟ್ರೇಟರು ಅಲ್ಲಿಗೆ ಅವಸರದಿಂದ ಹೋಗಿ "ಹಾದಿಯಲ್ಲಿ ಖುರ್ಚಿಯನ್ನು ಇಡಗೊಡುವದಿಲ್ಲ ಆದ್ದರಿಂದ ಏಳಬೇಕು" ಎಂದು ಸರೋಜಿನಿ ದೇವಿಯವರಿಗೆ ತಿಳಿಸಿದರು. ಶ್ರೀಮತಿಯವರು ಏಳಲು ನಿರಾಕರಿಸಿ "ಬೇಕಾದರೆ ಮೋಟಾರನ್ನು ನನ್ನ ಮೇಲೆಯೇ ಹಾಯಿಸಿಕೊಂಡು ಹೋಗಿರಿ" ಎಂದು ಆ ಅಧಿಕಾರಿಗಳಿಗೆ ತಿಳಿಸಿದರು. ಲಾರಿಗಳು ಮುಂದಕ್ಕೆ ಸಾಗಿಸಲ್ಪಟ್ಟವು. ಲಾರಿಗಳಿಗೆ ಅಲ್ಲಿ ಹಾಯ್ದುಹೋಗಲಿಕ್ಕೆ ಸಾಕಷ್ಟು ಸ್ಥಳವಿದ್ದುದರಿಂದ, ಅವು ಸರೋಜಿನಿ ದೇವಿಯವರ ಖುರ್ಚಿಗೆ ಎಳ್ಳಷ್ಟೂ ತಗುಲದೆ ಹಾಯ್ದುಹೋದವು.

ಪೋಲೀಸ ಅಧಿಕಾರಿಗಳ ಚಕ್ರವ್ಯೂಹದಲ್ಲಿ ಅನ್ನ ನೀರುಗಳಿಲ್ಲದೆ ಕಾಲಕಳೆಯುತ್ತಿರುವ ಶ್ರೀಮತಿ ಸರೋಜಿನಿ ದೇವಿಯವರಿಗೆ ನೀರನ್ನು ಕೊಡಲು ಎಷ್ಟೋ ಸ್ತ್ರೀಯರು ನೀರಿನಿಂದ ಸಹಿತವಾಗಿ ಹೋಗಿದ್ದರು. ಆದರೆ ಪೋಲೀಸ ಅಧಿಕಾರಿಗಳು ಅವರಿಗೆ ನೀರನ್ನು ಕೊಡಗೊಡಲಿಲ್ಲವಾದುದರಿಂದ ಕೆಲವು ಹೆಂಗಸರು ಚಕ್ರವ್ಯೂಹವನ್ನು ಒಳನುಗ್ಗಿ ನೀರನ್ನು ಕೊಡಲು ಯೋಚಿಸಿದರು. ಆದರೆ ಶ್ರೀ. ಮಣಿಲಾಲ ಗಾಂಧಿಯವರು ಅವರನ್ನು ತಡೆದಿದ್ದರಿಂದ ಅದು ಸಫಲವಾಗಲಿಲ್ಲ. ಪೋಲೀಸ ಅಧಿಕಾರಿಗಳ ಈ ಕೃತಿಯ ನಿಷೇಧಾರ್ಥವಾಗಿ ಹಳ್ಳಿಯ ಜನರು ಸರಕಾರೀ ಅಧಿಕಾರಿಗಳಿಗೆ ನೀರನ್ನು ಕೊಡತಕ್ಕದಲ್ಲವೆಂದು ನಿಶ್ಚಯಿಸಿದ್ದಾರೆ. ೮|| ಗಂಟೆಯ ಸುಮಾರಕ್ಕೆ ಶ್ರೀಮತಿಯವರು ಸ್ವಯಂಸೇವಕರಿಗೆ ಕುಳಿತುಕೊಳ್ಳಲು ಆಜ್ಞಾಪಿಸಿದರು. ಡಿ|| ಪೋ|| ಸುಪರಿಂಟೆಂಡೆಂಟರೂ ಪೋಲೀಸ ಅಧಿಕಾರಿಗಳಿಗೆ ಕುಳಿತುಕೊಳ್ಳಲು ಹೇಳಿದರು. ಶ್ರೀಮತಿಯವರೊಂದಿಗೆ ಹೋದ ಶ್ರೀ. ವ್ಹಿ. ಎ. ದೇಸಾಯಿಯವರು ಶ್ರೀಮತಿಯವರಿಗಾಗಿ ಕಾಫಿಯನ್ನು ತೆಗೆದುಕೊಂಡು ಹೋದರು. ಅದನ್ನಾದರೂ ಅಧಿಕಾರಿಗಳು ಕೊಡಗೊಡಲಿಲ್ಲ. ನಿರಶಿಸಿದ ಸತ್ಯಾಗ್ರಹಿಗಳಿಗೆ ನೀರನ್ನು ಕೊಡಲು ಅಧಿಕಾರಿಗಳು ಅಪ್ಪಣೆ ಕೊಡಲಿಲ್ಲ. ಹೀಗೆ ೧೭ ತಾಸುಗಳನ್ನು ಅನ್ನನೀರುಗಳಿಲ್ಲದೆ ಕಳೆದ ಬಳಿಕ ರಾತ್ರಿ ೨ ಗಂಟೆಗೆ ಶ್ರೀಮತಿಯವರಿಗೂ, ಸತ್ಯಾಗ್ರಹಿಗಳಿಗೂ ಅನ್ನನೀರುಗಳನ್ನು ಕೊಡಲು ಅಪ್ಪಣೆ ದೊರೆಯಿತು. ಉಂಟಾಡಿ ಬಿಡಾರದಲ್ಲಿಯ ಸ್ವಯಂಸೇವಕರು ಶ್ರೀಮತಿಯವರಿಗೆ ಹಾಸಿಗೆ ಹಾಗು ಹೊದಿಕೆಗಳನ್ನು ಕೊಡಲು ಎಷ್ಟೋ ಸಲ ಪ್ರಯತ್ನಿಸಿದ್ದರು. ಆದರೆ ಅದು ಸಫಲವಾಗಿದ್ದಿಲ್ಲ. ಅಧಿಕಾರಿಗಳು ರಾತ್ರಿ ೧ ಗಂಟೆಗೆ ಹಾಸಿಗೆ ಹಾಗು ಹೊದಿಕೆಗಳನ್ನು ಶ್ರೀಮತಿಯವರಿಗೆ ಕೊಡುವದಕ್ಕೆ ಅಪ್ಪಣೆಯನ್ನು ಕೊಟ್ಟರು. ಬಳಿಕ ಚಕ್ರವ್ಯೂಹದ ಹೊರಗೆ ನಿಂತು ರಾತ್ರಿಯನ್ನೆಲ್ಲ ಅಲ್ಲಿಯೇ ಕಳೆದ ಸ್ತ್ರೀಯರು ತಮ್ಮ ತಮ್ಮ ಹಳ್ಳಿಗಳಿಗೆ ಹೋಗಿ ಹಾಲು ರೊಟ್ಟಿ ಮೊದಲಾದವುಗಳನ್ನು ತೆಗೆದುಕೊಂಡು ಬಂದು ಶ್ರೀಮತಿಯವರಿಗೂ ಸ್ವಯಂಸೇವಕರಿಗೂ ಕೊಟ್ಟರು. ಬಳಿಕ ಎಲ್ಲರೂ ಆಹಾರವನ್ನು ಸ್ವೀಕರಿಸಿದರು. ೨ ಗಂಟೆಯ ಸಮಯಕ್ಕೆ ಶ್ರೀಮತಿಯವರಿಗೆ ಮಲವಿಸರ್ಜನೆಗಾಗಿ ಹೊರಗೆ ಹೋಗುವ ಪ್ರಸಂಗವು ಬಂದೊದಗಿತು. ಹಿಂಬದಿಯಲ್ಲಿರುವ ಏಕಾಂತ ಕೊಠಡಿಗೆ ಹೋಗಲು ಅಧಿಕಾರಿಗಳು ತಿಳಿಸಿದರು. ಸರೋಜಿನಿಯವರು ಇದಕ್ಕೊಪ್ಪದೆ "ನಾನು ಮುಂದಕ್ಕೆ ಹೋಗುವವಳೇ, ನೀವು ಮಾಡುವದನ್ನು ಮಾಡಿರಿ" ಎಂದು ಹೇಳಿ ಮುಂದೆ ಹೊರಟರು. ಪೋಲೀಸ ಅಧಿಕಾರಿಗಳೂ ಅವರ ಬೆನ್ನುಹತ್ತಿದರು. ಬಳಿಕ ಕೆಲವು ಹೊತ್ತಿನ ಮೇಲೆ ಶ್ರೀಮತಿಯವರು ತಿರುಗಿ ತಮ್ಮ ಸ್ಥಾನಕ್ಕೆ ಬಂದು ಕುಳಿತುಕೊಂಡರು.

ಒಂದೊಂದರಲ್ಲಿ ೫೦ ಸ್ವಯಂಸೇವಕರನ್ನೊಳಗೊಂಡ ಬೇರೆ ಬೇರೆ ಮೂರು ತಂಡಗಳು ೧೬ ನೆಯ ತಾ|| ದಿವಸ ಆಗರದ ಮೇಲೆ ದಾಳಿಯನ್ನು ಮಾಡುವ ಉದ್ದೇಶದಿಂದ ಉಂಟಾಡಿ ಬಿಡಾರದಿಂದ ಹೊರಟಿದ್ದು ಈ ತಂಡಗಳಾದರೂ ಪೋಲೀಸರಿಂದ ಧರಸಾನಾ ಹದ್ದಿನಲ್ಲಿ ತಡೆಯಲ್ಪಟ್ಟಿವೆ. ಸ್ವಯಂಸೇವಕರು ಅದೇ ಸ್ಥಳದಲ್ಲಿ ಗಟ್ಟಿಯಾಗಿ ಕುಳಿತು ಬಿಟ್ಟಿದ್ದಾರೆ. ಈ ತಂಡಗಳು ಉಂಟಾಡಿ ಬಿಡಾರವನ್ನು ಬಿಟ್ಟ ಬಳಿಕ ಸ್ವಲ್ಪ ಅವಧಿಯಲ್ಲಿಯೇ ಅಹಮ್ಮದಾಬಾದ ಕರಾಡಿ ಹಾಗು ನವಸಾರಿಗಳಿಂದ ಒಟ್ಟಿಗೆ ೧೦೦ ಸ್ವಯಂಸೇವಕರು ಉಂಟಾಡಿ ಬಿಡಾರಕ್ಕೆ ಹೋಗಿ ಸೇರಿದ್ದಾರೆ.

## ಸೋಲಾಪುರದ ಸುದ್ದಿಗಳು

ಸೊಲ್ಲಾಪುರದಲ್ಲಿಯ ಲಷ್ಕರದ ಮುಖ್ಯಾಧಿಕಾರಿಯು ಲಷ್ಕರಿ ಕಾಯಿದೆಗಳಿಗನುಸಾರವಾಗಿ ಕೆಳಗಿನ ಅಪ್ಪಣೆಗಳನ್ನು ಹೊರಡಿಸಿದ್ದಾನೆ— ೧) ದಂಗೆಗೆ ಕಾರಣೀಭೂತರಾದ ಜನರಿಗೆ ಯಾರೂ ಯಾವತರದಿಂದಲೂ ಆಶ್ರಯ ಕೊಡಬಾರದು. ಅವರಿಗೆ ಯಾವ ಸುದ್ದಿಗಳನ್ನೂ ತಿಳಿಸಬಾರದು. ಇದಕ್ಕೆ ತಪ್ಪಿದಲ್ಲಿ ೫ ವರ್ಷಗಳ ಸ. ಶಿಕ್ಷೆ ಮತ್ತು ದಂಡ. (೨) ಲಷ್ಕರಿ ಖಾತೆಯ ಮುಖ್ಯಾಧಿಕಾರಿಯ ಅಪ್ಪಣೆಯಿಲ್ಲದೆ ಯಾರೂ ೫ಕ್ಕಿಂತ ಹೆಚ್ಚು ಜನರ ಸಭೆಗಳನ್ನು, ಮೆರವಣಿಗೆ ಮೊದಲಾದವುಗಳನ್ನು ಮಾಡಬಾರದು. ಅವುಗಳಿಗೆ ಹೋಗಬಾರದು. ಈ ಕಾಯಿದೆಯು ಧಾರ್ಮಿಕ ವಿಷಯಗಳನ್ನು ಕುರಿತು ಚರ್ಚಿಸಲು ಗೊತ್ತಾದ ದೇವಾಲಯದಲ್ಲಿ ಕೂಡಿದ ಸಭೆಗಳಿಗೆ ಅನ್ವಯಿಸುವದಿಲ್ಲ. ಈ ಕಾಯಿದೆಯನ್ನು ಉಲ್ಲಂಘಿಸಿದವರಿಗೆ ೫ ವರ್ಷ ಸ. ಶಿಕ್ಷೆ ಮತ್ತು ದಂಡ. (೩) ಯಾರೂ ರಾಷ್ಟ್ರಧ್ವಜವನ್ನಾಗಲಿ, ಇಲ್ಲವೆ ಅಂತಹ ಯಾವವಾದರೂ ಚಿನ್ಹಗಳನ್ನಾಗಲೀ ಧರಿಸಬಾರದು. ಸಾರ್ವಜನಿಕ ಶಾಂತತಾ ಭಂಗವಾಗುವಂತೆ ಯಾರೂ ವರ್ತಿಸಬಾರದು. ಸೈನಿಕರಿಗೆ ಯಾರೂ ಅಡ್ಡಿಯನ್ನುಂಟು ಮಾಡಬಾರದು. ಕಾಯಿದೆಯಿಂದ ಸ್ಥಾಪಿತವಾದ ಸರಕಾರದಿಂದ ನಿಯಮಿತವಾದ ಅಧಿಕಾರಿಗಳ ಹೊರತು ಅಧಿಕಾರಿಗಳಿಂದ ನಿಯಮಿಸಲ್ಪಟ್ಟವರು ಯಾರೂ ಆ ಆ ಅಧಿಕಾರಿಗಳ ಕೆಲಸವನ್ನು ಮಾಡಬಾರದು. ಇದಕ್ಕೆ ತಪ್ಪಿದವರಿಗೆ ೧೦ ವರ್ಷ ಸ. ಶಿಕ್ಷೆ ಮತ್ತು ದಂಡ. (೪) ಸುಳ್ಳು ಸುದ್ದಿಗಳನ್ನು ಯಾರೂ ಹರಡಬಾರದು. ಭಯವನ್ನೂ, ಅಧೈರ್ಯವನ್ನೂ ಹುಟ್ಟಿಸುವಂತಹ ಸುದ್ದಿಗಳನ್ನು ಪತ್ರದ್ವಾರದಿಂದಾಗಲೀ; ಇಲ್ಲವೆ ಪ್ರಕಟಿಸಿಯಾಗಲಿ ಹರಡತಕ್ಕದ್ದಲ್ಲ. ಇದಕ್ಕೆ ತಪ್ಪಿದಲ್ಲಿ ೫ ವರ್ಷ ಸ. ಶಿಕ್ಷೆ ಮತ್ತು ದಂಡ.

ದಂಗೆಯ ಆರೋಪದಿಂದ ಕುರಬಾನ ಹುಸೇನ, ಶ್ರೀಕೃಷ್ಣ ಸರ್ದಾರ ಹಾಗು ಚನ್ನಪ್ಪ ಧನಪ್ಪ ಶೆಟ್ಟಿ ಈ ಮೂವರು ತಾ|| ೧೪ ನೆಯ ದಿವಸ ಹಿಡಿಯಲ್ಪಟ್ಟಿದ್ದಾರೆ.

## ಪೇಶಾವರ ವಿಚಾರಣೆಯ ಸಮಿತಿ.

ಪೇಶಾವರದಲ್ಲಾದ ದಂಗೆಯ ಸಂಬಂಧವಾಗಿ ವಿಚಾರಣೆಯನ್ನು ಮಾಡಲು ರಾಷ್ಟ್ರಸಭೆಯವರಿಂದ ನಿಯಮಿತವಾದ ಪೇಶಾವರ ವಿಚಾರಣೆಯ ಸಮಿತಿಯು ಶೀಘ್ರದಲ್ಲಿಯೇ ರಾವಳಪಿಂಡಿಯಲ್ಲಿ ಕೂಡತಕ್ಕದ್ದಿರುವದರಿಂದ ಶ್ರೀ ವಿಠ್ಠಲಭಾಯಿ ಪಟೇಲರು ಅತ್ತ ಕಡೆಗೆ ತೆರಳಿದ್ದಾರೆ.

## ಕರಾಚಿ.

ಕರಾಚಿಯ ಶ್ರೀ ಲೋಕರಾಮ ಶರ್ಮಾ, ನರಸಿಂಗಲಾಲ ಧನಮಲ್, ಆರ್. ಕೆ. ಸಿಧ್ವಾ ಮತ್ತು ಪ್ರೊ. ನಾರಾಯಣದಾಸ ಮಲಕಾನಿ ಇವರಿಗೆ ಇ. ಪಿ. ಕೋ. ೧೧೭ ಹಾಗು ಉಪ್ಪಿನ ಕಾಯಿದೆಯ ಕಲಮಿನನ್ವಯ ಕ್ರಮವಾಗಿ ೧೮ | ೧೨ | ೯ ಮತ್ತು ೧೨ ತಿಂಗಳುಗಳ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ. ಮೊದಲಿನವರಿಬ್ಬರಿಗೆ "ಎ" ವರ್ಗವೂ, ಕಡೆಯ ಇಬ್ಬರಿಗೆ "ಬಿ" ವರ್ಗವೂ ಕೊಡಲ್ಪಟ್ಟಿದೆ.

## ಮಿ|| ಬ್ರೇಲ್ಸ್‌ಫೋರ್ಡರು ಬ್ರಿಟಿಶರಿಗೆ ಕೊಟ್ಟ ಎಚ್ಚರಿಕೆ

೧) ಸಜ್ಜನರನ್ನು ತನ್ನ ತುರಂಗಗಳಲ್ಲಿ ತುಂಬಿ ರಾಜ್ಯವನ್ನಾಳಬಯಸುವ ಸರಕಾರವು ಪ್ರಜೆಗಳ ತಿರಸ್ಕಾರಕ್ಕೊಳಗಾಗದೆ ಉಳಿಯಬಹುದೇ?

೨) ಶಕ್ತಿಯನ್ನುಪಯೋಗಿಸಲು ನಮ್ಮನ್ನು ಬಲವಂತಪಡಿಸಿ ಮಹಾತ್ಮಾ ಗಾಂಧಿಯವರು ನಮ್ಮ ಕಟ್ಟಳೆಗಳ ಸ್ವರೂಪವನ್ನೆಲ್ಲ ಬೈಲಿಗೆಳೆಯುತ್ತಿರುವದಿಲ್ಲವೇ?

೩) ಮುಸಲ್ಮಾನರೂ ಮವಾಳರೂ ನಮ್ಮೊಡನೆ ಇನ್ನೆಷ್ಟು ದಿವಸಗಳ ವರೆಗೆ ಸಹಕರಿಸಬಲ್ಲರು? ಮುಸಲ್ಮಾನರ ಗಂಡುಮೆಟ್ಟಿನ ಸ್ಥಳವಾದ ಪೇಶಾವರವೂ, ಶ್ರೀ ಪಟೇಲರ ರಾಜೀನಾಮೆಯೂ ಏನನ್ನು ಸೂಚಿಸುತ್ತವೆ?

೪) ಆಯರಿಶರೊಡನೆ ಹೋರಾಡುವಾಗ ಅವರಿಗಿಂತಲೂ ನಮ್ಮ ಜನ ಬಲವು ಹತ್ತು ಪಟ್ಟು ಹೆಚ್ಚಿಗಿತ್ತು. ಈಗ ಭಾರತೀಯರ ಜನ ಬಲವು ನಮ್ಮಗಿಂತಲೂ ಏಳುಪಟ್ಟು ಹೆಚ್ಚಿಗಿದೆ. ನಾವು ಈಗ ಯಾರನ್ನು ನಂಬಬೇಕು? ಯಾವುದರ ಮೇಲೆ ವಿಶ್ವಾಸವನ್ನಿಡಬೇಕು?"

ಮಿ|| ಬ್ರೇಲ್ಸ್‌ಫೋರ್ಡರು.

("ನ್ಯೂ ಲೀಡರ"ದಲ್ಲಿ)

## ಸರಕಾರೀ ಪೇಶಾವರ ಸಮಿತಿಗೆ ಬಹಿಷ್ಕಾರ

ಪೇಶಾವರದಲ್ಲಾದ ದಂಗೆಯ ಸಂಬಂಧವಾಗಿ ವಿಚಾರಣೆಯನ್ನು ಮಾಡಲು ಸರಕಾರದಿಂದ ನಿಯಮಿತವಾದ ಸಮಿತಿಯ ಮುಂದೆ ಸಾಕ್ಷಿಗಳನ್ನು ನುಡಿಯಲು ಯಾರೂ ಹೋಗತಕ್ಕದ್ದಲ್ಲವೆಂದು ಪೇಶಾವರದ ನಾಗರಿಕರು ನಿಶ್ಚೈಸಿದ್ದಾರೆ

## ಗಾಂಧಿ ಟೊಪ್ಪಿಗೆಯ ಮೇಲೆ ಗದೆ

" ಗಾಂಧಿ ಟೊಪ್ಪಿಗೆಗಳನ್ನು ಧರಿಸಿದವರನ್ನು ಮೋಟಾರುಗಳಲ್ಲಿ ಕೂಡ್ರಿಸಿಕೊಂಡು ವೆಂಗುರ್ಲೆಯ ಕಡೆಗೆ ಹೋಗತಕ್ಕದ್ದಲ್ಲವೆಂದು " ಪೋಲೀಸ ಅಧಿಕಾರಿಗಳು ಸಾರ್ವಜನಿಕ ಮೋಟಾರುಗಳ ಚಾಲಕರಿಗೆ ತಿಳಿಸಿದ್ದಾರೆಂದು ಕರ್ನಾಟಕ ಪ್ರಾ. ಕಾ. ಮಂಡಳದ ಪ್ರಕಟನೆ ಶಾಖೆಯವರು ತಿಳಿಸುತ್ತಾರೆ.

ಕಂಪನಿಯ ಮುಕ್ಕಾಂ ಸ್ವಲ್ಪ ಉಳಿದಿವೆ,
**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**
ತಮ್ಮ ಲೋಕಪ್ರಿಯವಾದ
ಭಾನುವಾರ ತಾ || ೧೮—೫—೩೦
**ಸುದಾಮದೇವ**
ಸೋಮವಾರ ತಾ || ೧೯—೫—೩೦
**ಯಚ್ಛಮ್ಮನಾಯಿಕ.**
**ಎಂಬ ನಾಟಕವನ್ನು ಅಭಿನಯಿಸುವರು,**
ಈ ನಾಟಕಗಳು ಪುನಃ ಆಡಲ್ಪಡುವದಿಲ್ಲ.
ಸಂಘದೊಡೆಯ—**ಸದಾಶಿವರಾವ ಗರೂಡ**

ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧ ಪಡಿಸಲ್ಪಟ್ಟಿತು.

ರ.ನಂ. ಬಿ ೧೯೪೭ | ನಿತ್ಯಸಂಚಿಕೆಯು. | ಬೆಲೆ ೦-೦-೩

यद्यत् परवशं दुःखं । यद्यदात्मवशं सुखम् ॥ - मनु.

# ಕನ್ನಡಿಗ

KANNADIGA BAGALKOT | BI-WEEKLY

ಸಂಪಾದಕರು:- ಬಳವಂತ ಅಣ್ಣಾರಾವ ಮುಜುಮುದಾರ

ಬಾಗಲಕೋಟೆ ಸೋಮವಾರ ಮಿತಿ ವೈಶಾಖ ಬಹುಳ ೭ ಶಕ ೧೮೫೨ ತಾ ೧೯-೫-೩೦ ಸಂಚಿಕೆ ೫೩

ಮುಂಬಯಿಯಲ್ಲಿ ಕೂಡಿದ ಅಖಿಲಭಾರತ ವೃತ್ತಪತ್ರಕಾರರ ಪರಿಷತ್ತಿನಲ್ಲಿ ಗೊತ್ತಾದ ಮೇರೆಗೆ, ವೃತ್ತಪತ್ರದಬಾಬ್ತು ಹೊಸ ಕಾನೂನಿನ ನಿಷೇಧಾರ್ಥವಾಗಿ, ಮಂಗಳವಾರ ದಿವಸ "ಕನ್ನಡಿಗ"ನು ಹೊರಡುವದಿಲ್ಲ. ಎಂದಿನಂತೆಯೇ ಗುರುವಾರ ಹೊರಡುವನು.

"ನಾನು ಜಾತಿಯಿಂದ ಭಾರತೀಯನು. ನನ್ನ ಧರ್ಮ ಭಾರತ ಧರ್ಮ. ನನ್ನ ಕೋಮು ಭಾರತ ಕೋಮು. ಭಾರತವನ್ನು ಪಾರತಂತ್ರ್ಯದಿಂದ ಬಿಡಿಸುವದೇ ನನ್ನ ಕಸಬು. ನನ್ನ ಪ್ರಾಣವಿರುವವರೆಗೂ ನಾನು ನನ್ನ ಕಸಬನ್ನು ಬಿಡುವವನಲ್ಲ"

ಶ್ರೀ. ವಿಠ್ಠಲಭಾಯಿ.

## ಸರ್ವ ಪಕ್ಷೀಯ ಪರಿಷತ್ತು

ಸರ್ವಪಕ್ಷೀಯ ಪರಿಷತ್ತು ಮುಂಬಯಿಯಲ್ಲಿ ತಾ|| ೧೪|೧೫ ಹಾಗು ೧೬ ನೆಯ ದಿವಸಗಳಲ್ಲಿ ಸೇರಿತ್ತು. ಹಿಂದೂ ಮುಸಲ್ಮಾನ ಹಾಗು ಅಲ್ಪಸಂಖ್ಯಾಕರ ಪ್ರಶ್ನೆಗಳ ಬಗ್ಗೆ ವಿಚಾರ ಮಾಡಲು ಸರ್. ಎ. ಪಿ. ಪೆಟ್ರೋರವರ ಅಧ್ಯಕ್ಷತೆಯಲ್ಲಿ ಪಂಡಿತ ಮಾಲವೀಯಾ, ಸರ ತೇಜ ಬಹದ್ದೂರ ಸಪ್ರು, ಮಹಮ್ಮದ ಅಲ್ಲಿ. ಜಿನ್ನಾ, ಸರದಾರ ಉಜ್ಜಲಸಿಂಗ, ಡಾ. ಅಂಬೇಡಕರ, ಲೆ. ಕರ್ನಲ್ ಗಿಡ್ನೆ ಇವರುಗಳನ್ನೊಳಗೊಂಡ ಒಂದು ಉಪಮಂಡಳವು ಪರಿಷತ್ತಿನವರಿಂದ ನಿಯಮಿಸಲ್ಪಟ್ಟಿದೆ. ಈ ಮಂಡಳದವರು ಜೂನ ಅಂತ್ಯದೊಳಗಾಗಿ ತಮ್ಮ ವರದಿಯನ್ನು ಒಪ್ಪಿಸತಕ್ಕದ್ದೆಂದು ಗೊತ್ತಾಗಿದೆ.

## ಮಂತ್ರಿಪದಕ್ಕೆ ರಾಜೀನಾಮೆ

ಮುಂಬಯಿ ಇಲಾಖೆಯ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಖಾತೆಯ ಮಂತ್ರಿಗಳಾಗಿರುವ ನಾಮದಾರ ಹರಿಭಾಯಿ ದೇಸಾಯಿಯವರಿಗೆ ಮಂತ್ರಿಪದಕ್ಕೆ ರಾಜೀನಾಮೆ ಕೊಡಲು ಅಹಮ್ಮದಾಬಾದದ ನಾಗರಿಕರು ಕೇಳಿಕೊಂಡಿದ್ದಾರೆ.

## ಕಾಯದೆ ಭಂಗದ ಫಲಶ್ರುತಿ.

### ಪೋಲೀಸ ಅಧಿಕಾರಿಗಳಿಗೆ ಹೆಚ್ಚು ಭತ್ತೆ ಸಿಕ್ಕಿತು.

ಕಾಯದೆ ಭಂಗದ ಚಳವಳಿಯ ಮೂಲಕವಾಗಿ ಒದಗಿಬರುವ ತ್ರಯಾರಕರವಾದ ಕಾರ್ಯಗಳಲ್ಲಿ ಪ್ರತ್ಯೇಕವಾಗಿ ನಿಯಮಿತವಾದ ಜನರಿಗೂ, ಪೋಲೀಸ ಅಧಿಕಾರಿಗಳಿಗೂ, ಮುಂಬಯಿ ಇಲಾಖೆಯ ಮುಲ್ಕಿ ಖಾತೆಯ ಕಟ್ಟಳೆಗಳಿಗನುಸಾರವಾಗಿ ಪ್ರತಿನಿತ್ಯವೂ ಕೊಡಲ್ಪಡುವ ಭತ್ತೆಯ ಹೊರತಾಗಿ ಹೆಚ್ಚಿನ ಭತ್ತೆಯನ್ನು ಕೊಡುವದರಲ್ಲಿ ಬರುವದೆಂದು ಸರಕಾರದ ಸಾರ್ವಜನಿಕ ಖಾತೆಯವರಿಂದ ಪ್ರಕಟಿಸಲ್ಪಟ್ಟಿದೆ. ಭತ್ತೆಯನ್ನು ಕೆಳಗಿನಂತೆ ಕೊಡಲಾಗುವದು.

ಪ್ರತಿತಿಂಗಳಿಗೆ ಡೆಪ್ಯುಟಿ ಸುಪರಿಂಟೆಂಡೆಂಟ ೧೫೦ ರೂ, ಇನಸ್ಪೆಕ್ಟರ ೫೦ ರೂ, ಸಬ್ ಇನಸ್ಪೆಕ್ಟರ ೩೫ ರೂ, ಸಾರ್ಜಂಟ ೨೫ ರೂ, ಹೆಡ್ ಕಾನಸ್ಟೇಬಲ್ ೧೦ ರೂ ಕಾನಸ್ಟೇಬಲ್ ೭ ರೂ.

ಕೆಳಗಿನ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವವರಿಗೇನೆ ಇದು ಕೊಡಲ್ಪಡುವದು ಅಹಮ್ಮದಾಬಾದ ಪಟ್ಟಣ ಮತ್ತು ಹೆಡ್ ಕ್ವಾರ್ಟರ್ಸ, ವಿರಮಗಾಂವ, ಧಂಡುಕಾ, ಧೋಲೆರಾ, ರಾಣಪುರ, ಮೇಡಾಜ, ದೋಲಿಯಾ, ಅಲಾದಾರ, ದಂಕ್ರಾಯಿ, ಜಲಾಲಪುರ ತಾಲೂಕ, ಸುರತ ನಗರ, ಕಪದ್ವಂಜ ಮತ್ತು ಥಾಕುರಾ ತಾಲೂಕಗಳ ಹೊರತಾಗಿ, ಲಾಸುಂದ್ರಾ ಮಹಾಲವನ್ನೊಳಗೊಂಡ ಕಾಯಿರಾ ಜಿಲ್ಲೆ.

## ಸರಕಾರಿ ಉದ್ಯೋಗಸ್ಥನ ರಾಜೀನಾಮೆ

ಸಂಯುಕ್ತ ಪ್ರಾಂತದ ಸೆಕ್ರೆಟರಿಯೇಟ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ಪಂಡಿತ ಸೋಮನಾಥರು ಮಹಾತ್ಮರನ್ನು ಹಿಡಿದಿದ್ದುದರ ನಿಷೇಧಾರ್ಥವಾಗಿ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದಾರೆ.

## ಸಾಯಮನ್ ಸಮಿತಿಯ ವರದಿ.

ಸಾಯಮನ್ ಸಮಿತಿಯ ವರದಿಯ ಮೊದಲನೆಯ ಭಾಗವು ಜೂನ ೧೦ ನೆಯ ತಾ|| ನಲ್ಲಿಯೂ ಮತ್ತು ಎರಡನೆಯ ಭಾಗವು ಜೂನ ೨೪ ನೆಯ ತಾ|| ನಲ್ಲಿಯೂ ಪ್ರಸಿದ್ಧಿಸಲ್ಪಡುತ್ತಿವೆಯೆಂದು ಮಿ. ವೆಜವುಡ್‌ಬೆನರು ಕಾಮನ್ಸ ಸಭೆಯಲ್ಲಿ ನುಡಿದಿದ್ದಾರೆ.

## ರಾಷ್ಟ್ರಸಭೆಯ ಕಾರ್ಯಕಾರೀ ಮಂಡಳದ ನಿರ್ಧಾರ

# ಭೂಕಂದಾಯವನ್ನು ಕೊಡಬೇಡಿರಿ

ಪಂಡಿತ ಮೋತೀಲಾಲ ನೆಹರೂರವರ ಅಧ್ಯಕ್ಷತೆಯಲ್ಲಿ ಅಲಹಾಬಾದದಲ್ಲಿ ಸೇರಿದ ಅಖಿಲ ಭಾರತ ರಾಷ್ಟ್ರಸಭೆಯ ಕಾರ್ಯಕಾರೀ ಮಂಡಳದಲ್ಲಿ ಕೆಳಗಿನ ತೀರ್ಮಾನಗಳು ಸ್ವೀಕೃತವಾಗಿವೆ.

(೧) ಕಾಯಿದೆಭಂಗದ ಚಳವಳಿಯನ್ನು ಇನ್ನೂ ಹೆಚ್ಚು ಉತ್ಸಾಹದಿಂದ ಸಾಗಿಸಬೇಕೆಂದು ಈ ಮಂಡಳವು ನಿರ್ಧರಿಸುತ್ತದೆ. ವಕೀಲರು, ವಿದ್ಯಾರ್ಥಿಗಳು, ಕೂಲಿಕಾರರು, ವ್ಯಾಪಾರಸ್ಥರು, ಕಸಬುಗಾರರು ಮತ್ತು ಸರಕಾರಿ ಉದ್ಯೋಗಸ್ಥರು ಇವರೇ ಮೊದಲಾದವರು ತಮಗೆ ಶಕ್ಯವಿದ್ದಷ್ಟು ಸ್ವಾರ್ಥತ್ಯಾಗವನ್ನು ಮಾಡಿ ಸ್ವಾತಂತ್ರ್ಯ ಸಮರಕ್ಕೆ ಯಶವು ಸಿಗುವಂತೆ ಪ್ರಯತ್ನಿಸಬೇಕೆಂದೂ ಈ ಮಂಡಳವು ಅವರನ್ನು ಕೇಳಿಕೊಳ್ಳುತ್ತದೆ. (೨) ಸೆರೆಹಿಡಿಯಲ್ಪಟ್ಟು ಶಿಕ್ಷೆಗೊಳಗಾದ ಪಂಡಿತ ಜವಾಹರಲಾಲ ನೆಹರು ಹಾಗೂ ಉಳಿದ ರಾಷ್ಟ್ರೀಯ ಪಕ್ಷದವರನ್ನು ಈ ಮಂಡಳವು ಅಭಿನಂದಿಸುತ್ತದೆ. (೩) ದೇಶದ ಹಿತದ ಸಲುವಾಗಿ ದೇಶದಲ್ಲೆಲ್ಲ ಪರದೇಶೀ ಬಟ್ಟೆಗಳ ಬಹಿಷ್ಕಾರದ ಚಳವಳಿಯನ್ನು ಕೂಡಲೇ ಪ್ರಾರಂಭಿಸುವದು ಅವಶ್ಯವಾಗಿದೆಯೆಂದು ಈ ಮಂಡಳದ ಅಭಿಪ್ರಾಯವಿದೆ. ಮತ್ತು ಪರದೇಶಿ ಬಟ್ಟೆಗಳ ಬಹಿಷ್ಕಾರದ ಚಳವಳಿಯನ್ನು ಹೆಚ್ಚು ಜೋರಿನಿಂದ ಸಾಗಿಸಲು ಮತ್ತು ಪಿಕೆಟಿಂಗವನ್ನು ಪ್ರಾರಂಭಿಸಲು ಈ ಮಂಡಳವು ರಾಷ್ಟ್ರಸಭೆಯ ಎಲ್ಲ ಶಾಖೆಗಳಿಗೂ ಕೇಳಿಕೊಳ್ಳುತ್ತದೆ. (೪) ನಿಶ್ಚಿತವಾದ ಕರಗಳನ್ನು ಕೊಡದೆ ಕರನಿರಾಕರಣೆಯ ಚಳವಳಿಯನ್ನು ಕೆಲವು ಪ್ರಾಂತಗಳಲ್ಲಿ ಪ್ರಾರಂಭಿಸುವದಕ್ಕೆ ಈಗ ತಕ್ಕ ಸಮಯವು ಬಂದಿದೆಯೆಂದು ಈ ಮಂಡಳದ ಅಭಿಪ್ರಾಯವಿದೆ. ಆದುದರಿಂದ ಚೌಕಿದಾರ ತೆರಿಗೆಯನ್ನು ಮತ್ತು ರೈತವಾರಿ ಪದ್ಧತಿಯು ಪ್ರಚಾರದಲ್ಲಿದ್ದ ಪ್ರಾಂತಗಳ ನಿವಾಸಿಗಳು ಭೂಕಂದಾಯವನ್ನು ನಿರಾಕರಿಸಿ ಈ ಚಳವಳಿಯನ್ನು ಪ್ರಾರಂಭಿಸಬೇಕು. (೫) ಸ್ವತಂತ್ರ ರೀತಿಯಿಂದ ಉಪ್ಪನ್ನು ಸಿದ್ಧಪಡಿಸುವದನ್ನು ಇನ್ನೂ ಹೆಚ್ಚಾಗಿ ಸಾಗಿಸಬೇಕಾಗಿಯೂ ಮತ್ತು ಸಾಮುದಾಯಿಕ ಕಾಯಿದೆಭಂಗಗಳನ್ನು ಏರ್ಪಡಿಸಬೇಕಾಗಿಯೂ ಈ ಮಂಡಳವು ಎಲ್ಲ ಪ್ರಾಂ. ಕಾ. ಮಂಡಳಗಳಿಗೆ ಕೇಳಿಕೊಳ್ಳುತ್ತದೆ. (೬) ಮಧ್ಯಪ್ರಾಂತದಲ್ಲಿ ಮತ್ತು ಉಳಿದ ಪ್ರಾಂತಗಳಲ್ಲಿ ಪ್ರಾರಂಭಿಸಲ್ಪಟ್ಟ ಅರಣ್ಯ ಕಾನೂನಿನ ಭಂಗಕ್ಕೆ ಈ ಮಂಡಳವು ತನ್ನ ಒಪ್ಪಿಗೆಯನ್ನು ತೋರಿಸಿ ಅದನ್ನು ದೃಢಪಡಿಸುತ್ತದೆ. (೭) ಬ್ರಿಟಿಶ ಸರಕು, ವಿಮಾ ಕಂಪನಿ, ಬ್ಯಾಂಕು, ಹಡಗ ಇವೇ ಮೊದಲಾದವುಗಳನ್ನು ಬಹಿಷ್ಕರಿಸಲು ಈ ಮಂಡಳವು ಆಗ್ರಹಪಡಿಸುತ್ತದೆ. (೮) ಸೆರೆಸಿಂದಿ ಅಂಗಡಿಗಳ ಬಹಿಷ್ಕಾರ ಮತ್ತು ಮದ್ಯಪಾನ ಪ್ರತಿಬಂಧದ ಚಳವಳಿಯನ್ನು ಭರದಿಂದ ಸಾಗಿಸಬೇಕೆಂದು ಈ ಮಂಡಳವು ಕೇಳಿಕೊಳ್ಳುತ್ತದೆ. (೯) ಕೆಲವು ಕಡೆಗಳಲ್ಲಿ ಆದ ದಂಗೆಗಳ ಬಗ್ಗೆ ಈ ಮಂಡಳವು ವಿಷಾದವನ್ನು ವ್ಯಕ್ತಪಡಿಸುತ್ತದೆ ಮತ್ತು ಶಾಂತರೀತಿಯಿಂದ ವರ್ತಿಸಲು ಎಲ್ಲರನ್ನೂ ಪ್ರಾರ್ಥಿಸುತ್ತದೆ. (೧೦) ವೃತ್ತಪತ್ರಗಳ ದಬ್ಬಾಳಿಕೆಯ ಕಾನೂನಿನ ಬಗ್ಗೆ ಈ ಮಂಡಳವು ತನ್ನ ನಿಷೇಧವನ್ನು ವ್ಯಕ್ತಪಡಿಸುತ್ತದೆ ಮತ್ತು ಈ ದೇಶದ ಎಲ್ಲ ವೃತ್ತಪತ್ರಕರ್ತರು ತಮ್ಮ ತಮ್ಮ ಪತ್ರಗಳನ್ನು ನಿಲ್ಲಿಸಬೇಕೆಂದು ಅಭಿಪ್ರಾಯಪಡುತ್ತದೆ. (೧೧) ಮಂಡಳದ ಸಭೆಗಳನ್ನು ಕೂಡಿಸುವದು ಇನ್ನುಮುಂದೆ ಹೆಚ್ಚು ಹೆಚ್ಚು ದುಸ್ತರವಾಗಬಹುದಾದ್ದರಿಂದ ಈ ಮಂಡಳವು ಮಂಡಳದ ಸರ್ವಾಧಿಕಾರವನ್ನೆಲ್ಲ ಈಗಿನ ಅಧ್ಯಕ್ಷರಿಗೆ ಒಪ್ಪಿಸುತ್ತದೆ.

## ವರ್ತಮಾನಪತ್ರಗಳ ಹರತಾಳ

ಮುಂಬಯಿಯಲ್ಲಿ ಅಖಿಲ ಭಾರತ ವೃತ್ತಪತ್ರಕರ್ತರ ಪರಿಷತ್ತು ಶ್ರೀ. ಎ. ರಂಗಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಪರಿಷತ್ತಿನಲ್ಲಿ ಕೆಳಗಿನ ಮುಖ್ಯ ತೀರ್ಮಾನಗಳು ಸ್ವೀಕೃತವಾಗಿವೆ:- (೧) ಮಹಾತ್ಮಾ ಗಾಂಧಿಯವರನ್ನು ಸೆರೆಹಿಡಿದುದಕ್ಕಾಗಿ ಸರಕಾರದ ಕೃತಿಯನ್ನು ಈ ಸಭೆಯು ನಿಷೇಧಿಸುತ್ತದೆ. ಮಹಾತ್ಮರನ್ನು ಆಮಂತ್ರಿಸಿ ಮಹಾತ್ಮರೊಡನೆ ಸರಕಾರವು ರಾಷ್ಟ್ರದ ಬೇಡಿಕೆಯ ಸಂಬಂಧವಾಗಿ ವಿಚಾರವಿನಿಮಯ ಮಾಡಬೇಕೆಂದು ಈ ಸಭೆಯು ಸೂಚಿಸುತ್ತದೆ. (೨) ವ್ಹಾಯಿಸರಾಯರು ಹೊರಡಿಸಿದ ವೃತ್ತಪತ್ರ ದಬ್ಬಾಳಿಕೆಯ ಕಾನೂನು, ಸುಧಾರಿಸಿದ ರಾಷ್ಟ್ರಪದ್ಧತಿಗೆ ಕಳಂಕವನ್ನು ಹಚ್ಚುವಂತಹದೂ ಹಾಗೂ ಮುದ್ರಣ ಸ್ವಾತಂತ್ರ್ಯದ ಮೇಲೆ ಗದೆಯನ್ನು ಹಾಕುವಂತಹದೂ ಇದ್ದುದರಿಂದ ಈ ಸಭೆಯು ಅದನ್ನು ನಿಷೇಧಿಸುತ್ತದೆ (೩) ವೃತ್ತಪತ್ರಕರ್ತರು ಮೊದಲಿನ ಕೆಲ ಅಡವುಗಳನ್ನು ಇಡಬಹುದು. ಆದರೆ ಅದು ಜಪ್ತವಾದ ಮೇಲೆ ಮತ್ತೆ ಅಡವನ್ನು ಕೊಡದೆ ಆ ಪ್ರತಿಯನ್ನು ಪರಿಷತ್ತಿನ ಉಪಮಂಡಳದವರ ಕಡೆಗೆ ಒಪ್ಪಿಸಬೇಕು. (೪) ವೃತ್ತಪತ್ರಿಕೆಯ ದಬ್ಬಾಳಿಕೆಯ ಕಾನೂನಿನ ನಿಷೇಧಾರ್ಥವಾಗಿ, ವೃತ್ತಪತ್ರಗಳ ಕಚೇರಿ ಹಾಗು ಮುದ್ರಣಾಲಯಗಳನ್ನು ಮುಚ್ಚಿಯೂ ಮತ್ತು ವೃತ್ತಪತ್ರಗಳಿಗೆ ಸಂಬಂಧಿಸಿದಂತಹ ಉಳಿದ ಉದ್ಯೋಗಗಳನ್ನು ಬಿಟ್ಟುಕೊಟ್ಟು ಮಂಗಳವಾರ ತಾ|| ೨೦ ಹಾಗು ಬುಧವಾರ ತಾ|| ೨೧ ಈ ೨ ದಿವಸ ಹರತಾಳವನ್ನು ಪಾಲಿಸಬೇಕು.

## ಸತ್ಯಾಗ್ರಹ ಶಿಬಿರಕ್ಕೆ ಸರಕಾರದ ಸಹಾಯ

### ಸೆರೆಯಾಳುಗಳಿಗೆ ಅನ್ನವನ್ನು ಪೂರೈಸುವದಾಗಲಿಲ್ಲ.

ಶಿರೋಡಾ ಉಪ್ಪಿನ ಮಕ್ಕಾದ ಮೇಲೆ ದಾಳಿಯನ್ನು ಮಾಡಿ ಮಹಾರಾಷ್ಟ್ರದ ನೂರಾರು ಸ್ವಯಂಸೇವಕರು ಅಧಿಕಾರಿಗಳಿಂದ ಬಂಧಿತರಾಗಿದ್ದಾರಷ್ಟೆ. ಅವರಿಗೆಲ್ಲ ಆಹಾರವನ್ನು ಪೂರೈಸುವದಕ್ಕೆ ಅಲ್ಲಿಯ ಅಧಿಕಾರಿಗಳ ಬಳಿಯಲ್ಲಿ ಸಾಕಷ್ಟು ಸಾಮುಗ್ರಿಯು ಇದ್ದಿದ್ದಿಲ್ಲವಾದುದರಿಂದ ೧೨ ನೇ ತಾ|| ದಿವಸ ಅಧಿಕಾರಿಗಳು ಪ್ರತಿಯೊಬ್ಬ ಸೆರೆಯಾಳಿನ ಕೈಯಲ್ಲಿ ಐದು ಪೈಗಳನ್ನು ಕೊಟ್ಟು, ಸತ್ಯಾಗ್ರಹ ಶಿಬಿರಕ್ಕೆ ಹೋಗಿ ಉಂಡು ಬರಲು ತಿಳಿಸಿದರಂತೆ. ಅದರಂತೆಯೇ ಅವರೆಲ್ಲರೂ ಸತ್ಯಾಗ್ರಹ ಶಿಬಿರಕ್ಕೆ ಹೋಗಿ ಉಂಡು ಸ್ವಸ್ಥಾನಕ್ಕೆ ತಿರುಗಿದರಂತೆ. ಸರಕಾರದವರ ಸತ್ಯಾಗ್ರಹ ಶಿಬಿರಕ್ಕೆ ಅಪ್ರತ್ಯಕ್ಷವಾಗಿ ಸಹಾಯ ಮಾಡಿದಂತಾಗಲಿಲ್ಲವೇ!

# ಶ್ರೀಮತಿ ಸರೋಜಿನಿ ದೇವಿಯವರು ಸೆರೆಯಾಳಾಗಿ ಮುಕ್ತರಾದರು!

ಶ್ರೀಮತಿ ಸರೋಜಿನಿ ದೇವಿಯವರು ತಮ್ಮ ಸ್ವಯಂಸೇವಕರೊಂದಿಗೆ ಧರ್ಸಾನಾದಲ್ಲಿ ೨೮ ತಾಸುಗಳ ವರೆಗೆ ಬೇಸರವಿಲ್ಲದೆ ಕುಳಿತಿದ್ದುದನ್ನು ನೋಡಿ ಪೋಲೀಸ ಅಧಿಕಾರಿಗಳು ಗಾಬರಿಗೊಂಡು ಶ್ರೀಮತಿಯವರಿಗೆ ತಿರುಗಿ ಹೋಗಲು ಬಿನ್ನವಿಸಿಕೊಂಡರು. ಡಿ|| ಮ್ಯಾಜಿಸ್ಟ್ರೇಟರು ಶ್ರೀಮತಿಯವರಿದ್ದಲ್ಲಿಗೆ ಹೋಗಿ "ತಮ್ಮ ಮುಕಾಮಕ್ಕೆ ಹೋಗಿ ಸುಖದಿಂದಿರಲು ನೀವು ಇಚ್ಛಿಸುವದಿಲ್ಲವೋ?" ಎಂದು ಅವರನ್ನು ಕೇಳಿದರು. "ಮರಣಹೊಂದಿ ನೆಲಕ್ಕೆ ಬೀಳುವ ವರೆಗೆ ಇಲ್ಲವೆ ಸೆರೆಯಾಳಾಗುವವರೆಗೆ ಇಲ್ಲಿಯೇ ಇರುವೆನೆ"ಂದು ಶ್ರೀಮತಿಯವರು ಉತ್ತರ ಕೊಟ್ಟರು. ಇದನ್ನು ಕೇಳಿ ಅಧಿಕಾರಿಗಳು ಶ್ರೀಮತಿಯವರನ್ನು ಸೆರೆಹಿಡಿದು ಧರ್ಸಾನಾ ಗಡಿಯ ಆಚೆಗೆ ಕರೆದುಕೊಂಡು ಹೋಗಿ ಅವರನ್ನು ಬಿಟ್ಟುಬಿಟ್ಟರು. ಒಳಿಕ ಶ್ರೀಮತಿಯವರು ಮುಂಬಯಿಗೆ ಬಿಡಾರಕ್ಕೆ ಹೋದರು. ಇದರಂತೆಯೇ ಶ್ರೀಮತಿಯವರ ಪಥಕದ ಸ್ವಯಂಸೇವಕರನ್ನು ಅಧಿಕಾರಿಗಳು ಸೆರೆಹಿಡಿದು ಧರ್ಸಾನಾ ಗಡಿಯ ಆಚೆಗೆ ಕರೆದುಕೊಂಡು ಹೋಗಿ ಬಿಟ್ಟರೆಂಬಾಗಿ ತಿಳಿಯುತ್ತದೆ. ಈ ಸತ್ಯಾಗ್ರಹಿಗಳು ೧೭ ನೇ ತಾ|| ದಿವಸ ಮುಂಜಾನೆ ೭|| ಗಂಟೆಗೆ ಧರ್ಸಾನಾ ದಾಳಿಗಾಗಿ ಪುನಃ ಹೊರಟರು. ಶ್ರೀಮತಿ ಸರೋಜನಿಯವರು ಅವರನ್ನು ಆಶೀರ್ವದಿಸಿ ಕಳಿಸಿದರು. ಅವರು ಧರ್ಸಾನಾ ಗಡಿಯನ್ನು ಮುಟ್ಟಿದ ಕೂಡಲೇ ಪೋಲೀಸರು ಬಂದು ಅವರನ್ನು ತಡೆದರು. ಸತ್ಯಾಗ್ರಹಿಗಳು ಹಿಂದಕ್ಕೆ ತಿರುಗದೆ ಆ ಸ್ಥಳದಲ್ಲಿಯೇ ಕುಳಿತುಕೊಂಡರು. ಈ ವರೆಗೆ ಧರ್ಸಾನಾದಲ್ಲಿ [illegible] ಸತ್ಯಾಗ್ರಹಿಗಳು ಸೆರೆಹಿಡಿಯಲ್ಪಟ್ಟಿದ್ದಾರೆ.

## ಪಂಡಿತ ಮಾಲವೀಯಾ ಇವರು ಪೇಶಾವರಕ್ಕೆ ಹೊರಟರು.

ಪೇಶಾವರದಲ್ಲಾದ ದಂಗೆಯಲ್ಲಿ ದುಃಖಿತರಾದವರಿಗಾಗಿ ಸಹಾಯವನ್ನೀಯಲು ಪಂಡಿತ ಮಾಲವೀಯಾ ಇವರು ಪೇಶಾವರಕ್ಕೆ ಹೋಗುವವರಿದ್ದು, ಈ ಬಗ್ಗೆ ಪೇಶಾವರದಲ್ಲಿ ಹೋಗಲು ಅಪ್ಪಣೆಯನ್ನು ಕೊಡಲು ವಾಯವ್ಯ ಸರಹದ್ದಿನ ಪ್ರಾಂತದ ಚೀಫ ಕಮೀಶನರರಿಗೆ ಪತ್ರಬರೆದು ಕೇಳಿಕೊಂಡಿದ್ದಾರೆ.

## ಕಾಂಗ್ರೆಸ್ ಕ. ಕಾರ್ಯದರ್ಶಿಗೆ ೧೦ ವರ್ಷ ಶಿಕ್ಷೆ. ಸೊಲ್ಲಾಪುರದಲ್ಲಿ ಶಿಕ್ಷೆಯ ಸತ್ರ.

ದಂಗೆಯ ನಿಮಿತ್ತವಾಗಿ ಸೊಲ್ಲಾಪುರದಲ್ಲಿ ಬಂಧಿಸಲ್ಪಟ್ಟ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶೇಟ ರಾಮಕೃಷ್ಣ ಜಾಜು ಇವರಿಗೆ ೭ ವರ್ಷ, ಕಾರ್ಯದರ್ಶಿಗಳಾದ ತುಳಸೀರಾಮ ಜಾಧವ ಇವರಿಗೆ ೧೦ ವರ್ಷ, ಶ್ರೀ ವೆಂಕಟೇಶ ಗಣೇಶ ದೇಶಪಾಂಡೆ ಇವರಿಗೆ ೭ ವರ್ಷ, ಮತ್ತು ೨೦೦೦ ರು. ದಂಡ ಜಂಗವ[illegible] ಆಯ್ಯ ಇವರಿಗೆ ೩ ವರ್ಷ ಮತ್ತು ೧೨೦೦ ದಂಡ, ಮ್ಯುನಿಸಿಪಾಲಟಿಯ ಅಧ್ಯಕ್ಷರಾದ ಶೇಟ ಮಾಣಿಕಚಂದ ಇವರಿಗೆ ೬ ತಿಂಗಳ ಮತ್ತು ೧೦೦೦ ರು. ದಂಡ ಹೀಗೆ ಶಿಕ್ಷೆಗಳು ವಿಧಿಸಲ್ಪಟ್ಟವೆಂದು ಕೇಳಗಿ ಬರುತ್ತಿದೆ"

## ಜಮದಗ್ನಿಯವರಿಗೆ ೯ ವರ್ಷ ಸಕ್ರಮ ಶಿಕ್ಷೆ

ಉಪ್ಪಿನ ಕಟ್ಟಳೆಯನ್ನು ಮುರಿದದಕ್ಕಾಗಿ ಮದ್ರಾಸದಲ್ಲಿ ಶ್ರೀ ಜಮದಗ್ನಿ ಇವರಿಗೆ ೯ ವರ್ಷದ ಸಕ್ರಮ ಶಿಕ್ಷೆಯಾಗಿದೆ.

## "ಯಂಗ ಇಂಡಿಯಾ" ಪತ್ರದ ಭವಿತವ್ಯ

ಮಹಾತ್ಮಾಗಾಂಧಿಯವರ ಸಂಪಾದಕತ್ವದಲ್ಲಿ ಪ್ರಸಿದ್ಧವಾಗುತ್ತಿದ್ದ "ಯಂಗ ಇಂಡಿಯಾ" ಪತ್ರಿಕೆಯು ಇನ್ನು ಮುಂದೆ ಅಖಿಲಭಾರತ ಚರಕಾಸಂಘದ ಕಾರ್ಯದರ್ಶಿಗಳಾಗಿರುವ ಸಿಂಧ ಹೈದರಾಬಾದದ ಶ್ರೀ ಜಯರಾಮದಾಸ ದೌಲತರಾಮ ಇವರ ಸಂಪಾದಕತ್ವದಲ್ಲಿ ಹೊರಟು ಅಹಮ್ಮದಾಬಾದದಲ್ಲಿ ಪ್ರಕಟಿಸಲ್ಪಡುವದಾಗಿ ತಿಳಿಯುತ್ತದೆ.

## ಡಾ. ಗೋಪೀಚಂದರಿಗೆ ೧ ವರ್ಷ ಶಿಕ್ಷೆ

ರಾಜದ್ರೋಹಾತ್ಮಕ ಭಾಷಣಗಳನ್ನು ಮಾಡಿದುದಕ್ಕಾಗಿ ಬಂಧಿಸಲ್ಪಟ್ಟ ಲಾಹೋರದ ಡಾ. ಗೋಪೀಚಂದ ಭಾರ್ಗವ ಇವರಿಗೆ ೧ ವರ್ಷ ಸಾದಾ ಶಿಕ್ಷೆಯಾಗಿದೆ.

## ಮುಂಬಯಿಯಲ್ಲಿ ಕಾಯಿದೆಭಂಗ

ಮುಂಬಯಿಯ ಕಾಂ. ಕಮೀಟಿಯ ಯುದ್ಧಮಂಡಳದವರು ಚೀಫ ಪ್ರೆ. ಮ್ಯಾಜಿಸ್ಟ್ರೇಟರು ತೆಗೆದ ಅಪ್ಪಣೆಯನ್ನು ಉಲ್ಲಂಘಿಸಿ "ಕಾಂಗ್ರೆಸ ಪತ್ರಿಕೆ"ಯನ್ನು ಹೊರಡಿಸಿದರು. ಈ "ಕಾಂಗ್ರೆಸ್ ಪತ್ರಿಕೆ"ಯನ್ನು ಮಾರುತ್ತಿದ್ದವರಲ್ಲಿ ಇಬ್ಬರನ್ನು ಅಧಿಕಾರಿಗಳು ಬಂಧಿಸಿದ್ದಾರೆ.

## ಸಿಂಧದಲ್ಲಿ ದಬ್ಬಾಳಿಕೆ.

ಸಿಂಧ ಹೈದರಾಬಾದದಲ್ಲಿ ಹೊರಡುತ್ತಿರುವ "ಹಿಂದು" ಪತ್ರಿಕೆಯ ಸಂಪಾದಕರಾದ ಪ್ರೊ. ಘನಶ್ಯಾಮ ಜೇಠಾನಂದ ಇವರು, ಕಾಯಿದೆಗಳನ್ನು ಮುರಿಯಲು ಜನರಿಗೆ ಬೋಧಿಸಿದುದಕ್ಕಾಗಿ ೧ ವರ್ಷದ ಸಕ್ರಮ ಶಿಕ್ಷೆಗೆ ಒಳಗಾಗಿದ್ದಾರೆ.

## ಮದ್ರಾಸದಲ್ಲಿ ಸ್ವತಂತ್ರಪತ್ರಗಳ ದಬ್ಬಾಳಿಕೆ.

ಮದ್ರಾಸ ಸರಕಾರದವರು ಆಡವು ಇಡಲು ಕೇಳಿದುದಕ್ಕಾಗಿ "ಸ್ವದೇಶಮಿತ್ರನ್" ಎಂಬ ತಮಿಳು ದೈನಿಕ ಪತ್ರವು ನಿಂತು ಹೋಗಿದೆ. ಡಾ. ವರದರಾಜಲು ನಾಯಿಡುರವರು "ತಮಿಳನಾಡು" ಎಂಬ ಪತ್ರಿಕೆಯನ್ನು ನಿಲ್ಲಿಸುವವರಿದ್ದಾರೆ.

## ಕೌನ್ಸಿಲಕ್ಕೆ ರಾಜೀನಾಮೆ

ಚಾಳೀಸಗಾವದ ಶ್ರೀ ಪಾಟಸ್ಕರರು ದಬ್ಬಾಳಿಕೆಯ ನಿಷೇಧಾರ್ಥವಾಗಿ ಮುಂಬಯಿಯ ಕಾಯಿದೆ ಮಂಡಳದ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ.

## ಅಸೆಂಬ್ಲಿಗೆ ರಾಜೀನಾಮೆ

ಪಂಡಿತ ಹೃದಯನಾಥ ಕುಂಝ್ರು ಇವರು ಅಸೆಂಬ್ಲಿಯ ಸಭಾಸದತ್ವಕ್ಕೆ ಶರಣು ಹೊಡೆದಿದ್ದಾರೆ.

## ಮಹಾತ್ಮರ ಬಿಡುಗಡೆಯ ಭವಿಷ್ಯ

ಮೇ ೨೪ ನೆಯ ಕಾರ್ತಿಸಿಂದ ಜೂನ ೧೧ ನೆಯ ತಾ|| ಸೋಗಿಗೆ, ಮಹಾತ್ಮಾಗಾಂಧಿಯವರನ್ನು ಬಿಡುಗಡೆ ಮಾಡುವ ಪ್ರಸಂಗವು ಸರಕಾರಕ್ಕೆ ಬರುತ್ತಿದೆಂದು ಮಾಲವಣದ ಶ್ರೀ ವ್ಯಾಪಾರಣಕರರು ಭವಿಷ್ಯವನ್ನು ವರ್ತಿಸಿದ್ದಾರೆ.

## ಸಿಂದೀ ಗಿಡಗಳನ್ನು ಕಡಿದರು

ಬೆಳಗಾವಿ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಈ ವರೆಗೆ ೧೮೦೦೦ ಸಿಂದೀ ಗಿಡಗಳು ಸ್ವಯಂಸೇವಕರಿಂದ ಕಡಿಯಲ್ಪಟ್ಟಿವೆಯೆಂದು ತಿಳಿಯುತ್ತದೆ.

## ಅಲ್ಲಲ್ಲಿಯ ಶಿಕ್ಷೆಗಳು

ವೇದಾರಣ್ಯಂ ಗ್ರಾಮದ ಶ್ರೀಮತಿ ಲಕ್ಷ್ಮೀಪತಿಯವರು ಇ. ಪಿ. ಕೋ. ೧೧೭ ನೆಯ ಕಲಮಿನನ್ವಯ ೧ ವರ್ಷ ಸಾದಾ ಶಿಕ್ಷೆಗೆ ಗುರಿಯಾಗಿದ್ದಾರೆ.

ಮಧ್ಯಪ್ರಾಂತದ ಶ್ರೀ. ಗೋವಿಂದದಾಸ, ಪಂಡಿತ ದ್ವಾರಕಾಪ್ರಸಾದ ಮಿಶ್ರ, ಮಾಖನಲಾಲ ಚತುರ್ವೇದಿ ಮತ್ತು ರವಿಶಂಕರ ಶುಕ್ಲ ಇವರಿಗೆ ೧೨೪ ಅ, ೧೫೦ ಬ ಮತ್ತು ೧೧೭ ಇ ಪಿ ಕೋ ಕಲಮುಗಳನ್ವಯ ೨ ವರ್ಷಗಳ ಸಕ್ರಮ ಶಿಕ್ಷೆಗಳಾಗಿವೆ.

ಸ್ವಯಂಸೇವಕರಿಗೆ ಶಿಕ್ಷಣವನ್ನು ಕೊಡಲು ಸಾಬರಮತಿ ಆಶ್ರಮದಿಂದ ಬಂಗಾಲಕ್ಕೆ ಹೋದ ಮಹಾತ್ಮರ ಕಾರ್ಯದರ್ಶಿಗಳಾದ ಶ್ರೀ. ಕೃಷ್ಣದಾಸರಿಗೆ ಕ್ರಿ. ಪ್ರೊ. ಕೋ. ೧೪೪ ನೆಯ ಕಟ್ಟಳೆಯನ್ನು ಮುರಿದುದಕ್ಕಾಗಿ ೬ ತಿಂಗಳ ಶಿಕ್ಷೆಯಾಗಿದೆ.

ಮೀರತದ ಪ್ರಸಿದ್ಧ ಜಮೀನದಾರರಾದ ಶ್ರೀ. ಶೇಟ ರಾಮಗೋಪಾಳ ಹಾಗು ಜಯರಾಮಶರ್ಮಾ ಇವರು ೬ ತಿಂಗಳ ಸಕ್ರಮ ಶಿಕ್ಷೆ ಮತ್ತು ೫೦೦ ರು. ದಂಡಕ್ಕೆ ಪಾತ್ರರಾಗಿದ್ದಾರೆ.

ಮುಂಬಯಿಯಲ್ಲಿಯ ಶ್ರೀ ಸ್ವಾಮಿ ಕುವಲಯಾನಂದರಿಗೆ ಇ. ಪಿ ಕೋ. ೧೧೭ ನೆಯ ಕಲಮಿನನ್ವಯ ೯ ತಿಂಗಳ ಸಕ್ರಮ ಶಿಕ್ಷೆಯಾಗಿದೆ.

## ಅಂಕೋಲೆಯಲ್ಲಿ ಹಿಡಿದರು

ಶ್ರೀ ಶಾನಭಾಗರಿಗೆ ೧|| ವರ್ಷ ಶಿಕ್ಷೆ.

ಅಂಕೋಲಾ ತಾಲೂಕಿನಲ್ಲಿ ಮದ್ಯಪಾನ ನಿಷೇಧದ ಹಾಗು ವಿದೇಶಿ ವಸ್ತ್ರ ಬಹಿಷ್ಕಾರದ ಚಳವಳಿಗಳು ಭರದಿಂದ ಸಾಗಿವೆ. ವಾರದಲ್ಲಿ ಮೂರು ಸಲ ಸಭೆಗಳನ್ನು ಜರುಗಿಸಿ ವಿಧಾಯಕ ಕಾರ್ಯಕ್ರಮಗಳ ಬಗ್ಗೆ ಜನರಿಗೆ ತಿಳಿಸಿ ಹೇಳುವದರಲ್ಲಿ ಬರುವದು. ಈ ಪಟ್ಟಿಯ ಹತ್ತಿರವಿರುವ ತದರಿ ಬಂದರದಲ್ಲಿ ಭಾಷಣ ಮಾಡಿದ್ದಕ್ಕಾಗಿ ಶ್ರೀ ಲಕ್ಷ್ಮಣ್ಣ ಶಾನಭಾಗ ಇವರು ಬಂಧಿಸಲ್ಪಟ್ಟು [illegible] ವರ್ಷದ ಶಿಕ್ಷೆಗೆ ಗುರಿಯಾಗಿದ್ದಾರೆ.

## ಹುಬ್ಬಳ್ಳಿಯಲ್ಲಿ ವಿದ್ಯುದ್ದೀಪಗಳಿಗೆ ಬಹಿಷ್ಕಾರ

ಹುಬ್ಬಳ್ಳಿಯ ಪೇಟೆಯ ವ್ಯಾಪಾರಿಗಳು ವಿದ್ಯುದ್ದೀಪಗಳಿಗೆ ಬಹಿಷ್ಕಾರ ಹಾಕಿ ತಮ್ಮ ಅಂಗಡಿಗಳಲ್ಲಿ ವಿದ್ಯುದ್ದೀಪಗಳನ್ನು ಹಚ್ಚುವದನ್ನು ನಿಲ್ಲಿಸಿರುವರು.

## ಕರ್ನಾಟಕದಲ್ಲಿ ಶೆರೆ ಸಿಂದಿ ಬಹಿಷ್ಕಾರ

ಕರ್ನಾಟಕದಲ್ಲಿ ಶೆರೆ ಸಿಂದಿ ಬಹಿಷ್ಕಾರದ ಕಾರ್ಯಕ್ರಮವು ಒತ್ತರದಿಂದ ಸಾಗಿದೆ. ಅನೇಕ ಕಡೆಗಳಲ್ಲಿ ಸಿಂದೀ ಗಿಡಗಳನ್ನು ಕಡಿದೊಗೆಯುವ ಕಾರ್ಯವು ಪ್ರಾರಂಭವಾಗಿದೆ. ಕಿತ್ತೂರ ಮತ್ತು ಮುರಗೋಡದಲ್ಲಿ ಈ [illegible]ಗಳಲ್ಲಿ ೧೦೦೦ ಕ್ಕಿಂತ ಹೆಚ್ಚು ಸಿಂದೀ ಗಿಡಗಳು ಕಡಿಯಲ್ಪಟ್ಟಿವೆ ಸತ್ಯಾಗ್ರಹಿಗಳು ಹಳ್ಳಿ ಹಳ್ಳಿಗೆ ಹೋಗಿ ಶೆರೆ ಕುಡಿಯಬೇಡಿರೆಂದು ಬೋಧಿಸಹತ್ತಿದ್ದಾರೆ. ಕೆಲವೆಡೆಗಳಲ್ಲಿ ಗ್ರಾಮಸ್ಥರೆಲ್ಲರೂ ಸೇರಿ, ಇನ್ನು ಮುಂದೆ ಯಾರೂ ಶೆರೆ ಕುಡಿಯಬಾರದೆಂದೂ, ಕುಡಿಯುವವರಿಗೆ ಬಹಿಷ್ಕಾರ ಹಾಕತಕ್ಕದ್ದೆಂದೂ ಕಟ್ಟು ಮಾಡಿಕೊಂಡಿದ್ದಾರೆ.

## ಸ್ವತಂತ್ರ ಉಪ್ಪಿನ ವಖಾರ

ರತ್ನಾಗಿರಿಯ ಸತ್ಯಾಗ್ರಹಿಗಳೆಲ್ಲರೂ ಸೇರಿ ೫೦ ಫೂಟು ಉದ್ದ ಹಾಗು ೪೦ ಫೂಟು ಅಗಲ ಇರುವಂತಹ ಒಂದು ವಖಾರವನ್ನು ಕಟ್ಟಿ ಅದರ ಸುತ್ತಲೂ ೪ ಫೂಟು ಅಗಲ ಹಾಗು ೪ ಫೂಟು ಆಳವಿರುವಂತಹ ಒಂದು ಕಂದಕವನ್ನು ಸಿದ್ಧಪಡಿಸಿದ್ದಾರೆ

## ಹುಬ್ಬಳ್ಳಿಯಲ್ಲಿ ಹರತಾಳ.

ಶ್ರೀ ಅಬ್ಬಾಸ ತಯಬಜಿಯವರನ್ನು ಸೆರೆಹಿಡಿದುದಕ್ಕಾಗಿ ಹುಬ್ಬಳ್ಳಿಯಲ್ಲಿ ಹರತಾಳವು ಬಹಳ ಯಶಸ್ವಿಯಾಗಿ ಆಚರಿಸಲ್ಪಟ್ಟಿತು. ಹಿಂದೂ ಜನರ ಎಲ್ಲ ಅಂಗಡಿಗಳೂ ಮುಚ್ಚಲ್ಪಟ್ಟಿದ್ದವು ರೇಲ್ವೆ ವರ್ಕಶಾಪಿಗೆ ಅಂದು ೧೨೦೦ ಜನರು ಕೆಲಸದ ಮೇಲೆ ಹೋಗಿದ್ದಿಲ್ಲ. ಸಂಜೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ಹಾವೇರಿಯ ಶ್ರೀ ಹೊಸಮನಿ ವಕೀಲರು ಬೆಳಗಾಂವಿಯ ಬ್ರಾಹ್ಮಣೇತರ ಪರಿಷತ್ತಿನ ಸಂದೇಶವನ್ನು ಕುರಿತು ಭಾಷಣಮಾಡಿದರು.

## “ಟಾಯಿಮ್ಸ' ಪತ್ರಕ್ಕೆ ಬಹಿಷ್ಕಾರ.

ಹುಬ್ಬಳ್ಳಿಯ ಶ್ರೀ ಸರಸ್ವತಿ ವಿದ್ಯಾರಣ್ಯ ಧರ್ಮಾರ್ಥ ವಾಚನಾಲಯದವರು “ಇಂಡಿಯನ್ ಡೇಲಿ ಮೇಲ್” ಹಾಗು “ಟಾಯಿಮ್ಸ ಆಫ್ ಇಂಡಿಯಾ' ಪತ್ರಗಳಿಗೆ ಬಹಿಷ್ಕಾರ ಹಾಕಿ ಅವುಗಳನ್ನು ತರಿಸುವದನ್ನು ನಿಲ್ಲಿಸಿದ್ದಾರೆ.

ಕಂಪನಿಯ ಮುಕ್ಕಾಂ ಸ್ವಲ್ಪ ಉಳಿದಿವೆ,

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಸೋಮವಾರ ತಾ|| ೧೯—೫—೩೦

ಯಚ್ಚಮ್ಮನಾಯಕ.

**ಎಂಬ ನಾಟಕವನ್ನು ಅಭಿನಯಿಸುವರು.**

ಈ ನಾಟಕಗಳು ಪುನಃ ಆಗಲ್ಪಡುವದಿಲ್ಲ.

ಸಂಘದೊಡೆಯ—**ಸದಾಶಿವರಾವ ಗೆರೂಡ**

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

यद्यत् परवशं दुःखं । यद्यदात्मवशं सुखम् ॥—मनु.

# ಕನ್ನಡಿಗ

KANNADIGA
BAGALKOT.

BI-WEEKLY
ಅರೆವಾರ ಪತ್ರಿಕೆ.

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮುದಾರ

ಬಾಗಲಕೋಟೆ ಗುರುವಾರ ಮಿತಿ ವೈಶಾಖ ಬಹುಳ ೯ ಶಕೆ ೧೮೫೨ ತಾ ೨೨—೫—೩೦ ಸಂಚಿಕೆ ೫೮

## ಅಂಕೋಲೆಯ ವಾರ್ತೆ

ಸಿರ್ಸಿ ಮತ್ತು ಅಂಕೋಲಾ ತಾಲೂಕಗಳಲ್ಲಿ ಮದ್ಯಪಾನ ನಿಷೇಧದ ಕೆಲಸವು ಒಳ್ಳೇ ಭರದಿಂದ ಸಾಗಿದೆ. ಈಡುಕರೇ ಕುಡಿಯುವದನ್ನು ಬಿಟ್ಟುಗೊಟ್ಟು ನಿಷೇಧ ಕಾರ್ಯದಲ್ಲಿ ಹೆಚ್ಚು ಉತ್ಸಾಹದಿಂದ ಭಾಗವನ್ನು ತೆಗೆದುಕೊಳ್ಳಹತ್ತಿದ್ದಾರೆ. ಪ್ರತಿ ಗ್ರಾಮಗಳಲ್ಲಿಯೂ ಪಂಚಾಯಿತಗಳನ್ನು ಮಾಡಿಕೊಂಡು ಮದ್ಯಪಾನ ನಿಷೇಧದ ಗೊತ್ತಿಗೆ ವಿರುದ್ಧವಾಗಿ ನಡೆದವರಿಗೆ ದಂಡವನ್ನು ಮಾಡಲು ನಿಶ್ಚಯಿಸಿರುತ್ತಾರೆ. ಸೆರೆ ಕುಡಿಯುವದು ಈಗ ಬಹಳ ಕಡಿಮೆಯಾಗಿದ್ದು, ಕೆಲವು ದಿವಸಗಳಲ್ಲಿಯೇ ಅನೇಕ ಅಂಗಡಿಗಳು ಮುಚ್ಚಬಹದಾಗಿವೆ. ಉಪ್ಪಿನ ಸತ್ಯಾಗ್ರಹವು ಎಂದಿನಂತೆ ನಡೆದಿದ್ದು, ಹೆಂಗಸರು, ಮಕ್ಕಳು, ಎಲ್ಲರೂ ಉಪ್ಪನ್ನು ಸಿದ್ಧಪಡಿಸಿ ಬೀದಿಗಳಲ್ಲಿ ಮಾರುತ್ತಲಿದ್ದಾರೆ. ಅಂಕೋಲಾ ತಾಲೂಕಿನಲ್ಲಿ ಕರಕೊಡದ ಉಪ್ಪಿಲ್ಲದ ಮನೆಯೇ ಇಲ್ಲ. ಇಲ್ಲಿಂದ ಕಾದಿ, ಭಟಕಳ ಮುಂತಾದ ಸ್ಥಳಗಳಿಗೆ ಹೋದ ಸ್ವಯಂಸೇವಕರು ಕರಕೊಡದ ಉಪ್ಪನ್ನು ಲಿಲಾವ ಮಾಡಿ ೧೫೬ ರು. ಗಳನ್ನು ಗಳಿಸಿದ್ದಾರೆ. ಸಾಣಿಗಟ್ಟೆ ಉಪ್ಪಿನ ಮಾಳಿಗಳ ಮೇಲೆ ದಾಳಿಯನ್ನು ಮಾಡುವರೆಂದು ತಿಳಿದು, ಸರಕಾರದವರು ಕಾರವಾರದಿಂದ ಸಶಸ್ತ್ರ ಪೋಲೀಸರನ್ನು ಕರೆಯಿಸಿಕೊಂಡು ಅಲ್ಲಿ ಕಾವಲಿಟ್ಟಿದ್ದಾರೆ ಕೆಲವು ಸತ್ಯಾಗ್ರಹಿಗಳು ದಕ್ಷಿಣ ಕಾನಡಾದ ಕೆಲವು ಭಾಗಗಳಿಗೆ ಪ್ರಚಾರಕ್ಕೆ ಹೋಗಿದ್ದಾರೆ. ಶಿರ್ಸಿಯಲ್ಲಿ ಒಂದು ಶಿಬಿರವು ತೆಗೆಯಲ್ಪಟ್ಟಿದೆ.

ಕರ್ನಾಟಕ ಸತ್ಯಾಗ್ರಹ ಶಿಬಿರ
ಅಂಕೋಲಾ
೧೯—೫—೩೦
} ಪ್ರಕಟನಾ ಕಾರ್ಯಾಧಿಕಾರಿ

## ಸ್ವರಾಜ್ಯನಿಧಿಗೆ ೫ ಲಕ್ಷ ರೂ. ಗಳ ಸಹಾಯ

ಮುಂಬಯಿಯ ಪ್ರಸಿದ್ಧ ಎಡ್ವೋಕೇಟರಾದ ಶ್ರೀ ಭುಲಾಭಾಯಿ ದೇಸಾಯಿಯವರು ಸ್ವರಾಜ್ಯನಿಧಿಗೆ ೫ ಲಕ್ಷ ರೂಪಾಯಿಗಳನ್ನು ದಾನ ಮಾಡಿರುವರಾಗಿ ತಿಳಿಯುತ್ತದೆ. ಇಲ್ಲಿಯ ಲಕ್ಷಾಧೀಶರು ಇವರನ್ನು ಅನುಕರಿಸಬಾರದೇ ?

## ಹಾವೇರಿಯ ಶ್ರೀ॥ ಹೊಸಮನಿ ವಕೀಲರು ಸ್ವಯಂಸೇವಕರಾದರು

ಬೆಳಗಾವಿಯ ಬ್ರಾಹ್ಮಣೇತರ ಪರಿಷತ್ತಿನ ಅಧ್ಯಕ್ಷರಾದ ಹಾವೇರಿಯ ಶ್ರೀ॥ ಹೊಸಮನಿ ವಕೀಲರು ಧಾರವಾಡಕ್ಕೆ ಹೋದಾಗ ಅವರಿಗೆ ಸಾರ್ವಜನಿಕ ರೀತಿಯಿಂದಲೂ ಹಾಗು ಕರ್ನಾಟಕ ಪ್ರಾಂತಿಕ ಕಮಿಟಿಯ ಪರಿಯಿಂದಲೂ ಬಹುಮಾನ ಪೂರ್ವಕವಾಗಿ ಸನ್ಮಾನವು ಮಾಡಲ್ಪಟ್ಟಿತು. ಶ್ರೀ. ಕೌಜಲಗಿ ಶ್ರೀನಿವಾಸರಾಯರು ಕಾಂಗ್ರೆಸಕ್ಕೆ ಬಂದು ಕೂಡಿದುದಕ್ಕಾಗಿ ಅಭಿನಂದನೆಯನ್ನು ಮಾಡಿ ಅವರಿಗೆ ಪೂಮಾಲೆಗಳನ್ನರ್ಪಿಸಿದರು. ಈ ಸನ್ಮಾನಕ್ಕೆ ಉತ್ತರ ಕೊಡುವಾಗ ಶ್ರೀ. ಹೊಸಮನಿಯವರು “ ನಾನು ಮೊದಲಿನಿಂದ ರಾಷ್ಟ್ರೀಯನೇ ಇದ್ದೇನೆ. ಆದರೆ ಹಿಂಬಲವಿರಲಿಲ್ಲ. ಬೆಳಗಾವಿಯ ಸಭೆಯು ನನಗೆ ಈಗ ಬೆಂಬಲ ಕೊಟ್ಟಿದೆ. ದೇಶಹಿತದ ಸಲುವಾಗಿ ಕಾಂಗ್ರೆಸದ ಯಾವದಾದರೂ ಕಾರ್ಯವನ್ನು ಸಾಧಾರಣ ಸ್ವಯಂಸೇವಕನಂತೆ ಮಾಡಲು ಯಾವಾಗಲೂ ನಾನು ಸಿದ್ಧನಿದ್ದೇನೆ ” ಎಂಬ ಆಶಯದ ಭಾಷಣವನ್ನಿತ್ತರು. ಇಲ್ಲಿಯ ಬ್ರಾಹ್ಮಣೇತರ ಬಂಧುಗಳಿಗೆ ಭಾರತದ ಕೂಗು ಇನ್ನೂ ಕೇಳಬರಲೊಲ್ಲದೋ ?

## ಬೆಳಗಾವಿಯ ಸತ್ಯಾಗ್ರಹ ಶಿಬಿರವನ್ನು ಪೋಲೀಸರು ಮುತ್ತಿದರು

೧೦೦ ಜನ ಸಶಸ್ತ್ರ ಪೋಲೀಸರನ್ನು ಕರೆದುಕೊಂಡು ಪೋಲೀಸ ಸುಪರಿಂಟೆಂಡೆಂಟರು ೧೮ ನೆಯ ತಾ॥ ದಿವಸ ೬-೩೦ ಗಂಟೆಗೆ ಬೆಳಗಾವಿಯ ಸತ್ಯಾಗ್ರಹ ಶಿಬಿರವನ್ನು ಮುತ್ತಿ ಅದನ್ನು ತಮ್ಮ ಕೈವಶಪಡಿಸಿಕೊಂಡಿದ್ದಾರೆ. ಶಿರೋಡೆಯಿಂದ ಬಂದ ಸತ್ಯಾಗ್ರಹಿಗಳ ಸೇನಾಪತಿಯಾದ ಶ್ರೀ. ಗೋಖಲೆಯವರ ವ್ಯಾಖ್ಯಾನದ ಡಂಗುರವನ್ನು ಸಾರಲು ಪ್ರಮುಖ ಸ್ವಯಂಸೇವಕರು ಊರಲ್ಲಿ ಹೋಗಿದ್ದರು. ಶಿಬಿರದಲ್ಲಿಯ ಸತ್ಯಾಗ್ರಹಿಗಳು ಪೋಲೀಸರ ಎದುರಿನಲ್ಲಿಯೇ ತಮ್ಮ ತಮ್ಮ ಸಾಮಾನುಗಳನ್ನು ತೆಗೆದುಕೊಂಡು ಹೊರಬಿದ್ದರು. ಯಾರನ್ನೂ ಅಧಿಕಾರಿಗಳು ಕೈಸೆರೆಮಾಡಲಿಲ್ಲ.

## ಚಿಕ್ಕೋಡಿಯವರು ತಿಪ್ಪರಲಾಗಾ ಹೊಡೆದರು.

ಬೆಳಗಾವಿ ಜಿಲ್ಹೆಯಿಂದ ಮುಂಬಯಿ ಕಾಯದೆ ಮಂಡಳಕ್ಕೆ ಪ್ರತಿನಿಧಿಗಳಾಗಿ ಆರಿಸಿ ಹೋದ ಶ್ರೀ ಪಂಡಿತಪ್ಪಾ ಚಿಕ್ಕೋಡಿಯವರು ಬ್ರಾಹ್ಮಣೇತರರದೊಂದು ಶಿಷ್ಟಮಂಡಳವನ್ನು ತೆಗೆದುಕೊಂಡು ಹೋಗಿ ಕಮೀಶನರ ದೊರೆಗಳನ್ನು ಕಂಡರಂತೆ! ಅವರೊಡನೆ ದೇಶದಲ್ಲೆಲ್ಲ ನಡೆದ ಕಾಯದೆಭಂಗದ ವಿಷಯವಾಗಿ ಚರ್ಚಿಸಿದರಂತೆ! ಬ್ರಾಹ್ಮಣೇತರ ಸಮಾಜದ ಸಂಪೂರ್ಣ ಬೆಂಬಲವು ಸರಕಾರಕ್ಕಿದೆಯೆಂದೂ ಒಡನೆ.ಈ ಚಳವಳಿಯನ್ನು ಮುರಿಯಲು ಸಾಧ್ಯವಿದ್ದಷ್ಟುಮಟ್ಟಿಗೆ ಬ್ರಾಹ್ಮಣೇತರರು ಪ್ರಯತ್ನಿಸುವರಾಗಿ ಅವರಿಗೆ ಆಶ್ವಾಸನವನ್ನಿತ್ತರಂತೆ! ಕೆಲವು ತಿಂಗಳುಗಳ ಹಿಂದೆ ಸರದಾರ ವಲ್ಲಭಭಾಯಿಯವರೊಡನೆಯೂ, ದೇ, ಭ ಗಂಗಾಧರರಾಯರೊಡನೆಯೂ, ಕರ್ನಾಟಕವನ್ನೆಲ್ಲ ಸುತ್ತಿ, ಅಲ್ಲಲ್ಲಿ ರೈತರ ಸಂಘಗಳನ್ನು ಸ್ಥಾಪಿಸಿ, ರೈತರ ಸಂಕಟಗಳನ್ನು ದೂರ ಮಾಡುವ ಹೊಣೆಯನ್ನು ಹೊತ್ತ ಈ ಮಹಾಶಯರ ಈ ಹೊತ್ತಿನ ಕೃತಿಯನ್ನು ಕಂಡು ಯಾರಿಗೂ ಖೇದಾಶ್ಚರ್ಯವಾಗದೆ ಇರಲಿಕ್ಕಿಲ್ಲ! ಬ್ರಾಹ್ಮಣೇತರ ಸಮಾಜದ ಸಂಪೂರ್ಣ ಬೆಂಬಲವಾದರೂ ಇವರಿಗೆ ಇದೆಯೆನ್ನಬೇಕೇ? ಅದೂ ಇಲ್ಲ. ಮೊನ್ನೆ ಮೊನ್ನೆ ಬೆಳಗಾವಿಯಲ್ಲಿ ಕೂಡಿದ ಬ್ರಾಹ್ಮಣೇತರ ಪರಿಷತ್ತಿನವರು ಹೊತ್ತು ಬಂದಂತೆ ಕೊಡೆ ಹಿಡಿಯುವ ಮುಂದಾಳುಗಳ ವಿರುದ್ಧ ಎಬ್ಬಿಸಿದ ಬಂಡೇ ಇದಕ್ಕೆ ಸಾಕ್ಷಿಯಾಗಿದೆ. ಹೀಗೆ ತಮ್ಮ ಸಮಾಜದ ಮೇಲೆಯೆ ಸಾಕಷ್ಟು ಹಿಡಿತವಿರದಂತಹ ಈ ಮಹಾಶಯರು ಚಳವಳಿಯನ್ನು ಮುರಿಯುವ ಆಶ್ವಾಸನವನ್ನು ಹೇಗಿತ್ತರೋ ತಿಳಿಯದಾಗಿದೆ. ಏನೇ ಇರಲಿ! ಶ್ರೀ ಚಿಕ್ಕೋಡಿಯವರಂತೂ "ಲಾಗಾ" ಹೊಡೆದದ್ದು ನಿಜ.

## ಪಂಡಿತ ಮಾಲವೀಯರಿಗೂ ಸರಕಾರದ ಮೇಲೆ ಸಂಶಯ ಬಂತು.

ಪೇಶಾವರದಲ್ಲಾದ ದಂಗೆಯ ಸಂಬಂಧವಾಗಿ ವಿಚಾರಣೆಯನ್ನು ಮಾಡಲು ಶ್ರೀ ಪಟೇಲರ ಅಧ್ಯಕ್ಷತೆಯ ಕೆಳಗೆ ಅ ಭಾ ರಾ. ಸ. ಕಾರ್ಯಕಾರೀ ಮಂಡಳದವರು ಒಂದು ಮಂಡಳವನ್ನು ನಿಯಮಿಸಿದ್ದರಷ್ಟೆ. ಈ ಮಂಡಳದವರು ಪೇಶಾವರದಲ್ಲಿ ಕಾಲಿಟ್ಟರೆ ತಮ್ಮ ಹುಳುಕುಗಳೆಲ್ಲ ಹೊರಬೀಳುವವೆಂಬ ಸಂಶಯಕ್ಕೊಳಗಾಗಿ ಚೀಫ ಕಮೀಶನರ ದೊರೆಗಳು ಅವರು ಪೇಶಾವರದಲ್ಲಿ ಕಾಲಿಡ ಕೂಡದೆಂದು ಅವರನ್ನು ನಿರ್ಬಂಧಿಸಿದರು. ಇದರಂತೆಯೆ ನಿರಾಶ್ರಿತರಿಗೆ ಸಹಾಯ ಮಾಡುವದಕ್ಕಾಗಿ ಹೋಗಲಿಚ್ಛಿಸಿದ ಪಂಡಿತ ಮಾಲವೀಯರವರನ್ನೂ ನಿರ್ಬಂಧಿಸಿದ್ದಾರೆ. ಹೀಗೆ ನಿರ್ಬಂಧಿಸಿದ್ದನ್ನು ಕಂಡು ಪಂಡಿತರು ಕಮೀಶನರರಿಗೆ ಕೆಳಗಿನ ಆಶಯದ ಒಂದು ಪತ್ರವನ್ನು ಬರೆದಿದ್ದಾರೆ. "ನಾನು ಪೇಶಾವರದಲ್ಲಿ ಕಾಲಿಡಕೂಡದೆಂದು ನನ್ನನ್ನು ಏಕೆ ನಿರ್ಬಂಧಿಸಿದಿರೋ ತಿಳಿಯದಾಗಿದೆ. ಶ್ರೀ ಪಟೇಲರ ಮಂಡಳವನ್ನು ನಿರ್ಬಂಧಿಸಿದ ಮೇಲೆ ನನ್ನನ್ನು ನಿರ್ಬಂಧಿಸಿದ್ದು ಬಲವತ್ತರವಾದ ಸಂಶಯಕ್ಕೂ ಅಲ್ಲಿಯ ರಾಜ್ಯದಾಡಳಿತೆಯಲ್ಲಿ ಏನೇನೋ ಅನ್ಯಾಯಗಳಾಗ ಹತ್ತಿವೆಯೆಂಬುದನ್ನು ತೋರಿಸಲಿಕ್ಕೂ ಕಾರಣವಾಗಿದೆ.

## ಪೋಲೀಸರು ಕ್ಷಮೆ ಬೇಡಿಕೊಂಡರು

ತಾ|| ೧೬ ನೆಯ ದಿವಸ ಧರಾಸಣದಲ್ಲಿ ಬಾಧಿಸಲ್ಪಟ್ಟ ಸ್ವಯಂಸೇವಕರಲ್ಲಿ ೨೨೫ ಜನ ಸ್ವಯಂಸೇವಕರು ಓರ್ವ ಪೋಲೀಸ ಅಧಿಕಾರಿಯು ತಮಗೆ ಬೈದುದಕ್ಕಾಗಿ ಅನ್ನತ್ಯಾಗ ವ್ರತವನ್ನು ಸ್ವೀಕರಿಸಿದ್ದಾರೆ. ಇದನ್ನು ಕಂಡು ಮತ್ತೋರ್ವ ಪೋಲೀಸ ಅಧಿಕಾರಿಯು ಅಲ್ಲಿಗೆ ಬಂದು ಅವಮಾನಗೊಳಿಸಿದ ಅಧಿಕಾರಿಯ ಪರವಾಗಿ ಸ್ವಯಂಸೇವಕರ ಕ್ಷಮೆಯನ್ನು ಬೇಡಿಕೊಂಡನು. ಆದರೆ ಸ್ವಯಂಸೇವಕರು ಇದಕ್ಕೆ ಸಮ್ಮತಿಸಿರುವದಿಲ್ಲ

## ಶ್ರೀ ಗುಳವಾಡಿಯವರನ್ನು ಹಿಡಿದರು.

ಕರ್ನಾಟಕ ಸತ್ಯಾಗ್ರಹ ಮಂಡಳದ ಸಭಾಸದರೂ, ಕಾರವಾರ ಜಿಲ್ಹೆಯಲ್ಲಿಯ ಚರಕಾ ಸಂಘದ ಕಾರ್ಯಕರ್ತರೂ ಆಗಿರುವ ಶ್ರೀ ಗುಳವಾಡಿ ಶಂಕರರಾಯರನ್ನು ಹುಬ್ಬಳ್ಳಿಯಲ್ಲಿ ಮೊನ್ನಿನ ದಿವಸ ಸೆರೆ ಹಿಡಿದು ಕಾರವಾರಕ್ಕೆ ಒಯ್ದಿರುತ್ತಾರೆ.

## ಹೊನ್ನಾವರದಲ್ಲಿ ಶಿಕ್ಷೆ

ಹೊನ್ನಾವರ ತಾಲೂಕ ಮುರ್ಡೇಶ್ವರ ಎಂಬಲ್ಲಿ ಶ್ರೀ ಹೆಗಡೆ ಶೆಟ್ಟಿಯವರು ಉಪ್ಪಿನ ಕಾಯದೆಭಂಗಕ್ಕಾಗಿ ಬಾಧಿಸಲ್ಪಟ್ಟು ೨೨ ತಿಂಗಳ ಕಠಿಣ ಸಜೆಗೆ ಪಾತ್ರರಾಗಿದ್ದಾರೆ. ಇವರಿಗೆ ಶಿಕ್ಷೆಯಾದುದಕ್ಕಾಗಿ ಮುರ್ಡೇಶ್ವರದಲ್ಲಿ ೨ ದಿವಸಗಳ ವರೆಗೆ ಹರತಾಳವು ಆಚರಿಸಲ್ಪಟ್ಟಿತು.

## ಅಂಕೋಲೆಯ ಸುದ್ದಿ

ವಿಧಾಯಕ ಕಾರ್ಯಕ್ರಮಗಳ ವಿಷಯವಾಗಿ ಜನರಲ್ಲಿ ಜಾಗೃತಿಯನ್ನುಂಟು ಮಾಡಲು ಸತ್ಯಾಗ್ರಹ ಶಿಬಿರದಿಂದ ಸ್ವಯಂಸೇವಕರು ಕಾರವಾರ ಜಿಲ್ಹೆಯ ಬೇರೆ ಬೇರೆ ಭಾಗಗಳಿಗೆ ಕಳಿಸಲ್ಪಟ್ಟಿದ್ದಾರೆ. ಅವರ ಕಾರ್ಯವು ಉತ್ತಮ ರೀತಿಯಿಂದ ಸಾಗಿದೆ. ಜನರಾದರೂ ಅವರ ಕೆಲಸಕ್ಕೆ ಮೆಚ್ಚಿ ಉತ್ತಮ ರೀತಿಯಿಂದ ಸಹಾನುಭೂತಿಯನ್ನು ತೋರಿಸುತ್ತಿದ್ದಾರೆ.

## ಕರನಿರಾಕರಣೆಯು ಸುರುವಾಯಿತು

ಗುಜರಾಥ ಪ್ರಾಂತದ ಕಾಯಿರಾ ಜಿಲ್ಲೆಯೊಳಗಿನ ೧೫ ಹಳ್ಳಿಗಳ ಜನರು ಸರಕಾರಕ್ಕೆ ಕರಕೊಡಬಾರದಾಗಿ ನಿಶ್ಚಯಿಸಿದ್ದು, ಎಷ್ಟೋ ಜನರು ತಮ್ಮ ತಮ್ಮ ಜಂಗಮ ಆಸ್ತಿಗಳನ್ನೆಲ್ಲ ಸಂಸ್ಥಾನಗಳಲ್ಲಿ ಒಯ್ದು ಇಟ್ಟುಬಿಟ್ಟಿದ್ದಾರೆ.

## ಪೇಶಾವರಕ್ಕೆ ಅಕಾಲಿಗಳದಳ

ಪಠಾಣ ಹಾಗೂ ಸೀಖ ಇವರ ನಡುವೆ ಈ ವರೆಗೆ ಬೆಳೆದು ಬಂದಂತಹ ತಪ್ಪು ತಿಳವಳಿಕೆಯನ್ನು ದೂರ ಮಾಡಿ ಪಠಾಣರಲ್ಲಿ ತಮ್ಮ ಸಹಾನುಭೂತಿಯಿದೆಯೆಂಬುದನ್ನು ಪ್ರತ್ಯಕ್ಷವಾಗಿ ತೋರಿಸುವದಕ್ಕಾಗಿ ಅಮೃತಸರದಿಂದ ೧೦೩ ಅಕಾಲಿ ಜನರದೊಂದು ದಳವು ಶ್ರೀ ತಾರಾಸಿಂಗರವರ ನೇತೃತ್ವದಲ್ಲಿ ಪೇಶಾವರದಲ್ಲಿ ಸತ್ಯಾಗ್ರಹವನ್ನು ಹೂಡಲು ಹೊರಟಿತ್ತು. ಹಾದಿಯಲ್ಲಿಯೇ ಶ್ರೀ ತಾರಾಸಿಂಗರೂ, ಅಕಾಲಿಗಳೂ ಬಂಧಿಸಲ್ಪಟ್ಟಿದ್ದಾರೆ. ಈಗ ೧೦೦ ಜನರದೊಂದ ಮತ್ತೊಂದು ದಳವು ಅಮೃತಸರದಿಂದ ಕಾಲು ನಡಿಗೆಯಿಂದ ಪೇಶಾವರಕ್ಕೆ ಹೊರಟಿದೆ.

## ಧ ರ ಸಾ ನಾ – ವ ಡಾ ಲಾ

# ಉಪ್ಪಿನ ವಖಾರಗಳ ಲೂಟಿ

### ಧರಸಾನಾ:—

ಶ್ರೀಮತಿ ಸರೋಜಿನಿ ದೇವಿಯವರು ಅಧಿಕಾರಿಗಳಿಂದ ಬಂಧಿತರಾಗಿ ಮುಕ್ತರಾಗಿ ಆಶ್ರಮಕ್ಕೆ ತಿರುಗಿ ಹೋದ ಬಳಿಕ ಸ್ವಯಂಸೇವಕರ ಬೇರೆ ಬೇರೆ ಗುಂಪುಗಳು ಧರಸಾನಾ ವಖಾರದ ಮೇಲೆ ದಾಳಿಯನ್ನು ಮಾಡಲು ಹೊರಟವು. ಈ ಗುಂಪುಗಳೆಲ್ಲವೂ ಅಧಿಕಾರಿಗಳಿಂದ ಹಾದಿಯಲ್ಲಿಯೇ ತಡೆಯಲ್ಪಟ್ಟವು. ಇಷ್ಟರಲ್ಲಿಯೇ ಸೂರತದಿಂದ ಹೋದ ಸ್ವಯಂಸೇವಕರ ಗುಂಪಿನಲ್ಲಿಯ ಸತ್ಯಾಗ್ರಹಿಗಳು ಹತ್ತು ಹತ್ತು ಜನರ ಗುಂಪುಗಳನ್ನು ಮಾಡಿಕೊಂಡು ಬೇರೆ ಬೇರೆ ಹಾದಿಯಿಂದ ಧರಸಾನಾ ವಖಾರದ ಕಡೆಗೆ ಸಾಗಿದರು ಅವರಲ್ಲಿ ಕೆಲವರು ವಖಾರದಲ್ಲಿ ಒಳನುಗ್ಗಿ ರಾಶಿಯಾಗಿ ಬಿದ್ದ ಉಪ್ಪಿನಲ್ಲಿಯ ಉಪ್ಪನ್ನು ತೆಗೆದುಕೊಂಡು ಹೊರಬಿದ್ದರು. ತಿರುಗಿ ಬಂದ ಬಳಿಕ ಪೋಲೀಸ ಅಧಿಕಾರಿಗಳು ಅವರನ್ನು ತಡೆದು ಅವರಿಗೆ ಪೀಡೆಯನ್ನು ಕೊಟ್ಟರು. ೬ ಸ್ವಯಂಸೇವಕರಿಗೆ ಗಾಯಗಳಾಗಿದ್ದು ಇಬ್ಬರು ಮೂರ್ಛೆ ಹೊಂದಿ ಬಿದ್ದಿದ್ದಾರೆ. ತಾ|| ೧೭ ನೆಯ ದಿವಸ ಒಟ್ಟಿಗೆ ೨೨೪ ಜನರು ಬಂಧಿಸಲ್ಪಟ್ಟಿದ್ದಾರೆ. ಅವರ ವಿಚಾರಣೆಯು ೭ ದಿವಸಗಳ ವರೆಗೆ ಮುಂದರಿಸಲ್ಪಟ್ಟಿದೆ.

ವಖಾರದ ಮೇಲೆ ದಾಳಿಯನ್ನು ಮಾಡಲು ಸತ್ಯಾಗ್ರಹಿಗಳ ತಂಡಗಳು ಸುತ್ತಲಿಂದ ಬರುತ್ತಿರುವದನ್ನು ಕಂಡು ಅಧಿಕಾರಿಗಳಾದರೂ ತಮ್ಮ ಬಲವನ್ನು ಹೆಚ್ಚಿಸಿದ್ದಲ್ಲದೆ, ಸತ್ಯಾಗ್ರಹಿಗಳನ್ನು ದಾಳಿಯಿಂದ ತಡೆಯುವದಕ್ಕಾಗಿ ಸುತ್ತಲೂ ಹೆಚ್ಚಿಗೆ ತಂತಿಗಳನ್ನು ಬಿಗಿಯಲೂ, ಉಪ್ಪಿನ ಕಸಬುಗಾರರ ಮೇಲೆ ದಂಡರೂಪವಾಗಿ ಹೆಚ್ಚಿನ ಕರವನ್ನು ಕೂಡಿಸಲೂ ಯೋಚಿಸಿದ್ದಾರೆ ಉಪ್ಪಿನ ಕಸಬುಗಾರರು ಶ್ರೀಮತಿ ಸರೋಜಿನಿದೇವಿಯವರನ್ನು ಕಂಡು ಅವರೊಡನೆ ಈ ವಿಷಯವಾಗಿ ಚರ್ಚಿಸಿ, ಹೆಚ್ಚಿನ ತೆರಿಗೆಯನ್ನು ಕೊಡಲಾರದಾಗಿ ನಿರ್ಧರಿಸಿದ್ದಾರೆ. ೧೯ ನೆಯ ತಾ|| ದಿವಸ ವಖಾರದ ದಾಳಿಗಾಗಿ ಹೊರಟ ನಡಿಯಾದದ ೧೧೦ ಜನ ಸ್ವಯಂಸೇವಕರು, ತಂತಿಯ ಹೊರಗಡೆಯಲ್ಲಿ ಕುಳಿತಿದ್ದಾರೆ. ೨೦ ನೆಯ ತಾ|| ದಿವಸ ೧೦೦ ಜನ ಸ್ವಯಂಸೇವಕರು ಅಲ್ಲಿಗೆ ತೆರಳಿ ಸಾಮುದಾಯಿಕ ರೀತಿಯಿಂದ ದಾಳಿಯನ್ನು ಮಾಡುವವರಿದ್ದರು. ಸ್ನಾನಕ್ಕಾಗಿ ತಣ್ಣಗಿನ ನೀರನ್ನು ಪ್ರತಿಯೊಬ್ಬರಿಗೆ ಪ್ರತಿನಿತ್ಯವು ೬ ತಂಬಿಗೆಗಳನ್ನು ಕೊಡಲು ಅಧಿಕಾರಿಗಳು ಒಪ್ಪಿಕೊಂಡಿದ್ದುದರಿಂದ ಮೊದಲನೆಯ ದಿವಸ ಅನ್ನತ್ಯಾಗವನ್ನು ಕೈಕೊಂಡ ೨೨೫ ಸತ್ಯಾಗ್ರಹಿ ಸೆರೆಯಾಳುಗಳು ಈಗ ಆಹಾರವನ್ನು ಸ್ವೀಕರಿಸಹತ್ತಿದ್ದಾರೆ.

### ವಡಾಲಾ:—

ಈ ಮೊದಲು ಗೊತ್ತುಪಡಿಸಿದಂತೆ ಮುಂಬಯಿ ಪ್ರಾಂ. ಕಾಂ. ಮಂಡಳದ ೩೦೦ ಜನ ಸ್ವಯಂಸೇವಕರು ತಾ|| ೧೮ ನೆಯ ದಿವಸ ವಡಾಲಾ ಉಪ್ಪಿನ ವಖಾರದ ಮೇಲೆ ದಾಳಿಯನ್ನು ಮಾಡಲು ಬೇರೆ ಬೇರೆ ಮಾರ್ಗಗಳಿಂದ ಹೊರಟರು. ಅವರಲ್ಲಿ ಸ್ವಯಂಸೇವಕರ ೬ ಗುಂಪುಗಳನ್ನು ಪೋಲೀಸರು ತಡೆದು ಅವರನ್ನು ವರಳಿ ಚಾಳದಲ್ಲಿ ಬಂಧಿಸಿಟ್ಟರು. ವಡಾಲೆಯ ಬಳಿಯಲ್ಲಿಯೇ ಸ್ವಯಂಸೇವಕರ ಮತ್ತೊಂದು ಗುಂಪು ಅಧಿಕಾರಿಗಳಿಂದ ಸೆರೆಹಿಡಿಯಲ್ಪಟ್ಟಿತು. ಹೀಗೆ ಸ್ವಯಂಸೇವಕರು ಸೆರೆಯಾಳಾದದ್ದನ್ನು ಕಂಡು ವಖಾರದ ಬಳಿಯಲ್ಲಿ ನೆರೆದ ಸಾವಿರಾರು ಜನರೆಲ್ಲರೂ ಪೋಲೀಸ ಅಧಿಕಾರಿಗಳೆದುರಿನಲ್ಲಿಯೇ ವಖಾರವನ್ನು ಒಳನುಗ್ಗಿ ಉಪ್ಪನ್ನು ಲೂಟಿಮಾಡಿ ಜೇಬುಗಳಲ್ಲಿ, ಕರವಸ್ತ್ರಗಳಲ್ಲಿ, ಧೋತರಗಳಲ್ಲಿ ಹಾಗು ಗಾಂಧಿ ಟೊಪ್ಪಿಗೆಗಳಲ್ಲಿ ತುಂಬಿಕೊಂಡು ಹೊರಬಿದ್ದರು.

೧೯ ನೆಯ ತಾ|| ದಿವಸ ೧೦೦ ಸ್ವಯಂಸೇವಕರದೊಂದು ಮತ್ತೊಂದು ದಳವು ದಾಳಿಗಾಗಿ ಹೊರಟಿತು. ಅವರು ಹತ್ತು ಹತ್ತು ಜನರ ಗುಂಪುಗಳನ್ನು ಮಾಡಿಕೊಂಡು ಬೇರೆ ಬೇರೆ ದಿಕ್ಕುಗಳಿಂದ ಉಪ್ಪಿನ ಕ್ಷೇತ್ರವನ್ನು ಒಳನುಗ್ಗಿದರು. ಪೋಲೀಸ ಅಧಿಕಾರಿಗಳು ಅವರನ್ನು ಅಡ್ಡಗಟ್ಟಿದರು. ಸತ್ಯಾಗ್ರಹಿಗಳು ಮುಂದೆ ಹೋಗುವವರಾಗಿ ಹಟಹಿಡಿದರು. ಇದನ್ನು ಕಂಡು ಪೋಲೀಸರು ಅವರ ಮೇಲೆ ಲಾಠಿಗಳನ್ನು ಪ್ರಯೋಗಿಸಿದರು. ಮತ್ತು ಅವರನ್ನು ಅವಮಾನಗೊಳಿಸಿದರು. ಸುಮಾರು ೧೫ ಜನರಿಗೆ ಗಾಯಗಳಾಗಿವೆ. ಈವರೆಗೆ ಒಟ್ಟು ೪೭೫ ಸತ್ಯಾಗ್ರಹಿಗಳು ಸೆರೆಹಿಡಿಯಲ್ಪಟ್ಟಿದ್ದಾರೆ. ೫೦೦ ಮಣ ಉಪ್ಪಿನ ಲೂಟಿಯಾಗಿದೆ.

### ಸೊಲ್ಲಾಪುರದಲ್ಲಿ ಹಿಡಿದರು

ಸೊಲ್ಲಾಪುರದಲ್ಲಾದ ದಂಗೆಯ ಸಂಬಂಧವಾಗಿ ಪವಿತ್ರ ಸಂಗತಿಗಳನ್ನೆಲ್ಲ ಧೈರ್ಯದಿಂದ ಪ್ರಸಿದ್ಧಿಸಿದ "ಕರ್ಮಯೋಗಿ" ಪತ್ರಿಕೆಯ ಸಂಪಾದಕರಾದ ಶ್ರೀ. ರಾಜವಾಡೆಯವರು ಸೆರೆಹಿಡಿಯಲ್ಪಟ್ಟಿರುವರಾಗಿ ತಿಳಿಯುತ್ತದೆ.

### ಸೇವಾದಲದ ಶ್ರೀ ಲೇಂಗಡೆಯವರು ಸೆರೆಯಾಳಾದರು

ಹಿಂದುಸ್ಥಾನೀ ಸೇವಾದಲದ ಪ್ರಚಾರಕರಾದ ಶ್ರೀಯುತ ದಾಮು ಅಣ್ಣಾ ಲೇಂಗಡೆಯವರನ್ನು ಪೋಲೀಸರು ತಾ|| ೧೯ ನೆಯ ದಿವಸ ಬೆಳಗಾವಿಯಲ್ಲಿ ಸೆರೆಹಿಡಿದು, ಅವರನ್ನು ಹುಕ್ಕೇರಿಗೆ ತೆಗೆದುಕೊಂಡು ಹೋಗಿದ್ದಾರೆ.

# ಕ. ಪ್ರಾಂ. ಕಾ. ಕಮಿಟಿಯ

## ಕಾರ್ಯಕಾರೀ ಮಂಡಲದ ಸಭೆ.

## ಪಾಸಾದ ನಿರ್ಣಯಗಳು

ಹುಬ್ಬಳ್ಳಿಯಲ್ಲಿ ತಾ|| ೧೭—೫—೩೦ ನೇ ದಿನ ಬೆಳಗ್ಗೆ ೯ ಘಂಟೆಗೆ ಸರಿಯಾಗಿ ಸೇವಾದಲದ ಕಚೇರಿಯಲ್ಲಿ ಈ ಸಭೆಯು ಸೇರಿತ್ತು. ಶ್ರೀಯುತ ರಾದ ಶ್ರೀನಿವಾಸರಾವ ಕೌಜಲಗಿ, ಜೋಶಿ, ಹುಕ್ಕೇರಿ ಟಿ. ಸುಬಹ್ಮಣ್ಯಂ, ಹುಲ್ಯಾಳಕರ, ಕಟ್ಟಿ, ಪಾಳಪಾಳೆ, ಶೇಂಡೆ, ಹಾಗೂ ಡಾ ಉಮಚಗಿ ಯವರು ಸಭೆಗೆ ಬಂದಿದ್ದರು. ಕೌಜಲಗಿ ಶ್ರೀನಿವಾಸರಾಯರು ಅಧ್ಯಕ್ಷತೆ ಯನ್ನು ವಹಿಸಿದ ಮೇಲೆ ಗೊತ್ತಾದ ಮುಖ್ಯ ನಿರ್ಣಯಗಳೇನಂದರೆ .—

೧) ಭಾರತ ಸ್ವಾತಂತ್ರ್ಯ ನಿಧಿ ಅಥವಾ ಸತ್ಯಾಗ್ರಹ ಫಂಡು ಎಂಬ ಹೆಸ ರಿನಿಂದ ಸೇರುವ ಹಣವು ಕರ್ನಾಟಕ ಸತ್ಯಾಗ್ರಹ ಮಂಡಳದ ವಶದಲ್ಲಿರ ಬೇಕು. ಸತ್ಯಾಗ್ರಹ ಮಂಡಲದವರು ಈ ನಿಧಿಯಿಂದ ಅವಶ್ಯವಿದ್ದಷ್ಟು ಹಣ ವನ್ನು ತೆಗೆದುಕೊಳ್ಳಬಹುದು.

೨) ಕರ್ನಾಟಕ ಪ್ರಾಂತದಲ್ಲಿ ಸತ್ಯಾಗ್ರಹವನ್ನು ಮುಂದೆ ಸಾಗಿಸುವ ದಕ್ಕಾಗಿ ಹಾಗೂ ಅವಶ್ಯ ಕಂಡಲ್ಲಿ ಸತ್ಯಾಗ್ರಹದಲ್ಲಿ ಶಿಕ್ಷೆ ಹೊಂದಿದ ಈ ಪ್ರಾಂತದ ಬಡ ಕುಟುಂಬದವರ ಪೋಷಣೆಗಾಗಿ ೫೦೦೦೦ ರೂ. ನಿಧಿಯನ್ನು ಕೂಡಿಸಬೇಕೆಂದು ಈ ಮಂಡಳವು ನಿರ್ಣಯಿಸುತ್ತದೆ.

೩) ಸ್ವಾತಂತ್ರ್ಯ ಯುದ್ಧದಲ್ಲಿ ಶೌರ್ಯವನ್ನು ತೋರಿಸಿದ್ದಕ್ಕಾಗಿ ಕರ್ನಾಟಕದ ಹಾಗೂ ಇತರ ಪ್ರಾಂತಗಳ ದೇಶಭಕ್ತರನ್ನು ಈ ಸಭೆಯು ಅಭಿನಂದಿಸುತ್ತದೆ.

೪) ಆಚಾರ ವಿಚಾರ ಹಾಗೂ ಉಚ್ಚಾರಗಳಲ್ಲಿ ಸಂಪೂರ್ಣ ಅಹಿಂಸೆ ಯೇ ನಿಜವಾದ ಹಾಗೂ ಪರಿಣಾಮಕಾರಿಯಾದ ಸತ್ಯಾಗ್ರಹದ ಆಧಾರವೆಂಬು ದನ್ನು ವಿಶೇಷವಾಗಿ ಕಾರ್ಯಕರ್ತರೂ ಸಾಮಾನ್ಯವಾಗಿ ಉಳಿದ ಜನರೂ ಲಕ್ಷ್ಯದಲ್ಲಿಡಬೇಕು. ಈ ಮಾರ್ಗದ ಚ್ಯುತಿಯಿಂದ ಸ್ವಾತಂತ್ರ್ಯ ಚಳವಳಿಯ ಮೇಲೆ ಕೆಟ್ಟ ಪರಿಣಾಮವಾಗುವದೆಂದು ಈ ಮಂಡಲದ ಅಭಿಪ್ರಾಯವಿದೆ.

(೫) ಸಾಮಾನ್ಯವಾಗಿ ಸರಕಾರದ ದಬ್ಬಾಳಿಕೆಯನ್ನೂ, ಕಾಲನಿರ್ಬಂ ಧವಿಲ್ಲದ ಹಾಗೂ ಒಂದು ಹಳೇ ಕಾನೂನಿನನ್ವಯ ಜಗತ್ತಿನಲ್ಲಿಯ ಶ್ರೇಷ್ಠ ಸಾಧುಗಳೂ, ತತ್ವಜ್ಞರೂ, ರಾಜಕಾರಣ ನಿಪುಣರೂ, ಹಾಗು ಶಾಂತತಾವಾದಿಗಳೂ ಆದ ಮಹಾತ್ಮಾಗಾಂಧಿಯವರ ಬಂಧನದಲ್ಲಿ ಅದು ಪರ್ಯವಸಾನ ಹೊಂದಿದ್ದನ್ನೂ ಈ ಸಭೆಯು ನಿಷೇಧಿಸುವ ದಲ್ಲದೆ, ಸ್ವಾತಂತ್ರ್ಯದ ಈ ಚಳವಳಿಯನ್ನು ದಬ್ಬಾಳಿಕೆಯಿಂದ ಹತ್ತಿ ಕ್ಕಬೇಕೆಂಬ ಸರಕಾರದ ಉದ್ದೇಶವು ಎಂದಿಗೂ ಸಫಲವಾಗಲಾರ ದೆಂದು ಅವರಿಗೆ ಎಚ್ಚರ ಕೊಡುತ್ತಿದೆ ಈ ದಬ್ಬಾಳಿಕೆಯ ಪರಿಣಾಮ ವೆಂದು ಜನರು ಅತ್ಯಾಚಾರಗಳನ್ನು ಮಾಡಿದರೆ ಅದರ ಜವಾಬ ದಾರಿಯು ಕೇವಲ ಸರಕಾರದ ಮೇಲೆಯೇ ಇರುವದೆಂದು ಈ ಸಭೆಯು ಸಾರಿ ಹೇಳುತ್ತದೆ.

(೬) ಬೆಳಗಾವಿಯಲ್ಲಿ ಸೇರಿದ ಬ್ರಾಹ್ಮಣೇತರ ಪರಿಷತ್ತಿನವರು ತಾವು ಕಾಂಗ್ರೆಸ್ಸಿನಲ್ಲಿ ಸೇರಬೇಕೆಂದು ಮಾಡಿದ ನಿರ್ಣಯವನ್ನು ಈ ಸಭೆಯು ಆನಂದದಿಂದ ಸ್ವೀಕರಿಸುತ್ತದೆ. ಹಾಗೂ ಇಷ್ಟರಗೂ ಮಹತ್ವವಾಗಿರುವ ಕಾರ್ಯಕ್ರಮದಲ್ಲಿ ಕಾಂಗ್ರೆಸ್ಸಿನವರು ಅವರ ಕೂಡ ಸಂಪೂರ್ಣ ಸಹಕರಿಸುವರೆಂದು ಈ ಮಂಡಲವು ಆಶ್ವಾಸನ ವನ್ನು ಕೊಡುತ್ತದೆ.

(೭) ಹಿಂದುಸ್ಥಾನ ಸ್ವಾತಂತ್ರ್ಯ ಹುತಾತ್ಮ ಪ್ರತಿಭರ ವಸ್ತು ಗಳು ಹಾಗು ಹಣದ ಬಗ್ಗೆಯು ಬಹಿಷ್ಕಾರದ ಕಾರ್ಯವನು ಕರ್ನಾಟಕದಲ್ಲಿಯ ಎಲ್ಲ ಕಾಂಗ್ರೆಸ ಕಮಿಟಿಗಳು ಕೈಕೊಳ್ಳಬೇಕೆಂದು ಈ ಮಂಡಲವು ಕೇಳಿಕೊಳ್ಳುತ್ತದೆ. ಇದರ ಸವಿಸ್ತರ ಕಾರ್ಯ ಕ್ರಮವನ್ನು ಆಯಾ ಜಿಲ್ಹಾ ಕಾಂಗ್ರೆಸ ಕಮಿಟಿಗಳು ನಿರ್ಣಯಿಸ ಬೇಕು.

(೮) ಕರ್ನಾಟಕದಲ್ಲಿಯ ಎಲ್ಲ ಕಾಂಗ್ರೆಸ ಕಮಿಟಿಗಳೂ ಹಿಂದುಸ್ಥಾನೀ ಸೇವಾದಲದ ಕರ್ನಾಟಕ ಶಾಖೆಯವರೂ, ಕಾಂಗ್ರೆಸ ಸಭಾಸದರನ್ನು ಸೇರಿಸುವ ಕಾರ್ಯವನ್ನು ಅತ್ಯಂತ ರಭ ಸದಿಂದಲೂ ಅವಿಶ್ರಾಂತವಾಗಿಯೂ ನಡೆಸಬೇಕೆಂದು ಈ ಮಂಡ ಲವು ಅವುಗಳಿಗೆ ಬಿನ್ನವಿಸಿ ಕೊಳ್ಳುತ್ತದೆ

ಹುಬ್ಬಳ್ಳಿ ೧೭—೫—೩೦ } ಶ್ರೀನಿವಾಸರಾವ ಕೌಜಲಗಿ ಅಧ್ಯಕ್ಷರು.

## ಹೇಲೀ ಸಾಹೇಬರು ಹೊಸ ಅಸ್ತ್ರವನ್ನು ಹೊರಗೆ ತಗೆದರು

"ಜಾತಿ ಜಾತಿಗಳಲ್ಲಿ ವೈಮನಸ್ಸನ್ನೂ, ಅಸಂತೋಷ ವನ್ನೂ, ವಿದ್ಯಾರ್ಥಿಗಳಲ್ಲಿ ರಾಜದ್ರೋಹಾತ್ಮಕ ವಿಚಾರಗಳನ್ನೂ ಈ ಸರಕಾರದ ವಿಷಯವಾಗಿ ತಿರಸ್ಕಾರವನ್ನೂ, ಹುಟ್ಟಿಸು ವಂತಹ ಯಾವ ರಾಜಕೀಯ ಚಳವಳಿಯಲ್ಲಿಯೂ ಶಿಕ್ಷಕ ಜನರು ಭಾಗವನ್ನು ತೆಗೆದುಕೊಳ್ಳಕೂಡದೆಂಬದಾಗಿ ಸಂಯುಕ್ತ ಪ್ರಾಂತದ ಗವ್ಹರ್ನರ ದೊರೆಗಳು ಕಟ್ಟಪ್ಪಣೆಯನ್ನು ತೆಗೆದಿದ್ದಾರೆ.

---

ಕಂಪನಿಯ ಮುಕ್ಕಾಂ ಸ್ವಲ್ಪ ಉಳದಿವೆ.

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಶನಿವಾರ ತಾ|| ೨೪—೫—೩೦

**ಉಚ್ಚವ್ಯನಾಯಿಕ.**

ಭಾನುವಾರ ತಾ|| ೨೫—೫—೩೦

**ಸುದಾಮದೇವ**

ಸೋಮವಾರ ತಾ|| ೨೬—೫—೩೦

**ಶರಣಬಸವ**

ಬುಧವಾರ ತಾ|| ೨೮—೫—೩೦

ಸಾಮಾಜಿಕ ಹೊಸನಾಟಕ

**ಶಿಕ್ಷಣಸಂಭ್ರಮ**

**ಎಂಬ ನಾಟಕಗಳನ್ನು ಅಭಿನಯಿಸುವರು,**

ಈ ನಾಟಕಗಳು ಪುನಃ ಆಡಲ್ಪಡುವದಿಲ್ಲ.

ಸಂಘದೊಡೆಯ—ಸದಾಶಿವರಾವ ಗರೂಡ

---

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅವರಿಂದ್ದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ನಿತ್ಯಸಂಚಿಕೆಯು. ಬೆಲೆ ೦-೦-೩

यद्यत् परवशं दुःखं । यद्यदात्मवशं सुखम् ॥ -मनु.

# ಕನ್ನಡಿಗ

KANNADIGA BAGALKOT. BI-WEEKLY ಅರ್ಧವಾರ ಪತ್ರಿಕೆ

ಸಂಪಾದಕರು:- ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಶುಕ್ರವಾರ ಮಿತಿ ವೈಶಾಖ ಬಹುಳ ೧೦ ಶಕೆ ೧೮೫೨ ತಾ ೨೩-೫-೩೦ ಸಂಚಿಕೆ ೫೫

# ಸರೋಜಿನಿಯವರು ಸೆರೆಯಾಳಾದರು.

ಈ ಮೊದಲು ನಿಶ್ಚಯವಾದಂತೆ ತಾ|| ೨೧ ನೆಯ ದಿವಸ ಶ್ರೀ. ಇಮಾಮಸಾಹೇಬರು, ಶ್ರೀ. ಮಣಿಲಾಲ ಗಾಂಧಿ, ಪರೇಖ ಹಾಗು ೨೦೦೦ ಸತ್ಯಾಗ್ರಹಿಗಳು ಧರಸಾನಾ ವಖಾರದ ದಾಳಿಗಾಗಿ ಬೇರೆ ಬೇರೆ ದಿಕ್ಕುಗಳಿಂದ ಹೊರಟರು. ಅಲ್ಲಿ ಬಿಗಿಯಲ್ಪಟ್ಟ ತಂತಿಗಳನ್ನು ಮುರಿದು ದಾಳಿಯನ್ನು ಪೂರ್ಣಗೊಳಿಸುವ ಸಿದ್ಧತೆಯನ್ನು ಅವರು ಮಾಡಿಕೊಂಡಿದ್ದರು. ಹೀಗೆ ಹೊರಟ ಸತ್ಯಾಗ್ರಹಿಗಳೆಲ್ಲರೂ ೨೦ ಮಿನಿಟುಗಳ ಅವಧಿಯಲ್ಲಿಯೇ ಧರಸಾನಾಕ್ಕೆ ತಲುಪಿದರು. ಅಲ್ಲಿ ಪೋಲೀಸ ಅಧಿಕಾರಿಗಳಾದರೂ ಅವರನ್ನು ತಡೆಯುವದಕ್ಕೆ ಸಿದ್ಧರಾಗಿ ನಿಂತಿದ್ದದಲ್ಲದೆ, ೫ ಜನರಿಗಿಂತ ಹೆಚ್ಚು ಜನರು ಒತ್ತಟ್ಟಿಗೆ ಸೇರತಕ್ಕದ್ದಲ್ಲವೆಂಬ ಕಾಯಿದೆಯನ್ನು ಸಾರಿದ್ದರು. ಪೋಲೀಸರು ಲಾಠಿಗಳನ್ನುಪಯೋಗಿಸಿ ಸತ್ಯಾಗ್ರಹಿಗಳನ್ನು ತಡೆದದ್ದರಿಂದ ಎಲ್ಲ ಸತ್ಯಾಗ್ರಹಿಗಳು ಒಂದೇಕಡೆಗೆ ಸೇರಿದರು. ಕೆಲವು ಸ್ವಯಂಸೇವಕರು ತಂತಿಗಳನ್ನು ದಾಟಲು ಯತ್ನಿಸಿದರು. ಕೆಲವರು ಹಗ್ಗಗಳನ್ನು ಒಗೆದು ತಂತಿಗಳನ್ನು ಜಗ್ಗಲು ಯತ್ನಿಸಿದರು. ಪೋಲೀಸರು ಕೆಲವರ ಕೈಯಲ್ಲಿಯ ಹಗ್ಗಗಳನ್ನು ಕಸಿದುಕೊಂಡರು. ಹೀಗೆ ಅಧಿಕಾರಿಗಳು ಮತ್ತು ಸ್ವಯಂಸೇವಕರ ನಡುವೆ ೧ ತಾಸಿನವರೆಗೆ ಜಗ್ಗಾಟ ನಡೆಯಿತು. ಲಾಠಿಗಳನ್ನುಪಯೋಗಿಸಿ ಪೋಲೀಸರು ಕೆಲವು ಸ್ವಯಂಸೇವಕರನ್ನು ತಂತಿಯಿಂದ ೫೦ ಯಾರ್ಡುಗಳ ವರೆಗೆ ಹಿಂದಕ್ಕಟ್ಟಿದರು. ಈ ಜಗ್ಗಾಟದಲ್ಲಿ ೨೦೦ ಜನರಿಗೆ ಗಾಯಗಳಾಗಿವೆ. ಹೀಗೆ ಜಗ್ಗಾಟವು ನಡೆದ ಸ್ವಲ್ಪ ಹೊತ್ತಿನಲ್ಲಿಯೇ ಇಮಾಮಸಾಹೇಬ, ಪ್ಯಾರೀಲಾಲ ಮತ್ತು ಮಣಿಲಾಲ ಗಾಂಧಿ ಇವರು ಬಂಧಿಸಲ್ಪಟ್ಟರು. ಮಣಿಲಾಲ ಗಾಂಧಿಯವರಿಗೂ ಪೆಟ್ಟು ತಗುಲಿದೆ. ಇಷ್ಟರಲ್ಲಿಯೇ ಶ್ರೀಮತಿ ಸರೋಜಿನಿ ದೇವಿಯವರು ಧರಸಾನಾದ ಸುತ್ತಲು ನಡೆದ ಸಂಗತಿಗಳನ್ನು ನಿರೀಕ್ಷಿಸಲು ಅಲ್ಲಿಗೆ ಹೋದರು. ೮ ಗಂಟೆಗೆ ಮಣಿಲಾಲ ಗಾಂಧಿ ಮೊದಲಾದವರು ಸೆರೆಯಾಳಾದದ್ದು ಅವರಿಗೆ ತಿಳಿದು ಬಂದಿತು. ಬಳಿಕ ಶ್ರೀಮತಿ ಸರೋಜಿನಿಯವರು ಸತ್ಯಾಗ್ರಹಿಗಳಿದ್ದಲ್ಲಿಗೆ ಹೋಗಿ ಅವರೊಡನೆ ಮಾತನಾಡಹತ್ತಿದರು. ಹೀಗೆ ಸಂಭಾಷಣಗಳು ನಡೆದಿರುವಾಗ ಡೆಪ್ಯೂಟಿ ಸುಪರಿಂಟೆಂಡೆಂಟರು ಅಲ್ಲಿಗೆ ಹೋಗಿ "ನಿಮ್ಮೊಡನೆ ಸ್ವಲ್ಪ ಮಾತಾಡುವದಿದೆ" ಎಂದು ದೇವಿಯವರನ್ನು ಕರೆದರು. ಶ್ರೀಮತಿ ಸರೋಜಿನಿದೇವಿಯವರು ಅಧಿಕಾರಿಯ ಮಾತನ್ನು ನಂಬಿ ಅವರೊಡನೆ ಸ್ವಲ್ಪ ದೂರ ಹೋದರು. ಕೂಡಲೆ ಡೆಪ್ಯೂಟಿ ಸುಪರಿಂಟೆಂಡೆಂಟರು ಅವರಿಗೆ "ನಿಮ್ಮನ್ನು ಸೆರೆಮಾಡಿದ್ದೇವೆ" ಎಂದು ತಿಳಿಸಿ, ಅವರನ್ನು ತಮ್ಮ ಬಿಡಾರಕ್ಕೆ ಕರೆದುಕೊಂಡು ಹೋದರು.

## ೬೦೦೦೦ ರೂ. ಬೆಲೆಯ ಬಟ್ಟೆಗೆ ಸಂಕ್ರಾಂತಿ.

"ಬೆಂಗಳೂರಿನ ೫೦ ಜನ ಬಟ್ಟೆಗಳ ವ್ಯಾಪಾರಸ್ಥರು ಒಟ್ಟಿಗೆ ಸೇರಿ ಸ್ವರಾಜ್ಯ-ಸಂಪಾದನೆಗೆ ಪರದೇಶಿ ಬಟ್ಟೆಗಳನ್ನು ಬಹಿಷ್ಕರಿಸುವದೇ ಮೇಲಾದ ಸಾಧನವಾಗಿದೆಯಾದುದರಿಂದ ೬ ತಿಂಗಳ ಮಟ್ಟಿಗೆ ಯಾರೂ ಪರದೇಶಿ ಬಟ್ಟೆಗಳನ್ನು ತರಿಸತಕ್ಕದ್ದಲ್ಲ" ವೆಂಬುದಾಗಿ ತೀರ್ಮಾನಿಸಿಕೊಂಡಿದ್ದಾರೆ. ಪ್ರಸಿದ್ಧ ಜವಳಿಯ ವ್ಯಾಪಾರಸ್ಥರಾದ ಕಾಪುರಚಂದ ಮತ್ತು ಕಂಪನಿಯವರು ಈ ಮೊದಲು ಕಳಿಸಿಕೊಡಲು ತಿಳಿಸಿದ ೬೦೦೦೦ ರೂ. ಬೆಲೆ ಬಾಳುವ ಬಟ್ಟೆಗಳ ನೇಮಕವನ್ನು (Order) ತೆಗೆದುಹಾಕಿದ್ದಾರೆ.

## ಸೊಲ್ಲಾಪುರದ ದಂಗೆಯ ವಿಷಯವಾಗಿ ಸರಕಾರದ ಪ್ರಕಟನೆ

ಸೊಲ್ಲಾಪುರದ ದಂಗೆಯ ಸಂಬಂಧವಾಗಿ ಸರಕಾರದ ಸುದ್ದಿಯ ಖಾತೆಯವರು ಒಂದು ಪ್ರಕಟನೆಯನ್ನು ತೆಗೆದಿದ್ದು, ಅದರ ಸಾರಾಂಶವನ್ನು ಇಲ್ಲಿ ಕೆಳಗೆ ಕೊಟ್ಟಿದೆ.

"ಸೊಲ್ಲಾಪುರದ ಸ್ಪಿನಿಂಗ ಮತ್ತು ವ್ಹೀವಿಂಗ ಮಿಲ್ಲಿನ ಕೂಲಿಕಾರರು ಗಾಂಧಿಯವರನ್ನು ಸೆರೆಹಿಡಿದ ನಿಮಿತ್ತವಾಗಿ ೭ ನೆಯ ತಾ|| ದಿವಸವೂ ಹರತಾಳವಾಗಬೇಕೆಂದು ಯೋಚಿಸಿ ಉಳಿದ ಗಿರಣಿಗಳ ಕೂಲಿಕಾರರನ್ನೂ ಹೊರಗೆ ತರಲು ಹೊರಟರು. ಅಲ್ಲಿ ಕೆಲವರು ಇವರನ್ನು ಕೂಡಿದರು. ಹಾದಿಯಲ್ಲಿ ಈ ಜನರು ಹೊಗೆಬಂಡಿಗೆ ಕಲ್ಲುಗಳನ್ನು ಒಗೆದರು ಮತ್ತು ಮ್ಯುನಸಿಪಾಲಿಟಿಯ ಚೌಕಿಗೆ ಬೆಂಕಿ ಹಚ್ಚಿದರು. ಹೋಗಹೋಗುತ್ತ ಅವರು ಕಲ್ಲುಗಳನ್ನು ಒಗೆಯಹತ್ತಿದ್ದರಿಂದ, ಡಿ|| ಪೋ|| ಸುಪರಿಟೆಂಡೆಂಟರಿಗೂ ಮತ್ತು ಉಳಿದ ಅಧಿಕಾರಿಗಳಿಗೂ ಪೆಟ್ಟು ತಗಲಿದವು. ೧೦|| ಗಂಟೆಗೆ ಗುಂಪಿನೊಳಗಿನ ಕೆಲವು ಜನರು ಸಿಂದಿ ಗಿಡಗಳನ್ನು ಸುಡಹತ್ತಿದ್ದರು. ಈ ಗುಂಪು ಅಧಿಕಾರಿಗಳಿಂದ ಚದುರಿಸಲ್ಪಟ್ಟಿತು. ಸಂಜೆಯಲ್ಲಿ ಎಲ್ಲ ಕಡೆಗೂ ಶಾಂತತೆಯುಂಟಾಯಿತು. ೮ ನೆಯ ತಾ|| ದಿವಸ ೨೦೦ ಜನರು ಹಗ್ಗ ಮತ್ತು ಕೊಡ್ಲಿಗಳೊಂದಿಗೆ ಸಿಂದೀ ಗಿಡಗಳನ್ನು ಕಡಿಯಲು ಹೊರಟಿರುವರೆಂಬುವದು ಡಿ| ಪೋ|| ಸುಪರಿಂಟೆಂಡೆಂಟರಿಗೆ ತಿಳಿದು ಬಂದಿತು. ಸುಪರಿಂಟೆಂಡೆಂಟರು ೨೫ ಸಶಸ್ತ್ರ ಪೋಲೀಸರೊಂದಿಗೆ ಅಲ್ಲಿಗೆ ತೆರಳಿ ೭ ಜನರನ್ನು ಸೆರೆಹಿಡಿದು ಉಳಿದವರನ್ನು ಚದುರಿಸಿದರು. ಇಷ್ಟರಲ್ಲಿಯೇ ಜನರದೊಂದು ಗುಂಪೇ ಹಾದಿಯಲ್ಲಿ ಬಂದು ನಿಂತಿತ್ತು. ಈ ಗುಂಪು ಪೋಲೀಸರ ಮೇಲೆ ಕಲ್ಲುಗಳನ್ನು ಎಸೆಯಹತ್ತಿತು ಮತ್ತು ಲಾರಿಗಳನ್ನು ಅಡ್ಡಗಟ್ಟಲು ಯತ್ನಿಸಹತ್ತಿತು. ಬಳಿಕ ಡಿ| ಮ್ಯಾಜಿಸ್ಟ್ರೇಟರು ನೀವು ಇಲ್ಲಿಂದ ಹೋಗದಿದ್ದರೆ, ಗೋಳೀಬಾರ ಮಾಡುವ ಪ್ರಸಂಗವು ಬರುವದೆಂದು ಎಚ್ಚರಿಕೆಯನ್ನು ಕೊಟ್ಟರು. ಆದರೂ ಜನರು ಕೇಳದ್ದರಿಂದ ಗೋಳೀಬಾರ ಮಾಡುವದರಲ್ಲಿ ಬಂದಿತು. ಬಳಿಕ ಜನರು ಚದರಿದರು. ಆದರೂ ಕಲ್ಲುಗಳು ಬಂದೇ ಬರುತ್ತಿದ್ದವು. ದಂಗೆಗಾರರ ಮುಖಂಡನು ಮುಂದೆ ಬಂದು ಬಂಧಿಸಿದವರನ್ನು ಬಿಟ್ಟಲ್ಲಿ ಜನರು ತಿರುಗಿ ಹೋಗುವರು ಎಂದು ಹೇಳಿದನು. ಜನರು ಒಂದೇಸವನೆ ಕಲ್ಲುಗಳನ್ನು ಒಗೆಯಹತ್ತಿದ್ದರಿಂದ ಮತ್ತೆ ಗೋಳಿಬಾರನ್ನು ಮಾಡಲಾಯಿತು. ಡಿ| ಮ್ಯಾಜಿಸ್ಟ್ರೇಟ, ಸುಪರಿಂಟೆಂಡೆಂಟ ಮತ್ತು ಉಳಿದ ಅಧಿಕಾರಿಗಳಿಗೆ ಗಾಯಗಳಾದವು. ಅವರು ತಿರುಗಿ ಹೋಗುವಷ್ಟರಲ್ಲಿಯೇ ಪಟ್ಟಣದಲ್ಲಿ ಪೋಲೀಸರ ಮೇಲೆ ಹಲ್ಲೆ ನಡೆದಿದೆಯೆಂಬ ಸುದ್ದಿಯು ಹತ್ತಿತು. ಅಲ್ಲಿಗೆ ಅವರು ಹೋಗುವಷ್ಟರಲ್ಲಿಯೇ ದಂಗೆಗಾರರು ಅಲ್ಲಿ ಇದ್ದಿಲ್ಲ. ಇಬ್ಬರು ಪೋಲೀಸರು ಸುಡಲ್ಪಟ್ಟಿದ್ದು, ಮತ್ತು ಡಿಸ್ಟ್ರಿಕ್ಟ ಕೋರ್ಟುಗಳಿಗೆ ಬೆಂಕಿ ಹತ್ತಿದ್ದು ಅವರಿಗೆ ಅಲ್ಲಿ ಕಾಣಿಸಿತು. ಬಳಿಕ ಪಟ್ಟಣವನ್ನು ಸಶಸ್ತ್ರ ಪೋಲೀಸರಿಂದ ರಕ್ಷಿಸುವದರಲ್ಲಿ ಬಂದಿತು. ಪೋಲೀಸರ ಒಂದು ಲಾರಿಯನ್ನು ಜನರು ಮುತ್ತಲು ಯತ್ನಿಸಿದ್ದರಿಂದ ಪೋಲೀಸರು ಸ್ವಸಂರಕ್ಷಣೆಗಾಗಿ ಗೋಳೀಬಾರ ಮಾಡಬೇಕಾಯಿತು. ಪುಣೆಯಿಂದ ೧೨ ಗಂಟೆಗೆ ಸೈನಿಕರು ಬಂದರು. ಸೈನಿಕರು ಮತ್ತು ಪೋಲೀಸರೂ ಕೂಡಿಯೇ ಪಟ್ಟಣವನ್ನು ಸಂರಕ್ಷಿಸಹತ್ತಿದರು. ಎಲ್ಲ ಕಡೆಗೂ ಶಾಂತತೆಯುಂಟಾಯಿತು. ಇಷ್ಟರಲ್ಲಿಯೇ ಡಿ|| ಮ್ಯಾಜಿಸ್ಟ್ರೇಟರು ಕ್ರಿ|| ಪ್ರೊ| ಕೋಡಿನ ೧೪೪ ನೆಯ ಕಲಮಿನನ್ವಯ ೫ ಕ್ಕಿಂತ ಹೆಚ್ಚು ಜನರು ಒಟ್ಟಿಗೆ ಕೂಡಬಾರದೆಂದೂ, ಸಭೆ ಮೆರವಣಿಗೆಗಳನ್ನು ನಡಿಸಬಾರದೆಂದೂ, ಲಾಠಿಗಳನ್ನು ಹಿಡಿದುಕೊಂಡು ತಿರುಗಬಾರದೆಂದೂ ಕಟ್ಟಪ್ಪಣೆಯನ್ನು ಹೊರಡಿಸಿದ್ದರು. ೧೦ ನೆಯ ತಾ|| ದಿವಸ ಸಂಜೆಯ ವರೆಗೆ ಎಲ್ಲೆಲ್ಲಿಯೂ ಶಾಂತತೆಯಿತ್ತು. ಆದರೆ ಸಂಜೆಯಲ್ಲಿ ಮೇಲಿನ ಕಾಯಿದೆಯು ತಾತ್ಸಾರ ಮಾಡಲ್ಪಡಹತ್ತಿದೆಯೆಂದು ತಿಳಿದುಬಂದಿತು. ಸೈನಿಕರನ್ನು ಮುತ್ತಿದ ಸಾವಿರಾರು ಜನರು, ಡಿ|| ಮ್ಯಾಜಿಸ್ಟ್ರೇಟರು ತಿರುಗಿ ಹೋಗಲು ಹೇಳಿಕೊಂಡಿದ್ದರೂ, ಅಲ್ಲಿಂದ ಚದುರಲಿಲ್ಲ. ಆ ಲಾರಿಯೊಳಗಿನ ಪೋಲೀಸರನ್ನು ಇಬ್ಬಿಬ್ಬರಂತೆ ಹೊರಗೆ ತೆಗೆಯಲಾಯಿತು. ೧೧ ನೆಯ ತಾ|| ದಿವಸ ಸೈನಿಕರ ಮತ್ತೊಂದು ತುಕಡಿಯು ಬಂದಿತು. ಸೈನಿಕರನ್ನು ಪಟ್ಟಣದಲ್ಲಿ ಕಳಿಸಲಾಯಿತು. ಪಟ್ಟಣದೊಳಗಿನ ಪೋಲೀಸ ಚೌಕಿಯೊಳಗಿನ ಕೆಲವು ಸಾಮಾನುಗಳು ಸುಡಲ್ಪಟ್ಟಿವೆಯೆಂದು ತಿಳಿಯಿತು. ಕಾಂಗ್ರೆಸ್ಸದ ಸ್ವಯಂಸೇವಕರೂ ಪಟ್ಟಣದ ಆಡಳಿತೆಯನ್ನು ಸಾಗಿಸುವವರಂತೆ ನಟಿಸುತ್ತಿದ್ದುದು ಕಂಡುಬಂದಿತು. ೧೨ ನೆಯ ತಾ| ದಿವಸ ಮುಂಜಾನೆ ೮|| ಗಂಟೆಗೆ ಲಷ್ಕರೀ ಕಾಯಿದೆಯು ಸಾರಲ್ಪಟ್ಟಿತು. ಮತ್ತು ಅಂದೇ ರಾತ್ರಿಯಲ್ಲಿ ಪುಣೆಯಿಂದ ಲಷ್ಕರವು ಬಂದಿತು. ಲಷ್ಕರವು ೧೩ ನೆಯ ತಾ| ದಿವಸ ಪಟ್ಟಣವನ್ನು ಕೈವಶಪಡಿಸಿಕೊಂಡಿತು. ಲಷ್ಕರೀ ಕಾಯಿದೆಯು ಸಾರಲ್ಪಟ್ಟ ನಂತರ ಸಂಪೂರ್ಣ ಶಾಂತತೆಯು ನೆಲೆಗೊಂಡಿದೆ. ೧೬ ನೆಯ ತಾ|| ದಿವಸ ಗಿರಣಿಗಳು ಪ್ರಾರಂಭವಾದವು. ಒಟ್ಟಿನಲ್ಲಿ ೫೦ ಜನರಿಗೆ ಗಾಯಗಳಾಗಿದ್ದು, ಅವರಲ್ಲಿ ೧೪ ಜನರು ಮರಣಹೊಂದಿದ್ದಾರೆ. ಮೇಲಧಿಕಾರಿಗಳ ಅಪ್ಪಣೆಯಿಲ್ಲದ ಹೊರತು ಇಲ್ಲವೆ ಸ್ವಸಂರಕ್ಷಣಕ್ಕಾಗಿಯಲ್ಲದೆ ಯಾರಿಂದಲೂ ಗುಂಡು ಹೊಡೆಯಲ್ಪಟ್ಟಿಲ್ಲ. ಸಾರ್ಜಂಟನು ಅಡ್ಡಾತಿಡ್ಡ ಗುಂಡು ಹೊಡೆದರೆಂಬುವ ಸಂಗತಿಯು ಸುಳ್ಳು ಇದೆ. ಪೋಲೀಸರು ಒಟ್ಟಿಗೆ ಕಟ್ಟಲ್ಪಟ್ಟು ಸುಡಲ್ಪಟ್ಟಿದ್ದು ನಿಜವಾದ ಸಂಗತಿಯಲ್ಲ. ಒಬ್ಬನ ಕಣ್ಣು ಕಿತ್ತಲ್ಪಟ್ಟಿತು ಮತ್ತು ಇಬ್ಬರು ಬಾವಿಯಲ್ಲಿ ಒಗೆಯಲ್ಪಟ್ಟರು ಎಂಬ ಸಂಗತಿಗಳು ನಿಜವಾದವುಗಳಲ್ಲ.

## ಡೆಪ್ಯೂಟಿ ಕಲೆಕ್ಟರರು ರಾಜೀನಾಮೆ ಕೊಟ್ಟರು

ಗುಜರಾಥ ಪ್ರಾಂತದ ಕಾಯರಾ ಜಿಲ್ಲೆಯ ಡೆಪ್ಯುಟಿ ಕಲೆಕ್ಟರರಾದ ಶ್ರೀ. ದುಲರ್ಭಜಿ ದೇಸಾಯಿ ಇವರು ತಮ್ಮ ಸರಕಾರಿ ಉದ್ಯೋಗಕ್ಕೆ ಶರಣು ಹೊಡೆದಿದ್ದಾರೆ.

## ಪೋಸ್ಟಮನ್‌ನು ರಾಜೀನಾಮೆ ಕೊಟ್ಟನು

ಸರಕಾರದ ದಬ್ಬಾಳಿಕೆಯ ನಿಷೇಧಾರ್ಥವಾಗಿ ನಿಪ್ಪಾಣಿಯಲ್ಲಿಯ ಹಳ್ಳಿಯ ಅಂಚೆಯವನಾದ ಶ್ರೀ|| ಗೋವಿಂದಪ್ಪ ಕುರುಬೆಟ್ಟ ಇವರು ತಮ್ಮ ಉದ್ಯೋಗಕ್ಕೆ ಶರಣು ಹೊಡೆದಿದ್ದಾರೆ.

# ನರಿಮನ್ನರು ಮತ್ತೆ ಸೆರೆಯಾಳಾದರು.

ತಾ|| ೨೦ ನೆಯ ದಿವಸ ಮುಂಬಯಿಯ ಪೋಲೀಸ ಅಧಿಕಾರಿಗಳಾದ ಡೆಪ್ಯೂಟಿ ಕಮೀಶನರ ಹಾಗು ಸುಪರಿಂಟೆಂಡೆಂಟರು ೩೦೦ ಜನ ಪೋಲೀಸರೊಂದಿಗೆ ಕಾಂಗ್ರೆಸ ಕಚೇರಿಯ ಸ್ಥಳಕ್ಕೆ ಹೋಗಿ ಅದನ್ನು ಮುತ್ತಿ ಒಳಗಿನ ಕಾಗದ ಪತ್ರಗಳನ್ನು ತೆಗೆದುಕೊಂಡು ಹೋದದ್ದಲ್ಲದೆ, ಶ್ರೀ ನರಿಮನ್, ಜಿ. ಎಸ್. ಜೋಶಿ, ನಿಂಬಾಳಕರ, ಪಡಬಿದ್ರಿ, ಆರ್. ಕೃಷ್ಣ ಅಯ್ಯರ, ಕೆ. ಆರ್ ನಾರಾಯಣಸ್ವಾಮಿ, ಪಾಟಣಕರ, ಇವರನ್ನು ಸೆರೆಹಿಡಿದುಕೊಂಡು ಹೋದರು. "ಕಾಂಗ್ರೆಸ್ ಪತ್ರಿಕೆ"ಯನ್ನು ಇನ್ನು ಮುಂದೆ ಹೊರಡಿಸಬಾರದಾಗಿ ಚೀಫ. ಪ್ರೆ. ಮ್ಯಾಜಿಸ್ಟ್ರೇಟರು ೧೪೪ ನೆಯ ಕಲಮಿನನ್ವಯ ತೆಗೆದ ಕಟ್ಟಪ್ಪಣೆಯನ್ನು ಅಲ್ಲಗಳೆದು "ಪತ್ರಿಕೆ" ಯನ್ನು ಹೊರಡಿಸಿದುದಕ್ಕಾಗಿ ಇ. ಪಿ. ಕೋಡಿನ ೧೨೪ ನೆಯ ಕಲಮಿನ ಅನ್ವಯ ಇವರೆಲ್ಲರೂ ಹಿಡಿಯಲ್ಪಟ್ಟಿದ್ದಾರಾಗಿ ತಿಳಿಯುತ್ತಿದೆ.

## ಗುಜರಾಥದಲ್ಲಿ ಕರನಿರಾಕರಣೆಯು

ಬಾಡೋಲಿ ತಾಲೂಕದ ಸಾರಭೋಣ ಭಾಗದ ನಿವಾಸಿಗಳು, ಸರದಾರ ವಲ್ಲಭಭಾಯಿ ಪಟೇಲರಾಗಲಿ ಇಲ್ಲವೆ ಮಹಾತ್ಮಾ ಗಾಂಧಿಯವರಾಗಲಿ ಅಪ್ಪಣೆಯನ್ನೀಯುವವರೆಗೆ ಭೂಮಿಯ ಮೇಲಿನ ಕರವನ್ನು ಕೊಡಬಾರದಾಗಿ ನಿರ್ಧರಿಸಿದ್ದಾರೆ.

## ಗಾಂಧಿ ಟೊಪ್ಪಿಗೆಗಳಿಗೆ ಪ್ರತಿಬಂಧವಿಲ್ಲವಂತೆ!

ಕೊಲ್ಹಾಪುರದ ಲಷ್ಕರಿ ಅಧಿಕಾರಿಯು ಲಷ್ಕರಿ ಕಾಯಿದೆಯ ಅನ್ವಯ ಗಾಂಧಿ ಟೊಪ್ಪಿಗೆಗಳನ್ನು ಹಾಕಿಕೊಂಡು ತಿರುಗುವದನ್ನು ಪ್ರತಿಬಂಧಿಸಿಲ್ಲವೆಂದೂ, ಹಾಗೆ ಹಾಕಿಕೊಂಡು ತಿರುಗಿದವರಿಗೆ ಯಾವ ವಿಧದಿಂದಲೂ ಅಡ್ಡಿಯನ್ನುಂಟು ಮಾಡಿಲ್ಲವೆಂದೂ ಅಸೋಸಿಯೇಟೆಡ್ ಪ್ರೆಸ್ಸದ ಅಧಿಕಾರಿಗಳಿಗೆ ತಿಳಿದು ಬಂದಿದೆಯಂತೆ!

## ಗುಳೇದಗುಡ್ಡ

ಶ್ರೀ ಭಾಸುತಕರ ಇವರಿಂದ ಕಾಂಗ್ರೇಸ ಕಮೀಟಿಯ ಕೆಲಸವು ಚನ್ನಾಗಿ ಸಾಗುವದಿಲ್ಲವೆಂದು ಕಂಡುಬಂದಿದ್ದುದರಿಂದ ಇವರನ್ನು ಅಧ್ಯಕ್ಷಪದದಿಂದ ತೆಗೆದು ಹಾಕಿ ಅವರ ಸ್ಥಳದಲ್ಲಿ ಶ್ರೀ ಜೋಶಿ ಗುಂಡೇರಾಯರನ್ನು ನಿಯಮಿಸಿರುವರೆಂದೂ, ಅಂದು ಸಂಜೆಯಲ್ಲಿ ಶ್ರೀ ಜೋಶಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಪರದೇಶಿ ಬಟ್ಟೆಗಳ ಬಹಿಷ್ಕಾರ, ಮದ್ಯಪಾನ ನಿಷೇಧ ಮೊದಲಾದವುಗಳ ಮೇಲೆ ಮುಖಂಡರ ಭಾಷಣಗಳಾದದ್ದಲ್ಲದೆ, ವಿದೇಶಿ ಬಟ್ಟೆಗಳ ಪ್ರಚಂಡ ಹೋಳಿಯೂ ಜರುಗಿತೆಂದೂ" ಗುಳೇದಗುಡ್ಡದಿಂದ ಓರ್ವರು ಪತ್ರ ಬರೆದಿರುತ್ತಾರೆ.

## ಮುಸಲ್ಮಾನರು ಸತ್ಯಾಗ್ರಹದಲ್ಲಿ ಸೇರಿದರು

ಕೋಮಿಲಾದಲ್ಲಿಯ ೨೦೦ ಜನ ಮುಸಲ್ಮಾನರು ಸ್ವಯಂಸೇವಕರ ಪ್ರತಿಜ್ಞಾಪತ್ರಿಕೆಗಳಿಗೆ ಅಂಕಿತವನ್ನಿಕ್ಕಿ ಸತ್ಯಾಗ್ರಹಿಗಳಾಗಿ ಸೇರಿದ್ದಾರೆ. ಇಲ್ಲಿಯ ಮುಸಲ್ಮಾನರು?

## ನಾ|| ಶಾಸ್ತ್ರಿಗಳು ಶಕುನ ಹೇಳಿದರು.

ಲಂಡನದಲ್ಲಿ ತಮಗಾಗಿ ಏರ್ಪಡಿಸಿದ ಸಂತೋಷಕೂಟ ಸಮಾರಂಭದ ಸಮಯದಲ್ಲಿ ಭಾಷಣಮಾಡುವಾಗ್ಗೆ ನಾಮದಾರ ಶಾಸ್ತ್ರಿಗಳು ಹೀಗೆ ಹೇಳಿದ್ದಾರೆ " ಮಹಾತ್ಮಾ ಗಾಂಧಿಯವರನ್ನೂ ಮತ್ತು ಉಳಿದ ರಾಜಕೀಯ ಕೈದಿಗಳನ್ನೂ ಮೊದಲು ಬಿಟ್ಟುಬಿಡಿರಿ. ವಸಾಹತಿ ಸ್ವರಾಜ್ಯವನ್ನು ಶೀಘ್ರದಲ್ಲಿಯೇ ಖಂಡಿತವಾಗಿ ಕೊಡುತ್ತೇವೆಂದು ಮಾತು ಕೊಡಿರಿ. ಹೀಗೆ ನೀವು ಮಾಡಿದರೆ ಮಾತ್ರ ಮಹಾತ್ಮಾ ಗಾಂಧಿಯವರು ತಮ್ಮ ಅನುಯಾಯಿಗಳಿಗೆ ತಿಳಿಹೇಳಿ ಅವರ ದೃಷ್ಟಿಯನ್ನು ಸಂಪೂರ್ಣ ಸ್ವರಾಜ್ಯದಿಂದ ವಸಾಹತಿ ಸ್ವರಾಜ್ಯದ ಕಡೆಗೆ ಹೊರಳಿಸಬಹುದು"

## ಪೋಲೀಸ ಅಧಿಕಾರಿಗಳ ದಬ್ಬಾಳಿಕೆ.

ತಾ|| ೧೯—೫—೩೦ ನೆಯ ದಿವಸ ರಾತ್ರಿಯ ಘಂಟೆಯ ಸಮಯದಲ್ಲಿ ಒಬ್ಬ ರೈತನು ಎತ್ತುಗಳನ್ನು ತೆಗೆದುಕೊಂಡು ಭಳಕಳದ ಮಾರ್ಗದಿಂದ ಬರುತ್ತಿರುವಾಗ ಒಬ್ಬ ಪೋಲೀಸನು ಅವನನ್ನು ತಡೆದು ದೀಪವನ್ನು ಹಿಡಿದಿಲ್ಲವೇಕೆ ಎಂದು ಕೇಳಿದನು- ಎತ್ತನ್ನು ಗಾಡಿಗೆ ಕಟ್ಟಿದ್ದರೆ ದೀಪದ ಅವಶ್ಯಕತೆಯಿತ್ತು. ಕೇವಲ ಎತ್ತುಗಳನ್ನೇ ತೆಗೆದುಕೊಂಡು ಹೋಗುತ್ತಿರುವಾಗ ದೀಪವನ್ನು ಹಚ್ಚತಕ್ಕದ್ದೆಂಬ ನಿಯಮವು ನನಗೆ ತಿಳಿಯದು" ಎಂದು ಅವನು ಉತ್ತರ ಕೊಟ್ಟನು. ಅದಕ್ಕೆ ಪೋಲೀಸನು "ನೀವೇ ಅಲ್ಲವೇ ಉಪ್ಪು ಮಾಡುವವರು, ನಿಮಗೆ ತಕ್ಕ ಶಿಕ್ಷೆ ಮಾಡಬೇಕು" ಎಂದು ಹೇಳಿ ಅವನನ್ನು ಕೋಲಿನಿಂದ ಬಡಿಯಹೋದನು. ಹಾದಿಕಾರರು ಬಂದು ಬಿಡಿಸಿದರು. ಅದರ ಪರಿಣಾಮವಾಗಿ ಈ ದಿನ ತೋರಕೆಯಲ್ಲಿ ಅವನ ಜಾತಿಯ ಜನರು ಸಭೆಮಾಡಿಕೊಂಡು, ಇನ್ನು ಮುಂದೆ ಸರಕಾರಿ ಅಧಿಕಾರಿಗಳು ತಮ್ಮ ಜಾತಿಯ ಜನರಲ್ಲಿ ಯಾರನ್ನಾದರೂ ಅವಮಾನಗೊಳಿಸಿದಲ್ಲಿ ತಮ್ಮ ಜಾತಿಯವರನ್ನೆಲ್ಲ ಅವಮಾನಗೊಳಿಸಿದರೆಂದು ತಿಳಿದು ಮುಂದಿನ ಕೆಲಸವನ್ನು ಮಾಡತಕ್ಕದ್ದೆಂದು ಗೊತ್ತುಮಾಡಿಕೊಂಡರು. ಈ ದಿನ ಸಾಣಿಕಟ್ಟೆಗೆ ಕಾರವಾರದಿಂದ ೨೦ ಜನ ಸಶಸ್ತ್ರ ಪೋಲೀಸರು ಹೋಗಿರುತ್ತಾರೆ.

ಸತ್ಯಾಗ್ರಹ ಶಿಬಿರ<br>ಅಂಕೋಲಾ<br>೨೦-೫-೩೦ } ಪ್ರಕಟನಾ ಶಾಖಾಧಿಕಾರಿ

## ಸೈನಿಕರು ಸರಕಾರದ ಮಾತು ಕೇಳಲಿಲ್ಲ

ಪೇಶಾವರದಲ್ಲಾದ ದಂಗೆಯ ಸಮಯದಲ್ಲಿ ೧೮ ನೆಯ ರಾಯಲ್ ಗಡವಾಲ ರಾಯಫಲ್ಸದ ೨ ನೆಯ ಪಟಾಲಿಯಿನವರು ಮೇಲಧಿಕಾರಿಗಳ ಅಪ್ಪಣೆಯ ವಿರುದ್ಧವಾಗಿ ವರ್ತಿಸಿದರೆಂದು ವಿಚಾರಣೆಯಿಂದ ತಿಳಿದು ಬಂದದ್ದರಿಂದ, ಅವರ ವಿಚಾರಣೆಯು ಲಷ್ಕರಿ ಕಾಯಿದೆಯಿಂದ ಆಗುವದೆಂದು ಸರಕಾರದವರಿಂದ ಪ್ರಕಟವಾಗಿದೆ.

## ಬ್ರಿಟಿಶ್ ವ್ಯಾಪಾರಿಗಳಿಗೆ ಬಿಸಿಹತ್ತಿತು

ಈಗ ದೇಶದಲ್ಲೆಲ್ಲ ನಡೆದ ವಿದೇಶೀ ಬಟ್ಟೆಗಳ ಹಾಗು ಸರಕುಗಳ ಬಹಿಷ್ಕಾರದ ಚಳವಳಿಯ ಪ್ರಗತಿಯನ್ನು ಕಂಡು ಹಿಂದುಸ್ಥಾನದಲ್ಲಿಯ ಬ್ರಿಟಿಶ್ ವ್ಯಾಪಾರಿಗಳು ಗಾಬರಿಗೊಂಡಿದ್ದಾರೆಂಬುವದು, ಮುಂಬಯಿಯಲ್ಲಿಯ ಓವರ್ ಬ್ರಿಟಿಶ್ ಕಂಪನಿಯವರು ತಮ್ಮ ಗಿರಾಕಿಗಳಿಗೆ ಬರೆದ ಈ ಕೆಳಗಿನ ಪತ್ರದ ಮೇಲಿಂದ ವ್ಯಕ್ತವಾಗುತ್ತದೆ. "ಈಗಿನ ಪ್ರಸಂಗದಲ್ಲಿ ಬ್ರಿಟಿಶ್ ಕಂಪನಿಗಳಿಗೆ ಉತ್ತೇಜನ ಕೊಡುವದು ಯೋಗ್ಯವಾಗಿದೆ. ಹಿಂದೀ ಕಂಪನಿಗಳಲ್ಲಿ ಸಿಗುವ ಸರಕುಗಳಿಗಿಂತಲೂ ಬ್ರಿಟಿಶ್ ಕಂಪನಿಗಳಲ್ಲಿ ಸಿಗುವ ಸರಕುಗಳು ಉತ್ತಮವಿರುತ್ತವೆ. ಭಾರತೀಯರು ಬ್ರಿಟಿಶ ಸರಕುಗಳನ್ನು ಬಹಿಷ್ಕರಿಸುತ್ತಿರುವಾಗ, ಬ್ರಿಟಿಶರಾದ ನಾವೆಲ್ಲರೂ ಸಹಕರಿಸಿ, ಒಬ್ಬರಿಗೊಬ್ಬರು ಸಹಾಯಮಾಡ ತಕ್ಕದ್ದು." ಬ್ರಿಟಿಶ ಸರಕುಗಳ ಬಹಿಷ್ಕಾರವನ್ನು ಇನ್ನೂ ಭರದಿಂದ ಸಾಗಿಸಿದಲ್ಲಿ ಬ್ರಿಟಿಶರು ಸಂಪೂರ್ಣವಾಗಿ ಕೈಕಾಲು ಬಿಡುವದು ನಿಶ್ಚಿತವೇ ಸರಿ!

## ಸರಕಾರದ ತಾಳೀ ಹರಿದುಕೊಂಡನು

ದಬ್ಬಾಳಿಕೆಯ ನಿಷೇಧಾರ್ಥವಾಗಿ ತಾಳೀಕೋಟಿಯಲ್ಲಿ ಕುಲಕರ್ಣಿಕಿಯ ಕೆಲಸವನ್ನು ಮಾಡುತ್ತಿದ್ದ ಶ್ರೀ. ಗಂಗಾಧರರಾಯರು ತಮ್ಮ ಉದ್ಯೋಗಕ್ಕೆ ರಾಜೀನಾಮೆಯನ್ನು ಕೊಟ್ಟು ಸರಕಾರದ ತಾಳೀ ಹರಿದುಕೊಂಡಿದ್ದಾರೆ.

## ಅಲ್ಲೀ ಬಂಧುಗಳು ಹೊರಟರು !

ದಕ್ಷಿಣ ಆಫ್ರಿಕಾ ಯೂನಿಯನ್ನಕ್ಕೆ ಹೋಗಿ ಧಾರ್ಮಿಕ ವಿಷಯಗಳ ಬಗ್ಗೆ ವ್ಯಾಖ್ಯಾನಗಳನ್ನು ಕೊಡಲು ಹೋದ ವರ್ಷ ಅಲ್ಲೀ ಬಂಧುಗಳಿಗೆ ಅಧಿಕಾರಿಗಳಿಂದ ಅಪ್ಪಣೆಯು ದೊರೆತಿದ್ದಿಲ್ಲವಷ್ಟೆ. ಆದರೆ ಈಗ ಅವರಿಗೆ ಅಲ್ಲಿಗೆ ಹೋಗಲು ಅಪ್ಪಣೆಯು ದೊರೆತಿದ್ದು, ಅವರು ಜೂನ ತಿಂಗಳದ ಕೊನೆಯಲ್ಲಿ ಹೊರಡುವವರಿದ್ದಾರೆ. ಅಕ್ಟೋಬರ ತಿಂಗಳದಲ್ಲಿ ಲಂಡನ್ನದಲ್ಲಿ ಜರಗುವ ದುಂಡು ಮೇಜಿನ ಪರಿಷತ್ತಿಗೂ ಅವರು ಹೋಗುವವರಿದ್ದಾರಂತೆ! "ಕಾಲಾಯ ತಸ್ಮೈನಮಃ"!

## ತಾ|| ೨೫ ಕ್ಕೆ ಸಿಂದೀ ಗಿಡಗಳ ನಾಶ

ಮಳೆಗಾಲವು ಪ್ರಾರಂಭವಾಗಿದ್ದರಿಂದ, ಬಸನಾಳದಲ್ಲಿ ಉಪ್ಪನ್ನು ಸಿದ್ಧಪಡಿಸುವ ಕಾರ್ಯವನ್ನು ತಾ|| ೨೫ ಕ್ಕೆ ನಿಲ್ಲಿಸುವೆವೆಂದೂ, ಅಂದಿನಿಂದ ಸಿಂದೀ ಗಿಡಗಳನ್ನು ಕಡಿಯುವ ಹಾಗು ವಿದೇಶಿ ವಸ್ತ್ರಗಳ ಬಹಿಷ್ಕಾರ ಚಳವಳಿಯನ್ನು ಭರದಿಂದ ಸಾಗಿಸುವೆವೆಂದೂ ಈ ಕಾರ್ಯದಲ್ಲಿ ಎಲ್ಲರೂ ನೆರವಾಗಬೇಕೆಂದೂ ಸತ್ಯಾಗ್ರಹ ಮಂಡಲದವರು ತಿಳಿಸುತ್ತಾರೆ.

## ಮದುವೆಯಲ್ಲಿ ಖಾದಿ

ಎಡಹಳ್ಳಿಯ ಶ್ರೀ ನಿಂಗಪ್ಪ ಪಾಟೀಲ ಇವರು ತಮ್ಮ ಮನೆಯಲ್ಲಿಯ ಲಗ್ನಸಮಾರಂಭದಲ್ಲಿ ಕೇವಲ ಖಾದಿಯನ್ನೇ ಉಪಯೋಗಿಸಿದರೆಂದು ತಿಳಿಯುತ್ತದೆ.

## ಸೊಲ್ಲಾಪುರದಲ್ಲಿ ಭಯಂಕರ ಶಿಕ್ಷೆಗಳು

ಲಷ್ಕರೀ ಕಾಯದೆಯನ್ವಯ ಲಷ್ಕರಿ ಕೋರ್ಟನಿಂದ ಕೆಲವು ಜನರಿಗೆ ಶಿಕ್ಷೆಗಳು ಕೊಡಲ್ಪಟ್ಟಿದ್ದವಷ್ಟೆ. ಅವುಗಳಲ್ಲಿ ಕೆಲವುಗಳನ್ನು ಲಷ್ಕರಿ ಮೇಲಧಿಕಾರಿಯು ಪರ್ಯಾಲೋಚಿಸಿ ಮೂವರ ಶಿಕ್ಷೆಗಳನ್ನು ಕಡಿಮೆಮಾಡಿ ಉಳಿದವುಗಳನ್ನು ಮೊದಲಿನಂತೆಯೆ ಇರಿಸಿದ್ದಾನೆ. ಅವುಗಳನ್ನು ಇಲ್ಲಿ ಕೆಳಗೆ ಕೊಟ್ಟಿದೆ.

ವೆಂಕಟೇಶ ಗಣೇಶ ಮತ್ತು ರಾಮಕೃಷ್ಣ ಗಣೇಶರಾಮ ಜಾಜು, ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರು ೭ ವರ್ಷ, (ಈಗ ೫ ವರ್ಷ) ಮತ್ತು ೨೦೦೦ ರೂ. ದಂಡ; ತುಳಸೀದಾಸ ಸುಭಾನ ಜಾಧವ, ಕಾಂಗ್ರೆಸ್ ಕಮೀಟಿಯ ಕಾರ್ಯದರ್ಶಿ, ೧೦ ವರ್ಷ (ಈಗ ೭ ವರ್ಷ) ಮತ್ತು ೩೦೦೦ ರೂ. ದಂಡ; ಲಿಂಗಯ್ಯ ಮಲ್ಲಯ್ಯ, ಕೊಂಡು ವಾದಾಜಿ, ಮಾರುತಿ ಪ್ರಭು ಅಪ್ಪಾ, ಶಿವದಾಸ ಬಾಬೂರಾವ, ವಿಶ್ವನಾಥ ವಿರುಪಾದ, ಮಲಕಾ ಆರ್ಯ ಸಟವಾಜಿ, ಅಪ್ಪಾರಾವ ದೇಶಾಬಾ ಇವರಿಗೆ ೨ ವರ್ಷ ಮತ್ತು ೧೦೦೦ ರು. ದಂಡ; ಮಲ್ಲಿಕಾರ್ಜುನ ಚೋವಪ್ಪ; ಶಂಕರ ಕೇಶವದಾಸ, ಗಣಪತ ರಾಮಚಂದ್ರ ಇವರಿಗೆ ೧ ವರ್ಷ ೫೦೦ ರೂ. ದಂಡ; ಸಾಯಪ್ಪ ಹನುಮಂತ ೧ ವರ್ಷ; ಮಾಣಿಕಚಂದ ಶಹಾ, ಮ್ಯುನಸಿಪಾಲಿಟಿಯ ಅಧ್ಯಕ್ಷರು ೬ ತಿಂಗಳ ಮತ್ತು ೧೦೦೦ ರು. ದಂಡ; ಉಳಿದ ೮ ಜನರಲ್ಲಿ ೪ ಜನರಿಗೆ ಬೇರೆ ಬೇರೆ ದಂಡಗಳೂ, ಫಟಕೀ ಶಿಕ್ಷೆಗಳೂ ವಿಧಿಸಲ್ಪಟ್ಟಿವೆ. ಲಷ್ಕರಿ ಕಾಯದೆಯಿಂದ ಶಿಕ್ಷಿಸಲ್ಪಟ್ಟವರನ್ನು ವಿಜಾಪುರಕ್ಕೆ ಕಳಿಸುವದರಲ್ಲಿ ಬಂದಿದೆ.

ಕಂಪನಿಯ ಮುಕ್ಕಾಂ ಸ್ವಲ್ಪ ಉಳಿದಿವೆ,

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಶನಿವಾರ ತಾ|| ೨೪—೫—೩೦

**ಯಚ್ಚಮ್ಮನಾಯಿಕ.**

ಭಾನುವಾರ ತಾ|| ೨೫—೫—೩೦

**ಸುದಾಮದೇವ**

ಸೋಮವಾರ ತಾ|| ೨೬—೫—೩೦

**ಶರಣಬಸವ**

ಬುಧವಾರ ತಾ|| ೨೮—೫—೩೦

ಸಾಮಾಜಿಕ ಹೊಸನಾಟಕ

**ಶಿಕ್ಷಣಸಂಭ್ರಮ**

**ಎಂಬ ನಾಟಕಗಳನ್ನು ಅಭಿನಯಿಸುವರು.**

ಈ ನಾಟಕಗಳು ಪುನಃ ಆಡಲ್ಪಡುವದಿಲ್ಲ.

ಸಂಘದೊಡೆಯ—**ಸದಾಶಿವರಾವ ಗರೂಡ**

**ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅವರಿಂದ, ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.**

ರ. ನಂ. ಬಿ ೧೯೪೭ ನಿತ್ಯಸಂಚಿಕೆಯು. ಬೆಲೆ ೦-೦-೩

यद्यत् परवशं दुःखं । यद्यदात्मवशं सुखम् ॥ -मनु.

# ಕನ್ನಡಿಗ

KANNADIGA BAGALKOT

ಸಂಪಾದಕರು:- ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಶನಿವಾರ ಮಿತಿ ವೈಶಾಖ ಬಹುಳ ೧೧ ಶಕೆ ೧೮೫೨ ತಾ ೨೪-೫-೩೦ ಸಂಚಿಕೆ ೫೬

# ಮಹಾತ್ಮರ ಕರಾರುಗಳು

"ಡೇಲಿ ಹೆರಾಲ್ಡ" ಪತ್ರಿಕೆಯ ಪ್ರತಿನಿಧಿಗಳಾದ ಮಿ॥ ಜಾರ್ಜ ಸ್ಲೋಕೊಂಬೆ ಇವರು ತಾ॥ ೨೦ ನೆಯ ದಿವಸ ಮ॥ ಗಾಂಧಿಯವರನ್ನು ತುರಂಗದಲ್ಲಿ ಕಂಡು ಅವರೊಡನೆ ಹಿಂದುಸ್ತಾನದ ಈಗಿನ ಪರಿಸ್ಥಿತಿಯ ಸಂಬಂಧವಾಗಿ ಚರ್ಚಿಸಿದರು. ಚರ್ಚೆಯಲ್ಲಿ ಹೊರಬಿದ್ದ ಸಂಗತಿಗಳು 'ಡೇಲಿ ಮೇಲ' ಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಅವುಗಳನ್ನು ಇಲ್ಲಿ ಕೆಳಗೆ ಕೊಟ್ಟಿದೆ:-

ಮಿ॥ ಸ್ಲೋಕೊಂಬೆ:— ಸತ್ಯಾಗ್ರಹಿಗಳಿಗೂ, ಅಧಿಕಾರಿಗಳಿಗೂ ಈಗ ನಡೆದ ಯುದ್ಧದಲ್ಲಿ ಅಧಿಕಾರಿಗಳು ಸೋಲನ್ನು ಒಪ್ಪಿಕೊಂಡರೆ—

ಮಹಾತ್ಮರು:— ನಾನು ಇದ್ದುದರಲ್ಲಿಯೇ ಸಂತೋಷಪಡುವವನಾಗಿದ್ದೇನೆ. ಅಸಾಧ್ಯವಾದುದನ್ನು ಪಡೆಯುವದಕ್ಕಾಗಿ ನಾನು ಪ್ರಯತ್ನಿಸುತ್ತಿರುವೆನೆಂದು ಎಷ್ಟೋ ಜನರ ಅಭಿಪ್ರಾಯ ಇದೆ. ಆದರೆ ವಸ್ತುಸ್ಥಿತಿಯು ಹಾಗಿಲ್ಲ ನನ್ನ ಜೀವಮಾನದಲ್ಲಿ ಇಂಥ ಎಷ್ಟೋ ಪ್ರಸಂಗಗಳು ಬಂದು ಹೋಗಿವೆ. ಭಾರತೀಯರನ್ನು ಸಂತುಷ್ಟಪಡಿಸಲು ಸರಕಾರದವರು ಇಚ್ಛಿಸುತ್ತಿದ್ದರೆ, ನಾನು ವ್ಹಾಯಿಸರಾಯರಿಗೆ ಬರೆದ ಪತ್ರದಲ್ಲಿ ಕಾಣಿಸಿದ ೧೧ ಕರಾರುಗಳನ್ನು ಅವರು ಪೂರ್ತಿಪಡಿಸಬೇಕು. ನಮಗೆ ಬೇಕಾದುದನ್ನು ಪಡೆಯುವ ವರೆಗೆ ನಾವು ಈ ಸ್ವಾತಂತ್ರ್ಯಸಮರವನ್ನು ಹೀಗೆಯೇ ಸಾಗಿಸುವೆವು. ಅವಶ್ಯಬಿದ್ದಲ್ಲಿ ಸ್ವಾತಂತ್ರ್ಯಕ್ಕಾಗಿ ಪ್ರಾಣಗಳನ್ನಾದರೂ ಅರ್ಪಿಸಲು ಸಿದ್ಧರಿರುವೆವು. ಸರಕಾರದ ತುರಂಗಗಳನ್ನು ಸತ್ಯಾಗ್ರಹಿಗಳಿಂದಲೂ, ಸ್ವಯಂಸೇವಕರಿಂದಲೂ ತುಂಬಿ, ರಾಜ್ಯದಾಡಳಿತೆಯು ಸುಸೂತ್ರವಾಗಿ ಸಾಗದಂತೆ ಪ್ರಯತ್ನಿಸುವೆವು. ನನ್ನೊಡನೆ ಸರಕಾರವು ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಬಯಸುತ್ತಿದ್ದಲ್ಲಿ ಅವರು ಈ ಕೆಳಗಿನ ನಾಲ್ಕು ಕರಾರುಗಳಿಗೆ ಒಪ್ಪಿಕೊಳ್ಳಬೇಕು. ಈ ಕರಾರುಗಳಿಗೆ ಅವರು ಒಪ್ಪಿಕೊಂಡರೇನೇ, ಕಾಯಿದೆಭಂಗದ ಚಳವಳಿಯನ್ನು ಹಿಂದಕ್ಕೆ ತೆಗೆದುಕೊಳ್ಳಲೂ ಮತ್ತು ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವನ್ನು ತೆಗೆದುಕೊಳ್ಳಲೂ ರಾಷ್ಟ್ರೀಯ ಸಭೆಯವರಿಗೆ ನಾನು ತಿಳಿಸುತ್ತೇನೆ. ಈ ಕರಾರುಗಳಾವವೆಂದರೆ—

(೧) ದುಂಡುಮೇಜಿನ ಪರಿಷತ್ತಿನಲ್ಲಿ ಚರ್ಚಿಸಲ್ಪಡುವ ವಿಷಯಗಳಲ್ಲಿ ಹಿಂದುಸ್ತಾನಕ್ಕೆ ಬೇಕಾದ ಸ್ವಾತಂತ್ರ್ಯವಿಷಯವನ್ನೊಳಗೊಂಡಿರುವ ಯೋಜನೆಯು ಸಾರಭೂತವಾಗಿಯಾದರೂ ಸಮಾವಿಷ್ಟವಾಗಿರಬೇಕು.

(೨) ಉಪ್ಪಿನ ತೆರಿಗೆಯನ್ನು ತೆಗೆಯುವೆವಾಗಿಯೂ, ಮದ್ಯಪಾನವನ್ನು ಪ್ರತಿಬಂಧಿಸುವೆವಾಗಿಯೂ ಪರದೇಶಿ ಬಟ್ಟೆಗಳನ್ನು ನಿರ್ಬಂಧಿಸುವೆವಾಗಿಯೂ, ನನಗೆ ಸಮಾಧಾನವಾಗುವಂತೆ, ಸರಕಾರದವರು ವಚನಕೊಡಬೇಕು.

(೩) ಕಾಯಿದೆಭಂಗದ ಚಳವಳಿಯನ್ನು ನಿಲ್ಲಿಸಿದ ಕೂಡಲೆ, ರಾಜಕೀಯ ಅಪರಾಧಗಳಿಗಾಗಿ ಸೆರೆಯಾಳುಗಳಾದ ಎಲ್ಲ ಜನರನ್ನು ಸರಕಾರದವರು ಬಿಟ್ಟುಬಿಡಬೇಕು.

(೪) ವ್ಹಾಯಿಸರಾಯರಿಗೆ ಬರೆದ ಪತ್ರದಲ್ಲಿ ಕಾಣಿಸಿದ ಉಳಿದ ವಿಷಯಗಳನ್ನು ಕುರಿತು ಹಿಂದುಗಡೆಯಲ್ಲಿ ಚರ್ಚಿಸುವೆವೆಂದು ಸರಕಾರದವರು ವಚನಕೊಡಬೇಕು.

## ವ್ಹಾಯಿಸರಾಯರಿಗೆ ತಾರು

ಸೊಲ್ಲಾಪುರದ ಲಷ್ಕರಿ ಕಾಯಿದೆಯನ್ನು ತೀವ್ರವೇ ತೆಗೆದುಹಾಕಿ, ಹಾಯಕೋರ್ಟಿನ ನ್ಯಾಯಾಧೀಶರ ಅಧ್ಯಕ್ಷತೆಯ ಕೆಳಗೆ ಒಂದು ಮಂಡಳವನ್ನು ನಿಯಮಿಸಿ, ಅಲ್ಲಿಯ ಪರಿಸ್ಥಿತಿಯನ್ನು ವಿಚಾರಿಸಬೇಕೆಂದು ಮುಂಬಯಿಯ ಇಂಡಿಯನ್ ಮರ್ಚಂಟ ಚೇಂಬರದವರು ವ್ಹಾಯಿಸರಾಯರಿಗೆ ತಾರು ಮಾಡಿದ್ದಾರೆ.

# ಕರ್ನಾಟಕದಲ್ಲಿ ಮದ್ಯಪಾನ ಪ್ರತಿಬಂಧ ಹಾಗು ವಿದೇಶಿ ವಸ್ತ್ರ ಬಹಿಷ್ಕಾರ

ತಾ|| ೧೮-೫-೩೦ ನೆಯ ದಿವಸ ಕರ್ನಾಟಕದ ಸತ್ಯಾಗ್ರಹ ಮಂಡಳದ ಸಭೆಯು ಹುಬ್ಬಳ್ಳಿಯಲ್ಲಿ ಸೇರಿತ್ತು. ಅಲ್ಲಿ ಗೊತ್ತಾದ ನಿರ್ಣಯಗಳಲ್ಲಿ ಮುಖ್ಯ ನಿರ್ಣಯಗಳೆಂದರೆ:-

(೧) ಈ ಮಂಡಲವು ಕರ್ನಾಟಕದಲ್ಲಿ ತುರಂಗಕ್ಕೆ ಹಾಕಲ್ಪಟ್ಟ ಸತ್ಯಾಗ್ರಹಿಗಳೆಲ್ಲರನ್ನೂ ಅವರ ಅಪ್ರತಿಮ ಸ್ವಾರ್ಥತ್ಯಾಗಕ್ಕಾಗಿ ಅಭಿನಂದಿಸುತ್ತದೆ. (೨) ಸರಕಾರದವರು ಅಸಾಧ್ಯ ದಬ್ಬಾಳಿಕೆಯನ್ನು ಮಾಡಿದರೂ, ಸಿಟ್ಟಿಗೆಬ್ಬಿಸುವ ಕೃತ್ಯವನ್ನು ಮಾಡಿದರೂ ಸತ್ಯಾಗ್ರಹಿಗಳು ಅತ್ಯಂತ ಶಾಂತರೀತಿಯಿಂದ ವರ್ತಿಸಿದುದಕ್ಕಾಗಿ ಅವರನ್ನು ಈ ಮಂಡಲವು ಅಭಿನಂದಿಸುತ್ತದೆ. ಇದೇ ರೀತಿಯಿಂದ ಅತ್ಯಂತ ಶಾಂತವಾಗಿ ಮುಂದಾದರೂ ವರ್ತಿಸಬೇಕೆಂದು ಅವರನ್ನು ಆಗ್ರಹಪಡಿಸುತ್ತದೆ. (೩) ಈ ಮಂಡಲವು ಕೂಡಲೆ ಸೆರೆಕುಡಿತವನ್ನು ನಿಲ್ಲಿಸುವದಕ್ಕಾಗಿ ಪ್ರಚಾರಕಾರ್ಯವನ್ನು ಕರ್ನಾಟಕದಲ್ಲೆಲ್ಲ ಮಾಡಬೇಕೆಂದೂ ಮತ್ತು ಸ್ವತಂತ್ರ ಜನರ ವಶದಲ್ಲಿರತಕ್ಕಂತಹ ಸಿಂದೀ ಗಿಡಗಳನ್ನು ಅವರ ಅನುಮತಿಯಿಂದ ಕಡಿಯಬೇಕೆಂದು ಗೊತ್ತುಪಡಿಸುತ್ತದೆ (೪) ವಿದೇಶಿ ಸರಕುಗಳ ಬಹಿಷ್ಕಾರ ಅದರಲ್ಲಿಯೂ ವಿದೇಶಿ ವಸ್ತ್ರಗಳ ಬಹಿಷ್ಕಾರವನ್ನು ಸಂಪೂರ್ಣವಾಗಿಯೂ ಪರಿಣಾಮಕಾರಿಯಾಗಿಯೂ ಕರ್ನಾಟಕದಲ್ಲೆಲ್ಲ ಸಾಗಿಸಬೇಕೆಂದು ಈ ಮಂಡಲವು ನಿರ್ಣಯಿಸುತ್ತದೆ. ಮತ್ತು ಬಹಿಷ್ಕಾರವು ಯಶಸ್ವಿಯಾಗಬೇಕಾದಲ್ಲಿ ಈ ಕೆಳಗೆ ಕಂಡಂತೆ ವರ್ತಿಸಬೇಕೆಂದು ಸೂಚಿಸುತ್ತದೆ. (ಅ) ಪರದೇಶಿ ವಸ್ತ್ರಗಳ ಹೋಳಿಯನ್ನು ಕೆಲವು ಗೊತ್ತುಪಡಿಸಿದ ದಿವಸಗಳಲ್ಲಿ ಜರಗಿಸುವದು. (ಆ) ಮನೆ ಮನೆಗೆ ಹೋಗಿ ಪ್ರತಿಜ್ಞಾಪತ್ರಿಕೆಗಳನ್ನು ತೆಗೆದುಕೊಂಡು ಪ್ರಚಾರಕಾರ್ಯವನ್ನು ಸಾಗಿಸುವದು. (ಇ) ಕೈನೂಲು ತೆಗೆಯುವದನ್ನೂ, ಕೈಮಗ್ಗದ ಕೆಲಸವನ್ನೂ ಸಾಧ್ಯವಿದ್ದ ರೀತಿಗಳಲ್ಲೆಲ್ಲ ನಡೆಯಿಸುವದು. (ಈ) ವಿದೇಶಿ ಬಹಿಷ್ಕಾರದಲ್ಲಿ ಸತ್ಯಾಗ್ರಹ ಮಂಡಲದವರಿಗೆ ಸಹಾಯ ಮಾಡುವದಕ್ಕಾಗಿ ವ್ಯಾಪಾರಿಗಳ ಸಂಘಗಳನ್ನು ನಿರ್ಮಿಸುವದು. ಈ ಮಂಡಲವು ಸ್ತ್ರೀಕಾರ್ಯಕಾರಿಗಳನ್ನು ಅತಿ ಹುರುಪಿನಿಂದ ಕೆಲಸ ಮಾಡಲು ಬಿನ್ನವಿಸುತ್ತದೆ, (೬) ಸತ್ಯಾಗ್ರಹ ಮಂಡಲದ ಕಚೇರಿಯನ್ನು ಧಾರವಾಡದಿಂದ ಹುಬ್ಬಳ್ಳಿಗೆ ತರಬೇಕೆಂದು ಗೊತ್ತುಪಡಿಸುತ್ತದೆ. (೭) ಕರ್ನಾಟಕದಲ್ಲಿ ಒಂದು ಸತ್ಯಾಗ್ರಹ ಪತ್ರಿಕೆಯನ್ನು ವಾರಪತ್ರವನ್ನು ಮಂಡಲವು ಹೊರಡಿಸಬೇಕೆಂದು ಈ ಮಂಡಲವು ನಿರ್ಣಯಿಸುತ್ತದೆ. (೮) ಈ ಮಂಡಲವು ಪ್ರತಿಯೊಂದು ಜಿಲ್ಹೆಯಲ್ಲಿಯೂ ಸ್ವಯಂಸೇವಕರಿಗೆ ಸತ್ಯಾಗ್ರಹದ ಕೆಲಸಕ್ಕಾಗಿ ಶಿಕ್ಷಣ ಕೊಡಲು ಸತ್ಯಾಗ್ರಹ ಶಿಬಿರಗಳನ್ನು ಸ್ಥಾಪಿಸಬೇಕೆಂದೂ, ಈ ಎಲ್ಲ ಶಿಬಿರಗಳು ಧಾರವಾಡದ ಡಾ॰ ಕಬ್ಬೂರ ಇವರಿಂದ ಪರೀಕ್ಷಿಸಲ್ಪಡಬೇಕೆಂಬುದಾಗಿಯೂ ನಿರ್ಣಯಿಸುತ್ತದೆ. (೯) ಪ್ರಸಂಗ ಬಂದಲ್ಲಿ ಸದಸ್ಯರುಗಳ ಅನುಮತಿ ಇಲ್ಲದೆ ಕೆಲಸವನ್ನು ಸಾಗಿಸಲು ಈ ಮಂಡಲವು ಡಾ॥ ಹರ್ಡೀಕರರಿಗೆ ಸಂಪೂರ್ಣ ಅಧಿಕಾರ ಕೊಟ್ಟಿದೆ.

# ರಾಷ್ಟ್ರಧ್ವಜಕ್ಕಾಗಿ ಸತ್ಯಾಗ್ರಹ

## ಬಾಗಲಕೋಟೆಯ ನಗರಪಿತಾಮಹರಿಗೆ ಎಚ್ಚರಿಕೆ

ಬನಾರಸ ನಗರ-ಸಭೆಯು ಅಧಿವೇಶನದಲ್ಲಿ ನಗರಸಭೆಯ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ಹಚ್ಚತಕ್ಕದ್ದೆಂಬುದಾಗಿ ಕೆಲವು ತಿಂಗಳುಗಳ ಹಿಂದೆಯೆ ಗೊತ್ತಾಗಿತ್ತಂತೆ! ಆ ತೀರ್ಮಾನದಂತೆ ನಗರಸಭೆಯವರು ಇನ್ನೂ ನಡೆದುಕೊಂಡಿಲ್ಲವಂತೆ! ಆದ್ದರಿಂದ ಅಲ್ಲಿಯ ನಾಗರಿಕರು ಸಾರ್ವಜನಿಕ ಸಭೆಯನ್ನು ಕೂಡಿಸಿಕೊಂಡು ಸತ್ಯಾಗ್ರಹವನ್ನಾದರೂ ಮಾಡಿ ರಾಷ್ಟ್ರಧ್ವಜವನ್ನು ಹಚ್ಚತಕ್ಕದ್ದೆಂಬುದಾಗಿ ನಿರ್ಧರಿಸಿದ್ದಾರಂತೆ! ಬಾಗಲಕೋಟೆಯ ಮುನಸಿಪಾಲಟಿಯ ಸಭೆಯಲ್ಲಿಯೂ ಈ ವಿಷಯವು ಬಂದಿದೆಯೆಂದೂ ಅದು ಬೇಕೆಂತಲೆ ಮುಂದಕ್ಕೆ ಹಾಕಲ್ಪಡುತ್ತಿದೆಯೆಂತಲೂ ಸುದ್ದಿಯಿದೆ. ಇದು ನಿಜವಿದ್ದಲ್ಲಿ ಬಾಗಲಕೋಟೆಯ ಬಂಟರೂ ಇವರನ್ನು ಅನುಸರಿಸಿ ಬಾಗಲಕೋಟೆಯ ನಗರಸಭೆಯ ಕಟ್ಟಡದ ಮೇಲೆ ರಾಷ್ಟ್ರಧ್ವಜವು ಹಾರಾಡುವಂತೆ ಮಾಡಬಾರದೆ?

## ಪಂಡಿತ ಮಾಲವೀಯರವರು ಸರ್ವಪಕ್ಷೀಯ ಪರಿಷತ್ತಿನ ಕರೆಯನ್ನು ನಿರಾಕರಿಸಿದರು.

ಮುಂಬಯಿಯಲ್ಲಿಯ ಕೂಡಿದ ಸರ್ವಪಕ್ಷೀಯ ಪರಿಷತ್ತಿನವರು ಅಲ್ಪಸಂಖ್ಯಾಕರ ಪ್ರಶ್ನೆಗಳನ್ನು ವಿಚಾರ ಮಾಡಲು ಒಂದು ಉಪಮಂಡಲವನ್ನು ನಿಯಮಿಸಿ ಆ ಉಪಮಂಡಲದಲ್ಲಿ ಪಂಡಿತ ಮಾಲವೀಯಾ ಇವರನ್ನು ಸೇರಿಸಿದ್ದರಷ್ಟೆ. ಪಂಡಿತ ಮಾಲವೀಯಾ ಇವರು ಈಗ ಆ ಉಪಮಂಡಳದ ಸದಸ್ಯತನವನ್ನು ನಿರಾಕರಿಸಿ ಅಧ್ಯಕ್ಷರಿಗೊಂದು ಕೆಳಗಿನ ಆಶಯದ ಪತ್ರವನ್ನು ಬರೆದಿದ್ದಾರೆ. "ನಾನು ಬರೆದ ಪತ್ರದಲ್ಲಿಯ ಅಭಿಪ್ರಾಯದ ಕಡೆಗೆ ಲಕ್ಷ್ಯಕೊಡದೆ ನನ್ನನ್ನು ಉಪಮಂಡಳದ ಸದಸ್ಯನನ್ನಾಗಿ ಆರಿಸಿರುವಿರಿ. ದೇಶದಲ್ಲಿಯ ಈಗಿನ ಪರಿಸ್ಥಿತಿಯ ಕಡೆಗೆ ನೋಡಿದಲ್ಲಿ, ಯಾವ ಉದ್ದಿಶ್ಯವಾಗಿ ಪರಿಷತ್ತು ಕರೆಯಲ್ಪಟ್ಟಿರುವದೋ ಆ ಉದ್ದೇಶವು ಸಾಧಿಸುವದಿಲ್ಲವೆಂದು ತಿಳಿದು ಬರುವದು. ಆದುದರಿಂದ ನಾನು ಉಪಮಂಡಳದ ಸದಸ್ಯತ್ವವನ್ನು ನಿರಾಕರಿಸುತ್ತೇನೆ.

## ಬಂಡಿಗಾಲಿಯ ಪರಿಷತ್ತಿಗೆ ವರ್ತಕರ ಬಹಿಷ್ಕಾರ

ಮಹಾತ್ಮಾ ಗಾಂಧಿಯವರು ಆಮಂತ್ರಿಸಲ್ಪಡದ ಹೊರತು ಹಿಂದುಸ್ಥಾನದ ವ್ಯಾಪಾರಿಗಳ ಹಿತದ ವಿಷಯವಾಗಿ ವಿವೇಚನೆಯನ್ನು ಮಾಡಲು ತಮ್ಮ ಕೈಕೆಳಗಿನ ಯಾವ ಸಂಘದವರೂ ತಮ್ಮ ಪ್ರತಿನಿಧಿಗಳನ್ನು ದುಂಡು ಮೇಜಿನ ಪರಿಷತ್ತಿಗೆ ಕಳಿಸಬಾರದಾಗಿಯೂ, ಇತ್ತೀಚೆಗೆ ಪ್ರಾರಂಭವಾದ ಪಾಶವೀವೃತ್ತಿಯ ದಬ್ಬಾಳಿಕೆಯನ್ನು ಸರಕಾರವು ಕೂಡಲೆ ನಿಲ್ಲಿಸಬೇಕಾಗಿಯೂ. ಸಾಧ್ಯವಿದ್ದಷ್ಟು ಮಟ್ಟಿಗೆ ತಮ್ಮ ಕೈಕೆಳಗಿನ ಸಂಘಗಳ ಸಭಾಸದರೆಲ್ಲರೂ ಬ್ರಿಟಿಶ ಸರಕುಗಳಿಗೂ ಬ್ಯಾಂಕುಗಳಿಗೂ ಬಹಿಷ್ಕಾರ ಹಾಕಿ, ಸ್ವದೇಶಿ ವಸ್ತುಗಳಿಗೆ ಉತ್ತೇಜನವನ್ನೀಯಬೇಕಾಗಿಯೂ "ಇಂಡಿಯನ್ ಚೇಂಬರ್ ಆಫ್ ಕಾಮರ್ಸ ಮತ್ತು ಇಂಡಸ್ಟ್ರೀಜ" ಸಂಘದವರು ತೀರ್ಮಾನಿಸಿದ್ದಾರೆ.

## ಮು ದ್ರ ಣ ಬ ಕಾ ಸು ರ ನಿ ಗೆ

# “ಕರ್ನಾಟಕ ವೈಭವ”ದ ಆಹುತಿ!

ವಿಜಾಪುರದಲ್ಲಿ ಹೊರಡುತ್ತಿರುವ ರಾಷ್ಟ್ರೀಯ ಪಕ್ಷದ ವಾರಪತ್ರಿಕೆಯಾದ “ಕರ್ನಾಟಕ ವೈಭವಕ್ಕೆ” ೧೦೦೦ ರು. ಗಳ ಅಡವು ಕೇಳಲ್ಪಟ್ಟಿದೆ ಆದುದರಿಂದ ಅದು ಈ ವಾರ ಹೊರಡದೆ ನಿಶ್ಚಿತವಾದ ಧೋರಣವನ್ನು ಗೊತ್ತುಪಡಿಸಿಕೊಂಡೇ ಮುಂದೆ ಹೊರಡುವದು.

### ಬ್ರಿಟಿಶರು ಕಿವಿ ಹಿಂಡಿಸಿಕೊಂಡರು

ಮಹಾತ್ಮಾ ಗಾಂಧಿಯವರನ್ನೂ ಮತ್ತು ರಾಷ್ಟ್ರೀಯ ಸಭೆಯವರನ್ನೂ ಹೀಗೆಯೇ ಅಲಕ್ಷ್ಯ ಮಾಡುತ್ತ ನಡೆದಲ್ಲಿ ಹಿಂದುಸ್ತಾನ ಸರಕಾರದವರು ಅವಿಶ್ವಾಸಕ್ಕೊಳಗಾಗುವರೆಂಬುವದರಲ್ಲಿ ಯಾವ ಸಂದೇಹವೂ ಇಲ್ಲ. ಎಲ್ಲ ಭಾರತೀಯರ ವಿಶ್ವಾಸಕ್ಕೊಳಗಾದವರೆಂದರೆ ಈಗ ಮಹಾತ್ಮಾ ಗಾಂಧಿಯವರೊಬ್ಬರೇ. ಮಹಾತ್ಮಾ ಗಾಂಧಿಯವರೊಡನೆ ಒಪ್ಪಂದವನ್ನು ಮಾಡಿಕೊಂಡು ಅವರೊಡನೆ ಸಹಕರಿಸಿದಲ್ಲಿ ಮಾತ್ರ ಜಾತಿಭೇದದ ಪ್ರಶ್ನೆಗಳನ್ನು ಬಿಡಿಸಲು ಸರಕಾರದವರಿಗೆ ಬಹು ಸುಲಭವಾಗುವದು. ದುಂಡುಮೇಜಿನ ಪರಿಷತ್ತು ಯಶಸ್ವಿಯಾಗಿ ಕೊನೆಗಾಣಬೇಕಾಗಿದ್ದರೆ, ಸರಕಾರದವರು ಮಹಾತ್ಮರೊಡನೆ ಸಹಕರಿಸಲೇ ಬೇಕು.” ಎಂಬುದಾಗಿ ‘ಡೇಲಿ ಹೆರಾಲ್ಡ’ ಪತ್ರಿಕೆಯ ಮಿ|| ಸ್ಲೋಕೊಂಬೆಯವರು ಉದ್ಗಾರಗಳನ್ನು ತೆಗೆದಿದ್ದಾರೆ. ಬ್ರಿಟಿಶರೇ ಬ್ರಿಟಿಶರ ಕಿವಿಗಳನ್ನು ಹಿಂಡಿದಂತಾಯಿತು. ಅಕ್ಕಸಾಲಿಗನು ಕಿವಿ ಚುಚ್ಚಿದರೆ ನೋವಿಲ್ಲವಷ್ಟೇ?

### ಮಹಾತ್ಮರೊಡನೆ ಒಪ್ಪಂದ ಮಾಡಿಕೊಳ್ಳಿರಿ

ಅಮೇರಿಕೆಯ ಡಾ|| ಜಾನ್ಸ ಹೇನ್ಸ ಹೋಮ್ಸ ಇವರೇ ಮೊದಲಾದ ಜಗತ್ಪ್ರಖ್ಯಾತ ೧೦೩ ಮಂದಿ ಪಾದ್ರಿಗಳು ಇಂಗ್ಲಂಡದ ಮುಖ್ಯ ಮಂತ್ರಿಗಳಾದ ಮಿ| ಮೆಕಡನಾಲ್ಡರಿಗೆ ಆಧ್ಯಾತ್ಮಿಕ ಶಕ್ತಿಯ ಅವತಾರವಾದ ಮಹಾತ್ಮಾ ಗಾಂಧಿಯವರೊಡನೆ ಒಪ್ಪಂದವನ್ನು ಮಾಡಿಕೊಳ್ಳಲು ನೀವು ಅಲ್ಲಗಳೆದರೆ, ಸ್ವಾತಂತ್ರ್ಯ, ಪ್ರಜಾಸತ್ತೆ, ಭ್ರಾತೃತ್ವ ಮುಂತಾದ ತತ್ವಗಳನ್ನು ನೀವು ಮನ್ನಿಸುವವರಲ್ಲವೆಂದು ನಾವು ತಿಳಿಯುತ್ತೇವೆಂದು ತಿಳಿಸಿದ್ದಾರೆ.

### ನರಿಮನ್ನರಿಗೆ ೪ ತಿಂಗಳ ಸಾದಾ ಶಿಕ್ಷೆ

ತಾ|| ೨೧ ನೆಯ ದಿವಸ ಮುಂಬಯಿಯಲ್ಲಿ ಬಂಧಿಸಲ್ಪಟ್ಟ ಶ್ರೀಯುತರಾದ ನರಿಮನ್, ಜೆಡ್ಡೀಕ್ಸ, ಸಿ. ಕೆ. ನಾರಾಯಣಸ್ವಾಮಿ, ಪಡಬಿದ್ರಿ, ಜೋಶೀ, ನಿಫಾಡಕರ, ಪಾಟಣಕರ ಮತ್ತು ಕೃಷ್ಣ ಅಯ್ಯರ ಇವರಲ್ಲಿ ಶ್ರೀ. ನರಿಮನ್ನರಿಗೆ ೪ ತಿಂಗಳ ಸಾದಾ ಶಿಕ್ಷೆಯೂ, ಉಳಿದವರಿಗೆ ೬ ತಿಂಗಳ ಕಠಿಣ ಶಿಕ್ಷೆಗಳೂ ವಿಧಿಸಲ್ಪಟ್ಟಿವೆ.

### ಧರಸಾನಾಕ್ಕೆ ಸೈನಿಕರು ಬಂದರು

೨೬೦೦ ಜನ ಸತ್ಯಾಗ್ರಹಿಗಳು ಒಮ್ಮೆಲೆ ಹೋಗಿ ಧರಸಾನಾ ವಖಾರವನ್ನು ಮುತ್ತಿದುದಕ್ಕಾಗಿ ಅಧಿಕಾರಿಗಳು ಗಾಬರಿಗೊಂಡು ಈಗ ಅಲ್ಲಿಗೆ ಬ್ರಿಟಿಶ ಹಾಗು ಸೀಖ ಸೈನಿಕರನ್ನು ಕರೆಯಿಸಿಕೊಂಡಿದ್ದಾರೆ. ಇಷ್ಟು ದಿನಗಳ ವರೆಗೆ ಡೊಂಗರಿ ಸ್ಟೇಶನದಲ್ಲಿ ನಿಂತ ಸೈನಿಕರು ಈಗ ಧರಸಾನಾ ಮತ್ತು ಉಂಟಾಡಿಯ ಮಾರ್ಗದಲ್ಲಿ ತಳವೂರಿ ಕುಳಿತಿದ್ದು, ಆ ಸ್ಥಳಗಳಿಗೆ ಯಾರನ್ನೂ ಬಿಡುತ್ತಿರುವದಿಲ್ಲ. ಪರಿಸ್ಥಿತಿಯು ಹೀಗೆ ಪ್ರಾಪ್ತವಾದದ್ದನ್ನು ಕಂಡು ಸತ್ಯಾಗ್ರಹ ಮಂಡಲದವರು ಎರಡು ದಿವಸಗಳ ವರೆಗೆ ದಾಳಿಯ ಕಾರ್ಯವನ್ನು ನಿಲ್ಲಿಸಿ, ಎಲ್ಲ ಕಡೆಯಿಂದಲೂ ಸತ್ಯಾಗ್ರಹಿಗಳನ್ನು ಕರೆಯಿಸಿಕೊಂಡು ದಾಳಿಯನ್ನು ಮಾಡುವದಾಗಿ ನಿರ್ಧರಿಸಿದ್ದಾರೆ. ತಾ|| ೨೧ ನೆಯ ದಿವಸ ಕೆಲವು ಪೋಲೀಸರೂ, ೧೨೦ ಜನ ಸೀಖ ಸೈನಿಕರೂ ಉಂಟಾಡಿಯಲ್ಲಿದ್ದ ಸತ್ಯಾಗ್ರಹಿಗಳ ಶಿಬಿರವನ್ನು ಮುತ್ತಿ, ಸತ್ಯಾಗ್ರಹಿಗಳ ಮೇಲೆ ಲಾಠಿಗಳನ್ನು ಪ್ರಯೋಗಿಸಿ ಅವರನ್ನು ಹೊರಗೆ ಅಟ್ಟಿದ್ದಾರೆ. ಇವರಂತೆಯೇ ಡೊಂಗರಿಯಲ್ಲಿಯ ಸತ್ಯಾಗ್ರಹಿಗಳ ಬಿಡಾರವನ್ನು ವಶಪಡಿಸಿಕೊಂಡಿದ್ದಾರೆ. ಧರಸಾನಾ ದಾಳಿಗಾಗಿ ಬೇರೆ ಬೇರೆ ಸ್ಥಳಗಳಿಂದ ಹೋಗುವ ಸ್ವಯಂಸೇವಕರು ಈಗ ಬುಲಸಾರದಲ್ಲಿ ಕೂಡುತ್ತಿದ್ದಾರೆ. ಶ್ರೀಮತಿ ಸರೋಜಿನಿದೇವಿಯವರನ್ನೂ ಮತ್ತು ಶ್ರೀ ಪರೇಖರವರನ್ನೂ ಕಾಣಲು ಶ್ರೀ ವಿಠ್ಠಲಭಾಯಿ ಪಟೇಲರವರಿಗೆ ಅಧಿಕಾರಿಗಳು ಅಪ್ಪಣೆಯನ್ನು ಕೊಡಲಿಲ್ಲ.

### ಖಾನಬಹದ್ದೂರ, ರಾವಸಾಹೇಬ ಮೊದಲಾದ
### ೧೧೦ ಕತ್ತೆಗಳ ಮೆರವಣಿಗೆ

ಮಧ್ಯಪ್ರಾಂತದಲ್ಲಿ ಜಬಲಪುರದಲ್ಲಿ ಮೊನ್ನೆ ಮೊನ್ನೆ ಪರದೇಶಿ ಬಟ್ಟೆಗಳ ಬಹಿಷ್ಕಾರಾರ್ಥವಾಗಿ ಒಂದು ಪ್ರಚಂಡವಾದ ಮೆರವಣಿಗೆಯು ಹೊರಟಿತ್ತು. ೧೧೦ ಕತ್ತೆಗಳನ್ನು ಹಿಡಿದು ತಂದು ಅವುಗಳನ್ನು ನಾನಾತರದ ಪರದೇಶಿ ಉಡಿಗೆಗಳಿಂದಲೂ, ಹ್ಯಾಟು, ಬೂಟು, ಚಾಳೀಸ, ನೆಕ್ಟಾಯಿ ಮೊದಲಾದವುಗಳಿಂದಲೂ ಶೃಂಗರಿಸಿ ಮೆರವಣಿಗೆಯಲ್ಲಿ ತೆಗೆದುಕೊಂಡಿದ್ದರಂತೆ! ಇಷ್ಟೇ ಅಲ್ಲದೆ ಕೆಲಕೆಲವು ಕತ್ತೆಗಳ ಪಕ್ಕದಲ್ಲಿ ಖಾನಸಾಹೇಬ, ಖಾನಬಹದ್ದೂರ, ರಾವಸಾಹೇಬ, ರಾವಬಹದ್ದೂರ ಮೊದಲಾದ ಅಕ್ಷರಗಳಿಂದ ಕೂಡಿದ ಹಲಿಗೆಗಳನ್ನು ಹಿಡಿದಿದ್ದರಂತೆ! ದೊಡ್ಡ ದೊಡ್ಡ ಕತ್ತೆಗಳ ಹಣೆಗೆ “ಸರ” ಎಂಬ ಬಿರುದಿನ ತಗಡುಗಳನ್ನು ಕಟ್ಟಿದ್ದರಂತೆ! ಎಷ್ಟೋ ಕತ್ತೆಗಳು ಈ ಸಮಯದಲ್ಲಿಯೇ “ಸ್ಟಾರ ಆಫ್ ದಿ ಕ್ರೌನ” ಎಂಬ ಬಿರುದುಗಳನ್ನು ಪಡೆದವಂತೆ!

## ಬಿಸನಾಳದ ಸುದ್ದಿ

### ಅಸ್ಪೃಶ್ಯ ಭಗಿನಿಯರ ಉತ್ಸಾಹ.

ಹವೆಯು ಆರ್ದ್ರವಿರುವದರಿಂದ ಮಣ್ಣಿನಲ್ಲಿಯ ಉಪ್ಪು ಕರಗುತ್ತಿರುತ್ತದೆ. ಆದುದರಿಂದ ಮೊದಲು ಎಷ್ಟು ಉಪ್ಪು ಸಿದ್ಧವಾಗುತ್ತಿತ್ತೊ ಅಷ್ಟು ಉಪ್ಪು ಈಗ ಸಿದ್ಧವಾಗುತ್ತಿರುವದಿಲ್ಲ. ದಿನದಂತೆ ಸ್ವಯಂಸೇವಕರು ಇಂದೂ ಉಪ್ಪನ್ನು ಸಿದ್ಧಪಡಿಸಿದರು. ಅದು ಸ್ವಲ್ಪ ಕಪ್ಪು ಬಣ್ಣದ್ದಾಗಿ ಕಂಡಿತು. ಸಂಜೆಯಲ್ಲಿ ಸ್ವಯಂಸೇವಕರಲ್ಲೊಬ್ಬರಾದ ಶ್ರೀ ಸಿಂದಗಿಯವರು ಊರ ಜನರ ಮುಂದೆ ಕೀರ್ತನೆಯನ್ನು ಮಾಡಿದರು. ಕೀರ್ತನೆಯು ಮುಗಿದ ನಂತರದಲ್ಲಿ ಕೆಲವು ಅಸ್ಪೃಶ್ಯಭಗಿನಿಯರು ಸಿಂದೂರ ಲಕ್ಷ್ಮಣ್ಣ ಮತ್ತು ಶೆಟ್ಟಿಯ ಚನ್ನಪ್ಪ ಇವರ ಜೀವ ಮಾನದೊಳಗಿನ ಕೆಲವು ಸಂಗತಿಗಳನ್ನು ಕುರಿತು ಲಾವಣಿಗಳನ್ನು ಇಂಪಾಗಿ ಹಾಡಿದರು. ಲಾವಣಿಗಳನ್ನು ಕೇಳಿ ನೆರೆದವರೆಲ್ಲರೂ ಮತ್ತಷ್ಟು ಉತ್ಸಾಹಗೊಂಡರು. ಸುತ್ತಲೆಲ್ಲ ರಾಷ್ಟ್ರೀಯ ಕಾರ್ಯಕ್ರಮಗಳ ಪ್ರಸಾರವನ್ನು ಮಾಡುವದಕ್ಕಾಗಿ ಪ್ರತಿನಿತ್ಯವೂ ನಾಲ್ಕು ಸ್ವಯಂಸೇವಕರನ್ನು ಶ್ರೀ ಅಕ್ಕಿಯವರ ಸಂಗಡ ಕಳಿಸುವದರಲ್ಲಿ ಬರುತ್ತದೆ. ಮೊದಲಿನ ಶಿಬಿರಾಧಿಪತಿಗಳಾದ ಶ್ರೀ ಪದಕಿಯವರು ಕಾರ್ಯಬಾಹುಳ್ಯದ ಮೂಲಕ ಬಾಗಲಕೋಟೆಗೆ ಹೋಗಿದ್ದುದರಿಂದ ಆ ಸ್ಥಳವು ನನಗೆ ಒಪ್ಪಿಸಲ್ಪಟ್ಟಿದೆ. ಈ ವರೆಗೆ ಅಧಿಕಾರಿಗಳು ಯಾರನ್ನೂ ಸೆರೆ ಹಿಡಿದಿಲ್ಲ,

| | |
|---|---|
| ಬಿಸನಾಳ | ಸತ್ಯಾಗ್ರಹ ಶಿಬಿರಾಧಿಪತಿ |
| ೨೩—೫—೩೦ | ಸು. ಗೋವರ್ಧನದಾಸ |

### ಮುಂಬಯಿ ಇಲಾಖೆಯಲ್ಲೆಲ್ಲ ಲಷ್ಕರಿ ಕಾಯದೆಯಂತೆ!

ಮೊನ್ನೆ ಮೊನ್ನೆ ಪ್ರಾರಂಭವಾದ ಪಾರ್ಲಿಮೆಂಟ ಸಭೆಯಲ್ಲಿ ಸೊಲ್ಲಾಪುರದಲ್ಲಾದ ದಂಗೆಯ ವಿಷಯಕ್ಕೆ ಚರ್ಚೆ ನಡೆದಾಗ ಓರ್ವ ಸಭಾಸದರು ಮುಂಬಯಿ ಇಲಾಖೆಯಲ್ಲೆಲ್ಲ ಲಷ್ಕರೀ ಕಾಯಿದೆಯನ್ನು ಸಾರಬೇಕೆಂದು ನುಡಿದರಂತೆ! ಇವು ಭರತಖಂಡದಲ್ಲಿಯೇ ಸಾರಲಿ! ಕೈಹಿಡಿಯುವವರಾರು?

### ವಡಾಲಾ ವಖಾರದ ಉಪ್ಪಿನ ಲೂಟಿ.

#### ಓರ್ವ ಕ್ರಿಶ್ಚಿಯನ್ನನು ಸೆರೆಯಾಳಾದನು.

ತಾ॥ ೨೧ ನೆಯ ದಿವಸ ವಖಾರದ ದಾಳಿಗಾಗಿ ೯೫ ಸ್ವಯಂಸೇವಕರು ಹೊರಟರು. ವಖಾರದ ಒಳಯಲ್ಲಿಯ ಪೋಲಿಸರು ಅವರನ್ನು ತಡೆದು ತಿರುಗಿ ಹೋಗಲು ಹೇಳಿಕೊಂಡರು. ಸ್ವಯಂಸೇವಕರು ಒಪ್ಪದ್ದರಿಂದ ಪೋಲೀಸರು ಎಲ್ಲರನ್ನೂ ಸೆರೆಹಿಡಿದು ವರ್ಲಿ ಚಾಳಕ್ಕೆ ಒಯ್ದರು. ಹೀಗೆ ನಡೆದಿರುವಾಗ ಓರ್ವ ಇಂಡಿಯನ್ ಕ್ರಿಶ್ಚಿಯನ್ನನು ಅಲ್ಲಿಗೆ ಹೋಗಿ ಉಪ್ಪನ್ನು ತೆಗೆದುಕೊಳ್ಳಹತ್ತಿದ್ದನು. ವಖಾರವನ್ನು ರಕ್ಷಿಸುವ ಅಧಿಕಾರಿಗೆ ಇದು ತಿಳಿದು ಬಂದಿದ್ದರಿಂದ ಅವನು ಕೂಡಲೆ ಅಲ್ಲಿಗೆ ಹೋಗಿ ಅವನನ್ನು ಸೆರೆಹಿಡಿದನು.

## ಸ್ಟೇಟ ಸೆಕ್ರೆಟರಿಯವರು ಬೆದರಿಕೆ ಹಾಕಿದರು

ಹಿಂದುಸ್ಥಾನದಲ್ಲಿಯ ಸ್ಥಿತಿಗತಿಗಳನ್ನು ತೋರಿಸುವ ಒಂದು ಪತ್ರಕವನ್ನು ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿಯವರು ಪಾರ್ಲಿಮೆಂಟಿನ ಸಭಾಸದರಿಗೆ ತಾ॥ ೧೯ ನೆಯ ದಿವಸ ಕಳಿಸಿಕೊಟ್ಟಿದ್ದು, ಅದರಲ್ಲಿ ಮದ್ಯಪಾನ ಪ್ರತಿಬಂಧ ಹಾಗು ವಿದೇಶಿ ವಸ್ತ್ರಗಳ ಬಹಿಷ್ಕಾರದ ಚಳವಳಿಯನ್ನು ಕುರಿತು ಕೆಳಗಿನಂತೆ ಬೆದರಿಕೆ ಹಾಕಿದ್ದಾರೆ:— ಪರಿಣಾಮಗಳ ಕಡೆಗೆ ಲಕ್ಷ್ಯಕೊಡದೆ ರಾಷ್ಟ್ರೀಯ ಸಭೆಯವರು ತಮ್ಮ ಕಾರ್ಯಕ್ರಮಗಳನ್ನು ಸಾಗಿಸಲು ಯತ್ನಿಸುತ್ತಿರುವರು. ಮದ್ಯಪಾನ ಪ್ರತಿಬಂಧ ಹಾಗು ವಿದೇಶಿ ವಸ್ತ್ರಗಳ ಬಹಿಷ್ಕಾರದ ಚಳವಳಿಗಳು ಹೆಚ್ಚು ಹೆಚ್ಚು ಸಂಭವಿಸಬಹುದು. ಸರಕಾರದ ರಾಜ್ಯಮಾಡಳಿತೆಯನ್ನು ಸುಸೂತ್ರವಾಗಿ ಸಾಗದಂತೆ ಮಾಡುವದೇ ಈ ಚಳವಳಿಯ ಉದ್ದೇಶವಾಗಿರುವದರಿಂದ ತಮಗೆ ಸಾಧ್ಯವಿದ್ದ ಎಲ್ಲ ಉಪಾಯಗಳಿಂದಲೂ ಸರಕಾರದವರು ಈ ಚಳವಳಿಯನ್ನು ತಡೆಯಲು ಸಿದ್ಧರಿದ್ದಾರೆ॥

### ವಿಜಾಪುರದಲ್ಲಿ "ಕಿತ್ತೂರ ಚನ್ನಮ್ಮ"ನಿಗೆ ಪ್ರತಿಬಂಧ

ಅಬ್ಬಿಗೇರಿಯ "ಕನ್ನಡ ಸಾಹಿತ್ಯ ಸೇವಾ ಸಮಿತಿ ನಾಟಕ ಮಂಡಳಿ"ಯವರು ವಿಜಾಪುರಕ್ಕೆ ಹೋಗಿ ಅಲ್ಲಿ ಶನಿವಾರ ದಿವಸ "ಕಿತ್ತೂರ ಚನ್ನಮ್ಮ" ಎಂಬ ನಾಟಕವನ್ನು ಪ್ರಯೋಗಿಸಿದರು. ಆದರೆ ಈ ನಾಟಕವನ್ನು ಇನ್ನು ಮುಂದೆ ಆಡಿತೋರಿಸಬಾರದಾಗಿ ಸರಕಾರಿ ಅಧಿಕಾರಿಗಳು ಮಂಡಳಿಯವರಿಗೆ ಅಡ್ಡಿ ಮಾಡಿದ್ದಾರಂತೆ! ವಿಜಾಪುರದ ಅಧಿಕಾರಿಗಳು ಈ ಕೃತಿಯಲ್ಲಿ ಧಾರವಾಡದವರನ್ನು ಮೀರಿದರೆಂದೆನ್ನಬೇಕು! ಇಷ್ಟೆ!

### "ಟಾಯಿಮ್ಸ್"ಕ್ಕೆ ಬಹಿಷ್ಕಾರ

ಹುನಗುಂದದ ನೇಟಿವ್ಹ ಜನರಲ್ ವಾಚನಾಲಯದವರು 'ಟಾಯಿಮ್ಸ' ಪತ್ರವು ತಪ್ಪು ಸುದ್ದಿಗಳನ್ನು ಕೊಡುತ್ತಿರುವದಕ್ಕಾಗಿ ಅದನ್ನು ಬಹಿಷ್ಕರಿಸಿದ್ದಾರೆ.


ಕಂಪನಿಯ ಮುಕ್ಕಾಂ ಸ್ವಲ್ಪ ಉಳಿದಿವೆ.

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಶನಿವಾರ ತಾ॥ ೨೪ — ೫ — ೩೦

**ಯಚ್ಚಮ್ಮನಾಯಿಕ.**

ಭಾನುವಾರ ತಾ॥ ೨೫ — ೫ — ೩೦

**ಸುದಾಮದೇವ**

ಸೋಮವಾರ ತಾ॥ ೨೬ — ೫ — ೩೦

**ಶರಣಬಸವ**

ಬುಧವಾರ ತಾ॥ ೨೮ — ೫ — ೩೦

ಸಾಮಾಜಿಕ ಹೊಸನಾಟಕ

**ಶಿಕ್ಷಣಸಂಭ್ರಮ**

**ಎಂಬ ನಾಟಕಗಳನ್ನು ಅಭಿನಯಿಸುವರು.**

ಈ ನಾಟಕಗಳು ಪುನಃ ಆಡಲ್ಪಡುವದಿಲ್ಲ.

ಸಂಘದೊಡೆಯ—ಸದಾಶಿವರಾವ ಗೆರೂಡ


ಈ ಪತ್ರಿಕೆಯು ಒಳವಂತ ಅಣ್ಣಾರಾವ ಮಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣ ಮಂದಿರದಲ್ಲಿ ಮುದ್ರಿತವಾಗಿ ಅವರಿಂದಲೇ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

यद्यत् परवशं दुःखं । यद्यदात्मवशं सुखम् ॥ –मनु.

# ಕನ್ನಡಿಗ

KANNADIGA BI-WEEKLY

ಸಂಪಾದಕರು:- ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ರವಿವಾರ ಮಿತಿ ವೈಶಾಖ ಬಹುಳ ೧೨ ಶಕೆ ೧೮೫೨ ತಾ ೨೫—೫—೩೦ ಸಂಚಿಕೆ ೫೭

# ಮಹಾತ್ಮರೊಡನೆ ಸಹಕರಿಸಿರಿ

ಯರವಡೆಯ ತುರುಂಗದಲ್ಲಿ ಮಹಾತ್ಮಾ ಗಾಂಧಿಯವರಿಗೆ ಭೆಟ್ಟಿಯಾಗಿ, ಅವರೊಡನೆ ಹಿಂದುಸ್ತಾನದ ಪರಿಸ್ಥಿತಿಯ ವಿಷಯವಾಗಿ ಮಾತುಕತೆಗಳನ್ನಾಡಿ, ಮಹಾತ್ಮರ ಅಭಿಪ್ರಾಯವನ್ನು ತಿಳಿದುಕೊಂಡ ಲಂಡನ್ನದ "ಡೇಲಿ ಹೆರಾಲ್ಡ" ಪತ್ರಿಕೆಯ ಸುದ್ದಿಗಾರರಾದ ಮಿ|| ಜಾರ್ಜ ಸ್ಲೋಕೊಂಬೆಯವರು ಕೆಳಗಿನ ಉದ್ಗಾರಗಳನ್ನು ತೆಗೆದಿದ್ದಾರೆ.

"ಮನುಜ ವರ್ಗವನ್ನು ಪ್ರೀತಿಸುವಂತೆಯೆ ಮಹಾತ್ಮರು ಭಾರತ ದೇಶವನ್ನು ಪ್ರೀತಿಸುತ್ತಾರೆ ದುಷ್ಟವಾಗಿದ್ದದನ್ನು ತಿರಸ್ಕರಿಸುವಂತೆಯೇ ಅವರು ಹಿಂದುಸ್ತಾನದಲ್ಲಿಯ ಬ್ರಿಟಿಶರ ಪ್ರಭುತ್ವವನ್ನು ತಿರಸ್ಕರಿಸುತ್ತಾರೆ. ಹಿಂದುಸ್ತಾನದಲ್ಲಿಯ ಬ್ರಿಟಿಶರು ಅವರಿಗೆ ಅನ್ಯಾಯವರ್ತಿಗಳಾಗಿಯೂ, ಎಲ್ಲ ದುಃಖಗಳ ಮೂಲೋತ್ಪಾದಕರಾಗಿಯೂ ಕಾಣುತ್ತಾರೆ. ಆದರೂ ಅವರು ಯಾವ ಬ್ರಿಟಿಶನನ್ನೂ ವ್ಯಕ್ತಿಶಃ ತಿರಸ್ಕರಿಸುವದಿಲ್ಲ. ವ್ಹಾಯಿಸರಾಯರ ವಿಷಯವಾಗಿ ಅವರಲ್ಲಿ ಬಹಳ ಆದರವುಂಟು ಅವರಿಗೆ ಇಂಗ್ಲಂಡದಲ್ಲಿ ಎಷ್ಟೋ ಜನ ಸ್ನೇಹಿತರಿದ್ದಾರೆ. ಬ್ರಿಟಿಶರ ಇತಿಹಾಸ, ಸ್ವಭಾವ, ರಾಜ್ಯ ಇವುಗಳೊಳಗಿನ ಎಷ್ಟೋ ವಿಷಯಗಳು ಅವರ ಆದರಕ್ಕೆ ಪಾತ್ರವಾಗಿವೆ. ಹಿಂದುಸ್ತಾನಕ್ಕೆ ಸ್ವಾತಂತ್ರ್ಯವನ್ನು ಕೊಟ್ಟಲ್ಲಿ, ಜಗತ್ತಿನಲ್ಲಿಯ ಅತ್ಯಂತ ಮಮತೆಯ ಸ್ನೇಹಿತರಾದ ಗಾಂಧಿಯವರನ್ನು ಬ್ರಿಟಿಶರು ದೊರಕಿಸಿಕೊಂಡಂತಾಗುವದು. ಅವರಿಗೆ ಇವರಿಗಿಂತಲೂ ಹೆಚ್ಚಿನ ಮಮತೆಯ ಸ್ನೇಹಿತರು ಯಾರೂ ದೊರೆಯರು. ಬ್ರಿಟಿಶ ಸಾಮ್ರಾಜ್ಯಾಂತರ್ಗತ ಆಧಿಪತ್ಯವನ್ನು ಹಿಂದುಸ್ತಾನಕ್ಕೆ ಕೊಡಿರಿ. ಅಂದರೆ ಗಾಂಧಿಯವರು ಈಗ ಹಿಂದಸ್ತಾನದ ನಾಯಕರಾಗಿ ಎಣಿಸಲ್ಪಡುವಂತೆ ಬ್ರಿಟಿಶರ ನಾಯಕರಾಗಿಯೂ ಗಣಿಸಲ್ಪಡುವರು.

ಮಹಾತ್ಮಾ ಗಾಂಧಿಯವರೊಡನೆ ಒಪ್ಪಂದವನ್ನು ಮಾಡಿಕೊಳ್ಳಲು ಸರಕಾರದವರು ಸಿದ್ಧರಿರುವರೋ? ಒಪ್ಪಂದವನ್ನು ಮಾಡಿಕೊಳ್ಳುವದು ಇನ್ನೂ ಸಾಧ್ಯವಿದೆ. ಸಮಾಧಾನದಿಂದ ಎರಡೂ ಪಕ್ಷದವರು ಕೂಡಿ ಮಾತುಕಥೆಗಳನ್ನಾಡಿದರೆ ಒಪ್ಪಂದವು ಸಾಧ್ಯವಾಗಬಹುದಾಗಿ ನನಗೆ ತೋರುತ್ತದೆ. ದಂಡೋಪಾಯವನ್ನಾಶ್ರಯಿಸಿದರೆ ಯಾರೂ ಮಣಿಯರು. ಈಗ ಸೆರೆಯಾಳಾಗಿರುವ ಮಹಾತ್ಮಾ ಗಾಂಧಿಯವರು ಹಿಂದುಸ್ತಾನದ ಉದ್ಧಾರಕ್ಕಾಗಿ ಹುಟ್ಟಿದ ಅವತಾರ ಪುರುಷರೆಂದು ತಿಳಿದುಕೊಂಡು ವರ್ತಿಸಿದರೆ ಅರಿಷ್ಟಗಳನ್ನೆಲ್ಲ ತಪ್ಪಿಸಬಹುದು."

## ವಡಾಲಾ ವಖಾರದ ಮೇಲೆ ದಾಳಿ

ವಡಾಲಾ ವಖಾರದ ದಾಳಿಯ ಕಾರ್ಯವು ಮೊದಲಿನಂತೆಯೇ ತಾ|| ೨೨ ನೆಯ ದಿವಸ ಪ್ರಾರಂಭಿಸಲ್ಪಟ್ಟಿತು. ೨೭ ಜನ ಸ್ವಯಂಸೇವಕರ ಮೊದಲನೆಯ ತಂಡವು ೭ ಗಂಟೆಗೆ ಸರಿಯಾಗಿ ಕಾಮಾಟಪುರದಿಂದ ಹೊರಟಿತು. ಕೆಲವರು ಉಪ್ಪಿನ ಕ್ಷೇತ್ರಕ್ಕೆ ಹೋಗಿ ಮುಟ್ಟಿದರು. ಪೋಲೀಸರವರೂ ಅವರ ಬೆನ್ನುಹತ್ತಿದರು. ಅವರಲ್ಲಿ ೯ ಜನ ಸ್ವಯಂಸೇವಕರು ಉಪ್ಪು ಸಹಿತವಾಗಿ ಪಾರಾಗಿ ಬಂದರು. ಉಳಿದ ೧೮ ಜನರು ಸೆರೆಹಿಡಿಯಲ್ಪಟ್ಟರು. ೧೦೦ ಜನ ಸ್ವಯಂಸೇವಕರ ಎರಡನೆಯ ತಂಡವು ೯|| ಗಂಟೆಗೆ ಹೊಗೆಬಂಡಿಯಿಂದ ಹೊರಟು ವಡಾಲೆಗೆ ಮುಟ್ಟಿತು. ಅವರನ್ನು ಪೋಲೀಸ ಅಧಿಕಾರಿಗಳು ಅಡ್ಡಗಟ್ಟಿ ತಡೆದರು. ಬಳಿಕ ಸತ್ಯಾಗ್ರಹಿಗಳು ಎರಡು ಗುಂಪುಗಳನ್ನು ಮಾಡಿಕೊಂಡು ವಖಾರದ ಮೇಲೆ ದಾಳಿಯನ್ನು ಮಾಡಲು ಯತ್ನಿಸಿದರು," ಆದರೆ ಸಾಧ್ಯವಾಗಲಿಲ್ಲ. ಈ ೧೦೦ ಜನರೂ ಸೆರೆಹಿಡಿಯಲ್ಪಟ್ಟಿದ್ದಾರೆ.

## ಮಹಾತ್ಮಾ ಭಗವಾನದೀನಜಿಯವರು ಸೆರೆಯಾಳಾದರು

ನಾಗಪುರದ ಅಸಹಯೋಗ ಆಶ್ರಮದ ಪ್ರಮುಖರಾದ ಮಹಾತ್ಮಾ ಭಗವಾನ ದೀನಜಿಯವರು ತಾ| ೨೧ ನೆಯ ದಿವಸ ಸೆರೆಮಾಡಲ್ಪಟ್ಟಿದ್ದಾರೆ.

# ಧರಸಾನಾ ದಾಳಿಯ ರಣರಂಗ

ಉಂಟಾಡಿ ಬಿಡಾರವು ಇನ್ನೂ ಪೂರ್ಣವಾಗಿ ತೆರವಾಗದಿದ್ದುದನ್ನು ಕಂಡು, ಡಿ। ಮ್ಯಾಜಿಸ್ಟ್ರೇಟ ಪೋಲೀಸ ಸುಪರಿಂಟೆಂಡಂಟರು ಮೊದಲಾದವರು ಅಲ್ಲಿಗೆ ಹೋಗಿ, ಅದನ್ನು ತೆರವು ಮಾಡುವ ವಿಷಯವಾಗಿ ಬಿಡಾರದ ನೇತೃಗಳಾದ ಶ್ರೀ ಪರೀಖರಿಗೆ ಕೇಳಿಕೊಂಡರು ಅವರ ನಡುವೆ ಕೆಳಗಿನಂತೆ ಸಂಭಾಷಣವಾಯಿತು.

ಮಿ. ಲ್ಯಾಂಟಿಯಾ—ನೀವು ಈ ಬಿಡಾರವನ್ನು ಎಂದು ತೆರವು ಮಾಡುವಿರಿ?

ಶ್ರೀ ಪರೀಖರು—ನನಗೆ ಹಾಗೆ ಮಾಡುವ ಇಚ್ಛೆ ಇಲ್ಲ.

ಮಿ. ಲ್ಯಾ—ಇದು ಕಾಯಿದೆಗೆ ವಿರುದ್ಧವಾದ ಸಂಘವಿದೆ

ಪರೀಖ—ಇರಬಹುದು.

ಮಿ. ಲ್ಯಾ.—ನೀವಾಗಿಯೆ ತೆರವು ಮಾಡದಿದ್ದರೆ, ನಾವು ನಿಮ್ಮನ್ನು ಚದುರಿಸುವೆವು.

ಬಳಿಕ ಡಿ। ಮ್ಯಾಜಿಸ್ಟ್ರೇಟರು "ನೀವು ಇನ್ನು ಮುಂದೆ ಎಂದಾದರೂ ದಾಳಿಯನ್ನು ಮಾಡಲು ಇಚ್ಛಿಸುವಿರೋ" ಎಂದು ಕೇಳಿದರು. ಶ್ರೀ ಪರೀಖರು "ಅಹುದು" ಎಂದು ಉತ್ತರವನ್ನಿತ್ತರು. "ಸ್ವಯಂಸೇವಕರನ್ನು ಕರೆಕಳುಹುವಿರೋ" ಎಂದು ಡಿ। ಮ್ಯಾಜಿಸ್ಟ್ರೇಟರು ಕೇಳಿದುದಕ್ಕೆ ಶ್ರೀ ಪರೀಖರು ದುಃಖಗಳನ್ನು ಸಹಿಸಲು ಯಾರು ಸಿದ್ಧರಿರುವರೋ ಅಂತಹ ಸ್ವಯಂಸೇವಕರನ್ನೇ ಕರೆತರುವೆವೆಂಬುದಾಗಿಯೂ ಅಖಿಲ ಭಾರತ ರಾಷ್ಟ್ರಸಭೆಯ ಕಾರ್ಯಕಾರೀ ಮಂಡಳದವರು ಧರಸಾನಾ ದಾಳಿಯನ್ನು ಅಖಿಲ ಭರತಖಂಡದ ರಣರಂಗವನ್ನಾಗಿ ಮಾಡಿದ್ದಾರಾದುದರಿಂದ ದಾಳಿಯ ಕಾರ್ಯವು ಮತ್ತೆ ಪ್ರಾರಂಭವಾಗುವದಾಗಿಯೂ ದಾಳಿಯನ್ನು ತಡೆಯುವದಕ್ಕಾಗಿ ನೀವು ಬೇಕಾದುದನ್ನು ಮಾಡಬೇಕಾಗಿಯೂ ಶ್ರೀ ಪರೀಖರು ಡಿ। ಮ್ಯಾಜಿಸ್ಟ್ರೇಟರಿಗೆ ತಿಳಿಸಿದರು. ಬಳಿಕ ಅಧಿಕಾರಿಗಳೆಲ್ಲರೂ ಬಿಡಾರದಿಂದ ಹೊರಟುಹೋದರು. ಪೋಲೀಸರು ಬಿಡಾರವನ್ನು ಕೈವಶಪಡಿಸಿಕೊಳ್ಳುವ ಮುಂದೆ ಉಪಯೋಗಿಸಿದ ಪಾಶವೀ ಶಕ್ತಿಗೊಳಗಾಗಿ ಗಾಯಪಟ್ಟು ಉಂಟಾಡಿ ಬಿಡಾರದಲ್ಲಿ ಆರೈಕೆಯನ್ನು ಹೊಂದುತ್ತಿದ್ದ ದೋರಸಾದದ ಶ್ರೀ ಭೈಲಾಲಭಾಯಿ ದೇಸಾಯಿಯವರು ಮರಣ ಹೊಂದಿದ್ದಾರೆ ೧೨ ಜನ ಸ್ವಯಂಸೇವಕರಿಗೆ ಗಾಯಗಳಾಗಿದ್ದು ಅವರೆಲ್ಲರೂ ಉಂಟಾಡಿ ಬಿಡಾರದಲ್ಲಿ ಆರೈಕೆಯನ್ನು ಹೊಂದುತ್ತಿದ್ದಾರೆ.

## ಮುಂಬಯಿಯಲ್ಲಿ ಹರತಾಳ

ಪೋಲೀಸ ಅಧಿಕಾರಿಗಳು ಕಾಂಗ್ರೆಸ ಕಚೇರಿಯನ್ನು ಮುತ್ತಿ ಮುಖಂಡರನ್ನು ಸೆರೆ ಹಿಡಿದುದಕ್ಕಾಗಿಯೂ ಮತ್ತು ಧರಸಾನಾದಲ್ಲಿ ಶ್ರೀಮತಿ ಸರೋಜಿನಿದೇವಿ ಮೊದಲಾದವರನ್ನು ಬಂಧಿಸಿದುದಕ್ಕಾಗಿಯೂ ಮುಂಬಯಿಯ ನಾಗರಿಕರು ತಾ॥ ೨೧ ಹಾಗು ೨೨ ಈ ದಿವಸಗಳಲ್ಲಿ ಸಂಪೂರ್ಣ ಹರತಾಳವನ್ನಾಚರಿಸಿದರು.

## ಗುಡಿವಾಡೆಯಲ್ಲಿ ಗೋಳಿಬಾರು

೧೪೪ ನೆಯ ಕಲಮಿನ ಅನುಸಾರವಾಗಿ "ಸಭೆಯನ್ನು ಮಾಡಕೂಡದಾಗಿ" ಹೊರಡಿಸಿದ ಆಜ್ಞೆಯನ್ನು ಅಲ್ಲಗಳೆದು ಸಭೆಯನ್ನು ಕೂಡಿಸಲು ಸತ್ಯಾಗ್ರಹಿಗಳು ಪ್ರಯತ್ನಿಸಿದ್ದುದಕ್ಕಾಗಿ ಮದ್ರಾಸ ಇಲಾಖೆಯ ಗುಡಿವಾಡೆಯಲ್ಲಿ ಪೋಲೀಸರು ಗೋಳೀಬಾರ ಮಾಡಿದ್ದಾರೆ. ಕೆಲವರಿಗೆ ಗಾಯಗಳಾಗಿವೆ.

## ಕೌನ್ಸಿಲುಗಳಿಗೆ ರಾಜೀನಾಮೆ

ಸರಕಾರದವರು ಪ್ರಾರಂಭಿಸಿದ ದಬ್ಬಾಳಿಕೆಯ ನಿಷೇಧಾರ್ಥವಾಗಿ ಸಂಯುಕ್ತ ಪ್ರಾಂತದ ಕಾಯಿದೆ ಮಂಡಳದ ಸಭಾಸದರಾದ ಶ್ರೀ ಬಾಬು ಗಣಪತರಾವ ಮತ್ತು ಬಾಬು ನಾರಾಯಣರಾವ ನಿಗಾಮರೂ ಮಧ್ಯಪ್ರಾಂತದ ಕಾಯಿದೆ ಮಂಡಳದ ಸಭಾಸದರಾದ ಶ್ರೀ ಶ್ಯಾಮಸುಂದರ ಭಾರ್ಗವ ಹಾಗು ಗೋಳವಳಕರೂ ತಮ್ಮ ತಮ್ಮ ಸ್ಥಳಗಳಿಗೆ ರಾಜೀನಾಮೆಯನ್ನು ಕೊಟ್ಟಿದ್ದಾರೆ.

## ೭ ವರ್ಷದ ಹುಡುಗನ ಹುರುಪಿನ ಭಾಷಣ

ಲಾಹೋರ ಮಿಲಾಪ ಪತ್ರಿಕೆಯ ಸಂಪಾದಕರ ಮಗನಾದ ೭ ವರ್ಷದ ಯಶೋಪಾಲನೆಂಬ ಹುಡುಗನು ಪರದೇಶಿ ಬಟ್ಟೆಗಳ ಬಹಿಷ್ಕಾರದ ಬಗ್ಗೆ ಸ್ಫೂರ್ತಿದಾಯಕ ಭಾಷಣವನ್ನಿತ್ತು ನೆರೆದ ಜನರನ್ನು ತಲೆದೂಗಿದ್ದುದಲ್ಲದೆ, ತಮ್ಮ ಚಿಕ್ಕ ಮಕ್ಕಳ ಸಂಘದವರು ಭಿಕ್ಷೆಯನ್ನು ಬೇಡಿ ೭೦೦ ಜನ ಕೆಲಸಗಾರರಿಗೆ ಪುಕ್ಕಟೆಯಾಗಿ ಅನ್ನವನ್ನಿಕ್ಕುತ್ತಿರುವರೆಂದೂ ಸಾರಿದನಂತೆ! ಇದಕ್ಕಿನ್ನು ಬೇಕು ಬಡವರಿಗಾಗಿ ಕಷ್ಟಪಡುವದೆಂದು.

## ಶ್ರೀ ಗುಳವಾಡಿಯವರಿಗೆ ೧ ವರ್ಷ ಸಂ. ಶಿಕ್ಷೆ

ಕರ್ನಾಟಕ ಸತ್ಯಾಗ್ರಹ ಮಂಡಳದ ಸಭಾಸದರೂ, ಕಾರವಾರ ಜಿಲ್ಲೆಯಲ್ಲಿಯ ಪ್ರಮುಖ ಖಾದೀ ಕೆಲಸಗಾರರೂ, ಆದ ಶ್ರೀ ಗುಳವಾಡಿ ಶಂಕರರಾಯರು ೧೧೭ ನೆಯ ಕಲಮಿನನ್ವಯ ೧ ವರ್ಷ ಸಶ್ರಮ ಶಿಕ್ಷೆಗೆ ಗುರಿಯಾಗಿದ್ದಾರೆ. ಅವರು ತಮ್ಮ ಜಬಾಬಿನಲ್ಲಿ ಹೀಗೆ ಹೇಳಿದ್ದಾರೆ:— "ಶಿಸ್ತಿನಿಂದಲೂ ಶಾಂತತೆಯಿಂದಲೂ ವರ್ತಿಸಲು ಜನರಿಗೆ ನಾನು ಬೋಧಿಸಿದೆನು. ೧೧೭ ನೆಯ ಕಲಮಿನನ್ವಯ ನನ್ನನ್ನು ಸೆರೆ ಹಿಡಿದದ್ದು ತಪ್ಪು ೧೨೪ ನೆಯ ಕಲಮಿನನ್ವಯ ನನ್ನನ್ನು ಸೆರೆಹಿಡಿದಿದ್ದರೆ ಸರಿಯಾಗುತ್ತಿತ್ತು."

## ಇತರವೃತ್ತ

ಬೆಳಗಾವಿಯಲ್ಲಿ ಮೊನ್ನೆ ಮೊನ್ನೆ ಕೂಡಿದ ಬ್ರಾಹ್ಮಣೇತರ ಪರಿಷತ್ತಿನ ಅಧ್ಯಕ್ಷರಾಗಿದ್ದುಕೊಂಡು ಎಲ್ಲ ಬ್ರಾಹ್ಮಣೇತರರೂ ಕಾಂಗ್ರೆಸದಲ್ಲಿ ಸೇರಬೇಕಾಗಿ ಉಪದೇಶಿಸಿದ ಹಾವೇರಿಯ ಪ್ರಸಿದ್ಧ ವಕೀಲರಾದ ಶ್ರೀ ಹೊಸಮನಿ ಸಿದ್ದಪ್ಪನವರು ಇಂದು ೧೦ ಗಂಟೆಯ ಗಾಡಿಗೆ ಇಲ್ಲಿಗೆ ಬಂದರು. ಸಂಜೆಯ ೭ ಗಂಟೆಗೆ "ರಾಷ್ಟ್ರೀಯ ಸಭೆಯ ಕಾರ್ಯಕ್ರಮ"ಗಳ ವಿಷಯವಾಗಿ ಉಪನ್ಯಾಸ ಮಾಡುವವರಿದ್ದಾರೆ.

# ಶ್ರೀ. ವಿಠ್ಠಲಭಾಯಿಯವರ ಛಲನ

ಶ್ರೀ ವಿಠ್ಠಲಭಾಯಿ ಪಟೇಲರವರು ತಮಗೆ ಧರಾಸಾನಾದ ಹಾದಿಯಲ್ಲಿಯೂ ಮತ್ತು ಧರಾಸಾನಾದಲ್ಲಿಯೂ ಅಧಿಕಾರಿಗಳಿಂದುಂಟಾದ ಅಡ್ಡಿಗಳ ವಿಷಯವಾಗಿ ಹೀಂಗೆ ಹೇಳಿದ್ದಾರೆ:— "ನಾನು ೨೦ ನೆಯ ತಾ|| ದಿವಸ ರಾತ್ರಿ ನಡಿಯಾದದಿಂದ ಧರಾಸಾನಾಕ್ಕೆ ಹೊರಟೆನು. ಧರಾಸಾನಾಕ್ಕೆ ಸಮೀಪವಿರುವ ಡೋಂಗರಿ ಸ್ಟೇಶನಕ್ಕೆ ನಾನು ಇಳಿಯುವವನಿದ್ದೆನು. ಡೋಂಗರಿ ಸ್ಟೇಶನದ ಹಿಂದಿನ ಸ್ಟೇಶನವಾದ ಬಿಲ್ಮೋರಿಯಾದಲ್ಲಿ ನನ್ನ ಬಳಿಯಲ್ಲಿ ರೇಲ್ವೆ ಅಧಿಕಾರಿಯು ಬಂದು ಡೋಂಗರಿ ಸ್ಟೇಶನದಲ್ಲಿ ಗಾಡಿಯನ್ನು ನಿಲ್ಲಿಸಬಾರದಾಗಿ ಮೇಲಿನಿಂದ ಅಪ್ಪಣೆಯು ಬಂದಿದೆ ಎಂದು ಹೇಳಿದನು. ರೇಲ್ವೆ ಅಧಿಕಾರಿಯು ಇದಕ್ಕೊಪ್ಪಲಿಲ್ಲ. ಗಾಡಿಯು ಯಾವಾಗ ಡೋಂಗರಿ ಸ್ಟೇಶನದಲ್ಲಿ ಹಾಯಲಾರಂಭಿಸಿತೋ ಆಗ ನಾನು ಅದನ್ನು ನಿಲ್ಲಿಸಲು ಸರಪಳಿ ಜಗ್ಗಿದೆನು. ಆದರೆ ಸರಪಳಿಯೂ ಸುವ್ಯವಸ್ಥೆಯಲ್ಲಿದ್ದಿದ್ದಿಲ್ಲ. ಆದುದರಿಂದ ನನಗೆ ಮುಂದಿನ ಬುಲಸಾರ ಸ್ಟೇಶನದಲ್ಲಿ ಇಳಿಯುವ ಪ್ರಸಂಗ ಬಂತು! ಅಲ್ಲಿಂದ ನಾನು ಒಬ್ಬ ಸ್ನೇಹಿತನ ಮೋಟಾರ ತೆಗೆದುಕೊಂಡು ಧರಾಸಾನಾಕ್ಕೆ ತೆರಳಿದೆನು. ನಾನು ಶ್ರೀ ನರಹರಿ ಭಾಯಿ ಪರೀಖರ ಭೆಟ್ಟಿಯನ್ನು ತೆಗೆದುಕೊಂಡು ಅವರ ಆಜ್ಞೆಯಂತೆ ಸತ್ಯಾಗ್ರಹ ಶಿಬಿರಕ್ಕೆ ಹೋದೆನು. ೩೦೦ ಜನರು ಗಾಯ ಹೊಂದಿ ಬಿದ್ದಿರುವದನ್ನು ನಾನು ಅಲ್ಲಿ ನೋಡಿದೆನು. ಕೆಲವರು ಮೂರ್ಛೆ ಹೊಂದಿ ಬಿದ್ದಿದ್ದರು. ಅಲ್ಲಿಯ ಸ್ಥಿತಿಯು ಪ್ರತಿಯೊಬ್ಬರ ಹೃದಯವನ್ನು ಕರಗಿಸುವಂತಹದಿತ್ತು. ಆಮೇಲೆ ನಾನು ಶ್ರೀ. ದಾಧುಭಾಯಿಯವರನ್ನೊಡಗೊಂಡು, ಶ್ರೀಮತಿ ಸರೋಜಿನಿ ದೇವಿ ಮೊದಲಾದವರನ್ನು ಕಾಣಲು ಮ್ಯಾಜಿಸ್ಟ್ರೇಟರ ಅಪ್ಪಣೆಯನ್ನು ತೆಗೆದುಕೊಳ್ಳಲು ಮ್ಯಾಜಿಸ್ಟ್ರೇಟರಲ್ಲಿಗೆ ಹೋದೆನು. ಡಿ|| ಮ್ಯಾ|| ರ ಬಿಡಾರವು ಇನ್ನೂ ಒಂದು ಮೈಲು ದೂರದಲ್ಲಿರುವಾಗಲೇ ಓರ್ವ ಪೋಲೀಸ ಅಧಿಕಾರಿಯು "ಮುಂದಕ್ಕೆ ಹೋಗಬೇಡಿರಿ"ಎಂದು ನಮ್ಮನ್ನು ತಡೆದನು. ಪೋ|| ಸುಪರಿಂಟೆಂಡೆಂಟರು ಅಲ್ಲಿಯೇ ಹಾಯ್ದು ಹೋಗುತ್ತಿದ್ದರು. ಅವರಿಗೆ ನಮ್ಮ ಉದ್ದೇಶವನ್ನು ತಿಳಿಸಿದೆವು. "ಇಲ್ಲಿಯೇ ಸಮೀಪದ ಬಂಗಲೆಯಲ್ಲಿ ಕುಳಿತುಕೊಳ್ಳಿರಿ, ಡಿ|| ಮ್ಯಾ|| ರಿಗೆ ನೀವು ಬಂದದ್ದನ್ನು ತಿಳಿಸುತ್ತೇನೆ" ಎಂದು ಹೇಳಿ ಓರ್ವನನ್ನು ಡಿ|| ಮ್ಯಾ|| ರ ಬಳಿಗೆ ಕಳಿಸಿದರು. ಅವನು ೧೫ ಮಿನಿಟುಗಳ ವೇಳೆ ತಿರುಗಿ ಬಂದು "ಡಿ|| ಮ್ಯಾಜಿಸ್ಟ್ರೇಟರೇ ಬರುತ್ತಿರುವರು" ಎಂದು ನಮಗೆ ತಿಳಿಸಿದನು. ಒಂದು ತಾಸು ಆದರೂ ಅವರು ಬರಲಿಲ್ಲ. ಬಳಿಕ ನಾವು ಅವರಿಗೆ ನೆನಪು ಕೊಡಲು ಮತ್ತೊಬ್ಬನನ್ನು ಕಳಿಸಿದೆವು. ಡಿ|| ಮ್ಯಾಜಿಸ್ಟ್ರೇಟರು ಪೋ|| ಸುಪರಿಂಟೆಂಡೆಂಟರೊಡನೆ ಬಂದು "ಶ್ರೀಮತಿಯವರು ಸೆರೆಯಲ್ಲಿರುವದರಿಂದ ನಿಮಗೆ ಅವರನ್ನು ಕಾಣಲು ಅಪ್ಪಣೆಯನ್ನು ಕೊಡುವದಿಲ್ಲ" ಎಂದು ತಿಳಿಸಿದರು. "ಅಪ್ಪಣೆಯನ್ನು ಕೊಡುವದಿಲ್ಲ"ವೆಂಬುದಾಗಿ ಬರೆದು ಕೊಡಲು ಡಿ|| ಮ್ಯಾಜಿಸ್ಟ್ರೇಟರಿಗೆ ನಾನು ಕೇಳಿದೆನು. ಅದಕ್ಕೆ ಡಿ|| ಮ್ಯಾಜಿಸ್ಟ್ರೇಟರು ಉತ್ತರರೂಪವಾಗಿ "ನೀವು ಅಪ್ಪಣೆಯನ್ನು ಬಾಯಿಯಿಂದಲೇ ಕೇಳಿರುವಿರಿ. ನಾವಾದರೂ ಹಾಗೆಯೇ ಉತ್ತರ ಕೊಟ್ಟಿದ್ದೇವೆ. ಆದುದರಿಂದ ಬರೆದುಕೊಡುವ ಅವಶ್ಯಕತೆ ಕಾಣುವದಿಲ್ಲ" ವೆಂದು ಹೇಳಿದರು. ಕೂಡಲೆ ನನ್ನ ಬಳಿಯಲ್ಲಿ ನಿಂತಿದ್ದ ಶ್ರೀ. ದಾಧಭಾಯಿ ದೇಸಾಯಿಯವರು ನನಗೆ ಕಾಗದ ಮತ್ತು ಲೆಕ್ಕಣಿಕೆಯನ್ನು ಕೊಟ್ಟರು. 'ಅರ್ಜಿಯನ್ನು ಬರೆದು ಕೊಡುವೆ'ನೆಂದು ಡಿ|| ಮ್ಯಾಜಿಸ್ಟ್ರೇಟರಿಗೆ ನಾನು ತಿಳಿಸಿದೆನು. ಇದನ್ನು ಕಂಡು ಡಿ|| ಮ್ಯಾಜಿಸ್ಟ್ರೇಟರು ಮೋಟಾರದಲ್ಲಿ ಕುಳಿತು ಒಮ್ಮೆಲೆ ಹೋಗಿಬಿಟ್ಟರು. ನಾನಾದರೂ ಅವರ ಬೆನ್ನುಹತ್ತಿ "ದಾಳಿಯ ಕಾರ್ಯದಲ್ಲಿ ತೊಡಗಿದ ಸ್ವಯಂಸೇವಕರನ್ನು ಕಾಣಲು ಅಪ್ಪಣೆಯನ್ನು ಕೊಡಿರಿ"ಎಂದು ಬೇಡಿಕೊಂಡೆನು. ಅದಕ್ಕೆ ಅವರು 'ಅಲ್ಲಿ ನೋಡತಕ್ಕಂತಹದೇನೂ ಇರುವದಿಲ್ಲ'ವೆಂದು ಹೇಳಿ ಹೊರಟು ಹೋದರು. ಇಷ್ಟಾದ ಬಳಿಕ ನಾವು ಬಿಡಾರಕ್ಕೆ ತಿರುಗಿ ಬಂದೆವು.

ಬಾಗಲಕೋಟೆಯಲ್ಲಿ

## ಪರದೇಶಿ ಬಟ್ಟೆಗಳ ಬಹಿಷ್ಕಾರಕ್ಕಾಗಿ ಮೆರವಣಿಗೆ

ಸ್ತ್ರೀಯರೂ ಭಾಗ ತೆಗೆದುಕೊಂಡಿದ್ದರು.

ತಾ|| ೨೪ ನೆಯ ದಿವಸ ಪರದೇಶಿ ಬಟ್ಟೆಗಳ ಬಹಿಷ್ಕಾರಕ್ಕಾಗಿ ಸ್ವಯಂಸೇವಕರ ಮೆರವಣಿಗೆಯು ಹೊರಟಿತ್ತು. ಮೆರವಣಿಗೆಯಲ್ಲಿ ಶ್ರೀಮತಿ ಲಕ್ಷ್ಮೀಬಾಯಿ ಪದಕಿ, ಯಮುನಾಬಾಯಿ ಕಣಬೂರ, ಅಂಬಾಬಾಯಿ ಕಾಥೋಟೆ, ಶಂಕರೂಬಾಯಿ ಪರ್ವತಿ, ಚಂಪಾಬಾಯಿ ಭಾಪಸೀಧಾಯಿ ಇವರೇ ಮೊದಲಾದ ಮಹಿಳೆಯರು ಪ್ರಾಮುಖ್ಯವಾಗಿ ಭಾಗವನ್ನು ತೆಗೆದುಕೊಂಡಿದ್ದರು. ಮೆರವಣಿಗೆಯು ಹೊಸಪೇಟೆ, ಹಳೇಪೇಟೆ, ವೈಶ್ಯಪೇಟೆ, ಕಿಲ್ಲೆ ಮೊದಲಾದ ಓಣಿಗಳಲ್ಲಿ ಹಾಯ್ದು ಬಂದಿತು. ಇದರಿಂದ ಊರ ಜನರೆಲ್ಲರೂ ತಮ್ಮ ಧನ್ಯವಾದಗಳನ್ನರ್ಪಿಸಿದ್ದಲ್ಲದೆ ಕೆಲಕೆಲವು ಜನರು ಪರದೇಶಿ ಬಟ್ಟೆಗಳನ್ನು ಸಂಪೂರ್ಣ ಬಹಿಷ್ಕರಿಸುವೆವಾಗಿ ವಚನಗಳನ್ನಿತ್ತರು. ಇವರ ಅನುಕರಣೆಯನ್ನು ಉಳಿದ ಮಾನಿನಿಯರೂ ಮಾಡಿ ಶ್ರೇಯೋಭಾಗಿಗಳಾಗುವರೆಂದು ನಾವು ಪೂರ್ಣ ನಂಬಿದ್ದೇವೆ.

## ಪರ್ಸನಲ್ ಅಸಿಸ್ಟಂಟ ಕಲೆಕ್ಟರರ ರಾಜೀನಾಮೆ

ಅಹಮ್ಮದಾಬಾದದ ಪರ್ಸನಲ್ ಅಸಿಸ್ಟಂಟ ಕಲೆಕ್ಟರರಾದ ಶ್ರೀ. ಮುರಾರಜಿ ದೇಸಾಯಿಯವರು ತಮ್ಮ ಸರಕಾರಿ ಉದ್ಯೋಗಕ್ಕೆ ಶರಣು ಹೊಡೆದಿದ್ದಾರೆ.

## ಕಾಂಗ್ರೆಸಕ್ಕೆ ಹಣ ಕೊಡುವದು ಅಪರಾಧವಂತೆ!

ಕಾಂಗ್ರೆಸ ಸಂಸ್ಥೆಗಳಿಗೆ ಇಲ್ಲವೆ ಅಂತಹ ಬೇರೆ ಯಾವದಾದರೂ ಸಂಸ್ಥೆಗಳಿಗೆ ಹಣದಿಂದ ಸಹಾಯ ಮಾಡುವವರು ೬ ತಿಂಗಳ ಶಿಕ್ಷೆಗೂ ಮತ್ತು ೧೦೦ ರೂ. ದಂಡಕ್ಕೂ ಗುರಿಯಾಗುವರೆಂದು ಬಂಗಾಲ ಇಲಾಖೆಯ ಘಾಟಾಳ ಭಾಗದವರಿಗೆ ಒಂದು ಕಟ್ಟಳೆಯನ್ನು ತೆಗೆದಿದ್ದಾರೆ.

## ಸೊಲ್ಲಾಪುರ ದಂಗೆಯು.

ಸೊಲ್ಲಾಪುರದಲ್ಲಿ ಲಷ್ಕರೀ ಕಾಯಿದೆಯನ್ನು ಸಾರಿದ್ದು ಅನವಶ್ಯಕವಾಗಿತ್ತೆಂದೂ, ಏನೊಂದೂ ಕಾರಣವಿಲ್ಲದೆ ಸಿಕ್ಕ ಸಿಕ್ಕವರ ಮೇಲೆ ಗುಂಡುಗಳನ್ನು ಹೊಡೆದದ್ದು ಅನ್ಯಾಯದ್ದಾಗಿರುವದೆಂದೂ, ಸ್ವತಂತ್ರ ಜನರದೊಂದು ಮಂಡಳವನ್ನು ನಿಯಮಿಸಿ ದಂಗೆಯ ಸಂಬಂಧವಾಗಿ ವಿಚಾರಣೆಯನ್ನು ಮಾಡಬೇಕೆಂದೂ "ಡೆಕ್ಕನ ಮರ್ಚಂಟ್ಸ" ಅಸೋಸಿಯೇಶನದವರು ಗವ್ಹರ್ನರ ದೊರೆಗಳಿಗೆ ತಿಳಿಸಿದ್ದಾರೆ.

## ಅಂಕೋಲೆಯ ಸುದ್ದಿ.

### ರಾಜಕೀಯ ಸೆರೆಯಾಳುಗಳ ಸ್ಥಿತಿಯು

ಕಾರವಾರ ತುರಂಗದಲ್ಲಿಯ ರಾಜಕೀಯ ಸೆರೆಯಾಳುಗಳ ಪರಿಸ್ಥಿತಿಯು ಬಹಳ ಕೆಟ್ಟಿದೆ. ಶ್ರೀ ಶಂಕರರಾವ ಗುಳವಾಡಿಯವರನ್ನು ಕಾರವಾರ ತುರಂಗದಲ್ಲಿ ಇಟ್ಟಿದ್ದರು. ಅಲ್ಲಿಯ ರಾಜಕೀಯ ಸೆರೆಯಾಳುಗಳ ಸ್ಥಿತಿಗಳನ್ನು ಕುರಿತು ಅವರು ಹೀಗೆ ತಿಳಿಸುತ್ತಾರೆ:- ಶ್ರೀ ಹನುಮಂತರಾವ ಕೌಜಲಗಿ, ಎಂ. ಸಿ. ನಾಡಕರ್ಣಿ ಹಾಗೂ ಸ್ವಾಮಿ ವಿದ್ಯಾನಂದರು ಇವರ ತೂಕಗಳು ಅನುಕ್ರಮವಾಗಿ ೪, ೧೦, ೬ ಪೌಂಡು ಕಡಿಮೆಯಾಗಿವೆ. ಸರಿಯಾದ ಊಟವು ಸಿಗದಿದ್ದುದೇ ಇದಕ್ಕೆ ಕಾರಣ. ಕ ವರ್ಗದ ರಾಜಕೀಯ ಸೆರೆಯಾಳುಗಳಿಗೆ ಸರಿಯಾದ ಆಹಾರ ಸಿಗುವದಿಲ್ಲ ಮತ್ತು ಅವರನ್ನು ಇತರ ಸೆರೆಯಾಳುಗಳಂತೆಯೆ ನಡಿಸಿಕೊಳ್ಳುತ್ತಾರೆ. ಅವರನ್ನು ಏಕಾಂತವಾಸದಲ್ಲಿ ಇಟ್ಟಿದ್ದಾರೆ. ಸ್ವಾಮಿ ವಿದ್ಯಾನಂದಜಿಯವರು ಉಪವಾಸ ವ್ರತವನ್ನು ಕೈಕೊಳ್ಳುವ ವಿಚಾರದಲ್ಲಿದ್ದಾರೆ.

ಸತ್ಯಾಗ್ರಹ ಶಿಬಿರ
ಅಂಕೋಲಾ
೨೨-೫-೩೦ } ಪ್ರಕಟನಾ ಕಾರ್ಯಾಧಿಕಾರಿ.

## ನಾ। ಗವ್ಹರ್ನರ ದೊರೆಗಳು ರಾಷ್ಟ್ರಧ್ವಜಕ್ಕೆ ಸಲಾಮು ಹೊಡೆದರು

ಮಹಾಬಳೇಶ್ವರದಲ್ಲಿ ಪಂಚಗಣಿಯೆಂಬುದೊಂದು ಉಪನಗರವುಂಟು. ಅಲ್ಲಿಯ ಹಾಯಸ್ಕೂಲ ಸಮಾರಂಭಕ್ಕಾಗಿ ನಾ। ಗವ್ಹರ್ನರ ದೊರೆಗಳು ಬರತಕ್ಕವರಿದ್ದರು. ಆ ಶಾಲೆಯ ಮುಂದೆ ಕಾಂಗ್ರೆಸ ಕಚೇರಿಯಿದ್ದುದರಿಂದ ಅಲ್ಲಿ ರಾಷ್ಟ್ರಧ್ವಜವು ಹಾರಾಡುತ್ತಿತ್ತು. "ನಾ। ಗವ್ಹರ್ನರರು ಬರುವರು. ಧ್ವಜವನ್ನು ತೆಗೆಯಿರಿ" ಎಂದು ಶಾಲಾಧಿಕಾರಿಗಳೂ, ಪೋಲೀಸರೂ ಕಾಂಗ್ರೆಸ ಕಮೀಟಿಯವರಿಗೆ ತಿಳಿಸಿದರು. ಕಾಂಗ್ರೆಸದವರು ಅತ್ತ ಲಕ್ಷ್ಯಕೊಡದೆ, ಅದನ್ನು ಕಾಯಲು ೫೦ ಸ್ವಯಂಸೇವಕರನ್ನು ಅಲ್ಲಿ ಇಟ್ಟರು. ಸಾವಿರಾರು ಜನರು ಅಲ್ಲಿ ನೆರೆದಿದ್ದರು. ಇಷ್ಟರಲ್ಲಿಯೇ ಗವ್ಹರ್ನರ ದೊರೆಗಳು ಅಲ್ಲಿಗೆ ಬಂದರು, ಅಲ್ಲಿಯ ವಿದ್ಯಮಾನ ಪರಿಸ್ಥಿತಿಯನ್ನೆಲ್ಲ ಅರಿತುಕೊಂಡು ಸಾಹೇಬರು ಮೋಟಾರದಿಂದ ಇಳಿದು, ಟೊಪ್ಪಿಗೆ ತೆಗೆದು, ರಾಷ್ಟ್ರಧ್ವಜಕ್ಕೆ ವಂದನೆ ಮಾಡಿ, ಶಾಲೆಯೊಳಗೆ ಹೋದರು. ರಾಷ್ಟ್ರಧ್ವಜವನ್ನು ಕಂಡ ಕೂಡಲೆ ಬೆದರುವವರು ಇತ್ತ ಲಕ್ಷ್ಯಕೊಡಬೇಕು.

## ಮಹಾತ್ಮರ ಕ್ಷೇಮಸಮಾಚಾರ

ಶ್ರೀಮತಿ ಕಸ್ತೂರಿಬಾಯಿ ಗಾಂಧಿ ಹಾಗು ಮೀರಾಬಾಯಿ ಇವರು ೨೧ ನೆಯ ತಾ॥ ದಿವಸ ಮಹಾತ್ಮಾಗಾಂಧಿಯವರನ್ನು ಯರವಡಾ ತುರಂಗದಲ್ಲಿ ಭೆಟ್ಟಿಯಾಗಿ ಬಂದರು. ಮಹಾತ್ಮರು ಆರೋಗ್ಯದಿಂದಿದ್ದಾರೆ.

## ಹುನಗುಂದದಲ್ಲಿ ಸತ್ಯಾಗ್ರಹಿಗಳಿಗೆ ಸನ್ಮಾನ

ಬಾಗಲಕೋಟೆಯ ಎರಡನೆಯ ಪಥಕದ ಸತ್ಯಾಗ್ರಹಿವೀರರು ಹುನಗುಂದಕ್ಕೆ ಹೋದಾಗ ಅಲ್ಲಿಯ ಪೌರರು ಪಟ್ಟಣವನ್ನು [illegible] ತೋರಣಾದಿಗಳಿಂದ ಶೃಂಗರಿಸಿ, ಅವರನ್ನು ಆರತಿ, ಪುಷ್ಪಮಾಲೆ ಮೊದಲಾದವುಗಳಿಂದ ಸತ್ಕರಿಸಿದ್ದಲ್ಲದೆ, ಸಂಜೆಯಲ್ಲಿ ಶ್ರೀ. ತಮಣಾಚಾರ್ಯ ಕಟ್ಟಿ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯನ್ನು ಜರುಗಿಸಿ ಅವರನ್ನು ಅಭಿನಂದಿಸಿದರೆಂದೂ ತಿಳಿಯುತ್ತದೆ.

## ಶ್ರೀ ಹಿರೇಮಠರು ರಾಜೀನಾಮೆ ಕೊಟ್ಟರು,

ಮಹಾತ್ಮಾ ಗಾಂಧಿಯವರನ್ನು ಹಿಡಿದುದಕ್ಕಾಗಿ ನಿರೋಧಸೂಚಕವಾಗಿ ಹಾವೇರಿಯ ಶ್ರೀ ಎಸ್. ಬಿ. ಹಿರೇಮಠರವರು ಧಾರವಾಡ ಜಿಲ್ಲೆಯ ಲೋಕಲ್ ಬೋರ್ಡಿನ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ.

## ಮಹಾತ್ಮರು ಮೂರು ತಾಸು ಅದೃಶ್ಯರಾಗಿದ್ದರು,

ಮಹಾತ್ಮರು ತಾವು ಇರುವ ಯರವಡೆಯ ತುರಂಗದಿಂದ ಒಂದು ದಿವಸ ಅದೃಶ್ಯರಾಗಿದ್ದರು, ಅವರ ಕೋಣೆಗಳಲ್ಲಿ ಎಲ್ಲಿ ಹುಡುಕಿದರೂ ಅವರು ಸಿಗಲಿಲ್ಲ. ಮುಂದೆ ಮೂರು ತಾಸುಗಳ ಮೇಲೆ ಇದ್ದಲ್ಲಿಯೇ ಇದ್ದರು. ಈ ಮೂರು ತಾಸುಗಳ ಅವಧಿಯಲ್ಲಿ ಸಾಬರಮತಿ ಆಶ್ರಮಕ್ಕೆ ಹೋಗಿ ತಮ್ಮ ಜನರ ಯೋಗಕ್ಷೇಮ ನೋಡಿಕೊಂಡು ಬಂದರಂತೆ! ಈ ಮೇಲಿನ ಸುದ್ದಿಯು ಗುಜರಾಥೀ ಪತ್ರಗಳಲ್ಲಿ ಪ್ರಕಟವಾಗಿದೆ. ಇದೊಂದು ದಂತಕಥೆಯಾಗಿರಬಹುದು.

ಕಂಪನಿಯ ಮುಕ್ಕಾಂ ಸ್ವಲ್ಪ ಉಳಿದಿವೆ.
**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**
ತಮ್ಮ ಲೋಕಪ್ರಿಯವಾದ
ಭಾನುವಾರ ತಾ॥ ೨೫ — ೫ — ೩೦
**ಸುದಾಮದೇವ**
ಸೋಮವಾರ ತಾ॥ ೨೬ — ೫ — ೩೦
**ಶರಣಬಸವ**
ಬುಧವಾರ ತಾ॥ ೨೮ — ೫ — ೩೦
ಸಾಮಾಜಿಕ ಹೊಸನಾಟಕ
**ಶಿಕ್ಷಣಸಂಭ್ರಮ**
**ಎಂಬ ನಾಟಕಗಳನ್ನು ಅಭಿನಯಿಸುವರು,**
ಈ ನಾಟಕಗಳು ಪುನಃ ಆಡಲ್ಪಡುವದಿಲ್ಲ.
ಸಂಘದೊಡೆಯ—**ಸದಾಶಿವರಾವ ಗರೂಡ**

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದಲೇ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

यद्यत् परवशं दुःखं । यद्यदात्मवशं सुखम् ॥ -मनु.

# ಕನ್ನಡಿಗ

KANNADIGA BAGALKOT BI-WEEKLY ಅರ್ಧವಾರಪತ್ರಿಕೆ

ಸಂಪಾದಕರು:- ಬಳವಂತ ಅಣ್ಣಾರಾವ ಮುಜುಮುದಾರ

ಬಾಗಲಕೋಟೆ ಸೋಮವಾರ ಪ್ರತಿ ವೈಶಾಖ ಬಹುಳ ೧೩ ಶಕ ೧೮೫೨ ತಾ ೨೬—೫—೩೦ ಸಂಚಿಕೆ ೫೮

## ಮಹಾತ್ಮರ ಪತ್ರಗಳು

ಮಹಾತ್ಮಾ ಗಾಂಧಿಯವರು ಯರವಡೆಯ ತುರಂಗದಿಂದ ಬರ್ಮತಿ ಆಶ್ರಮದಲ್ಲಿ ಇರುವವರಿಗೂ ಮತ್ತು ಶಿಷ್ಯ ಷ್ಯರಿಗೂ ಪತ್ರಗಳನ್ನು ಬರೆದಿದ್ದು, ಅವುಗಳ ಸಾರವನ್ನು ಲ್ಲಿ ಕೆಳಗೆ ಕೊಟ್ಟಿದೆ:—

ಮೀರಾಬಾಯಿಯವರಿಗೆ,

“ನಾನು ಅತ್ಯಂತ ಸುಖಿಯಾಗಿದ್ದೇನೆ. ಹೊರಗೆ ಮಲ ಲು ಅಧಿಕಾರಿಗಳು ನನಗೆ ಅಪ್ಪಣೆಯನ್ನು ಕೊಟ್ಟಿದ್ದರಿಂದ ಖವಾಗಿ ನಿದ್ರಿಸುತ್ತೇನೆ. ತಕಲಿಯ ಮೇಲೆ ನೂಲು ತೆಗೆ ಯುವದರಲ್ಲಿ ಶಕ್ಯವಿದ್ದಷ್ಟು ವೇಳೆಯನ್ನು ಕಳೆಯುತ್ತೇನೆ. ತಾಸಿನ ಅವಧಿಯಲ್ಲಿ ೩೦ ಸುತ್ತುಗಳಾಗುವವು. ಮೊದ ನೆಯ ದಿವಸ ೧೬೦ ಸುತ್ತುಗಳನ್ನು ತೆಗೆಯಲು ೭ ತಾಸು ನ್ನು ಕಳೆದೆನು. ತುರಂಗದ ಅಧಿಕಾರಿಗಳೆಲ್ಲರೂ ದಯಾಳು ಗೂ ಜಾಗರೂಕತೆಯುಳ್ಳವರೂ ಇರುವರು.”

ಆಶ್ರಮವಾಸಿಗಳಿಗೆ ಬರೆದ ಪತ್ರದಲ್ಲಿ ಹೀಗೆ ಬರೆದಿದ್ದಾರೆ:- ನಾನು ಆರೋಗ್ಯದಿಂದಿದ್ದೇನೆ. ನಸುಕಿನಲ್ಲಿ ೪ ಗಂಟೆಗೆ ತ್ತೇನೆ. ಈ ಸಮಯದಲ್ಲಿಯೂ ಅಧಿಕಾರಿಗಳು ನನಗೆ ಪ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದಾರೆ. ಆದುದರಿಂದ ಗೀತಾಪಠಣ ಮಾಡುತ್ತೇನೆ. ಪ್ರಯಾಣದಲ್ಲಿ ಕಿತ್ತಳೆ ಣ್ಣುಗಳನ್ನು ತೆಗೆದುಕೊಳ್ಳುವದನ್ನು ಬಿಟ್ಟಿದ್ದೆನು. ಆದರೆ ಈಗ ಗಳನ್ನು ತೆಗೆದುಕೊಳ್ಳಹತ್ತಿದ್ದೇನೆ. ೩ ಪೌಂಡುಗಳ ವರೆಗೆ ನ ಹಾಲನ್ನು ಕಾಸದೆಯೆ ತೆಗೆದುಕೊಳ್ಳುತ್ತಿರುತ್ತೇನೆ. ಮುಂ ವಿನಲ್ಲಿಯೂ ತಣ್ಣೀರನ್ನೇ ತೆಗೆದುಕೊಳ್ಳುತ್ತೇನೆ. ಬೆಚ್ಚಗೆ ಡಲು ಬೇಕಾಗುವ ಎಲ್ಲ ಅನುಕೂಲತೆಗಳನ್ನು ಅಧಿಕಾರಿ ಳು ಒದಗಿಸಿಕೊಟ್ಟಿದ್ದರು. ತಣ್ಣೀರಿನ ಮೇಲೆ ಜೀವಿಸುವದು ಕ್ಯವಿದ್ದರೆ ಬೆಚ್ಚಗಿನ ನೀರನ್ನು ಪಡೆಯಲು ವ್ಯರ್ಥವಾಗಿ ಯಾಕೆ ಸಪಡಬೇಕು? ಪಾತ್ರಗಳನ್ನು ಸ್ವಚ್ಛಮಾಡಲಿಕ್ಕೆ ಅಧಿಕಾರಿ ಳು ಒಂದು ಆಳನ್ನು ಇಟ್ಟಿದ್ದಾರೆ. ನನ್ನ ಆಹಾರದ ವಿಷಯ ಗಿ ಯಾವ ಬಗೆಯಿಂದಲೂ ಚಿಂತೆಯನ್ನು ಮಾಡತಕ್ಕದ್ದಿಲ್ಲ. ಎಷ್ಟೋ ಜನರು ನನಗೆ ಹಣ್ಣುಗಳನ್ನು ಕಳಿಸುತ್ತಿರುವರು. ಎರಡನೆಯವರನ್ನು ಹೊಟ್ಟೆಗೆ ಸುಖಪಡಿಸುವದಕ್ಕಾಗಿ ಹಣವನ್ನು ಖರ್ಚುಮಾಡುವದು ಇದು ತಕ್ಕ ಸಮಯವಲ್ಲ. ಹೀಗೆ ಹೆಚ್ಚಿನ ಸುಖ ಪಡೆಯುವದಕ್ಕಾಗಿ ನಮ್ಮಲ್ಲಿ ಹಣವಿಲ್ಲ ಮತ್ತು ಹಣ ಇರತಕ್ಕದ್ದಲ್ಲ.”

## ಶ್ರೀ ಕೇಳಕರರು ಕಾಯದೆಭಂಗ ಮಾಡಿದರು

ತಾ|| ೨೧ ನೆಯ ದಿವಸ ಪುಣೆಯಲ್ಲಿ “ಕೇಸರಿ”ಯ ಸಂಪಾದಕರಾದ ಶ್ರೀ ಕೇಳಕರರ ಅಧ್ಯಕ್ಷತೆಯಲ್ಲಿ “ವೃತ್ತಪತ್ರ ದಬ್ಬಾಳಿಕೆಯ ಕಾಯದೆಯನ್ನು ನಿಷೇಧಿಸುವ ಕುರಿತು ಸಾರ್ವಜನಿಕ ಸಭೆಯು ಸೇರಿತ್ತು. ಆ ಸಭೆಯಲ್ಲಿ ಶ್ರೀ ಕೇಳಕರರು ಸರಕಾರದಿಂದ ಜಪ್ತಮಾಡಲ್ಪಟ್ಟ ಶ್ರೀ ಚಿಪಳೂಣಕರರ “ನಿಬಂಧಮಾಲಾ” ಹಾಗೂ ತಮ್ಮಿಂದಲೆ ರಚಿತವಾದ “೧೯೦೮ ರ ಟಿಳಕ ಖಟ್ಲೆ' ಈ ಗ್ರಂಥಗಳೊಳಗಿನ ಕೆಲಕೆಲವು ವಾಕ್ಯಗಳನ್ನು ಓದಿ ಕಾಯದೆಭಂಗ ಮಾಡಿದರು.

## ಮುಂಬಯಿಯ ಪದವೀಧರರ ಪ್ರತಿಜ್ಞೆ

ಮುಂಬಯಿಯ ಶ್ರೀ ಎಸ್ ಕೆ. ವೈದ್ಯ, ಡಾ. ಜಿ ವ್ಹಿ ದೇಶಮುಖ, ಎಸ್. ಎ ಬೆಳವಿ ಮೊದಲಾದ ೧೦೦ ಜನ ಪದವೀಧರರು, “ಸರಕಾರದವರು ಪ್ರಾರಂಭಿಸಿದ ದಬ್ಬಾಳಿಕೆಯ ಹಾಗೂ ಅತ್ಯಾಚಾರದ ನಿಷೇಧಾರ್ಥವಾಗಿಯೂ, ರಾಷ್ಟ್ರೀಯ ಚಳವಳಿಯ ಉತ್ತೇಜನಾರ್ಥವಾಗಿಯೂ, ಮುಂಬಯಿ ವಿಶ್ವವಿದ್ಯಾಲಯದ ಪದವೀಧರರಾದ ನಾವು ಶಕ್ಯವಿದ್ದಷ್ಟು ರೀತಿಯಿಂದ ಬ್ರಿಟಿಶ ಸರಕುಗಳನ್ನ ಬಹಿಷ್ಕರಿಸುವೆವೆಂದೂ, ಸ್ವದೇಶಿ ಸರಕುಗಳನ್ನೇ ಉಪಯೋಗಿಸುವೆವೆಂದೂ, ಮತ್ತು ಸ್ವರಾಜ್ಯವು ದೊರೆಯುವವರೆಗೆ ಈ ಚಳವಳಿಯನ್ನು ಹಾಗೆಯೆ ಸಾಗಿಸುವೆವೆಂದೂ” ಪ್ರತಿಜ್ಞೆಯನ್ನು ಮಾಡಿದ್ದಾರೆ.

## ೭೨ ವರ್ಷದ ಮುದುಕನಿಗೆ ೨ ವರ್ಷ ಸ. ಶಿಕ್ಷೆ

ಬಂಗಾಲ ಪ್ರಾಂತದ ತಾಮುಲಕ ಸತ್ಯಾಗ್ರಹ ಮಂಡಲದ ಅಧ್ಯಕ್ಷರಾದ ೭೨ ವರ್ಷ ವಯಸ್ಸಿನ ಮುದುಕನಾಗಿರುವ ಶ್ರೀ ಮಹೇಂದ್ರನಾಥ ಮೈತಿಯವರು ಉಪ್ಪಿನ ಕಾನೂನ ಭಂಗಕ್ಕಾಗಿ ಸೆರೆ ಹಿಡಿಯಲ್ಪಟ್ಟು ೨ ವರ್ಷಗಳ ಸಶ್ರಮ ಶಿಕ್ಷೆಗೆ ಗುರಿಯಾಗಿದ್ದಾರೆ.

# ಕರ್ನಾಟಕದಲ್ಲಿ ದಬ್ಬಾಳಿಕೆ

### ವಿಜಾಪುರ ಜಿಲ್ಲೆಯಿಂದ

## ಮತ್ತೊಂದು ಆಹುತಿಯು

ಲಾಲಾಜಿ ಪಥಕದ ಸತ್ಯಾಗ್ರಹಿಗಳೊಂದಿಗೆ ಹಳ್ಳಿ ಹಳ್ಳಿಗೆ ವ್ಯಾಖ್ಯಾನಗಳನ್ನು ಕೊಡುತ್ತ ಜನರಲ್ಲಿ ಜಾಗ್ರತಿಯನ್ನು ಹುಟ್ಟಿಸಿದ ಹಾಗು ಬಿಸನಾಳದಲ್ಲಿ ಸತ್ಯಾಗ್ರಹಿಗಳಿಗೆ ಬಹು ಪರಿಯಾಗಿ ಸಹಾಯಮಾಡಿದ ಶ್ರೀ ಶಂಕರಗೌಡ ತಿಮ್ಮನಗೌಡ ಪಾಟೀಲ ಇವರನ್ನು ಪೋಲೀಸರು ತಾ॥ ೨೫ ನೆಯ ದಿವಸ ಕುಂದರಗಿಯಲ್ಲಿ ಸೆರೆಹಿಡಿದು ಅಂದು ಮಧ್ಯಾಹ್ನದಲ್ಲಿ ಬೀಳಗಿಗೆ ತೆಗೆದುಕೊಂಡು ಹೋಗಿರುತ್ತಾರೆ.

## ನಾಗನೂರಿನಲ್ಲಿ ೩೮ ಜನರು ಸೆರೆಯಾಳಾದರು.

### ಹೆಣ್ಣುಮಕ್ಕಳೂ ಸತ್ಯಾಗ್ರಹ ಮಾಡಿದರು.

ಬೆಳಗಾವಿ ಜಿಲ್ಲೆಯಲ್ಲಿ ಸತ್ಯಾಗ್ರಹ ಚಳವಳಿಯು ಹೆಚ್ಚು ಹೆಚ್ಚು ಒತ್ತರದಿಂದ ಸಾಗಿದಂತೆ, ಅಲ್ಲಿಯ ಅಧಿಕಾರಿಗಳಾದರೂ ಹೆಚ್ಚು ಹೆಚ್ಚು ದಬ್ಬಾಳಿಕೆಯನ್ನು ಪ್ರಾರಂಭಿಸಿದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿ ಈಗ ಎಲ್ಲಿ ನೋಡಿದಲ್ಲಿಯೂ ಸಿಂದೀ ಗಿಡಗಳನ್ನು ಕಡಿದೊಗೆಯುವ ಚಳವಳಿಯು ರಭಸದಿಂದ ನಡೆದಿದ್ದು, ಮೊನ್ನೆ ನಾಗನೂರಿನಲ್ಲಿ ಸ್ವಯಂಸೇವಕರು ಎಷ್ಟೋ ಸಿಂದೀ ಗಿಡಗಳನ್ನು ನಾಶಮಾಡಿದರು, ಈ ಸುದ್ದಿಯನ್ನು ಬೆಳಗಾವಿಯ ಅ. ಕಲೆಕ್ಟರರು ಕೇಳಿ ಚೊಕ್ಕಿಗೆದ್ದು ಕೂಡಲೆ ನಾಗನೂರಿಗೆ ಹೋಗಿ ೩೮ ಜನರನ್ನು ಸೆರೆಹಿಡಿದರು. ಮೋಟಾರಿನಲ್ಲಿ ಹಾಕಿಕೊಂಡು ಹೋದರು ಮೋಟಾರಿನಲ್ಲಿ ಹಾಕಿಕೊಂಡು ಹೋಗುತ್ತಿರುವಾಗ ಅಲ್ಲಿಯ ಹೆಣ್ಣುಮಕ್ಕಳು ಮೋಟಾರಿನ ಮುಂದೆ ಅಡ್ಡ ಬಿದ್ದು ಸತ್ಯಾಗ್ರಹವನ್ನು ಹೂಡಿದರಂತೆ! ಸಾಹೇಬರು ಅವರ ರಟ್ಟೆ ಹಿಡಿದು ಅವರನ್ನು ದೂರ ಸರಿಸಿ ಮೋಟಾರನ್ನು ಸಾಗಿಸಿಕೊಂಡು ಹೋದರಂತೆ!

### ಬೆಳಗಾವಿಯಲ್ಲಿ ಅಧಿಕಾರಿಗಳ ಕಾಟ

ಬೆಳಗಾವಿಯ ಸತ್ಯಾಗ್ರಹ ಶಿಬಿರವನ್ನು ಮತ್ತೆ ಅಧಿಕಾರಿಗಳು ಅದನ್ನು ಕೈವಶಪಡಿಸಿಕೊಂಡ ಕೂಡಲೆ ಅಲ್ಲಿಯ ಸತ್ಯಾಗ್ರಹಿಗಳು ತಮ್ಮ ಗಂಟುಗದಡಿಗಳನ್ನೆಲ್ಲ ತೆಗೆದುಕೊಂಡು ಹೋಗಿ ಮಾರುತಿ ಗುಡಿಯಲ್ಲಿ ತಳವೂರಿದ್ದರು. ಅಲ್ಲಿ ಅವರು ಎರಡು ದಿವಸಗಳ ವರೆಗೆ ಇರುವಷ್ಟರಲ್ಲಿಯೇ ಅಧಿಕಾರಿಗಳು ಅಲ್ಲಿಯೂ ಅವರಿಗೆ ತ್ರಾಸಕೊಟ್ಟಿದ್ದರಿಂದ ಸತ್ಯಾಗ್ರಹಿಗಳು ಆ ಸ್ಥಳವನ್ನು ಬಿಟ್ಟು ಶ್ರೀ. ಜೋಶಿ ನಾರಾಯಣರಾಯರ ಮನೆಯಲ್ಲಿ ಬಿಡಾರ ಹಾಕಿದರು. ಅಲ್ಲಿ ಅವರು ಒಂದು ದಿವಸ ಇದ್ದರು. ಅಧಿಕಾರಿಗಳು ಶ್ರೀ. ಜೋಶಿ ನಾರಾಯಣರಾಯರ ಮನೆಯನ್ನೂ ಮುತ್ತುವರೆಂಬ ಸುದ್ದಿಯು ಮರುದಿವಸ ಸತ್ಯಾಗ್ರಹಿಗಳಿಗೆ ತಿಳಿದುಬಂದಿದ್ದರಿಂದ ಈಗ ಅವರು ಬೇರೆ ಕಡೆಗೆ ತೆರಳಿದ್ದಾರೆ,

### ಶ್ರೀ ಬೆಳವಿಯವರ ಛಲ

ಸಿಂದೀ ಗಿಡಗಳನ್ನು ಕಡಿದಿರುವರೆಂಬ ಆರೋಪದಿಂದ ನಾಗನೂರಿನಲ್ಲಿ ಸೆರೆಹಿಡಿಯಲ್ಪಟ್ಟು, ಹಿಂಡಲಗಿ ಜೇಲಿಗೆ ತರಲ್ಪಟ್ಟ ಮೇಲಿನ ಗೃಹಸ್ಥರನ್ನು ಕಾಣಲು ಶ್ರೀ ಬೆಳವಿ ಮೊದಲಾದವರು ಸೆರೆಯಾಳಾದವರ ಆಪ್ತರೊಂದಿಗೆ ಜೇಲಿಗೆ ಹೋಗಿದ್ದರು. ಆದರೆ ಜೇಲಿನ ಅಧಿಕಾರಿಗಳು "ಸೆರೆಯಾಳುಗಳು ನಿಮ್ಮ ಮೋರೆಯನ್ನು ನೋಡಲಿಚ್ಛಿಸುವದಿಲ್ಲ. ಆದುದರಿಂದ ಅಪ್ಪಣೆಯು ಸಿಗಲಾರದು" ಎಂದು ಹೇಳಿದರಂತೆ! ನೋಡಿರಿ! ಹೇಗಿದೆ ಅಧಿಕಾರಿಗಳ ಆಟ.

### ಶ್ರೀ ಲೆಂಗಡೆಯವರಿಗೆ ೯ ತಿಂಗಳ ಶಿಕ್ಷೆ.

ಹಿಂದೂಸ್ಥಾನ ಸೇವಾದಳದ ಪ್ರಮುಖ ಪ್ರಚಾರಕರಾದ ಶ್ರೀ ಲೇಗಡೆಯವರಿಗೆ ೬ ತಿಂಗಳ ಶಿಕ್ಷೆ ಮತ್ತು, ೧೨೦ ರೂ, ದಂಡ, ದಂಡ ಕೊಡದಿದ್ದರೆ ಮತ್ತೆ ೩ ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿದೆ.

### ಶ್ರೀ. ವಡವಿಯವರಿಗೆ ೭ ತಿಂಗಳ ಸಶ್ರಮ ಶಿಕ್ಷೆ

ಬೆಳಗಾವಿ ಜಿಲ್ಲೆಯ ಹುದಲಿಯಲ್ಲಿ ಖಾದಿಯ ಕೆಲಸವನ್ನು ಮಾಡುತ್ತಿದ್ದ ಶ್ರೀ. ವಡವಿ ರಾಮರಾಯರನ್ನು ಅಧಿಕಾರಿಗಳು ತಾ॥ ೨೦ ನೆಯ ದಿವಸ ಹುದಲಿಯಲ್ಲಿ ಸೆರೆಹಿಡಿದು ಗೋಕಾಕಕ್ಕೆ ಕರೆದುಕೊಂಡು ಹೋದರು. ಅಲ್ಲಿ ಅವರ ವಿಚಾರಣೆಯಾಗಿ ಅವರಿಗೆ ೭ ತಿಂಗಳ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ.

---

### ಮಂಗಳೂರಿನಲ್ಲಿ ಮದ್ಯಪಾನ ಪ್ರತಿಬಂಧ

ಇಲ್ಲಿ ಸೆರೆ ಸಿಂದಿ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುವ ಕಾರ್ಯವು ತಾ॥ ೨೦ ನೆಯ ದಿವಸ ಪ್ರಾರಂಭಿಸಲ್ಪಟ್ಟಿದೆ. ಅಂದು ಸಾಯಂಕಾಲ ೪ ಗಂಟೆಯಿಂದ ರಾತ್ರಿ ೮ ಗಂಟೆಯ ವರೆಗೆ ೨೫ ಜನ ಸ್ವಯಂಸೇವಕರು ೭ ಅಂಗಡಿಗಳನ್ನು ಪಿಕೆಟಿಂಗ ಮಾಡಿದರು. ಸ್ವಯಂಸೇವಕರು ಅಂಗಡಿಗಳ ಮುಂದೆ ನಿಂತುಕೊಂಡು ಕುಡಿಯಲು ಬಂದವರಿಗೆ ಮದ್ಯಪಾನ ನಿಷೇಧದ ಹಸ್ತಪತ್ರಿಕೆಗಳನ್ನು ಕೊಟ್ಟು ಕುಡಿಯುವದರಿಂದ ಅವರನ್ನು ಪರಾಙ್ಮುಖಗೊಳಿಸುತ್ತಿದ್ದರು. ಪ್ರತಿ ರವಿವಾರದಲ್ಲಿಯೂ ಪರದೇಶಿ ಬಟ್ಟೆಗಳ ಪ್ರಚಂಡ ಹೋಳಿಯು ಇಲ್ಲಿ ಜರಗುತ್ತಿದೆ. ಉಪ್ಪು ಸಿದ್ಧಪಡಿಸುವ ಕಾರ್ಯವೂ ಎಂದಿನಂತೆಯೇ ನಡೆದಿದೆ. ಭಗಿನಿಯರೂ ಸಮುದ್ರ ತೀರಕ್ಕೆ ಬಂದು ಉಪ್ಪು ಸಿದ್ಧಪಡಿಸುತ್ತಿರುವರು.

ಸತ್ಯಾಗ್ರಹ ಶಿಬಿರ<br>ಮಂಗಳೂರ<br>೨೧-೫-೩೦ } ಪ್ರಕಟನಾ ಕಾರ್ಯಾಧಿಕಾರಿ

### ಆಚಾರ್ಯ ಕೃಪಲಾನಿಯವರು ಸೆರೆಯಾಳಾದರು.

ಮೀರತದ ಗಾಂಧಿ ಆಶ್ರಮದ ಅಧಿಕಾರಿಗಳಾದ ಆಚಾರ್ಯ ಕೃಪಾಲಾನಿಯವರನ್ನು ೧೨೪ ಅ ಕಲಮಿನನ್ವಯ ಮೀರತದಲ್ಲಿ ಸೆರೆ ಹಿಡಿದು ಕಾರಾಗೃಹಕ್ಕೆ ಒಯ್ದಿದ್ದಾರೆ.

# ಸರೋಜಿನಿದೇವಿಗೆ ೯ ತಿಂಗಳ ಶಿಕ್ಷೆ

## ಶ್ರೀ. ನರಹರಿಭಾಯಿ ಪರೇಖರು ಸೆರೆಯಾಳಾದರು

೧೪೫ ನೆಯ ಕಲಮಿನನ್ವಯ ಧರಸಾನಾದಲ್ಲಿ ಸೆರೆಹಿಡಿಯಲ್ಪಟ್ಟ ಶ್ರೀಮತಿ ಸರೋಜಿನೀದೇವಿ, ಶ್ರೀ ಪ್ಯಾರೇಲಾಲ, ಶ್ರೀ ಮಣಿಲಾಲ ಗಾಂಧಿ ಹಾಗು ಇಮಾಮಸಾಹೇಬ ಇವರಲ್ಲಿ ಶ್ರೀಮತಿ ಸರೋಜಿನಿ ದೇವಿಯವರಿಗೆ ೯ ತಿಂಗಳ ಸಾದಾ ಶಿಕ್ಷೆಯೂ, ಇಮಾಮ ಸಾಹೇಬ ಇವರಿಗೆ ೭ ತಿಂಗಳ ಸಾದಾ ಶಿಕ್ಷೆಯೂ, ವಿಧಿಸಲ್ಪಟ್ಟಿವೆ. ಶ್ರೀಮತಿ ಸರೋಜಿನಿ ದೇವಿಯವರು ಹಾಗು ಇಮಾಮ ಸಾಹೇಬರು ಅನುಕ್ರಮವಾಗಿ "ಅ" ಮತ್ತು "ಬ" ವರ್ಗದ ಸೆರೆಯಾಳುಗಳಾಗಿ ತಿಳಿಯಲ್ಪಡುವರು. ತಾ|| ೨೩ ನೆಯ ದಿವಸ ಅಧಿಕಾರಿಗಳು ಉಂಟಾಡಿ ಬಿಡಾರಕ್ಕೆ ಹೋಗಿ ಇ. ಪಿ. ಕೋಡದ ೧೪೫ ನೆಯ ಕಲಮಿನನ್ವಯ ಬಿಡಾರದ ಅಧಿಪತಿಗಳಾದ ಶ್ರೀ. ನರಹರಿಭಾಯಿ ಪರೇಖರನ್ನು ಸೆರೆಹಿಡಿದಿದ್ದಾರೆ ಪ್ಯಾರೇಲಾಲ ಮತ್ತು ಮಣಿಲಾಲ ಇವರಿಗೆ ೧ ವ. ಸ ಶಿಕ್ಷೆ

## ಶ್ರೀ ವಿಠ್ಠಲಭಾಯಿಯವರ ವೀರವಾಣಿ

### ಬ್ರಿಟಿಶ ರಾಜ್ಯದ ಬದಲು ಬಡಿಗೆಯ ರಾಜ್ಯ.

( ಶ್ರೀ ವಿಠ್ಠಲಭಾಯಿಯವರ ಭಾಷಣದಿಂದ )

" ಹಿಂದುಸ್ಥಾನದಲ್ಲಿ ಈಗ ಬ್ರಿಟಿಶರ ರಾಜ್ಯವಿಲ್ಲ. ಕೂಲಿಕಾರ ಸರಕಾರವು ಹಿಂದುಸ್ಥಾನದ ಪ್ರಭುತ್ವವನ್ನು ಲಾರ್ಡ ಆಯರ್ವಿನ್ನರ ಕಡೆಗೆ ಒಪ್ಪಿಸಿದ್ದಾರೆ. ಲಾರ್ಡ ಆಯರ್ವಿನ್ನರು ಅದನ್ನು ಲಷ್ಕರಿ ಹಾಗೂ ಪೋಲೀಸ ಅಧಿಕಾರಿಗಳಿಗೆ ಬಿಟ್ಟುಬಿಟ್ಟಿದ್ದಾರೆ ಇವರು ಈ ದೇಶದಲ್ಲಿ ಬಡಿಗೆಯ ರಾಜ್ಯವನ್ನೇ ಸ್ಥಾಪಿಸಿ ಬಿಟ್ಟಿದ್ದಾರೆ. ಇದು ಬಹುಕಾಲ ಬಾಳಲಾರದು. ನೀವು ನಿಮ್ಮ ನಿಶ್ಚಿತಧೋರಣಕ್ಕೆ ಅಂಟಿಕೊಂಡು ನಡೆದಲ್ಲಿ, ಅದರ ಬದಲು ನೀವು ಸ್ವರಾಜ್ಯವನ್ನು ಸ್ಥಾಪಿಸಿಕೊಳ್ಳಬಹುದು. "

## ಮುಂಬಯಿಯ ವ್ಯಾಪಾರಸ್ಥರ ಅಪೂರ್ವ ವಿಜಯ

### ೨ ಲಕ್ಷ ಜನರು ಸತ್ಯಾಗ್ರಹ ಮಾಡಿದರು

ವ್ಯಾಪಾರಿ ಹಾಗು ಔದ್ಯೋಗಿಕ ಸಂಸ್ಥೆಗಳ ಸಭಾಸದರ ಮೆರವಣಿಗೆಯು ಕಿಲ್ಲೇದಲ್ಲಿ ಬರಕೂಡದೆಂಬುದಾಗಿ ಮುಂಬಯಿಯ ಪೋಲೀಸ ಕಮೀಶನರರು ಅಪ್ಪಣೆಯನ್ನು ತೆಗೆದಿದ್ದರು. ಈ ಅಪ್ಪಣೆಗನುಸಾರವಾಗಿ ಪೋಲೀಸ ಅಧಿಕಾರಿಗಳು, ೫೦ ಔದ್ಯೋಗಿಕ ಸಂಸ್ಥೆಗಳು ಹೊರಡಿಸಿದ ಪ್ರಚಂಡವಾದ ಒಂದು ಮೆರವಣಿಗೆಯನ್ನು ಹಾದಿಯಲ್ಲಿಯೇ ಅಡ್ಡಗಟ್ಟಿದರು. ಮೆರವಣಿಗೆಯಲ್ಲಿ ಲಕ್ಷಾನುಗಟ್ಟಲೆ ಜನರು ಸಮಾವಿಷ್ಟರಾಗಿದ್ದರು. ಜನರಾದರೂ ತಿರುಗಿ ಹೋಗದೆ ಅಲ್ಲಿಯೇ ಕುಳಿತು ಬಿಟ್ಟಿದ್ದರಂತೆ. ಮೈಲುಗಳ ಹಾದಿಯು ಕಟ್ಟಾಗಿದ್ದು ಅಲ್ಲಿಯ ವ್ಯವಹಾರವೇ ನಿಂತು ಹೋಗಿತ್ತು. ಹೀಗೆ ೨ ಲಕ್ಷ ಜನರು ಒಂದೇ ಸವನೆ ೪ ತಾಸುಗಳ ವರೆಗೆ ಹಾದಿಯಲ್ಲಿ ಕದಲದೆ ಕುಳಿತಿದ್ದುದನ್ನು ಕಂಡು ಪೋಲೀಸ ಕಮೀಶನರರಾದ ಹೇಲೀ ಸಾಹೇಬರು ಗಾಬರಿಗೊಂಡು ಅಲ್ಲಿಗೆ ಹೋಗಿ ಅವರ ಬೇಡಿಕೆಗಳನ್ನು ಮಾನ್ಯ ಮಾಡಿದ್ದಲ್ಲದೆ, ಅವರು ಮೊದಲು ನಿಶ್ಚಯಿಸಿಕೊಂಡಿದ್ದ ಹಾದಿಯಿಂದ ಹೋಗಲು ಬಿಟ್ಟುಗೊಟ್ಟರು. ಬಾಗಲಕೋಟೆಯ ವ್ಯಾಪಾರಸ್ಥರು ಇದರಿಂದ ಬುದ್ಧಿಗಲಿಯುವಂತಿದೆ ವ್ಯಾಪಾರಸ್ಥರೇ, ಇನ್ನಾದರೂ ಕಣ್ಣು ತೆರೆಯುವಿರೋ ?

## ಗುಜರಾಥದಲ್ಲಿ ಸತ್ಯಾಗ್ರಹದ ಪ್ರಗತಿ

ಸುರತ ಜಿಲ್ಹೆಯಲ್ಲಿ ಈ ವರೆಗೆ ೨೫೦೦೦ ಸಾವಿರ ಸಿಂದೀ ಗಿಡಗಳು ಕಡಿಯಲ್ಪಟ್ಟಿದ್ದು, ಭಡೋಚ ಜಿಲ್ಹೆಯಲ್ಲಿಯೂ ೧೦೦೦ ಗಿಡಗಳು ನಾಶಹೊಂದಿವೆ. ಸುರತ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ಓರ್ವ ಸಭಾಸದರೂ, ಓಲ್ಪಾಡ ತಾಲೂಕ ಬೋರ್ಡಿನ ೭ ಜನ ಸಭಾಸದರೂ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಪಂಚಮಹಾಲ ಜಿಲ್ಹೆಯಲ್ಲಿ ಒಟ್ಟಿಗೆ ೫೦ ಜನ ಗೌಡರು ಸರಕಾರಿ ಉದ್ಯೋಗಕ್ಕೆ ಶರಣು ಹೊಡೆದಿದ್ದಾರೆ. ಅಹಮ್ಮದಾಬಾದ ಜಿಲ್ಹೆಯೊಳಗಿನ ಧಾಕ್ತೋಜ ಮತ್ತು ನಾಂದೇಜ ಗ್ರಾಮಗಳ ಸಿಂದೀ ಅಂಗಡಿಗಳು ಮುಚ್ಚಿ ಹೋಗಿವೆ. ಸುರತ ಜಿಲ್ಹೆಯೊಳಗಿನ ಎಷ್ಟೋ ಹಳ್ಳಿಗಳಲ್ಲಿ ಸ್ವತಂತ್ರ ನ್ಯಾಯಸ್ಥಾನಗಳು ಸ್ಥಾಪಿತವಾಗತಕ್ಕವಿವೆ. ಉಪ್ಪಿನ ಸತ್ಯಾಗ್ರಹವಂತೂ ಎಲ್ಲ ಕಡೆಗೂ ಎಂದಿನಂತೆಯೇ ನಡೆದಿದೆ.

## ಮುಂಬಯಿಯಲ್ಲಿ ೨ ಸಿಂದೀ ಅಂಗಡಿಗಳು ಮುಚ್ಚಿದವು

ಮುಂಬಯಿಯಲ್ಲಿಯ ಸ್ವಯಂಸೇವಿಕೆಯರು ವಿಲೇಪಾರ್ಲೆಯಲ್ಲಿ ಸೆರೆ-ಸಿಂದಿ ಅಂಗಡಿಗಳ ಮುಂದೆ ನಿಂತು ಪಿಕೆಟಿಂಗನ್ನು ಪ್ರಾರಂಭಿಸಿದ್ದಾರೆ, ೭ ಅಂಗಡಿಗಳಲ್ಲಿ ಈಗಾಗಲೆ ಎರಡು ಅಂಗಡಿಗಳು ಮುಚ್ಚಿಹೋಗಿವೆ. ಉಳಿದ ಅಂಗಡಿಗಳಿಗೂ ಗಿರಾಕಿಗಳು ಕಡಿಮೆಯಾಗ ಹತ್ತಿದ್ದಾರೆ ಅಂಗಡಿಗಳ ಮುಂದೆ ನಿಂತಿರುವ ಸ್ವಯಂಸೇವಿಕೆಯರನ್ನು ಕಂಡು ಕುಡುಕರು ಹಾಗೆಯೇ ಹಿಂತಿರುಗ ಹತ್ತಿದ್ದಾರೆ.

## ಶಿಕ್ಷಕರ ಮೇಲೆ ಗದೆ

ಡಿಸ್ಟ್ರಿಕ್ಟ ಬೋರ್ಡಿನ ಅಧೀನತೆಯಲ್ಲಿದ್ದ ಶಾಲೆಗಳ ಶಿಕ್ಷಕರಲ್ಲಿ ಯಾರಾದರೂ ರಾಜಕೀಯ ಚಳವಳಿಯಲ್ಲಿ ಭಾಗ ತೆಗೆದುಕೊಂಡಲ್ಲಿ, ಅವರನ್ನು ಉದ್ಯೋಗದಿಂದ ತೆಗೆದು ಹಾಕುವದರಲ್ಲಿ ಬರುವದೆಂಬುದಾಗಿ ಬಿಹಾರ ಮತ್ತು ಓರಿಸಾ ಸರಕಾರದವರು ಒಂದು ಕಟ್ಟಳೆಯನ್ನು ತೆಗೆದಿದ್ದಾರೆ.

## ಸತ್ಯಾಗ್ರಹಿಗಳ ಪ್ರಯಾಣ

ಮಂಗಳವಾರ ತಾ|| ೨೭ ನೆಯ ದಿವಸ ಮುಂಜಾನೆ ೫ ಗಂಟೆಗೆ ಇಲ್ಲಿಂದ ಐದು ಜನ ಸ್ವಯಂಸೇವಕರು ಶಿರೂರ ಗುಳೇದಗುಡ್ಡಗಳ ಮಾರ್ಗವಾಗಿ ಪ್ರಚಾರಕಾರ್ಯವನ್ನು ಮಾಡುತ್ತ ಹೋಗುವರೆಂದೂ ಅವರಿಗೆ ಅಲ್ಲಲ್ಲಿಯ ಜನರು ತನುಮನಧನಗಳಿಂದ ಸಹಾಯ ಮಾಡಬೇಕೆಂದೂ ಸತ್ಯಾಗ್ರಹ ಮಂಡಳದವರು ತಿಳಿಸುತ್ತಾರೆ.

## ಕರ್ನಾಟಕ ಬ್ರಾಹ್ಮಣೇತರ ಪರಿಷತ್ತಿನ

ಸ್ವಾಗತಾಧ್ಯಕ್ಷರಾದ

ಶ್ರೀ. ವೀರನಗೌಡ ಪಾಟೀಲ ಇವರ

## ಭಾಷಣದ ಸಾರಾಂಶವು

ಇಪ್ಪೊತ್ತು ಮಹಾತ್ಮರ ಚಳವಳಿಯು ಹೊರತು ಪ್ರಜೆಗಳ ಕಲ್ಯಾಣವನ್ನು ತೋರುವ ಮಾರ್ಗವು ಯಾವದೂ ಕಾಣುವದಿಲ್ಲ. ಬ್ರಾಹ್ಮಣ-ಬ್ರಾಹ್ಮಣೇತರ ಎಂಬ ಪಕ್ಷಭೇದಗಳನ್ನು ಮೀರಿನಿಂತ, ಜನಸಾಮಾನ್ಯರ ನಿಜವಾದ ಕಲ್ಯಾಣವನ್ನು ಅನನ್ಯವಾಗಿ ಚಿಂತಿಸುವ ಮಹಾತ್ಮರ ಸಮತ್ವದ ಮಾರ್ಗವನ್ನು ಹಿಡಿಯಬೇಕಾಗಿದೆ. ನಾವು ಯಾರೊಬ್ಬರನ್ನೂ ಹಿಂಬಾಲಿಸಬೇಕಾಗಿಲ್ಲ. ಯಾರೊಬ್ಬರ ಹಿಂದಿನ ಬಾಲವನ್ನೂ ಹಿಡಿದು ಸಾಗಬೇಕಾಗಿಲ್ಲ. ಸರಕಾರದ ಬಾಲವನ್ನಂತೂ ಇಲ್ಲವೇ ಇಲ್ಲ. ಮ|| ಗಾಂಧಿಯವರು ಈ ಪರಾವಲಂಬನದ ಪ್ರವೃತ್ತಿಯನ್ನೇ ಹೊಡೆದು ಹಾಕಿದ್ದಾರೆ. ನಮ್ಮನ್ನೇ- ನಮ್ಮೊಳಗಿನ ಸ್ವಯಂಶಕ್ತಿಯನ್ನೇ ನಂಬಿ, ಯಾರನ್ನೂ ಹಿಂಬಾಲಿಸದೆ, ಎಲ್ಲ ಪಕ್ಷ ಪಂಗಡಗಳ ಮುಂದೆ ನಮ್ಮನ್ನು ಹಿಂಡಕೊಳ್ಳುತ್ತಿರುವ, ನಮ್ಮ ಮೇಲೆ ಉರಿದಾಡುವ ಎಲ್ಲ ಶಕ್ತಿಗಳ ಮುಂದೆ ಧೈರ್ಯದಿಂದ ತಲೆಯೆತ್ತಿ ಸಾಗುವ ರಾಜಮಾರ್ಗವನ್ನು ನಮ್ಮೆಲ್ಲರ ಅನಭಿಷಿಕ್ತ ರಾಜರಾದ ಮ|| ಗಾಂಧಿಯವರು ತೋರಿಸಿದ್ದಾರೆ. ಆ ಮಾರ್ಗವನ್ನೇ ನಾವು ಹಿಡಿಯಬೇಕಾಗಿದೆ. ಪ್ರಜೆಗಳ ಪೀಡೆಯು ಮಿತಿಯನ್ನು ಮೀರಿದೆ. ಸಹನೆಯು ಗೆರೆಯನ್ನು ದಾಟಿದೆ. "ಪ್ರಜಾಪೀಡನ ಸಂತಾಪೋದ್ಭೂತಃ ಸಮುದ್ಭೂತೋ ಹುತಾಶನಃ" ಪ್ರಜೆಗಳ ಪೀಡೆಯಿಂದ ಹುಟ್ಟಿದ ಉರಿಯು ರಾಜನ ಕುಲವನ್ನೂ, ರಾಜ್ಯಾಂಗಗಳನ್ನೂ ನಾಶಗೊಳಿಸದೆ ಬಿಡದೆಂದು ಸ್ಮೃತಿಕಾರರು ಹೇಳುತ್ತಾರೆ. ಇಲ್ಲದೆ ಅನರ್ಥವು ಆಗಬಾರದೆಂದೇ ಮಹಾತ್ಮರು ಅಹಿಂಸಾಮಯ ಸತ್ಯಾಗ್ರಹವನ್ನು ಉಪದೇಶಿಸುತ್ತಿದ್ದಾರೆ. ನನಗಂತೂ ಅದನ್ನು ಬಿಟ್ಟು ಬೇರೆ ಮಾರ್ಗನಾವುದೂ ಕಾಣುವದಿಲ್ಲ.

ಇನ್ನು ಬ್ರಾಹ್ಮಣ – ಬ್ರಾಹ್ಮಣೇತರ ಎಂಬ ಜಾತಿವಾಚಕ ಚಳವಳಿಗಳ ಅಗತ್ಯವು ನನಗೆ ಅನಿಸುವದಿಲ್ಲ. ಭಾರತ ಮಾತೆಯು ತರುಣರ ಮನಸನ್ನು ಹೊಕ್ಕಿದ್ದಾಳೆ. ಇನ್ನು ಒಂದೇ ಒಂದು ಚಳವಳಿ. ಭಾರತದ ವಿಮೋಚನೆಯ ಚಳವಳಿಯೊಂದೇ ಚಳವಳಿ. ಸಾಮಾಜಿಕ ರಾಜಕೀಯ ಆರ್ಥಿಕ ನೈತಿಕ — ಎಲ್ಲಾ ಅನ್ಯಾಯಗಳ ಪ್ರತಿಕಾರವನ್ನು ಮಾಡುವ ಚಳವಳಿಯೊಂದೇ ಚಳವಳಿ. ಮುಂಬಯಿಯ ಬ್ರಾಹ್ಮಣೇತರ ಮುಖಂಡರು ಮಹಾತ್ಮರನ್ನು ಸಂದರ್ಶಿಸಿ, "ಸ್ವರಾಜ್ಯವು ಲಕ್ಷೋಪಲಕ್ಷ ಹಸಿದ ಜೀವಗಳಿಗಾಗಿ ಇರುತ್ತದೆ" ಎಂದು ಸಂದೇಶವನ್ನು ಪಡೆದುಕೊಂಡಿದ್ದಾರೆ. ಕರ್ನಾಟಕದ ಹಳ್ಳಿಹಳ್ಳಿಗಳೊಳಗಿನ ರೈತರ ಉತ್ಸಾಹವು ಮಿಗಿಲಾಗಿದೆ. ಕರ್ನಾಟಕದ ಸತ್ಯಾಗ್ರಹ ಸಮರದಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ಬ್ರಾಹ್ಮಣರಲ್ಲವೆಂಬುದನ್ನು ನಾವು ನೆನೆಸಬೇಕಾಗಿದೆ. ಅಂಕೋಲೆಯಲ್ಲಿ, ಉತ್ತರ-ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಒಕ್ಕಲು ಹಾಲಕ್ಕಿ ನಾಯಕರು ಮೊಗವೀರರು ( ಮೀನಗಾರರು ) ಮೊದಲಾದ 'ಬ್ರಾಹ್ಮಣೇತರ' ಜಾತಿಯವರೇ ನಾಮುಂದೆ ನೀಮುಂದೆ ಎಂದು ಈ ಶಾಂತಿಯುದ್ಧದಲ್ಲಿ ಒದಗುತ್ತಿರುವರು. ಮಹಾರಾಷ್ಟ್ರದ ಭೋಸಲೆಯೆಂಬ ಮರಾಠಾ ಗೃಹಸ್ಥರು – ಕಾಯಿದೆ ಕೌನ್ಸಿಲಿನ ಮೆಂಬರರು ರಾಜಿನಾಮೆ ಕೊಟ್ಟಿದ್ದಾರೆ. ಇವೆಲ್ಲ ಶುಭಲಕ್ಷಣಗಳು. ಇಂಥ ಹೊತ್ತಿನಲ್ಲಿ ನಾವಷ್ಟೇ ಹಿಂದುಳಿದರೆ, ಅದೇನೂ ಗೌರವಾಸ್ಪದವಾದೀತೆಂದು ಅನಿಸುವದಿಲ್ಲ.

### ಕರಾಚಿಯಲ್ಲಿ ಸಾಮುದಾಯಿಕ ಕಾಯಿದೆಭಂಗ

ಕರಾಚಿಯಲ್ಲಿ ಈಗ ಜನರು ಜಪ್ತವಾದ ಗ್ರಂಥಗಳಲ್ಲಿಯ ವಾಕ್ಯಗಳನ್ನೋದಿ ಕಾಯಿದೆ ಭಂಗವನ್ನು ಮಾಡುವ ಕಾರ್ಯವನ್ನು ಪ್ರಾರಂಭಿಸಿದ್ದಾರೆ ಹೋದ ಸೋಮವಾರ ದಿವಸ ಒಂದು ಪ್ರಚಂಡವಾದ ಸಭೆಯು ನೆರೆದಿತ್ತು. ೨೦೦೦೦ ಜನರು ನೆರೆದ್ದರು ಒಬ್ಬನು ಸಭೆಯಲ್ಲಿ ಎದ್ದು ನಿಂತು ಆಕ್ಷೇಪಾರ್ಹವಾದ ವಾಕ್ಯಗಳನ್ನೋದಿದನು. ಆ ವಾಕ್ಯಗಳನ್ನು ನೆರೆದವರೆಲ್ಲರೂ ಓದಿ ಕಾಯಿದೆಭಂಗಮಾಡಿದರು.

### ಸೋಲ್ಲಾಪುರದಲ್ಲಿ ಮತ್ತೆ ಗೊಂದಲ.

ಸೋಲ್ಲಾಪುರದಲ್ಲಿ ಪ್ರಾರಂಭಿಸಿದ ಲಷ್ಕರಿ ಕಾಯಿದೆಯನ್ನು ತಾ|| ೨೨ ನೆಯ ದಿವಸ ಒಂದಕ್ಕೆ ಕೈಗೆತ್ತಿಕೊಳ್ಳುವದಿದ್ದರಷ್ಟೆ ಆದರೆ ತಾ|| ೨೧ ನೆಯ ದಿವಸ ಸೈನಿಕರ ಮೇಲೆ ಯಾರೋ ಕಲ್ಲುಗಳನ್ನು ಎಸೆದಿದ್ದರಿಂದ, ಅಧಿಕಾರಿಗಳು ಅದರ ಅವಧಿಯನು ಮತ್ತೆ ಬೆಳೆಸಿದ್ದಾರೆ. ಇದಕ್ಕಾಗಿ ನಾಲ್ಕು ಜನರು ಸೆರೆಹಿಡಿಯಲ್ಪಟ್ಟಿದ್ದು, ಅವರ ವಿಚಾರಣೆಯು ನಡೆದಿದೆ.

### ಸೋಲ್ಲಾಪುರದಲ್ಲಿ ಭಯಂಕರ ಶಿಕ್ಷೆ

ಸೋಲ್ಲಾಪುರದಲ್ಲಾದ ಸವಿಸ್ತರ ಸಂಗತಿಗಳನ್ನು ಪ್ರಸಿದ್ಧಿಸಿದ "ಕರ್ಮಯೋಗಿ" ಪತ್ರಿಕೆಯ ಸಂಪಾದಕರಾದ ಶ್ರೀ ರಾಜವಾಡೆಯವರಿಗೆ ಲಷ್ಕರೀ ಕಾಯಿದೆಯ ಪ್ರಕಾರ ೭ ವರ್ಷ ಕಠಿಣ ಶಿಕ್ಷೆ ಮತ್ತು ೧೦೦೦೦ ರು. ದಂಡವನ್ನು ಅಧಿಕಾರಿಗಳಿಂದ ವಿಧಿಸುವದರಲ್ಲಿ ಬಂದಿದೆ. "ಕರ್ಮಯೋಗಿ" ಕಚೇರಿಯನ್ನು ಜಪ್ತಮಾಡಿದ್ದಾರೆ.

---

ಕಂಪನಿಯ ಮುಕ್ಕಾಂ ಸ್ವಲ್ಪ ಉಳಿದಿವೆ.

ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು

ತಮ್ಮ ಲೋಕಪ್ರಿಯವಾದ

ಸೋಮವಾರ ತಾ|| ೨೬ — ೫ — ೩೦

ಶರಣಬಸವ

ಬುಧವಾರ ತಾ|| ೨೮ — ೫ — ೩೦

ಸಾಮಾಜಿಕ ಹೊಸನಾಟಕ

ಶಿಕ್ಷಣಸಂಭ್ರಮ

ಎಂಬ ನಾಟಕಗಳನ್ನು ಅಭಿನಯಿಸುವರು,

ಈ ನಾಟಕಗಳು ಪುನಃ ಆಡಲ್ಪಡುವದಿಲ್ಲ.

ಸಂಘದೊಡೆಯ—ಸದಾಶಿವರಾವ ಗೆರೂಡ

---

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮಜುಮದಾರ ಇವರಿಂದ ಬಾಗಿಲಕೋಟೆಯ ವಿದ್ಯಾರಣ್ಯ ಮುದ್ರಾಲಯದಲ್ಲಿ ಮುದ್ರಿತವಾಗಿ ಅವರಿಂದಲೇ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

यद्यत् परवशं दुःखं । यद्यदात्मवशं सुखम् ॥—मनु.

ಕನ್ನಡಿಗ

KANNADIGA BI-WEEKLY

ಸಂಪಾದಕರು:- ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಮಂಗಳವಾರ ಮಿತಿ ವೈಶಾಖ ಶುದ್ಧ ೧೫ ಶಕೆ ೧೮೫೨ ತಾ ೧೩—೫—೩೦ ಸಂಚಿಕೆ ೫೯

## ಸರಕಾರದ ದಬ್ಬಾಳಿಕೆಗೆ

# ಗಣಿ ಬಾಬುರಾಯರು ಮತ್ತೆ ತುತ್ತಾದರು

ತಾ|| ೧೨ ನೆಯ ದಿವಸ ಸಾಯಂಕಾಲ ೫ ಘಂಟೆಗೆ ೧೪೪ ನೆಯ ಕಲಮಿನನ್ವಯ ಗಣಿಯಲ್ಲಿ ಶ್ರೀ ಗಣಿ ಬಾಬುರಾಯರನ್ನು ಮತ್ತೆ ಸೆರೆಹಿಡಿದಿರುವರು. ಈಗ ಕೆಲವು ದಿವಸಗಳ ಹಿಂದೆ ಉಪ್ಪಿನ ಕಾಯದೆಭಂಗಕ್ಕಾಗಿ ಇವರು ಸೆರೆಹಿಡಿಯಲ್ಪಟ್ಟು ೧೦೦ ರೂ. ಗಳ ದಂಡದ ಶಿಕ್ಷೆಗೆ ಪಾತ್ರರಾಗಿದ್ದರು.

### ಶ್ರೀಮತಿ ಸರೋಜಿನಿಯವರ ವಾಙ್ಮೂಲ

ಶ್ರೀಮತಿ ಸರೋಜಿನಿಯವರು ತಮ್ಮ ವಾಙ್ಮೂಲದಲ್ಲಿ ಹೀಗೆ ಹೇಳಿದ್ದಾರೆ:—

"ನಾನು ಈ ಕೋರ್ಟಿನಲ್ಲಿ ಭಾಗ ತೆಗೆದುಕೊಳ್ಳಲಿಚ್ಛಿಸುವದಿಲ್ಲ. ಧರಸಾನಾ ದಾಳಿಯ ಎಲ್ಲ ಹೊಣೆಗಾರಿಕೆಯನ್ನೂ ನಾನೇ ವಹಿಸಿರುತ್ತೇನೆ. ಶ್ರೀ ಅಬ್ಬಾಸ ತಯ್ಯಬಜಿಯವರ ತರುವಾಯದಲ್ಲಿ ಮಹಾತ್ಮರ ಆಜ್ಞೆಗನುಸಾರವಾಗಿ ಧರಸಾನಾ ದಾಳಿಯ ನೇತೃತ್ವವು ನನ್ನ ಕಡೆಗೆ ಬಂದಿತು. ಅದಕ್ಕನುಸಾರವಾಗಿ ನಾನು ೧೫ ನೆಯ ತಾ|| ದಿವಸ ದಾಳಿಯನ್ನು ಪ್ರಾರಂಭಿಸಿದೆನು. ನಿನ್ನಿನ ದಾಳಿಯಲ್ಲಿ ನಾನು ಭಾಗವನ್ನು ವಹಿಸತಕ್ಕದ್ದಲ್ಲವೆಂಬುದಾಗಿ ಯುದ್ಧ ಮಂಡಳದವರು ನಿರ್ಣಯಿಸಿದರು. ಇದು ನನ್ನ ಇಚ್ಛೆಗೆ ವಿರುದ್ಧವಾಗಿತ್ತು. ಸತ್ಯಾಗ್ರಹಿಗಳು ಸ್ತ್ರೀಯರನ್ನು ಮುಂದು ಮಾಡಿಕೊಂಡು ಬರುತ್ತಿರುವರೆಂದು ಅನ್ನಲು ಅಧಿಕಾರಿಗಳಿಗೆ ಆಸ್ಪದವು ದೊರೆಯಬಾರದೆಂದೇ ಅವರು ಹೀಗೆ ಮಾಡಿದ್ದುಂಟು. ಆದರೂ ನಾನು ರಣರಂಗಕ್ಕೆ ಬಂದೆನು. ಪೋಲೀಸರಿಂದ ಹೊಡೆಯಲ್ಪಟ್ಟು ಮೂರ್ಛಿತರಾದ ಸತ್ಯಾಗ್ರಹಿಗಳನ್ನು ಡೋಲಿಗಳಲ್ಲಿ ಒಯ್ಯುತ್ತಿರುವದನ್ನು ಅಲ್ಲಿ ಕಂಡೆನು. ನಾನು ಅಲ್ಲಿ ಹೋದ ಮೇಲೆಯೂ ಪೋಲೀಸ ಅಧಿಕಾರಿಗಳು ಸತ್ಯಾಗ್ರಹಿಗಳಿಗೆ ಹಿಂಸೆ ಕೊಡುವದನ್ನು ನಡೆಯಿಸಿದ್ದರೆ, ನಾನು ಯುದ್ಧ ಮಂಡಳದವರ ಆಜ್ಞೆಯನ್ನು ಮೀರಿ ಸತ್ಯಾಗ್ರಹಿಗಳೊಂದಿಗೆ ಸೇರಿ ಗಂಡಾಂತರಕ್ಕೊಳಗಾಗುತ್ತಿದ್ದೆನು. ಮತ್ತು ಸತ್ಯಾಗ್ರಹಿಗಳೊಂದಿಗೆ ಆತ್ಮವನ್ನರ್ಪಿಸಲು ಸಹ ಸಿದ್ಧಳಿದ್ದೆನು. ಉತ್ತರ ದಿಕ್ಕಿನಲ್ಲಿಯ ಸತ್ಯಾಗ್ರಹಿಗಳನ್ನು ಪೋಲೀಸರು ಹಿಂದಕ್ಕಟ್ಟುತ್ತಿರುವರೆಂಬುದು ನನಗೆ ತಿಳಿದುಬಂದಿದ್ದರಿಂದ ನಾನು ಅತ್ತಕಡೆಗೆ ಹೋಗಿ ಸತ್ಯಾಗ್ರಹಿಗಳಿಗೆ ಶಾಂತತೆಯಿಂದ ವರ್ತಿಸಲು ಹೇಳಿ ಅವರನ್ನು ಹುರುದುಂಬಿಸುತ್ತಿದ್ದೆನು. ಅಷ್ಟರಲ್ಲಿಯೇ ನಾನು ಸೆರೆ ಹಿಡಿಯಲ್ಪಟ್ಟೆನು.

### ಗುಜರಾಥವು ಇನ್ನೂ ನಿರ್ಜೀವವಾಗಿಲ್ಲ

ತಾ|| ಮ್ಯಾಜಿಸ್ಟ್ರೇಟರು ಪೋಲೀಸ ಸುಪರಿಂಟೆಂಡೆಂಟ ಹಾಗು ಲಷ್ಕರಿ ಅಧಿಕಾರಿಗಳೊಂದಿಗೆ ತಾ|| ೧೪ ನೆಯ ದಿವಸ ಮತ್ತೆ ಉಂಟಾಡಿಯ ಸತ್ಯಾಗ್ರಹಿಗಳ ಬಿಡಾರಕ್ಕೆ ಹೋಗಿ ಅದನ್ನು ತೆರವು ಮಾಡಲು ಕೇಳಿಕೊಂಡರು. ಹೊಸದಾಗಿ ಆರಿಸಲ್ಪಟ್ಟ ಯುದ್ಧ ಮಂಡಳದ ಸಭಾಸದರಾದ ಶ್ರೀ ಅಂಬಾಲಾಲ ಪಟೇಲರು "ನಾವು ಜೀವದಿಂದ ಇರುವ ವರೆಗೆ ಈ ಬಿಡಾರವನ್ನು ಬಿಡತಕ್ಕವರಲ್ಲವೆಂಬುದಾಗಿ ಉತ್ತರಕೊಟ್ಟರು. ಬಳಿಕ ಅಧಿಕಾರಿಗಳು ಹೊರಟು ಹೋದರು. ಈಗ ಉಂಟಾಡಿ ಬಿಡಾರದಲ್ಲಿ ಗಾಯಪಟ್ಟ ೩ ಸ್ವಯಂಸೇವಕರಿರುತ್ತಾರೆ. ಶ್ರೀ ಅಂಬಾಲಾಲ ಪಟೇಲರು ವೃತ್ತಪತ್ರದ ಪ್ರತಿನಿಧಿಯ ಮುಂದೆ ಹೀಗೆ ಹೇಳಿದ್ದಾರೆ "ಗುಜರಾಥ ಪ್ರಾಂತದಲ್ಲಿ ಜೀವವಿರುವವರೆಗೂ, ನಮ್ಮಲ್ಲಿ ಪುರುಷತ್ವವಿರುವವರೆಗೂ ಸತ್ಯಾಗ್ರಹವನ್ನು ನಾವು ಹೀಗೆಯೇ ಸಾಗಿಸುವೆವು. ಮುಂದಾಳುಗಳನ್ನು ಸೆರೆಹಿಡಿದೊಯ್ಯಲಿ ಇಲ್ಲವೆ ಬಡಿಗೆಗಳಿಂದ ಬೇಕಾದಷ್ಟು ಹೊಡೆಯಲಿ, ನಾವು ಸತ್ಯಾಗ್ರಹ ಸೈನಿಕರು ಎಂದೂ ಹಿಂದೆ ಸರಿಯಲಾರೆವು."

## ಶಿರೋಡೆಯ

# ಉಪ್ಪಿನ ಸತ್ಯಾಗ್ರಹ ಸಂಗ್ರಾಮ

ಕರ್ನಾಟಕಕ್ಕೆ ಅಂಕೋಲೆಯು ರಣಕ್ಷೇತ್ರವಾಗಿರುವಂತೆ ಮಹಾರಾಷ್ಟ್ರಕ್ಕೆ ಶಿರೋಡೆಯು ರಣಕ್ಷೇತ್ರವಾಗಿತ್ತು. ಅಲ್ಲಿ ಸತ್ಯಾಗ್ರಹಿಗಳು ಹಳ್ಳಿಹಳ್ಳಿಗಳಿಂದ ಹೋಗಿ ೧೩ ನೆಯ ತಾ|| ಗೆ ಸತ್ಯಾಗ್ರಹ ಸಂಗ್ರಾಮವನ್ನು ಪ್ರಾರಂಭಿಸಿದರು. ೮೦೦ ಜನ ಸ್ವಯಂಸೇವಕರು ೫೫ ಜನರ ಗುಂಪುಗಳನ್ನು ಮಾಡಿಕೊಂಡು ಉಪ್ಪಿನ ಆಗರದ ಕಡೆಗೆ ಸಾಗಿದರು. ಕಲೆಕ್ಟರರೂ, ಪೋಲೀಸ ಸುಪರಿಂಟೆಂಡೆಂಟರೂ ೧೦೦ ಜನ ಪೋಲೀಸರೊಂದಿಗೆ ಅಲ್ಲಿ ಹಾಜರಿದ್ದರು. ಪೋಲೀಸರು ಸತ್ಯಾಗ್ರಹಿಗಳ ಮೊದಲನೆಯ ಗುಂಪನ್ನು ಒಳಗೆ ಬಿಡಲಿಲ್ಲ. ಅಷ್ಟರಲ್ಲಿ ಮತ್ತೊಂದು ತಂಡವು ಉಪ್ಪಿನ ರಾಶಿಯ ಕಡೆಗೆ ಸಾಗಿತು. ಪೋಲೀಸರು ಅತ್ತ ಓಡಿದರು. ಮೊದಲಿನ ತಂಡದವರು ಆಗರದೊಳಗೆ ಹೊಕ್ಕು ಒಂದೊಂದು ಉಪ್ಪನ್ನು ಎತ್ತಿದರು. ಇದನ್ನು ನೋಡಿ ಪೋಲೀಸರು ಓಡಿಬಂದರು ಕೂಡಲೆ ಎರಡನೆಯ ತಂಡದವರು ಉಪ್ಪನ್ನು ತೆಗೆದರು. ಹೀಗೆ ನಡೆದದ್ದರಿಂದ ಪೋಲೀಸರು ಸೋಲಬೇಕಾಯಿತು. ಮತ್ತು ಸೆರೆ ಹಿಡಿಯಬೇಕೆಂದು ಹೇಳಬೇಕಾಯಿತು. ಎಲ್ಲರೂ ಸೆರೆಯಾಳಾದರು. ೫೫ ಜನರನ್ನು ಹಿಡಿದು ಉಳಿದವರನ್ನು ಬಿಟ್ಟುಬಿಟ್ಟರು. ಸೆರೆಯಾಳಾದ ಸ್ವಯಂಸೇವಕರಿಗೆ ಅಧಿಕಾರಿಗಳಿಂದ ಊಟವನ್ನು ಪೂರೈಸಲಾಗಲಿಲ್ಲ. ಆದದರಿಂದ ಅವರಿಗೆಲ್ಲರಿಗೂ ಐದೈದು ಆಣೆಗಳನ್ನು ಕೊಟ್ಟು ಸತ್ಯಾಗ್ರಹ ಶಿಬಿರದಲ್ಲಿ ಊಟ ಮಾಡಲು ಕಳಿಸಿದರು. ಸತ್ಯಾಗ್ರಹಿಗಳು ಶಿಬಿರಕ್ಕೆ ಹೋಗಿ ಊಟ ತೀರಿಸಿಕೊಂಡು ಬಂದರು. ಪೋಲೀಸರಿಗೂ ಊಟದ ವ್ಯವಸ್ಥೆ ಇದ್ದಿದ್ದಿಲ್ಲ. ಅಲ್ಲಿ ಅವರಿಗೆ ಒಂದು ಹನಿ ನೀರು ಸಹ ಸಿಗುವಂತಿದ್ದಿಲ್ಲ. ಅವರು ಕಷ್ಟ ಪಡುವದನ್ನು ನೋಡಲಾರದೆ ಸ್ವಯಂಸೇವಕರು ಅವರಿಗೆ ಸತ್ಯಾಗ್ರಹ ಶಿಬಿರದಲ್ಲಿ ಊಟಕ್ಕೆ ಹಾಕಿಸಿದರು. ೧೪ ನೆಯ ತಾ|| ದಿವಸ ಮತ್ತೆ ಸತ್ಯಾಗ್ರಹಕ್ಕೆ ಪ್ರಾರಂಭವಾಯಿತು. ಅಧಿಕಾರಿಗಳು ಹುಲಿಯುಗುರುಗಳನ್ನು ತೆಗೆದುಕೊಂಡು ಕುಳಿತಿದ್ದರು. ಸತ್ಯಾಗ್ರಹಿಗಳ ಧೈರ್ಯವನ್ನು ಹರಿದುಕೊಳ್ಳಲು ಪ್ರಾರಂಭಮಾಡಿದರು. ಉಪ್ಪು ತಂದವರನ್ನು ಲಾಠಿಯಿಂದ ಹೊಡೆದರು; ಚಚ್ಚಿದರು; ಗುದ್ದಿದರು. ಸ್ವಯಂಸೇವಕರ ಬೆನ್ನ ಮೇಲೆ ಬಾಸುಳುಗಳೆದ್ದವು. ಇದಕ್ಕೆಲ್ಲ ಸತ್ಯಾಗ್ರಹಿಗಳು ಹೆದರದೆ ೫೦೦ ಮಣ ಉಪ್ಪನ್ನು ತಂದರು. ಅಂತು ೨ ದಿನಗಳಲ್ಲಿ ೫೪೪ ಜನರನ್ನು ಸೆರೆಹಿಡಿದರು. ಅವರನ್ನು ಎರಡನೆ ಕಡೆಗೆ ಸಾಗಿಸುವದು ಅಧಿಕಾರಿಗಳಿಗೆ ಅಸಾಧ್ಯವಾಯಿತು. ಯಾಕಂದರೆ ಮೋಟಾರಿನವರು ಬರಲು ಒಲ್ಲೆಂದರು. ಸತ್ಯಾಗ್ರಹಿಗಳು ಕಾಲುನಡಿಗೆಯಿಂದ ನಡೆದು ಹೋಗಲು ಒಪ್ಪಲಿಲ್ಲ. ಆದುದರಿಂದ ಒಂದು ದಿನ ತಡೆದು ಕೊಲ್ಲಾಪುರದಿಂದ ಮೋಟಾರುಗಳನ್ನು ತರಿಸಿಕೊಂಡು ಸತ್ಯಾಗ್ರಹಿಗಳನ್ನು ಬೆಳಗಾವಿಗೆ ಒಯ್ದರು.

ತಾ|| ೧೫ ನೆಯ ದಿನ ಮತ್ತೆ ಸತ್ಯಾಗ್ರಹಕ್ಕೆ ಪ್ರಾರಂಭವಾಯಿತು. ೬೫ ಜನ ಸ್ವಯಂಸೇವಕರು ಉಪ್ಪಿನ ಆಗರದ ಕಡೆಗೆ ಸಾಗಿದರು. ಪೋಲೀಸರು ಸತ್ಯಾಗ್ರಹಿಗಳನ್ನು ಹೊಡೆಯಲು ಪ್ರಾರಂಭಿಸಿದರು. ಸತ್ಯಾಗ್ರಹಿಗಳು ಹೊಡತಗಳನ್ನು ತಿನ್ನುತ್ತ ಆಗರದೊಳಗೆ ಹೊಕ್ಕು ಉಪ್ಪನ್ನು ತಂದರು. ೭೫ ಜನರಿಗೆ ಗಾಯಗಳಾಗಿವೆ

ಇಂತಹ ಪರಿಸ್ಥಿತಿಯಲ್ಲಿ ಸತ್ಯಾಗ್ರಹಿಗಳು ಶಾಂತತೆಯಿಂದ ಇರುವದು ಅಸಂಭವನೀಯವಾಗಿದೆಯೆಂದು ತಿಳಿದುಕೊಂಡು ಯುದ್ಧಮಂಡಳದವರು ೧೬ ನೆಯ ತಾರೀಖಿನ ದಿವಸ ಸತ್ಯಾಗ್ರಹವನ್ನು ನಿಲ್ಲಿಸಿದರು.

## "ಯಂಗ ಇಂಡಿಯಾ" ಪತ್ರಿಕೆಗೆ ಎಚ್ಚರಿಕೆ ಕೊಟ್ಟರು

ಪೇಶಾವರದಲ್ಲಾದ ದಂಗೆಯ ಸಂಬಂಧವಾಗಿ ಮೌಲಾನಾ ಕಸೂರಿಯವರು ಕಳುಹಿದ ಪತ್ರಕವನ್ನು ಪ್ರಸಿದ್ಧಿಸಿದುದಕ್ಕಾಗಿ 'ಯಂಗ ಇಂಡಿಯಾ' ಪತ್ರದ ಮುದ್ರಕರಾದ ಶ್ರೀ ಮೋಹನಲಾಲ ಭಟ್ಟರಿಗೆ "ಇನ್ನು ಮುಂದೆ ಇಂತಹ ಸುದ್ದಿಗಳನ್ನು ಪ್ರಸಿದ್ಧಿಸಬಾರದಾಗಿ ಉತ್ತರ ಭಾಗದ ಕಮಿಶನರರು ಎಚ್ಚರಿಕೆಯನ್ನು ಕೊಟ್ಟಿದ್ದಾರೆ "ಮೌಲಾನಾ ಕಸೂರಿಯವರು ವಿಶ್ವಾಸಾರ್ಹ ಗೃಹಸ್ಥರಿರುವದರಿಂದ ಅವರನ್ನು ನಂಬದಿರಲು ಆಗುವದಿಲ್ಲ"ವೆಂದು ಶ್ರೀ. ಮೋಹನಲಾಲರು ಉತ್ತರಕೊಟ್ಟರು.

## ಸೊಲ್ಲಾಪುರದಲ್ಲಿ ರಾಷ್ಟ್ರಧ್ವಜದ ಮೆರವಣಿಗೆ

ಸೊಲ್ಲಾಪುರದ ರಾ. ಬ ಸಾಠೆ ಮತ್ತು ಪುಣೆಯ ಕೆಲವು ಸದ್ಗೃಹಸ್ಥರು; ಸೊಲ್ಲಾಪುರದಲ್ಲಿ ಗಾಂಧಿ ಟೊಪ್ಪಿಗೆಗಳನ್ನು ಹಾಕಿಕೊಂಡು ರಾಷ್ಟ್ರಧ್ವಜವನ್ನು ಮೆರೆಯಿಸುತ್ತ ಹೋಗುವವರಿದ್ದು, ಹೀಗೆ ಬರುವವರಿದ್ದೇವೆಂಬುದಾಗಿ ರಾ. ಬ. ಸಾಠೆಯವರು ಮುಂದಾಗಿಯೆ ಲಷ್ಕರಿ ಅಧಿಕಾರಿಗಳಿಗೆ ತಿಳಿಸಿದ್ದಾರೆ-

## ಕಾಯಿದೆ ಮಂಡಳಗಳಿಗಾಗಿ ರಾಜೀನಾಮೆ

"ಇಂಡಿಯನ್ ಮರ್ಚಂಟ ಚೇಂಬರ"ದ ಪರವಾಗಿ ಮುಂಬಯಿಯ ಕಾಯಿದೆ ಮಂಡಳಕ್ಕೂ, ವರಿಷ್ಠ ಕಾಯಿದೆ ಮಂಡಳಕ್ಕೂ ಆರಿಸಿ ಹೋದ ಶ್ರೀ. ಲಾಲಜಿ ನಾರಾಯಣಜಿ ಮತ್ತು ಸರ ಪುರುಷೋತ್ತಮದಾಸರು ತಮ್ಮ ಸದಸ್ಯತ್ವಕ್ಕೆ ಕರಣು ಹೊಡೆದಿದ್ದಾರೆ.

# ವಡಾಲಾ ವಖಾರದ ಮೇಲೆ ದಾಳಿ.

## ವಡಾಲೆಯಲ್ಲಿ ಗೋಳೀಬಾರು

### ೪೦ ಜನರಿಗೆ ಗಾಯ ೧೨೫ ಜನರಿಗೆ ಕೈಸೆರೆ.

ತಂತಿಯ ವಾರ್ತೆ.

ತಾ|| ೨೫ ನೆಯ ದಿವಸ ಮುಂಬಯಿಯ ಸ್ವಯಂಸೇವಕರು ವಡಾಲಾ ವಖಾರದ ಮೇಲೆ ಸಾಮುದಾಯಿಕವಾಗಿ ದಾಳಿಯನ್ನು ಮಾಡಲು ಹೊರಟರು. ೧೨೫ ಜನರು ಸೆರೆಹಿಡಿಯಲ್ಪಟ್ಟಿದ್ದಾರೆ. ಕಲ್ಲುಗಳನ್ನು ಒಗೆದದರಿಂದ ಕಾರಣಕ್ಕಾಗಿ ಸಾರ್ಜಂಟರು ಗೋಳೀಬಾರ ಮಾಡಿದರು. ೪೦ ಜನರಿಗೆ ಗಾಯಗಳಾಗಿವೆ. ೭ ಜನರು ಅತ್ಯಂತ ಕಠಿಣ ಸ್ಥಿತಿಯಲ್ಲಿದ್ದಾರೆ.

ತಾ|| ೨೫ ನೆಯ ದಿವಸ ಅಹಮ್ಮದಾಬಾದದಿಂದ ಧರಸಾಣಕ್ಕೆ ಹೊರಟ ೭೪ ಜನ ಸ್ವಯಂಸೇವಕರು ಅಹಮ್ಮದಾಬಾದದಿಂದ ೧೧ ಮೈಲುಗಳ ಅಂತರದಲ್ಲಿರುವ ಒಂದು ಸ್ಟೇಶನ್ನಿನ ಮೇಲೆ ಸೆರೆಹಿಡಿಯಲ್ಪಟ್ಟಿದ್ದಾರೆ.

ಲಖನೌದಲ್ಲಿ ಎಷ್ಟೋ ಜನ ಮುಖಂಡರನ್ನು ಸೆರೆಹಿಡಿದಿದ್ದಾರೆ.

### ಮದ್ರಾಸ ಇಲಾಖೆಯ

## ಉಪ್ಪಿನ ವಖಾರದ ಮೇಲೆ ದಾಳಿ

ಮದ್ರಾಸ ಇಲಾಖೆಯ ಗಂಜಾಂ ಜಿಲ್ಲೆಯಲ್ಲಿ ನಾರದದಲ್ಲಿ ಉಪ್ಪಿನ ವಖಾರವಿದೆ. ಈ ವಖಾರದ ಮೇಲೆ ದಾಳಿಯನ್ನು ಮಾಡುವದಕ್ಕಾಗಿ ೪ ಜನ ಸತ್ಯಾಗ್ರಹಿಗಳು ಗಂಜಾಂದಿಂದ ಹೋಗಿದ್ದರು. ಅವರೆಲ್ಲರೂ ಅಧಿಕಾರಿಗಳಿಂದ ಸೆರೆಹಿಡಿಯಲ್ಪಟ್ಟರು. ಮತ್ತು ೬ ತಿಂಗಳ ಸಕ್ತ ಶಿಕ್ಷೆಗೆ ಗುರಿಯಾದರು. ಬಳಿಕ ೮ ಜನರದೊಂದು ಮತ್ತೊಂದು ತಂಡವು ಹೊರಟಿತು. ಈ ತಂಡದಲ್ಲಿ ಕಮಲಾದೇವಿ ಎಂಬ ಸ್ವಯಂಸೇವಿಕೆಯರೂ ಇದ್ದರು. ಅವರೆಲ್ಲ 'ನಡು ಹಾದಿಯಲ್ಲಿಯೇ ಸೆರೆಹಿಡಿದು, ಶ್ರೀಮತಿ ಕಮಲಾದೇವಿಯವರಿಗೆ ೬ ತಿಂಗಳ ಸಾದಾ ಶಿಕ್ಷೆಯನ್ನೂ, ಉಳಿದವರಿಗೆ ೧ ವರ್ಷ ಸಾದಾ ಶಿಕ್ಷೆಯನ್ನು ಅಧಿಕಾರಿಗಳು ವಿಧಿಸಿದ್ದಾರೆ.

## ಬಾಗಲಕೋಟೆಯಲ್ಲಿಯೇ ಸತ್ಯಾಗ್ರಹ

### ನಗರ ಸಭೆಯ ಮೇಲೆ ರಾಷ್ಟ್ರಧ್ವಜ

ಬನಾರಸ ಮ್ಯುನಸಿಪಾಲಿಟಿಯು ಸಭೆಯಲ್ಲಿ ನಗರಸಭೆಯ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ಹಚ್ಚತಕ್ಕದ್ದೆಂಬ ನಿರ್ಣಯವು ಎರಡು ವರ್ಷಗಳ ಹಿಂದೆಯೇ ತೀರ್ಮಾನಿಸಲ್ಪಟ್ಟಿತ್ತು. ಆದರೆ ಆ ತೀರ್ಮಾನದಂತೆ ಇನ್ನೂ ರಾಷ್ಟ್ರಧ್ವಜವನ್ನು ಹಚ್ಚುವದರಲ್ಲಿ ಬಂದಿದ್ದಿಲ್ಲ. ಜನರು ಒತ್ತಾಯ ಪಡಿಸಿದದರಿಂದ ಮ್ಯುನಸಿಪಾಲಿಟಿಯವರು ಮತ್ತೆ ಸಭೆ ಕೂಡಿಸಿಕೊಂಡು ರಾಷ್ಟ್ರಧ್ವಜವನ್ನು ಹಚ್ಚತಕ್ಕದ್ದೆಂಬ ಹಿಂದಿನ ನಿರ್ಣಯವನ್ನು ಕೃತಿಯಲ್ಲಿ ತರಬೇಕೆಂದು ಗೊತ್ತುಪಡಿಸಿಕೊಂಡರು. ಮತ್ತು ೨೩ ನೆಯ ತಾ| ದಿವಸ ರಾಷ್ಟ್ರಧ್ವಜವನ್ನೇರಿಸುವ ಸಮಾರಂಭವನ್ನು ವಿಜೃಂಭಣೆಯಿಂದ ಜರುಗಿಸಿದರು. ಬಾಗಲಕೋಟೆಯ ನಗರ ಸಭೆಯ ಸಭಾಸದರು ಇನ್ನಾದರೂ ಎಚ್ಚತ್ತು ತಾವಾಗಿಯೇ ನಗರ ಸಭೆಯ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ನಿಲ್ಲಿಸಬೇಕು; ಇಲ್ಲದಿದ್ದರೆ ಬಾಗಲಕೋಟೆಯ ತರುಣರೂ, ಮತದಾರ [illegible]ದವರೂ ಅದಕ್ಕಾಗಿ ಸತ್ಯಾಗ್ರಹವನ್ನು ಹೂಡಿ ರಾಷ್ಟ್ರಧ್ವಜವನ್ನು ನಗರ ಸಭೆಯ ಕಟ್ಟಡದ ಮೇಲೆ ನಿಲ್ಲಿಸುವಂತೆ ಸಭಾಸದರನ್ನು ಒತ್ತಾಯಪಡಿಸಬೇಕು.

## ಆಂಧ್ರದೇಶದಲ್ಲಿಯ ಸತ್ಯಾಗ್ರಹ ಚಳವಳಿ

### ಬ್ರಿಟಿಶ್ ಸ್ತ್ರೀಯರೂ ಸತ್ಯಾಗ್ರಹದಲ್ಲಿ ಸೇರಿದರು.

ಈ ಪ್ರಾಂತದಲ್ಲಿ ಸತ್ಯಾಗ್ರಹ ಚಳವಳಿಯು ಮೊದಲಿಗಿಂತಲೂ ಈಗ ಭರದಿಂದ ಸಾಗಿದೆ. ಉಪ್ಪಿನ ಕಾಯಿದೆ ಭಂಗ, ಶಿಂದೀ ಗಿಡಗಳ ನಾಶ, ಕಾಯಿದೆಗೆ ವಿರುದ್ಧವಾದ ಸಂಘ, ಇವೇ ಮೊದಲಾದ ಆರೋಪಗಳನ್ನಿಟ್ಟು ಅಧಿಕಾರಿಗಳು ಪ್ರಾಂತದಲ್ಲೆಲ್ಲ ಎಷ್ಟೋ ಜನರನ್ನು ಸೆರೆಹಿಡಿದಿದ್ದಾರೆ. ಮದ್ರಾಸದಲ್ಲಿ ಸ್ತ್ರೀಯರೂ ಈ ಚಳವಳಿಯಲ್ಲಿ ವಿಶೇಷವಾದ ಭಾಗವನ್ನು ತೆಗೆದುಕೊಂಡು ಮುಂದೆ ಬಂದಿದ್ದಾರೆ. ಪ್ರತಿದಿವಸವೂ ಸಭೆಗಳು ನೆರೆದು ಕಾಯಿದೆ ಭಂಗವು ಮಾಡಲ್ಪಡುತ್ತದೆ. ಆ್ಯನಿಬೆಸೆಂಟಮ್ಮನವರ ಥಿಯಾಸಫಿ ಸಂಘದ ಸದಸ್ಯರಾದ ಕಜಿನ್ಸ ಮತ್ತು ವುಡ್ ಎಂಬ ಬ್ರಿಟಿಶ ಮಹಿಳೆಯರು ಈ ಚಳವಳಿಯಲ್ಲಿ ಪ್ರಾಮುಖ್ಯವಾದ ಭಾಗವನ್ನು ವಹಿಸಿದ್ದಾರೆ.

## ಮಗನನ್ನು ಕಾಣಲು ಅಪ್ಪಣೆಯು ಸಿಗಲಿಲ್ಲ

ಧರಸಾಣಾದಲ್ಲಿ ಸೆರೆಹಿಡಿಯಲ್ಪಟ್ಟು ೧ ವರ್ಷದ ಶಿಕ್ಷೆಗೆ ಪಾತ್ರರಾದ ಶ್ರೀ ಮಣಿಲಾಲ ಗಾಂಧಿಯವರನ್ನು ಜೇಲಿನಲ್ಲಿ ಕಾಣಲು ಅವರ ತಾಯಿಯಾದ ಶ್ರೀಮತಿ ಕಸ್ತೂರಿಬಾಯಿಯವರಿಗೆ ಅಧಿಕಾರಿಗಳು ಅಪ್ಪಣೆಯನ್ನು ಕೊಡಲಿಲ್ಲವಂತೆ !

## ಸೊಲ್ಲಾಪುರಕ್ಕೆ ಸತ್ಯಾಗ್ರಹಿಗಳು ಹೊರಟರು

ಸೊಲ್ಲಾಪುರದಲ್ಲಿ ಲಷ್ಕರಿ ಕಾಯಿದೆಯನ್ನು ಮುರಿಯುವ ಉದ್ದೇಶ್ಯವಾಗಿ ತಾ|| ೨೩ ನೆಯ ದಿವಸ ಪುಣೆಯಿಂದ ಶ್ರೀ ಸಾತೆಯವರ ನೇತೃತ್ವದಲ್ಲಿ ಒಂದು ಸತ್ಯಾಗ್ರಹ ತಂಡವು ಹೊರಟಿತು. ಪುಣೆಯ ನಾಗರಿಕರು ಅವರಿಗೆ ಸನ್ಮಾನವನ್ನು ಮಾಡಿ "ಸತ್ಯಾಗ್ರಹದಲ್ಲಿ ವಿಜಯಿಗಳಾಗಿ ಬನ್ನಿರಿ" ಎಂದು ಆಶೀರ್ವದಿಸಿ ಕಳಿಸಿದ್ದಾರೆ.

## ಸೊಲ್ಲಾಪುರದಲ್ಲಿ ಸೆರೆ ಹಿಡಿದರು

ಪಂಢರಪುರದ ವಕೀಲರಾದ ಶ್ರೀ ಫಣಸಳಕರ ಮತ್ತು ಜೋಶಿಯವರು ಸೊಲ್ಲಾಪುರದಲ್ಲಿ ಸೆರೆಹಿಡಿಯಲ್ಪಟ್ಟಿದ್ದು ಅವರ ಖಟ್ಲೆಯ ವಿಚಾರಣೆಯು ಸುರುವಾಗಿದೆ.

## ಪಾರ್ಸಿ ಜನರು ಸತ್ಯಾಗ್ರಹದಲ್ಲಿ ಸೇರಿದರು.

ಮುಂಬಯಿಯ ೭೫ ಜನ ಪಾರ್ಸಿ ತರುಣರು ಸತ್ಯಾಗ್ರಹಿಗಳಾಗಿ ಕಾಯದೇಭಂಗದ ಚಳವಳಿಯಲ್ಲಿ ಸೇರಿದ್ದಾರೆ. ಇವರಲ್ಲಿ ಪೃಥ್ವಿಯ ಪ್ರದಕ್ಷಿಣೆಯನ್ನು ಮಾಡಿ ಪ್ರಖ್ಯಾತಿಯನ್ನು ಹೊಂದಿದ ಹುಟ್ಟಿನ ತರುಣರಾದ ಘೂಮಗೇರಾ ಮತ್ತು ಕಾಲ್ನಡಿಗೆಯಿಂದ ಅಫಗಾಣಿಸ್ತಾನಕ್ಕೆ ಪ್ರವಾಸ ಮಾಡಿದ ಭಿ. ಎಫ್. ಮದನ ಇವರೇ ಪ್ರಮುಖರಾಗಿದ್ದಾರೆ. ಈ ಎಲ್ಲ ತರುಣರೂ ತಮ್ಮದೊಂದು ಬೇರೆ ತಂಡವನ್ನು ಮಾಡಿಕೊಂಡು, ಸತ್ಯಾಗ್ರಹ ಮಂಡಳದವರು ನಿಯಮಿಸಿ ಕೊಟ್ಟ ದಿವಸದಲ್ಲಿ ವಡಾಲಾ ಮಿಠಾಗರದ ಮೇಲೆ ದಾಳಿಯನ್ನು ಮಾಡತಕ್ಕವರಿದ್ದಾರೆ.

## ಸತ್ಯಾಗ್ರಹಿಗಳು ಗೆದ್ದರು

ವಡಾಲಾ ಮಿಠಾಗರ ದಾಳಿಯನ್ನು ಮಾಡುವಾಗ ಸೆರೆಹಿಡಿಯಲ್ಪಟ್ಟ ೨೨೫ ಜನ ಸತ್ಯಾಗ್ರಹಿಗಳನ್ನು ವರ್ಲಿ ಜೇಲದಲ್ಲಿ ಇಟ್ಟಿದ್ದು, ಅವರೆಲ್ಲರೂ ಸರಿಯಾಗಿ ಆಹಾರವು ಸಿಗದ್ದಕ್ಕಾಗಿ ಅನ್ನತ್ಯಾಗ ವ್ರತವನ್ನು ಕೈಕೊಂಡಿದ್ದರಷ್ಟೆ. ಆದರೆ ಅವರಿಗೆ ಅಧಿಕಾರಿಗಳು ಈಗ ಬೇಳೆ ಮತ್ತು ಅನ್ನವನ್ನು ಕೊಡಹತ್ತಿದ್ದುದರಿಂದ ಅವರು ಆಹಾರವನ್ನು ಸ್ವೀಕರಿಸ ಹತ್ತಿದ್ದಾರೆ, ಅಂತೂ ಸತ್ಯಾಗ್ರಹಿಗಳು ಗೆದ್ದಂತಾಯಿತು.

## ಸ್ಟೇಟ ಸೆಕ್ರೆಟರಿಯವರ ಸಂಬಳಕ್ಕೆ ಕತ್ತರಿ

ಹಿಂದುಸ್ಥಾನದಲ್ಲಿಯ ರಾಜಕೀಯ ಸರಕಾರಗಳೊಡನೆ ಸರಕಾರದವರು ನಡಿಸಿದ ವರ್ತನೆಯ ವಿಷಯದ ಕಡೆಗೆ ಸ್ಟೇಟ ಸೆಕ್ರೆಟರಿಯವರಾದ ಮಿ|| ವೆಜವುಡ್ ಬೆನ್ನರವರ ಲಕ್ಷ್ಯವನ್ನು ಎಳೆಯುವ ಉದ್ದೇಶ್ಯವಾಗಿ ಪಾರ್ಲಿಮೆಂಟಿನ ಪ್ರತಿನಿಧಿಗಳಾದ ಮಿ|| ಫೆನರ ಬ್ರಾಕ್‌ವೇ, ಜ, ಬೆಕೆಟ ಜೆ. ಮ್ಯಾಕ್ಸಟನ್, ಜ, ಒಬ್ರಾಯನ್ ಇವರು ಮಿ|| ಬೆನ್ನರ ಸಂಬಳವನ್ನು ಕಡಿಮೆ ಮಾಡಬೇಕೆಂಬ ಸೂಚನೆಯನ್ನು ಪಾರ್ಲಿಮೆಂಟನಲ್ಲಿ ತರತಕ್ಕವರಿದ್ದಾರೆ.

## ಸ್ತ್ರೀಯಳ ರಾಜೀನಾಮೆ.

ಸರಕಾರದವರು ಪ್ರಾರಂಭಿಸಿದ ದಬ್ಬಾಳಿಕೆಯ ನಿಷೇಧಾರ್ಥವಾಗಿ, ಅಹಮ್ಮದಾಬಾದ ನಗರ ಸಭೆ ಜೇಲ ಕಮೀಟಿಗೂ ಸರಕಾರದ ಪರವಾಗಿ ಸಭಾಸದರೆಂದು ನಿಯಮಿಸಲ್ಪಟ್ಟ ಶ್ರೀಮತಿ ವಿದ್ಯಾಗೌರಿ ನೀಲಕಂಠರು ಮೇಲಿನ ಎರಡೂ ಸ್ಥಳಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ.

## ರಾಜಕೀಯ ಚಳವಳಿಗಾಗಿ ಹದ್ದುಪಾರು

“ರಾಜಕೀಯ ಚಳವಳಿಯಲ್ಲಿ ಭಾಗವನ್ನು ತೆಗೆದುಕೊಳ್ಳುವದನ್ನು ನೀವು ನಿಲ್ಲಿಸದಿದ್ದರೆ ನಿಮ್ಮನ್ನು ಹೈದರಾಬಾದ ಸಂಸ್ಥಾನದಿಂದ ಹದ್ದುಪಾರ ಮಾಡುವದಿಲ್ಲ ಬಿಡುವದೆಂದು” ಸಿಕಂದರಾಬಾದದ ಡಿ|| ಮ್ಯಾಜಿಸ್ಟ್ರೇಟರು, ಶ್ರೀಯುತರಾದ ಸಿ. ಎಸ್. ನಾಯುಡು ಮತ್ತು ಎಂ. ರಾಮಚಂದ್ರರಾವ ಇವರಿಗೆ ತಿಳಿಸಿದ್ದಾರೆ.

## ಮ್ಯುನಸಿಪಾಲಿಟಿಯ ಅಧ್ಯಕ್ಷರಿಗೆ ಶಿಕ್ಷೆ

ಮದ್ರಾಸ ಇಲಾಖೆಯ ಬರಹಮಪುರದ ನಗರ ಸಭೆಯ ಅಧ್ಯಕ್ಷರು. ಉಪ್ಪಿನ ಕಾಯದೆಭಂಗಕ್ಕಾಗಿ ೧೧೧, ೧೪೩ ಮತ್ತು ೭೪ ಕಲಮುಗಳನ್ವಯ ಬಂಧಿತರಾಗಿ, ೬ ತಿಂಗಳ ಸಾದಾ ಶಿಕ್ಷೆಗೆ ಪಾತ್ರರಾಗಿದ್ದಾರೆ.

## ಡಾಕ್ಟರರು ರಾಜೀನಾಮೆ ಕೊಟ್ಟರು

ಮಹಾತ್ಮಾ ಗಾಂಧಿಯವರನ್ನು ಸೆರೆಹಿಡಿದುದರ ನಿಷೇಧಾರ್ಥವಾಗಿ ಗೋದ್ರಾದಲ್ಲಿಯ ಸರಕಾರಿ ದವಾಖಾನೆಯಲ್ಲಿಯ ಹೆಡ್ ಅಸಿಸ್ಟಂಟ ಸರ್ಜನರಾದ ಡಾ|| ಜಂದುಲಾಲರು ತಮ್ಮ ಸರಕಾರಿ ಉದ್ಯೋಗಕ್ಕೆ ಶರಣು ಹೊಡೆದಿದ್ದಾರೆ.

## ಉಂಟಾಡಿಗೆ ವಿಮಾನುಗಳು ಬಂದವು

ಉಂಟಾಡಿಯಲ್ಲಿದ್ದ ಧರಸಾನಾ ದಾಳಿಯ ಸತ್ಯಾಗ್ರಹಿಗಳ ಬಿಡಾರವನ್ನು ತಾ|| ೨೨ನೆಯ ದಿವಸ ಅಧಿಕಾರಿಗಳು ಜಪ್ತ ಮಾಡಿ ಸತ್ಯಾಗ್ರಹಿಗಳ ಪ್ರತಿಜ್ಞಾ ಪತ್ರಿಕೆಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಅಂದು ಮುಂಜಾನೆ ಬಿಡಾರದ ಮೇಲ್ಭಾಗದಲ್ಲಿ ಎರಡು ವಿಮಾನುಗಳು ಹಾರಾಡುತ್ತಿದ್ದವಂತೆ!

## ದೇಶಬಂಧೂ ಪಥಕದ ಪ್ರವಾಸಕ್ರಮವು :—

| | | | |
|---|---|---|---|
| ಬಾಗಲಕೋಟೆಯಿಂದಾ | ೨೭-೫-೩೦ | ಶಿರೂರ | ಮಧ್ಯಾಹ್ನ |
| ಶಿರೂರ | ೨೭-೫-೩೦ | ಗುಳೇದಗುಡ್ಡ | ಸಾಯಂಕಾಲ |
| ಗುಳೇದಗುಡ್ಡ | ೨೮-೫-೩೦ | ಹಂಸನೂರ | ಮಧ್ಯಾಹ್ನ |
| ಹಂಸನೂರ | ೨೮-೫-೩೦ | ಕೆಂದೂರ | ಸಾಯಂಕಾಲ |
| ಕೆಂದೂರ | ೨೯-೫-೩೦ | ಬದಾಮಿ | ಮಧ್ಯಾಹ್ನ |
| ಬದಾಮಿ | ೩೦-೫-೩೦ | ಹೊಳಟಗುಡ್ಡ | ಮಧ್ಯಾನ |
| ಬೊಳಟಗುಡ್ಡ | ೩೦-೫-೩೦ | ಜ್ಯಾಲಿಹಾಳ | ಸಾಯಂಕಾಲ |
| ಜ್ಯಾಲಿಹಾಳ | ೩೧-೫-೩೦ | ಹೆಬ್ಬಳ್ಳಿ | ಮಧ್ಯಾಹ್ನ |
| ಹೆಬ್ಬಳ್ಳಿ | ೩೧-೫-೩೦ | ಮಲ್ಲಾಪೂರ | ಸಾಯಂಕಾಲ |
| ಮಲ್ಲಾಪೂರ | ೧-೬-೩೦ | ಬೆಳವಲಕೊಪ್ಪ | ಮಧ್ಯಾಹ್ನ |
| ಬೆಳವಲಕೊಪ್ಪ | ೧-೬-೩೦ | ಗೋವನಕೊಪ್ಪ | ಸಾಯಂಕಾಲ |
| ಗೋವನಕೊಪ್ಪ | ೨-೬-೩೦ | ಮುಮುಟಗೇರಿ | ಮಧ್ಯಾಹ್ನ |
| ಮುಮುಟಗೇರಿ | ೩-೬-೩೦ | ಕೆರೂರ | ಮಧ್ಯಾಹ್ನ |
| ಕೆರೂರ | ೪-೬-೩೦ | ಕಟಗೇರಿ | ಮಧ್ಯಾಹ್ನ |
| | | ಬಾಗಲಕೋಟೆ | ಸಾಯಂಕಾಲ |

ಸತ್ಯಾಗ್ರಹ ಮಂಡಳ ಬಾಗಲಕೋಟೆ,

ಅಂಪಸ್ವಯ [illegible] ಸ್ವಲ್ಪ ಉಳಿದಿವೆ,

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಬುಧವಾರ ತಾ|| ೨೮ — ೫ — ೩೦

ಸಾಮಾಜಿಕ ಹೊಸನಾಟಕ

**ಶಿಕ್ಷಣಸಂಭ್ರಮ**

ಶುಕ್ರವಾರ ತಾ|| ೩೦—೫—೩೦

**ಚಿವತಿಚಂದ್ರ**

ಶನಿವಾರ ತಾ|| ೩೧—೫—೩೦

**ಮಾಯಾಬಾಜಾರ**

ಸೋಮವಾರ ತಾ|| ೨-೬-೩೦

(ಧರ್ಮಾರ್ಥ ಕೊಡಲ್ಪಡುವದು.)

**ಶರಣಬಸವ**

ಎಂಬ ನಾಟಕಗಳನ್ನು ಅಭಿನಯಿಸುವರು.

ಈ ನಾಟಕಗಳು ಪುನಃ ಆಡಲ್ಪಡುವದಿಲ್ಲ.

ಸಂಘದೊಡೆಯ—ಸದಾಶಿವರಾವ ಗೆರೂಡ

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ನಿತ್ಯಸಂಚಿಕೆಯು. ಕಿಂ ೮-೦-೩

यद्यत् परवशं दुःखं । यद्यदात्मवशं सुखम् ॥ -मनु.

# ಕನ್ನಡಿಗ

KANNADIGA
BAGALKOT.

BI-WEEKLY
ಅರೆವಾರ ಪತ್ರಿಕೆ

ಸಂಪಾದಕರು:- ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಗುರುವಾರ ಮಿತಿ ಜ್ಯೇಷ್ಠ ಶುದ್ಧ ೧ ಶಕ ೧೮೫೨ ತಾ ೨೯-೫-೩೦ ಸಂಚಿಕೆ ೬೦

## ಮಹಾತ್ಮರ ಪ್ರಭಾವ,

ಮಹಾತ್ಮಾಗಾಂಧಿಯವರು ಯರೆವಡೆಯ ಕಾರಾಗೃಹದಿಂದ ಮೂರು ತಾಸುಗಳ ವರೆಗೆ ಅದೃಶ್ಯರಾಗಿದ್ದ ಸುದ್ದಿಯನ್ನು ಮುಂಬಯಿ ಕ್ರಾನಿಕಲ್ ಪತ್ರಿಕೆಯ ಬರಹಗಾರರೊಬ್ಬರು ಶ್ರೀಮತಿ ಸರೋಜಿನಿಯವರಿಗೆ ಧರಸಾನಾದಲ್ಲಿ ತಿಳಿಸಿದರು. ಶ್ರೀಮತಿಯವರು ಸುದ್ದಿಯನ್ನು ಕೇಳಿ ಎಳ್ಳಷ್ಟು ಸೋಜಿಗ ಪಡದೆ ಅಂಥಹದೇ ಈ ಕೆಳಗಿನ ಸಂಗತಿಯನ್ನು ಅವರಿಗೆ ತಿಳಿಸಿದರು. ಅದಾವುದೆಂದರೆ— ' ಅಸಹಕಾರ ಯುಗದಲ್ಲಿ ಮಹಾತ್ಮರು ಸೆರೆಯಾಳಾದ ತರುವಾಯದಲ್ಲಿ ಕೆಲವು ತಿಂಗಳುಗಳ ಮೇಲೆ ಶ್ರೀಮತಿಯವರಿಗೆ ಅಲಾಹಾಬಾದಕ್ಕೆ ವ್ಯಾಖ್ಯಾನವನ್ನು ಕೊಡಲು ಹೋಗುವ ಪ್ರಸಂಗವು ಬಿತ್ತಂತೆ. ಆದುದರಿಂದ ಅವರು ಕೆಲವು ಜನರೊಂದಿಗೆ ಒಂದು ಮೋಟಾರಿನಲ್ಲಿ ಕುಳಿತು. ಹೊರಟರಂತೆ? ಹೀಗೆ ಅವಸರದಿಂದ ಹೋಗುತ್ತಿರುವಾಗ ಮೋಟಾರು ಗಾಲಿಯು ಒಮ್ಮಿಂದೊಮ್ಮೆ ಕೆಸರಿನಲ್ಲಿ ಸಿಕ್ಕಿಕೊಂಡಿತಂತೆ! ಎಷ್ಟು ಪ್ರಯತ್ನ ಪಟ್ಟರೂ ಅದು ಕೆಸರಿನಿಂದ ಹೊರಗೆ ಬರಲಿಲ್ಲವಂತೆ! ಈ ಸಮಯದಲ್ಲಿ ಆ ಹಾದಿಯಲ್ಲಿ ಕೆಲವು ಸಾಧುಗಳು ಹಾಯ್ದು ಹೋಗುತ್ತಿದ್ದನಂತೆ! ಅವರು ಇದನ್ನು ಕಂಡು " ಮಹಾತ್ಮಾಗಾಂಧೀಕಿ ಜಯ " ಎಂದು ಕೂಗಿ ಮೋಟಾರವನ್ನು ನೂಗಿರಿ " ಎಂದ. ಹೇಳಿದರಂತೆ! ಅದರಂತೆಯೆ ಅವರು ಹಾಗೆ ಕೂಗಿ ನೂಗಿದ ಕೂಡಲೆ ಮೋಟಾರು ಮೇಲಕ್ಕೆ ಬಂದಿತಂತೆ! ಇದೆಲ್ಲವು ಮಹಾತ್ಮಾಗಾಂಧಿಯವರ ಪ್ರಭಾವವೇ ಸರಿ!

### ಮುಂಬಯಿಗೆ

## ಬಾಗಲಕೋಟೆಯ ಸತ್ಯಾಗ್ರಹಿಯ ಪ್ರಯಾಣ

ಬಾಗಲಕೋಟೆಯ ವೀರ ಸತ್ಯಾಗ್ರಹಿಗಳಾದ ಶ್ರೀಯುತ ನರಗುಂದ ಶ್ರೀನಿವಾಸರಾಯರು, ಮಾತುಂಗಾ ಸತ್ಯಾಗ್ರಹ ಶಿಬಿರದ ನಾಯಕತ್ವವನ್ನು ವಹಿಸಿಕೊಳ್ಳಲು ಹುಬ್ಬಳ್ಳಿಯಿಂದ ಮುಂಬಯಿಗೆ ಹೋಗಿರುವರಾಗಿ ತಿಳಿಯುತ್ತದೆ.

## ಬೈಲಹೊಂಗಲದ ವ್ಯಾಪಾರಸ್ಥರ ಅಪೂರ್ವ ವಿಜಯ

ಅರಳಿಯ ವ್ಯಾಪಾರದ ಪಡಿಮೂಲೆಯಾದ ಬೈಲಹೊಂಗಲದಲ್ಲಿ ಅಲ್ಲಿಯ ಪ್ರಸಿದ್ಧ ವ್ಯಾಪಾರಸ್ಥರಾದ ಶ್ರೀಯುತ ಕಾಮತ ಶಂಕರರಾಯರನ್ನು ಪೋಲೀಸರು ಉಪ್ಪಿನ ಕಾಯಿದೆಭಂಗಕ್ಕಾಗಿ ಸೆರೆಹಿಡಿದಿದ್ದರಷ್ಟೆ? ಅಂದು ಸೆರೆಹಿಡಿದ ದಿವಸವೇ ಬೈಲಹೊಂಗಲದ ನಾಗರಿಕರೆಲ್ಲರೂ ಸೇರಿ " ಶ್ರೀ. ಕಾಮತರವರನ್ನು ಬಿಡಲಿಕ್ಕೇ ಬೇಕು " ಎಂದು ಕಚೇರಿಯ ಮುಂದೆ ಹೋಗಿ ಕುಳಿತರು. ಅಧಿಕಾರಿಗಳು ಬಿದರಿ ಅವರ ಖಟ್ಲೆಯ ವಿಚಾರಣೆಯನ್ನು ಮುಂದಕ್ಕೆ ಹಾಕಿದರು. ಇದರ ನಿಷೇಧಾರ್ಥವಾಗಿ ಅಲ್ಲಿಯ ವ್ಯಾಪಾರಿಗಳು ತಮ್ಮಲ್ಲಿಯ ಅರಳಿಯನ್ನು ಮುಂಬಯಿಗೆ ಕಳಿಸುವದನ್ನು ನಿಲ್ಲಿಸಿಬಿಟ್ಟರು. ಹಮಾಲರೂ, ಮೋಟಾರಿನವರೂ ಸರಕನ್ನು ತೆಗೆದುಕೊಂಡು ಹೋಗಲು ನಿರಾಕರಿಸಿದರು. ಹೀಗೆ ಪರಿಸ್ಥಿತಿಯುಂಟಾದುದರಿಂದ ಯುರೋಪಿಯನ್ ವ್ಯಾಪಾರಸ್ಥರಿಗೆ ಬಹಳ ಹಾನಿಯಾಗಹತ್ತಿತು. ಆದುದರಿಂದ ಯುರೋಪಿಯನ್ ವ್ಯಾಪಾರಸ್ಥರು ಈ ಬಗ್ಗೆ ಕಮಿಶನರರ ಕೂಡ ಪತ್ರವ್ಯವಹಾರ ನಡೆಯಿಸಿದರು. ಕಮಿಶನರರು ಕಲೆಕ್ಟರರನ್ನು ಈ ಬಗ್ಗೆ ವಿಚಾರಿಸಿದರು. ಕಲೆಕ್ಟರರು ಯುರೋಪಿಯನ್ ವ್ಯಾಪಾರಸ್ಥರಿಗೆ " ಅಲ್ಲಿಯ ವ್ಯಾಪಾರಿಗಳ ಮನವೊಲಿಸಿರಿ " ಎಂದು ಹೇಳಿದರು. ಪುನಃ ವ್ಯಾಪಾರಿಗಳು "ಅವರ ಮನವೊಲಿಸುವದು ಎಂದಿಗೂ ಸಾಧ್ಯವಿಲ್ಲ" ಎಂಬುದಾಗಿ ತಿಳಿಸಿದರು. ಬಳಿಕ ಕಲೆಕ್ಟರ ಸಾಹೇಬರು ತಾ|| ೧೯ ನೆಯ ದಿವಸ ಶ್ರೀ. ಶಂಕರರಾಯರನ್ನು ಬಂಧಮುಕ್ತ ಮಾಡಿದರಾಗಿ ತಿಳಿಯುತ್ತದೆ. ಬೈಲಹೊಂಗಲದ ವ್ಯಾಪಾರಿಗಳು ಅಖಿಲ ಕರ್ನಾಟಕಕ್ಕೆ ಕೀರ್ತಿಯನ್ನು ಹಾಕಿಕೊಟ್ಟಂತಾಯಿತು.

---

ಕೆಲವು ದಿವಸಗಳವರೆಗೆ ಬಿಸನಾಳ ಸತ್ಯಾಗ್ರಹ ಶಿಬಿರದ ಅಧಿಪತಿಗಳಾಗಿದ್ದ ಇಲ್ಲಿಯ ಸತ್ಯಾಗ್ರಹಿವೀರರಾದ ಶ್ರೀ ಪದಕಿಯವರು ೨೫ ದಿವಸಗಳವರೆಗೆ ರಜೆಯನ್ನು ಬೇಡಿದ್ದು, ಮೇಲಿನಿಂದ ಅಪ್ಪಣೆಬಂದಕೂಡಲೆ ರಜೆಯಮೇಲೆ ಹೋಗುವವರಿದ್ದಾರೆ.

### ಗುಂಟೂರಿನಲ್ಲಿ

# ೨೩೪ ಜನರು ಸೆರೆಯಾಳಾದರು

ಗುಂಟೂರಿನ ಸತ್ಯಾಗ್ರಹ ಶಿಬಿರವನ್ನು ಪೋಲೀಸರು ಕೈವಶಪಡಿಸಿಕೊಂಡಿದ್ದಾರೆ. ಅದನ್ನು ತಿರುಗಿ ತಕ್ಕೊಳ್ಳಲು ೧೦ ಜನ ಸ್ವಯಂಸೇವಕರು ಅಲ್ಲಿಗೆ ಹೋಗಿ ತಳವೂರಿದರು. ಅವರೆಲ್ಲರನ್ನೂ ಅಧಿಕಾರಿಗಳು ಸೆರೆಹಿಡಿದರು. ಮತ್ತೆ ೨೧ ಜನ ಸತ್ಯಾಗ್ರಹಿಗಳು ಹೋದರು. ಅವರೂ ಸೆರೆಯಾಳಾದರು. ಮತ್ತೆ ೨೧ ಜನರು ಹೋಗಿ ಅಲ್ಲಿ ತಳವೂರಿದರು. ಅಧಿಕಾರಿಗಳು ಅವರನ್ನೂ ಸೆರೆಹಿಡಿದರು. ಹೀಗೆ ಒಂದು ಗುಂಪು ಸೆರೆಯಾಳಾದ ಕೂಡಲೆ ಮತ್ತೊಂದು ಗುಂಪಿನವರು ಅಲ್ಲಿಗೆ ಹೋಗಿ ಹೋಗಿ ಈಗ ಒಟ್ಟಿಗೆ ೨೩೪ ಜನರು ಸೆರೆಯಾಳಾಗಿದ್ದಾರೆ. ಪೋಲೀಸರು ಎಷ್ಟೋ ವೃದ್ಧ ಹಾಗು ಅವಯವ ಹೀನ ಜನರ ಮೇಲೆ ತಮ್ಮ ಶಕ್ತಿಯನ್ನುಪಯೋಗಿಸಿದರು.

### ದುರ್ಗಾಬಾಯಿಯವರಿಗೆ ೮ ತಿಂಗಳ ಶಿಕ್ಷೆ

ಮದ್ರಾಸ ಸತ್ಯಾಗ್ರಹ ಮಂಡಳದ ಪ್ರಮುಖರಾದ ಶ್ರೀಮತಿ ದುರ್ಗಾಬಾಯಿಯವರು ಉಪ್ಪಿನ ಕಾಯದೆಭಂಗಕ್ಕಾಗಿ ಅರ್ಕಾಲದಲ್ಲಿ ಸೆರೆಹಿಡಿಯಲ್ಪಟ್ಟು, ೯ ತಿಂಗಳ ಸಕ್ತ ಶಿಕ್ಷೆಗೆ ಪಾತ್ರರಾಗಿದ್ದಾರೆ.

### ಸೋಲಾಪುರವು ರಣಕ್ಷೇತ್ರವಾಯಿತು

ಸೊಲ್ಲಾಪುರದಲ್ಲಿ ಲಷ್ಕರಿ ಕಾಯಿದೆಗನುಸಾರವಾಗಿ ಹಿಂದುಸ್ತಾನದ ರಾಷ್ಟ್ರಧ್ವಜಕ್ಕಾದ ಅಪಮಾನವನ್ನು ಎದುರಿಸುವದಕ್ಕಾಗಿ ಮಹಾರಾಷ್ಟ್ರ ಸತ್ಯಾಗ್ರಹ ಮಂಡಳದವರು "ರಾಷ್ಟ್ರಧ್ವಜ ಸಂರಕ್ಷಕ ಮಂಡಳ"ವನ್ನು ಏರ್ಪಡಿಸಿಕೊಂಡಿದ್ದು, ಅಖಿಲ ಮಹಾರಾಷ್ಟ್ರದಿಂದ ಸೊಲ್ಲಾಪುರಕ್ಕೆ ರಾಷ್ಟ್ರಧ್ವಜ ಸಹಿತವಾಗಿ ಸತ್ಯಾಗ್ರಹಿಗಳನ್ನು ಕಳಿಸುವದಾಗಿ ನಿರ್ಧರಿಸಿದ್ದಾರೆ. ಇದಕ್ಕನುಸಾರವಾಗಿ ಪುಣೆಯಿಂದ ಶ್ರೀಯುತರಾದ ಕಾಳೆ, ಭಟ್ಟ ಮತ್ತು ಗಿರಿನಾರಾಯಣ ಈ ಮೂವರು ಸತ್ಯಾಗ್ರಹಿಗಳು ರಾಷ್ಟ್ರಧ್ವಜ ಸಹಿತವಾಗಿ ಸೊಲ್ಲಾಪುರಕ್ಕೆ ತಾ|| ೨೩ ನೆಯ ದಿವಸ ಕಳಿಸಲ್ಪಟ್ಟಿದ್ದರು. ಅವರನ್ನು ಅಧಿಕಾರಿಗಳು ಸೊಲ್ಲಾಪುರ ಸ್ಟೇಶನದಲ್ಲಿ ಸೆರೆಹಿಡಿದು ಅವರಿಗೆ ೬ ತಿಂಗಳ ಸಕ್ತ ಶಿಕ್ಷೆಯನ್ನು ವಿಧಿಸಿದ್ದಾರೆ. ಪುಣೆಯಿಂದ ತಾ|| ೨೮ ನೆಯ ದಿವಸ ೩ ಜನ ಸತ್ಯಾಗ್ರಹಿಗಳದೊಂದು ಮತ್ತೊಂದು ತಂಡವು ಈಗ ಸೊಲ್ಲಾಪುರಕ್ಕೆ ಹೋಗಿದೆ. ಸೊಲ್ಲಾಪುರವು ನಾಗಪುರದಂತೆ ಅಖಿಲ ಭರತ ಖಂಡದ ರಣಕ್ಷೇತ್ರವಾದರೂ ಆಗಬಹುದು.

### ಸತ್ಯವತಿದೇವಿಯನ್ನು ಸೆರೆಹಿಡಿದರು

೫ ಜನರು ಒಕ್ಕಟ್ಟಿಗೆ ಸೇರಬಾರದೆಂದು ಹೊರಡಿಸಿದ ಕಾಯಿದೆಯನ್ನು ಮುರಿದು ದಿಲ್ಲಿಯಲ್ಲಿ ೩ ದಿವಸ ಸ್ತ್ರೀಯರ ಮೆರವಣಿಗೆಯನ್ನು ತೆಗೆದುದಕ್ಕಾಗಿ, ಸ್ವಯಂಸೇವಿಕೆಯರ ಮುಖಂಡರಾದ ಶ್ರೀಮತಿ ಸತ್ಯವತಿ ದೇವಿಯವರು ಸೆರೆಯಾಳುಗಳಾಗಿದ್ದಾರೆ.

### ಮಹಾರಾಷ್ಟ್ರದಲ್ಲಿ ಅಡವಿಯ ಕಾನೂನಿನ ಸತ್ಯಾಗ್ರಹ

ಸಂಗಮನೇರವು ರಣಕ್ಷೇತ್ರವಾಯಿತು.

ಶಿರೋಡೆಯಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಹೂಡಿ ವಿಜಯವನ್ನು ದೊರಕಿಸಿದ ಮಹಾರಾಷ್ಟ್ರ ಸತ್ಯಾಗ್ರಹ ಮಂಡಳದವರು ಈಗ ಶಿರೋಡೆಯ ದಾಳಿಯನ್ನು ಮಳೆಯ ಮೂಲಕವಾಗಿ ನಿಲ್ಲಿಸಿ, ತಮ್ಮ ದೃಷ್ಟಿಯನ್ನು ಅಡವಿಯ ಕಾನೂನಿನ ಸತ್ಯಾಗ್ರಹದ ಕಡೆಗೆ ಹೊರಳಿಸಿದ್ದಾರೆ. ಈ ಸತ್ಯಾಗ್ರಹಕ್ಕಾಗಿ ಸಂಗಮನೇರವನ್ನು ರಣಕ್ಷೇತ್ರವನ್ನಾಗಿ ಆರಿಸಿಕೊಂಡಿದ್ದಾರೆ. ಈ ಬಗ್ಗೆ ಒಂದು ಮಂಡಳವನ್ನು ಮಾಡಿಕೊಂಡು, ಶ್ರೀ ರಾಮಕೃಷ್ಣದಾಸ ಮಹಾರಾಜರನ್ನು ಸರ್ವಾಧಿಕಾರಿಗಳನ್ನಾಗಿ ನಿಯಮಿಸಿದ್ದಾರೆ. ಈ ಸತ್ಯಾಗ್ರಹ ಶಿಬಿರದ ಸ್ಥಾಪನಾ ಸಮಾರಂಭವು ತಾ|| ೨೨ ನೆಯ ದಿವಸ ಜರುಗಿಸಲ್ಪಟ್ಟಿತು. ಈಗಾಗಲೆ ಮಹಾರಾಷ್ಟ್ರದ ಬೇರೆ ಬೇರೆ ಕಡೆಗಳಿಂದ ಎಷ್ಟೋ ಜನ ಸ್ವಯಂಸೇವಕರು ಅಲ್ಲಿಗೆ ಹೋಗಿದ್ದು, ಅವರನ್ನು ಸುತ್ತಲಿನ ಹಳ್ಳಿಗಳಿಗೆ ಕಳಿಸುವದರಲ್ಲಿ ಬಂದಿದೆ.

### ಮುದ್ರಣ ಬಕಾಸುರನಿಗೆ "ಮರಾಠಾ"ಪತ್ರದ ಆಹುತಿ

ಪುಣೆಯಲ್ಲಿ ಹೊರಡುವ ಇಂಗ್ಲೀಷ ವಾರಪತ್ರಿಕೆಯಾದ "ಮರಾಠಾ" ಪತ್ರದ ಸಂಪಾದಕರಾದ ಶ್ರೀ. ಗೋಖಲೆಯವರು ಶಿಕ್ಷೆಗೊಳಗಾದದ್ದುದರಿಂದ, ಶ್ರೀ. ದಿವೇಕರರು ಆ ಪತ್ರದ ಸಂಪಾದಕರಾಗಿ ತಮ್ಮ ಹೆಸರನ್ನು ನೊಂದಾಯಿಸಲು ಡಿ| ಮ್ಯಾಜಿಸ್ಟ್ರೇಟರ ಕಡೆಗೆ ಹೋದರು. ಡಿ| ಮ್ಯಾಜಿಸ್ಟ್ರೇಟರು ಅವರಿಗೆ ೨೦೦೦ ರು. ಗಳ ಅಡವು ಕೇಳಿದರು. ಎಲ್ಲಿಯ ವರೆಗೆ ತಕ್ಕ ವಿರುವದೋ ಅಲ್ಲಿಯ ವರೆಗೆ ಪತ್ರವನ್ನು ಹೊರಡಿಸುವದಾಗಿ ಚಾಲಕರು ಯೋಚಿಸಿ ೨೦೦೦ ರು. ಗಳ ಅಡವನ್ನು ಕೊಟ್ಟರು. ಮುಂಬಯಿ ಇಲಾಖೆಯಲ್ಲಿಯೂ ಮುದ್ರಣ ರಾಕ್ಷಸನ ಹಾವಳಿಯು ಜೋರಿನಿಂದ ಪ್ರಾರಂಭವಾದಂತಾಯಿತು. "ಕೇಸರಿ"ಯೂ ಆಹುತಿಯಾಗುವ ಲಕ್ಷಣವಿದೆ.

### ದಿಲ್ಲಿಯಲ್ಲಿ ದಂಗೆ

ಅರಿವೆಯ ಗಿರಣಿಯ ಕೂಲಿಕಾರರು ಹಾಗು ಗಿರಣಿಯ ಯಜಮಾನರ ನಡುವೆ ಕೂಲಿಯ ಸಂಬಂಧವಾಗಿ ತಿಕ್ಕಾಟವು ನಡೆದು. ಕೂಲಿಕಾರರು ಸಂಪು ಮಾಡಿದರು. ಕೂಲಿಕಾರರು ಹೋಗುವ ಮುಂದೆ ಲಾಠಿ, ಕಲ್ಲು ಮೊದಲಾದವುಗಳನ್ನುಪಯೋಗಿಸಿ ದೊಂಬಿಯನ್ನು ಮಾಡಿದರು. ೫೨ ಜನರಿಗೆ ಗಾಯಗಳಾಗಿವೆ. ಕೂಡಲೆ ಪೋಲೀಸರು ಬಂದು ಶಾಂತತೆಯನ್ನುಂಟು ಮಾಡಿದರು.

---

ಬಾಬುರಾಯರನ್ನು ನಿನ್ನೆದಿವಸ ಇಲ್ಲಿಗೆ ತಂದಿರುವರು. ಇಂದು ಖಟ್ಲೆಯ ವಿಚಾರಣೆಯಾಗಬಹುದು.

# ವಡಾಲೆಯ ವಖಾರದ ಲೂಟಿ

## ಅಧಿಕಾರಿಗಳು ಗೋಳೀಬಾರು ಮಾಡಿದರು

ತಾ| ೨೫ ನೆಯ ದಿವಸ ವಡಾಲಾ ವಖಾರದ ಮೇಲೆ ಸಾಮುದಾಯಿಕ ದಾಳಿಯನ್ನು ಮಾಡಲು ೫೦೦೦ ಜನರು ಹೊರಟ್ಟರು. ಇವರಲ್ಲಿ ೧೦೦೦ ಜನರು ವಖಾರದಲ್ಲಿ ಒಳನುಗ್ಗಿ ಉಪ್ಪನ್ನು ತೆಗೆದುಕೊಂಡರು. ದಾಳಿಯು ೪ ತಾಸುಗಳವರೆಗೆ ಸಾಗಿತು. ೧೨೫ ಜನ ಸತ್ಯಾಗ್ರಹಿಗಳು ಸೆರೆಯಾಳಾದರು. ಅವರಲ್ಲಿ ಮೂರು ಜನ ಗುಜರಾಥ ಸ್ತ್ರೀಯರೂ ಸೇರಿದ್ದರು. ಅಧಿಕಾರಿಗಳು ಹಾದಿ ಗಡಿಯಲ್ಲಿ ಸ್ತ್ರೀಯರನ್ನು ಬಿಟ್ಟುಕೊಟ್ಟರು. ಸಾಯಕಲ್ಲ ಮೇಲೆ ಪೃಥ್ವಿಪ್ರದಕ್ಷಿಣೆಯನ್ನು ಮಾಡಿ ಪ್ರಖ್ಯಾತಿಯನ್ನು ಹೊಂದಿದ ಪಾರ್ಸಿ ಗೃಹಸ್ಥರಾದ ಭರೂಚಾ ಇವರು ಈ ತಂಡದಲ್ಲಿಯೇ ಸೇರಿದ್ದರು. ಸೆರೆಯಾಳಾದ ೧೨೫ ಜನ ಸ್ವಯಂಸೇವಕರಲ್ಲಿ ೬೬ ಜನರು ಸತ್ಯಾಗ್ರಹಿಗಳೂ ಉಳಿದ ೫೯ ಜನರು ನೋಡಲು ಬಂದು ಸತ್ಯಾಗ್ರಹದಲ್ಲಿ ಭಾಗವಹಿಸಿಕೊಂಡವರೂ ಆಗಿದ್ದರು.

ತಾ| ೨೫ ನೆಯ ದಿವಸ ಸಂಜೆಯಲ್ಲಿ ವಡಾಲಾ ವಖಾರದ ಮೇಲೆ ದಾಳಿಯನ್ನು ಮಾಡಲು ಸತ್ಯಾಗ್ರಹಿಗಳಲ್ಲದ ೧೦೦೦ ಜನರು ವಡಾಲೆಗೆ ಹೋದರು. ಪೋಲೀಸ ಅಧಿಕಾರಿಗಳು ಅವರನ್ನು ಹೊರಗಡೆಯಲ್ಲಿ ತಡೆದರು. ಜನರು ಅಧಿಕಾರಿಗಳ ಅಪ್ಪಣೆಯನ್ನು ಕೇಳಲಿಲ್ಲ. ಪೋಲೀಸರು ೨ ತಾಸುಗಳ ವರೆಗೆ ಲಾಠಿಯನ್ನು ಪ್ರಯೋಗಿಸಿ ಜನರನ್ನು ಹಿಂದಕ್ಕಟ್ಟಲು ಪ್ರಯತ್ನಿಸಿದರು. ಇತ್ತ ಜನರೂ ಅಧಿಕಾರಿಗಳ ಮೇಲೆ ಕಲ್ಲುಗಳನ್ನು ಒಗೆಯುತ್ತಿದ್ದರು. ಸಂಜೆಯಲ್ಲಿ ಪರಿಸ್ಥಿತಿಯು ಮತ್ತಷ್ಟು ಕಠಿಣವಾಯಿತು. ಜನರನ್ನು ಚದರಿಸುವದಕ್ಕಾಗಿ ಒಬ್ಬ ಸಾರ್ಜಂಟರು ಗುಂಡು ಹಾರಿಸಿದರು. ಇದಕ್ಕೂ ಬೆದರದೆ ಅಲ್ಲಿ ನೆರೆದ ಜನರು ವಖಾರದಲ್ಲಿ ಒಳನುಗ್ಗಹತ್ತಿದರು. ಇದನ್ನು ಕಂಡು ಅಧಿಕಾರಿಗಳು ಮತ್ತೆ ಗೋಳೀಬಾರು ಮಾಡಿದರು. ಆದರೂ ಜನರು ಹೆದರಲಿಲ್ಲ. ಅಧಿಕಾರಿಗಳು ಹಿಂದೆಗೆದರು. ಬಳಿಕ ಜನರು ಒಳಹೊಕ್ಕು ಉಪ್ಪನ್ನು ತೆಗೆದುಕೊಂಡರು. ೬೦ ಜನರಿಗೆ ಗಾಯಗಳಾಗಿವೆ.

ತಾ| ೨೬ ನೆಯ ದಿವಸ ೮೩ ಸತ್ಯಾಗ್ರಹಿಗಳು ಬೇರೆಬೇರೆ ಮೂರು ಗುಂಪುಗಳನ್ನು ಮಾಡಿಕೊಂಡು ಬೇರೆ ಬೇರೆ ದಿಕ್ಕುಗಳಿಂದ ವಡಾಲೆಯನ್ನು ಮುಟ್ಟಿದರು. ಅವರಲ್ಲಿ ೩೦ ಜನರು ವಖಾರದಲ್ಲಿ ಒಳನುಗ್ಗಿ ಉಪ್ಪನ್ನು ತೆಗೆದುಕೊಂಡು ತಿರುಗಿ ಹೋದರು. ಉಳಿದ ೫೩ ಜನರಲ್ಲಿ ೪೩ ಜನರು ಬೇರೆ ಬೇರೆ ಕಡೆಗೆ ಹಿಡಿಯಲ್ಪಟ್ಟರು. ೧೦ ಜನರು ಪಾರಾಗಿ ಹೋದರು.

### ಧರಾಸಣಾ ವಖಾರದ ದಾಳಿ

ಶ್ರೀಯುತ ನರಹರಿಭಾಯಿ ಪರೀಖರು ಸೆರೆಯಾಳಾದ ತರುವಾಯದಲ್ಲಿ ಉಂಟಾಡಿ ಬಿಡಾರದ ಅಧಿಕಾರವನ್ನು ಸ್ವೀಕರಿಸಿದ ಶ್ರೀ. ಅಂಬಾಲಾಲ ಪಟೇಲರೂ, ಬಿಡಾರದಲ್ಲಿ ಔಷಧೋಪಚಾರಗಳನ್ನು ಮಾಡುತ್ತಿದ್ದ ಡಾ|| ಶಹಾ ಇವರೂ ಸೆರೆಹಿಡಿಯಲ್ಪಟ್ಟಿದ್ದಾರೆ. ಮೊದಲು ಹಿಡಿಯಲ್ಪಟ್ಟ ೨೩೪ ಸತ್ಯಾಗ್ರಹಿಗಳಲ್ಲಿ ೨೧ ಜನರಿಗೆ ೧ ತಿಂಗಳ ಸಕ್ತ ಶಿಕ್ಷೆಯು ವಿಧಿಸಲ್ಪಟ್ಟಿದೆ. ೫ ಕ್ಕಿಂತ ಹೆಚ್ಚು ಜನರು ಒತ್ತಟ್ಟಿಗೆ ಸೇರಬಾರದಾಗಿ ೧೪೪ ನೆಯ ಕಲಮಿನನ್ವಯ ಕಾಯಿದೆಯನ್ನು ಸಾರಿದ್ದಾರೆ. ಈಗ ಉಂಟಾಡಿ ಬಿಡಾರದಲ್ಲಿ ೫೧ ಜನ ಸತ್ಯಾಗ್ರಹಿಗಳಿರುವರು. ಅಧಿಕಾರಿಗಳು ಉಂಟಾಡಿ ಬಿಡಾರವನ್ನು ಭೂಕಂದಾಯದ ಕಾಯಿದೆಗನುಸಾರವಾಗಿ ಈಗ ಜಪ್ತಮಾಡಿದ್ದಾರೆ. ಅಲ್ಲಿಯ ಸತ್ಯಾಗ್ರಹಿಗಳನ್ನು ಹೊರಗೆ ದಬ್ಬಿದ್ದಾರೆ. ಮತ್ತಿನ ಗುಡಿಸಲುಗಳನ್ನು ನಾಶಮಾಡಿದ್ದಾರೆ.

ಸರಕಾರದವರು ಕೈವಶಪಡಿಸಿಕೊಂಡ ಉಂಟಾಡಿ ಬಿಡಾರವನ್ನು ತಿರುಗಿ ತೆಗೆದುಕೊಳ್ಳಲು ಅಹಮ್ಮದಾಬಾದದಿಂದ ೫೦ ಜನ ಸತ್ಯಾಗ್ರಹಿಗಳು ಹೋಗಿದ್ದಾರೆ.

### ಜೇಲಿನಲ್ಲಿ ೩೬ ತಾಸುಗಳ ಉಪವಾಸ

ಕೆಲವು ರಾಜಕೀಯ ಸೆರೆಯಾಳುಗಳನ್ನು 'ಬ' ವರ್ಗದಿಂದ 'ಕ' ವರ್ಗಕ್ಕೆ ವರ್ಗಾಯಿಸಿದುದರ ನಿಷೇಧಾರ್ಥವಾಗಿ ಠಾಣಾ ತುರಂಗದೊಳಗಿನ 'ಬ' ವರ್ಗದ ಸೆರೆಯಾಳುಗಳೆಲ್ಲರೂ ೨೬ ನೆಯ ತಾ|| ಸಿಂದ ೩೬ ತಾಸುಗಳ ವರೆಗೆ ಉಪವಾಸ ವ್ರತವನ್ನು ಕೈಕೊಂಡಿದ್ದಾರೆ.

### ಮಹಾತ್ಮರ ಬಿಡುಗಡೆಯ ಭವಿಷ್ಯ

ಕರಾಚಿಯ ಭವಿಷ್ಯವಾದಿಗಳೊಬ್ಬರು ಕೆಳಗಿನಂತೆ ಭವಿಷ್ಯವನ್ನು ವರ್ತಿಸಿದ್ದಾರೆ:—

(೧) ಮಹಾತ್ಮರು ಜುಲೈ ೧೦ ನೆಯ ತಾ|| ನೊಳಗಾಗಿ ಬಿಡುಗಡೆ ಹೊಂದುವರು. (೨) ಜೂನ ತಿಂಗಳದ ಕೊನೆಯ ವರೆಗೂ ದಬ್ಬಾಳಿಕೆಯು ಭರದಿಂದ ಸಾಗುವದು. (೩) ಜುಲೈ ೨೦ ನೆಯ ತಾ|| ನೊಳಗಾಗಿ ಎಲ್ಲ ರಾಜಕೀಯ ಸೆರೆಯಾಳುಗಳು ಬಿಡಲ್ಪಡುವರು. (೪) ಸಮಾಧಾನಕರವಾದ ಸುಧಾರಣೆಗಳು ಮಾಡಲ್ಪಡುವವು. (೫) ಮಹಾತ್ಮರು ಈ ವರ್ಷದಲ್ಲಿ ಇಂಗ್ಲೆಂಡಕ್ಕೆ ಹೋಗುವ ಲಕ್ಷಣವು ತೋರುವದಿಲ್ಲ.

### ಕೇಳಕರರು ಮತ್ತೆ ಕಾಯಿದೆಭಂಗ ಮಾಡಿದರು

ತಾ| ೧೯ ನೆಯ ದಿವಸ ಪುಣೆಯಲ್ಲಿ ಶ್ರೀ. ಕೇಳಕರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಸೇರಿತ್ತು. ಶಿರೋಡೆಯ ಸತ್ಯಾಗ್ರಹದ ವಿಷಯವಾಗಿ ಮುಖಂಡರ ಭಾಷಣಗಳಾದವು. ಸಭೆಯ ಕೊನೆಯಲ್ಲಿ ಶಿರೋಡೆಯಿಂದ ತಂದ ಸ್ವತಂತ್ರವಾದ ಉಪ್ಪನ್ನು ಶ್ರೀ. ಪಳಸುಳೆಯವರು ಲಿಲಾವ ಮಾಡಿದರು. ಶ್ರೀ. ಕೇಳಕರರು ಒಂದು ಪುಡಿಕೆಯನ್ನು ೧೨೦ ರು. ಗೆ ಕೊಂಡುಕೊಂಡು ಕಾಯಿದೆಭಂಗ ಮಾಡಿದರು.

# ಮುಂಬಯಿಯಲ್ಲಿ ಭಯಂಕರ ದಂಗೆ

## ೭೦ ಜನರಿಗೆ ಗಾಯ ೪ ಜನರು ಮರಣ ಹೊಂದಿದರು

ತಾ|| ೨೬ ನೆಯ ದಿವಸ ಮುಂಬಯಿಯಲ್ಲಿ ಭಯಂಕರ ದಂಗೆಯಾಯಿತು. ಪೋಲೀಸ ಸಾರ್ಜಂಟ ಹಾಗು ಓರ್ವ ಪಠಾಣನ ನಡುವೆ ಒಂದು ನಾಯಿಯ ಸಲುವಾಗಿ ಜಗಳವೆದ್ದದ್ದೇ ದಂಗೆಗೆ ಕಾರಣವಾಯಿತು. ಇವರಿಬ್ಬರ ನಡುವೆ ಹೀಗೆ ಜಗಳ ನಡೆದಿರುವಾಗ ೨—೩ ಸಾವಿರ ಜನರು ಅಲ್ಲಿ ಸೇರಿದರು. ಮತ್ತು ಅವರು ಸಾರ್ಜಂಟನ ಮೇಲೆ ಕಲ್ಲುಗಳನ್ನು ಒಗೆಯಹತ್ತಿದರು. ಸಾರ್ಜಂಟನು ಸ್ವಸಂರಕ್ಷಣೆಗಾಗಿ ಗುಂಡು ಹಾರಿಸಿದನು. ಇಷ್ಟರಲ್ಲಿ ಜನರು ಹಲ್ಲಾಗಿ ಸಾರಿ ಗೊಂದಲ ಹಾಕಹತ್ತಿದರು. ಬಳಿಕ ಪೋಲೀಸ ಠಾಣೆಯಿಂದ ಪೋಲೀಸರೂ ಸಾರ್ಜಂಟರೂ ಬಂದು ಗೋಳಿಬಾರ ಮಾಡಿ ಜನರನ್ನು ಚದುರಿಸಹತ್ತಿದರು. ಮರುದಿವಸ ಕಾಲಾಳುಬಾಡಿನಿಂದ ಸಶಸ್ತ್ರ ಸೈನಿಕರು ಬಂದರು. ಮಂಗಳವಾರ ದಿವಸ ಜನರು ಮತ್ತೆ ದೊಂಬಿಗಾರಂಭಿಸಿದರು. ಕಲ್ಲುಗಳನ್ನೆಸೆಯ ಹತ್ತಿದರು. ಮತ್ತೆ ಪೋಲೀಸರು ಗೋಳಿಬಾರು ಮಾಡಿದರು, ೭೯ ಜನರಿಗೆ ಗಾಯಗಳಾಗಿದ್ದು, ೪ ಜನರು ಮರಣಹೊಂದಿದ್ದಾರೆ. ಕಾಂಗ್ರೆಸ ಹಾಗು ಖಿಲಾಫತದ ಸ್ವಯಂಸೇವಕರು ಒಂದು ಜನರಿಗೆ ಶಾಂತತೆಯಿಂದ ವರ್ತಿಸಲು ಉಪದೇಶಮಾಡಿದ್ದಲ್ಲದೆ ಗಾಯಪಟ್ಟವರ ಶುಶ್ರೂಷೆಯನ್ನೂ ಮಾಡಿದರು.

## ಪಂ. ಮಾಲವೀಯಾ ಸೆರೆಯಾಳಾದರು

ವಾಯವ್ಯ ಸರಹದ್ದಿನ ಪ್ರಾಂತದ ಹೊಣೆಗಾರಿಕೆಯ ಕಾಯಿದೆಯ ಅನ್ವಯ ಪಂಡಿತ ಮದನಮೋಹನ ಮಾಲವೀಯಾ ಇವರನ್ನು ಅವರ ಸಂಗಡಿಗರೊಂದಿಗೆ ಕ್ಯಾಂಬೆಲ್ ಪುರದಲ್ಲಿ ಅಧಿಕಾರಿಗಳು ಸೆರೆ ಹಿಡಿದಿದ್ದಾರೆ.

( ತಂತಿಯ ದಿನಾಂಕ ) ತಾ|| ೨೮

ಪಂಡಿತ ಮಾಲವೀಯಾ ಇವರು ಸೆರೆಹಿಡಿಯಲ್ಪಟ್ಟಿಲ್ಲ ಅವರನ್ನು ಸ್ವಲ್ಪಹೊತ್ತು ಹಿಡಿದು ಕೂಡಿಸಿದ್ದರು. ಬಳಿಕ ಬಿಟ್ಟುಬಿಟ್ಟರು.

### ಸೊಲ್ಲಾಪುರದಲ್ಲಿ ರಾಷ್ಟ್ರಧ್ವಜಕ್ಕಾಗಿ ಸತ್ಯಾಗ್ರಹ.

### ಮುಂಬಯಿಯಿಂದ ೨೭ ಸ್ವಯಂಸೇವಕರು ಹೊರಟರು,

ಲಷ್ಕರಿ ಕಾಯಿದೆಯ ಅನ್ವಯ ಸೊಲ್ಲಾಪುರದಲ್ಲಿ ಪ್ರತಿಬಂಧಿತವಾದ ರಾಷ್ಟ್ರಧ್ವಜವನ್ನು ಪುನಃ ಅಲ್ಲಿ ಮೆರೆಯಿಸುವದಕ್ಕಾಗಿ ಮುಂಬಯಿಯಿಂದ ೨೭ ಜನ ಸ್ವಯಂಸೇವಕರು ರಾಷ್ಟ್ರಧ್ವಜ ಸಹಿತವಾಗಿ ಸೊಲ್ಲಾಪುರಕ್ಕೆ ತಾ|| ೨೮ ನೆಯ ದಿವಸ ಹೊರಟಿದ್ದಾರೆ.

## ಲಖನೌದಲ್ಲಿ ಗೋಳಿಬಾರು

ಶಾಂತತಾಭಂಗದ ಕಾಯಿದೆಯನ್ನು ಸಾರಿದ್ದಾರೆ. ಸಶಸ್ತ್ರ ಸೈನಿಕರು ಬರಹತ್ತಿದ್ದಾರೆ. ಗೋಳಿಬಾರು ಮಾಡಲ್ಪಟ್ಟಿತು. ೪ ಜನರು ಮರಣ ಹೊಂದಿದ್ದಾರೆ.

## ಪಾರ್ಲಿಮೆಂಟದಲ್ಲಿ ಹಿಂದುಸ್ತಾನ

### ಮಿ|| ಬೆನ್ನರು ಬೆದರಿಕೆಯ ಗುಂಡು ಒಗೆದರು

ಅಖಿಲ ಭಾರತ ರಾಷ್ಟ್ರಸಭೆಯ ಕಾರ್ಯಕಾರಿ ಮಂಡಳದವರು ಗೊತ್ತುಪಡಿಸಿಕೊಂಡ ಕಾರ್ಯಕ್ರಮಗಳ ಚಳವಳಿಯು ಶಕ್ಯವಿದ್ದಷ್ಟು ಬೇಗನೆ ಎದುರಿಸಿಯೇ ತೀರುವೆವೆಂದು ಮಿ| ಬೆನ್ನರು ಕಾಮನ್ಸ ಸಭೆಯಲ್ಲಿ ಹೇಳಿದ್ದಾರೆ.

## ಮಹಾತ್ಮರ ದಳದಲ್ಲಿದ್ದ ಕನ್ನಡವೀರನಿಗೆ ಶಿಕ್ಷೆ

ಸಾಬರಮತಿ ಆಶ್ರಮದಿಂದ ಮಾರ್ಚ ೧೨ ನೆಯ ದಿವಸ ಮಹಾತ್ಮರ ನೇತೃತ್ವದಲ್ಲಿ ಹೊರಟ ಸತ್ಯಾಗ್ರಹ ತಂಡದಲ್ಲಿ ಸೇರಿಕೊಂಡಿದ್ದ ಮೋಟೆಬೆನ್ನೂರಿನ ತರುಣ ವೀರನಾದ ಶ್ರೀ. ಮಹಾದೇವ ಮೈಲಾರ ಇವರಿಗೆ ೩ ತಿಂಗಳ ಸಶ್ರಮ ಶಿಕ್ಷೆಯಾಗಿದೆ. ಈ ಸುದ್ದಿಯು ತಿಳಿದ ಕೂಡಲೆ ಮೋಟೆಬೆನ್ನೂರಿನಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು.

---


ಕಂಪನಿಯ ಮುಕ್ಕಾಂ ಸ್ವಲ್ಪ ಉಳಿದಿವೆ.

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಶುಕ್ರವಾರ ತಾ|೩೦—೫—೩೦

**ಚವತಿಚಂದ್ರ**

ಶನಿವಾರ ತಾ||೩೧—೫—೩೦

**ಮಾಯಾಬಾಜಾರ**

ಕನ್ನಡ ನಾಡಿನಿಂದ ಕಲೆಯ ಪ್ರಗತಿಗಾಗಿ ಜರ್ಮನಿಗೆ ಹೋ[ಗುವ]

ಬಿ. ವ್ಹಿ. ಅಳವಂಡಿಯವರ ಸಹಾಯಕ್ಕಾಗಿ.

ಸೋಮವಾರ ತಾ|| ೨-೬-೩೦

(ಧರ್ಮಾರ್ಥ ಕೊಡಲ್ಪಡುವದು.)

**ಶರಣಬಸವ**

**ಎಂಬ ನಾಟಕಗಳನ್ನು ಅಭಿನಯಿಸುವರು,**

ಈ ನಾಟಕಗಳು ಪುನಃ ಆಡಲ್ಪಡುವದಿಲ್ಲ.

ಸಂಘದೊಡೆಯ—**ಸದಾಶಿವರಾವ ಗರೂ[ಡ]**


---

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

यद्यत् परवशं दुःखं । यद्यदात्मवशं सुखम् ॥—मनु.

# ಕನ್ನಡಿಗ

KANNADIGA BAGALKOT. BI-WEEKLY ಅರೆವಾರ ಪತ್ರಿಕೆ.

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಶುಕ್ರವಾರ ವಿ.ತಿ ಜ್ಯೇಷ್ಠ ಶುದ್ಧ ೨ ಶಕ ೧೮೫೨ ತಾ ೩೦—೫—೩೦ ಸಂಚಿಕೆ ೬೧

## ಅಮಲಝರಿಯ ಶ್ರೀ. ಶಂಕರಗೌಡರಿಗೆ ೬ ತಿಂಗಳ ಸಶ್ರಮ ಶಿಕ್ಷೆ

ಕುಂದರಗಿಯಲ್ಲಿ ಸೆರೆಹಿಡಿಯಲ್ಪಟ್ಟ ಅಮಲಝರಿಯ ಶ್ರೀ. ಶಂಕರಗೌಡ ತಿಮ್ಮನಗೌಡ ಪಾಟೀಲರ ವಿಚಾರಣೆಯು ತಾ॥ ೨೯ ನೆಯ ದಿವಸ ಬೀಳಗಿಯಲ್ಲಿ ನಡೆದು ಅವರಿಗೆ ೬ ತಿಂಗಳ ಸಶ್ರಮ ಶಿಕ್ಷೆಯನ್ನು ಅಧಿಕಾರಿಗಳಿಂದ ವಿಧಿಸುವದರಲ್ಲಿ ಬಂದಿದೆ.

## ಗಲಗಲಿಯು ಬಾರ್ಡೋಲಿಯಾಗುವದೇ ?

ಗಲಗಲಿಯ ಸತ್ಯಾಗ್ರಹ ಮಂಡಳದ ಮುಂದಾಳುಗಳಾದ ಶ್ರೀ. ಗಣಿ ಬಾಬುರಾಯರನ್ನು ಪೋಲೀಸರು ಸೆರೆಹಿಡಿದು ಕರೆದುಕೊಂಡು ಹೋಗುವಾಗ ಒಂದು ಪ್ರಚಂಡವಾದ ಮೆರವಣಿಗೆಯು ತೆಗೆಯಲ್ಪಟ್ಟಿತ್ತು. ಈ ಮೆರವಣಿಗೆಯಲ್ಲಿ ಸುತ್ತಲಿನ ಹಳ್ಳಿಗಳ ಜನರೂ ಸೇರಿದ್ದರು. ಮೆರವಣಿಗೆಯು ಓಣಿಗಳಲ್ಲಿ ಹಾಯ್ದು ಹೋಗುತ್ತಿರುವಾಗ ಸ್ತ್ರೀಯರು ಪೂಮಾಲೆಗಳಿಂದಲೂ, ಆರತಿ ಅಕ್ಷತೆಗಳಿಂದಲೂ ಸತ್ಕರಿಸಿದರು. ಮೆರವಣಿಗೆಯು ಮುಗಿದ ಬಳಿಕ ಹನುಮಂತದೇವರ ಗುಡಿಯಲ್ಲಿ ಸಭೆಸೇರಿತು. ಸಭೆಯಲ್ಲಿ ಶ್ರೀ. ಗಣಿ ಬಾಬುರಾಯರು "ನಾನು ನಿಮ್ಮೆಲ್ಲರ ಸೇವೆಯನ್ನು ಶಕ್ಯವಿದ್ದಷ್ಟು ಮಾಡಿದ್ದೇನೆ. ಈಗ ದಯಾಳು ಸರಕಾರದವರು ನನಗೆ ವಿಶ್ರಾಂತಿಯನ್ನು ಕೊಡಲಿಚ್ಛಿಸುತ್ತಾರೆ. ಗಲಗಲಿಯನ್ನು ಬಾರ್ಡೋಲಿಯನ್ನಾಗಿ ಮಾಡಲಿಚ್ಛಿಸುವ ತಾವು ನಾನು ಹೋದೆನೆಂದು ಯಾವ ರೀತಿಯಿಂದಲೂ ಹೆದರುವ ಕಾರಣವಿಲ್ಲ. ಬಾರ್ಡೋಲಿಯನ್ನು ಉದ್ಧಾರಮಾಡಲು ಸರದಾರ ವಲ್ಲಭಭಾಯಿಯವರು ಮುಂದೆ ಬಂದಂತೆ, ನಿಮ್ಮೆಲ್ಲರನ್ನು ಉದ್ಧಾರಮಾಡುವದಕ್ಕಾಗಿ ನಿಮ್ಮ ಊರಿನ ಗೌಡರಾದ ಶ್ರೀ. ಪಾಟೀಲ ಮಲ್ಲನಗೌಡರು ಮುಂದೆ ಬಂದಿರುವರು. ಇನ್ನುಮೇಲೆ ಅವರೇ ನಿಮ್ಮ ಮುಂದಾಳುಗಳು. ಅವರ ಹೇಳಿಕೆಯಂತೆ ನಡೆದುಕೊಳ್ಳಿರಿ" ಎಂದು ಹೇಳಿ ತಮ್ಮ ಕೊರಳೊಳಗಿನ ಮಾಲೆಯನ್ನು ಮಲ್ಲನಗೌಡರ ಕೊರಳಲ್ಲಿ ಹಾಕಿದರು. ಬಳಿಕ ಶ್ರೀ. ಮಲ್ಲನಗೌಡರು "ಶ್ರೀ. ಬಾಬುರಾಯರು ಹೊರಿಸಿದ ಹೊಣೆಗಾರಿಕೆಯನ್ನು ಹೊರಲು ನನ್ನಲ್ಲಿ ಯೋಗ್ಯತೆಯಿಲ್ಲದಿದ್ದರೂ, ನಿಮ್ಮೆಲ್ಲರ ಸೇವೆಯನ್ನು ಮಾಡುವ ಭಾಗ್ಯವು ದೊರೆತಿದ್ದುದಕ್ಕಾಗಿ ಉತ್ಸಾಹಪಡುತ್ತೇನೆ. ಇಂಥಹ ದೊಡ್ಡ ಕೆಲಸವು ನನ್ನೊಬ್ಬನಿಂದಲೆ ನೀಗಲಾರದು. ನೀವೆಲ್ಲರೂ ನನಗೆ ಸಹಾಯ ಮಾಡಬೇಕು" ಎಂದು ಹೇಳಿದರು. ಆಮೇಲೆ ಶ್ರೀ. ಪಾಟೀಲ ತಿಮ್ಮನಗೌಡರು ಮುಂದೆ ಬಂದು "ಶ್ರೀ. ಮಲ್ಲನಗೌಡರು ಸರಕಾರದ ದಬ್ಬಾಳಿಕೆಗೆ ತುತ್ತಾದರೆ ಅವರ ಸ್ಥಳವನ್ನು ನಾನು ಸಂತೋಷದಿಂದ ಸ್ವೀಕರಿಸುತ್ತೇನೆ." ಎಂದು ನುಡಿದರು.

## ಸರಕಾರಕ್ಕೆ ಬಿಸಿಹತ್ತಿತು

### ವಡಾಲಾ ದಾಳಿಯು ಜನಸಾಮಾನ್ಯವಾಯಿತು

ವಡಾಲಾ ವಖಾರದ ಮೇಲಿನ ದಾಳಿಯ ವಿಷಯವಾಗಿ ಸರಕಾರದ ಸುದ್ದಿಯ ಶಾಖೆಯವರು ಈ ಕೆಳಗಿನ ಪತ್ರಕವನ್ನು ಹೊರಡಿಸಿದ್ದಾರೆ:—

"ವಖಾರದ ಮೇಲಿನ ದಾಳಿಯ ನೋಟವನ್ನು ನೋಡುವದಕ್ಕಾಗಿ ಸತ್ಯಾಗ್ರಹಿಗಳಲ್ಲದ ಎಷ್ಟೋ ಜನರು ವಡಾಲೆಯಲ್ಲಿ ಬಂದು ಸೇರುತ್ತಿರುವದರಿಂದ ಅಲ್ಲಿ ಏನಾದರೂ ಗೊಂದಲವೆದ್ದರೆ ಅದರ ಹೊಣೆಗಾರಿಕೆಯು ಅವರ ಮೇಲೆಯೇ ಬೀಳುತ್ತದೆ. ಯಾಕೆಂದರೆ ಸತ್ಯಾಗ್ರಹಿಗಳು ಶಿಸ್ತಿನಿಂದಲೂ ವ್ಯವಸ್ಥಿತವಾಗಿಯೂ ವರ್ತಿಸುವರು. ಆದರೆ ಸಾಮಾನ್ಯ ಜನರು ಮಾತ್ರ ಕಲ್ಲು, ಬಡಿಗೆ ಮೊದಲಾದವುಗಳನ್ನು ಒಗೆದು ಅಲ್ಲಿ ಗೊಂದಲವನ್ನೆಬ್ಬಿಸುವದಲ್ಲದೆ, ವಖಾರದಲ್ಲಿ ಒಳನುಗ್ಗಿ ಕೈಗೆ ಸಿಕ್ಕಷ್ಟು ಉಪ್ಪನ್ನು ತೆಗೆದುಕೊಂಡು ಹೊರಬೀಳುವರು. ಆದುದರಿಂದ ಸಾಮಾನ್ಯ ಜನರು ದಾಳಿಯು ನಡೆದಾಗ ಅಲ್ಲಿಗೆ ಹೋಗಬಾರದು. ಹೋಗಿ ಹಿಂದಿನಂತೆ ಗೊಂದಲ ಹಾಕಿದಲ್ಲಿ ಅವರನ್ನು ಶಕ್ಯವಿದ್ದಷ್ಟು ಬಗೆಗಳಿಂದ ಹಣಿಯುವದೇ ಬರುವದು."

ವಡಾಲಾ ವಖಾರದ ದಾಳಿಯು ಜನಸಾಮಾನ್ಯವಾಗಿದ್ದುದನ್ನು ಕಂಡು ಸರಕಾರದವರು ಹೇಗೆ ಗಾಬರಿಗೊಂಡಿರುವರೆಂಬುವದು ಹಾಗು ಸತ್ಯಾಗ್ರಹಿಗಳು ಎಷ್ಟು ಶಾಂತತೆಯಿಂದ ವರ್ತಿಸುತ್ತಿರುವರೆಂಬುವದು ಇದರಿಂದ ತಾನಾಗಿಯೇ ವ್ಯಕ್ತವಾಗುವದಿಲ್ಲವೇ?

## ಒಂದೇ ದಿವಸದ ಶಿಕ್ಷೆ.

ಲಖನೌ ಕಾಂಗ್ರೆಸ ಕಮಿಟಿಯ ಅಧ್ಯಕ್ಷ ಹಾಗು ಕಾರ್ಯದರ್ಶಿಗಳಾದ ಶಿಡವಾಯಿ ಮತ್ತು ಜಯಗೋಪಾಳ ಟಂಡನ್ ಇವರಿಗೆ ಪೋಲೀಸ ಕಾಯದೆಯ ೩೨ ನೆಯ ಕಲಮಿನನ್ವಯ ೧೦೦ ರೂ ದಂಡ, ಇಲ್ಲವೆ ಒಂದು ದಿನದ ಶಿಕ್ಷೆಯಾಗಿದೆ.

## ನಂದಗಡದ ಭೀಮನಾಯಕರು ಸೆರೆಯಾಳಾದರು.

ಖಾನಾಪುರದ ತರುಣ ಸಂಘದ ಪ್ರಕಟನಾಶಾಖೆಯ ಕಾರ್ಯದರ್ಶಿಗಳಾದ ನಂದಗಡದ ನಾಯಕ ಭೀಮರಾಯರು ಉಪ್ಪಿನ ಕಟ್ಟಳೆಯನ್ನು ಮುರಿದು ಉಪ್ಪನ್ನು ಮಾರಿದುದಕ್ಕಾಗಿ ತಾ||೨೪ ನೆಯ ದಿವಸ ಸೆರೆಹಿಡಿಯಲ್ಪಟ್ಟಿದ್ದಾರೆ.

## ದೇಶಸೇವಕರನ್ನು ತುರಂಗಕ್ಕೆ ಕಳಿಸಿದುದಕ್ಕಾಗಿ ಡೆ. ಕಲೆಕ್ಟರ ಪಶ್ಚಾತ್ತಾಪ

ಡೆಪ್ಯೂಟಿ ಕಲೆಕ್ಟರ ಸ್ಥಳಕ್ಕೆ ರಾಜೀನಾಮೆಯನ್ನು ಕೊಟ್ಟ ದುರ್ಲಭಜಿ ದೇಸಾಯಿಯವರನ್ನು ಅಭಿನಂದಿಸುವ ಬಗ್ಗೆ ಸುರತದಲ್ಲಿ ಒಂದು ಸಾರ್ವಜನಿಕ ಸಭೆ ಸೇರಿತ್ತು. ಆ ಸಭೆಯಲ್ಲಿ ಭಾಷಣಮಾಡುವಾಗ ಶ್ರೀ ದೇಸಾಯಿಯವರು ಹೇಳಿದ್ದೇನಂದರೆ. ಮೊದಲಿನಿಂದಲೂ ನನ್ನಲ್ಲಿ ಸ್ವದೇಶದ ಬಗ್ಗೆ ಕಳಕಳಿಯಿದ್ದೇ ಇದೆ. ಸರಕಾರಿ ಉದ್ಯೋಗದಲ್ಲಿದ್ದುದರಿಂದ ನನ್ನ ಮನಸಿನ ವಿರುದ್ಧವಾಗಿ ಎಷ್ಟೋಸಲ ನಾನು ನಡಿಯಬೇಕಾಗಿಬಂತು. ಕಳೆದ ೨ ತಿಂಗಳ ಅವಧಿಯಲ್ಲಿಯೆ ೩೩ ಜನ ದೇಶಸೇವಕರನ್ನು ತುರಂಗಕ್ಕಟ್ಟಿದವನು ನಾನೇ ಅವರನ್ನು ತುರಂಗಕ್ಕಟ್ಟುವಾಗ ನಾನು ಎಷ್ಟು ತಳಮಳಗೊಳ್ಳುತ್ತಿದ್ದೆನೆಂಬುದು ದಯಾಘನನಿಗೆ ಗೊತ್ತು. ಈ ಸರಕಾರದ ಉದ್ಯೋಗದಲ್ಲಿರುವದು ದೇಶ ಘಾತುಕತನವಾಗಿರುವದೆಂದು ನನಗೆ ಆಗಾಗ್ಗೆ ಎನಿಸುತ್ತಿತ್ತು. ಯಾವಾಗ ನನ್ನ ಹೃದಯವು ತಡೆಯಲಾರದಷ್ಟು ತಳಮಳಗೊಳ್ಳಹತ್ತಿತೋ ಆಗ ನಾನು ಸರಕಾರಿ ಉದ್ಯೋಗವನ್ನು ಒದ್ದು ಹೊರಬಿದ್ದು ಬಂದೆನು. "ಪೆನ್ಶನ" ಇಲ್ಲವೆ ಜಮೀನನ್ನು ಕೊಡುತ್ತೇವೆಂದು ತಿಳಿಸಿ ಸರಕಾರದವರು ನನ್ನ ಮನವೊಲಿಸಲು ಪ್ರಯತ್ನಮಾಡಿದರು, ಕಾಯರಾ ಜಿಲ್ಹೆಯಲ್ಲಿ ಅಧಿಕಾರಿಗಳು ತೋರಿಸಿದ ಪಾಶವೀ ಶಕ್ತಿಯ ದಬ್ಬಾಳಿಕೆಯ ಚಿತ್ರವು ನನ್ನ ಕಣ್ಣು ಮುಂದೆಯೆ ಕಟ್ಟಿದಂತಾದುದರಿಂದ, ನಾನು ಸರಕಾರದವರು ತೋರಿಸಿದ ಅನುಗ್ರಹವನ್ನು ಧಿಕ್ಕರಿಸಿದೆನು. ಮತ್ತು ನನ್ನ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟೆನು.

## ಮದ್ರಾಸ ಇಲಾಖೆಯಲ್ಲಿ ಸತ್ಯಾಗ್ರಹ

ಕಡಲೂರಿನಲ್ಲಿ ಮೂರು ಜನ ಸತ್ಯಾಗ್ರಹಿಗಳಿಗೆ ೬ ತಿಂಗಳದಿಂದ ೨ ವರ್ಷಗಳ ವರೆಗೆ ಸಶ್ರಮ ಶಿಕ್ಷೆಗಳಾಗಿವೆ. ಶ್ರೀ ಸಿ. ರಾಜಗೋಪಾಲಚಾರ್ಯ ಹಾಗು ಸತ್ಯಾಗ್ರಹಿಗಳನ್ನು ತಮ್ಮ ಮನೆಯಲ್ಲಿ ಇಳಿಸಿಕೊಂಡಿದ್ದುದಕ್ಕಾಗಿ ಶ್ರೀ ರಾಮಚಂದ್ರ ನಾಯುಡು ಇವರಿಗೆ ೬ ವಾರಗಳ ಸಾದಾ ಶಿಕ್ಷೆಯಾಗಿದೆ. ಉದ್ಯಾವರದಲ್ಲಿ ೪ ಜನ ಸತ್ಯಾಗ್ರಹಿಗಳು ಸೆರೆಯಾಳಾಗಿದ್ದಾರೆ. ವೇದಾರಣ್ಯದಲ್ಲಿ ಉಪ್ಪನ್ನು ಸಿದ್ಧಪಡಿಸುವ ಕಾರ್ಯವನ್ನು ಸತ್ಯಾಗ್ರಹಿಗಳು ಎಂದಿನಂತೆಯೆ ಸಾಗಿಸಿದ್ದಾರೆ.

## ರಂಗೂನದಲ್ಲಿ ಭಯಂಕರ ದಂಗೆ

ತಾ|| ೨೫ ನೆಯ ದಿವಸ ರಂಗೂನದಲ್ಲಿ ಬರ್ಮಾ ಕೂಲಿಕಾರರು ಹಾಗು ಆಂಧ್ರ ಕೂಲಿಕಾರರ ನಡುವೆ ಜಗಳವೆದ್ದು ಭಯಂಕರ ದಂಗೆಯಾಗಿದೆ ಹಡಗು ಪಡೆಯ ಕೂಲಿಕಾರರು ಸಂಪು ಮಾಡಿದಾಗ್ಗೆ ಬರ್ಮೀ ಜನರು ಆ ಸ್ಥಳಗಳಿಗೆ ನಿಯಮಿಸಲ್ಪಟ್ಟಿದ್ದರು. ತಾ|| ೨೫ ನೆಯ ದಿವಸ ಕೂಲಿಕಾರರು ಹಾಗು ಹಡಗು ಪಡೆಯ ಒಡೆಯರ ನಡುವೆ ಒಪ್ಪಂದವಾದುದರಿಂದ ಮೊದಲಿನ ಕೂಲಿಕಾರರನ್ನು ತಿರುಗಿ ತೆಗೆದುಕೊಳ್ಳಲಾಯಿತು. ಬರ್ಮಿ ಕೂಲಿಕಾರರು ಹೊರಗೆ ಹೋಗಬೇಕಾಯಿತು. ಎರಡೂ ಪಕ್ಷದ ಕೂಲಿಕಾರರ ನಡುವೆ ಜಗಳವೇಳಲು ಇದೇ ಕಾರಣವಾಗಿ ಅದು ದಂಗೆಯ ಸ್ವರೂಪ ಹೊಂದಿತು. ಸಶಸ್ತ್ರ ಸೈನಿಕರು ಪಟ್ಟಣವನ್ನು ಸಂರಕ್ಷಿಸಹತ್ತಿದ್ದಾರೆ. ೮೦ ಜನರಿಗೆ ಗಾಯಗಳಾಗಿವೆ.

## ಯೂನಿಯನ್ ಜ್ಯಾಕಿನ ವಿರುದ್ಧ ಬಂಡು.

ಮಾತೃಭೂಮಿಯ ವಿಮೋಚನಾರ್ಥವಾಗಿ ಹೆಣಗಾಡುವ ದೇಶ ಸೇವಕರ ವಿರುದ್ಧವಾಗಿ ಅಧಿಕಾರಿಗಳು ಅವಲಂಬಿಸಿದ ದಬ್ಬಾಳಿಕೆಯ ನಿಷೇಧವೆಂದು ತಾವು ಇನ್ನು ಮುಂದೆ ಬ್ರಿಟಿಶ್ ರಾಷ್ಟ್ರಧ್ವಜವಾದ ಯೂನಿಯನ್ ಜ್ಯಾಕಿಗೆ" ಸಲಾಮು ಹೊಡೆಯುವದಿಲ್ಲವೆಂದೂ, ಮತ್ತು ಬಾಯಸ್ಕೌಟ ಸಂಘಕ್ಕೂ ತಮಗೂ ಇನ್ನು ಮೇಲೆ ಯಾವ ಸಂಬಂಧವೂ ಉಳಿದಿಲ್ಲವೆಂದೂ" ಮುಂಬಯಿಯ ೮೩ ನೆಯ ವಸಂತ" ರೋವ್ಹರ್"ರು ನಿರ್ಧರಿಸಿಕೊಂಡಿದ್ದಾರೆ. ಇದಕ್ಕಿನ್ನ ಬೇಕು ಸ್ವಾಭಿಮಾನವೆಂದು.

## ಲಖನೌದಲ್ಲಿ ಶಿಕ್ಷೆ

ಲಖನೌದಲ್ಲಿ ಸೆರೆಯಾಳಾದ ೧೧ ಜನ ಮುಖಂಡರಿಗೆ ೬ ತಿಂಗಳ ಶಿಕ್ಷೆ ಹಾಗು ೧೦೦ ರೂ ದಂಡ, ದಂಡವನ್ನು ಕೊಡದಿದ್ದಲ್ಲಿ ೧ ದಿವಸ ಶಿಕ್ಷೆ ಹೀಗೆ ಶಿಕ್ಷೆಗಳು ವಿಧಿಸಲ್ಪಟ್ಟಿವೆ.

## ವಡಾಲಾ ಮಖಾರದ ದಾಳಿ.

ತಾ|| ೨೬ ನೆಯ ದಿವಸ ೭೬ ಸತ್ಯಾಗ್ರಹಿಗಳು ವಡಾಲಾ ಮಖಾರವನ್ನು ನುಗ್ಗಿ ಉಪ್ಪನ್ನು ತೆಗೆದುಕೊಂಡರು. ಹೊರಗೆ ಬರುವ ಮುಂದೆ ಅಧಿಕಾರಿಗಳು ೩೫ ಜನರನ್ನು ಸೆರೆಹಿಡಿದರು. ಉಳಿದ ೪೧ ಜನರು ಉಪ್ಪು ಸಹಿತವಾಗಿ ಬಿಡಾರಕ್ಕೆ ಹೋದರು.

## ಕ್ಯಾಪ್ಟನ್ ಹುದ್ದೆಯನ್ನು ಬಿಟ್ಟರು.

ಮಹಾತ್ಮಾ ಗಾಂಧಿಯವರನ್ನು ಸೆರೆಹಿಡಿದುದರ ಹಾಗು ಅಧಿಕಾರಿಗಳ, ದಬ್ಬಾಳಿಕೆಯ ನಿಷೇಧಾರ್ಥವಾಗಿ ಡಾ, ವ್ಹಿ. ಜಿ. ಭಂಡಾರಿಯವರು ತಮ್ಮ ಕ್ಯಾಪ್ಟನ್ ಹುದ್ದೆಯನ್ನು ಬಿಟ್ಟುಗೊಟ್ಟಿದ್ದಾರೆ.

---

ಗಣಿಯಲ್ಲಿ ಸೆರೆಹಿಡಿಯಲ್ಪಟ್ಟ ಶ್ರೀ. ಗಣಿ ಬಾಬುರಾಯರ ವಿಚಾರಣೆಯು ತಾ|| ೨೯ ನೆಯ ದಿವಸ ಇಲ್ಲಿ ನಡೆಯಿತು. ಉಪ್ಪಿನ ಕಾಯಿದೆಭಂಗ ಹಾಗು ಅಡವಿಯ ಕಾನೂನಿನ ಭಂಗಗಳ ಬಗ್ಗೆ ಉಪದೇಶಮಾಡಿ ಜನರಿಗೆ ಉತ್ತೇಜನವನ್ನಿತ್ತರೆಂಬ ಆರೋಪವು ಇಡಲ್ಪಟ್ಟಿದೆ. ಶೀರ್ಷನ್ನು ಇಂದು ಹೇಳುವ ಸರಿಯಿದ್ದಾರೆ

## ಪಂಡಿತ ಮಾಲವೀಯಾ ಇವರು

# ಕಾಯಿದೆಯನ್ನು ಮುರಿಯುವರು.

ಪಂ. ಮದನಮೋಹನ ಮಾಲವೀಯಾ ಇವರು ಕ್ಯಾಂಬೆಲಪುರದಲ್ಲಿ ಸೆರೆಹಿಡಿಯಲ್ಪಟ್ಟು ಕೆಲವು ಹೊತ್ತಿನ ಮೇಲೆ ಬಿಡಲ್ಪಟ್ಟರೆಂಬ ಸುದ್ದಿಯು ಪ್ರಕಟವಾಗಿತ್ತಷ್ಟೆ. ಆದರೆ ನಿಜವಾದ ಸುದ್ದಿಯು ಈಗ ತಿಳಿದು ಬಂದಿದ್ದು ಅದನ್ನು ಕೆಳಗೆ ಕೊಟ್ಟಿದೆ:—

ಪಂಡಿತ ಮಾಲವೀಯಾ ಇವರು ತಾ। ೨೬ ನೆಯ ದಿವಸ ರಾವಳಪಿಂಡಿಯಿಂದ ಪೇಶಾವರಕ್ಕೆ ಹೋಗಲು ಹೊರಟರು. ಆದರೆ ಹಾದಿಯಲ್ಲಿಯೇ ಕ್ಯಾಂಬೆಲಪುರ ಸ್ಟೇಶನದಲ್ಲಿ ಓರ್ವ ಅಧಿಕಾರಿಯು ಬಂದು "ಸರಹದ್ದಿನಲ್ಲಿ ಕಾಲಿಡಬಾರದೆ"ಂಬ ಆಶಯದ ಚೀಫ ಕಮಿಶನರರ ಕಟ್ಟಪ್ಪಣೆಯನ್ನು ಅವರಿಗೆ ಕೊಟ್ಟನು. ಪಂಡಿತ ಮಾಲವೀಯಾ ಇವರು ಕಟ್ಟಪ್ಪಣೆಗೆ ಉತ್ತರ ರೂಪವಾಗಿ "ನಾನು ನಿರಾಶ್ರಿತರಿಗೆ ಸಹಾಯ ಮಾಡಲು ಹೋಗುವವನಿದ್ದೇನೆ. ಈ ಕಟ್ಟಪ್ಪಣೆಯನ್ನು ನನ್ನಂತಹ ಮನುಷ್ಯನಿಗೆ ಹಚ್ಚುವದು ಸರಿಯಾಗಿ ತೋರುವದಿಲ್ಲ. ನಾನು ಪೇಶಾವರಕ್ಕೆ ಹೋಗಿಯೇ ತೀರುವೆನು ಮತ್ತು ಶಿಕ್ಷೆಯಾದರೂ ಸಹ ಅದನ್ನು ಅನುಭವಿಸಲು ಸಿದ್ಧನಿರುವೆನು" ಎಂದು ಬರೆದು ಕೊಟ್ಟರು. ಇಷ್ಟರಲ್ಲಿಯೇ ತಮ್ಮ ಹಿಂದೆ ಬರುತ್ತಿರುವಂತಹ ಜನರನ್ನು ಪೋಲೀಸರು ಗಾಡಿಯಿಂದ ಹಾದಿಯಲ್ಲಿಯೇ ಒತ್ತಾಯದಿಂದ ಇಳಿಸಿ ತಿರುಗಿ ರಾವಳಪಿಂಡಿಗೆ ಕಳಿಸುವರೆಂದು ತಿಳಿದು ಬಂದಿದ್ದರಿಂದ ಪಂಡಿತ ಮಾಲವೀಯಾ ಇವರು ಕ್ಯಾಂಬೆಲಪುರದಲ್ಲಿಯೇ ಇಳಿದರು. ಇಲ್ಲಿಂದ ಮುಂದೆ ಪೇಶಾವರಕ್ಕೆ ಹೋಗುವವರಿದ್ದಾರೆ.

### ಅಧಿಕಾರಿಗಳ ಅಪ್ಪಣೆಯು ಕಾಲುಕಸವಾಯಿತು.

ಮುಂಬಯಿಯ ಸತ್ಯಾಗ್ರಹ ಮಂಡಳದವರು ಹೊರಡಿಸುತ್ತಿರುವ "ಕಾಂಗ್ರೆಸ್ ಬುಲೆಟಿನ್" ಪತ್ರಿಕೆಗೆ ಚೀಫ ಪ್ರೆ. ಮ್ಯಾಜಿಸ್ಟ್ರೇಟರು ಅಡ್ಡಿಯನ್ನು ಮಾಡಿದ್ದರು. ಮ್ಯಾಜಿಸ್ಟ್ರೇಟರ ಅಪ್ಪಣೆಯ ಕಡೆಗೆ ಎಳ್ಳಷ್ಟು ಲಕ್ಷ್ಯಕೊಡದೆ ಸತ್ಯಾಗ್ರಹ ಮಂಡಳದವರು ಅದನ್ನು ಹಾಗೆಯೇ ಹೊರಡಿಸಹತ್ತಿದರು. ಇದನ್ನು ಕಂಡು ಅಧಿಕಾರಿಗಳು ಸತ್ಯಾಗ್ರಹ ಮಂಡಳದ ಅಧಿಕಾರಿಗಳೆಲ್ಲರನ್ನು ಸೆರೆಹಿಡಿದು ಅವರಿಗೆ ಶಿಕ್ಷೆಗಳನ್ನು ವಿಧಿಸಿದರು. ಇದಕ್ಕೂ ಮಂಡಳದವರು ಬೆದರದೆ. ಅದನ್ನು ಎಂದಿನಂತೆಯೆ ಹೊರಡಿಸುತ್ತಿರುವರಲ್ಲದೆ, ಅದರ ವಿಷಯವನ್ನೇ ಒಳಗೊಂಡ ಪತ್ರಿಕೆಗಳನ್ನು ಮರಾಠಿ ಹಾಗು ಗುಜರಾಥಿಯಲ್ಲಿಯೂ ಈಗ ಹೊರಡಿಸಹತ್ತಿರುವರು.

### ಕರ್ನಾಟಕ ಸತ್ಯಾಗ್ರಹ ನಿಧಿಗೆ ಸಹಾಯ

ಮುಂಬಯಿಯಲ್ಲಿಯ ಪ್ರಸಿದ್ಧ ಗಾಯನಪಟುಗಳಾದ ಪ್ರೊ. ಮೋಂಜೀಖಾನರೆಂಬ ಮುಸಲ್ಮಾನ ಗೃಹಸ್ಥರು ಶ್ರೀ. ಹರಿಮನ್ನರ ಅಧ್ಯಕ್ಷತೆಯಲ್ಲಿ ತಾ॥ ೧೮ ನೆಯ ದಿವಸ ಗಾಯನ ಕಾರ್ಯಕ್ರಮವನ್ನೇರ್ಪಡಿಸಿಕೊಂಡು ಅದರಿಂದ ಪ್ರಾಪ್ತವಾದ ೧೦೭೦ ರೂಪಾಯಿಗಳನ್ನು ಕರ್ನಾಟಕ ಸತ್ಯಾಗ್ರಹ ನಿಧಿಗೆ ಸಹಾಯ ಧನವೆಂದು ಕೊಟ್ಟಿದ್ದಾರೆ. ಅಂಬಾ ಪ್ರಸಾದಿಕ ನಾಟಕ ಮಂಡಳಿದವರೂ ಒಂದು ನಾಟಕದ ಉತ್ಪನ್ನವನ್ನು ಸತ್ಯಾಗ್ರಹ ನಿಧಿಗೆ ಕೊಟ್ಟಿದ್ದಾರೆಂಬಾಗಿ ತಿಳಿಯುತ್ತದೆ. ಕನ್ನಡ ನಾಟಕ ಮಂಡಳಿಗಳ ಒಡೆಯರಾದ ಶ್ರೀ. ಗರುಡರು, ವಾಮನರಾಯರು, ವೆಂಕೋಬರಾಯರು ಮೊದಲಾದವರು ಇವರನ್ನು ಅನುಕರಿಸಬೇಕಾಗಿ ಬಿನ್ನಹ.

---

ಇಹವೃತ್ತ

## ನಗರಸಭೆಯ ಮೇಲೆ ರಾಷ್ಟ್ರಧ್ವಜ

ಸರಕಾರದ ದಬ್ಬಾಳಿಕೆಗೆ ತುತ್ತಾದ ಪಂಡಿತ ಮದನಮೋಹನ ಮಾಲವೀಯಾ ಇವರನ್ನು ಅಭಿನಂದಿಸುವದಕ್ಕಾಗಿ ೨೮ ನೆಯ ತಾ। ದಿವಸ ಕೊತ್ತಲಪ್ಪನ ಗುಡಿಯ ಬೈಲಿನಲ್ಲಿ ಡಾ॥ ಲಾತ್ಕ್ಯಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಸಭೆಯಲ್ಲಿ ಶ್ರೀ. ಕಣಬೂರ ವಕೀಲರು ಮಾಲವೀಯಾ ಇವರನ್ನು ಸೆರೆ ಹಿಡಿಯುದಕ್ಕಾಗಿ ಸರಕಾರದ ದಬ್ಬಾಳಿಕೆಯ ವೃತ್ತಿಯನ್ನು ನಿಷೇಧಿಸಿ ಮಾತಾಡಿದರು. ಇಷ್ಟರಲ್ಲಿಯೇ ಮಾಲವೀಯಾ ಇವರು ಬಿಡಲ್ಪಟ್ಟಿರುವರೆಂಬ ತಂತಿಯು ಬಂದಿತು. ಅದನ್ನು ಸಭೆಯಲ್ಲಿ ಓದಿ ಹೇಳಲಾಯಿತು. ಬಳಿಕ ಶ್ರೀ॥ ಕಣಬೂರವರು ಪರದೇಶಿ ಸರಕುಗಳ ಬಹಿಷ್ಕಾರದ ಬಗ್ಗೆ ಹೇಳಿ, "ನಗರಸಭೆಯ ಮೇಲೆ ರಾಷ್ಟ್ರಧ್ವಜ" ಈ ವಿಷಯವನ್ನು ಕುರಿತು "ಬಾಗಲಕೋಟೆಯ ನಗರ ಸಭೆಯ ಮುಂದೆ ರಾಷ್ಟ್ರಧ್ವಜದ ಪ್ರಶ್ನೆಯು ಬಂದು ಎಷ್ಟೋ ದಿವಸಗಳಾಗಿವೆ ಆದರೂ ಅದು ಅತ್ತ ಲಕ್ಷ್ಯಗೊಡದೆ ಆ ವಿಷಯವನ್ನು ಬೇಕಂತಲೇ ಮುಂದಕ್ಕೆ ಹಾಕುತ್ತಿರುವರು. ಹೀಗೆ ಮಾಡುತ್ತಿರುವದು ಬಾಗಲಕೋಟೆಗೆ ಅಪಮಾನವೇ ಸರಿ ೩ ನೇ ತಾ। ದಿವಸ ಮತ್ತೆ ನಗರಸಭೆಯ ಅಧಿವೇಶನವು ಕೂಡುವದಿದೆ. ಆ ಸಭೆಗೆ ನಾಗರಿಕರು ತಂಡತಂಡವಾಗಿ ಹೋಗಿ ಆ ವಿಷಯವನ್ನು ತೆಗೆದುಕೊಳ್ಳಲು ನಗರಸಭೆಯ ಸಭಾಸದರನ್ನು ಒತ್ತಾಯಪಡಿಸಬೇಕು. ನಾಗರಿಕರು ಹೀಗೆ ಒತ್ತಾಯಪಡಿಸಿದಾಗ್ಯೂ ಅವರು ಆ ವಿಷಯವನ್ನು ತೆಗೆದುಕೊಳ್ಳದಿದ್ದರೆ ಸತ್ಯಾಗ್ರಹವನ್ನು ಹೂಡಿ ನಗರಸಭೆಯ ಮೇಲೆ ರಾಷ್ಟ್ರಧ್ವಜವು ಹಾರಾಡುವಂತೆ ಮಾಡಬೇಕು" ಎಂದು ಹೇಳಿದರು. ಶ್ರೀ. ಕಣಬೂರವರು ಕೇಳಿಕೊಂಡಂತೆ ಬಾಗಲಕೋಟೆಯ ನಾಗರಿಕರು ರಾಷ್ಟ್ರಧ್ವಜಕ್ಕಾಗಿ ಹೋರಾಡಲು ಮುಂದೆ ಬರುವರೋ!

## ಸವದತ್ತಿಯಲ್ಲಿ ಸಿಂದೀಗಿಡಗಳ ನಾಶ

ಏಳು ಜನರನ್ನು ಸೆರೆಹಿಡಿದರು.

ಸವದತ್ತಿಯಲ್ಲಿ ಸಿಂದೀ ಗಿಡಗಳನ್ನು ಕಡಿದರೆಂದು ಪೋಲೀಸರು ಈ ಕೆಳಗಿನ ಏಳು ಜನರನ್ನು ಪಿ. ಕೋಡಿನ ೧೪೩. ೪೪೭. ಮತ್ತು ೪೨೭ ಕಲಮುಗಳನ್ವಯ ಸೆರೆ ಹಿಡಿದಿದ್ದಾರೆ. (೧) ಚಂಬುಲಿಂಗಪ್ಪ ತೆಗ್ಗಿನಮನಿ (೨) ಶ್ರೀನಿವಾಸ ಪಾಗಾದ (೩) ಬಾಳಪ್ಪ ಗಡೇರಾರ (೪) ಲಕ್ಷ್ಮಣಪ್ಪ (೫) ತಮ್ಮಣಭಟ್ಟ ಜೋಶಿ (೬) ಧಾಮಚಂದ್ರ ಜಾಧೋಕರ. (೭) ಹುಸೇನಸಾಹೇಬ ಮುಡೇದ.

ಈ ತಾಲೂಕಿನ ಸೇದ ಉಗಾಡಿ, ಮುಗಳಿ, ಶ್ರೀರಂಗಾರ ಕೊಪ್ಪ, ಗುಡ್ಡಹೊಸೂರ ಹಿರ್ಲಿ, ದುಕ್ಕಬಾಡಿ, ಧೂಪದಾಳ, ಮಲ್ಲೂರ, ಮೊರಬ, ಹೊಸೂರ, ಗುಜಮಾರಕೊಪ್ಪ, ಕಡಿ ಹಳ್ಳಿ, ಹಲನಾಳ ಮುಂತಾದ ಹಳ್ಳಿಗಳಲ್ಲಿಯು ಸಿಂದೀ ಗಿಡಗಳನ್ನು ಕಡಿದು ನಾಶಮಾಡಿದ್ದುದರಿಂದ ಸಿಂದೀ ಗಿಡಗಳು ಬಹು ಶೀಘ್ರವಾಗಿ ಮುಚ್ಚಿಹೋಗಿವೆ.

## ಧಾರವಾಡದಲ್ಲಿ ಸಿಡಿಲು ಬಿತ್ತು

ಒಬ್ಬನು ಸತ್ತನು. ಮೂರು ಜನರು ಎಚ್ಚರದಪ್ಪಿದರು.

ತಾ|| ೨೬ ನೆಯ ದಿವಸ ಧಾರವಾಡದಲ್ಲಿ ಸಿಡಿಲು ಬಿದ್ದು ಒಬ್ಬನು ಅಲ್ಲಿಯೇ ಪ್ರಾಣಬಿಟ್ಟನು. ಮೂವರು ಎಚ್ಚರ ತಪ್ಪಿ ಬಿದ್ದಿದ್ದಾರೆ.

## ಸಾವಿರಾರು ಪಟೇಲರು ರಾಜೀನಾಮೆ ಕೊಟ್ಟರು

ಗುಜರಾಥ ಪ್ರಾಂತದೊಳಗಿನ ಖೇಡಾ ಜಿಲ್ಲೆಯೊಳಗಿಂದ ಇಲ್ಲಿಯ ವರೆಗೆ ೧೮೩೪ ಪಟೇಲರು ರಾಜೀನಾಮೆಯನ್ನು ಕೊಟ್ಟಿದ್ದಾರೆ.

## ಅಂಕೋಲೆಯ ವಾರ್ತೆ

ಕರ್ನಾಟಕ ಸತ್ಯಾಗ್ರಹ ಮಂಡಳದ ಮುಂದಿನ ಕಾರ್ಯಕ್ರಮದ ನಿಶ್ಚಯಕ್ಕೆ ಅಡಚಣಿಯು ಬಾರದಂತೆ ಪ್ರಾರಂಭದ ಒಗ್ಗಟ್ಟಿನ ಸಭೆಯು ಬಹು ಉತ್ಸಾಹದಿಂದ ನಡೆಯಿತು. ಮಂಗಳವಾರ ದಿವಸ ಸಭೆಯು ಕರೆಯಲ್ಪಟ್ಟಿತ್ತು. ಮುಂಜಾನೆ ೮ ಗಂಟೆಗೆ ಸತ್ಯಾಗ್ರಹಿಗಳೂ ಜನರೂ ಉಲ್ಲಾಸದಿಂದ ಮೆರವಣಿಗೆ ಮಾಡಿಕೊಂಡು ಹೋಗಿ ಧ್ವಜಸ್ತಂಭದ ಬಳಿಗೆ ಹೋಗಿ, ಧ್ವಜಾರೋಹಣದ ನಂತರ ಸಭಾಸ್ಥಾನಕ್ಕೆ ಹೋದರು. ಕೆಲ ಸತ್ಯಾಗ್ರಹಿಗಳು ಮುಂದಿನ ಕಾರ್ಯಕ್ರಮಗಳನ್ನು ಕುರಿತು ಭಾಷಣಮಾಡಿದರು. ಕೊನೆಯಲ್ಲಿ ಉಪ್ಪಿನ ಪುಡಿಕೆಗಳನ್ನು ಲಿಲಾವು ಮಾಡಿದರು.

ಸತ್ಯಾಗ್ರಹ ಶಿಬಿರ<br>ಅಂಕೋಲಾ<br>೨೫-೫-೩೦ } ಪ್ರಕಟನಾ ಶಾಖಾಧಿಕಾರಿ

## ಬೆಳಗಾವಿ ಜಿಲ್ಹೆಯಲ್ಲಿ ದಬ್ಬಾಳಿಕ

ಸ್ಟಂಕೇಶ್ವರದ ಶ್ರೀ ವಡ್ಡುಗಲ್ಲ ಮಹಾದೇವಪ್ಪ, ಅಪ್ಪ ಕ್ಕಣ್ಣ ಉಣಕೋಶಿ ಇವರಿಗೆ ೬ ತಿಂಗಳ ಶ್ರೀ ರಾಮದಾಸ ಕುಲಕರ್ಣಿ ಇವರಿಗೆ ೩ ತಿಂಗಳ ಹಾಗು ಫಿಪ್ಪಾಣಿಯ ಪಣಛಂದೀಕರ ಕೃಷ್ಣ ಇವರಿಗೆ ೮ ತಿಂಗಳ ಹೀಗೆ ಶಿಕ್ಷೆಗಳು ವಿಧಿಸಲ್ಪಟ್ಟಿವೆ.

## ಬಾರ್ಡೋಲಿಯಲ್ಲಿ ಅಧಿಕಾರಿಗಳ ಆಟವು ಸಾಗದಂತಾಯಿತು

ಬಾರ್ಡೋಲಿ ತಾಲೂಕದೊಳಗಿನ ೨೪ ಹಳ್ಳಿಗಳ ಪಟೇಲರು ತಮ್ಮ ತಮ್ಮ ಕಾಗದಪತ್ರಗಳನ್ನು ಮೇಲಧಿಕಾರಿಗಳಿಗೆ ಒಪ್ಪಿಸಿ ರಾಜೀನಾಮೆ ಕೊಟ್ಟಿದ್ದಾರೆ. ಸರಕಾರಿ ಅಧಿಕಾರಿಗಳ ಮೇಲೆ ತೀಕ್ಷ್ಣತರವಾದ ಬಹಿಷ್ಕಾರವನ್ನು ಹಾಕಬೇಕೆಂಬುದಾಗಿ ಎಷ್ಟೋ ಹಳ್ಳಿಗಳ ಜನರು ನಿರ್ಧರಿಸಿಕೊಂಡಿದ್ದಾರೆ. "ಭೂಕಂದಾಯವನ್ನು ಕೊಡದ್ದಕ್ಕಾಗಿ ಹೊಲಗಳನ್ನು ಜಪ್ತ ಮಾಡುವದಲ್ಲಿ ಒಬ್ಬರು." ಎಂಬ ಆಶಯದ ಕಾಗದವನ್ನು ಅಂಟಿಸಬು ರಾಜಪುರಾನಾಸುರಾದ ಕಾಲೇಕ್ಟರಿಯು ಸರ್ಕಲ ಇನಸ್ಪೆಕ್ಟರರೊಂದಿಗೆ ಒಂದು ಹಳ್ಳಿಗೆ ಹೋಗಿದ್ದರು. ಇವರು ಹೋದ ದಿನ ಎಲ್ಲರೂ ಆ ಹಳ್ಳಿಯನ್ನೇ ಬಿಟ್ಟುಕೊಟ್ಟು ಹೋಗಿದ್ದುದರಿಂದ ಹಳ್ಳಿಯು ಹಾಳು ಸುರಿಯುತ್ತಿತ್ತು.

## ಮೈಸೂರಿನಿಂದ ಸತ್ಯಾಗ್ರಹಿಗಳು ಹೊರಟಿರು

ಈಗ ನಡೆದಿರುವ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗ ತೆಗೆದುಕೊಳ್ಳಲು ಮೈಸೂರಿನಿಂದ ಒಂದು ಸತ್ಯಾಗ್ರಹಿಗಳ ತಂಡವು ತಾ|| ೨೫ ನೆಯ ದಿವಸ ಪಂಡಿತ ಸಿದ್ಧನಾಥಪಂತರ ನೇತೃತ್ವದಲ್ಲಿ ಹುಬ್ಬಳ್ಳಿಗೆ ಹೊರಟಿದೆ. ಅವರನ್ನು ಆಶೀರ್ವದಿಸುವದಕ್ಕಾಗಿ ಮೈಸೂರಿನ ವೃದ್ಧ ಹಿತಾಮಹರಾದ ಶ್ರೀ ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿತ್ತು. ಮುಂತರ ಭಾಷಣಗಳಾದವು, ಜೈನ ಮಂದಿರದ ಆಚಾರ್ಯರು ಸತ್ಯಾಗ್ರಹ ನಿಧಿಗೆ ೫೦ ರೂ. ಗಳನ್ನು ಕೊಟ್ಟು, ಕೊನೆಯಲ್ಲಿ ಅವರನ್ನು ಆಶೀರ್ವದಿಸಿ ಅವರಿಗೆ ನಿರೋಪ ಕೊಡಲಾಯಿತು.

## ರಣಛೋಡದಾಸರಿಗೆ ಶಿಕ್ಷೆ

ಅಹಮ್ಮದಾಬಾದದಿಂದ ಧರಸಾನಕ್ಕೆ ಹೊರಟ ಸತ್ಯಾಗ್ರಹಿ ತಂಡದ ನೇತೃಗಳಾದ ಶ್ರೀ. ರಣಛೋಡದಾಸರಿಗೆ ೩ ತಿಂಗಳ ಸಶ್ರಮ ಶಿಕ್ಷೆಯಾಗಿದೆ.

---


ಕಂಪನಿಯು ಮುಕ್ಕಾಂ ಸ್ವಲ್ಪ ಉಳಿದಿವೆ,

**ಗದಗ ಶ್ರೀ ದತ್ತಾತ್ರೇಯಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಶುಕ್ರವಾರ ತಾ|೩೦—೫—೩೦

**ಚವತಿಚಂದ್ರ**

ಶನಿವಾರ ತಾ|೩೧—೫—೩೦

**ಮಾಯಾಬಾಜಾರ**

ಕನ್ನಡ ನಾಡಿನಿಂದ ಕಲೆಯಪ್ರಗತಿಗಾಗಿ ಜರ್ಮನಿಗೆ ಹೋದ

**ಬಿ. ವ್ಹಿ. ಅಳವಂಡಿಯವರ ಸಹಾಯಕ್ಕಾಗಿ.**

ಸೋಮವಾರ ತಾ|| ೨-೬-೩೦

(ಧರ್ಮಾರ್ಥ ಕೊಡಲ್ಪಡುವದು.)

**ಶರಣಬಸವ**

**ಎಂಬ ನಾಟಕಗಳನ್ನು ಅಭಿನಯಿಸುವರು.**

ಈ ನಾಟಕಗಳು ಪುನಃ ಆಡಲ್ಪಡುವದಿಲ್ಲ.

ಸಂಘಒಡೆಯ—ಸದಾಶಿವರಾವ ಗೆರೂಕ


---

ಈ ಪತ್ರಿಕೆಯು ಬೆಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ.ನಂ. ಬಿ ೧೯೪೭ ನಿತ್ಯಸಂಚಿಕೆಯು. ಬೆಲೆ ೦-೦-೩

ಯದ್ಯತ್ ಪರವಶं दुःखं । यद्यदात्मवशं सुखम् ॥ — मनु

ಸಂಪಾದಕರುಃ— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ಶನಿವಾರ ಮಿತಿ ಜ್ಯೇಷ್ಠ ಶುದ್ಧ ೪ ಶಕೆ ೧೮೫೨ ತಾ|| ೩೧-೫-೩೦ ಸಂಚಿಕೆ ೬೨

## ಶ್ರೀ|| ಗಣಿ ಬಾಬುರಾಯರಿಗೆ ೪ ತಿಂಗಳ ಸಶ್ರಮ ಶಿಕ್ಷೆ

ಗಲಗಲಿಯ ಸತ್ಯಾಗ್ರಹ ಮಂಡಳದ ಮುಖಂಡರೂ, ರೈತರ ಹಿತಕ್ಕಾಗಿ ಹಗಲಿರುಳು ಕಷ್ಟಪಡುವವರೂ ಆದ ಗಣಿಯ ಶ್ರೀ. ನಾಯಕ ಬಾಬುರಾಯರಿಗೆ, ಬಾಗಲಕೋಟೆಯ ಅಧಿಕಾರಿಗಳಿಂದ, ಉಪ್ಪಿನ ಕಾಯಿದೆಭಂಗ ಹಾಗು ಅಡವಿಯ ಕಾನೂನಿನ ಭಂಗ ಇವುಗಳನ್ನು ಮಾಡಲು ಜನರಿಗೆ ಪ್ರೋತ್ಸಾಹನ ಕೊಟ್ಟಿತ್ತೆಂಬುದುದಕ್ಕಾಗಿ ತಾ|| ೩೦ ನೆಯ ದಿವಸ ೪ ತಿಂಗಳ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ. ಇವರು ಕೆಲವು ದಿನಗಳ ಹಿಂದೆ ಉಪ್ಪಿನ ಕಾಯಿದೆಭಂಗಕ್ಕೆ ಬಂಧಿತರಾಗಿ ೧೦೦ ರು.ಗಳ ದಂಡಕ್ಕೆ ಪಾತ್ರರಾಗಿದ್ದರು.

## ಶ್ರೀ|| ಗಣಿ ಬಾಬುರಾಯರ ವೀರಸಂದೇಶ

ಮಹಾತ್ಮಾ ಗಾಂಧಿಯವರೇ ನಿಮ್ಮ ಮಾರ್ಗದರ್ಶಕ ತಾರೆಯು ಅವರ ಮಾರ್ಗವೇ ನಿಮ್ಮೆಲ್ಲರ ಪ್ರಸ್ತುತ ಮಾರ್ಗವು. ಈ ಪ್ರಕಾಶಮಯ ತಾರೆಯ ಬೆಳಕು ನೋಡುತ್ತ ಕಂಟಕಮಯ ಮಾರ್ಗವನ್ನು ಲೆಕ್ಕಿಸದೆ, ನೀವು ಕರ್ತವ್ಯ ಬುದ್ಧಿಯಿಂದ ಮುಂದಕ್ಕೆ ಸಾಗಿದರೆ ನಮ್ಮ ನಿಮ್ಮೆಲ್ಲರ ಮನೋವಾಂಛಿತ ಸ್ವರಾಜ್ಯ ಮಂದಿರವು ಶೀಘ್ರವೇ ಲಭಿಸುವದು. ಇದರಲ್ಲಿ ಯಾವ ಸಂದೇಹವೂ ಇಲ್ಲ. ಹೇಡಿಯನ್ನವವರಿಗೆ ಪರಮಾತ್ಮನು ಎಂದೂ ಸಹಾಯಮಾಡುವದಿಲ್ಲ. ಸತ್ಯವಂತನಿಗೆ ಮತ್ತು ಕರ್ತವ್ಯಕ್ಕಾಗಿ ದೇಹಾರ್ಪಣ ಮಾಡಲು ಸಿದ್ಧನಿದ್ದವನಿಗೆ ಜಗಚ್ಚಾಲಕನು ಕೈಬಿಡದೆ ಎಂದೂ ಬಿಡುವದಿಲ್ಲ. ಇದನ್ನು ನೆನಪಿನಲ್ಲಿಟ್ಟು ಮುಂದಕ್ಕೆ ಸಾಗಿರಿ.

“ಸರಕಾರದ ಕಾಟಕ್ಕ ಜೀವ ಬೇಸತ್ತೈತಿ”

## ಕಟಗೇರಿ ಮತ್ತು ಕೆರೂರು

ಬುಧವಾರ ಮಧ್ಯಾಹ್ನಕ್ಕೆ ಕಟಗೇರಿ ರೈತರ ಸಭೆಯು ಕೂಡಿತ್ತು. ಸಭೆಯಲ್ಲಿ ಬಾಗಲಕೋಟೆಯ ಸತ್ಯಾಗ್ರಹ-ಮಂಡಲದವರು, ಗಾಂಧಿಯವರು ಸರಕಾರದೊಡನೆ ಹೂಡಿದ ಸತ್ಯಾಗ್ರಹ ಯುದ್ಧದ ಸಾದ್ಯಂತ ಸಂಗತಿಗಳನ್ನು ತಿಳಿಸಿ ಹೇಳಿದರು. ರೈತರೆಲ್ಲರೂ “ಗಾಂಧಿ ಮಹಾತ್ಮರ ಹಿಂಬಾಲಿಸಿ ನಾವೆಲ್ಲರೂ ಬರುವವರು ನೋಡಿರಿ. ಪುಣ್ಯಾತ್ಮ, ಅವನ ಹೊಟ್ಟೆ ತಣ್ಣಗಾಗಲಿ! ಸರಕಾರದ ಕಾಟಕ್ಕ ಜೀವ ಬೇಸತ್ತೈತಿ” ಎಂದು ಅನ್ನುತ್ತ ಕಾಯಿದೆಭಂಗಕ್ಕೆ ಒಳ್ಳೇ ಉತ್ಸಾಹ ವ್ಯಕ್ತಮಾಡಿದರು. ೩-೪ ಚೀಲ ಜೋಳವನ್ನು ಸತ್ಯಾಗ್ರಹ ನಿಧಿಗೆ ಕೊಡಲು ಒಪ್ಪಿದ್ದಾರೆ.

ಕೆರೂರಲ್ಲಿ ಅದೇ ದಿವಸ ಸಾಯಂಕಾಲಕ್ಕೆ ಸಭೆ ಕೂಡಿತ್ತು. ಸಭೆಗೆ ೨೦೦೦ ಜನರು ಆಗಮಿಸಿದ್ದರು. ಅವಕ್ಕೂ ಮೊದಲು ಸಭೆ ಇದೆ ಎಂದು ಸಾರುತ್ತ ಹೋದ ಸ್ವಯಂಸೇವಕರನ್ನು ತಡೆದು “ಗಾಂಧಿ ಸಭಾ ಇದ್ದರ ಬರತೀವಿ, ಸರಕಾರ ಸಭಾ ಇದ್ದರ ಹೋಗು ಹಾಗ ಗಂಟೆ ಬಾರಿಸಿಕೋತ” ಅಂತ ಕೆರೂರ ನಿವಾಸಿಗಳು ಸ್ವಯಂಸೇವಕರನ್ನು ಬೀದಿಬೀದಿಗೆ ಕರೆದು ಕೇಳಿದ್ದರು. ಇದರ ಮೇಲಿಂದ ಗಾಳಿಯು ಎತ್ತ ಬೀಸಹತ್ತಿದೆಯೆಂಬುದು ಸಿದ್ಧವಾಗುತ್ತಿದೆ. ಸಭೆಯಲ್ಲಿ ಸತ್ಯಾಗ್ರಹ ಮಂಡಲದವರ ಭಾಷಣವಾದ ಮೇಲೆ ಶ್ರೀ. ಲೋಕಪ್ಪ ಕುಪ್ಪಸದ ಇವರು ಅಲ್ಲಿಂದಲ್ಲೆ ತಾನು ಸುತ್ತಿಕೊಂಡಿರುವ ೫೦ ರು. ಬೆಲೆಯ ರೇಶಿಮೆಯ ರುಮಾಲವನ್ನು ಅಗ್ನಿನಾರಾಯಣನಿಗೆ ಸಮರ್ಪಿಸಿ ಇನ್ನು ತಾನು ಪರದೇಶಿ ಅರಿವೆಯ ಪಾಪದಿಂದ ದೂರ ಇರುವೆನೆಂದು ಪ್ರತಿಜ್ಞೆ ಮಾಡಿದನು. ಇದೇ ಮಾದರಿಯ ಉತ್ಸಾಹವು ಊರವರಲ್ಲೆಲ್ಲ ತುಂಬಹತ್ತಿದೆ. ತಮ್ಮ ತಮ್ಮ ಶೃಂಖಲಮಾತಗಳನ್ನು ಕಡಿದೊಗೆಯಲು ಬಹುತರ ಎಲ್ಲರೂ ಸಿದ್ಧರಿರುವರು.

ವಂದೇ ಮಾತರಂ

ಸತ್ಯಾಗ್ರಹ ಮಂಡಲ<br>ಬಾಗಲಕೋಟೆ<br>೨೯-೫-೩೦ } ಪ್ರಕಟನಾ ಖಾತಾಧಿಕಾರಿ

## ಕಾಯದೆಮಂಡಳಕ್ಕೆ ರಾಜೀನಾಮೆ

ಲಾಹೋರದ ರಾಷ್ಟ್ರಸಭೆಯ ಅಜ್ಞೆಗನುಸಾರವಾಗಿ ಮದ್ರಾಸದ ಕಾಯಿದೆ ಮಂಡಳದ ಸಭಾಸದತ್ವಕ್ಕೆ ರಾಜೀನಾಮೆಯನ್ನು ಕೊಟ್ಟ ಶ್ರೀ|| ಕಾರಂತರ ಸ್ಥಳಕ್ಕೆ ಮಂಗಳೂರ ಜಿಲ್ಲೆಯಿಂದ ಆರಿಸಿ ಬಂದ ಶ್ರೀ|| ನಗರ ಶ್ರೀನಿವಾಸರಾಯರೂ, ಸರಕಾರದ ದಬ್ಬಾಳಿಕೆಯ ನಿಷೇಧಾರ್ಥವಾಗಿ, ತಮ್ಮ ಸಭಾಸದತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ.

## ನಾಗಪುರದ ಬ್ಯಾ. ಅಭ್ಯಂಕರರು ಸೆರೆಯಾಳಾದರು

ನಾಗಪುರದ ಪ್ರಸಿದ್ಧ ಬ್ಯಾರಿಸ್ಟರರಾದ ಶ್ರೀ. ಅಭ್ಯಂಕರರು ತಾ|| ೨೯ ನೆಯ ದಿವಸ ರಾಜದ್ರೋಹಕ್ಕಾಗಿ ಕಾರಾಗೃಹದಲ್ಲಿ ಸೆರೆಹಿಡಿಯಲ್ಪಟ್ಟಿದ್ದಾರೆ.

# ರಾಷ್ಟ್ರಧ್ವಜಕ್ಕಾಗಿ ಪ್ರಾಣಕೊಡಲು ೫೦೦೦ ಸತ್ಯಾಗ್ರಹಿಗಳು ಬೇಕು.

ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ ಕಮಿಟಿಯವರಿಗೆ ಕಳಿಸಿದ ಪತ್ರದಲ್ಲಿ ಪಂಡಿತ ಮೋತಿಲಾಲರು ಕೆಳಗಿನಂತೆ ಬರೆದಿದ್ದಾರೆ:—

ಸೊಲ್ಲಾಪುರದಲ್ಲಿಯ ರಾಷ್ಟ್ರಧ್ವಜವನ್ನು ಹಿಡಿದುಕೊಂಡು ಹೋಗುವವರು ದಂಡನೀತಿಯ ಕಾಯದೆಯ ಪ್ರಕಾರ ೧೦ ವರ್ಷ ಸಜಾ ಶಿಕ್ಷೆಗೆ ಪಾತ್ರರಾಗುವರು. ಪ್ರತ್ಯಕ್ಷವಾಗಿ ಕಾರ್ಯಮಾಡಿ ತೋರಿಸಲು ರಾಷ್ಟ್ರ ಸಭೆಯ ಅನುಯಾಯಿಗಳಿಗೆ ಇದೊಂದು ಸುಸಂಧಿಯೇ ಸಿಕ್ಕಿದೆ, ಈ ಕಾಯಿದೆಯನ್ನು ಮುರಿಯುವದರಿಂದ ಪರಿಣಾಮವು ಭಯಂಕರವಾಗುವದು, ಮೊದಲು ಮೂರು ಇಲ್ಲವೇ ನಾಲ್ಕು ಜನರು ಕೈಯಲ್ಲಿ ರಾಷ್ಟ್ರಧ್ವಜವನ್ನು ಹಿಡಿದುಕೊಂಡು ಸೊಲ್ಲಾಪುರದಲ್ಲಿ ತಿರುಗಬೇಕು. ಅವರು ಸೆರೆಯಾಳಾದರೆ ಒಡನೇ ತಂಡದವರು ರಾಷ್ಟ್ರಧ್ವಜ ಸಹಿತವಾಗಿ ಹೋಗಬೇಕು. ಹೀಗೆ ಒಬ್ಬರ ಹಿಂದೊಬ್ಬರಂತೆ ೫೦೦೦ ಜನ ಸತ್ಯಾಗ್ರಹಿಗಳು ರಾಷ್ಟ್ರಧ್ವಜಕ್ಕಾಗಿ ದಂಡನೀತಿಯ ಕಾಯದೆಯನ್ನು ಮುರಿದು ತುರಂಗಕ್ಕೆ ಹೋಗಲು ಸಿದ್ಧರಾದಲ್ಲಿ ದಂಡನೀತಿಯ ಜನಪ್ಪಕ್ಕೆ ತಾನೇ ಬಿದ್ದು ಹೋಗುವದು. ದಂಡನೀತಿಯು ಕೂಡ ದಬ್ಬಾಳಿಕೆಯೂ ಇಲ್ಲದಂತಾಗುವದು. ಈ ಕಾರ್ಯವು ಬಹಳ ಗಂಡಾಂತರವುಳ್ಳದ್ದಿದೆ. ಈ ಕಾರ್ಯದಲ್ಲಿ ಎಷ್ಟೋ ಜನರು ಗುಂಡಿನೇಟುಗಳಿಗೆ ಬಲಿಯಾಗಬಹುದು. ಈಗ ಸಾರಿದ ಕಾಯಿದೆಯಲ್ಲಿ ಕೇವಲ ಶಿಕ್ಷೆಯೇ ಹೇಳಲ್ಪಟ್ಟಿದ್ದರೂ ಸಹ, ಬಹಳ ಜನರು ಕಾಯಿದೆಯನ್ನು ಮುರಿಯಹತ್ತಿದರೆಂದರೆ ಅಲ್ಲಿಯ ಅಧಿಕಾರಿಗಳು ಗುಂಡುಗಳನ್ನು ಹೊಡೆಯಬಹುದು. ಯಾಕಂದರೆ ಒಂದೇ ಕ್ಷಣದಲ್ಲಿ ಎಷ್ಟರ ಕಾಯ್ದೆಯು ಅನ್ಯಾಯ ಬೇಕಾದ ಬಗೆಯ ಶಿಕ್ಷೆಯನ್ನೂ ಸಾರಲು ಅಧಿಕಾರಿಗಳಿಗೆ ಅಧಿಕಾರವಿದೆ ಆದುದರಿಂದ ಆತ್ಮಾರ್ಪಣವನ್ನು ಮಾಡುವಂಥ ೫೦೦೦ ಜನ ಸತ್ಯಾಗ್ರಹಿಗಳೇ ಬೇಕು.

## ಮಾಮಲೇದಾರರು ರಾಜೀನಾಮೆ ಕೊಟ್ಟರು.

ಗುಜರಾಥ ಪ್ರಾಂತದೊಳಗಿನ ಸುರತ ಜಿಲ್ಲೆಯ ವಲಸಾಡದ ಮಾಮಲೇದಾರರಾದ ಶ್ರೀ ದಯಾಳಜಿ ದೇಸಾಯಿಯವರು ಸರಕಾರದವರು ಪ್ರಾರಂಭಿಸಿದ ದಬ್ಬಾಳಿಕೆಯ ನಿಷೇಧಾರ್ಥವಾಗಿ ತಮ್ಮ ಸರಕಾರಿ ಉದ್ಯೋಗಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ.

## ಜೈನ ಸಾಧುಗಳಿಗೆ ಶಿಕ್ಷೆ.

ಅಹಮ್ಮದಾಬಾದದಿಂದ ಧಳಸಾನಾಕ್ಕೆ ೫೦ ಜನ ಸತ್ಯಾಗ್ರಹಿಗಳನ್ನು ಕರೆದುಕೊಂಡು ಹೊರಟ ಜೈನ ಸಾಧುಗಳಾದ ಶ್ರೀ ಮುನಿಜಿನ ವಿಜಯಜಿಯವರು ಹಾದಿಯಲ್ಲಿಯೇ ಸೆರೆಹಿಡಿಯಲ್ಪಟ್ಟು, [illegible]ನೆಯ ಕಲಮಿನನ್ವಯ ೫॥ ತಿಂಗಳ ಸಕ್ತಮಜುರಿ ಶಿಕ್ಷೆಗೆ ಗುರಿಯಾಗಿದ್ದಾರೆ.

## ಕರ್ಜಗಿಯ ಗೌಡನ ಕಿಡಿಗೇಡಿತನ

ಹಾವೇರಿಯ ಶ್ರೀ ಹೊಸಮನಿ ಪರಮಣ್ಣನವರು ಕೆಲವು ಸ್ವಯಂಸೇವಕರೊಂದಿಗೆ ವ್ಯಾಖ್ಯಾನವನ್ನು ಕೊಡುವದಕ್ಕಾಗಿ ಕರ್ಜಗಿಗೆ ಹೋಗಿದ್ದರಂತೆ! ಅಲ್ಲಿ ವ್ಯಾಖ್ಯಾನದ ಡಂಗುರವನ್ನು ಸಾರುವದಕ್ಕಾಗಿ ಒಬ್ಬ ಸ್ವಯಂಸೇವಕನ ಕೈಯಲ್ಲಿ ಹಲಿಗೆಯನ್ನು ಕೊಟ್ಟು ಕಳಿಸಿದರಂತೆ! ಹೀಗೆ ಹಲಿಗೆಯನ್ನು ಬಾರಿಸುತ್ತ ಸತ್ಯಾಗ್ರಹಿಗಳ 'ವ್ಯಾಖ್ಯಾನ'ವಿದೆ ಯೆಂದು ಸಾರುತ್ತ ಸಾಗಿರುವಾಗ, ಗೌಡರು ಆ ಸ್ವಯಂಸೇವಕನನ್ನು ಕರೆದ, ಅವನ ಕೈಯಲ್ಲಿಯ ಹಲಿಗೆಯನ್ನು ಕಸಿದುಕೊಂಡು ಅದನ್ನು ಹರಿದೊಗೆದರಂತೆ! ಬಳಿಕ ಆ ಹುಡುಗನು ಮತ್ತೊಂದು ಹಲಿಗೆಯನ್ನು ತೆಗೆದುಕೊಂಡು ಮೊದಲಿನಕಿಂತಲೂ ಜೋರಿನಿಂದ ಬಾರಿಸುತ್ತ ನಡೆದನಂತೆ! ಆಗ ಗೌಡರು ಕೈಲಾಗದವರಂತೆ ಸುಮ್ಮನೆ ನೋಡುತ್ತ ಕುಳಿತುಕೊಂಡರಂತೆ! ಸಾಯಂಕಾಲದ ಸಭೆಯಲ್ಲಿ ಶ್ರೀ. ಪರಮಣ್ಣನವರು ಗೌಡರ ಸಮಾಚಾರವನ್ನು ಚನ್ನಾಗಿ ತೆಗೆದುಕೊಂಡರಂತೆ! ಅಲ್ಲಿಯ ಜನರು ಗೌಡರ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ಹಾಕುವ ವಿಚಾರದಲ್ಲಿರುವರಂತೆ!

## ವ್ಹಾಯಿಸರಾಯರು ಕಣ್ಣು ತೆರೆಯುವರೆ?

ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳಲು ಭಾರತವಾಸಿಗಳೆಲ್ಲರೂ ಈಗ ಬಹು ಆತುರರಾಗಿರುವದರಿಂದ, ಮಹಾತ್ಮಾ ಗಾಂಧಿಯವರನ್ನು ದುಂಡು ಮೇಜಿನ ಪರಿಷತ್ತಿಗೆ ಕರೆಯಿಸಿಕೊಂಡು ಸರಕಾರದವರು ಅವರೊಡನೆ ಸಮಾಧಾನಕರವಾದ ಒಪ್ಪಂದವನ್ನು ಮಾಡಿಕೊಳ್ಳುವಂತೆ ನೀವು ಪ್ರಯತ್ನಿಸಬೇಕು" ಎಂಬ ಆಶಯದ ಪತ್ರಕವನ್ನು "ಇಂಡಿಯನ್ ಚೇಂಬರ್ ಆಫ್ ಕಾಮರ್ಸ ಮತ್ತು ಇಂಡಸ್ಟ್ರಿ" ಸಂಘದವರು ತೆಗೆದು ಅದನ್ನು ವ್ಹಾಯಿಸರಾಯರ ಕಡೆಗೆ ಕೊಟ್ಟು ಕಳಿಸಿದ್ದಾರೆ. ಈ ಪತ್ರಕದ ಮೇಲೆ ಶ್ರೀ ಬಿರ್ಲಾ ಸರ್ ಪುರುಷೋತ್ತಮದಾಸ, ಸರ್ ಚುನಿಲಾಲ ಮೇಹತಾ, ಆರ್ ಕೆ ಷಣ್ಮುಖಂಚೆಟ್ಟಿ ಮೊದಲಾದವರು ರುಜು ಹಾಕಿದ್ದಲ್ಲದೆ, ಮದ್ರಾಸ, ಕಲಕತ್ತಾ, ರಂಗೂನ, ಅಹಮ್ಮದಾಬಾದ, ಬರೋಡಾ, ಮುಂಬಯಿ, ಬೆಂಗಳೂರ, ಕರಾಚಿ ಮೊದಲಾದ ಕಡೆಗಳಲ್ಲಿಯ ವರ್ತಕ ಸಂಘಗಳ ಅಧ್ಯಕ್ಷರೂ, ಉಪಾಧ್ಯಕ್ಷರೂ ಅಂಕಿತಗಳನ್ನಿಕ್ಕಿದ್ದಾರೆ.

## ಖಿಪೋರ್ಡಾದಲ್ಲಿ ಉಪ್ಪಿನ ಲೂಟಿ

ಕೆಲವು ಸತ್ಯಾಗ್ರಹಿಗಳು ಸುತ್ತಲಿನ ಹಳ್ಳಿಗಳ ಜನರೊಂದಿಗೆ ಪ್ಯೋಗಾಡಾ ಕಾಲುವೆಗೆ ಹೋಗಿ ಸಾಮುದಾಯಿಕರೀತಿಯಿಂದ ಉಪ್ಪನ್ನು ಲೂಟಿಮಾಡಿದರು. ಅವರು ತಿರುಗಿ ಬರುವ ಮುಂದೆ ಕೆಲವು ಪೋಲೀಸ ಅಧಿಕಾರಿಗಳು ಅವರನ್ನು ತಡೆದು ಲಾಠಿಗಳನ್ನು ಉಪಯೋಗಿಸಿ, ಉಪ್ಪನ್ನು ಕಸಿದುಕೊಳ್ಳಲು ಯತ್ನಿಸಿದರು. ೧೦೦ ಜನರಿಗೆ ಗಾಯಗಳಾಗಿವೆ.

## ಉಂಟಾಡಿ ಬಿಡಾರವು ಸತ್ಯಾಗ್ರಹಿಗಳಿಗೆ ಸಿಕ್ಕಿತು!

# ಧರಸಾನಾ ಧಾರಾತೀರ್ಥ

### ೧೧೭ ಜನರು ಸೆರೆಹಿಡಿಯಲ್ಪಟ್ಟರು.

ಸುರತ ಹಾಗ ಮುಂಬಯಿಯಿಂದ ಕ್ರಮವಾಗಿ ೨೪, ೪೨ ಜನ ಸತ್ಯಾಗ್ರಹಿಗಳು ಧರಸಾನಕ್ಕೆ ಹೊರಟಿದ್ದರು. ಅವರು ಪೊಲೀಸರಿಂದ ಡೊಂಗರಿ ಸ್ಟೇಶನದಲ್ಲಿ ತಡೆಯಲ್ಪಟ್ಟರು. ಅವರು ತಿರುಗಿ ಬಾಂದ್ರಾದಲ್ಲಿ ಇಳಿದು, ಮತ್ತೆ ನವಸಾರಿಗೆ ಹೊರಟಿದ್ದಾರೆ.

ಉಂಟಾಡಿ ಬಿಡಾರದಲ್ಲಿ ೨೯ ಜನ ಸತ್ಯಾಗ್ರಹಿಗಳಿದ್ದರು. ಅವರಿಗೆ ೪೮ ಜನ ಸತ್ಯಾಗ್ರಹಿಗಳು ಬಂದು ಕೂಡಿದರು. ಡಿ॥ ಸುಪರಿಂಟೆಂಡೆಂಟರು ಅಲ್ಲಿಗೆ ಹೋಗಿ ಎಲ್ಲರನ್ನು ಸೆರೆಹಿಡಿದರು. ಸಂಜೆಗೆ ಉಂಟಾಡಿ ಬಿಡಾರಕ್ಕೆ ಅಹಮ್ಮದಾಬಾದದಿಂದ ಸತ್ಯಾಗ್ರಹಿಗಳು ಬಂದು ಸೇರಿದ್ದರು. ಕಾವಲಿನವರು ಅಲ್ಲಿಗೆ ಹೋಗಿ ಬಿಡಾರವನ್ನು ತೆರವು ಮಾಡಲು ಕೇಳಿಕೊಂಡರು. ಸತ್ಯಾಗ್ರಹಿಗಳು ನಿರಾಕರಿಸಿದರು. ಬಳಿಕ ಅವರು ಸೆರೆಹಿಡಿಯಲ್ಪಟ್ಟರು. ಒಟ್ಟಿಗೆ ೧೧೭ ಜನರು ಸೆರೆಯಾಳುಗಳಾಗಿದ್ದಾರೆ. ಶ್ರೀಮತಿ ಮಣಿಬೇನ ಪಟೇಲರಿಗೆ ಬಿಡಾರದಿಂದ ಹೊರಗೆ ಬರಲು ಅಧಿಕಾರಿಗಳು ಕೇಳಿದ್ದರಿಂದ ಅವರು ಹೊರಗೆ ಬಂದು ನಿಂತರು.

ಶೇಟ ಅಬ್ದುಲ್ಲಾ ಇವರ ನೇತೃತ್ವದಲ್ಲಿ ವ್ಹಿಲೆಪಾರ್ಲೆಯಿಂದ ೭೫ ಜನ ಸತ್ಯಾಗ್ರಹಿಗಳೂ, ಅಹಮ್ಮದಾಬಾದ ಮತ್ತು ಕಾಯರಾದಿಂದ ಶ್ರೀ. ಲಾಖಿಯಾ ಇವರ ನೇತೃತ್ವದಲ್ಲಿ ೧೦೦ ಜನರೂ, ಗೋಧ್ರಾದಿಂದ ೨೫ ಜನರೂ, ಪುಣೆಯಿಂದ ೪೦ ಜನರೂ, ತ್ರಿವೇಂದ್ರಮದಿಂದ ೧೨ ಜನರೂ ಧರಸಾನಾ ಧಾರಾತೀರ್ಥಕ್ಕೆ ಹೊರಟಿದ್ದಾರೆ. ಗೋಧ್ರಾದಿಂದ ಹೊರಟ ಜನರಲ್ಲಿ ಮುಂಬಯಿ ಕಾಯದೆ ಮಂಡಳ ಸಭಾಸದರಾಗಿದ್ದ ಶ್ರೀ. ವಾಮನ ಮುಕದಮರು ಸೇರಿದ್ದಾರೆ.

ಉಂಟಾಡಿ ಬಿಡಾರದ ಮುಂದೆ ಇಡಲ್ಪಟ್ಟ ಪೋಲೀಸರ ಕಾವಲು ತೆಗೆಯಲ್ಪಟ್ಟಿದೆ. ಪೋಲೀಸರು ಹೋದಬಳಿಕ ಸತ್ಯಾಗ್ರಹಿಗಳು ಅದನ್ನು ತಮ್ಮ ವಶಪಡಿಸಿಕೊಂಡರು. ಈಗ ಅಲ್ಲಿ ಅಹಮ್ಮದಾಬಾದ, ಖೇಡಾ, ವ್ಹಿಲೆಪಾರ್ಲೆ, ಸುರತ ಮತ್ತು ಉಂಟಾಡಿಗಳಿಂದ ಕೂಡಿ ೨೪೮ ಜನ ಸತ್ಯಾಗ್ರಹಿಗಳು ಇದ್ದಾರೆ. ಶ್ರೀ. ನರಹರಿಭಾಯಿ ಪರೀಖರಿಗೆ ೧ ವರ್ಷದ ಸಶ್ರಮ ಶಿಕ್ಷೆಯಾಗಿದೆ. ಅಂಬಾಲಾಲ ಪಟೇಲ ಮತ್ತು ತ್ರಿಭುವನದಾಸರಿಗೆ ೬ ತಿಂಗಳ ಸಶ್ರಮ ಶಿಕ್ಷೆಯಾಗಿದೆ.

## ಬೆಳಗಾವಿ ಜಿಲ್ಹೆಯಲ್ಲಿ ದಬ್ಬಾಳಿಕೆ

ಸಂಪಗಾವಿಯ ಹುರುಪಿನ ತರುಣರಾದ ಶ್ರೀ. ಈರಯ್ಯ ವಸ್ತ್ರದ ಹಾಗು ಮಧ್ವಾಚಾರ್ಯ ಹುಕ್ಕೇರಿಯವರನ್ನು ಬೈಲಹೊಂಗಲದಲ್ಲಿ ಭಾಷಣ ಮಾಡಿದುದಕ್ಕಾಗಿ ಬೈಲಹೊಂಗಲದಲ್ಲಿ ಸೆರೆಹಿಡಿದಿರುವರು.

## ಲಖನೌದಲ್ಲಿ ಭಯಂಕರ ದಂಗೆ

### ಪೋಲೀಸರು ಗೋಳೀಬಾರು ಮಾಡಿದರು

೪ ಜನರು ಮರಣ ಹೊಂದಿದರು. ೩೦ ಜನರಿಗೆ ಗಾಯ

ಲಖನೌದ ಅಧಿಕಾರಿಗಳು ಯುರೋಪಿಯನರ ವಸತಿಸ್ಥಳವಾದ ಹಜರತಗಂಜದಲ್ಲಿ ಕಾಂಗ್ರೆಸದವರ ನಿಶಾನಿಯನ್ನು ಕಾಲಿಕವಾಗಿ ಕಟ್ಟಿದ್ದನ್ನು ತೆಗೆದಿದ್ದರು. ಈ ಅಪ್ಪಣೆಯನ್ನು ಮುರಿದು ಕಾಂಗ್ರೆಸದವರು ತಾ॥ ೨೬ ನೆಯ ದಿವಸ ಮೆರವಣಿಗೆಯನ್ನು ಹೊರಡಿಸಿ ಹಜರತಗಂಜದಲ್ಲಿ ಕಾಲಿಟ್ಟರು. ಅಧಿಕಾರಿಗಳು ಅದನ್ನು ಕಾಯಿದೆಗೆ ವಿರುದ್ಧವಾದ ಸಂಘವೆಂದು ಸಾರಿ, ಮುಖಂಡರಾದ ಶ್ರೀ. ವಿಶ್ವನನ್ನು ಸೆರೆಹಿಡಿದುಕೊಂಡು ಹೋದರು. ಬಳಿಕ ಪೊಲೀಸರು ಶಕ್ತಿಯನ್ನು ಪ್ರಯೋಗಿಸಿ ಜನರನ್ನು ಚದರಿಸಿದರು. ೮-೧೦ ಜನರಿಗೆ ಗಾಯಗಳಾದವು. ತಾ॥ ೨೭ ನೆಯ ದಿವಸ ೬ ಜನ ಸತ್ಯಾಗ್ರಹಿಗಳು ಮತ್ತೆ ನಿರ್ಬಂಧಿಸಿದ ಹಾದಿಗಳಲ್ಲಿ ಹಾಯ್ದರು. ಈ ಆರು ಜನರು ತಿರುಗಿ ಹೋದ ಕೂಡಲೆ, ಪೊಲೀಸ ಸುಪರಿಂಟೆಂಡೆಂಟರು ಪಾರ್ಕಿನಲ್ಲಿದ್ದ ರಾಷ್ಟ್ರಧ್ವಜವನ್ನು ತೆಗೆಯಲು ಕಾಂಗ್ರೆಸ್ ಅಧಿಕಾರಿಗಳಿಗೆ ಹೇಳಿ ಕಳುಹಿಸಿದರು. ಕಾಂಗ್ರೆಸದವರು ನಿರಾಕರಿಸಿದರು. ಬಳಿಕ ಪೋಲೀಸರು ಅಲ್ಲಿಗೆ ಹೋಗಿ ರಾಷ್ಟ್ರಧ್ವಜವನ್ನು ಕಿತ್ತಿ ಒಗೆದರು. ಆಮೇಲೆ ಆ ಸ್ಥಳದಲ್ಲಿ ಸಶಸ್ತ್ರ ಸೈನಿಕರು ಬಂದು ನಿಂತರು. ಸಂಜೆಯಲ್ಲಿ ಶಾಂತತೆಯುಂಟಾದುದರಿಂದ ಸೈನಿಕರು ತಿರುಗಿ ಹೋದರು. ಸೈನಿಕರು ತಿರುಗಿ ಹೋದ ಬಳಿಕ ಸಾವಿರಾರು ಜನರು ದೊಂಬಿಗಳನ್ನೆಬ್ಬಿಸಿದರು. ಅಂಗಡಿಗಳನ್ನು ಲೂಟಿ ಮಾಡ ಹತ್ತಿದರು. ಪೋಲೀಸರ ಮೇಲೆ ಕಲ್ಲುಗಳು ಬೀಳಹತ್ತಿದವು. ಪೋಲೀಸರು ಗೋಳೀಬಾರ ಮಾಡಿದರು. ೪ ಜನರು ಮರಣ ಹೊಂದಿದರು. ೩೦ ಜನರಿಗೆ ಗಾಯಗಳಾಗಿವೆ. ಬಳಿಕ ಸೈನಿಕರು ಬಂದು ಪಟ್ಟಣದ ಮುಖ್ಯ ಮುಖ್ಯ ಕೂಟಗಳಲ್ಲಿ ನಿಂತರು. ಶಾಂತತಾಭಂಗದ ಕಾಯಿದೆಯು ಸಾರಲ್ಪಟ್ಟಿದೆ.

(ತಂತಿಯ ವಾರ್ತೆ) ತಾ॥ ೩೦.

## ಡಾಕಾ ಮತ್ತು ರಂಗೂನದಲ್ಲಿ ಭಯಂಕರ ದಂಗೆ.

ರಂಗೂನದಲ್ಲಿ ದಂಗೆಯು ಬರಬರುತ್ತ ಭಯಂಕರ ಸ್ವರೂಪವನ್ನು ಹೊಂದಹತ್ತಿದೆ. ಈ ವರೆಗೆ ೧೪೮ ಜನರು ಮರಣ ಹೊಂದಿದ್ದಾರೆ. ಡಾಕಾದಲ್ಲಿಯು ದಂಗೆಯು ಘೋರ ಸ್ವರೂಪವನ್ನು ತಾಳಿದೆ.

## ಬ್ರಿಟಿಶರ ಬಣ್ಣವು ಹೊರಬಿತ್ತು.

ಲಾರ್ಡ್ಸ್ ಸಭೆಯಲ್ಲಿಯ ಕಾನ್ಸರ್ವೇಟಿವ್ ಪಂಗಡದ ಮುಖಂಡರಾದ ಲಾರ್ಡ ಸ್ಯಾಲಿಸಬರಿಯವರು ಒಂದು ಕಡೆಯಲ್ಲಿ ಹೀಗೆ ಉದ್ಗಾರ ತೆಗೆದಿದ್ದಾರೆ:—"ಬ್ರಿಟಿಶರು ಭರತಖಂಡಕ್ಕೆ ರಾಜಕೀಯ ಶಿಕ್ಷಣವನ್ನು ಕೊಟ್ಟಿರುವದಿಲ್ಲ. ಆದುದರಿಂದ ಭರತಖಂಡದ ಬಗ್ಗೆ ಏನನ್ನು ಮಾಡಲಾರರು. ಭಾರತೀಯರು ದರಿದ್ರರು, ಅಜ್ಞಾನಿಗಳೂ ಇರುವರಲ್ಲದೆ, ಅವರ ಆಗುಹೋಗುಗಳೆಲ್ಲವೂ ಬ್ರಿಟಿಶರನ್ನೇ ಅವಲಂಬಿಸಿದೆ. ವಸಾಹತಿ ಸ್ವರಾಜ್ಯವೆಂದರೇನೆಂಬುದು ಸಹ ಭಾರತೀಯರಿಗೆ ಗೊತ್ತಿರುವದಿಲ್ಲ. ಭಾರತೀಯರು ಸಭ್ಯತನದಿಂದ ವರ್ತಿಸಿದರೆ ಮಾತ್ರ ಅವರಿಗೆ ನಾವು ಸ್ವರಾಜ್ಯವನ್ನು ದಯಪಾಲಿಸಬಹುದು." ಭಾರತೀಯರ ಬಗ್ಗೆ ಬ್ರಿಟಿಶರಲ್ಲಿದ್ದ ಕಲ್ಪನೆಯು ಇದರಿಂದ ವ್ಯಕ್ತವಾಗುವದಿಲ್ಲವೇ? ಕಾನ್ಫರೆನ್ಸದಲ್ಲಿಯ ಬ್ರಾಹ್ಮಣೇತರರ ಮುಂದಾಳುಗಳಾದ ಶ್ರೀ ಜಾಧವ ರಾವ ಪ್ರಭೃತಿಗಳು ಈ ಹೂರಣವನ್ನಿಷ್ಟು ಸವಿದು ನೋಡಲಿ.

## ಕಾನಪುರದಲ್ಲಿ ದಬ್ಬಾಳಿಕೆ.

ಸಂಯುಕ್ತ ಪ್ರಾಂತದ ಸತ್ಯಾಗ್ರಹ ಮಂಡಳದ ಅಧ್ಯಕ್ಷರಾದ ಶ್ರೀ ಗಣೇಶ ಶಂಕರ ವಿದ್ಯಾರ್ಥಿಯವರಿಗೆ ೧ ವರ್ಷದ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ.

## ಸತ್ಯಾಗ್ರಹಿಯು ಮರಣಕ್ಕೂ ಹೆದರಲಿಲ್ಲ

ಪಂಜಾಬ ಪ್ರಾಂತದ ರಾವಳಪಿಂಡಿಯಲ್ಲಿ ಸಿಂದೀ ಅಂಗಡಿಗಳ ಪಿಕೆಟಿಂಗ ಬಹು ಉತ್ಸಾಹದಿಂದ ಸಾಗಿದೆ. ಒಂದು ದಿವಸ ಅಕ್ಬರಸಿಂಗನೆಂಬೊಬ್ಬ ಸ್ವಯಂಸೇವಕನು "ಪಿಕೆಟಿಂಗ" ಕಾರ್ಯವನ್ನು ನಡಿಸಿದ್ದನು. ಸ್ವಲ್ಪಹೊತ್ತಿನ ವೇಳೆ ಅಂಗಡಿಯ ಒಡೆಯನು ಅಲ್ಲಿಗೆ ಒಂದು ಅಂಗಡಿಯೊಳಗಿನ ಕೆಲವು ಸೆರೆಯ ಬಾಟ್ಲಿಗಳನ್ನು ಟಾಂಗಾದ ಮೇಲೆ ಹಾಕಿಕೊಂಡು ಹೊರಡಲುದ್ಯುಕ್ತನಾದನು. ಇದನ್ನು ಕಂಡು ಸ್ವಯಂಸೇವಕನು ಹೊರಗೆ ಒಯ್ಯಬಾರದೆಂದು ಪರಿಪರಿಯಾಗಿ ಬೇಡಿಕೊಂಡನು. ಆದರೂ ಅಂಗಡಿಕಾರನು ತನ್ನ ಹಟವನ್ನು ಬಿಡಲಿಲ್ಲ. ಬಳಿಕ ಸತ್ಯಾಗ್ರಹಿಯು ಹಾದಿಯಲ್ಲಿ ಅಡ್ಡ ಮಲಗಿಕೊಂಡು "ಬೇಕಾದರೆ ಟಾಂಗೆಯನ್ನು ಮೇಲೆ ಹಾಯಿಸಿಕೊಂಡು ಹೋಗಿರಿ" ಎಂದು ಹೇಳಿದನು. ಅಂಗಡಿಕಾರನು ಟಾಂಗೆಯನ್ನು ಮೇಲೆ ಹಾಯಿಸಿಕೊಂಡು ಹೋದನು. ಸ್ವಯಂಸೇವಕನಿಗೆ ಬಹಳ ಗಾಯವಾಯಿತು. ಪಂಡಿತ ಮಾಲವೀಯರೂ ಇವರು ಅಲ್ಲಿಗೆ ಹೋಗಿ ಸ್ವಯಂಸೇವಕನನ್ನು ಆಸ್ಪತ್ರಿಗೆ ತೆಗೆದುಕೊಂಡು ಹೋದರು.

## ಮುಸಲ್ಮಾನರ ಸ್ವದೇಶಿ ಪ್ರೇಮ

ಅಮೀನಗಡದಲ್ಲಿಯ ಮುಸಲ್ಮಾನರು ಬರುವ ಮೋಹರಮ್ಮದಲ್ಲಿ ಕೇವಲ ಖಾದಿಯನ್ನೇ ಉಪಯೋಗಿಸುವೆವೆಂದು ನಿರ್ಧರಿಸಿಕೊಂಡಿದ್ದಾರೆ. ಇಲ್ಲಿಯ ಮುಸಲ್ಮಾನರು?

## ಶ್ರೀಮತಿ ಸತ್ಯದೇವಿಗೆ ೬ ತಿಂಗಳ ಸಾದಾ ಶಿಕ್ಷೆ.

ಕ್ರಿ. ಪ್ರೊ. ಕೋಡಿನ ೧೦೮ ನೆಯ ಕಲಮಿನನ್ವಯ ದಿಲ್ಲಿಯಲ್ಲಿ ಸೆರೆಹಿಡಿಯಲ್ಪಟ್ಟ ಶ್ರೀಮತಿ ಸತ್ಯದೇವಿಯವರ ವಿಚಾರಣೆಯಾಗಿ, "೬ ತಿಂಗಳವರೆಗೆ ಸಭ್ಯರೀತಿಯಿಂದ ವರ್ತಿಸುತ್ತೇನೆಂಬುದಾಗಿ ೫೦೦ ರೂ. ಹೊಣೆಯನ್ನು ಕೊಡಿರೆಂದು ಅವರನ್ನು ಕೇಳುವದರಲ್ಲಿ ಬಂದಿತು. ಶ್ರೀಮತಿ ದೇವಿಯವರು ಹೊಣೆಯನ್ನು ಕೊಡಲು ಒಪ್ಪದ್ದರಿಂದ ಅವರಿಗೆ ೬ ತಿಂಗಳ ಸಾದಾ ಶಿಕ್ಷೆಯಾಯಿತು. 'ಅ' ವರ್ಗದ ಸೆರೆಯಾಳುಗಳಾಗಿ ತಿಳಿಯಲ್ಪಡುವರು.

### ಇಹವೃತ್ತ

## ವರ್ತಕರ ಪಶ್ಚಾತ್ತಾಪ

ಇನ್ನುಮೇಲೆ ಪರದೇಶಿ ಬಟ್ಟೆಗಳನ್ನು ಖರಿದಿಸುವದಿಲ್ಲವೆಂದು ಇಲ್ಲಿಯ ಬಟ್ಟೆಯ ವರ್ತಕರು ನಿಶ್ಚಯಿಸಿಕೊಂಡಿರುವರಷ್ಟೆ. ಆದರೆ ಇದನ್ನು ಮೀರಿ ಓರ್ವ ವರ್ತಕರು ನೂರಾರು ರೂಪಾಯಿಗಳ ಪರದೇಶಿ ಸರಕುಗಳನ್ನು ಖರಿದಿಸಿಕೊಂಡರು. ಇದನ್ನು ವರ್ತಕರ ಸಂಘದವರು ಕಂಡುಹಿಡಿದು, ಮೊದಲನೆಯ ಅಪರಾಧವಾದುದರಿಂದ ಅವರಿಂದ ಕ್ಷಮೆಯನ್ನು ಬೇಡಿಸಿಕೊಂಡರು.

## ಕನ್ನಡಿಗನಿಗೆ ಸಹಾಯ

ಚಿತ್ರಕಲೆಯ ಸಂಬಂಧವಾಗಿ ಹೆಚ್ಚಿನ ಶಿಕ್ಷಣವನ್ನು ಪಡೆಯಲು ಜರ್ಮನಿಗೆ ತೆರಳಿದ ತರುಣ ಕನ್ನಡಿಗನಾದ ಶ್ರೀ. ಬಿ. ವ್ಹಿ. ಅಳವಂಡಿಯವರಿಗೆ ಅಲ್ಲಿಯ ಶಿಕ್ಷಣಾರ್ಥವಾಗಿ ಸಹಾಯವೆಂದು, ದತ್ತಾತ್ರಯ ನಾಟಕ ಮಂಡಳದ ಒಡೆಯರಾದ ಶ್ರೀ. ಗರುಡ ಸದಾಶಿವರಾಯರು ತಾರೀಖು ೨-೬-೩೦ ನೆಯ ದಿವಸ "ಶರಣಬಸವ" ಎಂಬ ನಾಟಕವನ್ನು ಪ್ರಯೋಗಿಸಿ ಅದರಿಂದ ಬಂದ ಉತ್ಪನ್ನವನ್ನು ಕೊಡಲು ಒಪ್ಪಿದ್ದಾರೆ. ಕನ್ನಡಿಗರೆಲ್ಲರೂ ಸಹಾಯಮಾಡಬೇಕಾಗಿ ವಿನ್ನಹ.

ಕಂಪನಿಯ ಮುಕ್ಕಾಂ ಸ್ವಲ್ಪ ಉಳಿದಿವೆ,
**ಗದಗ ಶ್ರೀ ದತ್ತಾತ್ರೆಯ ಸಂಗೀತ ನಾಟಕ**
**ಮಂಡಳಿಯವರು**
ತಮ್ಮ ಲೋಕಪ್ರಿಯವಾದ
ಶನಿವಾರ ತಾ|| ೩೧—೫—೩೦
**ಮಾಯಾಬಾಜಾರ**
ಕನ್ನಡ ನಾಡಿನಿಂದ ಕಲಾಪ್ರಗತಿಗಾಗಿ ಜರ್ಮನಿಗೆ ಹೋದ
**ಬಿ. ವ್ಹಿ. ಅಳವಂಡಿಯವರ ಸಹಾಯಕ್ಕಾಗಿ.**
ಸೋಮವಾರ ತಾ|| ೨-೬-೩೦
(ಧರ್ಮಾರ್ಥ ಕೊಡಲ್ಪಡುವದು.)
**ಶರಣಬಸವ**
**ಎಂಬ ನಾಟಕಗಳನ್ನು ಅಭಿನಯಿಸುವರು.**
ಈ ನಾಟಕಗಳು ಪುನಃ ಆಡಲ್ಪಡುವದಿಲ್ಲ.
ಸಂಘದೊಡೆಯ—**ಸದಾಶಿವರಾವ ಗರೂಡ**

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ
ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ, ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೫೮೭ ನಿತ್ಯಸಂಚಿಕೆಯು. ಬೆಲೆ ೦—೦—೩

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ — ಮನು

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ರವಿವಾರ ಮಿತಿ ಜ್ಯೇಷ್ಠ ಶುದ್ಧ ೫ ಶಕ ೧೮೬೪ ತಾ|| ೧—೬—೪೨ ಸಂಚಿಕೆ ೬೩

## ಮಿ|| ಬೆನ್ನರು ಬಾಯ್ತೆಗೆದರು

ಕಳೆದ ತಾ||೨೬ ಕ್ಕೆ ಕಾಮನ್ಸ ಸಭೆಯಲ್ಲಿ ಹಿಂದುಸ್ತಾನದ ಸಂಬಂಧವಾಗಿ ಚರ್ಚೆಯು ನಡೆದಾಗ ಸ್ಟೇಟ ಸೆಕ್ರೆಟರಿಯವರಾದ ಮಿ|| ಬೆನ್ನರು ಹೇಳಿದ್ದೇನಂದರೆ:—

"ಗುಜರಾಥ ಮತ್ತು ವಾಯುವ್ಯ ಸರಹದ್ದಿನ ಪ್ರಾಂತಗಳ ಹೊರತು ಎಲ್ಲ ಕಡೆಗೂ ಶಾಂತತೆಯಿದೆ. ಕೆಲವು ಕಡೆಗಳಲ್ಲಿ ದಂಗೆಗಳಾದದ್ದೇನೋ ನಿಜ. ಹಳ್ಳಿಗಳಲ್ಲಿ ರೈತರು ಶಾಂತವಾಗಿ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿದ್ದಾರೆ. ಕಾಯಿದೆ ಭಂಗದ ಚಳವಳಿಗೆ ಮುಸಲ್ಮಾನ ಸಮಾಜದ ಬೆಂಬಲವಿಲ್ಲ. ಕಾಯಿದೆಭಂಗದ ಚಳವಳಿಯನ್ನು ಹಳ್ಳಿಹಳ್ಳಿಗಳಲ್ಲಿ ಪಸರಿಸಲು ರಾಷ್ಟ್ರಸಭೆಯವರು ಯತ್ನಿಸುತ್ತಿರುವರು. ಈ ಚಳವಳಿಯು ಹಳ್ಳಿಗಳಲ್ಲಿ ಹರಡದಂತೆ ಮಾಡಲು ಸರಕಾರದವರು ಸಿದ್ಧರಿರುವರು. ಈ ದಬ್ಬಾಳಿಕೆ ಮಾರ್ಗವನ್ನವಲಂಬಿಸದಿದ್ದರೆ ರಾಜ್ಯಕಾರಭಾರವು ಸುರಳೀತವಾಗಿ ಸಾಗುವಂತಿಲ್ಲ.

ಹಿಂದುಸ್ತಾನಕ್ಕೆ ವಸಾಹತಿ ಸ್ವರಾಜ್ಯವು ಬೇಕೆಂದು ಭಾರತೀಯರು ಬಯಸುತ್ತಿರಬಹುದು. ಅಶಾಂತತೆ ಮತ್ತು ಬಂಡಾಯದಿಂದ ಈ ಧ್ಯೇಯವು ಸಾಧಿಸದು. ಕಾಯಿದೆಭಂಗದ ಚಳವಳಿಯನ್ನು ನಿಲ್ಲಿಸುವದು ಸರಕಾರದ ಕೈಯಲ್ಲಿಲ್ಲ. ಅದನ್ನು ಸುರುವು ಮಾಡಿದವರೇ ಅದನ್ನು ನಿಲ್ಲಿಸಬೇಕು. ಹಿಂದುಸ್ತಾನದ ಜನರು ನಡೆಸಿದ ಪರದೇಶಿ ಸರಕುಗಳ ಬಹಿಷ್ಕಾರವನ್ನು ಒತ್ತಾಯದಿಂದ ಮುರಿಯುವದು ಶಕ್ಯವಿಲ್ಲ. ಭಾರತೀಯರು ಪರದೇಶಿ ಸರಕುಗಳನ್ನು ಕೊಂಡುಕೊಳ್ಳಬೇಕೆಂದು ಸರಕಾರದವರು ಹೆಂಗೆ ಹೇಳಿಯಾರು? ಹಿಂದುಸ್ತಾನದ ಜನರೆಲ್ಲರೂ ಒಂದಾದರೆ ಅವರ ಬೇಡಿಕೆಯನ್ನು ತಿರಸ್ಕರಿಸುವದು ಸಾಧ್ಯವಿಲ್ಲ. ಅಲ್ಪಸಂಖ್ಯಾಕರಿಗೆ ಸುರಕ್ಷಿತತೆ ತೋರುವಂತಹ ರಾಜ್ಯಪದ್ಧತಿಯು ಬೇಕು. ಹಿಂದುಸ್ತಾನದಿಂದ ಆರ್ಥಿಕ ಲಾಭವನ್ನು ಅನ್ಯಾಯದಿಂದ ಮಾಡಿಕೊಳ್ಳುವ ಕಲ್ಪನೆಯನ್ನು ಬ್ರಿಟಿಶರು ಬಿಟ್ಟುಕೊಡಬೇಕು. ಈಗಿನ ಕಠಿಣ ಪರಿಸ್ಥಿತಿಯಿಂದ ಬ್ರಿಟಿಶರೂ ಭಾರತೀಯರೂ ಕೂಡಿಯೇ ಬೋಧ ತೆಗೆದುಕೊಳ್ಳುವಂತಿದೆ.

## ಸರ್ ಸೆಟಲವಾಡರು ಉಸುರ್ಗರೆದರು

ತಾ|| ೨೬ ಕ್ಕೆ ಹೌಸ ಆಫ್ ಕಾಮನ್ಸ ಸಭೆಯಲ್ಲಿ ಸ್ಟೇಟ ಸೆಕ್ರೆಟರಿಯವರಾದ ಮಿ|| ಬೆನ್ನರು ಹಿಂದುಸ್ತಾನದ ವಿಷಯವಾಗಿ ಮಾಡಿದ ಭಾಷಣವನ್ನು ಕುರಿತು ಉದಾರ ಮತವಾದಿಗಳ ಮುಖಂಡರಾದ ಸರ್ ಚಿಮಣಲಾಲ ಸೆಟಲವಾಡರು ಹೀಗೆ ಉಸುರ್ಗರೆದಿದ್ದಾರೆ:— ಭರತಖಂಡದಲ್ಲಿಯ ನಿವಾಸಿಗಳಲ್ಲಿ ಬಹಳ ಜನರು ಶಾಂತತೆಯಿಂದಲೂ ಸುಖದಿಂದಲೂ ಕಾಲಕಳೆಯುತ್ತಿರುವರೆಂದು ಮಿ| ಬೆನ್ನರು ಹೇಳಿದ್ದಾರೆ. ಇದು ಇಲ್ಲಿಯ ಪರಿಸ್ಥಿತಿಗೆ ತೀರ ವಿರುದ್ಧವಾಗಿದೆ, ಮುಂಬಯಿಯಲ್ಲಿಯೇ ಕಳೆದ ೨ ತಿಂಗಳುಗಳಿಂದ ಒಂದೇ ಸಮನೆ ಹರತಾಳಗಳೂ, ಮೆರವಣಿಗೆಗಳೂ ಆಗಿ ವ್ಯವಹಾರವು ನಿಂತುಹೋಗಿದೆ. ದಿವಸಗಳು ಕಳೆದು ಹೋದಂತೆ ಹಿಂದುಸ್ತಾನದ ಸ್ಥಿತಿಗತಿಗಳು ಹೆಚ್ಚು ಹೆಚ್ಚು ಕೆಡ ಹತ್ತಿವೆ. ಹೀಗಿದ್ದರೂ ಬ್ರಿಟಿಶರು ಅವಶ್ಯಕವಾಗಿದ್ದುದನ್ನು ಬಿಟ್ಟುಗೊಟ್ಟು ಇನ್ನೂ ನಿರೀಕ್ಷಿಸಹತ್ತಿದ್ದಾರೆ. ವಸಾಹತಿ ಸ್ವರಾಜ್ಯದ ಬಗ್ಗೆ ದುಂಡು ಮೇಜಿನ ಪರಿಷತ್ತಿನಲ್ಲಿ ಚರ್ಚಿಸುವೆವೆಂದು ಅವರು ಹೇಳಬೇಕಾಗಿತ್ತು. ಹೀಗೆ ಹೇಳುವದನ್ನು ಬಿಟ್ಟು ಕೂಲಿಕಾರ ಸರಕಾರವೂ, ವ್ಹಾಯಿಸರಾಯರೂ ಸಾಯಮನ್ ವರದಿಯ ಮೇಲೆ ವಿಶ್ವಾಸವನ್ನಿಟ್ಟು ಕುಳಿತುಕೊಂಡಿದ್ದಾರೆ. ಹಿಂದುಸ್ತಾನದಲ್ಲಿಯ ಅಸಂತೋಷದ ಮೂಲ ಕಾರಣಗಳನ್ನು ಕಂಡುಹಿಡಿದು ಭಾರತೀಯರನ್ನು ಸಮಾಧಾನಪಡಿಸುವದೇ ಈಗ ಅವರಿಗೆ ಮೇಲಾದ ಹಾದಿಯಾಗಿದೆ. ರಾಷ್ಟ್ರೀಯ ಮುಖಂಡರೊಡನೆ ಚರ್ಚೆಯನ್ನು ನಡಿಸಿದಲ್ಲಿ ಇವರ ಮಾನಕ್ಕೆ ಎಳ್ಳಷ್ಟು ಕುಂದು ಬರಲಾರದು. ಹೀಗೆ ಸಮಾಧಾನಕರವಾಗಿ ಒಪ್ಪಂದ ಮಾಡಿಕೊಳ್ಳಲು ಸರಕಾರವು ಸಿದ್ಧವಾದರೆ ಗಾಂಧಿಯವರಾದರೂ ತಮ್ಮ ಚಳವಳಿಯನ್ನು ನಿಲ್ಲಿಸುವರು.

## ಬಂಡೀಗಾಲಿಯ ಪರಿಷತ್ತಿಗೆ ಪಾರ್ಸಿ ಜನರ ಬಹಿಷ್ಕಾರ

ತಾ|| ೨೮ ನೆಯ ದಿವಸ ಮುಂಬಯಿಯಲ್ಲಿ ರಾಜಕೀಯ ಸಭೆಯವರ ಪರವಾಗಿ ಪಾರ್ಸಿ ಜನರ ಸಭೆ ಸೇರಿತ್ತು. ಪಾರ್ಸಿ ಜನರ ಪರವಾಗಿ ವ್ಹಾಯಿಸರಾಯರಿಗೆ ಬಂಡೀಗಾಲಿಯ ಪರಿಷತ್ತಿನ ಬಗ್ಗೆ ಬಿನ್ನಹ ಪತ್ರಿಕೆಯನ್ನು ಕಳುಹಿಸಲು "ಪಾರ್ಸಿ ಪಂಚಾಯತ ನಿಧಿ"ಯ ಸಂಘಕ್ಕೆ ಯಾವ ಅಧಿಕಾರವು ಇಲ್ಲವೆಂದೂ, ಹಾಗೆ ಈಗ ಪತ್ರಿಕೆಯನ್ನು ಕಳಿಸಿದ್ದಲ್ಲಿ, ಅದು ಈ ಸಂಘಕ್ಕೆ ಯಾವ ರೀತಿಯಿಂದಲೂ ಸಂಬಂಧಿಸಿರುವದಿಲ್ಲವೆಂದೂ ಸಭೆಯಲ್ಲಿ ನಿರ್ಧರಿಸಿಕೊಂಡರು.

## ವಿಠ್ಠಲಭಾಯಿಯವರ ನಿರ್ವಾಣಿ.

"ಸತ್ಯಾಗ್ರಹ ಚಳವಳಿಯ ಸತ್ಯಾಂಶವು ದೇಶ ಬಾಂಧವರಿಗೆ ತಿಳಿಯ ಬಾರದೆಂದು ಸರಕಾರವು ಇಚ್ಛಿಸುತ್ತದೆ ಒಂದು ಪ್ರಾಂತದಲ್ಲಿ ನಡೆದ ಚಳವಳಿಯ ವೃತ್ತಾಂತವು ಉಳಿದ ಪ್ರಾಂತದವರಿಗೆ ಸಂಪೂರ್ಣವಾಗಿ ಗೊತ್ತಾಗುವದಿಲ್ಲ. ಹೊರಗಿನ ಜಗತ್ತಿಗೂ ಈ ಚಳವಳಿಯ ಸುದ್ದಿಗಳು ತಿಳಿಯ ಬಾರದಾಗಿ ಅವರ ಮನೀಷೆ, ಆದುದರಿಂದಲೇ ಅವರು ಸುದ್ದಿಗಳನ್ನು ಹಿಡಿದು ಕಳಿಸುವದನ್ನು ಬಲವತ್ತರವಾಗಿ ಸಾಗಿಸಿದ್ದಾರೆ. ಕಾಯದೆಗೆ ಅನುಸಾರವಾಗಿ ನಡೆಯುವದು ಸರಕಾರಕ್ಕೆ ಈಗ ಅಸಾಧ್ಯವಾಗಿದೆ. ಸರಕಾರದವರು ಬಡಿಗೆ ಇಲ್ಲವೆ ಗುಂಡುಗಳ ಆಧಾರದಿಂದ ಈಗ ಹಿಂದುಸ್ಥಾನವನ್ನು ಆಳಹತ್ತಿದ್ದಾರೆ. ಸರಕಾರದವರು ಪ್ರಾರಂಭಿಸಿದ ದಬ್ಬಾಳಿಕೆಯ ಮೂಲಕವಾಗಿ, ಜನರಲ್ಲಿಯ ಅಹಿಂಸೆಯ ಮೇಲಿನ ವಿಶ್ವಾಸವು ಹಾರಿಹೋಗಿ ಅವರು ಹಿಂಸಾ ಪ್ರವೃತ್ತರಾದರೆ ಅದರ ಎಲ್ಲ ಹೊಣೆಗಾರಿಕೆಯು ಸರಕಾರದವರ ಮೇಲೆಯೇ ಬೀಳುವದು ಹಾಗೆ ಪರಿಸ್ಥಿತಿಯು ಪ್ರಾಪ್ತವಾದರೆ, ಭಾರತಖಂಡವೂ ಅದರೊಡನೆ ಇಂಗ್ಲಂಡವೂ ಅರಿಷ್ಟಕ್ಕೊಳಗಾಗುವದು.

## ಸುಲೇಮಾನ ಮಂಡಳಕ್ಕೆ ಬಹಿಷ್ಕಾರ.

ಪೇಶಾವರದಲ್ಲಾದ ದಂಗೆಯ ಸಂಬಂಧವಾಗಿ ವಿಚಾರ ಮಾಡಲು ಸರಕಾರದವರಿಂದ ನಿಯಮಿತವಾದ ಸುಲೇಮಾನ ಮಂಡಳಕ್ಕೆ ಪೇಶಾವರ ಖಿಲಾಫತ ಕಮೀಟಿಯವರು ಕೆಳಗಿನ ಕಾರಣಗಳಿಗಾಗಿ ಬಹಿಷ್ಕಾರ ಹಾಕಿದ್ದಾರೆ. (೧) ಈ ವಿಚಾರಣೆಯ ಮಂಡಳದಲ್ಲಿ ಸ್ವತಂತ್ರ ವೃತ್ತಿಯ ಸಭಾಸದನೊಬ್ಬನಾದರೂ ಇಲ್ಲ. (೨) ಯಾವ ಕಾರಣಗಳಿಗಾಗಿ ದಂಗೆಯು ಸಂಭವಿಸಿತು, ಹಾಗು ದಂಡಿನವರು ಯಾವ ಯಾವ ಅಸನ್ನಿಹಿತ ಅತ್ಯಾಚಾರಗಳನ್ನು ಮಾಡಿದರೆಂಬುದರ ಸಂಬಂಧವಾಗಿ ಮಂಡಳದಲ್ಲಿ ಚರ್ಚೆಯಾಗುವದಿಲ್ಲ. (೩) ಚೀಫ ಕಮೀಶನರರು ಎರಡು ತಿಂಗಳುಗಳವರೆಗೆ ಸಿಂದೀ ಅಂಗಡಿಗಳನ್ನು ಮುಚ್ಚಲು ಆಜ್ಞಾಪಿಸಿದ್ದರು; ಅವು ಈಗ ತೆರೆದಿವೆ (೪) ಈ ಬಗ್ಗೆ ಸಾಕ್ಷಿಗಳನ್ನು ಹೇಳತಕ್ಕಂತಹ ಕೆಲವು ಜನರು ಈಗ ಸೆರೆಯಾಳುಗಳಾಗಿದ್ದಾರೆ. (೫) ಅತ್ಯಾಚಾರವನ್ನು ಮಾಡಿದ ಅಧಿಕಾರಿಗಳು ಪ್ರತ್ಯಕ್ಷವಾಗಿ ಇಲ್ಲಿ ಇರುತ್ತಿರಲು, ರೈತರು ಸಾಕ್ಷಿಗಳನ್ನು ಹೇಳಲು ಬರಲು ಅಂಜುತ್ತಾರೆ. (೬) ಮರಣವನ್ನು ಹೊಂದಿದ ಹಾಗು ಗಾಯಪಟ್ಟವರ ಆಪ್ತೇಷ್ಟರು ತಮ್ಮ ಪರವಾಗಿ ವಕೀಲರನ್ನು ನಿಯಮಿಸುವಷ್ಟು ಧನಿಕರಾಗಿಲ್ಲ. (೭) ಸಭೆಗಳನ್ನು ಮಾಡಕೂಡದೆಂದು ಜಾರಿಗೊಳಿಸಿದ ಕಾಯಿದೆಯ ಮೂಲಕವಾಗಿ, ಈ ದಂಗೆಯ ಬಗ್ಗೆ ವಿಚಾರ ಮಾಡುವದಕ್ಕಾಗಿ ಒಕ್ಕಟ್ಟಿಗೆ ಸೇರುವದು ಅಸಾಧ್ಯವಾಗಿದೆ.

## ಮಂತ್ರಿಗಳು ರಾಜೀನಾಮೆ ಕೊಡಲೇಬೇಕು.

ತಾ|| ೨೮ ನೆಯ ದಿವಸ ಅಹಮ್ಮದಾಬಾದದೊಳಗಿನ ೫೦ ವ್ಯಾಪಾರಿ ಸಂಘಗಳ ಚಾಲಕರು ಮೆರವಣಿಗೆಯನ್ನು ತೆಗೆದಿದ್ದರು. ಮೆರವಣಿಗೆಯ ನಂತರದಲ್ಲಿ ಅವರು ಸಭೆ ಮಾಡಿಕೊಂಡು ದಬ್ಬಾಳಿಕೆಯ ನಿಷೇಧ, ಸೊಲ್ಲಾಪುರದಲ್ಲಿ ದಂಡನಾಳಿಕೆಯ ನಿಷೇಧ, ಮೊದಲಾದವುಗಳ ಬಗ್ಗೆ ಗೊತ್ತುಗಳನ್ನು ತಂದು ಅವುಗಳನ್ನು ಪಾಸುಮಾಡಿಕೊಂಡರು. ನಂತರದಲ್ಲಿ ಮತ್ತೊಂದು ಸಭೆಯನ್ನು ಜರುಗಿಸಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಯ ಮಂತ್ರಿಗಳಾದ ಶ್ರೀ ಹರಿಲಾಲ ದೇಸಾಯರು ಮಂತ್ರಿಪದಕ್ಕೂ, ಕಾಯಿದೆ ಮಂಡಳದ ಸಭಾಸದತ್ವಕ್ಕೂ ರಾಜೀನಾಮೆಯನ್ನು ಕೊಡಬೇಕೆಂದು ಕೇಳಿಕೊಳ್ಳುವ ಗೊತ್ತನ್ನು ಸ್ವೀಕರಿಸಿದರು. ಶ್ರೀ ಹರಿಲಾಲರು ರಾಜೀನಾಮೆಯನ್ನು ಕೊಡುವದಿಲ್ಲವೆಂದು ಹೇಳಿದಂತಾಗಿ ತಿಳಿಯುತ್ತದೆ.

## ಕಾಯಿದೆ ಮಂಡಳಗಳಿಗೆ ರಾಜೀನಾಮೆ.

ಬಿಹಾರ ಕಾಯಿದೆ ಮಂಡಳದ ಸಭಾಸದರಾದ ಶ್ರೀ ಚೌಧರಿ ಭಾಗವತ ಪ್ರಸಾದರೂ, ಸಂಯುಕ್ತ ಪ್ರಾಂತದ ಕಾಯಿದೆ ಮಂಡಳದ ಸಭಾಸದರಾದ ಪಂಡಿತ ರಾಜಬಿಹಾರಿ ತಿವಾರಿಯವರೂ, ಮುಂಬಯಿ ಕಾಯಿದೆ ಮಂಡಳದ ಸಭಾಸದರಾದ ಪಹಾಲಜನಿಯವರೂ, ಸರಕಾರದ ದಬ್ಬಾಳಿಕೆಯ ನಿಷೇಧಾರ್ಥವಾಗಿ ತಮ್ಮ ತಮ್ಮ ಸ್ಥಳಗಳಿಗೆ ರಾಜೀನಾಮೆಯನ್ನು ಕೊಟ್ಟಿದ್ದಾರೆ.

## ಬಂಡೀ ಗಾಲಿಯ ಪರಿಷತ್ತಿಗೆ ಕ್ರಿಶ್ಚಿಯನ್ನರೂ ಭಹಿಷ್ಕಾರ ಹಾಕಿದರು.

ಮಂಗಳೂರಿನಲ್ಲಿ ಹಿಂದೀ ಕ್ರಿಶ್ಚಿಯನ್ನರದೊಂದು ಸಭೆಯು ಸೇರಿತ್ತು. ಸಭೆಯಲ್ಲಿ "ಮಹಾತ್ಮಾ ಗಾಂಧಿ ಹಾಗು ಉಳಿದ ರಾಜಕೀಯ ಸೆರೆಯಾಳುಗಳನ್ನು ಬಿಟ್ಟು, ಬಂಡೀಗಾಲಿಯ ಪರಿಷತ್ತಿನಲ್ಲಿ ವಸಾಹತಿ ಸ್ವರಾಜ್ಯದ ಬಗ್ಗೆ ಚರ್ಚಿಸುವೆವೆಂದು ಆಶ್ವಾಸನವು ಸಿಗುವ ವರೆಗೆ ಪರಿಷತ್ತಿನಲ್ಲಿ ಹಿಂದಿ ಕ್ರಿಶ್ಚಿಯನ್ನರು ಭಾಗ ತೆಗೆದುಕೊಳ್ಳಕೂಡದೆಂಬ ಗೊತ್ತು ಸ್ವೀಕೃತವಾಯಿತು. ಕರ್ನಾಟಕದಲ್ಲಿಯ ಕ್ರಿಶ್ಚಿಯನ್ನರು ಹೀಗೆ ಮಹಾತ್ಮರ ಚರಣಗಳಿಗೆ ಬೆಂಬಲವನ್ನು ಕೊಡುತ್ತಿರುವ ಸಮಯದಲ್ಲಿ ಶ್ರೀ ಚಿಕ್ಕೋಡಿ ದೇವಿ ಪ್ರಭೃತಿಗಳು ಸರಕಾರದ ಬಾಲವನ್ನು ಹಿಡಿಯುತ್ತಿರುವದು ಸೋಜಿಗವಲ್ಲವೇ ?

## ೭೫ ಪಟೇಲರು ರಾಜೀನಾಮೆ ಕೊಟ್ಟರು.

ಗೋದ್ರಾ ಜಿಲ್ಲೆಯಲ್ಲಿ ಈ ವರೆಗೆ ೭೫ ಜನ ಪಟೇಲರು ರಾಜೀನಾಮೆಯನ್ನು ಕೊಟ್ಟಿರುತ್ತಾರೆ.

## ೩೦೦೦೦ ಮುಸಲ್ಮಾನರು ಸತ್ಯಾಗ್ರಹದಲ್ಲಿ ಸೇರಿದರು.

ದಿಲ್ಲಿಯಲ್ಲಿ ೩೦೦೦೦ ಜನ ಮುಸಲ್ಮಾನರು 'ಜುಮ್ಮಾ ಮಸೀದೆಯಲ್ಲಿ ಮೌಲಾನಾ ಅತುಲ್ಲಾಶಹಾರವರ ಅಧ್ಯಕ್ಷತೆಯಲ್ಲಿ ಸಭೆ ಮಾಡಿಕೊಂಡು "ಹಿಂದೂ ಜನರು ಈಗ ಪ್ರಾರಂಭಿಸಿದ ಸ್ವಾತಂತ್ರ್ಯದ ಚಳವಳಿಯಲ್ಲಿ ಮುಸಲ್ಮಾನರೂ ಭಾಗ ತೆಗೆದುಕೊಳ್ಳಬೇಕು" ಎಂದು ನಿರ್ಧರಿಸಿಕೊಂಡರು. ಸಭೆಯಲ್ಲಿಯೇ ಎಷ್ಟೋ ಜನರು ಸ್ವಯಂಸೇವಕರಾದದ್ದಲ್ಲದೆ, ಸ್ವದೇಶಿ ವ್ರತದ ಬಗ್ಗೆ ಶಪಥವನ್ನು ಮಾಡಿದರು. ಇಲ್ಲಿಯ ಮುಸಲ್ಮಾನರೂ ಇವರನ್ನು ಅನುಕರಿಸಿ ಹಿಂದೂ ಜನರೊಡನೆ ಹೋರಾಡಲು ಮುಂದೆ ಬರುವರೋ!

# ವ್ಹಾಯಿಸರಾಯರು
ಮತ್ತೆ
# ಎರಡು ಹೊಸ ಅಸ್ತ್ರಗಳನ್ನು ಹಿರಿದರು

( ತಂತಿಯ ವಾರ್ತೆ )

೬ ವ್ಹಾಯಿಸರಾಯರು ಮತ್ತೆ ಎರಡು ಹೊಸ ಕಾನೂನಾಸ್ತ್ರಗಳನ್ನು ಈಗ ಹಿರಿದಿದ್ದಾರೆ. ಮುಂಬಯಿ ಇಲಾಖೆಯಲ್ಲಿ ಕೂಡಲೆ ಇವು ಬಳಕೆಯಲ್ಲಿ ಬರುವವು. ಸರಕಾರಕ್ಕೆ ಕೊಡಬೇಕಾದ ಯಾವದಾದರೂ ಕರವನ್ನಾಗಲಿ ಇಲ್ಲವೆ ಭೂಕಂದಾಯವನ್ನಾಗಲಿ ಕೊಡಬೇಡಿರೆಂದೂ, ತಡಮಾಡಿ ಕೊಡಿರೆಂದೂ ಜನರಿಗೆ ಉತ್ತೇಜನ ಕೊಡುವವರಿಗೆ ೬ ತಿಂಗಳ ಶಿಕ್ಷೆಯನ್ನು ವಿಧಿಸುವದಲ್ಲಿ ಬರುವದೆಂಬುದಾಗಿ ಒಂದರಲ್ಲಿ ಹೇಳಿದ್ದಾರೆ. ಈ ಅಪರಾಧವನ್ನು ಮಾಡಿದವರನ್ನು ಹೊಣೆಯಿಂದ ಬಿಡತಕ್ಕದ್ದಲ್ಲವೆಂದೂ ಅದರಲ್ಲಿ ಸಾರಿದ್ದಾರೆ. ಸಾಮಾಜಿಕ ಬಹಿಷ್ಕಾರವನ್ನು ಹಾಕಿ ಅಧಿಕಾರಿಗಳನ್ನು ಬೆದರಿಸುವ ಮತ್ತು ಪಿಕೆಟಿಂಗದಲ್ಲಿ ಹಿಂಸೆಯನ್ನುಪಯೋಗಿಸಿ ಪೀಡೆಕೊಡುವ ಜನರಿಗೆ ೬ ತಿಂಗಳ ಶಿಕ್ಷೆಯೆಂದು ಎರಡನೆಯ ಕಾನೂನಿನಲ್ಲಿ ಹೇಳಿದ್ದಾರೆ.

ಧರಸಾನಾ

## ದಾಳಿಯು ಮತ್ತೆ ಸುರುವಾಯಿತು

ತಾ|| ೩೦ ನೆಯ ದಿವಸ ಧರಸಾನಾ ಮಖಾನದ ಮೇಲಿನ ದಾಳಿಯ ಕಾರ್ಯವು ಪ್ರಾರಂಭವಾಯಿತು. ೧೧೧ ಜನ ಸ್ವಯಂಸೇವಕರು ಉಪ್ಪನ್ನು ಲೂಟಿ ಮಾಡಲು ಹೋಗಿದ್ದರು. ಪೋಲೀಸ ಅಧಿಕಾರಿಗಳೂ, ಯುರೋಪಿಯನ್ ಸಾರ್ಜಂಟರೂ ಲಾಠಿಗಳನ್ನುಪಯೋಗಿಸಿ ಅವರನ್ನು ಹಿಂದಕ್ಕಟ್ಟಿದರು. ೫೦ ಜನರಿಗೆ ಗಾಯಗಳಾಗಿದ್ದು ಕೆಲವರಿಗೆ ಬಹಳ ಪೆಟ್ಟು ತಗುಲಿದೆ.

---

## ಕಾಲೇಜದ ಪ್ರೊಫೆಸರರು ಮಾತಾಡಿದರು

ಮುಂಬಯಿಯ ವ್ಹಿಲ್ಸನ್ ಕಾಲೇಜದ ಪ್ರೊಫೆಸರರಾದ ಮಿ|| ಥುಟಿಯವರು ಪಾರ್ಸಿ ರಾಜಕೀಯ ಸಭೆಯ ಪರವಾಗಿ ನೆರೆದ ಸಭೆಯಲ್ಲಿ "ಪಾರ್ಸಿ ಜನರು ಸ್ವದೇಶಿ ಸರಕುಗಳನ್ನೇ ಉಪಯೋಗಿಸಿ, ರಾಷ್ಟ್ರೀ ಚಳವಳಿಯಲ್ಲಿ ಸೇರಿ, ಹಿಂದೀ ಜನರ ಉಪಕಾರವನ್ನು ತೀರಿಸಬೇಕೆ"ಂಬುದಾಗಿ ಭಾಷಣ ಮಾಡಿದರು. ರಾಷ್ಟ್ರೀಯ ಚಳವಳಿಯೆಂದರೆ ದೂರ ಸರಿದು ನಿಲ್ಲುವ ಶಿಕ್ಷಕರು ಇವರನ್ನು ಅನುಕರಿಸಬೇಕು.

## ಢಾಕಾದಲ್ಲಿಯ ದಂಗೆ

ದಂಗೆಯ ಮೂಲಕವಾಗಿ ಪಟ್ಟಣವು ಭೀಕರ ಸ್ವರೂಪವನ್ನು ತಾಳಿದೆ. ಉದ್ಯೋಗ ವ್ಯವಹಾರಗಳು ನಿಂತುಹೋಗಿವೆ. ೪ ಜನರು ಮರಣ ಹೊಂದಿದ್ದು ೬೦ ಜನರಿಗೆ ಗಾಯಗಳಾಗಿವೆ.

## ಬ್ರಿಟಿಶರ ಬೆದರಗುಂಡು

ಕಾಂಗ್ರೆಸ್ ಕಮಿಟಿಗಳನ್ನೇ ಮುರಿಯಬೇಕಂತೆ!

ಲಾರ್ಡ ಸಭೆಯಲ್ಲಿ ಹಿಂದುಸ್ಥಾನದ ಸಂಬಂಧವಾಗಿ ಚರ್ಚೆಯು ಹೊರಟಾಗ ಲಾರ್ಡ ಪೀಲರು "ಹಿಂದುಸ್ಥಾನದಲ್ಲಿಯ ಸದ್ಯದ ಪರಿಸ್ಥಿತಿಗೆ ಕಾರಣವಾದ ಕಾಂಗ್ರೆಸ ಕಮಿಟಿಗಳ ಕಾರ್ಯವು ಸಾಗದಂತೆ ಅಧಿಕಾರಿಗಳನ್ನು ದಂಡಿಸಬೇಕೆ"ಂದೂ ಲಾರ್ಡ ರೀಡಿಂಗರು "ಎಲ್ಲ ಶಸ್ತ್ರಾಸ್ತ್ರಗಳನ್ನುಪಯೋಗಿಸಿ ಕಾಯಿದೆ ಭಂಗದ ಚಳವಳಿಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆ"ಂದೂ ಭಾಷಣಮಾಡಿ ರಾಷ್ಟ್ರಸಭೆಯ ಅನುಯಾಯಿಗಳಿಗೆ ಬೆದರಿಕೆಯನ್ನು ಹಾಕಿದ್ದಾರೆ. ಇವರು ಹೀಗೆ ಹೇಳುವ ಅವಶ್ಯಕತೆಯೇ ಇದ್ದಿದ್ದಿಲ್ಲ. ಯಾಕಂದರೆ ಆಳರಸರು ಈಗಾಗಲೇ ಚಳವಳಿಯನ್ನು ತಡೆಯಲು ಎಲ್ಲ ಉಪಾಯಗಳನ್ನು ಪ್ರಯೋಗಿಸಹತ್ತಿದ್ದಾರೆ.

೧೨ ಜನರು ತಾತ್ಪೂರ್ತಿಕವಾಗಿ

## ವಕೀಲಿಯನ್ನು ಬಿಟ್ಟರು

ಬಂಗಾಲ ಪ್ರಾಂತದ ರಂಗಪುರದ ೧೨ ಜನ ವಕೀಲರು ಹಳ್ಳಿಹಳ್ಳಿಗಳಲ್ಲಿ ರಾಷ್ಟ್ರಸಭೆಯ ಕಾರ್ಯಕ್ರಮಗಳನ್ನು ಸಾಗಿಸುವದಕ್ಕಾಗಿ ೧ ತಿಂಗಳ ವರೆಗೆ ತಾತ್ಪೂರ್ತಿಕವಾಗಿ ವಕೀಲಿಯನ್ನು ಬಿಟ್ಟುಕೊಟ್ಟಿದ್ದಾರೆ.

## ಅಲ್ಲಲ್ಲಿಯ ಶಿಕ್ಷೆಗಳು ಮತ್ತು ಕೈಸೆರೆ

ಮನಭೂಮ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ. ಅತುಲಘೋಷರಿಗೆ ೧ ವರ್ಷ ಸಾದಾ ಶಿಕ್ಷೆಯಾಗಿದೆ.

ಸುರತ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀಯುತ ಚಿಮಣಲಾಲ ಚಿನೊಯ್ ಇವರು ಸೆರೆಹಿಡಿಯಲ್ಪಟ್ಟಿದ್ದಾರೆ.

## ಸತ್ಯಾಗ್ರಹ ಶಿಬಿರಕ್ಕೆ ಸರಕಾರದ ಸಹಾಯ

ಧರಸಾನಾದಲ್ಲಿ ಸೆರೆಹಿಡಿಯಲ್ಪಟ್ಟ ಸೆರೆಯಾಳುಗಳಿಗೆ ಆಹಾರವನ್ನು ಪೂರೈಸುವದಕ್ಕಾಗಿ ಸರಕಾರದವರಿಗೆ ಶಕ್ಯವಾಗಿಲ್ಲ. ಆದುದರಿಂದ ಅವರು ಪ್ರತಿಯೊಬ್ಬ ಸೆರೆಯಾಳಿನ ಆಹಾರವನ್ನು ಪೂರೈಸಲು ಸತ್ಯಾಗ್ರಹ ಶಿಬಿರದವರಿಗೆ ಕೇಳಿಕೊಂಡಿದ್ದು, ಅದಕ್ಕಾಗಿ ಪ್ರತಿಯೊಬ್ಬರ ವೆಚ್ಚವೆಂದು ಆರಾರು ಆಣೆಗಳನ್ನು ಕೊಡಲೊಪ್ಪಿದ್ದಾರೆ. ಹೀಗೆ ಮಾಡುವದು ಸತ್ಯಾಗ್ರಹ ಶಿಬಿರಕ್ಕೆ ಸಹಾಯ ಮಾಡಿದಂತಾಗಲಿಲ್ಲವೇ?

## ಪೋಲೀಸನು ಸ್ವರಾಜ್ಯನಿಧಿಗೆ ಹಣ ಕೊಟ್ಟನು

ಕಾಂಗ್ರೆಸದ ಸ್ವಯಂಸೇವಕರು ದಂಗೆಯ ಸಮಯದಲ್ಲಿ ಮಾಡಿದ ಶುಶ್ರೂಷೆಗಾಗಿ ಸಂತೋಷಪಟ್ಟ ಮುಂಬಯಿಯ ಓರ್ವ ಪೋಲೀಸನು ಸ್ವರಾಜ್ಯನಿಧಿಗೆ ೧ ರೂ. ಕೊಟ್ಟಿದ್ದಾನೆ.

## ಪಿಕೆಟಿಂಗದ ವಿರುದ್ಧ ಚಳವಳಿ

ಹುಬ್ಬಳ್ಳಿಯಿಂದ ೨೦೦ ಜನರು ಸಿಂದೀ ಗಿಡಗಳನ್ನು ಕಡಿಯಲಿಕ್ಕೆ ತಾಳನಕಟ್ಟಿ ಎಂಬ ಹಳ್ಳಿಗೆ ಹೋಗಿದ್ದರು. ಅಲ್ಲಿ ಅವರ ವಿರುದ್ಧವಾಗಿ ೨೫ ಜನ ಬೇಡರು ಕೊಡಲಿಗಳನ್ನು ಹಿಡಿದುಕೊಂಡು ಹೋಗಿ ಅವರನ್ನು ತಡೆದರು. ದೇಶಪಾಂಡೆ ಬಾಪೂರಾಯರು ಹಾಕಿಕೊಂಡ ಗಾಂಧಿ ಟೊಪ್ಪಿಗೆಯನ್ನು ಹರಿದೊಗೆದರು. ಈ ವರೆಗೆ ೬೦೦ ಸಿಂದೀ ಗಿಡಗಳು ಕಡಿಯಲ್ಪಟ್ಟಿವೆ.

## ಸೋಲಾಪುರದ ದಂಡಿನಾಳಿಕೆ

ಪುಣೆಯ ಡೆಕ್ಕನ್ ಸಭೆಯವರು ಶ್ರೀ. ಘೋರಪುರೆಯವರ ಅಧ್ಯಕ್ಷತೆಯಲ್ಲಿ ಸಭೆ ಮಾಡಿಕೊಂಡು "ಸೊಲ್ಲಾಪುರದಲ್ಲಿಯ ದಂಡಿನಾಳಿಕೆಯನ್ನು ಕೂಡಲೇ ತೆಗೆದೊಗೆಯಬೇಕಾಗಿಯೂ, ಒಂದು ಸ್ವತಂತ್ರ ಮಂಡಳವನ್ನು ನಿಯಮಿಸಿ ದಂಗೆ ಹಾಗು ದಂಡಾಳುಗಳ ಅನನ್ವಿತ ಕೃತ್ಯಗಳ ಒಗ್ಗೆ ವಿಚಾರಣೆ ಮಾಡಬೇಕೆಂದೂ ಗೊತ್ತುಗಳನ್ನು ನಿರ್ಧರಿಸಿಕೊಂಡರು.

## ಕಾಯಿದೆ ಮಂಡಳಕ್ಕೆ ಬಹಿಷ್ಕಾರ.

ಮುಂಬಯಿ ವಿಶ್ವವಿದ್ಯಾಲಯದ ಪರವಾಗಿ ಕಾಯಿದೆ ಮಂಡಳಕ್ಕೆ ಆರಿಸಿ ಹೋದ ಶ್ರೀ ಮುನಸಿಯವರು ತಮ್ಮ ಸ್ಥಳಕ್ಕೆ ರಾಜೀನಾಮೆಯನ್ನು ಕೊಟ್ಟು ಸತ್ಯಾಗ್ರಹದಲ್ಲಿ ಸೇರಿ ಸ್ವರಾಜ್ಯಾಶ್ರಮಕ್ಕೆ ತೆರಳಿದರು. ಹೀಗೆ ಇವರಿಂದ ತೆರವಾದ ಸ್ಥಳಕ್ಕೆ ವಾಚ್ಛಾ ಎಂಬ ಪಾರ್ಸಿ ಗೃಹಸ್ಥರು ಹುರಿಯಾಳಾಗಿ ನಿಂತು ಅರ್ಜಿಯನ್ನು ಕಳಿಸಿದರು. ಆದರೆ ಅರ್ಜಿಯನ್ನು ಕಳಿಸಿದ ಮರುದಿವಸವೇ ಸರಕಾರದ ದಬ್ಬಾಳಿಕೆಗೆ ಬೇಸತ್ತು ಅದನ್ನು ತಿರುಗಿ ತಕ್ಕೊಂಡರು. ಸುಶಿಕ್ಷಿತರಾದ ಪದವೀಧರರಿಂದ ಆರಿಸಿ ಕಳುಹಿಸಲ್ಪಡುವ ಸ್ಥಳಕ್ಕೆ ಎರಡನೆಯ ಸಲ ಚೆನ್ನಾಗಿಯೇ ಬಹಿಷ್ಕಾರ ಬಿದ್ದಂತಾಯಿತು!

## ಹುಬ್ಬಳ್ಳಿಯ ನಗರ ಸಭೆಯ ಮೇಲೆ ರಾಷ್ಟ್ರಧ್ವಜ.

ತಾ|| ೨೮ ನೆಯ ದಿವಸ ಹುಬ್ಬಳ್ಳಿಯ ನಾಗರಿಕರ ಸಾರ್ವಜನಿಕ ಸಭೆಯು ಶ್ರೀ ಪಾಪಟಿ ವಕೀಲರ ಅಧ್ಯಕ್ಷತೆಯಲ್ಲಿ ಸೇರಿ, ಹುಬ್ಬಳ್ಳಿಯ ನಗರ ಸಭೆಯವರು ಜೂನ ತಾ|| ೧೫ ರೊಳಗಾಗಿ ರಾಷ್ಟ್ರಧ್ವಜವನ್ನು ಏರಿಸಬೇಕೆಂದು ವಿನಂತಿಮಾಡಿಕೊಳ್ಳುವ ಗೊತ್ತು ಸರ್ವಾನುಮತದಿಂದ ಸ್ವೀಕೃತವಾಯಿತು. ಇಲ್ಲಿಯ ನಾಗರಿಕರು ಇನ್ನೂ ಸುಮ್ಮನೆ ಕುಳಿತಿರುವರಲ್ಲ!

## ಹುಬ್ಬಳ್ಳಿಯಲ್ಲಿ ಸಂಪು.

ಎಮ್. ಎಸ್. ಎಮ್. ರೇಲ್ವೆಯ ಅಧಿಕಾರಿಗಳು ತಾ|| ೧ ನೆಯ ಎಪ್ರಿಲದಿಂದ ಹೊಸ ಸುಧಾರಣೆಯಂತೆ ಸಂಬಳವನ್ನು ಕೊಡುವದರಲ್ಲಿ ಒಪ್ಪಿದೆಂದು ತಿಳಿಸಿದ್ದರು. ಈ ವರೆಗೆ ಹಾಗೆ ಕೊಡುವದರಲ್ಲಿ ಬಂದಿಲ್ಲ. ಆದುದರಿಂದ ರೇಲ್ವೆ ಕೂಲಿಕಾರರು ಸಂಪನ್ನು ಪ್ರಾರಂಭಿಸತಕ್ಕವರಾಗಿರುವರೆಂದು ಸಂಘದ ಕಾರ್ಯದರ್ಶಿಗಳು ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ.

## ಕರನಿರಾಕರಣೆಯು ಹಬ್ಬಿತು.

ಸುರತ ಜಿಲ್ಲೆಯೊಳಗಿನ ಪಾರ್ಡಿ ತಾಲೂಕದ ನಿವಾಸಿಗಳು ಒಂದು ಸಭೆಯನ್ನು ಮಾಡಿಕೊಂಡು "ತೆರಿಗೆಯನ್ನು ಕೊಡಬಾರದಾಗಿ ನಿರ್ಧರಿಸಿಕೊಂಡಿದ್ದಾರೆ.

## ಪರದೇಶಿ ಸರಕುಗಳ ಬಹಿಷ್ಕಾರ.

ಹುಬ್ಬಳ್ಳಿಯ ಮಾರವಾಡಿ ವ್ಯಾಪಾರಸ್ಥರು ಮೂರು ತಿಂಗಳುಗಳ ವರೆಗೆ ಪರದೇಶಿ ಸರಕುಗಳನ್ನು ತರಿಸುವದಿಲ್ಲವೆಂದು ನಿರ್ಧರಿಸಿಕೊಂಡಿದ್ದಾರೆ.

ಇಹವೃತ್ತ

## ಕನ್ನಡಿಗನಿಗೆ ಸಹಾಯ

ಚಿತ್ರಕಲೆಯ ಸಂಬಂಧವಾಗಿ ಹೆಚ್ಚಿನ ಶಿಕ್ಷಣವನ್ನು ಪಡೆಯಲು ಜರ್ಮನಿಗೆ ತೆರಳಿದ ತರುಣ ಕನ್ನಡಿಗನಾದ ಶ್ರೀ. ಬಿ. ವ್ಹಿ. ಆಳವಂಡಿಯವರಿಗೆ ಅಲ್ಲಿಯ ಶಿಕ್ಷಣಾರ್ಥವಾಗಿ ಸಹಾಯವೆಂದು, ದತ್ತಾತ್ರೇಯ ನಾಟಕ ಮಂಡಳದ ಒಡೆಯರಾದ ಶ್ರೀ. ಗರುಡ ಸದಾಶಿವರಾಯರು ತಾರೀಖು ೨-೬-೩೦ ನೆಯ ದಿವಸ "ಶರಣಬಸವ" ಎಂಬ ನಾಟಕವನ್ನು ಪ್ರಯೋಗಿಸಿ ಅದರಿಂದ ಬಂದ ಉತ್ಪನ್ನವನ್ನು ಕೊಡಲು ಒಪ್ಪಿದ್ದಾರೆ. ಕನ್ನಡಿಗರೆಲ್ಲರೂ ಸಹಾಯಮಾಡಬೇಕಾಗಿ ಬಿನ್ನಹ.

---

ಕಂಪನಿಯ ಮುಕ್ಕಾಂ ಸ್ವಲ್ಪ ಉಳಿದಿವೆ,

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಸೋಮವಾರ ತಾ|| ೨-೬-೩೦

**ಶರಣಬಸವ**

(ಕನ್ನಡ ನಾಡಿನಿಂದ ಕಲೆಯ ಪ್ರಗತಿಗಾಗಿ ಜರ್ಮನಿಗೆ ಹೋದ

**ಬಿ. ವ್ಹಿ. ಅಳವಂಡಿಯವರ ಸಹಾಯಕ್ಕಾಗಿ.**

ಧರ್ಮಾರ್ಥ ಕೊಡಲ್ಪಡುವದು.)

**ಎಂಬ ನಾಟಕವನ್ನು ಅಭಿನಯಿಸುವರು.**

ಈ ನಾಟಕಗಳು ಪುನಃ ಆಡಲ್ಪಡುವದಿಲ್ಲ.

ಸಂಘದೊಡೆಯ—ಸದಾಶಿವರಾವ ಗರೂಡ

---

ಜಯಲಕ್ಷ್ಮೀ ಪ್ರಾಸಾದಿಕ

ಸ್ತ್ರೀಮಿಶ್ರಿತ ಸಂಗೀತ ನಾಟಕ ಮಂಡಳಿ ದಾವಣಗೇರಿ ಇವರು

**ಬೇಗನೇ ಬರುವರು**

ತಾ|| ೪—೬—೩೦ ಬುಧವಾರ

**ಬಾಗಲಕೋಟೆ ತಾಜ ಥಿಯೇಟರಿನಲ್ಲಿ**

**ತ್ರಿಕೋಟಿಲಿಂಗಪ್ರತಿಷ್ಠಾ**

ಶುಕ್ರವಾರ ತಾ|| ೬—೬—೩೦

**ಪ್ರತಾಪಪ್ರಮಿಲಾ**

ಎಂಬ ಹೊಸ ಆಖ್ಯಾನಗಳನ್ನು ಪ್ರಯೋಗಿಸುವರು.

ವ್ಯವಸ್ಥಾಪಕ.

---

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು
ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ಸೋಮವಾರ ಮಿತಿ ಜ್ಯೇಷ್ಠ ಶುದ್ಧ ೬ ಶಕೆ ೧೮೫೨ ತಾ|| ೨—೬—೩೦ ಸಂಚಿಕೆ ೬೪

ಅಮರಾವತಿಯ

# ವೀರ ವಾಮನರಾಯರ ಬಂಧನ.

ವರ್‍ಹಾಡ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಅಮರಾವತಿಯ ವೀರ ವಾಮನರಾವ ಜೋಶಿ ಇವರು ಛಂದೇರಿಂದಲ್ಲಿ ೧೨೪ ಅ ಕಲಮಿನನ್ವಯ ರಾಜದ್ರೋಹಕ್ಕಾಗಿ ಸೆರೆಹಿಡಿಯಲ್ಪಟ್ಟಿದ್ದಾರೆ.

ಸೇರುವದೇ ನಮ್ಮಗಳ ಕರ್ತವ್ಯವಾಗಿರುವದೆಂದೂ ಗುಜರಾಥ ಕಾಲೇಜದ ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿಗಳು ಬಿನ್ನಹ ಪತ್ರಿಕೆಯನ್ನು ಕೊಟ್ಟಿದ್ದಾರೆ.

---

## ಮುಂಬಯಿ ಸತ್ಯಾಗ್ರಹಿಗಳ ಅಪೂರ್ವವಿಜಯ.

ವಡಾಲಾ ವಖಾರದ ಮೇಲೆ ದಾಳಿಯನ್ನು ಮಾಡಲಿಕ್ಕೆ ಹೋದ ಸ್ವಯಂಸೇವಕರನ್ನು ಸೆರೆಹಿಡಿದು ಅಧಿಕಾರಿಗಳು ಅವರನ್ನು ವರ್ಲಿ ಜಾಳದಲ್ಲಿ ಇಟ್ಟಿರುವರಷ್ಟೆ, ಈಗ ಅಲ್ಲಿ ೮೦೦ ಜನ ಸೆರೆಯಾಳುಗಳಿದ್ದಾರೆ ಅವರಿಗೆ ಅಲ್ಲಿ ಪ್ರತಿನಿತ್ಯವು ಯೋಗ್ಯವಾದ ಆಹಾರವನ್ನು ಅಧಿಕಾರಿಗಳು ಕೊಡತಕ್ಕದ್ದಿಲ್ಲವಾದುದರಿಂದ ಒಂದು ದಿವಸ ಆ ಸತ್ಯಾಗ್ರಹಿಗಳೆಲ್ಲರೂ ತಮ್ಮ ಗಂಟುಗದಡಿಗಳನ್ನು ತೆಗೆದುಕೊಂಡು ಜಾಳದ ಹೊರಗೆ ಬಂದು ಈಗ ಆಹಾರವನ್ನು ಪೂರೈಸುವ ಸರಕಾರೀ ಗುತ್ತಿಗೆದಾರನು ಕಡೆಯಿಂದ ಅನ್ನವನ್ನು ಸಿದ್ಧಮಾಡಿಸಬೇಡದೆ ನಮ್ಮ ಮನಸಿಗೆ ಬಂದ ಸ್ವತಂತ್ರ ಗುತ್ತಿಗೆದಾರನಾದ ಶ್ರೀ ರತಿಲಾಲರ ಕಡೆಯಿಂದ ಆಹಾರವನ್ನು ಸಿದ್ಧಮಾಡಿಸಿ ಪೂರೈಸುವ ವರೆಗೆ ಹೊರಗಡೆಯಲ್ಲಿಯೇ ಕುಳಿತುಕೊಳ್ಳುವೆವು ಎಂದು ತಿಳಿಸಿದರು. ಅಧಿಕಾರಿಗಳು ಇದಕ್ಕೆ ಸಮ್ಮತಿಯನ್ನು ಕೊಡದ್ದರಿಂದ ಎಲ್ಲ ಸತ್ಯಾಗ್ರಹಿಗಳೂ ಹೊರಗೆ ಬಂದು ಹಾದಿಯ ಮೇಲೆ ಕುಳಿತುಕೊಂಡುಬಿಟ್ಟರು. ಸ್ವಲ್ಪ ಹೊತ್ತಿನಲ್ಲಿಯೆ ತುರಂಗದ ಅಧಿಕಾರಿಗಳು ಅವರ ಬೇಡಿಕೆಗೆ ಮನ್ನಣೆಯನ್ನಿತ್ತು ಶ್ರೀ ರತಿಲಾಲರಿಗೆ ಆಹಾರವನ್ನು ಪೂರೈಸಲು ಕೇಳಿಕೊಂಡರು. ಹೀಗೆ ಸತ್ಯಾಗ್ರಹವನ್ನು ಹೂಡಿ ಸತ್ಯಾಗ್ರಹಿಗಳು ಅಪೂರ್ವವಾದ ವಿಜಯವನ್ನು ಸಂಪಾದಿಸಿಕೊಂಡರು.

## ಗುಜರಾಥ ಕಾಲೇಜಕ್ಕೆ ಬಹಿಷ್ಕಾರ

"ಪರಮ ಪೂಜ್ಯರಾದ ರಾಷ್ಟ್ರಪಿತರು ತುರಂಗದಲ್ಲಿ ಇದ್ದಾಗ ವಿದ್ಯಾರ್ಥಿಗಳಾದ ನಾವು ಕಾಲೇಜಕ್ಕೆ ಹೋಗುವದು ಸರಿಯಾದದ್ದಲ್ಲವೆಂದೂ, ಸತ್ಯಾಗ್ರಹದ ಚಳವಳಿಯಲ್ಲಿ

ಬಾಗಲಕೋಟೆಯ

## ದೇಶಬಂಧು ಪಥಕದ ಪ್ರವಾಸ ವೃತ್ತ

ಬಾಗಲಕೋಟೆಯಿಂದ ನಾವು ೬ ಜನ ಸ್ವಯಂಸೇವಕರು ಹಳ್ಳಿಹಳ್ಳಿಗಳಲ್ಲಿ ರಾಷ್ಟ್ರೀಯ ಸಭೆಯ ಕಾರ್ಯಕ್ರಮಗಳ ಬಗ್ಗೆ ಜಾಗೃತಿಯನ್ನುಂಟು ಮಾಡಲು ತಾ|| ೨೭ನೆಯ ದಿವಸ ತಿಮ್ಮಾಪುರಿಗೆ ಹೊರಟೆವು. ಅಲ್ಲಿ ೯ ಗಂಟೆಗೆ ಮುಟ್ಟಿದೆವು. ಅಲ್ಲಿ ಮೊದಲು ನಗರಸಂಕೀರ್ತನೆಯನ್ನು ಜರುಗಿಸಿ, ಸಭೆಯನ್ನು ಮಾಡಿದೆವು. ಶ್ರೀ. ಸಿದ್ಧಾಂತಿ ಮತ್ತು ಸಿಂದಿಗಿ ಇವರ ಭಾಷಣಗಳಾದವು. ನಂತರ ಸಭೆಯಲ್ಲಿ ಸ್ವತಂತ್ರ ಉಪ್ಪನ್ನು ಮಾರುವದರಲ್ಲಿ ಬಂದಿತು. ಕೆಲವರು ಸತ್ಯಾಗ್ರಹ ನಿಧಿಗೆ ಸಹಾಯ ಮಾಡಿದರು. ಅಲ್ಲಿಂದ ಗುಳೇದಗುಡ್ಡಕ್ಕೆ ಹೊರಟು ೫|| ಗಂಟೆಗೆ ಗುಳೇದಗುಡ್ಡವನ್ನು ಮುಟ್ಟಿದೆವು ಪಿಕೋಬದೇವರ ಗುಡಿಯಲ್ಲಿ ಇಳಿದುಕೊಂಡೆವು. ಅಲ್ಲಿ ರಾಷ್ಟ್ರಧ್ವಜವನ್ನು ನಿಲ್ಲಿಸಿ, ಧ್ವಜಾರೋಹಣ ಸಮಾರಂಭವನ್ನು ಜರುಗಿಸಿದೆವು ಸಂಜೆಯಲ್ಲಿ ಸಭೆಯನ್ನು ಕೂಡಿಸಲಾದದರಲ್ಲಿ ಬಂದಿತು. ಸಭೆಗೆ ಸರಾಸರಿ ೨೦೦೦ ಜನರು ಬಂದಿದ್ದರು. ಶ್ರೀ ಸಿಂದಿಗಿ ಮತ್ತು ಸಿದ್ಧಾಂತಿ ಇವರು ಸತ್ಯಾಗ್ರಹ ಚಳವಳಿಯ ಬಗ್ಗೆ ಭಾಷಣಮಾಡಿದರು. ಖಾದಿಸಾಹೇಬ ದೇವರಾಮನಿ ಇವರು ನಮ್ಮ ಸಂಗಡ ಬರುವೆವೆಂದು ಹೇಳಿದರು. ಮರುದಿವಸ ಬದಾಮಿಗೆ ತೆರಳಿ ಅಲ್ಲಿ ಸಾರ್ವಜನಿಕ ಸಭೆಯನ್ನು ಜರುಗಿಸಿ, ರಾಷ್ಟ್ರೀಯ ಸಭೆಯ ಕಾರ್ಯಕ್ರಮಗಳನ್ನು ಕುರಿತು ಭಾಷಣಮಾಡಿದೆವು. ಸಭೆಯಲ್ಲಿ ಉತ್ಸಾಹವು ತುಂಬಿತುಳುಕುತ್ತಿತ್ತು. ಸಭೆಯ ನಂತರದಲ್ಲಿ ಸ್ವತಂತ್ರ ಉಪ್ಪನ್ನು ಮಾರುವದರಲ್ಲಿ ಬಂದಿತು ಎಷ್ಟೋ ಜನರು ಕೊಂಡುಕೊಂಡರು.

—ಪಥಕನಾಯಕ

## ರಾಷ್ಟ್ರಧ್ವಜವೇ ಭಾರತಸಂತತಿಯ ಸರ್ವಸ್ವ.

ಸೊಲ್ಲಾಪುರದಲ್ಲಿ ಲಷ್ಕರಿ ಅಧಿಕಾರಿಗಳು ರಾಷ್ಟ್ರಧ್ವಜದ ವಿರುದ್ಧವಾಗಿ ಹೊರಡಿಸಿದ ಕಾಯಿದೆಯನ್ನು ಮುರಿಯಲು ಪುಣೆಯಿಂದ ಸೊಲ್ಲಾಪುರಕ್ಕೆ ಸತ್ಯಾಗ್ರಹಿಗಳೊಂದಿಗೆ ರಾಷ್ಟ್ರಧ್ವಜಸಹಿತವಾಗಿ ಹೊರಟು ಸೆರೆಮನೆಯನ್ನು ಕಂಡ ಶ್ರೀ ಸಾಠೆಯವರು ಶಿಕ್ಷೆ ಹೊಂದುವದಕ್ಕಿಂತ ಪೂರ್ವದಲ್ಲಿ ಲಷ್ಕರಿ ಅಧಿಕಾರಿಯಾದ ಮಿ. ವೇಜ ಇವರಿಗೆ ಕೆಳಗಿನ ಆಶಯದ ಪತ್ರವನು ಬರೆದಿದ್ದರು

ಸೊಲ್ಲಾಪುರ ನಗರ ಸಭೆಯ ಕಟ್ಟಡದ ಮೇಲಿನ ರಾಷ್ಟ್ರಧ್ವಜವನ್ನು ಕಿತ್ತಿ ಒಗೆದು ಅಖಿಲ ಭಾರತಖಂಡವನ್ನೇ ನೀವು ಅವಮಾನಗೊಳಿಸಿರುವಿರಿ. ಅಲ್ಲಿ ನಡೆದ ದಂಗೆಗೂ ಮತ್ತು ರಾಷ್ಟ್ರಧ್ವಜಕ್ಕೂ ಯಾವತರದ ಸಂಬಂಧವೂ ಇದ್ದಿದ್ದಿಲ್ಲ, ರಾಷ್ಟ್ರಸಭೆಯ ಅನುಯಾಯಿಗಳೂ, ಖಾದಿಯನ್ನು ಧರಿಸುವವರೂ ಜನರನ್ನು ಶಾಂತಮಾಡಲು ಪ್ರಯತ್ನಿಸಿದ್ದುಂಟು. ಎರಡನೆಯು ದೇಶದ ರಾಷ್ಟ್ರಧ್ವಜವನ್ನು ಅವಮಾನಗೊಳಿಸಲು ಯಾವ ಬುದ್ಧಿವಂತನೂ ಬಯಸುವದಿಲ್ಲ. ಮುಂಬಯಿಯ ಗವ್ಹರ್ನರರೇ ಮೊನ್ನೆ ಮೊನ್ನೆ ಪಂಚಗಣಿಯಲ್ಲಿ ರಾಷ್ಟ್ರಧ್ವಜಕ್ಕೆ ವಂದನೆಯನ್ನು ಮಾಡುವರಾಗಿ ಪ್ರಕಟವಾಗಿದೆ. ರಾಷ್ಟ್ರಧ್ವಜವನ್ನು ಹಿಡಿದುಕೊಂಡು ಹೋಗುವವರು ಹತ್ತು ವರ್ಷಗಳ ಶಿಕ್ಷೆಗೆ ಪಾತ್ರರಾಗುವರೆಂದು ಪ್ರಸಿದ್ಧಿಸಿ, ನೀವು ಹುಣ್ಣಿನ ಮೇಲೆ ಬರೆಯನ್ನು ಕೊಟ್ಟಿರುವಿರಿ. ರಾಷ್ಟ್ರಧ್ವಜದ ಸಂಬಂಧವಾದ ಕಾಯಿದೆಯನ್ನು ಮುರಿಯದೆ ಸುಮ್ಮನೆ ಕುಳಿತರೆ ಮಾತೃಭೂಮಿಯ ಸಲುವಾಗಿ ಮಾಡತಕ್ಕ ಕರ್ತವ್ಯದಿಂದ ನಾನು ಚ್ಯುತನಾದಂತಾಗುವೆನು. ಆದುದರಿಂದ ರಾಷ್ಟ್ರಧ್ವಜವನ್ನು ಪ್ರತಿಬಂಧಿಸುವಂತಹ ಕಾಯಿದೆಯನ್ನು ತಿರುಗಿ ತೆಗೆದುಕೊಳ್ಳಲೂ ಹಾಗು ನಗರ ಸಭೆಯ ಕಟ್ಟಡದ ಮೇಲೆ ಅದನ್ನು ಪುನಃ ಪ್ರಸ್ಥಾಪಿಸಲೂ ನಿಮ್ಮನ್ನು ಕೇಳಿಕೊಳ್ಳುತ್ತೇನೆ. ನಾನಂತೂ ಈ ಕಾಯಿದೆಯನ್ನು ಮುರಿಯತಕ್ಕದ್ದೆಂದು ನಿಶ್ಚಯಮಾಡಿಕೊಂಡಿದ್ದೇನೆ. ಕೂಡಲೆ ಸೊಲ್ಲಾಪುರಕ್ಕೆ ೨-೩ ಸತ್ಯಾಗ್ರಹಿಗಳಿಂದ ಹೊರಟು ಬರತಕ್ಕವನಿದ್ದೇನೆ. ರಾಷ್ಟ್ರಧ್ವಜದ ಮಾನವನ್ನು ಕಾಯುವದಕ್ಕಾಗಿ ೧೦ ವರ್ಷಗಳವರೆಗೆ ಶಿಕ್ಷೆಯನ್ನು ಅನುಭವಿಸುವದು ಪ್ರತಿಯೊಬ್ಬರಿಗೂ ತೀರ ಕ್ಷುಲ್ಲಕವಾಗಿ ಕಾಣಿಸುವದು. ಇದೇನು ಬೆದರಿಕೆಯ ಮಾತಲ್ಲ. ಸತ್ಯಾಗ್ರಹಿಗಳ ನಿಯಮಗಳಿಗನುಸರಿಸಿ ಕೊಟ್ಟ ಮುಂಗಡ ಸೂಚನೆಯಿದು.

## ರಾಜೀನಾಮೆಯನ್ನು ಒಪ್ಪಿಸಲು ಸ್ತ್ರೀಯರ ಮೆರವಣಿಗೆ

ಗುಜರಾಥ ಪ್ರಾಂತದ ಸುರತ ಜಿಲ್ಲೆಯ ಚಿಕ್ಲಿ ತಾಲೂಕಿನಲ್ಲಿ ಎಷ್ಟೋ ಪಟೇಲರು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಮಾಮಲೇದಾರರು ಕೆಲವರ ರಾಜೀನಾಮೆಗಳನ್ನು ಸ್ವೀಕರಿಸಿಲ್ಲವಾಗಿ ತಿಳಿದಿದೆ. ಓರ್ವ ಪಟೇಲನ ಹೆಂಡತಿಯು ಊರಲ್ಲಿಯ ಸ್ತ್ರೀಯರನ್ನು ಕೂಡಿಸಿಕೊಂಡು ಮಾಮಲೇದಾರನ ಮನೆಗೆ ಮೆರವಣಿಗೆಯಿಂದ ಹೋಗಿ ತನ್ನ ಗಂಡನ ರಾಜೀನಾಮೆಯನ್ನು ಮತ್ತು ಕಾಗದಪತ್ರಗಳನ್ನು ಒಪ್ಪಿಸಿದಳು. ಮಾಮಲೇದಾರರೂ ಅದನ್ನು ಸ್ವೀಕರಿಸಿದರು.

## ಬೆಳಗಾವಿ ಜಿಲ್ಲೆಯಲ್ಲಿ ದಬ್ಬಾಳಿಕೆ.

ತಾ|| ೨೯ ನೆಯ ದಿವಸ ಎಷ್ಟೋ ಜನ ಸಶಸ್ತ್ರ ಪೋಲೀಸರು ಪಾಚ್ಛಾಪುರಕ್ಕೆ ಹೋಗಿ ಕೆಳಗಿನ ೭ ಜನರನ್ನು ೧೪೪, ೫೦೬, ೪೪೭ ನೆಯ ಕಲಮುಗಳ ಅನ್ವಯ ಸೆರೆಹಿಡಿದಿರುವರು. ೧)ಖಾದಿರಸಾಹೇಬ ೨)ಬಸವಣೆಪ್ಪ ಕೊಟಗಿ, ೩) ಜಂಬು ಭಡಾಲಿ ೪)ದಶರಥ ಮಿರ್ಜಿ, ೫) ಓಂಕಾರ ಗೋಟಸಕಿ ೬) ಗುರುನಿಂಗ ತೇಲಿ ೭) ಶಂಕರ ಜೋಶಿ.

## ನಗರ ಸಭೆಯ ಮೇಲೆ ರಾಷ್ಟ್ರಧ್ವಜ.

ಕಾರವಾರ ಜಿಲ್ಲೆಯೊಳಗಿನ ಸಿರಸಿಯ ನಗರ ಸಭೆಯವರೂ ತಮ್ಮ ನಗರ ಸಭೆಯ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನೇರಿಸಿದ್ದಾರೆ ಬಾಗಲಕೋಟೆಯ ನಗರ ಸಭೆಯ ಮೇಲೆ ರಾಷ್ಟ್ರಧ್ವಜವು ಕಾಣಿಸದಿರುವದು ಬಾಗಲಕೋಟೆಯ ನಾಗರಿಕರಿಗೆ ನಾಚಿಕೆ ತರುವಂತಹ ಮಾತಾಗಿದೆ ಇನ್ನಾದರೂ ನಾಗರಿಕರು ಎಚ್ಚತ್ತು ಕಾರ್ಯೋದ್ಯುಕ್ತರಾಗಲಿ

## ಧರಸಾನಾದಲ್ಲಿ ಬಡಿಗೆಯ ರಾಜ್ಯ.

ಮುಂಬಯಿಯ ಉಪನಗರವಾದ ವ್ಹಿಲೆಪಾರ್ಲೆಯಿಂದ ೭೫ ಜನ ಸತ್ಯಾಗ್ರಹಿಗಳದೊಂದು ತಂಡವು ಧರಸಾನಾ ವಖಾರದ ದಾಳಿಗೆಂದು ಹೊರಟು ಧರಸಾನಾ ವಖಾರದ ಗಡಿಯನ್ನು ಮುಟ್ಟಿತು, ಅಬ್ದುಲ್ಲಾ ಶೇಟರು ಈ ತಂಡದ ನೇತೃಗಳಾಗಿದ್ದರು. ಗಡಿಯಲ್ಲಿ ಕಾಲಿಡುವದರೊಳಗಾಗಿಯೇ ಪೋಲೀಸ ಇನಸ್ಪೆಕ್ಟರರು ಅವರ ಕುತ್ತಿಗೆಯನ್ನು ಹಿಡಿದು ಜಗ್ಗಿ ಶಾಂತತಾಭಂಗದ ಕಾಯಿದೆಯನ್ನು ಮುರಿಯುತ್ತಿರುವಿರೆಂದು ಅವರಿಗೆ ತಿಳಿಸಿದರು, "ನಾನು ಉಂಟಾಡಿ ಬಿಡಾರವನ್ನು ಬಿಟ್ಟ ಬಳಿಕ ಪ್ರತಿಯೊಂದು ಕ್ಷಣಕ್ಕೂ ಕಾಯಿದೆಯನ್ನು ಮುರಿಯುತ್ತ ಬಂದಿದ್ದೇನೆ" ಎಂದು ಅಬ್ದುಲ್ಲಾ ಶೇಟರು ಉತ್ತರ ಕೊಟ್ಟರು. ಇದಕ್ಕಾಗಿ ಪೋಲೀಸ ಅಧಿಕಾರಿಗಳು ರೊಚ್ಚಿಗೆದ್ದು ಸ್ವಯಂಸೇವಕರ ಮೇಲೆ ಏರಿಹೋಗಿ ಅವರನ್ನು ಹೊಡೆಯತೊಡಗಿದರು. ಅಬ್ದುಲ್ಲಾ ಶೇಟರಿಗೂ ಮತ್ತು ೧೫ ಜನ ಸ್ವಯಂಸೇವಕರಿಗೂ ಬಹಳ ಗಾಯಗಳಾಗಿದ್ದು, ಉಳಿದವರಿಗೂ ಸ್ವಲ್ಪ ಗಾಯಗಳಾಗಿವೆ. ಬಳಿಕ ಅಧಿಕಾರಿಗಳು ಎಲ್ಲರನ್ನೂ ಕರೆದುಕೊಂಡು ಹೋಗಿ ಬುಲಸಾರದಲ್ಲಿ ಬಿಟ್ಟು ಬಿಟ್ಟರು.

## ಸತ್ಯಾಗ್ರಹಕ್ಕಾಗಿ ಕ್ರೈಸ್ತರ ಶ್ರೇಯಃ ಪ್ರಾರ್ಥನೆ.

ಮಹಾತ್ಮಾ ಗಾಂಧಿಯವರು ಹೂಡಿದ ಸತ್ಯಾಗ್ರಹಕ್ಕೆ ಯಶವು ದೊರೆಯಲೆಂದು ಬೆಂಗಳೂರಿನ ಕ್ರೈಸ್ತರು ದೇವರನ್ನು ಪ್ರಾರ್ಥಿಸಿದರು,

## ಸರಕಾರಕ್ಕೆ ಪುರಾವೆ ಸಿಗಲಿಲ್ಲ.

ಬೆಳಗಾವಿಯ ಹಿಂಡಲಗಿ ಜೇಲಿನಿಂದ ಶಿರೋಡಾ ಸತ್ಯಾಗ್ರಹಿಗಳನ್ನು ಪುರಾವೆ ಸಿಗಲಿಲ್ಲವೆಂದು ಬಿಟ್ಟುಗೊಟ್ಟಿದ್ದಾರೆ. ಸತ್ಯಾಗ್ರಹಿಗಳು "ನಾವು ಉಪ್ಪಿನ ಕಾಯದೆ ಮುರಿದಿರುವೆವು, ಉಪ್ಪಿನ ವಖಾರದ ಮೇಲೆ ದಾಳಿಮಾಡಿ ಉಪ್ಪು ತಂದಿರುವೆವು" ಎಂದು ಸಾರಿ ಸಾರಿ ಹೇಳಿದರೂ ಅವರನ್ನು ಬಿಟ್ಟುಗೊಟ್ಟರು.

# ಧರಸಾನಾ ದಾಳಿಯ ರಣರಂಗ!

(ತಂತಿಯ ವಾರ್ತೆ, ತಾ|| ೧-೬-೩೦)

ಇಂದು ಮುಂಜಾನೆಯಲ್ಲಿ ಪ್ರತ್ಯೇಕವಾಗಿ ೬೫ ಜನ ಸತ್ಯಾಗ್ರಹಿಗಳನ್ನೊಳಗೊಂಡ ಬೇರೆ ಬೇರೆ ಎಂಟು ತಂಡಗಳು ಧರಸಾನಾ ವಖಾರದ ಮೇಲೆ ದಾಳಿಯನ್ನು ಮಾಡಲು ಹೋಗಿದ್ದವು. ಪೋಲೀಸರು ಲಾಠಿಗಳನ್ನುಪಯೋಗಿಸಿ ಅವರನ್ನು ಹಿಂದಕ್ಕಟ್ಟಲು ಪ್ರಯತ್ನಿಸಿದರು. ಸ್ವಯಂಸೇವಕರು ೧೧ ತಾಸಿನವರೆಗೆ ಬಡಿಗೆಗಳ ಪೆಟ್ಟುಗಳನ್ನು ತಿನ್ನುತ್ತ ಹಾಗೆಯೇ ಮುಂದಕ್ಕೆ ಸಾಗಿ ಮುಳ್ಳಿನ ತಂತಿಯ ವರೆಗೆ ಹೋಗಿ ಮುಟ್ಟಿದರು. ಅಲ್ಲಿ ೧೦ ಜನ ಪೋಲೀಸ ಸ್ವಾರರು ಅವರ ಮೇಲೆ ಬಡಿಗೆಗಳನ್ನುಪಯೋಗಿಸಿದ್ದಲ್ಲದೆ ಎಷ್ಟೋ ಜನರ ಮೇಲೆ ಕುದುರೆಗಳನ್ನು ಹಾಯಿಸಿದರು. ೮೦ ಜನ ಸತ್ಯಾಗ್ರಹಿಗಳಿಗೆ ಗಾಯಗಳಾಗಿದ್ದು, ೪ ಜನರಿಗೆ ಭಯಂಕರ ಪೆಟ್ಟು ತಗುಲಿದೆ. ಈ ಹೋರಾಟದಲ್ಲಿ ಮಹಾರಾಷ್ಟ್ರದ ಸತ್ಯಾಗ್ರಹಿಗಳು ಶೂರತನದಿಂದ ವರ್ತಿಸಿದರಾಗಿ ತಿಳಿಯುತ್ತದೆ.

---

## ಧರಸಾನಾ ವಖಾರದ ದಾಳಿಗೆ

### ೫ ಜನರು ಸಾಯಕಲ್ಲ ಮೇಲೆ ಹೊರಟರು.

ಧರಸಾನಾ ವಖಾರದ ಮೇಲೆ ದಾಳಿಯನ್ನು ಮಾಡುವ ಸತ್ಯಾಗ್ರಹಿಗಳನ್ನು ಕೂಡಿಕೊಳ್ಳುವದಕ್ಕಾಗಿ ಮುಂಬಯಿಯಿಂದ ೩ ಪಾರ್ಸಿ, ೧ ಹಿಂದೂ, ೧ ಮುಸಲ್ಮಾನ ಹೀಗೆ ೫ ಜನ ಸತ್ಯಾಗ್ರಹಿಗಳು ಸಾಯಕಲ್ಲ ಮೇಲಿಂದ ಸುರತಕ್ಕೆ ತಾ| ೩೧ ನೆಯ ದಿನ ಹೊರಟಿದ್ದಾರೆ.

## ಗದಗಿನಲ್ಲಿ ೩೭೫ ಸಿಂದೀ ಗಿಡಗಳ ನಾಶ

ಗದುಗಿನ ಸ್ವಯಂಸೇವಕರು ತಾ| ೩೦ ನೆಯ ದಿವಸ ೩೭೫ ಈಚಲ ಗಿಡಗಳನ್ನು ಕಡಿದು ಬಂದಿದ್ದುದಕ್ಕಾಗಿ ಅವರ ಮೆರವಣಿಗೆಯನ್ನು ಹೊರಡಿಸುವದರಲ್ಲಿ ಬಂದಿತ್ತು. ಸಂಜೆಯಲ್ಲಿ ಇಂಗ್ಲೀಷ ಶಾಲೆಯ ಬೈಲಿನಲ್ಲಿ ಸಭೆ ಸೇರಿತು. ಶ್ರೀ. ಅಪ್ಪಣ್ಣಶಾಸ್ತ್ರಿ ಕಳ್ಳಿ ಇವರ ಅಧ್ಯಕ್ಷತೆಯಲ್ಲಿ ಸದ್ಯದ ಪರಿಸ್ಥಿತಿಯ ವಿಷಯವಾಗಿ ಮುಖಂಡರ ಭಾಷಣಗಳಾದವು. ಈ ಚಳವಳಿಗೆ ಎಲ್ಲ ಮತದವರೂ ಬೆಂಬಲವನ್ನೀಯಬೇಕೆಂದು ಅಧ್ಯಕ್ಷರು ತಮ್ಮ ಸಮಾರೋಪ ಭಾಷಣದಲ್ಲಿ ಹೇಳಿದರು. ಕೊನೆಯಲ್ಲಿ ರಾಷ್ಟ್ರಗೀತವಾಗಿ ಸಭೆಯ ಕಾರ್ಯವು ಕೊನೆಗಂಡಿತು.

## ಸತ್ಯಾಗ್ರಹಿಯಾಗಲು ಅಪ್ಪಣೆ ಸಿಗದ್ದಕ್ಕಾಗಿ

### ಪ್ರಾಣಕೊಟ್ಟನು.

ಕಾನಪುರದ ಕಬ್ಬಿಣದ ವ್ಯಾಪಾರಸ್ಥರಾದ ಶ್ರೀ. ಲಾಲಾ ಶ್ಯಾಮಲಾಲರ ೧೬ ವರ್ಷದ ಮಗನಾದ ಶ್ರೀಯುತ ಹೀರಾಲಾಲ ಎಂಬ ತರುಣನು ಸತ್ಯಾಗ್ರಹಿಯಾಗಲು ಹಿರಿಯರು ಅಪ್ಪಣೆಯನ್ನು ಕೊಡದಿದ್ದುದಕ್ಕಾಗಿ ಹೊಗೆಬಂಡಿಯ ಬಾಡವಲ್ಲಿ ಬಿದ್ದು ಪ್ರಾಣಕೊಟ್ಟನು.

## ಮಂಗಳೂರಿನಲ್ಲಿ ಪರದೇಶಿ ವಸ್ತ್ರ ಬಹಿಷ್ಕಾರ

### ಕ್ರೈಸ್ತರೂ ಸತ್ಯಾಗ್ರಹದಲ್ಲಿ ಸೇರಬೇಕು

ತಾ| ೨೫ ರ ದಿನವು "ಧರಸಾನಾ ಯುದ್ಧದ ದಿನವಾಗಿಯೂ ಪರದೇಶಿ ವಸ್ತ್ರಗಳ ಹೋಳಿಯ ದಿನವಾಗಿಯೂ ಆಚರಿಸಲ್ಪಟ್ಟಿತು. ಸ್ವಯಂಸೇವಕರು ಮನೆಮನೆಗೆ ಹೋಗಿ ಪರದೇಶಿ ಬಟ್ಟೆಗಳ[illegible]ಸಂಗ್ರಹಿಸಿ ತಂದಿದ್ದರು. ಸಾಯಂಕಾಲದಲ್ಲಿ ಮೆರವಣಿಗೆಯನ್ನು ತೆಗೆದು ಬಟ್ಟೆಗಳನ್ನು ಗಾಡಿಗಳಲ್ಲಿ ಹೇರಿಕೊಂಡು ಸಭೆಯ ಸ್ಥಾನಕ್ಕೆ ತೆರಳಲಾಯಿತು. ಈ ದಿನದ ಸಭೆಗೆ ಕ್ರೈಸ್ತಬಂಧುಗಳೂ ತಂಡತಂಡವಾಗಿ ಆಗಮಿಸಿದ್ದರು. ಕಾಯಿದೆ ಮಂಡಳದ ಸಭಾಸದರಾದ ಜೆ. ಎ ಸಲ್ಡಾನಾರವರು ಪರದೇಶಿ ಬಟ್ಟೆಗಳ ಬಹಿಷ್ಕಾರದ ಆವಶ್ಯಕತೆಯನ್ನು ಕುರಿತು ಹೇಳಿದ್ದಲ್ಲದೆ, ಈಗ ನಡೆಯುವ ಚಳವಳಿಯಲ್ಲಿ ಕ್ರೈಸ್ತರೆಲ್ಲರೂ ಸೇರದಿದ್ದರೆ ಯೇಸುವಿನ ತತ್ವವನ್ನು ಅವರು ಉಲ್ಲಂಘಿಸಿದಂತಾಗಬಹುದಾಗಿಯೂ ಭಾಷಣ ಮಾಡಿದರು. ಸಲ್ಡಾನಾರವರು ಬಟ್ಟೆಗಳಿಗೆ ಅಗ್ನಿಸಂಸ್ಕಾರ ಮಾಡಿದರು. ಬಳಿಕ ಸಭೆಯು ಮುಕ್ತಾಯವಾಯಿತು.

ಸತ್ಯಾಗ್ರಹ ಶಿಬಿರ ಮಂಗಳೂರು ೨೮—೫—೩೦ } ಪ್ರಕಟನಾಧಿಕಾರಿ

## ಕರ್ನಾಟಕ ಸತ್ಯಾಗ್ರಹ

ಅಂಕೋಲಾ ತಾಲೂಕಿನಲ್ಲಿ ಮದ್ಯಪಾನ ನಿಷೇಧದ ಚಳವಳಿಯ ಪರಿಣಾಮವು ಬಹಳ ಚನ್ನಾಗಿ ಆಗಿದೆ. ಸೆರೆ ಅಂಗಡಿಗಳಲ್ಲಿಯ ವ್ಯಾಪಾರವು ಬಹಳ ಕಡಿಮೆಯಾಗಿದೆ. ಸತ್ಯಾಗ್ರಹಿಗಳು ಹಳ್ಳಿಹಳ್ಳಿಗೆ ಹೋಗಿ ಉತ್ತಮರೀತಿಯಲ್ಲಿ ಕೆಲಸಮಾಡುತ್ತಿದ್ದಾರೆ. ಅಂಗಡಿಯಲ್ಲಿಯ ವ್ಯಾಪಾರವು ಕಡಿಮೆಯಾದುದನ್ನು ಕಂಡು ಅಂಗಡಿಕಾರರು ಸೆರೆಯನ್ನು ಒಯ್ದು ಮನೆ ಮನೆಗೆ ತಿರುಗುತ್ತಲಿದ್ದಾರೆ. ಅವರೂ ಕೊಳ್ಳುವವರು ಕಡಿಮೆ. ಕೆಲವು ಅಂಗಡಿಕಾರರು ಶಿಬಿರಕ್ಕೆ ಬಂದು ಇನ್ನು ಒಂದು ತಿಂಗಳದವರೆಗಾದರೂ ಚಳವಳಿಯನ್ನು ನಿಲ್ಲಿಸಬೇಕೆಂದೂ, ಮುಂದಿನ ವರ್ಷದಿಂದ ಅಂಗಡಿಗಳನ್ನು ತೆಗೆದುಕೊಳ್ಳುವದಿಲ್ಲವೆಂದೂ, ಈಗಿನ ಚಳವಳಿಯಿಂದ ತಮಗೆ ಸಾವಿರಾರು ರೂಪಾಯಿಗಳ ನಷ್ಟವಾಗುತ್ತದೆಯೆಂದೂ ಕೇಳಿಕೊಳ್ಳುತ್ತಿದ್ದಾರೆ. ಸ್ವಲ್ಪೇ ದಿವಸಗಳಲ್ಲಿ ಅನೇಕ ಅಂಗಡಿಗಳನ್ನು ಮುಚ್ಚುವದೇನೂ ಅಸಂಭವವಲ್ಲ.

ಸತ್ಯಾಗ್ರಹ ಶಿಬಿರ ಅಂಕೋಲಾ ೩೦—೫—೩೦ } ಪ್ರಕಟನಾ ಶಾಖಾಧಿಕಾರಿ

## ಶಿರೋಡಾ ವಖಾರದ ಮೇಲೆ ದಾಳಿ

ಮಹಾರಾಷ್ಟ್ರ ಸತ್ಯಾಗ್ರಹ ಮಂಡಳದವರು ಶಿರೋಡಾ ವಖಾರದ ಮೇಲೆ ದಾಳಿಯನ್ನು ಮಾಡುವದನ್ನು ಬಿಟ್ಟುಗೊಟ್ಟಿದ್ದರೂ ಸಹ, ಕೆಲವು ಸ್ತ್ರೀಯರು ಮತ್ತೆ ವಖಾರದ ಮೇಲೆ ದಾಳಿಯನ್ನು ಮಾಡುವದಾಗಿ ಯೋಚಿಸಿದ್ದಾರೆ. ಶ್ರೀಮತಿ ಘಾರೆಯವರು ನೇತೃತ್ವವನ್ನು ವಹಿಸಿಕೊಂಡಿದ್ದಾರೆ.

## ಮಠ ವಕೀಲರು ಪ್ರಸಿದ್ಧ ಪುರ-ಸಭಾಸದರು!
### ನನಗೆ ಹೊಳೆದಂತೆ

ತಾ|| ೧೮ ನೆಯ ದಿವಸ ಬಾಗಲಕೋಟೆಯ ನಗರಸಭೆಯ ಸಾಧಾರಣ ಅಧಿವೇಶನವು ಸೇರಿತ್ತು. ಸಭೆಯು ಕೂಡುತ್ತಲೆ ಶ್ರೀ. ರಾಮಣ್ಣ ನಾಯಕ ಸೊಲ್ಲಾಪುರರು “ಮಹಾತ್ಮಾ ಗಾಂಧಿಯವರನ್ನು ಸರಕಾರದವರು ಸೆರೆಹಿಡಿದುದಕ್ಕಾಗಿ ನಿಷೇಧವೆಂದು ಈ ಸಭೆಯನ್ನು ೧ ತಾಸು ಮುಂದೆ ಹಾಕಬೇಕು” ಎಂಬ ಆಶಯದ ಸೂಚನೆಯನ್ನು ಸಭೆಯ ಮುಂದಿಟ್ಟರು. ಶ್ರೀ. ಪದಕಿ ಯೋಗಪ್ಪನವರು ಸೂಚನೆಗೆ ಪುಷ್ಟಿಯನ್ನಿತ್ತರು. ಶ್ರೀ ಮಠ ಮಹಾಶಯರು ಒಲವಾಗಿ ವಿರೋಧಿಸಿದರು. ಕಟ್ಟಕಡೆಯಲ್ಲಿ ಮತಗಳನ್ನು ತೆಗೆದುಕೊಳ್ಳಲಾಗಿ ೫ ಜನರು ಅನುಕೂಲ ಮತಕೊಟ್ಟರು ೯ ಜನರು ತಟಸ್ಥವೃತ್ತಿಯನ್ನು ಸ್ವೀಕರಿಸಿದರು. ಒಬ್ಬರೇ ಒಬ್ಬರಾದ ಮಠ ಮಹಾಶಯರು ವಿರುದ್ಧವಾಗಿ ಮತಕೊಟ್ಟರು. ಹೀಗೆ ಸೂಚನೆಯು ಸ್ವೀಕೃತವಾಗಿ ಸಭೆಯು ೧ ತಾಸಿನವರೆಗೆ ಮುಂದೆ ಹಾಕಲ್ಪಟ್ಟಿತು. ಇದಕ್ಕಾಗಿ ಅನುಕೂಲ ಮತಕೊಟ್ಟವರಿಗೂ ಹಾಗೂ ತಟಸ್ಥ ವೃತ್ತಿಯನ್ನು ಸ್ವೀಕರಿಸಿದವರಿಗೂ ನಮ್ಮ ಧನ್ಯವಾದಗಳು.

ತಟಸ್ಥ ವೃತ್ತಿಯವರು ಅಭಿನಂದನೆಗೆ ನಿಜವಾಗಿ ಪಾತ್ರರಲ್ಲದಿದ್ದರೂ ಅವರಿಗೆ ಅಭಿನಂದನಗಳನ್ನು ಅರ್ಪಿಸಬೇಕಾಗಿದೆ. ಯಾಕೆಂದರೆ ಶ್ರೀ. ಮಠ ಮಹಾಶಯರಂತೆ ವಿರುದ್ಧ ಮತಕೊಡದಿದ್ದುದಕ್ಕಾಗಿ, ಅನುಕೂಲ ಮತಕೊಟ್ಟರೆ ಮ್ಯುನಸಿಪಾಲಿಟಿಗೆ ಎಂತಹ ಗಂಡಾಂತರ ಪ್ರಸಂಗಗಳು ಬರುವವೋ ಎಂದು ಬೆದರಿ ಬಾಯಿಮುಚ್ಚಿಕೊಂಡು ಕುಳಿತಿದ್ದುದಕ್ಕಾಗಿ, ಇಲ್ಲವೆ ಮಹಾತ್ಮರಂತಹ ಜಗದ್ವಿಭೂತಿಗಳಿಗೆ ಸಂಬಂಧಿಸಿದ ವಿಷಯವಾಗಿ ವಿರುದ್ಧವಾಗಿ ಮತಕೊಟ್ಟರೆ ಯಾವ ಪಾಪಕ್ಕೆ ಒಳಗಾಗುವೆವೋ ಎಂಬ ಸಂಶಯದಿಂದ ಸ್ವಸ್ಥರಾಗಿ ಮೌನವನ್ನು ಧಾರಣ ಮಾಡಿದುದಕ್ಕಾಗಿ. ಇನ್ನು ವಿರುದ್ಧವಾಗಿ ಮತಕೊಟ್ಟ ಮಠ ಮಹಾಶಯರನ್ನು ನಾಗರಿಕರು ಎಂದೆಂದಿಗೂ ಮರೆಯು ಶಕ್ಯದ್ದಲ್ಲ. ಯಾಕೆಂದರೆ ನಗರಸಭೆಗೂ ರಾಜಕೀಯ ಚಳವಳಿಗೂ ಯಾವ ಸಂಬಂಧವೂ ಇರುವದಿಲ್ಲವೆಂದು ನುಡಿದುದಕ್ಕಾಗಿ, ಹೀಗೆ ಸಭೆಯನ್ನು ಮುಂದಕ್ಕೆ ಹಾಕುತ್ತ ಹೋದರೆ ಕರ್ತವ್ಯದಿಂದ ಚ್ಯುತರಾಗುವೆವೆಂದು ಹೇಳಿದುದಕ್ಕಾಗಿ, ಹೀಗೆ ಸಭೆಯನ್ನು ಮುಂದಕ್ಕೆ ಹಾಕುತ್ತ ಹೋದರೆ ನಾಗರಿಕರ ಹಿತವನ್ನು ನೋಡಿದಂತಾಗುವದಿಲ್ಲವೆಂದು ವಿರೋಧಿಸಿದುದಕ್ಕಾಗಿ. ಒಟ್ಟಿನಲ್ಲಿ ಹೇಳಬೇಕಾದರೆ ಅಲ್ಲದ ಸಲ್ಲದ ಕಾರಣಗಳನ್ನು ಮುಂದೆಮಾಡಿ, ದೊಡ್ಡ ದೊಡ್ಡ ಮುಂಡಿಗೆಗಳನ್ನು ಒಗೆದುದಕ್ಕಾಗಿ ಇವೆಲ್ಲ ಕಾರಣಗಳು ಎಷ್ಟು ಪೊಳ್ಳು ಇವೆ ಎಂಬುದನ್ನು ವಾಚಕರೇ ತಿಳಿದುಕೊಳ್ಳಲಿ;

ಅಖಿಲ ಭರತಖಂಡದ ನಿವಾಸಿಗಳ ಉದ್ಧಾರಕ್ಕಾಗಿ ಯತ್ನಿಸುತ್ತಿರುವ ಮಹಾತ್ಮಾ ಗಾಂಧಿಯವರ ಸನ್ಮಾನಾರ್ಥವಾಗಿ ಸಭೆಯನ್ನು ಮುಂದರಿಸಲು ಸ್ಥಾನಿಕ ಸ್ವರಾಜ್ಯ ಸಂಸ್ಥೆಯ ಈ ಸಭಾಸದರಿಗೆ ಒಂದು ತಾಸನ್ನು ಕಳೆಯಲು ಮನಸ್ಸು ಆಗಲಿಲ್ಲವಂತೆ! ಈ ಒಂದು ತಾಸಿನಲ್ಲಿ ಇವರು ಬಾಗಲಕೋಟೆಯ ನಾಗರಿಕರಿಗೆ ಯಾವ ಹಿತವನ್ನು ಮಾಡುತ್ತಿದ್ದರೋ ಏನೋ! ಆರಿಸಿ ಹೋದಂದಿನಿಂದ ಯಾವ ಯಾವ ಹಿತವನ್ನು ಮಾಡಿದವರೆಂಬುವದು ನಾಗರಿಕರಿಗೆ ಗೊತ್ತೇ ಇದೆ. ಬಾಗಲಕೋಟೆಯ ನಗರ ದೇವತೆಯು ತನಗಾಗಿ ಮಾಡಿದ ಉಪಕಾರಕ್ಕಾಗಿ ಅಪ್ರತ್ಯಕ್ಷವಾಗಿ ಇವರನ್ನು ಅಭಿನಂದಿಸುತ್ತಿರುವಳಂತೆ! ಆದುದರಿಂದ ಬಾಗಲಕೋಟೆಯ ನಾಗರಿಕರು ಇವರನ್ನು ಯಾವಾಗಲೂ ಆರಿಸಿ ಕಳುಹಿಸಿ ತಮ್ಮ ಹಿತವನ್ನು ಸಾಧಿಸಿಕೊಳ್ಳಬೇಕು! ಏನೇ ಇರಲಿ! ಇವರು ತಮ್ಮ ಈ ಕೃತ್ಯದಿಂದ ತಮ್ಮನ್ನು ಹೇರು ಬಾಗಲಕೋಟೆಯ ನಾಗರಿಕರ ನಾಲಿಗೆಯ ಮೇಲೆ ಕುಣಿದಾಡುವಂತೆ ಮಾಡಿಕೊಂಡರು. “ಏನ ಕೇನ ಪ್ರಕಾರೇಣ” ಪ್ರಸಿದ್ಧ ಪುರುಷರಾದರು — ನಿರೀಕ್ಷಕ.

## ಕಾಯಿದೆಮಂಡಳಕ್ಕೆ ಯಾರೂ ನಿಲ್ಲಲಿಲ್ಲ

ಮುಂಬಯಿ ಪಟ್ಟಣ ಹಾಗೂ ಸಿಂಧ ಜಿಲ್ಲೆಯ ಸಲುವಾಗಿ ಕಾಯಿದೆ ಮಂಡಳಕ್ಕೆ ಹೋದ ದೀಕ್ಷಿತ, ನಾಯಿಕ ಮತ್ತು ತಿವಾರಾನಿ ಇವರು ರಾಜೀನಾಮೆಯನ್ನು ಕೊಟ್ಟಿದ್ದರಿಂದ ತೆರವಾದ ಕಾಯಿದೆ ಮಂಡಳದ ಸ್ಥಳಗಳಿಗೆ ಯಾವ ಉಮೇದವಾರನೂ ಅರ್ಜಿಯನ್ನು ಕಳಿಸಿಲ್ಲ. ಆದುದರಿಂದ ಆ ಸ್ಥಳಗಳು ಹಾಗೆಯೇ ತೆರವಾಗಿ ಉಳಿದಿವೆ.

---

ಕಂಪನಿಯ ಮುಕ್ಕಾಂ ಸ್ವಲ್ಪ ಉಳಿದಿವೆ,

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಸೋಮವಾರ ತಾ|| ೨-೬-೩೦

**ಶರಣಬಸವ**

(ಕನ್ನಡ ನಾಡಿನಿಂದ ಕಲೆಯ ಪ್ರಗತಿಗಾಗಿ ಜರ್ಮನಿಗೆ ಹೋದ **ಬಿ. ವ್ಹಿ. ಅಳವಂಡಿಯವರ ಸಹಾಯಕ್ಕಾಗಿ.** ಧರ್ಮಾರ್ಥ ಕೊಡಲ್ಪಡುವದು)

ಬುಧವಾರ ತಾ|| ೪—೬—೩೦

**ಯಚ್ಚಮ್ಮನಾಯಕ**

(ರಾ. ಬ. ಸಾರದ ಫ್ರೀ ಬೋರ್ಡಿಂಗ ವೀರಶೈವ ತರುಣಸಂಘ ಬಾಗಲಕೋಟೆ ಇವರಿಗೆ ಧರ್ಮಾರ್ಥ ಕೊಡಲ್ಪಟ್ಟಿದೆ.)

ಎಂಬ ನಾಟಕವನ್ನು ಅಭಿನಯಿಸುವರು.

ಈ ನಾಟಕವನ್ನಾಡಿ ಕಂಪನಿಯು ರಾಣೆಬೆನ್ನೂರಿಗೆ ಹೋಗುವದು.

**ಸಂಘದೊಡೆಯ—ಸದಾಶಿವರಾವ ಗರೂಡ**

---

ಜಯಲಕ್ಷ್ಮೀ ಪ್ರಸಾದಿತ

ಸ್ತ್ರೀಮಿಶ್ರಿತ ಸಂಗೀತ ನಾಟಕ ಮಂಡಳಿ ದಾವಣಗೇರಿ ಇವರು

**ಬೇಗನೇ ಬರುವರು**

ತಾ| ೪—೬—೩೦ ಬುಧವಾರ

ಬಾಗಲಕೋಟೆ ತಾಜ ಥಿಯೇಟರಿನಲ್ಲಿ

**ತ್ರಿಕೋಟಿಲಿಂಗಪ್ರತಿಷ್ಠಾ**

ಶುಕ್ರವಾರ ತಾ|| ೬—೬—೩೦

**ಪ್ರತಾಪಪ್ರಮಿಲಾ**

ಶನಿವಾರ ತಾ|| ೭—೬—೩೦

**ಶ್ರೀಕೃಷ್ಣ—ಕೊರವಂಜಿ.**

ಎಂಬ ಹೊಸ ಆಖ್ಯಾನಗಳನ್ನು ಪ್ರಯೋಗಿಸುವರು.

ವ್ಯವಸ್ಥಾಪಕ.

---

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ. ಬಿ ೧೯೪೭ ನಿತ್ಯಸಂಚಿಕೆಯು. ಬೆಲೆ ೦-೦-೩

# ಕನ್ನಡಿಗ

ಜಯಕರ್ನಾಟಕ

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು :— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ಮಂಗಳವಾರ ಮಿತಿ ಜ್ಯೇಷ್ಠ ಶುದ್ಧ ೭ ಶಕೆ ೧೮೫೨ ತಾ|| ೩-೬-೩೦ ಸಂಚಿಕೆ ೬೫

## ಬಾಗಲಕೋಟೆ ನಗರ ಸಭೆಯ ಮೇಲೆ

# ರಾಷ್ಟ್ರಧ್ವಜಕ್ಕಾಗಿ ಇಂದು ಮೆರವಣಿಗೆ



### ನಮ್ಮ ಧ್ವಜವು.

ಇದು ತಪೋನಿಧಿ ಗಾಂಧಿ ಕಲ್ಪಿಸಿದ ಧ್ವಜವು ।
ಇದು ಭರತಸಂತತಿಯ ಸರ್ವಸ್ವವು || ಪಲ್ಲ ||
ಇದು ನಮ್ಮ ನಾಡಿನಧ್ಯಾತ್ಮಶಕ್ತಿ ಧ್ವಜವು ।
ಇದು ನಮ್ಮ ತಾಯ್ನಾಡ ಸೌಭಾಗ್ಯವು ||
ಇದು ನಮ್ಮ ನಾಡ ಪುಣ್ಯಪ್ರಕರ್ಷಧ್ವಜವು ।
ಇದು ನಮ್ಮ ತಾಯ್ನಾಡ ಚೈತನ್ಯವು ||೧||
ಇದರ ದರ್ಶನವೆಮಗೆ ಪರಮಪುಣ್ಯಪ್ರದವು ।
ಇದರಿಂದ ತೇಜಸ್ವಿ ನುತ್ಕರ್ಷವು ||
ಇದರ ನೆರಳೊಳ್ ನಮ್ಮ ಸ್ವಾತಂತ್ರ್ಯ ಮಂದಿರವು ।
ಇದರಿಂದಯೇ ವಿಶ್ವದಭ್ಯುದಯವು ||೨||
ಇದರ ರಕ್ಷಣದಿಂದೆ ನಮ್ಮ ಸಂರಕ್ಷಣವು ।
ಇದರ ಮಾನವು ನಮ್ಮ ಸನ್ಮಾನವು ||
ಇದರ ಪಾವನಕೀರ್ತಿ ಸಕಲಭುವನವ್ಯಾಪಿ ।
ಇದು ಜಗಕೆ ಮಂಗಲವು ನಮ್ಮ ಧ್ವಜವು ||೩||

ಸ್ವಾ. ರಾ.

### ಬಾಗಲಕೋಟೆಯ ನಾಗರಿಕರಲ್ಲಿ ಬಿನ್ನಹ

ಮೋಹನೀಯರೆ,

ಬಾಗಲಕೋಟೆಯ ನಗರ ಸಭೆಯವರು, ರಾಷ್ಟ್ರಧ್ವಜವನ್ನು ಹಚ್ಚತಕ್ಕದ್ದೆಂಬ ವಿಷಯವನ್ನ ಓರ್ವ ಸಭಾಸದರು ಎಷ್ಟೋ ದಿವಸಗಳ ಹಿಂದೆಯೇ ಸೂಚಿಸಿದ್ದರೂ ಸಹ ಆ ವಿಷಯವನ್ನು ಬೇಕಂತಲೇ ಮುಂದಕ್ಕೆ ಹಾಕುತ್ತಿರುವರೆಂಬುವದು ನಿಮಗೆ ತಿಳಿದಿರಲಿಕ್ಕೆ ಸಾಕು. ಭರತಸಂತತಿಯ ಸರ್ವಸ್ವವೂ ತಾಯ್ನಾಡಿನ ಚೈತನ್ಯವೂ ಆಗಿರುವ ನಾಡಗುಡಿಯನ್ನು ಬಾಗಲಕೋಟೆಯ ನಗರಸಭೆಯ ಮೇಲೆ ಏರಿಸದೆ ಕುಳಿತುಕೊಳ್ಳುವದು ಬಾಗಲಕೋಟೆಯ ನಾಗರಿಕರಿಗೆ ಭೂಷಣವಲ್ಲ. ಪ್ರತಿಯೊಂದು ದೇಶದವರಿಗೂ ಅವರವರ ರಾಷ್ಟ್ರಧ್ವಜಗಳುಂಟು. ಅವುಗಳ ಮಾನವನ್ನು ಕಾಯುವದಕ್ಕಾಗಿ ಅವರು ಮಡಿಯಲೂ ಅಂಜುವದಿಲ್ಲ. ಇಷ್ಟು ದಿವಸಗಳ ವರೆಗೆ ಹಿಂದುಸ್ಥಾನವು ಇದಕ್ಕೆ ಅಪವಾದವಾಗಿತ್ತು. ಆದರೆ ಈಗ ತಪೋನಿಧಿ ಗಾಂಧಿಯವರ ಪುಣ್ಯದಿಂದ ರಾಟಿಯ ಚಿತ್ರವನ್ನೊಳಗೊಂಡು ಕೆಂಪು, ಹಸರು, ಬಿಳೀ ಈ ಮೂರು ಬಣ್ಣಗಳಿಂದ ಕೂಡಿದ ರಾಷ್ಟ್ರಧ್ವಜವು ಹಿಂದುಸ್ಥಾನಕ್ಕೆ ದೊರಕಿದೆ. ಈ ರಾಷ್ಟ್ರಧ್ವಜಕ್ಕೆ ಯೋಗ್ಯ ಸನ್ಮಾನವನ್ನು ತೋರಿಸುವದೂ, ಪ್ರಸಂಗ ಬಿದ್ದಲ್ಲಿ ಅದಕ್ಕಾಗಿ ಮಡಿಯುವದೂ ಭಾರತೀಯರೆಲ್ಲರ ಕರ್ತವ್ಯವೇ ಆದೆ.

ಧಾರವಾಡದವರು ನಗರ ಸಭೆಯ ಮೇಲೆ ರಾಷ್ಟ್ರಧ್ವಜವನ್ನೇರಿಸಿ ಧನ್ಯರಾದರು. ಹಾವೇರಿಯವರು ನಗರಸಭೆಯ ಮೇಲೆ ಧ್ವಜವು ಹಾರಾಡುವಂತೆ ಮಾಡಿ ಕೀರ್ತಿಯುತರಾದರು. ಸಿರ್ಸಿಯವರೂ ನಗರಸಭೆಯ ಮೇಲೆ ನಾಡಗುಡಿಯನ್ನೇರಿ ಕೃತಕೃತ್ಯರಾದರು. ಹುಬ್ಬಳ್ಳಿಯ ನಾಗರಿಕರೂ ನಗರಸಭೆಯ ಮೇಲೆ ರಾಷ್ಟ್ರಧ್ವಜವನ್ನೇರಿಸಲು ಅಧ್ಯಕ್ಷರಿಗೆ ೧೫ ದಿವಸಗಳ ಅವಧಿಯನ್ನು ಕೊಟ್ಟಿದ್ದಾರೆ. ಕರ್ನಾಟಕದೊಳಗಿನ ಇಷ್ಟೆಲ್ಲ ನಗರ ಸಭೆಗಳು ಮುಂದೆ ಸಾಗಿರುವಾಗ ಬಾಗಲಕೋಟೆಯವರು ಸುಮ್ಮನೆ ಕುಳ್ಳಿರುವದೆಂದರೆ ಸಮಂಜಸವಾಗದು.

ಬಾಗಲಕೋಟೆಯ ನಾಗರಿಕರೇ ಎದ್ದೇಳಿರಿ! ರಾಷ್ಟ್ರಧ್ವಜಕ್ಕಾಗಿ ಹೋರಾಡಲು ಸಿದ್ಧರಾಗಿರಿ! ಇಂದು ಸೇರಲಿಕ್ಕಿದ ನಗರ ಸಭೆಯ ಅಧಿವೇಶನದಲ್ಲಿ ಈ ವಿಷಯವನ್ನು ಸಭೆಯಲ್ಲಿ ತೆಗೆದುಕೊಳ್ಳಹಚ್ಚಲು ತಂಡತಂಡವಾಗಿ ಹೋಗೋಣ ಬನ್ನಿರಿ. ಮಧ್ಯಾಹ್ನದಲ್ಲಿ ರಾಷ್ಟ್ರಧ್ವಜ ಸಹಿತವಾಗಿ ಹೊರಡಲಿಕ್ಕಿರುವ ಮೆರವಣಿಗೆಯಲ್ಲಿ ಸಮಾವಿಷ್ಟರಾಗಿರಿ!

ಕಾರ್ಯದರ್ಶಿ ರಾಷ್ಟ್ರಧ್ವಜ ಸತ್ಯಾಗ್ರಹ ಮಂಡಳ
ಬಾಗಲಕೋಟೆ.

## ಮಠ ವಕೀಲರು ಪ್ರಸಿದ್ಧ ಪುರುಷರಾದರು!
### ನನಗೆ ಹೊಳೆದಂತೆ

ತಾ|| ೧೮ ನೆಯ ದಿವಸ ಬಾಗಲಕೋಟೆಯ ನಗರಸಭೆಯ ಸಾಧಾರಣ ಅಧಿವೇಶನವು ಸೇರಿತ್ತು. ಸಭೆಯು ಬರುವಾಗ ಕೂಡಲೆ ಶ್ರೀ. ರಾಮಣ್ಣ ನಾಯಕ ಸೊಲ್ಲಾಪುರರು "ಮಹಾತ್ಮಾ ಗಾಂಧಿಯವರನ್ನು ಸರಕಾರದವರು ಸೆರೆಹಿಡಿದುದಕ್ಕಾಗಿ ನಿಷೇಧವೆಂದು ಈ ಸಭೆಯನ್ನು ೧ ತಾಸು ಮುಂದೆ ಹಾಕಬೇಕು" ಎಂಬ ಆಶಯದ ಸೂಚನೆಯನ್ನು ಸಭೆಯ ಮುಂದಿಟ್ಟರು. ಶ್ರೀ. ಪದಕಿ ಯೋಗಪ್ಪನವರು ಸೂಚನೆಗೆ ಪುಷ್ಟಿಯನ್ನಿತ್ತರು. ಶ್ರೀ ಮಠ ಮಹಾಶಯರು ಒಲವಾಗಿ ವಿರೋಧಿಸಿದರು. ಕಟ್ಟಕಡೆಯಲ್ಲಿ ಮತಗಳನ್ನು ತೆಗೆದುಕೊಳ್ಳಲಾಗಿ ೫ ಜನರು ಅನುಕೂಲ ಮತಕೊಟ್ಟರು ೯ ಜನರು ತಟಸ್ಥವೃತ್ತಿಯನ್ನು ಸ್ವೀಕರಿಸಿದರು. ಒಬ್ಬರೇ ಒಬ್ಬರಾದ ಮಠ ಮಹಾಶಯರು ವಿರುದ್ಧವಾಗಿ ಮತಕೊಟ್ಟರು. ಹೀಗೆ ಸೂಚನೆಯು ಸ್ವೀಕೃತವಾಗಿ ಸಭೆಯು ೧ ತಾಸಿನವರೆಗೆ ಮುಂದಹಾಕಲ್ಪಟ್ಟಿತು. ಇದಕ್ಕಾಗಿ ಅನುಕೂಲ ಮತಕೊಟ್ಟವರಿಗೂ ಹಾಗೂ ತಟಸ್ಥ ವೃತ್ತಿಯನ್ನು ಸ್ವೀಕರಿಸಿದವರಿಗೂ ನಮ್ಮ ಧನ್ಯವಾದಗಳು.

ತಟಸ್ಥ ವೃತ್ತಿಯವರು ಅಭಿನಂದನೆಗೆ ನಿಜವಾಗಿ ಪಾತ್ರರಲ್ಲದಿದ್ದರೂ ಅವರಿಗೆ ಅಭಿನಂದನಗಳನ್ನು ಅರ್ಪಿಸಬೇಕಾಗಿದೆ. ಯಾಕೆಂದರೆ ಶ್ರೀ. ಮಠ ಮಹಾಶಯರಂತೆ ವಿರುದ್ಧ ಮತಕೊಡದಿದ್ದುದಕ್ಕಾಗಿ ಅನುಕೂಲ ಮತಕೊಟ್ಟರೆ ಮುಂದೆ ಎಂಥಾ ಗಂಡಾಂತರ ಪ್ರಸಂಗಗಳು ಬರುವವೋ ಎಂದು ಬೆದರಿ ಬಾಯಿಮುಚ್ಚಿಕೊಂಡು ಕುಳಿತಿದ್ದುದಕ್ಕಾಗಿ, ಇಲ್ಲವೆ ಮಹಾತ್ಮರಂತಹ ಜಗದ್ವಿಭೂತಿಗಳಿಗೆ ಸಂಬಂಧಿಸಿದ ವಿಷಯವಾಗಿ ವಿರುದ್ಧವಾಗಿ ಮತಕೊಟ್ಟರೆ ಯಾವ ಪಾಪಕ್ಕೆ ಒಳಗಾಗುವೆವೋ ಎಂಬ ಸಂಶಯದಿಂದ ಸ್ವಸ್ಥರಾಗಿ ಮೌನವನ್ನು ಧಾರಣ ಮಾಡಿದುದಕ್ಕಾಗಿ. ಇನ್ನು ವಿರುದ್ಧವಾಗಿ ಮತಕೊಟ್ಟ ಮಠ ಮಹಾಶಯರನ್ನೂ ನಾಗರಿಕರು ಎಂದೆಂದಿಗೂ ಮರೆಯತಕ್ಕದ್ದಲ್ಲ. ಯಾಕೆಂದರೆ ನಗರಸಭೆಗೂ ರಾಜಕೀಯ ಚಳವಳಿಗೂ ಯಾವ ಸಂಬಂಧವೂ ಇರುವದಿಲ್ಲವೆಂದು ನುಡಿದುದಕ್ಕಾಗಿ, ಹೀಗೆ ಸಭೆಯನ್ನು ಮುಂದಕ್ಕೆ ಹಾಕುತ್ತ ಹೋದರೆ ಕರ್ತವ್ಯದಿಂದ ಚ್ಯುತರಾಗುವೆವೆಂದು ಹೇಳಿದುದಕ್ಕಾಗಿ, ಹೀಗೆ ಸಭೆಯನ್ನು ಮುಂದಕ್ಕೆ ಹಾಕುತ್ತ ಹೋದರೆ ನಾಗರಿಕರ ಹಿತವನ್ನು ನೋಡಿದಂತಾಗುವದಿಲ್ಲವೆಂದು ವಿರೋಧಿಸಿದುದಕ್ಕಾಗಿ. ಒಟ್ಟಿನಲ್ಲಿ ಹೇಳಬೇಕಾದರೆ ಅಲ್ಲದ ಸಲ್ಲದ ಕಾರಣಗಳನ್ನು ಮುಂದೆಮಾಡಿ, ದೊಡ್ಡ ದೊಡ್ಡ ಮುಂಡಿಗೆಗಳನ್ನು ಒಗೆದುದಕ್ಕಾಗಿ ಇವೆಲ್ಲ ಕಾರಣಗಳು ಎಷ್ಟು ಪೊಳ್ಳು ಇವೆ ಎಂಬುವನ್ನು ವಾಚಕರೇ ಕಂಡುಕೊಳ್ಳಲಿ.

ಅಖಿಲ ಭರತಖಂಡದ ನಿವಾಸಿಗಳ ಉದ್ಧಾರಕ್ಕಾಗಿ ಯತ್ನಿಸುತ್ತಿರುವ ಮಹಾತ್ಮಾ ಗಾಂಧಿಯವರ ಸನ್ಮಾನಾರ್ಥವಾಗಿ ಸಭೆಯನ್ನು ಮುಂದರಿಸಲು ಸ್ಥಾನಿಕ ಸ್ವರಾಜ್ಯ ಸಂಸ್ಥೆಯ ಈ ಸಭಾಸದರಿಗೆ ಒಂದು ತಾಸನ್ನು ಕಳೆಯಲು ಮನಸ್ಸು ಆಗಲಿಲ್ಲವಂತೆ! ಈ ಒಂದು ತಾಸಿನಲ್ಲಿ ಇವರು ಬಾಗಲಕೋಟೆಯ ನಾಗರಿಕರಿಗೆ ಯಾವ ಹಿತವನ್ನು ಮಾಡುತ್ತಿದ್ದರೋ ಏನೋ! ಆರಿಸಿ ಹೋದಂದಿನಿಂದ ಯಾವ ಯಾವ ಹಿತವನ್ನು ಮಾಡಿರುವರೆಂಬುವದು ನಾಗರಿಕರಿಗೆ ಗೊತ್ತೇ ಇದೆ. ಬಾಗಲಕೋಟೆಯ ನಗರ ದೇವತೆಯು ತನಗಾಗಿ ಮಾಡಿದ ಉಪಕಾರಕ್ಕಾಗಿ ಅಪ್ರತ್ಯಕ್ಷವಾಗಿ ಇವರನ್ನು ಅಭಿನಂದಿಸುತ್ತಿರುವಳಂತೆ! ಆದುದರಿಂದ ಬಾಗಲಕೋಟೆಯ ನಾಗರಿಕರು ಇವರನ್ನು ಯಾವಾಗಲೂ ಆರಿಸಿ ಕಳುಹಿಸಿ ತಮ್ಮ ಹಿತವನ್ನು ಸಾಧಿಸಿಕೊಳ್ಳಬೇಕು! ಏನೇ ಇರಲಿ! ಇವರು ತಮ್ಮ ಈ ಕೃತ್ಯದಿಂದ ತಮ್ಮ ಹೆಸರು ಬಾಗಲಕೋಟೆಯ ನಾಗರಿಕರ ನಾಲಿಗೆಯಮೇಲೆ ಓಡಾಡುವಂತೆ ಮಾಡಿಕೊಂಡರು. "ಯೇನ ಕೇನ ಪ್ರಕಾರೇಣ" ಪ್ರಸಿದ್ಧ ಪುರುಷರಾದರು.

— ನಿರೀಕ್ಷಕ.

## ಕಾಯಿದೆಮಂಡಳಕ್ಕೆ ಯಾರೂ ನಿಲ್ಲಲಿಲ್ಲ

ನಮ್ಮ ಪಟ್ಟಣ ಹಾಗೂ ಸಂತ ಜಿಲ್ಲೆಯ ಪರವಾಗಿ ಕಾಯಿದೆ ಮಂಡಳಕ್ಕೆ ಹೋದ ದೀಕ್ಷಿತ, ನಾಯಿಕ ಮತ್ತು ಶಿವಪಾಗನಿ ಇವರು ರಾಜೀನಾಮೆಯನ್ನು ಕೊಟ್ಟಿದ್ದರಿಂದ ತೆರವಾದ ಕಾಯಿದೆ ಮಂಡಳದ ಸ್ಥಳಗಳಿಗೆ ಯಾವ ಉಮೇದವಾರನೂ ಅರ್ಜಿಯನ್ನು ಕಳಿಸಿಲ್ಲ. ಆದುದರಿಂದ ಆ ಸ್ಥಳಗಳು ಹಾಗೆಯೇ ತೆರವಾಗಿ ಉಳಿದಿವೆ.

---


ಆಸನಗಳು ಸಂಖ್ಯೆ ಸ್ವಲ್ಪ ಉಳಿದಿವೆ.

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಸೋಮವಾರ ತಾ|| ೨-೬-೩೦

**ಶರಣಬಸವ**

(ಕನ್ನಡ ನಾಡಿನಿಂದ ಕಲೆಯ ಪ್ರಗತಿಗಾಗಿ ಜರ್ಮನಿಗೆ ಹೋದ ಬಿ. ಪ್ಪಿ. ಅಳವಂಡಿಯವರ ಸಹಾಯಕ್ಕಾಗಿ. ಧರ್ಮಾರ್ಥ ಕೊಡಲ್ಪಡುವದು.)

ಬುಧವಾರ ತಾ|| ೪—೬—೩೦

**ಯಚ್ಚಮ್ಮನಾಯಕ**

(ರಾ. ಬ. ಪಾರದ ಫ್ರೀ ಬೋರ್ಡಿಂಗ ವೀರಶೈವ ತರುಣ ಸಂಘ ಬಾಗಲಕೋಟಿ ಇವರಿಗೆ ಧರ್ಮಾರ್ಥ ಕೊಡಲ್ಪಟ್ಟಿದೆ.)

ಎಂಬ ನಾಟಕವನ್ನು ಅಭಿನಯಿಸುವರು.

ಈ ನಾಟಕವನ್ನಾಡಿ ಕಂಪನಿಯು ರಾಣಿಬೆನ್ನೂರಿಗೆ ಹೋಗುವದು.

ಸಂಘದೊಡೆಯ—ಸದಾಶಿವರಾವ ಗರೂಡ


---


ಜಯಲಕ್ಷ್ಮೀ ಪ್ರಾಸಾದಿಕ

ಶ್ರೀ ಮಿತ್ರ ಸಂಗೀತ ನಾಟಕ ಮಂಡಳಿ ದಾವಣಗೇರಿ ಇವರು

**ಬೇಗನೇ ಬರುವರು**

ತಾ| ೪—೬—೩೦ ಬುಧವಾರ

ಬಾಗಲಕೋಟಿ ತಾಜ ಥಿಯೇಟರಿನಲ್ಲಿ

**ತ್ರಿಕೋಟಿಲಿಂಗಪ್ರತಿಷ್ಠಾ**

ಶುಕ್ರವಾರ ತಾ|| ೬—೬—೩೦

**ಪ್ರತಾಪಪ್ರಮಿಲಾ**

ಶನಿವಾರ ತಾ|| ೭—೬—೩೦

**ಶ್ರೀ ಕೃಷ್ಣ—ಕೊರವಂಜಿ.**

ಎಂಬ ಹೊಸ ಆಖ್ಯಾನಗಳನ್ನು ಪ್ರಯೋಗಿಸುವರು.

ವ್ಯವಸ್ಥಾಪಕ.


---

ಈ ಪತ್ರಿಕೆಯು ಬಳವಂತ ಅಣ್ಣಾಜಿರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ. ಬಿ ೧೯೪೭ ನಿತ್ಯಸಂಚಿಕೆಯು. ಬೆಲೆ ೧—೦—೩

ಜಯಕರ್ನಾಟಕ

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ — ಮನು

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ಮಂಗಳವಾರ ಮಿತಿ ಜ್ಯೇಷ್ಠ ಶುದ್ಧ ೭ ಶಕ ೧೮೫೨ ತಾ॥ ೩—೬—೩೦ ಸಂಚಿಕೆ ೬೫

## ಬಾಗಲಕೋಟೆ ನಗರ ಸಭೆಯ ಮೇಲೆ

# ರಾಷ್ಟ್ರಧ್ವಜಕ್ಕಾಗಿ ಇಂದು ಮೆರವಣಿಗೆ



### ನಮ್ಮ ಧ್ವಜವು.

ಇದು ತಪೋನಿಧಿ ಗಾಂಧಿ ಕಲ್ಪಿಸಿದ ಧ್ವಜವು ।
ಇದು ಭರತಸಂತತಿಯ ಸರ್ವಸ್ವವು ॥ ಪಲ್ಲ ॥
ಇದು ನಮ್ಮ ನಾಡಿನಧ್ಯಕ್ಷಶಕ್ತಿ ಧ್ವಜವು ।
ಇದು ನಮ್ಮ ತಾಯ್ನಾಡ ಸೌಭಾಗ್ಯವು ॥
ಇದು ನಮ್ಮ ನಾಡ ಪುಣ್ಯದ ಕೀರ್ತಿಧ್ವಜವು ।
ಇದು ನಮ್ಮ ತಾಯ್ನಾಡ ಚೈತನ್ಯವು ॥೧॥
ಇದರ ದರ್ಶನವೆಮಗೆ ಪರಮಪುಣ್ಯಪ್ರದವು ।
ಇದರಿಂದ ತೇಜಸ್ಸು ಸುಕೃಷ್ಟವು ॥
ಇದರ ನೆರಳೊಳೆ ನಮ್ಮ ಸ್ವಾತಂತ್ರ್ಯ ಮಂದಿರವು
ಇದರಿಂದಲೇ ವಿಶ್ವದಭ್ಯುದಯವು ॥೨॥
ಇದರ ರಕ್ಷಣದಿಂದೆ ನಮ್ಮ ಸಂರಕ್ಷಣವು
ಇದರ ಮಾನವು ನಮ್ಮ ಸನ್ಮಾನವು ॥
ಇದರ ಪಾವನಕೀರ್ತಿ ಸಕಲಭುವನವ್ಯಾಪಿ ।
ಇದು ಜಗಕೆ ಮಂಗಳವು ನಮ್ಮ ಧ್ವಜವು ॥೩॥

ಸ್ವಾ. ರಾ.

### ಬಾಗಲಕೋಟೆಯ ನಾಗರಿಕರಲ್ಲಿ ಬಿನ್ನಹ

ಮೋಹನೀಯರೆ,

ಬಾಗಲಕೋಟೆಯ ನಗರ ಸಭೆಯವರು, ರಾಷ್ಟ್ರಧ್ವಜವನ್ನು ಏರಿಸಬೇಕೆಂಬ ವಿಷಯವನ್ನು ಒಪ್ಪದ ಸಭಾಸದರ. ಎಷ್ಟೋ ದಿವಸಗಳ ಹಿಂದೆಯೇ ಸೂಚಿಸಿದ್ದರೂ ಸಹ ಆ ವಿಷಯವನ್ನು ಬೇಕೆಂತಲೇ ಮುಂದಕ್ಕೆ ಹಾಕುತ್ತಿರುವರೆಂಬುವದು ನಿಮಗೆ ತಿಳಿದಿರಲಿಕ್ಕೆ ಸಾಕು. ಭರತಸಂತತಿಯ ಸರ್ವಸ್ವವೂ, ತಾಯ್ನಾಡಿನ ಚೈತನ್ಯವೂ ಆಗಿರುವ ನಾಡಗುಡಿಯನ್ನು ಬಾಗಲಕೋಟೆಯ ನಗರಸಭೆಯ ಮೇಲೆ ಏರಿಸದೆ ತಡೆಗಟ್ಟಿಕೊಳ್ಳುವದು ಬಾಗಲಕೋಟೆಯ ನಾಗರಿಕರಿಗೆ ಭೂಷಣವಲ್ಲ. ಪ್ರತಿಯೊಂದು ದೇಶದವರಿಗೂ ಅವರವರ ರಾಷ್ಟ್ರಧ್ವಜಗಳುಂಟು. ಅವುಗಳ ಮಾನವನ್ನು ಕಾಯುವದಕ್ಕಾಗಿ ಅವರು ಮಡಿಯಲೂ ಅಂಜುವದಿಲ್ಲ. ಇಷ್ಟು ದಿವಸಗಳ ವರೆಗೆ ಹಿಂದುಸ್ಥಾನವು ಇದಕ್ಕೆ ಅಪವಾದವಾಗಿತ್ತು. ಆದರೆ ಈಗ ತಪೋನಿಧಿ ಗಾಂಧಿಯವರ ಪುಣ್ಯದಿಂದ ರಾಟಿಯ ಚಿತ್ರವನ್ನೊಳಗೊಂಡು ಕೆಂಪು, ಹಸರು, ಬಿಳೀ ಈ ಮೂರು ಬಣ್ಣಗಳಿಂದ ಕೂಡಿದ ರಾಷ್ಟ್ರಧ್ವಜವು ಹಿಂದುಸ್ಥಾನಕ್ಕೆ ದೊರಕಿದೆ. ಈ ರಾಷ್ಟ್ರಧ್ವಜಕ್ಕೆ ಯೋಗ್ಯ ಸನ್ಮಾನವನ್ನು ತೋರಿಸುವದೂ, ಪ್ರಸಂಗ ಬಿದ್ದಲ್ಲಿ ಅದಕ್ಕಾಗಿ ಮಡಿಯುವದೂ ಭಾರತೀಯರೆಲ್ಲರ ಕರ್ತವ್ಯವೇ ಆಗಿದೆ.

ಧಾರವಾಡದವರು ನಗರ ಸಭೆಯ ಮೇಲೆ ರಾಷ್ಟ್ರಧ್ವಜವನ್ನೇರಿಸಿ ಧನ್ಯರಾದರು. ಹಾವೇರಿಯವರು ನಗರಸಭೆಯ ಮೇಲೆ ಧ್ವಜವು ಹಾರಾಡುವಂತೆ ಮಾಡಿ ಕೀರ್ತಿಯುತರಾದರು. ಸಿರ್ಸಿಯವರೂ ನಗರಸಭೆಯ ಮೇಲೆ ನಾಡಗುಡಿಯನ್ನೇರಿ ಕೃತಕೃತ್ಯರಾದರು. ಹುಬ್ಬಳ್ಳಿಯ ನಾಗರಿಕರೂ ನಗರಸಭೆಯ ಮೇಲೆ ರಾಷ್ಟ್ರಧ್ವಜವನ್ನೇರಿಸಲು ಅಧ್ಯಕ್ಷರಿಗೆ ೧೫ ದಿವಸಗಳ ಅವಧಿಯನ್ನು ಕೊಟ್ಟಿದ್ದಾರೆ. ಕರ್ನಾಟಕದೊಳಗಿನ ಇಷ್ಟೆಲ್ಲ ನಗರಸಭೆಗಳು ಮುಂದೆ ಸಾಗಿರುವಾಗ ಬಾಗಲಕೋಟೆಯವರು ಸುಮ್ಮನೆ ಕುಳ್ಳಿರುವದೆಂದರೆ ಸಮಂಜಸವಾಗದು.

ಬಾಗಲಕೋಟೆಯ ನಾಗರಿಕರೇ ಎದ್ದೇಳಿರಿ! ರಾಷ್ಟ್ರಧ್ವಜಕ್ಕಾಗಿ ಹೋರಾಡಲು ಸಿದ್ಧರಾಗಿರಿ! ಇಂದು ಸೇರಲಿಕ್ಕಿದ್ದ ನಗರಸಭೆಯ ಅಧಿವೇಶನದಲ್ಲಿ ಈ ವಿಷಯವನ್ನು ಸಭೆಯಲ್ಲಿ ತೆಗೆದುಕೊಳ್ಳಹಚ್ಚಲು ತಂಡತಂಡವಾಗಿ ಹೋಗೋಣ ಬನ್ನಿರಿ. ಮಧ್ಯಾಹ್ನದಲ್ಲಿ ರಾಷ್ಟ್ರಧ್ವಜ ಸಹಿತವಾಗಿ ಹೊರಡಲಿಕ್ಕಿರುವ ಮೆರವಣಿಗೆಯಲ್ಲಿ ಸಮಾವಿಷ್ಟರಾಗಿರಿ!

ಕಾರ್ಯದರ್ಶಿ ರಾಷ್ಟ್ರಧ್ವಜ ಸತ್ಯಾಗ್ರಹ ಮಂಡಳ
ಬಾಗಲಕೋಟೆ.

## ಸೊಲ್ಲಾಪುರದಲ್ಲಿ
# ನಾಡಗುಡಿಯ ಕಾಳಗ

ಸೊಲ್ಲಾಪುರದಲ್ಲಿ ಲಷ್ಕರಿ ಕಾಯಿದೆಯ ಮೂಲಕ ಪ್ರತಿಬಂಧಿತವಾದ ರಾಷ್ಟ್ರಧ್ವಜದ ಪ್ರಶ್ನೆಯನ್ನು ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಕೈಯಲ್ಲಿ ತೆಗೆದುಕೊಂಡು ಆ ಕಾಯಿದೆಯ ವಿರುದ್ಧವಾಗಿ ಸತ್ಯಾಗ್ರಹವನ್ನು ಹೂಡಿದ್ದಾರೆ. ತಮ್ಮ ಪ್ರಾಂತದೊಳಗಿನ ಕಾಂಗ್ರೆಸ್ ಕಮಿಟಿಗಳಿಗೆ ಈ ಕಾರ್ಯಕ್ಕಾಗಿ ಸ್ವಯಂಸೇವಕರನ್ನು ಸೊಲ್ಲಾಪುರಕ್ಕೆ ಕಳಿಸಿಕೊಡಲು ಕೇಳಿಕೊಂಡಿದ್ದಾರೆ. ರಾಷ್ಟ್ರಧ್ವಜವನ್ನು ಕೈಯಲ್ಲಿ ಹಿಡಿದುಕೊಂಡು ಪುಣೆಯಿಂದ ಸೊಲ್ಲಾಪುರಕ್ಕೆ ಹೋದ ಶ್ರೀ. ಸಾಠೆ, ಗಿರಿ ಮತ್ತು ಕಾಳೆ ಈ ಮೂವರು ಸತ್ಯಾಗ್ರಹಿಗಳಿಗೆ ಅಲ್ಲಿಯ ಅಧಿಕಾರಿಗಳು ೧ ವರ್ಷ ಸಕ್ತ ಶಿಕ್ಷೆ ಮತ್ತು ೨೦೦ ರೂ. ದಂಡ, ದಂಡ ಕೊಡದಿದ್ದರೆ ಮತ್ತೆ ೪ ತಿಂಗಳ ಶಿಕ್ಷೆಯನ್ನು ವಿಧಿಸಿದ್ದಾರೆ. ಶ್ರೀ. ಸಾಠೆಯವರ ಬಳಿಯಲ್ಲಿ ಸ್ವತಂತ್ರವಾಗಿ ಸಿದ್ಧಪಡಿಸಿದ ಉಪ್ಪು ಸಿಕ್ಕಿದ್ದರಿಂದ ಅದಕ್ಕಾಗಿ ಅವರಿಗೆ ಮತ್ತೆ ೬ ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಮೂರು ಜನರ ಸತ್ಯಾಗ್ರಹಿಗಳ ಎರಡನೆಯ ತಂಡವು ತಾ|| ೨೮ ನೆಯ ದಿವಸ ಪುಣೆಯಿಂದ ಸೊಲ್ಲಾಪುರಕ್ಕೆ ಹೊರಟಿತು. ಅವರು ಸೊಲ್ಲಾಪುರದಲ್ಲಿ ಇಳಿದ ಕೂಡಲೆ ಲಷ್ಕರೀ ಅಧಿಕಾರಿಗಳು ಅವರನ್ನು ಸೆರೆಹಿಡಿದು, ಜೊತೆಯಲ್ಲಿ ಲಷ್ಕರೀ ಠಾಣೆಗೆ ಕರೆದುಕೊಂಡು ಹೋದರು. "ರಾಷ್ಟ್ರಧ್ವಜದ ಮಾನವನ್ನು ಕಾಯುವದಕ್ಕಾಗಿ ನಾವು ಇಲ್ಲಿಗೆ ಬಂದಿದ್ದು, ಬೇಕಾದ ಕಷ್ಟಗಳನ್ನು ಸಹಿಸಲೂ ಸಹ ಸಿದ್ಧರಿರುವೆವು" ಎಂಬುದಾಗಿ ಸತ್ಯಾಗ್ರಹಿಗಳು ಹೇಳಿದರು. ಸತ್ಯಾಗ್ರಹಿಗಳು ಕೆಂಪು ಬಣ್ಣದ ಚೊಣ್ಣವನ್ನೂ, ನೀಲೀ ವರ್ಣದ ಅಂಗಿಯನ್ನೂ, ಶುಭ್ರವರ್ಣದ ಗಾಂಧಿ ಟೊಪ್ಪಿಗೆಯನ್ನೂ ಧರಿಸಿಕೊಂಡಿದ್ದರು ಅಂದರೆ ರಾಷ್ಟ್ರಧ್ವಜದ ಮೇಲೆ ಶೋಭಿಸುವ ಕೆಂಪು, ನೀಲಿ, ಬಿಳೀ ಬಣ್ಣಗಳ ಬಟ್ಟೆಗಳನ್ನೇ ಅವರು ಧರಿಸಿಕೊಂಡಿದ್ದರು. ಲಷ್ಕರೀ ಅಧಿಕಾರಿಗಳು ಟೊಪ್ಪಿಗೆಯೊಂದನ್ನು ಬಿಟ್ಟು ಉಳಿದ ಬಟ್ಟೆಗಳನ್ನು ಕಸಿದುಕೊಂಡು ಅವುಗಳನ್ನು ಹರಿದೊಗೆದು ಅವರಿಗೆ ಕರೇ ಬಟ್ಟೆಗಳನ್ನು ಕೊಟ್ಟರು. ಬಳಿಕ ಬಹಳ ಆತ್ಮೀಯತೆಯಿಂದ ಅವರನ್ನು ಸ್ಟೇಶನ್ನಿಗೆ ಕರೆದುಕೊಂಡು ಹೋಗಿ ಹೊಗೆಬಂಡಿಯಲ್ಲಿ ಕುಳ್ಳಿರಿಸಿದರು. ಪಾರ್ಲಿಮೆಂಟದಲ್ಲಿ ಗಾಂಧಿ ಟೊಪ್ಪಿಗೆಯ ವಿಷಯವಾಗಿ ಎದ್ದ ಗಲಭೆಗೆ ಬೆದರಿ ಗಾಂಧಿ ಟೊಪ್ಪಿಗೆಗೆ ಅಧಿಕಾರಿಗಳು ಕೈಹಚ್ಚಲಿಕ್ಕಿಲ್ಲ.

ಮೂರು ಜನ ಸತ್ಯಾಗ್ರಹಿಗಳ ಮೂರನೆಯ ತಂಡವು ಪುಣೆಯಿಂದ ೨೯ನೆಯ ತಾ|| ಗೆ ಹೊರಟು ಸಾಯಂಕಾಲಕ್ಕೆ ಸೊಲ್ಲಾಪುರವನ್ನು ಮುಟ್ಟಿತು. ಸ್ಟೇಶನದಲ್ಲಿ ಇಳಿದ ಕೂಡಲೆ ಮೇಜರ್ ಸಾರ್ಜಂಟನು ಅವರ ಕೈಯಲ್ಲಿಯ ರಾಷ್ಟ್ರಧ್ವಜಗಳನ್ನು ಕಸಿದುಕೊಂಡನು ಮತ್ತು ಅವರನ್ನು ಹೊಡೆಯುತ್ತ ಬಡೆಯುತ್ತ ಲಷ್ಕರಿಗಳ ವಸತಿಗೆ ಕರೆದುಕೊಂಡು ಹೋದನು. ವಸತಿಗೆ ಹೋದ ಬಳಿಕ ಅಲ್ಲಿಯೂ ೫-೬ ಯುರೋಪಿಯನ್ ಹಾಗು ೨ ಹಿಂದೀ ಅಧಿಕಾರಿಗಳು ಸ್ವಯಂಸೇವಕರನ್ನು ಚೆನ್ನಾಗಿ ಥಳಿಸಿದರು "ನಮ್ಮ ರಕ್ತವನ್ನಾದರೂ ಹರಿಸುವೆವು ಆದರೆ ಸ್ವರಾಜ್ಯವನ್ನು ಸಂಪಾದಿಸಿಕೊಳ್ಳದೆ ಹಿಂದಿರುಗುವದಿಲ್ಲ" ವಾಗಿ ಓರ್ವ ಸತ್ಯಾಗ್ರಹಿಯು ಉತ್ತರವಿತ್ತನು. ಹೀಗೆ ಹೇಳಿದ್ದಕ್ಕಾಗಿ ೨-೩ ಅಧಿಕಾರಿಗಳು ಮತ್ತೆ ಅವರನ್ನು ಥಳಿಸಹತ್ತಿದರು "ಪುನಃ ಪುಣೆಗೆ ಬರುವಿರೇನು?" ಎಂದು ಒಬ್ಬ ಅಧಿಕಾರಿಯು ಪ್ರಶ್ನೆ ಮಾಡಿದುದಕ್ಕೆ "ಸತ್ಯಾಗ್ರಹ ಮಂಡಳದವರು ಕಳಿಸಿದರೆ ಅವಶ್ಯವಾಗಿ ಬರುವೆವು" ಎಂದು ಸತ್ಯಾಗ್ರಹಿಗಳು ಉತ್ತರವಿತ್ತರು. ಬಳಿಕ ಸತ್ಯಾಗ್ರಹಿಗಳನ್ನು ಮೋಟಾರದಲ್ಲಿ ಕರೆದುಕೊಂಡು ಹೋಗಿ ೧೨ ಮೈಲುಗಳ ಮೇಲೆ ಬಿಟ್ಟುಬಿಟ್ಟರು.

ತಾ|| ೩೦ ನೆಯ ದಿವಸ ಮುಂಬಯಿಯಿಂದ ಪುಣೆಗೆ ಬಂದ ೨೭ ಸ್ವಯಂಸೇವಕರಲ್ಲಿ ೩ ಸ್ವಯಂಸೇವಕರು ರಾಷ್ಟ್ರಧ್ವಜ ಸಹಿತವಾಗಿ ಸೊಲ್ಲಾಪುರಕ್ಕೆ ಹೊರಟಿದ್ದಾರೆ.

## ಹೆಂಡತಿಯ ಕೂಡ ಉಣ್ಣದ್ದಕ್ಕಾಗಿ ದಂಡ

ವ್ಹಿಯೆನ್ನಾದಲ್ಲಿ ಫ್ರಾನ್ಝ್ ಫೋಕರ್ಸಿ ಎಂಬ ಹೆಸರಿನ ಅಡಿಗೆಯವನಿದ್ದಾನೆ. ಫ್ರಾನ್ಸಿಸ್ಕಾ ಪ್ರಿಗ್ರೊಫಿಕ್ ಎಂಬ ವಿದುಷಿಯ ಗಂಡನು ಈ ಅಡಿಗೆಯವನ ಮನೆಗೆ ಹೋಗಿ ಊಟಮಾಡುತ್ತಿದ್ದನು. ಅದಕ್ಕಾಗಿ ಆ ವಿದುಷಿಯು ಅಡಿಗೆಯವನ ಮೇಲೆ ದಾವೆಯನ್ನು ಮಾಡಿದಳು. ಜಜ್ಜರ ಮುಂದೆ ಆ ವಿದುಷಿಯ ಗಂಡನು "ನನ್ನ ಹೆಂಡತಿಯು ಮಾಡಿದ ಅಡಿಗೆಯನ್ನು ನಾನು ಮುಟ್ಟುತ್ತಿರುವದಿಲ್ಲ. ಯಾಕಂದರೆ ಹಾಗೆ ಮಾಡಿದೆನೆಂದರೆ ನನ್ನ ಆರೋಗ್ಯವೇ ಕೆಟ್ಟುಹೋಗುವದು" ಎಂದು ಹೇಳಿದನು, ಜಜ್ಜರು "ಮನೆಯಲ್ಲಾಗಲಿ ಇಲ್ಲವೆ ಹೊರಗೆ ಆಗಲಿ ಎಲ್ಲಿ ಉಂಡರೂ ಸಹ ಗಂಡನು ಹೆಂಡತಿಯ ಕೂಡ ಊಟವನ್ನು ಮಾಡಲಿಕ್ಕೇ ಬೇಕು" ಎಂದು ತೀರ್ಪು ಕೊಟ್ಟು ಅಡಿಗೆಯವನಿಗೆ ದಂಡವನ್ನು ವಿಧಿಸಿದರು. ಸುಧಾರಿಸಿದ ರಾಷ್ಟ್ರ! ಕೇಳುವದೇನು?

## ಖಾದಿಗಾಗಿ ಗುಡಿಯ ಮುಂದೆ ಸತ್ಯಾಗ್ರಹ.

ಹಿಂದೂ ಜನರು ಅಮಾವಾಸ್ಯೆ ತಿಥಿಯನ್ನು ಪವಿತ್ರದಿನವೆಂದು ತಿಳಿದುಕೊಳ್ಳುವರು. ಆದುದರಿಂದ ಅಂದು ಎಷ್ಟೋ ಜನರು ನದಿಯಲ್ಲಿ ಸ್ನಾನ ಮಾಡಲು ಹೋಗುವ ರೂಢಿಯುಂಟು. ಈ ಸುಸಂಧಿಯನ್ನು ಸಾಧಿಸಿಕೊಂಡು ದಿಲ್ಲಿಯ ೫೦೦ ಜನ ಸ್ವಯಂಸೇವಕರು ಯಮುನಾ ನದಿಯ ದಂಡೆಯ ಮೇಲಿರುವ ಗುಡಿಯ ಮುಂದೆ ನಿಂತು ಪಿಕೆಟಿಂಗವನ್ನು ಮಾಡಿ ಖಾದಿಯನ್ನು ಧರಿಸದಿದ್ದವರನ್ನು ದೇವಾಲಯದಲ್ಲಿ ಬಿಡಲಿಲ್ಲ.

## ಬೆಳಗಾವಿ ಜಿಲ್ಲೆಯಲ್ಲಿ ದಬ್ಬಾಳಿಕೆ.

ಶ್ರೀ ರಾಘವೇಂದ್ರ ಕಾಟೆ ಮತ್ತು ಗೋಪಾಲ ರೇಷ್ಮೆ ಇವರು ಚಂದಗಡದಲ್ಲಿ ಸೆರೆಹಿಡಿಯಲ್ಪಟ್ಟು ೬ ತಿಂಗಳ ಸಕ್ತ ಶಿಕ್ಷೆಗೆ ಗುರಿಯಾದರು. ಶ್ರೀ ಈರಯ್ಯ ಮಠದ ಹಾಗು ಮಧ್ವಾಚಾರ್ಯ ಹುಕ್ಕೇರಿ ಇವರಿಗೆ ೮ ತಿಂಗಳ ಸಕ್ತ ಶಿಕ್ಷೆ ಮತ್ತು ೫೦ ರೂ ದಂಡವಾಗಿದೆ. ಸವದತ್ತಿಯಲ್ಲಿ ಸೆರೆಹಿಡಿದ ೯ ಜನರನ್ನು ಪಾಚಾಪುರದಲ್ಲಿ ಸೆರೆಹಿಡಿದ ೭ ಜನರನ್ನು ಹೊಣೆಯ ಮೇಲೆ ಬಿಟ್ಟುಬಿಟ್ಟಿದ್ದಾರೆ.

# ವಡಾಲಾ ವಖಾರದಮೇಲೆ ದಾಳಿ

## ಶ್ರೀಮತಿ ಮುನಶಿಯುವರು ಸೆರೆಯಾಳಾಗಿ ಮುಕ್ತರಾದರು.

### ೧೫೦ ಜನರಿಗೆ ಗಾಯ, ಸೈನಿಕರ ಆಗಮನ.

ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮೀಟಿಯವರು ತಾ|| ೧ನೆಯ ದಿವಸ ಸಾಮುದಾಯಿಕ ರೀತಿಯಿಂದ ವಡಾಲಾ ವಖಾರದ ಮೇಲೆ ದಾಳಿಯನು ಮಾಡುವದಾಗಿ ನಿರ್ಧರಿಸಿದ ಪ್ರಕಾರ ದಾಳಿಯನ್ನು ಮಾಡಲು ೫೦೦೦ ಸಾವಿರ ಸತ್ಯಾಗ್ರಹಿಗಳು ವಡಾಲಾ ವಖಾರಕ್ಕೆ ಹೋದರು. ಸತ್ಯಾಗ್ರಹಿಗಳಲ್ಲಿ ಪಾರ್ಸಿ, ಕ್ರಿಶ್ಚಿಯನ್, ಹಾಗು ಮುಸಲ್ಮಾನ ಜನರು ಸೇರಿದ್ದರಲ್ಲದೆ, ಸೀಖ ಸ್ತ್ರೀಯರೂ ಸೇರಿದ್ದರು. ದಾಳಿಯನ್ನು ಮಾಡಲು ಸಾವಿರಾರು ಜನರು ಕೂಡಿದ್ದರು. ಹೀಗೆ ಅಲ್ಲಿ ೧೦ ಸಾವಿರದವರೆಗೆ ಜನಸಂದಣಿಯು ಕೂಡಿತ್ತು.

ಇತ್ತ ಅಧಿಕಾರಿಗಳೂ ತಮ್ಮ ಬಲವನ್ನು ಸುವ್ಯವಸ್ಥಿತವಾಗಿ ಏರ್ಪಡಿಸಿದ್ದರು. ವಖಾರದ ಸುತ್ತಲೂ ೬೦೦ ಪೋಲೀಸರನ್ನು ನಿಲ್ಲಿಸಿದ್ದಲ್ಲದೆ, ೭೦ ಸಶಸ್ತ್ರ ಪೋಲೀಸರನ್ನೂ, ೨೦ ಕುದುರೆಯ ಸ್ವಾರರನ್ನೂ ಕಾದಿಟ್ಟಿದ್ದರು ಪೋಲೀಸ ಕಮೀಶನರರಾದ ಹೇಲೆ ಸಾಹೇಬರೂ, ಡೆಪ್ಯೂಟಿ ಕಮೀಶನರರೂ, ಸುಪರಿಂಟೆಂಡೆಂಟರೂ ಕೆಲವು ಸಾರ್ಜಂಟರೂ ಅಲ್ಲಿಗೆ ಹೋಗಿ ವೇಳಿಂದವೇಳೆ ಪೋಲೀಸರಿಗೆ ಆಜ್ಞೆಗಳನ್ನು ಕೊಡುತ್ತಿದ್ದರು.

೮|| ಗಂಟೆಗೆ ಸರಿಯಾಗಿ ಮುಸಲ್ಮಾನ ಸತ್ಯಾಗ್ರಹಿಗಳು "ಅಲ್ಲಾಹೋ ಅಕಬರ್" ಎಂದು ಜಯಜಯಕಾರ ಮಾಡುತ ಒಳನುಗ್ಗ ಹತ್ತಿದರು. ಪೋಲೀಸರು ಲಾಠಿಗಳನ್ನು ಪ್ರಯೋಗಿಸಿ ಅವರನ್ನು ತಡೆದರು. ಇಬ್ಬರಿಗೆ ಗಾಯಗಳಾದವು. ಆದರೂ ಸಹ ಸತ್ಯಾಗ್ರಹಿಗಳು ಚಕ್ರವ್ಯೂಹವನ್ನು ಭೇದಿಸಿ ಒಳಹೊಕ್ಕರು. ಪೋಲೀಸರು ಅವರನ್ನು ಹಿಂದಕ್ಕಟ್ಟಿ ಹತ್ತಿರದ ಕೂಡಲೆ ಅವರೆಲ್ಲರೂ ಬೇರೆ ಬೇರೆ ದಿಕ್ಕುಗಳಿಗೆ ಹೋಗಿ ಒಳನುಗ್ಗಲು ಯತ್ನಿಸಿದರು. ಅಷ್ಟರಲ್ಲಿಯೇ ಶ್ರೀಮತಿ ಮುನಶಿಯವರು ಒಂದು ಸತ್ಯಾಗ್ರಹ ತಂಡದೊಂದಿಗೆ ಅಲ್ಲಿಗೆ ಹೋದರು. ಓರ್ವ ಸಾರ್ಜಂಟನು ಅವರನ್ನು ತಡೆದನು. "ನಾವು ಉಪ್ಪಿನ ವಖಾರವನ್ನು ಲೂಟಿ ಮಾಡತಕ್ಕವರೇ" ಎಂದು ಶ್ರೀಮತಿ ಮುನಶಿಯವರು ಕೇಳಿದರು. ಬಳಿಕ ಅಧಿಕಾರಿಗಳು ಅವರನ್ನು ಸೆರೆಹಿಡಿದು ಕೊಂಡು ಹೋದರು ಪ್ರತಿಯೊಂದು ದಿಕ್ಕಿನಿಂದ ಸ್ವಯಂಸೇವಕರು ಒಳಹೋಗಹತ್ತಿದ್ದರಿಂದ ಕಾವಲಿನ ಪೋಲೀಸರಿಗೆ ಅವರನ್ನು ತಡೆಯುವದು ಅಸಾಧ್ಯವಾಯಿತು. ಕುದುರೆಯ ಸ್ವಾರರು ಬಂದು ಅವರನ್ನು ಹಿಂದಕ್ಕಟ್ಟಿದರು. ಅಷ್ಟರಲ್ಲಿ ಮತ್ತೊಂದು ಕಡೆಯವರು ಒಳನುಗ್ಗಿ ಉಪ್ಪನ್ನು ತೆಗೆದುಕೊಂಡರು. ತಿರುಗಿ ಬರುವ ಮುಂದೆ ಕುದುರೆಯ ಸ್ವಾರರು ಅವರನ್ನು ಬೆನ್ನಟ್ಟಿದರು. ೯ ಜನರಿಗೆ ಗಾಯಗಳಾದವು. ಇದೇ ವೇಳೆಗೆ ಬೇರೆ ಎರಡು ಸತ್ಯಾಗ್ರಹಿ ಸ್ತ್ರೀಯರ ತಂಡಗಳು ವಡಾಲೆಗೆ ಬಂದವು. ಜನರಾದರೂ ತಂಡತಂಡವಾಗಿ ಬರಹತ್ತಿದ್ದರು, ಸಶಸ್ತ್ರ ಸೈನಿಕರೂ ಬಂದು ಮುಟ್ಟಿದರು. ಬಳಿಕ ದಾಳಿಗಾರ ಸತ್ಯಾಗ್ರಹಿಗಳು ದಕ್ಷಿಣ ದಿಕ್ಕಿನಿಂದ ಒಳನುಗ್ಗಿ ವಖಾರದಲ್ಲಿ ಹೊಕ್ಕರು. ಪೋಲೀಸರಿಗೆ ಅವರನ್ನು ತಡೆಯುವದಾಗಲಿಲ್ಲ. ಅವರನ್ನು ಲಾಠಿಗಳಿಂದ ಹೊಡೆಯಹತ್ತಿದರು. ಹೀಗಾದರೂ ಸಹ ನೂರಾರು ಜನರು ಉಪ್ಪು ಸಹಿತವಾಗಿ ಹೊರಗೆ ಬಂದರು. ದಾಳಿಯ ಕಾರ್ಯವನ್ನು ಸತ್ಯಾಗ್ರಹಿಗಳು ೧ ಗಂಟೆಯ ವರೆಗೆ ಸಾಗಿಸಿದರು ಒಟ್ಟಿನಲ್ಲಿ ೧೫೦ ಜನರಿಗೆ ಗಾಯಗಳಾಗಿದ್ದು, ಅವರು ಆಸ್ಪತ್ರೆಯಲ್ಲಿ ಉಪಚಾರವನ್ನು ಹೊಂದುತ್ತಿದ್ದಾರೆ. ೪ ಗಂಟೆಗೆ ಸೆರೆಹಿಡಿದ ಶ್ರೀಮತಿ ಮುನಶಿ ಹಾಗು ಉಳಿದ ಸತ್ಯಾಗ್ರಹಿಗಳನ್ನು ಬಿಟ್ಟುಬಿಟ್ಟರು.

### ಹಿಂದುಸ್ಥಾನದಲ್ಲಿಯ

## ಬ್ರಿಟಿಶರ ಸತ್ತೆಯು ಸಂಪುಷ್ಟಕ್ಕೆ ಬಂದಿದೆ.

ಅಮೇರಿಕೆಯಲ್ಲಿ "ಭಾವೀ ಜಗತ್ತು" ಎಂಬ ಹೆಸರಿನದೊಂದು ಪತ್ರಿಕೆಯು ಹೊರಡುತ್ತದೆ. ಈ ಪತ್ರಿಕೆಯ ಸಂಪಾದಕರಾದ ಮಿ. ಕರ್ಬಿ ಪೇಜರು ಹಿಂದುಸ್ಥಾನದ ವಿಷಯವಾಗಿ ಪತ್ರಿಕೆಯಲ್ಲಿ ಹೀಗೆ ಬರೆಯುತ್ತಾರೆ:—

ಕರವ್ರಡ ಏಕರೊಂದಿಗೆ ನಾನು ಲಾಹೋರದ ರಾಷ್ಟ್ರೀಯ ಸಭೆಗೆ ಹೋಗಿದ್ದೆನು. ಆ ಸಭೆಯಲ್ಲಿಯ ಕಾರ್ಯಕಲಾಪಗಳನ್ನು ಕಂಡು ನನ್ನ ಮನಸಿನ ಮೇಲೆ ಕೆಳಗಿನ ಪರಿಣಾಮಗಳಾದವು.

೧) ಮಹಾತ್ಮಾ ಗಾಂಧಿಯವರ ಮುಖಂಡತ್ವವು ಸರ್ವಶ್ರೇಷ್ಠ ಇದೆ. (೨) ಹಿಂದುಸ್ಥಾನದಲ್ಲಿಯ ಬ್ರಿಟಿಶರ ಸತ್ತೆಯು ಸಂಪುಷ್ಟಕ್ಕೆ ಬರಹತ್ತಿದೆ. (೩) ಸ್ವಯಂತ್ರಿತವಾದ ರಾಜ್ಯಪದ್ಧತಿಯು ಹಿಂದುಸ್ಥಾನದಲ್ಲಿ ಸ್ಥಾಪಿತವಾಗುವ ವರೆಗೆ ದಂಗೆ ದೊಂಬಿ ಕಲಹ, ಮೊದಲಾದವುಗಳು ಹಿಂದುಸ್ಥಾನದಲ್ಲಿ ನಡೆಯತಕ್ಕವವೇ

ಹಿಂದುಸ್ಥಾನದಲ್ಲಿಯ ಬ್ರಿಟಿಶರ ಸತ್ತೆಗೆ ೧೦೦ ವರ್ಷಗಳು ತುಂಬಿ ಬಂದಂತೆ ತೋರುತ್ತದೆ. ಪ್ರಜೆಗಳ ವಿಶ್ವಾಸವು ಹಾರಿ ಹೋಗಹತ್ತಿದೆ. ೩೩ ಕೋಟಿ ಭಾರತವಾಸಿಗಳ ನಿರ್ಧಾರಕ್ಕೆ ವಿರುದ್ಧವಾಗಿ ತಮ್ಮ ಸತ್ತೆಯನ್ನು ಹಿಂದುಸ್ಥಾನದಲ್ಲಿ ಹೀಗೆಯೇ ಮುಂದಕ್ಕೆ ಸಾಗಿಸುವದು ೧-೨ ಲಕ್ಷ ಬ್ರಿಟಿಶರಿಗೆ ಇನ್ನು ಮುಂದೆ ಶಕ್ಯವಾಗದು. ಆನಡುದುತೆ ಮಹಾತ್ಮ ಸ್ವರಾಜ್ಯವನ್ನಾದರೂ ಹಿಂದುಸ್ಥಾನವು ಸಂಪಾದಿಸಿಕೊಳ್ಳುವದು ಇಲ್ಲವೆ ಸಂಪೂರ್ಣ ಸ್ವಾತಂತ್ರ್ಯವನ್ನು ಸ್ಥಾಪಿಸಿಕೊಂಡು ಬ್ರಿಟಿಶ ಸತ್ತೆಯನ್ನು ನಿರ್ಮೂಲ ಮಾಡುವದು ಮುಖ್ಯ ಮಾತೆಂದರೆ ಮಹಾತ್ಮಾ ಗಾಂಧಿ ಹಾಗೂ ರಾಷ್ಟ್ರೀಯ ಸಭೆಯ ಅನುಯಾಯಿಗಳ ಬ್ರಿಟಿಶರ ಮೇಲಿನ ವಿಶ್ವಾಸವೇ ಹಾರಿ ಹೋಗಿದೆ.

## ಸರಕಾರಿ ಪಕ್ಷದವನು ಸತ್ಯಾಗ್ರಹಿಯಾದ ಕತೆ.

ಮಹಾರಾಷ್ಟ್ರ ಪ್ರಾಂತದಲ್ಲಿ ಧಾಡಸೆ ಎಂಬ ಹೆಸರಿನದೊಂದು ಹಳ್ಳಿಯಿದೆ. ಇಲ್ಲಿ ಶ್ರೀ ನಾಮದೇವಬುವಾ ಎಂಬ ಒಬ್ಬ ಧನಿಕನಾದ ಗೌಡಕಿರುವನು. ಅವರು ತಾಲೂಕ ಬೋರ್ಡಿನ ಅಧ್ಯಕ್ಷರೂ ಜಿಲ್ಲಾ ಲೋಕಲ್ ಬೋರ್ಡಿನ ಸಭಾಸದರೂ ಇರುವರು. ಅವರಿಗೆ ಪರದೇಶಿ ಬಟ್ಟೆಗಳ ಮೇಲೆ ಪ್ರೀತಿ ಬಹಳ. ಸರಕಾರಿ ಅಧಿಕಾರಿಗಳನ್ನೇ ಅವರು ದೇವರೆಂದು ತಿಳಿದುಕೊಳ್ಳುತ್ತಿದ್ದರು. ಅಧಿಕಾರಿಗಳಿಗೆ ತಾಂಬೂಲ ಸಮಾರಂಭವನ್ನು ಮಾಡಿಸುವದರಲ್ಲಿಯೇ ಅವರಿಗೆ ಯಾವಾಗಲೂ ಸಮಾಧಾನವೆನಿಸುತ್ತಿತ್ತು. ಒಂದು ದಿವಸ ಅವರು ಮುಂಬಯಿಗೆ ಹೋಗಿದ್ದರು ಸಂಜೆಯಲ್ಲಿ ಸಮುದ್ರದ ತೀರದ ಮೇಲೆ ತಿರುಗಲಿಕ್ಕೆ ಹೋದಾಗ್ಗೆ ಉಪ್ಪನ್ನು ಸಿದ್ಧಪಡಿಸಲು ಅಧಿಕಾರಿಗಳೆದುರಿನಲ್ಲಿಯೇ ಸಮುದ್ರದ ನೀರನ್ನು ಒಯ್ಯುತ್ತಿರುವ ಸತ್ಯಾಗ್ರಹಿ ಸ್ತ್ರೀ ಪುರುಷರನ್ನು ಕಂಡು ಆಶ್ಚರ್ಯಚಕಿತರಾದರು. ಈ ನೋಟವು ಅವರ ಮೇಲೆ ವಿಶೇಷ ಪರಿಣಾಮವನ್ನುಂಟು ಮಾಡಿತು. ಅವರು ತಿರುಗಿ ತಮ್ಮ ಹಳ್ಳಿಗೆ ಬಂದ ಕೂಡಲೆ ಪರದೇಶಿ ಬಟ್ಟೆಗಳನ್ನು ಧರಿಸುವದನ್ನು ಬಿಟ್ಟುಬಿಟ್ಟರು. ಖಾದಿಯನ್ನು ಧರಿಸಿಕೊಂಡರು. ಬಳಿಕ ಊರೊಳಗಿನ ಎಲ್ಲ ಪರದೇಶಿ ಬಟ್ಟೆಗಳನ್ನು ಸಂಗ್ರಹಿಸಿ ಅಗ್ನಿನಾರಾಯಣನಿಗೆ ಅರ್ಪಿಸಿದರು. ಪರದೇಶಿ ಬಟ್ಟೆಗಳಿಗೆ ಹಳ್ಳಿಯಲ್ಲಿ ಪ್ರವೇಶವು ದೊರೆಯದಂತೆ ಮಾಡಿದರು ಮೇಲಿಂದ ಮೇಲೆ ಸಭೆಗಳನ್ನು ಕೂಡಿಸಹತ್ತಿದರು ಹಳ್ಳಿಯ ಮುಖಂಡರಾದ ಶ್ರೀ ವಿಶ್ವಾಸರಾವ ಇವರಿಗೆ ಕಾರಾಗೃಹವಾಯಿತು. ತಾವೇ ೪೬೦ ರೂ. ಗಳಿಗೆ ಗುತ್ತಿಗೆ ಹಿಡಿದ ಸಿಂದೀ ಅಂಗಡಿಯ ಮೇಲೆ ಪಿಕೆಟಿಂಗ ಮಾಡಲು ಸ್ವಯಂಸೇವಕರಿಗೆ ಅಪ್ಪಣೆಯನ್ನು ಕೊಟ್ಟರು. ಇಲ್ಲಿಯವರೆಗೆ ಸರಕಾರಿ ಪಕ್ಷ ಹಾಗು ರಾಷ್ಟ್ರೀಯ ಪಕ್ಷ ಹೀಗೆ ಎರಡು ಪಕ್ಷಗಳಿದ್ದವು. ಸರಕಾರದ ಪಕ್ಷದವರಾದ ಶ್ರೀ ನಾಮದೇವರಾವ ಇವರೇ ರಾಷ್ಟ್ರ ಪಕ್ಷಕ್ಕೆ ಕೂಡಿದ ಮೇಲೆ ಸರಕಾರಿ ಪಕ್ಷದ ಹೆಸರೂ ಸಹ ಉಳಿಯಲಿಲ್ಲ ತಾಲೂಕದಲ್ಲಿಯೂ ಪ್ರಚಾರ ಕಾರ್ಯವನ್ನು ಕೈಕೊಂಡು ಜಾಗೃತಿಯನ್ನುಂಟು ಮಾಡಿದರು. ಹಳ್ಳಿಯಲ್ಲಿ ಒಂದು ದಿವಸ ಜಾತ್ರೆಯಿತ್ತು ಶಿಕ್ಷೆಯನ್ನು ಹೊಂದಿದವರ ಸನ್ಮಾನಾರ್ಥವಾಗಿ ಜಾತ್ರೆಯನ್ನು ಒಂದು ದಿವಸ ಮುಂದೆ ಹಾಕಿಸಿದರು. ಅಂದು ಜಾತ್ರೆಗೆ ಪೋಲೀಸ ಅಧಿಕಾರಿಗಳು ಬಂದಿದ್ದರು ಅವರಿಗ್ಯಾರೂ ಕೂಡಲಿಕ್ಕೆ ಸ್ಥಳವೂ, ತಿನ್ನಲಿಕ್ಕೆ ಅನ್ನವೂ ಸಹ ಸಿಗದಂತೆ ವ್ಯವಸ್ಥೆಯನ್ನು ಮಾಡಿದ್ದರು ಕಾಯಿದೆಭಂಗದ ಪ್ರತಿಜ್ಞಾಪತ್ರಿಕೆಯ ಮೇಲೆ ಅಂಕಿತವನ್ನು ಕೊಟ್ಟಿದ್ದಾರೆ. ಸತ್ಯಾಗ್ರಹಿಗಳನ್ನು ಕೂಡಿಸಹತ್ತಿದ್ದಾರೆ ಒಟ್ಟಿನಲ್ಲಿ ಹೇಳಬೇಕೆಂದರೆ ಶ್ರೀ ನಾಮದೇವರಾಯರು ತುರಂಗಕ್ಕೆ ಹೋಗಲು ಬಹು ಆತುರರಾಗಿ ಕಾಯುತಿದ್ದಾರೆ

## ಶ್ರೀ ಹರೋಳಿಕರರಿಗೆ ೧೦ ತಿಂಗಳ ಸಶ್ರಮ ಶಿಕ್ಷೆ.

ಮಹಾರಾಷ್ಟ್ರ ಸತ್ಯಾಗ್ರಹ ಮಂಡಳದ ನೇತೃಗಳಾದ ಶ್ರೀ ಹರೋಳಿಕರರು ಉಪ್ಪಿನ ಕಾಯಿದೆಭಂಗಕ್ಕಾಗಿ ಸೆರೆಹಿಡಿಯಲ್ಪಟ್ಟು ೧೦ ತಿಂಗಳ ಸಶ್ರಮ ಶಿಕ್ಷೆಗೆ ಗುರಿಯಾಗಿದ್ದಾರೆ

## ಕಮೀಶನರರು ಪಲಾಯನ ಹೇಳಿದರು.

"ಯಂಗ ಇಂಡಿಯಾ" ಪತ್ರಿಕೆಯಲ್ಲಿ ಪೇಶಾವರಲ್ಲಾದ ದಂಗೆಯ ಸವಿಸ್ತರ ಸಂಗತಿಗಳನ್ನು ಕಣ್ಣಾರೆ ಕಂಡವರೊಬ್ಬರು ಹೀಗೆ ಬರೆಯುತ್ತಾರೆ:— ಕಮೀಶನರರಾದ ಸರ್ ನೋರ್ಮನ್ ಬೋಲ್ಟನರು ಲಷ್ಕರೀ ಅಧಿಕಾರಿಗೂ ತಮಗೂ ಕೂಡಿ ಬರದ್ದಕ್ಕಾಗಿಯೇ ಪೇಶಾವರವನ್ನು ಬಿಟ್ಟು ಹೋಗಿರುವರು ಹೊರತಾಗಿ ದೇಹದಲ್ಲುಂಟಾದ ಅಶಕ್ತತೆಗಾಗಿ ಬಿಟ್ಟು ಹೋಗಲಿಲ್ಲವಾಗಿ ಪ್ರಾಂತದಲ್ಲಿಯ ಎಷ್ಟೋ ಜನರಿಗೆ ಮನವರಿಕೆಯಾಗಿದೆ. ಗಂಡಾಂತರ ಪ್ರಸಂಗಗಳು ಒದಗಿ ಬಂದಲ್ಲಿ ಉಪಯೋಗ[illegible] ಬಹುದೆಂದು ಕಮೀಶನರರು ಸೈನಿಕರನ್ನು ಕರೆಯಿಸಿದ್ದರು ಸೈನಿಕರೇ ತಮ್ಮ ಮನಸ್ಸಿಗೆ ಬಂದಂತೆ ನಡೆಯ ಹತ್ತಿದರು ಆದಕಾರಣ ಇಬ್ಬರಿಗೂ ಕೂಡಿ ಬರಲಿಲ್ಲ.

## ಪೋಲೀಸರು ವೇದಾರಣ್ಯಂ ಶಿಬಿರವನ್ನು ಮುತ್ತಿದರು.

ತಮಿಳನಾಡಿನ ಸತ್ಯಾಗ್ರಹ ಶಿಬಿರವಾದ ವೇದಾರಣ್ಯಂ ಶಿಬಿರವನ್ನು ಪೋಲೀಸ ಅಧಿಕಾರಿಗಳು ಮುತ್ತಿ ಶ್ರೀ ಹರಿಹರ ಶರ್ಮಾ, ಎನ್ ವ್ಹಿ. ನಾಯುಡು, ಕೃಷ್ಣಸ್ವಾಮಿ ಅಯ್ಯಂಗಾರ ಜಿ. ರಾಮಚಂದ್ರ ಧಂಬಿ ಮತ್ತು ಟಿ. ಎಸ್. ರಾಜನ್ ಇವರನ್ನು ಸೆರೆಹಿಡಿದುಕೊಂಡು ಹೋದರು.


ಕಂಪನಿಯು ಮುಕ್ಕಾಂ ಸ್ವಲ್ಪ ಉಳಿದಿವೆ.

**ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು**

ತಮ್ಮ ಲೋಕಪ್ರಿಯವಾದ

ಬುಧವಾರ ತಾ॥ ೪—೬—೩೦

**ಯಚ್ಚಮ್ಮನಾಯಕ**

(ರಾ. ಬ. ವಾರದ ಫ್ರೀ ಬೋರ್ಡಿಂಗ ವೀರಶೈವ ತರುಣಸಂಘ ಬಾಗಲಕೋಟೆ ಇವರಿಗೆ ಧರ್ಮಾರ್ಥ ಕೊಡಲ್ಪಟ್ಟಿದೆ.)

**ಎಂಬ ನಾಟಕವನ್ನು ಅಭಿನಯಿಸುವರು.**

ಈ ನಾಟಕವನ್ನಾಡಿ ಕಂಪನಿಯು ರಾಣಿಬೆನ್ನೂರಿಗೆ ಹೋಗುವದು.

ಸಂಘದೊಡೆಯ— **ಸದಾಶಿವರಾವ ಗರೂಡ**

ಜಯಲಕ್ಷ್ಮೀ ಪ್ರಾಸಾದಿಕ

ಶ್ರೀ ಮಿತ್ರಿಕ ಸಂಗೀತ ನಾಟಕ ಮಂಡಳಿ ದಾವಣಗೇರಿ ಇವರು

ತಾ॥ ೪—೬—೩೦ ಬುಧವಾರ

**ಬಾಗಲಕೋಟೆ ತಾಜ ಥಿಯೇಟರಿನಲ್ಲಿ**

**ತ್ರಿಕೋಟಿಲಿಂಗಪ್ರತಿಷ್ಠಾ**

ಶುಕ್ರವಾರ ತಾ॥ ೬—೬—೩೦

**ಪ್ರತಾಪಪ್ರಮೀಲಾ**

ಶನಿವಾರ ತಾ॥ ೭—೬—೩೦

**ಶ್ರೀ ಕೃಷ್ಣ—ಕೊರವಂಜಿ.**

ಎಂಬ ಹೊಸ ಆಖ್ಯಾನಗಳನ್ನು ಪ್ರಯೋಗಿಸುವರು.

ವ್ಯವಸ್ಥಾಪಕ


ಈ ಪತ್ರಿಕೆಯು ಬಲವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾಲಯದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು

यद्यत् परवशं दुःखं । यद्यदात्मवशं सुखम् ।। — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮುದಾರ

ಬಾಗಲಕೋಟೆ ಗುರುವಾರ ಮಿತಿ ಜ್ಯೇಷ್ಠ ಶುದ್ಧ ೯ ಶಕ ೧೮೫೨ ತಾ|| ೫-೬-೩೦ ಸಂಚಿಕೆ ೬೬


ಇಂದು

# ಮಹಾತ್ಮರ ಭಾವಚಿತ್ರದ ಮೆರವಣಿಗೆ

ಮಹಾತ್ಮಾ ಗಾಂಧಿಯವರನ್ನು ಸರಕಾರದವರು ಸೆರೆಯಲ್ಲಿಟ್ಟು ಇಂದಿಗೆ ಒಂದು ತಿಂಗಳಾಯಿತು. ಇದು ಅಖಿಲ ಭರತ ಖಂಡದಲ್ಲೆಲ್ಲ ಅವರ ಭಾವಚಿತ್ರದ ಮೆರವಣಿಗೆ, ಪರದೇಶಿ ಪಟ್ಟಿಗಳ ಹೋಳಿ, ಸಿಂದಿ ಗಿಡಗಳ ಸಂಹಾರ ಮೊದಲಾದ ಕಾರ್ಯಕ್ರಮಗಳು ಜರುಗತಕ್ಕವಿವೆ. ಬಾಗಲಕೋಟೆಯಲ್ಲಿಯೂ ಈ ವೇಳೆಯ ಕಾರ್ಯಕ್ರಮಗಳು ಸಾಂಗವಾಗುವವು. ಮುಂಜಾನೆ ೮ ಗಂಟೆಗೆ ಹಾಗು ಸಂಜೆಗೂ ೫ ಗಂಟೆಗೆ ಕ್ರಮವಾಗಿ ಸತ್ಯಾಗ್ರಹ ಶಿಬಿರದಿಂದ ಮಹಾತ್ಮರ ಭಾವಚಿತ್ರ ಸಹಿತವಾಗಿ ಸ್ತ್ರೀ ಪುರುಷರ ಪ್ರಚಂಡ ಮೆರವಣಿಗೆಗಳು ಹೊರಡುವವು.

ಮೆರವಣಿಗೆಗಳು ವೆಂಕಟಪೇಟೆ, ಹೊಸಪೇಟೆ ಮೊದಲಾದ ಓಣಿಗಳಲ್ಲಿ ಹಾಯುವವು. ಸಂಜೆಯ ೭ ಗಂಟೆಗೆ ಕೊತ್ತಲಪ್ಪನ ಗುಡಿಯ ಬೈಲಿನಲ್ಲಿ ಸಾರ್ವಜನಿಕ ಸಭೆಸೇರಿ ಕರ್ನಾಟಕ ಪ್ರಾಂತಿಕ ಕಾಂಗ್ರೇಸ ಕಮಿಟಿಯವರು ಹೇಳಿದ ಪ್ರಕಾರ ಕಾರ್ಯಕ್ರಮಗಳು ಜರಗುವವು. ಆದುದರಿಂದ ಬಾಗಲಕೋಟೆಯ ನಾಗರಿಕರೆಲ್ಲರೂ ಮೆರವಣಿಗೆಗಳಲ್ಲಿ ಬಂದು ಸೇರಿ ಅದಕ್ಕೆ ವಿಶೇಷ ಶೋಭೆಯನ್ನುಂಟುಮಾಡಬೇಕಲ್ಲದೆ ಎಲ್ಲ ಕಾರ್ಯಕ್ರಮಗಳಲ್ಲಿಯೂ ಭಾಗಿಗಳಾಗಿ ಬಾಗಲಕೋಟೆಗೆ ಭೂಷಣವನ್ನು ತರಬೇಕಾಗಿ ಬಿನ್ನಹ.

## ಬಾಗಲಕೋಟೆ ನಗರ ಸಭೆಯ ಮೇಲೆ ರಾಷ್ಟ್ರಧ್ವಜ.

ಬಾಗಲಕೋಟೆ ನಗರ ಸಭೆಯ ಮೇಲೆ ರಾಷ್ಟ್ರಧ್ವಜವನ್ನು ಏರಿಸಿರೆಂದು ನಗರ ಸಭೆಯವರನ್ನು ಕೇಳಿಕೊಳ್ಳುವದಕ್ಕಾಗಿ ತಾ|| ೩ನೆಯ ದಿವಸ ಇಲ್ಲಿಯ ನಾಗರಿಕರ ಪ್ರಚಂಡ ಮೆರವಣಿಗೆಯು ರಾಷ್ಟ್ರಧ್ವಜಗಳ ಸಹಿತವಾಗಿ ಸಂಜೆಯಲ್ಲಿ ಹೊರಟಿತ್ತು. ಮೆರವಣಿಗೆಯಲ್ಲಿ ಸಾವಿರಾರು ಜನ ಸ್ತ್ರೀ ಪುರುಷರು ಸೇರಿದ್ದಲ್ಲದೆ, ಊರೊಳಗಿನ ಕೆಲಕೆಲವು ಮುಖಂಡರೂ ಭಾಗಿಗಳಾಗಿದ್ದರು. ಮೆರವಣಿಗೆಯು ವೆಂಕಟಪೇಟೆ, ಹಳಪೇಟೆ, ಹೊಸಪೇಟೆ ಮೊದಲಾದ ಓಣಿಗಳಲ್ಲಿ ಹಾಯ್ದು ೭ ಗಂಟೆಗೆ ನಗರ ಸಭೆಗೆ ಬಂದು ತಲುಪಿತು. ಮೆರವಣಿಗೆಯು ತನ್ನ ಸ್ಥಳಕ್ಕೆ ಬರುವದಕ್ಕಿಂತ ಪೂರ್ವದಲ್ಲಿಯೇ ಸಾವಿರಾರು ಸ್ತ್ರೀಪುರುಷರು ನಗರಸಭೆಯ ಮುಂದೆ ಕಿಕ್ಕಿರಿದು ತುಂಬಿದ್ದರು. ಅಲ್ಲಿಗೆ ಒಂದು ಬಳಿಕ ಸ್ವಯಂಸೇವಕರು ಸಾಲಾಗಿ ನಿಂತು ರಾಷ್ಟ್ರಗೀತಗಳನ್ನು ಹಾಡಹತ್ತಿದರು. ಇಷ್ಟರಲ್ಲಿಯೇ ಸಭೆಗಾಗಿ ನಗರಸಭೆಯ ಸಭಾಸದರು ಒಬ್ಬೊಬ್ಬರಾಗಿ ಬರಹತ್ತಿದರು. ಪ್ರಚಂಡ ಸಮುದಾಯವು ನೆರೆದದ್ದನ್ನು ಕಂಡು ಸಭಾಸದರು ಗಾಬರಿಗೊಂಡು ಇಲ್ಲವೆ "ರಾಷ್ಟ್ರಧ್ವಜದ ಬಗ್ಗೆ ಇನ್ನೂ ಸಂಪೂರ್ಣ ವಿಚಾರವಾಗಿಲ್ಲವೆಂದೇ ಸಭೆಯನ್ನು ಮುಂದಕ್ಕೆ ಹಾಕಿದ್ದೇವೆಂದು ಹೇಳಿದರು. ಜಾರ್ಜ ಬಾದಶಹರ ಹುಟ್ಟಿದ ಹಬ್ಬದ ನಿಮಿತ್ತವಾಗಿ ಸಭೆಯು ಮುಂದಕ್ಕೆ ಹಾಕಲ್ಪಟ್ಟಿದೆಯೆಂದು ಕಾರಣವನ್ನು ತೋರಿಸಿದರು ಮಾತ್ರ; ನಂತರದಲ್ಲಿ ನಗರ ಸಭೆಯ ಸಭಾಸದರಾದ ಶ್ರೀ, ಜಂಗಿನ ಮುರಿಗೆಯ್ಯನವರು ಮುಂದೆ ಬಂದು "ಸಭೆಯನ್ನು ಇಂದು ಜಾರ್ಜ ಬಾದಶಹರ ಹುಟ್ಟಿದ ಹಬ್ಬದ ನಿಮಿತ್ತವಾಗಿ ಮುಂದಕ್ಕೆ ಹಾಕಿದೆ. ಇನ್ನು ೮-೧೦ ದಿವಸಗಳಲ್ಲಿ "ರಾಷ್ಟ್ರಧ್ವಜದ ಸೂಚನೆಯನ್ನು ಸಭೆಯಲ್ಲಿ ತೆಗೆದುಕೊಂಡು ಅದನ್ನು ಬಗೆಹರಿಸುವೆವು" ಎಂಬುದಾಗಿ ಆಶ್ವಾಸನವನ್ನಿತ್ತರು. ಬಳಿಕ ಜೋರಾಪುರ ಗುರುರಾಯರು "ಮುರಿಗೆಯ್ಯನವರ ಆಶ್ವಾಸನದ ಮೇಲೆ ವಿಶ್ವಾಸವನ್ನಿಟ್ಟು ತಿರುಗಿ ಹೋಗಲು ಜನರಿಗೆ ಕೇಳಿಕೊಂಡರು, ಜನರು ಜಯಜಯಕಾರದೊಂದಿಗೆ ತಿರುಗಿ ತೆರಳಿದರು, ಜನರಂತೂ ನಗರ ಸಭೆಯವರಮೇಲೆ ವಿಶ್ವಾಸವನ್ನಿಟ್ಟು ತಿರುಗಿ ಹೋದರು. ನಗರಸಭೆಯವರು ವಚನಕ್ಕೆ ತಕ್ಕಂತೆ ನಡೆಯುವರೋ ಸಂಶಯ. ಯಾಕೆಂದರೆ ಲಕ್ಷಣವೇನೂ ಒಳಿತಾಗಿ ಕಾಣುವದಿಲ್ಲ ಅತ್ತ ೮-೧೦ ದಿನಗಳಲ್ಲಿಯೇ ಹೆಚ್ಚುವೆವಾಗಿ ಆಶ್ವಾಸನವನ್ನು ಕೊಟ್ಟರು. ಇತ್ತ ಸಭೆಯನ್ನು ೧೯ ನೇಯ ತಾ|| ವರೆಗೆ ಮುಂದೂಡಿದರು. ಬಾಗಲಕೋಟೆಯ ನಾಗರೀಕರೇ ಇದಕ್ಕೆ ನಿಮ್ಮ ಉತ್ತರವೇನು? ಬೇರೆಕಡೆಗೆ ಕೊಟ್ಟ ಧಾರವಾಡದ ಸುದ್ದಿಯನ್ನೋದಿ ಬುದ್ಧಿಗಲಿಯಿರಿ.

[ ಕ್ರಾಂತಿಯ ವಾರ್ತೆ ]

## ಧಾರವಾಡದಲ್ಲಿ

# ಸತ್ಯಾಗ್ರಹಿಗಳಿಗೆ ಅಪೂರ್ವ ವಿಜಯ

### ರಾಷ್ಟ್ರಧ್ವಜಕ್ಕೆ ಸನ್ಮಾನ

ಧಾರವಾಡದ ನಗರಸಭೆಯವರು ತಾ॥ ೭ನೆಯ ದಿವಸ ಸೇರಿದ ಸಭೆಯಲ್ಲಿ “ ಇನ್ನು ಮುಂದೆ ಧಾರವಾಡ ನಗರ ಸಭೆಯ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನೇ ಹಚ್ಚತಕ್ಕದ್ದೆಂಬು ದಾಗಿ ನಿರ್ಣಯಿಸಿಕೊಂಡು ಅಂದು ರಾಷ್ಟ್ರಧ್ವಜವನ್ನು ಕಟ್ಟಡದ ಮೇಲೆ ಏರಿಸಿದರು. ಅಂದಿನಿಂದ ಕಟ್ಟಡದ ಮೇಲೆ ರಾಷ್ಟ್ರ ಧ್ವಜವೊಂದೇ ಹಾರಾಡುತ್ತಿತ್ತು. ಆದರೆ ೩ನೆಯ ತಾ॥ ದಿವಸ ಜಾರ್ಜ ಬಾದಶಹರ ಹುಟ್ಟಿದ ದಿವಸದ ನಿಮಿತ್ತವಾಗಿ ಕಟ್ಟಡದ ಮೇಲೆ ಬ್ರಿಟಿಶ ಸತ್ತೆಯ ಧ್ವಜವಾದ “ ಯುನಿಯನ್ ಜ್ಯಾಕ ” ವು ರಾಷ್ಟ್ರಧ್ವಜದಕಿಂತಲೂ ಸ್ವಲ್ಪ ಎತ್ತರದಮೇಲೆ ಏರಿಸ ಲ್ಪಟ್ಟಿತು. ನಗರಸಭೆಯವರು ತಾವು ನಿರ್ಣಯಿಸಿಕೊಂಡ ಗೊತ್ತಿನ ವಿರುದ್ಧವಾಗಿ ಆಚರಿಸಿ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದುದು ಅಲ್ಲಿಯ ಸತ್ಯಾಗ್ರಹಿಗಳಿಗೆ ಸಹನವಾಗಲಿಲ್ಲ. ಆದು ದರಿಂದ ಕೆಲವು ಸ್ಥಳಿಕ ಸತ್ಯಾಗ್ರಹಿಗಳು ಪ್ರಸಿದ್ಧ ವಕೀಲರಾದ ಶ್ರೀ ಕರಮರಕರ ದತ್ತಾತ್ರೇಯರವರ ನೇತೃತ್ವದಲ್ಲಿ ಮುನಸಿ ಪಾಲ್ಟಿಗೆ ಸಾಗಿಹೋದರು. ಅಲ್ಲಿಯ ಅಧಿಕಾರಿಗಳಿಗೆ ತಮ್ಮ ಉದ್ದೇಶವನ್ನು ತಿಳಿಸಿದರು. ಆ ಮೇಲೆ ಕಟ್ಟಡದ ಮೇಲ್ಬದಿಗೆ ಹೋಗಿ “ ಯೂನಿಯನ್ ಜ್ಯಾಕ ” ಇಳಿಸಿ ತಮ್ಮ ತಮ್ಮ ಸ್ಥಳ ಗಳಿಗೆ ತಿರುಗಿದರು. “ ಯೂನಿಯನ್ ಜ್ಯಾಕವು ” ನಗರ ಸಭೆಯ ಅಧ್ಯಕ್ಷರಿಗೆ ಒಪ್ಪಿಸಲ್ಪಟ್ಟಿತು. “ ಯೂನಿಯನ್ ಜ್ಯಾಕವು ” ತಿರುಗಿ ಏರಿಸಲ್ಪಟ್ಟಿಲ್ಲ.

### ವಿಜಾಪೂರ ಜಿಲ್ಲೆಯ ಪ್ರಚಾರಕರು

ವಿಜಾಪೂರ ಜಿಲ್ಲೆಯಲ್ಲಿ ಪ್ರಚಾರಕಾರ್ಯವನ್ನು ಮಾಡಲು ಶ್ರೀ ಅಶೋಕ ಬಂಡಾಚಾರ್ಯರು ಹಾಗು ಶ್ರೀ ದೇಶಪಾಂಡೆ ಶಂಕರರಾಯರು ಸಿದ್ಧರಾಗಿ ಮುಂದೆ ಬಂದಿದ್ದು ಅವರು ಕೂಡಲೆ ಜಿಲ್ಲೆಯಲ್ಲಿ ಈ ಬಗ್ಗೆ ಅಡ್ಡಾಡತಕ್ಕವರಿದ್ದಾರೆ, ಕಾರಣ ಎಲ್ಲರೂ ಅವರಿಗೆ ತನುಮನಧನಗಳಿಂದ ಸಹಾಯಮಾಡಬೇಕಾಗಿ ಬಿನ್ನಹ.

ತಾ॥ ೫-೬-೧೯೪೦ } ಕಾರ್ಯದರ್ಶಿ
ಸತ್ಯಾಗ್ರಹ ಮಂಡಳ
ಜಿಲ್ಲಾ ವಿಜಾಪೂರ

### ಮೈಸೂರಿನಲ್ಲಿ ಸತ್ಯಾಗ್ರಹಕ್ಕೆ ತಡೆ.

ಬ್ರಿಟಿಶ ಹಿಂದುಸ್ಥಾನದಲ್ಲಿ ನಡೆದ ಸತ್ಯಾಗ್ರಹದ ಚಳ ವಳಿಯು ಮೆಲ್ಲಮೆಲ್ಲನೆ ಮೈಸೂರ ಸಂಸ್ಥಾನದಲ್ಲಿಯೂ ಕಾಲಿ ಡಹತ್ತಿದ್ದನ್ನು ಕಂಡು ಅಲ್ಲಿಯ ಅಧಿಕಾರಿಗಳು ಗಾಬರಿಗೊಂಡು ೧೨ ಒನೆಮೇಲೆ “ಸತ್ಯಾಗ್ರಹದ ಸಹಾಯಾರ್ಥವಾಗಲಿ ಇಲ್ಲವೆ ಸಹಾನುಭೂತಿಗಾಗಲಿ ಮೆರವಣಿಗೆ, ಸಭೆ, ಹೋಳಿ ಮೊದ ಲಾದವುಗಳನ್ನು ೩ ತಿಂಗಳ ವರೆಗೆ ಮಾಡ ಬಾರದಾಗಿ ಕಟ್ಟಪ್ಪಣೆಯನ್ನು ತೆಗೆದಿದಾರೆ.

### ‘ ಯೂನಿಯನ ’ ಜಾಕಕ್ಕೆ ಸಂಕ್ರಾಂತಿ.

#### ಶ್ರೀ ಮತಿ ಸುಬ್ಬಮ್ಮನವರಿಗೆ ಶಿಕ್ಷೆ.

ರಾಜಮಹೇಂದ್ರಿಯ ಶ್ರೀಮತಿ ದುವ್ವರಿ ಸುಬ್ಬಮ್ಮನವ ರಿಗೆ ೧೫೭ ನೆಯ ಕಲಮಿನನ್ವಯ ೬ ತಿಂಗಳ ಸಾದಾ ಶಿಕ್ಷೆ ಯಾಗಿದೆ.

#### ಶ್ರೀ ಅಭ್ಯಂಕರರ ವೀರವಾಣಿ.

ಮಧ್ಯಪ್ರಾಂತದ ಸತ್ಯಾಗ್ರಹದ ಮಂಡಳದ ಶ್ರೀ ಅಭ್ಯಂ ಕರರು ತಮ್ಮ ಖಟ್ಲೆಯ ವಿಚಾರಣೆಯ ಕಾಲಕ್ಕೆ ಕೆಳಗಿನಂತೆ ಮಾಜ್ಮಲವನ್ನು ಒಪ್ಪಿಸಿದ್ದಾರೆ—

ಓರ್ವ ಹಿಂದೂಮನುಷ್ಯನು ಹಿಂದೂ ಜಾತಿಯವನಾದ ನನ್ನ ವಿರುದ್ಧವಾಗಿ ಸಾಕ್ಷಿಯನ್ನು ಹೇಳಲು ಮುಂದೆ ಬಂದಿ ದ್ದಾನೆ ಸಾರಾಸಾರ ವಿಚಾರವನ್ನು ಮಾಡದೆ ಓರ್ವ ಹಿಂದೂ ವಕೀಲನೇ ಸರಕಾರೀಪಕ್ಷದಿಂದ ನನ್ನ ಖಟ್ಲೆಯನ್ನು ಸಾಗಿಸಲು ಬಂದಿದ್ದಾನೆ ವಿಚಾರಣೆಯನ್ನು ಮಾಡುವ ಮ್ಯಾಜಿಸ್ಟ್ರೇಟನಾದರೂ ಹಿಂದೂ ಜಾತಿಯವನೇ ಇರುತ್ತಾನೆ. ಆದುದರಿಂದ ಇಂತಹ ಪ್ರಸಂಗದಲ್ಲಿ ನಾನು ಸಂರಕ್ಷಣೆಯನ್ನು ಮಾಡಿಕೊಳ್ಳುವದು ವಿಹಿತವಾಗದು ಖಟ್ಲೆಯ ಪರಿಣಾಮವು ನನಗೆ ಗೊತ್ತಿದೆ. ಸರಕಾರದವರು ನನ್ನನ್ನು ಹಿಡಿದು ಕೊಂಡು ಹೋಗುವ ವರೆಗೆ ಮತ್ತು ಸರಕಾರದವರಿಗೆ ನಮ್ಮ ವಿರುದ್ಧವಾಗಿ ಸಹಾಯ ಮಾಡಲು ನಮ್ಮಲ್ಲಿಯೇ “ದೇಶ ದ್ರೋಹಿ”ಗಳು ಇರತಕ್ಕವರೆಗೆ ರಾಜದ್ರೋಹಾತ್ಮಕ ಖಟ್ಲೆ ಗಳು ಹೀಗೆಯೇ ಸಾಗತಕ್ಕವುಗಳಾಗಿವೆ. ಮತ್ತು ರಾಷ್ಟ್ರಸೇ ವಕರಿಗೆ ಹೀಗೆಯೇ ಶಿಕ್ಷೆಗಳಾಗತಕ್ಕವುಗಳಾಗಿವೆ.

#### ಧಾರವಾಡದಲ್ಲಿ ೪೦೦೦ ಸಿಂದೀ ಗಿಡಗಳ ನಾಶ.

ಧಾರವಾಡ ಜಿಲ್ಲೆಯ ನರೇಂದ್ರದ ಇನಾಮದಾರರಾದ ಶ್ರೀ ಗೋವಿಂದರಾವ ದೇಶಪಾಂಡೆ ಇವರು ನರೇಂದ್ರ ಹಾಗು ಸುತ್ತುಮುತ್ತಲಿನ ಹೊಲಗಳಲ್ಲಿರುವ ತಮ್ಮ ಒಡೆತನದ ೪೦೦೦ ಸಿಂದೀ ಗಿಡಗಳನ್ನು ಕಡಿಸಿರುವರೆಂದು ಧಾರವಾಡದ ಕಾಂಗ್ರೆಸ್ ಕಮಿಟಿಗೆ ಪತ್ರ ಬರೆದು ತಿಳಿಸಿದ್ದಾರೆ.

#### ಕರ್ನಾಟಕದಲ್ಲಿ ಸತ್ಯಾಗ್ರಹದ ಪ್ರಗತಿ.

##### ಮುಳಗುಂದ

ತಾ॥ ೨೯ ಮತ್ತು ೩೦ ಈ ದಿವಸಗಳಲ್ಲಿ ಶ್ರೀ. ಸಿ. ಟಿ. ಬಳ್ಳಾರಿ ಮತ್ತು ಗೋವಿಂದರಾವ ಕುಲಕರ್ಣಿ ಇವರ ಅಧ್ಯಕ್ಷತೆಯಲ್ಲಿ ಸಭೆಗಳು ಜರುಗಿ, ಹುಬ್ಬಳ್ಳಿಯ ಮಂಡಳದ ರಾಮಸ್ವಾಮಿ ಎಸ್. ಎಸ್. ವೇದಾಂತದವರ ಭಾಷಣಗಳಾದವು, ಕೊನೆಯಲ್ಲಿ ಪರದೇಶಿ ಬಟ್ಟೆಗಳ ಹೋಳಿಮಾಯಿತು. ತಾ॥ ೩೧ಕ್ಕೆ ೫೦ ಜನ ಸತ್ಯಾ ಗ್ರಹಿಗಳು ೪೫ ಈಚಲ ಗಿಡಗಳನ್ನು ಕಡಿದರು. ದಿನಾಲು ಈ ಕಾರ್ಯವು ನಡೆಯುತ್ತದೆ.

## ಸಾಣೇಕಟ್ಟೆಯ ಉಪ್ಪಿನ ವಖಾರದ ಮೇಲೆ

# ಕನ್ನಡ ಕಡುಗಲಿಗಳ ಹಲ್ಲೆ

### ೮೦೦ ಮಣ ಉಪ್ಪಿನ ಲೂಟಿ. ಅಧಿಕಾರಿಗಳ ತಟಸ್ಥ ವೃತ್ತಿ

ತಾ| ೧ ನೆಯ ದಿವಸ ಕುಮಟೆಯ ೧೮ ಜನ ಕನ್ನಡ ಕಡುಗಲಿ ಸತ್ಯಾಗ್ರಹಿಗಳು ಶ್ರೀ. ಶ್ರೀಧರ ಪಾಂಡುರಂಗ ಬಾಳಿಗಿಯವರ ನೇತೃತ್ವದಲ್ಲಿ, ಕೋರ್ಕಿಯ ದೇವಸ್ಥಾನದಿಂದ ೧೦೦೦ ಜನರ ಮೆರವಣಿಗೆಯಿಂದ ವಾದ್ಯಘೋಷದೊಡನೆ ಸಾಣೇಕಟ್ಟೆಯ ಉಪ್ಪಿನ ವಖಾರದ ಮೇಲೆ ಸಾಗಿ ಹೋದರು. ಕೋರ್ಕಿಯ ಶಾಲೆ ಕಡೆ ಹೊಳೆಯಲ್ಲಿ ಇಳಿದು ಮುಂದಾದರು ಸುಮಾರು ಸೊಂಟ ನೀರು ಇತ್ತು. ಅಲ್ಲಿ ಇವರು ಹೋದಾಗ ಆಳುಗಳು ಉಪ್ಪನ್ನು ಕುಂತರಿಯಿಂದ ಒಗೆದು ನಾಶಮಾಡುತ್ತಿದ್ದರು. ಹೀಗೆ ಮಾಡಲು ಅಧಿಕಾರಿಗಳಿಂದ ಅಪ್ಪಣೆಯಾಗಿತ್ತಂತೆ! ಸ್ವಯಂ ಸೇವಕರು ಕೂಡಲೆ ಉಪ್ಪಿನ ರಾಶಿಗೆ ಮುತ್ತಿಗೆಯನ್ನು ಹಾಕಿ ೩೦-೪೦ ಮಣ ಉಪ್ಪನ್ನು ಚೀಲಗಳಲ್ಲಿ ತುಂಬಿಕೊಂಡರು ಆ ಮೇಲೆ ಇವರೊಡನೆ ಹೋದ ಜನರು ಮುಂದಕ್ಕೆ ನುಗ್ಗಿ ಸುಮಾರು ೭೦೦—೮೦೦ ಮಣ ಉಪ್ಪನ್ನು ತೆಗೆದುಕೊಂಡರು. ಇಷ್ಟೆಲ್ಲವೂ ನಡೆದಿರುವಾಗ ಸುಂಕದ ಕಲೆಕ್ಟರರಾದ ಮಿ|| ಸ್ಟೀಲರೂ ಹಾಗು ಕೆಲವು ಸಿಪಾಯಿಗಳೂ ಅಲ್ಲಿಯೇ ಇದ್ದರು. ಯಾರೂ ಸ್ವಯಂಸೇವಕರಿಗೆ ಯಾವ ವಿಧವಾದ ಅಡ್ಡಿಯನ್ನುಂಟು ಮಾಡಲಿಲ್ಲ. ಮರುದಿವಸ ಸತ್ಯಾಗ್ರಹಿಗಳು ಕುಮಟೆಗೆ ಹೋಗಿ ಸಾಣೇಕಟ್ಟೆಯಿಂದ ಒಯ್ದ ಉಪ್ಪನ್ನು ಮಾರಾಟಮಾಡಿದರು.

ಮುಂಬಯಿ ಇಲಾಖೆಯಲ್ಲಿಯ ಮಹಾರಾಷ್ಟ್ರ ಹಾಗು ಗುಜರಾಥ ಪ್ರಾಂತಗಳ ವೀರರು ತಮ್ಮ ತಮ್ಮ ಪ್ರಾಂತದೊಳಗಿನ ಉಪ್ಪಿನ ವಖಾರದ ಮೇಲೆ ಹಲ್ಲೆಯನ್ನು ನಡಿಸಿ ಕೀರ್ತಿಯನ್ನು ತರಹತ್ತಿದ್ದಾರೆ, ಕರ್ನಾಟಕವೊಂದೇ ಈ ವಿಷಯದ ಬಗ್ಗೆ ಸುಮ್ಮನೆ ಕುಳಿತಿತ್ತು. ಈಗ ಕುಮಟೆಯ ಕನ್ನಡ ವೀರರು ಮುಂದಕ್ಕೆ ಸಾಗಿ ಉಪ್ಪಿನ ವಖಾರದ ಮೇಲೆ ಹಲ್ಲೆಯನ್ನು ಮಾಡಿ ಅಖಿಲ ಕರ್ನಾಟಕಕ್ಕೇನೆ ಕೀರ್ತಿಯನ್ನು ತಂದರು. ಅದಕ್ಕಾಗಿ ಅವರನ್ನು ಕನ್ನಡಿಗರು ಎಷ್ಟು ಕೊಂಡಾಡಿದರೂ ಕಡಿಮೆಯೆ ಸರಿ. ಜಯ ಕರ್ನಾಟಕ.

## ಸೊಲ್ಲಾಪುರದಲ್ಲಿ ದಂಡಾಳುಗಳ ಪುಂಡಾಟಿಕೆ.

ಸೊಲ್ಲಾಪುರದಲ್ಲಿ ಲಷ್ಕರಿ ಕಾಯದೆಗನುಸಾರವಾಗಿ ಪ್ರತಿಬಂಧಿತವಾದ ರಾಷ್ಟ್ರಧ್ವಜದ ಮಾನ ಸಂಪಾದನೆಗಾಗಿ ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಸತ್ಯಾಗ್ರಹವನ್ನು ಹೂಡಿರುವರಷ್ಟೆ ಈ ಸತ್ಯಾಗ್ರಹದಲ್ಲಿ ಭಾಗ ತೆಗೆದುಕೊಳ್ಳಲು ಮುಂಬಯಿಂದ ೨೭ ಸತ್ಯಾಗ್ರಹಿಗಳು ಪುಣೆಗೆ ಕಳಿಸಲ್ಪಟ್ಟಿದ್ದರು. ಅವರಲ್ಲಿ ಮೂರು ಜನರು ರಾಷ್ಟ್ರಧ್ವಜಸಹಿತವಾಗಿ ತಾ| ೩೦ ನೆಯ ದಿವಸ ಸೊಲ್ಲಾಪುರಕ್ಕೆ ಹೋದರು ಈ ಸತ್ಯಾಗ್ರಹಿಗಳೊಡನೆ ದಂಡಾಳುಗಳು ಹೇಗೆ ನೀಚತನದಿಂದ ವರ್ತಿಸಿದರೆಂಬುವದು ಸತ್ಯಾಗ್ರಹಿಗಳೇ ಹೇಳಿದ ಕೆಳಗಿನ ಮಾತುಗಳಿಂದ ವ್ಯಕ್ತವಾಗುತ್ತಿದ್ದು, ಅದನ್ನು ಇಲ್ಲಿ ಕೆಳಗೆ ಕೊಟ್ಟಿದೆ. ಶ್ರೀ ದೇಸಾಯಿ ಕಾಶೀನಾಥರು ಹೇಳಿದ್ದು:— ಸೊಲ್ಲಾಪುರ ಸ್ಟೇಶನದಲ್ಲಿ ಇಳಿದ ಕೂಡಲೆ ಓರ್ವ ಸಾರ್ಜಂಟನು ನಮ್ಮನ್ನು ಹಿಡಿದು, ಪೋಲೀಸ ಚೌಕಿಗೆ ಕರೆದುಕೊಂಡು ಹೋಗಿ ಅಲ್ಲಿ ನಮ್ಮೆಲ್ಲರನ್ನು ಒಂದು ಕೋಣೆಯಲ್ಲಿ ನೂಕಿ, ಒಳಗಿನಿಂದ ಬಾಗಿಲಕ್ಕೆ ಕೀಲಿಯನ್ನು ಹಾಕಿ, ನಮ್ಮನ್ನು ಬೆತ್ತಗಳಿಂದ ಒಡೆಯಲಾರಂಭಿಸಿದನು. ಅವನು ನನ್ನ ಬೆನ್ನಿನ ಮೇಲಂತೂ ಒಳಿತಾಗಿಯೇ ಪೆಟ್ಟುಗಳನ್ನು ಹಾಕಿದನು. ಬಳಿಕ ಸಾರ್ಜಂಟನು "ನೀನು ಜಾತಿಯಿಂದ ಬ್ರಾಹ್ಮಣನಿರುವಿಯಾ?" ಎಂದು ಕೇಳಿದನು. ನಾನು "ಅಹುದು" ಎಂದು ಉತ್ತರ ಕೊಟ್ಟೆನು. ಕೂಡಲೆ ಅವನು ಮಾಂಸದಿಂದ ತುಂಬಿದ ಒಂದು ತಾಟನ್ನು ತಂದು ಅದನ್ನು ತಿನ್ನಲು ನನಗೆ ಹೇಳಿಕೊಂಡನು. ನಾನು ನಿರಾಕರಿಸಿದೆನು. ಬಳಿಕ ಸಾರ್ಜಂಟನು ಒಂದು ಎಲೆ ಟೊಂಗಿನಕಾಯಿಯನ್ನು ತೆಗೆದು, ಅದನ್ನು ತಿಂದು ನನ್ನ ಮೇಲೆ ಉಗುಳಹತ್ತಿದನಲ್ಲದೆ, ಮಹಾತ್ಮಾ ಗಾಂಧಿಯವರಿಗೆ ಬೈಯಲು ನನಗೆ ಆಜ್ಞಾಪಿಸಿದನು. ನಾನು "ಬೈಯುವದಿಲ್ಲ"ವಾಗಿ ಹೇಳಿದೆನು, ಆ ಮೇಲೆ "ಬ್ರಿಟಿಶ ರಾಜ್ಯಕೀ ಜಯ್" ವೆಂದು ಕೂಗಲು ಹೇಳಿಕೊಂಡನು. ಇದನ್ನು ನಾನು ನಿರಾಕರಿಸಿದ್ದುದರಿಂದ ಅವನು ನನ್ನನ್ನು ಬಡಿಗೆಗಳಿಂದ ಹೊಡೆಯಲು ಪ್ರಾರಂಭಿಸಿದನು ನಾನು ಮೂರ್ಛಿತನಾಗಿ ಬಿದ್ದೆನು. ರಾತ್ರಿ ೮ ಗಂಟೆಗೆ ನನ್ನನ್ನು ಸ್ಟೇಶನಕ್ಕೆ ಕರೆದುಕೊಂಡು ಹೋಗಿ ಪುಣೆಗೆ ಹೋಗುವ ಗಾಡಿಯಲ್ಲಿ ಕುಳ್ಳಿರಿಸಿದನು. ಹೀಗೆ ನಾವು ಮುಂಬಯಿಗೆ ಬಂದು ತಲುಪಿದೆವು"

ಶ್ರೀ ಲಾಲಜಿ ನಾರಾಯಣಜಿ ಹಾಗು ಶ್ರೀ ಮಾಣಿಕಚಂದ ಹೀರಾಚಂದರು ಇವರ ಎದುರಿನಲ್ಲಿ ಶ್ರೀ ದೇಸಾಯಿಯವರು ಮೇಲಿನ ವಾಙ್ಮೂಲವನ್ನು ಹೇಳಿದ್ದಾರೆ.

ಶ್ರೀ ಕಾಶೀರಾಮರು ಹೇಳಿದ್ದು:—

೩೦ ತಾ| ದಿವಸ ಸಂಜೆಗೆ ಸೊಲ್ಲಾಪುರಕ್ಕೆ ಮುಟ್ಟಿದೆನು. ಸ್ಟೇಶನದ ಹೊರಗೆ ಹೋದ ಕೂಡಲೆ ೩೨೩೧ ನೆಯ ನಂಬರಿನ ಸಾರ್ಜಂಟನು ನನ್ನ ಬಳಿಗೆ ಬಂದು "ರಾಷ್ಟ್ರಧ್ವಜ"ವನ್ನು ಕೊಡು ಎಂದು ಕೇಳಿದನು. ನಾನು ಕೊಡಲು ನಿರಾಕರಿಸಿದೆನು. ಬಳಿಕ ಮೂರು ಜನ ಸಾರ್ಜಂಟರು ನನ್ನನ್ನು ಎತ್ತಿ ಹಿಡಿದರು. ನನ್ನನ್ನು ಹೊಡೆದು ಬಡಿದು ಧ್ವಜವನ್ನು ಕಸಿದುಕೊಂಡರು. ಆ ಮೇಲೆ ನನ್ನನ್ನು ಬಿಡಾರಕ್ಕೆ ಕರೆದುಕೊಂಡು ಹೋಗಿ ಬೆತ್ತದಿಂದ ೫೦ ಏಟುಗಳನ್ನು ಕೊಟ್ಟರು. "ನೀನು ತಿರುಗಿ ಹೋಗಲಿಚ್ಛಿಸುತ್ತೀಯಾ" ಎಂದು ನನ್ನನ್ನು ಕೇಳಿದರು. ಅದಕ್ಕೆ ಶರೀರದಿಂದ ದುರ್ಬಲನಾಗುವವರೆಗೆ ಸತ್ಯಾಗ್ರಹವನ್ನು ಮಾಡುವೆನು" ಎಂಬುದಾಗಿ ನಾನು ಉತ್ತರವಿತ್ತೆನು. ಬಳಿಕ ಅವರು ನನ್ನನ್ನು ಜುಲೂಮೆಯಿಂದ ಸ್ಟೇಶನಕ್ಕೆ ಕರೆದುಕೊಂಡು ಹೋಗಿ ಪುಣೆಗೆ ಹೋಗುವ ಗಾಡಿಯಲ್ಲಿ ಕುಳ್ಳಿರಿಸಿದರು.

ಶ್ರೀ ಮೇಘಜಿಯವರು ಹೇಳಿದ್ದು:—

೩೦ ನೆಯ ತಾ| ದಿವಸ ಸಂಜೆಗೆ ಸೊಲ್ಲಾಪುರಕ್ಕೆ ಮುಟ್ಟಿದೆನು. ಸ್ಟೇಶನದ ಹೊರಗೆ ಕಾಲಿಟ್ಟ ಕೂಡಲೆ ಲಷ್ಕರಿ ಅಧಿಕಾರಿಗಳು ನನ್ನನ್ನು ಹಿಡಿದು ಹೊಡೆಯುತ್ತ ಬಿಡಾರಕ್ಕೆ ಒಯ್ದರು. ಅಲ್ಲಿಯೂ ನನ್ನನ್ನು ಒಳಿತಾಗಿ ಥಳಿಸಿದರು "ಮಹಾತ್ಮಾ ಗಾಂಧಿಯವರನ್ನು ಬೈದರೆ ನಿನ್ನನ್ನು ಬಿಡುವೆವು" ಎಂದು ತಿಳಿಸಿದರು. ನಾನು ಒಲ್ಲೆಂದೆನು. ಆ ಮೇಲೆ ನನ್ನನ್ನು ಬಹಳವಾಗಿ ಥಳಿಸಿದ್ದಲ್ಲದೆ, ಸುಡುತ್ತಿರುವ ಸಿಗರೇಟನ್ನು ನನ್ನ ಅಂಗಾಂಗಳಿಗೆ ಹಚ್ಚಿದರು ನಂತರದಲ್ಲಿ ಸ್ಟೇಶನಕ್ಕೆ ಕರೆದುಕೊಂಡು ಹೋಗಿ ಪುಣೆಗೆ ಹೋಗುವ ಗಾಡಿಯಲ್ಲಿ ನನ್ನನ್ನು ನೂಕಿಬಿಟ್ಟರು.

### ಹುಬ್ಬಳ್ಳಿ

ಮಹಾತ್ಮರನ್ನು ಸೆರೆಹಿಡಿದ ದಿವಸ ಎಮ್. ಎಸ್. ಎಮ್. ರೇಲ್ವೆ ಕೆಲಸಗಾರರು ಹರತಾಳವನ್ನು ಪಾಲಿಸಿದ್ದರು. ಕೆಲಸಗಾರರೆಲ್ಲರ್ರೂ ರೇಲ್ವೆಯ ಪಾಠಶಾಲೆಯನ್ನು ಮುರಿಬಿಡಿಯುವ ಕಾರ್ಖಾನೆಯೊಳಗೆ ಇಲ್ಲವೆ ಇವರು ರಾಜಕೀಯ ಚಳವಳಿಯಲ್ಲಿ ಭಾಗಿಗಳಾಗಿಲ್ಲವೆಂದು ತೋರಿಸುವದಕ್ಕಾಗಿಯೋ ರೇಲ್ವೆ ಅಧಿಕಾರಿಗಳು ಅವರ ಕೈಯಿಂದ ಹರತಾಳವನ್ನು ಪಾಲಿಸಿಲ್ಲವೆಂಬುದಾಗಿ ಬರೆಯಿಸಿಕೊಳ್ಳಲು ಯತ್ನಿಸುತ್ತಿರುವರು.

ತಾ| ೧೬ನೆಯ ದಿವಸ ಗಾಂಧಿ ಚೌಕದಲ್ಲಿ ಸಾರ್ವಜನಿಕ ಸಭೆಸೇರಿ, ಡಾ. ಹರ್ಡೀಕರ ಭಾಷಣವಾಯಿತು. ಅವರು ತಮ್ಮ ಮುಂದಿನ ಕಾರ್ಯಕ್ರಮವಾದ ಮದ್ಯಪಾನ ನಿಷೇಧ, ಈಚಲ ಗಿಡಗಳ ಧ್ವಂಸ, ವಿದೇಶಿ ಬಟ್ಟೆಯ ಬಹಿಷ್ಕಾರಗಳನ್ನು ಕುರಿತು ಹೇಳಿದರಲ್ಲದೆ, ಸೊಲ್ಲಾಪುರದ ರಾಷ್ಟ್ರಧ್ವಜ ಸತ್ಯಾಗ್ರಹದ ವಿಷಯವಾಗಿ ಹುಬ್ಬಳ್ಳಿಯವರ ಕರ್ತವ್ಯದ ವಿಷಯವಾಗಿಯೂ ಪ್ರಸ್ತಾಪಿಸಿದರು.

### ಹುದಲಿ.

ಇಲ್ಲಿ ಒಂದು ಸತ್ಯಾಗ್ರಹ ಶಿಬಿರವು ತೆರೆಯಲ್ಪಟ್ಟಿದೆ. ಶಿಬಿರದಲ್ಲಿ ೫೦ ಜನ ಸ್ವಯಂಸೇವಕರಿರುವರು. ಅಲ್ಲಿಯ ಸಿದ್ಧರೇಖ ವಾರಿ ಹಿಪ್ಪ ಎಂಬ ಸುಸಂಸ್ಕೃತ ಗೃಹಸ್ಥರು ಶಿಬಿರದ ನಾಯಕರಾಗಿದ್ದಾರೆ. ಪ್ರತಿ ದಿನದಲ್ಲಿಯೂ ಗ್ರಾಮಸಂಕೀರ್ತನ, ಧ್ವಜವಂದನ ಮೊದಲಾದ ಕಾರ್ಯಗಳು ನಡೆಯುವವು. ತಾ| ೩೧ನೆಯ ದಿವಸ ಸ್ವಯಂಸೇವಕರು ೨೦೦ ಈಚಲಗಿಡಗಳನ್ನು ಕಡಿದರು. ಸುತ್ತುಮುತ್ತಿನ ಹಳ್ಳಿಗಳಿಗೆ ಹೋಗಿ ಸ್ವಯಂಸೇವಕರು ಖಾದಿ ಪ್ರಚಾರ, ಪರದೇಶಿ ಬಟ್ಟೆಗಳ ಬಹಿಷ್ಕಾರ, ಈಚಲಗಿಡಗಳ ಧ್ವಂಸ ಇವುಗಳ ಬಗ್ಗೆ ಜನರಲ್ಲಿ ಜಾಗೃತಿಯನ್ನುಂಟುಮಾಡುತ್ತಿರುವರು.

ತಾ| ೩೧ನೆಯ ದಿವಸ ಊರಿನ ಅಧಿಕಾರಿಗಳು ಮೇಲಧಿಕಾರಿಗಳ ಅಪ್ಪಣೆಯ ಪ್ರಕಾರ "ಸಿಂದೀಗಿಡ ಕಡಿದವರ ಮೇಲೆ ಖಟ್ಲೆ ಮಾಡುವದರಲ್ಲಿ ಬರುವದು, ಇಲ್ಲವೆ ಒಂದು ಗಿಡಕ್ಕೆ ೩ ರೂಪಾಯಿಯಂತೆ ದಂಡವನ್ನು ಸರಕಾರದಲ್ಲಿ ತರುವದು. ಕಡಿದವರ ದಂಡವನ್ನು ಕೊಡಲು ನಿರಾಕರಿಸಿದರೆ, ಗಿಡಗಳ ಒಡೆಯರ ಕಡೆಯಿಂದ ದಂಡವನ್ನು ತೆಗೆದುಕೊಳ್ಳುವದಲ್ಲಿ ಬರುವದು." ಎಂದು ಡಂಗುರ ಹೊಡಿಸಿದ್ದಾರೆ. ಮೇಲಧಿಕಾರಿಗಳು ಗೌಡ ಕುಲಕರ್ಣಿಯವರಿಗೆ "ಕಾಯ್ದೆ ಗಿಡಗಳೆಷ್ಟು, ಸರಕಾರ ಕಡ್ಡಿನೋಟಿನ ಗಿಡಗಳೆಷ್ಟು, ಸ್ವತಂತ್ರ ಜನರ ಗಿಡಗಳೆಷ್ಟು, ಕಡಿಯಲ್ಪಟ್ಟ ಗಿಡಗಳೆಷ್ಟು" ಮೊದಲಾದವುಗಳನ್ನು ಸಾಧ್ಯಂತವಾಗಿ ತಿಳುಹಬೇಕೆಂದು ಅಪ್ಪಣೆಯನ್ನು ಕೊಟ್ಟಿದ್ದಾರೆ. ಗೌಡ ಕುಲಕರ್ಣಿಯವರದೂ "ಈ ಭಾಗದಲ್ಲಿ ಬಹುಶಃ ಎಲ್ಲ ಗಿಡಗಳೂ ನಾಶವಾದಲ್ಲವೆ." ಎಂಬುದಾಗಿ ಉತ್ತರವಿತ್ತಿದ್ದಾರೆಂಗಿ ತಿಳಿಯುತ್ತದೆ

### ಗಲಗಲಿ

ಸಾರ್ವಜನಿಕ ಸಭೆಸೇರಿ, ಸರಕಾರಿ ದಬ್ಬಾಳಿಕೆಗೆ ತುತ್ತಾದ ಶ್ರೀ. ಗಣೆ ಬಾಬುರಾಯರನ್ನೂ ಹಾಗ. ಪಾಟೀಲ ಶಂಕರಗೌಡ ರನ್ನೂ ಅಭಿನಂದಿಸುವದರಲ್ಲಿ ಬಂಗಿತು. ಇಲ್ಲಿಯ ಸಿಂಪಿಗರು ತಾ| ೧೫ ರಿಂದ ಇನ್ನು ಮುಂದೆ ಪರದೇಶಿ ಬಟ್ಟೆಗಳನ್ನು ಹೊಲಿಯುವದಿಲ್ಲವಾಗಿ ಪ್ರತಿಜ್ಞೆಯನ್ನು ಮಾಡಿದ್ದಾರೆ. ಬಾಗಲಕೋಟೆಯ ಸಿಂಪಿಗರಾದರೂ ಈ ಬಗೆಯ ನಿರ್ಧಾರಮಾಡಿ ಬಹಿಷ್ಕಾರದ ಚಳವಳಿಯಲ್ಲಿ ಸಹಾಯಮಾಡಿದರೆ, ಪರದೇಶಿ ಬಟ್ಟೆಗಳನ್ನು ಕೊಳ್ಳುವವರಿಗೆ ಬದ್ಧಿಗಲಿಸಿದಂತಾಗುವದು.

## ಬೆಳಗಾವಿಯ ಅಧಿಕಾರಿಗಳಿಗೆ ಬಿಸಿಹತ್ತಿತ.

## ಮದ್ಯಪಾನ ನಿಷೇಧಕ್ಕೆ ಅಡ್ಡಿ

ವ್ಹಾಯಿಸರಾಯರು ಹೊರಡಿಸಿದ ಹೊಸಕಾನೂನುಗಳನ್ನು ಆಧಾರವಾಗಿಟ್ಟುಕೊಂಡು ಡಿ| ಪೋಲೀಸ ಕಾಯಿದೆಯ ಅನ್ವಯ ಬೆಳಗಾವಿಯ ಡಿ| ಮ್ಯಾಜಿಸ್ಟ್ರೇಟರು, ಸಿಂದೀ ಅಂಗಡಿಗಳಮುಂದೆ ಯಾರೂ "ಪಿಕೆಟಿಂಗ" ಮಾಡತಕ್ಕದ್ದಲ್ಲವೆಂದೂ ಮತ್ತು ಮದ್ಯಪಾನದಿಂದ ಯಾರನ್ನೂ ಪರಾವೃತ್ತ ಮಾಡತಕ್ಕದ್ದಲ್ಲವಾಗಿಯೂ ಅಪ್ಪಣೆಯನ್ನು ಕೊಟ್ಟಿದ್ದಾರೆ. ಸ್ವಯಂಸೇವಕರು ಅಪ್ಪಣೆಯನ್ನು ಅಮಾನ್ಯ ಮಾಡಿ ಮದ್ಯಪಾನ ನಿಷೇಧದ ಕಾರ್ಯವನ್ನು ಹಾಗೆಯೇ ಸಾಗಿಸಿರುವರು.

## ಪೋಲೀಸರು ವೇದಾರಣ್ಯಂ ಶಿಬಿರವನ್ನು ಮುತ್ತಿದರು

ತಮಿಳನಾಡಿನ ಸತ್ಯಾಗ್ರಹ ಶಿಬಿರವಾದ ವೇದಾರಣ್ಯಂ ಶಿಬಿರವನ್ನು ಪೋಲೀಸ ಅಧಿಕಾರಿಗಳು ಮುತ್ತಿ ಶ್ರೀ ಹರಿಹರ ಶರ್ಮಾ, ಎನ್. ವ್ಹಿ. ನಾಯುಡು, ಕೃಷ್ಣಸ್ವಾಮಿ ಅಯ್ಯಂಗಾರ ಜಿ. ರಾಮಚಂದ್ರ ಥಂಬಿ ಮತ್ತು ಟಿ. ಎಸ್. ರಾಜನ್ ಇವರನ್ನು ಸೆರೆಹಿಡಿದುಕೊಂಡು ಹೋದರು.

## ಕತ್ತೆಯಮೇಲೆ ಕುಲಕರ್ಣಿಯ ಮೆರವಣಿಗೆ.

ಮುರಗೋಡದಲ್ಲಿ ಉಪ್ಪಿನ ಕಾಯಿದೇ ಭಂಗದ ಸಲುವಾಗಿ ೧ ವರ್ಷ ಕಠಿಣ ಶಿಕ್ಷೆಯಾಗಿದ್ದುದಕ್ಕೆ ಧೋಂಡೊ ಎಲ್ಲೊ ಕುಲಕರ್ಣಿ ಇವರು ಸರಕಾರಕ್ಕೆ ಕ್ಷಮೆಬೇಡಿ ಬಿಡುಗಡೆ ಹೊಂದಿದ ಮೂಲಕ ಮುರಗೋಡದಲ್ಲಿ ಅವರ ಪ್ರತಿಮೆಯನ್ನ ಮಾಡಿ ಕತ್ತೆಯ ಮೇಲೆ ಕುಳ್ಳಿರಿಸಿ ಉಳ್ಳೇಗಡ್ಡೆ ಮೊದಲಾದ ನವರತ್ನ ಮಾಲೆಯನ್ನು ಹಾಕಿ ಸಂತೆಯ ದಿವಸ ಪೇಟೆಯಲ್ಲಿ ಮೆರಿಸಿದರು. ಇವರು ಸೆರೆಮನೆಯಿಂದ ಬಿಡುಗಡೆಯಾದ ಮೇಲೆ ಥಾಗೋಜಿಕೊಪ್ಪಕ್ಕೆ ಓಡಿಹೋದರು. ಅಪರಾಧಕ್ಕೆ ತಕ್ಕ ಶಾಸನ

ಜಯಲಕ್ಷ್ಮೀ ಪ್ರಾಸಾದಿಕ

ಶ್ರೀಮಿತ್ರಿತ ಸಂಗೀತ ನಾಟಕ ಮಂಡಳಿ ದಾವಣಗೇರಿ ಇವರ

**ಬಾಗಲಕೋಟೆ ತಾಜ ಥಿಯೇಟರಿನಲ್ಲಿ**

ಶುಕ್ರವಾರ ತಾ|| ೬—೬—೩೦

**ಪ್ರತಾಪಪ್ರಮಿಲಾ**

ಶನಿವಾರ ತಾ|| ೭—೬—೩೦

**ಶ್ರೀ ಕೃಷ್ಣ—ಕೊರವಂಜಿ.**

ಮುಂಬ ಹೊಸ ಆಖ್ಯಾನಗಳನ್ನು ಪ್ರಯೋಗಿಸುವ

ವ್ಯವಸ್ಥಾಪಕ.

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರ್ಣವ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು

ರ. ನಂ ಬಿ. ೧೯೪೭ ನಿತ್ಯಸಂಚಿಕೆಯು.

ಜಯಕರ್ನಾಟಕ

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ಶುಕ್ರವಾರ ಮಿತಿ ಜ್ಯೇಷ್ಠ ಶುದ್ಧ ೧೦ ಶಕೆ ೧೮೫೨ ತಾ|| ೬-೬-೩೦ ಸಂಚಿಕೆ ೬೭

ಅಮರಾವತಿಯ

## ವೀರ ವಾಮನರಾಯರಿಗೆ

### ೨|| ವರ್ಷ ಸಶ್ರಮ ಶಿಕ್ಷೆ.

ವರ್‍ಹಾಡ ಪ್ರಾಂತದ ಸತ್ಯಾಗ್ರಹ ಮಂಡಳದ ಮುಖಂಡರಾದ ಅಮರಾವತಿಯ ವೀರ ವಾಮನರಾಯರು ಜೋಶಿ ಇವರಿಗೆ ರಾಜದ್ರೋಹಕ್ಕಾಗಿ ೨ ವರ್ಷ ಸಶ್ರಮ ಶಿಕ್ಷೆ ಹಾಗು ೧೫೦ ರು. ದಂಡ, ದಂಡವನ್ನು ಕೊಡದಿದ್ದಲ್ಲಿ ಮತ್ತೆ ೬ ತಿಂಗಳ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ.

---

ವಿ| ಹುಸೇನಭಾಯಿಯವರ ಶ್ರಮವು

ನಿರರ್ಥಕವಾಯಿತು.

## ಮಹಾತ್ಮರ ದರ್ಶನಕ್ಕೆ

### ಅಪ್ಪಣೆಯು ಸಿಗಲಿಲ್ಲ.

ಶಾಂತಿ ಸಂಧಾನವು ಸಫಲವಾಗಲಿಲ್ಲ.

ಮುಂಬಯಿ ಶಾಯಿಸಿ ಮಂಡಳದ ಸಭಾಸದರೂ, ಮುಂಬೈ ಕಾರ್ಪೊರೇಶನ್ ಹಾಗೂ ಹಿಂದೀ ವರ್ತಕ ಸಂಘದ ಅಧ್ಯಕ್ಷರೂ ಆದ ವಿ| ಹುಸೇನಭಾಯಿ ಲಾಲಜಿಯವರು ಮಹಾತ್ಮಾ ಗಾಂಧಿ ಹಾಗೂ ಹಿಂದುಸ್ಥಾನ ಸರಕಾರ ಇವರ ನಡುವೆ ಶಾಂತಿಸಂಧಾನವ(ಸ್ಥಾಪನೆ) ಮಾಡುವ ಯತ್ನದಲ್ಲಿ ತೊಡಗಿದ್ದರು. ಈ ಬಗ್ಗೆ ಎರಡು ಸಲ ಮಹಾಬಳೇಶ್ವರಕ್ಕೆ ಹೋಗಿ ಮುಂಬಯಿಯ ಗವ್ಹರ್ನರರನ್ನು ಕಂಡು ಅವರೊಡನೆ ಈ ವಿಷಯವಾಗಿ ಚರ್ಚಿಸಿದ್ದರು. ಆದರೆ ಚರ್ಚೆಯು ಇನ್ನೂ ಕೊನೆಗೆ ಮುಟ್ಟಿದ್ದಿಲ್ಲ. ಆದುದರಿಂದ ವಿ| ಹುಸೇನಭಾಯಿಯವರು ಮೂರನೆಯ ಸಲ ಮತ್ತೆ ಮಹಾಬಳೇಶ್ವರಕ್ಕೆ ಹೋಗಿ ಗವ್ಹರ್ನರರೊಡನೆ ಈ ಬಗ್ಗೆ ಮಾತಾಡಿದರು. ಗವ್ಹರ್ನರರು, ಅವರಿಗೆ "ನಿಮ್ಮ ಕರಾರು ಗಳಂತೆ ನಡೆಯುವದು ಅಸಾಧ್ಯವಾಗಿದೆಯೆಂದೂ, ಮತ್ತು ಮಹಾತ್ಮರನ್ನು ಕಂಡುಬರಲು ನಿಮಗೆ ಅಪ್ಪಣೆಯು ದೊರೆಯಲಾರದೆಂದೂ" ಹೇಳಿದರು. ಹೀಗೆ ಗವ್ಹರ್ನರ ದೊರೆಗಳು ಹೇಳಿದ್ದರಿಂದ ವಿ| ಹುಸೇನಭಾಯಿಯವರು ತಾವು ಪಟ್ಟ ಪರಿಶ್ರಮಕ್ಕೆ ಪಶ್ಚಾತ್ತಾಪಪಟ್ಟು ಹೋದ ಹಾದಿಗೆ ಸುಂಕವಿಲ್ಲೆಂದು ತಿರುಗಿ ಬಂದರು.

## ಸೈನಿಕರು ಗುಂಡು ಹೊಡೆಯಲು ಒಲ್ಲೆಂದರು.

ಶ್ರೀ. ವಿಠ್ಠಲಭಾಯಿ ಪಟೇಲರ ಅಧ್ಯಕ್ಷತೆಯ ಕೆಳಗೆ, ರಾಷ್ಟ್ರ ಸಭೆಯ ಕಾರ್ಯಕಾರಿ ಮಂಡಲದಿಂದ ನಿಯಮಿಸಲ್ಪಟ್ಟ, ಪೇಶಾವರ ದಂಗೆಯ ವಿಚಾರಣೆಯ ಮಂಡಲದವರು ತಮ್ಮ ಕಾರ್ಯವನ್ನು ಪ್ರಾರಂಭಿಸಿದ್ದು, ಈಗಾಗಲೆ ೧೪ ಜನರ ಸಾಕ್ಷಿಗಳನ್ನು ತೆಗೆದುಕೊಂಡಿದ್ದಾರೆ ತಾ|| ೩೧ ನೆಯ ದಿವಸ ಪೇಶಾವರದಲ್ಲಿಯ ಭೋಜನಗೃಹದ ಒಡೆಯರಾದ ಅಬ್ದುಲ್ ಕರೀಮ ಅಫ್ರಿದಿ ಇವರ ಸಾಕ್ಷಿಯಾಯಿತು. ಅವರು ತಮ್ಮ ಸಾಕ್ಷಿಯಲ್ಲಿ ಹೇಳಿದ್ದೇನಂದರೆ:—

ಗುಂಡುಗಳನ್ನು ಹೇರಿಕೊಂಡು ಬಂದ ಮೋಟಾರಿನ ಬಳಿಯಲ್ಲಿ ಮರಣಹೊಂದಿದ ಯುರೋಪಿಯನ್ನನು ಹಿಂದೂ ಮನುಷ್ಯನಿಂದ ಹೊಡೆಯಲ್ಪಡಲಿಲ್ಲ. ಅವನು ಮೋಟಾರಿಗೆ ಧಕ್ಕೆ ತಗಲಿದುದಕ್ಕಾಗಿ ಮರಣಹೊಂದಿದನು. ಮೋಟಾರು ತನ್ನಷ್ಟಕ್ಕೆ ತಾನೆ ಸುಟ್ಟಿತು. ಆದುದರಿಂದ ಒಳಗಿನ ಅಧಿಕಾರಿಗಳೂ ಡೆ| ಕಮೀಶನರರೂ ಅದರೊಳಗಿಂದ ಹೊರಬಿದ್ದರು. ಜನರಲ್ಲಿ ಯಾವ ಶಸ್ತ್ರಾಸ್ತ್ರಗಳೂ ಇದ್ದಿದ್ದಿಲ್ಲ. ಅವರು ತಮ್ಮ ಕೈಗಳಲ್ಲಿ ಏನನ್ನೂ ಹಿಡಿದಿದ್ದಿಲ್ಲ. ಘಡವಾಲಿ ಸೈನಿಕರು ನಿಃಶಸ್ತ್ರ ಜನರಮೇಲೆ ಗುಂಡುಗಳನ್ನು ಹಾರಿಸಲು ಒಡಂಬಡಲಿಲ್ಲ. ಎರಡನೆಯ ಪ್ರಾಂತವಮಂಕೊಡ(?) ಹೋರಾಡುವಾಗ ನಮ್ಮ ಶಕ್ತಿಯನ್ನು ತೋರಿಸುವೆವೆಂಬುದಾಗಿ ಆ ಸೈನಿಕರು ಅಧಿಕಾರಿಗಳಿಗೆ ಹೇಳಿದರು. ಪೇಶಾವರ ಕಾಂಗ್ರೆಸ್ ಕಮಿಟಿಯವರು ದಂಗೆಯಲ್ಲಿ ಮರಣಹೊಂದಿದ ಹಾಗೂ ಗಾಯಪಟ್ಟವರ ಪಟ್ಟಿಯನ್ನು ಸಿದ್ಧಪಡಿಸುವದರಲ್ಲಿ ತೊಡಗಿದ್ದರು. ಆದರೆ ಪೋಲೀಸ ಅಧಿಕಾರಿಗಳು ಕಾಂಗ್ರೆಸ ಕಮಿಟಿಗೆ ಮುತ್ತಿಗೆಯನ್ನು ಹಾಕಿ ಎಲ್ಲ ಕಾಗದ ಪತ್ರಗಳನ್ನು ಒಯ್ದರು.

## ಡಾ|| ಅಭ್ಯಂಕರರಿಗೆ ೨|| ವರ್ಷ ಸಶ್ರಮ ಶಿಕ್ಷೆ.

ಮಧ್ಯಪ್ರಾಂತದ ಸತ್ಯಾಗ್ರಹ ಮಂಡಳದ ಮುಖಂಡರಾದ ಬ್ಯಾ. ಅಭ್ಯಂಕರರಿಗೆ ರಾಜದ್ರೋಹಕ್ಕಾಗಿ ೨ ವರ್ಷ ಸಶ್ರಮ ಶಿಕ್ಷೆ ಹಾಗು ೧೫೦೦ ರೂ. ದಂಡ, ದಂಡವನ್ನು ಕೊಡದಿದ್ದಲ್ಲಿ ಮತ್ತೆ ೬ ತಿಂಗಳ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ.

---

ತಾ|| ೩೦ ನೆಯ ದಿವಸ ಕಿತ್ತೂರ ಭಾಗದ ೫೦ ಚಕ್ಕಡಿಗಾಡಿಯವರು ಸರಕಾರದ ಕಾಯಿದೆಯನ್ನು ಮುರಿದು ಸುಂಕವನ್ನು ಕೊಡದೆ ಹೊಂಗಲಕ್ಕೆ ಅಕ್ಕಿ ಒಯ್ದರು.

# ಕಾಯರಾ ಜಿಲ್ಲೆಯ
## ರೈತರ ಧೃಢನಿಶ್ಚಯ
### ಮಹಾತ್ಮರ ಅಪ್ಪಣೆಯಿಲ್ಲದೆ ಕರವನ್ನು ಕೊಡುವದಿಲ್ಲ

ತಾ|| ೩೧ ನೆಯ ದಿವಸ ಕಾಯರಾ ಜಿಲ್ಲೆಯ ರೈತರ ಸಭೆಯು ಶ್ರೀ ದಿವಾನ ಜೀವಣಲಾಲರ ಅಧ್ಯಕ್ಷತೆಯಲ್ಲಿ ಸೇರಿತ್ತು. ಬೇರೆ ಬೇರೆ ಸ್ಥಳಗಳಿಂದ ೧೦೦೦ ಪ್ರತಿನಿಧಿಗಳೂ, ೨-೩ ಸಾವಿರ ಪ್ರೇಕ್ಷಕರೂ ಸಭೆಯಲ್ಲಿ ಭಾಗಿಗಳಾಗಿದ್ದರು. ಸಭೆಯಲ್ಲಿ ಕೆಳಗಿನ ಗೊತ್ತುಗಳು ಸರ್ವಾನುಮತದಿಂದ ಸ್ವೀಕೃತವಾದವು.

೧) ಮಹಾತ್ಮಾ ಗಾಂಧಿಯವರಾಗಲಿ ಇಲ್ಲವೆ ಸರದಾರ ವಲ್ಲಭಭಾಯಿಯವರಾಗಲಿ ಕರಕೊಡಿರೆಂದು ಹೇಳುವ ವರೆಗೆ ನಾವು ಕಾಯರಾ ಜಿಲ್ಲೆಯ ರೈತರು ಸರಕಾರಕ್ಕೆ ಕರವನ್ನು ಕೊಡುವದಿಲ್ಲ ಈ ಕಾರ್ಯದಲ್ಲಿ ನಾವು ಬಡಿಗೆಗಳ ಏಟುಗಳನ್ನೂ, ತುರಂಗವಾಸವನ್ನೂ, ಸಹ ಅನುಭವಿಸಲು ಸಿದ್ಧರಾಗಿರುವೆವು. ನಮ್ಮ ಆಸ್ತಿಯು ಜಪ್ತವಾಗಿ ಹೋದರೂ ನಾವು ಚಿಂತೆ ಮಾಡುವದಿಲ್ಲ. ಈ ಕಾರ್ಯದಲ್ಲಿ ಪ್ರಸಂಗ ಬಿದ್ದಲ್ಲಿ ಆತ್ಮಾರ್ಪಣವನ್ನು ಸಹ ಮಾಡುವೆವು. (೨) ಎಲ್ಲ ಸರಕಾರಿ ಅಧಿಕಾರಿಗಳೂ, ಕುಲಕರ್ಣಿ ಗೌಡ ಮೊದಲಾದವರೂ ಕೂಡಲೆ ರಾಜೀನಾಮೆಯನ್ನು ಕೊಡಬೇಕು. (೩) ಹೀಗೆ ಹೇಳಿಕೊಂಡ ಮೇಲೆಯೂ ರಾಜೀನಾಮೆ ಕೊಡದೆ ಇದ್ದ ಅಧಿಕಾರಿಗಳ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ಹಾಕತಕ್ಕದ್ದು.

## ಶ್ರೀಮತಿ ಮಿತ್ರರಿಗೆ ೬ ತಿಂಗಳ ಸಾದಾ ಶಿಕ್ಷೆ.

ಲಖನೌದ ಅಧಿಕಾರಿಗಳ ಅಪ್ಪಣೆಯನ್ನು ಮೀರಿ ಹಜರಥಗಂಜದಲ್ಲಿ ಮೆರವಣಿಗೆಯನ್ನು ತೆಗೆದುಕೊಂಡು ಹೋದುದಕ್ಕಾಗಿ ಶ್ರೀಮತಿ ಮಿತ್ರರವರಿಗೆ ೬ ತಿಂಗಳ ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿದೆ.

# ಮುಂಬಯಿಯ ಹೆಂಗಸರು
### ವ್ಹಾಯಿಸರಾಯರಿಗೆ ಸರಿಯಾದ ಉತ್ತರ ಕೊಟ್ಟರು.

"ಕರನಿರಾಕರಣೆ ಮತ್ತು ಪಿಕೆಟಿಂಗ್‌ಗಳ ಸಂಬಂಧವಾಗಿ ವ್ಹಾಯಿಸರಾಯರು ಮೊನ್ನೆ ಹೊರಡಿಸಿದ ಕಾನೂನುಗಳನ್ನು ಕುರಿತು ಮುಂಬಯಿಯ ದೇಶಸೇವಿಕಾ ಸಂಘದವರು ವ್ಹಾಯಿಸರಾಯರಿಗೆ ಸರಿಯಾದ ಉತ್ತರ ಕೊಟ್ಟಿದ್ದಾರೆ. ಅದನ್ನು ಕರ್ನಾಟಕದ ಸ್ತ್ರೀಯರ ಅವಗಾಹನೆಗಾಗಿ ಕೆಳಗೆ ಅವತರಿಸಿದೆ'

ಇನ್ನು ಮುಂದೆ ತುರಂಗಗಳಲ್ಲಿ ಸ್ತ್ರೀಯರನ್ನು ತುಂಬುವ ಪ್ರಸಂಗವು ಬರಬಹುದಾಗಿದೆ. ಆದುದರಿಂದ ಸ್ತ್ರೀಯರನ್ನು ಸೆರೆಮನೆಗಳಲ್ಲಿ ತುಂಬುವದಕ್ಕಿಂತಲೂ ಸೆರೆಮನೆಗಳನ್ನು ತೆರವು ಮಾಡುವದೇ ನಿಮಗೆ ಮೇಲಾದದ್ದು, ಸೆರೆಮನೆಗಳಲ್ಲಿರುವದೂ, ತುರಂಗದ ಹೊರಗೆ ಇರುವದೂ ಎಲ್ಲವೂ ಒಂದೇ, ನೀವು ಹೊರಡಿಸಿದ ಹೊಸ ಕಾನೂನುಗಳಿಂದ ನಮಗೆ ಮಾತ್ರ ಲಾಭವಾಗಿದೆ. ಅದೇನೆಂದರೆ ನಮಗೆ ಹೆಚ್ಚು ಜನರು ಸ್ವಯಂಸೇವಿಕೆಯರು ಸಿಕ್ಕಿದ್ದರೆ ಅಲ್ಲದೆ ಕೆಲವು ವ್ಯಾಪಾರಿಗಳು ಅಧಿಕಾರಿಗಳಿಂದ ಸ್ತ್ರೀಯರ ಕೂಡಲಿಕ್ಕೆ ಧಕ್ಕೆ ತಗುಲಿದಲ್ಲಿ ಎಲ್ಲ ಅಂಗಡಿಗಳನ್ನೂ ಮುಚ್ಚುವೆವೆಂಬದಾಗಿ ಆಶ್ವಾಸನವನ್ನಿತ್ತಿದ್ದಾರೆ. ಬಟ್ಟೆಯ ವ್ಯಾಪಾರಿಗಳಲ್ಲಿ ಈ ಬಗೆಯ ಸ್ವದೇಶಾಭಿಮಾನವನ್ನು ಹುಟ್ಟಿಸಿದ್ದದರ ಶ್ರೇಯವು ನಮಗೆ ಸಲ್ಲತಕ್ಕದ್ದಾಗಿದೆ. ಬಟ್ಟೆಯ ವ್ಯಾಪಾರಿಗಳಲ್ಲಿಯೇ ಕೆಲವರು ಒಂದು ತಂಡವನ್ನೇರ್ಪಡಿಸಿಕೊಂಡು ಸತ್ಯಾಗ್ರಹದಲ್ಲಿ ಇನ್ನು ಸ್ವಲ್ಪ ದಿನಗಳಲ್ಲಿಯೇ ಸೇರಬಹುದಾಗಿ ನಮಗೆ ತೋರುತ್ತಿದೆ ಇವೆಲ್ಲವೂ ನೀವು ಹೊಸದಾಗಿ ಹೊರಡಿಸಿದ ಕಾನೂನುಗಳ ಪರಿಣಾಮ,

## ಬಾಗಲಕೋಟೆಯ ವೈದ್ಯರಿಗೊಂದು ಕಾಣಿಕೆ
### "ಕೈಸರ ಹಿಂದ" ಪದಕವನ್ನು ಸರಕಾರಕ್ಕೆ ಒಪ್ಪಿಸಿದರು

ಸರಕಾರದವರು ಪ್ರಾರಂಭಿಸಿದ ದಬ್ಬಾಳಿಕೆಯ ನಿಷೇಧಾರ್ಥವಾಗಿ ಶ್ರೀ ಶ್ರೀಭಗವನದಾಸ ಮಾಲವಿ ಇವರು ತಮಗೆ ೧೯೧೮ ರಲ್ಲಿ ದೊರೆತ "ಕೈಸರ ಹಿಂದ" ಪದಕವನ್ನು ಸರಕಾರದವರಿಗೆ ತಿರುಗಿ ಒಪ್ಪಿಸಿದ್ದಾರೆ. ಅಖಿಲ ಭರತಖಂಡಕ್ಕೇ ಭೂಷಣಪ್ರಾಯವಾಗಿರುವ ಶ್ರೀ ಪಟೇಲ, ಮಾಲವಿಯಾ, ಕೇಳಕರ, ಡಾ ಯು. ರಾಮರಾಯರು ಕಾಯಿದೇ ಮಂಡಳಗಳಿಗೂ, ಇನ್ನೂ ಕೆಲವರು 'ಕೈಸರ ಹಿಂದ' 'ಶಾಂತತೆ ಸಂರಕ್ಷಕ ಪದ" "ರಾವಸಾಹೇಬ" "ರಾವಬಹದ್ದೂರ" ಮೊದಲಾದ ಬಿರುದುಗಳಿಗೂ, ಎಷ್ಟೋ ಜನರು "ಆನರರಿ ಮ್ಯಾಜಿಸ್ಟ್ರೇಟ" ಸ್ಥಳಗಳಿಗೂ ರಾಜೀನಾಮೆಯನ್ನು ಕೊಟ್ಟಿರುವಾಗ ನಮ್ಮಲ್ಲಿಯ ಡಾಕ್ಟರ ಮಹಾಶಯರು ? ಅಲ್ಲ ಅಲ್ಲ ? ವೈದ್ಯ ಮಹಾಶಯರು ಬೆಂಚ ಮ್ಯಾಜಿಸ್ಟ್ರೇಟ ಪದವಿಗೆ ರಾಜೀನಾಮೆ ಕೊಡದಿರುವದು—? ಏನನ್ನಬೇಕೋ ತಿಳಿಯದು. ಮಹಾಶಯರೇ ನೀವೇ ಊಹಿಸಿಕೊಳ್ಳಿರಿ.

## ಸೈನಿಕರು ಸೊಲ್ಲಾಪುರವನ್ನು ಬಿಡಹತ್ತಿದರು.

ಸೊಲ್ಲಾಪುರದಲ್ಲಿಯ ದಂಗೆಯನ್ನು ತಡೆಯುವದಕ್ಕಾಗಿ ಪುಣೆಯಿಂದ ಹೋದ ಸೈನಿಕರ ಮೊದಲನೆಯ ದಳವು ಹಾಗು "ರಾಯಲ್ ಅಲಸ್ಟರ ರಾಯಫಲ್ಸದ" ಪಡೆಗಳೂ ತಿರುಗಿ ಪುಣೆಗೆ ಹೋಗಿವೆ. ಲಷ್ಕರಿ ಕಾಯಿದೆಯನ್ನು ಶೀಘ್ರದಲ್ಲಿಯೇ ತೆಗೆದುಹಾಕುವರಾಗಿ ತಿಳಿಯುತ್ತದೆ.

### ಅಡವಿಯ ಕಾನೂನಿನ ಸತ್ಯಾಗ್ರಹ.

ಠಾಣೆ ಜಿಲ್ಹೆಯ ಕಟ್ಟಿಗೆಯ ಗುತ್ತೇದಾರರು ಸರಕಾರದ ದಬ್ಬಾಳಿಕೆಯ ನಿಷೇಧಾರ್ಥವಾಗಿ, ಬರುವ ವರ್ಷದಲ್ಲಿ ಅಡವಿಯ ಗುತ್ತಿಗೆಯನ್ನು ಹಿಡಿಯುವದಿಲ್ಲವೆಂದು ನಿರ್ಧರಿಸಿದ್ದಾರೆ.

### ಕರಾಳಶಾಸನಕ್ಕೆ
## ಮತ್ತೆ ನಾಲ್ಕು ಪ್ರಾಂತಗಳು ಬಲಿಯಾದವು,

ವ್ಹಾಯಿಸರಾಯರು ಮೊನ್ನೆ ಹೊರಡಿಸಿದ 'ಪಿಕೆಟಿಂಗ ಮತ್ತು ಕರನಿರಾಕರಣೆಯ' ಕಾನೂನಿಗೆ ಬಿಹಾರ ಮತ್ತು ಓಡಿಸಾ, ಬಂಗಾಲ, ಆಸಾಮ ಹಾಗೂ ವಾಯುವ್ಯ ಸರಹದ್ದಿನ ಪ್ರಾಂತ ಈ ನಾಲ್ಕು ಪ್ರಾಂತಗಳು ಬಲಿಯಾದವು

ಬಾಗಲಕೋಟೆಯಲ್ಲಿ

# ಕಾಯಿದೆಗಳು ಚೂರುಚೂರಾದವು

## ಸ್ವತಂತ್ರ ಉಪ್ಪಿನ ಮಾರಾಟ! ರಾಜದ್ರೋಹಾತ್ಮಕ ವಾಚನ

## ವಿದೇಶಿ ಬಟ್ಟೆಗಳ ಹೋಳಿ

ಕ. ಪ್ರಾಂ. ಕಾಂಗ್ರೆಸ ಕಮಿಟಿಯವರ ಆಜ್ಞೆಗನುಸಾರವಾಗಿ ೫ನೇಯ ತಾರೀಖಿನ ದಿವಸ ಎಲ್ಲ ಕಾರ್ಯಕ್ರಮಗಳೂ ನೆರವೇರಿಸಲ್ಪಟ್ಟವು. ಮುಂಜಾನೆ ೮ ಘಂಟೆಗೆ ಕತ್ತೆಯ ಮೆರವಣಿಗೆಯು ತೆಗೆಯಲ್ಪಟ್ಟಿತು ಕತ್ತೆಯ ಮೇಲೆ ಪರದೇಶಿ ಹ್ಯಾಟು ಬೂಟುಗಳಿಂದ ಭೂಷಿತವಾದ ಪ್ರತಿಮೆಯನ್ನು ಕೂಡಿಸಿ ಊರಲ್ಲೆಲ್ಲ ಮೆರೆಯಿಸಿದರು. ಸಂಜೆಯ ೫ ಘಂಟೆಗೆ ಮಹಾತ್ಮರ ಭಾವಚಿತ್ರದ ಮೆರವಣಿಗೆ ಯಾಯಿತು. ಮೆರವಣಿಗೆಯು ವೆಂಕಟಪೇಟೆ, ಹೊಸಪೇಟೆ, ಹಳಪೇಟೆ ಮೊದಲಾದ ಓಣಿಗಳಲ್ಲಿ ಹಾಯ್ದು ಮಾರುತಿ ದೇವರ ಗುಡಿಯ ಬೈಲಿಗೆ ಬಂದು ತಲುಪಿತು. ಅಲ್ಲಿ ಡಾ। ಲಾಜ್ಮಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಸಭೆಯಲ್ಲಿ ಶ್ರೀ ನೀರಲಕೇರಿಯವರು ರಾಷ್ಟ್ರೀಯ ಪದ್ಯಗಳನ್ನು ಹಾಡಿದರು ಆಮೇಲೆ ಸೊಲ್ಲಾಪುರದಲ್ಲಿ ಸೈನಿಕರು ಮಾಡಿದ ಅತ್ಯಾಚಾರಗಳ ನಿಷೇಧ, ರಾಷ್ಟ್ರಧ್ವಜದ ಅವಮಾನದ ನಿಷೇಧ ಸೊಲ್ಲಾಪುರದ ನಾಗರಿಕರಿಗೆ ಸಹಾನುಭೂತಿ ಮೊದಲಾದ ಗೊತ್ತುಗಳ ಸ್ವೀಕೃತವಾದವು ಶ್ರೀ ಕಲ್ಯಾಣಶೆಟ್ಟಿ, ಕುಲಕರ್ಣಿ ಭೀಮರಾಯರು, ಮುಜುಮದಾರರು ಮೊದಲಾದವರು ಮೇಲಿನ ಗೊತ್ತುಗಳನ್ನು ಕುರಿತು ಭಾಷಣಮಾಡಿದರು. ಬಳಿಕ ಡಾ। ಬುಲಿ ಶ್ರೀ ಜೋಂಪುರ ಗುರುರಾಯರು ಕೆರೂರ ಸುಗಣೇಂದ್ರ ಇವರು ರಾಜದ್ರೋಹಾತ್ಮಕವೆಂದು ಗಣಿಸಲ್ಪಟ್ಟ ಸರಕಾರವಶವಾದ ವಿ. ಜೆ. ಟಿ. ಸಂಡರಲೆಂಡರು ಬರೆದ "ಇಂಡಿಯಾ ಇನ್ ಬೊಂಡೇಜ" ದೊಳಗಿನ ಕೆಲವು ಭಾಗಗಳನ್ನು ಎಷ್ಟೋಜನ ಸ್ತ್ರೀ ಪುರುಷರು ಉಪ್ಪನ್ನು ಕೊಂಡು ಕೊಂಡರು, ಇಷ್ಟೆಲ್ಲವೂ ಸರಕಾರೀ ಅಧಿಕಾರಿಗಳೆದುರಿನಲ್ಲಿಯೇ ಸಾಗಿತು ಆಮೇಲೆ ಪರದೇಶಿ ಬಟ್ಟೆಗಳಿಗೆ ಬೆಂಕಿಯನ್ನು ಹಚ್ಚುವದರಲ್ಲಿ ಬಂದು ಸಭೆಯು ಮುಕ್ತಾಯವಾಯಿತು.

( ತಂತಿಯ ವಾರ್ತೆ )

### ಮುಂಬಯಿಯ ಸೆರೆಯಾಳುಗಳ ಸತ್ಯಾಗ್ರಹ

ತಾ॥ ೩ನೇಯ ದಿವಸ ವರ್ಲಿ ಚಾಳದಲ್ಲಿರುವ ೨೦೦ ಜನ ಸೆರೆಯಾಳುಗಳು, ಚಾಳುಗಳಿಗೆ ತಂತಿಯನ್ನು ಬಿಗಿಯುತ್ತಿರುವ ಸೈನಿಕರ ವಿರುದ್ಧವಾಗಿ, ಸತ್ಯಾಗ್ರಹವನ್ನು ಆಚರಿಸಿದರು. ಸೈನಿಕರು ಸೆರೆಯಾಳುಗಳ ಮನಸ್ಸನ್ನು ನೋಯಿಸಿದ್ದೇ ಇದಕ್ಕೆ ಕಾರಣವಾಯಿತು. ಸತ್ಯಾಗ್ರಹಿಗಳನ್ನು ಹೊಡೆಯಲು ಸೈನಿಕರಿಗೆ ಕಮೀಶನರು ಎರಡುಸಾರೆ ಅಪ್ಪಣೆ ಮಾಡಿದರು. ಸೈನಿಕರು ಸೆರೆಯಾಳುಗಳನ್ನು ಅವರವರ ಕೋಣೆಗಳವರೆಗೆ ಹೊಡೆಯುತ್ತ ಹಿಂಬಾಲಿಸಿದರು. ೭೫ ಜನರಿಗೆ ಗಾಯಗಳಾಗಿದ್ದು ೧೨ ಜನರು ಕಠಿಣ ಸ್ಥಿತಿಯಲ್ಲಿದ್ದಾರೆ.

### ರಾಜೀನಾಮೆಗಳ ಸುರಿಮಳೆ

ಮಹಾತ್ಮಾ ಗಾಂಧಿ ಹಾಗು ಹಿಂದುಸ್ಥಾನ ಸರಕಾರ ಇವರ ನಡುವೆ ಒಪ್ಪಂದವನ್ನು ಮಾಡಿಸಬೇಕೆಂಬ ಉದ್ದೇಶದಿಂದ ಎರಡು ಸಾರೆ ಗವರ್ನರ ದೊರೆಗಳನ್ನು ಕಂಡು ಬಂದ ಮಿ. ಹುಶೇನಭಾಯಿಯವರ ಶ್ರಮವು ನಿಷ್ಫಲವಾದುದನ್ನು ಕಂಡು ಶ್ರೀ ಲಾಲಜಿ ನಾರಾಯಣಜಿ, ಸರ್ ಪುರುಷೋತ್ತಮದಾಸ ಠಾಕೂರದಾಸ, ಶ್ರೀ ಕಾವಸಜಿ ಜಹಾಂಗೀರ, ಫಿರೋಜ ಸೇಟನಾ, ಎಚ್. ಪಿ ಮೋದಿ, ಸರಭಾಜ ಹಾಜಿ ಮಿ, ಹುಸೇನಭಾಯಿ ಲಾಲಜಿ ಶ್ರೀ ಎಸ್. ಆರ್ ಜಯಕರ. ಮೊದಲಾದ ೮ ಜನ ಸಭಾಸದರು ತಮ್ಮ ತಮ್ಮ ಕಾಯಿದೆ ಮಂಡಳದ ಸ್ಥಳಕ್ಕೆ ರಾಜಿನಾಮೆಯನ್ನು ಕಳಿಸುವವರಿದ್ದಾರೆ.

### ರಾ.ಬ ಕಂಬಳಿಯವರು ಕಾಯದೇ ಭಂಗ ಮಾಡುವರೇ

ಪುಣೆಯ ಪ್ರಾಂತಿಕ ಬ್ರಾಹ್ಮಣೇತರರು ತಮ್ಮ ಕಾರ್ಯಕಾರಿ ಮಂಡಳದ ಸಭೆಯನ್ನು ಕೂಡಿಕೊಂಡು ಕೆಳಗಿನಂತೆ ಗೊತ್ತುಗಳನ್ನು ಮಾಡಿಕೊಂಡಿದ್ದಾರೆ (೧) ಮಹಾತ್ಮರನ್ನು ಸೆರೆ ಹಿಡಿದದ್ದಕ್ಕಾಗಿ ಸರಕಾರದ ಕೃತ್ಯವನ್ನು ನಿಷೇಧಿಸುತ್ತದೆ. (೨) ಖಾದಿಪ್ರಸಾರ ಮತ್ತು ಮದ್ಯಪಾನ ನಿಷೇಧದ ಬಗ್ಗೆ ಚಳವಳಿಯನ್ನು ಮಾಡಬೇಕೆಂದು ನಿರ್ಣಯಿಸುತ್ತದೆ (೩) ಮಿತಿ ಮೀರಿ ಹೆಚ್ಚಿದ ಭೂಕಂದಾಯ ಮತ್ತು ವನಗಾವಲಸಂಬಂಧವಾಗಿ ರೈತರು ಅನುಭವಿಸುವ ಕಷ್ಟಗಳನ್ನು ವಿಚಾರಮಾಡಲು ಒಂದು ಉಪಮಂಡಳವನ್ನು ನಿಯಮಿಸುತ್ತದೆ. ಈ ಮಂಡಳದಲ್ಲಿ ಕರ್ನಾಟಕದ ರಾ. ಬ. ದ್ವಯರಾದ ಶ್ರೀ ಕಂಬಳಿ ಹಾಗು ಪಾಟೀಲರು ಸಭಾಸದರಾಗಿ ನಿಯಮಿಸಲ್ಪಟ್ಟಿದ್ದು, ಸರ ಪೆಟ್ರಿ ಇವರು ಮಂಡಳದ ಅಧ್ಯಕ್ಷರಾಗಿದ್ದಾರೆ,

ಭೂಕಂದಾಯವು ಮಿತಿಮೀರಿ ಬೆಳೆದಿದೆಯೆಂದೂ ಮತ್ತು ವನಗಾವಲದ ಕಾಯಿದೆಗಳು ಅನ್ಯಾಯದ ಕಾಯಿದೆಗಳಾಗಿವೆಯೆಂದೂ ತಮಗೆ ಕಂಡುಬಂದಲ್ಲಿ ಆ ಕಾಯಿದೆಯನ್ನು ಮುರಿದು ಸತ್ಯಾಗ್ರಹವನ್ನು ಮಾಡುವೆವೆಂಬುದಾಗಿ ಸರ್ ಪೆಟ್ರೀಯವರು ನುಡಿದಿದ್ದಾರೆ. ಉಪಮಂಡಳದ ಅಧ್ಯಕ್ಷರಾದ ಸರ್ ಪೆಟ್ರಿಯವರೇ ಕಾಯಿದೆ ಭಂಗಮಾಡುವಲ್ಲಿ ಸಭಾಸದರಾದ ರಾ. ಬ. ದ್ವಯರಾದರೂ ಕಾಯಿದೆ ಭಂಗ ಮಾಡಲು ಮುಂದೆ ಬರಬೇಕಲ್ಲವೆ? ಹಾಗಾದರೆ ಅವರು ಹಾಗೆ ನಡೆದಾದರೂ ತೋರಿಸಲಿ.

## ದೇಶಬಂಧು ಪಥಕದ ಪ್ರವಾಸ ವೃತ್ತ.

ತಾ| ೩೧-೫-೩೦ ನೆಯ ದಿವಸ ಜಾಲಿಹಾಳಕ್ಕೆ ಹೋದೆವು. ಊರವರು ನಮ್ಮನ್ನು ಆದರಪೂರ್ವಕವಾಗಿ ಸತ್ಕರಿಸಿದರು. ಸಂಜೆಯ ೬॥ ಗಂಟೆಗೆ ಸಾರ್ವಜನಿಕ ಸಭೆಯಾಯಿತು. ಶ್ರೀ ಸಿಂದಗಿ ಹಾಗು ಸಿದ್ಧಾಂತಿ ಇವರು "ಸದ್ಯದ ಸ್ಥಿತಿ ಮತ್ತು ಸಿಂದೀ ಗಿಡಗಳ ಸಂಹಾರವನ್ನು ಕುರಿತು ಭಾಷಣಮಾಡಿದರು. ಅವರ ಭಾಷಣದಿಂದ ಜನರ ಮನಸಿನ ಮೇಲೆ ಒಳ್ಳೇ ಪರಿಣಾಮವಾಯಿತು. ಶ್ರೀ ಹಣಮಂತ ಧೋಟಿ ಕುಲಕರ್ಣಿಯವರು ಒಮ್ಮಿಂದೊಮ್ಮೆ ಎದ್ದು ಸರಕಾರದ ಪ್ರಶಂಸೆ ಮಾಡಿ ನಮ್ಮನ್ನು ಹೀಯಾಳಿಸಹತ್ತಿದರು. ಇದನ್ನು ಕಂಡು ಸಭೆಯಲ್ಲಿಯ ಜನರು "ಶೇಮ್. ಶೇಮ್" ಎಂದು ಕೂಗಿ ಅವರಿಗೆ ಛೀ ಹಾಕಿದರು. ಹೀಗೆ ಸಭೆಯಲ್ಲಿ ಗೊಂದಲವೆದ್ದುದರಿಂದ ಶಾಂತತೆಗೆ ಭಂಗ ತರಕೂಡದೆಂದು ಸಭಿಕರಿಗೆ ಹೇಳುವದರಲ್ಲಿ ಬಂದಿತು. ಜನರಲ್ಲಿ ಇದರಿಂದ ವಿಶೇಷ ಜಾಗ್ರತಿಯುಂಟಾಯಿತು. ಮರುದಿವಸ ಊರಲ್ಲಿ ತಿರುಗಾಡಿ ಸತ್ಯಾಗ್ರಹ ನಿಧಿಯನ್ನು ಕೂಡಿಸಿದೆವು.

ತಾ| ೨ ಕ್ಕೆ ನೀಲಗುಂದಕ್ಕೆ ಪ್ರಯಾಣ ಬೆಳೆಸಿದೆವು. ೯ ಗಂಟೆಗೆ ಊರನ್ನು ಮುಟ್ಟಿ ಚಾವಡಿಯ ಸಮೀಪದಲ್ಲಿಯೆ ಬಿಡಾರ ಮಾಡಿದೆವು. ಬಳಿಕ ನಗರ ಸಂಕೀರ್ತನೆ ಮಾಡಿಕೊಂಡು ಸಭೆಯನು ಏರ್ಪಡಿಸಿದೆವು. ಶ್ರೀ ಸಿದ್ಧಾಂತಿ ಹಾಗು ಸಿಂದಗಿ ಇವರ ಭಾಷಣಗಳಾದವು. ಇಲ್ಲಿಯೂ ನಮಗೆ ಚನ್ನಪ್ಪ ಸುಬ್ಬಣ್ಣವರ ಎಂಬುವವರೋರ್ವರು ದೂರಿನಿಂದಲೇ ವಿರೋಧ ಮಾಡಹತ್ತಿದರು. "ಸಮೀಪದಲ್ಲಿ ಬಂದು ಮಾತನಾಡಿರಿ" ಎಂದು ಆಹ್ವಾನ ಮಾಡಿದಕೂಡಲೆ ಅವರು ಬಾಯಿಯನ್ನೇ ತೆರೆಯಲಿಲ್ಲ ಈ ವಾದವಿವಾದವು ಜನರಲ್ಲಿ ಜಾಗ್ರತಿಯನ್ನು ಹುಟ್ಟಿಸಲು ಬಹುಮಟ್ಟಿಗೆ ಕಾರಣವಾಯಿತು. ಹೀಗೆ ಸಭೆಯನ್ನು ಮುಗಿಸಿಕೊಂಡು ಮುಂದೆ ಸಾಗಿದೆವು.

ತಾ| ೩ ಕ್ಕೆ ಕೆರೂರಿಗೆ ಹೋಗಿ ಅಲ್ಲಿ ನಗರ ಸಂಕೀರ್ತನವನ್ನು ಜರುಗಿಸಿದೆವು. ಬಳಿಕ ನಾಲ್ಕು ಜನ ಸ್ವಯಂಸೇವಕರು ಸಿಂದೀ ಗಿಡಗಳನ್ನು ಕಡಿಯಲು ಹೋಗಿ ೫ ಸಿಂದೀ ಗಿಡಗಳನ್ನು ಕಡಿದು ಬಂದರು. ಬಳಿಕ ಸಾರ್ವಜನಿಕ ಸಭೆಯನ್ನು ಸೇರಿಸಿ, ಸದ್ಯದ ಸ್ಥಿತಿ ಹಾಗು ಸಿಂದೀ ಗಿಡಗಳ ನಾಶದ ಬಗ್ಗೆ ಜನರಿಗೆ ಮನದಟ್ಟಾಗುವಂತೆ ತಿಳಿಸಿ ಹೇಳಿದೆವು. ಇಂದು ಸಂತೆಯಿದ್ದುದರಿಂದ ಸಭೆಗೆ ಸಾವಿರಾರು ಜನರು ಸೇರಿದ್ದರು. ಕೆಲವರು ಇನ್ನು ಮೇಲೆ ಖಾದಿಯನ್ನೇ ಧರಿಸುವವರಾಗಿ ಸಭೆಯಲ್ಲಿಯೇ ಆಣೆಯನು ಮಾಡಿದರು. ಮರುದಿವಸ ಮೂರು ಜನ ಸ್ವಯಂಸೇವಕರು ಮತ್ತೆ ೫ ಸಿಂದೀ ಗಿಡಗಳನ್ನು ಕಡಿದರು. ಇಂದು ಮತ್ತೆ ಸಾರ್ವಜನಿಕ ಸಭೆಯನ್ನು ಸೇರಿಸಿರುವೆವು. ಸಭೆಯ ಕಾರ್ಯವನ್ನು ಮುಗಿಸಿಕೊಂಡು ಮುಂದೆ ಸಾಗುವೆವು.

ತಾ| ೪—೬—೩೦ ದೇಶಬಂಧು ಪಥಕನಾಯಕ

## ವಿಜಾಪುರ ಜಿಲ್ಹೆಯೊಳಗಿನ ಯಾವತ್ತು ಸಹಕಾರಿ ಸಂಘಗಳಿಗೆ ವಿನಂತಿ

ಸಂಘಗಳು ಈಗಿನ ಪರಿಸ್ಥಿತಿಯಲ್ಲಿ ಏಳಿಗೆಯನ್ನು ಹೊಂದಬೇಕಾದರೆ ಯಾವ ಯಾವ ಉಪಾಯಗಳನ್ನು ಕೈಕೊಳ್ಳಬೇಕು ಮತ್ತು ಅವುಗಳ ಏಳಿಗೆಗೆ ಸಂಬಂಧಿಸಿದ ಮೇಲ್ವಿಚಾರಣೆಗಳನ್ನು ಸಂಸ್ಥೆಗಳಿಂದಲೂ ಮತ್ತು ಖಾತೆಯ ಅಧಿಕಾರಸ್ಥರಿಂದಲೂ ಆಗತಕ್ಕ ದುರ್ಲಕ್ಷ್ಯಗಳ ನಿವಾರಣೆಯನ್ನು ಮಾಡಲಿಕ್ಕೆ ಯಾವ ಯಾವ ಉಪಾಯಗಳನ್ನು ಕೈಕೊಳ್ಳತಕ್ಕದ್ದೆಂಬುದನ್ನು ವಿಚಾರ ಮಾಡುವ ಕುರಿತು ತಾ॥ ೧೭-೬-೩೦ ನೆಯ ದಿವಸ ಬಾಗಲಕೋಟೆಯಲ್ಲಿ ತಾಜ ಥಿಯೇಟರದಲ್ಲಿ ಚರ್ಚೆ ಮಾಡಿ ಒಂದು ಸಾಧಾರಣ ಸಭೆಯನ್ನು ಕರೆದು ವಿಚಾರ ಮಾಡತಕ್ಕದ್ದದೆ. ಕಾರಣ ಯಾವತ್ತು ಸಹಕಾರಿ ಸಂಘಗಳ ಪ್ರತಿನಿಧಿಗಳು ಮೇಲ್ಕಾಣಿಸಿದ ತಾರೀಖಿನ ದಿವಸ ಸಭೆಗೆ ಬರಬೇಕೆಂದು ಸವಿನಯ ಪ್ರಾರ್ಥನೆ.

ಬಾಗಲಕೋಟೆ
ತಾ| ೧-೬-೩೦

ಎಚ್. ಆರ್. ದೇಶಪಾಂಡೆ.
ಪ್ರಾಣೇಶಚಾರ್ಯ ಗುಡ್ಡದ.
ಇಂಬಸಪ್ಪ ಕರಿ.

ಬರುವರು! ಬರುವರು!!

ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ
ಶಿರಹಟ್ಟಿ ನಾಟಕ ಮಂಡಳಿಯವರು

# ಬೇಗನೆ ಬರುವರು

ಶಿವಾನಂದ ನಾಟಕ ಶಾಲೆಯಲ್ಲಿ
ಸೋಮವಾರ ತಾ॥ ೯-೬-೩೦
ಸಂಪೂರ್ಣ ಕೃಷ್ಣಲೀಲಾ
ಬುಧವಾರ ತಾ॥ ೧೧—೬—೩೦
ಲಂಕಾದಹನ.
ಎಂಬ ನಾಟಕಗಳನ್ನು ಅಭಿನಯಿಸುವರು.

ಎಚ್, ವೆಂಕೋಬರಾವ.
ಪ್ರೊಪ್ರಾಯಿಟರ.

ಜಯಲಕ್ಷ್ಮೀ ಪ್ರಾಸಾದಿಕ
ಸ್ತ್ರೀಮಿಶ್ರಿತ ಸಂಗೀತ ನಾಟಕ ಮಂಡಳಿ ದಾವಣಗೇರಿ ಇವರು
ಬಾಗಲಕೋಟೆ ತಾಜ ಥಿಯೇಟರಿನಲ್ಲಿ
ಶುಕ್ರವಾರ ತಾ॥ ೬—೬—೩೦
ಶ್ರೀ ಕೃಷ್ಣ—ಕೊರವಂಜಿ.
ಶನಿವಾರ ತಾ॥ ೭—೬—೩೦
ಲಂಕಾದಹನ
ಬುಧವಾರ ತಾ ೧೧—೬—೩೦
ಪ್ರತಾಪವಿಲಾಪ
ಎಂಬ ಹೊಸ ಆಖ್ಯಾನಗಳನ್ನು ಪ್ರಯೋಗಿಸುವರು.

ವ್ಯವಸ್ಥಾಪಕ.

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದಲೇ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೬

यद्यत परवशं दुःख । यद्यदात्मवशं सुखम ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬಾಗಲಕೋಟೆ ಶನಿವಾರ ಮಿತಿ ಜ್ಯೇಷ್ಠ ಶುದ್ಧ ೧೧ ಶಕ ೧೮೫೨ ತಾ|| ೭—೬—೩೦ ಸಂಚಿಕೆ ೬೮

# ಸೊಲ್ಲಾಪುರ ನಾಡಗುಡಿಯ ಕಾಳಗ

## ೧೦ ಜನ ಸತ್ಯಾಗ್ರಹಿಗಳ ಸುಳಿವೇ ಇಲ್ಲ.

ಸಾತಾರೆಯ ಶ್ರೀ ಏಕಬೋಟೆಯವರ ನೇತೃತ್ವದಲ್ಲಿ ೧೫ ಜನ ಸತ್ಯಾಗ್ರಹಿಗಳು ರಾಷ್ಟ್ರಧ್ವಜಸಹಿತವಾಗಿ ಪುಣೆಯಿಂದ ಸೊಲ್ಲಾಪುರಕ್ಕೆ ಹೋಗುವದಕ್ಕಾಗಿ ತಾ|| ೩೧ ನೆಯ ದಿವಸ ಹೊರಟರು. ಅವರು ಹಾದಿಯಲ್ಲಿಯೇ ಸೆರೆಹಿಡಿಯಲ್ಪಟ್ಟು ಸೊಲ್ಲಾಪುರಕ್ಕೆ ಒಯ್ಯಲ್ಪಟ್ಟರು. ಅಧಿಕಾರಿಗಳು ಸತ್ಯಾಗ್ರಹಿಗಳನ್ನು ಬಲಿ ಮತ್ತು ಸೊಲ್ಲಾಪುರದಲ್ಲಿ ಒಳಿತಾಗಿ ಥಳಿಸಿದರಾಗಿ ತಿಳಿಯುತ್ತದೆ, ಬಳಿಕ ಅಧಿಕಾರಿಗಳು ೫ ಜನರನ್ನು ಪುಣೆಗೆ ತಿರುಗಿ ಕಳಿಸಿಕೊಟ್ಟರು, ಆದರೆ ಶ್ರೀ ಏಕಬೋಟೆ ಮತ್ತು ಉಳಿದ ಸತ್ಯಾಗ್ರಹಿಗಳು ಎಲ್ಲಿರುವರೆಂಬುವದು ತಿಳಿಯದಂತಾಗಿದೆ, ಅವರನ್ನು ಮೋಟಾರಿನಲ್ಲಿ ಒಯ್ದು ಒಂದು ಅರಣ್ಯದಲ್ಲಿ ಬಿಟ್ಟಿರುವರಾಗಿ ಸುದ್ದಿಯಿದೆ. ಈ ವರೆಗೆ ೬೦ ಜನ ಸತ್ಯಾಗ್ರಹಿಗಳು ಸೊಲ್ಲಾಪುರಕ್ಕೆ ಹೋಗಿ ಅಧಿಕಾರಿಗಳಿಂದ ಬಡಿಗೆಗಳ ಏಟುಗಳನ್ನು ತಿಂದು ಬಂದಿದ್ದಾರೆ. ಮಹಾರಾಷ್ಟ್ರ ಸತ್ಯಾಗ್ರಹ ಮಂಡಳದವರು ೧೦೦ ಜನ ಸ್ವಯಂಸೇವಕರ ದಳವನ್ನು ಶೀಘ್ರದಲ್ಲಿಯೇ ಕಳಿಸುವವರಿದ್ದಾರೆ.

---

### "ಈಗ ಸರಕಾರಕ್ಕೆ ಯಾರೂ ಅಂಜುವದಿಲ್ಲ.

ಪೆಶಾವರ ದಂಗೆಯ ಬಗ್ಗೆ ವಿಚಾರಣೆಯನ್ನು ಮಾಡಲು ಕಾಂಗ್ರೆಸದ ಪರವಾಗಿ ನಿಯಮಿಸಲ್ಪಟ್ಟ ಮಂಡಳವು ರಾವಳಪಿಂಡಿಯಲ್ಲಿ ಶ್ರೀ ವಿಠ್ಠಲಭಾಯಿಯವರ ಅಧ್ಯಕ್ಷತೆಯಲ್ಲಿ ವಿಚಾರಣೆಯ ಕಾರ್ಯವನ್ನು ಪ್ರಾರಂಭಿಸಿರುತ್ತದೆ. ತಾ|| ೩೧ ನೆಯ ದಿವಸ ಮಹಮ್ಮದ ಸಾಲಿ ಎಂಬ ೧೫ ವರ್ಷದ ಹುಡುಗನ ಸಾಕ್ಷಿಯಾಯಿತು. ಇವನಿಗೆ ದಂಗೆಯಲ್ಲಿ ಗಾಯವಾಗಿತ್ತು. "ಮಂಡಳದವರಿಗೆ ಸಾಕ್ಷಿಯನ್ನು ಕೊಡಲು ಬೆದರುವಿಯಾ" ಎಂದು ಅಧ್ಯಕ್ಷರು ಅವನಿಗೆ ಕೇಳಿದರು. "ಈಗೀಗ ಸರಕಾರಕ್ಕೆ ಯಾರೂ ಅಂಜುತ್ತಿರುವದಿಲ್ಲ"ವೆಂದು ಆ ಹುಡುಗನು ಉತ್ತರಕೊಟ್ಟನು.

## ಮುಂಬಯಿ ಸರಕಾರದ ಗೋಳು

### ಸತ್ಯಾಗ್ರಹದಿಂದ ಸರಕಾರಕ್ಕೆ ೧೦ ಲಕ್ಷದ ಹಾನಿ.

ಮುಂಬಯಿ ಸರಕಾರವು ಗೋಳಿಡುತ್ತದೆ ಕೇಳಿರಿ! ಗುಜರಾಥ ಪ್ರಾಂತದಲ್ಲಿ ಸತ್ಯಾಗ್ರಹ ಚಳವಳಿಯನ್ನು ಒತ್ತರದಿಂದ ನಡೆಸಬೇಡಿರೆಂದು, ಯಾಕಂದರೆ ಅಲ್ಲಿಯ ಪೋಲೀಸ ಅಧಿಕಾರಿಗಳಿಗೆ ಹೆಚ್ಚಿನ ಭತ್ತೆಯನ್ನು ಕೊಡಬೇಕಾಗುತ್ತದಂತೆ! ಸರಕಾರದ ಅನ್ಯಾಯದ ಕಾಯಿದೆಗಳನ್ನು ಮುರಿದು ಸೆರೆಮನೆಗಳಿಗೆ ತಂಡತಂಡವಾಗಿ ಬರಬೇಡಿರೆಂದು, ಯಾಕಂದರೆ ಸೆರೆಯಾಳುಗಳಿಗೆ ಅಶನವಸನಾದಿಗಳನ್ನು ಪೂರೈಸಲು ಹೆಚ್ಚಿಗೆ ಹಣವನ್ನು ವೆಚ್ಚಮಾಡಬೇಕಾಗುತ್ತದಂತೆ, ಉಪ್ಪಿನ ಸತ್ಯಾಗ್ರಹವನ್ನು ನಿಲ್ಲಿಸಿರೆಂದು, ಯಾಕಂದರೆ ಅದು ಸರಕಾರಕ್ಕೆ ಸಿಗತಕ್ಕ ಸುಂಕಕ್ಕೆ ಕತ್ತರಿಯನ್ನು ತರಹತ್ತಿದೆಯಂತೆ! ಸೆರೆ ಸಿಂದಿ ಬಹಿಷ್ಕಾರ ಚಳವಳಿಯನ್ನು ತಡೆಯಿರೆಂದು, ಯಾಕಂದರೆ ಅದು ಸರಕಾರಕ್ಕೆ ಬರತಕ್ಕ ರೊಕ್ಕಕ್ಕೆ ಸಂಕ್ರಾಂತಿಯನ್ನು ತರಹತ್ತಿದೆಯಂತೆ! ಕರನಿರಾಕರಣೆಯ ಚಳವಳಿಯನ್ನು ಭರದಿಂದ ಪ್ರಾರಂಭಿಸಬೇಡಿರೆಂದು, ಯಾಕಂದರೆ ಅದು ಸರಕಾರದ ಉತ್ಪನ್ನಕ್ಕೇನೆ ಕೊಡ್ಲಿಯನ್ನು ಇಕ್ಕುತ್ತದೆಯಂತೆ! ಒಟ್ಟಿನಲ್ಲಿ ಹೇಳಬೇಕೆಂದರೆ ಸರಕಾರಕ್ಕೆ ೧೦ ಲಕ್ಷದ ಹಾನಿಯನ್ನು ಉಂಟುಮಾಡಬಾರದಾಗಿ ಬಯಸುತ್ತಿದ್ದರೆ ಸತ್ಯಾಗ್ರಹ ಚಳವಳಿಯನ್ನು ಸಂಪೂರ್ಣವಾಗಿ ನಿಲ್ಲಿಸಿರೆಂದು ಮುಂಬಯಿ ಸರಕಾರವು ಗೋಳಿಡಹತ್ತಿದೆ! ಸತ್ಯಾಗ್ರಹಿಗಳೇ ಇದು ನಿಮಗೆ ಕೇಳಿಸುವದಿಲ್ಲವೋ?

### ಸರಕಾರಿ ಉಪ್ಪಿಗೆ ಗಿರಾಕಿಗಳೇ ಇಲ್ಲ.

ಡೆಂಗರಿ ಹಾಗು ಉಂಟಾಡಿಯ ಉಪ್ಪಿನ ಗುತ್ತಿಗೆದಾರರು ಇನ್ನು ಮುಂದೆ ೪ ತಿಂಗಳುಗಳ ವರೆಗೆ ಧರಸಾನಾ ಮಿಠಾಗರದಲ್ಲಿಯ ಉಪ್ಪನ್ನು ಕೊಂಡುಕೊಳ್ಳುವದಿಲ್ಲವಾಗಿ ನಿರ್ಧರಿಸಿದ್ದಾರೆ. ಉಪ್ಪನ್ನು ಕೊಂಡುಕೊಳ್ಳಲಿಕ್ಕೆ ಧರಸಾನಾ ಮಿಠಾಗರಕ್ಕೆ ಹೋಗಿದ್ದ ಸಣ್ಣ ಸಣ್ಣ ವ್ಯಾಪಾರಸ್ಥರ ಥಂಡಿಗಳಾದರೂ ಡೊಂಗರಿಯ ಸಮೀಪದಲ್ಲಿ ಜನರಿಂದ ತಡೆಯಲ್ಪಟ್ಟವು.

# ಧರಸಾನಾ ಕುರುಕ್ಷೇತ್ರ

## ಶ್ರೀ. ವಾಮನ ಮುಕುಂದರ ಛಲ

### ಶ್ರೀ. ನಟರಾಜನ್ ಮತ್ತು ದೇವಧರರಿಗೆ ಹೊರಗೆ ಹೋಗಲು ಅಪ್ಪಣೆ.

ತಾ|| ೩ ನೆಯ ದಿವಸ ಎರಡು ಸತ್ಯಾಗ್ರಹಿಗಳ ತಂಡಗಳು ಧರಸಾನಾ ಮಿಠಾಗರದ ದಾಳಿಗಾಗಿ ಹೊರಟವು. ಮೊದಲನೆಯ ತಂಡದಲ್ಲಿ ೧೨೦ ಜನ ಸತ್ಯಾಗ್ರಹಿಗಳೂ, ಎರಡನೆಯ ತಂಡದಲ್ಲಿ ೮೧ ಜನ ಸತ್ಯಾಗ್ರಹಿಗಳೂ ಸೇರಿದ್ದರು. ಮೊದಲನೆಯ ತಂಡದ ನಾಯಕತ್ವವನ್ನು ಹಿಂದಕ್ಕೆ ಕಾಯಿದೆ ಮಂಡಳದ ಸಭಾಸದರಾದ ಶ್ರೀ. ಮುಕುಂದರು ವಹಿಸಿದ್ದರು. ಸ್ವಯಂಸೇವಕರು ಪ್ರತಿಬಂಧಿತವಾದ ಸ್ಥಳದಲ್ಲಿ ಕಾಲಿಟ್ಟಕೂಡಲೆ ಪೋಲೀಸರು ಅವರನ್ನು ತಡೆದರು. ಬಳಿಕ ದೃಶ್ಯವನ್ನು ನೋಡಲು ಬಂದಿದ್ದ ಶ್ರೀ ನಟರಾಜನ್, ಶ್ರೀ ದೇವಧರ ಮತ್ತು ಶ್ರೀ ಎ ವ್ಹಿ. ಠಕ್ಕರ ಇವರ ಬಳಿಗೆ ಪೋಲೀಸ ಅಧಿಕಾರಿಗಳು ಹೋಗಿ ಅವರಿಗೆ ಸ್ಥಳವನ್ನು ಬಿಟ್ಟು ತೆರಳಲು ತಿಳಿಸಿದರು. "ಇಲ್ಲಿ ಉಪ್ಪಿನ ಕಾಯಿದೆಯು ಸಾರಲ್ಪಟ್ಟಿಲ್ಲವಲ್ಲ?" ಎಂದು ದೇವಧರರು ಪ್ರಶ್ನೆ ಹಾಕಿದರು. "ಇಲ್ಲಿ ಶಾಂತತಾ ಭಂಗದ ಕಾಯಿದೆಯು ಸಾರಲ್ಪಟ್ಟಿದೆ. ಆದುದರಿಂದ ನೀವು ಇಲ್ಲಿ ಸೇರಿದ್ದು ಕಾಯಿದೆಗೆ ವಿರುದ್ಧವಾಗಿದೆ." ಎಂದು ಅಧಿಕಾರಿಯು ಉತ್ತರಕೊಟ್ಟನು. ಬಳಿಕ ಅಧಿಕಾರಿಗಳು ಶ್ರೀ. ಮುಕುಂದರನ್ನೂ, ಅವರ ಕೈಕೆಳಗಿನ ಸತ್ಯಾಗ್ರಹಿಗಳನ್ನೂ ಸೆರೆಹಿಡಿದುಕೊಂಡು ಹೋಗಿ ಉಂಟಾದ ಬಿಡಾರದ ಸಮೀಪದಲ್ಲಿ ಬಿಟ್ಟುಬಿಟ್ಟರು. ಶ್ರೀ. ಮುಕುಂದರಿಗೆ ಅಧಿಕಾರಿಗಳಿಂದ ಬಹಳವಾಗಿ ಅವಮಾನವಾಯಿತು. ಓರ್ವ ಯುರೋಪಿಯನ್ ಅಧಿಕಾರಿಯು ಅವರಿಗೆ "ಹೇಡಿಯೇ, ಈ ಎಲ್ಲ ಜನರನ್ನು ಇಲ್ಲಿಗೆ ಕರೆದುಕೊಂಡು ಬರಲು ನೀನೇ ಕಾರಣನಾಗಿರುವಿ" ಎಂದು ಬೈದು ಅವರ ಕಪಾಳದಮೇಲೆ ಹೊಡೆದು ಬಿಡಾರಕ್ಕೆ ಕರೆದುಕೊಂಡು ಹೋದನು. ಶ್ರೀ. ಮುಕುಂದರನ್ನು ಬಿಡಾರದಲ್ಲಿ ಬಿಟ್ಟು ಅಧಿಕಾರಿಯು ಜನರನ್ನು ಚದುರಿಸಲು ತಿರುಗಿ ಹೋದನು. ಸ್ವಲ್ಪ ಹೊತ್ತಿನವೇಲೆ ಆ ಅಧಿಕಾರಿಯು ಮಿ. ಬ್ರ್ಯಾಂಟಿಯಾ ಇವರೊಡನೆ ಶ್ರೀ. ಮುಕುಂದರಿದ್ದಲ್ಲಿಗೆ ಬಂದು ಅವರೆದುರಿನಲ್ಲಿ "ಮಹಾತ್ಮರಿಗೆ ಧಿಕ್ಕಾರವಿರಲಿ" ಎಂದು ಮಹಾತ್ಮಾ ಗಾಂಧಿಯವರನ್ನು ಬೈದನು. ಬಳಿಕ ಮಿ. ಬ್ರ್ಯಾಂಟಿಯಾ ಇವರು ಶ್ರೀ ಮುಕುಂದರು ಹಿಡಿದುಕೊಂಡಿದ್ದ ಪಾಕೇಟು ಮತ್ತು ಛತ್ರಿ ಇವುಗಳನ್ನು ತೆಗೆದುಕೊಂಡು ಹೋದರು. ಆವೇಳೆ ಆ ಯುರೋಪಿಯನ್ ಅಧಿಕಾರಿಯು ಶ್ರೀ. ಮುಕುಂದರನ್ನು ಕಟ್ಟ ಕಟ್ಟ ಕೈಗಳಿಂದ ಬೈಯುತ್ತ ಪೆಟ್ಟಿನಿಂದ ಹೊಡೆಯಹತ್ತಿದನು. ಹೊಡೆಯುವದನ್ನು ಮುಗಿಸಿದ ವೇಳೆ ಆ ಅಧಿಕಾರಿಯು ಅವರನ್ನು ಹೊರಗೆ ದಬ್ಬಿದನು.

ಇತ್ತ ಹೀಗೆ ನಡೆದಿರುವಾಗ ಎರಡನೆಯ ತಂಡದ ಸತ್ಯಾಗ್ರಹಿಗಳು ಬೇರೆ ದಿಕ್ಕಿನಿಂದ ಮಿಠಾಗರದ ಕಡೆಗೆ ತೆರಳಿದರು. ಅವರನ್ನು ಪೋಲೀಸರು ಹಾದಿಯಲ್ಲಿಯೇ ತಡೆದರು. ಕೆಲವು ಸ್ವಯಂಸೇವಕರು ಅಲ್ಲಿಯೇ ಕುಳಿತುಬಿಟ್ಟರು, ಕೆಲವರು ಮುಂದೆ ಸಾಗಲು ಯತ್ನಿಸಹತ್ತಿದರು. ಅವರನ್ನು ಪೋಲೀಸರು ಲಾಠಿಗಳಿಂದ ಹೊಡೆದು, ಗಾಯಗಳನ್ನುಂಟುಮಾಡಿದರು. ಇಷ್ಟರಲ್ಲಿ ಮೊದಲನೆಯ ತಂಡವು ಮತ್ತೆ ಉಂಟಾದ ಬಿಡಾರದಿಂದ ಬಂದು ತಲುಪಿತು. ಕುದುರೆಯ ಸ್ವಾರರು ಅವರನ್ನು ತುಳಿದು, ಹೊಡೆದು ಉಂಟಾದ ಬಿಡಾರದವರೆಗೆ ಹಿಂದಕ್ಕಟ್ಟಿದರು.

---

ಬೆಳಗಾವಿಯ

## ಶ್ರೀ ಚಿಕ್ಕೋಡಿಯವರು ದಿಕ್ಕಿಲ್ಲದವರಾದರು!!

ಬೆಳಗಾವಿಯ ಶ್ರೀ. ಚಿಕ್ಕೋಡಿಯವರು ಲಿಂಗಾಯತರ ಶಿಷ್ಟಮಂಡಳವನ್ನು ತೆಗೆದುಕೊಂಡು ಹೋಗಿ ಕಮೀಶನರರನ್ನು ಕಂಡು, ಸತ್ಯಾಗ್ರಹದ ಚಳವಳಿಗೆ ಲಿಂಗಾಯತ ಸಮಾಜದ ಬೆಂಬಲವಿಲ್ಲವೆಂದೂ, ಸತ್ಯಾಗ್ರಹ ಚಳವಳಿಯನ್ನು ಹಣಿದು ಹಾಕಲು ಲಿಂಗಾಯತರು ಸರಕಾರಕ್ಕೆ ಸಹಾಯಮಾಡುವೆನೆಂದೂ ತಿಳಿಸಿದ್ದರಷ್ಟೇ? ಆದರೆ ಈಗ ಲಿಂಗಾಯತ ಸಮಾಜದ ಎಷ್ಟೋ ಮುಖಂಡರು ಶ್ರೀ. ಚಿಕ್ಕೋಡಿಯವರ ವಿರುದ್ಧವಾಗಿ ಸಡ್ಡು ಹೊಡೆದು ಮುಂದೆ ಬಂದಿದ್ದಾರೆ. ಲಿಂಗಾಯತ ಸಮಾಜದ ಪರವಾಗಿ ಶಿಷ್ಟಮಂಡಳವನ್ನು ಒಯ್ಯಲು ಶ್ರೀ. ಚಿಕ್ಕೋಡಿಯವರಿಗೆ ಯಾರೂ ಅಧಿಕಾರವನ್ನು ಕೊಟ್ಟಿಲ್ಲವೆಂದೂ, ಮತ್ತು ಮಹಾತ್ಮರು ಹೂಡಿದ ಸತ್ಯಾಗ್ರಹಕ್ಕೆ ತಮ್ಮ ಸಮಾಜದ ಪೂರ್ಣ ಬೆಂಬಲವಿದೆಯೆಂದೂ ಬೆಳಗಾವಿ ಜಿಲ್ಲೆಯ ೧೦೦ ಜನ ಪ್ರಸಿದ್ಧ ಲಿಂಗಾಯತ ಮುಖಂಡರು ಒಂದು ಪತ್ರಿಕೆಯನ್ನು ತೆಗೆದು ಪ್ರಸಿದ್ಧಮಾಡಿದ್ದಾರೆ. ಸೈಕೋರಿಕೆ ಅವಲಕ್ಷಣ ಮಾಡಿಕೊಂಡು ಶ್ರೀ ಚಿಕ್ಕೋಡಿಯವರು ಈಗ ದಿಕ್ಕಿಲ್ಲದವರಾಗಿದ್ದಾರೆ! ಪಾಪ! ಹೋಗಲಿ ಬಿಡಿರಿ!

## ಕುಲಕರ್ಣಿಯು ರಾಜೀನಾಮೆ ಕೊಟ್ಟನು.

ಬೈಲಹೊಂಗಲದಲ್ಲಿರುವ ಬೈಲವಾಡ ಕುಲಕರ್ಣಿಗಳಾದ ಶ್ರೀ. ಮಲ್ಹಾರರಾಯರು ತಮ್ಮ ಕುಲಕರ್ಣಿ ಕೆಲಸಕ್ಕೆ ಶರಣು ಹೊಡೆದಿದ್ದಾರೆ.

## ನೂರಾರು ಗೌಡರ ರಾಜೀನಾಮೆ

ಕಾರವಾರ ಜಿಲ್ಲೆಯೊಳಗಿನ ಸಿದ್ದಾಪುರ ತಾಲೂಕದೊಳಗಿನ ಎಲ್ಲ ಹಳ್ಳಿಗಳ ಗೌಡರು, ಸರಕಾರ ದಬ್ಬಾಳಿಕೆಯ ನಿಷೇಧಾರ್ಥವಾಗಿ, ಒಟ್ಟಿಲೆ ರಾಜೀನಾಮೆಯನ್ನು ಕೊಡತಕ್ಕವರಿದ್ದಾರಾಗಿ ತಿಳಿಯುತ್ತಿದೆ.

# ಗಲಗಲಿಯಲ್ಲಿ ಕಾಯಿದೆ ಭಂಗ

## ಸ್ವತಂತ್ರ ಉಪ್ಪಿನ ಮಾರಾಟ! ರಾಜದ್ರೋಹಾತ್ಮಕ ಗ್ರಂಥವಾಚನ!

ತಾ|| ೫ನೆಯ ದಿವಸವಾದರೂ ಸತ್ಯಾಗ್ರಹಿಗಳು ಪಿಕೆಟಿಂಗಕ್ಕೆಂದು ಸಿಂದಿಯ ಅಂಗಡಿಗೆ ಹೋಗಿದ್ದರು. ೪ನೆಯ ತಾ|| ದಿವಸ ಆರ್ಭಟಿಸಿದ ಪೋಲೀಸರ ಸುಳುವು ಕೂಡ ಇಂದು ಅಲ್ಲಿ ಇರಲಿಲ್ಲ. ಕುಡುಕರಂತೂ ಸಮೀಪಕ್ಕೆ ಸಹ ಬರಲಿಲ್ಲ. ಸಾಯಂಕಾಲದವರೆಗೆ ಪಿಕೆಟಿಂಗ ಮಾಡಿದ ಬಳಿಕ ಸತ್ಯಾಗ್ರಹಿಗಳು ತಿರುಗಿ ಬಂದರು.

ಆ ವೇಳೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮೀಟಿಯ ಆಜ್ಞೆಯ ಪ್ರಕಾರ ಮಹಾತ್ಮಾಜಿಯವರ ಭಾವಚಿತ್ರದ ಮೆರವಣಿಗೆಯು ತೆಗೆಯಲ್ಪಟ್ಟಿತು. ಮೆರವಣಿಗೆಯು ಊರಲ್ಲೆಲ್ಲ ತಿರುಗಿ ಪೇಟೆಗೆ ಬಂದಿತು. ಆ ಬಳಿಕ ಶ್ರೀ ಗ. ಡೀ. ರಾಮಾಚಾರ್ಯರು ಸೊಲ್ಲಾಪೂರದ ಬಗ್ಗೆ ತೀರ್ಮಾನಿಸಬೇಕಾದ ಮೂರು ನಿರ್ಣಯಗಳನ್ನು ಮತ್ತು ಸುಂದರಲಾಲರು ಬರೆದ "ಇಂಡಿಯಾ ಇನ್ ಬೊಂಡೇಜ" ಪುಸ್ತಕದೊಳಗಿನ ಅವತರಣಿಕೆಯನ್ನು ಓದಿದರು. ಆ ಮೇಲೆ ಸೊಲ್ಲಾಪೂರದ ಅತ್ಯಾಚಾರಕ್ಕೆ ಸಂಬಂಧ ಪಟ್ಟ ಗೊತ್ತುಗಳು ಸ್ವೀಕೃತವಾದವು.

ಆ ಮೇಲೆ ಶ್ರೀ ರೇವಣೆಪ್ಪ ಸಿದ್ಧರಾಮಪ್ಪ ಇವರು ಸ್ವತಂತ್ರವಾದ ಉಪ್ಪನ್ನು ಮಾರಿದರು. ಉಪ್ಪನ್ನಾದರೂ ನೂರಾರು ಜನರು ಕೊಂಡುಕೊಂಡರು. ಮುಂದೆ, ಮುಂಚಿತವಾಗಿಯೇ ಶೇಖರಿಸಿದ ಪರದೇಶೀ ಅರಿವೆಯ ಹೋಳಿಯು ಮಾಡಲ್ಪಟ್ಟಿತು. ಆ ಕಾಲಕ್ಕೆ ಎಷ್ಟೋ ಜನರು ಸ್ವಯಂಸ್ಫೂರ್ತಿಯಿಂದ ತಮ್ಮ ಮೈಮೇಲಿನ ಅರಿವೆಗಳನ್ನು ತೆಗೆದು ಹೋಳಿಯಲ್ಲಿ ಬಿಸುಟಿದರು.

### ಮುಂಬಯಿಯ ಮುಸಲ್ಮಾನರು ಕಾಂಗ್ರೆಸಕ್ಕೆ ಕೂಡಿದರು

ಮುಂಬಯಿಯಲ್ಲಿಯ ಮುಸಲ್ಮಾನರು ತಾ|| ೩ನೆಯ ದಿವಸ ಒಂದು ಪ್ರಚಂಡ ಮೆರವಣಿಗೆಯನ್ನು ತೆಗೆದು ಈಗ ನಡೆದ ಸತ್ಯಾಗ್ರಹ ಚಳವಳಿಗೆ ಬೆಂಬಲವನ್ನು ಕೊಟ್ಟರು. ಮೆರವಣಿಗೆಯ ನಂತರದಲ್ಲಿ ಸಾರ್ವಜನಿಕ ಸಭೆಯನ್ನು ಮಾಡಿಕೊಂಡು ವಿದೇಶಿ ಬಟ್ಟೆಗಳ ಬಹಿಷ್ಕಾರ, ಮದ್ಯಪಾನ ನಿಷೇಧ ಮೊದಲಾದ ಕಾಂಗ್ರೆಸದ ಕಾರ್ಯಕ್ರಮಗಳನ್ನು ಸಿದ್ಧಿಗೊಯ್ಯಲು ಪ್ರಯತ್ನಿಸಬೇಕಾಗಿಯೂ, ರಾಷ್ಟ್ರೀಯ ಪಕ್ಷದವರು ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವನ್ನು ತೆಗೆದುಕೊಳ್ಳದಿದ್ದರೆ, ಮುಸಲ್ಮಾನರೂ ದೂರ ಉಳಿಯಬೇಕಾಗಿಯೂ ನಿರ್ಣಯಗಳನ್ನು ಸ್ವೀಕರಿಸಿಕೊಂಡರು. ಮುಂಬಯಿ ಇಲಾಖೆಯಿಂದ ಕಾಯಿದೆ ಮಂಡಳಿಗಳಿಗೆ ಮುಸಲ್ಮಾನರ ಪರವಾಗಿ ಆರಿಸಿಹೋದ ಎಲ್ಲ ಮುಸಲ್ಮಾನ ಸಭಾಸದರು ರಾಜೀನಾಮೆಯನ್ನು ಕೊಡಬೇಕೆಂಬುದಾಗಿ ಸಭೆಯಮುಂದೆ ಬಂದ ನಿರ್ಧಾರವೂ ಸ್ವೀಕೃತವಾಯಿತು. ಮುಂಬಯಿಯಲ್ಲಿ ಸತ್ಯಾಗ್ರಹಿಗಳಿಗೆ ಎಲ್ಲ ಜಾತಿಯವರಿಂದಲೂ ಬೆಂಬಲವು ಸಿಕ್ಕಂತಾಯಿತು. ಇಲ್ಲಿಯ ಮುಸಲ್ಮಾನರು ಇತ್ತ ಗಮನ ಕೊಡುವರೋ?

### ಅಂಕೋಲೆಯ ವಾರ್ತೆ.

#### ೫೦೦ ಮಣ ಉಪ್ಪಿನ ಲೂಟಿ.

ಅಂಕೋಲಾ ತಾಲೂಕಿನಲ್ಲಿ ೨—೩ ದಿವಸಗಳಿಂದ ಸೆರೆ ಸಿಂದೀ ಅಂಗಡಿಗಳ ಪಿಕೆಟಿಂಗ ಬಹಳ ಉತ್ತಮ ರೀತಿಯಲ್ಲಿ ನಡೆಯುತ್ತ ಬಂದಿದೆ. ಈ ಪಿಕೆಟಿಂಗದ ಸಲುವಾಗಿ ಜನರು ಕುಡಿಯಲಿಕ್ಕೆ ಬರದಿರುವರೆಂದು ಯಾರೂ ಇಲ್ಲದ ವೇಳೆಯಲ್ಲಿ ಹೆಂಡವನ್ನು ಒಯ್ದು ಹೊರಗೆ ಮಾರಾಟ ಮಾಡುತ್ತಿರುವರು. ಇದರ ಸುಳುವು ತಿಳಿದು ಸತ್ಯಾಗ್ರಹಿಗಳು ಈಗ ಎಲ್ಲೆಲ್ಲಿಯೂ ಅವರ ಬೆನ್ನುಹತ್ತಿ ಅವರು ಕದ್ದು ಮಾರುವದನ್ನು ನಿಲ್ಲಿಸತೊಡಗಿದ್ದಾರೆ.

ಈ ದಿವಸ ಕೆಲವು ಅಂಗಡಿಕಾರರು ಕಾರವಾರಕ್ಕೆ ಕಲೆಕ್ಟರರನ್ನು ಭೆಟ್ಟಿಯಾಗಲಿಕ್ಕೆ ಹೋಗಿದ್ದಾರೆಂದು ವರ್ತಮಾನ ಬಂದಿದೆ.

ಸಾಣಿಕಟ್ಟೆಯ ಉಪ್ಪಿನ ವಖಾರದಿಂದ ಸುತ್ತು ಮುತ್ತಲಿನ ಹಳ್ಳಿಗಳ ಜನರು ಹಲ್ಲೆಯನ್ನು ಮಾಡಿ ೫೦೦ ಮಣ ಉಪ್ಪನ್ನು ಒಯ್ದಿರುವರೆಂದೂ ಮತ್ತು ಸುಮಾರು ೧೦೦ ಮಣ ಉಪ್ಪನ್ನು ಕುಮಟಾದಲ್ಲಿ ಮಾರಿಸುವರೆಂದು ಸುದ್ದಿ ಬಂದಿದೆ.

ಸತ್ಯಾಗ್ರಹ ಶಿಬಿರ<br>ಅಂಕೋಲಾ<br>ತಾ|| ೨-೬-೩೦ } ಪ್ರಕಟನಾ ಕಾರ್ಯಾಧಿಕಾರಿ

### ಸೀಖ ಸತ್ಯಾಗ್ರಹಿಯ ಸಾಹಸ

#### ಸಾರ್ಜಂಟನಿಗೆ ಗುಂಡು ಹೊಡೆಯುವದಾಗಲಿಲ್ಲ.

ಮೊನ್ನೆ ಮೊನ್ನೆ ವಡಾಲಾ ವಖಾರದ ಮೇಲೆ ದಾಳಿಯನ್ನು ಮಾಡಿದ ಸತ್ಯಾಗ್ರಹಿಗಳಲ್ಲಿ ೧೭ ವರ್ಷದ ರಘುವೀರಸಿಂಗನೆಂಬ ಸತ್ಯಾಗ್ರಹಿಯೂ ಸೇರಿದ್ದನು. ಅವನು ಈ ಮೊದಲು ಗುರುಖಾ ಬಾಗ ಸತ್ಯಾಗ್ರಹದಲ್ಲಿ ಸೇರಿ ೬ ತಿಂಗಳ ಶಿಕ್ಷೆಯನ್ನು ಅನುಭವಿಸಿ ಬಂದಿದ್ದನು. ಸೀಖರ ದಳವೊಂದು ವಡಾಲಾ ವಖಾರದ ಮೇಲೆ ದಾಳಿಯನ್ನು ಮಾಡತಕ್ಕದ್ದಿದೆಯೆಂದು ಕೇಳಿ ಅವನು ಮುಂಬಯಿಗೆ ಬಂದು ಸತ್ಯಾಗ್ರಹದಲ್ಲಿ ಸೇರಿದನು. ಮತ್ತು ವಡಾಲಾ ವಖಾರಕ್ಕೆ ನುಗ್ಗಿದನು. ಅವನು ಅಲ್ಲಿ ಉಪ್ಪನ್ನು ಕೂಡಿಸುತ್ತಿರುವಾಗ ಓರ್ವ ಸಾರ್ಜಂಟನು ಅವನನ್ನು ಮೂರು ಸಾರೆ ಹಿಂದಕ್ಕೆ ನೂಕಿದನು. ಆದರೂ ಅವನು ತನ್ನ ಸ್ಥಳವನ್ನು ಬಿಡಲಿಲ್ಲ. ಇದನ್ನು ಕಂಡು ಸಾರ್ಜಂಟನು ಅವನನ್ನು ಬೆದರಿಸಲು ತನ್ನ ಪಿಸ್ತೂಲನ್ನು ತೋರಿಸಿದನು. ಆ ವೀರ ಸತ್ಯಾಗ್ರಹಿಯು ತನ್ನ ಎದೆಯನ್ನು ಮುಂದೆ ಮಾಡಿ ಗುಂಡು ಹೊಡೆಯಲು ಕೇಳಿಕೊಂಡನು. ಸೀಖ ಸತ್ಯಾಗ್ರಹಿಯು ತೋರಿಸಿದ ಧೈರ್ಯಕ್ಕೆ ಸಾರ್ಜಂಟನು ತಲೆದೂಗಿ ಉಪ್ಪನ್ನು ತೆಗೆದುಕೊಳ್ಳಲು ಅವನಿಗೆ ಹೋಗಗೊಟ್ಟನು. ರಘುವೀರಸಿಂಗನು ಒಂದು ಚೀಲದಲ್ಲಿ ಉಪ್ಪನ್ನು ತುಂಬಿಕೊಂಡು ತಿರುಗಿ ಬಂದನು.

## ಗುಳೇದಗುಡ್ಡ ಪೋಲೀಸರ ಉದ್ದಾಮತನ.

### ಸರಕಾರವೇ ಸೆರೆಯನ್ನು ಕುಡಿಸುತ್ತಿರುವದು

ಕಾಂಗ್ರೆಸ ಆಜ್ಞೆಯ ಪ್ರಕಾರ ೪ ನೆಯ ತಾ|| ದಿವಸ ಗುಳೇದಗುಡ್ಡದಲ್ಲಿ ಸಿಂದೀ ಅಂಗಡಿಗಳ "ಪಿಕೆಟಿಂಗ"ವು ಪ್ರಾರಂಭವಾಯಿತು. ಶ್ರೀ ಪಿಸ್ಸಣ್ಣಶಾಸ್ತ್ರಿ ಪೇಡಕರ, ರಾಮಾಚಾರ್ಯ ಗುಡಿ, ಶ್ರೀನಿವಾಸಚಾರ್ಯ ಸಂಗಮ, ಶ್ರೀ ರಘುಪತಿ ಚಾರ್ಯ ಸಂಗಮ, ಈ ನಾಲ್ಕು ಜನ ಸ್ವಯಂಸೇವಕರು "ಪಿಕೆಟಿಂಗ" ಮಾಡಲು ಹೋಗಿದ್ದರು, ಆ ದೃಶ್ಯವನ್ನು ನೋಡಲು ಎಷ್ಟೋ ಜನರು ಅಲ್ಲಿ ನೆರೆದಿದ್ದರು,

ಸ್ವಯಂಸೇವಕರು ಸಿಂದೀ ಅಂಗಡಿಯ ಬದಿಯಲ್ಲಿ ಹೋಗಿ ನಿಲ್ಲುವಷ್ಟರಲ್ಲಿ ಪೋಲೀಸರಾದರೂ ಅಲ್ಲಿಗೆ ಬಂದು ಸೇರಿದರು. ಸ್ವಯಂಸೇವಕರು ಶಾಂತರೀತಿಯಿಂದ ಕುಡುಕರಿಗೆ ಕುಡಿಯಬೇಡಿರೆಂದು ಕೈಕಾಲುಗಳನ್ನು ಹಿಡಿದು ಹೇಳುತ್ತಿದ್ದರು. ಇದರ ವಿರುದ್ಧವಾಗಿ ಪೋಲೀಸರು "ಈ ಹೊತ್ತು ಸಿಂದಿಯನ್ನು ಪುಕ್ಕಟೆಯಾಗಿ ಕೊಡಿಸುವೆವು, ಬೇಕಾದವರು ಬಂದು ಕುಡಿಯಬಹುದು" ಎಂದು ಜನರಿಗೆ ಬೋಧಿಸಹತ್ತಿದರು. ಆದರೆ ಕುಡುಕರು ಸ್ವಯಂಸೇವಕರ ಮಾತಿಗೆ ಮಾನಕೊಟ್ಟು ಅಂಗಡಿಯ ಸಮೀಪಕ್ಕೆ ಸಹ ಬರಲಿಲ್ಲ. ಇದನ್ನು ಕಂಡು ಪೋಲೀಸರು "ನಿಮ್ಮನ್ನು ನೋಡುತ್ತೇವೆ. ಆಗ ಹೋಗಲಿ" ಎಂದು ಅರ್ಭಟಿಸುತ್ತ ಎರಡು ಲಾಠಿಗಳನ್ನು ತೆಗೆದುಕೊಂಡು ಬಂದರು. ಸ್ವಯಂಸೇವಕರೂ ಇದಕ್ಕೆ ಎಳ್ಳಷ್ಟೂ ಹೆದರದೆ ತಮ್ಮ ಕಾರ್ಯವನ್ನು ಹಾಗೆಯೇ ಸಾಗಿಸಿದರು. ಒಳೇ ಪೋಲೀಸರು ಊರಲ್ಲಿ ಹೋಗಿ ನಾಲ್ಕೈದು ಜನ ಕುಡುಕರನ್ನು ಕರೆದುಕೊಂಡು ಬಂದರು. ಹಾದಿಯಲ್ಲಿ ಸ್ವಯಂಸೇವಕರು ಅವರನ್ನಾದರೂ ತಡೆದರು. ಆದರೆ ಆ ಕುಡುಕರು ಪೋಲೀಸರಿಗೆ ಹೆದರಿ ಅನಿಚ್ಛೆಯಿಂದ ಸಿಂದಿಯನ್ನು ಪುಕ್ಕಟೆಯಾಗಿ ಕುಡಿದರು. ತಮ್ಮ ಮಾತು ಗೆದ್ದಿತೆಂದು ಪೋಲೀಸರು ಕುಡುಕರನ್ನು ಹುರಿದುಂಬಿಸುತ್ತಿದ್ದರು. ಈ ಉಬ್ಬಿನಲ್ಲಿ ಅವರು ಹೆಚ್ಚು ಹೆಚ್ಚು ಸಿಂದಿಯನ್ನು ಕುಡಿಯತೊಡಗಿದ್ದರಿಂದ ಅಂಗಡಿಯ ಒಡೆಯನು ಪುಕ್ಕಟೆಯಾಗಿ ಸಿಂದಿಯು ಹೋಗುವದೆಂಬ ಹೆಚ್ಚಿನಿಂದ ಅಂಗಡಿಯನ್ನು ದಿನದಕಿಂತಲೂ ಒಂದು ತಾಸು ಮೊದಲು ಮುಚ್ಚಿದನು, ಆ ಮೇಲೆ ಪೋಲೀಸರು ನಿರಾಶರಾಗಿ ಕುಡುಕರನ್ನು ಕರೆದುಕೊಂಡು ಮನೆಗೆ ಹೋದರು ಸ್ವಯಂಸೇವಕರು ತಿರುಗಿ ಮನೆಗೆ ಬಂದರು.

| | |
|---|---|
| ಗುಳೇದಗುಡ್ಡ<br>ತಾ\| ೫-೬-೩೦ | ಪ್ರಕಟನಾ ಅಧಿಕಾರಿ<br>ಸತ್ಯಾಗ್ರಹ ಯುದ್ಧ ಮಂಡಳ ಛಾವಣಿ. |

## ಪದವೀಧರರ ಪ್ರತಿಜ್ಞೆ

ಮುಂಬಯಿ ವಿಶ್ವವಿದ್ಯಾಲಯದ ಪದವೀಧರರು ೩ ನೆಯ ತಾ| ದಿವಸ ಶ್ರೀ ಭೂಲಾಭಾಯಿಯವರ ಅಧ್ಯಕ್ಷತೆಯಲ್ಲಿ ಸಭೆ ಮಾಡಿಕೊಂಡು ಕೆಳಗಿನ ಗೊತ್ತುಗಳನ್ನು ನಿರ್ಧರಿಸಿಕೊಂಡಿದ್ದಾರೆ. (೧) ಸರಕಾರದವರು ಪ್ರಾರಂಭಿಸಿದ ದಬ್ಬಾಳಿಕೆಯನ್ನೂ, ದತ್ಯಾಚಾರವನ್ನೂ ಈ ಸಭೆಯು ನಿಷೇಧಿಸುತ್ತದೆ ೨) ಮುಂಬಯಿ ವಿಶ್ವವಿದ್ಯಾಲಯದ ಪದವೀಧರರೆಲ್ಲರೂ ಸ್ವದೇಶಿ ಸರಕುಗಳನ್ನೇ ಕೊಂಡುಕೊಳ್ಳಬೇಕೆಂದೂ, ಸ್ವದೇಶ ವಸ್ತ್ರಗಳನ್ನೇ ವಿಶೇಷತಃ ಖಾದಿಯನ್ನೇ ಧರಿಸಬೇಕೆಂದೂ ಈ ಸಭೆಯು ಕೇಳಿಕೊಳ್ಳುತ್ತದೆ. ೩) ದೇಶದಲ್ಲಿಯ ಪರಿಸ್ಥಿತಿಯು ಸುಧಾರಿಸುವವರೆಗೆ ಯಾರೂ ಮುಂಬಯಿ ಕಾಯಿದೆ ಮಂಡಳಕ್ಕೆ ಪದವೀಧರರ ಪರವಾಗಿ ಹುರಿಯಾಳಾಗಿ ನಿಲ್ಲಬಾರದು.

## ಶ್ರೀ ಮಹಾಂತೇಶ ಎ ವ್ಹಿ. ಸ್ಕೂಲ ಇಲಕಲ್ಲ.

ಈ ಶಾಲೆಯು ೯ ನೇ ತಾರೀಖಿಗೆ ಸುರು ಆಗುವದು. ಮತ್ತು ಜೂನ ೩೦ ನೇ ತಾರೀಖಿನೊಳಗಾಗಿ ಹೊಸ ಹುಡುಗರ ಹೆಸರು ಹಚ್ಚಿಕೊಳ್ಳುವದರಲ್ಲಿ ಬರುವದು. ಇಂಗ್ಲೀಷ ಮೂರನೇ ಇಯತ್ತೆಯನ್ನು ಕಲಿಯುವ ಪರಸ್ಥಳದ ಯಾವದೇ ಜಾತಿಯ ಬಡ ಹುಡುಗರಿಗೆ ಊಟದ ವ್ಯವಸ್ಥೆಯನ್ನು ಮಾಡುವದಲ್ಲದೆ ಶಾಲೆಯಲ್ಲಿ ಮಾಫಿಯನ್ನು ಸಹ ಮಾಡುವದು. ಆದ್ದರಿಂದ ಇಂಗ್ಲೀಷ ಮೂರನೆ ಇಯತ್ತೆಯನ್ನು ಕಲಿಯುವ ಪರಸ್ಥಳದ ಬಡ ಹುಡುಗರು ಇದರ ಉಪಯೋಗವನ್ನು ಮಾಡಿಕೊಳ್ಳಬೇಕು.

| | |
|---|---|
| ಇಲಕಲ್ಲ.<br>೩೦—೫—೩೦ | ಗುರುಪಾದಪ್ಪಾ ಸಜ್ಜನ ಬಿ. ಎ.<br>ಹೆಡ್ ಮಾಸ್ತರ. |


ಜಯಲಕ್ಷ್ಮೀ ಪ್ರಾಸಾದಿಕ

ಸ್ತ್ರೀಮಿಶ್ರಿತ ಸಂಗೀತ ನಾಟಕ ಮಂಡಳಿ ದಾವಣಗೇರಿ ಇವರು

ಬಾಗಲಕೋಟೆ ತಾಜ ಥಿಯೇಟರಿನಲ್ಲಿ

ಶನಿವಾರ ತಾ|| ೭—೬—೩೦

ಲಂಕಾದಹನ

ಬುಧವಾರ ತಾ. ೧೧—೬—೩೦

ಪ್ರತಾಪಪ್ರಮೀಲಾ

ಎಂಬ ಹೊಸ ಆಖ್ಯಾನಗಳನ್ನು ಪ್ರಯೋಗಿಸುವರು.

ವ್ಯವಸ್ಥಾಪಕ.

ಬರುವರು! ಬರುವರು!!

ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ

ಶಿರಹಟ್ಟಿ ನಾಟಕ ಮಂಡಳಿಯವರು

# ಬೇಗನೆ ಬರುವರು

ಶಿವಾನಂದ ನಾಟಕ ಶಾಲೆಯಲ್ಲಿ

ಸೋಮವಾರ ತಾ|| ೯-೬-೩೦

ಸಂಪೂರ್ಣ ಕೃಷ್ಣಲೀಲಾ

ಬುಧವಾರ ತಾ|| ೧೧—೬—೩೦

ಲಂಕಾದಹನ.

ಎಂಬ ನಾಟಕಗಳನ್ನು ಅಭಿನಯಿಸುವರು,

ಎಚ್, ವೆಂಕೋಬರಾವ.

ಪ್ರೊಪ್ರಾಯಿಟರ


ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬ. ೧೨೯೮

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾಜಿರಾವ ಮುಜುಮದಾರ.

ಬಾಗಲಕೋಟೆ ರವಿವಾರ ಮಿತಿ ಜ್ಯೇಷ್ಠ ಶುದ್ಧ ೧೨ ಶಕ ೧೮೫೨ ತಾ|| ೮-೬-೩೦ ಸಂಚಿಕೆ ೬೯

## ವಿಜಾಪುರ ಜಿಲ್ಲೆಯೂ ಎಚ್ಚತ್ತಿದೆ.

ರಾಷ್ಟ್ರೀಯ ಚಳವಳಿಯಲ್ಲಿ ವಿಜಾಪುರ ಜಿಲ್ಲೆಯು ಉಳಿದ ಜಿಲ್ಲೆಗಳಿಗಿಂತಲೂ ಹಿಂದೆ ಬಿದ್ದಿದೆಯೆಂದು ಕೆಲವರು ಗುಣುಗುಟ್ಟುತ್ತಿದ್ದರು. ಆದರೆ ವಸ್ತುಸ್ಥಿತಿಯು ಇದಕ್ಕೆ ತೀರ ವಿಪರೀತವಾಗಿದ್ದಿತೆಂದು ಹೇಳಬಹುದು. ಯಾಕಂದರೆ ಉಪ್ಪಿನ ಕಾಯಿದೆ ಭಂಗಕ್ಕಾಗಿ ಸೆರೆಹಿಡಿಯಲ್ಪಟ್ಟು ಕಾರಾಗ್ರಹಕ್ಕೆ ಈ ಜಿಲ್ಲೆಯಿಂದ ೧೨ ಜನ ಸತ್ಯಾಗ್ರಹಿಗಳು ಹೋಗಿರುವರು. ಇದರಂತೆಯೆ ಉಪ್ಪಿನ ಕಾಯಿದೆಭಂಗಕ್ಕಾಗಿ ದಂಡದ ಶಿಕ್ಷೆಯನ್ನು ೪ ಜನ ಸತ್ಯಾಗ್ರಹಿಗಳು ಅನುಭವಿಸಿರುವರು. ಒಂದು ತಿಂಗಳದವರೆಗೆ ಪ್ರತಿ ದಿನ ದಲ್ಲಿಯೂ ಬಸನಾಳದಲ್ಲಿ ಸ್ವಯಂಸೇವಕರು ಉಪ್ಪನ್ನು ಸಿದ್ಧಪಡಿಸಿ ಸಾಮುದಾಯಿಕ ಕಾಯಿದೆಭಂಗ ಮಾಡಿದರು. ಗಲಗಲಿಯಲ್ಲಿ ಸಿಂದಿ ಅಂಗಡಿಯ ಪಿಕೆಟಿಂಗ ಒತ್ತರದಿಂದ ಸಾಗಿದ್ದು, ಅಂಗಡಿಯು ಸ್ವಲ್ಪದಿನಗಳಲ್ಲಿಯೇ ಮುಚ್ಚಿಹೋಗುವ ಸಂಭವವಿದೆ. ಕೆರೂರ ಕಡೆಗೆ ಸಿಂದೀ ಗಿಡಗಳು ಕಡಿಯಲ್ಪಟ್ಟಿವೆ. ಮೊನ್ನೆ ೫ ನೆಯ ತಾರೀಖಿನ ದಿವಸ ಕ. ಪ್ರಾಂ. ಕಾ. ಕಮಿಟಿಯವರ ಆಜ್ಞೆಯನುಸಾರವಾಗಿ, ವಿಜಾಪುರ, ಬಾಗಲಕೋಟಿ, ಚಡಚಣ, ಗಲಗಲಿ, ಹುನಗುಂದ, ಕಲಾದಗಿ, ಗುಳೇದಗುಡ್ಡ, ಕೆರೂರ, ಬಾಡಗಿ, ದೇವರಗೆಣ್ಣೂರ, ಮೊದಲಾದ ಕಡೆಗಳಲ್ಲಿ ಸಭೆಗಳು ಜರುಗಿದವು. ಬಾಗಲಕೋಟಿ, ಗಲಗಲಿಗಳಲ್ಲಿ ಸ್ವತಂತ್ರ ಉಪ್ಪಿನ ಮಾರಾಟವೂ, ರಾಜದ್ರೋಹಾತ್ಮಕ ಗ್ರಂಥಗಳ ವಾಚನವೂ ಜರುಗಿ ಸರಕಾರಿ ಕಾಯಿದೆಗಳು ಚೂರು ಚೂರಾದವು. ಚಡಚಣ, ವಿಜಾಪುರಗಳಲ್ಲಿಯೂ ಉಪ್ಪಿನ ಮಾರಾಟವಾಯಿತು. ಈ ಜಿಲ್ಲೆಯಲ್ಲಿ ಈಗ ಎನಿಲ್ಲೆಂದರೂ ೫-೬ ಜನ ಕುಲಕರ್ಣಿಯರು ತಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಇವೆಲ್ಲವುಗಳನ್ನೂ ವಿಚಾರಮಾಡಿ ನೋಡಲಾಗಿ ವಿಜಾಪುರ ಜಿಲ್ಲೆಯು ಸತ್ಯಾಗ್ರಹದ ಚಳವಳಿಯಲ್ಲಿ ಮುಂದಡಿಯನ್ನಿಡುತ್ತಿರುವದೆಂದೇ ಹೇಳಬಹುದಲ್ಲವೆ?

## ಸರಲಾದೇವಿಯವರಿಗೆ ೬ ತಿಂಗಳ ಸಾದಾ ಶಿಕ್ಷೆ.

ಮದ್ರಾಸ ಇಲಾಖೆಯ ಗಂಜಾಮ ಜಿಲ್ಲೆಯ ಸ್ವಯಂಸೇವಿಕೆಯರಾದ ಶ್ರೀಮತಿ ಸರಲಾದೇವಿಯವರು ಉಪ್ಪಿನ ಕಾಯಿದೆ ಭಂಗಕ್ಕಾಗಿ ಸೆರೆಹಿಡಿಯಲ್ಪಟ್ಟು ೬ ತಿಂಗಳ ಸಾದಾ ಶಿಕ್ಷೆಗೆ ಪಾತ್ರರಾಗಿದ್ದಾರೆ.

## ಬಾರ್ಡೋಲಿ ತಾಲೂಕಿನಲ್ಲಿ

### ಅಧಿಕಾರಿಗಳ ಆಟವು ಸಾಗದಂತಾಯಿತು.

ಸ್ವಯಂಸೇವಕರು ಹಳ್ಳಿಹಳ್ಳಿಗಳಲ್ಲಿ ಸಾಮಾಜಿಕ ಬಹಿಷ್ಕಾರದ ಚಳವಳಿಯನ್ನು ಬಲವಾಗಿ ಸಾಗಿಸಿರುವದರಿಂದ ಬಾರ್ಡೋಲಿ ತಾಲೂಕಿನಲ್ಲಿ ಅಧಿಕಾರಿಗಳ ಆಟವು ಸಾಗದಂತಾಗಿದೆ. ಅಧಿಕಾರಿಗಳಿಗೆ ಬಳ್ಳಿ ಪಲ್ಲೆಕಾಯಿ, ಅಕ್ಕಿ, ಕಾಳು, ತುಪ್ಪ ಮೊದಲಾದ ಸಾಮಾನುಗಳು ಸಿಗುವದೇ ದುರ್ಲಭವಾಗಿದೆ. ಆದುದರಿಂದ ಅಧಿಕಾರಿಗಳು ತಮ್ಮ ಸೇವಕರಿಗೆ ಸಾಮಾನುಗಳು ಸಿಗಬೇಕೆಂಬ ಉದ್ದೇಶದಿಂದ ಸ್ವತಂತ್ರ ಅಂಗಡಿಯನ್ನು ತೆಗೆದಿದ್ದಾರೆ. ಅಲ್ಲಿಯ ವ್ಯಾಪಾರಿಗಳು ಇದರ ನಿಷೇಧಾರ್ಥವಾಗಿ ೩ ತಿಂಗಳಗಳವರೆಗೆ ತಮ್ಮ ಅಂಗಡಿಗಳನ್ನು ಮುಚ್ಚತಕ್ಕದ್ದಾಗಿ ನಿರ್ಧರಿಸಿಕೊಂಡಿದ್ದಾರೆ.

ಬಾರ್ಡೋಲಿ ತಾಲೂಕದ ನಿವಾಸಿಗಳೆಲ್ಲರೂ ೧ ವರ್ಷದವರೆಗೆ ಪರದೇಶಿ ಅರಿವೆಗಳನ್ನು ಮುಟ್ಟುವದಿಲ್ಲವಾಗಿ ಆಣೆಯನ್ನು ಮಾಡಿದ್ದಾರೆ. ಮಹಾತ್ಮಾ ಗಾಂಧಿಯವರು ಬಂದು ಆಜ್ಞಾಪಿಸುವವರೆಗೆ ಕಟ್ಟಿಗೆಯ ಗುತ್ತಿಗೆಯನ್ನು ಹಿಡಿಯುವದಿಲ್ಲವಾಗಿ ನವಸಾರಿಯ ೧೭ ಜನ ಕಟ್ಟಿಗೆಯ ಗುತ್ತಿಗೆದಾರರು ಬರೆದುಕೊಟ್ಟಿದ್ದಾರೆ. ಶ್ರೀ ಜೀವಣಲಾಲ ದಿವಾಣರು ಉತ್ಪನ್ನದ ಮೇಲಿನ ತೆರಿಗೆಯನ್ನು ಕೊಡಲು ನಿರಾಕರಿಸಿದ್ದಾರೆ.

## ಚಡಚಣದಲ್ಲಿ ಕಾಯಿದೆ ಭಂಗ

### ಸ್ವತಂತ್ರ ಉಪ್ಪಿನ ಮಾರಾಟ! ಪರದೇಶಿ ಬಟ್ಟೆಗಳ ಹೋಳಿ

ಕ. ಪ್ರಾಂ. ಕಾಂ. ಕಮಿಟಿಯವರ ಆಜ್ಞೆಯನುಸಾರವಾಗಿ ತಾ|| ೫ ನೆಯ ದಿವಸ ಚಡಚಣದಲ್ಲಿ ಕಾರ್ಯಕ್ರಮಗಳು ಜರುಗಿದವು. ಸಂಜೆಯ ೪ ಗಂಟೆಗೆ ಮಹಾತ್ಮಾ ಗಾಂಧಿ ಹಾಗೂ ಶ್ರೀ. ಅಬ್ಬಾಸ ತಯ್ಯಬಜಿಯವರ ಭಾವಚಿತ್ರಗಳ ಮೆರವಣಿಗೆಯು ಒಳ್ಳೇ ವಿಜೃಂಭಣೆಯಿಂದ ನೆರವೇರಿತು. ಸಂಜೆಯ ೫ ಗಂಟೆಗೆ ಸಾರ್ವಜನಿಕ ಸಭೆಯು ಸೇರಿ ಸೊಲ್ಲಾಪುರದಲ್ಲಿಯ ದಂಡನಾಳಿಕೆಯ ಹಾಗು ಅತ್ಯಾಚಾರದ ನಿಷೇಧಪರ ನಿರ್ಣಯಗಳು ಸ್ವೀಕೃತವಾದವು. ನಂತರದಲ್ಲಿ ಪರಮೇಶ್ವರನು ಮಹಾತ್ಮರಿಗೆ ದೀರ್ಘಾಯುವನ್ನು ಕೊಡಲೆಂದು ಪ್ರಾರ್ಥಿಸುವದರಲ್ಲಿ ಬಂದಿತು. ಬಳಿಕ ಸ್ವತಂತ್ರ ಉಪ್ಪಿನ ಮಾರಾಟವೂ, ಪರದೇಶಿ ಬಟ್ಟೆಗಳ ಹೋಳಿಯೂ ಜರುಗಿದ ಮೇಲೆ ಸಭೆಯು ಮುಗಿಯಿತು.

ನೂಲುವ ಮತ್ತು ನೇಯುವ ಕಾರಖಾನೆಗಳು ತಮ್ಮ ಕೆಲಸವನ್ನು ಉತ್ಸವವಾಗಿ ಸಾಗಿಸಿರುತ್ತವೆ. ೨೫ ಚರಖಗಳು ತಿರುಗುತ್ತಿದ್ದು, ಜನರು ನೂಲಲು ಸಿದ್ಧರಿರುತ್ತಾರೆ. ಚರಖಗಳು ಇಲ್ಲದ್ದರಿಂದ ಆ ಕಾರ್ಯವೂ ಇನ್ನೂ ಸಾಗಿಲ್ಲ. ಅಖಿಲ ಭಾರತ ಚರಖಾ ಸಂಘದವರು ಇತ್ತ ಲಕ್ಷ್ಯ ಕೊಡಬೇಕಾಗಿ ಬಿನ್ನಹ.

— ರೈತರ ಕಷ್ಟನಿವಾರಕ ಸಂಘದಿಂದ.

## ಸರದಾರ ಶಾರ್ದೂಲಸಿಂಗರು ಸೆರೆಯಾಳಾದರು.

ಪಂಜಾಬ ಪ್ರಾಂತಿಕ ಸತ್ಯಾಗ್ರಹ ಮಂಡಳದ ಅಧ್ಯಕ್ಷರೂ, ಶ್ರೀ ವಿಠ್ಠಲಭಾಯಿ ಪಟೇಲರ ಅಧ್ಯಕ್ಷತೆಯಲ್ಲಿ ಸೇರಿದ ಪೇಶಾವರ ದಂಗೆಯ ವಿಚಾರಣಾ ಸಮಿತಿಯ ಸಭಾಸದರೂ ಆದ ಸರದಾರ ಶಾರ್ದೂಲಸಿಂಗರು ೧೨೪ ಅ ಕಲಮಿನ ಅನ್ವಯ ರಾಜದ್ರೋಹಕ್ಕಾಗಿ ರಾವಳಪಿಂಡಿಯಲ್ಲಿ ಸೆರೆಹಿಡಿಯಲ್ಪಟ್ಟಿದ್ದಾರೆ. ಪಂಜಾಬದಲ್ಲಿ ಅಧಿಕಾರಿಗಳಿಗೆ ಎಲ್ಲಿ ಹೋದರೂ ರಾಜದ್ರೋಹವೇ ಕಾಣಿಸಿಕೊಳ್ಳುವಂತೆ ತೋರುತ್ತಿದೆ. ಯಾಕಂದರೆ ಅಲ್ಲಿಯ ಮುಖಂಡರೆಲ್ಲರನ್ನೂ ಇದೇ ಕಲಮಿನ ಅನ್ವಯ ಸೆರೆ ಹಿಡಿದದ್ದುಂಟು.

## ಕರ್ನಾಟಕದಲ್ಲಿ ಎಲ್ಲೆಲ್ಲಿಯೂ

### ಉಪ್ಪಿನ ಮಾರಾಟ.

#### ರಾಜದ್ರೋಹಾತ್ಮಕ ಗ್ರಂಥಗಳ ವಾಚನ.

ಮೊನ್ನಿನ ೫ ನೆಯ ತಾ|| ಗೆ ಸರಕಾರದವರು ಮಹಾತ್ಮಾ ಗಾಂಧಿಯವರನ್ನು ಸೆರೆಯಲ್ಲಿಟ್ಟು ಒಂದು ತಿಂಗಳವಾಯಿತು. ಅಂದು ಕರ್ನಾಟಕದಲ್ಲಿ ೫೦ ಸ್ಥಳಗಳಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಕೇಳಿಕೊಂಡ ಮೇರೆಗೆ ಮಹಾತ್ಮರ ಭಾವಚಿತ್ರದ ಮೆರವಣಿಗೆ, ಸ್ವತಂತ್ರ ಉಪ್ಪಿನ ಮಾರಾಟ, ರಾಜದ್ರೋಹಾತ್ಮಕ ಗ್ರಂಥಗಳ ವಾಚನ, ಪರದೇಶಿ ಬಟ್ಟೆಗಳ ಹೋಳಿ, ಸೊಲ್ಲಾಪುರದಲ್ಲಿಯ ದಂಡಾಳುಗಳ ಅತ್ಯಾಚಾರದ ನಿಷೇಧ ಮೊದಲಾದ ಕಾರ್ಯಕ್ರಮಗಳು ಒಳ್ಳೇ ಉತ್ಸಾಹದಿಂದ ನೆರವೇರಿದುವಾಗಿ ತಿಳಿಯುತ್ತದೆ.

## ಧಾರವಾಡದಲ್ಲಿ ಕಾಯದೆ ಭಂಗ

### ಶ್ರೀ ಕರಮರಕರರು ಕಾಯದೆಯನ್ನು ಮುರಿದರು.

ತಾ|| ೫ ನೆಯ ದಿವಸ ಧಾರವಾಡದಲ್ಲಿ ಮಹಾತ್ಮರ ಬಂಧನದ ದಿನವು ಒಳ್ಳೇ ಉತ್ಸಾಹದಿಂದ ಸಾಂಗವಾಯಿತು. ಮುಂಜಾನೆ ಮಹಾತ್ಮರ ಭಾವಚಿತ್ರದ ಮೆರವಣಿಗೆಯು ತೆಗೆಯಲ್ಪಟ್ಟಿತ್ತು. ಸಂಜೆಯಲ್ಲಿ ಸಾರ್ವಜನಿಕ ಸಭೆಯು ಸೇರಿತ್ತು. ಸಭೆಯಲ್ಲಿ ಶ್ರೀ ಕರಮರಕರ ದತ್ತರಾಯರು. ಜೆ. ಟಿ ಸಂಡರಲ್ಯಾಂಡರಿಂದ ರಚಿತವಾದ ಸರಕಾರ ಜಪ್ತವಾದ "ಇಂಡಿಯಾ ಇನ್ ಬೋಂಡೇಜ" ಎಂಬ ಗ್ರಂಥದೊಳಗಿನ ಅವತರಣಿಕೆಗಳನ್ನು ಓದಿ ಕಾಯಿದೆಯನ್ನು ಮುರಿದರು. ಆ ಕಾಲಕ್ಕೆ [illegible] ಸತ್ಯಾಗ್ರಹಿಯು ಸರಕಾರದಿಂದ ಜಪ್ತ ಮಾಡಲ್ಪಟ್ಟ ಪದ್ಯಾವಳಿಯೊಳಗಿನ ಪದ್ಯಗಳನ್ನು ಓದಿ ತೋರಿಸಿದನು. ಕೊನೆಯಲ್ಲಿ ಪರದೇಶಿ ಬಟ್ಟೆಗಳ ಪ್ರಚಂಡ ಹೋಳಿ ಆಗಿ ಸಭೆಯು ಮುಕ್ತಾಯವಾಯಿತು.

## ಧಾರವಾಡ ಜಿಲ್ಲೆಯಲ್ಲಿ ದಬ್ಬಾಳಿಕೆ

### ೧೭ ಜನರನ್ನು ಸೆರೆ ಹಿಡಿದು ಬಿಟ್ಟುಬಿಟ್ಟರು.

ತಾ|| ೫ ನೆಯ ದಿವಸ ಧಾರವಾಡದಿಂದ ಕೆಲವು ಸತ್ಯಾಗ್ರಹಿಗಳು ನರೇಂದ್ರಕ್ಕೆ ಹೋಗಿ ಸಿಂದೀ ಗಿಡಗಳನ್ನು ಕಡಿದರು. ಸರಕಾರಿ ಅಧಿಕಾರಿಗಳಿಗೆ ಇದು ತಿಳಿದು ಬಂದಿದ್ದರಿಂದ ಅವರು ದರೂ ಮುಂಜಾನೆ ೯ ಗಂಟೆಗೆ ಅಲ್ಲಿಗೆ ಹೋಗಿ ೧೭ ಜನ ಸತ್ಯಾಗ್ರಹಿಗಳನ್ನು ಸೆರೆ ಹಿಡಿದು ಧಾರವಾಡಕ್ಕೆ ಕರೆತಂದರು. ಆದರೆ ಧಾರವಾಡದ ಡಿ| ಮ್ಯಾಜಿಸ್ಟ್ರೇಟರು ಅವರ ಮೇಲಿನ ಖಟ್ಲೆಯನ್ನು ತೆಗೆದು ಹಾಕಿ ಎಲ್ಲ ಸತ್ಯಾಗ್ರಹಿಗಳನ್ನೂ ೪ ಗಂಟೆಗೆ ಬಿಟ್ಟು ಬಿಟ್ಟರು.

## ಹಾವೇರಿಯಲ್ಲಿ

### ೧೦೦೦ ಸಿಂದೀ ಗಿಡಗಳು ನಾಶವಾದವು.

ಹಾವೇರಿಯ ಸತ್ಯಾಗ್ರಹಿಗಳು ಪ್ರತಿದಿನವಲ್ಲಿಯೂ ಬೇರೆ ಬೇರೆ ಕಡೆಗೆ ಹೋಗಿ ಸಿಂದೀ ಗಿಡಗಳನ್ನು ಕಡಿಯಹತ್ತಿದ್ದು ಈಗಾಗಲೇ ೩—೪ ದಿನಗಳ ಅವಧಿಯಲ್ಲಿ ೧೦೦೦ ಗಿಡಗಳನ್ನು ಕಡಿದಿದ್ದಾರೆ. ೨ ನೆಯ ತಾ|| ದಿವಸ ಗಿಡಗಳನ್ನು ಕಡಿಯಲಿಕ್ಕೆ ೮ ಜನ ಸ್ತ್ರೀಯರೂ ಹೋಗಿದ್ದರು.

## ವಕೀಲರು ಕಿವಿ ಹಿಂಡಿಸಿಕೊಂಡರು

ಪುಣೆಯಲ್ಲಿ ಅಹಮ್ಮದನಗರದ ವಕೀಲರಾದ ಶ್ರೀ ಗಾಯಕೋವರಿಯವರ ವ್ಯಾಖ್ಯಾನವಾಯಿತು. ಅವರು ತಮ್ಮ ವ್ಯಾಖ್ಯಾನದಲ್ಲಿ ವಕೀಲರ ಕರ್ತವ್ಯಕರ್ಮಗಳ ವಿಷಯವಾಗಿ ಕೆಲವು ಬುದ್ಧಿಯ ಮಾತುಗಳನ್ನು ಹೇಳಿದ್ದು ಅದರ ಸಾರವನ್ನು ಕೆಳಗೆ ಕೊಟ್ಟಿದೆ.

"ಇಂದು ನಾವು ಸ್ವತಂತ್ರರಿಲ್ಲ. ಸರಕಾರದ ದೆಸೆಯಿಂದ ನಮ್ಮ ವ್ಯವಸಾಯವನ್ನು ಮಾರಾಟಕ್ಕೆ ಹಚ್ಚಿರುತ್ತೇವೆ. ಖಟ್ಲೆಯು ಸುಳ್ಳೆಂದು ಗೊತ್ತಿದ್ದರೂ, ಪಕ್ಷಕಾರನ ದೆಸೆಯಿಂದ ಖಟ್ಲೆ ನಡೆಸುತ್ತೇವೆ. ದರೋಡೆಗಾರರನ್ನು ದೋಷಮುಕ್ತ ಮಾಡಿಸುವದಕ್ಕೆ ಪ್ರಯತ್ನಿಸುತ್ತೇವೆ. ಆದರೆ ನಮ್ಮಿಂದ ಸ್ವಾರ್ಥತ್ಯಾಗವನ್ನು ಬಿಡಿಸುವದಕ್ಕಾಗುವದಿಲ್ಲ. ದಬ್ಬಾಳಿಕೆಯಿಂದ ಪ್ರಜೆಗಳ ಮೇಲೆ ಹೇರಿದ ಕಾಯಿದೆಗಳನ್ನು ವಿರೋಧಿಸುವದು ವಕೀಲರ ಕರ್ತವ್ಯಕರ್ಮವಾಗಿರುತ್ತದೆ. ಅಮೇರಿಕೆಯ ಅಧ್ಯಕ್ಷನು ಲಿಂಕನ್ನನು ವಕೀಲನೇ ಆಗಿದ್ದನು. ಆತನು ಸತ್ಯಕ್ಕಾಗಿ ತನ್ನ ಹಕ್ಕು ನಡಿಸಿದನು. ಆದುದರಿಂದ ನಾವು ದಬ್ಬಾಳಿಕೆಯ ಕಾಯಿದೆಯನ್ನು ಮುರಿಯಲು ಸಿದ್ಧರಾಗಬೇಕು. ಇಂದು ಉಪ್ಪನ್ನು ಕಡಿಮೆ ಮಾಡಿತು. ಕಾ[illegible] ಪ್ರತಿಯೊಬ್ಬನು ಸೆರೆ ಹಿಡಿಯಬೇಕು ಎಂದು ಕಾಯಿದೆಯು ಆದರೆ ಅದನ್ನು ಮನ್ನಿಸುವಿರೇನ? ಇಂಥ ಪಕ್ಷಪಾತ ಕಾಯಿದೆಗಳಿಗೆ ಕಲಿ ದಾಗುವದು ದೇಶದ್ರೋಹವೇ! ಸರಿ ನ್ಯಾಯಸ್ಥಾದ ಸೇವಕರಲ್ಲ. ವಕೀಲರಿದ್ದೇವೆಂದು ತಿಳಿದೇ ಕಾಯಿದೆ ಭಂಗ ಚಳವಳಿಯಲ್ಲಿ ಸೇರತಕ್ಕದ್ದು. ಸೇರದಿದ್ದರೆ ಅನರ್ಥವು ಆಗುವದು." ಶ್ರೀ ಗಾಯಕೋವರಿಯವರು ಹೇಳಿದ [illegible]ಗಳನ್ನು ವಕೀಲರು ಇನ್ನಾದರು ಮುಂದೆ ಬಂದು ಕಾಯಿದೆ ಭಂಗ ಚಳವಳಿಯಲ್ಲಿ ಸೇರುವರೋ?

# ಸೊಲ್ಲಾಪುರದ ಭಯಂಕರ ವಾರ್ತೆ

## ಶ್ರೀ ಮಲ್ಲಪ್ಪ ಧನಶೆಟ್ಟಿ ಮೊದಲಾದ ಮೂವರಿಗೆ ಗಲ್ಲಿನ ಶಿಕ್ಷೆ.

ಸೊಲ್ಲಾಪುರದಲ್ಲಿ ಸೆರೆಹಿಡಿಯಲ್ಪಟ್ಟ ಶ್ರೀ. ಮಲ್ಲಪ್ಪ ಧನಶೆಟ್ಟಿ ಹಾಗೂ ಇನ್ನಿಬ್ಬರನ್ನು ೨೫ ಜನ ಪೋಲೀಸರು ಈಗ ವಿಜಾಪುರಕ್ಕೆ ಕರೆದುಕೊಂಡು ಬಂದಿದ್ದಾರೆಂತಲೂ ಅವರಲ್ಲಿ ಒಬ್ಬರು ಕಾಯಿದೆ ಮಂಡಳದ ಸಭಾಸದರಿರುತ್ತಾರೆಂತಲೂ ಅವರೆಲ್ಲರಿಗೂ ದೇಹಾಂತದ ಶಿಕ್ಷೆಯನ್ನು ವಿಧಿಸುವವರಿದ್ದು, ಅಪೀಲ ಮಾಡಲು ಈಗ ಅವರಿಗೆ ಅವಧಿಯನ್ನು ಕೊಟ್ಟಿದ್ದಾರೆಂತಲೂ, ತಿಳಿದು ಬರುತ್ತದೆ.

---

### ಹುಬ್ಬಳ್ಳಿಯ ಸತ್ಯಾಗ್ರಹಿಗಳು
### ಸೊಲ್ಲಾಪುರಕ್ಕೆ ತೆರಳಿದರು.

ಸೊಲ್ಲಾಪುರದಲ್ಲಿ ನಡೆವ ನಾಡಗುಡಿಯ ಕಾಳಗದಲ್ಲಿ ಭಾಗ ತೆಗೆದುಕೊಳ್ಳಲು ಹೋಗಲಿಕ್ಕಿರುವ ಸತ್ಯಾಗ್ರಹಿಗಳನ್ನು ಆಶೀರ್ವದಿಸಿ ಕಳಿಸುವದಕ್ಕಾಗಿ ಹುಬ್ಬಳ್ಳಿಯಲ್ಲಿ ಗಾಂಧಿ ಚೌಕಿನಲ್ಲಿ ಸಾರ್ವಜನಿಕ ಸಭೆಯು ನೆರೆಯಿತು. ಶ್ರೀ ವಾಕನೇಕರ ಮತ್ತು ಶ್ರೀ ಕರಮರಕರ ಭಾಷಣಗಳಾದವು. ಟಿಳಕ ಕನ್ಯಾಶಾಲೆಯ ಬಾಲಿಕೆಯರು ಯಶಸ್ಟಿಂತನಪರ ಪದಗಳನ್ನು ಹಾಡಿ ಸತ್ಯಾಗ್ರಹಿಗಳನ್ನು ಸನ್ಮಾನಿಸಿದರು. ಕೊನೆಯಲ್ಲಿ ಶ್ರೀಮತಿ ಕುಂದಾಪುರ ಉಮಾಬಾಯಿಯವರು ಆಶೀರ್ವಾದಪರ ಭಾಷಣ ಮಾಡಿದರು. ಸತ್ಯಾಗ್ರಹಿಗಳು ಸೊಲ್ಲಾಪುರಕ್ಕೆ ಹೊರಟುಹೋದರು.

### ಧರಸಾನಾದಲ್ಲಿ ಅಧಿಕಾರಿಗಳ ರಾಕ್ಷಸೀ ಕೃತ್ಯ
### ಶ್ರೀಮತಿ ಗಾಂಧಿಯವರು ಕಣ್ಣೀರು ಸುರಿಸಿದರು.

ಮಹಾತ್ಮಾ ಗಾಂಧಿಯವರ ಪತ್ನಿಯವರಾದ ಶ್ರೀಮತಿ ಕಸ್ತೂರಿಬಾಯಿಯವರು ೪ನೆಯ ತಾ ದಿವಸ ಧರಸಾನಾ ದಾಳಿಯಲ್ಲಿ ಗಾಯವನ್ನು ಹೊಂದಿದ ಸ್ವಯಂಸೇವಕರನ್ನು ಆಸ್ಪತ್ರಿಯಲ್ಲಿ ಕಂಡು ಕಣ್ಣೀರು ಸುರಿಸಿ. ಕೆಳಗಿನಂತೆ ಉದ್ಗರೆದಿದ್ದಾರೆ:—

ಗಾಯಪಟ್ಟವರನ್ನು ಕಂಡಕೂಡಲೆ ನನ್ನ ಕಣ್ಣುಗಳಿಂದ ನೀರು ಜಳಜಳ ಉದುರಿದವು. ಪೋಲೀಸ ಅಧಿಕಾರಿಗಳು ಮಾಡಿದ ರಾಕ್ಷಸೀ ಕೃತ್ಯವನ್ನು ಕೇಳಿ ನನಗೆ ಸಿಡಿಲು ಬಡಿದಂತಾಯಿತು. ಈ ರಾಕ್ಷಸೀ ಕೃತ್ಯಗಳಿಗಾಗಿ ಪರಮೇಶ್ವರನು ಒಂದಿಲ್ಲೊಂದು ದಿನ ಅವರನ್ನು ದಂಡಿಸದೇ ಬಿಡಲಾರನು. ಶೂರ ಸಾಹಸೀ ಸತ್ಯಾಗ್ರಹಿಗಳು ತೋರಿಸಿದ ಧೈರ್ಯವನ್ನು ಕಂಡು ನನಗೆ ಇದ್ದುದರಲ್ಲಿಯೇ ಸಂತೋಷವಾಯಿತು. ಸತ್ಯಾಗ್ರಹಿಗಳು ದುಃಖಗಳನ್ನು ಅನುಭವಿಸುತ್ತಿರುವದು ಸತ್ಯಕ್ಕಾಗಿಯೇ. ಹಿಂದಕ್ಕೆ ಶ್ರೀ ಹರಿಶ್ಚಂದ್ರನಾದರೂ ಸತ್ಯಕ್ಕಾಗಿ ಹೀಂಗೆಯೆ ಕಷ್ಟಪಟ್ಟದ್ದುಂಟು. ದಬ್ಬಾಳಿಕೆಯನ್ನು [illegible] ಎದುರಿಸಿ ನಾನು ನನ್ನ ಜೀವನವನ್ನು ಸಾಗಿಸಲು ಟೊಂಕಕಟ್ಟಿದ್ದೇನೆ.

### ಬೆಳಗಾವಿ ಜಿಲ್ಹೆಯಲ್ಲಿ ದಬ್ಬಾಳಿಕೆ
### ೨೭ ಜನರನ್ನು ಸೆರೆಹಿಡಿದರು.

ಉಪ್ಪಿನ ಕಾಯಿದೆ ಭಂಗಕ್ಕಾಗಿ ಈಗೊಮ್ಮೆ ಶಿಕ್ಷೆಯನ್ನು ಕಂಡು ಬಿಡುಗಡೆಹೊಂದಿ ಬಂದ ಶ್ರೀ ಕುಲಕರ್ಣಿ ಜಯದೇವರನ್ನು ೧೧೭ನೆಯ ಕಲಮಿನನ್ವಯ [illegible]ದಲ್ಲಿ ಮತ್ತೆ ಸೆರೆಹಿಡಿದಿದ್ದಾರೆ. ಸೇಂದೀಗಿಡಗಳನ್ನು ಕಡಿದದ್ದಕ್ಕಾಗಿ ಬಾಗೇವಾಡಿಯಲ್ಲಿ ೨೭ ಜನರನ್ನು ಸೆರೆಹಿಡಿದಿದ್ದಾರೆ.

### ಶ್ರೀ ಚಿಕ್ಕೋಡಿಯವರಿಗೆ ಸಿಕ್ಕ ಬಹುಮಾನ

ಬೆಳಗಾವಿ ಜಿಲ್ಹೆಯ ಶ್ರೀ ಗೆಜ್ಜಿ, ಸರಶೆಟ್ಟಿ ಮನೋಳಿ ಮೊದಲಾದ ೧೦೦ ಜನ ಲಿಂಗಾಯತ ಗೃಹಸ್ಥರು ಕೆಳಗಿನಂತೆ ಒಂದು ಪತ್ರಕವನ್ನು ಪ್ರಸಿದ್ಧಿಸಿ, ಶ್ರೀ ಚಿಕ್ಕೋಡಿಯವರಿಗೆ ಬಹುಮಾನ ಮಾಡಿದ್ದಾರೆ ಆ ಪತ್ರವೆಂದರೆ:— ಶ್ರೀ ಚಿಕ್ಕೋಡಿ ಮುಂತಾದ ಇಬ್ಬರು ಮೂವರು ದಕ್ಷಿಣ ಭಾಗದ ಕಮೀಶನರರನ್ನೂ ಕಾಣಲಿಕ್ಕೆ ಹೋದಾಗ ಲಿಂಗಾಯತ ಸಮಾಜದವರು ಸತ್ಯಾಗ್ರಹ ಚಳವಳಿಗೆ ಅನುಕೂಲವಿಲ್ಲ. ಈ ಚಳವಳಿಗೆ ಲಿಂಗಾಯತರು ವಿರುದ್ಧರಿರುವರು ಎಂಬುದಾಗಿ ಮಾತನಾಡಿದ್ದಾರೆ. ಇದರಿಂದ ಕೆಲವರಿಗೆ ತಪ್ಪು ತಿಳುವಳಿಕೆಯುಂಟಾಗಿದೆ. ಆದುದರಿಂದ ನಾವು ಎಲ್ಲರಿಗೂ ಸಾರಿ ಹೇಳುವದೇನಂದರೆ, ಮೇಲ್ಕಾಣಿಸಿದ ಶ್ರೀ ಚಿಕ್ಕೋಡಿ ಪ್ರಭೃತಿಗಳು ನಮ್ಮ ಮುಖಂಡರಲ್ಲ, ಲಿಂಗಾಯತ ಜಾತಿಯವರೆಂಬುವದಕ್ಕಿಂತ ಹೆಚ್ಚಿಗೇನೂ ಇವರಿಗೆ ನಮ್ಮಲ್ಲಿ ಮಹತ್ವವಿಲ್ಲ. ಲಿಂಗಾಯತ ಸಮಾಜದ ಪರವಾಗಿ ಮಾತನಾಡಲಿಕ್ಕೆ ಇವರಿಗೆ ಯಾರೂ ಅನುಮತಿ ಕೊಟ್ಟಿದ್ದಿಲ್ಲ. ಈಗ ನಡೆದಿರುವ ಸತ್ಯಾಗ್ರಹದ ಸತ್ಕಾರ್ಯಕ್ಕೆ ಲಿಂಗಾಯತರ ಪೂರ್ಣ ಸಹಾನುಭೂತಿಯಿದೆ.

### ಧರಸಾನಾ ಮೇಲಿಯ ಕಡೆಯ ದಾಳಿ
### ಕನ್ನಡಿಗರೂ ಇವರಲ್ಲಿ ಸೇರಿದ್ದರು.

೬ನೆಯ ತಾ|| ದಿವಸ ಧರಸಾನಾ ವಖಾರದ ಮೇಲೆ ಕೊನೆಯ ದಾಳಿಯನ್ನು ಮಾಡುವದಕ್ಕಾಗಿ ೧೭೭ ಜನ ಸತ್ಯಾಗ್ರಹಿಗಳು ಬಿಡಾರದಿಂದ ಹೊರಟರು. ಈ ಸತ್ಯಾಗ್ರಹಿಗಳಲ್ಲಿ ಕರಾಚಿ, ಪಂಚಮಹಾಲ, ಕಾಠೇವಾಡ, ಗುಜರಾತ ಮತ್ತು ಕರ್ನಾಟಕಪ್ರಾಂತದಿಂದ ಹೋದ ಸತ್ಯಾಗ್ರಹಿಗಳು ಸಮಾವಿಷ್ಟರಾಗಿದ್ದರು. ಅವರು ಪ್ರತಿಬಂಧಿತವಾದ ಸ್ಥಳದಲ್ಲಿ ಕಾಲಿಟ್ಟ ಕೂಡಲೆ ಪೋಲೀಸರು ಅವರನ್ನು ತಡೆದರು. ಸತ್ಯಾಗ್ರಹಿಗಳು ಅಲ್ಲಿಯೇ ಕುಳಿತುಬಿಟ್ಟರು. ಬಳಿಕ ಪೋಲೀಸರು ತಿರುಗಿ ಹೋಗಲು ಅವರನ್ನು ಕೇಳಿಕೊಂಡರು. ಸತ್ಯಾಗ್ರಹಿಗಳು ಹಿಂದಕ್ಕೆ ಹೋಗಲು ಒಪ್ಪದೆ ಮತ್ತೆ ಮುಂದಕ್ಕೆ ಸರಿಯ ಹತ್ತಿದರು. ಆದುದರಿಂದ ಪೋಲೀಸ ಅಧಿಕಾರಿಗಳು [illegible] ಸತ್ಯಾಗ್ರಹಿಗಳನ್ನು ಬಡಿದು ಬಿಡಾರದ ವರೆಗೆ ಹಿಂದಕ್ಕಟ್ಟಿದರು. ಎಷ್ಟೋ ಸತ್ಯಾಗ್ರಹಿಗಳಿಗೆ ಗಾಯಗಳಾಗಿವೆ.

# ಮುಂಬಯಿಯ ಸತ್ಯಾಗ್ರಹ ಶಿಬಿರವನ್ನು ಪೋಲೀಸರು ಮುತ್ತಿದರು

## ಸತ್ಯಾಗ್ರಹ ಮಂಡಳದ ಅಧಿಕಾರಿಗಳನ್ನು ಸೆರೆ ಹಿಡಿದರು

ಮುಂಬಯಿಯ ಡೆ| ಕಮೀಶನರರು ೬೦೦ ಜನ ಪೋಲೀಸರೊಂದಿಗೆ ಹೋಗಿ ಕಾಂಗ್ರೆಸ ಕಮಿಟಿ ಹಾಗು ಸತ್ಯಾಗ್ರಹ ಶಿಬಿರವನ್ನು ಮುತ್ತಿ ಶ್ರೀ ಜಮನಾಭಾಯಿ ಜೋಶಿ, ಮಣಿಭಾಯಿ ದೇಸಾಯಿ, ಪ್ರೊ. ಜಿ, ರಾಮದಾಸ ಪ್ರಕಾಶ, ಜೆ ವಿಶ್ವನಾಥ ಮತ್ತು ಜಿ. ಶರ್ಮಾ ಮೊದಲಾದ ೬ ಜನ ಸತ್ಯಾಗ್ರಹ ಮಂಡಳದ ಸಭಾಸದರನ್ನು ಸೆರೆಹಿಡಿದರು.

### ಧರಸಾನಾ ದಾಳಿಯ ರಣರಂಗ
### ೬೫ ಕನ್ನಡ ಕಡುಗಲಿಗಳ ಪ್ರಯಾಣ
ಬಾಗಲಕೋಟೆಯಿಂದಲೂ ೮ ಜನರು ಹೋಗಿದ್ದಾರೆ.

ಧರಸಾನಾದಲ್ಲಿ ನಡೆದಿರುವ ಉಪ್ಪಿನ ಕಾಯಿದೆ ದಾಳಿಯ ಕಾರ್ಯದಲ್ಲಿ ಭಾಗವನ್ನು ತೆಗೆದುಕೊಳ್ಳಲು ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ೬೫ ಜನ ಕನ್ನಡ ಕಡುಗಲಿ ಸತ್ಯಾಗ್ರಹಿಗಳು ಕೆಲವು ದಿವಸಗಳ ಹಿಂದೆಯೆ ಹೊರಟು ತ|| ೫ಕ್ಕೆ ಧರಸಾನಾಕ್ಕೆ ಮುಟ್ಟಿದ್ದಾರೆ, ಮೇಲಿನ ೬೫ ಜನ ಸತ್ಯಾಗ್ರಹಿಗಳಲ್ಲಿ ಧಾರವಾಡ, ಹುಬ್ಬಳ್ಳಿ, ಬೆಳಗಾವಿ ಮೊದಲಾದ ಸ್ಥಳಗಳ ಸತ್ಯಾಗ್ರಹಿಗಳು ಸಮಾವಿಷ್ಟರಾಗಿರುವರಲ್ಲದೆ, ಬಾಗಲಕೋಟೆಯಿಂದ ಹೋದ ೮ ಜನ ಸತ್ಯಾಗ್ರಹಿಗಳೂ ಸೇರಿದ್ದಾರೆ ನಿನ್ನಿನ ದಿವಸ ಈ ಸತ್ಯಾಗ್ರಹಿಗಳು ದಾಳಿಯನ್ನು ಮಾಡಿರಬಹುದು.

### ಗಲಗಲಿಯಲ್ಲಿ ಪೋಲೀಸರ ಪುಂಡಾಟಿಕೆ.

ಎಂದಿನಂತೆ ನಿನ್ನೆಯಾದರೂ ಶ್ರೀ. ಶ್ರೀ. ಗೋ. ಸಂಗಮ ಮತ್ತು ಬಿ. ಕಾಖಂಡಕಿ, ಹಟ್ಟಿ ಇವರು ಪಿಕೆಟಿಂಗಕ್ಕೆಂದು ಹೋಗಿದ್ದರು. ಈ ಹೊತ್ತಿನ ದಿವಸವಾದರೂ ರಾಜೂ ಕುಡುಕರು ಸನಿಹಕ್ಕೆ ಬರಲಿಲ್ಲ. ಆದರೂ ಒಬ್ಬಿಬ್ಬ ಅತಿ ಕುಡುಕರು ಮಾತ್ರ ಬಂದಿದ್ದರು. ಅವರಿಗಾದರೂ ಸ್ವಯಂಸೇವಕರು ಕೈಕಾಲು ಜೋಡಿಸಿ ಹೇಳಿಕೊಂಡರು. ಅದಕ್ಕೆ ಅವರು "ನಾವು ಬಹು ದಿವಸದಿಂದ ಕುಡಿಯುತ್ತ ಬಂದವರು. ಒಮ್ಮೆಲೇ ಬಿಡುವದು ನಮ್ಮಿಂದಾಗದು. ಕ್ರಮೇಣ ಕಡಿಮೆಮಾಡುತ್ತ ಬರುತ್ತೇವೆ. ಅಲ್ಲಿಯ ವರೆಗೆ ದಯಮಾಡಿ ನಮ್ಮ ಕಾಲುಗಳನ್ನು ಮಾತ್ರ ಬೀಳಬೇಡಿರಿ! ನಮಗೂ ತಿಳಿಯುತ್ತದೆ. ಎಂದು ಹೇಳಿ, ನಿರ್ವಾಹವಿಲ್ಲದೆ ಕುಡಿದರು. ರಾಜೂ ಗಿರಾಕಿಗಳೂ ಇಲ್ಲದ್ದರಿಂದ ಅಂಗಡಿಯ ಮುಂದುಗಡೆಯ ಬೈದ ಬುಡ್ಡಿ ಬೀಸತ್ತು, ಸಂಜೆ ೬ ತಾಸ ಹೊತ್ತಿಗೆ ಇಲ್ಲಿಕ್ಕೆ ಅಂಗಡಿಯನ್ನು ಮುಚ್ಚಿ ಮನೆಗೆ ಹೊರಟು ಹೋದನು.

ರಾತ್ರಿಯಲ್ಲಿ ಸೇಂದಿಯು ಮಾರಲ್ಪಡುತ್ತಿರಬಹುದೆಂಬ ಸಂಶಯದಿಂದ ಸ್ವಯಂಸೇವಕರು ನಿರೀಕ್ಷಿಸುತ್ತಲೇ ಇದ್ದರು. ಅದರಂತೆ ಸರಿಯಾಗಿ ೧೦ ಗಂಟೆ ಸುಮಾರಕ್ಕೆ ಕೆಲವು ಕುಡುಕರೊಂದಿಗೆ ಪೋಲೀಸರು ಅಂಗಡಿಗೆ ಬಂದದ್ದು ದೃಷ್ಟಿಗೆ ಬಿತ್ತು. ಆ ಬಳಿಕ ಸತ್ಯಾಗ್ರಹಿಗಳು ಪಿಕೆಟಿಂಗಕ್ಕೆಂದು ಮತ್ತೆ ಹೋದರು. ಆಗ ಸಿಟ್ಟಿನಿಂದ ಪೋಲೀಸ ಹವಾಲ್ದಾರನು ಕುಡುಕರಿಗೆ ಸ್ವಯಂಸೇವಕರನ್ನು ಲಾಠಿಯಿಂದ ಥಳಿಸಲಿಕ್ಕೆ ಹುರಿದುಂಬಿಸುತ್ತಿದ್ದನು. ಎಷ್ಟು ಹೇಳಿದರೂ ಕುಡುಕರು ಕೈ ಎತ್ತಲಿಲ್ಲ ಇದನ್ನು ನೋಡಿ ಹವಾಲ್ದಾರನು ಅಂಗಡಿಕಾರನಿಗೆ "ಇವರನ್ನು ಎಳೆದುಕೊಂಡು ಹೋಗಿ ಅಂಗಡಿಯೊಳಗೆ ಹಾಕಿ. ಕುಡುಕಿಗೆ ಬಂದಿದ್ದರೆಂದು ಫಿರ್ಯಾದಿಯನ್ನು ಕೊಡು ಆ ಮೇಲೆ ನಾನು ನೋಡುತ್ತೇನೆ, ಎಂದು ಹೇಳಿದನು. ಸತ್ಯಾಗ್ರಹಿಗಳು ಶಾಂತರೀತಿಯಿಂದಲೇ ತಮ್ಮ ಕೆಲಸವನ್ನು ನಡಿಸಿದ್ದರು. ಶಾಂತತೆಯನ್ನು ಭಂಗ ಮಾಡುವದಕ್ಕಾಗಿ ಪೋಲೀಸರು ಎಷ್ಟು ಹವಣಿಸಿದರೂ ಸಾಧ್ಯವಾಗಲಿಲ್ಲ. ಮುಂದೆ ಅಂಗಡಿಯು ಮುಚ್ಚಲ್ಪಟ್ಟ ಬಳಿಕ. ಸತ್ಯಾಗ್ರಹಿಗಳು ಸ್ವಸ್ಥಾನಕ್ಕೆ ತೆರಳಿದರು.

| ಗಲಗಲಿ | ಪ್ರಕಟನಾ ಶಾಖಾ |
|---|---|
| ತಾ|೭—೬—೩೦ | ಸತ್ಯಾಗ್ರಹ ಯುದ್ಧ ಮಂಡಳ ಕಚೇರಿ. |

### ಮಹಾತ್ಮರ ಮೆರವಣಿಗೆಗೆ ಅಡ್ಡಿ.

೪ನೆಯ ತಾ| ದಿವಸ ಬೆಂಗಳೂರಿನಲ್ಲಿ ಮಹಾತ್ಮಾ ಗಾಂಧಿಯ ಭಾವಚಿತ್ರದ ಮೆರವಣಿಗೆಯು ಹೊರಡ ತಕ್ಕದ್ದಿತ್ತು ಆದರೆ ಅಲ್ಲಿಯ ಅಧಿಕಾರಿಗಳು ಮೆರವಣಿಗೆಗೆ ಅಡ್ಡಿಯನ್ನುಂಟು ಮಾಡಿದ್ದರಿಂದ ಅದು ಹೊರಡಲಿಲ್ಲ,


ಜಯಲಕ್ಷ್ಮೀ ಪ್ರಸಾದಿತ

ಶ್ರೀಮಿತ್ರಿತ ಸಂಗೀತ ನಾಟಕ ಮಂಡಳಿ ದಾವಣಗೇರಿ ಇವರು

**ಬಾಗಲಕೋಟೆ ರಾಜ ಥಿಯೇಟರಿನಲ್ಲಿ**

ಸೋಮವಾರ ತಾ|| ೯-೬-೩೦

ತ್ರಿಕೋಟಿಲಿಂಗಪ್ರತಿಷ್ಠಾ

ಬುಧವಾರ ತಾ ೧೧—೬—೩೦

ಪ್ರತಾಪಪ್ರಮೀಲಾ

ಎಂಬ ಹೊಸ ಆಖ್ಯಾನಗಳನ್ನು ಪ್ರಯೋಗಿಸುವರು.

ವ್ಯವಸ್ಥಾಪಕ.

ಬರುವರು! ಬರುವರು!!

ಶ್ರೀ ಮಹಾಲಕ್ಷ್ಮೀ ಪ್ರಸಾದಿತ

ಶಿರಹಟ್ಟಿ ನಾಟಕ ಮಂಡಳಿಯವರು

ಶಿವಾನಂದ ನಾಟಕ ಶಾಲೆಯಲ್ಲಿ

# ಬೇಗನೆ ಬರುವರು

ಸೋಮವಾರ ತಾ|| ೯-೬-೩೦

ಸಂಪೂರ್ಣ ಕೃಷ್ಣಲೀಲಾ

ಬುಧವಾರ ತಾ|| ೧೧—೬—೩೦

ಲಂಕಾದಹನ.

ಎಂಬ ನಾಟಕಗಳನ್ನು ಅಭಿನಯಿಸುವರು.

ಎಚ್, ವೆಂಕೋಬರಾವ.
ಪ್ರೊಪ್ರಾಯಿಟರ.


ಈ ಪತ್ರಿಕೆಯು ಬಳವಂತ ಅಣ್ಣಾರಾವ ಮಜುಮುದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

ಜಯ ಕರ್ನಾಟಕ

यदत् परवशं दुःखं । यद्यदात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಮಂಗಳವಾರ ಶುಕ್ಲ ಜ್ಯೇಷ್ಠ ಶುದ್ಧ ೧೪ ಶಕೆ ೧೮೫೨ ತಾ|| ೧೦—೬—೩೦ ಸಂಚಿಕೆ ೭೧

# ಕರ್ನಾಟಕದಲ್ಲಿಯು

## ಸತ್ಯಾಗ್ರಹದ ಸಿಂಹಾವಲೋಕನ

### ಬೆಳಗಾವಿ ಜಿಲ್ಲೆ.

ಈ ಜಿಲ್ಲೆಯಲ್ಲಿ ಉಪ್ಪಿನ ಸತ್ಯಾಗ್ರಹವು ಉತ್ತಮ ರೀತಿಯಿಂದ ನಡೆದು ಬಂದಿದೆ. ಸಾಮುದಾಯಿಕ ಕಾಯಿದೆ ಭಂಗವು ಇದೊಂದು ದೇಶದಲ್ಲಿಯೇ ನಡೆದಿದೆ ಇತ್ತೀಚೆಗೆ ಉಪ್ಪಿನ ಕಾಯಿದೇ ಭಂಗದ ಜೊತೆಗೆ ಮದ್ಯಪಾನ ನಿರೋಧ ಹಾಗೂ ವಿದೇಶೀ ವಸ್ತ್ರ ಬಹಿಷ್ಕಾರ ಚಳವಳಿಗಳು ಭರದಿಂದ ಸಾಗಿವೆ. ಈ ಜಿಲ್ಲೆಯ ಮುಂದಾಳುಗಳೆಲ್ಲರೂ ಸೆರೆ ಹಿಡಿಯಲ್ಪಟ್ಟಿದ್ದರೂ ಕಾರ್ಯವು ಮಾತ್ರ ಬಹು ಹುರುಪಿನಿಂದ ನಡೆದಿದೆ.

### ಧಾರವಾಡ ಜಿಲ್ಲೆ.

ಈ ಜಿಲ್ಲೆಯ ಅಧಿಕಾರಿಗಳು ಸತ್ಯಾಗ್ರಹ ಚಳವಳಿಯನ್ನು ತಿರಸ್ಕಾರ ದೃಷ್ಟಿಯಿಂದಲೇ ನೋಡುತ್ತಿದ್ದರೆ ಶ್ರೀ ದಿವಾಕರ ಮುಂತಾದ ಮುಖಂಡರಿಗೆ ಮತ್ತಾರಿಗೂ ಕಾರಾಗೃಹ ಪ್ರವೇಶ ದೊರೆಯಲಿಲ್ಲ ಟಣ್ಣೆ ಹಳ್ಳದ ಬದಿಯ ೧೫ ಗ್ರಾಮಗಳಲ್ಲಿ ಉಪ್ಪು ಹೇರಳವಾಗಿ ಸಿದ್ಧ ಮಾಡಲ್ಪಟ್ಟಿದೆ. ಜಿಲ್ಲೆಯ ಭಾಗಗಳಲ್ಲಿಯೂ ಕಾಯಿದೆ ಭಂಗವು ಆಯಿತು. ಈಚಲ ಗಿಡಗಳನ್ನು ಕಡಿಯುವ ಕೆಲಸವು ಆರಂಭವಾಗಿದೆ. ವಿದೇಶಿ ಬಹಿಷ್ಕಾರ ಹಾಗು ಖಾದೀ ಪ್ರಸಾರ ಒಳ್ಳೇ ಹುರುಪಿನಿಂದ ಸಾಗಿದೆ.

### ಮೈಸೂರ ಸಂಸ್ಥಾನ

ಮೈಸೂರ ಸಂಸ್ಥಾನವಾದರೂ ಬ್ರಿಟಿಶ್ ಪ್ರಾಂತಗಳಲ್ಲಿ ನಡೆಯುತ್ತಿರುವ ಚಳವಳಿಗೆ ಧನಜನ ಸಹಾಯವನ್ನು ಕೊಡುತ್ತಿದೆ ಮೈಸೂರು, ಬೆಂಗಳೂರ ನಗರಗಳಲ್ಲಿ ವಿದೇಶಿ ವಸ್ತ್ರ ಬಹಿಷ್ಕಾರ ಮತ್ತು ಖಾದಿ ಪ್ರಚಾರ ಇವುಗಳ ಕೆಲಸವು ಉತ್ಸಾಹದಿಂದ ನಡೆದಿದೆ.

### ಕರ್ನಾಟಕ ಸತ್ಯಾಗ್ರಹ ಪತ್ರಿಕೆ.

## ಸತೀನ ಸೇನರ ಉಪವಾಸವ್ರತ

ದಾರ್ಜಿಲಿಂಗ ತುರಂಗದಲ್ಲಿರುವ ರಾಜಕೀಯ ಕೈದಿಗಳಾದ ಸತೀನ ಸೇನರು ಅಲ್ಲಿಯ ಅಧಿಕಾರಿಗಳ ವರ್ತನದ ನಿಷೇಧಕ್ಕಾಗಿ ಮೇ ೨೪ನೇ ತಾ|| ನಿಂದ ಉಪವಾಸ ವ್ರತ ಕೈಕೊಂಡಿದ್ದಾರೆ.

# ದೇಶಸೇವೆಯೇ ನನ್ನ ಧರ್ಮವಾಗಿದೆ.

ವಡಾಲಾ ಮಿಠಾದ ಮೇಲೆ ದಾಳಿಯನ್ನು ಮಾಡಲು ಹೊರಟ ಸತ್ಯಾಗ್ರಹಿಗಳಲ್ಲಿ ಶ್ರೀ. ತ್ರಿಂಬಕ ವಿಠ್ಠಲ ಎಂಬ ಹೆಸರಿನ ೧೬ ವರ್ಷ ಸತ್ಯಾಗ್ರಹಿಯಿದ್ದನು. ಅಧಿಕಾರಿಗಳು ಅವರೆಲ್ಲರನ್ನು ಸೆರೆ ಹಿಡಿದು ವರ್ಲಿ ಚಾಳದಲ್ಲಿ ಇಟ್ಟಿದ್ದರು. ಸತ್ಯಾಗ್ರಹಿಗಳ ಖಟ್ಲೆಯು ೪ ನೇ ತಾ|| ದಿವಸ ಪ್ರಾರಂಭವಾಯಿತು ಅಂದು ಆ ತರುಣ ಸತ್ಯಾಗ್ರಹಿಯ ತಂದೆಯು ಕೋರ್ಟಿಗೆ ಹೋಗಿ ಆ ಹುಡುಗನನ್ನು ಬಿಡಲು ಮ್ಯಾಜಿಸ್ಟ್ರೇಟರಿಗೆ ಬೇಡಿಕೊಂಡನು. ಮ್ಯಾಜಿಸ್ಟ್ರೇಟರು ಪ್ರತಿಯಾಗಿ ಆ ಹುಡುಗನಿಗೆ "ನೀನು ಬಿಡುಗಡೆ ಹೊಂದಲಿಚ್ಛಿಸುವಿಯಾ? ಎಂದು ಕೇಳಿದರು. ಅದಕ್ಕೆ ತರುಣನು "ಇಲ್ಲ" ವೆಂದು ಉತ್ತರವನ್ನು ಕೊಟ್ಟು "ನೀನು ಮುದಿಯ ನಿರುವಿಯೆಂಬುದನ್ನು ನೆನಪಿಗೆ ತೆಗೆದುಕೊಂಡು ಬಾ" ಎಂದು ತನ್ನ ತಂದೆಗೆ ಹೇಳಿದನು. ಆ ಮೇಲೆ ಮ್ಯಾಜಿಸ್ಟ್ರೇಟರು "ನಿನ್ನ ತಂದೆಯ ಸೇವೆ ಮಾಡುವದು ನಿನ್ನ ಧರ್ಮವಿದೆ. ಆದದರಿಂದ ಮನೆಗೆ ಹೋಗು" ಎಂದು ತರುಣನನ್ನು ಕೇಳಿಕೊಂಡರು. ಇಷ್ಟು ದಿವಸಗಳವರೆಗೆ ನನ್ನ ತಂದೆಯ ಸೇವೆಯನ್ನು ಮಾಡಿದ್ದೇನೆ. ಈಗ ಮಾತೃಭೂಮಿಯ ಸೇವೆಯನ್ನು ಮಾಡುವ ಪ್ರಸಂಗವು ಬಂದಿದೆ. ಅದುದರಿಂದ ನಾನು ಸತ್ಯಾಗ್ರಹದಲ್ಲಿ ಸೇರಿದ್ದೇನೆ." ಎಂದು ಆ ತರುಣನು ಉತ್ತರಕೊಟ್ಟನು.

—>>o<<—

### ಸೂಚನೆ.

ಇಲ್ಲಿಯ ಭಗಿನಿಯರು ಸ್ವದೇಶಿ ಬಟ್ಟೆಗಳನ್ನು ಕೊಳ್ಳಲು ಹೋದಾಗ ಒಂದು ಅಂಗಡಿಯಲ್ಲಿ ಶ್ರೀ ವೆಂಕೋಬಾ ಪಾಂಡುರಂಗ ಮುರಾರಿಯವರ ಹೆಸರಿನಲ್ಲಿದ್ದ ಹಸ್ತ್ರಿಯ ಪಾವತಿಯು ಸಿಕ್ಕಿದೆ ಅದುದರಿಂದ ಅವರಾಗಲಿ ಇಲ್ಲವೆ ಅವರಿಗೆ ಸಂಬಂಧಿಸಿದವರಾಗಲಿ "ಕನ್ನಡಿಗನ" ಕಾರ್ಯಾಲಯಕ್ಕೆ ಬಂದು ಆ ಪಾವತಿಯನ್ನು ತೆಗೆದುಕೊಂಡು ಹೋಗಬೇಕಾಗಿ ವಿನಂತಿ.

ಬಾಗಲಕೋಟೆ ತಾ|| ೬-೬-೩೦ } ಶ್ರೀ. ರಾ. ಹದಕಿ, ಸತ್ಯಾಗ್ರಹ ಶಿಬಿರ ನಾಯಕ

## ಆಚಾರ್ಯ ಕೃಪಲಾಣಿಯವರಿಗೆ ೧ ವರ್ಷ ಸಶ್ರಮ ಶಿಕ್ಷೆ.

೧೨೪ ಅ ಕಲಮಿನನ್ವಯ ರಾಜದ್ರೋಹಕ್ಕಾಗಿ ಸೆರೆಹಿಡಿಯಲ್ಪಟ್ಟ ಆಚಾರ್ಯ ಕೃಪಲಾಣಿಯವರಿಗೆ ಕಾನಪುರದ ಡಿ। ಮ್ಯಾಜಿಸ್ಟ್ರೇಟರು ೧ ವರ್ಷದ ಸಶ್ರಮ ಶಿಕ್ಷೆಯನ್ನು ವಿಧಿಸಿದ್ದಾರೆ.

## ಪೋಲೀಸನು ರಾಜೀನಾಮೆ ಕೊಟ್ಟನು.

ನಿಃಶಸ್ತ್ರರೂ, ಶಾಂತತಾವಾದಿಗಳೂ ಆದ ಸತ್ಯಾಗ್ರಹಿಗಳನ್ನು ಅವಮಾನಗೊಳಿಸಿದ್ದುದರ ನಿಷೇಧಾರ್ಥವಾಗಿ ಅಹಮ್ಮದಾಬಾದ ನಗರದ ಪೋಲೀಸನಾದ ಶ್ರೀ ಪ್ರಕಾಶಸಿಂಗರು ತಮ್ಮ ಸರಕಾರಿ ಉದ್ಯೋಗಕ್ಕೆ ಶರಣು ಹೊಡೆದಿದ್ದಾರೆ.

## ಮಂಗಳೂರಿನಲ್ಲಿ ಮದ್ಯಪಾನ ಪ್ರತಿಬಂಧ.

ತಾ। ೩ ನೆಯ ದಿವಸ ಮೂರು ಮೂರು ಜನ ಸ್ವಯಂಸೇವಕರು ಹೋಗಿ ೧೨ ಸಿಂದೀ ಅಂಗಡಿಗಳನ್ನು ಪಿಕೆಟಿಂಗ ಮಾಡಿದರು. ಊರೊಳಗಿನ ೭—೮ ಸದ್ಗೃಹಸ್ಥರೂ ಈ ಕಾರ್ಯದಲ್ಲಿ ಸ್ವಯಂಸೇವಕರೊಡನೆ ಸಹಕರಿಸಿದ್ದರು. ಒಂದೆರಡು ಕಡೆಗೆ ಸ್ವಯಂಸೇವಕರಿಗೆ ಹೊಡೆತಗಳೂ ಬೈಗಳೂ ಬಿದ್ದರೂ ಗಲಾಟೆಯಾಗಲಿಲ್ಲ. ತಾ। ೪ ಮತ್ತು ೫ ಈ ದಿನಗಳಲ್ಲಿಯೂ ಪಿಕೆಟಿಂಗ ಕಾರ್ಯವು ನಡೆಯಿತು. ಸಾಯಂಕಾಲದಲ್ಲಿ ಸಾರ್ವಜನಿಕ ಸಭೆ ಸೇರಿತ್ತು. ಶ್ರೀ ಮುಕುಂದರಾಯರು ಮತ್ತು ಭ. ಡಾರಿಯವರು ಭಾಷಣ ಮಾಡಿದರು. ಮುಂಬಯಿಯಿಂದ ಬಂದಿದ್ದ ಯುವಕರಾದ ಶ್ರೀ ಪುಲ್ಲಿ ಉಮಾನಾಥರಾಯರು ಮುಂಬಯಿಯ ಈಗಿನ ರಾಜಕೀಯ ವಾತಾವರಣದ ವಿಷಯವಾಗಿ ಸ್ಫೂರ್ತಿದಾಯಕ ಭಾಷಣ ಮಾಡಿದರು. ಶ್ರೀ ಮಹಾಬಲಶೆಟ್ಟಿಯವರು ಪಾಣೆಮಂಗಳೂರು, ಬಂಟ್ವಾಳದ ಕಡೆಗೆ ಪ್ರಚಾರಕ್ಕಾಗಿ ಹೋಗಿರುವರು. ಬಂಟ್ವಾಳದಲ್ಲಿ ಮದ್ಯಪಾನ ಪ್ರತಿಬಂಧದ ಚಳವಳಿಯು ಉತ್ತಮರೀತಿಯಿಂದ ಸಾಗಿದೆ.

೫—೬-೩೦ ಮಂಗಳೂರ — ಪ್ರಕಟನಾಧಿಕಾರಿ, ಸ್ವಯಂಸೇವಕರ ಶಿಬಿರ.

## ಬೆಟಗೇರಿಯಲ್ಲಿ ಕಾಯಿದೆ ಭಂಗ.

**ಉಪ್ಪಿನ ಮಾರಾಟ ರಾಜದ್ರೋಹಾತ್ಮಕ ಗ್ರಂಥ ವಾಚನ**

ತಾ। ೫ ನೆಯ ದಿವಸ ಮಹಾತ್ಮಾ ಗಾಂಧಿಯವರ ಭಾವಚಿತ್ರದ ಮೆರವಣಿಗೆಯು ತೆಗೆಯಲ್ಪಟ್ಟಿತ್ತು. ಸಂಜೆಯಲ್ಲಿ ಶ್ರೀ ಅನಂತರಾವ ಜಾಲಿಹಾಳ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಸೇರಿತ್ತು. ಶ್ರೀ ಸಾವಕಾರ ಅನಂತರಾಯರು ಸ್ವತಂತ್ರವಾಗಿ ಸಿದ್ಧಪಡಿಸಿದ ಉಪ್ಪನ್ನು ಮಾರಾಟ ಮಾಡಿದರು. ಡಾ॥ ಹುಯಿಲಗೋಳ ವೆಂಕಟರಾಯರು "ಇಂಡಿಯಾ ಇನ್ ಬೊಂಡೇಜ" ಎಂಬ ಸರಕಾರ ವಶವಾದ ಗ್ರಂಥದೊಳಗಿನ ಕೆಲವು ಭಾಗಗಳನ್ನು ಓದಿದರು. ನಂತರದಲ್ಲಿ ಸೊಲ್ಲಾಪುರದಲ್ಲಿಯ ಅತ್ಯಾಚಾರಗಳನ್ನು" ನಿಷೇಧಿಸುವ ಗೊತ್ತುಗಳು ಸ್ವೀಕೃತವಾದವು. ಕೊನೆಯಲ್ಲಿ ಪರದೇಶಿ ಬಟ್ಟೆಗಳ ಹೋಳಿಯೂ, ರಾಷ್ಟ್ರಗೀತೆಯೂ ಆದ ನಂತರ ಸಭೆಯು ಮುಗಿಯಿತು.

## ಮುಂಬಯಿಯ ಕಾಂಗ್ರೆಸ ಭವನವು ಪುಣ್ಯಕ್ಷೇತ್ರವಾಯಿತು

ಮುಂಬಯಿಯಲ್ಲಿಯ ರಾಷ್ಟ್ರೀಯ ಪಕ್ಷದ ಮುಖಂಡರನ್ನು ಸರಕಾರದವರು ಸೆರೆಹಿಡಿದುಕೊಂಡು ಹೋಗಿದ್ದರೂ, ಅಲ್ಲಿಯ ಪ್ರಾಂತಿಕ ಕಮಿಟಿಯ ಕಾರ್ಯವು ಮೊದಲಿನಕಿಂತಲೂ ಭರದಿಂದ ಸಾಗಿದೆ. ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು "ಕಾಂಗ್ರೆಸ ಪತ್ರಿಕೆಯನ್ನು ಇನ್ನು ಮುಂದೆ ಹೊರಡಿಸಬಾರದೆಂದು ಕೊಟ್ಟ ಅಪ್ಪಣೆಯು ಕಸದ ಬುಟ್ಟಿಯನ್ನು ಕಂಡಿತು. ಈಗ ಕಾಂಗ್ರೆಸ ಪತ್ರಿಕೆಯು ಮೂರು ಭಾಷೆಗಳಲ್ಲಿ ಹೊರಡುತ್ತಿದೆ. ಕೆಲಕೆಲವು ದಿವಸಗಳಲ್ಲಿ ದಿನಕ್ಕೆ ಎರಡು ಸಾರೆ ಹೊರಟಿದೆ. ಸಾವಿರಾರು ಜನರು ದಿನಾಲು ಕಾಂಗೆಸ್ ಪತ್ರಿಕೆಯನ್ನು ಕೊಂಡುಕೊಳ್ಳಲು ಕಾಂಗ್ರೆಸ ಕಮಿಟಿಯ ಎದುರಿನಲ್ಲಿ ಹೋಗಿ ನಿಂತಿರುತ್ತಾರೆ. ಜಾತ್ರೆಯಲ್ಲಿ ಆಗುವಂತೆ, ಆಟದ ಸಾಮಾನುಗಳು ಮೊದಲಾದವುಗಳ ಅಂಗಡಿಗಳು ಕಾಣಿಸಿಕೊಳ್ಳುವಂತೆ, ಕಾಂಗ್ರೆಸ ಕಮಿಟಿಯ ಎದುರಿನಲ್ಲಿ, ತಕಲಿ, ಖಾದೀ ಟೊಪ್ಪಿಗೆ, ನೂಲು ಮೊದಲಾದವುಗಳ ಅಂಗಡಿಗಳು ಕಾಣಿಸಿಕೊಳ್ಳುತ್ತವೆ. ಪ್ರತಿನಿತ್ಯವೂ ಸಾವಿರಾರು ಸ್ವಯಂಸೇವಕರು ಅಲ್ಲಿಯೇ ಊಟಮಾಡಿ ತಮ್ಮ ತಮ್ಮ ಉದ್ಯೋಗಗಳಿಗೆ ಹೋಗುತ್ತಾರೆ. ಕಾಳಿನ ವ್ಯಾಪಾರಿಗಳಂತೂ ಪ್ರತಿನಿತ್ಯದಲ್ಲಿಯೂ ಧಾನ್ಯಗಳ ಎಷ್ಟೋ ಚೀಲಗಳನ್ನು ಪುಕ್ಕಟೆ ಒಯ್ದು ಕೊಡುತ್ತಿರುವರು. ಸೇಟ ಮೋಹನಲಾಲ ಹೇಮಚಂದ ಜವೇರಿಯವರು ತಮ್ಮ ಬಂಗಲೆಯನ್ನು ಕಾಂಗ್ರೆಸದ ದವಾಖಾನೆಗಾಗಿ ಕೊಟ್ಟಿರುವರು. ದವಾಖಾನೆಗೆ ಉಪಯೋಗ ಬೀಳುವ ಗಾದಿ, ಔಷಧ, ಮೊದಲಾದವುಗಳು ಪುಕ್ಕಟೆಯಾಗಿ ಸಿಕ್ಕಿರುತ್ತವೆ. ನಾಮಾಂಕಿತ ಡಾಕ್ಟರರು ದವಾಖಾನೆಗೆ ಹೋಗಿ ಗಾಯಪಟ್ಟವರ ಶುಶ್ರೂಷೆಯನ್ನು ಮಾಡುತ್ತಿರುವರು. ಮುಂಬಯಿಯ ಕಾರ್ಪೊರೇಶನದ ಅಧ್ಯಕ್ಷರಾದ ಹುಶೇನಭಾಯಿ ಲಾಲಜೀಯವರು ಗಾಯಪಟ್ಟವರ ಔಷಧೋಪಚಾರಕ್ಕಾಗಿ ೧೦೦ ರೂ.ಗಳನ್ನು ಕೊಟ್ಟಿರುವರು. ಈಗ ಸುಮಾರು ೧೫೦ ಜನರು ದವಾಖಾನೆಯಲ್ಲಿ ಶುಶ್ರೂಷೆಯನ್ನು ಹೊಂದುತ್ತಿದ್ದಾರೆ. ಒಟ್ಟಿನಲ್ಲಿ ಹೇಳಬೇಕೆಂದರೆ ಮುಂಬಯಿಯಲ್ಲಿಯ ಕಾಂಗ್ರೆಸ ಭವನವು ರಾಷ್ಟ್ರೀಯ ಪಕ್ಷದವರ ಪುಣ್ಯಕ್ಷೇತ್ರವಾಗಿ ಪರಿಣಮಿಸಿದೆ.

## ೨೫ ಸತ್ಯಾಗ್ರಹಿಗಳನ್ನು ಬಿಟ್ಟುಬಿಟ್ಟರು.

ತಿರೋಡೆಯಲ್ಲಿಯ ಉಪ್ಪಿನ ಪಣಾರದ ಮೇಲೆ ದಾಳಿಯನ್ನು ಮಾಡಿದರೆಂಬ ಆರೋಪದಿಂದ ಸೆರೆಹಿಡಿಯಲ್ಪಟ್ಟು ಬೆಳಗಾವಿಯ ತುರಂಗದಲ್ಲಿ ಇಡಲ್ಪಟ್ಟ ೨೫ ಜನ ಸತ್ಯಾಗ್ರಹಿಗಳನ್ನು ಅಧಿಕಾರಿಗಳು ಮುಕ್ತಮಾಡಿ, ಅವರನ್ನು ವಿ[illegible] ವರೆಗೆ ಕಳಿಸಿ ಬಿಟ್ಟರು. ಬೆಳಗಾವಿ ಜಿಲ್ಲೆಯಲ್ಲಿ ಕಾಲಿಡ[illegible]ದೆಂದು ಅವರಿಗೆ ಕಟ್ಟಪ್ಪಣೆಯನ್ನು ತೆಗೆದಿದ್ದಾರೆ.

## ಸೊಲ್ಲಾಪುರ ದಂಗೆಯ ವಿಚಾರಣೆಗ ಮಂಡಳ

ಸೊಲ್ಲಾಪುರದಲ್ಲಾದ ದಂಗೆಯ ಸಂಬಂಧವಾಗಿ ವಿ[illegible] ಮಾಡುವದಕ್ಕಾಗಿ ಇಬ್ಬರು ಹಾಯಕೋರ್ಟ ಜಡ್ಜರದೊ[illegible] ಮಂಡಳವನ್ನು ಮುಂಬಯಿ ಸರಕಾರದವರು ನಿಯಮಿಸುವ[illegible]ದ್ದಾರೆಂದು ತಿಳಿಯುತ್ತದೆ.

# ಬಾಗಲಕೋಟೆಯಲ್ಲಿ ಅಪೂರ್ವ ಉತ್ಸಾಹ

## ಬಿಸಿನೆತ್ತರದ ತರುಣರಾದ
## ಶ್ರೀಯುತರಾದ ಜೋರಾಪುರ
# ಗುರುರಾಯರು ಸೆರೆಯಾಳಾದರು.

## ಶ್ರೀ ಕಿರಸೂರ ವಕೀಲರು ರಣರಂಗದಲ್ಲಿ ಧುಮುಕಿದರು!

ತಾ। ೯ನೆಯ ದಿವಸ ಮುಂಜಾನೆಯಲ್ಲಿ ಬದಾಮಿಯ ಪೋಲೀಸ ಅಧಿಕಾರಿಗಳು ಬದಾಮಿಯಿಂದ ವಾರಂಟನ್ನು ತೆಗೆದುಕೊಂಡು ಬಂದು ಇಲ್ಲಿಯ ಬಿಸಿನೆತ್ತರದ ತರುಣ ವೀರರಾದ ಶ್ರೀ. ಜೋರಾಪುರ ಗುರುರಾಯರನ್ನು ೧೧೭, ೫೮ ಮತ್ತು ೪೭ ನೆಯ ಕಲಮುಗಳ ಅನ್ವಯ ಸೆರೆಹಿಡಿದು ಮಧ್ಯಾಹ್ನದ ಗಾಡಿಗೆ ಬದಾಮಿಗೆ ಕರೆದುಕೊಂಡು ಹೋದರು.

ಸೆರೆಹಿಡಿಯುವರೆಂಬ ವಾರ್ತೆಯು ಮುಂಚಿತವಾಗಿಯೆ ತಿಳಿದು ಬಂದಿದ್ದುದರಿಂದ ಬಾಗಲಕೋಟೆಯ ನಾಗರಿಕರು ಅವರ ದರ್ಶನದ ಉತ್ಕಟೇಚ್ಛೆಯಿಂದಲೂ, "ನೀವು ಕೈಕೊಂಡ ಕಾರ್ಯವನ್ನು ನಾವು ಕೊನೆಗಾಣಿಸದೆ ಬಿಡುವದಿಲ್ಲ." ಎಂದು ಅವರಿಗೆ ತಿಳಿಸುವದಕ್ಕಾಗಿಯೂ ತಂಡತಂಡವಾಗಿ ಅವರ ಮನೆಯ ಎದುರಿನಲ್ಲಿ ಒಂದು ಸೇರಿದ್ದರು. ಊರ ಹಿರಿಯರಾದ ಶ್ರೀ. ಖಡಕೆ ಸೋಲಾಪೂರ, ಕಿರಸೂರರು, ಧಾರವಾಡ ಯಲಗುರ್ದರಾಯರು ಕಣಬೂರ, ಜಂಗಿನ, ನರಗುಂದ, ಬುರ್ಲಿ, ಡಾ. ಲಾಡ್ಜೆ ಮೊದಲಾದವರು ಅವರ ಮನೆಯಲ್ಲಿ ಸೇರಿ, ಅವರೊಡನೆ ಮಾತುಕತೆಗಳನ್ನಾಡಿ, ಅವರು ಕೈಕೊಂಡ ಕಾರ್ಯವನ್ನು ಮುಂದೆ ಸಾಗಿಸುವ ಹೊಣೆಯನ್ನು ಹೊತ್ತುಕೊಂಡು, ದಬ್ಬಾಳಿಕೆಗೆ ಚಳವಳಿಯು ಕುಗ್ಗಲಾರದೆಂದು ತೋರಿಸಿಕೊಟ್ಟರು. ಇದಲ್ಲದೆ ಹಿಂದುಸ್ಥಾನೀ ಸೇವಾದಲದ ಸ್ವಯಂಸೇವಕರಾದ ಶ್ರೀ ನೀಲಕೇರಿ, ಕೆರೂರ, ಡಂಬಳ ಮೊದಲಾದ ಎಲ್ಲ ಸತ್ಯಾಗ್ರಹಿಗಳೂ ನಿಮಗೆ ಸಿಕ್ಕ ಬಹುಮಾನವು ನಮಗಾದರೂ ಬೇಗನೆ ಬರುವಂತೆ ಹೆಣಗುವೆವೆಂದು ತಿಳಿಸಿ ಅವರಿಂದ ಆಶೀರ್ವಾದಗಳನ್ನು ತೆಗೆದುಕೊಂಡರು. ಇಲ್ಲಿಗೆ ಆಗಮಿಸಿದ ಡಾ। ಹರ್ಡೀಕರರು ಇದೆಲ್ಲ ಉತ್ಸಾಹವನ್ನು ಕಂಡು ಹಿಗ್ಗಿದರು.

ಇಷ್ಟೆಲ್ಲ ಮುಗಿದಮೇಲೆ ಶ್ರೀ. ಗುರುರಾಯರು ಹೊರಗೆ ಬಂದರು. ಬಳಿಕ ಅಲ್ಲಿ ನೆರೆದವರೆಲ್ಲರೂ ಅವರನ್ನು ಪೂಮಾಲೆಗಳಿಂದ ಸತ್ಕರಿಸಿ ಮೆರವಣಿಗೆಯಿಂದ ಅವರನ್ನು ಕರೆದುಕೊಂಡು ಹಳಪೇಟೆ, ಕೊಳಪೇಟೆ, ವೆಂಕಟಪೇಟೆಗಳಲ್ಲಿ ಹಾಯ್ದು ತಾಲೂಕ ಕಚೇರಿಗೆ ಅವರನ್ನು ಮುಟ್ಟಿಸಿದರು. ಮೆರವಣಿಗೆಯಲ್ಲಿ ೫—೬ ಸಾವಿರ ಜನರು ಭಾಗತೆಗೆದುಕೊಂಡಿದ್ದರು. ಮೆರವಣಿಗೆಯು ಸಾಗುತ್ತಿರುವಾಗ ಆಯಾ ಓಣಿಗಳಲ್ಲಿಯ ಮಹಿಳೆಯರು ಪೂಮಾಲೆ ಆರತಿ ಮೊದಲಾದವುಗಳಿಂದ ಅವರನ್ನು ಸತ್ಕರಿಸಿದರು. ಲಿಂಗಾಯತರು ವಿಶೇಷವಾಗಿ ಅವರ ಸತ್ಕಾರಗಳನ್ನು ಮಾಡಿದ್ದೊಂದು ವಿಶೇಷ. ಬಳಿಕ ೧೦ ಗಂಟೆಗೆ ತಾಲೂಕ ಕಚೇರಿಯಿಂದ ಪುನಃ ಅವರನ್ನು ಮೆರವಣಿಗೆಯಿಂದ ಕರೆದುಕೊಂಡು ಹೋಗಿ ಸ್ಟೇಶನಕ್ಕೆ ಮುಟ್ಟಿಸಲಾಯಿತು.

ಶ್ರೀ. ಗುರುರಾಯರು ತಮ್ಮ ಸಂದೇಶದಲ್ಲಿ—

"ಧರಸಾನಾ, ವಡಾಲಾ ಮೊದಲಾದ ಕಡೆಗಳಲ್ಲಿಯ ಸ್ವಯಂಸೇವಕರು ಅಧಿಕಾರಿಗಳ ಡೊಣ್ಣೆಗಳಿಗೆ ತುತ್ತಾಗಿ ಗಾಯಗಳನ್ನು ಹೊಂದಿರುವರು. ಅಂತಹ ಸುಸಂಧಿಯು ನನಗೆ ಸಿಕ್ಕಿದ್ದರೆ ಒಳಿತಾಗುತ್ತಿತ್ತು. ಕುರಂಗವಾಸವು ಅದರ ಮುಂದೆ ಕಸದಾರ್ಥವು. ದಬ್ಬಾಳಿಕೆಗೆ ಜನರು ಬೆದರುವರೆಂದು ಅಧಿಕಾರಿಗಳು ತಿಳಿದುಕೊಂಡಿರುವಂತಾದೀತು. ಆದರೆ ಅದು ಶುದ್ಧ ಭ್ರಮೆ. ಬಾಗಲಕೋಟೆಯ ತರುಣರಲ್ಲಿ ನನಗೆ ಸಂಪೂರ್ಣ ವಿಶ್ವಾಸವಿದೆ. ಅವರು ರಾಷ್ಟ್ರಕಾರ್ಯದಲ್ಲಿ ಮುಂದಾಗಿಬಿದ್ದು ಅಧಿಕಾರಿಗಳ ಡೊಣ್ಣೆಗಳಿಗೆ ತಮ್ಮ ತಲೆಗಳನ್ನೊಡ್ಡಲಿ. ಅಷ್ಟು ಧೈರ್ಯವನ್ನು ತೋರಿಸುವದಾಗದಿದ್ದರೆ, ಪಿಕೆಟಿಂಗ, ಪರದೇಶಿ ವಸ್ತ್ರ ಬಹಿಷ್ಕಾರ ಮೊದಲಾದ ಕಾರ್ಯಗಳನ್ನು ಕೈಕೊಂಡು ಅವರು ಸೆರೆಮನೆಗೆ ಹೋಗಲಿ." ಎಂದು ಹೇಳಿದರು. ಬಳಿಕ ಎಲ್ಲರೂ ಅವರಿಗೆ ವಂದನೆಗಳನ್ನರ್ಪಿಸಿದರು.

ನಂತರದಲ್ಲಿ ಶ್ರೀ ಕಿರಸೂರ ಹಾಗು ಧಾರವಾಡ ಎಲಗುರ್ದರಾಯರು ಮುಂದೆ ಬಂದು ಅವರನ್ನು ಕಂಡುಕೊಂಡರು. ಕೂಡಲೆ ಶ್ರೀ. ಗುರುರಾಯರು ಗಾಡಿಯಿಂದ ಕೆಳಗಿಳಿದು ಬಂದು ಅವರಿಗೆ ನಮಿಸಿದರು. ಶ್ರೀ ಕಿರಸೂರರು ಕಣ್ಣೀರುಗಳನ್ನು ಸುರಿಸುತ್ತ "ನಿಮ್ಮ ಕಾರ್ಯವನ್ನು ಕೊನೆಗಾಣಿಸುವ ಭಾರವು ಇನ್ನು ಮೇಲೆ ನನ್ನದಾಗಿದೆ. ಎಷ್ಟೇ ತಾಪತ್ರಯಗಳಿದ್ದರೂ, ಅವುಗಳನ್ನೆಲ್ಲ ಒದ್ದು ಕಾರ್ಯವನ್ನು ಕೊನೆಗೊಯ್ಯುವೆನು. ಇಷ್ಟು ದಿವಸಗಳವರೆಗೆ ಹಿಂದೆ ಉಳಿದದ್ದಕ್ಕಾಗಿ ಕ್ಷಮಿಸಬೇಕು." ಎಂದು ನುಡಿದರು. ಬಳಿಕ ಎಲ್ಲರೂ ವಂದನೆಗಳನ್ನರ್ಪಿಸಿ ಅವರನ್ನು ಜಯಜಯಕಾರದೊಂದಿಗೆ ಬೀಳ್ಕೊಟ್ಟರು.

## ಹೂವಿನಸರಗಳಿಗೆ ೧೦೫ ರೂಪಾಯಿ.

ಸಂಜೆಯಲ್ಲಿ ಶ್ರೀ ಕೊಕ್ಕಲಪ್ಪನ ಗುಡಿಯ ಬೈಲಿನಲ್ಲಿ ಡಾ। ಲಾಡ್ಜೆಯವರ ಅಧ್ಯಕ್ಷತೆಯಲ್ಲಿ ಸಭೆ ನೆರೆದು ಶ್ರೀ ಗುರುರಾಯರನ್ನು ಅಭಿನಂದಿಸುವ ಠರಾವು ಬಂದಿತು. ಶ್ರೀ ಮುಜುಮದಾರ ಸೊಂಡೂರ, ಮುದಗಲ್ಲ ಮೊದಲಾದವರ ಭಾಷಣಗಳಾದವು.

ನಂತರದಲ್ಲಿ ಡಾ| ಹರ್ಡೀಕರರು ಕರ್ನಾಟಕದಲ್ಲಿಯ ಸತ್ಯಾಗ್ರಹ ಯುದ್ಧಕ್ಕೆ ದೇಶದ ಜನಬಲ ಮತ್ತು ಧನಬಲಗಳ ಬಗ್ಗೆ ಭಾಷಣ ಮಾಡಿ ಜನರಿಗೆ [illegible] ಮುಂದೆ ಮಾಡಿದರು. ೧೦ ಜನರು ಸ್ವಯಂ ಸೇವಕರಾಗಲು ಮುಂದೆ ಬಂದರು. ೪—೫ ಉಂಗುರಗಳೂ, [illegible], ಸುಮಾರು ೧೦೦ ರೂಗಳೂ ಜೋಳಿಗೆಯಲ್ಲಿ ಬಿದ್ದವು. [illegible] ಜೋಳಿಗೆಯಲ್ಲಿ ಹಾಕಿದ ಹಣವನ್ನು [illegible] ಅವುಗಳ [illegible] ಆದವು. ರಾಷ್ಟ್ರಗೀತವಾದ ನಂತರ ಜಯಜಯಕಾರದೊಂದಿಗೆ ಸಭೆಯು ವಿಸರ್ಜನವಾಯಿತು.

ಶ್ರೀ ಗಂಗಾಧರರಾಯರ [illegible] ವಿಚಾರಣೆಯು [illegible] ಇಂದು ನಡೆಯುವದಾಗಿ ತಿಳಿಯುತ್ತದೆ.

## ಡೊಣ್ಣೆಯು ಧೈರ್ಯವನ್ನು ನೋಡುವದೆ?

ರಾವಳಪಿಂಡಿಯಲ್ಲಿ ಪೇಶಾವರ ದಂಗೆಯ ವಿಚಾರಣೆಯ ಕಾರ್ಯವನ್ನು ನಡೆಸುತ್ತಿರುವ ಶ್ರೀ [illegible] ಅವ್ಯವಸ್ಥೆ [illegible] ಹಾಕಿದ್ದರು. ಜಾಲಿಯನ್ ವಾಲಾಬಾಗದಲ್ಲಿ [illegible] ಸಭೆಯಲ್ಲಿ ಭಾಷಣ ಮಾಡುವಾಗ ಶ್ರೀ [illegible]— [illegible] ಬಟ್ಟೆಗಳನ್ನು ಸಂಪೂರ್ಣ ಬಹಿಷ್ಕರಿಸಿರಿ. [illegible] ಪ್ರಚಾರ ಕಾರ್ಯವನ್ನು ಕೈಕೊಳ್ಳಿರಿ. ಸರ್ಕಾರ [illegible] ನಡೆಯಿರಿ, ಅಧಿಕಾರಿಗಳ ಡೊಣ್ಣೆಗಳಿಗೆ [illegible] ಎಷ್ಟು ಹಿಂದುಗಳೂ ಅಷ್ಟೇ ಡೊಣ್ಣೆಯು ಯಾವ ಧೈರ್ಯವನ್ನು ನೋಡುವದಿಲ್ಲ. ರಾವಳಪಿಂಡಿಯಲ್ಲಿ ನನ್ನ ಸುತ್ತಲೂ [illegible] ಗುಪ್ತ ಪೋಲೀಸರು ಇರುತ್ತಾರೆ. ನಾನು [illegible] ಹಿಂದೆಯೇ ಇರುತ್ತಾರೆ" ಎಂದು ಹೇಳಿದರು.

## "ಈ ಶಸ್ತ್ರಗಳು ನಿಃಶಸ್ತ್ರರನ್ನು ಚಿಕ್ಕಮಕ್ಕಳನ್ನು ಕೊಲ್ಲುವದಕ್ಕಾಗಿ ಇಲ್ಲ"

ಪೇಶಾವರದಲ್ಲಿ ನಡೆದ ದಂಗೆಯ ಸಮಯದಲ್ಲಿ ಘಾರ್ವಾಲಿ ಪಟಾಲಮದ ಕೆಲವು ಸೈನಿಕರು ಮೇಲಧಿಕಾರಿಗಳ ಹುಕುಮುಗಳನ್ನು ಮೀರಿದ್ದರಷ್ಟೇ. ಅವರ ವಿಚಾರಣೆಯು ಈಗ [illegible] ಕೋರ್ಟಿನ ಮುಂದೆ ನಡೆದಿದ್ದು [illegible] ಸೈನಿಕರ ಸಾಕ್ಷಿಗಳು ಆಗಿವೆ. ಕ್ಯಾಪ್ಟನ್ ಎಸ್. ಇ. [illegible] ತಮ್ಮ ಸಾಕ್ಷಿಯಲ್ಲಿ ಹೀಗೆ ಹೇಳಿದ್ದಾರೆ— ಏಪ್ರಿಲ್ ೨೪ ನೆಯ ತಾ|| ದಿವಸ ನಾನು [illegible] ಸುಬೇದಾರನ [illegible] ಕ್ಯಾಪ್ಟನ್ [illegible]. ಅವರು ಈಗ [illegible] ಹರಕಸಿಂಗರೊಡನೆ ಮಾತನಾಡುತ್ತ ನಿಂತಿದ್ದರು. ಅವರೊಡನೆ ನಡೆದ ಭಾಷಣದಲ್ಲಿ ಹರಕಸಿಂಗರು "ಹಿಂದು [illegible] ಹಿಂದೂಗಳ ಶತ್ರುಗಳನ್ನು ಎದುರಿಸುವದಕ್ಕಾಗಿ ಇದೆ. ನಿಃಶಸ್ತ್ರರಾದ ನಮ್ಮ ಸಹೋದರರನ್ನೇ ಸಂಹಾರ ಮಾಡುವದಕ್ಕಾಗಿ ಇಲ್ಲ" ಎಂದು ಹೇಳಿದ್ದರು. [illegible] ಚಂದ್ರಸಿಂಗರು ಚಿಕ್ಕಮಕ್ಕಳನ್ನು ಕೊಲ್ಲುವದಕ್ಕೆ ನಾವು ಸಿದ್ಧರಿಲ್ಲವೆಂದೂ" ಹೇಳಿದ್ದರು.

## ಸೊಲ್ಲಾಪುರದ ಸತ್ಯಾಗ್ರಹ

ಸೊಲ್ಲಾಪುರದಲ್ಲಿ ನಡೆದ ರಾಷ್ಟ್ರಧ್ವಜದ ಸತ್ಯಾಗ್ರಹ ಸಂಬಂಧವಾಗಿ ಮಾರ್ಚಿ [illegible] ತಾರೀಖಿನ [illegible] ಪ್ರಕಟಿಸಿದ್ದಾರೆ— [illegible] ಸೊಲ್ಲಾಪುರದಲ್ಲಿ ರಾಷ್ಟ್ರಧ್ವಜದ ಸತ್ಯಾಗ್ರಹಕ್ಕಾಗಿ ಜೋಡಿ [illegible] ಸ್ವಯಂಸೇವಕರ [illegible] ಪ್ರಸಿದ್ಧವಾಗಿವೆ. ಆ ಸಂಬಂಧವಾಗಿ ಡಿ| ಮ್ಯಾಜಿಸ್ಟ್ರೇಟರು ವಿಚಾರಣೆಯನ್ನು ಮಾಡಿದರು. ವಿಚಾರಣೆಯಲ್ಲಿ ಹೀಗೆ ಕಂಡು ಬಂದಿತು:— ಆ ಮೂರು ಸ್ವಯಂಸೇವಕರೂ ಪ್ರತೀಕಾರದ ಸ್ವಲ್ಪ ಧೋರಣೆ ತೋರಿಸಿ, ತಮ್ಮ ಕೈಯೊಳಗಿನ ರಾಷ್ಟ್ರಧ್ವಜಗಳನ್ನು ಪೋಲೀಸರ ಸ್ವಾಧೀನ ಮಾಡಿದರು. ಬಳಿಕ ಸ್ಟೇಶನದ ಸಮೀಪದಲ್ಲಿದ್ದ ಧರ್ಮಶಾಲೆಗೆ ಅವರನ್ನು ಕರೆದುಕೊಂಡು ಹೋಗುವದರಲ್ಲಿ ಬಂದಿತು. ಅಲ್ಲಿ ಅವರನ್ನು ವಿಚಾರಿಸಲಾಗಿ ಅವರು ಮುಂಬಯಿಗೆ ಕಳಿಸಿ ಕೊಡಲು ಕೇಳಿಕೊಂಡರು. ಆದರೆ ಗಾಡಿಯ ವೆಚ್ಚಕ್ಕಾಗಿ ಅವರಲ್ಲಿ ಹಣವಿದ್ದಿದ್ದಿಲ್ಲ. ಆದುದರಿಂದ ಪೋ| ಸುಪರಿಂಟೆಂಡೆಂಟರು ಅವರಿಗೆ ತಿಕೀಟುಗಳ ವೆಚ್ಚಕ್ಕಾಗಿ ತಮ್ಮ ಕಿಸೆಯೊಳಗಿಂದ ೯ ಆಣೆಗಳನ್ನು ತೆಗೆದು ಕೊಟ್ಟರು. ನಂತರ ಪೋಲೀಸ ಇನ್‌ಸ್ಪೆಕ್ಟರರು ಅವರಿಗೆ ಸ್ಟೇಶನದ ಮೇಲೆ ಚಹಾ ಕೊಟ್ಟರು. ಬಳಿಕ ಅವರನ್ನು ಪುಣೆಗೆ ಕಳಿಸಲಾಯಿತು. ಹೊಡೆದದ್ದು, ಬಾಯಿಯಲ್ಲಿ ಸಾರಾಯಿ ಹಾಕಿದ್ದು, ಬಟ್ಟೆಗಳನ್ನು ಹರಿದದ್ದು, ಮತ್ತು ಸುಡುವ ಸಿಗರೇಟನ್ನು ದೇಹಕ್ಕೆ ಹಚ್ಚಿದ್ದು, ಇವೆಲ್ಲ ಸಂಗತಿಗಳು ಸುಳ್ಳು. ಇವೆ [illegible] ಸಿಪಾಯಿಗಳು ಅವರನ್ನು ಸೆರೆ ಹಿಡಿಯಲಿಲ್ಲ. ಪೋಲೀಸರು ಅವರನ್ನು ಸೆರೆ ಹಿಡಿದರು.

(ಕೇಸರೀಕಾರರು ಈ ಬಗ್ಗೆ ಪ್ರಕಟಿಸಿದ್ದನ್ನು ನಾಳಿನ ಸಂಚಿಕೆಯಲ್ಲಿ)


ಜಯಲಕ್ಷ್ಮೀ ಪ್ರಾಸಾದಿಕ

ಶ್ರೀ ಮಿತ್ರ [illegible] ಸಂಗೀತ ನಾಟಕ ಮಂಡಳಿ ದಾವಣಗೇರಿ ಇವರು

ಬಾಗಲಕೋಟೆ ತೇಜ ಥಿಯೇಟರಿನಲ್ಲಿ

ಬುಧವಾರ ತಾ ೧೧—೬—೩೦

ಪ್ರತಾಪಸಿಂಹ [illegible]

ಎಂಟು ಹೊಸ [illegible] ಪ್ರಯೋಗಿಸುವರು.

ವ್ಯವಸ್ಥಾಪಕ.

ಬರುವರು! ಬರುವರು!!

ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ

ಶಿರಹಟ್ಟಿ ನಾಟಕ ಮಂಡಳಿಯವರು

ಶಿವಾನಂದ ನಾಟಕ ಶಾಲೆಯಲ್ಲಿ

# ಬೇಗನೆ ಬರುವರು

ಮತ್ತು ಲೋಕಪ್ರಿಯವಾದ

ತಮ್ಮ ನಾಟಕಗಳನ್ನು ಅಭಿನಯಿಸುವರು,

ಎಚ್, ವೆಂಕೋಬರಾವ.

ಪ್ರೊಪ್ರಾಯಿಟರ.


ಈ ಪತ್ರಿಕೆಯು ಒಳವಂತ ಅಣ್ಣಾರಾವ [illegible] ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದಲೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦-೦-೩

# ಕನ್ನಡಿಗ

ಜಯಕರ್ನಾಟಕ

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಗುರುವಾರ ಮಿತಿ ಜ್ಯೇಷ್ಠ ಬಹುಳ ೧ ಶಕೆ ೧೮೫೨ ತಾ|| ೧೨-೬-೩೦ ಸಂಚಿಕೆ ೭೨

## ಸೊಲ್ಲಾಪುರದ ಸತ್ಯಾಗ್ರಹ

("ಕೇಸರಿ"ಯ ಸಂಪಾದಕರ ವಾಕ್ಯ.)

"ಸೊಲ್ಲಾಪುರಕ್ಕೆ ರಾಷ್ಟ್ರಧ್ವಜದ ಸತ್ಯಾಗ್ರಹಕ್ಕಾಗಿ ಹೋದ ಕೆಲವು ಸ್ವಯಂಸೇವಕರನ್ನು ಅಧಿಕಾರಿಗಳು ಹೇಗೆ ನಡಿಸಿಕೊಂಡರೆಂಬುದನ್ನು ಜನರ ನಿದರ್ಶನಕ್ಕೆ ತಂದು ಕೊಡುವದಕ್ಕಾಗಿ ಮೂರು ಜನ ಸ್ವಯಂಸೇವಕರು ಹೇಳಿದ್ದುದನ್ನು ೩ನೆಯ ತಾ|| ನ "ಕೇಸರಿ"ಯಲ್ಲಿ ಪ್ರಸಿದ್ಧಿಸಿದೆವು. ಅದರ ಕಡೆಗೆ ಸರಕಾರದವರು ತಮ್ಮ ಲಕ್ಷ್ಯವನ್ನು ಹೊರಳಿಸಿ, ಅದರ ಸಂಬಂಧವಾಗಿ ಒಂದು ಪತ್ರಿಕೆಯನ್ನು ಪ್ರಕಟಿಸಿ ನಮ್ಮ ಕಡೆಗೆ ಕಳಿಸಿದರು. ಅದನ್ನು ನಾವು ಇದ್ದಕ್ಕಿದ್ದಂತೆ ಮೇಲೆ ಕೊಟ್ಟಿದ್ದೇವೆ. ಈಗ ಸರಕಾರದವರಾದರೂ ಒಂದೇ ಪಕ್ಷದವರನ್ನು ವಿಚಾರಿಸಿ ಪತ್ರಿಕೆಯನ್ನು ಪ್ರಕಟಿಸಿದ್ದಾರೆ. ಸರಕಾರದವರು ಪ್ರಕಟಿಸಿದ ಪತ್ರಿಕೆಯನ್ನು ನಾವು ಈ ಮೊದಲು ಪ್ರಸಿದ್ಧಿಸಿದ ಮೂವರ ವಾಜ್ಮೂಲಗಳನ್ನೂ ಓದಿ ನೋಡಿ ಅವುಗಳಿಂದ ಸಿದ್ಧವಾಗುವ ಅನುಮಾನಗಳನ್ನು ತೆಗೆಯಲು ವಾಚಕರಿಗೇನೆ ಬಿಟ್ಟುಕೊಟ್ಟಿದ್ದೇವೆ. ತಮ್ಮ ಪೋಲೀಸರು ಸುಳ್ಳು ಹೇಳುವದಿಲ್ಲವೆಂದು ಸರಕಾರವು ತಿಳಿದುಕೊಂಡಂತೆ ನಾವಾದರೂ ನಮ್ಮ ಸ್ವಯಂಸೇವಕರು ಸುಳ್ಳು ಹೇಳುವದಿಲ್ಲವೆಂದು ತಿಳಿದುಕೊಂಡಿದ್ದೇವೆ. ಆದುದರಿಂದ ಸರಕಾರದವರು ಎರಡೂ ಪಕ್ಷದವರ ಸಾಕ್ಷಿಗಳನ್ನು ಕೇಳಿಕೊಂಡು ಬಹಿರಂಗವಾಗಿ ವಿಚಾರಣೆಯನ್ನು ನಡಿಸಬೇಕಾಗಿತ್ತು. ಸರಕಾರದವರು ಸ್ವಯಂಸೇವಕರನ್ನು ಕರೆಸಿಕೊಂಡಿದ್ದರೆ ಅವರು ಸ್ವಂತ ತೊಂದರೆಯಿಂದ ಬಂದು ತಮ್ಮ ಗಾರ್ಹಾಣವನ್ನು ಹೇಳುತ್ತಿದ್ದರು. ನಾವು ಪ್ರಸಿದ್ಧಿಸಿದ ವಾಜ್ಮೂಲಗಳಿಗೆ ಮುಂಬಯಿ ಕಾಯಿದೆ ಮಂಡಳದ ಸಭಾಸದರಾದ ಗಾಂಜಾಳ, ಚಂದ್ರಹಾಸ, ಕೊಪ್ಪಟಕರ ಇವರು ಟಿಳಕ [illegible]ದ ಶಿಬಿರದಲ್ಲಿ ತಾ|| ೧ನೆಯ ದಿವಸ ಸ್ವತಃ ಹೋಗಿ ಗಾಯಹೊಂದಿದ ಸ್ವಯಂಸೇವಕರನ್ನು ಭೆಟ್ಟಿಯಾಗಿ, ಅವರಿಂದ ತಿಳಿದುಕೊಂಡು ಒಂದೇ ತರಹವಾಗಿವೆ. ಆ ಮೇಲೆ ನಾವೂ [illegible] ತಾ|| ಸಹಸ್ರಬುದ್ಧೆಯವರೂ ಶಿಬಿರಕ್ಕೆ ಹೋಗಿ ವಿಚಾರಣೆಯನ್ನು ಮಾಡಿದ್ದೆವು. ಇಬ್ಬರು ಸ್ವಯಂಸೇವಕರು ಮುಂಬಯಿಗೆ ಹೋಗಿದ್ದರು. ಅಲ್ಲಿಯೇ ಇದ್ದ ಒಬ್ಬ ಸ್ವಯಂಸೇವಕರು ನಮಗೆ ವಾಜ್ಮೂಲದೊಳಗಿನ ಎಲ್ಲ ಸಂಗತಿಗಳನ್ನೂ ತಿಳಿಸಿದರಲ್ಲದೆ, ಸುಡುವ ಸಿಗರೇಟನ್ನು ದೇಹಕ್ಕೆ ತಗುಲಿಸಿದ್ದರಿಂದ ಉಂಟಾದ ಗುರುತನ್ನೂ, ಹೊಡೆದದ್ದರಿಂದುಂಟಾದ ಗಾಯಗಳನ್ನೂ ನಮಗೆ ತೋರಿಸಿದರು." ವಸ್ತುಸ್ಥಿತಿಯು ಎಂತಹದೆಂಬುದನ್ನು ವಾಚಕರೇ ಕಂಡುಕೊಳ್ಳಬೇಕು.

[೩ನೆಯ ತಾ|| "ಕೇಸರಿ"ಯಲ್ಲಿ ಪ್ರಕಟವಾದ ಮೂರು ಜನ ಸ್ವಯಂಸೇವಕರ ವಾಜ್ಮೂಲಗಳು ೫ನೆಯ ತಾರೀಖಿನ "ಕನ್ನಡಿಗ"ನಲ್ಲಿ ಪ್ರಕಟವಾಗಿದ್ದುದರಿಂದ, ಮೇಲಿನ ಸಂಗತಿಗಳನ್ನಾದರೂ ಕೊಡುವ ಭಾಗ ಬಿತ್ತು. ಸಂಪಾದಕ.]

## ಬ್ರಿಟಿಶ ಮಹಿಳೆಯರಾದ ಮಿಸ್ ಡಿಕಿನ್ಸನ್‌ರು ಕಾಯಿದೆಮಂಡಳಕ್ಕೆ ಶರಣುಹೊಡೆದರು.

### ಕೈಸರ ಹಿಂದ ಬಿರುದನ್ನು ನಿರಾಕರಿಸಿದರು.

ಮುಂಬಯಿ ಕಾಯಿದೆ ಮಂಡಳಕ್ಕೆ ಸರಕಾರದ ಪರವಾಗಿ ಸಭಾಸದರಾಗಿ ನಿಯಮಿಸಲ್ಪಟ್ಟ ಬ್ರಿಟಿಶ್ ಮಹಿಳೆಯರಾದ ಮಿಸ್ ಡಾ ಡಿಕಿನ್‌ಸನ್ನರು ಸರಕಾರದ ದಬ್ಬಾಳಿಕೆಯ ನಿಷೇಧಾರ್ಥವಾಗಿ ಕಾಯಿದೆ ಮಂಡಳದ ಸಭಾಸದತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿರುವರಲ್ಲದೆ, ಜಾರ್ಜ ಬಾದಶಹರ ಹುಟ್ಟಿದ ಹಬ್ಬದ ನಿಮಿತ್ತವಾಗಿ ಮೊನ್ನೆ ಮೊನ್ನೆ ದೊರೆತ "ಕೈಸರ ಹಿಂದ" ಬಿರುದನ್ನೂ ನಿರಾಕರಿಸಿರುವರು. ಕರ್ನಾಟಕದ ಕಡೆಯಿಂದ ಕಾಯಿದೆ ಮಂಡಳಗಳಿಗೆ ಹೋದ ಸಭಾಸದರು ಈ ಬ್ರಿಟಿಶ ಮಹಿಳೆಯರನ್ನಾದರೂ ನೋಡಿ ಬುದ್ಧಿಗಲಿಯಲಿ!

## ಗುಂದರಗಿಯಲ್ಲಿ ಕಾಯಿದೆಗಳು ಚೂರುಚೂರಾದವು.

ಕರ್ನಾಟಕ ಸತ್ಯಾಗ್ರಹ ಮಂಡಳದ ಆಜ್ಞೆಯ ಪ್ರಕಾರ ತಾ|| ೫ನೆಯ ದಿವಸ ಸಭೆಯಾಯಿತು. ೨೦೦-೩೦೦ ಜನರು ಸಭೆಗೆ ಆಗಮಿಸಿದ್ದರು. ಶ್ರೀ ಭೀಮಾಜಿ ಜೋಶಿ ಇವರು ಇಂಡಿಯಾ ಇನ್ ಬೊಂಡೇಜ ಎಂಬ ರಾಜದ್ರೋಹಾತ್ಮಕ ಪುಸ್ತಕದೊಳಗಿನ ಕೆಲವು ಭಾಗವನ್ನು ಓದಿದರು. ನಂತರ ಸೊಲ್ಲಾಪುರದ ಅತ್ಯಾಚಾರವು ನಿಷೇಧಿಸಲ್ಪಟ್ಟಿತು. ಸ್ವತಂತ್ರ ಉಪ್ಪು ಮಾರಾಟವಾಗಿ ೧೫ ರೂ ಬಂದವು. ಆ ವೇಳೆ ಪರದೇಶಿ ಬಟ್ಟೆಗಳ ಹೋಳಿಯಾಗಿ ಸಭೆ ವಿಸರ್ಜನೆ ಆಯಿತು.

## ಮುಂಬಯಿಯಲ್ಲಿ

# ಇಬ್ಬರು ಪಠಾಣರಿಗೆ ಹದ್ದುಪಾರು

ರಾಷ್ಟ್ರೀಯ ಪಕ್ಷಕ್ಕೆ ಸೇರಿದ ಮುಂಬಯಿಯ ಪ್ರಸಿದ್ಧ ಪಠಾಣರಾದ ಅಬ್ದುಲ್ ಗಫೂರಖಾನ ಠೀಕೇದಾರ ಮತ್ತು ಅವರ ಮಗನನ್ನೂ ಮುಂಬಯಿಯಿಂದ ೨ ವರ್ಷಗಳವರೆಗೆ ಹದ್ದುಪಾರು ಮಾಡಿದ್ದಾರೆ. ಇವರು ಮಹಾಯುದ್ಧದಲ್ಲಿ ಬ್ರಿಟಿಶರಿಗೆ ಬಹಳ ಸಹಾಯಮಾಡಿದ್ದಲ್ಲದೆ, ಹೋದ ವರ್ಷ ಮುಂಬಯಿಯಲ್ಲಾದ ಹಿಂದೂ ಮುಸಲ್ಮಾನ ದಂಗೆಯ ಕಾಲಕ್ಕೂ ಪೋಲೀಸರಿಗೆ ಸಹಾಯಮಾಡಿದ್ದರು. ಇತ್ತೀಚಿಗೆ ಇವರು ರಾಷ್ಟ್ರೀಯ ಪಕ್ಷದಲ್ಲಿ ಬಂದು ಕೂಡಿಕೊಂಡಿದ್ದರು. ಇವರ ಅನುಯಾಯಿಗಳಾದ ಎಷ್ಟೋ ಜನ ಪಠಾಣರೂ ಕಾಂಗ್ರೆಸದಲ್ಲಿ ಸೇರಿದ್ದಾರೆ.

---

### ಸೊಲ್ಲಾಪುರದ ರಾಷ್ಟ್ರಧ್ವಜ ಸತ್ಯಾಗ್ರಹಕ್ಕೆ

### ಕನ್ನಡ ಕಡುಗಲಿಗಳು ತೆರಳಿದರು

ಸೊಲ್ಲಾಪುರದಲ್ಲಿ ಲಷ್ಕರಿ ಕಾಯಿದೆಯಿಂದ ಪ್ರತಿಬಂಧಿತವಾದ ರಾಷ್ಟ್ರಧ್ವಜದ ಸನ್ಮಾನ ಸಂಪಾದನೆಗಾಗಿ ಸೊಲ್ಲಾಪುರಕ್ಕೆ ಹೋಗ ಬಯಸಿದ ೧೫ ಜನ ಸತ್ಯಾಗ್ರಹಿಗಳು ವಿಜಾಪುರದಲ್ಲಿ ತಡವೂ ರಿದ್ದರಷ್ಟೆ. ಅವರನ್ನು ವಿಜಾಪುರದ ನಾಗರಿಕರು ಶ್ರೀ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿಸಿ ಆಶೀರ್ವದಿಸಿ ಅವರಲ್ಲಿ ಕೆಳಗಿನ ಮೂವರನ್ನು ಸೊಲ್ಲಾಪುರಕ್ಕೆ ಕಳಿಸಿದ್ದಾರೆ. ೧. ಶ್ರೀ ಗುಳೇದ ೨. ಶ್ರೀ ಮೇಥೀ ೩. ಕಳ್ಳೀಮಠ. ೭ ನೆಯ ತಾರೀಖಿನ ದಿವಸ ಶ್ರೀ ಎಸ್. ಎನ್ ರಾಮಸ್ವಾಮಿ, ಎನ್. ವ್ಹಿ. ಮಿಟ್ಟಿಮನಿ. ಎಸ್ ಜೀ. ಬಳೀನಾರ ಈ ಮೂವರು ಹುಬ್ಬಳಿಯಿಂದ ಸೊಲ್ಲಾಪುರಕ್ಕೆ ಸತ್ಯಾಗ್ರಹಕ್ಕಾಗಿ ಹೋಗಿದ್ದಾರೆ

### ಕಲಕತ್ತೆಯಲ್ಲಿ

## ೬೧ ಜನರನ್ನು ಸೆರೆ ಹಿಡಿದರು.

### ಕಾಂಗ್ರೆಸ್ ಕಮಿಟಿ ಹಾಗು ಸತ್ಯಾಗ್ರಹ ಮಂಡಳಗಳು ಜಪ್ತವಾದವು.

ತಾ॥ ೯ ನೆಯ ದಿವಸ ಕಲಕತ್ತೆಯ ಪೋಲೀಸ ಅಧಿಕಾರಿಗಳು ಕಾಂಗ್ರೆಸ್ ಕಮಿಟಿ ಹಾಗು ಸತ್ಯಾಗ್ರಹ ಮಂಡಳವನ್ನು ಜಪ್ತ ಮಾಡಿದರು. ಮತ್ತು ಅಲ್ಲಿ ಇರುವಂತಹ ಎಲ್ಲ ಜನರನ್ನೂ ಸೆರೆ ಹಿಡಿದುಕೊಂಡು ಹೋದದ್ದಲ್ಲದೆ, ಅಲ್ಲಿಯ ಎಲ್ಲ ಸಾಮಾನುಗಳನ್ನು ಜಪ್ತಮಾಡಿಕೊಂಡು ಹೋದರು. ಒಟ್ಟು ೬೧ ಜನರನ್ನು ಸೆರೆ ಹಿಡಿದಿರುತ್ತಾರೆ,

### ವಕೀಲಿಯನ್ನು ಬಿಟ್ಟರು.

ಸರದಾರ ವಲ್ಲಭಭಾಯಿ ಪಟೇಲರ ಸ್ನೇಹಿತರಾದ ಅಹಮ್ಮದಾಬಾದದ ಶ್ರೀ ಕೃಷ್ಣಲಾಲ ದೇಸಾಯಿ ಹಾಗು ಶ್ರೀ ಬಾಳುಭಾಯಿ ಠಾಕೂರ ಇವರು ವಕೀಲಿ ವ್ಯವಸಾಯಕ್ಕೆ ಶರಣು ಹೊಡೆದಿದ್ದಾರೆ.

### ರಾಷ್ಟ್ರಸಭೆಯ ಕಾರ್ಯಕಾರಿ ಮಂಡಳದ ನಿರ್ಧಾರಗಳು

### ಕರ್ನಾಟಕದಲ್ಲಿ ಕರನಿರಾಕರಣೆಯು ಸುರುವಾಗಬೇಕು.

ಅಖಿಲ ಭಾರತ ರಾಷ್ಟ್ರಸಭೆಯ ಕಾರ್ಯಕಾರಿ ಮಂಡಳದವರು ಅಲಹಾಬಾದದಲ್ಲಿ ಕೂಡಿ ಕೆಳಗಿನಂತೆ ಗೊತ್ತುಗಳನ್ನು ಮಾಡಿಕೊಂಡಿದ್ದಾರೆ :—

ವ್ಹಾಯಿಸರಾಯರು ಹೊರಡಿಸಿದ ಕಡೆಯ ಮೂರು ಕಾನೂನುಗಳನ್ನು ಸಾಮುದಾಯಿಕವಾಗಿ ಶಾಂತತೆಯಿಂದಲೂ ಧೈರ್ಯದಿಂದಲೂ ಭಾರತೀಯರು ಮುರಿಯಬೇಕು. ಮೂರೂ ಕಾನೂನುಗಳನ್ನು ದುರ್ಲಕ್ಷಿಸಿ ರಾಷ್ಟ್ರಸಭೆಯ ನಿರ್ಧಾರಗಳನ್ನು ಕೊನೆಗಾಣಿಸಬೇಕು. ಸಿಂದೀ ಅಂಗಡಿಗಳ ಮತ್ತು ಪರದೇಶಿ ಬಟ್ಟೆಯ ಅಂಗಡಿಗಳ ಪಿಕೆಟಿಂಗವನ್ನು ಮೊದಲಿನಕಿಂತಲೂ ಜೋರಿನಿಂದ ಸಾಗಿಸಬೇಕು. ಸ್ವಯಂಸೇವಕರಿಗೆ ಅನ್ಯಾಯದಿಂದ ಪೀಡೆಯನ್ನು ಕೊಟ್ಟ ಅಧಿಕಾರಿಗಳ ಮೇಲೆ ಸಾರ್ವಜನಿಕ ಬಹಿಷ್ಕಾರವನ್ನು ಹಾಕಬೇಕು. ಭೂಕಂದಾಯ ನಿರಾಕರಣೆಯ ಚಳವಳಿಯನ್ನು ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಗುಜರಾತ ಪ್ರಾಂತಗಳ ಕಲವು ಭಾಗಗಳಲ್ಲಿ ಹಬ್ಬಿಸಬೇಕು. ಬಂಗಾಲದಲ್ಲಿ ಚೌಕೀದಾರ ತೆರಿಗೆಯನ್ನು ನಿರಾಕರಿಸುವ ಚಳವಳಿಯನ್ನು ಹಬ್ಬಿಸಬೇಕು. ಬಿಹಾರ ಮತ್ತು ಓಡಿಸಾ ಪ್ರಾಂತಗಳಲ್ಲಿ ಅದನ್ನು ಪ್ರಾರಂಭಿಸಬೇಕು. ವೃತ್ತಪತ್ರ ದಬ್ಬಾಳಿಕೆಯ ಕಾನೂನನ್ನು ಮುರಿದು ಲೇಖಗಳನ್ನು ಬರೆಯುವೆವೆಂದೂ, ರಾಷ್ಟ್ರೀಯ ಪಕ್ಷವನ್ನೇ ಸಮರ್ಥಿಸುವೆವೆಂದೂ ಆಶ್ವಾಸನವನ್ನು ಕೊಟ್ಟು ವೃತ್ತಪತ್ರಕಾರರು ತಮ್ಮ ಪತ್ರಗಳನ್ನು ಪುನಃ ಪ್ರಾರಂಭಿಸಬೇಕು.

### ಬಾಗಲಕೋಟೆಯಲ್ಲಿ ಅಪೂರ್ವ ಉತ್ಸಾಹ.

## ಹೂವಿನ ಸರಕ್ಕೆ ೬೦ ರೂ.

### ಮಾವಿನ ಹಣ್ಣಿಗೆ ೫೫ ರು.

ಶ್ರೀ ಜೋರಾಪುರ ಗುರುರಾಯರನ್ನು ಅಭಿನಂದಿಸುವ ಕುರಿತು ಕೊತ್ತಲಪ್ಪನ ಬೈಲಿನಲ್ಲಿ ಶ್ರೀ ಟಗ್ಗರಸಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಶ್ರೀ ನರಗುಂದ ಡಾ. ಬುರ್ಲಿ. ಸೊಂಡೂರ, ಶ್ರೀಮತಿ ಉಮಾಬಾಯಿ ಕುಂದಾಪುರ ಮೊದಲಾದವರ ಅಭಿನಂದನಪರ ಭಾಷಣಗಳಾದವು. ಕೊನೆಯಲ್ಲಿ ಅವರ ಕೊರಳಲ್ಲಿ ಹಾಕಿದ ಹೂವಿನ ಸರದ ಹಾಗು ಅವರ ಕೈಯ್ಯಲ್ಲಿ ಕೊಟ್ಟ ಮಾವಿನ ಹಣ್ಣಿನ ಲಿಲಾವು ಮಾಡುವದರಲ್ಲಿ ಬಂದಿತು. ಹೂವಿನ ಸರಕ್ಕೆ ೬೦ ರು. ಹಾಗು ಮಾವಿನ ಹಣ್ಣಿಗೆ ೫೫ ರುಪಾಯಿ ಬಂದವು.

### ಹರತಾಳ.

ಶ್ರೀ ಗುರುರಾಯರನ್ನು ಸೆರೆ ಹಿಡಿದು ಅವರಿಗೆ ಶಿಕ್ಷೆಯನ್ನು ವಿಧಿಸಿದುದರ ನಿಷೇಧಾರ್ಥವಾಗಿ ತಾ॥ ೧೧ ರಲ್ಲಿ ಇಲ್ಲಿ ಹರತಾಳವು ಪಾಲಿಸಲ್ಪಟ್ಟಿತು. ಅಂತಿಯ ಅಂಗಡಿಗಳೆಲ್ಲ ಮುಚ್ಚಿದ್ದವು.

# ಬಾಗಲಕೋಟೆಯ
## ಶ್ರೀಯುತರಾದ ಜೋರಾಪುರ
# ಗುರುರಾಯರಿಗೆ ೭ ತಿ. ಸಶ್ರಮ ಶಿಕ್ಷೆ.
## "ರಾಜದ್ರೋಹ ಪ್ರಸಾರಮಾಡುವದೇ ನನ್ನ ಉದ್ಯೋಗ."

ತಾ|೯ ನೆಯ ದಿವಸ ಇಲ್ಲಿ ಸೆರೆಹಿಡಿಯಲ್ಪಟ್ಟ ಶ್ರೀ ಜೋರಾಪುರ ಗುರುರಾಯರ ಖಟ್ಲೆಯ ವಿಚಾರಣೆಯು ಬದಾಮಿಯಲ್ಲಿ ತಾ| ೧೦ ನೆಯ ದಿವಸ ಅಕ್ಷಯ ಮಾಮಲೇದಾರರ ಮುಂದೆ ಮುಂಜಾನೆ ೮|| ಗಂಟೆಗೆ ಪ್ರಾರಂಭವಾಯಿತು. ಪ್ರೋಸಿಕ್ಯುಟರರಾದ ಶ್ರೀ ಶಿರೋಳಕರರು ಖಟ್ಲೆಯನ್ನು ನಡಿಸಿದರು. ಗುಳೇದಗುಡ್ಡದಿಂದ ಇಬ್ಬರು ಸಾಕ್ಷೀದಾರರು ಬಂದಿದ್ದರು. ಅಲ್ಲಿಯ ಪೋಲೀಸ ಪಟೇಲರಾದ ವಿರುಪಾಕ್ಷಪ್ಪನವರೊಬ್ಬರು, ಮತ್ತೊಬ್ಬರೆಂದರೆ ಅಲ್ಲಿಯ ನಗರ ಸಭೆಯ ಸಭಾಸದರಾದ ನಬೀಸಾಹೇಬರು. ಅವರು ತಮ್ಮ ಸಾಕ್ಷ್ಯಯಲ್ಲಿ ಶ್ರೀ ಗುರುರಾಯರು ಗುಳೇದಗುಡ್ಡದಲ್ಲಿ ೨೨ ನೆಯ ತಾ| ಗೆ ಕೂಡಿದ ಸಭೆಯಲ್ಲಿ "ಉಪ್ಪಿನ ಕಾಯಿದೆ ಮುರಿಯರಿ, ಈಚಲ ಗಿಡಗಳನ್ನು ಕಡಿಯಿರಿ ಕಾಯಿದೆಗಳು ಸತ್ತಿವೆ. ನಾನು ಕಾಯಿದೆಯನ್ನು ಮುರಿದಿದ್ದೇನೆ" ಮೊದಲಾದ ಸಂಗತಿಗಳನ್ನು ಹೇಳಿದರೆಂದು ತಿಳಿಸಿದರು. "ಸಭೆಯಲ್ಲಿ ಎಷ್ಟು ಜನರು ನೆರೆದಿದ್ದರು?" ಎಂದು ಕೇಳಿದ ಪ್ರಶ್ನೆಗೆ ಓರ್ವ ಸಾಕ್ಷೀದಾರನು ಸುಮಾರು ೧೦೦ ೧೫೦ ಜನರು ಕೂಡಿದ್ದರೆಂದು ಹೇಳಿದನು. ಕಡೆಯಲ್ಲಿ ಮ್ಯಾಜಿಸ್ಟ್ರೇಟರು ಶ್ರೀ ಗುರುರಾಯರಿಗೆ "ಏನನ್ನಾದರೂ ಹೇಳುವದಿದೆಯೇ" ಎಂದು ಕೇಳಿದರು. ಅದಕ್ಕೆ ಶ್ರೀ ಗುರುರಾಯರು "ನನಗೆ ಮಾನ್ಯರಾದ ಹಿಂದೀಯರಾದ ಮಾಮಲೇದಾರರಂಥವರು ಸುಳ್ಳು ಖಟ್ಲೆಯ ವಿಚಾರಣೆಗೂ, ಪ್ರೋಸಿಕ್ಯೂಟರರು ಅದನ್ನು ನಡಿಸಲೂ ಫೌಜದಾರರಂಥವರು ಖಟ್ಲೆಯನ್ನು ಸಿದ್ಧಪಡಿಸಲೂ, ಸಾಕ್ಷೀದಾರರು ಒಂದೆರಡು ರೂಪಾಯಿ ಲಂಚದ ಸಲುವಾಗಿ ಸಾಕ್ಷಿಯನ್ನು ಹೇಳಲೂ ಮತ್ತು ತಾವು ತಮ್ಮ ಕರ್ತವ್ಯವನ್ನು ಮಾಡಿರುತ್ತೇವೆಂದು ಸಮಾಧಾನ ಹಚ್ಚಿಕೊಳ್ಳಲು ಸಿದ್ಧರಿರುವ ವರೆಗೆ ಈ ಕೋರ್ಟಿನಲ್ಲಿ ನ್ಯಾಯವು ಸಿಗುವದಿಲ್ಲವೆಂದು ಸ್ವಾಭಿಮಾನಿಗಳು ಈ ವಿಚಾರಣೆಯಲ್ಲಿ ಯಾವ ತರಹದ ಭಾಗ ತೆಗೆದುಕೊಳ್ಳಲಿಚ್ಛಿಸುವದಿಲ್ಲ" ಎಂದು ಹೇಳಿದರು. ನಿಮ್ಮ ಉದ್ಯೋಗವೇನೆಂದು ಮ್ಯಾಜಿಸ್ಟ್ರೇಟರು ಕೇಳಿದ್ದಕ್ಕೆ ಶ್ರೀ ಗುರುರಾಯರು "ರಾಜದ್ರೋಹವನ್ನು ಪ್ರಸಾರಮಾಡುವದೇ ನನ್ನ ಉದ್ಯೋಗ"ವೆಂದು ಹೇಳಿದರು. ಖಟ್ಲೆಯ ವಿಚಾರಣೆಯು ಸುಮಾರು ೯|| ಗಂಟೆಗೆ ಮುಗಿಯಿತು. ಮ್ಯಾಜಿಸ್ಟ್ರೇಟರು ಅವರಿಗೆ ೧೨೪ ನೆಯ ಕಲಮಿನ ಅನ್ವಯ ೬ ತಿಂಗಳ ಸಶ್ರಮ ಶಿಕ್ಷೆ, ಮತ್ತು ೫೦ ದಂಡ, ದಂಡವನ್ನು ಕೊಡದಿದ್ದಲ್ಲಿ ಮತ್ತೆ ೧ ತಿಂಗಳ ಸಶ್ರಮ ಶಿಕ್ಷೆಯನ್ನು ವಿಧಿಸಿದರು. "ಬ" ವರ್ಗದ ಸೆರೆಯಾಳೆಂತ ತಿಳಿಯಲ್ಪಡುವರು.

ಶ್ರೀ. ಗುರುರಾಯರನ್ನು ಸೆರೆಹಿಡಿದದ್ದು ಕನ್ನಡಿಗರ ಗಂಡು ಮೆಟ್ಟಿನ ಸ್ಥಳವೂ ವ್ಯಾಪಾರದ ಪಡಿಮುಖವೂ ಆಗಿರುವ ಬಾಗಲಕೋಟೆಯಲ್ಲಿ ಅವರ ಮೇಲೆ ಆರೋಪವನ್ನಿಟ್ಟಿರುವುದು ನೇಕಾರರ ಕೇಂದ್ರವಾಗಿರುವ ಗುಳೇದಗುಡ್ಡದಲ್ಲಿ ಭಾಷಣ ಮಾಡಿದುದಕ್ಕಾಗಿ. ಅವರ ಖಟ್ಲೆಯ ವಿಚಾರಣೆಯಾಗಿದ್ದುದು, ಕನೋಜದ ಶ್ರೀ ಹರ್ಷವರ್ಧನನ್ನು ಜಯಿಸಿ ಉತ್ತರಹಿಂದುಸ್ತಾನದಲ್ಲಿಯೂ ಕರ್ನಾಟಕದ ಕೀರ್ತಿಧ್ವಜವನ್ನು ಮೆರಿಸಿದ ಪುಲಿಕೇಶಿ ಹಾಗು ತ್ರಿಭುವನಮಲ್ಲ ವಿಕ್ರಮಾದಿತ್ಯಾದಿ ಚಾಲುಕ್ಯ ಸಾರ್ವಭೌಮರ ರಾಜಧಾನಿಯಾದ ಬದಾಮಿಯಲ್ಲಿ. ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಐತಿಹಾಸಿಕ ಮೊದಲಾದ ಎಲ್ಲ ವಿಷಯಗಳಲ್ಲಿಯೂ ಕರ್ನಾಟಕವು ಸರ್ವಾಂಗೀಣೋನ್ನತಿಯನ್ನು ಪಡೆಯುವಂತೆ ಹಗಲಿರುಳು ಹೆಣಗಾಡುತ್ತಿದ್ದ ಶ್ರೀ. ಗುರುರಾಯರಿಗೆ ಮೇಲಿನಂತಹ ಯೋಗಾಯೋಗಗಳು ಕೂಡಿಬಂದದ್ದು ದೈವೀ ಘಟನೆಯಲ್ಲದೆ ಮತ್ತೇನು?

ಖಟ್ಲೆಯನ್ನು ಮಧ್ಯಾಹ್ನದಲ್ಲಿ ಪ್ರಾರಂಭಿಸುವೆವೆಂದು ಅಧಿಕಾರಿಗಳು ಶ್ರೀ ಗುರುರಾಯರ ಮನೆಯವರಿಗೆ ಹೇಳಿದ್ದರಂತೆ. ಆದ್ದರಿಂದ ಅವರ ಮನೆಯವರು ಬಾಗಲಕೋಟೆಯಿಂದ ಮೋಟಾರ ಮಾಡಿಕೊಂಡು ಸುಮಾರು ೧೧|| ಗಂಟೆಗೆ ಅಲ್ಲಿಗೆ ಹೋದರಂತೆ. ಅವರು ಅಲ್ಲಿಗೆ ಹೋಗುವದರೊಳಗಾಗಿಯೇ ವಿಚಾರಣೆಯು ಮುಗಿದುಹೋಗಿತ್ತಂತೆ.

ಓರ್ವ ಸಾಕ್ಷೀದಾರರು ಶ್ರೀ. ಗುರುರಾಯರು ಗುಳೇದಗುಡ್ಡದಲ್ಲಿ ೨೨ ನೆಯ ತಾ| ನ ದಿವಸ ಭಾಷಣಮಾಡಿದರೆಂದು ಹೇಳಿದರಂತೆ. ಆದರೆ ಶ್ರೀ. ಗುರುರಾಯರು ಅಲ್ಲಿ ಭಾಷಣವನ್ನೇ ಮಾಡಿದ್ದಿಲ್ಲವಂತೆ. ಅವರು ಅಂದು ಸಭೆಯಲ್ಲಿ ಮಾತ್ರ ಪ್ರತ್ಯಕ್ಷರಿದ್ದರಂತೆ. ಸಭೆಯಲ್ಲಿ ೧೦೦-೧೫೦ ಜನರು ನೆರೆದಿದ್ದರೆಂದೂ ಹೇಳಿದರಂತೆ! ಗುಳೇದಗುಡ್ಡದಲ್ಲಿ ೨೨ಕ್ಕೆ ಭಾಷಣವಾಗಿಲ್ಲವಾಗಿ ಶ್ರೀ ಗುರುರಾಯರು ಹೇಳುತ್ತಿದ್ದರಂತೆ ಮ್ಯಾಜಿಸ್ಟ್ರೇಟರು ಅದನ್ನು ಬರೆದುಕೊಳ್ಳುತ್ತೇನೆಂದು ಅಂದರಂತೆ. ಬರೆಯುಕೊಳ್ಳುವದಾದರೆ ನಾನು ಹೇಳುವದಿಲ್ಲವೆಂದು ಶ್ರೀ. ಗುರುರಾಯರು ನುಡಿದರಂತೆ! ಆದರೆ ಅಂದು ಸಭೆಯಲ್ಲಿ ಸುಮಾರು ೨೦೦೦ ಜನರು ಸೇರಿದ್ದರಂತೆ! ಇಬ್ಬರು ಸಾಕ್ಷೀದಾರರ ಹೊರತಾಗಿ ಇನ್ನೊಬ್ಬರು ಸಾಕ್ಷಿಯಾಗತಕ್ಕದ್ದು ಇದ್ದಿತಂತೆ! ಆದರೆ ಆ ಸಾಕ್ಷಿದಾರರೇ ಬರಲಿಲ್ಲವಂತೆ! ವಿಚಾರಣೆಯ ಪ್ರಕಾರವು ಹೇಗೆ ನಡೆದಿದೆ ನೋಡಿರಿ!

## ಹಿರೇಮಠ ಸಾಹೇಬರು ಎಚ್ಚತ್ತರು.

ತಾ॥ ೯ ನೆಯ ದಿವಸ ಮಧ್ಯಾಹ್ನದಲ್ಲಿ ಶಾಂತಿಸಂಘದ ಸಭೆಯನ್ನು ಬದಾಮಿಯ ಅಧಿಕಾರಿಗಳು ನೆರೆಸಿದ್ದರಂತೆ! ಹಿರೇಮಠರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರಂತೆ! ಸಭೆಗೆ ೩೦-೪೦ ಜನರು ಗೌಡರು ಬಂದಿದ್ದರಂತೆ! ಹಿರೇಮಠರು "ಸತ್ಯಾಗ್ರಹ ಚಳವಳಿಯಲ್ಲಿ ಬಡವರೇ ಸೇರಿರುವರು. ಯಾವ ದೇಸಾಯಿ ದೇಶಪಾಂಡೆ ಮೊದಲಾದ ಧನಿಕರು ಸೇರುವದಿಲ್ಲ. ಚಳವಳಿಯನ್ನು ಮಾಡುವವರು ನಿಮಗೆ ಸಿಂದೀ ಗಿಡಗಳನ್ನು ಕಡಿಯಲಿಕ್ಕೆ ಹಚ್ಚಿ ತಾವು ಪಾರಾಗುತ್ತಾರೆ. ಆದುದರಿಂದ ಈ ಚಳವಳಿಯಲ್ಲಿ ಬೀಳಬೇಡಿರಿ. ಖಾದೀ ಚಳವಳಿಯನ್ನು ಬೇಕಾದರೆ ಸಾಗಿಸಿರಿ" ಎಂಬುದಾಗಿ ಹೇಳಿದರಂತೆ! ಕೆಲವರು ಇದಕ್ಕೆ ಹುಂ ಕೊಟ್ಟರಂತೆ! ಕೆಲವರು ಸುಮ್ಮನೆ ಕುಳಿತುಕೊಂಡರಂತೆ! ಶ್ರೀ ಜಮನಾಲಾಲ, ಜವಾಹಿರಲಾಲ, ಜಮನಾದಾಸ ಮೊದಲಾದವರನ್ನು ನಾವೆಲ್ಲರೂ ಇನ್ನು ಬಡವರೆಂದು ತಿಳಿದುಕೊಳ್ಳಬೇಕು ತಿಳಿಯಿತೇ?

ಹಿರೇಮಠರು ಬಾದಾಮಿಯಲ್ಲಿ ಅಧಿಕಾರಿಗಳ ಕೃಪಾಛತ್ರದ ಕೆಳಗೆ ಹೋಗುತ್ತಿರುವ "ಪ್ರಜಾಧ್ವನಿ" ಪತ್ರಿಕೆಯನ್ನು ತರಿಸಿಕೊಂಡು ಕೇಳಿಕೊಂಡರಂತೆ! ಕಾಯಿದೆಭಂಗ ಚಳವಳಿಯ ವಿರುದ್ಧವಾಗಿ ಹಳ್ಳಿಹಳ್ಳಿಗಳಲ್ಲಿ ಚಳವಳಿ ಮಾಡಲು ಕೇಳಿಕೊಂಡರಂತೆ. ಚಳವಳಿ ಮಾಡಲು ಅವರು ನಿರಾಕರಿಸಿದರಂತೆ! ಪ್ರಜಾಧ್ವನಿಯನ್ನು ತರಿಸುವೆವೆಂದು ಅಲ್ಲಿ ಒಪ್ಪಿಕೊಂಡರಂತೆ! ಹೊರಗೆ ಬಂದ ಕೂಡಲೆ ಸತ್ಯಾಗ್ರಹಿಗಳಿಗೆ ದಾರಿಗೆ ತರಿಸುವದಿಲ್ಲವಾಗಿ ಹೇಳಿದರಂತೆ! ನೋಡಿರಿ ಅಧಿಕಾರಿಗಳು ತಮ್ಮ ತಮ್ಮ ಪಾತ್ರಗಳನ್ನು ಹೇಗೆ ಅಭಿನಯಿಸುತ್ತಿರುವರು?

## ರಾಷ್ಟ್ರೀಯ ಪಕ್ಷಕ್ಕೆ ಸೇರಿದ

### ಮುಸಲ್ಮಾನರನ್ನು ಬೆದರಿಸುವದಕ್ಕಾಗಿ ಒಳಸಂಚು

### ಮೌಲಾನಾ ಅಹಮ್ಮದ ಸಯ್ಯದರಿಗೆ

### ಡೊಣ್ಣೆಗಳ ಪೆಟ್ಟು

ಮುಂಬಯಿಯಲ್ಲಿಯ ರಾಷ್ಟ್ರೀಯ [illegible]ದ ಮುಸಲ್ಮಾನ ಮುಖಂಡರಾದ ಮೌಲಾನಾ ಸಯ್ಯದ ಅಹಮ್ಮದರಿಗೆ ತಾ॥ ೬ ನೆಯ ದಿವಸ ಕೆಲವರು ಡೊಣ್ಣೆ[illegible]ಪೆಟ್ಟುಗಳನ್ನು ಕೊಟ್ಟು ಅವರನ್ನು ಬಲವಾಗಿ ಗಾಯಗೊಳಿಸಿದ್ದಾರೆ. ಕ್ರಾನಿಕಲ್ ಪತ್ರಿಕೆಯ ಪ್ರತಿನಿಧಿಯು ಅವರಲ್ಲಿಗೆ ಹೋಗಿ ಈ ವಿಷಯವಾಗಿ ಅವರನ್ನು ವಿಚಾರಿಸಿದಾಗ ಮೌಲಾನಾರವರು ಹೀಗೆ ಹೇಳಿದ್ದಾರೆ:—

ತಾ॥ ೬ ನೆಯ ದಿವಸ ರಾತ್ರಿ ೨ ಘಂಟೆಗೆ ನಾನು [illegible] ಮಹಾಲದಿಂದ ಮೋಟಾರದಲ್ಲಿ ತಿರುಗಿ ಬರುತ್ತಿದ್ದೆನು. ನಾಗಪಾಡಾದ ಮೂಲೆಯನ್ನು ನನ್ನ ಮೋಟಾರು ಮುಟ್ಟುವಷ್ಟರಲ್ಲಿಯೇ ಹಿಂದಿನಿಂದ ಒಂದು ಮೋಟಾರು ಬಂದು ನನ್ನ ಮೋಟಾರನ್ನು ಹಿಂದ ಹಾಕಿತು. ಆ ಮೋಟಾರಿನಲ್ಲಿ [illegible] ಜನರಿದ್ದರು. ಆ ಮೋಟಾರು ಮುಂದೆ ಹೋದ ಕೂಡಲೆ ನನ್ನ ಮೋಟಾರನ್ನು ಡ್ರೈವ್ಹರನು ನಿಲ್ಲಿಸಿದನು. ನಿಲ್ಲಿಸದೆ ಹಾಗೆಯೇ ಮುಂದೆ ಹೋಗೆಯೆಂದು ನನ್ನ ಗೆಳೆಯರು ಅವನನ್ನು ಕೇಳಿಕೊಂಡರು. ನನ್ನ ಮೋಟಾರು ಸಾಗಿದ ಕೂಡಲೆ, ಮತ್ತೊಂದು ಮೋಟಾರದೊಳಗಿನ ಕೆಲವು ಜನರು ನಮ್ಮ ಮೇಲೆ ಏರಿಬಂದರು. ಅವರೆಲ್ಲರ ಕೈಗಳಲ್ಲಿ ಡೊಣ್ಣೆಗಳಿದ್ದವು. ಅವರು ನಮ್ಮ ಮೋಟಾರವನ್ನು ನುಗ್ಗಿ ಒಳಗಿದ್ದವರನ್ನು ಹೊಡೆಯ ಹತ್ತಿದರು. ಡೊಣ್ಣೆಯ ಪೆಟ್ಟು ನನ್ನ ತಲೆಗೆ ಬಲವಾಗಿ ಬಿದ್ದುದರಿಂದ ನನ್ನ ತಲೆಯಿಂದ ರಕ್ತವು ಸುರಿಯಹತ್ತಿತು. ಕೆಲವು ಹೊತ್ತಿನಲ್ಲಿ ನಾವು ಅವರ ಕೈಯೊಳಗಿಂದ ಪಾರಾಗಿ ಡಾ॥ ಗೌರಕರವರ ಮನೆಯನ್ನು ಮುಟ್ಟಿದೆವು. ಆದರೆ ಆ ದಾಳಿಗಾರರು ನಮ್ಮನ್ನು ಅವರ ಮನೆಯ ವರೆಗೂ ಬೆನ್ನಟ್ಟಿ ಬಂದರು. ನನ್ನ ಗೆಳೆಯರು ಅವರನ್ನು ಬಾಗಿಲದಲ್ಲಿಯೇ ತಡೆದದ್ದರಿಂದ ಅವರು ನಿರುಪಾಯರಾಗಿ ತಿರುಗಿ ಹೋದರು. ಹಿಂದೂ ಮುಸಲ್ಮಾನರ ನಡುವೆ ಕಲಹವನ್ನು ಎಬ್ಬಿಸಲು ಕೆಲವು ಜನರು ಒಳಸಂಚು ಮಾಡಿ ಹೀಗೆ ಗೊಂದಲವನ್ನು ಹಾಕಿರುವರಾಗಿ ನನಗೆ ತೋರುತ್ತದೆ. ಇಂತಹ ಒಳಸಂಚುಗಳಿಗೆ ಮುಸಲ್ಮಾನರು ಸೊಪ್ಪು ಹಾಕದೆ ತಮ್ಮ ಕಾರ್ಯವನ್ನು ಕೊನೆಗಾಣಿಸಬೇಕು.

## ಶ್ರೀ ಮುಕದಮರಿಗೆ ೨ ವರ್ಷ ಸಶ್ರಮ ಶಿಕ್ಷೆ.

ಸ್ವಯಂಸೇವಕರ ತಂಡವನ್ನು ತೆಗೆದುಕೊಂಡು ಹೋಗಿ ಧರಸಾನಾ ದಾಳಿಯ ಕಾರ್ಯದಲ್ಲಿ ಅಧಿಕಾರಿಗಳ ದಬ್ಬಾಳಿಕೆಗೆ ತುತ್ತಾದ ಶ್ರೀ. ವಾಮನ ಮುಕದಮರಿಗೆ ೨ ವರ್ಷ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ.

---

ಜಯಲಕ್ಷ್ಮೀ ಪ್ರಾಸಾದಿಕ

ಸ್ತ್ರೀಮಿಶ್ರಿತ ಸಂಗೀತ ನಾಟಕ ಮಂಡಳಿ ಹಾವಣಗೇರಿ ಇವರು

**ಬಾಗಲಕೋಟೆ ರಾಜ ಥಿಯೇಟರಿನಲ್ಲಿ**

ಶನಿವಾರ ತಾ॥ ೨೧-೬-೩೦

**ಲಂಕಾದಹನ.**

ಎಂಟು ಹೊಸ ಆಖ್ಯಾನಗಳನ್ನು ಪ್ರಯೋಗಿಸುವರು.

ವ್ಯವಸ್ಥಾಪಕ.

ಬರುವರು! ಬರುವರು!!

ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ

ಶಿರಹಟ್ಟಿ ನಾಟಕ ಮಂಡಳಿಯವರು

ಶಿವಾನಂದ ನಾಟಕ ಶಾಲೆಯಲ್ಲಿ

# ಬೇಗನೆ ಬರುವರು

ಮತ್ತು ಲೋಕಪ್ರಿಯವಾದ

ತಮ್ಮ ನಾಟಕಗಳನ್ನು ಅಭಿನಯಿಸುವರು.

ಎಚ್. ವೆಂಕೋಬರಾವ.

ಪ್ರೊಪ್ರಾಯಿಟರ.

---

ಈ ಪತ್ರಿಕೆಯು [illegible] ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೭ ನಿತ್ಯ ಸಂಚಿಕೆಯು. ಬೆಲೆ ೦—೦—೩

सर्वं परवशं दुःखं सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಶುಕ್ರವಾರ ಮಿತಿ ಜ್ಯೇಷ್ಠ ಬಹುಳ ೨ ಶಕೆ ೧೮೫೨ ತಾ|| ೧೩—೬—೩೦ ಸಂಚಿಕೆ ೭೩

## ಬಾಗೇವಾಡಿಯಲ್ಲಿ ದಬ್ಬಾಳಿಕೆ

### ಲಿಂಗಾಯತ

# ಮಠಾಧಿಕಾರಿಗಳನ್ನು ಸೆರೆಹಿಡಿದರು.

## ಮಠಾಧಿಕಾರಿಗಳ ಧರ್ಮಪತ್ನಿಯವರು

# ಸತ್ಯಾಗ್ರಹದಲ್ಲಿ ಸೇರಿದರು.

[ನಮ್ಮ ಸ್ವಂತ ಸುದ್ದಿಗಾರರಿಂದ]

ಮಹಾತ್ಮರ ಕಾರ್ಯಕ್ರಮದಂತೆ ಇಲ್ಲಿಯೂ ಈಗ ಸಿಂದೀ ಗಿಡಗಳನ್ನು ಕಡಿಯುವ ಚಳವಳಿಯು ಭರದಿಂದ ಸಾಗಿದೆ. ೪ನೆಯ ತಾ. ದಿವಸ ಬೆಳಗ ೫ರಿಂದ ಪೋಲೀಸ ಲಾರಿಗಳು ಬಂದು ೩೭ ಜನರನ್ನು ಸೆರೆಹಿಡಿದರು. ಮುನ್ನಾದಿನ ೧೭ ಜನರನ್ನು ಹಿಡಿಯುವರೆಂದು ಗೊತ್ತಾಗಿತ್ತು. ಆದರೆ ೧೭ರ ಬದಲು ೩೭ ಜನರನ್ನು ಹಿಡಿದದ್ದರಿಂದ ಊರಲ್ಲಿ ಬಹಳೇ ಕ್ಷೋಭೆಯು ಉತ್ಪನ್ನವಾಯಿತು. ಈ ೩೭ ಜನರಲ್ಲಿ ಲಿಂಗಾಯತ ಮಠಾಧಿಕಾರಿಗಳಾದ ಶ್ರೀ. ಶಂಕರಯ್ಯನವರನ್ನೂ ಅವರ ಬಂಧುಗಳನ್ನೂ ಹಿಡಿದ ಕಾರಣ ಜನತೆಯಲ್ಲಿ ಗೊಂದಲವೆದ್ದಿತು. ಈ ಜನರನ್ನು ಪೋಲೀಸರು ಸ್ವಾಧೀನಮಾಡಿ ಊರ ಜನರೆಲ್ಲರೂ ಸಿಂದೀ ಗಿಡಗಳನ್ನು ಕಡಿದರು. ಅದೇ ಕಾಲಕ್ಕೆ ಕೂಡಿದ ಜನತೆಯಲ್ಲಿ ಯಾರೋ ಕೆಲವರು ಧಾರವಾಡ ಹಾಗು ಬೈಲಹೊಂಗಲದ ಮಾರ್ಗದಲ್ಲಿರುವ ತಂತಿಯ ಕಂಬಗಳನ್ನು ಕಡಿದು ಹಾಕಿದರು. ಹಾಗೆಯೆ ಊರಲ್ಲಿ ಒಂದು ಸಿಂದೀ ಅಂಗಡಿಯನ್ನು ಕೆಡವಿದರು. ಸ್ವಯಂಸೇವಕರು ಜನಕ್ಕೆ ಶಾಂತರಾಗಿರಲು ಹೇಳುತ್ತಿದ್ದರು. ಧರ್ಮಗುರುಗಳನ್ನು ಹಿಡಿದದ್ದಕ್ಕೆ ಕ್ಷುಬ್ಧವಾದ ಜನತೆಯನ್ನು ಅಶಾಂತಿ ಮಾರ್ಗಕ್ಕೆ ಹಚ್ಚಲು ಸಿಂದೀ ಗುತ್ತೇದಾರರ ಸೇವಕರೇ ಕಾರಣರಾದರೆಂದು ಜನರು ಅನ್ನುತ್ತಾರೆ. ಸಾಯಂಕಾಲ ಸಭೆಯಾಯಿತು. ಸಭೆಯಲ್ಲಿ ಶ್ರೀ. ಶಂಕರಯ್ಯನವರ ಧರ್ಮಪತ್ನಿಯವರು "ನಾನು ನನ್ನ ಪತಿಯು ಪ್ರಾರಂಭಿಸಿದ ಕಾರ್ಯವನ್ನು ಮುಂದೆ ಸಾಗಿಸುವೆನು. ನೀವೆಲ್ಲರೂ ಸಹಾಯಮಾಡಿರೆಂದು ಕೇಳಿದರು. ಜನರೆಲ್ಲರೂ ಹುರಿದುಂಬಿ ರಾತ್ರಿಯಲ್ಲಿಯೇ ೬೦೦ ಸಿಂದೀ ಗಿಡಗಳನ್ನು ಉರುಳಿಸಿದರು.

೫ನೆಯ ತಾ. ದಿವಸ ಕಲೆಕ್ಟರರು ಬಂದರು. ಅಷ್ಟರಲ್ಲಿಯೇ ಜನರೆಲ್ಲರೂ ಗಿಡ ಕಡಿಯಲು ಹೊರಟಿದ್ದರು. ಈ ದಿನ ಅಧಿಕಾರಿಗಳು ಉದ್ಧಟವರ್ತನವನ್ನು ತೋರಿಸಲಿಲ್ಲ. ಸ್ವತಂತ್ರ ಗಿಡಗಳನ್ನು ಕಡಿಯಿರಿ. ಸರಕಾರಿ ಗಿಡಗಳನ್ನು ಕಡಿಯಬೇಡಿರೆಂದು ಅಧಿಕಾರಿಗಳು ಹೇಳಿಹೋದರು. ಊರಲ್ಲಿ ಈಗ ಶಾಂತತೆಯಿದೆ. ಕಿತ್ತೂರಿನಿಂದ ಶ್ರೀ. ಅಗಳಗಟ್ಟಿ, ಅತ್ರೇಯ, ಇಂಗಳೆ, ಮಾಳಿಹಾಳ ಮೊದಲಾದವರು ಬಂದು ಶಾಂತರೀತಿಯಿಂದ ಇರಲು ಜನರಿಗೆ ಉಪದೇಶಿಸಿದರು. ಕಿತ್ತೂರ ಬಾಗೇವಾಡಿ ಮಧ್ಯದಲ್ಲಿ ತಂತಿಯ ಕಂಬಗಳನ್ನು ಕಡಿಯುವ ಅತ್ಯಾಚಾರವು ನಡೆದದ್ದರಿಂದ ಕಾರ್ಯ ಸಾಗಿಸಲು ಈ ಭಾಗದ ಸ್ವಯಂಸೇವಕರಿಗೆ ಬಹಳೇ ವ್ಯತ್ಯಯವುಂಟಾಗಿದೆ. ಅಲ್ಲಲ್ಲಿ ಈ ಅತ್ಯಾಚಾರದ ನಿಷೇಧವು ನಡೆದಿದೆ.

## ಮುಂಬಯಿಯಲ್ಲಿ ದಬ್ಬಾಳಿಕೆ

# ಪಂಡಿತ ಮುಕುಂದ ಮಾಲವೀಯಾ

## ಮೊದಲಾದ ೧೦ ಜನರಿಗೆ ೬ ತಿಂಗಳ ಸಶ್ರಮ ಶಿಕ್ಷೆ.

ಮುಂಬಯಿಯ ಸತ್ಯಾಗ್ರಹ ಯುದ್ಧ ಮಂಡಳದ ಸಭಾಸದರಾದ ಶ್ರೀ. ಜಿನಾಭಾಯಿ ಜೋಶಿ, ಮಣಿಭಾಯಿ ದೇಸಾಯಿ, ಆರ್. ಎಸ್. ಪಟೇಲ, ವಿಶ್ವನಾಥ, ರಾಜೇಂದ್ರನಾಥ ಶರ್ಮಾ, ನಾನಜಿ ಡಿ. ಪ್ರೇಮಜಿ, ರಾಮದಾಸ ಪ್ರತಾಪ, ಎಸ್. ಕೆ. ಪುಪ್ಪಳ, ಮೌಲಾನಾ ಹಮೀದ ಅಹಮ್ಮದ ಮತ್ತು ಪಂಡಿತ ಮುಕುಂದ ಮಾಲವಿಯಾ ಇವರಿಗೆ ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಹೊರಡಿಸಿದ ಅಪ್ಪಣೆಯ ವಿರುದ್ಧವಾಗಿ ಕಾಂಗ್ರೆಸ್ ಬುಲೇಟಿನ್ ಪತ್ರಿಕೆಯನ್ನು ಹೊರಡಿಸಿದುದಕ್ಕಾಗಿ ೬ ತಿಂಗಳ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ

## ದಿವಾಣ ಚಿಮಣಲಾಲರ ರಾಜೀನಾಮೆ.

ಕಾರ್ಯಕಾರಿ ಸಮಿತಿಯ ಸಭಾಸದರಾಗಿ ಜಿನೀವಾ ಪರಿಷತ್ತಿಗೆ ಹೋದ ದಿವಾಣ ಚಿಮಣಲಾಲರಿಗೆ ಅವರ ತಂದೆಯವರು "ಕಾರ್ಯಕಾರಿ ಸಮಿತಿಯ ಸಭಾಸದತ್ವಕ್ಕೆ ಕೂಡಲೆ ರಾಜೀನಾಮೆಯನ್ನು ಕೊಟ್ಟು ಇಲ್ಲಿಗೆ ಬಂದು ಕಾಂಗ್ರೆಸ ಪಕ್ಷದಲ್ಲಿ ಸೇರಿಕೊಳ್ಳಿ" ಎಂದು ರಾವಳಪಿಂಡಿಯಿಂದ ತಂತಿಯನ್ನು ಕಳಿಸಿದ್ದಾರೆ.

## ವಿಜಾಪೂರ ಜಿಲ್ಲೆಯ ತರುಣರೇ !

# ನಿಮ್ಮಲ್ಲಿ ರಕ್ತವಿದೆಯೋ ?

### ಇದ್ದರೆ, ಏಳಿರಿ !! ರಾಷ್ಟ್ರದ ರಕ್ಷಣೆಗಾಗಿ ಟೊಂಕಕಟ್ಟಿ ಕೆಲಸಕ್ಕೆ ಪ್ರಾರಂಭಮಾಡಿರಿ !!!

ಈಗಿನ ತನಕ ನಿಮ್ಮ ಜಿಲ್ಲೆಯ ತರುಣ ಮುಂದಾಳುಗಳಾದ ಶ್ರೀ. ಸಂಗಳವೇಕರ ಶ್ರೀನಿವಾಸರಾಯರು. ಶ್ರೀ. ಮೊಕಾಶಿ ಹಣಮಂತರಾಯರು. ಶ್ರೀ. ಗಣಿ ಬಾಬೂರಾಯರು. ಶ್ರೀ. ಕಬ್ಬೂರ ರಾಘವೇಂದ್ರರಾಯರು. ಶ್ರೀ ಕಾಖಂಡಕಿ ರಾಮಾಚಾರ್ಯರು. ಶ್ರೀ ಶಂಕರಗೌಡ ತಿಮ್ಮನಗೌಡ ಪಾಟೀಲ. ಮತ್ತು ಈಗ ಶ್ರೀ. ಜೋರಾಪೂರ ಗಣೇಶರಾಯರು ಮುಂತಾದವರು ನಮ್ಮ ನಿಮ್ಮ ಸಲುವಾಗಿ ಜೇಲಿಗೆ ತೆರಳಿದರು. ನಾವು ಇದೆಲ್ಲ ನೋಡಿ ಸುಮ್ಮನೇ ಕೂಡಬೇಕೆ ?

ನಿಮಗೆ ದೇಶದ ಸ್ವಾತಂತ್ರ್ಯಕ್ಕಾಗಿ ಏನೂ ಅನಿಸುವದಿಲ್ಲವೇ ? ಬನ್ನಿ ನಿಮ್ಮ ನಿಮ್ಮ ಹೆಸರುಗಳನ್ನು ಕೊಟ್ಟು ರಾಷ್ಟ್ರೀಯ ಸಂಗ್ರಾಮದಲ್ಲಿ ನಿಮ್ಮ ಆಹುತಿಯನ್ನು ಕೊಡಲಿಕ್ಕೆ ಸಿದ್ಧರಾಗಿರಿ. ಮಹಾತ್ಮಾ ಗಾಂಧಿಯವರ ಚಳವಳಿಯನ್ನು ಮುಂದೆ ಸಾಗಿಸುತ್ತಿದ್ದ ಪ್ರತಿಯೊಂದು ಸ್ಥಳದಲ್ಲಿಯ ಮುಂದಾಳುಗಳು ಕಾರಾಗೃಹವಾಸಿಗಳಾದ್ದರಿಂದ ಸದ್ಯಕ್ಕೆ ರಾಷ್ಟ್ರದ ಕಾರ್ಯವನ್ನು ಸಾಗಿಸಲಿಕ್ಕೆ ನಮ್ಮಲ್ಲಿಯ ತರುಣರು ಮುಂದಾಗದಿದ್ದರೆ ರಾಷ್ಟ್ರ ಕಾರ್ಯವು ಸಾಗುವ ಬಗೆ ಹೇಗೆ ? ಈ ಚಳವಳಿಯ ಎಲ್ಲ ಭಾರವು ಹೊಸ ರಕ್ತದ ನಿಮ್ಮಂಥ ತರುಣರ ಮೇಲೆ ಇರುವದು. ಇಂಥ ಪರೀಕ್ಷೆಯ ಸಮಯದಲ್ಲಿ ನೀವು ಹಿಂದುಳಿದರೆ ಇದರ ಪಾಪವನ್ನು ನಿಮ್ಮ ಮಕ್ಕಳು ಮರಿಗಳು ಅನುಭೋಗಿಸಬೇಕಾಗುವದು. ಇಂಥ ಪ್ರಸಂಗವು ಎಂದಿಗೂ ಬರಲಿಕ್ಕಿಲ್ಲ. ಈ ಸ್ವಾತಂತ್ರ್ಯ ಪ್ರಾಪ್ತಿಯ ಸಮಯದಲ್ಲಿ ನೀವು ಸ್ವಸ್ಥನಾಗಿ ಕುಳಿತುಕೊಳ್ಳುವಿರೋ ? ಸರಕಾರದ ಈ ಅಮಾನುಷ ದಬ್ಬಾಳಿಕೆಗೆ ಏನೆಂದು ಉತ್ತರ ಕೊಡುವಿರಿ ? ನಿಮ್ಮಲ್ಲಿ ದೇಶಾಭಿಮಾನವಿದ್ದರೆ ಈ ಪ್ರಸಂಗದಲ್ಲಿ ಹೊರಗೆ ಬನ್ನಿರಿ ! ತರುಣರೇ ಏಳಿರಿ !! ಸಿದ್ಧರಾಗಿರಿ !!!

ತಾರೀಖು ೯—೬—೪೨ | ಶ್ರೀನಿವಾಸ ಪಾಂಡುರಂಗ ನೀರಲಕೇರಿ
ಬಾಗಲಕೋಟ | ಹಿಂದುಸ್ಥಾನಿ ಸೇವಾದಳ ಸಂಘಟಕ.

---

## ಬೆಳಗಾವಿ ಜಿಲ್ಲೆಯಲ್ಲಿ ದಬ್ಬಾಳಿಕೆ

### ಸಂಪಗಾವಿಯಲ್ಲಿ ೧೦ ಜನರನ್ನು ಸೆರೆಹಿಡಿದರು

ಮೇಲಿನ ವಸ್ತ್ರದ ಇದರನ್ನು ಸೆರೆಹಿಡಿದದ್ದರಿಂದ ಅವರ ಜಾಗೆಯ ಮೇಲೆ ೧೦ ಜನ ಸ್ವಯಂಸೇವಕರು ನಿಂತು ದಿನಾಲು ಸಿಂದಿಯ ಗಿಡಗಳನ್ನು ಕಡಿಯುತ್ತಿದರು. ಅಧಿಕಾರಿಗಳು ಅವರನ್ನು ಸೆರೆಹಿಡಿದುಕೊಂಡು ಹೋಗಿದ್ದಾರೆ. ಈಗ ಅವರ ಸ್ಥಳದಲ್ಲಿ ಮತ್ತೆ ಹತ್ತು ಜನರು ಬಂದು ಕಾರ್ಯವನ್ನು ಸಾಗಿಸಿದ್ದಾರೆ.

## ಬಾಗಲಕೋಟೆಯಲ್ಲಿ ಕೆಲವರು ದೇಶದ್ರೋಹಿಗಳಾದರು !

ವಿಜಾಪುರ ಜಿಲ್ಲೆಯ ದಕ್ಷಿಣ ಭಾಗದ ಡಿ|| ಡೆ|| ಕಲೆಕ್ಟರರಾದ ಹಿರೇಮಠ ಸಾಹೇಬರು ತಾ|| ೧೨ನೇ ದಿವಸ ಮುಂಜಾನೆ ಬಾಗಲಕೋಟೆಯಲ್ಲಿ ಶಾಂತತಾ ಸಭೆಯನ್ನು ಕೂಡಿಸಿದ್ದರು. ಸಭೆಗೆ ಹಳ್ಳಿ ಪಳ್ಳಿಗಳಿಂದ ಬಂದ ಕೆಲವು ಗೌಡ ಕುಲಕರ್ಣಿಯರು ಹೋಗಿದ್ದಲ್ಲದೆ ಇಲ್ಲಿಯ ಡಾ|| ಜಹಾಗೀರದಾರ, ಮುರಗೋಡ, ತಪಶೆಟ್ಟಿ, ಪಿಂಜಾರ, ಮೆಣಸಿ, ಬಾಕೀಮಠ, ದೇಶಪಾಂಡೆ, ಕಿಣಗಿ, ಒಡೆಯರ ಮೊದಲಾದ ಮಹಾಶಯರು ಹೋಗಿದ್ದರಂತೆ ! ಹಿರೇಮಠ ಸಾಹೇಬರು ನೆರೆದವರನ್ನು ಕುರಿತು "ಕಾಯದೆ ಭಂಗದ ಚಳವಳಿಯಲ್ಲಿ ಸೇರಬೇಡಿರಿ. ಇದರಿಂದ ಹಾನಿಯಾಗುತ್ತದೆ. ಜಿಲ್ಲೆಯಲ್ಲಿ ಎಂಥ ಅವಸ್ಥೆಯಾಗಿದೆ ನೋಡಿರಿ. ಕಾಯದೆ ಭಂಗದ ವಿರುದ್ಧ ಚಳವಳಿಯನ್ನು ಮಾಡಿರಿ" ಎಂತಾಗಿ ಉಪದೇಶಿಸಿದ್ದಲ್ಲದೆ ಬೆಳಗಾವಿಯಲ್ಲಿ ಹೊರಡುತ್ತಿರುವ "ಪ್ರಜಾಧ್ವನಿ" ಎಂಬ ಸರಕಾರಿ ಪಕ್ಷದ ವಾರಪತ್ರಿಕೆಯನ್ನು ತರಿಸಿರೆಂದು ಹೇಳಿಕೊಂಡರು. ಒಬ್ಬರು ನಾವು "ಕನ್ನಡಿಗ" ಪತ್ರಿಕೆಯನ್ನು ತರಿಸುತ್ತೇವೆ. ಆದುದರಿಂದ ಪ್ರಜಾಧ್ವನಿ ನಮಗೆ ಬೇಕಾಗಿಲ್ಲವೆಂದು ನುಡಿದರಂತೆ. "ಕನ್ನಡಿಗದಲ್ಲಿ ಕೇವಲ ರಾಷ್ಟ್ರೀಯ ಪಕ್ಷದ ಸುದ್ದಿಗಳು ಇರುತ್ತವೆ, 'ಪ್ರಜಾಧ್ವನಿ' ಯಲ್ಲಿ ಸರಕಾರಿ ಪಕ್ಷ ಹಾಗೂ ರಾಷ್ಟ್ರೀಯ ಪಕ್ಷ ಈ ಎರಡೂ ಪಕ್ಷಗಳ ಸುದ್ದಿ ಇರುತ್ತವೆ. ಆದುದರಿಂದ ಅದನ್ನೇ ತರಿಸಿರಿ" ಎಂದು ಹಿರೇಮಠರು ಹೇಳಿದರಂತೆ "ಟಾಯಿಮ್ಸ ಪತ್ರವನ್ನು ತರಿಸುತ್ತೇವೆ ಪ್ರಜಾಧ್ವನಿಯನ್ನು ತರಿಸುವದಾಗುವದಿಲ್ಲವೆಂದು ಮತ್ತೊಬ್ಬರು ನುಡಿದರಂತೆ ! "ತರಿಸುವದಾಗದಿದ್ದರೆ ಬಿಡಿರಿ, ಪ್ರಜಾಧ್ವನಿ ಪತ್ರಿಕೆಯನ್ನು ಜನರು ತರಿಸಿಕೊಳ್ಳುವಂತೆ ಚಳವಳಿಯನ್ನಾದರೂ ಮಾಡಿರಿ ಎಂದು ಹಿರೇಮಠರು ಹೇಳಿದರಂತೆ. ಅದಕ್ಕೆ ಅವರು ಹೂಂ ಗುಟ್ಟಿದರಂತೆ ! ಇಷ್ಟರ ಬಳಿಕ ಸಭೆಯ ಕಾರ್ಯವು ಮುಗಿದದ್ದರಿಂದ ಗೌಡ ಕುಲಕರ್ಣಿಯರು ಹೊರಟುಬಿಟ್ಟು ಬಂದರಂತೆ. ಈ ಊರ ಮಹಾಶಯರು ಮಾತ್ರ ಅಲ್ಲಿಯೇ ಕುಳಿತು ಹಿರೇಮಠ ಸಾಹೇಬರೊಡನೆ ಕಾಯಿದೆ ಭಂಗದ ಚಳವಳಿಯ ವಿರುದ್ಧ ಯಾವ ಯಾವ ಉಪಾಯಗಳನ್ನು ಯೋಜಿಸಬೇಕೆಂಬುದರ ಬಗ್ಗೆ ಮಾತುಕತೆಗಳನ್ನಾಡುತ್ತ ಕುಳಿತುಕೊಂಡರಂತೆ ! ಅಂತೂ ಇಂತೂ ಬಾಗಲಕೋಟೆಯಲ್ಲಿ ಕೆಲವರಾದರೂ ದೇಶದ್ರೋಹಿಗಳೂ ಸ್ವಜನದ್ರೋಹಿಗಳೂ ಹೊರಟರು.

# ಸೊಲ್ಲಾಪುರದಲ್ಲಿ ರಾಷ್ಟ್ರಧ್ವಜದ ಸತ್ಯಾಗ್ರಹ

## ೧೦೦ ಜನ ಸತ್ಯಾಗ್ರಹಿಗಳು ಹೊರಟರು.

ಸೊಲ್ಲಾಪುರದಲ್ಲಿ ಲಷ್ಕರಿ ಕಾಯಿದೆಯಿಂದ ಪ್ರತಿಬಂಧಿತವಾದ ರಾಷ್ಟ್ರಧ್ವಜವನ್ನು ಪುನಃ ಅಲ್ಲಿ ಪ್ರಸ್ಥಾಪಿಸುವದಕ್ಕಾಗಿ ತಾ|| ೧೦ ನೆಯ ದಿವಸ ಪುಣೆಯಿಂದ ೧೨೨ ಜನ ಸ್ವಯಂಸೇವಕರು ರಾಷ್ಟ್ರಧ್ವಜಗಳ ಸಹಿತವಾಗಿ ಸೊಲ್ಲಾಪುರಕ್ಕೆ ಹೋಗಿದ್ದಾರೆ.

### ಧರಸಾನಾದಲ್ಲಿಯ ಅಧಿಕಾರಿಗಳ ಡೊಣ್ಣೆ

### ಸತ್ಯಾಗ್ರಹಿಯೊಬ್ಬನು ಮರಣ ಹೊಂದಿದನು.

ತಾ|| ೩೦ ನೆಯ ಹಾಗು ೩೧ ನೆಯ ದಿವಸ ಧರಸಾನಾದಲ್ಲಿಯ ಪೋಲೀಸ ಅಧಿಕಾರಿಗಳ ಡೊಣ್ಣೆಯ ಪೆಟ್ಟುಗಳ ಮೂಲಕವಾಗಿ ಗಾಯಪಟ್ಟ ಸೊಲ್ಲಾಪುರದ ಶ್ರೀ ಭಾವು ರೇವಯ್ಯ ಕೋಲಾ ಎಂಬ ಸತ್ಯಾಗ್ರಹಿಯು ಮರಣವನ್ನೈದಿದನು.

### ಪಂಜಾಬದಲ್ಲಿ ೯೪೨ ಜನರಿಗೆ ಸೆರೆಮನೆ

ಪಂಜಾಬ ಸತ್ಯಾಗ್ರಹ ಮಂಡಳದವರು, ತಾ|| ೩೧ ನೆಯ ದಿವಸದ ವರೆಗೆ ಸೆರೆ ಹಿಡಿಯಲ್ಪಟ್ಟ ಹಾಗೂ ಶಿಕ್ಷಿಸಲ್ಪಟ್ಟ ಸತ್ಯಾಗ್ರಹಿಗಳ ಪಟ್ಟಿಯನ್ನು ಪ್ರಸಿದ್ಧಪಡಿಸಿದ್ದು ಈ ವರೆಗೆ ೯೪೨ ಜನರು ಸೆರೆಮನೆಯನ್ನು ಕಂಡಿದ್ದಾರೆಂದು ಅದರಲ್ಲಿ ಹೇಳಿದ್ದಾರೆ.

### ಖಡ್ಗ ಬಹದ್ದೂರ ಸಿಂಗರಿಗೆ ೩ ತಿಂಗಳ ಸ ಶಿಕ್ಷೆ.

ಖಡ್ಗ ಬಹದ್ದೂರ ಸಿಂಗರ ನೇತೃತ್ವದಲ್ಲಿ ಧರಸಾನಾ ದಾಳಿಗೆ ಹೊರಟ ೧೩ ಜನ ಗೂರ್ಖಾ ಸ್ವಯಂಸೇವಕರನ್ನು ಹಾದಿಯಲ್ಲಿ ಗೋಧ್ರಾದ ಅಧಿಕಾರಿಗಳು ಸೆರೆ ಹಿಡಿದು ಅವರಿಗೆ ೩ ತಿಂಗಳ ಸಶ್ರಮ ಶಿಕ್ಷೆಯನ್ನು ವಿಧಿಸಿದ್ದಾರೆ.

### ಬ್ರಿಟಿಶರ ನ್ಯಾಯದ ಒಂದು ಮಾದರಿಯು!

### ಶ್ರೀ ಗುರುರಾಯರು ತಾ|| ೨೨ ಕ್ಕೆ

### ಮಂತ್ರಾಲಯದಲ್ಲಿದ್ದರು

“ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ” ವೆಂಬ ಗಾದೆಯ ಮಾತು ಸರ್ವರಿಗೂ ಮಾನ್ಯವಿದೆ ಯಾವ ಸತ್ಯದ “ಸಲುವಾಗಿ ಹರಿಶ್ಚಂದ್ರ, ಪ್ರಲ್ಹಾದ, ರಾಜಾ ಶ್ರೀಯಾಳ, ಬುದ್ಧ, ಕ್ರೈಸ್ತ ಮೊದಲಾದ ಸತ್ಪುರುಷರು ಕಷ್ಟನಷ್ಟಗಳನ್ನು ಅನುಭವಿಸಿದರೋ, ಮಹಾತ್ಮಾ ಗಾಂಧಿ, ಪಂಡಿತ ಜವಾಹಿರಲಾಲ ಮೊದಲಾದ ಮುಖಂಡರು ಈಗ ಕಾರಾಗೃಹವಾಸವನ್ನು ಅನುಭವಿಸುತ್ತಿರುವರೋ ಅಂತಹ ಸತ್ಯವು ಇಲ್ಲಿ ಮಣ್ಣುಪಾಲಾದಂತೆ ಆಗಿದೆ. ಮೊನ್ನಿನ ದಿವಸ ಬಾಗಲಕೋಟೆಯ ಕರ್ನಾಟಕ ಮುಖಂಡರೂ ಬಡವರ ಕೈವಾದಿಗಳೂ, ದೇಶಾಭಿಮಾನಿಗಳೂ ಆಗಿರುವ ಶ್ರೀ ಗುರುರಾವ ಜೋಶಿ-ಪುರೋಹಿತರನ್ನು, ಅವರು ತಾ|| ೨೨-೫-೩೦ ನೆಯ ದಿವಸ ಗುಳೇದಗುಡ್ಡದಲ್ಲಿ ಕಾಯಿದೆಭಂಗ ಚಳವಳಿಯ ಸಂಬಂಧವಾಗಿ ಭಾಷಣ ಮಾಡಿದರೆಂಬ ಆರೋಪದಿಂದ ಸೆರೆಹಿಡಿದುಕೊಂಡು ಹೋಗಿ ಅವರಿಗೆ ಇ. ಪಿ. ಕೋ. ೧೨೪ ನೆಯ ಕಲಮಿನನ್ವಯ ೭ ತಿಂಗಳ ಸಶ್ರಮ ಶಿಕ್ಷೆಯನ್ನು ಬದಾಮಿಯ ಅಧಿಕಾರಿಗಳು ವಿಧಿಸಿದರು. ಆದರೆ ಈ ಶಿಕ್ಷೆಯನ್ನು ವಿಧಿಸಿದ್ದು ಕೇವಲ ಅನ್ಯಾಯವೇ ಸರಿ. ಯಾಕಂದರೆ ೨೨-೫-೩೦ ನೆಯ ದಿವಸ ಅಂದರೆ ವೈಶಾಖ ವದ್ಯ ನವಮಿಯ ದಿವಸ ಶ್ರೀ ಗುರುರಾಯರೂ ನಾನೂ ಮಂತ್ರಾಲಯದಲ್ಲಿ ಇದ್ದೆವು ಮತ್ತು ಅಂದು ೩ ಗಂಟೆಗೆ ಮಂತ್ರಾಲಯವನ್ನು ಮೋಟಾರಿನಿಂದ ಬಿಟ್ಟು ಸ್ಟೇಶನಕ್ಕೆ ಬಂದು ೮ ಗಂಟೆಯ ಶುವನಾತ್ರ ಗದುಗಿನ ವರೆಗೆ ಟಿಕೀಟು ತೆಗೆದುಕೊಂಡೆವು. ಮತ್ತು ಬಾಗಲಕೋಟೆಗೆ ೨೩-೫-೩೦ ನೆಯ ದಿವಸ ಮುಂಜಾನೆ ೧೧ ಗಂಟೆಯ ಗಾಡಿಗೆ ಊರವರು ಕಾಣಿಯೇ ಬಂದೆವು ಈ ಊರಲ್ಲಿ ಇಳಿದ ಕೂಡಲೆ ನಮ್ಮಿಬ್ಬರ ಹೆಸರನ್ನು ಸ್ಟೇಶನದಲ್ಲಿ ಟಿಪ್ಪಣಿ ಮಾಡಿಕೊಂಡರು. ವಸ್ತುಸ್ಥಿತಿಯು ಹೀಗಿರುವದು ಆದರೆ ಸರಕಾರದವರು ವಿನಾಕಾರಣ ಯಾವ ವಿಚಾರವನ್ನು ಮಾಡದೆ ಕೇವಲ ಅನ್ಯಾಯದಿಂದ ಶಿಕ್ಷೆ ವಿಧಿಸಿದರು ಇದಕ್ಕೆ ಏನನ್ನಬೇಕೆಂಬುದು ತಿಳಿಯದು. ಇಷ್ಟಲ್ಲದೆ ಪಾಪ ಸರಕಾರದವರು ಈ ಊರಲ್ಲಿ ನಾವು ಇಳಿದ ಕೂಡಲೆ ನಮ್ಮ ಹೆಸರನ್ನು ಟಿಪ್ಪಣಿ ಮಾಡಿಕೊಂಡ ಸ್ಟೇಶನದ ಮೇಲಿನ ಪೋಲೀಸನ ಡಾಯರಿಯನ್ನು ಒಟ್ಟು ವಿಚಾರಣೆಯ ಕಾಲಕ್ಕೆ ತೆಗೆದು ನೋಡಿದ್ದರೆ ಈ ಮಾತಿನ ಸತ್ಯತೆಯು ಹೊಳೆಯುತ್ತಿತ್ತು. ಅಪರಾಧಿಗಳು ಸ್ವಸಂರಕ್ಷಣೆಯನ್ನು ಮಾಡಿಕೊಳ್ಳದಿದ್ದುದರ ಲಾಭವನ್ನು ತೆಗೆದುಕೊಂಡು ಈ ತರ ಶಿಕ್ಷೆಯನ್ನು ಹಾಕಿದ್ದು ಕೇವಲ ಅನ್ಯಾಯದ್ದಾಗಿರುವದೆಂದು ಅಧಿಕಾರಿಗಳಿಗೆ ಈ ಮೂಲಕ ಎಚ್ಚರಿಕೆಯನ್ನು ಕೊಟ್ಟಿದೆ.

### ಪ್ರೋಗ್ರಾಮು ಕೆಳಗೆ ಬರೆದಂತೆ.

ನಾನು ಮ ಗುರುರಾಯರ ಇಬ್ಬರು ೯-೫-೩೦ ನೆಯ ದಿವಸ ಬಾಗಲಕೋಟೆಯನ್ನು ರಾತ್ರಿ ೧೨ ಗಂಟೆಗೆ ಬಿಟ್ಟು ಆಲಮಟ್ಟಿಯಲ್ಲಿ ಇದ್ದು ಬಳಿಕ ನಸುಕಿನಲ್ಲಿ ೧೦-೫-೩೦ ಪಂಢರೀ ಪಾಳಕ್ಕೆ ಅಲ್ಲಿಂದ ಮೋಟಾರದಿಂದ ಅದೇ ದಿವಸ ನಾಲತವಾಡ ಅಲ್ಲಿಂದ ಚಿತ್ತಾಪೂರಕ್ಕೆ ಹಗಲು ೧೨ ಗಂಟೆಗೆ ತಲ್ಪಿದೆವು. ತಾ|| ೧೧-೫-೩೦, ೧೨-೫-೩೦ ಚಿತ್ತಾಪೂರ ವಸ್ತಿ. ತಾ|| ೧೩-೫-೩೦ ನಸುಕಿನಲ್ಲಿ ಚಿತ್ತಾಪೂರ ಬಿಟ್ಟು ಸೀರಲಕೇರಿ ವಸ್ತಿ, ನಂತರ ಸಂಜೆಗೆ ಭಾವನಿ ಮಲ್ಲಿ ವಸ್ತಿ ಮಾಡಿದೆವು. ಬಳಿಕ ಭಾವನಿ ನಸುಕಿನಲ್ಲಿ ಬಿಟ್ಟು ೧೪-೫-೩೦ ದಿವಸ ವಾಕಿನಕೇರಿ ಹಗಲು, ಸಂಜೆಗೆ ಕಾತ್ರಾಳ, ಅಲ್ಲಿಂದ ನಸುಕಿನಲ್ಲಿ ಹೊರಟು ೧೫-೫-೩೦ ದಿವಸ ಬಾಗಿಲವಾಡಿ, ಸಂಜೆಗೆ ಜ್ಯಾನೇಕಲ್ಲ, ಮಲ್ಲಿಗೆಮಡು. ೧೬-೫-೩೦ ದಿವಸ ಹಗಲು ಮಾನವಿ, ರಾತ್ರಿ ಬೆಳತನಕ ನಡೆದು ೧೭-೫-೩೦ ದಿವಸ ಸಾತನೂರು, ರಾತ್ರಿಗೆ ತುಂಗಭದ್ರಾ ಸ್ಟೇಶನದಲ್ಲಿ ವಸ್ತಿ. ೧೮-೫-೩೦ ದಿವಸ ನಸುಕಿನಲ್ಲಿ ಹೊರಟು ೧೯-೫-೩೦ ದಿವಸ ಮಂತ್ರಾಲಯ. ಮಂತ್ರಾಲಯದಲ್ಲಿ ೨೦-೫-೩೦, ೨೧-೫-೩೦, ೨೨-೫-೩೦ ದಿವಸ ಹಗಲು ಮೂರು ಗಂಟೆಗೆ ಊಟ ತೀರಿಸಿಕೊಂಡು ಹೊರಟೆವು.

ಮು|| ಗುರುರಾಜರಾಯರು.

## ಹಿರೇಮಠ ಸಾಹೇಬರ ಅಗಾಧ ಪಾಂಡಿತ್ಯ.

### ಕಾಂಗ್ರೆಸಕ್ಕೆ ಕೂಡುವದು ದುರ್ವರ್ತನೆಯಂತೆ!

ವಿಜಾಪುರ ಜಿಲ್ಹೆಯ ದಕ್ಷಿಣಭಾಗದ ಡಿ| ಡಿ| ಕಲೆಕ್ಟರರಾದ ಹಿರೇಮಠ ಸಾಹೇಬರು, ಜಾಲಗಿ, ಕೊಂತಿಕಲ್ಲ ಮತ್ತು ದೊಡ್ಡಿಹಾಳ ಈ ಗ್ರಾಮಗಳ ಕುಲಕರ್ಣಿಕಿ ಕೆಲಸವನ್ನು ಮಾಡುತ್ತಿದ್ದ ಈಗ ರಾಜಿನಾಮೆಯನ್ನು ಕೊಟ್ಟ ಶ್ರೀ ಹಣಮಂತ ರಾಮಚಂದ್ರ ದೇಶಪಾಂಡೆ ಇವರಿಗೆ ಕಳಿಸಿದ ನೋಟೀಸು ಸಿಕ್ಕಿದ್ದು ಅದನ್ನು ಇದ್ದಕ್ಕಿದ್ದಂತೆ ಕೆಳಗೆ ಕೊಟ್ಟಿದೆ—

### ನೋಟೀಸು.

ಡೆ| ಡಿ| ಕಲೆಕ್ಟರ ಸಾಹೇಬ ದಕ್ಷಿಣಭಾಗ ಜಿಲ್ಹಾ ವಿಜಾಪುರ ಇವರ ಕಚೇರಿಯಿಂದ—

ಹಣಮಂತ ರಾಮಚಂದ್ರ ದೇಶಪಾಂಡೆ ಕುಲಕರ್ಣಿ, ಜಾಲಗಿ, ಕೊಂತಿಕಲ್ಲ, ದೊಡ್ಡಿಹಾಳ, ಪೇಠಾ ಬೀಳಗಿ ಇವರಿಗೆ.

ಈ ನೋಟೀಸ ದ್ವಾರಾ ತಿಳಿಸಲಾಗುತ್ತದೆ:—

"ನೀನು ಈಗ ಸರಕಾರ ವಿರುದ್ಧ ಚಳವಳಿಯಲ್ಲಿ ಸೇರಿಕೊಳ್ಳುವ ದೆಶೆಯಿಂದ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ಕಾಂಗ್ರೆಸ ಜನರಿಗೆ ಕೂಡಿಕೊಂಡೀದಿ. ಕಾರಣ ನಿನ್ನ ಮೇಲೆ ಕೆಳಗೆ ಬರೆದ ಪ್ರಕಾರ ಚಾರ್ಜ ಇಟ್ಟಿರುತ್ತದೆ.

೧) ನೀನು ತಾ| ೨೫—೪—೩೦ ನೆಯ ದಿವಸ ನನ್ನ ಕಡೆಗೆ ಕಳಿಸಿದ ರಾಜೀನಾಮೆಯ ಅರ್ಜಿಯಲ್ಲಿ ... ಬರೆದ ಮಜಕೂರು ಬರೆದಿದಿ. "ಈಗ ನನ್ನ ೧೮-೨೦ ವರ್ಷಗಳ ನವಕರಿಯ ಅನುಭವದ ಮೇಲಿಂದ ಈಗಿನ ರಾಜಕೀಯ ಅಂದೋಲನದ ಮೂಲಕ ಪ್ರಾಮಾಣಿಕ ಮನುಷ್ಯ ಮನಸ್ಸಿನಿಂದ ನವಕರಿಯಲ್ಲಿ ಉಳಿಯುವದು ಶಕ್ಯವಿಲ್ಲ. ಪ್ರಜಾಹಿತದ ದೃಷ್ಟಿಯಿಂದಲೂ ಗ್ರಾಮಸ್ಥರಿಂದ ಮಾಡತಕ್ಕ ಕೆಲಸಗಳು ಬಹಳಿದ್ದು ಅವು ಅವರಿಂದಾಗಲಿಕ್ಕೆ ಶಕ್ಯವಿಲ್ಲ. ಈಗ ರಾಜಕೀಯ ವಾತಾವರಣವು ಹಳ್ಳಿಹಳ್ಳಿಗಳಲ್ಲಿಯೂ ಸಹ ಸಂಪೂರ್ಣ ಸೇರಿದ್ದು ಪರಿಸ್ಥಿತಿಯು ಮೇಲಿಂದ ಗ್ರಾಮಸ್ಥರಿಗೆ ಒಂದೇ ಧೋರಣದಿಂದ ನಡೆಯಲಿಕ್ಕೆ ಬಿಕ್ಕಟ್ಟಾದದು. ಪರಿಸ್ಥಿತಿಯ ಅವಲೋಕನೆಯ ಮೇಲಿಂದ ಸರಕಾರ ಮತ್ತು ಪ್ರಜಾ ಇವರ ಎರಡೂ ಬಾಜೂಗಳಿಂದಲೂ ಮಹತ್ವದ ಜವಾಬದಾರಿ ಗ್ರಾಮಸ್ಥರ ಮೇಲೆ ಬೀಳುವದರಿಂದ, ದಿನೇ ದಿನೇ ನಡೆಯುವ ದಬ್ಬಾಳಿಕೆಯಿಂದ ಪ್ರಜಾಕ್ಷೋಭೆ ಹೆಚ್ಚುತ್ತಿರುವದರಿಂದ ಇಂಥ ಪರಿಸ್ಥಿತಿಯಲ್ಲಿ ನವಕರಿಯ ಮೇಲೆ ಉಳಿಯಲಿಕ್ಕೆ ಶಕ್ಯವಿಲ್ಲ. ಎಂಥ ನವಕರನಿದ್ದರೂ ದೇಶಪ್ರೇಮವು ಯಾರಿಗೂ ಬಿಡಲಾಗದು. ಕಾರಣ ನಾನು ನನ್ನ ನವಕರಿಯಿಂದ ಮುಕ್ತನಾಗಲಿಚ್ಛಿಸಿ ಈ ಸಾದರ ಮಾಡಿರುತ್ತೇನೆ"

೨) ತಾ|| ೧—೫—೩೦ ನೆಯ ದಿವಸ ಗಲಗಲಿಯಲ್ಲಿ ಕೂಡಿದ ಸಭೆಯಲ್ಲಿ ಸ್ವತಾಃ ಸರಕಾರದ ನವಕರಿ ಬಿಟ್ಟು ರಾಜೀನಾಮೆ ಕೊಟ್ಟು ಬಂದೇನಿ ಅಂತ ಜಾಹೀರ ಮಾಡಿ ಇದರಂತೆ ಸಭೆಯಲ್ಲಿ ಹಾಜರಿದ್ದ ಉಳಿದ ಗೌಡ ಕುಲಕರ್ಣಿಯರಿಗೆ ನೀವೂ ರಾಜೀನಾಮೆ ಕೊಡಿರಿ ಅಂತ ಉಪದೇಶ ಮಾಡಿದಿ, ಮತ್ತು ಸತ್ಯಾಗ್ರಹ ವ್ಹಾಲೆಂಟಿಯರ ಜನರ ಸಂಗಡ ಹಳ್ಳಿಗಳಿಗೆ ಹೋಗಿ ನೀನು ಅವರಿಗೆ ಸಹಾಯ ಮಾಡೀದಿ. ಈ ಪ್ರಕಾರ ಚಾರ್ಜ ಇಟ್ಟಿರುತ್ತದೆ. ಇವುಗಳ ಮೇಲಿಂದ ನೀನು ಸರಕಾರ ವಿರುದ್ಧ ನಡೆದ ಚಳವಳಿಯಲ್ಲಿ ಸೇರಿ ಕಾಂಗ್ರೆಸ ಜನರಿಗೆ ಕೂಡಿಕೊಂಡೀದಿ ಅಂತ ಮತ್ತು ಅವರಿಗೆ ಪ್ರತ್ಯಕ್ಷ ಸಹಾಯ ಮಾಡೀದಿ ಅಂತ ಸಿದ್ಧವಾಗುತ್ತದೆ. ಕಾರಣ ನೀನು ಭಾರೀ ದುರ್ವರ್ತನೆಯನ್ನು (Grave misconduct) ಇಟ್ಟೀದಿ ಅಂತ ತಿಳಿದು ನಿನ್ನನ್ನು ವತನ ಆಕ್ಟ ಕಲಮು ೫೪ ಪ್ರಕಾರ ನಾಲಾಯಖ ಯಾಕೆ ಮಾಡಬಾರದು ಈ ಬಗ್ಗೆ ಏನಾದರೂ ಕಾರಣ ತೋರಿಸುವದಿದ್ದರೆ ನೀನು ನಮ್ಮ ಕಡೆಗೆ ತಾ| ೪—೬-೩೦ ನೆಯ ದಿವಸ ಹಗಲು ೧೧ ಗಂಟೆಗೆ ಬದಾಮಿ ಮುಕ್ಕಾಮಿಗೆ ಹಾಜರಾಗಬೇಕು. ತಪ್ಪಿದರೆ ಮುಂದಿನ ಕಚೇರಿ ರೀತಿ ಪ್ರಕಾರ ಮಾಡುವದಲ್ಲಿ ಬರುವದು. ತಿಳಿಯುವದು.

೨೭-೫-೩೦ (ಸಹಿ) ಆರ್. ಎಸ್. ಹಿರೇಮಠ (ಇಂಗ್ಲೀಷದಲ್ಲಿ)
ಡಿ. ಡಿ. ಕಲೆಕ್ಟರ.

ಶ್ರೀ ಹಣಮಂತರಾಯರು ಕೊಟ್ಟ ಉತ್ತರವನ್ನು ನ ಸಂಚಿಕೆಯಲ್ಲಿ ಕೊಡುವದಲ್ಲಿ ಬರುವದು. ಸಂಪಾದಕ)


ಜಯಲಕ್ಷ್ಮೀ ಪ್ರಸಾದಿಕ

ಶ್ರೀ ಮಿತ್ರ ಸಂಗೀತ ನಾಟಕ ಮಂಡಳಿ ದಾವಣಗೇರಿ ಇವರು

ಬಾಗಲಕೋಟೆ ರಾಜ ಥಿಯೇಟರಿನಲ್ಲಿ

ಶುಕ್ರವಾರ ತಾ ೧೩—೬—೩೦

ಪ್ರತಾಪಪ್ರಮಿಲಾ

ಶನಿವಾರ ತಾ|| ೧೪-೬-೩೦

ಲಂಕಾದಹನ.

ಎಂಬ ಹೊಸ ಆಖ್ಯಾನಗಳನ್ನು ಪ್ರಯೋಗಿಸುವರು.

ವ್ಯವಸ್ಥಾಪಕ.

ಬರುವರು! ಬರುವರು!!

ಶ್ರೀ ಮಹಾಲಕ್ಷ್ಮೀ ಪ್ರಸಾದಿಕ

ಶಿರಹಟ್ಟಿ ನಾಟಕ ಮಂಡಳಿಯವರು

ಶಿವಾನಂದ ನಾಟಕ ಶಾಲೆಯಲ್ಲಿ

ಬೇಗನೆ ಬರುವರು

ಮತ್ತು ಲೋಕಪ್ರಿಯವಾದ

ತಮ್ಮ ನಾಟಕಗಳನ್ನು ಅಭಿನಯಿಸುವರು.

ಎಚ್, ವೆಂಕೋಬರಾವ.

ಪ್ರೊಪ್ರಾಯಿಟರ.


ಈ ಪತ್ರಿಕೆಯು ಬಳವಂತ ಅಣ್ಣಾರಾವ [illegible] ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅವರಿಂದಲೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

# ಕನ್ನಡಿಗ

ಜಯಕರ್ನಾಟಕ

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಶನಿವಾರ ವಿಕೃತಿ ಜ್ಯೇಷ್ಠ ಬಹುಳ ೩ ಶಕೆ ೧೮೫೨ ತಾ|| ೧೪—೬—೩೦ ಸಂಚಿಕೆ ೭೪

## ತಪ್ಪು ತಿದ್ದುವಿಕೆ

ತಾ|| ೧೩-೬-೩೦ ನೇ ಕನ್ನಡಿಗ ನಿತ್ಯಸಂಚಿಕೆಯಲ್ಲಿ ಮು. ಗುರುರಾಜಾಚಾರ್ಯರು ಬರೆದ ಪತ್ರದಲ್ಲಿ ಪ್ರೊಗ್ರಾಮ್ಮು ಕೊಟ್ಟಿದ್ದಲ್ಲಿ ತಾರೀಖುಗಳಲ್ಲಿ ಮುದ್ರಣದ ದೋಷದಿಂದಾ ಕೆಲವು ತಪ್ಪುಗಳಾಗಿವೆ ಅವುಗಳಲ್ಲಿ ಕೆಳಗೆ ಬರೆದ ಪ್ರಕಾರ, ತಿದ್ದುಪಡೆಯಾಗಬೇಕು ಮೊದಲನೇ ಸಾಲಿನಲ್ಲಿ ತಾ|| ೯-೫-೩೦ ಬದಲಾಗಿ ೧೦—೫—೩೦ ಅಂತಾ ಓದಬೇಕು. ೩ ನೇ ಸಾಲಿನಲ್ಲಿ ೧೦-೫-೩೦ ಬದಲಾಗಿ ೧೧-೫-೩೦ ಅಂತಾ ಓದಬೇಕು. ೧೪ ನೇ ಸಾಲಿನಲ್ಲಿ ೧೮-೫-೩೦ ಬದಲಾಗಿ ೧೯-೫-೩೦ ಅಂತಾ ಓದಬೇಕು.

ತಾ|| ೧೨ ಕ್ಕೆ ಇಲ್ಲಿ ಸೇರಿದ ಶಾಂತಾ ಸಭೆಗೆ ಶ್ರೀ ಲೂತಿ ಮಠರು ಹೋಗಿದ್ದರೆಂಬುದಾಗಿ ನಿನ್ನಿನ ಸಂಚಿಕೆಯಲ್ಲಿ ಪ್ರಕಟವಾಗಿದೆಯಷ್ಟೆ. ಆದರೆ ಅವರು ಸಭೆಗೆ ಹೋಗಿದ್ದಿಲ್ಲವಾಗಿಯೂ ಮತ್ತು ಸಭೆಗೆ ಹೋದ ಈ ಊರಿನ ಸದ್ಗೃಹಸ್ಥರು ಕೇವಲ ಹಿರೇಮಠರು ಹೇಳಿದ್ದನ್ನು ಕೇಳಿಕೊಂಡು ಬಂದರೆಂದೂ ಅವರಿಗೆ ಯಾವತರದ ಆಶ್ವಾಸನವನ್ನು ಕೊಡಲಿಲ್ಲವೆಂದೂ ತಿಳಿದು ಬಂದಿರುತ್ತದೆ ಕಾರಣ "ದೇಶಪ್ರೇಮಿ" ಗಳೆಂದು ಬರೆದುದಕ್ಕಾಗಿ ನಾವು ಕ್ಷಮೆಯನ್ನು ಬೇಡಿಕೊಳ್ಳುತ್ತೇವೆ

ಸಂಪಾದಕ "ಕನ್ನಡಿಗ"

## ಮಹಾತ್ಮರ ಪ್ರೀತಿಯ ಪದ್ಯದ ಭಾವಾರ್ಥ

ಅಧಿಕಾರಿಗಳು ಮಹಾತ್ಮರನ್ನು ಹಿಡಿಯಲು ಬಂದಾಗ, ಮಹಾತ್ಮಾ ಗಾಂಧಿಯವರು ತಮ್ಮ ಅನುಯಾಯಿಯ ಕಡೆಯಿಂದ "ವೈಷ್ಣವಜನತೊ" ಎಂಬ ಪದ್ಯವನ್ನು ಅನಿಸಿ, ಅದನ್ನು ಕೇಳಿ ಹಿಂದುಗಡೆಯಲ್ಲಿ ಸೆರೆಯಾಳಾದರು. ಆ ಪದ್ಯದ ಭಾವಾರ್ಥವೆಂದರೆ — "ದೇವಾ, ನಾವು ದೀನ ದುರ್ಬಲರು. ನಮ್ಮನ್ನು ಬಹಳ ಪರೀಕ್ಷಿಸಬೇಡ. ನಿನ್ನ ಹೆಸರುಗೊಂಡು ನಾವಂತೂ ಯುದ್ಧದೊಳಗೆ ಧುಮುಕಿದ್ದೇವೆ ಇನ್ನು ನಮ್ಮನ್ನು ಉಳಿಸು ಅಥವಾ ಅಳಿಸು. ನಾವು ನಿನಗೆ ಶರಣು ಬಂದಿರುವೆವು, ನಿನ್ನಲ್ಲಿ ನಮ್ಮ ನಂಬಿಗೆಯು ಅಚಲವಾಗಿರಲಿ. ತಂದೆಯೇ, ನಮ್ಮನ್ನು ಈ ವರೆಗೆ ಸಾಕಷ್ಟು ಪರೀಕ್ಷಿಸಿದ್ದಾಯಿತು. ಇನ್ನು ಮಾತ್ರ ನಮ್ಮನ್ನು ಕಷ್ಟ ಪರೀಕ್ಷಿಸದಿರು, ನಮ್ಮ ನೆರವಿಗೆ ನಿನ್ನ ಕೈಗೊಡು ಮರಣಕಾಲಕ್ಕೆ ಕೂಡ ನಿನ್ನ ನಾಮರಸಾಯನವು ನಮ್ಮ ನಾಲಿಗೆಯಲ್ಲಿ ನಲಿಯುವಂತೆ ದೃಢಶಕ್ತಿಯ ಕೊಡು"

### "ಹಿರೇಮಠ ಸಾ"ಹೇಬರು,

## ದರ್ಪವನ್ನು ತೋರಿಸಿದರು !

ವಿದ್ಯಾರ್ಥಿಗಳಿಗೆ ಪಾರಿತೋಷಕಗಳನ್ನು ಹಂಚುವದಕ್ಕಾಗಿ ನಿನ್ನೆ ಸಾಯಂಕಾಲಕ್ಕೆ ೧ ನೇ ನಂಬರ ಕನ್ನಡ ಶಾಲೆಯಲ್ಲಿ ಸಭೆ ಕೂಡಿತ್ತು. ಹಿರೇಮಠ ಸಾಹೇಬರು ಅಧ್ಯಕ್ಷರಾಗಿದ್ದರು. ಶ್ರೀ ಹಿರೇಮಠರವರು ತಮ್ಮ ಭಾಷಣದಲ್ಲಿ, ವಿದ್ಯಾರ್ಥಿಗಳು ರಾಷ್ಟ್ರೀಯ ಚಳವಳಿಯಲ್ಲಿ ಸೇರಬಾರದೆಂದು ಒಮ್ಮೆ ಹೇಳಿದಂತೆ ಒಂದು ಮಾತ್ರ 'ಭೂಸಿಗೂ' ಈ ವಿಷಯದ ಬಗ್ಗೆ ಹೆಚ್ಚಿಗೆ ಏನೂ ಮಾತಾಡಲು ನನಗೆ ಮನಸ್ಸಿಲ್ಲವೆಂದು ಅವನ್ನು ತಿದ್ದಿಕೊಂಡರು. ಸಭೆಯ ಕೊನೆಗೆ ಶ್ರೀ. ಹಿರೇಮಠರವರಿಗೆ ಮಾಲೆ ಹಾಕುವ ಕಾಲಕ್ಕೆ ವಿದ್ಯಾರ್ಥಿಗಳು 'ಭಾರತಮಾತಾಕಿ ಜಯ್' ವಂದೇಮಾತರಂ ಎಂದು ಕೂಗಿದರು. ಅದಕ್ಕೆ ಸಾಹೇಬರ ಪಿತ್ತವು ತಲೆಗೇರಿತು. ಅವರು ಹೊರಗೆ ಬಂದಕೂಡಲೇ ಮನೆಗೆ ಹೋಗುವ ವಿದ್ಯಾರ್ಥಿಗಳ ಗುಂಪಿನ ಮೇಲೆ ಹರಿಹಾಯ್ದು ಎಲ್ಲರೂ ಓಡಿಹೋಗಲಾಗಿ ಕೈಗೆಸಿಕ್ಕ 'ಯದುಪತಿ ಮಳಗಿ' ಎಂಬವನನ್ನು ತಮ್ಮ ಕೈಯೊಳಗಿನ ಬಡಿಗೆಯಿಂದ ಒಂದು ಪೆಟ್ಟು ಹೊಡೆದರು. ಮತ್ತು ತಮ್ಮ ಅಧಿಕಾರಕ್ಕೆ ಭೂಷಣವಲ್ಲದ ಅವಾಚ್ಯಶಬ್ದಗಳನ್ನು ಬೈದರು. ಅದಕ್ಕೆ ಅವರು ಅಂಜುವರೇ? ಸಾಹೇಬರ ಮೋಟಾರದ ಹಿಂದೆ ಮತ್ತೆ ಮೊದಲಿನಂತೆ ಒದರುತ್ತ ಕೊತ್ತಲಪ್ಪನ ಗುಡಿಯವರೆಗೆ ಬೆನ್ನು ಹತ್ತಿದರು. ಸಾಹೇಬರು ಸಿಟ್ಟಿನ ಕೈಯಲ್ಲಿ ಬುದ್ಧಿಯನ್ನು ಕೊಡಬಾರದಾಗಿತ್ತು. ಆದರೆ ಅಧಿಕಾರವೆಷ್ಟೆ ಕೇಳುತ್ತದೆ?

## "ಕೇಸರಿ" ಮುದ್ರಣಾಲಯಕ್ಕೆ ೭೫೦೦ ರು. ಅಡವು

ವೃತ್ತಪತ್ರ ದಬ್ಬಾಳಿಕೆಯ ಕಾನೂನಿನ ಸಾರವಾಗಿ "ಕೇಸರಿ"ಯ ಮುದ್ರಣಾಲಯಕ್ಕೆ ೭೫೦೦ ರೂ. ಗಳು ಅಡವು ಕೇಳಲ್ಪಟ್ಟಿದ್ದು. ಮುದ್ರಣಾಲಯದ ಒಡೆಯರು ಅದನ್ನು ಕೊಟ್ಟರು.

### ೧೩೪ ಸಿಂದೀ ಅಂಗಡಿಗಳಿಗೆ ಯಾರೂ ಗತಿಯಾಗಲಿಲ್ಲ,

ಪಾಲಘಾಟ ತಾಲೂಕ ಕಚೇರಿಯಲ್ಲಿ ೧೩೪ ಸಿಂದೀ ಅಂಗಡಿಗಳ ಲಿಲಾವ ನಡೆಯುತ್ತಿತ್ತು, ಲಿಲಾವದಲ್ಲಿ ಮತ್ತೆಯನ್ನು ಹಿಡಿಯಲು ಯಾರೂ ಹೋಗಿದ್ದಿಲ್ಲ. ಆದುದರಿಂದ ಅವು ಲಿಲಾವು ಆಗದೆ ಹಾಗೆಯೇ ಉಳಿದವು

## ಅಸ್ಪೃಶ್ಯರ ಶಿಕ್ಷೆಗಳು.

ಮದ್ರಾಸದಲ್ಲಿ ಕಾಚಿಂಗ್ರಾ ದೇವಾಲಯದ ಎದುರಿಗಿರುವ ಮಾರ್ಗದಲ್ಲಿ ತಿರುಗಾಡಲು ಅಸ್ಪೃಶ್ಯರಿಗೆ ಯಾವ ಆತಂಕವೂ ಇರಕೂಡದೆಂದು ಸತ್ಯಾಗ್ರಹವು ಹೂಡಲ್ಪಟ್ಟಿತ್ತು. ಅವರಲ್ಲಿ ೨೩ ಜನರನ್ನು ಸೆರೆಹಿಡಿದು, ೧೧ ಜನರಿಗೆ ೧ ವರ್ಷದ ಸಶ್ರಮ ಶಿಕ್ಷೆಯನ್ನು ವಿಧಿಸಿದ್ದಾರೆ.

ಗುಂಟೂರಿನ ಶ್ರೀ. ವ್ಹಿ. ರಾಮಮೂರ್ತಿ ರಾಮಯ್ಯ ವ ಶ್ರೀ ಸುಬ್ಬರಾವ ಇವರಿಗೆ ಉಪ್ಪಿನ ಕಾಯಿದೆಯ ೭೪ ನೆಯ ಕಲಮಿನ ಪ್ರಕಾರ ೧೦ ತಿಂಗಳ ಸಶ್ರಮ ಶಿಕ್ಷೆಯಾಗಿದೆ. ಚಿದಂಬರದ ಶ್ರೀ ರಾಮಚಂದ್ರ ಅಯ್ಯರ ಇವರಿಗೆ ೧೧೭ ನೆಯ ಕಲಮಿನ ಅನ್ವಯ ೧ ವರ್ಷದ ಸಶ್ರಮ ಶಿಕ್ಷೆಯಾಗಿದೆ.

## ವ್ಹಾಯಿಸರಾಯರು

### ಇನ್ನೊಂದು ಶಸ್ತ್ರವನ್ನು ಹಿರಿಯುವರಂತೆ!

ವರಿಷ್ಠ ಕಾಯಿದೆ ಮಂಡಳದಲ್ಲಿ ಬಹುಮತದಿಂದ ಸ್ವೀಕೃತವಾದ ಶಾರದಾ ಕಾಯಿದೆಯಿಂದ ಮುಸಲ್ಮಾನರನ್ನು ಪಾರು ಮಾಡುವ ಉದ್ದೇಶದಿಂದ ವ್ಹಾಯಿಸರಾಯರು ಇನ್ನೊಂದು ಹೊಸ ಶಾಸನಾಸ್ತ್ರವನ್ನು ಹಿರಿಯುವವರಿದ್ದಾರಂತೆ!

## ದಿಲ್ಲಿಯಲ್ಲಿ ಕರನಿರಾಕರಣೆಯ ಚಳವಳಿಯು

ನಾರೆಳಾ ಭಾಗ ಹಾಗೂ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಕರನಿರಾಕರಣೆಯ ಚಳವಳಿಯನ್ನು ಪ್ರಾರಂಭಿಸುವ ಉದ್ದೇಶದಿಂದ ಶ್ರೀ ನಾಯಕರು ಪ್ರಯತ್ನಪಡುತ್ತಲಿದ್ದಾರೆ.

## “ಕರಣಾ ಬರದಿದ್ದರೆ ನಾವು ಕಾಂಗ್ರೆಸಕ್ಕೆ ಸೇರುವೆವು”

ಗುಜರಾನವಾಲಾ ಜಿಲ್ಹೆಯ ಗೋವಿಂದಪುರ ಹಳ್ಳಿಯ ಕೃಷಿಕರೂ ಹಾಗೂ ಜಮೀನದಾರರು ಒಂದು ಸಭೆಯನ್ನು ಸೇರಿಸಿಕೊಂಡು “ಪ್ರತಿವರ್ಷಕ್ಕೆ ೨೦೦೦ ರು ಗಳಿಗಿಂತಲೂ ಹೆಚ್ಚಿಗೆ ಹೊಲಗಳಿಂದ ಉತ್ಪನ್ನ ಮಾಡಿಕೊಳ್ಳುವವರಿಂದಿಷ್ಟೆ ಪಟ್ಟಿಯನ್ನು ತೆಗೆದುಕೊಳ್ಳಬೇಕಾಗಿಯೂ, ಇದಕ್ಕೆ ತಪ್ಪಿದಲ್ಲಿ ತಾವು ಕಾಂಗ್ರೆಸಕ್ಕೆ ಕೂಡಿಕೊಳ್ಳುವೆವಾಗಿಯೂ ನಿರ್ಧರಿಸಿಕೊಂಡಿದ್ದಾರೆ.

## ಸಾಯಮನ್ ವರದಿಯನ್ನು

### ಭಾರತೀಯರು ಓದುವದೇ ಇಲ್ಲ

“ಸಾಯಮನ್ ಸಮಿತಿಯ ವರದಿಯು ಬಹು ಮಹತ್ವದ್ದಿರುವದೇನೋ ನಿಜ. ಆದರೆ ಅದನ್ನು ಭಾರತೀಯರು ಯಾರೂ ಓದಲಾರರು. ಮುಂಬಯಿಯ ಪರಿಷತ್ತನ್ನು ಆಗಸ್ಟ ತಿಂಗಳ ಮಧ್ಯದಲ್ಲಿ ಕೂಡಿಸಬೇಕು.” ಕಮಾಂಡರ ಕೆನ್ವರ್ಡಿ

## ೧೪೪ ಜನರು ರಾಜೀನಾಮೆ ಕೊಟ್ಟರು.

...ಸಿಂಧೀ ಅಂಗಡಿಗಳನ್ನು ಪಿಕೆಟಿಂಗ ಮಾಡುವ ಸತ್ಯಾಗ್ರಹಿಗಳ ಮೇಲೆ ಪೋಲೀಸ ಅಧಿಕಾರಿಗಳು ಜುಲ್ಮೆಗಳನ್ನು ಉಪಯೋಗಿಸಿ ಅವರನ್ನು ಅಪಮಾನಗೊಳಿಸಿದುದರ ನಿಷೇಧಾರ್ಥವಾಗಿ ಬಾಗಲಕೋಟೆ ಭಾಗದ ...ಚೌಕೀದಾರರೂ, ೬ ಸಿಪಾಯಿಗಳೂ ೨ ಧಫೇದಾರರೂ ಹೀಗೆ ೧೪೪ ಜನರು ತಮ್ಮ ತಮ್ಮ ಸರಕಾರಿ ನೌಕರಿಗಳಿಗೆ ರಾಜೀನಾಮೆ ಕೊಡಲಿದ್ದಾರೆ.

## ಪೋಲೀಸನು ರಾಜೀನಾಮೆ ಕೊಟ್ಟನು.

ದಿಲ್ಲಿಯ ಪೋಲೀಸನಾದ ಶ್ರೀ ರಾಮಚಂದ್ರನು, ಮಹಾತ್ಮರನ್ನು ಸೆರೆಹಿಡಿದುದರ ನಿಷೇಧಾರ್ಥವಾಗಿ ತನ್ನ ಉದ್ಯೋಗಕ್ಕೆ ರಾಜೀನಾಮೆಯನ್ನು ಕೊಟ್ಟನು.

## ಗೌಡರು ರಾಜೀನಾಮೆ ಕೊಟ್ಟರು.

ಬೆಳಗಾವಿ ಜಿಲ್ಹೆಯಲ್ಲಿಯ ನಂದೀ ಹಳ್ಳಿ ಗ್ರಾಮದ ಗೌಡರಾದ ಶ್ರೀ ನಾರಾಯಣ ರಂಗೋ ಕುಲಕರ್ಣಿಯವರು ತಮ್ಮ ಗೌಡಕೀ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದಾರೆ

## ಶ್ರೀ ಚಿಕ್ಕೋಡಿಯವರು ಲಕ್ಷ್ಯಕೊಡಬೇಕು

ಬಳ್ಳಾರಿಯ ಕೆ. ದೊಡ್ಡಬಸಪ್ಪ ಹಾಗೂ ಸಿಂದಗಿ ಸಿದ್ದಬಸಪ್ಪನವರು ಅಲ್ಲದೆ ಬಳ್ಳಾರಿಯ ವರ್ತಕರು ಕೂಡಿ ಬರೆಯುವದು:— “ಬೇಗಾವಿಯ ಕೆಲವು ಲಿಂಗಾಯತ ಬಂಧುಗಳು ಈಗಿನ ಚಳವಳಿಗೆ ವಿರುದ್ಧರಿರುವರೆಂದು ತಿಳಿದು ನಮಗೆ ವ್ಯಸನವಾಗುತ್ತದೆ. ಇಡೀ ರಾಷ್ಟ್ರವೇ ಸಾಯುತ್ತಿರುವಾಗ ನಮಗೆ ಜಾತಿ ಹಕ್ಕುಗಳಿಂದೇನೂ ಉಪಯೋಗವಾಗುವದಿಲ್ಲ. ಮಹಾತ್ಮರ ಚಳವಳಿಯು ಅದೆಂತು ಕಟ್ಟಳೆಗೆಟ್ಟದ್ದೆಂಬುದು ನಮಗೆ ತಿಳಿಯದು” ಶ್ರೀ ಚಿಕ್ಕೋಡಿ ಪ್ರಭೃತಿಗಳು ಇತ್ತ ಲಕ್ಷ್ಯಕೊಡಬೇಕು.

### ಮಂಗಳೂರಿನ

## ಶ್ರೀ ಮಹಾಶೆಟ್ಟಿಯವರು ಸೆರೆಯಾಳಾದರು

ಮಂಗಳೂರಿನ ಸತ್ಯಾಗ್ರಹ ಮಂಡಳದ ನೇತೃಗಳಾದ ಶ್ರೀ ಎ. ಬಿ. ಮಹಾಶೆಟ್ಟಿಯವರನ್ನು ತಾ ॥ ೯ ನೆಯ ದಿವಸ ಇ. ಪಿ. ಕೋಡಿನ ೧೧೭ ನೆಯ ಕಲಮಿನ ಅನ್ವಯ ಸೆರೆಹಿಡಿದಿದ್ದಾರೆ.

### ವಿಜಾಪುರದಲ್ಲಿ

## ಗಾಂಧಿ ಟೊಪ್ಪಿಗೆಗೆ ಅಪಮಾನ

ತಾ॥ ೫ ನೆಯ ದಿವಸ ವಿಜಾಪುರದ ಶ್ರೀ ಮುದ್ದಣ್ಣನ ವಕೀಲರ ಮಗನು ಮುಂಜಾನೆ ೯ ಗಂಟೆಗೆ ಶಾಲೆಗೆ ಹೋಗುವ ಸಮಯಕ್ಕೆ ಲಕ್ಷ್ಮೀ ಗುಡಿಯ ಸಮೀಪಕ್ಕೆ ಕಾವಲು ಇರುತ್ತಿರುವ ಒಬ್ಬ ಪೋಲೀಸನು “ನಿನ್ನ ಬಿಳೇ ಟೊಪ್ಪಿಗೆಯನ್ನು ಇಂದಿನ ಹೋಳಿಗೆ ಕೊಟ್ಟುಬಿಡು ಎಂದು ಹೇಳಿದನು. ಆ ಪೋಲೀಸನು ಸಿಟ್ಟಿಗೆದ್ದು ಆ ಹುಡುಗನನ್ನು ಹೊಡೆಯಲಿಕ್ಕೆ ಯತ್ನಿಸಲು, ಆ ಬಾಲಕನು ತಪ್ಪಿಸಿಕೊಂಡು ಹೋಗುವ ಸಮಯದಲ್ಲಿ ತಲೆಯ ಮೇಲಿನ ಗಾಂಧಿ ಟೊಪ್ಪಿಗೆಯು ಆ ಪೋಲೀಸನ ಕೈಯಲ್ಲಿ ಸಿಕ್ಕಿತು. ಆ ಬಾಲಕನು ಹಾಗೆಯೇ ಓಡುತ್ತ ಮನೆಗೆ ಹೋದನು. ಪೋಲೀಸನು ಆ ಟೊಪ್ಪಿಗೆಯನ್ನು ಫುಟಬಾಲಿನಂತೆ ಕಾಲಿನಿಂದ ಒದೆಯುತ್ತ ಕೊನೆಗೆ ತನ್ನ ಸಂಗಡ ತೆಗೆದುಕೊಂಡು ಹೋದನು. ಅಂದಿನ ಸಂಜೆಯ ಸಾರ್ವಜನಿಕ ಸಭೆಯಲ್ಲಿ ಈ ಕೃತಿಯನ್ನು ನಿಷೇಧಿಸುವದರಲ್ಲಿ ಬಂದಿತು. ಸ್ವತಃ ಶ್ರೀ ಮುದ್ದಣ್ಣ ವಕೀಲರು ಇದರ ಸಂಬಂಧವಾಗಿ ಪೋಲೀಸ ಸಾಹೇಬರ ಕಡೆಗೆ ಅರ್ಜಿ ಮಾಡಿದರು. ಮರುದಿವಸ ಪೋಲೀಸ ಸಾಹೇಬರು ಸ್ವತಃ ಕಲೆಕ್ಟರ ಮತ್ತು ಕಾಡಲಗಿಯವರಿಗೆ ಭೆಟ್ಟಿಯಾಗಿ ಇದರ ಬಗ್ಗೆ ಯೋಗ್ಯ ವಿಚಾರವನ್ನು ಮಾಡುವೆವೆಂದು ಹೇಳಿದರು.

ಅಂತಿಮ ವಾರ್ತೆ.

## ಮುಂಬಯಿಯಲ್ಲಿ

# ಸೊಲ್ಲಾಪುರ ದಿನದ ಮೆರವಣಿಗೆ

### ಅಧಿಕಾರಿಗಳ ಪ್ರತಿಬಂಧ.

ತಾ|| ೧೨ ನೆಯ ದಿವಸ ಮುಂಬಯಿಯಲ್ಲಿ ಸೊಲ್ಲಾಪುರ ದಿನವು ಆಚರಿಸಲ್ಪಟ್ಟಿತು. ಪೊಲೀಸ ಕಮೀಶನರರು ಚಳ್ಳಿಪ್ಪಣೆಯನ್ನು ತೆಗೆದು ಮೆರವಣಿಗೆಗೆ ಅಡ್ಡಿ ಮಾಡಿದರು. ಸಂಜೆಯ ೫ ಗಂಟೆಗೆ ಕಾಂಗ್ರೆಸ್ ಭವನದಿಂದ ಹೊರಟ ಮೆರವಣಿಗೆಗೆ ಪೊಲೀಸ ಅಧಿಕಾರಿಗಳು ಅಡ್ಡಿಮಾಡಿದರು. ಇಂತಹ ಎಷ್ಟೋ ಮೆರವಣಿಗೆಗಳು ಬೇರೆ ಬೇರೆ ಮಾರ್ಗಗಳಿಂದ ಹೊರಟಿದ್ದವು. ಅವುಗಳಲ್ಲಿ ಕೆಲವು ಅಧಿಕಾರಿಗಳಿಂದ ತಡೆಯಲ್ಪಟ್ಟವು. ಕೆಲವು ಮೆರವಣಿಗೆಗಳಲ್ಲಿಯ ಜನರು ಬೆತ್ತಗಳಿಂದ ಹೊಡೆಯಲ್ಪಟ್ಟರು. ೩೦ ಜನರಿಗೆ ಭಯಂಕರ ಗಾಯಗಳಾಗಿವೆ. ಕೊನೆಯಲ್ಲಿ ಪೊಲೀಸರು ಮೆರವಣಿಗೆಗೆ ಹೋಗಗೊಟ್ಟರು. ಮಧ್ಯರಾತ್ರಿಯ ನಂತರದಲ್ಲಿ ಮೆರವಣಿಗೆಯು ಬೇರೆ ಬೇರೆ ಮಾರ್ಗಗಳಲ್ಲಿ ತಿರುಗಾಡಿತು. ನಂತರದಲ್ಲಿ ಸಭೆಯಾಗಿ ಕಾರ್ಯಕ್ರಮವು ಮುಗಿಯಿತು.

### ಸೊಲ್ಲಾಪುರದ ನಾಡಗುಡಿಯ ಕಾಳಗ

### ೧೧೭ ಸತ್ಯಾಗ್ರಹಿಗಳಿಗೆ ಹಾದಿಯಲ್ಲಿಯೇ ಅಡ್ಡಿ

ಪುಣೆಯಿಂದ ಸೊಲ್ಲಾಪುರಕ್ಕೆ ರಾಷ್ಟ್ರಧ್ವಜದ ಸತ್ಯಾಗ್ರಹಕ್ಕಾಗಿ ಹೊರಟ ೧೧೭ ಜನ ಸತ್ಯಾಗ್ರಹಿಗಳನ್ನು ದಂಡಿನ ಅಧಿಕಾರಿಗಳು ಸೊಲ್ಲಾಪುರದ ಸಮೀಪದಲ್ಲಿ ತಡೆದು ಅವರನ್ನು ಅವಮಾನಗೊಳಿಸಿ ಅವರ ಕೈಯೊಳಗಿಂದ ರಾಷ್ಟ್ರಧ್ವಜಗಳನ್ನು ಕಸಿದುಕೊಂಡರುವರು. ಈ ಮೇಲಿನ ೧೧೭ ಜನರಲ್ಲಿ ಕರ್ನಾಟಕದ ಸತ್ಯಾಗ್ರಹಿಗಳೂ ಸೇರಿರುವರು.

### ಭರತಖಂಡಕ್ಕೆ

### ಸಾಯಮನ್ ಸಮಿತಿಯಿಂದ ಸಿಕ್ಕುದ್ದೇನು ?

ಸಾಯಮನ್ ಸಮಿತಿಯವರು ತಮ್ಮ ವರದಿಯ ಮೊದಲನೆಯ ಭಾಗವನ್ನು ನೆನ್ನೆ ೧೦ ನೆಯ ತಾ|| ದಿವಸ ಪ್ರಕಟಿಸಿದ್ದಾರೆ. ಆ ವರದಿಯಲ್ಲಿ ಕಾಣಿಸಿದ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುವಾಗ ಸರ್ ಚಿಮನಲಾಲ ಸೆಟಲವಾಡರು ಹೀಗೆ ಹೇಳಿದ್ದಾರೆ— ಸಾಯಮನ್ ಸಮಿತಿಯಿಂದ ಭರತಖಂಡಕ್ಕೆ ಸಿಕ್ಕ ಬಹುಮಾನಗಳೇನೆಂದರೆ, ಭರತಖಂಡವು ಒಂದು ರಾಷ್ಟ್ರವಲ್ಲ. ಹಿಂದುಸ್ಥಾನದ ಮುಂದಾಳುಗಳು ಜನತೆಯ ವಿಚಾರಗಳನ್ನು ತಿಳಿಯದವರಾಗಿದ್ದಾರೆ. ಹಿಂದುಸ್ಥಾನದ ಜನರಿಗೆ ರಾಜಕೀಯ ವಿಷಯಗಳ ಬಗ್ಗೆ ಏನೂ ಗೊತ್ತಿರುವದಿಲ್ಲ. ಹಿಂದೂ ಮುಸಲ್ಮಾನರ ಪ್ರಶ್ನೆಯು ಬಹಳ ತೀಕ್ಷ್ಣವಾಗಿದೆ. ಬ್ರಿಟಿಶ ಸೈನ್ಯವು ಹಿಂದುಸ್ಥಾನವನ್ನು ಬಿಟ್ಟು ಹೋದರೆ ದೇಶದಲ್ಲೆಲ್ಲ ದಂಗೆ ಏಳುವದೆಂದು ಮೊದಲಾದವುಗಳೇ ಆ

### ಮೆರವಣಿಗೆಗೆ ಗೆಲುವು.

ವವು ಸೈನ್ಯದ ಹಿಂದೀ ಕರಣವನ್ನು ಆದಷ್ಟು ಸಾವಕಾಶವಾಗಿ ಪ್ರಾರಂಭಿಸಬೇಕು. ಹಿಂದೀ ಸೈನ್ಯವು ಬ್ರಿಟಿಶರ ನಿಯಂತ್ರಣದ ಕೆಳಗಿರಬೇಕು. ಬ್ರಿಟಿಶ ಸಾಮ್ರಾಜ್ಯದ ದೃಷ್ಟಿಯಿಂದ ಹಿತಕಾರಕವೆನಿಸುವದು.

### ಸೇಟ ಅಮೃತಲಾಲರನ್ನು ಬಿಟ್ಟರು

ಪತಿಯಾಳಾ ವಿಚಾರಣೆಯ ಸಮಿತಿಯ ಮುಂದೆ ಸಾಕ್ಷಿಯನ್ನು ಕೊಡಲು ಅನುಕೂಲವಾಗಬೇಕೆಂಬ ಉದ್ದೇಶದಿಂದ ಸರಕಾರದವರು ಆಕಸ್ಮಾತ್ ಬಾದರ ಸೇಟ ಅಮೃತಲಾಲರನ್ನು ೧ ತಿಂಗಳದ ವರೆಗೆ ಸೆರೆಮನೆಯಿಂದ ಹೊರಗೆ ಬಿಟ್ಟಿರುವರು.

### ಗುಂಟೂರಿನ

### ಲಕ್ಷ್ಮೀಬಾಯಿ ಅಮ್ಮಾ ಅವರನ್ನು ಸೆರೆಹಿಡಿದರು

೧೬ ಜನ ಸ್ವಯಂಸೇವಿಕೆಯರೊಂದಿಗೆ ಉಪ್ಪನ್ನು ಸಿದ್ಧಗೊಳಿಸಲು ಹೊರಟ ಗುಂಟೂರಿನ ಲಕ್ಷ್ಮೀಬಾಯಿ ಅಮ್ಮಾ ಅವರನ್ನು ಅಧಿಕಾರಿಗಳು ಸೆರೆಹಿಡಿದಿರುತ್ತಾರೆ.

### ಮುಂಬಯಿಯಲ್ಲಿ

### "ಕಾಂಗ್ರೆಸ್ ಬುಲಿಟೆನ್"ದ

### ಸಂಪಾದಕರನ್ನು ಸೆರೆಹಿಡಿದರು.

ಮುಂಬಯಿಯ ಸತ್ಯಾಗ್ರಹ ಯುದ್ಧ ಮಂಡಳದವರು "ಕಾಂಗ್ರೆಸ ಬುಲಿಟೆನ್" ಎಂಬ ದೈನಿಕ ಪ್ರಚಾರಕ ಪತ್ರಿಕೆಯನ್ನು ಇಂಗ್ಲಿಷ, ಗುಜರಾತಿ ಮತ್ತು ಮರಾಠಿ ಈ ಭಾಷೆಗಳಲ್ಲಿ ಹೊರಡಿಸುತ್ತಿರುವರಷ್ಟೆ. ಕೆಲವು ದಿವಸಗಳ ಹಿಂದೆ ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಅದನ್ನು ಹೊರಡಿಸಕೂಡದಾಗಿ ಚಳ್ಳಿಪ್ಪಣೆಯನ್ನು ತೆಗೆದಿದ್ದರು. ಸತ್ಯಾಗ್ರಹ ಮಂಡಳದವರು ಅದಕ್ಕೆ ಲಕ್ಷ್ಯಕೊಡದೆ ಪತ್ರಿಕೆಯನ್ನು ಹಾಗೆಯೇ ಹೊರಡಿಸುತ್ತಿದುದರಿಂದ ಸತ್ಯಾಗ್ರಹ ಮಂಡಳದ ಅಧಿಕಾರಿಗಳನ್ನು ಸೆರೆಹಿಡಿದು ಅವರಿಗೆ ಶಿಕ್ಷೆ ವಿಧಿಸಿದರು. ಈಗ ಪತ್ರಿಕೆಯ ಸಂಪಾದಕರಾದ ಶ್ರೀ ಜಮಿಂತ ದಲಾಲರನ್ನು ರಾಜದ್ರೋಹಕ್ಕಾಗಿ ಸೆರೆಹಿಡಿದಿದ್ದಾರೆ. ಶ್ರೀ ಮಾಣಿಕಲಾಲ ಗಾಂಧಿಯವರು ಸಂಪಾದಕತ್ವವನ್ನು ವಹಿಸಿಕೊಳ್ಳಹತ್ತಿರುವರೆಂದು ತಿಳಿದಿದೆ. ಇನ್ನು ಮುಂದೆ ಹಿಂದೀ ಮತ್ತು ಉರ್ದು ಭಾಷೆಗಳಲ್ಲಿಯೂ ಪತ್ರಿಕೆಯು ಹೊರಡುವಾಗಿ ತಿಳಿಯುತ್ತದೆ.

### ಕಾಲೇಜದ ವಿದ್ಯಾರ್ಥಿಯನ್ನು ಸೆರೆ ಹಿಡಿದರು.

ರಾಜದ್ರೋಹಾತ್ಮಕವಾದ ಕೆಲವು ಪತ್ರಪತ್ರಿಕೆಗಳನ್ನು ಹಂಚಿ ಪೊಲೀಸರಿಗೂ ಹಾಗೂ ಸರಕಾರಿ ಉದ್ಯೋಗಸ್ಥರಿಗೂ ರಾಜೀನಾಮೆಯನ್ನು ಕೊಟ್ಟು ಸತ್ಯಾಗ್ರಹದಲ್ಲಿ ಸೇರಿರೆಂದು ಪ್ರಚೋದಿಸಿದರೆಂಬ ಆರೋಪದಿಂದ ಅಹಮ್ಮದಾಬಾದ ಕಾಲೇಜದ ವಿದ್ಯಾರ್ಥಿಯಾದ ಶ್ರೀ ಲಲಿತ ಮೋಹನರನ್ನು ಸೆರೆಹಿಡಿದಿದ್ದಾರೆ.

## ಹಿರೇಮಠ ಸಾಹೇಬರಿಗೆ

### ದೇಶಪಾಂಡೆ ಹಣಮಂತರಾಯರ ಉತ್ತರ

### ಮೆ|| ಡಿ|| ಡಿ|| ಕಲೆಕ್ಟರ ಸಾ|| ದಕ್ಷಿಣ ಭಾಗ

### ಜಿಲ್ಹಾ ವಿಜಾಪೂರ ಇವರ ಕಡೆಗೆ—

ಹಣಮಂತರಾವ ರಾಮರಾವ ದೇಶಪಾಂಡೆ ಮಾಜಿ ಕುಲಕರ್ಣಿ ಬಾದಗಿ, ಕೊಂತಿಕಲ್ಲ, ದೊಡ್ಡಿಹಾಳ ಪೇಟಾ ಬೀಳಗಿ, ಇವನ ವಿನಂತಿ.

ತಮ್ಮ ತಾರೀಖು ೨೭-೫-೩೦ ನೇ ನೋಟೀಸು ನೋಡಿದೆನು. ನನ್ನ ಪ್ರಕೃತಿಯು ಅಶಕ್ತತೆಯು ಮತ್ತು ಆ ಜಾರಿ ಮಾಡಿಕಾ ಪ್ರವಾಸಕ್ಕೆ ಹೋಗಿದ್ದರಿಂದ, ತಾ|| ೯—೬—೩೦ಕ್ಕೆ ಹಾಜರಾಗಲಿಕ್ಕೆ ಆಗಲಿಲ್ಲ. ಮತ್ತು ತಮ್ಮ ನೋಟೀಸಿನ ಮುಖಾಂತರ ಮೇಲಿಂದ ನಾನು ಖುಲಾಸ ಮಾಡತಕ್ಕದ್ದು ಅವಶ್ಯ ವೆನಿಸಿದ್ದರಿಂದ ಈ ಕೆಳಗಿನಂತೆ ನನ್ನ ಜಂಬೋಣವದೆ.

ತಾ|| ೨೫-೬-೩೦ ನೇ ನನ್ನ ರಾಜೀನಾಮೆದಲ್ಲಿಯ ಸಂಗತಿಯ ಮೇಲಿಂದ ತಾವು ನನ್ನಮೇಲೆ ಚಾರ್ಜ ಇಟ್ಟೀರಿ ಅಂತಾ ಹೇಳಿದಿರುವಿರಿ. ಸದರ ರಾಜೀನಾಮೆ ಸಂಗತಿ ಮೇಲಿಂದ ಸತತ ಅತ್ಯಂತ ಹೀನ ಪ್ರಕಾರ (Gravemisconduct) ಘೋರ ದುರ್ವರ್ತನೆಯುಳ್ಳದ್ದು ಇದ್ದೀತಿ ಅಂತ ನಿಮಗೆ ಮಾಡಿದ್ದ ತೀರ ತಪ್ಪಾಗುವದು. ನನ್ನ ೩೦ ವರ್ಷದ ನವಕರಿಯಲ್ಲಿ ಮೇಲಿನ ಆರ್ಡರಿಗೆ ಅನುಸರಿಸಿಯೇ ಮಾತ್ರೇನಾದರೂ ಸರಕಾರ ಕೆಲಸ ದಲ್ಲಿಯಾಗಲೀ ಒಂದು ಸಣ್ಣ ತಾಕೀದಿ ಸಹಾ ನನಗೆ ಆಗದೆ ಈ ಹುದ್ದೆಯಲ್ಲಿ ೫ ಸಾರ ಆಲಕರ್ಣೀಯಂ ಪೈಕಿ ಒಬ್ಬನೆಂದು ವರಿಷ್ಠ ಅಧಿಕಾರಿಗಳಿಂದ ಶಿಫಾರಸ ಪಡೆದವನು ಇರುವೆನು. ಆದರೆ ಈಗ ರಾಜೀನಾಮೆಕೊಡುವ ಉದ್ದೇಶದ ಪ್ರಶ್ನೆ ಬರುವದು. ತಮ್ಮ ಅಭಿಪ್ರಾಯದಂತೆ ಈ ನನ್ನ ರಾಜೀನಾಮೆದ ಉದ್ದೇಶವಿಂದೆ ಅಗತ್ಯವಾದ ನನ್ನ ದೇಶದ ಮುಂದಾಳುಗಳು ತಮಗೆ ದೇವದೂತರಿಂದ ಸೌಖ್ಯಭೋಗ ಹೊಂದಿರುವ ಪರಿಸ್ಥಿತಿ ವಿದ್ಯಾಗ್ರಾದರೂ ಇರದಾ ನಿಸ್ವಾರ್ಥಬುದ್ಧಿಯಿಂದ ಪ್ರಜಾ ಸಂಕಷ್ಟಗಳನ್ನರಿತು ಪ್ರಜಾ ಹಿತವಾದ ದೇಶಕಗಳು ಏನು ಇಂಥವಂಬ ವ್ಯಕ್ತಿ ತಮಾಡುವ ಉದ್ದೇಶದಿಂದ ತಂದಾದ ಸರಕಾರನಿಗೆ ಉದಾದರೆನೇ ಹಾಕಿರ್ಗುನ್ಹೇಗಾರ ಜನರಂತೆ ಸೆರಮನೆಗೆ ಹೋದವರಲ್ಲ ಇದು ನನ್ನ ಮನಸಿನಮೇಲೆ ಧಾರುಣ ಪರಿಣಾಮವಾಗಿ ನಾನು ಮನಸಿನ ಸ್ವಾಧೀನದಲ್ಲಿ ಸಿಕ್ಕ ನಾನಾದರೂ ಒಬ್ಬ ಪ್ರಜನು ಇದ್ದು ಪ್ರಜಾಮತ ಸ್ಪಷ್ಟೀಕರಿಸುವದು ಪ್ರಜಾ ಬೇಡಿಕೆಗಳನ್ನು ಮುಂಟಿಡುವದು ಯಾವ ಘೋರ ಪಾತಕವಲ್ಲವೆಂಬ ಭಾವನೆಯಿಂದ ಪ್ರಜಾಮತ ಪ್ರದರ್ಶಕ ಸ್ವರೂಪವಾದ ರಾಜೀನಾಮಾ ಸಂಗತಿ ಗಳಿಂದ ಸರಕಾರವು ಆಲಿಸಿ ಯೋಗ್ಯ ಉಪಾಯ ಮಾಡೀತೆಂಬು ದಾಗಿ ಈ ರಾಜೀನಾಮೆಕೊಟ್ಟ ಉದ್ದೇಶವಿರುವದು ಪುಸ್ತಕದೊಡ್ಡ ದೊಡ್ಡ ಅಧಿಕಾರಿಗಳಾಗಲೀ ಯಾರೇ ಯಾಗಲೀ ಇದೇ ಭಾವನೆ ಯಿಂದ ರಾಜೀನಾಮೆಕೊಟ್ಟವರು ಇರುವರಾಗಿ ನನ್ನ ತಿಳುವಳಿಕೆ ಯಿದೆ. ಈ ಬಗ್ಗೆ ಸವಿಸ್ತರವಾಗಿ ಪರಿಶೀಲಿಸಿ ವಿಚಾರಿಸಿದಲ್ಲಿ ನಾನು ಮೇಲೆ ಅನ್ನುವಂತೆ ಅದರ ಸ್ವರೂಪವು ಸ್ವಚ್ಛವಾಗಿ ತೋರು ವದು. ಇಂಥ ಮಾತರ್ಸ್ವರೂಪವಾದ ರಾಜೀನಾಮೆ ಸಂಗತಿಗೆ ಅತ್ಯಂತ ಹೀನ ಪ್ರಕಾರ (Gravemisconduct) ಅನ್ನು ವದು ತಪ್ಪಾಗುವದು. ಮತ್ತು ಈ ಕಲ್ಮ ಲಾಗು ಮಾಡಲಿಕ್ಕೆ ಬರಲಾರದಂತ ನನ್ನ ಅಂಬೋಣವದೆ.

(ಮುಂದೆಸಾಗುವದು.)

## ದಕ್ಷಿಣ ಆಫ್ರಿಕೆಯ ಮುಸಲ್ಮಾನರು ಸತ್ಯಾಗ್ರಹದಲ್ಲಿ ಸೇರಿರೆಂದು

### ಶೌಕತ ಅಲ್ಲಿಯವರಿಗೆ ಎಚ್ಚರ ಕೊಟ್ಟರು.

ದಕ್ಷಿಣ ಆಫ್ರಿಕೆಯ ಮುಸಲ್ಮಾನರು ಮೌಲಾನಾ ಶೌ[illegible] ಅಲ್ಲಿಯವರಿಗೆ ತಂತಿಯಿಂದ ಕೆಳಗಿನಂತೆ ತಿಳಿಸಿದ್ದಾರೆ:—

"ಮೊದಲು ಸತ್ಯಾಗ್ರಹದಲ್ಲಿ ಸೇರಿ ಮಹಾತ್ಮರನ್ನು ಹಿಂಬ[illegible] ಲಿಸಿರಿ. ಆಮೇಲೆ ದಕ್ಷಿಣ ಆಫ್ರಿಕೆಯಲ್ಲಿ ಕಾಲಿಡಿರಿ. ಇದಕ್ಕೆ ನಿರಾಕರಿಸಿದಲ್ಲಿ ಅಲ್ಲಿಯ ಮುಸಲ್ಮಾನರಿಂದ ನಿಮಗೆ ಸನ್ಮಾ ನವು ದೊರೆಯದು.

### ಕರನಿರಾಕರಣೆಯ ಕಾನೂನು

ಕರನಿರಾಕರಣೆಯ ವಿರುದ್ಧವಾಗಿ ವ್ಹಾಯಿಸರಾಯರಿಂ[illegible] ಮೊನ್ನೆ ಮೊನ್ನೆ ಹೊರಬಿಟ್ಟ ಹೊಸ ಕಾನೂನಾಸ್ತ್ರವು ಸುರ[illegible] ಮತ್ತು ಕಾಯರಾ ಜಿಲ್ಲೆಗಳಲ್ಲಿ ಬೇಗನೆ ಬಳಕೆಯಲ್ಲಿ ಬರುವದಿ[illegible]

ಜಯಲಕ್ಷ್ಮೀ ಪ್ರಾಸಾದಿಕ

ಸ್ತ್ರೀಮಿಶ್ರಿತ ಸಂಗೀತ ನಾಟಕ ಮಂಡಳಿ ದಾವಣಗೇರಿ ಇವರು

**ಬಾಗಲಕೋಟೆ ರಾಜ ಥಿಯೇಟರಿನಲ್ಲಿ**

ಶನಿವಾರ ತಾ|| ೧೪-೬-೩೦

**ಪ್ರತಾಪಪ್ರಮೀಲಾ**

ಸೋಮವಾರ ತಾ|| ೧೬-೬-೩೦

**ಲಂಕಾದಹನ.**

ಬಹು ಹೊಸ ಆಖ್ಯಾನಗಳನ್ನು ಪ್ರಯೋಗಿಸುವರು.

ವ್ಯವಸ್ಥಾಪಕ.

ಬರುವರು! ಬರುವರು!!

**ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ**

**ಶಿರಹಟ್ಟಿ ನಾಟಕ ಮಂಡಳಿಯವರು**

**ಶಿವಾನಂದ ನಾಟಕ ಶಾಲೆಯಲ್ಲಿ**

# ಬೇಗನೆ ಬರುವರು

ಮತ್ತು ಲೋಕಪ್ರಿಯವಾದ

**ತಮ್ಮ ನಾಟಕಗಳನ್ನು ಅಭಿನಯಿಸುವರು.**

ಎಚ್, ವೆಂಕೋಬರಾವ

ಪ್ರೊಪ್ರಾಯಿಟರ.

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ
ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

ಸಂಪಾದಕರು :— ಬಳವಂತ ಅಣ್ಣಾರಾವ ಮುಜುಮುದಾರ.

ಕಾರ್ತಿಕ ಶಾಲಿವಾಹನ ರವಿವಾರ ಮಿತಿ ಜ್ಯೇಷ್ಠ ಬಹುಳ ೪ ಶಕ ೧೮೫೨ ತಾ॥ ೧೫—೬—೩೦ ಸಂಚಿಕೆ ೭೫

ಸನವತ್ತಿಯಲ್ಲಿ

## ರಾಷ್ಟ್ರಧ್ವಜಕ್ಕಾಗಿ ಸತ್ಯಾಗ್ರಹ

ಸನವತ್ತಿಯ ನಗರ ಸಭೆಯ ಮೇಲೆ ರಾಷ್ಟ್ರಧ್ವಜವನ್ನು ಏರಿಸಬೇಕೆಂಬುದಾಗಿ ಅಲ್ಲಿಯ ನಾಗರಿಕರು ಶ್ರೀ. ಗುರುರಾವ ಮುನವಳ್ಳಿ ಇವರ ಅಧ್ಯಕ್ಷತೆಯಲ್ಲಿ ಸಭೆಮಾಡಿ ಅದರದೊಂದು ನಕಲನ್ನು ಅಧ್ಯಕ್ಷರ ಕಡೆಗೆ ಕಳಿಸಿದ್ದರು. ನಗರ ಸಭೆಯವರು ೧೫ ದಿವಸಗಳಲ್ಲಿ ನಾಡಗುಡಿಯನ್ನು ಹಚ್ಚದಿದ್ದರೆ ಊರವರು ಸತ್ಯಾಗ್ರಹ ಮಾಡಿ ಅದನ್ನು ಏರಿಸತಕ್ಕದ್ದೆಂಬುದಾಗಿ ನಿರ್ಧರಿಸಿಕೊಂಡಿದ್ದಾರೆ. ಕರ್ನಾಟಕದೊಳಗಿನ ಎಲ್ಲ ನಗರ ಸಭೆಗಳು ಜನತೆಯ ಬೇಡಿಕೆಯನ್ನು ಮನ್ನಿಸಿ ಶೀಘ್ರವಾಗಿಯೇ ರಾಷ್ಟ್ರಧ್ವಜಗಳನ್ನು ಹಚ್ಚಿಕೊಳ್ಳುವದು ಒಳಿತು.

ಮದ್ರಾಸ ಇಲಾಖೆಯಲ್ಲಿ

## ದಬ್ಬಾಳಿಕೆಯು ಹೆಚ್ಚಾಯಿತು.

ಪರದೇಶಿ ಬಟ್ಟೆಗಳನ್ನು ಬಹಿಷ್ಕರಿಸಿರೆಂದು ಜನರಿಗೆ ಬೋಧಿಸುತ್ತ ತಿರುಗುತ್ತಿದ್ದ ಮದ್ರಾಸಿನ ೭ ಜನ ಸ್ವಯಂಸೇವಕರನ್ನು ಸರಕಾರ ಹಿಡಿದಿದ್ದಾರೆ. ಗುಂಟೂರಿನ ೧೭ ಜನ ಸತ್ಯಾಗ್ರಹಿಗಳಿಗೆ ೧ ವರ್ಷದ ಸಶ್ರಮ ಶಿಕ್ಷೆಯಾಗಿದೆ. ಅವರಲ್ಲಿ ಒಬ್ಬರು ಬ್ಯಾರಿಸ್ಟರರೂ, ಇಬ್ಬರು ವಕೀಲರೂ, ಇರುತ್ತಾರೆ. ಸಿಂದಿ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದುದಕ್ಕಾಗಿ ಎಲ್ಲೂರಿನ ೧೪ ಜನರಿಗೆ ೩ ರಿಂದ ೯ ತಿಂಗಳವರೆಗೆ ಶಿಕ್ಷೆಯಾಗಿದೆ. ೧೪೪ ಕಲಮನ್ನು ಮುರಿದುದಕ್ಕಾಗಿ ಮದ್ರಾಸಿನ ಮೂವರು ಸತ್ಯಾಗ್ರಹಿಗಳು ೬ ತಿಂ. ಸ. ಶಿಕ್ಷೆಗೆ ಗುರಿಯಾಗಿದ್ದಾರೆ. ಮಚಲಿಪಟ್ಟಣದ ಸತ್ಯಾಗ್ರಹ ಮುಖಂಡರಾದ ಶ್ರೀ ಗೋಪಾಲ ಕೃಷ್ಣಯ್ಯನವರಿಗೆ ಉಪ್ಪಿನ ಕಾಯಿದೆ ಭಂಗಕ್ಕಾಗಿ ೧೦ ತಿಂಗಳ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ. ಶ್ರೀ ರಾಮಕೃಷ್ಣ ಶಾಸ್ತ್ರಿಗಳಿಗೆ ೧ ವರ್ಷ ಸಶ್ರಮ ಶಿಕ್ಷೆಯಾಗಿದೆ. ಶಾಡಪಲ್ಲಿಗುಡಮದಲ್ಲಿ ೮ ಜನರನ್ನು ಸೆರೆಹಿಡಿದು, ಇಬ್ಬರಿಗೆ ೧ ವರ್ಷ ಸಾದಾ, ಮೂವರಿಗೆ ೧ ತಿಂಗಳ ಸಾದಾ, ಇಬ್ಬರಿಗೆ ಬೋರಸ್ಟಲ್ ಶಾಲೆಯಲ್ಲಿ ೨ ವರ್ಷಗಳವರೆಗೆ ಸೆರೆ ಹಾಗೂ ಅವರ ಮುಖಂಡರಿಗೆ ೨॥ ವರ್ಷ ಸಶ್ರಮ. ಹೀಗೆ ಶಿಕ್ಷೆಗಳನ್ನು ವಿಧಿಸಿದ್ದಾರೆ.

### ತಕಲಿಗಳನ್ನು ಮಾರಿದುದಕ್ಕಾಗಿ ಶಿಕ್ಷೆ

ಮಚಲಿಪಟ್ಟಣದ ಶ್ರೀ. ಸೂರ್ಯಪ್ರಕಾಶರಾವ, ಲಕ್ಷ್ಮೀನರಸಿಂಹರಾವ ಮತ್ತು ಪುನ್ನಯ್ಯ ಈ ಮೂವರಿಗೆ ೧೪೪ ಕಲಮನ್ನು ಮುರಿದುದಕ್ಕಾಗಿ ಮತ್ತು ತಕಲಿಗಳನ್ನು ಮಾರಿದುದಕ್ಕಾಗಿ ೧೦ ತಿಂಗಳ ಸಶ್ರಮ ಶಿಕ್ಷೆಯಾಗಿದೆ.

### ಸತ್ಯಾಗ್ರಹಿಗಳನ್ನು ಇಳಿಸಿಕೊಂಡಿದುದಕ್ಕಾಗಿ ಶಿಕ್ಷೆ

ವೇದಾರಣ್ಯಕ್ಕೆ ಹೋಗುತ್ತಿರುವ ಸತ್ಯಾಗ್ರಹಿಗಳನ್ನು ಮನೆಯಲ್ಲಿ ಇಳಿಸಿಕೊಂಡಿದ್ದುದಕ್ಕೆ ತಿರುವಾಲೂರದ ಡಾ. ನಾಗನಾಥ ಅಯ್ಯರ ಅವರಿಗೆ ೧೦೦ ರು. ದಂಡ, ಇಲ್ಲವೆ ೬ ವಾರ ಸಶ್ರಮ ಶಿಕ್ಷೆಯಾಗಿದೆ.

ರಾಷ್ಟ್ರಧ್ವಜವನ್ನು ಕಿತ್ತಲು ಹೋಗಿ

## ಬ್ರಿಟಿಶ ಸೈನಿಕನು ಗಾಯಹೊಂದಿದನು

ಲಖನೌದಲ್ಲಿ ಕಾಂಗ್ರೆಸ ಭುವನದ ಕಟ್ಟಡದ ಮೇಲೆ ಇರುವ ರಾಷ್ಟ್ರಧ್ವಜವನ್ನು ಕಿತ್ತುಕೊಂಡು ಹೋಗಲು ಇಬ್ಬರು ಬ್ರಿಟಿಶ ಸೈನಿಕರು ನೀರಿನ ನಳದ ಮೂಲಕ ಮೇಲೆ ಹತ್ತುತ್ತಿದ್ದರು. ಇದು ಅಲ್ಲಿಯ ಜನರಿಗೆ ಕೂಡಲೆ ತಿಳಿದುಬಂದಿದ್ದರಿಂದ ಅಲ್ಲಿ ಜನರು ನೆರೆದರು. ಜನರ ಗದ್ದಲಕ್ಕೆ ಬೆದರಿ ಸೈನಿಕರು ಕೆಳಗೆ ಇಳಿದರು. ಕೆಳಗೆ ಇಳಿಯುವ ಭರದಲ್ಲಿ ಒಬ್ಬ ಸೈನಿಕನು ಕಾಲುಜಾರಿ ಕೆಡೆದುಕೊಂಡು ಬಿದ್ದನು. ಬಹಳ ಗಾಯಹೊಂದಿದನು.

### ಕೌನ್ಸಿಲುಗಳ ಆರಿಸುವಿಕೆ.

ವರಿಷ್ಠ ಹಾಗು ಪ್ರಾಂತಿಕ ಶಾಸನ ಮಂಡಳಿಗಳ ಆರಿಸುವಿಕೆಯು, ದುಂಡುಮೇಜಿನ ಪರಿಷತ್ತಿನ ಪೂರ್ವದಲ್ಲಿ ಅಂದರೆ ಸಪ್ಟೆಂಬರ ತಿಂಗಳಲ್ಲಿ ನಡೆಯುವದಾಗಿ ತಿಳಿಯುತ್ತದೆ:

### ೪ ಜನ ಸತ್ಯಾಗ್ರಹಿಗಳ ಸುಳುವೇ ಇಲ್ಲ

ಸೋಲ್ಲಾಪುರಕ್ಕೆ ಪುಣೆಯಿಂದ ರಾಷ್ಟ್ರಧ್ವಜದ ಸತ್ಯಾಗ್ರಹಕ್ಕೆ ಕಳಿಸಲ್ಪಟ್ಟ ಸತ್ಯಾಗ್ರಹಿಗಳಲ್ಲಿ ೪ ಜನ ಸತ್ಯಾಗ್ರಹಿಗಳು ಎಲ್ಲಿರುವರೆಂಬುವದು ಇನ್ನೂ ಗೊತ್ತಾಗಿಲ್ಲ. ಆದ್ದರಿಂದ ಸತ್ಯಾಗ್ರಹಿಗಳು ಎಲ್ಲಿರುವರೆಂಬುದನ್ನು ತಿಳಿಸಿರೆಂದು ಪುಣೆಯ ಕಾಂಗ್ರೆಸ ಕಮಿಟಿಯವರು ಸೋಲ್ಲಾಪುರದ ಕಲೆಕ್ಟರರಿಗೆ ಪತ್ರ ಬರೆದಿದ್ದಾರೆ.

## ಮುಸಲ್ಮಾನರಿಗೆ

### ಮಿ। ಅಬ್ದುಲ್ ಗಫೂರರವರ ಸಂದೇಶ

ಮಿ। ಅಬ್ದುಲ್ ಗಫೂರ ಹಾಗು ಅವರ ಮಗನು ರಾಷ್ಟ್ರೀಯ ಪಕ್ಷಕ್ಕೆ ಸೇರಿದ್ದಕ್ಕಾಗಿ ಬೇರೆ, ಮುಂಬಯಿಯ ಅಧಿಕಾರಿಗಳು ಅವರನ್ನು ಎರಡು ವರುಷಗಳ ಹದ್ದುಪಾರ ಮಾಡಿರುವರಷ್ಟೆ. ಮಿ। ಅಬ್ದುಲ್ ಗಫೂರರು ಮುಂಬಯಿಯನ್ನು ಬಿಟ್ಟು ಹೋಗುವಾಗ ಮಾಡಿದ ಭಾಷಣದಲ್ಲಿ:—

ಮುಂಬಯಿಯನ್ನು ಬಿಡುವ ಪ್ರಸಂಗವು ನನಗೀಗ ಬಂದೊದಗಿದೆ. ಮಹಾಯುದ್ಧದಲ್ಲಿ ಬ್ರಿಟಿಶರಿಗೆ ಅನೇಕ ಬಗೆಗಳಿಂದ ಸಹಾಯ ಮಾಡಿದೆನು. ಅದರ ಪ್ರತಿಫಲವೆಂದರೆ ಈ ಹದ್ದುಪಾರಿನ ಶಿಕ್ಷೆಯು. ಸರಕಾರವು ಈಗ ಪ್ರಜೆಗಳ ಬೇಡಿಕೆಗಳ ಕಡೆಗೆ ಲಕ್ಷ್ಯಕೊಡುವದಿಲ್ಲ. ಸರದಾರ ಸುಲೇಮಾನ ಹಾಗು ಮೌ. ಶೌಕತ ಅಲ್ಲಿಯವರ ಮಾತುಗಳನ್ನೇ ಪ್ರಮಾಣವೆಂದು ಅವರು ತಿಳಿದುಕೊಳ್ಳುತ್ತಿದ್ದಾರೆ. ದೇಶದಲ್ಲಿ ಈಗ ಸ್ವಾತಂತ್ರ್ಯ ಸಮರವು ಶುರುವಾಗಿದೆ. ಹಿಂದೂ ಜನರು ನಮ್ಮ ವೈರಿಗಳೆಂದು ಕೆಲವರು ಹೇಳುತ್ತಾರೆ. ಭೆಂಡಿ ಬಜಾರದಲ್ಲಿ ಮುಸಲ್ಮಾನರು ಗುಂಡುಗಳಿಗೆ ತುತ್ತಾಗಿ ಬಿದ್ದಾಗ ಅವರಿಗೆ ಸಹಾಯ ಮಾಡಿದವರಾರು? ಹಿಂದೂ ಜನರೇ ಅಲ್ಲವೇ? ಹಿಂದುಸ್ಥಾನದಲ್ಲಿ ಹುಟ್ಟಿದವರೆಲ್ಲರೂ ನಮ್ಮ ಬಂಧುಗಳು. ಅಸಹಕಾರದ ಯುಗದಲ್ಲಿ ಅಲ್ಲಿ ಬಂಧುಗಳು ಸರಕಾರದ ಪಕ್ಷಕ್ಕೆ ಸೇರಿದವರಿಗೆ ದೇಶದ್ರೋಹಿಗಳೆಂದು ಹೆಸರಿಡುತ್ತಿದ್ದರು. ಈಗ ಅವರೇ ಸರಕಾರದ ಬಾಲವನ್ನು ಹಿಡಿಯುತ್ತಿರುತ್ತಾರೆ. ಹದ್ದುಪಾರಿನ ಶಿಕ್ಷೆಯಾದುದಕ್ಕಾಗಿ ನನಗೆ ದುಃಖವಾಗುವದಿಲ್ಲ. ಸರಕಾರವು ನಮ್ಮೊಡನೆ ಧರ್ಮಯುದ್ಧವನ್ನು ಹೂಡದಿರುವದಕ್ಕಾಗಿ ವಿಷಾದವೆನಿಸುತ್ತದೆ. ನನ್ನ ಹತ್ತಿರ ಶಸ್ತ್ರಾಸ್ತ್ರಗಳುಂಟು ಆದರೆ ಅವುಗಳನ್ನು ಉಪಯೋಗಿಸುವದು ನನಗೆ ಬೇಕಾಗಿಲ್ಲ. ಯಾಕೆಂದರೆ ಇದು ಅಹಿಂಸಾಮಯ ಯುದ್ಧವಾಗಿದೆ. ಸರಕಾರಕ್ಕೆ ಸಹಾಯ ಮಾಡುವವರು ನನಗೆ ಸಿಕ್ಕ ಪ್ರತಿಫಲವನ್ನು ಕಂಡು ಎಚ್ಚರಾಗಬೇಕು.

## ಶ್ರೀಮತಿ ಕಸ್ತೂರಿಬಾಯಿಯವರು

### ಕರ ಕೊಡಬೇಡಿರೆಂದು ಬೋಧಿಸಿದರು.

ಬಲೋಲಪುರ ತಾಲೂಕದ ಪ್ರಜೆಗಳ ಪರಿಷತ್ತು ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಶ್ರೀಮತಿಯವರು ತಮ್ಮ ಭಾಷಣದಲ್ಲಿ "ಈಗ ಸುತ್ತಲೆಲ್ಲ ಹೆಚ್ಚಾಗಿ ಜಾಗೃತಿಯುಂಟಾಗಿದೆ. ಹಿಂದುಸ್ಥಾನದ ಒಕ್ಕಲಿಗರನ್ನು ರಸಾತಳಕ್ಕೆ ಮೆಟ್ಟಲಿಕ್ಕೂ ಮತ್ತು ವಿದ್ಯಾವಂತರನ್ನು ದುರ್ಬಲರನ್ನಾಗಿ ಮಾಡಲಿಕ್ಕೂ ಈ ಬ್ರಿಟಿಶ ರಾಜ್ಯಪದ್ಧತಿಯೇ ಕಾರಣವಾಗಿದೆ. ಈ ರಾಜ್ಯಪದ್ಧತಿಯು ಒಡಲಾಗದ ಹೊರತು ಹಿಂದುಸ್ಥಾನದ ಉದ್ಧಾರವಾಗದು. ಇಂಥ ವೇಳೆಯಲ್ಲಿ ಕರ ಕೊಡದಿರುವದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ." ಎಂದು ಹೇಳಿದರು. ಕರನಿರಾಕರಣೆಯ ಗೊತ್ತು ಸಭೆಯಲ್ಲಿ ಸ್ವೀಕೃತವಾಯಿತು.

## ಸೊಲ್ಲಾಪುರದಲ್ಲಿ ಸೈನಿಕರ ಅತ್ಯಾಚಾರ

ಸೊಲ್ಲಾಪುರದಲ್ಲಿ ಪಲ್ಟನದವರು ನಡೆಸಿದ ಅತ್ಯಾಚಾರಗಳ ವಿಷಯವಾಗಿ ರಾಮಾವಲ್ಲದ ವನ್ನಪ್ಪ ಎಂಬ ಸತ್ಯಾಗ್ರಹಿಯು ಕೊಟ್ಟ ವರದಿ:—

ನಾನೊಬ್ಬ ವ್ಯಾಪಾರಿಯು. ದೇಶಸೇವೆಗಾಗಿ ಸೊಲ್ಲಾಪುರಕ್ಕೆ ಬಂದೆನು. ಮೇ ೧೪ ನೆಯ ತಾ॥ ದಿವಸ ದಂಡನಾಯಕನೊಬ್ಬನು ನನ್ನನ್ನು ಚಾಬೂಕಿನಿಂದ ಹೊಡೆದು ಮುಖವನ್ನು ತಿನ್ನಲಿಕ್ಕೆ ಹೇಳಿದನು. ಸೊಲ್ಲಾಪುರ ಸ್ಟೇಶನವನ್ನು ಪ್ರವೇಶ ಮಾಡುವ ಕಾಲಕ್ಕೆ ಒಬ್ಬ ಸೈನಿಕನು ನನ್ನ ಟೊಪ್ಪಿಗೆಯನ್ನು ಕಸಿದುಕೊಂಡದ್ದಲ್ಲದೆ ನನ್ನನ್ನು ಬತ್ತಲೆ ಮಾಡಿ ನನ್ನ ಖಾದೀ ಧೋತರವನ್ನು ಕೂಡ ಕಸಿದುಕೊಂಡು ಸುಟ್ಟುಬಿಟ್ಟನು. ನನ್ನ ಸಂಗಡ ಇಬ್ಬರು ಸ್ತ್ರೀಯರಿದ್ದರು. ಅವರಲ್ಲಿದ್ದ ಪಾವಲಿಗಳನ್ನು ಕೊಡಲಿಕ್ಕೆ ಸೈನಿಕರು ಅವರಿಗೆ ವಿಧಿಸಿದರು. ನನ್ನ ಗುಪ್ತಸ್ಥಳಗಳನ್ನು ನಾನು ಎರಡೂ ಕೈಗಳಿಂದ ಮುಚ್ಚಿಕೊಂಡಿದ್ದೆನು. ಗುಪ್ತಸ್ಥಳಗಳ ಮೇಲಿನ ಕೈಗಳನ್ನು ತೆಗೆಯೆಂದು ಹೇಳಿದ ಕೂಡಲೆ ನಾನು ತೆಗೆದೆನು. ಆಗ ಆ ಸೈನಿಕನು ದೊಡ್ಡದೊಂದು ಕಲ್ಲನ್ನು ನನ್ನ ಗುಪ್ತಸ್ಥಳಕ್ಕೆ ಒಗೆದನು. ಅದರಿಂದ ನಾನು ಎಚ್ಚರದಪ್ಪಿ ಬಿದ್ದೆನು. ಬಹು ತಾಸಿನ ಮೇಲೆ ನನಗೆ ಸ್ಮೃತಿ ಬಂದಿತು, ಕೂಡಲೆ ನಾನು ಸ್ಟೇಶನಕ್ಕೆ ಬಂದೆನು. ನಾನು ಬತ್ತಲೆ ಇದ್ದದರಿಂದ ದಾರಿಯೊಳಗಿನ ಜನರು ನನ್ನ ಸ್ಥಿತಿಯನ್ನು ನೋಡಿ ಕನಿಕರಪಟ್ಟು ತಮ್ಮ ರುಮಾಲನ್ನು ಹರಿದು ನನಗೆ ಅರಿವೆ ಕೊಟ್ಟರು. ಅದರಿಂದ ನಾನು ಶರೀರವನ್ನು ಮುಚ್ಚಿಕೊಂಡೆನು. ಆ ಹೆಣ್ಣುಮಕ್ಕಳನ್ನು ಸೈನಿಕರು ಯಾವದೋ ಒಂದು ಗೊತ್ತಿಲ್ಲದ ಸ್ಥಳಕ್ಕೆ ಕರೆದುಕೊಂಡು ಹೋದರು. ಮತ್ತು ಹೆಣ್ಣುಮಕ್ಕಳ ಮೇಲೆ ಬಲಾತ್ಕಾರ ಮಾಡುವದು ಸೊಲ್ಲಾಪುರದಲ್ಲಿ ದಿನಾಲು ನಡೆಸುವ ಸಂಗತಿಯೆಂದು ನನಗೆ ತಿಳಿದದೆ. ಬ್ರಿಟಿಶ ಜನರು ನಡೆಸಿದ ಅತ್ಯಾಚಾರಗಳ ಮುಖ್ಯ ಸ್ಥಳವು ಸೊಲ್ಲಾಪುರವು. ನಿರಪರಾಧಿ ಹೆಣ್ಣುಮಕ್ಕಳ ಗೋಳು ಹಾಗೂ ಚಿಕ್ಕಮಕ್ಕಳ ರಕ್ತಪ್ರವಾಹವು ಅಲ್ಲಿ ನಡೆಯುವ ದಿನದ ವ್ಯವಹಾರವು. ಕೊಲ್ಹಾಪುರದ ವ್ಯಾಪಾರಸ್ಥರ ವಿನಂತಿಯ ಮೇರೆಗೆ ನಾನು ಮುಂಬಯಿಗೆ ಬಂದೆನು. ಮತ್ತೆ ಸೊಲ್ಲಾಪುರಕ್ಕೆ ಹೋಗುವೆನು. ಸೊಲ್ಲಾಪುರದಲ್ಲಿ ಗುಂಡಿನ ಮಳೆಗೆ ಎದೆಗೊಟ್ಟು ನಿಲ್ಲುವ ಧೈರ್ಯವನ್ನು ದಯಪಾಲಿಸೆಂದು ಪರಮಾತ್ಮನನ್ನು ಪ್ರಾರ್ಥಿಸುವೆನು. (ಕರ್ಮವೀರದಿಂದ)

## ಕಾರವಾರ ಜಿಲ್ಲೆಯ ಲೋಕಲ್ ಬೋರ್ಡಿನವರು

### ಉಪ್ಪಿನ ಕರಕ್ಕೆ ವಿರೋಧ ತೋರಿಸಿದರು

ಕಾರವಾರ ಜಿಲ್ಲೆಯ ಲೋಕಲ್ ಬೋರ್ಡಿನವರು ತಾ। ೨೧ ಹಾಗು ೨೨ ನೆಯ ದಿವಸಗಳಲ್ಲಿ ಸೇರಿದ ಸಭೆಯಲ್ಲಿ ಸರಕಾರದವರು ಉಪ್ಪಿನ ಕರವನ್ನು ತೆಗೆದುಹಾಕಬೇಕಾಗಿ ಗೊತ್ತನ್ನು ಸ್ವೀಕರಿಸಿದರು. ಕರ್ನಾಟಕದೊಳಗಿನ ಉಳಿದ ಜಿಲ್ಲಾ ಲೋಕಲ್ ಬೋರ್ಡ, ತಾಲೂಕ ಬೋರ್ಡ, ಮ್ಯುನಿಸಿಪಾಲಿಟಿಗಳು ಇತ್ತ ಲಕ್ಷ್ಯಕೊಟ್ಟು ಉಪ್ಪಿನ ಕರವನ್ನು ತೆಗೆದೊಗೆಯುವಂತೆ ಸರಕಾರಕ್ಕೆ ಬಿನ್ನವಿಸಿಕೊಳ್ಳುವರೋ ?

# ಘಡವಾಲಿ ಸೈನಿಕನಿಗೆ ಕರೇನೀರಿನ ಶಿಕ್ಷೆ

ಪೇಶಾವರ ದಂಗೆಯ ಸಮಯದಲ್ಲಿ ಮೇಲಧಿಕಾರಿಗಳ ಆಜ್ಞೆಯಂತೆ ನಡೆಯದೆ ಇದ್ದ ೧೭ ಘಡವಾಲಿ ಸೈನಿಕರ ವಿಚಾರಣೆಯು ಲಷ್ಕರೀ ಕೋರ್ಟಿನಲ್ಲಿ ಆಗಿ ಕೆಳಗೆ ಕಾಣಿಸಿದಂತೆ ಶಿಕ್ಷೆಗಳು ವಿಧಿಸಲ್ಪಟ್ಟಿವೆ— ಒಬ್ಬನಿಗೆ ಕರೇನೀರಿನ ಶಿಕ್ಷೆ; ಒಬ್ಬನಿಗೆ ೧೫ ವರ್ಷ; ಉಳಿದವರಿಗೆ ೩ ವರ್ಷದಿಂದ ೧೦ ವರ್ಷಗಳವರೆಗೆ ಸಶ್ರಮ ಶಿಕ್ಷೆ.

---

## ಮುಂಬಯಿಯ ಶ್ರೀ ಜಯಂತಿ ದಲಾಲರಿಗೆ
### ೨ ವರ್ಷ ಸಶ್ರಮ ಶಿಕ್ಷೆ.

ಮುಂಬಯಿಯ ಸತ್ಯಾಗ್ರಹ ಮಂಡಳದ ಪರವಾಗಿ ಹೊರಡುತ್ತಿರುವ "ಕಾಂಗ್ರೆಸ್ ಬುಲೆಟಿನ್" ಪತ್ರಿಕೆಯ ಸಂಪಾದಕರಾದ ಶ್ರೀ ಜಯಂತಿ ದಲಾಲರಿಗೆ ರಾಜದ್ರೋಹಾತ್ಮಕ ಲೇಖನಗಳನ್ನು ಬರೆದುದಕ್ಕಾಗಿ ೨ ವರ್ಷಗಳ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ.

## ಸೊಲ್ಲಾಪುರದಲ್ಲಿ ೧೮ ಜನ ಸತ್ಯಾಗ್ರಹಿಗಳನ್ನು ಸೆರೆಹಿಡಿದರು.

ಪುಣೆಯಿಂದ ಸೊಲ್ಲಾಪುರಕ್ಕೆ ರಾಷ್ಟ್ರಧ್ವಜದ ಸತ್ಯಾಗ್ರಹಕ್ಕಾಗಿ ಹೋದ ೧೧೭ ಸತ್ಯಾಗ್ರಹಿಗಳಲ್ಲಿ ಅಧಿಕಾರಿಗಳು ೧೮ ಜನರನ್ನು ಸೆರೆಹಿಡಿದು ಉಳಿದವರನ್ನು ತಿರುಗಿ ಕೊಟ್ಟು ಕಳಿಸಿರುವರಾಗಿ ತಿಳಿಯುತ್ತದೆ.

## ಗಲ್ಲಿಗೇರಿಸಲ್ಪಡುವ ಸೊಲ್ಲಾಪುರದ ನಾಗರಿಕರ ಪರಿಚಯ

ಮಲ್ಲಪ್ಪ ಧನಶೆಟ್ಟಿ:- ಇವರು ಒಂದು ದೊಡ್ಡ ಅಂಗಡಿಯ ಕಾರ್ಯದರ್ಶಿಗಳಿದ್ದಾರೆ. ಇವರು ಹಿಂದೂ ಸಮಾಜದ ಮುಂದಾಳುಗಳಲ್ಲೊಬ್ಬರು. ಹಿಂದೂಮುಸಲ್ಮಾನರ ದಂಗೆಗಳಲ್ಲಿಯೂ [illegible] ಮೆರವಣಿಗೆಗಳಲ್ಲಿಯೂ ಎಲ್ಲವೂ ಸುರಕ್ಷಿತವಾಗಿ ಸಾಗಬೇಕೆಂದು ಇವರು ದುಡಿಯುತ್ತಿದ್ದರು. ಸೊಲ್ಲಾಪುರದ ಜನರ ಮೇಲೆ ಇವರ ವರ್ಚಸ್ಸು ಬಹಳ. ಈಗಿನ ಚಳವಳಿಯಲ್ಲಿಯೂ ಇವರು ಒಳ್ಳೇರೀತಿಯಿಂದ ಕೆಲಸಮಾಡುತ್ತಿದ್ದರು. ಮೆರವಣಿಗೆ ಮುಂತಾದವುಗಳ ವ್ಯವಸ್ಥೆಯನ್ನು ಚನ್ನಾಗಿ ಇಡುತ್ತಿದ್ದರು. ಶಾಂತತೆಯು ಭಂಗವಾಗದಂತೆ ನೋಡಿಕೊಳ್ಳುತ್ತಿದ್ದರು.

ಜಗನ್ನಾಥ ಶಿಂಧೇ:- ಇವರೂ ಮುಂದಾಳುಗಳಲ್ಲೊಬ್ಬರು. ಈಗಿನ ಚಳವಳಿಯಲ್ಲಿ ಎಷ್ಟೋ ಸಲ ಇವರ ವ್ಯಾಖ್ಯಾನಗಳಾಗಿವೆ. ರಾಜಕಾರಣದ ವಿಷಯವಾಗಿ ಭಾಷಣಮಾಡುವಾಗ ಶ್ರೋತೃಗಳಿಗೆ ತಿಳಿಯುವಂತೆ ಸಾದಾ ಭಾಷೆಯಲ್ಲಿ ಭಾಷಣಮಾಡುತ್ತಿದ್ದರು.

ಸಾರಡಾ:- ಇವರು ಶ್ರೀಮಂತರಿದ್ದು ಸುಖದಿಂದ ಕಾಲ ಕಳೆಯುವವರಲ್ಲೊಬ್ಬರು. ಇವರು ಎಂದೂ ವ್ಯಾಖ್ಯಾನವನ್ನು ಕೊಟ್ಟಿಲ್ಲ. ಯಾವ ಸಭೆಗೂ ಅಧ್ಯಕ್ಷರಾಗಿಲ್ಲ. ಆದರೆ ಮೆರವಣಿಗೆಗಳಲ್ಲಿ ಮಾತ್ರ ಭಾಗ ತೆಗೆದುಕೊಳ್ಳುತ್ತಿದ್ದರು.

ಕುರುಬಾನ ಹುಸೇನ:- ಇವರು ಮುಸಲ್ಮಾನ ಗೃಹಸ್ಥರು. ಕೂಲಿಕಾರರ ಮುಂದಾಳುಗಳಲ್ಲೊಬ್ಬರು. ಮಹಾತ್ಮಾ ಗಾಂಧಿಯವರನ್ನು ಹಿಡಿದ ನಂತರ ಸೊಲ್ಲಾಪುರದಲ್ಲಾದ ಮೊದಲನೇ ಸಭೆಯಲ್ಲಿ ಇವರು ಸ್ಫೂರ್ತಿದಾಯಕ ಭಾಷಣ ಮಾಡಿದ್ದರು.

## ಗಾಂಧಿ ಟೊಪ್ಪಿಗೆಯನ್ನು ಹಾಕಿಕೊಂಡಿದ್ದುದಕ್ಕಾಗಿ ೬೦ ಜನರಿಗೆ ಸೆರೆಮನೆ.

ಗಾಂಧಿ ಟೊಪ್ಪಿಗೆಯನ್ನು ಹಾಕಿಕೊಂಡಿದ್ದುದಕ್ಕಾಗಿ ಲಖನೌದ ಅಧಿಕಾರಿಗಳು ಕಳೆದ ೧೫ ದಿವಸಗಳಲ್ಲಿ ೧೪೪ ಮತ್ತು ೧೮೮ ನೆಯ ಕಲಮುಗಳ ಅನ್ವಯ ೬೦ ಜನರನ್ನು ಸೆರೆ ಮನೆಗೆ ಕಳಿಸಿರುವರು.

## ಪುಣೆಯ ಶ್ರೀ ರಾಬಡೆಯವರನ್ನು ಸೆರೆಹಿಡಿದರು.

ಸೊಲ್ಲಾಪುರ ರಾಷ್ಟ್ರಧ್ವಜ ಸತ್ಯಾಗ್ರಹ ಮಂಡಳದ ಮುಖಂಡರಾದ ಶ್ರೀ ರಾಬಡೆಯವರನ್ನು ಅಮಳನೇರದಲ್ಲಿ ಸೆರೆ ಹಿಡಿದಿರುತ್ತಾರೆ.

## ಪೋಲೀಸನು ರಾಜೀನಾಮೆಯನ್ನು ಕೊಟ್ಟನು

ಧರಾಸಣಾದಲ್ಲಿ ಅಧಿಕಾರಿಗಳು ಮಾಡಿದ ಅತ್ಯಾಚಾರಗಳ ನಿಷೇಧಾರ್ಥವಾಗಿ ಬಾಲಸಾರದ ಪೋಲೀಸನಾದ ಶ್ರೀ ಶಿವಾಜಿ ಧುಲಾಜಿಯವರು ತಮ್ಮ ಕೆಲಸಕ್ಕೆ ಶರಣು ಹೊಡೆದಿದ್ದಾರೆ. ಅವರು ಈ ಬಗ್ಗೆ ಬರೆದ ಪತ್ರದಲ್ಲಿ "ಧರಾಸಣಾದಲ್ಲಿ ಗಾಯಪಟ್ಟ ಸತ್ಯಾಗ್ರಹಿಗಳನ್ನು ನೋಡಿ ನನ್ನ ಹೃದಯವು ಕಳವಳಗೊಂಡಿತು. ಸರಕಾರಿ ಉದ್ಯೋಗವನ್ನು ಬಿಟ್ಟು ಹೊರಬೀಳೆಂದು ನನ್ನ ಮನೋದೇವತೆಯು ಅಗ್ಗಿ ನನಗೆ ಹೇಳಿತು" ಎಂದು ಬರೆದಿದ್ದಾರೆ.

## ಸತ್ಯಾಗ್ರಹಿಗಳಿಗೆ ಭಯಂಕರ ಗಾಯ

ಗುಜರಾಥ ಪ್ರಾಂತದ ವಿರಮಗಾಮದ ೮೦ ಸ್ತ್ರೀಪುರುಷರು ಉಪ್ಪನ್ನು ಸಂಗ್ರಹಿಸುವದಕ್ಕಾಗಿ ಶಹಾಪುರಕ್ಕೆ ಮೆರವಣಿಗೆಯಿಂದ ಹೋಗುತ್ತಿರುವಾಗ ಅಧಿಕಾರಿಗಳು ಅವರನ್ನು ಹಾದಿಯಲ್ಲಿ ತಡೆದು ಅವರನ್ನು ಥಳಿಸಿದರು. ಇಬ್ಬರು ಹೆಂಗಸರಿಗೆ ಭಯಂಕರ ಗಾಯಗಳಾಗಿವೆ.

## ಖಾದಿಗಾಗಿ ಉಪವಾಸ ವ್ರತ.

ಸೊಲ್ಲಾಪುರದ ರಾಷ್ಟ್ರಧ್ವಜದ ಸತ್ಯಾಗ್ರಹಿಯಾದ ಶ್ರೀ ಸಾಠೆಯವರು ತಮಗೆ ಸರಕಾರದವರು ಖಾದಿ ಬಟ್ಟೆಗಳನ್ನು ಕೊಡಲಿಲ್ಲವೆಂದು ತಿಳಿದು ಅನಶನ ವ್ರತವನ್ನು ಕೈಕೊಂಡಿರುವರು. ಇಂದಿಗೆ ೧೦ ದಿವಸಗಳಾದವು. ಮೊದಲು ಸ್ಥಾನಿಕ ಜೇಲಿನ ಅಧಿಕಾರಿಗಳು ಅವರ ಉಡುಪನ್ನೇ ಅವರಿಗೆ ಬಿಟ್ಟುಕೊಟ್ಟಿದ್ದರು. ಆದರೆ ಪ್ರಾಂತಿಕ ಸರಕಾರದವರು ಇದನ್ನು ಮಂಜೂರ ಮಾಡಲಿಲ್ಲ. ಆದ್ದರಿಂದ ಇಲ್ಲಿಯ ಅಧಿಕಾರಿಗಳು ಅವರ ಅಂಗಿಗಳನ್ನು ಕಸಿದುಕೊಳ್ಳಬೇಕಾಯಿತು. ಆದಕ್ಕಾಗಿ ಶ್ರೀ ಸಾಠೆಯವರು ಉಪವಾಸದ ಘೋರ ವ್ರತವನ್ನು ಕೈಕೊಂಡಿರುವರೆಂದು ತಿಳಿಯುತ್ತದೆ.

## ಹಿರೇಮಠ ಸಾಹೇಬರಿಗೆ

### ದೇಶಪಾಂಡೆ ಹಣಮಂತರಾಯರ ಉತ್ತರ

(ಮುಂದೆ ಸಾಗಿದ್ದು)

೨) ನೋಟೀಸಿನ ಎರಡನೆಯ ಪ್ಯಾರಾದಲ್ಲಿ ನಮೂದ ಮಾಡಿದ ಸಂಗತಿಗೆ ನಾನು ಪೂರ್ಣವಾಗಿ ಅಲ್ಲಗಳೆಯುವೆನು. ತಾ|| ೧—೪—೩೦ ಕ್ಕೆ ಗಲಗಲಿಯಲ್ಲಿ ಆದ ಸಭೆಯಲ್ಲಿ ನನ್ನ ರಾಜೀನಾಮೆ ಜಾಹೀರ ಮಾಡುವಕಾಲಕ್ಕೆ ಮಾತಾಡಿದ ಶಬ್ದಗಳು ಬಂದು ನಿಮ್ಮ ತಮ್ಮ ನೋಟೀಸಿನಲ್ಲಿ ರುವ ಭಿನ್ನ ಭಿನ್ನಾಯದ ಶಬ್ದಗಳು ಇದ್ದ ರಿ ಸಭೆಯಲ್ಲಿ ನಾನು ಮಾತ್ರ ನು ಡಾಡಿಲ್ಲ ಗೌಡ ಕುಲಕರ್ಣಿಯವರಿಗೆ ರಾಜೀನಾಮೆ ಕೊಡು ಅಂತ ಸಭೆಯಲ್ಲಿ ಗಲಿ ಮತ್ತು ಪ್ರಸಂಗದಲ್ಲಿಯಾಗಲಿ ಮಾತಾಡಿಲ್ಲ. ಈ ಸಂಗತಿಗಳ ನ್ನ ಲಿಂದ ನೊ ಡಲಾಗಿ ಭಿನ್ನ ಕೇಳಿಕೆಯಲ್ಲಿ ಬಂದ ಒಂದು ಸಂಗತಿಯು ನಿಜವೆಂಬುದಾಗಿ ದೃಢವಾಗುವದು. ಅದೆಂದರೆ:— ಸ್ವಾತಂತ್ರದಲ್ಲಿರುವ ಔಕಿಪ್ರೊಸ್ಟ ಪೋರಿರಾದು ಹಳ್ಳಿಗಳಲ್ಲಿ ಇಂಥಿಂಥಾ ವಿಷಯಗಳಲ್ಲಿ ಹೀಗೆ ಹೀಗೆಯೆ ರಿಪೋರ್ಟ ಕಳಿಸಿರಿ ಅಂತ ಪಕ್ಷಗಳ ಪಟೀಲರಿಗೆ ಒತ್ತಾಯ ಪಡಿಸಿದ ಸಂಗತಿ ನಿಜವೆಂಬುದಾಗಿ ಅನ್ನಬೇಕಾಗಿದೆ ನಾಟ್ಯದಲ್ಲಿ ಅಭಿನಯಿಸುವ ಪಾತ್ರಗಳನ್ನು ಗೊತ್ತುಪಡಿಸಿದಂತೆ ತಮ್ಮ ಬಳಿಗೆ ಬರುವ ರಿಪೋರ್ಟುಗಳ ಸಂಬಂಧವಿದ್ದು ಹೇಗೆ ಎಂಬ ಸಂಶಯ ಸ್ಥಾನ ವುಂಟಾಗಿದೆ. ಗಲಗಲಿಯಲ್ಲಿ ನಾನು ಆಡಿದ ಮಾತು ಸ್ವತಂತ್ರ ಮನ್ನು ಚಾಲು ಪರಿಸ್ಥಿತಿಗೆ ಮನಸಿಗೆ ಕತ್ರಿಕವಾಗಿ ಬಿಟ್ಟಂತೆ ಹೇಳ ಸಂದರ್ಭದಲ್ಲಿಯಷ್ಟೆ ಮಾತನಾಡಿದ್ದು ಇದ್ದು ಹೆಚ್ಚಿಗೇನೂ ಮಾತಾಡಿಲ್ಲ.

(೩) ತಮ್ಮ ನೋಟೀಸಿನ ಅವಧಿಯಲ್ಲಿ ನಾನು ನನ್ನ ರಾಜೀನಾಮೆ ಮರಳಿ ತೆಗೆದುಕೊಂಡಿದ್ದರೆ ನನ್ನ ಕಲಸವು ಸರಕಾರದ ಸಾಗಿ ಬಿನ್ ಕೊಟ್ಟಾಟ, ಈ ನೋಟೀಸಿನ ಪ್ರಸಂಗವೇ ಬರುತ್ತಿದ್ದಿಲ್ಲ. ಇದು ನನಗೆ ಪೂರ್ಣ ಖಾತ್ರಿಯಿದ್ದು, ಮತ್ತು ಈ ಹದ್ದಿನಸರಿಗಾದರೂ ಖಾತ್ರಿಯಾಯಿತು ಆ ಪ್ರಕಾರ ಒಮ್ಮೆ ಮ್ಮೆ ನನ್ನ ರಾಜೀನಾಮೆ ಮರಳಿ ತೆಗೆದುಕೊಳ್ಳಬಹುದೇ ನಂತ ನನ್ನ ಮನೋದೇವತೆಗೆ ಪ್ರಶ್ನೆ ಮಾಡುತ್ತ ಇದ್ದೆ ಆದರೆ ರಾಷ್ಟ್ರದ ವಿಭೂತಿಗಳು ಸೆರೆಮನೆಗಳಲ್ಲಿ ಇದ್ದದ್ದು ಜ್ಞಾಪಕಕ್ಕೆ ಬಂದ ಕೂಡಲೆ ಮತ್ತೆ ಆ ವಿಚಾರವು ವಾಯುವಾಗುತ್ತಿತ್ತು ಇದರ ಮೇಲಿಂದ ಸ್ವತಃ ಯಾವ ಪ್ರಜನ ಆಜ್ಞೆಯು ಬೇಡಿಕೆಯು ಮತ ಪ್ರದರ್ಶನವಾಗಲಿ ಪ್ರತ್ಯಕ್ಷ ಬೇಡಿಕೆಗಳಾಗಲಿ ಯಾವ ಕಾಲಕ್ಕೂ ಯಾವ ಕಡೆಗೂ ಗುಪ್ತವಾಗಲಾರದು. ನನ್ನ ರಾಜೀನಾಮಾದ ಸ್ವರೂಪವು ಇದೇ ಆಗಿದ್ದಿತ್ತದೆ.

ತಾವು ಹಾಜರಿರುವ ಸಂಗತಿ ನನ್ನ ರಾಜೀನಾಮಾದ ಪೂರ್ವದಲ್ಲಿ ಆದರೆ ನಮಗೆ ಮೇಲೆ ಇದು ನಾನು ನಮಗೂ ಇಲ್ಲ. ಮತ್ತು ನನ್ನ ಮೇಲಿನ ೩ ಗ್ರಾಮಗಳ ನೇಮಣೂಕಗಳು ವಹಿಸಲಾದ ಹಕ್ಕು ಕೋರ್ಟ ನಂತರ ಸರಕಾರ ಕಡೆಯಿಂದ ನೇಮಣೂಕ ಮಾಡಿದ್ದು ಇರುತ್ತವೆ. ಇಂಥ ನೇಮಣೂಕಿಗೆ ನನಗೆ ಬೇಕಾದಾಗ್ಗೆ ಮೋಕಳೀಕವಾಗುವಂತೆ ಬರುವದಾಗಿ ನನ್ನ ಮತ.

ಇವೆಲ್ಲ ಕಾರಣಗಳ ಮೂಲಕ ತಾವು ಹಾಜರಿರುವ ವತನ ಆಕ್ಟ ಕಲಮು ೫೬ ಪ್ರಕಾರ ಚಾರ್ಜ ಮಾಡಲಿಕ್ಕೆ ಬಾರದ ದಂತ ನನ್ನ ಅಭಿಪ್ರಾಯವಿದೆ. ತಾ|| ರವರಿಗೆ ಪ್ರತ್ಯುತ್ತರಲಿ

ಕ್ಯಾಂಪ ಬಾಗೇವಾಡಿ } (ಸಹಿ) ಎಚ್ ಆರ್. ದೇಶಪಾಂಡೆ
೭—೬—೧೯೩೦ }

(ಹಿರೇಮಠ ಸಾಹೇಬರು ಹಣಮಂತರಾಯರ ಮೇಲೆ ತೆಗೆದ ನೋಟೀಸದಲ್ಲಿ “ವತನ ಆಕ್ಟ ೫೮ ನೇ ಕಲಮು ಎಂದು ಮುದ್ರಣ ದೋಷದಿಂದ ಬಿದ್ದುದನ್ನು ವತನ ಆಕ್ಟ ೫೬ ನೇ ಕಲಮು ಎಂದು ಓದಿ ಕೊಳ್ಳಬೇಕು.)

---

### ವಿಜಾಪುರದಲ್ಲಿಯ ವರ್ತಕರ ಗೋಳು

ವಿಜಾಪುರದಲ್ಲಿ ಇರುವ ಇನ್‌ಕಮ್‌ಟ್ಯಾಕ್ಸ ಕಚೇರಿಯು ಪೇಟೆಯಿಂದ ದೂರದಲ್ಲಿ ಇರುವದರಿಂದ ಅಲ್ಲಿಯ ವರ್ತಕರಿಗೆ ಬಹಳ ತ್ರಾಸವಾಗುತ್ತದೆ ಕಾರಣ ತ್ರಾಸವನ್ನು ದೂರು ಮಾಡುವಂತೆ ಮೇಲಿನ ಅಧಿಕಾರಿಗಳಿಗೆ ಕೇಳಿಕೊಳ್ಳಬೇಕೆಂದು ವಿಜಾಪುರದಿಂದ ಓರ್ವರು ನಮಗೆ ಪತ್ರ ಬರೆದಿರುವರಲ್ಲದೆ ವಿಜಾಪುರದ ವರ್ತಕರೆಲ್ಲರೂ ಕೂಡಿ ಈ ಬಗ್ಗೆ ದೂರನ್ನು ಕಳಿಸಿಕೊಟ್ಟಲ್ಲಿ ಅದರ ಸಂಬಂಧವಾಗಿ ಯೋಗ್ಯ ಉಪಾಯಗಳನ್ನು ಕೈಕೊಳ್ಳುವದರಲ್ಲಿ ಬರುವದೆಂದೂ ಕರ್ನಾಟಕ ವ್ಯಾಪಾರ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

---

ಬರುವರು! ಬರುವರು!!

ಶ್ರೀ ಮಹಾಲಕ್ಷ್ಮೀ ಪ್ರಸಾದಿತ
ಶಿರಹಟ್ಟಿ ನಾಟಕ ಮಂಡಳಿಯವರು
ಶಿವಾನಂದ ನಾಟಕ ಶಾಲೆಯಲ್ಲಿ

# ಬೇಗನೆ ಬರುವರು

ಮತ್ತು ಲೋಕಪ್ರಿಯವಾದ
ತಮ್ಮ ಹೊಸ ನಾಟಕಗಳನ್ನು ಅಭಿನಯಿಸುವರು.

ಎಚ್, ವೆಂಕೋಬರಾವ.
ಪ್ರೊಪ್ರಾಯಿಟರ

---

ಜಯಲಕ್ಷ್ಮೀ ಪ್ರಸಾದಿತ
ಶ್ರೀ ಮಿತ್ರ ಸಂಗೀತ ನಾಟಕ ಮಂಡಳಿ ದಾವಣಗೇರಿ ಇವರು
ಬಾಗಲಕೋಟೆ ರಾಜ ಥಿಯೇಟರಿನಲ್ಲಿ
ಸೋಮವಾರ ತಾ|| ೧೬-೬-೩೦
ಲಂಕಾದಹನ.
ಎಂಬ ಹೊಸ ಆಖ್ಯಾನವನ್ನು ಪ್ರಯೋಗಿಸುವರು.
ವ್ಯವಸ್ಥಾಪಕ.

ಈ ಪತ್ರಿಕೆಯು ಬಸವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರಿ. ನಂ ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

# ಕನ್ನಡಿಗ

ಜಯ ಕರ್ನಾಟಕ

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಸೋಮವಾರ ಮಿತಿ ಜ್ಯೇಷ್ಠ ಬಹುಳ ೫ ಶಕೆ ೧೮೫೨ ತಾ|| ೧೬—೬—೩೦ ಸಂಚಿಕೆ ೭೬

## ರಾಷ್ಟ್ರಧ್ವಜಕ್ಕೆ ವಿಜಯ

ಮದ್ರಾಸ ಇಲಾಖೆಯಲ್ಲಿರುವ ಕರವಡಿಯಲ್ಲಿ ಕೆಲವರು ಒಂದು ಗಿಡದ ಮೇಲೆ ರಾಷ್ಟ್ರಧ್ವಜವನ್ನೇರಿಸಿದರು. ಸ್ವಲ್ಪ ಹೊತ್ತಿನಮೇಲೆ ಪೋಲೀಸರು ಅದನ್ನು ಕಿತ್ತಲು ಅಲ್ಲಿಗೆ ಹೋದರು. ಆ ಸಮಯಕ್ಕೆ ಅಲ್ಲಿ ನಿಂತಿದ್ದ ಸ್ತ್ರೀಯರು ಪೋಲೀಸರಿಗೆ ಅಡ್ಡಿ ಮಾಡಿದರು. ಒಳಿತ ಪೋಲೀಸರ ತಿರುಗಿ ಹೋಗಿ ಸರ್ಕಲ್ ಇನಸ್ಪೆಕ್ಟರರನ್ನು ಮತ್ತು ಸಶಸ್ತ್ರ ಪೋಲೀಸರನ್ನು ಕರೆದುಕೊಂಡು ಹೋದರು. ಸರ್ಕಲ್ ಇನಸ್ಪೆಕ್ಟರರು ರಾಷ್ಟ್ರಧ್ವಜವನ್ನು ಕಿತ್ತಿಕೊಂಡು ಮತ್ತು ಅಲ್ಲಿಂದ ಚದುರಿಹೋಗಲೂ ನೆರೆದವರನ್ನು ಕೇಳಿಕೊಂಡರು. ನೆರೆದವರು ಅದಕ್ಕೆ ಒಪ್ಪದೆ ಗಿಡದ ಸುತ್ತಲು ಕಾವಲನ್ನು ಇರಿಸಿಕೊಂಡು ಅಲ್ಲಿಯೆ ನಿಂತರು. ಕೊನೆಯಲ್ಲಿ ಅಧಿಕಾರಿಗಳೇ ಬೇಸತ್ತು ತಿರುಗಿ ಹೋದರು.

## ಅಲ್ಲಲ್ಲಿಯ ಶಿಕ್ಷೆಗಳು.

ಅಮೃತಸರ ಯುದ್ಧ ಮಂಡಳದ ಅಧಿಕಾರಿಗಳಾದ ಶ್ರೀ ಕರಮಸಿಂಗರಿಗೆ ರಾಜದ್ರೋಹಾತ್ಮಕ ಭಾಷಣಗಳನ್ನು ಮಾಡಿದಕ್ಕಾಗಿ ೧ ವರ್ಷ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಮದ್ರಾಸ ಇಲಾಖೆಯಲ್ಲಿಯ ಭೀಮಾವರದ ಕಾಂಗ್ರೆಸ ಕೆಲಸಗಾರರಾದ ಶ್ರೀಮತಿ ಕಾಶಮ್ಮ ಎಂಬ ೬೫ ವರ್ಷದ ಮುದುಕಿಗೆ ಕ್ರಿ. ಪ್ರೊ. ಕೋಡಿನ ೧೮೮ ನೆಯ ಕಲಮಿನ ಅನ್ವಯ ೬ ತಿಂಗಳ ಶಿಕ್ಷೆಯಾಗಿದೆ.

ಕೋಕೋನ ಡದ ಕ್ಯಾಪ್ಟನ್ ಕೃಷ್ಣಮೂರ್ತಿಯವರಿಗೆ ತಾ|| ೯೦ ನೆಯ ದಿವಸ ೨ ವರ್ಷಗಳ ಸಶ್ರಮ ಶಿಕ್ಷೆಯು ಆಯಿತು.

ಪೋಲೀಸರಿಗೆ ಸಾಮಾನುಗಳನ್ನು ಕೊಡದ್ದಕ್ಕಾಗಿ ಒಬ್ಬರನ್ನು, ಸತ್ಯಾಗ್ರಹಿಗಳನ್ನು ಮನೆಯಲ್ಲಿ ಇಳಿಸಿಕೊಂಡದ್ದಕ್ಕಾಗಿ ಒಬ್ಬರನ್ನು ಹೀಗೆ ಇಬ್ಬರು ವ್ಯಾಪಾರಿಗಳನ್ನು ಕರವಾಡಿಯಲ್ಲಿ ಸೆರೆಹಿಡಿದಿರುವರು.

ಕೆಲವು ದಿನಗಳ ಹಿಂದೆ ಪುಣೆಯಿಂದ ಕೊಲ್ಲಾಪುರಕ್ಕೆ ರಾಷ್ಟ್ರಧ್ವಜ ಸಹಿತವಾಗಿ ಹೋದ ಸತ್ಯಾಗ್ರಹಿಗಳ ಮುಖಂಡರಾದ ಶ್ರೀ. ಏಂದೂಟಿಯವರಿಗೆ ೧ ವರ್ಷದ ಸಶ್ರಮಶಿಕ್ಷೆಯನ್ನು ಅಲ್ಲಿಯ ಅಧಿಕಾರಿಗಳು ವಿಧಿಸುವರೆಂದು ತಿಳಿಯುತ್ತದೆ.

ಉತ್ಕಲ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶ್ರೀ ನೀಲಕಂಠದಾಸರಿಗೆ ಉಪ್ಪಿನ ಕಟ್ಟಳೆಯ ೯ ನೆಯ ಕಲಮಿನ ಅನ್ವಯ ೬ ತಿಂಗಳ ಸಾದಾ ಶಿಕ್ಷೆ ಮತ್ತು ೫೦ ರೂ. ದಂಡ, ದಂಡವನ್ನು ಕೊಡದಿದ್ದಲ್ಲಿ ಮತ್ತೆ ೧ ತಿಂಗಳ ಶಿಕ್ಷೆಯಾಗಿದೆ. "ಅ" ವರ್ಗದ ಸೆರೆಯಾಳುಗಳಾಗಿ ತಿಳಿಯಲ್ಪಡುವರು.

## ಕೆಲವು ಹುಡುಗರ ತಪ್ಪು.

ಮಹಾತ್ಮರ ಸಧ್ಯದ ಚಳವಳಿಯು ಅಹಿಂಸಾತ್ಮಕವಾದದ್ದು. ಮನೋವಾಕ್ಕಾಯಗಳಿಂದ ಈ ಅಹಿಂಸಾವ್ರತವನ್ನು ಆಚರಿಸಬೇಕಾಗಿದೆ. ಹೀಗಿದ್ದರೂ ಕೆಲವು ಹುಡುಗರು ತಮ್ಮ ಅಲ್ಪ ಬುದ್ಧಿಗೆ ಅನುಸರಿಸಿ ಈ ತತ್ವಕ್ಕೆ ವಿರುದ್ಧವಾಗಿ ಆಚರಣೆ ಮಾಡುವರೆಂದು ಕಂಡು ಬರಹತ್ತಿದೆ. ಇದು ಹುಡುಗರ ಶುದ್ಧ ತಪ್ಪು. ತಾವು ಹುಡುಗರಾದರೂ ಅವರು ಉರಟ ಆಚರಣೆಗಳಿಂದ ತತ್ವಕ್ಕೆ ಕಳಂಕ ತರುವ ಸಂಭವವುಂಟು ಇಲಿಗೆ ಬಡಿಯುವದರಲ್ಲಿ ಗಣಪ್ಪನಿಗೆ ಪೆಟ್ಟು ತಗಲಿತು ಎಂಬಂತೆ, ಮಹಾತ್ಮರ ಅಹಿಂಸಾತ್ಮಧರ್ಮಯುದ್ಧದ ತತ್ವಗಳಿಗೆ ಯಾವ ಬಗೆಯ ಕುಂದುಗಳನ್ನೂ ತಂದು ಕೊಡುವ ಆಚರಣೆಯನ್ನು ಯಾರೂ ಮಾಡಬಾರದಾಗಿ ನಮ್ಮ ಕಳಕಳಿಯ ಉಪದೇಶವಿರುತ್ತದೆ.— : ಸಂಪಾದಕ.

## ಸಂಪಾದಕರ ವಿನಂತಿ

"ಕನ್ನಡಿಗ" ವೃತ್ತ ಪತ್ರಕ್ಕೆ ಸುದ್ದಿ, ಸಮಾಚಾರ ಲೇಖ ಮೊದಲಾದವುಗಳನ್ನು ಕಳಿಸುವವರ, ಅವುಗಳನ್ನು "ಸಂಪಾದಕರು, ಕನ್ನಡಿಗ" ಈ ವಿಳಾಸಕ್ಕೆ ಕಳಿಸಬೇಕಾಗಿಯೂ ಮತ್ತು "ಕನ್ನಡಿಗ" ನಿಗಾಗಿ ಹಣ, ಜಾಹೀರಾತು, ಮೊದಲಾದವುಗಳನ್ನು ಕಳಿಸುವವರು ಅವುಗಳನ್ನು ವ್ಯವಸ್ಥಾಪಕರು, ಕನ್ನಡಿಗ ಕಾರ್ಯಾಲಯ" ಈ ವಿಳಾಸಕ್ಕೆ ಕಳಿಸಬೇಕಾಗಿಯೂ ವಿನಂತಿ.

## ಸುರತದಲ್ಲಿ ಸಾಯಮನ್ ವರದಿಗೆ ಬೆಂಕಿ ಹಚ್ಚಿದರು

ಸುರತದಲ್ಲಿ ಜನರು ಬೊಕ್ಕತಲೆಯಿಂದ ಮತ್ತು ಕೈಯ್ಯಲ್ಲಿ ಕರೇ ನಿಶಾನೆಗಳನ್ನು ಹಿಡಿದುಕೊಂಡು ಸಾಯಮನ್ ವರದಿ ಹಾಗು ಸಾಯಮನ್ ಗೊಂಬೆಯ ಮೆರವಣಿಗೆಯನ್ನು ತೆಗೆದು ತಾಪೀ ನದಿಯ ದಂಡೆಗೆ ಹೋಗಿ ಅಲ್ಲಿ ಅವುಗಳನ್ನು ಸುಟ್ಟು ಸ್ನಾನಮಾಡಿ ತಿರುಗಿ ಮನೆಗೆ ಬಂದರು.

## ಬೆಳಗಾವಿಯ ಅಧಿಕಾರಿಗಳು ಗಾಬರಿಗೊಂಡರು

ಬೆಳಗಾವಿ ಜಿಲ್ಲೆಯಲ್ಲಿ ಸಿಂದೀ ಗಿಡಗಳು ಬಹಳವಾಗಿ ಕಡಿಯಲ್ಪಡುತ್ತಿರುವದನ್ನು ಕಂಡು ಬೆಳಗಾವಿಯ ಡಿ| ಮ್ಯಾಜಿಸ್ಟ್ರೇಟರು ಗಾಬರಿಗೊಂಡು ಈ ಕೆಳಗಿನ ಕಟ್ಟಪ್ಪಣೆಯನ್ನು ತೆಗೆದಿದ್ದಾರೆ:— "ಇನ್ನು ಮುಂದೆ ಸಿಂದೀ ಗಿಡಗಳನ್ನು ಯಾವದಾದರೂ ಊರವರು ನಾಶಪಡಿಸಿದರೆ ಆ ಬಗ್ಗೆ ಆದ ಹಾನಿಯನ್ನು ಡಿಸ್ಟ್ರಿಕ್ಟ ಪೋಲೀಸ ಆಕ್ಟ ಕಲಮು ೧೫ (ಅ) ಪ್ರಕಾರ ಪೆ| ಕಲೇಕ್ಟರ ಸಾಹೇಬ ಬಹಾದ್ದೂರರವರು ಊರವರ ಮೇಲೆ ಹೆಚ್ಚಿನ ಕರ ಕೂಡಿಸಿ ವಸೂಲ ಮಾಡುವರು.

## ಹಿಂದುಸ್ಥಾನಕ್ಕೆ ೪೦ ಸಾವಿರ ಇಂಗ್ಲೀಷ ಜನರ ಸೈನ್ಯವು ಬರುವದಂತೆ!

ಮುಂಬಯಿಯಲ್ಲಿ ಮಹಾತ್ಮಾ ಗಾಂಧಿಯವರ ದಿನದ ನಿಮಿತ್ತವಾಗಿ ನೆರೆದ ಸಭೆಯಲ್ಲಿ ಭಾಷಣ ಮಾಡುವಾಗ ಪಂಡಿತ ಮದನಮೋಹನ ಮಾಲವೀಯಾ ಅವರು "ಹಿಂದುಸ್ಥಾನದಲ್ಲಿಯ ಚಳವಳಿಯನ್ನು ಮುರಿಯುವದಕ್ಕಾಗಿ ಇಂಗ್ಲಂಡದಿಂದ ೪೦ ಸಾವಿರ ಇಂಗ್ಲೀಷ ಜನರ ಸೈನ್ಯವು ಹಿಂದುಸ್ಥಾನಕ್ಕೆ ಬರುವದಿದ್ದು, ಅದರಲ್ಲಿ ಈಗಾಗಲೇ ಅರ್ಧ ಸೈನ್ಯವು ಹಿಂದುಸ್ಥಾನಕ್ಕೆ ಬಂದು ಇಳಿದಿದೆಯಾಗಿ ತಿಳಿಯುತ್ತಿದೆ." ಎಂದು ಹೇಳಿದರು,

## ಮಂಗಳೂರಿನ ಶ್ರೀ ನಾರಾಯಣ ಕಿಲ್ಲೆಯನ್ನು ಸೆರೆ ಹಿಡಿದರು

ಮಂಗಳೂರ ಜಿಲ್ಲೆಯಲ್ಲಿ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಕುರಿತು ಜನರಲ್ಲಿ ಜಾಗೃತಿಯನ್ನು ಹುಟ್ಟಿಸುತ್ತಿದ್ದ ಶ್ರೀ ನಾರಾಯಣ ಕಿಲ್ಲೆಯನ್ನು ರಾಜದ್ರೋಹಕ್ಕಾಗಿ ಒಂದುವಾರದಲ್ಲಿ ತಾ|| ೧೦ ನೆಯ ದಿನ ಸೆರೆ ಹಿಡಿದು ಮಂಗಳೂರಿಗೆ ಒಯ್ದಿರುತ್ತಾರೆ

## ಗಾಮನಗಟ್ಟಿಯಲ್ಲಿ ೧೨೦೦ ಸಿಂದೀ ಗಿಡಗಳ ಸಂಹಾರ

## ಒಬ್ಬನೇ ೨೦ ಗಿಡಗಳನ್ನು ಕಡಿದನು.

ಹುಬ್ಬಳ್ಳಿ ತಾಲೂಕಿನಲ್ಲಿ ಗಾಮನಗಟ್ಟಿಯೆಂಬುವದೊಂದು ಇನಾಮ ಗ್ರಾಮವಿದೆ. ಅಲ್ಲಿ ನಾಲ್ಕು ಸಾವಿರ ಸಿಂದೀಗಿಡಗಳುಂಟು. ಧಾರವಾಡದ ವಿಶ್ರಮ ಕಥಕದವರು ಅಲ್ಲಿಗೆ ಹೋಗಿ ಮೂರು ದಿವಸಗಳ ವರೆಗೆ ಪ್ರಚಾರ ಮಾಡಿ ಕೆಲವು ಸಿಂದೀ ಗಿಡಗಳನ್ನು ಕಡಿದರು. ಶ್ರೀ ಶಿವಯ್ಯ ಹಿರೇಮಠನೆಂಬ ಸತ್ಯಾಗ್ರಹಿಯು ಒಂದೇ ತಾಸಿನಲ್ಲಿ ೨೦ ಗಿಡಗಳನ್ನು ಉರುಳಿಸಿದನು. ಸಾಯಂಕಾಲದಲ್ಲಿ ಶ್ರೀ ಜೋಂದ್ರೆ, ಬೆಳಗಾವ, ಮುದವೀಡು, ಭಿಸೆ ಮೊದಲಾದವರ ವ್ಯಾಖ್ಯಾನಗಳಾದವು. ಅಲ್ಲಿಂದ ಅವರು ಅಮರಗೋಳಕ್ಕೆ ಹೋಗಿ ಹುಬ್ಬಳ್ಳಿಯ ಶ್ರೀ ಕೆಂಪಣ್ಣನವರ, ಕರಿಗುದರಿ, ಗೋಳಕೇರಿಯವರೊಡನೆ ಅಲ್ಲಿ ಕೆಲವು ಸಿಂದೀ ಗಿಡಗಳನ್ನು ಕಡಿದರು ಒಟ್ಟಿಗೆ ೧೨೦೦ ಸಿಂದೀ ಗಿಡಗಳು ಈಗ ನಾಶ ಮಾಡಲ್ಪಟ್ಟಿವೆ. ಊರಿನ ರೈತರೂ ಈಗ ಸಿಂದೀ ಗಿಡಗಳನ್ನು ಕಡಿಯಲಿಕ್ಕೆ ಹತ್ತಿದ್ದು ಎಲ್ಲ ಗಿಡಗಳೂ ಈ ವಾರದಲ್ಲಿಯೇ ನಾಶವಾಗುವವು.

## ಶ್ರೀ ಚಿಕ್ಕೋಡಿಯವರಿಗೆ ಇಳಕಲ್ಲಿನ ಲಿಂಗಾಯತ ಸಮಾಜದ ವಿರೋಧ

ತಾ|| ೧೦ ನೆಯ ದಿನ ಇಲಕಲ್ಲಿನಲ್ಲಿ ಲಿಂಗಾಯತ ಸಮಾಜದ ಸಭೆಯು ಸುಪ್ರಸಿದ್ಧ ಮುಂದಾಳುಗಳಾದ ಶ್ರೀ ರುದ್ರಪ್ಪಣ್ಣ ಕಂಠಿ ಇವರ ಅಧ್ಯಕ್ಷತೆಯಲ್ಲಿ ಸೇರಿತ್ತು, ಕೆಳಗಿನ ಗೊತ್ತು ಸರ್ವಾನುಮತದಿಂದ ಸ್ವೀಕೃತವಾಯಿತು

೧, ಶ್ರೀ ಸಂಡಿಕಪ್ಪ ಚಿಕ್ಕೋಡಿಯವರು ನಮ್ಮ ಲಿಂಗಾಯತ ಸಮಾಜದ ಮುಖಂಡರಲ್ಲ, ಅವರು ಕಮೀಶನರ ಸಾಹೇಬ ದಕ್ಷಿಣಭಾಗ ಇವರ ಮುಂದೆ "ಲಿಂಗಾಯತ ಸಮಾಜವು ಮಹಾತ್ಮಾ ಗಾಂಧಿಯವರ ಸ್ವರಾಜ್ಯ ಚಳವಳಿಗೆ ವಿರುದ್ಧವಿರುತ್ತದೆಂ" ದು ಮಾಡಿದ ವಿಧಾನವು ತೀರ ತಪ್ಪು ಮತ್ತು ಅನಧಿಕಾರದಿಂದ ಮಾಡಿದ್ದು ಇರುತ್ತದೆ. ಕಾರಣ ಅವರ ವಿಧಾನವನ್ನು ಈ ಸಭೆಯು ಸಂಪೂರ್ಣ ನಿಷೇಧಿಸುತ್ತದೆ. ಮತ್ತು ಮಹಾತ್ಮರು ಕೈಕೊಂಡ ದೇಶೋದ್ಧಾರದ ಈ ಕೆಲಸಕ್ಕೆ ನಮ್ಮ ಲಿಂಗಾಯತ ಸಮಾಜದ ಪೂರ್ಣ ಬೆಂಬಲವಿರುತ್ತದೆ,

## ಎಚ್ಚರಿಕೆ,

ಇಲ್ಲಿಯ ಶೀವಜಿ ಪದಮುಸಿ ಎಂಬ ಹೆಸರಿನ ತರುಣನು ಊರೂರಿಗೆ ಹೋಗಿ ಸತ್ಯಾಗ್ರಹ ನಿಧಿಗಾಗಿ ಹಣವನ್ನು ಎತ್ತುತ್ತಿರುವನೆಂದು ತಿಳಿದು ಬಂದಿದೆ, ಅವನಿಗೆ ಹೀಗೆ ಮಾಡಲು ಸತ್ಯಾಗ್ರಹದ ಮಂಡಳದವರು ಯಾವ ಅಧಿಕಾರವನ್ನೂ ಕೊಟ್ಟಿರುವದಿಲ್ಲವಾದುದರಿಂದ ಜನರು ಅವನ ಕೈಯಲ್ಲಿ ಹಣ ಕೊಡಬಾರದಾಗಿ ಈ ಮೂಲಕ ಎಚ್ಚರಿಕೆ ಕೊಟ್ಟಿದೆ,

ಬಾಗಲಕೋಟೆ
ತಾ| ೧೬-೬-೧೯೩೦

ಕಾರ್ಯದರ್ಶಿ
ಸತ್ಯಾಗ್ರಹ ಮಂಡಳ
ಜಿಲ್ಲಾ ವಿಜಾಪೂರ

## ಹಿಂದೀ ವರ್ತಕರ ಸಂಘದ ನಿರ್ಧಾರ

ಮಹಾತ್ಮಾ ಗಾಂಧಿಯವರನ್ನು ಸೆರೆಯಿಂದ ಬಿಡುವವರೆಗೆ ಮತ್ತು ರಾಷ್ಟ್ರೀಯ ಬೇಡಿಕೆಗಳ ಬಗ್ಗೆ ಸಮಾಧಾನಕರವಾದ ಆಶ್ವಾಸನವು ಸಿಗುವ ವರೆಗೆ ಹಿಂದೀ ವರ್ತಕ ಸಂಘದ ಪರವಾಗಿ ಮಧ್ಯ ಹಾಗು ಪ್ರಾಂತಿಕ ಕಾಯಿದೆ ಮಂಡಳಗಳಿಗೆ ಸಭಾಸದರನ್ನು ಕಳಿಸಬಾರದೆಂಬುದನ್ನು ನಿರ್ಧರಿಸಲು ಹಿಂದೀ ವರ್ತಕ ಸಂಘದ ಸಾಧಾರಣ ಸಭೆಯು ತಾ| ೨೫ಕ್ಕೆ ಕೂಡ ತಕ್ಕದ್ದಿದೆ,

## ಬಂಡೀ ಗಾಲಿಯ ಪರಿಷತ್ತಿಗೆ

### ಬಿಜೆಂಟಮ್ಮನವರು ಹೋಗುವರು

ನಾ| ಶ್ರೀನಿವಾಸಶಾಸ್ತ್ರಿ, ಶ್ರೀ ಎನ್. ಎಮ್ ಜೋಶಿ, ಹಾಗೂ ಮ್ಯಾನಿಬಿಜೆಂಟ ಈ ಮೂವರಿಗೆ ಬಂಡೀಗಾಲಿಯ ಪರಿಷತ್ತಿನ ಆಮಂತ್ರಣಗಳು ಹೋಗಿವೆ. ಸಭೆಯಲ್ಲಿ ವಸಾಹತಿ ಸ್ವರಾಜ್ಯದ ವಿಷಯವಾಗಿ ಚರ್ಚೆಯಾಗುತ್ತಿದ್ದರೆ, ಮಾತ್ರ ತಾವು ಪರಿಷತ್ತಿಗೆ ಬರುವೆವಾಗಿ ಬಿಜೆಂಟಮ್ಮನವರು ತಿಳಿಸಿದ್ದಾರೆ. ನೆಹರು ವರದಿಯನ್ನಾದರೂ ಪರಿಷತ್ತಿನವರು ವಿಚಾರಿಸಬೇಕಾಗಿ ತಿಳಿಸಿದ್ದಾರೆ.

ಮುಂಬಯಿ ನಗರ ಮತ್ತು ೫ ಜಿಲ್ಲೆಗಳಲ್ಲಿ

# ಹೊಸ ಕಾನೂನುಗಳ ಬಳಕೆ

## ಮುಂಬಯಿಗೆ ಸೈನಿಕರ ಆಗಮನ

ಭಯ ಹಾಕುವದನ್ನೂ, ಸಿಂದೀ ಅಂಗಡಿಗಳ ಪಿಕೆಟಿಂಗ ಹಾಗು ಪರದೇಶಿ ಬಟ್ಟೆಯ ಬಹಿಷ್ಕಾರ ಇವುಗಳನ್ನೂ ತಡೆಯುವದಕ್ಕಾಗಿ ವ್ಹಾಯಿಸರಾಯರು ಹೊರಡಿಸಿದ ಹೊಸ ಕಾನೂನುಗಳು ಮುಂಬಯಿ ನಗರ ಹಾಗು ಗುಜರಾಥದೊಳಗಿನ ಅಹಮ್ಮದಾಬಾದ, ಕೈರಾ, ಭಡೋಚ, ಸೂರತ ಮತ್ತು ಪಂಚಮಹಾಲ ಈ ಜಿಲ್ಲೆಗಳಲ್ಲಿ ಬಳಕೆಯಲ್ಲಿ ಬರುವವು. ಇದಲ್ಲದೆ ಭಯ ಹಾಕುವದರ ವಿರುದ್ಧವಾಗಿ ಹೊರಡಿಸಿದ ಕಾನೂನು ಪೂರ್ವ ಖಾನದೇಶದ ಪರೋಲಾ ಮತ್ತು ಜಾಮನೇರ ತಾಲೂಕಗಳಲ್ಲಿಯೂ ಉಪಯೋಗಿಸಲ್ಪಡುವದು. ಪುಣೆ ಮತ್ತು ಸಿಕಂದರಾಬಾದದಿಂದ ಸೈನಿಕರ ತುಕಡಿಗಳು ಮುಂಬಯಿಗೆ ಬಂದಿವೆ.

---

## ಪಂ. ಮಾಲವೀಯರಿಗೆ ಗೆಲವು.

### ಪೇಶಾವರಕ್ಕೆ ಹೋಗಲು ಅಪ್ಪಣೆಯು ಸಿಕ್ಕಿತು

ವಾಯವ್ಯ ಸರಹದ್ದಿನ ಪ್ರಾಂತದಲ್ಲಿ ಕಾಲಿಡಕೂಡದಾಗಿ ಪಂಡಿತ ಮದನ ಮೋಹನ ಮಾಲವೀಯಾ ಇವರ ಮೇಲೆ ಚೀಫ ಕಮಿಶನರರು ಕಟ್ಟಪ್ಪಣೆಯನ್ನು ಹೊರಡಿಸಿದ್ದರಷ್ಟೆ. ಆದರೆ ಈಗ ಅವರಿಗೆ ಪೇಶಾವರದಲ್ಲಿ ಕಾಲಿಡಲು ಅಪ್ಪಣೆಯು ದೊರೆತಿದೆಯಾಗಿ ತಿಳಿಯುತ್ತದೆ.

### ಕಲಕತ್ತಾ ಕಾಂಗ್ರೆಸ ಕಚೇರಿಯನ್ನು ಮುತ್ತಿದರು

ತಾ|| ೧೨ ನೆಯ ದಿವಸ ಪೋಲೀಸರು ಕಲಕತ್ತೆಯ ಕಾಂಗ್ರೆಸ ಕಚೇರಿಯನ್ನು ಮುತ್ತಿ ಇಬ್ಬರನ್ನು ಸೆರೆಹಿಡಿದುಕೊಂಡು ಹೋದರು.

### ಮಿಸ್ ಸ್ಲೇಡರು ಸೋಲಾಪುರಕ್ಕೆ ಹೋದರು

ಮಹಾತ್ಮಾ ಗಾಂಧಿಯವರ ಸಾಬರಮತಿ ಆಶ್ರಮದಲ್ಲಿರುವ ಶ್ರೀಮತಿ ಮೀರಾಬೇನರು (ಮಿಸ್ ಸ್ಲೇಡರು), ಸೋಲಾಪುರದಲ್ಲಿ ದಂಡಿನವರು ನಡಿಸಿದ ದುಂಡಾಟಿಕೆಗೆ ತುತ್ತಾದ ಹೆಂಗಸರ ಕಷ್ಟನಷ್ಟಗಳನ್ನು ವಿಚಾರಿಸಲು ಸೋಲಾಪುರಕ್ಕೆ ಹೋಗಿದ್ದಾರೆ.

### ಕೋಯಿಮುತ್ತೂರಿನಲ್ಲಿ ರಾಜದ್ರೋಹ

ತಾ|| ೧೧ ನೆಯ ದಿವಸ ಕೋಯಿಮುತ್ತೂರಿನಲ್ಲಿ ಸಾರ್ವಜನಿಕ ಸಭೆಯು ಸೇರಿತ್ತು. ಪ್ರಸಿದ್ಧ ವಕೀಲರಾದ ಶ್ರೀಯುತ ಬಾಳಾಜಿರಾಯರು ರಾಜದ್ರೋಹಾತ್ಮಕ ಗ್ರಂಥವಾದ 'ಇಂಡಿಯಾ ಇನ್ ಬೊಂಡೇಜ'ದೊಳಗಿನ ಕೆಲವು ಅವತರಣಿಕೆಗಳನ್ನು ಓದಿದರು. ಪೋಲೀಸರು ಅಲ್ಲಿಗೆ ಹೋಗಿ ಆ ಗ್ರಂಥವನ್ನು ಕಸಿದುಕೊಂಡು ಹೋದರು.

## ಆಯರಿಶ್ ಸ್ತ್ರೀಯಳ ಮನೋಧೈರ್ಯ

### ಹಿಂದುಸ್ಥಾನದ ಹಿತಕ್ಕಾಗಿ ದುಃಖಗಳನ್ನಾದರೂ ಅನುಭವಿಸುವೆ!

ಆಯರ್ಲಂಡದಿಂದ ಲಂಡನ್ನಕ್ಕೆ ಹೋದ ಆಯರಿಶ್ ಸ್ತ್ರೀಯಾದ ಫೆಲೋಜಫಸ ಬ್ರಿಟನ್ ಇವರು ಹಾದಿಯಲ್ಲಿ ಅಸಭ್ಯ ರೀತಿಯಿಂದ ವರ್ತಿಸಿದರೆಂಬ ಆರೋಪವನ್ನು ಪೋಲೀಸರು ಅವರ ಮೇಲೆ ಹೊರಿಸಿ ಖಟ್ಲೆಯನ್ನು ಹಾಕಿದರು. ಅವರು ಟೆಲಿಫೋನ ಪೆಟ್ಟಿಗೆಯಲ್ಲಿ "ಹಿಂದುಸ್ಥಾನಕ್ಕೆ ಸ್ವರಾಜ್ಯ" ಎಂಬ ಕಾರ್ಡುಗಳನ್ನು ಇಡುತ್ತಿದ್ದರು. ಎಷ್ಟೋ ಜನರು ಆ ಟೆಲಿಫೋನನ್ನು ಉಪಯೋಗಿಸಲು ಅಲ್ಲಿ ನಿಂತಿದ್ದರು. ಮೂರು ಜನರು ಅವುಗಳನ್ನು ಹರಿದರು. ಅವರು ಆ ಪೆಟ್ಟಿಗೆಯನ್ನು ಕೊಡಲು ಒಪ್ಪಲಿಲ್ಲ. ಆದುದರಿಂದ ಅವರನ್ನು ಸೆರೆಹಿಡಿಯಬೇಕಾಯಿತು, ಎಂದು ಒಬ್ಬ ಪೋಲೀಸನು ವಿಚಾರಣೆಯ ಕಾಲಕ್ಕೆ ಹೇಳಿದನು. ಆಯರಿಶ್ ವಿದುಷಿಯು ಮ್ಯಾಜಿಸ್ಟ್ರೇಟರಿಗೆ "ಹಿಂದುಸ್ಥಾನದಲ್ಲಿ ಈಗ ಅಸಂತೋಷವು ಹೆಚ್ಚಾಗಿದೆ. ಹಿಂದುಸ್ಥಾನದ ಹಿತಕ್ಕಾಗಿ ನಮ್ಮ ಸ್ವಾತಂತ್ರ್ಯವನ್ನಾದರೂ ಕಳೆದುಕೊಳ್ಳಲು ನಾವು ಸಿದ್ಧರಿರುವೆವು. ಹಿಂದುಸ್ಥಾನಕ್ಕೆ ವಸಾಹತಿ ಸ್ವರಾಜ್ಯವನ್ನು ಸಂಪಾದಿಸಿಕೊಡುವ ಪ್ರಯತ್ನದಲ್ಲಿ ನನಗೆ ಯಾವ ಶಿಕ್ಷೆಯಾದರೂ ಚಿಂತೆಯಿಲ್ಲ. ಅದನ್ನು ಅನುಭವಿಸಲು ನಾನು ಸಿದ್ಧಳಿದ್ದೇನೆ" ಎಂದು ಹೇಳಿದರು. ಮ್ಯಾಜಿಸ್ಟ್ರೇಟರು ಆ ಮೇಲೆ ಶಾಂತತೆಯನ್ನು ಕಾಯುವೆನೆಂದು ಹೊಣೆಯನ್ನು ಕೊಡಲು ಕೇಳಿಕೊಂಡರು. ಅದಕ್ಕೆ ಆ ವಿದುಷಿಯು— "ನಾನು ಹೊಣೆಯನ್ನು ಕೊಡಲು ಇಚ್ಛಿಸುವದಿಲ್ಲ. ಹಿಂದುಸ್ಥಾನಕ್ಕೆ ಸ್ವತಂತ್ರತೆಯು ಸಿಗುವವರೆಗೆ ಶಾಂತತೆಯಿಂದ ಇರುವದು ನನ್ನಿಂದ ಆಗದು." ಎಂದು ಉತ್ತರ ಕೊಟ್ಟರು. ಬಳಿಕ ಮ್ಯಾಜಿಸ್ಟ್ರೇಟರು ಅವರನ್ನು ಸೆರೆಯಲ್ಲಿಟ್ಟರು.

### ಸರಕಾರಿ ಉದ್ಯೋಗಸ್ಥನು ರಾಜೀನಾಮೆ ಕೊಟ್ಟನು

ಮುಂಬಯಿಯ ಹೌಸಿಂಗ ಮತ್ತು [illegible] ಭಾಗದ ಎಕ್ಸಿಕ್ಯೂಟಿವ್ ಇಂಜನಿಯರ ಕಚೇರಿಯಲ್ಲಿದ್ದ ಮಿ|| ಗುಲಾಮ ಮರ್ತುಜಾ ಗಿಲಾನಿಯವರು, ಸರಕಾರದ ದಬ್ಬಾಳಿಕೆಯ ನಿಷೇಧಾರ್ಥವಾಗಿ ತಮ್ಮ ಸರಕಾರಿ ಉದ್ಯೋಗಕ್ಕೆ ಕಲ್ಲು ಹೊಡೆದಿದ್ದಾರೆ.

### ಸಿನೇಮಾ ಪಿಕೆಟಿಂಗ

ದಿಲ್ಲಿಯ ಜಮಾಯತ್ ಉಲ್ ಉಲೇಮಾದ ೧೮ ಜನ ಸ್ವಯಂಸೇವಕರು ಪರದೇಶಿ ಬಟ್ಟೆಗಳ ಅಂಗಡಿ, ಸಿಂದೀ ಅಂಗಡಿ, ಸಿನೇಮಾ ಗೃಹಗಳ ಪಿಕೆಟಿಂಗವನ್ನು ನಡಿಸಿದ್ದಾರೆ. ಮುಸ್ಲಿಮ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೂ ಅವರಿಗೆ ಸಹಾಯ ಮಾಡುತ್ತಿದ್ದಾರೆ.

## ಪೋಲೀಸರು ಸತ್ಯಾಗ್ರಹದಲ್ಲಿ ಸೇರಬೇಕು

೧೨ ನೆಯ ತಾ॥ ದಿವಸ ಮುಂಬಯಿಯಲ್ಲಿ ಕೆಲವು ಮರಾಠಿ ಹಾಗು ಗುಜರಾಥಿ ಹಸ್ತಪತ್ರಿಕೆಗಳು ಹಂಚಲ್ಪಟ್ಟಿದ್ದು, ಅದರಲ್ಲಿ ಸರಕಾರಿ ಉದ್ಯೋಗಸ್ಥರೆಲ್ಲರೂ ವಿಶೇಷತಃ ಪೋಲೀಸರು ತಮ್ಮ ತಮ್ಮ ಉದ್ಯೋಗಗಳಿಗೆ ರಾಜೀನಾಮೆ ಕೊಟ್ಟು ಸ್ವಾತಂತ್ರ್ಯ ಸಮರದಲ್ಲಿ ಸೇರಬೇಕೆಂಬುದಾಗಿ ಬರೆದಿದೆ. ಅವುಗಳು ಶ್ರೀಯುತ ಮುನ್ನು ಕೋತವಾಲಿಯವರ ಹೆಸರಿನಿಂದ ಪ್ರಕಟವಾಗಿವೆ.

## ಬಟಾಲಾದಲ್ಲಿ ಡೊಣ್ಣೆಯ ರಾಜ್ಯ

### ೬೦ ಜನರಿಗೆ ಗಾಯ

೯ ನೆಯ ತಾ॥ ದಿವಸ ಬಟಾಲಾದಲ್ಲಿ ನವಜೀವನ ಭಾರತ ಸಭೆಯ ಪರವಾಗಿ ಸಾರ್ವಜನಿಕ ಸಭೆಯು ಸೇರಿತ್ತು. ಪೋಲೀಸರು ಸಭಾಸ್ಥಾನಕ್ಕೆ ಬಂದು ಅಲ್ಲಿ ನೆರೆದವರನ್ನು ಡೊಣ್ಣೆಗಳಿಂದಲೂ ಬಂದೂಕದ ತುದಿಗಳಿಂದಲೂ ಹೊಡೆಯಹತ್ತಿದರು. ಶ್ರೀ. ಮೂಲರಾಜ ಕಂಡಸ್, ತ್ರಿವೇದಿ, ಇಶನಲ್ ಹಕ್ ಹವಿಲದ ಮೊದಲಾದ ೬೦ ಜನರಿಗೆ ಗಾಯಗಳಾಗಿವೆ.

## ೩. ಮುಂಬಯಿ ಸರಕಾರದ ಕಟ್ಟಪ್ಪಣೆ

### ಅಧಿಕಾರಿಗಳು ಸಭೆಗೆ ಹೋಗಕೂಡದು

### ಮಹಾತ್ಮರ ಚಳವಳಿಯ ವಿಷಯವಾಗಿ ಚರ್ಚಿಸಕೂಡದು

ಮುಂಬಯಿ ಇಲಾಖೆಯಲ್ಲಿಯ ಸರಕಾರಿ ಉದ್ಯೋಗಸ್ಥರಿಗಾಗಿ ಸರಕಾರದವರು ಕೆಳಗಿನ ಕಟ್ಟಪ್ಪಣೆಗಳನ್ನು ಹೊರಡಿಸಿ ಅವುಗಳನ್ನು ಎಲ್ಲರೂ ಅಧಿಕಾರಿಗಳ ಕಡೆಗೆ ಕೊಟ್ಟು ಕಳಿಸಿದ್ದಾರೆ. ಸರಕಾರದ ವಿರುದ್ಧವಾಗಿ ನಡೆದ ಕಾಯಿದೆಭಂಗದ ಚಳವಳಿ ಇಲ್ಲವೆ ಅಂತಹವೇ ಬೇರೆ ಯಾವ ಚಳವಳಿಗಳ ಸಂಬಂಧವಾಗಿ ನೆರೆದ ಸಭೆಗಳಿಗೆ ಸರಕಾರಿ ಅಧಿಕಾರಿಗಳು ಹೋಗಕೂಡದು ಇಲ್ಲವೆ ಅವುಗಳಿಗೆ ಹಣದಿಂದ ಸಹಾಯಮಾಡುವದು ಸಮಂಜಸವಲ್ಲದು. ಇದಕ್ಕೆ ವಿರುದ್ಧವಾಗಿ ನಡೆದವರು ಸರಕಾರದವರು ವಿಧಿಸುವ ಶಿಕ್ಷೆಗೆ ಪಾತ್ರರಾಗುವರು. ಸರಕಾರಿ ಉದ್ಯೋಗಸ್ಥರ ಸಂಘಗಳಲ್ಲಿ ಇಲ್ಲವೆ ಮಂಡಳದಲ್ಲಿ ಕಾಯಿದೆಭಂಗದ ಚಳವಳಿ ಇಲ್ಲವೆ ಅಂತಹವೇ ಬೇರೆ ಚಳವಳಿ ಮತ್ತು ರಾಜಕೀಯ ವಿಷಯದಲ್ಲಿ ಸರಕಾರದವರು ಕೈಕೊಂಡ ಧೋರಣದ ಸಂಬಂಧವಾಗಿ ಯಾವ ವಿಷಯಗಳನ್ನೂ ಚರ್ಚಿಸಕೂಡದು.

ಈ ಕಟ್ಟಪ್ಪಣೆಯನ್ನು ಮೇಲಧಿಕಾರಿಯು ಕೆಳಗಿನ ಅಧಿಕಾರಿಗಳಿಗೆ ತಿಳಿಸಿದಾಗ ಕಟ್ಟಪ್ಪಣೆಯ ಮೇಲೆ ಅವರ ಸಹಿಗಳನ್ನು ತೆಗೆದುಕೊಳ್ಳಬೇಕು.

## ಬಾಲಕರೂ ಅಧಿಕಾರಿಗಳಿಗೆ ಬೆದರಲಿಲ್ಲ

ಲಾಹೋರದ ಬಾಲಭಾರತ ಸಭೆಯವರು ಮೋರಿಗೇಟ ಮ್ಯುನಿಸಿಪಾಲಿಟಿಯ ತೋಟದಲ್ಲಿ ಡೇರೆಗಳನ್ನು ಹೊಡೆದುಕೊಂಡು ಅಲ್ಲಿ ಬಡಬಗ್ಗರಿಗಾಗಿ ಒಂದು ಅನ್ನಛತ್ರವನ್ನು ತೆರೆದಿದ್ದಾರೆ ಬೀದಿಬೀದಿಗಳಲ್ಲಿ ಭಿಕ್ಷೆಯನ್ನು ಬೇಡಿ ತಂದು ಅನ್ನಛತ್ರವನ್ನು ನಡೆಸಿದ್ದಾರೆ. ಎಷ್ಟೋ ಜನ ಸತ್ಯಾಗ್ರಹಿಗಳು ಅಲ್ಲಿಗೆ ಹೋಗಿ ಊಟ ಮಾಡುವದನ್ನು ಕಂಡು ಅಧಿಕಾರಿಗಳು ಅವರಿಗೆ ಅನ್ನಛತ್ರವನ್ನು ಮುಚ್ಚಲೂ ಮತ್ತು ಪ್ಲ್ಯಾಟಿಸ್ಟೇಟರ ಮುಂದೆ ಬಂದು ಹೋಗಲೂ ಕೇಳಿಕೊಂಡರು. ಬಾಲಕರು ಅದಕ್ಕೆ ಒಪ್ಪದೆ "ಏನು ಬೇಕಾದುದನ್ನು ಮಾಡಿರಿ! ನಾವಂತೂ ಇಲ್ಲಿಂದ ಕದಲುವವರಲ್ಲ"ವೆಂದು ಹೇಳಿಕಳಿಸಿದರು. ಬಾಲಭಾರತ ಸಭೆಯಲ್ಲಿ ಎಲ್ಲರೂ ೧೦ ೧೨ ವರ್ಷದೊಳಗಿನ ಬಾಲಕರೇ ಇರುತ್ತಾರೆ.

## ವಿರಮಗಾಮದಲ್ಲಿ ಉಪ್ಪಿನ ಸತ್ಯಾಗ್ರಹ

ತಾ। ೧೦ ನೆಯ ದಿವಸ ಸ್ತ್ರೀಪುರುಷರು ಕೂಡಿ ೧೦೦೦ ಜನರು ಸಾಮುದಾಯಿಕವಾಗಿ ಉಪ್ಪನ್ನು ಸಿದ್ಧಪಡಿಸಿ ಉಪ್ಪಿನ ಕಟ್ಟಳೆಯನ್ನು ಮುರಿಯುವದಕ್ಕಾಗಿ ಹೊರಟಿದ್ದರು. ಪೋಲೀಸರು ಹಾದಿಯಲ್ಲಿ ಅವರನ್ನು ತಡೆದು ತಿರುಗಿ ಹೋಗಲು ಕೇಳಿಕೊಂಡರು. ಸತ್ಯಾಗ್ರಹಿಗಳು ಒಪ್ಪದ್ದರಿಂದ ಪೋಲೀಸರು ಅವರನ್ನು ಡೊಣ್ಣೆಗಳಿಂದ ಹೊಡೆದರು ೪ ಜನರಿಗೆ ಭಯಂಕರ ಗಾಯಗಳಾಗಿವೆ ತಂಡದ ಮುಖಂಡರಾದ ಶ್ರೀ. ರೇವಾಶಂಕರರಿಗೆ ಭಯಂಕರ ಪೆಟ್ಟು ತಗಲಿದೆ.

## ಬಂದೂಕ ಲಾಯಸೆನ್ಸ ಕಸಿದುಕೊಂಡರು.

ಅಂಬಾಲಾದ ಸುಪ್ರಸಿದ್ಧ ವಕೀಲರೂ, ಕಾಂಗ್ರೆಸ ಪಕ್ಷದ ಮುಂದಾಳುಗಳೂ ಆದ ಶ್ರೀ. ಲಾಲಾ ದುನೀಚಂದರವರಿಗೆ ಇಷ್ಟು ದಿವಸಗಳವರೆಗೆ ಕೊಟ್ಟ ಬಂದೂಕಿನ ಲಾಯಸೆನ್ಸನ್ನು ಈಗ ಸರಕಾರ ತೆಗೆದುಕೊಂಡಿರುವರು.

---


ಶ್ರೀ ಮಹಾಲಕ್ಷ್ಮೀ ಪ್ರಸಾದಿಕ

**ಶಿರಹಟ್ಟಿ ನಾಟಕ ಮಂಡಳಿಯವರು**

**ಶಿವಾನಂದ ನಾಟಕ ಶಾಲೆಯಲ್ಲಿ**

ಸೋಮವಾರ ತಾ॥ ೧೬—೬—೩೦ ದಿವಸ

ತಮ್ಮ ಲೋಕಪ್ರಿಯವಾದ

**ಸಂಪೂರ್ಣ ಕೃಷ್ಣಲೀಲಾ**

ಎಂಬ ನಾಟಕವನ್ನು ಅಭಿನಯಿಸುವರು.

ಎಚ್, ವೆಂಕೋಬರಾವ.

ಪ್ರೊಪ್ರಾಯಿಟರ.


---


ಜಯಲಕ್ಷ್ಮೀ ಪ್ರಾಸಾದಿಕ

ಸ್ತ್ರೀಮಿಶ್ರಿತ ಸಂಗೀತ ನಾಟಕ ಮಂಡಳಿ ದಾವಣಗೇರಿ ಇವರು

**ಬಾಗಲಕೋಟೆ ರಾಜ ಥಿಯೇಟರಿನಲ್ಲಿ**

ಸೋಮವಾರ ತಾ॥ ೧೬-೬-೩೦

**ಲಂಕಾದಹನ.**

ಎಂಬ ಹೊಸ ಆಖ್ಯಾನವನ್ನು ಪ್ರಯೋಗಿಸುವರು.

ವ್ಯವಸ್ಥಾಪಕ.


ಈ ಪತ್ರಿಕೆಯು ಬಸವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದಲೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦-೧-೩

ಜಯ ಕರ್ನಾಟಕ

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಮಂಗಳವಾರ, ಮಿತಿ ಜ್ಯೇಷ್ಠ ಬಹುಳ ೬ ಶಕೆ ೧೮೫೨ ತಾ|| ೧೭—೬—೩೦ ಸಂಚಿಕೆ ೭೭

ಗುಜರಾಥದಲ್ಲಿ

## ಕಾಲೇಜುಗಳಿಗೆ ಬಹಿಷ್ಕಾರ

ಗುಜರಾಥ ವಿದ್ಯಾಪೀಠದ ಪ್ರೊಫೆಸರರಾದ ಶ್ರೀ ಕುಮಾರಪ್ಪ ಇವರ ಅಧ್ಯಕ್ಷತೆಯಲ್ಲಿ ಅಹಮ್ಮದಾಬಾದದಲ್ಲಿ ಕಾಲೇಜದ ವಿದ್ಯಾರ್ಥಿಗಳ ಸಭೆಯು ಸೇರಿತ್ತು. ಗುಜರಾಥಪ್ರಾಂತದೊಳಗಿನ ಎಲ್ಲ ಕಡೆಯ ವಿದ್ಯಾರ್ಥಿಗಳು ಸಭೆಗೆ ಆಗಮಿಸಿದ್ದರು. "ದೇಶದಲ್ಲಿ ಈಗ ಪ್ರಾರಂಭಿಸಿದ ಸ್ವಾತಂತ್ರ್ಯ ಸಮರವು ಕೊನೆಗೆ ಮುಟ್ಟುವವರೆಗೆ ಯಾವ ವಿದ್ಯಾರ್ಥಿಯೂ ಕಾಲೇಜಕ್ಕೆ ಹೋಗತಕ್ಕದ್ದಲ್ಲ" ಎಂಬ ಗೊತ್ತು ಸಭೆಯಲ್ಲಿ ಸ್ವೀಕೃತವಾಯಿತು.

## ಮುಸಲ್ಮಾನರೂ ಕಾಯಿದೆಭಂಗವೂ

ತಾ|| ೪, ೫, ೬, ಮತ್ತು ೭ ಈ ದಿವಸಗಳಲ್ಲಿ ಪಂಡಿತ ನೆಹರುರವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ರಾಷ್ಟ್ರಸಭೆಯ ಕಾರ್ಯಕಾರಿ ಮಂಡಳದ ಸಭೆಯು ಅಲಹಾಬಾದದಲ್ಲಿ ಸೇರಿತ್ತು. ಸಭೆಯಲ್ಲಿ ಕರನಿರಾಕರಣೆ, ಮದ್ಯಪಾನ ಪ್ರತಿಬಂಧ, ಪರದೇಶಿ ಬಟ್ಟೆಗಳ ಬಹಿಷ್ಕಾರ, ಮೊದಲಾದವುಗಳ ಸಂಬಂಧವಾಗಿ ಗೊತ್ತುಗಳು ಸ್ವೀಕೃತವಾದದ್ದಲ್ಲದೆ ಕೆಳಗಿನ ಗೊತ್ತುದಡೂ ಸ್ವೀಕೃತವಾಯಿತು.

ಅಮೀರಾಬಾದಲ್ಲಿ ಕೂಡಿದ ಜಮಾಯತ್ ಉಲ್ ಉಲೇಮಾದವರು ಮುಸಲ್ಮಾನರಿಗೆ ಕಾಂಗ್ರೆಸ ಪಕ್ಷಕ್ಕೆ ಸೇರಿ ಕಾಯಿದೆ ಭಂಗ ಚಳವಳಿಯಲ್ಲಿ ಭಾಗಿಗಳಾಗಿರೆಂದು ಆಜ್ಞಾಪಿಸಿರುವದಕ್ಕಾಗಿ ಈ ಸಭೆಗೆ ಆನಂದವೆನಿಸುತ್ತದೆ. ಮುಸಲ್ಮಾನರಿಗೂ ಮತ್ತು ಇತರ ಅಲ್ಪಸಂಖ್ಯಾಕ ಜಾತಿಯವರಿಗೂ ಸಮಾಧಾನಕರವಾಗುವಂತೆಯೆ ಜಾತಿ ವಿಷಯಕ ಪ್ರಶ್ನೆಗಳು ಬಿಡಿಸಲ್ಪಡುವವೆಂದೂ, ಹಿಂದುಸ್ಥಾನದಲ್ಲಿಯ ಎಲ್ಲ ಧರ್ಮ ಹಾಗು ಸಂಸ್ಕೃತಿಗಳಿಗೆ ಯಾವಾಗಲೂ ಈ ಸಭೆಯು ಮರ್ಯಾದೆಯನ್ನು ತೋರಿಸುವದೆಂದೂ ಜಮಾಯತ್ ಉಲ್ ಉಲೇಮಾಕ್ಕೆ ಮತ್ತು ಮುಸಲ್ಮಾನರಿಗೂ ಈ ಸಭೆಯು ಆಶ್ವಾಸನವನ್ನು ಕೊಡುತ್ತದೆ ಮುಸಲ್ಮಾನರು ಎಲ್ಲ ಸಂಶಯಗಳನ್ನೂ ಬಿಟ್ಟುಗೊಟ್ಟು ಹಿಂದೂ ಜನರೊಡನೆ ಕೂಡಿಕೊಂಡು ನಡೆಯುವರಾಗಿ ಈ ಸಭೆಯು ನಂಬುತ್ತದೆ.

ಸೊಲ್ಲಾಪುರದ ರಾಷ್ಟ್ರಧ್ವಜ ಸತ್ಯಾಗ್ರಹಕ್ಕೆ

ಬಾಗಲಕೋಟೆಯಿಂದ

## ನಾಲ್ಕು ಜನ ವೀರರ ಪ್ರಯಾಣ

ಸೊಲ್ಲಾಪುರದಲ್ಲಿ ದಂಡಿಸಲಿಂದ ಪ್ರತಿಬಂಧಿತವಾದ ರಾಷ್ಟ್ರಧ್ವಜದ ಮಾನಸಂಪಾದನೆಗಾಗಿ ಹೂಡಿದ ಸತ್ಯಾಗ್ರಹದಲ್ಲಿ ಭಾಗ ತೆಗೆದುಕೊಳ್ಳಲು ಇಲ್ಲಿಂದ ತಾ|೧೬ ನೆಯ ದಿವಸ ಶ್ರೀ. ಗದ್ದನಕೇರಿ, ಕುಲಕರ್ಣಿ ಮದ್ದು, ಹುಂಡೇಕಾರ ಮತ್ತು ಮಲ್ಲಪ್ಪ ಈ ನಾಲ್ಕು ಜನ ತರುಣರು ವಿಜಾಪುರಕ್ಕೆ ತೆರಳಿದ್ದು ಅಲ್ಲಿಂದ ಮುಂದೆ ಸೊಲ್ಲಾಪುರಕ್ಕೆ ಹೋಗುವವರಿದ್ದಾರೆ.

## ಬಂಗಾಲದಲ್ಲಿ ಕರನಿರಾಕರಣೆ

ಬಂಗಾಲ ಪ್ರಾಂತದ ರಾಜಶಾಹಿ ಭಾಗದಲ್ಲಿ ಪಂಚ ಮುಖಾಂತರವಾಗಿ ನ್ಯಾಯಗಳನ್ನು ಬಗೆಹರಿಸಿಕೊಳ್ಳುವದು ರಾಟಿಯ ಪ್ರಸಾರ, ಕರನಿರಾಕರಣೆ ಮೊದಲಾದವುಗಳು ಪ್ರಾರಂಭವಾಗಿವೆ

## ಆಚಾರ್ಯರಿಗೆ ೨ ವರ್ಷ ಶಿಕ್ಷೆ

ಪೋಲೀಸರಲ್ಲಿ ಅಸಂತೋಷವನ್ನು ಹುಟ್ಟಿಸಿದುದಕ್ಕಾಗಿ ಬಿಜವಾಡದ ಶ್ರೀ ಸಿಟ್ಟಾಳ ರಾಮಕೃಷ್ಣಾಚಾರ್ಯರಿಗೆ ೨ ವರ್ಷಗಳ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ.

## ಪಾಟಣಾ ಕಾಂಗ್ರೆಸ ಕಚೇರಿಯನ್ನು ಮುತ್ತಿದರು

ಪಾಟಣಾದಲ್ಲಿರುವ ಬಿಹಾರ ಪ್ರಾಂತಿಕ ಕಾಂಗ್ರೆಸ್ ಕಚೇರಿಯನ್ನು ಪೋಲೀಸರು ಮುತ್ತಿ "ಕಾಂಗ್ರೆಸ್ ಬುಲೆಟಿನ್"ಗಳನ್ನು ಜಪ್ತಮಾಡಿಕೊಂಡು ಹೋದರು.

ರಾಣೆಬೆನ್ನೂರ ತಾಲೂಕದಲ್ಲಿ

## ಸಾವಿರಾರು ಸಿಂದೀ ಗಿಡಗಳ ನಾಶ

ರಾಣೇಬೆನ್ನೂರ ತಾಲೂಕದಲ್ಲಿ ಸ್ವಯಂಸೇವಕರು ಬಿ... ಸಿಂದೀ ಗಿಡಗಳನ್ನು ಕಡಿಯಲಿಕ್ಕೆ ಹೋಗಹತ್ತಿದ್ದು ... ೪ರಿಂದ ೧೧ರ ವರೆಗೆ ಈಗ ... ಗಿಡಗಳನ್ನು ಕಡಿ... ತ್ತಾರೆ. ಅಲ್ಲಲ್ಲಿಯ ರೈತರು ಸ್ವಯಂಸೇವಕರಿಗೆ ರೊಟ್ಟಿ ಬ... ನೀರು ಸಿದಿಗಳನ್ನು ತಂದುಕೊಟ್ಟು ಸಹಾಯ ಮಾಡುತ್ತಿರು...

## ಸೊಲ್ಲಾಪುರದ ರಾಷ್ಟ್ರಧ್ವಜ ಸತ್ಯಾಗ್ರಹ

# ೧೧ ಜನ ಕನ್ನಡಿಗರಿಗೆ ಶಿಕ್ಷೆ

ಸೊಲ್ಲಾಪುರದ ರಾಷ್ಟ್ರಧ್ವಜ ಸತ್ಯಾಗ್ರಹಕ್ಕೆ ಪುಣೆಯಿಂದ ಕಳಿಸಲ್ಪಟ್ಟ ೧೧೭ ಸತ್ಯಾಗ್ರಹಿಗಳಲ್ಲಿ ೩೮ ಜನ ಸತ್ಯಾಗ್ರಹಿಗಳು ಕನ್ನಡಿಗರಾಗಿದ್ದರು, ಅಧಿಕಾರಿಗಳು ಸತ್ಯಾಗ್ರಹಿಗಳಲ್ಲಿ ಕೆಲವರನ್ನು ಹೊಡೆದು, ಒಡೆದು ತಿರುಗಿ ಕಳಿಸಿಕೊಟ್ಟರು. ಮತ್ತು ೧೮ ಜನ ಸತ್ಯಾಗ್ರಹಿಗಳಿಗೆ ೧ ವರ್ಷದ ಸಶ್ರಮ ಶಿಕ್ಷೆಯನ್ನು ವಿಧಿಸಿ ವಿಜಾಪುರದ ಜೈಲಿಗೆ ಕಳಿಸಿ ಕೊಟ್ಟಿದ್ದಾರೆ. ಇವರಲ್ಲಿ ಕನ್ನಡಿಗರು ೧೧ ಜನರಿದ್ದಾರೆ.

---

### ಮಂಗಳೂರಿನ
### ಶ್ರೀ ನಾರಾಯಣ ಕಿಲ್ಲೆಯವರಿಗೆ ೧ ವ. ಸ. ಶಿಕ್ಷೆ.
### “ಲವಣಾಂಬುಧಿಯ ಮಹಾರಾಣಿಗೆ ಉಪ್ಪಿನ ಅಧಿಕಾರವಿಲ್ಲ
### ಹತ್ತಿಯ ತವರ್ಮನೆಗೆ ಬಟ್ಟೆಯ ಬರಗಾಲ.

ಬಂಟ್ವಾಳದಲ್ಲಿ ರಾಜದ್ರೋಹಕ್ಕಾಗಿ ಸೆರೆ ಹಿಡಿಯಲ್ಪಟ್ಟ ಶ್ರೀ ನಾರಾಯಣ ಕಿಲ್ಲೆಯವರ ಖಟ್ಲೆಯ ವಿಚಾರಣೆಯು ಮಂಗಳೂರಿನಲ್ಲಿ ನಡೆದು, ಅವರಿಗೆ ೧ ವರ್ಷದ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು. ಅವರು ಬಂಟ್ವಾಳದಲ್ಲಿ ಸೆರೆಯಾಳಾದೊಡನೆ ಕೆಳಗಿನಂತೆ ಸಂದೇಶವನ್ನು ಕೊಟ್ಟಿದ್ದಾರೆ.

“ಎಲ್ಲೆಲ್ಲಿಯೂ ಅಸ್ಪೃಶ್ಯತಾ ನಿವಾರಣೆ, ಉಪ್ಪಿನ ಕರ ನಿರಾಕರಣೆ, ಮದ್ಯಪಾನ ಬಹಿಷ್ಕಾರ, ಖಾದೀ ಬಟ್ಟೆಯ ಪುರಸ್ಕಾರ, ಬಟ್ಟೆನಷ್ಟ ಹೇಳುವದಾದರೆ ಶಾಂತಿಮಯ ಸ್ವಾತಂತ್ರ್ಯ ಸಮರ ಇಷ್ಟರಲ್ಲಿ ಯಾವುದು ರಾಜದ್ರೋಹವೆಂದು ಭಾವಿಸಲಿಕ್ಕೆ ಬರುವದಿಲ್ಲ. ಕೈಯಲ್ಲಿ ಕತ್ತಿಯಿಲ್ಲ, ಬಾಂಬು ಗುಂಡುಗಳಿಲ್ಲ. ಹಿಂಸಾತ್ಮಕ ಯುದ್ಧವಿಲ್ಲ, ಬರೀ ಬಡತನದ ಗೋಳಾಟ. ಲೋಕವೆಲ್ಲ ಅಜ್ಞಾನದಿಂದ ಆಚ್ಛಾದಿಸಲ್ಪಟ್ಟು ತಮೋಗುಣದ ತವರ್ಮನೆಯಲ್ಲಿ ಬಿದ್ದಾಡುತ್ತಿದ್ದಾಗ ಆ ಪುರಾತನ ಕಾಲದಲ್ಲಿ ತನ್ನ ವೈಭವದ ರಶ್ಮಿಯಿಂದ ಭೂಗೋಳವನು ಬೆಳಗಿಸಿದ ಬಂಗಾರದ ಬಟ್ಟಲು ಈಗ ತಗಡಿನ ತಟ್ಟೆಯಾಗಿ ಆಳರಸರ ಕಾಲಡಿಯಲ್ಲಿ ಹೊರಳಾಡುತ್ತಿದೆ. ಲವಣಾಂಬುಧಿಯ ಮಹಾರಾಣಿಗೆ ಉಪ್ಪಿನ ಅಧಿಕಾರವಿಲ್ಲ, ಹತ್ತಿಯ ತವರ್ಮನೆಗೆ ಬಟ್ಟೆಯ ಬರಗಾಲ. ವೇದ ವೇದಾಂತ ಭೂಮಿಗೆ ಸಾಕಷ್ಟು ವಿದ್ಯೆಯಿಲ್ಲ. ಕೈಗಾರಿಕೆ, ವ್ಯವಸಾಯ ವ್ಯಾಪಾರಗಳಿಲ್ಲ. ಇದ್ದ ಧನವು ಸುರಾಪಾನ ಸೈತಾನನಿಂದ ಸೂರೆಯಾಗುತ್ತಿದೆ. ಬಡತನದ ಬೇಗೆಯಲ್ಲಿ ಬೆಂದು ಅರೆಹೊಟ್ಟೆಯ ತುತ್ತಿಗಾಗಿ ಗತಿಯಿಲ್ಲದೆ ಮಾರಿಗೆಟ್ಟ ತನ್ನ ಮೂವತ್ತು ಮೂರು ಕೋಟಿ ಮಕ್ಕಳ ದುಃಖಕ್ಕೆ ಸಿಕ್ಕಿ ನುಚ್ಚುನೂರಾದ ನಮ್ಮ ಮಾತೆಯು ನಮಗಾಗಿ ಕೂಗುತ್ತಿರುವಳು.

ಬಂಧುಗಳೇ, ಅನಿತ್ಯವಾದ ದೇಹಕ್ಕಾಗಿ ನಿತ್ಯವಾದ ಆತ್ಮವನ್ನು ಮರೆಯಬೇಡಿರಿ. ಆತ್ಮನು ಸ್ವತಂತ್ರನು. ಸ್ವಾತಂತ್ರ್ಯವು ನಿತ್ಯಜೀವನ. ಅದು ಆತ್ಮಬಲದ ತಳಹದಿಯಲ್ಲಿ ನೆಲೆಯಾಗಿ ನಿಂತಿರುವದು. ಪಶುಬಲದ ಮೇರೆಯನ್ನು ಮೀರಿ ಆತ್ಮಬಲವು ಸ್ವಾತಂತ್ರ್ಯವನ್ನು ಸಾರುತ್ತಿರುವದು. ಅದರ ಕಾರ್ಯಾಂಗವೆಂದರೆ ಶಾಂತಿಸಮರವು. ಇದರಲ್ಲಿ ನಮ್ಮ ಸರ್ವಾರ್ಥ ಸಿದ್ಧಿಯಿದೆ. ಇದು ಭಾರತಮಾತೆಯ ಸಂದೇಶ. ಕರ್ನಾಟಕಗಾಂಧಿಯ ಕೂಗು. ಮಹಾತ್ಮಾ ಗಾಂಧಿಯವರ ವಚನ ಮತ್ತು ನನ್ನ ವಿನಯವಿನಂತಿ.

### ಧಾರಾಸಣಾ ದಾಳಿಯ ಸತ್ಯಾಗ್ರಹಿಗಳಿಗೆ
### ೨ ಲಕ್ಷ ರೂಪಾಯಿಗಳ ಸಹಾಯ.

ಧಾರಾಸಣಾ ದಾಳಿಯ ಕಾರ್ಯದಲ್ಲಿ ತೊಡಗಿದ ಸ್ವಯಂಸೇವಕರಿಗೆ ಸಹಾಯ ಮಾಡುವದಕ್ಕಾಗಿ ನಿಧಿಯನ್ನು ಕೂಡಿಸಲು ಮುಂಬಯಿ ಪ್ರಾಂತಿಕ ಸಮಿತಿಯವರಿಂದ ಒಂದು ಮಂಡಳವು ಏರ್ಪಾಡಾಗಿದ್ದು, ಆ ಮಂಡಳದವರು ಈಗಾಗಲೆ ೨ ಲಕ್ಷ ರೂ. ಗಳನ್ನು ಕೂಡಿಸಿದ್ದಾರೆ.

## ಹಿರೇಮಠ ಸಾಹೇಬರ ಪಾಂಡಿತ್ಯ!

ತಾ| ೧೫ ನೆಯ ದಿವಸ ಮುಂಜಾನೆ “ಶಾಂತಿ ಸಂಘ” ಸ್ಥಾಪನದ ಸಲುವಾಗಿ ಹಿರೇಮಠ ಸಾಹೇಬರು ಸಭೆ ಕೂಡಿಸಿದ್ದರು. ಸಾಹೇಬರ ಮೋಟಾರ ಬಂದ ಕೂಡಲೇ ಎಲ್ಲ ಸತ್ಯಾಗ್ರಹಿ ಜನರು ಜಯಘೋಷ ಮಾಡಿದರು. ಸಾಹೇಬರು ಸಮ್ಮಾನದಿಂದ ಮೋಟಾರಿನಿಂದ ಸಭಾಮಂಟಪ ಪ್ರವೇಶ ಮಾಡಿದರು. ಆ ಸಭೆಯಲ್ಲಿ ಸುಮಾರು ೫೦—೬೦ ಜನರು ಇದ್ದರು. ಅವರಲ್ಲಿ ಕೆಲವರು ಒತ್ತಾಯದಿಂದ ಬಂದವರಿದ್ದರು. ಸಾಹೇಬರು ತಮ್ಮ ಭಾಷಣದಲ್ಲಿ “ಈಗಿನ ಚಳವಳಿಯು ಸೋಟ ಚಳವಳಿಯೆಂದೂ ಉಪ್ಪಿನ ಮಖಾರದ ದಾಳಿಯು ದರೋಡೆ ಕಲಿಸುವ ಮಾರ್ಗವೆಂದೂ, ಸಿಂದೀ ಗಿಡಗಳನ್ನು ಕಡಿದರೆ ಮಳೆಯು ಕಡಿಮೆಯಾಗುವದೆಂದೂ ಮತ್ತು ಸೊಲ್ಲಾಪುರ, ಪೇಶಾವರ ದಂಗೆಗಳು ಈ ಚಳವಳಿಯ ಮೂಲಕವೆಂದೂ ಹೇಳಿ,” ಭಾಷಣಾಂತ್ಯಕ್ಕೆ ಈಗಿನ ಚಳವಳಿಗಾರರೆಲ್ಲ ಸೋಟರೆಂದೂ, ಅದಕ್ಕೆ ಯಾರೂ ಕೂಡಬಾರದೆಂದೂ, ಶಾಂತಿ ಸಂಘವನ್ನು ಕೂಡಿ”ರೆಂದು ಘಂಟೆ ಘೋಷ ಮಾಡಿಕೊಂಡರು.

ಗಲಗಲಿ. } ಪ್ರಕಟನಕಾರ
೧೬-೬-೧೯೩೦ } ಸತ್ಯಾಗ್ರಹ ಯುದ್ಧಮಂಡಳ.

### ಮಂಗಳೂರಿನ ಶ್ರೀ ಮಹಾ ಶಬ್ಬೆಯವರಿಗೆ
### ಒಂದು ವರ್ಷ ಸಶ್ರಮ ಶಿಕ್ಷೆ

ಮಂಗಳೂರಿನ ಸತ್ಯಾಗ್ರಹ ಮಂಡಳದ ಅಧಿಕಾರಿಗಳಾದ ಶ್ರೀ ಎ. ಬಿ. ಮಹಾಕಶೆಟ್ಟಿಯವರಿಗೆ ೧೧೭ ನೆಯ ಕಲಮಿನ ಅನ್ವಯ ೧ ವರ್ಷದ ಸಶ್ರಮ ಶಿಕ್ಷೆಯನ್ನು ಅಧಿಕಾರಿಗಳು ವಿಧಿಸಿದ್ದಾರೆ.

### ವ್ಹಾಯಿಸರಾಯರಿಗೆ

# ಮುಂಬಯಿ ವ್ಯಾಪಾರಿಗಳ ಉತ್ತರ

## ಒಂದು ತಿಂಗಳದ ವರೆಗೆ ಸಂಪೂರ್ಣ ಹರತಾಳ

ಕರನಿರಾಕರಣೆ ಸಾಮಾಜಿಕ ಬಹಿಷ್ಕಾರ ಮತ್ತು ಪಿಕೆಟಿಂಗ ಇವುಗಳ ವಿರುದ್ಧವಾಗಿ ವ್ಹಾಯಿಸರಾಯರು ಹೊರಡಿಸಿದ ಹೊಸ ಕಾನೂನು ಕುರಿತು ವಿಚಾರಿಸುವದಕ್ಕಾಗಿ ಮುಂಬಯಿಯ ೬೦ ಜನ ವ್ಯಾಪಾರಸ್ಥರನ್ನು ಹಾಗು ಉದ್ಯೋಗಿಗಳನ್ನು ಒಳಗೊಂಡ ಮಹಾಮಂಡಳದವರು ಒಂದು ಸಭೆಯನ್ನು ಕರೆದು ಆ ಸಭೆಯಲ್ಲಿ "ಸರಕಾರವು ಕಾನೂನನ್ನು ಕೂಡಲೆ ತಿರುಗಿ ತೆಗೆದುಕೊಳ್ಳಬೇಕೆಂದೂ, ತಿರುಗಿ ತೆಗೆದುಕೊಳ್ಳದಿದ್ದಲ್ಲಿ ಒಂದು ತಿಂಗಳದ ವರೆಗೆ ಸಂಪೂರ್ಣ ಹರತಾಳವನ್ನು ಪಾಲಿಸುವೆವೆಂದೂ ನಿರ್ಧರಿಸಿಕೊಳ್ಳುವವರಿದ್ದಾರೆ.

---

ಡಾ|| ಮುಂಜೆಯವರು

### ಕಾಯದೆಭಂಗ ಮಾಡುವರು

ವರ್‍ಹಾಡ ಪ್ರಾಂತದಿಂದ ಅಡವಿಯ ಕಾನೂನುಗಳನ್ನು ಮುರಿಯಲು ಹೋಗುವ ಸತ್ಯಾಗ್ರಹಿಗಳ ಮೊದಲನೆಯ ತಂಡದ ಮುಖಂಡತ್ವವನ್ನು ನಾಗಪುರ ಡಾ|| ಮುಂಜೆಯವರು ವಹಿಸುವವರಿದ್ದಾರೆ

### ಸತ್ಯಾಗ್ರಹಕ್ಕೆ ಕರ್ನಾಟಕದ ಬಲಿದಾನ

೨೧೫ ಜನರಿಗೆ ಸೆರೆಮನೆ

ಮಹಾತ್ಮಾ ಗಾಂಧಿಯವರು ಪ್ರಾರಂಭಿಸಿದ ಸತ್ಯಾಗ್ರಹ ಯುದ್ಧದಲ್ಲಿ ಧುಮುಕಿ ಕರ್ನಾಟಕದಿಂದ ಈ ವರೆಗೆ ೨೧೫ ಜನರು ಸೆರೆಮನೆಗಳಿಗೆ ಹೋಗಿರುವರು.

ಮುಂಬಯಿಯಲ್ಲಿ

### ಶ್ರೀ. ಧುರಂಧರರನ್ನು ಸೆರೆಹಿಡಿದರು

ತಾ|| ೧೪ ನೆಯ ದಿವಸ ಪೋಲೀಸ ಅಧಿಕಾರಿಗಳು ಕಾಂಗ್ರೆಸ್ ಭುವನಕ್ಕೆ ಹೋಗಿ ಮುಂಬಯಿ ಪ್ರಾಂತಿಕ ಮಂಡಳದ ಕಾರ್ಯದರ್ಶಿಗಳಾದ ಶ್ರೀ. ಧುರಂಧರ ಇವರನ್ನು ಸೆರೆಹಿಡಿದರು. ಪ್ರಾಂತಿಕ ಮಂಡಳದ ಅಧಿಕಾರಿಗಳಾದ ಶ್ರೀಯುತ ಕಪಾಡಿಯಾ, ಮಂಜರೇಕರ ಮತ್ತು ಕಾಂಗ್ರೆಸ್ ಬುಲೆಟಿನ ಪತ್ರಿಕೆಯ ಸಂಪಾದಕರಾದ ಶ್ರೀ. ಮಾಣಿಕಲಾಲ ಗಾಂಧಿ ಇವರ ಮೇಲೆಯೂ 'ವಾರಂಟ'ಗಳು ಹೊರಟಿವೆ. ಕಾಂಗ್ರೆಸ್ ಬುಲೆಟಿನವನ್ನು ಪ್ರಸಿದ್ಧಿಸಕೂಡದೆಂದು ಮ್ಯಾಜಿಸ್ಟ್ರೇಟರು ಹಾಕಿದ ಕಟ್ಟಪ್ಪಣೆಯ ವಿರುದ್ಧವಾಗಿ ಅವರು ನಡೆಯುತ್ತಿರುವದೇ ಕೈಸೆರೆಯ ಕಾರಣವು.

### ಬಂಡೀಗಾಲಿಯ ಪರಿಷತ್ತು

ಸತ್ಯಾಗ್ರಹವು ನಿಲ್ಲದ ಹೊರತು ರಾಜಕೀಯ ಸೆರೆಯಾಳುಗಳಿಗೆ ಬಿಡುಗಡೆಯಿಲ್ಲ.

### ಕಾಂಗ್ರೆಸ್ ಪಕ್ಷಕ್ಕೆ ವಿಶೇಷ ಮನ್ನಣೆಯಿಲ್ಲ

ಬಂಡೀಗಾಲಿಯ ಪರಿಷತ್ತಿನ ವಿಷಯವಾಗಿ ಅಸೋಸಿಯೇಟೆಡ ಪ್ರೆಸ್‌ದ ಸುದ್ದಿಗಾರರು ಹೀಗೆ ಅಭಿಪ್ರಾಯಪಟ್ಟಿದ್ದಾರೆ. ಸಪ್ಟೆಂಬರದಲ್ಲಿ ಸೇರಲಿಕ್ಕಿರುವ ಬಂಡೀಗಾಲಿಯ ಪರಿಷತ್ತಿಗೆ ಹಿಂದುಸ್ತಾನದಲ್ಲಿ ಬೇರೆ ಬೇರೆ ಪಕ್ಷಗಳಿಗೆ ಸೇರಿದ ಪ್ರತಿನಿಧಿಗಳಿಗೆ ಆಮಂತ್ರಣವು ಕಳಿಸುವದರಲ್ಲಿ ಬರುವದು. ಈ ಸಂಖ್ಯೆಯು ೫೦ಕ್ಕೆ ಮಿಕ್ಕದು. ಸತ್ಯಾಗ್ರಹ ಚಳವಳಿಯನ್ನು ನಿಲ್ಲಿಸದ ಹೊರತು ರಾಜಕೀಯ ಸೆರೆಯಾಳುಗಳನ್ನು ಬಿಡುವದಿಲ್ಲ. ಯಾಕೆಂದರೆ ಅವರನ್ನು ಬಿಟ್ಟರೆ ಪುನಃ ಅವರು ತಮ್ಮ ಚಳವಳಿಯನ್ನು ಪ್ರಾರಂಭಿಸಿ ಸೆರೆಮನೆಗಳಿಗೆ ಹೋಗಬಹುದು. ಆದುದರಿಂದ ಕಾಂಗ್ರೆಸಕ್ಕೆ ಸೇರಿದ ಪಂಗಡಗಳ ಪ್ರತಿನಿಧಿಗಳನ್ನು ಮತ್ತು ವಿಶಿಷ್ಟ ಪಕ್ಷಗಳ ಪ್ರತಿನಿಧಿಗಳನ್ನೇ ಪರಿಷತ್ತಿಗೆ ಹೆಚ್ಚಾಗಿ ಕರೆಯಿಸುವದರಲ್ಲಿ ಬರುವದು.

### ಕರ್ನಾಟಕದ ಪ್ರತಿನಿಧಿಗಳು

### ಕಾಯಿದೆ ಮಂಡಳಗಳಿಗೆ ಶರಣು ಹೊಡೆಯಬೇಕು

ತಾ|| ೧೦ ನೆಯ ದಿವಸ ಇಳಕಲ್ಲಿನಲ್ಲಿ ಶ್ರೀ. ರುದ್ರಪ್ಪ ಕಂಠಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಕೆಳಗಿನ ಗೊತ್ತುಗಳು ಸ್ವೀಕೃತವಾದವು.

(೧) ಶ್ರೀ. ಮಲ್ಲಪ್ಪ ಧನಶೆಟ್ಟಿ ಸೊಲ್ಲಾಪುರ ಇವರನ್ನೂ ಇವರ ಜೊತೆಗೆ ಇನ್ನೂ ಮೂವರನ್ನೂ ಅನ್ಯಾಯವಾಗಿ ದೇಹಾಂತ ಶಿಕ್ಷೆಗೆ ಈಡು ಮಾಡಿದುದಕ್ಕಾಗಿ ಈ ಸಭೆಯು ತೀವ್ರವಾಗಿ ನಿಷೇಧಿಸುತ್ತದೆ. (೨) ಸರಕಾರದ ದಬ್ಬಾಳಿಕೆಗೂ ದಂಡಿನವರ ಅತ್ಯಾಚಾರಗಳಿಗೂ ಎದೆಗೊಟ್ಟು ಧೈರ್ಯದಿಂದ ದುಃಖವನ್ನು ಸಹಿಸಿದ ಸೊಲ್ಲಾಪುರದ ನಾಗರಿಕರ ದುಃಖದಲ್ಲಿ ಈ ಸಭೆಯು ಕೂಡ ದುಃಖಭಾಗಿಯಾಗಿದೆ. (೩) ಸೊಲ್ಲಾಪುರದ ನಿವಾಸಿಗಳಿಗೆ ಅತ್ಯಂತವಾಗಿ ದುಃಖ ಕೊಟ್ಟ ಈ ಸರಕಾರದ ದಬ್ಬಾಳಿಕೆಯನ್ನೂ ದಂಡಿನವರ ಅತ್ಯಾಚಾರವನ್ನೂ ಈ ಸಭೆಯು ಅತ್ಯಂತವಾಗಿ ನಿಷೇಧಿಸುತ್ತದೆ. (೪) ಸೊಲ್ಲಾಪುರದಲ್ಲಿ ಸರಕಾರದ ದಬ್ಬಾಳಿಕೆಗೆ ಗುರಿಯಾಗಿ ತುರುಂಗದಲ್ಲಿದ್ದ ದೇಶಬಾಂಧವರನ್ನು ಅಭಿನಂದಿಸುತ್ತದೆ. (೫) ನಾವು ಆರಿಸಿಕೊಟ್ಟ ಕರ್ನಾಟಕದ ಕಾಯದೆ ಮಂಡಳದ ಸಭಾಸದರು ಮಹಾತ್ಮರನ್ನು ಸೆರೆ

ಹಿಂದಿದ ಬಗ್ಗೆ ತಮ್ಮ ತಮ್ಮ ಸ್ಥಳಗಳಿಗೆ ರಾಜೀನಾಮೆ ಕೊಟ್ಟ ಪ್ರತಿನಿಧಿಗಳನ್ನು ಈ ಸಭೆಯು ಅಭಿನಂದಿಸುತ್ತದೆ. ರಾಜೀನಾಮೆ ಕೊಡದೆ ಇದ್ದ ಪ್ರತಿನಿಧಿಗಳಿಗೆ ತೀವ್ರವಾಗಿ ಅವರಾದರೂ ತಮ್ಮ ಸ್ಥಳಗಳಿಗೆ ರಾಜೀನಾಮೆ ಕೊಡಬೇಕಾಗಿ ಒತ್ತಾಯ ಮಾಡುತ್ತದೆ. (೬) ಇಲಕಲ್ಲ [illegible] ಕನ್ನಡ ೧ ನೆಯ ನಂಬರ ಶಾಲೆಯ [illegible] ಟನ ಮಟಂ[illegible] ಗಾಂಧಿ ಟೋಪಿ [illegible] ಹಾಕಿದ್ದರಿಂದ ಕರಿಯಬೇಕೆಂತಲೂ ಹಾಗೂ [illegible] ಯಲ್ಲಿ ಈ ಬಗ್ಗೆ ಸೂಚನೆಯನ್ನು ಜಾಬೇರಾರಿಯೂ ಅಧ್ಯಕ್ಷರಿಗೆ ವಿನಂತಿ ಮಾಡಿಕೊಳ್ಳುತ್ತದೆ.

## ಸೈಮನ್ ಸಪ್ತಕದ ವರದಿಯ ಸಾರ

ಸಾಯಮನ್ ಸಪ್ತಕದ ವರದಿಯ ಮೊದಲನೇ ಭಾಗವು ತಾ|| ೧೦ ನೆಯ ದಿವಸ ಪ್ರಸಿದ್ಧವಾಗಿದೆ. ವರದಿಯು ೪೦೯ ಪುಟಗಳದಿದೆ. ಅದರ ಸಾರಾಂಶವೆಂದರೆ—

"ಇಂಗ್ಲಂಡದ ಎಲ್ಲ ಸಭಾಸದರು ಇಂಗ್ಲೀಷರೇ ಇರುತ್ತಾರೆ. ಇದಕ್ಕಾಗಿ ಹಿಂದುಸ್ಥಾನದ ಎಷ್ಟೋ ಜನರು ಸಿಟ್ಟಿಗೆದ್ದಾರು. ಈ ಸಿಟ್ಟನ್ನು ಕಡಿಮೆ ಮಾಡುವ ಉದ್ದೇಶದಿಂದ ನಾವು ಹಿಂದೀ ಜನಾಂಗದ ಸಹಾಯವನ್ನು ತೆಗೆದುಕೊಂಡೆವು. ಹಿಂದೀ ಜನರಿಗೆ ಸಿಟ್ಟು ಬಂದಿದ್ದರ ಕಾರಣವನ್ನು ನಾವು ಒಪ್ಪಿವು ಅದರಿಂದ ಅವರ ಸ್ವಾಭಿಮಾನಕ್ಕೆ ಸ್ವಲ್ಪ ಪೆಟ್ಟನ್ನು ಕೊಟ್ಟಂತಾಯಿತು. ಪಾರ್ಲಿಮೆಂಟಿದವರ ಕೇಳಿಕೆಗೆ ಮನ್ನಣೆಯನ್ನು ಕೊಟ್ಟು ನಾವು ನಮ್ಮ ಮೇಲೆ ತೆಗೆದುಕೊಂಡ ಈ ಕಾರ್ಯವು ಹಿಂದುಸ್ಥಾನದ ಹಿತಕ್ಕಾಗಿಯೇ ಇದೆ ಎಂಬುದನ್ನು ಹಿಂದೀ ಜನರು ತಿಳಿದುಕೊಳ್ಳುವರಾಗಿ ಆಶಿಸುತ್ತೇವೆ.

ಬಾಹೇರಿನವರಿಗೆ ಹಿಂದುಸ್ಥಾನದಲ್ಲಿಯ ಸ್ಥಿತಿಗತಿಯ ನಿಜ ಸ್ವರೂಪವನ್ನು ನಾವು ತಿಳಿಸಬೇಕಾಗಿದೆ. ನಿರ್ಣಯವೆಂದು ಏನನ್ನೂ ಕೊಡುವದಿಲ್ಲ. ನಮ್ಮ ವರದಿಯ ಮೇಲಿಂದ ನಿರ್ಣಯವನ್ನು ಮಾಡುವದಕ್ಕಿಂತ ಪೂರ್ವದಲ್ಲಿ ಹಿಂದುಸ್ಥಾನ ದಲ್ಲಿಯ ಪ್ರತಿಯೊಂದು ವರ್ಗದ ಪ್ರತಿನಿಧಿಗಳ ಮತಗಳನ್ನು ತಿಳಿದುಕೊಳ್ಳುವದರಲ್ಲಿ ಬರುವದು ರಾಷ್ಟ್ರೀಯ ಚಳವಳಿಗೂ ಬಹುಜನ ಸಮಾಜಕ್ಕೂ ವಿಶೇಷ ಸಂಬಂಧವಿಲ್ಲ. ಹಿಂದುಸ್ಥಾನದ ಲೋಕಸ್ವಾತಂತ್ರ್ಯ ಪ್ರಿಯರ ಅಭಿಪ್ರಾಯಗಳನ್ನೇ ಮುಂದಾಳುಗಳು ವ್ಯಕ್ತವಾದ ತತ್ತ್ವರೆಂದು ಹೇಳಲು ಬರಲಾರದು. ಆದರೂ ರಾಜಕೀಯ ಮುಖಂಡರು ವ್ಯಕ್ತಮಾಡುವ ಅಭಿಪ್ರಾಯಗಳೇ ಹಿಂದುಸ್ಥಾನದ ಲೋಕಮತವೆಂದು ಹೇಳಬಹುದು. ಯಾಕೆಂದರೆ ರಾಷ್ಟ್ರೀಯ ಚಳವಳಿಯಲ್ಲಿ ಬಹುಜನ ಸಮಾಜದ ಬೇರೆ ಬೇರೆ ಮತಗಳ ಸಾರವು ಅಡಕವಾಗಿದೆ ಒಕ್ಕಲತನ ಮಾಡುವವರು ಹಳ್ಳಿಗಳ ವಿಷಯವಾಗಿ ಹೇಳಿದ ಸಂಗತಿಗಳು ನಿಜವಾಗಿವೆ. ಒಕ್ಕಲಿಗರ ಹಿತಕ್ಕಾಗಿ ಸರಕಾರಿ ಅಧಿಕಾರಿಗಳು ಮತ್ತು ಮಂತ್ರಿಗಳು ಬಹಳ ಕಷ್ಟಪಡುತ್ತಿರುವರು. ಅವರ ಪ್ರಯತ್ನದಿಂದ ಹಿಂದುಸ್ಥಾನದ ಸಾಂಪತ್ತಿಕ ಸ್ಥಿತಿಯು ಬಹಳ ಸುಧಾರಿಸುತ್ತದೆ.

ಪಟ್ಟಣಗಳಲ್ಲಿ ಹಿಂದೀ ಜನರ ವ್ಯಾಪಾರ ಮತ್ತು ಉದ್ಯೋಗಗಳು ಬೆಳೆದಿವೆ. ಪಟ್ಟಣಗಳಲ್ಲಿರುವ ಕೆಲಸಗಾರರ ಸ್ಥಿತಿಯು ಸಾಧಾರಣ ನೆಟ್ಟಗಿದೆ. ಸುಶಿಕ್ಷಿತರ ಸ್ಥಿತಿಯು ಮಾತ್ರ ಇದಕ್ಕೂ ಬೇರೆಯಾಗಿದೆ. ಸುಶಿಕ್ಷಿತರು ಪಟ್ಟಣಗಳಲ್ಲಿ ವಾಸಿಸುವರು, ಇಂಗ್ಲೀಷ ಭಾಷೆಗಳಲ್ಲಿ ವಿಚಾರಮಾಡುವರು, ಪಾಶ್ಚಾತ್ಯ ಸುಧಾರಣೆ ಮತ್ತು ರಾಜಕಾರಣದ ತತ್ವಗಳನ್ನು ತಮ್ಮಲ್ಲಿ [illegible] ಕೊಳ್ಳುವರು.

(ಮುಂದೆಸಾಗುವದು)

## ಮೈಮೇಲೆ ಕತೆಯನ್ನು ಬರೆದುಕೊಂಡ ವಿಚಿತ್ರ[illegible]

ಅಮೇರಿಕಾದ ಜೇಲಿನಲ್ಲಿರುವ ಒಬ್ಬನೊಬ್ಬ ಕೈದಿಯು ಮೈಮೇಲೆ ಚಿತ್ರಸಹಿತವಾಗಿ ೨೧ ಅಧ್ಯಾಯಗಳುಳ್ಳ ಒಂದು ಸಣ್ಣ ಕತೆಯನ್ನು ಅಚ್ಚು ಹೊಯ್ದಿರುವರು. ಕಳೆದ ಫ[illegible] ಯುದ್ಧದ ಚಿತ್ರಗಳೂ ಅವನ ಮೈಮೇಲೆ ಇರುವವು. ಇದನ್ನು ಓದುವದಕ್ಕೆ ಸುಮಾರು ಮೂರು ಗಂಟೆಗಳ ಕಾಲ ಹಿಡಿ[illegible] ವದು. ಹಣೆಯ ಮೇಲ್ಭಾಗದಿಂದ ಹಿಡಿದು ಉಂಗುಷ್ಠದ ವರೆಗೆ ಅಚ್ಚೇ ಹೊಯ್ದಿರುವರು. ಈತನನ್ನು ಪ್ರದರ್ಶಿಸಲು ಅನೇಕರು ಇಚ್ಛಿಸುತ್ತಿರುವದರಿಂದ ಈತನ ಶಿಕ್ಷೆಯನ್ನು ಕಡಿಮೆ ಮಾಡಿ ಬಿಡುಗಡೆ ಮಾಡುವ ಯೋಜನೆಯಲ್ಲಿರುವರು.

## ಜಾಹೀರ ವಿನಂತಿ.

ಇಲ್ಲಿಯ ರ| ಬಾ| ವಾರದ ಫ್ರೀಬೋರ್ಡಿಂಗು ೯-೬-೩೦ ನೇ ದಿನ್ಸ ಸುರುವು ಆಗಿರುವದು. ಹೊಸದಾಗಿ ಸೇರ್ಪಡಿಸುವ ವಿದ್ಯಾರ್ಥಿಗಳು ತಾ|| ೨೮-೬-೩೦ ನೇ ದಿನದೊಳಗೆ ಅರ್ಜಿ ಮಾಡಿಕೊಳ್ಳತಕ್ಕದ್ದು. ಆ ಅರ್ಜಿಯೊತನೆ ಬಡತನದ ಬಗ್ಗೆ ಗ್ರಾಮಸ್ಥರ ಮತ್ತು ಸಭ್ಯಗೃಹಸ್ಥರ ಶಿಫಾರಸುಗಳನ್ನು ಮತ್ತು ನಡತೆಯ ಮತ್ತು ಅಭ್ಯಾಸದ ಬಗ್ಗೆ ಶಾಲಾ ಮಾಸ್ತರರ ಸರ್ಟಿಫಿಕೇಟನ್ನು ಕಳಿಸಬೇಕು. ಹೀಗೆ ಮಾಡದ ಅರ್ಜಿ ಸ್ವೀಕರಿಸಲಾಗದು.

ಬಾಗಲಕೋಟೆ

ತಾ|| ೧೬-೬-೩೦

ತಮ್ಮ
ಗದಿಗೆಪ್ಪ ಬಂಗ್ರಪ್ಪ [illegible]
ಕಾರ್ಯದರ್ಶಿ

ವೀರಶೈವ ತರುಣ ಸಂಘ


ಶ್ರೀ ಮಹಾಲಕ್ಷ್ಮೀ ಪ್ರಸಾದಿಕ
ಶ್ರೀ ಹಟ್ಟಿ ನಾಟಕ ಮಂಡಳಿಯವರು
ಶಿವಾನಂದ ನಾಟಕ ಶಾಲೆಯಲ್ಲಿ
ಬುಧವಾರ ತಾ|| ೧೮—೬—೩೦ ದಿವಸ
ತಮ್ಮ ಲೋಕಪ್ರಿಯವಾದ
ಸಂಪೂರ್ಣ ಕೃಷ್ಣಲೀಲಾ
ಎಂಬ ನಾಟಕವನ್ನು ಅಭಿನಯಿಸುವ[illegible]
ಎಚ್, ವೆಂಕೋ[illegible]
ಪ್ರೊಪ್ರಾಯಟ[illegible]


ಈ ಪತ್ರಿಕೆಯು ಒಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣ ಮಂದಿರದಲ್ಲಿ ಮುದ್ರಿತವಾಗಿ ಅವರಿಂದಲೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಗುರುವಾರ ಮಿತಿ ಜ್ಯೇಷ್ಠ ಬಹುಳ ೮ ಶಕೆ ೧೮೫೨ ತಾ|| ೧೯—೬—೩೦ ಸಂಚಿಕೆ ೭೮



## ರಾಷ್ಟ್ರಧ್ವಜದ ಮಹತ್ವ

ಜಗತ್ತಿನ ಪ್ರತಿಯೊಂದು ರಾಷ್ಟ್ರವೂ ತನ್ನ ರಾಷ್ಟ್ರೀಯತ್ವದ ದ್ಯೋತಕವಾದ ಒಂದು ಧ್ವಜವನ್ನು ಗೊತ್ತುಮಾಡಿಕೊಂಡು ಅದರ ಸಂರಕ್ಷಣೆಗಾಗಿ ಸರ್ವಸ್ವವನ್ನು ಕೊಡಲು ಸಿದ್ಧವಿರುವದು. ಹಿಂದುಸ್ಥಾನವು ಒಂದು ರಾಷ್ಟ್ರವು. ತನ್ನ ರಾಷ್ಟ್ರೀಯತ್ವವನ್ನು ಜಗತ್ತಿಗೆ ತೋರಿಸುವದಕ್ಕಾಗಿ ತಾನೂ ಒಂದು ಧ್ವಜವನ್ನು ನಿರ್ಮಿಸಿಕೊಂಡಿದೆ. ಈ ಧ್ವಜದ ಮಹತ್ವವು ದೇಶದಲ್ಲೆಲ್ಲ ಕಡೆಯಲ್ಲಿಯೂ ಬಹಳಾಗಿ ಮನವರಿಕೆಯಾಗಿ ಹೋಗಿದೆ. ಪ್ರತಿಯೊಬ್ಬ ಹಿಂದಮಾತೆಯ ಪುತ್ರನು ಈ ಧ್ವಜವನ್ನು ತನ್ನ ಜೀವಕ್ಕಿಂತಲೂ ಹೆಚ್ಚಾಗಿ ಪ್ರೀತಿಸುವನು. ಅದರ ಸಂರಕ್ಷಣೆಗಾಗಿ ತನ್ನ ದೇಹವನ್ನಾದರೂ ಪ್ರಸಂಗ ಬಿದ್ದಲ್ಲಿ ನಿವಾಳಿಸಿ ಒಗೆಯುವನು ಎಂಬ ಮಾತು. ಈಗ ಕೃತಿಯಲ್ಲಿ ಒಂದ ಉದಾಹರಣೆಗಳು ಎಷ್ಟೋ ಇವೆ ನಾಗಪೂರ ಸತ್ಯಾಗ್ರಹ ಕಾಲದಲ್ಲಿ ನಾವಿದಾರು ಹಿಂದೀ ತರುಣರು ಈ ಸಂಗತಿಯ ಸತ್ಯತೆಯನ್ನು ಜಗತ್ತಿನ ನಿದರ್ಶನಕ್ಕೆ ತಂದುಕೊಟ್ಟರು ನಾಗಪೂರದಲ್ಲಿ ಹಿಂಡುಹಿಂಡಾಗಿ ಸ್ವಯಂಸೇವಕರು ಸತ್ಯಾಗ್ರಹವನ್ನು ಕೈಕೊಂಡು ಸೆರೆಯಾಳುಗಳಾದರೂ, ಹೊಸ ಸ್ವಯಂಸೇವಕರು ಹುರುಪಿನಿಂದ ಅಲ್ಲಿಗೆ ಹೋಗಿ ತಮ್ಮ ದೇಶಪ್ರೇಮವನ್ನು ತೋರಿಸಿದರು ರಾಷ್ಟ್ರಧ್ವಜದ ಸತ್ಯಾಗ್ರಹವು ವಿರಾಟ ಸ್ವರೂಪವನ್ನು ತಾಳಿತು. ಈ ವಿರಾಟ ಸ್ವರೂಪದ ಎದುರಿಗೆ ನಿಲ್ಲಲು ಸರಕಾರಕ್ಕೆ ಧೈರ್ಯವಾಗಲಿಲ್ಲ. ಅದು ಬೆದರಿತು. ಕಡೆಗೆ ಬಗ್ಗಿತು, ಭಾರತಮಾತೆಯ ತರುಣ ಪುತ್ರರು ತಮ್ಮ ಇಷ್ಟಾರ್ಥವನ್ನು ಸಿದ್ಧಿಗೊಯ್ದರು. ಪತಾಕೆಯನ್ನು ಊರಲ್ಲೆಲ್ಲ ಬಹು ವಿಜೃಂಭಣೆಯಿಂದ ಮೆರೆಸಿದರು ಸೊಲ್ಲಾಪುರದಲ್ಲಿಯೂ ಈ ಬಗೆಯ ವಿಜಯ ಚಿನ್ಹಗಳು ಅತ್ಯಲ್ಪ ಕಾಲದಲ್ಲಿಯೇ ಕಂಡುಬರುವವು. ಕನ್ನಡ ನಾಡಿನ ತರುಣರಿಗೂ ಸಹ ಈ ಕೆಲಸಕ್ಕೆ ಕೈಹಾಕಿರುವರು. ಈ ಸಂಗತಿಯು ಕರ್ನಾಟಕಕ್ಕೆ ಅತಿ ಭೂಷಣಾಸ್ಪದವಾಗಿರುವದು. ಬಾಗಲಕೋಟೆಯ ನಾಗರಿಕರ ಮುಂದೆಯೂ ಈ ಪ್ರಶ್ನೆಯು ಬಂದು ನಿಂತಿದೆ. ವಿಜಾಪುರ ಜಿಲ್ಲೆಯಲ್ಲಿಯ ರಾಷ್ಟ್ರೀಯ ಚಳವಳಿಯ ಗಂಡುಮೆಟ್ಟಾದ ಬಾಗಲಕೋಟೆಯ ಗಂಡುಗಲಿಗಳು ಏನು ಮಾಡುವರೋ ನೋಡಬೇಕು. ಊರೊಳಗಿನ ಎಲ್ಲ ಪ್ರಮುಖ ನಾಗರಿಕರು ಈ ಪ್ರಶ್ನೆಯ ಬಗ್ಗೆ ವಿಚಾರ ಮಾಡುವರೆಂದು ನಮಗೆ ಪೂರ್ಣ ವಿಶ್ವಾಸವಿದೆ.

—ಒಬ್ಬ ನಾಗರಿಕ

## ಗುಳೇದಗುಡ್ಡದಲ್ಲಿ ಅಪೂರ್ವ ಉತ್ಸಾಹ

### ನೂಲಿನ ಮಾಲೆಗೆ ೧೬ ರೂ

ತಾ|| ೧೩ನೆಯ ದಿವಸ ಶ್ರೀ. ಶಿವಬಸಪ್ಪ ಹೊಸಮನಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು ೮-೧೦ ಸಾವಿರ ಜನರು ಸಭೆಗೆ ನೆರವಿದ್ದರು. ಶ್ರೀವ.ತಿ ಕುಂದಾಪುರ ಉಪಾಧ್ಯಾಯಿಯವರು "ಸ್ವದೇಶಿ" ಯ ಸಂಬಂಧವಾಗಿ ಭಾಷಣಮಾಡಿದರು. ಡಾ|| ಹರ್ಡೀಕರರು ಸಧ್ಯದ ಚಳವಳಿಯ ವಿಷಯದಾಗಿ ಭಾಷಣ ಮಾಡಿ, ಶ್ರೀ. ಜೋರಾಪುರ ಗುರುರಾಯರ ಕೊರಳಲ್ಲಿ ಹಾಕಿದ ನೂಲಿನ ಮಾಲೆಯನ್ನು ಲಿಲಾವ ಮಾಡಿದರು. ಅದು ೧೬ ರೂ. ಗಳಿಗೆ ಲಿಲಾವ ಆಯಿತು. ಶ್ರೀ. ಗೋವಾಳ ರಾಮಚಂದ್ರ ದಾಡಿಬೆಯವರು ತಮ್ಮ ೨೦೦ ಸಿಂದೀ ಗಿಡಗಳನ್ನು ಕಡಿಯಲಿಕ್ಕೆ ಕಾಂಗ್ರೆಸದವರಿಗೆ ಒಪ್ಪಿಸಿದರು. ಸಿಂದೀ ಗಿಡಗಳನ್ನು ಕಡಿಯಲು ೨೦ ಸ್ವಯಂಸೇವಕರು ಸಿದ್ಧರಾದರು. ಭಾರತಮಾತೆಯ ಜಯಜಯಕಾರದೊಂದಿಗೆ ಸಭೆಯು ವಿಸರ್ಜನೆಯಾಯಿತು.

## ವಿಜಾಪುರದಲ್ಲಿ ಸೆರೆ ಸಿಂದೀ ಪಿಕೆಟಿಂಗ

ವಿಜಾಪುರ ಜಿಲ್ಲೆಯ ಸಿಂದೀ ಸೆರೆಯ ಅಂಗಡಿಗಳ ಲಿಲಾವ ಆಗತಕ್ಕದ್ದಿದೆ. ಅಗ್ಗೆ ಅಲ್ಲಿಯ ಕೆಲವು ಪ್ರಮುಖರು ಪಿಕೆಟಿಂಗ ಮಾಡುವವರಿದ್ದಾರೆ. ಅದರ ಸಲುವಾಗಿ ಶ್ರೀ. ದೇಶಪಾಂಡೆ ವಕೀಲ, ಬಾಜೀರಾವ ಮಂತ್ರಿ ನಂದುಳಾರಾಧ್ಯ ಸ್ವಾಮಿಗಳು ಪ್ರಚಾರ ಕಾರ್ಯವನ್ನು ಉತ್ಸಾಹದಿಂದ ಸಾಗಿಸಿದ್ದಾರೆ.

# ಸೊಲ್ಲಾಪುರದ ರಾಷ್ಟ್ರಧ್ವಜ ಸತ್ಯಾಗ್ರಹ

### ಸತ್ಯಾಗ್ರಹಿಯು ಪಿಸ್ತೂಲಿಗೆ ಎದೆಯನ್ನು ಮುಂದೆ ಮಾಡಿದನು.

ನ. ೦೬ಯಿಂದ ೧೦ ನೆಯ ತಾ|| ಗೆ ಹೊರಟಿದ್ದ ನಾವು ಒಟ್ಟು ೧೧೭ ಸತ್ಯಾಗ್ರಹಿಗಳಿದ್ದೆವು. ಅವರಲ್ಲಿ ಕರ್ನಾಟಕದವರು ೩೮ ಮಂದಿ. ಸೊಲ್ಲಾಪುರಕ್ಕೆ ೮ ಮೈಲು ದೂರದಲ್ಲಿರುವ ಸ್ಟೇಶನದಲ್ಲಿ ಇಳಿದು, ಸ್ನಾನಮಾಡಿ, ಬುತ್ತಿಯನ್ನು ತಿಂದು ಎರಡು ಸಾಲಿನಲ್ಲಿ ನಡೆದು ಸೊಲ್ಲಾಪುರದ ದಾರಿ ಹಿಡಿದೆವು. ಸ್ವಲ್ಪ ದೂರ ನಡೆದು ಹೋಗುವಷ್ಟರಲ್ಲಿ ಒಬ್ಬ ಯುರೋಪಿಯನ್ ಸಾರ್ಜಂಟನು ಇಪ್ಪತ್ತು ಶಿಪಾಯರೊಡನೆ ಬಂದನು. ಸಾರ್ಜಂಟನು ಶ್ರೀ ವೈ. ಎಂ. ದರಗಳ ಎಂಬ ಸತ್ಯಾಗ್ರಹಿಯ ಎದೆಗೆ ಪಿಸ್ತೂಲು ಹಚ್ಚಿ "ನಿಮ್ಮ ನಾಯಕನು ಯಾರು? ಎಂದು ಇಂಗ್ಲೀಷದಲ್ಲಿ ಕೇಳಿದನು. ಸತ್ಯಾಗ್ರಹಿಗೆ ಇಂಗ್ಲೀಷ ಬರುತ್ತಿರಲಿಲ್ಲ. ಅವನು ಹೆದರದೆ ಎದೆಯನ್ನು ಬಿಚ್ಚಿ" ಹೊಡೆಯುವದಾದರೆ ಹೊಡಿ ಅದಕ್ಕೆ ಸಿದ್ಧನಾಗಿಯೇ ಬಂದಿದ್ದೇನೆ" ಎಂದನು. ಸಾರ್ಜಂಟನು ಸ್ವಯಂಸೇವಕನ ಧೈರ್ಯಕ್ಕೆ ಮೆಚ್ಚಿದನು. ಸತ್ಯಾಗ್ರಹಿಗಳ ದಳದ ನಾಯಕರಾದ ಆರ್. ಚಂದ್ರಶೇಖರರಾವ ಎಂಬ ಸತ್ಯಾಗ್ರಹಿಯು ಮುಂದೆ ಬಂದು "ನಾನು ಈ ದಳದ ನಾಯಕನು." ಎಂದು ಹೇಳಿದನು. ಸಾರ್ಜಂಟನು ಸ್ವಲ್ಪ ಸಮಯದ ನಂತರ ದಳವನ್ನು ಹಿಂಬಾಲಿಸಿ ನಡೆದನು.

ಸೊಲ್ಲಾಪುರವು ಒಂದು ಮೈಲು ಇರುವಾಗ ಮೂರು ಮೂರು ಮಂದಿಯು ಗುಂಪಾಗಿ ರಾಷ್ಟ್ರೀಯ ಧ್ವಜವನ್ನು ಹಿಡಿದು ಊರೊಳಗೆ ಹೊಕ್ಕರು. ಸತ್ಯಾಗ್ರಹಿಗಳು ಊರೊಳಗೆ ಹೊಕ್ಕ ಕೂಡಲೆ ಶಿಪಾಯರು ಅವರನ್ನು ಹಿಡಿದು ಬಡಿದು ಧ್ವಜವನ್ನು ಕಿತ್ತುಕೊಂಡರು. ಎಲ್ಲ ಸತ್ಯಾಗ್ರಹಿಗಳು ಬಂದ ಮೇಲೆ ಎಲ್ಲರನ್ನೂ ಪೋಲೀಸ ಚಾವಡಿಗೆ ಒಯ್ದರು. ಅಲ್ಲಿ ಒಬ್ಬೊಬ್ಬರನ್ನಾಗಿ ಒಳಗೆ ಒಯ್ದು ಟೊಪ್ಪಿಯನ್ನೂ ಬಿಚ್ಚಿ ಪರೀಕ್ಷಿಸಿ ಹೆಚ್ಚಿಗೆ ಇದ್ದ ಬಟ್ಟೆಗಳನ್ನು ಪರೀಕ್ಷಿಸಿ ಖಾದಿ ವಸ್ತ್ರಗಳನ್ನೂ ಮತ್ತು ಧ್ವಜ ಬಿಲ್ಲೆಗಳನ್ನೂ ಕಸಿದುಕೊಂಡರು. ಕಲೆಕ್ಟರನು ಧ್ವಜಗಳನ್ನೆಲ್ಲ ಗಂಟುಕಟ್ಟಿ ಫುಟಬಾಲಿನಂತೆ ಒದೆದಾಡಿದನು. ಆಯಾಸವಾಗಿ ಬಾಯಾರಿದರೂ ಸತ್ಯಾಗ್ರಹಿಗಳು ನೆರಳಿನಲ್ಲಿ ಕೂತರೆ ಅವರನ್ನು ಬೂಟುಗಾಲಿನಲ್ಲಿ ಒದ್ದು ಬಿಸಿಲಿಗೆ ಕಳುಹಿಸಿದನು. ಒಬ್ಬ ಬಿಳೀ ಅಧಿಕಾರಿಯು ಮಾತ್ರ ಶಿಪಾಯರಿಗೆ "ಮಾರೋ ನಕೋ" ಎಂದು ಆಗಾಗ್ಗೆ ಹೇಳುತ್ತಿದ್ದನು. ಅನಂತರ ಸ್ವಯಂಸೇವಕರನ್ನು ಬೇರೆ ಬೇರೆ ಗುಂಪು ಮಾಡಿ ಮೋಟಾರಿನಲ್ಲಿ ಒಯ್ದು ಕಾಡಿನಲ್ಲಿ ಬಿಟ್ಟರು. ಅಲ್ಲಿಂದ ದಾರಿ ವಿಚಾರಿಸಿಕೊಂಡು ಹಳ್ಳಿಗಳ ಮೇಲೆ ಪ್ರವಾಸ ಮಾಡಿ ಹುಟಗಿ ಸ್ಟೇಶನಿಗೆ ಬಂದು ರೈಲು ಹತ್ತಿದೆವು.

ನಮ್ಮ ಸತ್ಯಾಗ್ರಹಿ ದಳವನ್ನು ನೋಡಿ ಬಿಳೇ ಸಾರ್ಜಂಟನು "ನೀವು ಬಹಳ ಶಿಸ್ತಿನಿಂದ ನಡೆದಿದ್ದೀರಿ ಧೈರ್ಯ ಮತ್ತು ಅಹಿಂಸೆಯನ್ನು ಬಿಡಲಿಲ್ಲ, ಅಂತೆ ನಾನು ನಿಮಗೆ ಹಿಂಸೆ ಮಾಡಿಲ್ಲ. ನೀವೇನಾದರೂ ಹೆದರಿ ಓಡಲಿಕ್ಕೆ ಯತ್ನಿಸಿದರೆ ನಿಮ್ಮ ಮೇಲೆ ಗುಂಡು ಹಾರಿಸಿ ಕೊಲ್ಲುತ್ತಿದ್ದೆನು" ಎಂದನು.

ಒಬ್ಬ ಸತ್ಯಾಗ್ರಹಿ

### ಸೊಲ್ಲಾಪುರದಲ್ಲಿ ಶಿಕ್ಷೆಗೆ ಗುರಿಯಾದ ೧೧ ಜನ ಕನ್ನಡ ವೀರರು.

ಸೊಲ್ಲಾಪುರದಲ್ಲಿ ನಡೆದ ರಾಷ್ಟ್ರಧ್ವಜದ ಸತ್ಯಾಗ್ರಹಕ್ಕೆ ಪುಣೆಯಿಂದ ಹೋದ ೧೭೭ ಜನರಲ್ಲಿ ೧೫ ಜನರನ್ನು ಸೆರೆಹಿಡಿದು ಶಿಕ್ಷಿಸಿದ್ದಾರೆ. ಶಿಕ್ಷೆಗೊಳಗಾದವರಲ್ಲಿ ೧೧ ಜನರು ಕನ್ನಡಿಗರಿದ್ದಾರೆ. ಅವರ ಹೆಸರುಗಳು:—

೧) ಡಿ. ಕೃಷ್ಣಮೂರ್ತಿ, ೨) ಆರ್. ಚಂದ್ರಶೇಖರರಾವ, ೩) ಡಬಲ್ಲಿ ರಾಮಚಂದ್ರರಾವ. ೪) ಕೆ. ವಿ. ಶ್ರೀನಿವಾಸಮೂರ್ತಿ ೫) ಕೆ. ಕೃಷ್ಣಸ್ವಾಮಿ, ೬) ಟಿ. ಆರ್. ಶಾಮಣ್ಣ, ೭) ಕೆ. ಎಚ್. ನಾರಾಯಣಮೂರ್ತಿ, ೮) ವೈ. ಎ. ರಾಮಚಂದ್ರನ್, ೯ ಸಿ. ಕೃಷ್ಣರಾವ, ೧೦) ಎಚ್. ನಾಗಲರಾಜ ಮಾಲಿಪಾಟೀಲ, ೧೧ ಶಾಂತಾರಾಮ ದೇಸಾಯಿ. ಪ್ರತಿಯೊಬ್ಬರಿಗೂ ೯ ತಿಂಗಳ ಸಕ್ತ ಶಿಕ್ಷೆ ಮತ್ತು ೨೦ ರೂ. ದಂಡ ತಪ್ಪಿದಲ್ಲಿ ಮತ್ತೆ ೩ ತಿಂಗಳ ಹೆಚ್ಚಿನ ಶಿಕ್ಷೆ ವಿಧಿಸಲಾಗಿದೆ. ಇವರೆಲ್ಲರೂ ಈಗ ವಿಜಾಪುರ ತುರಂಗದಲ್ಲಿದ್ದಾರೆ.

### ಹುಬ್ಬಳ್ಳಿಯಲ್ಲಿ ಲಷ್ಕರದ ಹೆದರಿಕೆ.

"ಹುಬ್ಬಳ್ಳಿಯಲ್ಲಿ ಲಷ್ಕರ ಬಂದಿದೆಯೆಂದು ಸುದ್ದಿಯು ಹಬ್ಬಿದ್ದು, ಈ ಸುದ್ದಿಯನ್ನು ನಂಬಿ ಎಷ್ಟೋ ಜನರು ಪರಸ್ಥಳಕ್ಕೆ ಹೋಗಹತ್ತಿದ್ದಾರೆ. ಈ ಸುದ್ದಿಯು ಸುಳ್ಳು ಇರುತ್ತದೆ. ಆದ್ದರಿಂದ ನಗರವಾಸಿಗಳು ಹೆದರಬಾರದು. ಸದ್ಯದ ಕಾಲದಲ್ಲಿ ಇಂತಹ ಸುದ್ದಿಗಳು ಏಳಬಹುದು. ಇಂತಹವುಗಳನ್ನು ನಂಬಿ ಜನರು ಚಿಂತಾಕ್ರಾಂತರಾಗುವದು ಯೋಗ್ಯವಲ್ಲ" ಎಂದು ಶ್ರೀ ಪಾಟೀಲ ಸಿದ್ರಾಮಪ್ಪನವರು ಪ್ರಸಿದ್ಧಿಸಿದ್ದಾರೆ. 'ಯಾರೋ ಹತ್ತು ಹನ್ನೆರಡು ಬಿಳಿ ಜನರು ಶ್ರೀ ಸಿದ್ಧಾರೂಢ ಮಠದ ದಿಕ್ಕಿಗೆ ಬಂದಿದ್ದೇನೋ ನಿಜ ಆದರೆ ಅವರು ಅವರದೇ ತಮ್ಮ ಕೆಲಸಕ್ಕೆ ಬಂದಿದ್ದರೆಂದೂ ಅವರಿಗೂ ಹುಬ್ಬಳ್ಳಿಯಲ್ಲಿಯ ಪರಿಸ್ಥಿತಿಗೂ ಸಂಬಂಧವಿಲ್ಲವೆಂದೂ, ಆದುದರಿಂದ ನಾಗರಿಕರು ಗಾಬರಿಗೊಳ್ಳುವ ಕಾರಣವಿಲ್ಲವೆಂದೂ" ಸತ್ಯಾಗ್ರಹ ಮಂಡಳದವರು ಪ್ರಕಟಿಸಿದ್ದಾರೆ.

### ಕಲಕತ್ತೆಯಲ್ಲಿ ೧೨೦ ಜನರನ್ನು ಸೆರೆಹಿಡಿದರು.

ಕಲಕತ್ತೆಯ ಪೋಲೀಸರು ಬಂಗಾಲ ಪ್ರಾಂತಿಕ ಕಾಂಗ್ರೆಸ ಕಮಿಟಿ, ಮತ್ತು ಅದರ ಇನ್ನೆರಡು ಶಾಖೆಗಳನ್ನು ನುಗ್ಗಿ ಒಟ್ಟಿಗೆ ೧೨೦ ಜನರನ್ನು ಸೆರೆಹಿಡಿದುಕೊಂಡು ಹೋದರು.

# ಮುಂಬಯಿಯಲ್ಲಿಯ ದಬ್ಬಾಳಿಕೆ

ಮುಂಬಯಿಯ

## ಸತ್ಯಾಗ್ರಹ ಮಂಡಳದ ಅಧಿಕಾರಿಗಳಿಗೆ ೬ ತಿಂಗಳ ಸಶ್ರಮ ಶಿಕ್ಷೆ

ಪೋಲೀಸ ಕಮೀಶನರನು ತೆಗೆದ ಕಟ್ಟಳೆಯ ವಿರುದ್ಧವಾಗಿ ಸೋಲ್ಲಾಪುರ ದಿನದ ಮೆರವಣಿಗೆಯಲ್ಲಿ ಭಾಗತೆಗೆದುಕೊಂಡದ್ದಕ್ಕಾಗಿ ಶ್ರೀ ಧರಾಧರ ಮತ್ತು ಮಂಜರೇಕರ ಇವರಿಗೂ ಕಾಂಗ್ರೆಸ್ ಬುಲೇಟಿನ್‌ದಲ್ಲಿ ಲೇಖವನ್ನು ಪ್ರಕಟಿಸಿ ಸೊಲ್ಲಾಪುರದ ದಿನದ ಮೆರವಣಿಗೆಯಲ್ಲಿ ಭಾಗ ತೆಗೆದುಕೊಳ್ಳಲು ಜನರಿಗೆ ಬೋಧಿಸಿದುದಕ್ಕಾಗಿ ಶ್ರೀ ಗಾಂಧಿಯವರಿಗೂ ೬ ತಿಂಗಳ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ. ಮೇಲಿನ ಮೂವರೂ ಮುಂಬಯಿ ಸತ್ಯಾಗ್ರಹ ಮಂಡಳದ ಅಧಿಕಾರಿಗಳಾಗಿದ್ದರು.

ಮುಂಬಯಿಯಲ್ಲಿ

## ೮೨ ಸತ್ಯಾಗ್ರಹಿಗಳಿಗೆ ೪ ತಿಂಗಳ ಸಶ್ರಮ ಶಿಕ್ಷೆ

ಮುಂಬಯಿಯಲ್ಲಿ ಪರದೇಶಿ ಬಟ್ಟೆಗಳ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುತ್ತಿದ್ದ ೮೨ ಸ್ವಯಂಸೇವಕರನ್ನು, ಪಿಕೆಟಿಂಗದ ವಿರುದ್ಧವಾಗಿ ವ್ಹಾಯಿಸರಾಯರು ಹೊರಡಿಸಿದ ಹೊಸ ಕಾನೂನಿನ ಅನ್ವಯ ಸೆರೆಹಿಡಿದು ತಾ|| ೧೬ ನೆಯ ದಿವಸ ಪ್ರತಿಯೊಬ್ಬರಿಗೂ ೪ ತಿಂಗಳ ಸಶ್ರಮ ಶಿಕ್ಷೆಯನ್ನು ವಿಧಿಸಿದ್ದಾರೆ. ಕಾಂಗ್ರೆಸ್ ಬುಲೆಟಿನ್‌ದ ಸಂಪಾದಕರಾದ ಶ್ರೀಯುತ ಮಾಣಿಕಲಾಲ ಗಾಂಧಿ ಮತ್ತು ಶ್ರೀ. ಮಂಜರೇಕರ ಇವರಿಬ್ಬರೂ ಸೆರೆಹಿಡಿಯಲ್ಪಟ್ಟಿದ್ದಾರೆ.

ಮುಂಬಯಿಯಲ್ಲಿ

## ಮತ್ತೊಬ್ಬ ಪಠಾಣನಿಗೆ ಹದ್ದುಪಾರು

ತಾ|| ೧೫ ನೆಯ ದಿವಸ ಮುಂಬಯಿಯಲ್ಲಿ ಸಿ. ಆಯ್. ಡಿ. ಇನಸ್ಪೆಕ್ಟರರು "ಕಾಬೂಲಿ" ಎಂಬ ಹೆಸರಿನ ಓರ್ವ ಪಠಾಣ ಸ್ವಯಂಸೇವಕನನ್ನು ಸೆರೆ ಹಿಡಿದು ಒಯ್ದಿದ್ದಾರೆ. ಮಿ. ಅಬ್ದುಲ್ ಗಫೂರರಂತೆ ಇವರಿಗಾದರೂ ಹದ್ದುಪಾರಿನ ಶಿಕ್ಷೆಯನ್ನು ವಿಧಿಸುವವರಿದ್ದಾರೆಂದು ತಿಳಿಯುತ್ತದೆ.

ಮುಂಬಯಿಯಲ್ಲಿ

## ವಾನರ ಸೈನ್ಯದ ಸಾಳಿದಾಟ.

### ಶ್ರೀ ದೇಸಾಯಿಯವರು ವಾನರರಾಜರಾದರು.

ಮುಂಬಯಿಯಲ್ಲಿಯ ಪ್ರಾಥಮಿಕ ಶಾಲೆಗಳ ಸುಮಾರು ೫೦೦ ಬಾಲಕರು ಕಾಂಗ್ರೆಸ್ ಭುವನಕ್ಕೆ ಹೋಗಿ ಅಲ್ಲಿಯ ಶ್ರೀ ಪಟೇಲ ದೇಸಾಯಿಯವರನ್ನು ತಮ್ಮ ವಾನರ ಸೇನೆಗೆ ನಾಯಕರನ್ನಾಗಿ ಆರಿಸಿಕೊಂಡು, ಕವಾಯತ ಮಾಡಿ ತೋರಿಸಿದರು; ಮತ್ತು ರಾಷ್ಟ್ರೀಯ ಜಯಜಯಕಾರಗಳನ್ನು ಕೂಗಿದರು. ಬರುವ ಆದಿತ್ಯವಾರ ದಿವಸ ಈ ವಾನರ ಸೈನ್ಯವು ಕಾಂಗ್ರೆಸದ ಕಾರ್ಯಕ್ರಮಗಳನ್ನು ಕೈಕೊಳ್ಳಲಿಕ್ಕಿದ್ದಿದೆ. ಈ ವಾನರ ಸೈನ್ಯದೊಳಗಿನ ಎಲ್ಲ ಬಾಲಕರೂ ೧೦ ವರ್ಷದೊಳಗಿನವರೇ ಇರುತ್ತಾರೆ.

## ಬರ್ಫದಿಂದ ಮಳೆ

ಹಾಲಂಡಿನ ರಾಜಧಾನಿಯಾದ ಅಮಸ್ಟರ್ಡಾಮದಲ್ಲಿ ಒಬ್ಬ ವೈಮಾನಿಕನು ತನ್ನ ವಿಮಾನದಲ್ಲಿ ೨೦೦೦ ಪೌಂಡ ತೂಕದಷ್ಟು ಬರ್ಫದ ಇಟ್ಟಂಗಿಗಳನ್ನು ಹಾಕಿಕೊಂಡು ೮೦೦೦ ಫೂಟು ಎತ್ತರವಾಗಿ ಹಾರಿ ಅಲ್ಲಿಂದ ಮೋಡಗಳ ಮೇಲೆ ಆ ಬರ್ಫದ ತುಂಡುಗಳನ್ನು ಒಗೆಯುತ್ತಿದ್ದನು, ಅವುಗಳ ಪೆಟ್ಟಿನಿಂದ ಮಳೆಯಾಗ ಹತ್ತಿತು. ಮುಂದೆ ಆ ಹೊಡೆತಗಳಿಂದ ದೊಡ್ಡ ಮಳೆಯೇ ಬಿತ್ತು.

## ಮಛುವಾ ಬಾಜಾರದ ಬಾಂಬಿನ ಖಟ್ಲೆ

### ಒಬ್ಬನಿಗೆ ಹದ್ದುಪಾರು.

### ಉಳಿದವರಿಗೆ ೩ ರಿಂದ ೭ ವರ್ಷ ಕಠಿಣ ಶಿಕ್ಷೆ.

ಕಲಕತ್ತೆಯಲ್ಲಿ ನಡೆದ ಮಛುವಾ ಬಾಜಾರದ ಬಾಂಬಿನ ಖಟ್ಲೆಯ ವಿಚಾರಣೆಯು ಮುಗಿದು ೧೭ ಆರೋಪಿಗಳಲ್ಲಿ ೧೭ ಜನರಿಗೆ ೩ ರಿಂದ ೭ ವರ್ಷಗಳ ವರೆಗೆ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ. ಆರೋಪಿಗಳ ಮುಂದಾಳುಗಳಾದ ಶ್ರೀ ನಿರಂಜನ ಸೇನಗುಪ್ತರಿಗೆ ೧೦ ವರ್ಷಗಳ ವರೆಗೆ ಹದ್ದುಪಾರಿನ ಶಿಕ್ಷೆಯೂ, ಶ್ರೀ ಸತೀಶ ಪಾಕ್ರಾಶಿಯವರಿಗೆ ೭ ವರ್ಷಗಳ ಕಠಿಣ ಶಿಕ್ಷೆಯೂ ಆಗಿದೆ. ಉಳಿದವರನ್ನು ಬಿಟ್ಟುಬಿಟ್ಟಿದಾರೆ.

## ಕಾರವಾರದಲ್ಲಿ ಸಿಂದೀ ಪಿಕೆಟಿಂಗ

### ಅಂಗಡಿಗೆ ಗಿರಾಕಿಗಳೇ ಇಲ್ಲ.

ಕಾರವಾರದ ೭ ಜನ ಸತ್ಯಾಗ್ರಹಿಗಳು ಶ್ರೀ ನಾಗೇಶಭಟ್ಟರ ನೇತೃತ್ವದಲ್ಲಿ ತಾ|| ೧೩ ನೆಯ ದಿವಸ ಕಾರವಾರದಲ್ಲಿ ಸಿಂದೀ ಅಂಗಡಿಯ ಪಿಕೆಟಿಂಗ ಶುರುಮಾಡಿದರು. ನೂರಾರು ಜನರು ಅಲ್ಲಿಗೆ ಬಂದು ಸೇರಿದರು. ಅಂಗಡಿಯವನು ಪೋಲೀಸ ಅಧಿಕಾರಿಗಳಿಗೆ ಪಿಕೆಟಿಂಗವನ್ನು ತಿಳಿಸಿದನು. ಕೂಡಲೆ ಫೌಜದಾರರೂ ಹವಾಲದಾರನೂ ಇಬ್ಬರೂ ಸಿಪಾಯರೂ ಅಲ್ಲಿಗೆ ಹೋದರು. ಮತ್ತು, ಮಾರ್ಗದ ಮಧ್ಯದಲ್ಲಿ ನಿಲ್ಲಬೇಡಿರೆಂದು ಅವರಿಗೆ ಹೇಳಿದರು. ಆ ಮೇಲೆ ಫೌಜದಾರರು ಸತ್ಯಾಗ್ರಹಿಗಳ ಹೆಸರುಗಳನ್ನು ಬರೆದುಕೊಂಡು ಹೋದರು. ಅಂದು ಅಂಗಡಿಗೆ ಯಾರೂ ಕುಡಿಯಲಿಕ್ಕೆ ಹೋಗದ್ದರಿಂದ ಒಂದು ರೂಪಾಯಿಯಾದರೂ ಅಂಗಡಿಕಾರನಿಗೆ ಸಿಗಲಿಲ್ಲ.

## ಕರ್ನಾಟಕದಲ್ಲಿ ಉಪ್ಪಿನ ಕಾಯಿದೆ ಭಂಗ.

### ೪ ಜನರನ್ನು ಸೆರೆಹಿಡಿದರು.

ತಾ|| ೧೩ ನೆಯ ದಿವಸ ಕಾರವಾರದಿಂದ ಕೆಲವರು ಗೋವನಾಂತರಕ್ಕೆ ಉಪ್ಪು ತೆಗೆಯಲು ಹೋಗಿದ್ದರು. ಗೋಮಾಂತಕ ಸರಕಾರದ ಪ್ರತಿಬಂಧವಿಲ್ಲವಾಗಿ ತಿಳಿದರು, ಆದರೆ ಅಲ್ಲಿ ಉಪ್ಪೇ ಇದ್ದಿದ್ದಿಲ್ಲ. ಶ್ರೀ ಗೋವಿಂದಶೆಟ್ಟಿ, ವಾಸುದೇವ ವಾಗಳೆ, ಕೃಷ್ಣ ನಾಯಕ ಕುಂಕೇರಿ ಈ ಮೂವರನ್ನು ಸೆರೆಹಿಡಿದು ಪೋಲೀಸರು ಕೈದಿನಲ್ಲಿಟ್ಟಿದ್ದಾರೆ. ಗದುಗಿನ ಶ್ರೀ ಕುಂದಿಯವರೂ ನಿನ್ನೆ ಸೆರೆಹಿಡಿಯಲ್ಪಟ್ಟಿದ್ದಾರೆ.

## ಬಿಳೀ ಜನರ ಗೋಳಾಟ

ಕೆಲವು ದಿವಸಗಳ ಹಿಂದೆ ಚಮನ ಭಾಗದ ಸರಹದ್ದಿಯ ಕೆಲವು ಟೋಳಿಗಳ ಕಾಡು ಜನರು ಮೇಜರ ಫಾಲಿ, ಕ್ಯಾಪ್ಟನ್ ಫ್ರೇರಿ ಮತ್ತು ಮಿಸೆಸ್ ಫ್ರೇರಿ ಮತ್ತು ಅವರ ಮೋಟಾರ ಹೊಡೆಯುವವರಿಬ್ಬರನ್ನು ಒಮ್ಮೆಲೇ ನಮ್ಮ ಸೆರೆ ಹಿಡಿದುಕೊಂಡು ಹೋದರು. ಖಂಡಣಿಯನ್ನು ಕೊಡುವೆವೆಂದು ಅವರು ವಚನಕೊಟ್ಟ ಬಳಿಕ ಮೂರುದಿವಸ ಅವರನ್ನು ಬಿಟ್ಟುಬಿಟ್ಟರು. ಮೇಜರ ಫಾಲಿಯವರ ಒಬ್ಬ ಸೇವಕನು ಈ ಸಂಬಂಧವಾಗಿ ಹೇಳಿದ್ದುದು ಪ್ರಸಿದ್ಧವಾಗಿದೆ. ಅದು ಕೆಳಗಿನಂತೆ ಇದೆ:—

“ಮೇಜರ ಫಾಲಿಯವರು ಚಮನದಿಂದ ಕ್ವೆಟ್ಟಾಕ್ಕೆ ಮೋಟಾರದಿಂದ ಹೊರಟಿದ್ದರು. ೮ ಮೈಲು ದೂರ ಹೋಗುವದರೊಳಗಾಗಿಯೇ ಮುಂದಿನ ಮಾರ್ಗವು ಕಲ್ಲುಗಳಿಂದ ಮುಚ್ಚಲ್ಪಟ್ಟಿರುವದು ಅವರಿಗೆ ತಿಳಿದುಬಂದಿತು. ಕೂಡಲೆ ಅವರು ಮೋಟಾರನ್ನು ನಿಲ್ಲಿಸಿದರು. ಅಷ್ಟರಲ್ಲಿ ೧೨ ಜನರು ಅವರ ಮೋಟಾರಿಗೆ ಮುತ್ತಿಗೆ ಹಾಕಿ ಮೋಟಾರಿನಿಂದ ಇಳಿಯಲು ಹೇಳಿದರು. ಟೋಳಿಯೊಳಗಿನ ಕೆಲವು ಜನರು ಮೋಟರ ಸಂಚಾರ ಮಾಡಿ, ಮೇಜರ ಮತ್ತು ಮೋಟರ ಹೊಡೆಯುವವರ ಕೈಗಳನ್ನು ಕಟ್ಟಿಹಾಕಿದರು. ಅಷ್ಟರಲ್ಲಿಯೇ ಅಲ್ಲಿಗೆ ಮತ್ತೊಂದು ಮೋಟಾರು ಬಂದಿತು. ಅದರಲ್ಲಿ ಕ್ಯಾಪ್ಟನ್ ಫ್ರೇರಿ ಮತ್ತು ಅವರ ಪತ್ನಿಯವರು ಇದ್ದರು. ಟೋಳಿಯ ಜನರು ಅವರನ್ನು ಕಟ್ಟಿಹಾಕಿದರು. ಬಳಿಕ ಟೋಳಿಯ ಜನರು ಸಾಹೇಬರ ಗಂಟು ಗದಡಿಗಳನ್ನು ಹೊರಲು ಮೋಟಾರ ಡ್ರಾಯವ್ಹರಿಗೆ ಹೇಳಿದರು.

ಬಳಿಕ ಎಲ್ಲರೂ ಸರಹದ್ದಿಯ ಕಡೆಗೆ ಹೋದರು. ಸ್ವಲ್ಪ ದೂರ ಹೋಗುವದರೊಳಗಾಗಿಯೆ ಮಿಸೆಸ್ ಫ್ರೇರಿಯವರಿಗೆ ಮೂರ್ಛೆ ಬಂದಿತು. ಟೋಳಿಯ ಜನರು ನೀರನ್ನು ತಂದುಕೊಟ್ಟರು. ಬಳಿಕ ಅವರು ಎಚ್ಚರಾದರು. ಮೇಜರ ಫಾಲಿಯವರು ಟೋಳಿಯ ಜನರಿಗೆ ಕರಪರಯಾಗಿ ಬೇಡಿಕೊಂಡರು. ಆ ಕಾಡುಜನರು ಫ್ರೇರಿಬಾಯಿಯವರನ್ನು ಒಂಟೆಯ ಮೇಲೆ ಕೂಡ್ರಿಸಿದರು. ೨೪ ಮೈಲು ನಡೆದು ಅವರು ತಮ್ಮ ಸ್ಥಳಕ್ಕೆ ಮುಟ್ಟಿದರು. ಟೋಳಿಯ ಜನರು ತಾವು ಬಂದೂಕನ್ನು ಹಾರಿಸಿ ತಮ್ಮ ಬರುವಿಕೆಯನ್ನು ತಿಳಿಸಿದರು. ಅವರ ಹೆಂಗಸರು ಬಂದು ಅವರಿಗೆ ಸ್ವಾಗತಮಾಡಿದರು.

ಆಮೇಲೆ ಟೋಳಿಯ ಜನರು ಒಂದು ಕುರಿಯನ್ನು ಕೊಯ್ದು ತಂದು ಸೆರೆಯಾಳುಗಳಿಗೆ ಅದನ್ನು ತಿನ್ನಲು ಕೇಳಿಕೊಂಡರು. ಆಗ್ಗೆ ನಾನು “ಈ ಸಾಹೇಬರನ್ನು ಏಕೆ ಹಿಡಿದಿರುವಿರಿ?” ಎಂದು ಕೇಳಿದೆನು. ನಮ್ಮ ಟೋಳಿಯಲ್ಲಿಯ ೪ ಜನರನ್ನು ಗುಲಿಸ್ತಾನದಲ್ಲಿಯೂ, ಒಬ್ಬನನ್ನು ಚಮನದಲ್ಲಿಯೂ ಸೆರೆಹಿಡಿದಿದ್ದಾರೆ. ಅದಕ್ಕಾಗಿ ಇವರನ್ನು ನಾವು ಸೆರೆಹಿಡಿದಿದ್ದೇವೆ” ಎಂದು ಉತ್ತರ ಬಂದಿತು. ೧೦೦೦೦ ರೂ. ಗಳನ್ನು ಕೊಟ್ಟರೆ ಮಾತ್ರ ನಿಮ್ಮನ್ನು ಬಿಡುವೆವಾಗಿ ಟೋಳಿಯ ಜನರು ಸಾಹೇಬರಿಗೆ ಹೇಳಿದರು. ಮೇಜರ ಫಾಲಿಯವರು ಹಣವನ್ನು ಕಡಿಮೆ ಮಾಡಲು ಕೇಳಿಕೊಂಡರು. ಟೋಳಿಯ ಜನರು ಹಾಗಾದರೆ ೨೦೦೦ ರೂ. ಕೊಡಿರಿ ಎಂದು ಅಂದರು. ಮೇಜರ ಫಾಲಿಯವರು ೫೦೦೦ ರೂ. ಗಳಿಗೆ ಪ್ರಾಮಿಸರಿ ನೋಟು ಬರೆದು ಕೊಟ್ಟು ಮುಕ್ತರಾದರು. ಮರುದಿವಸ ಒಬ್ಬ ಅಧಿಕಾರಿಯು ಅಫ್ಗಾಣಿ ಟೋಳಿಯ ಕೆಲವು ಒಡೆಯರನ್ನು ಕರೆದುಕೊಂಡು ಅಲ್ಲಿಗೆ ಬಂದನು. ಟೋಳಿಯ ಜನರು ಮೇಜರ ಫಾಲಿಯವರಿಂದ ಒಂದು ಗಡಿಯಾರವನ್ನೂ ೨೨೨ ರೂಪಾಯಿಗಳನ್ನೂ ಕ್ಯಾಪ್ಟನ್ ಫ್ರೇರಿಯವರ ಕಡೆಯಿಂದ ೮೦ ರೂ. ಗಳನ್ನು ಮತ್ತು ಮಿಸೆಸ್ ಫ್ರೇರಿಯವರ ಕಡೆಯಿಂದ ಒಂದು ಕೈಚೀಲವನ್ನು ತೆಗೆದುಕೊಂಡರು. ಆದರೆ ಕೆಲವು ಹೊತ್ತಿನ ಮೇಲೆ ಗಡಿಯಾರವನ್ನು ತಿರುಗಿ ಕೊಟ್ಟು, ಅವರನ್ನು ತಿರುಗಿ ಬ್ರಿಟಿಷ ಹದ್ದಿಯಲ್ಲಿ ಒಯ್ದು ಬಿಟ್ಟುಬಿಟ್ಟರು.

ಧಾರವಾಡ ಜಿಲ್ಲೆಯಲ್ಲಿ

## ಸಾವಿರಾರು ಸಿಂದೀ ಗಿಡಗಳ ಸಂಹಾರ

ಈ ವಾರದಲ್ಲಿ ಈಚಲ ಗಿಡಗಳು ಈ ಕೆಳಗೆ ಕಂಡ ಪ್ರದೇಶಗಳಲ್ಲಿ ಕಡಿಯಲ್ಪಟ್ಟವೆ.

ಹಾವೇರಿ ತಾಲೂಕ ೬೦೦, ರಾಣೆಬೆನ್ನೂರ ೧೦೦೦, ಹುಬ್ಬಳ್ಳಿ ೬೫೦, ಹಾನಗಲ್ಲ ೪೦೦, ಒಟ್ಟು ೨೬೫೦. ರಾಣೆಬೆನ್ನೂರ ತಾಲೂಕ ಮೇಡ್ಲೇರಿಯಲ್ಲಿ ಶ್ರೀ ಕಲ್ಲವೀರಪ್ಪ ಮತ್ತು ಇತರ ಸದ್ಗೃಹಸ್ಥರು ೧೦೦೦೦ ಈಚಲ ಗಿಡಗಳನ್ನು ಕಡಿಯಲು ಗುತ್ತಿಗೆಯೊಂದನ್ನು ಅರ್ಧ ಅವಧಿಗೆ ಗುತ್ತಿಗೆ ಮಾಡಿ ಕೊಟ್ಟಿದ್ದಾರೆ. ಹಾನಗಲ್ಲ ತಾಲೂಕಿನ ಹಾವಣಗಿ ಮತ್ತು ಬಸಾಪುರ ನಾಯ್ಕರಕೊಪ್ಪಲುಗಳಲ್ಲಿ ಜನರು ಬಂದು ವಾರಗಳಲ್ಲಿಯೇ ತಮ್ಮ ಊರ ಸುತ್ತುಮುತ್ತಲಿನ ಈಚಲ ಗಿಡಗಳನ್ನು ಕಡಿದುಹಾಕಿ ಬಿಡುವೆವೆಂಬ ರಾಷ್ಟ್ರಧ್ವಜವನ್ನು ಮುಟ್ಟಿ ಆಣೆ ತೆಗೆದುಕೊಂಡಿದ್ದಾರೆ. ಈ ವರೆಗೆ ಈ ತಾಲೂಕದ ಹಳ್ಳಿಗಳ ೨೩ ಜನರು ಕಾಂಗ್ರೆಸದ ಸದಸ್ಯರಾಗಿದ್ದಾರೆ. ಅಮುಗೋಡದಲ್ಲಿ ಒಟ್ಟು ೭೫೦ ಗಿಡಗಳು ಕಡಿಯಲ್ಪಟ್ಟವೆ ಹಿರೇಕೆರೂರ ೨೦೦ ಜನರು ೧೨ ನೆಯ ತಾ|| ದಿವಸ ಆ ಊರ ಸುತ್ತಮುತ್ತ ಇದ್ದ ೮೦೦ ಈಚಲ ಗಿಡಗಳನ್ನು ನೆಲಕ್ಕುರುಳಿಸಿದರು.

## ಮುಸಲ್ಮಾನರ ಮುಖಂಡರಿಗೆ ಸೆರೆಮನೆ

ಜಮಾಯತ್ ಉಲ್ ಉಲೇಮಾ ಕಮಿಟಿಯ ಜಪ್ತಿ

ಆಗ್ರಾದ ಡಿ|| ಮ್ಯಾಜಿಸ್ಟ್ರೇಟರು ಮೌಲಾನಾ ಅತಾ ಉಲ್ಲಾ ಶಹಾ ಬುಖಾರಿಯವರ ಮೇಲೆ ಹೊರಡಿಸಿದ ವಾರಂಟನ್ನು ತೆಗೆದುಕೊಂಡು ಹೋಗಿ ಪೋಲೀಸರು ತಾ|| ೭ ನೆಯ ದಿವಸ ದಿಲ್ಲಿಯ ಜಮಾಯತ್ ಉಲ್ ಉಲೇಮಾದ ಕಚೇರಿಯನ್ನು ಒಳಹೊಕ್ಕು ಅವರನ್ನು ಹುಡುಕಾಡಿದರು. ಮೌಲಾನಾರವರು ಮುನ್ನಾದಿವಸವೇ ತಮ್ಮ ಕಾರ್ಯದ ನಿಮಿತ್ತವಾಗಿ ಬೇರೆ ಕಡೆಗೆ ಹೋಗಿದ್ದದರಿಂದ ಪೋಲೀಸರು ನಿರಾಶೆ ಹೊಂದಿ ತಿರುಗಿ ಹೋದರು.

ಈ ಪತ್ರಿಕೆಯು ಬಳವಂತ ಲಕ್ಷ್ಮಣರಾವ ಮುಜುಮದಾರ ಇವರಿಂದ ಬಾಗಲಕೋಟೆಯ
ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ — ಮನು

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬಾಗಲಕೋಟೆ ಶುಕ್ರವಾರ ಮಿತಿ ಜ್ಯೇಷ್ಠ ಬಹುಳ ೯ ಶಕೆ ೧೮೫೨ ತಾ|| ೨೦—೬—೩೦ ಸಂಚಿಕೆ ೭೯

## ಮಹಾತ್ಮರ ಮೇಲೆ ಇಂಗ್ಲೀಷ ಮನುಷ್ಯನ ಪ್ರೇಮ

ತಾ| ೧೧ ನೆಯ ದಿವಸ ಓರ್ವ ಇಂಗ್ಲೀಷ ಮನುಷ್ಯನು ಮುಂಬಯಿಯ ಹಡಗ ರ ಕಟ್ಟೆಯಲ್ಲಿ ನಿಂತಿದ್ದನು ಅವನು ಇಂಗ್ಲಂಡಕ್ಕೆ ಹೋಗಲಿದ್ದನು. ಅಲ್ಲಿಯೇ ಕೆಲಸ ಮಾಡುತ್ತಿದ್ದ ಕೆಲವು ಕೂಲಿಕಾರರನ್ನು ಅವನು ಕರೆದು ಪ್ರತಿಯೊಬ್ಬನಿಗೂ ೪ ಆಣೆಯಂತೆ ಕೊಟ್ಟು ಅವರಿಗೆ 'ಗಾಂಧೀ ಮಹಾರಾಜಕೀ ಜಯ್' ಎಂದು ಕೂಗಲು ಹೇಳಿಕೊಂಡನು. ಅದರಂತೆ ಕೂಲೀ ಜನರು ಕೂಗಿದರು. 'ಮಹಾತ್ಮಾ ಗಾಂಧೀ ಮಹಾರಾಜಕೀ ಜಯ್' ಎಂದು ಮುಂತಾಗಿ ಕೂಗಿದ ಕೂಡಲೆ ಸಿಟ್ಟಿಗೇಳುವ ಮಹನೀಯರು ಈ ಇಂಗ್ಲೀಷ ಮನುಷ್ಯನನ್ನು ನೋಡಿಯಾದರೂ ಬುದ್ಧಿಗಲಿಯಲಿ!

# ಬಂಡೀಗಾಲಿಯ ಪರಿಷತ್ತು

## ಹಿಂದುಸ್ಥಾನದಿಂದ ೬೨ ಪ್ರತಿನಿಧಿಗಳು

ಹಿಂದುಸ್ಥಾನ ಸರಕಾರದಿಂದ ೬೩೦೦೦ ರೂಪಾಯಿಗಳು.

ಲಂಡನ್ನದಲ್ಲಿ ಸೇರಲಿಕ್ಕಿರುವ ಬಂಡೀಗಾಲಿಯ ಪರಿಷತ್ತಿಗೆ ಬ್ರಿಟಿಶ ಹಿಂದುಸ್ಥಾನದಿಂದ ೫೦ ಜನ ಪ್ರತಿನಿಧಿಗಳೂ ಮತ್ತು ಹಿಂದೀ ಸಂಸ್ಥಾನಗಳಿಂದ ೧೨ ಜನ ಪ್ರತಿನಿಧಿಗಳೂ ಆರಿಸಿ ಕಳಿಸಲ್ಪಡುವವರಿದ್ದಾರೆ. ಹಿಂದುಸ್ಥಾನ ಸರಕಾರದ ಪರವಾಗಿ ೪ ಜನರು ಹೋಗುವರು. ಪರಿಷತ್ತಿನ ವೆಚ್ಚಕ್ಕಾಗಿ ೬೩೧೦೦೦ ರೂ. ಗಳನ್ನು ಕೊಡಲು ಹಿಂದುಸ್ಥಾನ ಸರಕಾರದವರು ಜಮಾಖರ್ಚಿನ ಮಂಡಳಕ್ಕೆ ಕೇಳಿಕೊಳ್ಳುವವರಿದ್ದಾರೆ ಪರಿಷತ್ತು ೨ ತಿಂಗಳುಗಳ ವರೆಗೆ ನಡೆಯುತಕ್ಕದ್ದಿದೆ. ಹಿಂದುಸ್ಥಾನ ಸರಕಾರದವರು ವೆಚ್ಚಕ್ಕಾಗಿ ಕೊಡುವ ಹಣದಷ್ಟೇ ಹಣವನ್ನು ಇಂಗ್ಲಂಡದ ಸರಕಾರದವರೂ ಕೊಡುವರು.

## ಸಿಂದೀ ಅಂಗಡಿಗಳು ಮುಚ್ಚಿಹೋದವು

ಧಾರವಾಡ ತಾಲೂಕದ ನರೇಂದ್ರ ಮತ್ತು ತಡಕೋಡ ಗ್ರಾಮಗಳಲ್ಲಿ ಸಿಂದೀ ಅಂಗಡಿಗಳು ಸಂಪೂರ್ಣ ಮುಚ್ಚಿ ಹೋಗಿವೆ. ಧಾರವಾಡದಲ್ಲಿಯ ಎರಡು ಸಿಂದೀ ಅಂಗಡಿಗಳಿಗೆ ಸಾಕಷ್ಟು ಹೆಂಡವು ಸಿಗದಂತಾಗಿದೆ. ಯಾಕೆಂದರೆ ಹೆಂಡ ತೆಗೆಯುತ್ತಿದ್ದ ಈಚಲ ಗಿಡಗಳೆಲ್ಲ ನಾಶವಾಗಿವೆ.

ಪುಣೆಯಲ್ಲಿ

## ಸೆರೆ ಸಿಂದೀ ಅಂಗಡಿಗಳಿಗೆ ಯಾರೂ ಗತಿಯಾಗಲಿಲ್ಲ

ತಾ|| ೧೬ ನೆಯ ದಿವಸ ಪುಣೆಯಲ್ಲಿ ಹರತಾಳವು ಆಚರಿಸಲ್ಪಟ್ಟಿತು. ಅಂದು ಲಿಲಾವು ಆಗತಕ್ಕ ಸೆರೆ ಸಿಂದೀ ಅಂಗಡಿಗಳ ಮಕ್ತೆಯನ್ನು ಹಿಡಿಯಲು ಬಹಳ ಜನರು ಹೋಗಿದ್ದಿಲ್ಲ. ಹೋದವರಲ್ಲಿ ಯಾರೂ ಮಕ್ತೆಯನ್ನು ಹಿಡಿಯಲಿಲ್ಲ. ಸಿಂದೀ ಅಂಗಡಿಗಳ ಪಿಕೆಟಿಂಗವು ಪ್ರಾರಂಭವಾಗತಕ್ಕದ್ದಿದೆ.

## ಪ್ರತಿ ಸಹಕಾರವಾದಿಗಳು

ಕಾಯಿದೆ ಮಂಡಳಗಳಿಗೆ ಶರಣು ಹೊಡೆಯುವರು.

ಮಧ್ಯಪ್ರಾಂತದ ಪ್ರತಿ ಸಹಕಾರವಾದಿಗಳು ಡಾ|| ಮುಂಜೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಿಕೊಂಡು ಮಧ್ಯಪ್ರಾಂತ ಕಾಯಿದೆ ಮಂಡಳಕ್ಕೂ ಮತ್ತು ವರಿಷ್ಠ ಕಾಯಿದೆ ಮಂಡಳಕ್ಕೂ ಆರಿಸಿಹೋದ ಪ್ರತಿಸಹಕಾರವಾದಿಗಳು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡತಕ್ಕದ್ದೆಂಬುದಾಗಿ ನಿರ್ಧರಿಸಿಕೊಂಡರು. ಪ್ರಾಂತಿಕ ಕಾಯಿದೆ ಮಂಡಳಕ್ಕೆ ಪ್ರತಿಸಹಕಾರವಾದಿಗಳ ಪರವಾಗಿ ೪ ಜನರೂ, ವರಿಷ್ಠ ಕಾಯಿದೆ ಮಂಡಳಕ್ಕೆ ಒಬ್ಬರೂ ಆರಿಸಿಹೋಗಿರುವರು. ಅವರೆಲ್ಲರೂ ಈ ತಿಂಗಳದ ಕೊನೆಗೆ ರಾಜೀನಾಮೆ ಕೊಡುವರು.

## ಆಯರ್ವಿನನಿಗೆ ೭|| ತಿಂಗಳ ಶಿಕ್ಷೆ

ಪೋಲೀಸರಲ್ಲಿ ಅಸಂತೋಷವನ್ನು ಹುಟ್ಟಿಸಿದರೆಂಬ ಆರೋಪದಿಂದ ತಾ| ೧೪ ನೆಯ ದಿವಸ ಮುಂಬಯಿ ಪೋಲೀಸರು ಇಬ್ಬರು ಸ್ವಯಂಸೇವಕರನ್ನು ಸೆರೆಹಿಡಿದುಕೊಂಡು ಹೋದರು. ಕಟ್ಟೆಯ ವಿಚಾರಣೆಯಲ್ಲಿ ಒಬ್ಬನು ತನ್ನ ಹೆಸರು "ಆಯರ್ವಿನ" ನೆಂದೂ, ಇನ್ನೊಬ್ಬನು ತನ್ನ ಹೆಸರು "ದೇಶಸೇವಕ"ನೆಂದೂ ಹೇಳಿದರು. ಅವರಿಬ್ಬರೂ ತಮ್ಮ ವಾಜ್ಮೂಲಗಳ ಮೇಲೆ ಹೇಳಿದಂತೆಯೇ ಸಹಿ ಮಾಡಿದರು. ಬಳಿಕ ಮ್ಯಾಜಿಸ್ಟ್ರೇಟರು ಅವರಿಗೆ ೭|| ತಿಂಗಳ ಸಶ್ರಮ ಶಿಕ್ಷೆಯನ್ನು ವಿಧಿಸಿದರು.

## ಶ್ರೀ. ದಾಸಗುಪ್ತರಿಗೆ ೧ ವರ್ಷ ಸಶ್ರಮ ಶಿಕ್ಷೆ

ಬಂಗಾಲ ಸತ್ಯಾಗ್ರಹ ಮಂಡಳದ ಅಧ್ಯಕ್ಷರಾದ ಶ್ರೀ. ಸತೀಶಚಂದ್ರ ದಾಸಗುಪ್ತರು ರಾಜದ್ರೋಹಕ್ಕಾಗಿ ಸೆರೆಹಿಡಿಯಲ್ಪಟ್ಟು ೧ ವರ್ಷದ ಸಶ್ರಮ ಶಿಕ್ಷೆಗೆ ಗುರಿಯಾದರು.

# ಮಂತ್ರಿಗಳು ರಾಜೀನಾಮೆ ಕೊಟ್ಟರು

ನಾಗಪುರ ಸರಕಾರದ ಮಂತ್ರಿಗಳಾದ ಬ್ಯಾರಿಸ್ಟರ ರಾಮರಾವ ದೇಶಮುಖರು ಸತ್ಯಾಗ್ರಹ ದಬ್ಬಾಳಿಕೆಯಿಂದ ತಮ್ಮ ಮಂತ್ರಿ ಪದಕ್ಕೆ ರಾಜೀನಾಮೆ ಕೊಟ್ಟಿದ್ದಾರೆ ಇವರು ಬ್ರಾಹ್ಮಣೇತರ ಸಂಗಡದ ಮುಖಂಡರಲ್ಲೊಬ್ಬರಾಗಿದ್ದಾರೆ ಕರ್ನಾಟಕದ ಬ್ರಾಹ್ಮಣೇತರ ಸಭಾಸದರು ಇನ್ನಾದರೂ ಕಾಯದೆ ಮಂಡಳಗಳಿಂದ ಹೊರಬಿದ್ದು ಬರಲಿ

## ಖೇರಾಡದಲ್ಲಿ ಗೋಳೀಬಾರು

### ೧೫ ಜನರು ಮರಣಹೊಂದಿದರು.

ತಾ॥ ೧೧ ನೆಯ ದಿವಸ ಕೆಲವು ಪೋಲೀಸ ಅಧಿಕಾರಿಗಳು ಶ್ರೀ ಬಾಬು ಬಿಪಿನ ಬಿಹಾರಿದಾಸ ಮತ್ತು ಕೆಲವರನ್ನು ಸೆರೆ ಹಿಡಿಯಲು ಖೇರಾಡಕ್ಕೆ ಹೋಗಿದ್ದರು. ಹಳ್ಳಿಯಲ್ಲಿ ಅವರಿಗೆ ಶ್ರೀ ಬಿಹಾರಿದಾಸರು ಸಿಗಲಿಲ್ಲ ಉಳಿದವರನ್ನು ಹಿಡಿದುಕೊಂಡು ಹೋದರು. ಅಷ್ಟರಲ್ಲಿಯೇ ಪೋಲೀಸರು ಶ್ರೀ ಬಿಹಾರಿದಾಸರ ಪತ್ನಿಯವರನ್ನೂ ಹಾಗೂ ಮಕ್ಕಳನ್ನೂ ಅವಮಾನಗೊಳಿಸಿದ್ದಾರೆಂದು ಊರಲ್ಲಿ ಸುದ್ದಿ ಹಬ್ಬಿತು. ಈ ಸುದ್ದಿಯನ್ನು ಕೇಳಿ ಜನರು ಒಟ್ಟಿಗೆ ಸೇರಹತ್ತಿದರು. ಪೋಲೀಸರು ಜನರಿಗೆ ಚದುರಲು ಹೇಳಿಕೊಂಡರು. ಆ ಜನರನ್ನು ಬಿಡುವವರೆಗೆ ತಿರುಗಿ ಹೋಗುವದಿಲ್ಲವೆಂದು ಜನರು ಉತ್ತರ ಕೊಟ್ಟರು. ಅಧಿಕಾರಿಗಳು ಗೋಳೀಬಾರು ಮಾಡಲು ಆಜ್ಞೆಯನ್ನಿತ್ತರು. ಪೋಲೀಸರು ಗೋಳೀಬಾರು ಮಾಡಿದರು. ೧೫ ಜನರು ಮರಣ ಹೊಂದಿದ್ದು ೩೦ ಜನರಿಗೆ ಗಾಯಗಳಾಗಿವೆ.

## ಮಿರಜದಲ್ಲಿ

### ಶ್ರೀ ದಿವೇಕರರಿಗೆ ಬಾಯ್ಬೀಗ

### ಶ್ರೀ ದಿವೇಕರರು ಕಾಯಿದೆ ಭಂಗ ಮಾಡಿದರು.

ಹೋದ ಆದಿತ್ಯವಾರ ದಿವಸ ಮಿರಜದಲ್ಲಿ ಪುಣೆಯ ಮರಾಠಾ ಪತ್ರಿಕೆಯ ಸಂಪಾದಕರಾದ ಶ್ರೀ ದಿವೇಕರರು “ಸ್ವದೇಶಿ” ಯನ್ನು ಕುರಿತು ಭಾಷಣಮಾಡತಕ್ಕವರಿದ್ದರು. ಅದಕ್ಕಾಗಿ ಶ್ರೀ ಶಿಖರೆಯವರು ಡಿ. ಮ್ಯಾಜಿಸ್ಟ್ರೇಟರಿಗೂ ಮತ್ತು ಕಾರಭಾರಿಯವರಿಗೂ ಅಪ್ಪಣೆಯ ಬಗ್ಗೆ ಕೇಳಿಕೊಂಡರು ಅಧಿಕಾರಿಗಳು ಅಪ್ಪಣೆಯನ್ನು ಕೊಡಲಿಲ್ಲ. ಶ್ರೀ ದಿವೇಕರರು ಕಾಯಿದೆಯನ್ನು ಮುರಿದು ಶ್ರೀ ಶಿಖರೆಯವರ ಅಧ್ಯಕ್ಷತೆಯಲ್ಲಿ ಭಾಷಣ ಮಾಡಿದರು. ಕೊನೆಯಲ್ಲಿ ಪರದೇಶಿ ಬಟ್ಟೆಗಳ ಪ್ರಚಂಡ ಹೋಳಿಯಾಯಿತು. ಕಾಯಿದೆ ಭಂಗವನ್ನು ಮಾಡಿದುದಕ್ಕಾಗಿ ಶ್ರೀ ಶಿಖರೆಯವರನ್ನು ಸೆರೆ ಹಿಡಿಯುವಂತಾಗಿ ತಿಳಿಯುತ್ತದೆ

## ಧರಸಾನಾ ದಿವಸ.

ಗುಜರಾಥ ಪ್ರಾಂತಿಕ ಸಮಿತಿಯವರು ನಾಳಿನ ೨೧ ನೆಯ ತಾ॥ ದಿವಸ ಗುಜರಾಥದಲ್ಲಿ ಧರಸಾನಾ ದಿನವನ್ನಾಗಿ ಆಚರಿಸಬೇಕೆಂದು ಗೊತ್ತು ಮಾಡಿಕೊಂಡಿದ್ದಾರೆ ಅಂದು ಗುಜರಾಥದಲ್ಲೆಲ್ಲ ಹರತಾಳ, ಮೆರವಣಿಗೆ, ಸಭೆ ಮೊದಲಾದವುಗಳು ಜರಗತಕ್ಕವಿವೆ.

## ಸೊಲ್ಲಾಪುರ ದಂಗೆಯ ವಿಚಾರಣೆಯ ಸಮಿತಿ

ಸೊಲ್ಲಾಪುರ ದಂಗೆಯ ಬಗ್ಗೆ ವಿಚಾರಣೆಯನ್ನು ಮಾಡಲು ಜಸ್ಟಿಸ್ ಪಾಟಕರ ಮತ್ತು ಒಬ್ರಾಮಫೀಲ್ಡರನ್ನೊಳಗೊಂಡ ಒಂದು ವಿಚಾರಣೆಯ ಮಂಡಲವನ್ನು ಮುಂಬಯಿ ಸರಕಾರದವರು ನಿಯಮಿಸುವವರಿದ್ದಾರಾಗಿ ತಿಳಿಯುತ್ತದೆ. ಮುಂಬಯಿಯ ಗವ್ಹರ್ನರರು ಸೊಲ್ಲಾಪುರ ಪರಿಸ್ಥಿತಿಯನ್ನು ಕುರಿತು ವಿಚಾರಿಸುವದಕ್ಕಾಗಿ ಸೊಲ್ಲಾಪುರಕ್ಕೆ ಹೋಗಿದ್ದಾರೆ.

## ಸೊಲ್ಲಾಪುರ ರಾಷ್ಟ್ರಧ್ವಜ ಸತ್ಯಾಗ್ರಹ

### ಸ್ವಯಂಸೇವಕರ ಸುಳುವೇ ಇಲ್ಲ

ಸೊಲ್ಲಾಪುರದಲ್ಲಿ ನಡೆದ ರಾಷ್ಟ್ರಧ್ವಜ ಸತ್ಯಾಗ್ರಹಕ್ಕೆ ಅಖಿಲ ಕರ್ನಾಟಕದ ಪರವಾಗಿ ವಿಜಾಪುರದಿಂದ ಕಳಿಸಲ್ಪಟ್ಟ ಎರಡನೆಯ ತಂಡದ ಮೂರು ಸ್ವಯಂಸೇವಕರು ಸೊಲ್ಲಾಪುರಕ್ಕೆ ಹೋಗಿದ್ದರು. ಅಲ್ಲಿ ಅವರ ಅವಸ್ಥೆಯು ಏನಾಗಿದೆಂಬುದರ ವಿಷಯವಾಗಿ ಏನೂ ತಿಳಿದು ಬಂದಿಲ್ಲ..

## ಮಹಾತ್ಮರ ಚಳವಳಿಯ ಮಹತ್ವ.

### ಎಲ್ಲ ಜಾತಿ ಸಂಗಡಗಳೂ ಒಂದಾದವು.

“ಡೇಲಿ ಹೆರಾಲ್ಡ” ಪತ್ರಿಕೆಯ ಸುದ್ದಿಗಾರರಾದ ಮಿ॥ ಸ್ಲೋಕೊಂಬೆ ಅವರು ಮಹಾತ್ಮರು ಪ್ರಾರಂಭಿಸಿದ ಸತ್ಯಾಗ್ರಹ ಚಳವಳಿಯ ಮಹತ್ವವನ್ನು ಕುರಿತು.

“ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳಲು ಪ್ರಾರಂಭವಾದ ಈ ಸ್ವಾತಂತ್ರ್ಯಸಮರದಲ್ಲಿ ಹಿಂದುಸ್ಥಾನದೊಳಗಿನ ಯಾವತ್ತೂ ಜಾತಿಗಳ ಜನರು ಉಚ್ಚ ನೀಚ ಭೇದ ಭಾವಗಳನ್ನು ಬದಿಗಿಟ್ಟು ಸೇರಿಕೊಂಡಿದ್ದುದೇ ವಿಶೇಷ”ವೆಂದು ಮುಂಬಯಿಯಿಂದ “ಡೇಲಿ ಹೆರಾಲ್ಡ” ಪತ್ರಕ್ಕೆ ತಿಳಿಸಿದ್ದಾರೆ.

## ಗುಜರಾಥದಲ್ಲಿ

### ಅಧಿಕಾರಿಗಳ ಆಟವು ಸಾಗದಂತಾಯಿತು.

ಗುಜರಾಥ ಪ್ರಾಂತದ ಭಡೋಚ ಜಿಲ್ಲೆಯಲ್ಲಿಯ ಜಂಬುಸಾರ ತಾಲೂಕದ ಪ್ರಜೆಗಳು ಸರಕಾರಕ್ಕೆ ತೆರಿಗೆಯನ್ನು ಕೊಡತಕ್ಕದ್ದಲ್ಲವೆಂಬುದಾಗಿ ನಿರ್ಧರಿಸಿಕೊಂಡಿದ್ದುದರಿಂದ ಅಲ್ಲಿಯ ಅಧಿಕಾರಿಗಳಿಗೆ ಬಿಗಿ ಬಂದಂತಾಗಿದೆ. ತಾ॥ ೧೦ ನೆಯ ದಿವಸ ಕೆಲವು ಅಧಿಕಾರಿಗಳು ಪೋಲೀಸರೊಂದಿಗೆ ಮಗನಾಡ ಎಂಬ ಗ್ರಾಮಕ್ಕೆ ಹೋಗಿದ್ದರು. ಅಧಿಕಾರಿಗಳು ಬರುವವರಿದ್ದಾರೆಂದು ತಿಳಿದ ಕೂಡಲೆ ಆ ಹಳ್ಳಿಯ ಜನರು ತಮ್ಮ ತಮ್ಮ ಮನೆಗಳ ಬಾಗಿಲುಗಳನ್ನು ಮುಚ್ಚಿಕೊಂಡು ಹೊರಟುಬಿಟ್ಟಿದ್ದರು. ಅಧಿಕಾರಿಗಳಿಗೆ ಆ ಹಳ್ಳಿಗೆ ಹೋಗಲು ಸಾಮಾಜಿಕ ಬಹಿಷ್ಕಾರದ ಮೂಲಕವಾಗಿ ಗಾಡಿಗಳೇ ಸಿಗಲಿಲ್ಲ. ಆದುದರಿಂದ ಅವರು ಕಾಲುನಡಿಗೆಯಿಂದ ಅಲ್ಲಿಗೆ ಹೋಗಿದ್ದರು. ಅಂದು ಆ ಹಳ್ಳಿಯಲ್ಲಿ ಯಾರೂ ಮನೆಬಿಟ್ಟು ಹೊರಗೆ ಬರಲಿಲ್ಲ. ಅಧಿಕಾರಿಗಳು ಸಂಜೆಯವರೆಗೆ ಹಾದಿ ನೋಡಿ ಬಂದ ಹಾದಿಗೆ ಸುಂಕವಿಲ್ಲೆಂದು ತಿರುಗಿ ಹೋದರು ಇದರಂತೆ ಮಾಮಲೇದಾರರು ೩-೪ ಹಳ್ಳಿಗಳಿಗೆ ಹೋಗಿದ್ದರು ಅವರಿಗಾದರೂ ಇದೇ ಅವಸ್ಥೆಯಾಯಿತು.

# ಮಹಾತ್ಮರಿಗೂ ಸರಕಾರಕ್ಕೂ ಒಪ್ಪಂದ

ಮುಂಬಯಿಯ ಮಿ| ಜಿನ್ನಾ ಅವರು ತಾ|| ೧೪ ನೆಯ ದಿವಸ ವ್ಹಾಯಿಸರಾಯರನ್ನು ಕಂಡು ಅವರೊಡನೆ ಸದ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ವಿಚಾರಿಸಿ ಈಗ ಮುಂಬಯಿಗೆ ತಿರುಗಿ ಬಂದಿರುವರು. ತಮ್ಮ ಪರವಾಗಿ ಮಹಾತ್ಮರೊಡನೆ ಒಪ್ಪಂದವನ್ನು ಮಾಡಿಕೊಳ್ಳುವ ಕಾರ್ಯವನ್ನು ಹಿಂದುಸ್ಥಾನ ಸರಕಾರದವರು ಮಿ| ಜಿನ್ನಾ ಅವರಿಗೆ ಒಪ್ಪಿಸಿರುವರಾಗಿಯೂ ಸರಕಾರದ ಕರಾರುಗಳನ್ನು ತಿಳಿಸಲಿಕ್ಕೂ ಮತ್ತು ಮಹಾತ್ಮರು ಹಾಕುವ ಕರಾರುಗಳನ್ನು ಕೇಳಿಕೊಳ್ಳಲಿಕ್ಕೂ ಹಿಂದುಸ್ಥಾನ ವರ್ತಕ ಸಂಘದ ಓರ್ವ ಪ್ರಮುಖ ಸಭಾಸದರನ್ನು ಮಿ. ಜಿನ್ನಾ ಅವರು ಮಹಾತ್ಮರ ಬಳಿಗೆ ಕಳಿಸಿರುವರಾಗಿಯೂ ತಿಳಿಯುತ್ತದೆ.

### ವ್ಹಾಯಿಸರಾಯರನ್ನು ಕಾಣಲು

## ಶ್ರೀ. ಕೇಳಕರರು ನಿರಾಕರಿಸಿದರು.

### ದಬ್ಬಾಳಿಕೆಯ ಕಾನೂನಾಸ್ತ್ರಗಳನ್ನು ಹಿರಿದ

### ಕೈಯನ್ನು ಮುಟ್ಟಲಾರೆ!

ಶ್ರೀ ರಂಗಸ್ವಾಮಿ ಅಯ್ಯಂಗಾರ, ಕೇಳಕರ, ಪೋತನ ಮೊದಲಾದ ಸಂಪಾದಕರದೊಂದು ಶಿಷ್ಟಮಂಡಳವು ಸದ್ಯದ ಪರಿಸ್ಥಿತಿಯನ್ನು ಕುರಿತು ಚರ್ಚಿಸುವದಕ್ಕಾಗಿ ವ್ಹಾಯಿಸರಾಯರ ಕಡೆಗೆ ಹೋಗತಕ್ಕದ್ದಿದೆಯೆಂಬುದಾಗಿ ಪ್ರಸಿದ್ಧವಾಗಿತ್ತು. ಆದರೆ ಶ್ರೀ ಕೇಳಕರರು ಶಿಷ್ಟಮಂಡಳದಲ್ಲಿ ಸೇರಲು ಒಪ್ಪದೆ ಶ್ರೀ. ರಂಗಸ್ವಾಮಿಯವರಿಗೆ ಕೆಳಗಿನ ತಂತಿಯನ್ನು ಕಳಿಸಿದ್ದಾರೆ.

ಸಂಪಾದಕರ ಶಿಷ್ಟಮಂಡಳದಲ್ಲಿ ಸೇರಿ ವ್ಹಾಯಿಸರಾಯರನ್ನು ಕಾಣಲು ನನಗೆ ಬರುವದಾಗುವದಿಲ್ಲ. ವೃತ್ತಪತ್ರದ ದಬ್ಬಾಳಿಕೆಯನ್ನು ಕುರಿತು ಅವರೊಡನೆ ವಿಚಾರಿಸಿ ಅದನ್ನು ಸರಿಪಡಿಸುವ ಬಗ್ಗೆ ಆಶ್ವಾಸನವನ್ನು ಅವರಿಂದ ತೆಗೆದುಕೊಳ್ಳುವರಾಗಿ ನಂಬಿರುತ್ತೇನೆ. ದಬ್ಬಾಳಿಕೆಯ ಕಾನೂನಾಸ್ತ್ರಗಳನ್ನು ಹಿರಿದುಕೊಂಡು ವ್ಹಾಯಿಸರಾಯರು ಸಜ್ಜಾಗಿ ಕುಳಿತಿರುವವರೆಗೆ ನಾನು ಅವರನ್ನು ಕಾಣಲಿಚ್ಛಿಸುವದಿಲ್ಲ. ಸೋಲಾಪುರ ದಂಗೆಯ ಸಂಬಂಧವಾಗಿ ಕೇಸರಿಯಲ್ಲಿ ಲೇಖಗಳನ್ನು ಪ್ರಸಿದ್ಧಿಸಿದುದಕ್ಕಾಗಿ "ಕೇಸರಿ" ಮುದ್ರಣಾಲಯದಿಂದಲೂ ಮತ್ತು "ಕೇಸರಿ" ಪತ್ರಿಕೆಯಿಂದಲೂ ಅಡವುಗಳನ್ನು ತೆಗೆದುಕೊಂಡಿದ್ದಾರೆ. ಇಷ್ಟಾಗಿ 'ಕೇಸರಿ'ಯಲ್ಲಿ ಸೋಲಾಪುರ ದಂಗೆಯ ಸಂಬಂಧವಾಗಿ ನಾನು ಬರೆದ ಲೇಖಗಳು ಅಲ್ಲಿಯ ನಿಜಸ್ಥಿತಿಯನ್ನು ನಿದರ್ಶನಕ್ಕೆ ತಂದುಕೊಡುವಂತಹವುಗಳೇ ಆಗಿರುವವು. ಈ ವಿಷಯದಲ್ಲಿ ಸರಕಾರದವರೇ ತಪ್ಪುಗಾರರಾಗಿರುವರು.

## ಮಿ. ಹಾಜೀಯವರ ರಾಜೀನಾಮೆ

ಸರಕಾರದವರು ಪ್ರಾರಂಭಿಸಿದ ದಬ್ಬಾಳಿಕೆಯ ನಿಷೇಧಾರ್ಥವಾಗಿ ಮಿ. ಸರಾಭಾಯಿ ಹಾಜಿಯವರು ವರಿಷ್ಠ ಕಾಯದೆ ಮಂಡಳದ ಸಭಾಸದತ್ವಕ್ಕೆ ರಾಜೀನಾಮೆಯನ್ನು ಕೊಡಲು ... ದ್ದಾರೆ

## ಜೇಲಿನಲ್ಲಿ ಮಹಾತ್ಮರ ಮಿತ್ರ

ಸಾಬರಮತಿ ತುರುಂಗದಲ್ಲಿರುವ ಕಾಕಾ ಕಾಲೇಲಕರರನ್ನು ತಾ|| ೧೮ ನೆಯ ದಿವಸ ಯರವಡಾ ತುರುಂಗಕ್ಕೆ ಒಯ್ದಿದ್ದಾರೆ. ಅಲ್ಲಿ ಮಹಾತ್ಮರೊಡನೆ ಅವರನ್ನು ಇಡುವರಾಗಿ ತಿಳಿಯುತ್ತದೆ.

## ಶ್ರೀ. ಕೋಯಾಜಿಯವರಿಗೆ

### ೭|| ತಿಂಗಳ ಸ. ಶಿಕ್ಷೆ.

ಹಸ್ತಪತ್ರಿಕೆಗಳನ್ನು ಹಂಚಿ ಪೋಲೀಸರಿಗೆ ರಾಜೀನಾಮೆಯನ್ನು ಕೊಡಲು ಕೇಳಿಕೊಂಡಿದುದಕ್ಕಾಗಿ ಮುಂಬಯಿಯ ಪಾರ್ಸಿ ಗೃಹಸ್ಥರಾದ ಶ್ರೀ ಮಿಸೂ ಕೋಯಾಜಿಯವರಿಗೆ ೬ ತಿಂಗಳ ಸಶ್ರಮ ಶಿಕ್ಷೆ ಮತ್ತು ೨೦೦ ರು. ದಂಡ, ದಂಡ ಕೊಡದಿದ್ದಲ್ಲಿ ಮತ್ತೆ ೧|| ತಿಂಗಳ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ.

## ಪಂ. ಮೋತೀಲಾಲರು ಮುಂಬಯಿಗೆ ಬಂದರು.

ಮುಂಬಯಿಯ ಸತ್ಯಾಗ್ರಹ ಮಂಡಳದವರು ಪಂಡಿತ ಮೋತೀಲಾಲ ನೆಹರೂರವರಿಗೆ ಮುಂಬಯಿಯ ಸತ್ಯಾಗ್ರಹ ಯುದ್ಧದ ನೇತೃತ್ವವನ್ನು ವಹಿಸಿಕೊಳ್ಳಲು ಕೇಳಿಕೊಂಡಿದ್ದರು. ಅವರೊಡನೆ ಈ ಬಗ್ಗೆ ವಿಚಾರಿಸಲು ಶ್ರೀ ಕಪಾಡಿಯಾ ಇವರು ಅಲಹಾಬಾದಕ್ಕೆ ಹೋಗಿದ್ದರು. ಅವರ ವಿನಂತಿಯನ್ನು ಕೇಳಿಕೊಂಡು ಮುಂಬಯಿಯಲ್ಲಿಯ ಪರಿಸ್ಥಿತಿಯನ್ನು ಕುರಿತು ವಿಚಾರ ಮಾಡುವದಕ್ಕಾಗಿ ಪಂಡಿತ ಮೋತೀಲಾಲರು ಈಗ ಮುಂಬಯಿಗೆ ಬಂದಿದ್ದಾರೆ. ಮುಂಬಯಿಯ ನಾಗರಿಕರು ಅವರಿಗೆ ಯೋಗ್ಯ ಸತ್ಕಾರಗಳನ್ನು ಮಾಡಿದರು.

### ಸೋಲಾಪುರಕ್ಕೆ

### ಬಾಗಲಕೋಟೆಯ ತರುಣರು ಹೊರಟರು.

ಸೊಲ್ಲಾಪುರದಲ್ಲಿ ನಡೆದ ರಾಷ್ಟ್ರಧ್ವಜ ಸತ್ಯಾಗ್ರಹದಲ್ಲಿ ಭಾಗ ತೆಗೆದುಕೊಳ್ಳಲು ಇಲ್ಲಿಂದ ಶ್ರೀ ಗದ್ದನಕೇರಿ, ಹುಂಡೇಕಾರ, ಬೀರಪ್ಪ ಮತ್ತು ಲಕ್ಷ್ಮಣ ಗುಳವಾಡಿ ಈ ನಾಲ್ಕು ಜನ ತರುಣರು ಈಗ ವಿಜಾಪುರಕ್ಕೆ ಹೋಗಿದ್ದು, ಅಲ್ಲಿಂದ ರಾಷ್ಟ್ರಧ್ವಜ ಸತ್ಯಾಗ್ರಹ ಮಂಡಳದ ಅಪ್ಪಣೆಯ ಮೇರೆಗೆ ಸೊಲ್ಲಾಪುರಕ್ಕೆ ಹೋಗುವವರಿದ್ದಾರೆ.

## ವ್ಯಾಪಾರಿಗಳು ಸರಕಾರಕ್ಕೆ ಎಚ್ಚರಿಕೆ ಕೊಟ್ಟರು.

### ಮಹಾತ್ಮರ ಹೊರತು ಸಂಧಿಯು ಸಾಧ್ಯವಿಲ್ಲ.

ಉತ್ತರ ಹಿಂದುಸ್ಥಾನದ ವ್ಯಾಪಾರಿ ಸಂಘಗಳು ತಾ|| ೧೫ ನೆಯ ದಿವಸ ಸಭೆಯಲ್ಲಿ ಸೇರಿ, ಸದ್ಯದ ಚಳವಳಿಯನ್ನು ಕುಗ್ಗಿಸಲು ಸರಕಾರದವರು ಕೈಕೊಂಡ ದಬ್ಬಾಳಿಕೆಯ ವೃತ್ತಿಯು ಚಳವಳಿಯನ್ನು ಕುಗ್ಗಿಸಲಾರದೆಂದೂ, ಸರಕಾರದವರು ತಮ್ಮ ಅಭಿಮಾನದ ಹಟವನ್ನು ಬಿಟ್ಟುಗೊಟ್ಟು ಮಹಾತ್ಮಾ ಗಾಂಧಿಯವರೊಡನೆ ಸಂಧಿಯನ್ನು ಮಾಡಿಕೊಳ್ಳಬೇಕೆಂದೂ ನಿರ್ಣಯಿಸಿಕೊಂಡಿದ್ದಾರೆ.

## ಸಾಯಮನ್ ಸಪ್ತಕದ ವರದಿಯ ಸಾರ

### ಹಿಂದೂ ಮತ್ತು ಮುಸಲ್ಮಾನ

[ಹಿಂದಿನಿಂದ ಮುಂದುವರಿದುದು]

ಹಿಂದೂ ಮುಸಲ್ಮಾನರ ಧರ್ಮ, ವಂಶ ಮತ್ತು ಧಾರ್ಮಿಕ ಕಾಯಿದೆಗಳು ಬೇರೆ ಬೇರೆಯೇ ಇರುವವು. ಅವರಿಬ್ಬರಲ್ಲಿ ಪರಸ್ಪರ ವ್ಯವಹಾರವಾಗುವದಿಲ್ಲ. ಹಿಂದೂ ಮುಸಲ್ಮಾನರು ದಿನದ ವ್ಯವಹಾರಗಳಲ್ಲಿ ಮಮತೆಯಿಂದ ವರ್ತಿಸುತ್ತಿದ್ದರೂ ಮತ್ತು ಎರಡೂ ಸಮಾಜದೊಳಗಿನ ಮುಂದಾಳುಗಳು ಎರಡೂ ಸಮಾಜಗಳಲ್ಲಿಯ ಸ್ನೇಹಸಂಬಂಧವನ್ನು ಬೆಳಸಲು ಪ್ರಯತ್ನಪಡುತ್ತಿದ್ದರೂ ಸಹ, ಅವರಿಬ್ಬರಲ್ಲಿ ಒಡಕು, ಅಸಂತೋಷ ಮೊದಲಾದವುಗಳೇನೂ ಕಡಿಮೆಯಾಗಿಲ್ಲ. ಕೆಲವು ಪ್ರಾಂತಗಳಲ್ಲಿ ಹೆಚ್ಚಾಗಿ ಹಿಂದೂ ಜನರೂ, ಕೆಲವು ಪ್ರಾಂತಗಳಲ್ಲಿ ಹೆಚ್ಚಾಗಿ ಮುಸಲ್ಮಾನರೂ ಇರುವರು. ಆದುದರಿಂದ ಕಾಯಿದ ಮಂಡಳಗಳಿಗೆ ಆರಿಸಿ ಕಳಿಸುವ ಸಮಯದಲ್ಲಿ ಎರಡೂ ಜಾತಿಗಳ ಜನಸಂಖ್ಯೆಗಳ ಪ್ರಮಾಣವನ್ನ ಲಕ್ಷ್ಯದಲ್ಲಿ ತಂದುಕೊಳ್ಳಬೇಕಾಗುವದು.

ಹಿಂದೂ ಮುಸಲ್ಮಾನರಲ್ಲಿಯ ದ್ವೇಷವನ್ನು ಕಡಿಮೆ ಮಾಡಲು ಪೋಲೀಸರೂ, ಮುಂದಾಳುಗಳೂ ಪ್ರಯತ್ನಿಸುತ್ತಿರುವರು. ಆದರೂ ಅದು ಸಾಧ್ಯವಾಗಿಲ್ಲ. ಸುಧಾರಣೆಯ ಕಾಯಿದೆಯು ಇದರ ಕಾರಣವಾಗಿಂದ, ಅಧಿಕಾರ ಲಾಲಸೆಯು ಈ ತಂಟೆಗೆ ಕಾರಣವಾಗಿದೆ. ರಾಜಕೀಯ ಸತ್ತೆಯು ತಮ್ಮ ಜಾತಿಯವರ ಕೈಯಲ್ಲಿಯೇ ಇರಬೇಕೆಂದು ಪ್ರತಿಯೊಬ್ಬರು ಯತ್ನಿಸುತ್ತಿರುವದೇ ಜಗಳಕ್ಕೆ ಮೂಲ ಕಾರಣವಾಗಿದೆ. ಜಾತಿವಾರ ಪ್ರತಿನಿಧಿತ್ವವು ಇರಬಾರದೆಂಬ ಬಗ್ಗೆ ಹೇಳಿದ ಯುಕ್ತಿವಾದವನ್ನು ನಾವು ಬಲ್ಲೆವು. ಇದರಿಂದ ರಾಜಕಾರಣದಲ್ಲಿ ಶಾಶ್ವತವಾಗಿ ಎರಡು ಪಂಗಡಗಳು ಉಳಿಯುವದೇನೂ ಸುಳ್ಳಲ್ಲ. ಅಲ್ಪಸಂಖ್ಯಾಕ ಜಾತಿಗಳ ಹಕ್ಕುಗಳ ಕಡೆಗೆ ದುರ್ಲಕ್ಷ್ಯ ಮಾಡುವದು ಸರಿಯಾಗದು.

ಹಿಂದುಸ್ಥಾನದಲ್ಲಿ ಸ್ತ್ರೀಯರ ಚಳವಳಿಯೂ ಸುರುವಾಗಿದೆ. ಸ್ತ್ರೀಯರ ಶಿಕ್ಷಣವು ಬೆಳೆದು ಅವರಲ್ಲಿ ಸುಧಾರಣೆಯಾಗಬೇಕು. ಅವರು ಸುಧಾರಣೆಯನ್ನು ಹೊಂದಿ ಸುಶಿಕ್ಷಿತ ವರ್ಗದಲ್ಲಿ ಗಣಿಸಲ್ಪಡುವ ವರೆಗೆ ಹಿಂದುಸ್ಥಾನಕ್ಕೆ ಜಗತ್ತಿನೊಳಗಿನ ಇತರ ರಾಷ್ಟ್ರಗಳಂತೆ ಮಾನಮರ್ಯಾದೆಯು ದೊರೆಯದು.

ಹಿಂದುಸ್ಥಾನದ ಸುಧಾರಣೆಯ ಸಂಬಂಧವಾಗಿ ಯೋಜಿಸಲ್ಪಡುವ ಉಪಾಯಗಳಿಗೆ ಹಿಂದುಸ್ಥಾನದೊಳಗಿನ ಸಂಸ್ಥಾನಿಕರು ಸ್ವಸಂತೋಷದಿಂದ ಸಮ್ಮತಿಯನ್ನು ತೋರಿಸಬೇಕು. ಸಂಸ್ಥಾನಿಕರೊಡನೆ ಆದ ಒಪ್ಪಂದಗಳ ಕಡೆಗೆ ದುರ್ಲಕ್ಷಿಸಿ ನಡೆಯಕೂಡದು.

(ಮುಂದೆಸಾಗುವದು.)

### ಸುಭದ್ರಮ್ಮಾ ಅವರಿಗೆ ೬ ತಿಂಗಳ ಶಿಕ್ಷೆ

ಪೋಲೀಸರಲ್ಲಿ ಅಸಂತೋಷವನ್ನು ಹುಟ್ಟಿಸಿದುದಕ್ಕಾಗಿ ತಾ|| ೧೩ ನೆಯ ದಿವಸ ಬಿಜಾಪುರದಲ್ಲಿ ಸೆರೆಹಿಡಿಯಲ್ಪಟ್ಟ ಶ್ರೀಮತಿ ಸುಭದ್ರಮ್ಮಾ ಅವರಿಗೆ ೬ ತಿಂಗಳ ಸಾದಾ ಶಿಕ್ಷೆಯಾಗಿದೆ.

### ಕರ್ನಾಟಕ ವ್ಯಾಪಾರ ಸಂಘವೂ

## ಪೋಸ್ಟಿನಲ್ಲಿ ಕನ್ನಡವೂ

ಸೊಲ್ಲಾಪುರದಿಂದ ಶ್ರೀ. ಗರುಡರು ಕೆಲವು ದಿನಗಳ ಹಿಂದೆ ಕನ್ನಡದಲ್ಲಿ ವಿಳಾಸವನ್ನು ಬರೆದು ಒಂದು ಪತ್ರವನ್ನು ಇಲ್ಲಿಯ "ಕನ್ನಡಿಗ" ಕಾರ್ಯಾಲಯಕ್ಕೆ ಹಾಕಿದ್ದರು. ಆ ಪತ್ರವು ನೆಟ್ಟಗೆ ಬಾಗಲಕೋಟೆಗೆ ಬರದೆ, ಡೆಡ್ ಲೆಟರ್ ಆಫೀಸಿಗೆ ಹೋಗಿ ಆಮೇಲೆ ತಡವಾಗಿ ಬಾಗಲಕೋಟೆಗೆ ಬಂತು. ಕರ್ನಾಟಕ ವ್ಯಾಪಾರ ಸಂಘದವರು ಈ ವಿಷಯವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಮೇಲಧಿಕಾರಿಗಳ ಕೂಡ ಈ ಸಂಬಂಧವಾಗಿ ಪತ್ರವ್ಯವಹಾರ ಮಾಡಿದರು. ಈಗ ಪೋಸ್ಟ ಮಾಸ್ತರ ಜನರಲ್‌ರು "ಸೊಲ್ಲಾಪುರದ ಹೆಡ್ ಪೋಸ್ಟ ಆಫೀಸದಲ್ಲಿ ಕನ್ನಡವನ್ನು ಬಲ್ಲ ಒಬ್ಬನನ್ನಾದರೂ ನಿಯಮಿಸಲು ಆ ಭಾಗದ ಮೇಲಧಿಕಾರಿಯನ್ನು ಕೇಳಿಕೊಂಡಿದೆ" ಎಂದು ಉತ್ತರ ಕೊಟ್ಟಿದ್ದಾರೆ.

ಕರ್ನಾಟಕದೊಳಗಿನ ಪೋಸ್ಟ ಆಫೀಸುಗಳಲ್ಲಿ ಕನ್ನಡ ನಮೂನೆಗಳನ್ನೇ ಬಳಕೆಯಲ್ಲಿ ತರುವ ಬಗ್ಗೆ ಕರ್ನಾಟಕ ವ್ಯಾಪಾರ ಸಂಘದವರು ಕೇಳಿಕೊಂಡಿದುದಕ್ಕೆ ಪೋಸ್ಟ ಮಾಸ್ತರ ಜನರಲ್‌ರು "ಕರ್ನಾಟಕದೊಳಗಿನ ಎಲ್ಲ ಪೋಸ್ಟ ಆಫೀಸುಗಳಲ್ಲಿಯೂ ಕನ್ನಡ ನಮೂನೆಗಳನ್ನಿಡಲು ಆ ಆ ಅಧಿಕಾರಿಗಳಿಗೆ ಅಪ್ಪಣೆಯನ್ನು ಕೊಟ್ಟಿದೆ. ಜನರು ಅವುಗಳ ಉಪಯೋಗವನ್ನು ಮಾಡಿಕೊಳ್ಳಬೇಕು. ಮೊದಲು ಕನ್ನಡ ನಮೂನೆಗಳನ್ನೇ ಕೊಡಿರಿ ಎಂದು ನಾವು ಪೋಸ್ಟಿನ ಅಧಿಕಾರಿಗಳಿಗೆ ಅಪ್ಪಣೆ ಕೊಡುವದು ಅನವಶ್ಯಕವಾಗಿ ತೋರುತ್ತದೆ. ಜನರು ಬಹುತರವಾಗಿ ಕನ್ನಡ ನಮೂನೆಗಳನ್ನೇ ಬೇಡುತ್ತಾರೆಂದು ಪೋಸ್ಟಿನ ಅಧಿಕಾರಿಗಳಿಗೆ ಕಂಡುಬಂದಲ್ಲಿ ಅವರು ಮೊದಲು ತಾವಾಗಿಯೇ ಕನ್ನಡ ನಮೂನೆಗಳನ್ನು ಕೊಡುವರು.

ಕರ್ನಾಟಕದ ಎಲ್ಲ ಪೋಸ್ಟ ಆಫೀಸುಗಳ ಹೆಸರಿನ ಹಲಿಗೆಗಳನ್ನು ಕನ್ನಡದಲ್ಲಿ ಬರೆಯಿಸುವ ಬಗ್ಗೆ ಪ್ರಯತ್ನಿಸುವೆವು. ಎಂಬದಾಗಿ ಪೋಸ್ಟ ಮಾಸ್ತರ ಜನರಲ್ ಇವರು ಇಲ್ಲಿಯ ಕರ್ನಾಟಕ ವ್ಯಾಪಾರ ಸಂಘಕ್ಕೆ ಉತ್ತರವನ್ನಿತ್ತಿದ್ದಾರೆ.

### ಅಸೆಂಬ್ಲಿಗೆ ರಾಜೀನಾಮೆ

ಸರಕಾರದ ದಬ್ಬಾಳಿಕೆಯ ವೃತ್ತಿಯನ್ನು ನಿಷೇಧಿಸಿ ಮದ್ರಾಸದ ಶ್ರೀ. ವಿದ್ಯಾಸಾಗರ ಪಾಂಡ್ಯ ಅವರು ಅಸೆಂಬ್ಲಿಯ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟರು.

### ಸಿಪಾಯಿ ಜಮಾದಾರರ ರಾಜೀನಾಮೆ

ಧಂಡುಕಾದ ಸುಂಕದ ಜಮಾದಾರರಾದ ಅತ್ತಾಯಿಕ ಶಹಾ ಒಕರಡ್ಡೂರಕಳ್ಳಾ ಎಂಬ ಹಬೀಬ ಗೃಹಸ್ಥರು ಸರಕಾರದ ದಬ್ಬಾಳಿಕೆಯ ನಿಷೇಧಾರ್ಥವಾಗಿ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದಾರೆ.

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮಜುಮದಾರ ಇವರಿಂದ ಬಾಗಲಕೋಟೆಯ
ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

# ಕನ್ನಡಿಗ

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ — ಮನು

ಸಂಪಾದಕರುಃ— ಬಳವಂತ ಅಣ್ಣಾರಾವ ಮುಜುಮದಾರ

ಬುಧವಾರದ ಹೊರ್ತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಶನಿವಾರ ಮಿತಿ ಜೇಷ್ಠ ಬಹುಳ ೧೦ ಶಕೆ ೧೮೫೨ ತಾ॥ ೨೧—೬—೩೦ [ಸಂಚಿಕೆ ೮೨

ಹುಬ್ಬಳ್ಳಿಯಲ್ಲಿ

## ಕುಚೋದ್ಯಗಾರರಿಗೆ ತಕ್ಕ ಮರ್ಯಾದೆ

### ಕಾಂಗ್ರೆಸ್ ಪಕ್ಷಕ್ಕೆ ಗೆಲುವು!

### ರಾ. ಬ. ಕಂಬಳಿಯವರ ಪಕ್ಷಕ್ಕೆ ಸೋಲು!!

ತಾ| ೧೪ ನೇ ದಿವಸ ಕರ್ನಾಟಕ ಪ್ರೆಸ್ಸಿನಲ್ಲಿ ಕೆಲವರು ಮಾಡಿದ ಭಾಷಣದಲ್ಲಿ— "ಹುಬ್ಬಳ್ಳಿಗೆ ಸೈನಿಕ ಕಾಯಿದೆ (ಮಾರ್ಶಲ್ ಲಾ) ಬರಬೇಕು." ಎಂದು ನಿಷ್ಕಾರಣವಾಗಿಯೂ, ಅನಧಿಕಾರವಾಗಿಯೂ ಹೇಳಿದ್ದರಿಂದ ಅದನ್ನು ನಿಷೇಧಿಸಬೇಕೆಂದೂ ಮತ್ತು 'ಸಾರ್ವಜನಿಕ ಸಭೆಯಲ್ಲಿ ರಾ. ಬ. ಕಂಬಳಿಯವರ ಮೇಲೆ ಮಾಡಿದ ಅನ್ಯಾಯದ ಮತ್ತು ಅನರ್ಥವಾದ ಟೀಕೆಯನ್ನು ನಿಷೇಧಿಸಬೇಕೆಂದೂ ತಾರೀಖು ೧೬ ನೆಯ ದಿವಸ ಶ್ರೀ. ಸಿದ್ಧರಾಮಪ್ಪಣ್ಣ ಪಂಟೆ ಇವರ ಅಧ್ಯಕ್ಷತೆಯ ಕೆಳಗೆ ಹುಬ್ಬಳ್ಳಿಯ ಕಾಟನ್ ಮಾರ್ಕೆಟನಲ್ಲಿ ಸಭೆಯು ಕೂಡಿತ್ತು. ಸಭೆಗೆ ಸುಮಾರು ೨೦೦೦ ಜನರು ಕೂಡಿದ್ದರು.

ಶ್ರೀ. ಪಾಪಟಿಯವರು ಸಭೆಗೆ ಅಧ್ಯಕ್ಷರಾಗಬೇಕೆಂದು ಶ್ರೀ| ಮಿರ್ಜಿಯವರು ಸೂಚಿಸಿದ ನಂತರ ಶ್ರೀ| ಭದ್ರಾಪುರ ಅದಕ್ಕೆ ಅನುಮೋದನವನ್ನಿತ್ತರು. ಅಧ್ಯಕ್ಷರ ಸ್ಥಳದಲ್ಲಿ ಶ್ರೀ| ಪಾಪಟಿಯವರು ವಿರಾಜಮಾನರಾದ ಬಳಿಕ ಶ್ರೀ| ಮಿರ್ಜಿ ವಕೀಲರು ಸಭೆಯ ಉದ್ದೇಶ ಮತ್ತು ಅದನ್ನು ಕೂಡಿಸಬೇಕೆಂದು ಸಹಿ ಮಾಡಿದವರ ಹೆಸರುಗಳನ್ನು ಹೇಳುವಾಗ ಸಹಿಮಾಡಿದವರಲ್ಲೊಬ್ಬರಾದ ಮತ್ತು ಹುಬ್ಬಳ್ಳಿಯ ಪ್ರಸಿದ್ಧ ವ್ಯಾಪಾರಸ್ಥರಾದ ಶೇಟ ನರಪಾಲ ಎಂಬುವರು ಇವರು ತಾವು ಸಹಿ ಮಾಡಿದ್ದೇನೋ ನಿಜವಂತೂ, ಆದರೆ ತಮಗೆ ಸಹಿ ತೆಗೆದುಕೊಳ್ಳಲಿಕ್ಕೆ ಬಂದ ಶ್ರೀ. ಮಿರ್ಜಿ ವಕೀಲರು ಸಭೆಯ ಉದ್ದೇಶವನ್ನು ಸಂಪೂರ್ಣವಾಗಿ ತಿಳಿಸಿ ಹೇಳಲಿಲ್ಲವೆಂದೂ ಹೇಳಿದರು. ಅಷ್ಟರಲ್ಲಿ ಶ್ರೀ. ಮಿರ್ಜಿಯವರು "ಸೇಟಜಿಯವರಿಗೆ ಸಭೆಯ ಉದ್ದೇಶವನ್ನು ನಾಲ್ಕು ಸಾರೆ ಓದಿ ಹೇಳಿದ್ದೇನೆ ಆ ಬಳಿಕ ಅವರು ತಮ್ಮ ಕಾರಕೂನರ ಕೈಯಿಂದ ಮಾರವಾಡಿ ಟಾಕಿನ [illegible] ತರಿಸಿ ಸಹಿಮಾಡಿದರು" ಎಂದು ಹೇಳಿದರು. ಅದಕ್ಕೆ ಶ್ರೀ. ನರಪಾಲ ಸೇಟರು "ಇದೆಲ್ಲವೂ ಸುಳ್ಳಿದೆ. ನಾನು ನಿಮ್ಮ ಪೆನಸಿಲಿನಿಂದಲೇ ಸಹಿ ಮಾಡಿದ್ದೇನೆ. ಬೇಕಾದರೆ ಸಭಿಕರು ನೋಡಬಹುದು" ಎಂದು ಹೇಳಿದರು. ಅದಕ್ಕೆ ಶ್ರೀ. ಮಿರ್ಜಿಯವರು ನಿರುತ್ತರರಾದರು. ನಂತರ ಶ್ರೀ. ನರಪಾಲ ಸೇಟರ ಸಹಿಯನ್ನು ತೆಗೆದುಹಾಕಬೇಕೆಂದು ಶ್ರೀ| ಮಿರ್ಜಿಯವರು ಹೇಳಿದ ಬಳಿಕ ಈ ಪ್ರಶ್ನೆಯು ಮುಗಿಯಿತು. ಅನಂತರ ಶ್ರೀ. ಮಿರ್ಜಿಯವರು ಕರ್ನಾಟಕ ಪ್ರೆಸ್ಸಿನಲ್ಲಿ ತಾ| ೧೪-೬-೩೦ ನೇ ದಿವಸ ಕಾಂಗ್ರೆಸ್ಸಿನ ಪರವಾಗಿ ಕೂಡಿದ ಸಭೆಯಲ್ಲಿ ಮಾಡಿದ ಭಾಷಣವನ್ನು ನಿಷೇಧಿಸುವ ಗೊತ್ತುವಳಿಯನ್ನು ಸಭೆಯ ಮುಂದೆ ಇಟ್ಟು ಅದರ ಬಗ್ಗೆ ಮಾತಾಡಿದರು. ಈ ಗೊತ್ತುವಳಿಗೆ ಶ್ರೀ. ಭದ್ರಾಪುರ ಇವರೇ ಅನುಮೋದನವನ್ನಿತ್ತರು. ಇಷ್ಟಾದ ನಂತರ ಶ್ರೀ. ಕರಿಗುದರಿಯವರು ಅಧ್ಯಕ್ಷರ ಅಪ್ಪಣೆಯನ್ನು ತೆಗೆದುಕೊಂಡು "ನಮ್ಮದು ಅಹಿಂಸಾ ವ್ರತವು. ಕೊನೆಯ ವರೆಗೆ ನಾವು ಅಹಿಂಸಾ ವ್ರತದಿಂದಲೇ ಕಾರ್ಯಮಾಡತಕ್ಕವರು. ಆದರೆ ಎರಡನೆಯವರಾರಾದರೂ ಹೊಣೆಗಾರಿಕೆಯನ್ನರಿಯದೆ ಸೈನ್ಯವನ್ನು ಹುಬ್ಬಳ್ಳಿಗೆ ತರುವಂತಹ ಕಾರ್ಯವನ್ನು ಮಾಡಿದರೆ ಅಥವಾ ಸರಕಾರದವರೇ ಅನ್ಯಾಯದಿಂದ ಹಾಗೆ ಮಾಡಿದರೆ ಸೈನ್ಯವು ಬರಲಿ. ಅಡ್ಡಿ ಇಲ್ಲ. ಅದಕ್ಕೆ ನಾವು ಅಂಜಿದರೆ ನಡೆಯಲಾರದು. ಅದಕ್ಕೆ ನಾವು ಸಿದ್ಧರಾಗಲೇ ಬೇಕು" ಎಂದು ಅಂದಿದ್ದೇನೆ ಎಂದು ಹೇಳಿದರು. ಬಳಿಕ ಶ್ರೀ. ಮಿರ್ಜಿಯವರು "ಕರ್ನಾಟಕ ಪ್ರೆಸ್ಸಿನಲ್ಲಾದ ಭಾಷಣದಿಂದಲೇ ಹುಬ್ಬಳ್ಳಿಯಲ್ಲಿ ಭಯ ಉತ್ಪನ್ನವಾಗಿದೆ" ಎಂಬ ತಾತ್ಪರ್ಯದ ಭಾಷಣವನ್ನು ಮಾಡಿದರು. ಕೊನೆಗೆ ಗೊತ್ತುವಳಿಯು ಮತಕ್ಕೆ ಬಿದ್ದು ಅದಕ್ಕೆ ಅನುಕೂಲವಾಗಿ ಸುಮಾರು ೩೦ ಮತಗಳೂ, ವಿರುದ್ಧವಾಗಿ ಸಾವಿರಾರು ಮತಗಳೂ ಬಿದ್ದು ರಾಷ್ಟ್ರೀಯ ಜಯಘೋಷಗಳಲ್ಲಿ ಗೊತ್ತುವಳಿಯು ಬಿದ್ದುಹೋಯಿತು.

ಎರಡನೆಯ ಗೊತ್ತುವಳಿಯು ಸಭೆಯ ಮುಂದೆ ಬರುವ ಮುಂಚೆಯೇ ಸಭೆಯನ್ನು ಕೂಡಿಸಿದ ಪಕ್ಷದವರಲ್ಲೊಬ್ಬರಾದ ಶ್ರೀ. ವೀರಪ್ಪಾ ಚನ್ನೂರ ಇವರು ಸಿಟ್ಟಿಗೆದ್ದು ಹೊಲಿಯನ್ನೆ[illegible] ಸಿದ್ದರಿಂದ ಅವರನ್ನು ಅವರ ಪಕ್ಷದ ಜನರೇ ಹಿಂದಕ್ಕೆ [illegible] ಕೊಂಡರು. ಇಷ್ಟರಲ್ಲಿ ಅಧ್ಯಕ್ಷರು ಈ ಗದ್ದಲದಲ್ಲಿಯೇ [illegible] ನಾಲಯದ ಹಿಂದಿನ ಬಾಗಿಲದಿಂದ ಹೊರಟುಹೋದರು.

ಹುಬ್ಬಳ್ಳಿಯಲ್ಲಿ ರಾಷ್ಟ್ರೀಯ ಕೆಲಸಕ್ಕೆ ಎಷ್ಟು ಬೆಂಬಲ ಇದೆಯೆಂಬುದೂ, ಜೋಡಣೆಯನ್ನು ತಿಳಿಯದ ಶ. ಜೋಶ್ಯಗಾರರ ಆಟಕ್ಕೆ ಹುಬ್ಬಳ್ಳಿಯ ನಾಗರಿಕರು ಆಸ್ಪದವನ್ನು ಎಂದೆಂದಿಗೂ ಕೊಡುವದಿಲ್ಲವೆಂಬುದೂ ಈ ಸಭೆಯಿಂದ ಸಂಪೂರ್ಣವಾಗಿ ನಿರ್ಣಯವಾದಂತಾಯಿತು.

## ಹುಬ್ಬಳಿಯ ಸುದ್ದಿ.

[ಸ್ವಂತ ಸುದ್ದಿಗಾರರಿಂದ]

ಇಲ್ಲಿ ಮಹಾತ್ಮರ ಚಳವಳಿಯು ಬಹಳ ಜೋರಿನಿಂದ ನಡೆದು ಜನರಲ್ಲಿ ಉತ್ಸಾಹವು ತುಂಬಿ ತುಳುಕುತ್ತದೆ. ಪ್ರತಿನಿತ್ಯದಲ್ಲಿಯೂ ಮುಂಜಾನೆ ಗ್ರಾಮಸಂಕೀರ್ತನೆಯೂ ಸಂಜೆಗೆ ರಾಷ್ಟ್ರಗೀತೆಗಳೂ ಜರುಗುತ್ತವೆ. ಊರೊಳಗಿನ ಜನರು ಪಂಚಾಯತಿಯನ್ನು ನಿಯಮಿಸಿಕೊಂಡು ತಮ್ಮ ತಮ್ಮ ತಂಟೆಗಳನ್ನು ಅವರ ಮುಖಾಂತರವಾಗಿ ತೀರಿಸಿಕೊಳ್ಳಲು ಗೊತ್ತುಮಾಡಿಕೊಂಡಿದ್ದಾರೆ. ಈ ಸಭೆಗೆ ಇನಾಮದಾರರನ್ನು ಬಿಡಲಿಲ್ಲವಾಗಿ "ಪ್ರಜಾಧ್ವನಿ"ಯಲ್ಲಿ ಪ್ರಕಟವಾದ ಸಂಗತಿಯು ಸುಳ್ಳು ಇದೆ. ತಾ|| ೧೪ನೆಯ ದಿವಸ ಸಭೆಯನ್ನು ಕೂಡಿಸಿ ಪ್ರಜಾಧ್ವನಿಯಲ್ಲಿ ಪ್ರಕಟವಾದುದರ ನಿಷೇಧವು ಮಾಡಲ್ಪಟ್ಟಿತು. ಪಂಚರನ್ನು ನಿಯಮಿಸುವ ಬಗ್ಗೆ ಕೂಡಿಸಿದ ಸಭೆಯಲ್ಲಿ ಯಾವ ಪ್ರಕಾರದ ಗೊಂದಲವೂ ಆಗದೆ ಅದು ಸುಂದರವಾಗಿ ಸಾಗಿತು. ಪ್ರಜಾಧ್ವನಿ ಪತ್ರಿಕೆಯನ್ನು ಯಾರೂ ತರಿಸಕೂಡದಾಗಿಯೂ ಮತ್ತು ಓದಬಾರದಾಗಿಯೂ ಸಭೆಯಲ್ಲಿ ನಿರ್ಣಯ ಮಾಡಲ್ಪಟ್ಟಿತು. ತಾ|| ೧೫ ನೆಯ ದಿವಸ ಪ್ರಜಾಧ್ವನಿ ಪತ್ರಕಾರರೂ, ಮಾಮಲೇದಾರರೂ, ಇನಾಮದಾರರೂ ರಾಜನಿಷ್ಠೆಯ ಸಭೆಯನ್ನು ಕೂಡಿಸುವ ಪ್ರಯತ್ನ ಮಾಡಿದರು. ಸಭೆಗೆ ಜನರು ಕೂಡುವ ಲಕ್ಷಣ ತೋರದ್ದರಿಂದ ಸಭೆಯು ಆಗಲಿಲ್ಲ. ಇಲ್ಲಿಯ ವರೆಗೆ ಸರಕಾರಿ ಅಧಿಕಾರಿಗಳು ಧರ್ಮಶಾಲೆಯಲ್ಲಿ ಇಳಿದುಕೊಳ್ಳುತ್ತಿದ್ದರು. ಆದರೆ ಮಾಮಲೇದಾರರು ಮಾತ್ರ ತಮ್ಮ ಬಿಡಾರವನ್ನು ಇನಾಮದಾರರ ಮನೆಯಲ್ಲಿಯೇ ಮಾಡಿದ್ದರು. ಸರಕಾರಿ ಕೆಲಸಕ್ಕೆ ಬಂದ ಜನರಿಗೆ ಅಲ್ಲಿಯೇ ರಾಜನಿಷ್ಠೆಯ ಬಗ್ಗೆ ಉಪದೇಶ ಮಾಡಿದರು.

## ಅವಧೂತ ಮಹಾರಾಜರನ್ನು ಸೆರೆಹಿಡಿದರು.

ತಾ|| ೧೫ ನೆಯ ದಿವಸ ಪೋಲೀಸರು ೧೨ ನೆಯ ಕಲಮಿನ ಅನ್ವಯ ಕೋಪರಗಾಂವದಲ್ಲಿ ಶ್ರೀ ಚಾಂದವಾಡಕರ, ಮುಗದಲ್ ಒಳವಂಕರಾವ, ರಾಮಲಾಲ ಹಲವಾಯಿ ಮತ್ತು ಅವಧೂತ ಮಹಾರಾಜರನ್ನು ಸೆರೆಹಿಡಿದಿರುತ್ತಾರೆ.

## ಸೆರೆಯಲ್ಲಿದ್ದವರು ಮ್ಯುನಸಿಪಾಲಿಟಿಯ ಅಧ್ಯಕ್ಷರಾದರು.

ಅಹಮ್ಮದಾಬಾದದ ಮ್ಯುನಸಿಪಾಲಿಟಿಯಲ್ಲಿ ಬರುವ ವರ್ಷದ ಬಗ್ಗೆ ಅಧ್ಯಕ್ಷರನ್ನು ಆರಿಸುವ ಕುರಿತು ಸಭೆಯು ಸೇರಿತ್ತು. [illegible]ನ ಕಾಯಿದೆ ಭಂಗಕ್ಕಾಗಿ ಸೆರೆಮನೆಗೆ ಹೋದ ಶ್ರೀ ಹರ[illegible]ರನ್ನೇ ಅಧ್ಯಕ್ಷರನ್ನಾಗಿ ಆರಿಸಿ ಅವರಿಗೆ ಬಹಳ ಮರ್ಯಾದೆ[illegible] ಮಾಡಿದರು. ಉಪಾಧ್ಯಕ್ಷರಾದ ಶ್ರೀ ಜೆ. ಸಿ. ಸ್ವಾಮಿನಾರಾಯಣರು ಅಧ್ಯಕ್ಷರ ಕಾರ್ಯವನ್ನು ಸಾಗಿಸಿಕೊಂಡು ಹೋಗುವರು.

## ಬದಾಮಿ ತಾಲೂಕದಲ್ಲಿ ಸಿಂದಿ ಗಿಡಗಳ ಸಂಹಾರ.

### ೬೦೦ ಗಿಡಗಳು ನೆಲಕ್ಕುರುಳಿದವು.

ಬದಾಮಿ ತಾಲೂಕದ ಕೆರೂರಿನ ಸುತ್ತುಮುತ್ತಲಿನ ೬೦೦ ಈಚಲ ಗಿಡಗಳು ಈ ವರೆಗೆ ಅಲ್ಲಿಯ ಸ್ವಯಂಸೇವಕರಿಂದ ನಾಶ ಮಾಡಲ್ಪಟ್ಟಿವೆ. ಕೆಂದೂರದ ಸಮೀಪದ ೨೫ ಗಿಡಗಳನ್ನು ಗುಳೇದಗುಡ್ಡದಿಂದ ಸ್ವಯಂಸೇವಕರು ಹೋಗಿ ಕಡಿದಿದ್ದಾರೆ. ಗಲ್ಲಿಯ ಜನ ಸ್ವಯಂಸೇವಕರು ಶ್ರೀ ಕಲ್ಯಾಣರಾವ ನೇತೃತ್ವದಲ್ಲಿ ಬದಾಮಿ ತಾಲೂಕದಲ್ಲಿಯ ಸಿಂದಿ ಗಿಡಗಳನ್ನು ಸಮೂಲವಾಗಿ ನಾಶಗೊಳಿಸಿ ನೆಲಕ್ಕೆ ಕೆಡಹುತ್ತಾರೆ. ಇನ್ನು ಸ್ವಲ್ಪ ದಿನಗಳಲ್ಲಿಯೇ ತಾಲೂಕಿನೊಳಗಿನ ಈಚಲಗಿಡಗಳು ಸಮೂಲವಾಗಿ ನಾಶವಾಗುವವು.

## ಪೋಲೀಸನು ಪೋಲೀಸರಿಗೆ ರಾಜೀನಾಮೆ ಕೊಡಲು ಬೋಧಿಸಿದನು.

ಮುಂಬಯಿಯಲ್ಲಿಯ ೧೭೫೬ ನೆಯ ನಂಬರಿನ ಪೋಲೀಸನು, ಪೋಲೀಸರ ಸಭೆಯನ್ನು ಕೂಡಿಸಿ ಆ ಸಭೆಯಲ್ಲಿ ಅವರಿಗೆ ರಾಜೀನಾಮೆಯನ್ನು ಕೊಡಲು ಹೇಳಿದನು. ಅದಕ್ಕಾಗಿ ಮೇಲಿನ ಅಧಿಕಾರಿಗಳು ಅವನನ್ನು ಕೆಲಸದಿಂದ ತೆಗೆದಿದ್ದಾರೆ.

## ಮುಂಬಯಿ ಕಾರ್ಪೊರೇಶನದ ಮೇಲೆ ರಾಷ್ಟ್ರಧ್ವಜ

ಈ ತಿಂಗಳದ ಕಡೆಯ ವಾರದಲ್ಲಿ ಸೇರಲಿಕ್ಕಿರುವ ಮುಂಬಯಿ ಕಾರ್ಪೊರೇಶನದ ಸಭೆಯಲ್ಲಿ ಶ್ರೀ ತಿವಾರಿ ಠಕ್ಕರ ಇವರು 'ಮುಂಬಯಿ ಕಾರ್ಪೊರೇಶನದ ಮುಖ್ಯ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ಹಚ್ಚತಕ್ಕದ್ದೆಂಬುದಾಗಿ ಈ ಕಾರ್ಪೊರೇಶನದ ಅಭಿಪ್ರಾಯವಿದೆ" ಎಂಬ ಸೂಚನೆಯನ್ನು ತರತಕ್ಕವರಿದ್ದಾರೆ.

## ಡಾ. ಪರೇಖರಿಗೆ ೧ ವರ್ಷ ಸಶ್ರಮ ಶಿಕ್ಷೆ.

ಗುಜರಾಥ ಪ್ರಾಂತದಲ್ಲಿಯ ಬುಲಸಾರ ತಾಲೂಕ ಸಮಿತಿಯ ಅಧ್ಯಕ್ಷರಾದ ಡಾ|| ಮೋಹನಲಾಲ ಪರೇಖರಿಗೆ ರಾಜದ್ರೋಹಕ್ಕಾಗಿ ೧ ವರ್ಷ ಸಶ್ರಮ ಶಿಕ್ಷೆ ಮತ್ತು ೨೦೦ ರೂ. ದಂಡ, ದಂಡವನ್ನು ಕೊಡದಿದ್ದಲ್ಲಿ ಮತ್ತೆ ೪ ತಿಂಗಳ ಸಶಿಕ್ಷೆಯಾಗಿದೆ.

## ಅಕ್ಕ ಸತ್ತರೆ ಅಮಾವಾಸ್ಯೆ ನಿಲ್ಲುವದಿಲ್ಲ.

ತಿರಪೂರದಲ್ಲಿ ಹರಿಯುವ ಜಂಬೂನದಿಯ ಮೇಲೆ ಮ್ಯುನಸಿಪಾಲಿಟಿಯವರು ಪೂಲನ್ನು ಕಟ್ಟಿ ಅದಕ್ಕೆ ಮಹಾತ್ಮರ ಹೆಸರಿಡಬೇಕೆಂದು ಗೊತ್ತುಮಾಡಿ, ಅದನ್ನು ತೆರೆಯುವದಕ್ಕೆ ಅಲ್ಲಿಯ ಕಲೆಕ್ಟರರನ್ನು ಕರೆದರು. ಆ ಇಂಗ್ರೇಜಿ ಕಲೆಕ್ಟರರು ಮಹಾತ್ಮರ ಹೆಸರನ್ನಿಡುವದಾದರೆ ತೆರೆಯಲು ಬರಲಾರೆನೆಂದು ತಿಳಿಸಿದರು. ನಂತರದಲ್ಲಿ ಮದ್ರಾಸ ಇಲಾಖೆಯ ಮುಖ್ಯ ಮಂತ್ರಿಯಾದ ಸುಬ್ರಹ್ಮಣ್ಯರಿಗೆ ತೆರೆಯಲು ಕೇಳಿಕೊಂಡರು. ಅವರೂ ಒಲ್ಲೆಂದರು. ಆಗ ಮ್ಯುನಸಿಪಾಲಿಟಿಯವರು ತಮ್ಮ ಊರಿನ ಸತ್ಯಾಗ್ರಹ ಮಂಡಳದ ಅಧ್ಯಕ್ಷರಾದ ಶ್ರೀ ರಾಮಸ್ವಾಮಿ ಗೌಡರಿಂದ ಪೂಲನ್ನು ತೆರೆಯುವ ಸಮಾರಂಭವನ್ನು ಸಾಂಗಗೊಳಿಸಿದರು. ಅಕ್ಕ ಸತ್ತರೆ ಅಮಾವಾಸ್ಯೆ ನಿಲ್ಲುವದಿಲ್ಲವಷ್ಟೆ.

# ಸರದಾರ ಶಾರ್ದೂಲ ಸಿಂಗರಿಗೆ ಶಿಕ್ಷೆ

ಪಂಜಾಬ ಸತ್ಯಾಗ್ರಹ ಮಂಡಳದ ಮುಖಂಡರಾದ ಸರದಾರ ಶಾರ್ದೂಲಸಿಂಗರಿಗೆ ರಾಜದ್ರೋಹಾತ್ಮಕ ಭಾಷಣಗಳನ್ನು ಮಾಡಿದುದಕ್ಕಾಗಿ ಲಾಹೋರದ ಮ್ಯಾಜಿಸ್ಟ್ರೇಟರಿಂದ ೧ ವರ್ಷದ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ. ಅಸಹಕಾರದ ಯುಗದಲ್ಲಿ ಪಂಜಾಬದಲ್ಲಿ ರಾಜದ್ರೋಹಕ್ಕಾಗಿ ಮೊದಲು ಸೆರೆ ಹಿಡಿಯಲ್ಪಟ್ಟವರೆಂದರೆ ಇವರೇ. ಆಗ್ಗೆ ಇವರು ೫ ವರ್ಷ ಸಶ್ರಮ ಶಿಕ್ಷೆಯನ್ನು ಅನುಭವಿಸಿದ್ದಾರೆ.

## 'ಯಂಗ ಇಂಡಿಯಾ'ದ ಮುದ್ರಕರಿಗೆ ಸೆರೆಮನೆ

ಪೋಲೀಸರೊಳಗೆ ಅಸಂತೋಷವನ್ನು ಹರಡಿದರೆಂಬ ಆರೋಪದಿಂದ "ನವಜೀವನ" ಪತ್ರಿಕೆಯ ಸಂಪಾದಕರೂ "ಯಂಗ ಇಂಡಿಯಾ" ಪತ್ರಿಕೆಯ ಮುದ್ರಕರೂ ಆಗಿರುವ ಶ್ರೀ. ಮೋಹನಲಾಲ ಭಟ್ಟರನ್ನು ತಾ|| ೧೫ ನೆಯ ದಿವಸ ರಾತ್ರಿ ೧೧ ಘಂಟೆಗೆ ಪೋಲೀಸರು ಸೆರೆಹಿಡಿದುಕೊಂಡು ಹೋದರು. ಶ್ರೀ. ಪೋಪಟಲಾಲ ಪಟವಾರಿಯವರು ಅವರ ಸ್ಥಳದಲ್ಲಿ ಮುದ್ರಕರಾಗಿ ಆರಿಸಲ್ಪಟ್ಟಿದ್ದಾರೆ.

## ಸೊಲ್ಲಾಪುರದ ಭಯಂಕರ ಸುದ್ದಿ

### ಮತ್ತೆ ೬ ಜನರ ಮೇಲೆ ಕೊಲೆಯ ಆರೋಪ

#### ೩೫ ಜನರ ಮೇಲೆ ದಂಗೆಯ ಆರೋಪ

ಸೊಲ್ಲಾಪುರ ದಂಗೆಯ ಕಾಲಕ್ಕೆ ಕೊಲೆ ಮಾಡಿದರೆಂಬ ಆರೋಪದಿಂದ ಮತ್ತೆ ೬ ಜನರು ಸೆರೆಹಿಡಿಯಲ್ಪಟ್ಟಿದ್ದಾರೆ. ೧೨ ಜನ ಸೆರೆಯಾಳುಗಳ ಮೇಲೆ ದಂಗೆಯ ಆರೋಪವು ಇಡಲ್ಪಟ್ಟಿದೆ. ಸೆಶನ್ಸ ಕೋರ್ಟು ಮತ್ತು ಅದರ ಬಳಿಯಲ್ಲಿಯ ಕಟ್ಟಡಗಳನ್ನು ಸುಟ್ಟ ಆರೋಪದಿಂದ ೯ ಜನರೂ, ಸಿಂದಿಯ ಅಂಗಡಿಗಳಿಗೆ ಬೆಂಕಿಯನ್ನು ಹಚ್ಚಿದುದಕ್ಕಾಗಿ ೧೪ ಜನರೂ ಸೆರೆಹಿಡಿಯಲ್ಪಟ್ಟಿದ್ದಾರೆ. ಕೆಲವು ಆರೋಪಿಗಳ ವಿಚಾರಣೆಯು ಶ್ರೀ. ವಾಡಿಯಾ ಅವರ ಮುಂದೆ ನಡೆಯುವದಿದೆ.

## ಮಂಗಳೂರ ಕಲೆಕ್ಟರರ ಕಟ್ಟಪ್ಪಣೆ.

### ಪಿಕೆಟಿಂಗಕ್ಕೆ ಅಡ್ಡಿ.

ಮಂಗಳೂರಿನ ಕಲೆಕ್ಟರರು ೧೪೪ ನೆಯ ಕಲಮಿನನ್ವಯ ಒಂದು ಕಟ್ಟಪ್ಪಣೆಯನ್ನು ಹೊರಡಿಸಿ ಕಚೇರಿಯ ಸುತ್ತಲು ೬ ಮೈಲು ಯಿಹಂಗೂ ಸೆರೆ ಸಿಂದಿ ಮತ್ತು ವಿಲಾಯತಿ ಬಟ್ಟೆಯ ಅಂಗಡಿಗಳ ಮುಂದೆ ಎರಡು ತಿಂಗಳ ವರೆಗೆ ಪಿಕೆಟಿಂಗ ಮಾಡಬಾರದೆಂದು ತಿಳಿಸಿದ್ದಾರೆ. ಕಾಂಗ್ರೆಸದ ಸ್ವಯಂಸೇವಕರು ಈ ಕಟ್ಟಪ್ಪಣೆಯ ವಿರುದ್ಧವಾಗಿ ಪಿಕೆಟಿಂಗ ಕಾರ್ಯವನ್ನು ಮೊದಲಿನಂತೆಯೇ ಒತ್ತರದಿಂದ ನಡಿಸಿದ್ದಾರೆ.

## ಧಾರವಾಡಕ್ಕೆ ವಿಮಾನವು ಬಂದಿತ್ತು.

ತಾ|| ೧೮ ನೆಯ ದಿವಸ ಒಂದು ವಿಮಾನವು ಧಾರವಾಡದ ಮೇಲೆ ಹಾಯ್ದು ಹೋಯಿತೆಂದು ತಿಳಿಯುತ್ತದೆ.

## ಸತ್ಯಾಗ್ರಹಕ್ಕಾಗಿ ಆಚಾರ್ಯರ ಶುಕ್ಲವೃತ್ತಿ.

ಧಾರವಾಡದಲ್ಲಿಯ ಪ್ರಸಿದ್ಧ ಪುರಾಣಿಕರಾದ ವೇ. ಮೂ. ಅಗಳಗಟ್ಟಿ ಹಚ್ಚಾಚಾರ್ಯರು ಕಾಂಗ್ರೆಸದ ಸ್ವಯಂಸೇವಕರ ಭೋಜನದ ಸಹಾಯವೆಂದು ದಿನಾಲು ಪ್ರಾತಃಕಾಲ ಎರಡು ತಾಸು ಊರೊಳಗೆ ಶುಕ್ಲವೃತ್ತಿಯನ್ನು ಬೇಡಿ ಬಂದದ್ದನ್ನು ಸತ್ಯಾಗ್ರಹ ಮಂಡಳಕ್ಕೆ ಒಪ್ಪಿಸುತ್ತಿದ್ದಾರೆ ಇದರಿಂದ ಸತ್ಯಾಗ್ರಹ ಮಂಡಳಕ್ಕೆ ಒಳ್ಳೇ ಸಹಾಯವಾಗಹತ್ತಿದೆ ಇಲ್ಲಿಯ ಆಚಾರ್ಯರೂ ಇವರ ಕಿತ್ತೆಯನ್ನು ತೀಡುವರೋ ?

## ಮುಂಬಯಿಯಲ್ಲಿ ದಬ್ಬಾಳಿಕೆ.

### ಇಬ್ಬರು ಸ್ವಯಂಸೇವಕರನ್ನು ಸೆರೆ ಹಿಡಿದರು.

ಅಹಿಂಸಾವಾದಿಗಳಾದ ಬಂಧುಗಳನ್ನು ಹೊಡೆಯಬೇಡಿರೆಂದೂ, ಅನ್ಯಾಯದ ಕಾಯಿದೆಗಳನ್ನು ಮುರಿಯಿರೆಂದೂ ಹಸ್ತಪತ್ರಿಕೆಗಳ ಮುಖಾಂತರವಾಗಿ ಪೋಲೀಸರಿಗೆ ಬೋಧಿಸಿದುದಕ್ಕಾಗಿ ಹಿಂದುಸ್ಥಾನೀ ಸೇವಾದಲದ ಸ್ವಯಂಸೇವಕರಾದ ಶ್ರೀ ನಾಗರಮಟ ಮತ್ತು ಕಾಳೆ ಇವರು ಸೆರೆ ಹಿಡಿಯಲ್ಪಟ್ಟಿದ್ದಾರೆ.

## ಮುಂಬಯಿಯ

### ಶ್ರೀ ಕಪಾಡಿಯಾ ಇವರಿಗೆ ೬ ತಿಂಗಳ ಸ. ಶಿಕ್ಷೆ

ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಮೂರನೆಯ ಸತ್ಯಾಗ್ರಹ ಯುದ್ಧ ಮಂಡಳದ ಅಧ್ಯಕ್ಷರಾದ ಶ್ರೀ ಗುಣವಂತ ಆರ್ ಕಪಾಡಿಯಾ ಅವರಿಗೆ ( ಪೋಲೀಸ ಕಮೀಶನರರು ಸೊಲ್ಲಾಪುರ ದಿನದ ಮೆರವಣಿಗೆಯ ವಿರುದ್ಧವಾಗಿ ಹೊರಡಿಸಿದ ಕಟ್ಟಪ್ಪಣೆಯನ್ನು ಮುರಿದುದಕ್ಕಾಗಿ ) ಚೀಫ ಪ್ರೆ. ಮ್ಯಾಜಿಸ್ಟ್ರೇಟರು ೬ ತಿಂಗಳ ಸಶ್ರಮ ಶಿಕ್ಷೆಯನ್ನು ವಿಧಿಸಿದ್ದಾರೆ. ಇವರ ಖಟ್ಲೆಯ ವಿಚಾರಣೆಯು ಕೇವಲ ೧೬ ನಿಮಿಷಗಳಲ್ಲಿಯೇ ಮುಗಿಯಿತು.

## "ಉಪ್ಪಿನ ಕರವನ್ನು ತೆಗೆದುಹಾಕಿರಿ"

ಮದ್ರಾಸ ಇಲಾಖೆಯ ಅನಂತಪುರ ಜಿಲ್ಹಾ ಲೋಕಲ್ ಬೋರ್ಡಿನವರು "ಉಪ್ಪಿನ ಕರವು ಅನ್ಯಾಯದ್ದು, ಬಡಜನರಿಗೆ ಹೆಚ್ಚು ಭಾರವಾದದ್ದು ಇರುವದರಿಂದ ಅದನ್ನು ತೆಗೆದುಹಾಕಬೇಕೆ"ಂದು ಗೊತ್ತುಮಾಡಿಕೊಂಡು ಆ ಗೊತ್ತನ್ನು ಸರಕಾರದ ಕಡೆಗೆ ಕಳಿಸಿದ್ದಾರೆ

## ಇತರವೃತ್ತ

ಪುಣೆಯ ಶ್ರೀಮತಿ ಸೌ|| ಸರಸ್ವತಿಬಾಯಿ ಗಾಡಗೀಳ ಇವರು ಇಲ್ಲಿಗೆ ಬಂದಿದ್ದು ಈ ದಿನ ಸಾಯಂಕಾಲಕ್ಕೆ ಕೇವಲ ಸ್ತ್ರೀಯರ ಸಲುವಾಗಿ ಅವರ ವ್ಯಾಖ್ಯಾನವಾಗತಕ್ಕದ್ದಿದೆ.

ಶ್ರೀ: ಎಚ್ ವೆಂಕಟರಾವ ಇವರ ಶಿರಹಟ್ಟಿ ನಾಟಕ ಮಂಡಳವು ಬಂದಿದ್ದು, ಅವರ ಪ್ರಯೋಗಗಳು ನಡೆದಿವೆ. ಜನರ ಪ್ರೋತ್ಸಾಹನವು ಚನ್ನಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ

## ೧೫೦೦೦ ಸಿಂದೀ ಗಿಡಗಳು ನೆಲಕ್ಕುರುಳಿದವು

ಸಿಂದೀ ಅಂಗಡಿಗಳೆಲ್ಲ ಮುಚ್ಚಿಹೋದವು.

ಈ ಜಿಲ್ಲೆಯಲ್ಲಿ ಕೆಳಗೆ ಕಂಡ ಸ್ಥಳಗಳಲ್ಲಿ ಕೂಡಿ ಒಟ್ಟಿಗೆ ೧೫೦೦೦ ಸಿಂದೀ ಗಿಡಗಳನ್ನು ಕಡಿದಿದ್ದಾರೆ.

ಕಿತ್ತೂರ, ಸಾಗನೂರ, ಸಂಗೊಳ್ಳಿ, ದೇವಲಾಪುರ, ನೇಗಿನಾಳ, ಸಂಪಗಾವ, ಚಿಕ್ಕಬಾಗೇವಾಡಿ, ಬೈಲಹೊಂಗಲ ಮುರಗೋಡ, ಹೊಸೂರ, ಅಸುಂಡಿ, ನೇಸರಗಿ, ಶಿವಸಮುದ್ರ, ಬುಡರಕಟ್ಟಿ, ಒಡಲಿ, ಮಾಸೊಳ್ಳಿ, ಸವದತ್ತಿ ಬೈಲಹೊಂಗಲ ತಾಲೂಕದಲ್ಲಿ ಸಿಂದೀ ಅಂಗಡಿಗಳೆಲ್ಲ ಮುಚ್ಚಿಹೋಗಿವೆ. ಯಾಕಂದರೆ ಸಿಂದೀ ತೆಗೆಯುವ ಮಂದಿಗಳನ್ನೆಲ್ಲ ಕೂಡುಹಾಕುತ್ತಿದ್ದಾರೆ.

## ಸಾಯಮನ್ ಸಪ್ತಕದ ವರದಿಯ ಸಾರ

[ಹಿಂದಿನಿಂದ ಮುಂದುವರಿದುದು]

ಹಿಂದುಸ್ಥಾನದ ರಾಜ್ಯವ್ಯವಸ್ಥೆಯ ಸಂಬಂಧವಾಗಿ ವಿಚಾರ ಮಾಡ ಹತ್ತಲು ಸೈನ್ಯದ ಅಡಚಣೆಯು ಮುಂದೆ ಬಂದು ನಿಲ್ಲುತ್ತದೆ. ಸೈನ್ಯ ಭರತಿ ಮತ್ತು ಅದರ ಮೇಲೆ ನಿಯಮಿಸಲ್ಪಡುವ ಅಧಿಕಾರಿಗಳ ಸಂಬಂಧವಾಗಿ ತಾತ್ಪೂರ್ತಿಕ ವ್ಯವಸ್ಥೆಯನ್ನು ಮಾಡಿದರೆ ಕಾರ್ಯವಾದಂತಾಗಲಿಲ್ಲ. ಇಂಗ್ಲೀಷರ ಧೋರಣದ ವಿಷಯವಾಗಿ ಸಂಶಯ ತೆಗೆದುಕೊಳ್ಳಲು ಹಿಂದೀ ಜನರಿಗೆ ಆಸ್ಪದ ಕೊಟ್ಟಂತಾಗುವದು. ಸ್ವರಾಜ್ಯವು ಸಿಕ್ಕಬೇಕ ಹಿಂದುಸ್ಥಾನದೊಳಗಿನ ರಾಜಕೀಯ ಮುಖಂಡರಿಗೆ ಸೈನ್ಯದ ಸಂಬಂಧವಾಗಿ ಒದಗಿರುವ ಅಡಚಣೆಗಳನ್ನು ದೂರಮಾಡುವದು ಈಗ ಅವಶ್ಯವಾಗಿದೆ. ಹಿಂದುಸ್ಥಾನ ಮತ್ತು ವಸಾಹತುಗಳ ನಡುವೆ ಈಗ ತುಲನೆಯನ್ನು ಮಾಡುತ್ತಿದ್ದಾರೆ. ಸೈನ್ಯದ ವಿಷಯವಾಗಿ ಹೀಗೆ ತುಲನೆಮಾಡುವದು ಸರಿಯಾಗದು. ಯಾಕಂದರೆ ಹಿಂದುಸ್ಥಾನದಲ್ಲಿ ಬೇರೆ ಬೇರೆ ಧರ್ಮ ಹಾಗೂ ಜಾತಿಗಳ ಜನರಿರುತ್ತಾರೆ. ವಾಯುವ್ಯ ಸರಹದ್ದಿನಲ್ಲಿಯಂತೂ ಸಂಕಟಗಳಿಗೆ ಕೊನೆಯೇ ಇಲ್ಲ. ಸರಹದ್ದಿಯನ್ನು ಸಂರಕ್ಷಿಸುವದು ಅವಶ್ಯವಾಗಿದೆ. ಈಗ ಹಿಂದುಸ್ಥಾನದಲ್ಲಿ ಬ್ರಿಟಿಶ ಸೈನ್ಯವು ಮತ್ತು ಬ್ರಿಟಿಶ ಅಧಿಕಾರಿಗಳು ಅವರ ಮೇಲೆ ಈಗ ಸತ್ತೆಯನ್ನು ನಡಿಸುತ್ತಿದ್ದಾರೆ. ಆದುದರಿಂದ ಹಿಂದುಸ್ಥಾನದ ಒಳಗೆ ಶಾಂತತೆಯೂ ಸ್ಥಿರತೆಯೂ ನೆಲೆಗೊಂಡಿವೆ. ಬ್ರಿಟಿಶ ಸೈನ್ಯವನ್ನು ಮತ್ತು ಅಧಿಕಾರಿಗಳನ್ನು ಅಲ್ಲಿಂದ ತೆಗೆದು, ಅಲ್ಲಿ ಶಾಂತತೆಯನ್ನು ಕಾಯುವ ಕಾರ್ಯವನ್ನು ಕೇವಲ ಹಿಂದೀ ಸೈನ್ಯದ ಮೇಲೆ ಒಪ್ಪಿಸಿದರೆ ಅದರಿಂದ ಹಿಂದುಸ್ಥಾನಕ್ಕೆ ಹಾನಿಯುಂಟು. ಯಾಕಂದರೆ ಹಿಂದುಸ್ಥಾನದ ಜನರು ಒಂದೇ ಧರ್ಮದವರೂ ಒಂದೇ ವಂಶದವರೂ ಇರುವದಿಲ್ಲ. ಹಿಂದುಸ್ಥಾನಕ್ಕೆ ಒಂದಿಲ್ಲೊಂದು ದಿನವಾದರೂ ಸ್ವರಾಜ್ಯವನ್ನು ಕೊಟ್ಟೇ ಕೊಡಬೇಕಾಗುವದು. ಆಗ್ಗೆ ಹಿಂದೀ ಸೈನ್ಯವನ್ನು ಹಿಂದೀ ಜನರ ಕೈಯಲ್ಲಿ ಸೇರಿಸಬೇಕಾಗುವದು. ಈ ಮಾತಿನದನ್ನು ವಿಚಾರಿಸಿಕೊಂಡು ಸೈನ್ಯದ ವ್ಯವಸ್ಥೆಯಲ್ಲಿ ನಾವು ಹಸ್ತಕ್ಷೇಪ ಮಾಡಿದ್ದರೆ, ಹಿಂದುಸ್ಥಾನಕ್ಕೆ ಒಂದು ರೀತಿಯಿಂದ ಅವಮಾನವನ್ನು ಮಾಡಿದಂತಾಗುವದು. ಸೈನ್ಯದ ಪ್ರಶ್ನೆಯನ್ನು ನೆಹರೂ ಮಂಡಳದವರು ಬಿಡಿಸಲು ಪ್ರಯತ್ನಿಸಿದ್ದಾರೆ. ಆದರೆ ಅದು ಅವರಿಗೆ ಸಫಲವಾಗಿಲ್ಲ.

ಸದ್ಯದ ಸೈನ್ಯರಚನೆಯ ಪುನರ್ಘಟನೆಯ ಕಾರ್ಯವನ್ನು ಬ್ರಿಟಿಶ ಸರಕಾರವು ಕೈಕೊಳ್ಳಬೇಕು. ಹಿಂದೀ ಜನರೂ ಈ ವಿಷಯದಲ್ಲಿ ಬ್ರಿಟಿಶರೊಡನೆ ಸಹಕರಿಸಬೇಕು. ಯಾಕಂದರೆ ಇಂಗ್ಲೀಷ ಜನರು ಹಿಂದೀ ಜನರ ಆಕಾಂಕ್ಷೆಗಳಿಗೆ ತಮ್ಮ ಸಂಪೂರ್ಣ ಸಹಾನುಭೂತಿಯನ್ನೇ ತೋರಿಸುತ್ತಿರುವರು.

### ಮತಾಧಿಕಾರದಲ್ಲಿಯ ದೋಷ

ಮತದಾರರು ನಿರಕ್ಷರರಿದ್ದಾರೆ. ಕೆಲವು ವರ್ಗಗಳಿಗೆ ಮತಾಧಿಕಾರವೇ ದೊರೆತಿರುವದಿಲ್ಲ. ಸ್ತ್ರೀಯರೂ, ಬಡವರೂ ಮತಾಧಿಕಾರ [illegible]ಯದ ವರ್ಗಗಳಲ್ಲಿ ಸೇರುತ್ತಾರೆ. ೧೦೦ ಕ್ಕೆ ೯೦ ಜನ ಮತದಾರರು ನಿರಕ್ಷರರಿದ್ದಾರೆ. ಸಾಕ್ಷರ ಜನರ ಸಂಖ್ಯೆಗಿಂತಲೂ ಮತದಾರರ ಸಂಖ್ಯೆಯು ಕಡಿಮೆಯಿದೆ. ಎಷ್ಟೋ ಸಾಕ್ಷರ ಜನರಿಗೆ ಮತಾಧಿಕಾರವೇ ದೊರೆತಿರುವದಿಲ್ಲ.

(ಮುಂದೆಸಾಗುವದು.)

## ವ್ಹಾಯಿಸರಾಯರ ಕಾನೂನುಗಳಿಗೆ

### ಹಿಂದೀ ವರ್ತಕ ಸಂಘದ ವಿರೋಧ

ಸಾಮಾಜಿಕ ಬಹಿಷ್ಕಾರ, ಕರನಿರಾಕರಣೆ ಮತ್ತು ಪಿಕೆಟಿಂಗ ಇವುಗಳ ವಿರುದ್ಧವಾಗಿ ವ್ಹಾಯಿಸರಾಯರು ಹೊರಡಿಸಿದ ಕಾನೂನುಗಳನ್ನು ಕುರಿತು ವಿಚಾರಿಸುವದಕ್ಕಾಗಿ ಹಿಂದೀ ವರ್ತಕ ಸಂಘದವರು ೧೭ ನೆಯ ತಾ|| ದಿವಸ ಸಭೆಯಲ್ಲಿ ಸೇರಿ, ಕೆಳಗಿನ ತಂತಿಯನ್ನು ವ್ಹಾಯಿಸರಾಯರ ಕಡೆಗೆ ಕಳಿಸಿದರು:—

ವ್ಹಾಯಿಸರಾಯರು ಹೊರಡಿಸಿದ ಕಾನೂನುಗಳನ್ನು ಕುರಿತು ಈ ಸಭೆಯು ತನ್ನ ನಿಷೇಧವನ್ನು ವ್ಯಕ್ತಪಡಿಸುತ್ತದೆ. ಈ ಕಾನೂನುಗಳನ್ನು ಹೊರಡಿಸುವ ಆವಶ್ಯಕತೆಯೇ ಇದ್ದಿದ್ದಿಲ್ಲವಾಗಿ ಈ ಸಭೆಯ ಅಭಿಪ್ರಾಯವಾಗಿದೆ. ವ್ಯಕ್ತಿಸ್ವಾತಂತ್ರ್ಯವನ್ನು ಹರಣಮಾಡುವ ಈ ಕಾಯದೆಗಳನ್ನು ಕೂಡಲೆ ತಿರುಗಿ ತೆಗೆದುಕೊಳ್ಳಬೇಕು. ಇಂತಹ ಕಾಯದೆಗಳಿಂದ ಸದ್ಯದ ಪರಿಸ್ಥಿತಿಯು ಸುಧಾರಿಸಲಾರದೆಂದು ಈ ಸಭೆಯು ಒತ್ತಿಹೇಳುತ್ತದೆ.

ಶ್ರೀ ಮಹಾಲಕ್ಷ್ಮೀ ಪ್ರಸಾದಿಕ
ಶಿರಹಟ್ಟಿ ನಾಟಕ ಮಂಡಳಿಯವರು
ಶಿವಾನಂದ ನಾಟಕ ಶಾಲೆಯಲ್ಲಿ
ಶನಿವಾರ ತಾ|| ೨೧-೬-೩೦ ರಾತ್ರಿ ೧೦ ಗಂಟೆಗೆ
ತಮ್ಮ ಲೋಕಪ್ರಿಯವಾದ
ದಶಾವತಾರ
ಸೋಮವಾರ ತಾ|| ೨೩-೬-೩೦
ರಾಮಾಂಜನೇಯ ಯುದ್ಧ
ಬುಧವಾರ ತಾ|| ೨೫—೬—೩೦ ದಿವಸ
ಶಿವಲೀಲಾ
ಎಂಬ ನಾಟಕಗಳನ್ನಭಿನಯಿಸುವರು.
ಎಚ್, ವೆಂಕೋಬರಾವ
ಪ್ರೊಪ್ರಾಯಿಟರ.

ಈ ಪತ್ರಿಕೆಯು ಬಸವಂತ ಅಣ್ಣಾರಾವ ಮುಖಂಡರ ಇವರಿಂದ ಬಾಗಲಕೋಟೆಯ
ವಿದ್ಯಾವರ್ಧಕ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅವರಿಂದಲೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

ಜಯಕರ್ನಾಟಕ

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬುಧವಾರದ ಹೊರ್ತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ರವಿವಾರ ಮಿತಿ ಜ್ಯೇಷ್ಠ ಬಹುಳ ೧೧ ಶಕೆ ೧೮೫೨ ತಾ॥ ೨೨—೬—೩೦ [ಸಂಚಿಕೆ ೮೩

## ಗುಜರಾಥ ಕಾಲೇಜಕ್ಕೆ ಬಹಿಷ್ಕಾರ

### ಮತ್ತೆ ಶಿರಾಸ ಸಾಹೇಬರು ಮುಂದೆ ಬಂದರು

ಐವರನ್ನು ಸೆರೆಹಿಡಿದರು

ತಾ॥ ೧೮ ನೆಯ ದಿವಸ ಅಹಮ್ಮದಾಬಾದದ ಸ್ವಯಂ ಸೇವಕರು ಗುಜರಾಥ ಕಾಲೇಜದ ಮುಂದೆ ನಿಂತು ಪಿಕೆಟಿಂಗ ವನ್ನು ಪ್ರಾರಂಭಿಸಿದರು. ಸ್ವಲ್ಪ ಹೊತ್ತಿನ ಮೇಲೆ ಕಮೀಶನರ ಸಾಹೇಬರು ಅಲ್ಲಿಗೆ ಹೋಗಿ "ಸರಕಾರಿ ಕಟ್ಟಡದಲ್ಲಿ ನೀವು ನಿಂತಿರುವಿರಿ ಹೊರಗೆ ಹೋಗಿರಿ" ಎಂದು ಸ್ವಯಂಸೇವಕರಿಗೆ ಹೇಳಿಕೊಂಡರು. ನಾಗರಿಕರು ಕೊಟ್ಟ ಹಣದಿಂದಲೇ ಕಟ್ಟಡವು ಕಟ್ಟಲ್ಪಟ್ಟದ್ದರಿಂದ ಕಟ್ಟಡವು ನಾಗರಿಕರದಾಗಿದೆ ಯೆಂದು ಉತ್ತರ ಕೊಟ್ಟರು. ಅಷ್ಟರಲ್ಲಿ ಶಿರಾಸ ಸಾಹೇಬರು "ನಾನು ನಿಮ್ಮ ಗುರು ಇರುವೆನೆಂಬುದು ನಿನಗೆ ಗೊತ್ತಿಲ್ಲವೋ" ಎಂದು ಒಬ್ಬ ಸ್ವಯಂಸೇವಕನಿಗೆ ಹೇಳಿ ಅವನನ್ನು ಪಾವಟಿಗೆ ಗಳ ಮೇಲಿಂದ ದಬ್ಬಿಬಿಟ್ಟರು. "ಗುರುವು ತನ್ನ ಶಿಷ್ಯರನ್ನು ಹೀಗೆಯೇ ನಡಿಸಿಕೊಳ್ಳುವದಿಲ್ಲವು"ಎಂಬುದಾಗಿ ಆ ವಿದ್ಯಾರ್ಥಿಯು ಶಿರಾಸಸಾಹೇಬರಿಗೆ ಹೇಳಿಬಿಟ್ಟನು. ಬಳಿಕ ಅಧಿಕಾರಿಗಳು ೪ ಜನ ಸ್ವಯಂಸೇವಕರನ್ನೂ, ಮತ್ತು ಅಲ್ಲಿಯ ಪರಿಸ್ಥಿತಿಯನ್ನು ನಿರೀಕ್ಷಿಸಲು ಹೋದ "ಸತ್ಯಾಗ್ರಹ ಸಮಾಚಾರ" ಪತ್ರಿಕೆಯ ಸಂಪಾದಕರಾದ ಶ್ರೀ: ಭಾಗವತರನ್ನು ಸೆರೆಹಿಡಿದು ಕೊಂಡು ಹೋದರು.

### ಮುಂಬಯಿಯಲ್ಲಿ

ಮಹಾತ್ಮಾ ಗಾಂಧಿ, ಭಾರತಪುತ್ರ, ತಕಲಿ, ಚರಖಾ ಮೊದಲಾದ

## ೨೦ ಸ್ವಯಂಸೇವಕರಿಗೆ ಸೆರೆಮನೆ

ಪರದೇಶಿ ಬಟ್ಟೆಗಳ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುತ್ತಿದ್ದ ೨೦ ಸ್ವಯಂಸೇವಕರನ್ನು ತಾ॥ ೧೯ ನೆಯ ದಿವಸ ಸೆರೆಹಿಡಿದು ಪ್ರತಿಯೊಬ್ಬರಿಗೂ ೪ ತಿಂಗಳ ಸಕ್ರಮ ಶಿಕ್ಷೆಯನ್ನು ವಿಧಿಸಿದ್ದಾರೆ. "ಮಹಾತ್ಮಾ ಗಾಂಧಿ, ಭಾರತಪುತ್ರ, ತಕಲಿ, ಚರಖಾ" ಎಂಬುದಾಗಿ ತಮ್ಮ ಹೆಸರುಗಳಿವೆಯೆಂದು ಸ್ವಯಂಸೇವಕರಲ್ಲಿ ೪ ಜನರು ಹೇಳಿದರು.

## ಶಾಲೆಯ ಹುಡುಗರ ಧೈರ್ಯ

ಮುಂಬಯಿಯಲ್ಲಿ ನೆಹರೂ ಅವರ ಆಗಮನದಿಂದ ಜನರಲ್ಲಿ ಉತ್ಸಾಹವು ತುಂಬಿತುಳುಕುತ್ತಿದೆ. ಗಿರಗಾಂವದಲ್ಲಿಯ ಕೆಲವು ಶಾಲೆಗಳ ಹುಡುಗರು ಆ ದಿವಸ ಶಾಲೆಗೆ ಹೋಗಲಿಲ್ಲ ಮತ್ತು ಹೋಗುವ ಹುಡುಗರನ್ನು ತಿರುಗಿ ಕಳಿಸುತ್ತಿದ್ದರು. ಮೆರವಣಿಗೆಯಲ್ಲಿ ಭಾಗತೆಗೆದುಕೊಂಡು ತಿರುಗಿ ಬರುವಾಗ್ಗೆ ತಮ್ಮ ಹುಡುಗರದೇ ಒಂದು ವಿಶಿಷ್ಟ ಮೆರವಣಿಗೆಯನ್ನು ಕಾಂಗ್ರೆಸ ಕಚೇರಿಯ ವರೆಗೆ ಹೊರಡಿಸಿದರು, ಹಾದಿಯಲ್ಲಿಯ ರಾಬರ್ಟ ಸ್ಕೂಲಿನ ಹುಡುಗರಿಗೆ ಹರತಾಳ ಮಾಡಲು ಹೇಳಿದರು. ಆ ಶಾಲೆಯ ಆವಾರದಲ್ಲಿ ಹೊಕ್ಕು ಹುಡುಗರನ್ನು ಹೊರಗೆ ಕರೆತರುವ ಪ್ರಯತ್ನ ನಡಿಸಿದರು. ಇದನ್ನು ನೋಡಿ ಪೋಲೀಸರು ಅಲ್ಲಿಗೆ ಬಂದರು. ಆದರೆ ಹುಡುಗರು ಅವರಿಗೆ ಹೆದರದೆ "ರಘುಪತಿ ರಾಜಾರಾಮ" ಎಂಬ ಮಹಾತ್ಮರ ಪ್ರೀತಿಯ ಹಾಡನ್ನು ಹಾಡುತ್ತ ನಿಂತರು. ಮತ್ತೆ ಕೆಲವು ಪೋಲೀಸರು ಬಂದರು. ಆದರೆ ಹುಡುಗರು ಮಾತ್ರ ಬಹಳ ಹೊತ್ತು ತಮ್ಮ ಕಾರ್ಯವನ್ನು ಧೈರ್ಯದಿಂದ ಹಾಗೇ ಸಾಗಿಸಿದರು.

## ಸಾಯಮನ್ ಸಾಹೇಬರ ಮುಕ್ತಾಫಲಗಳು

೧೩ ನೇ ತಾರೀಖಿನ ದಿವಸ ಸಾಯಮನ ಸಾಹೇಬರು ಹಿಂದುಸ್ಥಾನದ ಪರಿಸ್ಥಿತಿಯ ಬಗ್ಗೆ ಒಂದು ಭಾಷಣ ಮಾಡಿದರು. ಹಿಂದುಸ್ಥಾನದ ಪರಿಸ್ಥಿತಿಯಲ್ಲಿ ಅನೇಕ ಪ್ರಶ್ನೆಗಳ ಗೊಂದಲ ಉಂಟೆಂತಲೂ, ಅದನ್ನು ಬಹಳ ಚನ್ನಾಗಿ ಅಭ್ಯಾಸ ಮಾಡಬೇಕಾಗುತ್ತದೆಂತಲೂ ಮತ್ತು ಸೂಕ್ಷ್ಮವಾಗಿ ವಿಚಾರಿಸಬೇಕಾಗುತ್ತದೆಂತಲೂ ಸಾಹೇಬರು ಬಾಯಿಯಿಂದ ಮುತ್ತು ಉದುರಿಸಿದರು. ಹಿಂದೀ ಜನರಲ್ಲಿ ಸ್ವರಾಜ್ಯದ ಭಾವನೆಯು ಹುಟ್ಟಲು ಬ್ರಿಟಿಶರು ಹಬ್ಬಿಸಿದ ವಿಚಾರಶಕ್ತಿಯೇ ಕಾರಣವೆಂದು ಹೇಳಿದರು. ಹಿಂದುಸ್ಥಾನದ ಭೌತಿಕ ಉನ್ನತಿಯನ್ನು ಬ್ರಿಟಿಶರು ಬಹಳ ಚನ್ನಾಗಿ ಮಾಡಿದರೆಂದೂ ಹೇಳಿದರು. ಇವರ ಬಾಯಿಂದ ಸುರಿದ ಮುತ್ತುಗಳನ್ನು ಬಳಕೊಳ್ಳುವವರೇ ಇಲ್ಲವಾಗಿದೆ.

## ಪಂಡಿತ ಮೋತೀಲಾಲರ ಮೇಲೆಯೂ

# ಸರಕಾರದ ವಕ್ರದೃಷ್ಟಿ

ಪಂಡಿತ ಮೋತೀಲಾಲರು ಮುಂಬಯಿಯ ಓರ್ವ ವೃತ್ತಪತ್ರದ ಪ್ರತಿನಿಧಿಯ ಎದುರಿಗೆ "ನನ್ನ ಮಿತ್ರರು ಕಳಿಸಿದ ತಂತಿಗಳು ನನಗೆ ಮುಟ್ಟುತ್ತಿರುವದಿಲ್ಲ. ನನ್ನ ಖಾಸಗಿ ತಂತಿಗಳೂ ನನಗೆ ಸರಿಯಾದ ವೇಳೆಗೆ ಮುಟ್ಟುತ್ತಿರುವದಿಲ್ಲ. ನಾನು ಅಲಹಾಬಾದದಿಂದ ಬೇರೆ ಕಡೆಗೆ ಕಳಿಸಿದ ತಂತಿಗಳೂ ಆ ಆ ಜನರಿಗೆ ಮುಟ್ಟಿಲ್ಲ, ರಾಷ್ಟ್ರಸಭೆಯ ಕಾರ್ಯಕಾರೀ ಮಂಡಳದ ಸಭಾಸದರು ಸಭೆಗೆ ಆಗಮಿಸುವಂತೆ ಮಾಡಲು ಕಲಕತ್ತೆ, ದಿಲ್ಲಿ ಮತ್ತು ಅಹಮ್ಮದಾಬಾದುಗಳಿಗೆ ಬೇರೆ ಬೇರೆ ಸಂದೇಶ ವಾಹಕರನ್ನು ನಾನು ಕಳಿಸಿಕೊಡಬೇಕಾಯಿತು ಸರಕಾರದವರು ನನ್ನನ್ನು ಈ ಪರಿ ಪೀಡಿಸಹತ್ತಿದ್ದಾರೆ" ಎಂದು ಹೇಳಿದರು

### ಮುಂಬಯಿಯಲ್ಲಿ ಪಂಡಿತ ಮೋತಿಲಾಲರು.

ಶ್ರೀ ಜಿ ವ್ಹಿ ಕಪಾಡಿಯಾ ಇವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಪಂಡಿತ ಮೋತಿಲಾಲರು ಭಾಷಣ ಮಾಡಿದರು. ಅದರ ಸಾರಾಂಶವೆಂದರೆ: ..

ನಾನು ಮುಂಬಯಿಯ ಪರಿಸ್ಥಿತಿಯನ್ನು ನಿರೀಕ್ಷಿಸಲು ಬಂದಿದ್ದೇನೆ. ನೀವು ನಿಮ್ಮ ಕಾರ್ಯವನ್ನು ಚೊಕ್ಕಾಗಿ ನಡಿಸಿರುವಿರಿ. ದಬ್ಬಾಳಿಕೆಯ ಕಾನೂನುಗಳೂ ಕಟ್ಟಳೆಗಳೂ ನಿಮ್ಮನ್ನು ಬೆದರಿಸಲು ಶಕ್ತವಾಗಿಲ್ಲ. ಪಂಜಾಬ ಹಾಗು ಬಂಗಾಲ ಪ್ರಾಂತಗಳ ಬೆಂಬಲವು ನಿಮಗುಂಟೆಂದು ನೀವು ತಿಳಿದುಕೊಳ್ಳಿರಿ. ಸತ್ಯಾಗ್ರಹಿಗಳು ನಿಜವಾಗಿ ನೋಡಿದಲ್ಲಿ ಕಾಯಿದೆಗಳನ್ನೇ ಮುರಿಯುವವರಲ್ಲ ಕಾಯಿದೆಯನ್ನೂ ಸುವ್ಯವಸ್ಥೆಯನ್ನೂ ಪಾಲಿಸುವೆವೆಂದು ಹೇಳಿಕೊಳ್ಳುವವರೇ ಕಾಯಿದೆಗಳನ್ನು ಮುರಿಯಹತ್ತಿದ್ದಾರೆ. ಸ್ವಸಂತೋಷದಿಂದ ಸೆರೆಮನೆಗೆ ಹೋಗಲು ಸಿದ್ಧರಾದ ನಿರುಪದ್ರವಿ ಮತ್ತು ಶಾಂತತಾವಾದಿಗಳನ್ನು ಹೊಡೆಯಲು ಪೋಲೀಸರಿಗೆ ಮುಕ್ತದ್ವಾರವನ್ನು ಕೊಡುವ ಕಾಯಿದೆಗಳು ಜಗತ್ತಿನಲ್ಲಿ ಯಾವ ದೇಶದಲ್ಲಿಯೂ ಇಲ್ಲ. ಮೂರ್ಛಿತರಾಗಿ ಬೀಳುವ ವರೆಗೆ ಸತ್ಯಾಗ್ರಹಿಗಳನ್ನು ಹೊಡೆಯಹತ್ತಿರುವರು. ಕೆಲವು ಜನರನ್ನು ಬಹಳ ಹೊತ್ತಿನ ವರೆಗೆ ಅಜ್ಞಾನದಲ್ಲಿರಿಸುವದು ಸಂಭವದೆ ಆದರೆ ಎಲ್ಲ ಜನರನ್ನು ಸದಾಸರ್ವದಾ ಅಜ್ಞಾನದಲ್ಲಿರಿಸುವದು ಶಕ್ಯವಿಲ್ಲ.

### ಹಗಲು ಹೊಲದಲ್ಲಿ, ರಾತ್ರಿ ಮನೆಯಲ್ಲಿ.

ಗುಜರಾಥದಲ್ಲಿ ಭೂಕಂದಾಯವನ್ನು ನಿಲ್ಲಿಸುವ ಚಳವಳಿಯು ಜೋರಿನಿಂದ ನಡೆದದೆ. ಅಲ್ಲಿ ಅಧಿಕಾರಿಗಳು ಕೈಗೆ ಸಿಕ್ಕ ಜಂಗಮಮಾಲುಗಳನ್ನು ಜಪ್ತ ಮಾಡುತ್ತಿರುವರು. ಎಷ್ಟೋ ಒಕ್ಕಲಿಗರು ಗಟ್ಟಿಯಾಗಿ ಮನೆಯ ಬಾಗಿಲುಗಳನ್ನು ಇಕ್ಕಿಕೊಂಡು ಬಿಡುವರು. ಎಷ್ಟೋ ಜನ ಒಕ್ಕಲಿಗರು ಹಗಲು ಮನೆಗೆ ಬರದೇ ಹೊಲದಲ್ಲಿಯೇ ಇರುವರು. ರಾತ್ರಿಯಲ್ಲಿ ಮಾತ್ರ ಮನೆಗೆ ಬರುವರು. ಸರಕಾರದ ಕಾಟ ತಪ್ಪಿಸಲು ಇದೊಂದು ಒಳ್ಳೇ ಯುಕ್ತಿಯು ಅವರಿಗೆ ಸಿಕ್ಕಿದೆ.

### "ಕರ್ನಾಟಕ ವೈಭವ"

### ಚಂದಾದಾರರಲ್ಲಿ ವಿಜ್ಞಾಪನೆ.

ನಮ್ಮ ಪತ್ರಿಕೆಗೆ ಒಂದು ಸಾವಿರ ರೂಪಾಯಿಗಳ ಅಡವು ಕೇಳಲ್ಪಟ್ಟಿದ್ದರಿಂದ ಕಾಂಗ್ರೆಸಿನ ಕಾರ್ಯಕಾರೀ ಮಂಡಳದ ಆಜ್ಞೆಯ ಮೇರೆಗೆ ಅನಿವಾರ್ಯ ಪಕ್ಷಕ್ಕೆ ಐದು ತಿಂಗಳುಗಳ ಮಟ್ಟಿಗೆ ನಿಲ್ಲುವ ಪ್ರಸಂಗವು ಬಂದಿದೆ ಆದುದರಿಂದ ನಮ್ಮ ಪತ್ರಿಕೆಯ ಚಂದಾದಾರರು ದಯವಿಟ್ಟು ನಮ್ಮನ್ನು ಕ್ಷಮಿಸುವರೆಂದು ನಂಬಿದ್ದೇವೆ. ಈಗಿನ ಸಮಯಕ್ಕೆ ವೃತ್ತಪತ್ರಿಕೆಗಳಿಂದರೆ ಒಂದು ವಿಧದ ಆಹಾರವಿದ್ದಂತೆಂಬುದನ್ನು ನಾವು ಬಲ್ಲೆವು. ಆದರೆ ಸಧ್ಯಕ್ಕೆ ೧೦೦೦ ರೂ. ಗಳ ಅಡವನ್ನಿಡುವ ತ್ರಾಣವು ನಮ್ಮಲ್ಲಿಲ್ಲ ಆದುದರಿಂದ ನಿರುಪಾಯರಾಗಿದ್ದೇವೆ ಮುಂದೆ ಮುದ್ರಣ ಕಾನೂನು ಹೋಗಿ ನಮ್ಮ ಪತ್ರಿಕೆಯು ಮರಳಿ ಹೊರಡಹತ್ತಿದ ಬಳಿಕ ಈಗಿನ ವರ್ಗಣಿಯಲ್ಲಿ ಉಳಿದ ಅವಧಿಯ ವರೆಗೆ ನಮ್ಮ ಪತ್ರಿಕೆಯನ್ನು ಕಳಿಸುತ್ತ ಹೋಗುವೆವು ಜಾಹೀರಾತದಾರರೂ ಇದನ್ನು ಮನ್ನಿಸುವರೆಂದು ನಂಬಿರುವ

ವಿಜಾಪುರ { ನಿಮ್ಮೆಲ್ಲರ ಅಡಿಯಾಳು
{ ವ್ಯವಸ್ಥಾಪಕ ಕರ್ನಾಟಕ ವೈಭವ.

### ಕ್ರಿಶ್ಚನ್ನರು ಕಾಂಗ್ರೆಸಕ್ಕೆ ಸೇರಿದರು

ಮುಂಬಯಿಯ ಜಿ ಎಫ ಪಿಂಟೋ ಎಂಬವರು ಕಾಂಗ್ರೆಸ ಕ್ರಿಶ್ಚನ ಪಕ್ಷ ಎಂಬ ಹೆಸರಿನಿಂದ ಎಲ್ಲ ಕ್ರಿಶ್ಚನರನ್ನೂ ಒಟ್ಟುಗೂಡಿಸುವ ಕೆಲಸ ನಡಿಸಿರುವರು. ಕಾಂಗ್ರೆಸಕ್ಕೆ ಸೇರಬಿಚ್ಛಿಸುವ ಎಲ್ಲ ಕ್ರಿಶ್ಚನ್ನರು ತಮ್ಮ ಕಡೆಗೆ ಬರೆದು ತಿಳಿಸಬೇಕಾಗಿ ಅವರು ಕೇಳುವರು. ಕರ್ನಾಟಕದ ಕ್ರಿಶ್ಚನ ಮಹಾಶಯರು ಇತ್ತ ಲಕ್ಷ ಕೊಡಲಿ.

### ಗಲಗಲಿಯಲ್ಲಿ

### ಮುಸಲ್ಮಾನರು ಕಾಂಗ್ರೆಸಕ್ಕೆ ಸೇರಿದರು.

ತಾ॥ ೧೭ ನೆಯ ದಿವಸ ಇಲ್ಲಿಯ ಪ್ರಮುಖರಾದ ಇಮಾಮಸಾ ನಾಯಕಾ ಹುಸೇನಸಾ ಬಾಗವಾನ, ಅಬುಸಾ ನದಗಡ್ಡಿ, ಇಮಾಮಸಾ ಮೋಟಗಾರ ಮತ್ತು ಲಾಡ್ಲೆಸಾ ಮೊದಲಾದವರು ಎಲ್ಲ ಮುಸಲ್ಮಾನ ಜನರನ್ನು ಒಟ್ಟುಗೂಡಿಸಿ, ಹಿಂದೂ ಮುಖಂಡರನ್ನಾದರೂ ಕರೆಯದೆ ಹುಸೇನ ಪೀರನ ಮಸೀದೆಯಲ್ಲಿ ಸ್ವತಂತ್ರವಾಗಿ ಸಭೆ ಕೂಡಿಕೊಂಡು ಖಾದೀ ಬಟ್ಟೆಗಳನ್ನು ಧರಿಸುವೆವೆಂದೂ ಸೆರೆ ಸೇಂದಿ ಕುಡಿಯುವದನ್ನು ಬಿಡುವೆವೆಂದೂ ಅಲ್ಲಾನ ಸಮಕ್ಷಮ ಪಣ ತೊಟ್ಟರು.

### ಇಹವೃತ್ತ.

ಶ್ರೀಮತಿ ಸೌ ಸರಸ್ವತೀಬಾಯಿ ಗಾಡಗೀಳ ಇವರ ವ್ಯಾಖ್ಯಾನವು ಈ ದಿನ ಸಾಯಂಕಾಲ ೬ ಗಂಟೆಗೆ ಜೇನಪೇಟೆಯ ವಿಠೋಬದೇವರ ಗುಡಿ ಹತ್ತರ ಆಗುವದು.

### ಜೇ ಲಿ ನ ಲ್ಲಿ

# ಪಂ. ಜವಾಹಿರಲಾಲರ ಇರುವಿಕೆ

## ದಬ್ಬಾಳಿಕೆಯ ನಿಷೇಧಾರ್ಥವಾಗಿ 'ಅ' ವರ್ಗದ ಅನುಕೂಲತೆಗಳನ್ನು ಬಿಟ್ಟರು.

ಪಂಡಿತ ಜವಾಹಿರಲಾಲರು ತುರುಂಗದಲ್ಲಿ ಇರಹತ್ತಿದಂದಿನಿಂದ ಅವರ ತೂಕವು ಕಡಿಮೆಯಾಗಿದೆ. ಸರಕಾರದವರು ಪ್ರಾರಂಭಿಸಿದ ದಬ್ಬಾಳಿಕೆಯು ಹಾಗೂ ಲಾಠೀ ರಾಜ್ಯದ ನಿಷೇಧಾರ್ಥವಾಗಿ ಅವರು ತಮಗೆ ದೊರೆತ "ಅ" ವರ್ಗದ ಸೌಲಭ್ಯಗಳನ್ನು ಬಿಟ್ಟುಬಿಟ್ಟಿದ್ದಾರೆ. ಅವರ ಮನೆಯವರು ಪ್ರತಿನಿತ್ಯದಲ್ಲಿಯೂ ಅವರಿಗಾಗಿ ಕಾಯಿಪಲ್ಲೆಗಳನ್ನು, ಹಣ್ಣುಗಳನ್ನೂ ಕಳಿಸುತ್ತಿದ್ದರು. ತನ್ನ ದೇಶಬಾಂಧವರು ಘೋರವಾದ ದಬ್ಬಾಳಿಕೆಗೆ ಗುರಿಯಾಗಹತ್ತಿರುವರೆಂಬ ಸಂಗತಿಯನ್ನು ಕೇಳಿದ ಕೂಡಲೆ ಅವರು ಮನೆಯಿಂದ ಕಳಿಸಲ್ಪಡುವ ಹಣ್ಣು ಕಾಯಿಪಲ್ಲೆ ಮೊದಲಾದವುಗಳನ್ನು ಸ್ವೀಕರಿಸಲು ಒಲ್ಲೆಂದರು. ಅವರಿಗೆ ಜೇಲಿನಲ್ಲಿ ಓದಲು ಇಂಗ್ಲೀಷ ಪತ್ರಿಕೆಗಳನ್ನು ಕೊಟ್ಟಿರುವದಿಲ್ಲ. ಒಂದು ಹಿಂದೀ ವಾರಪತ್ರಿಕೆಯನ್ನು ಮಾತ್ರ ಕೊಟ್ಟಿರುವರು. ಅದರಲ್ಲಿ ಹೆಚ್ಚು ಸುದ್ದಿಗಳೇ ಇರುವದಿಲ್ಲ. ಸ್ವಂತದ ಬಟ್ಟೆಗಳನ್ನು ಉಪಯೋಗಿಸಲು ಮಾತ್ರ ಅಡ್ಡಿಯನ್ನುಂಟುಮಾಡಿಲ್ಲ. ಅವರ ತಾಯಿ, ತಂದೆ ಮತ್ತು ಹೆಂಡತಿ ಈ ಮೂವರಿಗೆ ಮಾತ್ರ, ತಿಂಗಳಿಗೆ ಎರಡು ಸಲ ಜೇಲಿನಲ್ಲಿ ಅವರನ್ನು ಕಾಣಲು ಬಿಡುತ್ತಾರೆ.

### ರಾಷ್ಟ್ರಕಾರ್ಯಕ್ಕಾಗಿ

## ಜಮಾಯತ ಉಲ್ ಉಲೇಮಾದವರು

### ೧೫೦೦೦ ಸ್ವಯಂಸೇವಕರನ್ನು ಸಿದ್ಧಮಾಡಿದರು

ಜಮಾಯತ್ ಉಲ್ ಉಲೇಮಾದವರು ಬನ್ನು ಜಿಲ್ಲೆಯಲ್ಲಿ ಹಿಂದೀ ಅಂಗಡಿಗಳ ಪಿಕೆಟಿಂಗವನ್ನು ಕೆಲವು ದಿವಸಗಳಿಂದ ಭರದಿಂದ ಸಾಗಿಸಿದ್ದಾರೆ. ಸರಕಾರದವರು ೧೪೪ ನೆಯ ಕಲಮಿನನ್ವಯ ಕಟ್ಟಪ್ಪಣೆಯನ್ನು ತೆಗೆದಿದ್ದರು. ಸ್ವಯಂಸೇವಕರು ಅದನ್ನು ಮುರಿದು ತಮ್ಮ ಕಾರ್ಯವನ್ನು ನಡಿಸಿದ್ದಾರೆ. ಈ ವರೆಗೆ ೧೫೦೦೦ ಸ್ವಯಂಸೇವಕರನ್ನು ಕೂಡಿಸುವದರಲ್ಲಿ ಬಂದಿದೆ. ಈ ವರೆಗೆ ಜಮಾಯತ್ ಉಲ್ ಉಲೇಮಾದ ೧೨೪ ಜನ ಪ್ರಮುಖ ಮುಂದಾಳುಗಳು ಸರಕಾರದ ದಬ್ಬಾಳಿಕೆಗೆ ತುತ್ತಾಗಿದ್ದಾರೆ. ನೂರಾರು ಜನ ನಂಬರದಾರರೂ, ತಹಸೀಲ್ದಾರರೂ ತಮ್ಮ ತಮ್ಮ ಉದ್ಯೋಗಗಳಿಗೆ ಶರಣು ಹೊಡೆದಿದ್ದು ಇನ್ನೂ ಎಷ್ಟೋ ಜನರು ರಾಜೀನಾಮೆ ಕೊಡತಕ್ಕವರಿದ್ದಾರೆ.

### ೮೦ ವರ್ಷದ ಕುರುಡ ಮುದುಕನಿಗೆ ೨ ವರ್ಷ ಶಿಕ್ಷೆ

ಕಾಯಿದೆಗೆ ವಿರುದ್ಧವಾಗಿ ಉಪ್ಪನ್ನು ಸಿದ್ಧಮಾಡಲೂ ಮತ್ತು ಈಚಲಗಿಡಗಳನ್ನು ಕಡಿಯಲೂ ಜನರಿಗೆ ಬೋಧಿಸಿದುದಕ್ಕಾಗಿ ಮುದ್ರಾಸ ಇಲಾಖೆಯಲ್ಲಿಯ ಬಿಜವಾಡದ ಓರ್ವ ೮೦ ವರ್ಷದ ಕುರುಡ ಮುದುಕನಿಗೆ ೨ ವರ್ಷಗಳ ಸಕ್ತ ಶಿಕ್ಷೆಯು ಅಧಿಕಾರಿಗಳಿಂದ ವಿಧಿಸಲ್ಪಟ್ಟಿದೆ.

### ಕಲಕತ್ತೆಯಲ್ಲಿ ೨೮ ಸ್ವಯಂಸೇವಕರಿಗೆ ಸೆರೆಮನೆ !

ಪರದೇಶಿ ಬಟ್ಟೆಗಳ ಅಂಗಡಿ ಮತ್ತು ಸಿಂದಿ ಅಂಗಡಿಗಳ ಮುಂದೆ ಪಿಕೆಟಿಂಗವನ್ನು ಮಾಡುತ್ತಿದ್ದ ೨೮ ಜನ ಸ್ವಯಂಸೇವಕರನ್ನು ಕಲಕತ್ತೆಯಲ್ಲಿ ಪಿಕೆಟಿಂಗದ ವಿರುದ್ಧವಾಗಿ ಹೊರಡಿಸಿದ ಕಾನೂನಿನನ್ವಯ ಸೆರೆಹಿಡಿದಿದ್ದಾರೆ.

### ಪೋಲೀಸರ ಲಾಠಿಗಳು ನಿಂತವು

ಮುಂಬಯಿಯಲ್ಲಿ ಗುರುವಾರ ದಿವಸ ಒಂದು ಯುರೋಪಿಯನ ಕಂಪನಿಯ ಅಂಗಡಿಯ ಎದುರಿಗೆ ಜನರು ಗುಂಪುಗೂಡಿ ಅಲ್ಲಿ ಹೋಗುವ ಗಿರಾಕಿಗಳಿಗೆ "ಶೇಮ ಶೇಮ" ಎಂದು ಹೇಳುತ್ತಿದ್ದರು. ಪೋಲೀಸರು ಆ ಜನರಿಗೆ ಲಾಠೀ ಪ್ರಹಾರ ಮಾಡುವದಕ್ಕೆ ಬದಲಾಗಿ ಅವರ ಮನ ಒಲಿಸುವದಕ್ಕೆ ಪ್ರಯತ್ನಿಸಿದರು. ಅಲ್ಲಿಯ ಪೋಲೀಸ ಅಧಿಕಾರಿಯಾದ ಭಾಸ್ಕರ ಸಾಹೇಬನು ಒಬ್ಬ ಸ್ವಯಂಸೇವಕನನ್ನು ಸೆರೆ ಹಿಡಿದನು. ಕೂಡಲೇ ಅವನ ಸ್ಥಳದಲ್ಲಿ ಮತ್ತೊಬ್ಬ ಸ್ವಯಂಸೇವಕನು ಬಂದು ನಿಂತೇ ಇದ್ದನು. ಇವರಿಬ್ಬರನ್ನೂ ಮೋಟಾರದಲ್ಲಿ ಕೂಡ್ರಿಸಿಕೊಂಡು ಹೋಗುವಷ್ಟರಲ್ಲಿ ಮೂರನೆಯವನೊಬ್ಬನು ಅಲ್ಲಿ ಬಂದು ನಿಂತು ಬಿಟ್ಟನು. ಹೀಗಾಗಿ ಅಲ್ಲಿ ಒಂದು ವಿಲಕ್ಷಣ ದೃಶ್ಯವೆ ಕಂಡು ಬಂದಿತು. ಮಧ್ಯಾಹ್ನ ಎರಡು ಗಂಟೆಗೆ ಒಟ್ಟು ೧೧ ಮಂದಿ ಸ್ವಯಂಸೇವಕರನ್ನು ಹಿಡಿದರು. ಒಬ್ಬ ನೇಪಾಳೀ ಸ್ವಯಂಸೇವಕನು ನೀನು ಕಾಂಗ್ರೆಸಕ್ಕೆ ಕೂಡಲಿಚ್ಛಿಸುವಿಯೋ ಎಂದು ಕೇಳಿದ ಮ್ಯಾಜಿಸ್ಟ್ರೇಟನ ಪ್ರಶ್ನಕ್ಕೆ "ಹೌದು" ಎಂದು ಉತ್ತರ ಕೊಟ್ಟನು.

### ರಾಷ್ಟ್ರೀಯ ಪುಸ್ತಕಗಳ ಮೇಲೆ ಸರಕಾರದ ಕಣ್ಣು

ಸಂಯುಕ್ತಪ್ರಾಂತ ಸರಕಾರದವರು "ಒಕ್ಕಲಿಗರ ಮಿತ್ರ" "ಗಾಯಪಟ್ಟ ಲಖನಾ" "ದುಃಖಿತರ ಗೋಳು" ಎಂಬ ಚಿಕ್ಕ ಪುಸ್ತಕಗಳನ್ನು ಕಾಯಿದೆಯಿಂದ ಕಟ್ಟಿಹಾಕಿರುವರು.

### ಸಿಡಿಲು ಬಡಿದು ಸತ್ತನು

ಇಂಗ್ಲಂಡದಲ್ಲಿ ದೊಡ್ಡ ಬಿರುಗಾಳಿ ಬಿಟ್ಟು ಮಳೆ ಸುರಿದು ಎಷ್ಟೋ ಪ್ರದೇಶಗಳಲ್ಲಿ ನೀರೇ ನೀರು ಆಗಿಹೋಗಿದೆ. ವ್ಯಾಪಾರವು ಕೆಡೆದಿದೆ. ಸುದ್ದೀ ಯಂತ್ರಗಳು ನಿಂತಿವೆ. ಮ್ಯಾಂಚೆಸ್ಟರದಲ್ಲಿ ಇಬ್ಬರು ಮುಣುಗಿ ಸತ್ತರು. ಮತ್ತು ಅಸ್ಕಾಟ ಎಂಬಲ್ಲಿ ಒಬ್ಬನು ಸಿಡಿಲು ಬಡಿದು ಸತ್ತನು.

### ಮುದ್ರಣ ಬಕಾಸುರನಿಗೆ ಆಹುತಿಯು

ಅಹಮ್ಮದಾಬಾದದಲ್ಲಿಯ ಉಜ್ವಲ ರಾಷ್ಟ್ರೀಯ ಪತ್ರವಾದ 'ಪ್ರಜಾಬಂಧು' ಎಂಬ ಪತ್ರಕ್ಕೆ ಸರಕಾರದವರು ಒಂದು ಸಾವಿರ ರೂಪಾಯಿ ಹೊಣೆ ಕೇಳಿದ್ದರಿಂದ ಅದು ತನ್ನ ಕೆಲಸವನ್ನು ನಿಲ್ಲಿಸಿತು. ಉಳಿದ ಎಲ್ಲ ಪತ್ರಗಳೂ ಈ ಕಾಯಿದೆಯನ್ನು ನಿಷೇಧಿಸುವದಕ್ಕಾಗಿ ನಿಲ್ಲಿಸಲ್ಪಡಲಿಕ್ಕಿವೆ.

## ಸಾಯಿಮನ್ ಸಪ್ತಕದ ವರದಿಯ ಸಾರ

[ ಹಿಂದಿನಿಂದ ಮುಂದುವರಿದುದು ]

ದೇಶದೊಳಗಿನ ಪಕ್ಷಗಳು

ದೇಶದಲ್ಲಿ ಎಷ್ಟೋ ಪಕ್ಷಗಳಿವೆ. ಆದರೆ ಪಕ್ಷಗಳ ಪರವಾಗಿ ಪ್ರಾಂತಿಕ ಕಾಯಿದ ಮಂಡಳಗಳಿಗೆ ಆರಿಸಲ್ಪಡುವ ಪ್ರತಿನಿಧಿಗಳು ಬಹು ಸಂಖ್ಯಾತರಾಗಿಲ್ಲ. ಆರಿಸಿದವರು [illegible] ಪ್ರತಿನಿಧಿ ಎಂತಲು ಮತದಾರರ ಇವರ ಏನುವ ಯಾವ ಸಂಬಂಧವೂ ಉಳಿಯುತ್ತಿರುವದಿಲ್ಲ. ಆರಿಸಿದ ಬಳಿಕ, ಪ್ರತಿನಿಧಿಗಳ ಏನು [illegible] ಇವರ ಮತದಾರರಲ್ಲಿ ಈ ಸಂಬಂಧವು [illegible] ಉಳಿಯುವದು. ಕೌನ್ಸಿಲದಲ್ಲಿ ಈಗ ಎಷ್ಟೋ ಪಕ್ಷಗಳಿವೆ. ಅದರ ಎಲ್ಲವೂ [illegible] [illegible] ಕಾಣುತ್ತವೆ. ಸ್ವರಾಜ್ಯ ಪಕ್ಷದಲ್ಲಿ ಮಾತ್ರ [illegible] ಒಟ್ಟು ಅಭಿಪ್ರಾಯ ಕಂಡು ಬಂಗಾಲ ಮತ್ತು ಸಂಯುಕ್ತ ಪ್ರಾಂತಗಳಲ್ಲಿ ಸ್ವರಾಜ್ಯ ಪಕ್ಷದವರು ದ್ವಿದಲ ಪದ್ಧತಿಯನ್ನು ಎದುರಿಸಿ [illegible] ಯಶಸ್ಸನ್ನು ಪಡೆದುಕೊಂಡರು. ಇತರ ಪ್ರಾಂತಗಳಲ್ಲಿಯೂ ಸ್ವರಾಜ್ಯ ಪಕ್ಷದವರು ವಿರೋಧ ಮಾಡಿದರು. ಆದರಿಂದ ಸರಕಾರ [illegible] ಆಯಿತು. ಮದ್ರಾಸದಲ್ಲಿ ಜಸ್ಟಿಸ್ ಪಕ್ಷದ [illegible] ರಾಷ್ಟ್ರೀಯ ಪಕ್ಷದ ಗೆಲುವು ದೊರೆತಂತೆ ತೋರುತ್ತದೆ.

ಅಸೆಂಬ್ಲಿಯ ಪರಿಸ್ಥಿತಿ

ಕೌನ್ಸಿಲದ ಸಭಾಸದನಾಗಿ ಆರಿಸಿ ಹೋದಬಳಿಕ ಸಭಾಸದನಿಗೂ ಮತದಾರರಿಗೂ ಯಾವ ಸಂಬಂಧವೂ ಉಳಿಯುವದಿಲ್ಲ. ಸಭಾಸದನು ಅಲ್ಲಿ ಮತದಾರರ ಪ್ರತಿನಿಧಿಯಾಗಿ ಕೆಲಸಮಾಡದೆ ಯಾವದಾವದೋ ಒಂದು ಜಾತಿಯ ಇಲ್ಲವೆ ಜಾತಿಪಾತಕ ಸಂಸ್ಥೆಯ ಪ್ರತಿನಿಧಿಯಾಗಿ ಕೆಲಸ ಮಾಡುತ್ತಾನೆ. ವರ್ತಮಾನ ಪತ್ರದೊಳಗಿನ ಟೀಕೆಗಳನ್ನೋದಿ ಅವರು ತಮ್ಮ ಧೋರಣವನ್ನು ಗೊತ್ತು ಮಾಡಿಕೊಳ್ಳುವರು. ಮತ್ತು ವರ್ತಮಾನ ಪತ್ರಗಳು ಸರಕಾರದ ವಿರುದ್ಧವಾಗಿ ಬರೆಯುತ್ತಿರುವವು. ಅಸೆಂಬ್ಲಿಯಲ್ಲಿ ೧೦೫ ಜನರು ಜನರಿಂದ ಆರಿಸಲ್ಪಟ್ಟವರು ಇರುವರು. ಮತದಾರರಿಗೂ ಸಭಾಸದರಿಗೂ ಯಾವ ಸಂಬಂಧವೂ ಇರುವದಿಲ್ಲ. ಸಭಾಸದರು ಕೌನ್ಸಿಲಿನಲ್ಲಿ ಏನು ಮಾಡುತ್ತಿರುವರೆಂಬುದರ ವಿಷಯಕ್ಕೆ ಮತದಾರರು ಲಕ್ಷ್ಯ ಕೊಡುವದಿಲ್ಲ.

ಬ್ರಿಟಿಶ್ ಪಾರ್ಲಮೆಂಟ ಮತ್ತು ದಿಲ್ಲಿಯಲ್ಲಿಯ ಅಸೆಂಬ್ಲಿ ಇವುಗಳಲ್ಲಿ ಮಹತ್ವವಾದ ಭೇದವು ಇರುತ್ತದೆ. ಅಸೆಂಬ್ಲಿಯ ಅಧ್ಯಕ್ಷರ ವಿಷಯವಾಗಿ ನಮಗೆ ಕಂಡುಬಂದ ಅನುಭವವೆಂದರೆ, ಅಸೆಂಬ್ಲಿಯ ಅಧ್ಯಕ್ಷರು ಸರಕಾರದ ಅಧಿಕಾರಿಗಳ ಸಂಬಂಧದ ವಿರುದ್ಧವಾಗಿ [illegible]. [illegible] ಅಧಿಕಾರವೆಂದು [illegible] ಅಧ್ಯಕ್ಷರ ಈ ವರ್ತನವು ಪಾರ್ಲಮೆಂಟಿನ ಪರಂಪರೆಗೆ ವಿರುದ್ಧವಾಗಿದೆಯೆಂದು ನಾವು ಹೇಳಬಲ್ಲೆವು.

ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು

ಸುಧಾರಣೆಯ ಕಾಯಿದೆಯಿಂದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಹೆಚ್ಚು ಸ್ವಾತಂತ್ರ್ಯವು ಸಿಕ್ಕಿದೆ. ಅವುಗಳಿಗೆ ಸ್ವತಂತ್ರ ಅಧ್ಯಕ್ಷರನ್ನು ಆರಿಸುವ ಅಧಿಕಾರವೂ ದೊರೆತಿದೆ, ಇದರಿಂದ ಅವುಗಳ ಮೇಲಿದ್ದ ಸರಕಾರದ ಸತ್ತೆಯು ಇಲ್ಲದಂತಾಯಿತು. ಹೀಗೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಸರಕಾರದಿಂದ ಜನರ ಕೈಯಲ್ಲಿ ಹೋದ ಕೂಡಲೆ, ಅವುಗಳ ಕಾರಭಾರದಲ್ಲಿಯ ಚೊಕ್ಕತನವು ಕಡಿಮೆಯಾಯಿತು. ಲೋಕಲ್ ಬೋರ್ಡುಗಳ ಕಾರ್ಯಗಳಲ್ಲಿ ಜನರು ಹೆಚ್ಚು ಹೆಚ್ಚಾಗಿ ಲಕ್ಷ್ಯವನ್ನು ಕೊಡಹತ್ತಿದ್ದೊಂದು ಮಾತ್ರ ಇದರಿಂದ ಲಾಭವಾಯಿತು.

(ಮುಂದೆ ಸಾಗುವದು)

## ನಾ॥ ಗವ್ಹರ್ನರ ದೊರೆಗಳು ಸೋಲಾಪುರಕ್ಕೆ ಬಂದದ್ದು

ಮುಂಬಯಿಯ ಗವ್ಹರ್ನರ ದೊರೆಗಳು ತಾ| ೧೮ ನೆಯ ದಿವಸ ಸೋಲಾಪುರಕ್ಕೆ ಬಂದು ಅಲ್ಲಿಯ ಸ್ಥಿತಿಗತಿಗಳನ್ನು ಕುರಿತು ಊರೊಳಗಿನ ಪ್ರಮುಖ ಜನರೊಡನೆ ಮಾತುಕತೆಗಳನ್ನಾಡಿದ್ದಲ್ಲದೆ, ಬೇರೆಬೇರೆ ಸ್ಥಳಗಳಿಗೆ ಹೋಗಿ ಅಲ್ಲಲ್ಲಿಯ ಜನರೊಡನೆಯೂ ಪರಿಸ್ಥಿತಿಯನ್ನು ಕುರಿತು ವಿಚಾರಿಸಿದರು. ದಂಡನಾಯಕರನ್ನು ಇನ್ನು ಸ್ವಲ್ಪ ದಿವಸಗಳಲ್ಲಿ ತೆಗೆಯುವರೆಂದು ತಿಳಿಯುತ್ತದೆ. ಪುಣೆ ಅಧಿಕಾರಿಗಳು ಸೋಲಾಪುರಕ್ಕೆ ಬಂದಿರುವರು.

## ನೇಪಾಳ ಸಂಸ್ಥಾನಿಕರ ರಾಟಿಯ ಮೇಲಿನ ಪ್ರೀತಿಯು

೧೫ ದಿವಸಗಳ ವರೆಗೆ ನೇಪಾಳ ಸಂಸ್ಥಾನದ ಅಧಿಕಾರಿಗಳ ವಾರ್ಷಿಕೋತ್ಸವವು ಸಾಗಿತು. ಉತ್ಸವದಲ್ಲಿ ಒಂದು ಸಾವಿರ ಹೆಣ್ಣುಮಕ್ಕಳು ನೂಲು ತೆಗೆಯುವ ಪ್ರದರ್ಶನವನ್ನು ಏರ್ಪಡಿಸಿದ್ದರು. ಮತ್ತು ನೇಪಾಳ ಸರಕಾರವು ತಾವು ತಮ್ಮ ಪ್ರಜೆಗಳಲ್ಲಿ ಚರಕಾದ ಮೇಲೆ ಪ್ರೀತಿಯನ್ನು ಹುಟ್ಟಿಸುತ್ತಿರುವರು ಮತ್ತು ಅದರ ಮೇಲೆ ನೂಲು ತೆಗೆಯುವ ಪ್ರಸಾರವನ್ನು ಮಾಡುತ್ತಿರುವರು. ಮತ್ತು ಅಲ್ಲಿಯ ಉದ್ಯೋಗ ಖಾತೆಯ ಅಧಿಕಾರಿಗಳು ಜನರಲ್ಲಿ ಚರಕಾದ ಮಹತ್ವವನ್ನು ಚನ್ನಾಗಿ ಮನಗಾಣಿಸಿಕೊಡುತ್ತಿರುವರು. ಬೇರೆ ಸಂಸ್ಥಾನಾಧಿಪತಿಗಳು ಇತ್ತಕಡೆಗೆ ಸ್ವಲ್ಪ ಕಣ್ಣುತೆರೆದು ನೋಡಲಿ!


ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ

ಶಿರಹಟ್ಟಿ ನಾಟಕ ಮಂಡಳಿಯವರು

ಬಾಗಲಕೋಟೆ ಶಿವಾನಂದ ನಾಟಕ ಶಾಲೆಯಲ್ಲಿ.

ಸೋಮವಾರ ತಾ|| ೨೩-೬-೩೦ ರಾತ್ರಿ ೧೦ ಗಂಟೆಗೆ.

ತಮ್ಮ ಲೋಕಪ್ರಿಯವಾದ

ರಾಮಾಂಜನೇಯ ಯುದ್ಧ

ಬುಧವಾರ ತಾ|| ೨೫—೬—೩೦ ದಿವಸ

ಶಿವಲೀಲಾ

ಎಂಬ ನಾಟಕಗಳನ್ನಭಿನಯಿಸುವರು.

ಎಚ್, ವೆಂಕೋಬರಾವ.
ಪ್ರೊಪ್ರಾಯಿಟರ.


ಈ ಪತ್ರಿಕೆಯು ಬಸವಂತ ಅಣ್ಣಾರಾವ ಮಾಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೭     ನಿತ್ಯಸಂಚಿಕೆಯು.     ಬೆಲೆ ೦—೦—೩

ಜಯಕರ್ನಾಟಕ

सर्वं परवशं दुःखं सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬುಧವಾರದ ಹೊರ್ತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಸೋಮವಾರ ಮಿತಿ ಜೇಷ್ಠ ಬಹುಳ ೧೨ ಶಕೆ ೧೮೫೨ ತಾ॥ ೨೩—೬—೩೦ [ಸಂಚಿಕೆ ೮೨

### ಲಖನೌದಲ್ಲಿ

## ರಾಷ್ಟ್ರಧ್ವಜದ ಸಲುವಾಗಿ ಸತ್ಯಾಗ್ರಹ.

### ಸತ್ಯಾಗ್ರಹಿಗಳು ಪೋಲೀಸರನ್ನು ಎದುರಿಸಿದರು

ಲಖನೌ ಕಾಂಗ್ರೆಸ್ ಕಚೇರಿಯ ಎದುರಿನಲ್ಲಿರುವ ಉದ್ಯಾನದಲ್ಲಿ ಈಗ ಕೆಲವು ತಿಂಗಳುಗಳಿಂದ ರಾಷ್ಟ್ರಧ್ವಜವು ಏರಿಸಲ್ಪಟ್ಟಿತ್ತು. ಮೇ ೨೬ನೇ ತಾ॥ ದಿವಸ ಆದ ದಂಗೆಗಳ ನಂತರ ಆ ಉದ್ಯಾನದಲ್ಲಿ ಬ್ರಿಟಿಶ ಸೈನಿಕರು ತಮ್ಮ ಬಿಡಾರವನ್ನು ಹಾಕಿದರು. ಅವರಿಗೆ ಅಲ್ಲಿಯ ನಮ್ಮ ರಾಷ್ಟ್ರಧ್ವಜದ ಕೆಳಗೆ ಇರುವದು ಸಹನವಾಗದ್ದರಿಂದ ಅವರು ಅದನ್ನು ಕಿತ್ತುಹಾಕಿದರು. ಕೆಲವು ದಿನಗಳ ನಂತರ ಅಲ್ಲಿಂದ ಬ್ರಿಟಿಶ ಸೈನಿಕರು ಹೋದ ನಂತರ ಕಾಂಗ್ರೆಸ ಕಮೀಟಿಯ ಅಧಿಕಾರಿಗಳು ಅದೇ ಸ್ಥಳದಲ್ಲಿ ರಾಷ್ಟ್ರಧ್ವಜವನ್ನು ತಿರುಗಿ ಹಚ್ಚಬೇಕೆಂದರು. ಆ ಪ್ರಕಾರ ಅಲ್ಲಿಯ ಮುನಸಿಪಾಲಿಟಿಯ ಪರವಾನಿಗೆಯನ್ನು ಪಡೆದು ರಾಷ್ಟ್ರಧ್ವಜವನ್ನು ಹಚ್ಚಿದರು. ಬ್ರಿಟಿಶ ಸೈನಿಕರು ಹೋದನಂತರ ಆ ತೋಟದಲ್ಲಿ ನಮ್ಮ ದೇಶೀ ಸಶಸ್ತ್ರ ಸೈನಿಕರು ಇರುತ್ತಿದ್ದರು. ಅವರು ರಾಷ್ಟ್ರಧ್ವಜವನ್ನು ಪುನಃ ಕಿತ್ತುವರೆಂಬ ಭಯದಿಂದ ಕಾಂಗ್ರೆಸ ಕಮೀಟಿಯ ಅಧಿಕಾರಿಗಳು ತೋಟದ ಎದುರಿನಲ್ಲಿ ಆರ್ವ ಸ್ವಯಂಸೇವಕರನ್ನು ನಿಲ್ಲಿಸಬೇಕೆಂದರು. ಆದರೆ ಅಲ್ಲಿಯ ಮ್ಯಾಜಿಸ್ಟ್ರೇಟರು ರಾಷ್ಟ್ರಧ್ವಜವನ್ನು ತೆಗೆಯುವದಿಲ್ಲೆಂದು ಅಭಯ ವಚನವನ್ನಿತ್ತದ್ದರಿಂದ ಸ್ವಯಂಸೇವಕರನ್ನು ತೋಟದ ಎದುರಿಗೆ ನಿಲ್ಲಿಸಲಿಲ್ಲ. ಆದರೆ ಮರುದಿವಸ ಉದ್ಯಾನದಲ್ಲಿ ರಾಷ್ಟ್ರಧ್ವಜವು ಕಾಣಬಂದಿಲ್ಲ. ಇದನ್ನು ನೋಡಿ ಕಾಂಗ್ರೆಸ ಅಧಿಕಾರಿಗಳು ಪುನಃ ನಿಶಾನಿಯನ್ನು ಹಚ್ಚುವದಕ್ಕೆ ಮೂವರು ಸ್ವಯಂಸೇವಕರನ್ನು ಕಳುಹಿದರು. ಉದ್ಯಾನಕ್ಕೆ ೬ ಮಹಾದ್ವಾರಗಳಿದ್ದು, ಪ್ರತಿಯೊಂದು ದ್ವಾರದ ಎದುರಿಗೆ ಸಶಸ್ತ್ರ ಪೋಲೀಸರು ನಿಂತಿರುವರು. ಸತ್ಯಾಗ್ರಹಿಗಳು ಪೋಲೀಸರನ್ನು ಧೈರ್ಯದಿಂದ ಎದುರಿಸಿದ್ದಾರೆ.

ಸ್ವಯಂಸೇವಕರು ನಿಶಾನಿಗಳನ್ನು ತೆಗೆದುಕೊಂಡು ಊರಲ್ಲಿ ಮೆರವಣಿಗೆಯಿಂದ ಹೋದಾಗ್ಯೆ ಸೇನಾಧಿಪತಿಯಾದ ಶ್ರೀಲೋಕಸಿಂಘ ಹಾಗು ಗಜಧರ ಪ್ರಸಾದ ಮತ್ತು ಇನ್ನು ಕೆಲ ೩ ಜನ ಸ್ವಯಂಸೇವಕರನ್ನು ೧೪೪ ನೇ ಕಲಮಿನನ್ವಯ ಸೆರೆ ಹಿಡಿದಿರುವರು. ಈ ಸುದ್ದಿಯು ತಿಳಿದ ಕೂಡಲೇ ಪೋಲೀಸ ಅಧಿಕಾರಿಗಳ ಈ ಕೃತ್ಯವನ್ನು ನಿಷೇಧಿಸುವದಕ್ಕಾಗಿ ಮತ್ತು ಆ ಆಜ್ಞೆಯನ್ನು ಉಲ್ಲಂಘಿಸುವದಕ್ಕಾಗಿ ಮತ್ತೆ ೬ ಜನ ಸ್ವಯಂಸೇವಕರನ್ನು ಕಾಂಗ್ರೆಸ ಕಮೀಟಿಯವರು ಕಳುಹಿದರು. ಅವರಾದರೂ ಸೆರೆಹಿಡಿಯಲ್ಪಟ್ಟರು.

### ಸಿಂಪಿಗರು ಪರದೇಶಿ ಅರಿವೆಗಳನ್ನು

## ಹೊಲಿಯಬಾರದಾಗಿ ನಿರ್ಧರಿಸಿದರು

ಹರಿದ್ವಾರದಲ್ಲಿ ವ್ಯಾಪಾರಿಗಳು ಪರದೇಶಿ ಅರಿವೆಗಳನ್ನು ತರಿಸಬಾರದಾಗಿ ಗೊತ್ತಾಯಿತು. ಸಿಂಪಿಗರು ಪರದೇಶಿ ಅರಿವೆಗಳನ್ನು ಹೊಲಿಯುವದಿಲ್ಲೆಂದೂ, ಬಟ್ಟೆ ಎಸ್ಸುವವರು, ಅಚ್ಚು ಹಾಕುವವರು ಪರದೇಶಿ ಅರಿವೆಗಳನ್ನು ಇನ್ನು ಮೇಲೆ ಮುಟ್ಟುವದಿಲ್ಲವೆಂದು ನಿರ್ಧರಿಸಿದರು.

## ಕೋರ್ಟಿನ ಹೊರಗ ಜಯಜಯಕಾರ ಮಾಡಿದ್ದಕ್ಕೆ

### ೬ ತಿಂಗಳ ಶಿಕ್ಷೆ

ರಾವಲಪಿಂಡಿಯ ಮುಖಂಡರ ಖಟ್ಲೆಯು ನಡೆದಾಗ್ಗೆ ಹೊರಗಿನ ಜನರು ಜಯಜಯಕಾರ ಮಾಡಿದ್ದಕ್ಕೆ ೧೪೩ ನೇ ಕಲಮಿನನ್ವಯ ೧೨ ಜನರಿಗೆ ೬ ತಿಂಗಳ ಸಕ್ತಮ ಶಿಕ್ಷೆ ಹಾಗೂ ೫೦ ರೂ. ದಂಡ ವಿಧಿಸಿದರು. ಅವರು ಆನಂದದಿಂದ ಶಿಕ್ಷೆಯನ್ನು ಸ್ವೀಕರಿಸಿ, ಜೇಲಿಗೆ ಒಯ್ಯುವಾಗ್ಗೆ ಮತ್ತೆ ಜಯಜಯಕಾರ ಮಾಡಿದರು.

### ಪಿಕೆಟಿಂಗಕ್ಕೆ

## ಪುಣೆಯ ಮ್ಯುನಸಿಪಾಲಿಟಿಯವರ ಬೆಂಬಲ

**ಗಡಂಗಗಳ ಮುಂದೆ ಪಿಕೆಟಿಂಗ ಮಾಡುವವರಿಗೆ ಮುನಸಿಪಾಲಿಟಿಯವರು ಸಹಾಯ ಮಾಡಬೇಕೆಂಬ ಠರಾವು ಪಾಸಾಯಿತು. ಈ ಬಗ್ಗೆ ಒಂದು ವಿಶಿಷ್ಟ ಮಂಡಳವನ್ನು ದಿವಾಣದ ಕಡೆಗೆ ಕಳುಹಬೇಕಾಗಿ ಗೊತ್ತಾಗಿದೆ. ಕರ್ನಾಟಕದಲ್ಲಿಯ ಮುನಸಿಪಾಲಿಟಿಗಳು ಇದರ ಅನುಕರಣ ಮಾಡುವವೋ?**

## ಭಡೋಚದಲ್ಲಿ ಸಿಂದಿಯ ಮೇಲೆ ಬಹಿಷ್ಕಾರ.

ನಿನ್ನೆ ಭಡೋಚದಲ್ಲಿ ಸಿಂದೀ ಗಿಡಗಳ ಮಕ್ತೆಯ ಸಲುವಾಗಿ ಲಿಲಾವು ನಡೆಯುವದಿದ್ದು, ಅಲ್ಲಿಯ ಕಾಂಗ್ರೆಸ ಕಮೀಟಿಯ ಮುಂದಾಳುಗಳು, ಈ ಲಿಲಾವನ್ನು ನಿಲ್ಲಿಸಬೇಕೆಂದು ನಿಶ್ಚಯಿಸಿದರು. ಅಪ್ರಕಾರ ಒಂದು ದೊಡ್ಡ ಮೆರವಣಿಗೆಯು ಲಾಲ ಬಝಾರದ ಮೇಲಿಂದ ಹೊರಟು ೧೧—೩೦ ಗಂಟೆಗೆ ಕಚೇರಿಗೆ ಬಂದು ತಲುಪಿತು. ಬೇರೆ ಬೇರೆ ಸ್ಥಳಗಳಿಂದ ಇನ್ನೂ ಕೆಲ ಮೆರವಣಿಗೆಗಳು ಬಂದಿದ್ದವು. ಲಿಲಾವಿನ ವೇಳೆಯನ್ನು ಒಮ್ಮೆಲೆ ಬದಲಿಸಿದ್ದರಿಂದ ಎಲ್ಲ ಜನರು ಅಲ್ಲಿಯೇ ಕಚೇರಿಯ ಹೊರಬದಿಯಲ್ಲಿ ಕುಳಿತರು. ಕಚೇರಿಯ ಬಾಗಿಲುಗಳನ್ನು ಪೋಲೀಸರು ಕಾಯುತ್ತಲೇ ಇದ್ದರು. ಆದರೂ ಸತ್ಯಾಗ್ರಹಿಗಳು ತಮ್ಮ ಕಾರ್ಯದಲ್ಲಿ ಯಶಸ್ವಿಯಾದರು. ಒಬ್ಬನನ್ನುಳಿದು ಉಳಿದ ಯಾವತ್ತೂ ಮಕ್ತೆದಾರರು, ಸಪ್ಟೆಂಬರ ೧೯೩೦ ೩೧ ನೆಯ ತಾರೀಖಿನ ವರೆಗೆ ತಾವು ಸಿಂದೀ ಮಕ್ತೆ ಹಿಡಿಯುವದಿಲ್ಲೆಂಬುದಾಗಿ ನಿಶ್ಚಯಿಸಿರುವರು. ಈ ಸಲ ಮಕ್ತೆ ಹಿಡಿದ ಗೃಹಸ್ಥನಿಗೆ ಸಾಮಾಜಿಕ ಬಹಿಷ್ಕಾರ ಹಾಕುವ ಸಂಭವವಿದೆ.

## ಆಂಗ್ಲ ಸ್ತ್ರೀಯರು ದಬ್ಬಾಳಿಕೆಯನ್ನು ನಿಷೇಧಿಸಿದರು.

ಲಂಡನದಲ್ಲಿ ಕಾಮನ್‌ವೆಲ್ಥ ಆಫ ಇಂಡಿಯಾ ಲೀಗದವರು ಒಂದು ಸ್ತ್ರೀಯರ ಪರಿಷತ್ತನ್ನು ಜೂನ ೨೦ ನೆಯ ತಾರೀಖಿನ ದಿವಸ ಕೂಡಿಸಿದ್ದರು. ಅಧ್ಯಕ್ಷೆಳಾದ ಗ್ರಹಾಮ್ ಎಂಬ ಸ್ತ್ರೀಯು ಆಂಗ್ಲ ಸ್ತ್ರೀಯರಿಗೆ ಹಿಂದುಸ್ಥಾನಕ್ಕೆ ನ್ಯಾಯ ಸಿಗುವ ಬಗ್ಗೆ ಬ್ರಿಟಿಶರನ್ನು ಒತ್ತಾಯಪಡಿಸಬೇಕೆಂದೂ ಮತ್ತು ಹಿಂದುಸ್ಥಾನಕ್ಕೆ ಸಾಮಂತ ಸ್ವರಾಜ್ಯವು ಸಿಗುವದು ಯೋಗ್ಯವೆಂದೂ ಅಭಿಪ್ರಾಯ ಕೊಟ್ಟಳು. ಆ ಪರಿಷತ್ತಿನಲ್ಲಿ ಶೀಘ್ರವೇ ಹಿಂದುಸ್ಥಾನಕ್ಕೆ ವಸಹಾತಿನ ಸ್ವರಾಜ್ಯವು ದೊರೆಯಬೇಕೆಂಬ ಠರಾವನ್ನು ಬಹುಮತದಿಂದ ಪಾಸು ಮಾಡಲ್ಪಟ್ಟಿತು. ಹಿಂದುಸ್ಥಾನ ಸರಕಾರದ ಸದ್ಯದ ದಬ್ಬಾಳಿಕೆಯನ್ನಾದರೂ ನಿಷೇಧಿಸುವ ಠರಾವು ಆ ಪರಿಷತ್ತಿನಲ್ಲಿ ಸರ್ವಾನುಮತದಿಂದ ಪಾಸಾಯಿತು. ಇನ್ನಾದರೂ ಸರಕಾರದವರು ಬುದ್ಧಿಗಲಿಯುವರೋ?

## ಶ್ರೀಮತಿ ಸರೋಜನೀಯವರಿಗೆ ಸಹಾನುಭೂತಿ.

ಲಂಡನದಲ್ಲಿ ಸೇರಿದ ಒಂದು ಸಭೆಯಲ್ಲಿ ಶ್ರೀಯುತ ಶ್ರೀನಿವಾಸ ಶಾಸ್ತ್ರಿಯವರು ಹಿಂದುಸ್ಥಾನದ ಸ್ತ್ರೀಯರು ರಾಷ್ಟ್ರೀಯ ಚಳವಳಿಯಲ್ಲಿ ವಿಶೇಷವಾಗಿ ಭಾಗ ತೆಗೆದುಕೊಂಡ ಬಗ್ಗೆ ತಮ್ಮ ಸಹಾನುಭೂತಿಯನ್ನು ವ್ಯಕ್ತಗೊಳಿಸಿದರು. ವಿಶೇಷವಾಗಿ ಅವರು ಶ್ರೀಮತಿ ಮುಥುಲಕ್ಷ್ಮೀರಡ್ಡಿ ಮತ್ತು ಸರೋಜನೀದೇವಿಯವರನ್ನು ಪ್ರಶಂಸಿದರು. ಆ ಸಭೆಯಲ್ಲಿಯ ಪೆಥಿಕ್‌ಲಾರೆನ್ಸ ಎಂಬವಳು ಸರೋಜನೀದೇವಿಯವರು ಮಾಡಿದ ಸ್ವಾರ್ಥತ್ಯಾಗವು ಎಂದಿಗೂ ನಿರರ್ಥಕವಾಗಲಾರದೆಂದು ಅಭಿಪ್ರಾಯಪಟ್ಟರು. ಪ್ರೊಫೆಸ್ಸರ ಸ್ಟ್ಯ. ಲರ್ವ. ಎಂಬ ಸ್ತ್ರೀಯೂ ಕೂಡ ಅದೇ ಅಭಿಪ್ರಾಯದವರಾಗಿದ್ದರು.

## ಹುಡುಗಿಯು ಬುದ್ಧೀ ಕಲಿಸಿದಳು.

ಸಿಮ್ಲಾದಲ್ಲಿಯ ಒಂದು ಶಾಲೆಯ ಬಾಲಿಕೆಯರು 'ಗರ್ಲ ಗಾಯಿಡ್' ಸಂಸ್ಥೆಯನ್ನು ಸೇರಲು ತಮ್ಮ ಇಚ್ಛೆ ಇಲ್ಲವೆಂದು ಸ್ಪಷ್ಟವಾಗಿ ಆ ಶಾಲೆಯ ಶಿಕ್ಷಕಳಿಗೆ ಹೇಳಿದರು. ಕಾರಣವನ್ನು ಕೇಳಲು, ಓರ್ವ ೧೨ ವರ್ಷದ ಬಾಲೆಯು ತಾನು 'ಯುನಿಯನ್ ಜ್ಯಾಕಕ್ಕೆ' ಸಲಾಮು ಹೊಡೆಯುವದಿಲ್ಲವಾದ್ದರಿಂದ ಸಂಸ್ಥೆಯನ್ನು ಸೇರುವದಿಲ್ಲವೆಂದೂ ರಾಷ್ಟ್ರಧ್ವಜವನ್ನು ಏರಿಸಿದರೆ ತಾನೇ ಮೊದಲು ಈ ಸಂಸ್ಥೆಯನ್ನು ಸೇರುವಳೆಂದೂ ಧೈರ್ಯದಿಂದ ಉತ್ತರವನ್ನಿತ್ತಳು.

## ಸೊಲ್ಲಾಪುರ

[ನಮ್ಮ ಸ್ವಂತ ಸುದ್ದಿಗಾರರಿಂದ]

೨೧ ನೆಯ ತಾ|| ದಿವಸ ಮುಂಜಾನೆ ೯|| ಗಂಟೆಯ ಗಾಡಿಯಿಂದ ವಿಜಾಪುರದಿಂದ ನಾರಾಯಣ ವೆಂಕಣ್ಣಾಚಾರ್ಯ ಮಟ್ಟೀಮನಿ ಹುಬ್ಬಳ್ಳಿ, ಶಂಕರ ಚಿದಂಬರ ಪೊಂಕ್ಷೆ ಹುಬ್ಬಳ್ಳಿ, ದಾಜೀರಾಮ ಗಿರ್ದರಲಾಲ ವಿಜಾಪೂರ ಈ ಮೂವರು ಈ ಊರಿಗೆ ಬಂದರು. ಈ ಮೂರು ಜನ ಸತ್ಯಾಗ್ರಹಿಗಳು ಮಧ್ಯಾಹ್ನ ೧ ಘಂಟೆಯ ಸುಮಾರಕ್ಕೆ ಇಲ್ಲಿಯ ಮುನಸೀಪಾಲಿಟಿಯ ಕಟ್ಟಡದ ಎದುರಿಗೆ ಬಂದು ರಾಷ್ಟ್ರಧ್ವಜಗಳೊಂದಿಗೆ ರಾಷ್ಟ್ರೀಯ ಪದಗಳನ್ನನ್ನುತ್ತ 'ನವೀ' ಪೇಟೆಯೊಳಗಿಂದ ಕಸಬಾ ಪೇಟೆಯೊಳಗಿದ್ದ ಚಾವಡಿಯ ಎದುರಿಗೆ ಬಂದನಂತರ ಪೋಲೀಸರು ಸ್ವಯಂಸೇವಕರನ್ನು ಮುತ್ತಿ ಅವರ ಟೊಪ್ಪಿಗೆಗಳನ್ನೂ ಮತ್ತು ಕೈಯಲ್ಲಿ ಹಿಡಿದ ರಾಷ್ಟ್ರಧ್ವಜಗಳನ್ನೂ ಜುಲುಮೆಯಿಂದ ಕಸಿದುಕೊಂಡರು. ಸ್ವಲ್ಪ ಹೊತ್ತಿನ ನಂತರ ಮೋಟಾರದಲ್ಲಿ ಕೂಡ್ರಿಸಿ ಸಬ್ ಇನಸ್ಪೆಕ್ಟರರ ಆಫೀಸಿಗೆ ಕರೆದುಕೊಂಡು ಬಂದರು. ಮೊದಲು ಮೋಟಾರದಲ್ಲಿ ಕೂಡ್ರಿಸುವ ಮುಂದೆ ಅವರವರ ಟೊಪ್ಪಿಗೆಗಳನ್ನೂ, ರಾಷ್ಟ್ರಧ್ವಜಗಳನ್ನೂ ಅವರವರಿಗೆ ಕೊಟ್ಟದ್ದು ಪುನಃ ಇಲ್ಲಿಗೆ ಬಂದ ಬಳಿಕ ರಾಷ್ಟ್ರಧ್ವಜಗಳನ್ನಷ್ಟೇ ಕಸಿದುಕೊಂಡರು. ಗಾಂಧೀ ಟೊಪ್ಪಿಗೆಗಳನ್ನು ಹಾಕಿಕೊಳ್ಳಲಿಕ್ಕೆ ಪರವಾನಿಗೆ ಕೊಟ್ಟರು. ಸುಮಾರು ೮|| ಗಂಟೆಗೆ ಡಿ. ಎಸ್. ಪಿ. ಮೊದಲಾದವರ ಆಫೀಸುಗಳಿಗೆ ಕರೆದುಕೊಂಡು ಹೋಗಿ, ೬|| ಗಂಟೆಯ ಸುಮಾರಕ್ಕೆ ಮೆಸ್ಸಾನಿಕ ಥಿಯೇಟರದ ಹತ್ತರ ಅವರಿಗೆ ಬೇಕಾದತ್ತ ಹೋಗಲಿಕ್ಕೆ ಅಪ್ಪಣೆ ಕೊಟ್ಟರು. ರಾತ್ರಿ ೯|| ಗಂಟೆಯ ಗಾಡಿಗೆ ಸತ್ಯಾಗ್ರಹಿಗಳು ವಿಜಾಪುರಕ್ಕೆ ಹೋದರು. ಅಧಿಕಾರಿಗಳು ಸತ್ಯಾಗ್ರಹಿಗಳಿಗೆ ತೊಂದರೆ ಕೊಡಲಿಲ್ಲ. ಆದರೆ ನಾನಾ ತರದ ಬೈಗಳನ್ನು ಸುರಿದರಂತೆ!

## ಆಚಾರ್ಯ ಕೃಪಲಾನಿಯವರ ಭವಣೆ.

ಜೇಲಿನಲ್ಲಿ ಆಚಾರ್ಯರನ್ನು ಒಂದು ಕತ್ತಲೆಕೋಣೆಯಲ್ಲಿ ಇಟ್ಟಿರುವರು. ಅಲ್ಲಿ ಸೆಕೆಯು ಹೆಚ್ಚಾಗಿರುವದು. ಗುಂಗಾಡಿಗಳು ತುಂಬಿರುವವು. ಇದಕ್ಕಾಗಿ ಅವರಿಗೆ ಮೂರು ದಿವಸಗಳ ವರೆಗೆ ನಿದ್ರೆಯೇ ಇಲ್ಲದಂತಾಗಿದೆ. ಜ್ವರ ಬರತಕ್ಕಿದೆ.

# ಮುಂಬಯಿಯಲ್ಲಿ ಲಾಠಿಯ ರಾಜ್ಯವು

ಆಝಾದ ಮೈದಾನದ ಮೇಲೆ ಸ್ವಯಂಸೇವಕರು ಕವಾಯತು ಮಾಡಕೂಡದೆಂದು ಮುಂಬಯಿಯ ಮ್ಯಾಜಿಸ್ಟ್ರೇಟರು ಅಪ್ಪಣೆ ಕೊಟ್ಟಿದ್ದರು. ಆ ಅಪ್ಪಣೆಯನ್ನು ಮುರಿಯುವದಕ್ಕಾಗಿ ಅಲ್ಲಿ ಎಲ್ಲ ಸ್ವಯಂಸೇವಕರು ಕೂಡಿದರು. ಈ ಅಹಿಂಸಾ ಪಕ್ಷದ ಸ್ವಯಂಸೇವಕರ ಹಾಗೂ ಪೋಲೀಸರು, ಸಾರ್ಜಂಟರು, ಕುದುರೆ ಸವಾರರ ಇವರ ನಡುವೆ ೩ ತಾಸುಗಳ ವರೆಗೆ ಕದನವು ನಡೆಯಿತು. ರಾಷ್ಟ್ರಪಕ್ಷದ ಕಡೆಯ ೩-೪ ಜನರಿಗೆ ಲಾಠೀ ಪ್ರಹಾರದಿಂದ ಗಾಯಗಳಾಗಿವೆ. ಕಾಂಗ್ರೆಸ ಆಸ್ಪತ್ರೆಯಲ್ಲಿ ಇವರೆಲ್ಲರೂ ನೋವಿನಿಂದ ನರಳುತ್ತಿರುವದು ಹೃದಯ ದ್ರಾವಕವಾಗಿ ತೋರುತ್ತಿತ್ತು. ೫೦೦ ಮಂದಿ ಪೋಲೀಸರು, ಅಷ್ಟೇ ಜನ ಸಾರ್ಜಂಟರು, ೫೦ ಜನ ಕುದುರೆಯ ಸವಾರರು ಆ ಮೈದಾನದಲ್ಲಿ ಯಾರನ್ನೂ ಬರಗೊಡದಂತೆ ಕಾಯುತ್ತಿದ್ದರು. ೫೦೦ ಮಂದಿ ಸ್ವಯಂಸೇವಕರು ರಾಷ್ಟ್ರಧ್ವಜವನ್ನು ತಕ್ಕೊಂಡು ಅಲ್ಲಿಗೆ ಸಾಗಿದ್ದರು. ೫-೬ ಸಾವಿರ ಜನರು ಅವರ ಹಿಂದೆ ನಡೆದಿದ್ದರು. ಕೆಲವು ಸ್ವಯಂಸೇವಕರು ಆ ಮೈದಾನದಲ್ಲಿ ಹೊಕ್ಕರು. ಕುದುರೆಯ ಸವಾರರು ಅವರೆಲ್ಲರಿಗೆ ಅಲ್ಲಿಂದ ಹೋಗಲು ಹೇಳಿದರು, ಸ್ವಯಂಸೇವಕರು ಹೋಗಲಿಲ್ಲ. ಸವಾರರು ಅವರನ್ನು ತಮ್ಮ ಬಡಿಗೆಗಳಿಂದ ಹೊಡೆದರು. ಅಲ್ಲಿ ನೋಡಲಿಕ್ಕೆ ಬಂದ ಜನರ ಮೇಲೆ ಪೋಲೀಸರು ತಮ್ಮ ಲಾಠೀ ಪ್ರಹಾರ ಮಾಡಿದರು. ೨೦-೩೦ ಸಾವಿರ ಜನರು ಇದನ್ನೆಲ್ಲ ನೋಡುತ್ತ ನಿಂತಿದ್ದರು.

ಅಕಾಲೀ ಶೀಖ ದಲದ ೨೦ ಸ್ವಯಂಸೇವಕರು ಮೈದಾನದಲ್ಲಿ ಹೊಕ್ಕರು. ಆಗ ಅವರು ತಳಪ್ಪೂರಿದರು. ಅವರ ಸಹಾಯಕ್ಕಾಗಿ ೨೦ ಗುಜರಾಥಿ ಸ್ತ್ರೀಯರು ಹಾಗು ೧೦ ಶೀಖ ಸ್ತ್ರೀಯರು ಬಂದರು. ಅವರೆಲ್ಲರೂ "ಸಾಹೇಬರೇ ನಮ್ಮನ್ನು ಹೊಡೆಯಿರಿ" ಎಂದು ಸಾರ್ಜಂಟರನ್ನು ಕೇಳಿದರು. ಸಾರ್ಜಂಟರು ನಗುತ್ತ ಅವರಿಗೆ ಅಲ್ಲಿಂದ ಹೋಗಲಿಕ್ಕೆ ಹೇಳಿದರು. "ಇದು ಸಾರ್ವಜನಿಕ ಸ್ಥಳವಾದದರಿಂದ ನಾವು ಇಲ್ಲಿಂದ ಹೋಗುವದಿಲ್ಲವೆಂ"ದು ಕೆಲವು ಸ್ತ್ರೀಯರು ಹೇಳಿದರು. 'ನಿಮ್ಮನ್ನು ಸೆರೆಹಿಡಿದಿದ್ದೇನೆ' ಎಂದು ಅವನು. ಸ್ತ್ರೀಯರು "ವಾರಂಟು" ತೋರಿಸು ಎಂದು ಸಾರ್ಜಂಟನನ್ನು ಕೇಳಿದರು. ಸಾರ್ಜಂಟನು ನಿರುತ್ತರನಾದನು. "ನಾವು ನಿಮ್ಮ ತಾಯಿ, ಅಕ್ಕತಂಗಿಯರಂತೆ ಇರುವೆವು; ಬೇಕಾದರೆ ನಮ್ಮನ್ನು ಹೊಡೆಯಿರಿ" ಎಂದು ಕೆಲವು ಸ್ತ್ರೀಯರು ಸಾರ್ಜಂಟನಿಗೆ ಹೇಳಿದರು. ನ್ಯೂಯಾರ್ಕ ಹಾಗೂ ಲಂಡನದಲ್ಲಿಯ ವರ್ತಮಾನ ಪತ್ರಗಳ ಪ್ರತಿನಿಧಿಗಳು ಅಲ್ಲಿಗೆ ನೋಡಲಿಕ್ಕೆ ಹೋಗಿದ್ದರು. ಸರಕಾರದ ಅಪ್ಪಣೆಯನ್ನು ಭಂಗಮಾಡುವದಕ್ಕಾಗಿ ಬಂದಿರುವೆವೆಂದು ಸ್ತ್ರೀಯರು ಅವರ ಪ್ರಶ್ನೆಗೆ ಉತ್ತರಕೊಟ್ಟರು. ಪೋಲೀಸರು ಶೀಖ ಸ್ವಯಂಸೇವಕರ ಕಾಲು ಹಾಗೂ ತಲೆಯ ಮೇಲೆ ಹೊಡೆಯುತ್ತಿದ್ದರು, ಕೆಲವರು ಗಾಯಹೊಂದಿ ನೆಲಕ್ಕೆ ಬಿದ್ದರು; ಆದರೆ ಅಲ್ಲಿಂದ ಸ್ವಲ್ಪವಾದರೂ ಸರಿಯಲಿಲ್ಲ, ಸ್ತ್ರೀಯರು ಅವರನ್ನು ಸಂರಕ್ಷಿಸಲು ಪ್ರಯತ್ನ ಮಾಡಿದರು. ೬ ಜನ ಸ್ತ್ರೀಯರಿಗೆ ಪೆಟ್ಟು ತಗಲಿವೆ. ಪಂಡಿತ ಮೋತೀಲಾಲರು ಅಲ್ಲಿಗೆ ನೋಡಲಿಕ್ಕೆ ಬಂದರು; ಕೂಡಲೇ ಎಲ್ಲ ಪೋಲೀಸರೂ ಸಾರ್ಜಂಟರೂ ಸರಿದು ನಿಂತರು; ಸಾವಿರಾರು ಸ್ವಯಂಸೇವಕರು ಮೈದಾನದಲ್ಲಿ ಧುಮುಕಿದರು; ಆದರೆ ಮಳೆಯು ಬೀಳಲಿಕ್ಕೆ ಸುರುವಾದ್ದರಿಂದ ಎಲ್ಲ ಜನರೂ ಅಲ್ಲಿಂದ ಚದರಿದರು. ಪೋಲೀಸರೂ, ಸವಾರರೂ, ಸಾರ್ಜಂಟರೂ ಓಡಿಹೋಗುವ ಈ ಜನರ ಮೇಲೆ ಏರಿಹೋಗಿ ತಮ್ಮ ಲಾಠಿಗಳ ತಿಂಡಿಯನ್ನು ತೀರಿಸಿಕೊಂಡರು.

## ಸ್ತ್ರೀಯರ ದುಃಖವಾರ್ತೆ

ಗಾಯಹೊಂದಿದ ಶ್ರೀಮತಿ ಸರದೇಸಾಯಿ ಎಂಬ ಒಬ್ಬ ತರುಣಿಯು ಕ್ರಾನಿಕಲ ಪತ್ರದ ಪ್ರತಿನಿಧಿಗೆ ಈ ಬಗೆಯಾಗಿ ತನ್ನ ವಾರ್ತೆಯನ್ನು ಹೇಳಿದಳು. ನನ್ನ ಕೈಯಲ್ಲಿ ರಾಷ್ಟ್ರಧ್ವಜ ಹಿಡಕೊಂಡು ನಾನು ಮೈದಾನದಲ್ಲಿ ಹೋದೆನು. ಒಬ್ಬ ಸಾರ್ಜಂಟನು ನನ್ನ ಕೈಯನ್ನು ಗಟ್ಟಿಯಾಗಿ ಹಿಡಿದು ನನ್ನನ್ನು ನೆಲದಮೇಲೆ ಕೆಡಹಿದನು ಆದರೂ ನಾನು ಧ್ವಜವನ್ನು ಗಟ್ಟಿಯಾಗಿ ಹಿಡಿದಿದ್ದೆನು. ಅವನು ಪುನಃ ನನ್ನನ್ನು ಮತ್ತೊಮ್ಮೆ ನೆಲಕ್ಕುರುಳಿಸಿದನು. ಮೂರನೇ ಸಾರೆ ಮತ್ತೊಮ್ಮೆ ಹೆಚ್ಚು ಸಿಟ್ಟಿನಿಂದ ನನ್ನನ್ನು ನೆಲಕ್ಕೆ ಅಪ್ಪಳಿಸಿದನು ನನ್ನ ಪ್ರಜ್ಞೆಯು ತಪ್ಪಿತು.

ಶ್ರೀಮತಿ ಮನೋರಮಾಬಾಯಿ ಎಂಬವರು ಹೀಗೆ ಹೇಳಿದರು — ಒಬ್ಬ ಸಾರ್ಜಂಟನು ನನ್ನ ಕೂದಲು ಹಿಡಿದು ಜಗ್ಗಿ ನೆಲಕ್ಕೆ ಕೆಡವಿದನು. ಆ ಮೇಲೆ ಸ್ವಯಂಸೇವಕರು ನನ್ನನ್ನು ಮೋಟಾರದಲ್ಲಿ ಹಾಕಿಕೊಂಡು ಬಂದರು. ಮಹಾಭಾರತದಲ್ಲಿ ದುಃಶಾಸನನು ದ್ರೌಪದಿಯ ಕೂದಲು ಹಿಡಿದು ಜಗ್ಗಿದನೆಂದು ಕಥೆಯುಂಟು. ಈಗ ಅದು ಪ್ರತ್ಯಕ್ಷವಾಗಿ ಕಾಣುತ್ತಿದೆ.

ಮುಂಬಯಿಯಲ್ಲಿ ಸರಕಾರದ ಈ ಕೃತಿಗಳನ್ನು ನಿಷೇಧಿಸುವದಕ್ಕಾಗಿ ಪ್ರಚಂಡ ಹರತಾಳವನ್ನು ಸಾಗಿಸಿರುವರು.

## ನವಜೀವನ ಪತ್ರಕರ್ತರಿಗೆ ಶಿಕ್ಷೆ

ಶ್ರೀ ಮೋಹನಲಾಲಭಟ್ಟ ಎಂಬ ನವಜೀವನದ ಸಂಪಾದಕರಿಗೆ ಗುಜರಾತ ಸತ್ಯಾಗ್ರಹ ಪತ್ರಿಕೆಯನ್ನು ಮುದ್ರಿಸಿದಕ್ಕಾಗಿ ಮೂರು ತಿಂಗಳ ಶಿಕ್ಷೆಯಾಗಿದೆ. ಮತ್ತು ನೂರು ರೂ. ದಂಡವೂ ಆಗಿದೆ. ದಂಡ ಕೊಡದಿದ್ದರೆ ಮತ್ತೊಂದು ತಿಂಗಳ ಶಿಕ್ಷೆ.

## ಅಮೇರಿಕಾದಲ್ಲಿಯೂ ಉಪ್ಪು ಮಾರಿದನು

ನ್ಯೂಯಾರ್ಕದಲ್ಲಿ ರೇಮಂಡ ಎಂಬ ಸಾಹೇಬನು ಮಹಾತ್ಮಾ ಗಾಂಧಿಯವರಿಗೆ ಸಹಾನುಭೂತಿಯನ್ನು ತೋರಿಸುವದಕ್ಕಾಗಿ ಬಂದರಕ್ಕೆ ಬಂದು ಮೆರವಣಿಗೆಯೊಂದಿಗೆ ಹೋಗಿ ಉಪ್ಪು ಮಾಡಿದನು. ಮತ್ತು ಆ ಉಪ್ಪನ್ನು ಪಾರಿಸ ಪಟ್ಟಣಕ್ಕೆ ಒಯ್ದು ಅಲ್ಲಿಂದ ಮಹಾತ್ಮರಿಗೆ ಕಳಿಸಿಕೊಡುವನು. ಮಹಾತ್ಮನ ಮಹಿಮೆಯು ಜಗತ್ತಿನಲ್ಲೆಲ್ಲ ಹರಡಿದೆ ಎನ್ನಲಿಕ್ಕೆ ಸಂಶಯವೇಕೆ

## ಮಾಮಲೇದಾರರು ರಾಜೀನಾಮೆ ಕೊಟ್ಟರು

ಅಹಮ್ಮದಾಬಾದದ ಮಾಮಲೇದಾರರು ಛಿದ್ರಿಯಾದ ಎಂಬ ಹಳ್ಳಿಗೆ ಹೋಗಿದ್ದರು. ಹಾದಿಯಲ್ಲಿ ಒಂದು ಗಾಲಿಯು ಮುರಿಯಿತು. ಮಾಮಲೇದಾರರು ಬರುವರೆಂಬ ಸುದ್ದಿಯು ತಿಳಿದ ಕೂಡಲೇ ಆ ಹಳ್ಳಿಯ ಜನರೆಲ್ಲ ತಮ್ಮ ಮನೆಯ ಬಿಡಕಿ ಬಾಗಿಲುಗಳನ್ನು ಮುಚ್ಚಿದರು. ಮಾಮಲೇದಾರರು ಮುಖಿಯನ್ನು ಕರೆದು ಊಟದ ವಗೈರೆ ವ್ಯವಸ್ಥೆಯನ್ನು ಮಾಡಲು ಹೇಳಿದರು. ವ್ಯವಸ್ಥೆಯು ಆಗಲಿಲ್ಲ. ಕಡೆಗೆ ನಿರುಪಾಯನಾಗಿ ರಾಜೀನಾಮೆಯನ್ನು ಕೊಟ್ಟನು.

## ಕೊಂಡವೆಂಕಟಪ್ಪಯ್ಯನವರನ್ನು

ಕಣ್ಣನೂರ ಜೇಲಿಗೆ ಒಯ್ಯುವರು.

ಮದ್ರಾಸ ಜೇಲಿನಿಂದ ಶ್ರೀ ಕೊಂಡವೆಂಕಟಪ್ಪಯ್ಯಾ ಮತ್ತು ಇತರ ೧೬ ಜನರನ್ನು ಕಣ್ಣನೂರ ಜೇಲಿಗೆ ತೆಗೆದುಕೊಂಡು ಹೋಗುವರು.

## ಜನವಾಕ್ಕೆ ಪ್ರತಿನಿಧಿಗಳಾಗಿ ಹೋಗಲು ಒಪ್ಪಲಿಲ್ಲ

ಜನವಾಕ್ಕೆ ಮದ್ರಾಸದ ಪ್ರತಿನಿಧಿಯಾಗಿ ಹೋಗಲು ಶ್ರೀ ಸರ್ [illegible]ರವರಿಗೆ ಆಮಂತ್ರಣ ಬಂದಿತ್ತು ಆದರೆ ಅವರು ಅದನ್ನು ನಿರಾಕರಿಸಿದರು.

## ಕೆರೂರ.

ತಾ|| ೧೯ ನೆಯ ದಿನ ಶ್ರೀ ಬಿಳಿಗಿ ಮಠದ ಪಟ್ಟದ್ದೇವರ ನೇತೃತ್ವದಲ್ಲಿ ಪ್ರಚಂಡ ಸಮುದಾಯದ ಸಭೆ ಸೇರಿ ಇಂಗಳಗಿ ಮಠದ ಶ್ರೀ ಮೃತ್ಯುಂಜಯಸ್ವಾಮಿಗಳ ಸುಶ್ರಾವ್ಯವಾದ ಮತ್ತು ಬಹಳ ಪರಿಣಾಮಕಾರಕವಾದ ವ್ಯಾಖ್ಯಾನವಾಯಿತು. ಅಧ್ಯಕ್ಷರ ಭಾಷಣ ಮುಗಿದ ಕೂಡಲೇ ಶ್ರೀ ಸಿಂದಗಿಯವರು ಹಸನಾದಲ್ಲಿ ತಾವೇ ಸ್ವತಃ ತಯಾರಿಸಿದ ಉಪ್ಪನ್ನು ಸಭೆಯಲ್ಲಿ ಮಾರಿದರು. ಎಲ್ಲ ಜನರು ಕೊಂಡರು.

ಊರಿಗೆ ಬಂದು ಬರುವದರಿಂದ ಅಜ್ಞಾನಿ ಜನರು ಬಹಳ ಅಂಜಿರುವರು. ಇದು ಕುಹಕ ಜನರ ಉಪದ್ವ್ಯಾಪವೆಂದು ಅವರಿಗೆಂತು ತಿಳಿಯಬೇಕು ಪಾಪ!

ಇಲ್ಲಿಯ ವರೆಗೆ ಅಜಮಾಸು ೫೦೦ ಸಿಂದೀ ಗಿಡಗಳ ನಾಶವಾಗಿವೆ ಕಡಿಯುವ ಕೆಲಸವು ದಿನಾಲು ನಡೆದೇ ಇದೆ.

ಕಾರ್ಯದರ್ಶಿ

ದೇಶಬಂಧು ಪಥಕ ಸತ್ಯಾಗ್ರಹ ಶಿಬಿರ.

## ಗಾಯಪಟ್ಟ ಸ್ವಯಂಸೇವಕರ ಭೆಟ್ಟಿ.

ಪಂ. ಮೋತೀಲಾಲರು ತಮ್ಮ ಪತ್ನಿ, ಮಗಳು, ಸೊಸೆ, ಇವರೆಲ್ಲರ ಸಂಗಡ ಪೋಲೀಸ ಅತ್ಯಾಚಾರಕ್ಕೆ ಬಲಿಬಿದ್ದ ಗಾಯಪಟ್ಟ ಸ್ವಯಂಸೇವಕರನ್ನು ನೋಡಲು ಕಾಂಗ್ರೆಸ ಆಸ್ಪತ್ರೆಗೆ ಹೋಗಿದ್ದರು. ಸ್ವಯಂಸೇವಕರು ಅವರಿಗೆ ಸಲಾಮು ಮಾಡಿದರು. ಅವರ ವೇದನೆಯ ವಾರ್ತೆಗಳನ್ನೆಲ್ಲ ಕೇಳಿಕೊಂಡರು. ಆಸ್ಪತ್ರೆಯನ್ನು ನಡಿಸಿದ ಎಲ್ಲ ಜನರನ್ನು ಅವರ ಈ ಉದಾರ ಬುದ್ಧಿಗಾಗಿ ಅಭಿನಂದಿಸಿದರು.

## ನಾಚಿಕೆ ಬರುವಂಥ ಮಾತು.

ಪಟೇಲರು ಮುಂಬಯಿಯಲ್ಲಿ ಭಾಷಣ ಮಾಡುವಾಗ್ಗೆ ಹೀಗೆಂದರು. ಮೂವತ್ತು ಕೋಟಿ ಜನಸಂಖ್ಯೆಯುಳ್ಳ ರಾಷ್ಟ್ರವು ಅಂಗುಷ್ಠಪ್ರಾಯ [illegible] ನಾಲ್ಕು ಕೋಟಿ ಜನಸಂಖ್ಯೆಯುಳ್ಳ ಒಂದು ಸಣ್ಣ ರಾಷ್ಟ್ರದ ಅಧಿಕಾರಕ್ಕೆ ಒಳಪಟ್ಟಿರುವದು ನಾಚಿಕೆ ಬರುವಂಥ ಮಾತಾಗಿದೆ. ಬ್ರಿಟಿಶ ಜನರು ವ್ಯಾಪಾರಿಗಳು. ಅವರು ಹಿಂದುಸ್ಥಾನದಲ್ಲಿ ತಮ್ಮ ಲಾಭಕ್ಕಾಗಿ ಬಂದಿರುವರು. ಹಿಂದುಸ್ಥಾನದವರು ಈ ಲಾಭವು ಅವರಿಗೆ ದೊರೆಯದಂತೆ ಮಾಡಿದರೆ ಅವರು ಮೆಲ್ಲಗಾಗಿ ಈ ದೇಶವನ್ನು ಬಿಟ್ಟು ಹೋಗುವರು. ಎಲ್ಲ ಬ್ರಿಟಿಶ ಸರಕುಗಳ ಬಹಿಷ್ಕಾರ ಹಾಕಲು ಅವರು ಹೇಳಿದರು. ಹಿಂದುಸ್ಥಾನದಲ್ಲಿ ಸಿಗದಂಥ ಸಾಮಾನುಗಳನ್ನು ಬೇರೆ ರಾಷ್ಟ್ರದಲ್ಲಿ ತಯಾರಾದವುಗಳನ್ನು ಕೊಳ್ಳಬಹುದು. ಆದರೆ ಬ್ರಿಟಿಶರಿಂದ ತಯಾರಾದವುಗಳನ್ನು ಮಾತ್ರ ಕೊಳ್ಳಬಾರದು. ಇದೇ ಒಂದು ರಾಮಬಾಣ ಉಪಾಯವು. ಒಂದು ವರ್ಷದ ವರೆಗಾದರೂ ಪರದೇಶೀ ಅರಿವೆಯನ್ನು ಯಾರೂ ಕೊಳ್ಳಲಾಗದು ಎಂದು ಅವರು ಹೇಳಿದರು. ಮಹಾತ್ಮಾಗಾಂಧಿಯವರಿಗೆ ಹಾಗೂ ರಾಷ್ಟ್ರಸಭೆಗೆ ನಮ್ಮ ದೇಶದ ಸರ್ಕಾರ ಬೆಂಬಲಿಸಿದೆ ಎಲ್ಲರೂ ಮತ್ತು ಮಹಾತ್ಮಾಗಾಂಧಿಯವರ ಬಿಡುಗಡೆಗಾಗಿ ಹಟಹತ್ತಿ [illegible] ದಲ್ಲವೆಂದೂ ಮಂದ [illegible] ತಮ್ಮ ನಿರ್ಧಾರವನ್ನು ಸರಕಾರಕ್ಕೆ ತಿಳಿಸಬೇಕು. ಎಂದು ಅವರು ಹೇಳಿದರು.

## ಗುಜರಾಥಿ "ಡೇಲಿ ಸಮಾಚಾರ"

ಪತ್ರಿಕೆಯ ಸಂಪಾದಕರನ್ನು ಸೆರೆ ಹಿಡಿದರು

ರಾಜದ್ರೋಹಾತ್ಮಕ ಲೇಖಗಳನ್ನು ಬರೆದ ಆರೋಪದಿಂದ ೧೨೪ ಅ ಕಲಮಿನನ್ವಯ ಅವರನ್ನು ಸೆರೆ ಹಿಡಿದು ಆ ಪತ್ರಿಕೆಯ ಕಛೇರಿಯನ್ನು ಮತ್ತು ಮಾರ್ಚ ಅಂಗಡಿಯಲ್ಲಿಯು ಕೆಲವು ರಾಜದ್ರೋಹಾತ್ಮಕ ಲೇಖಗಳನ್ನು ಪ್ರಕಟಿಸಿದ ಸಂಚಿಕೆಗಳನ್ನು ಜಪ್ತಿ ಮಾಡಿದರು. ಸಂಪಾದಕರ ಮನೆಯನ್ನು ಶೋಧಿಸಿದರು ಅಲ್ಲಿ ಏನೂ ದೊರೆಯಲಿಲ್ಲ


ಶ್ರೀ ಮಹಾಲಕ್ಷ್ಮೀ ಪ್ರಸಾದಿಕ

**ಶಿರಹಟ್ಟಿ ನಾಟಕ ಮಂಡಳಿಯವರು**

ಬಾಗಲಕೋಟೆ ಶಿವಾನಂದ ನಾಟಕ ಶಾಲೆಯಲ್ಲಿ

ಸೋಮವಾರ ತಾ|| ೨೩-೬-೩೦ ರಾತ್ರಿ ೧೦ ಗಂಟೆಗೆ

ತಮ್ಮ ಲೋಕಪ್ರಿಯವಾದ

**ರಾಮಾಂಜನೇಯ ಯುದ್ಧ**

ಬುಧವಾರ ತಾ|| ೨೫—೬—೩೦ ದಿವಸ

**ಶಿವಲೀಲಾ**

ಶುಕ್ರವಾರ ತಾ|| ೨೭-೬-೩೦

**ಲಂಕಾದಹನ**

ಎಂಬ ನಾಟಕಗಳನ್ನು ಅಭಿನಯಿಸುವರು.

ಎಚ್, ವೆಂಕೋಬರಾವ.

ಪ್ರೊಪ್ರಾಯಿಟರ.


ಈ ಪತ್ರಿಕೆಯು ಬಳವಂತ ಅಣ್ಣಾರಾವ [illegible] ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

# ಕನ್ನಡಿಗ

ಜಯ ಕರ್ನಾಟಕ

यद्यत् परवशं दुःखं । यद्यदात्मवशं सुखम ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬುಧವಾರದ ಹೊರ್ತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಮಂಗಳವಾರ ಮಿತಿ ಜೇಷ್ಠ ಬಹುಳ ೧೩ ಶಕೆ ೧೮೫೨ ತಾ॥ ೨೪—೬—೩೦ [ಸಂಚಿಕೆ ೮೩

## ವಿದ್ಯಾರಣ್ಯರ ಪುಣ್ಯತಿಥಿಯು.

ಈ ಹೊತ್ತು ಸರ್ವ ಕರ್ನಾಟಕದಲ್ಲಿಯೂ ಒಂದು ಉಲ್ಲಾಸಮಯವಾದ ಉತ್ಸವವು ಜರಗುವದು. ವಿದ್ಯಾರಣ್ಯ ಮಹಾಮುನಿಗಳ ಪುಣ್ಯತಿಥಿಯೇ ಉತ್ಸವದ ಮೂಲಕಾರಣವು. ಮಹಾಪುರುಷರ ಜೀವನ ಚರಿತ್ರೆಗಳಿಂದ ಮನುಷ್ಯನು ಎಷ್ಟೋ ಸಂಗತಿಗಳನ್ನು ಕಲಿಯತಕ್ಕದ್ದಾಗಿದೆ. ಪರಕೀಯರ ಆಘಾತದ ಹೊಡತಗಳಿಗೊಳಪಟ್ಟು ಬಲಗುಂದಿದ ಕನ್ನಡ ನಾಡು, ವಿದ್ಯಾರಣ್ಯ ಮುನಿಗಳ ತಪೋಬಲದ ಮೂಲಕ ಧಾರಾನೀರ ಜಗತ್ತಿನಲ್ಲಿ ಎಂದೆಂದಿಗೂ ಮರೆಯದಂಥ ಒಂದು ಅತ್ಯಂತ ಬಲಿಷ್ಠವಾದ ಸಾಮ್ರಾಜ್ಯವಾಗಿ ಮೆರೆಯಿತು. ಇದೇ ನಾವು ಹೇಳುವ ವಿಜಯನಗರ ಸಾಮ್ರಾಜ್ಯವು. ಅದರ ವೈಭವವು ವೈಕುಂಠಪ್ರಾಯವಾಗಿತ್ತು. ಕನ್ನಡಿಗರ ಈ ಸಾಮ್ರಾಜ್ಯವನ್ನು ಕಣ್ಣಿಟ್ಟು ನೋಡಿ ಧನ್ಯರಾಗಿ ಎಷ್ಟೋ ಪಾಶ್ಚಿಮಾತ್ಯ ಇತಿಹಾಸಕಾರರು ಬರೆದ ಸಂಗತಿಗಳನ್ನು ಓದಿದರೆ ಪ್ರತಿಯೊಬ್ಬ ಕನ್ನಡಿಗನ ಉತ್ಸಾಹವು ಉಕ್ಕಿಬರುವದು; ಪರಕೀಯರು ಬೆಪ್ಪನೆ ಬೆರಗಾಗುವರು. ಈ ಸಾಮ್ರಾಜ್ಯದ ತಳಹದಿಯು ವಿದ್ಯಾರಣ್ಯರ ತಪೋಬಲವು. ವಿದ್ಯಾರಣ್ಯರು ಅದ್ವೈತ ವೇದಾಂತ ಸಾಮ್ರಾಟರು. ಕನ್ನಡಿಗರ ಆಗಿನ ಕಳವಳಜನಕವಾದ ಸ್ಥಿತಿಯನ್ನು ನೋಡಿ ಅವರ ಅಂತಃಕರಣವು ಕರಗಿತು. ಬಾಳುವೆಗೇಡಿಗಳಾಗಿ ಮುಸಲ್ಮಾನರ ಹಾವಳಿಯಿಂದ ಹಾಳಾಗಿ ಹೋದ ಎಲ್ಲ ಕನ್ನಡಿಗರನ್ನು ಏಕೀಕರಿಸಿ, ತಾವು ಅವರಿಗೆ ಬೆಂಬಲವಾಗಿಯೂ, ಮಾರ್ಗದರ್ಶಕರಾಗಿಯೂ ನಿಲ್ಲಲು ನಿರ್ಧರಿಸಿದರು. ತಮ್ಮ ದಿವ್ಯ ಶಕ್ತಿಯಿಂದ ಅವರಲ್ಲಿ ಒಂದು ಹೊಸ ಚೈತನ್ಯವನ್ನು ಹುಟ್ಟಿಸಿದರು. ಅಲ್ಪ ಶಕ್ತಿಯುಳ್ಳ ವ್ಯಕ್ತಿಗಳೂ ಅವರ ಹಸ್ತಸ್ಪರ್ಶದಿಂದ ಗಂಡುಗಲಿಗಳಾಗಿ ಪರಿಣಮಿಸಿದರು. ಯಾವದಾದರೂ ಒಂದು ಮಹತ್ಕಾರ್ಯಗಳಿಗೆ ಜನಬಲ ಹಾಗೂ ಧನಬಲ ಇವೆರಡು ಅತ್ಯವಶ್ಯವಾದ ಸಾಧನಗಳು. ಜನಬಲವನ್ನು ಅವರು ಸಂಘಟನೆ ಮಾಡಿದರು. ಧನಬಲವು ಬೇಕಾದಿತು. ಯಾವ ಮಹಾತ್ಮನ ಕೈಯನ್ನೇ ಪರಮಾತ್ಮನು ಹಿಡಿದಿರುವನೋ ಅವನಿಗೆ ಧನದ ಕೊರತೆಯೆಂದರೆ ಗಂಗಾನದಿಯಲ್ಲಿ ನಿಂತು ನೀರಡಿಕೆಯೆಂದಂತೆಯೇ ಸರಿ. ಅವರು ದುಡ್ಡನ್ನು ಮಳೆ ಸುರಿಸಿದಂತೆ ಸುರಿಸುವರು. ಜನತೆಗೆ ದುಡ್ಡಿನ ಮಹತ್ವವು. ಮಹಾತ್ಮರಿಗೆ ಅದು ಕಸಕಡ್ಡಿಯಂತೆಯೇ ಸರಿ. ವಿದ್ಯಾರಣ್ಯರು ಇವೆರಡೂ ಬಲಗಳನ್ನು ಕೂಡಿಗೊಳಿಸಿ ಹುಕ್ಕಬುಕ್ಕರನ್ನು ತಮ್ಮ ಅಡಿಯಾಳುಗಳಾಗಿ ಮಾಡಿಕೊಂಡು, ಹಿಂದೂ ಜನರ ಧರ್ಮ, ಸಂಸ್ಕೃತಿ, ಪಾವಿತ್ರ್ಯಗಳನ್ನು ಗಟ್ಟಿಯಾಗಿ ಕಾಪಾಡುವಂಥ ಗಂಡುಮೆಟ್ಟನ್ನು ವಿಜಯನಗರ ರಾಜ್ಯವನ್ನಾಗಿ ಮಾಡಿ ನಮ್ಮೆಲ್ಲರನ್ನೂ ಉದ್ಧಾರಮಾಡಿದರು. ಇಂಥ ಮಹಾಮಹಿಮರು ಗೀತೆಯಲ್ಲಿ ಶ್ರೀಕೃಷ್ಣನು "ನ ನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ" ಎಂದು ಹೇಳಿದಂತೆ ಕೇವಲ ಕನ್ನಡಿಗರ ಕಲ್ಯಾಣಕ್ಕಾಗಿ ತಮ್ಮ ದೇಹವನ್ನು ಸವೆಸಿದರು. ಅವರು ಬರೆದ

ಕರ್ನಾಟಕ ಸಾಮ್ರಾಜ್ಯ ಸ್ಥಾಪನಾಚಾರ್ಯರಾದ

ವಿದ್ಯಾರಣ್ಯ ಮಹಾಮುನಿಗಳು

“ ಪಂಚದಶೀ ” ಗ್ರಂಥವನ್ನು ಓದಿದ ಕನ್ನಡಿಗರಿಗೆ ಇವರು ವೇದಾಂತಶಾಸ್ತ್ರ ಸಾರ್ವಭೌಮರಾಗಿದ್ದರೆಂದು ಗೊತ್ತಾಗುವದು. ಕರ್ನಾಟಕದಲ್ಲಿಯು ಆಬಾಲವೃದ್ಧ ಸ್ತ್ರೀಪುರುಷರೆಲ್ಲ ಇವರ ಉತ್ಸವವನ್ನು ಮಾಡಿ ತಮ್ಮಲ್ಲಿಯೂ ಅವರ ದಿವ್ಯಶಕ್ತಿಯು ಅಂಶವಾದರೂ ಅಂಕುರಿಸುವಂತೆ ಯತ್ನಿಸಲಿ!

## ಬದಾಮಿ ತಾಲೂಕಿನಲ್ಲಿ ಈಚಲಗಿಡದ ಸಂಹಾರವು.

ಈವತ್ತಿನ ದಿವಸ (೨೧-೬-೧೯೩೦) ಶ್ರೀ ರಾ॥ ಶಿವಕೃಷ್ಣ ಅಕ್ಕಿ ಇವರು ೫ ಮಂದಿ ಸ್ವಯಂಸೇವಕರೊಡಗೊಂಡು ಮಮಟಗೇರಿಗೆ ಈಚಲ ಗಿಡದ ಶೋಧಕ್ಕೂ ಸಂಹಾರಕ್ಕೂ ಹೋಗಿರುವರು. ಇವತ್ತಿನ ದಿವಸ ಕೆರೂರಿನಲ್ಲಿ ೬೦ ಗಿಡಗಳನ್ನು ನಾಶಮಾಡಿರುವರು. ಒಟ್ಟು ೭೦೦ ಗಿಡಗಳು ಸಂಹಾರ ಆದವು. ಇಷ್ಟು ಗಿಡಗಳ ನಾಶವಾದರೂ ಈ ಊರ ಕೂರ ಪುರುಷನೊಬ್ಬನು ಶರೆ ಸಿಂದಿ, ಅಂಗಡಿಯು ಮತ್ತಿಗೆ ಹೋಗಿರುವನಂತೆ; ಅವನ ಧೈರ್ಯವನ್ನು ನೋಡಿರಿ! ೨೧-೬-೧೯೩೦ ನೇ ದಿವಸ ಇಲ್ಲಿಂದ ವೆ॥ ರಾ॥ ವೃತ್ಯುಂಜಯ ಸ್ವಾಮಿಗಳು ಸಿಂದಗಿಯವರೊಡಗೊಂಡು ಶೀಲಗುಂದಕ್ಕೆ ತೆರಳಿದರು. ಮತ್ತು ಇಲ್ಲಿ ಶ್ರೀ ಗುಂಡಾಚಾರ್ಯ ಕಡಿವಾಲ ಶಿರೂರ ಇವರು ದಿನಾಲು ೬—೮ ರೊಳಗಾಗಿ ೨೫ ಗಿಡಗಳನ್ನು ಕಡಿದು ಬರುತ್ತಾರೆ

ಶಿಬಿರಾಧಿಪತಿ

ದೇಶಬಂಧು ಪಥಕ ಕೆರೂರ.

## “ಕಾನಡಾ ವೃತ್ತ”ಕ್ಕೆ ಕೆಲಕಾಲ ರಜೆ.

ಮಹನೀಯರೇ, ಮೊನ್ನೆ ಮಂಗಳವಾರ ಸಂಜೆಗೆ ನಮ್ಮ ‘ಕಾನಡಾ ವೃತ್ತ’ ಛಾಪಿಸುವ ‘ಸ್ಟಾರ ಆಫ ಕೆನರಾ ಪ್ರೆಸ್ಸಿ’ನ ಮೇಲೆ ಮುಂಬಯಿ ಗವ್ಹರ್ನರ—ಇನ್ ಕೌನ್ಸಿಲ್‌ರವರ ಅಪ್ಪಣೆಯು ಮೇರೆಗೆ ೧೩೦೦ ರೂಪಾಯಿಗಳ ಜಾಮೀನು ಕಟ್ಟಬೇಕೆಂಬ ಹುಕುಮು ಜಾರಿಯಾಗಿರುತ್ತದೆ. ನೂತನವಾಗಿ ಹೊರಡಿಸಿದ ಮುದ್ರಣ ಶಾಸನದ ಕಲಂ ೪ ಪೋಟ ಕಲಂ ೧ ನೇದರಲ್ಲಿ ನಮೂದಿಸಿದ ಆಕ್ಷೇಪಾರ್ಹ ಉದ್ದೇಶಗಳಿಗಾಗಿ ಈ ಛಾಪಖಾನೆಯು ಉಪಯೋಗವಾದದ್ದು ಗವ್ಹರ್ನರ—ಇನ್—ಕೌನ್ಸಿಲ್‌ರವರಿಗೆ ಕಂಡುಬಂದಿದೆಯಾಗಿ ಬರೆದದೆ ಕಾರಣ, ಅದೇ ಕಾನೂನಿನ ಕಲಂ ೩ ಪೋಟ ಕಲಂ ೩ ನೇದರನ್ವಯ ಮೇಲ್ಕಂಡಂತೆ ಜಾಮೀನು ತುಂಬುವ ಹುಕುಮು ಹೊರಡಿಸಲಾಗಿದೆ. ಆಕ್ಷೇಪ್ತ ಉದ್ದೇಶಗಳ್ಯಾವವೆಂದು ಬರೆದಿರುವದಿಲ್ಲ. ಸದ್ಯಕ್ಕೆ ಜಾಮೀನು ತುಂಬುವ ವಿಚಾರವಿಲ್ಲ; ಕಾರಣ, ಛಾಪಖಾನೆಯಲ್ಲಿ ಯಾವದೇ ಕೆಲಸ ಮಾಡಲಿಕ್ಕೆ ಪ್ರತಿಬಂಧವಿದೆ. ಆದ್ದರಿಂದ “ಕಾನಡಾ ವೃತ್ತ”ವು ನಿಯಮದಂತೆ ಹೊರಡಲಿಕ್ಕಿಲ್ಲ. ಅರಿಕೆಯಿರಬೇಕು.

‘ಕಾನಡಾ ವೃತ್ತ’ ಆಫೀಸು, ಕುಮಟಾ ೧೮-೬-೧೯೩೦ { ಪಾಂಡುರಂಗ ಕೃಷ್ಣ ಶ್ಯಾನಭಾಗ. ಮುದ್ರಕ, ಪ್ರಕಾಶಕ, ಸಂಪಾದಕ.

## ಸ್ಥಾನಿಕ ಸಂಸ್ಥೆಗಳಿಗೆ ಬೆದರಿಕೆ.

ರಾಷ್ಟ್ರಧ್ವಜವನ್ನು ಏರಿಸುವದು, ಶಿಕ್ಷೆಯಾದವರನ್ನು ಅಭಿನಂದಿಸುವದು. ಮತ್ತು ಶಾಲೆಯ ಹುಡುಗರ ಮೆರವಣಿಗೆಯನ್ನು ಹೊರಡಿಸುವದು ಇವೇ ಮೊದಲಾದ ರಾಷ್ಟ್ರೀಯ ಕಾರ್ಯಗಳಲ್ಲಿ ಸ್ಥಾನಿಕ ಸಂಸ್ಥೆಗಳು ಭಾಗ ತೆಗೆದುಕೊಳ್ಳಬಾರದು. ಒಂದು ವೇಳೆ ಹಾಗೆ ಮಾಡಿದರೆ ಆ ಸಂಸ್ಥೆಗಳನ್ನು ಸರಕಾರವು ರದ್ದುಪಡಿಸುವದು. ಇಲ್ಲವೆ ತನ್ನ ಕೈಯ್ಯಲ್ಲಿಯೇ ತೆಗೆದುಕೊಳ್ಳುವದು.

## ಇಂಗ್ಲೀಷ ಸ್ತ್ರೀಯು ಛೀ ಹಾಕಿದಳು.

ಶ್ರೀಮತಿ ಹಲಡೇ ಎಂಬವಳು ಆಂಗ್ಲ ಹೆಣ್ಣುಮಗಳು ಕ್ರಾನಿಕಲ್ ಪತ್ರದ ಪ್ರತಿನಿಧಿಗೆ ಭೆಟ್ಟಿಯಾಗಿ ಹೀಗೆ ಹೇಳಿದಳು:— ನಾನು ಕಾಂಗ್ರೆಸ ಆಸ್ಪತ್ರಿಗೆ ನೋಡಲಿಕ್ಕೆ ಹೋಗಿದ್ದೆನು. ಇಲ್ಲಿ ಗಾಯಹೊಂದಿ ಬಿದ್ದ ಆರು ಜನ ಸ್ತ್ರೀಯರನ್ನು ಕುರಿತು ವಿಚಾರಿಸಿದೆನು ಶ್ರೀಮತಿ ಗಂಗೂಬಾಯಿ ಜೋಶಿ ಎಂಬವಳು ತನಗೆ ಎದೆಯ ಮೇಲೆ ಹಾಗೂ ಹೊಟ್ಟೆಯ ಮೇಲೆ ಲಾಠೀ ಬಡಿತಗಳು ಬಿದ್ದಿವೆ ಎಂದು ಹೇಳಿದಳು. ಮೂರು ತಿಂಗಳ ಗರ್ಭಿಣಿಯಾದ ಒಬ್ಬ ಶೀಖ ಸ್ತ್ರೀಗೆ ಬಹಳೇ ಜಿಂತಾಜನಕ ಪೆಟ್ಟುಗಳು ತಾಗಿವೆ. ಕುದುರೆಗಳ ತುಳಿತಕ್ಕೆ ಸಿಕ್ಕ ಕೆಲವು ಜನರ ಮೇಲೆ ಕುದುರೆಯ ಖುರಗಳು ಮೂಡಿವೆ. ಡಾಕ್ಟರರು ಆ ಖುರಗಳು ಮೂಡಿದ್ದರ ಫೋಟೋ ತೆಗೆದಿರುವರು. ಅಹಿಂಸಾಮಯರಾದ ಶಾಂತರಾದ ಈ ಸ್ತ್ರೀಯರ ಮೇಲೆ ಹೀಗೆ ಏರಿ ಹೋದದ್ದಕ್ಕಾಗಿ ನಾನು ಒಬ್ಬ ಆಂಗ್ಲ ಸ್ತ್ರೀಯು ಅಧಿಕಾರಿಗಳಿಗೆ ಛೀ ಹಾಕುತ್ತೇನೆ.

ಇಲ್ಲಿಯ ಶ್ರೀ ಲಕ್ಷ್ಮಣ ಗುಳವಾಡಿ ಮತ್ತು ಧವಳೇಶ್ವರ ಇವರಿಗೆ ಶಿಕ್ಷೆಯಾಯಿತು.

೧೯ ನೇ ತಾರೀಖಿನ ದಿವಸ ಸೊಲ್ಲಾಪುರಕ್ಕೆ ರಾಷ್ಟ್ರೀಯ ನಿಶಾನೆಯ ಸತ್ಯಾಗ್ರಹಕ್ಕೆ ತೆರಳಿದ ಸ್ವಯಂಸೇವಕರಲ್ಲಿ ಶ್ರೀ ಗುಳವಾಡಿ ಮತ್ತು ಧವಳೇಶ್ವರ ಇವರಿಗೆ ಅನುಕ್ರಮವಾಗಿ ೯ ಮತ್ತು ೬ ತಿಂಗಳ ಸಶ್ರಮ ಶಿಕ್ಷೆ ವಿಧಿಸಲ್ಪಟ್ಟಿದೆ. ಇವರನ್ನು ವಿಜಾಪುರಕ್ಕೆ ತಂದಿರುವರಾಗಿ ತಿಳಿಯುತ್ತದೆ. ಇವರ ಜೊತೆಯಲ್ಲಿ ಹೋದ ಶ್ರೀ ಶಿದ್ಧಪ್ಪಾ ಹುಂಡೆ ಕಾರ ಇವರನ್ನು ಹಿಡಿದಿರುವರಾಗಿ ವಾರ್ತೆ.

## ದನಕರುಗಳ ಉಪವಾಸ

ಜೂನ ೧ ನೇ ತಾರೀಖಿನಿಂದ ಪೇಶಾವರ ಹದ್ದಿಯಲ್ಲಿಯ ಛಾಸಾದಾ ಮತ್ತು ಇನ್ನೆರಡು ಹಳ್ಳಿಗಳಲ್ಲಿ ದಂಡಿನಾಳಿಕೆಯು ನಡೆದಿದೆ. ಹೊರಗಿನಿಂದ ಒಳಗೆ ಬರಲಿಕ್ಕೂ, ಒಳಗಿನಿಂದ ಹೊರಗೆ ಹೋಗಲಿಕ್ಕೂ ದಂಡಿನ ಅಧಿಕಾರಿಗಳ ಅಪ್ಪಣೆಯ ಹೊರತು ಯಾರಿಗೂ ಅಧಿಕಾರವಲ್ಲ ದನಕರಗಳನ್ನು ಮೇಯಿಸುವ ಕೆಲಸಕ್ಕೂ ಸಹ ಅಡ್ಡಿಮಾಡಿರುವರು. ಹೊಟ್ಟೆ ಕಣಿಕೆ ಇಲ್ಲದೆ ದನಗಳನ್ನು ಎರಡು ದಿವಸ ಉಪವಾಸ ಕಟ್ಟಿರುವರು.

## ವ್ಹಾಯಿಸರಾಯರಿಗೆ ಪತ್ರಕರ್ತರ ಭೆಟ್ಟಿ

ರಂಗಸ್ವಾಮಿ ಅಯ್ಯಂಗಾರ ‘ಹಿಂದೂ’ ಪತ್ರದ ಸಂಪಾದಕರು, ಸಿ. ವಾಯ್. ಚಿಂತಾಮಣಿ ‘ಲೀಡರ’ ಪತ್ರದ ಸಂಪಾದಕರು ಹಾಗೂ ‘ಅಮೃತಬಝಾರ’ ಪತ್ರಿಕೆಯ ಸಂಪಾದಕರಾದ ಘೋಷ ಮೊದಲಾದವರು ವ್ಹಾಯಿಸರಾಯರಿಗೆ ಭೆಟ್ಟಿಯಾದರು. ಎರಡು ತಾಸುಗಳ ವರೆಗೆ ಅವರ ಮಾತುಕಥೆಗಳಾದವು. ಆದರೆ ಅವು ಹೊರಬಿದ್ದಿಲ್ಲ. ಅಂದರೆ ಬಾತ್ಮೀ ರಾಮಜಾನೆ.

# ಕಾಂಗ್ರೆಸದ ಮೇಲೆ ಸರಕಾರದ ಗದೆ

ಮದ್ರಾಸ ಸರಕಾರದವರು ಆಂಧ್ರ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಕಾಯಿದೆಗೆ ವಿರುದ್ಧವಾಗಿದೆಯೆಂದು ಹೊಸದಾಗಿ ಪ್ರಸಿದ್ಧಮಾಡಿರುವರು. ಮತ್ತು ಗುಂಟೂರ, ಪೂರ್ವಕೃಷ್ಣಾ, ಪಶ್ಚಿಮಕೃಷ್ಣಾ, ಪಶ್ಚಿಮ ಗೋದಾವರಿ ಹಾಗೂ ವಿಝಗಾಪಟ್ಟಣ ಜಿಲ್ಲೆಯ ಕಾಂಗ್ರೆಸ್ ಮಂಡಳಗಳೂ ಕಾಯಿದೆಗೆ ವಿರುದ್ಧವಾಗಿವೆ ಯೆಂದು ಪ್ರಕಟಮಾಡಿರುವರು.

## ಮುಂಬಯಿ ಕೌನ್ಸಿಲದಲ್ಲಿ ಖಾದಿಯು

ಜುಲೈ ೭ ನೇ ತಾರೀಖಿಗೆ ಪುಣೆಯಲ್ಲಿ ಕೂಡುವ ಮುಂಬಯಿ ಕಾಯಿದೆ ಕೌನ್ಸಿಲದಲ್ಲಿ ಶ್ರೀ ಬಲೂಚ ಇವರು ಕೆಳಗಿನ ಮೂರು ಠರಾವುಗಳನ್ನು ತರುವವರಿದ್ದಾರೆ.

(೧) ಈ ಸಭೆಯು ಸರಕಾರವು ಇನ್ನು ಮೇಲೆ ಯಾವತ್ತು ಅಧಿಕಾರಿಗಳಿಗೆ ಕೇವಲ ಖಾದಿ ಉಡುಪುಗಳನ್ನೇ ಕೊಡಬೇಕೆಂದು ಸೂಚಿಸುತ್ತದೆ.

(೨) ಈ ಸಭೆಯು ಸರಕಾರವು ತನ್ನ ಕೈಕೆಳಗಿನ ಎಲ್ಲ ಅಧಿಕಾರಿಗಳಿಗೆ ಕೆಲಸದಮೇಲಿದ್ದಾಗ ಸ್ವದೇಶೀ ವಸ್ತ್ರಗಳನ್ನಷ್ಟೆ ಹಾಕಿಕೊಳ್ಳಲಿಕ್ಕೆ ಆಜ್ಞೆ ಮಾಡಬೇಕೆಂದು ಸೂಚಿಸುತ್ತದೆ.

(೩) ಈ ಸಭೆಯು ಮುಂಬಯಿ ಸರಕಾರಕ್ಕೆ ಉಪ್ಪಿನ ಮೇಲಿನ ಕರವನ್ನು ಮತ್ತು ಕಾಯಿದೆಯನ್ನು ಕೂಡಲೇ ತೆಗೆದುಹಾಕಬೇಕೆಂದು ವ್ಹಾಯಿಸರಾಯರಿಗೆ ತಿಳಿಸಲಿಕ್ಕೆ ಕೇಳಿಕೊಳ್ಳುತ್ತದೆ.

## ಪೆನ್‍ಶನ್‍ದಾರರ ಮೇಲೆ ಆಸಾಮ ಸರಕಾರದ ವಕ್ರದೃಷ್ಟಿ

ಆಸಾಮ ಸರಕಾರದವರು ಪೆನ್‍ಶನ್‍ದಾರರು ಮತ್ತು ಸರಕಾರೀ ಅಧಿಕಾರಿಗಳು ಯಾವದೇ ರೀತಿಯಿಂದ ಸತ್ಯಾಗ್ರಹ ಚಳವಳಿಯಲ್ಲಿ ಭಾಗ ತೆಗೆದುಕೊಳ್ಳಕೂಡದೆಂದು ಕಟ್ಟಪ್ಪಣೆ ಮಾಡಿದ್ದಾರೆ. ಸಾರ್ವಜನಿಕ ಸಭೆಗೆ ಕೂಡ ಹೋಗಕೂಡದೆಂದು ನಿರ್ಬಂಧವಿದೆಯಂತೆ ಹಾಗೆಮಾಡಿದಲ್ಲಿ ಪೆನ್‍ಶನ್‍ದಾರರ ಅರ್ಧ ಅಥವಾ ಪೂರ್ಣ ಧಕ್ಕೆ ಬರುವದೆಂದು ಅಂಜಿಕೆ ಹಾಕಿದ್ದಾರೆ. ಅಂತೂ ಸರಕಾರದವರು ಮುದುಕರನ್ನೂ ಬಿಡಲಿಲ್ಲ.

## ಸರಕಾರಿ ಅಧಿಕಾರಸ್ಥರು

## ಲಾಠೀಹಲ್ಲೆಯನ್ನು ನಿರೀಕ್ಷಿಸಿದರು

೬೦ ರಿಂದ ೭೦ ವರೆಗೆ ಸ್ವಯಂಸೇವಕರು ಗಾಯಹೊಂದಿದ್ದಾರೆ

ರಾಷ್ಟ್ರೀಯ ನಿಶಾನೆಯು ಕಿತ್ತಿ ಒಗೆಯಲ್ಪಟ್ಟಿತು.

ಗುಂಟೂರದಲ್ಲಿ ಮುಂಜಾನೆ ೭॥ ಗಂಟೆಗೆ, ಅನೇಕ ಸಿಪಾಯಿಗಳು ಮತ್ತು ಫೌಜದಾರರೊಡನೆ, ಇನಸ್ಪೇಕ್ಟರ ಸಾಹೇಬರು ಸತ್ಯಾಗ್ರಹ ಶಿಬಿರಕ್ಕೆ ಆಗಮಿಸಿ, ೧೪೪ ನೇ ಕಲಮಿನನ್ವಯ ತೆಗೆದ ಹುಕುಮನ್ನು ಓದಿದರು. ೨ ತಿಂಗಳ ಮಟ್ಟಿಗೆ ಗುಂಟೂರ ಶಹರದಲ್ಲಿ ಐದು ಮೈಲು ಅಂತರದ ವರೆಗೆ ಸಭೆ ಸೇರಿಸಲಾಗದೆಂದೂ ಮೆರವಣಿಗೆ ಹೊರಡಿಸಲಾಗದೆಂತಲೂ ಆ ಹುಕುಮಿನ ಆಶಯವಾಗಿತ್ತು. ಸಾಹೇಬ ಬಹದ್ದೂರರು ಆ ಸ್ಥಳದಿಂದ ಬಿಟ್ಟು ಹೋಗಲು ಸ್ವಯಂಸೇವಕರಿಗೆ ಹೇಳಿಕೊಳ್ಳಲು, ಅವರು ನಿರಾಕರಿಸಿದರು. ನಂತರ ೨೦ ಮಿನಿಟುಗಳ ಅವಧಿಯಲ್ಲಿಯೇ ಸಶಸ್ತ್ರ ಪೋಲೀಸ ಸಿಪಾಯಿರನ್ನು ತುಂಬಿಕೊಂಡ ಐದು ಮೋಟಾರುಗಳು ಅಲ್ಲಿಗೆ ತಲುಪಿದವು. ಅಷ್ಟರಲ್ಲಿಯೇ ಪೋಲೀಸ ಸುಪರಿಂಟೆಂಡಂಟರು ಮತ್ತು ಕಲೇಕ್ಟರ ಸಾಹೇಬರೂ ಆಗಮಿಸಿ, ಶಿಬಿರಾಧಿಪತಿಯಾದ ಶ್ರೀ ಚಂದ್ರಮೌಳಿಯವರನ್ನು ಭೆಟ್ಟಿಯಾಗಿ, ಸ್ವಯಂಸೇವಕರಿಗೆ ಈ ಸ್ಥಳವನ್ನು ಬಿಟ್ಟು ಹೋಗಲಿಕ್ಕೆ ಹೇಳಲು ಕೇಳಿಕೊಂಡರು. ಆದರೆ ಶಿಬಿರಾಧಿಪತಿಗಳು ಇದಕ್ಕೆ ಒಪ್ಪದ್ದರಿಂದ, ಸುಪರಿಂಟೆಂಡಂಟರು ಶಕ್ತಿಯ ಉಪಯೋಗವನ್ನು ಮಾಡುವೆವೆಂದು ಹೇಳಿದರು. ಇತ್ತ ಸ್ವಯಂಸೇವಕರು ರಾಮಭಜನೆಯ ಗೀತಗಳನ್ನು ಹಾಡುತ್ತ ಕುಳಿತುಕೊಂಡರು. ಇದನ್ನೆಲ್ಲವನ್ನು ನಿರೀಕ್ಷಿಸಿ ಲಾಠೀ ಉಪಯೋಗವನ್ನು ಸ್ವಯಂಸೇವಕರಮೇಲೆ ಮಾಡಲು ಕಲೇಕ್ಟರ ಸಾಹೇಬರ ಆಜ್ಞೆಯು ಆಗಲೇ ಕೊಡಲಾಯಿತು. ಈ ಪೋಲೀಸರ ಹಲ್ಲೆಯಲ್ಲಿ ಕೆಲವು ಸ್ತ್ರೀ ಸ್ವಯಂಸೇವಿಕೆಯರನ್ನು ನೂಗಿಸಿದರೆಂದೂ, ಶ್ರೀ ಚಂದ್ರಮೌಳಿಯವರನ್ನು ಕುತ್ತಿಗೆಯಮೇಲೆ ಕೈಕೊಟ್ಟು ದೂಡಿದರೆಂದು ತಿಳಿಯುತ್ತದೆ. ಈ ಲಾಠೀಹಲ್ಲೆಯಲ್ಲಿ ಬಹಳ ಸ್ವಯಂಸೇವಕರು ಗಾಯಹೊಂದಿದ್ದು, ಒಟ್ಟಾರೆ ೬೦ ರಿಂದ ೭೦ ರ ವರೆಗೆ ಇರಬಹುದಾಗಿ ಅಂದಾಜಾಗಿದೆ. ಇವರಲ್ಲಿ ೧೫ ಜನರು ಜೇಲಿಗೆ ಒಯ್ಯಲ್ಪಟ್ಟು ಖಾಸಗಿ ಡಾಕ್ಟರರಿಂದ ಉಪಚಾರ ಹೊಂದುತ್ತಲಿದ್ದಾರೆ. ಸಧ್ಯಕ್ಕೆ ಸತ್ಯಾಗ್ರಹ ಶಿಬಿರವು ಪೋಲೀಸರ ವಶದಲ್ಲಿದ್ದು, ಅಲ್ಲಿಯ ರಾಷ್ಟ್ರೀಯ ನಿಶಾನೆಯು ಕಿತ್ತಿ ಒಗೆಯಲ್ಪಟ್ಟಿದೆ.

## ದೇಶಸೇವಿಕೆಯರ ಪ್ರಶಂಸೆಯು

ಮಾಧವ ಭಾಗದಲ್ಲಿ ಮೋತೀಬಾಲರು "ಸ್ವಾತಂತ್ರ್ಯ ಯುದ್ಧದಲ್ಲಿ ಸ್ತ್ರೀಯರ ಕರ್ತವ್ಯ" ಈ ವಿಷಯದ ಮೇಲೆ ವ್ಯಾಖ್ಯಾನ ಕೊಟ್ಟರು. ಹಿಂದೂ ಮುಸಲ್ಮಾನ ಪಾರ್ಸಿ ಮುಂತಾದ ಎಲ್ಲ ಜಾತಿಯ ಐದು ಸಾವಿರ ಹೆಣ್ಣುಮಕ್ಕಳು ಸಭೆಗೆ ಆಗಮಿಸಿದ್ದರು. ಸಧ್ಯದ ಯುದ್ಧವು ಜಗತ್ತಿನ ಇತಿಹಾಸದಲ್ಲಿಯ ಒಂದು ಅಸಾಧಾರಣವಾದ ಸಂಗತಿಯಾಗಿದೆ. ಸ್ವಾರ್ಥತ್ಯಾಗಿಗಳಾದ ಅಸಂಖ್ಯ ಸತ್ಯಾಗ್ರಹಿಗಳನ್ನು ಅಭಿನಂದಿಸಿ, ದೇಶಸೇವಿಕಾ ಸಂಘದವರು ಮಾಡಿದ ಮಹತ್ಕಾರ್ಯವನ್ನೂ ಪ್ರಶಂಸಿಸಿದರು. ಈ ಯುದ್ಧದಲ್ಲಿ ಪ್ರತ್ಯಕ್ಷವಾಗಿ ಭಾಗ ತೆಗೆದುಕೊಳ್ಳಲಿಕ್ಕಾಗದ ಸ್ತ್ರೀಯರು ನೂಲುವದು ಹಾಗೂ ಸ್ವದೇಶೀ ಪ್ರಚಾರ ಮಾಡುವದೂ ಈ ಮೊದಲಾದ ಕಾರ್ಯಗಳಿಂದ ಸಹಾಯ ಮಾಡಬೇಕಾಗಿ ಉಪದೇಶಿಸಿದರು. ಗಂಡಸರಷ್ಟೇ ಹೆಂಗಸರಾದರೂ ಈ ಸ್ವಾತಂತ್ರ್ಯಯುದ್ಧದಲ್ಲಿ ಭಾಗ ವಹಿಸತಕ್ಕದ್ದೆಂದೂ ಹೇಳಿದರು.

## ಸಾಯಮನ್ ಸಪ್ತಕದ ವರದಿಯ ಸಾರ

[ಹಿಂದಿನಿಂದ ಮುಂದುವರಿದುದು]

### ಶಿಕ್ಷಣ ಪ್ರಸಾರ

ಶಿಕ್ಷಣದ ವಿಷಯವಾಗಿ ಹೊರ್ಟಾಗ ಮಂಡಳದವರು ಮಾಡಿದ ಸೂಚನೆಗಳು ನಮಗೆ ಮಾನ್ಯವಿವೆ. ಸುಧಾರಣೆಯ ಕಾಯಿದೆಯು ಜಾರಿಯಲ್ಲಿ ಬಂದಂದಿನಿಂದ ಶಿಕ್ಷಣ ವಿಷಯದಲ್ಲಿ ವಿಲಕ್ಷಣ ಪ್ರಗತಿಯಾಗಿದೆ. ಮತ್ತು ಶಿಕ್ಷಣ ಖಾತೆಗಾಗಿ ರೊಕ್ಕವಾದರೂ ಬಹಳ ವೆಚ್ಚವಾಗಿದೆ. ೧೯೨೨-೨೩ ನೆಯ ವರ್ಷದಲ್ಲಿ ಬ್ರಿಟಿಶ ಹಿಂದುಸ್ಥಾನದಲ್ಲಿ ಮೊದಲನೆಯ ವರ್ಗದಲ್ಲಿ ೩೦ ಲಕ್ಷ ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಅವರಲ್ಲಿ ೬೫೪೧೧ ವಿದ್ಯಾರ್ಥಿಗಳು ಮಾತ್ರ ೪ ನೆಯ ವರ್ಗದ ವರೆಗೆ ಮುಟ್ಟಿರುವರೆಂದು ೧೯೨೫-೨೬ ನೆಯ ವರ್ಷದಲ್ಲಿ ಕಂಡುಬಂದಿತು. ಉಳಿದ ಹುಡುಗರಲ್ಲಿ ಕೆಲವರು ಶಾಲೆಗಳನ್ನು ಬಿಟ್ಟು ಹೋದರು. ಕೆಲವರು ಕೆಳಗಿನ ವರ್ಗಗಳಲ್ಲಿ ಉಳಿದರು. ಬಾಲಕಿಯರ ಶಿಕ್ಷಣದ ವಿಷಯವಂತೂ ಇದಕ್ಕೂ ನಿರಾಶಾಜನಕವಾಗಿದೆ. ಅವರ ಸಲುವಾಗಿ ವೆಚ್ಚ ಮಾಡಿದ ಹಣವೂ ಮತ್ತು ಅವರ ಸಲುವಾಗಿ ತೆಗೆದುಕೊಂಡ ಶ್ರಮವೂ ನಿರರ್ಥಕವಾದವು.

ಯುರೋಪಿಯನ್ನರಂತೆ ತಮ್ಮನ್ನೂ ನಡಿಸಿಕೊಳ್ಳಬೇಕೆಂದೂ, ಪಕ್ಷಪಾತವು ಎಲ್ಲೆಲ್ಲಿಯೂ ದೃಷ್ಟಿಗೆ ಬೀಳತಕ್ಕದ್ದಲ್ಲವೆಂದೂ ಹಿಂದೂ ಜನರು ಬಯಸುತ್ತಿದ್ದಾರೆ. ಬ್ರಿಟಿಶರಿಗೆ ಸ್ವರಾಜ್ಯ ಚಳವಳಿಯಲ್ಲಿ ಸಹಾನುಭೂತಿಯುಂಟು. ಹಿಂದುಸ್ಥಾನದ ಹಿತಕ್ಕಾಗಿಯೇ ನಾವು ಟೊಂಕಕಟ್ಟಿದ್ದೇವೆ. ಅದರ ಸಲುವಾಗಿ ವಿಧಾಯಕ ಕಾರ್ಯಕ್ರಮಗಳೂ ನಡೆದಿವೆ. ಹಿಂದೂ ಜನರು ಹಳೇ ಸಾಮಾಜಿಕ ಮತ್ತು ಆರ್ಥಿಕ ರೀತಿನೀತಿಗಳನ್ನು ಬಿಟ್ಟುಬಿಡಬೇಕು. ಹಿಂದುಸ್ಥಾನದಲ್ಲಿಯ ಜನರು ಈಗ ತಾವು ತೋರಿಸುವ ಶಕ್ತಿಯನ್ನು ಈ ಸುಧಾರಣೆಯ ವಿಷಯದಲ್ಲಿ ಉಪಯೋಗಿಸಿದರೆ ಅದರಿಂದ ಅವರಿಗೆ ಹಿತವುಂಟು

## ಪಂ. ಮೋತೀಲಾಲರ ಮೇಲೆ ಪಠಾಣನ ಪೂಜ್ಯಬುದ್ಧಿ

ಪಂಡಿತ ಮೋತೀಲಾಲರು ಪೇಶಾವರ ಸೀಮೆಯಲ್ಲಿಯ ಒಂದು ಹಳ್ಳಿಯಲ್ಲಿ ಹೋಗಿದ್ದರು. ಆಗ್ಗೆ ಒಬ್ಬ ಪ್ರಮುಖ ಪಠಾಣನು ಇವರು ಯಾರೆಂಬ ಬಗ್ಗೆ ತನ್ನ ಗೆಳೆಯನನ್ನು ಕೇಳಿದನು. ಇವರು ಪಂಡಿತ ಮೋತೀಲಾಲರೆಂದು ಅವನ ಗೆಳೆಯನು ಹೇಳಿದನು. ರಾಷ್ಟ್ರದ ತರುಣ ಮುಂದಾಳುವಾದ ಜವಾಹಿರಲಾಲರೆಂದು ಆ ಪಠಾಣನು ಊಹಿಸಿ ಅವರನ್ನು ಆನಂದದ ಭರದಲ್ಲಿ ಎತ್ತಿಕೊಂಡನು. ಆದರೆ ಮುದುಕರಾದ ಅವರನ್ನು ನೋಡಿ ಹಿಂಜರಿದನು. ಅವರು ಜವಾಹಿರಲಾಲರ ತಂದೆಯೆಂದು ತಿಳಿದ ಕೂಡಲೆ ಪುನಃ ಅವರನ್ನು ಎತ್ತಿ ಅಪ್ಪಿಕೊಂಡನು. ಮಹಾಪುರುಷರನ್ನು ನೋಡಿ ಎಂಥವರಿಗಾದರೂ ಪೂಜ್ಯಬುದ್ಧಿಯು ಹುಟ್ಟುವದು.

## ಸತ್ಯಾಗ್ರಹಿಯಾಗಿ ಯುದ್ಧಮಾಡು

ಮೋತೀಲಾಲರು ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮಿಟಿಯನ್ನು ನೋಡಲು ಹೋಗಿದ್ದರು. ಆಗ್ಗೆ "ಇನ್ನು ಮುಂದೆ ಕಾಂಗ್ರೆಸ್ಸು ಯುದ್ಧವನ್ನು ಹೆಚ್ಚು ಜೋರಿನಿಂದ ನಡಿಸುವದು. ನೀವೆಲ್ಲರೂ ಇದಕ್ಕೂ ಹೆಚ್ಚು ಸ್ವಾರ್ಥತ್ಯಾಗ ಮಾಡಬೇಕಾಗುವದು. ಸತ್ಯಾಗ್ರಹಿಗಳಾಗಿ ಯುದ್ಧಮಾಡುವ ಜನರೇ ಕಮಿಟಿಯಲ್ಲಿ ಇರತಕ್ಕದ್ದು" ಎಂದು ಹೇಳಿದರು. 'ಸರಕಾರದ ಕೂಡ ಒಪ್ಪಂದ ಮಾಡಿಕೊಳ್ಳಲು ಕೆಲವು ಮುಂದಾಳುಗಳು ಹವಣಿಸುತ್ತಿರುವದು ನಿಜವೋ?' ಎಂದು ಅವರಿಗೆ ಪ್ರಶ್ನೆಮಾಡಿದರು. ಅದಕ್ಕೆ- 'ಈ ಮುಂದಾಳುಗಳು ಯಾರು ನನಗೇನೂ ಗೊತ್ತಿಲ್ಲ. ನಾನಂತೂ ಹೀಗೆ ಮಾಡುವದಿಲ್ಲವೆಂದು ನಿಶ್ಚಯವಾಗಿ ಹೇಳುತ್ತೇನೆ. ನಮ್ಮ ರಾಷ್ಟ್ರಸಭೆಯು ಆಜ್ಞೆಯ ಪ್ರಕಾರ ನಾನು ಒಪ್ಪಂದ ಮಾಡಿಕೊಳ್ಳದಿದ್ದರೆ, ಹಾಗೆ ಮಾಡಲಿಕ್ಕೆ ಬೇರೆ ಯಾರಿಗೂ ಅಧಿಕಾರವೇ ಇಲ್ಲ' ಎಂದು ಅಂದರು.

## ಹಜಾಮನಿಗೆ ೩೫೦೦೦ ರೂ. ಬೆಲೆ

ಬಾಯಿ ಲಕ್ಷ್ಮೀಬಾಯಿ ಎಂಬ ಹಜಾಮನ ಹೆಂಡತಿಯು ತನ್ನ ಗಂಡನ ಮೇಲೆ ಮೋಟಾರ ಹಾಯಿಸಿದ್ದಕ್ಕಾಗಿ ಬೆಜೊರಸ್ತುಮಜಿ ಕಪಾಡಿಯಾ ಮತ್ತು ಏ ನೋಶಹ ಅಹಿರದಲಾಲ ಎಂಬ ಪಾರ್ಶಿ ಗೃಹಸ್ಥರ ಮೇಲೆ ೩೫೦೦೦ ರೂ. ಗಳ ಖಟ್ಲೆ ಮಾಡಿದಳು. ಹೈಕೋರ್ಟಿನಲ್ಲಿ ಜಸ್ಟೀಸ್ ಮಿರ್ಜಾ ಇವರ ಕಡೆಗೆ ಖಟ್ಲೆಯು ನಡೆದು, ೬೦೦೦ ರೂ. ಲುಕ್ಸಾನ ಮತ್ತು ೩೦೦೦ ರೂ. ಖರ್ಚು ಕೊಡಿಸಲಾಯಿತು.

## ಊಟ ಕೊಡದಿದ್ದರೆ ಲಾಠೀ ಹೊಡತ

ಝೂಮನ ಎಂಬ ಹಳ್ಳಿಯಲ್ಲಿ ಅಲ್ಲಿಯ ಜನರು ಪೋಲೀಸರಿಗೆ ತಿನ್ನುವ ಪದಾರ್ಥಗಳನ್ನು ಮಾರಾಟಕ್ಕೆ ಕೊಡಲಿಲ್ಲ. ಅದಕ್ಕಾಗಿ ಪೋಲೀಸರು ಆ ಹಳ್ಳೀ ಜನರನ್ನು ಲಾಠಿಗಳಿಂದ ಹೊಡೆದರಂತೆ! ನೂರಾರು ಜನರಿಗೆ ಗಾಯಗಳಾಗಿವೆ. ಐದಾರು ಜನರ ಸ್ಥಿತಿಯು ಚಿಂತಾಜನಕವಾಗಿದೆ.

ಶ್ರೀ ಮಹಾಲಕ್ಷ್ಮೀ ಪ್ರಸಾದಿಕ
ಶಿರಹಟ್ಟಿ ನಾಟಕ ಮಂಡಳಿಯವರು
ಬಾಗಲಕೋಟೆ ಶಿವಾನಂದ ನಾಟಕ ಶಾಲೆಯಲ್ಲಿ
ಬುಧವಾರ ತಾ|| ೨೫—೬—೩೦ ದಿವಸ
ತಮ್ಮ ಲೋಕಪ್ರಿಯವಾದ
**ಶಿವಲೀಲಾ**
ಶುಕ್ರವಾರ ತಾ|| ೨೭-೬-೩೦
**ಲಂಕಾದಹನ**
ಎಂಬ ನಾಟಕಗಳನ್ನಭಿನಯಿಸುವರು.
ಎಚ್. ವೆಂಕೋಬರಾವ
ಪ್ರೊಪ್ರಾಯಿಟರ.

ಈ ಪತ್ರಿಕೆಯು ವಕೀಲರಾದ ಅಣ್ಣಾರಾವ ಮಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ... ತಾ|| ... ಯಲ್ಲಿ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

ಜಯ ಕರ್ನಾಟಕ

यथत परवशं दुःखं । यथदात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.
ಬುಧವಾರದ ಹೊರ್ತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಗುರುವಾರ ಮಿತಿ ಜೇಷ್ಠ ಬಹುಳ ೩೦ ಶಕೆ ೧೮೫೨ ತಾ॥ ೨೬—೬—೩೦ [ಸಂಚಿಕೆ ೮೪

## ಹುಬ್ಬಳ್ಳಿ ಮುನಸಿಪಾಲಟಿಯ ಮೇಲೆ ರಾಷ್ಟ್ರಧ್ವಜಾರೋಹಣವು.

ಮೊನ್ನೆ ಶನಿವಾರ ದಿವಸ ಸಂಜೆಯ ೭ ಗಂಟೆಗೆ ಕರ್ನಾಟಕ ಪ್ರೆಸ್ಸಿನಲ್ಲಿ ಜಾಹೀರ ಸಭೆಯು ಕೂಡಿತ್ತು. ಹುಬ್ಬಳ್ಳಿಯ ಮುನಸಿಪಾಲಟಿಯ ಮೇಲೆ ರಾಷ್ಟ್ರಧ್ವಜವನ್ನೇರಿಸುವ ಮಹತ್ವದ ಪ್ರಶ್ನೆಯಬಗ್ಗೆ ಡಾ॥ ಹರ್ಡೀಕರರು ಭಾಷಣ ಮಾಡುವರಿದ್ದದರಿಂದ ಸಾವಿರಾರು ಜನರು ಕೂಡಿದ್ದರು ಸಭೆಯ ಕೆಲಸವು ಸುರುವಾದ ಕೂಡಲೇ ಮಳೆಯೂ ಸುರುವಾಯಿತು. ಪ್ರೇಕ್ಷಕರು ತೊಯಿಸಿಕೊಳ್ಳುತ್ತ ನಿಂತಲ್ಲಿಯೇ ತಿ ತಾಸಿನವರೆಗೆ ನಿಂತದ್ದು ನೋಡಿದರೆ ಹುಬ್ಬಳ್ಳಿ ಮುನಸಿಪಾಲಟಿಯ ಮೇಲೆ ರಾಷ್ಟ್ರಧ್ವಜವನ್ನೇರಿಸುವ ಪ್ರಯತ್ನವು ಎಷ್ಟು ಮಹತ್ವದ್ದಿದೆ ಎಂದು ಕಂಡು ಬರುತ್ತಿತ್ತು. ಮಳೆಯ ಕಳಕಳಗಳ ಒಂದರ ಮೇಲೊಂದು ಹೊಡೆದರೂ ವ್ಯಾಖ್ಯಾತರಾದ ಡಾ॥ ಹಾರ್ಡೀಕರ ರು ಪಂದೇಶೀ ಕೊಡೆಯನ್ನು ಹಿಡಿಯದೆ ಹಾಗೆ ಮಳೆಯಲ್ಲಿ ಭಾಷಣಮಾಡಿದರು— “ ಊರಲ್ಲಿ ಈ ರಾಷ್ಟ್ರಧ್ವಜಾರೋಹಣದ ಬಗ್ಗೆ ಒಳ್ಳೇ ಚಳವಳಿಯು ನಡೆದಿದೆ. ನಾನು ಊರಲ್ಲಿಲ್ಲದಾಗ್ಗೆ ಮೊನ್ನೆ ೧೬ ನೇ ತಾರೀಖಿನ ಕಾಟನಮಾರ್ಕೆಟದಲ್ಲಿ ಶ್ರೀ ಪಾವಟೆ ವಕೀಲರ ಅಧ್ಯಕ್ಷತೆಯಲ್ಲಿ ಆದ ಸಭೆಯ ಬಗ್ಗೆ ನಾನು ಕೇಳಿದ್ದೇನೆ. ಹಾಗು ಇಲ್ಲಿಯ ವೃತ್ತಪತ್ರಿಕೆಯಲ್ಲಿ ಬರೆದು ಬಂದ ಯಾವತ್ತು ಸಂಗತಿಗಳನ್ನು ಓದಿದ್ದೇನೆ. ಇವೆಲ್ಲವುಗಳ ಮೇಲಿಂದ ವಿಚಾರ ಮಾಡಲಾಗಿ ಕೆಲವು ತಪ್ಪು ತಿಳುವಳಿಕೆಗಳು ಇದ್ದಂತೆ ಗೊಂದಲಕ್ಕೆ ಕಾರಣವಾಗಿವೆ. ನಾಗಪೂರದಲ್ಲಿ ಆದ [ ಕಳೆದಗಡಲ್ಲಿ ] ಸತ್ಯಾಗ್ರಹದಲ್ಲಿ ನಾನೂ ಭಾಗ ತೆಗೆದುಕೊಂಡಿದ್ದೆ ನನ್ನ ಸಂಗಡ ಇಲ್ಲಿಯವರು ಕರ್ನಾಟಕದವರೂ ಆದ ೫೦ ಜನ ವೀರರು ಸೆರೆಮನೆಯನ್ನು ಸೇರಿದಂಥವರು ಇಂದಿಗೆ ಜೀವಂತ ಇದ್ದಾರೆ ಪ್ರತಿಯೊಂದು ರಾಷ್ಟ್ರಕ್ಕೆ ಅದರ ಧ್ವಜವು ಬೇಕು. ಧ್ವಜವಿಲ್ಲದೆ, ಅದು ರಾಷ್ಟ್ರವಲ್ಲ ಅದ್ದರಿಂದ ಹುಬ್ಬಳ್ಳಿಯ ಮುನಸಿಪಾಲಟಿಯಂಥ ಸ್ಥಾನಿಕ ಸಂಸ್ಥೆಯ ಮೇಲೆ ಈ ಧ್ವಜವನ್ನು ನಿಲ್ಲಿಸಲು ಅಡ್ಡಿ ಇದ್ದಿಲ್ಲ. ಆದರೆ ನಗರಾಧ್ಯಕ್ಷರು — “ ಮಿ॥ ಪುರಾಣಿಕ”, ಮಿ॥ ಕೆಂಪಣ್ಣವರ ಮೊದಲಾದವರು ೧೫—೪—೧೯೩೦ ದಿವಸದ ಸಭೆಯಲ್ಲಿ ನಗರಾಧ್ಯಕ್ಷರಿಗೆ ಆಡಿದ ಕೆಲವು ಮಾತುಗಳ ಬಗ್ಗೆ ಅವರು ಕ್ಷಮೆ ಬೇಡಲಿ ಅಂದರೆ ರಾಷ್ಟ್ರಧ್ವಜವನ್ನೇರಿಸೋಣವೆಂದು ಅಂದರು ಇದು ರಾಜಕಾರಣದವರಿಗೆ ಭೂಷಣವಲ್ಲ ನಾವು ಅನೇಕ ಸಾರೆ ಕಾಂಗ್ರೆಸ ಕಮೀಟಿಯ ವತಿಯಿಂದ ರಾಷ್ಟ್ರಧ್ವಜದ ಬಗ್ಗೆ ವಿನಂತಿ ಮಾಡಿಕೊಂಡೆವು ೧೫ನೇ ಎಪ್ರೀಲ ತಿಂಗಳದಲ್ಲಾದ ಠರಾವನ್ನು ಮುನಸಿಪಾಲಟಿಗೆ ಕಳಿಸಿದೆವು ಯಾವದಕ್ಕೂ ಉತ್ತರವಿಲ್ಲ ಹೀಗಾದ ಮೇಲೆ ನಾವು ಹೇಗೆ ಕೆಲಸ ಸಾಗಿಸಬೇಕು, ಸಾರ್ವಜನಿಕ ಕೆಲಸದ ಬಗ್ಗೆ ವಿನಂತಿ ಪತ್ರಗಳ ಮುಖಾಂತರ ಕೇಳಿಕೊಂಡರ ಕೂಡಲೆ ಉತ್ತರ ಬರೆಯುವದು ಸಭ್ಯಗೃಹಸ್ಥರ ಲಕ್ಷಣವು, ನಾವು ನಮ್ಮೊಳಗೆ ಬಡಿದಾಡ ಹತ್ತುವದು ಯೋಗ್ಯವಲ್ಲ. ನಾವು ಈಗ ನಮ್ಮ ವೈರಿಗಳಾದವರ ಸಂಗಡ ಯುದ್ಧ ಮಾಡಬೇಕಾಗಿದೆ ! ನಾವು ಅರಿತುಕೊಳ್ಳಬೇಕು, ನಮ್ಮವರೇ ಆದ ಸಭಾಸದರ ಸಂಗಡ ಜಗಳಾಡುವದು ಬೇಡ. ಮುನಸಿಪಾಲಟಿ ಸಭಾಸದರು ತಾವೇ ಈ ಪ್ರಶ್ನವನ್ನು ತೀರಿಸಿದ್ದರೆ ನೆಟ್ಟಗಿತ್ತು, ಅದರಿಂದ ಯಾವದೂ ನಿಶ್ಚಿತವಾದ ಧೋರಣ ಬಾರದ್ದರಿಂದ ಇಷ್ಟೊಂದು ಚರ್ಚೆಗೆ ದಾರಿ ಬೇಕಾಯಿತು. ಅಷ್ಟರಲ್ಲಿ ಮಿ॥ ಸಾತಪ್ಪಾ ಕೆಂಚದಾನಪೂರ, ಮಿ॥ ವೀರಪ್ಪಾ ಚನ್ನೂರ ಇವರು ಈ ಪ್ರಶ್ನವನ್ನು ನಾಳೆ ೨೭ ನೇ ತಾರೀಖಿನ ಮುನಸಿಪಾಲಟಿ ಮೀಟಿಂಗಿನಲ್ಲಿ ಚರ್ಚೆಗೆ ಇಟ್ಟಿದ್ದಾರೆ. ಅದು ನಾಳೆ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗುವದೆಂದು ಹೇಳಿದರು

## ಮಿ॥ ಸಾತಪ್ಪನವರ ಭಾಷಣ

ಮುನಸಿಪಾಲಟಿಯ ಮೇಲೆ ರಾಷ್ಟ್ರಧ್ವಜವನ್ನೇರಿಸುವ ಬಗ್ಗೆ ನಿಮಗೆಷ್ಟು ಅಭಿಮಾನವಿದೆಯೋ ಅಷ್ಟೇ ಅಭಿಮಾನವು ನಮಗೂ ಅದೆ. ನಾನು ಶ್ರೀ ಪಾವಟೆ ವಕೀಲರ ಸಂಗಡ ರಾ. ಬ. ಕಂಬಳಿಯವರ ಮನೆಗೆ ಹೋಗಿ ಯಾವತ್ತೂ ಸಂಗತಿಯನ್ನು ತಿಳಿಸಿದ್ದೇನೆ. ರಾವಬಹಾದ್ದೂರರಾದ ಈ ವಿಲಾಯತಿಯವರಲ್ಲ ಅವರೂ ಇಲ್ಲೇ ಜನಿಸಿದವರು ಅವರಿಗಾದರೂ ರಾಷ್ಟ್ರದ ಅಭಿಮಾನವಿದೆ. ನೀವು ವ್ಯಕ್ತಿ ವಿಷಯಕ ನಿಂದ್ಯಾವ್ಯಂಜಕ ಶಬ್ದಗಳನ್ನು ಆಡುವದನ್ನು ಬಿಡಿರಿ, ಕಾಂಗ್ರೆಸದ ಧ್ಯೇಯವು ಶಾಂತಿಮಯವಾಗಿರಬೇಕು. ಇದು ನಿಮ್ಮ ಕರ್ತವ್ಯ. ಒಬ್ಬರು ವಿನಾ ದರು ಅಂದರೆ ತಿರುಗಿ ಅನ್ನುವದು ನಿಮ್ಮ ಕೆಲಸವಲ್ಲ. ಹೀಗಿದ್ದು ಉದ್ಯೋಗಾರರು ಅಂಥಾ ಯಾವ ಪ್ರಕಟಿಸಿದಿರಿ. ನಾನು ಈ

ವಳಗಾಗಿ ನಿಮ್ಮ ಕಾಂಗ್ರೆಸ ಕಾರ್ಯದರ್ಶಿಗಳಿಗೂ ಸೆಕ್ರೆಟರಿಯವರಿಗೂ ತಿಳಿಸಿದ್ದೇನೆ. ನಿಮ್ಮಲ್ಲಿ ಕೆ. ಜನರು ಹೀಗೆ ದೊರ್ತ್ವದ ನಿಂದಾವ್ಯಂಜಕ ಶಬ್ದಗಳನ್ನ ಆಡಿ ಮನಸ್ಸು ನೋಯಿಸುತ್ತಾರೆ. ಅದರ ಬಗ್ಗೆ ನಿಷೇಧ ವ್ಯಕ್ತಮಾಡಿರಿ. ನಾಳೇ ರಾಷ್ಟ್ರಧ್ವಜವನ್ನು ಏರಿಸೋಣವೆಂದು ಅಂದಿರುವರು. ಬೇಕಾದರೆ ಇಲ್ಲೇ ಇರುವರು ಕೇಳಿರಿ. ನಾಳೆ ೨೭ ನೇ ತಾರೀಖಿಗೆ ಆಗುವ ಮುನಸಿಪಾಲಿಟಿಯ ಸಭೆಯಲ್ಲಿ ಈ ವಿಷಯವನ್ನು ಇಟ್ಟಿದೆ. ಅಗ್ಗೆ ಪಾಸಾಗದಿದ್ದರೆ ನಾನು ಸ್ವತಃ ಧ್ವಜವನ್ನ ಏರಿಸಿ ಬಂದು ಕಾಯುತ್ತೇನೆ. ನೀವೆಲ್ಲರು ಬೆಂಬಲರಾಗಿರಿ (ಚಪ್ಪಾಳೆ)

ಡಾ||. ಹಿಂದೆ ಆದದ್ದು ಆಯಿತು.. ಈಗ ಸಾಕಪ್ಪನವರು ಹೇಳಿದಂತೆ ೨೭ ನೇ ತಾರೀಖಿನ ದಿವಸ ಮುನಸಿಪಾಲಿಟಿಯಿಂದ ಧ್ವಜವನ್ನು ಏರಿಸುವದಾಗದಿದ್ದರೆ ಇತರರು ಏರಿಸುವರೆಂದು ಎದೆತಟ್ಟಿ ಹೇಳುವರು, ಅದಕ್ಕೆ ಎಲ್ಲರೂ ಬೆಂಬಲ ಕೊಡಿರಿ. ಯಾವ ರೀತಿಯಿಂದ ಹೇಗೆ ಧ್ವಜವನ್ನೇರಿಸಬೇಕೆಂಬ ಬಗ್ಗೆ ಈಗ ನಮ್ಮೊಳಗೆ ೭ ಜನರದೊಂದು ಕಮೀಟಿಯನ್ನು ಮಾಡಿಕೊಂಡು ಕೆಲಸ ಸಾಗಿಸೋಣ. ಈ ಕಮೀಟಿಗೆ ನಾನು ಹಾಜರ ಇರುವದಿಲ್ಲ. ನಾನು ಅಲಹಾಬಾದದ ಆಲ್ ಇಂಡಿಯಾ ಕಾಂಗ್ರೆಸದ ವರ್ಕಿಂಗ ಕಮೀಟಿಯವರು ಕರೆಸಿದ್ದರಿಂದ ನಾಳೆಗೆ ನಾನು ಹೋಗುವದು ಜರೂರ ಇದೆ. ನಾನು ಇಲ್ಲದಿದ್ದರೂ ನೀವು ಈ ಕೆಲಸವನ್ನು ಸಾಗಿಸಬೇಕು. ಈ ೭ ಜನರದೊಂದು ಕಮೀಟಿಯಲ್ಲಿ ಸೌ|| ರಂಗಕ್ಕಾ ಮುದವೇಡಕರ, ೨ ಶ್ರೀಮತಿ ಉಮಾತಾಯಿ ಕುಂದಾಪೂರ, ೩ ಶ್ರೀ ಕೆಂಪಣ್ಣವರ, ೪ ಶ್ರೀ ಸಾಕಪ್ಪಾ ಖೇದಾಸಪೂರ, ೫ ರಾಮಚಂದ್ರಪ್ಪಾ ದಿನಕರ, ೬ ಶಂಕರೆಪ್ಪಾ ಹಳೇಹುಬ್ಬಳ್ಳಿ, ೭ ವಿ|| ಕರಿಗುದರಿ ಈ ಜನರು ಇರತಕ್ಕದ್ದು.

ಡಾ|| ಹರ್ಡೀಕರರು — ೨೭ ನೇ ತಾರೀಖಿನ ಮುನಸಿಪಾಲಟಿ ಸಭೆಯಲ್ಲಿ ಈ ಠರಾವು ಪಾಸಾಗಿ ಅವರಿಂದ ಈ ರಾಷ್ಟ್ರಧ್ವಜಾರೋಹಣವಾಗಬೇಕೆಂದು ನನ್ನ ಇಚ್ಛೆ ಇದೆ. ಒಂದು ವೇಳೆ ಆಗದಿದ್ದರೆ ಮುಂದೆ ಒಂದೆರಡು ದಿವಸಗಳಲ್ಲಿ ಈ ಕಮೀಟಿಗೆ ತಾವೆಲ್ಲರು ಬೆಂಬಲ ಕೊಟ್ಟು ಧ್ವಜಾರೋಹಣವನ್ನು ಶಾಂತರೀತಿಯಿಂದ ಶಿಸ್ತಿನಿಂದ ಮಾಡಿರಿ. ಎರಡು ಮೂರು ದಿವಸಗಳಿಗಿಂತ ಹೆಚ್ಚಿಗೆ ದಿವಸ ಕಳೆಯುವದಿರಿ ೨—೩ ದಿವಸಗಳಲ್ಲಿ ನೀವು ಧ್ವಜವನ್ನು ಏರಿಸದಿದ್ದರೆ ನಿಮ್ಮಂಥ ಹೇಡಿಗಳು ನೀವೇ ಎಂದು ಹೇಳಿ ಬಹಳ ವೇಳೆಯಾದ್ದರಿಂದ ಸಭೆಯು ಕೆಲಸವನ್ನ ಮುಗಿಸಿದರು,

—ಶ ಕ.

## ಮುದ್ರಾರಾಕ್ಷಸನು ಮೂಲಿಹಿಡಿದನು

ಅಹಮ್ಮದಾಬಾದದಲ್ಲಿನ 'ಶಕ್ತಿ' ಎಂಬ ವೃತ್ತಪತ್ರಕ್ಕೆ ಸರಕಾರದವರು ೧೦೦೦ ರೂ. ಗಳ ಅಮಾನತು ಕೇಳಿರುವರು. ಆದರೆ ಆ ಪತ್ರದ ಸಂಪಾದಕರು ಅದನ್ನು ಕೊಡದೆ, ಮುದ್ರಾರಾಕ್ಷಸನನ್ನೆ ಮೂಲೆಗುಂಪು ಮಾಡುವದಕ್ಕಾಗಿ ತಮ್ಮ ಪತ್ರವು ಹಾಗೇ ನಿತ್ಯದಂತೆ ಹೊರಡುವದೆಂದು ಪ್ರಸಿದ್ಧಮಾಡಿರುವರು. ಮತ್ತು ಮುಂಬಾಯಿನಲ್ಲಿ ತಮ್ಮ ನಿತ್ಯಸಂಚಿಕೆಯನ್ನು ಹೊರಡಿಸಿಬಿಟ್ಟಿರುವರು. ಆ ಪತ್ರದ ಹೆಸರೇ "ಶಕ್ತಿ" ಎಂದ ಮೇಲೆ ಅದರ ಶಕ್ತಿಯು ಹೆಚ್ಚಾಗಿರಬೇಕಲ್ಲವೇ?

## ದೇಶಬಂಧು ದಾಸರ ಪುಣ್ಯತಿಥಿಯು

ಅಲ್ಲಿಯ ಅಧಿಕಾರಿಗಳ ಅಪ್ಪಣೆಯನ್ನು ಮೀರಿದು ಕಲಕತ್ತೆಯಲ್ಲಿ ಶ್ರೀಮತಿ ಊರ್ಮಿಲಾದೇವಿ, ಮೋಹಿನೀದೇವಿ ಮೊದಲಾದ ಪ್ರಮುಖ ಸ್ತ್ರೀಯರು ಹಾಗೂ ಶಿಖ ಸ್ತ್ರೀಯರು ಕೂಡಿ ಮೆರವಣಿಗೆಯನ್ನ ಹೊರಡಿಸಿ ಜನರನ್ನು ಪ್ರೋತ್ಸಾಹಗೊಳಿಸಿದರು ಮರುದಿವಸ ಅವರೆಲ್ಲರೂ ಒಂದು ದೊಡ್ಡ ಸಭೆ ಕೂಡಿಸಿದರು. ಎಲ್ಲ ಜನರು ಸಭೆ ಮುಗಿಸಿಕೊಂಡು ತಿರುಗಿ ಹೋಗ್ತಾಗ್ಗೆ ಪೋಲೀಸರು ಅವರ ಮೆರವಣಿಗೆಯನ್ನು ತಡೆದು ರಾಷ್ಟ್ರಧ್ವಜವನ್ನು ಕಸಿದುಕೊಂಡರು. ಸಾಯಂಕಾಲದಲ್ಲಿ ಮೆರವಣಿಗೆ ಹಾಗು ಸಭೆಗಳಲ್ಲಿ ಪೋಲೀಸರು ಬಂದಿದ್ದರು. ಆಗ್ಗೆ ಸುಮ್ಮನೆ ಕುಳಿತಿದ್ದರು.

## ನಾಮದಾರ ಶಾಸ್ತ್ರಿಗಳ ಕಂಠಶೋಷ

ಲಂಡನದಲ್ಲಿ ಶಾಸ್ತ್ರಿಗಳು ಸಭೆಗಳಲ್ಲಿ ಹಿಂದುಸ್ತಾನಕ್ಕೆ ಸಾಮಂತ ಸ್ವರಾಜ್ಯವನ್ನು ಕೊಡುವ ನಿಶ್ಚಿತವಾದ ಧೋರಣವನ್ನ ಆಳರಸರು ಪ್ರಕಟಮಾಡಬೇಕೆಂದು ಹೇಳುತ್ತ ನಡೆದಿರುವರು. ಅವರು ತಂದ ಸೂಚನೆಯು ಮೇರೆಗೆ ಲಂಡನ್ನದಲ್ಲಿಯ ಒಂದು ಸಂಸ್ಥೆಯವರು ಬಂಡೀ ಗಾಲಿಯು ಪರಿಷತ್ತಿನ ಧ್ಯೇಯವು ಸಾಮಂತ ಸ್ವರಾಜ್ಯವನ್ನು ಕೊಡುವ ಕುರಿತು ಇರತಕ್ಕದ್ದು. ಮತ್ತು ಆಳರಸರು ಇದಕ್ಕೆ ಒಪ್ಪಿಕೊಂಡರೆ ಸತ್ಯಾಗ್ರಹ ಚಳವಳಿಯ ಮುಂದಾಳುಗಳು ತಮ್ಮ ಯುದ್ಧವನ್ನೂ, ಸರಕಾರದವರು ತಮ್ಮ ದಬ್ಬಾಳಿಕೆಯನ್ನೂ ನಿಲ್ಲಿಸಬೇಕೆಂಬ ಠರಾವುಗಳನ್ನು ತಂದಿರುವರು.

## ಕೂಲಿಕಾರ ಪಕ್ಷದ ಕೃಪಣತನವು

ಪಾರ್ಲಿಮೆಂಟದಲ್ಲಿ ಕೂಲಿಕಾರ ಪಕ್ಷದ ಸದಸ್ಯರು ಸಾಯಮನ ವರದಿಯು ಪೂರ್ಣವಾಗಿ ಪ್ರಕಟವಾದ ನಂತರ ಒಪ್ಪಂದ ಮಾಡಿಕೊಳ್ಳಲು ಇನ್ನೊಮ್ಮೆ ಪ್ರಯತ್ನಮಾಡಿ ನೋಡುವರಂತೆ. ಮತ್ತು ಸತ್ಯಾಗ್ರಹವನ್ನು ನಿಲ್ಲಿಸಿದರೆ, ಕೇವಲ ರಾಜಕೈದಿಗಳನ್ನಷ್ಟೇ ಬಿಡುವರಂತಲೂ ಮತ್ತು ಈಗಿನ ಸರಕಾರದ ದಬ್ಬಾಳಿಕೆಯ ಅಬ್ಬರವನ್ನು ನಿಲ್ಲಿಸುವರೆಂತಲೂ ಕರಾರನ್ನು ಆ ಒಪ್ಪಂದದಲ್ಲಿ ಹಾಕುವರಂತೆ. ಇವರ ಈ ಉದಾರಬುದ್ಧಿಯು ಎಷ್ಟು ಫಲಕೊಡುವದೋ ನೋಡಬೇಕು.

## ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದು

ಅಹಮ್ಮದ ಅಲ್ಲೀ ಎಂಬ ೧೧ ವರ್ಷದ ಹುಡುಗನು ರಾಷ್ಟ್ರಧ್ವಜವನ್ನು ಹಿಡಿದುಕೊಂಡು ಹುಡುಗರ ಮೆರವಣಿಗೆಯೊಂದಿಗೆ ಹೊರಬಿದ್ದನು. ಪೋಲೀಸನು ಅವನ ಕೈಯೊಳಗಿನ ರಾಷ್ಟ್ರಧ್ವಜವನ್ನು ಕಸಿದುಕೊಳ್ಳಲು ಹವಣಿಸಿದನು. ಆದರೆ ಆ ಹುಡುಗನು ಅದನ್ನು ಕೊಡಲಿಲ್ಲ ಕಡೆಗೆ ಪೋಲೀಸನು ತನ್ನ ಕೈಯೊಳಗಿನ ಡೊಣ್ಣೆಯಿಂದ ಆ ಬಾಲಕನ ಕಾಲಮೇಲೆ ದೊಡ್ಡ ಪೆಟ್ಟುಹಾಕಿದನು. ಒಬ್ಬ ಸ್ವಯಂಸೇವಕನು ಆ ಹುಡುಗನನ್ನು ಅವನ ಮನೆಗೆ ಒಯ್ದು ಮುಟ್ಟಿಸಿದನು. ಅವನ ಕಾಲು ಬಹಳವಾಗಿ ಬಾತದ್ದರಿಂದ ಅವನು ಆಸ್ಪತ್ರೆಯಲ್ಲಿ ಉಪಚಾರ ಹೊಂದುತ್ತಿರುವನು.

# ಬೆನ್ನಸಾಹೇಬರ ಮುಕ್ತಾಫಲಗಳು

## ರಾಜಕೀಯ ಕೈದಿಗಳನ್ನು ಮುಕ್ತಮಾಡಲಾರೆವು!

ಕಾಮನ್ಸ ಸಭೆಯಲ್ಲಿ ಹಿಂದುಸ್ಥಾನದ ಸದ್ಯದ ವಾತಾವರಣದ ಬಗ್ಗೆ ಕೆಲವು ಪ್ರಶ್ನೆಗಳು ಚರ್ಚಿತವಾದವು.

ಬಿಂಡೀಗಾಲಿಯು ಪರಿಷತ್ತು ಸೇರುವದಕ್ಕಿಂತ ಮುಂಚಿತವಾಗಿ ರಾಜಕೀಯ ಸೆರೆಯಾಳುಗಳನ್ನು ಬಂಧಮುಕ್ತ ಮಾಡುವ ಬಗ್ಗೆ ಜಾಹೀರ ಪಡಿಸಲು ಸರಕಾರವು ಯೋಚಿಸಿರುವದೇ ಎಂಬ ಮಾರ್ಡ್ ಜೋನ್ಸರವರ ಪ್ರಶ್ನೆಗೆ ಬೆನ್ನಸಾಹೇಬರು, ಆ ಸಂಬಂಧವಾಗಿ ವಿಚಾರಿಸಲು ಅವಕಾಶವನ್ನೀಯುವದಿಲ್ಲವಾಗಿ ಸ್ಪಷ್ಟೀಕರಿಸಿದರು. ಸದ್ಯದ ಬಿಕ್ಕಟ್ಟಿನ ಮತ್ತು ಅಶಾಂತ ವಾತಾವರಣವನ್ನು ಕುರಿತು ಚರ್ಚಿಸಲು ಹಿಂದೀ ಮುಖಂಡರ ಸಾಧಾರಣ ಸಭೆ ಸೇರಿಸುವ ಬಗ್ಗೆ ಸರಕಾರವು ಇಚ್ಛಿಸುವದೋ ಎಂಬವಾಗಿ ಫ್ರೀಮನ್‌ರವರು ಕೇಳಿದ್ದಕ್ಕೆ, ಬೆನ್ನರು, ಆ ವಿಷಯವಾಗಿ ವ್ಹಾಯಿಸರಾಯರವರು ಪೂರ್ಣ ಆಲೋಚಿಸಿರುವರೆಂದೂ ಮತ್ತು ಪ್ರಸಿದ್ಧ ಹಿಂದೀ ಮುಖಂಡರ ಸಂಗಡ ಚರ್ಚಿಸಿರುವರೆಂದೂ ಹೇಳಿದರು. ಮುಂಬಯಿಯಲ್ಲಿ ಸಾಕಷ್ಟು ಸೈನ್ಯವಿರುವದೇ ಎಂಬ ಹಾವರ್ಡ ಬರಿಯುವರ ಪ್ರಶ್ನೆಗೆ, ಬೆನ್ನರವರು, ಸಮಯೋಚಿತ ಉಪಾಯಗಳು ಕೈಕೊಳ್ಳಲ್ಪಟ್ಟಿರುವವೆಂದೂ ಮತ್ತು ಸ್ಥಾನಿಕ ಸರಕಾರಗಳು ಸದ್ಯದ ಪರಿಸ್ಥಿತಿಯನ್ನು ನಿಭಾಯಿಸಲು ಸಮರ್ಥವಿರುವದರಿಂದ ಚರ್ಚಿಸಬಾರದಿತಾಗಿ ಉತ್ತರವನ್ನಿತ್ತರು.

## ಲಾಠೀ ರಾಜ್ಯವನ್ನು ನಿಲ್ಲಿಸಿರಿ.

ಮಿ|| ಸ್ಲೋಕೊಂಬ ಇವರು ಕೆಳಗಿನ ಸಾರಾಂಶವುಳ್ಳ ಪತ್ರವನ್ನು 'ಡೇಲಿ ಹೆರಾಲ್ಡ' ವೃತ್ತಪತ್ರಕ್ಕೆ ಕಳಿಸಿಕೊಟ್ಟಿರುವರು—

ಕಾಂಗ್ರೆಸ ಮತ್ತು ಇತರ ಪಕ್ಷಗಳ ಮುಂದಾಳುಗಳ ಸಂಗಡ ನಾನು ವಿಚಾರವಿನಿಮಯ ಮಾಡಿದೆನು. ಇನ್ನಾದರೂ ಸರಕಾರಕ್ಕೆ ಹಿಂದುಸ್ಥಾನದ ಸಂಗಡ ಒಪ್ಪಂದ ಮಾಡಲಿಕ್ಕೆ ಬರುವದೆಂದು ನನ್ನ ಮನವರಿಕೆಯಾಗಿದೆ ಸರಕಾರವು ಮಾತ್ರ ಇನ್ನು ಮೇಲೆ ಇಲ್ಲಿ ಎಲ್ಲ ಜಾತಿಗಳ ಮತ್ತು ಪಂಗಡಗಳ ಐಕ್ಯವನ್ನು ಕಲ್ಪರಿ ಮಾಡಲಿಕ್ಕೆ ಪ್ರಯತ್ನ ಮಾಡಬಾರದು. ಶಾಂತಿಮಯ ಚಳವಳಿಯಲ್ಲಿ ಸ್ವಲ್ಪ ಗೊಂದಲವಾಗಿದ್ದರೂ ಇರಬಹುದು, ಆದರೆ ಈ ಯುದ್ಧದಲ್ಲಿ ಶಾಂತಿಯಿಂದ ನಡೆದ ಸಂಗಗಳೇ ಎಲ್ಲ ಕಡೆಗೂ ನಡೆದಿವೆ.

ಇನ್ನಾದರೂ ಸರಕಾರಕ್ಕೆ ಧೈರ್ಯದಿಂದ ಮತ್ತು ಧೋರಣದಿಂದ ವರ್ತಿಸಿ ಹಿಂದುಸ್ಥಾನದ ಪರಿಸ್ಥಿತಿಯನ್ನು ಸರಿಪಡಿಸಲಿಕ್ಕೆ ಬರುವಂತಿದೆ. ಸರಕಾರವು ಮಾತ್ರ ಬೇಗನೇ ಎಚ್ಚರಿಯಬೇಕು, ಇಲ್ಲವಾದರೆ ಸರಕಾರವು ಮಾಡಿದ ದಬ್ಬಾಳಿಕೆಯ ಘಟನೆಗಳಿಂದ ಜನರ ಮನಸ್ಸು ತಿರುಗ್ಯ ಮಹಾತ್ಮರಿಗೆ ಕೂಡ ಅದ ಸಮಾಧಾನವೊಲಿಸಲು ಅಸಾಧ್ಯವಾಗಬಹುದು.

ಈ ಹೊತ್ತೇ ನನಗೆ ಒಂದು ಸಂಸ್ಥಾನದ ದಿವಾನರು ಹೇಳಿದ್ದೇನಂದರೆ- ತನ ಸಂಸ್ಥಾನಿಕರು ಹಿಂದುಸ್ಥಾನ ಸರಕಾರಕ್ಕೆ "ಸರಕಾರವು ಹತ್ತು ಸಾವಿರ ಜನರನ್ನು ಗುಂಡುಹಾಕಿ ಈ ಚಳವಳಿಯನ್ನು ನಿಲ್ಲಿಸುವದಿದ್ದರೆ ನಿಲ್ಲಿಸಲಿ, ಅದಕ್ಕೆ ನಾನು ಒಪ್ಪುತ್ತೇನೆ. ಆದರೆ ಈಗ ನಡೆದ ಅತ್ಯಾಚಾರಗಳು ಮಾತ್ರ ಸರಿಯಾದವುಗಳಲ್ಲ. ದಯಮಾಡಿ ಈಗಿನ ಲಾಠೀ ರಾಜ್ಯವನ್ನು ಬಂದು ಮಾಡಿರಿ' ಎಂದು ತಿಳಿಸಿರುವರಂತೆ.

ಸರಕಾರಕ್ಕಾದರೂ ದಾರಿ ಕಾಣದಾಗಿದೆಂಬ ಮಾತು ನಿಜ. ಪೋಲೀಸರಿಗಾದರೂ ಲಾಠಿಯ ಹೊಡತಗಳಿಂದ ಜನರನ್ನು ಸುಮ್ಮನೆ ಕೂಡ್ರಿಸುವದು ಶಕ್ಯವಿಲ್ಲ.

ಈ ತರದ ಪರಿಸ್ಥಿತಿಯು ಬರುವದೆಂದು ಮಹಾತ್ಮರು ಮೊದಲೇ ಗೊತ್ತುಹಿಡಿದಿದ್ದರು. ಅವರ ಚಳವಳಿಯ ಉದ್ದೇಶವಾದರೂ ಇದೇ ಆಗಿತ್ತು. ಸತ್ಯಾಗ್ರಹಿಗಳು ಮಾಡುವ ಅಹಿಂಸಾತ್ಮಕ ಚಳವಳಿಯಿಂದ ಮತ್ತು ಸ್ವಾರ್ಥತ್ಯಾಗದಿಂದ ಅತಿ ಕಠಿಣ ಹೃದಯವು ಕೂಡ ಕರಗುವದೆಂದು ಮಹಾತ್ಮರು ನಂಬಿದವರು.

### ಗುಂಡು ಬಡಿಸಿಕೊಂಡವರಿಗೂ ಜೇಲು

ಕೊಯಮತೂರ ಎಂಬಲ್ಲಿ ದಂಗೆಯಾಯಿತೆಂಬ ನೆವದಮೇಲೆ ಪೋಲೀಸರು ಗುಂಡು ಹಾರಿಸಿದರು. ೫ ಜನರಿಗೆ ಆ ಗುಂಡುಗಳು ಬಡಿದು ನೆಲಪಟ್ಟಾಗಿ ಬಿದ್ದಿರುವರು. ಅವರ ಉಪಚಾರವನ್ನು ಅಲ್ಲಿಯ ಡಾಕ್ಟರರು ಉದಾರತನದಿಂದ ನಡಿಸಿರುವರು ಅವರಲ್ಲಿ ಇಬ್ಬರು ಅಂತ್ಯಾವಸ್ಥೆಗೆ ಬಂದಿರುವರು. ಆದರೂ ಅವರ ಮೇಲೆ ವಾರಂಟು ಹೊರಡಿಸಿರುವರಂತೆ. ಇದೇನು ಸೋಜಿಗವೋ ಸಂಕಟವೋ!

### ಶತಚಂಡೀ ಹೋಮವು

ಬಿಲಿಮೋರಾ ಎಂಬಲ್ಲಿ ಪ್ರಮುಖ ಬ್ರಾಹ್ಮಣರು, ಮಹಾತ್ಮರ ಈ ಸತ್ಯಾಗ್ರಹಕ್ಕೆ ಪರಮಾತ್ಮನು ಜಯ ತಂದುಕೊಡುವದಕ್ಕೆ ಒಂದು ಶತಚಂಡೀ ಯಜ್ಞವನ್ನು ಮಾಡಿದರು. ಜಲಯಾತ್ರೆಗಾಗಿ ಮೆರವಣಿಗೆಯನ್ನು ಉತ್ಸವದಿಂದ ಹೊರಡಿಸಿದ್ದರು. ಕರ್ನಾಟಕದಲ್ಲಿಯ ಆಚಾರ್ಯರು ಈ ಬಗೆಯ ಕಾರ್ಯಗಳನ್ನು ಯಾಕೆ ಮಾಡಬಾರದು?

### ಒಂದು ಸಾವಿರ ಸೆರೆಯಾಳುಗಳು

ಮದ್ರಾಸ ಇಲಾಖೆಯಲ್ಲಿಯ ಸತ್ಯಾಗ್ರಹಿಗಳು ಸರಕಾರದ ದಬ್ಬಾಳಿಕೆಗೆ ಆಹುತಿಯಾಗಿ ಸಾವಿರ ಜನರು ಸೆರೆಮನೆಯ ಸೋಬತಿಗಳಾಗಿರುವರು. ಅವರಲ್ಲಿ ೩೦೦ ಜನರಿಗೆ ಮಾತ್ರ (ಅ) ಇಲ್ಲವೆ (ಬ) ವರ್ಗಗಳಲ್ಲಿ ಸೇರಿಸಲ್ಪಟ್ಟಿರುವರೆಂದು ತಿಳಿಯುತ್ತದೆ.

## ಮುಂಬಯಿಯಲ್ಲಿ ಸಂಪೂರ್ಣ ಹರತಾಳ.

### ವಿದ್ಯಾರ್ಥಿಗಳ ಉತ್ಸಾಹ.

ಎಸ್‌ಪ್ಲೆನೇಡ ಮೈದಾನದಲ್ಲಿ ಮೊನ್ನೆ ಶನಿವಾರ ದಿವಸ ನಡೆದ ಪೋಲೀಸರ ಅತ್ಯಾಚಾರವನ್ನು ನಿಷೇಧಿಸುವ ಗೋಸ್ಕರ ಮುಂಬಯಿ ನಾಗರಿಕರು, ಸೋಮವಾರ ದಿವಸ ಸಂಪೂರ್ಣ ಹರತಾಳವನ್ನು ಪಾಲಿಸಿದರು. ಮುಂಬಯಿ ಪೇಟೆಗಳೆಲ್ಲ ಬಂದಾಗಿದ್ದವು. ಇದಲ್ಲದೆ ಪ್ರಾಥಮಿಕ ಮತ್ತು ಹಾಯಿಸ್ಕೂಲ ವಿದ್ಯಾರ್ಥಿಗಳು ತಮ್ಮ ಶಾಲೆಗಳಿಗೆ ಹೋಗದೆ ಹರತಾಳವನ್ನು ಪಾಲಿಸಿದರು. ಕೆಲ್ಲಿ ಮತ್ತು ಕಾಲಬಾದೇವಿಯಲ್ಲಿರುವ ಶಾಲೆಗಳು ಮೊದಲು ತೆರೆದಿದ್ದು, ಚಿಕ್ಕ ಚಿಕ್ಕ ವಿದ್ಯಾರ್ಥಿಗಳು ಬಂದು, ಶಿಕ್ಷಕರಿಗೆ ಕೇಳಿಕೊಂಡದ್ದರಿಂದ, ಶಿಕ್ಷಕರು ನಿರುಪಾಯವಿಲ್ಲದೆ ಆ ಶಾಲೆಗಳನ್ನು ಮುಚ್ಚಬೇಕಾಯಿತು. ಸಣ್ಣ ಸಣ್ಣ ಅಂಗಡಿಗಳೂ ಮುಚ್ಚಿದ್ದವು. ವ್ಹಾಯಿಟವೇದಲ್ಲಿ ಮಾತ್ರ ಅಷ್ಟು ಉತ್ಸಾಹವು ಕಾಣಬರಲಿಲ್ಲ, ಜನರು ಮೊದಲಿನಷ್ಟು ಉತ್ಕಂಠರಿರಲಿಲ್ಲ. ಪೋಲೀಸರಂತರೂ ಕಾಯಿದೆಯನ್ನು ಬಿಟ್ಟು ಬಿಟ್ಟಿದ್ದಾರೆ. ಗಿರಾಕಿಗಳೂ ಸಹ ಕಡಿಮೆವಾದ್ದರಿಂದ ವ್ಹಾಯಿಟವೇದಲ್ಲಿ ಮೊದಲಿನಂತೆ ವ್ಯಾಪಾರವು ನಡೆಯಬೇಕಾದರೆ ಇನ್ನೂ ಕೆಲ ದಿನಗಳು ಬೇಕಾಗುವದೆಂಬುದಾಗಿ ತೋರುತ್ತದೆ.

## ಮೋಟಾರ ಮಾಲಕರಿಗೆ ಎಚ್ಚರಿಕೆ.

ದಕ್ಷಿಣ ಕಾನಡಾ ಜಿಲ್ಲೆಯ ಮ್ಯಾಜಿಸ್ಟ್ರೇಟರು, ಅಲ್ಲಿಯ ಸರ್ವೀಸ ಮೋಟರ ಮಾಲಕರಿಗೆ ಹೊಸದೊಂದು ನೋಟೀಸ ಹೊರಡಿಸಿ ಅವರಿಗೆ ಹೀಗೆ ತಿಳಿಸಿದ್ದಾರೆ.

ಮಂಗಳೂರಲ್ಲಿ ಕ್ರಿ. ಪ್ರೊ. ಕೋ. ೧೪೪ ನೇ ಕಲಮಿನ ಕಾಯಿದೆಯು ಅಮಲಿನಲ್ಲಿದೆ. ಆ ಕಾಯಿದೆಯನ್ನು ಮುರಿಯಲಿಕ್ಕೆ ಸ್ವಯಂಸೇವಕರು ಮಂಗಳೂರಿಗೆ ಹೋಗುವವರಿದ್ದಾರೆಂದು ತಿಳಿಯಬರುತ್ತದೆ. ಮತ್ತು ಹೊಸದಾಗಿ ಸ್ವಯಂಸೇವಕರನ್ನು ಭರ್ತಿ ಮಾಡುವದಕ್ಕೆ ಬೇರೆ ಸ್ವಯಂಸೇವಕರು ತಂಡತಂಡವಾಗಿ ಹೊರಡುವವರಿದ್ದಾರೆ. ಇಂಥ ಸ್ವಯಂಸೇವಕರು ಮಂಗಳೂರಿಗೆ ಸರ್ವೀಸ ಮೋಟರಗಳಲ್ಲಿ ಹೋಗಬಹುದು. ಆದ್ದರಿಂದ ಎಲ್ಲ ಮೋಟರಗಳ ಮಾಲಕರಿಗೆ ತಿಳಿಸುವದೇನಂದರೆ- ಅವರು ಕಾಯಿದೆಭಂಗವೇ ತಮ್ಮ ಉದ್ದೇಶವನ್ನಾಗಿ ಮಾಡಿಕೊಂಡಿರುವ ಸತ್ಯಾಗ್ರಹಿಗಳನ್ನು ತಮ್ಮ ಮೋಟರುಗಳಲ್ಲಿ ಅನುವು ಕೊಟ್ಟರೆ, ಇ. ಪಿ. ಕೋ. ೧೦೭ ಕಲಮಿನ ಪ್ರಕಾರ, ಅವರೂ ಕೂಡ ಕಾಯಿದೆಭಂಗ ಮಾಡುವದಕ್ಕೆ ಜ್ಞಾನಪೂರ್ವಕವಾಗಿ ಸಹಾಯ ಮಾಡಿದಂತಾಗುವದು. ಮತ್ತು ಹೀಗೆ ಮಾಡಿದಲ್ಲಿ ಇ. ಪಿ. ಕೋ. ೧೦೯ ಮತ್ತು ೧೪೪ ಕಲಮಿನ ಪ್ರಕಾರ ಶಿಕ್ಷೆಗೆ ಗುರಿಯಾಗುವರು. ಮತ್ತು ಅವರಿಗಿದ್ದ ಎಲ್ಲ ಲಾಯಸೆನ್ಸಗಳನ್ನು ಕಸಿದುಕೊಳ್ಳುವದಕ್ಕೆ ಬರುವದು.

## ಬಂಗಾಲದಲ್ಲಿ ಸ್ತ್ರೀಯರ ಮೇಲೆ ಅತ್ಯಾಚಾರ.

ಪದ್ಮಾವತಿ ಎಂಬ ಹಾಲು ಮಾರುವವಳು ರಾಷ್ಟ್ರಧ್ವಜದ ಮಾನರಕ್ಷಣೆಗಾಗಿ ನಾಯಕಿಯಾಗಿದ್ದಾಗ ಪೋಲೀಸರು ಅವಳನ್ನು ಘೋರ ಅಪಮಾನ ಮಾಡಿದರು. ಆಕೆಯ ಮೊಲೆ, ಟೊಂಕ ಬೆನ್ನುಗಳಮೇಲೆ ರಕ್ತಮಂಜುಗಟ್ಟಿ ಕಲೆಗಳು ಇವೆ.

ಕರುಣಿ ದಾಸಿ ಎಂಬವಳಿಗೆ ಲಾಠಿಯಿಂದ ಬಡಿದು, ಕಾಲಿನಿಂದ ಒದ್ದು ದಾರಿಯಲ್ಲಿ ದರದರನೆ ಎಳೆದದ್ದರಿಂದ ಆಕೆಯ ಮೈಯೆಲ್ಲ ತರಿದು ಹೋಗಿದೆ. ಮೈತುಂಬ ಬೂಟಕಾಲಿನ ಏಟುಗಳು ಮೂಡಿವೆ

ವಿರಾಜದಾಸಿ ಎಂಬವಳಿಗೆ ತೊಡೆಗಳಮೇಲೆ ಬೂಟಕಾಲಿನ ಏಟುಗಳು ಬಲವಾಗಿ ಬಿದ್ದದ್ದರಿಂದ ರಕ್ತ ಮಂಜುಗಟ್ಟಿದೆ.

ರಾಜೇಶ್ವರಿ ಎಂಬುವಳ ಹಣೆಯಮೇಲೆ ಜೂರಾದ ಆಯುಧದ ಗಾಯವಿದೆ. ಹಾಗೂ ಲಾಠಿಪೆಟ್ಟಿನ ಒಳನೋವು ಇದೆ.

ಪದ್ಮಾವತಿ ದಾಸಿ ಎಂಬ ೬೦ ವರ್ಷದ ಮುದಿಕೆಯನ್ನು ಹಣ್ಣಾಗುವಂತೆ ಥಳಿಸಿದ್ದರಿಂದ ಕೈಕಾಲು ನಡುವು ಬೆನ್ನು ಇವೆಲ್ಲ ನೋವಾಗಿವೆ. ಹಾಗೂ ಆಕೆಯ ತಲೆಗೂದಲನ್ನೆಲ್ಲಾ ಕಿತ್ತಿದ್ದಾರೆ.

ಕಾಂಚನ ದಾಸಿ ಎಂಬ ಮುದುಕಿಯನ್ನು ಲಾಠಿಯಿಂದ ಹೊಡೆದಿದ್ದಾರೆ.

ಸತ್ಯದಾಸಿ ಎಂಬವಳನ್ನು ಹಿಡಿದು ಎತ್ತಿ ಮುಗ್ಗುದೇಲೆ ಎಸೆದು ಬಿಟ್ಟದ್ದರಿಂದ ಅವಳ ಮೈತುಂಬ ಗಾಯಗಳಾಗಿವೆ.

## ಸಾಹೇಬರಿಗೆ ಮೊಚ್ಚೆಯ ಜೋಡು ಬಹುಮಾನ.

ಮಹಾತ್ಮರ ಬಂಧನದ ವಿಷಯವಾಗಿ ಡೇಲಿಟೆಲಿಗ್ರಾಫ ಪತ್ರದಲ್ಲಿ ಆಫ್ರಿಕೆಯ ಗೆಳೆಯರೊಬ್ಬರು:— ಮಹಾತ್ಮರನ್ನು ಕೈದು ಮಾಡಿದ್ದಕ್ಕಾಗಿ ವ್ಹಾಯಿಸರಾಯರಿಗಾದರೂ ಒಂದು ಜೋಡು ಮೊಚ್ಚೆಗಳು ಸಿಗಬಹುದು ಎಂದು ನುಡಿದರು. ಹಿಂದಕ್ಕೆ ಆಫ್ರಿಕೆಯಲ್ಲಿ ಮಹಾತ್ಮರನ್ನು ಬಂಧಿಸಿದ್ದಕ್ಕಾಗಿ ಮಹಾತ್ಮರು ತಾವು ವ್ಯಕ್ತಿದ್ವೇಷಿಗಳಲ್ಲವೆಂದು ತೋರಿಸುವದಕ್ಕಾಗಿ ಸ್ವತಃ ಒಂದು ಜೋಡು ಮೊಚ್ಚೆಯನ್ನು ಹೊಲಿದು ಅಲ್ಲಿಯ ಮಂತ್ರಿಯಾದ ಸ್ಮಟ್ಸ ಸಾಹೇಬರಿಗೆ ಮುಟ್ಟುವದಕ್ಕೆ ಕಳಿಸಿದ್ದರು. ಅವೇ ಆ ಜೋಡು ಮಹದ್ಭಾಗ್ಯವೆಂದು ಈ ವರೆಗೆ ಕಾಯ್ದಿಟ್ಟಿರುವರಂತೆ!

—ತ ಕ.


ಶ್ರೀ ಮಹಾಲಕ್ಷ್ಮೀ ಪ್ರಸಾದಿಕ

ಶಿರಹಟ್ಟಿ ನಾಟಕ ಮಂಡಳಿಯವರು

ಬಾಗಲಕೋಟ ಶಿವಾನಂದ ನಾಟಕ ಶಾಲೆಯಲ್ಲಿ

ಶುಕ್ರವಾರ ತಾ|| ೨೭-೬-೩೦

ತಮ್ಮ ಲೋಕಪ್ರಿಯವಾದ

ಲಂಕಾದಹನ

ಎಂಬ ನಾಟಕವನ್ನು ಅಭಿನಯಿಸುವರು.

ಎಚ್. ವೆಂಕೋಬರಾವ

ಪ್ರೊಪ್ರಾಯಿಟರ.


ಈ ಪತ್ರಿಕೆಯು ಬಸವಂತ ಜಕ್ಕ್ಲೂರಕರ ಮುಕುಂದರಾವ ಇವರಿಂದ ಬಾಗಲಕೋಟೆಯ ಪದ್ಮರಾಜ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಶುಕ್ರವಾರ ಮಿತಿ ಆಷಾಢ ಶುದ್ಧ ೧ ಶಕೆ ೧೮೫೨ ತಾ॥ ೨೭—೬—೩೦ [ಸಂಚಿಕೆ ೮೫

## ಜೇಲು ಸಾಲದಾಗಿದೆ.

ಸುಳೇಭಾವಿಯ ಪ್ರಸಿದ್ಧ ವ್ಯಾಪಾರಿಗಳಾದ ಶ್ರೀ ಚಂಚಿಪ್ಪ ಪಟ್ಟಣಶೆಟ್ಟಿ ಇವರಿಗೆ ೩ ತಿಂಗಳ ಶಿಕ್ಷೆಯಾಗಿತ್ತು. ಅವರನ್ನು ಹಿಂಡಲಗಿ ಜೇಲಿನಲ್ಲಿ ಇಟ್ಟಿದ್ದರು. ೨೦ ನೇ ತಾರೀಖಿನ ದಿವಸ ಅವರ ಬಿಡುಗಡೆಯಾಯಿತು. ಅವರು ಜೇಲಿನಲ್ಲಿಯ ತಮ್ಮ ಅನುಭವವನ್ನು "ತರುಣ ಭಾರತ" ಪತ್ರದ ಪ್ರತಿನಿಧಿಗಳಿಗೆ ಹೇಳಿದರು. ಅದರ ಸಾರಾಂಶವು ಈ ಪ್ರಕಾರ ಇದೆ— ಹುಕ್ಕೇರಿ ಮಾಮಲೇದಾರರು ನನ್ನನ್ನು 'ಅ' ವರ್ಗದಲ್ಲಿ ಹಾಕಿದ್ದರು. ಆದರೆ ಜೇಲಿನಲ್ಲಿ ಹೋದ ಕೂಡಲೇ ನನ್ನನ್ನು 'ಬ' ವರ್ಗದಲ್ಲಿ ಸೇರಿಸಿದರು. ಮೊದಮೊದಲು ಕೆಲಸ ಹಚ್ಚಲಿಲ್ಲ. ನಮ್ಮ ಇಚ್ಛೆಯಿಂದಾದಷ್ಟು ಕೆಲಸ ನಾವೇ ಮಾಡುತ್ತಿದ್ದೆವು. ಊಟದ ಒತ್ತಾಯವು ಸರಿ ಇಯುತು; ನಾವೇನೂ ಹೇಳಲಿಲ್ಲ. ಎಲ್ಲ ರಾಜಕೀಯ ಕೈದಿಗಳನ್ನು ಒತ್ತಟ್ಟಿಗೆ ಇಡುತ್ತಿದ್ದರು. ಆದರೆ ಈಗ ಮಾತ್ರ ಅವರನ್ನು ಸಾಮಾನ್ಯ ಕೈದಿಯಾಳುಗಳ ಸಂಗಡ ಇಡುವರು. ನಂದಗಡದ ಶ್ರೀ. ಬೇಂದ್ರೆ ಮತ್ತು ನಿಪ್ಪಾಣಿಯ ಶ್ರೀ. ಹರ್ಷವರ್ಧನ ಇವರನ್ನು ಬೀಸುವ ಕೆಲಸಕ್ಕೆ ಹಚ್ಚಿದರು. ಇವರ ತೂಕವು ಮಾತ್ರ ಕಡಿಮೆಯಾಗಿದೆ. ಅಧಿಕಾರಿಗಳು ಕ್ರೌರ್ಯವನ್ನು ತೋರಿಸಿದರೂ ಸತ್ಯಾಗ್ರಹಿಗಳು ಶಾಂತ ರೀತಿಯಿಂದ ಸಹನಮಾಡಿಕೊಳ್ಳುತ್ತಿರುವರು. ಜೇಲಿನಲ್ಲಿ ಅಗ್ಗ ಜಾಗೆಯು ಇಲ್ಲದಂತಾಗಿದ್ದರಿಂದ ಒಬ್ಬನನ್ನು ಇಡುವ ಜಾಗಿಯಲ್ಲಿ ಮೂವರನ್ನು ಒತ್ತೊತ್ತಿ ಇಡುವರು. ಸಾಯಂಕಾಲದ ರೊಟ್ಟಿಗಳು ಕಪಡಿನಿಂದ ಮಾಡಲ್ಪಟ್ಟಿರುವವೋ ಏನೋ ತಿಳಿಯುವದಿಲ್ಲ. ಅಲ್ಲಿಗೆ ಒಂದು ತರದ ವಾಸನೆಯು ಬರುತ್ತಿರುತ್ತದೆ. ಎಷ್ಟೋ ಜನರು ಈ ಪಲ್ಲೆಯನ್ನು ಬಿಟ್ಟುಬಿಟ್ಟಿರುವರು. ಕೆಲ ರೋಗಿಗಳ ಕಡೆಗೆ ಅಧಿಕಾರಿಗಳು ಲಕ್ಷ್ಯಕೊಡುವದಿಲ್ಲ. ಅನ್ನತ್ಯಾಗ ಮಾಡುವ ಹೊತ್ತು ಬರುವಂತಿದೆ. ಒಟ್ಟಿನ ಮೇಲೆ ರಾಜಕೀಯ ಕೈದಿಯಾಳುಗಳ ಸಂಗಡ ಅಧಿಕಾರಿಗಳ ವರ್ತನವು ಅತಿಶಯ ಗರ್ಹ್ಯವಾಗಿದೆ.

## ಅಧಿಕಾರಿಗಳಿಗೆ ಮುಗದಾಣವು

೧೯ ನೇ ಜೂನದ ಯಂಗ ಇಂಡಿಯಾದಲ್ಲಿ ಕೆಳಗಿನ ಸಂಗತಿಯು ಕಂಡುಬರುವದು— ಮುಝಫರನಗರ ಎಂಬಲ್ಲಿಯ ಅಸಿಸ್ಟಂಟ ಕಲೆಕ್ಟರರಿಗೆ 'ಶಾಂತಿ ಸಂಘ'ದ ಮೆಂಬರರಾಗಲು ಕೇಳಿದರು. ಅದಕ್ಕೆ ಅವರು "ನಾನು ಸತ್ಯಾಗ್ರಹದ ವಿರುದ್ಧ ಇದ್ದರೂ, ಈ ಸಂಘಕ್ಕೆ ಮೆಂಬರನಾದರೆ ಜನರ ಮೇಲಿನ ನನ್ನ ವಜನವು ಕಡಿಮೆಯಾಗುತ್ತದೆ. ಕಾರಣ ನಾನು ಮೆಂಬರನಾಗುವದಿಲ್ಲ" ಎಂದು ಹೇಳಿದರು. "ನಿನ್ನ ಕಚೇರಿಯಲ್ಲಿ ನಡೆಯುತ್ತಿರುವ ಖಟ್ಲೆಗಳನ್ನು ಇನ್ನುಮುಂದೆ ನೀನು ನಡಿಸಬಾರದು; ನೀನು ಅಸಿಸ್ಟಂಟ ಕಲೆಕ್ಟರನೆಂದು ಇನ್ನುಮುಂದೆ ಕೆಲಸಮಾಡಲಾರಿ" ಎಂದು ಕಲೆಕ್ಟರರು ಅವರಿಗೆ ತಿಳಿಸಿದರು. ಇಂಥ ಪರಿಸ್ಥಿತಿಯಲ್ಲಿ ಸ್ವಾಭಿಮಾನವುಳ್ಳ ಸದ್ಗೃಹಸ್ಥರು ಸರಕಾರದ ಚಾಕರಿ ಮಾಡುವದು ಶಕ್ಯವೋ ?

## ಓಡ್ವಾಯರನ ಪುರಾಣವು

ಹಿಂದುಸ್ತಾನದ ಬಹು ಜನರು ಬ್ರಿಟಿಶರ ಆಳಿಕೆಯಿಂದ ಸಂತುಷ್ಟರಿರುವರು. ಇವರ ಹೊರತಾಗಿ ಬೇರೆ ಜನರ ಆಳಿಕೆಯು ಇವರಿಗೆ ಬೇಕಾಗಿಲ್ಲ. ಆದರೆ ಪಾಶ್ಚಾತ್ಯ ಸಂಸರ್ಗವುಳ್ಳ ಸ್ವಲ್ಪ ಜನರು ಮಾತ್ರ ಅಸಂತುಷ್ಟರಾಗಿ ಹೆಚ್ಚು ಹಕ್ಕುಗಳನ್ನು ಬೇಡುತ್ತಲಿರುವರು. ಇವರ ಬೇಡುವಿಕೆಯು ಸ್ವಾಭಾವಿಕವಾದದ್ದು. ಆದರೆ ಇದನ್ನು ನಾವು ಯೋಗ್ಯ ಕಾಲಕ್ಕೆ ಪೂರೈಸುವೆವು. ಅವರ ಬೇಡಿಕೆಗಳಿಗೆ ಸರಿಯಾಗಿ ೧೯೧೯ ರಲ್ಲಿ ಮಾಂಟೇಗ ಚೆಮ್ಸಫರ್ಡ ಸುಧಾರಣೆಗಳನ್ನು ಕೊಟ್ಟೆವು. ಆದರೆ ಈಗ ಮಾತ್ರ ೧೫೦ ವರುಷಗಳಿಂದ ಸ್ಥಾಪನೆ ಹೊಂದಿದ ರಾಜ್ಯವನ್ನು ಕಿತ್ತೊಗೆಸಿ ಬಿಡುವ ಕೆಲಸಕ್ಕೆ ಒಂದು ಕಿರಿದಾದ ಜನತೆಯ ಭಾಗವು ಕೈಕೊಂಡಿದೆ. ಈಗ ಸ್ವರಾಜ್ಯವಾದಿಗಳು ಜೋಕೆಗಾರಿಕೆ ಹಾಗು ಸಹಕಾರಗಳಿಂದ ಸ್ವರಾಜ ದೊರೆಕಿಸುವದನ್ನು ಬಿಟ್ಟು, ತಮ್ಮ ಶಕ್ತಿಯಿಂದ ಸಾಮಂತ ಸ್ವರಾಜ್ಯವನ್ನು ಬೇಡುವರು. ಅದಕ್ಕಾಗಿ ಕಾಯದೆಭಂಗ ಹಾಗೂ ಕ್ರಾಂತಿಗಳ ಬೆದರಿಕೆ ಹಾಕುವರು. ಆದರೆ ಸುದೈವದಿಂದ ಈ ಜನರು ಹಿಂದುಸ್ತಾನದ ಬೆಂಬಲವುಳ್ಳವರಿಲ್ಲವೆಂಬಾಶಯದ ಒಂದು ಲೇಖನವನ್ನು ಓಡ್ವಾಯರ ಸಾಹೇಬನು ಒಂದು ಆಂಗ್ಲಪತ್ರದಲ್ಲಿ ಬರೆದಿರುವನು. ಪಾಪ! ಹಿಂದುಸ್ತಾನದಲ್ಲಿಯ [illegible]ದ ವಿರಾಟ ಸ್ವರೂಪವು ಇನ್ನೂ ಇವನಿಗೆ ಕಂಡುಬಂದಿಲ್ಲವೆಂದು ತೋರುತ್ತದೆ. ವೀರ ಸತ್ಯಾಗ್ರಹಿಗಳು ಇವನ ಪುರಾಣಕ್ಕೆ [illegible]ವದಂತೂ ದೂರಿದೆ. ಆಂಗ್ಲ ವಿಧವೆಯರ ಮುಂದೆ ಇವನು ತನ್ನ ಈ ಪುರಾಣದ ಹೊತ್ತಿಗೆಯನ್ನು ಬಿಚ್ಚಲಿ. ಅವರಿಗಾದರೂ ಇದು ರುಚಿಸುವದೋ,

## ಸುರತ ಕಾಲೇಜ ಪಿಕೆಟಿಂಗ

### ಪ್ರಿನ್ಸಿಪಾಲರು ಸ್ವಯಂಸೇವಿಕೆಯರು ರಚಿಸಿದ ಚಕ್ರವ್ಯೂಹವನ್ನು ಮುರಿದರು.

ಕಾಲೇಜದ ಮುಂದೆ 'ಪಿಕೆಟಿಂಗ' ನಡೆದೇ ಇದೆ. ಮೊನ್ನಿನ ದಿವಸ ಕಾಲೇಜದ ಅಧಿಕಾರಿಗಳು ಕಾಲೇಜ ಬಹಿಷ್ಕಾರ ಕಮೀಟಿಯ ಮೆಂಬರುಗಳಿಗೆ ಸಾರ್ವಜನಿಕ ರಸ್ತೆಯ ಮೇಲೆ ಪಿಕೆಟಿಂಗ ಮಾಡಿ ಹುಡುಗರಿಗೆ ಅಡ್ಡಿ ಮಾಡುವ ದಕ್ಕಿಂತ ಕಾಲೇಜದ ಹದ್ದಿಯಲ್ಲಿ ಶಾಂತರೀತಿಯಿಂದ ಪಿಕೆಟಿಂಗ ಮಾಡಬೇಕಾಗಿ ಕೇಳಿಕೊಳ್ಳಲು ಅದಕ್ಕೆ ಒಪ್ಪಿ ಸ್ವಯಂಸೇವಕರಿಗೆ ಅದರಂತೆ ಮಾಡಲು ಅಪ್ಪಣೆ ಕೊಟ್ಟರು. ಮರ ದಿನ ಮುಂಜಾನೆ ಕಾಲೇಜದ ಗೇಟಿನ ಹತ್ತರದವೇ ೬ ಜನ ಸ್ತ್ರೀ ಸ್ವಯಂಸೇವಿಕೆಯರೊಡಗೂಡಿ ಪಿಕೆಟಿಂಗಕ್ಕೆ ಸುರುವು ಮಾಡಿದರು, ಕಾಲೇಜಕ್ಕೆ ಹೋಗಲಿಚ್ಛಿಸುವ ವಿದ್ಯಾರ್ಥಿಗಳು ೧೦—೩೦ ಗಂಟೆಗೆ ಬಂದು ಗೇಟದ ಹತ್ತರ ನೆರೆಯಹತ್ತಿದರು. ೬ ಜನ ಸ್ವಯಂಸೇವಿಕೆಯರು ಗೇಟಿನ ಮುಂದೆ ನಿಂತು ಚಕ್ರವ್ಯೂಹವನ್ನು ರಚಿಸಿ ವಿದ್ಯಾರ್ಥಿಗಳಿಗೆ ಅಡ್ಡಿ ಮಾಡಹತ್ತಿದರು. ೧೧—೩೦ ರ ವರೆಗೆ ವಿದ್ಯಾರ್ಥಿಗಳ ಪ್ರಚಂಡ ಸಮುದಾಯವು ಕೂಡಿ ಒಳಗೆ ಹೋಗಲು ಆತುರವಾಗಿತ್ತು. ಆದರೆ ಸ್ವಯಂಸೇವಿಕೆಯರು ಅವರನ್ನು ಒಳಗೆ ಬಿಡಲಿಲ್ಲ ನಂತರ ಕಾಲೇಜದ ಪ್ರಿನ್ಸಿಪಾಲರಾದ ಎಸ್ ಎಂ. ಶಹಾರವರು ಬಂದರು. ವಿದ್ಯಾರ್ಥಿಗಳು ಒಳಗೆ ಹೋಗದಂತೆ ಅವರು ವನಿತೆಯರನ್ನು ಒಲಿಸಬೇಕು, ಹೀಗೆ ಚಕ್ರವ್ಯೂಹವನ್ನು ರಚಿಸಿ ಅಡ್ಡಗಟ್ಟಬಾರದೆಂದು ಪ್ರಿನ್ಸಿಪಾಲರು ಕೇಳಲು ಅದಕ್ಕೆ ಸ್ವಯಂಸೇವಕರು ಒಪ್ಪದೇ ಹಾಗೇ ನಿಂತರು. ಆ ಮೇಲೆ ಪ್ರಿನ್ಸಿಪಾಲರು ತಮ್ಮ ಎಲ್ಲ ವಿದ್ಯಾರ್ಥಿಗಳ ಮುಂದಾಳಾಗಿ ಚಕ್ರವ್ಯೂಹವನ್ನು ಮುರಿದು ಒಳನುಗ್ಗಿದರು. ಮತ್ತೆ ಸ್ವಯಂಸೇವಿಕೆಯರು ಚಕ್ರವ್ಯೂಹವನ್ನು ರಚಿಸಿ ನಿಂತುಕೊಂಡರು

## ೧೪೪ ನೇ ಕಲಮಿನ ಅಮಲು

ಶ್ರೀ ಚನಾಪಳ್ಳಿಯಲ್ಲಿ ಎರಡ ತಿಂಗಳುಗಳ ವರೆಗೆ ಈ ಕಲಮಿನ ಅಮಲು ಜಾರಲ್ಪಟ್ಟಿತು ಅಲ್ಲಿಯ ಆಶ್ರಮವನ್ನು ಪೋಲೀಸರು ಮತ್ತೆ ಅದರ ಕಾರ್ಯದರ್ಶಿಗಳಾದ ಶ್ರೀ ಸಿ. ರಾಜಗೋಪಾಳಾಚಾರ್ಯರ ಮಕ್ಕಳನ್ನು ಹಿಡಿದಿರುವರು.

ಮಚ್ಛಲಿಪಟ್ಟಣದಲ್ಲಿಯೂ ಈ ಕಲಮು ಬಜಾಯಿಸಲ್ಪಟ್ಟು ಆಂಧ್ರ ಸತ್ಯಾಗ್ರಹ ಮಂಡಳದ ಸರ್ವಾಧಿಗಳನ್ನೊಳಗೊಂಡು ಎಲ್ಲ ರಾಷ್ಟ್ರೀಯ ಮುಖಂಡರ ಮನೆಗಳು ತಪಾಸಮಾಡಲ್ಪಟ್ಟವು.

## ದಿಲ್ಲಿ ವ್ಯಾಪಾರಸ್ಥರ ನಿಶ್ಚಯ

ದಿಲ್ಲಿಯ ಬಟ್ಟೆಗಳ ವ್ಯಾಪಾರಸ್ಥರು ಕಾಂಗ್ರೆಸ್ ಕಮೀಟಿಯ ಸಂಗಡ ಚರ್ಚಿಸಿ ೩ ತಿಂಗಳ ವರೆಗೆ ಪರದೇಶಿ ಬಟ್ಟೆಯನ್ನು ಮಾರಕೂಡದಾಗಿ ನಿರ್ಧರಿಸಿದ್ದಾರೆ. ಅನಂತರಾದರೂ ಸಹ ಕಾಂಗ್ರೆಸ್ ಕಮೀಟಿಯವರ ಪರವಾನಗಿಯನ್ನು ಪಡೆಯಬೇಕಾಗಿ ವಿಚಾರಿಸಲ್ಪಟ್ಟಿದೆ ೩ ಜನ ವ್ಯಾಪಾರಸ್ಥರ ಮತ್ತು ೩ ಜನ ಕಾಂಗ್ರೆಸ ಸಭಾಸದರ ಒಂದು ಮಂಡಲವು ನಿಯಮಿಸಲ್ಪಟ್ಟಿದ್ದು, ಏನಾದರೂ ವ್ಯಾಜ್ಯಗಳು ಬಂದರೆ ಅವರೇ ನಿರ್ಣಯಿಸಬೇಕಾಗಿ ಠೀವರ್ಮಾನವಾಗಿದೆ. ಈ ಕರಾರುಗಳಿಗೆ ಒಪ್ಪದಿದ್ದ ಅಂಗಡಿಗಳಿಗೆ ಪಿಕೆಟಿಂಗ ಮಾಡಬೇಕಾಗಿ ವಿಚಾರಿಸಿದ್ದಾರೆ.

## ಮುಂಬಯಿ ಮುನಸಿಪಾಲಟಿಯು

ಮುಂಬಯಿಯ ಎಸ್ಪ್ಲೆನೇಡ ಮೈದಾನಿನಲ್ಲಿ ಸ್ತ್ರೀಯರ ಮತ್ತು ಹುಡುಗರ ಮೇಲೆ ಪೋಲೀಸರು ಲಾಠೀ ಉಪಯೋಗಿಸಿದ ಬಗ್ಗೆ, ಅವರ ಕೃತ್ಯವನ್ನು ನಿಷೇಧಿಸಿ ಸಭೆಯ ಕಾರ್ಯಕ್ರಮವು ಮುಂದೂಡಲ್ಪಟ್ಟಿತು

## ಒಂದುವಾರ ಪೂರ್ಣ ಹರತಾಳವು

ಹೊಸದಾಗಿ ಸರಕಾರವು ಹೊರಡಿಸಿದ ಹೊಸ ಕಾನೂನನ್ನು ನಿಷೇಧಿಸುವದಕ್ಕಾಗಿ, ರಾಸಪೂರ, ಧೊಂಡಾರ, ಧೋಲೇರಾ ಮತ್ತು ಬೋರಸಾಲಾ ಈ ಸ್ಥಳಗಳಲ್ಲಿ ಒಂದು ವಾರ ಪೂರ್ಣ ಹರತಾಳ ಪಾಲಿಸಬೇಕಾಗಿ ನಿರ್ಧರಿಸಿವೆ

## ಸ್ವಯಂಸೇವಕರು ಸೆರೆಯಾಳಾದರು

ಕಾಯಿದೆಯನ್ನುಲ್ಲಂಘಿಸಿ ತಯಾರಿಸಿದ ಉಪ್ಪನ್ನು ತಂದದಕ್ಕಾಗಿ ೧೯ ಜನ ಸ್ವಯಂಸೇವಕರು ಹಿಡಿಯಲ್ಪಟ್ಟರು.

ಸುರತ ಕಾಲೇಜ ಹೆಬ್ಬಾಗಿಲದಿಂದ ೨೫ ಫೂಟ ಅಂತರದ ಮೇಲೆ ನಿಂತು ಪಿಕೆಟಿಂಗ ಮಾಡಬೇಕಾಗಿ ಪೋಲೀಸ ಅಧಿಕಾರಸ್ಥರು ಹುಕುಮು ತೆಗೆದಿದ್ದಾರೆ.

## ಗಡಂಗಗಳ ಮುಂದೆ ಸಶಸ್ತ್ರ ಪೋಲೀಸರು

ಲಾಹೋರದಲ್ಲಿ ಅನೇಕ ಜನರು ಪಿಕೆಟಿಂಗ ಮಾಡಿದ ಬಗ್ಗೆ ಸೆರೆಯಾಳಾಗಿದ್ದಾರೆ ಪರದೇಶೀ ಬಟ್ಟೆ, ಸೆರೆಯ ಅಂಗಡಿಗಳ ಮುಂದೆ ಸಶಸ್ತ್ರ ಹಾಗೂ ಸ್ವಂತ ಪೋಲೀಸ ಕಾವಲು ಇಡಲ್ಪಟ್ಟಿತು. ಪಿಕೆಟಿಂಗ ಮಾಡಲು ಬಂದ ಸ್ವಯಂಸೇವಕನು ಅಂಗಡಿಯ ಎದುರಿಗೆ ತಲುಪಿದ ಕೂಡಲೇ ಹಿಡಿಯಲ್ಪಡುವ ಕ್ರಮವು ೨೩ ನೇ ತಾ॥ ನ ದಿವಸ ಮುಂಜಾವಿನಲ್ಲಿ ನಡೆದದ್ದು ಹಾಗೇಯೇ ಎಷ್ಟು ಜನರು ಹಿಡಿಯಲ್ಪಟ್ಟರೆಂಬುದು ಅಂದಾಜಾಗಿಲ್ಲ.

## ಆಕಳ ಶಾಪವು

ಕಪ್ತಾನ ಬ್ಲ್ಯಾಕ ಎಂಬ ಒಬ್ಬ ಸೈನ್ಯಾಧಿಕಾರಿಗಳು ಬನಾರಸದಿಂದ ಕಾನಪುರಕ್ಕೆ ಮೋಟಾರಿನಲ್ಲಿ ಹೋಗುವಾಗ್ಗೆ ಒಂದು ಆಕಳ ಮೇಲೆ ಮೋಟಾರು ಹಾಯಿಸಿತು. ಮೋಟಾರವು ತಿರುವಿ ಬಿದ್ದಿತು. ಅದರಲ್ಲಿ ಕಪ್ತಾನನಾದ ಬ್ಲ್ಯಾಕನು ಸತ್ತನು ಬಟ್ಲರನಿಗೂ ಹಾಗೂ ಡ್ರಾಯವ್ಹರನಿಗೂ ಗಾಯಗಳಾಗಿವೆ. ಕೆಳಗೆ ಸಿಕ್ಕು ಒದ್ದಾಡಿದ ಆಕಳ ಶಾಪ ಹತ್ತಿ ಹೀಗಾಗಿರಬಹುದೋ!

## ರೇಲ್ವೇ ನೌಕರರಿಗೆ ಉಪದೇಶ

ಶ್ರೀಯುತ ರಾಯಕರ ಇವರು ೨೯ ನೇ ತಾ॥ ದಿವಸ ಝಾನ್ಸಿಗೆ ಬಂದರು, ಸುಮಾರು ೫೦೦೦ ಕೂಲಿಕಾರರು ಅವರನ್ನು ಸ್ಟೇಶನದ ಮೇಲೆಯೇ ಆದರಪೂರ್ವಕವಾಗಿ ಬರಮಾಡಿಕೊಂಡರು. ಸಂಜೆಯ ಮುಂದೆ ಸಭೆ ನೆರೆದು ಶ್ರೀ. ರಾಯಕರ ಇವರು ತಮ್ಮ ಉಪನ್ಯಾಸದಲ್ಲಿ ರೇಲ್ವೆ ಅಧಿಕಾರಿಗಳ ದುರ್ವರ್ತನವನ್ನು ನಿಷೇಧಿಸಿದರು. ಮುಖ್ಯವಾಗಿ ನೌಕರದಾರರಿಗೆ ಅವರು ಒಂದು ಮಹತ್ವವಾದ ಉಪದೇಶ ಮಾಡಿದರು. ನೌಕರದಾರರು ಕಾಂಗ್ರೆಸಕ್ಕೆ ಕೂಡಬೇಕೆಂತಲೂ ಸ್ವರಾಜ್ಯ ದೊರೆಕಿಸುವದಕ್ಕೆ ತಾವೂ ಪ್ರಯತ್ನ ಮಾಡಬೇಕೆಂದೂ ಮತ್ತು ಸ್ವರಾಜ್ಯ ದೊರಕದ ವಿನಃ ಅವರ ಸ್ಥಿತಿಯು ಒಳಿತಾಗುವದಿಲ್ಲವೆಂದೂ ಸ್ಪಷ್ಟೋಕ್ತಿಯಿಂದ ಹೇಳಿದರು.

## ಪಂಜಾಬದ ರಾಜಕೀಯ ಸಂಸ್ಥೆಗಳು

# ಕಾಯಿದೆಗೆ ವಿರುದ್ಧವಾದವು

ಕ್ರಿಮಿನಲ್ ಲಾ ಅಮೆಂಡಮೆಂಟ ಕಾಯಿದೆಯನ್ವಯ ಪಂಜಾಬ ಇಲಾಖೆಯ ಕೆಳಗೆ ಕಾಣಿಸಿದ ರಾಜಕೀಯ ಸಂಸ್ಥೆಗಳು ಸರಕಾರದ ಕಾಯಿದೆ ಮತ್ತು ಸುವ್ಯವಸ್ಥೆಗೆ ಬಾಧೆಯನ್ನುಂಟುಮಾಡುವಂಥವುಗಳೆಂದು, ಪಂಜಾಬದ ಗವ್ಹರ್ನರರು ಜಾಹೀರ ಪಡಿಸಿದ್ದಾರೆ. (೧) ಪಂಜಾಬ ಪ್ರಾಂತಿಕ ಯುದ್ಧ ಮಂಡಳ. (೨) ಅಮೃತಸರ ಜಿಲ್ಲೆಯ ಯುದ್ಧ ಮಂಡಲ. (೩) ಪಂಜಾಬ ಪ್ರಾಂತಿಕ ನವಜವಾನ ಭಾರತ ಸಭಾ. (೪) ಪಂಜಾಬ ಇಲಾಖೆಯ ಎಲ್ಲ ನವ ಜವಾನ ಭಾರತ ಸಭೆಗಳು. (೫) ಲಾಹೋರದಲ್ಲಿಯ ಕೆಲಸಗಾರರ ಶಾಲೆಯು.

ಪಂಜಾಬ ಇಲಾಖೆಯ ಕಾಂಗ್ರೆಸ ಮಂಡಲದವರು ಸರಕಾರದ ಪ್ರಕಟಣೆಗೆ ಎಳ್ಳಷ್ಟಾದರೂ ಲಕ್ಷ್ಯವಿಲ್ಲದೆ ಹೆಚ್ಚು ಉತ್ಸಾಹದಿಂದ ಕಾರ್ಯವನ್ನು ಮುಂಗೂಡಿಸಲು ನಿಶ್ಚಯಿಸಿದ್ದಾರೆ.

ಪಂಜಾಬ ಪ್ರಾಂತಿಕ ಕಾಯಿದೆ ಮಂಡಲದ ಅಧಿವೇಶನವು ಸಿಮ್ಲಾದಲ್ಲಿ ಜುಲೈ ತಿಂಗಳದ ೨೨ ನೇ ತಾರೀಖಿನಿಂದ ಪ್ರಾರಂಭವಾಗುವದಿದೆ.

### ಪುಣ್ಯತಿಥಿಯನ್ನಾಚರಿಸಿದ್ದಕ್ಕೆ ಶಿಕ್ಷೆ.

ದೇಶಬಂಧು ದಾಸರ ಪುಣ್ಯತಿಥಿಯ ದಿನ ಮೆರವಣಿಗೆಯಲ್ಲಿ ಭಾಗ ತೆಗೆದುಕೊಂಡದ್ದಕ್ಕಾಗಿ ಮತ್ತು ೧೪೪ ನೇ ಕಲಮನ್ನು ನಿಷೇಧಿಸಿದ್ದಕ್ಕಾಗಿಯೂ ಬಂಗಾಲ ಪ್ರಾಂತಿಕ ಹಿಂದೂ ಸಭೆಯ ಕಾರ್ಯದರ್ಶಿಗಳಾದ ಶ್ರೀ ಪದಮರಾಜ ಜೈನ ಮತ್ತು ಬುರ್ರಾಬಜಾರ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ಮದನ ಮೋಹನ ಮಿಸಾರನವರನ್ನು ಹಿಡಿಯಲ್ಪಟ್ಟಿದಾರೆ

### ಪೋಲೀಸರ ಪುಕ್ಕತನವು

ಅಮೃತಸರದಲ್ಲಿ ಒಂದು ಉಪಹಾರಗೃಹದಲ್ಲಿ ಬಾಂಬು ಹಾರಿತು. ಅದನ್ನು ಪೋಲೀಸರು ಕಾಯುತ್ತಿರುವರು. ಮತ್ತೊಂದು ಬಾಂಬು ಹಾಗೇ ಇರುವದು. ಅದು ಹಾರೀತೆಂಬ ಅಂಜಿಕೆಯಿಂದ ಪೋಲೀಸರು ಅದಕ್ಕೆ ಕೈಸಹ ಹಚ್ಚಿಲ್ಲ. ಮೊದಲಿನ ಬಾಂಬು ವಿದ್ಯುಚ್ಛಕ್ತಿಯಿಂದ ಹಾರಿತೆಂದು ತಿಳಿದಿದೆ. ಎರಡನೇ ಬಾಂಬು ಒಂದು ಸಣ್ಣ ಪೆಟ್ಟಿಗೆಯಲ್ಲಿ ಇಡಲ್ಪಟ್ಟಿದೆ. ಅದಕ್ಕೆ ವಿದ್ಯುತ್ ತಂತಿಗಳನ್ನು ಜೋಡಿಸಿರುವರಂತೆ!

### ಸಾಯಮನ ಸದಸ್ಯರ ಪ್ರತಿಮೆಗಳ ಹೋಳಿ

ಲಾಹೋರದಲ್ಲಿ ಸಾಯಮನ್ ಸಾಹೇಬರ ವರದಿಯ ನಿಷೇಧಾರ್ಥವಾಗಿ ಕರೇನಿಶಾನೆಗಳ ಮೆರವಣಿಗೆಯನ್ನು ತೆಗೆದಿದ್ದರು. ಗೋಲಬಾಗದಲ್ಲಿ ಪ್ರಚಂಡ ಜನಸಮುದಾಯದ ಸಭೆ ಸೇರಿತ್ತು. ಸಭೆ ಮುಗಿದ ನಂತರ ಸಾಯಮನ ಸದಸ್ಯರ ಪ್ರತಿಮೆಗಳನ್ನು ವರದಿಗಳ ಎರಡೂ ಭಾಗಗಳನ್ನು ದಹನಮಾಡಿದರು.

### ಕಾಂಗ್ರೆಸ ಕಮಿಟಿಯ ಮೇಲೆ ಪೋಲೀಸರ ಹಲ್ಲೆ.

೨೪ ನೇ ತಾರೀಖಿನ ದಿವಸ ಲಾಹೋರದ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಿಂದ ಪ್ರಾಂತಿಕ ಕಾಂಗ್ರೆಸ ಕಮಿಟಿ, ಮತ್ತು ನವಜೀವನ ಭಾರತ ಸಭೆಯ ಕಾರ್ಯವಾಹಕರಿಗೆ ತಮ್ಮ ಕಚೇರಿಯಲ್ಲಿದ್ದ ಎಲ್ಲ ಕಾಗದ ಪತ್ರಗಳು ಪೋಲಿಸರಿಗೆ ಒಪ್ಪಿಸುವ ಬಗ್ಗೆ ನೋಟೀಸು ಕೊಡಲ್ಪಟ್ಟಿತ್ತು. ಆ ಪತ್ರಗಳನ್ನು ಹಾಜರ ಪಡಿಸುವದರಿಂದ ಮೇಲ್ಕಾಣಿಸಿದ ಸಂಸ್ಥೆಗಳು ಕಾಯಿದೆಯನ್ನು ಮುರಿಯುವ ಪ್ರವರ್ತಕರಂಥವುಗಳೋ ಎಂಬುದನ್ನು ನಿಶ್ಚಿತ ಪಡಿಸುವದಾಗಿ ಆ ನೋಟೀಸಿನಲ್ಲಿ ಪ್ರಸಿದ್ಧಿಸಲ್ಪಟ್ಟಿತ್ತು. ಆದರೆ ರಾತ್ರಿ ೨ ಘಂಟೆಗೆ ೬೦ ಜನ ಪೋಲೀಸರು ಈ ಸಂಸ್ಥೆಗಳನ್ನು ಸುತ್ತಿ ಅವುಗಳಲ್ಲಿದ್ದ ಎಲ್ಲ ಕಾಗದ ಪತ್ರ, ಪಾವತಿಬುಕ್ಕು, ರಜಿಸ್ಟರ ಬುಕ್ಕು ಮತ್ತು ತಮ್ಮ ಕೈಗೆ ಸಿಕ್ಕವುಗಳನ್ನೆಲ್ಲ ತೆಗೆದುಕೊಂಡು ಹೋದರು. ಆದರೂ ಇಲ್ಲಿಯ ವರೆಗೆ ಯಾರೂ ಹಿಡಿಯಲ್ಪಟ್ಟಿಲ್ಲ.

### ಸಾಯಮನ್ ವರದಿಯ ಬಗ್ಗೆ ಸರ್ ಶಿವಸ್ವಾಮಿಯವರ ಮತವು.

ಸಾಯಮನ್ ವರದಿಯಲ್ಲಿ ಕಾಣಿಸಿದ ಶಿಫಾರಸುಗಳು ಅತ್ಯಪ್ರಿಯಕರ ಮತ್ತು ಅಸಮಾಧಾನಕರವಿವೆ. ಈ ವರದಿಯು ದೇಶದಲ್ಲಿಯ ಅಶಾಂತತೆಗೆ ಹೆಚ್ಚು ಆಸ್ಪದವನ್ನೀಯುವಂಥದಿದೆ. ಸಾಮ್ರಾಜ್ಯ ಸರಕಾರವು ಸದ್ಯದ ಪರಿಸ್ಥಿತಿಯನ್ನು ಪರ್ಯಾಲೋಚಿಸಿ, ಶಾಂತ ವಾತಾವರಣವನ್ನುತ್ಪನ್ನ ಮಾಡದ ಹೊರತು ಹಿಂದುಸ್ಥಾನದಲ್ಲಿ ಸುಖಶಾಂತಿಯು ನೆಲಗೊಳ್ಳಲಾರದು. ಈ ಪ್ರಶ್ನೆಯನ್ನು ಸರಕಾರವು ವಿಚಾರಿಸುವದು ಅತ್ಯವಶ್ಯಕವಾಗಿದೆ.

### ಶಾಲೆಕಾಲೇಜುಗಳಿಗೆ ಬಹಿಷ್ಕಾರ

ಮುಂಬಯಿಯಲ್ಲಿ ೨೪ ನೇ ತಾ|| ದಿನ ವಿಲ್ಸನ್ ಕಾಲೇಜದ ಪ್ರೊಫೆಸರರಾದ ಪಿ ಎ ವಾಡಿಯಾರವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ ಶಾಲೇ ಕಾಲೇಜುಗಳ ಬಹಿಷ್ಕಾರದ ಬಗ್ಗೆ ಪ್ರೊಫೆಸರರ ಮತ್ತು ವಿದ್ಯಾರ್ಥಿಗಳ ಚರ್ಚಾತ್ಮಕ ವ್ಯಾಖ್ಯಾನಗಳಾದವು. ಕಡೆಗೆ ಬಹಳ ವಿದ್ಯಾರ್ಥಿಗಳು ಬಹಿಷ್ಕಾರವೇ ಯುಕ್ತವೆಂದು ಮತಪಟ್ಟರು. ಆ ಸಭೆಯಲ್ಲಿ ವೃತ್ತಪತ್ರಿಕೆಗಳ ಪ್ರತಿನಿಧಿಗಳಿಗೆ ಆಸ್ಪದವಿದ್ದಿಲ್ಲ. ಉಳಿದ ಕಡೆಯ ಶಾಲೆ ಕಾಲೇಜುಗಳು ಇದರ ಬಗ್ಗೆ ವಿಚಾರಿಸುವದು ಯುಕ್ತವಲ್ಲವೇ?

### ಶ್ರೀಮತಿ ಅನಸೂಯಾಬಾಯಿ ಕಾಳೆಯವರು ಕೌನ್ಸಿಲಕ್ಕೆ ಶರಣು ಹೊಡೆದರು.

ಸರಕಾರದ ದಬ್ಬಾಳಿಕೆಗೆ ಬೇಸತ್ತು ಅದರ ನಿಷೇಧಕ್ಕಾಗಿ ಶ್ರೀಮತಿ ಅನಸೂಯಾಬಾಯಿ ಕಾಳೆಯವರು ಮಧ್ಯಪ್ರಾಂತದ ಕೌನ್ಸಿಲದಲ್ಲಿಯ ತಮ್ಮ ಸ್ಥಳಕ್ಕೆ ರಾಜೀನಾಮೆಯನ್ನಿತ್ತರು-

## ಕರೆನಿಶಾನಗಳ ಮೆರವಣಿಗೆ.

ಸಾಯಮನ್ ಕಮಿಶನ್ನಿನ ವರದಿಯ ನಿಷೇಧಾರ್ಥವಾಗಿ ಅಹಮದಾಬಾದದಲ್ಲಿ ಕಾಂಗ್ರೆಸ ಕಮೀಟಿಯಿಂದ ಕರೆ ನಿಶಾನೆಗಳ ಮೆರವಣಿಗೆಯು ತೆಗೆಯಲ್ಪಟ್ಟಿತು.

## ಸುರತಕಾಲೇಜ ಬಹಿಷ್ಕಾರ ಕಮಿಟಿಯು ಚೇರಮನ್ನರು ಸೆರೆಯಾಳಾದರು.

ಸತ್ಯಾಗ್ರಹ ಪತ್ರಿಕೆಯ ಸಂಪಾದಕರು ಕಾಲೇಜ ಬಹಿಷ್ಕಾರ ಕಮಿಟಿಯ ಚೇರಮನ್ನರು ಆದ ಶ್ರೀ ಜಿನಾಭಾಯಿ ದೇಸಾಯಿಯವರನ್ನು ಚಿಕ್ಲಿ ಎಂಬ ಹಳ್ಳಿಯಲ್ಲಿ ವ್ಯಾಖ್ಯಾನ ಮಾಡಿದ್ದಕ್ಕಾಗಿ ಇ. ಪಿ. ಕೊ. ೧೨೪ ನೇ ಕಲಮಿನನ್ವಯ ಸೆರೆಹಿಡಿದಿರುವರು. ಸೆರೆ ಸಿಂದಿ ಅಂಗಡಿಗಳ ಮುಂದೆ 'ಪಿಕೆಟಿಂಗ' ಮಾಡುವ ಸ್ತ್ರೀ ಸ್ವಯಂಸೇವಿಕೆಯರ ಪಥಕ ನಾಯಕರಾದ ಫೋಟಿಭಾಯಿ ಜಿಹ್ನಾಭಾಯಿ ಜೋಶಿಯವರನ್ನು ಹಿಡಿದಿರುವರು.

## ಕಧರ ನೋಡಿ ಬೆದರಿದನು

ಮುಂಬಯಿಯಲ್ಲಿ ಒಂದು ಹಾಯ ಸ್ಕೂಲಿನಲ್ಲಿ ತಯ್ಯಬಜಿ ಎಂಬ ಹೆಸರಿನ ಒಬ್ಬ ವಿದ್ಯಾರ್ಥಿಯು ಖಾದಿಯ ಟೊಪಿಗೆ ಹಾಕಿಕೊಂಡು ಕ್ಲಾಸಿನಲ್ಲಿ ಬೆಂಚಿನ ಮೇಲೆ ಕುಳಿತುಕೊಳ್ಳುತ್ತಿದ್ದನು ಒಬ್ಬ ಆಂಗ್ಲೋ ಇಂಡಿಯನ್ ಶಿಕ್ಷಕನು ಆ ಹುಡುಗನಿಗೆ ಬಹಳ ಸಿಟ್ಟುಮಾಡಿದನು. ಮತ್ತು ಖಾದಿಯ ವಿದ್ಯಾರ್ಥಿ ಯಾವ ಕೆಲಸವನ್ನಾದರೂ ವಿದ್ಯಾರ್ಥಿಗಳು ಮಾಡಿದರೆ ಆ ಶಾಲೆಯ ಮುಖ್ಯಾಧ್ಯಾಪಕನಿಗೆ ಸಹನವಾಗದು. ಎಂದು ಹೇಳಿ ಪುನಃ ಈ ಅಪರಾಧವನ್ನು ಮಾಡಕೂಡದೆಂದು ಆ ಹುಡುಗನಿಗೆ ಹೇಳಿದನು. ಕಧರಿಗೂ ಸಾಹೇಬರು ಬೆದರುವರೋ?

## ಬ್ರಿಟಿಶ್ ಬ್ಯಾಂಕುಗಳೊಳಗಿನ ಠೇವನ್ನು ತೆಗೆದುಕೊಳ್ಳಿರಿ.

ಮುಂಬಯಿಯ ವ್ಯಾಪಾರಿ ಸಂಸ್ಥೆಗಳ ಸಂಘದ ಸಭೆಯು ೨೩ ನೇ ತಾ|| ನ ದಿವಸ ಸೇರಿತ್ತು. ೫೦ ವ್ಯಾಪಾರಿ ಸಂಸ್ಥೆಗಳು ಸಭೆಯಲ್ಲಿ ಭಾಗವಹಿಸಿದ್ದವು, ಶ್ರೀ ಪುರುಷೋತ್ತಮದಾಸ ಠಾಕೂರದಾಸ ಇವರ ಅಧ್ಯಕ್ಷತೆಯಲ್ಲಿ ಕೆಳಗೆ ಬರೆದ ವಿಷಯಗಳು ತೀರ್ಮಾನಿಸಲ್ಪಟ್ಟವು:—

ಈ ಸಭೆಯು ಸರಕಾರವು ಹೊರಡಿಸಿದ ಹೊಸ ಕಾನೂನ ಗಳನ್ನು ತೀವ್ರವಾಗಿ ನಿಷೇಧಿಸುತ್ತದೆ.

ಬ್ರಿಟಿಶ್ ಎಕ್ಸಚೇಂಜ ಬ್ಯಾಂಕುಗಳಲ್ಲಿ ಠೇವಿಟ್ಟ ವ್ಯಾಪಾರಿ ಸಂಘಗಳು, ಆ ಹಣವನ್ನು ಅವುಗಳಿಂದ ಬೇಗನೆ ತೆಗೆದುಕೊಳ್ಳಲಿಕ್ಕೆ ಈ ಸಭೆಯು ಕೇಳಿಕೊಳ್ಳುತ್ತದೆ.

೨೦೦೦ ಜನ ವ್ಯಾಪಾರಸ್ಥರಿಂದ, ಕೆಲವು ಅವಧಿಯವರೆಗೆ ಎಲ್ಲ ವ್ಯವಹಾರವನ್ನು ನಿಲ್ಲಿಸುವ ಬಗ್ಗೆ ಕೇಳಿಕೊಂಡ ಅರಿಕೆಯು ವಿಚಾರಿಸಲ್ಪಟ್ಟಿತು, ಈ ಸಂಬಂಧದಿಂದ ಸ್ಥಿತಿಗತಿಯನ್ನು ವಿಚಾರಿಸಿ, ವರದಿಯನ್ನು ಮುಂದಿನ ವಾರದಲ್ಲಿಯೇ ಕೊಡಲು ಹದಿನೆಂಟು ಜನರ ಮಂಡಲವು ನಿಯಮಿಸಲ್ಪಟ್ಟಿತು.

## ಸಾಯಮನ್ನರ ಹುರುಳು ಹೊರಬಿದ್ದಿತು.

ಸಾಯಮನ್ನ ವರದಿಯ ಎರಡನೆಯ ಭಾಗವು ಹೊರಬಿದ್ದಿದೆ. ಅದರಲ್ಲಿ ಹನ್ನೆರಡು ಭಾಗಗಳನ್ನು ಮಾಡಿರುವರು. ಮೊದಲನೆಯ ಭಾಗದಲ್ಲಿ ವ್ಹಾಯಿಸರಾಯರೇ ಸೈನ್ಯಖಾತೆಯ ಹಾಗೂ ಸಂಸ್ಥಾನಗಳ ಮೇಲೆ ಕೇವಲ ವರಿಷ್ಠ ಅಧಿಕಾರಿಗಳಾಗಿರಬೇಕು. ಪ್ರಾಂತಿಕ ಸರಕಾರಗಳು ಮಾತ್ರ, "ಇದ್ದ ಹಾಗೆ ಇರಲಿ ಸಿದ್ಧಾಂತ" ಎಂಬ ತತ್ವದ ನಾಣ್ಣುಡಿಯಂತೆ ಉಳಿಯುವವು. ಎರಡನೆಯ ಭಾಗದಲ್ಲಿ ಕಾಯದೆ ಮಂಡಳಗಳನ್ನು ದೊಡ್ಡವಾಗಿ ಮಾಡಬೇಕೆಂದೂ ಮತ್ತು ಚುನಾವಣೆಯ ಪದ್ಧತಿಯು ಮಾತ್ರ ಹಾಗೇ ಉಳಿಯಬೇಕೆಂದೂ ಇರುವದು, ಮೂರನೆಯ ಭಾಗದಲ್ಲಿ ಮಾಯಿನ್ಯಾರಿಟಿಯ ಪ್ರಶ್ನೆಯನ್ನು ಎತ್ತಿರುವದು, ನಾಲ್ಕನೆಯ ಭಾಗದಲ್ಲಿ ಮಧ್ಯವರ್ತಿ ಸರಕಾರದ ಬಗ್ಗೆ ಬರೆದಿರುವರು. ಅಸೆಂಬ್ಲಿ ಹಾಗು ಕೌನ್ಸಿಲ ಆಫ್ ಸ್ಟೇಟಗಳು ಈಗ ಇದ್ದಂತೆಯೇ ಇರುವವು. ಅವುಗಳ ಚುನಾವಣೆಯ ಮಾರ್ಗಗಳಲ್ಲಿ ಮಾತ್ರ ಕೆಲವು ಬದಲಾವಣೆಗಳಾಗಿವೆ. ಐದನೇ ಭಾಗದಲ್ಲಿ ಹಿಂದುಸ್ಥಾನದ ಸಂರಕ್ಷಣ ಸಂಬಂಧವಾಗಿ ಉಲ್ಲೇಖವಿದೆ. ಹಿಂದುಸ್ಥಾನದ ಸಂರಕ್ಷಣ ಹಾಗೂ ಆಭ್ಯಂತರ ಸುರಕ್ಷಿತತೆಯ ಬಗ್ಗೆ ಕೆಲವು ಸೈನ್ಯವನ್ನು "ಬಾದಶಾಹೀ ಸೈನ್ಯ" ವೆಂದು ವ್ಹಾಯಿಸರಾಯನ ಅಧಿಕಾರಕ್ಕೆ ಒಳಪಡಿಸುವಂತೆ ಹಿಂದುಸ್ಥಾನ ಹಾಗೂ ಬ್ರಿಟನ್‍ದವರು ಕಮ್ಮಾಗಿ ಗೊತ್ತುಮಾಡಿಕೊಳ್ಳಬೇಕು. ಆ ಸೈನ್ಯದ ವೆಚ್ಚಕ್ಕಾಗಿ ಒಂದು ಕಾಯಂ ನಿಧಿಯನ್ನು ಕೂಡಬೇಕು. ಕಮಾಂಡರ - ಇನ್ - ಚೀಫನು ಇನ್ನು ಮುಂದೆ ಹಿಂದುಸ್ಥಾನ ಸರಕಾರದ ಸದಸ್ಯನಿರದೆ ವ್ಹಾಯಿಸರಾಯನ ಅಧಿಕಾರಕ್ಕೆ ಒಳಪಡಬೇಕು. ಆರನೇ ಭಾಗದಲ್ಲಿ ಬರ್ಮಾ ದೇಶವನ್ನು ಹಿಂದುಸ್ಥಾನದಿಂದ ಬೇರ್ಪಡಿಸಬೇಕೆಂದು ಇದೆ. ಏಳನೇ ಭಾಗದಲ್ಲಿ ಸಂಸ್ಥಾನಗಳ ಸಂಬಂಧ ವಿಚಾರ ಕೊಟ್ಟಿದೆ. ಎಂಟನೆಯ ಭಾಗದಲ್ಲಿ ಹಿಂದುಸ್ಥಾನ ಆರ್ಥಿಕ ಪ್ರಶ್ನೆಯು, ಒಂಭತ್ತನೆಯ ಭಾಗದಲ್ಲಿ ಆಯ್. ಸಿ. ಎಸ್. ಹಾಗೂ ಆಯ್. ಪಿ. ಎಸ್. ನೌಕರರ ಬಗ್ಗೆ. ಹತ್ತನೇ ಭಾಗದಲ್ಲಿ ಹಾಯಕೋರ್ಟುಗಳ ಬಗ್ಗೆ ಬರೆದಿರುವರು. ಹನ್ನೊಂದನೆಯ ಭಾಗದಲ್ಲಿ ಹಿಂದುಸ್ಥಾನ ಸರಕಾರ ಹಾಗೂ ಪಾರ್ಲಿಮೆಂಟುಗಳ ನಡುವಿನ ಸಂಬಂಧ ಹಾಗೂ ಇಂಡಿಯಾ ಕೌನ್ಸಿಲದ ರಚನೆಯಲ್ಲಿ ಕೆಲವು ಬದಲಾವಣೆಗಳ ಬಗ್ಗೆ ವಿಚಾರಗಳಿವೆ. ಹನ್ನೆರಡನೆಯ ಭಾಗದಲ್ಲಿ ಇವೆಲ್ಲ ಪ್ರಶ್ನೆಗಳನ್ನು ಉಪಸಂಹಾರ ಮಾಡಿರುವರು, ನಮ್ಮ ಪರಾಲಕ್ಷ್ಮಿನ ಗತ್ತನ್ನು ಸಾಯಮನ್ನರು ಚನ್ನಾಗಿ ಸಾಧಿಸಿದಂತಾಯಿತು. ನಿಜವಾದ ಹುರುಳು ಹೊರಬಿದ್ದಿತು.

---

**ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ**

**ಶ್ರೀ ಶಕ್ತಿ ನಾಟಕ ಮಂಡಳಿಯವರು**

**ಬಾಗಲಕೋಟೆ ಶಿವಾನಂದ ನಾಟಕ ಶಾಲೆಯಲ್ಲಿ**

ಶು. ಪ್ರವಾರ ತಾ|| ೨೭-೬-೩೦

ಶ್ರೀ ನಾರಾಯಣ ಹಿರೇಕರ ಕೃತ

**ಲಂಕಾದಹನ**

ಎಂಬ ನಾಟಕವನ್ನು ಅಭಿನಯಿಸುವರು

ಎಚ್, ವೆಂಕೋಬರಾವ.

ಪ್ರೊಪ್ರಾಯಿಟರ

---

ಈ ಪತ್ರಿಕೆಯು ಬಸಪ್ಪನವರ ಅಣ್ಣೆಪ್ಪನವರ ಮುದ್ರಣಾಲಯದ ಇವರಿಂದ ಬಾಗಲಕೋಟೆಯು.
ವಿದ್ಯಾರಣ್ಯ ಮುದ್ರಣ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

ಜಯ ಕರ್ನಾಟಕ

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬುಧವಾರದ ಹೊರ್ತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ] ಬಾಗಲಕೋಟೆ— ಶನಿವಾರ ತಿಥಿ ಆಷಾಢ ಶುದ್ಧ ೨ ಶಕೆ ೧೮೫೨ ತಾ|| ೨೮—೬—೩೦ [ಸಂಚಿಕೆ ೫೭

## ಪಂಡಿತ ಮೋತೀಲಾಲರ ಘೋಷಣೆ

ಮುಂಬಯಿಯಲ್ಲಿ ಮೋತೀಲಾಲರು ಮಾಡಿದ ಭಾಷಣದ ಸಾರಾಂಶವೇನಂದರೆ:— ಸದ್ಯಕ್ಕೆ ಪ್ರತಿಯೊಬ್ಬ ಭಾರತೀಯ ಸ್ತ್ರೀಪುರುಷರು ಒಂದು ಕೆಲಸ ಮಾಡಬೇಕಾಗಿದೆ. ಆ ಕೆಲಸವೆಂದರೆ, ಈಗಿನ ಸರಕಾರದ ಅನ್ಯಾಯ ಹಾಗೂ ಅತ್ಯಾಚಾರದ ಎಲ್ಲ ಕಾಯಿದೆಗಳನ್ನು ಭಂಗಮಾಡುವದು. ಮತ್ತು ಕಾಂಗ್ರೆಸ್ಸಕ್ಕೆ ಸೇರುವದು ಹಾಗು ಬ್ರಿಟಿಶ ಸಾಮ್ರಾಜ್ಯದ ಶಕ್ತಿಯನ್ನು ನಾಶಗೊಳಿಸುವದು ಇವು ಪ್ರತಿಯೊಬ್ಬನ ಕರ್ತವ್ಯಗಳು. ಮುಂಬಯಿ ನಾಗರಿಕರು ಅತ್ಯಂತ ಯಶಸ್ವಿಯಾಗಿ ಈ ಕಾರ್ಯ ಮಾಡಿರುವರು. ನಿಮ್ಮ ನ್ಯಾಯವಾದ ಎಲ್ಲ ಆಕಾಂಕ್ಷೆಗಳು ಸಿದ್ಧಿಸುವ ವರೆಗೆ ನೀವು ಎದೆಗುಂದದೆಯೂ, ಅನುಮಾನಪಡದೆಯೂ ಚನ್ನಾಗಿ ಧೈರ್ಯದಿಂದ ಈ ಯುದ್ಧವನ್ನು ಮುಂದೆ ಸಾಗಿಸಿರಿ. ಲಾಠಿಯು ಹಾಗೂ ಗುಳ್ಳುಗಳ ರಾಜ್ಯವು ನಡೆದಿದೆ. ಜನರ ಹುರುಪನ್ನು ಒತ್ತಿಕ್ಕಲು ಲಾಠಿಯನ್ನೂ ಮತ್ತು ಸತ್ಯವನ್ನು ಜಗತ್ತಿಗೆ ಗೊತ್ತಾಗದಂತೆ ಒತ್ತಿಕ್ಕಲು ಗುಳ್ಳು ಮಾರ್ಗವನ್ನೂ ಉಪಯೋಗಿಸುತ್ತಿರುವರು. ಒಂದು ರಾಷ್ಟ್ರವನ್ನು ಮೆಟ್ಟಿಸುವದಕ್ಕೆ ಮತ್ತೊಂದು ರಾಷ್ಟ್ರದ ಕೈಯಾಳುಗಳು ಕಿಂಗ್ಸ ಮೇಲೆಯೂ ತಮ್ಮ ಕೈಮಾಡಿದರೆಂದ ಮೇಲೆ ಆ ರಾಷ್ಟ್ರದ ಆಳಗಾಲವು ಸಮೀಪಿಸಿರುವದೆಂದು ನಾನು ನಿಮಗೆ ಖಚಿತವಾಗಿ ಹೇಳುತ್ತೇನೆ. ನಾನು ಕಣ್ಣುಮುಟ್ಟ ನೋಡಿದ ಸಂಗತಿಯ ಮೇಲಿಂದ ಈ ಯುದ್ಧವು ದಬ್ಬಾಳಿಕೆಗೆ ಸೊಪ್ಪುಹಾಕುವದಿಲ್ಲವೆಂದು ನನಗೆ ವಿಶ್ವಾಸವಿದೆ. ತಮ್ಮ ಮನಸಿಗೆ ಬಂದಷ್ಟು ಲಾಠಿಗಳನ್ನು ಅವರು ಒಡೆಯಲಿ! ಎಲುಬುಗಳನ್ನು ಮುರಿಯಲಿ! ಬಡತನದ ಭಾರತೀಯರು ಬೆದರಲಾರರು. ಈ ಸ್ವಾತಂತ್ರ್ಯ ಯುದ್ಧದಲ್ಲಿ ಒಂದೆರಡು ಲಕ್ಷ ಹಿಂದುಪುತ್ರರು ವೀರಸ್ವರ್ಗವನ್ನು ಹೊಂದಿದರೂ ಏನು ಹಾನಿಯಾಗುವದು! ಕೋಟಿಗಟ್ಟಲೆ ಹಿಂದುಪುತ್ರರು ಜೀವಂತರಿರುವರು, ನಮ್ಮ ರಾಷ್ಟ್ರದ ಇತಿಹಾಸದಲ್ಲಿಯಾಗಲಿ, ಇಲ್ಲವೆ ಬೇರೆ ರಾಷ್ಟ್ರಗಳ ಇತಿಹಾಸದಲ್ಲಿಯಾಗಲಿ, ಇಲ್ಲಿನ ಸ್ತ್ರೀಯರ ಶೌರ್ಯವು ಕಂಡುಬರಬಹುದು. ಆದರೆ ಈಗಿನಂತೆ ಅವರು ತಮ್ಮ ಬಂಧುಗಳ ಸಂಗಡ ಹಗಲಿಗೆ ಹಗಲು ಕಟ್ಟಿ ಸತ್ಯಾಗ್ರಹ ನಡಿಸಿದ ಸಂಗತಿಯು ಮಾತ್ರ ಅಪೂರ್ವವಾಗಿರುವದು. ಇದರಿಂದ ನಮ್ಮ ಪಕ್ಷಕ್ಕೆ ಜಯಲಕ್ಷ್ಮಿಯು ತೀವ್ರವೇ ಮಾಲೆ ಹಾಕುವಳೆಂದೂ, ನಮ್ಮ ಶತ್ರುಪಕ್ಷಕ್ಕೆ ಅದಿಲಕ್ಷ್ಮಿಯು ಬೆನ್ನುಹತ್ತಿರುವಳೆಂದೂ ನನಗೆ ಕಂಡುಬರಹತ್ತಿದೆ.

## ವ್ಯಾಪಾರಸ್ಥರಿಗೆ ಎಚ್ಚರಿಕೆ

ಇನ್ನು ಮುಂದೆ ವ್ಯಾಪಾರಸ್ಥರು ಪರದೇಶೀ ಸಾಮಾನುಗಳ ಬಹಿಷ್ಕಾರವನ್ನು ಮುಂದೆ ಸಾಗಿಸಬೇಕೆಂತಲೂ ಈ ಕೆಲಸದಲ್ಲಿ ಸ್ವಯಂಸೇವಕರಿಗೆ ಸಹಾಯ ಮಾಡಬೇಕೆಂತಲೂ ಹೇಳಿದರು. ಯಾವ ಯುರೋಪಿಯನ್ ಅಂಗಡಿಕಾರರು ಮುಂಬಯಿಯಲ್ಲಿಯ ಈ ಎಲ್ಲ ಅನಾಹುತಕ್ಕೆ ಕಾರಣರಾಗಿರುವರೋ, ಅಂಥವರ ಅಂಗಡಿಗಳಿಗೆ ಒಬ್ಬ ಭಾರತೀಯನೂ ಸಹ ಹೋಗತಕ್ಕದ್ದಲ್ಲವೆಂದೂ, ಎಲ್ಲ ಬ್ರಿಟಿಶ ಸರಕುಗಳ ಮೇಲೆ ಬಹಿಷ್ಕಾರ ಹಾಕಿ ಅವರಿಗೆ ರೊಕ್ಕ ಸಿಗದಂತೆ ಮಾಡಿ ಅವರನ್ನು ಹಣ್ಣಿಗೆ ತರಬೇಕೆಂದೂ ಹೇಳಿದರು.

## ಸಾಯಮನ ವರದಿಗೆ ಛೀ! ಥೂ!

ಕೆಲವರಿಗೆ ಮಾತ್ರ ಈ ವರದಿಯು "ನೆಚ್ಚಿದ ಎಮ್ಮೆಯು ಕೋಣ ಈಯಿತು" ಎಂಬಂತೆ ಆಗಿರಬಹುದು, ಆದರೆ ಇದು ಕೋಣ ಈಯುವದೆಂದು, ನನಗೂ ಕಾಂಗ್ರೆಸ್ ಜನರಿಗೂ ಎಂದೋ ಗೊತ್ತಾಗಿತ್ತು. ಸಾಯಮನ ಮಂಡಳವು ಬಂದಾಗಲೂ ಲಾಠೀ ಹೊಡತಗಳು ಹೊರಬಿದ್ದವು! ಈಗಲೂ ಲಾಠಿಗಳು ಹೊರಬಿದ್ದಿವೆ. ಈ ಲಾಠಿಯ ಹೊಡತಕ್ಕೆ ಭಾರತದಲ್ಲಿ ರಕ್ತ ದಂತಿರುವ ಲಾಲಾಜಿಯವರೂ ಆಹುತಿಯಾದರು. ನಾನೂ ಲಖನೌದಲ್ಲಿ ಈ ಲಾಠೀ ಹೊಡತದ ರುಚಿ ಕಂಡಿರುವೆನು. ಅಂತೂ ಈ ವರದಿಯು ಈ ಲಾಠಿಗಳ ಎರಡೂ ತುದಿಗಳನ್ನು ತೋರಿಸಿಕೊಟ್ಟಿತು. ಇದನ್ನು ಓದುವದೆಂದು ರಾಷ್ಟ್ರೀಯ ಅಪರಾಧವು. ಇದನ್ನು ಕೇಳ್ವದೊಂದು ಪಾಪವು. ಒಂದಾನೆ ಕೊಟ್ಟು ಇದರ ಸಾರಾಂಶವುಳ್ಳ ಒಂದು ಪತ್ರ ಮಾತ್ರ ಕೊಳ್ಳಿರಿ. ಅದನ್ನು ನಿಮ್ಮ ಕಾಲಕೆಳಗೆ ಹಾಕಿ ತುಳಿಯಿರಿ. ಅದನ್ನು ಜೋಪಾನವಾಗಿ ಕಸದ ಗಟಾರದಲ್ಲಿ ಹಾಕಿರಿ. ಮತ್ತೊಮ್ಮೆ ಅದರ ಹೆಸರನ್ನು ಸಹ ಉಚ್ಚರಿಸಬೇಡಿರೆಂದು ಹೇಳಿದರು.

## ೧೬ ವರ್ಷದ ಹುಡಿಗಿಗೆ ಶಿಕ್ಷೆ.

ಶ್ರೀ ಪದ್ಮರಾಜ ಜೈನರವರ ಪುತ್ರಿಯಾದ ಶ್ರೀಮತಿ ಇಂದುಮತಿ ಬಾಯಿಯು, ಪೋಲೀಸರು ತಮ್ಮ ನವಕರಿಗೆ ತಿಲಾಂಜಲಿಯನ್ನೀಯುವ ಬಗ್ಗೆ ಹೊರಡಿಸಿದ ಹಸ್ತ ಪತ್ರಿಕೆಯ ಸಂಬಂಧದಿಂದ ಹಿಡಿಯಲ್ಪಟ್ಟಳು. ಅವಳ ಖಟ್ಲೆಯು ವಿಚಾರಣೆಗೆ ಬಂದಾಗ್ಗೆ ನೂರಾರು ಜನ ಸತ್ಯಾಗ್ರಹಿಗಳೂ, ಸ್ವಯಂಸೇವಕರೂ ಮತ್ತು ಮಾರವಾಡಿಗಳೂ ಕೋರ್ಟಿನಲ್ಲಿ ಹಾಜರಿದ್ದರು. ಅವಳಿಗೆ ೯ ತಿಂಗಳ ಶಿಕ್ಷೆಯು ವಿಧಿಸಲಾಯಿತು. ಶ್ರೀಮತಿ ಇಂದುಮತಿಬಾಯಿಯು ೧೬ ವರ್ಷದ ಬಾಲಿಕೆಯಾದರೂ ಶಿಕ್ಷೆಯನ್ನು ವಂದೇಮಾತರಂ ಗರ್ಜನೆಯಲ್ಲಿ ಆತ್ಮಾನಂದದಿಂದ ಸ್ವೀಕರಿಸಿದಳು. ಕಲಕತ್ತೆಯ ಎಲ್ಲ ಸ್ತ್ರೀಯರು ಇಂದುಮತಿಬಾಯಿಯನ್ನು ಜೇಲಿನ ವರೆಗೆ ಮೆರವಣಿಗೆಯಿಂದ ಹಿಂಬಾಲಿಸಿದರು. ಈ ವರೆಗೆ ಶಿಕ್ಷೆಯಾದವರಲ್ಲಿ ಇವಳೇ ಮೊದಲಿನ ಸ್ತ್ರೀಯು.

ಕಾಯಿದೆಯನ್ನು ಮುರಿದು ಮೆರವಣಿಗೆಯನ್ನು ಹೊರಡಿಸಿದ ಬಗ್ಗೆ ಶ್ರೀಮತಿ ಮೋಹಿನಿದೇವಿ, ಊರ್ಮಿಳಾದೇವಿ, ವಿಮಲಪ್ರತಿಭಾದೇವಿ, ಇಕೀ ಮೊದಲಾದ ಸ್ತ್ರೀಯರ ಮೇಲೆ ಸಮನ್ಸಗಳು ಹೊರಟಿವೆ

## ಪಠಾಣರು ರಾಷ್ಟ್ರೀಯ ಸಭೆಯಲ್ಲಿ ಸೇರಿದರು

ಅಂಬರನಾಥದಲ್ಲಿ ಲೇಬರ ಯೂನಿಯನ್ ಶಾಲೆಯ ಮುಂದಿನ ಮೈದಾನದಲ್ಲಿ ಪಠಾಣ ಲಾಲಖಾನರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಮುದಾಯದ ಸಭೆ ನೆರೆದಿತ್ತು. ರಾಷ್ಟ್ರೀಯ ಮುಖಂಡರಾದ ಮೌಲ್ವಿ ರಹೀಮುದ್ದೀನ, ಮಹಮ್ಮದ ಇಬ್ರಾಹಿಮ, ಕುಮಾರಿ ಭಾತಬಾಯಿ ವಾಗಳೆ, ಕುಮಾರಿ ಘೇರುಬಾಯಿ. ಎಂ ದೇಸಾಯಿ ವಾರೇಕರ ಮಾಮಾ ಶ್ರೀಯುತರುಗಳಾದ ಸಹಸ್ರಬುದ್ಧೆ ಜೋಗಳೇಕರರು ರಾಷ್ಟ್ರೀಯ ಮಹಾಸಭೆಯ ಸಂದೇಶವನ್ನು ತಿಳಿಸಿ, ಪರದೇಶಿ ಅರಿವೆ, ಪರದೇಶಿ ಮಾಲುಗಳಿಗೆ ಬಹಿಷ್ಕಾರ ಹಾಕಿ, ಸ್ವದೇಶಿ ಅರಿವೆಯನ್ನು ಧರಿಸಲು ಉಪದೇಶಿಸಿ, ಜನರಲ್ಲಿ ಒಳ್ಳೇ ಜಾಗ್ರತೆಯನ್ನುಂಟುಮಾಡಿದರು.

## ಬ್ರಿಟಿಶರಿಗೂ ಸಹ ಪಾಸಪೋರ್ಟ ಸಿಗಲಿಲ್ಲ.

ಸಾಮ್ರಾಜ್ಯ ವಿರೋಧಕ ಸಂಘದ ಸಭಾಸದರಾದ ಕಾಂಪಬೆಲ್ಲ ಮತ್ತು ಬಿಜ್ಜಮನ್ನರು ಹಿಂದುಸ್ಥಾನಕ್ಕೆ ಹೋಗುವಗೋಸ್ಕರ ಪಾಸಪೋರ್ಟ ದೊರೆಯಲು ಶಿಫಾರಸು ಮಾಡಬೇಕಾಗಿ ಕೇಳಿಕೊಂಡದಕ್ಕೆ, ತಾವು ಆ ಬಗ್ಗೆ ಅನುಕೂಲತೆಯನ್ನು ಪೂರೈಸಿಕೊಡಲಾರೆವೆಂದು ಉತ್ತರವನ್ನಿತ್ತ ಸಂಗತಿಯನ್ನು ಬೆನ್ನರು ಕಿಂಗ್ಸಲೀವುಡ್‌ರವರಿಗೆ ಅರುಹಿದರು.

## ಮುಂಬಯಿಯಲ್ಲಿ ಪಿಕೆಟಿಂಗು ಜೋರಿನಿಂದ ಸಾಗಿದೆ.

ಮುಂಬಯಿಯ ಕಿಲ್ಲೆಯಲ್ಲಿ ಸ್ವಯಂಸೇವಕರು ಪಿಕೆಟಿಂಗನು ಬಹು ಜೋರಿನಿಂದ ಸಾಗಿಸಿದ್ದಾರೆ. ೨೫ ನೇ ತಾರೀಖಿನ ದಿವಸ ೧೦ ಜನ ಸ್ವಯಂಸೇವಕರು ಹಿಡಿಯಲ್ಪಟ್ಟರು. ಎಲ್ಲರಿಗೂ ನಾಲ್ಕು ತಿಂಗಳ ಶಿಕ್ಷೆಯಾಗಿದೆ. ಅವರಲ್ಲಿ ನಾಲ್ವರು ತೀರ ಚಿಕ್ಕವರಿದ್ದುದರಿಂದ ಸಾದಾ ಶಿಕ್ಷೆಯೂ ಉಳಿದವರಿಗೆ ಸಕ್ರಮ ಶಿಕ್ಷೆಯೂ ವಿಧಿಸಲಾಗಿದೆ.

## ಸಂಕನಾಳದಲ್ಲಿ ಶಿಂದೀ ಗಿಡಗಳ ನಾಶ

ಬಾಗೆವಾಡಿ ತಾಲೂಕ ಸಂಕನಾಳ ಗ್ರಾಮದ ಒಂದು ಹೊಲದಲ್ಲಿಯ ೪೫ ಗಿಡಗಳನ್ನು ಕಡಿಯುವದಕ್ಕೆ ಇಲ್ಲಿಂದ ೧೬ ಜನ ಸ್ವಯಂಸೇವಕರು ೨೧ ನೇ ತಾರೀಖಿಗೆ ಹೋದೆವು. ನಾವು ಅಲ್ಲಿ ಮುಟ್ಟಿದೊಡನೆ ನಮ್ಮ ಉದ್ದೇಶವನ್ನು ಅಲ್ಲಿಯ ಗ್ರಾಮವಾಸಿಗಳಿಗೆ ಅರುಹಿ ಆ ಜಮೀನಿದ್ದ ಸ್ಥಳವನ್ನು ಕೇಳಿಕೊಂಡೆವು ಆದರೆ ಅಲ್ಲಿಯೇ ಇದ್ದ ಆಲೂರ ಕುಲಕರ್ಣಿಯು ನಾವು ತಿಳಿಸಿದ ಸರ್ವೆ ನಂಬರದ ಭೂಮಿಯು ಆ ಗ್ರಾಮ್ಯದಲ್ಲಿಯೇ ಇಲ್ಲವಾಗಿ ಹೇಳಿದನು. ಹೀಗೆ ಸುಮ್ಮನೆ ವೇಳೆಯನ್ನು ಕಳೆಯುವದು ಅನುಚಿತವೆಂದು ತಿಳಿದು ಮರುದಿವಸ ಮುಂಜಾನೆ ವಿಚಾರಿಸೋಣವೆಂದು ಸ್ವಸ್ಥಾನಕ್ಕೆ ತೆರಳಿದೆವು. ಅಷ್ಟರಲ್ಲಿಯೇ ಆ ಗ್ರಾಮದಲ್ಲಿದ್ದ ನಮ್ಮೋರ್ವ ಮಿತ್ರರು, ಮರುದಿವಸ ನಸುಕಿನಲ್ಲಿಯೇ ನಾನು ನಿಮಗೆ ಆ ಸರ್ವೆ ನಂಬರದ ಜಮೀನನ್ನು ತೋರಿಸುವೆನೆಂದು ಆಶ್ವಾಸನವಿತ್ತರು. ನಾವು ಇಳಿದುಕೊಂಡ ಹನುಮಂತದೇವರ ಗುಡಿಯಲ್ಲಿಯೇ ನಾವು ತಂದ ಅಲ್ಪಾಹಾರವನ್ನು ತೀರಿಸಿ ಮಲಗಿಕೊಂಡೆವು. ಯಾವದೋ ಕಾರಣದ ನಿಮಿತ್ತವಾಗಿ ಊರಲ್ಲಿಲ್ಲದ ಆ ಹಳ್ಳಿಯ ಗೌಡನು ರಾತ್ರಿ ೧೧ ಗಂಟೆಯ ಸುಮಾರಕ್ಕೆ ಊರಿಗೆ ಬಂದು ಕೂಡಲೇ ನಾವಿದ್ದ ಸ್ಥಳಕ್ಕೆ ಬಂದನು. ಮಲಗಿದ ನಮ್ಮೆಲ್ಲರನು ಕೂಗಿ ಎಬ್ಬಿಸಿ ಇಲ್ಲದ ಸಲ್ಲದ ಬೆದರಿಕೆಯನ್ನು ಹಾಕಿ, ನೀವು ಗಿಡಗಳನ್ನು ಹ್ಯಾಗೆ ಕಡಿಯುವಿರಿ ನೋಡುತ್ತೇನೆ ಎಂದು ಏನೇನೋ ಒದರಿದನು. ಅವನ ಈ ಬೆದರಿಕೆಗೆ ನಾವು ಸೊಪ್ಪುಹಾಕದ್ದರಿಂದ, ಅಪರಾತ್ರಿಯಲ್ಲಿಯೇ ಹೊಲೆಯರನ್ನು ಬಾಗೇವಾಡಿಗೆ ಕಳುಹಿ ನಾವು ನಸುಕಿನಲ್ಲಿ ಏಳುತ್ತಿರುವಾಗಲೇ ಈರ್ವರ ಪೋಲೀಸರು ಮತ್ತು ಒಬ್ಬ ಹವಾಲದಾರನನ್ನು ತರಿಸಿಯೇ ಬಿಟ್ಟಿದ್ದನು. ಮೊದಲೇ ನಿಶ್ಚಯಿಸಿದಂತೆ, ಪ್ರಾತರ್ವಿಧಿಗಳನು ತೀರಿಸಿಕೊಂಡು ನಾವೆಲ್ಲರೂ ನಮ್ಮ ಮಿತ್ರನೊಂದಿಗೆ ಆ ಹೊಲಕ್ಕೆ ಹೋಗಿ, ಎರಡು ತಾಸು ಹೊತ್ತು ಏರುವದರೊಳಗಾಗಿಯೇ ೧೦-೧೨ ಗಿಡಗಳನ್ನು ನೆಲಕ್ಕುರುಳಿಸಿದೆವು ಅಷ್ಟರಲ್ಲಿಯೇ ಗೌಡನು ಊರಲ್ಲಿಯ ಕೆಲವು ಜನರನ್ನು ಕರೆದುಕೊಂಡು ಬಂದು ನಮಗೆ ಬುದ್ಧಿವಾದವನ್ನು ಹೇಳಲಾರಂಭಿಸಿದನು ಪೋಲೀಸರು ಬಂದಿರುವರು. ಅವರು ನಿಮ್ಮನ್ನು ಹಿಡಕೊಂಡು ಹೋಗುವರೆಂಬದಾಗಿ ಏನೇನೋ ಒದರಹತ್ತಿದನು. ಅಲ್ಲಿಯೇ ಬಂದ ಹವಾಲದಾರನು ಕೆಲವು ಅಂತರದ ಮೇಲೆ ಎಲ್ಲ ಜನರನ್ನು ಕಳಿಸಿ, ನೀವು ಕಡಿಯಲು ಬಂದ ಗಿಡಗಳ ಬಗ್ಗೆ ಹೊಲದ ಮಾಲಕನಿಂದ ಸಮ್ಮತಿಯನ್ನು ದೊರಕಿಸಿರುವಿರೋ ಎಂದು ವಿಚಾರಿಸಿದನು. ಮತ್ತು ನಮ್ಮೆಲ್ಲರ ಹೆಸರುಗಳನ್ನು ಟಿಪ್ಪಣಿ ಮಾಡಿಕೊಂಡನು. ಮುಂದೆ ೧೨ ಗಂಟೆಗೆ ಎಲ್ಲ ಗಿಡಗಳನ್ನು ಸಂಹರಿಸಿ ನಾವಿಳಿದ ಸ್ಥಳಕ್ಕೆ ಬಂದೆವು. ಸ್ನಾನಭೋಜನಾದಿಗಳನ್ನು ತೀರಿಸಿಕೊಂಡು ತಿರುಗಿ ೨೨ ನೇ ತಾ|| ನ ರಾತ್ರಿ ಗಾಡಿಗೆ ಬಾಗಲಕೋಟೆಗೆ ಬಂದೆವು. ಸಂಕನಾಳ ಗೌಡನ ಈ ಉಪದ್ವ್ಯಾಪ ಕೃತಿಯನ್ನು ನೋಡಿ ಉಳಿದ ಹಳ್ಳಿಯ ಗೌಡರು ಬುದ್ಧಿಗಲಿಯಲಿ!

—ಓರ್ವ ಸ್ವಯಂಸೇವಕ

# ಸ ರ ದಾ ರ
# ವಲ್ಲಭಭಾಯಿಯವರ ಬಿಡುಗಡೆ

ಸರದಾರ ವಲ್ಲಭಭಾಯಿ ಪಟೇಲರು ೨೬ ನೇ ತಾ|| ದಿನ ಮಧ್ಯಾಹ್ನಕ್ಕೆ ಸಾಬರಮತಿ ಜೇಲಿನಿಂದ ಬಿಡುಗಡೆ ಹೊಂದಿದ್ದಾರೆ. ಇವರು ಅಲ್ಲಿಂದಲೇ ಸಾಬರಮತಿ ಆಶ್ರಮಕ್ಕೆ ತೆರಳಿದರು.

## ಬಂಡೀಗಾಲಿಯ ಪರಿಷತ್ತು
### ದಿಲ್ಲಿಯಲ್ಲಿ ಸೇರಬೇಕು.
ಸರಕಾರದ ಹೊಸ ಜಾಹೀರನಾಮೆಯ ಅವಶ್ಯಕತೆ.

ಪಂಡಿತ ಮಾಲವೀಯರು ದಿಲ್ಲಿಯಲ್ಲಿ ಸೇರಿದ ಸಭೆಯಲ್ಲಿ ಈ ಪ್ರಕಾರ ಭಾಷಣ ಮಾಡಿದ್ದಾರೆ. ಮಾಂಟಫೋರ್ಡ ಸುಧಾರಣೆಗಳು ಜೊಳ್ಳಾದವುಗಳೆಂದು ಸಾಯಮನ್ ಸಪ್ತಕದ ವರದಿಯಿಂದಲೇ ಪ್ರಕಟವಾಗುವಂತಿದೆ. ಸಧ್ಯದ ಪರಿಸ್ಥಿತಿಯಲ್ಲಿ ನಮಗೆ ಅವಶ್ಯವಾದ ಕಾರ್ಯಕ್ರಮವೆಂದರೆ, ಪರದೇಶಿ ವಸ್ತುಗಳ ಬಹಿಷ್ಕಾರವನ್ನು ಹೆಚ್ಚು ಮನಃಪೂರ್ವಕವಾಗಿ ಮುಂದೂಡುವದಾಗಿದೆ. ಬ್ರಿಟಿಶ್ ಸರಕಾರವು ಸಾಮಂತ ಸ್ವರಾಜ್ಯವನ್ನು ಕೊಡುವ ಬಗ್ಗೆ ಜಾಹೀರ ಪಡಿಸಬೇಕು ಮತ್ತು ಈ ವಿಷಯದ ಸಂಬಂಧವಾಗಿ ಚರ್ಚೆಯಾಗಲು ಅವಕಾಶಕೊಡುವುದು ಅವಶ್ಯಕತೆಯುಂಟು. ಈ ತರದ ಜಾಹೀರನಾಮೆಯನ್ನು ಸರಕಾರವು ಪ್ರಸಿದ್ಧಿಸದಿದ್ದರೆ, ಬಂಡೀಗಾಲಿಯ ಪರಿಷತ್ತನ್ನು ಬಹಿಷ್ಕರಿಸಲೇ ಬೇಕು ಮತ್ತು ಆ ಪರಿಷತ್ತು ಲಂಡನ್ನದಲ್ಲಿ ಸೇರದೆ ದಿಲ್ಲಿಯಲ್ಲಿ ಕೂಡತಕ್ಕದ್ದು.

## ಆಚಾರ್ಯ ಗಿಡ್ವಾನಿ ಮತ್ತು
## ಸ್ವಾಮಿ ಗೋವಿಂದಾನಂದರು ಹಿಡಿಯಲ್ಪಟ್ಟರು

ಆಚಾರ್ಯ ಗಿಡ್ವಾನಿ, ಲಾಲಜಿ ಮೆಹ್ರೋತ್ರಾ, ಮತ್ತು ಸ್ವಾಮಿ ಗೋವಿಂದಾನಂದರು ೨೫ ನೇ ತಾ || ನ ದಿವಸ ಕರಾಚಿಯಲ್ಲಿ ಪಿನಲ್ ಕೋಡ ೧೧೭ ಮತ್ತು ೪೭ ಉಪ್ಪಿನಕಾಯಿದೆಗಳನ್ವಯ ಸೆರೆ ಹಿಡಿಯಲ್ಪಟ್ಟಿದ್ದಾರೆ. ಇವರಲ್ಲಿ ಮೊದಲಿನ ಈರ್ವರಿಗೆ ೧ ವರ್ಷದ ಸಕ್ತ ಶಿಕ್ಷೆ ವಿಧಿಸಲಾಗಿದೆ. ಇವರನ್ನು 'ಬ' ವರ್ಗದ ಕೈದಿಗಳಾಗಿ ಶಿಫಾರಸು ಮಾಡಿದ್ದಾರೆ ಸ್ವಾಮಿ ಗೋವಿಂದಾನಂದರ ವಿಚಾರಣೆಯು ಮರುದಿವಸಕ್ಕೆ ಬಿದ್ದಿದೆ.

## ಅಗಾಧ ಶೋಧವು

ಬರ್ಲಿನದಲ್ಲಿ ಸರ ಆರ್ಥರ ಎಂಬ ಒಬ್ಬ ಶಾಸ್ತ್ರಜ್ಞನು ಒಂದು ಅಗಾಧವಾದ ಹೊಸ ಶೋಧವನ್ನು ಮಾಡಿರುವನು. ಇಂಜನುಗಳಿಗೆ ಕಲ್ಲಿದ್ದಲಿ, ಹಾಗೂ ಎಣ್ಣೆಗಳನ್ನು ಹಾಕುವ ಅವಶ್ಯಕತೆಯಿಲ್ಲವಂತೆ. "ಪರಮಾಣುಗಳ ಅಂತಃಶಕ್ತಿ" ಎಂಬ ಹೊಸಶಕ್ತಿಯನ್ನು ಹುಡುಕಿರುವನು. ಒಂದು ಒಟ್ಟಲ ತುಂಬುವಷ್ಟು ಈ ಶಕ್ತಿಯನ್ನು ಸಂಗ್ರಹಿಸಿಟ್ಟರೆ ಒಂದು ವರ್ಷ ಸಾಕಾಗುವಷ್ಟು ಸಾಮಗ್ರಿಯು ಇಂಜನುಗಳಿಗೆ ಪೂರೈಸುವದಂತೆ. ಇದು ಸಾಹೇಬರ ವ್ಯಾಖ್ಯಾನವಾಯಿತು. ಸ್ವತಃ ಈ ಶೋಧದ ಪ್ರಯೋಗಮಾಡಲಿಕ್ಕೆ ಸುರುವು ಮಾಡಲಿ.

## ದೇಶಬಂಧು ದಾಸರ ಭಗಿನಿಯು ಸೆರೆಯಾಳಾದಳು.

ಸ್ತ್ರೀ ಸತ್ಯಾಗ್ರಹ ಮಂಡಳದ ಅಧ್ಯಕ್ಷರಾದ ಶ್ರೀಮತಿ ಊರ್ಮಿಲಾದೇವಿಯವರೂ, ಕಾರ್ಯದರ್ಶಿಗಳಾದ ವಿಮಲ ಪ್ರತಿಭಾದೇವಿಯವರೂ ಕಮ್ರೇರ್ಸ ಸಂಗಡಿಗರಾದ ಶ್ರೀಮತಿ. ಪಾರ್ವತಿದೇವಿ ಮತ್ತು ಪ್ರಮೀಲಾದೇವಿಯವರೊಡನೆ ೧೧೭ ಕಲಮಿನನ್ವಯ ಹಿಡಿಯಲ್ಪಟ್ಟರು. ಕಾಯಿದೆಯನ್ನು ಮುರಿದು ಮೆರವಣಿಗೆಯನ್ನು ಹೊರಡಿಸಿದ ಬಗ್ಗೆ ಶ್ರೀಮತಿಯರಾದ ಮೋಹಿನೀದೇವಿ, ಮತ್ತು ಜೋಶಿಮಾಯಿಯವರ ಮೇಲೆ ವಾರಂಟು ಹೊರಟಿರುವದಾಗಿ ತಿಳಿಯುತ್ತದೆ.

## ವಿದ್ಯಾರ್ಥಿಗಳ ನಿರ್ಧಾರ

ಸುರತದಲ್ಲಿಯ ಕಾಲೇಜ ವಿದ್ಯಾರ್ಥಿಗಳ ಸಭೆಸೇರಿ ಒಂದು ವರ್ಷದ ವರೆಗೆ ಯಾವ ವಿದ್ಯಾರ್ಥಿಗಳೂ ಕಾಲೇಜಕ್ಕೆ ಹೋಗಕೂಡದಾಗಿ ಗೊತ್ತಾಯಿತು. ಅಧ್ಯಾಪಕರು ಈ ಚಳವಳಿಯಲ್ಲಿ ಮಾರ್ಗದರ್ಶಕರಾಗಬೇಕು. ಇದರ ಬಗ್ಗೆ ಕಾಲೇಜ ಪ್ರಾರಂಭವಾಗುವ ದಿನ ವಿದ್ಯಾರ್ಥಿಗಳು ಯಾರನ್ನೂ ಕಾಲೇಜಕ್ಕೆ ಹೋಗಗೊಡದಂತೆ ಕಾವಲ ನಡೆಸಬೇಕೆಂದು ವಿಚಾರವಾಯಿತು. ಇತ್ತಕಡೆಯ ಶಾಲೆ ಕಾಲೇಜುಗಳ ವಿದ್ಯಾರ್ಥಿಗಳೂ, ಅಧ್ಯಾಪಕರೂ ಇವರನ್ನು ಅನುಕರಿಸುವರೋ?

## ಕಾಂಗ್ರೆಸ ಪತ್ರಿಕೆಯು ಕಾಯಿದೆಗೆ ವಿರುದ್ಧವಲ್ಲ.

ಸಿಯಾಲಕೋಟದ ಕಾಂಗ್ರೆಸ ಪತ್ರಿಕೆಯು ಕಾಯಿದೆಗೆ ವಿರುದ್ಧವಾದುದೆಂದು ಜಾಹೀರಪಡಿಸಿ ಅದನ್ನು ಹೊರಡಿಸಿದ ಕೆಲಸಗಾರರನ್ನು ಸೆರೆಹಿಡಿದರು. ಆದರೆ ಈ ಬಗ್ಗೆ ಅಲ್ಲಿಯ ಸೆಶನ್ಸ ಜಡ್ಜರು, ಪತ್ರಿಕೆಯ ಸಂಬಂಧವಾಗಿ ೧೪೪ ನೇ ಕಲಮಿನನ್ವಯ ಹುಕುಮು ತೆಗೆದದ್ದು ಮತ್ತು ಕಾಂಗ್ರೆಸ ಜನರನ್ನು ಸೆರೆಹಿಡಿದದ್ದು ಅನ್ಯಾಯವೆಂದು ಅಲ್ಲಿಯ ಡೆಪ್ಯುಟಿ ಕಮಿಶನರರಿಗೆ ತಿಳಿಸಿ ಆ ಹುಕುಮನ್ನು ರದ್ದುಪಡಿಸಲು ಕೇಳಿಕೊಂಡಿದ್ದಾರೆ.

## ಗುಡುಗಪ್ಪನ ಆಟವು.

ರತ್ನಾಗಿರಿ ಜಿಲ್ಲೆಯ ಖೇಡ ತಾಲೂಕದ ರಸಾಲಗಡ ಎಂಬ ಹಳ್ಳಿಯಲ್ಲಿ ಒಂದುಮನೆಗೆ ಸಿಡಿಲು ಬಡೆದು ಅಲ್ಲಿ ಮಗನೂ ತಂದೆಯೂ ಇಬ್ಬರೂ ಸತ್ತರು. ಆರೇಳು ದನಗಳೂ ಸತ್ತವು. ತಂದೆಮಕ್ಕಳಿಗೆ ಪರಸ್ಪರರಿಗೂ ಒಬ್ಬರಿಗಾಗಿ ಮತ್ತೊಬ್ಬರು ಅಳುವ ಪ್ರಸಂಗ ಬರಬಾರದೆಂದು ಮೇಘರಾಜನು ಇಬ್ಬರಿಗೂ ಕೂಡಿಯೇ ಪೆಟ್ಟು ಹಾಕಿದನೋ? ಮಗನ ದುಃಖವನ್ನು ಸಹಿಸಲಾರದೆ ತಂದೆಯೂ ಅವನ ಸಂಗಡ ಸ್ವರ್ಗಕ್ಕೆ ಹೋದನೋ? ಗುಡುಗಪ್ಪನ ಆಟ ಯಾರಿಗೆ ತಿಳಿಯುವದು?

---

ಜಮಖಂಡಿಯ ಸಂಸ್ಥಾನಿಕರು ದಕ್ಷಿಣ ಭಾಗದ ಸಂಸ್ಥಾನಿಕರ ವತಿಯಿಂದ ರೌಂಡ ಟೇಬಲಕ್ಕೆ ಹೋಗಬೇಕೆಂದು ಪ್ರಯತ್ನ ನಡೆಸಿದ್ದಾರೆ.

## ಕೂಳಿಲ್ಲದ ಕೂಲಿಕಾರರು

ಹಿಂದುಸ್ಥಾನದಲ್ಲಿಯ ಬಹಿಷ್ಕಾರ ಚಳವಳಿಯಿಂದ ಲ್ಯಾಂಕ್ಯಾಶಾಯರದ ಮೇಲೆ ಏನಾದರೂ ಪರಿಣಾಮವಾಗಿದೆ ಎಂದು ಪಾರ್ಲಮೆಂಟದಲ್ಲಿ ಡೇವಿಂಗ ಎಂಬ ಸಾಹೇಬರು ಒಂದು ಪ್ರಶ್ನೆ ಕೇಳಿದರು. ಅದಕ್ಕೆ ಗ್ರಾಹಾಮ ಎಂಬ ಸಾಹೇಬರು ಬಹು ಕೆಟ್ಟ ಪರಿಣಾಮವಾಗಿದೆ ಎಂದು ಉತ್ತರ ಕೊಟ್ಟರು. ನಿಷ್ಟು ಈ ಶೋಚನೀಯವಾದ ಸ್ಥಿತಿಯನ್ನು ನಿವಾರಿಸಲು ಬೇಕಾದ ಸಾಹೇಬರಿಗೆ ಏನಾದರೂ ವಿಚಾರಿಸುವಿರೋ ಎಂದು ಗ್ರಾಹಾಮ ಸಾಹೇಬರನ್ನು ಕೇಳಿದ್ದಕ್ಕೆ ಅವರು ಅದರ ಬಗ್ಗೆ ಬೆನರಿಗೆ ಕ್ಯಾಪ್ಟನು ಕಾಲವು ಸರಿ ಈ ಬಗ್ಗೆ ಹೇಳುವನು ಎಂದು ಉತ್ತರ ಕೊಟ್ಟರು. ಹೋದ ವಾರದಲ್ಲಿ ಒಂದು ಲಕ್ಷ ಹತ್ತು ಸಾವಿರ ಕೂಲಿಕಾರ ಜನರಿಗೆ ಕೆಲಸವಿಲ್ಲದೆ ನಿರುದ್ಯೋಗಿಗಳಾಗಿ ಬಿಟ್ಟಿದ್ದಾರೆ. ಇದು ವರೆಗೆ ಕೆಲಸವಿಲ್ಲದ ಕೂಲಿಕಾರರು ಸುಮಾರು ಹತ್ತೊಂಭತ್ತು ಲಕ್ಷ ಜನರಾಗಿರುವರು. ಕೆಲಸವಿಲ್ಲದಿದ್ದರೆ ಕೂಳೂ ಇಲ್ಲದಂತಾಗುವದಿಲ್ಲವೇ?

## ತಮ್ಮವರೇ ತಮಗೆ "ಛೀ" ಎಂದರು

ಬತ್ರೀವಾ ಎಂಬ ಹಿಂದುಸ್ಥಾನದ ಹಿತೈಷಿಗಳಾದ ಒಬ್ಬ ಸಾಹೇಬರು ಸಾಯಮನ್ನ ವರದಿಯ ಬಗ್ಗೆ ಹೀಗೆನ್ನುವರು. ಈ ವರದಿಯನ್ನು ಮಂದ ಪಕ್ಷದವರೂ ಕಾಂಗ್ರೆಸ ಪಕ್ಷದವರಷ್ಟೇ ನಿರಾಕರಿಸುವರೆಂದು ನನ್ನ ನಿಶ್ಚಯವು. ಅವರಿಬ್ಬರೂ ಒಂದಾಗಿ ಈ ಚಳವಳಿಯನ್ನು ಮಾತ್ರ ಗಟ್ಟಿಮಾಡುವರು. ಹಿಂದುಸ್ಥಾನದ ಹಾಗೂ ಇಂಗ್ಲಂಡದ ಪ್ರತಿಯೊಬ್ಬ ನಿಜವಾದ ಮಿತ್ರನು ಈ ವರದಿಯಲ್ಲಿಯ ಸೂಚನೆಗಳಿಗೆ ಛೀ. ಥೂ. ಎಂಬುವದೇ ಯೋಗ್ಯವು.

## ನಮ್ಮವರಿಗೆ ನಾನು ವಿರುದ್ಧವಾಗುವದಿಲ್ಲ

ಮುಂಬಯಿಯಲ್ಲಿಯ ಒಂದು ಸೆಲ್ಯೂ ಅಂಗಡಿಯ ಮುಂದೆ ಒಬ್ಬ ಸ್ವಯಂಸೇವಕನು ಗಿರಾಕಿಗಳನ್ನು ತಡೆಯುತ್ತ ನಿಂತಿದ್ದನು. ನೀನು ಇಲ್ಲೇಕೆ? ಎಂದು ಒಬ್ಬ ಸಾರ್ಜಂಟನು ಅವನಿಗೆ ಕೇಳಿದನು. ಗಿರಾಕಿಗೆ ತಡೆಯುವುದು ಬೇಡ ಹೇಳಿಕೊಳ್ಳಲು ನಾನು ಇಲ್ಲಿ ನಿಂತಿರುವೆನು ಎಂದು ಅವನು ಹೇಳಿದನು. ನನಗೇಕೆ ನೀನು ಹೇಳುವದಿಲ್ಲ ಎಂದು ಸಾರ್ಜಂಟನು ಕೇಳಿದನು. ಅದಕ್ಕೆ ಸ್ವಯಂಸೇವಕನು ನನಗೇನೂ ಆಕ್ಷೇಪವಿಲ್ಲ ನಿನ್ನ ಹೆಸರು ಬರೆದುಕೊಳ್ಳುವೆನು ಎಂದು ಉತ್ತರವಿತ್ತನು. ಅಂಗಡಿಕಾರನಿಗೆ ನೀನು ಈ ಸ್ವಯಂಸೇವಕನ ವಿರುದ್ಧ ತಕರಾರು ಮಾಡುವದಿಲ್ಲವೆಂದು ಕೇಳಿದನು. ಅದಕ್ಕೆ ಅಂಗಡಿಕಾರನು ಇವನಿಂದ ನನಗೇನೂ ತ್ರಾಸವಾಗುವದಿಲ್ಲ. ಗಿರಾಕಿಗಳು ಬಾರದ್ದರಿಂದ ನನಗೇನು ಪರಿವಿಲ್ಲ. ನನ್ನ ಬಾಂಧವರ ವಿರುದ್ಧ ತಕರಾರು ಮಾಡಿ ಅವನನ್ನು ಜೇಲಿಗೆ ಅಟ್ಟುವದಕ್ಕಿಂತ ನಾನೇ ಅಂಗಡಿಯನ್ನು ಬಂದು ಮಾಡಬೇಕೆನ್ನುವೆನು. ಸಾಹೇಬರೆ ನೀವು ಹೋಗಿರೆಂದು ಅವನು ಹೇಳಿದನು?

## ಬಂಡೀಗಾಲೀ ಸಭೆಗೆ ಬಹಿಷ್ಕಾರ

ದಿಲ್ಲಿಯಲ್ಲಿ ಭಾಷಣ ಮಾಡುವಾಗ ಪಂಡಿತ ಮಾಲವೀಯರು ಹೀಗೆಂದರು. ಸ್ವಾತಂತ್ರ್ಯಪ್ರಿಯರಾದ ಯಾವ ಭಾರತೀಯನೂ ಸಾಯಮನ ವರದಿಯನ್ನು ವಿಚಾರಿಸಲಾರನು. ಬಂಡೀಗಾಲೀ ಸಭೆಗೆ ಬಹಿಷ್ಕಾರ ಹಾಕುವ ಕೆಲಸದಲ್ಲಿ ನಾವು ಇನ್ನು ಹೆಚ್ಚು ಚಳವಳಿಯನ್ನು ಮಾಡತಕ್ಕದ್ದು. ಸರಕಾರವು ಪ್ರತಿಬಂಧಿಸಿದ್ದರೂ ಬಹಿಷ್ಕಾರದ ಕೆಲಸವನ್ನು ಬಲು ಜೋರಿನಿಂದ ನಡೆಸಬೇಕೆಂದು ಹೇಳಿದರು.

## ಪರಾವಲಂಬನದ ಪರಮಾವಧಿಯು

೧೯೨೯ ನೇ ಇಸ್ವಿಯಲ್ಲಿ ಅಂದರೆ ಹೋದ ವರುಷ ಹಿಂದುಸ್ಥಾನದ ಆರ್ಥಿಕ ಪರಿಸ್ಥಿತಿಯು ಕೆಟ್ಟದ್ದರಿಂದ ವ್ಯಾಪಾರದ ಸ್ಥಿತಿಯು ಚನ್ನಾಗಿರದಿದ್ದರೂ ಪರದೇಶದಿಂದ ತರಿಸಿದ ರಸಾಯನ ದ್ರವ್ಯಗಳ ಬೆಲೆಯು ಮಾತ್ರ ಎರಡು ಕೋಟಿ ಅರವತ್ತೇಳು ಲಕ್ಷ ರೂಪಾಯಿ ಆಗಿದೆ. ೧೯೨೮ ನೇ ಇಸ್ವಿಯಲ್ಲಿ ಎರಡು ಕೋಟಿ ಐವತ್ತೆಂಟು ಲಕ್ಷ ರೂಪಾಯಿಗಳ ರಸಾಯನ ದ್ರವ್ಯವು ಹಿಂದುಸ್ಥಾನದಲ್ಲಿ ಪರದೇಶದಿಂದ ಬಂದಿತ್ತು. ನಮ್ಮ ದೇಶದಲ್ಲಿಯೇ ಈ ರಸಾಯನಗಳನ್ನು ಸಿದ್ಧಗೊಳಿಸಲು ಶಕ್ಯವಿಲ್ಲವೋ? ಇದಲ್ಲ ನಮ್ಮ ಪರಾವಲಂಬನದ ಪರಮಾವಧಿಯಲ್ಲವೋ?

## ಗರ್ಭಶ್ರೀಮಂತರು ಅಡಿಗೆ ಮಾಡುವರು

ಮುಂಬಯಿಯಲ್ಲಿ ಕಾಂಗ್ರೆಸ ಆಸ್ಪತ್ರೆಯನ್ನು ಟಾಟಾ ಹಾಗೂ ಪೆಟಿಟ ಎಂಬ ಗರ್ಭ ಶ್ರೀಮಂತರ ಮನೆಯ ಸ್ತ್ರೀಯರು ನೋಡಲಿಕ್ಕೆ ಹೋಗಿದ್ದರು. ನ್ಯಾಯಮೂರ್ತಿಗಳಾದ ಮಡಗಾಂವಕರರ ಹೆಣ್ಣುಮಕ್ಕಳೂ ಸೊಸೆಯೂ ನೋಡಲಿಕ್ಕೆ ಹೋಗಿದ್ದರು. ಅಷ್ಟೇ ಅಲ್ಲದೇ ಆ ಶ್ರೀಮಂತ ಸ್ತ್ರೀಯರು ಆಸ್ಪತ್ರೆಯಲ್ಲಿಯ ಅಡಿಗೆಯ ಕೆಲಸಕ್ಕೆ ಸಹಾಯ ಮಾಡುತ್ತಿರುವರು. ಸರ್ ಕರೀಮಭಾಯಿ ಎಂಬ ಗರ್ಭ ಶ್ರೀಮಂತರ ಸೊಸೆಯು ಅಲ್ಲಿ ಚಪಾತಿಗೆ ತುಪ್ಪ ಕೊಡುತ್ತಿದ್ದಳು. ಲಾಠೀ ಬಹದ್ದೂರರ ಪೆಟ್ಟು ತಿಂದು ನರಳುತ್ತಿರುವ ಸ್ವಯಂಸೇವಕರ ಶರೀರವನ್ನೂ ದುಃಖಪೂರ್ಣ ಸ್ಥಿತಿಯನ್ನು ನೋಡಿ ಈ ಗರ್ಭ ಶ್ರೀಮಂತರ ಹೃದಯವೂ ಕರಗಿ ನೀರಾಗಿರಲಿಕ್ಕಿಲ್ಲವೇ?

## ರಂಗೂನ ಜೇಲಿನಲ್ಲಿ ದೊಂಬಿಯು

ಅಕಸ್ಮಾತವಾಗಿ ರಂಗೂನ ಸರಕಾರಿ ಜೇಲಿನಲ್ಲಿ ಸೆರೆಯಾಳುಗಳು ದೊಂಬಿ ಮಾಡಿದರು. ಅದರಲ್ಲಿ ಇಬ್ಬರು ಶ್ವೇತ ಸೈನಿಕರು (ಮಿಲಿಟರಿ ಪೋಲೀಸರು) ಒಬ್ಬ ಡಾಕ್ಟರನು ಹಾಗೂ ನಾಲ್ವತ್ತು ಸೆರೆಯಾಳುಗಳು ಯಮಸದನದ ಹಾದಿ ಹಿಡಿದರು. ಹನ್ನೊಂದು ಮಂದಿ ವಾರ್ಡರರೂ ಮತ್ತು ನೂರ ಅರವತ್ತು ಸೆರೆಯಾಳುಗಳೂ ಗಾಯಗೊಂಡಿವೆ. ಸೆರೆಯಾಳುಗಳು ಮಾಡಿಕೊಂಡ ಒಳಸಂಚೇ ಇದಕ್ಕೆ ಕಾರಣವಂತೆ.

ಶ್ರೀ ಮುದ್ರಕರು ಬಸವಂತ ಅಣ್ಣಪ್ಪ ಕುಲಕರ್ಣಿ ಇವರಿಂದ ಬಾಗಲಕೋಟೆಯ
ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಿ ಬಾಗಲಕೋಟೆ ಕನ್ನಡಿಗ ಪ್ರಸಿದ್ಧಿ ಪಡಿಸಿದರು.

ರ. ನಂ ಬಿ. ೧೫೪೭ ನಿತ್ಯಸಂಚಿಕೆಯು. ಬೆಲೆ ೦—೧—೦

[illegible] — ಇತ್ಯಾದಿ

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ರವಿವಾರ ಮಿತಿ ಆಷಾಢ ಶುದ್ಧ ೩ ಶಕೆ ೧೮೫೨ ತಾ॥ ೨೯—೬—೩೦ [ಸಂಚಿಕೆ ೮೭

## ಸ್ಲೋಕೋಂಬರ ಪತ್ರವು

ಜಾರ್ಜ ಸ್ಲೋಕೋಂಬ ಇವರು ಜೂನ ೪ ನೇ ತಾ॥ ಗೆ ಕೆಳಗಿನ ಪತ್ರವನ್ನು "ಡೇಲಿ ಹೆರಾಲ್ಡ' ವೃತ್ತಪತ್ರಕ್ಕೆ ಕಳಿಸಿರುವರು

"ದುಂಡು ಮೇಜಿನ ಪರಿಷತ್ತನ್ನು ಯಶಸ್ವಿಯಾಗಿ ಮಾಡುವ ಕುರಿತು ವ್ಹಾಯಿಸರಾಯ ಸಾಹೇಬರು ಕೆಲವು ದಿವಸಗಳ ಹಿಂದೆ ಒಬ್ಬ ಪ್ರಮುಖ ಮುಖಂಡನ ಸಂಗಡ ವಿಚಾರ ಮಾಡಿದರೆಂದು ನನಗೆ ತಿಳಿದುಬರುತ್ತಿದೆ. ಹಿಂದುಸ್ಥಾನದ ಸದ್ಯದ ಪರಿಸ್ಥಿತಿಯಲ್ಲಿ ದುಂಡು ಮೇಜಿನ ಪರಿಷತ್ತಿನ ಬಗ್ಗೆ ವಿಚಾರ ಮಾಡುವದು ತೀರ ಅಯೋಗ್ಯವೆಂದು, ಪ್ರಾಮಾಣಿಕರೆಂಬ ಪ್ರಸಿದ್ಧಿಯನ್ನು ಪಡೆದ ಆ ಮುಖಂಡರು ಸ್ಪಷ್ಟವಾಗಿ ಹೇಳಿದರು. ದುಂಡು ಮೇಜಿನ ಪರಿಷತ್ತು ಸಂಪೂರ್ಣ ಸ್ವರಾಜ್ಯದ ಘಟನೆಯನ್ನು ತಯಾರಿಸುವ ಕುರಿತು ಕೂಡುವದೆಂದು ಆಶ್ವಾಸನ ಕೊಡದ ಹೊರತು, ಕಾಂಗ್ರೆಸ ಪಕ್ಷದವರಾಗಲಿ, ಅಥವಾ ಮಂದಪಕ್ಷದವರಾಗಲಿ, ಆ ಪರಿಷತ್ತಿಗೆ ಬರುವದಿಲ್ಲವೆಂದಾದರೂ ಹೇಳಿದರಂತೆ"

"ಎಲ್ಲ ಪಕ್ಷಗಳ ಮತಗಳನ್ನು ಈಗ್ಗೆ ನಾವು ಚನ್ನಾಗಿ ತಿಳಿದುಕೊಳ್ಳಬಹುದು. ಕಾಂಗ್ರೆಸ್ ಪಕ್ಷದವರಂತೂ ಮಹಾತ್ಮರ ನಾಲ್ಕು ಕರಾರುಗಳಿಗೆ ಒಪ್ಪಿದರಷ್ಟೇ ಸರಕಾರದ ಸಂಗಡ ಸಹಕಾರ ಮಾಡುವರು. ಒಪ್ಪಂದ ಮಾಡಬೇಕೆಂದು ಮಹಾತ್ಮರು ನಾಲ್ಕೇ ಕರಾರುಗಳನ್ನು ಕೇಳಿಕೊಂಡರೂ, ಸರಕಾರದವರು ಅವುಗಳ ಬಗ್ಗೆ ವಿಚಾರ ಮಾಡದೇ, ಒದಗಿಸಿಕೊಟ್ಟ ಸಂಧಿಯನ್ನು ಕಳೆದುಕೊಳ್ಳುವರೆಂಬ ಮಾತು ಮುಂದರಿಗೂ ಕಡಾ ಆಶ್ಚರ್ಯದ ಸಂಗತಿಯಾಗಿದೆ. ಶಾಂತತೆಯಿಂದ ವರ್ತಿಸಿದ ಎಲ್ಲ ರಾಜಕೀಯ ಕೈದಿಗಳನ್ನು ಬಿಟ್ಟುಕೊಟ್ಟು, ಮತ್ತು ಸಾಮಂತ ಸ್ವರಾಜ್ಯವನ್ನು ಕೊಡುವೆವೆಂದು ಸರಕಾರದವರು ಮಹಾತ್ಮರನ್ನು ದುಂಡು ಮೇಜಿನ ಪರಿಷತ್ತಿಗೆ ಆಮಂತ್ರಿಸಿದರೆ, ಅವರು ತಮ್ಮ ಚಳವಳಿಯನ್ನು ನಿಲ್ಲಿಸಿ, ಪರಿಷತ್ತಿಗೆ ಬಹುತರ ಎಲ್ಲ ಅನುಯಾಯಿಗಳೊಂದಿಗೆ ಬರಬಹುದೆಂದು ತೋರುತ್ತದೆ.

ಮವಾಳ ಪಕ್ಷದವರ ಮತಗಳು ಕಾಂಗ್ರೆಸದವರ ಕಡೆಗೇ ಒಲೆಯುತ್ತ ನಡೆದಿವೆ. ಜನರಾದರೂ ಸೆರೆಮನೆಯೊಳಗಿದ್ದವರನ್ನಷ್ಟೇ ಶ್ರೇಷ್ಠ ಮುಂದಾಳುಗಳೆಂದು ಗೌರವಿಸುತ್ತಿರುವರು. ನ್ಯಾಯ ರೀತಿಯ ವಿಶೇಷವಾಗಿ ನಂಬಿಷ್ಟ ಮವಾಳ ಪಕ್ಷದವರೂ ಪರಿಷತ್ತಿಗೆ ಬರುವದು ಅಸಂಭವವಿದೆ. ಬ್ರಿಟಿಶರು ಹಿಂದುಸ್ಥಾನಕ್ಕೆ ಕೊಡುವ ರಾಜಕೀಯ ಹಕ್ಕುಗಳ ಮೇಲೆಯೇ ಅವಲಂಬಿಸಿರುತ್ತದೆ

ಪ್ರಾಂತಿಕ ಸ್ವಾತಂತ್ರ್ಯವನ್ನು ಕೊಡುವೆವೆಂದು ಹೇಳಿ, ರಾಜ್ಯದ ಸುವ್ಯವಸ್ಥೆಗೆಂದು ಗವ್ಹರ್ನರರಿಗೆ ಬೇಕಾದ ಅಧಿಕಾರಗಳನ್ನು ಕೊಟ್ಟರೆ ಮತ್ತು ವ್ಹಾಯಿಸರಾಯರ ಆಸನದಲ್ಲಿ ಯಾವ ವಿಶೇಷ ಬದಲಾವಣೆಗಳನ್ನು ಮಾಡದಿದ್ದರೆ ಸಾನಂತರೂ ಲಂಡನಕ್ಕೆ ಹೋಗುವದಿಲ್ಲೆಂದು ತೇಜಬಹದ್ದೂರ ಸಪ್ರೂ ಇವರು ಅನ್ನುತ್ತಾರೆ. ಸಪ್ರೂ ಇವರು ಬಹಳ ದಿವಸದಿಂದ ಸರಕಾರದ ಸ್ನೇಹಿತರು. ಅವರ ಮೇಲೆ ಸರಕಾರದ ವಿಶ್ವಾಸವಾದರೂ ಬಹಳ. ಅವರು ಹೇಗಾದರೂ ತಮಗೂ ಮತ್ತು ಕಾಂಗ್ರೆಸಕ್ಕೂ ಒಪ್ಪಂದ ಮಾಡಬಲ್ಲರೆಂಬದಾಗಿ ಸರಕಾರದವರು ಬಹಳವಾಗಿ ನಂಬಿದ್ದಾರೆ.

ಮುಸಲ್ಮಾನ ಮುಂದಾಳುಗಳಲ್ಲಿ ಕೆಲವರು ಸರಕಾರದ ತೀರ ಹಿತಚಿಂತಕರೂ, ಇನ್ನೂ ಕೆಲವರು ತೀರ ಶತ್ರುಗಳೂ ಇರುತ್ತಾರೆ ಈ ಎರಡೂ ಪಕ್ಷಗಳನ್ನುಳಿದು ಎಷ್ಟೋ ಮುಸಲ್ಮಾನ ಬಂಧುಗಳಿಗೆ ಈ ಚಳವಳಿಯಲ್ಲಿ ಸೇರಲಿಕ್ಕೆ ಪೂರ್ಣ ಇಚ್ಛೆ ಇರುವದು. ಯೋಗ್ಯ ಮುಂದಾಳುಗಳು ಸಿಕ್ಕರೆ ಸಾಕು. ಈಗಾಗಲೇ ಎಷ್ಟೋ ಜನರು ಪೇಶಾವರ ಮತ್ತು ಮುಂಬಯಿಯ ದಂಗೆಗಳ ಮೂಲಕ ಸರಕಾರದವರ ಮೇಲೆ ಸಿಟ್ಟಿಗೆದ್ದು ಚಳವಳಿಯಲ್ಲಿ ಧುಮುಕಿದ್ದಾರೆ

ಅಲ್ಲೀ ಬಂಧುಗಳು ಏಕೋ ಕಾಯದೆಭಂಗ ಚಳವಳಿಗೆ ಸಹಾನುಭೂತಿಯನ್ನು ತೋರಿಸಿಲ್ಲ. ಅವರು ಹಿಂದೂ ಜನರ ಉದ್ದೇಶದ ಬಗ್ಗೆ ಸಂಶಯ ಪಡುವರೋ, ಅಥವಾ ಮಹಾತ್ಮಾ ಗಾಂಧಿಯವರಲ್ಲಿ ಮತ್ಸರವನ್ನು ತಾಳುವರೋ ತಿಳಿಯದು.

ಮಹಾತ್ಮಾ ಗಾಂಧಿಯವರು ಜೇಲಿನಲ್ಲಿ ನನ್ನ ಸಂಗಡ ಮುಸಲ್ಮಾನ ಬಂಧುಗಳ ಬಗ್ಗೆ ಮಾತಾಡುವಾಗ್ಗೆ, ಅವರಿಗೆ ಬೇಕಾದ ಎಲ್ಲ ಹಕ್ಕುಗಳನ್ನು ಕೊಡುವರೆಂಬದಾಗಿ ಹೇಳಿದರು.

ಮುಸಲ್ಮಾನ ಮತ್ತು ಉಳಿದ ಅಲ್ಪಸಂಖ್ಯಾಕರನ್ನು ಸಂರಕ್ಷಿಸುವ ವಿಷಯವು ಬಹಳೇ ಮಹತ್ವವಿದೆಯಂತೆ. ಆದರೆ

ಹಿಂದುಸ್ಥಾನದಲ್ಲಿಯ ಎಲ್ಲ ಪಕ್ಷದವರನ್ನೂ ಸಮಾಧಾನಗೊಳಿಸುವಂತಹ ಸ್ವರಾಜ್ಯ ಘಟನೆಯನ್ನು ಮಾಡಿದರೆ ಈ ವಿಷಯವು ತಾನಾಗಿಯೇ ಬಿಡುವದೆಂದು ನನ್ನ ಮನವರಿಕೆಯಾಗಿದೆ.

ಸಾರಾಂಶ, ಸದ್ಯಕ್ಕೆ ಹಿಂದುಸ್ಥಾನದಲ್ಲಿ ಮುಖ್ಯವಾದ ಪ್ರಶ್ನೆ ಯಾವದೆಂದರೆ— “ಬ್ರಿಟಿಶರು ನಮಗೆ ವಸಹಾತಿನ ಸ್ವರಾಜ್ಯವನ್ನು ಕೊಡುವರೋ? ಇಲ್ಲವೆ ಸ್ವರಾಜ್ಯದ ಭ್ರಮೆಯೋ? ಮತ್ತು ಕೊಡುವದಿದ್ದರೆ ಎಷ್ಟು ವರ್ಷಗಳೊಳಗೆ ಕೊಡುವರು?”

## ಧಾರವಾಡ.

ಶ್ರೀ ಪುರೋಹಿತ ಹನುಮಂತಚಾರ್ಯರು ಎಂ. ಎ. ಇವರು ವಿಕ್ರಮ ಪಥಕದ ೪೦ ಜನ ಕನ್ನಡ ತರುಣರ ನೇತೃತ್ವವನ್ನು ವಹಿಸಿಕೊಂಡು ತಾ|| ೨೩ ನೆಯ ದಿವಸ ಧಾರವಾಡದಿಂದ ೭ ಮೈಲು ದೂರದಲ್ಲಿರುವ ಗೋವನಕೊಪ್ಪ ಹಳ್ಳಿಕ್ಕೆ ಸಾಗಿ ಹೋಗಿ ಅಲ್ಲಿಯ ೫೦೦ ಸೇಂದೀ ಗಿಡಗಳನ್ನು ಕಡಿದುಬಂದರು. ತಾ|| ೨೫ ನೆಯ ದಿವಸ ಕನ್ನಡಿಗರ ಕೂಟದ ೭ ನೇ ವರ್ಷದ ಉತ್ಸವವು ಶ್ರೀ ಆಲೂರ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಕೊನೆಗೊಂಡಿತು. ಶ್ರೀ ಆಲೂರ ಮುದವೀಡು ಮೊದಲಾದವರು ಕೂಟದ ಕಾರ್ಯವನ್ನು ಹೊಗಳಿದ್ದಲ್ಲದೆ, ಕೂಟದವರು ಮುಂದೆ ಮಾಡಬೇಕಾದ ಕರ್ತವ್ಯಗಳನ್ನು ಕುರಿತು ಭಾಷಣಮಾಡಿದರು. ಶ್ರೀ ತುವ್ವಿನಕಟ್ಟಿ ಭೀಮರಾಯರು ಗಾಯನಮಾಡಿ ನೆರೆದವರನ್ನು ತಲ್ಲೀನಗೊಳಿಸಿದರು.

ತಾ|| ೨೪ ನೆಯ ದಿವಸ ಸದರ್ನ ಮರಾಠಾ ಬ್ಯಾಂಕಿನ ಕಟ್ಟಡದಲ್ಲಿ ಶ್ರೀಮದ್ವಿದ್ಯಾರಣ್ಯರ ಪುಣ್ಯತಿಥಿಯು ಮುದವೀಡು ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಶ್ರೀ ರಾಜಪುರೋಹಿತ ಬೇಂದ್ರೆ, ಬೆಳಗಾಂವಿ ರಾಮರಾಯರು, ಮೊದಲಾದವರು ವಿದ್ಯಾರಣ್ಯರ ಕಾಲದ ಪರಿಸ್ಥಿತಿಯನ್ನು ಸದ್ಯದ ಪರಿಸ್ಥಿತಿಗೆ ಹೋಲಿಸಿ ಮಾತಾಡಿದರು.

## “ಇಷ್ಟರೆ ಇಂಥ ಅಳಿಯನಿರಬೇಕು”

ಬಂಗಾಲದ ಮುಖಂಡರಾದ ಡಾ. ಸೇನಗುಪ್ತರನ್ನು ಆಳರಸರು ಉಪ್ಪಿನ ಸತ್ಯಾಗ್ರಹಕ್ಕಾಗಿ ಸೆರೆಮನೆ ಕಾಣಿಸಿರುವರಷ್ಟೇ! ಡಾ. ಸೇನಗುಪ್ತರು ಯುರೋಪಿಯರ ಮಹಿಳೆಯನ್ನು ಲಗ್ನವಾದವರಿದ್ದು, ಅವರ ಅತ್ತೆಯು (ಹೆಣ್ಣು ಕೊಟ್ಟ ಅತ್ತೆಯು) ಈಗೂ ಕೇಂಬ್ರಿಡ್ಜದಲ್ಲಿರುವಳು; ಡಾ. ಸೇನಗುಪ್ತರು ಉಪವಾಸದ ಸತ್ಯಾಗ್ರಹ ನಡಿಸಿರುವರೆಂಬ ಸುದ್ದಿಯು ಹಿಂದಕ್ಕೆ ಎದ್ದಿತ್ತು; ಆ ಸುದ್ದಿಯನ್ನು ಕೇಳಿ ಅವರ ಮನಸ್ಸು ಮರುಗಿದರೂ “ನನ್ನ ಮಗಳು ಮಿ. ಸೇನಗುಪ್ತರನ್ನೇ ಮದುವೆಯಾಗುವ ಬಗ್ಗೆ ಹಟ ಹಿಡಿದಿದ್ದಳು. ಯುರೋಪಿಯಳು ಹಿಂದೂನನ್ನು ಲಗ್ನವಾದರೂ ಲಗ್ನವಾದ ಮೇಲೆ ಹಿಂದುಸ್ಥಾನವನ್ನೇ ತನ್ನ ಮನೆಯನ್ನಾಗಿ ಮಾಡಿಕೊಳಲಿಕ್ಕೆ ಬೇಕೆಂದು ಅವಳ ಮನವರಿಕೆ! ನನ್ನ ಮಗಳು ಕಪ್ಪು ಮನುಷ್ಯನನ್ನು ಲಗ್ನವಾದರೂ, ಅವರಿಗೆ ಡಾ. ಸೇನಗುಪ್ತರಿಗಿಂತ ಯೋಗ್ಯ ಪತಿಯು ಸಿಗುತ್ತಿರಲಿಲ್ಲ; ಅವರಿಂದ ಅವಳ ಜನ್ಮ ಸಾರ್ಥಕವಾಯಿತು.” ಎಂದು ನುಡಿದಳಂತೆ!

## ವಿಮಾನದ ಮೋಹ.

ಕಳೆದ ವಾರದಿಂದ ಎರಡು ವಿಮಾನಗಳು ಇಲ್ಲಿ ಬಂದಿದ್ದು ದಿನಾಲು ವಿಮಾನದವರ ವ್ಯಾಪಾರ ಚನ್ನಾಗಿಯೇ ನಡದಿದೆ; ೧೦ ಮಿನಿಟಕ್ಕೆ ೧೦ ರೂಪಾಯಿ ತೆಗೆದುಕೊಳ್ಳುವರು. ದುಡ್ಡಿದ್ದ ಜನರು ತಮ್ಮ ಅಪೇಕ್ಷೆ ತೀರಿಸಿಕೊಳ್ಳುತ್ತಿರುವರು. ಸ್ತ್ರೀ ಪುರುಷರು ವಿಮಾನದಲ್ಲಿ ಕುಳ್ಳಿರಬೇಕೆಂದು ಜನರಿಗೆ ಹೇಳುತ್ತಿದ್ದಾರೆ, ಮೂರು ಮುಂದಿ ಗಂಡಸರನ್ನು ಪೋಲೀಸರು ನೆರೆಹಿಡಿದು ಒಂದೆರಡು ತಾಸುಗಳಲ್ಲಿ ಕಾವೇ ಬಿಟ್ಟರು. ಅಂತೂ ವಿಮಾನದವರಿಗೆ ದುಡ್ಡಿನ ಚಲ್ಲಾಟ ನಡೆದಿದೆ; ಒಬ್ಬ ಪಾರ್ಸಿ ಹೆಂಗಸು ಕೂಡ ವಿಮಾನದಲ್ಲಿ ಕೂಡ್ರಬೇಕೆಂದು ಹೇಳುತ್ತಿರುವಳಂತೆ!

## ರಾಷ್ಟ್ರಧ್ವಜ ವಂದನವು.

ಇಂದು ಈ ತಿಂಗಳ ಕೊನೆಯ ರವಿವಾರವು ನಮ್ಮ ಕಾಂಗ್ರೆಸ್ ಆಜ್ಞೆಯ ಮೇರೆಗೆ ಇಂದು ನಮ್ಮ ರಾಷ್ಟ್ರಧ್ವಜದ ಮೆರವಣಿಗೆಯನ್ನು ಬೆಳಗಿನ ೬—೭ ಘಂಟೆಗೆ ಹಿಂದುಸ್ಥಾನಿ ಸೇವಾದಲದಿಂದ ಹೊರಡಿಸಿ ಪುನಃ ೭—೮ ಘಂಟೆಗೆ ಸೇವಾದಲಕ್ಕೆ ಬಂದು ರಾಷ್ಟ್ರಧ್ವಜಾರೋಹಣದ ಸಮಾರಂಭವನ್ನು ಜಯಘೋಷದಿಂದ ನಾವೆಲ್ಲರೂ ಮಾಡತಕ್ಕದ್ದಿದೆ.

ಕಾರಣ ಬಾಗಲಕೋಟೆಯ ನಗರವಾಸಿಗಳು ಈ ಕಾರ್ಯಕ್ರಮದಲ್ಲಿ ಭಾಗಿಗಳಾಗಬೇಕಾಗಿ ಬಿನ್ನಹವಿದೆ

ಕಾರ್ಯದರ್ಶಿ

ಹಿಂದುಸ್ಥಾನಿ ಸೇವಾದಲ ಬಾಗಲಕೋಟೆ.

## ಕಾಯಿದೆ ಮಂಡಳಕ್ಕೆ ಬಹಿಷ್ಕಾರ

ಹಿಂದುಸ್ಥಾನ ವ್ಯಾಪಾರಿ ಸಂಘದವರು ಮುಂಬಯಿಯಲ್ಲಿ ತಮ್ಮದೊಂದು ಸಭೆಗೂಡಿಸಿ ಅದರಲ್ಲಿ ಮುಂದೆ ಕಂಡ ಠರಾವನ್ನು ನಿರ್ಧರಿಸಿದರು. ಮಹಾತ್ಮಾ ಗಾಂಧಿಯವರ ಬಿಡುಗಡೆಯಾಗುವ ವರೆಗೆ ಮತ್ತು ಸರಕಾರವು ರಾಷ್ಟ್ರದ ಬೇಡಿಕೆಗಳನ್ನು ಸನ್ಮಾನ ಪೂರ್ವಕವಾಗಿಯೂ ಸಂತೋಷಕರವಾಗಿಯೂ ಪೂರ್ತಿಕೊಡುವ ವರೆಗೆ ನಮ್ಮ ಸಂಘದ ಯಾವ ಪ್ರತಿನಿಧಿಗಳು ಕಾಯಿದೆ ಮಂಡಳಗಳಲ್ಲಿ ಸೇರತಕ್ಕದ್ದಲ್ಲವೆಂದು ಶ್ರೀ ನಾರಾಭಾಯಿ ಎಂಬವರು ಒಂದು ಗೊತ್ತುವಳಿಯನ್ನು ಮುಂದಿಟ್ಟರು. ಮಹಾತ್ಮಾಗಾಂಧಿಜೀಕೀ ಜಯ ಎಂಬ ಜಯಘೋಷದೊಂದಿಗೆ ಈ ಠರಾವು ಪಾಸುಮಾಡಲ್ಪಟ್ಟಿತು.

## ಸಾಯಮನ್ ವರದಿಗೆ ಬೆಂಕೀ ಹಚ್ಚಿದರು.

ಸಿಮ್ಲಾದಲ್ಲಿ ಒಂದು ಪ್ರಚಂಡ ಮೆರವಣಿಗೆಯು ಹೊರಟಿತ್ತು. ಒಂದು ಕತ್ತೆಗೆ ಪರದೇಶಿ ಬಟ್ಟೆಗಳನ್ನೂ, ಸಾಹೇಬರ ಹ್ಯಾಟನ್ನೂ ತೊಡಿಸಿ ಅದರ ಮೇಲೆ ಸಾಯಮನ್ ವರದಿಯನ್ನು ಇಟ್ಟು ಅದನ್ನು ಮೆರವಣಿಗೆಯಲ್ಲಿ ತೆಗೆದುಕೊಂಡಿದ್ದರು. ಮೆರವಣಿಗೆಯ ನಂತರದಲ್ಲಿ ಸಾರ್ವಜನಿಕ ಸಭೆಯನ್ನು ಸೇರಿಸಿ, ಮುಖಂಡರು ಸಾಯಮನ್ ವರದಿಯ ಬಗ್ಗೆ ನಿಷೇಧಪರ ಭಾಷಣಗಳನ್ನು ಮಾಡಿ, ಕೊನೆಯಲ್ಲಿ ಅದಕ್ಕೆ ಬೆಂಕೀ ಹಚ್ಚಿದರು.

# ಶ್ರೀಮತಿ ಊರ್ಮಿಳಾದೇವಿಗೆ ೬ ತಿಂ. ಶಿಕ್ಷೆ

ಕಲಕತ್ತೆಯ ಸ್ತ್ರೀ ಸತ್ಯಾಗ್ರಹ ಮಂಡಳದ ಅಧಿಕಾರಿಗಳಾದ ಶ್ರೀಮತಿ ಊರ್ಮಿಳಾದೇವಿ, ವಿಮಲಾಪ್ರತಿಭಾದೇವಿ, ಜ್ಯೋತಿರ್ಮಯಿ ಗಂಗೊಳ್ಳಿ, ಹಾಗು ಮೋಹಿನಿದೇವಿ ಈ ನಾಲ್ವರಿಗೆ ೬ ತಿಂಗ. ಸಾದಾ ಶಿಕ್ಷೆಯೂ, ಶ್ರೀ. ಪದ್ಮರಾಜ ಜೈನ ಹಾಗೂ ಮಂಡ್ರಲಾಲ ಮಿಶ ಇವರಿಗೆ ೬ ತಿಂಗಳ ಸಕ್ತ್ರ ಶಿಕ್ಷೆಯೂ ವಿಧಿಸಲ್ಪಟ್ಟಿದೆ. ಅಧಿಕಾರಿಗಳು ತೆಗೆದ ಕಟ್ಟಪ್ಪಣೆಯ ವಿರುದ್ಧವಾಗಿ, ಗತಿಸಿದ ದೇಶಬಂಧು ದಾಸರ ಸ್ಮರಣಾರ್ಥವಾಗಿ ಮೆರವಣಿಗೆಯನ್ನು ತೆಗೆದುದಕ್ಕಾಗಿ ಮೇಲಿನವರೆಲ್ಲರೂ ಶಿಕ್ಷಿಸಲ್ಪಟ್ಟಿದ್ದಾರೆ. ಶ್ರೀಮತಿ ಊರ್ಮಿಳಾದೇವಿಯವರು ಗತಿಸಿದ ದೇಶಬಂಧು ದಾಸರ ಭಗಿನಿಯರಾಗಿದ್ದಾರೆ.

## ಶ್ರೀ. ಸ್ವಾಮಿ ನಾರಾಯಣರು
### ಸೆರೆಯಾಳಾದರು

ಭೂಮಿಯ ಮೇಲಿನ ತೆರಿಗೆಯನ್ನು ಕೊಡದಿರಲು ಜನರಿಗೆ ಉತ್ತೇಜನ ಕೊಟ್ಟಿದ್ದುದಕ್ಕಾಗಿ, ಅಹಮ್ಮದಾಬಾದದ ಶ್ರೀಯುತ ಜೆ. ಸಿ ಸ್ವಾಮಿನಾರಾಯಣರು ಸೆರೆಹಿಡಿಯಲ್ಪಟ್ಟಿದ್ದಾರೆ. ಸರಕಾರದವರು ಪ್ರಾರಂಭಿಸಿದ ದಬ್ಬಾಳಿಕೆಯ ನಿಷೇಧಾರ್ಥವಾಗಿ ಇವರು ಮುಂಬಯಿ ಕಾಯಿದೆ ಮಂಡಳದ ಸಭಾಸದತ್ವಕ್ಕೆ ಕೆಲವು ದಿನಗಳ ಹಿಂದೆಯೇ ಶರಣು ಹೊಡೆದಿದ್ದರು.

### ಜೇಲಿನಲ್ಲಿ
## ಸರದಾರ ವಲ್ಲಭಭಾಯಿಯವರ
### ತೂಕವು ೧೫ ಪೌಂಡು ಕಡಿಮೆಯಾಗಿದೆ.

ತಾ|| ೨೬ ನೆಯ ದಿವಸ ಸರದಾರ ವಲ್ಲಭಭಾಯಿಯವರು ತುರಂಗದಿಂದ ಬಿಡುಗಡೆ ಹೊಂದಿ ಅಹಮ್ಮದಾಬಾದಕ್ಕೆ ಹೋಗಿದ್ದಾರೆ. ಅವರ ತೂಕವು ೧೫ ಪೌಂಡು ಕಡಿಮೆಯಾಗಿದೆ. ತುರಂಗದಲ್ಲಿ ಅವರಿಗೆ ಟಾಯಿಮ್ಸ್ ಪತ್ರಿಕೆಯನ್ನು ಕೊಡುವದರಲ್ಲಿ ಬರುತ್ತಿತ್ತು. ಅಹಮ್ಮದಾಬಾದದಲ್ಲಿ ತಮ್ಮ ಸನ್ಮಾನಾರ್ಥವಾಗಿ ಕೂಡಿದ ಸಭೆಯಲ್ಲಿ “ಗುಜರಾಥದವರು ಸತ್ಯಾಗ್ರಹ ಚಳವಳಿಯಲ್ಲಿ ತೋರಿಸಿದ ಧೈರ್ಯ, ಸಾಹಸ ಮತ್ತು ಸ್ವಾರ್ಥತ್ಯಾಗಗಳು ಹೊಗಳತಕ್ಕವುಗಳಾಗಿವೆ ಸರಕಾರವು ಈಗ ರೊಚ್ಚಿಗೆದ್ದಿದೆ. ಅಹಿಂಸೆಯಲ್ಲಿ ನಂಬಿಗೆಯಿಟ್ಟು ತುರಂಗಕ್ಕೆ ಹೆದರದೆ ಸಾರಿ. ತುರಂಗದಲ್ಲಿದ್ದ ದೇಶಸೇವಕರನ್ನಾದರೂ ಬಿಡಿಸುವೆನು ಇಲ್ಲವೆ ನಾನಾದರೂ ತುರಂಗಕ್ಕೆ ಹೋಗುವೆನು. ಹಾಗೆಯೇ ಉಳಿಯುವದು ನನಗೆ ಸರಿಯಾಗಿ ತೋರುವದಿಲ್ಲ. ಈಗ ಪ್ರಾಪ್ತವಾದ ಸುಸಂಧಿಯನ್ನು ಹಾಗೆಯೇ ಹೋಗಗೊಟ್ಟಲ್ಲಿ ಇತಿಹಾಸದಲ್ಲಿ ನಮಗೆ ಕರ್ತವ್ಯಹೀನರೆಂಬ ಹೆಸರು ಸಿಗುವದು” ಎಂಬುದಾಗಿ ಭಾಷಣಮಾಡಿದರು.

### ತನ್ನ ಹುಳುಕು ತಾನೇ ಹೊರಗೆಡವಿದನು

ಸಾಯಮನ್ ಸಾಹೇಬರು ತಮ್ಮ ವರದಿಯ ಎರಡನೇ ತುಣುಕಿನ ವಿಷಯಕ್ಕೆ ಲಂಡನದಲ್ಲಿ ಮತ್ತೆ ಮಾತಾಡಿದರು. “ನನ್ನ ವರದಿಯು ಏನೂ ಕೆಲಸ ಮಾಡದಿದ್ದರೂ ನಿಜವಾದ ಕಾರ್ಯವನ್ನು ಸ್ಪಷ್ಟಗೊಳಿಸುವದು ಮತ್ತು ಅತ್ತಕಡೆಗೆ ಲಕ್ಷ್ಯ ಎಳೆಯುವದೆಂದು ಹೇಳಿದರು. ತಮ್ಮ ವರದಿಯಷ್ಟೇ ವಿಶೇಷ ವಿಧಾಯಕವಾದ ಯೋಜನೆಯನ್ನು ಸೂಚಿಸಬೇಕೆಂದೂ, ಹಾಗೆ ಮಾಡದೆ ತಮ್ಮ ವರದಿಗೆ ಟೀಕಿಸಿದರೆ ಅದು ವ್ಯರ್ಥವೆಂದೂ ಹೇಳಿದರು. ಸಾಯಮನ್ನರು ತಾವೇ ಬೃಹಸ್ಪತಿಗಳೆಂದು ತಿಳಿದಿರುವರೋ ಏನೋ! ನೆಹರೂ ವರದಿಯು ಇವರ ವರದಿಯ ಮಾರಿಯ ಮೇಲೆ ಹೊಡೆಯುವಂತಿಲ್ಲವೆ.? ತಾವು ಸಹಾನುಭೂತಿಯಿಂದಲೂ, ಸದಯಾಂತಃಕರಣದಿಂದ ಈ ಕಾರ್ಯದಲ್ಲಿ ಶ್ರಮ ಪಟ್ಟೆವೆಂದು ಹೇಳಿದರು. ಇವರ ಉಪಕಾರ ಯಾರು ಹೊರಬೇಕು? ಗುಡ್ಡ ಕಡಿದು ಇಲಿಯನ್ನು ಹೊರಗೆ ತೆಗೆದರೆ, ಅದರಿಂದ ಹಿಂದೀಯರಿಗೇನು ಉಪಕಾರ? ಗುಡ್ಡ ಕಡಿದು ರತ್ನ ಹೊರಗೆ ತೆಗೆದಿದ್ದರೆ ಮಾತ್ರ ಬೇರೆ ಮಾತಾಗುತ್ತಿತ್ತು. ಮುಂಬಯಿಯಲ್ಲಿ ಪಂಡಿತ ನೆಹರೂರವರು ಇವರಿಗೆ ಕೊಟ್ಟ ಕಾಲುಜೋಡಿಯು ಸಾಕಾಗಿಲ್ಲವೋ?

### ಬೆಳಗಾವಿ ಜಿಲ್ಹೆಯಲ್ಲಿ
### ಸಿಂದೀ ಗಿಡಗಳ ಸಂಹಾರ.
## ೮ ಜನರಿಗೆ ೬ ತಿಂಗಳ ಸಕ್ತ್ರ ಶಿಕ್ಷೆ

ಬೆಳಗಾವಿಯ ಜಿಲ್ಲೆಯ ಬೆಳೆಯುತ್ತಿರುವ ಸಿಂದೀಗಿಡಗಳನ್ನು ಕಡಿದುದಕ್ಕಾಗಿ ಶಹಾಪುರದ ಶ್ರೀ. ನಾರಾಯಣ ಜೋಶಿ, ನರಹರ ಕುಡಾಳೆ, ಗೋವಿಂದ ಮತ್ತು ಶಿವರಾಮ ಮುರಕಳುಂಬಿ ಇವರಿಗೂ, ಬೈಲಹೊಂಗಲ ತಾಲೂಕದಲ್ಲಿಯ ಸಿಂದೀ ಗಿಡಗಳನ್ನು ಕಡಿದುದಕ್ಕಾಗಿ ನೇಸರಗಿಯ ಶ್ರೀ ಅನಂತ ನೇರ್ಲೇಕರ, ಶ್ರೀಪಾದ ಜೋಶಿ, ರಾಮಚಂದ್ರ ಕುಲಕರ್ಣಿ ಮತ್ತು ಚಂದ್ರಪ್ಪ ಸತ್ತೀಗೇರಿ ಇವರಿಗೂ ೬ ತಿಂಗಳ ಸಕ್ತ್ರ ಶಿಕ್ಷೆಯು ಆಗಿದೆ.

### ಪೋಲೀಸರು ರಾಜೀನಾಮೆ ಕೊಟ್ಟರು.

ಸರಕಾರದ ದಬ್ಬಾಳಿಕೆಯ ನಿಷೇಧಾರ್ಥವಾಗಿ ಅಂಕಲೇಶ್ವರ ತಾಲೂಕದ ಚೋರಾಸಿ ಗ್ರಾಮದ ಪೋಲೀಸ ಪಟೇಲರಾದ ಶ್ರೀ ಪಿ. ಎಲ್. ದೇಸಾಯಿಯವರು ತಮ್ಮ ಸರಕಾರಿ ಉದ್ಯೋಗಕ್ಕೆ ಶರಣು ಹೊಡೆದಿದ್ದಾರೆ.

### ಶ್ರೀ ಖಾಪರ್ಡೆಯವರು ಕಾಯಿದೆ ಮಂಡಳಕ್ಕೆ
### ಶರಣು ಹೊಡೆದರು.

ಪ್ರತಿಸಹಕಾರವಾದಿಗಳ ಮುಖಂಡರಲ್ಲೊಬ್ಬರಾದ ನಾಗಪುರದ ಶ್ರೀ ಬಿ. ಜಿ. ಖಾಪರ್ಡೆಯವರು ಮಧ್ಯಪ್ರಾಂತದ ವ್ಹಾಯಿಸರಾಯರಿಗೆ ದಬ್ಬಾಳಿಕೆಯ ನಿಷೇಧಕರವಾಗಿ ಒಂದು ಪತ್ರವನ್ನು ಬರೆದು ಮಧ್ಯಪ್ರಾಂತದ ಕಾಯಿದೆಮಂಡಳದ ಸಭಾಸದತ್ವಕ್ಕೆ ಶರಣು ಹೊಡೆದಿದ್ದಾರೆ.

## ವಾನರ ಸೇನೆಯ ಮೆರವಣಿಗೆಯು

### ಪೋಲೀಸರೂ ಮೆರವಣಿಗೆಯಲ್ಲಿ ಸೇರಿದರು

ಮುಂಬಯಿಯಲ್ಲಿ ಹೊಸದಾಗಿ ಸ್ಥಾಪಿತವಾದ 'ವಾನರ ಸೇನೆಯ' ಸಭೆಯು ಬುಧವಾರ ದಿವಸ ಜಿನ್ನಾಹಾಲಿನಲ್ಲಿ ಸೇರಿತ್ತು. ಅನೇಕ ಜನ ಸಭಾಸದರು. ಸಭೆಗೆ ಆಗಮಿಸಿದ್ದರು. ಎಲ್ಲರಿಗೂ ರಾಷ್ಟ್ರೀಯ ನಿಶಾನೆಗಳು ಕೊಡಲ್ಪಟ್ಟವು. ಅಲ್ಲಿಯ ಮಾರವಾಡಿ ವ್ಯಾಪಾರಸ್ಥರು ಈ ವಾನರ ಸೇನಗೆ ಪೇಢೆಯನ್ನೂ ಬಾಳೇ ಹಣ್ಣುಗಳನ್ನೂ ಹಂಚಿದರು. ಇದೆಲ್ಲವೂ ಪೂರ್ತಿಯಾದ ನಂತರ, ವಾನರ ಸೇನೆಯ ಮೆರವಣಿಗೆಯು ಅನೇಕ ಬಾಲಕರೊಂದಿಗೆ ಕಾಂಗ್ರೆಸ್ ಹೌಸದಿಂದ ಹೊರಡುವದಾಯಿತು. ಈ ಮೆರವಣಿಗೆಯು ಪ್ರಿನ್ಸೆಸ್ ರೋಡ, ಕೆನಡಿ ಬ್ರಿಜ್, ಗ್ರ್ಯಾಂಟ ರೋಡ ಬ್ರಿಜ್ ಮತ್ತು ಲ್ಯಾಮಿಂಗ್ಟನ್ ರೋಡ ಇವೆಲ್ಲ ಬೀದಿಗಳನ್ನು, ರಾಷ್ಟ್ರೀಯ ಗೀತಗಳನ್ನು ಹಾಡುತ್ತ ಮತ್ತು 'ವಾನರ ಸೇನಾ ಝಿಂದಾಬಾದ' ಎಂಬ ಜಯಜಯಕಾರದಿಂದ ಸುತ್ತುವರಿದು ೧ ತಾಸಿನ ನಂತರ ತಿರುಗಿ ಕಾಂಗ್ರೆಸ್ ಹೌಸಕ್ಕೆ ತಲುಪಿತು ೧೨ ವರ್ಷಕ್ಕಿಂತ ಕಡಿಮೆ ವಯಸ್ಸಿನ, ಮತ್ತು ಒಂದೇ ಮಾದರಿಯ ಉಡುಪುಳ್ಳ ಈ ಬಾಲಕರ ಮೆರವಣಿಗೆಯು ಅತೀ ವಿಚಿತ್ರ ನೋಟವನ್ನುಂಟು ಮಾಡಿತು, ಈ ಮೆರವಣಿಗೆಯು ಸಾಗಿದ ಹಾದಿಯಲ್ಲಿ ಹೋಗುವಾಗ್ಗೆ, ಬೀದಿಯ ಎರಡೂ ಬದಿಗೆ ನಿಂತ ಜನರು ಈ ಬಾಲಕರ ಮೆರವಣಿಗೆಯನ್ನು ನಿರೀಕ್ಷಿಸಿ ಬೆಪ್ಪಾಗುತ್ತಲಿದ್ದರು. ಮೆರವಣಿಗೆಯು ಲ್ಯಾಮಿಂಗ್ಟನ್ ರೋಡಿಗೆ ತಲ್ಪಿದೊಡನೆ ಮೂರು ಜನ ಪೋಲೀಸ ಅಧಿಕಾರಿಗಳು ಕೈಯಲ್ಲಿ ಬೆತ್ತಗಳುಳ್ಳ ೧೨ ಜನ ಶಿಪಾಯಿರೊಂದಿಗೆ ಮೆರವಣಿಗೆಯನ್ನು ಪ್ರಿನ್ಸೆಸರ ಬೀದಿಯ ಕೊನೆಯ ವರೆಗೆ ಹಿಂಬಾಲಿಸಿದರು. ನಂತರ ಮೆರವಣಿಗೆಯು ತನ್ನ ಸ್ಥಳಕ್ಕೆ ಬಂದಿತು, ಈ ಸೇನೆಯು ಬರುವ ಇಪ್ಪತ್ತನೆ ದಿವಸ ಮುಂಜಾನೆ ೭ ಗಂಟೆಗೆ ಗವಾಲಿಯಾ ಟ್ಯಾಂಕಿನಲ್ಲಿ ಕಲೆಯುತ್ತದೆ.

## ರಾಷ್ಟ್ರೀಯ ಶಾಲೆಯ ಮೇಲೆ ದಾಳಿ

ಎಲ್ಲೂರಿನಲ್ಲಿ ಪೋಲೀಸರು ಗುಂಡು ಹಾರಿಸಿದರು. ಒಬ್ಬನು ಸತ್ತನು. ಹನ್ನೊಂದು ಜನರಿಗೆ ಗಾಯಗಳಾಗಿವೆ ಪೋಲೀಸರು ೫೦ ಮ್ಯಾಜಿಸ್ಟ್ರೇಟನೊಂದಿಗೆ ರಾಷ್ಟ್ರೀಯ ಶಾಲೆಯ ಒಳಗೆ ನುಗ್ಗಿದರು. ಅದರಲ್ಲಿಯ ಎಂಟು ಜನರನ್ನು ಸೆರೆ ಹಿಡಿದರು. ಪೋಲೀಸರು ತಿರುಗಿ ಹೋಗುವಕಾಲಕ್ಕೆ ಜನರು ಮತ್ತೆ ನೆರೆದರು. ಅವರಿಗೆ ಹೋಗಲಿಕ್ಕೆ ಪೋಲೀಸರು ಹೇಳಿದರು. ಆದರೆ ಜನರು ಮಾತ್ರ ಶಾಂತಿಯಿಂದ ಅಹಿಂಸೆಯಿಂದಲೂ ಅಲ್ಲಿಯೇ ನಿಂತರು. ಮತ್ತೊಮ್ಮೆ ಪೋಲೀಸರು ಅವರಿಗೆ ಹೋಗಲಿಕ್ಕೆ ಹೇಳಿದರು. ಜನರೇನು ಸರಿಯಲಿಲ್ಲ. ಕಡೆಗೆ ಪೋಲೀಸರು ೧೨೦ ಗುಂಡುಗಳ ಹಾರಿಸಿದರು.

## ಪಂಜಾಬದಲ್ಲಿ ಕಾಯಿದೆಯ ಪಿಡುಗು

ಪಂಜಾಬ ಪ್ರಾಂತದ ತುಂಬೆಲ್ಲ ಸತ್ಯಾಗ್ರಹ ಯುದ್ಧ ಮಂಡಲಗಳೂ ನವಜೀವನ ಸಭೆಗಳೂ ಕಾಯಿದೆಗೆ ವಿರುದ್ಧವೆಂದು ಜಾಹೀರ ಮಾಡಿದರು ಈ ಕಾಯಿದೆಯ ಪಿಡುಗು ಪ್ರಾಂತದಲ್ಲೆಲ್ಲ ಕಡೆಗೂ ಹಬ್ಬಿದೆ. ಅಮೃತಸರ, ಲೈಲಾಪೂರ, ಜಲಂಧರ, ಸಿಯಾಲಕೋಟ, ಫಿರೋಜಪೂರ, ಮತ್ತು ಲಾಹೋರ ಎಂಬ ಮುಖ್ಯ ಪಟ್ಟಣಗಳಲ್ಲಿಯ ಎಲ್ಲ ಸತ್ಯಾಗ್ರಹ ಯುದ್ಧ ಮಂಡಳದ ಸಭಾಸದರನ್ನೂ ನವಜೀವನ ಸಭಾಸದರನ್ನೂ ಒಟ್ಟು ಇಪ್ಪತ್ತು ಜನರನ್ನು ಸೆರೆ ಹಿಡಿದಿರುವರು

## ಸತ್ಯಾಗ್ರಹೀ ವೀರರ ಸಂದೇಶ

ಮುಂಬಯಿಯಲ್ಲಿಯ ಸತ್ಯಾಗ್ರಹ ಯುದ್ಧ ಮಂಡಳದ ಕೆಲವು ಸಭಾಸದರನ್ನು ಸೆರೆ ಹಿಡಿದು ಶಿಕ್ಷೆ ಕೊಟ್ಟು ಅವರನ್ನು ನಾಸಿಕ ಜೇಲಿಗೆ ಕಳಿಸಿದರು. ಇವರಲ್ಲಿ ಮುಖ್ಯವಾಗಿ ಶ್ರೀ ಕಪಾಡಿಯಾ, ಜಿನಾಭಾಯಿ, ಜೋಶಿ, ಮಾಣಿಕಲಾಲ ಗಾಂಧಿ, ಮೀನು ಕೋಯಾಜಿ, ಮುಕುಂದ ಮಾಲವೀಯಾ, ಫುಸಲ್, ಪ್ರಾಂಜಪೇಕರ, ಧುರಂಧರೆ, ಮತ್ತು ಶರ್ಮಾ ಎಂಬವರಿದ್ದರು. ಇವರನ್ನು ಜನರು ಸ್ಟೇಶನದ ವರೆಗೆ ಕಳಿಸಲಿಕ್ಕೆ ಬಂದಿದ್ದರು. ಇವರ ಮುಖಗಳು ಮುಗುಳು ನಗೆಯಿಂದ ಮಿನುಗುತ್ತಿದ್ದವು. ಈ ಯುದ್ಧವನ್ನು ಹೀಗೇ ಮುಂದೆ ಸಾಗಿಸಿರಿ ಎಂದು ಅವರು ತಮ್ಮ ಸಂದೇಶವನ್ನು ಕೊಟ್ಟರು. ಸ್ವಯಂಸೇವಕರು ಕೋಳಿ ದವರು ಎಂದು ಕರೆವ ಕಾಗೆಯು ಇಂಥ ಶ್ರೀಮಂತ ಕಡೆಗೆ ನೋಡಿದರೆ ತಾನೇ ಕಾಳಿಲ್ಲದ ಮೂಳನಂತೆ ತನ್ನ ದೇಶ ಬಿಟ್ಟು ಬಂದು ಈ ದೇಶದಲ್ಲಿ ಸೇರಿಕೊಂಡಿನೆ ಎಂದು ಎಲ್ಲರಿಗೂ ಅನಿಸಲಿಕ್ಕಿಲ್ಲವೋ.

ಆನೆ ನೀರಾಟದೊಳು ಮೀನಕಂಡಂಜುವದೇ, ಮಾನಹೀನ ನುಡಿಗೆ ಅಭಿಜ್ಞಾನಿ ಅಂಜುವನೇ ಸರ್ವಜ್ಞ ಎಂಬ ಮಾತು ನಿಜ ವಲ್ಲವೇ? ಆನೆ ಹೋದರೆ ಸ್ವಾನ ಬೊಗಳುವದು ಎಂಬ ಮಾತು ನೆನಪಾಗುವದಿಲ್ಲವೋ.?

## ಈಚಲಾಸುರನ ಕುತ್ತಿಗೆ ಹಿಚುಕಿದರು

ಧಾರವಾಡದಲ್ಲಿ ದರಬಾರ ಹಾಲಿನಲ್ಲಿ ಸಿಂದೀ ಮರದ ಲಿಲಾವು ನಡೆದಿತ್ತು. ಪೋಲಿಸ ಸಾಹೇಬರು ಸಶಸ್ತ್ರ ಹಾಗೂ ಸಾದಾ ಪೋಲೀಸರ ಸಂಗಡ ನಿಂತಿದ್ದರು. ೫೦ ಜನ ಸ್ವಯಂ ಸೇವಕರು, ೩೦ ಜನ ಸ್ವಯಂಸೇವಿಕೆಯರು ಗಿರಾಕಿಗಳನ್ನು ತಡೆಯುತ್ತ ನಿಂತಿದ್ದರು ಜನರಾದರೂ ಬಹಳವಾಗಿ ನೆರೆದಿದ್ದರು ಸಿಂದೀ ಬಂಧುಗಳು ಅನುಮಾನ ಮಾಡಿದ್ದರಿಂದ ಲಿಲಾವು ೧೫ ದಿವಸಗಳ ವರೆಗೆ ಮುಂದೆ ಹಾಕಲ್ಪಟ್ಟಿತು. ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಸಾವಿರಾರು ಸಿಂದೀ ಗಿಡಗಳು ನೆಲಕ್ಕುರುಳಿವೆ. ಅದರಿಂದ ೧೦೦ ಕ್ಕೆ ೭೦ ರಂತೆ ಸಿಂದೀ ಅಂಗಡಿಗಳು ನಷ್ಟ ಇಟ್ಟುಕೊಂಡಿವೆ.

ಈ ಪತ್ರಿಕೆಯು ಒಡೆಯರಾದ ಕನ್ನಡಿಗ ಕಾಮತ ಅವರಿಂದ ಬಾಗಲಕೋಟೆಯ
ವಿದ್ಯಾರ್ಥಿ ಮುದ್ರಣ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭. ನಿತ್ಯಸಂಚಿಕೆಯು. ಬೆಲೆ ೦—೦—೩

[illegible]
ಸಂಪಾದಕರು— [illegible]
ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಸೋಮವಾರ ತಿಂತಿ ಆಷಾಢ ಶುದ್ಧ ೪ ಶಕೆ ೧೮೫೨ ತಾ॥ ೩೦—೬—೩೦ [ಸಂಚಿಕೆ ೮೮

## ಶಿಕ್ಷಣಾಧಿಕಾರಿಗಳು ಗಡಬಡಿಸಹತ್ತಿದರು

ಸರಕಾರದ ಮನ್ನಣೆಯನ್ನು ಪಡೆದು ತನ್ನ ಆಡಳಿತೆಯೊಳಗಿರುವ ಎಲ್ಲ ಶಾಲೆಗಳಿಗಾಗಿ ಸಿಂಧ ಪ್ರಾಂತದ ಶಿಕ್ಷಣ ಖಾತೆಯು ಅಧಿಕಾರಿಗಳು ಒಂದು ಪತ್ರಿಕೆಯನ್ನು ಹೊರಡಿಸಿ ಶಾಲಾಧಿಕಾರಿಗಳಿಗೆ [೧] ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗಿದೆಯೋ ಹೇಗೆ? [೨] ಶಾಲೆಗೆ ಬರುತ್ತಿರುವ [illegible] ಸರಾಸರಿಯು ಮೊದಲಿನಕಿಂತಲೂ ಕಡಿಮೆಯಾಗಿದೆಯೋ ಹೇಗೆ? [೩] ಮೆರವಣಿಗೆಗಳಲ್ಲಿ ಸೇರಿ, ಸಭೆಗಳಲ್ಲಿ ಭಾಷಣ ಮಾಡಿ, ಇಲ್ಲವೆ ಪಿಕೆಟಿಂಗ ಮೊದಲಾದ [illegible] ಕೆಲಸಗಳಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಸತ್ಯಾಗ್ರಹ ಸಮರದಲ್ಲಿ ಭಾಗ ತೆಗೆದುಕೊಂಡಿರುವರು? [illegible] ಸಂಗತಿಗಳ ಸಂಬಂಧವಾಗಿ ಎಲ್ಲ ಸುದ್ದಿಯನ್ನು ಸವಿಸ್ತಾರವಾಗಿ ಪ್ರತಿ ತಿಂಗಳ ಮೊದಲನೆಯ ತಾರೀಖಿನೊಳಗಾಗಿ [illegible] ಕೇಳಿಕೊಂಡಿದ್ದಾರೆ. ಸತ್ಯಾಗ್ರಹ ಸಮರದಲ್ಲಿ ಸಿಂಧ ಪ್ರಾಂತದ ತರುಣರು ವಿಶೇಷವಾಗಿ ಭಾಗ ತೆಗೆದುಕೊಳ್ಳುತ್ತಿರುವದೇ ಈ ಪತ್ರಿಕೆಗೆ ಕಾರಣವಾಗಿದೆ! ನಮ್ಮ ಜನರ [illegible] ಒಪ್ಪಿಸಲ್ಪಟ್ಟ ಖಾತೆಯಾದ ಶಿಕ್ಷಣ ಖಾತೆಯ ಅಧಿಕಾರಿಗಳು ತಮ್ಮ ಆಳಿಕೆಯೊಳಗಿನ ಶಾಲಾಧಿಕಾರಿಗಳಿಗೆ ಗುಪ್ತ ಪೋಲೀಸರ ಕಾರ್ಯವನ್ನು ಕೈಕೊಳ್ಳಲು ತಿಳಿಸಿ ತಮ್ಮ ತಾಯ್ನಾಡನ್ನು ಹೇಗೆ ಸೇವಿಸುತ್ತಿರುವರೆಂಬುವದು ಇದರಿಂದ ತಾನಾಗಿಯೇ ವ್ಯಕ್ತವಾಗುವದು. ಯಾವನಾದರೂ ಮುಖ್ಯೋಪಾಧ್ಯಾಯನು ಈ ಪತ್ರಿಕೆಯ ವಿರುದ್ಧವಾಗಿ ವರ್ತಿಸಿದಲ್ಲಿ ಅವನ ಶಾಲೆಗೆ ಸರಕಾರದಿಂದ ಸಿಗಬಹುದಾದ ಧನವೂ, ಮನ್ನಣೆಯೂ ದೊರೆಯಲಾರವು. ಆದರೂ ತಮ್ಮ ಕೈಕೆಳಗಿನ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಚಲನವಲನಗಳ ಮೇಲೆ ಚನ್ನಾಗಿ ಕಣ್ಣಿಟ್ಟು ಅವರ ಕಾರ್ಯಕಲಾಪಗಳನ್ನು ಮೇಲಧಿಕಾರಿಗಳಿಗೆ ತಿಳಿಸುವ ಹೊಲಸು ಕೆಲಸವನ್ನು ಸ್ವಾಭಿಮಾನಿಯಾದ ಯಾವ ಮುಖ್ಯಾಧ್ಯಾಪಕನೂ ಮಾಡಬಾರದಾಗಿ ನಾವು ಬಿನ್ನವಿಸಿಕೊಳ್ಳುತ್ತೇವೆ.

[ಯಂಗ ಇಂಡಿಯಾ]

ಮುಂಬಯಿ ಇಲಾಖೆಯ ದಕ್ಷಿಣ ಭಾಗದ ಶಿಕ್ಷಣ ಖಾತೆಯ ಅಧಿಕಾರಿಗಳೂ ಹೀಗೆಯೇ ಪತ್ರಿಕೆಯನ್ನು ತೆಗೆದಿರುವರೋ ಎಂಬುವದು ತಿಳಿದು ಬಂದಿಲ್ಲ. ಈಗ ಅವರು ತೆಗೆದಿದ್ದರೂ ಮುಂದೆಯಾದರೂ ಇಂತಹ ಪತ್ರಿಕೆಯನ್ನು ಹೊರಡಿಸಬಹುದು. ಇಂತಹ ಪತ್ರಿಕೆಯು ಹೊರಟಲ್ಲಿ ಕರ್ನಾಟಕದೊಳಗಿನ ಶಾಲೆಗಳ ಮುಖ್ಯಾಧ್ಯಾಪಕರೂ ಮೇಲಧಿಕಾರಿಗಳ ಪತ್ರಿಕೆಗೆ ಎಳ್ಳಷ್ಟು ಮನ್ನಣೆಯನ್ನು ಕೊಡದೆ ಸ್ವಾಭಿಮಾನದಿಂದ ವರ್ತಿಸಬೇಕು!

## ನಾ॥ ಜಾಧವರೂ ನಿರಾಶೆಯನ್ನು ಹೊಂದಿದರು

ಮುಂಬಯಿ ಸರಕಾರದ ಒಳ್ಳೆಲತನದ [illegible] ಮಂತ್ರಿಗಳೂ, ಬ್ರಾಹ್ಮಣೇತರ ಸಂಗದ ಮುಖಂಡರಲ್ಲೊಬ್ಬರೂ ಆದ ನಾ॥ ಬಿ. ವ್ಹಿ. ಜಾಧವರು ಸಾಯಮನ ಕಮೀಶನದ ವರದಿಯನ್ನು ಕುರಿತು ಕೆಳಗಿನಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ—

"ಸಾಯಮನ್ ಸಮಿತಿಯ ವರದಿಗೆ ಬ್ರಾಹ್ಮಣೇತರರ ಬೆಂಬಲವಿರುವದೆಂದು ತಪ್ಪಾಗಿ ಟಾಯಿಮ್ಸ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಬ್ರಾಹ್ಮಣೇತರ ಸಂಗದ ಧೋರಣದ ವಿಷಯವಾಗಿ ಇದರಿಂದ ಜನರಲ್ಲಿ ತಪ್ಪು ತಿಳುವಳಿಕೆಯುಂಟಾಗಬಹುದು. ಪ್ರಾಂತಿಕ ಸ್ವರಾಜ್ಯವನ್ನೇ ತಮ್ಮ ಧ್ಯೇಯವನ್ನಾಗಿಟ್ಟುಕೊಂಡ ಬ್ರಾಹ್ಮಣೇತರ ಸಂಗದವರಿಗೆ ಸಾಯಮನ್ ವರದಿಯು ಬಹಳೇ ನಿರಾಶೆಯನ್ನುಂಟುಮಾಡಿದೆ. ವರದಿಯಲ್ಲಿ ವಸಾಹತಿಸ್ವರಾಜ್ಯದ ವಿಷಯವಾಗಿ ಸಭ್ಯಸದರು ಒಂದು ಚಕಾರ ಶಬ್ದವನ್ನೂ ತೆಗೆದಿಲ್ಲ ಮತ್ತು ಅದರ ಸಂಬಂಧವಾಗಿ ಯಾವ ಸೂಚನೆಯನ್ನು ಸಭಾಸದರು ಅದರಲ್ಲಿ ಸ್ಥಳವನ್ನು ಕೊಟ್ಟಿಲ್ಲ. ಸಾಯಮನ್ ಸಮಿತಿಯವರ ಶಿಫಾರಸುಗಳಿಗೂ ಹಿಂದೀ ಜನರ ಬೇಡಿಕೆಗಳಿಗೂ ಹೋಲಿಸಿ ನೋಡಿದಲ್ಲಿ ಅವುಗಳು ಒಂದಕ್ಕೊಂದು ತೀರ ವಿರುದ್ಧವಾಗಿವೆಯೆಂದು ಕಂಡುಬರುವದು.

## ಸತ್ಯಾಗ್ರಹಕ್ಕೆ ಪಂಜಾಬದ ಬಲಿದಾನ

### ೧೬೦೦ ಜನರಿಗೆ ಸೆರೆಮನೆ

ಹಿಂದುಸ್ಥಾನದಲ್ಲಿ ನಡೆದ ಸತ್ಯಾಗ್ರಹ ಚಳವಳಿಯಲ್ಲಿ ಭಾಗ ತೆಗೆದುಕೊಂಡಿದ್ದುದಕ್ಕಾಗಿ ಪಂಜಾಬದಲ್ಲಿ ಈ ವರೆಗೆ ೧೬೦೦ ಜನರಿಗೆ ಕಾರಾಗೃಹವಾಸವು ದೊರೆತಿದೆಯಾಗಿ ತಿಳಿಯುತ್ತದೆ.

## ವಿಜಾಪುರ ಜಿಲ್ಲೆಯಲ್ಲಿ

# ಸರಕಾರಕ್ಕನಿಗೆ ಕಠಿಣ ದೆಸೆ.

### ಹೋದ ವರ್ಷ ೧೪೦೦೦೦ ರು. ಈ ವರ್ಷ ಕೇವಲ ೭೫೦೦೦ ರು.

ಈ ಮೊದಲು ನಿರ್ಧರಿಸಿದಂತೆ ವಿಜಾಪುರ ಸತ್ಯಾಗ್ರಹ ಶಿಬಿರದ ಸ್ವಯಂಸೇವಕರು ತಾ|| ೨೫ ನೆಯ ದಿವಸ ಪಿಕೆಟಿಂಗ ಕಾರ್ಯವನ್ನು ಪ್ರಾರಂಭಿಸಿದರು. ಅಂದು ವಿಜಾಪುರದಲ್ಲಿ ವಿಜಾಪುರ ಜಿಲ್ಲೆಯಲ್ಲಿಯ ಸಿಂದೀ ಅಂಗಡಿಗಳ ಲಿಲಾವು ಆಗಲಿಕ್ಕಿದ್ದವು. ಸ್ವಯಂಸೇವಕರು ಮುಂಜಾನೆ ೬ ಗಂಟೆಗೆ ಪ್ರಚಂಡ ಮೆರವಣಿಗೆಯೊಡನೆ ಹೊರಟು ಕಚೇರಿಯ ಮುಂದೆ ಹೋದರು. ಎಲ್ಲ ಬಾಗಿಲುಗಳಲ್ಲಿಯೂ ಸ್ವಯಂಸೇವಕರು ನಿಲ್ಲಿಸಲ್ಪಟ್ಟರು. ಬಾಗಲಕೋಟೆಯಿಂದಲೂ ಕೆಲವು ಸ್ವಯಂಸೇವಕರು ಬಂದಿದ್ದರು. ಸ್ತ್ರೀ ಸ್ವಯಂಸೇವಕರೂ ನಮ್ಮೊಡನೆ ಸಹಕರಿಸಿ ಒಳ್ಳೇ ಶಿಸ್ತಿನಿಂದ ಕೆಲಸ ಮಾಡಿದರು. ಸುಮಾರು ೧೦-೧೧ ಗಂಟೆಗೆ ಮಕ್ತೇದಾರರು ಬರಲು ಪ್ರಾರಂಭಿಸಿದರು. ಸ್ತ್ರೀಯರು ವ್ಯಾಪಾರದ ದುಷ್ಟತನವನ್ನು ಅವರಿಗೆ ತಿಳಿಹೇಳಿ ಅದರಿಂದ ನಿವೃತ್ತರಾಗಲು ಅವರಿಗೆ ಸೆರಗೊಡ್ಡಿ ಬೇಡಿಕೊಂಡರು. ಎಷ್ಟೋ ಮಹನೀಯರು ತಿರುಗಿ ಹೋದರು. ಕೆಲವರು ಒಳಹೊಕ್ಕರು. ಒಬ್ಬ ಪಾರ್ಶಿಯನು ಮಕ್ತೆಯನ್ನು ಹಿಡಿಯಬೇಕೆಂದು ಬಂದಿದ್ದನು. ನಮ್ಮ ಕೆಲಸಕ್ಕೆ ಮೆಚ್ಚಿ ಸಿಂದೀ ಅಂಗಡಿಯನ್ನು ಹಿಡಿಯುವದಿಲ್ಲವೆಂದು ಮಾತುಕೊಟ್ಟು ಸತ್ಯಾಗ್ರಹ ನಿಧಿಗೆ ೧೧೦ ರು. ಕೊಟ್ಟು ಹೋದನು. ಸುಮಾರು ೧೨ ಗಂಟೆಗೆ ಲಿಲಾವುಗಳು ಪ್ರಾರಂಭವಾದವು. ಸತ್ಯಾಗ್ರಹಿಗಳ ಮಾತುಗಳನ್ನು ಮೀರಿ ಒಳಹೊಕ್ಕವರು ಅಂಗಡಿಗಳನ್ನು ಲಿಲಾವಿನಲ್ಲಿ ಹಿಡಿದರು. ಮೇಲೆ ಹೇಳಿದ ಪಾರ್ಸಿ ಗೃಹಸ್ಥನು ಪುನಃ ಬಂದು ಒಳಹೊಕ್ಕು ಎಷ್ಟೋ ಅಂಗಡಿಗಳನ್ನು ಹಿಡಿದನು. ಕಂಡೂ ಕಂಡೂ ವಿಪತ್ತಿಗೊಳಗಾದ ಈ ಮಹನೀಯನನ್ನು ಕಂಡು ನಮಗೆ ದುಃಖವುಂಟಾಗುತ್ತದೆ. ನಮ್ಮ ಪಿಕೆಟಿಂಗದಿಂದ ಸರಕಾರಕ್ಕೆ ೧ ರೂಪಾಯಿಗೆ ೬|| ಆಣೆಯಂತೆ ಹಾನಿಯಾಗಿರುತ್ತದೆ. ಹಿಂದಿನ ವರ್ಷದಲ್ಲಿ ೧೪೦೦೦೦ ರು. ಗಳ ಉತ್ಪನ್ನವಾಗಿತ್ತು. ಈ ವರ್ಷ ಕೇವಲ ೭೫೦೦೦ ರುಪಾಯಿಗಳೇ ದೊರೆತವು.

ಪೋಲೀಸರಾದರೂ ತಕ್ಕಮಟ್ಟಿಗೆ ವ್ಯವಸ್ಥೆ ಮಾಡಿಟ್ಟಿದ್ದರು. ಅವರೂ ನಮ್ಮ ಶಿಸ್ತಿಗೆ ಮೆಚ್ಚಿದರು. ನೋಡಲಿಕ್ಕೆ ಏನಿಲ್ಲೆಂದರೂ ೭—೮ ಸಾವಿರ ಜನರು ನೆರೆದಿದ್ದರು. ಇನ್ನು ಮುಂದೆ ಸಿಂದೀ ಅಂಗಡಿಗಳನ್ನು ಮುಚ್ಚಿಸುವ ಮತ್ತು ಗಿಡಗಳನ್ನು ಕಡಿಯುವ ಚಳವಳಿಯು ಜುಲೈ ೧ ನೇ ತಾ|| ನಿಂದ ಜೋರಿನಿಂದ ಪ್ರಾರಂಭವಾಗಲಿಕ್ಕಿದೆ.

—ಪ್ರಕಟನಾಧಿಕಾರಿ

### ಸೆರೆಯಾಳುಗಳಿಗೆ ಹುಳಗಳಿಂದ ತುಂಬಿದ ಅನ್ನ

ವರ್ಲಿಜಾಲದಲ್ಲಿರುವ ಸತ್ಯಾಗ್ರಹಿ ಸೆರೆಯಾಳುಗಳಿಗೆ ತಾ|| ೨೬ ನೆಯ ದಿವಸ ಮುಂಜಾವಿನಲ್ಲಿ ಇರುವೆಗಳಿಂದಲೂ ಹುಳಗಳಿಂದಲೂ ತುಂಬಿದ ಆಹಾರವನ್ನು ಕೊಟ್ಟಿದ್ದರಿಂದ, ಅಲ್ಲಿಯ ೪೦೦ ಜನ ಸತ್ಯಾಗ್ರಹಿಗಳು ಯೋಗ್ಯವ್ಯವಸ್ಥೆಯಾಗುವವರೆಗೆ ಆಹಾರವನ್ನು ತೆಗೆದುಕೊಳ್ಳುವದನ್ನು ಬಿಟ್ಟುಬಿಟ್ಟಿದ್ದಾರೆ.

ಇಹವೃತ್ತ

### ಕೊತ್ತಲಬಸ್ಸನ ಬೈಲಿಗೆ

## ಲಾಲಾಜಿಯವರ ನಾಮಕರಣ

ತಾ|| ೨೮ ನೆಯ ದಿವಸ ಕೊತ್ತಲಬಸ್ಸನ ಬೈಲಿನಲ್ಲಿ ಶ್ರೀ. ಕಣಬೂರರ ಅಧ್ಯಕ್ಷತೆಯಲ್ಲಿ ಸೇರಿದ ಮೂರು ಸಾವಿರ ಜನ ಸಮುದಾಯವಿದ್ದ ಸಾರ್ವಜನಿಕ ಸಭೆಯಲ್ಲಿ ಧಾರವಾಡದ ನಗರ ಸಭೆಯ ಸಭಾಸದರೂ ಮರಾಠಾ ಸಮಾಜದ ಮುಂದಾಳುಗಳೂ ಆದ ಶ್ರೀ ಭಿಸೆಯವರು ಮದ್ಯಪಾನ ನಿಷೇಧ, ಪರದೇಶಿ ಬಟ್ಟೆಯ ಬಹಿಷ್ಕಾರ, ವಿದೇಶಿ ಸಾಮಾನುಗಳ ಬಹಿಷ್ಕಾರ ಮೊದಲಾದವುಗಳನ್ನು ಕುರಿತು ಜನರ ಮೇಲೆ ಒಳ್ಳೇ ಪರಿಣಾಮವಾಗುವಂತೆ ತಮ್ಮ ಅಸ್ಖಲಿತವಾಣಿಯಿಂದ ೨ ತಾಸುಗಳವರೆಗೆ ಭಾಷಣ ಮಾಡಿದರು. ನಗರ ಸಭೆಯ ಮೇಲೆ ರಾಷ್ಟ್ರಧ್ವಜವನ್ನು ಹಚ್ಚುವ ವಿಷಯವನ್ನು ಎತ್ತಿ ಬಾಗಲಕೋಟೆಯವರು ಅದನ್ನು ಕಟ್ಟಡದ ಮೇಲೆ ಏರಿಸಿಯೇ ತೀರಬೇಕೆಂಬುದಾಗಿ ಕೇಳಿಕೊಂಡರು. ನಂತರದಲ್ಲಿ ಶ್ರೀ ಕಣಬೂರರ ವ್ಯಾಖ್ಯಾನವಾಯಿತು. ಬಳಿಕ ಶ್ರೀ. ನೀರಲಕೇರಿ ಶೀನಪ್ಪನವರು ಪ್ರಚಂಡ ಸಮುದಾಯವು ನೆರೆದಿದ್ದದನ್ನು ಕಂಡು ಹರ್ಷಗೊಂಡು ಇದೇ ತಕ್ಕ ಸಮಯವೆಂದು ತಿಳಿದು ಈ ಬೈಲಿಗೆ ಒಂದು ಹೆಸರನ್ನು ಇಡಬೇಕಾಗಿದೆ ಆದುದರಿಂದ ಶ್ರೀ ವಿದ್ಯಾರಣ್ಯ, ಲಾಲಾಜಿ, ಮೋತಿ, ನೆಹರು ಇವುಗಳಲ್ಲಿ ಯಾವದಾದರೂ ಒಂದನ್ನು ಆರಿಸಿಕೊಂಡು ತಿಳಿಸಲು ಸಭಿಕರಲ್ಲಿ ಕೇಳಿಕೊಂಡರು. ಪಂಜಾಬದ ಸಿಂಹರೆಂದೆನಿಸಿಕೊಂಡು ಅಧಿಕಾರಿಗಳ ಲಾಠಿಗಳಿಗೆ ಗುರಿಯಾಗಿ ಪರಲೋಕಕ್ಕೆ ತೆರಳಿದ ಲಾಲಾಜಿಯವರ ಹೆಸರನ್ನಿಡಬೇಕೆಂದು ಜನರು ಗಟ್ಟಿಯಾಗಿ ಕೂಗಿದರು. ರಾಷ್ಟ್ರಗೀತೆಯಾದ ನಂತರ ಸಭೆಯು ಮುಕ್ತಾಯಹೊಂದಿತು.

ಬಳಿಕ ಶ್ರೀ ಭಿಸೆಯವರು ಮರಾಠಾ ಸಮಾಜದವರು ಪ್ರತ್ಯೇಕವಾಗಿ ಏರ್ಪಡಿಸಿದ ಸ್ಥಳಕ್ಕೆ ಸಾಗಿಹೋಗಿ ಸನ್ನದ ಚಳವಳಿಯ ಮರಾಠರ ಕರ್ತವ್ಯದ ವಿಷಯವಾಗಿ ಅವರಿಗೆ ತಿಳಿಸಿ ಹೇಳಿದರು.

### ನೂಲಲು ಕಲಿಸಿದುದಕ್ಕಾಗಿ ಶಿಕ್ಷಕನಿಗೆ ಕೈದು

ಪಂಜಾಬ ಪ್ರಾಂತದ ಗಡಿ ಎಂಬ ಗ್ರಾಮದ ಪ್ರಾಥಮಿಕ ಶಾಲೆಯ ಶಿಕ್ಷಕನೋರ್ವನು ತನ್ನ ಶಾಲೆಯಲ್ಲಿಯ ವಿದ್ಯಾರ್ಥಿಗಳಿಗೆ ಪ್ರತಿನಿತ್ಯದಲ್ಲಿಯೂ ನೂಲನ್ನು ತೆಗೆಯಲು ಕಲಿಸುತ್ತಿದ್ದನು. ಒಂದು ದಿವಸ ಪೋಲೀಸ ಅಧಿಕಾರಿಗಳು ಅಲ್ಲಿಗೆ ಹೋಗಿ ಅವನನ್ನು ವರ್ಗದಲ್ಲಿಯೇ ಹಿಡಿದು ಅವನ ಕೈಗಳಿಗೆ ಬೇಡಿಗಳನ್ನು ಹಾಕಿ ೧೨ ನೆಯ ಕಲಮಿನನ್ವಯ ಅವನನ್ನು ಹಿಡಿದುಕೊಂಡು ಹೋದರು. ಕಾಳವಿಪ್ಲದಲಿ ಬೇತಾಳನಂದದಿ ಕುಣಿಯುತ್ತಿರುವ ದಬ್ಬಾಳಿಕೆಯ ರಕ್ಕಸನಿಗೆ ಇನ್ನು ಮುಂದೆ ಯಾರಾರು ತುತ್ತಾಗುವರೋ ಹೇಳಲು ಬರಂತಿಲ್ಲ. ಯಾಕೆಂದರೆ ಅವನು ಸಾರಾಸಾರ ವಿಚಾರವಿಲ್ಲದೆ ಕುಣಿಯುತ್ತಿರುವ ರಕ್ಕಸನಾಗಿರುವನು.

## ಮಂಗಳೂರ ಜಿಲ್ಲೆಯಲ್ಲಿ

# ದಬ್ಬಾಳಿಕೆಯ ರಕ್ಕಸನ ಹಾವಳಿಯು

## ಎರಡೇ ವಾರಗಳಲ್ಲಿ ೧೨೫ ಜನರಿಗೆ ಸೆರೆಮನೆ

ಮಂಗಳೂರಿನ ಡಿ॥ ಮ್ಯಾಜಿಸ್ಟ್ರೇಟರು ತಮ್ಮ ಕಚೇರಿಯ ಸುತ್ತಮುತ್ತಲು ೭ ಮೈಲುಗಳ ವರೆಗೆ ಯಾವ ತರದ ಪಿಕೆಟಿಂಗವನ್ನು ಸತ್ಯಾಗ್ರಹಿಗಳು ಮಾಡಕೂಡದೆಂದು ಕಟ್ಟಪ್ಪಣೆಯನ್ನು ಹೊರಡಿಸಿ ಚಳವಳಿಯನ್ನು ಕುಗ್ಗಿಸಲು ಯತ್ನಿಸಿದರು, ಮಂಗಳೂರಿನ ಸತ್ಯಾಗ್ರಹಿಗಳು ಇದಕ್ಕೆ ಎಳ್ಳಷ್ಟು ಸೊಪ್ಪು ಹಾಕದೆ ಸೆರೆಸಿಂದಿ ಪಿಕೆಟಿಂಗ ಕಾರ್ಯವನ್ನು ಎಂದಿನಂತೆಯೆ ಭರದಿಂದ ಸಾಗಿಸಿದರು. ಇದನ್ನು ಕಂಡು ಅಧಿಕಾರಿಗಳು ಸತ್ಯಾಗ್ರಹಿಗಳನ್ನು ಸೆರೆ ಹಿಡಿಯುವ ಕಾರ್ಯವನ್ನು ಕೈಕೊಂಡು ಮೊದಲಿನ ದಿವಸ ೩೬ ಸತ್ಯಾಗ್ರಹಿಗಳನ್ನು ಸೆರೆ ಹಿಡಿದುಕೊಂಡು ಹೋದರು ಮೊದಲಿನ ತಂಡದವರು ಸೆರೆಯಾಳಾದ ಕೂಡಲೆ ಅವರ ಸ್ಥಳದಲ್ಲಿ ಎರಡನೆಯ ತಂಡವು ಮುಂದೆ ಬಂದು ಪಿಕೆಟಿಂಗ ಕಾರ್ಯವನ್ನು ಸಾಗಿಸಿತು. ಅಧಿಕಾರಿಗಳು ಅವರನ್ನೂ ಸೆರೆ ಹಿಡಿದರು. ಸತ್ಯಾಗ್ರಹಿಗಳೂ ಹಾಗು ಅಧಿಕಾರಿಗಳೂ ಇವರ ನಡುವೆ ನಡೆದ ಶಾಂತಿಮಯ ಸ್ವಾತಂತ್ರ್ಯ ಸಮರವು ಇನ್ನೂ ಹಾಗೆಯೇ ಸಾಗಿದೆ. ಸತ್ಯಾಗ್ರಹಿಗಳು ಮುಂದೆ ಬಂದು ಪಿಕೆಟಿಂಗ ಕಾರ್ಯವನ್ನು ಕೈಕೊಳ್ಳುವದೊಂದೇ ತಡ, ಅವರು ಸೆರೆಮನೆಗಳಿಗೆ ತೆರಳುತ್ತಿರುವರು. ಎರಡೇ ವಾರಗಳ ಅವಧಿಯಲ್ಲಿ ಏನಿಲ್ಲೆಂದರೂ ೧೨೫ ಸತ್ಯಾಗ್ರಹಿಗಳು ಕಾರಾಗೃಹವನ್ನು ಸೇರಿರುವರು. ಅವರೆಲ್ಲರಿಗೂ ೪ ತಿಂಗಳ ಸಖ್ತ ಶಿಕ್ಷೆಯು ವಿಧಿಸಲ್ಪಟ್ಟಿದೆ. ಇದಲ್ಲದೆ ಅಲ್ಲಿಯ ಸತ್ಯಾಗ್ರಹಿಗಳ ಮುಖಂಡರಾದ ಶ್ರೀ ಕೋಚಣ್ಣ ಭಂಡಾರಿ ಹಾಗೂ ಬೋಳಾರ ಇವರಿಗೆ ೧ ವರ್ಷದ ಸಖ್ತ ಶಿಕ್ಷೆಯೂ ಉಡುಪಿಯ ಶ್ರೀ ಕುಂಬಳೆ ಕಮಲಾನಾಥರಾಯರಿಗೆ ರಾಜದ್ರೋಹಕ್ಕಾಗಿ ೮ ತಿಂಗಳ ಸಾದಾ ಶಿಕ್ಷೆಯೂ ಆಗಿದೆ. ಕರ್ನಾಟಕದಲ್ಲಿ ನಡೆದ ಸತ್ಯಾಗ್ರಹ ಸಮರದಲ್ಲಿ ಅಗ್ರಪೂಜೆಯ ಮಾನವು ಮಂಗಳೂರಿನವರಿಗೇನೆ ಸಲ್ಲತಕ್ಕದ್ದಾಗಿದೆ.

### ಸವದತ್ತಿಯಲ್ಲಿ

## ಶಿಕ್ಷಕರು ಕ್ಷಮೆ ಬೇಡಿಕೊಂಡರು

ಕೆಲವು ಕನ್ನಡ ಶಾಲೆಗಳಲ್ಲಿ ಪ್ರತಿನಿತ್ಯದಲ್ಲಿಯೂ ಪ್ರಾರ್ಥನೆಯ ಪದಗಳನ್ನು ವಿದ್ಯಾರ್ಥಿಗಳ ಕಡೆಯಿಂದ ನಡಿಸುವ ರೂಢಿಯುಂಟು. ಒಂದು ದಿವಸ ಬೆಳಗಾವಿ ಜಿಲ್ಲೆಯಲ್ಲಿಯ ತಾಲೂಕಿನ ಸ್ಥಳವಾದ ಸವದತ್ತಿಯ ಕನ್ನಡ ಶಾಲೆಯ ಶಿಕ್ಷಕರು ತಮ್ಮ ಹುಡುಗರಿಗೆ ಪ್ರಾರ್ಥನೆಯು ಮುಗಿದ ಕೂಡಲೆ "ಜಾರ್ಜ ಬಾದಶಹಕೀ ಜಯ" ಎಂದು ಜಯಘೋಷ ಮಾಡಲು ಹೇಳಿಕೊಂಡರು. ಕೆಲವು ಹುಡುಗರು ಸುಮ್ಮನೆ ಕುಳಿತರು, ಕೆಲವರು "ಮಹಾತ್ಮಾಗಾಂಧೀಕಿ ಜಯ" ಎಂದು ಜಯಘೋಷ ಮಾಡಿದರು. ಶಿಕ್ಷಕರು ಸಿಟ್ಟಿಗೆದ್ದು ಒಬ್ಬ ಹುಡುಗನಿಗೆ ಚೆನ್ನಾಗಿ ಪೆಟ್ಟುಕೊಟ್ಟರು. ಆ ಹುಡುಗನು ಹಾಗೆಯೆ ಶಾಲೆಯನ್ನು ಬಿಟ್ಟು ಹೋಗಿ ನಡೆದ ಸಂಗತಿಗಳನ್ನೆಲ್ಲ ಅಲ್ಲಿಯ ಸತ್ಯಾಗ್ರಹಿಗಳಿಗೆ ತಿಳಿಸಿದನು. ಸತ್ಯಾಗ್ರಹಿಗಳೆಲ್ಲರೂ ಕೂಡಿಕೊಂಡು ರಾಷ್ಟ್ರಧ್ವಜ ಸಹಿತವಾಗಿ ಶಾಲೆಯ ಮುಂದೆ ಹೋಗಿ ನಿಂತು ಒಂದೇ ಸವನೆ ಮಹಾತ್ಮಾಗಾಂಧೀಕಿ ಜಯ ಎಂದು ಜಯಘೋಷ ಮಾಡುತ್ತ ಅಲ್ಲಿ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಶಾಲೆಯ ಮುಖ್ಯಾಧ್ಯಾಪಕರು ಕೆಲವು ಹೊತ್ತಿನ ಮೇಲೆ ಸತ್ಯಾಗ್ರಹಿಗಳು ನಿಂತಲ್ಲಿಗೆ ಬಂದು ಅವರಿಗೆ ಕ್ಷಮೆಯನ್ನು ಬೇಡಿಕೊಂಡರು. ಸತ್ಯಾಗ್ರಹಿಗಳು ತಮಗೆ ದೊರೆತ ಗೆಲುವಿಗಾಗಿ ಅಭಿಮಾನ ಪಟ್ಟು ಜಯಘೋಷ ಮಾಡುತ್ತ ಸ್ವಸ್ಥಾನಗಳಿಗೆ ತೆರಳಿದರು.

ಹರಿಯುವ ಪ್ರವಾಹ ಮುಂದೆ ಒಡ್ಡನ್ನು ಹಾಕಿದರೆ ಅದು ಎಂದಾದರೂ ತಡೆದು ನಿಲ್ಲಬಹುದೇ?

## ಬಾಗಲಕೋಟೆಯವರೇ ನೋಡಿರಿ!

### ಹುಬ್ಬಳ್ಳಿಯವರು ಹಿರಿದಾದರು

ಹುಬ್ಬಳ್ಳಿಯ ನಗರ ಸಭೆಯ ಮೇಲೆ ರಾಷ್ಟ್ರಧ್ವಜವನ್ನು ಹಚ್ಚತಕ್ಕದ್ದೆಂಬ ವಿಷಯವು ತಾ॥ ೨೭ ನೆಯ ದಿವಸ ಕೂಡಿದ ಹುಬ್ಬಳ್ಳಿಯ ನಗರ ಸಭೆಯಲ್ಲಿ ಬರತಕ್ಕದ್ದಿತ್ತು. ಆದರೆ ನಗರ ಸಭೆಯವರು ಅಂದು ಆ ವಿಷಯವನ್ನು ತೆಗೆದುಕೊಳ್ಳಲಿಲ್ಲ. ತಾ॥ ೨೦—೭—೩೦ ನೆಯ ದಿವಸ ಕೂಡತಕ್ಕ ಸಭೆಯಲ್ಲಿ ತೆಗೆದುಕೊಳ್ಳತಕ್ಕದ್ದೆಂದು ನಿರ್ಣಯ ಮಾಡಿದರು. ಅಂದು ರಾಷ್ಟ್ರಧ್ವಜದ ವಿಷಯವು ಸಭೆಯಿಂದ ತೀರ್ಮಾನಿಸಲ್ಪಡದಿದ್ದರೆ ಮಾತ್ರ, ರಾಷ್ಟ್ರಧ್ವಜ ಸತ್ಯಾಗ್ರಹ ಮಂಡಳದವರು ಸತ್ಯಾಗ್ರಹವನ್ನು ಹೂಡಿ ಅಂದು ನಗರ ಸಭೆಯ ಮೇಲೆ ರಾಷ್ಟ್ರಧ್ವಜವನ್ನು ಹಚ್ಚತಕ್ಕವರಿದ್ದಾರೆ. ಈ ಸತ್ಯಾಗ್ರಹ ಮಂಡಳದಲ್ಲಿ ಶ್ರೀಮತಿ ಉಮಾಬಾಯಿ ಕುಂದಾಪುರ, ರಂಭಕ್ಕ ಮುದವೀಡು ಶ್ರೀಯುತರಾದ ಕರಿಗುದರಿ, ಖೋದಾನಪುರ, ದೇವಪುರ, ರಾಮಕೃಷ್ಣ ದಿನಕರ, ಗುರುಶಾಂತಪ್ಪ ಬೊಬ್ಬಣ್ಣವರ ಮೊದಲಾದ ೭ ಜನರು ಇದ್ದಾರೆ.

### ಸೆರೆಮನೆಗಳು ಸಾಲದಾಗಿವೆ

ಸತ್ಯಾಗ್ರಹ ಸಮರದಲ್ಲಿ ಸೇರಿ ಸ್ವಸಂತೋಷದಿಂದ ಸೆರೆಮನೆಗಳಲ್ಲಿ ಸೇರಲು ಕಾಲಿಡುತ್ತಿರುವ ಸತ್ಯಾಗ್ರಹಿಗಳನ್ನು ಇಡಲು ಸರಕಾರಕ್ಕೆ ಈಗಿದ್ದ ಜೇಲುಗಳು ಸಾಲದೆ ಹೋಗಿರುವದರಿಂದ ಕೆಲವು ದಿವಸಗಳ ಹಿಂದೆಯೆ ಮುಚ್ಚಿಹೋದ ವಿಸಾಪುರ ಜೇಲನ್ನು ಮತ್ತೆ ಕೈದಿಗಳಿಗಾಗಿ ಮುಂಬಯಿ ಸರಕಾರದವರು ಉಪಯೋಗಿಸಹತ್ತಿರುವರು. ವರ್ಲಿ ಭಾಗದಲ್ಲಿಯ ಕೆಲವು ಬರಾಕುಗಳನ್ನು ತೆಗೆದುಕೊಂಡು ಹೋಗಿ ಅಲ್ಲಿ ಇಟ್ಟಿರುವರಾಗಿ ತಿಳಿಯುತ್ತದೆ.

## ಡಿ|| ಮ್ಯಾಜಿಸ್ಟ್ರೇಟರ ಅಗಾಧ ಪಾಂಡಿತ್ಯ

### ಗಾಂಧಿ ಟೊಪ್ಪಿಗೆ ಹಾಕಿದರೆ ಶಾಂತತೆಗೆ ಭಂಗವಂತೆ!

ಗುಂಟೂರಿನ ಡಿ|| ಮ್ಯಾಜಿಸ್ಟ್ರೇಟರಾದ ಸ್ಟುವಾರ್ಟ ಸಾಹೇಬರು "ಸತ್ಯಾಗ್ರಹ ಚಳವಳಿಯಿಂದ ಸಾರ್ವಜನಿಕ ಶಾಂತತೆಗೆ ಭಂಗ ಒದಗುತ್ತಿದೆಯೆಂದೂ, ಸತ್ಯಾಗ್ರಹ ಚಳವಳಿಗೆ ಸಹಾನುಭೂತಿಯನ್ನು ತೋರಿಸುವದಕ್ಕಾಗಿ ಗಾಂಧಿ ಟೊಪ್ಪಿಗೆಗಳನ್ನು ಧರಿಸಬೇಕೆಂದು ಜನರಿಗೆ ಕೇಳಿಕೊಳ್ಳುವ ಬಗ್ಗೆ ಒಂದು ಬಿನ್ನಹ ಪತ್ರಿಕೆಯು ಪ್ರಸಿದ್ಧವಾಗುತ್ತಿದೆಯೆಂದೂ ಅದರಿಂದ ಸಾರ್ವಜನಿಕ ಶಾಂತತೆಗೆ ಮತ್ತಷ್ಟು ಭಂಗ ಬರುವ ಸಂಭವವಿದೆಯೆಂದೂ ತಿಳಿದುಬಂದಿದೆ. ಆದುದರಿಂದ ಗುಂಟೂರ ಮ್ಯುನಿಸಿಪಾಲಿಟಿಯ ಹದ್ದಿನೊಳಗಿರುವ ಕ್ಷೇತ್ರದಲ್ಲಿಯೂ ಮತ್ತು ಅದರ ಸುತ್ತುಮುತ್ತು ೫ ಮೈಲುಗಳ ವರೆಗೂ ಯಾರೂ ಗಾಂಧಿ ಟೊಪ್ಪಿಗೆಯನ್ನು ಹಾಕಿಕೊಂಡು ತಿರುಗತಕ್ಕದ್ದಲ್ಲ. ಈ ಅಪ್ಪಣೆಯು ೨ ತಿಂಗಳುಗಳ ವರೆಗೆ ಜಾರಿಯಲ್ಲಿ ಇರುವದು" ಎಂಬುದಾಗಿ ಅಪ್ಪಣೆಯನ್ನು ಹೊರಡಿಸಿದ್ದಾರೆ. ಮ್ಯಾಜಿಸ್ಟ್ರೇಟರಿಗೆ ಈ ಅಪ್ಪಣೆಯನ್ನು ತೆಗೆಯಲು ಕಾರಣವಾದ ಪ್ರಸಂಗವು ಮನೋರಂಜಕವಾಗಿದ್ದು ಅದನ್ನು ಕೆಳಗೆ ಕೊಟ್ಟಿದೆ.

ಗುಂಟೂರಿನ ಪೋಲೀಸರು ಸತ್ಯಾಗ್ರಹಿಗಳನ್ನು ಅಧಿಕವಾಗಿ ಪೀಡಿಸಹತ್ತಿದ್ದರು. ಆದುದರಿಂದ ಊರೊಳಗಿನ ಕೆಲವು ಮುಖಂಡರು ಕೂಡಿ ಶ್ರೀ. ಜಿ. ವ್ಹಿ. ಶ್ರೀನಿವಾಸರಾಯರನ್ನು ಪ್ರಮುಖರನ್ನಾಗಿ ಆರಿಸಿಕೊಂಡು ಒಂದು ಶಿಷ್ಟ ಮಂಡಳವನ್ನು ತೆಗೆದುಕೊಂಡು ಡಿ|| ಮ್ಯಾಜಿಸ್ಟ್ರೇಟರ ಕಡೆಗೆ ಹೋದರು. ಅವರೊಡನೆ ಪೋಲೀಸರ ವರ್ತನೆಯ ವಿಷಯವಾಗಿ ಚರ್ಚಿಸಿ, ಇನ್ನು ಮುಂದೆ ಗಾಂಧಿ ಟೊಪ್ಪಿಗೆ ಹಾಕಿಕೊಂಡವರಿಗಾಗಿ ಸತ್ಯಾಗ್ರಹಿಗಳಿಗೆ ಪೀಡೆಯಾಗಲಿಕ್ಕಿಲ್ಲವೆಂಬ ಆಶ್ವಾಸನವನ್ನು ಅವರಿಂದ ತೆಗೆದುಕೊಂಡು ಬಂದರು. ಬಳಿಕ ಡಿ|| ಮ್ಯಾಜಿಸ್ಟ್ರೇಟರೊಡನೆ ನಡೆದ ಸಂಭಾಷಣೆಯ ವಿಷಯವನ್ನು ಜನರಿಗೆ ತಿಳಿಸುವದಕ್ಕಾಗಿ ಒಂದು ಬಿನ್ನಹ ಪತ್ರಿಕೆಯನ್ನು ಬರೆದು ಅದನ್ನು ಮುದ್ರಿಸಿ ಕೊಡಲು ಮುದ್ರಾಲಯಕ್ಕೆ ಕೊಟ್ಟರು. ಅದು ಮುದ್ರಿತವಾಗುತ್ತಿರುವ ಸಮಯದಲ್ಲಿ ಸರ್ಕಲ್ ಇನಸ್ಪೆಕ್ಟರರು ಅಲ್ಲಿಗೆ ಹೋಗಿ ಎಲ್ಲ ಪತ್ರಿಕೆಗಳನ್ನು ಸ್ವಾಧೀನಪಡಿಸಿಕೊಂಡರು. ಮರುದಿವಸವೇ ಡಿ|| ಮ್ಯಾಜಿಸ್ಟ್ರೇಟರು ಮೇಲಿನ ಅಪ್ಪಣೆಯನ್ನು ಹೊರಡಿಸಿ ಊರಲ್ಲಿ ಡಂಗುರ ಹೊಡಿಸಿದರು. ಪೋಲೀಸರ ಪೀಡೆಯನ್ನು ತಡೆಯಿರೆಂದು ಕೇಳಿಕೊಳ್ಳಲು ಹೋಗಿ ನಾಗರಿಕರು ಮತ್ತೊಂದು ಪೀಡೆಯನ್ನು ತಮ್ಮ ಮೇಲೆ ತಂದು ಕೊಂಡಂತಾಯಿತು.

## ಗಾಂಧಿ ಟೊಪ್ಪಿಗೆಯ ವಿರುದ್ಧ ಅಧಿಕಾರಿಗಳ ಯುದ್ಧ

### ಇಂಗ್ಲೀಷ ಗೃಹಸ್ಥನ ಬಾಯಿಂದ ಮಾತು

"ಮ್ಯಾಂಚೆಸ್ಟರ ಗಾರ್ಡಿಯನ್" ಎಂಬ ಇಂಗ್ಲಿಷ ಪತ್ರಿಕೆಯಲ್ಲಿ ಪರ್ಸೆಲ್ ಎಂಬ ಇಂಗ್ಲೀಷ ಗೃಹಸ್ಥರೊಬ್ಬರು ಬರೆಯುವದೇನಂದರೆ—

ಸೋಲ್ಲಾಪುರದಲ್ಲಿ ಗಾಂಧಿ ಟೊಪ್ಪಿಗೆಯ ವಿರುದ್ಧವಾಗಿ ಅಧಿಕಾರಿಗಳು ನಡಿಸಿದ ದಬ್ಬಾಳಿಕೆಯು ನಿಜವಿದ್ದಲ್ಲಿ, ಅದು ಅತ್ಯಂತ ಮೂರ್ಖತನದ ಕೃತ್ಯವಾಗಿರುವದೆಂದು ನನ್ನ ಮತ. ಅಧಿಕಾರಿಗಳು ಈ ಮೂರ್ಖತನದ ಕೃತಿಯನ್ನು ಹೀಗೆಯೇ ಮುಂದಕ್ಕೆ ಸಾಗಿಸಿದಲ್ಲಿ ಪರಿಣಾಮವು ಭಯಂಕರವಾಗಬಹುದು. ಮಿ|| ಬೆನ್ನರು ಕೂಡಲೇ ಈ ಯುದ್ಧವನ್ನು ನಿಲ್ಲಿಸುವರೆಂದು ನಾನು ಆಶಿಸುತ್ತೇನೆ. ಹಿಂದುಸ್ಥಾನದಲ್ಲಿಯೂ ಮತ್ತು ಈ ರಾಷ್ಟ್ರದಲ್ಲಿಯೂ ಗಾಂಧಿ ಟೊಪ್ಪಿಗೆಯನ್ನು ಹಾಕಿಕೊಂಡ ಎಷ್ಟೋ ಜನರನ್ನು ನಾನು ಕಂಡಿದ್ದೇನೆ. ಅವರಲ್ಲಿ [illegible] ಮಾಡುವ ದುರ್ಬುದ್ಧಿಯಿದೆಯೆಂಬುದು ನನಗೆ ಎಳ್ಳಷ್ಟು ಕಂಡಿಲ್ಲ. ಹಿಂದುಸ್ಥಾನದವರು ಸಾಗಿಸಿದ ಅಹಿಂಸಾ ಯುದ್ಧದಲ್ಲಿ ನಾನು ಎಳ್ಳಷ್ಟು ಭಾಗ ತೆಗೆದುಕೊಂಡಿದ್ದರೂ ಸಹ, [illegible] ದೇಶಬಾಂಧವರ ಟೊಪ್ಪಿಗೆ ಸಂಬಂಧ [illegible]ಯನ್ನು ಬಹಿಷ್ಕರಿಸುವದಕ್ಕಾಗಿಯೂ ಮತ್ತು ಅವರಿಗೆ ಯೋಗ್ಯವಾದ ಶಿಕ್ಷಣವನ್ನು ದೊರಕಿಸಿ ಕೊಡುವದಕ್ಕಾಗಿಯೂ ಟೊಂಕಕಟ್ಟಿ ನಿಂತ ತರುಣ ಸುಶಿಕ್ಷಿತ ಹಿಂದೀಯರ ಕಾರ್ಯದಕ್ಷತೆಯನ್ನು ಕಂಡು ಹೀಗೆ ನುಡಿಯಬೇಕಾಗಿದೆ.

ಹುನಗುಂದದಲ್ಲಿ

## ಸಹಕಾರಿ ಸಂಘದ ಮೇಲೆ ರಾಷ್ಟ್ರಧ್ವಜ

ಹುನಗುಂದದ ಸಹಕಾರಿ ಸಂಘದ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ನಿಲ್ಲಿಸುವ ಸಮಾರಂಭವು ತಾ|| ೬-೭-೩೦ ನೆಯ ದಿವಸ ಅಂದರೆ ರವಿವಾರ ದಿವಸ ಸಂಜೆಯ ೬ ಗಂಟೆಗೆ ಶ್ರೀ. ದೇಸಾಯಿ ರಘುವೀರರಾಯರ ಹಸ್ತದಿಂದ ನೆರವೇರತಕ್ಕದ್ದಿರುವದರಿಂದ, ಆ ಸಮಯಕ್ಕೆ ಎಲ್ಲರೂ ಬಂದು ಉತ್ಸವಕ್ಕೆ ಶೋಭೆಯನ್ನುಂಟು ಮಾಡಬೇಕೆಂದೂ, ಸಂಘದ ಅಧಿಕಾರಿಗಳಾದ ಶ್ರೀ. ಗುಡ್ಡದ [illegible] ತಿಳಿಸುತ್ತಾರೆ.

## ವಿಲಾಯಿತಿಯಲ್ಲಿಯ ಹಿಂದೀ ಸ್ತ್ರೀಯರು

ಲಂಡನದಲ್ಲಿ ಹಿಂದೀ ಸ್ತ್ರೀಯರೆಲ್ಲರೂ ಸಭೆಗೂಡಿಸಿದ್ದರು. ಮಹಾತ್ಮಾ ಗಾಂಧಿ, ಸುಭಾಷಚಂದ್ರ ಬೋಸ, ಗಢವಾಲೀ ಸೈನಿಕರು, ಪೇಶಾವರದ ಸೆರೆಯಾಳು, ಇವರೆಲ್ಲರನ್ನು ಬಿಡುಗಡೆ ಮಾಡತಕ್ಕದ್ದು. ಸರಕಾರವು ದಬ್ಬಾಳಿಕೆಯನ್ನು ನಿಲ್ಲಿಸತಕ್ಕದ್ದು. ಮಹಾತ್ಮರಿಲ್ಲದ ಒಂದೇಗೋಲ ಸಭೆಗೆ ಯಾರೂ ಹೋಗಬಾರದು. ಮತ್ತು ಹಾಗೆ ಮಾಡುವದು ದೇಶದ್ರೋಹವು ಎಂಬ ಠರಾವುಗಳನ್ನು ಆ ಸಭೆಯಲ್ಲಿ ಗೊತ್ತುಮಾಡಿದರು. ಅಧ್ಯಕ್ಷರಾದ ಶ್ರೀಮತಿ ಎಸ್. ಪಿ ಸೇನರೆಂಬವರು, ಈಗಿನ ಯುದ್ಧದಲ್ಲಿ ತಮ್ಮ ಶೌರ್ಯವನ್ನು ತೋರಿಸಿದ ಎಲ್ಲ ಬಂಧುಭಗಿನಿಯರ ಅಭಿನಂದನವನ್ನು ಮಾಡಿದರು, ಭಾರತ ಮಾತಾರೀ ಜಯ! ಭಾರತಮಾತೆಯ ಪುತ್ರಿಯರೇ ಎಚ್ಚರಾಗುವ ಕಾಲವಿದಲ್ಲವೋ!

## ಸ್ವಾಮಿ ಗೋವಿಂದಾನಂದರಿಗೆ ೧ ವರ್ಷ ಸ. ಶಿಕ್ಷೆ

ಸಿಂಧಪ್ರಾಂತದ ಸತ್ಯಾಗ್ರಹ ಮಂಡಳದ ಸಭಾಸದರಾದ ಕರಾಚಿಯ ಸ್ವಾಮಿ ಗೋವಿಂದಾನಂದರಿಗೆ ೧ ವರ್ಷದ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಈ ಪತ್ರಿಕೆಯು [illegible] ಬಾಗಲಕೋಟೆಯ
ವಿದ್ಯಾರ್ಣವ ಮುದ್ರಾ ಯಂತ್ರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

# ಕನ್ನಡಿಗ

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಪ್ಪಾರಾವ ಮುಜುಮದಾರ.

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಮಂಗಳವಾರ ಮಿತಿ ಆಷಾಢ ಶುದ್ಧ ೫ ಶಕೆ ೧೮೬೨ ತಾ॥ ೧—೭—೪೦ [ಸಂಚಿಕೆ ೮೯

## ಖಾದಿಯ ಕೆಲಸಗಾರರಿಗೆ

ಸಾಬರಮತಿ ಆಶ್ರಮದಲ್ಲಿರುವ ಶ್ರೀಮತಿ ಮೀರಾಬಾಯಿಯವರು (ಮಿಸ್ ಸ್ಲೇಡರು) ಖಾದಿಯ ಕೆಲಸಗಾರರ ಉಪಯೋಗಕ್ಕಾಗಿ ಕೆಳಗಿನ ಪ್ರಶ್ನಪತ್ರಿಕೆಯನ್ನು ತಯಾರಿಸಿದ್ದಾರೆ. ಕರ್ನಾಟಕದಲ್ಲಿಯ ಖಾದಿಯ ಕೆಲಸಗಾರರ ಸಲುವಾಗಿ ಅದನ್ನು ಕೆಳಗೆ ಕನ್ನಡಿಸಿದ್ದೇವೆ.

### ಖಾದಿಯ ಅರ್ಥ.

ಹಿಂದುಸ್ಥಾನದ ಆರ್ಥಿಕ ಸ್ಥಿತಿಯನ್ನು ಸರಿಪಡಿಸುವದಕ್ಕಾಗಿಯೆ ಖಾದಿಯ ಕಾರ್ಯವು ಕೈಕೊಳ್ಳಲ್ಪಟ್ಟಿದೆ. ತಿನ್ನಲಿಕ್ಕೆ ಸಾಕಷ್ಟು ಕೂಲಿಲ್ಲದೆ ನಿರುದ್ಯೋಗಿಗಳಾಗಿ ಬಳಲುತ್ತಿರುವ ಬಡವರ ಸಂಕಷ್ಟಗಳನ್ನು ಸರಿಪಡಿಸಿ ಸ್ವಾತಂತ್ರ್ಯಸಮರದಲ್ಲಿ ಸರಿಯಾಗಿ ಭಾಗವನ್ನು ತೆಗೆದುಕೊಳ್ಳುವಂತೆ ಅವರಿಗೆ ಸಾಕಷ್ಟು ಶಕ್ತಿಯನ್ನು ಕೊಡುವ ಸಾಧನವಾವುದಾದರೂ ಇದ್ದರೆ ಅದು ಖಾದಿಯೊಂದೇ, ತಿನ್ನಲು ಕೂಳಿಲ್ಲದೆಯೂ, ತೊಡಲು ಬಟ್ಟೆಯಿಲ್ಲದೆಯೂ ಜಗತ್ತಿನಲ್ಲಿ ಬಾಳಲು ಮನುಷ್ಯಪ್ರಾಣಿಗೆ ಎಂದಿಗೂ ಶಕ್ಯವಿಲ್ಲ. ಖಾದಿಯ ಕಾರ್ಯವು ಅವನ ಹೊಟ್ಟೆಗೆ ಹಾಕುವದಲ್ಲದೆ ಅವನಿಗೆ ಸಾಕಾಗುವಷ್ಟು ಬಟ್ಟೆಯನ್ನು ಪೂರೈಸಿಕೊಡುವದು.

### ಭರತಖಂಡದಲ್ಲಿಯ ದಾರಿದ್ರ್ಯ

ಪ್ರತಿಯೊಬ್ಬನ ಪ್ರತಿನಿತ್ಯದ ಉತ್ಪನ್ನ

| | | | |
|---|---|---|---|
| ಯುನಾಯಿಟೆಡ್ ಸ್ಟೇಟ್ಸ | ೩-೦-೦ | ಆಸ್ಟ್ರೇಲಿಯಾ | ೨-೪-೦ |
| ಗ್ರೇಟ ಬ್ರಿಟನ್ | ೨-೧-೪ | ಕಾನಡಾ | ೧-೧೦-೮ |
| ಭರತಖಂಡ | ೦-೧-೭ | | |

### ಹಿಂದುಸ್ಥಾನದಲ್ಲಿ ಉದ್ಯೋಗಗಳಲ್ಲಿ ತೊಡಗಿದವರು

| | ೦೦೧ಕ್ಕೆ |
|---|---|
| ಸ್ವತಂತ್ರವಾಗಿ ಪಡೆದ ಉದ್ಯೋಗ | ೧. |
| ಜ್ಞಾನಕಾರಭಾರ | ೨. |
| ವ್ಯಾಪಾರ | ೬. |
| ಒಕ್ಕಲತನ | ೭೦.೯ |
| ಕಸಬು | ೨ |

ಜನಸಂಖ್ಯೆ

| | |
|---|---|
| ಪಟ್ಟಣಗಳಲ್ಲಿ | ೩ ಕೋಟಿ ೨೪ ಲಕ್ಷ |
| ಹಳ್ಳಿಗಳಲ್ಲಿ | ೨೮ ಕೋಟಿ ೬೪ ಲಕ್ಷ. |

### ಪಟ್ಟಣಗಳು ಮತ್ತು ಹಳ್ಳಿಗಳು

ಪಟ್ಟಣಗಳು ೨೩೦೦

ಹಳ್ಳಿಗಳು ೭೦೦,೦೦೦

ಹಿಂದುಸ್ಥಾನದ ಸುಧಾರಣೆಯು ಪ್ರಶ್ನೆಯು ಹಳ್ಳಿಗಳನ್ನೇ ಅವಲಂಬಿಸಿದೆ.

ನಿರುದ್ಯೋಗತನ

ಒಕ್ಕಲಿಗರು ವರ್ಷದಲ್ಲಿ ಎರಡರಿಂದ ೪ ತಿಂಗಳುಗಳ ವರೆಗೆ ನಿರುದ್ಯೋಗಿಗಳಾಗಿ ಕಾಲ ಕಳೆಯುತ್ತಾರೆ. ಕೆಲವು ಜಿಲ್ಲೆಗಳಲ್ಲಿ ೬ ತಿಂಗಳ ವರೆಗೂ ಒಕ್ಕಲಿಗರಿಗೆ ಉದ್ಯೋಗವಿರುವದಿಲ್ಲ.

ಖಾದಿ ಅಥವಾ ಸ್ವದೇಶಿ ನೂಲಿನ ಬಟ್ಟೆ

ಮೇಲಿನ ಅಂಕಿಗಳಿಂದ ಕೆಳಗಿನ ಮೂರು ಸಂಗತಿಗಳು ನಿಚ್ಚಳವಾಗಿ ಒಡೆದು ಕಾಣಿಸುವವು. [೧] ಹಿಂದುಸ್ಥಾನವು ಈಗ ಅತೀವ ದರಿದ್ರವಾಗಿದೆ. [೨] ಹಿಂದುಸ್ಥಾನದಲ್ಲಿಯ ಬಹುಸಂಖ್ಯಾಕ ಜನರು ಒಕ್ಕಲತನದಿಂದ ಜೀವಿಸಿ ಹಳ್ಳಿಗಳಲ್ಲಿ ವಾಸಮಾಡಿಕೊಂಡು ಇರುತ್ತಿರುವರು. [೩] ಈ ಒಕ್ಕಲಿಗರು ನಿರುದ್ಯೋಗಿಗಳಾಗಿ ಬಳಲಿ ಬೆಂಡಾಗುತ್ತಿರುವರು.

ಆದುದರಿಂದ ಹಿಂದುಸ್ಥಾನದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲೂ ಮತ್ತು ಬಳಲಿ ಬೆಂಡಾಗುತ್ತಿರುವವರ ಸಂಕಷ್ಟಗಳನ್ನು ಸರಿಪಡಿಸಲೂ, ನಾವು ಹಳ್ಳಿಗಳಲ್ಲಿ ವಾಸಿಸುವ ಈ ಜನರಿಗೆ ತಮ್ಮ ತಮ್ಮ ಮನೆಗಳಲ್ಲಿಯೇ ಕೆಲಸ ಮಾಡಲು ಅವರಿಗೆ ಅನುಕೂಲವಾಗುವಂತಹ ಉದ್ಯೋಗವನ್ನೇ ಕೊಡಬೇಕಾಗಿದೆ.

ಗಿರಣಿಗಳಿಂದ ಈ ಕಾರ್ಯವು ಸಾಧ್ಯವಾಗುವಂತಿಲ್ಲ. ಖಾದಿಯೊಂದೇ ಅವರಿಗೆ ಹೊಟ್ಟೆಗೆ ಹಾಕಲು ಸಾಮರ್ಥ್ಯವುಳ್ಳದ್ದಾಗಿದೆ. ಆದುದರಿಂದಲೇ ಖಾದಿಗೆ ಗಿರಣಿಯ ಬಟ್ಟೆಗಿಂತಲೂ ಮಹತ್ವವು ಹೆಚ್ಚು. ಗಿರಣಿಗಳಲ್ಲಿ ದುಡಿಯುವವರು ತಮ್ಮ ತಮ್ಮ ಮನೆಮಾರುಗಳನ್ನು ಬಿಟ್ಟು ಪಟ್ಟಣಗಳಿಗೆ ಹೋಗುತ್ತಿರುವದುಂಟು. ಒಕ್ಕಲಿಗರಿಗೆ ಇದು ಶಕ್ಯವಾಗಿರುವದಿಲ್ಲ. ಮನೆಯಲ್ಲಿಯೇ ಕುಳಿತಲ್ಲಿ ಮಾಡಲು ಅನುಕೂಲವಾಗುವಂತಹ ಒಂದು ಉದ್ಯೋಗವು ಅವರಿಗೆ ಅವಶ್ಯವಾಗಿ ಬೇಕಾಗಿದೆ. ಖಾದಿಯೊಂದೇ ಅಂತಹ ಅನುಕೂಲತೆಯುಳ್ಳದ್ದಾಗಿದೆ.

ಬೇಕಾದಷ್ಟು ತೀವ್ರವಾಗಿ ದೊಡ್ಡ ಪ್ರಮಾಣದಲ್ಲಿ ಹೆಚ್ಚಿನ ವೆಚ್ಚವಿಲ್ಲದೆ ಖಾದಿಯನ್ನು ವ್ಯವಸ್ಥಿತವಾಗಿ ಸಿದ್ಧಪಡಿಸಬಹುದು. ಗಿರಣಿಗಳನ್ನು ಹಚ್ಚಿಸಬೇಕಾದರೆ ಅದಕ್ಕೆ ಹೆಚ್ಚಿನ ಹಣವೂ ಬೇಕಾಗುವದಲ್ಲದೆ, ಅದರಲ್ಲಿ ವೇಳೆಯ ಅಪವ್ಯಯವೂ ಆಗುವದು. ಮತ್ತೊಂದು ಲಕ್ಷ್ಯದಲ್ಲಿಡತಕ್ಕ ಸಂಗತಿಯೆಂದರೆ, ಗಿರಣಿಗಳು ಪರದೇಶಿ ಯಂತ್ರಗಳ ಮೇಲೆಯೂ ಮತ್ತು ಪರದೇಶಿಯರ ಚಾತುರ್ಯದ ಮೇಲೆಯೂ ಅವಲಂಬಿಸಿಕೊಂಡಿರುವಂಥ ಹಸ್ತಗಳಾಗುತ್ತವೆ. ಆದುದರಿಂದ ಗಿರಣಿಗಳಕಿಂತಲೂ ಖಾದಿಯೇ ಹಿಂದುಸ್ಥಾನದ ದಾರಿದ್ರ್ಯವನ್ನು ಹೋಗಲಾಡಿಸಲು ಸಾಮರ್ಥ್ಯವುಳ್ಳದ್ದಾಗಿದೆ.

ಕೆಳಗಿನ ಅಂಕಿಗಳನ್ನು ವಿಚಾರಿಸಿ ನೋಡಿದಲ್ಲಿ ಮೇಲೆ ಬರೆದುದರ ಸತ್ಯತೆಯು ಹೊಳೆಯದೆ ಇರಲಾರದು.

೨೫,೦೦೦ ಕದರುಗಳುಳ್ಳ ನೂಲಿನ ಗಿರಣಿಯನ್ನು ಸ್ಥಾಪಿಸಬೇಕಾದರೆ ಅದಕ್ಕೆ ೧೬೬೦೯೧೬ ರೂ. ಗಳ ವೆಚ್ಚವು ತಗಲುವದು. ಇದೇ ಹಣವನ್ನು ಚರಖಾಗಳಿಗಾಗಿ ಖರ್ಚು ಮಾಡಿದಲ್ಲಿ ಅದರಿಂದ ೮೩೦೪೫೮ ಚರಖಾಗಳು ದೊರಕುವವು. ಮತ್ತು ಇವುಗಳಿಂದ ಸಿದ್ಧವಾಗುವ ನೂಲು ಗಿರಣಿಯಲ್ಲಿ ಸಿದ್ಧವಾಗುವ ನೂಲಿನಕಿಂತಲೂ ೬-೭ ಪಟ್ಟಾದರೂ ಹೆಚ್ಚಾಗುವದು. ಗಿರಣಿಯಿಂದ ಒಂದು ತಾಸಿನಲ್ಲಿ ೬೦೦ ಯಾರ್ಡು ನೂಲು ಹೊರಡುವದು. ಅಲ್ಲಿ ೧೦ ತಾಸುಗಳ ವರೆಗೆ ದುಡಿಯಬೇಕಾಗುವದು. ರಾಟಿಗಳ ಮೇಲೆ ೧ ತಾಸಿಗೆ ೨೫೦ ಯಾರ್ಡು ನೂಲು ಹೊರಡುವದು. ಮತ್ತು ೪ ತಾಸುಗಳ ವರೆಗೆ ದುಡಿಯಬೇಕಾಗುವದು. ಪ್ರತಿಯೊಂದು ರಾಟಿಯ ಬೆಲೆಯನ್ನು ನಾವು ಎರಡು ರೂ. ಹಿಡಿದಿದ್ದೇವೆ. ಆದರೆ ಹಳ್ಳಿಗಳಲ್ಲಿ ರಾಟಿಗಳು ೧ ರೂ. ಇಲ್ಲವೆ ೧೨ ಆಣೆಗಳಿಗೆ ಒಂದರಂತೆ ದೊರೆಯುವವು.

## ಬೆಳಗಾವಿ ಜಿಲ್ಹೆಯಲ್ಲಿ
## ದಬ್ಬಾಳಿಕೆಯ ಉಗ್ರ ಸ್ವರೂಪ.

### ೧೬ ಜನರಿಗೆ ಕೈದು. ೧೭ ಜನರಿಗೆ ಶಿಕ್ಷೆ

ಬೆಳಗಾವಿ ಜಿಲ್ಹೆಯ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ಸಿಂದೀ ಅಂಗಡಿಗಳ ಪಿಕೆಟಿಂಗದ ಕಾರ್ಯವು ಪ್ರಾರಂಭವಾಗಿದೆ. ತಾ॥ ೨೪ ನೆಯ ದಿವಸ ಬೆಳಗಾವಿಯಲ್ಲಿ ಮುಂಬಯಿ ದಿನವು ಆಚರಿಸಲ್ಪಟ್ಟಿತು ೨೮ ಜನರನ್ನು ಹಿಡಿದರು. ಅದರಲ್ಲಿ ೨೭ ಜನರನ್ನು ಕೂಡಲೇ ಬಿಟ್ಟುಬಿಟ್ಟರು. ಅಂಜಿಕೆಯ ಕೆಲಸಕ್ಕೆ ಮೊನ್ನೆ ಮೊನ್ನೆ ರಾಜೀನಾಮೆಯನ್ನು ಕೊಟ್ಟವನೇ ಸೆರೆಯಾಳಾಗಿದ್ದಾನೆ. ಬೆಳಗಾವಿ ಕಿಲ್ಲೆಯ ಸಮೀಪದಲ್ಲಿಯ ಒಂದು ಸಿಂದೀ ಗಿಡವನ್ನು ಕಡಿದುದಕ್ಕಾಗಿ ಬಾಲಕರಾದ ವಸಂತ ಹಾಗು ಗಜಾನನ ಅನಗೋಳ ಮತ್ತು ವಾಮನ ಇವರುಗಳು ತಾ| ೨೮ ನೆಯ ದಿವಸ ಸೆರೆ ಹಿಡಿಯಲ್ಪಟ್ಟಿದ್ದಾರೆ.

ಸಂಪಗಾವಿಯ ಶ್ರೀ. ಶಿವಬಸಪ್ಪ ಬೆಳವಡಿ, ಕಾಳಪ್ಪ ಕುಂಬಾಯಿ, ಬೈಲಪ್ಪ ವಕ್ಕುಂದ, ಮಲ್ಲಪ್ಪ ಹೊಸೂರ, ಬಸವಂತ ಮೈಲಾರಿ, ಬಾಳಪ್ಪ ಹುಟ್ಟಣ್ಣವರ, ಗಂಗಪ್ಪ ಜುಟ್ಟಣ್ಣವರ, ಶಿದ್ದಪ್ಪ ಮಾರಿಹಾಳ, ರುದ್ರಪ್ಪ ಸಾನಿಬಾಚಿ, ಶಿವಲಿಂಗಪ್ಪ ಮಳಿಗಿ, ನಾರಾಯಣ ಜೋಶಿ ಮತ್ತು ಬಸವಣ್ಣೆಪ್ಪ ಚಟ್ಟಿ ಈ ಸತ್ಯಾಗ್ರಹಿಗಳೆಲ್ಲರೂ ಶಿಂದೀ ಗಿಡಗಳನ್ನು ಕಡಿದುದಕ್ಕಾಗಿ ಸೆರೆಯಾಳಾಗಿದ್ದಾರೆ.

ಸಂಪಗಾವಿಯ ಶ್ರೀ ಬಸಪ್ಪ ಸಿದ್ನಾಳ, ಸಾತಪ್ಪ ಚೌಗುಲಾ, ಶಿವಪುತ್ರಪ್ಪ ತೋಣಿ. ತಿಪ್ಪ ಮಹಾರ, ಬಸಪ್ಪ ಜುಟ್ಟಣ್ಣವರ, ಗಣಪಪ್ಪ ಜುಟ್ಟಣ್ಣವರ, ಹನಮಂತ ರಜಪೂತ ಈ ೭ ಸ್ವಯಂಸೇವಕರಿಗೆ ೯ ತಿಂಗಳ ಸಕ್ತ ಶಿಕ್ಷೆಯು ವಿಧಿಸಲ್ಪಟ್ಟಿದೆ.

ನಾರಾಯಣ ಜೋಶಿ, ಶಂಕರ ಕುಂಡಾಲೆ, ಗೋವಿಂದ ಮುರಕುಂಬಿ ಮತ್ತು ಶಿವರಾಮ ಮುರಕುಂಬಿ ಇವರಿಗೆ ಬೈಲಹೊಂಗಲದಲ್ಲಿ ೬ ತಿಂಗಳ ಸಕ್ತ ಶಿಕ್ಷೆಯಾಗಿದೆ

ನೇಸರಗಿಯ ಅನಂತ ನಾರ್ಲೇಕರ, ಶ್ರೀಪಾದರಾವ ಜೋಶಿ, ರಾಮಚಂದ್ರ ಕುಲಕರ್ಣಿ, ಚಂದ್ರಪ್ಪ ಸತ್ತಿಗೇರಿ ಇವರು ೯ ತಿಂಗಳ ಸಕ್ತ ಶಿಕ್ಷೆಗೆ ಗುರಿಯಾಗಿದ್ದಾರೆ

ಬೆಳಗಾವಿಯ ಪ್ರಸಿದ್ಧ ವಕೀಲರಾದ ಶ್ರೀ. ಜೋಶಿ ನಾರಾಯಣರಾಯರ ಮೋಟಾರ ಚಾಲಕರಾದ ಮರ್ಲಿಹಳ್ಳಿ ಅನಂತಾಚಾರ್ಯರು ಕಾಯಿದೆಭಂಗಕ್ಕಾಗಿ ಸೆರೆಹಿಡಿಯಲ್ಪಟ್ಟು ಬೈಲಹೊಂಗಲದ ಮಾಮಲೇದಾರರಿಂದ ೬ ತಿಂಗಳ ಸಕ್ತ ಶಿಕ್ಷೆಯನ್ನು ಹೊಂದಿದರು.

## ಮಂಗಳೂರಿನಲ್ಲಿ ಬಡಿಗೆಯ ರಾಜ್ಯ

### ೫೦ ಜನರಿಗೆ ಭಯಂಕರ ಪೆಟ್ಟುಗಳು

ಮಂಗಳೂರಿನಲ್ಲಿ ಅಧಿಕಾರಿಗಳಿಗೂ ಸತ್ಯಾಗ್ರಹಿಗಳಿಗೂ ಈಗ ತುಮುಲವಾದ ಯುದ್ಧವು ನಡೆದಿದೆ. ಅತ್ತ ಅಧಿಕಾರಿಗಳು ತಮಗೆ ಸಾಧ್ಯವಿದ್ದ ಎಲ್ಲ ಬಗೆಗಳಿಂದಲೂ ಚಳವಳಿಯನ್ನು ತಗ್ಗಿಸಲು ಯತ್ನಿಸುತ್ತಿರುವರು. ಇತ್ತ ಸತ್ಯಾಗ್ರಹಿಗಳು ಸರಕಾರದ ದಬ್ಬಾಳಿಕೆಗೆ ಹೆದರದೆ ಬೆದರದೆ ಮತ್ತಿಷ್ಟು ಹುರುಪಿನಿಂದ ಮುಂದೆ ಬಂದು ರಾಷ್ಟ್ರಸಭೆಯ ಕಾರ್ಯಕ್ರಮಗಳನ್ನು ಸಾಗಿಸುತ್ತಿರುವರು. ಎಂದಿನಂತೆಯೇ ಮಂಗಳೂರಿನ ಸತ್ಯಾಗ್ರಹಿಗಳು ತಾ|| ೨೬ ನೆಯ ದಿವಸದಲ್ಲಿಯೂ ಸಿಂದೀ ಅಂಗಡಿಯ ಪಿಕೆಟಿಂಗ ಕಾರ್ಯವನ್ನು ಪ್ರಾರಂಭಿಸಿದರು. ಕೆಲವು ಪೋಲೀಸರು ಹೋಗಿ ಅವರಿಗೆ ಆ ಸ್ಥಳವನ್ನು ಬಿಡಲು ಕೇಳಿಕೊಂಡರು ಅವರು ಸ್ಥಳವನ್ನು ಬಿಡಲು ನಿರಾಕರಿಸಿದರು. ಬಳಿಕ ಪೋಲೀಸರು ಅವರನ್ನು ಬೆತ್ತಗಳಿಂದ ಥಳಿಸಿದರು. ಬಡಿಸಿಕೊಂಡರೂ ಸತ್ಯಾಗ್ರಹಿಗಳು ತಮ್ಮ ಸ್ಥಳವನ್ನು ಬಿಟ್ಟು ಅತ್ತಿತ್ತ ಸರಿಯಲಿಲ್ಲ ಅಲ್ಲಿಯೇ ಕುಳಿತುಕೊಂಡು ಬಿಟ್ಟರು ಪೋಲೀಸರ ಅತ್ಯಾಚಾರದ ಸುದ್ದಿಯನ್ನು ಕೇಳಿ ಜನರು ಆ ಸ್ಥಳದಲ್ಲಿ ನೆರೆದರು. ಜನರಿಗೆ ಚದುರಲು ಪೋಲೀಸರು ಬಿನ್ನವಿಸಿಕೊಂಡರು. ಜನರು ಸ್ಥಳ ಬಿಟ್ಟು ಕದಲಲಿಲ್ಲ. ನಂತರದಲ್ಲಿ ಜನರ ಮೇಲೆ ಪೋಲೀಸರು ಲಾಠಿಗಳನ್ನುಪಯೋಗಿಸಿದರು. ೫೦ ಜನರಿಗೆ ಭಯಂಕರ ಪೆಟ್ಟುಗಳು ತಗುಲಿವೆ. ದಬ್ಬಾಳಿಕೆಯ ನಿಷೇಧಾರ್ಥವಾಗಿ ಓರ್ವ ಆನರರಿ ಮ್ಯಾಜಿಸ್ಟ್ರೇಟರು ತಮ್ಮ ಉದ್ಯೋಗಕ್ಕೆ ಶರಣು ಹೊಡೆದಿರುವರಾಗಿ ತಿಳಿಯುತ್ತದೆ.

## ರಾಮದುರ್ಗದಲ್ಲಿ

# ಸತ್ಯಾಗ್ರಹಕ್ಕೆ ಅಪೂರ್ವ ವಿಜಯ

ರಾಮದುರ್ಗ ಸಂಸ್ಥಾನದಲ್ಲಿ ಪ್ರಜೆಗಳು ಪಡುತ್ತಿರುವ ಕಷ್ಟಗಳು ನೋಡಿದಮೇಲೆ ನಮ್ಮ ಕಿವಿಯ ವರೆಗೆ ಬರಹ ತ್ತಿವೆ. ರಾಮದುರ್ಗ ಸಂಸ್ಥಾನವು ಸಣ್ಣದಾಗಿದ್ದರೂ ಸಹ ಆ ಸಂಸ್ಥಾನದ ವಿರುದ್ಧವಾಗಿ ಬರುವ ದೂರುಗಳು ಮಾತ್ರ ಬಹಳ ವಾಗಿವೆ ಉತ್ಪನ್ನದ ಮೇಲೆ ತೆಗೆದುಕೊಳ್ಳುವ ಕರದ ವಿಷ ಯವು ಅಂತಹ ದೂರುಗಳಲ್ಲಿ ಒಂದಾಗಿದೆ. ಬ್ರಿಟಿಶ ಹದ್ದಿಯಲ್ಲಿ ೨೦೦೦ ರೂ. ಗಳ ಮೇಲೆ ಉತ್ಪನ್ನವಿದ್ದವರಿಗೇನೇ ಕರವು ಬೀಳುವದು. ಆದರೆ ರಾಮದುರ್ಗ ಸಂಸ್ಥಾನದಲ್ಲಿ ಆ ಕರವು ೫೦೦ ರೂ. ಉತ್ಪನ್ನವಿದ್ದವರ ಮೇಲೆಯೂ ಕೂಡಿಸಲ್ಪಟ್ಟಿರುವ ದಾಗಿ ತಿಳಿಯುತ್ತದೆ. ಸಂಸ್ಥಾನದ ಪ್ರಜೆಗಳಿಗೆ ಈ ಕರವು ಭಾರವಾಗಿದ್ದುದರಿಂದ ಅವರು ಇದರ ವಿರುದ್ಧವಾಗಿ ಜೋರಿ ನಿಂದ ಚಳವಳಿಯನ್ನು ನಡಿಸಿದ್ದುಂಟು.

ಈ ಸಂಸ್ಥಾನದಲ್ಲಿ ಸುರೇಬಾನ ಎಂಬುದೊಂದು ಗ್ರಾಮವುಂಟು. ಈ ಕರದ ಭಾರವನ್ನು ತಾಳಲಾರದೆ ಆ ಊರಿನವರು ಸತ್ಯಾಗ್ರಹವನ್ನು ಕೈಕೊಳ್ಳುವದನ್ನು ನಿರ್ಧರಿಸಿದರು. ತಾ|| ೧೩ ನೆಯ ದಿವಸ ಸುರೇಬಾನದ ಸಾವಿರಾರು ಜನರು ಸತ್ಯಾಗ್ರಹ ವನ್ನು ಹೂಡಲು ರಾಮದುರ್ಗಕ್ಕೆ ಹೋದರು. ಅಧಿಕಾರಿಗಳು ಸರಿಯಾಗಿ ೧೨ ಗಂಟೆಗೆ ಮೋಟಾರಿನಲ್ಲಿ ಕುಳಿತು ಕಚೇರಿಗೆ ಬರುತ್ತಿದ್ದರು. ಸತ್ಯಾಗ್ರಹಿಗಳು ಹಾದಿಯಲ್ಲಿಯೇ ಅವರ ಮೋಟಾ ರನ್ನು ಅಡ್ಡಗಟ್ಟಿ ತಮ್ಮ ದೂರುಗಳನ್ನು ಅವರ ಮುಂದೆ ತೋಡಿ ಕೊಂಡರು. ಪೋಲೀಸರೂ ಕುದುರೆಯ ಸ್ವಾರರೂ ಅವರ ಮೇಲೆ ಸಾಗಿ ಹೋಗಿ ಅವರನ್ನು ಚದುರಿಸಲು ಯತ್ನಿಸಿದ್ದರಿಂದ ಜನರು ಮತ್ತಷ್ಟು ಸಿಟ್ಟಿಗೆದ್ದರು. ಪರಿಸ್ಥಿತಿಯು ಈ ಮೆಟ್ಟಿಗೆ ಮುಟ್ಟಿದ್ದನ್ನು ಕಂಡು ನ್ಯಾಯಾಧೀಶರಾದ ನಾಯಕರರು ಮಧ್ಯಸ್ಥಿಕೆಯನ್ನು ಮಾಡಿ ಜನರನ್ನು ಶಾಂತಗೊಳಿಸಿದರು. ಅಧಿಕಾರಿಗಳು ತಮ್ಮ ಕಾರಭಾರಿಗಳೊಡನೆ ಈ ವಿಷಯವಾಗಿ ಚರ್ಚಿಸಿ ೫೦೦ ರೂ ಉತ್ಪನ್ನವಿರದ ಜನರಿಂದ ಕರವನ್ನು ತೆಗೆದು ಕೊಳ್ಳುವದನ್ನು ಬಿಟ್ಟುಬಿಟ್ಟರು. ಅಂತೂ ಸತ್ಯಾಗ್ರಹಿಗಳು ಗೆಲುವನ್ನು ದೊರಕಿಸಿಕೊಂಡರು.

### ಪೋಲೀಸರು ವಕೀಲರನ್ನು ಬತ್ತಲೆ ಮಾಡಿದರು.

ಮದ್ರಾಸ ಇಲಾಖೆಯ ಬಿಜವಾಡದ ಓರ್ವ ವಕೀಲರು ತಿರುವೂರ ಎಂಬಲ್ಲಿಗೆ ತಾವು ಹಿಡಿದ ಖಟ್ಲೆಯನ್ನು ನಡಿಸುವದಕ್ಕಾಗಿ ಹೋಗಿದ್ದರು. ಅವರು ಯಾವಾಗಲೂ ಸಂಪೂರ್ಣವಾಗಿ ಖಾದಿಯನ್ನೇ ಧರಿಸುವವರಾಗಿದ್ದುದರಿಂದ ಆದಿವಸವಾದರೂ ಖಾದಿಯನ್ನೇ ಹಾಕಿಕೊಂಡು ಹೋಗಿದ್ದರು. ಹೀಗೆ ಮೈಮೇಲೆ ಖಾದಿಯ ಅರಿವೆಗಳನ್ನು ಧರಿಸಿಕೊಂಡು ಮಾರ್ಗದಲ್ಲಿ ನಿಂತ ವಕೀಲರನ್ನು ಕಂಡು ತಿರುವೂರದ ಓರ್ವ ಪೋಲೀಸನು ಅವರ ಬಳಿಗೆ ಹೋಗಿ ತಮಗೆ ಖಾದಿಯನ್ನು ಧರಿಸುವದು ಬಗ್ಗೆ ಪ್ರಶ್ನೆ ಮಾಡಿದನು. ನಾನು ಯಾವಾಗಲೂ ಖಾದಿಯನ್ನೇ ಧರಿಸುತ್ತಿರುತ್ತೇನೆ. ಕೋರ್ಟಿಗೆ ಹೋಗುವ ಮುಂದೆಯೂ ಖಾದಿಯ ಬಟ್ಟೆಗಳನ್ನೇ ತೊಟ್ಟುಕೊಂಡು ಹೋಗುತ್ತಿರುತ್ತೇನೆ, ''ಎಂದು ವಕೀಲರು ಉತ್ತರಕೊಟ್ಟರು ವಕೀಲರು ಹೀಗೆ ಉತ್ತರವನ್ನು ಕೊಟ್ಟ ಕೂಡಲೆ ಆ ಪೋಲೀಸನು ಅವರು ಉಟ್ಟುಕೊಂಡ ಖಾದಿಯ ಧೋತರವನ್ನು ಬಲವಂತದಿಂದ ಕಸಿದುಕೊಂಡು ಅವರನ್ನು ಬತ್ತಲೆ ಮಾಡಿದನು. ಮತ್ತು ಅವನು ಮೋಜಿನಿಂದ ಕೊಡೆಯು ವೆಂಬುದಾಗಿಯೂ ಅವರನ್ನು ಬೆದರಿಸಿದನಂತೆ ಇಷ್ಟಾದ ಬಳಿಕ ವಕೀಲರು ಸಮೀಪದಲ್ಲಿಯೇ ಇದ್ದ ಖಾನಾವಳಿಯಲ್ಲಿ ಹೊಕ್ಕು, ಅಲ್ಲಿಯ ಜನರಿಂದ ಒಂದು ಟೊವೆಲನ್ನು ಇಸಕೊಂಡು ಅದನ್ನು ಸುತ್ತಿಕೊಂಡರು. ಬಳಿಕ ಧೋತರವಿಲ್ಲದೆ ಕೋರ್ಟಿಗೆ ಬರುವದು ಅಸಮಂಜಸವಾಗಿ ತೋರುತ್ತದೆ. ಆದುದರಿಂದ ಖಟ್ಲೆಯನ್ನು ಮುಂದಕ್ಕೆ ಹಾಕಿರೆಂದು ಅಧಿಕಾರಿಗಳಿಗೆ ಅರ್ಜಿಮಾಡಿ ತಿರುಗಿ ತಮ್ಮ ಸ್ಥಾನಕ್ಕೆ ಬಂದುಬಿಟ್ಟರು.

### ಪಂಜಾಬದಲ್ಲಿ ಅಧಿಕಾರಿಗಳಿಗೆ ಪೇಚು

೩೦ ಯುದ್ಧ ಮಂಡಳಗಳ ನಿರ್ಮಾಣವು

ಪಂಜಾಬ ಸರಕಾರದವರು ಪಂಜಾಬ ಪ್ರಾಂತದ ಯುದ್ಧ ಮಂಡಳವನ್ನು ಕಾಯಿದೆಗೆ ವಿರುದ್ಧವಾದ ಸಂಘವೆಂದು ನಿರ್ಣಯಿಸಿದಂದಿನಿಂದ ಲಾಹೋರದಲ್ಲಿ ಜನರಲ್ಲಿ ಹೆಚ್ಚು ಜಾಗೃತಿಯುಂಟಾಗಿದ್ದು ಅಲ್ಲಿಯ ನಾಗರಿಕರು ನಾ ಮುಂದೆ ನೀ ಮುಂದೆ ಎಂದು ಅಹಮಹಮಿಕೆಯಿಂದ ಮುಂದೆ ಬಂದು ಕಾಯಿದೆಗೆ ವಿರುದ್ಧವಾದ ಸಂಘದಲ್ಲಿ ಸೇರಲು ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಿರುವರು. ಆದುದರಿಂದ ಪರಿಸ್ಥಿತಿಯನ್ನು ಕುರಿತು ವಿಚಾರಿಸುವದಕ್ಕಾಗಿ ಯುದ್ಧ ಮಂಡಳದವರು ಸಭೆಯನ್ನು ಸೇರಿಸಿಕೊಂಡು ಕಾಯಿದೆಯನ್ನು ಮುರಿಯುವದಾಗಿ ನಿರ್ಣಯಿಸಿಕೊಂಡಿದ್ದಲ್ಲದೆ, ಅದಕ್ಕಾಗಿ ಬೇರೆ ಬೇರೆಯಾಗಿ ೩೦ ಯುದ್ಧ ಮಂಡಳಗಳ ನಿರ್ಮಾಣವನ್ನು ಮಾಡಿರುವರು. ಒಂದು ಯುದ್ಧ ಮಂಡಳವು ಸೆರೆಯಾಳಾದ ಕೂಡಲೇ ಮತ್ತೊಂದು ಯುದ್ಧ ಮಂಡಳವು ಅವರ ಸ್ಥಾನದಲ್ಲಿ ಬಂದು ನಿಲ್ಲತಕ್ಕದ್ದಾಗಿದೆ. ಹೀಗೆ ಒಂದು ತಿಂಗಳದ ವರೆಗೆ ಒಂದೇ ಸಮನೆ ಕಾಯಿದೆಭಂಗವನ್ನು ಮಾಡುವವರಿದ್ದಾರೆ.

### ಭೂಪೇಂದ್ರ ಬೋಸರಿಗೆ ೩ ತಿಂಗಳ ಸಶ್ರಮ ಶಿಕ್ಷೆ.

ದೇಶಬಂಧು ದಾಸರ ಸ್ಮರಣಾರ್ಥವಾಗಿ ಹೊರಟ ಮೆರವಣಿಗೆಯಲ್ಲಿ ೧೮೮ ನೆಯ ಕಲಮನ್ನು ಮುರಿದು ಭಾಗ ತೆಗೆದುಕೊಂಡದ್ದುದಕ್ಕಾಗಿ ಕಲಕತ್ತೆಯ ಪ್ರಸಿದ್ಧ ಅ್ಯಡವ್ಹೋಕೇಟರಾದ ಶ್ರೀ ಭೂಪೇಂದ್ರ ಬೋಸರಿಗೆ ೩ ತಿಂಗಳ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ.

## ಭರತಖಂಡಕ್ಕೆ
# ಸಾಯಮನ್ ಸಪ್ತಕದಿಂದ ಸಿಕ್ಕದ್ದೇನು

ಸಾಯಮನ್ ವರದಿಯಿಂದ ಮುಸಲ್ಮಾನರಿಗೆ ಎಳ್ಳಷ್ಟು ಸಮಾಧಾನವಾಗಿರುವದಿಲ್ಲ. ಮುಸಲ್ಮಾನರೆಲ್ಲರೂ ಅದನ್ನು ಸಂಪೂರ್ಣವಾಗಿ ತಿರಸ್ಕರಿಸಿಯೇ ತೀರುವರು.

— ಯಾಕೂಬ ಹಸನರು.

ಸಾಯಮನ್ ವರದಿಯ ಶಿಫಾರಸುಗಳನ್ನೋದಿ ನಾನು ಅತಿ ನಿರಾಶೆಯನ್ನು ಹೊಂದಿದೆನು. ಹಿಂದಕ್ಕೆ ಸಾಯಮನ್ ಸಮಿತಿಯವರೊಡನೆ ಸಹಕರಿಸಿದುದಕ್ಕಾಗಿ ಸಾರ್ವಜನಿಕವಾಗಿ ನಾನು ಈಗ ಪಶ್ಚಾತ್ತಾಪವನ್ನು ವ್ಯಕ್ತಪಡಿಸಬೇಕಾಗಿದೆ.

ನಾ| ನವಾಬ ಅಲ್ಲೀಖಾನರು.

ಸಾಯಮನ್ ಸಮಿತಿಯ ಶಿಫಾರಸುಗಳು ಸ್ವಲ್ಪವೂ ಸಮಾಧಾನಕರವಾಗಿಲ್ಲ, ಅವುಗಳಿಗೆ ಯಾವ ಭಾರತೀಯನು ಮಹತ್ವವನ್ನು ಕೊಡಲಾರನು.

—ಮಹಾರಾಷ್ಟ್ರ ವ್ಯಾಪಾರಿ ಸಂಘ.

ವಸಾಹತಿ ಸ್ವರಾಜ್ಯವನ್ನೇ ತಮ್ಮ ಧ್ಯೇಯವನ್ನಾಗಿಟ್ಟುಕೊಂಡ ಬ್ರಾಹ್ಮಣೇತರ ಪಂಗಡದವರಿಗೆ ಸಾಯಮನ್ ವರದಿಯು ಬಹಳೇ ನಿರಾಶೆಯನ್ನುಂಟುಮಾಡಿದೆ.

ನಾ | ಜಾಧವರು.

ಸಾಯಮನ್ ವರದಿಯ ಶಿಫಾರಸುಗಳು ಅತ್ಯಂತ ಅಸಮಾಧಾನಕರವಾಗಿವೆ. ಅವುಗಳಿಗೆ ಕಸದ ಬುಟ್ಟಿಯೇ ತಕ್ಕ ಸ್ಥಾನವಾಗಿದೆ.

ಸರ್. ಸಿ. ಪಿ. ಶಿವಸ್ವಾಮಿ ಅಯ್ಯರರು.

“ನಾವು ರೊಟ್ಟಿಯನ್ನು ಬೇಡಿದ್ದೆವು, ಅವರು ಕಲ್ಲನ್ನು ಕೊಟ್ಟರು” ಎಂದು ಭಾರತೀಯರೆಲ್ಲರೂ ಈಗ ಆಕ್ರೋಶ ಮಾಡತಕ್ಕದ್ದು

—ರಾಜಾ ಸರ್ ದಲಜಿತಸಿಂಗರು.

ವರದಿಯು ನನ್ನಲ್ಲಿ ಬಹಳ ನಿರಾಶೆಯನ್ನುಂಟು ಮಾಡಿದೆ. ವರದಿಯಲ್ಲಿಯ ಶಿಫಾರಸುಗಳು ಕೂಲಿಕಾರ ಸರಕಾರಕ್ಕೆ ಸರಿಬೀಳುವವೆಂದು ನನಗೆ ತೋರುವದಿಲ್ಲ

—ಮಾರ್ಗಜೋನ್ಸ

ಅಪೇಕ್ಷಿಸಿದ್ದಕ್ಕಿಂತಲೂ ವರದಿಯು ಬಹಳ ಜಾಳವಾಗಿದೆ. ಅದರಲ್ಲಿಯ ಶಿಫಾರಸುಗಳನ್ನು ಅಲ್ಲಗಳೆಯಲಿಕ್ಕೆ ಕೂಲಿಕಾರ ಸರಕಾರವು ಸಿದ್ಧರಾಗದಿದ್ದಲ್ಲಿ ಜಗಳಗಳು ಬಹಳವಾಗಿ ಬೆಳೆಯುವ ಸಂಭವವುಂಟು.

—ಫೆನ್ನರ ಬ್ರೊಕ್‌ವೇ

ಸಾಯಮನ್ ವರದಿಯು ಹಿಂದುಸ್ಥಾನದ ರಾಷ್ಟ್ರೀಯ ಭಾವನೆಗೆ ಉದ್ಧಾಮತನದಿಂದ ಉತ್ತರವನ್ನು ಕೊಟ್ಟಿದೆ. ಸಮಿತಿಯೊಡನೆ ಸಹಕರಿಸಿದಲ್ಲಿ ಹಿತವಾಗುವದೆಂದು ಹಟ ಹಿಡಿದವರಿಗೆ ಸಮಿತಿಯವರು ಯೋಗ್ಯ ಉತ್ತರವನ್ನೇ ಕೊಟ್ಟಿದ್ದಾರೆ.

ಸರಕಾರದವರು ಸಾಯಮನ್ ವರದಿಯನ್ನು ಸಂಪೂರ್ಣವಾಗಿ ನಿರಾಕರಿಸಬೇಕು.

—ಚಿಂತಾಮಣಿಗಳು.

ಸಾಯಮನ ವರದಿಯ ಕಡೆಗೆ ರಾಷ್ಟ್ರೀಯ ಪಕ್ಷದವರು ತಮ್ಮ ಲಕ್ಷ್ಯವನ್ನು ಹೊರಳಿಸಕೂಡದು. ವರದಿಯನ್ನು ಓದಲು ಬಹಳ ಉತ್ಸುಕರಾದವರು ಮಾತ್ರ ನಾಲ್ಕು ದುಡ್ಡನ್ನು ಕೊಟ್ಟು ಅದರ ಸಾರಾಂಶವನ್ನೊಳಗೊಂಡ ಒಂದು ವರ್ತಮಾನ ಪತ್ರವನ್ನು ಕೊಂಡು ಕೊಂಡು ಓದಲಿ ಬಳಿಕ ಅದನ್ನು ಚೂರು ಚೂರಾಗಿ ಹರಿದು ಗಟಾರದಲ್ಲಿ ಬಿಸುಟ ಬಿಡಲಿ.

—ಪಂಡಿತ ಮೋತಿಲಾಲರು.

## ಕೆರೂರಲ್ಲಿಯ
### ಎಲ್ಲ ಸಿಂದೀ ಗಿಡಗಳು ನೆಲಕ್ಕುರುಳಿದವು.

ಬದಾಮಿ ತಾಲೂಕಿನಲ್ಲಿ ಸಂಚರಿಸಿ ಅಲ್ಲಿಯ ಸಿಂದೀ ಗಿಡಗಳನ್ನು ಸಮೂಲವಾಗಿ ನಾಶಗೊಳಿಸಲು ದೇಶಬಂಧು ಪಥಕದವರು ಬದಾಮಿ ತಾಲೂಕಿನಲ್ಲಿ ಈಗ ಸಂಚರಿಸ ಹತ್ತಿರುವರಷ್ಟೇ. ಈ ವರೆಗೆ ಅವರು ಕೆರೂರಲ್ಲಿಯ ಎಲ್ಲ ಸಿಂದೀ ಗಿಡಗಳನ್ನು ಅಂದರೆ ೯೦೦ ಸಿಂದೀ ಗಿಡಗಳನ್ನು ನೆಲಕ್ಕುರುಳಿಸಿದ್ದಾರೆ. ಇನ್ನು ಮುಂದೆ ೩ ಜನ ಸ್ವಯಂಸೇವಕರ ಪಥಕವೊಂದು ನಿರಂತರ ಪೂರ್ಣವಾಗಿ ಕೆಳಗಿನ ಹಳ್ಳಿಗಳಿಗೆ ಪ್ರಚಾರಕಾರ್ಯಕ್ಕಾಗಿ [illegible]ನ ಬುಧವಾರ ದಿವಸ ಹೊರಡತಕ್ಕದ್ದಿದೆ. ಆ ಹಳ್ಳಿಗಳೆಂದರೆ ನೀರಲೂರು, ಸಾಗನೂರು, ಲಕ್ಕೇರಿ, ಕಿತ್ತಾಪೂರ, ಜಂಗವಾಡ, ನಂದಿಹಾಳ, ಅನವಾಲ, ಮತ್ತು ಹೊಸಕೋಟೆ.

## ವಿಜಾಪುರ ನಗರ ಸಭೆಯ
### ಕಲವು
## ಸಭಾಸದರ ದೊಡ್ಡಿಸ್ತನದ ಹುಚ್ಚು

ವಿಜಾಪುರ ನಗರ ಸಭೆಯ ಕಲವು ಸಭಾಸದರು ಹಾಗು ನಗರ ಸಭೆಯಲ್ಲಿಯ ಕಲವು ನೌಕರರು ಇವರ ನಡುವೆ ದೊಡ್ಡಿಸ್ತನದ ವಿಷಯವಾಗಿ ದುಡ್ಡಿಗೊಂದು ತಿಕ್ಕಾಟವೇ ನಡೆದಿದೆ. “ನಗರ ಸಭೆಯಲ್ಲಿಯ ನೌಕರರು ತಮಗೆ ಯೋಗ್ಯವಾದ ಮರ್ಯಾದೆಯನ್ನು ತೋರಿಸುತ್ತಿರುವದಿಲ್ಲ. ಅದರಿಂದ ಈ ಬಗ್ಗೆ ಸರಿಯಾದ ವ್ಯವಸ್ಥೆಯನ್ನುಂಟು ಮಾಡಿರಿ” ಎಂದು ಕಲವು ಸಭಾಸದರು ಅಧ್ಯಕ್ಷರಿಗೆ ಕೇಳಿಕೊಂಡರೆಂದೂ, ಅಧ್ಯಕ್ಷರು ಚೀಫ ಆಫೀಸರರಿಗೆ ತಿಳಿಸಿದರೆಂದೂ, ಸಭಾಸದರನ್ನು ಕಂಡ ಕೂಡಲೇ ಸಲಾಮು ಹೊಡೆಯಬೇಕೆಂದು ಚೀಫ ಆಫೀಸರರು ಎಲ್ಲ ನೌಕರರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆಂದೂ ತನ್ನ ಕೇಳ್ವಿಯಲ್ಲಿ ಬಂದುದಾಗಿ ‘ನವಕರ್ನಾಟಕ’ದ ಮಲ್ಲನು ಉಲ್ಲೇಖಿಸಿದ್ದಾನೆ. ಇದು ನಿಜವಿದ್ದಲ್ಲಿ, ಹೇಳಿಕೊಂಡು ದೊಡ್ಡಸ್ತನವನ್ನು ದೊರಕಿಸಿಕೊಳ್ಳುವ ಮಹನೀಯರ ಈ ಕರುಣಾಸ್ಪದ ಸ್ಥಿತಿಯನ್ನು ಕಂಡು ಎಲ್ಲರೂ, ಕನಿಕರಪಡತಕ್ಕದ್ದೇ ವಿಹಿತವಾಗುವದು! ನೌಕರರೇ ಎಚ್ಚರ! ಮರೆತು ಗರತೀರ ಶರಣು ಹೊಡೆಯುವದನ್ನು!

ಈ ಪತ್ರಿಕೆಯು ಬಸವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

೦ ಪೈ. ೯೯೪೭ ನಿತ್ಯಸಂಚಿಕೆಯು ಬೆಲೆ ೦—೦—೩

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮುದಾರ

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಬುಧವಾರ ಮಿತಿ ಆಷಾಢ ಶುದ್ಧ ೭ ಶಕೆ ೧೮೫೨ ತಾ॥ ೨—೭—೩೦ [ವಿಶೇಷ ಸಂಚಿಕೆ

### ಜನಪದ ಚಕ್ರವರ್ತಿಗಳಾದ

# ಪಂ. ಮೋತೀಲಾಲರಿಗೆ ಸೆರೆಮನೆಯು

## ವರ್ಕಿಂಗ ಕಮೀಟಿಯು ಕಾಯಿದೆಗೆ ವಿರುದ್ಧವಾದ ಸಂಘವಾಯಿತು.

ಕಾಂಗ್ರೆಸದ ಅಧ್ಯಕ್ಷರಾದ ಪಂ. ಮೋತೀಲಾಲ ನೆಹ್ರು ಮತ್ತು ಕಾರ್ಯದರ್ಶಿಗಳಾದ ಡಾ॥ ಸಯ್ಯದ ಮಹಮ್ಮದ ಇವರು ಅಲಹಾಬಾದದಲ್ಲಿ ಆನಂದಭವನದಲ್ಲಿ ತಾ॥ ೩೦ ನೆಯ ದಿವಸ ಮುಂಜಾವಿನಲ್ಲಿ ಇಂ. ಪಿ. ಕೋಡಿನ ೧೧೭ ನೆಯ ಕಲಮಿನನ್ವಯ ಸೆರೆಹಿಡಿಯಲ್ಪಟ್ಟು ನೈನಿತಾಲ ತುರಂಗಕ್ಕೆ ಒಯ್ಯಲ್ಪಟ್ಟಿದ್ದಾರೆ.

ಹಿಂದುಸ್ಥಾನ ಸರಕಾರದ ಸಮ್ಮತಿಯನ್ನು ತೆಗೆದುಕೊಂಡು ಕಾಂಗ್ರೆಸ್ ವರ್ಕಿಂಗ ಕಮೀಟಿ ಮತ್ತು ನವಜೀವನ ಭಾರತ ಸಭಾ ಇವುಗಳನ್ನು ಸಂಯುಕ್ತಪ್ರಾಂತ ಸರಕಾರದವರು, ಕಾಯಿದೆಗೆ ವಿರುದ್ಧವಾದ ಸಂಘಗಳೆಂದು ನಿರ್ಣಯಿಸಿದ್ದಾರೆ. ಬಂಗಾಲ ಪ್ರಾಂತಕ್ಕೆ ಅನ್ವಯಿಸಿದ ಕ್ರಿಮಿನಲ್ ಲಾ ಅಮೆಂಡಮೆಂಟ ಕಾಯಿದೆಯು ಸಂಯುಕ್ತ ಪ್ರಾಂತಕ್ಕೂ ಹಚ್ಚಲ್ಪಟ್ಟಿದೆಯೆಂದು ಸಾರಲ್ಪಟ್ಟಿದೆ.

ಪಂಡಿತ ಮೋತೀಲಾಲರನ್ನು ಸೆರೆಹಿಡಿದ ಮೇಲೆ ಅಧಿಕಾರಿಗಳು ಕಾಂಗ್ರೆಸ್ ವರ್ಕಿಂಗ ಕಮೀಟಿಯ ಕಚೇರಿಯನ್ನೂ, ಆನಂದಭವನವನ್ನೂ ಜಪ್ತಮಾಡಿ, ಅವುಗಳಿಗೆ ಕೀಲಿಗಳನ್ನು ಜಡಿದು ತಿರುಗಿ ಹೋದರು. ಅಂದು ಅಲಹಾಬಾದದಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿದ್ದಲ್ಲದೆ, ಪ್ರಚಂಡವಾದ ಮೆರವಣಿಗೆಯೂ ತೆಗೆಯಲ್ಪಟ್ಟಿತು.

# ಹರತಾಳ

## ಪಾಲಿಸಿರಿ.

ರಾಷ್ಟ್ರೀಯ ಮಹಾಸಭೆಯ ಕಾರ್ಯಕಾರೀ ಮಂಡಳದ ಅಧ್ಯಕ್ಷರಾದ ಪಂಡಿತ ಮೋತೀಲಾಲ ನೆಹರೂರವರನ್ನು ಹಾಗೂ ಕಾರ್ಯದರ್ಶಿಗಳಾದ ಡಾ. ಸಯ್ಯದ ಮಹಮ್ಮದರವರನ್ನೂ ಈಗ ಸರಕಾರದವರು ಸೆರೆಹಿಡಿದುಕೊಂಡು ಹೋಗಿ ಜುಡಿಯಲ್ಲಿ ಮತ್ತೆ ಕೇಡವನ್ನು ಕಟ್ಟಿಕೊಂಡು ತಮ್ಮ ದುಷ್ಟಬುದ್ಧಿ ಕಳವಳ ದಿವಾಳಿಯನ್ನು ಹೊರಗೆಡವಿದ್ದಾರೆ. ಸರಕಾರದ ಈ ದಬ್ಬಾಳಿಕೆಗೆ ಸರಿಯಾದ ಉತ್ತರವನ್ನು ಕೊಡುವದು ಪ್ರತಿಯೊಬ್ಬ ಭಾರತೀಯನಿಗೆ ಬಿಟ್ಟಲ್ಲಾರದ ಕರ್ತವ್ಯವಾಗಿದ್ದುದರಿಂದ ಅಲಹಾಬಾದ, ಮುಂಬಯಿ, ದಿಲ್ಲಿ ಮೊದಲಾದ ದೊಡ್ಡ ದೊಡ್ಡ ಪಟ್ಟಣದವರು ಈ ಬಗ್ಗೆ ಹರತಾಳವನ್ನು ಪಾಲಿಸಿ ತಮ್ಮ ನಿಷೇಧವನ್ನು ಈಗಾಗಲೆ ವ್ಯಕ್ತಪಡಿಸಿದ್ದಾರೆ. ಅದರಂತೆ ಕರ್ನಾಟಕದ ಗಂಡುಮೆಟ್ಟಿನ ಸ್ಥಳವೆಂದೆನಿಸಿಕೊಳ್ಳುವ ಬಾಗಲಕೋಟೆಯವರಾದ ನಾವು ಇಂದು ಹರತಾಳವನ್ನು ಪಾಲಿಸಿ ನಾವೂ ಭಾರತೀಯರಾಗಿದ್ದೇವೆಂದು ವ್ಯಕ್ತಪಡಿಸಬೇಕಾಗಿದೆ. ಆದುದರಿಂದ ವಿದ್ಯಾರ್ಥಿಗಳೇ, ಇಂದು ಶಾಲೆಗೆ ಕರಣು ಹೊಡೆಯಿರಿ. ವರ್ತಕರೇ, ಇಂದು ನಿಮ್ಮ ನಿಮ್ಮ ಅಂಗಡಿಗಳಿಗೆ ಕೀಲಿಗಳನ್ನು ಜಡಿದು ವ್ಯವಹಾರವನ್ನು ನಿಲ್ಲಿಸಿಬಿಡಿರಿ. ಸಿನೇಮಾ, ನಾಟಕ, ಚಹಾ ಫರಾಳದ ಅಂಗಡಿ ಮೊದಲಾದ ಇನ್ನಿತರ ಉದ್ಯೋಗಗಳನ್ನು ಕೈಕೊಂಡವರೇ, ಇಂದು ನಿಮ್ಮ ನಿಮ್ಮ ಉದ್ಯೋಗಗಳನ್ನು ನಿಲ್ಲಿಸಬೇಡಿರಿ. ಹಿಂದುಸ್ಥಾನದಲ್ಲಿಯೇ ಹುಟ್ಟಿ, ಹಿಂದುಸ್ಥಾನದಲ್ಲಿಯೇ ಬೆಳೆದು ಹಿಂದುಸ್ಥಾನದಲ್ಲಿಯೇ ಮಣ್ಣುಪಾಲಾಗಿ ಹೋಗುವವರಾದ ನಾವು, ತಮ್ಮ ತನುಮನಧನಗಳನ್ನೇ ರಾಷ್ಟ್ರಕ್ಕೆ ಧಾರೆಯೆರೆದ ಜನಪದ ಚಕ್ರವರ್ತಿಗಳಿಗಾಗಿ ಇಷ್ಟೂ ಮಾಡದಿದ್ದರೆ, ನಾವು ಹಿಂದುಗಳೆನ್ನಿಸಿಕೊಳ್ಳಲು ಅರ್ಹರೇ ಆಗುವದಿಲ್ಲ. ಆದುದರಿಂದ ಬಾಗಲಕೋಟೆಯ ನಾಗರಿಕರೇ ಎದ್ದೇಳಿರಿ. ಇಂದು ನಿಮ್ಮ ಎಲ್ಲ ವ್ಯವಹಾರಗಳನ್ನು ಬದಿಗಿಟ್ಟು ಹರತಾಳವನ್ನು ಯಶಸ್ವಿಯನ್ನಾಗಿ ಮಾಡಿರಿ. ಮತ್ತು ಸಂಜೆಗೆ ಲಾಲಾಜಿ ಬೈಲಿನಲ್ಲಿ ಈ ಬಗ್ಗೆ ಸೇರುವ ಸಭೆಗೆ ತಂಡತಂಡವಾಗಿ ಬಂದು ನಿಷೇಧಕ್ಕೆ ಬೆಂಬಲವನ್ನು ಕೊಡಿರಿ.

ಬಾಗಲಕೋಟೆ ತಾ॥ ೨-೭-೩೦ } ಕಾರ್ಯದರ್ಶಿ ಸತ್ಯಾಗ್ರಹ ಮಂಡಳ

# ನಗರ ಸಭೆಯ
## ಮೇಲೆ
## ನಾಡಗುಡಿಯು ನಿಲ್ಲಲಿಕ್ಕೇ ಬೇಕು.

ಬಾಗಲಕೋಟೆಯ ನಗರ ಸಭೆಯ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ಹಚ್ಚತಕ್ಕದ್ದೆಂಬ ವಿಷಯವು ನಗರಸಭೆಯ ಮುಂದೆ ಬರುವ ವಿಷಯಗಳಲ್ಲಿ ಸೇರ್ಪಡೆಯಾಗಿ ಎಷ್ಟೋ ದಿವಸಗಳು ಕಳೆದುಹೋದವು. ನಗರ ಸಭೆಯವರು ಆ ವಿಷಯವನ್ನು ತೆಗೆದುಕೊಂಡು ಏನೊಂದು ನಿರ್ಣಯ ಕೊಡದೆ ಅದನ್ನು ಮುಂದಕ್ಕೆ ಒಗೆಯಹತ್ತಿದರು. ಇದನ್ನು ಕಂಡು ಬಾಗಲಕೋಟೆಯ ಸ್ತ್ರೀಪುರುಷರು ತಾ|| ೩-೬-೩೦ ನೆಯ ದಿವಸ ರಾಷ್ಟ್ರಧ್ವಜ ಸಹಿತವಾಗಿ ಒಂದು ಪ್ರಚಂಡ ಮೆರವಣಿಗೆಯನ್ನು ಹೊರಡಿಸಿ ಊರಲ್ಲೆಲ್ಲ ಹಾಯ್ದು ಅಂದು ನಗರ ಸಭೆಯ ಮುಂದ ಹೋಗಿ ನಿಂತುಕೊಂಡರು. ಅಂದು ನಗರಸಭೆಯ ಸಾಧಾರಣ ಸಭೆಯು ಸೇರತಕ್ಕದ್ದಿತ್ತು. ಸ್ತ್ರೀಪುರುಷರ ಪ್ರಚಂಡ ಸಮುದಾಯವನ್ನು ಕಂಡು ನಗರ ಸಭೆಯ ಸಭಾಸದರು ಬೆದರಿಯೋ ಏನೋ ಬಾದಶಹರ ಹುಟ್ಟಿದ ದಿನದ ನೆವತೋರಿ ಅಂದಿನ ಸಭೆಯನ್ನು ಮುಂದಕ್ಕೆ ಹಾಕಿದರು. ಮುಂದಿನ ಸಭೆಯಲ್ಲಿ ಈ ವಿಷಯವನ್ನು ತೆಗೆದುಕೊಂಡು ನಿರ್ಣಯವನ್ನು ಕೊಡುವದರಲ್ಲಿ ಬರುವದೆಂದು ನಗರ ಸಭೆಯ ಸಭಾಸದರಾದ ಶ್ರೀ. ಮುರಿಗೆಯ್ಯನವರ ಕಡೆಯಿಂದ ನುಡಿಸಿದರು. ಶ್ರೀ. ಜೋರಾಪುರರು ಆಶ್ವಾಸನಕ್ಕಾಗಿ ಅವರನ್ನು ಅಭಿನಂದಿಸಿದರು. ಜನರು ಅವರು ಕೊಟ್ಟ ಆಶ್ವಾಸನವನ್ನು ನಂಬಿ ಜಯಜಯಕಾರ ಮಾಡುತ್ತ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು. ಇತ್ತ ಸಭಾಸದರೂ ಸಭೆಯನ್ನು ೧೯ ನೇ ತಾ|| ನ ವರೆಗೆ ಮುಂದರಿಸಿದರು. ಇದಿಷ್ಟು ೩ ನೆಯ ತಾ|| ನ ದಿವಸ ನಡೆದದ್ದಾಯಿತು.

“ಸಭಾಸದರಾದ ಶ್ರೀ. ಮುರಿಗೆಯ್ಯನವರು ಆಶ್ವಾಸನವನ್ನು ಕೊಟ್ಟಿದ್ದಾರೆ. ಅವರು ಕಟ್ಟರ ರಾಷ್ಟ್ರೀಯ ವೃತ್ತಿಯವರು. ತಾವು ನುಡಿದದ್ದನ್ನು ಅವರು ಹುಸಿ ಹೋಗಗೊಡುವದಿಲ್ಲ. ತಾ|| ೧೯ ನೆಯ ದಿವಸ ನಗರ ಸಭೆಯ ಮೇಲೆ ರಾಷ್ಟ್ರಧ್ವಜವು ಏರೇ ಏರುವದು” ಎಂದು ಬಾಗಲಕೋಟೆಯ ನಾಗರಿಕರೆಲ್ಲರೂ ತಿಳಿದುಕೊಂಡು, ತಾ|| ೧೯ ನೆಯ ದಿನವು ಎಂದು ಬರುವದೋ, ಕಟ್ಟಡದ ಮೇಲೆ ರಾಷ್ಟ್ರಧ್ವಜವು ಕಂಗೊಳಿಸುತ್ತಿರುವದನ್ನು ಎಂದು ನೋಡುವೆವೋ ಎಂದು ಉತ್ಸಾಹವನ್ನು ತಾಳಿ ಮನದಲ್ಲಿಯೇ ಉಬ್ಬಿ ಕುಳಿತುಕೊಂಡಿದ್ದರು. ೧೯ ನೆಯ ತಾರೀಖು ಬರುವಂತೆಯೇ ಬಂದಿತು. ಪ್ರಸಿದ್ಧ ಮುಂದಾಳುಗಳಲ್ಲೊಬ್ಬರಾದ ಶ್ರೀ. ಕೌಜಲಗಿ ಶ್ರೀನಿವಾಸರಾಯರು ನಗರಸಭೆಯ ಸಭಾಸದರೊಡನೆ ಈ ಸಂಬಂಧವಾಗಿ ಚರ್ಚಿಸುವೆನು. ಸತ್ಯಾಗ್ರಹ ಮೊದಲಾದವುಗಳನ್ನು ಹೂಡಬೇಡಿರೆಂದು ಸ್ಥಳಿಕರಿಗೆ ಕೇಳಿಕೊಂಡಿದ್ದರು. ಹಿರಿಯರ ಅಜ್ಞೆಗೆ ಮನ್ನಣೆಯನ್ನಿತ್ತು, ಸತ್ಯಾಗ್ರಹಿಗಳು ಅಂದು ಯಾವದೇ ತರದ ಮೆರವಣಿಗೆ ಮೊದಲಾದವುಗಳನ್ನು ತೆಗೆಯಲಿಲ್ಲ. ಶ್ರೀ. ಶ್ರೀನಿವಾಸರಾಯರು ಸಭಾಸದರೊಡನೆ ೨ ದಿನಗಳ ವರೆಗೆ ಚರ್ಚಿಸಿದರು. ಚರ್ಚೆಯ ಫಲವು ಮಾತ್ರ ಹಗ್ಗ ಹರಿಯಲಿಲ್ಲ ಕೋಲು ಮುರಿಯಲಿಲ್ಲವೆಂಬಂತಾಯಿತು. ಚರ್ಚೆಯಲ್ಲಿ ಏನೇನು ನಡೆದವೋ ತಿಳಿದು ಬರಲಿಲ್ಲ. ಸಭಾಸದರು ತಾ|| ೧೯ ನೆಯ ದಿವಸ ಸಭೆಯಲ್ಲಿ ಸೇರಿದರು. ನಗರ ಸಭೆಯ ಮುಂಬಾಗಿಲವನ್ನು ಇಕ್ಕಿಕೊಂಡು, ಅಲ್ಲೊಬ್ಬ ಆಳನ್ನಿಟ್ಟು ಒಳಗೆ ಯಾರನ್ನೂ ಬಿಡದೆ ಸಭೆಯ ಕಾರ್ಯವನ್ನು ಸಾಗಿಸಿದರು. ಅಂದಿನ ಸಭೆಯಲ್ಲಿಯೂ ಈ ವಿಷಯವನ್ನು ತೆಗೆದುಕೊಳ್ಳಲಿಲ್ಲ. ಮನದಲ್ಲಿಯೇ ಉಬ್ಬಿ ಕುಳಿತ ನಾಗರಿಕರು ಅತ್ಯಂತ ನಿರಾಶೆ ಹೊಂದಿದರು. ಶ್ರೀಯುತ ಮುರಿಗೆಯ್ಯನವರು ನುಡಿದ ವಚನವು ಬ್ರಿಟಿಶರ ವಚನದಂತೆ ಕೃತಿಯಲ್ಲಿ ಬಾರದೆ ಹೋಯಿತು. ಇದಿಷ್ಟು ೧೯ ನೇ ತಾ|| ನ ಕತೆ.

ಬಾಗಲಕೋಟೆಯ ನಗರ ಸಭೆಯ ಕಟ್ಟಡವು ನಾಗರಿಕರ ಹಣದಿಂದ ಕಟ್ಟಲ್ಪಟ್ಟ ಕಟ್ಟಡವಾಗಿದೆ. ನಾಗರಿಕರಿಗಾಗಿ ನಗರ ಸಭೆ ಇರುವದಲ್ಲದೆ ನಗರ ಸಭೆಗಾಗಿ ನಾಗರಿಕರಿಲ್ಲ. ಆದುದರಿಂದ ನಾಗರಿಕರ ಮನದಿಚ್ಛೆಯನ್ನು ತಿಳಿದುಕೊಂಡು ಅವುಗಳನ್ನು ಈಡೇರಿಸುವದು ನಗರ ಸಭೆಯವರಿಗೆ ಬಿಡಲಾರದ ಕರ್ತವ್ಯವಾಗಿತ್ತು. ನಗರ ಸಭೆಯ ಮೇಲೆ ರಾಷ್ಟ್ರಧ್ವಜವು ಬೇಕೆಂದು ನಾಗರಿಕರು ಬೇಡುತ್ತಿರುವಲ್ಲಿ ಅತ್ತ ಲಕ್ಷ್ಯ ಕೊಟ್ಟು ರಾಷ್ಟ್ರಧ್ವಜವನ್ನು ಹಚ್ಚಿದ್ದರೆ ಬಾಗಲಕೋಟೆಯ ನಗರ ಸಭೆಗೆ ಭೂಷಣವು ಬರುತ್ತಿತ್ತು. ಇದಿಷ್ಟು ಮಾಡಿದ್ದರೆ ನಗರಸಭೆಯವರು ತಮ್ಮ ಕರ್ತವ್ಯವನ್ನು ಮಾಡಿದಂತಾಗುತ್ತಿತ್ತು. ಆದರೆ ಅದೆಲ್ಲವನ್ನು ಈಗ ಹೇಳಿಯೇನು ಫಲ! ಅವರಂತೂ ತಮ್ಮ ಕರ್ತವ್ಯವನ್ನು ಮಾಡಲಿಲ್ಲ. ಇನ್ನು ಮುಂದೆ ಮಾಡುವರೆಂದು ನಾಗರಿಕರು ಅವರ ಮೇಲೆ ಅವಲಂಬಿಸಿಕೊಂಡು ಕೂಡುವದು ಈಗಿನ ಸ್ವಾತಂತ್ರ್ಯ ಯುಗದಲ್ಲಿ ಪ್ರಯೋಜನವಾಗಿರುವದಿಲ್ಲ. ನಾಗರಿಕರು ಈಗ ಎಚ್ಚತ್ತು ನಗರಸಭೆಯವರು ರಾಷ್ಟ್ರಧ್ವಜದ ವಿಷಯವಾಗಿ ತೋರುತ್ತಿರುವ ಧೋರಣದ ಬಗ್ಗೆ ನಿಷೇಧವನ್ನು ವ್ಯಕ್ತಪಡಿಸಬೇಕು. ನಗರ ಸಭೆಯ ಮೇಲೆ ರಾಷ್ಟ್ರಧ್ವಜವು ಇಲ್ಲದಿದ್ದಲ್ಲಿ ತಮಗೆ ಸಮಾಧಾನವಿಲ್ಲವೆಂದೂ, ಆದುದರಿಂದ ಅದನ್ನು ನಗರ ಸಭೆಯ ಮೇಲೆ ಹಚ್ಚಬೇಕೆಂದೂ, ಹಚ್ಚದಿದ್ದಲ್ಲಿ ಅದು ಅಲ್ಲಿ ನಿಲ್ಲುವಂತೆ ಮಾಡಲು ಇಂತಿಂತಹ ಉಪಾಯಗಳನ್ನು ಕೈಕೊಳ್ಳುವದರಲ್ಲಿ ಬರುವದೆಂದೂ, ಮತದಾರರು ನಗರ ರಕ್ಷಕರಿಗೆ ಎಚ್ಚರಿಕೆಯನ್ನು ಕೊಡಬೇಕು. ಇದೀಗ ಸುಮ್ಮನೆ ಕೂಡುವ ಸಮಯವಲ್ಲ. ಹುಬ್ಬಳ್ಳಿ, ಗದಗ, ಸವದತ್ತಿ ಮೊದಲಾದ ಪಟ್ಟಣಗಳ ನಾಗರಿಕರು ಈ ವಿಷಯದಲ್ಲಿ ನಮ್ಮಗಿಂತ ಎಷ್ಟೋ ಮುಂದಕ್ಕೆ ಹೋಗಿರುವರು. ಬಾಗಲಕೋಟೆಯ ನಾಗರಿಕರೇ ಇದಕ್ಕೆ ನಿಮ್ಮ ಉತ್ತರವೇನು? ಬಾಗಲಕೋಟೆಗೆ ಬಾಂಗಡಿಕೋಟೆಯೆಂದು ಹೆಸರನ್ನು ಮಾತ್ರ ಮತ್ತೆ ತರಿಸಬೇಡಿರಿ!

—ಓರ್ವ ಮತದಾರ

ಈ ಪತ್ರಿಕೆಯು ಒಳವಂಶ ಅಣ್ಣಾರಾವ ಮುಳವಾಡಮಠ ಇವರಿಂದ ಬಾಗಲಕೋಟೆಯ
ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಂ ॥ — ಮನು
ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.
ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಗುರುವಾರ ಮಿತಿ ಆಷಾಢ ಶುದ್ಧ ೮ ಶಕೆ ೧೮೫೨ ತಾ|| ೩—೭—೩೦ [ ಸಂಚಿಕೆ ೯೦

## ಪಂಡಿತ ಮೋತೀಲಾಲರಿಗೂ ಹಾಗೂ ಡಾ|| ಸಯ್ಯದ ಮಹಮ್ಮದರಿಗೂ ೬ ತಿಂಗಳ ಸಾದಾ ಶಿಕ್ಷೆ.

### ಸರದಾರ

# ವಲ್ಲಭಭಾಯಿಯವರಿಗೆ ಅಧ್ಯಕ್ಷಪದ.

## ಮೌಲಾನಾ ಅಬ್ದುಲ್ ಕಲಮ ಆಝಾದರು ಸೆರೆಮನೆಗೆ ತೆರಳಿದರು!

ಕಾಂಗ್ರೆಸ ವರ್ಕಿಂಗ ಕಮಿಟಿಯ ಅಧ್ಯಕ್ಷರಾದ ಪಂಡಿತ ಮೋತೀಲಾಲ ನೆಹರು ಹಾಗು ಕಾರ್ಯದರ್ಶಿಗಳಾದ ಡಾ|| ಸಯ್ಯದ ಮಹಮ್ಮದರು ೧೧೭ ನೆಯ ಕಲಮಿನನ್ವಯ ತಾ|| ೩೦ ನೆಯ ದಿವಸ ಸೆರೆಹಿಡಿಯಲ್ಪಟ್ಟು ನೈನಿತಾಲ ತುರಂಗಕ್ಕೆ ಒಯ್ಯಲ್ಪಟ್ಟಿದ್ದರು. ಕಾಯಿದೆಗೆ ವಿರುದ್ಧವಾದ ಸಂಘವಾದ ರಾಷ್ಟ್ರಸಭೆಯ ಕಾರ್ಯಕಾರೀ ಮಂಡಳದ ಸಭಾಸದರಾಗಿದ್ದುಕೊಂಡು ೧೫ ನೆಯ ತಾ|| ಗೆ ಸೇರಿದ ಕಾರ್ಯಕಾರೀ ಮಂಡಳದ ಸಭೆಯಲ್ಲಿ ಗೊತ್ತುಗಳನ್ನು ನಿರ್ಧರಿಸಿಕೊಂಡು ಹಾಗು ಅವುಗಳನ್ನು ಪ್ರಸಿದ್ಧಿಸಿ ವ್ಹಾಯಿಸರಾಯರು ಹೊರಡಿಸಿದ ಮೂರೂ ಕಾನೂನುಗಳನ್ನು ಮುರಿದುದಕ್ಕಾಗಿ ಅಲ್ಲಿ ಅವರಿಗೆ ೬ ತಿಂಗಳ ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿತು.

ಕಾಂಗ್ರೆಸ ವರ್ಕಿಂಗ ಕಮಿಟಿಯ ಸಭಾಸದರಾದ ಮೌಲಾನಾ ಅಬ್ದುಲ್ ಕಲಮ ಆಝಾದರು ಪಾಟಣಾದಲ್ಲಿ ಸೆರೆಹಿಡಿಯಲ್ಪಟ್ಟಿರುವರಾಗಿ ತಿಳಿಯುತ್ತದೆ.

ಪಂಡಿತ ಮೋತೀಲಾಲರು ತಮ್ಮ ಸ್ಥಳದಲ್ಲಿ ಸರದಾರ ವಲ್ಲಭಭಾಯಿಯವರನ್ನು ತಾತ್ಪೂರ್ತಿಕವಾಗಿ ಕಾಂಗ್ರೆಸದ ಅಧ್ಯಕ್ಷರನ್ನಾಗಿ ನಿಯಮಿಸಿದ್ದಾರೆ.

### ಬೆಳಗಾವಿ ಜಿಲ್ಹೆಯಲ್ಲಿ ಮದ್ಯಪಾನ

## ನಿಷೇಧದ ಚಳವಳಿಯು

### ೬ ಜನರಿಗೆ ೧ ತಿಂಗಳ ಸಾದಾ ಶಿಕ್ಷೆ

ಸಿಂದೀ ಅಂಗಡಿಗಳ ಮೇಲೆ ಪಿಕೆಟಿಂಗ ಮಾಡಿದುದಕ್ಕಾಗಿ ಸೆರೆಹಿಡಿಯಲ್ಪಟ್ಟ ನಂದಗಡದ ಶ್ರೀ ಕೃಷ್ಣಾಜಿ ನಾಯಿಕ, ರಾಮಚಂದ್ರ ಸೌದೇಕರ, ಗಜಾನನ ಧೋರಿ, ಗೋವಿಂದ ಕಾಮತ, ಅನಂತನಾಯಿಕ ಮತ್ತು ಸಂಗಪ್ಪ ಶೆಟ್ಟಿ, ಇವರುಗಳಿಗೆ ೧೫ ರೂ. ದಂಡ, ಇಲ್ಲವೆ ೧ ತಿಂಗಳ ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿದೆ.

### ೧೨ ವರ್ಷದ ಹುಡುಗನಿಗೆ ೩ ತಿಂಗಳದ ಶಿಕ್ಷೆ

ಡೇರಾ ಇಸ್ಮಾಯಿಲ್‌ಖಾನದ ಟಾಟಾರಾಮ ಎಂಬ ಹೆಸರಿನ ೧೨ ವರ್ಷದ ಹುಡುಗನಿಗೆ ಮೆರವಣಿಗೆಯಲ್ಲಿ ಭಾಗತೆಗೆದುಕೊಂಡಿದ್ದುದಕ್ಕಾಗಿ ೩ ತಿಂಗಳದ ಶಿಕ್ಷೆಯು ವಿಧಿಸಲ್ಪಟ್ಟಿದೆ.

### ಹುಬ್ಬಳ್ಳಿಯಲ್ಲಿ ಟಕಲಿಯ ಮೆರವಣಿಗೆ

ಮುಂದಿನ ವಾರದಲ್ಲಿ ಅನುಕೂಲವಾಗುವ ದಿವಸ ಹುಬ್ಬಳ್ಳಿಯ ಕಾಂಗ್ರೆಸ್ ಕಮಿಟಿಯವರು ಒಂದು ದೊಡ್ಡದಾದ ಟಕಲಿಗಳ ಮೆರವಣಿಗೆಯನ್ನು ಹೊರಡಿಸುವವರಿದ್ದು, ಈ ಬಗ್ಗೆ ನಾಗರಿಕರಿಗೆ ಸಿದ್ಧರಾಗಿರಲು ಕೇಳಿಕೊಂಡಿದ್ದಾರೆ,

### ಜೇಲಿನಲ್ಲಿಯೇ ಮೆರವಣಿಗೆ

ಪಾಟಣಾದ ಶ್ರೀಮತಿ ಸರಸ್ವತಿದೇವಿ ಹಾಗು ಇನ್ನಿತರ ಸ್ವಯಂಸೇವಿಕೆಯರನ್ನು ಅಲ್ಲಿಯ ಅಧಿಕಾರಿಗಳು ಸೆರೆಹಿಡಿದುಕೊಂಡು ಪಾಟಣಾ ತುರಂಗಕ್ಕೆ ಒಯ್ದರು. ಈ ಸುದ್ದಿಯನ್ನು ತುರಂಗದಲ್ಲಿದ್ದ ಕೈದಿಗಳು ಕೇಳಿ ಅವರ ಸನ್ಮಾನಾರ್ಥವಾಗಿ ಅಲ್ಲಿಯೇ ಒಂದು ಮೆರವಣಿಗೆಯನ್ನು ಹೊರಡಿಸಿ ಅವರ ಸ್ವಾಗತ ಮಾಡಿದರು.

# ನ ಗ ರ ಸ ಭೆ ಯ

## ಮೇಲೆ

## ನಾಡಗುಡಿಯು ನಿಲ್ಲಲಿಕ್ಕೇ ಬೇಕು.

ಬಾಗಲಕೋಟೆಯ ನಗರ ಸಭೆಯ ಕಟ್ಟಡದ ಮೇಲೆ ರಾಷ್ಟ್ರ ಧ್ವಜವನ್ನು ಹಚ್ಚತಕ್ಕದ್ದೆಂಬ ವಿಷಯವು ನಗರಸಭೆಯ ಮುಂದೆ ಬರುವ ವಿಷಯಗಳಲ್ಲಿ ನಿರ್ಧಡೆಯಾಗಿ ಎಷ್ಟೋ ದಿವಸಗಳು ಕಳೆದುಹೋದವು. ನಗರ ಸಭೆಯುವರು ಆ ವಿಷಯವನ್ನು ತೆಗೆದುಕೊಂಡು ಏನೊಂದು ನಿರ್ಣಯ ಕೊಡದೆ ಅದನ್ನು ಮುಂದಕ್ಕೆ ಒಗೆಯುತ್ತಿದರು. ಇದನ್ನು ಕಂಡು ಬಾಗಲಕೋಟೆಯ ಸ್ತ್ರೀ ಪುರುಷರು ತಾ|| ೩-೬-೩೦ ನೆಯ ದಿವಸ ರಾಷ್ಟ್ರಧ್ವಜ ಸಹಿತವಾಗಿ ಒಂದು ಪ್ರಚಂಡ ಮೆರವಣಿಗೆಯನ್ನು ಹೊರಡಿಸಿ ಊರಲ್ಲೆಲ್ಲ ಹಾಯ್ದು ಅಂದು ನಗರ ಸಭೆಯ ಮುಂದೆ ಹೋಗಿ ನಿಂತುಕೊಂಡರು. ಅಂದು ನಗರಸಭೆಯ ಸಾಧಾರಣ ಸಭೆಯು ಸೇರತಕ್ಕದ್ದಿತ್ತು. ಸ್ತ್ರೀಪುರುಷರ ಪ್ರಚಂಡ ಸಮುದಾಯವನ್ನು ಕಂಡು ನಗರ ಸಭೆಯ ಸಭಾಸದರು ಬೆದರಿಯೋ ಏನೋ ಬಾದಶಹರ ಹುಟ್ಟಿದ ದಿನದ ನೆವತೋರಿ ಅಂದಿನ ಸಭೆಯನ್ನು ಮುಂದಕ್ಕೆ ಹಾಕಿದರು. ಮುಂದಿನ ಸಭೆಯಲ್ಲಿ ಈ ವಿಷಯವನ್ನು ತೆಗೆದುಕೊಂಡು ನಿರ್ಣಯವನ್ನು ಕೊಡುವದರಲ್ಲಿ ಬರುವದೆಂದು ನಗರ ಸಭೆಯ ಸಭಾಸದರಾದ ಶ್ರೀ. ಮುರಿಗೆಪ್ಪನವರ ಕಡೆಯಿಂದ ನುಡಿಸಿದರು. ಶ್ರೀ. ಜೋರಾಪುರರು ಆಶ್ವಾಸನಕ್ಕಾಗಿ ಅವರನ್ನು ಅಭಿನಂದಿಸಿದರು. ಜನರು ಅವರು ಕೊಟ್ಟ ಆಶ್ವಾಸನವನ್ನು ನಂಬಿ ಜಯಜಯಕಾರ ಮಾಡುತ್ತ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು. ಇತ್ತ ಸಭಾಸದರೂ ಸಭೆಯನ್ನು ೧೯ ನೇ ತಾ|| ನ ವರೆಗೆ ಮುಂದರಿಸಿದರು. ಇದಿಷ್ಟು ೩ ನೆಯ ತಾ|| ನ ದಿವಸ ನಡೆದದ್ದಾಯಿತು.

“ಸಭಾಸದರಾದ ಶ್ರೀ. ಮುರಿಗೆಪ್ಪನವರು ಆಶ್ವಾಸನವನ್ನು ಕೊಟ್ಟಿದ್ದಾರೆ. ಅವರು ಕಟ್ಟರ ರಾಷ್ಟ್ರೀಯ ವ್ಯಕ್ತಿಯವರು. ತಾವು ನುಡಿದದ್ದನ್ನು ಅವರು ಹುಸಿ ಹೋಗಗೊಡುವದಿಲ್ಲ. ತಾ|| ೧೯ ನೆಯ ದಿವಸ ನಗರ ಸಭೆಯ ಮೇಲೆ ರಾಷ್ಟ್ರಧ್ವಜವು ಏರೇ ಏರುವದು” ಎಂದು ಬಾಗಲಕೋಟೆಯ ನಾಗರಿಕರೆಲ್ಲರೂ ತಿಳಿದುಕೊಂಡು, ತಾ|| ೧೯ ನೆಯ ದಿನವು ಎಂದು ಬರುವದೋ, ಕಟ್ಟಡದ ಮೇಲೆ ರಾಷ್ಟ್ರಧ್ವಜವು ಕಂಗೊಳಿಸುತ್ತಿರುವದನ್ನು ಎಂದು ನೋಡುವೆವೋ ಎಂದು ಉತ್ಸಾಹವನ್ನು ತಾಳಿ ಮನದಲ್ಲಿಯೇ ಉಬ್ಬುತ್ತ ಕುಳಿತುಕೊಂಡಿದ್ದರು. ೧೯ ನೆಯ ತಾರೀಖು ಬರುವಂತೆಯೇ ಬಂದಿತು. ಪ್ರಸಿದ್ಧ ಮುಂದಾಳುಗಳಲ್ಲೊಬ್ಬರಾದ ಶ್ರೀ. ಕೌಜಲಗಿ ಶ್ರೀನಿವಾಸರಾಯರು ನಗರಸಭೆಯ ಸಭಾಸದರೊಡನೆ ಈ ಸಂಬಂಧವಾಗಿ ಚರ್ಚಿಸುವವರು. ಸತ್ಯಾಗ್ರಹ ಮೊದಲಾದವುಗಳನ್ನು ಹೂಡಬೇಡರೆಂದು ಸ್ಥಳಿಕರಿಗೆ ಕೇಳಿಕೊಂಡಿದ್ದರು. ಹಿರಿಯರ ಆಜ್ಞೆಗೆ ಮನ್ನಣೆಯನ್ನಿತ್ತು, ಸತ್ಯಾಗ್ರಹಿಗಳು ಅಂದು ಯಾವದೇ ತರದ ಮೆರವಣಿಗೆ ಮೊದಲಾದವುಗಳನ್ನು ತೆಗೆಯಲಿಲ್ಲ. ಶ್ರೀ. ಶ್ರೀನಿವಾಸರಾಯರು ಸಭಾಸದರೊಡನೆ ೨ ದಿನಗಳ ವರೆಗೆ ಚರ್ಚಿಸಿದರು. ಚರ್ಚೆಯ ಫಲವು ಮಾತ್ರ ಹಗ್ಗ ಹರಿಯಲಿಲ್ಲ ಕೋಲು ಮುರಿಯಲಿಲ್ಲವೆಂಬಂತಾಯಿತು. ಚರ್ಚೆಯಲ್ಲಿ ಏನೇನು ನಡೆಯಿತೋ ತಿಳಿದು ಬರಲಿಲ್ಲ. ಸಭಾಸದರು ತಾ|| ೧೯ ನೆಯ ದಿವಸ ಸಭೆಯಲ್ಲಿ ಸೇರಿದರು. ನಗರ ಸಭೆಯ ಮುಂಬಾಗಿಲವನ್ನು ಇಕ್ಕಿಕೊಂಡು, ಅಲ್ಲೊಬ್ಬ ಆಳನ್ನಿಟ್ಟು ಒಳಗೆ ಯಾರನ್ನೂ ಬಿಡದೆ ಸಭೆಯ ಕಾರ್ಯವನ್ನು ಸಾಗಿಸಿದರು. ಅಂದಿನ ಸಭೆಯಲ್ಲಿಯೂ ಈ ವಿಷಯವನ್ನು ತೆಗೆದುಕೊಳ್ಳಲಿಲ್ಲ. ಮನದಲ್ಲಿಯೇ ಉಬ್ಬುತ್ತ ಕುಳಿತ ನಾಗರಿಕರು ಅತ್ಯಂತ ನಿರಾಶೆ ಹೊಂದಿದರು. ಶ್ರೀಯುತ ಮುರಿಗೆಪ್ಪನವರು ನುಡಿದ ವಚನವು ಬ್ರಿಟಿಶರ ವಚನದಂತೆ ಕೃತಿಯಲ್ಲಿ ಬಾರದೆ ಹೋಯಿತು. ಇದಿಷ್ಟು ೧೯ ನೇ ತಾ|| ನ ಕತೆ.

ಬಾಗಲಕೋಟೆಯ ನಗರ ಸಭೆಯ ಕಟ್ಟಡವು ನಾಗರಿಕರ ಹಣದಿಂದ ಕಟ್ಟಲ್ಪಟ್ಟ ಕಟ್ಟಡವಾಗಿದೆ. ನಾಗರಿಕರಿಗಾಗಿ ನಗರ ಸಭೆ ಇರುವದಲ್ಲದೆ ನಗರ ಸಭೆಗಾಗಿ ನಾಗರಿಕರಿಲ್ಲ. ಆದುದರಿಂದ ನಾಗರಿಕರ ಮನದಿಚ್ಛೆಯನ್ನು ತಿಳಿದುಕೊಂಡು ಅವುಗಳನ್ನು ಆಚರಿಸುವದು ನಗರ ಸಭೆಯವರಿಗೆ ಬಿಡಲಾರದ ಕರ್ತವ್ಯವಾಗಿತ್ತು. ನಗರ ಸಭೆಯ ಮೇಲೆ ರಾಷ್ಟ್ರಧ್ವಜವು ಬೇಕೆಂದು ನಾಗರಿಕರು ಬೇಡುತ್ತಿರುವಲ್ಲಿ ಅತ್ತ ಲಕ್ಷ್ಯಕೊಟ್ಟು ರಾಷ್ಟ್ರಧ್ವಜವನ್ನು ಹಚ್ಚಿದ್ದರೆ ಬಾಗಲಕೋಟೆಯ ನಗರ ಸಭೆಗೆ ಭೂಷಣವು ಬರುತ್ತಿತ್ತು. ಇದಿಷ್ಟು ಮಾಡಿದ್ದರೆ ನಗರಸಭೆಯವರು ತಮ್ಮ ಕರ್ತವ್ಯವನ್ನು ಮಾಡಿದಂತಾಗುತ್ತಿತ್ತು. ಆದರೆ ಅದೆಲ್ಲವನ್ನು ಈಗ ಹೇಳಿಯೇನು ಫಲ! ಅವರಂತೂ ತಮ್ಮ ಕರ್ತವ್ಯವನ್ನು ಮಾಡಲಿಲ್ಲ. ಇನ್ನು ಮುಂದೆ ಮಾಡುವರೆಂದು ನಾಗರಿಕರು ಅವರ ಮೇಲೆ ಅವಲಂಬಿಸಿಕೊಂಡು ಕೂಡುವದು ಈಗಿನ ಸ್ವಾತಂತ್ರ್ಯ ಯುಗದಲ್ಲಿ ಭೂಷಣವಾಗಿರುವದಿಲ್ಲ. ನಾಗರಿಕರು ಈಗ ಎಚ್ಚತ್ತು ನಗರಸಭೆಯವರು ರಾಷ್ಟ್ರಧ್ವಜದ ವಿಷಯವಾಗಿ ತೋರುತ್ತಿರುವ ಧೋರಣದ ಬಗ್ಗೆ ನಿಷೇಧವನ್ನು ವ್ಯಕ್ತಪಡಿಸಬೇಕು. ನಗರ ಸಭೆಯ ಮೇಲೆ ರಾಷ್ಟ್ರಧ್ವಜವು ನಿಲ್ಲದಿದ್ದಲ್ಲಿ ತಮಗೆ ಸಮಾಧಾನವಿಲ್ಲವೆಂದೂ, ಆದುದರಿಂದ ಅದನ್ನು ನಗರ ಸಭೆಯ ಮೇಲೆ ಹಚ್ಚಬೇಕೆಂದೂ, ಹಚ್ಚದಿದ್ದಲ್ಲಿ ಅದು ಅಲ್ಲಿ ನಿಲ್ಲುವಂತೆ ಮಾಡಲು ಇಂತಿಂತಹ ಉಪಾಯಗಳನ್ನು ಕೈಕೊಳ್ಳುವದರಲ್ಲಿ ಬರುವದೆಂದೂ, ಮತದಾರರು ನಗರ ರಕ್ಷಕರಿಗೆ ಎಚ್ಚರಿಕೆಯನ್ನು ಕೊಡಬೇಕು. ಇದೀಗ ಸುಮ್ಮನೆ ಕೂಡುವ ಸಮಯವಲ್ಲ. ಹುಬ್ಬಳ್ಳಿ, ಗದಗ, ಸವದತ್ತಿ ಮೊದಲಾದ ಪಟ್ಟಣಗಳ ನಾಗರಿಕರು ಈ ವಿಷಯದಲ್ಲಿ ನಮ್ಮಗಿಂತ ಎಷ್ಟೋ ಮುಂದಕ್ಕೆ ಹೋಗಿರುವರು. ಬಾಗಲಕೋಟೆಯ ನಾಗರಿಕರೇ ಇದಕ್ಕೆ ನಿಮ್ಮ ಉತ್ತರವೇನು? ಬಾಗಲಕೋಟೆಗೆ ಬಾಂಗಡಿ ಕೋಟೆಯೆಂದು ಹೆಸರನ್ನು ಮಾತ್ರ ಮತ್ತೆ ತರಿಸಬೇಡಿರಿ!

—ಓರ್ವ ಮತದಾರ

ಈ ಪತ್ರಿಕೆಯು ಒಳವಂತ ಅಣ್ಣಾರಾವ ಮಂಜುನಾಥರಾವ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಯಂತ್ರಾಲಯದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭. ನಿತ್ಯಸಂಚಿಕೆಯು. ಬೆಲೆ ೦—೦—೩

ಅಬಲಾ ದುರ್ಬಲ ದುಃಖ । ಅಬಲಾನವಲಂ ಭ್ರಷ್ಟ ॥ — ಮನು
ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮುದಾರ.
ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಗುರುವಾರ ಮಿತಿ ಆಷಾಢ ಶುದ್ಧ ೮ ಶಕೆ ೧೮೫೨ ತಾ॥ ೩—೭—೩೦ [ ಸಂಚಿಕೆ ೯೦

## ಪಂಡಿತ ಮೋತೀಲಾಲರಿಗೂ ಹಾಗೂ ಡಾ॥ ಸಯ್ಯದ ಮಹಮ್ಮದರಿಗೂ ೬ ತಿಂಗಳ ಸಾದಾ ಶಿಕ್ಷೆ.

ಸರದಾರ

# ವಲ್ಲಭಭಾಯಿಯವರಿಗೆ ಅಧ್ಯಕ್ಷಪದ.

## ಮೌಲಾನಾ ಅಬ್ದುಲ್ ಕಲಮ ಅಝಾದರು ಸೆರೆಮನೆಗೆ ತೆರಳಿದರು!

ಕಾಂಗ್ರೆಸ ವರ್ಕಿಂಗ ಕಮಿಟಿಯ ಅಧ್ಯಕ್ಷರಾದ ಪಂಡಿತ ಮೋತೀಲಾಲ ನೆಹರು ಹಾಗು ಕಾರ್ಯದರ್ಶಿಗಳಾದ ಡಾ॥ ಸಯ್ಯದ ಮಹಮ್ಮದರು ೧೧೭ ನೇ ಕಲಮಿನನ್ವಯ ತಾ॥ ೩೦ ನೆಯ ದಿವಸ ಸೆರೆಹಿಡಿಯಲ್ಪಟ್ಟು ನೈನಿತಾಲ ತುರಂಗಕ್ಕೆ ಒಯ್ಯಲ್ಪಟ್ಟಿದ್ದರು. ಕಾಯಿದೆಗೆ ವಿರುದ್ಧವಾದ ಸಂಘವಾದ ರಾಷ್ಟ್ರ ಸಭೆಯ ಕಾರ್ಯಕಾರೀ ಮಂಡಳದ ಸಭಾಸದರಾಗಿದ್ದುಕೊಂಡು ೧೨ ನೆಯ ತಾ॥ ಗೆ ಸೇರಿದ ಕಾರ್ಯಕಾರೀ ಮಂಡಳದ ಸಭೆಯಲ್ಲಿ ಗೊತ್ತುಗಳನ್ನು ನಿರ್ಧರಿಸಿಕೊಂಡು ಹಾಗು ಅವುಗಳನ್ನು ಪ್ರಸಿದ್ಧಿಸಿ ವ್ಹಾಯಿಸರಾಯರು ಹೊರಡಿಸಿದ ಮೂರೂ ಶಾಸನಗಳನ್ನು ಮುರಿದುದಕ್ಕಾಗಿ ಅಲ್ಲಿ ಅವರಿಗೆ ೬ ತಿಂಗಳ ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿತು

ಕಾಂಗ್ರೆಸ ವರ್ಕಿಂಗ ಕಮಿಟಿಯ ಸಭಾಸದರಾದ ಮೌಲಾನಾ ಅಬ್ದುಲ್ ಕಲಮ ಅಝಾದರು ಪಾಟಣಾದಲ್ಲಿ ಸೆರೆ ಹಿಡಿಯಲ್ಪಟ್ಟಿರುವರಾಗಿ ತಿಳಿಯುತ್ತದೆ.

ಪಂಡಿತ ಮೋತೀಲಾಲರು ತಮ್ಮ ಸ್ಥಳದಲ್ಲಿ ಸರದಾರ ವಲ್ಲಭಭಾಯಿಯವರನ್ನು ತಾತ್ಪೂರ್ತಿಕವಾಗಿ ಕಾಂಗ್ರೆಸದ ಅಧ್ಯಕ್ಷರನ್ನಾಗಿ ನಿಯಮಿಸಿದ್ದಾರೆ.

---

### ಬೆಳಗಾವಿ ಜಿಲ್ಹೆಯಲ್ಲಿ ಮದ್ಯಪಾನ

## ನಿಷೇಧದ ಚಳವಳಿಯು

### ೬ ಜನರಿಗೆ ೧ ತಿಂಗಳ ಸಾದಾ ಶಿಕ್ಷೆ

ಸೇಂದೀ ಅಂಗಡಿಗಳ ಮೇಲೆ ಪಿಕೆಟಿಂಗ ಮಾಡಿದುದಕ್ಕಾಗಿ ಸೆರೆ ಹಿಡಿಯಲ್ಪಟ್ಟ ನಂದಗಡದ ಶ್ರೀ ಕೃಷ್ಣಾಜಿ ನಾಯಿಕ, ರಾಮಚಂದ್ರ ಸೌದೇಕರ, ಗಜಾನನ ಧೋರಿ, ಗೋವಿಂದ ಕಾಮತ, ಅನಂತನಾರಾಯಣ ಮತ್ತು ಸಂಗಪ್ಪ ಶೆಟ್ಟಿ, ಇವರುಗಳಿಗೆ ೧೫ ರು. ದಂಡ, ಇಲ್ಲವೆ ೧ ತಿಂಗಳ ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿದೆ.

### ೧೨ ವರ್ಷದ ಹುಡುಗನಿಗೆ ೩ ತಿಂಗಳದ ಶಿಕ್ಷೆ

ಡೇರಾ ಇಸ್ಮಾಯಿಲ್ ಖಾನದ ಟಾಟಾರಾಮ ಎಂಬ ಹೆಸರಿನ ೧೨ ವರ್ಷದ ಹುಡುಗನಿಗೆ ಮೆರವಣಿಗೆಯಲ್ಲಿ ಭಾಗವಹಿಸಿಕೊಂಡಿದ್ದುದಕ್ಕಾಗಿ ೩ ತಿಂಗಳದ ಶಿಕ್ಷೆಯು ವಿಧಿಸಲ್ಪಟ್ಟಿದೆ.

### ಹುಬ್ಬಳ್ಳಿಯಲ್ಲಿ ಟಕಲಿಯ ಮೆರವಣಿಗೆ

ಮುಂದಿನ ವಾರದಲ್ಲಿ ಅನುಕೂಲವಾಗುವ ದಿವಸ ಹುಬ್ಬಳ್ಳಿಯ ಕಾಂಗ್ರೆಸ್ ಕಮಿಟಿಯವರು ಒಂದು ದೊಡ್ಡದಾದ ಟಕಲಿಗಳ ಮೆರವಣಿಗೆಯನ್ನು ಹೊರಡಿಸುವವರಿದ್ದು, ಈ ಬಗ್ಗೆ ನಾಗರಿಕರಿಗೆ ಸಿದ್ಧರಾಗಿರಲು ಕೇಳಿಕೊಂಡಿದ್ದಾರೆ,

### ಜೇಲಿನಲ್ಲಿಯೇ ಮೆರವಣಿಗೆ

ಪಾಟಣಾದ ಶ್ರೀಮತಿ ಸರಸ್ವತಿದೇವಿ ಹಾಗು ಇನ್ನಿತರ ಸ್ವಯಂಸೇವಿಕೆಯರನ್ನು ಅಲ್ಲಿಯ ಅಧಿಕಾರಿಗಳು ಸೆರೆ ಹಿಡಿದು ಕೊಂಡು ಪಾಟಣಾ ತುರಂಗಕ್ಕೆ ಒಯ್ದರು. ಈ ಸುದ್ದಿಯನ್ನು ತುರಂಗದಲ್ಲಿದ್ದ ಕೈದಿಗಳು ಕೇಳಿ ಅವರ ಸನ್ಮಾನಾರ್ಥವಾಗಿ ಅಲ್ಲಿಯೇ ಒಂದು ಮೆರವಣಿಗೆಯನ್ನು ಹೊರಡಿಸಿ ಅವರ ಸ್ವಾಗತ ಮಾಡಿದರು.

## ಬೆಳಗಾವಿ ಜಿಲ್ಲೆಯಲ್ಲಿ

# ಭಯಂಕರ ದಬ್ಬಾಳಿಕೆ

## ೧೬ ವರ್ಷದ ಮೂವರು ಹುಡುಗರಿಗೆ ೨ ತಿಂಗಳ ಕಠಿಣ ಶಿಕ್ಷೆ

ಕಂತಿರು ವಾರ್ತೆ ತಾ|| ೧.

ಪಿಕೆಟಿಂಗವು ಎಂದಿನಂತೆಯೇ ಮತ್ತೆ ಪ್ರಾರಂಭವಾಯಿತು. ೬ ಜನರನ್ನು ಹಿಡಿದು ಅವರಲ್ಲಿ ೫ ಜನರನ್ನು ಬಿಟ್ಟು ಬಿಟ್ಟರು. ಅಂಚೆಯ ಸಿಪಾಯಿಯ ಉದ್ಯೋಗಕ್ಕೆ ಶರಣು ಹೊಡೆದ ಶ್ರೀ ಕುರುಹಟ್ಟಿ ಮತ್ತು ಶ್ರೀ ನಿಂಬಾಳಕರರಿಗೆ ೨ ವಾರಗಳ ಶಿಕ್ಷೆಯಾಗಿದೆ.

ಪಂಡಿತ ಮೋತೀಲಾಲ ನೆಹರೂರವರನ್ನು ಸೆರೆ ಹಿಡಿದ ಹಾಗು ಕಾಂಗ್ರೆಸ್ ವರ್ಕಿಂಗ ಕಮೀಟಿಯನ್ನು ಕಾಯಿದೆಗೆ ವಿರುದ್ಧವಾದ ಸಂಘವೆಂದು ಸಾರಿದ ಸುದ್ದಿಯು ಬಂದು ಇಲ್ಲಿಗೆ ತಿಳಿದ ಕೂಡಲೆ ಯಶಸ್ವಿಯಾದ ಹರತಾಳವು ಆಚರಿಸಲ್ಪಟ್ಟಿತು. ದೊಡ್ಡ ಮೆರವಣಿಗೆಯು ತೆಗೆಯಲ್ಪಟ್ಟಿತ್ತು. ವಕೀಲರ ಸಂಘದವರು ಸಭೆ ಸೇರಿಸಿಕೊಂಡು ಸರಕಾರದ ದಬ್ಬಾಳಿಕೆಯ ವೃತ್ತಿಯನ್ನು ನಿಷೇಧಿಸಿದರು. ಮತ್ತು ಇಂದಿನ ಕಾರ್ಯಕ್ರಮದಲ್ಲಿ ಸೇರತಕ್ಕದ್ದೆಂದು ಗೊತ್ತುಪಡಿಸಿಕೊಂಡರು. ಮೆರವಣಿಗೆಯಲ್ಲಿ ಶ್ರೀ ಬೆಳವಿ, ಜೋಶಿ ಮೊದಲಾದ ಮುಂದಾಳುಗಳೂ, ಪ್ರಸಿದ್ಧ ವ್ಯಾಪಾರಸ್ಥರೂ ಸೇರಿದ್ದರು. ಮೆರವಣಿಗೆಯು ೨ ತಾಸುಗಳ ವರೆಗೆ ಊರಲ್ಲಿ ಸಂಚರಿಸಿ ಬಂತು. ಸಂಜೆಯಲ್ಲಿ ಶ್ರೀ ಬೆಳವಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಸಭೆಯಲ್ಲಿ ಪಂಡಿತ ಮೋತಿಲಾಲ ಮತ್ತು ಡಾ. ಸಯ್ಯದ ಮಹಮ್ಮದರನ್ನು ಅಭಿನಂದಿಸುವದರಲ್ಲಿ ಬಂದಿದ್ದಲ್ಲದೆ, ಸ್ವರಾಜ್ಯವನ್ನು ಪಡೆಯುವ ವರೆಗೆ ಸಮರವನ್ನು ಹಾಗೆಯೇ ಸಾಗಿಸಬೇಕೆಂಬುದಾಗಿ ನಿರ್ಣಯಿಸಲ್ಪಟ್ಟಿತು. ಕಾಂಗ್ರೆಸ ವರ್ಕಿಂಗ ಕಮೀಟಿಯು ಕಾಯಿದೆಗೆ ವಿರುದ್ಧವಾದ ಸಂಘವೆಂದು ಸಾರಲ್ಪಟ್ಟಿದ್ದರೂ ಸಹ, ರಾಷ್ಟ್ರೀಯ ಕಾರ್ಯಕ್ರಮಗಳು ಮೊದಲಿನಂತೆಯೇ ಜರುಗಿಸಲ್ಪಡುವವಾಗಿ ಶ್ರೀ ಬೆಳವಿಯವರು ಭಾಷಣ ಮಾಡಿದರು.

(ಕಂತಿಸ. ವಾರ್ತೆ ತಾ|| ೨)

ಬೆಳಗಾವಿಯ ಕೋಟೆಯ ಬಳಿಯಲ್ಲಿಯ ಒಂದೇ ಒಂದು ಸಿಂದೀ ಗಿಡವನ್ನು ಕಡಿದದಕ್ಕಾಗಿ ಸೆರೆಹಿಡಿಯಲ್ಪಟ್ಟ ೧೬ ವರ್ಷದವರಾದ ವಸಂತ ಯಾಳಗಿ, ವೆಂಕಟೇಶ ಕಾಮತ, ಮಹಾದೇವಪ್ಪ ಅನಗೋಳಕರ ಈ ಮೂವರು ತರುಣರಿಗೆ ೨ ತಿಂಗಳ ಸಕ್ತ ಶಿಕ್ಷೆಯು ಆಗಿದೆ. ೧೧ ವರ್ಷದವನಾದ ಗಜಾನನ ಯಾಳಗಿಯವರು ಬಿಡಲ್ಪಟ್ಟಿದ್ದಾರೆ. ಪಿಕೆಟಿಂಗವು ಎಂದಿನಂತೆ ಇಂದೆಯೂ ಪ್ರಾರಂಭಿಸಲ್ಪಟ್ಟಿದೆ. ಇಬ್ಬರು ಸೆರೆಯಾಳುಗಳಾಗಿದ್ದಾರೆ. ಸಂಘಗಾರ ಸ್ವಯಂಸೇವಕರ ಪಡೆ ಸೆರೆ ಮುಂತೆ ಹಾಕಲ್ಪಟ್ಟಿದೆ.

### ಮರಾಠಾ ವೀರನಿಗಾಗಿ

೧೨ ಜನ ತರುಣರು ರಕ್ತಕೊಡಲು ಸಿದ್ಧರಾದರು.

ತಾ|| ೨೮ ನೆಯ ದಿವಸ ಮುಂಬಯಿಯ ಅಧಿಕಾರಿಗಳ ದೊಣ್ಣೆಗಳಿಗೆ ಧೈರ್ಯದಿಂದ ತಲೆಯೊಡ್ಡಿ ಪೆಟ್ಟುಗಳನ್ನು ಸ್ವೀಕರಿಸಿ ಕಾಂಗ್ರೆಸ ದವಾಖಾನೆಯಲ್ಲಿ ಆರೈಕೆಯನ್ನು ಹೊಂದುತ್ತಿರುವ ಧರ್ಮಖಾನ ಎಂಬ ಹೆಸರಿನ ಮರಾಠಾ ಸತ್ಯಾಗ್ರಹಿಯು ಈಗ ಅತ್ಯಂತ ಕಠಿಣಾವಸ್ಥೆಯಲ್ಲಿರುತ್ತಾನೆ. ತಾ|| ೨೯ ನೆಯ ದಿವಸ ಡಾಕ್ಟರರು ಅವನ ಸ್ಥಿತಿಯನ್ನು ಪರೀಕ್ಷಿಸಿ, ಮನುಷ್ಯರ ರಕ್ತವನ್ನು ದೇಹದಲ್ಲಿ ಚುಚ್ಚಿ ಹಾಕಿದರೆ ಅವನು ಉಳಿಯಬಹುದೆಂದು ಹೇಳಿದರು. ಅದನ್ನು ಕೇಳಿ ಅಲ್ಲಿಯೇ ನಿಂತ ಸುಮಾರು ೧೨ ಜನ ಸ್ವಯಂಸೇವಕರೂ, ಓರ್ವ ಸ್ವಯಂಸೇವಿಕೆಯೂ ಮುಂದಕ್ಕೆ ಹೋಗಿ ತಮ್ಮ ದೇಹದೊಳಗಿಂದ ರಕ್ತವನ್ನು ತೆಗೆದುಕೊಳ್ಳಲು ಡಾಕ್ಟರರನ್ನು ಕೇಳಿಕೊಂಡರು. ಡಾಕ್ಟರರು ಅವರಲ್ಲಿ ಭರುಚಾ, ಚಿಮನಲಾಲ ಗಾಂಧಿ, ಮತ್ತು ಜೀವಾಜಿ ಕಾಪಸೆಕರ ಈ ಮೂವರನ್ನು ಆರಿಸಿಕೊಂಡು ಅವರ ದೇಹದೊಳಗಿಂದ ರಕ್ತವನ್ನು ತೆಗೆದು ಆ ಮರಾಠಾ ಸತ್ಯಾಗ್ರಹಿಯ ದೇಹದಲ್ಲಿ ಚುಚ್ಚಿ ಹಾಕಿದರು.

### ಮಲಗಿದವಳನ್ನು ಎಬ್ಬಿಸಿ ಶಿಕ್ಷೆ ಕೊಟ್ಟರು

ಮದ್ರಾಸ ಇಲಾಖೆಯ ಒರತನಾಡುವಿನ ಶ್ರೀಮತಿ ಜಯಂತಿ ಸೂರಮ್ಮನವರನ್ನು, ಅವರು ರಾತ್ರಿ ಮಲಗಿರುವಾಗ ಸುಮಾರು ೧೧ ಗಂಟೆಗೆ ಸೆರೆ ಹಿಡಿದು, ಆಗಿಂದಾಗ್ಗೆ ಖಟ್ಲೆಯನ್ನು ಮುಗಿಸಿ ಅಧಿಕಾರಿಗಳು ಅವರಿಗೆ ೬ ತಿಂಗಳ ಶಿಕ್ಷೆಯನ್ನು ವಿಧಿಸಿದರು.

### ಮುಸಲ್ಮಾನರಾರೂ

### ದುಂಡು ಮೇಜಿನ ಪರಿಷತ್ತಿಗೆ ಹೋಗಕೂಡದು

ಲಖನೌದ ಮುಸಲ್ಮಾನರು ಸಾರ್ವಜನಿಕ ಸಭೆಯನ್ನು ಸೇರಿಸಿಕೊಂಡು ಸಾಯಮನ್ ವರದಿಯನ್ನು ಧಿಕ್ಕಾರ ಮಾಡಿದ್ದಲ್ಲದೆ, ವಸಾಹತಿ ಸ್ವರಾಜ್ಯದ ಸಂಬಂಧವಾಗಿ ವಚನವು ಸಿಗುವವರೆಗೆ ಮುಸಲ್ಮಾನರಾರೂ ದುಂಡು ಮೇಜಿನ ಪರಿಷತ್ತಿಗೆ ಹೋಗಕೂಡದೆಂದು ನಿರ್ಧರಿಸಿಕೊಂಡಿದ್ದಾರೆ.

### ಧಾರವಾಡದ ಪೋಲೀಸರು ಗುಜರಾಥಕ್ಕೆ ಹೋದರು

ಪಿಕೆಟಿಂಗದ ವಿರುದ್ಧವಾಗಿ ವ್ಹಾಯಿಸರಾಯರು ಹೊರಡಿಸಿದ ಕಾನೂನನ್ನು ಸತ್ಯಾಗ್ರಹಿಗಳು ಮುರಿಯುತ್ತಿರುವದರಿಂದ ಉಂಟಾಗುವ ಪರಿಸ್ಥಿತಿಯನ್ನು ಎದುರಿಸುವದಕ್ಕಾಗಿ ಅಲ್ಲಿಯ ಅಧಿಕಾರಿಗಳು ಧಾರವಾಡದಿಂದ ೫೦ ಜನ ಪೋಲೀಸರನ್ನು ಕರೆಯಿಸಿಕೊಂಡಿದ್ದಾರೆ. ಇನ್ನೂ ೨೫೦ ಜನ ಪೋಲೀಸರು ಧಾರವಾಡದಿಂದ ಅಲ್ಲಿಗೆ ಹೋಗುವರಾಗಿ ತಿಳಿಯುತ್ತದೆ.

## ರಾಷ್ಟ್ರಸಭೆಯ ಕಾರ್ಯಕಾರೀ ಮಂಡಳದ ಮೇಲೆ

# ಬಂಡಾಯದ ಆರೋಪ!

ಹಿಂದ ಸ್ಥಾನ ಸರಕಾರದವರು ಕೆಳಗಿನಂತೆ ಒಂದು ಪತ್ರಿಕೆಯನ್ನು ಪ್ರಸಿದ್ಧಪಡಿಸಿದ್ದಾರೆ:—

ಕ್ರಿಮಿನಲ್ ಲಾ ಅಮೆಂಡಮೆಂಟ ಕಾಯಿದೆಯ ೧೬ ನೆಯ ಕಲಮಿನನ್ವಯ ಸಂಯುಕ್ತ ಪ್ರಾಂತ ಸರಕಾರದವರು ಹಿಂದುಸ್ಥಾನ ಸರಕಾರದ ಸಮ್ಮತಿಯಿಂದ ರಾಷ್ಟ್ರಸಭೆಯ ಕಾರ್ಯಕಾರೀ ಮಂಡಳವನ್ನು ಕಾಯಿದೆಗೆ ವಿರುದ್ಧವಾದ ಸಂಘವೆಂದು ನಿರ್ಣಯಿಸಿದ್ದಾರೆ. ವರ್ಕಿಂಗ ಕಮೀಟಿಯವರು ಈಗ ಒಂದು ತಿಂಗಳಿಂದ ನಡೆಯಿಸುತ್ತ ಬಂದ ಹಾದಿಯೇ ಇದಕ್ಕೆ ಮೂಲ ಕಾರಣವಾಗಿದೆ.

ವರ್ಕಿಂಗ ಕಮೀಟಿಯವರಿಂದ ನಡೆಸಲ್ಪಡುವ ಕಾಯಿದೆಭಂಗದ ಚಳವಳಿಯ ಉದ್ದೇಶವೆಂದರೆ, ಅಧಿಕಾರಿಗಳ ಕಾನೂನುಗಳನ್ನು ಮೀರಿಯಲು ಜನರನ್ನು ಹುರಿದುಂಬಿಸಿ ತಮ್ಮ ರಾಜಕೀಯ ಬೇಡಿಕೆಗಳನ್ನು ಸಫಲಗೊಳಿಸುವಂತೆ ಸರಕಾರಕ್ಕೆ ಒತ್ತಾಯಪಡಿಸುವದೂ ಮತ್ತು ಸರಕಾರದ ಆಟವು ಸಾಗದಂತೆ ಮಾಡುವದೂ ಆಗಿದೆ. ಈ ಚಳವಳಿಯು ಉಪ್ಪಿನ ಕಾಯಿದೆ ಭಂಗದಿಂದ ಮೊದಲು ಪ್ರಾರಂಭವಾಯಿತು. ಮಹಾತ್ಮಾ ಗಾಂಧಿಯವರು ಸೆರೆಯಾಳಾದ ಕೂಡಲೆ ಕಾಯಿದೆಭಂಗದ ಚಳವಳಿಯನ್ನು ವರ್ಕಿಂಗ ಕಮೀಟಿಯವರು ತಮ್ಮ ಕೈಯಲ್ಲಿ ತೆಗೆದುಕೊಂಡು ಅದನ್ನು ಹೆಚ್ಚು ಹೆಚ್ಚು ಜೋರಿನಿಂದ ಸಾಗಿಸುತ್ತಿರುವರು. ಮೇ ತಿಂಗಳ ಮಧ್ಯದಲ್ಲಿ ಮಂಡಳದವರು ಕರನಿರಾಕರಣೆ ಬಹಿಷ್ಕಾರ, ಪಿಕೆಟಿಂಗ ಮೊದಲಾದವುಗಳ ಸಂಬಂಧವಾಗಿ ಗೊತ್ತುಗಳನ್ನು ಮಾಡಿಕೊಂಡು ಚಳವಳಿಗೆ ಉತ್ತೇಜನ ಕೊಟ್ಟರು. ಜೂನ ತಿಂಗಳಲ್ಲಿ ಮಂಡಳದವರು ಗೊತ್ತುಗಳನ್ನು ಮಾಡಿಕೊಂಡು ವ್ಹಾಯಿಸರಾಯರು ಹೊರಡಿಸಿದ ಕಾನೂನುಗಳನ್ನು ಮುರಿಯಲು ಮತ್ತೆ ಜನರಿಗೆ ಹೆಚ್ಚು ಉತ್ತೇಜನ ಕೊಟ್ಟರು. ಇದಲ್ಲದೆ ಮಂಡಳದವರು ಪೋಲೀಸರಿಗೂ ಸೈನಿಕರಿಗೂ ಕಾಯಿದೆಭಂಗವನ್ನು ಮಾಡುವವರ ಕೂಡ ವರ್ತಿಸುವಾಗ ಕರ್ತವ್ಯಚ್ಯುತರಾಗಿರೆಂದೂ ಹೇಳಿಕೊಂಡರು. ಈ ಗೊತ್ತಿನನುಸರಿಸಿ ಎಷ್ಟೋ ಕಾಂಗ್ರೆಸ ಸಂಸ್ಥೆಗಳು ದಂಗೆಯ ಆರೋಪದ ಶಿಕ್ಷೆಗೆ ಪಾತ್ರರಾದ ಗಡವಾಲಿ ಸೈನಿಕರಿಗಾಗಿ ಸಹಾನುಭೂತಿಯನ್ನು ತೋರಿಸಲು ಯುಕ್ತಿ ಮಾಡುತ್ತಿರುವರು. ವರ್ಕಿಂಗ ಕಮೀಟಿಯವರು ಬಂಡಾಯಕ್ಕೆ ಸಿದ್ಧರಾಗಿರುವರೆಂದು ಇದರಿಂದ ಸ್ಪಷ್ಟವಾಗುತ್ತದೆ.

ಬಂಗಾಲ ಪ್ರಾಂತದ ಮಿದನಾಪುರ ಜಿಲ್ಲೆಯಲ್ಲಿ ಮೊನ್ನೆ ಮೊನ್ನೆ ನಡೆದ ದೊಂಬಿಗಳು ಕಾಂಗ್ರೆಸದ ಸ್ವಯಂಸೇವಕರಿಂದ ಮಾಡಲ್ಪಟ್ಟವುಗಳಾಗಿದ್ದವು. ಮತ್ತು ಬ್ರಿಟಿಶ ರಾಜ್ಯವು ಕೊನೆಗೊಂಡಿದೆಯೆಂದು ಅಲ್ಲಿ ಸುದ್ದಿಯು ಹರಡಲ್ಪಟ್ಟಿತ್ತು. ಇಂಥ ಸ್ಥಿತಿಯಲ್ಲಿ ಅವನ್ನು ಕಾಯಿದೆಗೆ ವಿರುದ್ಧವಾದ ಸಂಘವೆಂದು ನಿರ್ಣಯಿಸಿದ ಹೊರತು ಸರಕಾರಕ್ಕೆ ಬೇರೆ ಉಪಾಯವೇ ಇರಲಿಲ್ಲ.

## ಮುಂಬಯಿಯಲ್ಲಿ ಬಹಿಷ್ಕಾರದ ವಾರ

ಎಲ್ಲೆಲ್ಲಿಯೂ ಬ್ರಿಟಿಶ ಸರಕುಗಳ ಬಹಿಷ್ಕಾರದ ಕೂಗು!

ಮುಂಬಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ನಿರ್ಣಯಿಸಿದಂತೆ ಮುಂಬಯಿಯಲ್ಲಿ ತಾ| ೩೦ ರಿಂದ ಬಹಿಷ್ಕಾರದ ವಾರವು ಪ್ರಾರಂಭವಾಗಿದೆ. ತಾ| ೩೦ ನೆಯ ಮುಂಜಾವಿನಲ್ಲಿ ೩೦ ಜನ ಸ್ವಯಂಸೇವಕರ ಬೇರೆ ಬೇರೆ ಗುಂಪುಗಳನ್ನು ಮಾಡಿ ೩೦೦ ಜನರನ್ನು ಬೇರೆ ಬೇರೆ ಭಾಗಗಳಿಗೆ ಕಳಿಸಿದರು. ಈ ಸ್ವಯಂಸೇವಕರು ಮನೆಮನೆಗೆ ಭೆಟ್ಟಿಯನ್ನು ಕೊಟ್ಟು ಬ್ರಿಟಿಶ ಸರಕುಗಳನ್ನು ಬಹಿಷ್ಕರಿಸಲು ಜನರನ್ನು ಕೇಳಿಕೊಂಡರು. ಸ್ವಯಂಸೇವಕರು ತಮ್ಮ ಹಾದಿಯಲ್ಲಿ ಹತ್ತುವ ಗಿಡ, ದೀಪದ ಕಂಬ, ಗೋಡೆ ಮೊದಲಾದವುಗಳ ಮೇಲೆ ಬಹಿಷ್ಕಾರದ ವಿಷಯವಾಗಿ ಬರೆಯಲ್ಪಟ್ಟ ಪತ್ರಿಕೆಗಳನ್ನು ಅಂಟಿಸುತ್ತ ನಡೆದಿದ್ದರು. ಸಂಜೆಯಲ್ಲಿ ತಕಲಿಯ ಮೇಲೆ ನೂಲುವ ಪದ್ಧತಿಯನ್ನು ಜನರ ನಿದರ್ಶನಕ್ಕೆ ತಂದುಕೊಡುವದಕ್ಕಾಗಿ ಒಂದು ತಕಲಿಯ ಪ್ರದರ್ಶನವು ತೆರೆಯಲ್ಪಟ್ಟಿತ್ತು. ಅಂದು ವಿದ್ಯಾರ್ಥಿಗಳು ಶಾಲೆಗಳಿಗೆ ಶರಣು ಹೊಡೆದು ಬಹಿಷ್ಕಾರದ ಕಾರ್ಯಕ್ರಮದಲ್ಲಿ ಭಾಗ ವಹಿಸಿದ್ದರು. ವಾನರ ಸೇನೆಯ ೫೦೦ ಬಾಲಕರು ಬ್ರಿಟಿಶ ಸರಕುಗಳನ್ನು ಬಹಿಷ್ಕರಿಸಿರಿ ಎಂದು ಕೂಗುತ್ತ ನಡೆದಿದ್ದರು. ಈ ಕಾರ್ಯಕ್ರಮದಲ್ಲಿ ಸಾವಿರಾರು ಕೂಲಿಯ ಜನರೂ ಭಾಗ ತೆಗೆದುಕೊಂಡಿದ್ದರು.

ಪ್ರತಿದಿನದಲ್ಲಿಯೂ ೫ ಲಕ್ಷಗಳ ವರೆಗೆ ಹಸ್ತಪತ್ರಿಕೆಗಳು ಹಂಚಲ್ಪಡುತ್ತಿದ್ದು, ಅವುಗಳಲ್ಲಿ ಬೋಧಪ್ರದವಾದ ಬೇರೆಬೇರೆ ವಿಷಯಗಳು ಬರೆಯಲ್ಪಟ್ಟಿರುತ್ತವೆ. ಬುಧವಾರದಿಂದ ಕಾಲೇಜದ ವಿದ್ಯಾರ್ಥಿಗಳು ಹಿಂದೀ ಸರಕುಗಳ ಮೇಲ್ಮೆಯನ್ನು ತೋರಿಸುವ ಕುರಿತು ಹಿಂದೀ ಸರಕುಗಳನ್ನು ಬೇರೆ ಬೇರೆ ಭಾಗಗಳಲ್ಲಿ ವ್ಯವಸ್ಥಿತರೂಪವಾಗಿ ಮಂಡಿಸಿ ಇಡುವವರಿದ್ದರು. ಇದೇ ವಾರದಲ್ಲಿ ಒಂದು ದಿವಸ ವ್ಯಾಪಾರಸ್ಥರು ತಮ್ಮಲ್ಲಿಯ ಹಿಂದೀ ಸರಕುಗಳನ್ನು ಮೋಟಾರುಗಳಲ್ಲಿ ತುಂಬಿಕೊಂಡು ಪ್ರಚಂಡವಾದ ಮೆರವಣಿಗೆಯಿಂದ ಬೇರೆ ಬೇರೆ ಭಾಗಗಳಲ್ಲಿ ಹೋಗುವವರಿದ್ದಾರೆ.

## ಸೊಲ್ಲಾಪುರದಲ್ಲಿ ದಂಡಿನಾಳಿಕೆಗೆ ಮುಕ್ತಾಯ

## ರಾಷ್ಟ್ರಧ್ವಜಗಳಿಗೆ ಅಡ್ಡಿ.

ಸೊಲ್ಲಾಪುರದಲ್ಲಿಯ ದಂಡಿನಾಳಿಕೆಯನ್ನು ತಾ|| ೧ ರಿಂದ ಅಧಿಕಾರಿಗಳು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ಕ್ರಿ. ಪ್ರೊ. ಕೋಡಿನ ೧೪೪ ನೆಯ ಕಲಮಿನ ಅನ್ವಯ ಅಲ್ಲಿಯ ಡಿ|| ಮ್ಯಾಜಿಸ್ಟ್ರೇಟರು ಸೊಲ್ಲಾಪುರದ ಹದ್ದಿಯಲ್ಲಿ ಎರಡು ತಿಂಗಳುಗಳ ವರೆಗೆ ರಾಷ್ಟ್ರಧ್ವಜವನ್ನು ಹಿಡಿದುಕೊಂಡು ಯಾರೂ ತಿರುಗಕೂಡದೆಂದು ಸಾರಿದ್ದಾರೆ.

## ಮೋತೀಲಾಲರ ಸಂದೇಶ.

"ಸಾಯಮನ್ ಸಮಿತಿಯ ವರದಿಯನ್ನು ಸುಡಬೇಕಾಗಿದ್ದಿಲ್ಲ. ಕೆಲವು ವರ್ಗಗಳನ್ನು ಕೆಳದವರನ್ನು ಸುಡುವ ಪದ್ಧತಿಯು ಮಾತ್ರ ಹಿಂದೂ ಜನರಲ್ಲಿ ಇರುವದಲ್ಲದೆ ತನ್ನ ತಾಯಿಯ ಹೊಟ್ಟೆಯಲ್ಲಿರುವಾಗಲೆ ಪ್ರಾಣಹೋಗಿ ಹೊರಬೀಳುವ ಶಿಶುವನ್ನು ಸುಡುವ ಪದ್ಧತಿಯು ಅವರಲ್ಲಿ ಇಲ್ಲ. ಕೆಲವರು ಅವುಗಳನ್ನು ಹುಗಿಯುವದುಂಟು, ಕೆಲವರು ಅವುಗಳನ್ನು ನದಿಗಳಲ್ಲಿ ಬಿಡುವದುಂಟು, ಸಾಯಮನ್ ವರದಿಯು ಸತ್ತುಹುಟ್ಟಿದೆ. ಆದುದರಿಂದ ಅದನ್ನು ಇಲ್ಲಿ ನೆರೆದವರು ಸುಡದೆ ಅದನ್ನು ಹುಗಿದು ಬಿಡತಕ್ಕದ್ದು.

ಬಂದೀ ಗಾಳಿಯು ಸರಿಪತ್ರ ಆದರೂ ದೊಡ್ಡ ಮಾಯೆಯಾಗಿದೆ. ಸಾಯಮನ್ ಸಮಿತಿಯಕಿಂತಲೂ ಹೆಚ್ಚಿನ ಮೋಸದಿಂದ ಅದು ತುಂಬಿದಂತಹುದಾಗಿದೆ.

ಅಲಹಾಬಾದದಲ್ಲಿ.
ಪಂಡಿತ ಮೋತೀಲಾಲರು.

## ಸಂಪೂರ್ಣ ಖಾದೀಧಾರಕರಿಗೆ ಮೋಟಾರಿನಲ್ಲಿ ಅರ್ಧ ದರ.

ಸಂಪೂರ್ಣವಾಗಿ ಖಾದಿಯನ್ನು ಧರಿಸಿಕೊಂಡು ತಮ್ಮ ಮೋಟಾರುಗಳಿಂದ ಪ್ರವಾಸ ಮಾಡುವಂತಹ ಜನರಿಗಾಗಿ ಮುಜಫ್ಫರಪುರದ ಸಾರ್ವಜನಿಕ ಮೋಟಾರುಗಳ ವ್ಯವಸ್ಥಾಪಕರು ಕೆಳಗಿನ ಅನುಕೂಲತೆಯನ್ನು ಮಾಡಿದ್ದಾರೆ. ಅದೆಂದರೆ ಸಂಪೂರ್ಣವಾಗಿ ಖಾದಿಯನ್ನು ಧರಿಸುವವರಿಗೆ ತಿಕೀಟನ್ನು ಅರ್ಧಬೆಲೆಗೆ ಕೊಡುತ್ತಿರುವರು. ಇಲ್ಲಿಯ ಮೋಟಾರಿನವರೂ ಹೀಗೆ ಅನುಕೂಲತೆಗಳನ್ನು ಕಲ್ಪಿಸಿಕೊಡುವರೋ!

## ಗಲಗಲಿಯಲ್ಲಿ ಶ್ರೀಮತಿ ಸೀತಾಬಾಯಿಯವರು,

ತಾ|| ೨೮ ನೆಯ ದಿವಸ ಶ್ರೀಮತಿ ತುಂಗಾಬಾಯಿ ಹಬ್ಬು ಇವರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಶ್ರೀಮತಿ ಬಸಪ್ಪ ಸೀತಾಬಾಯಿಯವರು "ಸಧ್ಯದ ಪರಿಸ್ಥಿತಿಯಲ್ಲಿ ಸ್ತ್ರೀಯರ ಕರ್ತವ್ಯಗಳನ್ನು ಕುರಿತು ಒಳ್ಳೇ ಪರಿಣಾಮಕಾರಿಯಾಗುವಂತೆ ಭಾಷಣವನ್ನು ಮಾಡಿದರು. ಸಭೆಗೆ ಸಾವಿರಾರು ಜನರು ಸೇರಿದ್ದರಿಂದ ಎಲ್ಲರಲ್ಲಿಯೂ ಉತ್ಸಾಹವು ತೋರುತ್ತಿತ್ತು.

## ರಂಗಭೂಮಿಯ ಮೇಲೆ ಪುಂಡಾಟಿಕೆಯ ದೃಶ್ಯ.

ಮುಂಬಯಿಯಲ್ಲಿ ಶ್ರೀ ಲಕ್ಷ್ಮೀಕಾಂತ ನಾಟಕ ಸಮಾಜದವರು ಗಢವಾಲಿ ಸೈನಿಕರು ಮತ್ತು ಗೂರ್ಖಾ ಪುಂಡರಲ್ಲಿಯ ದಂಡಾಸುಗಳ ಪುಂಡಾಟಿಕೆಯ ದೃಶ್ಯವನ್ನು ರಂಗಭೂಮಿಯ ಮೇಲೆ ಪ್ರಯೋಗಿಸಿ ತೋರಿಸಿದ್ದರಿಂದ ನಾಟಕ ಮಾಡುವ ಅಪ್ಪಣೆಯನ್ನು ಸರಕಾರವು ಈಗ ಕಸಕೊಂಡದೆಂದು ತಿಳಿಯುತ್ತದೆ.

## ವೀರ ರಣಾಭಿಷೇಕ.

'ತಲೆಲಿ ಮೆರವಣಿಗೆ ಹೋಗಬಾರದು' ಎಂದು ಒಬ್ಬ ಅಧಿಕಾರಿಗಳ ಆಜ್ಞೆ. 'ಗಾಂಧಿ ಟೋಪಿ ಧರಿಸಬಾರದು' ಎಂದು ಇನ್ನೊಬ್ಬ ಅಧಿಕಾರಿಗಳ ಆಜ್ಞೆ. ಮುಂಬೈಯ ಸಹಾಯ ಸಂಘಗಳೊಂದೂ ಖಾದೀ ಪ್ರಚಾರಕರಾಗಲಿ, ಸ್ವದೇಶೀ ಪ್ರತಿಜ್ಞೆಗಾರರಾಗಲಿ ಸೇವಾಗಬಾರದು ಎಂದು ಸರಕಾರದ ಸುಗ್ರೀವಾಜ್ಞೆ.

ಇದರ ಮೇಲೆ ಟೀಕೆ ಮಾಡಿ ಫಲವಿಲ್ಲ. ನಾವಿಷ್ಟೆ ಹೇಳಬಯಸುವದು. ಸೋಲುಂಟಾಗುತ್ತದೆಯೆಂದು ಮನವರಿಕೆಯಾದಾಗ್ಗೆ ಮಾನವ ಮರ್ಯಾದೆ, ನೀತಿ ರೀತಿ, ನ್ಯಾಯ ಅನ್ಯಾಯಗಳನ್ನು ತೊರೆದು ಅನಿರ್ಬಂಧಿತ ವರ್ತಿಸುವದು ಮಾನವ ವ್ಯಕ್ತಿಯವರಿಗೆ ಸಹಜ. ರಷ್ಯಾ ಚಳವಳಿಯನ್ನು ಧ್ವಂಸಮಾಡಲು ಮಾಡಬಾರದ್ದಲ್ಲ ಮಾಡಿದ್ದಾಯಿತು. ಸಾವಿರಾರು ದೇಶಸೇವಕರನ್ನು ಬಂಧಿಸಿದ್ದಾಯಿತು. ನೂರಾರು ಅಹಿಂಸಾವೃತ ಸ್ವಾತಂತ್ರ್ಯವೀರರ ತಲೆಯೊಡೆದದ್ದಾಯಿತು; ಮೂಳೆ ಮುರಿದದ್ದಾಯಿತು; ಅನೇಕರ ಪ್ರಾಣಗಳಲ್ಲಿ ತಪ್ಪಿದ್ದಾಯಿತು. ಅನೇಕ ಸ್ತ್ರೀಯರನ್ನು ಘೋರತರವಾದ ಅವಮಾನಕ್ಕೆ, ಚಿತ್ರಹಿಂಸೆಗೆ ಗುರಿಮಾಡಿದ್ದಾಯಿತು. ಅವರನ್ನೂ ಬಂಧಿಸಿದ್ದಾಯಿತು. ಲಾಠಿಯ ಪ್ರಹಾರವಾಯಿತು ಗುಂಡಿನ ಮಳೆ ಗರೆದದ್ದಾಯಿತು.

ಫಲವೇನು? ಭಾರತೀಯರ ಸ್ವಾತಂತ್ರ್ಯೇಚ್ಛೆಯು ಕಡಿಮೆಯಾಯಿತೆ? ಅವರ ಜನ್ಮಸಿದ್ಧ ಹಕ್ಕು ಮರೆಯಾಯಿತೆ? ಇಲ್ಲ. ದಿನ ದಿನವೂ ಪ್ರಾಣ ಪ್ರಾಣವೂ ಧ್ವನಿಯ ಬಲವಾಗುತ್ತದೆ. ತ್ಯಾಗದ ಕೀರ್ತಿ ಜ್ವಲಿಸುತ್ತದೆ. ಉತ್ಸಾಹವು ಹೆಚ್ಚುತ್ತದೆ. ಭಾರತೀಯರೆಲ್ಲ ಹೆಂಗಸರನ್ನದೆ ಗಂಡಸರನ್ನದೆ, ವೃದ್ಧರನ್ನದೆ ತರುಣರನ್ನದೆ ವೀರ ರಣಾಭಿಷೇಕಕ್ಕೆ ಸಿದ್ಧರಾಗಿದ್ದಾರೆ. ಎ. ಕ.

## ಸಾಯಮನ್ ಗೊಂಬೆಗಳನ್ನು ಸುಟ್ಟರು.

ಸಾಯಮನ್ ವರದಿಯ ಪ್ರತಿಭಟನಾರ್ಥವಾಗಿ ಜಗಾಧ್ರಿ, ಕರನಾಲ, ಪಾಣಿಪತ್, ರೋಹತಕ, ಲುಧಿಯಾನ, ಬಹಾದುರ್ಗ, ಮತ್ತು ದಿಲ್ಲಿ ಪಟ್ಟಣಗಳಲ್ಲಿ ಸಭೆಗಳಾಗಿ ಅಂದು ಹಾಗು ಸಾಯಮನ್ ಗೊಂಬೆಗಳು ಸುಡಲ್ಪಟ್ಟವು

## ಕರನಿರಾಕರಣೆಯ ಚಳವಳಿಯು.

ಲಾಹೋರ ಜಿಲ್ಲೆಯ ಕಾಸೂರ ಹಳ್ಳಿಯಲ್ಲಿ ಕರವನ್ನು ಕೊಡಕೂಡದೆಂದು ಜನರಿಗೆ ಬೋಧಿಸಿದುದಕ್ಕಾಗಿ ಡಾ. ನಾರಾಯಣಸಿಂಗ ಮತ್ತು ೫ ಜನ ಸ್ವಯಂಸೇವಕರಿಗೆ ೫ ತಿಂಗಳ ಸಶ್ರಮ ಶಿಕ್ಷೆಯಾಗಿದೆ. ೧೦ ಜನ ಸ್ವಯಂಸೇವಕರ ಎಂಟನೆಯ ತಂಡವು ಇದೇ ಅಪರಾಧಕ್ಕಾಗಿ ಸೆರೆಹಿಡಿಯಲ್ಪಟ್ಟಿದೆ.

## ವಕೀಲರ ಸನದನ್ನು ಕಸಕೊಂಡರು.

ಮಹಾತ್ಮಾ ಗಾಂಧಿಯವರನ್ನು ಸೆರೆಹಿಡಿದುದರ ನಿಮಿತ್ತವಾಗಿ ಕರೆಯಲ್ಪಟ್ಟ ಹರತಾಳದ ದಿನದಲ್ಲಿ ಕೋರ್ಟಿಗೆ ಹೋಗದಿದ್ದುದಕ್ಕಾಗಿ ಬಂಗಾಲ ಪ್ರಾಂತದ ಹಾಬಿಗಂಜದ ೪ ಜನ ವಕೀಲರ ಸನದನ್ನು ಕಸಿದುಕೊಂಡಿದ್ದಾರೆ.

ಈ ಪತ್ರಿಕೆಯು [illegible] ಬಾಗಲಕೋಟೆಯ
ಪಂಡಿತರನ್ನು ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

ಜಯ ಕರ್ನಾಟಕ

[illegible] — मनु
ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ
ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಶುಕ್ರವಾರ ತಿಥಿ ಆಷಾಢ ಶುದ್ಧ ೯ ಶಕೆ ೧೮೫೨ ತಾ॥ ೪—೭—೩೦ [ ಸಂಚಿಕೆ ೯೧

ಪ್ರತಿಯೊಂದು ಕಾಂಗ್ರೆಸ್ ಸಂಸ್ಥೆಯು ಕಾಯಿದೆಗೆ ವಿರುದ್ಧವಾಗಿದೆಯೆಂದು ಸರಕಾರದವರು ಸಾರಿದಲ್ಲಿ ಮತ್ತು ತಮ್ಮ ಮನಸ್ಸಿಗೆ ಬಂದಂತೆ ಮುಂದಾಳುಗಳೆಲ್ಲರನ್ನು ಒಬ್ಬೊಬ್ಬರನ್ನಾಗಿ ಸೆರೆಹಿಡಿದು ಸರಕಾರವು ತುರಂಗಕ್ಕಟ್ಟಿದಲ್ಲಿ, ಪ್ರತಿಯೊಂದು ಕಡೆಯು ಸ್ತ್ರೀ ಪುರುಷರೆಲ್ಲರೂ ಆಬಾಲವೃದ್ಧರೆನ್ನದೆ ರಾಷ್ಟ್ರೀಯ ಸಭೆಯವರು ಹಾಕಿಕೊಟ್ಟ ಕಾರ್ಯಕ್ರಮಗಳ ಹೊಣೆಯನ್ನು ತಮ್ಮ ಮೇಲೆ ಹೊತ್ತುಕೊಂಡು ಈ ಸ್ವಾತಂತ್ರ್ಯ ಸಮರವನ್ನು ಸಾಗಿಸಬೇಕು. ಅಂದರೇನೇ ಪ್ರತಿಯೊಬ್ಬ ಮನುಷ್ಯನು ತನ್ನಷ್ಟಕ್ಕೆ ತಾನೇ ಕಾಂಗ್ರೆಸ್ ಸಂಸ್ಥೆಯಾಗುವನು.

ಸರದಾರ ವಲ್ಲಭಭಾಯಿಯವರು.

ನಾಗರಿಕರಲ್ಲಿ ಬಿನ್ನಹ

## ಗಾಂಧೀ ದಿವಸ

ಮಹಾತ್ಮಾ ಗಾಂಧಿಯವರು ಸೆರೆಮನೆಗೆ ತೆರಳಿ ನಾಳಿನ ದಿವಸಕ್ಕೆ ಅಂದರೆ ತಾ|| ೫-೭-೩೦ ಕ್ಕೆ ೨ ತಿಂಗಳುಗಳಾಗುವವು. ಮಹಾತ್ಮರು ಯಾವ ಕಾರ್ಯಕ್ಕಾಗಿ ಸೆರೆಮನೆಗೆ ತೆರಳಿದರೋ, ಆ ಕಾರ್ಯವನ್ನು ಹೆಚ್ಚು ಜೋರಿನಿಂದ ಸಾಗಿಸಿ ಅವರ ಸ್ಮರಣೆಯನ್ನು ಮಾಡುವದು ಪ್ರತಿಯೊಬ್ಬ ಭಾರತೀಯನ ಕರ್ತವ್ಯಕರ್ಮವಾಗಿರುವದರಿಂದ ಬಾಗಲಕೋಟೆಯಲ್ಲಿಯೂ ಮೇಲಿನ ದಿನವು ಆಚರಿಸಲ್ಪಡುವದು. ಆದುದರಿಂದ ಬಾಗಲಕೋಟೆಯ ನಾಗರಿಕರೆಲ್ಲರೂ ಅಂದು ನಮ್ಮೊಡನೆ ಕೆಳಗಿನ ಕಾರ್ಯಕ್ರಮಗಳಲ್ಲಿ ಸಹಕರಿಸಿ ಮಹಾತ್ಮರ ಬಗ್ಗೆ ತಮ್ಮಲ್ಲಿದ್ದ ಪ್ರೇಮವನ್ನು ವ್ಯಕ್ತಗೊಳಿಸಬೇಕಾಗಿ ಬಿನ್ನಹ.

ಕಾರ್ಯಕ್ರಮಗಳ ವಿವರ

[೧] ಮುಂಜಾನೆ ೭ ಗಂಟೆಯಿಂದ ೧೦ ಗಂಟೆಯ ವರೆಗೆ ಖಾದೀ ಪಟ್ಟಿಗಳ ಕೂಡಿಸುವಿಕೆ.

[೨] ಸಾಯಂಕಾಲ ೫ ಗಂಟೆಗೆ ಮಹಾತ್ಮರ ಭಾವಚಿತ್ರದ ಹಾಗು ಸಕಲಿಗಳ ಮೆರವಣಿಗೆ

[೩] ಸಂಜೆಯ ೭ ಗಂಟೆಗೆ ಲಾಲಾಜಿ ಬೈಲಿನಲ್ಲಿ ಸಾರ್ವಜನಿಕ ಸಭೆ. —ಸತ್ಯಾಗ್ರಹ ಮಂಡಳ.

ಸರ್ ಸಪ್ರೂರವರ

## ಕಾರ್ಯದರ್ಶಿಗಳಿಗೆ ೧೮ ತಿಂಗಳ ಶಿಕ್ಷೆ

ಒಂದೆರಡು ವರ್ಷ ಸರ್ ತೇಜಬಹದ್ದೂರ ಸಪ್ರೂರವರ ರಾಜಕೀಯ ಕಾರ್ಯದರ್ಶಿಗಳಾಗಿದ್ದ ಶ್ರೀ. ಸರದೇಸಾಯಿಯವರಿಗೆ ಅಡವಿಯ ಕಾನೂನಿನ ಸತ್ಯಾಗ್ರಹಕ್ಕಾಗಿ ಸಂಗಮನೇರದಲ್ಲಿ ೧೮ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಜಳಗಾವದಲ್ಲಿ

## ವ್ಹಾಯಿಸರಾಯರ ಕಾನೂನುಗಳಿಗೆ ೩೨ ಜನರ ಆಹುತಿಯು

ಪಿಕೆಟಿಂಗ, ಕರನಿರಾಕರಣೆ ಹಾಗು ಬಹಿಷ್ಕಾರ ಇವುಗಳ ವಿರುದ್ಧವಾಗಿ ವ್ಹಾಯಿಸರಾಯರು ಹೊರಡಿಸಿದ ಕಾನೂನುಗಳಿಗೆ ಜಳಗಾವ ಕಾಂಗ್ರೆಸ ಕಮೀಟಿಯ ಕಾರ್ಯದರ್ಶಿಗಳಾದ ಶ್ರೀ. ಧನ್ನಾಲಾಲಜಿ ಹಾಗು ಶ್ರೀ. ವಸಂತ ಶರ್ಮಾರವರು ೩೦ ಜನ ಸ್ವಯಂಸೇವಕರೊಂದಿಗೆ ಆಹುತಿಯಾಗಿದ್ದಾರೆ.

ಗುಳೇದಗುಡ್ಡದಲ್ಲಿ

## ಪುಕ್ಕಟೆ ಸಿಂದಿಗೂ ಗಿರಾಕಿಗಳು ಸಿಗಲಿಲ್ಲ

ಗುಳೇದಗುಡ್ಡದಲ್ಲಿ ಸೆರೆಸಿಂದೀ ಅಂಗಡಿಯ ಮುಂದೆ ಪಿಕೆಟಿಂಗ ಮಾಡುವದು ತಾ. ೨ಕ್ಕೆ ಪ್ರಾರಂಭವಾಗಿದೆ. ೮ ೧೦ ಜನ ಸ್ವಯಂಸೇವಕರು ಊರೊಳಗಿನ ಪ್ರಮುಖರಿಂದೊಡಗೂಡಿ ಮುಂಜಾನೆ ೮ ರಿಂದ ಸಂಜೆಯ ವರೆಗೆ ಅತ್ಯಂತ ಶಾಂತತೆಯಿಂದ ಪಿಕೆಟಿಂಗವನ್ನು ಮಾಡಿದರು. ಮುನಸಿಪಾಲಟಿಯ ಸಭಾಸದರಾದ ನಿಜಪ್ಪ ಗದಿಗೆಪ್ಪ ನಿಡಗುಂದಿಯವರೂ ಪಿಕೆಟಿಂಗ ಕಾರ್ಯದಲ್ಲಿ ಭಾಗ ತೆಗೆದುಕೊಂಡಿದ್ದರು. ಇದರ ಪರಿಣಾಮವೆಂದರೆ ಸಿಂದಿಯ ವ್ಯಾಪಾರವು ತೀರ ಕಟ್ಟಾಗಿ ಹೋಯಿತು. ಸಿಂದಿಯನ್ನು ಪುಕ್ಕಟೆ ಕೊಡುವೆನು ಕುಡಿಯುವವರು ಕುಡಿದು ಹೋಗಬೇಕು. ಎಂದು ಅಂಗಡಿಕಾರನು ಬೇಡಿಕೊಂಡರೂ ಕುಡಿಯುವವರೇ ಸಿಗಲಿಲ್ಲ.

## ಕೈಸರ ಹಿಂದ ಪದವಿಯನ್ನು ಬಿಟ್ಟರು.

ದೇಶದಲ್ಲಿಯ ಸದ್ಯದ ಪರಿಸ್ಥಿತಿಯನ್ನು ಅನುಲಕ್ಷಿಸಿ ಅಮರಾವತಿಯ ಡಾ. ಜೋಶಿ ಅವರು ತಮಗೆ ಮೊನ್ನೆ ಮೊನ್ನೆ ದೊರೆತ ಕೈಸರ ಹಿಂದ ಬಿರುದನ್ನು ಬಿಟ್ಟುಕೊಟ್ಟಿದ್ದಾರೆ.

### ಧಾರವಾಡದ

# ಶ್ರೀ ಹುಕ್ಕೇರಿ ಮತ್ತು ಕರಮರಕರ

### ಇವರ ಮೇಲೆ

## ಬೆಳಗಾವಿ ಜಿಲ್ಹೆಯವರ ವಾರಂಟು

## ಧಾರವಾಡದ ಕಲೆಕ್ಟರರು ಅದಕ್ಕೆ ಒಪ್ಪಿಗೆ ಕೊಡಲಿಲ್ಲ

ಬೆಳಗಾವ ಜಿಲ್ಹೆಯ ಸಬ್ ಇನಸ್ಪೆಕ್ಟರರಾದ ಶ್ರೀ ನಾಡಕರ್ಣಿಯವರು ಧಾರವಾಡದ ಶ್ರೀ ಹುಕ್ಕೇರಿ ರಾಮರಾಯರು ಹಾಗೂ ಕರಮರಕರ ದತ್ತಾತ್ರಯರಾಯರು ಈ ಈರ್ವ ಪ್ರಸಿದ್ಧ ಮುಖಂಡರ ಮೇಲೆ ವಾರಂಟು ತೆಗೆದುಕೊಂಡು ಧಾರವಾಡಕ್ಕೆ ಹೋಗಿದ್ದರಿಂದೂ, ಧಾರವಾಡದ ಕಲೆಕ್ಟರರು ಅದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡಲಿಲ್ಲವೆಂದೂ ತಿಳಿಯುತ್ತದೆ ಧಾರವಾಡದ ಕಲೆಕ್ಟರರ ಶಾಂತಸ್ವಭಾವದ ಅನುಕರಣೆಯನ್ನು ಉಳಿದ ಜಿಲ್ಹೆಯ ಅಧಿಕಾರಿಗಳೂ ಮಾಡಿದರೆ ಅವರೂ ಅಭಿನಂದನೆಗೆ ಪಾತ್ರರಾಗುವರು.

### ಮುಂಬಯಿಯಲ್ಲಿ

## ಸರಕಾರಕ್ಕೆ ೩ ಲಕ್ಷದ ಹಾನಿ

### ಸಿಂದೀ ಅಂಗಡಿಗಳಿಗೆ ಬಂದ ದುರ್ದೆಸೆ

೩೦ ನೆಯ ತಾ|| ದಿವಸ ಮುಂಬಯಿಯಲ್ಲಿ ಸಿಂದೀ ಅಂಗಡಿಗಳ ಲಿಲಾವು ಕಲೆಕ್ಟರ ಕಚೇರಿಯಲ್ಲಿ ೨೦೦ ಜನ ಪಾರ್ಸಿ ಗೃಹಸ್ಥರು ವ್ಯಕ್ತಿ ಹಿಡಿಯಲು ಕೂಡಿದ್ದರು. ಈ ಸುದ್ದಿಯು ಕಾಂಗ್ರೆಸದ ಅಧಿಕಾರಿಗಳಿಗೆ ತಿಳಿದು ಬಂದಿತು. ಶ್ರೀಮತಿ ಮುನಸಿಯವರು ೧೨ ಜನ ಸ್ವಯಂಸೇವಿಕೆಯರೊಂದಿಗೆ ಅಲ್ಲಿಗೆ ಹೋಗಿ ನಿಂತರು. ಪಿಕೆಟಿಂಗ ಪ್ರಾರಂಭಿಸಿದರು. ಸಿಂದೀ ಅಂಗಡಿಯ ಒಬ್ಬ ಒಡೆಯನು ಅವರಲ್ಲಿಗೆ ಬಂದನು ‘ ಈ ವರ್ಷ ಲಿಲಾವು ಆಗಲಿಕ್ಕಿಲ್ಲದಿಲ್ಲ. ಪಿಕೆಟಿಂಗ ಜೋರಿನಿಂದ ನಡೆದಿದೆ, ಅರ್ಜಿಗಳನ್ನು ಸ್ವೀಕರಿಸಿ ಅವುಗಳನ್ನು ಒಪ್ಪಿಸತಕ್ಕವರಿದ್ದಾರೆ. ’ ಎಂದು ಹೇಳಿದನು. ಪಿಕೆಟಿಂಗದ ಪರಿಣಾಮವೆಂದರೆ ೪ ಲಕ್ಷಗಳಿಗೆ ಆಗುವ ಮಕ್ತೆಯು ಕೇವಲ ಒಂದೇ ಲಕ್ಷಕ್ಕೆ ಒಂದು ಇಳಿಯಿತು. ಕಲೆಕ್ಟರರು ಹೆಚ್ಚಿಗೆ ಏರಿಸಲು ಬೇಡಿಕೊಂಡರು. ಮಕ್ತೇದಾರರು ಒಡಂಬಡಲಿಲ್ಲ. ಕಲೆಕ್ಟರರು ಸಿಂದೀ ಖಾತೆಯ ಅಧಿಕಾರಿಗಳನ್ನು ವಿಚಾರಿಸಿದರು. ಅವರೊಡನೆ ಚರ್ಚಿಸಿದರು ಬಳಿಕ ಹೊರಗೆ ಬಂದು ಮಕ್ತೇದಾರರಿಗೆ ೨ ನೆಯ ತಾ|| ಗೆ ಒನ್ನಿರಿ. ಕೊಡುವದಾದಲ್ಲಿ ಕೊಡುವೆವು ಎಂದು ತಿಳಿಸಿದರು.

### ಮುಂಬಯಿಯಲ್ಲಿ ೪ ದಿವಸಗಳ ಹರತಾಳ

ಪಂಡಿತ ಮೋತೀಲಾಲ ನೆಹರೂರವರನ್ನು ಸೆರೆಹಿಡಿದುದರ ನಿಷೇಧಾರ್ಥವಾಗಿ ಮುಂಬಯಿಯೊಳಗಿನ ಎಲ್ಲ ಶಾಲೆ ಕಾಲೇಜುಗಳ ವಿದ್ಯಾರ್ಥಿಗಳು ತಮ್ಮ ತಮ್ಮ ಶಾಲೆಗಳಿಗೆ ೪ ದಿವಸಗಳವರೆಗೆ ಶರಣು ಹೊಡೆದು ಹರತಾಳವನ್ನು ಪಾಲಿಸಹತ್ತಿದ್ದಾರೆ.

### ಬೆಳಗಾವಿಯಲ್ಲಿ

## ೪ ಜನರಿಗೆ ಶಿಕ್ಷೆ

( ತಂತಿಯ ವಾರ್ತೆ ತಾ|| ೩. )

ಸಿಂದೀ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುವದಕ್ಕಾಗಿ ತಾ|| ೨ ನೆಯ ದಿವಸ ೬ ಜನರನ್ನು ಸೆರೆ ಹಿಡಿದರು. ಅವರಲ್ಲಿ ಶ್ರೀ ರಾಘವೇಂದ್ರ ಮುಂಡಗಿ, ಶ್ರೀನಿವಾಸ ಗಲಗಲಿ, ರಾಘವೇಂದ್ರ ಮನೊಳ್ಳಿ, ಮತ್ತು ಮಹಮ್ಮದಸಾಹೇಬ ನದಾಫ ಇವರಿಗೆ ೨ ವಾರಗಳ ಸಾದಾ ಶಿಕ್ಷೆಯನ್ನು ವಿಧಿಸಿ, ಉಳಿದ ಇಬ್ಬರನ್ನು ಬಿಟ್ಟು ಬಿಟ್ಟಿದ್ದಾರೆ. ಸಿಂದೀ ಅಂಗಡಿಗಳ ಪಿಕೆಟಿಂಗ ಮೊದಲಿನಕಿಂತಲೂ ಒತ್ತರದಿಂದ ಸಾಗಿಸಲ್ಪಡಹತ್ತಿದೆ.

### ಬೆಳಗಾವಿಯ

## ನಗರ ಸಭೆಯ ಮೇಲೆ ರಾಷ್ಟ್ರಧ್ವಜ

(ತಂತಿಯ ವಾರ್ತೆ ತಾ|| ೩)

“ ನಗರ ಸಭೆಯ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ನಿಲ್ಲಿಸಬೇಕು. ” ಎಂಬ ಸೂಚನೆಯು ಬೆಳಗಾವಿಯ ನಗರ ಸಭೆಯ ಮುಂದೆಯೂ ಬಂದಿದೆ. ತಾ|| ೧೦ ನೆಯ ದಿವಸ ಈ ವಿಷಯವನ್ನು ವಿಚಾರಿಸುವದಕ್ಕಾಗಿಯೇ ನಗರ ಸಭೆಯ ಸಾಧಾರಣ ಸಭೆಯು ಕೂಡತಕ್ಕದ್ದಿದೆ.

ತಾ|| ೫ ನೆಯ ದಿವಸ ಮಹಾತ್ಮಾ ಗಾಂಧಿಯವರ ಬಂಧನ ದಿನವು ಅತ್ಯಂತ ಯಶಸ್ವಿಯಾಗಿ ಆಚರಿಸಲ್ಪಡುವಂತೆ ತೋರುತ್ತದೆ.

### ಗುಂಟೂರಿನ

## ಮ್ಯಾಜಿಸ್ಟ್ರೇಟರ ಅಗಾಧವಾದ ಮಿದುಳು!

ಗುಂಟೂರಿನ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ತಾವು ಗಾಂಧಿಟೊಪ್ಪಿಗೆಯ ವಿರುದ್ಧವಾಗಿ ತೆಗೆದ ಕಟ್ಟಪ್ಪಣೆಯನ್ನು ಕುರಿತು “ ಗಾಂಧಿಟೊಪ್ಪಿಗೆಯನ್ನು ಧರಿಸಿಕೊಂಡು ತಿರುಗುತ್ತಿರುವ ಸತ್ಯಾಗ್ರಹಿಗಳಿಗೆ ಪೋಲೀಸರೂ ಹಾಗು ಅಂತಹ ಟೊಪ್ಪಿಗೆಗಳನ್ನು ಧರಿಸದಿದ್ದವರೂ ಬಹಳ ಪೀಡೆಯನ್ನು ಕೊಡುತ್ತಿದ್ದುದು ತಿಳಿದದ್ದರಿಂದ ಸತ್ಯಾಗ್ರಹಿಗಳಿಗೆ ಆಗುವ ಪೀಡೆಯನ್ನು ತಪ್ಪಿಸುವದಕ್ಕಾಗಿಯೇ ಇಂತಹ ಕಟ್ಟಪ್ಪಣೆಯನ್ನು ತೆಗೆಯಬೇಕಾಯಿತು. ” ಎಂಬುದಾಗಿ ಕಾರಣವನ್ನು ಹೇಳಿದ್ದಾರಂತೆ ಇದು ನಿಜವಿದ್ದಲ್ಲಿ ಮ್ಯಾಜಿಸ್ಟ್ರೇಟರ ಮಿದುಳಿನಿಂದ ಹೊರಟ ಈ ಅಗಾಧವಾದ ಕಟ್ಟಪ್ಪಣೆಗೆ ನಗಬೇಕೋ ಅಳಬೇಕೋ ತಿಳಿಯದಾಗಿದೆ! ಬಹುರತ್ನಾ ವಸುಂಧರಾ!

# ಸರದಾರ ವಲ್ಲಭಭಾಯಿಯವರ ವೀರ ಸಂದೇಶ

“ಪಂಡಿತ ಮೋತೀಲಾಲ ನೆಹರೂರವರನು ಸರಕಾರದವರು ಸೆರೆಹಿಡಿದು ತಮ್ಮ ಮೂರ್ಖತನವನ್ನು ವ್ಯಕ್ತಪಡಿಸಿದ್ದಾರೆ. ಒಂದೀಗಾಲಿಯ ಪರಿಷತ್ತಿನಲ್ಲಿ ಶಾಂತಿಸಂಧಾನದ ಯೋಜನೆಗಳು ವಿಚಾರಿಸಲ್ಪಡುವವೆಂದು ಎಷ್ಟೋ ಜನರು ತಿಳಿಕೊಂಡಿದ್ದರು. ಸರಕಾರದವರ ಈ ಕೃತಿಯಿಂದ ಜನರಲ್ಲಿ ಅವರ ಬಗ್ಗೆ ಇದ್ದ ವಿಶ್ವಾಸವು ಈಗ ಹಾರಿಹೋಗಿದೆ ಶಾಂತಿ ಸಂಧಾನಕ್ಕೆ ಸರಕಾರವು ಸಿದ್ಧವಿಲ್ಲ. ಈ ಸಂಗ್ರಾಮವು ಕೇವಲ ಒಲ್ಕ ಇಲ್ಲವೆ ಆರು ತಿಂಗಳುಗಳ ಅವಧಿಯಲ್ಲಿ ಮುಗಿಯು ಸಂಭವವಿರುವದಿಲ್ಲ. ಸ್ವಾತಂತ್ರ್ಯವನ್ನು ಸಂಪಾದಿಸಲು ಆಯಂಡಕ್ಕೆ ೩೦೦ ವರ್ಷಗಳು ಸಾಲದೆ ಹೋದವು. ಬ್ರಿಟಿಶ ಜನರಲ್ಲಿಯೂ ಒಳಭೇದಗಳು ಎಷ್ಟೋ ಇರಬಹುದು, ಆದರೆ ಹಿಂದುಸ್ಥಾನದವರೊಡನೆ ಹೋರಾಡುವಾಗ ಅವರೆಲ್ಲರೂ ಕೂಡಿ ನಡೆಯುತ್ತಾರೆ. ಇದ ಸಾಯಮನ್ ವರದಿಯಿಂದ ಯಾರಿಗಾದರೂ ಹೊಳೆಯದೆ ಇರದು. ಮುಂದಾಳುಗಳನ್ನು ಹಿಡಿದು ಸೆರೆಮನೆಗಳಲ್ಲಿ ಹಾಕಿದರೆ ಚಳವಳಿಯು ಕುಗ್ಗಬಹುದೆಂದು ಅವರಿಗೆ ಭ್ರಮೆಯಾಗಿದೆ. ಅವರಿಗೆ ಭಾರತೀಯರ ಹೋರಾಟದ ನಿಜವಾದ ಪರಿಸ್ಥಿತಿಯು ಇನ್ನೂ ತಿಳಿದುಬಂದಿಲ್ಲ. ಸ್ವಾತಂತ್ರ್ಯ ಸಂಪಾದನೆಗಾಗಿ ಭಾರತೀಯರು ತಮ್ಮ ಜೀವಗಳನ್ನರ್ಪಿಸಲು ಸಹ ಸಿದ್ಧರಾಗಿರುವರೆಂಬುವದನ್ನು ಸ್ವಲ್ಪ ದಿವಸಗಳಲ್ಲಿಯೇ ಅವರು ಕಂಡುಕೊಳ್ಳಬಹುದು.

ಇಂತಹ ಪರಿಸ್ಥಿತಿಯಲ್ಲಿ ಒಂದೀ ಗಾಲಿಯ ಪರಿಷತ್ತಿನಲ್ಲಿ ಭಾಗತೆಗೆದುಕೊಳ್ಳುವದು ಅತ್ಯಂತ ಮೂರ್ಖತನದ್ದಾಗಿರುತ್ತದೆ. ಸರಕಾರವು ಈಗ ಸಿಟ್ಟಿಗೆದ್ದಿದೆ. ಬ್ರಿಟಿಶ ಸರಕಾರದವರು ರಾಷ್ಟ್ರದ ಬುಡಕ್ಕೆ ಕೊಡಲಿಯನ್ನಿಕ್ಕಲು ಉದ್ಯುಕ್ತರಾಗಿದ್ದು, ಹಿಂದುಸ್ಥಾನ ಸರಕಾರದವರು ಅವರು ಹೇಳಿದಂತೆ ಕುಣಿಯಲು ಸಿದ್ಧರಾಗಿದ್ದಾರೆ. ಸರಕಾರದವರಲ್ಲಿದ್ದ ಶಸ್ತ್ರಾಸ್ತ್ರಗಳು ಇನ್ನೂ ತೀರಿಲ್ಲ. ಎಲ್ಲ ಶಸ್ತ್ರಾಸ್ತ್ರಗಳೂ ತೀರಿದಬಳಿಕ ಅವರು ನಮ್ಮೊಡನೆ ಸಂಧಾನ ಮಾಡಿಕೊಳ್ಳಲು ಸಿದ್ಧರಾಗಿ ಬರಬಹುದು.” —ಮುಂಬಯಿಯ ಭಾಷಣದಿಂದ

### ಶ್ರೀ. ಜೋರಾಪುರ ರಾಮಣ್ಣನಾಯಕರು
## ೧೫೦ ಸಿಂದೀ ಗಿಡಗಳನ್ನು ಒಪ್ಪಿಸಿದರು.

ಬಾಗಲಕೋಟೆಯ ಶ್ರೀ. ಜೋರಾಪುರ ರಾಮಣ್ಣನಾಯಕರು, ತೆಲಗಿ ಹಾಗು ಸುಳಕೋಡದಲ್ಲಿರುವ ತಮ್ಮ ಒಡೆತನದ ೧೫೦ ಸಿಂದೀ ಗಿಡಗಳನ್ನು ಸತ್ಯಾಗ್ರಹ ಶಿಬಿರದ ಕಡೆಗೆ ನಾಶಪಡಿಸುವದಕ್ಕಾಗಿ ಒಪ್ಪಿಸಿದ್ದಾರೆಂದೂ ಮತ್ತು ಅವುಗಳನ್ನು ನಾಶಪಡಿಸುವ ಕಾರ್ಯದಲ್ಲಿ ಅವರು ಸ್ವತಃ ಭಾಗಿಗಳಾಗುವವರಿದ್ದಾರೆಂದೂ ತಿಳಿಯುತ್ತದೆ. ಉಳಿದ ಮಹನೀಯರೂ ಇವರ ಅನುಕರಣೆಯನ್ನು ಮಾಡಿ ಮದ್ಯಪಾನ ಪ್ರತಿಬಂಧ ಚಳವಳಿಯಲ್ಲಿ ಸಹಾಯಕರಾಗಬೇಕು.

## ನೆಲ್ಲೂರಿನಲ್ಲಿ ಗೋಳೀಬಾರು
### ೨೫ ಜನರಿಗೆ ಭಯಂಕರ ಗಾಯ

ಕ್ರಿ. ಲಾ ಅಮೆಂಡಮೆಂಟ ಕಾಯದೆಯ ಪ್ರಕಾರ ಇಬ್ಬರು ಸ್ವಯಂಸೇವಕರಿಗೆ ೬ ತಿಂಗಳ ಸಕ್ತ ಶಿಕ್ಷೆಯು ವಿಧಿಸಲ್ಪಟ್ಟಿದೆ. ತಾ|| ೧ ನೆಯ ದಿವಸ ಜನರನ್ನು ಚದುರಿಸಲು ಪೋಲೀಸರು ಗೋಳೀಬಾರು ಮಾಡಿದರು. ೨೫ ಜನರಿಗೆ ಭಯಂಕರ ಗಾಯಗಳಾಗಿವೆ.

### ಸರಕಾರೀ ವಕೀಲರು
## ರಾಜೀನಾಮೆ ಕೊಟ್ಟರು.

ದೇಶದಲ್ಲೆಲ್ಲ ನಡೆದ ಕಾಯಿದೆ ಭಂಗದ ಚಳವಳಿಯನ್ನನು ಲಕ್ಷಿಸಿ ಗುಜರಾಥ ಪ್ರಾಂತದ ಕಾಯರಾ ಜಿಲ್ಲೆಯ ಸರಕಾರೀ ವಕೀಲರಾದ ಶ್ರೀ ಭೈಲಾಲ ಎನ್. ದೇಸಾಯಿಯವರು ತಮ್ಮ ಸರಕಾರಿ ಉದ್ಯೋಗಕ್ಕೆ ಶರಣು ಹೊಡೆದಿದ್ದಾರೆ.

## ಮಕ್ಕಳು ಮತ್ತು ಮೊಮ್ಮಕ್ಕಳೊಂದಿಗೆ
### ಕಾರಾಗೃಹವನ್ನು ಸೇರಿದ ಮುದುಕನು.

ಚಿಂಬೂರದಲ್ಲಿ ಸಿಂದೀ ಅಂಗಡಿಗಳ ಪಿಕೆಟಿಂಗದ ಕಾರ್ಯವು ಉತ್ಸಾಹದಿಂದ ಸಾಗಿದೆ. ಅಲ್ಲಿಯ ಎಲ್ಲ ಮುಖಂಡರೂ ಈಗಾಗಲೇ ಸೆರೆಮನೆಗೆ ಹೋಗಿರುವದರಿಂದ ಕಾರ್ಯದ ಭಾರವೆಲ್ಲವೂ ಕೇವಲ ಸ್ವಯಂಸೇವಕರ ಮೇಲೆಯೇ ಬಿದ್ದಿದೆ. ಸ್ವಯಂಸೇವಕರನ್ನು ಸೆರೆ ಹಿಡಿಯುವ ಕಾರ್ಯವನ್ನು ಅಧಿಕಾರಿಗಳು ಪ್ರತಿನಿತ್ಯದಲ್ಲಿಯೂ ಸಾಗಿಸುತ್ತಿದ್ದಾರೆ. ತಾ|| ೨೭ ನೆಯ ದಿವಸ ಪೋಲೀಸರು ಸತ್ಯಾಗ್ರಹ ಶಿಬಿರವನ್ನು ಮುತ್ತಿ ಶ್ರೀ ಕೇಶವರಾವ ಚೆಂಬೂರಕರ, ಗಣಪತರಾವ, ಕೆ, ಚೆಂಬೂರಕರ, ಮಹೇಶ್ವರ ಪಾಟೀಲ, ರಾಮರಾವ, ಜಿ ಚೆಂಬೂರಕರ, ಭೋಸಲೆ, ಪಂಡಿತ ಮೊದಲಾದವರನ್ನು ಸೆರೆ ಹಿಡಿದುಕೊಂಡು ಹೋದರು. ಎಲ್ಲರೂ ೧ ತಿಂಗಳ ಸಕ್ತ ಶಿಕ್ಷೆಗೆ ಪಾತ್ರರಾದರು.

ಮೇಲಿನವರಲ್ಲಿ ೮೦ ವರ್ಷದ ಮುದುಕರಾದ ಶ್ರೀ ಕೇಶವರಾವ ಚೆಂಬೂರಕರರು ತಮ್ಮ ಮಗನಾದ ಗಣಪತರಾಯನೊಡನೆಯೂ ಮತ್ತು ಮೊಮ್ಮಗನಾದ ರಾಮರಾಯನೊಡನೆಯೂ ಸೆರೆಮನೆಯನ್ನು ಸೇರಿದ್ದುದು ನೆನಪಿನಲ್ಲಿಡತಕ್ಕದ್ದಾಗಿದೆ ತನ್ನ ಮಗನ ಹಾಗು ತಂದೆಯ ಖಟ್ಲೆಯ ವಿಚಾರಣೆಯನ್ನು ಕೇಳಿಕೊಳ್ಳಲು ಕೋರ್ಟಿಗೆ ಗಣಪತರಾಯರು ಹೋಗಿದ್ದರು. ಆಗ್ಗೆ ಅಧಿಕಾರಿಗಳು ಅಲ್ಲಿಯೇ ಅವರನ್ನು ಸೆರೆ ಹಿಡಿದರು. ಕೇಶವರಾಯರ ಇನ್ನೊಬ್ಬ ಮೊಮ್ಮಗನು ಇದಕ್ಕೂ ಪೂರ್ವದಲ್ಲಿಯೇ ಕಾರಾಗೃಹದಲ್ಲಿ ಸೇರಿದ್ದಾನೆ. ಅಂತೂ ಚೆಂಬೂರ ಮನೆತನದವರು ಒಂದೇ ಒಂದು ವಾರದಲ್ಲಿ ೪ ಜನರನ್ನು ಸೆರೆಕಾರಕ್ಕೆ ಆಹುತಿಯನ್ನು ಕೊಟ್ಟಂತಾಯಿತು.

## ಮುಂಬಯಿಯಲ್ಲಿ

# ಮಿತಿ ಮೀರಿದ ಉತ್ಸಾಹ.

## ೫೦,೦೦೦ ಜನರು ಸ್ವದೇಶಿ ವ್ರತ ಕೈಕೊಂಡರು!

ಮುಂಬಯಿಯಲ್ಲಿ ತಾ|| ೩೦ ರಿಂದ ಬಹಿಷ್ಕಾರದ ವಾರವು ಪ್ರಾರಂಭವಾಗಿದ್ದರಿಂದ ಅಲ್ಲಿ ಎಲ್ಲಿ ನೋಡಿದಲ್ಲಿಯೂ ಮಿತಿ ಮೀರಿದ ಉತ್ಸಾಹವೇ ಕಂಡುಬರುತ್ತಿದೆ. ಅಲ್ಲಿಯ ನಾಗರಿಕರೆಲ್ಲರೂ ಈ ಬಹಿಷ್ಕಾರದ ವಾರದ ಕಾರ್ಯಕ್ರಮಗಳಲ್ಲಿ ಒಂದೇ ಹುಮ್ಮಸಿನಿಂದ ಭಾಗವನ್ನು ತೆಗೆದುಕೊಳ್ಳುತ್ತಾರೆ. ವ್ಯಾಪಾರಸ್ಥರು ಸ್ವದೇಶೀ ಸರಕುಗಳ ಪ್ರದರ್ಶನವನ್ನು ಏರ್ಪಡಿಸಿದ್ದರೆ, ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ದೊಡ್ಡ ದೊಡ್ಡ ಮೆರವಣಿಗೆಗಳನ್ನು ತೆಗೆದು ಅವುಗಳ ಪ್ರಚಾರಕ್ಕಾಗಿ ಮಾರ್ಗ ಮಾರ್ಗಗಳಲ್ಲೆಲ್ಲ ಸಂಚರಿಸುತ್ತಿದ್ದಾರೆ. ತಾ|| ೧ ನೆಯ ದಿವಸ ೫೦೦ ಜನ ಸ್ವಯಂಸೇವಕರು ತಮ್ಮ ಕೈಗಳಲ್ಲಿ ಸ್ವದೇಶಿ ವಿಷಯಕವಾದ ಹಸ್ತಪತ್ರಿಕೆಗಳನ್ನು ತೆಗೆದುಕೊಂಡು ಊರೊಳಗಿನ ಮನೆ ಮನೆಗೆ ಭೆಟ್ಟಿಯನ್ನು ಕೊಟ್ಟು ಅವುಗಳನ್ನು ಹಂಚಿದ್ದಾರೆ. ಹಾದಿ ಬೀದಿ ರಾಷ್ಟ್ರಧ್ವಜಗಳನ್ನು ಮಾರಿದರು. ಇದರ ಪರಿಣಾಮವೆಂದರೆ ಈಗಿನವರೆಗೆ ೫೦,೦೦೦ ಜನರು ಸ್ವದೇಶಿ ಪ್ರತಿಜ್ಞಾ ಪತ್ರಗಳ ಮೇಲೆ ತಮ್ಮ ಅಂಕಿತಗಳನ್ನು ಹಾಕಿ ಸ್ವದೇಶಿ ವ್ರತವನ್ನು ಕೈಕೊಂಡಿದ್ದಾರೆ. ಮುಂಬಯಿ ಕಾರ್ಪೊರೇಶನ್ ಕಟ್ಟಡದ ಮೇಲೆ ರಾಷ್ಟ್ರಧ್ವಜವು ಹಚ್ಚಲ್ಪಟ್ಟಿದೆ. ಶುಕ್ರವಾರವನ್ನು ರಾಷ್ಟ್ರಧ್ವಜದ ದಿನವನ್ನಾಗಿ ಆಚರಿಸಬೇಕೆಂದು ಗೊತ್ತಾಗಿದೆ. ಅಂದು ಇಡೀ ದಿವಸ ರಾಷ್ಟ್ರಧ್ವಜಗಳು ಮಾರಲ್ಪಡುವವಲ್ಲದೆ, ಎಲ್ಲೆಲ್ಲಿಯೂ ಅವುಗಳು ಕಾಣಿಸುವಂತೆ ಪ್ರಯತ್ನವು ಮಾಡಲ್ಪಡುವದು.

ಪಂಡಿತ ಮೋತೀಲಾಲರನ್ನು ಸೆರೆಹಿಡಿದುದರ ನಿಷೇಧಾರ್ಥವಾಗಿ ೧ ಲಕ್ಷ ಕೂಲಿಕಾರ ಜನರು ಹರತಾಳವನ್ನು ಪಾಲಿಸಿದರು. ೪೨ ಗಿರಣಿಗಳು ಕೂಲಿಕಾರರಿಲ್ಲದೆ ಹಾಳು ಸುರಿಯುತ್ತಿದ್ದವು. ಗಿರಣಿಗಳ ಒಡೆಯರು ಕೂಲಿಕಾರರಿಗೆ ಬೆದರಿಕೆ ಹಾಕಿ ನೋಡಿದರು. ಆದರೆ ಅವರ ಉದ್ದೇಶವು ಸಫಲವಾಗಲಿಲ್ಲ. ಇದನ್ನು ಕಂಡು ಅವರು ತಮ್ಮ ತಮ್ಮ ಗಿರಣಿಗಳನ್ನು ಮುಚ್ಚಿಕೊಂಡು ಹೋಗಿಬಿಟ್ಟರು.

ಪೋಲೀಸರಿಗೆ ರಾಜೀನಾಮೆ ಕೊಡಲು ಹಸ್ತಪತ್ರಿಕೆಗಳ ಮುಖಾಂತರವಾಗಿ ಕೇಳಿಕೊಂಡಿದ್ದಕ್ಕಾಗಿ ಶ್ರೀ. ಮಾನಸೋಳ ಅವರು ಸೆರೆಹಿಡಿಯಲ್ಪಟ್ಟಿದ್ದಾರೆ. ಪಿಕೆಟಿಂಗಕ್ಕಾಗಿ ೧೩ ಜನರಿಗೆ ೪ ತಿಂಗಳ ಸಖ್ತ ಶಿಕ್ಷೆಯಾಗಿದೆ. “ದೊಡ್ಡ ಅಂಗಡಿಯ ಮುಂದೆ ಪಿಕೆಟಿಂಗ ನಾನು ಮಾಡಿದ್ದೇನೆ ಆದುದರಿಂದ ನನಗೆ ಒಂದು ತಿಂಗಳ ಶಿಕ್ಷೆಯನ್ನು ಹೆಚ್ಚಿಗೆ ವಿಧಿಸಿರಿ”ಎಂದು ಒಬ್ಬ ಸತ್ಯಾಗ್ರಹಿಯು ಮ್ಯಾಜಿಸ್ಟ್ರೇಟರಿಗೆ ಕೇಳಿಕೊಂಡನು.

ತಾ|| ೧ ನೆಯ ದಿವಸ ಪಿಕೆಟಿಂಗಕ್ಕಾಗಿ ೧೨ ಜನರು ಸೆರೆಹಿಡಿಯಲ್ಪಟ್ಟಿದ್ದಾರೆ. ಶ್ರೀ. ಲಕ್ಷ್ಮೀದಾಸ ಪೀತಾಂಬರ ಇವರು ತಮಗೆ ದೊರೆತ ಕೈಸರ ಹಿಂದ ಬಿರುದನ್ನು ದಬ್ಬಾಳಿಕೆಯ ನಿಷೇಧಾರ್ಥವಾಗಿ ಸರಕಾರಕ್ಕೆ ತಿರುಗಿ ಒಪ್ಪಿಸಿದ್ದಾರೆ.

### ಮುಂಬಯಿಯಲ್ಲಿ

## ಸಿಂದೀ ಅಂಗಡಿಗಳ ಪಿಕೆಟಿಂಗ

### ಅಂಗಡಿಯ ಒಡೆಯನೇ ಸಿಂದಿಯನ್ನು ಕೊಡಲು ಒಲ್ಲೆಂದನು.

ಮುಂಬಯಿಯಲ್ಲಿ ಫಾಕ್ಲಂಡವೆಂಬ ಹೆಸರಿನದೊಂದು ಮಾರ್ಗ. ಅಲ್ಲಿ ಒಂದು ಸಿಂದೀ ಅಂಗಡಿ. ಅಲ್ಲಿ ದೇಶಸೇವಿಕೆಯರ ಪಿಕೆಟಿಂಗು. ಒಂದು ದಿನ ಒಬ್ಬ ಮುಸಲ್ಮಾನನು ಕುಡಿಯಲು ಅಲ್ಲಿಗೆ ಹೋದನು. ಸ್ವಯಂಸೇವಿಕೆಯರು ಅವನಿಗೆ ಒಳಗೆ ಹೋಗಲು ಬಿಡಲಿಲ್ಲ. ಕುಡಿಯಬೇಡವೆಂದು ಬೇಡಿಕೊಂಡರು. ಅಷ್ಟರಲ್ಲಿ ಒಬ್ಬ ಪಠಾಣನು ಅಲ್ಲಿಗೆ ಬಂದನು. ದೃಶ್ಯವನ್ನು ನೋಡಿದನು. ಅವನ ಹೃದಯವು ಕರಗಿ ನೀರಾಯಿತು. ಸ್ವಯಂಸೇವಿಕೆಯರು ಅಂಗಲಾಚಿ ಬೇಡಿಕೊಳ್ಳುತ್ತಿರುವರು. “ಕುಡಿಯುವದನ್ನು ಬಿಡು ಹಟ ಹಿಡಿಯಬೇಡ” ಎಂದು ಕುಡುಕನಿಗೆ ಹೇಳಿದನು. ಕುಡುಕನು ಕೇಳಲಿಲ್ಲ. ಅಂಗಡಿಯಲ್ಲಿ ಕಾಲಿಟ್ಟೇ ಬಿಟ್ಟನು. ಒಡೆಯನು ಅವನನ್ನು ಮಾತಾಡಿಸಲಿಲ್ಲ. ಸಿಂದಿಯನ್ನು ಕೊಡಲಿಲ್ಲ. ಕುಡುಕನು ಮೋರೆಯನ್ನು ಕೆಳಗೆ ಹಾಕಿದನು. ಅಂಗಡಿಯಿಂದ ಹೊರಬಿದ್ದು ನಡೆದನು. ಇದೀಗ ಅಂಗಡಿಯವನೇ ಪಿಕೆಟಿಂಗದಲ್ಲಿ ಭಾಗಿಯಾದ ಕತೆ. ಎಲ್ಲರಿಗೂ ಅನುಕರಿಸಲು ಯೋಗ್ಯವಾಗಿದೆ.

## ಶ್ರೀ. ಜಯಕರರು

### ವ್ಹಾಯಸರಾಯರನ್ನು ಕಂಡರು.

ಪ್ರತಿಯೋಗಿ ಸಹಕಾರವಾದಿಗಳ ಮುಂದಾಳುಗಳಲ್ಲೊಬ್ಬರಾದ ಶ್ರೀ. ಜಯಕರರು ತಾ|| ೨ ನೆಯ ದಿವಸ ವ್ಹಾಯಸರಾಯರನ್ನು ಕಂಡು, ಅವರೊಡನೆ ಪಂ. ಮೋತೀಲಾಲರನ್ನು ಹಿಡಿದುದರ ಹಾಗೂ ವರ್ಕಿಂಗ ಕಮಿಟಿಯನ್ನು ಕಾಯಿದೆಗೆ ವಿರುದ್ಧವಾದ ಸಂಘವೆಂದು ನಿರ್ಣಯಿಸಿದುದರ ಮೂಲಕವಾಗಿ ಉಂಟಾದ ಪರಿಸ್ಥಿತಿಯನ್ನು ಕುರಿತು ಚರ್ಚಿಸಿದರೆಂದು ತಿಳಿಯುತ್ತದೆ.

---

ಮೌಲಾನಾ ಅಬ್ದುಲ್ ಕಲಾಮ್ ಅಝಾದರು ಸೆರೆಹಿಡಿಯಲ್ಪಟ್ಟಿಲ್ಲವಾಗಿ ಈಗ ತಿಳಿಯುತ್ತದೆ.

---

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭. ನಿತ್ಯಸಂಚಿಕೆಯು. ಬೆಲೆ ೦—೦—೩

ಸಂಪಾದಕರು :— ಬಳವಂತ ಅಣ್ಣಾರಾವ ಮುಜುಮುದಾರ
ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಶನಿವಾರ ಮಿತಿ ಆಷಾಢ ಶುದ್ಧ ೧೦ ಶಕೆ ೧೮೫೨ ತಾ॥ ೫—೭—೩೦ [ ಸಂಚಿಕೆ ೯೨

ಸರಕಾರಕ್ಕೆ

# ವಿಠ್ಠಲಭಾಯಿಯವರು ಕೊಟ್ಟ ಎಚ್ಚರ

ಮಹಾತ್ಮಾ ಗಾಂಧಿಯವರನ್ನು ಸೆರೆಮನೆಗೆ ಅಟ್ಟಿದ್ದಾಯಿತು. ಸರದಾರ ವಲ್ಲಭಭಾಯಿಯವರನ್ನು ಕಾರಾಗೃಹದಲ್ಲಿ ಸೇರಿಸಿದ್ದಾಯಿತು. ಭಾರತದ ಸ್ವಾತಂತ್ರ್ಯಾಭಿಲಾಷೆಯು ಅಳಿಯಿತೇ? ಗುಜರಾಥದೊಳಗಿನ ಕಾರ್ಯಕ್ರಮಗಳೇನು ಕಡಿಮೆಯಾದುವೇ? ಇಲ್ಲ.; ಇವೆಲ್ಲವುಗಳಿಂದ ರಾಷ್ಟ್ರೀಯ ಕಾರ್ಯಕ್ರಮಗಳಿಗೆ ಮತ್ತಿಷ್ಟು ಉತ್ಸಾಹವೇ ದೊರೆಯಿತು. ಅಂದಿನಿಂದಲೇ ಪಂಡಿತ ಮೋತೀಲಾಲರನ್ನೂ, ಡಾ॥ ಸಯ್ಯದ ಮಹಮ್ಮದರನ್ನೂ ಸ್ವರಾಜ್ಯಾಶ್ರಮಕ್ಕೆ ಕಳಿಸುವದರಿಂದ ಆಗುವದೇನು? ರಾಷ್ಟ್ರಸಭೆಯವರು ಹಾಕಿಕೊಟ್ಟ ಕಾರ್ಯಕ್ರಮಗಳಿಗೆ ಹೆಚ್ಚು ಪ್ರೋತ್ಸಾಹವೂ, ಬಲವೂ ಬರುವದೇ ನಿಶ್ಚಯವು. ಕೈದುಗಳು ಮತ್ತು ಶಿಕ್ಷೆಗಳು ಈಗ ಪ್ರತಿದಿನದಲ್ಲಿ ನಡೆಯುತ್ತಲಿರುವವುಗಳಾಗಿವೆ. ಅವುಗಳಿಗೆ ಈಗ ಯಾರೂ ಬೆದರುವಂತಿಲ್ಲ. ೩೩ ಕೋಟಿ ಭಾರತೀಯರು ಈಗ ಸೆರೆಮನೆಗೆ ತೆರಳಲು ಸಜ್ಜಾಗಿ ಸಿದ್ಧರಾಗಿ ನಿಂತಿದ್ದಾರೆ. ಸರಕಾರದವರಿಗೆ ಇದು ಇಷ್ಟರಲ್ಲಿಯೇ ತಿಳಿಯಬೇಕಾಗಿತ್ತು. ಆದರೆ ಅದು ಅವರಿಗೆ ತಿಳಿಯಲೊಲ್ಲದು. ವಿನಾಶಕಾಲದಲ್ಲಿ ವಿಪರೀತ ಬುದ್ಧಿ. ಇಷ್ಟೇ!

ಈ ಚಳವಳಿಯನ್ನು ತಗ್ಗಿಸಲು ಸರಕಾರದವರಲ್ಲಿ ೪ ಉಪಾಯಗಳಾಗಿವೆ ಅವುಗಳಾವವೆಂದರೆ:—

ಶಿಕ್ಷೆ ಕೊಡುವದು, ಬಡಿಗೆಗಳಿಂದ ಹೊಡೆಯುವದು, ಬರ್ಚೆಗಳಿಂದ ಚುಚ್ಚುವದು ಮತ್ತು ಗುಂಡುಗಳನ್ನು ಹಾರಿಸುವದು. ಬಡಿಗೆಗಳ ಏಟುಗಳಿಗೂ, ಸೆರೆಮನೆಗಳಿಗೂ ನಾವು ಬೆದರತಕ್ಕವರಲ್ಲವೆಂದು ಭಾರತೀಯರು ಈಗ ತೋರಿಸಿದ್ದಾರೆ. ಗುಂಡಿಗಾದರೂ ಎದೆಯನ್ನು ಮುಂದೆ ಮಾಡಿ ನಿಲ್ಲುವೆವೆಂದ ಭಾರತೀಯರೀಗ ಸರಕಾರದ ನಿದರ್ಶನಕ್ಕೆ ಬಂದುಕೊಡಬೇಕಾಗಿದೆ. ಪ್ರಾಣಗಳನ್ನರ್ಪಿಸಲು ಸಿದ್ಧರಾದವರೇ ಈ ಚಳವಳಿಯಲ್ಲಿ ಸೇರಿದ್ದಾರೆ.

ಅಸೆಂಬ್ಲಿಯ ಅಧ್ಯಕ್ಷಪದವನ್ನು ಬಿಟ್ಟುಗೊಟ್ಟು ದೇಶದಲ್ಲೆಲ್ಲ ತಿರುಗಾಡಿದೆ. ರಾಷ್ಟ್ರೀಯ ಕೆಲಸಗಾರರನ್ನು ಕಂಡುಕೊಂಡೆ. ಅವರೊಡನೆ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಕುರಿತು ಚರ್ಚಿಸಿದೆ. ಆದರೂ ಸರಕಾರದವರಿಂದ ಸೆರೆಮನೆಯ ಮನ್ನಣೆಯನ್ನು ಪಡೆಯದೆ ಹೋದೆ. ಇದಕ್ಕಾಗಿ ನನಗೀಗ ಅತ್ಯಂತ ವಿಷಾದ.

ಎಲ್ಲೆಲ್ಲಿಯೂ ಜನರು ಈಗ ಸ್ವರಾಜ್ಯಕ್ಕಾಗಿ ಆತುರರಾಗಿರುವರು. ಭಾರತೀಯ ಜನಪದದಲ್ಲಿ ಸ್ವಾತಂತ್ರ್ಯೇಚ್ಛೆಯು ಬಲವಾಗಿ ಬೇರುಮೂಡಿದೆ. ಏನು ಮಾಡಿದರೂ ಅದು ಅಳಿಸಿಹೋಗುವಂತಿಲ್ಲ. ಆದುದರಿಂದ ಸರಕಾರವು ಎಚ್ಚರದಿಂದ ವರ್ತಿಸತಕ್ಕದ್ದು.

## ಬ್ರಿಟಿಶ ಮಹಿಳೆಯರಾದ ಮಿಸ್ ಡಿಕಿನ್ಸನ್ನರು ಕಾಂಗ್ರೆಸಕ್ಕೆ ಸೇರಿದರು.

ಸರಕಾರದ ದಬ್ಬಾಳಿಕೆಯ ವೃತ್ತಿಯನ್ನು ನಿಷೇಧಿಸಿ ಮುಂಬಯಿ ಕಾಯದೆ ಮಂಡಳದ ಸಭಾಸದತ್ವಕ್ಕೆ ರಾಜೀನಾಮೆ ಕೊಡೆದು ಹಾಗು ಕೈಸರ ಹಿಂದ ಬಿರುದನ್ನು ಬಿಟ್ಟುಗೊಟ್ಟು ಕಾಯದೆಭಂಗದ ಚಳವಳಿಗೆ ತಮ್ಮ ಸಹಾನುಭೂತಿಯನ್ನು ತೋರಿಸಿದ ಬ್ರಿಟಿಶ ಮಹಿಳೆಯರಾದ ಮಿಸ್ ಡಿಕಿನ್‌ಸನ್ನರು ಕ್ರಾನಿಕಲ್ ಪತ್ರಿಕೆಯ ಪ್ರತಿನಿಧಿಯ ಮುಂದೆ ಕೆಳಗಿನಂತೆ ತಮ್ಮ ಮತವನ್ನು ವ್ಯಕ್ತಪಡಿಸಿದ್ದಾರೆ:—

ಕಾಯದೆಭಂಗದ ಚಳವಳಿಯೇನೂ ಕ್ರಿಶ್ಚಿಯನ್ ಧರ್ಮದಿಂದ ಬಾಹ್ಯವಾಗಿಲ್ಲವಾದುದರಿಂದ ಕ್ರಿಶ್ಚಿಯನ್ನರೆಲ್ಲರೂ ಕಾಂಗ್ರೆಸದ ಧ್ಯೇಯವನ್ನು ಒಪ್ಪಿಕೊಂಡು ಅದರಲ್ಲಿ ಸೇರತಕ್ಕದ್ದು. ಇಂತಹ ಪರಿಸ್ಥಿತಿಯಲ್ಲಿ ಕ್ರಿಶ್ಚಿಯನ್ನರು ರಾಷ್ಟ್ರೀಯ ಪಕ್ಷದವರಿಗೆ ತಮ್ಮ ಸಹಾನುಭೂತಿಯನ್ನು ತೋರಿಸದಿದ್ದಲ್ಲಿ, ಅವರು ಅನಿಷ್ಟಕ್ಕೊಳಗಾಗಬಹುದು. ಕ್ರಿಶ್ಚಿಯನ್ನರು ತಮಗೆ ಶಕ್ಯವಿದ್ದಷ್ಟು ಬಗೆಗಳಿಂದ ರಾಷ್ಟ್ರೀಯ ಪಕ್ಷದವರಿಗೆ ಬೆಂಬಲ ಕೊಡಬೇಕು. ಅಂತಃಕರಣಪೂರ್ವಕವಾಗಿ ಕಾಂಗ್ರೆಸಕ್ಕೆ ಸೇರಿದ ಪಕ್ಷದ ವಿಷಯವಾಗಿ ನಾನು ಇನ್ನು ಮುಂದೆ ಯಾವ ರೀತಿಯಿಂದಲೂ ಸಹಾನುಭೂತಿಯನ್ನು ತೋರಿಸಲಾರೆ.

### ಲಾಹೋರದಲ್ಲಿ
### ಅಧಿಕಾರಿಗಳಿಗೂ ಬಾಲಕರಿಗೂ
# ಘನಘೋರ ಸಂಗ್ರಾಮ
## ಹುಡುಗರಿಗೆ ಗೆಲುವು ಆಳರಸರಿಗೆ ಸೋಲು

ಲಾಹೋರದಲ್ಲಿ ಅಲ್ಲಿನ ಆಳರಸರಿಗೂ, ಬಾಲಭಾರತ ಸಭೆಯ ಸಭಾಸದರಿಗೂ ಘನಘೋರ ಸಂಗ್ರಾಮವು ನಡೆದಿದೆ. ಬಾಲಭಾರತ ಸಭೆಯವರು ಅಲ್ಲಿ ಒಂದು ಆಶ್ರಮವನ್ನು ಸ್ಥಾಪಿಸಿಕೊಂಡಿದ್ದು, ಅದರ ಮುಖಾಂತರವಾಗಿ ಹಳ್ಳಿ ಭಿಕ್ಷೆಯನ್ನು ಬೇಡಿ ಬಂದ ಹಣದಿಂದಲೂ ಕಾಳುಗಳಿಂದಲೂ ಬಡಬಗ್ಗರಿಗೆ ಮತ್ತು ಈಗ ನಡೆದ ಸತ್ಯಾಗ್ರಹ ಚಳವಳಿಯ ಸ್ವಯಂಸೇವಕರಿಗೆ ಅವರು ಆಹಾರವನ್ನು ಕೊಡುತ್ತಿದ್ದರು. ಇದು ಅಧಿಕಾರಿಗಳಿಗೆ ಸರಿ ಬೀಳಲಿಲ್ಲ. ಆಶ್ರಮವನ್ನು ಕಿತ್ತಿರೆಂದು ಅಧಿಕಾರಿಗಳು ಸಭೆಯವರಿಗೆ ತಿಳಿಸಿದರು. ಸಭೆಯವರು ಒಪ್ಪಲಿಲ್ಲ. ಆದ್ದರಿಂದ ಅಧಿಕಾರಿಗಳು ತಾ|| ೧೭ ನೆಯ ದಿವಸ ಅದನ್ನು ಜಪ್ತು ಮಾಡಿ ಎಲ್ಲ ಸಾಹಿತ್ಯಗಳನ್ನು ತೆಗೆದುಕೊಂಡು ಹೋದರು. ಪೋಲೀಸರು ಹೊರಬೀಳುವದೊಂದೇ ತಡ, ವಿದ್ಯಾರ್ಥಿಗಳು ಮತ್ತೆ ಅದೇ ಸ್ಥಳದಲ್ಲಿ ಬೇರೊಂದು ಗುಡಿಸಲನ್ನೇ ಕಟ್ಟಿಸಿಕೊಂಡರು. ಮತ್ತು ತಮ್ಮ ಕಾರ್ಯವನ್ನು ಸಾಗಿಸಿದರು. ಇದಾದ ಸ್ವಲ್ಪ ದಿವಸಗಳಲ್ಲಿಯೇ ಮ್ಯಾಜಿಸ್ಟ್ರೇಟರು ಒಂದು ಕಟ್ಟಪ್ಪಣೆಯನ್ನು ತೆಗೆದು ೨೪ ತಾಸುಗಳಲ್ಲಿ ಅದನ್ನು ತೆರವು ಮಾಡಲು ಹೇಳಿಕೊಂಡರು. ಮ್ಯಾಜಿಸ್ಟ್ರೇಟರ ಅಪ್ಪಣೆಯನ್ನು ಬಾಲಕರು ಕಾಲ್ಕೆಳಗೆ ಮೆಟ್ಟಿದರು. ಮತ್ತು ತಮ್ಮ ಕಾರ್ಯವನ್ನು ಹಾಗೆಯೇ ಸಾಗಿಸಿದರು. ತಾ|| ೨೭ ನೆಯ ದಿವಸ ನಸುಕಿನಲ್ಲಿಯೇ ಪಟ್ಟಣದ ಕೊತವಾಲರು ೧೫೦ ಜನ ಪೋಲೀಸರಿಂದ ಕೂಡಿಕೊಂಡು ಆಶ್ರಮಕ್ಕೆ ಮುತ್ತಿಗೆ ಹಾಕಿದರು. ಬಾಲಭಾರತ ಸಭೆಯ ವಿದ್ಯಾರ್ಥಿಗಳು ಆಗ ಇನ್ನೂ ಮಲಗಿಕೊಂಡಿದ್ದರು. ಪೋಲೀಸರು ಅಲ್ಲಿದ್ದವರನ್ನು ಹೊಡೆದು ಬಡಿದು ಅಲ್ಲಿಯ ಎಲ್ಲ ಉಪಕರಣ ಹಾಗೂ ಕಾಳುಕಡಿಗಳನ್ನು ತೆಗೆದುಕೊಂಡು ಹೋದರು. ಸ್ವಯಂಸೇವಕರು ಇದಕ್ಕೂ ಬೆದರಲಿಲ್ಲ! ಅದೇ ಸ್ಥಳದಲ್ಲಿ ಬೇರೊಂದು ಆಶ್ರಮವನ್ನು ಸ್ಥಾಪಿಸಿಕೊಂಡು ಕಾಲಕ್ಷೇಪ ಮಾಡುತ್ತಿದ್ದಾರೆ. ಈಗಂತೂ ಆಳರಸರಿಗೆ ಸೋಲು ಮತ್ತು ವಿದ್ಯಾರ್ಥಿಗಳಿಗೆ ಗೆಲುವು ಒಂದಿದೆ. ನೋಡಬೇಕು ಮುಂದೆ ಏನಾಗುವದೆಂಬುದನ್ನು!

### ಸತ್ಯಾಗ್ರಹಿಗಳಿಗೆ ನೆರಳು ಕೊಟ್ಟಿದುದಕ್ಕಾಗಿ ಶಿಕ್ಷೆ

ಆಂಧ್ರ ದೇಶದಲ್ಲಿಯ ಚಿರಾಳಾ ಪಟ್ಟಣದ ಪ್ರಸಿದ್ಧ ವ್ಯಾಪಾರಿಗಳಾದ ಶ್ರೀ. ವಾಯ್. ರಂಗನಾಯಕರು ಇವರಿಗೆ ೬ ತಿಂಗಳ ಸಶ್ರಮ ಶಿಕ್ಷೆಯಾಗಿದೆ. ಸತ್ಯಾಗ್ರಹಿಗಳನ್ನು ತಮ್ಮ ಮನೆಯಲ್ಲಿಳಿಸಿಕೊಂಡು ಅವರಿಗೆ ಅನ್ನನೀರುಗಳನ್ನು ಕೊಟ್ಟಿದ್ದುದೆ ಇವರ ತಪ್ಪು.

### ಕಲೆಕ್ಟರರು
## ಗೌಡರಿಗೆ ಬೇಡಿಕೊಂಡರು

ಸತ್ಯಾಗ್ರಹ ಚಳವಳಿಯ ಮೂಲಕವಾಗಿ ತಮ್ಮ ತಮ್ಮ ಗೌಡಕಿಗಳಿಗೆ ರಾಜೀನಾಮೆಯನ್ನು ಕೊಟ್ಟ ಗೌಡರನ್ನು ಕುರಿತು ಗುಜರಾಥ ಪ್ರಾಂತದ ಕಾಯರಾ ಜಿಲ್ಹೆಯ ಕಲೆಕ್ಟರರಾದ ಮಿ. ಮಾರ್ಷಲರು ಒಂದು ಪತ್ರವನ್ನು ಬರೆದಿದ್ದು ಅದರಲ್ಲಿ ರಾಜೀನಾಮೆ ಕೊಟ್ಟಿದ್ದನ್ನು ತಿರುಗಿ ತೆಗೆದುಕೊಂಡು ೬ ನೆಯ ತಾ|| ದೊಳಗಾಗಿ ಮತ್ತೆ ಕೆಲಸದ ಮೇಲೆ ಬನ್ನಿರಿ ಎಂದು ಕೇಳಿಕೊಂಡಿದ್ದಾರೆ.

## ಕನ್ನಡಿಗರು ಎಚ್ಚರಾಗಬೇಕು
### ಮುಂಬಯಿ ಇಲಾಖೆಯ ವಿಭಾಗೀಕರಣ

ಮುಂಬಯಿ ಇಲಾಖೆಯನ್ನು ವಿಭಾಗಿಸಿ ಕರ್ನಾಟಕ, ಮಹಾರಾಷ್ಟ್ರ, ಗುಜರಾಥ ಹಾಗು ಸಿಂಧ ಹೀಗೆ ಬೇರೆ ಬೇರೆ ಪ್ರಾಂತಗಳನ್ನು ಭಾಷಾವಾರ ರಚನೆ ಮಾಡಿ ಅವುಗಳ ಮೇಲೆ ಒಬ್ಬೊಬ್ಬ ಚಿಫ ಕಮೀಶನರರನ್ನು ನಿಯಮಿಸಿ ಪ್ರಾಂತಗಳ ರಾಜ್ಯಕಾರಭಾರವನ್ನು ಸಾಗಿಸಬೇಕೆಂಬುದಾಗಿ ಹಿಂದುಸ್ಥಾನ ಸರಕಾರದವರನ್ನು ಕೇಳಿಕೊಳ್ಳಬೇಕೆಂಬ ಆಶಯದ ಸೂಚನೆಯೊಂದನ್ನು ರಾ. ಬ. ಆರ್. ಆರ್. ಕಾಳೆಯವರು ಮುಂಬಯಿ ಕಾಯಿದೆ ಮಂಡಳದಲ್ಲಿ ತರತಕ್ಕವರಿದ್ದಾರೆ. ಕರ್ನಾಟಕದ ಪರವಾಗಿ ಕಾಯಿದೆ ಮಂಡಳಗಳಿಗೆ ಆರಿಸಿ ಹೋದ ಸಭಾಸದರು ಈ ಸುಸಂಧಿಯನ್ನು ವ್ಯರ್ಥ ಹೋಗಗೊಡದೆ ಅವರೊಡನೆ ಸಹಕರಿಸಿ ಕರ್ನಾಟಕಕ್ಕೆ ಏಕೀಕರಣವನ್ನು ಗಳಿಸಿಕೊಳ್ಳುವರೋ ?

## ಸತ್ಯಾಗ್ರಹದ ದುಡ್ಡಿಗೆ ಸರಕಾರದ ಗದೆ
### ಬ್ಯಾಂಕುಗಳಿಗೆ ಬಿಗಿ ಬಂದಿತು

ಲಾಹೋರದ ಮ್ಯಾಜಿಸ್ಟ್ರೇಟರಾದ ಮಿ. ಲೇನ್ ರೊಬರ್ಟ್ಸರು ಕ್ರಿ. ಪ್ರೊ. ಕೋಡಿನ ೧೪೪ ನೆಯ ಕಲಮಿನ ಕೆಳಗೆ ಎಲ್ಲ ಬ್ಯಾಂಕುಗಳಿಗೂ ಒಂದು ಅಪ್ಪಣೆಯನ್ನು ತೆಗೆದು ಸತ್ಯಾಗ್ರಹ ಯುದ್ಧ ಮಂಡಳ, ಮತ್ತು ನವಜೀವನ ಭಾರತ ಸಭೆಗಳು ತಮ್ಮಲ್ಲಿ ಇಟ್ಟ ಹಣವನ್ನು ಎರಡು ತಿಂಗಳುಗಳ ವರೆಗೆ ತಿರುಗಿ ಕೊಡತಕ್ಕದ್ದಲ್ಲವೆಂದು ಹೇಳಿಕೊಂಡಿದ್ದಾರೆ. ಸಾರ್ವಜನಿಕ ಶಾಂತತೆಗೆ ಭಂಗ ಬರುವಂತಹ ಕಾರ್ಯಗಳಲ್ಲಿ ನಿಧಿಯು ಉಪಯೋಗಿಸಲ್ಪಡ ಬಹುದಾದುದರಿಂದ ಅದನ್ನು ತಡೆಯಲು ಈ ಕಟ್ಟಪ್ಪಣೆಯು ಹೊರಟಿದೆಯೆಂಬುದಾಗಿ ಕಾರಣವನ್ನು ಹೇಳಿದ್ದಾರೆ.

## ಮುಂಬಯಿಯ
# ಶ್ರೀಮತಿ ಪೆರಿನ್ ಕ್ಯಾಪ್ಟನ್ನರಿಗೆ ಕೈದು

ಅಧಿಕಾರಿಗಳು ಕಾಂಗ್ರೆಸ್ ಬುಲೆಟಿನದ ವಿರುದ್ಧವಾಗಿ ಹೊರಡಿಸಿದ ಕಟ್ಟಪ್ಪಣೆಯನ್ನು ಮೂಲೆಗೊತ್ತಿ ಅದನ್ನು ಪ್ರಸಿದ್ಧ ಪಡಿಸಿದುದಕ್ಕಾಗಿ ಇ. ಪಿ. ಕೋಡಿನ ೧೫೮ ನೆಯ ಕಲಮಿನನ್ವಯ, ಸತ್ಯಾಗ್ರಹ ಯುದ್ಧ ಮಂಡಳ ಹಾಗು ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀಮತಿ ಪೆರಿನ್ ಕ್ಯಾಪ್ಟನ್ನರನ್ನೂ ಹಾಗೂ ಅವರುಗಳ ಕಾರ್ಯದರ್ಶಿಗಳಾದ ಶ್ರೀ ಜಿ. ಪಿ. ಮುರಾರಬಟ್ಟ ಮತ್ತು ಇಾಪ್ರಸಿಕ್ ಠಾಕೂರರೂ ತಾ|| ೩ ನೆಯ ದಿವಸ ಸೆರೆಯಲ್ಲಿಟ್ಟಿದ್ದಾರೆ. ಯಾದ್ದು ಮುಂಡಳದ ಎಲ್ಲ ಅಧಿಕಾರಿಗಳನ್ನೂ ಹಾಗೂ ಶ್ರೀಮತಿ ಲೀಲಾವತಿ ಮುನಶಿಯವರನ್ನು ಸೆರೆಹಿಡಿಯುವವರಿದ್ದಾರೆಂದಾಗಿ ತಿಳಿಯುತ್ತದೆ. ಸೆರೆಯಾಳಾದ ಶ್ರೀಮತಿ ಕ್ಯಾಪ್ಟನ್ನರು ಗತಿಸಿದ ಭಾರತಪಿತಾಮಹ ದಾದಾಭಾಯಿ ನವರೋಜಿಯವರ ಮೊಮ್ಮಕ್ಕಳಾಗಿರುವರು.

### ವ್ಹಾಯಿಸರಾಯರು
## ಮತ್ತೊಂದು ಹೊಸ ಅಸ್ತ್ರ ಹಿರಿದರು

ಕಾಂಗ್ರೆಸ್ ಪಕ್ಷದವರು ಸಾಯಕ್ಲೋಸ್ಟಾಯಿಲ್ ಯಂತ್ರಗಳಿಂದ ಹೊರಡಿಸುತ್ತಿರುವ ಪತ್ರಿಕೆಗಳನ್ನು ನಿಲ್ಲಿಸುವದಕ್ಕಾಗಿ ವ್ಹಾಯಿಸರಾಯರು ಮತ್ತೊಂದು ಹೊಸ ಅಸ್ತ್ರವನ್ನು ಹೊರಗೆ ತೆಗೆದಿದ್ದು, ಅದರಲ್ಲಿ ಸರಕಾರದಿಂದ ಮನ್ನಣೆಯನ್ನು ಪಡೆಯದ ಹೊರತಾಗಿ ಯಾರೂ ಯಾವ ತರದ ಸುದ್ದಿ ಸಮಾಚಾರ ಪತ್ರಿಕೆಗಳನ್ನಾಗಲಿ ಇಲ್ಲವೆ ವೃತ್ತಪತ್ರಿಕೆಗಳನ್ನಾಗಲಿ ಹೊರಡಿಸಬಾರದಾಗಿ ಕಾಣಿಸಿದ್ದಾರೆ. ವ್ಹಾಯಿಸರಾಯರು ತಾವೇ ಹೊರಡಿಸಿದ ಕಟ್ಟಳೆಗಳಲ್ಲಿ ಇದು ಏಳನೆಯದಾಗಿದೆ. ಬ್ರಿಟಿಶ ಹಿಂದುಸ್ಥಾನ, ಬ್ರಿಟಿಶ ಬಲುಚಿಸ್ತಾನ, ಸಂಥಾಲ ಮುಂತಾದ ಸ್ಥಳಗಳಲ್ಲಿ ಈ ಕಾಯಿದೆಯು ಬಳಕೆಯಲ್ಲಿ ಬರತಕ್ಕದ್ದಿದ್ದು, ವೃತ್ತಪತ್ರ ದಬ್ಬಾಳಿಕೆಯ ಕಾನೂನು ಪ್ರಚಾರದಲ್ಲಿರುವ ವರೆಗೆ ಇದಾದರೂ ಪ್ರಚಾರದಲ್ಲಿರತಕ್ಕದಾಗಿದೆ.

### ಡಾ|| ಮುಂಜೆಯವರು
## ಅಸೆಂಬ್ಲಿಗೆ ಶರಣು ಹೊಡೆದರು

ಮಧ್ಯಪ್ರಾಂತದ ಪ್ರತಿಯೋಗಿ ಸಹಕಾರ ವಾದಿಗಳ ಸಭೆಯಲ್ಲಿ ಗೊತ್ತಾದ ಮೇರೆಗೆ ಡಾ|| ಮುಂಜೆಯವರು ವರಿಷ್ಠ ಕಾಯಿದೆ ಮಂಡಳದ ಸಭಾಸದತ್ವಕ್ಕೆ ಶರಣು ಹೊಡೆದಿರುವರು. ಮಧ್ಯಪ್ರಾಂತ ಕಾಯಿದೆ ಮಂಡಳದಲ್ಲಿದ್ದ ನಾಲ್ಕು ಜನ ಪ್ರತಿಯೋಗಿ ಸಹಕಾರ ವಾದಿಗಳಾದರೂ ತಮ್ಮ ತಮ್ಮ ಸ್ಥಳಗಳಿಗೆ ರಾಜೀನಾಮೆ ಕೊಟ್ಟಿದ್ದಾರೆ. ಕರ್ನಾಟಕದ ರಾ. ಬ. ಕಂಬಳಿಯವರು ಇನ್ನೂ ತೂಕಡಿಸುತ್ತಿರುವರು. ಅವರಾದರೂ ಏನು ಮಾಡಿಯಾರು! ಮಂತ್ರಿಪದದ ಆಶೆಯೊಂದಿದೆಯಲ್ಲ!

## ಮಹಾತ್ಮರು ತುರಂಗದಲ್ಲಿ ಹೇಗಿರುವರು?

ಕೆಲವು ವಾರಗಳು ಕಳೆದ ನಂತರ ಈಗ ಮಹಾತ್ಮಾ ಗಾಂಧಿಯವರಿಂದ ಕೆಲವು ಪತ್ರಗಳು ಬಂದಿವೆ. ಅವರು ಒಟ್ಟಿನಲ್ಲಿ ಸಮಾಧಾನವಾಗಿ ಇದಂತೆ ತೋರುತ್ತದೆ. ಅವರು ಪ್ರತಿನಿತ್ಯದಲ್ಲಿಯೂ ಕಳೆಯುವ ವೇಳೆ ದೊಡ್ಡ ಪ್ರಮಾಣದಲ್ಲಿ ನೂಲನ್ನು ತೆಗೆಯುತ್ತಿರುವರು. ತುರಂಗದ ಅಧಿಕಾರಿಗಳಿಂದ ಅವರು ಕಾವಾಗಿಯೇ ಜೊಲಿಯುವ ಕಾರ್ಯವನ್ನು ವಹಿಸಿಕೊಂಡಿದ್ದಾರೆ.

—ವಿಜಯಬಾಬಾಯು

## ಗಾಂಧೀ ದಿವಸ

ಮಹಾತ್ಮಾ ಗಾಂಧಿಯವರನ್ನು ಸೆರೆಹಿಡಿದು ೩ ತಿಂಗಳುಗಳಾಗುವ ಪ್ರಯುಕ್ತ ಶನಿವಾರ ೫ ನೇ ತಾ|| ನ ದಿನವನ್ನು 'ಗಾಂಧೀ ದಿವಸ' ವೆಂಬುದಾಗಿ ಆಚರಿಸಬೇಕೆಂದು ಕರ್ನಾಟಕ ಸೇವಾದಲದವರ ನಿಶ್ಚಯಿಸಿರುತ್ತಾರೆ. ಆ ಕಾರಣ ಕರ್ನಾಟಕದಲ್ಲಿರುವ ಸೇವಾದಲದ ಎಲ್ಲ ಶಾಖೆಗಳೂ ಮತ್ತು ಪದವೀಧರೂ ಹಾಗೂ ಸತ್ಯಾಗ್ರಹಿಗಳು ಮತ್ತು ಸತ್ಯಾಗ್ರಹ ಶಿಬಿರಗಳೂ ಆ ದಿವಸ ಅನುಕೂಲವಾದ ಸಮಯಗಳಲ್ಲಿ ಮೆರವಣಿಗೆಗಳನ್ನು ತೆಗೆದು ಸಭೆಗಳನ್ನು ಕರೆಯಬೇಕೆಂದಾಗಿ ದಲದವರು ಆಗ್ರಹಪಡುತ್ತಾರೆ.

ಮಹಾತ್ಮಾ ಗಾಂಧಿಯವರ ಫೋಟೋಗಳನ್ನೂ ಅವರ ಪುಸ್ತಕಗಳನ್ನು, ಮಾತು ಅವರನ್ನು ಈ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ಅವರುಗಳ ಆರೋಗ್ಯದ ಬಗ್ಗೆಯನು ಸಭೆಗಳಲ್ಲಿ ತಿಳಿಸಿಕೊಳ್ಳತಕ್ಕದ್ದು.

ಭಾರತೀಯರ ಸಂಪೂರ್ಣ ಸ್ವಾತಂತ್ರ್ಯತೆಯ ಬೇಡಿಕೆಯೇ ಸುಸಾಧ್ಯ ಹಾಗು ಯೋಗ್ಯವಾದುದೆಂಬುದನ್ನು ತಿಳಿಸಿಹೇಳಬೇಕು.

ಮಳೆ ಇಲ್ಲದಿದ್ದರೆ ಮೈದಾನದಲ್ಲಿ ರಾಷ್ಟ್ರಧ್ವಜವನ್ನು ಆರೋಹಣ ಮಾಡತಕ್ಕದ್ದು.

ಮಳೆಯ ದೆಶೆಯಿಂದ ಎಲ್ಲ ಕಡೆಗಳಲ್ಲಿಯೂ ಏಕಕಾಲದಲ್ಲಿ ಈ ಕಾರ್ಯಕ್ರಮವನ್ನು ಆಚರಿಸಲಿಕ್ಕಾಗಲಿಕ್ಕಿಲ್ಲೆಂದು ಸಮಯ ನಿಶ್ಚಯವನ್ನು ಮಾಡಿಲ್ಲ.

ದಿನದ ಕಾರ್ಯಕ್ರಮವು ಮುಗಿದೊಡನೆಯೇ ಈ ಕಚೇರಿಗೆ ಅಲ್ಲಲ್ಲಿಯ ವರದಿಗಳನ್ನು ಕಳುಹಿಸತಕ್ಕದ್ದು.

ಹುಬ್ಬಳ್ಳಿ } ನಾ. ಭೀ. ಮಾಳಗಿ
ಕಾರ್ಯದರ್ಶಿ,
೨—೭—೪೦ } ಹಿಂದುಸ್ಥಾನೀ ಸೇವಾದಲದ ಕರ್ನಾಟಕ ಶಾಖೆ

## ಮೂವರು ಹೆಂಗಸರಿಗೆ ೬ ತಿಂಗಳ ಕಠಿಣ ಶಿಕ್ಷೆ

ಮದ್ರಾಸ ಇಲಾಖೆಯ ನೆಲ್ಲೂರಿನ ಮೂವರು ಸ್ವಯಂ ಸೇವಿಕೆಯರಿಗೆ ಕಾಯಿದೆಭಂಗಕ್ಕಾಗಿ ೬ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ.

## ವರ್ಕಿಂಗ ಕಮಿಟಿಯಲ್ಲಿ ಸೇರಲು

# ಪಂ. ಮಾಲವೀಯರು ಸಿದ್ಧರಾದರು.

ಸರಕಾರದವರು ವರ್ಕಿಂಗ ಕಮಿಟಿಯನ್ನು ಕಾಯಿದೆಗೆ ವಿರುದ್ಧವಾದ ಸಂಘವೆಂದು ನಿರ್ಣಯಿಸಿದ ಹಾಗು ಪಂಡಿತ ಮೋತೀಲಾಲ ನೆಹರೂರವರನ್ನು ಸೆರೆಹಿಡಿದ ಸುದ್ದಿಯನ್ನು ಕೇಳಿ ಪಂಡಿತ ಮದನ ಮೋಹನ ಮಾಲವೀಯರವರು ಅಲಹಾಬಾದಕ್ಕೆ ಬಂದು ಅಲ್ಲಿಂದ ಸಮಾಚಾರ ಪತ್ರಿಕೆಯವರಿಗೆ ಕೆಳಗಿನ ಸಂದೇಶವನ್ನು ಕಳಿಸಿದ್ದಾರೆ.

"ವರ್ಕಿಂಗ ಕಮಿಟಿಯನ್ನು ಕಾಯಿದೆಗೆ ವಿರುದ್ಧವಾದ ಸಂಘವೆಂದು ನಿರ್ಣಯಿಸಿ ಸರಕಾರದವರು ತಾವು ಈ ಮೊದಲು ಪ್ರಾರಂಭಿಸಿದ ದಬ್ಬಾಳಿಕೆಯ ವೃತ್ತಿಗೆ ಕಳಸವನ್ನಿಟ್ಟಿರುವರು. ಇಂಥಹ ಪರಿಸ್ಥಿತಿಯಲ್ಲಿ ಸುಮ್ಮನೆ ಕುಳಿತುಕೊಳ್ಳುವದು ನನಗೆ ಸಾಧ್ಯವಿಲ್ಲ. ವರ್ಕಿಂಗ ಕಮಿಟಿಯ ಸಭಾಸದನಾಗಿ ನಾನು ಅದಕ್ಕೆ ಸೇರಿಕೊಳ್ಳುವದೇ ಸರಕಾರಕ್ಕೆ ಸರಿಯಾದ ಉತ್ತರವಾಗಿದೆ. ಹಾಗೆ ಮಾಡಲು ನೀವು ಅಜ್ಞಾಪಿಸುವದೊಂದೇ ಇದೆ. ನಾನು ಅದರಲ್ಲಿ ಸೇರಿಕೊಳ್ಳುತ್ತೇನೆ.

### ಸೊಲ್ಲಾಪುರದ ದಂಗೆ

## ೫೫ ಲಕ್ಷ ರೂಪಾಯಿಗಳ ಹಾನಿ.

### ೧೪ ಜನರಿಗೆ ಮರಣ. ೫೯ ಜನರಿಗೆ ಗಾಯ.

(ಮುಂಬಯಿ ಸರಕಾರಿ ಪತ್ರಿಕೆಯಿಂದ)

ಸೊಲ್ಲಾಪುರದಲ್ಲಾದ ದಂಗೆಯಿಂದ ಒಟ್ಟಿಗೆ ೫೫ ಲಕ್ಷ ರೂಪಾಯಿಗಳ ಹಾನಿಯಾಗಿದೆ. ೪ ಜನರಿಗೆ ಗಲ್ಲಿನ ಶಿಕ್ಷೆಯಾಗಿದೆ ೧೨ ಜನರ ಮೇಲೆ ದಂಗೆಯ ಆರೋಪವಿದ್ದು ಅವರ ವಿಚಾರಣೆಯು ಇನ್ನೂ ನಡೆದಿದೆ. ದಂಡಿನ ಕಾಯಿದೆಯನ್ನು ಮುರಿದಿದ್ದಕ್ಕಾಗಿ ೩೫ ಜನರಿಗೆ ಶಿಕ್ಷೆಯು ವಿಧಿಸಲ್ಪಟ್ಟಿದೆ. ದಂಗೆಯ ಸಂಬಂಧವಾದ ೫ ಖಟ್ಲೆಗಳ ವಿಚಾರವು ಇನ್ನೂ ಆಗಿರುವದಿಲ್ಲ. ಈ ಖಟ್ಲೆಗಳಲ್ಲಿ ೧೭೦ ರಷ್ಟು ಜನರು ಸಿಕ್ಕಿಬಿದ್ದಿದ್ದಾರೆ. ಪ್ರವಾಸಂಗದಲ್ಲಿಯ ೮ ಜನರಿಗೆ ದಂಗೆಯ ಮೂಲಕವಾಗಿ ಶಿಕ್ಷೆಯು ವಿಧಿಸಲ್ಪಟ್ಟಿದೆ. ಸಂಘಪುರದಲ್ಲಿ ಅಸಂತೋಷವನ್ನು ಹುಟ್ಟಿಸುತ್ತಿದ್ದ ೪೭ ಜನರಿಗೂ ಶಿಕ್ಷೆಗಳಾಗಿವೆ. ದಂಗೆಯಲ್ಲಿ ಪೋಲೀಸ ಖಾತೆ ಹಾಗೂ ಸಿಂದೀಖಾತೆಯಲ್ಲಿಯ ಇಬ್ಬರು ಮರಣಹೊಂದಿದ್ದು, ೩೧ ಜನರಿಗೆ ಗಾಯಗಳಾಗಿವೆ. ಗೋಳೀಬಾರು ಮಾಡಿದುದರ ಮೂಲಕವಾಗಿ ೧೧ ಹಿಂದೂ ಜನರು ಒಟ್ಟು ಮುಸಲ್ಮಾನರೂ ಮರಣಹೊಂದಿದ್ದು, ೨೭ ಹಿಂದೂ ಹಾಗು ಒಬ್ಬ ಮುಸಲ್ಮಾನನ ಗಾಯಗಳಾಗಿವೆ.

### ಬೆಳಗಾವಿಯಲ್ಲಿ

## ೪ ಜನರಿಗೆ ೨ ವಾರಗಳ ಶಿಕ್ಷೆ

(ತಂತಿಯ ವಾರ್ತೆ ತಾ. ೪)

ಹಿಂದಿ ಜಂಗಡಿಗಳ ಮುಂದೆ ಪಿಕೆಟಿಂಗ ಮಾಡಿದುದಕ್ಕಾಗಿ ಬೆಳಗಾವಿಯ ಶ್ರೀ ವೆಂಕಟೇಶ ಯಾಳಗಿ, ಮಲಕಪ್ಪಾ ಮಾಡೇಶ್ವರಿ, ಬಸಪ್ಪ ಪಾಟೀಲ ಮತ್ತು ನಾರಾಯಣ ಶಿನಾಯಿಕರ ಈ ನಾಲ್ವರಿಗೆ ೨ ವಾರಗಳ ಶಿಕ್ಷೆಯಾಗಿದೆ. ಸ್ಥಳಿಕ ಸತ್ಯಾಗ್ರಹ ಮಂಡಳದವರು ಪ್ರತಿ ದಿನದಲ್ಲಿಯೂ ೬ ಜನ ಸತ್ಯಾಗ್ರಹಿಗಳನ್ನು ಪಿಕೆಟಿಂಗಕ್ಕಾಗಿ ಕಳಿಸಲು ನಿಶ್ಚೈಸಿದ್ದಾರೆ. ಯಾವತ್ತೂ ಜಾತಿಗಳ ಹಾಗು ಸಂಘಗಳ ಜನರು ಈ ಕಾರ್ಯದಲ್ಲಿ ತಮ್ಮ ಸಹಾನುಭೂತಿಯನ್ನು ತೋರಿಸುತ್ತಿದ್ದಾರೆ. ಈ ಸತ್ಯಾಗ್ರಹ ಸಮರಕ್ಕೆ ಶ್ರೀ ಯಾಳಗಿ ಮನೆತನದವರು ಮೂರು ಆಹುತಿಗಳನ್ನು ಕೊಟ್ಟಂತಾಯಿತು.

## ವಿಠ್ಠಲ ಭಕ್ತರಲ್ಲಿ ವಿಜ್ಞಾಪನೆ.

ಬರುವ ಆಷಾಢ ಏಕಾದಶಿಯ ದಿವಸ ಸಕಲ ವಿಠ್ಠಲನ ಭಕ್ತಶಿರೋಮಣಿಗಳಾದ ವಾರಕರೀ ಮಂಡಳಿಗಳು ತಮ್ಮ ತಮ್ಮ ಧ್ವಜಗಳನ್ನು ಒಯ್ಯುವ ಪರಿಪಾಠವಿದೆ. ಈ ವರ್ಷ ಭಕ್ತಶಿರೋಮಣಿಗಳು ರಾಷ್ಟ್ರೀಯ ಧ್ವಜವನ್ನು ಹಿಡಿದುಕೊಂಡು ಹೋಗಬೇಕಾಗಿ ವಿನಂತಿ. ಯಾಕಂದರೆ ಪರಮಪೂಜ್ಯವಾದ ರಾಷ್ಟ್ರೀಯ ಧ್ವಜವು ಐಕ್ಯ, ಪ್ರೇಮ ಮತ್ತು ಶಾಂತತೆ ಇವುಗಳ ಕುರುಹಾಗಿದೆ. ಕಾರಣ ಸಕಲರೂ ಅದನ್ನೇ ಹಿಡಿದುಕೊಂಡು, ತಮ್ಮ ಈಶಭಕ್ತಿ ಹಾಗು ದೇಶಭಕ್ತಿಗಳನ್ನು ವ್ಯಕ್ತಮಾಡಬೇಕಾಗಿ ನನ್ನ ವಿನಂತಿ ಇದೆ.

—ಗ. ರು. ರಾಜ

### ಜಮೀನು ಕೊಳ್ಳುವವರಿಗೆ ಸುಸಂಧಿಯು

ಕೆಳಗೆ ಸಹಿ ಮಾಡುವವನ ಕಡೆಯಿಂದ ಎಲ್ಲ ಸಾರ್ವಜನಿಕರಿಗೆ ತಿಳಿಸುವದೇನಂದರೆ——ಬಾಗಲಕೋಟೆ ತಾಲೂಕ ಪೈಕಿ ಶಿರೂರ ಗ್ರಾಮದಲ್ಲಿರುವ ಹಣಮಂತರಾವ ದೊಡ್ಡ ಭೀಮರಾವ ದೇಶಪಾಂಡೆ ಕೇಸನೂರ, ಸಾ|| ಪುಣೆ ಇವರ ಬಾಬತ ಇನಾಮು ಜಮೀನ (ಅಜ್ಮಾಸರಾವ ಜಮೀನ) ೮|| ಸರ್ವೆ ನಂಬರ (೮೨) ಎಕರೆ (೨೦೮-೬) ಆಕಾರ ರೂಪಾಯಿ (೧೮) ಇದನ್ನು ಮಾರಾಟ ಮಾಡುವದಿದೆ. ಯಾರಿಗಾದರೂ ತಕ್ಕೊಳ್ಳತಕ್ಕದ್ದಿದ್ದರೆ ಕೆಳಗೆ ಸಹಿ ಮಾಡುವವರ ಕಡೆಗೆ ಬಂದು ಭೆಟ್ಟಿಯಾಗಬೇಕು.

ಬಾಗಲಕೋಟೆ ತಾ|| ೬-೭-೩೦ — ರಾಮಚಂದ್ರ ಹಣಮಂತರಾವ ಕವನೂರ. ಬಾಳಕೃಷ್ಣದಾಸ ವೆಂಕಟದಾಸ ಇವರ ಮನೆಯ ಹತ್ತರ.

ಈ ಪತ್ರಿಕೆಯು ಒಳವಂಶ ಅಣ್ಣಾರಾವ ಮುಧೋಳಕರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೫೪೭ ನಿತ್ಯಸಂಚಿಕೆಯು. ಬೆಲೆ ೦-೧

जयकर्नाटक

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ರವಿವಾರ ಮಿತಿ ಆಷಾಢ ಶುದ್ಧ ೧೧ ಶಕೆ ೧೮೫೨ ತಾ|| ೬—೭—೩೦ [ ಸಂಚಿಕೆ ೯೩

## ರಾ. ಬ. ಕಂಬಳಿಯವರಿಗೆ

# ಕಲೆಕ್ಟರರು ಬುದ್ಧೀ ಹೇಳಿದರು

ಹುಬ್ಬಳ್ಳಿಯ ನಗರ ಸಭೆಯ ಮೇಲೆ ರಾಷ್ಟ್ರಧ್ವಜವನ್ನು ನಿಲ್ಲಿಸಬೇಕೆಂಬುದೊಂದು ಸೂಚನೆಯು ಅಲ್ಲಿಯ ನಗರ ಸಭೆಯ ಮುಂದೆ ಬಂದಿದೆ. ನಗರ ಸಭೆಯ ಅಧ್ಯಕ್ಷರಾದ ರಾ. ಬ. ಕಂಬಳಿಯವರು ಅದನ್ನು ನಿಲ್ಲಿಸಲು ಹಿಂದುಮುಂದೆ ನೋಡು ತ್ತಿರುವರು. ಇತ್ತ ಹುಬ್ಬಳ್ಳಿಯ ನಾಗರಿಕರು ತಾ|| ೨೭ ರೊಳ ಗಾಗಿ ನಗರಸಭೆಯ ಮೇಲೆ ನಾಡಗುಡಿಯು ನಿಲ್ಲದಿದ್ದರೆ ಸತ್ಯಾ ಗ್ರಹವನ್ನು ಹೂಡುವವೆಂದು ನಿರ್ಣಯಿಸಿಕೊಂಡಿರುವರು. ಹೀಗೆ ರಾ. ಬ. ಕಂಬಳಿಯವರು ಕತ್ತರಿಯ ಇರುಕಿನಲ್ಲಿ ಸಿಲುಕಿ ಪೇಚಾಡುತ್ತಿರುವರು. ಒಂದು ದಿವಸ ಅವರು ಈ ವಿಷಯವನ್ನು ಕುರಿತು ವಿಚಾರಿಸಲು ಕಲೆಕ್ಟರರ ಕಡೆಗೆ ಹೋಗಿದ್ದರಂತೆ! ಕಲೆಕ್ಟರರು ಅವರಿಗೆ “ ನೀವು ಇಷ್ಟೇಕೆ ಗಾಬರಿಯಾಗಿರುವಿರಿ? ನಾಡಗುಡಿಯನ್ನು ನಗರ ಸಭೆಯ ಮೇಲೆ ನಿಲ್ಲಿಸಿದರೆ ಏನಾಗು ವದು? ಅಲ್ಲದ ಸಲ್ಲದ ಗದ್ದಲವನ್ನು ಮಾಡಬೇಡಿರಿ. ಸುಮ್ಮನೆ ಕೂಡಿರಿ” ಎಂದು ಗದ್ದರಿಸಿದರಂತೆ! ರಾ. ಬ. ಕಂಬಳಿಯವರು ಮೋರೆ ಕೆಳಗೆ ಹಾಕಿಕೊಂಡು ತಿರುಗಿ ಬಂದರಂತೆ! ರಾ ಬ. ಕಂಬಳಿಯವರು ಇನ್ನಾದರೂ ಎದೆ ಗಟ್ಟಿಮಾಡಿಕೊಂಡು ನಾಡ ಗುಡಿಯನ್ನು ನಗರ ಸಭೆಯ ಮೇಲೆ ನಿಲ್ಲಿಸುವರೋ!

ಬಾಗಲಕೋಟೆಯ ನಗರಪಿತಾಮಹರೂ ಇದರಿಂದ ಬುದ್ಧಿ ಗಲಿಯುವಂತಿದೆ.

## ವಿಜಾಪುರ ಜಿಲ್ಹೆಯಲ್ಲಿ

# ಸಿಂದೀ ಗಿಡಗಳ ಸಂಹಾರ.

## ೬೦೦ ಗಿಡಗಳು ನೆಲಕ್ಕುರುಳಿದವು.

ತಾ|| ೩೦ ನೆಯ ದಿವಸ ವಿಜಾಪುರ ಸತ್ಯಾಗ್ರಹ ಶಿಬಿರದ ಸ್ವಯಂಸೇವಕರು ಅಲಿಯಾಬಾದಕ್ಕೆ ಹೋಗಿ ಅಲ್ಲಿಯ ಹಳ್ಳದ ಹತ್ತರ ಬಿಡಾರವನ್ನು ಹಾಕಿದರು. ಅಲ್ಲಿ ಹತ್ತು ಹತ್ತು ಸತ್ಯಾ ಗ್ರಹಿಗಳ ಒಂದೊಂದು ತಂಡದಂತೆ ೬ ತಂಡಗಳನ್ನು ಮಾಡಿ ಅವುಗಳನ್ನು ಬೇರೆ ಬೇರೆ ನಾಯಕರ ಕಡೆಗೆ ಒಪ್ಪಿಸಿದರು. ಬಳಿಕ ಅವರಿಗೆ ಶಿಸ್ತಿನಿಂದ ಕೆಲಸಮಾಡಲು ಸೇನಾನಾಯಕರು ತಿಳಿಸಿಹೇಳಿದರು. ಅಷ್ಟರಲ್ಲಿ ಊರಿನಿಂದ ಬುತ್ತಿಯು ಬಂದಿದ್ದ ರಿಂದ ಸತ್ಯಾಗ್ರಹಿಗಳು ಊಟವನ್ನು ತೀರಿಸಿಕೊಂಡರು. ಬಳಿಕ ಎಲ್ಲರೂ ಸಿಂದೀ ಗಿಡಗಳನ್ನು ಕಡಿಯಲು ಶ್ರೀಪಾದಭಟ್ಟರ ಮಕ್ಕಳ ಹೊಲಕ್ಕೆ ಹೋದರು ಶ್ರೀಪಾದಭಟ್ಟರ ಮಕ್ಕಳು ತಮ್ಮ ಹೊಲದಲ್ಲಿಯ ಗಿಡಗಳನ್ನು ತೋರಿಸಿ ಅವುಗಳನ್ನು ಸ್ವಯಂಸೇ ವಕರಿಂದ ಧ್ವಂಸಮಾಡಿಸಿದರು. ಸಂಜೆಯ ೫ ಗಂಟೆಯ ವರೆಗೆ ಸಿಂದೀಗಿಡಗಳ ಸಂಹಾರವು ನಡೆಯಿತು. ಒಟ್ಟಿಗೆ ೩೫೦ ಗಿಡ ಗಳು ನಾಶವಾದವು.

ಬಳಿಕ ಎಲ್ಲ ಸ್ವಯಂಸೇವಕರು ೩-೪ ಮೈಲು ದೂರದ ಲ್ಲಿರುವ ನಾಗಠಾಣಕ್ಕೆ ತೆರಳಿದರು, ಊರ ಜನರು ಅವರನ್ನು ಸ್ವಾಗತಪೂರ್ವಕವಾಗಿ ಸತ್ಕರಿಸಿದರು. ಅಲ್ಲಿ ಸಭೆಯಾಯಿತು. ಶ್ರೀ. ದೇಶಪಾಂಡೆ, ನಿಕಮ ಮತ್ತು ಮರುಳಾರಾಧ್ಯ ಶಾಸ್ತ್ರಿಗಳ ಭಾಷಣಗಳಾದವು. ನಂತರದಲ್ಲಿ ಮರುದಿವಸ ಮುಂಜಾನೆ ಎಲ್ಲರೂ ಹಳ್ಳಕ್ಕೆ ಹೋಗಿ ಅಲ್ಲಿಯ ೨೫೦ ಸಿಂದೀ ಗಿಡಗಳನ್ನು ಕಡಿದರು. ಪಂಡಿತ ಮೋತೀಲಾಲ ಹಾಗು ಡಾ|| ಸಯ್ಯದ ಮಹಮ್ಮದ ರನ್ನು ಸೆರೆಹಿಡಿದ ಸುದ್ದಿಯು ತಿಳಿದಿದ್ದರಿಂದ ಅವರು ಅಷ್ಟಕ್ಕೆ ಕಾರ್ಯವನ್ನು ನಿಲ್ಲಿಸಿ ಸಂಜೆಗೆ ವಿಜಾಪುರಕ್ಕೆ ತಿರುಗಿದರು. ವಿಜಾಪುರದ ನಾಗರಿಕರು ಅವರನ್ನು ಸತ್ಕರಿಸಿ ಪುಷ್ಪಮಾಲೆಗಳ ನ್ನರ್ಪಿಸಿದರು. ಸಂಜೆಯಲ್ಲಿ ಸಭೆ ಕೂಡಿಸಿ ಸ್ವಯಂಸೇವಕರು ತಮ್ಮ ಕಾರ್ಯದ ವಿವರವನ್ನು ತಿಳಿಸಿಹೇಳಿದರು.

## ಅಮೇರಿಕನ್ನರ ಕನಸು ಮನಸಿನಲ್ಲಿಯೂ

# ಮಹಾತ್ಮಾ ಗಾಂಧಿಯವರೇ.

“ ನೀವು ಮಹಾತ್ಮಾ ಗಾಂಧಿಯವರನ್ನು ಕಾಣಲು ಹೋ ಗಿರುವಾಗ ಇಲ್ಲವೆ ಅವರೊಡನೆ ಪತ್ರವ್ಯವಹಾರವನ್ನು ಮಾಡು ತ್ತಿರುವಾಗ ಅವರಿಗೆ ನನ್ನ ಪ್ರೇಮಪೂರ್ವಕವಾದ ಆಶೀರ್ವಾದ ಗಳನ್ನು ತಿಳಿಸುವದಲ್ಲದೆ, ನಾನು ಯಾವಾಗಲೂ ಅವರನ್ನೇ ಸ್ಮರಿಸುತ್ತಿರುವೆನೆಂದೂ, ಹಾಗೂ ಯಾವದಾದರೂ ಬಗೆಯಿಂದ ಸಹಾಯ ಮಾಡುವ ಉಪಾಯಗಳನ್ನೇ ಯೋಚಿಸುತ್ತಿರುವೆನೆಂದೂ ಹೇಳಿರಿ ” ಎಂಬ ಆಶಯದ ಒಂದು ಪತ್ರವನ್ನು ತಮ್ಮ ಮುಂಬ ಯಿಯ ಮಿತ್ರರೊಬ್ಬರಿಗೆ ಅಮೇರಿಕೆಯ “ಯುನಿಟಿ” ಪತ್ರಿಕೆಯ ಸಂಪಾದಕರಾದ ರೆ. ಜೆಹನ್ ಹೋಮ್ಸರು ಬರೆದಿರುತ್ತಾರೆ.

## ಧಾರವಾಡದಲ್ಲಿ ಸತ್ಯಾಗ್ರಹ ಚಳವಳಿಯು.

(ನಮ್ಮ ಸ್ವಂತ ಪತ್ರಿಗಾರರಿಂದ)

ಪರದೇಶಿ ವಸ್ತ್ರದ ಬಹಿಷ್ಕಾರದ ವ್ಯವಸ್ಥೆಗಾಗಿ ಶ್ರೀ. ದೇಶಪಾಂಡೆ ಭಗೀರಥರಾಯರ ಅಧ್ಯಕ್ಷತೆಯಲ್ಲಿ ಒಂದು ಮಂಡಳವು ಏರ್ಪಾಟಾಗಿದೆ. ತಾ॥ ೮ ರಿಂದ ಪರದೇಶಿ ಬಟ್ಟೆಗಳ ಅಂಗಡಿಗಳ ಮುಂದೆ ಪಿಕೆಟಿಂಗ ಪ್ರಾರಂಭಿಸಲ್ಪಡುವದು.

ಇಲ್ಲಿಯ ಕೆಲವು ಸಿಂಪಿಗರು ಸಿಂದೀ ಗಿಡಗಳನ್ನು ಕಡಿಯಲು ಹೋಗಿ ೫೦೦ ರ ಮೇಲೆ ಸಿಂದೀಗಿಡಗಳನ್ನು ಕಡಿದಿದ್ದಾರೆ. ತಾ॥ ೩ ನೆಯ ದಿವಸ ಇಲ್ಲಿಯ ಜನರು ಮಗ್ದುಮಹಾಳದಲ್ಲಿಯ ೩೦೦ ಸಿಂದೀ ಗಿಡಗಳನ್ನು ನಾಶಪಡಿಸಿದ್ದಾರೆ.

ಪಂಡಿತ ಮೋತೀಲಾಲರನ್ನು ಸೆರೆಹಿಡಿದುದರ ನಿಷೇಧಾರ್ಥವಾಗಿ ಪ್ರಾಥಮಿಕ ಶಾಲೆಗಳಿಗೆ ತಾ| ೨ ನೆಯ ದಿವಸ ಮಧ್ಯಾಹ್ನ ರಜೆಯು ಕೊಡಲ್ಪಟ್ಟಿತ್ತು. ಸಂಜೆಯಲ್ಲಿ ಸಭೆ ಸೇರಿ ಸರಕಾರದ ಕೃತಿಯು ನಿಷೇಧಿಸಲ್ಪಟ್ಟಿತು.

## ಇಹವೃತ್ತ. ಸಾಯಮನ್ ಪ್ರತಿಮೆಗೆ ಬೆಂಕೀ ಕೊಟ್ಟರು.

ತಾ| ೨ ನೆಯ ದಿವಸ ಶ್ರೀ ನರಗುಂದ ಜಯರಾಯರ ಅಧ್ಯಕ್ಷತೆಯಲ್ಲಿ ಸಭೆಸೇರಿ ಪಂಡಿತ ಮೋತೀಲಾಲ ಹಾಗು ಡಾ. ಸಯ್ಯದ ಮಹಮ್ಮದರವರನ್ನು ಅಭಿನಂದಿಸುವದರಲ್ಲಿ ಬಂದಿತು. ಶ್ರೀ ಮಜುಮುದಾರ ಮತ್ತು ಶ್ರೀಮತಿ ಸೀತಾಬಾಯಿ ಬಳ್ಳಾಳ್ಳಿಯವರ ಭಾಷಣಗಳಾದವು. ಅಂದು ಸಂಪೂರ್ಣವಾಗಿ ಹರತಾಳವು ಆಚರಿಸಲ್ಪಟ್ಟಿತ್ತು. ವಿದ್ಯಾರ್ಥಿಗಳು ಶಾಲೆಗಳಿಗೆ ಶರಣು ಹೊಡೆದಿದ್ದುದರಿಂದ ಅವು ಹಾಳು ಸುರಿಯುತ್ತಿದ್ದವು. ಜವಳಿಯ ವ್ಯಾಪಾರಿಗಳು ತಮ್ಮ ಸಂಘದಲ್ಲಿ ನಿರ್ಣಯಿಸಿಕೊಂಡಂತೆ ಅಂದು ಹರತಾಳವನ್ನು ಪಾಲಿಸಿದರು. ಉಳಿದ ವ್ಯಾಪಾರಿಗಳೂ ತಮ್ಮ ತಮ್ಮ ಅಂಗಡಿಗಳನ್ನು ಮುಚ್ಚಿದ್ದರು.

ತಾ| ೫ ನೆಯ ದಿವಸ ಮಹಾತ್ಮಾ ಗಾಂಧಿಯರ ಬಂಧನ ದಿವಸವು ಒಳ್ಳೇ ಯಶಸ್ವಿ ರೀತಿಯಿಂದ ಸಾಂಗವಾಯಿತು. ಸಂಜೆಯ ೫ ಗಂಟೆಗೆ ಮಹಾತ್ಮರ ಭಾವಚಿತ್ರದ ಹಾಗು ಟಕಳಿಯ ಮೆರವಣಿಗೆ ಹೊರಟಿತ್ತು. ಮೆರವಣಿಗೆಯ ಮುಂಭಾಗದಲ್ಲಿ ವಾನರ ಸೇನೆಯ ನೂರಿನ್ನೂರು ಬಾಲಕರೂ, ಅವರ ಹಿಂದೆ ಸುಮಾರು, ೧೦೦ ಜನ ಹೆಂಗಸರೂ, ಅವರ ಹಿಂದೆ ನಾಲ್ಕೈದು ನೂರು ಜನರೂ ಟಕಳಿಗಳನ್ನು ಹಿಡಿದುಕೊಂಡು ಅವುಗಳ ಮೇಲೆ ನೂಲನ್ನು ತೆಗೆಯುತ್ತಲೂ, ರಾಷ್ಟ್ರಗೀತೆಗಳನ್ನು ಅನ್ನುತ್ತಲೂ ಸಾಗಿದ್ದರು. ನಡುನಡುವೆ ಅಲ್ಲಲ್ಲಿ "ಸಿಂದೀ ಸೆರೆ ವ್ಯಾಪಾರಿಗಳೇ, ಕೇಳಿರಿ ನೀವೆಲ್ಲಾ" ಎಂಬ ಲಾವಣಿಯೂ ಅನ್ನಲ್ಪಡುತ್ತಿತ್ತು. ಮೆರವಣಿಗೆಯಲ್ಲಿ ಎಲ್ಲ ಜಾತಿಗಳ ಜನರೂ ಸೇರಿದ್ದೊಂದು ವಿಶೇಷ. ಮೆರವಣಿಗೆಯು ಊರಲ್ಲೆಲ್ಲ ಹಾಯ್ದು ೭ ಗಂಟೆಗೆ ಲಾಲಾಜಿ ಬೈಲಿಗೆ ಬಂದಿತು. ಅಲ್ಲಿ ೪-೫ ಸಾವಿರ ಜನರು ನೆರೆದಿದ್ದರು. ಶ್ರೀ ತಿರಸೂರ ವಕೀಲರ ಅಧ್ಯಕ್ಷತೆಯಲ್ಲಿ ಸಭೆಸೇರಿತು. ಶ್ರೀ ಮುದಗಲ್ಲ, ಕೆರೂರ, ಮಿರ್ಜಿ ಮೊದಲಾದವರ ಭಾಷಣಗಳಾದವು. ಶಿವಮೊಗ್ಗ ಪದ್ಮಾವತಿ ಬಾಯಿಯವರೂ ಸದ್ಯದ ಸ್ಥಿತಿಯಲ್ಲಿ ಸ್ತ್ರೀಯರ ಕರ್ತವ್ಯಗಳನ್ನು ಕುರಿತು ಭಾಷಣಮಾಡಿದರು. ನಂತರದಲ್ಲಿ ಸಾಯಮನ್ ಪ್ರತಿಮೆಗೆ ಮತ್ತು ವರದಿಯ ನಕಲಿಗೆ ಬೆಂಕಿಯು ಕೊಡಲ್ಪಟ್ಟಿತು. ರಾಷ್ಟ್ರಗೀತೆ ಯಾದನಂತರ ಸಭೆಯು ಮುಕ್ತಾಯವಾಯಿತು.

## ಬ್ರಿಟಿಶ ಸರಕಾರಕ್ಕೆ ಇಂಗ್ಲಂಡದಲ್ಲಿಯೇ ವಿರೋಧ.

ವಿ॥ ಬ್ರಾಕ್‌ವೇಯ ವರು ಬ್ರಿಟಿಶರಿಗೆ ಬುದ್ಧಿ ಹೇಳಿದರು

"ಹಿಂದುಸ್ಥಾನದೊಡನೆ ಶಾಂತಿಸಂಧಾನವನ್ನು ಮಾಡಿಕೊಳ್ಳುವದಿದ್ದರೆ ಸರಕಾರದವರು ಮೊದಲು ರಾಜಕೀಯ ಕೈದಿಗಳೆಲ್ಲರನ್ನೂ ಬಿಟ್ಟುಬಿಡತಕ್ಕದ್ದು. ಸರಕಾರದವರು ಹಿಂದುಸ್ಥಾನದಲ್ಲಿ ಪ್ರಾರಂಭಿಸಿದ ದಬ್ಬಾಳಿಕೆಯು ನಿಷೇಧಾರ್ಹವಾಗಿದೆ. ಬ್ರಿಟಿಶ ಸರಕಾರದವರು ಹಿಂದುಸ್ಥಾನದ ಸಂಬಂಧವಾಗಿ ಇನ್ನು ಮುಂದೆ ಇದೇ ಧೋರಣದಿಂದ ವರ್ತಿಸಿದಲ್ಲಿ ಕೂಲಿಕಾರ ಪಕ್ಷದ ಕೆಲವು ಸಭಾಸದರು ಅವರಿಗೆ ವಿರೋಧಮಾಡದೆ ಬಿಡಲಿಕ್ಕಿಲ್ಲ" ಎಂಬುದಾಗಿ ವಿ| ಫೆನ್ನರ ಬ್ರಾಕ್‌ವೇಯವರು ಲಂಡನದಲ್ಲಿ ಒಂದು ಕಡೆಗೆ ಭಾಷಣ ಮಾಡುವಾಗ ಹೇಳಿದ್ದಾರೆ

## ದೇ. ಭ. ಗಂಗಾಧರರಾಯರ ಕನ್ನಡದ ಅಭ್ಯಾಸ

ರತ್ನಾಗಿರಿ ತುರಂಗದಲ್ಲಿರುವ ದೇ. ಭ. ಗಂಗಾಧರರಾಯರು ಜೈಮಿನಿ ಭಾರತ, ಗೀತಾರಹಸ್ಯ, ಕರ್ನಾಟಕ ಗತವೈಭವ ಮೊದಲಾದ ಗ್ರಂಥಗಳನ್ನು ತರಿಸಿಕೊಂಡು ಅವುಗಳ ಅಭ್ಯಾಸವನ್ನು ಮಾಡುತ್ತಿರುವರಾಗಿ ತಿಳಿಯುತ್ತದೆ. ಸ್ತುತ್ಯವು.

## ಅಡವಿಯ ಕಾನೂನಿನ ಭಂಗ

### ಶ್ರೀ ಉಪಾಧ್ಯಾಯರಿಗೆ ೭॥ ತಿಂಗಳ ಸಶ್ರಮ ಶಿಕ್ಷೆ

ಕುಲಾಬಾ ಜಿಲ್ಹೆಯ ಸತ್ಯಾಗ್ರಹ ಮಂಡಳದ ಅಧಿಕಾರಿಗಳಾದ ಶ್ರೀಯುತ ಉಪಾಧ್ಯಾಯರವರಿಗೆ ಅಡವಿಯ ಕಾನೂನಿನ ಭಂಗಕ್ಕಾಗಿ ೧೧೭ ನೆಯ ಕಲಮಿನ ಅನ್ವಯ ೭॥ ತಿಂಗಳ ಸಶ್ರಮ ಶಿಕ್ಷೆಯಾಗಿದೆ,

## ಸಾಯಮನ್ನ ಕಮಿಶನು ಅನಾಥವಾಯ್ತು

ಹಿಂದುಸ್ಥಾನ ಸರಕಾರದವರು ಭಾರತವ ಮಂತ್ರಿಗಳಿಗೆ ದೇ[illegible] ದಲ್ಲಿಯ ಪರಿಸ್ಥಿತಿಯನ್ನು ಕುರಿತು ತಾ| ೨೫ ನೆಯ ದಿವಸ [illegible] ಪತ್ರಿಯನ್ನು ಕಳಿಸಿದ್ದು ಅದರಲ್ಲಿ ಕೆಳಗಿನ ಸಂಗತಿ[illegible] ಉಲ್ಲೇಖಿಸಿದ್ದಾರೆ:—

ಸಾಯಮನ್ ಸಮಿತಿಯ ವರದಿಯ ವಿಷಯದ [illegible] ವನ್ನು ಯಾರೂ ವಿಚಾರಿಸುವದೇ ಇಲ್ಲವಾಗಿದೆ. ಎಲ್ಲ ಪಕ್ಷಗಳ ಮುಖಂಡರೂ ಅದನ್ನು ಧಿಕ್ಕರಿಸಿದ್ದಾರೆ. ಅದರಲ್ಲಿ [illegible] ವಾಗಿದ್ದ ಸೂಚನೆಗಳು ಪಾರತಂತ್ರ್ಯ ದರ್ಶಕವಾದವು [illegible] ವೆಂಬುದಾಗಿ ಭಾರತೀಯರೆಲ್ಲರೂ ತಮ್ಮ ಮತವನ್ನು ವ್ಯಕ್ತಪಡಿಸಿದ್ದಾರೆ.

# ಅಧಿಕಾರಿಗಳು ಲೂಟೀ ಮಾಡಿದರು.

ಬಂಗಾಲ ಪ್ರಾಂತದ ಮಿದನಾಪುರ ಜಿಲ್ಲೆಯಲ್ಲಿ ಮೋಹನಪುರ ಎಂಬುದೊಂದು ಹಳ್ಳಿ. ಮಿದನಾಪುರ ಜಿಲ್ಲೆಯ ಎಲ್ಲ ಭಾಗಗಳಲ್ಲಿಯೂ ಚೌಕಿದಾರಿ ತೆರಿಗೆಯ ವಿರುದ್ಧ ಚಳವಳಿಯು ಸುರುವಾಗಿರುವಂತೆ ಅಲ್ಲಿಯಾದರೂ ಈ ಚಳವಳಿಯು ಸುರುವಾಗಿದೆ. ಶ್ರೀ ಹೃಷಿಕೇಶ ಘೋಷರು ಅಲ್ಲಿಯ ಯೂನಿಯನ್ ಬೋರ್ಡಿನ ಉಪಾಧ್ಯಕ್ಷರಾಗಿರುವರು. ತಾ|| ೨೨ ನೆಯ ದಿವಸ ೮|| ಗಂಟೆಗೆ ಅಡಿಶನಲ್ ಡಿ|| ಮ್ಯಾಜಿಸ್ಟ್ರೇಟರೂ, ಎಕ್ಸಾಯಿಜ ಸುಪರಿಂಟೆಂಡೆಂಟರೂ ೨೦-೨೫ ಶಸ್ತ್ರ ಪೋಲೀಸರೊಂದಿಗೆ ಅಲ್ಲಿಗೆ ಹೋದರು. ಶ್ರೀ. ಘೋಷರು ಮನೆಯಲ್ಲಿರಲಿಲ್ಲ. ಅವರ ತಮ್ಮಂದಿರಾದ ಶ್ರೀ. ಆಶುತೋಷ ಮುಂ., ಅವರೂ ಅವರ ಕಾಗದರೂ ಕೋರ್ಟಿಗೆ ಹೋಗಿದ್ದರು. ಮನೆಯಲ್ಲಿ ಹೆಂಗಸರೂ ಒಬ್ಬ ಆಳುಮಗನೂ ಆಗ ಮನೆಯಲ್ಲಿದ್ದರು. ಅಧಿಕಾರಿಗಳು ಇದನ್ನು ನೋಡಿ, ಬಲಿ ಹಚ್ಚಿ ಒಮ್ಮೆಲೆ ಮನೆಯಲ್ಲಿ ಒಳಹೊಕ್ಕರು. ಪೋಲೀಸರು ಹೆಂಗಸರನ್ನು ಮುಟ್ಟಿದರು. ಬಳಿಕ ಮನೆಯ ಒಳಬಾಗದಲ್ಲಿ ಕೊಡಲ್ಲಿ ಅಲ್ಲಿಯ ಸಾಮಾನುಗಳನ್ನು, ಒಡೆದು ೩೦೦೦ ರೂ. ನಗದು ನೋಟು. ೧೨೫೦ ರೂ. ಬೆಲೆಯುಳ್ಳ ಕಾಗದ, ೪೦೦ ತೊಲೆ ಬಂಗಾರ ಹಾಗು ೧೦೧ ತೊಲೆ ಬೆಳ್ಳಿಯ ಆಭರಣ. ೧ ಸಾಯಿಕಲ್ಲು, ೧ ಪಿಯಾನು ಪೆಟ್ಟಿಗೆ, ೧ ಭಂಗಾರದ ಕೈಗಡಿಯಾರ ಇವುಗಳನ್ನು, ಸ್ವಾಧೀನಪಡಿಸಿಕೊಂಡರು. ೧೦೦೦ ರೂ. ಬೆಲೆ ಬಾಳುವ ವಸ್ತುಗಳನ್ನು ನಾಶಗೊಳಿಸಿದರು. ೧೦೦೦ ರೂ. ಬೆಲೆ ಬಾಳುವ ಬಟ್ಟೆಗಳನ್ನು, ಹರಿದೊಗೆದರು. ೫೦-೬೦ ಮಣಗಳ ಅಕ್ಕಿ ಹಾಗು ಕಾಮ್ಯದ ಪಾತ್ರೆಗಳು ಒಡೆದು ಬಿಟ್ಟವು. ಅಕ್ಕಿ, ಬೇಳೆ, ಹುಲ್ಲು ಇವೆಲ್ಲವುಗಳನ್ನು, ಕೂಡಿಸಿ ಅವುಗಳ ಮೇಲೆ ಕಲ್ಲೆಣ್ಣೆಯನ್ನು ಸುರುವಿದರು. ಮನೆಯಲ್ಲಿಯ ಕಾಗದಪತ್ರಗಳನ್ನು, ತೆಗೆದುಕೊಂಡು ಹೋದರೋ ಇಲ್ಲವೆ ನಾಶಗೊಳಿಸಿದರೋ ತಿಳಿಯಲಿಲ್ಲ. ಅಧಿಕಾರಿಗಳ ಈ ಪ್ರಕಾರದ ಕಾರ್ಯವು ೭-೨|| ಗಂಟೆಯ ವರೆಗೆ ನಡೆಸಿದರು. ಈ ರಾಣೆಯ ಆಡಳಿತೆಗೆ ಒಳಗಾಗಿರುವ ಎಷ್ಟೋ ಹಳ್ಳಿಗಳಲ್ಲಿ ಇದೇ ಪ್ರಕಾರದ ಕೃತ್ಯಗಳು ಅಧಿಕಾರಿಗಳಿಂದ ಜರುಗುತ್ತಿರುವವಾಗಿ ತಿಳಿಯುತ್ತದೆ. (ಯಂಗ ಇಂಡಿಯಾ ತಾ|| ೩-೭-೩೦)

## ಸುರತದಲ್ಲಿ ಪಿಕೆಟಿಂಗು,

### ಶ್ರೀಮತಿ ಕಸ್ತೂರಿಬಾಯಿಯವರು ಮುಂದಾಳು

ಮಹಾತ್ಮಾ ಗಾಂಧಿಯವರ ಧರ್ಮಪತ್ನಿಯಾದ ಶ್ರೀಮತಿ ಕಸ್ತೂರಿಬಾಯಿಯವರು ೫೦೦ ಜನ ಸ್ವಯಂಸೇವಿಕೆಯರೊಂದಿಗೆ ತಾ|| ೨ ನೆಯ ದಿವಸ ಸುರತದಲ್ಲಿ ಪರದೇಶಿ ಬಟ್ಟೆಗಳ ಅಂಗಡಿಗಳ ಮುಂದೆ ಪಿಕೆಟಿಂಗ ಪ್ರಾರಂಭಿಸಿದ್ದಾರೆ. ಶ್ರೀ ಅಬ್ಬಾಸ ತಯ್ಯಬಜಿಯವರ ಮೊಮ್ಮಕ್ಕಳಾದ ಕುಮಾರಿ ಅಬೀದಾ ತಯ್ಯಬಜಿಯವರೂ ಅದರಲ್ಲಿ ಭಾಗ ತೆಗೆದುಕೊಂಡಿದ್ದಾರೆ.

## ಧರಸಾನಾ ಉಪ್ಪಿನ ವಖಾರದ ಒಡೆತನ.

### ಸರಕಾರದವರಲ್ಲಿಯೇ ಒಳಜಗಳ.

ಸಿಮುಲಾದಲ್ಲಿ ಜನಾಬ ಬೇನ ಮುಂತ್ರಿಮಂಡಳದ ಸಭೆಯು ಸೇರಿತ್ತು. ಅಲ್ಲಿ ಉಪ್ಪಿನ ಖಾತೆಯ ಆದಾಯದ ಬಗ್ಗೆ ಚರ್ಚೆ ನಡೆದಿತ್ತು. ಆಗ್ಗೆ ಅಬ್ದುಲ್ ಮಾಟಿನ್ ಚೌಧರಿಯವರು ತಮ್ಮ ಭಾಷಣದಲ್ಲಿ "ಇತ್ತ ಸುದವರ್ತಿ ಗಂಗಾಧರ ಪ್ರಸಂಗದಲ್ಲಿ ಧರಸಾನಾ ಉಪ್ಪಿನ ವಖಾರದ ಒಡೆತನವು ಮುಂಬಯಿ ಸರಕಾರದ್ದಾಗುವದೆಂದು ಹೇಳಿ ಇತ್ತ ನಿಕ್ಕಾತ್ಮಾ ಗಾಂಧಿಯವರು ಧರಸಾನಾ ವಖಾರದ ಮೇಲೆ ದಾಳಿಯನ್ನು ಮಾಡಲು ನಿರ್ಧರಿಸಿದ ಕಾಲದಲ್ಲಿ ಮುಂಬಯಿ ಸರಕಾರದವರು ಒಂದು ಪ್ರಕಟಣ ಪತ್ರಿಕೆಯನ್ನು, ತೆಗೆದು ಧರಸಾನಾ ವಖಾರವು ತನ್ನ ಒಡೆತನದ್ದಾಗಿರುವದಿಲ್ಲವೆಂದು ಹೇಳಿದ್ದಾರೆ. ಆದುದರಿಂದ ಧರಸಾನಾ ವಖಾರದ ಒಡೆಯರು ಯಾರಿರುವರೆಂಬುವದು ತಿಳಿಯದಾಗಿದೆ." ಎಂದು ಕೇಳಿದರು. ಆದಕ್ಕೆ ಎ|| ಹಾಯ್ಗಯವರು "ವಿಚಾರವಮಾಡಿ ಹೇಳಲು ನನಗೆ ಸ್ವಲ್ಪ ಅವಧಿಯು ಬೇಕು. ಆದರೂ ಅದು ಸರಕಾರದ ಒಡೆತನದ್ದಿರುವದೆಂದು ನನಗೆ ತೋರುತ್ತದೆ" ಎಂಬುದಾಗಿ ಹೇಳಿದರು. ಸರ್ ಜಾರ್ಜ ಶೆಲ್‌ರವರು "ಜನಾಬ ಬೇನ ಮಂಡಳಕ್ಕೂ, ಮುಂಬಯಿ ಸರಕಾರಕ್ಕೂ ಯಾವ ಸಂಬಂಧವಿದೆಯೆಂಬುದು ತಿಳಿಯದು. ಆದರೂ ವಿಚಾರ ಮಾಡಿ ನೋಡುತ್ತೇನೆ" ಎಂದು ಅಂದರು.

ಧರಸಾನಾ ವಖಾರದ ಒಡೆತನದ ಸಂಬಂಧವಾಗಿ ಸರಕಾರದವರಲ್ಲಿಯೇ ಹೀಗೆ ಮೇಲಾಟದ ಜಗಳ ನಡೆಯುತ್ತಿರುವದನ್ನು, ನೋಡಿರಿ!

## ಜಪಾನ ಹಾಗು ರಶಿಯಾಗಳ ನಡುವೆ 'ಯುದ್ಧ

ಕಾಮಸ್ಕಾಟ್ಕ ನಡುಗಡ್ಡೆಯ ಹತ್ತಿರ ಸಮುದ್ರದಲ್ಲಿ ಮೀನು ಹಿಡಿಯುವ ಹಕ್ಕಿನ ಸಂಬಂಧವಾಗಿ ಜಪಾನ ಮತ್ತು ರಶಿಯಾ ರಾಷ್ಟ್ರಗಳಲ್ಲಿ ತಿಕ್ಕಾಟ ನಡೆದಿದೆ. ತಾ|| ೨೫ ಕ್ಕೆ ಒಂದು ಜಪಾನಿ ಮೀನು ಹಿಡಿಯುವ ಹಡಗವು ಸಮುದ್ರದಲ್ಲಿ ಬರುತ್ತಿರುವಾಗ ಅದರ ಮೇಲೆ ರಶಿಯನ್ ಹಡಗದವರು ಗುಂಡು ಹಾರಿಸಿದರು. ಒಬ್ಬ ಜಪಾನಿಯು ಸತ್ತನು. ಉಳಿದವರು ಸೆರೆಯಾಳುಗಳಾದರು. ಈಗ ಜಪಾನ ಸರಕಾರವು ತನ್ನ ನಿಸ್ಸಾಯಾರ ಎಂಬ ಹಡಗ ವನ್ನು ಗುಪ್ತವಾಗಿ ಕಳಿಸಿದೆ. ಜಪಾನ ಹಾಗು ರಶಿಯಾಗಳಲ್ಲಿ ಯುದ್ಧವಾಗುವ ಲಕ್ಷಣವು ತೋರುತ್ತದೆ.

## ಬ್ರಹ್ಮಚರ್ಯಕ್ಕೆ ಕರ!

ಪ್ರಶಿಯಾ ಸರಕಾರದವರು ತಮ್ಮ ಜಮಾಖರ್ಚನ್ನು ಹೊಂದಿಸುವದಕ್ಕಾಗಿ ಲಗ್ನವಾಗದೆ ಉಳಿದಿರುವ ತರುಣರು ಹಾಗು ತರುಣಿಯರ ಮೇಲೆ ಕರವನ್ನು ಹೇರಿದ್ದಾರೆ. ಒಳ್ಳೇ ಉಪಾಯ! ಹಿಂದುಸ್ತಾನ ಸರಕಾರದವರಿಗೆ ಅನುಕರಿಸಲು ಯೋಗ್ಯವಾಗಿದೆ!

# ಸೊಲ್ಲಾಪುರದ ಕೊಲೆಯ ವಿಚಾರಣೆ

## ಶ್ರೀ ಧನಶೆಟ್ಟಿಯವರ ಜವಾಬು

ಪ್ರಶ್ನೆ— ತಾ. ೮—೫—೧೯೩೦ ನೆಯ ದಿನ ಮಂಗಳವಾರ ಚೌಕಿಯ ಮುಂದೆ ನೆರೆದ ಕಾಯದೆ ವಿರುದ್ಧವಾದ ಗುಂಪಿನಲ್ಲಿ, ಪೋಲೀಸರ ಕೊಲೆ ಮಾಡುವ ಮತ್ತು ಅನ್ಯಾಯ ಮಾಡುವ ಉದ್ದೇಶವಿದ್ದಲ್ಲಿ ನೀವು ಇದ್ದಿರೋ?

ಉತ್ತರ— ಇದ್ದಿಲ್ಲ.

ಪ್ರ— ನೀವು ಮಂಗಳವಾರ ಚೌಕಿಯ ಮೇಲೆ ದಾಳಿ ಮಾಡಿದಿರೇನು?

ಉ— ಇಲ್ಲ.

ಪ್ರ— ನೀವು ಉಳಿದ ಜನರೊಂದಿಗೆ ಪೋಲೀಸ ಹವಾಲದಾರ ಹಾಗು ಪೋಲೀಸರನ್ನು ಕೊಂದು ಹಾಕುವದರಲ್ಲಿ ಇದ್ದಿರೋ?

ಉ— ಇಲ್ಲ.

ಪ್ರ— ಅವರ ಕೊಲೆ ಮಾಡಿದಿರೇನು?

ಉ— ಇಲ್ಲ.

ಪ್ರ— ದಿಂದಾ ಚೌಕಂ ಇವರ ದೇಹವನ್ನು ಸುಟ್ಟಿರೋ?

ಉ— ಇಲ್ಲ.

ಪ್ರ— ಮತ್ತೇನಾದರೂ ಹೇಳುವದಿದೆಯೇನು?

ಉ— ಹೌದು ಹಿಂದು ಮುಸಲ್ಮಾನರ ದೊಂಬಿಯಲ್ಲಿಯು ಎಲ್ಲ ಖಟ್ಲೆಯಿಂದ ನಿರ್ದೋಷಿಯಾದುದರಿಂದ ಪೋಲೀಸರ ಕಣ್ಣು ನನ್ನ ಮೇಲೆ ಇತ್ತು. ಕೆಲವು ಖಟ್ಲೆಗಳು ಪ್ರಾಂತ ಸಾಹೇಬರಲ್ಲಿ, ಕೆಲವು ಅಪೀಲ ಆದಮೇಲೆ ಬಿಡುಗಡೆಯಾದವು. ನನ್ನ ಕೆಲವು ನೌಕರರು ವ್ಯಾಪಾರ ಹಾಜರ ಮಾಡಬೇಕಾಗುತ್ತದೆ. ಅದರ ಸೈನಿಕ ಕಾಯಿದೆಯ ಮೂಲಕ ನನ್ನ ಮಾಲಕರಲ್ಲಿ ಒಬ್ಬರಿಗೆ ಶಿಕ್ಷೆಯಾದದ್ದರಿಂದಲೂ ಮತ್ತೊಬ್ಬರು ಮುಂಬಯಿಗೆ ಹೋದದ್ದರಿಂದಲೂ ಅವರಲ್ಲಿ ಇದ್ದ ನೌಕರರು ಈಗ ಸಿಕ್ಕುವಂತೆ ಇಲ್ಲ. ನನ್ನ ಸಾಕ್ಷಿದಾರರು ಅವರು. ಆದರೆ "ಸೈನಿಕ ಕಾಯದೆ" ಯ ಮೂಲಕ ಅವರು ಸಾಕ್ಷಿ ಹೇಳಲು ಬರುವಂತಿಲ್ಲ. ನನ್ನನ್ನು ಯಾವ ದಿವಸ ಸೆರೆ ಹಿಡಿದರೋ ಆ ದಿವಸವೇ ಸೈನಿಕರ ವಶಕ್ಕೆ ನನ್ನನ್ನು ಒಪ್ಪಿಸಿದರು. ಈ ಎಲ್ಲ ಖಟ್ಲೆಯು ಸುಳ್ಳು ಇದೆ.

# ಸೊಲ್ಲಾಪುರ ರಾಷ್ಟ್ರಧ್ವಜ ಸತ್ಯಾಗ್ರಹ

## ೨೫ ಜನರಿಗೆ ಶಿಕ್ಷೆ

"ಸೊಲ್ಲಾಪುರದಲ್ಲಿ ದಂಡನಾಳಿಕೆಯವರು ಪ್ರತಿಬಂಧಿಸಿದ ರಾಷ್ಟ್ರಧ್ವಜವನ್ನು ಪುನಃ ಅಲ್ಲಿ ಪ್ರಸ್ಥಾಪಿಸುವದಕ್ಕಾಗಿ ಒಟ್ಟಿಗೆ ೧೮೧ ಜನ ಸತ್ಯಾಗ್ರಹಿಗಳು ಸತ್ಯಾಗ್ರಹ ಹೂಡಲು ಬಂದವರಾಗಿದ್ದರು. ಎಲ್ಲರನ್ನೂ ಸೆರೆಹಿಡಿದು ಅವರಲ್ಲಿ ೧೫೬ ಜನರನ್ನು ಸೊಲ್ಲಾಪುರದಿಂದ ಹೊರಗೆ ಒಯ್ದು ಬಿಟ್ಟರು. ೨೫ ಜನರಿಗೆ ಬೇರೆ ಬೇರೆ ಶಿಕ್ಷೆಗಳಾದವು." ಎಂದು ಮುಂಬಯಿ ಸರಕಾರದವರು ಪ್ರಕಟಿಸಿದ್ದಾರೆ.

## ಸೊಲ್ಲಾಪುರ ಅತ್ಯಾಚಾರದ ವಿಚಾರಣೆ

ಸೊಲ್ಲಾಪುರದಲ್ಲಿ ಅಧಿಕಾರಿಗಳು ಗೈದ ಅತ್ಯಾಚಾರಗಳ ವಿಷಯಗಳನ್ನು ಕುರಿತು ವಿಚಾರಿಸುವದಕ್ಕಾಗಿ ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಶ್ರೀ ಭುಲಾಭಾಯಿ ಜೆ. ದೇಸಾಯಿಯವರ ಅಧ್ಯಕ್ಷತೆಯಲ್ಲಿ ಒಂದು ವಿಚಾರಣೆಯ ಮಂಡಳವನ್ನು ನಿಯಮಿಸಿದ್ದಾರೆ. ಈ ಮಂಡಳದಲ್ಲಿ ನಿವೃತ್ತ ನ್ಯಾಯಾಧೀಶರಾದ ಹುಸೇನ ಬಿ. ತಯ್ಯಬಜಿಯವರೂ ಮತ್ತು ಪ್ರಸಿದ್ಧ ವಕೀಲರಾದ ಶ್ರೀ. ಎ. ಎಸ್. ಸವರ್, ಸಿ. ಪಿ. ಸಪ್ತರ್ಷಿ, ಎಸ್. ಎಸ್. ದೇವ ಈ ನಾಲ್ಕು ಜನರು ಸಭಾಸದರಾಗಿ ನಿಯಮಿಸಲ್ಪಟ್ಟಿದ್ದಾರೆ. ಜನರಿಗೆ ಸಮಾಧಾನವಾಗುವಂತಹ ಮಂಡಳವನ್ನು ಸರಕಾರದವರು ನಿಯಮಿಸುವರೇನೆಂಬ ಬಗ್ಗೆ ಹಾದಿಯನ್ನು ನೋಡಿ ಅನಂತರದಲ್ಲಿ ಈ ಮಂಡಳದವರು ತಮ್ಮ ಕಾರ್ಯವನ್ನು ಪ್ರಾರಂಭಿಸುವರು.

# ಅಖಿಲ ಭಾರತ ರಾಷ್ಟ್ರಸಭೆಯ

## ಸಭಾಸದರಿಗೆ ಕೈದು

ಶಿರಾಜಗಂಜದ ಮೌಲಾನಾ ಶಿರಾಜಖಾನ ಬಾಗು ಅಸದುಲ್ಲಾ ಶಿರಾಜ ಇವರು ಇ. ಪಿ. ಕೋಡಿನ ೧೨೪ ನೆಯ ಕಲಮಿನನ್ವಯ ಸೆರೆಹಿಡಿಯಲ್ಪಟ್ಟಿದ್ದಾರೆ. ಇವರು ಅಖಿಲ ಭಾರತ ರಾಷ್ಟ್ರಸಭೆಯ ಸಭಾಸದರಾಗಿರುವರು.

## ಮುಂಬಯಿಯಲ್ಲಿ

## ೨೪ ಸತ್ಯಾಗ್ರಹಿಗಳಿಗೆ ಶಿಕ್ಷೆ

ಪರದೇಶಿ ಬಟ್ಟೆಗಳ ಅಂಗಡಿಗಳ ಮುಂದೆ ಪಿಕೆಟಿಂಗು ಮಾಡಿದುದಕ್ಕಾಗಿ ೨೪ ಜನ ಸತ್ಯಾಗ್ರಹಿಗಳು ಮುಂಬಯಿಯಲ್ಲಿ ಸೆರೆ ಹಿಡಿಯಲ್ಪಟ್ಟು ೪ ತಿಂಗಳ ಸಕ್ರಮ ಶಿಕ್ಷೆಗೆ ಪಾತ್ರರಾಗಿದ್ದಾರೆ.


# ಜಮೀನು ಕೊಳ್ಳುವವರಿಗೆ ಸುಸಂಧಿ.

ಕೆಳಗೆ ಸಹಿ ಮಾಡುವವನ ಕಡೆಯಿಂದ ಎಲ್ಲ ಸಾರ್ವಜನಿಕರಿಗೆ ತಿಳಿಸುವದರಲ್ಲಿ ಬರುವದೇನೆಂದರೆ——ಬಾಗಲಕೋಟೆ ತಾಲೂಕ ಪೈಕಿ ಕೋಳಮುಟ್ಟಿ ಗ್ರಾಮದಲ್ಲಿರುವ ಹಣಮಂತರಾವ ದೊಡ್ಡ ಭೀಮರಾವ ದೇಶಪಾಂಡೆ ಕೇಸನೂರ, ಸಾ|| ಪುಣೆ ಇವರ ಖಾತೆದಾರ ಇನಾಮ ಜಮೀನು (ಅಣ್ಣಾಜಿರಾವ ಜಮೀನ) ರಿ|| ಸರ್ವೆ ನಂಬರ (೮೩) ಯಕರ (೨೦ ಎ ೩೭) ಆಕಾರ ರೂಪಾಯಿ (೧೭) ಇದನ್ನು ಮಾರಾಟ ಮಾಡುವದಿದೆ. ಯಾರಿಗಾದರೂ ತಕ್ಕೊಳ್ಳುವದಿದ್ದರೆ ಕೆಳಗೆ ಸಹಿ ಮಾಡುವವರ ಕಡೆಗೆ ಒಂದು ಭೆಟ್ಟಿಯಾಗಬೇಕು.

ಬಾಗಲಕೋಟೆ ತಾ|| ೪-೭-೩೦ — ರಾಮಚಂದ್ರ ಹಣಮಂತರಾವ ನವಣೂರ. ಬಾಳಕೃಷ್ಣದಾಸ ವೆಂಕಟದಾಸ ಇವರ ಮನೆಯ ಹತ್ತರ.


ಈ ಪತ್ರಿಕೆಯು ಬಸವಂತ ಅಣ್ಣಾರಾವ ಮಾಳವದಕರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೬

ಜಯಕರ್ನಾಟಕ

सर्वं परवशं दुःखं । सर्वमात्मवशं सुखम् ॥ — मनु
ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.
ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಸೋಮವಾರ ಮಿತಿ ಆಷಾಢ ಶುದ್ಧ ೧೨ ಶಕೆ ೧೮೫೨ ತಾ॥ ೭—೭—೩೦ [ ಸಂಚಿಕೆ ೪೪

### ವೀರ ಮಹಿಳೆಯರಾದ

# ಶ್ರೀಮತಿ ಕ್ಯಾಪ್ಟನ್ ಹಾಗೂ ಮುನಸಿ

### ಇವರಿಗೆ

## ೩ ತಿಂಗಳ ಸಾದಾ ಶಿಕ್ಷೆ

ಮುಂಬಯಿಯ ಸತ್ಯಾಗ್ರಹ ಯುದ್ಧ ಮಂಡಳದ ಅಧಿಕಾರಿಗಳಾದ ಶ್ರೀಮತಿ ಪೆರಿನ್ ಕ್ಯಾಪ್ಟನ್ ಹಾಗು ಶ್ರೀಮತಿ ಲೀಲಾವತಿ ಮುನಸಿಯವರಿಗೆ ೧೪೪ ನೆಯ ಕಲಮಿನ ಅನ್ವಯ ೩ ತಿಂಗಳ ಸಾದಾ ಶಿಕ್ಷೆಯೂ, ಶ್ರೀಯುತರಾದ ಜೆ. ಪಿ. ಮಹಾತಪ್ಪೆ, ಇಂದ್ರಜಿತ ಠಾಕೂರ ಹಾಗು ನೂರಮಹಮ್ಮದ ಪಟ್ನೀಭಾಯಿ ಇವರಿಗೆ ಅದೇ ಕಲಮಿನ ಅನ್ವಯ ೫ ತಿಂಗಳ ಸಕ್ತ ಶಿಕ್ಷೆಯೂ ವಿಧಿಸಲ್ಪಟ್ಟಿದೆ. ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಕಾಂಗ್ರೆಸ್ ಬುಲೆಟಿನವನ್ನು ಹೊರಡಿಸಕೂಡದೆಂಬ ತೆಗೆದ ಆಜ್ಞೆಯನ್ನು ಮೀರಿಗೊತ್ತ ಅದನ್ನ ಹೊರಡಿಸಿದ್ದುದಕ್ಕಾಗಿಯೇ ಇವರೆಲ್ಲರಿಗೆ ಮೇಲಿನಂತೆ ಶಿಕ್ಷೆಗಳಾಗಿವೆ. ಶ್ರೀಮತಿ ಲೀಲಾವತಿಯವರು ತಾವು ಸೆರೆಯಾಳಾದ ಕೂಡಲೆ ಕ್ರಾನಿಕಲ್ ಪತ್ರಿಕೆಯ ಪ್ರತಿನಿಧಿಗಳೆದುರಿಗೆ "ಸ್ವಾತಂತ್ರ್ಯ ಇಲ್ಲವೆ ಸಾವು. ಕೊನೆಯವರೆಗೆ ಯುದ್ಧವನ್ನು ಸಾಗಿಸಿರಿ." ಎಂಬುದಾಗಿ ಸಂದೇಶವನ್ನು ಹೇಳಿದರು.

## ಡಾ. ಬಿಜೆಂಟಮ್ಮನವರು ಕಾಂಗ್ರೆಸಕ್ಕೆ ಕೂಡಿದರು.

ಹಿಂದುಸ್ಥಾನದಲ್ಲಿಯ ರಾಜಕೀಯ ಪರಿಸ್ಥಿತಿಯನ್ನು ಕುರಿತು ವಿಚಾರಿಸುವದಕ್ಕಾಗಿ ಲಂಡನದಲ್ಲಿ ಸೇರಿದ ಪಾರ್ಲಮೆಂಟದ ಸಭಾಸದರ ಒಂದು ಸಭೆಯಲ್ಲಿ ಭಾಷಣಮಾಡುವಾಗ ಡಾ ಬಿಜೆಂಟಮ್ಮನವರು, "ಹಿಂದುಸ್ಥಾನ ಸರಕಾರದವರು ವರ್ಕಿಂಗ ಕಮೀಟಿಯನ್ನು ಕಾಯದೆಗೆ ವಿರುದ್ಧವಾದ ಸಂಘವೆಂದು ನಿರ್ಣಯಿಸಿರುವರು. ನಾನು ಒಮ್ಮೆ ಕಾಂಗ್ರೆಸದ ಅಧ್ಯಕ್ಷಪದದಲ್ಲಿ ಕುಳಿತಿದ್ದೆನಾದುದರಿಂದ ನನಗಾದರೂ ಅಖಿಲ ಭಾರತ ರಾಷ್ಟ್ರೀಯ ಸಭಾಸದತ್ವದ ಹಕ್ಕು ಇದೆ. ಈ ಸಮಯದಲ್ಲಿ ಕಾಂಗ್ರೆಸದಲ್ಲಿ ಕೂಡಿಕೊಳ್ಳುವದೇ ನನಗೆ ವಿಹಿತವಾಗಿ ತೋರುತ್ತದೆ. ಉದಾರಮತವಾದಿಗಳೆಲ್ಲರೂ ಕಾಂಗ್ರೆಸದಲ್ಲಿ ಸೇರಿಕೊಳ್ಳಬೇಕಾಗಿ ವಿನಂತಿ" ಎಂಬುದಾಗಿ ಹೇಳಿರುವರು.

### ಸೊಲ್ಲಾಪುರಕ್ಕೆ

## ೧ ಲಕ್ಷ ರೂಪಾಯಿ ದಂಡ.

ಸೊಲ್ಲಾಪುರದಲ್ಲಾದ ದಂಗೆಯ ಮೂಲಕವಾಗಿ ಅಲ್ಲಿ ಹೆಚ್ಚಿಗೆ ಪೋಲೀಸರನ್ನು ಇಡಬೇಕಾಗುವದೆಂದೂ, ಅವರ ವೆಚ್ಚವು ಸಾಧಾರಣವಾಗಿ ವರ್ಷಕ್ಕೆ ೧ ಲಕ್ಷ ರುಪಾಯಿಗಳವರೆಗೆ ಬರುವದೆಂದೂ, ಈ ವೆಚ್ಚವನ್ನು ದಂಗೆಗೆ ಕಾರಣರಾದ ಜನರೇ ಕೊಡಬೇಕಾಗುವದೆಂದೂ ಮುಂಬಯಿ ಸರಕಾರದವರು ಪ್ರಕಟಿಸಿದ್ದಾರೆ.

### ಇಹವೃತ್ತ.

## ೩೦೦೦ ಸಿಂದೀ ಗಿಡಗಳಿಗೆ ಅಳಿಗಾಲ.

ಬದಾಮಿ ತಾಲೂಕದಲ್ಲಿರುವ ಕೆರೂರ ಗ್ರಾಮದ ಸುತ್ತುಮುತ್ತಲಿರುವ ೩೦೦೦ ಸಿಂದೀ ಗಿಡಗಳನ್ನು ನಾಶಗೊಳಿಸುವದಕ್ಕಾಗಿ ಅವುಗಳ ಒಡೆಯರು ಅವುಗಳನ್ನು ಇಲ್ಲಿಯ ಸತ್ಯಾಗ್ರಹ ಮಂಡಳದವರ ಕಡೆಗೆ ಒಪ್ಪಿಸಿದ್ದು, ಈ ಸಿಂದೀ ಗಿಡಗಳನ್ನು ಕಡಿಯುವದಕ್ಕಾಗಿ ಇಲ್ಲಿಯ ಸತ್ಯಾಗ್ರಹ ಶಿಬಿರದಿಂದ ಕೆಲವು ಜನ ಸ್ವಯಂಸೇವಕರು ಇಂದು ೧೦ ಗಂಟೆಗೆ ಕೊಟ್ಟಿಯ ಮೇಲೆ ಹೋಗುವವರಿದ್ದಾರೆ. ಮತ್ತು ಅಲ್ಲಿ ಮೂರು ದಿನಗಳವರೆಗೆ ಕಳವೂರಿ ಅವುಗಳನ್ನೆಲ್ಲ ನಾಶಪಡಿಸುವವರಿದ್ದಾರೆ. ಈ ಪುಣ್ಯದ ಕಾರ್ಯದಲ್ಲಿ ಎಲ್ಲರೂ ಅವರೊಡನೆ ಸಹಕರಿಸಬೇಕಾಗಿ ವಿನಂತಿ

ಸ್ವಾತಂತ್ರ್ಯ ಸರಕಾರಕ್ಕೆ ಯಾವ ನೆರವನ್ನೂ ತೋರಿಸಲು ಬರುವ ಹಾಗಿಲ್ಲವೆಂದೂ ಈ ಮಂಡಳವು ಪ್ರಕಟಿಸುತ್ತದೆ. ಜನರಲ್ಲಿಯ ಉತ್ಸಾಹವನ್ನು ಕುಗ್ಗಿಸುವದೇ ಅಲ್ಲ ಇನ್ನೂ ದಂಡನೀತಿಯನ್ನು ಕೈಗೊಳಿಸಿದ್ದದರ ಕಾರಣವಾಗಿದೆಯೆಂದು ಈ ಮಂಡಳಕ್ಕೆ ಮನವರಿಕೆಯಾಗಿಹೋಗಿದೆ. [ಯಂಗ ಇಂಡಿಯಾದಿಂದ]

ಇವುಗಳಲ್ಲದೆ ಇನ್ನೂ ಐದು ನಿರ್ಣಯಗಳು ಮಂಡಳದ ವರಿಂದ ತೀರ್ಮಾನಿಸಲ್ಪಟ್ಟಿವೆ. ಅವು ಸೆರೆಯಾಳಾದ ಸ್ತ್ರೀಯರ ಹಾಗೂ ಅಖಿಲ ಭಾರತ ರಾಷ್ಟ್ರಸಭೆಯ ಸಭಾಸದರ ಅಭಿನಂದನೆ; ಅಖಿಲ ಭಾರತ ರಾಷ್ಟ್ರಸಭೆಗೆ ಪ್ರಾಂತಿಕ ಮಂಡಳದ ಸಭಾಸದರ ಆರಿಸುವಿಕೆ. ಶ್ರೀ. ದೇವಶಂಕರ ಜನ್ವೇರಿಯವರ ಮರಣದ ಬಗ್ಗೆ ದುಃಖ ಇವೇ ಮೊದಲಾದ ವಿಷಯಗಳಿಗೆ ಸಂಬಂಧಿಸಿದವುಗಳಾಗಿವೆ. ಸ್ಥಳ ಸಂಕೋಚದ ಮೂಲಕ ಅವುಗಳನ್ನು ಸಂಪೂರ್ಣವಾಗಿ ಕೊಟ್ಟಿಲ್ಲ.

## ಫೌಜದಾರರು ರಾಜೀನಾಮೆ ಕೊಟ್ಟರು

ದೇಶದಲ್ಲಿಯ ಸದ್ಯದ ಪರಿಸ್ಥಿತಿಯ ಮೂಲಕವಾಗಿ ತಮಗೆ ಇನ್ನುಮೇಲೆ ಸರಕಾರದ ಸೇವೆಯಲ್ಲಿರುವದು ಸಾಧ್ಯವಿಲ್ಲವೆಂಬುದಾಗಿ ಒಂದು ಪತ್ರವನ್ನು ಮೇಲಧಿಕಾರಿಗಳಿಗೆ ಬರೆದು ನಾಶಿಕದ ಫೌಜದಾರರಾದ ಶ್ರೀ. ಧನಾಜಿ ನಾನಾಜಿ ಚೌಧರಿಯವರು ತಮ್ಮ ಸರಕಾರಿ ಉದ್ಯೋಗಕ್ಕೆ ಶರಣು ಹೊಡೆದಿದ್ದಾರೆ. ಮೇಲಧಿಕಾರಿಗಳಾದ ಎಷ್ಟೋ ಜನರು ಅವರ ಮನವೊಲಿಸಲು ಪ್ರಯತ್ನಿಸಿದರು, ಆದರೆ ಅದು ಸಾಧ್ಯವಾಗಲಿಲ್ಲ. ಅವರು ಶೀಘ್ರದಲ್ಲಿಯೇ ಸಾಬರಮತಿ ಆಶ್ರಮಕ್ಕೆ ಹೋಗಿ ಅಲ್ಲಿ ಸೇರುವವರಿದ್ದಾರೆ.

### ಮೂರು ತಿಂಗಳುಗಳಲ್ಲಿ
## ೩೩೦೨ ಜನರಿಗೆ ಸೆರೆಮನೆ

ಮಾರ್ಚ ಮೊದಲನೆಯ ತಾರೀಖಿನಿಂದ ಮೇ ೩೧ ನೆಯ ತಾರೀಖಿಗೆ ಮುಗಿಯುವ ಮೂರು ತಿಂಗಳುಗಳ ಅವಧಿಯಲ್ಲಿ ಸತ್ಯಾಗ್ರಹ ಚಳವಳಿಯ ಮೂಲಕವಾಗಿ ೩೩೦೨ ಜನರು ಸೆರೆ ಹಿಡಿಯಲ್ಪಟ್ಟಿದ್ದು, ಅವರೆಲ್ಲರೂ ಈಗ ಶಿಕ್ಷೆಗಳನ್ನು ಅನುಭವಿಸುತ್ತಿರುವರೆಂದು ಭಾರತ ಮಂತ್ರಿಗಳಾದ ಮಿ| ಬೆನ್ನರು ಹೌಸ ಆಫ್ ಕಾಮನ್ಸ ಸಭೆಯಲ್ಲಿ ನುಡಿದಿದ್ದಾರೆ.

## ಶಾಲೆಗಳ ಮೇಲೆ
### ಮುಂಬಯಿ ಸರಕಾರದ ಗದೆ.

ಮುಂಬಯಿ ಸರಕಾರದವರು ಪ್ರಾಥಮಿಕ ಶಾಲೆಗಳ ಸಂಬಂಧವಾಗಿ ಒಂದು ಪ್ರಕಟಣಾ ಪತ್ರಿಕೆಯನ್ನು ತೆಗೆದರು, ಅದರಲ್ಲಿ "ಸದ್ಯದಲ್ಲಿ ನಡೆದ ರಾಜಕೀಯ ಚಳವಳಿಯಲ್ಲಿ ಸೇರಲು ವಿದ್ಯಾರ್ಥಿಗಳಿಗೆ ಎಷ್ಟೋ ಸಂಸ್ಥೆಗಳು ಉತ್ತೇಜನವನ್ನು ಕೊಡುತ್ತಿರುವವು. ಈ ಚಳವಳಿಯು ಬ್ರಿಟಿಶ ಸರಕಾರದ ವಿರುದ್ಧವಾಗಿ ನಡೆದದ್ದಾಗಿದೆ. ಆದುದರಿಂದ ಇಂಥಹ ಚಳವಳಿಗೆ ಲೋಕಲ್ ಬೋರ್ಡ, ಸ್ಕೂಲ ಬೋರ್ಡ ಮತ್ತು ಶಾಲಾಖಾತೆಯ ಕೆಲಸಗಾರರು ಸಹಾಯಮಾಡತಕ್ಕದ್ದಲ್ಲ. ಹೀಗೆ ಯಾರಾದರೂ ಸಹಾಯ ಮಾಡುತ್ತಿರುವರೆಂದು ಕಂಡುಬಂದಲ್ಲಿ, ಶಿಕ್ಷಣಖಾತೆಯ ಮೇಲಧಿಕಾರಿಗಳು ಅವರು, ಅವರ ವರ್ತನದ ವಿಷಯವಾಗಿ ಪ್ರಶ್ನೆಗಳನ್ನು ಕೇಳುವರು. ಆ ಪ್ರಶ್ನೆಗಳಿಗೆ ಅವರಿಂದ ಸರಿಯಾದ ಉತ್ತರ ಬಾರದಿದ್ದಲ್ಲಿ ಶಾಲೆಗೆ ಸರಕಾರದಿಂದ ಸಲ್ಲತಕ್ಕ ಹಣವು ನಿಲ್ಲಿಸಲ್ಪಡುವದು." ಎಂಬುದಾಗಿ ಕಂಡಿದ್ದಾರೆ.

## ಕಾಯದೆ ಮಂಡಳದ ದುಸ್ಥಿತಿ
### ಮಿ|| ವಾಚ್ಛಾ ಅವರೂ ಶರಣು ಹೊಡೆದರು.

ಮಿ|| ಕೆ. ಎಮ್. ಮುನಶಿಯವರು ರಾಜೀನಾಮೆಯನ್ನು ಕೊಟ್ಟಿದ್ದರಿಂದ ತೆರವಾದ ಮುಂಬಯಿ ಕಾಯದೆ ಮಂಡಳದ ಸ್ಥಳದಲ್ಲಿ ಮಿ| ವಾಚ್ಛಾ ಅವರು ಆರಿಸಿ ಹೋಗಿದ್ದರು. ಸ್ವಲ್ಪ ದಿವಸಗಳ ನಂತರದಲ್ಲಿಯೇ ಅವರೂ ತಮ್ಮ ಸಭಾಸದತ್ವಕ್ಕೆ ಶರಣು ಹೊಡೆದರು. ಆದರೆ ಅವರ ರಾಜೀನಾಮೆಯು ವೇಳೆಗೆ ಸರಿಯಾಗಿ ಮುಟ್ಟದಿದ್ದದರಿಂದ ಅವರ ಹೆಸರು ಗ್ಯಾಜಿಟದಲ್ಲಿ ಬಂದಿದೆ. ಮಿ| ವಾಚ್ಛಾ ಅವರು ಈಗ ಮತ್ತೆ ರಾಜೀನಾಮೆಯನ್ನು ಕಳಿಸುವರೆಂಬುದಾಗಿ ತಿಳಿಯುತ್ತದೆ.

### ಬಳಗಾನೂರಿನಲ್ಲಿ
## ರೇಲ್ವೆಯ ಅಪಘಾತ

**ಗಾಡಿಯು ಉರುಳಿಬಿದ್ದಿತು ೪ ಜನರು ಗಾಯಹೊಂದಿದರು.**

ಗದಗ ಹುಟಗಿ ರೇಲ್ವೆ ದಾರಿಯ ಮೇಲೆ ಬಳಗಾನೂರ ಹೊಂಬಳದ ನಡುವೆ ಜೂನ್ನ ೩೦-೩೧ ನೆಯ ರಾತ್ರಿ ೮ ಗಂಟೆಗೆ ಒಂದು ಪ್ಯಾಸೆಂಜರ ಬಂಡಿಯು ಉರುಳಿ ಬಿದ್ದಿತು. ೧ ಗಾರ್ಡ ಡಬ್ಬಿಯೂ ಡ್ರೈವ್ಹರನೂ ಉರುಳಿ ಬಿದ್ದವು. ಇಲೆಕ್ಟ್ರಿಕ್ ಟೆಲಿಗ್ರಾಫ ಇನಸ್ಪೆಕ್ಟರರೂ ಮೂವರು ಪ್ರವಾಸಿಕರೂ ಗಾಯಹೊಂದಿದರು. ಉಳಿದ ಪ್ರವಾಸಿಕರನ್ನು ಬೇರೊಂದು ಗಾಡಿಯಿಂದ ಮುಂದೆ ಸಾಗಿಸುವದರಲ್ಲಿ ಬಂದಿತು. ೧೨ ತಾಸುಗಳ ನಂತರದಲ್ಲಿ ಆ ಹಾದಿಯು ಸುಧಾರಿಸಲ್ಪಟ್ಟ ಬಳಿಕ ಗಾಡಿಗಳು ಓಡಾಡಹತ್ತಿದವು.

### ಶಿರಸಿಯ ಸುದ್ದಿ.

ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಮೋತೀಲಾಲಜಿಯವರನ್ನು ಹಿಡಿದ ಬಗ್ಗೆ ಊರಲ್ಲಿ ಇಡೀ ದಿವಸ ಹರತಾಳವು ಆಚರಿಸಲ್ಪಟ್ಟಿತು. ಸಂಜೆಯ ೬ ಘಂಟೆಗೆ ಒಳ್ಳೆ ವ್ಯಾಪಾರಿ ಸಭೆಯಾಯಿತು. ಈ ಮೊದಲೇ ಸ್ಥಾಪಿಸಿದ ವ್ಯಾಪಾರೀ ಸಂಘದ ಕಾಯದ ನಿಯಮಗಳು ಓದಲ್ಪಟ್ಟವು. ಪರದೇಶೀ ವಸ್ತ್ರ ಮತ್ತು ಬ್ರಿಟಿಶ ಮಾಲಿನ ಬಹಿಷ್ಕಾರದ ಠರಾವು ಪಾಸಾಗಿತ್ತು. ಶ್ರೀ ಮರಾಠೆ ಮತ್ತು ಶ್ರೀ ಬಾಡಕರಯ್ಯ ಇವರ ಮೇಲಿನ ಖಟ್ಲೆಯ ತೀರ್ಪು ತಾ|| ೯—೭—೧೯೩೦ ಕ್ಕೆ ಕೊಡುವದಾಗಿ ತಿಳಿಯುತ್ತದೆ.

ಸತ್ಯಾಗ್ರಹ ಶಿಬಿರ ಶಿರಸಿ } ಪ್ರಕಟಣಾ ಕಾರ್ಯಾಧಿಕಾರಿ.

---

ಈ ಪತ್ರಿಕೆಯು ಬಸವಂತ ಅಣ್ಣಾರಾವ ಮುಕ್ಕಣ್ಣವರ ಇವರಿಂದ ಬಾಗಲಕೋಟೆಯ
ವಿದ್ಯಾರಣ್ಯ ಮುದ್ರಣ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೬

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಮಂಗಳವಾರ ಮಿತಿ ಆಷಾಢ ಶುದ್ಧ ೧೪ ಶಕೆ ೧೮೫೨ ತಾ॥ ೮—೭—೩೦ [ ಸಂಚಿಕೆ ೯೫

## ಶ್ರೀ ಮಾಧವರಾವ ಅಣೆಯವರನ್ನು

### ಸೆರೆ ಹಿಡಿಯುವರಂತೆ!

### ಡಾ॥ ಮುಂಜೆಯವರು ಕಾಯದೆ ಭಂಗ ಮಾಡುವರು

ಮಧ್ಯಪ್ರಾಂತದಲ್ಲಿ ಅಡವಿಯ ಕಾನೂನಿನ ವಿರುದ್ಧವಾಗಿ ಸತ್ಯಾಗ್ರಹವು ಇದೇ ತಿಂಗಳದಲ್ಲಿ ತಾ॥ ೧೦ ಕೆ ಜೋರಿನಿಂದ ಪ್ರಾರಂಭವಾಗತಕ್ಕದ್ದಿದೆ. ಪುಸದ ಎಂಬ ಗ್ರಾಮವು ಆ ಸತ್ಯಾಗ್ರಹದ ರಣಕ್ಷೇತ್ರವಾಗಿ ಆರಿಸಲ್ಪಟ್ಟಿದ್ದು, ಅಲ್ಲಿ ಆ ಬಗ್ಗೆ ಸಿದ್ಧತೆಯು ಆಗಹತ್ತಿದೆ. ಒಂದು ಸತ್ಯಾಗ್ರಹ ಶಿಬಿರವು ಸ್ಥಾಪಿತವಾಗಿದೆ, ಅದರ ಹೊರತಾಗಿ ಯಾವತಮಾಳ, ಉಮರಾವತಿ, ಬುಲಢಾಣಾ ಮತ್ತು ಅಕೋಲಾ ಇವುಗಳಲ್ಲಿಯೂ ಶಿಬಿರಗಳು ಹೊರಟಿವೆ. ಆ ಸತ್ಯಾಗ್ರಹದ ಆರಂಭವನ್ನು ಶ್ರೀ ಮಾಧವರಾವ ಅಣೆಯವರು ಮಾಡತಕ್ಕವರಿದ್ದುದರಿಂದ ಅವರು ಹಾಗೆ ಮಾಡುವದರಕ್ಕಿಂತ ಪೂರ್ವದಲ್ಲಿಯೇ ಸರಕಾರದವರು ಅವರನ್ನು ಸೆರೆ ಹಿಡಿದುಕೊಂಡು ಹೋಗುವವರಿದ್ದಾರಾಗಿ ತಿಳಿಯುತ್ತದೆ. ಶ್ರೀ ಅಣೆಯವರು ಸೆರೆಯಾಳಾದಲ್ಲಿ ಅವರ ಸ್ಥಳದಲ್ಲಿ ಬೇರೆಯವರು ಹೋಗಿ ಆ ಸತ್ಯಾಗ್ರಹವನ್ನು ನಡಿಸತಕ್ಕವರಿದ್ದಾರೆ. ತಾ॥ ೧೭ ಕ್ಕೆ ಲೋಕಮಾನ್ಯರ ಜಯಂತಿಯುದ್ದರಿಂದ ಅಂದು ಡಾ॥ ಮುಂಜೆಯವರು ಮುಂದೆ ಬಂದು ಸತ್ಯಾಗ್ರಹಿಗಳ ತಂಡದ ನೇತೃತ್ವವನ್ನು ಸ್ವೀಕರಿಸಿ ಕಾಯದೆ ಭಂಗವನ್ನು ಮಾಡುವವರಿದ್ದಾರೆ.

### ಅಮೀನಗಡದಲ್ಲಿ

## ಸೆರೆ ಸಿಂದೀ ಪಿಕೆಟಿಂಗ

( ಸ್ವಂತ ಸುದ್ದಿಗಾರರಿಂದ )

ಅಮೀನಗಡದಲ್ಲಿ ತಾ॥ ೬ ಕ್ಕೆ ಸೆರೆ ಸಿಂದೀ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುವ ಕಾರ್ಯವು ಅಲ್ಲಿಯ ಉತ್ಸಾಹಿ ತರುಣರಿಂದ ಪ್ರಾರಂಭಿಸಲ್ಪಟ್ಟಿದೆ. ಈ ಪಿಕೆಟಿಂಗದ ಮೂಲಕವಾಗಿ ಅಂಗಡಿಯ ಬಾಗಿಲವು ಮುಚ್ಚಿ ಹೋಗಿದೆ. ಜಹಾದ ಅಂಗಡಿಯ ಮುಂದೆಯೂ ಪಿಕೆಟಿಂಗ ಪ್ರಾರಂಭವಾಗಿದೆ.

### ಗುಳೇದಗುಡ್ಡದಲ್ಲಿ ಗಾಂಧಿ ದಿನ

## ಸಿಂದೀ ಅಂಗಡಿಗಳು ಮುಚ್ಚಿಹೋದವು

( ನಮ್ಮ ಸ್ವಂತ ಸುದ್ದಿಗಾರರಿಂದ )

ಗುಳೇದಗುಡ್ಡದಲ್ಲಿ ಗಾಂಧೀ ದಿನವು ಒಳ್ಳೇ ಯಶಸ್ವಿಯಾಗಿ ಜರುಗಿತು. ಸಾಯಂಕಾಲದಲ್ಲಿ ಮಹಾತ್ಮರ ಭಾವಚಿತ್ರದ ಮೆರವಣಿಗೆಯು ಹೊರಟಿತ್ತು. ಸಂಜೆಯ ೭ ಗಂಟೆಗೆ ಮಹಾತ್ಮರ ಭಾವಚಿತ್ರದ ಅಧ್ಯಕ್ಷತೆಯಲ್ಲಿಯೇ ಸಾರ್ವಜನಿಕ ಸಭೆ ನೆರೆಯಿತ್ತು. ಮೂವರು ಸ್ವಯಂಸೇವಕರು ಮದ್ಯಪಾನ ನಿಷೇಧವನ್ನು ಕುರಿತು ಭಾಷಣಮಾಡಿದರು. ಗುಳೇದಗುಡ್ಡ ಮತ್ತು ಇಳಕಲ್ಲ ಈ ಗ್ರಾಮಗಳ ನೇಕಾರರ ಉದ್ಯೋಗಕ್ಕೆ ಈಗ ಧಕ್ಕೆಯು ಬರಹತ್ತಿದೆ. ಆದುದರಿಂದ ಆ ಉದ್ಯೋಗವನ್ನು ಉರ್ಜಿತಸ್ಥಿತಿಗೆ ತರಲು ಸದ್ಯದ ಪರಿಸ್ಥಿತಿಯಲ್ಲಿ ನೇಕಾರರು ಮಾಡತಕ್ಕ ಕರ್ತವ್ಯಗಳಾವವು? ಈ ವಿಷಯವಾಗಿ ಡಾ॥ ಇಂಗಳೇರವರು ಸಭೆಯಲ್ಲಿ ಭಾಷಣಮಾಡಿದರು. ನಂತರದಲ್ಲಿ ಶ್ರೀ ಜೋಶಿ ಗುಂಡೇರಾಯರ ಭಾಷಣವಾಗಿ ಸಭೆಯು ಮುಕ್ತಾಯವಾಯಿತು.

ಪಿಕೆಟಿಂಗದ ಮೂಲಕವಾಗಿ ಇಲ್ಲಿಯ ಎಲ್ಲ ಸಿಂದೀ ಅಂಗಡಿಗಳೂ ಮುಚ್ಚಿಹೋಗಿವೆ

### ಖಾದಿಯ ಸಲುವಾಗಿ

## ವಕೀಲಿಯ ಸನದು ರದ್ದಾಯಿತು

ಕಾಠೇವಾಡದಲ್ಲಿ ಮಾಂಗರೋಳ ವೆಂಬುದೊಂದು ಸಣ್ಣ ಸಂಸ್ಥಾನವಿದೆ. ಅಲ್ಲಿ ಸುಂದರಜಿ ಶಾಮಜಿ ಎಂಬೊರ್ವ ದೇಶಭಕ್ತ ವಕೀಲರಿರುವರು. ಅವರು ಯಾವಾಗಲೂ ಖಾದಿಯನ್ನೇ ಹಾಕುತ್ತಿರುವದು ಅಲ್ಲಿಯ ಯುವರಾಜರ ಮನಸ್ಸಿಗೆ ಬರಲಿಲ್ಲ. ಒಂದು ದಿವಸ ಯುವರಾಜರು ಅವರನ್ನು ಕರೆಯಿಸಿಕೊಂಡು ಅವರಿಗೆ ಈ ಬಗ್ಗೆ ಛೀ, ಥೂ, ಹಾಕಿದರು. ವಕೀಲರು ಖಾದಿಯನ್ನು ಧರಿಸುವದನ್ನೇನೂ ಬಿಡಲಿಲ್ಲ. ಇದನ್ನು ಕಂಡು ಯುವರಾಜರು ಅವರ ವಕೀಲಿಯ ಸನದನ್ನೇ ಕಸಿದುಕೊಂಡು ಬಿಟ್ಟರು. ಯುವರಾಜರು ಅವರಿಗೆ ಈಗ ತಮ್ಮ ಸಂಸ್ಥಾನದ ಹದ್ದಿಯನ್ನು ಬಿಟ್ಟು ಹೋಗಲು ತಿಳಿಸಿರುವರಾಗಿ ತಿಳಿಯುತ್ತದೆ.

### ಸಿರ್ಸಿಯು

## ಚೌಡನಾಯ್ಕರಿಗೆ ೧೫ ತಿಂಗಳ ಕಠಿಣ ಶಿಕ್ಷೆ.

ಸಿದ್ದಾಪುರದಲ್ಲಿ ಅಡವಿಯ ಕಾನೂನಿನ ಭಂಗದ ಸಲುವಾಗಿ ವ್ಯಾಖ್ಯಾನವನ್ನು ಕೊಟ್ಟ ಒಗ್ಗೆ ಸತ್ಯಾಗ್ರಹಿಗಳ ಮುಖಂಡರಾದ ಶ್ರೀ ಚೌಡನಾಯ್ಕರಿಗೆ ೧ ವರ್ಷ ಕಠಿಣ ಶಿಕ್ಷೆ. ಹಾಗು ೩೦೦ ರು. ದಂಡ, ದಂಡಕೊಡದಿದ್ದಲ್ಲಿ ಮತ್ತೆ ಮೂರು ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ.

### ಸಿರ್ಸಿಯಲ್ಲಿ

## ೧೬ ವರ್ಷದ ಹುಡುಗನಿಗೆ ೯ ತಿಂಗಳ ಶಿಕ್ಷೆ.

ಸಿರ್ಸಿಯಲ್ಲಿಯ ಸತ್ಯಾಗ್ರಹಿಯಾದ ಶ್ರೀ ಕೃಷ್ಣ ಸುಬ್ರಾವ ಮರಾಠೆ ಎಂಬ ೧೬ ವರ್ಷದ ಹುಡುಗನಿಗೆ ಅಡವಿಯ ಕಾನೂನಿನ ಭಂಗಕ್ಕಾಗಿ ೯ ತಿಂಗಳದ ಸಾದಾ ಶಿಕ್ಷೆಯು ಆಗಿದೆ.

### ಧಾರವಾಡದ ವಕೀಲರು

## ಸರಕಾರದ ಕೃತ್ಯವನ್ನು ನಿಷೇಧಿಸಿದರು.

ಧಾರವಾಡದ ವಕೀಲರು ತಾ|| ೪ ನೆಯ ದಿವಸ ಶ್ರೀ ಜೋಗಳೇಕರ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಿಕೊಂಡು, ಪಂಡಿತ ಮೋತಿಲಾಲ ನೆಹರೂರವರನ್ನು ಸೆರೆ ಹಿಡಿದುದಕ್ಕಾಗಿ ಸರಕಾರದ ಅವಿವೇಕತನದ ಕೃತಿಯನ್ನು ನಿಷೇಧಿಸಿದರು. ಮುಸಲ್ಮಾನರ ಮುಖಂಡರಾದ ಪಠಾಣ ವಕೀಲರೂ ಅದಕ್ಕೆ ಅನುಕೂಲ ಮತಕೊಟ್ಟರು. ಇಲ್ಲಿಯ ವಕೀಲರು!

## ಗಲಗಲಿಯಲ್ಲಿ ಪ್ರಚಂಡ ಹರತಾಳ.

### ಹೆಣ್ಣುಮಕ್ಕಳು ಪಿಕೆಟಿಂಗ ಮಾಡಿದರು.

(ಸತ್ಯಾಗ್ರಹ ಮಂಡಳದಿಂದ)

ಪಂಡಿತ ಮೋತೀಲಾಲ ನೆಹರು ಹಾಗು ಡಾ|| ಸಯ್ಯದ ಮಹಮ್ಮದರನ್ನು ಸೆರೆಹಿಡಿದ ಸುದ್ದಿಯು ೩ ನೆಯ ತಾ|| ದಿವಸ ಸಂಜೆಗೆ ಇಲ್ಲಿಗೆ ತಿಳಿಯಿತು. ಮರುದಿವಸ ಊರಿನ್ನೆಲ್ಲ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಚಹಾದ ಅಂಗಡಿಗಳೂ ಮುಚ್ಚಲ್ಪಟ್ಟಿದ್ದವು. ಅಂದು ಪೋಲಿಸರು ಬಹಳೇ ಪ್ರಯತ್ನ ಪಟ್ಟಾಗ್ಯೂ ಅವರಿಗೆ ಒಂದು ಗುಟಕು ಚಹವೂ ಕೂಡ ಸಿಗಲಿಲ್ಲ. ಉದ್ಯೋಗಸ್ಥರೂ, ವ್ಯಾಪಾರಸ್ಥರೂ ತಮ್ಮ ತಮ್ಮ ವ್ಯವಸಾಯಗಳನ್ನು ನಿಲ್ಲಿಸಿಬಿಟ್ಟಿದ್ದರು. ಇಲ್ಲಿಯ ಯಾವತ್ತೂ ಹೆಣ್ಣುಮಕ್ಕಳು ಶಾಲೆಗಳ ಮುಂದೆ ಪಿಕೆಟಿಂಗ ಮಾಡಿದ್ದರಿಂದ ಯಾವತ್ತೂ ಶಾಲೆಗಳು ಹಾಳು ಸುರಿಯುತ್ತಿದ್ದವು.

ಸಾಯಂಕಾಲದಲ್ಲಿ ಶ್ರೀ ಶಂಕರರಾವ ಪಂಡಿತ ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಪಂಡಿತ ಮೋತೀಲಾಲ ಹಾಗು ಡಾ|| ಸಯ್ಯದ ಮಹಮ್ಮದ ಇವರನ್ನು ಅಭಿನಂದಿಸುವದರಲ್ಲಿ ಬಂದಿತು. ಶ್ರೀ ನಾಗೇಶ ಭಟ್ಟರು ಅಭಿನಂದನಪರ ಭಾಷಣ ಮಾಡಿದರು. ಸರಕಾರದ ದಬ್ಬಾಳಿಕೆಯ ನಿಷೇಧವೆಂದು ಚಿಕ್ಕ ಬಾಲಕರು ಆಟಗಳನ್ನು ಬಿಟ್ಟುಬಿಡದೆ ನಡಿಸಬೇಕೆಂದು ನಿಶ್ಚಯಮಾಡಿಕೊಂಡು ಮುಂಜಾನೆಯಿಂದ ಸಂಜೆಯ ವರೆಗೆ ಅವುಗಳ ಮೇಲೆ ನೋಟವನ್ನು ತೆಗೆದರು.

### ಕೆರೂರಲ್ಲಿ

## ಸಾಯಮನ್ ವರದಿಗೆ ಕೊಳ್ಳೀ ಹಚ್ಚಿದರು.

(ಸ್ವಂತ ಸುದ್ದಿಗಾರರಿಂದ)

ಮ. ಹಾತ್ಮಾ ಗಾಂಧಿಯವರ ಬಂಧನ ದಿನದ ನಿಮಿತ್ತವಾಗಿ ಸಂಜೆಯ ೫|| ಗಂಟೆಗೆ ಮೆರವಣಿಗೆಯು ಹೊರಡಿಸಲ್ಪಟ್ಟಿತು. ಮೆರವಣಿಗೆಯು ಸ್ವಲ್ಪ ಮುಂದೆ ಸಾಗುವಷ್ಟರಲ್ಲಿ ಊರಲ್ಲಿಯ ಹುಡುಗರು ತಂಡಗಟ್ಟಲೆಯಾಗಿ ಬಂದು ಮೆರವಣಿಗೆಯಲ್ಲಿ ಸೇರಿಕೊಂಡರು. ಮೆರವಣಿಗೆಯು ಊರನ್ನೆಲ್ಲ ಸುತ್ತಿಕೊಂಡು ಮೋಟಾರಗಳು ನಿಲ್ಲುವ ಸ್ಥಳಕ್ಕೆ ಬಂದಿತು. ಅಲ್ಲಿ ಇಬ್ಬರು ಸತ್ಯಾಗ್ರಹಿಗಳು ಮದ್ಯಪಾನ ನಿಷೇಧವನ್ನು ಕುರಿತು ಭಾಷಣಮಾಡಿದರು. ಅವರ ಭಾಷಣ ಮುಗಿದ ಬಳಿಕ ಓರ್ವ ಸತ್ಯಾಗ್ರಹಿಯು ಸಾಯಮನ್ ವರದಿಗೆ ಕೊಳ್ಳೀ ಹಚ್ಚಿದನು. ನಂತರದಲ್ಲಿ ಓರ್ವ ಸತ್ಯಾಗ್ರಹಿಯ ಉಪನ್ಯಾಸಗಳಾದವು. ಬಳಿಕ ಸಭೆಯ ಕಾರ್ಯವು ಮುಕ್ತಾಯವಾಯಿತು.

## ಎಚ್ಚರ,

ಈಗ ಕಳೆದ ಒಂದೆರಡು ವಾರದಿಂದ ಹಲವರು ಗಿರಣಿಯ ನೂಲಿನ ತೀಕಗಳನ್ನು ಕೆಲವು ಕಡೆಗೆ ಮನಬಂದಂತೆ ಧಾರಣೆ ಏರಿಸಿಕೊಂಡು ಕೊಳ್ಳ ಹತ್ತಿರುವರು. ಅದರಿಂದ ತೀಕಿನ ಧಾರಣೆ ಏರಿ ಕಟ್ಟ ಹೋಗಿದೆ. ಆ ಧಾರಣೆಯಿಂದ ತೀಕು ಕೊಂಡುಕೊಂಡರೆ ಖಾದೀ ಮಾರಾಟಕ್ಕೆ ಪೂರೈಸುವದಿಲ್ಲ. ಹೀಗಿದ್ದರೂ ಹಲವರು ಗಿರಣೀ ನೂಲಿನಲ್ಲಿ ಈ ನೂಲನ್ನು ಮಿಶ್ರಮಾಡಿ ಬಟ್ಟೆ ಖಾದಿ ಸಿದ್ಧಮಾಡಿ ಮನೆಮನೆಗೆ ತಂದು ಮಾರಹತ್ತಿರುತ್ತಾರೆ. ಇದು ಶುದ್ಧ ಖಾದೀ ಎನಿಸುವದಿಲ್ಲ. ಆದಕಾರಣ ಖಾದೀ ಭಕ್ತರು ಇಂತಹ ಮೋಸಕ್ಕೆ ಒಳಗಾಗದೆ ಕಾಂಗ್ರೆಸ ಖಾದೀ ಭಾಂಡಾರದಿಂದಲೇ ಖಾದಿಯನ್ನು ಕೊಂಡುಕೊಳ್ಳಬೇಕಾಗಿ ಪ್ರಾರ್ಥನೆ ಇದೆ. ವಿಶ್ವಾಸಿಕರು ಯಾರಾದರೂ ತಂದುಕೊಟ್ಟಲ್ಲಿ ಅದರ ವಿಷಯವಾಗಿ ಒಳ್ಳೇ ಜಾಗರೂಕರಾಗಬೇಕಾಗಿ ವಿನಂತಿ. ಹಿಂದಿನ ಗಲಾಟೆಯಲ್ಲಿಯೂ ಇದೇ ಮಾದರಿಯ ಮೋಸವು ಹಲವು ಕಡೆಗೆ ನಡೆದಿತ್ತು. ಈಗಲೂ ಅದರಂತೆ ನಡೆದಿದೆ. ಕಾರಣ ಇದರ ಕಡೆಗೆ ಜನರು ಎಚ್ಚರದಿಂದ ಇರಬೇಕು.

ಬಾಗಲಕೋಟ ೪-೭-೧೯೩೦ { ಸಿದ್ದಪ್ಪರಾವ ಖಾದೀ ಸಂಚಾಲಕ ಕರ್ನಾಟಕ.

### ಕಾಠೇವಾಡ ಭಾಗದಲ್ಲಿ

## ಟೊಪ್ಪಿಗೆಯನ್ನೇ ಹಾಕಕೂಡದಂತೆ !

ಸರಕಾರದ ಯಾವ ಕಚೇರಿಗಳಲ್ಲಿಯೂ ಟೊಪ್ಪಿಗೆಗಳನ್ನು ಹಾಕಿಕೊಂಡು ಯಾರೂ ಕಾಲಿಡಕೂಡದೆಂಬುದಾಗಿ ಒಂದು ವಿಚಿತ್ರವಾದ ಅಪ್ಪಣೆಯನ್ನು ಕಾಠೆವಾಡದ ಮೊರವಿ ಮಹಾರಾಜರು ಹೊರಡಿಸಿದ್ದಾರೆ. ಗಾಂಧಿ ಟೊಪ್ಪಿಗೆಯನ್ನು ಪ್ರತಿಬಂಧಿಸುವದೇ ಈ ಅಪ್ಪಣೆಯ ಉದ್ದೇಶವಾಗಿದೆ. ಎಂತಹ ಅಮೋಘವಾದ ಮೆಂದುಸಪ್ಪ ಇವರದು !

### ಕಾಂಗ್ರೆಸ್ ವರ್ಕಿಂಗ ಕಮಿಟಿಯಲ್ಲಿ

# ಪಂ. ಮಾಲವೀಯರು ಸೇರಿದರು.

### ಮಾಲವೀಯರ ತಂತಿಗೂ ಸರಕಾರದ ತಡೆ.

ಕಾಂಗ್ರೆಸದ ಈಗಿನ ಸರ್ವಾಧಿಕಾರಿಗಳಾದ ಸರದಾರ ವಲ್ಲಭಭಾಯಿಯವರು ಪಂಡಿತ ಮಾಲವೀಯರಿಗೆ ಒಂದು ಪತ್ರ ಬರೆದಿದ್ದು ಅದರಲ್ಲಿ, ಸರಕಾರದವರು ವರ್ಕಿಂಗ ಕಮಿಟಿಯನ್ನು ಕಾಯಿದೆಗೆ ವಿರುದ್ಧವಾದ ಸಂಘವೆಂದು ನಿರ್ಣಯಿಸಿದ್ದುದನ್ನು ಉಪೇಕ್ಷಿಸಿ, ವರ್ಕಿಂಗ ಕಮಿಟಿಯಲ್ಲಿ ಸೇರಲು ನನ್ನ ಸಮ್ಮತಿಯನ್ನು ಪಡೆಯುವದಕ್ಕಾಗಿ ನೀವು ನನಗೊಂದು ಆ ಬಗ್ಗೆ ತಂತಿಯನ್ನು ಕಳಿಸಿರುವಿರೆಂಬುದು ವೃತ್ತಪತ್ರಗಳಲ್ಲಿ ಪ್ರಕಟವಾದ ಸುದ್ದಿಯಿಂದ ತಿಳಿದುಬಂದಿತು. ನೀವು ಕಳುಹಿಸಿದ ತಂತಿಯು ಇನ್ನೂ ವರೆಗೆ ನನ್ನ ಕೈಯಲ್ಲಿ ಬಂದಿಲ್ಲ ಬರಬಹುದಾದ ಆಶೆಯೂ ಇಲ್ಲ. ನೀವು ನೀಡಿದ ಸಹಾಯವನ್ನು ಹೃತ್ಪೂರ್ವಕವಾಗಿ ಸ್ವೀಕರಿಸಿ, ಪಂಡಿತ ಮೋತೀಲಾಲ ನೆಹರೂರವರು ಕಾರಾಗೃಹಕ್ಕೆ ತೆರಳಿದುದರಿಂದ ತೆರವಾದ ವರ್ಕಿಂಗ ಕಮಿಟಿಯಲ್ಲಿಯ ಸ್ಥಳಕ್ಕೆ ನಿಮ್ಮನ್ನು ಸಭಾಸದರನ್ನಾಗಿ ನಿಯಮಿಸಿದ್ದೇನೆ. ನೀವು ಈಗ ತೋರಿಸಿದ ಸ್ವದೇಶಪ್ರೀತಿಗಾಗಿ ಅಖಿಲ ಭಾರತವಾಸಿಗಳೆಲ್ಲರೂ ನಿಮ್ಮನ್ನು ಬಹುವಾಗಿ ಗೌರವಿಸುವರಾಗಿ ತಿಳಿಯುತ್ತೇನೆ'' ಎಂಬುದಾಗಿ ಕಾಣಿಸಿದ್ದಾರೆ.

## ಲಾಲಾ ದುನೀಚಂದರಿಗೆ ಕೈದು

ಪಂಜಾಬ ಪ್ರಾಂತದ ಮುಖಂಡರಲ್ಲೊಬ್ಬರೂ, ಲಾಹೋರದ ಪ್ರಸಿದ್ಧ ಬ್ಯಾರಿಸ್ಟರರೂ ಆದ ಲಾಲಾ ದುನೀಚಂದರನ್ನು ಕ್ರಿಮಿನಲ್ ಲಾ ಅಮೆಂಡಮೆಂಟ ಕಾಯದೆಯ ಪ್ರಕಾರ ಅಧಿಕಾರಿಗಳು ತಾ॥ ೩ ನೆಯ ದಿವಸ ರಾತ್ರಿಯಲ್ಲಿ ಸೆರೆಹಿಡಿದಿರುತ್ತಾರೆ. ಪಂಜಾಬ ಸತ್ಯಾಗ್ರಹ ಯುದ್ಧ ಮಂಡಳದ ಸಭಾಸದರಾದ ಮಹಮ್ಮದ ಶಾಫಿ, ಹಡಿಕಿ ಹಾಗು ಸೊಂಧಿ ಅವರಾದರೂ ಸೆರೆಹಿಡಿಯಲ್ಪಟ್ಟಿದ್ದಾರೆ.

## ಮೊದಲು ಮಹಾತ್ಮರ ಬಿಡುಗಡೆ

### ಆಮೇಲೆ ಒಪ್ಪಂದ

"ಮಹಾತ್ಮರನ್ನು ಬಿಡುಗಡೆ ಮಾಡದ ಹೊರತು ಶಾಂತಿಸ್ಥಾಪನಕ್ಕೆ ಆಸ್ಪದವೇ ಇಲ್ಲ" ಎಂಬುದಾಗಿ ಪೆಸರ್ ಬ್ರ್ಯಾಕ್‌ವೇಯವರು ಲಂಡನ್ನದಲ್ಲಿಯ ತಮ್ಮ ಒಂದು ಭಾಷಣದಲ್ಲಿ ಹೇಳಿದ್ದಾರೆ

### ಉಪ್ಪಿನ ಕಾಯದೆಭಂಗಕ್ಕಾಗಿ

### ಕ್ರಿಶ್ಚಿಯನ್ನನಿಗೆ ಕಠಿಣ ಶಿಕ್ಷೆ

ಸ್ವಯಂಸೇವಕರ ದಳದ ಮುಖಂಡರಾದ ಬಂಗಾಲ ಪ್ರಾಂತದ ಮಿರಜಾಪುರದ ಮಿ॥ ಜೆ ಎನ್. ವಿಲ್ಸನ್ ಅವರಿಗೆ ಉಪ್ಪಿನ ಕಾಯದೆಭಂಗಕ್ಕಾಗಿ ೬ ತಿಂಗಳದ ಕಠಿಣ ಶಿಕ್ಷೆಯಾಗಿದೆ.

### ವಿಜಾಪುರದಲ್ಲಿಯ ಲಿಂಗಾಯತರು

## ಕಾಂಗ್ರೆಸಕ್ಕೆ ಕೂಡುವರೋ ?

ವೀರಶೈವರು ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಳ್ಳಬೇಕೋ ಹೇಗೆ ಎಂಬ ವಿಷಯವನ್ನು ಕುರಿತು ಚರ್ಚಿಸುವದಕ್ಕಾಗಿ ತಾ॥ ೨ ನೆಯ ದಿವಸ ವಿಜಾಪುರದಲ್ಲಿ ಶೆಪರ್ಡ ಹಾಲಿನಲ್ಲಿ ರಾ. ಸಾ. ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ ಅಲ್ಲಿಯ ವೀರಶೈವರ ಸಭೆಯು ಸೇರಿತ್ತು. ಸಭೆಯಲ್ಲಿ ಶ್ರೀ. ಎಸ್. ಟಿ ಪಾಟೀಲ, ಗುರುಗುಂಟಿ, ಮರ.ಆರಾಧ್ಯಶಾಸ್ತ್ರಿ ಮತ್ತು ಚನಮಲ್ಲಪ್ಪ ಕುರ್ಲೆ ಮೊದಲಾದವರ ಭಾಷಣಗಳಾದವು. ಅಂದಿನ ಸಭೆಯಲ್ಲಿ ಏನೂ ನಿರ್ಧಾರವಾಗದ್ದರಿಂದ ಸಭೆಯು ತಾ॥ ೧೩ ಕ್ಕೆ ಮುಂದಕ್ಕೆ ಹಾಕಲ್ಪಟ್ಟಿತು. ವಿಜಾಪುರದ ವೀರಶೈವರು ಬಾಗಲಕೋಟೆಯವರನ್ನು ಹಿಂದಿಕ್ಕಬಹುದಲ್ಲವೇ?

## ಬೆಳಗಾವಿಯ ವಕೀಲರು ಎಚ್ಚತ್ತರು.

ತಾ॥ ೧ ಕ್ಕೆ ಸೇರಿದ ಬೆಳಗಾವಿಯ ವಕೀಲರ ಸಂಘದಲ್ಲಿ ಕೆಳಗಿನ ಗೊತ್ತು ಸ್ವೀಕೃತವಾಗಿದೆ.

"ಭಾರತ ರಾಷ್ಟ್ರಸಭೆಯ ತಾತ್ಕಾಲಿಕ ಅಧ್ಯಕ್ಷರಾದ ಪಂಡಿತ ಮೋತೀಲಾಲ ನೆಹರೂರವರನ್ನೂ ಹಾಗೂ ಅವರ ಕಾರ್ಯದರ್ಶಿಗಳಾದ ಡಾ॥ ಸಯ್ಯದ ಮಹಮ್ಮದರನ್ನೂ ತಾ॥ ೩೦ ನೆಯ ದಿವಸ ೧೧೭ ನೆಯ ಕಲಮಿನನ್ವಯ ಸೆರೆಹಿಡಿದುದರ ಮತ್ತು ಅಖಿಲ ಭಾರತ ರಾಷ್ಟ್ರಸಭೆಯ ಕಾರ್ಯಕಾರೀ ಮಂಡಳವನ್ನು ಕಾಯಿದೆಗೆ ವಿರುದ್ಧವಾದ ಸಂಘವೆಂದು ನಿರ್ಣಯಿಸಿದುದರ ಸುದ್ದಿಯನ್ನು ಕೇಳಿ ಈ ಸಂಘಕ್ಕೆ ಅತ್ಯಂತ ವಿಷಾದವಾಗಿದೆ. ಈ ಸಂಘವು ಸರಕಾರದ ಈ ಅವಿವೇಕತನದ ಕೃತಿಯನ್ನು ಸಂಪೂರ್ಣವಾಗಿ ನಿಷೇಧಿಸುತ್ತದಲ್ಲದೆ, ಸದ್ಯದ ಪರಿಸ್ಥಿತಿಯಲ್ಲಿ ಇಂತಹ ಕೃತಿಗಳಿಂದ ಭಯಂಕರ ಪರಿಣಾಮಗಳಾಗುವ ಸಂಭವವಿರುವದರಿಂದ ತಮ್ಮ ನಿರ್ಣಯವನ್ನು ಸರಕಾರದವರು ಪುನಃ ವಿಚಾರಿಸಬೇಕೆಂದು ಈ ಸಂಘವು ಅವರನ್ನು ಪ್ರಾರ್ಥಿಸುತ್ತದೆ."

## ಮಿರಜೆಯ ಶ್ರೀ. ಶಿಖಾರೆಯವರಿಗೆ ೨೦ ದಿವಸ ಶಿಕ್ಷೆ

ಅಧಿಕಾರಿಗಳ ಅಪ್ಪಣೆಯ ವಿರುದ್ಧವಾಗಿ ಕೂಡಿದ ಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ಪುಣೆಯ ಶ್ರೀ ದಿವೇಕರರಿಗೆ ಸ್ವದೇಶಿಯ ಮೇಲೆ ವ್ಯಾಖ್ಯಾನ ಕೊಡಲು ಅವಕಾಶಕೊಟ್ಟಿದ್ದುದಕ್ಕಾಗಿ ಮಿರಜೆಯ ಶ್ರೀ. ಶಿಖಾರೆಯವರಿಗೆ ೨೦೦-ರು. ದಂಡ ಇಲ್ಲವೆ ೨೦ ದಿವಸಗಳ ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿದೆ. ಶ್ರೀ. ಶಿಖಾರೆಯವರು ದಂಡವನ್ನು ಕೊಡದೆ ತುರಂಗಕ್ಕೆ ಹೋದರು.

## ಖೋರಸಾಯಿಯಲ್ಲಿ ಗೋಳೀಬಾರು

ಬಂಗಾಲ ಪ್ರಾಂತದಲ್ಲಿ ದಿನಾಜಪುರ ಜಿಲ್ಹೆಯಲ್ಲಿ ಖೋರಸಾಯಿ ಎಂಬುದೊಂದು ಹಳ್ಳಿಯುಂಟು. ಅಲ್ಲಿ ಚೌಕಿದಾರ ಕರಿಗೆಯ ನಿರಾಕರಣೆಯ ಚಳವಳಿಯು ಬಹು ಜೋರಿನಿಂದ ನಡೆದಿದ್ದುದರಿಂದ ಎಷ್ಟೋ ಜನರು ಕರಿಗೆಯನ್ನು ಕೊಟ್ಟಿರುವದಿಲ್ಲ. ಒಂದು ದಿವಸ ಸಬ್ ಡೆಪ್ಯುಟಿ ಮ್ಯಾಜಿಸ್ಟ್ರೇಟರು ತಮ್ಮ ಸಂಗಡ ಒಂದು ದಳವನ್ನು ತೆಗೆದುಕೊಂಡು ಕರಿಗೆಯನ್ನು ವಸೂಲ ಮಾಡಲೂ ಹಾಗೂ ಕೊಡದಿದ್ದವರ ಸಾಮಾನುಗಳನ್ನು ಜಪ್ತ ಮಾಡಲೂ ಅಲ್ಲಿಗೆ ಹೋದರು. ಹಳ್ಳಿಯ ಜನರೆಲ್ಲರೂ ಒಟ್ಟಿಗೆ ಸೇರಿ ತಾವು ಕರಿಗೆಯನ್ನು ಕೊಡುವದಿಲ್ಲವಾಗಿ ಅಧಿಕಾರಿಗಳ ಮುಂದೆ ಸ್ಪಷ್ಟವಾಗಿ ಹೇಳಿದರು. ಅದಕ್ಕಾಗಿ ಅಧಿಕಾರಿಗಳು ರೊಚ್ಚಿಗೆದ್ದು ಅವರ ಮುಖಂಡರನ್ನು ಸೆರೆಹಿಡಿದೊಯ್ದರು. ಮರುದಿವಸ ಆ ಪೋಲೀಸರೇ ಹೆಚ್ಚು ಜನ ಪೋಲೀಸರೊಂದಿಗೆ ಅಲ್ಲಿಗೆ ಹೋಗಿ ಮನೆಗಳನ್ನು ಜಪ್ತ ಮಾಡಹತ್ತಿದ್ದಲ್ಲದೆ, ಮನೆಯೊಳಗಿನ ಸಾಮಾನುಗಳನ್ನು ನಾಶಮಾಡಹತ್ತಿದರು. ಹಳ್ಳಿಯ ಜನರು ಅದನ್ನು ಕಂಡು ಸಿಟ್ಟಿಗೆದ್ದು ಅವರ ಮೇಲೆ ಕಲ್ಲುಗಳನ್ನು ಒಗೆಯಹತ್ತಿದರು. ಪೋಲೀಸರು ಗೋಳೀಬಾರ ಮಾಡಿದರು. ಒಬ್ಬನು ಮರಣ ಹೊಂದಿದನು, ಅನೇಕರು ಗಾಯ ಹೊಂದಿದ್ದಾರೆ.

### ಪೋಲೀಸನೇ ಕಲ್ಲುಗಳನ್ನು ಒಗೆದನು

ಕಟನಿಯೆಂಬ ಗ್ರಾಮದಲ್ಲಿ ಪ್ರತಿನಿತ್ಯದಲ್ಲಿಯೂ ಸಭೆಗಳು ಜರುಗುತ್ತಿದ್ದವು. ಹೀಗೆ ಪ್ರತಿನಿತ್ಯ ಸಭೆಗಳು ಜರಗುತ್ತಿರುವದನ್ನು ಕಂಡು ಓರ್ವ ಪೋಲೀಸನು ಬೇಸತ್ತು ಗೊಂದಲ ಹಾಕಹತ್ತಿದನು. ಅವನು ಒಂದೇ ಸವನೆ ೩ ದಿವಸ ಸಭೆಯಲ್ಲಿ ಸೇರಿದವರ ಮೇಲೆ ಮರೆಯಲ್ಲಿ ನಿಂತು ಕಲ್ಲುಗಳನ್ನೆಸೆಯುತ್ತಿದ್ದನು. ಸಭೆಯಲ್ಲಿ ನೆರೆದವರಿಗೆ ಕಲ್ಲುಗಳನ್ನು ಯಾರು ಎಸೆಯುತ್ತಿರುವರೆಂಬುದು ತಿಳಿದು ಬರಲಿಲ್ಲ. ಸ್ವಯಂಸೇವಕರು ಅವನ ಶೋಧದಲ್ಲಿಯೇ ತೊಡಗಿದ್ದರು. ಒಂದು ದಿವಸ ಮೆರವಣಿಗೆಯು ಹೊರಟಿತ್ತು. ಮೆರವಣಿಗೆಯು ಸಾಗುವಾಗ ಓರ್ವನು ಕತ್ತಲೆಯಲ್ಲಿ ಕಲ್ಲು ಆರಿಸಿಕೊಳ್ಳುತ್ತಿರುವದು ಒಬ್ಬ ಸ್ವಯಂ-ಸೇವಕನಿಗೆ ಕಂಡು ಬಂದಿತು. ಕೂಡಲೆ ಅವನು ಕಲ್ಲನ್ನು ಆರಿಸಿಕೊಳ್ಳುವವನ ಬಳಿಗೆ ಹೋಗಿ ಅವನನ್ನು ಹಿಡಿದನು. ಅವನು ಬಿಡಿಸಿಕೊಂಡು ಹೋಗುವ ಉದ್ದೇಶದಿಂದ ಸ್ವಯಂಸೇವಕನನ್ನು ಕಡಿದನು. ಸ್ವಯಂಸೇವಕನು ಚಿಟ್ಟನೆ ಚೀರಿದನು. ಅದನ್ನು ಕೇಳಿ ಉಳಿದ ಸ್ವಯಂಸೇವಕರು ಅಲ್ಲಿ ನೆರೆದರು ಮತ್ತು ಅವನನ್ನು ಫೌಜದಾರರ ಮುಂದೆ ಒಯ್ದು ನಿಲ್ಲಿಸಿದರು. ಅಲ್ಲಿ ಹೋದ ಬಳಿಕ ಅವನು ಒಬ್ಬ ಪೋಲೀಸನಿರುವನೆಂದು ತಿಳಿದು ಬಂದಿತು. ಫೌಜದಾರರೂ ಅದನ್ನು ಒಪ್ಪಿಕೊಂಡರು. ಆದುದರಿಂದ ಜನರು ಅವನನ್ನು ಕ್ಷಮಿಸಿ, ತಾವು ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು. ಶಾಂತತಾ ರಕ್ಷಣೆಗಾಗಿ ನಿಯಮಿಸಲ್ಪಟ್ಟವರೇ ಹೇಗೆ ಗೊಂದಲ ಹಾಕುತ್ತಿರುವರೆಂಬುದು ಇದರಿಂದ ತಾನಾಗಿಯೇ ತಿಳಿದುಬರುವದು.

### ಸತ್ಯಾಗ್ರಹ ಸಮರಕ್ಕೆ

## ೨೦೦೦ ಜನರು ಆಹುತಿಯಾದರು

ಮಹಾತ್ಮಾ ಗಾಂಧಿಯವರು ಪ್ರಾರಂಭಿಸಿದ ಸತ್ಯಾಗ್ರಹ ಯುದ್ಧವು ಸುರುವಾದಂದಿನಿಂದ ಕೇವಲ ಪಂಜಾಬ ಪ್ರಾಂತದಿಂದ ಈ ಸತ್ಯಾಗ್ರಹ ಸಮರಕ್ಕೆ ಈ ವರೆಗೆ ೨೦೦೦ ಕ್ಕಿಂತ ಹೆಚ್ಚು ಜನರು ಆಹುತಿಯಾಗಿರುವರಾಗಿ ತಿಳಿಯುತ್ತದೆ.

### ಸುರತದಲ್ಲಿ

## ಪರದೇಶಿ ಬಟ್ಟೆಗಳ ಬಹಿಷ್ಕಾರ

ಮಹಾತ್ಮಾ ಗಾಂಧಿಯವರ ಪತ್ನಿಯವರಾದ ಶ್ರೀಮತಿ ಕಸ್ತೂರಿ ಬಾಯಿಯವರ ನೇತೃತ್ವದಲ್ಲಿ ಸುರತದಲ್ಲಿ ಪರದೇಶಿ ಬಟ್ಟೆಗಳ ಅಂಗಡಿಗಳ ಮುಂದೆ ಪಿಕೆಟಿಂಗು ಮಾಡುವ ಕಾರ್ಯವು ಪ್ರಾರಂಭವಾಗಿದೆ. ಪಿಕೆಟಿಂಗದ ಪರಿಣಾಮವೆಂದರೆ ಮೋಟ ಮಂದಿರದ ವ್ಯಾಪಾರಿಗಳು ತಮ್ಮ ತಮ್ಮ ಅಂಗಡಿಗಳನ್ನು ೫ ದಿವಸಗಳವರೆಗೆ ಮುಚ್ಚಿಬಿಡಲು ನಿರ್ಧರಿಸಿಕೊಂಡು, ಮುಂದಿನ ಯೋಜನೆಯ ಬಗ್ಗೆ ತಮ್ಮ ತಮ್ಮೊಳಗೆ ವಿಚಾರ ನಡಿಸಿದ್ದಾರೆ.

---

## ಜಮೀನು ಕೊಳ್ಳುವವರಿಗೆ ಸುಸಂಧಿ.

ಕೆಳಗೆ ಸಹಿ ಮಾಡುವವನ ಕಡಿಂದ ಎಲ್ಲ ಸಾರ್ವರಿಗೆ ತಿಳಿಸುವದರಲ್ಲಿ ಬರುವದೇನಂದ್ರೆ——ಬಾಗಲಕೋಟೆ ತಾಲೂಕ ಪೈಕಿ ಕೋಳಮಟ್ಟಿ ಗ್ರಾಮದಲ್ಲಿರುವ ಹಣಮಂತರಾವ ದೊಡ್ಡ ಭೀಮರಾವ ದೇಶಪಾಂಡೆ ಕೇಸನೂರ, ಸಾ॥ ಪುಣೆ ಇವರ ಖಾಸರಾತ ಇನಾಮು ಜಮೀನು (ಅಚ್ಯುತರಾವ ಜಮೀನ) ದ॥ ಸರ್ವೆ ನಂಬರ (೮೩) ಯಕರ (೨೦೪೩೬) ಆಕಾರ ರೂಪಾಯಿ (೧೭) ಇದನ್ನು ಮಾರಾಟ ಮಾಡುವದಿದೆ. ಯಾರಿಗಾದರೂ ತಕ್ಕೊಳ್ಳುವದಿದ್ದರೆ ಕೆಳಗೆ ಸಹಿಮಾಡುವವರ ಕಡೆಗೆ ಬಂದು ಭೆಟ್ಟಿಯಾಗಬೇಕು.

ಬಾಗಲಕೋಟೆ ತಾ॥ ೪-೭-೩೦ { ರಾಮಚಂದ್ರ ಹಣಮಂತರಾವ ಸವಣೂರ. ಬಾಳಕೃಷ್ಣದಾಸ ಪಂಢರದಾಸ ಇವರ ಮನೆಯ ಹತ್ತಿರ

---

**ಶುದ್ಧ ಖಾದಿ! ಶುದ್ಧ ಖಾದಿ!**

ನಮ್ಮಲ್ಲಿ ಕೈನೂಲು ಕೈಮಗ್ಗದ ಶರ್ಟಿಂಗ, ಕೋಟಿಂಗ, ಧೋತರ ಮೊದಲಾದ ಎಲ್ಲ ತರದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಗ್ರಾಹಕರು ಲಾಭ ಪಡೆಯಬೇಕಾಗಿ ವಿನಂತಿ.

ಶಂಕರಪ್ಪಾ ಬಣಾಗಾರ

ಜವಳಿ ವ್ಯಾಪಾರಿಗಳು, ಬಾಗಲಕೋಟೆ

---

ಈ ಪತ್ರಿಕೆಯು ಬಸವಂತ ಅಣ್ಣಾರಾವ ಮುಖಾಂಡದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅದರಿಂದಲೇ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ · ನಿತ್ಯಸಂಚಿಕೆಯು. · ಬೆಲೆ ೦—೦—೬

सर्वं परवशं दुःखं । सर्वमात्मवशं सुखम् ॥ — मनु
ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ
ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಗುರುವಾರ ಮಿತಿ ಆಷಾಢ ಶುದ್ಧ ೧೫ ಶಕೆ ೧೮೫೨ ತಾ॥ ೧೦—೭—೩೦ [ ಸಂಚಿಕೆ ೯೬

ಶ್ರೀ. ಗುರುರಾಯರ

## ಸಂದೇಶ

'ಧರಸಾನಾ, ವಡಾಲಾ ಮೊದಲಾದ ಕಡೆಗಳಲ್ಲಿಯ ಸ್ವಯಂಸೇವಕರು ಅಧಿಕಾರಿಗಳ ಡೊಣ್ಣೆಗಳಿಗೆ ತುತ್ತಾಗಿ ಗಾಯಗಳನ್ನು ಹೊಂದಿರುವರು. ಅಂತಹ ಸುಸಂಧಿಯು ನನಗೆ ಸಿಕ್ಕಿದ್ದರೆ ಒಳಿತಾಗುತ್ತಿತ್ತು. ತುರಂಗವಾಸವು ಅದರ ಮುಂದೆ ಕಃಪದಾರ್ಥವು. ದಬ್ಬಾಳಿಕೆಗೆ ಜನರು ಬೆದರುವರೆಂದು ಅಧಿಕಾರಿಗಳು ತಿಳಿದುಕೊಂಡಿರುವಂತಿದೆ. ಆದರೆ ಅದು ಶುದ್ಧ ಭ್ರಮೆ. ಬಾಗಲಕೋಟೆಯ ತರುಣರಲ್ಲಿ ನನಗೆ ಸಂಪೂರ್ಣ ವಿಶ್ವಾಸವಿದೆ. ಅವರು ರಾಷ್ಟ್ರಕಾರ್ಯದಲ್ಲಿ ಮುಂದಾಗಿ ಬಿದ್ದು ಅಧಿಕಾರಿಗಳ ಡೊಣ್ಣೆಗಳಿಗೆ ತಮ್ಮ ತಲೆಗಳನ್ನೊಡ್ಡಲಿ. ಅಷ್ಟು ಧೈರ್ಯವನ್ನು ತೋರಿಸುವದಾಗದಿದ್ದರೆ, ಪಿಕೆಟಿಂಗ, ವಿದೇಶಿ ವಸ್ತ್ರಬಹಿಷ್ಕಾರ ಮೊದಲಾದ ಕಾರ್ಯಗಳನ್ನು ಕೈಕೊಂಡು ಅವರು ಸೆರೆಮನೆಗೆ ಹೋಗಲಿ''

ಬಾಗಲಕೋಟೆಯ
ಬಿಸಿನೆತ್ತರದ ಕನ್ನಡ ತರುಣರಾದ

## ಜೋರಾಪುರ ಗುರುರಾಯರು.

ನಮ್ಮೆಲ್ಲರ ಸಲುವಾಗಿ ಕಾರಾಗೃಹದಲ್ಲಿ ಕುಳಿತು ಇಂದಿಗೆ ಒಂದು ತಿಂಗಳು ಸಂದಿತು.

ಶ್ರೀ. ಗುರುರಾಯರ

## ವಾಙ್ಮೂಲ

''ನನಗೆ ಮಾನ್ಯರಾದ ಹಿಂದೀಯರಾದ ಮಾಮಲೇದಾರರಂತಹವರು ಸುಳ್ಳು ಖಟ್ಲೆಯ ವಿಚಾರಣೆಗೂ, ಪ್ರೊಸಿಕ್ಯೂಟರರು ಅದನ್ನು ನಡಿಸಲೂ, ಫೌಜದಾರರಂತಹವರು ಪಟ್ಟಿಯನ್ನು ಸಿದ್ಧಪಡಿಸಲೂ, ಸಾಕ್ಷಿದಾರರು ಒಂದೆರಡು ರೂಪಾಯಿ ಲಂಚದ ಸಲುವಾಗಿ ಸಾಕ್ಷಿಯನ್ನು ಹೇಳಲೂ ಮತ್ತು ತಾವು ತಮ್ಮ ಕರ್ತವ್ಯವನ್ನು ಮಾಡಿರುತ್ತೇವೆಂದು ಸಮಾಧಾನ ಹೆಚ್ಚಿಕೊಳ್ಳಲೂ ಸಿದ್ಧರಿರುವ ವರೆಗೆ ಈ ಕೋರ್ಟಿನಲ್ಲಿ ನ್ಯಾಯವು ಸಿಗುವದಿಲ್ಲವೆಂದು, ಸ್ವಾಭಿಮಾನಿಗಳು ಈ ವಿಚಾರಣೆಯಲ್ಲಿ ಯಾವ ತರಹದ ಭಾಗ ತೆಗೆದುಕೊಳ್ಳಲಿಚ್ಛಿಸುವದಿಲ್ಲವಾದ್ದರಿಂದ ನಾನು ಈ ವಿಚಾರಣೆಯಲ್ಲಿ ಯಾವ ತರಹದ ಭಾಗವನ್ನು ತೆಗೆದುಕೊಳ್ಳಲಾರೆ. ರಾಜದ್ರೋಹವನ್ನು ಪ್ರಸಾರ ಮಾಡುವದೇ ನನ್ನ ಉದ್ಯೋಗವಾಗಿರುತ್ತದೆ.''

## ಮಹಾತ್ಮರೊಡನೆ ಮಂತ್ರಿಗಳ ಒಪ್ಪಂದ

ಇಂಗ್ಲಂಡದಲ್ಲಿಯ ಮಿತ್ರ ಸಂಘದ ಓರ್ವ ಸಭಾಸದರು ಮಂತ್ರಿಗಳಾದ ಮ್ಯಾಕಡೊನಾಲ್ಡರ ಸಂದೇಶವಾಹಕರಾಗಿ ಇಲ್ಲಿಗೆ ಬಂದು ಮಹಾತ್ಮಾ ಗಾಂಧಿಯವರನ್ನು ಕಂಡು ಅವರೊಡನೆ ಒಪ್ಪಂದದ ವಿಷಯವಾಗಿ ಚರ್ಚಿಸುವರೆಂದು ಈಗ ತಿಳಿದು ಬರುತ್ತದೆ.

ಗಾಂಧಿ ಟೊಪ್ಪಿಗೆಗಾಗಿ

## ೬೦೩ ಜನರಿಗೆ ಸೆರೆಮನೆ

ಗುಂಟೂರಿನ ಡಿ| ಮ್ಯಾಜಿಸ್ಟ್ರೇಟರು ಗಾಂಧಿ ಟೊಪ್ಪಿಗೆಯ ವಿರುದ್ಧವಾಗಿ ಹೊರಡಿಸಿದ ಆಜ್ಞೆಯನ್ನು ಮುರಿದು ಟೊಪ್ಪಿಗೆಗಳನ್ನು ಹಾಕಿಕೊಂಡಿದ್ದುದಕ್ಕಾಗಿ ಈ ವರೆಗೆ ಅಲ್ಲಿ ೬೦೩ ಜನರು ಸೆರೆಹಿಡಿಯಲ್ಪಟ್ಟಿರುವರಾಗಿ ತಿಳಿಯುತ್ತದೆ.

# ಪುಣೆಯಲ್ಲಿ ಬಡಿಗೆಯ ರಾಜ್ಯದ ಆರಂಭ

## ಪೋಲೀಸರು ಸತ್ಯಾಗ್ರಹಿಗಳನ್ನು ಥಳಿಸಿದರು.

ಮಹಾತ್ಮಾ ಗಾಂಧಿಯವರನ್ನು ಸರಕಾರದವರು ಸೆರೆಯಲ್ಲಿಟ್ಟು ಮೊನ್ನಿನ ೫ ನೆಯ ತಾ|| ಗೆ ಎರಡು ತಿಂಗಳುಗಳಾದವು. ಆ ದಿನದ ಸ್ಮರಣಾರ್ಥವಾಗಿ, ಪುಣೆಯ ಸತ್ಯಾಗ್ರಹ ಮಂಡಳದವರು ಎರವಡೆಯ ತುರಂಗದ ವರೆಗೆ ಮೆರವಣಿಗೆಯನ್ನು ತೆಗೆದುಕೊಂಡು ಹೋಗಿ, ಅಲ್ಲಿ ತುರಂಗದ ಬಾಗಿಲದಲ್ಲಿ ಮಹಾತ್ಮರ ಹೆಸರಿನಿಂದ ಪುಷ್ಪ ಹಾರಗಳನ್ನು ಅರ್ಪಿಸಿ ಬರಬೇಕೆಂದು ಯೋಚಿಸಿಕೊಂಡಿದ್ದರು. ನಿರ್ಧಾರದಂತೆ ನಿರಿಸಿ ೫ ನೆಯ ತಾ|| ದಿವಸ ಮಧ್ಯಾಹ್ನ ೨ ಗಂಟೆಗೆ ಮೆರವಣಿಗೆಯನ್ನು ಹೊರಡಿಸಿದರು. ಪ್ರಾರಂಭಕ್ಕೆ ಮೆರವಣಿಗೆಯಲ್ಲಿ ೫೦ ಜನ ಸ್ತ್ರೀಯರೂ, ೨೦೦ ಜನ ಸ್ವಯಂಸೇವಕರೂ ಮತ್ತು ಬೇರೆ ಜನರೂ ಸಮಾವಿಷ್ಟರಾಗಿದ್ದರು. ಮೆರವಣಿಗೆಯು ಬಂಡ ಗಾರ್ಡನದ ಪೂಲನ್ನು ಮುಟ್ಟುವದರೊಳಗಾಗಿಯೇ ಪೋಲೀಸ ಅಧಿಕಾರಿಗಳು ಅದನ್ನು ತಡೆದರು. ಮೆರವಣಿಗೆಯನ್ನು ಶಾಂತತೆಯಿಂದ ಒಯ್ಯುವೆನೆಂದು ಸತ್ಯಾಗ್ರಹ ಮಂಡಳದವರು ಹೇಳಿಕೊಂಡರೂ ಪೋಲೀಸರು ಅವರನ್ನು ಮುಂದಕ್ಕೆ ಬಿಡಲಿಲ್ಲ. ಸತ್ಯಾಗ್ರಹಿಗಳು ತಮ್ಮ ಹಟವನ್ನು ಬಿಡದೆ ಅಲ್ಲಿಯೇ ನಿಂತು ಸತ್ಯಾಗ್ರಹ ಹೂಡಿದರು.

ಈ ಸುದ್ದಿಯು ಜನರಿಗೆ ತಿಳಿದ ಕೂಡಲೆ ಜನರು ತಂಡ ತಂಡವಾಗಿ ಹೋಗಿ ಮೆರವಣಿಗೆಯಲ್ಲಿ ಸೇರಿಕೊಂಡರು. ಜನ ಸಂದಣಿಯು ೩೦೦೦ ಕ್ಕೆ ಮಿಕ್ಕಿತು. ಅವರು ಮಹಾತ್ಮಾ ಗಾಂಧಿ ಹಾಗು ಲೋಕಮಾನ್ಯರ ಜಯಘೋಷಗಳನ್ನು ಉಚ್ಚರಿಸುತ್ತ ಅತ್ಯಂತ ಶಾಂತತೆಯಿಂದ ನಿಂತುಕೊಂಡರು. ವ್ಯಾಪಾರಿ ವರ್ಗದವರು ಸತ್ಯಾಗ್ರಹಿಗಳಿಗೆ ಚುರಮುರಿ, ಬೆಲ್ಲ, ಫುಠಾಣಿ ಮತ್ತು ಬೆಂಡುಬತ್ತಾಸಗಳನ್ನು ಒಯ್ದುಕೊಟ್ಟರು.

"ಮೆರವಣಿಗೆಯಿಂದ ನಿಮ್ಮನ್ನು ಹೋಗಗೊಡುವದಿಲ್ಲ. ಬೇಕಾದರೆ ನಾಲ್ಕು ನಾಲ್ಕು ಜನರಂತೆ ಹೋಗಿರಿ" ಎಂದು ಪೋಲೀಸರು ಹೇಳಿದರು. ಈ ಸಂಧಿಯನ್ನು ಸಾಧಿಸಿ ನಾಲ್ಕೈದು ನೂರು ಜನರು ತುರಂಗದ ಹತ್ತರ ಹೋದರು. ಅಲ್ಲಿ ಸಭೆ ಜರುಗಿಸಿದರು. ಭಜನೆ ಮೊದಲಾದವುಗಳನ್ನು ಪ್ರಾರಂಭಿಸಿದರು. ಹಿಂದಿನವರು ಇಲ್ಲಿಯ ವರೆಗೆ ಬರುವ ತನಕ ಸತ್ಯಾಗ್ರಹ ಹೂಡತಕ್ಕದ್ದೆಂದು ನಿರ್ಧರಿಸಿಕೊಂಡು ಅಲ್ಲಿಯೇ ಕುಳಿತುಕೊಂಡರು. ಈ ಸುದ್ದಿಯನ್ನು ಕೇಳಿ ಡಾ|| ಫಳಸುಳೆ ಮತ್ತು ಭಿಡೆಯವರು ಅಲ್ಲಿಗೆ ಹೋಗಿ ಅವರನ್ನು ತಿರುಗಿ ಕರೆದುಕೊಂಡು ಬಂದರು.

ಶ್ರೀ. ಚಂದ್ರಚೂಡ, ಗುಪ್ತೆ, ತುಳಪುಳೆ ಮತ್ತು ಕೇಳಕರರು ಒಪ್ಪಂದದ ಬಗ್ಗೆ ಬಹು ಪ್ರಯತ್ನಪಟ್ಟರು. ೫೦ ಇಲ್ಲವೆ ೧೦೦ ಜನರು ಒಂದು ಗುಂಪನ್ನು ಮಾಡಿಕೊಂಡು ತುರಂಗಕ್ಕೆ ಹೋಗಿ ಅಲ್ಲಿಂದ ಕೂಡಲೇ ತಿರುಗಿ ಬರುವವರಿದ್ದರೆ ಮಾತ್ರ ಅಲ್ಲಿಗೆ ಹೋಗಲು ಅಪ್ಪಣೆ ಸಿಗುವದಾಗಿ ಅಧಿಕಾರಿಗಳು ತಿಳಿಸಿದರು. "ಹೋಗುವದಾದರೆ ಎಲ್ಲರೂ ಕೂಡಿಯೇ ಹೋಗುವೆವು. ಇಲ್ಲದಿದ್ದರೆ ಇಲ್ಲ" ಎಂದು ಸತ್ಯಾಗ್ರಹಿಗಳು ಅಧಿಕಾರಿಗಳಿಗೆ ತಿಳಿಸಿದರು. ರಾತ್ರಿ ೧ ಗಂಟೆಯ ವರೆಗೆ ಹೀಗೆಯೇ ನಡೆಯಿತು.

ಜನರು ಹಾದಿಯ ಮೇಲೆ ಕುಳಿತುಕೊಂಡಿದ್ದರು, ಭಜನೆಗಳನ್ನು ಪ್ರಾರಂಭಿಸಿದ್ದರು, ಅಷ್ಟರಲ್ಲಿಯೇ ಎರಡು ಮೋಟಾರುಗಳು ಅತ್ಯಂತ ವೇಗದಿಂದ ಜನರ ಮೇಲೆ ನುಗ್ಗಿದವು. ಒಂದು ಮೋಟಾರಂತೂ ಜನರ ಕಾಲುಗಳ ಮೇಲೆಯೇ ಹಾಯ್ದು ಹೋಯಿತು. ಇದೆಲ್ಲವೂ ಪೋಲೀಸ ಅಧಿಕಾರಿಗಳ ಎದುರಿಗೆ ನಡೆದರೂ ಸಹ, ಅವರು ಅತ್ತ ಲಕ್ಷ್ಯಕೊಡಲಿಲ್ಲ.

ಮೋಟಾರುಗಳು ಹೀಗೆ ಮೆರವಣಿಗೆಯಲ್ಲಿಯ ಜನರ ಮೇಲೆ ಹಾಯ್ದುದನ್ನು ಕಂಡು, ಜನರು ಸಿಟ್ಟಿಗೆದ್ದರು ಮತ್ತು ಮೋಟಾರುಗಳನ್ನು ಹಿಂಬಾಲಿಸಿದರು. ಪೋಲೀಸರು ಈ ಸಂಧಿಯನ್ನು ಸಾಧಿಸಿಕೊಂಡು ಜನರ ಮೇಲೆ ಲಾಠಿಗಳನ್ನು ಉಪಯೋಗಿಸಹತ್ತಿದರು. ಬಾಲಕರಿಗೂ ಸ್ತ್ರೀಯರಿಗೂ ಭಯಂಕರ ಪೆಟ್ಟುಗಳು ತಗುಲಿದವು. ಒಬ್ಬ ಚಿಕ್ಕ ಹುಡುಗನಿಗೆ ಒಬ್ಬ ಸಾರ್ಜಂಟನು ಬಳಿತಾಗಿ ಪೆಟ್ಟು ಕೊಟ್ಟು ಅವನನ್ನು ಬೇಲಿಯಲ್ಲಿ ಒಗೆದುಬಿಟ್ಟನು. ಲಾಠಿಗಳನ್ನು ಉಪಯೋಗಿಸಿದ್ದುದಲ್ಲದೆ, ಪೋಲೀಸರು ಬಂದೂಕದ ಮೊನೆಗಳನ್ನು ಉಪಯೋಗಿಸಿದರು. ಪೋಲೀಸರು ಹೀಗೆ ಲಾಠಿಗಳಿಂದ ಜನರನ್ನು ಹೊಡೆಯುತ್ತ ಅವರನ್ನು ಜಳಕಿ ದ್ವಾರದ ವರೆಗೆ ಹಿಂದಕ್ಕಟ್ಟಿದರು. ಪೋಲೀಸರ ಲಾಠಿಗಳಿಗೆ ತುತ್ತಾಗಿ ಎಷ್ಟೋ ಜನ ಸ್ತ್ರೀಪುರುಷರು ಗಾಯಹೊಂದಿದರು. ೭ ವರ್ಷದ ಕಾಶೀ ಪೆಂಡಸೆ ಎಂಬ ಬಾಲಿಕೆಯು ಬಳಿತಾಗಿ ಪೆಟ್ಟುಗಳನ್ನು ತಿಂದು ಮೂರ್ಛಿತಳಾಗಿ ಬಿದ್ದಿದ್ದಳು. ಸೌ|| ಯಶೋದಾಬಾಯಿ ಭಟ್ಟ ಹಾಗು ಚಂಪೂತಾಯಿ ಆಗರಕರರಿಗೂ ಏಟುಗಳು ಬಿದ್ದಿವೆ. ಪುರುಷರಲ್ಲಿ ಶ್ರೀ. ಭಾಗವತ, ಶಿರೋಳಕರ, ವರಖೇಡಕರ, ಗಂಗಾವತಿ, ನಾಯುಡು ಮೊದಲಾದವರು ಗಾಯಹೊಂದಿದ್ದಾರೆ. ೭೦ ವರ್ಷದ ಮುದುಕರಾದ ಶ್ರೀ. ಭಾವೆಯವರಿಗೆ ಕಣ್ಣಿನ ಮೇಲೆ ಬಳಿತಾಗಿ ಪೆಟ್ಟು ಬಿದ್ದಿದ್ದು, ಅವರ ಕಣ್ಣಿನ ಸ್ಥಿತಿಯು ಚಿಂತಾಜನಕವಾಗಿದೆ. ಶ್ರೀ. ಕೋಲ್ಹಟಕರ ಮತ್ತು ಅನ್ನವಾಲಕರರನ್ನು ರಕ್ತವು ಹೊರಬೀಳುವ ತನಕ ಥಳಿಸಿದರಾಗಿ ತಿಳಿಯುತ್ತದೆ. ಇನ್ನೂ ಎಷ್ಟೋ ಜನರಿಗೆ ಸಣ್ಣ ಸಣ್ಣ ಗಾಯಗಳಾಗಿವೆ.

### ೮೦೦೦ ಸತ್ಯಾಗ್ರಹಿಗಳೊಂದಿಗೆ

# ಶ್ರೀ ಆಣೆಯವರ ಕಾಯದೆ ಭಂಗ

ವರ್ಹಾಡದ ಸುಪ್ರಸಿದ್ಧ ಮುಖಂಡರಾದ ಶ್ರೀ ಮಾಧವ ರಾವ ಅಣೆಯವರು ೮೦೦೦ ಸತ್ಯಾಗ್ರಹಿಗಳನ್ನು ತಮ್ಮೊಡನೆ ಕರೆದುಕೊಂಡು ತಾ|| ೧೦ ನೆಯ ದಿವಸ "ಪುಸದ" ಎಂಬಲ್ಲಿ ಅಡವಿಯ ಕಾನೂನಗಳನ್ನು ಮುರಿದು ಸತ್ಯಾಗ್ರಹ ಹೂಡಲು ಹೊರಟಿದ್ದಾರೆ.

## ಹಾಯಸ್ಕೂಲ ಹೆಡ್ ಮಾಸ್ತರರನ್ನು ಸೆರೆ ಹಿಡಿದರು

ಅಹಮ್ಮದಾಬಾದ ಪ್ರಾಂತಿಕ ಸಮಿತಿಯ ಅಧ್ಯಕ್ಷರೂ ಪ್ರೊಪ್ರಾಯಿಟರಿ ಹಾಯಸ್ಕೂಲದ ಹೆಡ್ ಮಾಸ್ತರರೂ ಆಗಿರುವ ಶ್ರೀ ಜೀವನಲಾಲ ದಿವಾಣರನ್ನು ಕಾಯದೆ ಭಂಗಕ್ಕೆ ಉತ್ತೇಜನ ಕೊಟ್ಟಿದುದಕ್ಕಾಗಿ ತಾ|| ೭ ನೆಯ ದಿವಸ ಸೆರೆ ಹಿಡಿದಿರುವರು.

### ಮುಂಬಯಿಯಲ್ಲಿ

## ಶ್ರೀ ಧನಶೆಟ್ಟಿಯವರ ವಿಚಾರಣೆ

ಮುಂಬಯಿ ಹಾಯಕೋರ್ಟಿನಲ್ಲಿ ಶ್ರೀ ಮಲ್ಲಪ್ಪ ಧನಶೆಟ್ಟಿ ಮೊದಲಾದವರ ಅಪೀಲಿನ ವಿಚಾರಣೆಯು ತಾ|| ೭ಕ್ಕೆ ಪ್ರಾರಂಭವಾಗತಕ್ಕದ್ದಿತ್ತು. ಇದರ ಸಂಬಂಧವಾಗಿ ಬೇಕಾದ ಕಾಗದ ಪತ್ರಗಳು ಇತ್ತೀಚಲಾಗಿ ನಮಗೆ ದೊರೆತಿರುವದರಿಂದ ವಿಚಾರಣೆಯನ್ನು ಮುಂದಕ್ಕೆ ಹಾಕಬೇಕೆಂದು ಆರೋಪಿಗಳ ಪರವಾಗಿ ಶ್ರೀ ಚಿತಳೆ ವಕೀಲರು ಬೇಡಿಕೊಂಡರು. ವಿಚಾರಣೆಯು ತಾ|| ೯ ರ ವರೆಗೆ ಮುಂದುವರಿಸಲ್ಪಟ್ಟಿದ್ದು ಆ ಬಗ್ಗೆ ಏನೂ ತಿಳಿದು ಬಂದಿಲ್ಲ.

## ಡಾ|| ಬಿಜೆಂಟಮ್ಮನವರಿಗೆ

### ಸರದಾರ ವಲ್ಲಭಭಾಯಿಯವರ ತಂತಿ

ವರ್ಕಿಂಗ ಕಮೀಟಿಯು ಕಾಯಿದೆಗೆ ವಿರುದ್ಧವಾದ ಸಂಘವಾಗಿದೆಯೆಂದು ಸರಕಾರದವರಿಂದ ಸಾರಲ್ಪಟ್ಟಿದ್ದನ್ನು ಕೇಳಿದಾಕ್ಷಣ ಡಾ|| ಬಿಜೆಂಟಮ್ಮನವರು ಸರದಾರ ವಲ್ಲಭಭಾಯಿಯವರಿಗೆ ಒಂದು ತಂತಿಯನ್ನು ಕಳಿಸಿ ಅದರಲ್ಲಿ ತಾವು ವರ್ಕಿಂಗ ಕಮೀಟಿಯಲ್ಲಿ ಸೇರಲು ಇಚ್ಛಿಸುವೆವೆಂಬುದಾಗಿ ತಿಳಿಸಿದ್ದರು. ಅದಕ್ಕೆ ಉತ್ತರವೆಂದು ಸರದಾರ ವಲ್ಲಭಭಾಯಿಯವರು "ಭಾರತ ದೇಶದ ಮೇಲೆ ನೀವು ತೋರಿಸುತ್ತಿರುವ ಪ್ರೀತಿಯು ಗೌರವಿಸತಕ್ಕಂತಹದಿರುತ್ತದೆ. ಅದಕ್ಕಾಗಿ ಎಲ್ಲ ಭಾರತೀಯರೂ ನಿಮ್ಮನ್ನು ಗೌರವಿಸುವರು. ನಿಮ್ಮ ಕೃತಿಯು ಉಳಿದವರಿಗೂ ಮಾರ್ಗದರ್ಶಕವಾಗಿ ಅವರನ್ನೂ ಕಾಂಗ್ರೆಸ ಪಕ್ಷದಲ್ಲಿ ಸೇರಿಸುವಂತೆ ಮಾಡುವದಾಗಿ ತಿಳಿಯುತ್ತೇನೆ." ಎಂಬ ತಂತಿಯನ್ನು ಲಂಡನಕ್ಕೆ ಕಳಿಸಿದ್ದಾರೆ.

### ಬೆಳಗಾವಿಯಲ್ಲಿ

## ೧೪ಳನೇ ಕಲಮು ಬಳಕೆಯಲ್ಲಿ ಬಂತು

### ಸಾಯಮನ್ ಪ್ರತಿಮೆಯನ್ನು ಸುಟ್ಟಿದ್ದಕ್ಕೆ

### ಇಬ್ಬರಿಗೆ ಸೆರೆಮನೆ

( ತಂತಿಯ ಸುದ್ದಿ ತಾ|| ೮ )

ಮಹಾತ್ಮಾ ಗಾಂಧಿಯವರ ಬಂಧನ ದಿವಸವು ಬಹು ಯುಕ್ತವಾಗಿ ಆಚರಿಸಲ್ಪಟ್ಟಿತು. ಸಾಯಮನ್ ಪ್ರತಿಮೆಯೊಡನೆ ಹೊರಟ ಪ್ರಚಂಡ ಮೆರವಣಿಗೆಯು ಊರಲ್ಲೆಲ್ಲ ಸುತ್ತಿ ಬಂದಿತು. ಸಾಯಮನ್ ಪ್ರತಿಮೆಗೆ ಮಹಾತ್ಮ ದೇವಾಲಯದ ಎದುರಿಗೆ ಕೊಳ್ಳಿಯು ಹಚ್ಚಲ್ಪಟ್ಟಿತು. ಸಾರ್ವಜನಿಕ ಸಭೆಯು ಸೇರಿತು. "ಸಾಯಮನ್ ಸಮಿತಿಯ ವರದಿಯಲ್ಲಿ ಭಾರತವಾಸಿಗಳ ವಿಶ್ವಾಸವಿಲ್ಲ" ವೆಂಬುದನ್ನು ಸಾರಲಾಯಿತು. ಸಾಯಮನ್ ಪ್ರತಿಮೆಯನ್ನು ಸುಟ್ಟುದಕ್ಕಾಗಿ ಶ್ರೀ ದೇಶಪಾಂಡೆ ಹಾಗು ಫೇಣಾರಿ ಈ ಈರ್ವರನ್ನು ಸೆರೆ ಹಿಡಿಯಲ್ಪಟ್ಟಿದ್ದಾರೆ. ಕ್ಯಾಂಟೋನಮೆಂಟಿನಲ್ಲಿಯ ಸಿಂಧಿ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದುದಕ್ಕಾಗಿ ಶ್ರೀ ನರಹರಿ ದಿವೇಕರ ಹಾಗು ಗಾವಡೆಯವರು ಸೆರೆಯಾಳುಗಳಾಗಿದ್ದು, ಶ್ರೀ ನರಹರಿ ದಿವೇಕರರಿಗೆ ೩ ವಾರಗಳ ಶಿಕ್ಷೆಯಾಗಿದೆ. ಗಾವಡೆಯವರಿಗೆ ಇನ್ನೊಮ್ಮೆ ಸತ್ಯಾಗ್ರಹ ಚಳವಳಿಯ ಮೂಲಕವಾಗಿ ೧೫ ಛಡಿ ಏಟುಗಳು ದೊರೆತಿವೆ. ಶಿಕ್ಷೆಯಲ್ಲಿ ೩ ತಿಂಗಳುಗಳ ವರೆಗೆ ಮೆರವಣಿಗೆಯು ಬರತಕ್ಕದ್ದಲ್ಲವಾಗಿ ಡಿ|| ಮ್ಯಾಜಿಸ್ಟ್ರೇಟರು ೧೪೪ ನೆಯ ಕಲಮಿನ ಅನ್ವಯ ಪ್ರತಿಬಂಧವನ್ನು ಹೊರಡಿಸಿದ್ದಾರೆ. ನಗರ ಸಭೆಯ ಮೇಲೆ ರಾಷ್ಟ್ರಧ್ವಜವನ್ನು ಏರಿಸುವ ಕುರಿತು ಸೂಚನೆಯು ತಾ|| ೧೪ ನೆಯ ದಿವಸ ಸೇರತಕ್ಕ ನಗರ ಸಭೆಯ ಸಾಧಾರಣ ಸಭೆಯಲ್ಲಿ ಬರತಕ್ಕದ್ದಾಗಿದೆ.

### ಬಿಹಾರದ

## ಬಾಬು ರಾಜೇಂದ್ರಪ್ರಸಾದರಿಗೆ ಶಿಕ್ಷೆ.

ಬಿಹಾರದಲ್ಲಿಯ ರಾಷ್ಟ್ರೀಯ ಪಕ್ಷದ ಮುಖಂಡರೂ, ಕಾಂಗ್ರೆಸ್ ವರ್ಕಿಂಗ ಕಮೀಟಿಯ ಸಭಾಸದರೂ ಆಗಿರುವ ಬಾಬು ರಾಜೇಂದ್ರ ಪ್ರಸಾದರಿಗೆ ೬ ತಿಂಗಳ ಸಾದಾ ಶಿಕ್ಷೆಯಾಗಿದೆ ತಿಳಿಯುತ್ತದೆ. ಸರದಾರ ವಲ್ಲಭಭಾಯಿಯವರು ಸೆರೆಯಾಳಾದಲ್ಲಿ ಕಾಂಗ್ರೆಸದ ಸರ್ವಾಧಿಕಾರವು ರಾಜೇಂದ್ರ ಪ್ರಸಾದರಿಗೆ ಸಿಗತಕ್ಕದ್ದೆಂದು ಪಂಡಿತ ಮೋತೀಲಾಲರು ತಾವು ಸೆರೆಯಾಳಾದಕೂಡಲೆ ಅಪ್ಪಣೆಯನ್ನು ಕೊಟ್ಟಿದ್ದರು.

## ಮಿರಜ ಸಂಸ್ಥಾನದಲ್ಲಿ ಸತ್ಯಾಗ್ರಹವು ಸುರುವಾಯಿತು.

ಮಿರಜದ ಅಧಿಕಾರಿಗಳ ಕಟ್ಟಪ್ಪಣೆಯನ್ನು ಮೂಲೆಗೊತ್ತಿ ಸಭೆಯನ್ನು ಜರುಗಿಸಿ ಅದರ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ ಶ್ರೀ ಶಿವಮೂರ್ತಿಗೆ ೨೦ ದಿವಸ ಶಿಕ್ಷೆಯಾದುದನ್ನು ಕಂಡು ಅಲ್ಲಿಯ ನಾಗರಿಕರು ಈಗ ಆ ಅಪ್ಪಣೆಯ ವಿರುದ್ಧವಾಗಿ ಸತ್ಯಾಗ್ರಹವನ್ನು ಹೂಡಿದ್ದಾರೆ. ಪ್ರತಿನಿತ್ಯದಲ್ಲಿಯೂ ಸಭೆಗಳನ್ನು ಜರುಗಿಸುತ್ತಿದ್ದಾರೆ. ತಾ|| ೫ ನೆಯ ದಿವಸ ಶ್ರೀ ನಾಥು ಅವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿ ಶ್ರೀ ಕುಲಕರ್ಣಿ, ಚೌಗುಲೆಯವರ ಭಾಷಣಗಳಾದುದಲ್ಲದೆ, ಸಂಜೆಗೆ ತಿಳಿದ ಶ್ರೀ ಶಿವಮೂರ್ತಿಯವರ ಬಿಡುಗಡೆಯನ್ನು ಕುರಿತು ೧೨ ವರ್ಷದ ಶ್ರೀ ಕೇಶವನ ವ್ಯಾಖ್ಯಾನವೂ ಆಯಿತು. ತಾ|| ೬ ಕ್ಕೆ ಶ್ರೀ ಜೋಶಿಯವರ ಅಧ್ಯಕ್ಷತೆಯಲ್ಲಿ ಸಭೆ ನೆರೆದು ಶ್ರೀ ಶಿರಹಟ್ಟಿ ಮತ್ತು ಶ್ರೀ ಶಿವಮೂರ್ತಿಯ ಸಹೋದರನ ವಾಕ್ಪಟುತ್ವದ ಬಿಡುಗಡೆಯ ವ್ಯಾಖ್ಯಾನಗಳು ಜರುಗಿದವು. ಅಧಿಕಾರಿಗಳ ದಬ್ಬಾಳಿಕೆಯು ಸತ್ಯಾಗ್ರಹ ಚಳವಳಿಗೆ ಹೆಚ್ಚು ಹೆಚ್ಚು ಪ್ರೋತ್ಸಾಹವನ್ನು ಹೀಗೆ ಕೊಡುತ್ತಿರುವದೆಂಬುವದು ಇದರಿಂದ ಸಿದ್ಧವಾಗುವದಲ್ಲವೆ?

### ಹೈದರಾಬಾದ ಸಂಸ್ಥಾನದಲ್ಲಿ

## ಸೇವಾದಳಕ್ಕೆ ಕಾಯಿದೆಯ ವಿರೋಧ

ರಾಜಕೀಯ ಚಳವಳಿಯಿಂದ ಹೈದರಾಬಾದ ಸಂಸ್ಥಾನವನ್ನು ಸಂರಕ್ಷಿಸಿಕೊಳ್ಳುವದಕ್ಕಾಗಿ ನಿಜಾಮರು ಒಂದು ಕಟ್ಟಪ್ಪಣೆಯನ್ನು ಹೊರಡಿಸಿ ಸೇವಾದಳದ ಸಂಸ್ಥೆಗಳು ಕಾಯಿದೆಗೆ ವಿರುದ್ಧವಾದ ಸಂಸ್ಥೆಗಳಾಗಿವೆಯೆಂದು ಸಾರಿದ್ದಾರೆ. ರಾಜಕೀಯ ಚಳವಳಿಗೆ ಸಹಾಯ ಮಾಡುತ್ತಿರುವ ಎಷ್ಟೋ ಜನರನ್ನು ಸಂಸ್ಥಾನದಿಂದ ಹೊರಗೆ ಹಾಕಲಾಗಿರುವದು; ಈಗಾಗಲೆ ಮಹಮ್ಮದ ಷ್ಯಾಸ ಎಂಬ ಮುಸಲ್ಮಾನ ಮುಖಂಡರನ್ನು ಹದ್ದುಪಾರುಮಾಡಿ ಮದ್ರಾಸಕ್ಕೆ ಕಳಿಸಿದ್ದಾರೆ.

### ಹುನಗುಂದದ ಸಹಕಾರಿ ಸಂಘದಲ್ಲಿ

### ರಾಷ್ಟ್ರಧ್ವಜಾರೋಹಣ ಸಮಾರಂಭ,

ಈ ಮೊದಲೇ ನಿಶ್ಚೈಸಿದಂತೆ ಹುನಗುಂದ ಕೋ ಆಪರೇಟಿವ್ ಸೊಸಾಯಿಟಿಯು ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ನಿಲ್ಲಿಸುವ ಸಮಾರಂಭವು ತಾ|| ೬ ಕ್ಕೆ ಅತ್ಯಂತ ಯಶಸ್ವಿಯಾಗಿ ಕೊನೆಗೊಂಡಿತು. ರಾಷ್ಟ್ರಧ್ವಜದೊಂದಿಗೆ ಊರಲ್ಲಿ ಒಂದು ಪ್ರಚಂಡ ಮೆರವಣಿಗೆಯನ್ನು ಹೊರಡಿಸುವದರಲ್ಲಿ ಒಂದಿತ್ತು. ಮೆರವಣಿಗೆಯು ಸಂಘದ ಕಟ್ಟಡಕ್ಕೆ ಬರುವದರೊಳಗಾಗಿ ಅಲ್ಲಿ ಸ್ತ್ರೀ ಪುರುಷರು ಕಿಕ್ಕಿರಿದು ತುಂಬಿದ್ದರು. ಸ್ಥಳ ಸಾಲದ್ದರಿಂದ ಕೆಲವು ಜನರು ಮಾಳಿಗೆಗಳ ಮೇಲೆ ನಿಂತುಕೊಂಡು ಉತ್ಸವದಲ್ಲಿ ಭಾಗಿಗಳಾದ್ದರು. ಒಟ್ಟಿನಲ್ಲಿ ಹೇಳಬೇಕೆಂದರೆ ಅಂದು ಜನರಿಗೆ ಹಿಡಿಸಲಾರದಷ್ಟು ಆನಂದವಾಗಿತ್ತು. ರಾಷ್ಟ್ರಧ್ವಜವು ಕಟ್ಟಡಕ್ಕೆ ಕಲಿಸಿದ ಬಳಿಕ ರಾಷ್ಟ್ರೀಯ ಗೀತಗಳು ಹಾಡಲ್ಪಟ್ಟವು. ಶ್ರೀ ಹಣಮಂತಚಾರ್ಯ ಜೋಶಿ ಮತ್ತು ರಾಘವೇಂದ್ರರಾವ ದೇಸಾಯಿಯವರ ಸಮಯೋಚಿತ ಭಾಷಣಗಳು ಜರುಗಿದವು. ವ್ಯಾಖ್ಯಾತರು ಖಾದಿ ಕರೆ ಬಟ್ಟೆಗಳನ್ನೂ ಸರಸಿಂದಿಯನ್ನೂ ಬಹಿಷ್ಕರಿಸಲು ಜನರಲ್ಲಿ ಕೇಳಿಕೊಂಡರು. ನಂತರದಲ್ಲಿ ಶ್ರೀ ದೇಸಾಯಿ ರಾಘವೇಂದ್ರರಾಯರ ಹಸ್ತದಿಂದ ರಾಷ್ಟ್ರಧ್ವಜವು ಕಟ್ಟಡದ ಮೇಲೆ ಏರಿಸಲ್ಪಟ್ಟಿತು. ಜನರು ಜಯ ಜಯಕಾರದೊಂದಿಗೆ ಮನೆಗೆ ತೆರಳಿದರು.

### ಜಾಹೀರ ನೋಟೀಸ.

ಕೆಳಗೆ ಸಹಿ ಮಾಡುವವರು ಈ ನೋಟೀಸಿನಿಂದ ತಿಳಿಸುವದೇನಂದರೆ:—

ನಮ್ಮ ಸಂಘದ ಆಫೀಸ ಹೊಸ ಮಾದರಿಯಿಂದ ಕಟ್ಟಿಸುವದದೆ. ಕಾರಣ ಯಾರಾದರೂ ಕಾಂಟ್ರ್ಯಾಕ್ಟರರು ಕಾಮಗಾರ ಮಾಡಲಿಚ್ಛಿಸುವವರು ಕೆಳಗೆ ಸಹಿ ಮಾಡಿದವರ ಕಡೆಗೆ ಟೆಂಡರಿನಿಂದಾಗಲಿ ಅಗರ ಮುದ್ದಾಂ ಒಂದು ತಾ|| ೨೫—೭—೧೯೩೦ ರೊಳಗಾಗಿ ಮಾಹಿತಿ ತೆಗೆದುಕೊಂಡು. ಕಾಂಟ್ರ್ಯಾಕ್ಟ ಮಾಗಿಸಿ ಕೊಳ್ಳತಕ್ಕದ್ದು. ಕಾಂಟ್ರ್ಯಾಕ್ಟ ಅಜಮಾಸ ೪೦೦ ರೂ. ಗಳದ್ದು ಅದೆ.

ಹನುಮಂತಗವಡ ಪಾಟೀಲ.
ಚೇರಮನ್ ಸಹಕಾರಿ ಸಂಘ.
ಸೂಳೇಭಾವಿ

## ಜಮೀನು ಕೊಳ್ಳುವವರಿಗೆ ಸುಸಂಧಿ.

ಕೆಳಗೆ ಸಹಿ ಮಾಡುವವರ ಕಡಿಂದ ಎಲ್ಲ ಸಾರ್ವಜನಿಕರಿಗೆ ತಿಳಿಸುವದರಲ್ಲಿ ಬರುವದೇನಂದರೆ—ಬಾಗಲಕೋಟೆ ತಾಲೂಕ ಪೈಕಿ ಕೊಣ್ಣೂರ ಗ್ರಾಮದಲ್ಲಿಯ ಹಣಮಂತರಾವ ದೊಡ್ಡಭೀಮರಾವ ದೇಶಪಾಂಡೆ ಕೇಸನೂರ, ಸಾ|| ಪುಣೆ ಇವರ ಚಾವರಾತ ಇನಾಮ ಜಮೀನು (ಅಚ್ಯುತರಾವ ಜಮೀನ) ರಿ|| ಸರ್ವೆ ನಂಬರ (೮೨) ಯಕರೆ (೨೦೫೨೬) ಆಕಾರ ರುಪಾಯಿ (೧೭) ಇದನ್ನು ಮಾರಾಟ ಮಾಡುವದಿದೆ. ಯಾರಿಗಾದರೂ ತಕ್ಕೊಳ್ಳುವದಿದ್ದರೆ ಕೆಳಗೆ ಸಹಿಮಾಡುವವರ ಕಡೆಗೆ ಒಂದು ಭೆಟ್ಟಿಯಾಗಬೇಕು.

ಬಾಗಲಕೋಟೆ ತಾ|| ೪-೭-೩೦ { ರಾಮಚಂದ್ರ ಹಣಮಂತರಾವ ನವಣೂರ. ಬಾಳಕೃಷ್ಣದಾಸ ವೆಂಕಟದಾಸ ಇವರ ಮನೆಯ ಹತ್ತಿರ.

### ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಕೈನೂಲು ಕೈಮಗ್ಗದ ಶರ್ಟಿಂಗ, ಕೋಟಿಂಗ, ಧೋತರ ಮೊದಲಾದ ಎಲ್ಲ ತರದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಗ್ರಾಹಕರು ಲಾಭ ಪಡೆಯಬೇಕಾಗಿ ವಿನಂತಿ.

ಶಂಕರಪ್ಪಾ ಬಣಗಾರ
ಜವಳಿ ವ್ಯಾಪಾರಿಗಳು, ಬಾಗಲಕೋಟೆ

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೭ | ನಿತ್ಯಸಂಚಿಕೆಯು. | ಬೆಲೆ ೦-

ಜಯಕರ್ನಾಟಕ

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮುದಾರ.

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಶುಕ್ರವಾರ ಮಿತಿ ಆಷಾಢ ಬಹುಳ ೧ ಶಕೆ ೧೮೫೨ ತಾ॥ ೧೧—೭—೩೦ [ ಸಂಚಿಕೆ ೯೭

# ಪಂ. ಮೋತೀಲಾಲರ ಸಂದೇಶ

ಸ್ವಾತಂತ್ರ್ಯ ಸಂಪಾದಿಸಿಕೊಳ್ಳುವದಕ್ಕಾಗಿ ನಾವು ಹೆಚ್ಚಿನ ಸ್ವಾರ್ಥತ್ಯಾಗ ಮಾಡಿಲ್ಲ. ನಾವು ಈಗ ಮಾಡಿದ್ದು ನೂರರಲ್ಲಿ ಕೇವಲ ಒಂದರಷ್ಟು ಮಾತ್ರ, ಅದಕ್ಕಾಗಿ ನಾವು ಹಿಂಜರಿಯದೆ ಮುಂದರಿಯತಕ್ಕದ್ದು. ನಿಮ್ಮಿಂದ ಈಗ ಅಗಲಿ ಹೋದವರಿಗಾಗಿ ವಿಷಾದಪಡುತ್ತ ಕೂಡಬೇಡಿ. ಪ್ರತಿಯೊಬ್ಬ ಅಬಾಲವೃದ್ಧ ಸ್ತ್ರೀಪುರುಷರು ರಾಷ್ಟ್ರಸೇವೆಗಾಗಿ ಟೊಂಕಕಟ್ಟಿ ನಿಲ್ಲುವಂತೆ ನೋಡಿಕೊಳ್ಳಿರಿ.

ಅತ್ಯಂತ ಗಾಬರಿಗೊಂಡ ವ್ಹಾಯಿಸರಾಯರಿಂದ ಹೊರಟ ಕರಾಳ ಶಾಸನಗಳನ್ನು ಮುರಿಯಲು ಜನರಿಗೆ ಬೋಧಿಸಿದ್ದಕ್ಕಾಗಿ ಸರಕಾರವು ನನ್ನನ್ನು ಸೆರೆಹಿಡಿದಿದ್ದಾಗಿದೆ. ಶಿಕ್ಷಿಸಿದ್ದಾಗಿದೆ. ಈಗಿಂದೀಗ ನಾನು ಅದೇ ಅಪರಾಧವನ್ನು ಪುನಃ ಮಾಡಿ ಭಾರತೀಯರಲ್ಲಿ ಆ ಕಟ್ಟಳೆಗಳನ್ನಷ್ಟೇ ಅಲ್ಲದೆ ಇನ್ನುಳಿದ ಅನ್ಯಾಯದ ಕಾಯದೆಗಳನ್ನು ಮುರಿಯಿರೆಂದು ಕೇಳಿಕೊಳ್ಳುತ್ತೇನೆ. ಈ ಸ್ವಾತಂತ್ರ್ಯ ಸಮರವು ಕೊನೆತನಕ ಸಾಗಿಸಲ್ಪಡತಕ್ಕದ್ದಾಗಿದೆ. ಅತ್ಯಂತ ಶಾಂತತನದಿಂದ ಸಾಗಿದ ಯುದ್ಧವು ಜಯವನ್ನು ದೊರಕಿಸಿಕೊಳ್ಳದೆ ಅಂದರೆ ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳದೆ ನಿಲ್ಲಲಾರದೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿ. ಅಖಿಲ ಭಾರತ ರಾಷ್ಟ್ರಸಭೆಯ ಕಾರ್ಯಕಾರಿ ಮಂಡಳದವರು ತಮ್ಮ ಕಾರ್ಯಕ್ರಮಗಳನ್ನು ಎಂದಿನಂತೆಯೆ ಸಾಗಿಸಲಿ. ಸಂಯುಕ್ತ ಪ್ರಾಂತದ ಸರಕಾರದವರನ್ನು ಚನ್ನಾಗಿ ಎದುರಿಸಲಿ. ಸ್ವಾತಂತ್ರ್ಯವು ಕೈಗೂಡುವವರೆಗೆ ಹಿಂಜರಿಯಬೇಡಿ, ಎದೆಗುಂದಬೇಡಿ, ಶಾಂತಿಸಂಧಾನದ ಮಾತುಗಳನ್ನು ಎತ್ತಬೇಡಿ. ಅಖಿಲ ಭಾರತ ರಾಷ್ಟ್ರಸಭೆಯೂ, ಅದರ ಕಾರ್ಯಕಾರಿ ಮಂಡಳಗಳೂ ಚಿರಾಯುವಾಗಿ ಬಾಳಲಿ.

## ೭೫ ವರ್ಷದ ಮುದುಕಿಗೆ ಕಠಿಣ ಶಿಕ್ಷೆ

ಮುಂಬಯಿಯಲ್ಲಿ ಪ್ರಸಿದ್ಧ ಡಾಕ್ಟರರಾಗಿರುವ ಲುಕ್ಮಾನಜಿಯವರ ೭೫ ವರ್ಷ ವಯಸ್ಸಿನ ತಾಯಿಯವರು ೫ ನೆಯ ಆರ್ಡಿನನ್ಸದನ್ವಯ ತಾ॥ ೭ ನೆಯ ದಿವಸ ಸೆರೆಹಿಡಿಯಲ್ಪಟ್ಟು ೫ ತಿಂ. ಕಠಿಣ ಶಿಕ್ಷೆಗೆ ಗುರಿಯಾದರು. ಇವರು ಗತಿಸಿದ ನ್ಯಾಯಾಧೀಶರಾದ ಬದರುದ್ದೀನ ತಯ್ಯಬಜಿಯವರ ಮಕ್ಕಳಾಗಿರುವರು.

### ಸರದಾರರು ಮತ್ತೆ ಸೆರೆಯಾಳಾದಲ್ಲಿ

## ಪಂ. ಮಾಲವೀಯರಿಗೆ ಸರ್ವಾಧಿಕಾರ

ಸರದಾರ ವಲ್ಲಭಭಾಯಿ ಪಟೇಲರನ್ನು ಸರಕಾರದವರು ಮತ್ತೆ ಬೇಗನೆ ಸೆರೆ ಹಿಡಿಯುವವರಿದ್ದಾರೆ. ಯಾವ ಕ್ಷಣಕ್ಕೆ ಸೆರೆ ಹಿಡಿಯುವರೆಂಬುದನ್ನು ಹೇಳಲು ಬರುವಂತಿಲ್ಲ. ಸರದಾರರು ಸೆರೆ ಮನೆಗೆ ಹೋಗಲು ಸಿದ್ಧರಾಗಿಯೇ ಕುಳಿತಿದ್ದಾರೆ. ತಾವು ಸೆರೆಯಾಳಾದಲ್ಲಿ ಅವರು ಕಾಂಗ್ರೆಸದ ಸರ್ವಾಧಿಕಾರವನ್ನು ಪಂಡಿತ ಮದನ ಮೋಹನ ಮಾಲವೀಯರಿಗೆ ಕೊಡತಕ್ಕವರಾಗಿದ್ದಾರೆ.

## ಮ್ಯಾಜಿಸ್ಟ್ರೇಟರು ಗಾಂಧಿ ಟೊಪ್ಪಿಗೆಯನ್ನು ಸುಟ್ಟರು.

ಆಸಾಮ ಪ್ರಾಂತದ ಪುರಿಲಾದ ಜಾಯಿಂಟ ಮ್ಯಾಜಿಸ್ಟ್ರೇಟರಾದ ಮಿ॥ ಟೇಲರಲ್ಲಿ ಕೆಲವು ರಾಜಕೀಯ ಕೈದಿಗಳ ವಿಚಾರಣೆಯಾಯಿತು. ಖಟ್ಲೆಯ ಕಾಲಕ್ಕೆ ಅವರು ರಾಜಕೀಯ ಕೈದಿಗಳಿಗೆ ಗಾಂಧಿ ಟೊಪ್ಪಿಗೆಗಳನ್ನು ತೆಗೆಯಲು ಹೇಳಿದರು. ಕೈದಿಗಳು ಅದಕ್ಕೆ ಒಪ್ಪಲಿಲ್ಲ. ಬಳಿಕ ಅವರು ಜುಲುಮೆಯನ್ನು ಉಪಯೋಗಿಸಿ ಟೊಪ್ಪಿಗೆಗಳನ್ನು ತೆಗೆಯಿಸಿದರು. ಖಟ್ಲೆಯು ಮುಗಿದ ಮೇಲೆ ಮ್ಯಾಜಿಸ್ಟ್ರೇಟರು ಜನರ ಎದುರಿನಲ್ಲಿಯೇ ಅವುಗಳನ್ನು ಸುಟ್ಟರು.

## ಕಲೆಕ್ಟರ ಕಚೇರಿಯ ಮುಂದೆ ಪಿಕೆಟಿಂಗ.

ತಾ॥ ೭ ನೆಯ ದಿವಸ ರಾಣೆಯ ಕಲೆಕ್ಟರರ ಕಚೇರಿಯಲ್ಲಿ ಸಿಂದೀ ಅಂಗಡಿಗಳ ಲಿಲಾವು ಆಗತಕ್ಕದ್ದಿತ್ತು. ಈ ಸುದ್ದಿಯನ್ನು ಕಾಂಗ್ರೆಸದ ಅಧಿಕಾರಿಗಳು ತಿಳಿದುಕೊಂಡು ಅಲ್ಲಿ ಪಿಕೆಟಿಂಗ ಮಾಡತಕ್ಕದ್ದಾಗಿ ನಿರ್ಧರಿಸಿ ಸ್ವಯಂಸೇವಿಕೆಯರೊಂದಿಗೆ ಕಲೆಕ್ಟರರ ಕಚೇರಿಗೆ ಹೋದರು. ಕಚೇರಿಯ ಪ್ರತಿಯೊಂದು ಬಾಗಿಲಕ್ಕೂ ಇಬ್ಬಿಬ್ಬರಂತೆ ಸ್ವಯಂಸೇವಿಕೆಯರನ್ನು ನಿಲ್ಲಿಸಿದರು. ಅದರ ಪರಿಣಾಮವೆಂಗರೆ ಅಂಗಡಿಗಳನ್ನು ಹಿಡಿಯಲು ಯಾರೂ ಬರಲಿಲ್ಲ. ಪಿಕೆಟಿಂಗ ಪ್ರಾರಂಭವಾಗುವದಕ್ಕಿಂತ ಮೊದಲೇ ೪ ಜನರು ಮಾತ್ರ ಕಲೆಕ್ಟರ ಕಚೇರಿಯಲ್ಲಿ ಹೋಗಿ ಕುಳಿತಿದ್ದರು. ಅವರಾದರೂ ಅಂಗಡಿಗಳನ್ನು ಹಿಡಿಯದೆ ತಿರುಗಿ ಹೋದರು.

( ಶಂತಿಯ ವಾರ್ತೆ ತಾ|| ೧೦ )

# ಬೆಳಗಾವಿ ಜಿಲ್ಲೆಯಲ್ಲಿಯ ದಬ್ಬಾಳಿಕೆ

## ಶ್ರೀ ಗವಾಡೆಯವರಿಗೆ ೩ ವಾರಗಳ ಶಿಕ್ಷೆ

## ಸಿಂದೀ ಗಿಡಗಳನ್ನು ಕಡಿದುದಕ್ಕಾಗಿ

### ೧೧ ಜನರಿಗೆ ಕೈದು

ಬೆಳಗಾವಿಯ ಕ್ಯಾಂಟೋನಮೆಂಟದಲ್ಲಿಯ ಸಿಂದೀ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದುದಕ್ಕಾಗಿ ಸೆರೆ ಹಿಡಿಯಲ್ಪಟ್ಟ ಶ್ರೀ ಗವಾಡೆಯವರಿಗೆ ೩ ವಾರಗಳ ಶಿಕ್ಷೆಯಾಗಿದೆ. ಇವರಿಗೆ ಈಗೊಮ್ಮೆ ಉಪ್ಪಿನ ಕಾಯದೆ ಭಂಗಕ್ಕಾಗಿ ಘಟಕೀ ಏಟುಗಳು ದೊರೆತಿದ್ದವು. ಸಿಂದೀ ಅಂಗಡಿಗಳ ಪಿಕೆಟಿಂಗ ಜೋರಿನಿಂದ ನಡೆದಿದೆ. ಯಾರನ್ನೂ ಇತ್ತೀತ್ತಲಾಗಿ ಸೆರೆ ಹಿಡಿದಿಲ್ಲ.

ಸಿಂದೀ ಗಿಡಗಳನ್ನು ಕಡಿದ ಅಪರಾಧಕ್ಕಾಗಿ ಚಿಕ್ಕ ಬಾಗೇವಾಡಿಯಲ್ಲಿ ೭ ಜನ ಸತ್ಯಾಗ್ರಹಿಗಳನ್ನು ಸೆರೆ ಹಿಡಿದಿದ್ದಾರೆ. ಶ್ರೀ ಗದಿಗೆಪ್ಪ ಪಾಟೀಲ, ಭೀಮಪ್ಪ ಹೂಲಿಮನಿ, ದೇವಪ್ಪ ಹೂಲಿಮನಿ ಮತ್ತು ಅನಂತ ಕುಲಕರ್ಣಿ ಈ ನಾಲ್ಕು ಜನರು ಮುತನಾಳದಲ್ಲಿಯ ಸಿಂದೀ ಗಿಡಗಳನ್ನು ನಾಶಪಡಿಸಿದ ದಕ್ಕಾಗಿ ಸೆರೆ ಹಿಡಿಯಲ್ಪಟ್ಟಿದ್ದು, ಅವರಲ್ಲಿ ಅನಂತ ಕುಲಕರ್ಣಿಯವರ ಹೊರತಾಗಿ ಉಳಿದವರು ಹೊಣೆಯ ಮೇಲೆ ಬಿಡಲ್ಪಟ್ಟಿದ್ದಾರೆ.

# ಮಹಾತ್ಮರು ಜೇಲಿನಲ್ಲಿ ಹೇಗೆ ಇರುವರು?

ಮಹಾತ್ಮಾ ಗಾಂಧಿಯವರ ಜೇಲಿನಲ್ಲಿಯ ಸ್ಥಿತಿಗತಿಯ ವಿಷಯವಾಗಿ "ನವಜೀವನ" ವೆಂಬ ಗುಜರಾಥಿ ಪತ್ರಿಕೆಯು ಹೀಗೆ ಹೇಳುತ್ತದೆ.

"ಮಹಾತ್ಮರು ಆರೋಗ್ಯದಿಂದ ಇರುವರೆಂಬಂತೆ ತೋರುತ್ತದೆ. ಅವರು ತಮ್ಮ ಬಹುತರ ವೇಳೆಯನ್ನು ನೂಲುವದರಲ್ಲಿಯೇ ಕಳೆಯುತ್ತಿರುತ್ತಾರೆ. ಒಂದು ತಾಸು, ಹೊಲಿಯುವ ಯಂತ್ರದ ಮೇಲೆ ಅವರು ಟೊಪ್ಪಿಗೆಗಳನ್ನು ಹೊಲಿಯುತ್ತಿರುವರು. ಉಳಿದ ವೇಳೆಯಲ್ಲಿ ಓದುವರು. ತುರಂಗದಲ್ಲಿ ತಮ್ಮೊಂದಿಗೆ ಇರುವ ಕಾಕಾ ಕಾಲೇಲಕರರಿಂದ ಮರಾಠಿಯನ್ನು ಹೇಳಿಸಿಕೊಂಡು ಮಹಾತ್ಮರು ಮರಾಠಿಯನ್ನು ಕಲಿಯುತ್ತಿರುವರು. ಗೀತೆಯನ್ನು ಬಾಯಿಪಾಠ ಮಾಡುತ್ತಿರುವರು."

ಮಹಾತ್ಮರ ಆರೋಗ್ಯದ ವಿಷಯವಾಗಿ ಫ್ರೀಪ್ರೆಸ್ಸಿದ ಸುದ್ದಿಗಾರರು ಹೀಗೆ ತಿಳಿಸಿದ್ದಾರೆ

"ಮಹಾತ್ಮರ ತೂಕವು ೩ ಪೌಂಡು ಕಡಿಮೆಯಾಗಿದೆ. ಆದರೂ ಚಿಂತೆಯನ್ನು ಮಾಡಲು ಏನೂ ಕಾರಣವಿಲ್ಲ. ಮಹಾತ್ಮರು ಬಹುತರ ವೇಳೆಯನ್ನು ತಕಲಿಯಮೇಲೆ ನೂಲುವದರಲ್ಲಿ ಕಳೆಯುತ್ತಿರುವರು."

ಮಹಾತ್ಮರ ಆರೋಗ್ಯ ವಿಷಯವನ್ನು ಕುರಿತು ನಿಜವಾದ ಸುದ್ದಿಯನ್ನು ಪ್ರಕಟಿಸುವಷ್ಟು ಕರುಣೆಯನ್ನು ಸರಕಾರದ ಸುದ್ದಿಯ ಸೂರಪ್ಪನವರು ತೋರಿಸುವರೋ!

# ರಾಷ್ಟ್ರಧ್ವಜಕ್ಕಾಗಿ

## ಕ್ಯಾಪ್ಟನ್ ಪದವನ್ನು ಬಿಟ್ಟುಗೊಟ್ಟರು.

ಕಾಶ್ಮೀರ ಸೈನ್ಯಖಾತೆಯ ಆರೋಗ್ಯ ವಿಭಾಗದಲ್ಲಿದ್ದ ಕ್ಯಾಪ್ಟನ್ ಜನೀಲಾಲ ಭಾಟಿಯಾ ಅವರು ಕೆಲವು ದಿವಸಗಳ ಹಿಂದೆಯೇ ತಮ್ಮ ಉದ್ಯೋಗವನ್ನು ಬಿಟ್ಟುಗೊಟ್ಟಿದ್ದರೂ ಕ್ಯಾಪ್ಟನ್ ಪದವನ್ನು ಬಿಟ್ಟಿದ್ದಿಲ್ಲ. ಈಗ ಕಾಶ್ಮೀರದ ಮಹಾರಾಜರು ರಾಷ್ಟ್ರಧ್ವಜವನ್ನು ಕುರಿತು ನುಡಿದ ಅಪಶಬ್ದಗಳ ನಿಷೇಧವೆಂದು ಅವರು ತಮ್ಮ ಕ್ಯಾಪ್ಟನ್ ಪದವನ್ನು ಬಿಟ್ಟುಗೊಟ್ಟಿದ್ದಾರೆ.

## ಕಲಕತ್ತೆಯಲ್ಲಿ ೬೦ ಜನರಿಗೆ ಕೈದು.

ಕಲಕತ್ತೆಯ ಪೋಲೀಸರು ತಾ|| ೭ ನೆಯ ದಿವಸ ಮತ್ತೆ ಬಂಗಾಲ ಪ್ರಾಂತಿಕ ಕಾಂಗ್ರೆಸ ಕಮಿಟಿಯನ್ನು ಮುತ್ತಿ ಲಾ ಕಾಲೇಜದ ಪಿಕೆಟಿಂಗದ ಸಲುವಾಗಿ ಸಿದ್ಧರಾಗಿ ನಿಂತಿದ್ದ ೬೦ ಜನ ಸ್ವಯಂಸೇವಕರನ್ನು ಸೆರೆಹಿಡಿದೊಯ್ದರು.

## ೪೩ ಜನ ಪಟೇಲರು ರಾಜೀನಾಮೆ ಕೊಟ್ಟರು.

ಗುಜರಾಥ ಪ್ರಾಂತದ ಬಾಲಗಣ ತಾಲೂಕದೊಳಗಿನ ನಾಮಪುರೆ ಭಾಗದ ೪೩ ಜನ ಪೋಲೀಸ ಹಾಗೂ ಮುಲಕೀ ಪಾಟೀಲರು ತಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟಿರುವರು.

## ಹದ್ದುಪಾರಿನ ಶಿಕ್ಷೆಗೆ ಪಾತ್ರರಾದ ಶ್ರೀ ಪಾಂಗಾರಕರರು ಕಾಯಿದೆ ಮುರಿದರು.

ಮುಂಬಯಿಯಿಂದ ಹದ್ದುಪಾರ ಮಾಡಲ್ಪಟ್ಟ ಶ್ರೀ ಡಿ. ಎಲ್. ಪಾಂಗಾರಕರರು ಸರಕಾರದ ಅಪ್ಪಣೆಯನ್ನು ಮುರಿದು ಮುಂಬಯಿಯಲ್ಲಿ ಪ್ರವೇಶಿಸಿದರು. ಅಧಿಕಾರಿಗಳು ಅವರನ್ನು ಸೆರೆಹಿಡಿದು ಬಾಯಖಳಾ ತುರಂಗದಲ್ಲಿ ಇಟ್ಟರು. ಜೇಲಿನಲ್ಲಿ ಕೆಟ್ಟ ಅನ್ನವನ್ನು ಕೊಡುತ್ತಿರುವದರಿಂದ ಅದರ ನಿಷೇಧಾರ್ಥವಾಗಿ ಅವರು ಜೂನ ೧೬ ನೆಯ ತಾ| ನಿಂದ ಉಪವಾಸವ್ರತವನ್ನು ಕೈಕೊಂಡಿದ್ದಾರೆ.

## ಶ್ರೀ ಜಾಧವರನ್ನು ಸೆರೆ ಹಿಡಿದರು.

ತಾ|| ೫ ನೆಯ ದಿವಸ ಪುಣೆಯಲ್ಲಿ ಪೋಲೀಸರು ಹಾಗು ಸತ್ಯಾಗ್ರಹಿಗಳು ಇವರ ನಡುವೆ ಬಂಡಗಾರ್ಡನದ ಹತ್ತಿರ ನಡೆದ ಗೊಂದಲದ ಆರೋಪದಿಂದ ಪುಣೆಯ ಕಾಂಗ್ರೆಸ್ ಕಮೀಟಿಯ ಕಾರ್ಯದರ್ಶಿಗಳಾದ ಶ್ರೀ ಕೆ. ಟಿ. ಜಾಧವ ಹಾಗು ಶ್ರೀ ಜೋಶಿಯವರನ್ನು, ಅಧಿಕಾರಿಗಳು ಸೆರೆ ಹಿಡಿದಿರುತ್ತಾರೆ.

## ಸರ್ ಆರ್ಥರ ಕೊನನ್ ಡಾಯಿಲರು ಮರಣಹೊಂದಿದರು

ಪ್ರಸಿದ್ಧ ಕಾದಂಬರಿಕಾರರೆಂದು ಜಗತ್ತಿನಲ್ಲೆಲ್ಲ ಹೆಸರುಗೊಂಡ ಸರ್ ಆರ್ಥರ ಕೊನನ್ ಡಾಯಿಲರು ತಾ|| ೭ ನೆಯ ದಿವಸ ಮರಣಹೊಂದಿದರಾಗಿ ತಿಳಿಯುತ್ತದೆ.

## ಪ್ರೊಫೆಸರರು ರಾಜೀನಾಮೆ ಕೊಟ್ಟರು.

ಬಂಗಾಲ ಪ್ರಾಂತದಲ್ಲಿಯ ಕೃಷ್ಣನಗರ ಸರಕಾರಿ ಕಾಲೇಜದ ಪ್ರೊಫೆಸರರಾದ ಶ್ರೀ ವೀರೇಶ್ವರ ಬೋಸರು, ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸಿ ತಮ್ಮ ಉದ್ಯೋಗಕ್ಕೆ ಶರಣು ಹೊಡೆದಿದ್ದಾರೆ.

## ಮುದ್ರಣಬಕಾಸುರನಿಗೆ

# 'ಯಂಗ ಇಂಡಿಯಾ' 'ನವಜೀವನ'

## ಪತ್ರಿಕೆಗಳು ಆಹುತಿಯಾದವು.

ಮಹಾತ್ಮಾ ಗಾಂಧಿಯವರ ಪತ್ರಿಕೆಗಳಾದ "ಯಂಗ ಇಂಡಿಯಾ" ಹಾಗು "ನವಜೀವನ" ಗಳನ್ನು ಮುದ್ರಿಸುತ್ತಿದ್ದ "ನವಜೀವನ" ಮುದ್ರಣಾಲಯವು ಅಧಿಕಾರಿಗಳಿಂದ ಜಪ್ತ ಮಾಡಲ್ಪಟ್ಟಿದೆ. ವೃತ್ತಪತ್ರ ದಬ್ಬಾಳಿಕೆಯ ಕಾನೂನಿಗನುಸಾರವಾಗಿ ಕೇಳಲ್ಪಟ್ಟ ಹೊಣೆಯನ್ನು ಕೊಡದೆ ಪತ್ರಿಕೆಗಳನ್ನು ಹಾಗೆಯೇ ಸಾಗಿಸಿದ್ದುದೇ ಜಪ್ತಿಗೆ ಕಾರಣವಾಗಿದೆ.

### ಹರಪನಹಳ್ಳಿಯಲ್ಲಿ

## ರಾಷ್ಟ್ರೀಯ ಜಾಗೃತಿ

ಸ್ತ್ರೀಯರು ಸ್ವದೇಶಿ ವ್ರತ ಕೈಕೊಂಡರು.
ವರ್ತಕರು ವಿದೇಶಿ ಬಟ್ಟೆ ಬಹಿಷ್ಕರಿಸಿದರು.

ರಾಷ್ಟ್ರೀಯ ಚಳವಳಿಯನ್ನು ಮಾಡುವದಕ್ಕಾಗಿ ವಕೀಲಿ ವೃತ್ತಿಯನ್ನು ಬಿಟ್ಟುಕೊಟ್ಟ ಬಳ್ಳಾರಿಯ ಮುಖಂಡರಾದ ಶ್ರೀ. ಸುಬ್ರಹ್ಮಣ್ಯರವರು ೫ ಜನ ಸ್ವಯಂಸೇವಕರೊಡನೆ ಇಲ್ಲಿಗೆ ಬಂದು ಜನರಲ್ಲಿ ರಾಷ್ಟ್ರಸಭೆಯ ಕಾರ್ಯಕ್ರಮಗಳ ಬಗ್ಗೆ ಜಾಗೃತಿಯನ್ನುಂಟುಮಾಡಿದರು. ಸ್ವಯಂಸೇವಕರು ಊರಲ್ಲೆಲ್ಲ ರಾಷ್ಟ್ರಧ್ವಜವನ್ನು ಮೆರಸಿದರು. ಸುಬ್ರಹ್ಮಣ್ಯರವರ ಎರಡು ವ್ಯಾಖ್ಯಾನಗಳಾದವು. ಅವರು ತಮ್ಮ ವ್ಯಾಖ್ಯಾನಗಳಲ್ಲಿ ಭಾರತೀಯರು ಈ ಬ್ರಿಟಿಶ ಸರಕಾರದ ಆಡಳಿತೆಯಲ್ಲಿ ಹೇಗೆ ಹೇಗೆ ಅಧಃಪಾತವನ್ನು ಹೊಂದುತ್ತಿರುವರೆಂಬುದನ್ನು ಉದಾಹರಣೆಗಳಿಂದ ಸಿದ್ಧಮಾಡಿ ತೋರಿಸಿದರು. ವ್ಯಾಖ್ಯಾನದಿಂದ ಜನರ ಮನಸಿನ ಮೇಲೆ ಒಳ್ಳೇ ಪರಿಣಾಮವಾಯಿತು.

ಗುಡಿಕೇರಿಯ ವೆಂಕಟೇಶ್ವರ ದೇವಸ್ಥಾನದಲ್ಲಿ ಸ್ತ್ರೀಯರ ಪ್ರಚಂಡ ಸಭೆಯು ನೆರೆದಿದ್ದಿತು. ಸುಬ್ರಹ್ಮಣ್ಯಂರವರ ವ್ಯಾಖ್ಯಾನವಾಯಿತು. ಅದರ ಪರಿಣಾಮವೆಂದರೆ ಸ್ತ್ರೀಯರೆಲ್ಲರೂ ಖಾದಿಯನ್ನೇ ಧರಿಸುವೆವಾಗಿ ಪ್ರತಿಜ್ಞೆಮಾಡಿದರು. ಜೈನಮಂದಿರದಲ್ಲಿ ಜೈನ ಮಹಿಳೆಯರಿಗಾಗಿ ಪ್ರತ್ಯೇಕ ಸಭೆಯು ಏರ್ಪಟ್ಟಿತ್ತು. ಜೈನ ಮಹಿಳೆಯರೆಲ್ಲರೂ ತಾವು ಖಾದಿಯನ್ನು ಧರಿಸುವೆವಾಗಿಯೂ, ಒಂದು ವರ್ಷದ ವರೆಗೆ ಸ್ವದೇಶಿ ವಸ್ತುಗಳನ್ನೇ ಉಪಯೋಗಿಸುವೆವಾಗಿಯೂ ಪ್ರತಿಜ್ಞೆಮಾಡಿ ಆರೀತಿ ಬರೆದುಕೊಟ್ಟರು. ವರ್ತಕರೂ ಸಭೆಯನ್ನು ಸೇರಿಸಿಕೊಂಡು ೩ ತಿಂಗಳುಗಳ ವರೆಗೆ ಪರದೇಶಿ ಬಟ್ಟೆಗಳನ್ನು ತರಿಸುವದಿಲ್ಲವೆಂದು ನಿರ್ಧರಿಸಿಕೊಂಡರು.

### ಕೂಡ್ಲಿಗಿ ತಾಲೂಕಿನಲ್ಲಿ

## ಸಿಂದೀ ವ್ಯಾಪಾರಕ್ಕೆ ವಿರೋಧ

ಕೂಡ್ಲಿಗಿ ಹತ್ತಿರವಿರುವ ಮರಬ ಗ್ರಾಮದಲ್ಲಿ ಕೂಡ್ಲಿಗಿ ತಾಲೂಕಿನ ಕಂಟ್ರ್ಯಾಕ್ಟದಾರರೆಲ್ಲ ಕಲೆತು ತಮಗೆ ಸಂಭವಿಸಿದ ನಷ್ಟವನ್ನೂ, ದೇಶದಲ್ಲಿ ಒತ್ತರದಿಂದ ಸಾಗಿದ ಚಳವಳಿಯನ್ನೂ ಪರಿಶೀಲಿಸಿ, ಅಕ್ಟೋಬರದ ವರೆಗೆ ಯಾರೂ ಸಿಂದೀ ಅಂಗಡಿಗಳನ್ನು ಲಿಲಾವಿನಲ್ಲಿ ಹಿಡಿಯಬಾರದಾಗಿ ಗೊತ್ತುಮಾಡಿಕೊಂಡರು. ಆ ಬಗ್ಗೆ ಒಂದು ಸಭೆಯನ್ನು ಏರ್ಪಡಿಸಿಕೊಂಡು ಅದಕ್ಕೆ ಶ್ರೀಯುತ ಸುಬ್ಬಯ್ಯನವರನ್ನು ಕಾರ್ಯದರ್ಶಿಗಳನ್ನಾಗಿ ಆರಿಸಿಕೊಂಡರು.

## ಶುದ್ಧ ಖಾದಿ ಕೊಳ್ಳುವವರಿಗೆ ಎಚ್ಚರಿಕೆ

ತಾ|| ೮-೭-೩೦ ನೆಯ "ಕನ್ನಡಿಗ" ದೈನಿಕ ಪತ್ರಿಕೆಯಲ್ಲಿ ಶ್ರೀ. ಸಿದ್ದುರಾಯರು ಖಾದಿ ಕೊಳ್ಳುವವರನ್ನು ಎಚ್ಚರಿಸಿರುವದು ಯೋಗ್ಯವಾದುದಾಗಿದೆ. ಶುದ್ಧ ಖಾದಿಯನ್ನೇ ಉಪಯೋಗಿಸಬೇಕೆನ್ನುವವರು ತಮ್ಮ ತಮ್ಮ ಮನೆಗಳಲ್ಲಿಯೇ ನೂತು, ಆ ನೂಲನ್ನು ತಮ್ಮ ವಿಶ್ವಾಸಿಕರಾದ ನೇಕಾರರಿಗೆ ಕೊಟ್ಟು ನೇಯಿಸಿಕೊಳ್ಳುವದು ಅತ್ಯುತ್ತಮ.

ಇದು ಸಾಧ್ಯವಿಲ್ಲದಿದ್ದವರು, ಶುದ್ಧ ಖಾದಿಯನ್ನೇ ಮಾರುತ್ತಿರುವ ಕಾಂಗ್ರೆಸ್ ಖಾದಿ ಭಾಂಡಾರಗಳಿಂದಾಗಲಿ ಅಥವಾ ಅಖಿಲ ವೀರಶೈವ ಖಾದಿ ಮಂಡಲದ ಬಾಗಲಕೋಟೆ, ನರಗುಂದ, ರಾಣೆಬೆನ್ನೂರ ಮೊದಲಾದ ಸ್ಥಳಗಳಲ್ಲಿ ಸಿದ್ಧವಾಗುತ್ತಿರುವ ಇಲ್ಲವೆ ಈ ಪ್ರಕಾರ ಜನಹಿತವನ್ನೇ ಮುಖ್ಯವಾಗಿಟ್ಟುಕೊಂಡು ಖಾದಿಯ ಕಾರ್ಯವನ್ನು ನಡೆಸುತ್ತಿರುವ ಸಾರ್ವಜನಿಕ ಸಂಸ್ಥೆಗಳ ಮೂಲಕ ಸಿದ್ಧವಾಗುತ್ತಿರುವ ಖಾದಿಯನ್ನು ಕೊಳ್ಳುವದು ಉತ್ತಮ.

ಶುದ್ಧ ಖಾದಿ ಭಕ್ತರು ಈ ಸಂಗತಿಗಳನ್ನು ಲಕ್ಷಿಸುವದಲ್ಲದೆ, ಶುದ್ಧ ಮತ್ತು ಅಶುದ್ಧ ಖಾದಿಗಳನ್ನು ಪರೀಕ್ಷೆಮಾಡುವದನ್ನು ಕಲಿಯುವದು ಅವಶ್ಯಕವಾಗಿರುವದರಿಂದ ಇದರ ಕಡೆಗೂ ಲಕ್ಷಿಸಬೇಕಾಗಿ ಕೋರಿಕೆ.

| | |
|---|---|
| ಆಲಮಟ್ಟಿ<br>ತಾ|| ೯-೭-೧೯೩೦ | ಹರ್ಡೇಕರ ಮಂಜಪ್ಪನವರು.<br>ಅಖಿಲ ವೀರಶೈವ ಖಾದಿ ಮಂಡಲದ<br>ಕಾರ್ಯನಿರ್ವಾಹಕರು. |

## ವಿಜಾಪುರದಲ್ಲಿ ಸತ್ಯಾಗ್ರಹ ಚಳವಳಿ

ಮೊನ್ನಿನ ೫ ನೆಯ ತಾ|| ದಿವಸ ಗಾಂಧಿ ದಿನವನ್ನು ಪಾಲಿಸುವದರಲ್ಲಿ ಬಂದಿತು. ಸಾಯಮನ್ ಗೊಂಬೆಯನ್ನು ಸಿದ್ಧಪಡಿಸಿ, ಅದರ ಕೈಯಲ್ಲಿ ಸಾಯಮನ್ ವರದಿಗಳನ್ನು ಕೊಟ್ಟು, ಅದರ ಕೊರಳಲ್ಲಿ ಉಳ್ಳೇಗಡ್ಡೆಯ ಸರಗಳನ್ನು ಹಾಕಿಯೂ ಅದನ್ನು ಊರಲ್ಲೆಲ್ಲ ಮೆರಿಸಲಾಯಿತು. ಮೆರವಣಿಗೆಯಲ್ಲಿ ಸಾವಿರಾರು ಜನರು ಭಾಗ ತೆಗೆದುಕೊಂಡಿದ್ದರು. ಹೆಣ್ಣುಮಕ್ಕಳಾದರೂ ಸಮಾವಿಷ್ಟರಾಗಿದ್ದರು. ಸಂಜೆಯ ೭|| ಗಂಟೆಗೆ ಪ್ರಚಂಡವಾದ ಸಭೆಯು ಜರುಗಿತು. ಶ್ರೀ. ಮುರುಳಾರಾಧ್ಯ ಶಾಸ್ತ್ರಿಗಳು ಮೊದಲಾದವರ ಭಾಷಣಗಳಾದವು.

# ಡಿಸೆಂಬರದಲ್ಲಿ [illegible] ಬಿಡುಗಡೆ

## ಕೋಲಿಕಾರ ಮಂತ್ರಮಂಡಲ[illegible] ಜಯ

೧೯೪೩ರಲ್ಲಿ ಹಿಂದುಸ್ಥಾನ [illegible]

ಯುನಿವರ್ಸಲ್ ಆಸ್ಟ್ರೋ[illegible] ಸ್ಟ್ಯಾಟಿಸ್ಟಿಕಲ್ ಬ್ಯೂರೋದವರು ಭಾ[illegible]ಸ್ವಾತಂತ್ರ್ಯ ಸಮರವನ್ನು ಕುರಿತು ಕೆಳಗಿನಂತೆ [illegible]ಸಿದ್ದಾರೆ:—

“೧೯೪೩ ನೇ ಮೇ [illegible] ದಿವಸ ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವರಾಜ್ಯ[illegible]. ಅಲ್ಲಿಯ ವರೆಗೆ ಸ್ವಾತಂತ್ರ್ಯ ಸಮರವು [illegible]ಗತಕ್ಕದ್ದಾಗಿದೆ. ಮ್ಯಾಕಡೊನಾಲ್ಡ [illegible] ಅಪಜಯವಾಗುವದು. ಕೋಲಿಕಾರ ಪಕ್ಷದ [illegible] ತಿಂಗಳದಲ್ಲಿ ತಮ್ಮ ಅಧಿಕಾರವನ್ನು ಕಳೆದು[illegible]ಮಿಗಾಲಿಯ ಪರಿಷತ್ತಿನ ಮೇಲೆ ಅದರ ಪ[illegible]ವಾಗಿ ಪರಿಷತ್ತು ಫೆಬ್ರುವರಿ ವರೆಗೆ ಮು[illegible]. ಬಂದೀಗಾಲಿಯ ಪರಿಷತ್ತಿನಿಂದ ಯಾ[illegible]ಲಾರದು. ಅದರಿಂದ ಮಂತ್ರಿಮಂಡಲ ಗೊಂದ[illegible] ಪರಿಷತ್ತಿನ ಪರಿಣಾಮವನ್ನು ನೋಡಿ ಜನ[illegible]ಸಮರವನ್ನು ಮತ್ತಷ್ಟು ಜೋರಿನಿಂದ ಸಾಗ[illegible] ೧೭ ನೇಯ ಡಿಸೆಂಬರದೊಳಗಾಗಿ ಮಹಾತ್ಮಾ[illegible] ಇನ್ನು[illegible]ದ ರಾಜಕೀಯ ಸೆರೆಯಾಳು[illegible]ಬಂಧವು ತಪ್ಪದೆ ಬಿಡಲ್ಪಡುವರು. ಕರಾಚಿ, [illegible] ಮುಂಬಯಿ, ಪೇಶಾವರ, ಕಾನಪುರ ಮತ್ತು [illegible]ಗಳ ಪರಿಸ್ಥಿತಿಯು ಅಗಸ್ಟ ತಾ| ೨೦ [illegible] ೨೦ ವರೆಗೆ ಬಿಗಡಬಹುದು. ಸ್ತ್ರೀಯರೂ ಬಾಲಕರೂ [illegible] ಇದಕ್ಕಾಗಿ ಸೇರಿ, ಕಷ್ಟನಷ್ಟಗಳನ್ನು [illegible] ಆಗಾಗ್ಗೆ ಶಾಂತಿಸಂಧಾನ, ಹಾಗು ಒಪ್ಪಂದ[illegible] ನಡೆಯುವವು. ಆದರೆ ಅವೆಲ್ಲವೂ ನಿರ[illegible]. ಕೊನೆಯಲ್ಲಿ ಸರಕಾರ[illegible] ಎರಡೂ ಪಕ್ಷದವರಿ[illegible]ಗಳನ್ನು [illegible]ಯುವ ಪ್ರಸಂಗವು ಬರುವದು. [illegible] ೧೯೪೩ [illegible] ಮೇ ತಿಂಗಳ[illegible] ಸ್ವರಾಜ್ಯವು [illegible]ಗುವದು.

## ಉಡುಪಿಯಲ್ಲಿ ೧೪೪ ನೇ ಕಲಮು

ಉಡುಪಿಯಲ್ಲಿ ಸತ್ಯಾಗ್ರಹ [illegible] ಸಂಬಂಧಿಸಿದ ಮೆರವಣಿಗೆ, ಸಭೆ ಮೊದಲಾದ[illegible]ಕ್ಷವಾಗಿ ಮಂಗಳೂರಿನ ಡಿ|| ಮ್ಯಾಜಿಸ್ಟ್ರೇಟರು [illegible] ನೇಯ ಕಲಮಿನ ಪ್ರಕಾರ ಕಟ್ಟಪ್ಪಣೆಯನ್ನು ಹೊರಡಿಸಿದ್ದಾರೆ. ಅಲ್ಲಿ ಬಹಳ ದಿನದಿಂದ ಸಾಗಿದ ಸತ್ಯಾಗ್ರಹ ಚಳವಳಿಯನ್ನು [illegible]ಸುವದಕ್ಕಾಗಿಯೇ ಈ ಅಪ್ಪಣೆಯು ಹೊರಟಿದ್ದು[illegible].

### ವಿಜಾಪುರ ಜಿಲ್ಲೆಯಲ್ಲಿ

## ಸಾವಿರಾರು ಸಿಂದೀ ಗಿಡಗಳ ಸಂಹಾರ

ತಾ|| ೭ ನೇಯ ದಿವಸ ವಿಜಾಪುರದ ೬೦ ಜನ ಸ್ವಯಂಸೇವಕರು ಸಿಂದೀ ಗಿಡಗಳನ್ನು ಕಡಿಯುವ ಸಲುವಾಗಿ [illegible] ಠಾಣಾಕ್ಕೆ ಹೋಗಿದ್ದು, ಈಗಾಗಲೆ ೭೦೦ ಗಿಡಗಳನ್ನು ಕಡಿದು ಹಾಕಿದ್ದಾರೆ. ನಾಲ್ಕು ದಿನಗಳಲ್ಲಿ ಒಟ್ಟಿಗೆ ೧೬೦೦ ಗಿಡಗಳು ನೆಲಕ್ಕುರುಳಿದಂತಾಯಿತು.

### ಕೆರೂರ ಭಾಗದಲ್ಲಿ

## ಸಾವಿರಾರು ಸಿಂದೀ ಗಿಡಗಳ ಸಂಹಾರ

ತಾ|| ೭ ನೇಯ ದಿವಸ ಬಾಗಲಕೋಟೆಯಿಂದ ಮಮಟಗೇರಿಗೆ ಸಿಂದೀ ಗಿಡಗಳನ್ನು ಕಡಿಯಲು [illegible] ಸ್ತ್ರೀಪುರುಷರನ್ನೊಡಗೊಂಡ ನೂರಾರು ಜನ ಸ್ವಯಂಸೇವಕರು ಅಲ್ಲಿಯ ಸಾವಿರಾರು ಸಿಂದೀ ಗಿಡಗಳನ್ನು ಈಗ ಕಡಿದು[illegible] ಯುತ್ತಿದ್ದಾರೆ. ತಾ| ೯ ನೇಯ ದಿವಸ ಕೆರೂರ, ಉಗಲವಾಟ ಹಾಗು ಗೋವಿಂದಕೊಪ್ಪ ಈ ಊರುಗಳಿಂದ ಕೂಡಿ ಒಟ್ಟಿಗೆ ೩೦೦ ಜನರು ಮೆರವಣಿಗೆಯಿಂದ [illegible]ಗೇರಿಗೆ ಹೋಗಿ [illegible] ತಾಸಿನಲ್ಲಿ ೫೦೦–೬೦೦ ಸಿಂದೀ ಗಿಡಗಳನ್ನು ಸಂಹರಿಸಿದ್ದಲ್ಲದೆ, ಊಟವಾದ ಬಳಿಕ ಪುನಃ ೬೦೦ ಸಿಂದೀ ಗಿಡಗಳನ್ನು [illegible] ತಿರುಗಿ ಕೆರೂರಿಗೆ ಹೋಗಿದ್ದಾರೆ. ಈ ಸಂಭ್ರಮವನ್ನು ನೋಡಲಿಕ್ಕೆಂದು ಹೋಗಿದ್ದ [illegible] ಫೌಜದಾರರು [illegible] ಅಲ್ಲಿಗೆ ಹೋಗಿದ್ದರು.

ತಾ| ೧೦ ನೇಯ ದಿವಸ ಕೆರೂರಿನಿಂದ ೭೦೦ ಜನರು ಸಿಂದೀ ಗಿಡಗಳನ್ನು ಕಡಿಯಲು [illegible] ಹೋಗುವವರಿದ್ದರು.

### ಮುಂಬಯಿಯ

## ಕಾಂಗ್ರೆಸ ಭವನಕ್ಕೆ ಪೋಲೀಸರ ಮುತ್ತಿಗೆ

ಸರಕಾರದ [illegible] ಹೊರಡಿಸಿದ ಕಾಯದೆಗನುಸಾರವಾಗಿ ಮುಂಬಯಿಯ ಪೋಲೀಸ ಅಧಿಕಾರಿಗಳು ತಾ|| ೮ ನೇಯ [illegible] ಕಾಂಗ್ರೆಸ ಭವನವನ್ನು ಮುತ್ತಿ, ಅಲ್ಲಿಯ [illegible]ಗಳನ್ನು, ಕಾಂಗ್ರೆಸ ಪತ್ರಿಕೆಗಳನ್ನೂ [illegible] ಹೋದರು.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಕೈನೂಲು ಕೈಮಗ್ಗದ [illegible], ಧೋತರ ಮೊದಲಾದ ಎಲ್ಲ ತರದ ಬಟ್ಟೆ[illegible] ಯೋಗ್ಯ ದರದಿಂದ ದೊರೆಯುತ್ತವೆ. ಗ್ರಾಹಕರು ಲಾಭ ತೆಗೆದುಕೊಳ್ಳಬೇಕಾಗಿ ವಿನಂತಿ.

ಶಂಕರಪ್ಪಾ [illegible]

ಜವಳಿ ವ್ಯಾಪಾರಿಗಳು, ಬಾಗಲಕೋಟೆ

ಈ ಪತ್ರಿಕೆಯು [illegible] ಮುದ್ರಕ [illegible] ಬಾಗಲಕೋಟೆಯ ವಿದ್ಯಾರಣ್ಯ [illegible] ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ — ನಿತ್ಯಸಂಚಿಕೆಯು. — ಬೆಲೆ ೦—೧—

ಜಯ ಕರ್ನಾಟಕ

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಶನಿವಾರ ಮಿತಿ ಆಷಾಢ ಬಹುಳ ೨ ಶಕೆ ೧೮೫೨ ತಾ॥ ೧೨—೭—೩೦ [ ಸಂಚಿಕೆ ೯೮

ವರ್ಗಾಯಿಸಿದ

# ಶ್ರೀ ಆಣೆಯವರು ಸೆರೆಯಾಳಾದರು.

ಪುಸದದಲ್ಲಿ ತಾ॥ ೧೦ ಕ್ಕೆ ಸಾಮುದಾಯಿಕ ರೀತಿಯಿಂದ ಅರಣ್ಯ ಕಾನೂನಿನ ಭಂಗಮಾಡಲು ಸತ್ಯಾಗ್ರಹಿಗಳೊಡನೆ ಯಾವತಮಾಳದಿಂದ ಹೋಗಿ ಪುಸದಕ್ಕೆ ಹೋಗಿ ಶ್ರೀ ಮಾಧವ ರಾವ ಅಣೆಯವರು ೩ ಪಿ. ಕೊಡಿನ ಒಂದು ಸಾವಿರ ಜನ ಸತ್ಯಾಗ್ರಹಿಗಳೊಂದಿಗೆ ತಾ॥ ೧೧ಕ್ಕೆ ಸೆರೆಹಿಡಿಯಲ್ಪಟ್ಟಿದ್ದಾರೆ

## ಹೆಣ್ಣುಮಗಳಿಗೆ ೪ ತಿಂಗಳ ಶಿಕ್ಷೆ.

ಪಶ್ಚಿಮ ಗೋದಾವರಿ ಜಿಲ್ಹೆಯೊಳಗಿನ ಎಲ್ಲೂರಿನ ಶ್ರೀಮತಿ ವಿಶ್ವಸುಂದರಮ್ಮನವರಿಗೆ ಕ್ರಿ. ಲಾ ಅಮೆಂಡಮೆಂಟ ಕಾಯದೆಗನುಸಾರವಾಗಿ ೪ ತಿಂಗಳ ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿದೆ. ಶ್ರೀಮತಿ ವಿಶ್ವಸುಂದರಮ್ಮನವರ ಪತಿಯೂ ಹಾಗು ಬಂಧುವೂ ಈ ಮೊದಲೇ ಕಾರಾಗೃಹಕ್ಕೆ ತೆರಳಿದವರಾಗಿದ್ದಾರೆ

---

## ಡಾ. ಬಿಜಂಟಮ್ಮನವರು ಸರಕಾರಕ್ಕೆ ಎಚ್ಚರಿಕೆ ಕೊಟ್ಟರು.

ಲಂಡನ್ನದಲ್ಲಿ ಮಿತ್ರ್ಯಂಘದಲ್ಲಿ ತಾ॥ ೪ ನೇ ದಿವಸ ಮಿ। ಲ್ಯಾನ್ಸಬರಿ ಅಧ್ಯಕ್ಷತೆಯಲ್ಲಿ ಭಾರತೀಯ ಸ್ವಾತಂತ್ರ್ಯ ಸಮರ ವನ್ನು ಕುರಿತು ವಿಚಾರಿಸುವದಕ್ಕಾಗಿ ಒಂದು ಸಭೆಯು ನೆರೆ ದಿತ್ತು. ಆ ಸಭೆಯಲ್ಲಿ ಶ್ರೀ ಶಾಸ್ತ್ರಿ, ಬ್ಯಾನರ್ಜಿ, ಡಾ. ಬೆಜಂಟಮ್ಮ, ಮಿ। ಫೆನ್ನರ ಬ್ರೋಕವೆ ಮೊದಲಾದವರು ಭಾಷಣಮಾಡಿದರು ಡಾ ಬಿಜೆಂಟಮ್ಮನವರು ತಮ್ಮ ಭಾಷಣ ದಲ್ಲಿ "ಬ್ರಿಟಿಶರಲ್ಲಿ ಹಿಂದೂ ಜನರು ವಿಶ್ವಾಸವನ್ನಿಟ್ಟಿದ್ದರು, ಆದರೆ ಈಗ ಆ ವಿಶ್ವಾಸವೆಲ್ಲ ಹಾರಿಹೋಗಿದೆ. ಬ್ರಿಟಿಶರು ತಮ್ಮ ವಚನಗಳಂತೆ ನಡೆದುಕೊಳ್ಳುವದಿಲ್ಲದೆ ಇದಕ್ಕೆ ಕಾರಣ ಹಿಂದು ಸ್ಥಾನದ ಬೇಡಿಕೆಗಳನ್ನು ಸರಕಾರದವರು ಮನ್ನಿಸಲೇ ಬೇಕು. ಮನ್ನಿಸದಿದ್ದಲ್ಲಿಮಾತ್ರ, ಅಲ್ಲಿ ಬಂಡು ಏಳುವದು ನಿಶ್ಚಯವು." ಎಂದು ಹೇಳಿ ಸರಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟರು.

ಜಮಖಂಡಿಯಲ್ಲಿ

## ಗಾಂಧಿ ದಿನದ ಆಚರಣೆ.

### ಶಾಲೆಗಳ ಬಾಗಿಲುಗಳಿಗೆ ಕೀಲಿ.

( ನಮ್ಮ ಸ್ವಂತ ಸುದ್ದಿಗಾರರಿಂದ )

ಮಹಾತ್ಮಾ ಗಾಂಧಿಯವರ ಬಂಧನ ದಿನವು ಜಮಖಂಡಿ ಯಲ್ಲಿ ಒಳ್ಳೇ ಯಶಸ್ವಿಯಾಗಿ ಆಚರಿಸಲ್ಪಟ್ಟಿತು. ಇಲ್ಲಿಯ ವಿದ್ಯಾರ್ಥಿ ಗಳು ಮುಂಜಾನೆಯಲ್ಲಿ ನಗರ ಸಂಕೀರ್ತನೆಯನ್ನು ಮುಗಿಸಿ ಕೊಂಡು ಶಾಲೆಗಳ ಮುಂದೆ ಹೋಗಿ ಪಿಕೆಟಿಂಗ ಮಾಡಿದರು. ಪಿಕೆಟಿಂಗವನ್ನು ನೋಡಲು ಸಾವಿರಾರು ಜನರು ನೆರೆದಿದ್ದರು. ವಿದ್ಯಾರ್ಥಿಗಳ ಉತ್ಸಾಹವನ್ನು ಕಂಡು ಅಧಿಕಾರಿಗಳೂ ಬೆರಗಾ ದರು. ಪಿಕೆಟಿಂಗ ಎಂಟಾರು ೧೦॥ ಗಂಟೆಯ ವರೆಗೆ ಸಾಗಿತು. ಒಬ್ಬರೂ ಶಾಲೆಯೊಳಗೆ ಕಾಲಿಡಲಿಲ್ಲ. ಶಾಲೆಗಳ ಬಾಗಿಲುಗಳಿಗೆ ಕೀಲಿ ಬಿದ್ದವು. ಬಳಿಕ ವಿದ್ಯಾರ್ಥಿಗಳು ಜಯ ಜಯಕಾರದೊಂದಿಗೆ ತಿರುಗಿ ಹೋದರು. ಸಂಜೆಯಲ್ಲಿ ದ್ವಾರಕಾನಾಥ ದೇವಾಲಯ ದಲ್ಲಿ ಸಭೆಯನ್ನು ನೆರೆಸಲಾಯಿತು. ಶ್ರೀ. ಬಾಬೂರಾಯರು ಸಮಯೋಚಿತ ಭಾಷಣಮಾಡಿದರು. ಸಭೆಯ ಕೊನೆಯಲ್ಲಿ ಪರ ದೇಶಿ ಬಟ್ಟೆಗಳ ಪ್ರಚಂಡ ರಾಶಿಗೆ ಕೊಳ್ಳಿಯು ಹಚ್ಚಲ್ಪಟ್ಟಿತು.

ಮರುದಿವಸ ವಿದ್ಯಾರ್ಥಿಗಳೆಲ್ಲರೂ ಕೃಷ್ಣಾ ತಟಾಕಕ್ಕೆ ಹೋಗಿ ಅಲ್ಲಿ ರಾಷ್ಟ್ರಧ್ವಜವಂದನೆ ಸಮಾರಂಭವನ್ನು ನೆರವೇರಿಸಿ ಕೊಂಡು ೧೦॥ ಗಂಟೆಗೆ ತಿರುಗಿ ಊರಿಗೆ ಬಂದರು. ಮಿರಜದ ಲ್ಲಿಯ ಅಧಿಕಾರಿಗಳ ರೋಷಕ್ಕೆ ಪಾತ್ರರಾಗಿ ಶಿಕ್ಷೆಯನ್ನು ಅನುಭವಿ ಸಲು ತೆರಳಿದ ಶ್ರೀ ಕಿವಿರೆಯವರನ್ನು ಅಭಿನಂದಿಸುವದಕ್ಕಾಗಿ ನಾಗರಿಕರ ಪರವಾಗಿ ಒಂದು ಸಾರ್ವಜನಿಕ ಸಭೆಯು ಶೀಘ್ರದ ಲ್ಲಿಯೇ ನೆರೆಸಲ್ಪಡಲಿದೆ.

## ವ್ಹಾಯಿಸರಾಯರು ಬೆನ್ನು ಚಪ್ಪರಿಸಿಕೊಂಡರು.

ತಾ|| ೯ನೆಯ ದಿವಸ ವ್ಹಾಯಿಸರಾಯರಾದ ಆಯರ್ವಿನ್ ದೊರೆಗಳು ಕೌನ್ಸಿಲ ಆಫ್ ಸ್ಟೇಟ ಮತ್ತು ಅಸೆಂಬ್ಲಿ ಸಭಾಸದರನ್ನು ಕುರಿತು ಒಂದು ಭಾಷಣವನ್ನು ಮಾಡಿದರು. ಆ ಭಾಷಣದಲ್ಲಿ ಅವರು ನುಡಿದಿದ್ದೇನೆಂದರೆ—

“ಕಾಯದೆ ಭಂಗ ಚಳವಳಿಯನ್ನು ಪ್ರಾರಂಭಿಸುವದಕ್ಕಿಂತ ಪೂರ್ವದಲ್ಲಿಯೇ ಮಹಾತ್ಮರಿಗೆ ಎಚ್ಚರಿಕೆಯನ್ನು ಕೊಡುವದರಲ್ಲಿ ಬಂದಿತ್ತು. ಅವರು ಅತ್ತ ಲಕ್ಷ್ಯ ಕೊಡಲಿಲ್ಲ. ಈ ಚಳವಳಿಯು ಸರಕಾರಕ್ಕೆ ಅಪಾಯಕಾರಿಯಾಗಿದೆ. ಸರಕಾರದವರು ತಮಗೆ ಶಕ್ಯವಿದ್ದ ಎಲ್ಲ ಸಾಧನೆಗಳಿಂದಲೂ ಅದನ್ನು ಹತ್ತಿಕ್ಕುತ್ತಿದ್ದಾರೆ. ವರ್ಕಿಂಗ ಕಮೀಟಿಯವರು ಶಿಪಾಯಿ ಹಾಗೂ ಸೈನಿಕರನ್ನು ಮನಸ್ಫೋಟಿಸತೊಡಗಿದರು. ಆದುದರಿಂದ ಅದನ್ನು ಕಾಯಿದೆಗೆ ವಿರುದ್ಧವಾದ ಸಂಘವೆಂದು ಸಾರಲಾಯಿತು. ಬಂಡಿಗಾಲಿಯ ಪರಿಷತ್ತು ಶೀಘ್ರದಲ್ಲಿಯೇ ಸೇರಲಿಕ್ಕಿದೆ. ಅದರ ಕಾರ್ಯಕ್ರಮಗಳ ವಿಷಯವಾಗಿ ನಿಶ್ಚಿತವಾಗಿ ಏನೂ ಹೇಳಲು ಬರುವಂತಿಲ್ಲ. ತಮ್ಮ ಮುಂದೆ ಬಂದ ಎಲ್ಲ ತರಗತಿಯ ಪತ್ರಗಳ ವಿಷಯವಾಗಿ ಅದರ ಸ್ವತಂತ್ರ ರೀತಿಯಿಂದ ಯೋಗ್ಯ ವಿಚಾರಣೆ ಮಾಡುವದು. ಪರಿಷತ್ತು ನಡೆಯತಕ್ಕದ್ದು ಕೇವಲ ಚರ್ಚೆಗಾಗಿಯೇ ಅಲ್ಲ. ಎರಡೂ ದೇಶದ ಪ್ರತಿನಿಧಿಗಳು ಒಪ್ಪಿಕೊಂಡ ಠರಾವುಗಳನ್ನು ನಮೂದಿಸಿಕೊಂಡು, ಆ ಸೂಚನೆಗಳನ್ನು ಪಾರ್ಲಿಮೆಂಟದ ಮುಂದೆ ಇಡುವದಕ್ಕಾಗಿ ಸೇರತಕ್ಕದ್ದಿದೆ. ಹಿಂದುಸ್ಥಾನದ ರಾಜಕೀಯ ಮುಖಂಡರು ಬ್ರಿಟಿಶರೊಡನೆ ಸಹಕರಿಸಿ ಒಪ್ಪಂದವನ್ನು ಮಾಡಿಕೊಳ್ಳುವರಾಗಿ ನಂಬುತ್ತೇನೆ. ಈಗ ಎರಡೇ ಹಾದಿಗಳು ಉಳಿದಿವೆ. ಒಂದು ಅನೈಕ್ಯ, ಹಿಂಸೆ, ನಿರಾಶೆ ಮೊದಲಾದವುಗಳ ಕಡೆಗೆ ಒಯ್ಯತಕ್ಕಂಥದು. ಮತ್ತೊಂದು, ಹಿಂದುಸ್ಥಾನವನ್ನು ಬ್ರಿಟಿಶ ಸಾಮ್ರಾಜ್ಯಾಂತರ್ಗತವನ್ನಾಗಿ ಮಾಡಿ ಸುಖ ಸಮಾಧಾನ, ಶಕ್ತಿ ಮೊದಲಾದವುಗಳ ಕಡೆಗೆ ಕರೆದುಕೊಂಡು ಹೋಗತಕ್ಕಂಥದು. ಸರಿಯಾದದ್ದನ್ನು ತಿಳಿದುಕೊಂಡು ವರ್ತಿಸುವಂತೆ ಹಿಂದುಸ್ಥಾನಕ್ಕೆ ಬುದ್ಧಿಯನ್ನು ಕೊಡಲು ದೇವರಲ್ಲಿ ಪ್ರಾರ್ಥಿಸುತ್ತೇನೆ” ಎಂದು ನುಡಿದು ತಾವು ಕೈಕೊಂಡ ದಬ್ಬಾಳಿಕೆಯ ನೀತಿಯನ್ನು ಸಮರ್ಥಿಸಿಕೊಂಡು ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಂಡಿದ್ದಾರೆ.

## ಶಾರದಾ ಕಾಯದೆಯ ಭಂಗ

### ಆರೋಪಿಗೆ ೧೫ ದಿವಸಗಳ ಶಿಕ್ಷೆ

ಪಂಜಾಬ ಪ್ರಾಂತದ ರೋಹಟಕ ಎಂಬ ಗ್ರಾಮದಲ್ಲಿ ಫಕೀರಾ ವಿರಾಸಿ ಎಂಬ ಗಾಯಕನೋರ್ವನಿರುವನು. ಅವನು ಶಾರದಾ ಕಾಯದೆಯನ್ನು ಮುರಿದು ತನ್ನ ೭ ವರ್ಷದ ಮಗನ ಮದುವೆಯನ್ನು ಮಾಡಿದನು. ಹಳ್ಳಿಯ ಗೌಡನು ಈ ಬಗ್ಗೆ ಮೊದಲು ಎಚ್ಚರಿಕೆ ಕೊಟ್ಟಿದ್ದರೂ ಅವನು ಅತ್ತ ಲಕ್ಷ್ಯ ಕೊಡಲಿಲ್ಲ. ಈ ಅಪರಾಧಕ್ಕಾಗಿ ಮ್ಯಾಜಿಸ್ಟ್ರೇಟರು ಫಕೀರಾ ವಿರಾಸಿಯವರಿಗೆ ೧೫ ದಿವಸಗಳ ಸಾದಾ ಶಿಕ್ಷೆಯನ್ನು ವಿಧಿಸಿದರು. ಶಾರದಾ ಕಾಯದೆಯನ್ನು ಮುರಿದುದಕ್ಕಾಗಿ ಶಿಕ್ಷಿಸಲ್ಪಟ್ಟವರೊಳಗೆ ಇವರೇ ಮೊದಲನೆಯವರು.

## ಇಂಗ್ಲಂಡದಲ್ಲಿ ೧೮ ಲಕ್ಷ ಜನರಿಗೆ ಕೂಲಿಯಿಲ್ಲ

ಜೂನ ೩೦ನೆಯ ತಾರೀಖು ಮುಗಿಯುವ ಅವಧಿಯಲ್ಲಿ ಇಂಗ್ಲಂಡದಲ್ಲಿ ೧೮ ಲಕ್ಷ ಜನ ಕೂಲಿಕಾರರು ಕೂಲಿಯಿಲ್ಲದೆ ಕುಳಿತಿದ್ದಾರೆ. ಒಂದೇ ವಾರದಲ್ಲಿ ೭೫೦೦೦ ಜನರು ಕೂಲಿಗೇಡಿಗಳಾಗಿದ್ದಾರೆ. ಈ ದೇಶದಲ್ಲಿ ನಡೆದ ಬಹಿಷ್ಕಾರ ಚಳವಳಿಯು ಕಾರಣವಿದೆ.

## ಕಾಂಗ್ರೆಸ್ ಪಕ್ಷದವರಿಗೆ ಉದಾರ ಮತವಾದಿಗಳ ಬುದ್ಧಿವಾದ

ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ, ಸರ್ ಕಾವಸಜಿ ಜಹಾಂಗೀರ, ರಾಮಸ್ವಾಮಿ ಮುದಲಿಯಾರ, ಮಿ|| ಜಿನ್ನಾ, ಮಿ|| ಜಯಕರ ಮೊದಲಾದ ಉದಾರ ಮತವಾದಿಗಳು [illegible] ಒಂದು ಪ್ರಕಟನೆಯನ್ನು ಹೊರಡಿಸಿ ಅದರಲ್ಲಿ ಕಾಂಗ್ರೆಸ್ ಪಕ್ಷದವರಿಗೆ ಬುದ್ಧಿಯನ್ನು ಹೇಳಿದ್ದಾರೆ. ಅವರ ಪ್ರಕಟನೆಯ ಸಾರವು ಕೆಳಗಿನಂತೆ ಇದೆ—

“ಬಂಡಿಗಾಲಿಯ ಪರಿಷತ್ತು ಅಕ್ಟೋಬರ ತಿಂಗಳಲ್ಲಿ ಲಂಡನದಲ್ಲಿ ಸೇರತಕ್ಕದ್ದಿದೆ. ಪಾರ್ಲಿಮೆಂಟಿನ ಎದುರಿಡುವ ಸೂಚನೆಗಳ ವಿಷಯವಾಗಿ ಆ ಪರಿಷತ್ತಿನಲ್ಲಿ ಇಂಗ್ಲಂಡ ಹಾಗು ಹಿಂದುಸ್ಥಾನದ ಪ್ರತಿನಿಧಿಗಳ ನಡುವೆ ಚರ್ಚೆಯು ನಡೆಯತಕ್ಕದ್ದಾಗಿದೆ. ಆ ಪರಿಷತ್ತು ಬಹಳ ಮಹತ್ವದ್ದಿರುವದೆಂದು ಹೇಳಲು ಅಡ್ಡಿಯಿಲ್ಲ. ಸಾಯಮನ್ ವರದಿಯು ಪ್ರಕಟವಾದ ನಂತರ ಅದಕ್ಕೆ ಮತ್ತಷ್ಟು ಮಹತ್ವವು ಬಂದಿದೆ. ಸಾಯಮನ್ ವರದಿಯು ಪ್ರಕಟವಾದಂದಿನಿಂದ ದೇಶದಲ್ಲೆಲ್ಲ ಅಸಂತೋಷವು ಬೆಳೆಯಿತು. ಸಾಯಮನ್ ವರದಿಯ ಶಿಫಾರಸುಗಳೇ ಕೊನೆಯ ಶಿಫಾರಸುಗಳಾಗಿಲ್ಲವಾಗಿಯೂ, ಮತ್ತು ತಮ್ಮ ಮುಂದೆ ಕೊಡಲ್ಪಡುವ ಸೂಚನೆಗಳಿಗೆ ತಡೆಯಿಲ್ಲವಾಗಿಯೂ ವ್ಹಾಯಿಸರಾಯರು ನುಡಿದಿದ್ದಾರೆ. ಈ ಪರಿಷತ್ತಿನಲ್ಲಿ ಭಾಗ ತೆಗೆದುಕೊಳ್ಳುವದರಿಂದ ಯಾವ ಹಾನಿಯೂ ನಮಗೆ ಬರಲಾರದು. ಆದುದರಿಂದ ಈ ಸಂಧಿಯನ್ನು ವ್ಯರ್ಥ ಹೋಗಗೊಡದೆ ಭಾರತೀಯರು ಪರಿಷತ್ತಿನಲ್ಲಿ ಸೇರಿ ಬ್ರಿಟಿಶರೊಡನೆ ಸಹಕರಿಸಿ ತಮ್ಮ ಇಷ್ಟಾರ್ಥವನ್ನು ಸಾಧಿಸಿಕೊಳ್ಳಲು ಪ್ರಯತ್ನಿಸಬೇಕಾಗಿ ನಾವು ಕೋರುತ್ತೇವೆ. ಸರಕಾರದವರು ತಾವು ಹೊರಡಿಸಿದ ದಬ್ಬಾಳಿಕೆಯ ಕಾನೂನುಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ರಾಜಕೀಯ ಕಾರಣಕ್ಕಾಗಿ ಸೆರೆಮನೆಗೆ ಹೋದವರನ್ನು ಬಿಟ್ಟುಬಿಡಬೇಕು. ಕಾಂಗ್ರೆಸ್ ಪಕ್ಷದವರು ಅಸಹಕಾರ ಹಾಗು ಕಾಯದೆಭಂಗ ಚಳವಳಿಯನ್ನು ನಿಲ್ಲಿಸಬೇಕು. ಮತ್ತು ಈ ಸಂಧಿಯನ್ನು ಸಾಧಿಸಿಕೊಂಡು ತಮ್ಮ ಬೇಡಿಕೆಗಳನ್ನು ಬ್ರಿಟಿಶರ ಮುಂದೆ ಇಡಬೇಕು. ರಾಜಕೀಯ ಪಂಗಡದವರು ಈ ಕ್ಷಣದ ಮಹತ್ವವನ್ನು ಅರಿತುಕೊಂಡು ನಡೆದಲ್ಲಿ ಒಪ್ಪಂದವಾಗುವದರಲ್ಲಿ ಯಾವ ಸಂದೇಹವೂ ಇಲ್ಲ.”

## ಎರಡೇ ತಿಂಗಳಲ್ಲಿ

# ೪೦೦೦ ಜನರಿಗೆ ಸೆರೆಮನೆ

ತಾ॥ ೬ ನೆಯ ಏಪ್ರಿಲದಿಂದ ಜೂನ ೧೫ಕ್ಕೆ ಮುಗಿಯುವ ಅವಧಿಯಲ್ಲಿ ಕಾಯದೆ ಭಂಗ ಚಳವಳಿಯ ಮೂಲಕವಾಗಿ ೪೨೩೭ ಜನರಿಗೆ ಶಿಕ್ಷೆಯಾಗಿದೆಯೆಂಬುದಾಗಿ ಕೌನ್ಸಿಲ ಆಫ್ ಸ್ಟೇಟಿನ ಸಭಾಸದರಾದ ರಾ. ಬ. ಸ ಬರಾಮರಾಯರಿಗೆ ಉತ್ತರ ಕೊಡುವಾಗ ವಿ.॥ ಎಮರ್ಸನ್ನರು ನುಡಿದಿದ್ದಾರೆ.

### ಧಾರವಾಡದಲ್ಲಿ

## ಬಹಿಷ್ಕಾರದ ಮೆರವಣಿಗೆ

### ಸ್ವದೇಶಿಯ ಬಗ್ಗೆ ವಕೀಲರ ಉತ್ಸಾಹ

ಧಾರವಾಡದಲ್ಲಿ ತಾ। ೮ ನೆಯ ದಿವಸ ಪರದೇಶಿ ಬಟ್ಟೆಗಳು ಹಾಗು ಸರಕುಗಳ ಬಹಿಷ್ಕಾರದ ಬಗ್ಗೆ ಒಂದು ಪ್ರಚಂಡ ಮೆರವಣಿಗೆಯು ಹೊರಟಿತ್ತು. ಮೆರವಣಿಗೆಯಲ್ಲಿ ಶ್ರೀಯುತ ರಾದ ಜೋಗ, ಹೊಸಮನಿ, ಪುರೋಹಿತ, ಪಿಶ್ವೆ, ಕಬ್ಬೂರ ಮೊದಲಾದ ೫೦ ಜನ ಪ್ರಮುಖ ವಕೀಲರು ಭಾಗ ತೆಗೆದುಕೊಂಡಿದ್ದರು. ಸ್ತ್ರೀಯರೂ ಸೇರಿದ್ದರು. ಮೆರವಣಿಗೆಯು ಸಾಗುತ್ತಿರುವಾಗ ಶ್ರೀ ಕಬ್ಬೂರ ವಕೀಲರು ಕೂಟಕೂಟಕ್ಕೆ ನಿಂತು "ಬ್ರಿಟಿಶ ಸರಕುಗಳಿಗೆ ಬಹಿಷ್ಕಾರ ಹಾಕಿರಿ" ಎಂದು ಕೂಗುತ್ತಿದ್ದರು. ಮೆರವಣಿಗೆಯಲ್ಲಿ ಸೇರಿದವರೆಲ್ಲರೂ ಅದಕ್ಕೆ ಧ್ವನಿಗೂಡುತ್ತಿದ್ದರು.

ಅಂದು ಸಂತೆಗಾಗಿ ಬಂದ ಜನರ ಮೇಲೆ ಮೆರವಣಿಗೆಯು ಪರಿಣಾಮಕಾರಿ ಆಯಿತು. ಅವರೆಲ್ಲರೂ ಪರದೇಶಿ ಬಟ್ಟೆಗಳನ್ನು ಕೊಂಡುಕೊಳ್ಳುವುದನ್ನು ಬಿಟ್ಟುಕೊಟ್ಟರು.

### ಧಾರವಾಡದಲ್ಲಿ

## ಪರದೇಶಿ ಬಟ್ಟೆಗಳ ಪಿಕೆಟಿಂಗ

### ವ್ಯಾಪಾರಿಗಳಿಗೆ ಗಿರಾಕಿಗಳೇ ಸಿಗಲಿಲ್ಲ

ಧಾರವಾಡದಲ್ಲಿಯ ಸ್ತ್ರೀ ಸ್ವಯಂಸೇವಿಕೆಯರು ಪರದೇಶಿ ಬಟ್ಟೆಗಳ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುವದನ್ನು ನಿರ್ಧರಿಸಿಕೊಂಡು ಪಿಕೆಟಿಂಗನ್ನು ಮೊನ್ನಿನಿಂದ ಪ್ರಾರಂಭ ಮಾಡಿದ್ದಾರೆ. ಸಂತೆಯ ದಿವಸ ಪಿಕೆಟಿಂಗ ನೋಡಲು ಹಳ್ಳಿಯ ಜನರು ಗುಂಪುಗುಂಪಾಗಿ ಬಂದು ನಿಂತಿದ್ದರು. ಪಿಕೆಟಿಂಗದ ಹಳ್ಳಿಯ ಜನರ ಮೇಲೆ ಪರಿಣಾಮಕಾರಿಯಾಯಿತು. ಎಲ್ಲಾ ಅಂಗಡಿಗಳಲ್ಲಿ ಕೊಂಡುಕೊಳ್ಳುವರು ಯಾರೂ ತೋರಲಿಲ್ಲ. ಪ್ರಸಿದ್ಧ ವ್ಯಾಪಾರಿಗಳಾದ ಶ್ರೀ ಘುವಚಂದರ ಗಲ್ಲೀಯಲ್ಲಿ ಅಂದು ಏನೂ ಬಿಕರಿಯಾಗಲಿಲ್ಲ. ವ್ಯಾಪಾರಿಗಳು ಗಿರಾಕಿಗಳಿಲ್ಲದೆ ಕುಳಿತುಕೊಂಡರು. ಪಿಕೆಟಿಂಗದ ಕಾರ್ಯದಲ್ಲಿ ಶ್ರೀಮತಿ ಕೃಷ್ಣಾಬಾಯಿ ಪಣಜೀಕರ, ಶಿರೂರ, ಪಿಳ್ಳೂಬಾಯಿ ಜೋಗಳೇಕರ, ಜಾನಕೀಬಾಯಿ ಕಿರ್ಲೋಸ್ಕರ, ರಾಧಾಬಾಯಿ ಹುಬ್ಳೀಕರ ಮೊದಲಾದವರೂ ಸ್ವಾರ್ಥತ್ಯಾಗ ಸಂಘದ ೭—೮ ಜನ ಹೆಣ್ಣುಮಕ್ಕಳೂ ಪ್ರಮುಖ ಭಾಗ ವಹಿಸಿದ್ದಾರೆ.

### ಚಿಕ್ಕೋಡಿನ

## ಶ್ರೀ ಇಂಗಳೆಯವರನ್ನು ಸೆರೆ ಹಿಡಿದರು

ಬೆಳಗಾವಿ ಜಿಲ್ಲೆಯೊಳಗಿನ ಚಿಕ್ಕೋಡಿನ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳೂ, ಉತ್ಸಾಹಿ ತರುಣರೂ ಆದ ಶ್ರೀ ಶಾಂತಿನಾಥ ಇಂಗಳೆಯವರನ್ನು ಅಧಿಕಾರಿಗಳು ಸತ್ಯಾಗ್ರಹ ಚಳವಳಿಯ ಮೂಲಕವಾಗಿ ತಾ॥ ೬ ನೆಯ ದಿವಸ ಸೆರೆ ಹಿಡಿದುಕೊಂಡು ಬೈಲಹೊಂಗಲಕ್ಕೆ ಒಯ್ದಿರುತ್ತಾರೆ. ಚಿಕ್ಕೋಡಿನ ಜನರು ಹೂವಮಾಲೆಗಳಿಂದ ಸತ್ಕರಿಸಿ ಅವರನ್ನು ಬೀಳ್ಕೊಟ್ಟರು.

### ಗುಂಟೂರಿನಲ್ಲಿ

## ಗಾಂಧಿ ಟೊಪ್ಪಿಗೆಯ ಸತ್ಯಾಗ್ರಹ

ಗುಂಟೂರಿನ ಮ್ಯಾಜಿಸ್ಟ್ರೇಟರು ಗಾಂಧಿ ಟೊಪ್ಪಿಗೆಯ ವಿರುದ್ಧವಾಗಿ ತೆಗೆದ ಕಟ್ಟಪ್ಪಣೆಯು ಆಂಧ್ರ ದೇಶದಲ್ಲಿಯ ಸತ್ಯಾಗ್ರಹ ಚಳವಳಿಗೆ ಒಳ್ಳೆ ಪ್ರೋತ್ಸಾಹವನ್ನು ಕೊಡಹತ್ತಿದೆ. ಈ ಗಾಂಧಿ ಟೊಪ್ಪಿಗೆಗಾಗಿ ಈಗಾಗಲೆ ೬೦೦ ಕ್ಕಿಂತ ಹೆಚ್ಚು ಜನರು ಸೆರೆಮನೆಯ ಪಾಲಾಗಿದ್ದಾರೆ. ಆಂಧ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಈ ವಿಷಯವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಸತ್ಯಾಗ್ರಹವನ್ನು ಹೂಡಬೇಕೆಂದು ನಿರ್ಧರಿಸಿಕೊಂಡಿದ್ದಾರೆ. ಈ ಸತ್ಯಾಗ್ರಹವನ್ನು ನಡೆಸುವದಕ್ಕಾಗಿಯೇ ಆಂಧ್ರ ಪ್ರಾಂತಿಕ ಕಾಂಗ್ರೆಸ್ ಕಚೇರಿಯು ತೆನಾಲಿಗೆ ಹೋಗಿದೆ. ತೆನಾಲಿಯ ಪ್ರಸಿದ್ಧ ವ್ಯಾಪಾರಿಗಳೂ, ವಕೀಲರೂ ಆದ ಶ್ರೀ. ಮಂಗಳ ರಂಗಯ್ಯ ಚೆಟ್ಟಿಯವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದಾರೆ. ತೆನಾಲಿಯಿಂದ ಗುಂಟೂರಿಗೆ ಪ್ರತಿನಿತ್ಯದಲ್ಲಿಯೂ ಸತ್ಯಾಗ್ರಹಿಗಳನ್ನು ಕಳಿಸಿ ಸತ್ಯಾಗ್ರಹವನ್ನು ಮುಂದುವರಿಸ ಬೇಕಾಗಿದೆ.

## ಹಾಜೀಯವರು ರಾಜೀನಾಮೆ ಕೊಟ್ಟರು

ವರಿಷ್ಠ ಕಾಯದೆ ಮಂಡಳದ ಸಭಾಸದರಾದ ಶ್ರೀ ಸರಭಾಯಿ ಹಾಜೀಯವರು ಸರಕಾರದ ದಬ್ಬಾಳಿಕೆಯ ವೃತ್ತಿಯನ್ನು ನಿಷೇಧಿಸಿ ತಮ್ಮ ಸಭಾಸದತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ.

## ಕೈದಿಗೆ ಹುಚ್ಚು ಹಿಡಿಯಿತು

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಸಿಕ್ಕ ಒಬ್ಬ ಕೈದಿಯು ಏಕಾಂತವಾಸದ ಶಿಕ್ಷೆಗೆ ಪಾತ್ರನಾಗಿದ್ದನು. ಈ ಏಕಾಂತವಾಸದ ಪರಿಣಾಮವು ಅವನ ಮೇಲೆ ಆಗಿ ಅವನಿಗೆ ಈಗ ಹುಚ್ಚು ಹಿಡಿದಿರುವದಾಗಿ ತಿಳಿಯುತ್ತದೆ.

## ಶ್ರೀ ಕುಂಟೆಯವರಿಗೆ ೭ ತಿಂಗಳ ಕಠಿಣ ಶಿಕ್ಷೆ

ಅಲಿಬಾಗದ ತರುಣ ಸಂಘದ ಉಪಾಧ್ಯಕ್ಷರಾದ ಶ್ರೀ. ವಿ. ಕೆ. ಕುಂಟೆಯವರು ಐ. ಪಿ. ಕೋಡಿನ ೧೨೪ ನೆಯ ಹಾಗು ಆಡಳಿತ ಕಾಯದೆಯ ೧೭ ನೆಯ ಕಲಮುಗಳ ಅನ್ವಯ ೭ ತಿಂಗಳ ಕಠಿಣ ಶಿಕ್ಷೆಗೆ ಗುರಿಯಾಗಿದ್ದಾರೆ.

## ದೇಶಬಂಧು ಪಥಕದ ಸಂಚಾರವೃತ್ತ

# ಹವಾಲದಾರನ ಕಿಡಿಗೇಡಿತನ

ತಾ|| ೩ನೆಯ ದಿವಸ ಕೆರೂರಿನಿಂದ ಈ ಪಥಕದ ನಾಲ್ಕು ಜನ ಸ್ವಯಂಸೇವಕರದೊಂದು ತಂಡವು ಪ್ರಚಾರ ಕಾರ್ಯಕ್ಕಾಗಿ ಹೊರಟಿತು. ಪಥಕದವರು ೯ ಗಂಟೆಗೆ ನರಸಾಪುರಕ್ಕೆ ಹೋಗಿ ನಗರಸಂಕೀರ್ತನ ಮಾಡಿಕೊಂಡು ಊರ ಮಧ್ಯದಲ್ಲಿರುವ ಮಸೀದಿಯೊಳಗೆ ಸಭೆ ಕೂಡಿಸಿದರು. ದಿವಾಣಜಿಯವರ ಲಾವಣಿಯೂ, ಸಿಂದಗಿಯವರ ಸದ್ಯದ ಸ್ಥಿತಿಯ ಬಗ್ಗೆ ಭಾಷಣವೂ ಜರುಗಿದವು. ನೆರೆದ ಜನರು ನೂಲುವೆವೆಂದು ವಚನವನ್ನು ಕೊಟ್ಟರು. ಮುಂದೆ ಸಾಗನೂರ ಮತ್ತು ಒಡೆಯರಹಾಳ ಗ್ರಾಮಗಳಿಗೆ ಹೋಗಿ ಅಲ್ಲಿ ಸಭೆಕೂಡಿಸಿ ಭಾಷಣ ಮಾಡಿದರು. ತಾ|| ೪ನೆಯ ದಿವಸ ಮೂಸಕೋಟಿಗೆ ಹೋಗಿ ಭಾಷಣ ಮಾಡಿದರು. ಬಳಿಕ ಅನವಾಲ ಗ್ರಾಮಕ್ಕೆ ಹೋದರು. ದ್ಯಾಮವ್ವನ ಗುಡಿಯಲ್ಲಿ ತಳವೂರಿದರು. ಈ ಸುದ್ದಿಯು ಊರ ಗೌಡನ ಕಿವಿಗೆ ಮುಟ್ಟಿತು. ಅವನು ಗುಡಿಯನ್ನು ಸಾರಿಸು ಎಂದು ಒಬ್ಬ ಹೆಂಗಸನ್ನು ಗುಡಿಗೆ ಕಳುಹಿಸಿಕೊಟ್ಟನು. ಆ ಹೆಂಗಸು 'ಸಾರಿಸುವದದೆ, ಇಲ್ಲಿಂದ ಹೊರಡಿರಿ' ಎಂದು ಪಥಕದವರಿಗೆ ಹೇಳಿದಳು. 'ನಿನ್ನೆ ಮೊನ್ನೆ ಸಾರಿಸಿದಂತೆ ತೋರುತ್ತದೆ. ಮತ್ತೆ ಇಂದೇಕೆ ಸಾರಿಸುವದು' ಎಂದು ಸ್ವಯಂಸೇವಕರು ಕೇಳಿದರು. 'ಸಾರಿಸಲು ಅಪ್ಪಣೆಯಾಗಿದೆ, ಸಾರಿಸಲು ಬಂದಿದ್ದೇನೆ' ಎಂದು ಆ ಹೆಂಗಸು ಹೇಳಿದಳು. ಸ್ವಲ್ಪ ಹೊತ್ತಿನ ಮೇಲೆ ಅದೆಲ್ಲವೂ ಗೌಡನ ಕುಚೇಷ್ಟೆಯಾಗಿದೆಯೆಂಬುದು ಸತ್ಯಾಗ್ರಹಿಗಳಿಗೆ ತಿಳಿದುಬಂದಿತು. ಊಟದ ಹೊತ್ತಾದುದರಿಂದ ಸತ್ಯಾಗ್ರಹಿಗಳು ತಮ್ಮ ಹಾಸಿಗೆ ಹೊದಿಕೆಗಳನ್ನು ತೆಗೆದುಕೊಂಡು ಹೋದರು, ಬಳಿಕ ಬಸವಣ್ಣದೇವರ ಗುಡಿಯಲ್ಲಿ ಬಿಡಾರ ಒಗೆದರು. ಗುಡಿಯ ಪೂಜಾರಿಯು 'ಸಾರಿಸುವದದೆ ಏಳಿರಿ' ಎಂದು ಅವರ ಬೆನ್ನುಹತ್ತಿದನು. ಸತ್ಯಾಗ್ರಹಿಗಳು ಏಳಲೊಪ್ಪಲಿಲ್ಲ. ಪೂಜಾರಿಯು ಸಾರಿಸಿ ಗುಡಿಯ ತುಂಬ ಕೊಚ್ಚು ಮಾಡಿದನು. ಸತ್ಯಾಗ್ರಹಿಗಳು ಗೀರಿ ಸ್ವಚ್ಛಮಾಡಿದರು. ಸಂಜೆಗೆ ಅಲ್ಲಿ ಸಭೆಯಾಯಿತು. ದಿವಾಣಜಿಯವರ ಲಾವಣಿಗಳೂ, ಉಳಿದವರ ಭಾಷಣಗಳೂ ಆದವು. ಗುಡಿಯಲ್ಲಿ ಚಳವಳಿಯವರನ್ನು ಇಳಿಸಿಕೊಳ್ಳಬಾರದೆಂದು ಅಪ್ಪಣೆಯು ಹೊರಬಿದ್ದಂತೆ ಕಾಣುತ್ತದೆ. ನಂತರ ಅವರು ಸಂಡ್ಯಾಳಕ್ಕೆ ಹೋಗಿ ಅಲ್ಲಿ ಜನರಿಗೆ ಉಪದೇಶಮಾಡಿ ಮಧ್ಯಾಹ್ನಕ್ಕೆ ಬಂಗಿಸ್ಥಾನಕ್ಕೆ ಹೋದರು. ಅಲ್ಲಿ ಬಸವಣ್ಣದೇವರ ಗುಡಿಯಲ್ಲಿ ಇಳಿದುಕೊಂಡರು. ಅಲ್ಲಿ ಒಬ್ಬ ಕುಂಟ ರೀತಿಯ ಹವಾಲದಾರನು ಕುಳಿತಿದ್ದನು. ಅವನು ಸತ್ಯಾಗ್ರಹಿಗಳಿಗೆ ಅವರವರ ಹೆಸರುಗಳನ್ನು ತಿಳಿಸಲು ಕೇಳಿಕೊಂಡನು. ಸತ್ಯಾಗ್ರಹಿಗಳು ತಿರುಗಿ ಅವನಿಗೆ ಅವನ ಹೆಸರನ್ನು ಕೇಳಿದರು. 'ನನ್ನ ಹೆಸರನ್ನು ಕೇಳುವವರು ನೀವು ಯಾರು? ನನಗೆ ಸಂಬಳಕ್ಕೆ ಸಂಬಂಧವಿದೆ. ನೀವು ರೈತರು ನನ್ನ ಕೈಯಲ್ಲಿದ್ದವರು' ಎಂದು ಹವಾಲದಾರನು ನುಡಿದನು. ಸ್ವಯಂಸೇವಕರು 'ನಮಗಾವರೂ ಫೌಜದಾರರಿದ್ದವರು ಅವರಿಗೇನೇ ಹೆಸರು ಹೇಳುತ್ತೇವೆ' ಎಂದು ನುಡಿದರು. ಬಳಿಕ ಹವಾಲದಾರನು ಅವರಿಗೆ 'ಇಲ್ಲಿ ಸಭೆ ಮಾಡಿಸಿ ಕೊಡುವದಿಲ್ಲ, ರಾಷ್ಟ್ರಧ್ವಜವನ್ನು ಕಿತ್ತಿ ಒಗೆಯುತ್ತೇನೆ' ಎಂದು ತಿಳಿಸಿದನು. 'ರಾಷ್ಟ್ರಧ್ವಜವನ್ನು ಕಿತ್ತಿದಲ್ಲಿ ಏನಾಗುವದು ನಿನಗೆ ಗೊತ್ತಿಲ್ಲವಾಗಿ ಕಾಣುತ್ತದೆ. ಬೇಕಾದರೆ ಪರೀಕ್ಷಿಸಿ ನೋಡು' ಎಂದು ಸತ್ಯಾಗ್ರಹಿಗಳು ಉತ್ತರ ಕೊಟ್ಟರು. ಬಳಿಕ ಅವನು ನೆರೆದ ಜನರನ್ನು ಬೆದರಿಸಹತ್ತಿದನು. ಅಷ್ಟರಲ್ಲಿ ಸಂಜೆಯಾದುದರಿಂದ ಜನರೆಲ್ಲ ಹೋದರು. ಸತ್ಯಾಗ್ರಹಿಗಳು ಮಲಗಿಕೊಂಡರು. ಮಧ್ಯರಾತ್ರಿಯಲ್ಲಿ ಬೇರೊಬ್ಬ ಸಿಪಾಯಿಯು ಅಲ್ಲಿಗೆ ಬಂದು ಅವರನ್ನು ಎಬ್ಬಿಸಿ ಅವರವರ ಹೆಸರುಗಳನ್ನು ಕೇಳಿದನು. ಹವಾಲದಾರನು ನಡೆದ ಸಂಗತಿಯನ್ನು ತಿಳಿಸಿದನು. ಬಳಿಕ ಅವನು ಗೌಡನನ್ನು ಕರೆಸಿ ಅವನಿಗೆ ಒಳ್ಳೆಯಾಗಿ ಬೈದನು. ಅಲ್ಲಿಂದ ಮತ್ತೆ ಸೌಮ್ಯತನದಿಂದ ಸತ್ಯಾಗ್ರಹಿಗಳಿಗೆ ಹೆಸರು ಕೇಳಿದನು. 'ನಿಮ್ಮ ಹೆಸರು ಹೇಳಿದರೆ ನಾವು ಹೆಸರು ಹೇಳುವೆವೆಂ'ದು ಸತ್ಯಾಗ್ರಹಿಗಳು ಉತ್ತರಕೊಟ್ಟರು. ಅವನು ತನ್ನ ಹೆಸರು ಎಸ್. ಎಚ್. ಇನಾಮದಾರ ಎಂದು ಹೇಳಿದನು. ಬಳಿಕ ಸತ್ಯಾಗ್ರಹಿಗಳು ತಮ್ಮ ಹೆಸರು ಹೇಳಿದರು. ಮರುದಿನ ಮುಂಜಾನೆ ಸಭೆ ಸೇರಿಸಿ ಸದ್ಯದ ಸ್ಥಿತಿಯ ಬಗ್ಗೆ ಪಥಕದವರು ಭಾಷಣಮಾಡಿದರು. ಅಲ್ಲಿಂದ ಪಥಕದವರು ಬಡ್ಡೀರ ತಿಮ್ಮಾಪುರ ಹಾಗು ಹಾಲಗೇರಿಯಲ್ಲಿ ವ್ಯಾಖ್ಯಾನ ಮೊದಲಾದವುಗಳನ್ನು ಸಾಗಿಸಿ ತಿರುಗಿ ಕೆರೂರಿಗೆ ಬಂದರು.

—ಪಥಕನಾಯಕ.

## ಯುವಕ ಸಂಘದ ಕಾಗದಪತ್ರಗಳ ಕಳವು

ಮುಂಬಯಿಯ ಶ್ರೀ. ಬಿ. ಎಫ್. ನರಿಮನ್ನರ ಬಂಗಲೆಯ ಮೇಲೆ ಯಾರೋ ಕಳವಿನ ರಾತ್ರಿಯಲ್ಲಿ ದಾಳಿ ಮಾಡಿ, ಮಹತ್ವದ ಕಾಗದ ಪತ್ರಗಳನ್ನೊಳಗೊಂಡ ಪೆಟ್ಟಿಗೆಗಳನ್ನು ಒಡೆದು, ಯುವಕ ಸಂಘಕ್ಕೆ ಸಂಬಂಧಿಸಿದ ಕಾಗದಪತ್ರಗಳನ್ನು ತೆಗೆದುಕೊಂಡು ಹೋಗಿರುವರು. ಕಾಗದಪತ್ರಗಳನ್ನು ಒಯ್ದವರ ವಿಷಯವಾಗಿಯೂ ಮತ್ತು ಅವರ ಉದ್ದೇಶದ ವಿಷಯವಾಗಿಯೂ ಏನೂ ತಿಳಿದುಬಂದಿಲ್ಲ.

### ಮಹಮ್ಮದ ಯಾಕೂಬರು

## ಅಸೆಂಬ್ಲಿಯ ಅಧ್ಯಕ್ಷರಾದರು.

ಇಷ್ಟು ದಿವಸಗಳ ವರೆಗೆ ಅಸೆಂಬ್ಲಿಯ ಉಪಾಧ್ಯಕ್ಷರಾಗಿದ್ದ ಮೌಲವಿ ಮಹಮ್ಮದ ಯಾಕೂಬರು ಬಹುಮತದಿಂದ ಅಸೆಂಬ್ಲಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

## ಮುಸಲ್ಮಾನ ಮುಖಂಡರನ್ನು ಸೆರೆಹಿಡಿದರು

ಜಮಾಯತ್ ಉಲ್ ಉಲೇಮಾ ಸಂಘದ ಯುದ್ಧಮಂಡಳದ ಸಭಾಸದರಾದ ಮುಫ್ತಿ ಮಹಮ್ಮದ ನಾಯೀಮರನ್ನು ಅಧಿಕಾರಿಗಳು ಸೆರೆಹಿಡಿದುದಾಗಿ ತಿಳಿಯುತ್ತದೆ.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಕೈನೂಲು ಕೈಮಗ್ಗದ ಕಟೀಂಗ, ಕೋಟಿಂಗ, ಧೋತರ ಮೊದಲಾದ ಎಲ್ಲ ತರದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಗಿರಾಕಿಗಳು ಲಾಭ ಪಡೆಯಬೇಕಾಗಿ ವಿನಂತಿ.

ಶಂಕರಪ್ಪಾ ಬಣಗಾರ
ಜವಳಿ ವ್ಯಾಪಾರಿಗಳು, ಬಾಗಲಕೋಟೆ

ಈ ಪತ್ರಿಕೆಯು ಬಳವಂತ ಅಣ್ಣಾರಾವ [illegible] ಇವರಿಂದ ಬಾಗಲಕೋಟೆಯ ವಿದ್ಯಾಲಕ್ಷ್ಮೀ ಮುದ್ರಣ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—

ಜಯ ಕರ್ನಾಟಕ

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರುಃ— ಬಳವಂತ ಅಣ್ಣಾರಾವ ಮುಜುಮದಾರ.

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ರವಿವಾರ ಮಿತಿ ಆಷಾಢ ಬಹುಳ ೩ ಶಕೆ ೧೮೫೨ ತಾ|| ೧೩—೭—೩೦ [ ಸಂಚಿಕೆ ೯೯

## ಮುಂಬಯಿಯಲ್ಲಿ

# ಗಢವಾಲ ಮೆರವಣಿಗೆಗೆ ತಡೆ.

## ೧೫ ಜನರಿಗೆ ಗಾಯ

ತಾ|| ೧೧ನೆಯ ದಿವಸ ಮುಂಬಯಿಯ ಸತ್ಯಾಗ್ರಹ ಮಂಡಳದ ಅಧಿಕಾರಿಗಳು ಗಢವಾಲ ದಿನದ ನಿಮಿತ್ತವಾಗಿ ಮೆರವಣಿಗೆಯನ್ನು ಹೊರಡಿಸುವವರಾಗಿದ್ದರು. ಅಧಿಕಾರಿಗಳಿಗೆ ಈ ಮೆರವಣಿಗೆಯು ಸರಿತೋರಿಬರಲಿಲ್ಲ ಆದುದರಿಂದ ಪೋಲೀಸ ಕಮೀಶನರರು ಯುದ್ಧ ಮಂಡಳದವರ ಮೇಲೆಯೂ ಹಾಗು ಸಾಮಾನ್ಯ ಜನರ ತಿಳುವಳಿಕೆಗಾಗಿಯೂ ಎರಡು ಪತ್ರಪ್ರಕಟಣೆಗಳನ್ನು ಹೊರಡಿಸಿ ಮೆರವಣಿಗೆಗೆ ಅಡ್ಡಿಯನ್ನುಂಟುಮಾಡಿದರು. ಸಾರ್ವಜನಿಕ ಶಾಂತತೆಗೆ ಭಂಗಬರುವದೆಂದು ಅವರಿಗೆ ತಿಳಿದು ಬಂದದ್ದೇ ಈ ಪತ್ರಪ್ರಕಟಣೆಗಳಿಗೆ ಕಾರಣವಾಯಿತು. ಸಾರ್ವಜನಿಕ ಸಭೆಗಳು ಸೇರತಕ್ಕ ಸ್ಥಳವಾದ ಆಜದ್ ಮೈದಾನಕ್ಕೆ ಹೋಗಿ ಮುಟ್ಟುವ ಎಲ್ಲ ಮಾರ್ಗಗಳಲ್ಲಿಯೂ ಸಾರ್ಜಂಟರು ಹಾಗು ಪೋಲೀಸರು ಪಹರೆಗಾಗಿ ನಿಲ್ಲಿಸಲ್ಪಟ್ಟಿದ್ದರು. ಅಡ್ಡಿಯಾದರೂ ಸಹ ೨೦೦೦ ಸ್ವಯಂಸೇವಕರು ಮೆರವಣಿಗೆಯಿಂದ ಹೋಗತಕ್ಕದ್ದೆಂದು ನಿರ್ಧರಿಸಿಕೊಂಡಿದ್ದರು. ಸ್ವಯಂಸೇವಕರು ಬೇರೆ ಬೇರೆ ಮಾರ್ಗಗಳಿಂದ ಆಜದ್ ಮೈದಾನಕ್ಕೆ ಹೋಗಲು ಯತ್ನಿಸಿದರು. ಅಧಿಕಾರಿಗಳು ಲಾಠಿಗಳನ್ನು ಉಪಯೋಗಿಸಿ ಸ್ವಯಂಸೇವಕರನ್ನು ಹಿಂದಕ್ಕಟ್ಟಿದರು. ೧೫ ಜನರಿಗೆ ಗಾಯಗಳಾದವು.

---

### ಲಾಹೋರ ಒಳಸಂಚಿನ ಖಟ್ಲೆ

### ಇಬ್ಬರು ಬಂಧಮುಕ್ತರಾದರು

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಆರೋಪಿಗಳಾಗಿದ್ದ ಭಗತಸಿಂಗ ಮೊದಲಾದ ೧೪ ಜನರ ಮೇಲೆ ಆರೋಪವು ಹೊರಿಸಲ್ಪಟ್ಟಿತು. ಬಟುಕೇಶ್ವರ ದತ್ತರ ಮೇಲಿನ ಆರೋಪವು ತೆಗೆದುಹಾಕಲ್ಪಟ್ಟಿತು. ಶ್ರೀ ಎಸ್. ಎನ್. ಪಾಂಡೆ ಮತ್ತು ಅಗ್ನ್ಯಾಮುರು ನಿರಪರಾಧಿಗಳಾಗಿ ನಿರ್ಣಯಿಸಲ್ಪಟ್ಟು ಬಂಧಮುಕ್ತರಾದರು.

### ಮುಂಬಯಿಯಲ್ಲಿ

### ಶ್ರೀ ಧನಶೆಟ್ಟಿಯವರ ವಿಚಾರಣೆ.

ಸೊಲ್ಲಾಪುರದ ದಂಗೆಯ ಕಾಲಕ್ಕೆ ಇಬ್ಬರು ಪೋಲೀಸರನ್ನು ಕೊಂದ ಆರೋಪಕ್ಕಾಗಿ ದೇಹಾಂತ ಶಿಕ್ಷೆಗೆ ಪಾತ್ರರಾದ ಶ್ರೀ ಮಲ್ಲಪ್ಪ ಧನಶೆಟ್ಟಿ ಮೊದಲಾದ ೪ ಜನರ ಖಟ್ಲೆಯ ಅಪೀಲಿನ ವಿಚಾರಣೆಯು ತಾ|| ೯ನೆಯ ದಿವಸ ಜಸ್ಟಿಸ್ ಮಡಗಾಂವಕರರ ಮುಂದೆ ಪ್ರಾರಂಭವಾಯಿತು:— ಆರೋಪಿಗಳು ತಮ್ಮ ಪರವಾಗಿ ಶ್ರೀ ಭುಲಾಭಾಯಿ ದೇಸಾಯಿ, ಜಕಳೆ ಮತ್ತು ವಾಳವಳಕರರನ್ನು ಖಟ್ಲೆ ನಡೆಸಲು ನಿಯಮಿಸಿದ್ದಾರೆ. ಶ್ರೀ ಭುಲಾಭಾಯಿ ದೇಸಾಯಿಯವರು ಆರೋಪಿಗಳ ಪರವಾಗಿ ಖಟ್ಲೆಯನ್ನು ಪ್ರಾರಂಭಿಸಿ ಕೊಲೆಗೆ ಕಾರಣವಾದ ಸಂಗತಿಗಳನ್ನು ಮೊದಲು ಸ್ಪಷ್ಟೀಕರಿಸಿದರು. ಬಳಿಕ ಆ ಖಟ್ಲೆಯು ಸಿದ್ಧಮಾಡಲ್ಪಟ್ಟಂತಹದು ಆಗಿರಬಹುದೆಂಬುದು ಪೋಲೀಸರ ಸಾಕ್ಷಿಗಳಿಂದ ವ್ಯಕ್ತವಾಗುತ್ತಿದೆಯೆಂದೂ, ಆ ಕೃತ್ಯವನ್ನು ನಿರೀಕ್ಷಿಸಿದವರು ಯಾರೂ ಕರೆಯಲ್ಪಡುವದಕ್ಕಿಂತ ಮೊದಲೇ ಬಂದು ಆ ಸಂಗತಿಯ ವಿಷಯವಾಗಿ ಏನನ್ನು ಹೇಳಿರುವದಿಲ್ಲವಾಗಿಯೂ ಎಷ್ಟೋ ನೂರಾರು ಜನರು ದಂಗೆಯಲ್ಲಿ ಭಾಗ ತೆಗೆದುಕೊಂಡಿರುವಾಗ ಸಾಕ್ಷಿದಾರರು ಈ ನಾಲ್ಕು ಜನರನ್ನೇ ಗುರುತಿಸುವದು ಅಶಕ್ಯವಾಗಿದೆಯೆಂದೂ ತಮ್ಮ ಪಕ್ಷ ಸಮರ್ಥನ ಮಾಡಿಕೊಂಡರು. ಅಷ್ಟಕ್ಕೆ ಕೋರ್ಟಿನ ವೇಳೆಯು ಮುಗಿದಿದ್ದರಿಂದ ಅವರು ತಮ್ಮ ಸಮರ್ಥನವನ್ನು ನಿಲ್ಲಿಸಿದರು.

### ಬಾದಶಹರು ಭಾಷಣಮಾಡಿದರು

ಬಾದಶಹರು ಭಾರತ ಭುವನವನ್ನು ತೆರೆಯುವ ಸಮಾರಂಭದ ಕಾಲಕ್ಕೆ ಭಾಷಣ ಮಾಡುವಾಗ "ಭಾರತ ದೇಶದಲ್ಲಿ ನಡೆದ ಗೊಂದಲವನ್ನು ನಿರೀಕ್ಷಿಸುತ್ತಿದ್ದೇನೆ. ಪರಮೇಶ್ವರನು ಭಾರತೀಯರಿಗೆ ಶಾಂತಿ-ಸಮಾಧಾನವನ್ನು ಕೊಡುವನೆಂಬುದಾಗಿ ನಂಬುತ್ತೇನೆ" ಎಂಬುದಾಗಿ ನುಡಿದರು.

# ಮಂಗಳೂರಿನಲ್ಲಿ ಬಡಿಗೆಯ ರಾಜ್ಯ

## ಸ್ವಯಂಸೇವಕರಿಗೆ ಬೆತ್ತದ ಏಟು. ಸತ್ಯಾಗ್ರಹಿಗಳಿಗೆ ಲಾಠಿಯ ಪೆಟ್ಟು.

ಮಂಗಳೂರಿನ ಪರಿಸ್ಥಿತಿಯು ದಿನೇ ದಿನೇ ಕಠಿಣವಾಗುತ್ತಿದೆ. ೧೪೪ ನೆಯ ಕಲಮಿನ ಉಪಯೋಗವಂತೂ ಎಲ್ಲೆಲ್ಲಿಯೂ ಹೇಳತೀರದು. ಬೀದಿಗಳಲ್ಲಿ ೪-೫ ಜನರು ಒಟ್ಟಿಗೆ ಹೋಗಲಾಗದು. ಅಂಗಡಿಗಳಲ್ಲಿ ವ್ಯಾಪಾರ ಮಾಡಲು ಹೆಚ್ಚು ಜನರು ಸೇರುವ ಹಾಗಿಲ್ಲ. ೪ ಜನರಿಗಿಂತ ಹೆಚ್ಚು ಜನರು ಎಲ್ಲಿ ಸೇರಿದರೂ ಹಿಂದೆಯೇ ಲಾಠಿ ಪ್ರಹಾರಗಳು ಕಾದಿರುತ್ತವೆ. ಮೊಳೆಗಳನ್ನು ಹಾಕಿ ಹಿತ್ತಾಳಿ ಗುಂಡುಗಳನ್ನು ಹಾಕಿದ ಲಾಠಿಗಳನ್ನು ಉಪಯೋಗಿಸುತ್ತಾರೆ ಇದು ಸಾಮಾನ್ಯ ಜನರ ಪಾಡು. ಸ್ವಯಂಸೇವಕರ ಪಾಡಂತೂ ಹೇಳತೀರದು. ಎಲ್ಲಿ ಕಂಡಲ್ಲಿ ಅವರಿಗೆ ಛಡೀ ಏಟುಗಳು. ಇರಲಿಕ್ಕೆ ಸ್ಥಳವಿಲ್ಲ. ಉಣಲಿಕ್ಕೆ ಆಹಾರವಿಲ್ಲ. ಹೋಟಲುಗಳಲ್ಲಿ ಆಗಲಿ, ಖಾಸಗಿ ಮನೆಗಳಲ್ಲಿ ಆಗಲಿ ಇವರಿಗೆ ಆಹಾರ ಕೊಡ ಕೂಡದು(?) ಇವರ ಮೇಲೆ ಕನಿಕರಗೊಂಡು ಜನರೇನಾದರೂ ಇವರಿಗೆ ಇಳಿಯುವ ಸ್ಥಳ ಅಥವಾ ಅನ್ನಾಹಾರಗಳನ್ನೇನಾದರೂ ಕೊಟ್ಟಲ್ಲಿ ಅಂಥವರಿಗೆ ಶಿಕ್ಷೆಯಾಗುವದು. ಸತ್ಯಾಗ್ರಹಿಗಳನ್ನು ಪೋಲೀಸರು ಹೊಡೆಯುವದಲ್ಲದೆ, ಅವರನ್ನು ಪೋಲೀಸ ಲಾಕಪ್ಪುಗಳಿಗೆ ಕರೆದೊಯ್ದು, ಅಲ್ಲಿ ಚನ್ನಾಗಿ ಹೊಡೆದು ಆಚೆಗೆ ದೂಡುತ್ತಿರುವರು. ಅನೇಕರಿಗೆ ಅನೇಕ ವಿಧವಾದ ಗಾಯಗಳಾಗಿರುವವು. ಹೊಡೆತ ವಿಶೇಷವಾಗಿ ನೆಲದ ಮೇಲೆ ಮೂರ್ಛೆಹೊಂದಿ ಬಿದ್ದರೂ ಏಟುಗಳಂತೂ ತಪ್ಪುವದಿಲ್ಲ. ಹಲವರಿಗೆ ಮೂಳೆಗಳು ಮುರಿದಿರುವವು. "ಶ್ರೀ ರಾಮಕೃಷ್ಣ ನರ್ಸಿಂಗ ಹೋಮ"ದಲ್ಲಿ ದಿನಾಲು ನೂರಾರು ಜನರು ಬಂದು ಚಿಕಿತ್ಸೆಯನ್ನು ಹೊಂದುತ್ತಿರುವರು. ಅಲ್ಲಿಯೇ ಉಪಚಾರವನ್ನು ಪಡೆಯುತ್ತಿರುವವರೂ ಅನೇಕರಿರುವರು.

ಈಗ ಈ ಕಾನೂನಿನ ಪ್ರಭಾವವು ಮಂಗಳೂರಿಂದ ಉಡುಪಿ ಸುತ್ತುಮುತ್ತ ೧೦ ಮೈಲುಗಳ ವರೆಗೂ ಹಬ್ಬಿದೆ. ಸವಿನಯ ಕಾಯದೆಭಂಗ ಚಳವಳಿಗೆ ಸಹಾಯ ಮಾಡುವದೂ, ಹಾಗೂ ಶೇಂದೀ ಶರಾಬು, ವಿದೇಶಿ ವಸ್ತ್ರದಂಗಡಿಗಳ ಮುಂದೆ ಪಿಕೆಟಿಂಗ ಮಾಡುವದೂ ೧೪೪ ನೆಯ ಕಲಮಿಗೆ ವಿರುದ್ಧವಾದುದರಿಂದ ೧೪೪ ನೆಯ ಕಲಮಿನ ಪ್ರಕಾರ ಶಿಕ್ಷೆಯಾಗುವದೆಂದು ಆ ಜಿಲ್ಹೆಯ ಕಲೆಕ್ಟರರು ಜಾಹೀರನಾಮೆಯನ್ನು ತೆಗೆದಿದ್ದಾರೆ.

ಮಂಗಳೂರಿಗೆ ಯಾರೇ ಹೋಗಬೇಕಾದರೂ— ಅದರಲ್ಲೂ ಖಾದಿ ಧರಿಸಿರುವವರು ಪೋಲೀಸರ ತಪಾಸಣೆಯಾಗಿ ಅವರ ಅಪ್ಪಣೆಯನ್ನು ಪಡೆಯದ ಹೊರತು ಮುಂದೆ ಹೆಜ್ಜೆ ಇಡತಕ್ಕದ್ದಲ್ಲ. ಹಿಂದುಸ್ಥಾನೀ ಸೇವಾದಲದವರಿಗೂ, ಡಾ|| ಹರ್ಡೀಕರರ ಜನರಿಗೂ ಮಂಗಳೂರಿಗೆ ಹೋಗಲು ಸಾಧ್ಯವೇ ಇಲ್ಲ. ಒಂದು ವೇಳೆ ಅಲ್ಲಿ ಸಿಕ್ಕರೆ ಅವರಿಗೆ ತಕ್ಷಣವೇ ಶಿಕ್ಷೆಯಾಗುವದು.

## ವರ್‍ಹಾಡದ ಶ್ರೀ. ಅಣೆಯವರಿಗೆ

### ೬ ತಿಂಗಳ ಸಾದಾ ಶಿಕ್ಷೆ

ತಾ| ೧೨ ನೆಯ ದಿವಸ ಪುಸದದಲ್ಲಿ ಅಡವಿ ಕಾನೂನಿನ ಭಂಗಕ್ಕೆ ಪ್ರಾರಂಭವಾಯಿತು. ಶ್ರೀ. ಅಣೆಯವರಿಗೆ ನಿರೋಪ ಕೊಡುವದಕ್ಕಾಗಿ ಸಾವಿರಾರು ಜನರು ನೆರೆದಿದ್ದರು. ಡಾ|| ಮುಂಜೆ, ಶ್ರೀ ಖಾಪರ್ಡೆ, ಬಾವಣಗಾಂವಕರ ಮೊದಲಾದವರು ಸಮಾರಂಭದಲ್ಲಿ ಭಾಗಿಗಳಾಗಿದ್ದರು. ಕಾನೂನಿನ ಭಂಗಕ್ಕಾಗಿ ಆರಿಸಿದ ಸ್ಥಳಕ್ಕೆ ಶ್ರೀ. ಅಣೆಯವರು ಸತ್ಯಾಗ್ರಹಿಗಳೊಂದಿಗೆ ತೆರಳಿದರು. ಅವರ ಹಿಂದೆ ೨೦೦೦ ಜನರು ಅವರ ಬೆನ್ನು ಹತ್ತಿದರು. ಅಡವಿಯಲ್ಲಿ ಅಧಿಕಾರಿಗಳಾದರೂ ಸಜ್ಜಾಗಿ ನಿಂತಿದ್ದರು. ಶ್ರೀ ಅಣೆಯವರು ೯|| ಗಂಟೆಗೆ ಹುಲ್ಲನ್ನು ಕೊಯ್ಯಲು ಶುರುಮಾಡಿದರು. ಬಳಿಕ ಸತ್ಯಾಗ್ರಹಿಗಳೂ ಹುಲ್ಲು ಕೊಯ್ದರು. ಅಧಿಕಾರಿಗಳು ಶ್ರೀ. ಅಣೆಯವರನ್ನೂ ಅವರ ತಂಡದ ಸತ್ಯಾಗ್ರಹಿಗಳನ್ನೂ ನೆರೆದಿದ್ದ ಕೆಲವರನ್ನೂ ಠಾಣ್ಯಕ್ಕೆ ಕರೆದುಕೊಂಡು ಹೋದರು. ಪ್ರಥಮ ವರ್ಗದ ಮ್ಯಾಜಿಸ್ಟ್ರೇಟರ ಮುಂದೆ ಖಟ್ಲೆಯ ವಿಚಾರಣೆಯಾಯಿತು. ೪ ಜನರು ಬಿಡಲ್ಪಟ್ಟರು. ೫೭೯ ನೆಯ ಕಲಮಿನನುಸರಿಸಿ ಉಳಿದವರಿಗೆ ಶಿಕ್ಷೆ ಹೇಳಲ್ಪಟ್ಟಿತು. ಸತ್ಯಾಗ್ರಹಿಗಳು ಜಾಮೀನನ್ನು ಕೊಡಲೊಪ್ಪಲಿಲ್ಲ. ಶ್ರೀ ಅಣೆಯವರಿಗೆ ೬ ತಿಂಗಳ ಸಾದಾ ಶಿಕ್ಷೆಯೂ, ೬ ಜನರಿಗೆ ೬ ತಿಂಗಳ ಸಕ್ತ ಶಿಕ್ಷೆಯೂ ವಿಧಿಸಲ್ಪಟ್ಟಿತು.

## ಪ್ರೊ. ಸ್ವಾಮಿನಾರಾಯಣರಿಗೆ

### ೬ ತಿಂಗಳ ಸಾದಾ ಶಿಕ್ಷೆ.

ಕಾಯದೆಭಂಗಕ್ಕೆ ಉತ್ತೇಜನ ಕೊಟ್ಟಿದ್ದಕ್ಕಾಗಿ ಅಹಮ್ಮದಾಬಾದ ಮ್ಯುನಸಿಪಾಲಿಟಿಯ ಉಪಾಧ್ಯಕ್ಷರಾದ ಪ್ರೋ. ಸ್ವಾಮಿನಾರಾಯಣರಿಗೆ ೬ ತಿಂಗಳ ಸಾದಾ ಶಿಕ್ಷೆಯಾಗಿದೆ. ಇವರು ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸಿ ಮೊದಲೇ ತಮ್ಮ ಮುಂಬಯಿ ಕಾಯಿದೆ ಮಂಡಳದ ಸಭಾಸದತ್ವಕ್ಕೆ ರಾಜೀನಾಮೆ ಕೊಟ್ಟಿದ್ದರು.

## ಜೇಲರನು ರಾಜೀನಾಮೆ ಕೊಟ್ಟನು

ಸರಕಾರದವರು ಕೈಕೊಂಡ ದಬ್ಬಾಳಿಕೆಯ ನಿಷೇಧಾರ್ಥವಾಗಿ ರಾಜಬಂದಿ(?) ಕಾರಾಗೃಹದಲ್ಲಿ ಜೇಲರ ಕೆಲಸ ಮಾಡುತ್ತಿದ್ದ ಶಿವಪ್ರಸಾದಸಿಂಗರು ತಮ್ಮ ಉದ್ಯೋಗಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ.

# ಕೆರೂರಲ್ಲಿ ಅಪೂರ್ವ ಜಾಗೃತಿ

## ೪೦೦೦ ಸಿಂದೀ ಗಿಡಗಳ ಸಮೂಲ ನಾಶ

### ದೇವಾಂಗ ಗುರುಗಳ ನಿಃಸ್ಪೃಹತೆ. ಮಹಿಳೆಯರ ಮಿತಿಮೀರಿದ ಉತ್ಸಾಹ.

[ಸ್ವಂತ ಪ್ರತಿನಿಧಿಯಿಂದ]

ತಾ|೧೦ ನೆಯ ದಿವಸ ಕೆರೂರ ಗ್ರಾಮದ ೩೨೦ ಜನ ಗಂಡಸರೂ, ೪ ಜನ ಹೆಣ್ಣುಮಕ್ಕಳೂ ಬೇರೆ ಬೇರೆ ಗ್ರಾಮದ ೩೦೦ ಜನರೊಡನೆ ಕೂಡಿಕೊಂಡು ಮುಂಜಾನೆಗೆ ಬಂದು ನಾಲ್ಕೇ ತಾಸುಗಳಲ್ಲಿ ೨೧೦೦ ಈಚಲ ಗಿಡಗಳನ್ನು ಸಮೂಲವಾಗಿ ನಾಶಮಾಡಿದರು. ಬಾಗಲಕೋಟೆಯಿಂದ ಬಂದ ಮಹಿಳೆಯರಾದ ಸೀತಾಬಾಯಿ ಬಳವಳಿ, ಯಂಕೂಬಾಯಿ ಸರ್ವತಿ, ಗಂಗಾಬಾಯಿ ಮಿರ್ಜಿ, ಚಂಪಾಬಾಯಿ ಭಾಟೆ, ಸರಸ್ವತಿಬಾಯಿ ಶಿವಪೂಜಿ, ಲಕ್ಷ್ಮೀಬಾಯಿ ಪದಕಿ ಇವರಾದರೂ ಎಷ್ಟೋ ಗಿಡಗಳನ್ನು ನೆಲಕ್ಕುರುಳಿಸಿದರು. ಕೆರೂರಿನ ಭಗಿನಿಯರಾದ ಹಣಮವ್ವ ನೀಲಕೇರಿಯವರು ಬಹಳ ಉತ್ಸಾಹದಿಂದ ಇಲ್ಲಿಯ ವರೆಗೆ ಬಂದು ಸಿಂದೀ ಗಿಡಗಳನ್ನು ಕಡಿದದ್ದಲ್ಲದೆ, ಆಗಾಗ್ಗೆ ಜನರನ್ನು ಹುರಿದುಂಬಿಸುತ್ತಿದ್ದರು. ಸಂಜೆಯಾದ ಬಳಿಕ ಎಲ್ಲರೂ ತಿರುಗಿ ಕೆರೂರಿಗೆ ಹೋದರು. ಕೆರೂರ ನಾಗರಿಕರು ಅವರನ್ನು ಯೋಗ್ಯರೀತಿಯಿಂದ ಸತ್ಕರಿಸಿ, ಊರಲ್ಲೆಲ್ಲ ಮೆರವಣಿಗೆ ಮಾಡಿದರು. ರಾತ್ರಿ ೧೦ ಗಂಟೆಗೆ ಅಲ್ಲಿ ಸಭೆ ಸೇರಿಸಿ ಕಾರ್ಯದ ವಿವರವನ್ನು ಹೇಳುವದರಲ್ಲಿ ಬಂದಿತು.

ತಾ|| ೧೧ ನೆಯ ದಿವಸ ಅಗಸನಕೊಪ್ಪ ಗ್ರಾಮದ ೭೫ ಜನರೂ, ಕೆರೂರ ಗ್ರಾಮದ ನೂರಿನ್ನೂರು ಜನರೂ ಮುಮಾಟಗೇರಿಗೆ ಬಂದು ಒಳ್ಳೆ ಸಾಹಸಮಾಡಿ ೨೦೦೦ ಸಿಂದೀ ಗಿಡಗಳನ್ನು ಕಡಿದರು. ಈ ಹುರುಪನ್ನು ಕಂಡು ಕೆಲವು ನೆರೆ ಹಳ್ಳಿಯ ಜನರು ರೊಟ್ಟಿ ಬುತ್ತಿ, ಮೊದಲಾದವುಗಳನ್ನು ತೆಗೆದುಕೊಂಡು ಬನಕ್ಕೆ ಬಂದು ಬೇಕಾದವರಿಗೆ ಅವುಗಳನ್ನು ತಿನ್ನಲು ಕೊಟ್ಟರು. ಈ ಸಿಂದೀ ಗಿಡಗಳ ಸಂಹಾರದ ಕಾರ್ಯವನ್ನು ನೋಡಲು ಕೆಲವರು ಎತ್ತಿನ ಬಂಡಿಗಳ ಮೇಲಿಂದ ಬಂದಿದ್ದರು. ಹಲವರು ಮೋಟಾರುಗಳಿಂದ ಬಂದಿದ್ದರು. ಕಾಲುನಡಿಗೆಯಿಂದಲೂ ಸಾವಿರಾರು ಜನರು ಬಂದವರಾಗಿದ್ದರು. ನೋಡಲಿಕ್ಕೆ ಬಂದವರೂ ಸಹ ಸ್ವಯಂಸೇವಕರ ಕಾರ್ಯವನ್ನು ಕಂಡು ಉತ್ಸಾಹಗೊಂಡು ಎಷ್ಟೋ ಗಿಡಗಳನ್ನು ಸಂಹರಿಸಿದರು. ಅಗಸನಕೊಪ್ಪದವರು ವಿಶೇಷ ಉತ್ಸಾಹದಿಂದ ಮರಗಳನ್ನು ಕಡಿದುಹಾಕಿದರು. ಸಂಜೆಯಾದ ಬಳಿಕ ಎಲ್ಲರೂ ತಿರುಗಿ ಕೆರೂರಿಗೆ ಹೋದರು. ಕೆರೂರ ವಾಸಿಗಳು ಅವರನ್ನು ವಾದ್ಯವೈಭವದೊಡನೆ ಸತ್ಕರಿಸಿ ಅವರ ಮೆರವಣಿಗೆಯನ್ನು ಹೊರಡಿಸಿದರು. ಅಗ್ಗೆ ಅನೇಕ ಜನರು ತಾವೂ ಸಿಂದೀ ಗಿಡಗಳನ್ನು ಕಡಿಯಲು ಬರುವೆವಾಗಿ ಸ್ವಯಂಸ್ಫೂರ್ತಿಯಿಂದ ಮುಂದೆ ಬಂದು ತಿಳಿಸಿದರು.

ಈ ಎಲ್ಲ ಕಾರ್ಯಗಳಿಗೆ ದೇವಾಂಗದವರ ಗುರುಗಳು ಒಳ್ಳೇ ಸಹಾಯ ಮಾಡಿದರು. ಅವರ ಸಹಾಯದಿಂದಲೆ ಇಷ್ಟೆಲ್ಲ ಕಾರ್ಯವು ಕೊನೆಗಂಡಿತು. ಈ ಕಾರ್ಯವನ್ನು ಮಾಡುತ್ತಿರುವಲ್ಲಿ ಬೇಕಾದ ಸಂಕಟಗಳು ಬಂದರೂ ಅವುಗಳನ್ನು ಎದುರಿಸಿ ಕಾರ್ಯವನ್ನು ಪೂರ್ತಿಗೊಳಿಸುವೆನೆಂಬುದಾಗಿ ಅವರು ಸಾರಿ ಸಾರಿ ಹೇಳಿ, ಬಾಗಲಕೋಟೆಗರಿಗೆ ಪುನಃ ಬರಲು ಆಮಂತ್ರಣವನ್ನು ಕೊಟ್ಟಿದ್ದಲ್ಲದೆ, ಸಿಂದೀ ಗಿಡಗಳ ಸಂಹಾರ ಸಮಾರಂಭವನ್ನು ನೋಡಲಿಚ್ಛಿಸುವವರೆಲ್ಲರೂ ಸೋಮವಾರ ದಿವಸ ತಪ್ಪದೆ ಬರಬೇಕಾಗಿ ಜನರನ್ನು ಕೇಳಿಕೊಂಡರು.

---

## ನಾನಾ ಫರಾರಿಯು

### ಮಾರವಾಡಿಯ ಮೂಗು ಕೊಯ್ದನು

ನಾನಾ ಫರಾರಿ ಎಂಬ ಪುಂಡಗಾರನು ಈಗ ಕೆಲವು ದಿವಸಗಳಿಂದ ಮಹಾರಾಷ್ಟ್ರದಲ್ಲಿ ದರೋಡೆ, ಕಳವು ಮೊದಲಾದವುಗಳನ್ನು ಮಾಡಿ ಅಲ್ಲಿ ಗೊಂದಲ ಹಾಕುತ್ತಿರುವನಷ್ಟೆ. ಆದಿತ್ಯವಾರದಲ್ಲಿ ಅವನು ನಾಶಿಕ ಜಿಲ್ಲೆಯ ಪಿಂಪಳಗಾವದಲ್ಲಿ ಹೊಕ್ಕು ಅಲ್ಲಿಯ ಒಬ್ಬ ಮಾರವಾಡಿ ಸಾಹುಕಾರನನ, ಅವನ ಮಾಡಿ ೩೦೦೦ ರೂ. ಗಳನ್ನು ವಶಪಡಿಸಿಕೊಂಡಿದ್ದಲ್ಲದೆ ಆ ಮಾರವಾಡಿಯ ಮಗನ ಮೂಗನ್ನೂ ಕೊಯ್ದು ತೆಗೆದನಂತೆ. ಮಾರವಾಡಿ ಜನರ ಸಾಲದಿಂದ ರೈತರನ್ನು ಮುಕ್ತ ಮಾಡುವದಕ್ಕಾಗಿ ಅವನು ಹೀಗೆ ದರೋಡೆಗಳನ್ನು ನಡೆಸುತ್ತಿರುವನಂತೆ.

### ಸತ್ಯಾಗ್ರಹ ಯುದ್ಧಕ್ಕೆ

## ಮುಂಬಯಿಯ ಬಲಿದಾನ

### ಸುಮಾರು ೫೦೦ ಜನರಿಗೆ ಸೆರೆಮನೆ

ಹಿಂದುಸ್ಥಾನದಲ್ಲೆಲ್ಲ ನಡೆದ ಸತ್ಯಾಗ್ರಹ ಚಳವಳಿಯಲ್ಲಿ ಅಗ್ರಮಾನವನ್ನು ದೊರಕಿಸಿದ ಮುಂಬಯಿ ಪಟ್ಟಣವು ಜೂನ್ ೧೪ ನೆಯ ತಾ|| ದಿಂದ ಜುಲೈ ೩ ನೆಯ ತಾ|| ದ ವರೆಗೆ ೪೮೧ ಜನರನ್ನು ಸೆರೆಮನೆಗೆ ಕಳಿಸಿರುತ್ತದೆ.

ಕೆಳಗೆ ತೋರಿಸಿದ ಕಾರ್ಯಗಳಲ್ಲಿ ತೊಡಗಿ ಸೆರೆಮನೆಗೆ ಹೋದವರ ವರ್ಗೀಕರಣವು ಈ ಪ್ರಕಾರವಿದೆ.

| | |
|---|---|
| ಪರದೇಶಿ ಬಟ್ಟೆಗಳ ಅಂಗಡಿಗಳ ಪಿಕೆಟಿಂಗಕ್ಕಾಗಿ | ೪೬೨. |
| ಸಿಂದೀ ಅಂಗಡಿ ಪಿಕೆಟಿಂಗಕ್ಕಾಗಿ | ೧. |
| ಕೋರ್ಟುಗಳ ಪಿಕೆಟಿಂಗಕ್ಕಾಗಿ | ೩೦ |
| ಪೋಲೀಸರಿಗೆ ಹಸ್ತಪತ್ರಿಕೆಗಳನ್ನು ಹಂಚುವದಕ್ಕಾಗಿ | ೫. |

---

ಆದ.

## ಗುಳೇದಗುಡ್ಡದಲ್ಲಿ ಸಾರ್ವಜನಿಕ ಸಭೆ.

(ಸ್ವಂತ ಸುದ್ದಿಗಾರರಿಂದ)

ಗುಳೇದಗುಡ್ಡದಲ್ಲಿ ತಾ|| ೧೦ ನೆಯ ದಿವಸ ರಾತ್ರಿ ೧೦ ಘಂಟೆಗೆ ದೇ- ಶಿವಬಸಪ್ಪ ಹೊಸಮನಿಯವರ ಅಧ್ಯಕ್ಷತೆಯಲ್ಲಿ ಗಾಂಧಿಚೌಕದಲ್ಲಿ ಸಾರ್ವಜನಿಕ ಸಭೆಯು ಸೇರಿತ್ತು. ಸ್ವಯಂಸೇವಕರಾದ ಶ್ರೀ ಮ. ಜೇರಿಯವರು ಲಾವಣಿಯನ್ನು ಅಂದು ತೋರಿಸಿದ್ದಲ್ಲದೆ, ಉಪ್ಪಿನ ಸತ್ಯಾಗ್ರಹದ ಸಂಗತಿಗಳನ್ನು ವಿವರಿಸಿ ಹೇಳಿದರು. ಬಾಗಲಕೋಟೆಯ ಮಹಿಳೆಯರಾದ ಪದ್ಮಾವತಿ ಬಾಯಿ ಶಿವಸೊಗ್ಗೆಯವರು ಸದ್ಯದ ಸ್ಥಿತಿಯ ಬಗ್ಗೆ ನಿಬಂಧವನ್ನು ಓದಿದ್ದರು. ಬಳಿಕ ಶ್ರೀಮತಿ ಸೀತಾಬಾಯಿ ಬಳವಳ್ಳಿಯವರು ಈ ಸತ್ಯಾಗ್ರಹ ಚಳವಳಿಯಲ್ಲಿ ಗುಳೇದಗುಡ್ಡದ ಅಬಾಲವೃದ್ಧ ಸ್ತ್ರೀ ಪುರುಷರೆಲ್ಲರೂ ಸೇರಿ ಸತ್ಯಾಗ್ರಹ ಚಳವಳಿಯನ್ನು ಮುಂದುವರಿಸಬೇಕಾಗಿ ಒಂದು ತಾಸಿನ ವರೆಗೆ ಆವೇಶವಾಗಿ ಭಾಷಣ ಮಾಡಿದರು. ಗುಳೇದಗುಡ್ಡದ ನೇಕಾರರು ಖಾದಿ ಇಲ್ಲವೆ ಸ್ವದೇಶಿ ಗಿರಣಿಯ ನೂಲಿನಿಂದ ಬಟ್ಟೆಗಳನ್ನು ಸಿದ್ಧಪಡಿಸಿದಲ್ಲಿ ಅವರ ಉದ್ಯೋಗಕ್ಕೆ ಧಕ್ಕೆ ತಗಲಲಿಕ್ಕಿಲ್ಲವೆಂಬುದಾಗಿ ಮತ್ತೊಬ್ಬರ ಸ್ವಯಂಸೇವಕರು ಭಾಷಣ ಮಾಡಿದರು. ಬಳಿಕ ಇಲ್ಲಿ ಒಂದು ಖಾದೀ ಭಾಂಡಾರವನ್ನು ತೆರೆಯಬೇಕಾಗಿಯೂ. ಗುಳೇದಗುಡ್ಡದ ನಾಗರಿಕರು ಸ್ವದೇಶಿ ಬಟ್ಟೆಗಳನ್ನೇ ಸಿದ್ಧಪಡಿಸಬೇಕಾಗಿಯೂ ನಿರ್ಣಯಿಸುವದರಲ್ಲಿ ಬಂದು ಸಭೆಯು ಮುಗಿಯಿತು.

## ಇಂಗ್ಲಂಡದಲ್ಲಿ
## ಬಹಿಷ್ಕಾರ ಚಳವಳಿಯ ಪರಿಣಾಮವು.

ಹಿಂದುಸ್ಥಾನದಲ್ಲಿ ನಡೆದ ಪರದೇಶಿ ಬಟ್ಟೆಗಳ ಬಹಿಷ್ಕಾರದ ಮೂಲಕವಾಗಿ ಎಪ್ರೀಲದಿಂದ ಮೇದ ವರೆಗೆ ಅಂದರೆ ಒಂದೇ ತಿಂಗಳಲ್ಲಿ ಬ್ರಿಟನದಿಂದ ಹಿಂದುಸ್ಥಾನಕ್ಕೆ ಹೋಗುವ ಜವಳಿಯ ಸಂಖ್ಯೆಗಳು ೧೦೦ ಕ್ಕೆ ೩೩|| ರಷ್ಟು ಕಡಿಮೆಯಾಗಿವೆಯೆಂದು ಮಿ|| ವುಡ್‌ಹೆಡ್ಡರು ಕೌನ್ಸಿಲ ಆಫ್‌ಸ್ಟೇಟದಲ್ಲಿ ನುಡಿದಿದ್ದಾರೆ.

## ಕಾಯದೆಭಂಗಕ್ಕೆ ಬಿಹಾರದ ಬಲಿದಾನ

೨೩೪೪ ಜನರಿಗೆ ಸೆರೆಮನೆ.

ಮಹಾತ್ಮಾ ಗಾಂಧಿಯವರು ಪ್ರಾರಂಭಿಸಿದ ಸತ್ಯಾಗ್ರಹ ಚಳವಳಿಯಲ್ಲಿ ಸೇರಿ ಕಾಯದೆಭಂಗವನ್ನು ಮಾಡಿದುದಕ್ಕಾಗಿ ಬಿಹಾರ ಪ್ರಾಂತದಲ್ಲಿ ಈ ವರೆಗೆ ೨೩೪೪ ಜನರಿಗೆ ಸೆರೆಮನೆಯ ವಾಸವು ದೊರೆತಿದೆಯಾಗಿ ತಿಳಿಯುತ್ತದೆ.

## ಪೇಶಾವರ ಜಿಲ್ಹೆಯಲ್ಲಿ

೧೪೯೩ ಜನರಿಗೆ ಜೇಲು.

ಪೇಶಾವರ ಪಟ್ಟಣವನ್ನು ಬಿಟ್ಟುಕೊಟ್ಟು ಪೇಶಾವರ ಜಿಲ್ಹೆಯಲ್ಲಿ ಈ ವರೆಗೆ ೧೪೯೩ ಜನರಿಗೆ ಕಾರಾಗೃಹ ವಾಸವು ಸಿಕ್ಕದೆಯೆಂಬುದಾಗಿ ಸರಹದ್ದಿನ ಪ್ರಾಂತದ ಸುದ್ದಿಯ ಸಂಘದ ಕಾರ್ಯದರ್ಶಿಗಳಾದ ಶ್ರೀ ಮಾತ್ರಿಕಯವರು ತಿಳಿಸುತ್ತಾರೆ.

## ನವಜೀವನ ಮುದ್ರಣಾಲಯವು ಜಪ್ತವಾಯಿತು.

“ಯಂಗ ಇಂಡಿಯಾ” ಪತ್ರಿಕೆಯು ಪುನಃ ಹೊರಡುವದು.

ನವಜೀವನ ಮುದ್ರಣಾಲಯದ ಮೋಹರನ್ನು ಒಡೆದು ಪೋಲೀಸರು ಅಲ್ಲಿ ಒಳಹೊಕ್ಕು, ಅಲ್ಲಿಯ ಎಲ್ಲ ಉಪಕರಣಗಳನ್ನು ತೆಗೆದುಕೊಂಡು ಹೋದರು. ಮುದ್ರಣಾಲಯವು ಜಪ್ತವಾಗಿ ಹೋಗಿದ್ದರೂ ಸಹ ಯಂಗ ಇಂಡಿಯಾ ಪತ್ರಿಕೆಯು ಸಾಯಕ್ಲೋಸ್ಟಾಯಿಲ ಯಂತ್ರದಲ್ಲಿಯಾಗಲಿ ಇಲ್ಲವೆ ಮುದ್ರಿಸಲ್ಪಟ್ಟಾಗಲಿ ಎಂದಿನಂತೆಯೇ ಹೊರಬೀಳುತ್ತಿದ್ದೆ. ಯಂಗ ಇಂಡಿಯಾ ನವಜೀವನ, ಮತ್ತು ಸತ್ಯಾಗ್ರಹ ಸಮಾಚಾರ ಈ ಪತ್ರಿಕೆಗಳನ್ನು ಹೊರಡಿಸುವದಕ್ಕಾಗಿ ಸಹಾಯಮಾಡಲು ಸ್ವಯಂಸೇವಕರು ಕರೆಯಲ್ಪಟ್ಟಿದ್ದಾರೆ.

## ಬ್ರಿಟಿಶ ಸರಕಾರವನ್ನು ನಾಶಗೊಳಿಸುವದೇ
## ನನ್ನ ಉದ್ಯೋಗ.

ಮುಂಬಯಿಯ ಉಪನಗರವಾದ ಘಾಟಕೋಪರದ ಶ್ರೀಮತಿ ಕಮಲಾಬೇನರು ಸಿಂದೀ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದುದಕ್ಕಾಗಿ ಸೆರೆಹಿಡಿಯಲ್ಪಟ್ಟು ೫ ತಿಂಗಳ ಸಾದಾ ಶಿಕ್ಷೆಗೆ ಗುರಿಯಾದರು. ಖಟ್ಲೆಯ ಕಾಲಕ್ಕೆ ಮ್ಯಾಜಿಸ್ಟ್ರೇಟರು ಆವಾಗ ಅವರ ಉದ್ಯೋಗದ ಬಗ್ಗೆ ಕೇಳಿದರು. ಅದಕ್ಕೆ ಶ್ರೀಮತಿಯವರು ಬ್ರಿಟಿಶ ಸರಕಾರವನ್ನು ನಾಶಗೊಳಿಸುವದು, ಮತ್ತು ಸ್ವರಾಜ್ಯ ತರುವದೂ ನನ್ನ ಉದ್ಯೋಗವಾಗಿದೆಯೆಂಬುದಾಗಿ ಉತ್ತರಕೊಟ್ಟರು. ಅಷ್ಟಕ್ಕೆ ನಿಲ್ಲದೆ ಶ್ರೀಮತಿಯವರು ಖಟ್ಲೆಯು ಮುಗಿದ ಕೂಡಲೆ ಮ್ಯಾಜಿಸ್ಟ್ರೇಟರಿಗೆ ನೀವೂ ಹಿಂದುಸ್ಥಾನ ಸ್ವಾತಂತ್ರ್ಯಕ್ಕಾಗಿ [illegible] ಚಳವಳಿಯಲ್ಲಿ ಸೇರಬೇಕೆಂದು ಹೇಳಿದರು.

## ಕಲಕತ್ತೆಯಲ್ಲಿ ಬಾಂಬು ಹಾರಿತು

ಕಲಕತ್ತೆಯ ಉಪನಗರವಾದ [illegible] ಗುಪ್ತ ಪೋಲೀಸ ಖಾತೆಯ ಇನಸ್ಪೆಕ್ಟರರಾದ ಶ್ರೀ ಹರೇಂದ್ರನಾಥ ಅವರ ಮನೆಯಲ್ಲಿ ತಾ|| ೯ ನೆಯ ದಿವಸ ಬಾಂಬು ಒಗೆಯಲ್ಪಟ್ಟಿತು. ಇದು ದೊಡ್ಡ [illegible] ಆದರೆ ಯಾರಿಗೂ ಗಾಯವಾಗಲಿಲ್ಲ.

**ಶುದ್ಧ ಖಾದಿ!** **ಶುದ್ಧ ಖಾದಿ!**

ನಮ್ಮಲ್ಲಿ ಕೈನೂಲಿನ ಕೈಮಗ್ಗದ ಶರ್ಟಿಂಗ, ಕೋಟಿಂಗ, ಧೋತರ ಮೊದಲಾದ ಎಲ್ಲ ತರದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಗ್ರಾಹಕರು ಲಾಭ ಪಡೆಯಬೇಕಾಗಿ ವಿನಂತಿ

**ಶಂಕರಪ್ಪಾ ಬಣಗಾರ**

ಜವಳಿ ವ್ಯಾಪಾರಿಗಳು, ಬಾಗಲಕೋಟೆ

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಯಂತ್ರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೧-

सर्वं परवशं दुःखं । सर्वमात्मवशं सुखम् ॥ — मनु
ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮುದಾರ
ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟಿ— ಸೋಮವಾರ ಮಿತಿ ಆಷಾಢ ಬಹುಳ ೪ ಶಕೆ ೧೮೫೨ ತಾ॥ ೧೪—೭—೩೦ [ ಸಂಚಿಕೆ ೧೦೨

## ಮುಂಬಯಿಯ

# ಕಾಂಗ್ರೆಸದ ಅಧಿಕಾರಿಗಳಿಗೆ ಶಿಕ್ಷೆ

ಗಢವಾಲ ಮೆರವಣಿಗೆಯ ಸಂಬಂಧವಾಗಿ ಪೋಲೀಸ ಕಮಿಶನರರು ಹೊರಡಿಸಿದ ಅಪ್ಪಣೆಯ ವಿರುದ್ಧವಾಗಿ ನಡೆದುಕೊಂಡಿದ್ದದಕ್ಕಾಗಿ ಮುಂಬಯಿಯ ಕಾಂಗ್ರೆಸ್ ಯುದ್ಧಮಂಡಳದ ಅಧಿಕಾರಿಗಳಾದ ಶ್ರೀ. ಧಿರಜಲಾಲ ಮೋದಿ, ಮೇಜರ್ ಹರ್ ಗೌರ ಮತ್ತು ಖುಮಾನಸಿಂಗ ಗಾಂಧಿ ಇವರುಗಳು ಸೆರೆ ಹಿಡಿಯಲ್ಪಟ್ಟು ೪ ತಿಂಗಳ ಸಶ್ರಮ ಶಿಕ್ಷೆಗೆ ಪಾತ್ರರಾದರು. ಸ್ವಯಂಸೇವಕರ ಮತ್ತೊಂದು ತಂಡದ ನೇತೃಗಳಾದ ಜಸವಂತಸಿಂಗ ಅಕಾಲಿಯವರಿಗೂ ಅದೇ ಅಪರಾಧಕ್ಕಾಗಿ ೪ ತಿಂಗಳ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿತು. ಈಗ ಶ್ರೀಮತಿ ಹಂಸ ಮೆಹತಾರವರು ಅಧ್ಯಕ್ಷರಾಗಿದ್ದಾರೆ.

### ಅಡವಿಯ ಕಾಯದೆಭಂಗಕ್ಕಾಗಿ

## ಡಾ॥ ಮುಂಜೆಯವರಿಗೆ ಶಿರು- ದಂಡ

ಶ್ರೀ. ಮಾಧವರಾವ ಅಣೆಯವರು ಸೆರೆಯಾಳಾದನಂತರದಲ್ಲಿ ನಾಗಪುರದ ಡಾ। ಮುಂಜೆಯವರು ಎರಡನೆಯ ಸತ್ಯಾಗ್ರಹಿಗಳ ತಂಡದ ನೇತೃತ್ವವನ್ನು ಸ್ವೀಕರಿಸಿ ಅಡವಿಯ ಕಾಯದೆ ಭಂಗಕ್ಕಾಗಿ ಹೊರಟರು. ಅಧಿಕಾರಿಗಳು ಡಾ. ಮುಂಜೆಯವರನ್ನೂ ಸತ್ಯಾಗ್ರಹಿಗಳನ್ನೂ ಸೆರೆಹಿಡಿದರು. ಡಾ। ಮುಂಜೆಯವರಿಗೆ ೫ ರು. ದಂಡ ಇಲ್ಲವೆ ಕೋರ್ಟ ಏಳುವವರೆಗೆ ಶಿಕ್ಷೆಯು ವಿಧಿಸಲ್ಪಟ್ಟಿತು. ಸತ್ಯಾಗ್ರಹಿಗಳು ಯಾವ ನಿರ್ಬಂಧವೂ ಇಲ್ಲದೆ ಬಿಡಲ್ಪಟ್ಟರು.

### ಅರಸು ಮನೆತನದ

## ಕುನ್ವರ ಆನಂದಸಿಂಗರಿಗೆ ೧೮ ತಿಂ. ಶಿಕ್ಷೆ

ಪಂಜಾಬ ಪ್ರಾಂತಕ್ಕೆ ಸೇರಿದ ಜುಮೋನದ ಅರಸುಮನೆತನದವರೂ, ಪ್ರಸಿದ್ಧ ವಕೀಲರೂ ಆದ ಶ್ರೀ. ಕುನ್ವರ ಆನಂದಸಿಂಗರು, ರಾಜದ್ರೋಹಾತ್ಮಕ ಭಾಷಣಗಳಿಗಾಗಿ ಸೆರೆಹಿಡಿಯಲ್ಪಟ್ಟು, ೧೮ ತಿಂಗಳ ಶಿಕ್ಷೆಗೆ ಗುರಿಯಾಗಿದ್ದಾರೆ.

### ಅಸೆಂಬ್ಲಿಯ ಸಭಾಸದರ

## ಬಂಗಲೆಗಳ ಮುಂದೆ ಪಿಕೆಟಿಂಗ

ಸಿಮ್ಲಾದಲ್ಲಿ ನಡೆದಿರುವ ಅಸೆಂಬ್ಲಿಯ ಅಧಿವೇಶನಕ್ಕಾಗಿ ಹೋದ ಸಭಾಸದರು ಅಲ್ಲಿ ಬೇರೆ ಬೇರೆ ಬಂಗಲೆಗಳಲ್ಲಿ ಇಳಿದುಕೊಂಡಿರುವ ಪ್ರಯುಕ್ತ ಅವರನ್ನು ಸಭೆಗೆ ಹೋಗಗೊಡಬಾರದೆಂದು ನಿರ್ಧರಿಸಿಕೊಂಡು ಅಲ್ಲಿಯ ಸ್ತ್ರೀ ಸತ್ಯಾಗ್ರಹಿಗಳು ಅವರವರ ಬಂಗಲೆಗಳ ಮುಂದೆ ಪಿಕೆಟಿಂಗ ನಡಿಸಿದ್ದಾರೆ. ಪಿಕೆಟಿಂಗದ ಪರಿಣಾಮವೆಂದರೆ ಶ್ರೀ ಎಸ್. ಸಿ. ಮಿತ್ರ ಮತ್ತು ಅಮರನಾಥ ದತ್ತರು ತಮ್ಮ ತಮ್ಮ ಬಂಗಲೆಗಳನ್ನು ಬಿಟ್ಟು ಹೊರಬೀಳಲೇ ಇಲ್ಲ.

### ಮುಸಲ್ಮಾನ ಮುಖಂಡರಾದ

### ಹಸನ ಇಮಾಮರೂ

## ಸತ್ಯಾಗ್ರಹದಲ್ಲಿ ಸೇರಿದರು.

ಬಿಹಾರ ಪ್ರಾಂತದ ಸರ್ವಾಧಿಕಾರಿಗಳಾದ ಬಾಬು ರಾಜೇಂದ್ರ ಪ್ರಸಾದರು ತಾವು ಸೆರೆಯಾಳಾಗುವಮುಂದೆ ತಮ್ಮ ಸ್ಥಳದಲ್ಲಿ ಬಾಬು ದೀಪ ನಾರಾಯಣ ಸಿಂಗರನ್ನು ನಿಯಮಿಸಿ ಹೋದರು. ಅವರನ್ನಾದರೂ ಸರಕಾರದವರು ಬೇಗನೆ ಸೆರೆಹಿಡಿಯುವವರಿದ್ದಾರಾಗಿ ತಿಳಿಯುತ್ತದೆ. ಅವರು ಸೆರೆಯಾಳಾದಲ್ಲಿ ಅವರ ಸ್ಥಳದಲ್ಲಿ ಶ್ರೀ ಹಸನ ಇಮಾಮರು ಬಂದು ಸತ್ಯಾಗ್ರಹವನ್ನು ಸಾಗಿಸತಕ್ಕವರಿರುವರು.

## ಮ್ಯಾಜಿಸ್ಟ್ರೇಟರ ಮನೆಯಲ್ಲಿ ಬಾಂಬು ಹಾರಿತು

ಪೇಶಾವರದ ಅಸಿಸ್ಟಂಟ ಮ್ಯಾಜಿಸ್ಟ್ರೇಟರಾದ ಕರಮ ಲಾಲ ಅವರ ಮನೆಯಲ್ಲಿ ತಾ॥ ೮ನೆಯ ದಿವಸ ಒಂದು ಬಾಂಬು ಒಮ್ಮಿಂದೊಮ್ಮೆ ಹಾರಿತು. ಯಾರಿಗೂ ಗಾಯವಾಗಲಿಲ್ಲ.

## ನೆಲ್ಲೂರಿನ ಯುದ್ಧಮಂಡಳವು ಕಾಯಿದೆಗೆ ವಿರುದ್ಧವಾಯಿತು.

ಮದ್ರಾಸ ಇಲಾಖೆಯಲ್ಲಿಯ ನೆಲ್ಲೂರಿನ ಕಾಂಗ್ರೆಸ್ ಕಮಿಟಿಯ ಯುದ್ಧ ಮಂಡಳವು ಕಾಯಿದೆಗೆ ವಿರುದ್ಧವಾದ ಸಂಘವಾಗಿದೆಯೆಂದು ಮದ್ರಾಸ ಸರಕಾರದವರು ಸಾರಿದ್ದಾರೆ.

### ಸರಕಾರಕ್ಕೂ ಕಾಂಗ್ರೆಸಕ್ಕೂ ಒಪ್ಪಂದ

ವರಿಷ್ಠ ಕಾಯಿದೆ ಮಂಡಳದ ಹಿಂದೂ ಸಭಾಸದರು ಒತ್ತಟ್ಟಿಗೆ ಸೇರಿ ಸಧ್ಯದ ಪರಿಸ್ಥಿತಿಯ ಬಗ್ಗೆ ವಿಚಾರಿಸಿಕೊಂಡು ವ್ಹಾಯಿಸರಾಯರಿಗೂ ಕಾಂಗ್ರೆಸ ಪಕ್ಷದವರಿಗೂ ಒಪ್ಪಂದ ಮಾಡಿಸಲು ಪ್ರಯತ್ನಿಸುವದಕ್ಕಾಗಿ ಶ್ರೀ ಜಯಕರರನ್ನು ವ್ಹಾಯಿಸರಾಯರ ಭೆಟ್ಟಿಗೆ ಕಳಿಸುವವರಿದ್ದಾರೆ.

## ವ್ಹಾಯಿಸರಾಯರು ಶಕ್ತಿಹೀನರಾದರು

ವ್ಹಾಯಿಸರಾಯರು ಅಸೆಂಬ್ಲಿಯಲ್ಲಿ ಮಾಡಿದ ಭಾಷಣದನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಾಗ ಶ್ರೀ ಕೇಳಕರರು ಕೆಳಗಿನಂತೆ ಹೇಳಿದ್ದಾರೆ.

“ವ್ಹಾಯಿಸರಾಯರು ತಮ್ಮ ಕೈಯಲ್ಲಿದ್ದ ಎಲ್ಲ ಅಸ್ತ್ರಗಳನ್ನು ಬಳಕೆಯಲ್ಲಿ ತಂದು ನೋಡಿದರು. ಈಗ ಅವರು ಶಕ್ತಿಹೀನರಾಗಿ ಕುಳಿತಿದ್ದಾರೆ. ವಿಪತ್ತಿನಲ್ಲಿ ಸಿಲುಕಿದ ವ್ಹಾಯಿಸರಾಯರು ಹಾಗು ಕಾಲಿಕಾಂ ಸರಕಾರದವರು ಇವರ ವಿಷಯಕ್ಕೆ ಕನಿಕರ ಪಡಬೇಕಾದ್ದೇನೋ ನಿಜ ಆದರೆ ಹಿಂದುಸ್ಥಾನವು ಅದಕ್ಕಿಂತಲೂ ಹೆಚ್ಚಿನ ಸಂಕಟದಲ್ಲಿ ಸಿಲುಕಿ ನರಳುತ್ತಿದೆ. ಸರಕಾರದವರು ಯಾವ ನಿರ್ಬಂಧವನ್ನು ಹಾಕದೆ ರಾಜಕೀಯ ಕೈದಿಗಳನ್ನು ಬಿಟ್ಟು ಕೊಡಬೇಕು. ಸರಕಾರವು ಇಷ್ಟು ಮಾಡಿದಲ್ಲಿ ಮಾತ್ರ ಮಹಾತ್ಮಾ ಗಾಂಧಿ ಹಾಗು ಪಂಡಿತ ಮೋತಿಲಾಲರು ಬಂಡಿಗಾಲಿಯ ಪರಿಷತ್ತಿನಲ್ಲಿ ಸೇರುವರು. ಸಾಯಮನ್ ಮಂಡಳದಲ್ಲಿ ಸೇರಿದ ಕೂಲಿಕಾರ ಪಕ್ಷದವರ ಮನಸ್ಸಿನಲ್ಲಿ ಹಿಂದುಸ್ಥಾನಕ್ಕೆ ಹಿತ ಮಾಡುವದು ಇತ್ತಂತೆ. ನಿಜವಾಗಿಯೂ ಹಿಂದುಸ್ಥಾನದ ಹಿತವನ್ನು ಅವರು ಬಯಸಿದ್ದಲ್ಲಿ ಸಾಯಮನ್ ವರದಿಯಲ್ಲಿ ಅವರು ತಮ್ಮ ತಮ್ಮ ಮತಗಳನ್ನು ಬೇರೆಯಾಗಿ ನಮೂದಿಸಬಹುದಾಗಿತ್ತು.

### ಸತ್ಯಾಗ್ರಹಿಯು ಜೇಲಿನಲ್ಲಿ ಮರಣ ಹೊಂದಿದನು

ಸತ್ಯಾಗ್ರಹದ ಮೂಲಕವಾಗಿ ಶಿಕ್ಷೆಯನ್ನು ಹೊಂದಿ ತ್ರಿಚನಾಪಳ್ಳಿ ತುರಂಗದಲ್ಲಿ ಇರುತ್ತಿದ್ದ ಶ್ರೀ ಗುಳ್ಳಯ್ಯ ಎಂಬ ಓರ್ವ ಸತ್ಯಾಗ್ರಹಿಯು ಅತಿಸಾರ ಬೇನೆಯಿಂದ ಅಲ್ಲಿಯೇ ಮರಣ ಹೊಂದಿದನು.

### ತರುಣ ಸಂಘದ ಅಧ್ಯಕ್ಷರಿಗೆ ಶಿಕ್ಷೆ

ಕಾನಪುರದಲ್ಲಿ ಸೊಲ್ಲಾಪುರ ದಿನದ ನಿಮಿತ್ತವಾಗಿ ಸೇರಿದ ಸಾರ್ವಜನಿಕ ಸಭೆಯಲ್ಲಿ ರಾಜದ್ರೋಹಾತ್ಮಕ ಭಾಷಣಮಾಡಿದುದಕ್ಕಾಗಿ ಅಲ್ಲಿಯ ತರುಣ ಸಂಘದ ಅಧ್ಯಕ್ಷರಾದ ಗೋಪೀನಾಥ ಸಿಂಗರಿಗೆ ೨ ವರ್ಷಗಳ ಸತ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ.

## ಶ್ರೀ ಸಿ. ಆರ್ ರೆಡ್ಡಿಯವರು ವ್ಹಾಯಿಸ್ ಚಾನ್ಸಲರ ಪದಕ್ಕೆ ರಾಜೀನಾಮೆ ಕೊಟ್ಟರು

ಆಂಧ್ರ ವಿಶ್ವವಿದ್ಯಾಲಯದ ವ್ಹಾಯಿಸ್ ಚಾನ್ಸಲರರಾದ ಶ್ರೀ ಸಿ. ಆರ್ ರೆಡ್ಡಿಯವರು. ಸರಕಾರದ ದಬ್ಬಾಳಿಕೆಯ ಕೃತಿಯ ನಿಷೇಧಪರವಾಗಿ ಒಂದು ಪತ್ರವನ್ನು ಚಾನ್ಸಲರರಾದ ಗವ್ಹರ್ನರರಿಗೆ ಬರೆದು ತಮ್ಮ ವ್ಹಾಯಿಸ್ ಚಾನ್ಸಲರ ಪದದ ರಾಜೀನಾಮೆ ಕೊಟ್ಟಿದ್ದಾರೆ. ದೇಶದೊಳಗಿನ ಅತ್ಯಂತ ಅಜ್ಞಾತವಾದಂದಿನಿಂದ ಪಡುತ್ತಿರುವ ಕಷ್ಟನಷ್ಟಗಳನ್ನು ನೋಡುತ್ತ ಕುಳಿತುಕೊಳ್ಳುವದು ತಮ್ಮಿಂದ ಸಾಧ್ಯವಾಗಿಲ್ಲವಾಗಿಯೂ ಮತ್ತು ಇಂತಹ ಪರಿಸ್ಥಿತಿಯಲ್ಲಿ ವ್ಹಾಯಿಸ ಚಾನ್ಸಲರ ಪದಕ್ಕೆ ಏನೂ ಮಹತ್ವವಿಲ್ಲವಾಗಿಯೂ ಅವರು ಗವ್ಹರ್ನರರಿಗೆ ಬರೆದ ಪತ್ರದಲ್ಲಿ ಕಾಣಿಸಿದ್ದಾರೆ.

## ಹುನಗುಂದ ಮಾಮಲೇದಾರರ ಅಗಾಧ ಪಾಂಡಿತ್ಯ

### ಸಿಂದೀಗಿಡಗಳ ಸಂಹಾರವು ಅಹಿಂಸಾ ತತ್ವಕ್ಕೆ ವಿರುದ್ಧವಂತೆ!

( ಸ್ವಂತದ ವರದಿಗಾರರಿಂದ )

ತಾ॥ ೮ ನೆಯ ದಿವಸ ಹುನಗುಂದದ ಮಾಮಲೇದಾರರ ಕಛೇರಿಯ ಬಂಗಲೆಯಲ್ಲಿ ಒಂದು ರಾಜನಿಷ್ಠರ ಸಭೆಯನ್ನು ಸೇರಿಸಿದ್ದರು. ೮—೧೦ ಜನ ಗೌಡಕುಲಕರ್ಣಿಯರು ಸಭೆಗೆ ಬಂದಿದ್ದರು. ಮಾಮಲೇದಾರರು ಸಭೆಯ ಕೆಲಸವನ್ನು ಪ್ರಾರಂಭಿಸಿ ಮಹಾತ್ಮಾ ಗಾಂಧಿಯವರು ಪ್ರಾರಂಭಿಸಿದ ಸತ್ಯಾಗ್ರಹ ಚಳವಳಿಯ ವಿರುದ್ಧವಾಗಿ ಭಾಷಣಮಾಡಿದರು. ಅವರು ತಮ್ಮ ಭಾಷಣದಲ್ಲಿ ಮಹಾತ್ಮಾ ಗಾಂಧಿಯವರಿಗೆ ಏನೇನೂ ತಿಳಿಯುವದಿಲ್ಲವೆಂದೂ, ಸಿಂದೀಗಿಡಗಳನ್ನು ಕಡಿಯುವದು ಬಹಳ ಮೂರ್ಖತನದ್ದಿರುವದಲ್ಲದೆ, ಅದು ಮಹಾತ್ಮರ ಅಹಿಂಸಾ ತತ್ವಕ್ಕೆ ವಿರುದ್ಧವಾದದ್ದಿರುವದೆಂದೂ ಹೇಳಿದರು. ನೋಡಿರಿ! ಹೇಗಿದೆ ಮೋಜ! ಒಬ್ಬರು ಸಿಂದೀಗಿಡಗಳನ್ನು ಕಡಿದರೆ ಮಳೆ ಬರುವದಿಲ್ಲವೆಂದು ಹೇಳುವರು! ಮತ್ತೊಬ್ಬರು ಸಿಂದೀಗಿಡಗಳ ಸಂಹಾರವು ಅಹಿಂಸೆಗೆ ವಿರುದ್ಧವಾಗಿದೆಯೆಂದು ನುಡಿಯುವರು!

### ಅಹಮ್ಮದಾಬಾದ ಕಾಂಗ್ರೆಸ ಕಮಿಟಿಗೆ

## ಪೋಲೀಸರ ಮುತ್ತಿಗೆ

ತಾ॥ ೧೧ ನೆಯ ದಿವಸ ಪೋಲೀಸರು ಅಹಮ್ಮದಾಬಾದದಲ್ಲಿಯ ಗುಜರಾಥ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಚೇರಿಗೆ ಮುತ್ತಿಗೆಯನ್ನು ಹಾಕಿ ೧೧ “ಸತ್ಯಾಗ್ರಹ ಸಮಾಚಾರ” ಪತ್ರಿಕೆಗಳನ್ನು ತೆಗೆದುಕೊಂಡು ಹೋದರು. “ಸತ್ಯಾಗ್ರಹ ಸಮಾಚಾರ” ಪತ್ರಿಕೆಯ ಮುದ್ರಕರಾದ ಶ್ರೀ ರತಿಲಾಲ ತೇಲಿಯವರೂ ಸೆರೆಹಿಡಿಯಲ್ಪಟ್ಟರು.

# ಮುಂಬಯಿಯಲ್ಲಿ ೨೫ ಸಲ ಲಾಠಿಗಳ ಹೊಡತ.

## ೫೦೦ ಜನರಿಗೆ ಗಾಯ.

ಮುಂಬಯಿಯ ಪೋಲೀಸ ಕಮಿಶನರರು ತಾ| ೧೯ನೆಯ ದಿವಸ ಗಢವಾಲ ದಿನದ ಮೆರವಣಿಗೆಗೆ ಪ್ರತಿಬಂಧವನ್ನುಂಟು ಮಾಡಿದರು. ಇತ್ತ ಕಾಂಗ್ರೆಸದ ಯುದ್ಧ ಮಂಡಳದ ಅಧಿಕಾರಿಗಳು ಪ್ರತಿಬಂಧವನ್ನು ಲೆಕ್ಕಿಸದೆ ಮೆರವಣಿಗೆಯನ್ನು ಹೊರಡಿಸುವದಾಗಿ ನಿರ್ಧರಿಸಿಕೊಂಡರು. ಅತ್ತ ಅಧಿಕಾರಿಗಳು ಅಲ್ಲಲ್ಲಿಗೆ ಪೋಲೀಸರ ಹಾಗು ಸಾರ್ಜಂಟರ ಕಾವಲುಗಳನ್ನು ಏರ್ಪಡಿಸಿಕೊಂಡು ಸಜ್ಜಾಗಿ ನಿಂತರು. ಸತ್ಯಾಗ್ರಹಿಗಳ ಮೊದಲನೆಯ ತಂಡವು ೪|| ಗಂಟೆಗೆ ಹೊರಟಿತು. ಪೋಲೀಸರು ಲಾಠಿಗಳನ್ನುಪಯೋಗಿಸಿ ಅವರನ್ನು ಹಿಂದಕ್ಕಟ್ಟಿದರು. ೪ ಜನರಿಗೆ ಭಯಂಕರ ಗಾಯಗಳು ಮತ್ತು ಉಳಿದವರಿಗೆ ಪೆಟ್ಟುಗಳೂ ತಗುಲಿದವು. ತಂಡದ ನಾಯಕರು ಮತ್ತು ಉಪನಾಯಕರು ಸೆರೆಹಿಡಿಯಲ್ಪಟ್ಟರು. ಹತ್ತು ಮಿನೀಟಿನ ನಂತರ ಎರಡನೆಯ ತಂಡವು ಹೊರಬಿತ್ತು. ಪೋಲೀಸರು ಲಾಠಿಗಳನ್ನುಪಯೋಗಿಸಿ ಅವರನ್ನು ಚದುರಿಸಿದರು. ಶ್ರೀ. ಮೇದಿ, ಗೌತ ಮತ್ತು ಮಿಮಾನ ಸಿಂಗರು ಸೆರೆಯಾಳುಗಳಾದರು. ೫|| ಗಂಟೆಗೆ ಜನರ ಸಂದಣೆಯು ಬೋರಿಬಂದರದ ಹತ್ತರ ನೆರೆಯಿತು. ಮತ್ತೊಂದು ಸತ್ಯಾಗ್ರಹಿ ತಂಡವು ಅಲ್ಲಿಗೆ ಬಂದಿತು. ಪೋಲೀಸರು ಲಾಠಿಗಳಿಂದ ಅವರನ್ನು ಚದುರಿಸಿದರು. ಈ ತಂಡದಲ್ಲಿ ವಿಶೇಷವಾಗಿ ವಿದ್ಯಾರ್ಥಿಗಳೇ ಸೇರಿದ್ದರು. ಅವರೆಲ್ಲರಿಗೂ ಒಳಿತಾಗಿ ಪೆಟ್ಟುಗಳು ಬಿದ್ದವು. ಹೀಗೆ ಸತ್ಯಾಗ್ರಹಿಗಳ ೬ ತಂಡಗಳು ಹಿಂದಕ್ಕಟ್ಟಲ್ಪಟ್ಟವು.

ಇದೆಲ್ಲವನ್ನು ನೋಡಲು ಅಷ್ಟರಲ್ಲಿಯೇ ಜನರು ಹೆಚ್ಚಾಗಿ ಬಂದು ಅಲ್ಲಿ ಸೇರಿದ್ದರು. ಪೋಲೀಸರು ತಮ್ಮ ದೃಷ್ಟಿಯನ್ನು ಅತ್ತ ಹೊರಳಿಸಿ ಜನರ ಮೇಲೆ ಲಾಠಿಗಳನ್ನುಪಯೋಗಿಸಿದರು. ಜನರು ಚದುರಲಿಲ್ಲ. ಜನರು ಗುಂಪುಗುಂಪಾಗಿ ಬಂದು ಸೇರಹತ್ತಿದರು. ಪೋಲೀಸರೂ ಹಾಗೆಯೇ ತಮ್ಮ ಕೃತಿಯನ್ನು ನಡೆಸಿದರು. ಸ್ವಯಂಸೇವಕರಲ್ಲದ ಎಷ್ಟೋ ಜನರಿಗೆ ಪೆಟ್ಟುಗಳು ಬಿದ್ದವು. ಸ್ತ್ರೀಯರಾದರೂ ಹೊಡೆಯಲ್ಪಟ್ಟರು. ಒಟ್ಟಿನಲ್ಲಿ ಪೋಲೀಸರು ೨೫ ಸಲ ಲಾಠಿಗಳಿಂದ ಏಟುಗಳನ್ನು ಕೊಟ್ಟರೆಂದೂ, ಸುಮಾರು ೫೦೦ ಜನರಿಗೆ ಗಾಯಗಳು ತಗಲಿದವೆಂದೂ ಹೇಳಬಹುದಾಗಿದೆ.

### ಸಂಯುಕ್ತ ಪ್ರಾಂತ
### ಸರಕಾರಕ್ಕೆ ಸೋಲು.

ತಾ|| ೧೭ಕ್ಕೆ ಸೇರಿದ ಸಂಯುಕ್ತ ಪ್ರಾಂತದ ಕಾಯಿದೆ ಮಂಡಳದಲ್ಲಿ ಶ್ರೀ ಚಿಂತಾಮಣಿಯವರು ಒಂದು ಸೂಚನೆಯನ್ನು ತಂದು ನೈನಿತಾಲದಲ್ಲಿ ಸತ್ಯಾಗ್ರಹಿಗಳ ಮೇಲೆ ಪೋಲೀಸರು ಗೈದ ಅತ್ಯಾಚಾರಗಳ ವಿಷಯವಾಗಿ ವಿಚಾರಿಸಲು ಸಭೆಯನ್ನು ಮುಂದರಿಸಬೇಕೆಂದು ಕೇಳಿಕೊಂಡರು. ನೈನಿತಾಲದಲ್ಲಿ ಸತ್ಯಾಗ್ರಹಿಗಳ ಮೇಲೆ ಲಾಠಿಗಳನ್ನು ಉಪಯೋಗಿಸುವದರಲ್ಲಿ ಬಂದಿಲ್ಲವಾಗಿಯೂ, ಯಾರಿಗೂ ಬಹಳ ಗಾಯಗಳಾಗಿಲ್ಲವಾಗಿಯೂ ಸರ್ ಜಾರ್ಜ ಲ್ಯಾಂಬರ್ಟರು ಹೇಳಿದರು. ಬಳಿಕ ಮತಗಳನ್ನು ತೆಗೆದುಕೊಳ್ಳಲಾಗಿ ಶ್ರೀ ಚಿಂತಾಮಣಿಯವರ ಸೂಚನೆಯು ಸ್ವೀಕೃತವಾಯಿತು. ಸರಕಾರವು ಸೋಲನ್ನೊಪ್ಪಿಕೊಂಡಿತು.

### ಧಾರವಾಡದಲ್ಲಿ
### ಪರದೇಶಿ ಚಹಕ್ಕೆ ಬಹಿಷ್ಕಾರ.

(ಸ್ವಂತ ಸುದ್ದಿಗಾರರಿಂದ)

ತಾ|| ೯ನೆಯ ದಿವಸ ಧಾರವಾಡದಲ್ಲಿ ಕಾಂಗ್ರೆಸ ಕಮಿಟಿಯ ಕಟ್ಟಡದಲ್ಲಿ ಶ್ರೀ ಗುತ್ತಲ ವಕೀಲರ ಅಧ್ಯಕ್ಷತೆಯ ಕೆಳಗೆ ಫಲಾಹಾರದ ಅಂಗಡಿಕಾರರ ಸಭೆಯು ಸೇರಿತ್ತು. ಸಭೆಯಲ್ಲಿ ಅಂಗಡಿಕಾರರು ಪರದೇಶಿ ಚಹವನ್ನು ಮತ್ತು ಸಕ್ಕರೆಯನ್ನೂ ಉಪಯೋಗಿಸಕೂಡದೆಂದೂ, ಸಿಗರೇಟುಗಳನ್ನು ಮಾರಕೂಡದೆಂದೂ ನಿರ್ಧರಿಸಲ್ಪಟ್ಟಿತು.

### ರಾ. ಬ. ಕಂಬಳಿಯವರೂ, ಕಾಯದೆಭಂಗವೂ
### ೧೩೩ ಕನ್ನಡಿಗರಿಗೆ ಸೆರೆಮನೆ

ಪುಣೆಯಲ್ಲಿ ಈಗ ಪ್ರಾರಂಭವಾಗಿರುವ ಮುಂಬಯಿ ಕಾಯಿದೆ ಮಂಡಳದಲ್ಲಿ ಹುಬ್ಬಳ್ಳಿಯ ರಾ. ಬ. ಕಂಬಳಿಯವರು ಮುಂಬಯಿ ಕರ್ನಾಟಕ ದೊಳಗಿನ ಪ್ರತಿಯೊಂದು ಜಿಲ್ಲೆಯೊಳಗೆ ಉಪ್ಪಿನ ಕಾಯಿದೆ ಭಂಗಕ್ಕಾಗಿ ಎಷ್ಟೆಷ್ಟು ಜನರಿಗೆ ಶಿಕ್ಷೆಯಾಗಿದೆಯೆಂಬುದಾಗಿ ಪ್ರಶ್ನೆ ಕೇಳಿದರು. ಅದಕ್ಕೆ ಸರಕಾರದವರಿಂದ ಕೆಳಗಿನಂತೆ ಉತ್ತರ ದೊರೆಯಿತು.

ಉಪ್ಪಿನ ಕಾಯದೆ ಭಂಗಕ್ಕಾಗಿ ಶಿಕ್ಷಿಸಲ್ಪಟ್ಟವರು -

ಬೆಳಗಾವ ಜಿಲ್ಲೆ ೬೪. ಧಾರವಾಡ ಜಿಲ್ಲೆ ೧.
ವಿಜಾಪುರ ಜಿಲ್ಲೆ ೧೬. ಕಾರವಾರ ಜಿಲ್ಲೆ ೨೬.

ಅದಲ್ಲದೆ ಉಪ್ಪಿನ ಕಾಯದೆ ಭಂಗಕ್ಕೆ ಉತ್ತೇಜನ ಕೊಟ್ಟುದಕ್ಕಾಗಿ ಶಿಕ್ಷಿಸಲ್ಪಟ್ಟವರು, ಕಾರವಾರ ಜಿಲ್ಲೆ ೨೬, ಒಟ್ಟು ೧೩೩.

### ಇಹವೃತ್ತ.

ಬಳ್ಳಾರಿಯ ಪುರಾಣ ಕೇಸರಿಗಳೆಂದ ಶ್ರೀ ರಾಘವೇಂದ್ರಾಚಾರ್ಯರು ಇಲ್ಲಿಯ ವೆಂಕಟಪೇಟೆಯ ವೆಂಕಟೇಶದೇವರ ಗುಡಿಯಲ್ಲಿ ಮೊನ್ನೆಯಿಂದ ಭಾರತಸಾರಗ್ರಂಥದ ಪುರಾಣವನ್ನು ಪ್ರಾರಂಭಿಸಿರುವರು. ಅವರು ಕುರುಡರಿದ್ದರೂ ಸಹ ಪುರಾಣವನ್ನು ಹೇಳುತ್ತಿರುವದೊಂದು ವಿಶೇಷ. ಬಾಗಲಕೋಟೆಯವರು ಅವರ ಪುರಾಣಶ್ರವಣದ ಲಾಭವನ್ನು ಪಡೆಯಬೇಕಾಗಿ ಕೋರಿಕೆ.

## ವ್ಹಾಯಿಸರಾಯರೆದುರಿಗೆ ರಾಜ್ಯಕ್ರಾಂತಿಯ ಕೂಗು.

ಸಿಮಲಾದಲ್ಲಿ ಅಸೆಂಬ್ಲಿಯ ಸಭಾಸದರನ್ನುದ್ದೇಶಿಸಿ ತಾ|| ೯ ನೆಯ ದಿವಸ ವ್ಹಾಯಿಸರಾಯರು ಭಾಷಣ ಮಾಡುವವರಿದ್ದರು. ಅವರು ಬರುವ ದಾರಿಯನ್ನೇ ನಿರೀಕ್ಷಿಸುತ್ತ ಅಸೆಂಬ್ಲಿಯ ಎದುರಿಗೆ ೩೦ ಜನ ಸ್ತ್ರೀಯರು ಕುಳಿತುಕೊಂಡಿದ್ದರು. ಅವರೆಲ್ಲರೂ ಖಾದಿಯನ್ನೇ ಧರಿಸಿದವರಾಗಿದ್ದರು. ಪೋಲೀಸರು ಅವರಿಗೆ ಅಲ್ಲಿಂದ ಎದ್ದು ಹೋಗಲು ಹೇಳಿಕೊಂಡರು. ಅವರು ಅದಕ್ಕೆ ಒಪ್ಪದೆ ಹಾಗೆಯೇ ಕುಳಿತುಕೊಂಡರು. ಅಷ್ಟರಲ್ಲಿಯೇ ವ್ಹಾಯಿಸರಾಯರು ಅಲ್ಲಿಗೆ ಬಂದು ಇಳಿದರು. ವ್ಹಾಯಿಸರಾಯರು ಬಂದದ್ದೊಂದೇ ತಡ, ಸ್ತ್ರೀಯರೆಲ್ಲರೂ "ರಾಜ್ಯಕ್ರಾಂತಿಗೆ ಜಯವಾಗಲಿ" "ರಾಷ್ಟ್ರಧ್ವಜವು ಮನ್ನಣೆ ಸಿಗಲಿ" "ಗಾಂಧಿ ಮಹಾರಾಜಕೀ ಜಯ" ಮೊದಲಾದ ಜಯ ಜಯಕಾರಗಳನ್ನು ಮಾಡಿದರು. ವ್ಹಾಯಿಸರಾಯರು ಮುಗುಳನಗೆ ನಗುತ್ತ ಅಸೆಂಬ್ಲಿಯಲ್ಲಿ ಹೊಕ್ಕರು. ಬಳಿಕ ಸ್ತ್ರೀಯರೂ ಮೆರವಣಿಗೆಯಿಂದ ತಿರುಗಿ ಹೋದರು.

---

## ಗುಳೇದಗುಡ್ಡದಲ್ಲಿ ಸೆರೆ ಸಿಂದಿ ಪಿಕೆಟಿಂಗ ಪೋಲೀಸರೇ ಸೆರೆಯನ್ನು ಮಾರುತ್ತಿರುವರಂತೆ!

(ಸ್ವಂತ ಸುದ್ದಿಗಾರರಿಂದ)

ಇಲ್ಲಿ ಸೆರೆ ಸಿಂದಿ ಅಂಗಡಿಗಳ ಪಿಕೆಟಿಂಗ ಪ್ರಾರಂಭವಾಗಿ ೫-೬ ದಿನಗಳಾದವು. ಸ್ವಯಂಸೇವಕರು ಶಾಂತರೀತಿಯಿಂದ ಪಿಕೆಟಿಂಗ ಮಾಡುತ್ತಿರುವರು. ಸಿಂದೀ ಅಂಗಡಿಯ ವ್ಯಾಪಾರವು ಅಗದಿ ಕಟ್ಟಾಗಿ ಹೋಗಿದೆ. ಸಿಂದಿಯನ್ನು ಕುಡಿಯಲು ಯಾರೂ ಹೋಗುವದೇ ಇಲ್ಲ. ಯಾರಾದರೂ ಕುಡಿದದ್ದು ನಗರವಾಸಿಗರಿಗೆ ತಿಳಿದು ಬಂದಲ್ಲಿ ಅವರ ಮೇಲೆ ನಾಗರಿಕರು ಸಾಮಾಜಿಕ ಬಹಿಷ್ಕಾರವನ್ನು ಹಾಕುವದಾಗಿ ಗೊತ್ತುಮಾಡಿಕೊಂಡಿದ್ದಾರೆ. ಕುಡುಕರು ಕುಡಿಯುವದನ್ನ ಬಿಟ್ಟುಕೊಟ್ಟದ್ದು ಇಲ್ಲಿಯ ಪೋಲೀಸರಿಗೆ ಸಹನವಾಗಲೊಲ್ಲದಾಗಿ ತೋರುತ್ತದೆ. ಅವರೇ ಸ್ವತಃ ಸೆರೆ ಸಿಂದಿ ಊರೊಳಗೆ ಮಾರುತ್ತಿರುವರಾಗಿ ತಿಳಿಯುತ್ತದೆ. ಈ ಊರ ಕಲಾಯಿಗಾರರ ಮನೆಯಲ್ಲಿ ಮಾರುತ್ತಿರುವರಾಗಿ ಸುದ್ದಿಯಿದೆ. ಇದು ನಿಜವಿದ್ದಲ್ಲಿ ಅಂಗಡಿಯ ಒಡೆಯನು ಸುಮ್ಮನೆ ಕುಳಿತಿರುವಾಗ ಪೋಲೀಸರು ಹೀಗೆ ಮಾಡುತ್ತಿರುವದು ನ್ಯಾಯನೀತಿಗೆ ಅನುಸರಿಸಿದ್ದಾಗುವದಿಲ್ಲ. ಇತ್ತಿತ್ತಲಾಗಿ ಅಂಗಡಿಕಾರರಿಗೂ ಹೆಚ್ಚಿನ ಅನುಕೂಲತೆಗಳು ದೊರೆತಿರುವವೋ ಏನೋ. ಯಾಕೆಂದರೆ ಅಂಗಡಿಗಳು ಬೇಕಾದ ಹಾಗೆ ತಡ ತಾಸು ತೆರೆದಿರುತ್ತವೆ. ಯಾಕೆಂದು ಕೇಳಿದರೆ ನಮ್ಮ ಅಬಕಾರಿ ಇನಸ್ಪೆಕ್ಟರರು ಅಪ್ಪಣೆಯನ್ನು ಕೊಟ್ಟಿರುವರೆಂದು ಹೇಳುತ್ತಿರುವರು, ನಿಜವಿರಬಹುದು. ಯಾಕೆಂದರೆ ಸರಕಾರಿ ಕಾಯದೆಗಳಲ್ಲಿ ಈಗ ದಿನದಿನಕ್ಕೂ ಬದಲು ಆಗ ಹತ್ತಿದೆ.

---

## ಶಿರೂರಲ್ಲಿ ಸಿಂದೀ ಅಂಗಡಿಯ ಪಿಕೆಟಿಂಗ ಸಿಂದೀ ವ್ಯಾಪಾರವು ನಿಂತುಹೋಯಿತು.

( ನಮ್ಮ ಸ್ವಂತ ಸುದ್ದಿಗಾರರಿಂದ )

ಶಿರೂರಿನ ಜನರು ಸಿಂದೀ ಅಂಗಡಿಯ ಮುಂದೆ ಪಿಕೆಟಿಂಗ ಮಾಡುವದನ್ನು ಮೊದಲೇ ಗೊತ್ತು ಮಾಡಿಕೊಂಡು ತಾ|| ೧೧ ನೆಯ ದಿವಸ ಪಿಕೆಟಿಂಗ ಕಾರ್ಯವನ್ನು ಪ್ರಾರಂಭಿಸಿದರು. ಪಿಕೆಟಿಂಗ ನೋಡಲಿಕ್ಕಂದು ನೂರಾರು ಜನರು ಬಂದು ನೆರೆದಿದ್ದರು. ಪಿಕೆಟಿಂಗದ ಪರಿಣಾಮವು ಊರ ಜನರ ಮೇಲೆ ಒಳಿತಾಗಿ ಆಯಿತು. ಸಿಂದೀ ಕುಡಿಯಲು ಯಾರೂ ಹೋಗಲಿಲ್ಲ. ಗುಳೇದಗುಡ್ಡದಿಂದ ನೂರಾರು ಜನರು ಸಿಂದೀ ಕುಡಿಯಲು ಬಂದಿದ್ದರು. ಅವರಾದರೂ ಸ್ವಯಂಸೇವಕರ ಮಾತುಗಳಿಗೆ ಕಿವಿಗೊಟ್ಟು ಕುಡಿಯುವದನ್ನು ಬಿಟ್ಟುಕೊಟ್ಟು ನಡೆದರು. ಪಿಕೆಟಿಂಗದಲ್ಲಿ ಇಮಾಮಸಾಹೇಬ ಹಾವರಗಿ, ವೆಂಕಟೇಶ ರಾಘವೇಂದ್ರ ಕುಲಕರ್ಣಿ, ನಿಂಗಯ್ಯ ಗಣಾಚಾರಿ, ಶಿದ್ದಯ್ಯ ಗಣಾಚಾರಿ ಇವರೆಲ್ಲರೂ ಭಾಗವಹಿಸಿಕೊಂಡಿದ್ದರು. ಊರೊಳಗಿನ ಅಬಾಲವೃದ್ಧ ಸ್ತ್ರೀಪುರುಷರೆಲ್ಲರೂ ಈ ಪುಣ್ಯಕಾರ್ಯದಲ್ಲಿ ಸಹಾಯ ಮಾಡಿದಲ್ಲಿ ಶಿರೂರಲ್ಲಿ ಸಿಂದಿಯು ಹೇಳಹೆಸರಿಲ್ಲದೆ ನಿರ್ನಾಮವಾಗಿ ಹೋಗುವದು. ಎಲ್ಲರೂ ಸಹಾಯ ಮಾಡಬೇಕು.

---

ಮುಮಟಗೇರಿಯಲ್ಲಿಯ ಹವೆಯು ದೂಷಿತವಾದದ್ದೂ ಮಲೇರಿಯಾ ಬೇನೆಯನ್ನು ತರುವಂತಹದೂ ಆಗಿಪ್ಪದರಿಂದ ಮತ್ತು ಅಲ್ಲಿಯ ನೀರಿನಲ್ಲಿ ಹುಳಗಳಾಗಿದ್ದುದರಿಂದ, ಅಲ್ಲಿಯ ಬಿಡಾರವನ್ನು ಕಿತ್ತಿ ಕೆರೂರಿನಲ್ಲಿ ಹಾಕುವದ್ದೇವೆಂಬುದಾಗಿ ದೇಶಬಂಧು ಪಥಕದ ಬಿಡಾರದ ಅಧಿಪತಿಗಳಾದ ಶ್ರೀ ಪದಕಿಯವರು ತಿಳಿಸುತ್ತಾರೆ.

---

**ಶುದ್ಧ ಖಾದಿ! ಶುದ್ಧ ಖಾದಿ!**

ನಮ್ಮಲ್ಲಿ ಕೈನೂಲು ಕೈಮಗ್ಗದ ಶರ್ಟಿಂಗ, ಕೋಟಿಂಗ, ಧೋತರ ಮೊದಲಾದ ಎಲ್ಲ ತರದ ಬಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಗ್ರಾಹಕರು ಲಾಭ ಪಡೆಯಬೇಕಾಗಿ ವಿನಂತಿ

ಶಂಕರಪ್ಪಾ ಬಣಗಾರ
ಜವಳಿ ವ್ಯಾಪಾರಿಗಳು, ಬಾಗಲಕೋಟೆ

---

## ಜಮೀನ ಕೊಳ್ಳುವವರಿಗೆ ಸುಸಂಧಿ.

ಕೆಳಗೆ ಸಹಿ ಮಾಡುವವನ ಕಡಿಂದ ಎಲ್ಲ ಸಾವುಕಾರರಿಗೆ ತಿಳಿಸುವದರಲ್ಲಿ ಬರುವದೇನಂದ್ರೆ—ಬಾಗಲಕೋಟೆ ತಾಲೂಕ ಪೈಕಿ ತೋಳಮಟ್ಟಿ ಗ್ರಾಮದಲ್ಲಿರುವ ಹಣಮಂತರಾವ ದೊಡ್ಡಭೀಮರಾವ ದೇಶಪಾಂಡೆ ಕೇಸನೂರ, ಸಾ|| ಪುಣೆ ಇವರ ಚಾವರಾತ ಇನಾಮ ಜಮೀನು (ಅಚ್ಯುತರಾವ ಜಮೀನ) ೮|| ಸರ್ವೆ ನಂಬರ (೮೨) ಯಕರೆ (೨೦೮೩೭) ಆಕಾರ ರೂಪಾಯಿ (೧೭) ಇದನ್ನು ಮಾರಾಟ ಮಾಡುವದಿದೆ. ಯಾರಿಗಾದರೂ ತಕ್ಕೊಳ್ಳುವದಿದ್ದರೆ ಕೆಳಗೆ ಸಹಿಮಾಡುವವರ ಕಡೆಗೆ ಬಂದು ಭೆಟ್ಟಿಯಾಗಬೇಕು.

ಬಾಗಲಕೋಟೆ ತಾ|| ४-೭-೩೦ { ರಾಮಚಂದ್ರ ಹಣಮಂತರಾವ ಸವಣೂರ. ಬಾಳಕೃಷ್ಣದಾಸ ವೆಂಕಟದಾಸ ಇವರ ಮನೆಯ ಹತ್ತರ.

---

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ, ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರಿ. ನಂ ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦-೦-೬

ಜಯಕರ್ನಾಟಕ

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಮಂಗಳವಾರ ಮಿತಿ ಆಷಾಢ ಬಹುಳ ೪ ಶಕೆ ೧೮೫೨ ತಾ|| ೧೫—೭—೩೦ [ ಸಂಚಿಕೆ ೧೦೧

### ಪುನಃ ಕಾಯಿದೆಭಂಗ ಮಾಡಿದುದಕ್ಕಾಗಿ

# ಡಾ. ಮುಂಜೆಯವರಿಗೆ ೧ ವಾರ ಶಿಕ್ಷೆ

ತಾ|| ೧೩ ನೆಯ ದಿವಸ ಪುನಃ ದಿಂದ ಮತ್ತೆ ಡಾ|| ಮುಂಜೆಯವರು ೩೦ ಜನ ಸತ್ಯಾಗ್ರಹಿಗಳನ್ನು ಕರೆದುಕೊಂಡು ಅರಣ್ಯಕ್ಕೆ ಹೋಗಿ ಅಲ್ಲಿ ಹುಲ್ಲನ್ನು ಕೊಯ್ದು ತೆಗೆದು ಅಡವಿಯ ಕಾಯಿದೆಯನ್ನು ಮುರಿದರು. ಈ ಕಾಯಿದೆಭಂಗವನ್ನು ನೋಡಲು ಅಬಾಲವೃದ್ಧರಾದ ೫೦೦೦ ಜನ ಸ್ತ್ರೀಪುರುಷರು ತಮ್ಮ ತಮ್ಮ ಮಕ್ಕಳು ಮರಿಗಳನ್ನು ಕರೆದುಕೊಂಡು ಹೋಗಿದ್ದರು. ಡಾ|| ಮುಂಜೆಯವರೂ, ಸತ್ಯಾಗ್ರಹಿಗಳೂ ಕಾಯಿದೆ ಭಂಗ ಮಾಡಿದ ಕೂಡಲೆ ಪೋಲೀಸರು ಅವರೆಲ್ಲರನ್ನು ಇ. ಪಿ. ಕೋಡಿನ ೩೭೯ ನೆಯ ಕಲಮಿನನ್ವಯ ಸೆರೆಹಿಡಿಸಿದರು. ಡಾ|| ಮುಂಜೆಯವರಿಗೆ ೧ ವಾರದ ಸಾದಾ ಶಿಕ್ಷೆಯೂ ಮತ್ತು ೧೪ ಜನ ಸ್ವಯಂಸೇವಕರಿಗೆ ೧ ವಾರದ ಸಖ್ತ ಶಿಕ್ಷೆಯೂ ವಿಧಿಸಲ್ಪಟ್ಟಿತು. ೧೬ ಜನರು ಯಾವ ನಿರ್ಬಂಧವೂ ಇಲ್ಲದೆ ಬಿಡುಗಡೆ ಹೊಂದಿದರು.

## ಬೆಳಗಾವಿಯ ನಗರಸಭೆಯ ಮೇಲೆ ರಾಷ್ಟ್ರಧ್ವಜವು ನಿಂತಿತು.

[ಶಂತಿಯ ವಾರ್ತೆ ತಾ|| ೧೪]

ಬೆಳಗಾವಿಯ ನಗರಸಭೆಯ ಮೇಲೆ ರಾಷ್ಟ್ರಧ್ವಜವನ್ನು ಹಚ್ಚುವ ವಿಷಯವು ತಾ|| ೧೪ ಕ್ಕೆ ಕೂಡುವ ಸಾಧಾರಣ ಸಭೆಯಲ್ಲಿ ಬರತಕ್ಕದ್ದಾಗಿ ಗೊತ್ತಾಗಿತ್ತು. ಆದುದರಿಂದ ತಾ|| ೧೪ ನೆಯ ದಿವಸ ಎಲ್ಲ ಸಂಗಡಿಗರು ಅಬಾಲವೃದ್ಧರಾದ ಸ್ತ್ರೀಪುರುಷರೆಲ್ಲರೂ ತಮ್ಮ ತಮ್ಮ ಕೈಗಳಲ್ಲಿ ರಾಷ್ಟ್ರಧ್ವಜಗಳನ್ನು ತೆಗೆದುಕೊಂಡು, ರಾಷ್ಟ್ರಗೀತೆಗಳನ್ನು ಅನ್ನುತ್ತ, ಪಟ್ಟಣದಲ್ಲೆಲ್ಲ ಮೆರವಣಿಗೆಯಿಂದ ಸಂಚರಿಸಿ, ಸಭೆಯ ಹೊತ್ತಿಗೆ ನಗರ ಸಭೆಯ ಮುಂದ ಹೋಗಿ ನೆರೆದರು. ಸರಿಯಾದ ವೇಳೆಗೆ ಸಾಧಾರಣ ಸಭೆಯು ಪ್ರಾರಂಭವಾಯಿತು. ರಾಷ್ಟ್ರಧ್ವಜದ ವಿಷಯವು ಸಭೆಯ ಮುಂದೆ ಬಂದಿತು. ಆದರ ಬಗ್ಗೆ ಕೆಲವು ಹೊತ್ತಿನವರೆಗೆ ಚರ್ಚೆಯಾಗಿ "ನಗರ ಸಭೆಯ ಮೇಲೆ ರಾಷ್ಟ್ರಧ್ವಜವು ನಿಲ್ಲಬೇಕು" ಎಂಬುದಾಗಿ ಬಹುಮತದಿಂದ ನಿರ್ಣಯಿಸಲ್ಪಟ್ಟಿತು. ಹೊರಗಿನ ಜನರು ತಮಗೆ ಹೀಗೆ ಜಯ ದೊರೆತಿದ್ದದನ್ನು ಕಂಡು, ಜಯಜಯಕಾರಗಳನ್ನು ಮಾಡಿದರು ಆಮೇಲೆ ನಗರಸಭೆಯ ಅಧಿಕಾರಿಗಳು ಹೋಗಿ ಬಂದು ಕಟ್ಟಡದ ಮೇಲೆ ನಾಡಗುಡಿಯನ್ನು ನಿಕ್ಷಿಸಿದರು. ಜನರು ಜಯಜಯಕಾರಗಳನ್ನು ಮಾಡುತ್ತ ಗಗನವನ್ನೇ ಗಡಚಿಕ್ಕಿ ಬಿಟ್ಟರು. ಅಂದು ಸಂಜೆಯಲ್ಲಿ ಬೆಳಗಾವಿಯ ನಾಗರಿಕರು ಸಾರ್ವಜನಿಕ ಸಭೆಯಲ್ಲಿ ಸೇರಿ ನಗರ ಸಭೆಯ ಅಧಿಕಾರಿಗಳಿಗೆ ಈ ಬಗ್ಗೆ ಅಭಿನಂದನೆಗಳನ್ನರ್ಪಿಸಿದರು.

## ಭಾರತೀಯರನ್ನು ಭ್ರಮೆಯಲ್ಲಿ ನೂಕಬೇಡಿರಿ.

"ಆಕ್ಟೋಬರದಲ್ಲಿ ಸೇರಲಿಕ್ಕಿದ ಬಂಡೀಗಾಲಿಯ ಪರಿಷತ್ತಿನಲ್ಲಿ ವಸಾಹತಿ ಸ್ವರಾಜ್ಯದ ಬೇಡಿಕೆಯು ಮನ್ನಿಸಲ್ಪಡುವದೆಂದೂ ಮತ್ತು ತಮ್ಮ ಜೀವಮಾನದಲ್ಲಿಯೇ ವಸಾಹತಿ ಸ್ವರಾಜ್ಯವು ಹಿಂದುಸ್ಥಾನಕ್ಕೆ ದೊರೆಯತಕ್ಕದ್ದಾಗಿದೆಯೆಂದೂ ಯಾವ ಭಾರತೀಯನೂ ನೆನೆಸಲಾರನು. ಭಾರತೀಯರಲ್ಲಿ ಪರಿಷತ್ತಿನ ಬಗ್ಗೆ ಆಶೆಯನ್ನು ಹುಟ್ಟಿಸುವದರಲ್ಲಿ ಯಾವ ಲಾಭವೂ ಇಲ್ಲ. ಬ್ರಿಟಿಶರಲ್ಲಿದ್ದ ಭಾರತೀಯರ ವಿಶ್ವಾಸವು ಮತ್ತಿಷ್ಟು ಅಳಿದು ಹೋಗುವದಕ್ಕೆ ಮಾತ್ರ ಪರಿಷತ್ತು ಕಾರಣವಾಗುವದು. ವಸಾಹತಿ ಸ್ವರಾಜ್ಯದ ಸಂಬಂಧವಾಗಿ ತಾವು ಮಾಡಿಕೊಂಡ ಅರ್ಥವೂ ಮತ್ತು ಬ್ರಿಟಿಶರು ಬಗೆದ ಅರ್ಥವೂ ಬೇರೆ ಬೇರೆ ಯಾಗಿವೆಯೆಂದು ತಿಳಿದು ಬಂದ ಮೇಲಂತೂ ಭಾರತೀಯರು ಹೆಚ್ಚು ನಿರಾಶೆಯನ್ನು ಹೊಂದಿ ಮತ್ತಿಷ್ಟು ಸಿಟ್ಟಿಗೇಳುವರು. ಕಾರಣ ಭಾರತೀಯರನ್ನು

...ಯಲ್ಲಿ ನೂಕಬೇಡಿರಿ.” ಎಂಬುದಾಗಿ ಮಿ|| ವಿನ್ಸಂಟ ...ಹಿಲ್ಲರು ಲಂಡನ್ನಿನಲ್ಲಿ ಒಂದು ಕಡೆಗೆ ಭಾಷಣ ಮಾಡುವಾಗ ನುಡಿದಿದ್ದಾರೆ.

## ಸರ್ ಲೆಸ್ಲಿವುಯಿಲ್ಸನ್ನರಿಗೆ ದುಃಖವಾಗಿದೆಯಂತೆ.

ಮುಂಬಯಿ ಇಲಾಖೆಯೊಳಗಿನ ಪ್ರತಿಯೊಂದು ಭಾಗದವರು ತಮಗೆ ಸಹಾನುಭೂತಿಯನ್ನು ತೋರಿಸಿದ್ದರಿಂದ ೫ ವರ್ಷಗಳ ವರೆಗೆ ತಮ್ಮ ಆಡಳಿತೆಯು ಸುಸೂತ್ರವಾಗಿ ಸಾಗಿತೆಂದೂ ಈಗ ಅದೇ ಇಲಾಖೆಯಲ್ಲಿ ಅಶಾಂತತೋಷವು ಬೆಳೆದಿರುವದನ್ನು ಕಂಡು ತಮಗೆ ಅತ್ಯಂತ ದುಃಖವಾಗಿದೆಯೆಂದೂ ಮುಂಬಯಿ ಇಲಾಖೆಯ ಹಿಂದಿನ ಗವ್ಹರ್ನರರಾದ ಸರ್ ಲೆಸ್ಲಿ ವುಯಿಲ್ಸನ್ನರು ಮಿ|| ಹಲಿಯ ಅವರಿಗೆ ಪತ್ರ ಬರೆದಿದ್ದಾರೆ.

### ದಿಲ್ಲಿಯಲ್ಲಿ ೪೩ ಜನರಿಗೆ ಶಿಕ್ಷೆ.

ಸೆರೆ ಸಿಂದಿ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದ್ದರಿಂದಾಗಿ ೪೩ ಜನ ಸ್ವಯಂಸೇವಕರು ಸೆರೆಮನೆಗಳಲ್ಲಿ ೩ ತಿಂಗಳ ಸಾದಾ ಶಿಕ್ಷೆಗೆ ಗುರಿಯಾದರು.

### ಅಸೆಂಬ್ಲಿಯ ಸಭಾಸದರಿಂದ

## ಸ್ವಯಂಸೇವಿಕೆಯರಿಗೆ ಅಪಮಾನ

ಅಸೆಂಬ್ಲಿಯ ಅಧಿವೇಶನಕ್ಕಾಗಿ ಸಿಮ್ಲಾಕ್ಕೆ ಹೋಗುವ ಹಿಂದೂ ಸಭಾಸದರು ಇಳಿದುಕೊಂಡ ಬಂಗಲೆಗಳ ಮುಂದೆ ಅವರನ್ನು ಅಸೆಂಬ್ಲಿಗೆ ಹೋಗಗೊಡಬಾರದೆಂದು ಸ್ವಯಂಸೇವಿಕೆಯರು ಪಿಕೆಟಿಂಗ ನಡಿಸಿರುವರು. ಈ ಪಿಕೆಟಿಂಗದ ಮೂಲಕವಾಗಿ ಎಷ್ಟೋ ಜನ ಸಭಾಸದರು ತಮ್ಮ ತಮ್ಮ ಬಂಗಲೆಗಳಿಂದ ಹೊರಬೀಳಲೇ ಇಲ್ಲ. ಆದರೆ ಶ್ರೀ. ಎಮ್. ಕೆ. ಆಚಾರ್ಯರು ಮಾತ್ರ ಸ್ವಯಂಸೇವಿಕೆಯರಿಗೆ ಸಿಕ್ಕ ಸಿಕ್ಕಹಾಗೆ ಬೈದು, ಅಸೆಂಬ್ಲಿಗೆ ಹೋಗಲು ಹೊರಬಿದ್ದು ನಡೆದರಂತೆ! ಅದನ್ನು ಕಂಡು ಸ್ವಯಂಸೇವಿಕೆಯರು ಆಚಾರ್ಯರ ಮನೆಯ ತಿರಸ್ಕರಿಸಲು, ಅವರ ಬಂಗಲೆಯ ಮುಂದೆ ಜೋರಿನಿಂದ ಪಿಕೆಟಿಂಗ ನಡಿಸುವದಾಗಿ ನಿರ್ಧರಿಸಿಕೊಂಡಿದ್ದಾರೆ.

## ಉಪ್ಪಿನ ಕರಕ್ಕೆ

### ನರಗುಂದ ಮುನಸಿಪಾಲಿಟಿಯ ವಿರೋಧ.

ಉಪ್ಪಿನ ಮೇಲಿನ ಕರವು ಶ್ರೀಮಂತರಿಗಿಂತ ಬಡವರಿಗೆ ಬಹು ಭಾರವಾದದ್ದಾಗಿರುವದರಿಂದ ಮತ್ತು ಅನ್ಯಾಯದ್ದಾಗಿರುವದರಿಂದ ಸರಕಾರದವರು ಅದನ್ನು ಕೂಡಲೆ ತೆಗೆದು ಹಾಕಬೇಕಾಗಿಯೂ, ಮತ್ತು ಉಪ್ಪನ್ನು ಸಿದ್ಧಪಡಿಸುವದಕ್ಕೆ ಯಾರಿಗೂ ಯಾವ ತರದ ನಿರ್ಬಂಧವಾಗದಂತೆ ವ್ಯವಸ್ಥೆ ಮಾಡಬೇಕಾಗಿಯೂ ನರಗುಂದ ಮುನಸಿಪಾಲಿಟಿಯವರು ತಾ|| ... ಕ್ಕೆ ಸೇರಿದ ಸಾಧಾರಣ ಸಭೆಯಲ್ಲಿ ನಿರ್ಧರಿಸಿಕೊಂಡಿರುವರು.

## ಉಡುಪಿಯ ಸ್ವಾಮಿಗಳಿಗೆ

### ಸರಕಾರದವರು ಬೆದರಿಕೆ ಹಾಕಿದರು.

ಮಹಾತ್ಮಾ ಗಾಂಧಿಯವರು ಪ್ರಾರಂಭಿಸಿದ ಸತ್ಯಾಗ್ರಹ ಚಳವಳಿಯಲ್ಲಿ ನೀವು ಸೇರಿದ್ದು ಕಂಡುಬಂದಲ್ಲಿ, ನಿಮ್ಮ ನಿಮ್ಮ ಮಠಗಳಿಗೆ ಸರಕಾರದಿಂದ ಸಿಗತಕ್ಕ ಹಣವನ್ನು ನಿಲ್ಲಿಸುವದಾಗಿ ಬರುವದೆಂದು ಅಲ್ಲಿಯ ಅಧಿಕಾರಿಗಳು ಉಡುಪಿಯ ಶ್ರೀಸ್ವಾಮಿಗಳವರಿಗೆ ಎಚ್ಚರಿಕೆಯನ್ನು ಕೊಟ್ಟಿರುವರಾಗಿ ತಿಳಿಯುತ್ತದೆ.

## ಡಾ|| ಬಿಜೆಂಟಮ್ಮನವರು ಬ್ರಿಟಿಶರಿಗೆ ಎಚ್ಚರಿಕೆ ಕೊಟ್ಟರು.

ಹಿಂದುಸ್ಥಾನದ ಹಿತಸಂರಕ್ಷಣೆಯ ಸಲುವಾಗಿ ವಿಚಾರಿಸಲು ಲಂಡನದಲ್ಲಿ ಇಮ್ಸ್ ಭುವನದಲ್ಲಿ ಪಾರ್ಲಿಮೆಂಟ ಸಭಾಸದರ ಸಭೆಯು ಸೇರಿತ್ತು. ಸಭೆಯಲ್ಲಿ ಡಾ|| ಬಿಜೆಂಟ, ದಿವಾಣ ಚಮನಲಾಲ, ಮಿ|| ದೇಶ್‌ಟ್, ಮಿ|| ಮಾರ್ಲಿ ವೆಡ್ಜ್‌ವುಡ್‌ರವರು ಭಾಷಣ ಮಾಡಿದರು. ಡಾ|| ಬಿಜೆಂಟಮ್ಮನವರು ತಮ್ಮ ಭಾಷಣದಲ್ಲಿ, “ಹಿಂದುಸ್ಥಾನದ ಬೇಡಿಕೆಗಳ ಕಡೆಗೆ ಲಕ್ಷ್ಯಕೊಟ್ಟು ಪ್ರತಿನಿಧಿಗಳ ಅಪೇಕ್ಷೆಗಳನ್ನು ಬೇಗನೆ ಪೂರೈಸಬೇಕು. ಪೂರೈಸದಿದ್ದಲ್ಲಿ ಮಾತ್ರ ಹಿಂದುಸ್ಥಾನದಲ್ಲಿ ಎಲ್ಲಿ ನೋಡಿದಲ್ಲಿಯು ಸ್ವಾತಂತ್ರ್ಯದ ಕೂಗೇ ಕೇಳಬಂದೀತು. ಪಾರ್ಲಿಮೆಂಟವರು ಬಾಡೀಗಾಲಿಯ ಪರಿಷತ್ತಿನ ಸೂಚನೆಗಳನ್ನು ಮನ್ನಿಸಬೇಕು. ವರ್ಕಿಂಗ ಕಮಿಟಿಯು ಕಾಯಿದೆಗೆ ವಿರುದ್ಧವಾದ ಸಂಘವಾಗಿದೆಯೆಂದು ನಿರ್ಣಯಿಸಿದ್ದುದನ್ನು ತಿರುಗಿ ತೆಗೆದುಕೊಂಡು ಕಾಂಗ್ರೆಸ ಪಕ್ಷದವರೊಡನೆ ಸರಕಾರದವರು ಸಹಕಾರ ಬೆಳಿಸಬೇಕು” ಎಂಬುದಾಗಿ ಹೇಳಿದರು.

### ಹುನಗುಂದದಲ್ಲಿ

## ಮದ್ಯಪಾನಕ್ಕೆ ತೊಂದರೆಯುಂಟಾಯಿತು.

ಹುನಗುಂದದಲ್ಲಿ ಸೆರೆ ಸಿಂದಿ ಅಂಗಡಿಗಳ ಪಿಕೆಟಿಂಗ ೮-೧೦ ದಿನಗಳಿಂದ ಒಳ್ಳೇ ಜೋರಾಗಿ ನಡೆದು ಬಂದಿದ್ದರಿಂದ ಸೆರೆ ಸಿಂದೀ ವ್ಯಾಪಾರವು ತೀರ ಕಟ್ಟಾಗಿ ಹೋಗಿದೆಯೆಂದೂ, ನಾಗರಿಕರು ಮದ್ಯಪಾನ ಪ್ರತಿಬಂಧಕ ಚಳವಳಿಗೆ ಒಳ್ಳೇ ರೀತಿಯಿಂದ ಸಹಾಯ ಮಾಡುತ್ತಿರುವರೆಂದೂ, ನಾಳಿನ ೨೨ನೆಯ ತಾ|| ಗೆ ಲೋಕಮಾನ್ಯ ಪಥಕದವರು ನಾಗರಿಕರಿಂದೊಡಗೂಡಿ ಸಿಂದೀ ಗಿಡಗಳನ್ನು ಕಡಿಯಲು ಸಿಂದೀ ಬನಕ್ಕೆ ಹೋಗುವವರಿದ್ದಾರಾಗಿಯೂ ಅಲ್ಲಿಯ ಸುದ್ದಿಗಾರರು ತಿಳಿಸುತ್ತಾರೆ.

### ಗಾಂಧಿ ಟೊಪ್ಪಿಗೆಗಾಗಿ

## ಸತ್ಯಾಗ್ರಹಿಗೆ ೬ ತಿಂಗಳ ಕಠಿಣ ಶಿಕ್ಷೆ.

ಮ್ಯಾಜಿಸ್ಟ್ರೇಟರ ಕಟ್ಟಪ್ಪಣೆಯ ವಿರುದ್ಧವಾಗಿ ಗಾಂಧಿಯ ಟೊಪ್ಪಿಗೆಯನ್ನು ಹಾಕಿಕೊಂಡಿದ್ದುದಕ್ಕಾಗಿ ಗುಂಟೂರಿನ ೨ ವರ್ಷ ಚಿಕ್ಕ ವಯಸ್ಸಿನ ಸತ್ಯಾಗ್ರಹಿಗೆ ೬ ತಿಂಗಳ ಕಠಿಣ ಶಿಕ್ಷೆಯು ಆಗಿರುತ್ತದೆ.

## ಅಸೆಂಬ್ಲಿಯಲ್ಲಿ ಸಾಯಮನ್ ವರದಿಗೆ ಸೋಲು

ಅಸೆಂಬ್ಲಿಯಲ್ಲಿ ಚರ್ಚೆಗೆ ಬಂದ ಸಾಯಮನ್ ವರದಿಯು ೧೮ ವಿರುದ್ಧ ೬೨ ಮತಗಳಿಂದ ನಿರಾಕರಿಸಲ್ಪಟ್ಟಿತು. ಸರಕಾರದವರಿಂದ ನೇಮಿಸಲ್ಪಟ್ಟ ಸಭಾಸದರಲ್ಲಿ ಮೂವರು ಸಭಾಸದರು ವಿರುದ್ಧ ಮತಕೊಟ್ಟರು.

### ಮುಸಲ್ಮಾನ ಮುಖಂಡರಾದ

# ಅಲ್ಲಿಇಮಾಮರು ಕಾಂಗ್ರೆಸ ಸೇರಿದರು

ಕೆಲವು ಕಾಲಗಳ ವರೆಗೆ ಪಾಟಣಾ ಹಾಯ ಕೋರ್ಟಿನ ನ್ಯಾಯಾಧೀಶರೂ, ಹೈದರಾಬಾದ ಸಂಸ್ಥಾನದ ಮಂತ್ರಿಗಳೂ ಆಗಿದ್ದುಕೊಂಡು ನಿವೃತ್ತರಾಗಿರುವ ಪಾಟಣಾದ ಮುಸಲ್ಮಾನ ಮುಖಂಡರಾದ ಸರ್ ಅಲ್ಲೀ ಇಮಾಮರು ಈಗ ಕಾಂಗ್ರೆಸ್ ಪಕ್ಷ ಸೇರಿರುವರೆಂದೂ, ಮತ್ತು ತಮ್ಮ ಬಂಧುಗಳಾದ ಹಸನ ಇಮಾಮರು ನೆರೆಯಾಳದಲ್ಲಿ ಅವರ ಸ್ಥಳದಲ್ಲಿ ಹೋಗಿ ರು ಯುದ್ಧ ಮಂಡಳದ ಸದಸ್ಯತ್ವವನ್ನು ಸ್ವೀಕರಿಸಲು ಅವರು ಒಪ್ಪಿಕೊಂಡಿರುವರೆಂದೂ ತಿಳಿಯುತ್ತದೆ. ನೆಹರು ವರದಿಯನ್ನು ತಯಾರಿಸುವ ಕಾರ್ಯದಲ್ಲಿ ಇವರು ಬಹಳೇ ಸಹಾಯ ಮಾಡಿದ್ದರು, ಸಾಯಮನ್ ಸಮಿತಿಗೆ ಬಹಿಷ್ಕಾರ ಹಾಕುವ ಚಳವಳಿಯಲ್ಲಿ ಇವರು ಅಗ್ರಭಾಗವನ್ನು ವಹಿಸಿಕೊಂಡಿದ್ದರು.

### ಬಂಡಿಗಾಲಿಯ ಪರಿಷತ್ತಿಗೆ

## ಮಹಾತ್ಮರನ್ನು ಕರಿಸುವದಿಲ್ಲವಂತೆ

ಮಹಾತ್ಮಾ ಗಾಂಧಿಯವರೇ ಪ್ರಾರಂಭಿಸಿದ ಕಾಯಿದೆಗೆ ವಿರುದ್ಧವಾದ ಸತ್ಯಾಗ್ರಹ ಚಳವಳಿಯು ದಿನದಿನಕ್ಕೂ ಪ್ರಗತಿಯನ್ನು ಹೊಂದುತ್ತ ಸಾಗಿರುವಾಗ ಮಹಾತ್ಮಾ ಗಾಂಧಿಯವರನ್ನು ಬಂಡಿಗಾಲಿಯ ಪರಿಷತ್ತಿಗೆ ಕರೆಕಳುಹುವದು ಅಸಾಧ್ಯವಾಗಿದೆಯೆಂದು ವಿ|| ಎಮರ್ಸನ್ನರು ಕೌನ್ಸಿಲ ಆಫ್ ಸ್ಟೇಟದಲ್ಲಿ ಹೇಳಿದರು. ನೋಡಿರಿ! ಇತ್ತ ವ್ಹಾಯಿಸರಾಯರು ಶಾಂತಿಸಂಧಾನದ ಮಾತುಕತೆಗಳನ್ನಾಡುತ್ತಿರುವರು. ಇತ್ತ ಅವರ ಕೈಕೆಳಗಿನ ಅಧಿಕಾರಿಗಳು ದರ್ಪದ ಭಾಷೆಯನ್ನು ತೋರಿಸುತ್ತಿರುವರು.

### ಪಿಕೆಟಿಂಗಕ್ಕಾಗಿ

## ಕೀಲಿ ಪರೀಕ್ಷೆಯು ಮುಂದೆ ಬಿತ್ತು

ವಿಶ್ವವಿದ್ಯಾಲಯದ ಮುಂದೆ ಜೋರಿನಿಂದ ನಡೆದ ಪಿಕೆಟಿಂಗದ ಮೂಲಕವಾಗಿ ವಕೀಲಿ ಪರೀಕ್ಷೆಯನ್ನು ತಾ|| ೧೪ಕ್ಕೆ ನಡೆಸಿಕೊಳ್ಳುವದು ಸಾಧ್ಯವಾಗಿಲ್ಲವಾದ್ದರಿಂದ ಅವನ್ನು ತಾ|| ಕ್ಕೆ ಮುಂದೂಗೆಯಬೇಕೆಂದು ಕಲಕತ್ತೆಯ ವಿಶ್ವವಿದ್ಯಾಲಯದ ಅಧಿಕಾರಿಗಳು ನಿರ್ಧರಿಸಿಕೊಂಡು ಪರೀಕ್ಷೆಯನ್ನು ಮುಂದುವರಿಸಿದ್ದಾರೆ.

### ಕೇರಳದಲ್ಲಿ ದಬ್ಬಾಳಿಕೆ

#### ೪ ಜನ ಮುಖಂಡರಿಗೆ ೪ ತಿಂಗಳ ಶಿಕ್ಷೆ

ಕೇರಳ ಪ್ರಾಂತಿಕ ಕಾಂಗ್ರೆಸ್ ಕಮೀಟಿಯ ಅಧಿಕಾರಿಗಳಾದ ಕೆ. ಮಾಧವನ್ ನಾಯರ್, ಸಿ. ಎಸ್. ನೀಲಕಂಠ ಅಯ್ಯರ್, ಯು. ಗೋಪಾಲ ಮೆನನ್ ಇವರುಗಳು ೧೪೪ ನೆಯ ಕಲಮಿನನ್ವಯ ಸೆರೆಹಿಡಿಯಲ್ಪಟ್ಟು ೪ ತಿಂಗಳ ಸಾದಾ ಶಿಕ್ಷೆಗೆ ಗುರಿಯಾದರು.

### ಗವ್ಹರ್ನರ ದೊರೆಗಳ ಮಂತ್ರಾಲೋಚನೆಯ ಸಭೆ

ಬಂಡಿಗಾಲಿಯ ಪರಿಷತ್ತಿನ ಸಂಬಂಧವಾಗಿ ವಿಚಾರಿಸುವದಕ್ಕಾಗಿ ವ್ಹಾಯಿಸರಾಯರು ಸಿಮ್ಲಾದಲ್ಲಿ ಎಲ್ಲ ಗವ್ಹರ್ನರರದೊಂದು ಸಭೆಯನ್ನು ಕರೆದಿದ್ದರಿಂದ, ಆ ಸಭೆಗೆ ಹೋಗುವದಕ್ಕಿಂತ ಪೂರ್ವದಲ್ಲಿಯೇ ತಮ್ಮ ಇಲಾಖೆಯಲ್ಲಿಯ ಜನರ ಅಭಿಪ್ರಾಯಗಳನ್ನು ತಿಳಿದುಕೊಂಡು ಹೋಗುವ ಉದ್ದೇಶದಿಂದ ಮುಂಬಯಿ ಗವ್ಹರ್ನರರು ಬೇರೆ ಬೇರೆ ಮುಖಂಡರನ್ನು ಆಲೋಚನೆಗೆ ತಾ|| ೧೫ ನೆಯ ದಿವಸ ಪುಣೆಗೆ ಕರೆಯಿಸಿಕೊಂಡು ಅವರೊಡನೆ ಆ ಬಗ್ಗೆ ಚರ್ಚಿಸುವವರಿದ್ದಾರೆಂದೂ, ಈಗಾಗಲೇ ೫೦ ಜನ ಮುಖಂಡರಿಗೆ ಆಮಂತ್ರಣ ಪತ್ರಿಕೆಗಳು ಹೋಗಿವೆಯೆಂದೂ ತಿಳಿಯುತ್ತದೆ. ಶ್ರೀ ಜಕ್ಕಲಿ, ಅಂಗಡಿ, ದೇಸಾಯಿ ಪ್ರಭೃತಿಗಳಿಗೆ ಹರ್ಷವಾಯು ಬೇರೆ ಆಗಿರಲಿಕ್ಕಿಲ್ಲವಷ್ಟೇ!

### ಎಲ್ಲೂರಿನಲ್ಲಿ ೧೪೪ ನೆಯ ಕಲಮು

#### ಇಬ್ಬರು ಸ್ತ್ರೀಯರಿಗೆ ಸೆರೆಮನೆ

೧೪೪ ನೆಯ ಕಲಮಿನನ್ವಯ ಕಟ್ಟಪ್ಪಣೆಯನ್ನು ತೆಗೆದು ಮೆರವಣಿಗೆಗೆ ಪ್ರತಿಬಂಧವನ್ನುಂಟುಮಾಡಿದ ಎಲ್ಲೂರಿನ ಅಧಿಕಾರಿಗಳ ಕಾಯಿದೆಯನ್ನು ಮುರಿಗೊತ್ತಿ, ಅಲ್ಲಿಯ ಸ್ವಯಂಸೇವಿಕೆಯರಾದ ಶ್ರೀಮತಿ ಕಾಲಾಗೀರ ಎಸ್ವತ್ತ ಹಾಗು ಕೆ. ಮುತ್ತು ವೀರವೆಂಕಮ್ಮ ಇವರು ಮೆರವಣಿಗೆಯನ್ನು ಹೊರಡಿಸಿದರು. ಪೋಲೀಸರು ಅವರನ್ನು ಕೂಡಲೆ ಸೆರೆಹಿಡಿದುಕೊಂಡು ಹೋದರು.

### ಮಂತ್ರಿಗಳು ರಾಜೀನಾಮೆ ಕೊಟ್ಟರು.

ಮಧ್ಯಪ್ರಾಂತ ಸರಕಾರದ ಮಂತ್ರಿಗಳಾದ ಶ್ರೀ. ಆರ್. ಎಮ್. ದೇಶಮುಖರು ತಮ್ಮ ಮಂತ್ರಿಪದಕ್ಕೆ ರಾಜೀನಾಮೆ ಕೊಟ್ಟರಾಗಿ ತಿಳಿಯುತ್ತದೆ.

### ಹುನಗುಂದದ ಅಧಿಕಾರಿಗಳು ಗಡಬಡಿಸುತ್ತಿದರು

[ಸ್ವಂತ ಸುದ್ದಿಗಾರರಿಂದ]

ಈ ತಾಲೂಕಿನಲ್ಲಿ ಸತ್ಯಾಗ್ರಹ ಚಳವಳಿಯು ಅಂಗವಾದ ಸೆರೆ ಸಿಂದಿ ಅಂಗಡಿ ಪಿಕೆಟಿಂಗ ಬಹಳೇ ಜೋರಿನಿಂದ ನಡೆದದ್ದನ್ನು ಕಂಡು ಇಲ್ಲಿಯ ಅಧಿಕಾರಿಗಳು ಈಗ ಗಡಬಡಿಸುತ್ತಿದ್ದಾರೆ. ಮಾಮಲೇದಾರರೂ, ಶಿರಸ್ತೇದಾರರೂ ಹಳ್ಳಿಹಳ್ಳಿಗಳಿಗೆ ಹೋಗಿ ಅಲ್ಲಿ ಸಭೆಗಳನ್ನೇರ್ಪಡಿಸಿಕೊಂಡು ಸತ್ಯಾಗ್ರಹ ಚಳವಳಿಯ ವಿರುದ್ಧವಾಗಿ ಭಾಷಣ ಮಾಡಹತ್ತಿದ್ದಾರೆ. ಮಾಮಲೇದಾರರು ಹಾಗು ಶಿರಸ್ತೇದಾರರು ಇಬ್ಬರೂ ಏಕಕಾಲದಲ್ಲಿ ಠಾಣೆಯನ್ನು ಬಿಟ್ಟು ಹೋಗಬಾರದಾಗಿ ಏನೋ ನಿಯಮವಿದೆಯಂತೆ! ಇದು ನಿಜವಿದ್ದಲ್ಲಿ ಮೇಲಿನ ಅಧಿಕಾರಿಗಳು ನಿಯಮವನ್ನು ಮುರಿದಂತಾಯಿತಲ್ಲವೆ?

## ಹಿರೇ ಹಡಗಲಿಯಲ್ಲಿ ಪೋಲೀಸರ ಭೀಷಣ ಕೃತ್ಯಗಳು

ಹಿರೇಹಡಗಲಿಯಿಂದ ಸುಮಾರು ಇಪ್ಪತ್ತು ಜನ ಆದಿಕರ್ನಾಟಕರು ಈದಿನ ಅಂದರೆ ತಾರೀಖು ೭—೭—೧೯೩೦ ಬಾಗಲಕೋಟೆಗೆ ಬಂದರು. ಅವರ ಸ್ಥಿತಿಯು ಭಯಾನಕವಾಗಿಯೂ, ಕರುಣಾಜನಕವಾಗಿಯೂ ಇದ್ದಿತು. ರಾತ್ರಿಯೆಲ್ಲಾ ಭೀಷಣವಾಗಿ ಹೊಡೆತಗಳನ್ನು ತಿಂದಿದ್ದರಿಂದಲೋ ಏನೋ ಅವರು ಗಡಗಡನೆ ನಡುಗುತ್ತಿದ್ದರು. ಅವರನ್ನು ಕಂಡ ಕಲ್ಲು ಹೃದಯದವನೂ ಅಳದೆ [illegible].

“[illegible] ನಮ್ಮ [illegible] ನಾವು ಸೇಂದಿ ಸರಾಯಿಗಳನ್ನು ಕುಡಿಯುವದನ್ನು ಬಿಟ್ಟು, [illegible] ನಮ್ಮ [illegible] ಬಿಟ್ಟುಬಿಟ್ಟೆವು. ಇದರಿಂದ [illegible] ನಮ್ಮ ಮೇಲೆ [illegible]. ನಿನ್ನೆ ರಾತ್ರಿ ನಾವು [illegible] ಪೋಲೀಸರೂ [illegible] ನಮ್ಮನ್ನು [illegible]. ನಾವು ನಿನ್ನೆ ರಾತ್ರಿ [illegible]. ನಮ್ಮಲ್ಲಿ [illegible] ಬಿಟ್ಟರು. [illegible] ಇಲ್ಲ. ನಮ್ಮ ಅಪರಾಧವೇನು [illegible] ಆಗಿದೆ”

ಪೋಲೀಸರು [illegible] ಹೊಡೆದಾಟಕ್ಕೆ [illegible] ಬಂದಿದೆ. [illegible] ಅನಾಮಾನುಷವಾದ [illegible] ಸ್ಥಿತಿಯನ್ನು ನೋಡಿದರೆ ಎಂಥಹ ಕಲ್ಲೆ [illegible] ಇರುವದಿಲ್ಲ. [illegible] ಕಾಂಗ್ರೆಸ್ [illegible] ಆದಿಕರ್ನಾಟಕರ [illegible] ಅಪರಾಧಗಳನ್ನು ಹೊರಿಸಿ ಕ್ರಿಮಿನಲ್ [illegible] ಇದೆ. ಈ ಊರಿಗೆ [illegible] ಜಿಲ್ಹಾ ಮ್ಯಾಜಿಸ್ಟ್ರೇಟರಿಗೂ, [illegible].

| | |
|---|---|
| ಹಂಪಸಾಗರ<br>ತಾ॥ ೭—೭—೩೦ | ಒಬ್ಬ ಹಿತೈಷಿ, |

## ಜಮಖಂಡಿಯಲ್ಲಿ ಗಾಂಧಿ ಟೊಪ್ಪಿಗೆಗೆ ವಿರೋಧ.

(ಸ್ವಂತ ವರದಿಗಾರರಿಂದ)

ಜಮಖಂಡಿಯ ಮರಾಠಿ ಶಾಲೆಯ ವಿದ್ಯಾರ್ಥಿಗಳು ಗಾಂಧಿ ಟೊಪ್ಪಿಗೆಯ ವಿರುದ್ಧವಾಗಿ [illegible] ಮಾಡಿದರು. ತಾ॥ ೮ ನೆಯ ದಿವಸ ಕೆಲವು [illegible] ಗಾಂಧಿ ಟೊಪ್ಪಿಗೆಗಳನ್ನು ಧರಿಸಿಕೊಂಡು ಶಾಲೆಗೆ ಹೋಗಿದ್ದರು. ಮುಖ್ಯಾಧ್ಯಾಪಕರು ಆ ಟೊಪ್ಪಿಗೆಗಳನ್ನು [illegible] ಕಸಿದುಕೊಂಡು, ಹುಡುಗರಿಗೆ ಎರಡೆರಡು [illegible] ಕೊಟ್ಟು, ಅವುಗಳನ್ನು ತಿರುಗಿ ಕೊಟ್ಟರು. [illegible] ಆ ಟೊಪ್ಪಿಗೆಗಳನ್ನು ಧರಿಸಕೂಡದು [illegible] ಹುಡುಗರಿಗೆ ಹೇಳಿದರು. ಈ ಸುದ್ದಿಯು [illegible] ಊರಲ್ಲೆಲ್ಲ ಹಬ್ಬಿತು. ಕೆಲವು [illegible] ಅಧಿಕಾರಿಗಳ ಕಡೆಗೆ ಹೋಗಿ ಯಾವತ್ತು [illegible] ಅವರಿಗೆ ತಿಳಿಸಿದರು. ಅಧಿಕಾರಿಗಳು [illegible] ಉತ್ತರ ಕೊಟ್ಟರು.

ತಾ॥ ೯ ನೆಯ ದಿವಸ ಮತ್ತೆ ವಿದ್ಯಾರ್ಥಿಗಳು [illegible] ಟೊಪ್ಪಿಗೆಗಳನ್ನು ಹಾಕಿಕೊಂಡು ಶಾಲೆಗೆ ಹೋದರೆ, [illegible] ಅವರೆಲ್ಲರನ್ನೂ ಹೊರಗೆ ಹಾಕಿದರು. [illegible] ಗಾಂಧಿ ಟೊಪ್ಪಿಗೆ [illegible] ಶಾಲೆಗೆ ಹೋಗದ [illegible]. [illegible] ಗಾಂಧಿ ಟೊಪ್ಪಿಗೆಯನ್ನು [illegible] ಅಧಿಕಾರಿಗಳ [illegible] ತಿಳಿಯದು.

## ಮುಂಡರಗಿ [illegible] ಮಂಡಳಕ್ಕೆ ೨೮ ಜನರು ರಾಜೀನಾಮೆ ಕೊಟ್ಟರು

[illegible] ಜನರು [illegible] ೧೯ ಜನರು [illegible] ರಾಜೀನಾಮೆಯನ್ನು ಕೊಟ್ಟು [illegible] ತಿಳಿದುಬಂದಿದೆ

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ [illegible] ಎಲ್ಲ ತರದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಗ್ರಾಹಕರು [illegible]

[illegible]
[illegible] ಬಾಗಲಕೋಟೆ

ಶ್ರೀ [illegible] ಬಾಗಲಕೋಟೆಯ [illegible] ಮುದ್ರಿಸಿ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೬ ನಿತ್ಯಸಂಚಿಕೆಯು. ಬೆಲೆ ೦—೦—೩

# ಕನ್ನಡಿಗ

ಜಯ ಕರ್ನಾಟಕ

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಗುರುವಾರ ಮಿತಿ ಆಷಾಢ ಬಹುಳ ೬ ಶಕೆ ೧೮೫೨ ತಾ॥ ೧೭—೭—೩೦ [ ಸಂಚಿಕೆ ೧೦೩

## ಪಾರ್ಲಿಮೆಂಟಿನಲ್ಲಿ ಮಿ. ಬ್ರಾಕವೇಯವರು

# ಗಾಂಧಿ ಟೊಪ್ಪಿಗೆ ಹಾಕಿಕೊಂಡರು.

ಲಂಡನದಲ್ಲಿ ಕಾಮನ್ಸ ಸಭೆಯಲ್ಲಿ ಹಿಂದುಸ್ಥಾನದ ಸಂಬಂಧವಾಗಿ ಚರ್ಚೆ ನಡೆದಿತ್ತು. ಚರ್ಚೆಯು ನಡೆದಿರುವಾಗ ಮಿ. ಬ್ರಾಕವೇಯವರು "ಹಿಂದುಸ್ಥಾನದಲ್ಲಿ ಗಾಂಧಿ ಟೊಪ್ಪಿಗೆಗೆ ಪ್ರತಿಬಂಧವುಂಟಾಗಿದೆಯೋ ಹೇಗೆ" ಎಂಬುದಾಗಿ ಪ್ರಶ್ನೆ ಮಾಡಿದರು. "ಪೇಶಾವರದಲ್ಲಿ ದಂಡನೀತಿಯ ಸಮಯದಲ್ಲಿ ಮಾತ್ರ ಕಾಂಗ್ರೆಸದ ಚಿಹ್ನಗಳಿಗೆ ಅಡ್ಡಿಯುಂಟಾಗಿತ್ತು. ಉಳಿದ ಕಡೆಯಲ್ಲಿ ಹಾಗೆ ಆದದ್ದು ವೃತ್ತಪತ್ರಗಳಿಂದ ತಿಳಿದು ಬಂದಿದ್ದರ ಹೊರತಾಗಿ ಬೇರೆಯಾಗಿ ತಿಳಿದುಬಂದಿಲ್ಲ" ವೆಂದು ಮಿ। ಬೆನ್ನರು ಉತ್ತರ ಕೊಟ್ಟರು. "ಗುಂಟೂರು ಜಿಲ್ಹೆಯಲ್ಲಿ ಗಾಂಧಿ ಟೊಪ್ಪಿಗೆಗೆ ಅಧಿಕಾರಿಗಳಿಂದ ತಡೆಯುಂಟಾಗಿದೆ" ಯೆಂದು ಮಿ। ಬ್ರಾಕವೇಯವರು ಸೂಚಿಸಿದರು. "ಅದು ವೃತ್ತಪತ್ರಿಕೆಗಳಿಂದ ತಿಳಿದು ಬಂದದ್ದು, ಅದರ ಬಗ್ಗೆ ನಿಜವಾದ ಸಂಗತಿಗಳು ತಮ್ಮೊಡನೆ ಇಲ್ಲ" ವೆಂದು ಮಿ। ಬೆನ್ನರು ನುಡಿದರು. ಗುಂಟೂರಿನ ಅಧಿಕಾರಿಗಳು ಗಾಂಧಿ ಟೊಪ್ಪಿಗೆಯ ವಿಷಯವಾಗಿ ಹೊರಡಿಸಿದ ಕಟ್ಟಳೆಯು ನನ್ನ ಬಳಿಯಲ್ಲಿ ಇದೆ. ಬೇಕಾದರೆ ನಿಮಗೆ ಅದನ್ನು ತೆಗೆದು ಕೊಡಬಹುದು. ಹಿಂದುಸ್ಥಾನದಲ್ಲಿ ಬ್ರಿಟಿಶ ರಾಜ್ಯಕಾರಭಾರಕ್ಕೆ ಗಾಂಧಿ ಟೊಪ್ಪಿಗೆಯಿಂದ ಧಕ್ಕೆಯು ತಗಲುತ್ತಿದೆಯೆಂದು ನಿಮ್ಮ ಮತವಿದೆಯೋ ಹೇಗೆ? ಎಂಬುದಾಗಿ ಬ್ರಾಕವೇಯವರು ನುಡಿದು, ತಮ್ಮ ಬಳಿಯಲ್ಲಿಯ ಗಾಂಧಿ ಟೊಪ್ಪಿಗೆಯನ್ನು ಹೊರಗೆ ತೆಗೆದು ಅದನ್ನು ಅಲ್ಲಿಯೇ ತಮ್ಮ ತಲೆಯ ಮೇಲೆ ಹಾಕಿಕೊಂಡರು. ಇದೀಗ ಗಾಂಧಿ ಟೊಪ್ಪಿಗೆಗೆ ಇಲ್ಲಿಯ ಕೆಲವು ಅಧಿಕಾರಿಗಳು ಪ್ರತಿಬಂಧವನ್ನು ಮಾಡಿದ್ದರ ಪರಿಣಾಮ!

**ಕೇಳ್ಕರರು ಆಮಂತ್ರಣವನ್ನು ನಿರಾಕರಿಸಿದರು.**

ಬಂದೀಗೃಹದ ಶಾಸನದ ಸಂಬಂಧವಾಗಿ ವಿಚಾರಮಾಡಲು ಕರೆದಿದ್ದ ಸಂತಕ್ಕ ಸಭೆಗೆ ನಾ। ಗವ್ಹರ್ನರರು ಶ್ರೀ ಕೇಳ್ಕರರಿಗೆ ಕರೆದಿದ್ದರೆಂಬುದೂ, ಶ್ರೀ ಕೇಳ್ಕರರು ಆಮಂತ್ರಣವನ್ನು ನಿರಾಕರಿಸಿದರೆಂದೂ ತಿಳಿಯುತ್ತದೆ.

## ಆಂಧ್ರದೇಶದಲ್ಲಿ ಒತ್ತಾಳಿಕೆಯ ರಾಜ್ಯ

### ೩೦೦೦ ಜನರಿಗೆ ಸೆರೆಮನೆ.

### ಗಾಂಧೀ ಟೊಪ್ಪಿಗೆಗೆ ನಿರ್ಬಂಧ.

"ಆಂಧ್ರದೇಶದಲ್ಲಿ ಈಗ ಎಲ್ಲೆಲ್ಲಿಯೂ ಒತ್ತಾಳಿಕೆಯ ಸಾಮ್ರಾಜ್ಯ; ವ್ಯಕ್ತಿ ಸ್ವಾತಂತ್ರ್ಯಕ್ಕೆ ಗದೆ; ಗಾಂಧೀ ಟೊಪ್ಪಿಗೆಗೆ ನಿರ್ಬಂಧ; ಮುಖಂಡರಾದವರೆಲ್ಲರೂ ಸೆರೆಮನೆಯನ್ನು ಸೇರಿದ್ದಾರೆ. ಮುಖಂಡರನ್ನು ಹಿಡಿಯಲು ಸಿದ್ಧರಾದವರು ಸೆರೆಯಾಳುಗಳಾಗಹತ್ತಿದ್ದಾರೆ. ಒಟ್ಟಿನಲ್ಲಿ ಸರಕಾರದ ದಬ್ಬಾಳಿಕೆಗೆ ಬಲಿಯಾದವರ ಸಂಖ್ಯೆಯು ಈಗ ೩೦೦೦ ಸಾವಿರಕ್ಕೆ ಮುಟ್ಟಿದೆ. ಸತ್ಯಾಗ್ರಹಿಗಳಿಗೆ ಯಾರೂ ಅನ್ನನೀರುಗಳನ್ನು ಇಕ್ಕುವಂತಿಲ್ಲ. ಇಕ್ಕಿದರೆ ಅವರೂ ಸೆರೆಮನೆಗೆ ಹೋಗಬೇಕಾಗುವದು! ಗಾಯ ಹೊಂದಿದ ಸತ್ಯಾಗ್ರಹಿಗಳನ್ನು ಯಾರೂ ಉಪಚರಿಸುವಂತಿಲ್ಲ. ಹಾಗೆ ಮಾಡಿದಲ್ಲಿ ಅವರು ಕಾರಾಗೃಹಕ್ಕೆ ತೆರಳಲು ಸಿದ್ಧರಾಗಬೇಕಾಗುವದು. ಪೋಲೀಸರ ಅತ್ಯಾಚಾರದ ವಿಷಯವಾಗಿ ವಕೀಲರು ಕನ್ನ... ಸಂಘದಲ್ಲಿ ವಿಚಾರವಿನಿಮಯ ಮಾಡಕೂಡದು. ಯಾಕೆಂದರೆ ಹಾಗೆ ಮಾಡಿದಲ್ಲಿ ಆ ಸಂಘವು ಕಾಯಿದೆಗೆ ವಿರುದ್ಧವಾದದ್ದೆಂದು ನಿರ್ಣಯಿಸಲ್ಪಡುವದು! ತಕಲಿಯನ್ನು ಯಾರೂ ಉಪಯೋಗಿಸಕೂಡದು. ಉಪಯೋಗಿಸಿದಲ್ಲಿ ಅವರಿಗೆ ಗಳಿಗೆಯು ಕಲಹ. ಗುಂಟೂರಿನಲ್ಲಿ ಗಾಂಧಿ ಟೊಪ್ಪಿಗೆಗೆ ಸೆರೆಮನೆ. ರಾಷ್ಟ್ರಧ್ವಜಕ್ಕೆ ಕಾಯಿದೆಗೆ ವಿರುದ್ಧವಾದ ಸಂಘದ ಗುರುತಿನ ಬಹುಮಾನ. ಇದೀಗ ಆಂಧ್ರದೇಶದಲ್ಲಿ ನಡೆದ ದಬ್ಬಾಳಿಕೆಯ ರಾಜ್ಯ. ಸರದಾರ ವಲ್ಲಭಭಾಯಿಯವರನ್ನು ಕಂಡು ಗುಂಟೂರಿನ ಗಾಂಧಿ ಟೊಪ್ಪಿಗೆಯ ಸತ್ಯಾಗ್ರಹವನ್ನು ಅಖಿಲ ಭಾರತದ ಪ್ರಶ್ನೆಯನ್ನು ಮಾಡದೆ ಹಾಗೆಯೆ ಅವರಿಗಾಗಿ ಅಹವಾಲುದಾರದಕ್ಕೆ ಈಗ ಹೋಗಿದ್ದಾಗಿದೆ" ಎಂಬುದಾಗಿ ಶ್ರೀ ಕೆ. ಸುಬ್ರಹ್ಮಣ್ಯಂ ಅವರು ಹೇಳಿದ್ದಾಗಿದೆ

## ಮುದ್ರಣ ಬಕಾಸುರನಿಗೆ

# "ಕರ್ಮವೀರ"ವು ಬಲಿಯಾಯಿತು.

ಧಾರವಾಡದಲ್ಲಿ ಶ್ರೀ ದಿವಾಕರ ರಂಗರಾಯರ ಸಂಪಾದಕತ್ವದಲ್ಲಿ ಮೊದಲು ಹೊರಡುತ್ತಿದ್ದು, ಅವರು ಈಗ ಸೆರೆಯಾಳಾದ ಮೂಲಕ ಶ್ರೀ ಕರಮರಕರ ದತ್ತಾತ್ರಯರ ಸಂಪಾದಕತ್ವದಲ್ಲಿ ಹೊರಡುತ್ತ ಬಂದ ಕಟ್ಟರ ರಾಷ್ಟ್ರೀಯ ವೃತ್ತಿಯ ವಾರಪತ್ರಿಕೆಯಾದ "ಕರ್ಮವೀರ"ಕ್ಕೆ ೧೦೦೦ ರೂ ಗಳ ಹಣವು ಕೇಳಲ್ಪಟ್ಟಿದೆಯಾಗಿ ತಿಳಿಯುತ್ತದೆ. ಮುದ್ರಣ ಬಕಾಸುರನಿಗೆ ಕರ್ನಾಟಕದಲ್ಲಿ ಇದರೊಂದಿಗೆ ಮೂರು ಪತ್ರಿಕೆಗಳು ಆಹುತಿಯಾದಂತಾದವು

## ಅಸೆಂಬ್ಲಿಯಲ್ಲಿ ಸರಕಾರದ ಮೇಲೆ ನಿಯೋಗಿಯವರು ಕೆಂಡಕಾರಿದರು

ಅಸೆಂಬ್ಲಿಯ ಮುಂದೆ ಬಂದ ಬಂಡೀಗಾಲಿಯ ಪರಿಷತ್ತಿನ ವಿಷಯದ ವಿಚಾರವಾಗಿ ಭಾಷಣ ಮಾಡುವಾಗ ಶ್ರೀ ನಿಯೋಗಿಯವರು ಹೇಳಿದ್ದೇನಂದರೆ:—

ಕಾಯದೆಭಂಗ ಚಳವಳಿಯನ್ನು ಹತ್ತಿಕ್ಕಲು ವ್ಹಾಯಿಸರಾಯರು ಟೊಂಕಕಟ್ಟಿ ನಿಂತಿದ್ದಾರೆ. ನನಗಾದರೂ ರಾಜ್ಯದಲ್ಲಿ ಸುವ್ಯವಸ್ಥೆಯು ನೆಲೆಗೊಳ್ಳುವದೇ ಬೇಕಾಗಿದೆ. ಕಾಯದೆಭಂಗ ಚಳವಳಿಯಲ್ಲಿ ನಾನು ಸೇರಿರದಿದ್ದರೂ ಸಹ ನಾನು ಸರಕಾರಕ್ಕೆ ಸತ್ಯಾಗ್ರಹಿಗಳೊಡನೆ ನ್ಯಾಯದಿಂದ ವರ್ತಿಸಿರೆಂದು ಎಚ್ಚರಿಕೆ ಕೊಡುತ್ತೇನೆ. ಎಷ್ಟೋ ಜನ ನಿರಪರಾಧಿಗಳಿಗೆ ಅಧಿಕಾರಿಗಳು ಪೀಡೆಯನ್ನು ಕೊಟ್ಟಿದ್ದಾರೆಂಬ ಮಿ|| ಕಾಳಜಿ ಜಹಾಂಗೀರರು ಹೇಳಿದ್ದರಲ್ಲಿ ಸ್ವಲ್ಪಾದರೂ ಸುಳ್ಳಿಲ್ಲ. ನಿರಪರಾಧಿಗಳಿಗೆ ಅಧಿಕಾರಿಗಳು ಹೀಗೆ ಪೀಡೆ ಕೊಡುವದು ಕೇವಲ ಮುಂಬಯಿಯಲ್ಲಿಯೇ ನಡೆದಿದೆಯೆಂತಲ್ಲ. ಹಿಂದುಸ್ಥಾನದಲ್ಲಿ ಎಲ್ಲ ಭಾಗಗಳಲ್ಲಿಯೂ ಅದು ನಡೆದಿದೆ. ಇಷ್ಟೆಲ್ಲವೂ ನಡೆದಿದ್ದರೂ ಗೃಹಮಂತ್ರಿಗಳು ಅದನ್ನು ವಿರೋಧಿಸಿದ್ದಾರೆ. ಗೃಹಮಂತ್ರಿಗಳು ತಮ್ಮ ಕಣ್ಣುಗಳನ್ನೇ ಮುಚ್ಚಿಕೊಂಡಿರುವರೆಂದೂ, ಇಲ್ಲವೆ ಅವರು ಗೃಹಮಂತ್ರಿಗಳಾಗಿರಲು ಅಸಮರ್ಥರಾಗಿರುವರೆಂದೂ ಹೇಳಬೇಕಾಗುವದು. ಇಂದು ಹಿಂದುಸ್ಥಾನದಲ್ಲಿ ಎಲ್ಲೆಲ್ಲಿಯೂ ಜಾಲಿಯನ್‌ವಾಲಾಬಾಗದಲ್ಲಿ ನಡೆದ ಘೋರ ಕೃತ್ಯಗಳೇ ನಡೆಯುತ್ತಿವೆ. ಗೃಹಮಂತ್ರಿಗಳು ಈ ಬಗ್ಗೆ ತಮ್ಮ ಅಜ್ಞಾನವನ್ನು ವ್ಯಕ್ತಪಡಿಸಿದಲ್ಲಿ, ಹಿಂದುಸ್ಥಾನದಲ್ಲಿ ಶಾಂತತೆಯನ್ನೂ ಸಮಾಧಾನವನ್ನೂ ನೆಲೆಗೊಳಿಸಲು ಹಾತೊರೆಯುವ ವ್ಹಾಯಿಸರಾಯರಿಗೆ ಅವರು ತಕ್ಕ ಸೇವಕರಾಗಿಲ್ಲವೆಂದು ನನಗೆ ಹೇಳಬೇಕಾಗುವದು. ಇವರು ಕೇವಲ ಉಪ್ಪಿನ ಕಾಯದೆಯನ್ನೇ ಮುರಿಯುತ್ತಿರುವರು. ಆದರೆ ಸರಕಾರದ ಅಧಿಕಾರಿಗಳು ಮಾತ್ರ ಮಾನವಧರ್ಮವನ್ನು ಮೂಲೆಗೊತ್ತಿ ತಮ್ಮ ಕಾಯದೆಗಳನ್ನು ತಾವೇ ಮುರಿಯುತ್ತಿರುವರು.

ಬಂಗಾಲದಲ್ಲಿ ಭಯಂಕರ ಅತ್ಯಾಚಾರವು ನಡೆದಿದೆಯೆಂಬುದು ನಾನು ನನ್ನ ಅನುಭವದಿಂದ ಕಂಡುಹಿಡಿದಿದ್ದೇನೆ. ತಮಗೆ ಸರಿಬಾರದ ಸುದ್ದಿಗಳನ್ನು ಪ್ರಸಿದ್ಧಿಸಿದ ಪತ್ರಿಕೆಗಳನ್ನು ನ್ಯಾಯಸ್ಥಾನಕ್ಕೆ ಎಳೆಯುವ ಸರಿಯಾದ ಮಾರ್ಗವನ್ನು ಬಿಟ್ಟುಕೊಟ್ಟು ಸರಕಾರದವರು ಅವುಗಳನ್ನು ನಿಲ್ಲಿಸಿಬಿಟ್ಟಿದ್ದಾರೆ. ಮಿದನಾಪುರದ ಡಿ|| ಮ್ಯಾಜಿಸ್ಟ್ರೇಟರ ಬಾರುಕೋಲಿಗೆ ಬಲಿಯಾಗಿ ಮೂರ್ಛೆಹೊಂದಿ ಬಿದ್ದ ೧೦ ವರ್ಷದ ಬಾಲಕನದೊಂದು ಚಿತ್ರವು ಈ ಪತ್ರಿಕೆಯಲ್ಲಿ ಇದೆ. ನೋಡಿಕೊಳ್ಳಿರಿ. ಇದು ನಿರಾಧಾರವಾದದ್ದಿದೆಯೆಂದು ಸರಕಾರವು ಸಿದ್ಧಮಾಡಿರುವದೋ ಹೇಗೆ?

ಅಲ್ಲಿ ಪೋಲೀಸರು ಗೈದ ಅತ್ಯಾಚಾರ ಹಾಗೂ ಗೋಳೀಬಾರದ ವಿಷಯವಾಗಿ ವಿಚಾರಮಾಡಲು ಸ್ವತಂತ್ರ ಜನರದೊಂದು ಮಂಡಳವು ನಿಯಮಿಸಲ್ಪಟ್ಟಿತ್ತು. ಆ ಮಂಡಳದಲ್ಲಿ ಸೇರಿದವರೆಲ್ಲರೂ ಕಾಯದೆ ಭಂಗದ ಚಳವಳಿಗೆ ವಿರೋಧಿಗಳಾಗಿದ್ದರು. ಆ ಮಂಡಳವು ಆ ಹಳ್ಳಿಗೆ ಮುಟ್ಟಿದ ಕೂಡಲೆ ಅಧಿಕಾರಿಗಳು ಸಭಾಸದರನ್ನು ಸೆರೆಹಿಡಿದರು. ಹಿಂದುಗಡೆ ಬಿಟ್ಟರು. ಮಂಡಳದವರ ವರದಿಯು ಈಗ ಸಿದ್ಧವಾಗಿದೆ. ಮುದ್ರಣ ಬಕಾಸುರನ ಹಾವಳಿಗೆ ಬೆದರಿದ್ದರಿಂದ ಯಾವ ಪತ್ರಿಕೆಯೂ ಅದನ್ನು ಪ್ರಸಿದ್ಧಿಸಲು ಒಪ್ಪಂಬಡಲಿಲ್ಲದು, ಯಾವ ಮುದ್ರಣಾಲಯದವರೂ ಅದನ್ನು ಮುದ್ರಿಸಿಕೊಡಲು ಒಪ್ಪಲೊಲ್ಲರು. ವಸ್ತುಸ್ಥಿತಿಯು ಹೀಗಿದೆಯೆಂದು ಹೇಳಿ, ಸರಕಾರದ ವೃತ್ತಿಯ ಬಗ್ಗೆ ನಿಷೇಧವನ್ನು ವ್ಯಕ್ತಮಾಡಿ ಹೋಗುವದಕ್ಕಾಗಿಯೇ ನಾನು ಅಸೆಂಬ್ಲಿಗೆ ಈಗ ಬಂದಿದ್ದಾಗಿದೆ. ಮ್ಯಾಜಿಸ್ಟ್ರೇಟರ ಎದುರಿನಲ್ಲಿಯೇ ಸ್ತ್ರೀಯರು ಅಪಮಾನವನ್ನು ಹೊಂದಿದ್ದಾರೆಂಬುದನ್ನು ತೋರಿಸಲು ನನ್ನಲ್ಲಿ ಸಾಕಷ್ಟು ಆಧಾರಗಳಿವೆ. ಬಂಗಾಲ ಸರಕಾರದವರು ಈ ಬಗ್ಗೆ ಹೊರಡಿಸಿದ ಪತ್ರಿಕೆಯು ಸುಳ್ಳಿನಿಂದ ತುಂಬಿದ್ದಾಗಿದೆ. ನಾನು ಮೊದಲು ಈ ವರದಿಯನ್ನು ಪ್ರಸಿದ್ಧಪಡಿಸುತ್ತೇನೆ. ಆಮೇಲೆ ಬೇಕಾದರೆ ನನ್ನನ್ನು ಆ ಬಗ್ಗೆ ನ್ಯಾಯಸ್ಥಾನಕ್ಕೆ ಎಳೆಯಿರಿ. ಸುಳ್ಳಿನ ಕಾರಖಾನೆಯಾದ ಸರಕಾರದವರಿಂದ ಪ್ರಸಿದ್ಧವಾಗಿರುವ ಪತ್ರಿಕೆಯ ಮೇಲೆ ವಿಶ್ವಾಸವನ್ನಿಡಬೇಡಿರಿ

## ಸರದಾರರು ಜಯಕರರನ್ನು ಜರಿದರು.

ಒರವ ಕೌನ್ಸಿಲ ಅಸೆಂಬ್ಲಿಯಲ್ಲಿ ರಾಷ್ಟ್ರೀಯ ಪಕ್ಷದವರು ಭಾಗ ತೆಗೆದುಕೊಳ್ಳಬೇಕಾಗಿ ಸರದಾರ ವಲ್ಲಭಭಾಯಿಯವರು ನುಡಿದಿರುವರೆಂದು, ಮುಸ್ತು ಕಾಯದೆ ಮಂಡಳದಲ್ಲಿ ಬಂಡೀಗಾಲಿಯ ಪರಿಷತ್ತಿನ ಸಂಬಂಧವಾಗಿ ಭಾಷಣ ಮಾಡುವಾಗ ಶ್ರೀ ಜಯಕರರು ನುಡಿದಿದ್ದಕ್ಕೆ ಸರದಾರರು ಈಗ ಅವರನ್ನು ಒಳಿತಾಗಿ ಜರಿದಿದ್ದು, ಅವರು ಅನ್ನುವದೇನಂದರೆ:— ಶ್ರೀ ಜಯಕರರು ಹೀಗೆ ನುಡಿದಿದ್ದನ್ನು ಕಂಡು ನನಗೆ ಅತ್ಯಂತ ಆಶ್ಚರ್ಯವಾಯಿತು. ಅದರಲ್ಲಿ ಯಾವ ತಥ್ಯವೂ ಇಲ್ಲ. ೧೯೨೧ ರಿಂದ ನಾನು ಕೌನ್ಸಿಲ ಬಹಿಷ್ಕಾರ ಮಾಡಿಯಿದ್ದುದಲ್ಲದೆ, ಈಗಾದರೂ ಕೌನ್ಸಿಲುಗಳಲ್ಲಿ ನನಗೆ ವಿಶ್ವಾಸವು ಹುಟ್ಟಿಲ್ಲ. ನಾನು ಕೌನ್ಸಿಲದಲ್ಲಿ ಸೇರು ಉಪದೇಶ ಮಾಡುತ್ತಿರುವೆನೆಂದು ಶ್ರೀ. ಜಯಕರರಿಗೆ ಹೇಗೆ ಹೊಳೆದಿತೋ ಏನೋ!

## ವಿಜಾಪುರದಲ್ಲಿ

# ಐವರಿಗೆ ೫॥ ತಿಂಗಳ ಕಠಿಣ ಶಿಕ್ಷೆ

( ಸ್ವಂತಸುದ್ದಿಗಾರರಿಂದ )

ವಿಜಾಪುರದಲ್ಲಿ ಈಗೆ ಒಂದೆರಡು ತಿಂಗಳುಗಳಿಂದ ಕಾರ್ಯ ಮಾಡುತ, ನವಚೈತನ್ಯವನ್ನುಂಟುಮಾಡಿದ ಸೇವಾದಳದ ಶ್ರೀ. ಶಂಕರ ರಾಮಚಂದ್ರ ದೇಶಪಾಂಡೆ ಹಾಗು ಸ್ವಯಂಸೇವಕರಾದ ಎಸ್. ಸಿ. ಫೋಂಡ್ಕೆ, ವೆಂಕಟರಾಮಯ್ಯ, ಬಾಲಕೃಷ್ಣ ಡರಜಣ, ವಿಠೋಬಾ ಲಕ್ಷ್ಮಣ ನಿಕಮ ಈ ಐದು ಜನರ ಮೇಲೆ ೧೪೪ ನೆಯ ಕಲಮಿನನ್ವಯ ಸಮನ್ಸಗಳು ಹೊರಟಿದ್ದವು. ತಾ। ೧೪ ನೆಯ ದಿವಸ ಅವರ ಖಟ್ಲೆಯ ವಿಚಾರಣೆಯು ಪ್ರಾರಂಭವಾಯಿತು. ಸತ್ಯಾಗ್ರಹಿಗಳು ವಿಚಾರಣೆಯಲ್ಲಿ ಯಾವ ಭಾಗವನ್ನೂ ತೆಗೆದುಕೊಳ್ಳಲಿಲ್ಲ. ಗೌಡನು, ಪಾಟೀಲಕಾರರು ಮತ್ತು ಪೋಲೀಸರು ಸಾಕ್ಷಿಗಳನ್ನು ಹೇಳಿದರು. ತಾ॥ ೧೫ ನೆಯ ದಿವಸ ವಿಚಾರಣೆಯು ಮುಗಿದು, ಅವರ ಮೇಲೆ ಇಡಲ್ಪಟ್ಟ ಎರಡೂ ಆರೋಪಗಳಿಗಾಗಿ ಒಟ್ಟಿಗೆ ೪ ತಿಂಗಳ ಸಕ್ತ್ರಮ ಶಿಕ್ಷೆಯೂ ಮತ್ತು ೫೦ ರೂ. ದಂಡವೂ, ದಂಡವನ್ನು ಕೊಡದಿದ್ದಲ್ಲಿ ಮತ್ತೆ ೬ ವಾರಗಳ ಶಿಕ್ಷೆಯೂ ವಿಧಿಸಲ್ಪಟ್ಟಿತು.

ಸಂಜೆಯಲ್ಲಿ ಶ್ರೀ ನರಗುಂದ ಬಳುರಾಯರ ಅಧ್ಯಕ್ಷತೆಯಲ್ಲಿ ಸಭೆಯಾಗಿ ಶಿಕ್ಷೆಗೆ ಪಾತ್ರರಾದ ಸ್ವಯಂಸೇವಕರನ್ನು ಅಭಿನಂದಿಸುವದರಲ್ಲಿ ಬಂದಿತು.. ಶ್ರೀ. ಭಿಸೆ, ಮತ್ತು ಶ್ರೀಮತಿ ಇಂದಿರಾಬಾಯಿ ಕಟ್ಟಿ, ಮೊದಲಾದವರ ಭಾಷಣಗಳಾದವು. ಸ್ವಯಂಸೇವಕರಿಗರ್ಪಿಸಿದ ಪೂಮಾಲೆಗಳು ಸಭೆಯಲ್ಲಿ ಲಿಲಾವು ಮಾಡಲ್ಪಟ್ಟವು. ತಾ॥ ೧೬ ನೆಯ ದಿವಸ ದಬ್ಬಾಳಿಕೆಯ ನಿಷೇಧಾರ್ಥವಾಗಿ ಯಶಸ್ವಿಯಾದ ಹರತಾಳವು ಆಚರಿಸಲ್ಪಟ್ಟಿತು.

ತಾ॥ ೧೪ ನೆಯ ದಿವಸ ಭಗಿನಿ ಮಂಡಲದವರು ಸಿಂದೀಗಿಡಗಳನ್ನು ಕಡಿದು ಬಂದರು.

## ಬೆಳಗಾವಿ ಜಿಲ್ಹೆಯಲ್ಲಿ
## ಸತ್ಯಾಗ್ರಹದ ಪ್ರಗತಿ
### ಇಬ್ಬರಿಗೆ ೧೫ ದಿವಸಗಳ ಶಿಕ್ಷೆ

[ತಂತಿಯ ವಾರ್ತೆ ತಾ॥ ೧೫]

ಬೆಳಗಾವಿಯ ಶ್ರೀ. ಗೋಖಲೆಯವರೂ ಮತ್ತು ಪಾಚಾಪುರದ ಶೇಖಸಾಹೇಬರೂ ಜಿಲ್ಹೆಯಲ್ಲಿ ಸಂಚಾರಕ್ಕೆ ಹೊರಟು ಹುಕ್ಕೇರಿ, ಚಿಕ್ಕೋಡಿ, ಸಂಕೇಶ್ವರ, ನಿಪ್ಪಾಣಿ, ಎಕ್ಸಂಬೆ, ಮಲಿಕವಾಡ, ಸಾದಲಗಿ, ಗಳತಗಿ, ಭೋಜ, ಮಾಂಗೂರ, ಅಕೋಳ, ಕೊಣ್ಣೂರ, ಘೋಡಗೇರಿ ಮೊದಲಾದ ಸ್ಥಳದಲ್ಲಿ ರಾಷ್ಟ್ರೀಯ ಕಾರ್ಯಕ್ರಮಗಳ ಬಗ್ಗೆ ಜನರಲ್ಲಿ ಜಾಗೃತಿಯನ್ನುಂಟುಮಾಡಿ ಬಂದರು. ಎಲ್ಲ ಕಡೆಯಲ್ಲಿಯೂ ಅವರಿಗೆ ಖಾದಿಯ ಪಟ್ಟವಳಿ, ವಿದೇಶಿ ವಸ್ತ್ರ ಬಹಿಷ್ಕಾರ, ಚಹಾ, ಸಕ್ಕರೆ ಬಹಿಷ್ಕಾರ, ಮದ್ಯಪಾನ ನಿಷೇಧ ಮೊದಲಾದವುಗಳ ವಿಷಯವಾಗಿ ಜನರಲ್ಲಿ ಒಳ್ಳೇ ಜಾಗೃತಿಯಾದದ್ದು ತೋರಿಬಂದಿತು. ಸ್ವಯಂಸೇವಕರಾಗಿ ಕಾಯದೆಭಂಗ ಚಳವಳಿಯಲ್ಲಿ ಬೀಳುವೆವೆಂದು ೧೨೦ ಜನರು ವಚನ ಕೊಟ್ಟರು

ಸಿಂದೀ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದುದಕ್ಕಾಗಿ ಶ್ರೀ. ದೊಡ್ಡಣ್ಣವರ ಮತ್ತು ಇನ್ನೊಬ್ಬ ಸ್ವಯಂಸೇವಕರು ೧೫ ದಿವಸಗಳ ಶಿಕ್ಷೆಗೆ ಗುರಿಯಾದರು. ಪಿಕೆಟಿಂಗದ ಮೂಲಕವಾಗಿ ರಾತ್ರಿಯಲ್ಲಿ ಕೆಲವು ಸ್ವಯಂಸೇವಕರು ಸೆರೆ ಹಿಡಿಯಲ್ಪಟ್ಟಿದ್ದಾರೆ. ಸಾಯುವನ್ ಪ್ರತಿಮೆಗಳನ್ನು ಸುಟ್ಟದುದಕ್ಕಾಗಿ ಸೆರೆಯಾಳುಗಳಾದ ಶ್ರೀ ದೇಶಪಾಂಡೆ ಮತ್ತು ಫೇವಾರಿಯವರ ಖಟ್ಲೆಯ ವಿಚಾರಣೆಯು ಮುಂದುವರಿಸಲ್ಪಟ್ಟಿದೆ.

### ವ್ಹಾಯಿಸರಾಯರ ಭಾಷಣವನ್ನು ಕುರಿತು
## ಸರದಾರ ವಲ್ಲಭಭಾಯಿಯವರು ಹೇಳಿದ್ದು

ವ್ಹಾಯಿಸರಾಯರು ತಮ್ಮ ಭಾಷಣದಲ್ಲಿ ಹೊಸದಾಗಿ ಏನನ್ನೂ ಹೇಳಿರುವದಿಲ್ಲವಾದುದರಿಂದ ಕಾಂಗ್ರೆಸದವರು ಧೋರಣವನ್ನು ಬದಲಿಸಲಾರರು. ಉದಾರಮತವಾದಿಗಳು ತಮ್ಮ ಧೋರಣವನ್ನು ಯಾವ ಕಾರಣದ ಸಲುವಾಗಿ ಬದಲಿಸಿರುವರೆಂಬುವದು ನನಗೆ ತಿಳಿಯದಾಗಿದೆ. ಲಂಡನದಲ್ಲಿ ಚರ್ಚೆಗೆ ಹೊರಟ ವಿಷಯಗಳಲ್ಲಿ ಯಾವ ವಿಷಯಗಳಿಗೆ ಎರಡೂ ದೇಶದ ಪ್ರತಿನಿಧಿಗಳ ಒಪ್ಪಿಗೆಯು ದೊರೆಯುವದೋ ಆ ಪ್ರಶ್ನೆಗಳು ಪಾರ್ಲಮೆಂಟಿನ ಎದುರಿಗೆ ಇಡಲ್ಪಡುವವೆಂದು ವ್ಹಾಯಿಸರಾಯರು ನುಡಿದಿದ್ದಾರೆ. ಬಂಡೀಗಾಲಿಯ ಪರಿಷತ್ತು ಹಿಂದುಸ್ಥಾನಕ್ಕೆ ಸಂಪೂರ್ಣ ವಸಾಹತಿ ಸ್ವರಾಜ್ಯವನ್ನು ಕೊಡುವಬಗ್ಗೆ ವಿಚಾರಮಾಡುವದಕ್ಕಾಗಿಯೇ ನೆರೆಯುವದೆಂದು ವ್ಹಾಯಿಸರಾಯರು ಹೇಳಬೇಕಾಗಿತ್ತು. ಬಂಡೀಗಾಲಿಯ ಪರಿಷತ್ತಿಗೆ ಹೋದವರು ಕಟ್ಟಕಡೆಯಲ್ಲಿ ಹೋದಹಾಗೆ ಪಂಕವಿಲ್ಲೆಂದು ಭ್ರಮನಿರಸ್ತರಂತೆ ತಿರುಗಿ ಬರುವರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಸ್ವಾತಂತ್ರ್ಯ ಸಂಗ್ರಾಮವನ್ನು ಕೊನೆಯವರೆಗೆ ಸಾಗಿಸಿರೆಂದು ಕಾಂಗ್ರೆಸದ ಕೆಲಸಗಾರರಿಗೂ ಹಾಗು ಸಾರ್ವಜನಿಕರಿಗೂ ನಾನು ಕೇಳಿಕೊಳ್ಳುತ್ತೇನೆ. ದಬ್ಬಾಳಿಕೆಯು ಇನ್ನೂ ಹೆಚ್ಚಾಗಿ ಪ್ರಾರಂಭಿಸಲ್ಪಡಬಹುದು. ಅದಕ್ಕೆಲ್ಲಕೂ ಸಿದ್ಧರಾಗಿ ತಲೆಯೊಡ್ಡಬೇಕು. ನಮ್ಮ ಪಕ್ಷವು ಸತ್ಯವಾಗಿದೆಯೆಂಬುದನ್ನು ತಿಳಿದುಕೊಂಡು ಮತ್ತು ದೇವರ ಮೇಲೆ ನಂಬಿಗೆಯನ್ನಿಟ್ಟು, ಮಧ್ಯದಲ್ಲಿ ಯಾವ ಮಾಯೆಗಳಿಗೂ ಒಳಗಾಗದೆ, ನಾವು ಕಡೆತನಕ ಕಾದಾಡತಕ್ಕದ್ದು.

---

ಸೊಲ್ಲಾಪುರದಲ್ಲಾದ ದಂಗೆಯ ವಿಷಯವಾಗಿ ವಿಚಾರ ಮಾಡಲು ಹಾಯ ಕೋರ್ಟ ಜಡ್ಜರ ಅಧ್ಯಕ್ಷತೆಯಲ್ಲಿ ಒಂದು ಸ್ವತಂತ್ರ ವಿಚಾರಣೆ ಮಂಡಳವನ್ನು ನಿಯಮಿಸಬೇಕೆಂದು ಮುಂಬಯಿ ಕಾಯಿದೆ ಮಂಡಳದಲ್ಲಿ ಶ್ರೀ ಕಾಳೆಯವರ ಸೂಚನೆಯು ಬಿದ್ದುಹೋಯಿತು.

### ಅಸೆಂಬ್ಲಿಯಲ್ಲಿ
## ಮಹಾತ್ಮರ ಬಂಧನ ಹಾಗು ಉಪ್ಪಿನ ಸುಂಕ.

ಉಪ್ಪಿನ ಕರವು ಯಾರಿಗೂ ಭಾರದಾಯಕವಾಗಿಲ್ಲವೆಂದೂ ಸಹಜವಾಗಿ ನೋಡಿದಲ್ಲಿ ಯಾರಲ್ಲಿಯೂ ಅದು ಅಸಂತೋಷವನ್ನು ಹುಟ್ಟಿಸಿಲ್ಲವೆಂದೂ ಮಿ|| ಜಾರ್ಜ ಶಿಸ್ಟರರು ಅಸೆಂಬ್ಲಿಯಲ್ಲಿ ಶ್ರೀ ವಿಶ್ವನಾಥರಿಗೆ ಉತ್ತರವನ್ನೀಯುವಾಗ ಹೇಳಿದರು.

ಸಾಮಾನ್ಯವಾದ ಕಾಯದೆಗನುಸರಿಸಿ ಮಹಾತ್ಮಾ ಗಾಂಧಿಯವರನ್ನು ವಿಚಾರಣೆಗೆ ಗುರಿಪಡಿಸಲು ಬರುತ್ತಿದ್ದರೂ, ಸಹ ಮುಂಬಯಿ ಸರಕಾರದವರು ಪರಿಸ್ಥಿತಿಯನ್ನನುಲಕ್ಷಿಸಿ ಹಾಗೆ ಮಾಡಲಿಲ್ಲವೆಂದೂ, ಮತ್ತು ಕಾಯದೆಭಂಗ ಚಳವಳಿಯು ಇನ್ನೂ ನಡೆದಿರುವಾಗ ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡುವ ಬಗ್ಗೆ ವಿಚಾರ ಮಾಡುವದೇ ಸಮಂಜಸವಾಗಿಲ್ಲವೆಂದೂ ಮಿ|| ಹೇಗರು ಶ್ರೀ ಎಸ್. ಸಿ. ಮಿತ್ರರಿಗೆ ಉತ್ತರವನ್ನಿತ್ತರು.

## ನವಜೀವನವು ಪುನ: ಹೊರಟಿತು.
### ಶ್ರೀ ಜಯರಾಮದಾಸರ ವೀರ ಪ್ರತಿಜ್ಞೆ.

ನವಜೀವನ ಮುದ್ರಣಾಲಯವು ಸರಕಾರದವರಿಂದ ಜಪ್ತ ಮಾಡಿದ್ದರೂ ಸಹ ನವಜೀವನ ಪತ್ರಿಕೆಯು ನಿಂತು ಹೋಗದೆ, ಅದು ಸಾಯಕ್ಲೋಸ್ಟಾಯಿಲದಲ್ಲಿ ಮುದ್ರಿತವಾಗಿ ಪುನ: ಹೊರಟಿದೆ. ಈಗ ಹೊರಟ ನವಜೀವನವು ಎರಡು ಪುಟಗಳದಿದ್ದು, ಅದರಲ್ಲಿ ಸರದಾರ ವಲ್ಲಭಭಾಯಿ ಹಾಗು ಶ್ರೀ ಜಯರಾಮದಾಸ ದೌಲತರಾಮರ ಸಂದೇಶಗಳು ಕೊಡಲ್ಪಟ್ಟಿವೆ. ಮುದ್ರಣಾಲಯಕಾಯಿದೆಯ ಹಾವಳಿಯನ್ನು ಕುರಿತು ಅವರು ತಮ್ಮ ಸಂದೇಶಗಳಲ್ಲಿ "ಮುದ್ರಣಾಲಯಕಾಯಿದೆಯ ಹಾವಳಿಗೆ ಅಂಜಿ 'ಯಂಗ ಇಂಡಿಯಾ' ಹಾಗು "ನವಜೀವನ" ಪತ್ರಿಕೆಗಳು ಎಂದಿನಂತೆಯೆ ಹೋಗುವವು. ಸತ್ಯವನ್ನು ಜಪ್ತ ಮಾಡುವದು ಯಾವ ಕಾಯಿದೆಯಿಂದಲೂ ಸಾಧ್ಯವಾಗದು. ಕಾಗದ ಮತ್ತು ಲೇಖಕರುಗಳ ಮೇಲೆ ಸರಕಾರದ ಗದೆಯು ಬೀಳುವವರೆಗೆ ಮಾತ್ರ ಅದಕ್ಕಾಗಿ ಕೆಲಸ ಮಾಡಲು ಸಿದ್ಧರಾದವರಲ್ಲಿ ಒಬ್ಬನೇ ಒಬ್ಬನು ಇರುವವರೆಗೆ "ಯಂಗ ಇಂಡಿಯಾ" ಹಾಗು ನವಜೀವನಗಳು ಪ್ರಸಿದ್ಧಿಸಲ್ಪಡುವವು" ಎಂಬುದಾಗಿ ಉಲ್ಲೇಖಿಸಿದ್ದಾರೆ.

### ಮುಂಬಯಿ ಕಾಯಿದೆ ಮಂಡಳದಲ್ಲಿ
## ಮಹಾತ್ಮಾ ಗಾಂಧಿಯವರ ಬಿಡುಗಡೆ.

ದೇಶದಲ್ಲಿ ಶಾಂತತೆಯು ಪ್ರಸ್ಥಾಪಿತವಾಗಬೇಕಾಗಿದ್ದರೆ ಹಾಗು ಬಂಧೀಗಾಲಿಯ ಪರಿಷತ್ತಿನ ವಿಷಯವಾಗಿ ಅನುಕೂಲ ವಾತಾವರಣವು ಉಂಟಾಗಬೇಕಾಗಿದ್ದರೆ ಮಹಾತ್ಮಾ ಗಾಂಧಿಯವರನ್ನು ಕೂಡಲೆ ಬಿಟ್ಟುಬಿಡಬೇಕು" ಎಂಬ ಆಶಯದ ಸೂಚನೆಯನ್ನು ಮುಂಬಯಿಯ ಡಾ|| ನರಿಮನ್ನರು ಕಾಯಿದೆ ಮಂಡಳದಲ್ಲಿ ತಂದರು. ಶ್ರೀ ಪ್ರಧಾನ, ಗುಂಜಾಳ, ಕೊಟ್ಟೂರಕರ, ಠಂಬಳೆ, ಆಸವಾಲೆ ಮೊದಲಾದವರು ನರಿಮನ್ನರಿಗೆ ಅನುಕೂಲವಾಗಿ ಭಾಷಣಮಾಡಿದರು. ಇಂಥವ ವಿರೋಧವು ಹಮ್ಮದ ಭಲೋಷರು ಸೂಚನೆಗೆ ಪುಷ್ಟಿಯನ್ನು ಕೊಟ್ಟರು. ಮಹಾತ್ಮರು ಕಾಯಿದೆಭಂಗವನ್ನು ನಿಲ್ಲಿಸುವೆವೆಂದು ವಚನ ಕೊಟ್ಟರೆ ಮಾತ್ರ ಅವರನ್ನು ಬಿಟ್ಟುಬಿಡಬೇಕಾಗಿ ಶ್ರೀ ಪೋದಿಯುವರು ಹೇಳಿದರು. ಡಿ. ಬಿ. ದೇಸಾಯಿ ಮತ್ತು ಸುರ್ವೆಯವರೂ ಸೂಚನೆಗೆ ಅನುಕೂಲವಾಗಿ ಮಾತಾಡಿದರು. ಸೂಚನೆಯನ್ನು ಸಭೆಯಲ್ಲಿ ತರಲು ಅಪ್ಪಣೆಯನ್ನು ಕೊಟ್ಟದ್ದಕ್ಕಾಗಿ ದೋಷ ಹೊರಿಸಿ ಶ್ರೀ ವಸಂತರಾವ ದಾಭೋಳಕರರು ಅದನ್ನು ವಿರೋಧಿಸಿದರು. ತಮ್ಮ ಸೂಚನೆಯು ಭವಿತವ್ಯತೆಯನ್ನರಿತುಕೊಂಡು ಡಾ|| ನರಿಮನ್ನರೇ ಅದನ್ನು ಹಿಂದಕ್ಕೆ ತೆಗೆದುಕೊಂಡರು.

### ಸವದತ್ತಿಯ ನಗರಸಭೆಯವರೂ
## ರಾಷ್ಟ್ರಧ್ವಜವನ್ನು ಏರಿಸಿದರು.

ತಾ|| ೧೦ ನಯ ದಿವಸ ಸವದತ್ತಿಯಲ್ಲಿ ಸ್ತ್ರೀಪುರುಷರ ಪ್ರಚಂಡ ಮೆರವಣಿಗೆಯು ನಗರ ಸಭೆಯ ಮೇಲೆ ರಾಷ್ಟ್ರಧ್ವಜವನ್ನು ಏರಿಸಲು ಬಹಳ ವೈಭವದಿಂದ ಹೊರಟಿತ್ತು. ಮೆರವಣಿಗೆಯಲ್ಲಿ ೭—೮ ನೂರು ಸ್ತ್ರೀಯರು ಸೇರಿದ್ದರು. ನಗರ ಸಭೆಯ ಅಧ್ಯಕ್ಷರು ಮೆರವಣಿಗೆಯಲ್ಲಿಯ ಜನರನ್ನು ಸಡದಾರಿಯಲ್ಲಿ ಕಂಡುಕೊಂಡು, ರಾಷ್ಟ್ರಧ್ವಜವನ್ನು ಹಚ್ಚಬೇಕೆಂದು ತಿಳಿಸಿ ಬಳಿಕ ಒಂದು ಮನೆಯಲ್ಲಿ ಸಭಾಸದರನ್ನು ಕೂಡಿಸಿಕೊಂಡು ಆ ಬಗ್ಗೆ ನಿರ್ಣಯವನ್ನು ಗೊತ್ತು ಮಾಡಿಕೊಂಡರು. ಬಳಿಕ ಅವರು ಮೆರವಣಿಗೆಯಲ್ಲಿ ಹೋಗಿ ಸೇರಿ, ಅವರೊಂದಿಗೆ ನಗರಸಭೆಯ ಕಟ್ಟಡಕ್ಕೆ ಸಾಗಿ ಹೋಗಿ, ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ಏರಿಸಿದರು. ಜನರು ಜಯ ಜಯಕಾರದೊಂದಿಗೆ ಆಕಾಶವನ್ನೇ ಗದುಗುಟ್ಟಿ ಬಿಟ್ಟು, ಅಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸಿದರು. ಸವದತ್ತಿ ಹಾಗು ಬೆಳಗಾವಿಯ ನಗರ ಸಭೆಯವರು ಬಾಗಲಕೋಟೆಯವರನ್ನು ಹಿಂದಕ್ಕೆ ದೂಡಿದಂತಾಯಿತು.

### ಸೊಲ್ಲಾಪುರ ಕೊಲೆಯ ವಿಚಾರಣೆ.
## ಶ್ರೀ. ಧನಶೆಟ್ಟಿಯವರಿಗೆ ಗಲ್ಲಿನ ಶಿಕ್ಷೆ.
### ಮೂವರಿಗೆ ಪುನರ್ವಿಚಾರಣೆ

ಮುಂಬೈ ಹಾಯಕೋರ್ಟಿನಲ್ಲಿ ಚೀಫ ಜಸ್ಟಿಸ್ ಬೀಮಾಂಟ ಮತ್ತು ಜಸ್ಟಿಸ್ ಮಡಗಾಂವಕರ ಮುಂದೆ ನಡೆದ ಸೊಲ್ಲಾಪುರದ ಕೊಲೆಯ ಆರೋಪಿಗಳ ಅಪೀಲು ತಾ|| ೧೮ ಕ್ಕೆ ಮುಗಿದು ಶ್ರೀ. ಮಲ್ಲಪ್ಪ ಧನಶೆಟ್ಟಿಯವರಿಗೆ ಕೆಳಗಿನ ಕೋರ್ಟಿನಲ್ಲಿ ಆದ ಗಲ್ಲಿ ಶಿಕ್ಷೆಯು ಸ್ಥಿರವಾಯಿತು. ಶ್ರೀ. ಸಾರ್ಡಾ, ಶಿಂದೆ ಮತ್ತು ಕುರ್ಬಾನ ಹುಸೇನರ ಅಪೀಲಿನ ವಿಚಾರಣೆಯು ಕ್ರಿ. ಪ್ರೊ. ಕೋಡಿನ ೧೯೭ ನೇ ಕಲಮಿನ ಅನ್ವಯ ಮತ್ತೊಬ್ಬ ನ್ಯಾಯಾಧೀಶರ ಕಡೆಗೆ ನಡೆಯಬೇಕೆಂದು ಗೊತ್ತುಮಾಡಲ್ಪಟ್ಟಿತು.

ಈ ಪತ್ರಿಕೆಯು ಬಸವಂತ ಅಣ್ಣಾರಾವ [illegible] ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—

# ಕನ್ನಡಿಗ

ಜಯ ಕರ್ನಾಟಕ

सर्वं परवशं दुःखं । सर्वमात्मवशं सुखम् ॥ — मनु
ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ
ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಶುಕ್ರವಾರ ಮಿತಿ ಆಷಾಢ ಬಹುಳ ೭ ಶಕೆ ೧೮೬೨ ತಾ॥ ೧೮—೭—೪೦ [ ಸಂಚಿಕೆ ೧೦೪

### ಬೇಕಾದರೆ
# ಸರಕಾರವೇ ಒಪ್ಪಂದಕ್ಕೆ ಬರಲಿ

ಸರಕಾರದವರು ಮಹಾತ್ಮರು ಹಾಗು ಕಾಂಗ್ರೆಸದವರೊಡನೆ ಒಪ್ಪಂದವನ್ನು ಮಾಡಿಕೊಳ್ಳಲು ಸಿದ್ಧರಾಗದವರೆಗೆ ಯಾವ ಸ್ವಾಭಿಮಾನಿಯೂ ದುಂಡು ಮೇಜಿನ ಪರಿಷತ್ತಿಗೆ ಹೋಗಕೂಡದು

ಯಾರಾದರೂ ಹಾಗೆಯೆ ಪರಿಷತ್ತಿಗೆ ಹೋದಲ್ಲಿ, ಅವರು ನಮ್ಮ ಪರವಾಗಿ ಹೋದವರಾಗಿಲ್ಲವೆಂದೂ ನಮ್ಮಗಳವತಿಯಿಂದ ಅಲ್ಲಿ ಮಾತಾಡಲು ಅವರಿಗೆ ಯಾವ ಅಧಿಕಾರವಿಲ್ಲವೆಂದೂ ನಾವು ಸಾರ್ವಜನಿಕ ರೀತಿಯಿಂದ ಸಾರಿ ಹೇಳಬೇಕು. ಬೇಕಾದರೆ ಅವರು ತಮ್ಮಗಳ ಪರವಾಗಿ ತಾವೇ ಮಾತಾಡಿಕೊಳ್ಳಲಿ. ಶಾಂತಿ ಸಂಧಾನಕ್ಕೆ ಬೇಕಾದಷ್ಟು ಹಾದಿಗಳು ಮುಕ್ತವಾಗಿ ಇಡಲ್ಪಟ್ಟಿವೆ

ಮೊದಲು ದೇಶದಲ್ಲೆಲ್ಲ ನಡೆದ ದಬ್ಬಾಳಿಕೆಯು ಮುಕ್ತಾಯ ಹೊಂದಬೇಕು. ಮಹಾತ್ಮಾ ಗಾಂಧಿಯವರು ಯರವಡಾ ಜೇಲಿನಲ್ಲಿ ವಿ| ಸ್ಲೋಕೊಂಬೆಯವರ ಮುಂದೆ ಹೇಳಿದ ಕರಾರುಗಳನ್ನು ಒಪ್ಪಿಕೊಳ್ಳುವೆವೆಂದು ವ್ಹಾಯಿಸರಾಯರು ಆಶ್ವಾಸನವನ್ನೀಯಬೇಕು. ಎಲ್ಲ ರಾಜಕೀಯ ಕೈದಿಗಳನ್ನೂ ಬಿಡುಗಡೆ ಮಾಡಬೇಕು.

ಇಷ್ಟು ಮಾತ್ರ ವ್ಹಾಯಿಸರಾಯರು ಪೂರ್ತಿಗೊಳಿಸಿದಲ್ಲಿ ಕಾಯದೆ ಭಂಗವು ನಿಲ್ಲಿಸಲ್ಪಡುವದು. ದುಂಡು ಮೇಜಿನ ಪರಿಷತ್ತಿನ ವಿಷಯವಾಗಿ ವಿಚಾರಮಾಡಲ್ಪಡುವದು.

ಇದು ಪೂರ್ತಿಯಾಗದಿದ್ದರೆ, ನಮ್ಮ ಹಾದಿಯಂತೂ ನಮಗೆ ಇದ್ದೇ ಇದೆ. ಸಂಕಟಗಳಿಗೆ ಎದೆಗುಂದದೆ ತಲೆಯೆತ್ತಿ ಚಳವಳಿಯನ್ನು ಮತ್ತಿಷ್ಟು ಜೋರಿನಿಂದ ಸಾಗಿಸಬೇಕು. ಸರಕಾರದವರು ತಾವಾಗಿಯೇ ಮಹಾತ್ಮರೊಡನೆ ಒಪ್ಪಂದವನ್ನು ಮಾಡಿಕೊಳ್ಳಲು ಬರಲು ಬೇಕಾಗುವಷ್ಟು ಸ್ವಾರ್ಥತ್ಯಾಗವನ್ನು ನಾವು ಮಾಡಿ, ಅವರ ಮೇಲೆ ಅಂತಹ ಪ್ರಸಂಗವನ್ನು ತರತಕ್ಕದ್ದು.

ಪಂ ಮಾಲವೀಯಾ

## ೮೦ ಜನ ಪೋಲೀಸರು ರಾಜೀನಾಮೆ ಕೊಟ್ಟರು

ನಾಸಿಕ ಜಿಲ್ಹೆಗೆ ಸೇರಿದ ಬಾಗಲಾಣ ತಾಲೂಕದೊಳಗಿನ ೮೦ ಜನ ಪೋಲೀಸರು ಹಾಗು ಮುಲಕಿ ಪಾಟೀಲರು ತಮ್ಮ ಉದ್ಯೋಗಗಳಿಗೆ ರಾ. ನಾ. ಹೊಡೆದಿದ್ದಾರೆ

## ಅಸೆಂಬ್ಲಿಯ ಸಭಾಸದರಿಗೆ ಬಳೆಗಳ ಬಹುಮಾನ

ಅಸೆಂಬ್ಲಿಯ ಅಧಿವೇಶನಕ್ಕಾಗಿ ಸಿಮ್ಲಾಕ್ಕೆ ಹೋಗಿ ಅಲ್ಲಿ ಇಳಿದುಕೊಂಡ ಅಸೆಂಬ್ಲಿಯ ಸಭಾಸದರ ಬಂಗಲೆಗಳ ಮುಂದೆ ಸ್ತ್ರೀಯರು ಇನ್ನೂ ಹಾಗೆಯೇ ಪಿಕೆಟಿಂಗ ಮಾಡುತ್ತಿದ್ದಾರೆ. ಪಿಕೆಟಿಂಗದ ಪರಿಣಾಮವು ಕೆಲವು ಸಭಾಸದರ ಮೇಲೆ ಒಳ್ಳೆಯದಾಗಿ ಆಗಿದ್ದು, ಅವರು ಅಧಿವೇಶನಕ್ಕೆ ಹೋಗಿರುವದೇ ಇಲ್ಲ. ಸ್ವಯಂಸೇವಿಕೆಯರು ಶ್ರೀ. ಎಂ. ಕೆ. ಆಚಾರ್ಯರ ಬಂಗಲೆಯ ಮುಂದೆ ಮಾತ್ರ ಪಿಕೆಟಿಂಗ ಮಾಡುವದನ್ನು ಬಿಟ್ಟುಕೊಟ್ಟಿರುವರು. ಅವರು ಒಂದು ದಿವಸ ಸ್ವಯಂಸೇವಿಕೆಯರಿಗೆ ಅಪಮಾನ ಮಾಡಿದ್ದೇ ಇದಕ್ಕೆ ಕಾರಣವಾಗಿದೆ. ಆದರೂ ಆಚಾರ್ಯರು ಸ್ವಯಂಸೇವಿಕೆಯರ ಕೈಯೊಳಗಿಂದೇನೂ ಪಾರಾಗಿ ಹೋಗಲಿಲ್ಲ. ತಾ॥ ೧೫ ನೆಯ ದಿವಸ ವಿರಾಮದ ಅವಧಿಯಲ್ಲಿ ಯಾರೋ ಒಬ್ಬರು ಆಚಾರ್ಯರಿದ್ದಲ್ಲಿಗೆ ಹೋಗಿ ಅವರ ಕೈಯಲ್ಲಿ ಒಂದು ಪತ್ರ ಕೊಟ್ಟು ಲಗುಬಗೆಯಿಂದ ತಿರುಗಿ ಹೋದರು. ದುಂಡಿಗಾಲಿಯ ಪರಿಷತ್ತಿನ ವಿಷಯವಾಗಿ ವಿಚಾರ ಮಾಡಲು ಕೂಡುವ ಸಭೆಯ ಕರೆಯಾಗಲಿ, ಇಲ್ಲವೆ ಅಧಿಕಾರಿಗಳ ಅನುಗ್ರಹ ಪತ್ರವಾಗಲಿ ಇರಬಹುದೆಂದು ಆಚಾರ್ಯರು ತಿಳಿದುಕೊಂಡು ಅದನ್ನು ಲಗುಬಗೆಯಿಂದ ಒಡೆದು ನೋಡಿದರು. ಅದರಲ್ಲಿ ಎರಡು ಬಳೆಗಳು ಹೊರಬಿದ್ದವು. ಅಲ್ಲಿಯೇ ಕುಳಿತ ಕೆಲವು ಸಭಾಸದರು ಅದನ್ನು ನೋಡಿ ಹೊಳ್ಳನೆ ನಕ್ಕುಬಿಟ್ಟರು. ಆಚಾರ್ಯರಿಗೆ ಅಪಮಾನ! ಅವರ ದುರ್ದೈವ! ಅವರೇನು ಮಾಡುವರು, ಅಂದದ್ದೇನಹುದು.........

## ಸಂಸ್ಥಾನಿಕರೂ ಸಾಯಮನ್ ವರದಿಯನ್ನು ಜರಿವರು

ಸಾಯಮನ್ ವರದಿಯ ವಿಷಯವಾಗಿ ವಿಚಾರಮಾಡಲು ಸಿಮಲಾದಲ್ಲಿ ಸೇರಿದ ಸಂಸ್ಥಾನಿಕರೂ, ಆ ವರದಿಯಲ್ಲಿ ತಮ್ಮಗಳ ವಿಷಯವಾಗಿ ಕಾಣಿಸಿದ ಮಾತುಗಳಿಗೆ ತಮ್ಮ ಸಮ್ಮತಿಯಿಲ್ಲವೆಂದು ಹೇಳಿ, ಅದನ್ನು ಸಂಪೂರ್ಣವಾಗಿ ಜರಿದು ಬಿಟ್ಟಿರುವರು.

## ರಾಷ್ಟ್ರೀಯ ಪಕ್ಷದ ಮುಸಲ್ಮಾನರ ಸಭೆ

ಇದೇ ತಿಂಗಳದ ೨೦ ನೆಯ ತಾ|| ದಿವಸ ಲಖನೌದಲ್ಲಿ ಸಾಯಮನ್ ವರದಿಯ ವಿಷಯವಾಗಿ ವಿಚಾರ ಮಾಡುವದಕ್ಕೂ ಮತ್ತು ಸದ್ಯದ ಸ್ಥಿತಿಯಲ್ಲಿ ಮುಸಲ್ಮಾನರು ಹೇಗೆ ವರ್ತಿಸತಕ್ಕದ್ದೆಂಬುದನ್ನು ಗೊತ್ತುಪಡಿಸುವದಕ್ಕೂ, ರಾಷ್ಟ್ರೀಯ ಪಕ್ಷದ ಮುಸಲ್ಮಾನ ಮುಖಂಡರ ಸಭೆಯು ಸೇರತಕ್ಕದ್ದಿದೆ. ಡಾ|| ಅನಸಾರಿ, ಮೌಲಾನಾ ಅಬ್ದುಲ್ ಕಲಮ ಅಜಿಸ್, ಶರ್ ಅಲ್ಲೀ ಇಮಾಮ, ಹಸನ ಇಮಾಮ, ಯಾಕೂಬ ಹಸನ, ಖ್ರೇಲವಿ ಮೊದಲಾದವರು ಸಭೆಯಲ್ಲಿ ಭಾಗ ತೆಗೆದುಕೊಳ್ಳುವವರಿದ್ದಾರೆ.

## ಜೇಲಿನಲ್ಲಿ ಸತ್ಯಾಗ್ರಹಿಯು ಮರಣ ಹೊಂದಿದನು

ಜುಲೈ ೩ ನೆಯ ತಾ|| ಗೆ ಪಿಕೆಟಿಂಗ ಕಾಯದೆಯನ್ವಯ ನಾಲ್ಕು ತಿಂಗಳ ಸಶ್ರಮ ಶಿಕ್ಷೆಗೆ ಗುರಿಯಾಗಿ ವರ್ಲಿ ಜೇಲದಲ್ಲಿ ತನ್ನ ಶಿಕ್ಷೆಯನ್ನು ಅನುಭವಿಸುತ್ತಿದ್ದ, ಮುಂಬಯಿಯ ನಾರಾಯಣ ಗೋಪಾಳ ಗವಳೆ ಎಂಬ ಸತ್ಯಾಗ್ರಹಿಯು ಅತಿಸಾರ ಬೇನೆಯಿಂದ ಜೇಲಿನಲ್ಲಿಯೇ ತಾ|| ೧೪ ನೆಯ ದಿವಸ ಮರಣ ಹೊಂದಿದನು.

## ಶ್ರೀ. ದಿವಾಣರಿಗೆ ೧ ವರ್ಷದ ಕಠಿಣ ಶಿಕ್ಷೆ

ಧಂಡುಕಾದಲ್ಲಿ ಭಾಷಣ ಮಾಡಿದುದಕ್ಕಾಗಿ ಗುಜರಾಥ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ. ಜೀವಣಲಾಲ ದಿವಾಣರಿಗೆ ೧ ವರ್ಷದ ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿದೆ.

## ಪಂಡಿತ ಸುಂದರಲಾಲರಿಗೆ ೩ ತಿಂಗಳ ಕಠಿಣ ಶಿಕ್ಷೆ

ಸರಕಾರಿ ಕಾಲೇಜ ಮತ್ತು ಹಾಯಸ್ಕೂಲುಗಳ ಮುಂದೆ ಪಿಕೆಟಿಂಗ ಮಾಡಿದುದಕ್ಕಾಗಿ ಅಲಹಾಬಾದದ ಪಂಡಿತ ಸುಂದರಲಾಲ, ಶ್ರೀ. ಕೇಶವ ಮಾಲವೀಯಾ, ಚಂದ್ರಕಾಂತ ಮಾಲವೀಯಾ ಅವರಿಗೆ ೩ ತಿಂಗಳ ಸಶ್ರಮ ಶಿಕ್ಷೆಯೂ, ಶ್ರೀ. ರಜನಿ ಮುಖರ್ಜಿ ಮತ್ತು ಶ್ರೀ. ಉಪಾಧ್ಯ ಅವರಿಗೆ ೬ ತಿಂಗಳ ಕಠಿಣ ಶಿಕ್ಷೆಯೂ ಆಗಿದೆ.

## ಲಾಹೋರದಲ್ಲಿ ಪಿಕೆಟಿಂಗ ಕಾಯದೆಗೆ

### ೫೦೬ ಜನರು ಆಹುತಿಯಾದರು

ವ್ಯಾಯಿಸರಾಯರು ಪಿಕೆಟಿಂಗದ ವಿರುದ್ಧವಾಗಿ ಹೊರಡಿಸಿದ ಕಾಯದೆಗೆ ಈ ವರೆಗೆ ಲಾಹೋರದಲ್ಲಿ ೫೪೬ ಜನ ಸ್ವಯಂಸೇವಕರು ಬಲಿಯಾಗಿರುವರೆಂದು ತಿಳಿಯುತ್ತದೆ.

## ಪುಸದದಲ್ಲಿ ಅಡವಿಯ ಕಾಯದೆಭಂಗ

### ಶ್ರೀ. ಫಾಟಕ ಹಾಗು ಸಹಸ್ರಬುದ್ಧೆಯವರಿಗೆ ಶಿಕ್ಷೆ

ಶ್ರೀ. ಗೋವಿಂದಶಾಸ್ತ್ರಿ ಫಾಟಕ ಅವರು ಸತ್ಯಾಗ್ರಹಿ ತಂಡದೊಡನೆ ಅರಣ್ಯಕ್ಕೆ ಸಾಗಿ ಹೋಗಿ ಹುಲ್ಲನ್ನು ಕೊಯ್ದು ಅಡವಿಯ ಕಾಯದೆಯನ್ನು ಮುರಿದರು. ಅಧಿಕಾರಿಗಳು ಅವರನ್ನು ಸೆರೆಹಿಡಿದು, ಅವರಿಗೆ ೧೦ ರೂ ದಂಡ ಇಲ್ಲವೆ ೧ ತಿಂಗಳ ಸಶ್ರಮ ಶಿಕ್ಷೆಯನ್ನು ವಿಧಿಸಿದರು. ಅಡವಿಯ ಕಾನೂನನ್ನು ಮುರಿದುದಕ್ಕಾಗಿ ಅಕೋಲೆಯ ಶ್ರೀ. ಸಹಸ್ರಬುದ್ಧೆಯವರಿಗೆ ೧ ವರ್ಷದ ಸಶ್ರಮ ಶಿಕ್ಷೆಯಾಯಿತು.

## ನೆಲ್ಲೂರ ಕಾಂಗ್ರೆಸ ಕಚೇರಿಗೆ

## ಪೋಲೀಸರ ಮುತ್ತಿಗೆ

ತಾ|| ೧೪ ನೆಯ ದಿವಸ ಪೋಲೀಸ ಅಧಿಕಾರಿಗಳು ನೆಲ್ಲೂರಿನ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಿ ೬ ಜನರನ್ನು ಸೆರೆ ಹಿಡಿದು ಅಲ್ಲಿದ್ದ ರಾಷ್ಟ್ರಧ್ವಜ, ಫೋಟೋ, ಕಾಜಿನ ಸಾಕ್ಸ ಮೊದಲಾದವುಗಳನ್ನು ತೆಗೆದುಕೊಂಡು ಹೋದರು.

## ದೇಶಬಂಧು ಪಥಕದ ಪ್ರಚಾರ ಕಾರ್ಯ

### ನೂರಾರು ಸಿಂದೀ ಗಿಡಗಳು ನೆಲಕ್ಕುರುಳಿದವು

ತಾ|| ೧೫ ನೆಯ ದಿವಸ ದೇಶಬಂಧು ಪಥಕದ ಶ್ರೀ. ಮಿರ್ಜಿಯವರು ಕೆಲವು ಸತ್ಯಾಗ್ರಹಿಗಳೊಂದಿಗೆ ನರಸಾಪುರಿಗೆ ಸಾಗಿ ಹೋಗಿ ಅಲ್ಲಿಯ ೬೨ ಸಿಂದೀ ಗಿಡಗಳನ್ನು ನೆಲಕ್ಕುರುಳಿಸಿದರು. ಬಾಥ ಆ ದಿವಸದಲ್ಲಿಯೂ ಮಮಟಗೇರಿಯಲ್ಲಿಯ ಕೆಲವು ಸಿಂದೀ ಗಿಡಗಳು ಸಂಹರಿಸಲ್ಪಟ್ಟವು. ಅವುಗಳನ್ನು ಕಡಿಯುವದಕ್ಕಾಗಿ ಅಗಸನಕೊಪ್ಪ, ಕೆರೂರು, ಗೋವನಕೊಪ್ಪ ಮೊದಲಾದ ಸ್ಥಳಗಳಿಂದ ಜನರು ಹೋಗಿದ್ದರು. ಸಿಂದೀ ಗಿಡಗಳ ಸಂಹಾರದ ಬಗ್ಗೆ ಜನರಲ್ಲಿ ಒಳ್ಳೇ ಉತ್ಸಾಹವು ತೋರಿಬರುತ್ತಿದೆ.

—ದೇಶಬಂಧು ಪಥಕನಾಯಕ

## ಗುಳೇದಗುಡ್ಡದಲ್ಲಿ

## ಪರದೇಶಿ ಬಟ್ಟೆಗಳ ಮೇಲೆ ದಾಳಿ

[ಸ್ವಂತ ಸುದ್ದಿಗಾರರಿಂದ]

ಗುಳೆದಗುಡ್ಡದಲ್ಲಿ ಪರದೇಶೀ ಬಟ್ಟೆಗಳ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುವ ಕಾರ್ಯವು ಬೇಗನೆ ಪ್ರಾರಂಭವಾಗುವದಿದೆ. ಶ್ರೀ. ಸಿಂಗದರು ವ್ಯಾಪಾರಿಗಳಿಗೆ ಭೆಟ್ಟಿಯಾಗಿ ಅವರಿಂದ ಪರದೇಶಿ ಸರಕುಗಳ ಬಗ್ಗೆ ವಚನ ತೆಗೆದುಕೊಂಡರು. ನಗರ ಸಭೆಯವರು ತಮ್ಮ ಸೇವಕರಿಗೆ ಖಾದಿಯ ಉಡುಪುಗಳನ್ನೇ ಕೊಡತಕ್ಕದ್ದೆಂದೂ ಮತ್ತು ಖಾದಿಯ ಮೇಲೆ ಕರವನ್ನು ಹೇರತಕ್ಕದ್ದಲ್ಲವೆಂದೂ ಗೊತ್ತುಮಾಡಿಕೊಂಡಿರುವರು. ಸಿಂದೀ ಅಂಗಡಿಗಳ ಪಿಕೆಟಿಂಗ ಎಂದಿನಂತೆ ಶಾಂತತೆಯಿಂದ ನಡೆದಿದೆ. ಅಧಿಕಾರಿಗಳೂ ಈಗೀಗ ಶಾಂತರೀತಿಯಿಂದ ವರ್ತಿಸುತ್ತಿರುವರು. ಸಿಂದಿಯನ್ನು ಪುಕ್ಕಟೆ ಕೊಡುವೆವು; ಕುಡಿಯಲು ಬನ್ನಿರಿ ಎಂದು ಅಂಗಡಿಯವನು ಬೇಡಿಕೊಳ್ಳುತ್ತಿರುವನು. ಯಾರೂ ಕುಡಿಯಲು ಹೋಗಿಲ್ಲ.

## ಪೇಶಾವರದ ದಂಗೆಯೂ, ಪಟೇಲರ ವರದಿಯೂ

ಪೇಶಾವರದಲ್ಲಾದ ದಂಗೆಯ ಸಂಬಂಧವಾಗಿ ವಿಚಾರ ಮಾಡಲು ಶ್ರೀ. ವಿಠ್ಠಲಭಾಯಿ ಪಟೇಲರವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸದವರಿಂದ ನಿರ್ಮಿಸಲ್ಪಟ್ಟ ಮಂಡಳದ ವರದಿಯು ಇತ್ತೀಚೆಗೆ "ಇಂಡಿಯನ್ ಡೇಲಿ ಮೇಲ" ಮುದ್ರಣಾಲಯದಲ್ಲಿ ಮುದ್ರಿತವಾಗಿ ಹೊರಬೀಳುವದಿತ್ತು. ಅದನ್ನು ಮುದ್ರಿಸಲು ಒಪ್ಪಿದ ಮುದ್ರಣಾಲಯದ ಒಡೆಯರಾದ ಮಿ| ವುಯಿಲ್ಸನ್ನರು ವರದಿಯೊಳಗಿನ ಕೆಲವು ಭಾಗಗಳನ್ನು ತೆಗೆದಲ್ಲಿ ಮಾತ್ರ ಪ್ರಸಿದ್ಧಿಸುವೆವೆಂದು ಹೇಳಿದರು. ಮಿ| ವುಯಿಲ್ಸನ್ನರು ತೆಗೆಯಲು ಕೇಳಿಕೊಂಡ ಭಾಗಗಳನ್ನು ತೆಗೆದೊಗೆಯಲು ಶ್ರೀ. ಪಟೇಲರು ಒಪ್ಪಿಕೊಳ್ಳಲಿಲ್ಲ. ಅದುದರಿಂದ ಈಗ ಅದು ಮುದ್ರಿತವಾಗದೆ ಹಾಗೆಯೇ ಉಳಿದಿದೆ.

## ಮಹಾತ್ಮರೊಡನೆ ಒಪ್ಪಂದಕ್ಕಾಗಿ ಪ್ರಯತ್ನ

ಮಹಾತ್ಮಾ ಗಾಂಧಿ, ಪಂಡಿತ ಮೋತೀಲಾಲ ನೆಹರು ಹಾಗು ಜವಾಹಿರಲಾಲ ನೆಹರು ಅವರನ್ನು ಜೇಲಿನಲ್ಲಿ ಕಂಡುಕೊಂಡು ಕಾಯಿದೆ ಭಂಗ ಚಳವಳಿಯನ್ನು ನಿಲ್ಲಿಸಲು ಅವರಿಗೆ ಕೇಳಿಕೊಳ್ಳುವದಕ್ಕಾಗಿ ವರಿಷ್ಠ ಕಾಯಿದೆ ಮಂಡಳದ ಉದಾರಮತವಾದಿ ಸಭಾಸದರು ಶ್ರೀ ಜಯಕರರನ್ನು ತಮ್ಮ ಪರವಾಗಿ ಪ್ರತಿನಿಧಿಗಳನ್ನಾಗಿ ಕಳಿಸಿಕೊಟ್ಟಿದ್ದಾರೆ. ಸರಕಾರಕ್ಕೂ ಕಾಂಗ್ರೆಸ ಪಕ್ಷಕ್ಕೂ ಒಪ್ಪಂದ ಮಾಡಿಸುವದೇ ಅವರ ಉದ್ದೇಶವಾಗಿದೆಯೆಂದು ಗೊತ್ತಾಗುತ್ತದೆ.

## ಮುಂಬಯಿಯಲ್ಲಿ ಬ್ಯಾರಿಸ್ಟರರ ಮೆರವಣಿಗೆ

ಮುಂಬಯಿಯಲ್ಲಿ ಈಗ ಕಾಂಗ್ರೆಸ್ ವಾರವು ಪ್ರಾರಂಭವಾಗಿದ್ದು, ಅದನ್ನು ಸಂಪೂರ್ಣವಾಗಿ ಯಶಸ್ವಿಯನ್ನಾಗಿ ಮಾಡುವದಕ್ಕಾಗಿ ತಾ ॥ ೧೪ ನೆಯ ದಿವಸ ಮುಂಬಯಿಯ ವಕೀಲರು, ಬ್ಯಾರಿಸ್ಟರರು, ಸೊಲಿಸಿಟರರು ಕೂಡಿ ಕಾಂಗ್ರೆಸ್ ಭವನದಿಂದ ಒಂದು ಮೆರವಣಿಗೆಯನ್ನು ಹೊರಡಿಸಿದ್ದರು. ಎಲ್ಲರೂ ಖಾದಿಯನ್ನೇ ಧರಿಸಿದ್ದರು. ಶ್ರೀ ಬಾಳುಭಾಯಿ ದೇಸಾಯಿಯವರು ಮೆರವಣಿಗೆಯ ಮುಂದಾಳುತನವನ್ನು ವಹಿಸಿ, ಕೈಯ್ಯಲ್ಲಿ ರಾಷ್ಟ್ರಧ್ವಜವನ್ನು ಹಿಡಿದುಕೊಂಡು ಮುಂದು ಮುಂದಾಗಿ ಸಾಗಿದ್ದರು. ಅವರ ಹಿಂದೆ ಉಳಿದವರೆಲ್ಲರೂ ಇಬ್ಬಿಬ್ಬರಂತೆ ಸಾಲುಹಿಡಿದು ರಾಷ್ಟ್ರೀಯ ಜಯ ಜಯ ಕಾರಗಳನ್ನು ಘೋಷಿಸುತ್ತ ನಡೆದಿದ್ದರು. ಹೀಗೆ ಅವರು ಮೆರವಣಿಗೆಯಿಂದ ಎಲ್ಲ ಭಾಗಗಳಲ್ಲಿಯೂ ಸುತ್ತಿ ಜನರಲ್ಲಿ ಒಂದು ತರದ ಜಾಗೃತಿಯನ್ನುಂಟು ಮಾಡಿ ಉಳಿದ ಉದ್ಯೋಗಸ್ಥರಿಗೆ ಒಂದು ಕಿತ್ತಿಯನ್ನು ಹಾಕಿಕೊಟ್ಟರು.

### ಶಿರೂರಲ್ಲಿ
### ಸಿಂದೀ ಅಂಗಡಿ ಪಿಕೆಟಿಂಗ

( ನಮ್ಮ ಸ್ವಂತ ಸುದ್ದಿಗಾರರಿಂದ )

ತಾ ॥ ೧೪ ನೆಯ ದಿವಸ ಪ್ರತಿ ದಿನದಂತೆ ಸಂಜೆಯ ಮುಂದೆ ಸಿಂದೀ ಅಂಗಡಿಯ ಮುಂದೆ ಪಿಕೆಟಿಂಗ ಮಾಡಲ್ಪಟ್ಟಿತು. ಪಿಕೆಟಿಂಗದ ಕಾರ್ಯದಲ್ಲಿ ಊರೊಳಗಿನ ಸಭ್ಯ ಗೃಹಸ್ಥರೂ ಭಾಗ ತೆಗೆದುಕೊಂಡಿದ್ದರು. ಮೆ ॥ ಸ್ಟೇಶಲ್ ಮಾಮಲೇದಾರರು ಗ್ರಾಮಸ್ಥರ ಸಹಿತ ಬಂದು ಸಿಂದೀ ಅಂಗಡಿ ನೋಡಿಕೊಂಡರು. ಸ್ವಯಂಸೇವಕರಿಗೆ ಕೆಲವು ಪ್ರಶ್ನೆಗಳನ್ನು ಕೇಳಿದರು. ಇಂದು ಅಂಗಡಿಗೆ ಸಿಂದಿಯು ಬರಲೇ ಇಲ್ಲ. ಅಂಗಡಿಯು ಕುಡಿಯುವವರಿಲ್ಲದ್ದರಿಂದ ಮುಚ್ಚಲ್ಪಟ್ಟಿತು.

## ಶ್ರೀ ಕೇಳಕರರು ಜಯಕರರ ಕಿವಿ ಹಿಂಡಿದರು

" ಯಾವ ನಿರ್ಬಂಧವೂ ಇಲ್ಲದೆ ಮಹಾತ್ಮಾ ಗಾಂಧಿ ಪಂ. ನೆಹರು ಮೊದಲಾದ ಮುಂದಾಳುಗಳನ್ನು ಸರಕಾರದವರು ಸೆರೆಮನೆಯಿಂದ ಬಿಡುಗಡೆ ಮಾಡಿದರೇನೇ ನೀವು ಒಂದೀ ಗಾಲಿಯ ಪರಿಷತ್ತಿನ ಆಮಂತ್ರಣವನ್ನು ಸ್ವೀಕರಿಸಬೇಕು " ಎಂದು ಬರೆದು ಶ್ರೀ ಕೇಳಕರರು ಶ್ರೀ ಜಯಕರರವರ ಕಿವಿಯನ್ನು ಹಿಂಡಿದ್ದಾರೆ.

### ತಾಳೀಕೋಟೆಯಲ್ಲಿ

## ಮತ್ತೆ ಶ್ರೀಮಾನ್ ಹಿರೇಮಠರು!

ಸ್ವಂತ ಸುದ್ದಿಗಾರರಿಂದ

ತಾ ॥ ೧೩ ನೆಯ ದಿವಸ ಡಿ. ಡಿ. ಕಲೆಕ್ಟರರಾದ ಹಿರೇಮಠ ಸಾಹೇಬರು ಇಲ್ಲಿಗೆ ಬಂದಿದ್ದರು. ಶಾಂತತಾ ಸಭೆಯನ್ನು ಕೂಡಿಸಿದ್ದರು. ಈ ಸಭೆಗೆ ಊರ ಗೃಹಸ್ಥರೂ ವ್ಯಾಪಾರಸ್ಥರೂ ಯಾರೂ ಹೋಗಿದ್ದಿಲ್ಲ. ಬರೇ ಗೌಡ ಕುಲಕರ್ಣಿಯವರೂ, ಶಾಲಾ ಶಿಕ್ಷಕರೂ, ಹಳ್ಳಿಯ ಗೌಡ ಕುಲಕರ್ಣಿಯವರೂ ಹೋಗಿದ್ದರು. ಸಾಹೇಬರು ಸಭೆಯಲ್ಲಿ " ಈಗಿನ ಸರಕಾರ ಬಹಳ ದಯಾಳು ಸರಕಾರವದೆ. ಅಲ್ಪ ಸಂಖ್ಯಾಕರಾದ ಗಾಂಧಿಯ ಪಕ್ಷದವರು ಚಳವಳಿ ಮಾಡಹತ್ತಿದ್ದಾರೆ. ಅದನ್ನು ನೀವು ನಂಬಬೇಡಿರಿ. ನಿಮ್ಮನ್ನು ಅವರು ಚಳವಳಿಯಲ್ಲಿ ನೂಕಿ ತಾವು ಪಾರಾಗುತ್ತಾರೆ. ಈಚಲಗಿಡ ಕಡಿಯಿರಿ ಎಂದು ಅವರು ನಿಮಗೆ ಹೇಳುತ್ತಾರೆ. ಈಚಲಗಿಡ ಕಡಿದರೆ ಮಳೆಯು ಬರುವದಿಲ್ಲ. ಸ್ವತಂತ್ರವಾಗಿ ಸಿದ್ಧ ಮಾಡಲ್ಪಟ್ಟ ಉಪ್ಪು ತಿಂದರೆ ಹೊಟ್ಟೆ ಝುಂಡಿಸುತ್ತದೆ " ಎಂದು ಹೇಳಿದರು.- ವಾಚಕರೆ, ನಕ್ಕಗಿಕ್ಕೀರಿ ಮತ್ತೆ! ಎಚ್ಚರಿಕೆ.

### ಕಾಯಿದೆಯನ್ನು ಮುರಿದು ತಂದ

## ಹುಲ್ಲಿಗೆ ೧೫೦ ರೂಪಾಯಿಗಳು

ಅಡವಿಯ ಕಾನೂನ ಭಂಗಕ್ಕಾಗಿ ತಾ ॥ ೧೦ ನೆಯ ದಿವಸ ಪುಣೆದಲ್ಲಿ ಸೆರೆ ಹಿಡಿಯಲ್ಪಟ್ಟ ೬ ತಿಂಗಳ ಶಿಕ್ಷೆಗೆ ಗುರಿಯಾದ ಶ್ರೀ. ಅಣೆಯವರ ಅಭಿನಂದನಾರ್ಥವಾಗಿ ಯಾವತ್ ಮಾಳದಲ್ಲಿ ಒಂದು ಸಾರ್ವಜನಿಕ ಸಭೆಯು ಸೇರಿತ್ತು. ಶ್ರೀ ಅಣೆ ಹಾಗು ಅವರ ತಂಡದ ಸ್ವಯಂಸೇವಕರು ಕೊಯ್ದು ತೆಗೆದ ಹುಲ್ಲು ಸಭೆಯಲ್ಲಿ ಲಿಲಾವಿನಿಂದ ಮಾರಲ್ಪಟ್ಟಿತು, ಅಲ್ಲಿ ಅದಕ್ಕೆ ೧೫೦ ರು. ಗಳ ಬೆಲೆಯು ಬಂದಿತು.

### ವಿಜಾಪುರ ಜಿಲ್ಲೆಯಲ್ಲಿ
### ಮಧ್ಯಪಾನ ಪ್ರತಿಬಂಧ

ಸಿಂದೀ ಅಂಗಡಿಗಳ ಬಾಗಿಲುಗಳಿಗೆ ಕೀಲಿ.

ವಿಜಾಪುರ ಜಿಲ್ಹೆಯಲ್ಲಿ ಈಗ ಸಿಂದೀ ಗಿಡಗಳನ್ನು ಕಡಿಯುವದೂ ಮತ್ತು ಸೆರೆ ಸಿಂದಿ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುವದೂ ಜೋರಾಗಿ ನಡೆದಿದ್ದುದರಿಂದ ಕೆಲವು ಕಡೆಗಳಲ್ಲಿ ಮಧ್ಯಪಾನವು ನಿಂತೇ ಹೋಗಿದೆ. ಗುಳೇದಗುಡ್ಡ ಹಾಗೂ ಗಲಗಲಿಯಲ್ಲಿಯ ಸಿಂದೀ ಶರಾಬು ಅಂಗಡಿಗಳ ಬಾಗಿಲುಗಳು ಇಕ್ಕಿಹೋಗಿವೆ. ತಾಳೀಕೋಟೆಯಲ್ಲಿಯೂ ಈ ಬಗ್ಗೆ ಪಿಕೆಟಿಂಗ ಸಮವಾಗಿದ್ದುದರಿಂದ ಕುಡಿತವು ಬಹಳೇ ಕಡಿಮೆಯಾಗಿದೆ. ಶಿರೂರ; ಅಮೀನಗಡ; ಹುನಗುಂದಗಳಲ್ಲಿಯೂ ಸಿಂದೀ ಅಂಗಡಿಗಳ ಮುಂದಿನ ಕಾವಲು ಬಲವತ್ತರವಾಗಿ ಸಾಗಿದೆ. ಬದಾಮಿ ಮತ್ತು ವಿಜಾಪೂರ ತಾಲೂಕಗಳಲ್ಲಿ ಕೂಡ ಈ ವರೆಗೆ ೭-೮ ಸಾವಿರ ಸಿಂದೀ ಗಿಡಗಳು ನೆಲಕ್ಕುರುಳಿವೆ. ಹುನಗುಂದ ತಾಲೂಕದಲ್ಲಿ ೩೦೦ ಈಚಲ ಗಿಡಗಳು ಮಣ್ಣುದಾರಿಗೆ ಬೀಳಲಿಕ್ಕಿವೆ.

### ಕರ್ನಾಟಕದಲ್ಲಿ

## ಸೆರೆ ಸಿಂದಿಯ ಉತ್ಪನ್ನಕ್ಕೆ ಕ್ಷೀಣದೆಸೆ.

ಕರ್ನಾಟಕದಲ್ಲಿ ಈಗ ಒಂದೆರಡು ತಿಂಗಳುಗಳಿಂದ ಸಿಂದೀ ಗಿಡಗಳ ಸಂಹಾರವೂ, ಸೆರೆ ಸಿಂದಿ ಲಿಲಾವಿನ ಹಾಗು ಅಂಗಡಿಗಳ ಪಿಕೆಟಿಂಗ ಬಹು ಜೋರಾಗಿ ನಡೆದಿದ್ದುದರಿಂದ, ಸೆರೆಸಿಂದಿಯಿಂದ ಸಿಗತಕ್ಕ ಸರಕಾರದ ಉತ್ಪನ್ನಕ್ಕೆ ಕ್ಷೀಣದೆಸೆಯು ಹಿಡಿದೆ. ಬೆಳಗಾವಿ ಜಿಲ್ಲೆಯಲ್ಲಿ ೧/೩ ಉತ್ಪನ್ನಕ್ಕೆ ಕೊಡಲಿಯು ಬಿತ್ತು. ವಿಜಾಪುರ ಜಿಲ್ಲೆಯಲ್ಲಿ ಸರಕಾರಕ್ಕೆ ೧೪೦೦೦೦ ರು. ಗಳು ಸಿಗುತ್ತಿದ್ದವು. ಆದರೆ ಈ ವರ್ಷ ಕೇವಲ ೮೦೦೦೦ ರು. ಗಳೇ ದೊರೆತವು. ಹೀಗೆ ಅಲ್ಲಿ ಅರ್ಧ ಹಣಕ್ಕೆ ಕತ್ತರಿಯುಂಟಾಯಿತು. ಧಾರವಾಡ ಜಿಲ್ಲೆಯಲ್ಲಿ ೭೭ ಅಂಗಡಿಗಳು ಲಿಲಾವು ಆಗಬೇಕಾದವುಗಳಾಗಿದ್ದವು. ಆದರೆ ೧೫ ಅಂಗಡಿಗಳು ಲಿಲಾವು ಆದವು, ಸಾವಿರಾರು ರು. ಗಳ ವರೆಗೆ ಉತ್ಪನ್ನವಾಗುವಂತಹ ಅಂಕೋಲೆಯ ಎರಡು ಸಿಂದಿ ಅಂಗಡಿಗಳನ್ನು ೧,೦೦ ರು. ಗಳಿಗೆ ಕೊಡುತ್ತೇನೆ. ಲಿಲಾವಿನಲ್ಲಿ ಹಿಡಿಯಿರಿ" ಎಂದು ಆ ಜಿಲ್ಲೆಯ ಕಲೆಕ್ಟರರು ಹೇಳಿಕೊಂಡರೂ ಯಾರೂ ಆ ಅಂಗಡಿಗಳನ್ನು ಹಿಡಿಯಲಿಲ್ಲ.

### ಸೊಲ್ಲಾಪುರದಲ್ಲಿ

## ಮತ್ತೆ ೧೨ ಜನರಿಗೆ ಶಿಕ್ಷೆ.

ಸೊಲ್ಲಾಪುರದಲ್ಲಿ ದಂಗೆಯಲ್ಲಿ ಭಾಗ ತೆಗೆದುಕೊಂಡಿದ್ದುದಕ್ಕಾಗಿ ವಿಠೋಬಾ ಕವಡೆ, ಮಲ್ಹಾರಿ ವಾಘಮೋಡೆ, ಜಗನ್ನಾಥ ಪರದೇಶಿ ಇವರಿಗೆ ೨ ವರ್ಷ, ಭೀಮರಾವ ಹತ್ರಿಸ ಇವರಿಗೆ ೧ ವರ್ಷ, ಉಳಿದವರಾದ ನಾರಾಯಣ ಪೋಕಳೆ, ರಾಮಾ ಘೋಲಂದಿ, ಸುದಾಮ ಲಟ್ಕೆ, ದಾದಾ ಪವಾರ, ಅಣ್ಣಾ ಶೇವಳಾ, ಶಿವರಾಮ ಸುಭಾನಾ, ಸಿದ್ರಾಮ ತುಕಾರಾಮ, ತುಕಾರಾಮ ಕಾಟಕರ್ ಇವರಿಗೆ ೬ ತಿಂಗಳು, ಹೀಗೆ ಸಕ್ರಮ ಶಿಕ್ಷೆಗಳು ಇಲ್ಲಿಯ ಪ್ರಥಮ ವರ್ಗದ ಸ್ಪೇಶಲ್ ಮ್ಯಾಜಿಸ್ಟ್ರೇಟರಿಂದ ವಿಧಿಸಲ್ಪಟ್ಟಿವೆ.

### ಗದುಗಿನಲ್ಲಿ ಪರದೇಶಿ ಬಟ್ಟೆಗಳ ಪಿಕೆಟಿಂಗ.

### ಸಿಂದೀ ಗಿಡಗಳ ನಾಶ.

(ಸ್ವಂತ ಸುದ್ದಿಗಾರರಿಂದ)

ತಾ|| ೧೪ ನೆಯ ದಿವಸ ಗದುಗಿನಲ್ಲಿ ಜವಳಿ ಪೇಟೆಯಲ್ಲಿ ಪರದೇಶಿ ಬಟ್ಟೆಗಳ ಅಂಗಡಿಗಳ ಮುಂದೆ ಸ್ವಯಂಸೇವಕರು ಪಿಕೆಟಿಂಗ ಪ್ರಾರಂಭಿಸಿದರು. ಸಾರಸ್ವತ ಮಹಿಳೆಯರೂ ಈ ಕಾರ್ಯದಲ್ಲಿ ಭಾಗ ತೆಗೆದುಕೊಂಡಿದ್ದರು. ಸಂಜೆಯ ವರೆಗೆ ಪರದೇಶಿ ಬಟ್ಟೆಗಳನ್ನು ಕೊಂಡುಕೊಳ್ಳಲು ಯಾರೂ ಹೋಗಲೇ ಇಲ್ಲ. ಅಂದು ಎಲ್ಲ ವ್ಯಾಪಾರಿಗಳಿಗೂ ಕೂಡಿ ಕೇವಲ ೨೫ ರು. ಗಳು ದೊರೆತವು. ಈ ಪಿಕೆಟಿಂಗದ ಕಾರ್ಯವು ಶಾಂತಿತ್ವದಲ್ಲಿಯೆ ನಡೆಯುತ್ತಿದ್ದಿತು, ೬೦ ಜನ ಸ್ವಯಂಸೇವಕರು ಹೆಸರು ಕೊಟ್ಟಿದ್ದಾರೆ.

ಈ ವರೆಗೆ ಸುತ್ತಮುತ್ತಲಿನ ಹಳ್ಳಿಗಳಲ್ಲಿಯ ೫೭೦೦ ಸಿಂದೀ ಗಿಡಗಳು ಸ್ವಯಂಸೇವಕರಿಂದ ನಾಶವಾಗಲ್ಪಟ್ಟಿವೆ.

ತಾ|| ೧೫ ನೆಯ ದಿವಸ ಜವಳಿ ವ್ಯಾಪಾರಿಗಳು ಸಭೆಯಲ್ಲಿ ಸೇರಿ ಒಂದು ಪರಸ್ಪರ ಸಂಘವನ್ನೇರ್ಪಡಿಸಿಕೊಂಡರು. ಮೂರು ತಿಂಗಳ ಮಟ್ಟಿಗೆ ಇದ್ದ ಬಟ್ಟೆಗಳನ್ನೇ ಮಾರಬೇಕೆಂದೂ ಮತ್ತು ಹೊಸದಾಗಿ ಆರ್ಡರುಗಳನ್ನು ಕಳಿಸತಕ್ಕದ್ದಲ್ಲವೆಂದೂ ಸಭೆಯಲ್ಲಿ ಗೊತ್ತು ಮಾಡಿಕೊಂಡರು.

## ಡಾ. ಪಟವರ್ಧನ ಹಾಗು ಸೋಮಣರು ಸೆರೆಯಾಳಾದರು.

ವರ್ಹಾಡ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಯುದ್ಧ ಮಂಡಳದ ಸಭಾಸದರಾದ ಅಮರಾವತಿಯ ಡಾ. ಪಟವರ್ಧನ ಹಾಗು ಡಾ. ಸೋಮಣರು ಕ್ರಿ. ಪ್ರೊ. ಕೋಡಿನ ೧೦೮ ನೆಯ ಕಲಮಿನ ಅನ್ವಯ ಸೆರೆ ಹಿಡಿಯಲ್ಪಟ್ಟಿದ್ದಾರೆ.

### ಗುಂಟೂರ ಕೋರ್ಟಿನಲ್ಲಿ

## ಗಾಂಧಿ ಟೊಪ್ಪಿಗೆಯವರ ಸಂಕಿದಾಟ.

ಗುಂಟೂರಿನ ಮ್ಯಾಜಿಸ್ಟ್ರೇಟರು ಗಾಂಧಿ ಟೊಪ್ಪಿಗೆಯ ವಿರುದ್ಧವಾಗಿ ಹೊರಡಿಸಿದ ಕಟ್ಟಳೆಯು ಅಕ್ಷರಶಃ ಹೇಗೆ ಮುರಿಯಲ್ಪಡುತ್ತಿದೆ ನೋಡಿರಿ. ಒಂದು ದಿನ ಶ್ರೀ ರಂಗನಾಯಕರೆಂಬ ಸತ್ಯಾಗ್ರಹಸ್ಥರೋರ್ವರು ಗಾಂಧಿಟೊಪ್ಪಿಗೆಯನ್ನು ಧರಿಸಿಕೊಂಡು ಬೀದಿಯಲ್ಲಿ ಹೋಗುತ್ತಿದ್ದರು. ಅಧಿಕಾರಿಗಳು ಅವರನ್ನು ಸೆರೆಹಿಡಿದು ಸೆರೆಮನೆಗೆ ಅಟ್ಟಿದರು. ಈ ದಬ್ಬಾಳಿಕೆಗೆ ಉತ್ತರವೆಂದು ಮರುದಿವಸ ಇಬ್ಬರು ಸ್ವಯಂಸೇವಕರು ತಮ್ಮ ತಲೆಯಮೇಲೆ ಗಾಂಧಿ ಟೊಪ್ಪಿಗೆಗಳನ್ನು ಧರಿಸಿಕೊಂಡು ಕೋರ್ಟಿಗೆ ಹೋದರು. ಅಲ್ಲಿ ಸುತ್ತೆಲ್ಲ ತಿರುಗಾಡಿದರು. ಕೆಲವು ಹೊತ್ತಿನಮೇಲೆ ಪೋಲೀಸರು ಅವರಿದ್ದಲ್ಲಿಗೆ ಹೋಗಿ ಅವರನ್ನು ಸೆರೆಹಿಡಿದುಕೊಂಡು ಸುಪರಿಂಟೆಂಡೆಂಟರ ಕಡೆಗೆ ಒಯ್ದರು. ಅಲ್ಲಿ ಅವರ ಗಾಂಧಿ ಟೊಪ್ಪಿಗೆಗಳನ್ನು ಜುಲುಮೆಯಿಂದ ಕಸಿದುಕೊಳ್ಳುವದರಲ್ಲಿ ಬಂದು ಅವರಿಗೆ ತಿರುಗಿಹೋಗಲು ಹೇಳಿಕೊಳ್ಳಲಾಯಿತು. ಅವರು ಆ ಸ್ಥಳ ಬಿಟ್ಟು ಕದಲಲು ನಿರಾಕರಿಸಿದರು. ಅಧಿಕಾರಿಗಳು ಅವರನ್ನು ಕೂಡಲೆ ತುರಂಗಕ್ಕೆ ಕಳಿಸಿಬಿಟ್ಟರು.

**ಶುದ್ಧ ಖಾದಿ!** **ಶುದ್ಧ ಖಾದಿ!**

ನಮ್ಮಲ್ಲಿ ಕೈನೂಲು ಕೈಮಗ್ಗದ ಶರ್ಟಿಂಗ, ಕೋಟಿಂಗ, ಧೋತರ ಮೊದಲಾದ ಎಲ್ಲ ತರದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಗ್ರಾಹಕರು ಲಾಭ ಹೊಂದಬೇಕಾಗಿ ವಿನಂತಿ.

ಶಂಕರಪ್ಪಾ ಒಣಗಾರ

ಜವಳಿ ವ್ಯಾಪಾರಿಗಳು, ಬಾಗಲಕೋಟೆ

ಈ ಪತ್ರಿಕೆಯು ಬಳವಂತ ಅಣ್ಣಾರಾವ ಕುಲಕುಮುದಾಣ್ಣ ಇವರಿಂದ ಬಾಗಲಕೋಟೆಯ ... ಮುದ್ರಾ ಕಾರ್ಯಾಲಯದಲ್ಲಿ ಮುದ್ರಿತವಾಗಿ ಅವರಿಂದಲೇ ಪ್ರಸಿದ್ಧಗೊಳಿಸಲ್ಪಟ್ಟಿತು.

ರೆ. ನಂ ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೬

ಜಯಕರ್ನಾಟಕ

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಶನಿವಾರ ಮಿತಿ ಆಷಾಢ ಬಹುಳ ೮ ಶಕೆ ೧೮೫೨ ತಾ॥ ೧೯—೭—೩೦ [ ಸಂಚಿಕೆ ೧೦೪

## ವ್ಹಾಯಿಸರಾಯರು

# ಮಹಾತ್ಮರೊಡನೆ ಒಪ್ಪಂದ ಮಾಡಿಕೊಳ್ಳುವರು

ಮಹಾತ್ಮರಿಗೂ ಹಾಗು ಸರಕಾರಕ್ಕೂ ಒಪ್ಪಂದ ಮಾಡಿಸುವ ಬಗ್ಗೆ ಸರ್ ತೇಜಬಹದ್ದೂರ ಸಪ್ರು ಮತ್ತು ಶ್ರೀ ಜಯಕರರು ಬಹಳೇ ಪ್ರಯತ್ನಿಸುತ್ತಿದ್ದು ಅವರ ಪ್ರಯತ್ನಕ್ಕೆ ಈಗ ಫಲ್ಪ ದೊರೆಕಿದಂತೆ ತಿಳಿಯುತ್ತದೆ. ಹಿಂದುಸ್ಥಾನದ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಸರಿಪಡಿಸುವ ಹಾಗು ದೇಶದಲ್ಲಿ ಶಾಂತತೆಯನ್ನುಂಟುಮಾಡುವ ಬಗ್ಗೆ ಸರ್ ಸಪ್ರು ಮತ್ತು ಶ್ರೀ ಜಯಕರರು ಮಹಾತ್ಮಾಗಾಂಧಿ, ಪಂಡಿತ ಮೋತೀಲಾಲ ಹಾಗು ಜವಾಹಿರಲಾಲ ನೆಹರೂ ಅವರನ್ನು ಜೇಲಿನಲ್ಲಿ ಕಂಡು ಅವರೊಡನೆ ಅವರು ಆಬಗ್ಗೆ ವಿಚಾರವಿನಿಮಯ ಮಾಡಿ ಬರಬೇಕಾಗಿ ವ್ಹಾಯಿಸರಾಯರು ಒಪ್ಪಿಕೊಂಡಿರುವರು.

ಜೇಲಿನಲ್ಲಿ

## ಮಹಾತ್ಮರು ಸುಖದಿಂದಿರುವರು,

ಜೇಲಿನಲ್ಲಿ ಮಹಾತ್ಮಾಗಾಂಧಿಯವರು ಸುಖದಿಂದ ಇರುವರೆಂದೂ, ಅವರು ಪ್ರತಿನಿತ್ಯದಲ್ಲಿಯೂ ರಾಟಿಯ ಮೇಲೆ ೫೦೦ ಯಾರ್ಡಿನ ವರೆಗೆ ನೂಲನ್ನು ತೆಗೆಯುತ್ತಿರುವರೆಂದೂ ಅವರು ಸಾಬರಮತಿ ಆಶ್ರಮಕ್ಕೆ ಬರೆದ ಪತ್ರಗಳಿಂದ ತಿಳಿದುಬರುತ್ತದೆ.

ನಾಗಪುರ

## ಕಾಲೇಜದ ಮೇಲೆ ರಾಷ್ಟ್ರಧ್ವಜ.

ಕಾಲೇಜಕ್ಕೆ ಕೀಲಿಬಿದ್ದಿತು.

ನಾಗಪುರ ಕಾಲೇಜದಮೇಲೆ ಕೆಲವು ದಿವಸಗಳ ಹಿಂದೆ ರಾಷ್ಟ್ರಧ್ವಜವು ಹಚ್ಚಲ್ಪಟ್ಟಿತ್ತು. ಆದರೆ ಕಾಲೇಜದ ಅಧಿಕಾರಿಗಳಿಗೆ ತಾ॥ ೧೫ ನೆಯ ದಿವಸ ಏನು ಹೊಳೆಯಿತೋ ಏನೋ! ಅವರು ಇಂದು ರಾಷ್ಟ್ರಧ್ವಜವನ್ನು ಅಲ್ಲಿಂದ ಕಿತ್ತಿ ಒಗೆದುಬಿಟ್ಟರು. ವಿದ್ಯಾರ್ಥಿ ವರ್ಗಕ್ಕೆ ರಾಷ್ಟ್ರಧ್ವಜಕ್ಕಾದ ಅಪಮಾನವನ್ನು ಸಹಿಸುವದಾಗಲಿಲ್ಲ ಅವರು ಅಲ್ಲಿಯ ಎಲ್ಲ ಶಾಲೆ ಕಾಲೇಜುಗಳ ವಿದ್ಯಾರ್ಥಿಗಳನ್ನು ಕರೆದುಕೊಂಡು ಮೆರವಣಿಗೆಯಿಂದ ಕಾಲೇಜಕ್ಕೆ ಹೋಗಿ ಪುನಃ ಕಾಲೇಜದ ಮೇಲೆ ಮತ್ತೆ ರಾಷ್ಟ್ರಧ್ವಜವನ್ನು ಏರಿಸಿದರು. ಶಿಕ್ಷಣಕ್ರಮವು ಸುವ್ಯವಸ್ಥಿತವಾಗಿ ಸಾಗದಂತೆ ಘೋಷಣೆ ಜಯಜಯಕಾರ ಮಾಡಿದರು. ಶಿಕ್ಷಣಕ್ರಮವು ಚನ್ನಾಗಿ ನಡೆಯಲು ಈಗ ಸಾಧ್ಯವಿಲ್ಲವೆಂದರಿತು ಅಧ್ಯಾಪಕರು ಕಾಲೇಜವನ್ನು ಮುಚ್ಚಿಹೋಗಿಬಿಟ್ಟರು.

ಬ್ರಾಹ್ಮಣೇತರರ ಮುಂದಾಳುಗಳಾದ

## ಶ್ರೀ ಜಾವಳಕರರಿಗೆ ಇಂಗ್ಲಂಡದಲ್ಲಿ ಅವಮಾನ.

ಮುಂಬಯಿ, ಇಲಾಖೆಯ ಬ್ರಾಹ್ಮಣೇತರ ಸಂಗಡದ ಕಾರ್ಯದರ್ಶಿಗಳಾದ ಶ್ರೀ. ಡಿ. ಎಸ್. ಜಾವಳಕರರು ಕೆಲವು ದಿವಸಗಳ ಹಿಂದೆ ಲಂಡನ್ನಕ್ಕೆ ಹೋದಾಗ ಒಂದು ದಿನ ತಮ್ಮ ಹೆಂಡತಿ ಹಾಗು ಮಿತ್ರರೊಂದಿಗೆ "ಲಾಯನ್ಸ ಕಾರ್ನರ" ಕ್ಕೆ ಹೋಗಿದ್ದರು. ಅಲ್ಲಿ ಅವರಿಗೆ ಒಳಗೆ ಹೋಗಲು ಅಪ್ಪಣೆಯು ದೊರಕಲಿಲ್ಲ. ಶ್ರೀ. ಜಾವಳಕರರು ಕಾರಣವನ್ನು ತಿಳಿಸಲು ಕೇಳಿದರು. ಅಷ್ಟರಲ್ಲಿ ಶ್ರೀ ಜಾವಳಕರರ ಪತ್ನಿಯವರೂ ಮತ್ತು ಮಿತ್ರರೂ ತಿರುಗಿ ಹೋದರು. ಜಾವಳಕರರು ಒಳಗೆ ಬಿಡಲು ಮತ್ತೆ ಕೇಳಿಕೊಂಡರು. ಅಧಿಕಾರಿಯು ಒಳಗೆಬಿಡಲೊಪ್ಪಲಿಲ್ಲ. ಶ್ರೀ. ಜಾವಳಕರರು ಪೋಲೀಸರನ್ನು ಕರೆಕಳುಹಿ ಎಲ್ಲ ಸಂಗತಿಯನ್ನು ತಿಳಿಸಿದರು. ಪೋಲೀಸರು ಅವರನ್ನು ಠಾಣೆಗೆ ಕರೆದೊಯ್ದು, ಡಾಕ್ಟರಿಂದ ಅವರನ್ನು ಪರೀಕ್ಷಿಸಿದರು. ಅವರು ಕುಡಿದಿಲ್ಲವೆಂದು ಡಾಕ್ಟರರು ನಿರ್ಣಯಕೊಟ್ಟರು. ಕೆಲವು ಹೊತ್ತಿನಮೇಲೆ ಜಾವಳಕರರು ಬಿಡುಗಡೆಹೊಂದಿದರು. ಸಾಯಮನ್ ಕಮಿಟಿಯೊಂದಿಗೆ ಸಹಕಾರ ಮಾಡಿದುದಕ್ಕಾಗಿ ಜಾವಳಕರರಿಗೆ ಒಳ್ಳೆ ಪ್ರತಿಫಲ ಸಿಕ್ಕಂತಾಯಿತು.

## ಸರದಾರರೂ ಸಾಯಮನ್‌ರ ಮೇಲೆ ರೇಗಿಗೆದ್ದರು

ಮುಂಬಯಿ ಇಲಾಖೆಯೊಳಗಿನ ಸರದಾರರು ಹಾಗು ಇನಾಮದಾರರು ತಾ|| ೧೫ ನೆಯ ದಿವಸ ತಮ್ಮದೊಂದು ಪ್ರತ್ಯೇಕವಾದ ಸಭೆಯನ್ನು ಪುಣೆಯಲ್ಲಿ ಏರ್ಪಡಿಸಿಕೊಂಡು ಸಾಯಮನ್ ವರದಿಯ ಶಿಫಾರಸುಗಳ ಬಗ್ಗೆ ಚರ್ಚೆಮಾಡಿ ಕೆಳಗಿನ ನಿರ್ಣಯಗಳನ್ನು ಗೊತ್ತುಮಾಡಿಕೊಂಡರು [೧] ಹಿಂದುಸ್ಥಾನದಲ್ಲಿ ಕಾಯದೆ ಮಂಡಳಗಳು ಸ್ಥಾಪಿತವಾದಂದಿನಿಂದ ತಮಗೆ ದೊರೆತ ಕಾಯದೆ ಮಂಡಳದ ಪ್ರಾತಿನಿಧಿತ್ವವನ್ನು ತಿರುಗಿ ತೆಗೆದುಕೊಳ್ಳಲು ಸಾಯಮನ್ ವರದಿಯಲ್ಲಿ ಶಿಫಾರಸು ಮಾಡಿದ ಬಗ್ಗೆ ಈ ಸಭೆಯು ನಿಷೇಧವನ್ನು ವ್ಯಕ್ತಪಡಿಸುತ್ತದೆ. [೨] ಸಾಯಮನ್ ವರದಿಯಲ್ಲಿಯ ಶಿಫಾರಸುಗಳು ಪ್ರಗತಿಪರವಾಗಿಲ್ಲವೆಂದೂ, ಅವು ರಾಷ್ಟ್ರದ ಬೇಡಿಕೆಗಳನ್ನನುಲಕ್ಷಿಸಿ ಮಾಡಲ್ಪಟ್ಟವುಗಳಾಗಿಲ್ಲನೆಂದೂ ಈ ಸಭೆಯು ಅಭಿಪ್ರಾಯಪಡುತ್ತದೆ. [೩] ಶಾಂತತೆಯ ಮಾರ್ಗವನ್ನನುಸರಿಸಿ ದೇಶದ ಕ್ಷುಬ್ಧ ವಾತಾವರಣವನ್ನು ಶಾಂತಗೊಳಿಸಿ ದುಂಡು ಮೇಜಿನ ಪರಿಷತ್ತಿನ ಬಗ್ಗೆ ಯೋಗ್ಯ ವಾತಾವರಣವನ್ನು ಹುಟ್ಟಿಸಲು ಸರಕಾರಕ್ಕೆ ಒತ್ತಾಯಪಡಿಸುತ್ತದೆ.

## ಇವರು ದುಂಡೀಗಾಲಿಯ ಪರಿಷತ್ತಿಗೆ ಹೋಗುವರಂತೆ

ಪತಿಯಾಲದ ಮಹಾರಾಜರು, ಕಾಶ್ಮೀರ, ಭೋಪಾಳ, ಅಳ್ವಾರ, ಜಾಮನಗರ, ಬರೋಡಾ, ರೇವಾ ಹಾಗು ಸಾಂಗಲಿ ಈ ಸಂಸ್ಥಾನಗಳ ಅಧಿಪತಿಗಳು, ಮೈಸೂರಿನ ದಿವಾಣರಾದ ಸರ್ ಮಿರ್ಜಾ ಇಸ್ಮಾಯಿಲರು ಬಿಕಾನೇರದ ದಿವಾಣರಾದ ಸರ್ ಮನೂಭಾಯಿ ಮೆಹತಾರವರು, ಹೈದರಾಬಾದ ಸಂಸ್ಥಾನದ ಕಾರಭಾರಿಗಳಾದ ಸರ್. ಎ. ಹೈದರಿಯವರು, ಕರ್ನಲ ಹಸ್ಕರ ಮತ್ತು ಡಾ|| ರುಶಬ್ರುಕ್ ವಿಲಿಯಮ್ಸರು ಈ ಹದಿನಾಲ್ಕು ಜನ ಪ್ರತಿನಿಧಿಗಳು ಹಿಂದುಸ್ಥಾನದ ಸಂಸ್ಥಾನಿಕರ ಪರವಾಗಿ ದುಂಡೀಗಾಲಿಯ ಪರಿಷತ್ತಿಗೆ ಹೋಗುವವರಿದ್ದಾರೆ "ರತ್ನಾನೀಹ ಚತುರ್ದಶಂ ಪ್ರತಿದಿನಂ ಕುರ್ವಂತುವೋ ಮಂಗಲಮ್"

## ಮಧ್ಯಪ್ರಾಂತದಲ್ಲಿ ಅಡವಿಯ ಕಾಯದೆಭಂಗ

ಅಂಕೋಲೆಯ ಶ್ರೀ ಜೋಗಳೇಕರರು ೬ ನೆಯ ತಂಡದ ೨೪ ಜನ ಸತ್ಯಾಗ್ರಹಿಗಳ ನೇತೃತ್ವವನ್ನು ವಹಿಸಿ ಅವರೊಂದಿಗೆ ಅರಣ್ಯಕ್ಕೆ ಸಾಗಿಹೋಗಿ ತಾ|| ೧೫ ನೆಯ ದಿವಸ ಕಾಯದೆಭಂಗ ಮಾಡಿದರು, ಅಧಿಕಾರಿಗಳು ಅವರೆಲ್ಲರನ್ನು ಸೆರೆಹಿಡಿದೊಯ್ದು ವಿಚಾರಣೆಗೆ ಗುರಿಮಾಡಿದರು. ಶ್ರೀ. ಜೋಗಳೇಕರರಿಗೆ ೧೫ ರೂ. ದಂಡ ಇಲ್ಲವೆ ೫ ವಾರಗಳ ಸಕ್ತ ಶಿಕ್ಷೆಯೂ, ೧೪ ಜನ ಸ್ವಯಂಸೇವಕರಿಗೆ ೧೦ ರೂ ದಂಡ ಇಲ್ಲವೆ ೧ ತಿಂಗಳ ಕಠಿಣ ಶಿಕ್ಷೆಯೂ ವಿಧಿಸಲ್ಪಟ್ಟಿತು ೯ ಜನ ಸ್ವಯಂಸೇವಕರು ಬಿಡುಗಡೆ ಹೊಂದಿದರು.

### ಶಿವ ಲಾಟಲ್ಲಿಯೂ

## ಗಾಂಧಿ ಟೊಪ್ಪಿಗೆಯವರು ಪೆಟ್ಟು ತಿಂದರು

ಸಿಮಲಾದಲ್ಲಿ ತಾ|| ೧೩ ನೆಯ ದಿವಸ ಇಬ್ಬರು ಸ್ವಯಂಸೇವಕರು ಅಂದು ಸಂಜೆಗೆ ಅಲ್ಲಿ ನೆರವೇರಲಿಕ್ಕಿದ್ದ ಸಭೆಯ ಸುದ್ದಿಯನ್ನು ಸಾರ್ವಜನಿಕರಿಗೆ ತಿಳಿಸುತ್ತ ನಡೆದಿದ್ದರು ಅವರು ಹೀಗೆ ನಡೆದಿರುವಾಗ 'ಮಾಲ' ದಲ್ಲಿಯ ಇಬ್ಬರು ಯುರೋಪಿಯನ್ ಅಧಿಕಾರಿಗಳು 'ಮಾಲ' ವನ್ನು ಬಿಟ್ಟು ಹೊರಗೆ ಹೋಗಲು ಅವರಿಗೆ ಕೇಳಿಕೊಂಡರು, ಅವರು ಮಾಲದಲ್ಲಿ ತಿರುಗಾಡಲು ತಮಗಾದರೂ ಹಕ್ಕು ಇದೆಯಾಗಿ ಹೇಳಿದರು. ಸ್ವಯಂಸೇವಕರು ಎದುರುತ್ತರ ಕೊಟ್ಟಿದುದಕ್ಕಾಗಿ ಆ ಅಧಿಕಾರಿಗಳು ರೇಗಿಗೆದ್ದು ಅವರನ್ನು ನೂಕಿ ಒಳಿತಾಗಿ ಥಳಿಸಿದರು ಒಬ್ಬನು ಈಗ ಅತ್ಯಂತ ಕಠಿಣ ದೆಸೆಯಲ್ಲಿರುವನಾಗಿ ತಿಳಿಯುತ್ತದೆ

### ಸತ್ಯಾಗ್ರಹ ಸಮರಕ್ಕೆ

## ೧೭೦೦೦ ಹಿಂದೂ ಜನರ ಆಹುತಿಯು

ಎಪ್ರಿಲ ತಿಂಗಳದ ೬ ನೆಯ ತಾ|| ನಿಂದ ಜೂನ ತಿಂಗಳದ ೩೯|| ೧೫ ಕ್ಕೆ ಮುಗಿಯುವ ಅವಧಿಯಲ್ಲಿ ಸತ್ಯಾಗ್ರಹ ಚಳವಳಿಯ ಮೂಲಕವಾಗಿ ಹಿಂದುಸ್ಥಾನದಲ್ಲಿ ಒಟ್ಟಿಗೆ ೪೩೬೭ ಜನರಿಗೆ ಶಿಕ್ಷೆಯಾಗಿದೆಯೆಂದೂ, ಬೇರೆ ಬೇರೆ ಪ್ರಾಂತಗಳಿಂದ ಸೆರೆಮನೆಗೆ ಹೋದವರ ಸಂಖ್ಯೆಯು ಕೆಳಗಿನಂತೆ ಇದೆಯೆಂದೂ ಮಿ|| ಹೇಗರು ವರಿಷ್ಠ ಕಾಯದೆ ಮಂಡಳದಲ್ಲಿ ತಿಳಿಸಿದರು.

ಮದ್ರಾಸ ೧೨೫೯- ಮುಂಬಯಿ ೬೬೧.
ಬಂಗಾಲ ೧೧೫೭ ಸಂಯುಕ್ತ ಪ್ರಾಂತ ೪೯೩.
ಪಂಜಾಬ ೬೮. ಬಿಹಾರ ಮತ್ತು ಓಡಿಸಾ ೪೮೩
ಮಧ್ಯಪ್ರಾಂತ ೧೦ ಆಸಾಮ ೪೦.
ವಾಯುವ್ಯ ಸರಹದ್ದು ೯೧ ದಿಲ್ಲಿ ೪೫.

ಈ ಸಂಖ್ಯೆಯು ಈಗ ಮತ್ತೆ ಒಂದು ತಿಂಗಳ ಅವಧಿಯಲ್ಲಿಯೇ ೧೭೦೦೦ ದ ವರೆಗೆ ಹೋಗಿದೆಯಾಗಿ ತಿಳಿದು ಬರುತ್ತದೆ. ಹೀಗೆ ಚಳವಳಿಯು ದಿನದಿನಕ್ಕೆ ಹೆಚ್ಚಾಗಿ ನಡೆದಿದ್ದರೂ ಸಹ ಇಲ್ಲಿಯ ಅಧಿಕಾರಿಗಳು ಇಂಗ್ಲಂಡಕ್ಕೆ ಕಾಗದದ ಕುದುರೆಗಳನ್ನು ಓಡಿಸಿ, ಅಲ್ಲಿಯ ಜನರಿಗೆ ಸತ್ಯಾಗ್ರಹ ಚಳವಳಿಯು ಜಗ್ಗುತ್ತಿರುವದೆಂದು ತಿಳಿಸುತ್ತಿರುವರಲ್ಲ! ಅವರಾದರೂ ಏನು ಮಾಡಿಯಾರು? ಪಾಪ!

### ಸೊಲ್ಲಾಪುರದ

## ಶ್ರೀ ಧನಶೆಟ್ಟಿಯವರಿಗಾಗಿ

### ದೇವರಲ್ಲಿ ಮೊರೆ.

"ಸೊಲ್ಲಾಪುರದ ಸುಪ್ರತಿಷ್ಠಿತ ನಾಗರಿಕರಾದ ಶ್ರೀ. ಮಲ್ಲಪ್ಪ ಧನಶೆಟ್ಟಿಯವರಿಗೆ ಫಾಶೀ ಶಿಕ್ಷೆಯಾಗುವದೆಂದು ಕೇಳಿ ನಮಗೆ ಕಸಿವಿಸಿಯಾಗಿದೆ. ಸೊಲ್ಲಾಪುರದ ಲಷ್ಕರೀ ಅಮಲಿನಲ್ಲಿ ಆರೋಪಿತರಿಗೆ ತಮ್ಮ ರಕ್ಷಣೆಯನ್ನು ಮಾಡಿಕೊಳ್ಳಲು ಅವಕಾಶ ವಿದ್ದಿಲ್ಲವೆಂದು ನಮ್ಮ ಸ್ಪಷ್ಟ ಅಭಿಪ್ರಾಯವಿದೆ. ಶ್ರೀ. ಮಲ್ಲಪ್ಪ ಧನಶೆಟ್ಟಿಯವರಿಗೆ ಇನ್ನು ದೇವರೇ ಬೆಂಬಲವಾಗಬೇಕೆಂದು ಆ ಸರ್ವಶಕ್ತಿಮಾನ ಪರಮೇಶ್ವರನನ್ನು ನಾವು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ."

ಹೀಗೆ ಗೊತ್ತುವಳಿಯನ್ನು ತಕ್ಕವಿದ್ದ ಪ್ರತಿ ಊರಲ್ಲಿಯ ನಾಗರಿಕರು ಸಭೆ ಮಾಡಿಕೊಂಡು ಪಾಸು ಮಾಡಿ, ಅದನ್ನು ಮುಂಬಯಿಯ ಗವ್ಹರ್ನರರಿಗೂ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಗೂ ಕಳಿಸಬೇಕು.

## ಯರವಡೆಯ ಜೇಲಿಗೆ ಮತ್ತೆ ಮೆರವಣಿಗೆ

ಯರವಡೆಯ ಜೇಲಿಗೆ ಮತ್ತೆ ಮೆರವಣಿಗೆಯನ್ನು ತೆಗೆದುಕೊಂಡು ಹೋಗತಕ್ಕದ್ದಾಗಿ ಪುಣೆಯಲ್ಲಿಯ ತರುಣರು ನಿರ್ಧರಿಸಿಕೊಂಡಿದ್ದು, ಆ ಬಗ್ಗೆ ಒಂದು ಯುದ್ಧ ಮಂಡಳವನ್ನಾದರೂ ಏರ್ಪಡಿಸಿಕೊಂಡಿದ್ದಾರೆ, ಕ್ಯಾಂಟೋನಮೆಂಟದಲ್ಲಿ ಸಭೆ ಹಾಗು ಮೆರವಣಿಗೆಗಳನ್ನು ಜರುಗಿಸಕೂಡದೆಂದು ಮ್ಯಾಜಿಸ್ಟ್ರೇಟರು ತೆಗೆದ ಕಟ್ಟಪ್ಪಣೆಯನ್ನೂ ಅಲ್ಲಿಯ ಸ್ವಯಂಸೇವಕರು ಮುರಿಯುವವರಿದ್ದಾರೆ.

## ತಾರೀಖು ೨೭ ರಿಂದ ೨ ನೆಯ ತಾರೀಖಿನ ವರೆಗೆ

# ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಪ್ತಾಹ

ಜುಲೈ ೨೭ ತಾರೀಖಿನಿಂದ ಆಗಸ್ಟ ೨ ನೇ ತಾರೀಖಿನ ವರೆಗೆ 'ಸ್ವಾತಂತ್ರ್ಯ ಸಪ್ತಾಹ' ವನ್ನು ಆಚರಿಸಬೇಕೆಂದು ನಿರ್ಣಯಿಸಲ್ಪಟ್ಟಿದೆ. ಅದರ ಕಾರ್ಯಕ್ರಮವನ್ನು ಈ ಕೆಳಗೆ ಕೊಟ್ಟಿದೆ.

### ಕಾರ್ಯಕ್ರಮ

| | |
|---|---|
| ರವಿವಾರ ೨೭ ನೇ ಜುಲೈ | ರಾಷ್ಟ್ರಧ್ವಜಾಭಿವಂದನ |
| ಸೋಮವಾರ ೨೮ ನೇ ಜುಲೈ | ರಾಟಿ ಮತ್ತು ತಕಲಿ ದಿನ |
| ಮಂಗಳವಾರ ೨೯ " " | ಮಂಗಳೂರ ದಿನ |
| ಬುಧವಾರ ೩೦ " " | ಬಹಿಷ್ಕಾರ ದಿನ |
| ಗುರುವಾರ ೩೧ " " | ಸ್ವಾತಂತ್ರ್ಯ ಸಮರದಲ್ಲಿ ಮಡಿದವರ ದಿವಸ |
| ಶುಕ್ರವಾರ ೧ ನೇ ಆಗಸ್ಟ | ಲೋಕಮಾನ್ಯ ಟಿಳಕರ ದಿನ |
| ಶನಿವಾರ ೨ " " | ಸವಿನಯ ಕಾಯದೆಭಂಗ ದಿನ |

ಪ್ರತಿದಿನ ಮುಂಜಾನೆ ಅಥವಾ ಸಾಯಂಕಾಲ ಮೆರವಣಿಗೆ ಮತ್ತು ಸಾಯಂಕಾಲ ಆ ಆ ವಿಷಯಗಳ ಮೇಲೆ ಜಾಹೀರ ವ್ಯಾಖ್ಯಾನಗಳನ್ನೇರ್ಪಾಡ ಮಾಡಬೇಕು.

ಕರ್ನಾಟಕದಲ್ಲಿಯ ಕಾಂಗ್ರೆಸ ಕಮಿಟಿಗಳು, ಸತ್ಯಾಗ್ರಹ ಮಂಡಲಗಳು, ತರುಣ ಸಂಘಗಳು, ಭಗಿನಿ ಮಂಡಳ ಮತ್ತು ಇನ್ನುಳಿದ ಬೇರೆ ಸಂಘದವರು ಅತ್ಯಂತ ಉತ್ಸಾಹದಿಂದ ತಮ್ಮ ತಮ್ಮ ಗ್ರಾಮಗಳಲ್ಲಿ ಸ್ವಾತಂತ್ರ್ಯ ಸಪ್ತಾಹ ನೆರವೇರಿಸಬೇಕು.

ರಾಷ್ಟ್ರಧ್ವಜಾಭಿವಂದನ ದಿನ, ರಾಷ್ಟ್ರಧ್ವಜಗಳು, ಬಿಲ್ಲೆಗಳು ಅಲ್ಲಲ್ಲಿ ಮಾರಲ್ಪಟ್ಟು ರಾಷ್ಟ್ರಧ್ವಜವನ್ನು ಜನಸಾಮಾನ್ಯರಲ್ಲೆಲ್ಲ ಪ್ರಸಾರ ಮಾಡಬೇಕು. ಅವತ್ತಿನ ದಿವಸ ಎಲ್ಲ ಸಾರ್ವಜನಿಕ ಸಂಸ್ಥೆಗಳ ಮೇಲೆ ರಾಷ್ಟ್ರಧ್ವಜವನ್ನೇರಿಸಬೇಕಾಗಿ ಪ್ರಾರ್ಥನೆ.

ಹುಬ್ಬಳ್ಳಿ } ನಾರಾಯಣ ಸುಬ್ಬರಾವ ಹರ್ಡೀಕರ
ಅಧ್ಯಕ್ಷ
೧೪-೭-೩೦ } ಕರ್ನಾಟಕ ಸತ್ಯಾಗ್ರಹ ಮಂಡಳ

---

ಜಮಖಂಡಿಯ

## ಡಾ. ಹಲ್ಯಾಳರು ಕಾಯದೆ ಮುರಿದರು

ಅಪ್ಪಣೆಯಿಲ್ಲದೆ ಸಭೆಗಳನ್ನು ಮಾಡಕೂಡದಾಗಿ ಈ ರಾಜ್ಯದ ಅಧಿಪತಿಗಳು ಹೊರಡಿಸಿದ ಕಟ್ಟಪ್ಪಣೆಯು ಈಗ ಪ್ರತಿನಿತ್ಯದಲ್ಲಿಯೂ ಮುರಿಯಲ್ಪಡುತ್ತಿದೆ. ತಾ|| ೯ ನೆಯ ದಿವಸ ಜಮಖಂಡಿಯ ಡಾ|| ಹಲ್ಯಾಳರೂ ಮತ್ತು ಸಾಠಾರೆಯವರೂ ಮುಂದಾಳುಗಳೂ "ಸ್ವದೇಶಿ"ಯ ಬಗ್ಗೆ ಭಾಷಣಗಳನ್ನು ಮಾಡಿ ಕಾಯದೆ ಭಂಗ ಮಾಡಿದರು.

ಕೊಯಿಮುತ್ತೂರಿನ

## ಶ್ರೀಮತಿ ಮೀನಾಕ್ಷಮ್ಮನವರಿಗೆ

### ೬ ತಿಂಗಳ ಶಿಕ್ಷೆ

ಕಾಯದೆಭಂಗ ಚಳವಳಿಯಲ್ಲಿ ಸೇರಲು ಪೋಲೀಸರಿಗೆ ಪ್ರೋತ್ತೇಜನವನ್ನು ಕೊಟ್ಟರೆಂಬ ಆರೋಪದಿಂದ ಅಧಿಕಾರಿಗಳು ಶ್ರೀಮತಿ ಮೀನಾಕ್ಷಿ ಅಮ್ಮನವರನ್ನು ಕೊಯಿಮುತ್ತೂರಿನಲ್ಲಿ ಸೆರೆಹಿಡಿದು ಅವರಿಗೆ ೬ ತಿಂಗಳ ಶಿಕ್ಷೆಯನ್ನು ವಿಧಿಸಿದರು. ಇವರು ಸಿಲೋನ ಕಾಯದೆ ಕೌನ್ಸಿಲದ ಸಭಾಸದರಾಗಿರುವ ಶ್ರೀ ನಟೇಶ ಅಯ್ಯರರ ಪತ್ನಿಗಳಾಗಿರುವರು.

## ಕಾಯದೆಭಂಗದ ಮೂಲಕವಾಗಿ

### ಮುಂಬಯಿ ಸರಕಾರಕ್ಕೆ ೨೦ ಲಕ್ಷ ರು. ಹೆಚ್ಚಿನ ಖರ್ಚು

ಮುಂಬಯಿ ಇಲಾಖೆಯಲ್ಲಿ ಅತ್ಯಂತ ಜೋರಿನಿಂದ ನಡೆದ ಕಾಯದೆಭಂಗ ಚಳವಳಿಯ ಮೂಲಕವಾಗಿ ಸರಕಾರಕ್ಕೆ ಹೆಚ್ಚಿನ ಖರ್ಚು ತಗಲುತ್ತಿದೆ. ಈ ಖರ್ಚಿನ ಬಗ್ಗೆ ಕಾಯದೆ ಮಂಡಳದ ಸಮ್ಮತಿಯನ್ನು ದೊರಕಿಸಿಕೊಳ್ಳುವದಕ್ಕಾಗಿ ಮುಂಬಯಿ ಕಾಯದೆ ಮಂಡಳದಲ್ಲಿ ಗೃಹಮಂತ್ರಿಗಳು ಎರಡು ಸೂಚನೆಗಳನ್ನು ಮಂಡಿಸತಕ್ಕವರಿದ್ದು, ಅವರು "ಕಾಯದೆ ಭಂಗದ ಚಳವಳಿಯನ್ನು ಎದುರಿಸುವದಕ್ಕಾಗಿ ಪ್ರತಿಯೊಂದು ಜಿಲ್ಹೆಯಲ್ಲಿಯೂ ಈಗ ಪೋಲೀಸರನ್ನು ಹೆಚ್ಚಾಗಿ ನಿಯಮಿಸಿಕೊಂಡಿದೆ. ಇದಲ್ಲದೆ ಕೆಲವು ಪೋಲೀಸ ಅಧಿಕಾರಿಗಳ ಸಂಬಳವನ್ನು ಹೆಚ್ಚಿಸಿರುತ್ತದೆ. ಈ ಬಗ್ಗೆ ೧೪,೯೯,೨೦೦ ರೂ. ಗಳ ವೆಚ್ಚವು ತಗುಲಬಹುದಾಗಿ ತೋರುತ್ತದೆ" ಎಂದು ಒಂದರಲ್ಲಿಯೂ, "ಸತ್ಯಾಗ್ರಹ ಚಳವಳಿಯ ಮೂಲಕವಾಗಿ ಜನರು ಜೇಲುಗಳಲ್ಲಿ ಬಂದು ತುಂಬ ಹತ್ತಿದ್ದಾರೆ. ಅವರಿಗೆ ಜೇಲಿನಲ್ಲಿ ಅನ್ನ ನೀರು ಮೊದಲಾದವುಗಳನ್ನು ಪೂರೈಸುವದಕ್ಕಾಗಿಯೂ ಮತ್ತು ಇನ್ನೂ ಹೆಚ್ಚು ಹೆಚ್ಚಾಗಿ ಸೆರೆಯಾಗುತ್ತಿರುವ ಜನರಿಗೆ ಜೇಲುಗಳು ಸಾಕಾಗುವಂತೆ ಏರ್ಪಾಟು ಮಾಡುವದಕ್ಕಾಗಿಯೂ ೬,೧೫,೦೦೦ ರೂ. ಗಳ ವೆಚ್ಚವು ಹತ್ತಬಹುದು." ಎಂದು ಮತ್ತೊಂದರಲ್ಲಿಯೂ ಧ್ವನಿತ ಮಾಡಿದ್ದಾರೆ.

ಪಂಜಾಬದಲ್ಲಿ ಕರನಿರಾಕರಣೆ

## ೪೦ ಜನರಿಗೆ ಕೈದು ೧೦ ಜನರಿಗೆ ಶಿಕ್ಷೆ

ಪಂಜಾಬ ಪ್ರಾಂತ್ಯಕ್ಕೆ ಸೇರಿದ ಶೇಖುಪುರದಲ್ಲಿ ಕರನಿರಾಕರಣೆಯ ಚಳವಳಿಯು ಜೋರಿನಿಂದ ಸಾಗಿದ್ದುದರಿಂದ ಅಲ್ಲಿ ಅಧಿಕಾರಿಗಳ ಆಟವು ನಡೆಯದಂತಾಗಿದೆ. ಈ ಅಪರಾಧಕ್ಕಾಗಿ ಅಲ್ಲಿ ೪೦ ಜನರು ಸೆರೆ ಹಿಡಿಯಲ್ಪಟ್ಟಿದ್ದಾರೆ. ೧೦ ಜನರಿಗೆ ಶಿಕ್ಷೆಯಾಗಿದೆ. ಶಿಕ್ಷೆಗೆ ಒಳಗಾದವರಲ್ಲಿ ಆ ಊರಿನ ಗೌಡನೂ ಇರುವನು.

ಬೆಳಗಾವಿ ಜಿಲ್ಹೆಯಲ್ಲಿ

# ದಬ್ಬಾಳಿಕೆಯ ರಕ್ಕಸನ ಹಾವಳಿಯು

## ೨೦ ಜನರಿಗೆ ಶಿಕ್ಷೆ- ೨೭ ಜನರಿಗೆ ಕೈದು.

ಬೆಳಗಾವಿಯಲ್ಲಿ ಸಿಂದೀ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದುದಕ್ಕಾಗಿ ಶ್ರೀ ದೊಡ್ಡಣ್ಣವರ ಶಾಸ್ತ್ರಿ, ಬೇಡಗೇರಿ ಈ ಮೂವರಿಗೆ ೧೪ ದಿನಗಳ ಶಿಕ್ಷೆಯಾಯಿತು. ಮೇಲಿನ ಅಪರಾಧಕ್ಕಾಗಿಯೆ ಬಹಾದ್ದೂರ ಕೋಬ್ರೆ, ಶಿರೋಳಕರ ಅಂಗಡಿ, ಪಾಟೀಲ, ಧಾಳಿ, ವೇಣೇಕರ ಇವರುಗಳು ತಾ|| ೧೫ಕ್ಕೆ ಸೆರೆ ಹಿಡಿಯಲ್ಪಟ್ಟಿದ್ದಾರೆ. ವಿಷ್ಣು ಚಿಕೋಡಿ, ಮದನ ಕಾಳೆ, ಮಾಧವ [illegible], ಗಣಪತ ದೇವಲಾಪೂರ, ನರಸಿಂಹ ಕೌಲಗಿ ಹಾಗು [illegible] ಇವರಿಗೆ ಕಲ್ಲೊಳ್ಳಿ ಪತ್ರಿಂದ ಸಿಂದೀ ಗಿಡ ಕಡಿದುದರ ಬಗ್ಗೆ ೩ ತಿಂಗಳ [illegible] ಶಿಕ್ಷೆಯೂ, ಶ್ರೀ ಧವಳೆಯವರಿಗೆ ೬ ವಾರಗಳ ಶಿಕ್ಷೆಯೂ ಆಯಿತು.

ಈಚಲ ಗಿಡಗಳನ್ನು ಕಡಿದರೆಂಬ ಆರೋಪದಿಂದ ಶ್ರೀ ಸಂಗಪ್ಪ [illegible], ಶ್ರೀನಿವಾಸರಾವ ಅಪ್ಪಾಜಿ, ಭೀ. ದೇಶಪಾಂಡೆ, ಅಲ್ಲಿಸಾಹೇಬ, ಗಂಗಪ್ಪ ಉಪ್ಪಾರ, [illegible] ಶಾಸ್ತ್ರಿ, ಅಧ್ಯಾಪಕ ಮಹಾಲಿಂಗರಾವ, ಬಸವಂತಪ್ಪ, ಸಣ್ಣಬಸಪ್ಪ, ಹುಚ್ಚಪ್ಪ, ಲಕ್ಷ್ಮಣ ದೀಕ್ಷಿತ, ಇವರು ಜನರನ್ನು [illegible] ಯಲ್ಲಿ ಸೆರೆ ಹಿಡಿಯಲಾಗಿದೆ. ಅಕ್ಕಪಕ್ಕದ [illegible] ಮೇಲಿನ ಅಪರಾಧಕ್ಕಾಗಿ ಜನರನ್ನು ಸೆರೆಹಿಡಿದು ಪೊಲೀಸರು ಮೇಲೆ ಬಿಟ್ಟಿದ್ದಾರೆ [illegible] ಶ್ರೀ ಶಾಂತಿನಾಥ [illegible] ಅವರಿಗೆ ೪ ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿದೆ. [illegible] ಸಾರ್ವಜನಿಕ ಬಸಪ್ಪ [illegible], ಪ್ರಹ್ಲಾದರಾವ [illegible], ಹಾಗು [illegible] ಇವರನ್ನು ತಾ|| ೧೨ ರಿಂದ ಈ ದಿನಗಳಲ್ಲಿ ಕೈದು ಮಾಡಿದ್ದಾರೆ. ಅಲ್ಲಿ ಇನ್ನೂ ೭-೮ ಜನರನ್ನು ಸೆರೆ ಹಿಡಿಯುವರೆಂದು ತಿಳಿಯುತ್ತದೆ. ಮಂಗಸೂಳಿಯ ಮಾಧವ ವೆಂಕಟೇಶ ಮಂಗಸೂಳಿಯವರಿಗೆ ೧೪ ದಿವಸಗಳ ಶಿಕ್ಷೆಯಾಗಿದೆ. ಸಂದರ್ಭದ ಪಿಕೆಟಿಂಗ [illegible] ಆರೋಪದಿಂದ ಶ್ರೀ ಮಾಧವ ಶ್ರೀಧರ [illegible] ಕೃಷ್ಣಾಜಿ [illegible], ಲಕ್ಷ್ಮಣ [illegible] [illegible] ಧೋಂಡ, ರಾಮಚಂದ್ರ ಗೋಡಬೋಲೆ, ಗೋವಿಂದ [illegible] ಇವರಿಗೆ ೧|| ತಿಂಗಳ ಸಾದಾ ಶಿಕ್ಷೆ ವಿಧಿಸಲ್ಪಟ್ಟಿದೆ. ಅಥಣಿಯಲ್ಲಿ ಸಿಂದೀ ಗಿಡಗಳನ್ನು ಕಡಿದುದಕ್ಕಾಗಿ ೭ ಜನರು ಸೆರೆ [illegible] ದ್ದಾರೆ. [illegible] ೨೧ [illegible] ೧೪ ದಿನ ಸಾದಾ ಶಿಕ್ಷೆಯಾಗಿದೆ.

### ನಾಸಿಕದ ಸೀತಾರಾಮ ಶಾಸ್ತ್ರಿಗಳಿಗೆ ಶಿಕ್ಷೆ

ನಾಸಿಕದ ಶ್ರೀ ಸೀತಾರಾಮ ಶಾಸ್ತ್ರಿಗಳಿಗೆ ಕಾಯದೆಭಂಗದ ಮೂಲಕವಾಗಿ ೭ ತಿಂಗಳ ಸಶ್ರಮಶಿಕ್ಷೆಯು ವಿಧಿಸಲ್ಪಟ್ಟಿದೆ

### ದಬ್ಬಾಳಿಕೆಯ ಬಕಾಸುರನಿಗೆ

ಮುಂಬಯಿಯಿಂದ ೧೪೫೭ ಜನರ ಬಲಿದಾನ.

ಸತ್ಯಾಗ್ರಹ ಚಳವಳಿಯು ಪ್ರಾರಂಭವಾದಂದಿನಿಂದ ಈ ವರೆಗೆ ಅಂದರೆ ಎಪ್ರಿಲ್ ತಾ|| ೭ ರಿಂದ ಜುಲೈ ೧೫ ನೆಯ ತಾರೀಖಿನ ವರೆಗೆ ಮುಗಿಯುವ ಅವಧಿಯಲ್ಲಿ ಕೇವಲ ಮುಂಬಯಿ ಪಟ್ಟಣದಲ್ಲಿ ಉಪ್ಪಿನ ಕಾಯದೆಭಂಗಕ್ಕಾಗಿ ೭೪೩ ಜನರಿಗೂ, ಪರದೇಶಿ ಬಟ್ಟೆಗಳ ಅಂಗಡಿಗಳ ಪಿಕೆಟಿಂಗಕ್ಕಾಗಿ ೬೧೭ ಜನರಿಗೂ, ಸಿಂದೀ ಅಂಗಡಿಗಳ ಮುಂದಿನ ಕಾವಲಿಕ್ಕಾಗಿ ೫೭ ಜನರಿಗೂ, ಹಾಗು ಯುದ್ಧ ಮಂಡಳದ ೪೦ ಜನ ಅಧಿಕಾರಿಗಳಿಗೂ ಶಿಕ್ಷೆಗಳಾಗಿವೆ. ಹೀಗೆ ಒಟ್ಟಿಗೆ ಮುಂಬಯಿ ಪಟ್ಟಣವು ದಬ್ಬಾಳಿಕೆಯ ಬಕಾಸುರನಿಗೆ ೧೪೫೭ ಜನರ ಬಲಿ ಕೊಟ್ಟಿದೆ.

ಹುಬ್ಬಳ್ಳಿಯ

### ಜೋಶಿ ವಕೀಲರ ಮೇಲೆ ವಾರಂಟು

ಹುಬ್ಬಳ್ಳಿಯ ಶ್ರೀ ವಿಶ್ವನಾಥರಾವ ಜೋಶಿ ವಕೀಲರು ಕಾರವಾರ ಜಿಲ್ಹೆಯಲ್ಲಿ ಅಪರಾಧಾತ್ಮಕವಾದ ಭಾಷಣ ಮಾಡಿದರೆಂಬ ಆರೋಪದಿಂದ ಅವರ ಮೇಲೆ ಪಿನಲ್ ಕೋಡಿನ ೧೨೪ನೆಯ ಕಲಮಿನ ಅನ್ವಯ ವಾರಂಟು ಹೊರಟಿರುತ್ತದೆಂದು ತಿಳಿಯುತ್ತದೆ.

ಶುದ್ಧಖಾದಿ! ಶುದ್ಧಖಾದಿ!

ಕೈನೂಲಿನ ಎಲ್ಲ ನಮೂನೆಯ ಶುದ್ಧ ಖಾದಿಕೊಳ್ಳಬಿಚ್ಛಿಸುವ ಗ್ರಾಹಕರು ತ್ವರೆಮಾಡಬೇಕು. ಯೋಗ್ಯ ಬೆಲೆಯಿಂದ ಖಾದಿಯು ಇಲ್ಲಿ ಮಾರಲ್ಪಡುವದು.

ಪತ್ತೆ:—ರಾಮಚಂದ್ರ ಬಾಸುತಕರ.

ಪ್ರೊ:—ಶ್ರೀಮತ್ ವಿವೇಕಾನಂದ ವಿಜಯ ಖಾದಿ

ವಸ್ತ್ರಭಾಂಡಾರ. c/o

ಬಾಗಲಕೋಟ. ಭೀಮರಾವ ರ್‍ಯಾಗಾಪೆ ಟೇಲರ.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಕೈನೂಲು ಕೈಮಗ್ಗದ ಶರ್ಟಿಂಗ, ಕೋಟಿಂಗ, ಧೋತರ ಮೊದಲಾದ ಎಲ್ಲ ತರದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಗ್ರಾಹಕರು ಲಾಭ ಪಡೆಯಬೇಕಾಗಿ ವಿನಂತಿ

ಶಂಕರಪ್ಪಾ ಬಣಗಾರ

ಜವಳ ವ್ಯಾಪಾರಿಗಳು, ಬಾಗಲಕೋಟೆ

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾಲಕ್ಷ್ಮಿ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ

यद्यत परवशं दु:खं । यद्यदात्मवशं सुखम ।। — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ರವಿವಾರ ಮಿತಿ ಆಷಾಢ ಬಹುಳ ೯ ಶಕೆ ೧೮೫೨ ತಾ|| ೨೦—೭—೩೦ [ ಸಂಚಿಕೆ ೧೦೫

## ಮುದ್ರಣ ಬಕಾಸುರನಿಗೆ

# 'ಕರ್ನಾಟಕ ಧುರೀಣದ' ಆಹುತಿಯು

ಕುಮಟೆಯಲ್ಲಿ ಶ್ರೀ ಗಣೇಶ ರಾವ ಯಾಜಿಯವರ ಸಂಪಾದಕತ್ವದಲ್ಲಿ ಪ್ರಸಿದ್ಧವಾಗುತ್ತಿದ್ದ ರಾಷ್ಟ್ರೀಯ ಪಕ್ಷದ ಪ್ರಮುಖ ವಾರಪತ್ರಿಕೆಯಾದ "ಕರ್ನಾಟಕ ಧುರೀಣ"ಕ್ಕೆ ವೃತ್ತಪತ್ರ ದಬ್ಬಾಳಿಕೆಯ ಕಾನೂನಿಗನುಸಾರವಾಗಿ ತಾ। ೧೬ಕ್ಕೆ ಅಡವು ಕೇಳಲ್ಪಟ್ಟಿದೆ. ಕಾರವಾರ ಜಿಲ್ಲೆಯ ಎರಡು ಪತ್ರಿಕೆಗಳು ಮುದ್ರಣ ಬಕಾಸುರನಿಗೆ ಬಲಿಯಾದಂತಾದವು.

---

### ಮುಂಬಯಿಯ

## 'ನವಾಕಾಳ'ಕ್ಕೆ ೫೦೦೦ ರು. ಗಳ ಅಡವು

ವೃತ್ತಪತ್ರ ದಬ್ಬಾಳಿಕೆಯ ಕಾನೂನಿಗನುಸಾರವಾಗಿ ತಾ|| ೧೭ ನೆಯ ದಿವಸ ಮುಂಬಯಿಯಲ್ಲಿಯ ದೈನಿಕ ಪತ್ರಿಕೆಯಾದ "ನವಾಕಾಳ"ದ ಸಂಪಾದಕರಾದ ಶ್ರೀ. ಖಾಡಿಲಕರರಿಗೆ ಅವರ ಪತ್ರಿಕೆ ಹಾಗು ಮುದ್ರಣಾಲಯಗಳ ಬಗ್ಗೆ ಬೇರೆ ಬೇರೆಯಾಗಿ ೨೫೦೦ ರು. ಗಳ ಎರಡು ಅಡವುಗಳು ಕೇಳಲ್ಪಟ್ಟಿದ್ದರಿಂದ ಶ್ರೀ. ಖಾಡಿಲಕರರು ತಾ|| ೧೮ ನೆಯ ದಿವಸ ಚೀಫಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಿಗೆ ಹೋಗಿ ೫೦೦೦ ರು. ಗಳನ್ನು ಕೊಟ್ಟರೆಂಬಾಗಿ ತಿಳಿಯುತ್ತದೆ.

---

## ಉಪ್ಪಿನ ಅಧಿಕಾರಿಯು ರಾಜೀನಾಮೆ ಕೊಟ್ಟನು

ಮದ್ರಾಸ ಇಲಾಖೆಯ ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿ ಉಪ್ಪಿನ ಖಾತೆಯಲ್ಲಿ ಕೆಲಸಮಾಡುತ್ತಿದ್ದ ಶ್ರೀ ದುರ್ಗಾಪ್ರಸಾದರು ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸಿ ತಮ್ಮ ಉದ್ಯೋಗಕ್ಕೆ ಶರಣು ಹೊಡೆದಿದ್ದಾರೆ. ಮದ್ರಾಸ ಸರಕಾರದವರು ಅವರ ರಾಜೀನಾಮೆಯನ್ನು ಸ್ವೀಕರಿಸಿ, ಅವರನ್ನು ಇನ್ನು ಮುಂದೆ ಯಾವ ಸರಕಾರಿ ಹುದ್ದೆಯ ಮೇಲೆಯೂ ನಿಯಮಿಸಿಕೊಳ್ಳತಕ್ಕದ್ದಲ್ಲವಾಗಿ ಅಪ್ಪಣೆಯನ್ನು ತೆಗೆದಿದ್ದಾರೆ.

### ಕಾಯದೆ ಮಂಡಳಕ್ಕೆ ರಾಜೀನಾಮೆ.

ಸರಕಾರದ ದಬ್ಬಾಳಿಕೆಗೆ ಬೇಸತ್ತು ನಡಿಯಾದದ ಶ್ರೀ ಎಮ್. ಎಚ್. ಶಹಾರವರು ಮುಂಬಯಿ ಕಾಯಿದೆ ಮಂಡಳದ ಸಭಾಸದತ್ವಕ್ಕೆ ಶರಣು ಹೊಡೆದಿದ್ದಾರೆ.

### ಡಾ. ಪಟವರ್ಧನ ಹಾಗು ಸೋಮಣರಿಗೆ ಶಿಕ್ಷೆ.

### ಶ್ರೀಮತಿ ದುರ್ಗಾಬಾಯಿಯವರು ನೇತೃಗಳಾದರು.

ಅಮರಾವತಿಯ ಡಾ. ಪಟವರ್ಧನ ಹಾಗು ಸೋಮಣರಿಗೆ ೧ ವರ್ಷ ಸಾದಾ ಶಿಕ್ಷೆಯು ಆಯಿತು. ಅಕೋಲೆಯ ಶ್ರೀಮತಿ ದುರ್ಗಾಬಾಯಿ ಜೋಶಿಯವರು ಸತ್ಯಾಗ್ರಹಿಗಳ ಎರಡನೆಯ ತಂಡದ ನೇತೃತ್ವವನ್ನು ಸ್ವೀಕರಿಸಿದ್ದು, ಅವರು ನಿನ್ನೆ ಅಡವಿಯ ಕಟ್ಟಳೆಯನ್ನು ಮುರಿಯುವವರಿದ್ದರು.

### ಗುಂಟೂರಿನಲ್ಲಿ

## ಗಾಂಧಿ ಟೊಪ್ಪಿಗೆಯ ಸತ್ಯಗ್ರಹ

### ೪ ಜನರಿಗೆ ಕೈದು.

ಗುಂಟೂರಿನ ಅಧಿಕಾರಿಗಳು ಗಾಂಧಿಟೊಪ್ಪಿಗೆಯ ವಿರುದ್ಧವಾಗಿ ಹೊರಡಿಸಿದ ಕಟ್ಟಳೆಯು ಬಹುದಿನಕ್ಕ ಅಲ್ಲಿ ಜಾರಿಗೆ ಹತ್ತಿದೆ. ತಾ|| ೧೬ ನೆಯ ದಿವಸ ೪ ಜನ ಸ್ವಯಂಸೇವಕರು ಗಾಂಧಿ ಟೊಪ್ಪಿಗೆಗಳನ್ನು ಧರಿಸಿಕೊಂಡು ಪೋಲೀಸ ಕೋರ್ಟಿನೆದುರಿಗೆ ಸುಳಿದಾಡಿದರು. ಕೂಡಲೇ ಅಧಿಕಾರಿಗಳು ಅವರನ್ನು ಸೆರೆಹಿಡಿದರು.

---

ಕ್ರಿ. ಲಾ. ಅಮೆಂಡಮೆಂಟ ಕಾಯಿದೆಯ ೧೭ ನೆಯ ಕಲಮಿನ ಪ್ರಕಾರವಾಗಿ ಪಂಡಿತ ಮೋತೀಲಾಲ ಮತ್ತು ಡಾ. ಸಯ್ಯದ ಮಹಮ್ಮದ ಇವರ ಮೇಲೆ ವಿಚಾರಣೆಯ ಕಾಲಕ್ಕೆ ಹೊರಿಸಿದ ಆರೋಪವನ್ನು ಅಲಹಾಬಾದ ಹೈಕೋರ್ಟಿನವರು ತೆಗೆದು ಒಗೆದಿದ್ದಾರೆ. ಅವರಮೇಲೆ ಎರಡು ಆರೋಪಗಳು ಇದ್ದವು.

## ಗದುಗಿನಲ್ಲಿ
## ನರಗುಂದ ಬಂಡಾಯ'ದಾಟಕ್ಕೆ ಅಡ್ಡಿ

ನಾಟಕಕಾರರೆಂದು ಹೆಸರು ಪಡೆದ ಗದುಗಿನ ಶ್ರೀ ಹುಯಿಲಗೋಳ ಪಂಡಿತರಾಯರಿಂದ ರಚಿತವಾಗಿರುವ “ನರಗುಂದ ಬಂಡಾಯ” ವೆಂಬ ನಾಟಕವನ್ನು ಗದುಗಿನ ರಂಗಭೂಮಿಯ ಮೇಲೆ ಪ್ರಯೋಗಿಸಲಿಚ್ಛಿಸಿದ ನಾಟ್ಯ ಸೇವಕರಿಗೆ ಹಾಗೆ ಮಾಡಲು ಅಲ್ಲಿಯ ಅಧಿಕಾರಿಗಳು ಅಪ್ಪಣೆಯನ್ನು ಕೊಡಲಿಲ್ಲವಂತೆ! ಕನ್ನಡಿಗರೇ, ಇಷ್ಟು ದಿನಗಳ ವರೆಗೆ ನೀವು ಕನ್ನಡದಲ್ಲಿ ಐತಿಹಾಸಿಕ ನಾಟಕಗಳೇ ಇಲ್ಲವೆಂದು ಆತಂಕವನ್ನು ಪಡುತ್ತಿದ್ದಿರಲ್ಲವೆ? ಹೇಳಿರೀಗೇನು ಮಾಡುವಿರಿ! ದೇವರು ವರ ಕೊಟ್ಟರೂ ಪೂಜಾರಿಯು ವರ ಕೊಡಲಿಲ್ಲವೆಂಬಂತಾಗಿದೆ.

### ಕೋರ್ಟುಗಳಲ್ಲಿ ಗಾಂಧಿ ಟೊಪ್ಪಿಗೆ

ಕೊಲಾಬಾ ಮತ್ತು ಠಾಣೆಯ ವಕೀಲರ ಪರಿಷತ್ತಿನಲ್ಲಿಯ ನಿರ್ಣಯವನ್ನನುಸರಿಸಿ, ರೋಹಾದಲ್ಲಿಯ ಎಲ್ಲ ವಕೀಲರೂ ತಮ್ಮ ತಲೆಗಳ ಮೇಲೆ ಗಾಂಧಿಯ ಟೊಪ್ಪಿಗೆಗಳನ್ನೇ ಹಾಕಿಕೊಂಡು ಕೋರ್ಟುಗಳಿಗೆ ಹೋಗುತ್ತಿರುವರು.

### ಸ್ತ್ರೀಯರಿಗೂ ಕಠಿಣ ಶಿಕ್ಷೆ

೧೪೪ ನೆಯ ಕಲಮಿನ ಅನ್ವಯ ಹೊರಟ ಕಟ್ಟಪ್ಪಣೆಯನ್ನು ಮುರಿದುದಕ್ಕಾಗಿ ಮದ್ರಾಸ ಇಲಾಖೆಗೆ ಸೇರಿದ ಎಲ್ಲೂರಿನ ಶ್ರೀಮತಿ ಪಿಚ್ಚಮ್ಮನವರಿಗೂ ಮತ್ತು ಓರ್ವ ಸ್ವಯಂಸೇವಿಕೆಗೂ ೬ ತಿಂಗಳದ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ

## ಬೆಳಗಾವಿಯ ಮ್ಯಾಜಿಸ್ಟ್ರೇಟರು ಸಿಂದಿಪಾನಕ್ಕೆ ಸಹಾಯ ಮಾಡಹತ್ತಿದರು.

ಬೆಳಗಾವಿ ಜಿಲ್ಲೆಯಲ್ಲಿ ಸಿಂದೀ ಅಂಗಡಿಗಳ ಮುಂದೆ ಪಿಕೆಟಿಂಗ ಜೋರಿನಿಂದ ನಡೆದಿದ್ದುದರಿಂದ ಅಲ್ಲಿ ಸಿಂದಿಯ ವ್ಯಾಪಾರವು ಕಡಿಮೆಯಾಗಹತ್ತಿದೆ. ಅಲ್ಲಿ ಸಿಂದೀ ಅಂಗಡಿಗಳನ್ನು ಹಿಡಿದವರಿಗೆ ಅತ್ಯಂತ ಹಾನಿಯಾಗಹತ್ತಿದೆ. ಹಾನಿಯನ್ನು ತಪ್ಪಿಸಿಕೊಳ್ಳುವದಕ್ಕಾಗಿ ಕೆಲವು ಅಂಗಡಿಕಾರರು ಸರಕಾರಿ ನಿಯಮಗಳನ್ನು ಬದಿಗೊತ್ತಿ ಅಂಗಡಿಗಳನ್ನು ಬಹಳ ಹೊತ್ತಿನ ವರೆಗೆ ತೆರೆದಿಟ್ಟು ವ್ಯಾಪಾರ ಮಾಡುವದನ್ನು ನಡಿಸಿರುವರು. ನಿಪ್ಪಾಣಿಯ ಸಿಂದಿಯ ಅಂಗಡಿಯವರೊಬ್ಬರನ್ನು ಮೇಲಿನವರಲ್ಲಿ ಎಣಿಸಬಹುದು. ಅವರು ಸರಕಾರಿ ನಿಯಮವನ್ನು ಬದಿಗೊತ್ತಿ ಗೊತ್ತು ಮಾಡಿದ ವೇಳೆಗಿಂತ ಬೇಗನೆ ಅಂಗಡಿಯನ್ನು ತೆರೆಯುವದಲ್ಲದೆ ಗೊತ್ತು ಮಾಡಿದ ವೇಳೆಗಿಂತ ತಡಮಾಡಿ ಅಂಗಡಿಯನ್ನು ಮುಚ್ಚುತ್ತಿರುವರು. ಇದನ್ನು ಕಂಡು ನಿಪ್ಪಾಣಿಯ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು ಅಂಗಡಿಯವನ ಈ ವರ್ತನವನ್ನು ಬೆಳಗಾವಿಯ ಮ್ಯಾಜಿಸ್ಟ್ರೇಟರಿಗೆ ತಿಳಿಸಿದರು. ಅದಕ್ಕೆ ಉತ್ತರವಾಗಿ ಸಿಂದೀ ಅಂಗಡಿಯ ಮುಂದೆ ಪಿಕೆಟಿಂಗ ಮಾಡುತ್ತಿರುವದನ್ನು ನಿಲ್ಲಿಸಿದಲ್ಲಿ ಮಾತ್ರ ಯೋಗ್ಯ ವ್ಯವಸ್ಥೆಯು ಮಾಡಲ್ಪಡುವದೆಂಬುದಾಗಿ ಮ್ಯಾಜಿಸ್ಟ್ರೇಟರು ತಿಳಿಸಿದ್ದಾರಂತೆ! ಭಪ್ಪರೆ, ಮ್ಯಾಜಿಸ್ಟ್ರೇಟರೇ!

## ಢಾಕಾದಲ್ಲಿ ನಾದಿರಶಾಹಿಯ ರಾಜ್ಯ

ಕೆಲವು ದಿನಗಳ ವರೆಗೆ ಢಾಕಾ ಪಟ್ಟಣವು ಪುಂಡುಗಾರರ ಆಳಿಕೆಗೆ ಒಳಗಾಗಿತ್ತು. ಆ ಸಮಯದಲ್ಲಿ ಅಲ್ಲಿ ನಡೆದ ಅತ್ಯಾಚಾರಗಳನ್ನು ನಾದಿರಶಹನ ದಾಳಿಗೆ ಹೋಲಿಸಬಹುದಾಗಿದೆ. ಅರಸಾಳುಗಳು ಢಾಕಾ ಪಟ್ಟಣವನ್ನು ಕೆಲವು ದಿನಗಳ ವರೆಗೆ ಪುಂಡರ ಕೈಯಲ್ಲಿಯೇ ಕೊಟ್ಟಂತಾಗಿತ್ತು. ಒಂದೇ ಸವನೆ ೪ ದಿನಗಳ ವರೆಗೆ ಅಂಚೆಯ ಅಧಿಕಾರಿಗಳಿಗೆ ಕಾಗದಪತ್ರಗಳನ್ನು ಆ ಆ ಪತ್ರಗಳ ಒಡೆಯರಿಗೆ ಮುಟ್ಟಿಸಲು ಬರುವಂತಿದ್ದಿಲ್ಲ. ಜನರೇ ಪೋಸ್ಟಿಗೆ ಹೋಗಿ ಅವುಗಳನ್ನು ತೆಗೆದುಕೊಳ್ಳಬೇಕಾಗುತ್ತಿತ್ತು. ಮರಣಕ್ಕೆ ಹೆದರದವರೇ ಹಾಗೆ ಹೋಗಿ ತೆಗೆದುಕೊಳ್ಳುತ್ತಿದ್ದರು. ಅಂತಹ ಕಠಿಣ ಪರಿಸ್ಥಿತಿಯು ಢಾಕಾದಲ್ಲಿ ಆ ಕಾಲಕ್ಕೆ ಉಂಟಾಗಿತ್ತು. ೬೦ ಕ್ಕೆ ಕಡಿಮೆಯಿಲ್ಲದಷ್ಟು ಜನರು ಅಗ್ನಿ [illegible]ವಾದರು. ಅರ್ಧ ಕೋಟಿ ರೂಪಾಯಿಗಳ ವರೆಗೆ ಬೆಲೆ ಬಾಳುವ ಸರಕುಗಳು ಹಾಳಾಗಿ ಹೋದವು. ಜನರು ಸಹಾಯಕ್ಕಾಗಿ ಪೋಲೀಸರನ್ನು ಕರೆಕಳಿಸಿದಾಗ “ಕಾಂಗ್ರೆಸದವರನ್ನು ಸಹಾಯಕ್ಕೆ ಕರೆದುಕೊಳ್ಳಿರಿ” ಎಂಬ ಉತ್ತರವು ಜನರಿಗೆ ದೊರೆಯಿತು. ಹಾದಿಯಲ್ಲಿ ಹಾಯ್ದು ಹೋಗುತ್ತಿದ್ದ ಗುರ್ಖಾ ಅಧಿಕಾರಿಗಳು ಜನರ ಮೇಲೆ ನಡೆದ ಅತ್ಯಾಚಾರಗಳನ್ನು ನೋಡಿ ಹಾಗೆಯೇ ಹೋದರು. ಈ ಅತ್ಯಾಚಾರವನ್ನು ನಿಲ್ಲಿಸಲು ತಮಗೆ ಮೇಲಧಿಕಾರಿಗಳಿಂದ ಅಪ್ಪಣೆಯು ದೊರೆತಿಲ್ಲವಾಗಿ ಅವರು ಹೇಳಿದರು. ಒಂದೇ ಹಳ್ಳಿಯಲ್ಲಿ ೧೭೦ ಮನೆಗಳು ಲೂಟಿ ಮಾಡಲ್ಪಟ್ಟವು ಈ ಲೂಟಿಗಳೆಲ್ಲ ಹಗಲಿನಲ್ಲಿಯೇ ನಡೆದವು. ಜನರ ಸಮುದಾಯದಲ್ಲಿ ಪೋಲೀಸರಾದರೂ ಕೆಲವರಿದ್ದರು. ಅವರು ಗದ್ದಲವನ್ನು ಶಾಂತಪಡಿಸಲು ಏನನ್ನೂ ಮಾಡಲಿಲ್ಲ. ಜನರಿಗೆ ಸರಕಾರಿ ವಿಚಾರಣೆಯ ಮಂಡಳವು ಬೇಕಾಗಿದ್ದಿಲ್ಲ ಬಂಗಾಲದ ಗವ್ಹರ್ನರರಾಗಲಿ, ಇಲ್ಲವೆ ಒಬ್ಬಾನೊಬ್ಬ ಸರಕಾರಿ ಅಧಿಕಾರಿಯಾಗಲೀ ದಂಗೆಯ ನಂತರದಲ್ಲಿ ಢಾಕಾ ಪಟ್ಟಣಕ್ಕೆ ಹೋಗಿರುವದೇ ಇಲ್ಲ. ಸರಕಾರಿ ಅಧಿಕಾರಿಗಳು ನ್ಯಾಯದಿಂದ ವರ್ತಿಸುವರೆಂದು ನಾನು ತಿಳಿದುಕೊಂಡಿದ್ದೆ. ಈ ಮೇಲಿನ ಸಂಗತಿಗಳಿಂದ ಆ ನನ್ನ ತಿಳುವಳಿಕೆಯು ತಪ್ಪಾಗಿದೆಯೆಂದು ಈಗ ಹೇಳಿವೆ

—ಶ್ರೀ ಸಿಯೇಗಿಯವರು.

## ಪೋಲೀಸರು ಹೆಂಗಸರನ್ನು ಅಡವೀಪಾಲು ಮಾಡಿದರು

ಬಂಗಾಲ ಪ್ರಾಂತಕ್ಕೆ ಸೇರಿದ ಮಿದನಾಪುರದ ಕಾಲೇಜದ ಮುಂದೆ ಪಿಕೆಟಿಂಗವನ್ನು ಮಾಡುತ್ತ ನಿಂತುಕೊಂಡಿದ್ದ ೧೬ ಸ್ವಯಂಸೇವಿಕೆಯರನ್ನು ಅಲ್ಲಿಯ ಪೋಲೀಸರು ತಾ|| ೧೬ ನೆಯ ದಿವಸ ಸೆರೆಹಿಡಿದು, ಅವರನ್ನು ಮೋಟಾರದಲ್ಲಿ ಹಾಕಿಕೊಂಡು ಹೋಗಿ, ಊರಿನಿಂದ ೮ ಮೈಲಿನ ದೂರದಲ್ಲಿರುವ ಗುಡ್ಡಗಾಡು ಅಡವಿಯಲ್ಲಿ ಅವರನ್ನು ಬಿಟ್ಟುಬಿಟ್ಟರಂತೆ. ಆ ಸ್ಥಳದಲ್ಲಿ ಹಾಯ್ದು ಹೋಗುತ್ತಿದ್ದ ಮೋಟಾರಿನವರಿಗೆ ಅವರು ತಮ್ಮನ್ನು ಕರೆದುಕೊಂಡು ಹೋಗಲು ಅಂಗಲಾಚಿ ಬೇಡಿಕೊಂಡರಂತೆ! ಮೋಟಾರಿನವರು ನಿರಾಕರಿಸಿದರಂತೆ! ಅವರನ್ನು ಕರೆದುಕೊಂಡು ಬಂದಲ್ಲಿ ನಿಮ್ಮ ನಿಮ್ಮ ಮೋಟಾರುಗಳ ‘ಲಾಯಸೆನ್ಸ’ಗಳನ್ನು ರದ್ದು ಮಾಡುವೆವಾಗಿ ಅಧಿಕಾರಿಗಳು ಮೋಟಾರ ಚಾಲಕರಿಗೆ ಮೊದಲೇ ತಿಳಿಸಿದ್ದರಂತೆ!

## ಕಾಂಗ್ರೆಸದ ಅನುಯಾಯಿಗಳ ಮೇಲೆ

# ಕೊಲೆ ಹಾಗು ದರೋಡೆಯ ಆರೋಪ

ಮುಂಬಯಿ ಇಲಾಖೆಯ ಗವ್ಹರ್ನರರು ಪುಣೆಯಲ್ಲಿ ಕೂಡಿದ ಕಾಯದೆ ಮಂಡಳದ ಸಭಾಸದರನ್ನುದ್ದೇಶಿಸಿ ಒಂದು ಭಾಷಣ ಮಾಡಿದರು. ಅವರು ಕಾಯದೆ ಭಂಗ ಚಳವಳಿಯ ವಿಷಯವಾಗಿ ಆಗ ಹೇಳಿದ್ದುದರ ಸಾರವನ್ನು ತೆಗೆದು ವಾಚಕರಿಗಾಗಿ ಕೆಳಗೆ ಕೊಟ್ಟಿರುತ್ತದೆ:—

"ಕಾಯದೆಭಂಗ ಚಳವಳಿಯು ಹಿಂಸೆಯಿಂದ ಪ್ರಾರಂಭವಾಗಿ ಹಿಂಸೆಯಲ್ಲಿಯೇ ಪರಿಣಮಿಸುತ್ತಿದೆ. ಸೊಲ್ಲಾಪುರದಲ್ಲಿಯ ಇಬ್ಬರು ಪೋಲೀಸರ ಕೊಲೆಗೂ ಹಾಗು ಕೈರಾ ಜಿಲ್ಲೆಯಲ್ಲಿಯ ೧೮ ದರೋಡೆಗಳಿಗೂ ಕಾಂಗ್ರೆಸ್ಸೇ ಅಪ್ರತ್ಯಕ್ಷವಾಗಿ ಕಾರಣವಾಗಿದೆ. ಕಾಯದೆಭಂಗ ಚಳವಳಿಯಿಂದ ಮುಂಬಯಿ ಸರಕಾರಕ್ಕೆ ೨೦ ಲಕ್ಷ ರೂಪಾಯಿಗಳ ವೆಚ್ಚವು ಹೆಚ್ಚಿಗೆ ಬರುವದಾಗಿ ತಿಳಿದಿದ್ದು, ಪ್ರತಿನಿತ್ಯದಲ್ಲಿಯೂ ಜೇಲು ಮತ್ತು ಪೋಲೀಸರಿಗಾಗಿ ೧೨೦೦ ರೂ.ಗಳನ್ನು ಹೆಚ್ಚಿಗೆ ಖರ್ಚ ಮಾಡುವ ಪರಿಸ್ಥಿತಿಯು ಈಗ ಸರಕಾರದವರಿಗೆ ಬಂದೊದಗಿದೆ. ಕಾಯದೆಭಂಗದ ಚಳವಳಿಯು ನಿಲ್ಲುವವರೆಗೆ ಕಾಂಗ್ರೆಸದವರೊಡನೆ ಶಾಂತಿ ಸಂಧಾನದ ಮಾತುಗಳು ನಡೆಯಲಾರವು. ವಸಾಹತಿ ಸ್ವರಾಜ್ಯವನ್ನು ಕೊಡಿರೆಂದು ಕೇಳಿದ ಮಾತ್ರಕ್ಕೆ ಅದು ನಿಮಗೆ ದೊರೆಯಲಾರದು. ಹಿಂದುಸ್ತಾನದ ಪ್ರಗತಿಗೆ ಸಾಯಮನ್ ವರದಿಯಿಂದ ಯಾವ ಧಕ್ಕೆಯೂ ಉಂಟಾಗಿಲ್ಲ."

## ವಿದೇಶಿ ವಸ್ತ್ರಕ್ಕೆ ಬಹಿಷ್ಕಾರ

ಎಲ್ಲ ಪರದೇಶಿಯ ಬಟ್ಟೆಗಳಿಗೆ ಮತ್ತು ಪರದೇಶಿಯ ನೂಲಿನಿಂದ ಸಿದ್ಧವಾದಂಥ ಬಟ್ಟೆಗಳಿಗೆ ಬಹಿಷ್ಕಾರ ಹಾಕಲೇಬೇಕು. ಮತ್ತು ಅವುಗಳನ್ನು ಮಾರಗೊಡಬಾರದೆಂಬ ಕಾಂಗ್ರೆಸ ಕಾರ್ಯಕಾರಿ ಮಂಡಲ [ವರ್ಕಿಂಗ ಕಮಿಟಿ] ದ ಗೊತ್ತುವಳಿಗನುಸರಿಸಿ ಇಡೀ ದೇಶದಲ್ಲಿ ಕಾರ್ಯವು ನಡೆದಿರುವ ಸಂಗತಿಯು ಎಲ್ಲರಿಗೂ ತಿಳಿದಿದ್ದಾಗಿದೆ. ಅದಕ್ಕನುಸಾರವಾಗಿ ಕರ್ನಾಟಕದಲ್ಲಿಯಾದರೂ ಕೆಲಸವು ಪ್ರಾರಂಭವಾಗಿದೆ. ಆದ್ದರಿಂದ ಯಾವ ವ್ಯಾಪಾರಸ್ಥರೂ ಪರದೇಶದಿಂದ ಬಂದ ಅರಿವೆಗಳನ್ನು ಅಥವಾ ಪರದೇಶಿಯ ನೂಲಿನಿಂದ ನಮ್ಮ ದೇಶದಲ್ಲಿಯ ಗಿರಣಿಗಳಲ್ಲಿ ಅಥವಾ ಮಗ್ಗಗಳ ಮೇಲೆ ನೇಯ್ದ ಬಟ್ಟೆಗಳನ್ನು ಮಾರಾಟ ಮಾಡಬಾರದು. ಇಂಥ ಅರಿವೆಗಳು ಇದ್ದ ಪಕ್ಷದಲ್ಲಿ ಅವುಗಳನ್ನೆಲ್ಲ ಕಟ್ಟಿ ಕಾಂಗ್ರೆಸಿನ ಅಜ್ಞೆಯ ಪ್ರಕಾರ ಬಿಗಿತಬೇಕು. ಮತ್ತು ಕಾಂಗ್ರೆಸಿನವರು ಪುನಃ ಹೇಳುವ ತನಕ ಅವುಗಳನ್ನು ಯಾವ ಕಾರಣದಿಂದಲೂ ಹೊರಗೆ ತೆಗೆಯಬಾರದಾಗಿದೆಂದು ನಾವು ಎಲ್ಲರಿಗೂ ವಿನಂತಿ ಮಾಡಿಕೊಳ್ಳುತ್ತೇವೆ.

ಈ ಪ್ರಕಾರ ಮಾಡದೆ ಇದ್ದ ಪಕ್ಷದಲ್ಲಿ ಕರ್ನಾಟಕ ಸತ್ಯಾಗ್ರಹ ಮಂಡಲದವರಿಗೆ ತಮ್ಮ ಪ್ರಾಂತದೊಳಗಿನ ಎಲ್ಲ ಸ್ವಯಂಸೇವಕರಿಗೆ ಇಂತಹ ಅಂಗಡಿಗಳೆದುರಿಗೆ ನಿಂತು ಅಲ್ಲಿ ವ್ಯಾಪಾರವಾಗದ ಹಾಗೆ ಪಿಕೆಟಿಂಗ ಮಾಡಿರೆಂದು ಹೇಳುವಂತಹ ಪ್ರಸಂಗವು ದುರ್ದೈವದಿಂದ ಬರಬಹುದು. ಅಂತಹ ಪ್ರಸಂಗವನ್ನು ತರಗೊಡಬಾರದೆಂದು ನಾವು ಎಲ್ಲ ವ್ಯಾಪಾರಸ್ಥರಿಗೆ ಬಿನ್ನಹ ಮಾಡಿಕೊಳ್ಳುತ್ತೇವೆ.

ಹುಬ್ಬಳ್ಳಿ, ಗದಗ, ಬೆಟಗೇರಿ, ಶಹಾಪೂರ, (ಬೆಳಗಾಂವಿ) ಇಳಕಲ್ಲ, ಗಜೇಂದ್ರಗಡ, ಬಾಗಲಕೋಟೆ ಮುಂತಾದ ಸ್ಥಳಗಳಲ್ಲಿ ದೊರೆಯುವಂತಹ ಸೀರೆ, ಖಣಗಳು ಪರದೇಶಿಯ ನೂಲಿನಿಂದ ಸಿದ್ಧವಾಗುತ್ತಿರುವವು. ನಮ್ಮ ಭಗಿನಿಯರು ಸ್ವಲ್ಪವಾದರೂ ಸ್ವಾರ್ಥತ್ಯಾಗ ಮಾಡಿ ಪರದೇಶಿ ನೂಲಿನಿಂದ ಸಿದ್ಧವಾಗುವಂತಹ ಖಣ, ಸೀರೆಗಳನ್ನು ಬಿಟ್ಟುಬಿಡಬೇಕು. ಮತ್ತು ಖಾದಿಯ ಸೀರೆಗಳನ್ನೇ, ಅವು ದೊರೆಯದಿದ್ದರೆ ದೇಶೀಯ ಗಿರಣಿಗಳ ನೂಲಿನಿಂದ ಸಿದ್ಧವಾದಂತಹ ಸೀರೆ, ಖಣಗಳನ್ನೇ ತೊಡುಕೊಳ್ಳಬೇಕೆಂದು ನಮ್ಮ ಆಗ್ರಹಪೂರ್ವಕ ಸೂಚನೆ.

ಆಯಾ ಊರಿನ ಕಾಂಗ್ರೆಸ ಕಮಿಟಿಯ ಮುದ್ರೆ ಇಲ್ಲದೆ ಹೊರತು ಪರದೇಶಿಯ ನೂಲಿನಿಂದ ಬಟ್ಟೆಗಳನ್ನು ಸಿದ್ಧಮಾಡುವಂತಹ ವ್ಯಾಪಾರಸ್ಥರ ಸರಕುಗಳನ್ನು ತೆಗೆದುಕೊಳ್ಳಬಾರದು.

ನಾ. ಸು. ಹರ್ಡೀಕರ

## ಮುಂಬಯಿಯ ಸ್ಕಾಟ ಜನರು

# ಯೂನಿಯನ್ನ ಜಾಕಿಗೆ ಬೇಸತ್ತರು

ಸ್ಕಾಟ ಚಳವಳಿಯನ್ನು ಸರಕಾರಿ ಅಧಿಕಾರಿಗಳ ನೇತೃತ್ವದಲ್ಲಿಯೇ ಸಾಗಿಸುವದು ಈಗಿನ ಪರಿಸ್ಥಿತಿಯಲ್ಲಿ ಹಿತಕರವಾಗಿರುವದೋ ಹೇಗೆಂಬುವದನ್ನು ಮತ್ತು ಸ್ಕಾಟ ಜನರು ಯೂನಿಯನ್ ಜ್ಯಾಕಿಗೆ ಇನ್ನು ಮುಂದೆಯಾದರೂ ಮೊದಲಿನಂತೆಯೇ ಶರಣು ಹೊಡೆಯಬೇಕೋ ಹೇಗೆಂಬುವದನ್ನು ವಿಚಾರಿಸುವದಕ್ಕಾಗಿ ಮುಂಬಯಿಯ ೮೦ ಜನ ಸ್ಕಾಟ ಶಿಕ್ಷಕರು ತಾ. ೧೯ನೆಯ ದಿವಸ ಸಭೆಯಲ್ಲಿ ಸೇರಿದ್ದರು. ಸಭೆಯಲ್ಲಿ ಬಹಳ ಹೊತ್ತಿನ ವರೆಗೆ ಚರ್ಚೆ ನಡೆಯಿತು. ಯೂನಿಯನ್ ಜಾಕನು ಬದಿಗೊತ್ತಿ, ಅದರ ಸ್ಥಳದಲ್ಲಿ ರಾಷ್ಟ್ರಧ್ವಜವನ್ನು ತಮ್ಮ ಧ್ವಜವನ್ನು ಮಾಡಿಕೊಳ್ಳಬೇಕೆಂದೂ ಮತ್ತು ಸ್ಕಾಟ ಚಳವಳಿಯನ್ನು ಸ್ವತಂತ್ರವಾಗಿಯೇ ನಡೆಸಬೇಕೆಂದೂ ಎಲ್ಲರೂ ಅಭಿಪ್ರಾಯಪಟ್ಟರು, ಆ ಬಗ್ಗೆ ವ್ಯವಸ್ಥೆಯನ್ನು ಮಾಡಲು ಮಿ|| ನವರೋಜಿ ಮುವರ್ಗೆ ಅಧಿಕಾರ ಕೊಟ್ಟರು.

## ೭೫ ವರ್ಷದ ಮುದುಕನಿಗೆ ೭ ತಿಂ. ಕಠಿಣ ಶಿಕ್ಷೆ

ಭೂಕಂದಾಯವನ್ನು ಕೊಡದೇ ಇರೆಂದು ಜನರಿಗೆ ಬೋಧಿಸಿದುದಕ್ಕಾಗಿಯೂ ಮತ್ತು ಸರಕಾರಿ ಅಧಿಕಾರಿಗಳಿಗೆ ಉದ್ಯೋಗವನ್ನು ಬಿಡಲು ಕೇಳಿಕೊಂಡಿದುದಕ್ಕಾಗಿಯೂ ಪುಲವಾಡದ ೭೫ ವರ್ಷದ ವಯಸ್ಸಿನ ಶ್ರೀ ಸ್ವಾಮಿ ನಿರಂಜನರಿಗೆ ೭ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ.

## ಶ್ರೀ ಧನಶೆಟ್ಟಿಯವರಿಗಾಗಿ
### ಕೌನ್ಸಿಲದ ಸಭಾಸದರು ಗವ್ಹರ್ನರರಿಗೆ
### ಮೊರೆ ಹೋದರು.

"ಶ್ರೀ ಮಲ್ಲಪ್ಪ ಧನಶೆಟ್ಟಿಯವರಿಗಾದ ಗಲ್ಲಿನ ಶಿಕ್ಷೆಯನ್ನು ಕಡಿಮೆ ಮಾಡಿರಿ" ಎಂಬ ಆಶಯದ ಒಂದು ವಿನಂತಿ ಅರ್ಜಿಯನ್ನು ಕೌನ್ಸಿಲದ ಸಭಾಸದರು ಗವ್ಹರ್ನರರ ಕಡೆಗೆ ಕೊಟ್ಟು ಕಳಿಸಿರುವರೆಂದು ತಿಳಿಯುತ್ತದೆ,

### ಶಿರೂರಲ್ಲಿ ಸಿಂದೀ ಅಂಗಡಿಯ ಪಿಕೆಟಿಂಗ.

(ಸ್ವಂತ ಸುದ್ದಿಗಾರರಿಂದ)

ಶಿರೂರಲ್ಲಿ ಸಿಂದೀ ಅಂಗಡಿಯ ಪಿಕೆಟಿಂಗ ಬಹು ಜೋರಿನಿಂದ ನಡೆದಿದೆ. ಊರಲ್ಲಿಯ ಜನರ ಮೇಲೆ ಪಿಕೆಟಿಂಗವು ಒಳ್ಳೇ ಪರಿಣಾಮವನ್ನುಂಟು ಮಾಡಿದೆ. ನಾಗರಿಕರೆಲ್ಲರೂ ರಾಷ್ಟ್ರೀಯ ಕಾರ್ಯಕ್ರಮಗಳಿಗೆ ತ್ರಿಕರಣ ಪೂರ್ವಕವಾಗಿ ಸಹಾಯ ಮಾಡುತ್ತಿರುವರು. ಸಿಂದೀ ಅಂಗಡಿಯ ವ್ಯಾಪಾರವು ಸಂಪೂರ್ಣವಾಗಿ ನಿಂತು ಹೋಗಿದೆ. ಗುಳೇದಗುಡ್ಡದ ಶ್ರೀ ಮಡಿ ಶಾಸ್ತ್ರಿ ಆಚಾರ್ಯರು ಇಬ್ಬರು ಸ್ವಯಂಸೇವಕರೊಂದಿಗೆ ಇಲ್ಲಿಗೆ ಬಂದು ಮದ್ಯಪಾನ ಪ್ರತಿಬಂಧ, ಅಡವಿಯ ಕಾನೂನು ಭಂಗ, ಮೊದಲಾದವುಗಳ ಬಗ್ಗೆ ತಾ ೧೬ ನೆಯ ದಿವಸ ಭಾಷಣ ಮಾಡಿದರು.

### ಮಧ್ಯ ಪ್ರಾಂತದಲ್ಲಿ ಆಡವಿಯ ಕಾಯದೆಭಂಗ
### ಮತ್ತೆ ೧೯ ಜನರಿಗೆ ಶಿಕ್ಷೆ.

ತಾ॥ ೧೬ ನೆಯ ದಿವಸ ಶ್ರೀ ಜೋಶಿಯವರು ೧೮ ಜನ ಸತ್ಯಾಗ್ರಹಿಗಳೊಂದಿಗೆ ಪುಸದ ಗ್ರಾಮದ ಸಮೀಪದಲ್ಲಿರುವ ಅಡವಿಗೆ ಹೋಗಿ, ಕಾಯಿದೆಭಂಗ ಮಾಡಿದರು. ಕೂಡಲೆ ಅಧಿಕಾರಿಗಳು ಅವರೆಲ್ಲರನ್ನು ಸೆರೆ ಹಿಡಿದು, ವಿಚಾರಣೆಗೆ ಗುರಿಮಾಡಿ, ಶ್ರೀ ಜೋಶಿಯವರಿಗೆ ೫ ವಾರ ಸಕ್ರಮ ಶಿಕ್ಷೆಯನ್ನು, ೯ ಜನರಿಗೆ ೪ ವಾರಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು.

### ಅಂಕೋಲೆಯಲ್ಲಿ ದಬ್ಬಾಳಿಕೆ
### ಸ್ನೇಹಿತನನ್ನು ಹಿಂಬಾಲಿಸಿದ್ದಕ್ಕಾಗಿ ಒಬ್ಬರಿಗೆ ಸೆರೆಮನೆ.

ಅಂಕೋಲೆಯಲ್ಲಿ ತಾ॥ ೧೪ ನೆಯ ದಿವಸ ಶ್ರೀ ಬ್ರಿಜಲಾಲ ಬಿಯಾಣಿಯವರನ್ನು ಕ್ರಿ ಪ್ರೊ. ಕೋಡಿನ ೧೦೮ ನೆಯ ಕಲಮಿನ ಅನ್ವಯ ಅಧಿಕಾರಿಗಳು ಸೆರೆ ಹಿಡಿದು ಅವರನ್ನು ಜೇಲಿಗೆ ಕರೆದುಕೊಂಡು ಹೋದರು ಅವರನ್ನು ಜೇಲಿಗೆ ಕರೆದೊಯ್ಯುವ ಮುಂದೆ ಅವರ ಮಿತ್ರರಾದ ಶ್ರೀ ಗೋಖಲೆಯವರು ಅವರಿಗೆ ಹಾದಿಯಲ್ಲಿ ಭೆಟ್ಟಿಯಾಗಿ ಜೇಲಿನ ವರೆಗೂ ಅವರನ್ನು ಹಿಂಬಾಲಿಸಿದರು. ಶ್ರೀ ಗೋಖಲೆಯವರು ಜೇಲಿಗೆ ಮುಟ್ಟಿದ್ದೊಂದೇ ತಡ, ಅಲ್ಲಿ ೧೦೮ ನೆಯ ಕಲಮಿನ ಅನ್ವಯ ಅವರನ್ನು ಸೆರೆಹಿಡಿದು ಜೇಲಿನಲ್ಲಿ ಹಾಕಿದರು.

### ಚಿತ್ತೂರಿನಲ್ಲಿ
### ಶಾಲೆಯ ಹುಡುಗರು ಸತ್ಯಾಗ್ರಹ ಹೂಡಿದರು

"ಶಾಲೆಯಲ್ಲಿ ಮಹಾತ್ಮಾ ಗಾಂಧಿಯವರ ಭಾವಚಿತ್ರವನ್ನು ಇಡಿರಿ ಅದನ್ನು ಅಲ್ಲಿ ಇಡುವ ವರೆಗೆ ಶಾಲೆಗೆ ಬರುವದಿಲ್ಲ" ಎಂಬುದಾಗಿ ಅಧಿಕಾರಿಗಳಿಗೆ ತಿಳಿಸಿ ಚಿತ್ತೂರಿನ ಮು... ಮಿಶ ಶಾಲೆಯ ಎಲ್ಲ ವಿದ್ಯಾರ್ಥಿಗಳೂ ತಾ॥ ೧೫ ನೆಯ ದಿ... ಹೊರಬಿದ್ದು ದೊಡ್ಡದೊಂದು ಮೆರವಣಿಗೆಯನ್ನು ತೆಗೆದು ಊ... ಲ್ಲೆಲ್ಲ ಸಂಚರಿಸಿ ಹರತಾಳವನ್ನು ಪಾಲಿಸಿದರು

### ಒಬಂತ್ರಿಯವರಿಗೂ ಸೆರೆಮನೆಯಾಯಿತು

ಮಹಾತ್ಮಾ ಗಾಂಧಿಯವರ ಬಂಧನ ದಿನದ ನಿಮಿತ್ತ... ನೆಲ್ಲೂರಿನಲ್ಲಿ ಮಹಾತ್ಮಾ ಗಾಂಧಿಯವರ ಭಾವಚಿತ್ರದೊ... ವಾದ್ಯ ವೈಭವದೊಡನೆ ಒಂದು ಪ್ರಚಂಡ ಮೆರವಣಿಗೆಯು ಹೊ... ಟಿತ್ತು. ಈ ಮೆರವಣಿಗೆಯಲ್ಲಿ ಭಾಗ ತೆಗೆದುಕೊಂಡಿದ್ದ... ೧೩ ಜನರನ್ನು ಸೆರೆಹಿಡಿದರು. ಕೆಲವು ಹೊತ್ತಿನಮೇಲೆ ಬಿ... ಬಿಟ್ಟರು. ಇದಲ್ಲದೆ ಮೆರವಣಿಗೆಯಲ್ಲಿ ವಾದ್ಯವನ್ನು ಬಾರಿಸಿ... ಕ್ಕಾಗಿ ೯ ಜನ ಒಬಂತ್ರಿಗಾರರಿಗೆ ಸೆರೆಮನೆಯವಾಸವು ಸಿ...

## ಮಂಗಳೂರ ಜಿಲ್ಲೆಯಲ್ಲಿ ದಬ್ಬಾಳಿಕೆ
### ಉಡುಪಿಯ ಶೆಣೈ ಅವರಿಗೆ ೯ ತಿಂಗಳ ಶಿಕ್ಷೆ

ಉಡುಪಿಯ ಶ್ರೀ ವಾಸುದೇವ ಶೆಣೈ ಅವರ ಖಟ್ಲೆ ವಿಚಾರಣೆಯು ಕುಂದಾಪುರ ಸಬ್ ಕಲೆಕ್ಟರನ ಮುಂದೆ ತಾ... ನೆಯ ದಿವಸ ನಡೆದು, ಅವರಿಗೆ ೯ ತಿಂಗಳ ಶಿಕ್ಷೆಯು ವಿಧಿ... ಟ್ಟಿತು. ಕಾಯಿದೆಭಂಗದ ಮೂಲಕವಾಗಿಯೆಂದು ಹೇಳುವ... ಬೇಕಾಗಿಲ್ಲ. ಇವರೊಂದಿಗೆ ಮಂಗಳೂರ ಜಿಲ್ಲೆಯಿಂದ ೧... ಜನರು ತುರಂಗಕ್ಕೆ ತೆರಳಿದಂತಾಯಿತು.

**ಶುದ್ಧ ಖಾದಿ!** **ಶುದ್ಧ ಖಾ...**

ಕೈನೂಲಿನ ಎಲ್ಲ ನಮೂನೆಯ ಶುದ್ಧ ಖಾದಿ ಕೊಳ್ಳಬಯಸುವ ಗ್ರಾಹಕರು ತ್ವರೆಮಾಡಬೇಕು. ಯೋಗ್ಯ ಬೆಲೆಯಿಂದ ಖಾದಿಯು ಇಲ್ಲಿ ಮಾರಲ್ಪಡುವದು.

ಪತ್ತೆ:—ರಾಮಚಂದ್ರ ಬಾಪುತಕರ.

ಪ್ರೊ:—ಶ್ರೀಮಾತ್ ವಿವೇಕಾನಂದ ವಿಜಯ ಖಾದಿ

ವಸ್ತ್ರಭಾಂಡಾರ. c/o

ಬಾಗಲಕೋಟೆ. ಭೀಮರಾವ ಝಿಂಗಾಡೆ ಟೇಲರ.

**ಶುದ್ಧ ಖಾದಿ!** **ಶುದ್ಧ ಖಾ...**

ನಮ್ಮಲ್ಲಿ ಕೈನೂಲು ಕೈಮಗ್ಗದ ಶರ್ಟಿಂಗ, ಕೋ... ಧೋತರ ಮೊದಲಾದ ಎಲ್ಲ ತರದ ಬಟ್ಟೆಗಳು ಯೋಗ್ಯ... ದೊರೆಯುತ್ತವೆ. ಗ್ರಾಹಕರು ಲಾಭ ಪಡೆಯಬೇಕಾಗಿ ವಿ...

ಶಂಕರಪ್ಪಾ ಬಣಗಾರ

ಜವಳಿ ವ್ಯಾಪಾರಿಗಳು, ಬಾಗಲಕೋಟೆ

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾಕರ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ —೧—

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮುದಾರ

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಸೋಮವಾರ ಮಿತಿ ಆಷಾಢ ಬಹುಳ ೧೦ ಶಕೆ ೧೮೫೨ ತಾ॥ ೨೧—೭—೩೦ [ ಸಂಚಿಕೆ ೧೦೬

## ಮುದ್ರಣ ಬಕಾಸುರನಿಗೆ

# ೭೧ ಪತ್ರಿಕೆಗಳು ಬಲಿಯಾದವು.

ವೃತ್ತಪತ್ರ ದಬ್ಬಾಳಿಕೆಯ ಕಾನೂನಿನ ಸಂಬಂಧವಾಗಿ ಹಿಂದುಸ್ಥಾನದಲ್ಲಿ ಎಷ್ಟು ಪತ್ರಿಕೆಗಳಿಗೆ ಅಡವು ಕೇಳಲ್ಪಟ್ಟಿವೆಯೆಂಬುದಾಗಿ ಶ್ರೀ. ಮಿತ್ರರವರು ಅಸೆಂಬ್ಲಿಯಲ್ಲಿ ಕೇಳಿದ ಪ್ರಶ್ನೆಗೆ ಒಟ್ಟು ೧೩೧ ಪತ್ರಿಕೆಗಳಿಗೆ ಅಡವು ಕೇಳಲ್ಪಟ್ಟಿವೆಯೆಂದೂ, ಅವುಗಳಲ್ಲಿ ೭೧ ಪತ್ರಿಕೆಗಳು ಹಣವನ್ನು ಕೊಡದೆ ನಿಂತುಹೋದವೆಂದೂ ಸರಕಾರದಿಂದ ಉತ್ತರ ದೊರೆಯಿತು.

---

### ರಾಜಕೀಯ ಕೈದಿಗಳನ್ನು

## ವಿಜಾಪುರದಿಂದ ಯರವಡೆಗೆ ಒಯ್ದರು

(ಸ್ವಂತ ಸುದ್ದಿಗಾರರಿಂದ)

ತಾ॥ ೧೮ ನೆಯ ದಿವಸ ರಾತ್ರಿ ೧೦ ಗಂಟೆಯ ಗಾಡಿಗೆ ವಿಜಾಪುರ ಜೇಲಿನಲ್ಲಿಯ ಸುಮಾರು ೯೦೦ ಜನ ರಾಜಕೀಯ ಕೈದಿಗಳನ್ನು ಯರವಡಾ ಜೇಲಿಗೆ ಒಯ್ದರು. ಈ ಸುದ್ದಿಯು ಮೊದಲು ಊರಲ್ಲಿ ಗೊತ್ತಾಗಿದ್ದಿಲ್ಲ. ಆದರೆ ಒಳಗಿನ ರಾಜಕೀಯ ಕೈದಿಗಳೇ "ಮಹಾತ್ಮಾ ಗಾಂಧಿಕಿ ಜಯ" ಎಂದು ಜಯಘೋಷಮಾಡ ಹತ್ತಲು ಪೇಟೆಯಲ್ಲಿಯ ಎಲ್ಲ ಜನರು ಬೆನ್ನು ಹತ್ತಿದರು. ಸ್ಟೇಶನದಲ್ಲಿ ಸುಮಾರು ೯೦೦೦ ಜನರು ಕೂಡಿದ್ದರು. ಅಲ್ಲಿ ಅವರ ಭಾಷಣಗಳಾದವು. ಅವರಲ್ಲಿ ಬಹು ಸಂಖ್ಯಾತಜನರು ಸೊಲ್ಲಾಪುರದ ಕೈದಿಗಳೇ ಇದ್ದರು. ಶ್ರೀ ಚಂದ್ರಶೇಖರ ಅಯ್ಯ ಮುಂತಾದ ಅನೇಕ ಬೆಂಗಳೂರಿನ ತರುಣರೂ ಇದ್ದರು. ಅವರಲ್ಲಿ ಮುಖ್ಯರಾದವರೆಂದರೆ:— ಬೋರಾಮಣಿಕರ, ಕವಿ ಕುಂಜವಿಹಾರಿ, ವಾಲಚಂದ ಶಹಾ, ಡಾ. ದೇಶಮುಖ ಕ್ಯಾಪ್ಟನ್ ದೇಶಪಾಂಡೆ, ಜಾಜು, ನಿಕಮ, ವೆಂಕಟರಾಮಯ್ಯ, ಫೊಂಕ್ಸೆಯವರು. ಇವರೆಲ್ಲರೂ ಜೇಲಿನಲ್ಲಿ ತಾವು ತೊಟ್ಟುಕೊಳ್ಳುವ ಅರಿವೆಯನ್ನು ಹರಿದು ಅದಕ್ಕೆ ೩ ಬಣ್ಣ ಕೊಟ್ಟು ರಾಷ್ಟ್ರೀಯ ಧ್ವಜವನ್ನು ಸಿದ್ಧಮಾಡಿದ್ದಾರೆ. ಹೋದ ಹೋದಲ್ಲಿ ಅದನ್ನು ಅವರು ತೆಗೆದುಕೊಂಡು ಹೋಗುತ್ತಾರೆ.

### ವಿಜಾಪುರ ಜೇಲಿನಲ್ಲಿ

## ಶ್ರೀ. ಸಾಠೆಯವರ ಉಪವಾಸ.

[ಸ್ವಂತ ಸುದ್ದಿಗಾರರಿಂದ]

ಪುಣೆಯ ವಕೀಲರಾದ ಶ್ರೀ ಸಾಠೆಯವರು ಖಾದಿಯ ಬಟ್ಟೆಯ ಸಲುವಾಗಿ ಉಪವಾಸ ವ್ರತವನ್ನು ಕೈಕೊಂಡಿದ್ದು ಎಲ್ಲರಿಗೂ ಗೊತ್ತಿರಲಿಕ್ಕೆ ಸಾಕು. ಅವರು ಮೂರ್ಛೆ ಹೊಂದಿಬಿದ್ದಾಗ ಅವರಿಗೆ ಜೇಲಿನ ಬಟ್ಟೆಯನ್ನು ಹಾಕಿದ್ದರು. ಕೆಲವು ಹೊತ್ತಿನ ಮೇಲೆ ಅವರಿಗೆ ನೆಟ್ಟಗಾಯಿತು ಕೂಡಲೆ ಅವರು ಆ ಬಟ್ಟೆಗಳನ್ನು ಹರಿದೊಗೆದು ಬತ್ತಲೆಯಾಗಿಯೇ ಇರಹತ್ತಿದ್ದಾರೆ. ಉಪವಾಸ ವ್ರತವೂ ಹಾಗೆಯೇ ಸಾಗಿದೆ. ಈಗ ಅವರಿಗೆ ದಿನಾಲು ಒತ್ತಾಯದಿಂದ ನಳಿಯಿಂದ ಹಾಲುಹಾಕುತ್ತಿರುವರಂತೆ

### ಹೊನ್ನುಟಗಿಯಲ್ಲಿ

## ಸರ್ಕಲ್ ಇನಸ್ಪೆಕ್ಟರನ ಕಿಡಿಗೇಡಿತನ

(ಸ್ವಂತ ಸುದ್ದಿಗಾರರಿಂದ)

ವಿಜಾಪುರ ಸತ್ಯಾಗ್ರಹ ಶಿಬಿರದಿಂದ ಶ್ರೀ ತೊರವಿಯವರ ನೇತೃತ್ವದಲ್ಲಿ ೩ ಜನ ಸ್ವಯಂಸೇವಕರು ಪ್ರಚಾರಕ್ಕಾಗಿ ಹೊನ್ನುಟಗಿ ಎಂಬ ಹಳ್ಳಿಗೆ ಹೋಗಿದ್ದರು. ಅಲ್ಲಿ ಸ॥ ಇನಸ್ಪೆಕ್ಟರನು ಆ ಸ್ವಯಂಸೇವಕರನ್ನು ಹೊರಗೆ ಹಾಕಲು ಪಾಲೀಕಾರರಿಗೆ ಹೇಳಿದನು. ಆ ಪಾಲೀಕಾರನು ಸ್ವಯಂಸೇವಕರ ನೇತೃಗಳಾದ ಶ್ರೀ. ತೊರವಿಯವರನ್ನು ಹೆಗಲಮೇಲೆ ಹೊತ್ತುಕೊಂಡು ಅಪ್ಪಳಿಸುತ್ತ ಊರಹೊರಗೆ ಒಯ್ದನು. ಮುಂದೆ ಅವರನ್ನು ಊರು ಬಿಟ್ಟು ೩ ಮೈಲು ದೂರ ಬಿಡಬೇಕೆಂದು ಮುಂದೆ ಹಾಗೆಯೇ ತೆಗೆದುಕೊಂಡು ಹೋದನು. ಇದೆಲ್ಲವನ್ನು ಕಂಡು ಆ ಹಳ್ಳಿಯಲ್ಲಿಯ ಜನರು ಸಿಟ್ಟಿಗೆದ್ದು ಆ ಪಾಲೀಕಾರನನ್ನು ದಬ್ಬಿ ಸ್ವಯಂಸೇವಕರನ್ನು ಊರಲ್ಲಿ ಕರೆದುಕೊಂಡು ಹೋಗಿ ಸಭೆಮಾಡಿದರು. ಸರ್ಕಲ್ ಇನಸ್ಪೆಕ್ಟರರು ಮಿಕಿ ಮಿಕಿ ನೋಡುತ್ತ ಸುಮ್ಮನೆ ಕುಳಿತಿದ್ದರು,

## ಶಾಂತಿಸಂಧಾನಕ್ಕಾಗಿ
# ಮಹಾತ್ಮರಿಗಳಲ್ಲಿ ಕಾಗದದ ಕುದುರೆ

ಕಾಂಗ್ರೆಸ ಹಾಗು ಸರಕಾರಗಳಲ್ಲಿ ಒಪ್ಪಂದವನ್ನು ಮಾಡಿಸಿ, ದೇಶದಲ್ಲಿಯ ಅಶಾಂತತೆಯನ್ನು ಹೋಗಲಾಡಿಸಲು ಇತ್ತಿತ್ತಲಾಗಿ ಪ್ರಯತ್ನ ನಡೆಯುತ್ತಿರುವದು ಎಲ್ಲರಿಗೂ ಗೊತ್ತಿರಲಿಕ್ಕೆ ಸಾಕು. ಮಹಾತ್ಮಾ ಗಾಂಧಿ, ಪಂಡಿತ ಮೋತೀಲಾಲ ಹಾಗು ಜವಾಹಿರಲಾಲ ನೆಹರುರವರನ್ನು ಜೇಲಿನಲ್ಲಿ ಕಂಡು, ಅವರ ಮುಂದೆ ದೇಶದಲ್ಲಿಯ ಸದ್ಯದ ಪರಿಸ್ಥಿತಿಯನ್ನು ವಿವರಿಸಿ ಇಟ್ಟು ಯಾವುದಾದರೊಂದು ರೀತಿಯಿಂದ ಶಾಂತಿಸಂಧಾನವನ್ನು ಮಾಡಿಸುವದೇ ಅವರ ಈ ಪ್ರಯತ್ನದ ಉದ್ದೇಶವಾಗಿದೆ. ಮೇಲಿನ ಮುಖಂಡರನ್ನು ಜೇಲಿನಲ್ಲಿ ಕಂಡುಕೊಳ್ಳಲು ಬೇಕಾಗುವ ಅಪ್ಪಣೆಯನ್ನು ದೊರಕಿಸಿಕೊಳ್ಳುವದಕ್ಕಾಗಿ ಸರ್ ಸಪ್ರು ಹಾಗು ಶ್ರೀ ಜಯಕರರು ವ್ಹಾಯಸರಾಯ ದೊರೆಗಳಿಗೆ ಒಂದು ಪತ್ರವನ್ನು ಬರೆದಿದ್ದು, ಅದರಲ್ಲಿ ಅವರು "ದೇಶದಲ್ಲಿಯ ರಾಜಕೀಯ ಪರಿಸ್ಥಿತಿಯನ್ನು ಸುಧಾರಿಸಲು ಯಾವ ಬಗೆಯಿಂದಾದರೂ ಪ್ರಯತ್ನಪಡುವದು ಈಗ ಅತ್ಯವಶ್ಯವಾಗಿ ಕಂಡುಬಂದಿದೆ. ಕಾಯದೆಭಂಗದ ಚಳವಳಿಯಿಂದುಂಟಾಗುವ ದುಷ್ಪರಿಣಾಮವನ್ನು ನಾವು ಬಲ್ಲೆವು. ಆ ಚಳವಳಿಯು ನಮಗೆ ಮಾನ್ಯವಿಲ್ಲ. ಅದರಲ್ಲಿ ನಾವು ಸೇರಿಯೂ ಇಲ್ಲ. ರಾಜಕೀಯ ಮುಖಂಡರೊಡನೆ ಸದ್ಯದ ಪರಿಸ್ಥಿತಿಯ ಬಗ್ಗೆ ವಿಚಾರಿಸಿ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸುವದೇ, ದೇಶಹಿತದ ದೃಷ್ಟಿಯಿಂದಲೂ, ಸರಕಾರದ ದೃಷ್ಟಿಯಿಂದಲೂ ನಮ್ಮಗಳ ಕರ್ತವ್ಯವಾಗಿದೆಯೆಂದೂ, ದೇಶದಲ್ಲಿ ಶಾಂತತೆಯನ್ನು ಪ್ರಸ್ಥಾಪಿಸುವಂತೆ ನಾವು ಅವರ ಮನವೊಲಿಸಲು ಶಕ್ತರಾಗಿರುವೆವೆಂದೂ ನಮಗೆ ಎನಿಸುತ್ತದೆ. ದಬ್ಬಾಳಿಕೆಯ ವೃತ್ತಿಯನ್ನು ಕೈಕೊಂಡವರಾದ ನಿಮಗೂ ದೇಶದಲ್ಲಿ ಶಾಂತತೆಯು ನೆಲೆಗೊಳ್ಳುವದು ಬೇಕಾಗಿದೆಯೆಂಬುದು ನಿಮ್ಮ ಭಾಷಣದಿಂದ ಶಾನಾಗಿಯೇ ವ್ಯಕ್ತವಾಗುತ್ತದೆ. ಮಹಾತ್ಮಾ ಗಾಂಧಿ ಪಂಡಿತ ಮೋತೀಲಾಲ ಹಾಗು ಜವಾಹಿರಲಾಲರನ್ನು ಜೇಲಿನಲ್ಲಿ ಕಂಡುಕೊಳ್ಳಲು ನೀವು ನಮಗೆ ಅಪ್ಪಣೆಯನ್ನು ಕೊಟ್ಟಲ್ಲಿ, ನಾವು ಅವರ ಮುಂದೆ ನಮ್ಮ ಮತಗಳನ್ನು ಮಂಡಿಸಿ; ನಮ್ಮ ಅಭಿಪ್ರಾಯಗಳಿಗೆ ಒಪ್ಪಿಕೊಳ್ಳಲು ಅವರಿಗೆ ಒತ್ತಾಯಪಡಿಸುವೆವು. ಸರಕಾರದ ಪರವಾಗಿ ಇಲ್ಲವೆ ಯಾವುದಾದರೊಂದು ಪಕ್ಷದ ಪರಿಯಿಂದ ನಾವು ಈಗ ಅವರನ್ನು ಕಾಣಲು ಹೋಗುತ್ತಿರುವದಿಲ್ಲ. ನಮ್ಮ ಪ್ರಯತ್ನವು ನಿಷ್ಫಲವಾದಲ್ಲಿ ಅದರ ಹೊಣೆಯಾದರೂ ನಮ್ಮ ಮೇಲೆಯೇ. ಅವರನ್ನು ಜೇಲಿನಲ್ಲಿ ಕಾಣಲು ನಮಗೆ ಅಪ್ಪಣೆಯನ್ನು ಕೊಟ್ಟಲ್ಲಿ, ನಮಗೆ ಅಲ್ಲಿ ಎಲ್ಲ ಬಗೆಯ ಸೌಕರ್ಯಗಳನ್ನು ಒದಗಿಸಿಕೊಡಲೂ, ಅವರೊಡನೆ ನಮ್ಮ ಮಾತುಕಥೆಗಳು ಏಕಾಂತವಾದ ಸ್ಥಳಗಳಲ್ಲಿ ನಡೆಯುವಂತೆಯೂ, ಮಾತುಕಥೆಗಳು ನಡೆಯುವಾಗ ಯಾವ ಸರಕಾರಿ ಅಧಿಕಾರಿಯೂ ಅಲ್ಲಿ ಇರದಂತೆಯೂ, ವ್ಯವಸ್ಥೆಯನ್ನು ಮಾಡಲು ಪ್ರಾಂತಿಕ ಸರಕಾರಕ್ಕೆ ನೀವು ತಿಳಿಸಬೇಕು" ಎಂಬುದಾಗಿ ಕಾಣಿಸಿದ್ದರು.

ಸರ್. ಸಪ್ರು ಹಾಗು ಜಯಕರರು ಬರೆದ ಪತ್ರಕ್ಕೆ ಉತ್ತರರೂಪವಾಗಿ ವ್ಹಾಯಸರಾಯರು ಒಂದು ಪತ್ರವನ್ನು ಬರೆದಿದ್ದು, ಅದರಲ್ಲಿ ಅವರು "ದೇಶದಲ್ಲಿ ಶಾಂತತೆಯು ನೆಲೆಗೊಳ್ಳುವಂತೆ ಮಾಡುವದಕ್ಕಾಗಿ ಮಹಾತ್ಮಾ ಗಾಂಧಿ, ಪಂಡಿತ ಮೋತೀಲಾಲ ಹಾಗು ಜವಾಹಿರಲಾಲರನ್ನು ಜೇಲಿನಲ್ಲಿ ಕಂಡುಕೊಳ್ಳಲು ಕೇಳಿಕೊಂಡಿರುವ ಪತ್ರವು ತಲುಪಿತು. ಕಾಯದೆಭಂಗದ ಚಳವಳಿಯು ಬಹಳೇ ಅಪಾಯಕಾರಿಯಿದ್ದು, ಅದರಿಂದ ದೇಶಕ್ಕೆ ಹಾನಿಯಾಗುತ್ತಿದೆಯೆಂದು ಎಲ್ಲರೂ ಒಡಂಬಟ್ಟಿದ್ದಾರೆ. ಆದುದರಿಂದ ಸರಕಾರದವರು ಅವರ ಸಹಾಯವನ್ನು ತೆಗೆದುಕೊಂಡು ಕಾಯದೆಭಂಗ ಚಳವಳಿಯನ್ನು ಎಲ್ಲ ಬಗೆಗಳಿಂದಲೂ ಹತ್ತಿಕ್ಕಲು ಟೊಂಕಕಟ್ಟಿರುವರು. ಎರಡೂ ಪಕ್ಷದವರು ಒಬ್ಬರಮೇಲೊಬ್ಬರು ವಿಶ್ವಾಸವಿಟ್ಟು ವರ್ತಿಸಿದಲ್ಲಿ ಒಪ್ಪಂದವು ಸಾಧ್ಯವಾಗಬಹುದಾಗಿ ನನಗೆ ಎನಿಸುತ್ತದೆ. ದೇಶದಲ್ಲಿ ಶಾಂತತೆಯನ್ನು ನೆಲೆಗೊಳಿಸಲು ನೀವು ಪ್ರಯತ್ನಿಸುತ್ತಿದ್ದಲ್ಲಿ ನಿಮಗೆ ಅಡ್ಡಿಯನ್ನುಂಟುಮಾಡುವದು ನನಗೆ ಸರಿಯಾಗಿ ತೋರುವದಿಲ್ಲ. ಕಾಯದೆಭಂಗದ ಚಳವಳಿಯ ವಿರುದ್ಧವಾಗಿ ಸರಕಾರಕ್ಕೆ ಬೆಂಬಲವನ್ನೀಯುವವರೂ ಇದಕ್ಕೆ ವಿರುದ್ಧವಾಗಿ ಅಭಿಪ್ರಾಯಪಡುವರೆಂದು ನನಗೆ ತೋರುವದಿಲ್ಲ. ನಿಮ್ಮ ಈ ಪ್ರಯತ್ನಕ್ಕೆ ಎಲ್ಲ ಬಗೆಗಳಿಂದ ಸಹಾಯ ಮಾಡುವಂತೆ ನಾನು ಪ್ರಾಂತಿಕ ಸರಕಾರಕ್ಕೆ ಕೇಳಿಕೊಳ್ಳುತ್ತೇನೆ" ಎಂಬುದಾಗಿ ಕಾಣಿಸಿದ್ದಾರೆ.

## ಪುಂಡುಗಾರ ವಿಸಾಜಿಯು
# ಶಿವಾಜಿಯಾಗಲು ಹವಣಿಸಿದನು

ಪುಣೆಯ ಸಬ್ ಡಿವ್ಹಿಜನಲ್ ಮ್ಯಾಜಿಸ್ಟ್ರೇಟರಾದ ಶ್ರೀ. ಕೆ. ಬಿ. ಪುರೋಹಿತರ ಮುಂದೆ ಕೆಲವು ಪುಂಡುಗಾರರ ಖಟ್ಲೆಯ ವಿಚಾರಣೆಯು ನಡೆದಿದೆ. ವಿಸಾಜಿ ಶಿಂದೆಯೆಂಬವನೊಬ್ಬನು ಆ ಪುಂಡುಗಾರರ ಮುಖ್ಯಸ್ಥನು. ಲಾಯಸೆನ್ಸ ಪಡೆದುಕೊಳ್ಳದೆ ಶಸ್ತ್ರಾಸ್ತ್ರಗಳ ಸಹಿತವಾಗಿ ಜಿಲ್ಹೆಯಲ್ಲಿ ತಿರುಗಾಡಿದುದಕ್ಕಾಗಿ ಅವರೆಲ್ಲರೂ ಶಿಕ್ಷಿಸಲ್ಪಟ್ಟಿದ್ದಾರೆ. ಸೋನಾರಿ ಕಿಲ್ಲೆಗೆ ಹೋಗಿ ಅದನ್ನು ವಶಪಡಿಸಿಕೊಳ್ಳುವದು ಹಾಗು ಸರಕಾರಿ ಅಧಿಕಾರಿಗಳಿಗೆ ಪೀಡೆ ಕೊಡುವದೇ ಅವರ ಉದ್ದೇಶವಾಗಿತ್ತಾಗಿ ತಿಳಿಯುತ್ತದೆ. ನಿಜಾಮ ಸಂಸ್ಥಾನಕ್ಕೆ ಹೋಗಿ ಅಲ್ಲಿಂದ ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಪುಣೆಗೆ ಒಂದು ಅಶ್ವ ಮೆರವಣಿಗೆಯಿಂದ ಹೊರಟು, ಶಸ್ತ್ರಾಸ್ತ್ರಗಳ ಕಾಯದೆಯನ್ನು ಮುರಿಯುವದೂ ಮತ್ತು ಆ ಕಾಯದೆಯನ್ನು ಮುರಿಯಲು ಜನರಿಗೆ ಬೋಧಿಸುವದೂ ತಮ್ಮ ಉದ್ದೇಶವಾಗಿತ್ತೆಂದು ಸೆರೆಯಾಳುಗಳು ವಿಚಾರಣೆಯ ಕಾಲಕ್ಕೆ ಹೇಳಿದರು. ಮ್ಯಾಜಿಸ್ಟ್ರೇಟರು ಇನ್ನೂ ತೀರ್ಪು ಹೇಳಿಲ್ಲ.

## ಧಾರವಾಡದಲ್ಲಿ
# ಕರ್ನಾಟಕ ಕಾಲೇಜಕ್ಕೆ ಪಿಕೆಟಿಂಗ
### ಕಲೆಕ್ಟರರು ಹುಡುಗರಿಗೆ ಬುದ್ಧಿ ಹೇಳಿದರು.

ಕರ್ನಾಟಕ ಕಾಲೇಜದ ವಿದ್ಯಾರ್ಥಿಗಳಲ್ಲಿ ಕಾಲೇಜಕ್ಕೆ ಶರಣು ಹೊಡೆಯುವ ಬಗ್ಗೆ ಘನವಾದ ಚರ್ಚೆಯು ಕೆಲವು ದಿವಸಗಳಿಂದ ನಡೆದಿದ್ದು, ಅದು ಈಗ ಯಶಸ್ವಿಯಾಗುವ ಲಕ್ಷಣವು ತೋರುತ್ತಿದೆ. ಅದನ್ನು ಕಂಡು ಕಲೆಕ್ಟರ ಸಾಹೇಬರು ಕಾಲೇಜಕ್ಕೆ ಹೋಗಿ ವಿದ್ಯಾರ್ಥಿಗಳಿಗೆ ಕಾಲೇಜವನ್ನು ಬಹಿಷ್ಕರಿಸುವದರಿಂದೂ, ಸರಕಾರದವರು ವಸಾಹತಿ ಸ್ವರಾಜ್ಯವನ್ನು ಕೊಡಲಾರರೆಂದೂ ಉಪದೇಶ ಮಾಡಿ ವಿದ್ಯಾರ್ಥಿಗಳಿಗೆ ಬುದ್ಧಿ ಹೇಳಿದರಂತೆ !

# ಮಿ. ಬ್ರೊಕವೇ ಹಾಗು ಬೆಕೆಟ್ಟರು

## ಪಾರ್ಲಿಮೆಂಟದಿಂದ ತಳ್ಳಲ್ಪಟ್ಟರು.

ತಾ|| ೧೭ ನೆಯ ದಿವಸ ಪಾರ್ಲಿಮೆಂಟದಲ್ಲಿ ಹಿಂದುಸ್ಥಾನದ ಸಂಬಂಧವಾಗಿ ಮಿ. ಮೆಕಡೊನಾಲ್ಡ ಹಾಗು ಮಿ ಬ್ರೊಕವೇಯವರ ನಡುವೆ ವಾದವಿವಾದವಾಯಿತು. ಆ ವಾದದ ಪರಿಣಾಮವೆಂದರೆ ಮಿ. ಬ್ರೊಕವೇ ಹಾಗು ಮಿ. ಬೆಕೆಟ್ಟರು ಪಾರ್ಲಿಮೆಂಟದಿಂದ ತಳ್ಳಲ್ಪಟ್ಟರು. ಅವರಲ್ಲಿ ನಡುವೆ ವಾದದ ವಿಷಯ ಕೆಳಗೆ ಕೊಟ್ಟಿದೆ.

ಮಿ. ಬ್ರೊಕವೇ—ಹಿಂದುಸ್ಥಾನದಲ್ಲಿಯ ಪರಿಸ್ಥಿತಿಯನ್ನು ವಿಚಾರಿಸಲು ಅಪ್ಪಣೆಯನ್ನು ಕೊಡುವಿರಾ?

ಮಿ. ಮೆಕಡೊನಾಲ್ಡ—ಆ ವಿಷಯದ ಬಗ್ಗೆ ತಾ|| ೧೪ ಕ್ಕೆ ಚರ್ಚೆಯಾಗಿ ಹೋಗಿದೆ.

ಮಿ. ಬ್ರೊಕವೇ—ಆ ಮೇಲೆ ಹಿಂದುಸ್ಥಾನದಲ್ಲಿ ಚರ್ಚೆಗೆ ಯೋಗ್ಯವಾದಂತಹ ಯಾವ ಮಹತ್ವದ ಸಂಗತಿಗಳಾದರೂ ಜರುಗಿವೆಯೋ?

ಮಿ. ಮೆಕಡೊನಾಲ್ಡ—ಯಾವವೂ ಜರುಗಿಲ್ಲ. ನಡೆದ ಸಂಗತಿಗಳೆಲ್ಲ ನಮ್ಮ ವಿರುದ್ಧವಾಗಿಯೇ ಇವೆ.

ಮಿ. ಬ್ರೊಕವೇ—ಈಗ ಹಿಂದುಸ್ಥಾನದಲ್ಲಿ ಒಟ್ಟಿಗೆ ೫೦೦೦೦ ಜನರಿಗೆ ಸೆರೆಮನೆಯಾಗಿದೆ. ಸಂಧಾನದ ಆಶೆಯಂತೂ ಕಾಣುವದಿಲ್ಲ ಈಗ ಹಿಂದುಸ್ಥಾನದ ವಿಷಯವಾಗಿ ಚರ್ಚೆಮಾಡಲು ಅಪ್ಪಣೆ ಸಿಗದಿದ್ದರೆ, ಮುಂದೆಯಾದರೂ ಸಿಗುವದಿಲ್ಲವಾಗಿ ತೋರುತ್ತದೆ.

ಮಿ. ಮೆಕಡೊನಾಲ್ಡ— ನಿರಾಶರಾಗಲು ಕಾರಣವಿಲ್ಲ. ಯಾಕೆಂದರೆ ನಿಜವಾದ ಸ್ಥಿತಿಯು ಬೇರೆಯೇ ಇದೆ.

ಆ ಮೇಲೆ ಮಿ. ಬ್ರೊಕವೇಯವರು ಮೂರೂ ಸಂಗಡದವರು ತಮ್ಮ ತಮ್ಮೊಳಗೆ ಮಾಡಿಕೊಂಡ ಠರಾವುಗಳ ವಿಷಯವಾಗಿ ವಿರೋಧವನ್ನು ವ್ಯಕ್ತಪಡಿಸಿದರು.

ಬಳಿಕ ಮತ್ತೆ ಮಿ ಬ್ರೊಕವೆಯವರು ಎದ್ದುನಿಂತು ಹಿಂದುಸ್ಥಾನದಲ್ಲಿಯ ಪರಿಸ್ಥಿತಿಯು ಈಗ ತೀರ ಭಯಂಕರವಾಗಿದೆ. ಅಲ್ಲಿಯ ಸ್ಥಿತಿಯ ಬಗ್ಗೆ ವಿಚಾರಿಸುವದು ನಮ್ಮಗಳ ಕರ್ತವ್ಯವಾಗಿದೆ. ನಮ್ಮ ಅಭಿಪ್ರಾಯಗಳನ್ನು ಈ ಸಮಯದಲ್ಲಿ ವ್ಯಕ್ತಪಡಿಸದಿದ್ದಲ್ಲಿ ನಾವು ಕರ್ತವ್ಯ ಹೀನರಾಗುವೆವು" ಎಂದು ಭಾಷಣಮಾಡಿದರು. ನನ್ನ ನಿರ್ಣಯವನ್ನು ಕೇಳದಿದ್ದಲ್ಲಿ ನಿಮ್ಮನ್ನು ಸಭೆಯಿಂದ ತೆಗೆದುಕೊಂಡು ಕರೆಯಬೇಕಾಗುವದು ಎಂದು ಸ್ಪೀಕರರು ಅವರಿಗೆ ಎಚ್ಚರಿಕೆಕೊಟ್ಟರು. ಬ್ರಾಕವೇಯವರು ತಮ್ಮ ಭಾಷಣವನ್ನು ಹಾಗೆಯೆ ಸಾಗಿಸಿದರು. ಸಭಾಸದರು ಅವರನ್ನು ತೆಗೆಯಿರಿ" ಎಂದು ಕೂಗಿದರು. ಸ್ಪೀಕರರು ಅವರ ಹೆಸರನ್ನು ತೆಗೆದರು ಮಿ. ಮೆಕಡೊನಾಲ್ಡರು ಅವರನ್ನು ಸಭಾಸದತ್ವದಿಂದ ಕಡಿಮೆ ಮಾಡಿದರು. ಕೂಡಲೆ ಮಿ. ಬೆಕೆಟ್ಟರು ಜೋರಾಗಿ ನಿಂತು ಈ ನ್ಯಾಯವೇ? ಟೆಸ್ಟ ಪದ್ಧತಿಯೂ, ಕೂಲಿಕಾರ ಪಕ್ಷವೂ "ಬೆಕೆಟರನ್ನು ಹೊರಗೆ ಹಾಕಿರಿ" ಎಂದು ಕೂಗಿದರು.

ಮಿ. ಬೆಕೆಟ್ಟರು ಭಾಗದ ಗದೆಯನ್ನು ತೆಗೆದುಕೊಂಡು ಹೊರಟಿದ್ದರು. ಬಳಿಕ ಮಿ. ಬೆಕೆಟ್ಟರೂ ಸಭಾಸದರಿಂದ ಕಡಿಮೆಮಾಡಲ್ಪಟ್ಟರು.

## ಬಾಗಲಕೋಟೆಯಲ್ಲಿ ಹೀಗಾಗಬೇಕೆ?

ಸ್ವಾಮೀ,

ನಾನೊಬ್ಬ ಬಾಗಲಕೋಟೆಯ ನಗರ ಸಭೆಯ ಮತದಾರ. ನಾನು ಇರುತ್ತಿರುವದು ಪೂನಾದಲ್ಲಿ. ಕೆಲವೊಂದು ಕೆಲಸದ ನಿಮಿತ್ತವಾಗಿ ಇಲ್ಲಿಗೆ ಈಗ ಬಂದಿರುವೆ. ಬಹಳ ದಿನಗಳೇನಾಗಿಲ್ಲ. ನಗರ ಸಭೆಯ ಮೇಲೆ ರಾಷ್ಟ್ರಧ್ವಜವನ್ನು ಹಚ್ಚುವ ಬಗ್ಗೆ ಮಿತ್ರರನ್ನು ವಿಚಾರಿಸಿದೆ. ಅವರೆಲ್ಲರೂ ತಮತಮಗೆ ತಿಳಿದು ಬಂದ ಸಂಗತಿಗಳನ್ನು ವಿವರಿಸಿ ಹೇಳಿದರು. "ಓರ್ವ ಸಭಾಸದರು ಈ ವಿಷಯವನ್ನು ಸೂಚಿಸಿದ್ದರು. ನಗರ ಸಭೆಯವರು ಅದನ್ನು ಮುಂದಕ್ಕೆ ಒಗೆಯಹತ್ತಿದರು. ಅದನ್ನು ಕಂಡು ನಾಗರಿಕರು ಒಂದು ದಿನ ನಗರ ಸಭೆಗೆ ಹೋದರು. ಆ ವಿಷಯವನ್ನು ತೆಗೆದುಕೊಳ್ಳಲು ಒತ್ತಾಯ ಪಡಿಸಿದರು. ಮುಂದಿನ ಸಭೆಯಲ್ಲಿ ತೆಗೆದುಕೊಳ್ಳುವೆವಾಗಿ ಒಬ್ಬರು ವಚನ ಕೊಟ್ಟರು. ನಾಗರಿಕರು ತಿರುಗಿ ಬಂದರು. ಆ ಮೇಲೆ ಎರಡು ಮೂರು ಸಭೆಗಳಾದವು. ಆ ವಿಷಯವನ್ನೇನೂ ಅವರು ಎತ್ತಲಿಲ್ಲ. ಅದು ಅಲ್ಲಿಯೇ ಕೊಳೆಯುತ್ತ ಬಿದ್ದಿದೆ. ಇತ್ತ ನಾಗರಿಕರೂ ಹಾಗೆಯೆ ಕುಳಿತಿದ್ದಾರೆ. ಸಭಾಸದರೂ ಸುಮ್ಮಗಾಗಿದ್ದಾರೆ. ರಾಷ್ಟ್ರೀಯ ಪಕ್ಷದವರು ರಾಜೀನಾಮೆಯನ್ನು ಕೊಟ್ಟು ಹೊರಬೀಳಬೇಕಾಗಿತ್ತು. ಅದನ್ನೂ ಮಾಡಿಲ್ಲ. ಏನು ತಿಳಿದು ಕೊಳ್ಳುತ್ತೀರಿ ನೀವೇ ತಿಳಿದು ಕೊಳ್ಳಿರಿ" ಎಂದು ಒಬ್ಬರು ಹೇಳಿದರು. "ಫಾಲ್ಗುಣ ೨೭ ನೆಯ ತಾ|| ಗೆ ಕರ್ನಾಟಕದಲ್ಲೆಲ್ಲ ಸ್ವಾತಂತ್ರ್ಯ ಸಪ್ತಾಹಕ್ಕೆ ಆರಂಭ. ಅಂದು ಎಲ್ಲ ಸಾರ್ವಜನಿಕ ಸಂಸ್ಥೆಗಳ ಮೇಲೆ ರಾಷ್ಟ್ರಧ್ವಜವು ನಿಲ್ಲಬೇಕು. ಹೀಗೆ ಹರ್ಡೇಕರರು ಕೇಳಿಕೊಂಡಿದ್ದುಂಟು. ಬಾಗಲಕೋಟೆಯ ನಗರ ಸಭೆಯ ಸಭಾಸದರಲ್ಲಿ ರಾಷ್ಟ್ರಧ್ವಜದ ಬಗ್ಗೆ ಅಭಿಮಾನವಿದ್ದಲ್ಲಿ, ಬಾಗಲಕೋಟೆಯ ಬಿಸಿ ನೆತ್ತರದ ತರುಣರು ಸ್ವಾತಂತ್ರ್ಯ ಪ್ರೇಮಿಗಳಾಗಿದ್ದಲ್ಲಿ, ಅಂದು ನಗರ ಸಭೆಯ ಮೇಲೆ ರಾಷ್ಟ್ರಧ್ವಜವು ನಿಲ್ಲುವದು. ಇಲ್ಲದಿದ್ದರೆ ಇಲ್ಲ. ನಿಂತರೆ ಎಲ್ಲರಿಗೂ ಭೂಷಣ. ಇಲ್ಲದಿದ್ದರೆ ದೂಷಣ." ಎಂದು ಮಗದೊಬ್ಬರು ಮಾತಾಡಿದರು. ಇದನ್ನೆಲ್ಲ ಕೇಳಿಕೊಂಡು "ಬಾಗಲಕೋಟೆಯಲ್ಲಿಯೂ ಹೀಗಾಗಬೇಕೆ" ಎಂದು ಅಂದುಕೊಂಡೆ. ನಿಟ್ಟುಸಿರು ಬಿಟ್ಟೆ. ಇದನ್ನಿಷ್ಟು ತಿಳಿಸುವದಿಷ್ಟೇ ತಿಳಿಸಿದೆ ಭೂಷಣದೂಷಣಗಳೆಲ್ಲವೂ ಬಾಗಲಕೋಟೆಯಲ್ಲಿರುವವರ ಸುತ್ತುಮುತ್ತ. ಅದರಲ್ಲಿ ನನಗೂ ಸ್ವಲ್ಪ ಬಂದರೆ ಬರಲಿ.

ತಾ|| ೨೦-೭-೩೦. ಓರ್ವ ಮತದಾರ

## ಸತ್ಯಮೂರ್ತಿಗಳು ಬುದ್ಧಿ ಹೇಳಿದರು.

ಮದ್ರಾಸ ಇಲಾಖೆಯಲ್ಲಿಯ ರಾಜಕೀಯ ಮುಖಂಡರಲ್ಲೊಬ್ಬರಾದ ಶ್ರೀ ಸತ್ಯಮೂರ್ತಿಗಳು ದುಂಡೀಗೋಲಿಯ ಪರಿಷತ್ತಿನ ಸಂಬಂಧವಾಗಿ ತಮ್ಮ ಮತಗಳನ್ನು ವ್ಯಕ್ತಪಡಿಸಿ, ಕೆಳಗಿನ ಮೂರು ಮುದ್ದೆಗಳಿಗೆ ಸರಕಾರವು ಸಮ್ಮತಿಯನ್ನು ಕೊಟ್ಟಲ್ಲಿ ಮಾತ್ರ ಭಾರತೀಯರು ಅದರಲ್ಲಿ ಭಾಗಿಗಳಾಗಬೇಕೆಂದು ಬುದ್ಧಿ ಹೇಳಿದ್ದಾರೆ. ಆ ಮೂರು ಮುದ್ದೆಗಳೆಂದರೆ—೧) ವಸಾಹತಿ ಸ್ವರಾಜ್ಯದ ಯೋಜನೆಯನ್ನು ಅಲ್ಲಿ ಸಿದ್ಧಪಡಿಸುವದರಲ್ಲಿ ಬರುವದೆಂದೂ (೨) ಹಿಂದುಸ್ಥಾನದಿಂದ ಕಾಂಗ್ರೆಸ ಪಕ್ಷದ ಪ್ರತಿನಿಧಿಗಳನ್ನು ಹೆಚ್ಚಾಗಿ ಸೇರಿಸಿಕೊಳ್ಳುವದಲ್ಲದೆ, ಉಳಿದ ರಾಜಕೀಯ ಪಕ್ಷಗಳ ಮುಖಂಡರನ್ನೂ ಅದರಲ್ಲಿ ಸೇರಿಸಿಕೊಳ್ಳುವದರಲ್ಲಿ ಬರುವದೆಂದೂ, (೩) ಬ್ರಿಟಿಶರ ಪರವಾಗಿ ಕೇವಲ ಕೂಲಿಕಾರ ಸರಕಾರದ ಪ್ರತಿನಿಧಿಗಳೇ ದುಂಡೀಗೋಲಿಯ ಪರಿಷತ್ತಿನಲ್ಲಿ ಭಾಗಿಗಳಾಗುವರೆಂದೂ ಸ್ಪಷ್ಟವಾದ ಆಶ್ವಾಸನಗಳು ಬೇಕು.

## ಜೇಲಿನಲ್ಲಿ ಸತ್ಯಾಗ್ರಹಿಯು ಮರಣ ಹೊಂದಿದನು.

ತಾ|| ೧೭ ನೆಯ ದಿವಸ ಮುಂಬಯಿಯ ಆರ್ಥರ ಜೇಲಿನಲ್ಲಿ "ಕಿಶೋರಿ ಯೇಶಾ" ಎಂಬ ಹೆಸರಿನ ಓರ್ವ ಸತ್ಯಾಗ್ರಹಿಯು ಮರಣ ಹೊಂದಿದನು. ವಡಾಲಾ ಉಪ್ಪಿನ ಪಗಾರದ ಮೇಲೆ ದಾಳಿಯನ್ನು ಮಾಡಿದುದಕ್ಕಾಗಿ ಇವನಿಗೆ ಶಿಕ್ಷೆಯಾಗಿತ್ತು. ಮೂತ್ರ ಬೇನೆಯು ಇವನ ಮರಣಕ್ಕೆ ಕಾರಣವಾಯಿತಂತೆ!

## ಸತ್ಯಾಗ್ರಹಿಗಳನ್ನು ಇಳಿಸಿಕೊಂಡದ್ದಕ್ಕಾಗಿ. ದೇವಾಲಯದ ಅಧಿಕಾರಿಗಳ ಮೇಲೆ ಗದೆ.

ಮಂಗಳೂರಿನಲ್ಲಿ ಸತ್ಯಾಗ್ರಹಿಗಳನ್ನು ತಮ್ಮ ಒಕ್ಕಲ ರಸ್ತೆಯ ದೇವಾಲಯದಲ್ಲಿ ಇಳಿಸಿಕೊಂಡದಕ್ಕಾಗಿ ಆ ದೇವಾಲಯದ ಮೊಕ್ತೇಸರರಾದ ಶ್ರೀ ಉಳ್ಳಾಲ ವಾಸ ದೇವನಾಯಕ, ಕೇಶವಪ್ರಭು, ಮಾರ್ಗೋಳಿ ಕೂಗ್ಗ ಕಾಮತ ಮತ್ತು ಮತ್ತೆ ಮುಕುಂದ ಪ್ರಭು ಇವರ ಮೇಲೆ ೧೪೭ ನೆಯ ಕಲಮಿನ ಅನ್ವಯ ದೋಷವನ್ನು ಹೊರಿಸಿ ಅಧಿಕಾರಿಗಳು ಅವರನ್ನು ವಿಚಾರಣೆಗೆ ಗುರಿಮಾಡಿದ್ದಾರೆ.

## ಪುಣೆಯಲ್ಲಿಯ ದುಂಡೀಗೋಲಿಯ ಪರಿಷತ್ತು "ಮಹಾತ್ಮಾ ಗಾಂಧಿಯವರನ್ನು ಬಿಟ್ಟುಬಿಡಿರಿ"

ತಾ|| ೧೭ ಹಾಗು ೧೮ ಈ ದಿವಸಗಳಲ್ಲಿ ಪುಣೆಯಲ್ಲಿ ಮುಂಬಯಿ ಇಲಾಖೆಯ ದುಂಡೀಗೋಲಿಯ ಪರಿಷತ್ತು ಸೇರಿತ್ತು. ಡಾ|| ಗ್ವಾಲ್ಹೇರರು ಈ ಪರಿಷತ್ತನ್ನು ಕೂಡಿಸಿದ್ದರು. ಪರಿಷತ್ತಿಗೆ ಒತ್ತಾಯವಾಗಿ ಎಲ್ಲ ವರ್ಗದ ಮಂದಾಳುಗಳೂ ಹೋಗಿದ್ದರು. ಕರ್ನಾಟಕದಿಂದ ಶ್ರೀ ದಿವಾನ ಚಿಕ್ಕೋಡಿ, ಅಂಗಡಿ ಗುರಪ್ಪನವರ. ರಾ. ಬ. ಕಂಬಳಿ, ಸರದೇಸಾಯಿ, ಜೋಗ ಮೊಕಾಶಿಯವರು ಹೋಗಿದ್ದರು. ದೇಶದಲ್ಲಿಯ ಸಧ್ಯದ ಪರಿಸ್ಥಿತಿ ಸಾಯಮನ್ ವರದಿಯ ಶಿಫಾರಸುಗಳು ಮತ್ತು ದುಂಡೀಗೋಲಿಯ ಪರಿಷತ್ತು ಈ ವಿಷಯವಾಗಿ ಅಲ್ಲಿ ಚರ್ಚೆ ನಡೆಯಿತು. ಸಾಯಮನ್ ವರದಿಯು ಅಪೂರ್ಣವೂ, ಅಸಮಾಧಾನಕರವೂ ಆಗಿದೆಯೆಂದು ಒಮ್ಮತವಾಗಿ ಎಲ್ಲರೂ ಹೇಳಿದ್ದಲ್ಲದೆ, ದೇಶದಲ್ಲಿಯ ಪರಿಸ್ಥಿತಿಯನ್ನು ಸುಧಾರಿಸಲು ಸರಕಾರದವರು ನಿಜವಾಗಿ ಬಯಸುತ್ತಿದ್ದಲ್ಲಿ ಮಹಾತ್ಮಾ ಗಾಂಧಿಯವರನ್ನು ಕೂಡಲೆ ಬಿಟ್ಟುಬಿಡಬೇಕಾಗಿಯೂ, ಮತ್ತು ದುಂಡುಮೇಜಿನ ಪರಿಷತ್ತು ಯಶಸ್ವಿಯಾಗಬೇಕಾಗಿದ್ದಲ್ಲಿ ಕಾಂಗ್ರೆಸ ಪಕ್ಷದ ಮುಖಂಡರೂ ಅದರಲ್ಲಿ ಸೇರುವಂತೆ ದೇಶದಲ್ಲಿ ವಾತಾವರಣವನ್ನುಂಟುಮಾಡಬೇಕಾಗಿಯೂ ಕೇಳಿಕೊಂಡರು.

## ವಿದೇಶಿ ವ್ಯಾಪಾರಿಗಳು "ಗಚ್ಚು" ಹೊಡೆಯ ಹತ್ತಿದರು.

ಚಿಕಾಗೋ ಪಟ್ಟಣದ ಫೆಂಬ್ಯಾಂಕ್ಸ ಮೋರ್ಸ್ ಕಂಪನಿಯ ಅಧಿಕಾರಿಗಳು ಒಂದು ತಂತಿಯನ್ನು ಕಳಿಸಿ ಹಿಂದುಸ್ಥಾನದಲ್ಲಿಯ ತಮ್ಮ ಪ್ರತಿನಿಧಿಗಳಿಗೆ "ಹಿಂದುಸ್ಥಾನದಲ್ಲಿಯ ವ್ಯಾಪಾರದ ಸ್ಥಿತಿಯು ಈಗ ಬಹಳ ಕೆಟ್ಟಿದೆ. ಅಲ್ಲಿ ಇನ್ನು ಉಳಿಯುವದರಿಂದ ಯಾವ ಲಾಭವೂ ಇಲ್ಲ. ಆದುದರಿಂದ ನೀವೆಲ್ಲರೂ ಕೂಡಲೆ ಹಿಂದುಸ್ಥಾನವನ್ನು ಬಿಟ್ಟುಕೊಟ್ಟು ಚೀನ, ಜಪಾನ, ಮತ್ತು ದಕ್ಷಿಣ ಆಫ್ರಿಕಾ ದೇಶಗಳಿಗೆ ಹೋಗಿರಿ" ಎಂಬುದಾಗಿ ತಿಳಿಸಿದ್ದಾರೆ. ಇದೇಗ ವಿದೇಶಿ ಸರಕುಗಳ ಬಹಿಷ್ಕಾರದ ಪರಿಣಾಮ.

## ಶುದ್ಧ ಖಾದಿಯು ಬೇಕಾಗಿದ್ದರೆ ತ್ವರೆಮಾಡಿರಿ.

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಶರ್ಟಿಂಗ, ಹಾಗು ಕೋಟಿನ ಉತ್ತಮವಾದ ಖಾದಿಯ ಅರಿವೆಯು ಮಾರಾಟಕ್ಕೆ ಸಿಗುತ್ತದೆ. ಗ್ರಾಹಕರು ತ್ವರೆಮಾಡಬೇಕು.

ಬಾಗಲಕೋಟೆ. { ರಾಘವೇಂದ್ರ ವ್ಯಾಸರಾವ ದೇಶಪಾಂಡೆ<br>ಖಾದಿ ವ್ಯಾಪಾರಿಗಳು.

**ಶುದ್ಧ ಖಾದಿ! ಶುದ್ಧ ಖಾದಿ!**

ಕೈನೂಲಿನ ಎಲ್ಲ ನಮೂನೆಯ ಶುದ್ಧ ಖಾದಿ ಕೊಳ್ಳಬಯಸುವ ಗ್ರಾಹಕರು ತ್ವರೆಮಾಡಬೇಕು. ಯೋಗ್ಯ ಬೆಲೆಯಿಂದ ಖಾದಿಯು ಇಲ್ಲಿ ಮಾರಲ್ಪಡುವದು.

ಪತ್ತೆ:—ರಾಮಚಂದ್ರ ಬಾಸುತಕರ.

ಪ್ರೊ:—ಶ್ರೀನಾಥ ವಿವೇಕಾನಂದ ವಿಜಯ ಖಾದಿ ವಸ್ತ್ರಭಾಂಡಾರ. c/o

ಬಾಗಲಕೋಟೆ. ಭೀಮರಾವ ಝಂಗಾಡೆ ಟೇಲರ.

**ಶುದ್ಧ ಖಾದಿ! ಶುದ್ಧ ಖಾದಿ!**

ನಮ್ಮಲ್ಲಿ ಕೈನೂಲು ಕೈಮಗ್ಗದ ಶರ್ಟಿಂಗ, ಕೋಟಿಂಗ, ಧೋತರ ಮೊದಲಾದ ಎಲ್ಲ ತರದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಗ್ರಾಹಕರು ಲಾಭ ಪಡೆಯಬೇಕಾಗಿ ವಿನಂತಿ.

ಶಂಕರಪ್ಪಾ ಬಣಗಾರ.
ಜವಳಿ ವ್ಯಾಪಾರಿಗಳು, ಬಾಗಲಕೋಟೆ

ಈ ಪತ್ರಿಕೆಯು ಬಳವಂತ ಶ್ರೀನಿವಾಸರಾವ ಮುಜುಮುದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಛಾಪಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು

ರ. ನಂ. ಬಿ. ೧೯೪೭. ನಿತ್ಯಸಂಚಿಕೆಯು. ಬೆಲ ೦-೧-೦

ಜಯಕರ್ನಾಟಕ

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಂ ॥ — ಮನು

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಮಂಗಳವಾರ ಮಿತಿ ಆಷಾಢ ಬಹುಳ ೧೧ ಶಕೆ ೧೮೫೨ ತಾ॥ ೨೨—೭—೩೦ [ ಸಂಚಿಕೆ ೧೮

## ದಕ್ಷಿಣ ಆಫ್ರಿಕಾದಿಂದಲೂ

### ಸತ್ಯಾಗ್ರಹಿಗಳು ಬಂದರು

ಶ್ರೀ ಕರ್ತಾರಸಿಂಗ ಮತ್ತು ಪ್ಯಾರಾ ಎಂಬುವವರನ್ನು ತಮ್ಮ ಧುರೀಣರನ್ನಾಗಿ ಮಾಡಿಕೊಂಡು ದಕ್ಷಿಣ ಆಫ್ರಿಕಾದಿಂದ ೧೧ ಜನ ಸತ್ಯಾಗ್ರಹಿಗಳು ಮುಂಬಯಿಗೆ ತಾ॥ ೧೯ ನೆಯ ದಿವಸ ಬಂದು ಕಾಂಗ್ರೆಸ್ ಭುವನಕ್ಕೆ ಹೋಗಿ ಅಲ್ಲಿ ಸತ್ಯಾಗ್ರಹಿಗಳಾಗಿ ಸೇರಿದರು.

### ಪೋಲೀಸರು ವಕೀಲರಿಗೆ ಅಪಮಾನ ಮಾಡಿದರು

ವಧುರೆಯ ಪ್ರಸಿದ್ಧ ವಕೀಲರಾದ ಶ್ರೀ ಎಸ್. ವೈದ್ಯನಾಥರವರು ತಾ॥ ೧೮ ನೆಯ ದಿವಸ ಸೆಂಟ್ರಲ್ ಪೋಲೀಸ ಸ್ಟೇಶನದ ಮುಂದೆ ಹಾಯ್ದು ಹೋಗುತ್ತಿರುವಾಗ ಅಲ್ಲಿ ನಿಂತುಕೊಂಡ ಓರ್ವ ಪೋಲೀಸನು ಅವರನ್ನು ತಡೆದು ನಿಲ್ಲಿಸಿ, ವೈವೇಲಿನ ಖಾದಿಯ ವಸ್ತ್ರಗಳನ್ನು ಕಸಿದುಕೊಂಡು ಅವರನ್ನು ಅಪಮಾನಗೊಳಿಸಿ, ಆ ವಸ್ತ್ರಗಳನ್ನು ತೆಗೆದುಕೊಂಡು ಹೋಗಿ ಚೌಕಿಯ ಮುಂದೆ ಸುಟ್ಟುಬಿಟ್ಟನಂತೆ !

### ಬಂಗಾಲದಲ್ಲಿ ಸಿಗರೇಟುದ ವಿರುದ್ಧ ಬಂಡು

ಬಂಗಾಲದಲ್ಲಿ ವಿದೇಶಿ ಸರಕುಗಳ ಬಹಿಷ್ಕಾರವು ಬಹು ಜೋರಾಗಿ ನಡೆದಂತೆ ಸಿಗರೇಟುಗಳ ವಿರುದ್ಧವಾಗಿ ಚಳವಳಿಯು ಅಲ್ಲಿ ಬಹಳ ಜೋರಿನಿಂದ ಸಾಗಿದೆ. ಅಲ್ಲಿ ಒಂದು ಯುರೋಪಿಯನ್ ಕಂಪನಿಯವರಿಗೆ ಎಪ್ರಿಲ ತಿಂಗಳದಲ್ಲಿ ಕೇವಲ ಸಿಗರೇಟುಗಳಿಂದಲೇ ೧,೨೨,೦೦೦ ರೂ. ಗಳ ಉತ್ಪನ್ನವಾಗಿತ್ತು. ಬಹಿಷ್ಕಾರ ಮೂಲಕವಾಗಿ ಆ ಕಂಪನಿಯವರ ಸಿಗರೇಟುಗಳ ವ್ಯಾಪಾರವು ಮೇ ತಿಂಗಳಲ್ಲಿ ೬೦೦೦ ರೂ. ಗಳಿಗೆ ಇಳಿಯಿತು. ಈಗ ಬಂಗಾಲದಲ್ಲಿ ಯುರೋಪಿಯನ್ನರ ಇಲ್ಲವೆ ಹಿಂದುಸ್ಥಾನಕ್ಕೆ ಹುಟ್ಟಿದ್ದು ತಪ್ಪಾಯಿತೆಂದು ತಿಳಕೊಳ್ಳುವವರ ಹೊರತಾಗಿ ಯಾವ ಭಾರತೀಯರೂ ಸಿಗರೇಟುಗಳನ್ನು ಮುಟ್ಟುವದಿಲ್ಲ. ಚಟವಿದ್ದವರೆಲ್ಲರೂ ಈಗ ಬೀಡಿಗಳನ್ನೇ ಸೇದುತ್ತಿರುವರು

### ದಿಲ್ಲಿಯಲ್ಲಿ ೬೦ ಜನರನ್ನು ಸೆರೆಹಿಡಿದರು.

ಸಿಂದಿ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದ್ದುದಕ್ಕಾಗಿ ತಾ॥ ೧೬ ನೆಯ ದಿವಸ ದಿಲ್ಲಿಯಲ್ಲಿ ೬೦ ಜನರು ಕೈದುಮಾಡಲ್ಪಟ್ಟಿದ್ದಾರೆ.

### ಕೈದಿಯು ಪಾರಾಗಿಹೋದನು

ಬಂಗಾಲ ಇಲಾಖೆಗೆ ಸೇರಿದ ಬಾರಿಸಾಲದ ಶ್ರೀ ಹರಿಪಾದ ಸೇನರು ಬಂಗಾಲ ಕಟ್ಟಳೆಯ ಅನುಸಾರವಾಗಿ ಸೆರೆ ಹಿಡಿಯಲ್ಪಟ್ಟಿದ್ದರು. ಜೇಲಿನಲ್ಲಿರುವಾಗ ಅವರಿಗೆ ತಮ್ಮ ತಾಯಿಯವರಿಗೆ ಅಸ್ವಸ್ಥತೆ ಉಂಟಾಗಿದ್ದುದು ತಿಳಿದು ಬಂದದ್ದರಿಂದ ಅವರು ಅಧಿಕಾರಿಗಳಿಂದ ೭ ದಿವಸಗಳ ಬಿಡುವನ್ನು ತೆಗೆದುಕೊಂಡು ತಮ್ಮ ಮನೆಗೆ ಹೋದರು. ೭ ದಿವಸಗಳು ಕಳೆದು ಹೋದವು ಅವರು ಜೇಲಿಗೆ ತಿರುಗಿ ಹೋಗಲಿಲ್ಲ. ಅದನ್ನು ಕಂಡು ಸಬ್ ಇನಸ್ಪೆಕ್ಟರರು ಅವರ ಮನೆಗೆ ಹೋಗಿ ಮನೆಯನ್ನು ಶೋಧಿಸಿದರು. ಶ್ರೀ ಸೇನರು ಮನೆಯಲ್ಲಿ ಸಿಗಲಿಲ್ಲ ಕಟ್ಟಕಡೆಯಲ್ಲಿ ನಿರಾಶೆ ಹೊಂದಿ ಅಧಿಕಾರಿಗಳು ೨೪ ತಾಸುಗಳಲ್ಲಿ ಅವನನ್ನು ಗೊತ್ತುಹಚ್ಚಿ ಕೊಡದಿದ್ದರೆ ನಿಮ್ಮ ಅವಸ್ಥೆಯು ನೆಟ್ಟಗಾಗಲಿಕ್ಕಿಲ್ಲವೆಂದು ಅವರ ಅಣ್ಣಂದಿರನ್ನು ಬೆದರಿಸಿ ಹೋದರು.

### ಲೆಫ್ಟಿನೆಂಟರು ರಾಜೀನಾಮೆ ಕೊಟ್ಟರು

ಮಹಾತ್ಮಾ ಗಾಂಧಿಯವರನ್ನು ಸೆರೆ ಹಿಡಿದುದರ ಹಾಗೂ ಸರಕಾರದವರು ಕೈಕೊಂಡ ದಬ್ಬಾಳಿಕೆಯ ನಿಷೇಧವೆಂದು ಮಲಬಾರ "ಟೆರಿಟೋರಿಯಲ್ ಫೋರ್ಸ" ನ ಲೆಫ್ಟಿನೆಂಟರಾದ ಶ್ರೀ ಎನ್ ರಾಮುಮುನಿ ಕುರುಪರವರು ತಮ್ಮ ಲೆಫ್ಟಿನೆಂಟ ಪದವನ್ನು ಬಿಟ್ಟುಕೊಟ್ಟಿರುವರು.

### ಪ್ರೊಫೆಸರರಿಗೆ ಶಿಕ್ಷೆಯಾಯಿತು

ಕಲಕತ್ತೆಯ ಪ್ರೆಸಿಡೆನ್ಸಿ ಕಾಲೇಜದ ಮುಂದೆ ನಡೆದ ಪಿಕೆಟಿಂಗದ ಸಮಯದಲ್ಲಿ ತಮ್ಮ ಕೊಡೆಯಿಂದ ಸಾರ್ಜಂಟರಿಗೆ ಅವಮಾನ ಮಾಡಿದರೆಂಬ ಆರೋಪದಿಂದ ಸೆರೆ ಹಿಡಿಯಲ್ಪಟ್ಟ, ಕಲಕತ್ತೆಯ ಸಿ. ಎಮ್. ಎಸ್. ಕಾಲೇಜದ ಪ್ರೊಫೇಸರರಾದ ಶ್ರೀ ಆಶಾನಂದ ನಾಗರವರಿಗೆ ೬ ತಿಂಗಳ ಸಕ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ.

### ವಕೀಲಿಯನ್ನು ಬಿಟ್ಟರು

ಸರಕಾರದ ದಬ್ಬಾಳಿಕೆಯ ನಿಷೇಧಾರ್ಥವಾಗಿ ಆಗ್ರಾದ ಪ್ರಸಿದ್ಧ ವಕೀಲರಾದ ಶ್ರೀ. ಅವಧ ಬಿಹಾರಿಲಾಲರು ತಮ್ಮ ವಕೀಲಿಯನ್ನು ಬಿಟ್ಟುಕೊಟ್ಟಿದ್ದಾರೆ. ಅವರು ಇನ್ನು ಮುಂದೆ ವಿದೇಶಿ ಸರಕುಗಳ ಬಹಿಷ್ಕಾರದ ಕಾರ್ಯದಲ್ಲಿ ತೊಡಗುವವರಿದ್ದಾರೆ.

## ಬಂಗಾಲ ಸರಕಾರದವರು
# ಬುದ್ಧಿಯನ್ನು ಕಳೆದುಕೊಂಡರು

ಸರಕಾರಿ ಅಧಿಕಾರಿಗಳ ವರ್ತನೆಯ ವಿಷಯವಾಗಿ ಬಂಗಾಲ ಸರಕಾರದವರು ಮೊನ್ನೆ ಮೊನ್ನೆ ಒಂದು ಪತ್ರಿಕೆಯನ್ನು ಹೊರಡಿಸಿದ್ದು, ಅದರಲ್ಲಿ ಅವರು "ರಾಜಕೀಯ ಚಳವಳಿಯಲ್ಲಿ ಯಾವ ಸರಕಾರಿ ಅಧಿಕಾರಿಯೂ ಭಾಗ ತೆಗೆದುಕೊಳ್ಳಕೂಡದು. ಇಷ್ಟೇ ಅಲ್ಲದೆ ತನ್ನ ಮೇಲೆ ಅವಲಂಬಿಸಿದ ಜನರಾಗಲಿ, ತನ ಬಂಧು ಬಳಗದವರಾಗಲಿ, ಇಲ್ಲದೆ ಇಷ್ಟೇಷ್ಟರಾಗಲಿ ಇವರೆಲ್ಲರೂ ಚಳವಳಿಯಲ್ಲಿ ಭಾಗ ತೆಗೆದುಕೊಳ್ಳದಂತೆ ಅವನು ಎಚ್ಚರದಿಂದ ಇರತಕ್ಕದ್ದು. ಯಾರಾದರೂ ಹೀಗೆ ಭಾಗ ತೆಗೆದುಕೊಂಡಿದ್ದುದು ಮೇಲಧಿಕಾರಿಗಳಿಗೆ ತಿಳಿದು ಬಂದಲ್ಲಿ ಅವನು ದೋಷಕ್ಕೆ ಪಾತ್ರನಾಗಿ ಶಿಕ್ಷೆಗೆ ಗುರಿಯಾಗುವನು" ಎಂಬುದಾಗಿ ಸಾರಿದ್ದಾರೆ. ಇನ್ನು ಮೇಲೆ ಸರಕಾರಿ ಅಧಿಕಾರಿಗಳು ತಮಗೆ ಸಂಬಂಧಿಸಿದವರು ಭಾಗ ತೆಗೆದುಕೊಳ್ಳದಂತೆ ನೋಡಿಕೊಳ್ಳಲು ಕಚೇರಿಗಳಲ್ಲಿ ಕೆಲಸವನ್ನು ಬಿಟ್ಟುಕೊಟ್ಟು ಸದಾಕಾಲ ಮನೆಯಲ್ಲಿಯೇ ಇರಬೇಕಾಯಿತು! ಇಲ್ಲವೆ ಅವರು ತಮ್ಮ ಜನರ ಚಲನವಲನಗಳನ್ನು ನಿರೀಕ್ಷಿಸಲು ಸಂಬಳವನ್ನು ಕೊಟ್ಟು ಒಬ್ಬ ಸೇವಕನನ್ನು ಇಡಬೇಕಾಯಿತು! ತಾವು ಹೊರಡಿಸಿದ ಆಜ್ಞೆಯಲ್ಲಿಯ ಈ ಅಸಂಬದ್ಧತೆಯು ಸರಕಾರದ ಪಂಡಿತರಿಗೆ ಹೇಗೆ ತಿಳಿಯಲಿಲ್ಲವೋ ಏನೋ! ಬುದ್ಧಿಯೇ ಭ್ರಂಶವಾಗುತ್ತಿರುವಾಗ ಎಲ್ಲಿಯ ತಿಳಿವು? ಎಲ್ಲಿಯ ಹೊಳವು?

## ಬಂಡೀಗಾಲಿಯ ಪರಿಷತ್ತಿನಲ್ಲಿ
# ಬ್ರಿಟಿಶರ ಪ್ರತಿನಿಧಿಗಳು

ಲಂಡನ್ನದಲ್ಲಿ ಕೂಡಲಿರುವ ಬಂಡೀಗಾಲಿಯ ಪರಿಷತ್ತಿಗೆ ಬ್ರಿಟಿಶರ ಪ್ರತಿನಿಧಿಗಳಾಗಿ ೬ ಜನರು ಅಲ್ಲಿ ಭಾಗಿಗಳಾಗುವರೆಂದೂ, ಅವರಲ್ಲಿ ಮಿ|| ಮ್ಯಾಕಡೊನಾಲ್ಡ್ ಹಾಗೂ ಬಾಲ್ಡವಿನ್ನರು ಅಧ್ಯಕ್ಷರಾಗುವರೆಂದೂ, ಮಿ|| ರೀಡಿಂಗ ಮತ್ತು ಜೆಂಬರಲೇನರು ಸಭಾಸದರಾಗುವರೆಂದೂ ತಿಳಿಯುತ್ತದೆ

## ಬೆಂಗಳೂರಿನ "ವಿಶ್ವಕರ್ನಾಟಕ"ಕ್ಕೆ ೨೦೦ ರು. ದಂಡ

ಕ.ಜೆಗಲ್ ಅವಲ್ದಾರರ ವಿಷಯವಾಗಿ ಅವಮಾನಾಸ್ಪದ ಲೇಖಗಳನ್ನು ಪ್ರಕಟಿಸಿದುದಕ್ಕಾಗಿ ಬೆಂಗಳೂರಿನ 'ವಿಶ್ವಕರ್ನಾಟಕ' ಪತ್ರಿಕೆಯ ಸಂಪಾದಕರಾದ ಶ್ರೀ. ತಿರುಮಲೆ ತಾತಾಚಾರ್ಯ ಶರ್ಮರವರಿಗೆ ಬೆಂಗಳೂರಿನ ಪ್ರಥಮ ವರ್ಗದ ಮ್ಯಾಜಿಸ್ಟ್ರೇಟರು ೨೦೦ ರು ದಂಡ, ದಂಡವನ್ನು ಕೊಡದಿದ್ದಲ್ಲಿ ೧ ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಿದ್ದಾರೆ.

## ಡೊಣ್ಣೆಯ ಪೆಟ್ಟಿಗೆ ಒಬ್ಬನು ಪ್ರಾಣಬಿಟ್ಟನು.

ಮುಂಬಯಿಯಲ್ಲಿ ಘಾಟಿವಾಲ ಮೆರವಣಿಗೆಯ ದಿವಸ ದಾವೂದ ಎಂಬ ಮುಸಲ್ಮಾನ ತರುಣನು ಮೆರವಣಿಗೆಯನ್ನು ನೋಡುತ್ತ ನಿಂತುಕೊಂಡಿದ್ದನು. ಆ ಸಮಯದಲ್ಲಿ ಅವನಿಗೆ ಡೊಣ್ಣೆಗಳ ಪೆಟ್ಟುಗಳು ಬಿದ್ದವು. ಅವನು ಮೂರ್ಛೆ ಹೊಂದಿ ಬಿದ್ದನು. ಕೂಡಲೆ ಅವನನ್ನು ದವಾಖಾನೆಗೆ ಒಯ್ದರು. ತಾ|| ೧೦ ನೆಯ ದಿವಸ ಅವನು ಅಲ್ಲಿ ಮರಣಹೊಂದಿದನು

## ಹುನಗುಂದದಲ್ಲಿ
# ವ್ಯಾಪಾರಿ ಸಂಘದ ಸ್ಥಾಪನೆ

ಹುನಗುಂದದಲ್ಲಿ ವ್ಯಾಪಾರಸ್ಥರ ಸಭೆಯು ತಾ|| ೧೭-೭-೩೦ನೆಯ ದಿವಸ ಸೇರಿ, ಅಲ್ಲಿ ಅಂದು ವ್ಯಾಪಾರಸ್ಥರ ಸಂಘವು ಸ್ಥಾಪಿತವಾಯಿತು. ಈ ಸಂಘವು ಕರ್ನಾಟಕ ವ್ಯಾಪಾರ ಸಂಘದ ಶಾಖೆಯಾಗಿ ಕಾರ್ಯ ಮಾಡಬೇಕೆಂದು ಗೊತ್ತಾಯಿತು. ಸಭೆಯು ಸರಿಯಾಗಿ ೭|| ಗಂಟೆಗೆ ಸುರುವಾಯಿತು. ಸಂಘದ ಸ್ಥಾಪನೆಗೋಸ್ಕರ ಆಮಂತ್ರಿತರಾಗಿ ಹೋಗಿದ್ದ ಶ್ರೀ. ಜಂಗಿನ ಮುರಿಗೆಯ್ಯನವರು ಕರ್ನಾಟಕ ವ್ಯಾಪಾರ ಸಂಘದಿಂದ ಈ ವರೆಗೆ ಜರುಗಿದ ಕಾರ್ಯದ ವಿವರವನ್ನು ಅಲ್ಲಿಯ ವ್ಯಾಪಾರಸ್ಥರಿಗೆ ತಿಳಿಸಿ ಹೇಳಿದರು. ಪ್ರತಿಯೊಂದು ಸ್ಥಳದಲ್ಲಿ ವ್ಯಾಪಾರಸ್ಥರ ಸಂಘವನ್ನು ಸ್ಥಾಪಿಸಿಕೊಳ್ಳುವದು ಈಗ ಅತ್ಯವಶ್ಯವಾಗಿದೆಯೆಂಬುದನ್ನು ಅವರು ಚನ್ನಾಗಿ ಮಂಡಿಸಿದರು. ಒಂದು ಕಾರ್ಯಕಾರಿ ಮಂಡಲವು ಏರ್ಪಡಿಸಲ್ಪಟ್ಟಿತು. ಸಂಘದ ವಾರ್ಷಿಕ ವರ್ಗಣಿ ಹಣವನ್ನು ಪ್ರತಿಯೊಬ್ಬ ವ್ಯಾಪಾರಸ್ಥನಿಗೆ ಅನುಕೂಲವಾಗುವಂತೆ ೧ ರೂ ಇಡಲಾಯಿತು. ಈ ಸಂಘದಿಂದ ಕರ್ನಾಟಕ ವ್ಯಾಪಾರ ಸಂಘಕ್ಕೆ ೩ ಜನರನ್ನು ಸಭಾಸದರನ್ನಾಗಿ ಮಾಡಬೇಕೆಂದು ತೀರ್ಮಾನವಾಯಿತು

## ಇಳಕಲ್ಲದಲ್ಲಿ ವ್ಯಾಪಾರಿಗಳಲ್ಲಿ ಚಟುವಟಿಕೆ

ಇಳಕಲ್ಲದಲ್ಲಿ ತಾ|| ೧೬-೭-೩೦ ನೆಯ ದಿವಸ ರಾತ್ರಿ ೯ ಗಂಟೆಗೆ ವ್ಯಾಪಾರಸ್ಥರ ಸಭೆಯು ಶ್ರೀಮಂತ ಶಂಕ್ರಪ್ಪಣ್ಣ ಸಕ್ರಿಯವರ ಮನೆಯ ಕಟ್ಟಡದ ಮೇಲೆ ಕೂಡಿತು. ಶ್ರೀ ಗುರಪ್ಪಣ್ಣ ಸಕ್ರಿಯವರು ಸಭೆಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಬಾಗಲಕೋಟೆಯಿಂದ ಆಮಂತ್ರಿತರಾಗಿ ಬಂದ ಶ್ರೀ ಜಂಗಿನ ಮುರಿಗೆಯ್ಯನವರು ವ್ಯಾಪಾರಿ ಸಂಘದ ಅವಶ್ಯಕತೆಯ ವಿಷಯವಾಗಿಯೂ, ಮತ್ತು ಕರ್ನಾಟಕ ವ್ಯಾಪಾರ ಸಂಘವು ಈ ವರೆಗೆ ಮಾಡಿದ ಕಾರ್ಯಗಳ ವಿಷಯವಾಗಿಯೂ ಬಹು ಮಾರ್ಮಿಕವಾಗಿ ವಿವೇಚಿಸಿ, ವ್ಯಾಪಾರಿ ಸಂಘದ ಮಹತ್ವವನ್ನು ತಿಳಿಸಿಕೊಟ್ಟರು. ಒಂದು ಕಾರ್ಯಕಾರಿ ಮಂಡಳವು ಸ್ಥಾಪಿತವಾಯಿತು. ಸಭಾಸದತ್ವದ ವರ್ಗಣಿ ಹಣವನ್ನು ೧ ಮತ್ತು ೨ ರೂ. ಇಡಲಾಯಿತು. ಈ ಸಂಘದಿಂದ ೫ ಜನರನ್ನು ಕರ್ನಾಟಕ ವ್ಯಾಪಾರ ಸಂಘಕ್ಕೆ ಸಭಾಸದರನ್ನಾಗಿ ಮಾಡಬೇಕೆಂದು ಗೊತ್ತಾಯಿತು.

## ಹುನಗುಂದದಲ್ಲಿ ರಾಟಿಗಳ ಪ್ರಸಾರ
### ಸಿಂಪಿಗರು ಪರದೇಶಿ ಬಟ್ಟೆಗಳನ್ನು ಹೊಲಿಯುವದಿಲ್ಲ

(ಸ್ವಂತ ವರದಿಗಾರರಿಂದ)

ಈಗ ಹುನಗುಂದ ತಾಲೂಕದಲ್ಲಿ ಸುಮಾರು ೫೦೦ ರಾಟಿಗಳು ಕೆಲಸ ಮಾಡುತ್ತಿದ್ದು, ಈಗ ಪ್ರತಿ ವಾರ ೧೫೫ ತಾಗೆ ಖಾದಿಯು ಹೊರಡುತ್ತದೆ. ಮುಂದಿನ ವಾರದಿಂದ ೨೫೫ ತಾಗೆ ಖಾದಿಯನ್ನು ಹೊಂದಿಸಬೇಕೆಂಬ ಬಗ್ಗೆ ಒಳ್ಳೇ ಜೋರಿನಿಂದ ಪ್ರಯತ್ನವು ಈಗ ನಡೆದಿದ್ದು, ಅದು ಬಹುಶಃ ಸಾಧ್ಯವಾಗಬಹುದಾಗಿ ತೋರುತ್ತದೆ. ಇಲ್ಲಿಯ ಸಿಂಪಿಗರು ತಮ್ಮದೊಂದು ಸಂಘವನ್ನೇರ್ಪಡಿಸಿಕೊಂಡು, ಪರದೇಶಿ ಬಟ್ಟೆಗಳನ್ನು ಹೊಲಿಯುತಕ್ಕದ್ದಲ್ಲವೆಂಬುದಾಗಿ ನಿರ್ಧರಿಸಿಕೊಂಡಿದ್ದಾರೆ.

# ಬೆಳಗಾವಿಯಲ್ಲಿ ಅಪೂರ್ವ ಉತ್ಸಾಹ

## ಪಿಕೆಟಿಂಗಕ್ಕಾಗಿ ೧೭ ಜನರಿಗೆ ಶಿಕ್ಷೆ. 'ಬಹಿಷ್ಕಾರ ವಾರ' ಪ್ರಾರಂಭ

ಸೆರೆ ಸಿಂದಿ ಅಂಗಡಿಗಳ ಮುಂದೆ ನಿಂತುಕೊಂಡು ಜನರು ಮದ್ಯಪಾನದಿಂದ ಬಿಡಿಸಲು ಪ್ರಯತ್ನ ಮಾಡಿದುದ ಕ್ಕಾಗಿ ಬೆಳಗಾವಿಯ ಶ್ರೀ ಕೆಕ್ಕರೆ ಗೋವಿಂದಭಟ್ಟ, ಅಂಗಡಿ, ದೇಶಪಾಂಡೆ ಅನಂತ, ಬ ಳೇಕುಂದ್ರಿ, ಗೋಡಸೆ, ಫೇವಾರಿ, ವೇಣೇಕರ, ಬಾಗಿ ಮತ್ತು ಜೋಗಿ ಯವರುಗಳಿಗೆ ಶಿಕ್ಷೆಯು ವಿಧಿಸಲ್ಪಟ್ಟಿದೆ. ಶ್ರೀ. ದೇಶಪಾಂಡೆ ಫೇವಾರಿ ಯವರಿಗೆ ಸಾಯ.ಪನ್ ಪ್ರತಿಮೆಯನ್ನು ಮಾಡಿದುದಕ್ಕಾಗಿ ೧೫ ದಿವಸಗಳ ಹೆಚ್ಚಿನ ಶಿಕ್ಷೆಯಾಗಿದೆ. ಹೆಬ್ಬಳ್ಳಿಯ ಸರಕಾರಿ ಸಿಂದೀ ಗಿಡವನ್ನು ಸಂಹಾರ ಮಾಡಿದ್ದಕ್ಕಾಗಿ ಶ್ರೀ ಕಾಕಡೆ, ವಾಳವೇಕರ, ಶಂಕರಪ್ಪ, ಶ್ರೀನಿವಾಸ ಕುಲಕರ್ಣಿ ಈ ನಾಲ್ವರು ೩ ತಿಂಗಳ ಸಶ್ರಮ ಶಿಕ್ಷೆಗೆ ಗುರಿಯಾದರು. ಕೊಳಟನೂರದ ಶ್ರೀ ಮಹಾದೇವ ಜೋಶಿಯು ೧೫ ದಿವಸಗಳ ವರೆಗೆ ಕಾರಾಗೃಹವಾಯಿತು.

ಬ್ರಿಟಿಶ ಬಟ್ಟೆಗಳ ಬಹಿಷ್ಕಾರ ಕಾರ್ಯದಲ್ಲಿ ತಮ್ಮಿಂದ ಅದಷ್ಟು ಸಹಾಯ ಮಾಡಬೇಕೆಂಬ ಉದ್ದೇಶದಿಂದ ಬಹು ಜನ ಬೆಳಗಾವಿಯ ಎಲ್ಲ ವಕೀಲರೂ ರಾಟಿಯ ಮೇಲೆ ನೂಲುತ್ತಿರುವರು. ಅವರು ಕೋರ್ಟಿನಲ್ಲಿಯ ವಕೀಲರ ಕೋಣೆ ಯಲ್ಲಿಯಾದರೂ ರಾಟಿಗಳನ್ನಿಟ್ಟುಕೊಂಡಿದ್ದು ಫುರಸತ್ತಿನಲ್ಲಿ ದಿನಾಲು ನೂಲು ತೆಗೆಯುತ್ತಿರುವರು. ಮತ್ತು ಅದನ್ನು ಉಚಿತವಾಗಿ ಕಾಂಗ್ರೆಸ್ ಖಾದಿ ಭಾಂಡಾರದವರಿಗೆ ಕೊಡುವರು. 'ಬಹಿಷ್ಕಾರ ಸಪ್ತಾಹ'ವು ಸೋಮವಾರದಿಂದ ಪ್ರಾರಂಭವಾಗಿರುವದು.

### ನಿಪ್ಪಾಣಿಯ ನಗರಸಭೆಯವರೂ

### ನಾಡಗುಡಿಯನ್ನು ನಿಲ್ಲಿಸಿದರು

ಬೆಳಗಾವಿಯ ನಗರ ಸಭೆಯವರು ತಮ್ಮ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ನಿಲ್ಲಿಸಿಕೊಂಡಿದ್ದುದನ್ನು ನೋಡಿ ನಿಪ್ಪಾಣಿಯ ನಗರಸಭೆಯವರೂ ಸಭೆ ಕೂಡಿಸಿಕೊಂಡು, ಸಭೆಯಲ್ಲಿ ನಾಡಗುಡಿ ಯನ್ನು ನಿಲ್ಲಿಸತಕ್ಕದ್ದೆಂಬುದಾಗಿ ನಿರ್ಧರಿಸಿಕೊಂಡರು. ತಾ|| ನೆಯ ದಿವಸ ನಗರ ಸಭೆಯ ಕಟ್ಟಡದ ಮೇಲೆಯೂ ಒಡೆತನದವುಗಳಾದ ಚಾವಿ ಮಾರ್ಕೆಟ್ ಹಾಗು ಮ್ಯುನಿ ಸಿಪಾಲ ವಾಚನಾಲಯಗಳ ಮೇಲೆಯೂ ರಾಷ್ಟ್ರಧ್ವಜಗಳನ್ನು ಹಾರಿಸಿದರು. ಇದರೊಂದಿಗೆ ಮುಂಬಯಿ ಕರ್ನಾಟಕದಲ್ಲಿ ಒಟ್ಟಿಗೆ ಬೆಳಗಾವಿ ಜಿಲ್ಲೆಯಲ್ಲಿ ೩ ಧಾರವಾಡ ಜಿಲ್ಲೆಯಲ್ಲಿ ೨, ಕಾರವಾರ ಜಿಲ್ಲೆಯಲ್ಲಿ ೧, ವಿಜಾಪುರ ಜಿಲ್ಲೆಯಲ್ಲಿ ೦, ಹೀಗೆ ೬ ಸಭೆಗಳ ಮೇಲೆ ರಾಷ್ಟ್ರಧ್ವಜಗಳು ನಿಂತಂತಾದವು. ವಿಜಾಪುರ ಹಾಗು ಬಾಗಲಕೋಟೆಯವರೇ, ನೀವು ಈ ಕಳಂಕವ ಅಳಿಸಿಕೊಳ್ಳುವಿರಾ?

### ಇಳಕಲ್ಲಿನಲ್ಲಿ

### ಸಿಂದೀ ಗಿಡಗಳ ಸಂಹಾರ

ತಾ। ೨೦ ನೆಯ ದಿವಸ ಹುನಗುಂದದ ಲೋಕಮಾನ್ಯ ಸಂಘ ಕದ ಸತ್ಯಾಗ್ರಹಿಗಳು ಶ್ರೀ. ತಮ್ಮಣಾಚಾರ್ಯ ಕಟ್ಟಿಯವರ ನೇತೃತ್ವದಲ್ಲಿ ಸಿಂದೀ ಗಿಡಗಳ ಸಂಹಾರಕ್ಕಾಗಿ ಇಳಕಲ್ಲಿಗೆ ಹೊರಟು ಹೋದರು. ಅಂದು ನಾಗರಿಕರು ಪ್ರಚಂಡವಾದ ಮೆರವಣಿಗೆ ಯನ್ನು ತೆಗೆದು ಸತ್ಯಾಗ್ರಹಿಗಳನ್ನು ಆರತಿ ಅಕ್ಷತೆಗಳಿಂದ ಸತ್ಕರಿಸಿ ಅವರನ್ನು ಕಳಿಸಿಕೊಟ್ಟರು. ಅವರು ಇಳಕಲ್ಲಿಗೆ ಮುಟ್ಟಿದ ಕೂಡಲೆ ಅಲ್ಲಿಯ ಜನರು ಅವರನ್ನು ಸತ್ಕರಿಸಿ ಕರೆದುಕೊಂಡು ಹೋದರು. ಸತ್ಯಾಗ್ರಹಿಗಳು ತಾ|| ೨೧ ನೆಯ ದಿವಸ ಸಿಂದೀ ಬನಕ್ಕೆ ಹೋಗಿ ಬಹಳ ಗಿಡಗಳನ್ನು ನೆಲಕ್ಕುರುಳಿಸಿ ಬಂದರು.

### ಸತ್ಯಾಗ್ರಹಕ್ಕಾಗಿ ತಂದೆ ಮಕ್ಕಳಲ್ಲಿ ತಂಟೆ

ತ್ರಿಚನಾಪಳ್ಳಿಯಲ್ಲಿ ಶ್ರೀ ರಘುನಾಥರಾವ ಸುರೇಂದ್ರೋವರ್ ಸಬ್ ಮ್ಯಾಜಿಸ್ಟ್ರೇಟರಿರುವರು. ಅವರಿಗೆ ರಾಮಚಂದ್ರರಾಯ ನೆಂಬೊಬ್ಬ ಮಗ. ಅವನು ಅಲ್ಲಿಯ ಸತ್ಯಾಗ್ರಹ ತಂಡದ ಮುಖಂಡ. ಅವನಿಗೆ ಜೂನ ತಿಂಗಳದಲ್ಲಿ ೬ ತಿಂಗಳ ಕಠಿಣ ಶಿಕ್ಷೆಯಾಯಿತು. ರಘುನಾಥರಾಯರು ಮಗನಿಗಾದ ಶಿಕ್ಷೆಯ ವಿರುದ್ಧ ಮೇಲಿನ ಕೋರ್ಟಿಗೆ ಅಪೀಲು ಮಾಡಿದರು. ಅದು ವಿಚಾರಣೆಯು ನಡೆ ಯಿತು. ವಿಚಾರಣೆಯ ಕಾಲಕ್ಕೆ ಸತ್ಯಾಗ್ರಹಿಗಳಾದ ರಾಮಚಂದ್ರ ರಾಯರೇನು ಕ್ಷಮೆಯನ್ನು ಬೇಡಿಕೊಳ್ಳಲಿಲ್ಲ. ತನ್ನ ತಂದೆಯವ ರಿಗೆ ಸರಕಾರಿ ಉದ್ಯೋಗವನ್ನು ಬಿಟ್ಟು ಬಿಡಲಿಕ್ಕೂ ಹಾಗು ಕಾಂಗ್ರೆಸ್ಸದ ಕಾರ್ಯಕ್ರಮಗಳನ್ನು ಜರುಗಿಸಿ ನೆರವಾಗಲಿಕ್ಕೂ ಉಪದೇಶಮಾಡಿದರು. ರಘುನಾಥರಾಯರು ಕೇಸನ್ನು ಬಿಟ್ಟು ಎದ್ದುಹೋದರು. ನ್ಯಾಯಾಧೀಶರು ಮೊದಲಿನ ಶಿಕ್ಷೆ ಯನ್ನೇ ಸ್ಥಿರಮಾಡಿದರು.

### ಸರ್. ಸಿ ಪಿ. ರಾಮಸ್ವಾಮಿಯವರು

### ಮಹಾತ್ಮರನ್ನು ಭೆಟ್ಟಿಯಾದರು.

ಸಿಮಲಾದಲ್ಲಿಯ ಅಸೆಂಬ್ಲಿಯ ಕಾರ್ಯವನ್ನು ಮುಗಿಸಿ ಕೊಂಡು ಮದ್ರಾಸಕ್ಕೆ ತೆರಳುವಾಗ ಸರ್, ಸಿ. ಪಿ ರಾಮಸ್ವಾಮಿ ಅಯ್ಯರರವರು ಹಾದಿಯಲ್ಲಿ ಪುಣೆಯಲ್ಲಿ ಇಳಿದು, ಮಹಾತ್ಮಾ ಗಾಂಧಿ ಹಾಗು ಶ್ರೀಮತಿ ಸರೋಜಿನಿ ದೇವಿಯವರನ್ನು ಯರ ವಡಾ ಜೈಲಿನಲ್ಲಿ ಕಂಡುಕೊಂಡು, ಅವರೊಡನೆ ಸಖ್ಯದ ರಾಜಕೀ ಯ, ಪರಿಸ್ಥಿತಿ ಹಾಗು ದುಂಡಿಗಾಲಿಯ ಪರಿಷತ್ತಿನ ವಿಷಯ ವಾಗಿ ಚರ್ಚಿಸಿದರೆಂದು ತಿಳಿದು ಬರುತ್ತದೆ.

### ಸತ್ಯಾಗ್ರಹಿಗಳಿಗೆ ಪುಕ್ಕಟೆ ಕಸ್ತ

ದಿಲ್ಲಿಯಲ್ಲಿ ೬೦೦ ಜರ ನಾವಲಿಗರು ತಮ್ಮದೊಂದು ಸಭೆ ಯನ್ನೇರ್ಪಡಿಸಿಕೊಂಡು ಸತ್ಯಾಗ್ರಹಿಗಳಿಗೆ ಪುಕ್ಕಟೆಯಾಗಿ ಕಸ್ತ ಮಾಡಬೇಕೆಂದಾಗಿ ನಿರ್ಧರಿಸಿಕೊಂಡಿದ್ದಾರೆ

[illegible]

## ಮಥುರೆಯಲ್ಲಿ ಗೋಳೀಬಾರು.

ತಾ|| ೧೭ ನೇ ದಿವಸ ಮಥುರೆಯಲ್ಲಿ ಸತ್ಯಾಗ್ರಹಿಗಳು ಅಲ್ಲಿಯ ಸೆರೆ ಅಂಗಡಿಗಳ ಮುಂದ ಪಿಕೆಟಿಂಗವನ್ನು ಪ್ರಾರಂಭಿಸಿದರು. ಸ್ವಯಂಸೇವಕರು ಕುಡಿಯಲು ಬಂದವರಿಗೆ ಉಪದೇಶ ಮಾಡಿ ಅವರನ್ನು ಕುಡಿಯುವದರಿಂದ ತಡೆಯುತ್ತಿದ್ದರು. ಸತ್ಯಾಗ್ರಹಿಗಳ ಪಿಕೆಟಿಂಗವನ್ನು ನೋಡಲು ಉತ್ಸುಕರಾಗಿ ಊರಲ್ಲಿಯ ಬಹಳಷ್ಟು ಜನರು ಅಲ್ಲಿ ಸೇರಿದ್ದರು. ಸಂಜೆಯಲ್ಲಿ ಸಬ್ ಇನಸ್ಪೆಕ್ಟರು ಪೋಲೀಸರೊಂದಿಗೆ ಅಲ್ಲಿಗೆ ಹೋಗಿ ಎಲ್ಲವನ್ನು ನೋಡಿಕೊಂಡರು. ಪೋಲೀಸರು ಅಲ್ಲಿಗೆ ಹೋದ ಕೂಡಲೆ ಜನರ ಗುಂಪಿನೊಳಗಿಂದ ಯಾರೋ ಕೆಲವರು ಕಲ್ಲುಗಳನ್ನು ಒಗೆದರಂತೆ. ಕೂಡಲೆ ಅಧಿಕಾರಿಗಳು ಸತ್ಯಾಗ್ರಹಿಗಳ ಮುಖಂಡರನ್ನು ಹಾಗು ಸತ್ಯಾಗ್ರಹಿಗಳನ್ನು ಸೆರೆಹಿಡಿದುಕೊಂಡು ಮೋಟಾರದಲ್ಲಿ ಕುಳ್ಳಿರಿಸಿಕೊಂಡು ಹೋದರು. ಜನರು ಮೋಟಾರಿನ ಬೆನ್ನು ಹತ್ತಿದರು. ಅಧಿಕಾರಿಗಳು ಲಾಠಿಗಳನ್ನು ಉಪಯೋಗಿಸಿದರು. ಜನರು ಕಲ್ಲು ಒಗೆಯಲು ಆರಂಭಿಸಿದರು. ಹೀಗೆ ಗೊಂದಲವೆದ್ದದರಿಂದ ಪೋಲೀಸರು ಗೋಳೀಬಾರ ಮಾಡಿದರು. ಕೆಲವರಿಗೆ ಗಾಯಗಳಾದವು.

## ಅಸಿಸ್ಟಂಟ ಕಮಿಶನರರ ಮಗನು ತುರುಂಗ ಕಂಡನು

ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದ ದೆಶೆಯಾಗಿ ಗೌಹಾತಿಯ ಎಕ್ಸಟ್ರಾ ಅಸಿಸ್ಟಂಟ ಕಮಿಶನರರ ಮಗನಾದ ಶ್ರೀ ಉಪೇಂದ್ರನಾಥ ನ್ಯಾಯಸರಿಗೆ ತಾ|| ೧೬ ನೆಯ ದಿವಸ ಕೈದಾಗಿದೆ

## ಜೈಲರನ ಮಗನಿಗೆ ಜೇಲು ಆಯಿತು

ಗೌಹಾತಿಯ ತುರುಂಗದ ಜೇಲರನ ಮಗನಾದ ಶ್ರೀ ಸುರೇಂದ್ರನಾಥ ಚೌಧರಿಯವರು ತಾ|| ೧೬ ನೆಯ ದಿವಸ ಪಿಕೆಟಿಂಗ ಕಾಯದೆಯ ಮೂಲಕವಾಗಿ ಸೆರೆಹಿಡಿಯಲ್ಪಟ್ಟಿದ್ದಾರೆ.

### ಮದ್ರಾಸ ಇಲಾಖೆಯಲ್ಲಿ

## ಗಾಂಧಿ ಟೊಪ್ಪಿಗೆಯ ಮೇಲೆ ಗದೆ,

ಗಾಂಧಿ ಟೊಪ್ಪಿಗೆಯು ಹಿಂದುಸ್ಥಾನದಲ್ಲಿಯ ಪ್ರಮುಖ ಪಕ್ಷದ ಚಿನ್ಹವಾಗಿರುವದೆಂದು ತಿಳಿದುಬಂದದ್ದರಿಂದ ಜೈಲಿನಲ್ಲಿ ಗಾಂಧಿ ಟೊಪ್ಪಿಗೆಯನ್ನು ಹಾಕಿಕೊಳ್ಳಲು ಯಾರಿಗೂ ಅಪ್ಪಣೆಯಿಲ್ಲವೆಂಬುದಾಗಿ ಮದ್ರಾಸ ಸರಕಾರದವರು ಕಟ್ಟಳೆಯನ್ನು ಹೊರಡಿಸಿದ್ದಾರೆ.

### ಅಹಮ್ಮದಾಬಾದದಲ್ಲಿ

## ನಗರ ಸಭೆಯ ಕಟ್ಟಡಗಳ ಮೇಲೆ ರಾಷ್ಟ್ರಧ್ವಜ.

ತಮ್ಮ ಆಡಳಿತೆಯೊಳಗಿನ ಎಲ್ಲ ಶಾಲೆಗಳು ಹಾಗೂ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ನಿಲ್ಲಿಸತಕ್ಕದ್ದೆಂದು ಅಹಮ್ಮದಾಬಾದ ನಗರ ಸಭೆಯವರು ನಿರ್ಧರಿಸಿಕೊಂಡಿದ್ದು, ತಾ|| ೨೧ ನೆಯ ದಿವಸ ಅವುಗಳನ್ನು ನಿಲ್ಲಿಸತಕ್ಕವರಿದ್ದಾರು ಈ ಬಗ್ಗೆ ವೆಚ್ಚಕ್ಕಾಗಿ ೩೦೦ ರು. ಗಳನ್ನು ತೆಗೆದಿಟ್ಟಿದ್ದಾರು ಬಾಗಲಕೋಟೆಯ ನಗರ ಸಭೆಯವರ?

## ಶ್ರೀಮತಿ ಕಮಲಾ ನೆಹರೂರವರು ವರ್ಕಿಂಗ ಕಮಿಟಿಯ ಸಭಾಸದರಾದರು.

ವರ್ಕಿಂಗ ಕಮಿಟಿಯ ಸಭಾಸದರಾದ ಅಲಹಾಬಾದದ ಪಂಡಿತ ಸುಂದರಲಾಲರು ಸೆರೆಮನೆಗೆ ಹೋದ ಮೂಲಕ ತೆರವಾದ ಅವರ ಸ್ಥಳದಲ್ಲಿ ಶ್ರೀಮತಿ ಕಮಲಾ ನೆಹರೂರವರು ಸಭಾಸದರಾಗಿ ನಿಯಮಿಸಲ್ಪಟ್ಟಿದ್ದಾರೆ. ಇವರು ಶ್ರೀ ಜವಾಹಿರಲಾಲ ನೆಹರೂರವರ ಪತ್ನಿಗಳಾಗಿರುವರು.

## ಪೋಲೀಸ ಅಧಿಕಾರಿಯನ್ನು ಕ್ಲಬ್ಬಿನಿಂದ ಹೊರಗೆ ಹಾಕಿದರು.

ಅಹಮ್ಮದಾಬಾದದ "ಗುಜರಾಥ ಕ್ಲಬ್"ದವರು ತಾ|| ೧೩ ನೆಯ ದಿವಸ ಶ್ರೀ ಅಂಬಾಲಾಲ ಸರಾಭಾಯಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಸೇರಿಸಿಕೊಂಡು ಆ್ಯಂಗ್ಲೋ ಇಂಡಿಯನ್ ಪತ್ರಿಕೆಗಳಿಗೆ ಬಹಿಷ್ಕಾರ ಹಾಕತಕ್ಕದ್ದೆಂದೂ, ತಮ್ಮ ಸಂಘದ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ನಿಲ್ಲಿಸತಕ್ಕದ್ದೆಂದೂ ಮತ್ತು ಧರಸಾನಾ ದಾಳಿಯಲ್ಲಿ ಸ್ವಯಂಸೇವಕರ ಮೇಲೆ ಅತ್ಯಾಚಾರಗಳನ್ನು ಮಾಡಿದ ಮಿ. [illegible]ವನ್ನು ಕ್ಲಬ್ಬಿನಿಂದ ಹೊರಗೆ ಹಾಕತಕ್ಕದ್ದೆಂದೂ ನಿರ್ಧರಿಸಿಕೊಂಡರು...


## ಶುದ್ಧ ಖಾದಿಯು ಬೇಕಾಗಿದ್ದರೆ ತ್ವರೆಮಾಡಿರಿ.

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಪಟಕ, ಹಾಗು ಕೋಟಿನ ಉತ್ತಮವಾದ ಖಾದಿಯು [illegible] ಮಾರಾಟಕ್ಕೆ ಸಿಗುತ್ತದೆ. ಗ್ರಾಹಕರು ತ್ವರೆಮಾಡಬೇಕು.

ಬಾಗಲಕೋಟೆ. { ರಾಘವೇಂದ್ರ ವ್ಯಾಸರಾವ ದೇಶಪಾಂಡೆ
ಖಾದಿ ವ್ಯಾಪಾರಿಗಳು.

ಶುದ್ಧ ಖಾದಿ! ಶುದ್ಧ ಖಾದಿ!

ಕೈನೂಲಿನ ಎಲ್ಲ ನಮೂನೆಯ ಶುದ್ಧ ಖಾದಿ ಕೊಳ್ಳಬಯಸುವ ಗ್ರಾಹಕರು ತ್ವರೆಮಾಡಬೇಕು. ಯೋಗ್ಯ ಬೆಲೆಯಿಂದ ಖಾದಿಯು ಇಲ್ಲಿ ಮಾರಲ್ಪಡುವದು.

ಕರ್ತೃ:—ರಾಮಚಂದ್ರ ಬಾಸುತಕರ.
ಪ್ರೊ:—ಶ್ರೀಮಾನ್ ವಿವೇಕಾನಂದ ವಿಜಯ ಖಾದಿ ವಸ್ತ್ರಭಂಡಾರ. c/o
ಬಾಗಲಕೋಟೆ. ಭೀಮರಾವ ಝುಂಗಾಡೆ ಟೇಲರ.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಕೈನೂಲು ಕೈಮಗ್ಗದ ಶರ್ಟಿಂಗ, ಕೋಟಿಂಗ, ಧೋತರ ಮೊದಲಾದ ಎಲ್ಲ ತರದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಗ್ರಾಹಕರು ಲಾಭ ಪಡೆಯಬೇಕಾಗಿ ವಿನಂತಿ

ಶಂಕರಪ್ಪಾ ಬಣಗಾರ
ಜವಳಿ ವ್ಯಾಪಾರಿಗಳು, ಬಾಗಲಕೋಟೆ


ಈ ಪತ್ರಿಕೆಯು, ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು

ರ. ನಂ. ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—೩

# ಕನ್ನಡಿಗ

ಜಯ ಕರ್ನಾಟಕ

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಂ ॥ — ಮನು

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಗುರುವಾರ ಮಿತಿ ಆಷಾಢ ಬಹುಳ ೧೩ ಶಕೆ ೧೮೫೨ ತಾ॥ ೨೪—೭—೩೦ [ ಸಂಚಿಕೆ ೧೦೮

# ಸಂಗಮನೇರ ಅಡವಿಗೆ ದಾಳಿ

## ೧೦,೦೦೦ ಜನರು ಹುಲ್ಲನ್ನು ಕಿತ್ತುವರು

ಮಹಾರಾಷ್ಟ್ರ ಯುದ್ಧ ಮಂಡಳದವರು ಮಂಗಳವಾರ ದಿವಸ ಸಂಗಮನೇರದಲ್ಲಿ ಸಾಮುದಾಯಿಕವಾಗಿ ಅಡವಿಯ ಕಾಯದೆಭಂಗವನ್ನು ಮಾಡುವದಾಗಿ ಗೊತ್ತುಮಾಡಿಕೊಂಡಿದ್ದಾರೆ. ಅಕೋಲಾ ಹಾಗು ಸಂಗಮನೇರ ತಾಲೂಕದೊಳಗಿನ ರೈತರು ಇನ್ನೂ ವರೆಗೆ ಹುಲ್ಲುಬನ್ನಿಯನ್ನು ಕೊಟ್ಟಿಲ್ಲ. ಯಾವ ವ್ಯಾಪಾರಿಯೂ ಅಡವಿಯಲ್ಲಿಯ ಹುಲ್ಲನ್ನು ಮಕ್ತೆಯಿಂದ ಹಿಡಿದಿಲ್ಲ. ಮಂಗಳವಾರ ದಿವಸ ನಸುಕಿನಲ್ಲಿ ಎಲ್ಲ ಜನರು ತಮ್ಮ ತಮ್ಮ ಹಳ್ಳಿಗಳಿಂದ ರಾಷ್ಟ್ರಧ್ವಜಗಳ ಸಹಿತವಾಗಿ ಹೊರಟು ಯುದ್ಧ ಮಂಡಳದವರು ಗೊತ್ತುಮಾಡಿದ ಅಡವಿಯನ್ನು ಸೇರುವರು. ಈ ಕಾಯದೆಭಂಗಕ್ಕಾಗಿ ಯುದ್ಧ ಮಂಡಳದವರು ಒಟ್ಟಿಗೆ ೧೨ ಸ್ಥಳಗಳನ್ನು ಆರಿಸಿದ್ದಾರೆ. ಅಡವಿಯನ್ನು ಮುಟ್ಟಿದ ಕೂಡಲೆ ಅವರು ಮೊದಲು ಆಕಳನ್ನು ಪೂಜಿಸುವರು. ಆಮೇಲೆ ಎಲ್ಲರೂ ಅಡವಿಯನ್ನು ಹೊಕ್ಕು ತಮ್ಮ ತಮ್ಮ ಕೈಗಳಿಂದ ಹುಲ್ಲನ್ನು ಕಿತ್ತುಕೊಳ್ಳುವರು. ಈ ಕಾಯದೆಭಂಗದಲ್ಲಿ ಮುಂಬಯಿಯಿಂದ ೧೨ ಜನ ಸತ್ಯಾಗ್ರಹಿಗಳು ಭಾಗ ತೆಗೆದುಕೊಳ್ಳುವವರಿದ್ದಾರೆ.

### ಮಧ್ಯಪ್ರಾಂತದ
### ಯುದ್ಧಮಂಡಳದವರನ್ನು ಕೈದುಮಾಡಿದರು.

ಮಧ್ಯಪ್ರಾಂತದ ಯುದ್ಧ ಮಂಡಳದ ಅಧಿಕಾರಿಗಳಾದ ಸೇಟ ಪೂನಮಚಂದ, ಖರೆ, ನೀಲಕಂಠರಾವ ದೇಶಮುಖ ಮತ್ತು ಶ್ರೀ ಧರ್ಮಾಧಿಕಾರಿ ಇವರನ್ನು ತಾ ೨೨ ನೆಯ ದಿವಸ ಕ್ರಿ. ಪ್ರೊ. ಕೋಡಿನ ೧೦೮ ನೆಯ ಕಲಮಿನನ್ವಯ ಸೆರೆಹಿಡಿದಿದ್ದಾರೆ.

### ಸ್ಟೇಶನಮಾಸ್ತರರು ರಾಜೀನಾಮೆ ಕೊಟ್ಟರು.

ಸರಕಾರದವರು ಕೈಕೊಂಡ ದಬ್ಬಾಳಿಕೆಯ ನಿಷೇಧಾರ್ಥವಾಗಿ ಉಮರಾಂಧದ ಅಸಿಸ್ಟಂಟ ಸ್ಟೇಶನಮಾಸ್ತರರಾದ ಶ್ರೀ ಪೋಪಟಲಾಲ ಶರಾಫರವರು ತಮ್ಮ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟಿದ್ದಾರೆ.

### ಗಾಂಧಿ ಟೊಪ್ಪಿಗೆಯನ್ನು ಸುಟ್ಟಿದ್ದಕ್ಕಾಗಿ
### ಮ್ಯಾಜಿಸ್ಟ್ರೇಟರ ಮೇಲೆ ದಾವೆ.

ಸತ್ಯಾಗ್ರಹಿ ಯುವಕನ ಗಾಂಧಿ ಟೊಪ್ಪಿಗೆಯನ್ನು ಒತ್ತಾಯದಿಂದ ಕಸಿದುಕೊಂಡು ಅದನ್ನು ಸುಟ್ಟಿದ್ದರಿಂದ ಕಲಕತ್ತೆಯ ಜಗತ್‌ಬಂಧು ಪಾಂಡೆಯವರು ಅಲ್ಲಿಯ ಮ್ಯಾಜಿಸ್ಟ್ರೇಟರ ಮೇಲೆ [illegible] ರೂಗಳ ದಾವೆಯನ್ನು ಮಾಡಿದ್ದಾರೆ.

### ಹೊನ್ನಾವರದಲ್ಲಿ ೧೨ ಜನರನ್ನು ಕೈದುಮಾಡಿದರು

ಹಿಂದುಸ್ಥಾನೀ ಸೇವಾದಲದ ಸಂಘಟಕರಾದ ಶ್ರೀ ನಾಡಗೇರ ಹಾಗು ೧೧ ಜನ ಸ್ವಯಂಸೇವಕರನ್ನು ಹೊನ್ನಾವರದಲ್ಲಿ ೫೦೪ ನೆಯ ಕಲಮಿನನ್ವಯ ಅಧಿಕಾರಿಗಳು ಸೆರೆಹಿಡಿದಿರುವರೆಂದು ತಿಳಿಯುತ್ತದೆ.

### ಕಾಯದೆಮಂಡಳಕ್ಕೆ
### ಮತ್ತೆ ೭ ಜನರು ರಾಜೀನಾಮೆ ಕೊಟ್ಟರು.

ಮಧ್ಯಪ್ರಾಂತ ಕಾಯದೆ ಮಂಡಳದ ಸಭಾಸದರಾಗಿದ್ದ ಶ್ರೀ ದಿಘೆ ರಾಜಪೂರಕರ ಪಾಟೀಲ, ಕೋಷ್ಟಿ, ಕೋರ್ಡೆ, ಬಿ. ಕೆ. ಪಾಟೀಲ ಈ ೬ ಜನರೂ, ಬಿಹಾರ ಓರಿಸಾ ಕಾಯದೆ ಮಂಡಳದ ಅಧ್ಯಕ್ಷರೂ ಸಭಾಸದರಾದ ಶ್ರೀ ದ್ವಾರಕಾನಾಥರೂ ತಮ್ಮ ತಮ್ಮ ಸಭಾಸದತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ.

### ಪ್ರಿನ್ಸಿಪಾಲರು ರಾಜೀನಾಮೆ ಕೊಟ್ಟರು.

ದೇಶಸೇವೆಯನ್ನು ಮಾಡುವ ಉದ್ದೇಶದಿಂದ ಕಲಕತ್ತೆಯ ವ್ಹಿಕ್ಟೋರಿಯಾ ಇನಸ್ಟಿಟ್ಯೂಟದ ಪ್ರಿನ್ಸಿಪಾಲರಾದ ಶ್ರೀಮತಿ ಲತಿಕಾ ಬಸುರವರು ತಮ್ಮ ಉದ್ಯೋಗಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ

---

ಬಳ್ಳಾರಿಯ ವೇ॥ ರಾಘವೇಂದ್ರಾಚಾರ್ಯರ 'ಭಾರತಸಾರ' ಪುರಾಣದ ಮಂಗಳ ಈ ದಿನ ಸಂಜೆಯ ೪ ಗಂಟೆಗೆ ವೆಂಕಟಪೇಟೆಯ ವೆಂಕಟೇಶ್ವರ ದೇವರ ಗುಡಿಯಲ್ಲಿ ಜರಗುವದು. ಎಲ್ಲರೂ ಭಾಗಿಗಳಾಗಬೇಕಾಗಿ ಆಚಾರ್ಯರು ತಿಳಿಸುತ್ತಾರೆ.

# ಶ್ರೀ. ಧನಶೆಟ್ಟಿಯವರ ಜೀವವುಳಿಸಲು

## ಕಾಯದೆ ಮಂಡಳದ ೨೮ ಜನ ಸಭಾಸದರು ಅರ್ಜಿ ಕಳಿಸಿದರು.

ಮುಂಬಯಿ ಕಾಯದೆ ಮಂಡಳದ ಸಭಾಸದರಾದ ಶ್ರೀ. ನಾರಾಯಣರಾವ ಗುಂಜಾಳರವರು ಒಂದು ವಿನಂತಿ ಅರ್ಜಿಯನ್ನು ನಾಮದಾರ ಗವ್ಹರ್ನರ ದೊರೆಗಳ ಕಡೆಗೆ ಕಳಿಸಿದ್ದು, ಅದರ ಆಶಯವೆಂದರೆ —

“ಸೊಲ್ಲಾಪುರದಲ್ಲಾದ ಕೊಲೆಯ ವಿಚಾರಣೆಯ ಖಟ್ಲೆಯಲ್ಲಿ ಶ್ರೀ ಮಲ್ಲಪ್ಪ ಧನಶೆಟ್ಟಿಯವರಿಗೆ ಸೆಶನ್ಸ ಜಡ್ಜರು ಗಲ್ಲಿನ ಶಿಕ್ಷೆಯನ್ನು ವಿಧಿಸಿದರು. ಹಾಯಕೋರ್ಟದವರು ಅದನ್ನು ಸ್ಥಿರ ಮಾಡಿದರು. ಪುರಾವೆಗಳ ಸಂಬಂಧವಾಗಿ ನಾವು ಈಗ ಏನೂ ನುಡಿಯುವದಿಲ್ಲ. ನಿಮಗೆ ಸರಕಾರದ ಕರಾರು ಆದ ವೇಳೆ ಶ್ರೀ. ಧನಶೆಟ್ಟಿಯವರನ್ನು ನೀವು ಮುಕ್ತಮಾಡಿದಲ್ಲಿ, ಬಹಳ ದಯೆ ತೋರಿಸಿದಂತಾಗುವದು. ಇದನ್ನು ಮಾಡುವದು ಅಸಾಧ್ಯವಾಗಿದ್ದಲ್ಲಿ, ಅವರಿಗೆ ಕೊಟ್ಟ ಗಲ್ಲಿನ ಶಿಕ್ಷೆಯನ್ನು ರದ್ದುಮಾಡಿ, ಅದರ ಬದಲಾಗಿ ಕೆಲವು ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿರಿ. ಸೊಲ್ಲಾಪುರದಲ್ಲಿ ಈಗ ಶಾಂತತೆಯು ನೆಲೆಗೊಳ್ಳಹತ್ತಿದೆ. ಈ ಸಮಯದಲ್ಲಿ ನೀವು ಇಷ್ಟು ದಯೆಯನ್ನು ತೋರಿಸಿದಲ್ಲಿ ಅಲ್ಲಿ ಶಾಂತತೆಯು ನೆಲೆಗೊಳ್ಳಲು ಮತ್ತಷ್ಟು ಸಹಾಯವಾದಂತಾಗುವದು.” ಈ ಅರ್ಜಿಯ ಮೇಲೆ ಮುಂಬಯಿ ಕಾಯದೆ ಮಂಡಳದ ಶ್ರೀ. ಗುಂಜಾಳ, ಜೋಲೆ, ಬಲೂಚ, ಆರ ಎಲ್. ಪಾಟೀಲ, ಹಣ್ಮಂ, ಗಿರಿಯಪ್ಪನವರ, ಅಕವಲೆ, ಜಿ. ಬಿ ದೇಸಾಯಿ, ಸೋಲಾಂಕಿ, ಸಯ್ಯದ ಮುನಾವರ, ವಾಡೇಕರ, ಅಂಬೇಡಕರ, ಕಾಳೆ, ನವಲೆ, ಚಂದ್ರಚೂಡ, ರಾ. ಬ. ಕಾಂಬಳೆ, ಮುಜುಮದಾರ, ಕಾರಭಾರಿ, ಎ ಎಸ್. ಸುರ್ವೆ, ಪ್ಹಿ ಎ. ಸುರ್ವೆ, ಕೊಲ್ಹಟಕರ, ಥೋರಾತ, ಸರದೇಸಾಯಿ, ಪವಾರ, ವಾಟಣಕರ, ಚಿಕ್ಕೋಡಿ, ಝುಂಝುರಾವ ಮುತ್ತು ಅಂಗಡಿ ಈ ೨೮ ಜನ ಸಭಾಸದರು ತಮ್ಮ ತಮ್ಮ ಸಹಿಗಳನ್ನು ಹಾಕಿದ್ದಾರೆ.

### ಹುಬ್ಬಳ್ಳಿಯಲ್ಲಿ

## ರಾಷ್ಟ್ರಧ್ವಜಕ್ಕಾಗಿ ಸತ್ಯಾಗ್ರಹವೇ?

ಹುಬ್ಬಳ್ಳಿಯ ನಗರ ಸಭೆಯ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ನಿಲ್ಲಿಸಬೇಕೆಂಬ ಬಗ್ಗೆ ಅಲ್ಲಿಯ ನಾಗರಿಕರಲ್ಲಿಯೂ ಮತ್ತು ನಗರಸಭೆಯ ಅಧಿಕಾರಿಗಳಲ್ಲಿಯೂ ಬಹು ದಿವಸಗಳಿಂದ ತಿಕ್ಕಾಟವು ನಡೆಯುತ್ತ ಬಂದಿದೆ. ಹುಬ್ಬಳ್ಳಿಯ ನಾಗರಿಕರೂ ಬಾಗಲಕೋಟೆಯ ನಾಗರಿಕರಂತೆಯೇ ಒಂದು ದಿವಸ ನಗರ ಸಭೆಯ ಮುಂದೆ ಹೋಗಿ ನಿಂತುಕೊಂಡು ರಾಷ್ಟ್ರಧ್ವಜದ ವಿಷಯವನ್ನು ತೆಗೆದುಕೊಳ್ಳಲು ಅಧ್ಯಕ್ಷರಿಗೆ ಕೇಳಿಕೊಂಡರು. “ತಾ|| ೨೦ ರ ವರೆಗೆ ಅವಧಿಯನ್ನು ಕೊಡಿರಿ ವಿಚಾರಮಾಡಿ ಏನೆಂಬುವದನ್ನು ತಿಳಿಸುವೆವೆಂ”ದು ಅಧ್ಯಕ್ಷರು ಹೇಳಿದರು. ನಾಗರಿಕರು ಆ ಅವಧಿಯನ್ನು ಕೊಟ್ಟು ತಿರುಗಿ ಬಂದರು. ಒಂದು ಸಾರ್ವಜನಿಕ ಸಭೆಯನ್ನೇರ್ಪಡಿಸಿಕೊಂಡು ಸಭೆಯಲ್ಲಿ ರಾಷ್ಟ್ರಧ್ವಜ ಸತ್ಯಾಗ್ರಹ ಮಂಡಳವನ್ನು ಸ್ಥಾಪಿಸಿಕೊಂಡರು. ತಾ|| ೨೦ ಕ್ಕೆ ನಗರ ಸಭೆಯ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ಹಚ್ಚುವ ವಿಷಯವಾಗಿ ಅಧಿಕಾರಿಗಳು ಏನನ್ನೂ ಹೇಳದಿದ್ದರೆ ತಾ|| ೨೭ ನೆಯ ದಿವಸ ನಾಗರಿಕರು ಸತ್ಯಾಗ್ರಹ ಹೂಡಿ ಅಲ್ಲಿ ರಾಷ್ಟ್ರಧ್ವಜವನ್ನು ನಿಲ್ಲಿಸತಕ್ಕದ್ದಾಗಿ ನಿರ್ಧರಿಸಿಕೊಂಡರು. ಅವಧಿಯೊಳಗಾಗಿ ಅಧಿಕಾರಿಗಳು ಏನನ್ನೂ ತಿಳಿಸಿಲ್ಲ. ಅಲ್ಲಿಯ ಧ್ವಜಮಂಡಳದವರು ಈಗ ತಾ|| ೨೧ ರಿಂದ ತಾ|| ೨೭ ರ ವರೆಗೆ ಧ್ವಜಸಪ್ತಾಹವನ್ನು ಪ್ರಾರಂಭಿಸಿದ್ದು, ಪ್ರತಿನಿತ್ಯದಲ್ಲಿಯೂ ನಗರಸಂಕೀರ್ತನೆ, ಧ್ವಜವಂದನ ಮೊದಲಾದ ಕಾರ್ಯಕ್ರಮಗಳನ್ನು ಜರುಗಿಸಹತ್ತಿದ್ದಾರೆ. ಸಂಜೆಯಲ್ಲಿ ಬೇರೆ ಬೇರೆ ಓಣಿಗಳಲ್ಲಿ ಸಭೆಗಳನ್ನು ಸೇರಿಸಿ ರಾಷ್ಟ್ರಧ್ವಜದ ಮಹತ್ವದ ವಿಷಯವಾಗಿ ಭಾಷಣಮಾಡಹತ್ತಿದ್ದಾರೆ. ಹೀಗೆ ತಾ|| ೨೭ ರ ವರೆಗೆ ನಾಗರಿಕರಲ್ಲಿ ರಾಷ್ಟ್ರಧ್ವಜದ ಬಗ್ಗೆ ಜಾಗೃತಿಯನ್ನುಂಟುಮಾಡಿ, ಧ್ವಜಮಂಡಳದವರು ತಾ|| ೨೭ ನೆಯ ದಿವಸ ಎಲ್ಲರನ್ನು ಕೂಡಿಕೊಂಡು, ರಾಷ್ಟ್ರಧ್ವಜ ಸಹಿತವಾಗಿ ಮುಂಜಾನೆ ೧೦ ಗಂಟೆಗೆ ನಗರ ಸಭೆಯ ಕಟ್ಟಡಕ್ಕೆ ಹೋಗಿ ಅಲ್ಲಿ ನಾಟಗಡಿ ನಿಲ್ಲಿಸುವರು. ಇದೀಗ ನಿಜವಾದ ಗಂಡಸುತನ! ಬಾಗಲಕೋಟೆಯವರು ಇವರ ಮುಂದೆ ಕೂತು ಗಳಗಳ ಅಳಲಿ!

### ಧಾರವಾಡದಲ್ಲಿ

## ಮುತಾಲಿಕ ದೇಸಾಯರನ್ನು ಹಿಡಿದರು

ಧಾರವಾಡದ ತರುಣ ಸತ್ಯಾಗ್ರಹಿಗಳಾದ ಶ್ರೀ. ದೇಸಾಯಿ ಬಾಬು ಇವರನ್ನು ಪಿಸ್ತೂಲ ಕೇಸಿನ [illegible] ನೆಯ ಕಲಮಿನ ಅನ್ವಯ ಮೊನ್ನೆ ಮೊನ್ನೆ ಧಾರವಾಡದಲ್ಲಿ ಸೆರೆಹಿಡಿದರು. ಅವರ ತಂದೆಯವರಾದ ಶ್ರೀ ಲಕ್ಷ್ಮಣರಾವ ಮುತಾಲಿಕ ದೇಸಾಯಿ ವಕೀಲರು ಜಾಮೀನನ್ನು ಕೊಟ್ಟು ಅವರನ್ನು ಬಿಡಿಸಿಕೊಂಡು ಬಂದರು. ತಾ|| ೨೧ ಕ್ಕೆ ಅವರ ವಿಚಾರಣೆಯು ನಡೆಯುವದಿತ್ತು. ವಿಚಾರಣೆಯ ಫಲಿತಾಂಶವು ಇನ್ನೂ ತಿಳಿದುಬಂದಿಲ್ಲ.

### ಸಿಂದೀ ಗಿಡ ಕಡಿಯಲು

## ಸರಕಾರದವರೇ ಡಂಗುರ ಸಾರಿದರು

ಜನರ ಒಡೆತನದೊಳಗಿರುವ ಸಿಂದೀ ಗಿಡಗಳನ್ನು ಕಡಿಯಲು ಸರಕಾರದವರು ಯಾವ ರೀತಿಯಿಂದಲೂ ಆಜ್ಞೆಯನ್ನುಂಟುಮಾಡುವದಿಲ್ಲವಾಗಿ ಕೇರೂರಲ್ಲಿ ಡಂಗುರ ಸಾರಿರುವರಾಗಿ ತಿಳಿಯುತ್ತದೆ. ಇನ್ನೇನು ಭೀತಿ! ಸಿಂದೀ ಗಿಡಗಳೆಲ್ಲ ಸಮೂಲವಾಗಿ ನಾಶವಾಗಿ ಹೋಗಲಿ!

## ಬಾರ್ಡೋಲಿಯ

# ಸರದಾರರ ವೀರ ಗರ್ಜನೆಯು

ಶಾಂತಿಸಂಧಾನಕ್ಕಿದು ತಕ್ಕ ಸಮಯವಾಗಿಲ್ಲ. ಸರ್ ಸಪ್ರು, ಹಾಗು ಶ್ರೀ ಜಯಕರರು ಹಿಂದುಸ್ಥಾನಕ್ಕೆ ಹಿತವನ್ನು ಮಾಡಬೇಕೆಂಬ ಉದ್ದೇಶದಿಂದಲೇ ಈ ಕಾರ್ಯವನ್ನು ಕೈಕೊಂಡಿರುವರೆಂಬುದು ನನಗೆ ಗೊತ್ತಿದೆ. ಆದರೆ ಅವರು ಯಾವದಾದರೊಂದು ಭ್ರಮೆಗೆ ಒಳಗಾಗಿರಬೇಕು. ಸ್ವಾತಂತ್ರ್ಯದ ಸಾಧನವನ್ನು ಸಂಪಾದಿಸದ ಹೊರತು ತಮಗೆ ಸಮಾಧಾನವೆನಿಸುವದಿಲ್ಲವಾಗಿ ಮಹಾತ್ಮರು ಈ ಮೊದಲೇ ತಿಳಿಸುವರು. ನಾವು ಈಗ ಒಕ್ಕಲಿಗ. ಮಹಾತ್ಮರು ಇದರ ಹೊರತಾಗಿ ಏನು ಹೇಳುವರೋ ನನಗೆ ತಿಳಿಯದು. ವಸಾಹತು ಸ್ವರಾಜ್ಯವು ಹಿಂದುಸ್ಥಾನಕ್ಕೆ ಹಿತ ಮಾಡಲು ಹೊರಟಿರುವರೆಂದು ಕೆಲವರು ಹೇಳುವದುಂಟು. ಅವರು ಹಿಂದುಸ್ಥಾನದ ಹಿತ ಸಂಬಂಧವಾಗಿ ವಿಚಾರವನ್ನು ಮಾಡುವದಕ್ಕಿಂತ ಮೊದಲು ತಮ್ಮ ದೇಶದ ಹಿತಚಿಂತನೆ ಮಾಡುವರು. ಮಹಾತ್ಮರು ಈ ಸರಕಾರವನ್ನು ಸೈತಾನಿ ಸರಕಾರವೆಂದು ಕರೆದಿದ್ದಾರೆ. ಇಂಗ್ಲೀಷರು ಇವರಿಗೆ ತಮ್ಮ ನಿಜವಾದ ಸ್ವರೂಪವನ್ನು ತೋರಗೊಡಲಿಲ್ಲ. ಅವರ ಸ್ವರೂಪವು ತೋರಬಿದ್ದ ಮೇಲೆ ಈ ಸರಕಾರವು ಸೈತಾನಿ ಸರಕಾರಕ್ಕಿಂತಲೂ ಹೆಚ್ಚು ಕ್ರೂರವಾಗಿರುವದೆಂದು ಅವರಿಗೆ ಕಂಡು ಬರಲಿದೆ. ಭಾರತೀಯರು ತಮ್ಮ ಸರ್ವಸ್ವವನ್ನು ಅರ್ಪಿಸಲು ಸಿದ್ಧರಾಗಿರುವರು. ಸ್ವಾತಂತ್ರ್ಯ ಸಮರದಲ್ಲಿ ಮಡಿದ ವೀರರ ಅಸ್ಥಿಗಳಲ್ಲಿ ಸಾವಿರಾರು ಶೂರರನ್ನು ಹುಟ್ಟಿಸುವ ಶಕ್ತಿಯುಂಟು.

ಶಾಂತಿಸಂಧಾನವೇ ಬೇಕಾಗಿದ್ದರೆ, ಇಂಗ್ಲೀಷರು ದರ್ಪವನ್ನು ಬಿಡಲಿ. ತಮಗೆ ಬೇಕಾಗಿದ್ದುದನ್ನು ನಿರ್ಣಯಿಸಿಕೊಳ್ಳುವದನ್ನು ಭಾರತೀಯರಿಗೇನೆ ಬಿಟ್ಟುಕೊಡಲಿ. ಬಳಿಕ ಕರೆದಾಗ ಬಂದು ಕರಾರ ಪತ್ರದ ಮೇಲೆ ಸಹಿ ಹಾಕಲಿ. “ಭಾರತೀಯರಲ್ಲಿ ಸ್ವಸಂರಕ್ಷಣೆಯನ್ನು ಮಾಡಿಕೊಳ್ಳುವಷ್ಟು ಸಾಮರ್ಥ್ಯವಿಲ್ಲ. ಅಂದ ಬಳಿಕ ಅವರು ಸ್ವರಾಜ್ಯಾಡಳಿತವನ್ನು ಹೇಗೆ ಸಾಗಿಸಿಕೊಂಡು ಹೋಗುವರು.” ಎಂದು ಕೆಲವರು ಕೇಳುವದುಂಟು. ಪರಕೀಯರ ಶಸ್ತ್ರಯುಕ್ತ ತಮ್ಮ ಮೇಲೆ ಹೇರಿಕೊಳ್ಳದಿರುವದೇ ಸ್ವರಾಜ್ಯಕ್ಕೆ ಮೂಲಮಂತ್ರವಾಗಿದೆ. ಮುಂಬಯಿಯ ಗವರ್ನರರು ಮೊನ್ನೆ ಮೊನ್ನೆ ಮಾಡಿದ ಭಾಷಣದಲ್ಲಿ ಯಾವ ಅರ್ಥವೂ ಇಲ್ಲ. ಅವರ ಭಾಷಣದೊಳಗಿನ ಪ್ರತಿಯೊಂದು ವಾಕ್ಯವು ಭಾರತೀಯರಿಗೆ ಅಪಮಾನಕರವಾಗಿದೆ. ಶಾಂತಿಸಂಧಾನಕ್ಕೆ ಇನ್ನೂ ತಕ್ಕ ಸಮಯವು ಒದಗಿಬಂದಿಲ್ಲವೆಂಬುದನ್ನು ಅವರ ಭಾಷಣದಿಂದ ತಿಳಿದುಕೊಳ್ಳಬಹುದು. ಕಾಯುರಾ ಜಿಲ್ಹೆಯಲ್ಲಿ ದರೋಡೆಗಾರರಿಗೆ ಆಹುತಿಯಾದವರು ರಾಷ್ಟ್ರೀಯ ಚಳವಳಿಯಲ್ಲಿ ಸೇರಿದವರು. ಅವರು ಆಗ ಬ್ರಿಟಿಶ ಸರಕಾರದ ಪೊಲೀಸರ ಸಹಾಯವನ್ನು ತೆಗೆದುಕೊಳ್ಳುವದನ್ನು ನಿರಾಕರಿಸಿದರು. ನಿಜವಾದ ವಸ್ತುಸ್ಥಿತಿಯು ಹೀಗುಂಟು. ಅದನ್ನೆಲ್ಲ ಬಿಟ್ಟುಕೊಟ್ಟು ಗವರ್ನರರು ಸತ್ಯಾಗ್ರಹ ಅನುಯಾಯಿಗಳ ಮೇಲೆಯೆ ಆ ದರೋಡೆಗಳ ಆರೋಪವನ್ನು ಹೊರಿಸಿದ್ದಾರೆ.

ಇನ್ನು ಸ್ವಲ್ಪ ದಿನಗಳಲ್ಲಿ ಈ ಸತ್ಯಾಗ್ರಹ ಚಳವಳಿಗೆ ಹೆಚ್ಚಿನ ಕಳೆ ಬರುವದು. ರಾಷ್ಟ್ರಕ್ಕಾಗಿ ತಮ್ಮವರನ್ನು ಬಲಿಕೊಡಲು ಪ್ರತಿಯೊಂದು ಮನೆಯ ಹೆಂಗಳೆಯರು ಈಗ ಮುಂದೆ ಬರಬೇಕು. “ಕಾಂಗ್ರೆಸದ ಶಾಂತಿಸೇನೆಯಲ್ಲಿ ನೀವಾದರೂ ಸೇರಿರಿ ಇಲ್ಲವೆ ನನ್ನಿಂದ ಅಗಲಲು ಸಿದ್ಧರಾಗಿರಿ” ಎಂಬುದಾಗಿ ಹೆಂಗಸರು ತಮ್ಮ ತಮ್ಮ ಗಂಡಂದಿರಿಗೆ ತಿಳಿಸಬೇಕು.

## ಗದಗ ಬೆಟಗೇರಿಯಲ್ಲಿ

## ಸಿಂದೀ ಅಂಗಡಿಗಳ ಪಿಕೆಟಿಂಗ

( ಸ್ವಂತ ಸುದ್ದಿಗಾರರಿಂದ )

ತಾ|| ೧೭ ನೆಯ ದಿವಸ ಇಲ್ಲಿ ಸರೆ ಸಿಂದಿ ಅಂಗಡಿಗಳ ಮುಂದೆ ಪಿಕೆಟಿಂಗವು ಪ್ರಾರಂಭವಾಗಿದೆ. ಗದುಗಿನಲ್ಲಿಯ ಅಂಗಡಿಗಳ ಮುಂದೆ ಶ್ರೀ ನಾ. ರಾ. ಪ್ಯಾಟಿ, ದೇ. ಭ. ಜಾಲಿಹಾಳ ಅಪ್ಪಾಚಾರ್ಯರು, ಹಾಗು ಹುಯಿಲಗೋಳರವರು ಬೇರೆ ಬೇರೆ ಭಾಗಗಳಲ್ಲಿ ಮುಖ್ಯರಾಗಿ ಕೆಲಸ ಮಾಡುತ್ತಿರುವರು. ಬೆಟಗೇರಿಯಲ್ಲಿ ಶ್ರೀ ಸಾವಕಾರರು, ಮುಂದಲಗಿರಿಯವರು, ಎಚ್ಚರಪ್ಪ ಕೆಂಚರಗಿ ಮತ್ತು ಕೊಟಿ ಪ್ರ. ಜಂಜಗಾರರವರು ವ್ಯವಸ್ಥಿತ ರೀತಿಯಿಂದ ಕಾರ್ಯವನ್ನು ಸಾಗಿಸಿರುವರು. ಗದುಗಿನ ಸರೆ ಸಿಂದಿ ಅಂಗಡಿಗಳಿಗೆ ೮—೧೦ ದಾರಿಗಳಿದ್ದುದರಿಂದ ಸ್ವಯಂಸೇವಕರಿಗೆ ಅಡ ತಾಳುವದೊಂದು ಹೆಚ್ಚಿಗೆ ಬೀಳುತ್ತಿತ್ತು. ಬೆಟಗೇರಿಯಲ್ಲಿ ಮಕ್ಕಳ [illegible]ಕೆಯು ವಿಶೇಷವಾಗಿದೆ. 'ಊರವರೆಲ್ಲರೂ ಒಕ್ಕಟ್ಟಿನಿಂದ ಕೆಲಸ ಮಾಡು'ತ್ತಿರುವರು. ಎರಡೂ ಕಡೆಯ ಪೋಲೀಸ ಅಧಿಕಾರಿಗಳಾದರೂ ಶಾಂತರೀತಿಯಿಂದ ವರ್ತಿಸುತ್ತಿದ್ದಾರೆ. ಪಿಕೆಟಿಂಗವು ಮೊದಲಿನಿಂದಲೂ ಶಾಂತತೆಯಿಂದಲೇ ಸಾಗಿದೆ.

## ಗುಳೇದಗುಡ್ಡದಲ್ಲಿ

## ಹೆಂಗಸರೂ ಪಿಕೆಟಿಂಗಮಾಡಹತ್ತಿದರು

( ಸ್ವಂತ ಸುದ್ದಿಗಾರರಿಂದ )

ಗುಳೇದಗುಡ್ಡದಲ್ಲಿ ಮೊನ್ನಿನ ದಿವಸ ಮಕ್ತೇದಾರನು ಊರೊಳಗಿನ ಕುಡುಕ ಜನರಿಗೆ ಪುಕ್ಕಟೆಯಾಗಿ ಸಿಂದಿ ಕೊಡುವೆ ಎಂದು ಹೇಳಿದ್ದಕ್ಕೆ ೮—೧೦ ಜನರು ಕುಡಿಯಹೊಕ್ಕು ಹೋದರು. ಇದು ಕೊಡಕಲ ದ್ಯಾಮಣ್ಣರವರಿಗೆ ತಿಳಿಯಿತು. ಅವರು ಅವರಲ್ಲಿಗೆ ಹೋಗಿ ಕುಡಿಯುವದಿಲ್ಲವೆಂದು ಆಣೆ ಮಾಡಿಸಿಕೊಂಡರು ಅಲ್ಲದೆ ೫ ರೂ. ದಂಡ ಕಟ್ಟಿದರು. ಮತ್ತು ಅವರ ಕಡೆಯಿಂದ ೧೦೦ ರೂ. ಬಾಂಡ ಬರೆಯಿಸಿಕೊಂಡರು. ಈಗೀಗ ಕುಡುಕ ಜನರು ಅಂಗಡಿಗಳ ಸಮೀಪಕ್ಕೆ ಹೋಗುವದೇ ಇಲ್ಲ. ಮೊನ್ನೆ ಶ್ರೀಮತಿ ಸೀತಾಬಾಯಿ ಬಳ್ಳಾರಿಯವರು ಸರಾಯದ ದುಷ್ಪರಿಣಾಮದ ಬಗ್ಗೆ ಭಾಷಣ ಮಾಡಿದರು. ಅವರ ಭಾಷಣದ ಪರಿಣಾಮವು ಒಳ್ಳೇದಾಗಿ ಆಯಿತು. ಶ್ರೀಮತಿ ಭಾಗೀರಥಮ್ಮ ಪಾಟೀಲರವರು ದೇಶಸೇವಿಕೆಯರಾಗಿ ದಿನಾಲು ಪಿಕೆಟಿಂಗ ಕಾರ್ಯವನ್ನು ಕೈಕೊಂಡಿದ್ದಾರೆ. ಈಗ ಸ್ವಯಂಸೇವಕರ ಸಂಖ್ಯೆಯು ಬೆಳೆಯುತ್ತಿದೆ.

## ಬಳ್ಳಾರಿ ಜಿಲ್ಲೆಯಲ್ಲಿ ಪೋಲೀಸರ ಕಿಡಿಗೇಡಿತನ

ಹೋದ ತಿಂಗಳು ೨೩ ನೆಯ ತಾ॥ ಗೆ ಶ್ರೀ ಟಿ. ಸುಬ್ರಹ್ಮಣ್ಯಂರವರು ರಾಷ್ಟ್ರೀಯ ಕಾರ್ಯಕ್ರಮಗಳ ಬಗ್ಗೆ ಜನರಲ್ಲಿ ಜಾಗ್ರತಿಯನ್ನುಂಟು ಮಾಡುವದಕ್ಕಾಗಿ ಬಳ್ಳಾರಿಯನ್ನು ಬಿಟ್ಟು ಹಳ್ಳಿಗಳ ಮೇಲೆ ಹೊರಟರು. ಅವರು ೨೩ ಹಳ್ಳಿಗಳಲ್ಲಿ ಸಂಚರಿಸಿ ಪ್ರತಿಯೊಂದು ಕಡೆಯಲ್ಲಿಯೂ ಜನಗಳಲ್ಲಿ ಸರಕಾರದ ಅಧಿಕಾರಿಗಳು ಹುಟ್ಟಿಸಿರುವಂಥ ಭಯಭೀತಿಗಳನ್ನು ಹೋಗಲಾಡಿಸಿದರು. ಶ್ರೀ. ಟಿ. ಸುಬ್ರಹ್ಮಣ್ಯಂರವರ ಭಾಷಣಗಳಿಂದ ಜನರ ಮೇಲೆ ಒಳ್ಳೇ ಪರಿಣಾಮವಾಗುತ್ತಿತ್ತು. ಖಾನಭೋಗರೂ ಪಟೇಲರೂ ಚಳವಳಿಗೆ ಸಹಾಯ ಮಾಡಲು ಬಹು ಹೆದರುತ್ತಿದ್ದರೂ, ಅವರು ಗುಟ್ಟಾಗಿ ಊಟ ಉಪಚಾರಗಳನ್ನು ಮಾಡುತ್ತಿದ್ದರು. ತಾ॥ ೨೮ ಕ್ಕೆ ಜಿಲ್ಲೆಯಲ್ಲಿ ಹಿಂದಿ ಸರಾಯಿ ಮಾರಾಟಗಾರರು [illegible]. ೩ ತಿಂಗಳ ಕಾಲ ಮಕ್ತೆಯನ್ನು ಹಿಡಿಯುವದಿಲ್ಲವಾಗಿ ಅವರು ಪ್ರತಿಜ್ಞಾ ಮಾಡಿದರು. ಜುಲೈ ೧೪ ನೆಯ ತಾ॥ ದಿವಸ [illegible] ಹಳ್ಳಿಯ ಕೆಲವು ಸ್ವಯಂಸೇವಕರೊಡನೆ ಅದೇ ತಾಲೂಕಿನ [illegible]ಗೇರಿ ಎಂಬ ಸ್ಥಳದಲ್ಲಿ ಪಟ್ಟೇದಾರನ ಅನುಮತಿಯಿಂದ ಕೆಲವು [illegible] ಗಿಡಗಳು ಕಡಿಯಲ್ಪಟ್ಟವು. ಆ ತಾಲೂಕಿನಲ್ಲಿ ಪೋಲೀಸರಿಗೂ ಜನಗಳಿಗೂ ಬಹಳ [illegible], ಅಧಿಕಾರಿಗಳು [illegible] ಅವರಿಗೆ [illegible] ಕೆಲವು ಜನರನ್ನು ಅನ್ಯಾಯವಾಗಿ ಹೊಡೆದು [illegible] ಸ್ವಯಂಸೇವಕರ [illegible] ಸತ್ಯಾಗ್ರಹ ಚಳವಳಿಯನ್ನು ಹುಟ್ಟಿಸುತ್ತ ಬಂದರು. ಅಲ್ಲಿಂದಲ್ಲಿಯೂ ಜನಗಳಲ್ಲಿ ಹೆದರಿಕೆ ಹುಟ್ಟಿಸುವದಕ್ಕಾಗಿ ಅಲ್ಲಿಯ [illegible] ಕೆಲವು ಜನಗಳನ್ನು ಹೊಡೆದರು, ಅದರ [illegible] ಜನಗಳು ಪೋಲೀಸ [illegible] ಎಂದು [illegible]. [illegible] ಜನಗಳಿಗೆ [illegible]. ಬಳ್ಳಾರಿಯಲ್ಲಿ [illegible] ಜನ ಸ್ತ್ರೀಯರು [illegible] ಶ್ರೀಮತಿ ಲಕ್ಷ್ಮಣಮ್ಮನವರೇ ಮುಖ್ಯಸ್ಥರು. ([illegible]) ಇಲ್ಲಿ ಖಾದಿಯನ್ನು ಸಿದ್ಧಪಡಿಸುವ ಕಾರ್ಯವು ಒಳ್ಳೇ ಉತ್ಸಾಹದಿಂದ ಸಾಗಿದೆ. ಕೆಲವು ದಿನಗಳ ಹಿಂದೆ [illegible] ಶಾಲೆಯು ಸ್ಥಾಪಿಸಲ್ಪಟ್ಟಿದ್ದು, ಪ್ರತಿನಿತ್ಯ [illegible] ಜನ ಹುಡುಗರು ಬರುತ್ತಿದ್ದಾರೆ.

ಬಳ್ಳಾರಿ ತಾ| ೨೧—೭—೩೦ { ಪ್ರಕಟನಾಕಾರ್ಯದರ್ಶಿ ಸತ್ಯಾಗ್ರಹ ಶಿಬಿರ,

### ಅಮರಾವತಿಯಲ್ಲಿ ೩೦ ಜನರನ್ನು ಸೆರೆಹಿಡಿದರು.

ಅಮರಾವತಿಯ ೩೦ ಜನ ಸತ್ಯಾಗ್ರಹಿಗಳು ಕಡಾಲಿ ಅರಣ್ಯಕ್ಕೆ ಸಾಗಿಹೋಗಿ ಅಲ್ಲಿ ಗಿಡಗಳನ್ನು ಕಡಿದು ಕಾಯದೆಭಂಗ ಮಾಡಿದರು. ಅಧಿಕಾರಿಗಳು ಅವರೆಲ್ಲರನ್ನು ಸೆರೆಹಿಡಿದುಕೊಂಡು ಹೋದರು. ಅಮರಾವತಿಯ ಸತ್ಯಾಗ್ರಹ ಶಿಬಿರದ ಅಧಿಕಾರಿಗಳಾದ ಶ್ರೀ ಜೋಶಿಯವರೂ ಸೆರೆಹಿಡಿಯಲ್ಪಟ್ಟಿದ್ದಾರೆ.

## ನಾಗರಾಣೆಯಲ್ಲಿ ಅಧಿಕಾರಿಗಳ ಉಚೋದ್ಧತನ

(ಸ್ವಂತ ಸುದ್ದಿಗಾರರಿಂದ)

ವಿಜಾಪುರದಲ್ಲಿಯ ಸ್ವಯಂಸೇವಕರು ನಾಗರಾಣ ಗ್ರಾಮದ ಪಕ್ಕದ ೩೦೦೦ ಸಿಂದೀ ಗಿಡಗಳನ್ನು ಸಂಹರಿಸಿದ್ದಾರೆ. ಗಿಡಗಳನ್ನು ಕಡಿಯಲಿಕ್ಕೆ ಹಳ್ಳಿಯ ಜನರು ಬಹಳ ಸಹಾಯ ಮಾಡುತ್ತಿದ್ದಾರೆ. ಆದರೆ ಸರಕಾರಿ ಅಧಿಕಾರಿಗಳು ಹಳ್ಳಿಯ ಜನರನ್ನು ಬೆದರಿಸಿ ಅಲ್ಲಿಯ ಗೌಡನಿಗೆ ೫೦ ಜನ ಸ್ವಯಂಸೇವಕರ ಮೇಲೆ ಫಿರ್ಯಾದಿಯನ್ನು ಮಾಡಲು ಒತ್ತಾಯ ಮಾಡುತ್ತಿದ್ದಾರೆಂದು ತಿಳಿದುಬಂದಿದೆ.

(ಮಾರಾಟಕ್ಕೆ ಸಿದ್ಧ!) ರಾಟಿಗಳು (ಮಾರಾಟಕ್ಕೆ ಸಿದ್ಧ!)

ನಮ್ಮಲ್ಲಿ ಉತ್ತಮ ನೂಲು ತೆಗೆಯುವ ಕೈರಾಟಿಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಕೈನೂಲು ಚೆನ್ನಾಗಿ ಹುರಿ ಇದ್ದದ್ದು ಮಾರಲಿಕ್ಕೆ ತೆಗೆದುಕೊಳ್ಳುತ್ತೇವೆ

ಭಾಪ್ಸಿ ಬೇಕಾಜಿ ಲೋಡಾಯಾ
ಹೊಸಪೇಟೆ ಗುಜ್ಜರವಾರ ಬಾಗಲಕೋಟೆ

ಕಾಂಗ್ರೆಸ ಕಮಿಟಿಯ ಮನ್ನಣೆ ಪಡೆದ

ಶುದ್ಧ ಖಾದಿಯು ಬೇಕಾಗಿದ್ದರೆ ತ್ವರೆಮಾಡಿರಿ.

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆ, ಹಾಗೂ ಕೋಟಿನ ಉತ್ತಮವಾದ ಖಾದಿಯೂ [illegible] ಮಾರಾಟಕ್ಕೆ ಸಿದ್ಧ. ಗ್ರಾಹಕರು ತ್ವರೆಮಾಡಬೇಕು.

ಬಾಗಲಕೋಟೆ. { ರಾಘವೇಂದ್ರ ವ್ಯಾಸರಾವ ದೇಶಪಾಂಡೆ ಖಾದಿ ವ್ಯಾಪಾರಿಗಳು.

ಶುದ್ಧ ಖಾದಿ! ಶುದ್ಧ ಖಾದಿ!

ಕೈನೂಲಿನ ಎಲ್ಲ ನಮೂನೆಯ ಶುದ್ಧ ಖಾದಿಕೊಳ್ಳಲಿಕ್ಕೆ ಸಾರ್ವ ಗ್ರಾಹಕರು ತ್ವರೆಮಾಡಬೇಕು. ಯೋಗ್ಯ ಬೆಲೆಯಿಂದ ಖಾದಿಯು ಇಲ್ಲಿ ಮಾರಲ್ಪಡುವದು.

ಪತ್ತೆ—ರಾಮಚಂದ್ರ ಬಾಸುತಕರ.
ಠಿಕಾಣಿ:—ಶ್ರೀಮಂತ ವಿವೇಕಾನಂದ ವಿಜಯ ಖಾದಿ ವಸ್ತ್ರಭಂಡಾರ. c/o
ಬಾಗಲಕೋಟೆ. ಭೀಮರಾವ ಝುಂಗಾಡೆ ಟೇಲರ.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಕೈನೂಲು ಕೈಮಗ್ಗದ [illegible], ಕೋಟಿಂಗ್, ಧೋತರ ಮೊದಲಾದ ಎಲ್ಲ ತರದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಗ್ರಾಹಕರು ಲಾಭ ಪಡೆಯಬೇಕಾಗಿ ವಿನಂತಿ.

ಶಂಕರಪ್ಪಾ ಬಣಗಾರ
ಜವಳಿ ವ್ಯಾಪಾರಿಗಳು, ಬಾಗಲಕೋಟೆ

ಈ ಪತ್ರಿಕೆಯು, ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ
[illegible] ಮುದ್ರಣ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು

ರ. ನಂ ಬಿ. ೧೫೪೭ ನಿತ್ಯಸಂಚಿಕೆಯು. ಬೆಲೆ ೦—೦—೩

# ಕನ್ನಡಿಗ

ಜಯ ಕರ್ನಾಟಕ

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ.

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಶುಕ್ರವಾರ ಮಿತಿ ಆಷಾಢ ಬಹುಳ ೩೦ ಶಕೆ ೧೮೫೨ ತಾ॥ ೨೫—೭—೩೦ [ ಸಂಚಿಕೆ ೧೧೯

### ಸ್ವಾತಂತ್ರ್ಯ ಸಪ್ತಾಹದಲ್ಲಿ

## ನೂಲುವ ಪೋಟಾಪೋಟಿ

ಸ್ವಾತಂತ್ರ್ಯ ಸಪ್ತಾಹದಲ್ಲಿ ಎರಡನೆಯ ದಿವಸ ಅಂದರೆ ಸೋಮವಾರ ತಾ॥ ೨೮—೭—೩೦ ನೆಯ ದಿವಸ ತಕಲಿಯ ಮೆರವಣಿಗೆಯಾಗುವದು. ಅಂದು ತಕಲಿ ಹಾಗು ರಾಟಿಗಳಮೇಲೆ ನೂಲು ತೆಗೆಯುವದರಲ್ಲಿ ಮೇಲಾಟವನ್ನಾದರೂ ಏರ್ಪಡಿಸಿದ್ದೇವೆ. ಈ ಮೇಲಾಟಗಳಲ್ಲಿ ಅನುಕ್ರಮವಾಗಿ ಮೊದಲಿನ ಮೂರು ನಂಬರುಗಳನ್ನು ಪಡೆದವರಿಗೆ ಮೆಚ್ಚುಗಳು ಕೊಡಲ್ಪಡುವವು. ಮೇಲಾಟದಲ್ಲಿ ಭಾಗ ತೆಗೆದುಕೊಳ್ಳಲಿಚ್ಛಿಸುವವರು ತಮ್ಮ ತಮ್ಮ ರಾಟಿ ಹಾಗು ತಕಲಿಗಳನ್ನು ತೆಗೆದುಕೊಂಡು ಬರತಕ್ಕದ್ದು. ಸ್ಥಳ ಮತ್ತು ವೇಳೆಯನ್ನು ಹಿಂದಿನಿಂದ ತಿಳಿಸಲಾಗುವದು.

ಸೂಚನೆ:— ಶ್ರೀ ಕರಂದಿಕರ ಇವರಲ್ಲಿ ರಾಷ್ಟ್ರಧ್ವಜಗಳು ಮಾರಾಟಕ್ಕೆ ಸಿಗುತ್ತವೆ. ಬಾಗಲಕೋಟೆಯ ನಾಗರಿಕರು ಅವುಗಳನ್ನು ತೆಗೆದುಕೊಂಡು ಸ್ವಾತಂತ್ರ್ಯ ಸಪ್ತಾಹದಲ್ಲಿ ರಾಷ್ಟ್ರಧ್ವಜ ದಿನವೆಂದು ಗೊತ್ತಾಗಿರುವ ತಾ॥ ೨೭—೭—೩೦ ನೆಯ ದಿವಸ ಅವುಗಳನ್ನು ಎಲ್ಲೆಲ್ಲಿಯೂ ಹಚ್ಚಿ ರಾಷ್ಟ್ರಧ್ವಜ ದಿನವನ್ನು ಉತ್ಸವವನ್ನಾಗಿ ಮಾಡಬೇಕಾಗಿ ಬಿನ್ನಹ.

ಬಾಗಲಕೋಟೆ ತಾ॥ ೨೫-೭-೩೦ } ಕಾರ್ಯದರ್ಶಿ ಸತ್ಯಾಗ್ರಹ ಶಿಬಿರ

## ಸೂಚನೆ

ತಾ॥ ೨೭ ರಿಂದ ೨ ನೆಯ ತಾ॥ ನ ವರೆಗೆ ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಪ್ತಾಹವು ಆಚರಿಸಲ್ಪಡಬೇಕಾಗಿ ಗೊತ್ತಾಗಿದ್ದು, ಬಾಗಲಕೋಟೆಯಲ್ಲಿಯಾದರೂ ಸಪ್ತಾಹವು ಆಚರಿಸಲ್ಪಡುವದರಿಂದ ಹಿಂದುಸ್ತಾನಿ ಸೇವಾದಲದ ಪರವಾಗಿ ಪ್ರತಿವರ್ಷ ಆಗಸ್ಟ ೧ ನೆಯ ತಾ॥ ಗೆ ಜರುಗತಕ್ಕ ಸಮಾರಂಭವು ಈ ವರ್ಷ ಪ್ರತ್ಯೇಕವಾಗಿ ಜರಗುವದಿಲ್ಲ. ಆ ಸಮಾರಂಭವಾದರೂ ಈ ಸ್ವಾತಂತ್ರ್ಯ ಸಪ್ತಾಹದಲ್ಲಿಯೇ ಸಮಾವೇಶವಾಗಿರುತ್ತದೆ.

ಬಾಗಲಕೋಟೆ ತಾ॥ ೨೪—೭—೩೦ } ಶ್ರೀನಿವಾಸ ನೀರಲಕೇರಿ ಹಿಂ. ಸೇ. ದಲದ ಸಂಘಟಕ.

### ಎಲ್ಲೂರಿನಲ್ಲಿ

## ಎರಡು ವರ್ಷದ ಮಗುವಿಗೆ ತುರಂಗ

ಅಧಿಕಾರಿಗಳು ೧೪೪ನೆಯ ಕಲಮಿನ ಅನ್ವಯ ಹೊರಡಿಸಿದ ಅಪ್ಪಣೆಯನ್ನು ಮುರಿದು ಎಲ್ಲೂರಿನಲ್ಲಿ ೪ ಜನಸ್ತ್ರೀಯರು ತಾ॥ ೨೨ ನೆಯ ದಿವಸ ರಾಷ್ಟ್ರಧ್ವಜಗಳೊಂದಿಗೆ ಮೆರವಣಿಗೆಯನ್ನು ತೆಗೆದು ಊರಲ್ಲೆಲ್ಲ ಸುತ್ತಿ ಬಂದರು. ಅಧಿಕಾರಿಗಳು ಅವರೆಲ್ಲರನ್ನೂ ಸೆರೆಹಿಡಿದು ಒಬ್ಬರಿಗೆ ೩ ತಿಂಗಳು ಹಾಗು ಉಳಿದವರಿಗೆ ೪ ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಿದರು. ಶಿಕ್ಷೆಗೆ ಗುರಿಯಾದ ಸ್ತ್ರೀಯರಲ್ಲಿ ಒಬ್ಬರಾದ ಶ್ರೀಮತಿ ವೆಂಕಮ್ಮನವರ ಇಬ್ಬರು ಮಕ್ಕಳು ಹಾಗು ಪತಿಯು ಸತ್ಯಾಗ್ರಹ ಮೂಲಕವಾಗಿ ಈ ಮೊದಲೆ ತುರಂಗ ಸೇರಿದ್ದು, ಈಗ ಶ್ರೀಮತಿಯವರಾದರೂ ತಮ್ಮ ೨ ವರ್ಷದ ಮಗುವಿನೊಂದಿಗೆ ಕಾರಾಗೃಹವನ್ನು ಸೇರಿದರು.

## ರಾಜಕೀಯ ಸೆರೆಯಾಳುಗಳು ಸತ್ಯಾಗ್ರಹ ಹೂಡಿದರು

ತಾ॥ ೨೨ ನೆಯ ದಿವಸ ಮುಂಬಯಿಯ ಅಧಿಕಾರಿಗಳು ಅಲ್ಲಿಯ ಸತ್ಯಾಗ್ರಹಿ ಸೆರೆಯಾಳುಗಳಾದ ಶ್ರೀ ರಾಕೇಶ್ವರ, ಮಹಾಶಬ್ದೆ ಮೊದಲಾದ ೮ ಜನರನ್ನು ಆರ್ಥರ ಜೇಲಿನಿಂದ ನಾಶಿಕ ಜೇಲಿಗೆ ಒಯ್ಯುವ ಉದ್ದೇಶದಿಂದ ಬಾಯಕಳಾ ಸ್ಟೇಶನ್ನಿಗೆ ಕರೆದುಕೊಂಡು ಹೋದರು. ಹೊಗೆಬಂಡಿಯು ಬಂದ ಕೂಡಲೆ ಅಲ್ಲಿ ೩ ನೆಯ ವರ್ಗದ ಡಬ್ಬಿಯಲ್ಲಿ ಕುಳಿತುಕೊಳ್ಳಲು ಅವರಿಗೆ ಆಜ್ಞಾಪಿಸಿದರು. ಇಂಟರ್ಮೀಜಿಯಟ್ ಡಬ್ಬಿಯಲ್ಲಿ ಕುಳಿತುಕೊಳ್ಳುವೆವು. ೩ ನೆಯ ವರ್ಗದ ಡಬ್ಬಿಯಲ್ಲಿ ಕುಳಿತುಕೊಳ್ಳಲಾರೆವೆಂಬುದಾಗಿ ಸೆರೆಯಾಳುಗಳು ತಿಳಿಸಿದರು. ಅಧಿಕಾರಿಗಳು ಕುಳಿತುಕೊಳ್ಳಲು ಅವರಿಗೆ ಒತ್ತಾಯಪಡಿಸಿದರು. ಸತ್ಯಾಗ್ರಹಿಗಳು ನೆಲ ಹಿಡಿದು ಕುಳಿತುಬಿಟ್ಟರು. ಹೊಗೆಬಂಡಿಯು ಹಾಗೆಯೆ ಹೋಗಿಬಿಟ್ಟಿತು. ಒಳಿಕ ಅಧಿಕಾರಿಗಳು ಅವರನ್ನು ತಿರುಗಿ ಆರ್ಥರ ಜೇಲಿಗೆ ಒಯ್ದರು.

## ಮುದ್ರಣಾಲಯ ಕಾನೂನನ್ನು ಮುರಿದರು.

ಸರಕಾರದ ಪರವಾನಿಗೆಯನ್ನು ಪಡೆಯದೆ ಕಾಂಗ್ರೆಸ್ ಪತ್ರಿಕೆಯನ್ನು ಪ್ರಕಟಿಸಿದ್ದಕ್ಕಾಗಿ ಅಲೀಪುರಿಯ ಶ್ರೀ. ಬಾಲಚಂದ್ರ ದೇ ಅವರಿಗೆ ೬ ತಿಂಗಳ ಸಕ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ.

### ಕಿತ್ತೂರಿನಲ್ಲಿ
## ಬಾಲಕರ ಸತ್ಯಾಗ್ರಹಕ್ಕೆ ವಿಜಯ

ಮಹಾತ್ಮಾ ಗಾಂಧಿಯವರ ಭಾವಚಿತ್ರವನ್ನು ಶಾಲೆಯಲ್ಲಿ ಇಡದ ಹೊರತು ಶಾಲೆಗೆ ಬರುವದಿಲ್ಲವೆಂದು ಕಿತ್ತೂರಿನ ಕನ್ನಡ ಶಾಲೆಯ ವಿದ್ಯಾರ್ಥಿಗಳು ಹೆಡ್ ಮಾಸ್ತರರಿಗೆ ತಿಳಿಸಿ ತಾ|| ೧೫ ರಿಂದ ಶಾಲೆಗೆ ಬಹಿಷ್ಕಾರ ಹಾಕಿದ್ದರಷ್ಟೆ. ಬಾಲಕರು ಹೂಡಿದ ಸತ್ಯಾಗ್ರಹಕ್ಕೆ ಈಗ ಅಪೂರ್ವ ವಿಜಯವು ದೊರೆತಿದೆ. ಜಗದ್ವಂದ್ಯರೂ, ಶಾಂತತಾವಾದಿಗಳೂ ಆಗಿರುವ ಮ|| ಗಾಂಧಿಯವರ ದರ್ಶನವು ನೈತಿಕ ದೃಷ್ಟಿಯಿಂದ ಬಾಲಕರ ಅಭ್ಯುನ್ನತಿಗೆ ಕಾರಣೀಭೂತವಾಗಿರುವದೆಂಬ ಹಾಗು ಬಾಲಕರ ಅಭ್ಯಾಸಕ್ಕೆ ಅಡ್ಡಿಯಾಗಬಾರದೆಂಬ ಉದ್ದೇಶದಿಂದ ಊರಲ್ಲಿಯ ಸದ್ಗೃಹಸ್ಥರು ಹಾಗು ಶಾಲೆಯ ಪಂಚರು ಕೂಡಿಕೊಂಡು ತಾ|| ೨೨ ನೆಯ ದಿವಸ ಭಾವಚಿತ್ರವನ್ನು ಇಟ್ಟು ಸಮಾರಂಭವನ್ನು ಸಾಂಗಗೊಳಿಸಿದರು.

## ಲಾಹೋರ ಜೇಲಿನಲ್ಲಿ ಅನ್ನತ್ಯಾಗ
ಡಾ| ಕಿಚಲು, ಸತ್ಯಪಾಲ, ದೇವಿದಾಸ ಮೊದಲಾದವರ ಉಪವಾಸ.

"ಕ" ವರ್ಗದ ರಾಜಕೀಯ ಕೈದಿಗಳನ್ನು ಜೇಲಿನಲ್ಲಿ ಕೆಟ್ಟರೀತಿಯಿಂದ ನಡಿಸಿಕೊಳ್ಳುವದರ ನಿಷೇಧಾರ್ಥವಾಗಿ 'ಅ' ಮತ್ತು 'ಬ' ವರ್ಗದ ರಾಜಕೀಯ ಕೈದಿಗಳು ಒಂದು ದಿನ ಅನ್ನತ್ಯಾಗ ಮಾಡಿದರು. 'ಕ' ವರ್ಗದ ರಾಜಕೀಯ ಕೈದಿಗಳೂ ಅವನ್ನೇ ಅನುಸರಿಸಿದ್ದಾರೆ ತಾ|| ೨೦ ರಿಂದ ತಮ್ಮನ್ನಾದರೂ 'ಕ' ವರ್ಗದಲ್ಲಿಯೇ ಸೇರಿಸಿಕೊಳ್ಳಲು 'ಅ' ಮತ್ತು 'ಬ' ವರ್ಗದವರು ಮೇಲಧಿಕಾರಿಗಳಿಗೆ ಕೇಳಿಕೊಂಡಿದ್ದಾರೆ. ಅವರ ಬೇಡಿಕೆಗೆ ಮನ್ನಣೆಯನ್ನಿತ್ತು ಅಧಿಕಾರಿಗಳು ಅವರನ್ನು 'ಕ' ವರ್ಗದಲ್ಲಿ ಸೇರಿಸದಿದ್ದಲ್ಲಿ ಎಲ್ಲರೂ ಉಪವಾಸ ವ್ರತವನ್ನು ಕೈಕೊಳ್ಳುವವರಿದ್ದಾರೆ. ಈ ರಾಜಕೀಯ ಕೈದಿಗಳಲ್ಲಿ ಪಂಡಿತ ಸಂತಾನಮ್, ಡಾ| ಕಿಚಲು, ಸತ್ಯಪಾಲ ಹಾಗು ದೇವಿದಾಸ ಗಾಂಧಿ ಮೊದಲಾದವರೇ ಪ್ರಮುಖರಾಗಿರುವರು.

### ಬ್ರಿಟಿಶ ಸರಕಾರವನ್ನು ಡಬ್ಬುಹಾಕಲು
## ಸತ್ಯಾಗ್ರಹಿಗಳು ಸೇರಿದ್ದರು

ಕಾಯಿದೆಗೆ ವಿರುದ್ಧವಾಗಿ ವರ್ತಿಸುವ ಸತ್ಯಾಗ್ರಹಿಗಳನ್ನು ಇರಿಸಿಕೊಂಡಿದ್ದಕ್ಕಾಗಿ ಕಲಕತ್ತೆಯ ಬುರಾಬಜಾರ ಕಾಂಗ್ರೆಸ ಕಮಿಟಿಯ ಶ್ರೀ. ವಿಶ್ವನಾಥ ಕಪೂರರಿಗೆ ೬ ತಿಂಗಳ ಸಶ್ರಮ ಶಿಕ್ಷೆಯು ಆಗಿದೆ. "ಪೋಲೀಸರು ಕಾಂಗ್ರೆಸ ಕಚೇರಿಗೆ ಮುತ್ತಿಗೆ ಹಾಕಿದಾಗ ಅಲ್ಲಿ ಎಷ್ಟೋ ಜನ ಸ್ವಯಂಸೇವಕರು ಇದ್ದದ್ದು ತಿಳಿದು ಬಂದಿದೆ. ಆಗ ಅವರು ಅಲ್ಲಿ ಏಕೆ ಸೇರಿದ್ದರು" ಎಂಬುದಾಗಿ ವಿಚಾರಣೆಯ ಕಾಲಕ್ಕೆ ಅವರಿಗೆ ಕೇಳುವದಲ್ಲಿ ಬಂದಿತು. "ಬ್ರಿಟಿಶ ಸರಕಾರವನ್ನು ಡಬ್ಬುಹಾಕುವದಕ್ಕಾಗಿಯೇ ಅವರು ನೆರೆದಿದ್ದರು" ಎಂಬುದಾಗಿ ಶ್ರೀ. ಕಪೂರರು ಉತ್ತರ ಕೊಟ್ಟರು.

## ಗದುಗಿನಲ್ಲಿ ಶಾಲೆಯ ಹುಡುಗರು
### ಸಿಂದಿ ಗಿಡ ಕಡಿದರು

ಗದುಗಿನಲ್ಲಿ ಸಿಂದೀ ಗಿಡಗಳನ್ನು ಕಡಿಯುವ ಚಳ... ಯು ಜೋರಿನಿಂದ ನಡೆದಿದೆ. ಅಲ್ಲಿ ಪ್ರಾಥಮಿಕ ಶಾಲೆಯ ಹುಡುಗರೂ ಸಹ ಸ್ವಯಂಸೇವಕರಾಗಿ ಸೇರಿ ತಾ|| ೨೧ ನೆಯ ದಿವಸ ಕೆಲವು ಸಿಂದೀ ಗಿಡಗಳನ್ನು ಕಡಿದದ್ದಲ್ಲದೆ ಗಿಡಕ್ಕೆ ಜೋತುಬಿದ್ದ ಕೆಲವು ಗಡಿಗೆಗಳನ್ನು ಒಡೆದರು. ಈ ವ... ೪೦೦೦ ಸಿಂದೀ ಗಿಡಗಳು ನೆಲಕ್ಕುರುಳಿವೆ. ಡಿ. ಪೋ. ಸುಪರಿಂಟೆಂಡೆಂಟರು ಪೋಲೀಸರೊಂದಿಗೆ ಹೋಗಿ ಆ ಸ್ಥಳವನ್ನು ನೋಡಿಕೊಂಡರು.

ಗದಗ ತಾಲೂಕದ ಹುಲಕೋಟಿಯ ಜನರು ಈ ವ... ೪೦೦೦ ಸಿಂದೀ ಗಿಡಗಳನ್ನು ನೆಲಕ್ಕುರುಳಿಸಿದ್ದಾರೆ.

## ಮಿ. ಬೆಕೆಟ್ಟರು ಸ್ಪಷ್ಟೀಕರಿಸಿದರು

ಇಂಗ್ಲೆಂಡದಲ್ಲಿ ನನ್ನ ಮಿತ್ರರಲ್ಲಿ ಯಾರನ್ನಾದರೂ ಕಾ... ಗೃಹಕ್ಕೆ ಇಟ್ಟಿದ್ದರೆ, ಆ ಬಗ್ಗೆ ನಾನು ಶಕ್ಯವಿದ್ದಷ್ಟು ಬಗೆ... ನನ್ನ ನಿಷೇಧವನ್ನು ವ್ಯಕ್ತಪಡಿಸುತ್ತಿದ್ದೆ. ಮಿ| ಮ್ಯಾಕ್ಡೊನಲ್ಡ ಮೊದಲಾದ ಮಿತ್ರರು ನನಗೆ ಅತ್ಯಂತ ಪ್ರೀತ್ಯಾಸ್ಪದರಾಗಿರುವಂತೆಯೆ, ಪಂಡಿತ ಮೋತೀಲಾಲರೂ ಮತ್ತು ... ಹಿರಲಾಲರೂ ಪ್ರೀತ್ಯಾಸ್ಪದರಾಗಿರುವರು. ಭಾರತೀಯರ ... ಯಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕಾಮನ್ಸ ಸಭೆಯಲ್ಲಿ ಚ... ಸುವ ಬಗ್ಗೆ ನಾವು ಬಹಳೇ ಪ್ರಯತ್ನ ಮಾಡಿದೆವು. ಆ... ಲೇಬರ, ಕಾನ್ಸರ್ವೇಟಿವ್ಹ ಮತ್ತು ಲಿಬರಲ್ ಪಕ್ಷದ... ದಬ್ಬಾಳಿಕೆಯ ವೃತ್ತಿಯನ್ನು ಸ್ವೀಕರಿಸಿ ಅದರ ಚರ್ಚೆಯು ನಡೆಯದಂತೆ ಮಾಡಿದರು. ಭಾರತೀಯ ಶಿರೋಮಣಿಗ... ೫೦೦೦ ಜನರನ್ನು ಈಗಿನ ಸರಕಾರದವರು ಸೆರೆಮನೆಗೆ ಕಳಿಸಿದ್ದಾರೆಂಬುವದನ್ನು ಮತ್ತು ಸೊಲ್ಲಾಪುರ, ಪೇಶಾ... ಕಲಕತ್ತಾ ಹಾಗು ಮುಂಬಯಿ ಪಟ್ಟಣಗಳಲ್ಲಿ ಅಸ... ವಾದ ಅತ್ಯಾಚಾರಗಳನ್ನು ಗೈದಿದ್ದಾರೆಂಬುವದನ್ನು ನಾವು ನೆನಪಿಗೆ ತಂದುಕೊಂಡಲ್ಲಿ, ಅಲ್ಲಿ ನಡೆದ ದುಷ್ಕೃತ್ಯಗಳು ಕಣ್ಣೆದುರಿಗೆ ಬಂದು ನಿಲ್ಲುವವು. ಸೆರೆಮನೆಗಳಿಗೆ ಹೋಗಿರುವ ಮಿತ್ರರಿಗೆ ಸಹಾನುಭೂತಿಯನ್ನು ತೋರಿಸುವದಕ್ಕಾಗಿ ಹಾಗು ಬ್ರಿಟಿಶ ಜನರ ಲಕ್ಷ್ಯವನ್ನು ಈ ಕಡೆಗೆ ಹೊ... ವದಕ್ಕಾಗಿಯೂ ನಾವು ಪಾರ್ಲಿಮೆಂಟದಲ್ಲಿ ಆ ರೀತಿ ವರ್ತಿ...

—ಮಿ|| ಬೆಕೆಟ್ಟರು.

## ಮಧ್ಯಪ್ರಾಂತದಲ್ಲಿ ಅಡವಿಯ ಕಾಯದೆಭ...
### ೧೦ ಜನರಿಗೆ ಶಿಕ್ಷೆ

ಯಾವತಮಾಳದಲ್ಲಿ ತಾ|| ೨೨ ನೆಯ ದಿವಸ ೧೦ ಸ್ವಯಂಸೇವಕರು ಶ್ರೀ ಸೀತಾರಾಮ ತಿವಾರಿಯವರ ... ದಲ್ಲಿ ಅರಣ್ಯಕ್ಕೆ ಸಾಗಿ ಹೋಗಿ ಅಲ್ಲಿ ಹುಲ್ಲನ್ನು ಕಿತ್ತಿ ಕಾಯದೆಭಂಗ ಮಾಡಿದರು. ಅಧಿಕಾರಿಗಳು ಅವರೆಲ್ಲರನ್ನು ಹಿಡಿದು ಅವರಿಗೆ ೨ ತಿಂಗಳಿನಿಂದ ೪ ತಿಂಗಳ ವರೆಗೆ ಶಿಕ್ಷೆಯನ್ನು ವಿಧಿಸಿದರು.

## ಸರ್ ಸಪ್ರು ಹಾಗು ಶ್ರೀ ಜಯಕರರು

# ಮಹಾತ್ಮರನ್ನು ಜೇಲಿನಲ್ಲಿ ಕಂಡರು

ಮಹಾತ್ಮಾ ಗಾಂಧಿಯವರನ್ನು ಯರವಡಾ ಜೇಲಿನಲ್ಲಿ ಕಂಡುಕೊಂಡು ಅವರೊಡನೆ ದೇಶದ ಸದ್ಯದ ಪರಿಸ್ಥಿತಿಯ ಸಂಬಂಧವಾಗಿ ಚರ್ಚೆಮಾಡಿ ಶಾಂತಿಸಂಧಾನಕ್ಕೆ ಹಾದಿಯನ್ನು ಮಾಡಿಕೊಡಲು ಟೊಂಕಕಟ್ಟಿದ ಶ್ರೀ ಜಯಕರ ಹಾಗು ಸರ್ ಸಪ್ರುರವರು ತಾ|| ೨೩ ನೆಯ ದಿವಸ ಪುಂಜಾಯಿನಲ್ಲಿ ಮಹಾತ್ಮಾ ಗಾಂಧಿಯವರನ್ನು ಭೆಟ್ಟಿಯಾಗಿ ಅವರೊಡನೆ ಅಲ್ಲಿ ೩ ತಾಸುಗಳವರೆಗೆ ಚರ್ಚೆ ಮಾಡಿದರು. ಅವರು ಹೊರಗೆ ಬಂದ ಕೂಡಲೆ ವೃತ್ತ ಪತ್ರಿಕೆಯ ಪ್ರತಿನಿಧಿಗಳು ಚರ್ಚೆಯ ಸಂಬಂಧವಾಗಿ ತಿಳಿಸಲು ಅವರನ್ನು ಕೇಳಿಕೊಂಡರು. ಅವರು ಅವನ್ನು ಹೊರಗೆಡವಲು ನಿರಾಕರಿಸಿದರು. ತಾ|| ೨೪ ನೆಯ ದಿವಸದಲ್ಲಿಯೂ ಭೆಟ್ಟಿಯಾಗಲು ಅವರು ಹೋಗುವವರಿದ್ದರು. ಚರ್ಚೆಯು ನಡೆದಾಗ ಉಳಿದವರಾರೂ ಅಲ್ಲಿ ಇದ್ದಿದ್ದಿಲ್ಲ.

---

### ಮುಂಬಯಿ ಸರಕಾರಕ್ಕೆ
### ಸೆರೆಮನೆಗಳು ಸಾಲಲಿಲ್ಲ.

ಮುಂಬಯಿ ಸರಕಾರಕ್ಕೆ ಈಗ ಸೆರೆಮನೆಗಳು ಸಾಲದಂತಾಗಿವೆ. ಅವರು ವಿಜಾಪುರ ತುರಂಗವನ್ನು ವತ್ತಿ ಹೋದಾಗಿ ಹೊರಡಿಸಿ ನೋಡಿದರು. ಆದರೆ ಅದೂ ಸಾಲಲೊಲ್ಲದಾಗಿದೆ. ಆದುದರಿಂದ ಈಗ ಮುಂಬಯಿ ಸರಕಾರದವರು ತಮ್ಮ ಇಲಾಖೆಯ ರಾಜಕೀಯ ಕೈದಿಗಳನ್ನು ಮದ್ರಾಸ ಇಲಾಖೆಯಲ್ಲಿಯ ತುರುಂಗಗಳಿಗೆ ಕಳಿಸಿಕೊಡಹತ್ತಿದ್ದು, ತಾ|| ೨೨ ನೆಯ ದಿವಸ ಧುಲಿಯಾದ ೫೭ ಕೈದಿಗಳನ್ನು ಹಾಗು ಮುಂಬಯಿಯ ೩೦ ಕೈದಿಗಳನ್ನು ತ್ರಿಚನಾಪಲ್ಲಿಗೆ ಕಳಿಸಿಕೊಟ್ಟರು.

### ಪಂಜಾಬದಲ್ಲಿ ಕಾಂಗ್ರೆಸ್ ಕಮೀಟಿಗಳ ಮೇಲೆ ದಾಳಿ

ಪಂಜಾಬದ ಪ್ರಾಂತಿಕ ಸರಕಾರದವರು ಅಲ್ಲಿಯ ಎಲ್ಲ ಕಾಂಗ್ರೆಸ್ ಕಮೀಟಿಗಳನ್ನು ಕಾಯಿದೆಗೆ ವಿರುದ್ಧವಾದ ಸಂಘಗಳಾಗಿವೆಯೆಂದು ಗೊತ್ತುಪಡಿಸುವವರಿದ್ದಾರೆ. ಅಲ್ಲಿ ಈಗ ರಾಜಕೀಯ ಸಂಸ್ಥೆಗಳ ಹಾಗು ಮುಖಂಡರ ಮನೆಗಳ ಜಪ್ತಿಗಳು ಪ್ರತಿನಿತ್ಯ ನಡಿದಿವೆ.

### ಗುಂಟೂರಲ್ಲಿ ಗಾಂಧಿ ಟೊಪ್ಪಿಗೆಯ ಸತ್ಯಾಗ್ರಹ

ಮ್ಯಾಜಿಸ್ಟ್ರೇಟರು ಹೊರಡಿಸಿದ ಕಟ್ಟಪ್ಪಣೆಯನ್ನು ಮುರಿದು ಗಾಂಧಿ ಟೊಪ್ಪಿಗೆಗಳನ್ನು ಹಾಕಿಕೊಂಡು ತಿರುಗಾಡಿದುದಕ್ಕಾಗಿ ಗುಂಟೂರಿನಲ್ಲಿ ೫೮ ಜನ ಸತ್ಯಾಗ್ರಹಿಗಳು ಸೆರೆಹಿಡಿಯಲ್ಪಟ್ಟಿದ್ದಾರೆ. ಮ್ಯಾಜಿಸ್ಟ್ರೇಟರ ಕಟ್ಟಪ್ಪಣೆಯನ್ನು ಮುರಿಯುವದು ದಿನಾಲು ನಡೆದಿದೆ. ಗುಂಟೂರಿನೊಳಗಿನ ಎಲ್ಲ ಸುದ್ದಿ ಸಂಗತಿಗಳನ್ನು ತಿಳಿದುಕೊಂಡ ಮೇಲೆಯೆ ಅಲ್ಲಿಯ ಸತ್ಯಾಗ್ರಹವನ್ನು ಅಖಿಲ ಭಾರತದ ಪ್ರಶ್ನೆಯನ್ನಾಗಿ ಮಾಡುವೆವೆಂದು ಸರ್ದಾರ ವಲ್ಲಭಭಾಯಿಯವರು ಹೇಳಿದ್ದಾರೆ.

### ಬನಾರಸ ಹಿಂದೂ ವಿಶ್ವವಿದ್ಯಾಲಯದಲ್ಲಿ
### ರಾಜದ್ರೋಹ.

ಬನಾರಸದಲ್ಲಿ ಸತ್ಯಾಗ್ರಹ ಚಳವಳಿಯು ಭರದಿಂದ ಸಾಗಿದೆ. ಪರದೇಶಿ ಬಟ್ಟೆಗಳ ಹಾಗು ಸೆರೆ ಸಿಂಧಿ ಅಂಗಡಿಗಳ ಮುಂದೆ ಪಿಕೆಟಿಂಗವು ದಿನಾಲು ನಡೆದಿದೆ. ಇದಲ್ಲದೆ ತಾ|| ೨೧ ರಿಂದ ಬನಾರಸ ಹಿಂದೂ ವಿಶ್ವವಿದ್ಯಾಲಯದ ದ್ವಾರದಲ್ಲಿ ನಿಂತುಕೊಂಡು ರಾಜದ್ರೋಹಾತ್ಮಕ ಗ್ರಂಥಗಳನ್ನು ಓದುವ ಚಳವಳಿಯು ಪ್ರಾರಂಭಿಸಲ್ಪಟ್ಟಿದೆ.

### ಗುಲಗಲಿಯ
### ಶ್ರೀ ಲಿಂಗಾಪುರರ ಬಿಡುಗಡೆ

ಧಿರಣಾಕದಲ್ಲಿ ಉಪ್ಪನ್ನು ಸಿದ್ಧಪಡಿಸಿ ಕಾಯಿದೆ ಭಂಗ ಮಾಡಿದುದಕ್ಕಾಗಿ ೩ ತಿಂಗಳದ ಸಾದಾ ಶಿಕ್ಷೆಗೆ ಪಾತ್ರರಾಗಿ ತಾ|| ೨೬—೪—೩೦ ನೆಯ ದಿವಸ ಸೆರೆಮನೆಗೆ ತೆರಳಿದ ತರುಣರಾದ ಶ್ರೀ ಲಿಂಗಾಪುರರು ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ತಾ|| ೨೪ ನೆಯ ದಿವಸ ವಿಜಾಪುರ ಜೇಲಿನಿಂದ ಬಿಡುಗಡೆ ಹೊಂದಿ ಹೊರಗೆ ಬಂದಿದ್ದಾರೆ. ೩ ತಿಂಗಳದಲ್ಲಿ ಅವರ ತೂಕವು ೧೩ ಪೌಂಡು ಹೆಚ್ಚಾಗಿರುವದು. ವಿಜಾಪುರದ ನಾಗರಿಕರು ತಾ|| ೨೪ ಕ್ಕೆ ಸಾರ್ವಜನಿಕ ಸಭೆ ಸೇರಿಸಿ ಅವರನ್ನು ಯೋಗ್ಯರೀತಿಯಿಂದ ಸನ್ಮಾನಿಸಿದರು. ಇಂದು ಸಂಜೆಯ ಗಾಡಿಗೆ ಶ್ರೀ ಲಿಂಗಾಪುರರು ಇಲ್ಲಿಗೆ ಬರುವವರಿದ್ದಾರೆ. ಬಾಗಲಕೋಟೆಯ ನಾಗರಿಕರು ಅವರಿಗೆ ಸುಸ್ವಾಗತವನ್ನೀಯಬೇಕು.

### ಗುಲಗಲಿಯಲ್ಲಿ ಶ್ರೀ ಧನಶೆಟ್ಟಿಯವರ ಬಗ್ಗೆ ಮೊರೆ

ಶ್ರೀ ಜಕೋತ ಬಂಡಾಚಾರ್ಯರ ಅಧ್ಯಕ್ಷತೆಯಲ್ಲಿ ತಾ|| ೨೩—೭—೩೦ ನೇ ದಿವಸ ಸಾರ್ವಜನಿಕ ಸಭೆ ಸೇರಿ, ಶ್ರೀ ಧನಶೆಟ್ಟಿ ಮಲ್ಲಪ್ಪನವರಿಗಾದ ಗಲ್ಲಿನ ಶಿಕ್ಷೆಯ ಬಗ್ಗೆ ಕೆಳಗೆ ಬರೆದ ಗೊತ್ತು ಸರ್ವಾನುಮತದಿಂದ ಸ್ವೀಕೃತವಾಯಿತು.

" ಸೊಲ್ಲಾಪುರದ ಸುಪ್ರತಿಷ್ಠಿತ ಗೃಹಸ್ಥರಾದ ಶ್ರೀ ಮಲ್ಲಪ್ಪ ಧನಶೆಟ್ಟಿಯವರಿಗೆ ಗಲ್ಲಿನ ಶಿಕ್ಷೆಯಾಗುವದೆಂದು ಕೇಳಿ ನಮಗೆ ಕಡುದುಃಖವಾಗುತ್ತದೆ; ಸೊಲ್ಲಾಪುರದ ಲಷ್ಕರಿ ಅಮಲಿನಲ್ಲಿ ಆರೋಪಿತರಿಗೆ ತಮ್ಮ ರಕ್ಷಣೆಯನ್ನು ಮಾಡಿಕೊಳ್ಳಲು ಅವಕಾಶವಿದ್ದಿಲ್ಲವೆಂದು ನಮ್ಮ ಸ್ಪಷ್ಟವಾದ ಅಭಿಪ್ರಾಯವು. ಶ್ರೀ ಧನಶೆಟ್ಟಿಯವರಿಗೆ ಇನ್ನು ದೇವರೇ ಬೆಂಬಲವಾಗಬೇಕೆಂದು ಆ ಸರ್ವಶಕ್ತಿಮಾನ ಪರಮೇಶ್ವರನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ. "

ತಾ|| ೨೪-೭ ೩೦ { ಪ್ರಕಟಿಸುವಾತ. ಸತ್ಯಾಗ್ರಹ ಮಂಡಳ, ಗುಲಗಲಿ

ಹಿಂದುಸ್ಥಾನದಲ್ಲಿ

## ಮುದ್ರಣ ಬಕಾಸುರನ ಹಾವಳಿಯು.

ವ್ಹಾಯಿಸರಾಯರು ಹೊರಡಿಸಿದ ವೃತ್ತಪತ್ರದಬ್ಬಾಳಿಕೆಯ ಶಾಸನಕ್ಕೆ ಈ ವರೆಗೆ ಹಿಂದುಸ್ಥಾನದಲ್ಲಿ ಒಟ್ಟಿಗೆ ೧೪೦ ವೃತ್ತಪತ್ರಿಕೆಗಳು ಆಹುತಿಗಳಾಗಿವೆ. ಪ್ರತಿಯೊಂದು ಪ್ರಾಂತದಿಂದ ಆಹುತಿಯಾದವುಗಳ ಸಂಖ್ಯೆಯು ಕೆಳಗಿನಂತೆ ಇದೆ,

ಮುಂಬಯಿ ೩೫, ಪಂಜಾಬ ೨೫, ದಿಲ್ಲಿ ೭೫, ಮದ್ರಾಸ ೧೮ ಸಂಯುಕ್ತಪ್ರಾಂತ ೧೩, ಬಂಗಾಲ ೯ ಓವರ್ ೫ ಆಸಾಮ ೪ ವರಹಪ್ಪಿನಪ್ರಾಂತ ೩, ಮಧ್ಯಪ್ರಾಂತ ೨, ಬಿಹಾರ ೧.

ಈ ಮೇಲಿನ ಪತ್ರಿಕೆಗಳಲ್ಲಿ ೬೩ ಪತ್ರಿಕೆಗಳು ನಿಂತುಹೋದವು. ೧೫ ಪತ್ರಿಕೆಗಳು ದಂಡವನ್ನು ಕೊಟ್ಟವು ೭ ಪತ್ರಿಕೆಗಳು ದಂಡವನ್ನು ಕೊಡದೆ ಮೊದಲಿನಂತೆಯೇ ಸಾಗಿದವು ಮತ್ತು ವಿಚಾರಣೆಗೆ ಗುರಿಯಾದವು.

## ಟಿಳಕ ವಿದ್ಯಾಲಯದ ಶಿಕ್ಷಕರಿಗೆ ಸೆರೆಮನೆ.

ನಾಗಪೂರದ ಟಿಳಕ ವಿದ್ಯಾಲಯದಲ್ಲಿಯ ಶಿಕ್ಷಕರಾದ ಶ್ರೀ ಪಾಠಕರೆಂಬುವರು ಇ. ಪಿ. ಕೋಡಿನ ೧೧೭ ನೆಯ ಕಲಮಿನ ಅನ್ವಯ ಚಿನವಾಡದಲ್ಲಿ ಸೆರೆಹಿಡಿಯಲ್ಪಟ್ಟಿದ್ದಾರೆ.

## ಸಿಮಲಾದಲ್ಲಿ ೧೫ ಜನರನ್ನು ಸೆರೆಹಿಡಿದರು.

ಸಿಮಲಾದಲ್ಲಿ ಮೇಲಭಾಗದಲ್ಲಿ ಸೆರೆ ಸಿಂದಿ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದುದಕ್ಕಾಗಿ ತಾ|| ೨೧ ನೆಯ ದಿವಸ ಅಲ್ಲಿ ೧೫ ಜನ ಸ್ವಯಂಸೇವಕರನ್ನು ಸೆರೆಹಿಡಿದಿರುತ್ತಾರೆ. ಅವರ ಸ್ಥಳದಲ್ಲಿ ಬೇರೆ ಸ್ವಯಂಸೇವಕರು ಒಂದು ಪಿಕೆಟಿಂಗ ಮಾಡಹತ್ತಿದ್ದಾರೆ.

## ತಕಲಿ ಮಾರಿದ್ದಕ್ಕೆ ೧ ಆಣೆ ದಂಡ.

ತಕಲಿಯನ್ನು ವ್ಯಾಪಾರ ಮಾಡುವ ಮುಂದೆ ತನ್ನ ಸುತ್ತಲೂ ಜನಸಮುದಾಯವನ್ನು ನೆರೆಯಿಸಿಕೊಂಡು ಗೊಂದಲವನ್ನುಂಟು ಮಾಡಿದುದಕ್ಕಾಗಿ ಮದ್ರಾಸದ ಶ್ರೀ ರಂಗನಾಥಮ್ ಚೆಟ್ಟಿಯವರು ವಿಚಾರಣೆಗೆ ಗುರಿಯಾಗಿ ೧ ಆಣೆಯ ದಂಡಕ್ಕೆ ಪಾತ್ರರಾದರು.

ಬೀಳಗಿಯಲ್ಲಿಯ

## ಹೆಡ್‌ಮಾಸ್ತರರ ಅಧಿಕಪ್ರಸಂಗತನವು.

ನಗರ ಸಂಕೀರ್ತನೆಗೂ, ರಾಷ್ಟ್ರಧ್ವಜವಂದನೆಗೂ ಪ್ರತಿನಿತ್ಯ ಬರುವ ವಿದ್ಯಾರ್ಥಿಗಳಿಗೆ ಇಲ್ಲಿಯ ಹೆಡ್‌ಮಾಸ್ತರರು ಹೆಸರು ತೆಗೆಯುವೆನೆಂಬ ಅಂಜಿಕೆಯು ಗದರಿಸಿ ಹಾಕಿರುವರು ಇದಕ್ಕೆ ಅಂಜದೆ ಕೆಲವು ವಿದ್ಯಾರ್ಥಿಗಳು ಪ್ರತಿನಿತ್ಯ ಬರುತ್ತಲಿದ್ದಾರೆ, ಹೀಗೆ ಮಾಡಿದಲ್ಲಿ ಇವರ ಸಂಬಳವೇನಾದರೂ ಹೆಚ್ಚಾಗುವದೋ?

ಬೀಳಗಿ
ತಾ|| ೨೨—೭—೩೦ { ಕಾರ್ಯದರ್ಶಿ
ತರುಣ ಸಂಘ.

## ಅಹಮ್ಮದಾಬಾದದಲ್ಲಿ ಮತ್ತೆ ಉಪ್ಪಿನ ಕಾಯಿದೆಭಂಗ

## ೫೦ ಜನರನ್ನು ಸೆರೆಹಿಡಿದರು.

ಅಹಮ್ಮದಾಬಾದದಲ್ಲಿ ಉಪ್ಪಿನ ಕಾಯಿದೆಭಂಗವು ಇನ್ನೂ ಹಾಗೆಯೇ ಸಾಗಿದೆ. ಪ್ರತಿದಿವಸದಲ್ಲಿಯೂ ಸ್ವಯಂಸೇವಕರು ಖಾರೇವಾಡ ಪ್ರಾಂತದಲ್ಲಿ ಹೋಗಿ, ಅಲ್ಲಿ ಉಪ್ಪನ್ನು ಸಿದ್ಧಪಡಿಸಿ, ಅದನ್ನು ಬ್ರಿಟಿಶರ ಹದ್ದಿನಲ್ಲಿ ತೆಗೆದುಕೊಂಡು ಬರುತ್ತಿದ್ದಾರೆ. ಈ ಕಾಯಿದೆಭಂಗಕ್ಕಾಗಿ ೫೦ ಜನ ಸ್ವಯಂಸೇವಕರು ಸೆರೆಹಿಡಿಯಲ್ಪಟ್ಟಿದ್ದಾರೆ.

ಮಾರಾಟಕ್ಕೆ ಸಿದ್ಧ!) ರಾಟಿಗಳು (ಮಾರಾಟಕ್ಕೆ ಸಿದ್ಧ!)

ನಮ್ಮಲ್ಲಿ ಉತ್ತಮ ನೂಲು ತೆಗೆಯುವ ಚರಕಾಗಳು ಯೋಗ್ಯಬೆಲೆಗೆ ದೊರೆಯುತ್ತವೆ. ಕೈನೂಲು ಚನ್ನಾಗಿ ಹುರಿ ಇದ್ದದ್ದು ಮಾರಲಿಕ್ಕೆ ತೆಗೆದುಕೊಳ್ಳುತ್ತೇವೆ

ಭಾಷ್ಕರ ಬೇಕಾಜಿ ಲೋಡಾಯಾ

ಹೊಸಪೇಟೆ ಗುಜ್ಜರವತಾರ ಬಾಗಲಕೋಟೆ

ಕಾಂಗ್ರೆಸ ಕಮಿಟಿಯು ಮನ್ನಣೆ ಪಡೆದ

## ಶುದ್ಧ ಖಾದಿಯು ಬೇಕಾಗಿದ್ದರೆ ತ್ವರೆಮಾಡಿರಿ.

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಶರ್ಟಿಂಗ, ಹಾಗು ಕೋಟಿನ ಉತ್ತಮವಾದ ಖಾದಿಯ ಅರಿವೆಯು ಮಾರಾಟಕ್ಕೆ ಸಿಗುತ್ತದೆ. ಗ್ರಾಹಕರು ತ್ವರೆಮಾಡಬೇಕು.

ಬಾಗಲಕೋಟೆ. { ರಾಘವೇಂದ್ರ ವ್ಯಾಸರಾವ ದೇಶಪಾಂಡೆ
ಖಾದಿ ವ್ಯಾಪಾರಿಗಳು.

**ಶುದ್ಧಖಾದಿ! ಶುದ್ಧಖಾದಿ!**

ಕೈನೂಲಿನ ಎಲ್ಲ ನಮೂನೆಯ ಶುದ್ಧ ಖಾದಿಕೊಳ್ಳಲಿಕ್ಕೆ ಸಾವಿ ಗ್ರಾಹಕರು ತ್ವರೆಮಾಡಬೇಕು. ಯೋಗ್ಯ ಬೆಲೆಯಿಂದ ಖಾದಿಯು ಇಲ್ಲಿ ಮಾರಲ್ಪಡುವದು.

ಪತ್ತೆ—ರಾಮಚಂದ್ರ ಬಾಸುತಕರ.

ಪ್ರೊ:—ಶ್ರೀನಾಥ ವಿವೇಕಾನಂದ ವಿಜಯ ಖಾದಿ ವಸ್ತ್ರಭಾಂಡಾರ. c/o

ಬಾಗಲಕೋಟೆ. ಭೀಮರಾವ ಝಂಗಾಣಿಪಟೇಲರ.

**ಶುದ್ಧ ಖಾದಿ! ಶುದ್ಧ ಖಾದಿ!**

ನಮ್ಮಲ್ಲಿ ಕೈನೂಲು ಕೈಮಗ್ಗದ ಶರ್ಟಿಂಗ, ಕೋಟಿಂಗ, ಧೋತರ ಮೊದಲಾದ ಎಲ್ಲ ತರದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಗ್ರಾಹಕರು ಲಾಭ ಪಡೆಯಬೇಕಾಗಿ ವಿನಂತಿ

ಶಂಕರಪ್ಪಾ ಬಣಗಾರ.

ಜವಳಿ ವ್ಯಾಪಾರಿಗಳು, ಬಾಗಲಕೋಟೆ

ಈ ಪತ್ರಿಕೆಯು ಬಳವಂತ (ಅಣ್ಣಾರಾವ) ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾ ಮುದ್ರಾ ಸ್ಥಾನದಲ್ಲಿ ಮುದ್ರಿತವಾಗಿ ಅವರಿಂದ ಪ್ರಸಿದ್ಧಿಸಲ್ಪಟ್ಟಿತು

ರ. ನಂ. ಬಿ. ೧೯೪೭ ನಿತ್ಯಸಂಚಿಕೆಯು. ಬೆಲೆ ೦—೦—[illegible]

यद्यत् परवशं दुःखं । यद्यदात्मवशं सुखम् ॥—मनु.

# ಕನ್ನಡಿಗ

KANNADIGA BAGALKOT — BI-WEEKLY

ಸಂಪಾದಕರು:— ಬಳವಂತ ಅಣ್ಣಾರಾವ ಮುಜುಮದಾರ

ಬುಧವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಶನಿವಾರ ಮಿತಿ ಶ್ರಾವಣ ಶುದ್ಧ ೧ ಶಕೆ ೧೮೫೨ ತಾ॥ ೨೬—೭—೩೦ [ ಸಂಚಿಕೆ ೧೧೦

## ಮುದ್ರಣ ಬಕಾಸುರನಿಗೆ

# "ಕನ್ನಡಿಗ"ನೂ ಆಹುತಿಯಾದನು.

ಮಹಾತ್ಮರ ದಿವ್ಯಶಕ್ತಿಯು ಈಗ ರಾಷ್ಟ್ರದಲ್ಲೆಲ್ಲ ಹೊಸ ಚೈತನ್ಯವನ್ನು ಹುಟ್ಟಿಸುತ್ತದೆ. ಹತ್ತಿಪ್ಪತ್ತು ವರ್ಷಗಳಲ್ಲಿ ಆಗಲಾರದಷ್ಟು ಕಾರ್ಯವು ಅವರ ದಿವ್ಯಶಕ್ತಿಯ ಪ್ರಭಾವದಿಂದ ಈಗ ನಾಲ್ಕಾರು ತಿಂಗಳಲ್ಲಿಯೇ ಆಗಿ ಹೋಗಿದೆ. ದಿವ್ಯಶಕ್ತಿಯ ಪ್ರಭಾವವನ್ನು ಸರಕಾರದವರಿಗೆ ನೋಡಲಿಕ್ಕಾಗಲೊಲ್ಲದು. ಸರಕಾರದವರ ಕಣ್ಣುಗಳು ಈ ದಿವ್ಯಶಕ್ತಿಯ ಎದುರಿಗೆ ಈಗ ಕುಕ್ಕಿಹೋಗಿವೆ. ಅವರಿಗೆ ಈಗ ಕತ್ತಲೆಗಟ್ಟಿದಂತಾಗಿದೆ. ಇದಕ್ಕಾಗಿಯೇ ಚೈತನ್ಯವನ್ನು ಒತ್ತಿಕ್ಕಲು ಸರಕಾರವು ಹಲಕೆಲವು ಉಪಾಯಗಳನ್ನು ಕೈಕೊಂಡಿದ್ದಾಗಿದೆ. ಆ ಉಪಾಯಗಳಲ್ಲಿ ವೃತ್ತಪತ್ರ ದಬ್ಬಾಳಿಕೆಯ ಕಾನೂನೂ ಒಂದು.

ಈ ಮುದ್ರಣ ಬಕಾಸುರನ ಹಾವಳಿಯು ಕರ್ನಾಟಕದಲ್ಲಿ ಹೇಳಲಿಕ್ಕಿಲ್ಲದಷ್ಟು ಬೆಳೆದು ಹೋಗಿದೆ. ಮೊಟ್ಟಮೊದಲು ಅವನಿಗೆ ವಿಜಾಪುರದ "ಕರ್ನಾಟಕ ವೈಭವ"ವು ಬಲಿಯಾಯಿತು. ನಂತರದಲ್ಲಿ "ಕಾನಡಾ ವೃತ್ತ"ವು ಅವನ ಬಲಿಯಲ್ಲಿ ಸಿಕ್ಕಿತು. ಧಾರವಾಡದಲ್ಲಿ "ಕರ್ಮವೀರ" ಹಾಗು "ಕರ್ನಾಟಕ ಧುರೀಣ"ಗಳು ಅವನಿಗೆ ಆಹುತಿಯಾದವು. ಈಗ "ಕನ್ನಡಿಗ"ನ ಸರತಿಯು ಬಂದಿದೆ. ಅವನು "ಕನ್ನಡಿಗ"ನಿಗೂ ಹಾಗು "ವಿದ್ಯಾಭ್ಯುದಯ ಮುದ್ರಾಮಂದಿರ"ಕ್ಕೂ ಕೂಡಿಕೊಂಡು ೩೦೦೦ ರುಗಳ ಹವಿರ್ಭಾಗವನ್ನು ಅರ್ಪಿಸಲು ಕೇಳಿಕೊಂಡಿದ್ದಾನೆ. ರಕ್ಕಸನಿಗೆ ಹವಿರ್ಭಾಗವನ್ನು ಅರ್ಪಿಸಲು ಕನ್ನಡಿಗನಂತೂ ಸಿದ್ಧನಿಲ್ಲ. ಹೊಣೆಯನ್ನು ಕೊಡುವದಕ್ಕಿಂತಲೂ ನಿಂತುಹೋಗುವದೇ ಶ್ರೇಯಸ್ಕರವಾಗಿದೆಯೆಂದು ಅವನ ಮತವಾಗಿದೆ. ಆದುದರಿಂದ ಕನ್ನಡಿಗನು ಇನ್ನು ಮುಂದೆ ವಾಚಕರ ಕೈಸೇರುವಂತಿಲ್ಲ

"ಕನ್ನಡಿಗ"ನನ್ನು ಎತ್ತಿಕ್ಕಿ ಮುದ್ದಿಟ್ಟು ಲಾಲನೆ ಪಾಲನೆಗಳಿಂದ ಪರಿಪೋಷಿಸುವವರು ಅವನಿಗಾಗಿ ತಮ್ಮ ತಮ್ಮ ಅಂತಃಕರಣದಲ್ಲಿ ಒಂದು ಚಿರಂತರವಾದ ಸ್ಥಾನವನ್ನು ಕಾಯ್ದಿಡಲಿ. ಪುನಃ ದರ್ಶನ ಕೊಡುವವರೆಗೆ ಅವನನ್ನು ಸ್ಮರಿಸಲಿ. ಅಂದರೆ ಅವನು ಪುನಃ ಹೊಸ ಹುರುಪಿನಿಂದ ಮುಂದೆ ಬಂದು ಎಲ್ಲರ ಮುಖವನ್ನು ತೋರಿಸುವನು.

ಹೋಗಿ ಬರುವೆವು. ನಮಸ್ಕಾರಗಳು.

—ಸಂಪಾದಕರು.

---

## ಏಜಂಟರಲ್ಲಿಯೂ, ಜಾಹೀರಾತದಾರರಲ್ಲಿಯೂ

## ಬಿನ್ನಹ.

"ಕನ್ನಡಿಗನು" ಈಗ ಮುದ್ರಣ ಬಕಾಸುರನಿಗೆ ಆಹುತಿಯಾಗಿದ್ದಾನೆ. ಅವನು ಇನ್ನು ಮುಂದೆ ವಾಚಕರ ಕೈಸೇರುವಂತಿಲ್ಲ. ಎಷ್ಟೋ ಏಜಂಟರಿಂದಲೂ ಹಾಗೂ ಜಾಹೀರಾತದಾರರಿಂದಲೂ 'ಕನ್ನಡಿಗನಿಗೆ' ಇನ್ನೂ ಹಣವು ಸಲ್ಲತಕ್ಕದ್ದಿದೆ. ಆದುದರಿಂದ ಅವರೆಲ್ಲರೂ ತಮ್ಮ ತಮ್ಮ ಪಾಲಿನ ಹಣವನ್ನು ಕಳುಹಿಸಿಕೊಟ್ಟು "ಕನ್ನಡಿಗ"ನ ಭಾರವನ್ನು ಇಳಿಸುವರಾಗಿ ಕೋರುತ್ತೇನೆ.

ಬಾಗಲಕೋಟ<br>ತಾ॥ ೨೬—೭—೩೦.

ವ್ಯವಸ್ಥಾಪಕರು<br>ಕನ್ನಡಿಗ.

# ‘ಕರ್ಮವೀರ’ನ ಬಿನ್ನಹ

ಹೊಸದಾಗಿ ಒಳಕೆಯಲ್ಲಿ ಬಂದ ವೃತ್ತಪತ್ರ ಕಾನೂನಿನ ೪ ನೇ ನಿಯಮದ ಮೇರೆಗೆ ೧೦೦೦ ರೂ ಗಳ ಹೊಣೆಯನ್ನು ಕೊಡಿರೆಂದು ಸರಕಾರದವರು ‘ಕರ್ಮವೀರ’ ಪತ್ರಕ್ಕೆ ಕಳಹಿಸಿದ ನೋಟೀಸು ತಾ॥ ೧೭-೭-೩೦ ನೆಯ ದಿವಸ ನಮ್ಮ ಕೈಸೇರಿತು. ಇಂತಹ ಪ್ರಸಂಗ ಬಂದರೆ ಹೊಣೆಯನ್ನು ಕೊಟ್ಟು ಪತ್ರವನ್ನು ನಡೆಯಿಸುವದಕ್ಕಿಂತಲೂ ವೃತ್ತಪತ್ರ ಕಾನೂನು ಇರುವ ವರೆಗೆ ಪತ್ರವನ್ನು ನಿಲ್ಲಿಸುವದೇ ಶ್ರೇಯಸ್ಕರವೆಂದು ಶ್ರೀ. ದಿವಾಕರರ ಅಭಿಪ್ರಾಯವಿತ್ತು. ಅಲ್ಲದೆ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಮಂಡಳಿಯವರೂ ವರ್ತಮಾನ ಪತ್ರಗಳು ಹೊಣೆಯನ್ನು ಕೊಡಬಾರದೆಂದು ಸ್ಪಷ್ಟವಾಗಿ ನಿರ್ಬಂಧಿಸಿದ್ದಾರೆ. ಕಾಂಗ್ರೆಸು ಹಾಕಿಕೊಟ್ಟ ಮಾರ್ಗವನ್ನು ತಪ್ಪದೆ ಅನುಸರಿಸುವದು ‘ಕರ್ಮವೀರ’ದ ನಿಯಮವಿದ್ದುದು ಎಲ್ಲರಿಗೂ ಗೊತ್ತೇ ಇದೆ. ಆದುದರಿಂದ ವರ್ತಮಾನ ಪತ್ರವನ್ನು ಕೆಲಕಾಲ ನಿಲ್ಲಿಸುವದರಿಂದ ವರ್ತಮಾನ ಪತ್ರಕ್ಕೂ, ಓದುಗರಿಗೂ ಅನಾನುಕೂಲತೆಯುಂಟು. [illegible], ಅದೇ ರಾಷ್ಟ್ರೀಯ ಸ್ವಾಭಿಮಾನದ ಮಾರ್ಗವೆಂದು ತಿಳಿದು, ಸರಕಾರದ ಅನ್ಯಾಯದ ವೃತ್ತಪತ್ರದ ಕಟ್ಟಳೆಯು ಒಳಕೆಯಲ್ಲಿರುವ ವರೆಗೆ ಅಂದರೆ ನಮ್ಮ ಲೆಕ್ಕದಂತೆ ಇನ್ನು ೩॥ ತಿಂಗಳುಗಳ ವರೆಗೆ ‘ಕರ್ಮವೀರ’ ಪತ್ರಿಕೆಯನ್ನು ನಿಲ್ಲಿಸಬೇಕೆಂದು ನಿಶ್ಚಯಿಸಿದ್ದೇವೆ. ಇದು ವರೆಗೆ ಎಡಬಿಡದೆ ಸಹಾಯಮಾಡುತ್ತ ಬಂದಿರುವ ‘ಕರ್ಮವೀರ’ನ ಮಿತ್ರರಿಗೂ, ಓದುಗರಿಗೂ ನಾವು ತುಂಬಾ ಋಣಿಯಾಗಿದ್ದೇವೆ. ೩॥ ತಿಂಗಳುಗಳಾದ ಮೇಲೆ ‘ಕರ್ಮವೀರ’ನು ಮತ್ತೆ ಎಲ್ಲರ ಕೈಸೇರುವನು.

ಧಾರವಾಡ } ದತ್ತಾತ್ರೇಯ ಪರಶುರಾಮ ಕರಮರಕರ,
ತಾ॥ ೨೦—೭—೩೦ } ಸಂಪಾದಕರು, ‘ಕರ್ಮವೀರ’

## ಹಿಂಡಲಗಿ ಸೆರೆಮನೆಯಲ್ಲಿಯ ಸೆರೆಯಾಳುಗಳ ಗೋಳಾಟ

“ಹಿಂಡಲಗಿ ಸೆರೆಮನೆಯಲ್ಲಿರುವ ಅ, ಬ, ಕ, ವರ್ಗದ ರಾಜಕೀಯ ಸೆರೆಯಾಳುಗಳಲ್ಲಿ ಗೊಂದಲವೆದ್ದಿದೆ. ‘ಅ’ ವರ್ಗದ ಸೆರೆಯಾಳುಗಳನ್ನೆಲ್ಲ ‘ಬ’ ವರ್ಗದಲ್ಲಿ ಸೇರಿಸಿದ್ದಾರೆ. ಶ್ರೀ. ಲೇಂಗಡೆ, ಪುಂಡಲೀಕ, ಮುಂತಾದವರನ್ನು ‘ಕ’ ವರ್ಗದಲ್ಲಿ ಇರಿಸಿದ್ದಾರೆ. ‘ಕ’ ವರ್ಗದವರಿಗೆ ಕೊಡುತ್ತಿರುವ ಅನ್ನವು ಬಹಳ ಹೊಲಸಿರುತ್ತದೆ. ‘ಕ’ ವರ್ಗದ ಸೆರೆಯಾಳುಗಳನ್ನು ಕಟ್ಟಾಗಬಾರದೆಂದು ಬೇರೆ ಬೇರೆಯಾಗಿ ಬಿಡಿಬಿಡಿಸಿ ಇಟ್ಟಿದ್ದಾರೆ. ಅವರಿಂದ ೩೫-೪೦ ಪೌಂಡಿನ ವರೆಗೆ ಬೀಸಿಸಿಕೊಳ್ಳುವರು. ನೇಸರಗಿಯ ಶ್ರೀ ಕ.ಲಾಣೆ ಹಾಗು ಚಾಂದೋರಕರರಿಗೆ ಇದಕ್ಕಾಗಿ ಒಡಕಗಳು ಬಿದ್ದವು ಅವರಿಬ್ಬರೂ ಪಲ್ಲೆಯಲ್ಲಿ ಹುಳಗಳಿವೆಯೆಂದು ತಕರಾರು ತೆಗೆದರು. ಅದಕ್ಕಾಗಿ ಅವರನ್ನು ಕತ್ತಲೆ ಕೋಣೆಯಲ್ಲಿ ಇಟ್ಟರು. ಎಷ್ಟೋ ಸೆರೆಯಾಳುಗಳಿಗೆ ಒಣ ರೊಟ್ಟಿ ತಿನ್ನಬೇಕಾಗುತ್ತದೆ. ರೊಟ್ಟಿ ಪಲ್ಲೆಯಲ್ಲಿ ಹರಳು ಕಲ್ಲು ಬರುತ್ತವೆ. ಗಂಜಿಯಲ್ಲಿ ನೀರು ಹಿಟ್ಟು ಇರುವದೇ. ಕೆಲವರ ತೂಕವು ಕಡಿಮೆಯಾಗಿದ್ದರೂ ಇನ್ನೂ ಅವರಿಗೆ ಬೀಸಲಿಕ್ಕೆ ಕೊಟ್ಟೇ ಕೊಡುತ್ತಾರೆ. ಸುಪರಿಂಟೆಂಡೆಂಟರು ಬಂದಾಗಲೂ ಸೆರೆಯಾಳುಗಳು ಆಫ್ರಿಕದ ಗುಲಾಮರಿಗಿಂತ ಕೀಳರಂತೆ ವರ್ತಿಸಬೇಕಾಗುತ್ತದೆ. ಇಂತಹ ಕಾಡುಸ್ಥಿತಿಯು ಸುಧಾರಿಸಿದ ಇಂಗ್ಲೀಷರ ಆಳಿಕೆಯಲ್ಲಿ ನಡೆಯುವದು ನಾಚಿಕೆಯದೆಂದು ಮೊನ್ನೆ, ತಾವೇ ಸೆರೆಮನೆ ಕಂಡುಬಂದ ಶ್ರೀ ಮುಂದಗಿ, ಯಾಳಗಿ, ತಿನಯಿ, ಪಾಟೀಲ ಮುಂತಾದವರು ತಿಳಿಸುತ್ತಾರೆ.

## ವಿಜಾಪುರದ ಡಿ॥ ಮ್ಯಾಜಿಸ್ಟ್ರೇಟರು ಕಾಯಿದೆಯ ಮೇರೆ ಹೊಕ್ಕರು

ವಿಜಾಪುರ ಜಿಲ್ಲೆಯಲ್ಲಿ ಪಿಕೆಟಿಂಗಕ್ಕೆ ತಡೆಯನ್ನು ಮಾಡುವ ಉದ್ದೇಶದಿಂದ ವಿಜಾಪುರದ ಡಿ॥ ಮ್ಯಾಜಿಸ್ಟ್ರೇಟರು ತಾ। ೧೭-೭-೩೦ ನೆಯ ದಿವಸ ಒಂದು ಕಟ್ಟಪ್ಪಣೆಯನ್ನು ಹೊರಡಿಸಿದ್ದು ಅದರಲ್ಲಿ ಅವರು ಕೆಳಗಿನಂತೆ ಕಾಣಿಸಿದ್ದಾರೆ:—

“ಈ ಜಿಲ್ಲೆಯಲ್ಲಿಯ ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿ ಇರುವ ಸಿಂದಿ, ಸರೆ, ಅಫೀಮು ಮತ್ತು ಗಾಂಜಾ ಅಂಗಡಿಗಳ ಮುಂದೆ ಇರುವ ಬೈಲು ಮತ್ತು ತೆರವಿದ್ದ ಸ್ಥಳಗಳಲ್ಲಿ ಮತ್ತು ಓಣಿಗಳಲ್ಲಿ ಜನರು ತಿರುಗಾಡುವದಾಗಿ ಅಥವಾ ತಿರುಗಾಡುತ್ತಿರುವದಾಗಿ ಡಿ। ಮ್ಯಾ॥ ಸಾಹೇಬರವರಿಗೆ ಕಂಡುಬಂದಿದೆ. ಈ ಪ್ರಕಾರ ಅವರು ತಿರುಗಾಡುತ್ತಿರುವದರಿಂದ ಸಾರ್ವಜನಿಕರಿಗೆ ಅನಾನುಕೂಲತೆ ಆಗುವದಾಗಿ ಅಥವಾ ಆಗುತ್ತಿರುವದಾಗಿ ಕಂಡುಬಂದಿದೆ

ಮೇಲೆ ತೋರಿಸಿದ ಕಾರಣಗಳ ಮೂಲಕ ಡಿ। ಮ್ಯಾಜಿಸ್ಟ್ರೇಟರು, ಜಿಲ್ಲಾ ವಿಜಾಪುರ ಇವರು ಮುಂಬಯಿಯ ಡಿಸ್ಟ್ರಿಕ್ಟ್ ಪೋಲೀಸ ಆಕ್ಟ (೧೮೯೦ ನೆಯ ಇಸ್ವಿಯ ೧ ನೆಯ ಕಾಯಿದೆ) ಕಲಮು ೩೯ (೧) (M) ಇವರ ಅನ್ವಯ ಅಪ್ಪಣೆ ಮಾಡುವದೇನೆಂದರೆ, ಸೆರೆ, ಸಿಂದಿ, ಗಾಂಜಾ ಮತ್ತು ಅಫೀಮು ಮಾರುವ ಅಂಗಡಿಗಳ ಮುಂದೆ ಇರುವ ಬೈಲು ಮತ್ತು ತೆರವಿದ್ದ ಸ್ಥಳಗಳಲ್ಲಿ ಅಥವಾ ಓಣಿಗಳಲ್ಲಿ ಯಾರೂ ಅಂಗಡಿಗಳೊಳಗೆ ಹೋಗಲಿಚ್ಛಿಸುವವರಿಗೆ ಅಡ್ಡಿ ಮಾಡುವ ಉದ್ದೇಶದಿಂದ ಅಥವಾ ಅವರ ಮನಸ್ಸು ತಿರುಗಿಸುವ ಉದ್ದೇಶದಿಂದ ಅಥವಾ ಇತರ ಯಾವ ಕಾರಣದಿಂದಲೂ ತಿರುಗಾಡಕೂಡದು. ಈ ಹುಕುಮಿನ ಅಮಲಬಜಾವಣೆಯನ್ನು ಪೋಲೀಸರು ಮುಂಬಯಿ ಡಿ॥ ಪೋಲೀಸ ಆಕ್ಟ ಕಲಮು ೫೩ (೧) (A) ನೇದರ ಪ್ರಕಾರ ಮಾಡಿ ತಮ್ಮ ಕರ್ತವ್ಯಕರ್ಮಗಳನ್ನು ಮಾಡುವರು. ಈ ಹುಕುಮು ಇವತ್ತಿನಿಂದ ೭ ತಿಂಗಳದ ವರೆಗೆ ಬಳಕೆಯಲ್ಲಿ ಇರುವದು.”

## ಅಮರಾವತಿಯಲ್ಲಿ ಕಾಯಿದೆಭಂಗ

೧೮ ಜನರಿಗೆ ಕೈದು

ವರ್‍ಹಾಡ ಪ್ರಾಂತದ ಅಡವಿಯ ಸತ್ಯಾಗ್ರಹ ಶಿಬಿರದ ೨೯ ಜನ ಸ್ವಯಂಸೇವಕರು ಪಡಾಲಿಗೆ ಸಾಗಿಹೋಗಿ ಅಡವಿಯ ಕಟ್ಟಿಗೆಗಳನ್ನು ಮುರಿದರು. ಅವರಲ್ಲಿ ೧೮ ಜನರು ಸೆರೆ ಹಿಡಿಯಲ್ಪಟ್ಟರು.

## ಯರವಡಾ ಜೇಲಿನಲ್ಲಿ

# ಶಾಂತಿಸಂಧಾನದ ಮಾತುಕತೆಗಳು

ತಾ|| ೨೪ ನೆಯ ದಿವಸ ಸರ್ ಸಪ್ರು ಹಾಗು ಶ್ರೀ ಜಯಕರರು ಯರವಡಾ ಜೇಲಿಗೆ ಹೋಗಿ ಮತ್ತೆ ಮಹಾತ್ಮಾ ಗಾಂಧಿ ಗಾಂಧಿಯವರನ್ನು ಕಂಡುಕೊಂಡರು. ಅವರೊಡನೆ ೪ ತಾಸುಗಳ ವರೆಗೆ ಶಾಂತಿಸಂಧಾನದ ಬಗ್ಗೆ ಮಾತುಕತೆಗಳನ್ನಾಡಿದರು. ಅವರು ಕೆಳಗಿನಂತೆ ಪ್ರಕಟನೆಯನ್ನು ಹೊರಡಿಸಿದ್ದಾರೆ:—

ತಾ|| ೨೩ ಹಾಗು ೨೪ ಈ ದಿನಗಳಲ್ಲಿ ಮಹಾತ್ಮರನ್ನು ಜೇಲಿನಲ್ಲಿ ಕಂಡುಕೊಂಡೆವು. ಅವರೊಡನೆ ಶಾಂತಿಸಂಧಾನದ ಬಗ್ಗೆ ಬಹಳ ಹೊತ್ತಿನವರೆಗೆ ಮಾತುಕತೆಗಳನಾಡಿದೆವು. ನಮ್ಮ ಅಭಿಪ್ರಾಯವನ್ನು ಅವರಿಗೆ ತಿಳಿಸಿದೆವು. ಮಹಾತ್ಮರು ಪಂಡಿತ ಮೋತೀಲಾಲ ಹಾಗು ಜವಾಹರಲಾಲರಿಗಾಗಿ ತಮ್ಮ ಸಂದೇಶವನ್ನು ಬರೆದು ನಮ್ಮಕಡೆಗೆ ಕೊಟ್ಟರು. ನಾವು ಆ ಸಂದೇಶಗಳನ್ನು ತೆಗೆದುಕೊಂಡು ಅಲಾಹಾಬಾದಕ್ಕೆ ಹೋಗಿ ಅವುಗಳನ್ನು ನೆಹರೂರವರಿಗೆ ಕೊಡುತ್ತೇವೆ.

### ಬಳ್ಳಾರಿ ಜಿಲ್ಲೆಯಲ್ಲಿ

## ಸ್ವಾತಂತ್ರ್ಯಸಪ್ತಾಹದ ಸಿದ್ಧತೆಯು

(ಸ್ವಂತ ಸದ್ವಿಗಾರರಿಂದ)

ತಾ|| ೨೨ ನೆಯ ದಿವಸ ಸಂಜೆಯಲ್ಲಿ ಬಳ್ಳಾರಿ ಜಿಲ್ಲೆಯ ಕಾಂಗ್ರೆಸ್ ಕಮೀಟಿಯ ಸಭಾಸದರ ಸಭೆಯು ಸೇರಿ, ಕೆಲವು ಕಾರ್ಯನಿರ್ವಾಹಕರು ರಾಜೀನಾಮೆ ಕೊಟ್ಟ ಮೂಲಕ ತೆರವಾದ ಸ್ಥಳಗಳಿಗೆ ಕೆಳಗಿನವರನ್ನು ಆರಿಸುವದರಲ್ಲಿ ಬಂದಿತು. (೧) ಉಪಾಧ್ಯಕ್ಷರು ಶ್ರೀಮತಿ ಸೌ. ನಿವೃತ್ತಿ ಲಕ್ಷ್ಮೀದೇವಿ (೨) ಸಹಕಾರ್ಯದರ್ಶಿ ಹಾಗು ಖಜಾನೆದಾರ:— ವೆಂಕೋಬರಾವ ಮುದ್ದನಗಿರಿ. ಕಾರ್ಯಕಾರಿ ಮಂಡಳದ ಸಭಾಸದರು:- (೧) ಶ್ರೀಮತಿ ಪ್ರತಾಪಗಿರಿ ಕಮಲಮ್ಮ (೨) ಶ್ರೀ; ಕುಲವತ್ತಿ ಸಾವುಕಾರ ಚೆನ್ನಪ್ಪ. (೩) ಡಾ. ರಾಮರಾವ ಹರಪನಹಳ್ಳಿ (೪) ಬಿ. ವಿ. ಶೇಷಗಿರಿರಾವ. (೫) ಕಲ್ಲಣಿ ದೊಡ್ಡಬಸಪ್ಪ. (೬) ಸಿಂಧಗಿ ಸಿದ್ದಬಸಪ್ಪ.

ಕರ್ನಾಟಕ ಸತ್ಯಾಗ್ರಹ ಮಂಡಳವು ನಿಶ್ಚೈಸಿದಂತೆ ಈ ಜಿಲ್ಲೆಯಲ್ಲಿ "ಸ್ವಾತಂತ್ರ್ಯ ಸಪ್ತಾಹವನ್ನು ವಿಜೃಂಭಣೆಯಿಂದ ಜರುಗಿಸಲು ಸನ್ನಾಹಗಳು ಭರದಿಂದ ಸಾಗಿವೆ. ವರ್ತಕ ಮಂಡಳಿಯಲ್ಲಿ ಬಹುಮತವಾಗಿ ಎಲ್ಲರೂ ತಮ್ಮ ತಮ್ಮ ಅಂಗಡಿಗಳ ಮೇಲೆ ರಾಷ್ಟ್ರಧ್ವಜಗಳನ್ನೇರಿಸಲು ಒಪ್ಪಿರುತ್ತಾರೆ

ಈ ಜಿಲ್ಲೆಯ ಆದೋನಿ, ಹೂವಿನಹಳ್ಳಿ, ಹಡಗಲಿ, ರಾಯದುರ್ಗ, ಕೂಡ್ಲಿಗಿ, ಹಾಗು ಆದವಾನಿ ತಾಲೂಕುಗಳಲ್ಲಿ "ಸ್ವಾತಂತ್ರ್ಯ ಸಪ್ತಾಹ" ಜರುಗಿಸಲು ಬಳ್ಳಾರಿಯ ಸತ್ಯಾಗ್ರಹ ಶಿಬಿರದಿಂದ ಸ್ವಯಂಸೇವಕ ಮಂಡಳಗಳು ನಿನ್ನಿನ ದಿನ (೨೩-೭-೩೦) ಕಳುಹಿಸಲ್ಪಟ್ಟಿವೆ.

### ಶಿರೂರಲ್ಲಿ

## ಸಿಂದೀ ಮಾರುವವನ ಪುಂಡಾಟಿಕೆ

ನಿನ್ನಿನ ದಿವಸ ಪಿಕೆಟಿಂಗ ಮಾಡುವಾಗ ಸಿಂದೀ ಮಾರುವವನು ತತ್ರಾಣಿ ಮತ್ತು ತಂಬಿಗೆಯಲ್ಲಿ ಸಿಂದಿಯನ್ನು ತುಂಬಿಕೊಂಡು ಮನೆಗೆ ಹೋದನು, ನಾನು ಅವನ ಹಿಂದೆಯೇ ಹೋಗಿ ಸಿಂದಿಯನ್ನು ಮಾರಬೇಡನೆಂದು ಬೇಡಿಕೊಂಡೆನು. "ನಾನು ಸೇವಕನು ನನಗೆ ನೀನು ಹೈಳಬೇಡ ಅಂಗಡಿಯ ಮುಂದೆ ಹೋಗಿ ಪಿಕೆಟಿಂಗ ಮಾಡು" ಎಂದು ಅವನು ಹೇಳಿದನು. "ಸಿಂದಿಯ ವ್ಯಾಪಾರವಾಗುವ ಸ್ಥಳದಲ್ಲಿ ನಾನು ಪಿಕೆಟಿಂಗ ಮಾಡತಕ್ಕವನೆ" ಎಂದು ನಾನು ನುಡಿದೆನು. ಅದಕ್ಕೆ ಅವನು ನೀನು ಹೋಗು. ಇಲ್ಲದಿದ್ದರೆ ಕೊಡಲಿಯಿಂದ ಕಡಿದು ತುಂಡು ತುಂಡು ಮಾಡುವೆನೆಂದು ಕೊಡಲಿಯನ್ನು ತಲೆಯ ಮೇಲೆ ಎತ್ತಿದನು. ದೇಹದ ತುಂಡುಗಳನ್ನು ಮಾಡೆಂದು ನಾನು ತಲೆಯನ್ನು ಬಗ್ಗಿದೆನು. ಬಳಿಕ ಕೊಡಲಿಯನ್ನು ಒಗೆದು ಕುತ್ತಿಗೆ ಹಿಡಿದು ಅವನು ನನ್ನನ್ನು ದಬ್ಬಿದನು, ಜನರೆಲ್ಲರೂ ಅವನಿಗೆ ಛೀ ಹಾಕಿದರು. ಕಡೆಗೆ ಅವನು ತಂಬಿಗೆಯಲ್ಲಿಯ ಸಿಂದಿಯನ್ನು ಸುರಿದು ಬಿಟ್ಟನು. ಮತ್ತು ತತ್ರಾಣಿಯಲ್ಲಿದ್ದ ಸಿಂದಿಯನ್ನು ತಂಬಿಗೆಗೆ ಹಾಕಿ ಅದನ್ನು ಪಕ್ಕದಲ್ಲಿದ್ದ ಮನೆಯಲ್ಲಿ ಇಟ್ಟನು. ಅಲ್ಲಿ ಯಾರೋ ಅದನ್ನು ಮಾಯ ಮಾಡಿದರು. ಇಷ್ಟಾದ ಮೇಲೆ ನಾನು ಹೊರಟು ಹೋದೆನು.

ತಾ|| ೨೪—೭—೩೦ { ಓರ್ವ ಸ್ವಯಂಸೇವಕ.

### ಮುಂಬಯಿಯ

## ಜವಳಿ ವ್ಯಾಪಾರಿಗಳ ನಿರ್ಧಾರ

### ಅನಿಯಮಿತ ಕಾಲದ ವರೆಗೆ ಹರತಾಳ

ತಾ|| ೨೫ ನೆಯ ದಿವಸ ಮುಂಬಯಿಯಲ್ಲಿಯ ಜವಳಿ ವ್ಯಾಪಾರಿ ಸಂಘದವರು ತಮ್ಮದೊಂದು ಸಭೆಯನ್ನು ಸೇರಿಸಿಕೊಂಡು, ಸರಕಾರದ ದಬ್ಬಾಳಿಕೆಯ ನಿಷೇಧಾರ್ಥವಾಗಿ ತಾ|| ೨೬ ರಿಂದ ಅನಿಯಮಿತ ಕಾಲದವರೆಗೆ ಹರತಾಳವನ್ನು ಪಾಲಿಸತಕ್ಕದ್ದೆಂಬುದಾಗಿ ನಿರ್ಧರಿಸಿಕೊಂಡರು. ಈ ನಿರ್ಣಯವು ಮುಂಬಯಿಯಲ್ಲಿಯ ೪೪೦ ಜನ ಜವಳಿ ವ್ಯಾಪಾರಿಗಳಿಗೆ ಅನ್ವಯಿಸುತ್ತದೆ.

### ಕುಮಟೆಯಲ್ಲಿ

## ೩೦೦ ಸಿಂದೀ ಗಿಡಗಳನ್ನು ಕಡಿದರು

ಶ್ರೀ ರಾವ ಸ್ವಾಮಿಯವರ ನೇತೃತ್ವದಲ್ಲಿ ವಿಜಾಪುರದಿಂದ ಕೆಲವು ಸ್ವಯಂಸೇವಕರು ಕುಮಟೆಗೆ ಹೊರಟು ಹೋಗಿ ಅಲ್ಲಿಯ ೩೦೦ ಸಿಂದೀ ಗಿಡಗಳನ್ನು ಕಡಿದರು. ಅವರು ಈಗ ಬಬಲೇಶ್ವರ, ಸಾರವಾಡ ಮೊದಲಾದ ಹಳ್ಳಿಗಳಲ್ಲಿ ರಾಷ್ಟ್ರೀಯ ಕಾರ್ಯಕ್ರಮಗಳ ಬಗ್ಗೆ ಜನರಲ್ಲಿ ಜಾಗೃತಿಯನ್ನುಂಟುಮಾಡುತ್ತಿರುವರು.

# ಬಂಕಾಪುರದಲ್ಲಿ ಪುಂಡಾಟಿಕೆ.

## ಸ್ವಯಂಸೇವಕರಿಗೆ ಏಟುಗಳು ಬಿದ್ದವು.

ಬಂಕಾಪುರದ ಕೆಲವು ಸ್ವಯಂಸೇವಕರು ಮೊನ್ನೆ ಶ್ರೀ. ಶಂಕರದೀಕ್ಷಿತ ಕರ್ಮರಕರ ನೇತೃತ್ವದಲ್ಲಿ ಸೇಂದೀ ಗಿಡಗಳನ್ನು ಕಡಿಯಲು ಸೇಂದಿಗೆಯ ಹತ್ತರದ ಅಂಗಡಿಯವರ ಕಡೆಗೆ ಹೋಗಿದ್ದರು. ಅವರು ತಮ್ಮ ಸಂಗಡ ಗಿಡಗಳ ಒಡೆಯರನ್ನು ಪರವಾನಗಿ ಕರೆದುಕೊಂಡಿದ್ದರು. ಸ್ವಯಂಸೇವಕರು ಮಧ್ಯಾಹ್ನಕ್ಕೆ ಸೇಂದೀ ಬನಕ್ಕೆ ಮುಟ್ಟಿದರು, ಅಲ್ಲಿ ಸೇಂದೀ ಕಂಟ್ರ್ಯಾಕ್ಟರನ ನೌಕರನು ಸ್ವಯಂಸೇವಕರನ್ನು ಹೊಡೆಯಬೇಕೆಂದು ಹುಬ್ಬಳ್ಳಿಯಿಂದ ಕೆಲವು ಪುಂಡರನ್ನು ಕರೆಯಿಸಿಕೊಂಡು ಸಿದ್ಧನಾಗಿ ಕುಳಿತಿದ್ದನು. ಸ್ವಯಂಸೇವಕರನ್ನು ಕಂಡಕೂಡಲೆ ಆ ಪುಂಡರೆಲ್ಲರೂ ಸ್ವಯಂಸೇವಕರ ಮೇಲೆ ಎರಗಿದರು. ಪುಂಡರು ಸುಮಾರು ೬೦ ಜನ ಇದ್ದರು. ಪುಂಡರಲ್ಲಿ ಕೆಲವರು ಒಬ್ಬ ಸ್ವಯಂಸೇವಕನನ್ನು ಹಿಡಿದು ಗಿಡ ಕಡಿಯಲಿಕ್ಕೆ ಹೋಗಬೇಡ. ಹೋದರೆ ಇದು ನೋಡೆಂದು ಚಾಕು ತೋರಿ ಅವನ ಕುತ್ತಿಗೆಗೆ ಒತ್ತಿ ಹಿಡಿದರು. ಕೂಡಲೆ ಸ್ವಯಂಸೇವಕರ ಮುಖಂಡರು "ನಾವು ಸರಕಾರಿ ಗಿಡ ಕಡಿಯುವದಿಲ್ಲ. ಗಿಡಗಳ ಒಡೆಯರನ್ನು ಕರೆದುಕೊಂಡು ಬಂದಿರುವೆವು. ಹೀಗೆ ಜಗಳ ತೆಗೆಯಬಾರದು." ಎಂದು ಹೇಳಿದರು. ಪುಂಡರು ಅತ್ತ ಲಕ್ಷ್ಯ ಕೊಡದೆ ಎಲ್ಲರನ್ನು ಸುತ್ತುಗಟ್ಟಿ ಅವರನ್ನು ಚನ್ನಾಗಿ ಥಳಿಸಿದರು. ಮತ್ತು ಅವರ ಧ್ವಜ ಟೊಪ್ಪಿಗೆ, ಕೊಡಲಿಗಳನ್ನು ಕಸಿದುಕೊಂಡರು. ಗಿಡಗಳ ಒಡೆಯರಾದ ಶ್ರೀ ವೆಂಕಟೇಶ ಶ್ರೀನಿವಾಸ [illegible] ಹೊಡೆತಗಳು ಬಿದ್ದವು. ಕೃಷ್ಣಾಜಿ ರಾಮಚಂದ್ರ ಜೋಶಿ ಎಂಬುವನ ಎದೆಯ ಮೇಲೆ [illegible] ಶ್ರೀನಿವಾಸ ಕುಲಕರ್ಣಿ ಎಂಬುವನ ತಲೆಗೆ ಎರಡು ಕಡೆಗೆ ಪೆಟ್ಟುಗಳು ಬಿದ್ದವು. ಉಳಿದ ಸ್ವಯಂಸೇವಕರು ಮಾರ್ಗದಿಂದ ಬಿದ್ದರು. ಕೆಲವು ಹುಬ್ಬಳ್ಳಿಯ ಜನರ [illegible] ಬಂಕಾಪುರ [illegible] ಬಂಕಾಪುರಕ್ಕೆ ಮುಟ್ಟಿ ಅಲ್ಲಿಯ [illegible] ಹುಬ್ಬಳ್ಳಿಯಿಂದ ಬಂದ ಶ್ರೀ [illegible] ಅಧ್ಯಕ್ಷತೆಯಲ್ಲಿ ಸಂಜೆಗೆ ಸಭೆ ನೆರೆದು ಪುಂಡರ ಕೃತ್ಯವನ್ನು ನಿಷೇಧಿಸಲಾಯಿತು.

## ಸುದ್ದಿಗಾರರನ್ನು ಸೆರೆಹಿಡಿದರು.

[illegible] ಪತ್ರಿಕೆಯ ಸುದ್ದಿಗಾರರಾದ ಶ್ರೀ. [illegible] ಇವರು ಸೆರೆಹಿಡಿಯಲ್ಪಟ್ಟಿದ್ದಾರೆ.

## ಬೈಲಹೊಂಗಲದಲ್ಲಿ ದಬ್ಬಾಳಿಕೆ.

ಸೇಂದೀ ಗಿಡಗಳನ್ನು ಕಡಿದದ್ದಕ್ಕಾಗಿ ಬೈಲಹೊಂಗಲದ ಶ್ರೀ ಅನಂತ ಕೃಷ್ಣ ನಾಯಕ ಇವರಿಗೆ ೪ ತಿಂಗಳ ಸಶ್ರಮ ಶಿಕ್ಷೆ ಹಾಗು ೫೦ ರು. ದಂಡವು ವಿಧಿಸಲ್ಪಟ್ಟಿದೆ. ದಂಡ ಕೊಡದಿದ್ದಲ್ಲಿ ಅವರ ಮನೆಯು ಜಪ್ತ ಮಾಡಲ್ಪಡುವದಂತೆ.

## ಸರಕಾರದ ಚಾವಡಿಯಲ್ಲಿಯೇ ಸಿಂದಿ ಅಂಗಡಿ

ಬೆಳಗಾವಿ ಜಿಲ್ಲೆಯಲ್ಲಿಯ ಅಕ್ಕೋಳದ [illegible] ಗುತ್ತೇದಾರನಿಗೆ ಗಡಂಗ ಇಡಲಿಕ್ಕೆ ಅಲ್ಲಿಯ ಜನರಾರೂ ಸ್ಥಳವನ್ನು ಕೊಡಲಿಲ್ಲ. ಇದನ್ನು ಕಂಡು ಅಲ್ಲಿಯ ಅಧಿಕಾರಿಗಳು ತಮ್ಮ ಚಾವಡಿಯಲ್ಲಿಯೇ ಗಡಂಗ ಹಾಕಲಿಕ್ಕೆ ಅವನಿಗೆ ಸ್ಥಳವನ್ನು ಕೊಟ್ಟಿರುವರೆಂದು ತಿಳಿಯುತ್ತದೆ.

## ಅಸೆಂಬ್ಲಿಯ ಸಭಾಸದರಾದ

## ಶ್ರೀ ಮಿತ್ರರು ಸತ್ಯಾಗ್ರಹದಲ್ಲಿ ಸೇರುವರು

"ಸರಕಾರವು ಕಾಂಗ್ರೆಸದವರೊಡನೆ ಒಪ್ಪಂದಮಾಡಿಕೊಳ್ಳಲು ಮುಂದೆ ಬರಬೇಕು. ಅವರು ಹಾಗೆ ಬಂದ ಹೊರತು ಕಾಂಗ್ರೆಸದವರು ಕಾಯಿದೆಭಂಗ ಚಳವಳಿಯನ್ನು ನಿಲ್ಲಿಸಕೂಡದು. ಚಳವಳಿಯನ್ನು ಈಗ ನಿಲ್ಲಿಸುವದು [illegible] ಸರಕಾರದವರು ಒಪ್ಪಂದಮಾಡಿಕೊಳ್ಳಲು ಲಕ್ಷ್ಯ ಕೊಡದಿದ್ದಲ್ಲಿ, ಕಾಂಗ್ರೆಸ್ ಪಕ್ಷದಲ್ಲಿ ಸೇರಿ, ನಾನೂ ಕಾಯಿದೆಭಂಗ ಚಳವಳಿಯಲ್ಲಿ ಧುಮುಕುತ್ತೇನೆ. ಈ ದೇಶದಲ್ಲಿ ನಡೆದ ಕಾಯಿದೆಭಂಗ ಚಳವಳಿಯಲ್ಲಿ ನನಗೆ ಪೂರ್ಣ ವಿಶ್ವಾಸವಿದೆ" ಎಂಬುದಾಗಿ ಅಸೆಂಬ್ಲಿಯ ಸಭಾಸದರಾದ ಶ್ರೀ. ಎಸ್. ಸಿ. ಮಿತ್ರರು ನುಡಿದಿದ್ದಾರೆ

ಮಾರಾಟಕ್ಕೆ ಸಿದ್ಧ! ರಾಟಿಗಳು (ಮಾರಾಟಕ್ಕೆ ಸಿದ್ಧ!)

ನಮ್ಮಲ್ಲಿ ಉತ್ತಮ ನೂಲು ತೆಗೆಯುವ [illegible] ಗ್ರಾಹಕರ [illegible]. ಕೈನೂಲು ಚನ್ನಾಗಿ [illegible] ಮಾರಲಿಕ್ಕೆ ತೆಗೆದುಕೊಳ್ಳುತ್ತೇವೆ

ಭಾಸ್ಕಿ. ಹಿರಾಜ ಲೋಡಾಯಾ

ಹೊಸಪೇಟ [illegible]

ಕಾಂಗ್ರೆಸ ಕಮಿಟಿಯ ಮನ್ನಣೆ ಪಡೆದ

ಶುದ್ಧ ಖಾದಿಯು ಬೇಕಾಗಿದ್ದರೆ ತ್ವರೆಮಾಡಿರಿ

ನಮ್ಮಲ್ಲಿ ಎಲ್ಲ ತರದ ಕೈನೂಲಿನ [illegible] ಹಾಗು [illegible] ಉತ್ತಮವಾದ ಖಾದಿಯು [illegible] ಗ್ರಾಹಕರು ತ್ವರೆಮಾಡಬೇಕು.

ಬಾಗಲಕೋಟ. { ರಾಘವೇಂದ್ರ ವ್ಯಾಸರಾವ ದೇಶಪಾಂಡೆ<br>ಖಾದಿ ವ್ಯಾಪಾರಿಗಳು.

ಶುದ್ಧ ಖಾದಿ! ಶುದ್ಧ ಖಾ[illegible]

ನಮ್ಮಲ್ಲಿ ಕೈನೂಲು ಕೈಮಗ್ಗದ ಶರ್ಟಿಂಗ, ಕೋಟಿಂಗ, ಧೋತರ ಮೊದಲಾದ ಎಲ್ಲ ತರದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಗ್ರಾಹಕರು ಲಾಭ ಪಡೆಯಬೇಕಾಗಿ ವಿನಂತಿ

ಶಂಕರಪ್ಪಾ ಬಣಗಾರ.

ಜವಳಿ ವ್ಯಾಪಾರಿಗಳು, ಬಾಗಲಕೋಟೆ

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ [illegible] ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು

FLASH NO 2

**ದೇಶಬಂಧುಗಳ ನಿಧನದ ವಿಷಯದಲ್ಲಿ ಲಂಡನ ಟಾಯಿಮ್ಸ್ ಪತ್ರದ ಅಭಿಪ್ರಾಯವು:—**

"ಬಹಳ ದಿವಸಗಳಿಂದ ಪ್ರಚಾರವಾಗದಿತ್ತಿದ್ದ ತಮ್ಮ ಧೋರಣವು ಅವ್ಯವಹಾರ್ಯವೆಂದು ಕಂಡುಬಂದು, ಕ್ರಾಂತಿಕಾರಕವಾದ ತಮ್ಮ ಆಂದೋಲನವು ಯಶಸ್ವಿಯಾಗಲಿಲ್ಲೆಂದು ಒಪ್ಪಿ ಸರಕಾರದವರೊಂದಿಗೆ ಅಸಹಕಾರಿತೆಯು ತ್ಯಾಗದ್ಯೋತಕವಾದ ಒಪ್ಪಂದಕ್ಕೊದಗಿದ್ದ ಸಮಯದಲ್ಲಿ ಶ್ರೀ ದಾಸರು ನಿಧನ ಹೊಂದಿದರು. ಇತ್ತೀಚೆಗಾಗಿ ಬಂಗಾಲದಲ್ಲಿ ಅವರ ವರ್ಚಸ್ಸು ಲೋಕಪ್ರಿಯತೆಯು ಕಡಿಮೆಯಾಗಿತ್ತೆಂದು ಹೇಳಲು ಸಾಕಷ್ಟು ಆಧಾರಗಳುಂಟು ಆದರೆ ಇವರ ಮರಣದಿಂದ ಬಂಗಾಲ ರಾಜಕೀಯ ಪಕ್ಷದಲ್ಲಿ ಒಬ್ಬನೊಡ್ಡ ಮುಖಂಡನೂ ಇಲ್ಲದಂತಾಯಿತು"

---

## ಇಹವೃತ್ತ.

ದೇಶಬಂಧುಗಳ ನಿಧನದ ಸುದ್ದಿಯು ಗುರುವಾರ ೧೮ ನೇ ತಾ. ದಿನ ಸಾಯಂಕಾಲಕ್ಕೆ ಬಾಗಲಕೋಟೆಗೆ ಬಂದಿತು. ಆಗ್ಗೆ ಭಾಗವತ ಶಿರೋಮಣಿ ಕೊಲ್ಹಾರ ಕೇಶವದಾಸರ ಕೀರ್ತನೆಯಲ್ಲಿ ಜನರು ತಲ್ಲೀನರಾಗಿದ್ದರು ಈ ದುಃಖದಾಯಕ ವಾರ್ತೆಯು ಕೇಶವದಾಸರ ಕಿವಿಗೆ ತಲ್ಪಿದೊಡನೆ ಅವರು ಕೀರ್ತನವನ್ನು ತತ್‌ಕ್ಷಣದಲ್ಲಿಯೇ ನಿಲ್ಲಿಸಿದರು. ದೇಶಬಂಧುಗಳ ನಿಧನದ ಸ್ಮರಣಾರ್ಥವಾಗಿ, ಇಲ್ಲಿಯ ಮ್ಯುನಿಸಿಪಾಲಿಟಿಯ ಎಲ್ಲ ಶಾಲೆಗಳು ಈ ದಿನ ಮುಚ್ಚಲ್ಪಟ್ಟಿದ್ದವು.

ಈ ದಿನ ಮುಂಜಾನೆ ಶ್ರೀ ರಾಘವೇಂದ್ರರ ಗಿರಣಿಯ ಪಟಾಂಗಣದಲ್ಲಿ ಇಲ್ಲಿಯ ಸ್ವಯಂಸೇವಕರು ಮರಣಸೂಚಕವಾದ ರಾಷ್ಟ್ರಧ್ವಜವನ್ನು ದಾಸರವರ ಸ್ಮರಣಾರ್ಥ ಅರ್ಧ ಕೆಳಗೆ ನಿಲ್ಲಿಸಿದರು.

ಸಾಯಂಕಾಲದಲ್ಲಿ ಸಾರ್ವಜನಿಕ ಸಭೆಯಾಗಿ ದಾಸರವರ ನಿಧನದ ಬಗ್ಗೆ ದುಃಖಪ್ರದರ್ಶಕವಾದ ಠರಾವು ನಿರ್ಣಯಿಸಲ್ಪಟ್ಟಿತು. ಶ್ರೀ. ಕೇಶವದಾಸರು ಅಧ್ಯಕ್ಷರಾಗಿದ್ದರು. ಧಾರವಾಡಕರ, ರಾಮರಾವ ದಾತಾರ, ಇವರ ಭಾಷಣಗಳಾದವು. ೧೬ ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಪುರಂದರದಾಸರು ಜೋಳಿಗೆಯನ್ನು ಹಾಕಿ ಸಂಚರಿಸುತ್ತ ಧರ್ಮ ಜಾಗ್ರತಿ ಮಾಡಿದಂತೆ ಈಗಿನ ಕಾಲದಲ್ಲಿಯ ಚಿತ್ತರಂಜನ ದಾಸರು ಖದ್ದರದ ಜೋಳಿಗೆಯಿಂದ ರಾಷ್ಟ್ರಕಾರ್ಯಕ್ಕಾಗಿ ಜನರ ಚಿತ್ತವನ್ನು ರಂಜಿಸುತ್ತಿದ್ದರೆಂದೂ, ದಾಸರು ಮಡಿದದ್ದು ಅಸತ್ಯವಾಗಿದ್ದು, ಹಿಂದುಸ್ಥಾನದ ದಾಸ್ಯವು ಮಾತ್ರ ಮಡಿದಿರುವದೆಂದೂ, ಚಿತ್ತರಂಜನರು ಪ್ರತಿಯೊಬ್ಬ ಭಾರತೀಯನ ಅಂತಃಕರಣದಲ್ಲಿ ಜೀವಿಸಿರುವರೆಂದೂ ಬಹು ಹೃದಯದ್ರಾವಕವಾಗಿ ಕೇಶವದಾಸರು ನುಡಿದರು.

---

## "ಕನ್ನಡಿಗ" ನ ವಿನಂತಿ.

"ಕನ್ನಡಿಗ" ನಿಗೆ ವರ್ಷದಲ್ಲಿ ನಾಲ್ಕು ರಜೆಯ ದಿವಸಗಳು. ಅವುಗಳಲ್ಲಿ ಮೊದಲನೆಯದು, ವಿದ್ಯಾರಣ್ಯರ ಪುಣ್ಯತಿಥಿಗಾಗಿ ೧೯ ನೇ ತಾರೀಖಿನ ದಿನ ತೆಗೆದುಕೊಳ್ಳಬೇಕೆಂದಿದ್ದೆವು ಆದರೆ ಲೋಕಲ್ ಬೋರ್ಡ ಚುನಾವಣೆಯ ಕೆಲಸಕ್ಕಾಗಿ ಕಳೆದ ವಾರದಲ್ಲಿಯೇ ಕನ್ನಡಿಗನು ವಾಚಕರಿಗೆ ಮೊದಲು ಸೂಚನೆಯನ್ನು ಕೊಡದೆ ಅಕಸ್ಮಾತ್ತಾಗಿ ರಜೆಯನ್ನು ತೆಗೆದುಕೊಳ್ಳಬೇಕಾಯಿತು. ದಾಸರವರ ಮರಣದ ದುಃಖದಾಯಕ ವಾರ್ತೆಯು ನಿನ್ನಿನ ದಿನ ಸಾಯಂಕಾಲದಲ್ಲಿ ಬಾಗಲಕೋಟೆಗೆ ತಲ್ಪಿತು. ಶುಕ್ರವಾರವೇ ಕನ್ನಡಿಗನು ಹೊರಡಬೇಕಾದ್ದರಿಂದಲೂ ಈ ವಾರದಲ್ಲಿ ದಾಸರವರ ನಿಧನದ ವಾರ್ತೆಯ ಹೊರತಾಗಿ ಉಳಿದ ವಿಷಯಗಳನ್ನು ಪ್ರಸಿದ್ಧಿಸಬಾರದೆಂದು ಸಂಕಲ್ಪವಾದ್ದರಿಂದಲೂ ಈ ವಾರದಲ್ಲಿ ನಾಲ್ಕೇ ಪುಟಗಳು ಹೊರಡಿಸಲ್ಪಟ್ಟಿವೆ.

**ವ್ಯವಸ್ಥಾಪಕ.**

ವಿದ್ಯಾರಣ್ಯ ಪ್ರ. ಮು. ಬಾಗಲಕೋಟೆ.

# KANNADIGA

## DAILY

YEAR 1. Nos. 133-214.

FROM 9-12-1930

TO 17-3-1931.

# ಕನ್ನಡಿಗ

## ನಿತ್ಯ ಸಂಚಿಕೆ

ವರ್ಷ. 1. ಸಂಚಿಕೆ 133-214.

9-12-1930 ರಿಂದ

17-3-1931 ಗೆ.

ರ. ನಂ. ಬಿ. ೨೭೮೮ ನಿತ್ಯ ಸಂಚಿಕೆಯು. ಬೆಲೆ. ೦—೦—೩.

यद्यत् परवशं दुःखं । यद्यदात्मवशं सुखम् ॥ —मनु.

# ಕನ್ನಡಿಗ

KANNADIGA BAGALKOT. BI-WEEKLY

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ— ಮಂಗಳವಾರ ತಿ ಮಾರ್ಗಶಿರ ಬಹುಳ ೪ ಶಕೆ ೧೮೫೨ ತಾ॥ ೯—೧೨—೩೦ [ ಸಂಚಿಕೆ ೧೩೩

ಅಖಿಲ ಭಾರತ ರಾಷ್ಟ್ರಸಭೆಯ ಅಧ್ಯಕ್ಷರಾದ

## ವಲ್ಲಭಭಾಯಿಯರನ್ನು ಮತ್ತೆ ಸೆರೆಹಿಡಿದರು.

ಅಖಿಲ ಭಾರತ ರಾಷ್ಟ್ರಸಭೆಯ ಈಗಿನ ಅಧ್ಯಕ್ಷರಾದ ಸರದಾರ ವಲ್ಲಭಭಾಯಿ ಪಟೇಲರು ತಾ॥ ೬ನೆಯ ರಾತ್ರಿ ೯ ಗಂಟೆಗೆ ಕ್ರಿ. ಲಾ. ತಿದ್ದುಪಡಿ ಕಾಯದೆಯ ೧೭ನೆಯ ಕಲಮಿನನ್ವಯ [illegible] ಬಂಧಿಸಲ್ಪಟ್ಟರು. ಅಂದೇ ಮುಂಬಯಿಗೆ ಕರೆದೊಯ್ಯಲ್ಪಟ್ಟರು. ಜೇಲಿನಿಂದ ಬಿಡುಗಡೆಹೊಂದಿ ಬಂದಕೂಡಲೆ ಅವರು ಮುಂಬಯಿಯಲ್ಲಿ ಮಾಡಿದ ಭಾಷಣವೇ ಅವರ ಬಂಧನಕ್ಕೆ ಕಾರಣವಾಗಿದೆ.

ಸರದಾರರನ್ನು ಇದಕ್ಕೂ ಬೇಗನೆ ಸೆರೆಹಿಡಿಯುವ ಉದ್ದೇಶದಿಂದ ಅವರ ಮೇಲೆ ಎರಡು ಸಲ ೧೪೪ನೆಯ ಕಲಮಿನನ್ವಯ ನೋಟೀಸು ಹೊರಡಿಸಿ, ಅವರು ಅವುಗಳನ್ನು ಮುರಿಯುವರೇನೆಂಬುದನ್ನು ಅಧಿಕಾರಿಗಳು ಪರೀಕ್ಷಿಸಿ ನೋಡಿದರು. ಆದರೆ ಸರದಾರರವರು ಅವುಗಳನ್ನು ಮುರಿದು ಕಾರಾಗೃಹಕ್ಕೆ ಹೋಗುವ ಗೊಡವೆಗೇ ಹೋಗಲಿಲ್ಲ. ಅಧಿಕಾರಿಗಳು ನಿರಾಶೆಹೊಂದಿದರು. ಅವರು ಮಾಡಿದ ಅಪರಾಧಗಳನ್ನು [illegible] ಮುಂಬಯಿಯಲ್ಲಿ ಅವರು ಮಾಡಿದ ಭಾಷಣವು ರಾಜದ್ರೋಹಾತ್ಮಕವಾಗಿಯೆಂದು ಅಧಿಕಾರಿಗಳಿಗೆ ಕಂಡುಬಂತು. ಕೂಡಲೆ [illegible] ಮಾಡಿದರು. ಫಲಿತಾಂಶವು ತಿಳಿದಿದ್ದೇ ಇದೆ. ಮೂರನೆಯ ಸಲ ಸ್ವರಾಜ್ಯಾಶ್ರಮಕ್ಕೆ ಪ್ರಯಾಣ. ಯೋಗ್ಯ ಉತ್ತರವನ್ನು ಕೊಡಲು ಅಧಿಕಾರಿಗಳು ಅವರಿಗೆ



ಅವಕಾಶವನ್ನು ಕೊಡಲಿಲ್ಲ. ಇಷ್ಟೇ ಒಂದು ವಿಷಾದ.

### ಪ್ರೊಫೆಸರ ಬೋಸರಿಗೆ ಶಿಕ್ಷೆ.

೧೪೪ ನೆಯ ಕಲಮಿನನ್ವಯ ಹೊರಟ ಅಪ್ಪಣೆಯನ್ನು ಧಿಕ್ಕರಿಸಿ ಕೃಷ್ಣ ನಗರದಲ್ಲಿ ಭಾಷಣ ಮಾಡಿದಸಲುವಾಗಿ ಪ್ರೊಫೆಸರ ವಿಶ್ವೇಶ್ವರ ಬೋಸರಿಗೆ ೧೮೮ನೆಯ ಕಲಮಿನನ್ವಯ ೪ ತಿಂಗಳ ಸಾದಾಶಿಕ್ಷೆಯು ದೊರೆತಿದೆ. ಶ್ರೀ ಬೋಸರು ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸಿ ಕೆಲವು ದಿನಗಳ ಹಿಂದೆ ಪ್ರೊಫೆಸರ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದರು.

### ಪಂಡಿತ ಮೋತೀಲಾಲರ ಪ್ರಕೃತಿ

ಪಂಡಿತ ಮೋತೀಲಾಲರ ದೇಹಸ್ಥಿತಿಯು ಹಾಗೆಯೆ ಇದೆ. ತಾ॥ ೬ನೆಯ ದಿವಸ ಅವರಿಗೆ ೧೦೧ ಡಿಗ್ರಿ ಜ್ವರ ಬಂದಿದ್ದವು. ಅವರ ಪತ್ನಿಯು ಸೊಸೆಯಂದೊಡಗೂಡಿ ಮೋತೀಲಾಲರನ್ನು ಕಾಣಲು ಬಂದಿದ್ದಾರೆ.

### ಮಿ. ಮ್ಯಾಕಡೋನಾಲ್ಡರು ವ್ಹಾಯಿಸರಾಯರಾಗುವರೇ?

ಇಂಗ್ಲಂಡದ ಮಂತ್ರಿಗಳಾಗಿರುವ ಮಿ. ರ್‍ಯಾಮ್ಸೆ ಮ್ಯಾಕಡೋನಾಲ್ಡರು ಹಿಂದುಸ್ಥಾನದ ವ್ಹಾಯಿಸರಾಯರಾಗುವರಾಗಿ ಲಂಡನದಲ್ಲಿ ಹಬ್ಬಿದ ವಾರ್ತೆಯಿದೆ.

### ೧೪ ವರ್ಷದ ಹುಡುಗನಿಗೆ
## ೮ ತಿಂಗಳದ ಕಠಿಣ ಶಿಕ್ಷೆ

ಸಿಂದಿ ಗಿಡ ಕಡಿದ ಬಗ್ಗೆ ಶಿಕ್ಷೆಯನ್ನು ಹೊಂದಿ ಮೊನ್ನೆ ಮೊನ್ನೆ ಮರಳಿ ಬಂದ ಬೈಲಹೊಂಗಲದ ಶ್ರೀ ಬಾಬು ಮಹಾಜನ ಎಂಬ ೧೪ ವರ್ಷದ ಹುಡುಗನಿಗೆ ತಾರಿನ ಕಂಬ ಕಡಿದ ಅಪರಾಧದ ಸಲುವಾಗಿ ಮತ್ತೆ ೮ ತಿಂಗಳ ಕಠಿಣ ಶಿಕ್ಷೆಯು ಕೊಡಲ್ಪಟ್ಟಿದೆ.

### ಶಾಂತಿಸಂಧಾನದ ವಿಷಯವನ್ನು
## ಪಾರ್ಲಿಮೆಂಟಕ್ಕೆ ಒಪ್ಪಿಸಿದರು

ಕಾಂಗ್ರೆಸ್ ಮುಖಂಡರು ಹಾಗು ತಮ್ಮ ನಡುವೆ ನಡೆದ ಶಾಂತಿಸಂಧಾನವನ್ನು ಕುರಿತು ತಾವು ಪ್ರಸಿದ್ಧಪಡಿಸಿದ ವಾಜ್ಞಾಲವನ್ನು, ಸರ್ ಸಪ್ರು-ಜಯಕರರು ಪಾರ್ಲಿಮೆಂಟಕ್ಕೆ ಒಪ್ಪಿಸಿದ್ದಾರೆ.

### ಕಾರವಾರ ಜೇಲಿನಲ್ಲಿ
## ಸತ್ಯಾಗ್ರಹಿಯು ಮರಣ ಹೊಂದಿದನು

ಕಾರವಾರ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ತರುಣ ಸತ್ಯಾಗ್ರಹಿಗಳಾದ ಶ್ರೀ ರಾಮಚಂದ್ರ ಸಿರಸಿಕರ ಎಂಬುವವರು ತಾ| ೫ ನೆಯ ದಿವಸ ಜೇಲಿನಲ್ಲಿಯೇ ಮರಣಹೊಂದಿದರೆಂಬುದಾಗಿ ತಿಳಿಯುತ್ತದೆ. ಅವರು ಮರಣಹೊಂದುವದಕ್ಕಿಂತ ನಾಲ್ಕೈದು ದಿನಗಳ ಪೂರ್ವದಲ್ಲಿ ಅವರ ತಾಯಿ ತಂದೆಗಳು ಅವರ ಭೆಟ್ಟಿಗೆ ಹೋಗಿದ್ದರು. ಆದರೆ ಅಧಿಕಾರಿಗಳು ಅವರಿಗೆ ಭೆಟ್ಟಿಯಾಗಗೊಡಲಿಲ್ಲ

### ವಿಶ್ವವಿದ್ಯಾಲಯಕ್ಕೆ
## ೧ ಲಕ್ಷ ರೂಪಾಯಿಯ ದಾನ

ಲಾರ್ಡ ಆಯರ್ವಿನರು ತಾ|| ೨ ನೆಯ ದಿವಸ ಅಲ್ಲೀಗಡಕ್ಕೆ ಹೋಗಿ ಅಲ್ಲಿಯ ವಿಶ್ವವಿದ್ಯಾಲಯಕ್ಕೆ ಭೆಟ್ಟಿ ಕೊಟ್ಟರು. ಅಲ್ಲಿ ಅವರ ಭಾಷಣವಾಯಿತು. ಆ ಸಮಯದಲ್ಲಿ ಭಾವಲಪುರದ ನವಾಬರು ವಿಶ್ವವಿದ್ಯಾಲಯಕ್ಕೆ ೧ ಲಕ್ಷ ರುಪಾಯಿಗಳನ್ನು ದಾನವಾಗಿ ಕೊಟ್ಟರು.

### ಶ್ರೀ ಪೆಂಡಸೆಯವರನ್ನು
## 'ಕ' ವರ್ಗಕ್ಕೆ ಬದಲಾಯಿಸಿದರು

ಕಾಯದೆ ಭಂಗಕ್ಕಾಗಿ ಶಿಕ್ಷೆಯನ್ನು ಹೊಂದಿ ಯೆರವಡೆಯ ಜೇಲಿನಲ್ಲಿ ಈಗ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಮುಂಬಯಿಯ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಲಾಲಜಿ ಪೆಂಡಸೆಯವರು 'ಬ' ವರ್ಗದಿಂದ 'ಕ' ವರ್ಗಕ್ಕೆ ಬದಲಾಯಿಸಲ್ಪಟ್ಟಿರುವರೆಂದು ತಿಳಿಯುತ್ತದೆ.

### ಯೆರವಡೆಯ ತುರಂಗದಲ್ಲಿ
## ರಾಜಕೀಯ ಕೈದಿಗಳ ಗೋಳಾಟ

ಯೆರವಡೆಯ ತುರಂಗದಲ್ಲಿ ರಾಜಕೀಯ ಕೈದಿಗಳಿಗೆ ಕೊಡಲ್ಪಡುವ ರೊಟ್ಟಿ ಹಾಗು ಪಲ್ಲೆದಲ್ಲಿ ಹರಳು, ಹುಳ ಮೊದಲಾದವುಗಳು ತುಂಬಿರುತ್ತವೆಂದೂ, ಅವರಿಗೆ ಈ ಥಂಡಿಯ ದಿನಗಳಲ್ಲಿ ಸಾಕಷ್ಟು ಹೊದಿಕೆಗಳನ್ನು ಸಹ ಕೊಡುತ್ತಿರುವದಿಲ್ಲವೆಂದೂ ಆ ಜೇಲಿನಿಂದ ಬಿಡುಗಡೆ ಹೊಂದಿ ಬಂದ ಸತ್ಯಾಗ್ರಹಿಗಳು ಪ್ರಸಿದ್ಧಪಡಿಸಿದ್ದಾರೆ.

### ಬ್ಯಾಡಗಿಯಲ್ಲಿ
## ಇಬ್ಬರಿಗೆ ಶಿಕ್ಷೆ

ಜವಾಹಿರಲಾಲರ ದಿನದ ದಿವಸ ಸೇರಿದ ಸಭೆಯಲ್ಲಿ ಜವಾಹಿರಲಾಲರ ಭಾಷಣವನ್ನು ಓದಿ ಮತ್ತು ಭಾಷಣಮಾಡಿ ಅದರಲ್ಲಿ ಭಾಗ ತೆಗೆದುಕೊಂಡ ಅಪರಾಧದ ಬಗ್ಗೆ ಬ್ಯಾಡಗಿಯ ಶ್ರೀ ಕ್ಯಾತಾರಿ ಮತ್ತು ದತ್ತಾತ್ರಯ ಹರಿಹರ ಇವರಿಗೆ ಪ್ರತ್ಯೇಕವಾಗಿ ೬|| ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ.

### ಉಡುಪಿಯಲ್ಲಿ
## ಅಧಿಕಾರಿಗಳ ಕಣ್ಣಿಗೆ ಇಂಗು.

ಕಳೆದ ನವ್ಹೆಂಬರ ತಿಂಗಳಾರಂಭ್ಯ ಉಡುಪಿಯಲ್ಲಿ "ರಾಮಬಾಣ" ವೆಂಬ ಒಂದು ಕಳ್ಳಚ್ಚಿನ ಪತ್ರಿಕೆಯು ಹೊರಡುತ್ತಿದೆ. ಅದರ ಕಾರ್ಯಾಲಯವು ಉಡುಪಿಯಲ್ಲಿ ಎಲ್ಲಿದೆಯೆಂಬುದು ಯಾರಿಗೂ ತಿಳಿದು ಬಂದಿಲ್ಲ. ಅಧಿಕಾರಿಗಳು ಕೆಲವುದಿನಗಳಿಂದ ಅದನ್ನು ಗೊತ್ತುಹಚ್ಚುವ ಕಾರ್ಯದಲ್ಲಿ ತೊಡಗಿದ್ದಾರೆ. ಆದರೆ ಅದು ಇನ್ನೂ ಅವರಿಗೆ ತಿಳಿದು ಬಂದಿಲ್ಲ. ಮುದ್ರಣ ಬಕಾಸರನು ಮರಣ ಹೊಂದಿದ್ದನ್ನು ತಿಳಿದೂ ತಿಳಿದೂ, ಅಧಿಕಾರಿಗಳು ಹೀಗೆ ತೊಂದರೆಯನ್ನು ಏಕೆ ತೆಗೆದು ಕೊಳ್ಳುತ್ತಿರುವರೋ ತಿಳಿಯದಾಗಿದೆ.

### ಶ್ರೀ ವಿಠ್ಠಲಭಾಯಿಯವರನ್ನು
## ಕೋಯಿಮುತ್ತೂರಿಗೆ ಒಯ್ದರು

ತಾ|| ೬ ನೆಯ ದಿವಸ ಶ್ರೀ ವಿಠ್ಠಲಭಾಯಿ ಪಟೇಲರವರು ಮದ್ರಾಸದಿಂದ ಕೋಯಿಮುತ್ತೂರಿಗೆ ಒಯ್ಯಲ್ಪಟ್ಟರು. ಅಲ್ಲಿಯ ಸೆಂಟ್ರಲ್ ಜೇಲಿನಲ್ಲಿ ಅವರು ಇಡಲ್ಪಡುವರಾಗಿಯೂ, ಮತ್ತು ಅಲ್ಲಿ ಅವರಿಗಾಗಿ ಮೂರು ಪ್ರತ್ಯೇಕವಾದ ಕೋಣೆಗಳು ಕಾದಿಡಲ್ಪಟ್ಟವೆಯಾಗಿಯೂ ತಿಳಿಯುತ್ತದೆ.

### ಪ್ರಸಿದ್ಧ ವ್ಯಾಪಾರಿಗಳನ್ನು
## ಗುಂಡು ಹೊಡೆದು ಕೊಂದರು

—:(o):—

ತಾ|| ೨೭ ನೆಯ ದಿವಸ ರಾತ್ರಿ ೯|| ಗಂಟೆಗೆ ಘೋಡನದಿಯ ಪ್ರಸಿದ್ಧ ವ್ಯಾಪಾರಿಗಳಾದ ಧರಮಚಂದ ಖುಶಾಲಚಂದರನ್ನು ಯಾವನೋ ಒಬ್ಬನು ತುಂಬಿದ ಪೇಟೆಯಲ್ಲಿ ಗುಂಡು ಹೊಡೆದು ಕೊಂದನು. ಅಪರಾಧಿಗಳ ಶೋಧವು ನಡೆದಿದೆ

### ಕಾಲಿಕತ್ತದಲ್ಲಿ
## ೩೩ ಜನರಿಗೆ ಕೈದು.

ಕಾಲಿಕತ್ತದಲ್ಲಿ ಪರದೇಶಿ ಬಟ್ಟೆಗಳ ಅಂಗಡಿಗಳ ಮುಂದೆ ನಿಂತುಕೊಂಡು ಪಿಕೆಟಿಂಗ ಮಾಡುವ ಕಾರ್ಯವು ಭರದಿಂದ ಸಾಗಿದೆ. ಆ ಮೂಲಕವಾಗಿ ಕಳೆದ ಮೂರು ದಿನಗಳಲ್ಲಿ ೩೩ ಜನ ಸ್ವಯಂಸೇವಕರು ಕೈದು ಮಾಲಲ್ಪಟ್ಟಿದ್ದಾರೆ. ಡಿ. ಮ್ಯಾಜಿಸ್ಟ್ರೇಟರ ಅಪ್ಪಣೆಯ ವಿರುದ್ಧ ವರ್ತಿಸಿದ ೪ ಜನ ಸ್ವಯಂಸೇವಕರಿಗೆ ೪ ತಿಂಗಳಿಂದ ೬ ತಿಂಗಳವರೆಗೆ ಬೇರೆ ಬೇರೆ ಶಿಕ್ಷೆಗಳನ್ನು ವಿಧಿಸುವದಲ್ಲಿ ಬಂದಿದೆ.

### ಅಧಿಕಾರಿಗಳ ಅಪ್ಪಣೆ ಮುರಿದು
## ಕಾರಾಗೃಹಕ್ಕೆ ತೆರಳಿದರು.

ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ತೆಗೆದ ಅಪ್ಪಣೆಯನ್ನು ಮುರಿದು ಕನ್ನಾನೂರಿನಲ್ಲಿ ಭಾಷಣ ಮಾಡಿದ್ದಕ್ಕೆ ಅಲ್ಲಿಯ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ರಘುವನರಿಗೆ ೧೪೫ ಹಾಗು ೧೮೮ ಈ ಕಲಮುಗಳನ್ವಯ ೧೨ ತಿಂಗಳ ಕಠಿಣ ಕಾರಾಗೃಹವಾಸದ ಶಿಕ್ಷೆಯು ದೊರೆತಿದೆ.

### ಮದ್ರಾಸ ಸರಕಾರಕ್ಕೆ
## ಒಂದು ಕೋಟಿ ರೂಪಾಯಿಯ ಹಾನಿ.

ಮದ್ರಾಸ ಸರಕಾರದವರಿಗೆ ಈ ವರ್ಷ ೧ ಕೋಟಿ ರೂಪಾಯಿಗಳ ವರೆಗೆ ಹಾನಿ ಹೊಂದಬೇಕಾಗಿದೆಯೆಂದೂ, ಸಿಂದಿ ಮತ್ತು ಸ್ಟ್ಯಾಂಪುಗಳಿಂದ ೫೭ ಲಕ್ಷ ರೂಪಾಯಿಗಳ ಕಡಿಮೆ ಬಂದಿವೆಯೆಂದೂ ತಿಳಿಯುತ್ತದೆ.

## ೬೦ ದಿನಗಳ ವರೆಗೆ ಉಪವಾಸ ಮಾಡಿ

# ಮಾಣಿಕಲಾಲರು ಮರಣಹೊಂದಿದರು.

ಕಾಯದೆಭಂಗದ ಸಲುವಾಗಿ ಶಿಕ್ಷೆಯನ್ನು ಹೊಂದಿ ಮುರಸಿದಾಬಾದ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ೧೭ ವರ್ಷ ವಯಸ್ಸಿನ ಉತ್ಸಾಹಿ ತರುಣರಾದ ಶ್ರೀಯುತ ಮಾಣಿಕಲಾಲ ಸೇನರು ರಾಜಕೀಯ ಕೈದಿಗಳಿಗೆ ಜೇಲಿನಲ್ಲಿ ಕೊಡಲ್ಪಡುವ ಕೆಟ್ಟ ಆಹಾರದ ನಿಷೇಧಾರ್ಥವಾಗಿ ಒಂದೇಸವನೆ ೬೦ ದಿನಗಳವರೆಗೆ ಅನ್ನತ್ಯಾಗವನ್ನು ಮಾಡಿ ಜೇಲಿನಲ್ಲಿಯೇ ಮರಣ ಹೊಂದಿದರು. ತಾ|೭ ನೆಯ ದಿವಸ ಅವರ ಬೂದಿಯು ಕಾಶಿಗೆ ತರಲ್ಪಟ್ಟು ಮೆರವಣಿಗೆಯೊಂದಿಗೆ ಗಂಗಾತೀರಕ್ಕೆ ಒಯ್ಯಲ್ಪಟ್ಟಿತು. ಬಹುದಿನಗಳ ವರೆಗೆ ಅನ್ನತ್ಯಾಗ ಮಾಡಿ ಜೇಲಿನಲ್ಲಿ ಮರಣ ಹೊಂದಿದವರಲ್ಲಿ ಶ್ರೀ ಜತಿನದಾಸರ ತರುವಾಯದಲ್ಲಿ ಇವರೇ ಎರಡನೆಯವರಾಗಿದ್ದಾರೆ.

## ಪೋಲೀಸ ಸಾಹೇಬರಮೇಲೆ ಕಲ್ಲುಬಿದ್ದವು.

ಮಹಾತ್ಮಾ ಗಾಂಧಿಯವರ ಬಂಧನ ದಿನದ ನಿಮಿತ್ತವಾಗಿ ನಿಷಿದ್ಧವಾದ ಉಪ್ಪು ಎಲ್ಲ ಕಡೆಗಳಲ್ಲಿಯೂ ಮಾರಲ್ಪಡುವದಾಗಿ ಅಹಮ್ಮದಾಬಾದದ ಕಾಂಗ್ರೆಸ ಅಧಿಕಾರಿಗಳು ಮೊದಲೆ ಪ್ರಕಟ ಪಡಿಸಿದ್ದರಿಂದ ಅಂದಿನ ಕಾಯದೇಭಂಗವನು ನೋಡಲು ಜನರು ಬೀದಿಗಳಲ್ಲಿ ತಂಡ ತಂಡವಾಗಿ ನೆರೆದಿದ್ದರು. ಪೋಲೀಸ ಅಧಿಕಾರಿಗಳಾದರೂ ಎಲ್ಲೆಲ್ಲಿಯೂ ಶಸ್ತ್ರಾಸ್ತ್ರ ಸಹಿತವಾಗಿ ಸಜ್ಜಾಗಿ ನಿಂತಿದ್ದರು. ೧೨ ಗಂಟೆಯ ಸುಮಾರಕ್ಕೆ ೧೫ ಜನ ಸ್ವಯಂಸೇವಕರು ಒಂದು ಮೋಟಾರ ಬಂಡಿಯಲ್ಲಿ ಉಪ್ಪನ್ನು ತುಂಬಿಕೊಂಡು ರತನಪೋಲಕ್ಕೆ ಬಂದು ಮುಟ್ಟಿದರು. ಅವರು ಅಲ್ಲಿಗೆ ಬಂದಕೂಡಲೆ ೧೩ ಜನ ಪೋಲೀಸರು ಅವರನ್ನು ಸುತ್ತುಗಟ್ಟಿದರು. ಮೋಟಾರನ್ನು ಬಿಟ್ಟು ಕದಲಲಿಲ್ಲ. ಪೋಲೀಸರು ಅವರನ್ನು ದೊಣ್ಣೆಗಳಿಂದ ಒಳಿತಾಗಿ ಥಳಿಸಿದರು. ೧೨ ಜನರಿಗೆ ಭಯಂಕರ ಗಾಯಗಳಾದವು ಅಷ್ಟರಲ್ಲಿ ಪೋಲೀಸ ಅಧಿಕಾರಿಗಳು ಬಂದು ಅವರನ್ನು ಸೆರೆಹಿಡಿದುಕೊಂಡು ಹೋದರು.

ಈ ಸುದ್ದಿಯು ಊರಲ್ಲಿ ಹಬ್ಬಿದಕೂಡಲೆ ಜನರು ತಂಡತಂಡವಾಗಿ ಒಂದು ಮಾಣಿಕ ಚೌಕದಲ್ಲಿ ಸೇರಿದರು. ಅಲ್ಲಿಯ ವ್ಯವಹಾರವು ಕಟ್ಟಾಯಿತು. ಅಷ್ಟರಲ್ಲಿ ಇನಸ್ಪೆಕ್ಟರು ಮೋಟಾರದಲ್ಲಿ ಕುಳಿತುಕೊಂಡು ಅಲ್ಲಿಗೆ ಬಂದರು. ಅವರು ಒಂದ ಕಡೆ ದ ಲೆ ಯಾರೋ ಕೆಲವರು ಅವರಮೇಲೆ ಕಲ್ಲುಗಳನ್ನು ಎಸೆದರು. ಪೋಲೀಸರು ಜನರಮೇಲೆ ಸಿಟ್ಟಿಗೆದ್ದು ಅವರನ್ನು ದೊಣ್ಣೆಗಳಿಂದ ಚದುರಿಸಿದರು ೧೨ ಜನರು ಭಯಂಕರ ಗಾಯಹೊಂದಿದರು. ಕಲ್ಲನ್ನು ಒಗೆದ ಸಂಶಯದಿಂದ ಪೋಲೀಸರು ಒಬ್ಬನನ್ನು ಕೈದು ಮಾಡಿಕೊಂಡು ಹೋದರು.

## ಕಾರವಾರ ಜಿಲ್ಲೆಯಲ್ಲಿ ಕಟ್ಟಿಗೆ ಲಿಲಾವಿಗೆ ಪಿಕೆಟಿಂಗ

ಕಾರವಾರ ಜಿಲ್ಲೆಯಲ್ಲಿಯ ಸರಕಾರಿ ಕಟ್ಟಿಗೆಯ ಲಿಲಾವು ತಾ|೧ ನೆಯ ದಿವಸ ಹತ್ತಿಕೇರಿಯಲ್ಲಿ ನಡೆಯಿತು. ಅವುಗಳನ್ನು ಲಿಲಾವಿನಲ್ಲಿ ಹಿಡಿಯಲು ಕಾಕೇವಾಡ, ರತ್ನಾಗಿರಿ ಮತ್ತು ಗೋವೆಗಳಿಂದ ಜನರು ಬಂದಿದ್ದರು. ಕಾಂಗ್ರೆಸ್ ಅಧಿಕಾರಿಗಳಾದರೂ ಆ ಸಮಯದಲ್ಲಿ ಅಲ್ಲಿಗೆ ಹೋಗಿ ಅವುಗಳನ್ನು ಲಿಲಾವಿನಲ್ಲಿ ಬೇಡಕೊಡದಾಗಿ ಜನರಿಗೆ ಬೇಡಿಕೊಂಡರು ಈ ಮೂಲಕವಾಗಿ ಲಿಲಾವು ಸಾಗದೆ ಸರಕಾರಕ್ಕೆ ಹಾನಿ ಸಂಭವಿಸಿತು. ತಮ್ಮ ಬಿನ್ನಹವನ್ನು ಮೀರಿ ಅವುಗಳನ್ನು ಲಿಲಾವಿನಲ್ಲಿ ಹಿಡಿದವರಿಗೆ ಅವುಗಳನ್ನು ತೆಗೆದುಕೊಂಡು ಹೋಗಲು ಕೂಲಿಕಾರರು ಸಿಗದಂತೆ ಕಾಂಗ್ರೆಸ್ ಅಧಿಕಾರಿಗಳು ಏರ್ಪಾಡು ಮಾಡಿದ್ದಾರೆ. ಲಿಲಾವು ಅನಿಯಮಿತ ಕಾಲದವರೆಗೆ ಮುಂದೆ ನೂಕಲ್ಪಟ್ಟಿದೆ.

## ಮ್ಯುನಸಿಪಾಲಟಿಯ ಸಭಾಸದರು ರಾಜೀನಾಮೆ ಕೊಟ್ಟರು

ಕಾನಪುರದ ನಗರಸಭೆಯ ತೋಟದಲ್ಲಿ ನಿಲ್ಲಿಸಲ್ಪಟ್ಟ ರಾಷ್ಟ್ರಧ್ವಜದನ್ನು ಕಿತ್ತೊಗೆದು ಆ ತೋಟವನ್ನು ಅಧಿಕಾರಿಗಳು ತಮ್ಮ ವಶ ಪಡಿಸಿಕೊಂಡದ್ದರ ನಿಷೇಧಾರ್ಥವಾಗಿ ಅಲ್ಲಿಯ ಮ್ಯುನಸಿಪಾಲಟಿಯ ಸಭಾಸದರಾದ ಶ್ರೀ ಬ್ರಾಮರತನ ಗುಪ್ತರವರು ತಮ್ಮ ಸಭಾಸದತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ.

## ಶ್ರೀಮತಿ ವಸುಮತಿಯವರಿಗೆ ೧೦೦ ರುಪಾಯಿ ದಂಡ

ಮಹಾತ್ಮಾ ಗಾಂಧಿಯವರ ಬಂಧನ ದಿನದ ಸಭೆಯಲ್ಲಿ ಭಾಗ ತೆಗೆದುಕೊಂಡ ಆರೋಪದಿಂದ ಸೂರತದಲ್ಲಿ ಬಂಧನಕ್ಕೊಳಗಾದ ಶ್ರೀಮತಿ ವಸುಮತಿ ಠಾಕೂರರವರಿಗೆ ೧೮೪ ಹಾಗು ೧೭ ನೆಯ ಕಲಮುಗಳನ್ವಯ ಪ್ರತಿಯೊಂದು ಅಪರಾಧಕ್ಕೂ ೧೦೦ ರುಪಾಯಿ ದಂಡದ ಶಿಕ್ಷೆಯನ್ನು ವಿಧಿಸುವದರಲ್ಲಿ ಬಂದಿದೆ. ಶ್ರೀಮತಿ ವಸುಮತಿಯವರು ನಿವೃತ್ತ ನ್ಯಾಯಾಧೀಶರ ಮಕ್ಕಳಿರುವರು.

## ಅಮೃತಸರದಲ್ಲಿ ಧರ್ಮಶಾಲೆಗೆ ಮುತ್ತಿಗೆ

ರಾಜಕೀಯ ಚಳವಳಿಗೆ ಸಂಬಂಧಿಸಿದ ಒಂದು ದರೋಡೆ ಖಟ್ಲೆಯಲ್ಲಿಯ ಇಬ್ಬರು ಅಪರಾಧಿಗಳ ಶೋಧವನ್ನು ಕುರಿತು ದಿಲ್ಲಿಯಿಂದ ಬಂದ ತಂತಿಯ ವಾರ್ತೆಯನ್ನು ಅನುಸರಿಸಿ, ಅಮೃತಸರದ ಪೋಲೀಸ ಅಧಿಕಾರಿಗಳು ಅಲ್ಲಿಯ ಧರ್ಮಶಾಲೆಗೆ ತಾ||೬ ನೆಯ ದಿವಸ ಮುತ್ತಿಗೆಯನ್ನು ಹಾಕಿ, ಶಿವದತ್ತನೆಂಬ ತರುಣನನ್ನು ಕೈದು ಮಾಡಿಕೊಂಡು ಹೋದರು.

## ಕರ್ನಾಟಕ ವ್ಯಾಪಾರಿಸಂಘದ ಸಾಧಾರಣ ಸಭೆ

ಇದೇ ತಿಂಗಳ ತಾ|| ೨೨ ನೆಯ ದಿವಸ ಗದಗಿನಲ್ಲಿ ಅಲ್ಲಿಯ ಕಾಟನ್ ಮಾರ್ಕೆಟ್ ಅಸೋಸಿಯೇಶನದ ಕಚೇರಿಯಲ್ಲಿ ಸೇರಲಿಕ್ಕಿದ್ದ ಕರ್ನಾಟಕ ವ್ಯಾಪಾರಿ ಸಂಘದ ಸಾಧಾರಣ ಸಭೆಯು ಜಾನೇವರಿ ತಿಂಗಳದ ೨೭ ನೆಯ ತಾರೀಖಿಗೆ ಮುಂದೂಡಲ್ಪಟ್ಟಿದೆಯೆಂಬುದಾಗಿ ಕರ್ನಾಟಕ ವ್ಯಾಪಾರಿ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

---

ಹಸನಖಾನರ ಮೇಲೆ

## ಅರಸರ ವಿರುದ್ಧ ಬಂಡಿನ ಆರೋಪ.

ಪೇಶಾವರ ಪ್ರಾಂತದಲ್ಲಿಯ ತಹಾಬು ಬೇಲಗ್ರಾಮದ ಹಸನಖಾನ ಎಂಬವರಿಗೆ ಮೇಲೆ ಅರಸರ ವಿರುದ್ಧ ಬಂಡು ಮಾಡಿದ ಹಾಗು ಅಫ್ರೀದಿ ದಾಳಿಗಾರರಿಗೆ ಉತ್ತೇಜನವನ್ನು ಕೊಟ್ಟ ಆರೋಪಗಳನ್ನಿಟ್ಟು ಪೇಶಾವರ ಸಿಟಿ ಮ್ಯಾಜಿಸ್ಟ್ರೇಟರು ಅವರ ಖಟ್ಲೆಯನ್ನು ಸೆಶನ್ಸ ಕೋರ್ಟಿಗೆ ಒಪ್ಪಿಸಿದ್ದಾರೆ.

## ಸೊಲ್ಲಾಪುರದಲ್ಲಿ ಮತ್ತೆ ಗಾಂಧಿ ಟೊಪ್ಪಿಗೆಯ ಮೇಲೆ ಕಣ್ಣು.

ಸೊಲ್ಲಾಪುರದ ಸಬ್ ಇನಸ್ಪೆಕ್ಟರರಾದ ಶ್ರೀ ಮೇಡಕರರು ಬೀದಿಯಲ್ಲಿ ಹಾಯ್ದು ಹೋಗುತ್ತಿರುವ ಒಬ್ಬ ಗೃಹಸ್ಥನ ತಲೆಯ ಮೇಲಿನ ಗಾಂಧಿ ಟೊಪ್ಪಿಗೆಯನ್ನು ಬಲಾತ್ಕಾರದಿಂದ ಕಸಿದುಕೊಂಡು, ಅದನ್ನು ಬೀದಿಯ ಮೇಲೆ ಬಿಸುಟು, "ಗಾಂಧಿ ಟೊಪ್ಪಿಗೆ"ಯ ವಿಷಯವಾಗಿ ಕುತ್ಸಿತವಾದ ಶಬ್ದಗಳನ್ನು ಉಚ್ಚರಿಸಿದರಂತೆ! ಬಂಡನಾಳಿಕೆಯು ತೀರಿ ಹೋದರೂ, ಗಾಂಧಿ ಟೊಪ್ಪಿಗೆ ಮೇಲಿನ ಅಧಿಕಾರಿಗಳ ವಕ್ರದೃಷ್ಟಿಯು ಇನ್ನೂ ಕಡಿಮೆಯಾಗಿಲ್ಲ!

## ಮುಂಬಯಿ ತುರುಂಗದಲ್ಲಿ

### ಸ್ತ್ರೀಯರ ಕರುಣಾಜನಕ ಸ್ಥಿತಿ.

ಮುಂಬಯಿ ಸತ್ಯಾಗ್ರಹ ಯುದ್ಧ ಮಂಡಳದ ಸರ್ವಾಧಿಕಾರಿಗಳಾಗಿ ತುರುಂಗಕ್ಕೆ ಹೋಗಿರುವ ಶ್ರೀಮತಿ ಅವಂತಿಕಾಬಾಯಿ ಗೋಖಲೆಯವರು ತುರುಂಗದಲ್ಲಿ ಸ್ತ್ರೀಯರಿಗಾಗುವ ತೊಂದರೆಗಳ ಬಗ್ಗೆ ಕೆಳಗಿನಂತೆ ಹೇಳಿದ್ದಾರೆ.

ಆರ್ಥರರೋಡ ತುರುಂಗದಲ್ಲಿ ಅ, ಬ, ಕ ವರ್ಗದ ಎಲ್ಲ ಸ್ತ್ರೀ ಕೈದಿಗಳನ್ನು ಒಂದೇ ಕಡೆಗೆ ಇಟ್ಟಿರುತ್ತಾರೆ. ನನ್ನದು 'ಬ' ವರ್ಗವಿದ್ದುದರಿಂದ ನನಗೇನು ಬಹಳ ಕಷ್ಟವಿಲ್ಲ. 'ಕ' ವರ್ಗದ ಭಗಿನಿಯರು ಬಹಳೇ ಕಷ್ಟರೀತಿಯಿಂದ ನಡೆಸಿಕೊಳ್ಳಲ್ಪಡಹತ್ತಿದ್ದಾರೆ. ಇದಕ್ಕಾಗಿ ಅವರಲ್ಲಿ ಕೆಲವರು ಎಷ್ಟೋ ಸಾರೆ ಉಪವಾಸ ಬೀಳುವರು. ದುಃಖ ಬಂದು ಅಳುವರು. ಅವರು ಪಡುತ್ತಿರುವ ದುಃಖವು ಯಾರಿಂದಲೂ ನೋಡಲಸಾಧ್ಯವಾಗಿದೆ. ಮುಂಜಾನೆ ೬॥ ಗಂಟೆಗೆ ನಮ್ಮ ಕೋಣೆಯ ಬಾಗಿಲ ತೆರೆದು ಸಾಯಂಕಾಲದ ೬॥ ಗಂಟೆಗೆ ಬಾಗಿಲ ಹಾಕುವರು. ಮುಂಜಾನೆ ಚಹಾ, ರೋಟಿ, ಮತ್ತು ಬೆಣ್ಣೆ ಕೊಡುವರು. ಮಧ್ಯಾಹ್ನದಲ್ಲಿ ಅನ್ನ ತಪ್ಪಿ ಮತ್ತು ಪಲ್ಲೆ ದೊರೆಯುತ್ತದೆ. ಸಾಯಂಕಾಲದ ಊಟವೆಂದರೆ-ಮುಂಜಾನೆ ಮಾಡಿದ್ದೇ ತಂಗಳ ಅನ್ನ 'ಬ' ವರ್ಗದವರಿಗೆ ಮೈ ತೊಳೆಯುವದಕ್ಕೂ ಮತ್ತು ಹೇಳು ಹಾಕಿಕೊಳ್ಳುವದಕ್ಕೂ ಅನುಕೂಲತೆಯನ್ನು ಒದಗಿಸಿ ಕೊಟ್ಟಿರುತ್ತಾರೆ. 'ಕ' ವರ್ಗದವರಿಗೆ ಎಣ್ಣೆ, ಹಣಿಗೆ ಮತ್ತು ಉಡುವ ಬಟ್ಟೆಗಳ ಬಗ್ಗೆ ಸಾಕಷ್ಟು ಏರ್ಪಾಟನ್ನು ಮಾಡಿ ಕೊಟ್ಟಿಲ್ಲ. ಮಂಗಳಸೂತ್ರವನ್ನು ಕೊಡಬೇಕೆಂದು ಸರಕಾರದವರು ಅಪ್ಪಣೆಯನ್ನು ಕೊಟ್ಟಿದ್ದೇನೂ ನಿಜ, ಆದರೆ ಹೋದ ದಿವಸವೇ ನನ್ನಿಂದ ಕಸಿದುಕೊಂಡ ಮಂಗಳಸೂತ್ರವು ನನಗೆ ಇನ್ನೂ ತಿರುಗಿ ಬಂದಿಲ್ಲ. ಅಧಿಕಾರಿಗಳು ಕಸಿದುಕೊಂಡ ದಿವಸ ನನಗೆ ಬಹಳೇ ಕಡಕೆನಿಸಿತು. ಅಂದು ಒಂದೇ ಸವನೆ ಕಣ್ಣಿಂದ ದಳದಳ ನೀರು ಸುರಿದವು. ಒಂದೇ ತಿಂಗಳಲ್ಲಿ ನನ್ನ ತೂಕವು ೬ ಪೌಂಡು ಕಡಿಮೆಯಾಗಿದೆ.

### ದಿಲ್ಲಿಯಲ್ಲಿ ೩೦ ಜನರಿಗೆ ಬಡತ ಬಿದ್ದವು

ಮಹಾತ್ಮಾ ಗಾಂಧಿಯವರ ಬಂಧನದ ನಿಮಿತ್ತವಾಗಿ ನೆರೆದ ಸಭೆಯಲ್ಲಿ ಪೋಲೀಸರಿಗೂ ಮತ್ತು ಜನರಿಗೂ ಜಗಳವಾಗಿ ೩೦ ಜನರು ಗಾಯ ಹೊಂದಿದರು. ಗೃಹಮಂತ್ರಿಗಳು ಆ ಸಮಯದಲ್ಲಿ ಸಭಾಸ್ಥಾನವನ್ನು ಸಂದರ್ಶಿಸಿ ಹೋದರು.

## ಸೊಲ್ಲಾಪುರದ ಮೇಲೆ

### ೯೦ ಸಾವಿರ ರು. ಪುಂಡಗಂದಾಯ.

ಸೊಲ್ಲಾಪುರದಲ್ಲಾದ ದಂಗೆಯ ಬದಲು ಶಿಕ್ಷೆಯೆಂದು ಆ ಪಟ್ಟಣದ ಮೇಲೆ ೯೦೭೫೬ ರು ಪುಂಡಗಂದಾಯವನ್ನು ಹೇರಿ, ಹಿಂದೂ ಜನರ ಮನೆಗಳ ಮೇಲೆ ಅದನ್ನು ವಸೂಲ ಮಾಡಿಕೊಡಬೇಕೆಂದು ಅಲ್ಲಿಯ ಮ್ಯುನಿಸಿಪಾಲಟಿಯವರಿಗೆ ಅಧಿಕಾರಿಗಳು ಆಜ್ಞೆ ಕೊಟ್ಟಿದ್ದಾರೆ. ಯಾವತ್ತು ಸರಕಾರಿ ಅಧಿಕಾರಿಗಳು, ಲೋಕಲ್‌ಬೋರ್ಡ, ಮ್ಯುನಸಿಪಾಲಟಿ ಮತ್ತು ರೇಲ್ವೆ ಕೆಲಸಗಾರರು, ಮೇಲನೆಯ ತಾರೀಖಿನ ವರೆಗೆ ಕೆಲಸದ ಮೇಲಿದ್ದ ಆನರರಿ ಮ್ಯಾಜಿಸ್ಟ್ರೇಟರು, ಕೋರ್ಟ ಆಫ್ ವಾರ್ಡದ ವ್ಯವಸ್ಥೆಯನ್ನು ಒಪ್ಪಿಸಿದವರು, ಬೇಡ, ಚಾಂಭಾರ, ಢೋರ, ಕೈಕಾಡಿ, ಮಹಾರ, ಮಾಂಗ, ಮಾಂಗಗಾರುಡಿ, ಮೊಚ್ಚಿಗಾರರು, ರಾಮೋಶಿ, ವಡ್ಡರು, ಲಮಾಣಿ, ಕೊಂಗಡಿ ಮತ್ತು ಭಂಗಿಯವರು ಈ ಜನರು ಮಾತ್ರ ಪುಂಡಗಂದಾಯದಿಂದ ಮುಕ್ತ ಮಾಡಲ್ಪಟ್ಟಿದ್ದಾರೆ. ಮೇಲಿನ ಹಣದಲ್ಲಿ ೩/೪ ಹಣವನ್ನು ಮಾರ್ಚ ತಿಂಗಳದ ಕೊನೆಯ ಒಳಗಾಗಿ ವಸೂಲ ಮಾಡಿ ಕಳಿಸಿ ಉಳಿದದ್ದನ್ನು ಮುಂದೆ ವಸೂಲ ಮಾಡಿಕೊಳ್ಳಬೇಕಾಗಿ ಹೀಗೆ ಅಪ್ಪಣೆಯಿದೆ.

### ಶ್ರೀ ಬೆಹರೆಯವರಿಗೆ

## ೪ ತಿಂಗಳ ಕಠಿಣ ಶಿಕ್ಷೆ.

ಮಹಾದೇವಭಾಯಿ ದೇಸಾಯಿಯವರು ಹೊರಡಿಸಿದ ಹಸ್ತಪತ್ರಿಕೆಯನ್ನು ಪ್ರಕಟಿಸಿದ ಬಗ್ಗೆ ಅಹಮ್ಮದಾಬಾದದಲ್ಲಿ ಶ್ರೀ. ಲಾ. ಆಮೆಂಡಮೆಂಟ ಕಾಯದೆಯ ಅನ್ವಯ ಸೆರೆಹಿಡಿಯಲ್ಪಟ್ಟ ಶ್ರೀ ಭಾಸ್ಕರ ಬೆಹರೆಯವರಿಗೆ ೩ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೨೦೦ ರು. ದಂಡ, ಇಲ್ಲವೆ ಮತ್ತೆ ೧ ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆಯು ದೊರೆತಿದೆ.

---


**ಹಿಟ್ಟಿನ ಗಿರಣಿ ಮಾರಾಟಕ್ಕಿದ್ದಿದೆ.**

ರಸ್ಟನ ಮೇಕರ್ ಇಂಜಿನ್ ಆಯಿಲ ೬. H. P. ಅದರ ಚಕ್ಕಿ ಸಹಿತ ಸದ್ಯಕ್ಕೆ ಚಾಲು ಇದ್ದದ್ದು ಮಾರುವದಿದೆ. ಸಮಕ್ಷಮ ಅಥವಾ ಪತ್ರವ್ಯವಹಾರ ಮಾಡಬೇಕು.

**ಟಿ. ಜಿ. ದೇಸಾಯಿ c/o ಕನ್ನಡಿಗ ಬಾಗಲಕೋಟ.**

---

**ಶುದ್ಧ ಖಾದಿ! ಶುದ್ಧ ಖಾದಿ!**

ನಮ್ಮಲ್ಲಿ ಎಲ್ಲ ತರದ ಕೈನೂಲು ಕೈಮಗ್ಗದ ಶರ್ಟಿಂಗ, ಕೋಟಿಂಗ, ಧೋತರ ಮತ್ತು ಸ್ವದೇಶೀ ಇಳಕಲ್ಲ ನಮೂನೆಯ ಸೀರೆ ಬೇಕಾದವರು ಭಾಂಡು ಮತ್ತು ಖಣ ವಗೈರೆ ದೊರೆಯುತ್ತವೆ.

**ಶಂಕರೆಪ್ಪಾ ಬಣಗಾರ.**

ಜವಳಿ ವ್ಯಾಪಾರಸ್ಥರು ಬಾಗಲಕೋಟೆ.

---

**ಶುದ್ಧ ಖಾದಿ! ಶುದ್ಧ ಖಾದಿ!**

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

**ಕೃಷ್ಣಾಜಿ. ಹಣಮಂತರಾವ. ದೇಸಾಯಿ. ಸುದರ್ಶನ ಸ್ಟೋರ್ಸ ಬಾಗಲಕೋಟೆ**


ಈ ಪತ್ರಿಕೆಯು ವೆಂಕಟೇಶ ತಿರಕೋ ಕುಲಕರ್ಣಿಯವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದಲೇ ಪ್ರಸಿದ್ಧಿಸಲ್ಪಟ್ಟಿತು.

ನಂ. ಬಿ. ೨೭೮೮ ನಿತ್ಯ ಸಂಚಿಕೆಯು. ಬೆಲೆ. ೦-೦-೩.

यद्यत् परवशं दुःखं । यद्यदात्मवशं सुखम् ॥ -मनु.

# ಕನ್ನಡಿಗ

KANNADIGA BAGALKOT BI-WEEKLY

ಸಂಪಾದಕರು:- ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದಹೊರತಾಗಿಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ—ಸೋಮವಾರ ಮಿತಿ ಮಾರ್ಗಶಿರ ಬಹುಳ ೧೦ ಶಕೆ ೧೮೫೨ ತಾ॥ ೧೫—೧೨—೩೦ [ ಸಂಚಿಕೆ ೧೩೮

# ಗೋಕರ್ಣದಲ್ಲಿ ೨೬ ಜನರನ್ನು ಹಿಡಿದರು

ಗೋಕರ್ಣದಲ್ಲಿಯ ಸ್ವಯಂಸೇವಕರ ಮುಖ್ಯಾಧಿಕಾರಿಗಳಾದ ಶ್ರೀ ಕೆ. ರಾಮ ಭಟ್ಟ ಹಾಗು ೨೫ ಜನ ಸ್ವಯಂಸೇವಕರು ಸಿಂದಿ ಗಿಡ ಕಡಿದ ಬಗ್ಗೆ ಸೋದವಾರದಲ್ಲಿ ಅಧಿಕಾರಿಗಳಿಂದ ಸ್ತೃದುಮಾಡಲ್ಪಟ್ಟಿದ್ದಾರೆ. ಇನ್ನೂ ಎಷ್ಟೋ ಜನರ ಮೇಲೆ ವಾರಂಟುಗಳಿವೆ. ಶ್ರೀ ಕೃಷ್ಣಭಟ್ಟರು ಮುಖ್ಯಾಧಿಕಾರಿಗಳಾಗಿ ಆರಿಸಲ್ಪಟ್ಟಿದ್ದಾರೆ

---

### ಹೊನ್ನಾವರದಲ್ಲಿ
## ೧೩ ಜನರಿಗೆ ಶಿಕ್ಷೆ.

ಅಧಿಕಾರಿಗಳು ಹೊರಡಿಸಿದ ೧೪೪ ನೆಯ ಕಲಮನ್ನು ಮುರಿದು ಪ್ರತಿಸಂಕೀರ್ತನೆಯಲ್ಲಿ ಭಾಗವಹಿಸಿಕೊಂಡ ಆರೋಪದ ಸಲುವಾಗಿ ಹೊನ್ನಾವರದಲ್ಲಿ ೧೩ ಜನ ಸ್ವಯಂಸೇವಕರಿಗೆ ಪ್ರತ್ಯೇಕವಾಗಿ ೬ ತಿಂಗಳ ಕಠಿಣ ಶಿಕ್ಷೆಯು ಪ್ರಾಪ್ತವಾಗಿದೆ

### ಹಾನಗಲ್ಲಿನ
## ಅನಂತಭಟ್ಟರ ಮೇಲೆ ಖಟ್ಲೆ

ಸುತ್ತುಮುತ್ತಲಿನ ೫ ತಾಲೂಕಗಳ ಹದ್ದಿಯನ್ನು ಬಿಟ್ಟು ಹೋಗಲು ಸಬ್ ಡಿವ್ಹಿಜನಲ್ ಮ್ಯಾಜಿಸ್ಟ್ರೇಟರು ಹೊರಡಿಸಿದ ಅಪ್ಪಣೆಯನ್ನು ಧಿಕ್ಕರಿಸಿ ಹಾನಗಲ್ಲದ ಶ್ರೀ ಅನಂತ ಭಟ್ಟ ಕುಂದಾಪುರ ಹಾನಗಲ್ಲಿನಲ್ಲಿಯೇ ಉಳಿದದ್ದರಿಂದ ಅಧಿಕಾರಿಗಳು ಅವರನ್ನು ೨ನೆಯ ತಾರೀಖಿಗೆ ಬಂಧಿಸಿ ಅವರನ್ನು ಸಬ್ ಡಿವ್ಹಿಜನ್ ಮ್ಯಾಜಿಸ್ಟ್ರೇಟರ ಮುಂದೆ ಕರೆದೊಯ್ದರು. ಅವರು ಅವರ ಖಟ್ಲೆಯನ್ನು ಹಾನಗಲ್ಲ ಮ್ಯಾಜಿಸ್ಟ್ರೇಟರ ಕಡೆಗೆ ಹಾಕಿದರು ತಾ॥ ೬ನೆಯ ದಿವಸ ವಿಚಾರಣೆ ನಡೆಯಿತು. ವಿಚಾರಣೆಯ ಸಮಯದಲ್ಲಿ ಶ್ರೀ ಅನಂತಭಟ್ಟರು ತಮ್ಮ ಹುಟ್ಟಿದ ಊರು ಹಾನಗಲ್ಲಿದ್ದು ತಾವು ಅಲ್ಲಿ ಇಪ್ಪತ್ತಿ ೧೫ ವರ್ಷಗಳಾದವೆಂದೂ ಅಲ್ಲಿಂದ ಹೋಗಲು ತಮಗೆ ಕಾರ್ಯವಿಲ್ಲವೆಂದೂ ಮ್ಯಾಜಿಸ್ಟ್ರೇಟರಿಗೆ ತಿಳಿಸಿದರು ಕೇಸು ಮುಂದರಿಸಲ್ಪಟ್ಟಿತು.

ಶ್ರೀ ಕುಂದಾಪುರರ ಮೇಲೆ ೧೪೪ನೆಯ ಕಲಮಿನ ಮೊಟ್ಟದ ಪ್ರಕಾರ ಮತ್ತೊಂದು ಆರೋಪವು ಹೊರಿಸಲ್ಪಟ್ಟಿದ್ದು, ಅದರ ವಿಚಾರಣೆಯಾದರೂ ಹಾನಗಲ್ಲಿನಲ್ಲಿಯೇ ನಡೆಯುವದು.

### ಹಾವೇರಿಯಲ್ಲಿ
## ೫ ಜನರಿಗ ಶಿಕ್ಷೆ.

ಅಡವಿಯ ಕಾಯಿದೆಭಂಗದಲ್ಲಿ ಭಾಗ ತೆಗೆದುಕೊಂಡ ಆರೋಪದ ಬಗ್ಗೆ ಹಾವೇರಿಯ ಶ್ರೀ ವಿರುಪಾಕ್ಷಪ್ಪ ಸಿರ್ಸಿ ಮೊದಲಾದ ೫ ಜನ ಸ್ವಯಂಸೇವಕರಿಗೆ ಪ್ರತ್ಯೇಕವಾಗಿ ೩॥ ತಿಂಗಳ ಕಠಿಣ ಶಿಕ್ಷೆಯು ದೊರೆತಿದೆ.

### ಹಾವೇರಿಯಲ್ಲಿ
## ವಕೀಲರ ಅಸಭ್ಯ ವರ್ತನೆ.

ಹಾವೇರಿಯ ನಾಲ್ಕೈದು ಜನ ಪ್ರಸಿದ್ಧ ವಕೀಲರು ಚಹಾ ಜಾನಕಿ ಸಕ್ಕರೆ ಮೊದಲಾದವುಗಳಿಗೆ ಬಹಿಷ್ಕಾರ ಹಾಕಿದ ಅಂಗಡಿಯಲ್ಲಿ ಹೋಗಿ ಅಂಗಡಿಯವರಿಗೆ ಒತ್ತಾಯ ಮಾಡಿ ಅಲ್ಲಿಂದ ಚಹಾ ಮುಂತಾದವುಗಳನ್ನು ಕೊಂಡೊಯ್ದರೆಂದು ಪ್ರಕಟವಾಗಿದೆ ಇದು ನಿಜವಿದ್ದರೆ ಅವರ ಈ ವರ್ತನವನ್ನು ಎಷ್ಟು ಹಳಿದರೂ ಕಡಿಮೆಯೇ ಸರಿ.

### ಶ್ರೀ ಸಾರಿಯುವರ ಮೇಲೆ
### ಮತ್ತೆ ೧೨೪ ನೆಯ ಕಲಮು.

ಸೊರಬಪುರದಲ್ಲಿ ರಾಷ್ಟ್ರಧ್ವಜಕ್ಕೆ ಪ್ರತಿಬಂಧವು ಬಂದ ಮೇಲೆ ಸತ್ಯಾಗ್ರಹಿಗಳೊಂದಿಗೆ ಅಲ್ಲಿಗೆ ಹೋಗಿ ರಾಷ್ಟ್ರಧ್ವಜ ಸತ್ಯಾಗ್ರಹವನ್ನು ಪ್ರಾರಂಭಿಸಿ ಆ ಬಗ್ಗೆ ಶಿಕ್ಷೆಗೆ ಗುರಿಯಾದ ಶ್ರೀ ಸಾರಿಯುವರ ಮೇಲೆ ೧೨೪ ಅ ಕಲಮಿನ ಪ್ರಕಾರ ಮತ್ತೊಂದು ಖಟ್ಲೆಯು ಹಾಕಲ್ಪಟ್ಟಿದೆ. ವಿಚಾರಣೆಗಾಗಿ ವಿಸಾಪುರ ಜೇಲದಿಂದ ಅವರನ್ನು ಶಿವಮೊಗ್ಗಾವಕ್ಕೆ ಕರೆದೊಯ್ಯುವವರಿದ್ದಾರೆ.

ರಾಗಿ ಆರಿಸಲ್ಪಟ್ಟಿದ್ದಾರೆ. ... ಶಾಸ್ತ್ರಿ ... ಸಾಹೇಬರು ... ಅಧ್ಯಕ್ಷ

## ಸತ್ಯಾಗ್ರಹಿಯ ಮೇಲೆ ಮೋಟಾರು ಹಾಯಿಸಿದರು

ತಾ| ೧೨ ನೆಯ ದಿವಸ ಮುಂಬಯಿಯಲ್ಲಿ ಮುಳಜಿ ಜೇಠಾ ಮಾರ್ಕೆಟದಲ್ಲಿ ಪರದೇಶಿ ಬಟ್ಟೆಯ ಅಂಗಡಿಗಳ ಮುಂದೆ ಪಿಕೆಟಿಂಗ ಪ್ರಾರಂಭಿಸಲ್ಪಟ್ಟಿತು. ಆ ಸಮಯದಲ್ಲಿ ಓರ್ವ ಮುಸಲ್ಮಾನನು ಪರದೇಶಿ ಬಟ್ಟೆಯನ್ನು ಕೊಂಡುಕೊಂಡು ಮೋಟಾರದಲ್ಲಿ ಹೋಗುತ್ತಿದ್ದನು. ಸ್ವಯಂಸೇವಕರು ಆ ಮೋಟಾರಿಗೆ ಅಡ್ಡನಿಂತರು. ಬಾಬುಗೇನು ಎಂಬ ಸ್ವಯಂಸೇವಕನು ಮೋಟಾರದ ಮುಂದೆ ಅಡ್ಡ ಬಿದ್ದುಕೊಂಡನು. ಆ ಗೃಹಸ್ಥನು ಮೋಟಾರನ್ನು ಅವನ ಮೇಲೆ ಹಾಗೆಯೆ ಹಾಯಿಸಿಕೊಂಡು ಹೋದ್ದರಿಂದ ಅವನಿಗೆ ಭಯಂಕರ ಗಾಯವಾಯಿತು. ದವಾಖಾನೆಗೆ ಹಾಕಲ್ಪಟ್ಟ ೪ ತಾಸುಗಳ ಅವಧಿಯಲ್ಲಿಯೇ ಅವನು ಮರಣ ಹೊಂದಿದನು. ಈ ಸುದ್ದಿಯು ಊರೊಳ್ಗೆ ಕೂಡಲೆ ಹಬ್ಬಿತು. ಎಷ್ಟೋ ಜನರು ತಂಡ ತಂಡವಾಗಿ ಅಲ್ಲಿ ಒಂದು ಸೇರಿದರು. ಊರಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಸಾವಿರಾರು ಜನರು ಅವನ ಮೇಲೆ ಮೋಟಾರು ಹಾಯ್ದ ಸ್ಥಳಕ್ಕೆ ಹೋಗಿ ಅಲ್ಲಿ ಪೂಮಾಲೆ, ಸುಗಂಧ ದ್ರವ್ಯ ಮೊದಲಾದವುಗಳನ್ನು ಅರ್ಪಿಸಹತ್ತಿದ್ದರಿಂದ ಆ ಸ್ಥಳದಲ್ಲಿ ಜನಸಂದಣಿಯು ಹೆಚ್ಚಾಯಿತು. ರಾತ್ರಿ ೧೦ || ಗಂಟೆಯ ಸುಮಾರಕ್ಕೆ ಪೋಲೀಸರು ಆ ಸ್ಥಳಕ್ಕೆ ಬಂದು ಜನರನ್ನು ದೊಣ್ಣೆಗಳಿಂದ ಚದುರಿಸಿದರು. ೧೩ ಜನರಿಗೆ ಭಯಂಕರ ಗಾಯಗಳು ಸಂಭವಿಸಿದವು.

ಶನಿವಾರ ದಿವಸ ಅವರ ಪ್ರೇತಯಾತ್ರೆಯ ಮೆರವಣಿಗೆಯು ಹೊರಟಿತ್ತು. ಸಾವಿರಾರು ಜನ ಸ್ತ್ರೀಪುರುಷರು ಮೆರವಣಿಗೆಯಲ್ಲಿ ಭಾಗ ತೆಗೆದುಕೊಂಡಿದ್ದರು. ಎಲ್ಲರೂ ಬಹಳ ಶಾಂತತೆಯಿಂದಲೆ ಸಾಗಿದ್ದರು. ಚೌಪಾಟಿಯಲ್ಲಿ ದಹಿಸುವ ಕಾರ್ಯವು ಸಾಗಹತ್ತಿತ್ತು. ಅಲ್ಲಿ ಮೆರವಣಿಗೆಯು ಮುಟ್ಟುವಷ್ಟರಲ್ಲಿಯೇ ಸಶಸ್ತ್ರ ಪೋಲೀಸರು ಅಲ್ಲಿಗೆ ಬಂದು ಅದಕ್ಕೆ ಅಡ್ಡಿ ಮಾಡಿದರು. ದೊಣ್ಣೆಗಳಿಂದ ಜನರನ್ನು ಚದುರಿಸಿದರು. ೩೦ ಜನರಿಗೆ ಗಾಯಗಳಾದವು ಸ್ತ್ರೀಯರೂ ಮತ್ತು ಅವನನ್ನು ಹೊತ್ತುಕೊಂಡವರೂ ಚದರಲು ನಿರಾಕರಿದರು. ಅಷ್ಟರಲ್ಲಿಯೇ ಪೋಲೀಸ ಕಮೀಶನರೂ ಅಲ್ಲಿಗೆ ಬಂದರು. ಕಾಂಗ್ರೆಸ್ ಅಧಿಕಾರಿಗಳಾದ ಶ್ರೀ ಮುನಶಿ, ಜಮನಾದಾಸ ಮೊದಲಾದವರು ಪೋಲೀಸ ಕಮೀಶನರೊಡನೆ ಮಾತುಕತೆಗಳಾಡಿದರು. ಗವರ್ನರರ ಅಪ್ಪಣೆಯಿಲ್ಲದೆ ಚೌಪಾಟಿಯಲ್ಲಿ ದಹಿಸಲು ಬಿಡುವದಿಲ್ಲವಾಗಿ ಪೋಲೀಸ ಕಮೀಶನರರು ಹೇಳಿದರು. ಇಂತಹ ಸಂಧಿಯಲ್ಲಿ ಪೋಲೀಸರೊಡನೆ ಜಗಳ ತೆಗೆಯುವದು ಸರಿಯಾಗಿಲ್ಲವೆಂದು ತಿಳಿದು ಮೆರವಣಿಗೆಯವರು ಸ್ಮಶಾನ ಭೂಮಿಗೆ ಹೊರಟು ಅಲ್ಲಿ ದಹನ ಕಾರ್ಯವನ್ನು ಮುಗಿಸಿದರು.

## ಮುಂಬಯಿ ಸರಕಾರಕ್ಕೆ ಹಣದ ಕೊರತೆ

ಮುಂಬಯಿ ಸರಕಾರದ ಕಾರ್ಯಕಾರಿ ಕೌನ್ಸಿಲದವರು ಪ್ರತಿನಿತ್ಯದಲ್ಲಿಯೂ ಸಭೆ ಸೇರಿಸಿಕೊಂಡು ಮುಂದಿನ ವರ್ಷದ ಅಂದಾಜ ಪತ್ರಿಕೆಯನ್ನು ಹೇಗೆ ಬಾಯಿಗೂಡಿಸಬೇಕೆಂಬ ಬಗ್ಗೆ ವಿಚಾರ ಮಾಡಹತ್ತಿದ್ದಾರೆ. ಹೆಚ್ಚಿನ ಕರವನ್ನು ಕೂಡಿಸಬೇಕೆಂಬ ವಿಷಯವಾಗಿ ಎಷ್ಟೋ ಸೂಚನೆಗಳು ಸಭೆಯಲ್ಲಿ ಮಂಡಿಸಲ್ಪಟ್ಟವೆ. ಮೂರು ವರ್ಷಗಳ ಹಿಂದೆ 'ಕೀ" ಕಮಿಟಿಯವರು ತಂಬಾಕು, ಔಷಧ, ಹುಂಡಿ ಮೊದಲಾದವುಗಳ ಮೇಲೆ ಹೆಚ್ಚಿನ ಕರವನ್ನು ಕೂಡಿಸುವ ಬಗ್ಗೆ ಶಿಫಾರಸು ಮಾಡಿದ್ದು ಸಭೆಯಲ್ಲಿ ವಿಚಾರಿಸಲ್ಪಟ್ಟಿತು.

## ನಾಗಪುರ ಜೇಲಿನಲ್ಲಿ ಸೆರೆಯಾಳುಗಳಿಗೆ ತೊಂದರೆ

ನಾಗಪುರ ಸೆಂಟ್ರಲ್ ಜೇಲಿನಲ್ಲಿ "ಅ" ವರ್ಗದ ರಾಜಕೀಯ ಕೈದಿಗಳಿಗೆ ಕೀಳು ತರದ ಆಹಾರವು ಕೊಡಲ್ಪಡುತ್ತಿರುವದರಿಂದ ಅದರ ನಿಷೇಧಾರ್ಥವಾಗಿ "ಬ" ವರ್ಗದ ರಾಜಕೀಯ ಕೈದಿಗಳ್ನೂ 'ಅ" ವರ್ಗದವರ ಅನ್ನವನ್ನೇ ತೆಗೆದುಕೊಳ್ಳಲಾರಂಭಿಸಿದ್ದಾರೆ. ಅದೇ ಜೇಲಿನಲ್ಲಿ ಕಪ್ಪು ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಶ್ರೀ ರಾಪ್ಪಕರು ಖಾದಿಯ ಬಟ್ಟೆಗಳನ್ನು ತಮಗೆ ಕೊಡಲು ಸುಪರಿಂಟೆಂಡೆಂಟರಿಗೆ ವಿನಂತಿ ಮಾಡಿಕೊಂಡರು. ಮೇಲಧಿಕಾರಿಗಳು ಅವರ ಬೇಡಿಕೆಯನ್ನು ಅಲ್ಲಗಳೆದರು. ಈಗ ಅವರು ಬತ್ತಲೆಯಾಗಿಯೆ ಇರುತ್ತಾರೆ. ರಾಜಕೀಯ ಕೈದಿಗಳಿಗೆ ಖಾದಿಯ ಬಟ್ಟೆಯನ್ನು ಕೊಡಬೇಕೆಂಬುದಾಗಿ ಸರಕಾರಿ ನಿರ್ಣಯವಿರುತ್ತಿದ್ದರೂ ಮೇಲಧಿಕಾರಿಗಳು ಹೀಗೇಕೆ ವರ್ತಿಸುತ್ತಿರುವರೋ ತಿಳಿಯದಾಗಿದೆ.

## ದಿಲ್ಲಿಯಲ್ಲಿ ವಕೀಲರಮನೆಗೆ ಪಿಕೆಟಿಂಗ

ದಿಲ್ಲಿಯ ಸ್ವಯಂಸೇವಿಕೆಯರು ತಾ|| ೧೨ ನೆಯ ದಿವಸ ಅಲ್ಲಿಯ ವಕೀಲರ ಸಂಘಕ್ಕೆ ಹೋಗಿ ಪರದೇಶಿ ಬಟ್ಟೆಗಳನ್ನು ತೊಟ್ಟುಕೊಳ್ಳುತ್ತಿರುವ ವಕೀಲರ ಹೆಸರುಗಳನ್ನು ಬರೆದುಕೊಂಡು ಬಂದರು. ಪರದೇಶಿ ಬಟ್ಟೆಗಳನ್ನು ಧರಿಸುತ್ತಿರುವ ವಕೀಲರ ಮನೆಗಳಿಗೆ ಪಿಕೆಟಿಂಗ ಮಾಡುವ ಕಾರ್ಯವು ಅಲ್ಲಿ ಬೇಗನೆ ಪ್ರಾರಂಭವಾಗಹತ್ತಿದೆ.

ಶ್ರೀ. ರಾಮಕುಮಾರರೆಂಬ ಮಾರವಾಡಿ ಸದ್ಗೃಹಸ್ಥರೊಬ್ಬರು ಸತ್ಯಾಗ್ರಹ ಯುದ್ಧ ಮಂಡಳದ ೧೦ ನೆಯ ಸರ್ವಾಧಿಕಾರಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ

ವಲ್ಲಭಭಾಯಿ ಪಟೇಲರನ್ನು ಸೆರೆ ಹಿಡಿದ ಸಂಬಂಧವಾಗಿ ಜರುಗಿದ ಸಭೆಯಲ್ಲಿ ಭಾಷಣ ಮಾಡಿದ ಸಲುವಾಗಿ ಶ್ರೀಮತಿ ಸಾವಿತ್ರಿದೇವಿಯವರಿಗೆ ಕೈದು ಆಗಿದೆ.

### ಶ್ರೀ ಸಾರಡಾರವರಿಗೆ ಜೀವದಾನ

ಸೊಲ್ಲಾಪುರದಲ್ಲಾದ ದಂಗೆಯ ಸಂಬಂಧವಾಗಿ ಗಲ್ಲಿನ ಶಿಕ್ಷೆಗೆ ಪಾತ್ರರಾದ ೪ ಜನರಲ್ಲಿ ಒಬ್ಬರಾದ ಶ್ರೀ ಸಾರಡಾರವರ ಮೇಲೆ ದಯೆ ತೋರಿಸಿ, ಅವರ ಗಲ್ಲಿನ ಶಿಕ್ಷೆಯನ್ನು ರದ್ದುಪಡಿಸಿ ಅವರಿಗೆ ಬೇರೊಂದ ಶಿಕ್ಷೆಯನ್ನು ವಿಧಿಸಬೇಕಾಗಿ ಅಖಿಲ ಭಾರತ ಮಾಹೇಶ್ವರಿ ಮಹಾಸಭೆಯ ಪರವಾಗಿ ಆ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ನಂದನಕಿಶೋರ ಮಾಹೇಶ್ವರಿಯವರು ವ್ಹಾಯಿಸರಾಯರಿಗೆ ತಂತಿಯ ಮೂಲಕವಾಗಿ ವಿನಂತಿ ಮಾಡಿಕೊಂಡಿದ್ದಾರೆ. ಎಲ್ಲರಿಗೂ ಜೀವದಾನ ಮಾಡಿರಿ ಎಂದು ವಿನಂತಿ ಮಾಡಿಕೊಂಡಿದ್ದರೆ ಏನಾಗುತ್ತಿತ್ತೋ ಏನೋ!

### ಉಪ್ಪಿನ ಕಾಯದೆ ಭಂಗಕ್ಕಾಗಿ ೨ ವರ್ಷ ಕಠಿಣ ಶಿಕ್ಷೆ

ಸಿಂಧ ಸತ್ಯಾಗ್ರಹ ಯುದ್ಧ ಮಂಡಳದ ಅಧ್ಯಕ್ಷರಾದ ಶ್ರೀ. ಸಿ. ಟಿ. ವಾಲೇಚಾರವರಿಗೆ ಉಪ್ಪಿನ ಕಾಯದೆ ಭಂಗಕ್ಕೆ ಉತ್ತೇಜನ ಕೊಟ್ಟಿದ್ದರ ಸಲುವಾಗಿ ೧೧೭ ನೆಯ ಕಲಮಿನನ್ವಯ ೨ ವರ್ಷಗಳ ಕಠಿಣ ಶಿಕ್ಷೆಯು ಕೊಡಲ್ಪಟ್ಟಿದೆ. ಕಾಯದೆ ಭಂಗಕ್ಕಾಗಿ ಕೆಲವು ದಿನಗಳ ಹಿಂದೆ ಇವರ ವಕೀಲಿಯ ಸನದು ರದ್ದು ಮಾಡಲ್ಪಟ್ಟಿತ್ತು.

## ದೇ. ಭ. ಗಂಗಾಧರರಾಯರ ಬಗ್ಗೆ

### “ಟೈಮ್ಸಿ”ದ ಸುಳ್ಳು ವಿಧಾನ.

೧೦ ನೆಯ ತಾರೀಖಿನ “ಟೈಮ್ಸ ಆಫ್ ಇಂಡಿಯಾ” ಪತ್ರಿಕೆಯಲ್ಲಿ “ಬೇಕಾದ ಮನುಷ್ಯನು ಸೆರೆಹಿಡಿಯಲ್ಪಟ್ಟನು” ಎಂಬ ಬರಹವನ್ನು ಉಪಯೋಗಿಸಿ ತಮ್ಮ ಬಂಧನದ ಸುದ್ದಿಯನ್ನು ಕೊಟ್ಟಿದ್ದು ವಿಷಯವಾಗಿ ದೇ. ಭ. ಗಂಗಾಧರರಾಯರು ಕೆಳಗಿನಂತೆ ಹೇಳಿದ್ದಾರೆ. “ಬೇಕಾದ ಮನುಷ್ಯನು ಸೆರೆಹಿಡಿಯಲ್ಪಟ್ಟನು” ಎಂಬ ತಲೆಬರಹವನ್ನು ಉಪಯೋಗಿಸಿ ಟೈಮ್ಸಕಾರರು ಜನರಲ್ಲಿ ನನ್ನ ಸಂಬಂಧವಾಗಿ ತಪ್ಪು ತಿಳುವಳಿಕೆಯನ್ನುಂಟುಮಾಡಿದ್ದಾರೆ. ನನ್ನನ್ನು ಸೆರೆಹಿಡಿಯುವವರೆಗೂ, ನನ್ನ ಮೇಲೆ ವಾರಂಟು ಹೊರಟಿದೆಯೆಂಬುದು ನನಗೆ ಗೊತ್ತಿದ್ದಿಲ್ಲ. ಅಕ್ಟೋಬರ ತಾ। ೨೫ ರಿಂದ ನಾನು ಮುಂಬಯಿಯಲ್ಲಿಯೇ ನಿಂತುಕೊಂಡೆ. ಕೆಲವೊಂದು ಖಾಸಗಿ ವಿಷಯಗಳ ಸಂಬಂಧವಾಗಿ ಬೇಗಾಗಿಯು ಕಲೆಕ್ಟರರೊಡನೆ ಆಗಾಗ್ಗೆ ಪತ್ರವ್ಯವಹಾರ ಮಾಡಿದ್ದೇನೆ. ಇಷ್ಟೇ ಅಲ್ಲದೆ ಸಾರ್ವಜನಿಕ ಚಳವಳಿಯನ್ನು ಬಹಿರಂಗವಾಗಿ ಸಾಗಿಸಿದ್ದೇನೆ. ಟೈಮ್ಸಕಾರರು ಕೊಟ್ಟ ತಲೆಬರಹವು ವಸ್ತುಸ್ಥಿತಿಗೆ ತೀರ ವಿರುದ್ಧವಾದದ್ದಿರುತ್ತದೆ.

## ಕೌಜಲಗಿಯವರ ಸಂದೇಶ

ಮೊನ್ನೆ ಮೊನ್ನೆ ಹಿಂಡಲಗಿ ಜೇಲಿನಿಂದ ಬಿಡುಗಡೆ ಹೊಂದಿಬಂದ ಶ್ರೀ ಪೆಂಡಗುದ್ದಿಯವರ ಕೂಡ ಶ್ರೀ ಕೌಜಲಗಿ ಹಣಮಂತರಾಯರು ಕೆಳಗಿನಂತೆ ಸಂದೇಶವನ್ನು ಕಳಿಸಿದ್ದಾರೆ. “ನನಗೆ ೨೧ ತಿಂಗಳ ಕಠಿಣ ಶಿಕ್ಷೆಯಾಗಿದೆ. ಆದರೆ ನಾನು ಈ ಬಂಧನದಿಂದ ಮುಕ್ತನಾದ ಕೂಡಲೆ ಸ್ವತಂತ್ರ ಹಿಂದುಸ್ಥಾನದ ಕರ್ನಾಟಕ ಪ್ರಾಂತದಲ್ಲಿಯೇ ನನ್ನ ಮೊದಲನೆಯ ಹೆಜ್ಜೆಯು ಬೀಳುವದೆಂದು ನಂಬಿದ್ದೇನೆ. ಈ ನನ್ನ ನಂಬಿಗೆಯನ್ನು ಪೂರೈಸುವದು ಕರ್ನಾಟಕದ ನನ್ನ ಎಲ್ಲ ತರುಣರನ್ನು ಅವಲಂಬಿಸಿದೆ.

## ಕಾಲಿಕತ್ತದಲ್ಲಿ

### ಕಾಂಗ್ರೆಸ್ ಕಚೇರಿಗೆ ಕೀಲಿ ಬಿತ್ತು.

ಮದ್ರಾಸ ಸರಕಾರದವರು ಮಲಬಾರದಲ್ಲಿಯ ಕಾಂಗ್ರೆಸ್ ಸಂಸ್ಥೆಗಳನ್ನು ಕಾಯದೆಗೆ ವಿರುದ್ಧವಾದ ಸಂಸ್ಥೆಗಳೆಂದು ಸಾರಿದ್ದನ್ನು ಅನುಸರಿಸಿ ಕಾಲಿಕತ್ತದ ಪೋಲೀಸ ಅಧಿಕಾರಿಗಳು ಅಲ್ಲಿಯ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಿ ಅಲ್ಲಿಯ ರಾಷ್ಟ್ರಧ್ವಜವನ್ನು ಕಿತ್ತಿ ಒಗೆದರು. ಮತ್ತು ಅದಕ್ಕೆ ತಮ್ಮ ಕೀಲಿಹಾಕಿ ಹೊರಟು ಹೋದರು.

## ಶ್ರೀ ಮಹಾದೇವಭಾಯಿಯವರಿಗೆ

### “ಅ” ವರ್ಗ ದೊರೆಯಿತು.

ಕೇಳ್ವಿಕೆ ಹೇಳುವದೇನೆಂದರೆ ಅಹಮ್ಮದಾಬಾದದ ಮ್ಯಾಜಿಸ್ಟ್ರೇಟರು ಶ್ರೀ ಮಹಾದೇವಭಾಯಿಯವರಿಗೆ “ಬ” ವರ್ಗ ವಿಧಿಸಿದ್ದರೂ ಸಾಬರಮತಿ ಜೇಲಿನಲ್ಲಿ ಅವರು “ಅ” ವರ್ಗದಲ್ಲಿ ಇಡಲ್ಪಟ್ಟಿದ್ದಾರೆಂಗಿ ತಿಳಿದುಬರುತ್ತದೆ.

## ಶ್ರೀಮತಿ ಮುನಸಿಯವರು

### ವಾನರಸೇನೆಗೆ ಆಜ್ಞೆಕೊಟ್ಟರು.

ಶ್ರೀಮತಿ ಲೀಲಾವತಿ ಮುನಶಿಯವರು ಸುರತದಲ್ಲಿ ವಾನರಸೇನೆಯ ಸಭೆಯಲ್ಲಿ ಭಾಷಣ ಮಾಡುವಾಗ ಜನಗಣತಿಯ ಬಹಿಷ್ಕಾರ ಕಾರ್ಯವನ್ನು ಹೆಚ್ಚಿಗೆ ಜೋರಿನಿಂದ ಸಾಗಿಸಲು ಹಾಗು ಸರಕಾರಿ ಶಾಲೆಯ ಬಹಿಷ್ಕಾರವನ್ನು ನಡೆಸಲು ಅವರಿಗೆ ಉಪದೇಶಮಾಡಿದರು.

## ಶ್ರೀ ಮುನಶಿ ಅವರು

### ಉಪವಾಸವನ್ನು ಬಿಟ್ಟು ಬಿಟ್ಟರು

ಶ್ರೀ ಮುನಸಿಯವರ ಕೆಲವು ಮಿತ್ರರು ಅವರಿಗೆ ಉಪವಾಸವನ್ನು ಬಿಟ್ಟುಬಿಡಲು ಬಿನ್ನೈಸಿಕೊಂಡಿದ್ದರಿಂದ ಅವರ ಬಿನ್ನಹಕ್ಕೆ ಮನ್ನಣೆಕೊಟ್ಟು ಶ್ರೀ ಮುನಶಿಯವರು ಮೊನ್ನೆಯಿಂದ ಆಹಾರವನ್ನು ತೆಗೆದುಕೊಳ್ಳಹತ್ತಿದ್ದಾರೆ. ತಮ್ಮ ಈ ಉಪವಾಸಕ್ಕೂ ಮತ್ತು ಕಾಂಗ್ರೆಸ್ ಚಳವಳಿಗೂ ಏನು ಸಂಬಂಧವಿಲ್ಲವೆಂಬುದಾಗಿ ಶ್ರೀ ಮುನಶಿಯವರು ಪ್ರಸಿದ್ಧಮಾಡಿದ್ದರು.

## ಪೋಲೀಸರ ವಿರುದ್ಧ ವರ್ತಿಸಿದ್ದಕ್ಕೆ

### ೧೦ ಜನರ ಮೇಲೆ ಖಟ್ಲೆ

ಪೋಲೀಸರ ಅಪ್ಪಣೆಯ ವಿರುದ್ಧ ವರ್ತಿಸಿದ್ದಕ್ಕಾಗಿ ಮುಳಸಿ ಪೇಟೆಯಲ್ಲಿಯ ಘಾಟವತಿ ಮತ್ತು ಘೋಟವಾಡಾ ಹಳ್ಳಿಗಳೊಳಗಿನ ೧೦ ಜನರ ಮೇಲೆ ಖಟ್ಲೆಯು ಹಾಕಲ್ಪಟ್ಟಿದೆ.

## ಮುಂಬಯಿಯಲ್ಲಿ

### ಇಬ್ಬರಿಗೆ ಶಿಕ್ಷೆ

ಪೋಲೀಸರಿಗೆ ಹಸ್ತಪತ್ರಿಕೆಗಳನ್ನು ಹಂಚಿದ ಆರೋಪದ ಸಲುವಾಗಿ ಮುಂಬಯಿಯಲ್ಲಿ ಇಬ್ಬರು ಸ್ವಯಂಸೇವಕರಿಗೆ ಪ್ರತ್ಯೇಕವಾಗಿ ೬ ತಿಂಗಳ ಕಠಿಣ ಶಿಕ್ಷೆಯು ಪ್ರಾಪ್ತವಾಗಿದೆ.

## ಕರ್ನಲ್ ಗುಣೆಯವರಿಗೆ

### ೫ ತಿಂಗಳ ಕಠಿಣ ಶಿಕ್ಷೆ.

ಹಿಂದೀ ಸೈನ್ಯಖಾತೆಯ ಉದ್ಯೋಗದಿಂದ ನಿವೃತ್ತ ಹೊಂದಿದ ಕರ್ನಲ್ ಗುಣೆಯವರಿಗೆ ಸಂಗಮನೇರದ ಅರಣ್ಯ ಸತ್ಯಾಗ್ರಹದಲ್ಲಿ ಭಾಗ ತೆಗೆದುಕೊಂಡ ಬಗ್ಗೆ ೫ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೨೫೦ ರು. ದಂಡ ಹೀಗೆ ಶಿಕ್ಷೆಯು ವಿಧಿಸಲ್ಪಟ್ಟಿದೆ.

### ಶ್ರೀ ದಾತೆಯವರಿಗೆ ಶಿಕ್ಷೆ

ಮುಳಾಡ ಕಾಂಗ್ರೆಸ್ ಕಮಿಟಿಯ ಸರ್ವಾಧಿಕಾರಿಗಳಾದ ಶ್ರೀ ಗೋವಿಂದ ಕೇಶವರಾವ ದಾತೆಯವರಿಗೆ ಜವಾಹಿರಲಾಲರ ದಿನದ ದಿವಸ ಮೆರವಣಿಗೆಯನ್ನು ತೆಗೆದು ವ್ಯವಹಾರಕ್ಕೆ ಅಡ್ಡಿಮಾಡಿದ್ದರ ಸಲುವಾಗಿ ೬೦ ರು. ದಂಡ ಇಲ್ಲವೆ ೨ ತಿಂಗಳ ಕಠಿಣ ಶಿಕ್ಷೆ ಹೀಗೆ ಶಿಕ್ಷೆಯು ವಿಧಿಸಲ್ಪಟ್ಟಿತು.

## ಪಂಡಿತ ಮೋತೀಲಾಲರ ಪ್ರಕೃತಿ,

ಪಂಡಿತ ಮೋತೀಲಾಲರಿಗೆ ತಾ॥ ೧೨ ನೆಯ ದಿವಸ ಜ್ವರ ಬಂದಿದ್ದಿಲ್ಲ. ಅವರ ಪ್ರಕೃತಿಯು ದಿನದಿನಕ್ಕೂ ಸುಧಾರಿಸಹತ್ತಿದೆ.

## ಕರಾಚಿಯಲ್ಲಿ

### ೧೪ ಜನರಿಗೆ ಕೈದು

ಮೋಟಾರುಗಳಲ್ಲಿ ಪರದೇಶಿ ಸರಕುಗಳನ್ನು ಒಯ್ಯುವದಕ್ಕೆ ಅಡ್ಡಿ ಮಾಡಿದ್ದರ ಬಗ್ಗೆ ಕರಾಚಿಯಲ್ಲಿ ತಾ॥ ೧೨ ನೆಯ ದಿವಸ ೧೪ ಜನ ಸ್ವಯಂಸೇವಕರು ಕೈದು ಮಾಡಲ್ಪಟ್ಟಿದ್ದಾರೆ.

---

ಬನಾರಸದಲ್ಲಿ ತಾ। ೨೬ ಕ್ಕೆ ಸೇರಲಿಕ್ಕಿದ್ದ ಅಖಿಲ ಏಸಿಯಾಖಂಡದ ಶಿಕ್ಷಣ ಪರಿಷತ್ತಿಗೆ ಕಲಕತ್ತೆಯ ವಿಶ್ವವಿದ್ಯಾಲಯದ ಪ್ರೊಫೆಸರರಾಗಿರುವ ರಾಧಾ ಕೃಷ್ಣನ್‌ರವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಅಹಮ್ಮದಾಬಾದದಲ್ಲಿ

## ಪರದೇಶ ಬಟ್ಟೆಯ ಪ್ರೇತಯಾತ್ರೆ.

ತಾ| ೧೨ನೆಯ ದಿವಸ ಮುಂಜಾನೆಯಲ್ಲಿ ಅಹಮ್ಮದಾಬಾದದ ಕೆಲವು ಜನ ವಿದ್ಯಾರ್ಥಿಗಳು ಪರದೇಶಿ ಬಟ್ಟೆಯ ಪ್ರೇತಯಾತ್ರೆಯನ್ನು ಹೊರಡಿಸಿದ್ದರು. ಪೋಲೀಸ ಅಧಿಕಾರಿಗಳು ಹಾದಿಯಲ್ಲಿ ಅವರಿಗೆ ಅಡ್ಡಿಯನ್ನುಂಟು ಮಾಡಿ ಇಬ್ಬರು ವಿದ್ಯಾರ್ಥಿಗಳನ್ನು ಸೆರೆಹಿಡಿದು ಕೊಂಡು ಪೋಲೀಸ ಚೌಕಿಗೆ ಒಯ್ದುಕೊಂಡು ಹೋದರು. ಅಲ್ಲಿ ಅವರಿಗೆ ಎಚ್ಚರಿಕೆಕೊಟ್ಟು ಹಿಂದುಗಡೆಯಲ್ಲಿ ಬಿಟ್ಟುಬಿಟ್ಟರು.

ಅಸೆಂಬ್ಲಿಯ

## ಸರಕಾರ ನಿಯುಕ್ತ ಸಭಾಸದರು

ಲಾರ್ಡ ಇರ್ವಿನರು ಕೆಳಗಿನ ಸದ್ಗೃಹಸ್ಥರನ್ನು ಅಸೆಂಬ್ಲಿಗೆ ಸರಕಾರ ನಿಯುಕ್ತ ಸಭಾಸದರನ್ನಾಗಿ ನಿಯಮಿಸಲ್ಪಟ್ಟಿದ್ದಾರೆ.

೧) ಸರ್ ಜಾಫರ ಅಲ್ಲೀಖಾನ ೨) ಸರ್ ಅಬ್ದುಲ ಕ್ವಿಯಾಮ ೩) ಕೆ. ಸಿ. ರಾಯ ೪) ಮಿ. ಜವಾಹಿರಸಿಂಗ, ೫) ಸತ್ಯಚರಣ ಮುಖರ್ಜಿ ೬) ರಿಸ್ಡಾರಾದ ಜೆ. ಸಿ. ಚಟರ್ಜಿ ೭) ಮಿ. ಎಂ. ಸಿ. ರಾಜಾ ೮) ಆರ್. ಎಸ್. ಶರ್ಮಾ ೯) ಕ್ಯಾಪ್ಟನ್ ಶೇರ ಮಹಮ್ಮದಖಾನ.

ಕಲಕತ್ತೆಯ ಟ್ರೇಡ್ಸ್ ಅಸೋಸಿಯೇಶನ್ನು, ಅಸೋಸಿಯೇಟೆಡ್ ಚೇಂಬರ ಆಫ್ ಕಾಮರ್ಸ ಹಿಂದೀ ವ್ಯಾಪಾರಿಗಳು ಮತ್ತು ಮುಂಬಯಿ ಇವುಗಳ ಪ್ರತಿನಿಧಿಗಳನ್ನು ಸಭಾಸದರನ್ನಾಗಿ ನಿಯಮಿಸಲ್ಪಡಬೇಕಾಗಿದ್ದಾರೆ.

ಹೈದರಾಬಾದದ

## ಕೋರ್ಟಿನಲ್ಲಿ ಕಾಯದೆಭಂಗ

ಹೈದರಾಬಾದ ಕೋರ್ಟಿಗೆ ಸಾಗಿ ಹೋಗಿ ಅಲ್ಲಿ ಕಾಯದೆಗೆ ವಿರುದ್ಧವಾಗಿ ಸಿದ್ಧಪಡಿಸಿದ ಉಪ್ಪನ್ನು ಮಾರಿ ಒರುವದು ಅಲ್ಲಿಯ ನವಜೀವನ ಭಾರತಸಭೆಯವರ ಪ್ರತಿನಿಧ್ಯದ ಉದ್ಯೋಗವೇ ಆಗಿದೆ. ಪ್ರತಿನಿತ್ಯದಲ್ಲಿಯೂ ಸಂಜೆಗೆ ಕೆಲವು ಸ್ವಯಂಸೇವಕರು ಅಲ್ಲಿಗೆ ಹೋಗುವರು. ಅವರಲ್ಲಿ ಒಬ್ಬನು ಪ್ರಯತ್ನಪೂರ್ವಕವಾಗಿ ಶ್ರಮಪಟ್ಟು ಒಳಗೆ ಹೋಗುವನು. ಮತ್ತು ಉಪ್ಪನ್ನು ಮಾರುತ್ತಿರುವನು. ಉಪ್ಪನ್ನು ಮಾರುತ್ತಿದ್ದ ಕೂಡಲೆ ಪೋಲೀಸರು ಅವನನ್ನು ಸೆರೆಹಿಡಿಯುವರು. ನಂತರದಲ್ಲಿ ಉಳಿದ ಸ್ವಯಂಸೇವಕರು ತಿರುಗಿ ಹೊರಟು ಬರುವರು.

ಸಿಂಧ ಪ್ರಾಂತದಲ್ಲಿ ಉಪ್ಪಿನ ಕಾಯದೆ ಭಂಗವು ಎಷ್ಟೋ ಸ್ಥಳಗಳಲ್ಲಿ ಮತ್ತೆ ಪ್ರಾರಂಭಿಸಲ್ಪಟ್ಟಿದೆ. ನವಾಬಶಹಾ ಮತ್ತು ಮೀರಪುರಖಾಸಗಳಲ್ಲಿ ಆ ಸಂಬಂಧವಾಗಿ ಕೆಲವು ಸ್ವಯಂಸೇವಕರು ಬಂಧನಕ್ಕೆ ಗುರಿಯಾದರು.

ಪರದೇಶಿ ವ್ಯಾಪಾರಿಗಳ

## ನಿಷ್ಫಲ ಪ್ರಯತ್ನ.

"ದಿಲ್ಲಿಯಲ್ಲಿಯ ಬ್ಯಾಗಲ ಆ್ಯಂಡ ಕಂಪನಿ ಮತ್ತು ಜೆ ಆರ್. ಮಾರ್ಟಿನ್ ಆ್ಯಂಡ ಕಂಪನಿಯವರು ಅಲ್ಲಿಯ ಕಾಂಗ್ರೆಸ್ಸಿನಲ್ಲಿ ತಮ್ಮ ಕಂಪನಿಗಳ ಶಾಖೆಗಳನ್ನು ಸ್ಥಾಪಿಸಿ ಪರದೇಶಿ ಬಟ್ಟೆಗಳಿಗೆ ಗಿರಾಕಿಗಳನ್ನು ಸಂಪಾದಿಸುವ ಪ್ರಯತ್ನ ಮಾಡಿದರು. ಸ್ವಯಂಸೇವಿಕೆಯರು ಈ ಸುದ್ದಿಯನ್ನು ತಿಳಿದುಕೊಂಡು ಅಲ್ಲಿಗೆ ಹೋಗಿ ಪಿಕೆಟಿಂಗ ಮಾಡುತ್ತಿದ್ದರು. ಗಿರಾಕಿಗಳು ಯಾರೂ ಬರಲಿಲ್ಲ. ಮೂರು ತಾಸಿನವರೆಗೆ ಹಾದಿ ನೋಡಿ ವ್ಯಾಪಾರಿಗಳು ಹೊರಟು ಹೋದರು.

## ಪೋಲೀಸರಿಗೆ

### ಚಹಾ ಮತ್ತು ಸಕ್ಕರೆ ಸಿಗಲಿಲ್ಲ.

ತಮ್ಮ ಸಭೆಯಲ್ಲಿ ನಿರ್ಣಯಿಸಿಕೊಂಡ ಮೇರೆಗೆ, ಅಲೀಬಾಗದ ವ್ಯಾಪಾರಿಗಳು ೫ನೆಯ ತಾರೀಖಿನಿಂದ ಪರದೇಶಿ ಬಟ್ಟೆ, ಸಕ್ಕರೆ, ಚಹಾ ಮೊದಲಾದವುಗಳನ್ನು ಮಾರಲಿಕ್ಕೆ ನಿಲ್ಲಿಸಿ ಬಿಟ್ಟಿದ್ದರಿಂದ ಕೆಲವು ದಿನ ಅಲ್ಲಿಯ ಪೋಲೀಸರಿಗೆ ಬಹಳೇ ತ್ರಾಸವಾಯಿತು. ಅದನ್ನು ಕಂಡ ಕೂಡಲೇ ಪೋಲೀಸ ಸುಪರಿಂಟೆಂಡೆಂಟರು ಕುಲಾಬಾದಲ್ಲಿಯ ಪ್ರಸಿದ್ಧ ವ್ಯಾಪಾರಿಗಳಿಂದ ಮಹಸ್ಮದ ಎಸಿಯಲ್ಲಿಗೆ ಹೋಗಿ ಕಷ್ಟವನ್ನು ಪರಿಹಾರ ಮಾಡಲು ಕೇಳಿಕೊಂಡರು. ಪೋಲೀಸರಿಗೆ ಚಹಾ ಮತ್ತು ಸಕ್ಕರೆ ಒದಗಿಸುವ ಬಗ್ಗೆ ವಚನಕೊಟ್ಟರು.

ಪರೀಕ್ಷೆಯ ಭಯದಿಂದ

### ಆತ್ಮಹತ್ಯ ಮಾಡಿಕೊಂಡದ್ದು.

[illegible] ಲಕ್ಷ್ಮೇಶ್ವರ ಕಾಲೇಜದಲ್ಲಿ ಕಲಿಯುತ್ತಿದ್ದ ಶ್ರೀಮತಿ ಜಯಂತಿ ವಿದ್ಯಾರ್ಥಿನಿಯರು ಪರೀಕ್ಷೆಯ ಭಯದ ಮೂಲಕವಾಗಿ ಕಾಲೇಜದ ಬಳಿಯಲ್ಲಿರುವ ಕೆರೆಯಲ್ಲಿ ಮುಳುಗಿ ಮರಣಹೊಂದಿದರೆಂದು ತಿಳಿಯುತ್ತದೆ.

---

ಎಲ್ಲ ತರದ ಚಳಿಜ್ವರದ ಮೇಲೆ

## ರಾಮಬಾಣದ ಗುಳಿಗೆಗಳು

ವಿಷಮಜ್ವರದ ಹೊರತಾಗಿ ಎಲ್ಲ ತರದ ಚಳಿಜ್ವರಗಳ ಮೇಲೆ ಈ ಗುಳಿಗೆಗಳು ಬಹಳೇ ಗುಣಕಾರಿಯಾಗಿರುವವು. ವಿಶೇಷ ಪಥ್ಯವನ್ನು ಮಾಡುವ ಕಾರಣವಿಲ್ಲ. ಹುಣಸೀ ಹಣ್ಣು ಮತ್ತು ಮಜ್ಜಿಗೆ ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ಪಡೆಯಿರಿ.

ಒಂದು ಗುಳಿಗೆಗೆ ೦-೧-೦

೧೦೦ ಗುಳಿಗೆಗಳಿಗೆ ೫-೦-೦

ಏಜಂಟರಿಗೆ ಧಾರಾಳವಾದ ಕಮೀಶನ ಕೊಡಲಾಗುವದು.

ವಿಳಾಸ:- ಕೃಷ್ಣಾಚಾರ್ಯ ಮಣ್ಣೂರ.
ಕಿಲ್ಲಾ ೬೦ ಓಣಿ, ಬಾಗಲಕೋಟೆ.

---

## ರುಪ್ಪೀ ಗಿರಣಿ ಮಾರಾಟಕ್ಕಿದೆ.

[illegible] ಕಾರ್ ಇಂಜಿನ್ [illegible]

P. ಇದು ಚಕ್ಕಿ ಸಹಿತ ಸದ್ಯಕ್ಕೆ ಚಾಲು [illegible] ಮಾಡುವವರು ಸಮಕ್ಷಮ ಅಥವಾ ಪತ್ರವ್ಯವಹಾರ ಮಾಡಬೇಕು.

ಟಿ. ಜಿ. ದೇಸಾಯಿ c/o ಕನ್ನಡಿಗ
ಬಾಗಲಕೋಟೆ.

---

## ಶುದ್ಧ ಖಾದಿ ! ಶುದ್ಧ ಖಾದಿ

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ದರದಲ್ಲಿ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ ದೇಸಾಯಿ
ಸುದರ್ಶನ ಸ್ಟೋರ್ಸ ಬಾಗಲಕೋಟೆ.

---

## ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಶರ್ಟಿಂಗ, ಕೋಟಿಂಗ, ಧೋತರ ಮತ್ತು ಸ್ವದೇಶೀ ರೇಶ್ಮೆ ನಮೂನೆಯ ಟೊಪ್ಪಿಗೆ ಟಿಳೇಕರವರಿಯ ಭಾಗದಲ್ಲಿ ಮತ್ತು ಮಾರ್ಕೆಟ್ ದೊರೆಯುತ್ತವೆ.

ಶಂಕರಪ್ಪಾ ಬಣಗಾರ.
ಜವಳಿ ವ್ಯಾಪಾರಸ್ಥರು ಬಾಗಲಕೋಟೆ.

---

ಈ ಪತ್ರಿಕೆಯು ವೆಂಕಟೇಶ ಶ್ರೀನಿವಾಸ ಕುಲಕರ್ಣಿ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಛಾಪಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯ-ಸಂಚಿಕೆಯು. ಬೆಲೆ. ೦-೦-೩.

यदत् परवशं दुःखं । यदद्आत्मवशं सुखम् ॥ -मनु.

# ಕನ್ನಡಿಗ

KANNADIGA BAGALKOT. BI-WEEKLY

ಸಂಪಾದಕರು:- ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟವಾಗುವದು.

ವರ್ಷ ೧] ಬಾಗಲಕೋಟೆ—[illegible] ಮಾರ್ಗಶಿರ ಬಹುಳ ೧[illegible] ತಾ॥ ೧೮—೧೨—೩೦ [ ಸಂಚಿಕೆ ೧೯೧

# ಬೆಳಗಾವಿಯಲ್ಲಿ ಭಯಂಕರ ದಬ್ಬಾಳಿಕೆ.

## ಶ್ರೀ ಸೋಮಣ ಮೊದಲಾದ [illegible] ಜನರಿಗೆ ಸೆರೆಮನೆ.

(ಸಂಕೆಯ ವಾರ್ತೆ [illegible] ೧೭,

ತಾ॥ ೧೭ ನೆಯ ದಿವಸ ಸಂಜೆಯಲ್ಲಿ ಸಾರ್ವಜನಿಕ [illegible] ಪ್ರಚಂಡ ಮೆರವಣಿಗೆಯು ಪಟ್ಟಣದ [illegible] ಮುಖ್ಯ ಬೀದಿಗಳಲ್ಲೆಲ್ಲ ಸಂಚರಿಸಿ ಸಭಾಸ್ಥಾನಕ್ಕೆ [illegible]. ಅಲ್ಲಿ ಶ್ರೀ ಬೆ[illegible] [illegible] ಲ್ಲಿ ಸಭೆಗೆ. ಪ್ರಭಾತಫೇರಿ [illegible] ಬಾಧಕವು [illegible] ಅವರು [illegible] ಹೋಗಿದ್ದ [illegible] ಹಾಗು [illegible] [illegible] ವಿಷಯವಾಗಿ ನಿಷೇಧದ ಹುಕುಮ್ [illegible] ಜನರು ಸಭೆಗೆ [illegible].

[illegible] ಯಲ್ಲಿ ಎಂದಿನಂತೆಯೆ ಪ್ರಭಾತಫೇರಿ [illegible] ಗಳು [illegible] ಸೋಮಣ [illegible] ಜನರನ್ನು [illegible]. [illegible] ಮೇಲೆ [illegible] ಜನರನ್ನು ಬಿಟ್ಟುಬಿಟ್ಟರು. ಶ್ರೀ [illegible] ಕೆಲವರನ್ನು ಬಂಧಿಸಲ್ಪಟ್ಟಿದ್ದಾರೆ. ಅವರೆಲ್ಲರ ವಿಚಾರಣೆಯು ಇಂದು [illegible] ದ್ದಿತು.

ಜಂಗೆಟ [illegible] ಸಭೆಯ ಕಾರ್ಯಕರ್ತ [illegible] ಗ [illegible] ದಿವಸ [illegible] ವನಗಳ ಶಿಕ್ಷೆಯು [illegible].

ನಿನ್ನೆ [illegible] ಯಲ್ಲಿಯೂ ಮೆರವಣಿಗೆ [illegible] ಜನಗಳಲ್ಲಿ [illegible] ಎಷ್ಟೋ ಜನ [illegible] ಗಳಲ್ಲಿ ಉತ್ಸಾಹದಿಂದ [illegible]. ಇಂದು ಮುಂಜಾನೆ ಪ್ರಭಾತಫೇರಿ [illegible] ಜನರು ಭಾಗವಹಿಸಿ [illegible] ಸಮಾರಂಭವನ್ನು ಯಶಸ್ವಿ [illegible] ಅವರನ್ನು [illegible] ನೂರಾರು ಜನ [illegible] ನಗೆ [illegible] ಅಲ್ಲಿಯೂ [illegible] ಪೋಲೀಸರು ಅಲ್ಲಿ [illegible] ನ್ನು [illegible] ಹೋದರು. ಅವರ ವಿಚಾರಣೆ ಯಾದರೂ ಇಂದೇ ನಡೆಯುತ್ತದೆ.

---

**ಪುಣೆಯ ಜಿಲ್ಲೆಗೆ ಸೇರಿದ [illegible] ದಲ್ಲಿ ೧೧ ಜನ [illegible] ಆಜ್ಞಾಭಂಗ [illegible] ಬಂಧಿತರಾಗಿದ್ದಾರೆ.**

**[illegible] ಯಲ್ಲಿ**
**[illegible] ಅವರಿಗೆ ಶಿಕ್ಷೆ.**

[illegible] ಕೆಲಸಗಾರರಾದ ಶ್ರೀ [illegible] ಅವರಿಗೆ ಶ್ರೀ [illegible] ಅವರು [illegible] ಕಲಮು [illegible] ದಿವಸ ಅಧಿಕಾರಿಗಳು ೧॥ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದ್ದಾರೆ.

---

## ಶ್ರೀ ಕಪಾಡಿಯಾರವರ

### ಶಿಕ್ಷೆಯು [illegible]

ಮುಂಬಯಿಯ [illegible] ಪತ್ರಿಕೆಯ ಪ್ರಕಾಶಕರಾದ [illegible] ಅವರಿಗೆ [illegible] ಶ್ರೀ [illegible] ೧೭ ನೆಯ [illegible] ಗಳ [illegible] ಹಾಗೆ ೧೫೦ [illegible] ಶಿಕ್ಷೆಯಾಗಿತ್ತು. ಶ್ರೀ [illegible] ಸಂಬಂಧವಾದ [illegible] ಮಾಡಿದ್ದರು. [illegible] ಯಾಗಿ [illegible] ಶಿಕ್ಷೆ [illegible].

## ವ್ಯಾಪಾರಸ್ಥರ ಮೇಲೆ ಮತ್ತೊಂದು ಸಂಕಟ.

ಹಿಂದುಸ್ಥಾನ ಸರಕಾರದವರು ವ್ಹಿ.ಪಿ.ಯ ಸಂಬಂಧವಾಗಿ ಕೆಳಗಿನಂತೆ ಒಂದು ಹೊಸ ನಿಯಮವನ್ನು ಮಾಡಿದ್ದಾರೆ. ವ್ಹಿ. ಪಿ. ಯು ಬಂದ ಬಗ್ಗೆ ಪೋಸ್ಟಕಚೇರಿಯ ಇಂಟಿಮೇಶನ್ ತನಗೆ ಮುಟ್ಟಿದ ಮೂರು ದಿನಗಳಲ್ಲಿಯೇ ವ್ಹಿ. ಪಿ. ಯಿಂದ ಬೇಡಿದವನು ಅದನ್ನು ಬೆಲೆಕೊಟ್ಟು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಕಳಿಸಿದವರ ಕಡೆಗೆ ಅದನ್ನು ತಿರುಗಿ ಕಳಿಸುವದಕ್ಕೆ ಬರುವದು. ಮೂರು ದಿವಸಗಳ ನಂತರದಲ್ಲಿ ವ್ಹಿ. ಪಿ. ಯನ್ನು ಪೋಸ್ಟಕಚೇರಿಯಲ್ಲಿಯೇ ಇಟ್ಟುಕೊಳ್ಳಬೇಕಾಗಿ ತೆಗೆದುಕೊಳ್ಳುವವನು ಇಚ್ಛಿಸಿದಲ್ಲಿ, ಅವನು ಹಾಗೆ ಅರ್ಜಿ ಕೊಡಬೇಕು, ಮತ್ತು ಮುಂದಿನ ದಿನಗಳಲ್ಲಿ ಎಷ್ಟು ದಿನಗಳ ವರೆಗೆ ಇಡಲು ತಿಳಿಸುವನೋ ಅಷ್ಟು ದಿನಗಳ ವರೆಗೆ ಪ್ರತಿದಿನಕ್ಕೆ ೨ ಆಣೆಯಂತೆ ಪೋಸ್ಟ ಆಫೀಸಿಗೆ ಹಣ ತುಂಬಬೇಕು.

ಈ ಹೊಸ ನಿಯಮವು ಜಾನೇವಾರಿ ೧ ನೆಯ ತಾರೀಖಿನಿಂದ ಬಳಕೆಯಲ್ಲಿ ಬರತಕ್ಕದ್ದಿದೆ. ಈ ನಿಯಮವು ಬಳಕೆಯಲ್ಲಿ ಬಂದಲ್ಲಿ ಭಾರತಖಂಡದಲ್ಲಿಯ ಯಾವತ್ತೂ ಜನರಿಗೆ ವಿಶೇಷತಃ ವ್ಯಾಪಾರಸ್ಥರು, ಮಾಸಪತ್ರಿಕಾಕಾರರು, ವಾರಪತ್ರಿಕಾಕಾರರು, ಪುಸ್ತಕ ವ್ಯಾಪಾರಿಗಳು ಮೊದಲಾದವರಿಗೆ ಬಹಳ ಹಾನಿ ಹಾಗು ತೊಂದರೆ ಆಗುವದು. ಆದ್ದರಿಂದ ನಾವೆಲ್ಲರೂ ಈ ನಿಯಮವನ್ನು ರದ್ದುಪಡಿಸುವ ಕುರಿತು ಹಿಂದುಸ್ಥಾನ ಸರಕಾರಕ್ಕೆ ಪ್ರತೀಕಾರದ ಅರ್ಜಿ ಕಳಿಸಬೇಕು. ನಾನಾಪಥ ಚಳವಳಿಮಾಡಿ ಬಳಕೆಯಲ್ಲಿ ಬಂದಂತೆ ನೋಡಿಕೊಳ್ಳಬೇಕು. ಮಧ್ಯವರ್ತಿ ಕಾಯದೆ ಮಂಡಳದಲ್ಲಿ ಯೋಗ್ಯ ಪ್ರಯತ್ನಮಾಡಲು ಅಸೆಂಬ್ಲಿಯ ಸಭಾಸದರಿಗೆ ಒತ್ತಾಯಪಡಿಸಬೇಕು. ಮಹಾರಾಷ್ಟ್ರದಿಂದ ಮಧ್ಯವರ್ತಿ ಕಾಯದೆ ಮಂಡಳಕ್ಕೆ ಆರಿಸಿ ಹೋದ ಶ್ರೀ ಗುಂಜಾಳ, ಮುಜುಮದಾರ ಮೊದಲಾದವರು ಈಗಾಗಲೆ ಈ ಕಾರ್ಯಕ್ಕೆ ತೊಡಗಿದ್ದಾರೆ. ಕನ್ನಡಿಗರು ವಿಶೇಷತಃ ಕರ್ನಾಟಕ ವ್ಯಾಪಾರಿ ಸಂಘದವರೂ, ಕರ್ನಾಟಕದೊಳಗಿನ ಸಾರ್ವಜನಿಕ ಸಂಸ್ಥೆಗಳೂ, ಪತ್ರಿಕಾಕರ್ತರೂ ಈ ಬಗ್ಗೆ ಎಚ್ಚತ್ತು ತಮ್ಮ ಪ್ರತೀಕಾರವನ್ನು ತೋರಿಸಬೇಕಾಗಿ ನಾವು ಅವರಲ್ಲಿ ಕೇಳಿಕೊಳ್ಳುತ್ತೇವೆ.

## ಗಾಂಧಿ ಟೊಪ್ಪಿಗೆಗೆ ೫೦೦ ರು. ಹೊಣೆ ಬೇಡಿದರು

ಹೈದರಾಬಾದ ಸಂಸ್ಥಾನದಲ್ಲಿ ಗುಡಗುಂಟಿ ಯೆಂಬ ಒಂದು ಗ್ರಾಮ. ಅಲ್ಲಿ ಬಸಪ್ಪ ಸಾವಕಾರ ನೆಂಬೊಬ್ಬ ಸದ್ಗೃಹಸ್ಥರು ವಾಸಮಾಡುತ್ತಿರುವರು. ಒಂದು ದಿವಸ ಅವರು ತಮ್ಮ ತಲೆಯ ಮೇಲೆ ಗಾಂಧಿ ಟೊಪ್ಪಿಗೆಯನ್ನು ಹಾಕಿಕೊಂಡು ತಿರುಗಾಡಲಿಕ್ಕೆ ಹೋಗಿದ್ದರು. ಆಗ ಹಾದಿಯಲ್ಲಿ ಸರ್ಕಲ್ ಇನಸ್ಪೆಕ್ಟರರು ಅವರಿಗೆ ಅಕಸ್ಮಾತ ಭೆಟ್ಟಿಯಾದರು. ಅವರು ಗಾಂಧಿ ಟೊಪ್ಪಿಗೆಯನ್ನು ತೆಗೆದೊಗೆಯಲು ಅವರಿಗೆ ಹೇಳಿದರು. ಶ್ರೀ ಸಾವಕಾರರು ಸ್ವಲ್ಪ ಹಿಂದೆ ಮುಂದೆ ನೋಡಿದರು. ಇನಸ್ಪೆಕ್ಟರರ ಸಿಟ್ಟು ಏರಿ ಅವರು ಬೆದರಿಕೆ ಹಾಕಿದರು. ಸಾವಕಾರರು ಭಯಭೀತರಾಗಿ ಟೊಪ್ಪಿಗೆಯನ್ನು ತೆಗೆದೊಗೆದರು. ಬಳಿಕ ಅಂತಹ ಟೊಪ್ಪಿಗೆಯನ್ನು ಇನ್ನು ಮುಂದೆ ಧರಿಸುವದಿಲ್ಲವೆಂಬುದಕ್ಕೆ ಅವರಿಂದ ೫೦೦ ರು. ಹೊಣೆ ತೆಗೆದುಕೊಂಡು ಅಧಿಕಾರಿಗಳು ಬಿಟ್ಟು ಹೋದರು. ಮೊಗಲಾಯಿಯಲ್ಲಿ ಹೀಗೆ ಆಗುವದೇನೂ ಸೋಜಿಗವಲ್ಲ!

## ಶ್ರೀ ವಿಠ್ಠಲಭಾಯಿಯವರ ಸ್ಥಿತಿಗತಿ

ಕೋಯಿಮತ್ತೂರ ಜೇಲಿನಲ್ಲಿ ಶ್ರೀ ವಿಠ್ಠಲಭಾಯಿ ಪಟೇಲರವರಿಗೆ ಖುರ್ಚಿ ಮೇಜು ಮತ್ತು ಪಲ್ಲಂಗ ಮೊದಲಾದವುಗಳನ್ನೂ ಅವರ ಅಡಿಗೆಯನ್ನು ಸಿದ್ಧಪಡಿಸಲಿಕ್ಕೆ ಓರ್ವ ಗುಜರಾಥಿ ಅಡಿಗೆಯವನನ್ನೂ ಅಧಿಕಾರಿಗಳು ಒದಗಿಸಿಕೊಟ್ಟಿರುವರಲ್ಲದೆ, ಮದ್ರಾಸ ಮೇಲ್, 'ಟೈಮ್ಸ ಆಫ್ ಇಂಡಿಯಾ' ಮತ್ತು ಹಿಂದೂ ವಾರ್ತಾ ಪತ್ರಿಕೆಗಳನ್ನು ಅವರಿಗೆ ಓದಲಿಕ್ಕೆ ಕೊಡುತ್ತಾರೆ.

### ಪೆನಶನಕ್ಕೆ ದಾಳಿ ಬಂತು.

ಆಸಾಮ ಸರಕಾರದವರು ಗೌಹಾತಿಯ ನಿವೃತ್ತಿ ಹೊಂದಿದ ಸರಕಾರಿ ಡಾಕ್ಟರರಾದ ಶ್ರೀ ಹರಿಕೃಷ್ಣದಾಸರಿಗೆ ಒಂದು ಆಜ್ಞೆಯನ್ನು ಕಳಿಸಿ, ಕಾಯದೆಭಂಗದಲ್ಲಿ ಸೇರಿರುವಿರೆಂದು ಕಂಡು ಬಂದಿದೆಯಾದಕಾರಣ ನಿಮ್ಮ ಪೆನಶನ್ ಯಾಕೆ ನಿಲ್ಲಿಸಬಾರದೆಂಬ ಬಗ್ಗೆ ಕಾರಣ ತೋರಿಸಲು ಅವರಿಗೆ ಆ ಮೂಲಕವಾಗಿ ಕೇಳಿಕೊಂಡಿದ್ದಾರೆ.

## ಅಧಿಕಾರಿಗಳು ತಂಬಾಕ ಜಪ್ತಮಾಡಿದರು.

ಗುಜರಾಥ ಪ್ರಾಂತದ ಕಾಸದಲ್ಲಿರುವ ಶ್ರೀ ಆಶಾಭಾಯಿಯವರು ತೆರಿಗೆಯನ್ನು ಕೊಡಲು ನಿರಾಕರಿಸಿದ್ದರಿಂದ, ಅಧಿಕಾರಿಗಳು ಅವರ ಒಡೆತನದ ೩೦೦೦ ರು. ಬೆಲೆ ಬಾಳುವ ತಂಬಾಕನ್ನು ಜಪ್ತಮಾಡಿಕೊಂಡು ಹೋದರು. ತಂಬಾಕದ ಚೀಲಗಳಲ್ಲಿ ೧೦೦ ರು. ಬೆಲೆ ಬಾಳುವ ಕೆಲವು ಆಭರಣಗಳು ಇದ್ದವು, ಅವುಗಳನ್ನಾದರೂ ಅಧಿಕಾರಿಗಳು ತೆಗೆದುಕೊಂಡು ಹೋದರು. ತಮ್ಮ ತಂಬಾಕನ್ನು ಜಪ್ತ ಮಾಡಿದ್ದರ ಕಾರಣ ಕೇಳಲು 'ತೆರಿಗೆಯನ್ನು ಕೊಡದ ರೈತರ ಹಣವನ್ನು ವಸೂಲಮಾಡಿಕೊಳ್ಳಲು' ಎಂದು ಕುಲಕರ್ಣಿಯು ಉತ್ತರ ಕೊಟ್ಟನು.

## ಸಕ್ಕರದಲ್ಲಿ ಪಿಕೆಟಿಂಗಕ್ಕೆ ಪ್ರತಿಬಂಧ.

ಕೆಲವು ದಿನಗಳ ಹಿಂದೆ ಸಕ್ಕರದಲ್ಲಾದ ದಂಗೆಯ ಮೂಲಕವಾಗಿ ಹಿಂದೂ ಮುಸಲ್ಮಾನರಲ್ಲಿ ಒಡಕು ಹುಟ್ಟಿದ್ದು, ಈ ನಗರದಲ್ಲಿ ಪಿಕೆಟಿಂಗ, ಮೆರವಣಿಗೆ ಮೊದಲಾದ ಕಾರ್ಯಕ್ರಮಗಳನ್ನು ಜರುಗಿಸಿದಲ್ಲಿ ಸಾರ್ವಜನಿಕ ಶಾಂತತೆಗೆ ಭಂಗ ಬರುವ ಸಂಭವವಿರುವದರಿಂದ ೬ ತಿಂಗಳ ವರೆಗೆ ಯಾರೂ ಪಿಕೆಟಿಂಗ, ಮೆರವಣಿಗೆ ಮೊದಲಾದವುಗಳನ್ನು ಮಾಡಕೂಡದಾಗಿ ಅಧಿಕಾರಿಗಳು ಅಪ್ಪಣೆ ಹೊರಡಿಸಿದ್ದಾರೆ.

## ಕಟಕದಲ್ಲಿ ಸ್ವರಾಜ್ಯಾಶ್ರಮಕ್ಕೆ ಮುತ್ತಿಗೆ

ಕಟಕದಲ್ಲಿಯ ಸ್ವರಾಜ್ಯಾಶ್ರಮವು ಕಾಯಿದೆಗೆ ವಿರುದ್ಧವಾದ ಸಂಸ್ಥೆಯಾಗಿದೆಯೆಂದು ಸಾರಿದ್ದನ್ನು ಅನುಸರಿಸಿ, ಅಲ್ಲಿಯ ಪೋಲೀಸ ಅಧಿಕಾರಿಗಳು ತಾ|| ೧೩ ನೆಯ ದಿವಸ ಅದಕ್ಕೆ ಮುತ್ತಿಗೆಹಾಕಿ ೧೬ ಜನರನ್ನು ಸೆರೆಹಿಡಿದು ಕೊಂಡು ಹೋದರು.

## ದಿಲ್ಲಿಯಲ್ಲಿ ಶ್ರೀ ರಾಮಕುಮಾರರಿಗೆ ಕೈದು

ದಿಲ್ಲಿಯ ಸತ್ಯಾಗ್ರಹ ಯುದ್ಧ ಮಂಡಳದ ಸರ್ವಾಧಿಕಾರಿಗಳಾದ ಶ್ರೀ ರಾಮಕುಮಾರರು ಕಾಯಿದೆಭಂಗದ ನಿಮಿತ್ತವಾಗಿ ಅಧಿಕಾರಿಗಳಿಂದ ಕೈದುಮಾಡಲ್ಪಟ್ಟಿದ್ದಾರೆ.

## ಶ್ರೀ ಹುಸೇನಭಾಯಿಯವರು

### ವ್ಹಾಯಿಸರಾಯರಿಗೆ ತಾರು ಕಳಿಸಿದರು

ಹಿಂದೂ ವರ್ತಕ ಸಂಘದ ಅಧ್ಯಕ್ಷರಾದ ಶ್ರೀ ಹುಸೇನಭಾಯಿ ಲಾಲಜಿ ಇವರು ತಾ॥ ೧೩ ನೆಯ ದಿವಸ ವ್ಹಾಯಿಸರಾಯರ ಪ್ರಾಯವ್ಹೇಟ ಸೆಕ್ರೆಟರಿಯವರಿಗೆ ಕೆಳಗಿನಂತೆ ತಂತಿಯನ್ನು ಕಳಿಸಿದ್ದಾರೆ.

ಸೊಲ್ಲಾಪುರದಲ್ಲಾದ ದಂಗೆಯ ಸಂಬಂಧವಾಗಿ ಗಲ್ಲಿನ ಶಿಕ್ಷೆಗೆ ಗುರಿಯಾದ ನಾಲ್ಕು ಜನ ಆರೋಪಿಗಳ ಸಂಬಂಧವಾಗಿ ದಯೆ ತೋರಿಸುವ ವಿಷಯವಾಗಿ ವಿಚಾರ ಮಾಡಲು ಹಿಂದೂ ವರ್ತಕ ಸಂಘದ ಶಿಷ್ಟಮಂಡಳಕ್ಕೆ ಭೆಟ್ಟಿ ಕೊಡಲು ನೀವು ನಿರಾಕರಿಸಿದ್ದು ತಾ॥ ೧೦ ನೆಯ ದಿವಸ ಕೇಳಿಕೊಳ್ಳುವದರಲ್ಲಿ ಬಂದಿತ್ತು. ಕಟ್ಟಕಡೆ ನಿರ್ಣಯವನ್ನು ಮೊದಲೆ ಕೊಟ್ಟದ್ದರಿಂದ ಶಿಷ್ಟಮಂಡಳವನ್ನು ಕಾಣಲು ಶಕ್ಯವಿಲ್ಲವ್ಹಾ ತಾ॥ ... ಅದಕ್ಕೆ ಉತ್ತರ ಕೊಟ್ಟಿದ್ದಾರೆ ಸೊಲ್ಲಾಪುರದ ಆರೋಪಿಗಳಿಗೆ ದಯೆ ತೋರಿಸಿ ಅವರ ಗಲ್ಲಿನ ಶಿಕ್ಷೆಯನ್ನು ಕಡಿಮೆ ಮಾಡಬೇಕೆಂಬ ಬಗ್ಗೆ ವಿನಂತಿ ಮಾಡಿಕೊಳ್ಳಲು ವರ್ತಕ ಸಂಘದವರು ನನಗೆ ಹೇಳಿಕೊಂಡಿದ್ದಾರೆ ಆರೋಪಿಗಳಲ್ಲಿ ಮೂವರು ಆರೋಪಿಗಳು ಸೊಲ್ಲಾಪುರದ ಪ್ರಸಿದ್ಧ ವ್ಯಾಪಾರಸ್ಥರಿರುತ್ತಾರೆ.

ಈ ನಾಲ್ಕು ಜನರಿಗೆ ಈ ಸಮಯದಲ್ಲಿ ದಯೆ ತೋರಿಸದಿದ್ದಲ್ಲಿ, ಸರಕಾರದವರು ನಿಜವಾಗಿಯೂ ದಬ್ಬಾಳಿಕೆಯ ಧೋರಣವನ್ನು ಹಿಡಿದಿರುವರೆಂಬದಾಗಿ ಭಾರತೀಯರೆಲ್ಲರೂ ವಿಶೇಷತಃ ವ್ಯಾಪಾರಸ್ಥರು ತಿಳಿದುಕೊಳ್ಳುವರು. ಜನರ ಮೇಲೆ ಹೀಗೆ ಪರಿಣಾಮ ಮಾಡುವದು ಯಾವ ಸಮಯದಲ್ಲಿಯೂ ಸರಕಾರಕ್ಕೆ ಹಿತಕರವಿರುವದಿಲ್ಲ. ಸೊಲ್ಲಾಪುರದ ಆರೋಪಿಗಳನ್ನು ಗಲ್ಲಿಗೇರಿಸಿದಲ್ಲಿ ಎಂತಹ ಭಯಂಕರ ಪರಿಣಾಮವಾಗುವದೆಂಬುದನ್ನು ವಿಶದಪಡಿಸಲು ವರ್ತಕಸಂಘದವರು ಒಂದು ಶಿಷ್ಟಮಂಡಳವನ್ನು ಕಳಿಸುವರಿದ್ದಾರೆ ಈ ತಂತಿಯನ್ನು ದಯಮಾಡಿ ವ್ಹಾಯಿಸರಾಯರಿಗೆ ತೋರಿಸಿರಿ"

### ಕಲಕತ್ತೆಯಲ್ಲಿ

### ೬ ಜನ ಹೆಂಗಸರಿಗೆ ಶಿಕ್ಷೆ

ಕಲಕತ್ತೆಯಲ್ಲಿ ಪರದೇಶಿ ಬಟ್ಟೆಗಳ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದ ಸಂಬಂಧವಾಗಿ ಶ್ರೀಮತಿ ಅಬುಲಾಲಸೇನ ಮೊದಲಾದ ೬ ಜನ ಸ್ತ್ರೀಯರಿಗೆ ೫೦ರು ದಂಡ ಇಲ್ಲವೆ ೨ ತಿಂಗಳ ಸಾದಾ ಕಾರಾಗೃಹವಾಸ ಹೀಗೆ ಶಿಕ್ಷೆಯು ವಿಧಿಸಲ್ಪಟ್ಟಿದೆ

## ದಿಲ್ಲಿಯಲ್ಲಿ

### ೧೧ನೆಯ ಸರ್ವಾಧಿಕಾರಿಗೆ ಬಂಧನ

ದಿಲ್ಲಿಯ ಸತ್ಯಾಗ್ರಹ ಯುದ್ಧ ದ ದಳದ ೧೧ನೆಯ ಸರ್ವಾಧಿಕಾರಿಗಳಾದ ಮೌಲಾನಾ ಶೌಕತ ಅಲ್ಲಿಯವರು ಕ್ರಿ. ಲಾ ಅಮೆಂಡಮೆಂಟ ಖಾಯದೆಯ ೧೭ನೆಯ ಕಲಮಿನನ್ವಯ ತಾ॥ ೧೫ನೆಯ ದಿವಸ ಬಂಧಿಸಲ್ಪಟ್ಟಿದ್ದಾರೆ ರಾಷ್ಟ್ರಧ್ವಜ ವಂದನೆಯ ಸಮಾರಂಭವನ್ನು ಜರುಗಿಸಿ ಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದೆ ಅವರ ಅಪರಾಧವಾಗಿದೆ.

### ೧೦೦ ಜನ ಕೈದಿಗಳನ್ನು

### ಸುಮ್ಮ ಸುಮ್ಮನೆ ಬಿಟ್ಟರು

ಇಂಡಿಯನ್ ಪಿನಲ್ ಕೋಡಿನ ಬೇರೆ ಬೇರೆ ಕಲಮುಗಳನ್ವಯ ಶಿಕ್ಷೆಗೆ ಗುರಿಯಾಗಿ ಸೆರೆಮನೆ ... ದ ೧೦೦ ಜನ ಕೈದಿಗಳನ್ನು ಅಧಿಕಾರಿಗಳು ತಾ॥ ೧೩ನೆಯ ದಿವಸ ದಿಲ್ಲಿಯ ಜೇಲಿನಿಂದ ಬಿಡುಗಡೆ ಮಾಡಿದ್ದಾರೆ! ರಾಜಕೀಯ ಕೈದಿಗಳಿಗೆ ... ಬೇಕಿಲ್ಲ!

### ಬೊರಸದ

## ಮಾಮಲೆದಾರರ ಮೇಲೆ ದಾವೆ

ಕೆಲವು ದಿನಗಳ ಹಿಂದೆ ಜೋತಿ ಗ್ರಾಮದಲ್ಲಿ ನಡೆದ ಗೊಂದಲದ ಸಂಬಂಧವಾಗಿ ಶ್ರೀ ಪ್ರಭಾತ ಕುಮಾರ ಮರು ಬೊರಸಾದದ ಮಾಮಲೇದಾರರಾದ ಶ್ರೀ ಎಂ. ಎಂ. ಶಹಾರವರ ಮೇಲೆ ದಾವೆ ಹೂಡಿದ್ದಾರೆ.

### ಲೋಕಲ್ ಬೋರ್ಡದವರು

### ಸರಕಾರಕ್ಕೆ ಬೆದರಲಿಲ್ಲ

ಕಲಾಬಾ ಡಿಸ್ಟ್ರಿಕ್ಟ ಲೋಕಲ್‌ಬೋರ್ಡದವರು ತಾ॥ ೧೩ ನೆಯ ದಿವಸ ಸಭೆಯಲ್ಲಿ ಸೇರಿ, ಸ್ಕೂಲಬೋರ್ಡ ಕಟ್ಟಡದ ಮೇಲಿನ ರಾಷ್ಟ್ರಧ್ವಜವನ್ನು ಕಿತ್ತು ಒಗೆಯಲು ಸರಕಾರದವರು ಅಪ್ಪಣೆ ವಿಧಿಸಿದಲ್ಲಿ, ಸ್ಕೂಲಬೋರ್ಡದವರು ಸರಕಾರ ಕಟ್ಟಡವನ್ನೇ ಬಿಟ್ಟು ಹೋಗಬೇಕೆಂಬದಾಗಿ ನಿರ್ಧರಿಸಿಕೊಂಡರು. ಇದೀಗ ಸ್ವಾಭಿಮಾನ!

### ಪಂಜಾಬದಲ್ಲಿ

### "ಸ್ವಾತಂತ್ರ್ಯ ಧ್ವಜಕ್ಕೆ" ಅಡ್ಡಿ

ಕೊಲ್ಹಾಪುರದ ಪ್ರಭಾತ ಚಿತ್ರಪಟ ಮಂಡಳಿಯವರು ಹೊರಡಿಸಿದ "ಸ್ವಾತಂತ್ರ್ಯ ಧ್ವಜ" ಚಿತ್ರಪಟಕ್ಕೆ ಪಂಜಾಬ ಸರಕಾರದವರು ತಮ್ಮ ಹದ್ದಿಯಲ್ಲಿ ಅಡ್ಡಿಯನ್ನುಂಟು ಮಾಡಿದ್ದಾರೆ.

## ಪುಣೆಯಲ್ಲಿ

### ಶ್ರೀ ಫುಲಮಾಮಡೀಕರರಿಗೆ ಶಿಕ್ಷೆ.

ಪುಣೆಯ ಕಾಂಗ್ರೆಸ್ ಕಮೀಟಿಯ ಐದನೆಯ ಸರ್ವಾಧಿಕಾರಿ ಶ್ರೀ ಫುಲಮಾಮಡೀಕರರಿಗೆ ಕ್ರಿ. ಲಾ ಅಮೆಂಡಮೆಂಟ ಖಾಯದೆಯ ೧೭ ನೆಯ ಕಲಮಿನನ್ವಯ ೬ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೩೦೦ ರು ದಂಡ, ಇಲ್ಲವೆ ಮತ್ತೆ ೧ ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆಯಾಗಿದೆ ಶ್ರೀಮತಿ ಲಕ್ಷ್ಮೀಬಾಯಿ ರಾಸೆಯವರು ಅವರ ಸ್ಥಳದಲ್ಲಿ ಸರ್ವಾಧಿಕಾರಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ

### ಚಂಪಾರಣದಲ್ಲಿ

### ಮತ್ತೆ ಕಾಂಗ್ರೆಸ್ ಕಚೇರಿಗಳ ಉದಯ

ಚಂಪಾರಣ ಜಿಲ್ಹೆಯಲ್ಲಿಯ ಕಾಂಗ್ರೆಸ್ ಸಂಸ್ಥೆಗಳನ್ನು ಅಧಿಕಾರಿಗಳು ೯ ನೆಯ ಆರ್ಡಿನನ್ಸದನ್ವಯ ತಮ್ಮ ವಶಪಡಿಸಿಕೊಂಡ ಕೂಡಲೆ ಎಲ್ಲೆಲ್ಲಿಯೂ ಹೊಸ ಕಾಂಗ್ರೆಸ್ ಕಮೀಟಿಗಳು ಮತ್ತೆ ಸ್ಥಾಪಿಸಲ್ಪಟ್ಟಿದ್ದರಿಂದ ಕಾಂಗ್ರೆಸ್ ಕಾರ್ಯವು ಮೊದಲಿನಂತೆಯೆ ಜೋರಿನಿಂದ ನಡೆಯುತ್ತಿದೆ

### ಹಜಾಮನೂ

## ಹಪ್ತೆ ಕೊಡಲಿಲ್ಲ.

ದೇವಗಡದ ತಾಲೂಕದ ಬನಜಾದ ಹಳ್ಳಿಯಲ್ಲಿಯ ಓರ್ವ ಹಜಾಮನ, ತನ್ನ ಹೊಲಗಳ ಸಂಬಂಧವಾಗಿ ಸರಕಾರಕ್ಕೆ ಸಲ್ಲತಕ್ಕ ಹಪ್ತೆಯ ಹಣವನ್ನು ಕೊಡಲು ನಿರಾಕರಿಸಿ, ಕರನಿರಾಕರಣೆ ಚಳವಳಿಯಲ್ಲಿ ಸೇರಿಕೊಂಡಿದ್ದಾನೆ.

### ಮುಂಬಯಿಯಲ್ಲಿ

### ೧೧ ಜನರಿಗೆ ಗಾಯ

ಪೇಟೆಯ ದ ಮುಂದೆ ಅಡ್ಡಬಿದ್ದು ಮರಣಹೊಂದಿದ ವೀರ ಸತ್ಯಾಗ್ರಹಿ ಬಾಬು ಗೆನೂ ರವರಿಗೆ ಮನ್ನಣೆ ಮಾಡಲು ಪ್ರತಿನಿತ್ಯದಲ್ಲಿಯೂ ಜನರು ತಂಡತಂಡವಾಗಿ ಹೋಗುತ್ತಿರುವರು. ಎಷ್ಟೋ ಜನರು ಆ ಅತ್ಯಾಚಾರದ ಸ್ಥಳದಲ್ಲಿ ನೆರೆದು ಅಲ್ಲಿ ಪೂಮಾಲೆಗಳನ್ನು ಅರ್ಪಿಸುತ್ತಿರುವರು. ಸೋಮವಾರ ದಿವಸ ಪೋಲೀಸ ಅಧಿಕಾರಿಗಳು ಜನರ ಮೇಲೆ ಲಾಠಿ ಉಪಯೋಗಿಸಿ ಅವರನ್ನು ಚದುರಿಸಿದರು. ೧೧ ಜನರು ಗಾಯಹೊಂದಿದರು.

## ಜಳಗಾವದಲ್ಲಿ
# ನಾಟಕಕ್ಕೆ ಪ್ರತಿಬಂಧ

ಸಮರ್ಥ ನಾಟಕ ಮಂಡಳಿಯವರು ಪ್ರಯೋಗಿಸುತ್ತಿರುವ "ಆಗ್ರಾದಿಂದ ಬಿಡುಗಡೆ" ಎಂಬ ನಾಟಕಕ್ಕೆ ಜಳಗಾವದ ಡಿ. ಮ್ಯಾಜಿಸ್ಟ್ರೇಟರು ಪೂರ್ವ ಖಾನದೇಶ ಜಿಲ್ಲೆಯಲ್ಲಿ ಪ್ರತಿಬಂಧವನ್ನುಂಟು ಮಾಡಿದ್ದಾರೆ. ಜಳಗಾವದ ಸಿಟಿ ಮ್ಯಾಜಿಸ್ಟ್ರೇಟರು ಈ ನಾಟಕವಾಡಲು ಮಂಡಳಿಯವರಿಗೆ ಅಪ್ಪಣೆ ಕೊಟ್ಟಿದ್ದರು. ಆದರೆ ಕೆಲವು ಜನ ಮುಸಲ್ಮಾನರು ಒಂದು ಶಿಷ್ಟಮಂಡಳವನ್ನು ತೆಗೆದುಕೊಂಡು ಹೋಗಿ ನಾಟಕದಲ್ಲಿ ಧರ್ಮಕ್ಕೆ ಅವಮಾನಕಾರಕವಾದಂತಹ ಕೆಲವು ವಿಷಯಗಳು ನಾಟಕದಲ್ಲಿ ಸೇರ್ಪಡೆಯಾಗಿವೆಯಾದ್ದರಿಂದ ಅದಕ್ಕೆ ಪ್ರತಿಬಂಧ ಮಾಡಲು ಅಧಿಕಾರಿಗಳಿಗೆ ಒತ್ತಾಯ ಪಡಿಸಿದರು. ಕಲೆಕ್ಟರರು ಸ್ವತಃ ನಾಟಕಕ್ಕೆ ಹೋಗಿ ಅದನ್ನು ನೋಡಿಕೊಂಡು ಬಂದು, ಇನ್ನು ಮುಂದೆ ನಾಟಕವನ್ನು ಆಡಕೂಡದಾಗಿ ಪ್ರತಿಬಂಧಿಸಿದ್ದಾರೆ. ಶಿವಾಜಿ ಮಹಾರಾಜರು ಆಗ್ರಾದಿಂದ ಔರಂಗಜೇಬನ ಕೈಯೊಳಗಿಂದ ಪಾರಾಗಿ ಬಂದಿದ್ದೇ ನಾಟಕದ ವಿಷಯವಾಗಿದೆ.

## ಘಡೋಚಿವಲ್ಲಿ
### ಶ್ರೀ ದಿವಾಣರಿಗೆ ಶಿಕ್ಷೆ

ಘಡೋಚಿ ನಗರಸಭೆಯ ಸಭಾಸದರಾದ ಶ್ರೀ ಠಾಕೂರಲಾಲ ದಿವಾಣರಿಗೆ ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ೧೭ ನೇ ಕಲಮಿನನ್ವಯ ೬ ತಿಂಗಳ ಕಠಿಣ ಶಿಕ್ಷೆಯು ಪ್ರಾಪ್ತವಾಗಿದ್ದು ಅವರ ಸ್ಥಳದಲ್ಲಿ ಶ್ರೀ [illegible] ಭಾಯಿ ದಾವೆಯವರು ಸರ್ವಾಧಿಕಾರಿಗಳೆಂದು ಗೊತ್ತುಪಡಿಸಿದ್ದಾರೆ.

## ಅಥಣಿಯ
### ಶ್ರೀಮತಿ ಪಾನಬಾಯಿಗೆ "ಕ" ವರ್ಗ

ಕಾಯದೆಭಂಗದ ನಿಮಿತ್ತವಾಗಿ ೬ ತಿಂಗಳ ಕಠಿಣ ಶಿಕ್ಷೆಗೆ ಗುರಿಯಾದ ಅಥಣಿಯ ಶ್ರೀಮತಿ ಪಾನಬಾಯಿಯವರಿಗೆ "ಕ" ವರ್ಗವು ಕೊಡಲ್ಪಟ್ಟಿದ್ದು ಯೋಗ್ಯವರ್ಗವಾಗಿಲ್ಲವೆಂದು ಅವರಿಗೆ "ಅ" ವರ್ಗವನ್ನು ಕೊಡಬೇಕೆಂದು ಅಥಣಿಯ ಭಗಿನೀ ಮಂಡಳದವರು ಅಧಿಕಾರಿಗಳ ಕಡೆಗೆ ಒಂದು ಅರ್ಜಿ ಕಳಿಸಿದ್ದಾರೆ.

## ಚರೋಲಾದಲ್ಲಿ
# ೧೫೦೦೦ ರು. ಪುಂಡುಗಂದಾಯ

ಪೂರ್ವ ಖಾನದೇಶ ಜಿಲ್ಲೆಯ [illegible] ತಾಲೂಕಿನ ಸ್ಥಳವಾದ ಚರೋಲಾ ಪಟ್ಟಣದಲ್ಲಿ ೧ ವರ್ಷದ [illegible] ಜಿಲ್ಲೆ [illegible] ಪ್ರೋಲೀಸರು ಇಡಲ್ಪಟ್ಟಿದು [illegible] ೧೫೦೦೦ ರು. [illegible] ಊರ ಜನರು ಕೊಡಬೇಕೆಂದು [illegible] ನಿರ್ಣಯಿಸಲ್ಪಟ್ಟಿದೆ. [illegible] ಮುಸಲ್ಮಾನರನ್ನು [illegible] ಹಿಂದುಗಡೆಯಲ್ಲಿ [illegible] ಮಾಡಿಕೊಟ್ಟು [illegible] ಗಳಸಿಧೆಯವರಿಗೆ [illegible] ರೀತಿ ಸೂಚಿಸಿ [illegible]!

### [illegible]ಬಂಗೆ
### [illegible] ದಂಡ [illegible]

[illegible] ಯ ಒರ್ವ [illegible] ಮುಸ [illegible] ಚಂದ [illegible] ಎಂಬ ಕಂಪನಿಯ ಸ್ಟೀಲ್ [illegible] ಮಾಡ [illegible] ರಸಿಗಳು [illegible] ಕೊಂಡರ್ ಮ್ಯಾಜಿಸ್ಟ್ರೇಟರು ೨೦,೦೦೦ ರು. ಜಾಮೀನು [illegible] ಕೊಂಡು [illegible] ಬಿಟ್ಟರು [illegible] ಅವರಿಗೆ [illegible]ಯಾಗಿದೆ.

# ೧೪ ಗೌಡರು
## ರಾಜಿನಾಮೆ ಕೊಟ್ಟರು

[illegible] ಸಮೀಪದಲ್ಲಿಯ ದೇವಳೀ ಭಾಗದಲ್ಲಿಯ ೧೪ ಜನ ಗೌಡರು, ಸರಕಾರಿ ಅಧಿಕಾರಿಗಳ ದಬ್ಬಾಳಿಕೆಯನ್ನು ನಿಷೇಧಿಸಿ, ತಮ್ಮ ತಮ್ಮ ಗೌಡಕಿಗಳಿಗೆ ರಾಜಿನಾಮೆ ಕೊಟ್ಟಿದ್ದಾರೆ.

### ಶಿಷ್ಟಮಂಡಳ ಕಾಣಲು
## ಗವ್ಹರ್ನರರು ನಿರಾಕರಿಸಿದರು

ಸೊಲ್ಲಾಪುರದಲ್ಲಾದ ದಂಗೆಯ ಸಂಬಂಧವಾಗಿ ಗಲ್ಲಿನ ಶಿಕ್ಷೆಗೆ ಪಾತ್ರರಾದ ಶ್ರೀ ಧನಶೆಟ್ಟಿ, ಸಾರಡಾ ಮೊದಲಾದವರಿಗೆ ದಯೆ ತೋರಿಸಲು ಕೇಳಿಕೊಳ್ಳಲು ಮಿ. ಹುಸೇನ ಭಾಯಿ ಲಾಲಜಿ ಮೊದಲಾದವರದೊಂದು ಶಿಷ್ಟಮಂಡಳವು ನಾ॥ ಗವ್ಹರ್ನರರ ಕಡೆಗೆ ಹೋಗಲಿಕ್ಕಿದ್ದಿತು. ಆದರೆ ಶಿಷ್ಟಮಂಡಳದ ಭೆಟ್ಟಿಯನ್ನು ತೆಗೆದುಕೊಳ್ಳಲು ನಾ॥ ಗವ್ಹರ್ನರರು ನಿರಾಕರಿಸಿರುವರಾಗಿ ಸುದ್ದಿಯಿದೆ.

---

### [illegible] ಮೇಲೆ
## [illegible]

[illegible] ಳ ಮೇಲೆ [illegible] ಯೋಗ ಮತ್ತು [illegible] ಕಾರಣವಿಲ್ಲ. [illegible] ಮ ಜ್ಜಿಗೆ [illegible] ಒಮ್ಮೆ ತೆಗೆ [illegible]

[illegible]

[illegible] ಗುವದು.

[illegible]

---

### ಹುಟ್ಟಿನ [illegible]

[illegible] H. P. [illegible] ಅಥವಾ [illegible]

ಟಿ. ಜಿ. [illegible] c/o ಕನ್ನಡಿಗ

[illegible]

---

[illegible]

[illegible] ಸ್ಥಳ [illegible]

[illegible] ಮಾಡಿ [illegible]

[illegible] ಕೃಷ್ಣ [illegible]

[illegible]

ಕಟ್ಟೆರ [illegible]

[illegible]

ಜವಳಿ ವ್ಯಾ[illegible] ಬಾಗಲಕೋಟೆ.

[illegible] ಇವರಿಂದ ಬಾಗಲಕೋಟೆ ಕಿಷ್ಕಿಂಧಾ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅಲ್ಲಿಂದ ಅವರಿಂದಲೇ ಪ್ರಸಿದ್ಧಿಸಲ್ಪಟ್ಟಿತು.

ರಿ. ಬಿ. ೭೦೮೮ | ನಿತ್ಯ ಪತ್ರಿಕೆ. | ಬೆಲೆ ೩ ಪೈ

सर्वं परवशं दुःखं सर्वमात्मवशं सुखम् ॥ मनु.

ಸಂಪಾದಕರು:— ಮಂಗಳವೇಢೆ ಬಾಜೀರಾಯರ ಮಕ್ಕಳಾದ ಶ್ರೀನಿವಾಸರಾಯರು

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧ ] ಬಾಗಲಕೋಟೆ -ಗುರುವಾರ ಮಾಘ ಶುದ್ಧ ೧೧ ಶಕೆ ೧೮೫೩ ತಾರೀಖು ೧೮—೨—೩೨ [ ಸಂಚಿಕೆ ೧೪೩

# ಬಂಗಾಲದಲ್ಲಿ ಗೋಳೀಬಾರು.

## ಇಬ್ಬರು ಸತ್ತರು ಹಾಗು ೧೪ ಜನರಿಗೆ ಗಾಯ.

ಕೋಮಿಲ್ಲಾ ತಾ॥ ೧೫ — ಲಕ್ಷಮ್ ಪೋಲೀಸ ಸ್ಟೇಶನದ ಹದ್ದಿಯಲ್ಲಿಯ ಬುಸನಾಬಾದ ಎಂಬಲ್ಲಿ ಜನರು ಪೋಲೀಸರ ಮೇಲೆ ಕಲ್ಲು ಒಗೆದ ಕಾರಣ ಪೋಲೀಸರು ಅವರ ಮೇಲೆ ಗೋಳೀಬಾರ ಮಾಡಿದ್ದರಿಂದ ಇಬ್ಬರು ಸತ್ತಿದ್ದು ೧೦ ಜನರಿಗೆ ಗಾಯಗಳಾಗಿವೆ.

ನವಖಾಲಿಯಲ್ಲಿ ಸುಮಾರು ಒಂದು ಸಾವಿರ ಜನರು ಪೋಲೀಸರ ಪ್ರತಿಬಂಧಕ ಆಜ್ಞೆಯನ್ನು ಮನ್ನಿಸದೆ, ಸ್ವತಂತ್ರ ದಿನದ ನಿಮಿತ್ತವಾಗಿ ಸಭೆ ಜರುಗಿಸಲು ಹಾಗು ಮೆರವಣಿಗೆ ತೆಗೆಯಲು ಹಟ ಹಿಡಿದರು. ಈ ಮೂಲಕ ಗೊಂದಲವಾಗಿ ಪೋಲೀಸರ ಮೇಲೆ ಕಲ್ಲು ಬೀಳಹತ್ತಿದವು. ಒಬ್ಬ ಸಬ್ ಇನಸ್ಪೆಕ್ಟರ ಹಾಗು ೭ ಜನ ಪೋಲೀಸರು ಗಾಯಗೊಂಡರು. ಕೊನೆಗೆ ಪೋಲೀಸರು ಗೋಳೀಬಾರ ಮಾಡಿದರು. ಈ ಗೋಳೀಬಾರದಲ್ಲಿ ಎಷ್ಟೋ ಜನರು ಗಾಯ ಹೊಂದಿ ಬಿದ್ದರು. ಗಾಯ ಹೊಂದಿದವರಲ್ಲಿ ೧೩ ಜನರನ್ನು ಆಸ್ಪತ್ರೆಗೆ ಕಳಿಸಿದ್ದು, ಅವರಲ್ಲಿ ಇಬ್ಬರು ಅತ್ಯವಸ್ಥರಿದ್ದಾರೆ. ಜಿಲ್ಹಾಧಿಕಾರಿಗಳು ಆ ಸ್ಥಳವನ್ನು ಸಂದರ್ಶಿಸಿ ಬಂದಿದ್ದು, ಈಗ ಅಲ್ಲಿ ಪೋಲೀಸರ ಕಾವಲಿಡಲಾಗಿದೆ.

### ೧೫ ದಿವಸದಲ್ಲಿ
### ೭೦೮ ಜನರಿಗೆ ತುರಂಗವಾಸ

ಲಂಡನ್ ತಾ॥ ೧೫.— ಕಾಮನ್ಸ್ ಸಭೆಯಲ್ಲಿ ಕೇಳಲ್ಪಟ್ಟ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಭಾರತ ಮಂತ್ರಿಗಳು ಹೇಳಿದ್ದೇನಂದರೆ— ಬಹಿಷ್ಕಾರ ಚಳವಳಿ ಮೂಲಕ ಅಹ್ಮದಾಬಾದದ ಗಿರಣಿಕಾರರು ೨ ಲಕ್ಷ ೭೦ ಸಾವಿರ ರೂಪಾಯಿ ಕಿಮ್ಮತ್ತಿನ ಯಂತ್ರ ಸಾಮಗ್ರಿಯ ಆರ್ಡರನ್ನು ಹಿಂದುಗಡೆಯಲ್ಲಿ ರದ್ದು ಮಾಡಿದ್ದು, ಈ ಬಗ್ಗೆ ಹಿಂದುಸ್ಥಾನ ಸರಕಾರಕ್ಕೆ ಸಂಪೂರ್ಣ ಸಂಗತಿ ವಿಚಾರಿಸಲಾಗಿದೆ.

ಹಿಂದುಸ್ಥಾನದ ಈ ಕಳೆದ ೧೫ ದಿನದ ಪರಿಸ್ಥಿತಿ ಸಂಬಂಧವಾಗಿ ಉತ್ತರ ಕೊಡುವಾಗ ಭಾರತ ಮಂತ್ರಿಗಳು ಹೇಳಿದ್ದೇನಂದರೆ, ಮುಂಬಯಿ, ಸಂಯುಕ್ತಪ್ರಾಂತ, ಪಂಜಾಬ ಈ ಪ್ರಾಂತಗಳಲ್ಲಿ ಕೂಡಿ ಇಮರ್ಜನ್ಸಿ ಆರ್ಡಿನನ್ಸದನ್ವಯ ೧೭೩ ಜನರಿಗೆ ಕೈದು ಮಾಡಿದ್ದು, ೭೦೮ ಜನರಿಗೆ ತುರಂಗಕ್ಕೆ ಅಟ್ಟಲಾಗಿದೆ. ಇದರಂತೆ ೭ನೇ ತಾರೀಖಿಗೆ ಮುಗಿಯುವ ಒಂದು ವಾರದಲ್ಲಿ ಬಂಗಾಲದಲ್ಲಿ ಒಟ್ಟಿಗೆ ೭[illegible] ಜನರನ್ನು ಸೆರೆಹಿಡಿಯುವದರಲ್ಲಿ ಬಂದಿದೆ.

### ಬಂಗಾಲಿ ತರುಣರಿಗೆ
### ೭ ವರ್ಷ ಕಠಿಣ ಶಿಕ್ಷೆ

ಕೋಮಿಲ್ಲಾ ತಾ॥ ೧೫— ಸಂಗರೇಶದಲ್ಲಿ ಸಂಭವಿಸಿದ ಬಾಂಬಿನ ಅತ್ಯಾಚಾರದ ಸಂಬಂಧವಾಗಿ ಮೂವರು ಬಂಗಾಲಿ ತರುಣರ ಮೇಲೆ ಹಾಕಲ್ಪಟ್ಟ ಖಟ್ಲೆಯ ವಿಚಾರಣೆಯು ಇವತ್ತಿನ ದಿವಸ ಮುಗಿದು, ಇಬ್ಬರಿಗೆ ಪ್ರತ್ಯೇಕವಾಗಿ ೭ ವರ್ಷ ಕಠಿಣ ಶಿಕ್ಷೆ ವಿಧಿಸಲಾಯಿತು. ಮತ್ತು ಒಬ್ಬರನ್ನು ಬಿಡುಗಡೆ ಮಾಡಲಾಯಿತು.

### ಗೋಳಿಬಾರಕ್ಕಾಗಿ ಅಧಿಕಾರಿಗಳಿಗೆ ಶಾಸನೆ
### ಒಬ್ಬ ಅಧಿಕಾರಿಯನ್ನು ಮನೆಗೆ ಕಳಿಸಿದರು
### ೬೦ ಜನ ಪೋಲೀಸರ ಮೇಲೆ ಖಟ್ಲೆ

ಕಲಕತ್ತಾ ತಾ॥ ೧೫—ಇವತ್ತಿನ ದಿವಸ ಕಾಯದೆ ಮಂಡಳದಲ್ಲಿ ಕೇಳಲ್ಪಟ್ಟ ಪ್ರಶ್ನೆಗೆ ಉತ್ತರ ಕೊಡುವಾಗ ಬಂಗಾಲ ಸರಕಾರದ ಗೃಹಮಂತ್ರಿಗಳು ಹೇಳಿದ್ದೇನಂದರೆ, ಹಿಜಲಿ ಗೋಳೀಬಾರ ಸಂಬಂಧವಾಗಿ ವಿಚಾರಣೆಯಾದ ಬಳಿಕ ಓರ್ವ ಅಧಿಕಾರಿಯನ್ನು ನೌಕರಿ ಬಿಡಿಸಿ ಮನೆಗೆ ಕಳಿಸಿದ್ದು, ಇಬ್ಬರ ಗ್ರೇಡ ಕಡಿಮೆ ಮಾಡಲಾಗಿದೆ. ಮತ್ತು ಕೆಲವರ ಪಗಾರ ಕಡಿಮೆ ಮಾಡಿಸಿ ಇಬ್ಬರು ನಾಯಕರು ಹಾಗು ೮ ಜನ ಪೋಲೀಸರ ಮೇಲೆ ಖಟ್ಲೆ ಹಾಕಲಾಗಿದೆ.

### ತಿದ್ದುಪಡೆ

ಗೋಪಾಳ ರಾಮಚಂದ್ರ ವಾರಕರ ಎಂಬುವವರು ಗುಳೇದಗುಡ್ಡದ ಸರ್ವಾಧಿಕಾರಿಗಳಾಗಿ ನಿಯಮಿಸಲ್ಪಟ್ಟಿರುವರೆಂದು ಗುಳೇದಗುಡ್ಡದ ಸುದ್ದಿಗಾರರು ತಿಳಿಸಿದ್ದನ್ನು ನಾವು ೫—೨—೩೨ನೇ ತಾರೀಖಿನ ಸಂಚಿಕೆಯಲ್ಲಿ ಪ್ರಕಟ ಮಾಡಿರುವೆವಷ್ಟೆ. ಆದರೆ ಅವರು ಸರ್ವಾಧಿಕಾರಿಗಳಾಗಲು ತಮ್ಮ ಒಪ್ಪಿಗೆ ಕೊಟ್ಟಿಲ್ಲವೆಂದು ಈಗ ತಿಳಿದು ಬರುತ್ತದೆ. (ಸ. ಕ.)

### ಮದ್ರಾಸ ಇಲಾಖೆಯಲ್ಲಿ

### ಪೊಲೀಸರ ಪ್ರಚಂಡತನ!

ತಿರುಚನಾಪಲ್ಲಿಯಲ್ಲಿ ಅನೇಕರ ದಸ್ತಗಿರಿಗಳಾದವು. ಅವರಲ್ಲಿ ಶ್ರೀ ಸಿ. ರಾಜಗೋಪಾಲಾಚಾರ್ಯರ ಆಪ್ತ ಕಾರ್ಯದರ್ಶಿಗಳಾಗಿದ್ದ ಶ್ರೀ ಸುಬ್ಬಯ್ಯನವರೊಬ್ಬರು. ಅವರು ಮ್ಯಾಜಿಸ್ಟ್ರೇಟರ ಮುಂದೆ ಹೀಗೆ ಹೇಳಿದರು

"೫ ನೇ ತಾರೀಖಿನ ದಿವಸ ದಸ್ತಗಿರಿಯಾದ ನನ್ನ ಗೆಳೆಯ ರಾಮಸ್ವಾಮಿಗೆ ಅನ್ನ ತಂದುಕೊಡಬಹುದೆ ಎಂದು ಕೇಳಲು ೬ ನೆ ತಾರೀಖಿನ ದಿವಸ ಪೋಲೀಸ ಸ್ಟೇಶನಿಗೆ ಹೋದೆ. ಒಳಕ್ಕೆ ಹೋಗಿ ಅಂದರು; ಹೋದೆ. ಕೂಡಲೆ ಅಲ್ಲಿಯ ಪೋಲೀಸ ಅಧಿಕಾರಿಗಳೆಲ್ಲ ಸೇರಿ ನನ್ನ ಮುಖ, ಕಿವಿಗಳ ಮೇಲೆ ೧೦-೧೨ ಏಟುಗಳನ್ನು ಪಟಪಟನೆ ಕೊಟ್ಟರು. ಬೂಟು ಕಾಲಿನಿಂದ ನನ್ನನ್ನು ಒದ್ದರು. ನನಗಾದ ನೋವಿಯು ನನ್ನ ಮಿತ್ರರಾದ ಮಿ. ಕೃಷ್ಣಸ್ವಾಮಿಗೂ ಕೆ. ರುಂಬಾಲೂರು ನಟೇಶಯ್ಯರಿಗೂ ಆ ಏಟನ್ನು ಕಣ್ಣಾರೆ ಕಂಡ" ಎಂಬುದಾಗಿ ಹೇಳಿದರು.

ಅನಂತರ ಶ್ರೀ ವಿ ಕೃಷ್ಣಸ್ವಾಮಿ ಅಯ್ಯರ ಎಂ ಎ ರವರು ಕೋರ್ಟಿನಲ್ಲಿ ಈ ರೀತಿ ವರ್ಣಿಸಿದರು

೬ ನೆ ತಾರೀಖಿನ ಮಧ್ಯಾಹ್ನ ಕೋಟೆ ಪೋಲೀಸ ಸ್ಟೇಶನ್ ಬಳಿ ಹೋಗಲು ಇಬ್ಬರು ಸಬ್ ಇನಸ್ಪೆಕ್ಟರರು ದಾರಿಯಲ್ಲಿ ನಿಂತಿದ್ದರು, ಅವರಲ್ಲೊಬ್ಬನಾದ ಶ್ರೀ ಕೃಷ್ಣರಾಯನನ್ನು 'ಸ್ವಾಮಿ' ಶ್ರೀ ರಾಮಸ್ವಾಮಿಯವರ ಸ್ನೇಹಿತರು ಊಟಕ್ಕಾಗಿ ಅವರ ಊಟ ಒಯ್ಯಬಹುದೆ ಎಂದು ಕೇಳುತ್ತಿರಲು, ಸಬ್ ಇನಸ್ಪೆಕ್ಟರ ಗುಲಾಂ ಅಲ್ಲಿಗರು ಹಿಂದಿನಿಂದ ನನ್ನನ್ನು ದೂಡಿದರು. ನಾನು ಹಿಂತಿರುಗಿ ಆತನನ್ನು ಏಕೆ ದೂಡಿದೆ ಯೆಂದು ಕೇಳಿದೆ. ಅದಕ್ಕುತ್ತರವಾಗಿ ಇನ್ನೊಂದೆರಡೇಟುಗಳು ಬಿದ್ದವು. ಸ್ಟೇಶನ್ನೊಳಕ್ಕೆ ಹೋಗೆಂದಾಜ್ಞೆಯಾಯಿತು ಹೋದೆ. ಕೆಲವು ನಿಮಿಷಗಳಲ್ಲಿ ಸುಬ್ಬಯ್ಯನವರೂ ಅಲ್ಲಿಗೆ ಬಂದರು ಅವರನ್ನೂ ನನ್ನಬಳಿ ನಿಲ್ಲಿಸಿದರು ನಮ್ಮಿಬ್ಬರಿಗೆ ಡಾ. ಪೀಟರ್ಸನ್ನರಿಗೆ ದೊರೆತ ಸನ್ಮಾನ ಸಿಕ್ಕಿತು. ಮೂವರು ಪೋಲೀಸ ಅಧಿಕಾರಿಗಳು ನನ್ನ ಮೇಲೆ ಬಿದ್ದರು. ಇನ್ನು ಮೂವರು ಸುಬ್ಬಯ್ಯನನ್ನು ನೋಡಿಕೊಂಡರು. ಮಿ. ಗುಲಾಂ ಅಲ್ಲಿಗಳು ನನ್ನನ್ನು ಒದ್ದರು. ನನ್ನ ಮೇಲೆ ಉಗುಳಿದರು. ಮುಖದ ಮೇಲೆ ಹೊಡೆದರು ಇನ್ನೊಬ್ಬ ಸಬ್ ಇನಸ್ಪೆಕ್ಟರರು ನನ್ನ ಪಕ್ಕಗಳಿಗೆ ಹೊಡೆದರು. [illegible] ಆಗುತ್ತಿರಲು ಆಂಗ್ಲೋ ಇಂಡಿಯನ್ ಅಧಿಕಾರಿಯೊಬ್ಬನು ಬೆತ್ತದಿಂದ ಬೆನ್ನಮೇಲೆ ಏಕಪ್ರಕಾರವಾಗಿ ಬಾರಿಸುತ್ತಿದ್ದನು ಪ್ಯಾಮೋಲನ್ನೂ ಬಾಸುಂಡೆಗಳಿವೆ. ಬಹಳಕಾಲ ಈ ಪ್ರಕಾರವಾಯಿತು. ಅಷ್ಟುಕಾಲವೂ ಮಹಾತ್ಮನೊಬ್ಬನನ್ನು ಧ್ಯಾನಿಸುತ್ತ ನಿಂತೆನು ಆ ಮೇಲೆ ನಮ್ಮ ಹೆಸರು ಕೆಲಸ ಕೇಳಿ ಒಂದೊಂದು ಕೋಣೆಗೆ ಕಳುಹಿಸಿದರು. ನಾನು ಕಾಂಗ್ರೆಸ್ ಸದ್ಗೃಹಸ್ಥನೂ ಅಲ್ಲ, ಯಾವ ಕಾಂಗ್ರೆಸ್ ಸಭೆಗೂ ಹೋಗಿಲ್ಲ. (ವಿ. ಕ.)

---

### ಚೀನ—ಜಪಾನ ಯುದ್ಧ

೧೨೦೦ ಜಪಾನ ಸೈನಿಕರು ಮರಣ ಹೊಂದಿದರು

**ಪ್ರೆಕಂಗ ಪಟ್ಟಣದ ಮೇಲೆ ಬಾಂಬಿನ ಸುರಿಮಳೆ**

ಶಾಂಘಾಯ. ತಾ॥ ೧೪— ತಾತ್ಪೂರ್ತಿಕ ಒಪ್ಪಂದದ ಅವಧಿಯು ನಿನ್ನಿನ ದಿವಸ ಮುಗಿದಿದ್ದರಿಂದ ಚೀನ-ಜಪಾನ ಸೈನಿಕರ ನಡುವೆ ಇವತ್ತಿನ ದಿವಸ ಪುನಃ ಯುದ್ಧವು ಪ್ರಾರಂಭವಾಯಿತು. ಮುಂಜಾನೆ ೮ ಗಂಟೆಗೆ ಜಪಾನದ ೬ ವಿಮಾನಗಳು ಚಾಪೆ ಪಟ್ಟಣದ ಮೇಲೆ ಬಾಂಬಿನ ಸುರಿಮಳೆಗರೆಯುತ್ತಿವೆ. ಬ್ರಿಟಿಶ ಹಾಗು ಅಮೇರಿಕನ್ ವಕೀಲರ ಎರಡೂ ರಾಷ್ಟ್ರಗಳಲ್ಲಿ ಒಪ್ಪಂದ ಮಾಡಿಸ ಪ್ರಯತ್ನ ಮಾಡಿ ನೋಡಿದರು. ಆದರೆ ಅವರ ಕಾರ್ಯವು ಸಫಲವಾಗಲಿಲ್ಲ ಜಪಾನಿ ಜನರು ಭೂಮಿ ಹಾಗು ಸಮುದ್ರಗಳ ಮೇಲಿನ ಯುದ್ಧದ ಹಡಗುಗಳ ಮೇಲಿಂದ ಪ್ರೆಕಂಗ ನಗರ ಚಾಪೆ ಪಟ್ಟಣದ ಮೇಲೆ ಬಾಂಬು ಹಾರಿಸತೊಡಗಿದ್ದಾರೆ ೧೫೦೦ ಜನ ಜಪಾನಿ ಸೈನಿಕರು ವುಗಂಗ ಕಿಲ್ಲೆ ದಾಟಿ ಹೋಗುತ್ತಿರುವಾಗ ಚೀನಿ ಸೈನಿಕರು ಅವರ ಮೇಲೆ ತೋಫು ಹಾರಿಸಿದ್ದರಿಂದ ಜಪಾನಿ ಜನರು ಹಿಂದಿರುಗಬೇಕಾಯಿತು ಕೆಲಹೊತ್ತಿನ ಮೇಲೆ ಅವರು ಹೆಚ್ಚಿಗೆ ಜನರನ್ನು ಕೂಡಿಸಿಕೊಂಡು ಅದನ್ನು ದಾಟಿ ಹೋಗುವ ಪ್ರಯತ್ನ ಮಾಡಿದರು ಆದರೆ ಚೀನಿ ಸೈನಿಕರು ಆ ಮಾರ್ಗವನ್ನೇ ಅಡ್ಡಗಟ್ಟಿ ಅವರ ಮೇಲೆ ಹಲ್ಲೆ ಮಾಡಿದರು ಈ ಹಲ್ಲೆಯಲ್ಲಿ ೧೨೦೦ ಜನ ಜಪಾನಿ ಜನರು ಮರಣ ಹೊಂದಿರುವರು ಇಲ್ಲವೆ ಸೆರೆಯಾಳಾಗಿರುವರು ಎಂಬುದಾಗಿ ಶಾಂಘಾಯ-ಮೇಯರರ ಹೇಳಿಕೆಯಾಗಿದೆ. ಪುಸಂಗದ ಹಳ್ಳಿಯಲ್ಲಿ ಮೂವರು ಜಪಾನಿ ಸೈನಿಕರು ಮರಣ ಹೊಂದಿದ್ದು ೧೪ ಜನರು ಗಾಯಹೊಂದಿರುವರೆಂದು ರೇಗ್ಯೂ ಏಜನ್ಸಿಯಿಂದ ಸುದ್ದಿ ಬಂದಿದೆ. ಅಂತರ ರಾಷ್ಟ್ರೀಯ ವಸಾಹತಿಯಲ್ಲಿಯ ಜಪಾನಿ ರಾಣಿಯ ಮೇಲೆ ೧೨ ಸಾವಿರ ಜಪಾನಿ ಸೈನಿಕರು ಈಗಾಗಲೆ ಬಂದು ಇಳಿದುಕೊಂಡಿದ್ದು, ಇನ್ನೂ ೧೦ ಸಾವಿರ ಸೈನಿಕರು ನಾಳಿಗೆ ಬರುವವರಿದ್ದಾರೆ.

### ಕಾಶ್ಮೀರ ಸಂಸ್ಥಾನದಲ್ಲಿ ಗೋಲೀಬಾರು

**೫ ಜನರು ಮರಣ ಹೊಂದಿದರು**

ಜಮ್ಮೂ ತಾ॥ ೧೪ ಕೋಟಲಿ ಭಾಗದ ಕರೋಲ ಎಂಬ ಹಳ್ಳಿಯಲ್ಲಿ ೧೬ ಜನರನ್ನು ಧರ್ಮಾಂತರ ಮಾಡಿದ್ದು, ಇದಕ್ಕೆ ಕಾರಣರಾದವರ ಮೇಲೆ ಖಟ್ಲೆ ಹಾಕಲಾಗಿದೆ.

ಮಿರಪುರ ದಂಗೆಯಲ್ಲಿ ೧೫ ಹಿಂದೂಜನರು ಹಾಗು ೪ ಮುಸಲ್ಮಾನರು ಮರಣಹೊಂದಿದ್ದು, ೭೫ ಮನೆಗಳು ಅಗ್ನಿಗೆ ಆಹುತಿಯಾಗಿವೆ.

ಪೋಲೀಸರು ಕೆಲವು ಜನ ಆಪಾದಿತರನ್ನು ತಮ್ಮೊಂದಿಗೆ ತೆಗೆದುಕೊಂಡು ಬರುತ್ತಿರುವಾಗ ಧರ್ಮಸಿ ಎಂಬ ಹಳ್ಳಿಯ ಬಳಿಯಲ್ಲಿ ಮುಸಲ್ಮಾನ ದಂಗೆಗಾರರು ಅವರ ಮೇಲೆ ಹಲ್ಲೆ ಮಾಡಿದ್ದರಿಂದ ಪೋಲೀಸರು ಸ್ವರಕ್ಷಣೆಗಾಗಿ ಅವರ ಮೇಲೆ ಗೋಳೀಬಾರ ಮಾಡಿದರು. ಈ ಗೋಳೀಬಾರದಲ್ಲಿ ೫ ಜನರು ಮರಣ ಹೊಂದಿದರು

### ಕಮೀಶನರ ಕಚೇರಿಯ ಮೇಲೆ

ರಾಷ್ಟ್ರಧ್ವಜ

ಅಜಮೀರ. ತಾ ೧೪ - ನಿನ್ನಿನ ದಿವಸ ಇಬ್ಬರು ತರುಣರು ಕಮೀಶನರ ಕಚೇರಿಯ ಮೇಲೆ ಏರಿ ಹೋಗಿ ಅಲ್ಲಿಯ ಧ್ವಜಸ್ತಂಭಕ್ಕೆ ರಾಷ್ಟ್ರಧ್ವಜ ಹಚ್ಚಿ, ಕಾಂಗ್ರೆಸ್ ಜಯಜಯಕಾರ ಮಾಡಹತ್ತಿದರು. ಜಯಜಯಕಾರ ಕೇಳಿ ಪೋಲೀಸರು ಕೂಡಲೆ ಅಲ್ಲಿಗೆ ಬಂದು ಅವರನ್ನು ಸೆರೆಹಿಡಿದುಕೊಂಡು ಹೋದರು.

### ಪಿಸ್ತೂಲಿನ ಕಳವು

**೩ ವರ್ಷ ಕಠಿಣ ಶಿಕ್ಷೆ**

ಕಲಕತ್ತಾ ತಾ॥ ೧೩—ಓರ್ವ ಪೋಲೀಸ ಅಧಿಕಾರಿಯ ೫ ಬಾರಿನ ಪಿಸ್ತೂಲು ಕಳವು ಮಾಡಿ ಲಾಯಸೆನ್ಸ ಇಲ್ಲದೆ ಅದನ್ನು ಹತ್ತಿರ ಇಟ್ಟುಕೊಂಡಿದ್ದಕಾಗಿ ನಲಿನಿ ಮೋಹನ ಹಾಗು ಇನ್ನೊಬ್ಬ ತರುಣನಿಗೆ ೩ ವರ್ಷ ಕಠಿಣ ಶಿಕ್ಷೆ ವಿಧಿಸಲಾಯಿತು.

ಬೆಂಗಳೂರಲ್ಲಿ

### ವಿಶ್ವನಾಥನಿಗೆ ೨ ವರ್ಷ ಕಠಿಣ ಶಿಕ್ಷೆ.

ಮದ್ರಾಸ ತಾ॥ ೧೩—ಕಾಂಗ್ರೆಸ್ ಹಸ್ತಪತ್ರಿಕೆಗಳನ್ನು ಹಂಚಿದ ಸಂಬಂಧವಾಗಿ ಬೆಂಗಳೂರಲ್ಲಿ ವಿಶ್ವನಾಥ ಎಂಬ ಕಾಂಗ್ರೆಸ್ ಕೆಲಸಗಾರನಿಗೆ ೨ ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ

# ಗಲಗಲಿಯಲ್ಲಿ ಸಂಕೀರ್ತನ ಸತ್ಯಾಗ್ರಹ.

## ೧೧ ಜನರಿಗೆ ಶಿಕ್ಷೆ.

( ಸ್ವಂತ ಸುದ್ದಿಗಾರರಿಂದ ತಾ॥ ೧೬ )

ಇಲ್ಲಿಯ ನಗರ ಸಂಕೀರ್ತನ ಸತ್ಯಾಗ್ರಹದಲ್ಲಿ ಶ್ರೀ [illegible] ನಾಗಪ್ಪ, ವ ರಾಜೀನಪ, ಶೆಟ್ಟಿ ಶಿವಪ್ಪ, ಗಾಣಿಗೇರ ಇವರಿಗೆ ಸ ತಿಂಗಳು ೩ ತಿಂಗಳ ಶಿಕ್ಷೆ, ೫೧ ರು. ದಂಡ ವಿಧಿಸಲಾಯಿತು. ಮರುದಿವಸ ಶ್ರೀನಿವಾಸ ಸಂಗವು ಇವರು ಪೋಲೀಸ ಸಾಹೇಬರ ನೋಟೀಸು ಮೀರಿ ನಗರಸಂಕೀರ್ತನ ಹೊರಡಿಸಿದ್ದರಿಂದ ಕೈದು ಮಾಡಲ್ಪಟ್ಟು ಬೀಳಗಿ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ನಿಲಿಸಲ್ಪಟ್ಟರು. ಮ್ಯಾಜಿಸ್ಟ್ರೇಟರು ಇವರಿಗೆ ೬ ತಿಂಗಳ ಶಿಕ್ಷೆ ಹಾಗು ೫ ರು ದಂಡ ವಿಧಿಸಿದರು. ೧೩ ನೆ ತಾರೀಖಿನ ದಿವಸ [illegible] ಜೋಶಿ ಹಾಗು ವಾಸುದೇವ ಲಕ್ಷ್ಮಣ ಸಾವಕಾರ ಈ ಇಬ್ಬರು ತರುಣರು ನಗರ ಸಂಕೀರ್ತನ ಹೊರಡಿಸಿದ್ದರಿಂದ, ಆಂಜೀ ಮುಧೋಳ ಸಹಿತ ವಾಸುದೇವ ಸಾವುಕಾರ ಇವರನ್ನು ಕೈದು ಮಾಡಿದರು. ಇಂದೇ ಊರಲ್ಲಿ ಇವರ ವಿಚಾರಣೆಯಾಗಿ ಇವರಿಗೆ ೬ ತಿಂಗಳ ಶಿಕ್ಷೆ ಹಾಗು ೧೦ ರು ದಂಡವಾಯಿತು. ದಾನಪ್ಪ ಎಂಬವನನ್ನು ಪೋಲೀಸರು ಶೋಧ ಮಾಡಿದರು ಆದರೆ ಅವನ ಪತ್ತೆಯಾಗಲಿಲ್ಲ. ಮರುದಿವಸ ೧೪ ನೇ ತಾರೀಖಿನ ದಿವಸ ದಾನಪ್ಪನು ತನ್ನ ಮಂತ ಅಂಬಿಗೇರ ಎಂಬವನನ್ನು ಜೊತೆಮಾಡಿಕೊಂಡು ನಗರಸಂಕೀರ್ತನ ಹೊರಡಿಸಲು ಪೋಲೀಸರು ಇಬ್ಬರನ್ನೂ ಕೈದು ಮಾಡಿದರು. ದಾನಪ್ಪ ಎಂಬ ಹುಡುಗನು ಸಣ್ಣವನಿದ್ದುದರಿಂದ ಅಧಿಕಾರಿಗಳು ಆ ಹುಡುಗನ ತಂದೆಯನ್ನು ಕರೆಯಿಸಿ ಕ್ಷಮೆ ಬೇಡಲು ಮಗನಿಗೆ ಬುದ್ಧಿ ಹೇಳಬೇಕೆಂದು ತಿಳಿಸಿದರು, ಆದರೆ ಹುಡುಗನು ಧಿಟ್ಟನೂ ಹಾಗು ಧೈರ್ಯಶಾಲಿಯೂ ಇದ್ದುದರಿಂದ ಅವರ ಪ್ರಯತ್ನವು ನಿಷ್ಫಲವಾಯಿತು. ೪ ಗಂಟೆಗೆ ಮ್ಯಾಜಿಸ್ಟ್ರೇಟರು ಇಲ್ಲಿಗೆ ಬರಲು ಸತ್ಯಾಗ್ರಹಿಗಳ ವಿಚಾರಣೆಯಾಗಿ ಪ್ರತಿಯೊಬ್ಬರಿಗೆ ೬ ತಿಂಗಳ ಶಿಕ್ಷೆ ಮತ್ತು ೫ ರು. ದಂಡ ಹೇಳಲಾಯಿತು. ಇಂದೇ ಈ ಊರೊಳಗಿನ ಕೆಲವು ಸ್ಥಳಗಳಲ್ಲಿ ಬುಲೆಟಿನ್ ಪತ್ರಿಕೆಗಳನ್ನು ಅಂಟಿಸಲಾಗಿತ್ತು. ೧೫ ನೇ ತಾರೀಖಿನ ದಿವಸ ಉತ್ಸಾಹಿ ತರುಣರಾದ ಕೃಷ್ಣಾಜಿ ಶಹಾಪುರ ಹಣಮಂತಾಚಾರ್ಯ ಹುಬ್ಬಳ್ಳಿ, ರಾಮಚಂದ್ರ ದಾಸಾಚಾರ್ಯ ಗುಡಿ, ರಾಘವೇಂದ್ರ ಸಂಗಮ ಹಣಮಂತ ಗುಂಡೂ ಸಬ್ಬ ಈ ೫ ಜನರು ಇಲ್ಲಿಯ ಸೇವಾದಲದಲ್ಲಿ ಬಟ್ಟಗೇರಿ ಶಿಬಿರದಿಂದ ನಗರಸಂಕೀರ್ತನ ಹೊರಡಿಸಿ, ಊರೊಳಗಿನ ಸತಿಯೊಂದು ಓಣಿಯೊಳಗೆ ತಿರುಗಾಡಿ ಚಾವಡಿಯ ಹತ್ತರ ಬರಲು. ಪೌಜದಾರರು ಇವರನ್ನು ಕೈದುಮಾಡಿ ಬೀಳಗಿಗೆ ಕಳಿಸಿದರು. ಬೀಳಗಿಯಲ್ಲಿ ಇವರ ವಿಚಾರಣೆಯಾಗಿ ಪ್ರತಿಯೊಬ್ಬರಿಗೆ ೬ ತಿಂಗಳ ಶಿಕ್ಷೆಯಾಗಿದ್ದಲ್ಲದೆ ಮೂವರಿಗೆ ೧೫ ರು ಹಾಗು ಇಬ್ಬರಿಗೆ ೧೦ರು. ದಂಡವೂ ವಿಧಿಸಲ್ಪಟ್ಟಿತು.

### ವಿಜಾಪುರ ೧ನೇ ಸರ್ವಾಧಿಕಾರಿಗೆ
### ೧॥ ವರ್ಷ ಕಠಿಣ ಶಿಕ್ಷೆ

ವಿಜಾಪುರ ತಾ।೧೪:— ಅಜಾದ್ ಮೈದಾನದಲ್ಲಿ ಆಕ್ಷೇಪಾರ್ಹವಾದ ಭಾಷಣ ಮಾಡಿದ್ದಕ್ಕಾಗಿ ಹಿಡಿಯಲ್ಪಟ್ಟ ಇಲ್ಲಿಯ ೧ನೇ ಸರ್ವಾಧಿಕಾರಿಗಳಾದ ಶ್ರೀ ಮಠ ಇವರಿಗೆ ೧॥ ವರ್ಷ ಕಠಿಣ ಶಿಕ್ಷೆ ಹಾಗು ೧೫೦ರು ದಂಡ ಇಲ್ಲವೆ ೬॥ ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿತು

### ಗದಗಿನಲ್ಲಿ ಗಾಂಧಿ ದಿನ
### ಚಂದವ್ವ ಕುನ್ನಿಬಾವಿಮೊದಲಾದ
### ೬ ಜನರನ್ನು ಹಿಡಿದರು

(ಸ್ವಂತ ಸುದ್ದಿಗಾರರಿಂದ ತಾ॥ ೧೫)

ಇವತ್ತಿನ ದಿವಸ ಸೋಮವಾರವಿದ್ದು ವಾಡಿಕೆಯಂತೆ ಗಾಂಧಿ ದಿನಾಚರಣೆಯು ಈ ಊರಲ್ಲಿ ಆಯಿತು. ಶ್ರೀಮತಿ ಚಂದವ್ವ ಕುನ್ನಿಬಾವಿ ಎಂಬುವಳು ೫ ಜನ ಸ್ವಯಂಸೇವಕರೊಂದಿಗೆ ಶ್ರೀ ವೀರನಾರಾಯಣ ದೇವಾಲಯದಿಂದ ಹೊರಟು ಚಾವಡಿಯ ವರೆಗೆ ಬರಲು ಇಲ್ಲಿಯ ಪೋಲೀಸರು ಅವರಿಗೆ ಅಡ್ಡಿ ಮಾಡಿ, ಅವರೆಲ್ಲರನ್ನು ಹಿಡಿದುಕೊಂಡು ಹೋದರು. ಸುಮಾರು ೨೦೦ ಜನರು ಮೆರವಣಿಗೆಯನ್ನು ಹಿಂಬಾಲಿಸಿದ್ದರು. ಇವರ ಖಟ್ಲೆಯ ವಿಚಾರಣೆಯು ನಾಳಿನ ದಿವಸ ಆಗಲಿರುವದು.

### ಬಾಗಲಕೋಟೆಯಲ್ಲಿ
### ಸಂಕೀರ್ತನ ಸತ್ಯಾಗ್ರಹ.
### ಇಬ್ಬರನ್ನು ಸೆರೆಹಿಡಿದರು

ಬಾಗಲಕೋಟೆ ತಾ॥ ೧೬—ಇವತ್ತಿನ ದಿವಸ ಪುನಃ ಇಬ್ಬರು ತರುಣರು ಸಾಯಂಸಂಕೀರ್ತನ ಹೊರಡಿಸಿ ಪೋಲೀಸ ಸಾಹೇಬರ ನೋಟೀಸು ಉಲ್ಲಂಘಿಸಿದ್ದರಿಂದ ಪೋಲೀಸರು ಅವರನ್ನು ಸೆರೆಹಿಡಿದುಕೊಂಡು ಹೋದರು.

### ಕುಮಾರಿ ಮೀರಾಬೇನರಿಗೆ
### ಹದ್ದುಪಾರಿನ ನೋಟೀಸು

ಮುಂಬಯಿ ತಾ।೧೬:— ಇಲ್ಲಿಯ ನೇಪಿಯನ್ ಸೀ ರೋಡದಲ್ಲಿ ಒಂದು ಬಂಗಲೆಯಲ್ಲಿ ತಾತ್ಕಾಲಿಕನಾಗಿ ತಳವೂರಿರುವ ಕುಮಾರಿ ಮೀರಾಬೇನರ ಮೇಲೆ ಆರ್ಡಿನನ್ಸಿನ ನೋಟೀಸ ಪ್ರಯೋಗಿಸಿ, ತಾ॥೭ರೊಳಗಾಗಿ ಮುಂಬಯಿ ಹದ್ದು ಬಿಟ್ಟು ಹೋಗಬೇಕಾಗಿ ಅವರಿಗೆ ಕೇಳಿಕೊಂಡಿದ್ದಾರೆ.

### ಮೌಲಾನಾ ಅಬ್ದುಲ್ ಕಲಮ್‌ರು
### ಕಾಂಗ್ರೆಸ್ ಅಧ್ಯಕ್ಷರಾದರು

ಕಾಂಗ್ರೆಸ್ ಅಧ್ಯಕ್ಷರಾದ ಸರದಾರ ಶಾರ್ದೂಲಸಿಂಗರು ಸೆರೆಹಿಡಿಯಲ್ಪಟ್ಟಿದ್ದರಿಂದ ಅವರ ಸ್ಥಳದಲ್ಲಿ ಮೌಲಾನಾ ಅಬ್ದುಲ್ ಕಲಮ್ ಆಜಾದರು ಅಧ್ಯಕ್ಷರಾಗಿ ನಿಯಮಿಸಲ್ಪಟ್ಟಿದ್ದಾರೆ.

### ಬಳ್ಳಾರಿ ಸರ್ವಾಧಿಕಾರಿಗಳಿಗೆ
### ೬ ತಿಂಗಳ ಕಠಿಣ ಶಿಕ್ಷೆ

ಬಳ್ಳಾರಿ ತಾ॥ ೧೪— ಬಳ್ಳಾರಿ ಕಾಂಗ್ರೆಸ್ ಕಮಿಟಿಯ ಎರಡನೆ ಸರ್ವಾಧಿಕಾರಿಗಳಾದ ಬಿ. ವೆಂಕೋಬರಾಯರನ್ನು ಬಹಿಷ್ಕಾರ ಪತ್ರಿಕೆಗಳನ್ನು ಹಂಚುತ್ತಿರುವಾಗ ಪೋಲೀಸರು ಕೈದು ಮಾಡಿ ಅವರನ್ನು ವಿಚಾರಣೆಗೆ ನಿಲ್ಲಿಸಲು, ಮ್ಯಾಜಿಸ್ಟ್ರೇಟರು ಅವರಿಗೆ ೬ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೫೦ ರು ದಂಡ, ಇಲ್ಲವೆ ೧ ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆ ಕೊಟ್ಟರು

## ಮುಂಬಯಿಯಲ್ಲಿ ೩೨ ಜನರನ್ನು ಹಿಡಿದರು

ಮುಂಬಯಿ ತಾ|೧೪:— ಇವತ್ತಿನ ದಿವಸ ಇಲ್ಲಿ ಬೇರೆ ಬೇರೆ ವಾರ್ಡುಗಳಲ್ಲಿ ರಾಜಕೀಯ ಕೈದಿಗಳ ದಿನವು ಯಥಾ ರೀತಿಯಾಗಿ ಆಚರಿಸಲ್ಪಟ್ಟಿತು. ದಾದರದಲ್ಲಿಯ ಟಿಳಕ ವ್ಯಾಖ್ಯಾನದಲ್ಲಿ ರಾಷ್ಟ್ರಧ್ವಜವಂದನ ಸಮಾರಂಭ ನಡೆಯಲು ಪೋಲೀಸರು ಅಲ್ಲಿಗೆ ಬಂದು ಸವಾರ್ಥಿರಾಂ ಬಜಾರಿ ಹಾಗು ೯ ಜನರನ್ನು ಸೆರೆಹಿಡಿದುಕೊಂಡು ಹೋದರು. ಎಫ್. ವಾರ್ಡ ಕಾಂಗ್ರೆಸ್ ಕಮೀಟಿ ಪರವಾಗಿ ಕಪ್ಪಿರಿಕಾರ ವಿಭಾಗದಲ್ಲಿ ಸಂಜೆಯಲ್ಲಿ ಸಭೆ ಸೇರಿದಿರಲು ಪೋಲೀಸರು ೧೦ ಜನರನ್ನು ಕೈದು ಮಾಡಿದರು. ನಾಗುಸಯಾಜಿ ವಾಡಿಯಲ್ಲಿ ಶ್ರೀ ಟಿ. ಆರ್ ನರವಣೆಯವರು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಿರಲು ಪೋಲೀಸರು ಸಭೆಗೆ ಬಂದು ಅಲ್ಲಿಯಿಂದ ಅವರನ್ನು ವ್ಯಾಖ್ಯಾತರೊಂದಿಗೆ ಬೇರೆ ಐದು ಜನರನ್ನು ಸೆರೆಹಿಡಿದುಕೊಂಡುಹೋದರು. ಘಗ್ಯೂರ್‌ನ ಬೀದಿಯಲ್ಲಿ ಇದೇ ಪ್ರಕಾರ ಸಭೆ ಸೇರಿದಲು ೬ ಜನರು ಅಲ್ಲಿ ಸೆರೆಹಿಡಿಯಲ್ಪಟ್ಟರು. ಚೌಪಾಟಿಯಲ್ಲಿ ವಿದೇಶಿ ಹ್ಯಾಟು ಹಾಗು ಟೊಪ್ಪಿಗೆಗಳ ಹೋಳಿ ಮಾಡಲಾಯಿತು. ಪೋಲೀಸರು ಹೋಳಿಯನ್ನು ನಂದಿಸಿ ಇಬ್ಬರನ್ನು ಕೈದುಮಾಡಿಕೊಂಡುಹೋದರು. ಗಾಂಧಿ ಮಾನಮಾಡ ಭಾಗದಲ್ಲಿ ಒಬ್ಬ ಸ್ವಯಂಸೇವಕನು ಪೋಲೀಸ ಚೌಕಿಯ ಮೇಲೆ ರಾಷ್ಟ್ರಧ್ವಜ ಹಚ್ಚಲು ಚೌಕಿಯಮೇಲೆ ಹತ್ತಿ “ಚೌಕಿಯು ಕಾಂಗ್ರೆಸ್ ಭವನವಾಯಿತು” ಎಂದು ಕೂಗಿ ಅದನ್ನು ಅಲ್ಲಿ ಹಚ್ಚಿಬಿಟ್ಟನು. ಪೋಲೀಸರು ಅವನನ್ನು ಸೆರೆಹಿಡಿದಿದ್ದಾರೆ. ಇವತ್ತಿನ ದಿವಸ ಹೀಗೆ ಒಟ್ಟಿಗೆ ೩೨ ಜನರಿಗೆ ಕೈದು ಆಗಿದೆ.

ಬಂಗಾಲಿ ಮುಂದೆ ಪಿಕೆಟಿಂಗ ಮಾಡಿದ ಬಗ್ಗೆ ೪ ಜನ ಸ್ವಯಂಸೇವಕರಿಗೆ ಪ್ರತ್ಯೇಕವಾಗಿ ೬ ತಿಂಗಳ ಕಠಿಣ ಶಿಕ್ಷೆಯಾಗಿದೆ. ಡಿ ವಾರ್ಡ ಕಾಂಗ್ರೆಸ್ ಸವಾಧಿಕಾರಿಗಳಾದ ದಾಮೋದರ ಬ್ರಾಂಕೋನಾಥ ಇವರಿಗೆ ೮ ತಿಂಗಳ ಕಠಿಣ ಶಿಕ್ಷೆ ೧೦೦ ರೂ. ದಂಡ, ಇಲ್ಲವೆ ೩ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ. ಅನಧಿಕಾರ ಪತ್ರಿಕೆಗಳನ್ನು ಹಂಚಿದ್ದಕ್ಕಾಗಿ ಮ್ಯಾನವೇಂದ್ರರಾಯ ಎಂಬವರಿಗೆ ೬ ತಿಂಗಳ ಕಠಿಣ ಶಿಕ್ಷೆ ವಿಧಿಸಿದ್ದಾರೆ.

### ಬಾರ್ಡೋಲಿ ತಾಲೂಕದಲ್ಲಿ

#### ಕಂದಾಯ ವಸೂಲ

ಬಾರ್ಡೋಲಿ ತಾ|| ೪:— ತ್ಯಾಗತನಯ ದಿವಸ ಮಹಾಲಕರಿಯವರು ಕೆಲವು ಜನ ಪೋಲೀಸರು ಹಾಗು ಡಿ. ಎಸ್. ಪಿ ಯವರೊಂದಿಗೆ ಅಲಗಾಂಥ ಎಂಬ ಹಳ್ಳಿಗೆ ಹೋಗಿ, ಕಂದಾಯ ಕೊಡದಿದ್ದರೆ ಕಡುಕರ ಶಾಸನ ಮಾಡಲಾಗುವದಾಗಿ ಅಲ್ಲಿಯ ರೈತರಿಗೆ ಬೆದರಿಕೆ ಹಾಕಿದರು. ಹಂಸಜಿಭಾಯಿ ಚಿನಾಭಾಯಿ ಎಂಬ ಓರ್ವ

# ಸರ್ಪ ಸಂಹಾರ

ಎಂಥ ಭಯಂಕರ ಸರ್ಪವಿದ್ದರೂ ಸತ್ತುಬೀಳುವದು.
ಹಪ್ತು, ಚೇಳು, ಮುಂತಾದ ಸಂಕೀರ್ಣಜಂಗಮ ವಿಷವಿದ್ದರೆ ರಾಮಬಾಣ!
ಕಾಲ್ಕುಣಿ, ಪ್ಲೇಗು, ಕಾಲರಾ, ಕರೆಯುವದ ಇವು, ಗಜಕರ್ಣ ಇವು ಮೊದಲಾದ
ಸರ್ವ ರೋಗಗಳಿಗೆ ಇಂತಹ ಔಷಧವು ಸಂಸಾರದಲ್ಲಿ ಮತ್ತೊಂದಿಲ್ಲ
ಹಚ್ಚಿ, ಚಮತ್ಕಾರ ನೋಡಿರಿ. ಬಾ. ಕಿ. ೯ ರೂ. ೧ ಡಬ್ಬಿಗೆ ೮ ಆ.
ಸರ್ಪ ಸಂಹಾರ ಕಾರ್ಯಾಲಯ ಬೇಪೂ"(ವಿಜಾಪುರ)

ರಾಮಭಾಯಿ ಎಂಬ ರೈತನು ಮಹಾತ್ಮಾಗಾಂಧಿ ಹಾಗು ಸರದಾರರು ಜೇಲಿನಲ್ಲಿರುವ ವರೆಗೆ ತಾನು ತೆರಿಗೆಯನ್ನು ಕೊಡುವದಿಲ್ಲವೆಂದು ಹೇಳಿದನು. ಪೋಲೀಸರು ಅವನನ್ನು ಆಗಿಂದಾಗ್ಗೆ ಕೈದು ಮಾಡಿ ಅವನ ಮನೆಯನ್ನು ಝಡತಿ ಮಾಡಿ ಎರಡು ಕೋಟು, ಬಟ್ಟೆ ಜಪ್ತು ಮಾಡಿಕೊಂಡು ಹೋದರು. ಅಧಿಕಾರಿಗಳು ಶ್ರೀಮತಿ ಲಾಲಜೀನ ಎಂಬುವವರಿಗೆ ತೆರಿಗೆ ಕೊಡಬೇಕೆಂದು ಕೇಳಿದರು; ಅವರು ಕೊಡುವದಿಲ್ಲವೆಂದು ಉತ್ತರ ಕೊಟ್ಟರು. ಪೋಲೀಸ ಅಧಿಕಾರಿಗಳು ದಯಾಭಾಯಿ ಪಟೇಲ ಎಂಬ ಓರ್ವ ರೈತನ ತಾಯಿಯನ್ನು ಪೋಲೀಸ ಠಾಣೆಗೆ ಕರೆಯಿಸಿ ಅಲ್ಲಿ ಮೂರು ತಾಸು ಕೂಡ್ರಿಸಿ, ತೆರಿಗೆಯನ್ನು ಕೊಡಲು ಕೇಳಿಕೊಂಡರು, ಅವಳು “ತೆರಿಗೆ ಕೊಡುವದು ಬಿಡುವದು ನನಗೆ ಸಂಬಂಧಿಸಿದ ವಿಷಯವಲ್ಲ. ಬೇಕಾದರೆ ನನ್ನನ್ನು ಕೊಲ್ಲಬಹುದು” ಎಂದು ಉತ್ತರ ಕೊಟ್ಟಳು. ಆದರೆ ಅವಳ ಶಿಕ್ಷೆಯಾಗಲಿಲ್ಲ.

### ಬಾರ್ಡೋಲಿ ಹೆಂಗಸರನ್ನು

#### ಸೆರೆಹಿಡಿದರು

ಬಾರ್ಡೋಲಿ ತಾ||೧೪:— ಅಬ್ಬಾಸ ಸಾಹೇಬರ ಮಗಳಾದ ಅಮೀನಾಬೀನ ಇವರು, ಪ್ಯಾರೆಲಾಲರ ತಾಯಿಯವರಾದ ಶ್ರೀಮತಿ ಶಾರದಾದೇವಿ ಮೊದಲಾದ ೬ ಜನ ಸ್ತ್ರೀಯರೊಂದಿಗೆ ಬಾರ್ಡೋಲಿ ತಾಲೂಕದಲ್ಲಿ ಅಲ್ಲಿಯ ರೈತರ ಸ್ಥಿತಿಗತಿ ಪರೀಕ್ಷಿಸಲು ಸಂಚರಿಸುತ್ತಿರುವಾಗ ಪೋಲೀಸರು ವಾಪಾಲ ಎಂಬ ಹಳ್ಳಿಯಲ್ಲಿ ಅವರೆಲ್ಲರನ್ನು ಸೆರೆಹಿಡಿದು ಬಾರ್ಡೋಲಿಗೆ ತಂದರು.

### ಮದ್ರಾಸ ಇಲಾಖೆಯ

#### ದಬ್ಬಾಳಿಕೆಯ ಪುರಾಣ

ಮದ್ರಾಸ ತಾ||೧೩:— ಪರದೇಶಿ ಬಟ್ಟೆಯ ಅಂಗಡಿ ಮುಂದೆ ಪಿಕೆಟಿಂಗ ಮಾಡಿದ ಬಗ್ಗೆ ಕೈದಿಗಳಾಗಿದ್ದ ಇಲ್ಲಿಯ ೧ನೆ ಸರ್ವಾಧಿಕಾರಿಗಳಾದ ಕುಮಾರಿ ಶಿವಭೋಗಮ್ ಇವರಿಗೆ ೧ ವರ್ಷ ಸಾದಾ ಕಾರಾಗೃಹವಾಸ ೫೦ ರೂ. ದಂಡ ಇಲ್ಲವೆ ೧ ತಿಂಗಳ ಕಾರಾಗೃಹವಾಸದ ಶಿಕ್ಷೆ ದೊರೆತಿದೆ. ಇದೇ ಅಪರಾಧಕ್ಕಾಗಿ ನೆಲ್ಲೂರ

ದಲ್ಲಿ ೬ ಜನರಿಗೆ ಆರಾರು ತಿಂಗಳ ಕಠಿಣ ಶಿಕ್ಷೆಯಾಗಿದೆ. ಕಾಯಿದೆಭಂಗ ಚಳವಳಿ ಮೂಲಕವಾಗಿ ನೆಲ್ಲೂರಲ್ಲಿ ಶಿಕ್ಷೆಗೊಳಗಾದ ಇಬ್ಬರ ಮನೆಗೆ ಪೋಲೀಸರು ಜಪ್ತಿಯನ್ನು ಅವರ ದಂಡದ ಹಣದ ಬಗ್ಗೆ ಅವರ ನೋಟರು ಜಪ್ತ ಮಾಡಿದ್ದಾರೆ. ಪರದೇಶಿ ಬಟ್ಟೆಯ ಅಂಗಡಿ ಮುಂದೆ ಪಿಕೆಟಿಂಗ ಮಾಡಿದ್ದಕ್ಕಾಗಿ ನೆಲ್ಲೂರಲ್ಲಿ ಇಬ್ಬರಿಗೂ, ಗುಡೂರಲ್ಲಿ ಒಬ್ಬನಿಗೂ ಒಂದೊಂದು ವರ್ಷ ಕಠಿಣ ಶಿಕ್ಷೆ ಪ್ರಾಪ್ತವಾಗಿದೆ.

### ಸರದಾರ ಜವಾಯಿತ್‌ಸಿಂಗರಿಗೆ

#### ೧ ವರ್ಷ ಕಠಿಣ ಶಿಕ್ಷೆ

ಮುಂಬಯಿ ನವಜವಾನ ಭಾರತ ಸಭೆಯ ಅಧ್ಯಕ್ಷರಾದ ಜವಾಯತ್‌ಸಿಂಗರಿಗೆ ೧೨೪ನೇ ಕಲಮಿನನ್ವಯ ೧ ವರ್ಷ ಕಠಿಣ ಕಾರಾಗೃಹವಾಸ ೩೦೦ ರೂ. ದಂಡ ಇಲ್ಲವೆ ೬ ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆ ವಿಧಿಸಲಾಯಿತು.

ಸ್ಯಾಂಡಲ್) ಮಣಿ ಪೇಟಿಗಳು (ಪ್ಯಾಕ್ಟ್
ನೀಲಿ ಕಪ್ಪು, ಕೆಂಪು, ಜಾಂಬಳ ಮಸಿ
ಚೀಟುಗಳು ದೊರೆಯುತ್ತವೆ.
೫೦ ಚೀಟುಗಳಿಗೆ ೦-೧೪-೦
೧ ಸಾವಿರ „ ೩-೦-೦
೧೦ „ „ ೩೦-೦-೦ ರೇಲ್ವೆ ಫ್ರೀ
೫ ತೊಲಾ ಪಾಕೇಟುಗಳಿಗೆ ೧-೦-೦
ರಬ್ಬರ ಸ್ಟ್ಯಾಂಪ ಮಸಿ ಅರ್ಧ ಔಂಸಿನ ೯ ಡಜನ ಬಾಟ್ಲಿಗೆ } ೧-೦-೦
ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ.
ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಮೆಡಿಕಲ್ ಸ್ಟೋರ್
ನಮ್ಮಲ್ಲಿ ಎಲ್ಲ ತರದ ಪೇಟೆಂಟ ಔಷಧಗಳು ದವಾಖಾನೆಗೆ ಉಪಯುಕ್ತ ಸಾಮಾನುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ಡಾ. ಕೆ. ಜಿ. ಪರ್ವತಿ
ಮೆಡಿಕಲ್ ಸ್ಟೋರ್, ಬಾಗಲಕೋಟೆ.

ಈ ಪತ್ರಿಕೆಯನ್ನು ವೆಂಕಟೇಶ ಶೇತುರಾಮಾಚಾರ್ಯ ಕೆರೂರ ಇವರು ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿಸಿ ಅಲ್ಲಿಯೇ ಪ್ರಸಿದ್ಧಿಸಿದರು.

ರ. ನಂ. ಬಿ. ೨೭೮೮ ನಿತ್ಯ ಸಂಚಿಕೆಯು. ಬೆಲೆ. ೦–೦–೩.

यद्यत् परवशं दुःखं । यद्यदात्मवशं सुखम् ॥–मनु.

# ಕನ್ನಡಿಗ

KANNADIGA
BAGALKOT.

BI-WEEKLY
ಅರೆವಾರ ಪತ್ರಿಕೆ.

ಸಂಪಾದಕರು:– ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ—ಶನಿವಾರ ಮಿತಿ ಪುಷ್ಯ ಶುದ್ಧ ೧ ಶಕೆ ೧೮೫೨ ತಾ॥ ೨೦—೧೨—೩೦ [ ಸಂಚಿಕೆ ೧೮೩

## ಪಂಡಿತ ಜವಾಹಿರಲಾಲರು

# ಉಪವಾಸ ಮಾಡಹತ್ತಿದರು.

ಕೆಲವು ಸುರಂಗಗಳಲ್ಲಿಯ ರಾಜಕೀಯ ಕೈದಿಗಳು ಅಧಿಕಾರಿಗಳಿಂದ ಹೊಡೆಯಲ್ಪಟ್ಟಿರುವ ಕೆಂಟ ವಾರ್ತೆಯನ್ನು ಕೇಳಿ, ನೈನಿ ಜೇಲದಲ್ಲಿಯ ಪಂಡಿತ ಜವಾಹಿರಲಾಲ ನೆಹರು, ಡಾ. ಸಯ್ಯದ ಮಹಮ್ಮದ, ನರಹದಾಸಿಂಗ ಮತ್ತು ಆರ್. ಎಸ್. ಪಂಡಿತ ಈ ನಾಲ್ವರು ಅವರಿಗೆ ಸಹಾನುಭೂತಿಪರವಾಗಿ ತಾ|೧೮ ರಿಂದ ಮೂರು ದಿನಗಳ ವರೆಗೆ ಉಪವಾಸವೃತವನ್ನು ಕೈಕೊಂಡಿದ್ದಾರೆ,

### ಹುಬ್ಬಳ್ಳಿಯಲ್ಲಿ

## ಉಡಪಿ ಗುರುರಾಜರಿಗೆ ಶಿಕ್ಷೆ

ಹುಬ್ಬಳ್ಳಿಯ ಸತ್ಯಾಗ್ರಹ ಯುದ್ಧ ಮಂಡಳದ ನಾಲ್ಕನೆಯ ಸರ್ವಾಧಿಕಾರಿಗಳಾದ ಶ್ರೀ ಉಡುಪಿ ಗುರುರಾಜರಿಗೆ, ಜವಾಹಿರಲಾಲ ದಿನದ ದಿವಸ ಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ ಬಗ್ಗೆ, ೬ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೧೦೦ ರೂ. ದಂಡ, ಹೀಗೆ ಶಿಕ್ಷೆಯು ದೊರೆತದೆ.

ಹುಬ್ಬಳ್ಳಿಯಲ್ಲಿಯ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಜೋಶಿ ಹಾಗು ಶ್ರೀ ಕಲ್ಮೇಶ್ವರಪ್ಪ ಉಗರಗೊಳ್ಳ ಇವರು ಕಾಯದೇ ಭಂಗದ ನಿಮಿತ್ತವಾಗಿ ತಾ|೧೭ನೆಯ ದಿವಸ ಬಂಧನ ಶೃಂಖಳಗಾಳಿದ್ದಾರೆ ಮೊದಲು ಸೆರೆಯಾಳಾದ ೭ಜನರೊಂದಿಗೆ ಇವರ ವಿಚಾರಣೆಯಾದರೂ ಸೋಮವಾರ ದಿವಸ ನಡೆಯತಕ್ಕದ್ದಿದೆ.

### ಹುನಗುಂದದ

## ಸ್ವಯಂಸೇವಕರಿಗೆ ಶಿಕ್ಷೆ

ಮನೆಗಳ ಮೇಲೆ ಜನಗಣತಿಯ ಅಧಿಕಾರಿಗಳು ಹಾಕಿದ ಅಂಕಿಗಳನ್ನು ಅಳಿಸಿದ್ದರ ಸಂಬಂಧವಾಗಿ ಹುನಗುಂದದಲ್ಲಿ ಬಂಧನಕ್ಕೊಳಗಾದ ಶ್ರೀ ನಾಗೇಶ ಪುರಿ, ಕಲ್ಲಪ್ಪ ಮೊದಲಾದ ೪ ಜನ ಸ್ವಯಂಸೇವಕರಿಗೆ ನಿನ್ನಿನ ದಿವಸ ಪ್ರತ್ಯೇಕವಾಗಿ ೮ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆಯೆಂದಾಗಿ ತಿಳಿಯುತ್ತದೆ. ಅವರ ವಿಚಾರಣೆಯು ಬದಾಮಿಯಲ್ಲಿ ಡಿ. ಡಿ. ಸಿಯವರ ಮುಂದೆ ನಡೆದಿತ್ತು.

### ಕಾನಪುರದಲ್ಲಿ

## ೮೩ ಜನರಿಗೆ ಕೈದು.

ಕಾನಪುರದ ಪೂದೋಟದಲ್ಲಿ ಪುನಃ ರಾಷ್ಟ್ರಧ್ವಜವನ್ನು ಏರಿಸಲು ಹೋದ ಸತ್ಯಾಗ್ರಹದ ಸಂಬಂಧವಾಗಿ ಈ ವರೆಗೆ ಅಲ್ಲಿ ೮೩ ಜನ ಸತ್ಯಾಗ್ರಹಿಗಳು ಸೆರೆಹಿಡಿಯಲ್ಪಟ್ಟಿದ್ದಾರೆ.

## ಪಂ. ಮಾಲವೀಯರಿಗೆ

### ಹೊಟ್ಟೆ ಶೂಲಿ.

ನೈನಿ ಜೇಲದಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಪಂಡಿತ ಮದನಮೋಹನ ಮಾಲವಿಯಾರವರು ಕಳೆದ ಮೂರು ನಾಲ್ಕು ದಿನಗಳಾರಭ್ಯ ಹೊಟ್ಟೆಶೂಲಿಯಿಂದ ನರಳಹತ್ತಿದ್ದರಿಂದ, ತಾ|೧೭ನೆಯ ದಿವಸ ಅವರು ಅಲಹಾಬಾದದ ಯುರೋಪಿಯನ್ ಸಿವ್ಹಿಲ್ ಹಾಸ್ಪಿಟಲಕ್ಕೆ ಕರೆದೊಯ್ಯಲ್ಪಟ್ಟಿದ್ದಾರೆ.

---

### ಕೊನೆಯುಚ್ಚು

---

### ಬಾಗಲಕೋಟೆಯಲ್ಲಿ

## ೫ ಜನರನ್ನು ಹಿಡಿದರು.

ಎಂದಿನಂತೆಯೆ ಇಂದು ನಸುಕಿನಲ್ಲಿಯಾದರೂ ಪ್ರಾತಃಸಂಕೀರ್ತನೆಯು ಜರುಗಿತು. ಸಂಕೀರ್ತನೆಯವರು ಕೋರ್ಟಿನಮುಂದಿನ ಬೀದಿಯಲ್ಲಿ ಹಾಯ್ದು ಹೋಗುತ್ತಿರುವಾಗ, ಪೋಲೀಸ ಅಧಿಕಾರಿಗಳು ಅವರಿಗೆ ನಿನ್ನಿನಂತೆ ಮತ್ತೆ ಅಪ್ಪಣೆ ಮಾಡಿ, ೫ ಜನ ಸ್ವಯಂಸೇವಕರನ್ನು ಸೆರೆಹಿಡಿದರು. ಸೆರೆಯಾಳಾದವರು ೧ ನಾರಾಯಣ ಜೋಶಿ, ೨ ವ್ಹಿ. ಜಿ ಕುಲಕರ್ಣಿ, ೩ ನೀಲಕಂಠಯ್ಯ ಬಿಟ್ಟದಪುರ, ೪ ಶಿವಯ್ಯ ಹಿರೇಮಠ, ೫ ವೆಂಕಟ ಸುಬ್ರಾವ ಇವರೆಲ್ಲರೂ ಪರಸ್ಥಳದವರೇ ಇರುತ್ತಾರೆ.

# ಬಾಗಲಕೋಟೆಯಲ್ಲಿ.

## ಪ್ರಾತಃ ಸಂಕೀರ್ತನಕ್ಕೆ ಅಡ್ವೊ. ಶ್ರೀ ರಾಘವೇಂದ್ರರಾಯರಿಗೆ ಸನ್ಮಾನ

ಬಾಗಲಕೋಟೆಯಲ್ಲಿ ಎಂದಿನಂತೆಯೇ ನಿನ್ನಿನ ದಿವಸವಾದರೂ ಪ್ರಾತಃಸಂಕೀರ್ತನೆಯು ಜರುಗಿತು. ಸಂಕೀರ್ತನೆಗಾರರು ಸಾಗಿ ಹೋಗುತ್ತಿರುವಾಗ 'ಫೌಜದಾರರು ಬರುತ್ತಾರೆ ನಿಲ್ಲಿರಿ" ಎಂದು ಕೆಲವು ಪೋಲೀಸರು ಅವರನ್ನು ಕಚೇರಿಯ ಹತ್ತರ ಹಾದಿಯಲ್ಲಿ ತಡೆದು ನಿಲ್ಲಿಸಿದರು. ಬಳಿಕ ಸ್ವಲ್ಪ ಹೊತ್ತಿನ ಮೇಲೆ ಫೌಜದಾರರು ಅಲ್ಲಿಗೆ ಬಂದು ಪರಸ್ಥಳದ ಸ್ವಯಂಸೇವಕರ ಹೆಸರು ಬೆಸೆ ಮೊದಲಾದವುಗಳನ್ನು ಬರೆದುಕೊಂಡ ಅವರನ್ನು ಹೋಗಗೊಟ್ಟರು. ಸಂಕೀರ್ತನೆಯವರು ಮುಂದಕ್ಕೆ ಸಾಗಿ ಊರೆಲ್ಲ ಸಂಚರಿಸಿದರು. ಪೋಲೀಸ ಅಧಿಕಾರಿಗಳಂದೂ ಹೋದಹೋದಲ್ಲಿ ಅವರನ್ನು ಹಿಂಬಾಲಿಸಿ, ಅವರು ಚದುರಿ ಹೋದ ಬಳಿಕ, ತಮ್ಮ ಸ್ಥಳಕ್ಕೆ ತಿರುಗಿ ಬಂದರು. ಪ್ರಾತಃಸಂಕೀರ್ತನೆಯ ಮೇಲೀಗ ಪೋಲೀಸ ಅಧಿಕಾರಿಗಳ ವಕ್ರದೃಷ್ಟಿ ಬಿತ್ತೋ ತಿಳಿಯದಾಗಿದೆ.

ಮೇಲಿನ ಕೋರ್ಟಿನಲ್ಲಿ ನಿರ್ದೋಷಿಗಳಾಗಿ ನಿರ್ಣಯಿಸಲ್ಪಟ್ಟು, ವಿಜಾಪುರ ಜೇಲಿನಿಂದ ಬಿಡುಗಡೆ ಹೊಂದಿದ ಹುನಗುಂದದ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ [illegible] ರಾಘವೇಂದ್ರರಾಯರು ನಿನ್ನಿನ ದಿವಸ ಸಂಜೆಗೆ ವಿಜಾಪುರದಿಂದ ಇಲ್ಲಿಗೆ ಬಂದರು. ನಾಗರಿಕರು ಸ್ಟೇಶನದಲ್ಲಿ ಅವರಿಗೆ ಯೋಗ್ಯ ಆದರ ಸತ್ಕಾರಗಳನ್ನು ಮಾಡಿ, ಮೆರವಣಿಗೆಯಿಂದ ಅವರನ್ನು ಊರಲ್ಲಿ ಕರೆದುಕೊಂಡು ಬಂದರು. ಸಂಜೆಗೆ ಲಾಲಬಾಜ ಚೌಕಿನಲ್ಲಿ ಸಭೆಸೇರಿಸಿ, ಅವರಿಗೆ ಸನ್ಮಾನ ಮಾಡಲಾಯಿತು. ಶ್ರೀ ರಾಘವೇಂದ್ರರಾಯರು ತಮ್ಮ ಭಾಷಣದಲ್ಲಿ 'ನನ್ನ [illegible] ರಾಷ್ಟ್ರಸೇವಕ. ಶಕ್ಯವಿದ್ದಷ್ಟು ಕಾಂಗ್ರೆಸ್ ಕಾರ್ಯವನ್ನು ಮಾಡಿದೆ. ಅದಕ್ಕೆ ನನ್ನನ್ನು ತುರುಂಗಕ್ಕೆ ಕಳಿಸಿ ಸರಕಾರದವರು ನನಗೆ ಬಹುಮಾನ ಮಾಡಿದರು, ನಾನು ಬಹಳ ದಿನಗಳವರೆಗೆ ತುರುಂಗದಲ್ಲಿರುವದು ಪರಮೇಶ್ವರನ ಮನಸಿಗೆ ಬರಲಿಲ್ಲ. ಆದ್ದರಿಂದ ಅವನು ನನ್ನನ್ನು ಬೇಗನೆ ಬಿಡುಗಡೆ ಮಾಡಿದನು. ಇನ್ನು ಮುಂದಾದರೂ ರಾಷ್ಟ್ರಸೇವೆಯಲ್ಲಿಯೇ ನನ್ನ ಪ್ರಾಣ ಕಳೆಯುವೆನು" ಮುಂತಾಗಿ ಹೇಳಿ ಜೇಲಿನಲ್ಲಿಯ ಸ್ಥಿತಿಯನ್ನು ತಿಳಿಸಿದರು. ಬಳಿಕ ಶ್ರೀಮತಿ ಸೀತಾಬಾಯಿಯವರ ಭಾಷಣವಾಯಿತು. ರಾಷ್ಟ್ರಗೀತೆಯಾಗಿ ಸಭೆಯು ಮುಕ್ತಾಯವಾಯಿತು.

### ಗದುಗಿನ

## ಹುಲಿಯು ಹೊರಬಿದ್ದಿತು

ಅಧಿಕಾರಿಗಳು ಹೊರಡಿಸಿದ ೧೪ನೆಯ ಕಲಮನ್ನು ಮುರಿದು ಶಿಕ್ಷೆಗೆ ಗುರಿಯಾದ ಡಾ. ಹುಯಿಲಗೋಳರು ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು, ಬಿಡುಗಡೆಹೊಂದಿ, ಸೋಮವಾರ ರಾತ್ರಿ ಗದುಗಿಗೆ ಬಂದರು. ತಾ| ೧೬ನೆಯ ದಿವಸ ನಗರವಾಸಿಗಳು ಅವರಿಗೆ ಸನ್ಮಾನ ಮಾಡುವದನ್ನು ನಿಶ್ಚಯಿಸಿ ಎಲ್ಲ ಸಿದ್ಧತೆಯನ್ನು ಮಾಡಿದ್ದರು. ಆದರೆ ಡಾಕ್ಟರರಿಗೆ ಒಮ್ಮಿಂದೊಮ್ಮೆ ಚಳಿಜ್ವರ ಬಂದಿದ್ದರಿಂದ ಆ ಕಾರ್ಯವು ನಿಂತುಹೋಯಿತು. ಆದರೆ ಅಂದೇ ಶ್ರೀ ರಾಮಚಂದ್ರರಾವ ನರೇಗಲ್ಲ ಎಂಬ ಸತ್ಯಾಗ್ರಹಿಯು ಬಳ್ಳಾರಿ ಜೇಲಿನಿಂದ ಬಿಡುಗಡೆಹೊಂದಿ ಬಂದಿದ್ದರಿಂದ ಅವನಿಗೆ ಸನ್ಮಾನ ಮಾಡಲಾಯಿತು. ೨-೩ ಸಾವಿರ ಜನರು ಸಭೆಗೆ ನೆರೆದಿದ್ದರು. ಶ್ರೀ ಕೃಷ್ಣಾಚಾರ್ಯ ಪೂಜಾರ ಹಾಗು ಶ್ರೀಮತಿ ಇಂದಿರಾಬಾಯಿ ಹಾವನಹಳ್ಳಿಯವರು ಒಳ್ಳೇ ಸ್ಫೂರ್ತಿದಾಯಕ ಭಾಷಣ ಮಾಡಿದರು.

## ರೈತರು ಗುಳೇಕಟ್ಟಿಕೊಂಡು ಹೋದರು

ಬಾರಡೋಲಿ ತಾಲೂಕದಲ್ಲಿಯ ಬೋಟಾ ಹಳ್ಳಿಯ ಯಾವತ್ತೂ ರೈತರು ಕರಿಗೆಯನ್ನು ಕೊಡಬಾರದೆಂಬುದನ್ನು ನಿರ್ಧರಿಸಿಕೊಂಡು, ಬಡೋದಾ ಸಂಸ್ಥಾನದಲ್ಲಿ ವಾಸಮಾಡಲು ಹಳ್ಳಿಯನ್ನು ಬಿಟ್ಟು ಹೊರಟು ಹೋಗಹತ್ತಿದ್ದಾರೆ.

### ಶ್ರೀ ಪುರಾಣಿಕರು

## ಉದ್ಯೋಗಕ್ಕೆ ಶರಣು ಹೊಡೆದರು

ಬೆಳಗಾವಿಯ ಗಿಲಗಂಚಿ ಅರಟಾಳ ಹಾಯಸ್ಕೂಲದಲ್ಲಿ ಶಿಕ್ಷಕರಾಗಿದ್ದ ಶ್ರೀ ಪುರಾಣಿಕರು ತಮ್ಮ ಉದ್ಯೋಗಕ್ಕೆ ಶರಣು ಹೊಡೆದು ಸತ್ಯಾಗ್ರಹ ಚಳವಳಿಯಲ್ಲಿ ಸೇರಿರುವರಾಗಿ ತಿಳಿದು ಬರುತ್ತದೆ.

## ಡಾ. ಖರೆಯವರಿಗೆ ಬಿಡುಗಡೆ

ಕಾಯದೆಭಂಗದ ನಿಮಿತ್ತವಾಗಿ ನಾಗಪೂರ ಜೇಲದಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಡಾ. ಖರೆಯವರ ದೇಹಸ್ಥಿತಿಯನ್ನು ಅಲ್ಲಿಯ ವೈದ್ಯ ಮಂಡಳದವರು ಪರೀಕ್ಷಿಸಿ, ಅವರನ್ನು ಕೂಡಲೆ ಬಿಡುಗಡೆಮಾಡಲು ಅಧಿಕಾರಿಗಳಿಗೆ ಕೇಳಿಕೊಂಡಕಾರಣ, ಅಧಿಕಾರಿಗಳು ಅವರನ್ನು ತಾ| ೧೫ನೆಯ ದಿವಸ ಬಿಡುಗಡೆ ಮಾಡಿದರು. ಜೇಲಿನಲ್ಲಿ ಅವರು ಎದೆಶೂಲಿಯಿಂದ ನರಳುತ್ತಿದ್ದದ್ದೇ ಅವರ ಬಿಡುಗಡೆಗೆ ಕಾರಣವಾಗಿದೆ.

## ಸತ್ಯಾಗ್ರಹ ಶಿಬಿರಕ್ಕೆ ಮುತ್ತಿಗೆ

ಹೌರಾ ಜಿಲ್ಹೆಗೆ ಸೇರಿದ ಸಂತ್ರಾಗಾಚಿ ಎಂಬಲ್ಲಿಯ ಸತ್ಯಾಗ್ರಹ ಶಿಬಿರಕ್ಕೆ ಪೋಲೀಸ ಅಧಿಕಾರಿಗಳು ತಾ| ೧೬ನೆಯ ದಿವಸ ಮುತ್ತಿಗೆಯನ್ನು ಹಾಕಿ, ೧೨ಜನ ಸ್ವಯಂಸೇವಕರನ್ನು [illegible]ಮಾಡಿ ಅದಕ್ಕೆ ತಮ್ಮ ಕೀಲಿ ಹಾಕಿಕೊಂಡು ಹೋದರು.

### ಮಂಗಳೂರಿನಲ್ಲಿ

## ಸಭೆಗಳಿಗೆ ಪ್ರತಿಬಂಧ

ಮಂಗಳೂರು ಹಾಗು ಉಡುಪಿ ಈ ಪಟ್ಟಣಗಳಲ್ಲಿ ಸಭೆ, ಮೆರವಣಿಗೆ ಮೊದಲಾದವುಗಳನ್ನು ಯಾರೂ ಮಾಡಕೂಡದೆಂದು ಮಂಗಳೂರ ಜಿಲ್ಹೆಯ ಮ್ಯಾಜಿಸ್ಟ್ರೇಟರು ಹೊರಡಿಸಿದ ಕಟ್ಟಪ್ಪಣೆಯ ಅವಧಿಯನ್ನು ಮದ್ರಾಸ ಸರಕಾರದವರು ೨ ತಿಂಗಳ ವರೆಗೆ ಮತ್ತೆ ಹೆಚ್ಚಿಗೆ ಬೆಳೆಸಿದ್ದಾರೆ.

## ಶ್ರೀ ದೇವರಾವ ದೇಶಮುಖರಿಗೆ

### ೧ ವರ್ಷ ಕಠಿಣ ಶಿಕ್ಷೆ

ಪುಣೆಯಲ್ಲಿಯ ಪ್ರಸಿದ್ಧ ರಾಷ್ಟ್ರಸೇವಕರಾದ ಶ್ರೀ ದೇವರಾವ ದೇಶಮುಖರಿಗೆ ತಾ| ೧೬ನೆಯ ದಿವಸ ೧ ವರ್ಷದ ಕಠಿಣ ಶಿಕ್ಷೆಯಾಯಿತು.

## ಜಿಲ್ಹಾ ಮ್ಯಾಜಿಸ್ಟ್ರೇಟರ ಪ್ರಕಟನೆ

ಬಾಗಲಕೋಟೆ, ಬದಾಮಿ ಮತ್ತು ರೋಣ ತಾಲೂಕುಗಳಲ್ಲಿ ಈಗ ಪ್ಲೇಗು ಹಾಗು ಕಾಲರಾ ಬೇನೆಗಳು ಸುರುವಾಗಿದ್ದು, ಜನದಟ್ಟಣೆಯ ಮೂಲಕ ಅವು ಎಲ್ಲಿಯೂ ಹಬ್ಬುವ ಸಂಭವ ಇದ್ದುದರಿಂದ, ಶ್ರೀ ಬನಶಂಕರಿ ದೇವಿಯ ಜಾತ್ರೆಗೆ ಯಾರೂ ಹೋಗಕೂಡದಾಗಿ ವಿಜಾಪುರ ಜಿಲ್ಹೆಯ ಮ್ಯಾಜಿಸ್ಟ್ರೇಟರು ಒಂದು ಪ್ರಕಟನೆಯನ್ನು ಹೊರಡಿಸಿದ್ದಾರೆ. ಆದುದರಿಂದ ಆ ಜಾತ್ರೆಗೆ ಹೋಗದಂತೆ ಜನರು ಎಚ್ಚರ ವಡತಕ್ಕದ್ದು.

# ಬೆಳಗಾವಿಯಲ್ಲಿ
# ಮುತ್ತೈಲ ಜನರನ್ನು ಹಿಡಿದರು.

[ ತಂತಿಯ ವಾರ್ತೆ ತಾ॥ ೧೯ ]

ಪಂಡಿತ ಮೋತೀಲಾಲರ ದಿನದ ನಿಮಿತ್ತವಾಗಿ ಇಂದು ಮುಂಜಾನೆ ಶಹಪುರವಾಡಿಯಲ್ಲಿ ಗಾಂಧಿ ಮೈದಾನದಲ್ಲಿ ರಾಷ್ಟ್ರಧ್ವಜವಂದನೆಯ ಸಮಾರಂಭವು ಜರುಗಿತು. ಬೆಳಗಾವಿ, ಶಹಾಪುರ ಮತ್ತು ವಡಗಾವಿ ಈ ಸ್ಥಳಗಳಲ್ಲಿಯ ಸಾವಿರಾರು ಜನರು ಕಾರ್ಯಕ್ರಮದಲ್ಲಿ ಭಾಗ ತೆಗೆದುಕೊಂಡಿದ್ದರು. ಪಂಡಿತ ಮೋತೀಲಾಲರಿಗೆ ಬೇಗನೆ ಗುಣವಾಗಲೆಂದು ಸಾರ್ವಜನಿಕವಾಗಿ ಪ್ರಾರ್ಥನೆಯು ಮಾಡಲ್ಪಟ್ಟಿತು. ಸಂಜೆಯಲ್ಲಿ ಈ ಬಗ್ಗೆ ಸಾರ್ವಜನಿಕ ಸಭೆಯು ಸೇರುತ್ತಲಿದ್ದಿದೆ. ಪ್ರಭಾತಫೇರಿಯ ೧೩ ಜನರು ೧೪೪ ನೆಯ ಕಲಮನ್ನು ಮುರಿದು ಬಂಧನಕ್ಕೊಳಗಾದರು. ಸ್ವಲ್ಪ ಹೊತ್ತಿನ ನಂತರ ೫ ಜನರು ಬಿಡುಗಡೆ ಹೊಂದಿದರು. ಪ್ರಭಾತಫೇರಿಯ ನಿಮಿತ್ತವಾಗಿ ಈ ವರೆಗೆ ಒಟ್ಟು ೯೪ ಜನರು ಸೆರೆಯಾಳಾಗಿದ್ದಾರೆ.

## ಹಾವೇರಿಯಲ್ಲಿ
## ಮೂವರಿಗೆ ಬಂಧನ

ಕೊಂಬರಡಿಗೆ ಜಂಗಲ ಸತ್ಯಾಗ್ರಹಕ್ಕೆ ಹೋಗಿದ್ದ ಶ್ರೀ ಸಿದ್ದಯ್ಯ ಕಡಕೋಳ, ಸಿದ್ದಪ್ಪ ಸೂರಣ್ಣ, ಸಿದ್ದರಾಮಪ್ಪಶೆಟ್ಟಿ ಈ ಮೂವರು ಸ್ವಯಂಸೇವಕರನ್ನು ಅಧಿಕಾರಿಗಳು ತಾ॥ ೧೫ ನೆಯ ದಿವಸ ಬಂಧಿಸಿ, ಅವರನ್ನು ಹಾವೇರಿಗೆ ಕರೆದೊಯ್ದಿರುತ್ತಾರೆ.

## ಗದುಗದಲ್ಲಿ
## ಸಿಗರೇಟಿಗೆ ಬಹಿಷ್ಕಾರ

ಗದಗ, ರೋಣ, ನರಗುಂದ ಮತ್ತು ಶಿರಹಟ್ಟಿ ಸಂಸ್ಥಾನ ಈ ಭಾಗಗಳಲ್ಲಿ ಕೂಡಿ ಪ್ರತಿ ತಿಂಗಳ ೫೦೦೦ ರುಪಾಯಿಗಳ ಸಿಗರೇಟ ಮಾರಾಟವಾಗುತ್ತಿದ್ದವು. ಆದರೆ ... ಗದುಗಿನ ಸ್ವದೇಶಿ ಮಂಡಳದವರು ಸಿಗರೇಟಿನ ವಿರುದ್ಧವಾಗಿ ಚಳವಳಿ ನಡೆಸಿದ್ದರಿಂದ ಅದರ ವ್ಯಾಪಾರವು ಕಡಿಮೆಯಾಗಿದ್ದು, ತಿಂಗಳಿಗೆ ೪೦೦ ರುಪಾಯಿಗಳು ಸಹ ಸಿಗುವದಿಲ್ಲ. ಇನ್ನು ಮುಂದೆ ಸಿಗರೇಟು ಮಾರಬಾರದೆಂದು ಅಲ್ಲಿ ವ್ಯಾಪಾರಸ್ಥರ ಕಡೆಯಿಂದ ಪ್ರತಿಜ್ಞಾಪತ್ರಿಕೆಯ ಮೇಲೆ ಅಂಕಿತವನ್ನು ತೆಗೆದುಕೊಳ್ಳುವದರಲ್ಲಿ ಬಂದಿದೆ. ಒಬ್ಬ ಅಂಗಡಿಕಾರನು ಮಾತ್ರ ಅಂಕಿತವನ್ನು ಕೊಟ್ಟಿಲ್ಲ. ಆದ್ದರಿಂದ ನಾಗರಿಕರು ಅವನ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ಹಾಕತಕ್ಕವರಿದ್ದಾರೆ.

## ಮುಡೇಶ್ವರದಲ್ಲಿ
## ೭ ಜನರಿಗೆ ಶಿಕ್ಷೆ

ಸಿಂದಿ ಗಿಡಗಳ ಗೊನೆಗಳನ್ನು ಕಡಿಯಿಸಿದ್ದರ ಬಗ್ಗೆ ಕಾರವಾರ ಜಿಲ್ಲೆಯಲ್ಲಿಯ ಮುಡೇಶ್ವರದ ಶ್ರೀ ವಾಸುದೇವ ಶೇಷಗಿರಿ ಕಾಮತ ಮೊದಲಾದ ೭ ಜನರಿಗೆ ಪ್ರತ್ಯೇಕವಾಗಿ ೧॥ ವರ್ಷ ಕಠಿಣ ಕಾರಾಗೃಹವಾಸ ಹಾಗು ೨೫೦ ರು. ದಂಡ ಹೀಗೆ ಶಿಕ್ಷೆಗಳಾಗಿವೆ.

## ಶ್ರೀ ವಿಠ್ಠಲಭಾಯಿಯವರಿಗೆ
### ಅನಾರೋಗ್ಯ

ಮುಂಬಯಿ ಕಾಯದೆ ಮಂಡಳದ ಸಭಾಸದರಾದ ಶ್ರೀ ನರೀಮನ್ ಖಂಜೆಟ್ಟಿಯವರು ಯೆರವಡೆ ಮುತ್ತಾಕ ಜೇಲಿನಲ್ಲಿ ಶ್ರೀ ವಿಠ್ಠಲಭಾಯಿಯವರನ್ನು ಕಂಡುಕೊಂಡು, ಅವರ ಪ್ರಕೃತಿಯ ವಿಷಯವಾಗಿ ಅವರೊಡನೆ ಮಾತುಕತೆಯಾಡಿದರು. ಶ್ರೀ ಪಟೇಲರ ಪ್ರಕೃತಿಯು ದಿನದಿನಕ್ಕೂ ಕೆಡತಕ್ಕದೆಯೆಂದೂ, ಅವರ ದೇಹಸ್ಥಿತಿಯನ್ನು ಪರೀಕ್ಷಿಸಿ ಔಷಧೋಪಚಾರವನ್ನು ನಡಿಸಲು ತಕ್ಕ ಏರ್ಪಾಡುಗಳು ಸರಕಾರದವರಿಂದ ಮಾಡಲ್ಪಟ್ಟಿಲ್ಲವೆಂದೂ ಅವರಿಗೆ ಕಂಡು ಬಂತು. ಆದ್ದರಿಂದ ಅವರು ಶ್ರೀ ಸಿ. ವ್ಹಿ. ವೆಂಕಟರಮಣ ಅಯ್ಯಂಗಾರ, ಶ್ರೀ ರತನಸ್ವಭಾಪತಿ ಮುದಲಿಯಾರ ಇವರೊಂದಿಗೆ ಕೂಡಿ ಮದ್ರಾಸ ಸರಕಾರದ ಶಾಸನಮಂತ್ರಿಗಳನ್ನು ಕಂಡುಕೊಂಡು, ವಿಠ್ಠಲಭಾಯಿಯವರ ದೇಹಸ್ಥಿತಿಯನ್ನು ಪರೀಕ್ಷಿಸಲು ಅವರ ಡಾಕ್ಟರರಿಗೆ ಅಪ್ಪಣೆಯನ್ನು ಕೊಡಬೇಕೆಂದು ಮತ್ತು ಒಬ್ಬ 'ಅ' ವರ್ಗದ ಸೆರೆಯಾಳನ್ನು ಅವರ ಜೊತೆಯಲ್ಲಿ ಇರಿಸಬೇಕೆಂದು ಅವರಿಗೆ ವಿನಂತಿ ಮಾಡಿಕೊಂಡರು. ಶ್ರೀ ಪಟೇಲರು ಬೇಗನೆ 'ಅ' ವರ್ಗದ ಉಪಚಾರ ಹೊಂದುವವರಿದ್ದಾರಾಗಿ ತಿಳಿಯುತ್ತದೆ.

## ದಿಲ್ಲಿಯಲ್ಲಿ
## ಮನೆಗಳ ಝಡತಿ

ದಿಲ್ಲಿಯ ಪೋಲೀಸ ಅಧಿಕಾರಿಗಳು ತಾ॥ ೧೭ ನೆಯ ದಿವಸ ಅಲ್ಲಿಯ "ತೇಜ" ಪತ್ರಿಕೆಯ ಕಚೇರಿ ಹಾಗು ಶ್ರೀ ದೇಶಬಂಧುರವರ ಮನೆಗಳಿಗೆ ಮುತ್ತಿಗೆಯನ್ನು ಹಾಕಿ ಝಡತಿ ಮಾಡಿದರು. ಆಕ್ಷೇಪಾರ್ಹ ಕಾಗದಪತ್ರಗಳೇನೂ ಸಿಗಲಿಲ್ಲ.

ಸಿಂದಿ ಅಂಗಡಿಗಳ ಪಿಕೆಟಿಂಗಕ್ಕಾಗಿ ೧೭ ಜನರು ಕೈದು ಮಾಡಲ್ಪಟ್ಟಿದ್ದು, ಅವರಲ್ಲಿ ೮ ಜನರು ಸ್ತ್ರೀಯರಿರುತ್ತಾರೆ.

## ಹಸ್ತೆಯನ್ನು ಬಿಟ್ಟುಬಿಡಬೇಕು

ಈ ವರ್ಷದ ಬೆಳೆ ಹಾಗು ಹೋದ ವರ್ಷದ ಬೆಳೆ ಮೊರಬದಲ್ಲಿ ಅನುಕ್ರಮವಾಗಿ ೩ ಆ. ೧೦ ಪೈ. ಹಾಗು ೩ ಆ ೧೧ ಪೈ. ಇದ್ದದ್ದರಿಂದ ಈ ವರ್ಷದ ಹಸ್ತೆಯನ್ನು ಬಿಟ್ಟುಬಿಡಬೇಕೆಂದು ಆ ಗ್ರಾಮದ ಪಂಚರು ಮತ್ತು ರೈತರು ಧಾರವಾಡ ಜಿಲ್ಹೆಯ ಕಲೆಕ್ಟರರಿಗೆ ಅರ್ಜಿ ಮಾಡಿದಾರೆ.

## ಅಹಮ್ಮದನಗರದಲ್ಲಿ
## ಸಪ್ತರ್ಷಿಗಳಿಗೆ ಸೆರೆಮನೆ

ಅಹಮ್ಮದನಗರದಲ್ಲಿಯ ಪ್ರಸಿದ್ಧ ವಕೀಲರಾದ ಶ್ರೀ ಸಪ್ತರ್ಷಿಯವರಿಗೆ ತಾ. ೩. ಕೋರ್ಟ ದಿನ ೧೭ ಹಾಗೆ ಅಡವಿಯ ಕಾಯದೆಯ ೨೬ ಈ ಕಲಮುಗಳನ್ವಯ ೩ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೧೦೦ ರು. ದಂಡ, ಇಲ್ಲವೆ ಮತ್ತೆ ೧೫ ದಿನಗಳ ಕಾರಾಗೃಹವಾಸ ಹೀಗೆ ಶಿಕ್ಷೆಯು ದೊರೆತಿದೆ. ಇವರು ಒಮ್ಮೆ ಮುಂಬಯಿ ಕಾಯದೆಮಂಡಳದ ಸಭಾಸದರಿದ್ದರು.

## ಮ್ಯಾಜಿಸ್ಟ್ರೇಟರು
## ರಾಜೀನಾಮೆ ಕೊಟ್ಟರು

ಮಧ್ಯಪ್ರಾಂತಕ್ಕೆ ಸೇರಿದ ವರ್ಧಾದಲ್ಲಿಯ ಆನರರಿ ಮ್ಯಾಜಿಸ್ಟ್ರೇಟರಾದ ಶ್ರೀ ವಾಸುದೇವರಾವ ದೇಶಮುಖರವರು ಸರಕಾರಿ ದಬ್ಬಾಳಿಕೆಯ ವಿರೋಧಾರ್ಥವಾಗಿ ಮ್ಯಾಜಿಸ್ಟ್ರೇಟ ಪದಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ.

## ಸೊಲ್ಲಾಪುರದ ಅರೋಪಿಗಳಿಗೆ

### ಜೀವದಾನ

ಮುಂಬಯಿಯ ಶ್ರೀಮತಿ ಲಕ್ಷ್ಮೀಬಾಯಿ ಜಗಮೋಹನದಾಸರು ೧೪ ಸ್ತ್ರೀಸಂಘಗಳ ಪರವಾಗಿ ವ್ಹಾಯಿಸರಾಯರು ಹಾಗು ಅವರ ಪತ್ನಿಯವರಿಗೆ, ಸೊಲ್ಲಾಪುರದ ೪ ಜನ ಆರೋಪಿಗಳಿಗೆ ದಯ ತೋರಿಸಿ ಜೀವದಾನ ಕೊಡಬೇಕೆಂದು ತಾರಿನಿಂದ ವಿನಂತಿ ಮಾಡಿಕೊಂಡಿದ್ದಾರೆ.

ಅಹಮ್ಮದಾಬಾದ ಗಿರಣಿಯ ಸಂಘದವರು ಹಾಗು ಅಲ್ಲಿಯ ಇತರ ೧೩ ವ್ಯಾಪಾರಿ ಸಂಘದವರು ಸೊಲ್ಲಾಪುರದ ೪ ಜನ ಆರೋಪಿಗಳಿಗೆ ದಯೆತೋರಿಸಲು ಜಾರ್ಜ ಬಾದಶಹರು ಮುಖ್ಯ ಮಂತ್ರಿಗಳು, ಭಾರತ ಮಂತ್ರಿಗಳು ಮಿ ಫೆನರ ಬ್ರೊಕವೇ, ಮಿ. ಬೆನ್ ವ್ಯಾಕ್ಸ್‌ಟನ್, ವ್ಹಾಯಿಸರಾಯರು ಹಾಗು ಮುಂಬಯಿ ಗವ್ಹರ್ನರ ಇವರುಗಳಿಗೆ ತಂತಿಗಳನ್ನು ಕಳಿಸಿದ್ದಾರೆ.

## ರೇಲ್ವೆ ಕೂಲಿಕಾರರು

### ಸಂಬಳ ತೆಗೆದುಕೊಳ್ಳಲಿಲ್ಲ

( ಸುದ್ದಿಗಾರರಿಂದ )

ಎಂ. ಎಸ್. ಎಂ. ರೇಲ್ವೆ ಕಾರಖಾನೆಯಲ್ಲಿಯ ಕೆಲಸಗಾರರಿಗೆ ಸಂಬಳದಲ್ಲಿ ಯೋಗ್ಯ ಬಡತಿಯು ಇನ್ನೂ ವರೆಗೆ ಸಿಗದ್ದರಿಂದ, ಅದು ದೊರೆಯುವ ವರೆಗೆ ಸಂಬಳವನ್ನು ತೆಗೆದುಕೊಳ್ಳುವದಿಲ್ಲವೆಂದು ಅವರು ನಿಶ್ಚೈಸಿಕೊಂಡಿದ್ದಾರೆ. ಹುಬ್ಬಳ್ಳಿಯಲ್ಲಿಯ ಸುಮಾರು ೩೦೦೦ ಜನರು ಈ ತಿಂಗಳದ ಸಂಬಳವನ್ನು ತೆಗೆದುಕೊಂಡಿಲ್ಲ. ಕೂಲಿಕಾರರು ಶ್ರೀ ಗಿರಿಯವರ ಆಗಮನವನ್ನು ಪ್ರತೀಕ್ಷಿಸುತ್ತ ಕುಳಿತಿದ್ದಾರೆ.

### ಪಂಚಮಹಾಲದಲ್ಲಿ

### ಕರನಿರಾಕರಣೆಯು

ಪಂಚಮಹಾಲ ಜಿಲ್ಹೆಯಲ್ಲಿ ತಾ|| ೫ರಿಂದ ಪಟ್ಟಿಯ ವಸೂಲಿಯ ಕಾರ್ಯವು ಪ್ರಾರಂಭವಾಗಲಿಕ್ಕಿದ್ದಿದೆ ಗೋಧ್ರಾ ಮತ್ತು ಹಲೋಲ ತಾಲೂಕಗಳ ಖಾತೇದಾರರು ತೆರಿಗೆಯನ್ನು ಕೊಡುವದಿಲ್ಲವೆಂದು ನಿರ್ಧರಿಸಿಕೊಂಡು ಕುಳಿತಿದ್ದಾರೆ. ತೆರಿಗೆಯನ್ನು ಕೊಡಬೇಡಿರೆಂದು ಉಪದೇಶ ಮಾಡುತ್ತ ಸ್ವಯಂಸೇವಕರು ಹಳ್ಳಿಗಳಲ್ಲಿ ಸಂಚರಿಸಹತ್ತಿದ್ದಾರೆ. ಪಂಚಮಹಾಲ ಕಾಂಗ್ರೆಸ್ ಕಮಿಟಿಯ ಸರ್ವಾಧಿಕಾರಿಗಳಾದ ಡಾ. ಮಾಣಿಕಲಾಲ ಠಕ್ಕರವರೂ ಈ ಬಗ್ಗೆ ಅಲ್ಲಲ್ಲಿ ಜಾಗೃತಿಮಾಡಹತ್ತಿದ್ದಾರೆ.

## ಶ್ರೀಮತಿ ಲಕ್ಷ್ಮೀದೇವಿಗೆ

### ೩ ತಿಂಗಳ ಶಿಕ್ಷೆ

ಪೋಲೀಸ ಅಧಿಕಾರಿಗಳು ಹೊರಡಿಸಿದ ಕಟ್ಟಪ್ಪಣೆಯನ್ನು ಮುರಿದು ಪ್ರಭಾತ ಫೇರಿಯನ್ನು ಹೊರಡಿಸಿದ್ದರ ಬಗ್ಗೆ ಸಿಂಧ ಪ್ರಾಂತದ ಶಿಕಾರಪುರದಲ್ಲಿ ಬಂಧನಕ್ಕೊಳಗಾದ ಶ್ರೀಮತಿ ಲಕ್ಷ್ಮೀದೇವಿಯವರಿಗೆ ೩ ತಿಂಗಳ ಸಾದಾ ಶಿಕ್ಷೆಯು ಪ್ರಾಪ್ತವಾಗಿದೆ

### ಮುಂಬಯಿಯಲ್ಲಿ

### ಶ್ರೀ ಕೊಪ್ಪೀಕರರಿಗೆ ಕೈದು

ಕೆಲವು ದಿನಗಳ ಹಿಂದೆ ಮುಂಬಯಿಯಲ್ಲಿ ಲ್ಯಾಮಿಂಗಟನ್ ರೋಡದಲ್ಲಿ ನಡೆದ ಬಾಂಬಿನ ಅತ್ಯಾಚಾರದ ಸಂಬಂಧವಾಗಿ ಶ್ರೀ ಪ್ರಭಾಕರ ಭವಾನಿಶಂಕರ. ಕೊಪ್ಪೀಕರರೆಂಬ ಓರ್ವ ತರುಣರು ಮೊನ್ನಿನ ದಿವಸ ಕೈದು ಮಾಡಲ್ಪಟ್ಟಿದ್ದಾರೆ.

### "ಪ್ರಳಯ ಶಿಖಾ"ಕಾರರಿಗೆ

### ೬ ತಿಂಗಳ ಕ. ಶಿಕ್ಷೆ

ಕಲಕತ್ತೆಯ ಪ್ರಬುದ್ಧ ಕವಿಗಳಾದ ಕಾಜಿ ನಜರುಲ್ ಇಸ್ಲಾಮರು "ಪ್ರಳಯ ಶಿಖಾ"ವೆಂಬ ಕಾವ್ಯವನ್ನು ಪ್ರಸಿದ್ಧ ಪಡಿಸಿದ್ದರ ಬಗ್ಗೆ ೧೨೪ ಅ ಕಲಮಿನನ್ವಯ ೬ ತಿಂಗಳ ಕಠಿಣ ಶಿಕ್ಷೆಯು ದೊರೆತಿದೆ.

### ಲೋಕಲ್ ಬೋರ್ಡದ ಹಣವು

### ಜಪ್ತಿಯಾಯಿತು.

ಬೋರಸಾದ ತಾಲೂಕ ಲೋಕಲ್ ಬೋರ್ಡದ ಓರ್ವ ಸಭಾಸದರಾದ ಶ್ರೀ ಜವೇರಭಾಯಿಯವರು ತಾ|| ೮ನೆಯ ದಿವಸ ಕಲವೊಂದು ಕೆಲಸದ ನಿಮಿತ್ತವಾಗಿ ಪಂಸಾರದಕ್ಕೆ ಹೋದಾಗ, ಅಲ್ಲಿಯ ಸಬ್ ಇನಸ್ಪೆಕ್ಟರರು ಅವರಲ್ಲಿಗೆ ಹೋಗಿ ಅವರ ಕಿಸೆಯೊಳಗಿನ ೧೪೭ ರೂಪಾಯಿಗಳನ್ನು ಒತ್ತಾಯದಿಂದ ತೆಗೆದುಕೊಂಡು ಹೋದರು. ತಾಲೂಕ ಲೋಕಲ್ ಬೋರ್ಡಿನ ಕೆಲಸಗಾರರಿಗಾಗಿ ಹಣದ ವಿನಿಯೋಗ ವಾಗತಕ್ಕದ್ದಿತ್ತು.

### ತಮಲುಕದಲ್ಲಿ

## ಉಪ್ಪಿನ ಕಾಯದೆಭಂಗ

ತಮಲುಕದ ನಿವಾಸಿಗಳು, ಅಧಿಕಾರಿಗಳಿಗೆ ಮುಂಗಡ ಸೂಚನೆಯನ್ನು ಕೊಟ್ಟು, ತಾ| ೧೬ ನೆಯ ದಿವಸ ೭ ಸ್ಥಳಗಳಲ್ಲಿ ಉಪ್ಪಿನ ಕಾಯದೆಭಂಗವನ್ನು ಮಾಡಿದರು. ಪೋಲೀಸ ಅಧಿಕಾರಿಗಳು ಅವರನ್ನು ಡೊಣ್ಣೆಗಳಿಂದ ಹೊಡೆದು ಚದುರಿಸಿ ೧೬ ಜನರನ್ನು ಸೆರೆಹಿಡಿದುಕೊಂಡು ಹೋದರು.


ಎಲ್ಲ ತರದ ಚಳಿಜ್ವರದ ಮೇಲೆ

ರಾಮಬಾಣದ ಗುಳಿಗೆಗಳು

ವಿಷಮಜ್ವರದ ಹೊರತಾಗಿ ಎಲ್ಲತರದ ಚಳಿಜ್ವರಗಳ ಮೇಲೆ ಈ ಗುಳಿಗೆಗಳು ಬಹಳೇ ಗುಣಕಾರಿಯಾಗಿರುವವು. ವಿಶೇಷ ಪಥ್ಯವನ್ನು ಮಾಡುವ ಕಾರಣವಿಲ್ಲ. ಹುಣಸೀ ಹಣ್ಣು ಮತ್ತು ಮಜ್ಜಿಗೆ ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ಪಡೆಯಿರಿ.

ಒಂದು ಗುಳಿಗೆಗೆ ೦-೧-೦
೧೦೦ ಗುಳಿಗೆಗಳಿಗೆ ೫-೮-೦

ಏಜಂಟರಿಗೆ ಧಾರಾಳವಾದ ಕಮಿಶನ ಕೊಡಲಾಗುವದು.

ವಿಳಾಸ:- ಕೃಷ್ಣಾಚಾರ್ಯ ಮಣ್ಣೂರ.
ಕಿಲ್ಲಾ ೭೦ ಓಣಿ, ಬಾಗಲಕೋಟೆ.

ಹಿಟ್ಟಿನ ಗಿರಣಿ ಮಾರತಕ್ಕದ್ದಿದೆ.

ಡಿಸ್ಸನ ಮೋಟರ್ ಇಂಜಿನ್ ೭|| ಬ. H. P. ಅದರ ಚಕ್ಕಿ ಸಹಿತ ಸದ್ಯಕ್ಕೆ ಚಾಲು ಇದ್ದದ್ದು ಮಾರುವದದೆ ಸಮಕ್ಷಮ ಅಥವಾ ಪತ್ರವ್ಯವಹಾರ ಮಾಡಬೇಕು

ಟಿ. ಜಿ. ದೇಸಾಯಿ c/o ಕನ್ನಡಿಗ,
ಬಾಗಲಕೋಟೆ.

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ ದೇಸಾಯಿ
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲು ಕೈಮಗ್ಗದ ಶರ್ಟಿಂಗ, ಕೋಟಿಂಗ, ಧೋತರ ಮತ್ತು ಸ್ವದೇಶೀ ಇಳಕಲ್ಲ ನಮೂನೆಯ ಸೀರೆ ಟಿಕೇಕರವಾಡಿಯ ಭಾಂಡು ಮತ್ತು ಖಣ ವಗೈರೆ ದೊರೆಯುತ್ತವೆ.

ಶಂಕರೆಪ್ಪಾ ಬಣಗಾರ
ಜವಳಿ ವ್ಯಾಪಾರಸ್ಥರು ಬಾಗಲಕೋಟೆ.


ಈ ಪತ್ರಿಕೆಯು ವೆಂಕಟೇಶ ಲಕ್ಷ್ಮಣಾಚಾರ್ಯ ಕಲೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯ ಸಂಚಿಕೆಯು. ಬೆಲೆ. ೦—೦—೩.

यद्यत् परवशं दुःखं । यद्यदात्मवशं सुखम् ॥ -मनु.

ಕನ್ನಡಿಗ

KANNADIGA BAGALKOT

BI-WEEKLY ಅರೆವಾರ ಪತ್ರಿಕೆ

ಸಂಪಾದಕರು:- ವೆಂಕಟೇಶ ಶೇತುರಾಮಾಚಾರ್ಯ ಕೆರೂರ. ಶ್ರೀ

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ—ಸೋಮವಾರ ಮಿತಿ ಪುಷ್ಯ ಶುದ್ಧ ೩ ಶಕೆ ೧೮೫೨ ತಾ|| ೨೨—೧೨—೩೦ [ ಸಂಚಿಕೆ ೧೮೮

## ಕರ್ನಾಟಕದಲ್ಲಿಯ

# ೫ ಸಂಸ್ಥೆಗಳು ಕಾಯಿದೆಗೆ ವಿರುದ್ಧಾದವು.

ಮುಂಬಯಿ ಸರಕಾರದವರು ತಾ|| ೧೯ ನೆಯ ದಿವಸ ಒಂದು ವಿಶೇಷ ಗ್ಯಾಝಿಟ್ ಹೊರಡಿಸಿ ಕೆಳಗಿನ ಸಂಸ್ಥೆ ಹಾಗು ಅವುಗಳ ಶಾಖೆಗಳನ್ನು ೧೯೦೮ ರ ಕ್ರಿಮಿನಲ್ ಲಾ. ಅಮೆಂಡಮೆಂಟ ಕಾಯದೆಯ ಪ್ರಕಾರ ಕಾಯಿದೆಗೆ ವಿರುದ್ಧವಾದ ಸಂಸ್ಥೆಗಳನ್ನಾಗಿ ಮಾಡಿದ್ದಾರೆ. ೧ ಸಿರಸಿ ತಾಲೂಕ ಕಾಂಗ್ರೆಸ್ ಕಮೀಟಿ ೨ ಬಂಕಾಪುರ ತಾಲೂಕ ಕಾಂಗ್ರೆಸ್ ಕಮೀಟಿ ಇಲ್ಲವೆ ಸತ್ಯಾಗ್ರಹ ಮಂಡಳ, ಬಂಕಾಪುರ, ೩ ಹಾವೇರಿ ತಾಲೂಕ ಕಾಂಗ್ರೆಸ್ ಕಮೀಟಿ, ಹಾವೇರಿ. ೪ ರಾಣೇಬಿನ್ನೂರ ತಾಲೂಕ ಕಾಂಗ್ರೆಸ್ ಕಮೀಟಿ ರಾಣೇಬಿನ್ನೂರ. ೫ ಗ್ರಾಮ ಸುಧಾರಕ ಸಂಘ, ಹಾಲಗೇರಿ. ತಾಲೂಕ ರಾಣೇಬಿನ್ನೂರ.

## ಸಯ್ಯದಮುಹಮ್ಮದರಿಗೆ ಬಿಡುಗಡೆ

ನೈನಿ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಡಾ. ಸಯ್ಯದ ಮುಹಮ್ಮದರು ತಾ|| ೧೮ ನೆಯ ದಿವಸ ಅನಿರೀಕ್ಷಿತವಾಗಿ ಬಿಡುಗಡೆ ಹೊಂದಿ ಹೊರಗೆ ಬಂದಿದ್ದಾರೆ. ಅವರ ತೂಕವು ೨೩ || ಪೌಂಡು ಕಡಿಮೆಯಾಗಿದೆ.

## ಶ್ರೀ. ಜೋರಾಪೂರ ಗುರುರಾಯರು.

ಕಾಯಿದೇ ಭಂಗದ ಮೂಲಕವಾಗಿ ೭ ತಿಂಗಳ ಕಠಿಣ ಶಿಕ್ಷೆಗೆ ಗುರಿಯಾಗಿ ವಿಜಾಪುರ ಜೇಲದಲ್ಲಿ ತಮ್ಮ ಶಿಕ್ಷೆಯನ್ನು ಅನುಭವಿಸುತ್ತಿದ್ದ ಇಲ್ಲಿಯ ಉತ್ಸಾಹಿ ತರುಣ ವಕೀಲರಾದ ಶ್ರೀ. ಜೋರಾಪುರ ಗುರುರಾಯರು, ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ತಾ|| ೨೦ನೆಯ ದಿವಸ ವಿಜಾಪುರ ಜೇಲದಿಂದ ಬಿಡುಗಡೆ ಹೊಂದಿದರು.

## ಹುನಗುಂದದ ೧೨ ಜನರಿಗೆ ಬಿಡುಗಡೆಯಾಯಿತು.

ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ೧೭ನೆಯ ಕಲಮಿನನ್ವಯ ೩ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೫೦ ರೂ. ದಂಡ ಹೀಗೆ ಶಿಕ್ಷೆಗೆ ಗುರಿಯಾಗಿ, ವಿಜಾಪುರ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಹುನಗುಂದದ ಶ್ರೀ. ಸಿದ್ದಪ್ಪ ಕಡಪಟ್ಟಿ, ಸಂಗನಬಸಪ್ಪಾ ಬಳುಟಗಿ, ಈಶ್ವರಪ್ಪ ಹವಾಲದಾರ, ಜಾಫರಸಾಹೇಬ ಲೈನದ, ಕೃಷ್ಣಾಚಾರ್ಯ ಅನಂತಭಟ್ಟನವರ, ಪ್ರಲ್ಹಾದಾಚಾರ್ಯ ಪಂಢರಿ, ರಾಘವೇಂದ್ರಾಚಾರ್ಯ ಕಟ್ಟಿ, ಪಾಂಡುರಂಗ ಚಿತ್ತರಗಿ, ಭೀಮರಾ ದೇಸಾಯಿ, ರಾಜೇಂದ್ರ ಜೋಶಿ, ಶ್ರೀನಿವಾಸ ನಾಡೂರ ಈ ೧೨ ಜನ ಕಾಂಗ್ರೆಸ್ ಕಾರ್ಯಕರ್ತರು ಮೇಲಿನ

ಕೋರ್ಟಿನಲ್ಲಿ ನಿರ್ದೋಷಿಗಳೆಂದು ನಿರ್ಣಯಿಸಲ್ಪಟ್ಟು ತಾ|| ೩ನೆಯ ದಿವಸ ಬಿಡುಗಡೆ ಹೊಂದಿದರು.

## ಮತ್ತೆ ೨೬ ಜನರನ್ನು ವಿಜಾಪುರಕ್ಕೆ ಒಯ್ದರು

ವಿಜಾಪುರ ಜೇಲದಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ೨೬ ಜನ ರಾಜಕೀಯ ಕೈದಿಗಳನ್ನು ತಾ|| ೧೮ ನೆಯ ದಿವಸ ರಾತ್ರಿ ವಿಜಾಪುರ ಜೇಲಿಗೆ ಒಯ್ದರೆಂದೂ, ಅವರಲ್ಲಿ ಶ್ರೀ. ಚನ್ನಬಸಪ್ಪ, ವಾಟವೆ, ಗಂಗಾವತಿ, ರಾಮಚಂದ್ರನ್, ರಾಮಾಚಾರ್ಯ, ಶಾಖಂಡಕಿ, ದಿಡ್ಡಿಮನಿ ಮೊದಲಾದವರು ಇದ್ದರೆಂದೂ ತಿಳಿದು ಬರುತ್ತದೆ.

## ಹಾವೇರಿಯಲ್ಲಿ ೪ ಜನರಿಗೆ ಶಿಕ್ಷೆ

ಅಡವಿಯ ಕಾಯದೆಭಂಗದಲ್ಲಿ ಭಾಗ ತೆಗೆದುಕೊಂಡ ಸಲುವಾಗಿ ಹಾವೇರಿಯಲ್ಲಿ ಶ್ರೀ ವೀರಯ್ಯ ಮುರಸತಿ, ಕೃಷ್ಣಾಚಾರ್ಯ ದಾವಣಗೇರಿ, ಶಿದ್ದಯ್ಯಾ ಕಡಕೋಳ ಇವರಿಗೆ ಪ್ರತ್ಯೇಕವಾಗಿ ೪ ತಿಂಗಳ ಕಠಿಣ ಕಾರಾಗೃಹವಾಸ ಮತ್ತು ಶ್ರೀ ಗಿರೆಡ್ಡಿ ಹನುಮರೆಡ್ಡಿ ಇವರಿಗೆ ೨ ತಿಂಗಳ ಕಠಿಣ ಕಾರಾಗೃಹವಾಸ ಹೀಗೆ ಶಿಕ್ಷೆಯು ವಿಧಿಸಲ್ಪಟ್ಟಿದೆ.

## ಹುಬ್ಬಳ್ಳಿಯಲ್ಲಿ ೪ ಜನರನ್ನು ಹಿಡಿದರು

ಹುಬ್ಬಳ್ಳಿಯ ಶ್ರೀ ವಿಠ್ಠಲಸಾ ಬಾಂಡಗೆ, ಶೇವಣಸಾ ಊಟಿ, ಅಂಜನಪ್ಪ ಬಳ್ಳಾರಿ, ಮತ್ತು ನಾಗಪ್ಪ ಜಂಕಾ ಈ ನಾಲ್ವರು ಅಂಚಟಗೇರಿ ಹಳ್ಳದಲ್ಲಿಯ ಚಂದನ ಗಿಡದ ತುಂಡುಗಳನ್ನು ತಂದು ತಾ|| ೧೯ ನೆಯ ದಿವಸ ಅವುಗಳನ್ನು ಹುಬ್ಬಳ್ಳಿಯಲ್ಲಿ ದುರ್ಗದ ಬೈಲಿನಲ್ಲಿ ಸಾರ್ವಜನಿಕವಾಗಿ ಲಿಲಾವು ಮಾಡಿದರು. ಲಿಲಾವಿನ ಸಮಯದಲ್ಲಿ ಪೋಲೀಸರು ಅಲ್ಲಿಗೆ ಬಂದು ಅವರನ್ನು ಸೆರೆಹಿಡಿದುಕೊಂಡು ಹೋದರು.

## ಪಂ. ಮೋತೀಲಾಲರ ದಿನ

ಪಂಡಿತ ಮೋತೀಲಾಲ ನೆಹರೂ, ಪಂಡಿತ ಮಾಳವೀಯ ಮತ್ತು ಶ್ರೀ ವಿಠ್ಠಲಭಾಯಿಯವರಿಗೆ ಆಯುರಾರೋಗ್ಯವನ್ನು ಇಚ್ಛಿಸುವದಕ್ಕಾಗಿ ತಾ|| ೧೯ ನೆಯ ದಿವಸ ಹುಬ್ಬಳ್ಳಿಯಲ್ಲಿ ಸಾರ್ವಜನಿಕ ಸಭೆ ಕೂಡಿ, ಆ ಬಗ್ಗೆ ದೇವರಲ್ಲಿ ಪ್ರಾರ್ಥನೆಯು ಮಾಡಲ್ಪಟ್ಟಿತು. ಶ್ರೀ ಕರಿಗುದರಿ, ಗೋರೇಕೆರಿ ಮತ್ತು ಶ್ರೀಮತಿ ಉಮಾಬಾಯಿ ಕುಂದಾಪುರ ಇವರು ಸಮಯೋಚಿತವಾಗಿ ಭಾಷಣ ಮಾಡಿದರು.

## ಹಾನಗಲ್ಲಿನಲ್ಲಿ ಶ್ರೀ ಅನಂತಭಟ್ಟರಿಗೆ ಶಿಕ್ಷೆ

ಹಾನಗಲ್ಲಿನ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಅನಂತಭಟ್ಟ ಕುಂದಾಪುರರಿಗೆ ಕಾಯದೆ ಭಂಗದ ನಿಮಿತ್ತವಾಗಿ ೬ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೧೦೦ ರು. ದಂಡ ಹೀಗೆ ಶಿಕ್ಷೆಯನ್ನು ವಿಧಿಸುವದಲ್ಲಿ ಬಂದಿದೆ. ಸುತ್ತುಮುತ್ತಲಿನ ಐದು ತಾಲೂಕುಗಳನ್ನು ಬಿಟ್ಟು ಹೋಗಬೇಕೆಂದು ಅಧಿಕಾರಿಗಳು ಇವರಿಗೆ ಅಪ್ಪಣೆ ಮಾಡಿದ್ದರೂ ಸಹ ಇವರು ಅದನ್ನು ಧಿಕ್ಕರಿಸಿ ಹಾನಗಲ್ಲಿನಲ್ಲಿಯೇ ಉಳಿದಿದ್ದರು.

## ಮೈಸೂರ ಸಂಸ್ಥಾನದಲ್ಲಿ ಪತ್ರಿಕೆಗಳಿಗೆ ಎಚ್ಚರಿಕೆ

ಮೈಸೂರ ಸಂಸ್ಥಾನದಲ್ಲಿಯ ೧ ತಾಯಿನಾಡು, ೨ ವಿಶ್ವಕರ್ನಾಟಕ, ೩ ಲೋಕಹಿತೈಷಿ, ೪ ಚಿತ್ರಗುಪ್ತ, ೫ ಡೆಮೊಕ್ರ್ಯಾಟ, ೬ ಪಂಚಾಚಾರ್ಯ ಪ್ರಭಾ, ೭ ಸಬೋಧ, ೮ ರಂಗಭೂಮಿ ಈ ಪತ್ರಿಕೆಗಳಿಗೆ ಮೈಸೂರ ಸರಕಾರದವರು ಒಂದು ಅಪ್ಪಣೆಯನ್ನು ಕಳಿಸಿ, ಚಳವಳಿಯ ವಿಷಯವನ್ನು ಬಹು ಎಚ್ಚರಿಕೆಯಿಂದ ಬರೆಯಲು ಅವರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಕೇವಲ ರಂಗಭೂಮಿಗೆ ಸಂಭವಿಸಿದ ವಿಷಯಗಳನ್ನೇ ಚರ್ಚಿಸುತ್ತಿರುವ "ರಂಗಭೂಮಿ"ಗೂ ಹೀಗೆ ಎಚ್ಚರಿಕೆಯನ್ನು ಕೊಟ್ಟಿರುವದು ಬಹು ಸೋಜಿಗವಾಗಿದೆ.

## ಸಾತಾರೆಯ ಮುಖಂಡರಿಗೆ ಬಿಡುಗಡೆ

ಸಾತಾರೆಯ ಕಾಂಗ್ರೆಸ್ ಮುಖಂಡರಾದ ಶ್ರೀ ಸೋಮಣ, ಪಾಟೀಲ, ಫಡೆ, ಹಡಪ ಮೊದಲಾದವರಿಗೆ ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ೧೭ ನೆಯ ಕಲಮಿನ ಅನ್ವಯ ಶಿಕ್ಷೆಯಾಗಿತ್ತು. ಅವರೆಲ್ಲರೂ ಶಿಕ್ಷೆಯ ವಿರುದ್ಧವಾಗಿ ಹಾಯಕೋರ್ಟಿಗೆ ಅಪೀಲು ಮಾಡಿದ್ದರು. ಅಲ್ಲಿ ಅವರು ನಿರ್ದೋಷಿಗಳೆಂದು ನಿರ್ಣಯಿಸಲ್ಪಟ್ಟು ಬಿಡುಗಡೆ ಹೊಂದಿದರು.

## ಗುಜರಾಥದಲ್ಲಿ ರೈತರ ನಿರ್ಧಾರ

ಗುಜರಾಥ ಪ್ರಾಂತದ ಓಲಪಾಡ ತಾಲೂಕದ ರೈತರು ಸಭೆಯಲ್ಲಿ ಕೂಡಿಕೊಂಡು, ಸರದಾರ ವಲ್ಲಭಭಾಯಿ ಇಲ್ಲವೆ ಮಹಾತ್ಮಾ ಗಾಂಧಿಯವರು ಬಂದು ಹೇಳುವ ವರೆಗೆ ಹಪ್ತೆಯನ್ನು ಯಾರೂ ಕೊಡತಕ್ಕದ್ದಲ್ಲವಾಗಿ ನಿರ್ಧರಿಸಿಕೊಂಡರು.

## ಇಡಪವೃತ್ತ ಸೇವಾದಲಕ್ಕೆ ಜಪ್ತಿ

ಇಲ್ಲಿಯ ಸೇವಾದಲ ಕಚೇರಿಯನ್ನು ಸರಕಾರದವರು ವಶಪಡಿಸಿಕೊಂಡ ಕೆಲವು ದಿನಗಳ ಮೇಲೆ, ಸೇವಾದಲದ ಸಂಘಟಕರಾದ ಶ್ರೀ. ಚಂಡೂರರವರು ಇಲ್ಲಿಯ ಧರ್ಮಶಾಲೆಯಲ್ಲಿ ಹೊಸದಾಗಿ ಸೇವಾದಲವನ್ನು ಸ್ಥಾಪಿಸಿ ಅದರ ಕಾರ್ಯವನ್ನು ಪ್ರಾರಂಭಿಸಿದ್ದರು. ಪ್ರತಿನಿತ್ಯದಲ್ಲಿಯೂ ಒಬ್ಬ ಸ್ವಯಂಸೇವಕನು ರಾಷ್ಟ್ರಧ್ವಜ ಹಾಗು ಸೇವಾದಲದ ಪಟದೊಂದಿಗೆ ಅಲ್ಲಿಗೆ ಹೋಗಿ ಅಲ್ಲಿ ಸೇವಾದಲದ ಕಚೇರಿಯನ್ನು ತೆರೆದುಕೊಂಡು ಕೂತಿರುತ್ತಿದ್ದನು. ಪೋಲೀಸ ಅಧಿಕಾರಿಗಳಾದರೂ ನಿನ್ನಿನ ವರೆಗೆ ಅದಕ್ಕೆ ಯಾವ ತರದ ಅಡ್ಡಿಯನ್ನು ಮಾಡಿದ್ದಿಲ್ಲ. ಆದರೆ ಅವರಿಗೆ ಏನು ಹೊಳೆಯಿತೋ ಏನೋ! ಮೊನ್ನೆ ಕೆಲವು ಪೋಲೀಸರು ಅಲ್ಲಿಗೆ ಹೋಗಿ ರಾಷ್ಟ್ರಧ್ವಜ ಮತ್ತು ಸೇವಾದಲದ ಪಟಗಳನ್ನು ಜಪ್ತ ಮಾಡಿದರು. ಮರುದಿವಸ ಮತ್ತೊಬ್ಬ ಸ್ವಯಂಸೇವಕನು ಅಲ್ಲಿಗೆ ಹೋಗಿ ಕಚೇರಿಯನ್ನು ತೆರೆದುಕೊಂಡು ಕುಳಿತನು. ಪೋಲೀಸ ಅಧಿಕಾರಿಗಳು ಅಂದಾದರೂ ರಾಷ್ಟ್ರಧ್ವಜ ಮತ್ತು ಸೇವಾದಲದ ಪಟವನ್ನು ಜಪ್ತ ಮಾಡಿ ಆ ಸ್ವಯಂಸೇವಕನನ್ನು ಸೆರೆಹಿಡಿದುಕೊಂಡು ಹೋದರು. ನಿನ್ನಿನಿಂದ ಮತ್ತೊಬ್ಬ ಸ್ವಯಂಸೇವಕನು ಅಲ್ಲಿ ಕಚೇರಿಯನ್ನು ತೆರೆದುಕೊಂಡು ಕುಳಿತಿದ್ದಾನೆ. ಅಧಿಕಾರಿಗಳು ಅವನನ್ನು ಇನ್ನೂ ಸೆರೆಹಿಡಿದಿಲ್ಲ. ಒಬ್ಬರ ಮೇಲೊಬ್ಬರು ಬರಹತ್ತಿದರೆ ಅವರಾದರೂ ಏನು ಮಾಡಿಯಾರು?

ಶ್ರೀ. ಶ್ರೀನಿವಾಸರಾವ ಸೀರಲಕೇರಿಯವರು ತಾ|| ೨೦ನೆಯ ದಿವಸ ಮಧ್ಯಾಹ್ನದಲ್ಲಿ ವಿಜಾಪುರ ಕಡೆಯಿಂದ ಮೋಟರದಿಂದ ಇಲ್ಲಿಗೆ ಬಂದರು.

ಸಿಂದಿಗಿಡ ಕಡಿದ ಅಪರಾಧದ ಸಲುವಾಗಿ ಬಳ್ಳಾರಿಯಲ್ಲಿ ಶಿಕ್ಷೆಗೊಳಗಾದ ಇಲ್ಲಿಯ ಶ್ರೀ. ಕೃಷ್ಣ ಕುಲಕರ್ಣಿಯವರು ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ತಾ. ೧೬ ನೆಯ ದಿವಸ ಮದ್ರಾಸ ಜೇಲದಿಂದ ಬಿಡುಗಡೆ ಹೊಂದಿ ಈಗ ಹುಬ್ಬಳ್ಳಿಗೆ ಬಂದಿದ್ದಾರೆ.

# ರಾಮದಾಸ ಗಾಂಧಿಯವರಿಗೆ ಮತ್ತೆ ಬಂಧನ.

ಮಹಾತ್ಮಾ ಗಾಂಧಿಯವರ ಚಿರಂಜೀವಿರಾದ ಶ್ರೀ ರಾಮದಾಸ ಗಾಂಧಿಯವರು ಇ. ಪಿ. ಕೋಡಿನ ೧೧೭ ಹಾಗು ಉಪ್ಪಿನ ಕಾಯ್ದೆಯ ೪೭ ಈ ಕಲಮುಗಳನ್ವಯ ತಾ|| ೧೯ ನೆಯ ದಿವಸ ಮತ್ತೆ ಸೆರೆಹಿಡಿಯಲ್ಪಟ್ಟಿದ್ದಾರೆ. ತಾ|| ೧೦ ನೆಯ ದಿವಸ ಮಾಟವಾಡಿಯಲ್ಲಿ ಭಾಷಣಮಾಡಿ ಉಪ್ಪಿನ ಕಾಯದೆಭಂಗಕ್ಕೆ ಉತ್ತೇಜನ ಕೊಟ್ಟಿರುವರೆಂಬ ಆರೋಪವು ಅವರ ಮೇಲೆ ಹೊರಿಸಲ್ಪಟ್ಟಿದೆ.

## ಪಂ ಮಾಲವೀಯರು ಮೂರ್ಛೆ ಹೊಂದಿದರು

ಪಂಡಿತ ಮದನಮೋಹನ ಮಾಲವಿಯಾರವರು ಈಗ ಅಲಹಾಬಾದ ಸಿವ್ಹಿಲ್ ಹಾಸ್ಪಿಟಲದಲ್ಲಿ ಉಪಚಾರ ಹೊಂದುತ್ತಿದ್ದು, ಅವರು ಬಹಳೇ ಅಶಕ್ತರಾಗಿರುವರು. ಒಂದು ಕಡೆಗೆ ಕುಳಿತುಕೊಳ್ಳುವಷ್ಟು ಶಕ್ತಿಯು ಸಹ ಅವರಲ್ಲಿ ಈಗ ಉಳಿದಿಲ್ಲ. ತಾ|| ೧೭ ನೆಯ ದಿವಸ ರಾತ್ರಿ ಅವರು ಸ್ವಲ್ಪ ಹೊತ್ತು ಮೂರ್ಛೆ ಹೊಂದಿ ಬಿದ್ದಿದ್ದರು. ಮೇಜರ ಒಬೇರಲ್, ಕರ್ನಲ್ ಟಾವುನೆಂಡ ಮತ್ತು ಡಾ. ಬ್ಯಾನರ್ಜಿಯವರು ಅವರಿಗೆ ಉಪಚಾರ ಮಾಡುತ್ತಿರುವರು.

### ಕರಡಿಯಲ್ಲಿ ಉಪ್ಪಿನ ಕಾಯದೆಭಂಗ.

ಗುಜರಾಥ ಪ್ರಾಂತಕ್ಕೆ ಸೇರಿದ ಕರಡಿಯಲ್ಲಿ ತಾ|| ೧೬ ನೆಯ ದಿವಸ ಜವಾಹಿರಲಾಲ ದಿನವು ಸಾಂಗವಾಯಿತು. ಸಂಜೆಯಲ್ಲಿ ಸಾರ್ವಜನಿಕ ಸಭೆಯಿತ್ತು. ಸಭೆಯಲ್ಲಿ ಜವಾಹಿರಲಾಲರ ಭಾಷಣವನ್ನು ಓದುವದು ಕಾಯದೆಗೆ ವಿರುದ್ಧವಾಗಿ ಸಿದ್ಧಪಡಿಸಿದ ಉಪ್ಪನ್ನು ಲಿಲಾವು ಮಾಡುವ ಕಾರ್ಯಕ್ರಮಗಳು ಜರಗಿದವು.

### ಶ್ರೀ ವಿಠ್ಠಲಭಾಯಿಯವರು ಮೇಜಿನಿಂದ ಕೆಳಕ್ಕೆ ಬಿದ್ದರು

ಕೋಯಿಮುತ್ತೂರದ ಸರಕಾರಿ ಡಾಕ್ಟರರು ತಾ|| ೧೮ ನೆಯ ದಿವಸ ಶ್ರೀ ವಿಠ್ಠಲಭಾಯಿಯವರ ದೇಹಸ್ಥಿತಿಯನ್ನು ಪರೀಕ್ಷಿಸಿದರು. ಶ್ರೀ ವಿಠ್ಠಲಭಾಯಿಯವರು ಶಸ್ತ್ರಕ್ರಿಯೆಯ ಕೋಣೆಗೆ ನಡೆಯುತ್ತಲೆ ಹೋದರು. ಶಸ್ತ್ರಕ್ರಿಯೆಯ ಮೇಜಿನ ಮೇಲೆ ಅವರನ್ನು ಮಲಗಿಸಿ, ಡಾಕ್ಟರರು ಅವರ ದೇಹಸ್ಥಿತಿಯನ್ನು ಪರೀಕ್ಷಿಸಲು ಪ್ರಾರಂಭಿಸುವಷ್ಟರಲ್ಲಿಯೇ ಮೇಜಿನ ಒಂದು ಭಾಗವು ಒಮ್ಮಿಂದೊಮ್ಮೆ ಮುರಿದಿದ್ದರಿಂದ ಶ್ರೀ ಪಟೇಲರು ಕೆಳಕ್ಕೆ ಬಿದ್ದರು. ಇದರಿಂದ ಅವರಿಗೆ ಮತ್ತಷ್ಟು ತೊಂದರೆಯುಂಟಾಗಿದೆ.

### ಜಂಬೂಸರದಲ್ಲಿ ರೈತರ ಜಿಗಟುತನ.

ಕಲೆಕ್ಟರ ಸಾಹೇಬರಾದ ಮಿ. ಕುರೇಶಿ ಹಾಗು ಡೆಪ್ಯೂಟಿ ಕಲೆಕ್ಟರರಾದ ಮಿ ಅಯ್ಯಂಗಾರರವರು ಕಿಜನೇರಿ ಪೋಲೀಸರನ್ನು ಸಂಗಡ ಕರೆದುಕೊಂಡು ಹೋಗಿ ಜಂಬುಸರ ತಾಲೂಕದಲ್ಲಿ ಹತ್ತಿಯನ್ನು ಎತ್ತಲು ಪ್ರಯತ್ನಿಸುತ್ತಿರುವರು. ರೈತರು ಹತ್ತಿಯನ್ನು ಕೊಡಲು ನಿರಾಕರಿಸುತ್ತಿರುವದರಿಂದ ಅವರ ಪ್ರಯತ್ನಗಳೆಲ್ಲವೂ ನಿಷ್ಫಲವಾಗಹತ್ತಿವೆ.

### ಲಾರ್ಡ ವೆಯಿಲಿಂಗಡನ್ನರು ವ್ಹಾಯಿಸರಾದರು.

ಹಿಂದಕ್ಕೆ ಮುಂಬಯಿ ಹಾಗು ಮದ್ರಾಸ ಇಲಾಖೆಗಳ ಗವ್ಹರ್ನರರಾಗಿ ಕೆಲಸ ಮಾಡಿದ ಲಾರ್ಡ ವೆಯಿಲಿಂಗಡನ್ನರು, ಈಗಿನ ವ್ಹಾಯಿಸರಾಯರ ತರುವಾಯದಲ್ಲಿ, ಹಿಂದುಸ್ಥಾನದ ವ್ಹಾಯಿಸರಾಯರಾಗಿ ನಿಯಮಿಸಲ್ಪಟ್ಟಿದ್ದಾರೆ. ಅವರು ಈಗ ಕೆನಡಾದ ಗವ್ಹರ್ನರ ಜನರಲರಿದ್ದು, ಅದರಿಂದ ಬೇಗನೆ ನಿವೃತ್ತಿಹೊಂದಿ, ಎಪ್ರಿಲ್ ತಿಂಗಳದಲ್ಲಿ ಅವರು ಇಲ್ಲಿಗೆ ಬರತಕ್ಕವರಿದ್ದಾರೆ

### ಕಾಲಿಕತ್ತದಲ್ಲಿ ೧೪ ಜನರಿಗೆ ಶಿಕ್ಷೆ

ಸಭೆ, ಮೆರವಣಿಗೆ ಮೊದಲಾದವುಗಳನ್ನು ಜರುಗಿಸಕೂಡದೆಂದು ಸಬ್ ಡಿವ್ಹಿಜನಲ್ ಮ್ಯಾಜಿಸ್ಟ್ರೇಟರು ಹೊರಡಿಸಿದ ಅಪ್ಪಣೆಯನ್ನು ಮುರಿದು, ಅವುಗಳನ್ನು ಜರಗಿಸಿದ್ದರ ಸಂಬಂಧವಾಗಿ ಕೇರಳ ಸತ್ಯಾಗ್ರಹ ಮಂಡಳದ ಸರ್ವಾಧಿಕಾರಿ ಪಿ ಮಾಧವನ್ ಹಾಗು ಮೂವರಿಗೆ ಪ್ರತ್ಯೇಕವಾಗಿ ೬ ತಿಂಗಳ ಕಠಿಣ ಶಿಕ್ಷೆಯು ಪ್ರಾಪ್ತವಾಗಿದೆ.

ಪರದೇಶಿ ಬಟ್ಟೆಯ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದ ಸಲುವಾಗಿ ೧೧ ಜನ ಸ್ವಯಂಸೇವಕರಿಗೆ ಪ್ರತ್ಯೇಕವಾಗಿ ೬ ದಿನಗಳ [illegible] ಕಠಿಣ ಶಿಕ್ಷೆಯು ದೊರೆತಿದ್ದು, ೫ ಜನರು ಮತ್ತೆ ಸೆರೆಯಾಗಿದ್ದಾರೆ.

### ಸರನದಲ್ಲಿ ಪೋಲೀಸರ ಮೇಲೆ ಗೋಳೀಬಾರು

ಬಿಹಾರ ಪ್ರಾಂತಕ್ಕೆ ಸೇರಿದ ಸರನದಲ್ಲಿ ಪೋಲೀಸರು ಜನರನ್ನು ಚದುರಿಸುವಾಗ ಜನರು ಅವರ ಮೇಲೆ ಗೋಳೀಬಾರ ಮಾಡಿದ್ದರಿಂದ ಪೋಲೀಸರಾದರೂ ತಿರುಗಿ ಗೋಳೀಬಾರ ಮಾಡಿದರು. ಎಷ್ಟೋ ಜನರಿಗೆ ಗಾಯಗಳಾಗಿವೆ

### ಉಡುಪಿಯಲ್ಲಿ ರಾಮಬಾಣಕಾರರಿಗೆ ಶಿಕ್ಷೆ

ಉಡುಪಿಯಲ್ಲಿ ಹೊರಡುತ್ತಿರುವ "ರಾಮಬಾಣ" ವೆಂಬ ಕರಪತ್ರಿಕೆಯ ಸಂಪಾದಕರಾದ ಶ್ರೀ ದೇಜಪ್ಪ ಶೆಟ್ಟರ ಇವರಿಗೆ ತಾ|| ೧೩ ನೆಯ ದಿವಸ ೬ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ.

### ಮದ್ರಾಸದಲ್ಲಿ ನಾಲ್ವರಿಗೆ ಸೆರೆಮನೆ.

ಪರದೇಶಿ ಬಟ್ಟೆಯ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದ ಸಂಬಂಧವಾಗಿ ಮದ್ರಾಸದಲ್ಲಿ ಮೂವರು ಸ್ವಯಂಸೇವಕರು ಹಾಗು ಓರ್ವ ಸ್ವಯಂಸೇವಿಕೆಯರು ಕೈದುಮಾಡಲ್ಪಟ್ಟಿದ್ದಾರೆ.

### ಶ್ರೀ ಕೃಷ್ಣಸಿಂಗರಿಗೆ ಶಿಕ್ಷೆ

ಅಧಿಕಾರಿಗಳ ಅಪ್ಪಣೆಯನ್ನು ಮುರಿದು ಮೆರವಣಿಗೆ ಹೊರಡಿಸಲು ಜನರಿಗೆ ಬೋಧಿಸಿದ ನಿಮಿತ್ತವಾಗಿ ಪಾಟಣಾದಲ್ಲಿಯ ಕಾಂಗ್ರೆಸ್ ಮುಖಂಡರಾದ ಶ್ರೀ ಕೃಷ್ಣಸಿಂಗರಿಗೆ ೧ ವರ್ಷದ ಕಠಿಣ ಕಾರಾಗೃಹವಾಸ ಶಿಕ್ಷೆಯು ದೊರೆತಿದೆ.

### ಮಿದನಾಪುರದಲ್ಲಿ ಉಪ್ಪಿನ ಕಾಯದೆಭಂಗ

ಮಿದನಾಪುರ ಜಿಲ್ಹೆಯಲ್ಲಿ ಎಷ್ಟೋ ಸ್ಥಳಗಳಲ್ಲಿ ಉಪ್ಪಿನ ಕಾಯದೆಭಂಗವು ಮತ್ತೆ ಪ್ರಾರಂಭವಾಗಿದೆ. ಡಿ. ಮ್ಯಾಜಿಸ್ಟ್ರೇಟರು ಪೋಲೀಸರನ್ನು ಸಂಗಡ ತೆಗೆದುಕೊಂಡು ಆಯಾ ಸ್ಥಳಗಳಲ್ಲಿ ಸಂಚರಿಸಹತ್ತಿದ್ದಾರೆ. ಕೊಂಟೇರಿ ಕೇಂದ್ರದಲ್ಲಿ ಮೂವರು ಸ್ವಯಂಸೇವಕರು ಬಂಧನಕ್ಕೊಳಗಾಗಿದ್ದಾರೆ.

### ಕಾಪುರಾದಲ್ಲಿ
## ೨೨ ಜನರಿಗೆ ಕೈದು

ಬರೋಡಾ ಸಂಸ್ಥಾನದ ಪೋಲೀಸ ಅಧಿಕಾರಿಗಳು ತಾ| ೧೨ನೆಯ ದಿವಸ ಕಾಪುರಾ ಎಂಬ ಗ್ರಾಮಕ್ಕೆ ಸಾಗಿಹೋಗಿ, ಬ್ರಿಟಿಶ ಪೋಲೀಸರನ್ನು ಹೊಡೆದಿರುವರೆಂಬ ಆರೋಪದಿಂದ, ಅಲ್ಲಿಯ ೨೨ ಜನ ರೈತರನ್ನು ಕೈದು ಮಾಡಿಕೊಂಡು ಹೋದರು,

### "ವಂದೇ ಮಾತರಂ."ದ
## ಸಂಪಾದಕರಿಗೆ ಕೈದು

ಲಾಹೋರದಲ್ಲಿಯ "ವಂದೇಮಾತರಂ" ದೈನಿಕ ಪತ್ರಿಕೆಯ ಸಂಪಾದಕರಾದ ಶ್ರೀ ಲಾಲ ಖದಾಸರು ೧೨೪ ಅ ಕಲಮಿನನ್ವಯ ಅಧಿಕಾರಿಗಳಿಂದ ಬಂಧಿಸಲ್ಪಟ್ಟಿದ್ದಾರೆ ಶ್ರೀ ಭಗತಸಿಂಗರ ವಿಷಯವಾಗಿ ತಮ್ಮ ಪತ್ರಿಕೆಯಲ್ಲಿ ಅಗ್ರಲೇಖವನ್ನು ಬರೆದದ್ದೇ ಅವರ ಅಪರಾಧವಾಗಿದೆ.

### ವಡ್ಡಾಡದಲ್ಲಿ
## ಸತ್ಯಾಗ್ರಹ ಸಂಸ್ಥೆಗೆ ಮುತ್ತಿಗೆ

ಅಕೋಲೆಯ ಪೋಲೀಸ ಅಧಿಕಾರಿಗಳು ತಾ| ೧೮ನೆಯ ದಿವಸ ಅಲ್ಲಿಯ ವಡ್ಡಾಡ ಸತ್ಯಾಗ್ರಹ ಯುದ್ಧಮಂಡಳದ ಕಚೇರಿಗೆ ಮುತ್ತಿಗೆ ಹಾಕಿ ಅದನ್ನು ಒಂದು ತಾಸಿನ ವರೆಗೆ ಝಡತಿ ಮಾಡಿದರು. ಅಲ್ಲಿ ಆಕ್ಷೇಪಾರ್ಹವಾದ ಕಾಗದ ಪತ್ರಗಳು ಏನೂ ಸಿಗದ್ದರಿಂದ ಅವರು ನಿರಾಶರಾಗಿ ಹೊರಟುಹೋದರು.

ಪೋಲೀಸ ಅಧಿಕಾರಿಗಳು ಖಾದಿ ಭಂಡಾರ ಹಾಗು ಶ್ರೀ ಜೋಶಿಯವರ ಮನೆ ಇವುಗಳನ್ನು ಝಡತಿ ಮಾಡಿ ರಾಜದ್ರೋಹಾತ್ಮಕವಾದದ್ದೆಂದು ಸಾರಲ್ಪಟ್ಟ "ರಣಗರ್ಜನೆ"ಯ ನಾಲ್ಕೈದು ಪ್ರತಿಗಳನ್ನು ಜಪ್ತ ಮಾಡಿಕೊಂಡು ಹೋದರು.

### ಸನ್ಯಾಸಿಗಳೂ
## ಜನಗಣತಿಗೆ ಬಹಿಷ್ಕಾರ ಹಾಕುವರು

ಬರುವ ಜನಗಣತಿಯಲ್ಲಿ ಸನ್ಯಾಸಿಗಳಿಗೆ ಬೇರೊಂದು ವರ್ಗವನ್ನು ಕಲ್ಪಿಸಿ ಕೊಡಬೇಕಾಗಿ ಅಖಿಲಭಾರತ ಸಾಧು ಸಭೆಯವರು ಹೋದ ಸಲದ ಸಮ್ಮೇಲನದಲ್ಲಿ ಕೇಳಿಕೊಂಡಿರುವರು. ಆದ್ದರಿಂದ ಅವರಿಗೊಂದು ಬೇರೆ ವರ್ಗವನ್ನು ಕೊಡಬೇಕೆಂದೂ ಇಲ್ಲದಿದ್ದರೆ ಜನಗಣತಿಗೆ ಬಹಿಷ್ಕಾರ ಹಾಕುವದರಲ್ಲಿ ಬರುವದೆಂದೂ ಮಹಂತ ಸೀತಾರಾಮ ಶಾಸ್ತ್ರಿಯವರು ಪ್ರಕಟ ಮಾಡಿದ್ದಾರೆ.

### ಮುಂಬಯಿಯಲ್ಲಿ
## ೫೬ ಜನರಿಗೆ ಬಿಡುಗಡೆ

ವ್ಹಿಲೆ ಪಾರ್ಲೆ ಸತ್ಯಾಗ್ರಹ ಛಾವಣಿಗೆ ಸೇರಿದ ಸಂಬಧವಾಗಿ ಪ್ರೋ. ಧರ್ಮಾನಂದ ಕೋಸಂಬಿ ಮೊದಲಾದ ೫೬ ಜನರಿಗೆ ಕ್ರಿ. ಲಾ ಅಮೆಂಡಮೆಂಟ ಕಾಯದೆಯ ೧೭ನೆಯ ಕಲಮಿನ ಪ್ರಕಾರ ಬೇರೆ ಬೇರೆ ಶಿಕ್ಷೆಗಳಾಗಿದ್ದವು. ಮುಂಬಯಿಯ ಹಾಯಕೋರ್ಟಿನ ಅಧಿಕಾರಿಗಳು ಅವರ ಖಟ್ಲೆಯ ಕಾಗದ ಪತ್ರಗಳನ್ನು ತರಿಸಿಕೊಂಡು ಪುನಃ ವಿಚಾರಣೆ ಮಾಡಿದರು ಅಲ್ಲಿ ಅವರು ನಿರ್ದೋಷಿಗಳಾಗಿ ನಿರ್ಣಯಿಸಲ್ಪಟ್ಟು ಬಿಡುಗಡೆ ಹೊಂದಿದರು.

### ಲಿಂಬಸಿಯಲ್ಲಿ
## ೪ ಜನರಿಗೆ ಬಂಧನ

ಲಿಂಬಸಿಯಲ್ಲಿಯ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಸೋಮಭಾಯಿ, ಸುರೇಂದ್ರ ಶ್ರೀಮತಿ ಕೌಸಲ್ಯಾಬಾಯಿ ಮತ್ತು ಶ್ರೀಮತಿ ಸುಂದರಾಬಾಯಿ ಇವರುಗಳು ಕ್ರಿ. ಲಾ ಅಮೆಂಡಮೆಂಟ ಕಾಯದೆಯ ೧೭ ನೆಯ ಕಲಮಿನನ್ವಯ ಸೆರೆಹಿಡಿಯಲ್ಪಟ್ಟಿದ್ದಾರೆ.

### ದಿಲ್ಲಿಯಲ್ಲಿ
## ೧೯ ಸ್ತ್ರೀಯರಿಗೆ ಬಂಧನ

ಸಿಂದಿ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದ ನಿಮಿತ್ತವಾಗಿ ದಿಲ್ಲಿಯಲ್ಲಿ ಅಲ್ಲಿಯ ಯುದ್ಧಮಂಡಳದ ೧೩ನೆಯ ಸರ್ವಾಧಿಕಾರಿಗಳಾದ ಶ್ರೀಮತಿ ಸಾವಿತ್ರಿ ದೇವಿ ಮೊದಲಾದ ೧೯ ಜನ ಸ್ತ್ರೀಯರು ಸೆರೆಹಿಡಿಯಲ್ಪಟ್ಟಿದ್ದಾರೆ.

### ಮೈಮನಸಿಂಗದಲ್ಲಿ
## ೯ ಜನರ ಬಾಯಿಗೆ ಬೀಗ.

ಮೈಮನಸಿಂಗದ ಅಧಿಕಾರಿಗಳು ಅಲ್ಲಿ ೯ ಜನರ ಮೇಲೆ ೧೪೪ನೆಯ ಕಲಮಿನ ಪ್ರಕಾರ ಅಪ್ಪಣೆ ಹೊರಡಿಸಿ ೨ ತಿಂಗಳ ವರೆಗೆ ಎಲ್ಲಿಯೂ ಭಾಷಣ ಮಾಡಕೂಡದಾಗಿ ಅವರಿಗೆ ಆಜ್ಞೆ ವಿಧಿಸಿದ್ದಾರೆ

### ಮುಂಬಯಿಯಲ್ಲಿ
## ಪಂ. ಮೋತೀಲಾಲರ ದಿನ

ತಾ| ೧೯ ನೆಯ ದಿವಸ ಮುಂಬಯಿಯಲ್ಲಿ ಪಂಡಿತ ಮೋತೀಲಾಲರ ದಿನವು ಯಥಾಸಾಂಗವಾಗಿ ಜರುಗಿತು. ಅವರಿಗೆ ಆಯುರಾರೋಗ್ಯವನ್ನು ದಯಪಾಲಿಸಲು ನಾಗರಿಕರು ದೇವಾಲಯ, ಮಸೀದೆ ಮೊದಲಾದವುಗಳಲ್ಲಿ ಪರಮಾತ್ಮನಿಗೆ ಪ್ರಾರ್ಥನೆಗಳನ್ನರ್ಪಿಸಿದರು. ಸಂಜೆಯಲ್ಲಿ ಮೆರವಣಿಗೆ ಸಭೆ ಮೊದಲಾದವುಗಳು ನಡೆದು ಈ ಬಗ್ಗೆ ಸಾರ್ವಜನಿಕವಾಗಿ ಪ್ರಾರ್ಥನೆಯಾಯಿತು.


## ಪ್ಲಾಟುಗಳು ಮಾರತಕ್ಕವಿವೆ.

ಟ್ರಾವ್ಹೆಲರ್ಸ ಬಂಗಲೆಯ ಉತ್ತರವಿರುವ ೨೩೦ನೆಯ ಸರ್ವೆ ನಂಬರದಲ್ಲಿಯ ಪ್ಲಾಟುಗಳು ಮಾರತಕ್ಕವಿವೆ. ತೆಗೆದುಕೊಳ್ಳಲಿಚ್ಛಿಸುವವರು ಸಮಕ್ಷಮ ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

ಯಲಿಗಾರ ರಾವ ಧಾರವಾಡ
ವಕೀಲರು ಬಾಗಲಕೋಟೆ.

ಎಲ್ಲ ತರದ ಚಳಿಜ್ವರದ ಮೇಲೆ
## ರಾಮಬಾಣ ಗುಳಿಗೆಗಳು

ವಿಷಮಜ್ವರದ ಹೊರ್ತಾಗಿ ಎಲ್ಲತರದ ಚಳಿಜ್ವರಗಳ ಮೇಲೆ ಈ ಗುಳಿಗೆಗಳು ಬಹಳೇ ಗುಣಕಾರಿಯಾಗಿರುವವು. ವಿಶೇಷ ಪಥ್ಯವನ್ನು ಮಾಡುವ ಕಾರಣವಿಲ್ಲ. ಹುಣಸೀ ಹಣ್ಣು ಮತ್ತು ಮಜ್ಜಿಗೆ ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ಪಡೆಯಿರಿ.

ಒಂದು ಗುಳಿಗೆಗೆ ೦-೧-೦
೧೦೦ ಗುಳಿಗೆಗಳಿಗೆ ೫-೦-೦

ಏಜಂಟರಿಗೆ ಧಾರಾಳವಾದ ಕಮಿಶನ ಕೊಡಲಾಗುವದು.

ವಿಳಾಸ:- ಕೃಷ್ಣಾಚಾರ್ಯ ಮಣ್ಣೂರ.
ಕಿಲ್ಲಾ ೭೦ ಓಣಿ, ಬಾಗಲಕೋಟೆ

## ಉಟ್ಟಿನ ಗಿರಣಿ ಮಾರತಕ್ಕದ್ದಿದೆ.

ರಿಸ್ಟನ ಮೋಟರ್ ಇಂಜಿನ್ ೮॥ B. H. P. ಅದರ ಚಕ್ಕಿ ಸಹಿತ ಸದ್ಯಕ್ಕೆ ಚಾಲು ಇದ್ದದ್ದು ಮಾರುವದದೆ ಸಮಕ್ಷಮ ಅಥವಾ ಪತ್ರವ್ಯವಹಾರ ಮಾಡಬೇಕು.

ಟಿ. ಜಿ. ದೇಸಾಯಿ c/o ಕನ್ನಡಿಗ
ಬಾಗಲಕೋಟೆ.

## ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ
ಸುದರ್ಶನ ಸ್ಟೋರ್ಸ ಬಾಗಲಕೋಟೆ


ಈ ಪತ್ರಿಕೆಯು ವೆಂಕಟೇಶ ಸೇತುರಾಮಾಚಾರ್ಯ ಕಲ್ಲೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧ ಪಡಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯ ಸಂಚಿಕೆಯು. ಬೆಲೆ. ೦—೦—೩.

यद्यत् परवशं दुःखं । यद्यदात्मवशं सुखम् ॥—मनु.

# ಕನ್ನಡಿಗ

KANNADIGA BAGALKOT BI-WEEKLY

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧ ] ಬಾಗಲಕೋಟೆ—ಮಂಗಳವಾರ ಮಿತಿ ಪುಷ್ಯ ಶುದ್ಧ ೩ ಶಕೆ ೧೮೫೨ ತಾ|| ೩೦—೧೨—೩೦ [ ಸಂಚಿಕೆ ೧೮೫

## ಬಾಗಲಕೋಟೆಯಲ್ಲಿ

# ೬ ಜನ ಸ್ವಯಂಸೇವಕರಿಗೆ ಶಿಕ್ಷೆಯಾಯಿತು

ತಾ| ೨೦ ನೆಯ ದಿವಸ ಇಲ್ಲಿ ಸೆರೆಹಿಡಿಯಲ್ಪಟ್ಟ ಶ್ರೀ ನಾರಾಯಣ ಜೋಶಿ, ವ್ಹಿ. ಜಿ. ಕುಲಕರ್ಣಿ, ನೀಲಕಂಠಯ್ಯ ಬೆಟ್ಟದಪುರ, ಶಿವಯ್ಯ ಹಿರೇಮಠ, ವೆಂಕಟಸುಬ್ರಾವ ಮತ್ತು ಗುಂಡಪ್ಪ ಜೇರಿಗೆ ಈ ೬ ಜನ ಸ್ವಯಂಸೇವಕರ ಖಟ್ಲೆಯ ವಿಚಾರಣೆಯು ತಾ| ೨೨ ನೆಯ ದಿವಸ ಸಂಜೆಯಲ್ಲಿ ಇಲ್ಲಿಯ ಮೊದಲನೆ ವರ್ಗದ ಮ್ಯಾಜಿಸ್ಟ್ರೇಟರ ಮುಂದೆ ಪ್ರಾರಂಭವಾಯಿತು. ಸಬ್ ಇನಸ್ಪೆಕ್ಟರರು ಅವರ ಮೇಲೆ ಕ್ರಿ. ಲಾ ಅಮೆಂಡಮೆಂಟ ಕಾಯದೆಯ ೧೭ ನೆಯ ಕಲಮಿನನ್ವಯ ಆರೋಪ ಹೊರಿಸಿ, ಅವರು ಕಾಯಿದೆಗೆ ವಿರುದ್ಧವಾದ ಸಂಸ್ಥೆಗಳ ಕಾರ್ಯಕ್ರಮಗಳನ್ನು ಜರುಗಿಸಿ ಮತ್ತು ರಾಜದ್ರೋಹಾತ್ಮಕವಾದ ರಾಷ್ಟ್ರಗೀತೆಗಳನ್ನು ಹಾಡಿ ಸರಕಾರದ ವಿಷಯಕ್ಕೆ ಅಪ್ರೀತಿಯನ್ನು ಹುಟ್ಟಿಸುತ್ತಿರುವರೆಂಬುದಾಗಿ ಹೇಳಿದರು. ಬಳಿಕ ಪೋಲೀಸರ ಸಾಕ್ಷಿಗಳಾದವು. ಸ್ವಯಂಸೇವಕರು ವಿಚಾರಣೆಯಲ್ಲಿ ಯಾವ ತರದಿಂದಲೂ ಭಾಗತೆಗೆದುಕೊಳ್ಳಲಿಲ್ಲ. ಮ್ಯಾಜಿಸ್ಟ್ರೇಟರು ಅವರನ್ನು ದೋಷಿಗಳಾಗಿ ನಿರ್ಣಯಿಸಿ ಪ್ರತಿಯೊಬ್ಬರಿಗೂ ೩ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು.

---

### ಹುಬ್ಬಳ್ಳಿಯಲ್ಲಿ

## ದಂಡ ವಸೂಲಿಯ ಹಾವಳಿ

(ಸ್ವಂತ ಸುದ್ದಿಗಾರರಿಂದ)

ನಾಲ್ಕನೆಯ ಸರ್ವಾಧಿಕಾರಿಗಳಾದ ಶ್ರೀ ಉಡುಪಿ ಗುರುರಾಯರಿಗಾದ ೧೦೦ ರೂಪಾಯಿ ದಂಡದ ಹಣವನ್ನು ವಸೂಲಮಾಡಲು ತಾ| ೨೧ ನೆಯ ದಿವಸ ಪೋಲೀಸ ಅಧಿಕಾರಿಗಳು ಅವರ ಅಂಗಡಿಗೆ ಬಂದರು. ಅಂಗಡಿಯ ಚಾಲಕರು ದಂಡವನ್ನು ಕೊಡಲು ನಿರಾಕರಿಸಿದರು. ಅಧಿಕಾರಿಗಳು ಅಂಗಡಿಯಲ್ಲಿ ಹೊಕ್ಕು ಪೆಟ್ಟಿಗೆಯಲ್ಲಿದ್ದ ೧೦೦ ರೂಪಾಯಿಗಳನ್ನು ಜಪ್ತಮಾಡಿ ಪಂಚನಾಮೆ ಮಾಡಿದರು. ಗಾಂಧಿ ಚೌಕಿನಲ್ಲಿರುವವರು ಪಂಚರಾಗಲು ಒಪ್ಪದ್ದರಿಂದ ಅಧಿಕಾರಿಗಳು ಚನ್ನಪ್ಪ ಬಸಪ್ಪ ಗದಗ ಮೋಟಾರ ಡ್ರಾಯವ್ಹರ ಹಾಗು ಹದ್ದಿಯ ಶೆಟ್ಟರನ್ನು ಪಂಚರನ್ನಾಗಿಮಾಡಿ, ಪಾವತಿಯನ್ನು ಪೆಟ್ಟಿಗೆಯಲ್ಲಿಟ್ಟು ದಂಡದ ಹಣವನ್ನು ಒಯ್ದರು. ಪಂಚನಾಗಿದ್ದ ಮೋಟಾರ ಡ್ರಾಯವ್ಹರನ ಮೇಲೆ ಜನರು ಬಹಿಷ್ಕಾರ ಹಾಕುವದಾಗಿ ಯೋಚಿಸಿದ್ದಾರೆ.

**ಶ್ರೀ [illegible] ಹಾಗು** ಹುಬ್ಬಳ್ಳಿ ತಾಲೂಕದ ೫ ನೆಯ ಸರ್ವಾಧಿಕಾರಿಗಳೆಂದು ನಿಯಮಿಸಲ್ಪಟ್ಟಿದ್ದು, ಹಿಂದುಸ್ಥಾನೀ ಸೇವಾದಲದ ಕರ್ನಾಟಕ ಶಾಖೆಯ ಸರ್ವಾಧಿಕಾರತ್ವವಾದರೂ ಅವರಿಗೇನೆ ಅರ್ಪಿಸಲ್ಪಟ್ಟಿದೆ.

### ಧಾರವಾಡದಲ್ಲಿ

## ಸ್ತ್ರೀಯರ ಮೆರವಣಿಗೆ

ಬಾಬೂಗೇನೂ ಎಂಬ ಸ್ವಯಂಸೇವಕನು ಮುಂಬಯಿಯಲ್ಲಿ ಪರದೇಶಿ ವಸ್ತ್ರ ಬಹಿಷ್ಕಾರ ಕಾರ್ಯದಲ್ಲಿ ತನ್ನ ಆಹುತಿಯನ್ನು ಕೊಟ್ಟದ್ದರ ಸ್ಮರಣಾರ್ಥವಾಗಿ ತಾ|| ೨೧ ನೆಯ ದಿವಸ ಧಾರವಾಡದಲ್ಲಿ ಸ್ತ್ರೀಯರ ಮೆರವಣಿಗೆ ಹೊರಟಿತ್ತು. ನೂರಾರು ಜನ ಸ್ತ್ರೀಯರು ಮೆರವಣಿಗೆಯಲ್ಲಿ ಭಾಗ ತೆಗೆದುಕೊಂಡಿದ್ದರು. ಮೆರವಣಿಗೆಯು ಪಟ್ಟಣದ ಮುಖ್ಯ ಮುಖ್ಯ ಬೀದಿಗಳಲ್ಲೆಲ್ಲ ಹಾಯ್ದು ಸಭಾಸ್ಥಾನವನ್ನು ಸೇರಿತು. ಅಲ್ಲಿ ಸಾರ್ವಜನಿಕ ಸಭೆಯಾಗಿ ಮುಖಂಡರ ಭಾಷಣಗಳಾದವು.

---

ಇಂದು ಸಂಜೆಯ ೬ ಗಂಟೆಗೆ ಲೋಕಮಾನ್ಯ ಚೌಕಿನಲ್ಲಿ ಮುಂಬಯಿಯ ಶ್ರೀಮತಿ ಸೀತಾಬಾಯಿ ಪಟವರ್ಧನರವರು "[illegible]"ಯ ಬಗ್ಗೆ ಭಾಷಣ ಮಾಡುವವರಿದ್ದಾರೆಂದು ತಿಳಿದು ಬಂದಿದೆ.

# "ಸೋಲ್ಲಾಪುರದ ಆರೋಪಿಗಳಿಗೆ ದಯೆ ತೋರಿಸಿರಿ"

ಸೊಲ್ಲಾಪುರದಲ್ಲಾದ ದಂಗೆಯ ಸಂಬಂಧವಾಗಿ ಗಲ್ಲಿನ ಶಿಕ್ಷೆಗೆ ಗುರಿಯಾದ ಶ್ರೀ ಧನಶೆಟ್ಟಿ ಮೊದಲಾದ ನಾಲ್ಕು ಜನ ಆರೋಪಿಗಳ ಗಲ್ಲಿನ ಶಿಕ್ಷೆಯನ್ನು ರದ್ದುಪಡಿಸಿ ಅವರಿಗೆ ದಯೆತೋರಿಸಬೇಕೆಂಬ ವಿಷಯವಾಗಿ, ನಗರಸಭೆ, ವರ್ತಕಸಂಘ, ಮಹಿಲಾಸಂಘ, ಮೊದಲಾದ ಸಾರ್ವಜನಿಕ ಸಂಸ್ಥೆಗಳೂ, ಕಾಯದೆಮಂಡಳಗಳ ಸಭಾಸದರೂ ಹೇಗೆ ಹೇಗೆ ಪ್ರಯತ್ನ ನಡಿಸಿರುವರೆಂಬುವದು ಕೆಳಗಿನ ಸಂಗತಿಗಳಿಂದ ವ್ಯಕ್ತವಾಗುವದು.

೧) ಶ್ರೀಮತಿ ಟಾಟಾ, ಶ್ರೀಮತಿ ಸೆಟಲವಾಡ, ಶ್ರೀಮತಿ ಮೆಹ್ತಾ, ಶ್ರೀಮತಿ ಪುರುಷೋತ್ತಮದಾಸ ಈ ನಾಲ್ವರು, ವ್ಹಾಯಿಸರಾಯರಿಗೆ ತಂತಿ ಕಳಿಸಿ ಸೊಲ್ಲಾಪುರದ ಆರೋಪಿಗಳಿಗೆ ಜೀವದಾನ ಕೊಡಲು ಕೇಳಿಕೊಂಡಿದ್ದಾರೆ.

೨) ಆರೋಪಿಗಳು ದಯೆಯ ಬಗ್ಗೆ ಬಾದಶಹರ ಕಡೆಗೆ ಅರ್ಜಿಮಾಡಿದಲ್ಲಿ, ಅದನ್ನು ಬಾದಶಹರಿಗೆ ಮುಟ್ಟಿಸುವಷ್ಟಾದರೂ ಅನುಗ್ರಹ ತೋರಿಸಬೇಕೆಂದು ರಾ. ಬ. ಕಾಳೆ ಮತ್ತು ಮುಂಬಯಿಯ ಹಿಂದೀ ವರ್ತಕ ಸಂಘದವರು ಗವ್ಹರ್ನರರಿಗೆ ವಿನಂತಿ ಮಾಡಿಕೊಂಡಿದ್ದಾರೆ

೩) ಮುಂಬಯಿಯಲ್ಲಿಯ ಸರಾಫ ಸಂಘ ದಲಾಲರ ಸಂಘ, ಶೇರುದಾರರ ಸಂಘ, ಮಾರವಾಡಿ ಚೇಂಬರ, ಈಸ್ಟ ಇಂಡಿಯನ್ ಕಾಟನ್ ಯೆಶನ, ಗ್ರೇನ ಮರ್ಚಂಟ್ಸ ಅಸೋಸಿಯೇಶನ್, ಇನ್‌ಶೂರನ್ಸ ಅಸೋಸಿಯೇಶನ್, ಡೆಕ್ಕನ್ ಬುಲಿಯನ್ ಎಕ್ಸಚೇಂಜ, ವ್ಹಿಲ್‌ಟ್ರರ್ಸ ಅಸೋಸಿಯೇಶನ್ ಮೊದಲಾದ ಸಂಸ್ಥೆಗಳು ದಯೆ ತೋರಿಸಲು ವ್ಹಾಯಿಸರಾಯರ ಕಡೆಗೆ ತಂತಿ ಕಳಿಸಿದ್ದಾರೆ.

೪) ರಂಗೂನ, ಕರಾಚಿ, ತುತಿಕೋರಿನ, ಕಲಕತ್ತಾ, ಕೋಚೀನ ಮೊದಲಾದ ಪಟ್ಟಣಗಳಲ್ಲಿಯ ಪ್ರಮುಖ ವ್ಯಾಪಾರಿ ಸಂಸ್ಥೆಗಳವರೂ ಮೇಲಿನಂತೆಯೆ ವಿನಂತಿ ಮಾಡಿಕೊಂಡಿದ್ದಾರೆ.

೫) ಶ್ರೀ ನಾರಾಯಣರಾವ ಗುಂಜಾಳ, ವಿಶ್ವನಾಥರಾವ ಜೋಗ ಇವರು ವ್ಹಾಯಿಸರಾಯರ ಕಡೆಗೆ ಈ ಬಗ್ಗೆ ತಂತಿಕಳಿಸಿದ್ದು, ಎಷ್ಟೋ ಜನ ಸಭಾಸದರಾದರೂ ಅದರಂತೆಯೇ ಕಾರು ಮಾಡಿದ್ದಾರೆ.

೬) ಮುಂಬಯಿಯ ಹಿಂದೂ ಮರ್ಚಂಟ ಸಂಘದ ಅಧ್ಯಕ್ಷರಾದ ಶ್ರೀ ಹ. ಸೇನಭಾಯಿ ಲಾಲಜಿಯವರು ಈ ಬಗ್ಗೆ ವ್ಹಾಯಿಸರಾಯರ ಕಡೆಗೆ ಒಂದು ಶಿಷ್ಟಮಂಡಳವನ್ನು ಒಯ್ಯುವವರಿದ್ದು, ಅದಕ್ಕೆ ಭೆಟ್ಟಿ ಕೊಡಲು ಅವರಿಗೆ ತಾರಿನಿಂದ ವಿನಂತಿ ಮಾಡಿಕೊಂಡಿದ್ದಾರೆ.

೭) ಒಂಡಿ ಗಾಲಿ ಪರಿಷತ್ತಿಗೆ ಹೋಗಿರುವ ಹಿಂದೀ ಪ್ರತಿನಿಧಿಗಳು ಬಾದಶಹರ ಕಡೆಗೆ ಈ ಬಗ್ಗೆ ಒಂದು ಅರ್ಜಿ ಕಳಿಸುವವರಿದ್ದು, ಅಲ್ಲಿಯ ಪ್ರಸಿದ್ಧ ಬ್ಯಾರಿಸ್ಟರರಾದ ಮಿ. ಪೊಯಿಲ್ಸನ್ನರು ಆ ಅರ್ಜಿಯನ್ನು ಸಿದ್ಧಪಡಿಸಹತ್ತಿದ್ದಾರೆ.

೮) ಗಲ್ಲಿನ ಶಿಕ್ಷೆಯನ್ನು ಯಾರಿಗೂ ಕೊಡಕೂಡದೆಂದು ಒಂದು ಪಾರ್ಲಿಮೆಂಟ ಕಮೀಟಿಯವರು ವರದಿ ಒಪ್ಪಿಸಿದ್ದು, ಆ ಆಶಯದ ಕಾಯದೆಯೊಂದು ಬೇಗನೆ ಪಾರ್ಲಿಮೆಂಟದ ಮುಂದೆ ಬರತಕ್ಕದ್ದಿದೆ ಯೆಂದು ತಿಳಿದ ಕೂಡಲೆ ಆ ಕಮೀಟಿಯ ಅಧ್ಯಕ್ಷರಾದ ರೆ. ಜೇಮ್ಸ ಬಾರ ಇವರ ಕಡೆಗೆ, ಸೋಲ್ಲಾಪುರದ ಆರೋಪಿಗಳ ಗಲ್ಲಿನಶಿಕ್ಷೆಯನ್ನು ರದ್ದುಪಡಿಸಲು ಭಾರತಮಂತ್ರಿಗಳಿಗೆ ಕಮೀಟಿಯ ಪರವಾಗಿ ಶಿಫಾರಸು ಮಾಡಿರಿ ಎಂದು, ಪುಣೆಯ ರೆ. ವಿನಸ್ಲೋರವರು ವಿನಂತಿ ಮಾಡಿಕೊಂಡಿದ್ದಾರೆ.

೯ ಕರ್ನಾಟಕ ವ್ಯಾಪಾರಿ ಸಂಘದವರೂ ಶ್ರೀ ಧನಶೆಟ್ಟಿ, ಸಾರಡಾ, ಸಿಂಧೆ, ಕುರ್ಬಾನ ಹುಸೇನ ಮೊದಲಾದವರಿಗೆ ದಯೆ ತೋರಿಸಬೇಕೆಂದು ನಾ. ಗವ್ಹರ್ನರ ಹಾಗು ವ್ಹಾಯಿಸರಾಯರಿಗೆ ವಿನಂತಿ ಮಾಡಿಕೊಂಡಿದ್ದಾರೆ,

( ಈ ಬಗ್ಗೆ ವಿಚಾರ ಮಾಡುವದರಲ್ಲಿ ಒಳುವದೆಂಬುದಾಗಿ ವ್ಹಾಯಿಸರಾಯರು ಮೇಲಿನ ಕೆಲವು ತಾರುಗಳಿಗೆ ಉತ್ತರ ಕೊಟ್ಟಿದ್ದಾರೆ.

## ಸೊಲ್ಲಾಪುರದಲ್ಲಿ ಕ್ರಾಂತಿಕಾರಕ ಪತ್ರಗಳು

ಸೊಲ್ಲಾಪುರದಲ್ಲಿ ಮಂಗಳವಾರ ಪೇಟೆಯಲ್ಲಿ ಒಂದು ಕಡೆಗೆ " ಕಲೆಕ್ಟರ, ಇಮಾಮಸಾ, ಫೌಜದಾರ ಮತ್ತು ಕೆಲವು ಪೋಲೀಸ ಅಧಿಕಾರಿಗಳನ್ನು ಕೊಲ್ಲುವವನಿದ್ದೇನೆ " ಎಂಬ ಆಶಯದ ಒಂದು ಪತ್ರಿಕೆಯು ಯಾರಿಂದಲೋ ಅಂಟಿಸಲ್ಪಟ್ಟಿತ್ತು. ಪೋಲೀಸರು ಆ ಬಗ್ಗೆ ಶೋಧನಡಿಸಿದ್ದಾರೆ.

## ಕಿತ್ತೂರಿನಲ್ಲಿ ಸಿಂಧಿಯವನ ಬಾಯಿಗೆ ಗಡ್ಡಿ ಬಿತ್ತು

ಕಿತ್ತೂರ ರಾಗು ಜನರ ಸುತ್ತಮುತ್ತಲಿರುವ ಸಿಂಧೀ ಅಂಗಡಿಗಳು ಸ್ವಯಂಸೇವಕರಿಂದ ನಾಶಹೊಂದಿದ್ದರಿಂದ ಅಲ್ಲಿಯ ಸಿಂಧಿಯು ಅಂಗಡಿಕಾರನಿಗೆ ಸಿಂಧಿಯು ಸಿಗದಂತಾಯಿತು. ಅವನ ಅಂಗಡಿಗೆ ಕೀಲಿ ಬಿತ್ತು. ಅದ್ದರಿಂದ ಅವನು ಶ್ರಮಪಟ್ಟು ಆ ನಂತರ ಬೆಳೆದ ಗಿಡಗಳಿಗೆ ಗೊಬ್ಬಿ ಕಟ್ಟಿಸಿದನು. ಸ್ವಯಂಸೇವಕರು ಕೂಡಲೆ ಅವುಗಳನ್ನಾದರೂ ಹಂಡರಿಸಿ ಒಗೆದರು. ಅಂಗಡಿಯನ್ನು ನಷ್ಟ ಹಿಡಿದಿದ್ದರಿಕ್ಕಾಗಿ ಅವನು ಈಗ ಪಶ್ಚಾತ್ತಾಪ ಪಡುತ್ತ ಕುಳಿತಿದ್ದಾನೆ, ಯಾಕಂದರೆ ಬಾಯಿಗೆ ಗಡ್ಡಿ ಬಿದ್ದಿದೆ.

## ಶ್ರೀ ಶಿವಾನಂದಜಿಯವರಿಗೆ ಹದ್ದುಪಾರಿನ ನೋಟೀಸು

ಮೊನ್ನೆ ಮೊನ್ನೆ ಜೇಲಿನಿಂದ ಬಿಡುಗಡೆ ಹೊಂದಿ ಬಂದ ವರ್ಧಮಾಣದ ಸುಪ್ರಸಿದ್ಧ ದೇಶಸೇವಕರಾದ ಶ್ರೀ ಶಿವಾನಂದಜಿಯವರ ಮೇಲೆ ಭಾವನಗರ ಸಂಸ್ಥಾನದ ಅಧಿಕಾರಿಗಳು ಒಂದು ನೋಟೀಸು ಹೊರಡಿಸಿ, ೨೪ ತಾಸುಗಳಲ್ಲಿ ಸಂಸ್ಥಾನದ ಹದ್ದನ್ನು ಬಿಟ್ಟು ಹೋಗಬೇಕೆಂದು ಅವರಿಗೆ ಆಜ್ಞೆ ವಿಧಿಸಿದ್ದಾರೆ.

---

## ಇಹವೃತ್ತ

ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ತಾ || ೨೦ ನೆಯ ದಿವಸ ವಿಜಾಪುರ ಜೇಲದಿಂದ ಬಿಡುಗಡೆ ಹೊಂದಿದ ಇಲ್ಲಿಯ ಶ್ರೀ ಜಹಗೀರಪುರ ಗುರುರಾಯರು ತಾ || ೨೨ ನೆಯ ದಿವಸ ಸಂಜೆಗೆ ವಿಜಾಪುರದಿಂದ ಇಲ್ಲಿಗೆ ಬಂದರು. ನಾಗರಿಕರು ಸ್ಟೇಶನದಲ್ಲಿ ಅವರಿಗೆ ಯೋಗ್ಯರೀತಿಯಿಂದ ಆದರಸತ್ಕಾರಗಳನ್ನು ಮಾಡಿ ಮೆರವಣಿಗೆಯಿಂದ ಅವರನ್ನು ಊರಲ್ಲಿ ಕರೆದುಕೊಂಡು ಬಂದರು. ಸಂಜೆಯಲ್ಲಿ ಲಾಲಾಜಿ ಚೌಕಿನಲ್ಲಿ ಸಭೆ ಸೇರಿ ಅವರಿಗೆ ಬಹುಮಾನ ಮಾಡಲಾಯಿತು. ಶ್ರೀ ಗುರುರಾಯರು ಜೇಲಿನಲ್ಲಿಯ ಅನುಭವವನ್ನು ಸ್ವಲ್ಪದರಲ್ಲಿಯೇ ತಿಳಿಸಿ, ರಾಷ್ಟ್ರಕಾರ್ಯಕ್ಕೆ ನೆರವಾಗಲು ಎಲ್ಲರಿಗೂ ಬಿನ್ನವಿಸಿಕೊಂಡರು. ನಂತರದಲ್ಲಿ ಶ್ರೀ ಮಂಜುನಾಥರಾವರ ಭಾಷಣವಾಗಿ ಸಭೆಯು ಮುಕ್ತಾಯ ಹೊಂದಿತು.

## ದೇಶದಾಸರ ನಡೆಸುವರು ಅನ್ನತ್ಯಾಗ ಕೈಕೊಂಡರು

ಪುಣೆಯಲ್ಲಿಯ ಬಹಳ ವ್ಯಾಪಾರಸ್ಥರು ಪರದೇಶಿ ಬಟ್ಟೆಯ ವ್ಯಾಪಾರವನ್ನು ನಿಲ್ಲಿಸಲು ಇನ್ನೂ ಸಿದ್ಧರಾಗದ್ದನ್ನು ಕಂಡುಕೊಂಡು, ಪೈಸಾಫಂಡಿನ ದೇಶದಾಸ ರಾನಡೆಯವರು ಮೊನ್ನಿನಾರಭ್ಯ ಅನ್ನವನ್ನು ಬಿಟ್ಟುಕೊಟ್ಟು ಬುಧವಾರ ಬಾಗದಲ್ಲಿ ಸತ್ಯಾಗ್ರಹ ಹೂಡಿದ್ದಾರೆ.

## ಯರೋಡಾ ಜೇಲಿನಲ್ಲಿ

# ೮೫೦ ರಾಜಕೀಯ ಕೈದಿಗಳ ಅನ್ನತ್ಯಾಗ.

ಜೇಲಿನಲ್ಲಿ ತಮಗೆ ಸಿಗುತ್ತಿರುವ ಕೀಳು ಆಹಾರದ ನಿಷೇಧಾರ್ಥವಾಗಿ, ಯರೋಡಾ ಜೇಲಿನಲ್ಲಿಯ ೮೫೦ ಜನ ರಾಜಕೀಯ ಕೈದಿಗಳು ತಾ॥ ೨೦ ರಿಂದ ಅನ್ನತ್ಯಾಗ ವ್ರತವನ್ನು ಕೈಕೊಂಡಿರುವರಾಗಿ ತಿಳಿದುಬರುತ್ತದೆ.

### ತೆರಿಗೆಯನ್ನು
### ಹೇಗೆ ಎತ್ತುತ್ತಾರೆ ನೋಡಿರಿ!

ಬೋರಸಾದ ತಾಲೂಕದಲ್ಲಿಯ ದಾವೋಲಹಳ್ಳಿಯ ಶ್ರೀ ಮೋತೀಲಾಲ ರಾಮಚಂದ ಶಹಾರವರು ಹಪ್ತೆಯ ಹಣವನ್ನು ಕೊಡಲು ನಿರಾಕರಿಸಿ ಹಳ್ಳಿಯನ್ನು ಬಿಟ್ಟು ಹೋಟಿಹೋಗಿದ್ದು, ತಮ್ಮ ಹೆಂಡತಿಗೆ ಔಷಧೋಪಚಾರ ಸಾಗಿಸಲು ಅವರು ಕೆಲವು ದಿನಗಳಿಂದ ಬೋರಸಾದ ಮಿಶನ ಹಾಸ್ಪಿಟಲದಲ್ಲಿ ಇರುತ್ತಿದ್ದಾರೆ, ಅಲ್ಲಿಯ ಮಾಮಲೇದಾರರು ಅವನ್ನು ಗೊತ್ತು ಮಾಡಿಕೊಂಡು, ದವಾಖಾನೆಗೆ ಹೋಗಿ ಅಕ್ಕಿಯ ಡಬ್ಬಿಯಲ್ಲಿದ್ದ ೫೭ ರು. ೧೨ ಆಣೆಗಳನ್ನು ಜಪ್ತಮಾಡಿಕೊಂಡು ಹೋದರು.

### ಡ್ರಾಯಿಂಗ ಪುಸ್ತಕವನ್ನು
### ಜಪ್ತ ಮಾಡಿದರು.

ರಜಪುತಾನಾ ಪ್ರಾಂತದ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ಅರ್ಜುನಲಾಲ ಸೇಠಿಯವರ ಮನೆಗೆ ಅಜಮೀರದ ಪೋಲೀಸ ಅಧಿಕಾರಿಗಳು ತಾ॥ ೧೭ ನೆಯ ದಿವಸ ಮುತ್ತಿಗೆ ಹಾಕಿ ೨ ತಾಸುಗಳ ವರೆಗೆ ಝಡತಿ ಮಾಡಿದರು. ಅವರ ೫ ವರ್ಷದ ಚಿರಂಜೀವನದೊಂದು ಡ್ರಾಯಿಂಗ ಪುಸ್ತಕದ ಹೊರತಾಗಿ ಆಕ್ಷೇಪಾರ್ಹವಾದ ಕಾಗದಪತ್ರಗಳಾವವೂ ಅಲ್ಲಿ ಅವರಿಗೆ ಸಿಗಲಿಲ್ಲ. ಅಧಿಕಾರಿಗಳು ಅದನ್ನೇ ಜಪ್ತಮಾಡಿಕೊಂಡು ಹೋದರು. ಶ್ರೀ ಅರ್ಜುನಲಾಲರು ಈಗ ಅಜಮೀರ ತುರಂಗದಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವರು.

### ಸೂರತದಲ್ಲಿಯ
### ಪತ್ರಿಕೆಗಳಿಗೆ ಎಚ್ಚರಕೊಟ್ಟರು.

ಸರಕಾರದ ಡೆಪ್ಯೂಟಿ ಪೋಲೀಸ ಸುಪರಿಂಟೆಂಡೆಂಟರಾದ ಮಿ. ನಾದಿರಶಹಾ ಸಂಜಾಫರವರು ಅಲ್ಲಿಯ ಸ್ಥಳಿಕ ವೃತ್ತಪತ್ರಿಕೆಗಳ ಪ್ರಕಾಶಕರಿಗೆ ಒಂದು ಆಜ್ಞೆಯನ್ನು ಕಳಿಸಿ, ಕಾಯದೆಗೆ ವಿರುದ್ಧವಾದ ಸಂಸ್ಥೆಗಳ ಕಾರ್ಯಕ್ರಮವು ಮೊದಲಾದವುಗಳನ್ನು ಪ್ರಕಟಿಸಕೂಡದೆಂದೂ, ಅವುಗಳ ಪ್ರಕಟನೆಯು ಕ್ರಿ. ಲಾ ಅಮೆಂಡಮೆಂಟ ಕಾಯದೆಯ ೧೭ ನೆಯ ಕಲಮಿನನ್ವಯ ಅಪರಾಧವಾಗುವದೆಂದೂ ಎಚ್ಚರಿಕೆಯನ್ನು ಕೊಟ್ಟಿದ್ದಾರೆ.

### ಪೋಲೀಸನ
### ತುಬಾಕಿಯು ಕಳವಾಯಿತು

ತಾ॥ ೧೩ ನೆಯ ದಿವಸ ಯಾವನೋ ಒಬ್ಬ ಬಹಾರಿಯಾನು, ಬೋರಸಾದ ತಾಲೂಕಿಗೆ ಸೇರಿದ ಅಂಕಲಾವ ಹಳ್ಳಿಯ ಓರ್ವ ಪೋಲೀಸನ ಉಡುಪು ತುಬಾಕಿ ಮತ್ತು ಸಂಬಳದ ಹಣ ಇವುಗಳನ್ನು ಕದ್ದುಕೊಂಡು ಪಾರಾಗಿ ಹೋಗಿದ್ದಾನೆ.

### ಬಾರ್ಡೋಲಿಯಲ್ಲಿ
### ಅಧಿಕಾರಿಗಳ ಆಟ ಸಾಗಲಿಲ್ಲ

ಮುಂಬಯಿ ಸರಕಾರದ ಕಂದಾಯ ಖಾತೆಯ ಮುಖ್ಯಾಧಿಕಾರಿಗಳಾದ ಮಿ. ಕಡಸನ್ನರು ಆ ಭಾಗದ ಕಮೀಶನರರಾದ ಮಿ. ಗ್ಯಾರೆಟರವರೊಡನೆ ತಾ॥ ೧೨ ನೆಯ ದಿವಸ ಬಾರ್ಡೋಲಿ ತಾಲೂಕಿನ ಹಳ್ಳಿಗಳಲ್ಲಿ ಸಂಚರಿಸಿ, ಅಲ್ಲಲ್ಲಿಯ ರೈತರಿಗೆ ಹಪ್ತೆಯನ್ನು ಕೊಡಲು ಕೇಳಿಕೊಂಡರು. ದೇಲವಾಡ ಎಂಬ ಹಳ್ಳಿಗೆ ಹೋದಾಗ ಒಬ್ಬ ಮನುಷ್ಯನನ್ನು ಕಳುಹಿ ಅವರು ಅಲ್ಲಿಯ ರೈತರನ್ನು ಕರೆಕಳುಹಿದರು. ಆಗ ಒಬ್ಬ ರೈತನು "ಮಹಾತ್ಮಾ ಗಾಂಧಿ ಇಲ್ಲವೆ ಸರದಾರ ವಲ್ಲಭಭಾಯಿಯವರೇ ಎಲ್ಲವನ್ನು ಹೇಳುವರು ಅವರ ಕಡೆಗೆ ಹೋಗಲು ಸಾಹೇಬರಿಗೆ ತಿಳಿಸು ಎಂದು ಉತ್ತರ ಕೊಟ್ಟನು.

### ಬಿಜೆಂಟಮ್ಮನವರು
### ಬ್ರಿಟಿಶರಿಗೆ ಎಚ್ಚರಿಕೆ ಕೊಟ್ಟರು

ಮದ್ರಾಸದಲ್ಲಿ ತಾ॥ ೧೪ ನೆಯ ದಿವಸ ಗೋಖಲೆಭುವನದಲ್ಲಿ ಡಾ. ಬಿಜೆಂಟಮ್ಮನವರ, ಒಂದು ಭಾಷಣ ಮಾಡಿದರು. ಅದರಲ್ಲಿ ಅವರು ೬೩,೦೦೦ ಜನ ಭಾರತೀಯರು ಸ್ವಾರ್ಥತ್ಯಾಗ ಮಾಡಿ ಕಾರಾಗೃಹಕ್ಕೆ ತೆರಳಿದ್ದು ಗೊತ್ತಿದ್ದರೂ ಸಹ, ಇಂಗ್ಲಂಡವು ಇನ್ನೂ ಭಾರತೀಯರ ಸಹನಶೀಲತೆಯ ಪರೀಕ್ಷೆಯನ್ನು ಮಾಡುವದರಲ್ಲಿಯೇ ತೊಡಗಿದೆಯೆಂದೂ, ಸಹನಶೀಲತೆಗಾದರೂ ಒಂದು ಮೇರೆಯಿದ್ದು, ಅದು ಮೇರೆಯನ್ನು ಮೀರದಂತೆ ಬ್ರಿಟಿಶರು ಎಚ್ಚರಪಡುವದು ಈಗ ಅತ್ಯವಶ್ಯವಾಗಿದೆಯೆಂದೂ ಬ್ರಿಟಿಶರಿಗೆ ಎಚ್ಚರಿಕೆ ಕೊಟ್ಟರು.

### ಕರಾಚಿಯಲ್ಲಿ
### ಉಪ್ಪಿನ ಕಾಯದೆ ಭಂಗಕ್ಕಾಗಿ ಖಟ್ಲೆ

ಕರಾಚಿಯಲ್ಲಿ ತಾ॥ ೫ ನೆಯ ದಿವಸ ಕೂಡಿದ ಸಾರ್ವಜನಿಕ ಸಭೆಯಲ್ಲಿ ಕಾಯದೆಗೆ ವಿರುದ್ಧವಾಗಿ ಸಿದ್ಧಪಡಿಸಿದ ಉಪ್ಪನ್ನು ಮಾರಿದ ಆರೋಪದಿಂದ, ಅಲ್ಲಿಯ ನಗರ ಸಭೆಯ ಸಭಾಸದರಾದ ಶ್ರೀ ಮುರಾರ ಜೇಠಾರವರು ತಾ॥ ೧೮ ನೆಯ ದಿವಸ ಸೆರೆ ಹಿಡಿಯಲ್ಪಟ್ಟಿದ್ದಾರೆ.

### ಶ್ರೀ ಸಿ. ಆರ್. ರೆಡ್ಡಿಯವರು
### ರಾಜೀನಾಮೆ ಕೊಟ್ಟರು

ಆಂಧ್ರ ವಿಶ್ವವಿದ್ಯಾಲಯದ ವ್ಹಾಯಿಸ್ ಚಾನ್ಸಲರ ಶ್ರೀ ಸಿ. ಆರ್. ರೆಡ್ಡಿಯವರು ಸರಕಾರಿ ದಬ್ಬಾಳಿಕೆಯನ್ನು ನಿಷೇಧಿಸಿ ತಮ್ಮ ವ್ಹಾಯಿಸ್ ಚಾನ್ಸಲರ ಪದವಿಗೆ ರಾಜೀನಾಮೆ ಕೊಟ್ಟಿದ್ದಾರೆ.

### ಢಾಕಾದಲ್ಲಿ
### ೭ ಜನರಿಗೆ ಶಿಕ್ಷೆ

ಕೆಲವು ದಿನಗಳ ಹಿಂದೆ ಢಾಕಾದಲ್ಲಿ ಹಿಂದೂಮುಸಲ್ಮಾನರಲ್ಲಿ ಸಂಭವಿಸಿದ ದಂಗೆಯ ಸಂಬಂಧವಾಗಿ ಅಲ್ಲಿಯ ೭ ಜನ ಮುಸಲ್ಮಾನರಿಗೆ ೧೮ ತಿಂಗಳಿಂದ ೫ ವರ್ಷಗಳ ವರೆಗೆ ಬೇರೆ ಬೇರೆ ಕದ ಕಠಿಣ ಶಿಕ್ಷೆಗಳು ವಿಧಿಸಲ್ಪಟ್ಟಿವೆ.

### ಶ್ರೀ ಮಗನಲಾಲರಿಗೆ ಕೈದು

ಸೂರತ ತಾಲೂಕಿಗೆ ಸೇರಿದ ರಾಂದೇರ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರಾದ ಶ್ರೀ ಮಗನಲಾಲ ಕಲ್ಯಾಣಭಾಯಿಯವರು ಇ. ಪಿ. ಕೋಡಿನ ೧೧೭ ಹಾಗು ಉಪ್ಪಿನ ಕಾಯದೆಯ ೪೭ ಈ ಕಲಮುಗಳನ್ವಯ ತಾ॥ ೨೦ ನೆಯ ದಿವಸ ಕೈದು ಮಾಡಲ್ಪಟ್ಟಿದ್ದಾರೆ.

## ಬೆಳಗಾವಿಯಲ್ಲಿ

# ಲ ಜ ನ ರು ಗಳ ನೆ ಯ ಕ ಲ ಮು ಮು ರಿ ದ ರು

ಆದಿತ್ಯವಾರ ದಿವಸ ನಾಗರಿಕರು ಮೆರವಣಿಗೆಯಿಂದ ಹೊರಟುಹೋಗಿ, ಮಾಲವೀಯಜಿ ಚೌಕಿನಲ್ಲಿ ರಾಷ್ಟ್ರಧ್ವಜವಂದನೆಯ ಸಮಾರಂಭವನ್ನು ಜರುಗಿಸುವರೆಂದು ಮೊದಲೇ ಪ್ರಸಿದ್ಧವಾಗಿತ್ತು. ಅದಕ್ಕನುಸರಿಸಿ ಬೆಳಗಾವಿಯ ನಾಗರಿಕರು ಅಂದು ಮುಂಜಾವಿನಲ್ಲಿ ಮಾರುತಿ ದೇವಾಲಯದ ಮುಂದೆ ಕೂಡಿ ಮೆರವಣಿಗೆಯಿಂದ ಸಾಗಿ ಹೋದರು. ಮೆರವಣಿಗೆಯು ಪಟ್ಟಣದ ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ೮ ಗಂಟೆಗೆ ಮಾಲವೀಯಜಿ ಚೌಕಿಗೆ ತಲುಪಿತು. ಅಲ್ಲಿ ಶ್ರೀ ಬೆಳವಿ ದತ್ತಾತ್ರಯರಾಯರ ಹಸ್ತದಿಂದ ರಾಷ್ಟ್ರಧ್ವಜವಂದನೆಯ ಸಮಾರಂಭವು ನೆರವೇರಿಸಲ್ಪಟ್ಟಿತು. ಆ ಸಮಯದಲ್ಲಿ ಶ್ರೀ ಬೆಳವಿಯವರು ಸಮಯೋಚಿತ ಭಾಷಣ ಮಾಡಿ, ಪಂಡಿತ ಮಾಲವೀಯಜಿಯವರಿಗೆ ಧನ್ಯವಾದಗಳನ್ನರ್ಪಿಸಿ, ಅವರಿಗೆ ಆಯುರಾರೋಗ್ಯ ಲಭಿಸಲೆಂದು ಪ್ರಾರ್ಥಿಸಿದರು. ಬಳಿಕ ಸರಕಾರಿ ದಬ್ಬಾಳಿಕೆಯ ಮೂಲಕವಾಗಿ ತಮ್ಮ ಶಿಕ್ಷಕ ವೃತ್ತಿಗೆ ಶರಣು ಹೊಡೆದ ಶ್ರೀ ಪುರಾಣಿಕರು ಭಾಷಣಮಾಡಿದರು. ಅವರು ತಮ್ಮ ಭಾಷಣದಲ್ಲಿ ಪಂಡಿತಜಿಯವರ ಗುಣವರ್ಣನೆ ಮಾಡಿ, ಹಿಂದುಸ್ಥಾನದಲ್ಲಿ ಇತ್ತೀಚೆಗೆ ಸಂಭವಿಸಿದ ಸಂಗತಿಗಳು ಅವರಲ್ಲಿ ಹೇಗೆ ವಿಚಾರಕ್ರಾಂತಿಯನ್ನುಂಟುಮಾಡಿವೆಯೆಂಬುದನ್ನು ಜನರಿಗೆ ತಿಳಿಸಿ ಹೇಳಿದರು.

ಸಭೆಯು ಮುಕ್ತಾಯ ಹೊಂದುವದಕ್ಕಿಂತ ಪೂರ್ವದಲ್ಲಿ ನಾಲ್ಕು ನಾಲ್ಕು ಜನ ಸತ್ಯಾಗ್ರಹಿಗಳ ಎರಡು ತಂಡಗಳು ಸಭೆಯಲ್ಲಿ ಎದ್ದುನಿಂತು, ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಹೊರಡಿಸಿದ ಅಪ್ಪಣೆಯ ವಿರುದ್ಧವಾಗಿ ಪ್ರಭಾತಫೇರಿಯನ್ನು ತೆಗೆದುಕೊಂಡು ಹೋಗಲು ಸಿದ್ಧರಿದ್ದೇವೆಂಬುದಾಗಿ ತಿಳಿಸಿ, ಜಯ ಜಯಕಾರ ಮಾಡುತ್ತ ಹೊರಟುಹೋಗಿ, ಕೆಲವು ಬೀದಿಗಳಲ್ಲಿ ಸಂಚರಿಸಿದರು. ಅವರು ಇನ್ನೂ ಬಂಧನಕ್ಕೊಳಗಾಗಿಲ್ಲ.

ನಾಳಿನ ದಿವಸ ಮುಂಜಾನೆ ಲಾಲಾಜಿ ಚೌಕಿನಲ್ಲಿ ರಾಷ್ಟ್ರಧ್ವಜವಂದನೆಯ ಸಮಾರಂಭವು ಜರುಗತಕ್ಕದ್ದಿದೆ.

### ಗೋಕಾಕದಲ್ಲಿ

## ಎಮ್ಮೆಗಳು ಜಪ್ತವಾದವು

ಸಿಂದೀ ಗಿಡಗಳನ್ನು ಕಡಿದ ಆರೋಪದಿಂದ ಶಿಕ್ಷೆ ಹೊಂದಿದ ಶಂಕರ ಮಾರ್ಕಂಡ ಎಂಬುವನ ೧೦೦ ರೂ. ದಂಡ ವಸೂಲ ಮಾಡಲು ಪೋಲೀಸ ಅಧಿಕಾರಿಗಳು ತಾ॥ ೧೮ನೇಯ ದಿವಸ ಗೋಕಾಕಕ್ಕೆ ಹೋಗಿ, ಅವರ ಮನೆಗೆ ಮುತ್ತಿಗೆ ಹಾಕಿದರು. ಆಗ ಅವರ ತಂದೆಯು ಈ ಮನೆಗೆ ಅವನದೇನೂ ಸಂಬಂಧವಿಲ್ಲವೆಂದು ಅಧಿಕಾರಿಗಳಿಗೆ ತಿಳಿಸಿದನು. ಅವರು ಅದನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ಮನೆಯಲ್ಲಿಯ ಎರಡು ಎಮ್ಮೆಗಳನ್ನು ಜಪ್ತಮಾಡಿಕೊಂಡು ಹೋದರು.

### ದಿಲ್ಲಿಯಲ್ಲಿ

## ಸುರಾರಕ್ಕಸನ ಪ್ರೇತಯಾತ್ರೆ

ತಾ॥ ೧೮ನೆಯ ದಿವಸ ದಿಲ್ಲಿಯ ಕಾಂಗ್ರೆಸ್ ಕಮೀಟಿಯ ಅಧಿಕಾರಿಗಳು ಸುರಾರಕ್ಕಸನದೊಂದು ಪ್ರತಿಮೆಯನ್ನು ಮಾಡಿ ಅದರ ಪ್ರೇತಯಾತ್ರೆಯನ್ನು ಹೊರಡಿಸಿದರು. ಪೋಲೀಸರು ಅವರಿಗೆ ಅಡ್ಡಿಮಾಡಿ ಆ ಗೊಂಬೆಯನ್ನು ತೆಗೆದುಕೊಂಡು ಹೋದರು. ಕೂಡಲೆ ಜನರು ಮತ್ತೊಂದನ್ನು ಸಿದ್ಧಪಡಿಸಿಕೊಂಡು ಮುಂದಕ್ಕೆ ಸಾಗಿ ಭೋಲಾರಾಮರ ಸಿಂದಿ ಅಂಗಡಿಗೆ ತಲುಪಿದರು. ಅಲ್ಲಿ ಪೋಲೀಸ ಅಧಿಕಾರಿಗಳು ಅಡ್ಡಬಂದು ಅವರನ್ನು ತಡೆದರು. ಜನರು ಅಲ್ಲಿಯೇ ಕುಳಿತುಕೊಂಡರು. ಕೆಲವು ಹೊತ್ತಿನಮೇಲೆ ಪೋಲೀಸರು ೩೨ ಜನ ಸ್ತ್ರೀಯರು ಹಾಗು ೪ ಜನ ಗಂಡಸರು ಹೀಗೆ ೩೬ ಜನರನ್ನು ಕೈದು ಮಾಡಿಕೊಂಡು ಹೋದರು.

### ಸಕ್ಕರದಲ್ಲಿ

## ಬಾಂಬು ಹಾರಿತು

ಸಕ್ಕರದಲ್ಲಿಯ ಓರ್ವ ಜವಳಿ ವ್ಯಾಪಾರಸ್ಥನ ಅಂಗಡಿಯಲ್ಲಿ ಒಂದು ಗಂಟು ಇಡಲ್ಪಟ್ಟಿತ್ತು. ಆ ವ್ಯಾಪಾರಸ್ಥನು ಅಂಗಡಿಗೆ ಬಂದ ಕೂಡಲೆ ಅದನ್ನು ಒಡೆದು ನೋಡಿದನು. ಒಂದು ಗುಂಡಿನಂತಹ ಪದಾರ್ಥವು ಕಾಗದದಲ್ಲಿ ಸುತ್ತಲ್ಪಟ್ಟದ್ದು ಕಂಡುಬಂತು. ಕೂಡಲೆ ಅವನು ಅದನ್ನು ನೆಲದ ಮೇಲೆ ಒಗೆದನು. ಅದು ಒಮ್ಮಿಂದೊಮ್ಮೆ ಹಾರಿತು. ವ್ಯಾಪಾರಸ್ಥನಿಗೆ ಯಾವತರದ ಅಪಾಯವೂ ಸಂಭವಿಸಿಲ್ಲ.


### ಪ್ಲಾಟುಗಳು ಮಾರಾಟಕ್ಕಿವೆ.

ಟ್ರಾವ್ಹೆಲರ್ಸ ಬಂಗಲೆಯ ಹತ್ತರವಿರುವ ೬೩ನೇಯ ಸರ್ವೆ ನಂಬರದಲ್ಲಿಯ ಪ್ಲಾಟುಗಳು ಮಾರಾಟಕ್ಕಿವೆ. ತೆಗೆದುಕೊಳ್ಳಲಿಚ್ಛಿಸುವವರು ಸಮಕ್ಷಮ ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

ಯಲಗುರ್ದರಾವ ಧಾರವಾಡ
ವಕೀಲರು ಬಾಗಲಕೋಟೆ

### ಎಲ್ಲ ತರದ ಚಳಿಜ್ವರದ ಮೇಲೆ

## ರಾಮಬಾಣ ಗುಳಿಗೆಗಳು

ವಿಷಮಜ್ವರದ ಹೊರತಾಗಿ ಎಲ್ಲ ತರದ ಚಳಿಜ್ವರಗಳ ಮೇಲೆ ಈ ಗುಳಿಗೆಗಳು ಬಹಳೇ ಗುಣಕಾರಿಯಾಗಿರುವವು. ವಿಶೇಷ ಪಥ್ಯವನ್ನು ಮಾಡುವ ಕಾರಣವಿಲ್ಲ. ಹುಣಸೀ ಹಣ್ಣು ಮತ್ತು ಮಜ್ಜಿಗೆ ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ಪಡೆಯಿರಿ.

ಒಂದು ಗುಳಿಗೆಗೆ ೦-೧-೦
೧೦೦ ಗುಳಿಗೆಗಳಿಗೆ ೫-೮-೦

ಏಜಂಟರಿಗೆ ಧಾರಾಳವಾದ ಕಮಿಶನ ಕೊಡಲಾಗುವದು.

ವಿಳಾಸ:- ಕೃಷ್ಣಾಚಾರ್ಯ ಮಣ್ಣೂರ.
ಕಿಲ್ಲಾ ೭೦ ಓಣಿ, ಬಾಗಲಕೋಟೆ

### ಹಿಟ್ಟಿನ ಗಿರಣಿ ಮಾರಾಟಕ್ಕಿದೆ.

ರಸ್ಟನ ಮೇಕರ್ ಇಂಜಿನ್ ೭॥ 8. H. P. ಆದರ ಚಕ್ಕಿ ಸಹಿತ ಸದ್ಯಕ್ಕೆ ಚಾಲು ಇದ್ದದ್ದು ಮಾರುವದಿದೆ. ಸಮಕ್ಷಮ ಅಥವಾ ಪತ್ರವ್ಯವಹಾರ ಮಾಡಬೇಕು.

ಟಿ. ಜಿ. ದೇಸಾಯಿ c/o ಕನ್ನಡಿಗ
ಬಾಗಲಕೋಟ.

### ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ
ಸುದರ್ಶನ ಸ್ಟೋರ್ಸ ಬಾಗಲಕೋಟೆ


ಈ ಪತ್ರಿಕೆಯು ವೆಂಕಟೇಶ [illegible] ಆಚಾರ್ಯ [illegible] ಇವರಿಂದ ಬಾಗಲಕೋಟೆ ವಿದ್ಯಾರ್ಥಿ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮ ನಿತ್ಯ ಸಂಚಿಕೆಯು. ಬೆಲೆ. ೦—೦—೩

यद्यत् परवशं दुःखं । यद्यदात्मवशं सुखम् ॥—मनु.

# ಕನ್ನಡಿಗ

KANNADIGA

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವ.

ವರ್ಷ ೧ ] ಬಾಗಲಕೋಟೆ—ಬುಧವಾರ ಮಿತಿ ಪುಷ್ಯ ಶುದ್ಧ ೪ ಶಕೆ ೧೮೫೨ ತಾ|| ೨೪—೧೨—೩೦ [ ಸಂಚಿಕೆ ೧೮೬

## ಕಾರವಾರ ಜಿಲ್ಲೆಯಲ್ಲಿ

# ೨೭ ಜನ ಗೌಡರು ರಾಜೀನಾಮೆ ಕೊಟ್ಟರು

ಸರಕಾರದವರು ಕೈಕೊಂಡಿರುವ ದಬ್ಬಾಳಿಕೆಯ ವೃತ್ತಿಯ ನಿಷೇಧಾರ್ಥವಾಗಿ ಕಾರವಾರ ಜಿಲ್ಲೆಯ ಅಂಕೋಲಾ ತಾಲೂಕದಲ್ಲಿಯ ೨೭ ಜನ ಗೌಡರು ತಮ್ಮ ಗೌಡಿಕಿಗಳಿಗೆ ರಾಜೀನಾಮೆ ಕೊಟ್ಟಿದ್ದಾರೆ. ಇನ್ನೂ ಕೆಲವರು ಕೊಡುವವರಿದ್ದಾರೆ.

### ಬೆಳಗಾವಿಯಲ್ಲಿ

### ಪೋಲೀಸ ಅಧಿಕಾರಿಗಳ ಮೇಲೆ ಫಿರ್ಯಾದಿ

ಬೆಳಗಾವಿಯ ಹೋಮ ಇನಸ್ಪೆಕ್ಟರರಾದ ಮಿ. ವೆಸ್ಟ್‌ಗೇಟರು ತಮ್ಮನ್ನು ಹೊಡೆದರೆಂದು ಶ್ರೀ ಮುಂಡಗಿಯವರೂ, ತಮ್ಮನ್ನು ಹಿಡಕೊಂಡು ಹೋದ ನಂತರ ಸಬ್ ಇನಸ್ಪೆಕ್ಟರ ಖಾನರು ತಮಗೆ ಬೈದು ಹೊಡೆದರೆಂದು ಶ್ರೀ ಗುಂಡೋಪಂತ ಜನಯಿಯವರೂ ಫೌಜದಾರಿಯಲ್ಲಿ ಅವರ ಮೇಲೆ ಫಿರ್ಯಾದಿ ಮಾಡಿದ್ದಾರೆ.

### ಮುರುಗೋಡದಲ್ಲಿ

### ನಾಲ್ವರಿಗೆ ಶಿಕ್ಷೆ

ಮುರಗೋಡದ ಸುತ್ತುಮುತ್ತಲಿನ ಹಳ್ಳಿಗಳಲ್ಲಿಯ ಸಿಂದಿ ಗಿಡಗಳನ್ನು ಕಡಿದ ಆರೋಪದ ಸಂಬಂಧವಾಗಿ ಅಲ್ಲಿಯ ಶ್ರೀ ಬಸವಣ್ಣೆಪ್ಪ ರಡಿಗುಡ್ಡ, ಅನಂತ ಮುನವಳ್ಳಿ, ಪ್ರಲ್ಹಾದ ಶೆಟ್ಟಿ, ಸಣ್ಣ ಮಲ್ಲಪ್ಪ ಪಾಟೀಲ ಈ ನಾಲ್ಕು ಜನರಿಗೆ ತಾ|| ೧೯ ನೆಯ ದಿವಸ ೧೮ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೧೫೦ ರು. ದಂಡ, ಇಲ್ಲವೆ ಮತ್ತೆ ೩ ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆಯು ವಿಧಿಸಲ್ಪಟ್ಟಿದೆ. ಬಿಡುಗಡೆಯಾದ ಮೇಲೆಯೂ ಸಹ ೫೦೦ ರು. ಗಳ ಹೊಣೆ ಕೊಡಲು ಕಡೆಯ ಇಬ್ಬರಿಗೆ ಆಜ್ಞೆ ವಿಧಿಸಿದ್ದಾರೆ. ಮೊದಲಿನ ಮೂವರಿಗೆ ೧ ತಿಂಗಳ ಹಿಂದೆ ೧೩ ತಿಂಗಳ ಶಿಕ್ಷೆಯಾಗಿದೆ.

### ಬೈಲಹೊಂಗಲದಲ್ಲಿ

### ಜಪ್ತಿಯ ಹಾವಳಿ

ಸಿಂದಿ ಗಿಡ ಕಡಿದ ಬಗ್ಗೆ ಬೈಲಹೊಂಗಲದಲ್ಲಿ ಶ್ರೀ ದತ್ತು ಬಾಳಪ್ಪ ಸರಾಫ ಎಂಬ ಸ್ವಯಂಸೇವಕನಿಗೆ ೧೦೦ ರು. ದಂಡವಾಗಿತ್ತು. ತಾ|| ೧೯ ನೆಯ ದಿವಸ ಪೋಲೀಸ ಅಧಿಕಾರಿಗಳು ಅವರ ಮನೆಗೆ ಮುತ್ತಿಗೆ ಹಾಕಿ ಅಷ್ಟು ರುಪಾಯಿಗಳನ್ನು ಜಪ್ತ ಮಾಡಿಕೊಂಡು ಹೋದರು. ಶ್ರೀ ಬಸಪ್ಪ ನೇಸರಗಿಯವರ ಮನೆಯಾದರೂ ಝಡತಿ ಮಾಡಲ್ಪಟ್ಟಿತು. ಆದರೆ ಅಧಿಕಾರಿಗಳಿಗೆ ಅಲ್ಲಿ ಏನೂ ಸಿಗಲಿಲ್ಲ.

### ಸಿಗ್ಗಾವಿಯಲ್ಲಿ

### ೮ ಜನರ ಮೇಲೆ ಖಟ್ಲೆ.

ಅಡವಿಯ ಸತ್ಯಾಗ್ರಹ ಸಂಬಂಧವಾಗಿ ಬಂಧಿತರಾಗಿದ್ದ ಸ್ವಯಂಸೇವಕರ ಮೆರವಣಿಗೆಯ ಸಲುವಾಗಿ ಮೋಟಾರು ತರುವಿದರೆಂಬ ಆರೋಪ ಹೊರಿಸಿ ಅಧಿಕಾರಿಗಳು ಸಿಗ್ಗಾವಿಯಲ್ಲಿ ೮ ಜನರ ಮೇಲೆ ಖಟ್ಲೆ ಹಾಕಿದ್ದಾರೆ.

### ಜೇಲಿನಲ್ಲಿ

### ಸತ್ಯಾಗ್ರಹಿಯ ಮರಣ

ಬಳ್ಳಾರಿ ಜಿಲ್ಲೆಯ ಅಲೀಪುರ ಜೇಲಿನಲ್ಲಿ ತನ್ನ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಶ್ರೀ ಪ್ರಭಾಲ ಸುಬ್ರಾವ ಎಂಬ ಸತ್ಯಾಗ್ರಹಿಯು ಕ್ಷಯ ವಿಕಾರದಿಂದ ಜೇಲಿನಲ್ಲಿಯೇ ಮರಣ ಹೊಂದಿದನು.

### ದಿಲ್ಲಿ ಜೇಲಿನಲ್ಲಿ

### ೪೦ ಸ್ತ್ರೀಯರ ಅನ್ನತ್ಯಾಗ.

ಕಾಯದೆಭಂಗದ ಮೂಲಕವಾಗಿ ಶಿಕ್ಷೆಗೊಳಗಾದ ೨೪ ಜನ ಸ್ತ್ರೀಯರಿಗೆ "ಕ" ವರ್ಗವನ್ನು ಕೊಟ್ಟಿದ್ದರ ನಿಷೇಧಾರ್ಥವಾಗಿ ದಿಲ್ಲಿಯ ಜೇಲಿನಲ್ಲಿಯ ೪೦ ಜನ ಸ್ತ್ರೀಯರು ಅನ್ನತ್ಯಾಗ ವ್ರತವನ್ನು ಕೈಕೊಂಡಿರುವರಾಗಿ ತಿಳಿಯುತ್ತದೆ.

### ಅಲ್ಲಿಪೂರ ಜೇಲಿನಲ್ಲಿ ಅನ್ನತ್ಯಾಗ.

ಅಲ್ಲಿಪೂರ ಪ್ರೆಸಿಡೆನ್ಸಿ ಜೇಲಿನಲ್ಲಿರುವ ಎಷ್ಟೋ ಜನ ರಾಜಕೀಯ ಕೈದಿಗಳು ನಿರಶನ ವ್ರತವನ್ನು ಪ್ರಾರಂಭಿಸಿರುವರಾಗಿ ತಿಳಿದು ಬರುತ್ತದೆ.

# ಅಧಿಕಾರಿಗಳು ರೈತರ ಮನವೊಲಿಸಹತ್ತಿದರು

ಮುಂಬಯಿ ಇಲಾಖೆಯ ಕಂದಾಯ ಖಾತೆಯ ಮುಖ್ಯಾಧಿಕಾರಿಗಳಾದ ಮಿ. ಹಡಸನ್ನರು, ಜಿಲ್ಲೆಯ ಕಲೆಕ್ಟರ ಹಾಗು ಬೋರಸಾದದ ಮಾಮಲೇದಾರರೊಡನೆ ತಾ|| ೧೬ ನೇಯ ದಿವಸ ಬೋರಸಾದ ತಾಲೂಕದ ಬೋಚಾಸನ ಹಾಗು ರಾಸ ಈ ಹಳ್ಳಿಗಳಿಗೆ ಹೋಗಿದ್ದರು. ಆಗ ಆ ಹಳ್ಳಿಗಳಲ್ಲಿ ಯಾರೂ ಅವರ ಕಣ್ಣಿಗೆ ಬೀಳಲಿಲ್ಲ. ರಾಸದಂದರೆ ರೈತರಲ್ಲರೂ ಗುಳೇ ಕಿತ್ತಿಕೊಂಡು ಬಡೋದಾ ಸಂಸ್ಥಾನದ ಹದ್ದನ್ನು ಸೇರಿದ್ದಾರೆ. ಆದ್ದರಿಂದ ಅಧಿಕಾರಿಗಳು [illegible] (ನೆ ಬೋ..) ಅವರ ಭೆಟ್ಟಿಗೆ ಹೋದರು. ಆ ಸಮಯದಲ್ಲಿ ಮಿ. ಹಡಸನ್ನರು ರೈತರನ್ನುದ್ದೇಶಿಸಿ ಕೆಳಗಿನಂತೆ ಸಂಭಾಷಣ ಮಾಡಿದರು.

ನಿಮ್ಮ ಬಡತನದ ೫೦೦ ಎಕರೆ ಭೂಮಿಗಳು ಮಾರಲ್ಪಟ್ಟಿವೆ ಯೆಂಬುದನ್ನು ಕಂಡು ನನಗೆ ವಿಷಾದವೆನಿಸುತ್ತದೆ. ನೀವು ತೆರಿಗೆಯ ಹಣವನ್ನು ಕೊಟ್ಟಲ್ಲಿ ಜಪ್ತವಾದ ನಿಮ್ಮ ಭೂಮಿಗಳು ನಿಮಗೆ ಸಿಗುವವು. ನೀವು ಬಡವರಿರುವದಿಲ್ಲ ನಿಮಗೆ ಸಾಕಷ್ಟು ಉತ್ಪನ್ನವಿದೆ. ಆದ್ದರಿಂದ ತೆರಿಗೆಯನ್ನು ಕೊಡುವದೇನೂ ನಿಮಗೆ ಬಿಗಿ ಹೋಗಲಾರದು. ನೀವು ಮನೆಬಿಟ್ಟು ಹೋಗಿ ಬಂದದ್ದನ್ನು ನೋಡಿ ನನಗೆ ದುಃಖವಾಗುತ್ತಿದೆ. ಎಂದರೆ ಎಷ್ಟೋ ಹಳ್ಳಿಗಳಲ್ಲಿಯ ರೈತರ ತೆರಿಗೆಯ ಹಣವನ್ನು ಕೊಟ್ಟು ಸುಖದಿಂದ ಜೀವಿಸುತ್ತಿರುವರು. ಅವರಂತೆ ನೀವಾದರೂ ತೆರಿಗೆಯನ್ನು ಕೊಟ್ಟಲ್ಲಿ ನಿಮಗೆ ಯಾವ ತೊಂದರೆಯೂ ಉಂಟಾಗದು.

ಮಿ. ಹಡಸನ್ನರು ಸಂಭಾಷಣವು ಮುಗಿದ ಕೂಡಲೆ ರೈತರೆಲ್ಲರೂ ಏಕಮತದಿಂದ ಮಹಾತ್ಮಾಗಾಂಧಿ ಹಾಗು ಸರದಾರ ವಲ್ಲಭಭಾಯಿಯವರು ಬಿಡುಗಡೆಹೊಂದಿ ಬರುವವರೆಗೆ ಒಂದ ಪೈ ಸಹ ಕೊಡುವದಿಲ್ಲವೆಂಬುದಾಗಿ ಸ್ಪಷ್ಟವಾಗಿ ತಿಳಿಸಿದರು.

ನೀವು ತೆರಿಗೆಯ ಹಣವನ್ನು ಕೊಟ್ಟಲ್ಲಿ ಮಾತ್ರ ನಿಮ್ಮ ಮುಖಂಡರು ಬಿಡುಗಡೆ ಮಾಡಲ್ಪಡುವರು ಎಂಬುದಾಗಿ ಮಿ. ಹಡಸನ್ನರು ಅವರಿಗೆ ಹೇಳಿದರು.

ತಮ್ಮ ಮನಸಿಗೆ ಬಂದಂತೆ ವರ್ತಿಸಲು ಕೆಳಗಿನ ಅಧಿಕಾರಿಗಳಿಗೆ ಮೇಲಧಿಕಾರಿಗಳು ಮುಕ್ತದ್ವಾರವನ್ನಿಟ್ಟಿದ್ದರಿಂದ, ಅವರು ರೈತರನ್ನು ಬಹುಕ್ರೂರವಾಗಿ ಪೀಡಿಸಹತ್ತಿದ್ದಾರೆ. ಅವರ ಅನ್ಯಾಯ ಹಾಗು ಜುಲುಮೆಗಳನ್ನು ಸಹಿಸಿಕೊಳ್ಳದೆ ಇಲ್ಲಿಗೆ ಗುಳೇ ಕಿತ್ತಿಕೊಂಡು ಬಂದಿದ್ದೇವೆ ಎಂದು ರೈತರು ಮಿ. ಹಡಸನ್ನರಿಗೆ ತಿಳಿಸಿದರು.

ನಮಗೆ ತೆರಿಗೆಯ ಹಣವನ್ನು ಕೊಡುವ ಪ್ರಸಂಗವು ನಿಮಗೆ ಇಂದಿಲ್ಲ ನಾಳೆಯಾದರೂ ಒಂದೇ ಬರುವದು. ಆದ್ದರಿಂದ ಈಗಲೆ ಅದನ್ನು ಕೊಟ್ಟು ನಿಮ್ಮ ಹಳ್ಳಿಗಳಿಗೆ ನೀವು ತಿರುಗಿ ಹೋಗುವದು ಹಿತಕರವಾಗಿದೆ ಎಂಬುದಾಗಿ ಮಿ. ಹಡಸನ್ನರು ರೈತರಿಗೆ ಹೇಳುತ್ತಿದ್ದರು.

ನಮ್ಮ ನಿರ್ಧಾರವನ್ನು ಮೊದಲೇ ತಿಳಿಸಿದ್ದೇವೆ. ಈ ಬಗ್ಗೆ ನಿಮ್ಮ ಉಪದೇಶವನ್ನು ಕೇಳಲು ನಾವು ಸಿದ್ಧರಿಲ್ಲ ಎಂದು ರೈತರು ಉತ್ತರ ಕೊಟ್ಟರು.

ಅಧಿಕಾರಿಗಳು ಅವನತಮುಖರಾಗಿ ಬಂದ ಹಾದಿಗೆ ಸುಂಕವಿಲ್ಲವೆಂದು ತಿರುಗಿ ಹೊರಟು ಹೋದರು.

### ಬಡ ಕೋಲಿ ರೈತರಿಗೆ ನಾಟಕ ಮಂಡಳಿಯ ಸಹಾಯ

ದಾವಣಗೇರೆಯಲ್ಲಿ ತಮ್ಮ ಲೋಕಪ್ರಿಯವಾದ ನಾಟಕಗಳನ್ನು ಪ್ರಯೋಗಿಸುತ್ತಿರುವ ಲೋಕ ಸೇವಕ ನಾಟಕ ಮಂಡಳಿಯವರು ಒಂದು ದಿವಸ [illegible] ಎಂಬ ನಾಟಕವನ್ನಾಡಿ ಅದರಿಂದ ಬಂದ ೬೦೦ ರೂ. ಉತ್ಪನ್ನವನ್ನು ಬಾಡೆ ಕೋಲಿ ರೈತರ ಕಷ್ಟನಿವಾರಣ ನಿಧಿಗೆ ದಾನಮಾಡಿದರು. ಉಳಿದ ನಾಟಕ ಮಂಡಳಿಯವರು?

### ಡಾಕಾದಲ್ಲಿ ಒಬ್ಬನಿಗೆ ಕರೆನೀರಿನ ಶಿಕ್ಷೆ

ಮೇ ತಿಂಗಳ ೨೪ ನೆಯ ತಾರೀಖಿನ ದಿವಸ ಡಾಕಾದಲ್ಲಿ ಹಿಂದೂ ಮುಸಲ್ಮಾನರ ದಂಗೆಯು ಸಂಭವಿಸಿದಾಗ ಜತೀಂದ್ರನಾಥ [illegible]ರ ಮುಕರ್ಜಿ ಕೊಲೆಮಾಡಿದ ಸಂಬಂಧವಾಗಿ ಅಲ್ಲಿಯ ಮೋಹಿಯುದ್ದೀನನಿಗೆ ಕರೆನೀರಿನ ಶಿಕ್ಷೆಯು ವಿಧಿಸಲ್ಪಟ್ಟಿದೆ.

### ಕುವರ ದ[illegible]ವ್ರರು ಕಾರಾಗೃಹ ಕಂಡರು

ಕಿಶೋರ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳೂ ಅಖಿಲ ಬಂಗಾಲ ವಿದ್ಯಾರ್ಥಿ ಸಂಘದ ಸಭಾಸದರೂ ಆಗಿರುವ ಶ್ರೀ ಕ.ಮ.ದ ಚಂದ್ರಸೇನರು ಬಂಗಾಲ ಆರ್ಡಿನನ್ಸದನ್ವಯ ಸೆರೆಹಿಡಿಯಲ್ಪಟ್ಟಿದ್ದಾರೆ.

## ಹುಬ್ಬಳ್ಳಿಯಲ್ಲಿ ಹುಣಸಿ ಲಿಲಾವಿಗೆ ಅಡ್ಡಿ

(ಸ್ವಂತ ಸುದ್ದಿಗಾರರಿಂದ)

ಹುಬ್ಬಳ್ಳಿ ತಾಲೂಕಿಗೆ ಸೇರಿದ ಗೋಕಲ್ ಕುಸುಗಲ್ಲ ಮುಂತಾದ ಸ್ಥಳಗಳಲ್ಲಿ ಸರಕಾರ ಹುಣಸಿಗಿಡಗಳ ಲಿಲಾವು ಆಗತಕ್ಕದ್ದಿದೆಯೆಂದು ಪ್ರಕಟವಾಗಿತ್ತು. ಅದನ್ನು ತಿಳಿದುಕೊಂಡು ಸ್ವಯಂಸೇವಕರು ಆ ಆ ಸ್ಥಳಗಳಿಗೆ ಪಿಕೆಟಿಂಗಕ್ಕೆ ಹೋಗಿದ್ದರು. ಆದರೆ ಅಧಿಕಾರಿಗಳು ಯಾವ ಕಾರಣದಿಂದಲೋ ಏನೋ ಲಿಲಾವನ್ನು ಮುಂದಕ್ಕೆ ಹಾಕಿದರು.

### ಇಹವೃತ್ತ

ಮುಂಬಯಿಯ ಶ್ರೀಮತಿ ಸೀತಾಬಾಯಿ ಪಡಬಿದ್ರಿಯವರ ಹಸ್ತದಿಂದ ಇಲ್ಲಿ ನಿನ್ನಿನ ದಿವಸ ಸ್ವದೇಶಿ ವಸ್ತು ಪ್ರಚಾರಕ ಸಂಘವು ಸ್ಥಾಪಿಸಲ್ಪಟ್ಟಿತು. ಸಂಘದ ಸಭಾಸದರು ಹಾಗು [illegible] ಕೈಕೊಂಡ ಕಾರ್ಯಕಲಾಪ ಮೊದಲಾದವುಗಳನ್ನು ನಾಳಿನ ಸಂಚಿಕೆಯಲ್ಲಿ ಕೊಡುವದಲ್ಲಿ ಬರುವದು.

ನಿನ್ನಿನ ದಿವಸ ಸಂಜೆಯಲ್ಲಿ ಲಾಲಾಜಿ ಹಾಲಿನಲ್ಲಿ ಮುಂಬಯಿಯ ಶ್ರೀಮತಿ ಸೀತಾಬಾಯಿ ಪಡಬಿದ್ರಿಯವರು "ಮುಂಬಯಿಯ ಸ್ತ್ರೀ ಚಳವಳಿ"ಯ ವಿಷಯವಾಗಿ ಭಾಷಣ ಮಾಡಿದರು.

ಮೊ. ಸಮೀರಸಾಹೇಬರಿಗೆ ಲೋಕಲ್ ಬೋರ್ಡ ಕಚೇರಿಯಲ್ಲಿ ಸಂತೋಷಕೂಟ ನಡೆದ ದಿವಸ ಸಬ್ ಇನಸ್ಪೆಕ್ಟರರು ಶ್ರೀ ಶ್ರೀನಿವಾಸರಾವ ಭಟ್ಟ ವಕೀಲರನ್ನು ರೊಟ್ಟೆ ಹಿಡಿದು ನೂಕಿ ಅವಮಾನ ಮಾಡಿದ್ದರ ಸಂಬಂಧವಾಗಿ, ಇಲ್ಲಿಯ ವಕೀಲ ಸಂಘದವರು ನಿಷೇಧಪರ ಠರಾವು ಮಾಡಿಕೊಂಡಿದ್ದಲ್ಲದೆ, ಆ ಸಂಬಂಧವಾಗಿ ಡಿ. ಮ್ಯಾಜಿಸ್ಟ್ರೇಟರು ಪೋಲೀಸ ಸುಪರಿಂಟೆಂಡೆಂಟರು ಹಾಗು ಡಿಸ್ಟ್ರಿಕ್ಟ ಜಡ್ಜರು ಇವರ ಕಡೆಗೆ ದೂರು ಬರೆದುಕೊಂಡಿದ್ದಾರೆ.

ಇಲ್ಲಿಯ ಶಿವಪ್ಪ ಬಸಪ್ಪ ಕಳ್ಳಿಗುಡ್ಡ ಎಂಬ ಹೆಸರಿನ ೧೪ ವರ್ಷದ ಹುಡುಗನೊಬ್ಬನು ಮಹಾತ್ಮಾ ಗಾಂಧಿಯವರು ಬಂಧಮುಕ್ತರಾಗಿ ಬರುವವರೆಗೆ ಅನ್ನವನ್ನು ತೆಗೆದುಕೊಳ್ಳುವದನ್ನು ಬಿಟ್ಟಿದ್ದಾನೆ. ಅವನು ಹೀಗೆ ಅನ್ನವನ್ನು ಬಿಟ್ಟು ಈಗ ೩ ತಿಂಗಳಾದವು.

# ಜಗತ್ತಿನ ಇತಿಹಾಸದಲ್ಲಿ ಅಪೂರ್ವ ಸಂಗತಿ.

## ಮಹಾತ್ಮರ ಚಳವಳಿಯಲ್ಲಿ ಸಹಸ್ರಾರು ಜನ ಯುರೋಪಿಯನ್ನರ ವಿಶ್ವಾಸ.

ಸ್ವಿಟ್ಜರ್ಲಂಡದ ಯುವಕ ಸಂಘದ ಪ್ರಸಿದ್ಧ ಕಾರ್ಯಕರ್ತರಾದ ಮಿ. ಝಿನರಮನ್ನರು ತಾ|| ೧೫ ನೆಯ ದಿವಸ ಗುಜರಥ ಪ್ರಾಂತದ ಬೋರಸಾದ ತಾಲೂಕದ ಕೆಲವು ಹಳ್ಳಿಗಳಲ್ಲಿ ಸಂಚರಿಸಿ ಸತ್ಯಾಗ್ರಹ ಚಳವಳಿಯ ವಿಷಯವಾಗಿ ಕೆಳಗಿನಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಈ ಚಳವಳಿಯು ಜಗತ್ತಿನ ಇತಿಹಾಸದಲ್ಲಿ ಒಂದು ಅಪೂರ್ವವಾದ ಸಂಗತಿಯಾಗಿರುತ್ತದೆ. ಜರ್ಮನಿಯಲ್ಲಿಯ ಸಾವಿರಾರು ಜನರು ಅಹಿಂಸೆ ಮತ್ತು ಸತ್ಯಗಳಲ್ಲಿ ವಿಶ್ವಾಸವನ್ನಿಟ್ಟಿದ್ದಾರೆ. ನನಗಾದರೂ ಅಹಿಂಸೆಯಲ್ಲಿ ವಿಶ್ವಾಸವುಂಟು. ಹಿಂದುಸ್ಥಾನದಲ್ಲಿಯ ಜನರು ಈ ತತ್ವಕ್ಕೆ ಅಂಟಿಕೊಂಡು ಕಾರ್ಯಮಾಡುತ್ತಿರುವದನ್ನು ನೋಡಿ ನನಗೆ ಬಹು ಸಂತೋಷವಾಯಿತು.

ಹಿಂದುಸ್ಥಾನದಲ್ಲಿ ಅನೇಕ ಕಡೆಗಳಲ್ಲಿ ಸಂಚರಿಸಿದೆ. ಭೆಟ್ಟಿಯಾದವರೊಡನೆ ಮಾತುಕತೆಯಾಡಿದೆ. ಎಲ್ಲಿ ನೋಡಿದಲ್ಲಿಯೂ ಪ್ರತಿಯೊಬ್ಬನು ಸ್ವಾತಂತ್ರ್ಯಕ್ಕಾಗಿ ಒಂದಿಲ್ಲೊಂದು ಬಗೆಯಿಂದ ಪ್ರಯತ್ನ ಮಾಡುತ್ತಲೇ ಇರುವನು. ಕಾರಣ ಈ ಸ್ವಾತಂತ್ರ್ಯಾಭಿಲಾಷೆಯನ್ನು ಹತ್ತಿಕ್ಕುವದು ಯಾರಿಗೂ ಸಾಧ್ಯವಿಲ್ಲ.

ಹಿಂದುಸ್ಥಾನದಲ್ಲಿಯೇ ವಾಸಿಸಿ ಈ ಚಳವಳಿಯಲ್ಲಿ ಭಾಗತೆಗೆದುಕೊಳ್ಳಬೇಕೆಂಬುದಾಗಿ ನಾನು ಮೊದಲು ಇಚ್ಛಿಸಿದೆ. ಆದರೆ ನನ್ನ ದೇಶಕ್ಕೆ ತಿರುಗಿ ಹೋಗಿ ಅಲ್ಲಿಯ ಜನರಿಗೆ ಹಿಂದುಸ್ಥಾನದಲ್ಲಿಯ ಪರಿಸ್ಥಿತಿಯ ನಿಜವಾದ ಜ್ಞಾನವನ್ನು ಮಾಡಿಕೊಟ್ಟಲ್ಲಿ, ಹೆಚ್ಚಿನ ಸೇವೆಯನ್ನು ಮಾಡಿದಂತಾಗುವದೆಂದು ನನಗೆ ಎನಿಸಿದ್ದರಿಂದ ಮೊದಲಿನ ವಿಚಾರವನ್ನು ನಾನು ಬದಲಿಸಬೇಕಾಯಿತು.

ಬ್ರಿಟಿಶ ಪ್ರಭುತ್ವವಾದಿಗಳೊಡನೆ ಮಹಾತ್ಮರು ಒಪ್ಪಂದವನ್ನು ಮಾಡಿಕೊಳ್ಳದಿದ್ದದ್ದೇ ಹಿತವಾಯಿತು. ಬಂಡಿಗಾಲಿಯ ಪರಿಷತ್ತಿಗೆ ಎಂದಿಗೂ ಯಶಸ್ವಿಯಾಗದು. ಸರಕಾರದವರು ತಮ್ಮ ತಪ್ಪನ್ನು ತಿಳಿದುಕೊಂಡು ಮಹಾತ್ಮರು ಹಾಗು ಅಖಿಲಭಾರತರಾಷ್ಟ್ರಸಭೆಯ ಪ್ರತಿನಿಧಿಗಳೊಡನೆ ಇನ್ನಾದರೂ ಒಪ್ಪಂದ ಮಾಡಿಕೊಳ್ಳಲಿ ಅಂದರೆ ಹಿಂದುಸ್ಥಾನದ ಪ್ರಶ್ನೆಯು ತಾನಾಗಿಯೆ ಬಿಟ್ಟುಹೋಗುವದು. ಇನ್ನೊಮ್ಮೆ ಇಲ್ಲಿಗೆ ನಾನು ಬರುವದರೊಳಗಾಗಿ ಹಿಂದುಸ್ಥಾನವು ಸ್ವತಂತ್ರವಾಗಿರಲೆಂದು ನಾನು ಬಯಸುತ್ತೇನೆ.

### ಮ್ಯಾಜಿಸ್ಟ್ರೇಟರು ಸಿಂದಿ ಅಂಗಡಿ ಕಾಯಹತ್ತಿದರು

ದಿಲ್ಲಿಯಲ್ಲಿಯ ಭೋಲಾರಾಮರ ಸಿಂದಿ ಅಂಗಡಿಯ ಮುಂದೆ ಕಾಂಗ್ರೆಸ್ ಅಧಿಕಾರಿಗಳು ಜೋರಿನಿಂದ ಪಿಕೆಟಿಂಗ ನಡಿಸಿದ್ದನ್ನು ಕಂಡು, ತಾ|| ೨೦ ನೆಯ ದಿವಸದಿಂದ ಅಧಿಕಾರಿಗಳು ಆ ಅಂಗಡಿಯ ಸಂರಕ್ಷಣೆಗಾಗಿ ಕೆಲವು ಜನ ಪೋಲೀಸರನ್ನು ಹಾಗು ಒಬ್ಬ ಮೊದಲನೆಯ ವರ್ಗದ ಮ್ಯಾಜಿಸ್ಟ್ರೇಟರನ್ನು ಅಲ್ಲಿ ಇಟ್ಟಿದ್ದಾರೆ.

### ದಿಲ್ಲಿಯಲ್ಲಿ

## ೨೯ ಸ್ತ್ರೀಯರಿಗೆ ಶಿಕ್ಷೆ

ಭೋಲಾರಾಮನ ಸಿಂದಿ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದ ಸಂಬಂಧವಾಗಿ ದಿಲ್ಲಿಯಲ್ಲಿ ಬಂಧನಕ್ಕೊಳಗಾದ ೨೯ ಜನ ಸ್ತ್ರೀಯರಿಗೆ ಪ್ರತ್ಯೇಕವಾಗಿ ೩೦೦ ರು ದಂಡ ತಪ್ಪಿದರೆ ೬ ತಿಂಗಳ ಸಾದಾ ಕಾರಾಗೃಹವಾಸ ಹೀಗೆ ಶಿಕ್ಷೆಯು ವಿಧಿಸಲ್ಪಟ್ಟಿದೆ.

### ಕಾನಪುರದಲ್ಲಿ

## ಡೊಣ್ಣೆಯ ರಾಜ್ಯ.

ಕಾನಪುರದಲ್ಲಿ ಸಿಂದಿ ಪಿಕೆಟಿಂಗದ ಸಂಬಂಧವಾಗಿ ಶಿಕ್ಷೆಗೊಳಗಾದ ೧೬ ಜನ ಸ್ತ್ರೀಯರು ತಾ|| ೧೬ ನೆಯ ದಿವಸ ಜೇಲಿನಿಂದ ಬಿಡುಗಡೆ ಹೊಂದಿದರು. ಅವರ ಸನ್ಮಾನಾರ್ಥವಾಗಿ ಅಂದು ಸಂಜೆಯಲ್ಲಿ ಮೆರವಣಿಗೆಯು ಹೊರಟಿತು. ಮೆರವಣಿಗೆಯು ಏನೊಂದು ತೊಂದರೆಯಿಲ್ಲದೆ ಮುಖ್ಯ ಮುಖ್ಯ ಬೀದಿಗಳಲ್ಲಿ ಸಂಚರಿಸಿ ಕರಾಚಿಖಾನಾ ಮಾರ್ಗಕ್ಕೆ ಬಂದು ತಲುಪಿತು. ಅಲ್ಲಿ ಪೋಲೀಸರು ಮೆರವಣಿಗೆಗೆ ಅಡ್ಡಿ ಮಾಡಿದರು. ಈ ಸುದ್ದಿಯು ಊರತುಂಬ ಹಬ್ಬಿದ ಕೂಡಲೆ ಸಾವಿರಗಟ್ಟಲೆ ಜನರು ಅಲ್ಲಿ ಬಂದು ಸೇರಿದರು. ಪೋಲೀಸರು ಡೊಣ್ಣೆಗಳನ್ನುಪಯೋಗಿಸಿ ಜನರನ್ನು ಚದುರಿಸಲು ಪ್ರಯತ್ನ ಮಾಡಿದರು. ಜನರು ಸ್ಥಳಬಿಟ್ಟು ಕದಲದೆ ಅಲ್ಲಿಯೇ ಹಾಗೆಯೆ ಕುಳಿತುಕೊಂಡರು. ಕೆಲವು ಹೊತ್ತಿನ ಮೇಲೆ ಅಧಿಕಾರಿಗಳು ನಿರುಪಾಯರಾಗಿ ಹೊರಟು ಹೋದರು. ಐವರು ಜನರಿಗೆ ಗಾಯಗಳಾಗಿವೆ.

## ಪಂಡಿತ ಮಾಲವೀಯರಿಗಾಗಿ

### ಪ್ರಾರ್ಥನೆ

ಬನಾರಸ ಹಿಂದೂ ವಿಶ್ವವಿದ್ಯಾಲಯದ ಶ್ರೀ ವ್ಹಿ. ಎಸ್. ಸುಂದರಮರವರು ಕಲಕತ್ತೆಯ ಯುರೋಪಿಯನ್ ಸಿವ್ಹಿಲ ಹಾಸ್ಪಿಟಲದಲ್ಲಿ ಪಂಡಿತ ಮಾಲವೀಯರನ್ನು ಕಂಡುಕೊಂಡು ತಾ|| ೨೨ ನೆಯ ದಿವಸ ಮುಂಬಯಿಗೆ ಬಂದರು. ಪಂಡಿತ ಮಾಲವೀಯರು ಬಹಳೇ ಅಶಕ್ತರಾಗಿರುವ ಕಾರಣ, ಅವರ ೭೦ ನೆಯ ಜನ್ಮದಿನವಾದ ತಾ|| ೨೫ ನೆಯ ದಿವಸದಲ್ಲಿ ಅವರಿಗೆ ಆಯುರಾರೋಗ್ಯ ದಯಪಾಲಿಸಲು ಪರಮೇಶ್ವರನಲ್ಲಿ ಭಾರತೀಯರೆಲ್ಲರು ಪ್ರಾರ್ಥನೆಗಳನ್ನರ್ಪಿಸಬೇಕೆಂದು ಅವರು ಪ್ರಕಟಿಸಿದ್ದಾರೆ.

### ಲಿಬರ್ಟಿ ಪತ್ರಿಕೆಯ ಕಚೇರಿಗೆ ಮುತ್ತಿಗೆ.

ಕಲಕತ್ತೆಯ ಪೋಲೀಸ ಅಧಿಕಾರಿಗಳು ತಾ|| ೧೯ ನೆಯ ದಿವಸ ಅಲ್ಲಿಯ "ಲಿಬರ್ಟಿ" ಪತ್ರಿಕೆಯ ಕಚೇರಿಗೆ ಮುತ್ತಿಗೆ ಹಾಕಿ ಕಾಯದೆ ಮಂಡಳಕ್ಕೆ ಸಂಬಂಧಿಸಿದ ಕೆಲವು ಹಸ್ತಪತ್ರಿಕೆಗಳನ್ನು ಜಪ್ತಮಾಡಿಕೊಂಡು ಹೋದರು.

### ಮೌಲಾನಾ ಮಹಮ್ಮದ ಅಲ್ಲಿಯವರಿಗೆ ಅಸ್ವಸ್ಥತೆ.

ಬಂಡಿಗಾಲಿಯ ಪರಿಷತ್ತಿಗೆ ಪ್ರತಿನಿಧಿಗಳಾಗಿ ಹೋಗಿರುವ ಮೌಲಾನಾ ಮಹಮ್ಮದ ಅಲ್ಲಿಯವರು ಮೂತ್ರವ್ಯಾಧಿ ಮತ್ತು ಉಬ್ಬಸದಿಂದ ಬಹು ಅಸ್ವಸ್ಥರಾಗಿ ಹಾಸಿಗೆ ಹಿಡಿದಿರುವರು.

## ಯರೋಡಾ ಜೇಲಿನಲ್ಲಿ

### ಅನ್ನತ್ಯಾಗ

ಅಡಿಗೆಯನ್ನು ಮಾಡುವ ಹಾಗು ಅದನ್ನು ಬಡಿಸುವ ವಿಷಯವಾಗಿ ಯರೋಡಾ ಜೇಲಿನಲ್ಲಿಯ ೫೦೦ ಜನ ರಾಜಕೀಯ ಕೈದಿಗಳು ತಕರಾರು ಮಾಡಿ ತಾ|| ೨೦ ನೆಯ ದಿವಸ ಅನ್ನತ್ಯಾಗ ಕೈಕೊಂಡರು. ಜೇಲ ಸುಪರಿಂಟೆಂಡೆಂಟರು ಕೂಡಲೆ ಅಲ್ಲಿಗೆ ಬಂದು ಅನ್ಯಾಯವನ್ನು ನಿವಾರಿಸುವೆವಾಗಿ ಅವರಿಗೆ ಹೇಳಿದ್ದರಿಂದ ಎಲ್ಲ ಜನರು ಮರುದಿವಸದಿಂದ ಪುನಃ ಅನ್ನ ತೆಗೆದುಕೊಳ್ಳಲಾರಂಭಿಸಿದರು.

# ಅಧಿಕಾರಿಗಳು ರೈತರ ಮನವೊಲಿಸಹತ್ತಿದರು

ಮುಂಬಯಿ ಇಲಾಖೆಯ ಕಂದಾಯ ಖಾತೆಯ ಮುಖ್ಯಾಧಿಕಾರಿಗಳಾದ ಮಿ. ಹಡಸನ್ನರು, ಜಿಲ್ಲೆಯ ಕಲೆಕ್ಟರ ಹಾಗು ಬೋರಸಾದದ ಮಾಮಲೇದಾರರೊಡನೆ ತಾ|| ೧೬ ನೆಯ ದಿವಸ ಬೋರಸಾದ ತಾಲೂಕದ ಬೋಚಾಸನ ಹಾಗು ರಾಸ ಈ ಹಳ್ಳಿಗಳಿಗೆ ಹೋಗಿದ್ದರು. ಆಗ ಆ ಹಳ್ಳಿಗಳಲ್ಲಿ ಯಾರೂ ಅವರ ಕಣ್ಣಿಗೆ ಬೀಳಲಿಲ್ಲ. [illegible] ರೈತರೆಲ್ಲರೂ ಗುಳೇಕಟ್ಟಿಕೊಂಡು ಬಡೋದಾ ಸಂಸ್ಥಾನದ ಹದ್ದನ್ನು ಸೇರಿದ್ದರು. ಆದ್ದರಿಂದ ಅಧಿಕಾರಿಗಳು [illegible]ನೆ ಹೋಗಿ ಅವರ ಭೆಟ್ಟಿ ತೆಗೆದುಕೊಂಡರು. ಆ ಸಮಯದಲ್ಲಿ ಮಿ. ಹಡಸನ್ನರು ರೈತರನ್ನುದ್ದೇಶಿಸಿ ಕೆಳಗಿನಂತೆ ಸಂಭಾಷಣ ಮಾಡಿದರು.

ನಿಮ್ಮ ಬಡತನದ ೩೦೦ ಎಕರೆ ಭೂಮಿಗಳು ಮಾರಲ್ಪಟ್ಟವೆಯೆಂಬುದನ್ನು ಕಂಡು ನನಗೆ ವಿಷಾದ ಎನಿಸುತ್ತದೆ. ನೀವು ತೆರಿಗೆಯ ಹಣವನ್ನು ಕೊಟ್ಟಲ್ಲಿ ಜಪ್ತವಾದ ನಿಮ್ಮ ಭೂಮಿಗಳು ನಿಮಗೆ ಸಿಗುವವು. ಹೀಗೆ ಒದಗಬರುವದಿಲ್ಲ ನಿಮಗೆ ಸಾಕಷ್ಟು ಉತ್ಪನ್ನವಿದೆ. ಆದ್ದರಿಂದ ತೆರಿಗೆಯನ್ನು ಕೊಡುವದೇನೂ ನಿಮಗೆ ಬಿಗಿ ಹೋಗಲಾರದು. ನೀವು ಬಿಟ್ಟುಹೋಗಿ ಬಂದಿದ್ದನ್ನು ನೋಡಿ ನನಗೆ ದುಃಖವಾಗುತ್ತಿದೆ. ಇಂದಿನವರೆಗೆ ಎಷ್ಟೋ ಹಳ್ಳಿಗಳಲ್ಲಿಯ ರೈತರು ತೆರಿಗೆಯ ಹಣವನ್ನು ಕೊಟ್ಟು ಸುಖದಿಂದ ಜೀವಿಸುತ್ತಿರುವರು. ಅವರಂತೆ ನೀವಾದರೂ ತೆರಿಗೆಯನ್ನು ಕೊಟ್ಟಲ್ಲಿ ನಿಮಗೆ ಯಾವ ತೊಂದರೆಯೂ ಉಂಟಾಗದು.

ಮಿ. ಹಡಸನ್ನರ ಸಂಭಾಷಣವು ಮುಗಿದ ಕೂಡಲೆ ರೈತರೆಲ್ಲರೂ ಏಕಮುಖದಿಂದ ಮಹಾತ್ಮಾಗಾಂಧಿ ಹಾಗು ಸರದಾರ ವಲ್ಲಭಭಾಯಿಯವರು ಬಿಡುಗಡೆಹೊಂದಿ ಬರುವವರೆಗೆ ಒಂದು ಪೈ ಸಹ ಕೊಡುವದಿಲ್ಲವೆಂಬುದಾಗಿ ಸ್ಪಷ್ಟವಾಗಿ ತಿಳಿಸಿದರು.

ನೀವು ತೆರಿಗೆಯ ಹಣವನ್ನು ಕೊಟ್ಟಲ್ಲಿ ಮಾತ್ರ ನಿಮ್ಮ ಮುಖಂಡರು ಬಿಡುಗಡೆ ಮಾಡಲ್ಪಡುವರು ಎಂಬುದಾಗಿ ಮಿ. ಹಡಸನ್ನರು ಅವರಿಗೆ ಹೇಳಿದರು.

ತಮ್ಮ ಮನಸಿಗೆ ಬಂದಂತೆ ವರ್ತಿಸಲು ಕೆಳಗಿನ ಅಧಿಕಾರಿಗಳಿಗೆ ಮೇಲಧಿಕಾರಿಗಳು ಮುಕ್ತದ್ವಾರವನ್ನಿಟ್ಟಿದ್ದರಿಂದ, ಅವರು ರೈತರನ್ನು ಬಹುಪರಿಯಾಗಿ ಪೀಡಿಸಹತ್ತಿದ್ದಾರೆ. ಅವರ ಅನ್ಯಾಯ ಹಾಗು ಜುಲುಮೆಗಳನ್ನು ಸಹಿಸಿಕೊಳ್ಳದೆ ಇಲ್ಲಿಗೆ ಗುಳೇಕಟ್ಟಿಕೊಂಡು ಬಂದಿದ್ದೇವೆ ಎಂದು ರೈತರು ಮಿ. ಹಡಸನ್ನರಿಗೆ ತಿಳಿಸಿದರು.

ನಮಗೆ ತೆರಿಗೆಯ ಹಣವನ್ನು ಕೊಡುವ ಪ್ರಸಂಗವು ನಿಮಗೆ ಇಂದಿಲ್ಲ ನಾಳೆಯಾದರೂ ಬಂದೇ ಬರುವದು. ಆದ್ದರಿಂದ ಈಗಲೆ ಅದನ್ನು ಕೊಟ್ಟು ನಿಮ್ಮ ಹಳ್ಳಿಗಳಿಗೆ ನೀವು ತಿರುಗಿ ಹೋಗುವದು ವಿಹಿತವಾಗಿದೆ ಎಂಬುದಾಗಿ ಮಿ. ಹಡಸನ್ನರು ರೈತರಿಗೆ ಹೇಳಿಕೊಂಡರು.

ನಮ್ಮ ನಿರ್ಧಾರವನ್ನು ಮೊದಲೇ ತಿಳಿಸಿದ್ದೇವೆ. ಈ ಬಗ್ಗೆ ನಿಮ್ಮ ಉಪದೇಶವನ್ನು ಕೇಳಲು ನಾವು ಸಿದ್ಧರಿಲ್ಲ ಎಂದು ರೈತರು ಉತ್ತರ ಕೊಟ್ಟರು.

ಅಧಿಕಾರಿಗಳು ಅವನತಮುಖರಾಗಿ ಬಂದ ಹಾದಿಗೆ ಸುಂಕವಿಲ್ಲವೆಂದು ತಿರುಗಿ ಹೊರಟು ಹೋದರು.

## ಬಾರ್ಡೋಲಿ ರೈತರಿಗೆ ನಾಟಕ ಮಂಡಳಿಯ ಸಹಾಯ

ದಾವಣಗೆರೆಯಲ್ಲಿ ತನ್ನ ಕೌಶಲ್ಯಯುತವಾದ ನಾಟಕಗಳನ್ನು ಪ್ರಯೋಗಿಸುತ್ತಿರುವ ಲೋಕಸೇವಕ ನಾಟಕ ಮಂಡಳಿಯವರು ಒಂದು ದಿವಸ [illegible] ಎಂಬ ನಾಟಕವನ್ನಾಡಿ ಅದರಿಂದ ಬಂದ ೬೦೦ ರು. ಉತ್ಪನ್ನವನ್ನು ಬಾರ್ಡೋಲಿ ರೈತರ ಕಷ್ಟನಿವಾರಣ ನಿಧಿಗೆ ದಾನಮಾಡಿದರು. ಉಳಿದ ನಾಟಕ ಮಂಡಳಿಯವರು?

## ಢಾಕಾದಲ್ಲಿ ಒಬ್ಬನಿಗೆ ಕರಿನೀರಿನ ಶಿಕ್ಷೆ

ಮೇ ತಿಂಗಳ ೨೪ ನೆಯ ತಾರೀಖಿನ ದಿವಸ ಢಾಕಾದಲ್ಲಿ ಹಿಂದೂ ಮುಸಲ್ಮಾನರ ದಂಗೆಯು ಸಂಭವಿಸಿದಾಗ ಜತೀಂದ್ರನಾಥ [illegible] ಕೊಲೆಮಾಡಿದ ಸಂಬಂಧವಾಗಿ ಅಲ್ಲಿಯ ಮೊಹಿಯುದ್ದೀನನಿಗೆ ಕರಿನೀರಿನ ಶಿಕ್ಷೆಯು ವಿಧಿಸಲ್ಪಟ್ಟಿದೆ.

## ಶಿವ [illegible]ಂದ್ರರು ಕಾರಾಗೃಹ ಕಂಡರು

[illegible] ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳೂ ಅಖಿಲ ಬಂಗಾಲ ವಿದ್ಯಾರ್ಥಿ ಸಂಘದ ಸಭಾಸದರೂ ಆಗಿರುವ ಶ್ರೀ ಶಿವಾನಂದ ಚಂದ್ರಸೇನರು ಬಂಗಾಲ ಆರ್ಡಿನನ್ಸದನ್ವಯ ಸೆರೆಹಿಡಿಯಲ್ಪಟ್ಟಿದ್ದಾರೆ

## ಹುಬ್ಬಳ್ಳಿಯಲ್ಲಿ ಹುಣಸಿ ಲಿಲಾವಿಗೆ ಅಡ್ಡಿ

(ಸ್ವಂತ ಸುದ್ದಿಗಾರರಿಂದ)

ಹುಬ್ಬಳ್ಳಿ ತಾಲೂಕಿಗೆ ಸೇರಿದ ಗೋಕಲ ಕುಸುಗಲ್ಲ ಮುಂತಾದ ಸ್ಥಳಗಳಲ್ಲಿ ಸರಕಾರಿ ಹುಣಸಿಗಿಡಗಳ ಲಿಲಾವು ಆಗತಕ್ಕದ್ದಿದೆಯೆಂದು ಪ್ರಕಟವಾಗಿತ್ತು. ಅದನ್ನು ತಿಳಿದುಕೊಂಡು ಸ್ವಯಂಸೇವಕರು ಆ ಆ ಸ್ಥಳಗಳಿಗೆ ಪಿಕೆಟಿಂಗಕ್ಕೆ ಹೋಗಿದ್ದರು. ಆದರೆ ಅಧಿಕಾರಿಗಳು ಯಾವ ಕಾರಣದಿಂದಲೊ ಏನೂ ಲಿಲಾವನ್ನು ಮುಂದಕ್ಕೆ ಹಾಕಿದರು.

## ಇಹವೃತ್ತ

ಮುಂಬಯಿಯ ಶ್ರೀಮತಿ ಸೀತಾಬಾಯಿ ಪಡಬಿದ್ರಿಯವರ ಹಸ್ತದಿಂದ ಇಲ್ಲಿ ನಿನ್ನಿನ ದಿವಸ ‘ಸ್ವದೇಶಿ ವಸ್ತು ಪ್ರಚಾರಕ ಸಂಘ’ವು ಸ್ಥಾಪಿಸಲ್ಪಟ್ಟಿತು. ಸಂಘದ ಸಭಾಸದರು ಹಾಗು ಅವರು ಕೈಕೊಂಡ ಕಾರ್ಯಕಲಾಪ ಮೊದಲಾದವುಗಳನ್ನು ನಾಳಿನ ಸಂಚಿಕೆಯಲ್ಲಿ ಕೊಡುವದಲ್ಲಿ ಬರುವದು.

ನಿನ್ನಿನ ದಿವಸ ಸಂಜೆಯಲ್ಲಿ ಲಾಲಾಜಿ ಚೌಕಿನಲ್ಲಿ ಮುಂಬಯಿಯ ಶ್ರೀಮತಿ ಸೀತಾಬಾಯಿ ಪಡಬಿದ್ರಿಯವರು ‘ಮುಂಬಯಿಯ ಸ್ತ್ರೀ ಚಳವಳಿ’ಯ ವಿಷಯವಾಗಿ ಭಾಷಣ ಮಾಡಿದರು.

ಮಿ. ಕಮೀಶನರರಿಗೆ ಲೋಕಲ್ ಬೋರ್ಡ ಕಚೇರಿಯಲ್ಲಿ ಸಂತೋಷಕೂಟ ನಡೆದ ದಿವಸ ಸಬ್ ಇನಸ್ಪೆಕ್ಟರರು ಶ್ರೀ ಶ್ರೀನಿವಾಸರಾವ ಘಟ್ಟ ವಕೀಲರನ್ನು ರಟ್ಟೆ ಹಿಡಿದು ನೂಕಿ ಅವಮಾನ ಮಾಡಿದ್ದರ ಸಂಬಂಧವಾಗಿ, ಇಲ್ಲಿಯ ವಕೀಲ ಸಂಘದವರು ನಿಷೇಧಪರ ಠರಾವು ಮಾಡಿಕೊಂಡಿದ್ದಲ್ಲದೆ, ಆ ಸಂಬಂಧವಾಗಿ ಡಿ. ಮ್ಯಾಜಿಸ್ಟ್ರೇಟರು ಪೋಲೀಸ ಸುಪರಿಂಟೆಂಡೆಂಟರು ಹಾಗು ಡಿಸ್ಟ್ರಿಕ್ಟ ಜಡ್ಜರು ಇವರ ಕಡೆಗೆ ದೂರು ಬರೆದುಕೊಂಡಿದ್ದಾರೆ.

ಇಲ್ಲಿಯ ಶಿವಪ್ಪ ಬಸಪ್ಪ ಕಳ್ಳಿಗುಡ್ಡ ಎಂಬ ಹೆಸರಿನ ೧೪ ವರ್ಷದ ಹುಡುಗನೊಬ್ಬನು ಮಹಾತ್ಮಾ ಗಾಂಧಿಯವರು ಬಂಧಮುಕ್ತರಾಗಿ ಬರುವವರೆಗೆ ಅನ್ನವನ್ನು ತೆಗೆದುಕೊಳ್ಳುವದನ್ನು ಬಿಟ್ಟಿದ್ದಾನೆ. ಅವನು ಹೀಗೆ ಅನ್ನವನ್ನು ಬಿಟ್ಟುಕೊಟ್ಟು ಈಗ ೩ ತಿಂಗಳಾದವು.

# ಜಗತ್ತಿನ ಇತಿಹಾಸದಲ್ಲಿ ಅಪೂರ್ವ ಸಂಗತಿ.

## ಮಹಾತ್ಮರ ಚಳವಳಿಯಲ್ಲಿ ಸಹಸ್ರಾರು ಜನ ಯುರೋಪಿಯನ್ನರ ವಿಶ್ವಾಸ.

ಸ್ವಿಟ್ಸರ್ಲಂಡದ ಯುವಕ ಸಂಘದ ಪ್ರಸಿದ್ಧ ಕಾರ್ಯಕರ್ತರಾದ ಮಿ. ಝಿವ ರಮನ್ನರು ತಾ|| ೧೫ ನೆಯ ದಿವಸ ಗುಜರಾಥ ಪ್ರಾಂತದ ಬೋರಸಾದ ತಾಲೂಕದ ಕೆಲವು ಹಳ್ಳಿಗಳಲ್ಲಿ ಸಂಚರಿಸಿ ಸತ್ಯಾಗ್ರಹ ಚಳವಳಿಯು ವಿಷಯವಾಗಿ ಕೆಳಗಿನಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಈ ಚಳವಳಿಯು ಜಗತ್ತಿನ ಇತಿಹಾಸದಲ್ಲಿ ಒಂದು ಅಪೂರ್ವವಾದ ಸಂಗತಿಯಾಗಿರುತ್ತದೆ. ಜನರನ್ನಿಲ್ಲಿಯ ಸಾವಿರಾರು ಜನರು ಅಹಿಂಸೆ ಮತ್ತು ಸತ್ಯಗಳಲ್ಲಿ ವಿಶ್ವಾಸವನ್ನಿಟ್ಟಿದ್ದಾರೆ. ನನಗಾದರೂ ಅಹಿಂಸೆಯಲ್ಲಿ ವಿಶ್ವಾಸವುಂಟು. ಹಿಂದುಸ್ಥಾನದಲ್ಲಿಯ ಜನರು ಈ ಶಕ್ತಿಯ ಉಪಯೋಗ ಕಾರ್ಯಸಾಗಿಸುತ್ತಿರುವದನ್ನು ಕಂಡು ನನಗೆ ಬಹು ಸಂತೋಷವಾಯಿತು.

ಹಿಂದುಸ್ಥಾನದಲ್ಲಿ ಅನೇಕ ಕಡೆಗಳಲ್ಲಿ ಸಂಚರಿಸಿದೆ- ಭೆಟ್ಟಿಯಾದವರೊಡನೆ ಮಾತುಕತೆ ಮಾಡಿದೆ. ಎಲ್ಲಿ ನೋಡಿದಲ್ಲಿಯೂ ಪ್ರತಿಯೊಬ್ಬನು ಸ್ವಾತಂತ್ರ್ಯಕ್ಕಾಗಿ ಒಂದಿಲ್ಲೊಂದು ಬಗೆಯಿಂದ ಪ್ರಯತ್ನ ಮಾಡುತ್ತಲೇ ಇರುವನು. ಕಾರಣ ಈ ಸ್ವಾತಂತ್ರ್ಯಾಭಿಲಾಷೆಯನ್ನು ಹತ್ತಿಕ್ಕುವದು ಯಾರಿಗೂ ಸಾಧ್ಯವಿಲ್ಲ.

ಹಿಂದುಸ್ಥಾನದಲ್ಲಿಯೇ ವಾಸಿಸಿ ಈ ಚಳವಳಿಯಲ್ಲಿ ಭಾಗತೆಗೆದುಕೊಳ್ಳಬೇಕೆಂಬುದಾಗಿ ನಾನು ಮೊದಲು ಇಚ್ಛಿಸಿದೆ. ಆದರೆ ನನ್ನ ದೇಶಕ್ಕೆ ತಿರುಗಿ ಹೋಗಿ ಅಲ್ಲಿಯ ಜನರಿಗೆ ಹಿಂದುಸ್ಥಾನದಲ್ಲಿಯ ಪರಿಸ್ಥಿತಿಯ ನಿಜವಾದ ಜ್ಞಾನವನ್ನು ಮಾಡಿಕೊಟ್ಟಲ್ಲಿ, ಹೆಚ್ಚಿನ ಸೇವೆಯನ್ನು ಮಾಡಿದಂತಾಗುವದೆಂದು ನನಗೆ ಎನಿಸಿದ್ದರಿಂದ ಮೊದಲಿನ ವಿಚಾರವನ್ನು ನಾನು ಬದಲಿಸಬೇಕಾಯಿತು.

ಬ್ರಿಟಿಶ ಪ್ರಭುತ್ವವಾದಿಗಳೊಡನೆ ಮಹಾತ್ಮರು ಒಪ್ಪಂದವನ್ನು ಮಾಡಿಕೊಳ್ಳದಿದ್ದದ್ದೇ ಉಚಿತವಾಯಿತು. ಜಂಡಿಗಾಲಿಯ ಪರಿಷತ್ತಿಗೆ ಎಂದಿಗೂ ಯಶಸ್ವಿಯಾಗದು. ಸರಕಾರದವರ ತಮ್ಮ ತಪ್ಪನ್ನು ತಿಳಿದುಕೊಂಡು ಮಹಾತ್ಮರು ಹಾಗು ಅಖಿಲಭಾರತರಾಷ್ಟ್ರಸಭೆಯ ಪ್ರತಿನಿಧಿಗಳೊಡನೆ ಇನ್ನಾದರೂ ಒಪ್ಪಂದ ಮಾಡಿಕೊಳ್ಳಲಿ ಅಂದರೆ ಹಿಂದುಸ್ಥಾನದ ಪ್ರಶ್ನೆಯು ತಾನಾಗಿಯೆ ಬಿಟ್ಟುಹೋಗುವದು. ಇನ್ನೊಮ್ಮೆ ಇಲ್ಲಿಗೆ ನಾನು ಬರುವಗರೊಳಗಾಗಿ ಹಿಂದುಸ್ಥಾನವು ಸ್ವತಂತ್ರವಾಗಿರಲೆಂದು ನಾನು ಬಯಸುತ್ತೇನೆ.

### ಮ್ಯಾಜಿಸ್ಟ್ರೇಟರು ಸಿಂದಿ ಅಂಗಡಿ ಕಾಯುತ್ತಿದ್ದರು

ದಿಲ್ಲಿಯಲ್ಲಿಯ ಭೋಲೇರಾಮರ ಸಿಂದಿ ಅಂಗಡಿಯ ಮುಂದೆ ಕಾಂಗ್ರೆಸ್ ಅಧಿಕಾರಿಗಳು ಜೋರಿನಿಂದ ಪಿಕೆಟಿಂಗ ನಡಿಸಿದ್ದನ್ನು ಕಂಡು, ತಾ|| ೨೦ ನೆಯ ದಿವಸದಿಂದ ಅಧಿಕಾರಿಗಳು ಆ ಅಂಗಡಿಯ ಸಂರಕ್ಷಣೆಗಾಗಿ ಕೆಲವು ಜನ ಪೋಲೀಸರನ್ನು ಹಾಗು ಒಬ್ಬ ಮೊದಲನೆಯ ವರ್ಗದ ಮ್ಯಾಜಿಸ್ಟ್ರೇಟರನ್ನು ಅಲ್ಲಿ ಇಟ್ಟಿದ್ದಾರೆ.

### ದಿಲ್ಲಿಯಲ್ಲಿ

## ೨೯ ಸ್ತ್ರೀಯರಿಗೆ ಶಿಕ್ಷೆ

ಭೋಲೇರಾಮರ ಸಿಂದಿ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದ ಸಂಬಂಧವಾಗಿ ದಿಲ್ಲಿಯಲ್ಲಿ ಬಂಧನಕ್ಕೊಳಗಾದ ೨೯ ಜನ ಸ್ತ್ರೀಯರಿಗೆ ಪ್ರತ್ಯೇಕವಾಗಿ ೩೦೦ ರು ದಂಡ ಇಲ್ಲವೆ ೬ ತಿಂಗಳ ಸಾದಾ ಕಾರಾಗೃಹವಾಸ ಹೀಗೆ ಶಿಕ್ಷೆಯು ವಿಧಿಸಲ್ಪಟ್ಟಿದೆ.

### ಕಾನಪುರದಲ್ಲಿ ಡೊಣ್ಣೆಯ ರಾಜ್ಯ.

ಕಾನಪುರದಲ್ಲಿ ಸಿಂದಿ ಪಿಕೆಟಿಂಗದ ಸಂಬಂಧವಾಗಿ ಶಿಕ್ಷೆಗೊಳಗಾದ ೧೬ ಜನ ಸ್ತ್ರೀಯರು ತಾ|| ೧೬ ನೆಯ ದಿವಸ ಜೇಲಿನಿಂದ ಬಿಡುಗಡೆ ಹೊಂದಿದರು. ಅವರ ಸನ್ಮಾನಾರ್ಥವಾಗಿ ಅಂದು ಸಂಜೆಯಲ್ಲಿ ಮೆರವಣಿಗೆಯು ಹೊರಟಿತ್ತು. ಮೆರವಣಿಗೆಯು ಎಲ್ಲೊಂದು ತೊಂದರೆಯಿಲ್ಲದೆ ಮುಖ್ಯ ಮುಖ್ಯ ಬೀದಿಗಳಲ್ಲಿ ಸಂಚರಿಸಿ ಕರಾಚಿಖಾನಾ ಮಾರ್ಗಕ್ಕೆ ಬಂದು ತಲುಪಿತು. ಅಲ್ಲಿ ಪೋಲೀಸರು ಮೆರವಣಿಗೆಗೆ ಅಡ್ಡಿ ಮಾಡಿದರು. ಈ ಸುದ್ದಿಯು ಊರಲ್ಲ ಹಬ್ಬಿದ ಕೂಡಲೆ ಸಾವಿರಗಟ್ಟಲೆ ಜನರು ಅಲ್ಲಿ ಬಂದು ಸೇರಿದರು. ಪೋಲೀಸರು ಡೊಣ್ಣೆಗಳನ್ನುಪಯೋಗಿಸಿ ಜನರನ್ನು ಚದುರಿಸಲು ಪ್ರಯತ್ನ ಮಾಡಿದರು. ಜನರು ಸ್ಥಳಬಿಟ್ಟು ಕದಲದೆ ಅಲ್ಲಿಯೇ ಹಾಗೆಯೇ ಕುಳಿತುಕೊಂಡರು, ಕೆಲವು ಹೊತ್ತಿನ ಮೇಲೆ ಅಧಿಕಾರಿಗಳು ನಿರುಪಾಯರಾಗಿ ಹೊರಟು ಹೋದರು. ಐವರು ಜನರಿಗೆ ಗಾಯಗಳಾಗಿವೆ.

### ಪಂಡಿತ ಮಾಲವೀಯರಿಗಾಗಿ ಪ್ರಾರ್ಥನೆ

ಬನಾರಸ ಹಿಂದೂ ವಿಶ್ವವಿದ್ಯಾಲಯದ ಶ್ರೀ ವ್ಹಿ. ಎಸ್. ಸುಂದರಮರವರು ಕಲಕತ್ತೆಯ ಯುರೋಪಿಯನ್ ಸಿವ್ಹಿಲ ಹಾಸ್ಪಿಟಲದಲ್ಲಿ ಪಂಡಿತ ಮಾಲವೀಯರನ್ನು ಕಂಡುಕೊಂಡು ತಾ|| ೨೨ ನೆಯ ದಿವಸ ಮುಂಬಯಿಗೆ ಬಂದರು ಪಂಡಿತ ಮಾಲವೀಯರು ಬಹಳೇ ಅಶಕ್ತರಾಗಿರುವ ಕಾರಣ, ಅವರ ೭೦ ನೆಯ ಜನ್ಮದಿನವಾದ ತಾ|| ೨೫ ನೆಯ ದಿವಸದಲ್ಲಿ ಅವರಿಗೆ ಆಯುರಾರೋಗ್ಯ ದಯಪಾಲಿಸಲು ಪರಮೇಶ್ವರನಲ್ಲಿ ಭಾರತೀಯರೆಲ್ಲರು ಪ್ರಾರ್ಥನೆಗಳನ್ನು ಮಾಡಬೇಕಾಗಿ ಅವರು ಪ್ರಕಟಿಸಿದ್ದಾರೆ.

### ಲಿಬರ್ಟಿ ಪತ್ರಿಕೆಯ ಕಚೇರಿಗೆ ಮುತ್ತಿಗೆ.

ಕಲಕತ್ತೆಯ ಪೋಲೀಸ ಅಧಿಕಾರಿಗಳು ತಾ|| ೧೯ ನೆಯ ದಿವಸ ಅಲ್ಲಿಯ “ಲಿಬರ್ಟಿ” ಪತ್ರಿಕೆಯ ಕಚೇರಿಗೆ ಮುತ್ತಿಗೆ ಹಾಕಿ ಕಾಯದೆ ಮಂಡಳಕ್ಕೆ ಸಂಬಂಧಿಸಿದ ಕೆಲವು ಹಸ್ತಪತ್ರಿಕೆಗಳನ್ನು ಜಪ್ತ ಮಾಡಿಕೊಂಡು ಹೋದರು.

### ಮೌಲಾನಾ ಮಹಮ್ಮದ ಅಲ್ಲಿಯವರಿಗೆ ಅಸ್ವಸ್ಥತೆ.

ಜಂಡಿ ಗಾಲಿಯ ಪರಿಷತ್ತಿಗೆ ಪ್ರತಿನಿಧಿಗಳಾಗಿ ಹೋಗಿರುವ ಮೌಲಾನಾ ಮಹಮ್ಮದ ಅಲ್ಲಿಯವರು ಮೂತ್ರವ್ಯಾಧಿ ಮತ್ತು ಉಬ್ಬಸದಿಂದ ಬಹು ಅಸ್ವಸ್ಥರಾಗಿ ಹಾಸಿಗೆ ಹಿಡಿದಿರುವರು.

## ಯರೋಡಾ ಜೇಲಿನಲ್ಲಿ

### ಅನ್ನತ್ಯಾಗ

ಅಡಿಗೆಯನ್ನು ಮಾಡುವ ಹಾಗು ಅದನ್ನು ಬಡಿಸುವ ವಿಷಯವಾಗಿ ಯರೋಡಾ ಜೇಲಿನಲ್ಲಿಯ ೫೦೦ ಜನ ರಾಜಕೀಯ ಕೈದಿಗಳು ತಕರಾರು ಮಾಡಿ ತಾ|| ೨೦ ನೆಯ ದಿವಸ ಅನ್ನತ್ಯಾಗ ಕೈಕೊಂಡರು. ಜೇಲ ಸುಪರಿಂಟೆಂಡೆಂಟರು ಕೂಡಲೆ ಅಲ್ಲಿಗೆ ಬಂದು ಅನ್ಯಾಯವನ್ನು ತಿದ್ದುಪಡಿಸುವೆವಾಗಿ ಅವರಿಗೆ ಹೇಳಿದ್ದರಿಂದ ಎಲ್ಲ ಜನರು ಮರುದಿವಸದಿಂದ ಪುನಃ ಅನ್ನ ತೆಗೆದುಕೊಳ್ಳಲಾರಂಭಿಸಿದರು.

## ದಿಲ್ಲಿ ಜೇಲಿನಲ್ಲಿ ಮದ್ದು ಗುಂಡುಗಳು ದೊರೆತವು

ದಿಲ್ಲಿಯಲ್ಲಿ ತಾ। ೨೨ನೆಯ ದಿವಸ ಕಸ ಉಡುಗುವವನೊಬ್ಬನು ಅಲ್ಲಿಯ ಸೆಂಟ್ರಲ್ ಜೇಲಿನ ಜೇಲರರ ಕಚೇರಿಯನ್ನು ಉಡುಗುತ್ತಿರುವಾಗ ಅವನಿಗೊಂದು ಕೆಂಪು ಅರಿವೆಯ ಗಂಟು ಸಿಕ್ಕಿತು. ಆವನು ಆ ಗಂಟನ್ನು ತೆಗೆದುಕೊಂಡು ಹೋಗಿ ಜೇಲರನ ಮೇಜಿನಮೇಲೆ ಇಟ್ಟನು ಜೇಲಿನ ಡೆಪ್ಯೂಟಿ ಸುಪರಿಂಟೆಂಡೆಂಟರು ಅದನ್ನು ತೆಗೆದುಕೊಂಡು ನೋಡಿದರು. ಬಾಂಬನ್ನು ಸಿದ್ಧಪಡಿಸಲು ಉಪಯೋಗ ಬೀಳುವ ಸಾಮಾನುಗಳು ಅದರಲ್ಲಿದ್ದವು.

## ೧೫೦ ಜನ ಶೀಖರಿಗೆ ಕೈದು

ಹೊಸದಾಗಿ ಗೊತ್ತು ಮಾಡಲ್ಪಟ್ಟ ಕೀರ್ವೆಯ ವಿರುದ್ಧವಾಗಿ ಸಾಗಿದ ಚಳವಳಿಯಲ್ಲಿ ಸೇರಿದ್ದರ ಸಂಬಂಧವಾಗಿ ಜೆಂದ ಸಂಸ್ಥಾನದಲ್ಲಿ ೧೫೦ ಜನ ಸೀಖರು ಕೈದು ಮಾಡಲ್ಪಟ್ಟಿದ್ದಲ್ಲದೆ, ಅಲ್ಲಿಯ ಎಷ್ಟೋ ಗುರುದ್ವಾರ ಸಂಸ್ಥೆಗಳಾದರೂ ಅಧಿಕಾರಿಗಳ ಆಜ್ಞೆಯಿಂದ ಮುಚ್ಚಲ್ಪಟ್ಟವೆ.

## ಮಹಾತ್ಮರ ಚಿತ್ರವು

### ಜಪ್ತವಾಯಿತು

ಸರಕಾರದ ವಿಷಯಕ್ಕೆ ದ್ವೇಷ ಹಾಗು ಅಪ್ರೀತಿ ಹುಟ್ಟಿಸುತ್ತಿರುವದೆಂಬ ಕಾರಣವನ್ನು ತೋರಿಸಿ ಪಂಜಾಬ ಸರಕಾರದವರು "ಅಸಹಕಾರವೃಕ್ಷ ಹಾಗು ಮಹಾತ್ಮರು" ಎಂಬ ಚಿತ್ರವನ್ನು ಜಪ್ತ ಮಾಡಿದ್ದಾರೆ.

## ಶ್ರೀ ವಿಠ್ಠಲಭಾಯಿಯವರ ಪ್ರಕೃತಿ

ಕೋಯಿಮುತ್ತೂರ ಜೇಲಿನಲ್ಲಿರುವ ಶ್ರೀ ವಿಠ್ಠಲಭಾಯಿ ಪಟೇಲರವರಿಗೆ ಈಗ ಸ್ವಲ್ಪ ಗುಣವಾಗಿರುವದು. ಮುಂಬಯಿಯ ಡಾಕ್ಟರ ಪಟೇಲರು ಅವರ ದೇಹಸ್ಥಿತಿಯನ್ನು ಪರೀಕ್ಷಿಸಲು ಬೇಗನೆ ಅಲ್ಲಿಗೆ ಹೋಗುವವರಿದ್ದಾರೆ,

## ಮದ್ರಾಸದಲ್ಲಿ

### ೪ ಜನರಿಗೆ ಕೈದು

ಮದ್ರಾಸದಲ್ಲಿ ಮೂವರು ಸ್ವಯಂಸೇವಕರು ಹಾಗು ಓರ್ವ ಸ್ವಯಂಸೇವಿಕೆಯು ಪರದೇಶಿ ಬಟ್ಟೆಗೆ ಬಹಿಷ್ಕಾರ ಹಾಕಲು ಹೇಳುತ್ತ ಬೀದಿಗಳಲ್ಲಿ ನಡೆದಿದ್ದರು. ಪೋಲೀಸರು ಅವರನ್ನು ಹಾದಿಯಲ್ಲಿ ತಡೆದು, ಹೊರಟು ಹೋಗಲು ಹೇಳಿಕೊಂಡರು ಸ್ವಯಂಸೇವಕರು ನಿರಾಕರಿಸಿದರು ಪೋಲೀಸರು ಅವರನ್ನು ಸೆರೆಹಿಡಿದುಕೊಂಡು ಹೋದರು.

## ಮುಂಬಯಿಯಲ್ಲಿ

### ಮತ್ತೆ ಒಬ್ಬ ಸ್ವಯಂಸೇವಕನ ಮರಣ

ಪರದೇಶಿ ಬಟ್ಟೆಯ ಪಿಕೆಟಿಂಗ ಕಾರ್ಯದಲ್ಲಿ ತೊಡಗಿದಾಗ ಮೋಟಾರಿನ ಮುಂದೆ ಅಡ್ಡ ಬಿದ್ದು ಮರಣಹೊಂದಿದ, ಶ್ರೀ ಬಾಬೂ ಗೇನೂ ರವರ ಪ್ರೇತಯಾತ್ರೆಯ ಸಮಯದಲ್ಲಿ ಪೋಲೀಸ ಅಧಿಕಾರಿಗಳ ಹುಕ್ಮಿಗೆ ಸಕ್ಕಾಗಿ ದವಾಖಾನೆಯಲ್ಲಿ ಸೇರಿಸಲ್ಪಟ್ಟ ಶ್ರೀ ಕಾಳೆ ಶಂಕರ ವಾಜಪೇಯಿಯವರು ಮೊನ್ನೆ ಗುರುವಾರ ದಿವಸ ಮರಣಹೊಂದಿದರು.

## ಕಾನಪುರದಲ್ಲಿ

### ರಾಷ್ಟ್ರಧ್ವಜ ಸತ್ಯಾಗ್ರಹ

ಪೂನೋಟದಲ್ಲಿ ಪುನಃ ರಾಷ್ಟ್ರಧ್ವಜವನ್ನು ನಿಲ್ಲಿಸುವ ಬಗ್ಗೆ ಕಾನಪುರದಲ್ಲಿ ಸತ್ಯಾಗ್ರಹವು ಒಳ್ಳೇಭರದಿಂದ ಸಾಗಿದೆ. ಪ್ರತಿನಿತ್ಯದಲ್ಲಿಯೂ ಕೆಲವು ಸ್ವಯಂಸೇವಕರು ಅಲ್ಲಿಗೆ ಸಾಗಿ ಹೋಗಿ ಬಂಧನಕ್ಕೊಳಗಾಗುತ್ತಿರುವರು. ಈ ವರೆಗೆ ೪೦ ಕ್ಕಿಂತ ಹೆಚ್ಚು ಜನರು ಸೆರೆಯಾಳಾಗಿದ್ದಾರೆ.

ಶ್ರೀ ಮಣಿಲಾಲ ನಿವೇಟಿಯಾ, ಬಾಲಮುಕುಂದ ಶ್ರೀ ವಾಜಪೇಯಿ ಈ ಮೂವರು ಕಾಂಗ್ರೆಸ್ ಕಾರ್ಯಕರ್ತರು ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ಪ್ರಕಾರ ಬಂಧಿಸಲ್ಪಟ್ಟಿದ್ದಾರೆ.

## ಶಾಹಪುರದಲ್ಲಿ

### ೧೦೩ ಮನೆಗಳ ಜಪ್ತಿ

ಬೆಳಗಾವಿ ಜಿಲ್ಲೆಯ ಪೋಲೀಸ ಅಧಿಕಾರಿಗಳು ಶಿಕ್ಷೆಗೊಳಗಾದ ಸ್ವಯಂಸೇವಕರ ದಂಡ ವಸೂಲಿಯ ಸಂಬಂಧವಾಗಿ ಶಾಹಾಪುರದಲ್ಲಿ ಈ ವರೆಗೆ ೧೦೩ ಮನೆಗಳಿಗೆ ಮುತ್ತಿಗೆಹಾಕಿ ಎಷ್ಟೋ ತಾಮ್ರ ಹಾಗು ಹಿತ್ತಾಳಿಯ ಪಾತ್ರೆಗಳನ್ನು ಜಪ್ತ ಮಾಡಿಕೊಂಡು ಹೋದರು. ಹುಕ್ಕೇರಿಯಲ್ಲಿ ಅವುಗಳ ಲಿಲಾವು ನಡೆಯುತಕ್ಕದ್ದಿದೆ.

---

**ಶುದ್ಧ ಖಾದಿ ! ಶುದ್ಧ ಖಾದಿ !**

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ದರಿಗೆ ದೊರೆಯುತ್ತವೆ.

**ಕೃಷ್ಣಾಜಿ. ಹಣಮಂತರಾವ. ದೇಸಾಯಿ**
**ಸುದರ್ಶನ ಸ್ಟೋರ್ಸ ಬಾಗಲಕೋಟೆ**

---

## ವಾಚು, ಟಾಯಂಪೀಸು

### ದುರಸ್ತಿ ಮಾಡಿಸುವವರಿಗೆ ಸುಸಂಧಿ.

ನಮ್ಮಲ್ಲಿ ಎಲ್ಲ ನಮೂನೆ ಹಾಗು ಮೋಲಗಳ ವಾಚು, ಟಾಯಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಚನ್ನಾಗಿ ಸೇರಿಸಿದ್ದರಿಂದ ಸರಿಯಾದ ವೇಳೆಗೆ ದುರಸ್ತಿ ಮಾಡಿಕೊಡುವದಲ್ಲದೆ, ಹೊಸ ವಾಚು, ಟಾಯಂಪೀಸ ಗ್ರಾಮೋಫೋನುಗಳನ್ನು ಮಾರಿ ಕೊಡುವೆವು ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿಮಾಡಿ ಕೊಳ್ಳಿರಿ.

ವಿಳಾಸ:- ಆರ್. ಡಿ, ಸಿ ಧೆ

ವಾಚ ರಿಪೇರರ ಮತ್ತು ಗ್ರಾಮೋಫೋನ ಡೀಲರ ಬಾಗಲಕೋಟ.

---

### ರುಪ್ಪಿನ ಗಾಣಿ ಮಾರಾಟಕ್ಕಿದೆ.

ರಸ್ಟನ ಮೋಟರ್ ಇಂಜಿನ್ ೮॥ 8 H P. ಅದರ ಚಕ್ಕಿ ಸಹಿತ ಸದ್ಯಕ್ಕೆ ಚಾಲು ಇದ್ದದ್ದು ಮಾರುವದಿದೆ ಸಮಕ್ಷಮ ಅಥವಾ ಪತ್ರವ್ಯವಹಾರ ಮಾಡಬೇಕು.

**ಟಿ. ಜಿ. ದೇಸಾಯಿ c/o ಕನ್ನಡಿಗ**
ಬಾಗಲಕೋಟ.

---

### ಎಲ್ಲ ತರದ ಚಳಿಜ್ವರದ ಮೇಲೆ

## ರಾಮಬಾಣ ಗುಳಿಗೆಗಳು

ವಿಷಮಜ್ವರದ ಹೊರತಾಗಿ ಎಲ್ಲತರದ ಚಳಿಜ್ವರಗಳ ಮೇಲೆ ಈ ಗುಳಿಗೆಗಳು ಬಹಳೇ ಗುಣಕಾರಿಯಾಗಿರುವವು. ವಿಶೇಷ ಪಥ್ಯವನ್ನು ಮಾಡುವ ಕಾರಣವಿಲ್ಲ. ಹುಣಸೀ ಹಣ್ಣು ಮತ್ತು ಮಜ್ಜಿಗೆ ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ಪಡೆಯಿರಿ.

ಒಂದು ಗುಳಿಗೆಗೆ ೦-೧-೦
೧೦೦ ಗುಳಿಗೆಗಳಿಗೆ ೫-೦-೦

ಏಜಂಟರಿಗೆ ಧಾರಾಳವಾದ ಕಮಿಶನ ಕೊಡಲಾಗುವದು,

ವಿಳಾಸ:- ಕೃಷ್ಣಾಚಾರ್ಯ ಮುಳ್ಳೂರ.
ಕಿಲ್ಲಾ ೭೦ ಓಣಿ, ಬಾಗಲಕೋಟೆ

---

### ಪ್ಲಾಟುಗಳು ಮಾರತಕ್ಕವಿವೆ.

ಟ್ರಾವ್ಹಲರ್ಸ ಬಂಗಲೆಯ ಹತ್ತರವಿರುವ ೨೩೦ನೆಯ ಸರ್ವೆ ನಂಬರದಲ್ಲಿಯ ಪ್ಲಾಟುಗಳು ಮಾರತಕ್ಕವಿವೆ. ತೆಗೆದುಕೊಳ್ಳಲಿಚ್ಛಿಸುವವರು ಸಮಕ್ಷಮ ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

**ಯಲಗುರ್ದರಾವ ಧಾರವಾಡ**
**ವಕೀಲರು ಬಾಗಲಕೋಟೆ.**

---

ಈ ಪತ್ರಿಕೆಯು ವೆಂಕಟೇಶ ಕೃಷ್ಣ ... ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.